ಕರ್ನಾಟಕ ಸರ್ಕಾರ

## ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

## ಮತ್ತು

# ಭಾಷಣಗಳು



೧೫

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೫೦
ವಿಚಾರ ಸಾಹಿತ್ಯಮಾಲೆ - ೬೩

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೫

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೫)

ಡಾ. ಅಂಬೇಡ್ಕರ್ ಮತ್ತು ಹಿಂದೂ ಕೋಡ್ ಮಸೂದೆ
ಕಲಮುವಾರು ಚರ್ಚೆ
(ಫೆಬ್ರವರಿ ೫, ೧೯೫೧ರಿಂದ ಸೆಪ್ಟೆಂಬರ್ ೨೫,
೧೯೫೧ರ ವರೆಗೆ)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 15** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition : 2015; Pp. xxx + 554; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxx + ೫೫೪
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ|| ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶಿ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳ ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು


ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'**, ಜೆ. ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

**(ಡಾ. ಎನ್.ಎಸ್. ಚನ್ನಪ್ಪಗೌಡ)**

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು; ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

(ಕೆ. ಎ. ದಯಾನಂದ)

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡಿ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ. ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿಯ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿ 'ಬಿ. ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ! ಸಂಘಟನೆ!! ಹೋರಾಟ!!! (Educate! Organize!! Agitate!!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ. ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾ ಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡುಬಿಟ್ಟಿದ್ದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದುಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮).

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨–೬–೨೦೦೮ ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದ ರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯–೮–೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ. ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ–ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ. ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ. ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ. ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್. ಆರ್. ಗೌತಮ್ (ಸಂ. ೧೦; ಭಾಗಗಳು ೧–೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ. ಎನ್. ಶಾಮರಾವ್ (ಸಂ. ೧೧; ಭಾಗಗಳು ೧–೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧–೨)

೪. ಶ್ರೀ ಕೃಷ್ಣ ಮೂರ್ತಿಸಿರ್ಸಿ (ಸಂ. ೧೩; ಭಾಗಗಳು ೧–೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ. ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

## ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿದೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ.

ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹಾದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

## ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ, ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗೆ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡಿ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ. ಅಂಬೇಡ್ಕರ್ ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರ ಮೂರ್ತಿಗಳಾಗಿದ್ದು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ. ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ, ಇವುಗಳ ನಿವಾರಣೆಯ ವಿಧಾನಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು, ಇವುಗಳಲ್ಲಿ ಜಾತಿ ನಿರ್ಮೂಲನೆ; ಶೂದ್ರರು ಯಾರು: ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು; ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ–ಪ್ರಮುಖವಾಗಿವೆ. ಬುದ್ಧ ಮತ್ತು ಅವನ ಧಮ್ಮ ಅವರ ಮರಣೋತ್ತರ ಪ್ರಕಟಣೆ. ಇವುಗಳಲ್ಲದೇ ಅವರ ಅಪ್ರಕಟಿತ ಬರೆಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಾಗಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ. ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ,

ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ. ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಲ್ಲಿಯೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೬ರ ವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವೂ ಸಂಪೂರ್ಣವಾಗಿ ಅಳಿದು ಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರ ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ  ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ್ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನು ಸಂಗ್ರಹಿಸಿ ಒಟ್ಟು "ಡಾ. ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ  ಹಾಕಿಕೊಂಡು ಇದುವರೆಗೆ ಒಟ್ಟು ಹದಿನೈದು ಸಂಪುಟಗಳನ್ನು ಪ್ರಕಟಿಸಿದೆ.

ಇದುವರೆಗೆ ಪ್ರಕಟಿತವಾದ ಹದಿನೈದು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರೆಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ; ಭಾಷಾವಾರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೨)ದಲ್ಲಿ

ಅವರ ಅಪ್ರಕಟಿತ ಕೃತಿಗಳಾದ ಹಿಂದೂ ಧರ್ಮದರ್ಶನ, ಪ್ರಾಚೀನ ಭಾರತದಲ್ಲಾದ ಕ್ರಾಂತಿ ಮತ್ತು ಪ್ರತಿಕ್ರಾಂತಿ, ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು, ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರೆಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರೆಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ, ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳು ಅರ್ಥಶಾಸ್ತ್ರ ಸಂಬಂಧವಾಗಿದ್ದು, ಅವರ ಮಹಾಪ್ರಬಂಧ 'ರೂಪಾಯಿಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು ಮತ್ತು ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು? ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ ಆದರೆ ಅಷ್ಟೇ ವಿದ್ವತ್ ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨– ೧೯೪೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ ೯ನೆಯ ಸಂಪುಟ (೧೯೯೧) ಮುಂಬಯಿಯ ಪೀಪಲ್ಸ್ ಎಜುಕೇಷನ್ಸ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರೆಹಗಳು ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟ (೧೯೯೧) ದಲ್ಲಿ ಅವರು ಗವರ್ನರ್ ಜನರಲ್ ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ(೧೯೯೨). ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧಮ್ಮ" ಗ್ರಂಥದ ಪುನರ್ ಮುದ್ರಣವಾಗಿದೆ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ "ಪ್ರಾಚೀನ ಭಾರತದ ವಾಣಿಜ್ಯ", "ಅಸ್ಪೃಶ್ಯರು ಮತ್ತು ಬ್ರಿಟಿಷರ ಸಾಮ್ರಜ್ಯ", "ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು", "ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು", "ವಿಕಾಸಕ್ಕಾಗಿ  ಕಾದಿದ್ದು" ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್ ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮುಂಗಂಡು ಅವುಗಳಿಗೆ ಡಾ. ಅಂಬೇಡ್ಕರರು ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ ಹಿಂದೂ ಕೋಡ್ ಬಿಲ್ ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ. ಅಂಬೇಡ್ಕರರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ  ಈ ಸಂಪುಟದ ಎರಡೂ ಭಾಗಗಳಲ್ಲಿ ಲಭ್ಯವಿದೆ.

ಮಹಾರಾಷ್ಟ್ರ ಸರ್ಕಾರ ಡಾ. ಅಂಬೇಡ್ಕರ್‌ರವರ ಅಮೂಲ್ಯ ಮತ್ತು ಸಮಗ್ರ ವೈಚಾರಿಕ ಸಾಹಿತ್ಯವನ್ನು

ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದ ರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊಟ್ಟ ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

| | |
|---|---|
| ೧. ಡಾ. ಎ.ಎಂ.ರಾಜಶೇಖರಯ್ಯ | ಸಂಪಾದಕರು |
| ೨. ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ೩. ಶ್ರೀ ದೇವನೂರು ಮಹಾದೇವ | ಸದಸ್ಯರು |
| ೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಅಲಭ್ಯವಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಆನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲಕೃತಿಯ ಸುಮಾರು ಒಂದುನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ಅವರ ಬರೆಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅವುಗಳ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು. ೧. ಡಾ. ಆರ್. ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨. ಡಾ. ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ೩. ಶ್ರೀ ವೈ. ಎಂ. ಸಿ. ಶರ್ಮ ಅಂದಿನ

ಅಧ್ಯಕ್ಷರು, ಕರ್ನಾಟಕ ರಾಜ್ಯ ಭಾಷಾ ಆಯೋಗ, ಬೆಂಗಳೂರು. ನಂತರ ಶ್ರೀಕಂಠೀರಾವ್. ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟತವಾಗಿರುವ ಈ ಸಂಪುಟವು ಡಾ. ಅಂಬೇಡ್ಕರರ ರಾಜಕೀಯ ಜೀವನ ಮತ್ತು ಮುಖಂಡತ್ವದಲ್ಲಿ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡಿವೆ. ಏಕೆಂದರೆ ಅವರು ಪ್ರಥಮ ಬಾರಿಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯ(ಸಚಿವ)ರಾಗಿ ೧೯೪೨ರಲ್ಲಿ ನೇಮಕಗೊಂಡರು. ೧೯೪೩ರಿಂದ ೧೯೪೬ರ ಅವಧಿಯಲ್ಲಿ ಅವರು ಈ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದು ಈ ಅವಧಿಯಲ್ಲಿ, ಅದರಲ್ಲಿಯೂ ಎರಡನೆಯ ಮಹಾಯುದ್ಧದ ಸಂಕಟ ಕಾಲದಲ್ಲಿ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಮಿಕ ಸಮಸ್ಯೆಗಳತ್ತ ರಚನಾತ್ಮಕ ರೀತಿಯಲ್ಲಿ ಗಮನಹರಿಸಿದರು. ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ. ಮತ್ತು ಅವರ ತೀವ್ರ ಸಮಸ್ಯೆಗಳತ್ತ ಯಾರೂ ಗಮನ ಹರಿಸುವುದಿಲ್ಲ. ಆದರೆ ಡಾ.ಅಂಬೇಡ್ಕರರು ತಮ್ಮ ಅಧಿಕಾರಾವಧಿಯಲ್ಲಿ ಭಾರತೀಯ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಇದರ ಕೀರ್ತಿ ಡಾ.ಅಂಬೇಡ್ಕರರಿಗೆ ಸಲ್ಲುವುದು.

ಅವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಡಾ. ಅಂಬೇಡ್ಕರರು ಕೇಂದ್ರ ಶಾಸನಸಭೆಯಲ್ಲಿ ೧೯೪೨ರಿಂದ ೧೯೪೬ರ ಅವಧಿಯಲ್ಲಿ ವಿವಿಧ ವಿಷಯಗಳ ಮೇಲೆ ಮಾಡಿದ ಭಾಷಣಗಳು ಅದರಲ್ಲಿಯೂ ಪ್ರಮುಖವಾಗಿ ಭಾರತದ ಕಾರ್ಮಿಕರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಈ ಭಾಷಣಗಳು ವಿದ್ವತ್ ಪೂರ್ಣವೂ ಬೋಧಪ್ರದವೂ ಮತ್ತು ಸಂವೇದನಾಶೀಲವೂ ಆಗಿರುವುದಲ್ಲದೆ ಈ ದಿನಗಳಲ್ಲಿ ಕಾಣಸಿಗದಂಥ ಸಾಹಿತ್ಯದ ವೈಖರಿಯನ್ನು ಪ್ರತಿಬಿಂಬಿಸುತ್ತದೆ. ಅವು ಅತ್ಯಂತ ಸ್ವೋಪಜ್ಞವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ ಡಾ. ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅಗಾಧ ಅರಿವನ್ನು ಹೊಂದಿದ್ದರೆಂಬ ಅಂಶ ಗೊತ್ತಾಗುತ್ತದೆ. ಅವರೇ ಮುಂಬಯಿ ಪರೇಲ್‌ನಲ್ಲಿ ಕೂಲಿಕಾರರ ಚಾಲಿನಲ್ಲಿ ವಾಸವಾಗಿದ್ದ ದಿನಗಳಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದ ಕೂಲಿಕಾರರ ಕಠಿಣ ಜೀವನದ ಅರಿವು ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೆ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣತೊಟ್ಟರು.

ಅವರು ಅಧಿಕಾರದಲ್ಲಿದ್ದ ದ್ವಿತೀಯ ಮಹಾಯುದ್ಧದ ಕಾಲ ದೇಶಕ್ಕೆ ಕಠಿಣ ಕಾಲವಾಗಿತ್ತಾದರೂ ಯುದ್ಧದ ಅವಶ್ಯಕತೆಗಳ ಒತ್ತಡಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಗಮನೀಯ ಪರಿವರ್ತನೆಯಾಯಿತು. ಔದ್ಯೋಗಿಕ ವಿಸ್ತರಣೆಯ ಅವಕಾಶಗಳೊದಗಿ ಬಂದವು. ಇದರಿಂದ ಉದ್ಯಮಿಗಳು ಮತ್ತು ಉದ್ಯೋಗಪತಿಗಳಿಗೆ ಅಭಿವೃದ್ಧಿಯ

ವಿಪುಲ ಅವಕಾಶ ದೊರಕಿತಾದರೂ ಕಾರ್ಮಿಕರಿಗೆ ಅದರ ಲಾಭ ದೊರೆಯಲಿಲ್ಲ. ಇದನ್ನರಿತಿದ್ದ ಡಾ.ಅಂಬೇಡ್ಕರರು ಕಾರ್ಮಿಕ ಕಲ್ಯಾಣ ಕುರಿತ ಅನೇಕ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥ ರೀತಿಯಲ್ಲಿ ನಡೆಸಿ ಕಾನೂನುಗಳನ್ನು ಮಾಡಿದರು.

ಕಾರ್ಮಿಕರ ಬಗ್ಗೆ ಅವರು ತಳೆದಿದ್ದ ನಿಲುವು ಮತ್ತು ಸಿದ್ಧಾಂತಗಳನ್ನು ಅವರು ೧೫ನೆಯ ಸೆಪ್ಟಂಬರ್ ೧೯೪೩ರಲ್ಲಿ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಗೋಷ್ಠಿಯಲ್ಲಿ ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು ಮತ್ತು (ಕೆಲಸ ಕೊಡುವ)ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧವಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೇ ಹೋದರೆ ಔದ್ಯೋಗಿಕ ಕಾರ್ಮಿಕರ ಕಲ್ಯಾಣದ ಸಮಸ್ಯೆ ನಿವಾರಣೆಯಾಗುವುದು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಪುರೋಗಾಮಿ ಕಾರ್ಮಿಕ ಧೋರಣೆಗಳಿಗೆ ಬಹುಮಟ್ಟಿಗೆ ಡಾ. ಅಂಬೇಡ್ಕರರು ನಲವತ್ತರ ದಶಕದಲ್ಲಿ ಅನುಷ್ಠಾನಕ್ಕೆ ತಂದಂತಹ ಅನೇಕ ಕಾನೂನು ವಿಧಿಗಳೇ ಕಾರಣ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಔದ್ಯಮಿಕ ಬೆಳವಣಿಗೆಗೆ ಬಹುಮುಖ್ಯವಾದ ಕಾರ್ಮಿಕರ ತಾಂತ್ರಿಕ ತರಬೇತಿ ಮತ್ತು ನೈಪುಣ್ಯಗಳ ವೃದ್ಧಿಯತ್ತ ಹೆಚ್ಚು ಒತ್ತು ನೀಡಿದರು. ಇವುಗಳ ಬೆಳವಣಿಗೆ ಸುಲಭ ಸಾಧ್ಯವಲ್ಲ ಮತ್ತು ಅದರಲ್ಲಿ ವಿಳಂಬವೂ ಸಹಜ. ಶಾಂತಿಯುತ ಬದಲಾವಣೆಯಲ್ಲಿ ಯಾವಾಗಲೂ ವಿಳಂಬವಾಗುತ್ತದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಭಾರತದಂತಹ ಪುರಾತನ ದೇಶದಲ್ಲಿ ಪ್ರಗತಿ ಮಂದಗತಿಯಲ್ಲಿಯೇ ಸಾಗುವುದು. ಆದ್ದರಿಂದ ಡಾ. ಅಂಬೇಡ್ಕರರು ನಮ್ಮ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕೆಂದು ಪ್ರತಿಪಾದಿಸಿದರು. ಇದೂ ಅಲ್ಲದೆ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಒಳ್ಳೆಯ ಸರ್ಕಾರ, ಒಳ್ಳೆಯ ಸಮಾಜ ಅವಶ್ಯ ಎಂದೂ ಅವರು ಹೇಳಿದರು.

ಭಾರತದಲ್ಲಿ ಕಾರ್ಮಿಕರು ಬಹುವಾಗಿ ಶೋಷಿತರಾಗಿದ್ದಾರೆ. ಕಾರ್ಮಿಕ ವರ್ಗವನ್ನು ಸಾಮಾಜಿಕ ಭದ್ರತೆಯ ರಕ್ಷಣೆಯಡಿಯಲ್ಲಿ ತರುವುದೇ ಡಾ. ಅಂಬೇಡ್ಕರರ ಮೂಲ ಗುರಿಯಾಗಿತ್ತು. ಕಾರ್ಮಿಕರ ಪರಿಹಾರ ಕಾಯ್ದೆ, ಹೆರಿಗೆ ಸೌಕರ್ಯ ಕಾಯ್ದೆ ಮುಂತಾದವು ಅವರು ಕೈಗೊಂಡ ಶಾಶ್ವತ ಮಹತ್ವದ ಕ್ರಮಗಳಾಗಿದ್ದವು.

ಡಾ. ಅಂಬೇಡ್ಕರ್ ರವರು ಕಾರ್ಮಿಕ ಸಚಿವರಾಗಿದ್ದಾಗ ಕಲ್ಲಿದ್ದಲು ಗಣಿಗಳಲ್ಲಿನ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಲು ಮುಂದಾದರು. ಅವರು ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳಲ್ಲಿ ಸುಮಾರು ೪೦೦ ಅಡಿಗಳಷ್ಟು ಆಳದವರೆಗೆ ಸ್ವತಃ ಇಳಿದು ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಾರ್ಮಿಕರ ಬಗ್ಗೆ ಅವರು ಹೊಂದಿದ ಈ ಕಾಳಜಿ, ಅದರಲ್ಲಿಯೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತಿಫಲವೇ ಕಲ್ಲಿದ್ದಲು ಗಣಿ ಕೆಲಸಗಾರರ ಕಲ್ಯಾಣ ಅಧ್ಯಾದೇಶ, ೧೯೪೪. ಆದ್ದರಿಂದ ಅವರು ಕಾರ್ಮಿಕ ಕಲ್ಯಾಣ ಸಮಸ್ಯೆಯ ವಿವಿಧ ಮುಖಗಳ ಬಗ್ಗೆ ಮಾಡಿದ ಅನೇಕ ಭಾಷಣಗಳು ಬಹಳ ಬೋಧಪ್ರದವಾಗಿವೆ.

ಕಾರ್ಮಿಕರ ಸಮಸ್ಯೆಗಳೂ ಅಲ್ಲದೆ ಆರ್ಥಿಕ ಪ್ರಗತಿಯ ಇನ್ನೊಂದು ಮುಖವೆನಿಸಿದ ಇತರ ಅಭಿವೃದ್ಧಿಪರ ಯೋಜನೆಗಳಿಗೂ ಅವರ ಕೊಡುಗೆ ಅಪಾರ. ಅವರು ಕಾರ್ಮಿಕ ಸದಸ್ಯರಾಗಿದ್ದಾಗಲೇ ಕೈಗೊಂಡ ದಾಮೋದರ ಕಣಿವೆ ವಿವಿಧೋದ್ದೇಶ ಅಭಿವೃದ್ಧಿಯ ಬೆಳವಣಿಗೆ, ಒರಿಸ್ಸಾದ ನದಿಗಳ ಬಗ್ಗೆ ವಿವಿಧೋದ್ದೇಶ ಯೋಜನೆಗಳು, ಅಂತರ್ದೇಶಿಯ ಜಲಸಂಚಾರ ಯೋಜನೆ ಮುಂತಾದವು ಉಲ್ಲೇಖನಾರ್ಹ. ಈ ಸಂಪುಟದಲ್ಲಿ ಈ ವಿಷಯಗಳ ಕುರಿತು ಅವರು ಮಾಡಿದ ಭಾಷಣಗಳೂ, ವಿಧಾನಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೂ ಬಹಳ ಮಹತ್ವದವುಗಳಾಗಿವೆ. ಇವುಗಳಿಂದ ದೇಶದ ಆರ್ಥಿಕ ಪ್ರಗತಿಯ ಸಮಸ್ಯೆಗಳ ಬಗ್ಗೆ ಅವರಿಗೆ ಎಷ್ಟು

ಅರಿವಿದ್ದಿತೆಂಬುದು ಗೊತ್ತಾಗುತ್ತದೆ. ನದಿಗಳ ಪ್ರವಾಹ ನಿಯಂತ್ರಣ, ಜಲಸಂಚಾರ, ನೀರಾವರಿ ವ್ಯವಸಾಯ ಮತ್ತು ಮಣ್ಣಿನ ರಕ್ಷಣೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದವುಗಳ ಬಗ್ಗೆ ಅವರ ವಿಚಾರಗಳು ಎಷ್ಟು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದವೆಂಬುದು ಗಮನಾರ್ಹವಾಗಿದೆ.

ಅವರು ಸಚಿವರಾಗಿದ್ದಾಗ ಸರ್ಕಾರದ ಕಾರ್ಯವಿಧಾನವನ್ನು ಸುಧಾರಿಸಲು ಕೂಡ ಗಮನ ನೀಡಿದರು. ಅವರು ಕಾಗದ ನಿಯಂತ್ರಣ ಆಜ್ಞೆಯನ್ನು ಕುರಿತು ವಿಧಾನಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದಲ್ಲಿ ಬಳಸಲಾಗುತ್ತಿದ್ದ ಯುದ್ಧಕಾಲದಲ್ಲಿ ೧೪೯ ವ್ಯವಹಾರ ನಮೂನೆ (forms) ಗಳನ್ನು ಅಮಾನತಿನಲ್ಲಿಟ್ಟು ೧೯೦ ನಮೂನೆಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿದರು. ಅದೇ ರೀತಿ ಕೆಲವು ವ್ಯವಹಾರವನ್ನು ಕಡಿಮೆ ಮಾಡಬಹುದೆಂಬ ಅಂಶವನ್ನು ಭಾರತ ಸರ್ಕಾರದ ಗಮನಕ್ಕೆ ತಂದರು.

ಒಟ್ಟಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಪ್ರಕಟಿತವಾಗಿರುವ ಈ ಬರೆಹಗಳು ಮತ್ತು ಭಾಷಣಗಳು ಇಂದಿಗೂ ಸಹ ಪ್ರಸ್ತುತವಾಗಿರುವ ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. ಇವು ಸಾಮಾನ್ಯ ಓದುಗರಿಗೂ, ಆಡಳಿತಗಾರರಿಗೂ, ಸಂಶೋಧಕರಿಗೂ, ಕಾರ್ಮಿಕ ವಕೀಲರಿಗೂ, ಕಾರ್ಮಿಕ ಮುಖಂಡರಿಗೂ, ಅರ್ಥಶಾಸ್ತ್ರಜ್ಞರಿಗೂ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವೂ ಬೋಧಪ್ರದವೂ ಮತ್ತು ಜ್ಞಾನಪ್ರದವೂ ಆಗಿದೆ.

ಕೊನೆಯಲ್ಲಿ ಒಂದು ಮಾತು. ಮೊದಲಿನಿಂದಲೂ ನಿಮ್ನವರ್ಗಗಳ ಹಿತಾಸಕ್ತಿಗಳು ಮತ್ತು ಅಭಿವೃದ್ಧಿಯನ್ನು ಚಿಂತಿಸುತ್ತಿದ್ದ ಮತ್ತು ಅಸ್ಪೃಶ್ಯತೆಯನ್ನು ಅಮೂಲಾಗ್ರವಾಗಿ ನಿರ್ಮೂಲ ಮಾಡಲು ಪಣತೊಟ್ಟಿದ್ದ ಡಾ. ಅಂಬೇಡ್ಕರರು ೪೦ರ ದಶಕದ  ಆರಂಭದಲ್ಲಿ ಎಂದರೆ ೧೯೪೨ರಲ್ಲಿ, ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಪರ್ಯವಸಾನ ವಾಗುತ್ತಿರುವುದು ಸ್ಪಷ್ಟ ಗೋಚರವಾಗುತ್ತಿರುವ ಕಾಲದಲ್ಲಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಗೆ ದೇಶ ಬಿಟ್ಟು ತೊಲಗಿ ಎಂದು ಕರೆ ನೀಡಿದ ಸಂದರ್ಭದಲ್ಲಿ ವೈಸ್‌ರಾಯ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಏಕೆ ಸೇರಿದರು ಎಂಬ ಜಿಜ್ಞಾಸೆ ಓದುಗರ ಮನಸ್ಸಿನಲ್ಲಿ ಸುಳಿಯುವುದು ಸಹಜ. ಇದಕ್ಕೆ ಉತ್ತರ ಬಹುಶಃ ಡಾ. ಅಂಬೇಡ್ಕರರ ವಿಚಾರದಲ್ಲಿಯೇ ಅಡಗಿದೆ ಎಂದೆನಿಸುತ್ತದೆ. ಅವರ ಅಭಿಪ್ರಾಯದಲ್ಲಿ ಸರ್ಕಾರದ ಹೊರಗುಳಿದು ಹೋರಾಡುವುದಕ್ಕಿಂತಲೂ ಒಳಗಿನಿಂದ ಹೋರಾಡುವುದು ಹೆಚ್ಚು ಉಪಯುಕ್ತ ಮತ್ತು ಪ್ರಭಾವಿ ಹೋರಾಟವಾಗಬಲ್ಲದು. ಆದುದರಿಂದಲೇ ಅವರು ಸಮಾಜದ ಅತ್ಯಂತ ಶೋಷಣೆಗೊಳಗಾದ ಕಾರ್ಮಿಕ ಇಲಾಖೆಯನ್ನೇ ಸ್ವಸಂತೋಷದಿಂದ ಆಯ್ದುಕೊಂಡರು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಡಾ.ಅಂಬೇಡ್ಕರರ ಪ್ರಕಾರ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡಾ ೯೦ರಷ್ಟು ಕಾರ್ಮಿಕರು ನಿಮ್ನವರ್ಗಕ್ಕೆ ಸೇರಿದವರು. ಈ ಕಾರಣದಿಂದ ಅವರು ಸರ್ಕಾರ ಸೇರುವ ಈ ನಿರ್ಧಾರಕ್ಕೆ ಬಂದಿದ್ದರೆನ್ನಬಹುದು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಿಯವರೆಗೂ ಜಾತಿಪ್ರಜ್ಞೆಗೇ ಪ್ರಾಧಾನ್ಯತೆ ಇತ್ತಿದ್ದ ಡಾ. ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳಿಗೆ ಮಹತ್ವ ನೀಡಿದ್ದು ಅವರಲ್ಲುಂಟಾದ ವರ್ಗಪ್ರಜ್ಞೆಯ ಸಂಕೇತವಾಗಿದೆಯೆ? ಅವರಲ್ಲಿಯ ಈ ವರ್ಗಪ್ರಜ್ಞೆಯ ದ್ಯೋತಕವಾಗಿಯೇ ಅವರು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ಸ್ಥಾಪಿಸಿದರೆನ್ನಬಹುದೇ? ಹೀಗೆ ಅವರು ತಮ್ಮ ಕಾರ್ಯಕ್ಷೇತ್ರದಡಿಯಲ್ಲಿ ತಮ್ಮ ವರ್ಗಪ್ರಜ್ಞೆಯು ಜಾತಿಪ್ರಜ್ಞೆಗೆ ವಿಶಾಲ ತಳಹದಿಯೊದಗಿಸಿತೆಂದು ಹೇಳಬಹುದೇ? ಈ ಕುರಿತ ಹೆಚ್ಚಿನ ಚಿಂತನೆ ಅವಶ್ಯ.

ಈ ಸಂಪುಟದ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಒಂದನೆಯ ಭಾಗದಲ್ಲಿ ಡಾ. ಅಂಬೇಡ್ಕರರು ಕೇಂದ್ರ ವಿಧಾನಸಭೆಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ತತ್ಸಂಬಂಧ

ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ಭಾಗವಹಿಸಿ ಮಾಡಿದ ಭಾಷಣಗಳನ್ನು ಪ್ರಕಟಿಸಲಾಗಿದೆ. ಎರಡನೆಯ ಭಾಗದಲ್ಲಿ ಕೇಂದ್ರ ವಿಧಾನಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿದ್ದ ಅವರು ಸದಸ್ಯರು ತಮ್ಮ ಇಲಾಖೆಯ ಬಗ್ಗೆ ಕೇಳಿದ ಅನೇಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಪ್ರಶ್ನೋತ್ತರಗಳು ಸೇರಿವೆ. ಓದುಗರು ಈ ಸೂಚನೆಯನ್ನು ಗಮನಿಸಬೇಕಾಗಿ ವಿನಂತಿ.

ಈಗ ಪ್ರಕಟವಾಗುತ್ತಿರುವ ೧೪ನೆಯ ಸಂಪುಟದಲ್ಲಿ ಭಾರತೀಯರ ಸಂವಿಧಾನದ ರಚನೆಯ ಅವಧಿಯಲ್ಲೇ ಕೈಗೊಂಡ ಇನ್ನೊಂದು ಮಹತ್ವದ ಶಾಸನ ರಚನೆಯ ಪ್ರಯತ್ನವಾಗಿದೆ. ಹಿಂದೂ ಕೋಡ್ ಎಂದೇ ಪರಿಚಯವಾಗಿರುವ ಈ ಮಸೂದೆ ಡಾ. ಬಿ. ಆರ್. ಅಂಬೇಡ್ಕರ್ ರವರ ಸತತ ಪರಿಶ್ರಮದ ಫಲವಾಗಿ ರೂಪುಗೊಂಡಿತು. ಈ ಮಸೂದೆ ಎಷ್ಟು ಮಹತ್ವದ್ದಾಗಿತ್ತೋ ಅಷ್ಟೆ ವಿವಾದಾತ್ಮಕವಾಗಿತ್ತು. ಈ ಮಹತ್ವದ ಮಸೂದೆಯ ಮೇಲೆ ಜರುಗಿದ ವಿವರವಾದ ಚರ್ಚೆ, ಉತ್ತರ ಪ್ರತ್ಯುತ್ತರಗಳು ಇಂದು ನಮ್ಮ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯ ದ್ಯೋತಕವಾಗಿವೆ. ಆದರೆ ದುರದೃಷ್ಟವಶಾತ್ ಈ ಮಸೂದೆಯ ಕೆಲವೇ ಅಂಶಗಳು ಈಗ ಕಾನೂನಾಗಿ ಉಳಿದ ಹೆಚ್ಚಿನ ಭಾಗಗಳು ಕಾನೂನು ರೂಪ ತಳೆಯದೇ ನಿರಾಕರಿಸಲ್ಪಟ್ಟವು. ಈ ಮಸೂದೆ ಕಾನೂನಾಗಿದ್ದರೆ ನಮ್ಮ ಇಂದಿನ ಸಮಾಜದ ರೂಪುರೇಷೆಗಳೇ ಬದಲಾಗುತ್ತಿದ್ದವು.

ಗಾತ್ರದ ದೃಷ್ಟಿಯಿಂದ ಈ ಸಂಪುಟವನ್ನು ಎರಡು ಭಾಗಗಳಲ್ಲಿ ಮುದ್ರಿಸಿ ಪ್ರಕಟಿಸಲಾಗುತ್ತಿದೆ. ಈ ಸಂಪುಟದ ಎರಡನೆಯ ಭಾಗವನ್ನು ಪ್ರಕಟಿಸುವಲ್ಲಿ ನೆರವಾದ ಎಲ್ಲರಿಗೂ ಸಂಪಾದಕ ಸಮಿತಿ ಋಣಿಯಾಗಿದೆ. ಸಕಾಲದಲ್ಲಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದವರಿಗೆ ನಮ್ಮ ಧನ್ಯವಾದಗಳು.

**ಡಾ॥ ಎ. ಎಂ. ರಾಜಶೇಖರಯ್ಯ**
ಸಂಪಾದಕ

# ಪರಿವಿಡಿ


| | |
|---|---|
| ಸಂದೇಶಗಳು | v |
| ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ | x |
| ಎರಡನೇ ಮುದ್ರಣಕ್ಕೆ ಮುನ್ನುಡಿ | xiv |
| ಮೂರನೇ ಮುದ್ರಣಕ್ಕೆ ಮುನ್ನುಡಿ | xiv |
| ಸಂಪಾದಕೀಯ | xvi |

**ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ**
**ಸಮಗ್ರ ಬರೆಹಗಳು ಮತ್ತು ಭಾಷಣಗಳು**

| | |
|---|---|
| **ಹಿಂದೂಕೋಡ್ ಮಸೂದೆ**<br>**ವಿಭಾಗ–IV**<br>**(ಕಲಮುವಾರು ಚರ್ಚೆ)** | ೧–೫೪೦ |
| **ವಿಷಯಸೂಚಿ** | ೫೪೧ |

# ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು

## ಹಿಂದೂ ಸಂಹಿತೆಯ (ಕೋಡ್) ಮಹತ್ವ

ಭಾರತದ ಶಾಸಕಾಂಗದಿಂದ ಈ ಹಿಂದೆ ಪಾಸು ಮಾಡಿದ ಮುಂದೆ ಪಾಸು ಮಾಡಬಹುದಾದ, ಯಾವುದೇ ಕಾನೂನನ್ನು ಅದರ ಮಹತ್ವದ ದೃಷ್ಟಿಯಿಂದ ಹಿಂದೂ ಕಾನೂನಿಗೆ ಹೋಲಿಸಲಾಗುವುದಿಲ್ಲ. ಭಾರತೀಯ ಸಮಾಜದ ಜೀವಾಳವೆನಿಸಿರುವ ವರ್ಗ ವರ್ಗಗಳ ನಡುವೆ ಮತ್ತು ಲಿಂಗ ಲಿಂಗಗಳ ನಡುವೆ ಇರುವ ಅಸಮಾನತೆಯನ್ನು ತೊಡೆದು ಹಾಕದೆ, ಆರ್ಥಿಕ ಸಮಸ್ಯೆಗಳ ಕುರಿತಾದ ಕಾನೂನುಗಳನ್ನು ಪಾಸು ಮಾಡುತ್ತಾ ಹೋಗುವುದೆಂದರೆ ಅದು ನಮ್ಮ ಸಂವಿಧಾನದ ಗೇಲಿ ಮಾಡಿದಂತಾಗುತ್ತದೆಯಲ್ಲದೆ ಸೆಗಣಿಯ ರಾಶಿಯ ಮೇಲೆ ಅರಮನೆಯನ್ನು ಕಟ್ಟಿದಂತಾಗುತ್ತದೆ. ಇದು ನಾನು ಹಿಂದೂ ಸಂಹಿತೆಗೆ ಕೊಟ್ಟಿರುವ ಮಹತ್ವ.

ಹಿಂದೂ ಸಂಹಿತೆ (ಕೋಡ್) ಯನ್ನು
ಕುರಿತು ಡಾ. ಬಿ. ಆರ್. ಅಂಬೇಡ್ಕರ್‌ರವರ ನುಡಿಗಳು

# ಡಾ. ಅಂಬೇಡ್ಕರ್ ಮತ್ತು ಹಿಂದೂ ಕೋಡ್ ಮಸೂದೆ ಕಲಮುವಾರು ಚರ್ಚೆ (ಫೆಬ್ರವರಿ ೫, ೧೯೫೧ರಿಂದ ಸಪ್ಟೆಂಬರ್ ೨೫, ೧೯೫೧ರ ವರೆಗೆ)

# ಹಿಂದೂಕೋಡ್ ಮಸೂದೆ

## ವಿಭಾಗ– IV

## (ಕಲಮುವಾರು ಚರ್ಚೆ)

ಹಿಂದೂ ಕೋಡ್ ಮಸೂದೆಯ ಕಲಮುವಾರು ಚರ್ಚೆಯನ್ನು ಡಿಸೆಂಬರ್ ೧೪, ೧೯೫೦ರಂದು ಕೈಗೆತ್ತಿಕೊಳ್ಳಲಾಯಿತು. ದೀರ್ಘ ಚರ್ಚೆಯ ನಂತರ ಕೆಲವು ಕಲಮುಗಳನ್ನು ಅನುಮೋದಿಸಲಾಯಿತು. ಕೆಲವು ಸದಸ್ಯರ ನಿಧಾನ ಪ್ರವೃತ್ತಿಯಿಂದ ರೋಸಿ ಹೋದ ಡಾ.ಅಂಬೇಡ್ಕರರು ಅಕ್ಟೋಬರ್ ೨೭, ೧೯೫೧ರಂದು ತಮ್ಮ ರಾಜೀನಾಮೆ ನೀಡಿದರು.

ಡಾ.ಅಂಬೇಡ್ಕರರು ರಾಜೀನಾಮೆ ನೀಡಿದ ದಿನಾಂಕದವರೆಗೆ ಸಂಸತ್ತಿನಲ್ಲಿ ನಡೆದ ಚರ್ಚೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಡಾ. ಅಂಬೇಡ್ಕರರ ರಾಜೀನಾಮೆಯ ಮೂಲಪಾಠವನ್ನು ಮತ್ತು ಸಂಸತ್ತಿನಲ್ಲಿ ಅದರ ಮೇಲಣ ಚರ್ಚೆಯನ್ನು ಈ ಸರಣಿಯ ಮುಂದಿನ ಸಂಪುಟ ಎಂದರೆ ಸಂಪುಟ ೧೫ರಲ್ಲಿ ಸೇರಿಸಲಾಗಿದೆ.

–ಸಂಪಾದಕ

## **ಹಿಂದೂ ಮಸೂದೆಯ** – ಚರ್ಚೆಯ ಮುಂದುವರಿಕೆ
## ಕಲಮುವಾರು ಚರ್ಚೆ

*ಮಾನ್ಯ ಸಭಾಧ್ಯಕ್ಷರು: ಆಯ್ಕೆ ಸಮಿತಿ ವರದಿ ಮಾಡಿರುವಂತೆ ಈಗ ಈ ಸದನವು ಹಿಂದೂ ಕಾನೂನಿನ ಕೆಲವು ಶಾಖೆಗಳ ತಿದ್ದುಪಡಿ ಮತ್ತು ಸಂಹಿತೀಕರಣ ಮಾಡುವ ಕುರಿತು ಪರಿಗಣಿಸಲು ತನ್ನ ಚರ್ಚೆಯನ್ನು ಮುಂದುವರೆಸುತ್ತದೆ.

**ಶ್ರೀ ಆರ್.ಕೆ. ಚೌಧರಿ (ಅಸ್ಸಾಂ):** ಮಾನ್ಯ ಕಾನೂನು ಮಂತ್ರಿಗಳು ಮಸೂದೆಯ ಚರ್ಚೆಯನ್ನು ಮುಂದುವರೆಸುವ ಮೊದಲು, ನಾನೊಂದು ಅತ್ಯಂತ ವಿನಯಪೂರ್ವಕ ಸಲಹೆಯನ್ನು ಮಂಡಿಸಬಯಸುತ್ತೇನೆ. ಮೊದಲು ವಿಷಯಪಟ್ಟಿಯಲ್ಲಿರುವ ಹೆಚ್ಚು ಪ್ರಮುಖ ಮತ್ತು ಚಿಕ್ಕ ಮಸೂದೆಗಳ ಚರ್ಚೆಯನ್ನು ಮುಗಿಸಿ ನಂತರ ಹಿಂದೂ ಮಸೂದೆಯನ್ನು ಕೈಗೆತ್ತಿಕೊಂಡು ಮುಗಿಸಿಬಿಡಬಹುದು ಅಥವಾ ಹಿಂದೂ ಮಸೂದೆಯನ್ನು ಈಗಲೇ ತೆಗೆದುಕೊಂಡು, ಅದು ಮುಗಿಯುವವರೆಗೂ ಮತ್ತಾವ ಮಸೂದೆಗಳನ್ನೂ ಕೈಗೆತ್ತಿಕೊಳ್ಳದಂತೆ ಅದೊಂದನ್ನೆ ಮುಗಿಸಿಬಿಡಬಹುದು. ಈ ಎರಡು ವಿಧಾನಗಳಲ್ಲಿ ಯಾವುದಾದರೊಂದನ್ನು ಅಂಗೀಕರಿಸಬಹುದು.

ಕೆಲವರು, ಯಾರು ಈ ಮಸೂದೆಯ ಪರವಾಗಿರುವರೋ, ಅವರು ಈ ಮಸೂದೆಯನ್ನು ಒಂದು ಹಂತದವರೆಗೆ ಅಲ್ಪ ಸಮಯದವರೆಗೆ ಚರ್ಚಿಸಿ, ನಂತರ ಬಹು ದೀರ್ಘಾವಧಿಯವರೆಗೆ ಕೈಬಿಡುವ, ಒಂದು ರೀತಿಯಲ್ಲಿ ಕಾಲಯಾಪನ ಮಾಡುತ್ತಿರುವಂತೆ ಅನ್ನಿಸುತ್ತದೆ. ಸಂಬಂಧಿಸಿದವರೆಲ್ಲರ ದೃಷ್ಟಿಯಲ್ಲಿ ಇದೊಂದು ಅಸಹಜ ನಡವಳಿಕೆ. ಆದ್ದರಿಂದ ನನ್ನ ಗೌರವಪೂರ್ಣ ವಿನಂತಿ ಏನೆಂದರೆ –ಮೊದಲು ಈ ಚಿಕ್ಕ ಮತ್ತು ಮುಖ್ಯ ಮಸೂದೆಗಳ ಚರ್ಚೆಯನ್ನು ಮುಗಿಸಿಬಿಡಬಹುದು. ಉದಾಹರಣೆಗೆ – ಪ್ರತಿಬಂಧಕ ಸ್ಥಾನಬದ್ಧತೆ ಕಾಯಿದೆ. ಈ ಮಸೂದೆಯನ್ವಯ ಅನೇಕ ಜನರನ್ನು ಬಂಧಿಸಲಾಗಿದೆ. ಅವರನ್ನು ಉಚ್ಚನ್ಯಾಯಾಲಯಗಳ ಆದೇಶದನ್ವಯ ಬಿಡುಗಡೆ ಮಾಡಲಾಗಿದೆ. ಮತ್ತೆ ಅವರನ್ನು ಬಂಧಿಸಲಾಗಿದೆ. ಒಟ್ಟಾರೆ ಈ ವಿಷಯದಲ್ಲಿ ಸರ್ಕಾರವು ಈ ಕುರಿತಂತೆ ಹೊರಡಿಸಲಿರುವ ವಿಸ್ತೃತ ಮಸೂದೆಯ ನಿರೀಕ್ಷೆಯ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಮಾನ್ಯರೇ, ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಹಾಗೂ ನ್ಯಾಯವೂ ಯಾವುದೇ ಪ್ರತಿಬಂಧಕವಿಲ್ಲದೆ ಜಾರಿಗೆ ಬರಬೇಕೆಂಬ ದೃಷ್ಟಿಯಿಂದ ಮೊದಲು ಈ ಮುಖ್ಯ ಮಸೂದೆಯ ಬಗ್ಗೆ ಚರ್ಚೆ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

ಮೊದಲು ಪ್ರತಿಬಂಧಕ ಸ್ಥಾನಬದ್ಧತೆ ಮಸೂದೆ, ನಂತರ ನೌಕರರ ಹೊಣೆಗಾರಿಕೆ ಮಸೂದೆ ಮುಗಿಸಿ, ಹಿಂದೂ ಕಾಯ್ದೆಯ ಚರ್ಚೆಗೆ ಕುಳಿತುಕೊಳ್ಳೋಣ ಹಾಗೂ ಒಮ್ಮೆಗೆ ಮುಗಿಸಿಬಿಡೋಣ. ನನ್ನ ಸಲಹೆಯು ಮಾನ್ಯ ಕಾನೂನು ಮಂತ್ರಿಗಳಿಗೆ ಒಪ್ಪಿತವೆಂದು ನಾನಾದರೂ ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಸಲಹೆಯು ಮಾನ್ಯ ಮಂತ್ರಿಗಳಿಗೆ ಒಪ್ಪಿತವೆ?

**ಕಾನೂನು ಮಂತ್ರಿಗಳು (ಡಾ.ಅಂಬೇಡ್ಕರ್) :** ಇಲ್ಲ ಸರ್.

---

* ಸಂಸದೀಯ ಚರ್ಚೆ(ಇಲ್ಲಿಂದ ಮುಂದೆ ಸ.ಚ. ಎಂದು ಕರೆಯಲಾಗುವುದು) ಸಂಪುಟ:VIII ಭಾಗ II ಫೆಬ್ರವರಿ 5, 1951, ಪುಟಗಳು 2356-77

**ಮಾನ್ಯ ಸಭಾಧ್ಯಕ್ಷರು :** ಹಾಗಾದರೆ ಹಿಂದೂ ಸಂಹಿತೆಯ ಮಸೂದೆಯ ಪರಿಗಣನೆಯನ್ನು ಕುರಿತ ಚರ್ಚೆಯನ್ನೇ ಮುಂದುವರೆಸೋಣ.

**ಶ್ರೀ ನಜೀರುದ್ದೀನ್ ಅಹ್ಮದ್ (ಪಶ್ಚಿಮ ಬಂಗಾಳ) :** ಮಾನ್ಯರೆ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಸದನದ ಮುಂದೆ ಬಹುದಿನದಿಂದ ಹಿಂದೂ ಸಂಹಿತೆಯ ಮಸೂದೆ ಇದೆ.

ಈ ಮಧ್ಯೆ ಕೆಲ ಮುಖ್ಯ ಸಂಗತಿಗಳು ಜರುಗಿಹೋಗಿವೆ. ಹೆಸರಿಸುವುದಾದರೆ, ಈಗಾಗಲೇ ಸಂವಿಧಾನ ಹಲವು ಕಾನೂನು ಮತ್ತು ಕಲಮುಗಳನ್ನು ಜಾರಿ ಮಾಡಿದ್ದು, ಅವು ಅದರ ಅಧಿಕಾರ ವ್ಯಾಪ್ತಿಯೊಳಗೆ ಬರುವುದಿಲ್ಲವೆಂದೂ ಘೋಷಿಸಲಾಗಿದೆ. ಸದ್ಯದ ಮಸೂದೆ ಕೂಡ ಸಂವಿಧಾನಕ್ಕಿರುವ ನಿಶ್ಚಿತ ಅವಕಾಶಗಳಿಗೆ ಧಕ್ಕೆ ಮಾಡುವ ರೀತಿಯಲ್ಲಿದೆಯೆಂದೂ ಅನ್ನಿಸುತ್ತಿದೆ. ನಾವು ಸಂವಿಧಾನಕ್ಕೆ ಹಲವಾರು ವಿಚಾರಗಳನ್ನು ಕಾನೂನಾಗಿ ಸೇರಿಸಿದ್ದು ಅವುಗಳಲ್ಲಿ ಕೆಲ ಪ್ರಸ್ತುತ ಕಾಯ್ದೆಗಳನ್ನೂ ಕೂಡ ಸಂವಿಧಾನದ ಅಧಿಕಾರದಾಚೆಯವು ಎನ್ನುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತಿದೆ. ಸಂವಿಧಾನದಲ್ಲಿ ಎರಡು ರೀತಿಯ ಅವಕಾಶಗಳಿವೆ. ಇದನ್ನು ೧೫ನೆಯ ಅನುಚ್ಛೇದದ, ಕಲಮು(೧)ರಲ್ಲಿನ ಆ ಅನುಚ್ಛೇದ ಈ ರೀತಿ ಹೇಳುತ್ತದೆ.

**"**ಸರ್ಕಾರವು ಯಾವುದೇ ನಾಗರಿಕನನ್ನು ಈ ಕೆಳಗಿನ ಆಧಾರಗಳಿಂದ........ ಕೇವಲ ಧರ್ಮ, ಜನಾಂಗ, ಜಾತಿ, ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡಕೊಡದು........**"**

ಈ ಮಸೂದೆಯು ಹಿಂದೂಗಳಿಗೆ ಮಾತ್ರ ಸಂಬಂಧಪಟ್ಟಿದ್ದು ಎಂದು ನಾನು ಹೇಳುತ್ತೇನೆ. **'**ಹಿಂದೂ**'** ಎಂಬ ಹೇಳಿಕೆಯ ವ್ಯಾಪ್ತಿಗೆ ಬಹುಸಂಖ್ಯಾತ ವರ್ಗಗಳನ್ನು ಹಿಂದೂಗಳೆಂದು ಸಹಜವಾಗಿ ಭಾವಿಸಿ ಕರೆಯಲಾಗದು. ಇಷ್ಟಲ್ಲದೆ ಬಹುಸಂಖ್ಯಾತ ವರ್ಗಗಳು ಈ ಮಸೂದೆಯಾಚೆಗೆ ಉಳಿಯುತ್ತವೆ. ಬೇರೆ ಬೇರೆ ಧರ್ಮಗಳನ್ನು ಆಚರಿಸುವ ಜನರ ಮಧ್ಯೆಯೇ, ಇರುವ ಬೇರೆ ಬೇರೆ ಜಾತಿಗಳಲ್ಲಿ, ತಾರತಮ್ಯವೂ ಇದೆಯೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸಮಾಜದಲ್ಲಿ ವಿವಿಧ ಶ್ರೇಣಿಗಳಿಗೆ ಸೇರಿದ ನಾಗರಿಕರ ನಡುವೆಯೇ ಧರ್ಮದ ಆಧಾರದಲ್ಲಿ ಹಲವಾರು ತಾರತಮ್ಯಗಳಿವೆ. ಆದ್ದರಿಂದ ಕೇವಲ ಧರ್ಮದ ಎಂಬ ಮಾತಿಗೇನೂ ಅರ್ಥವಿಲ್ಲ.... ಧರ್ಮದ ಹೊರತಾಗಿಯೂ, ಬೇರೆ ಬೇರೆ ಧಾರ್ಮಿಕ ಘಟಕಗಳ ನಡುವೆ ತಾರತಮ್ಯ ಇದೆ ಎಂಬುದಕ್ಕೆ ಯಾವ ಕಾರಣಗಳೂ ನನಗೆ ತೋರುತ್ತಿಲ್ಲ..... ಇದು ಒಂದು ವಿಷಯ.

ಸದನದ ಪರಿಗಣನೆಗೆ ನಾನು ಎರಡನೆಯ ಅನುಚ್ಛೇದ ಕುರಿತು ಮಂಡಿಸಲಿಚ್ಛಿಸುವುದೇನೆಂದರೆ...

**ಶ್ರೀ ತ್ಯಾಗಿ (ಉತ್ತರ ಪ್ರದೇಶ):** ನಾನೊಂದು ವಿಷಯ ಕೇಳಲೇ ಮಾನ್ಯರೇ...... ಕಳೆದ ಬಾರಿ ಸದನವನ್ನು ಮುಂದೂಡಿದಾಗ – ಯಾವುದೇ ವಿಳಂಬಕರ ಗೊತ್ತುವಳಿ ಮಾಡಬಾರದೆಂದು ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು ಮತ್ತು ಎಲ್ಲರೂ ಒಪ್ಪಿದ್ದರು, ಅದಕ್ಕೆ ಅನುಮತಿಸಿದವರಲ್ಲಿ ಇವರೂ ಒಬ್ಬರಾಗಿದ್ದರು.

**ಸಭಾಧ್ಯಕ್ಷರು:** ಸದ್ದು, ಸದ್ದು, ಅವರು ಯಾವುದೇ ಗೊತ್ತುವಳಿ ಮಂಡಿಸುತ್ತಿಲ್ಲ. ಅವರು ಅವರ ಪ್ರಕಾರ ಕೇವಲ ಕ್ರಿಯಾಲೋಪವೊಂದನ್ನು ಪ್ರಸ್ತಾಪಿಸುತ್ತಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯರೆ ನಾನು ಸಂಕ್ಷೇಪವಾಗಿ ಹೇಳಲೆ?

**ಶ್ರೀ ಬಿ.ದಾಸ್ (ಒರಿಸ್ಸಾ) :** ಆದರೆ, ಅವರು ಉದ್ದ ಭಾಷಣ ಮಾಡುತ್ತಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮತ್ತೊಂದು ಅನುಚ್ಛೇದ ೨೫(೧)ನ್ನು ಪ್ರಸ್ತಾಪಿಸಿ ಹೇಳುವುದೇನೆಂದರೆ, ಅದು ಹೀಗೆ ಹೇಳುತ್ತದೆ:– **"**ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಹಾಗೂ ಆರೋಗ್ಯಕ್ಕೆ ಒಳಪಟ್ಟು.....

**ಶ್ರೀಮತಿ ದುರ್ಗಾಬಾಯಿ (ಮದರಾಸು) :** ಕ್ರಿಯಾಲೋಪವನ್ನು ಎತ್ತುವ ನೆಪದಲ್ಲಿ ಮಾನ್ಯ ಸದಸ್ಯರಿಗೆ ಪ್ರಶ್ನೆಯ ಮೇಲೆ ಅದರ ಅರ್ಹತೆ ಬಗ್ಗೆ ಮಾತಾಡಲು ಅವಕಾಶ ಕೊಟ್ಟಂತಾಗಿದೆ!

**ಮಾನ್ಯ ಸಭಾಧ್ಯಕ್ಷರು:** ಅವರು ವಾದ ಮಂಡಿಸುತ್ತಿದ್ದಾರೆ. ಅವರು ವಾದ ಮಾಡಲು ಹಕ್ಕುಳ್ಳವರಾಗಿದ್ದಾರೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರ ಬಗ್ಗೆ ಸದಸ್ಯರು ತಾಳ್ಮೆ ಕಳೆದುಕೊಳ್ಳದಿರಲಿ.

**ಶ್ರೀ ಸೊನವಣೆ (ಬಾಂಬೆ) :** ಅವರು ಎತ್ತಿರುವ ಕ್ರಿಯಾಲೋಪ ಯಾವುದು?

**ಮಾನ್ಯ ಸಭಾಧ್ಯಕ್ಷರು :** ಅವರು ಏನು ಹೇಳುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ಕೇಳಬೇಕು.

**ಶ್ರೀ ಸೊನವಣೆ :** ಅವರಿಗೆ ವಾದಮಾಡಲು ಅವಕಾಶ ನೀಡಲಾಗಿದೆಯೆ?

**ಮಾನ್ಯ ಸಭಾಧ್ಯಕ್ಷರು :** ಆತ ಏನು ಮಾತನಾಡುತ್ತಾನೆಂಬುದು ನನಗೆ ತಿಳಿಯದೆ, ಮತ್ತು ಆತ ಮಾತನಾಡಿದ ಮೇಲೆಯೇ ಆತ ಯಾವ ವಿಷಯ ಕುರಿತು ಮಾತನಾಡುತ್ತಾನೆಂಬುದು ನನಗೆ ತಿಳಿಯುವುದರಿಂದ, ನಾನು ಆ ಸದಸ್ಯರು ಮಾತನಾಡುವುದನ್ನು ತಡೆಯಲಾಗುವುದಿಲ್ಲ. ಆದ್ದರಿಂದ ಆತ ಏನು ಮಾತನಾಡುತ್ತಾನೆಂಬುದನ್ನು ನಾನು ಕೇಳಬೇಕಾಗಿದೆ. ಇದು ಪ್ರಜಾಸತ್ತಾತ್ಮಕ ದಾರಿ. ನಾವು ನೀವೆಲ್ಲಾ ಸಾಗಬೇಕಾದ ದಾರಿ.

**ಶ್ರೀಮತಿ ದುರ್ಗಾಬಾಯಿ :** ಆದರೆ, ಮಸೂದೆಯೊಳಗಿನ ಕಲಮುಗಳನ್ನು ಉಲ್ಲೇಖಿಸಿ ಮಾತನಾಡಲು ಅವರಿಗೆ ಅವಕಾಶ ಕೊಡಲಾಗುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು :** ತಮ್ಮ ವಿಷಯ ಕುರಿತು ವಾದಿಸಬಯಸುವವರಿಗೆ ಇರುವ ವಾಕ್ ಸ್ವಾತಂತ್ರ್ಯದ ಬಗ್ಗೆ ಮಾನ್ಯ ಸದಸ್ಯರು ಅರಿತವರಾಗಿದ್ದಾರೆ. ಆದರೂ ಮಾನ್ಯ ಸದಸ್ಯರು ಆ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡರೆ ಅಥವಾ ಹೇಳಿದ್ದನ್ನೇ ಹೇಳಿದರೆ, ಖಂಡಿತ ನಾನು ಅವರನ್ನು ತಡೆಯುತ್ತೇನೆ.

**ಶ್ರೀ ರಾಜ ಬಹುದ್ದೂರ(ರಾಜಸ್ಥಾನ) :** ಮಾನ್ಯರೆ, ನೀವು ಕೊಟ್ಟಿರುವ ಅವಕಾಶವನ್ನು ಬಳಸಿಕೊಂಡು ಸದಸ್ಯರು ಸಂವಿಧಾನದ ಉಪಬಂಧಗಳನ್ನು ಪ್ರಸ್ತಾಪಿಸುತ್ತಾ ಸಾರ್ವಜನಿಕ ನೈತಿಕತೆ, ಆರೋಗ್ಯ ಇನ್ನಿತರ ವಿಷಯಕ್ಕೆ ಸಂಬಂಧಿಸಿದಂತೆ ಅವಹೇಳನಕಾರಿ ಪದಗಳನ್ನು ಬಳಸಬಹುದೇ? ಇವೆಲ್ಲಾ ಅರ್ಥವಿಲ್ಲದ ಶಬ್ದಗಳು ಎಂದು ಅವರು ಆಡಬಹುದೆ?

**ಶ್ರೀ ಆರ್.ಕೆ. ಚೌಧರಿ :** ಮಾನ್ಯರೆ, ಸದಸ್ಯರೊಬ್ಬರು ಕ್ರಿಯಾಲೋಪ ಎತ್ತಿದಾಗ ಅದನ್ನು ಸಭಾಧ್ಯಕ್ಷರು ಕೇಳುತ್ತಿರುವಾಗ, ಯಾವುದೇ ಸದಸ್ಯರಿಂದ ಮಧ್ಯೆ ಮಧ್ಯೆ ಅಡೆತಡೆಗಳುಂಟಾಗಬಾರದು.

**ಮಾನ್ಯ ಸಭಾದ್ಯಕ್ಷರು:** ಸದ್ದು, ಸದ್ದು.

**ಶ್ರೀ ನಜೀರುದ್ದೀನ್ ಅಹ್ಮದ್:** ಪ್ರಕರಣ (೧)ರಲ್ಲಿನ ಅನುಚ್ಛೇದ ೨೫ನ್ನು ನಾನು ಉಲ್ಲೇಖಿಸಬಯಸುತ್ತೇನೆ..... "ಸಾರ್ವಜನಿಕ ಸುವ್ಯವಸ್ಥೆ ನೈತಿಕತೆ ಮತ್ತು ಆರೋಗ್ಯ....." ಇದೆಲ್ಲಾ ಅಂತಹ ಗಂಭೀರವಾಗಿ ಪರಿಗಣಿಸುವಂಥ ವಿಷಯವಲ್ಲ. ಇವೆಲ್ಲ ಕಾನೂನಿನ ಅಧಿಕೃತ ಮನ್ನಣೆಯಿರದ ಒಂದು ಬಗೆಯ ಹುಸಿ ರಕ್ಷಣಾ ವಿಧಾನಗಳು. ಮುಂದೆ ಈ ಅನುಚ್ಛೇದ.... ಹೀಗೆ ಹೇಳುತ್ತದೆ... "ಪ್ರತಿಯೊಬ್ಬ ನಾಗರಿಕನೂ ತನ್ನ ಆತ್ಮಸಾಕ್ಷಿಯಾಗಿ ಯಾವುದೇ ಧರ್ಮವನ್ನು ಪಾಲಿಸಲು, ಬೋಧಿಸಲು, ಪ್ರಚಾರ ಮಾಡಲು ಸಮಾನ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ." ಮದುವೆ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರತಿಯೊಬ್ಬ ಹಿಂದುವು ಮದುವೆಯನ್ನು ತಮ್ಮ ಧರ್ಮದ ಒಂದು ವಿಧಿ ಹಾಗೂ ಆಚಾರ ಎಂದು ಭಾವಿಸುತ್ತಾನೆ. ನನಗೆ ಗೊತ್ತಿದ್ದಂತೆ, ವಿವಾಹ ತನ್ನ ಧರ್ಮದ ಒಂದು ಭಾಗ ಎಂದು ಹಿಂದೂ ಭಾವಿಸುತ್ತಾನೆ. ವ್ಯಕ್ತಿಯೊಬ್ಬನಿಗೆ ಪುತ್ರಪ್ರಾಪ್ತಿ ಇಲ್ಲದಿದ್ದರೆ, ಅವನು ತಾನು ನರಕದ ಒಂದು ಭಾಗಕ್ಕೆ ನೂಕಲ್ಪಡುತ್ತೇನೆ ಎಂದು ಭಾವಿಸುತ್ತಾನೆ.

**ಶ್ರೀ ತ್ಯಾಗಿ:** ಸದ್ದು, ಸದ್ದು, ನನಗೆ ಪುತ್ರನಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳುವರೆ? ಸದ್ದು, ಸದ್ದು, ಮಾನ್ಯ ಸದಸ್ಯರಿಗೆ ಅಡ್ಡಿಯುಂಟುಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್:** ನರಕದ ಒಂದು ಭಾಗಕ್ಕೆ ಹೋಗದಿರಲು, ಮನುಷ್ಯನೊಬ್ಬ ಪುತ್ರನನ್ನು ಹೊಂದಲೇಬೇಕು. ಪುತ್ರ ಬೇಕಾದರೆ ಆತ ಮದುವೆಯಾಗಬೇಕು. ಹಿಂದೂ ಆಚರಿಸುವ ಹತ್ತು ಸಂಸ್ಕಾರಗಳಲ್ಲಿ ಇದೂ ಒಂದು. ಇದೊಂದು ಧಾರ್ಮಿಕ ಆಚಾರ, ಪುತ್ರಪ್ರಾಪ್ತಿಗೆ ಆತ ಒಂದೋ ಅಥವಾ ಅದಕ್ಕಿಂತ ಹೆಚ್ಚಿನ ಹೆಂಡತಿಯರನ್ನೋ ಹೊಂದಬೇಕು. ಆದ್ದರಿಂದ ನಾನು ಅನುಚ್ಛೇದ ೨೫(೧)ನ್ನು ಮೂಲಭೂತ ಹಕ್ಕಿಗೆ ಘಾತಕಾರಿ ಎಂದು ಹೇಳಬಯಸುತ್ತೇನೆ. ಕೇವಲ ವಿದ್ವತ್ ಪ್ರದರ್ಶನ ದೃಷ್ಟಿಯಿಂದ ನಾನು ಈ ಪ್ರಶ್ನೆ ಎತ್ತುತ್ತಿಲ್ಲ....ಬಾಂಬೆ ಹೈಕೋರ್ಟ್ ಈ ಪ್ರಕರಣವನ್ನು ಬಳಸಿ "ಬಹುಪತ್ನಿತ್ವ ತಡೆ ಕಾಯ್ದೆ"ಯು ಸಂವಿಧಾನ ಅತೀತವಾದದ್ದು ಎಂದು ನಿರ್ಣಯ ನೀಡಿದೆ.

**ಡಾ. ಅಂಬೇಡ್ಕರ್:** ಬಾಂಬೆ ಹೈಕೋರ್ಟ್‌ನಿಂದ? ನನಗೆ ಗೊತ್ತಿದ್ದಂತೆ ಇರಲಿಕ್ಕಿಲ್ಲ..ಪ್ರಾಯಶಃ ಯಾವುದಾದರೂ ಜಿಲ್ಲಾ ನ್ಯಾಯಾಲಯ(ಮ್ಯಾಜಿಸ್ಟ್ರೇಟ್) ಇರಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್:** ನಮ್ಮ ಮುಂದಿರುವ ಪ್ರಶ್ನೆ, ವಿವಾಹಕ್ಕೆ ಸಂಬಂಧಿಸಿದ ಕೆಲ ವಿಷಯಗಳು ಸಂವಿಧಾನಾತೀತವಿಲ್ಲದಿರಬಹುದೇ ಎನ್ನುವುದಾಗಿದೆ. ಸಂವಿಧಾನದ ಅನುಚ್ಛೇದ ೧೫(೧) ವಿವರಿಸುವ ದೃಷ್ಟಿಯಲ್ಲಿ ತಾರತಮ್ಯಕ್ಕೂ ಅವಕಾಶವಿದೆ. ಈ ಪ್ರಶ್ನೆಯ ಕೆಲ ಮುಖ್ಯವಲ್ಲದ ವಿಷಯಗಳನ್ನು ಕುರಿತ ಹಲವಾರು ಅನುಚ್ಛೇದಗಳೂ ಇವೆ. ಆದರೆ ಸದ್ಯಕ್ಕೆ ಈ ಎರಡನ್ನು ಚರ್ಚಿಸಿದರೆ ಸಾಕು. ಇವುಗಳು ಕಾನೂನು ಸಮ್ಮತವಾಗಿರುವುದು ಅನುಮಾನಾಸ್ಪದವಾಗಿರುವುದರಿಂದ ಮಾನ್ಯ ಸಭಾಧ್ಯಕ್ಷರು ನನ್ನ ಕ್ರಿಯಾಲೋಪವನ್ನು ತಳ್ಳಿಹಾಕಲಾರರೆಂದು ನಾನು ಅಂದುಕೊಂಡಿದ್ದೇನೆ. ಇವುಗಳೇ ಬಹು ದೊಡ್ಡ ತೊಡಕುಗಳಾಗಿರುವುದರಿಂದ, ಈ ಮಸೂದೆಯ ಕಾನೂನುಬದ್ಧತೆಯ ಬಗ್ಗೆ ದಯಮಾಡಿ ವಿವೇಚಿಸಬೇಕೆಂದು ವಿನಂತಿಸುತ್ತೇನೆ. ನಮಗೆ ಗೊತ್ತಿದ್ದಂತೆ ಹಲವಾರು ಕಾನೂನು ಮತ್ತು ವಿಭಾಗಗಳನ್ನು ಸಂವಿಧಾನ ವ್ಯಾಪ್ತಿಯಾಚೆಯವು ಎಂದು ಘೋಷಿಸಲಾಗಿದೆ. ಸಂವಿಧಾನ ರಚನಾ ಸಂದರ್ಭದಲ್ಲಿಯೇ ಆಕ್ಷೇಪಗಳನ್ನು ವ್ಯಕ್ತಪಡಿಸಿ ಇವುಗಳನ್ನು ಸಂವಿಧಾನದ ಆಚೆ ಇಡಬೇಕೆಂದು ನಿರ್ಧರಿಸಲಾಗಿತ್ತು. ಮೂಲಭೂತ ಹಕ್ಕುಗಳನ್ನು ಮತ್ತು ಅವುಗಳ ಜೊತೆ ಕೆಲ ಅಸಂಗತ ವಿಷಯಗಳನ್ನು ಅದರೊಳಗೆ ಸೇರಿಸಿದೆವು. ಅಂಥ ಅಸಂಗತತೆಗಳ ದೃಷ್ಟಿಯಿಂದಲಾದರೂ ಅವುಗಳನ್ನು ಅಸಿಂಧು ಎಂದು ಪರಿಗಣಿಸಬೇಕು. ಬೇರೆ ದಾರಿಯೇ ಉಳಿದಿಲ್ಲ. ಈ ಅನುಚ್ಛೇದದೊಳಗಿರುವ ಯಾವುದೇ ಕಾನೂನು ಕಟ್ಟಳೆಗಳು ಅಸಂಗತವೆನಿಸಿದಲ್ಲಿ, ಅಂಥ ಕಾನೂನು ಮತ್ತು ಕಟ್ಟಳೆಗಳನ್ನು ಅಮಾನ್ಯಗೊಳಿಸಬೇಕು. ನಮ್ಮ ಮುಂದಿರುವ ಪ್ರಶ್ನೆ ಗಂಭೀರ ಇದೆ. ಅಸಿಂಧುವಾದ ಕಾನೂನನ್ನು ಜಾರಿಗೊಳಿಸಲು ನಾವು ಸಿದ್ಧರಿದ್ದೇವೆಯೆ? ನಮಗೆ ನಾವೇ ಬೇಕೆಂದು ಆಯ್ದುಕೊಂಡಿರುವ ಸಂವಿಧಾನದ ರಚನೆಯೊಳಗೆ, ಈ ಮಸೂದೆಯ ಬಗ್ಗೆ ಮರು ಆಲೋಚನೆ ಮಾಡಲಾರವೆ?

ಮಾನ್ಯರೆ, ಈ ಕೆಲವೊಂದು ವಿಷಯಗಳನ್ನು ನಿಮ್ಮ ಅವಗಾಹನೆಗೆ ತರುವ ಪ್ರಯತ್ನವನ್ನು ನಾನು ಮಾಡಿರುವೆ.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ನಜೀರುದ್ದೀನ್ ಅಹ್ಮದ್ ಎತ್ತಿರುವ ಗಂಭೀರ ಅಂಶಗಳ ಬಗ್ಗೆ ನಾನು ವಿವರವಾಗಿ ಪರಿಶೀಲಿಸುವ ಆವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಅವರು ಹೇಳಿದ್ದರ ಬಗ್ಗೆ ನಾನು ಹೀಗೆ ಸಂಕ್ಷಿಪ್ತವಾಗಿ ಉತ್ತರ ಕೊಡಬಹುದೇನೋ– ಅವರು ಒತ್ತಿ ಹೇಳುತ್ತಿರುವ ಮಾತುಗಳು ಸಂವಿಧಾನದ ಕೆಲ

ಅಂಶಗಳ ಮಟ್ಟಿಗೆ ಸತ್ಯವೇ ಹೊರತು–ಎಲ್ಲಾ ಅಂಶಗಳಿಗೂ ಅಲ್ಲ. ಅವರು ಹೇಳುವ ಸಂವಿಧಾನಾತ್ಮಕ ತೊಡಕುಗಳನ್ನು, ಸರಿಯಾದ ಸಂದರ್ಭ ಮತ್ತು ಸಮಯ ಬಂದಾಗ ಹಾಗೂ ಅಂಥ ಚರ್ಚೆಗಳು ಸದನದ ಮುಂದೆ ಬಂದಾಗ ಮಾಡಬಹುದೇ ಹೊರತು ಅದನ್ನೇ ಮುಂದಿಟ್ಟುಕೊಂಡು ಪ್ರಸ್ತುತ ಮಸೂದೆಯ ಪರಿಗಣನೆಯೇ ಬೇಡವೆಂದರೆ – ಅದು ಅವಾಸ್ತವಿಕವಾದೀತು.

ಮಾನ್ಯ ಸದಸ್ಯರು ಎತ್ತಿರುವ ಆಕ್ಷೇಪಗಳಿಗೆ ನಾನು ಹೀಗೆ ಸಂಕ್ಷಿಪ್ತವಾಗಿ ಹೇಳಿ ಅವರ ಎಲ್ಲ ಆಕ್ಷೇಪಗಳನ್ನೂ ತಳ್ಳಿಹಾಕಬಹುದು. ಹಾಗಂತ ನಾನು ಅವರ ದೃಷ್ಟಿಕೋನವನ್ನು ಒಪ್ಪುತ್ತೇನೆ ಎಂದು ಅಲ್ಲ. ಅವರ ದೃಷ್ಟಿಕೋನ ಸರಿ ಇದೆ ಎಂದು ಸಂಬಂಧಿಸಿದ ಅನುಚ್ಛೇದಗಳು ಪರಿಗಣನೆಗೆ ಬರುವವರೆಗೂ ಭಾವಿಸೋಣ. ಪ್ರಸ್ತುತ ಮಸೂದೆಯೊಳಗಿನ ಕೆಲ ಅಂಶಗಳು ಸರಿಯಲ್ಲವೆಂದೆನಿಸಿದರೆ ಅಥವಾ ಕೆಲವರಿಗೆ ನೋವುಂಟುಮಾಡುವ ರೀತಿಯಲ್ಲಿ ಇದೆಯೆಂದು ಅನಿಸಿದರೆ, ಅಥವಾ ಕೆಲ ಅಂಶಗಳನ್ನು ಸೇರಿಸಬೇಕೆನಿಸಿದರೆ, ಈ ಸದನವು ಅಂಥ ಕೆಲಸ ಮಾಡುವ ಎಲ್ಲಾ ಸಕ್ಷಮತೆಯನ್ನು ಹೊಂದಿದೆ. ಆದರೆ ಆರಂಭದಲ್ಲಿಯೇ ಇದನ್ನು ಸಭಾಧ್ಯಕ್ಷರು ನಿರ್ಣಯಿಸಲಾರರು.

ವಿವಾಹ ಎನ್ನುವುದು ನಿಜಕ್ಕೂ ಧರ್ಮಕ್ಕೆ ಸಂಬಂಧಪಟ್ಟದ್ದೋ... ಅದರೊಳಗೇನಾದರೂ ನಿಜಕ್ಕೂ ತಾರತಮ್ಯವುಂಟುಮಾಡುವ ಅಂಶಗಳು ಮಸೂದೆಯಲ್ಲಿವೆಯೋ ಎಂಬ ವಾದ–ವಿವಾದಗಳ ಅರ್ಹತೆ ಬಗ್ಗೆ ನಾನು ಯೋಚಿಸುವ ಅಗತ್ಯವಿಲ್ಲ ಎಂದು ಭಾವಿಸುವೆ. ಈಗ ನಾವು ಮಸೂದೆಗೆ ಸಂಬಂಧಿಸಿದ ಕಲಮುಗಳನ್ನು ಒಂದೊಂದಾಗಿ ಚರ್ಚಿಸೋಣ.

**ಕಲಮು ೨ :** ಸಂಹಿತೆಯನ್ನು ಅನ್ವಯಿಸುವುದು.

**ಪಂಡಿತ ಎ.ಬಿ. ಭಾರ್ಗವ(ಆಜ್ಮೇರ್):** ಕಲಮು ೧ರ ನಂತರ ಎರಡನೆಯ ಹೊಸ ಕಲಮು ಸೇರಿಸಬೇಕೆಂದು ನಾನು ನನ್ನ ಹೆಸರಿನಲ್ಲಿ ತಿದ್ದುಪಡಿ ಕಳಿಸಿರುವೆ.

**ಮಾನ್ಯ ಸಭಾಧ್ಯಕ್ಷರು:** ಹೌದು ಕಳಿಸಿರುವಿರಿ. ಸದಸ್ಯರೇ ಈಗ ಮಂಡನೆ ಮಾಡಿ.

**ಶ್ರೀ ತ್ಯಾಗಿ:** ಮಾನ್ಯರೆ, ಅದಕ್ಕೂ ಮೊದಲು ನೀವು ಈಗ ಕೊಟ್ಟ ಆದೇಶಕ್ಕೆ ಸಂಬಂಧಿಸಿದಂತೆ ಈ ಹಿಂದೆ ಕೊಟ್ಟ ಆದೇಶವನ್ನು ಪ್ರಸ್ತಾಪಿಸಲೆ? ನಾನೊಮ್ಮೆ ಪ್ರಸ್ತುತ ಮಸೂದೆಯು ಸಂವಿಧಾನಕ್ಕೆ ಅತೀತವಾಗಿದೆ ಎಂದು ನೀವು ಘೋಷಿಸಬೇಕೆಂದು ಕೇಳಿದಾಗ ತಾವುಗಳು ಅದನ್ನು ನ್ಯಾಯಾಲಯ ನಿರ್ಧರಿಸುತ್ತದೆ. ಅದು ಈ ಸಭಾಧ್ಯಕ್ಷ ಪೀಠದ ವ್ಯಾಪ್ತಿಯೊಳಗೆ ಬರುವುದಿಲ್ಲವೆಂದಿದ್ದಿರಿ. ನೀವು ಈಗಲೂ ಅದೇ ನಿಲವನ್ನು ಹೊಂದಿರುವಿರೋ ಅಥವಾ ಕೆಲ ಪ್ರಕರಣಗಳನ್ನು ಮಾತ್ರ ಸಂವಿಧಾನಕ್ಕೆ ಅತೀತವಾದವು ಎಂದು ಹೇಳಲು ನಿಮ್ಮ ವಿವೇಚನಾ ಶಕ್ತಿಯನ್ನು ಬಳಸುವಿರೋ.

**ಮಾನ್ಯ ಸಭಾಧ್ಯಕ್ಷರು:** ನಾನು ನನ್ನ ನಿಲುವುಗಳನ್ನು ಬದಲಿಸಿಕೊಳ್ಳಬೇಕಾದ ಪ್ರಮೇಯ ಬಂದಿದೆ ಎಂದು ನನಗನಿಸಿಲ್ಲ. ಅಂಥ ಅಂಶಗಳನ್ನು ತೋರಿಸಿದಲ್ಲಿ ನನ್ನ ನಿರ್ಧಾರವನ್ನು ಪುನರ್ ಪರಿಶೀಲಿಸುತ್ತೇನೆ.

**ಪಂಡಿತ ಠಾಕೂರು ದಾಸ್ ಭಾರ್ಗವ(ಪಂಜಾಬ್):** ಸಾಮಾನ್ಯವಾಗಿ ಎಲ್ಲಾ ಕಲಮುಗಳ ಚರ್ಚೆ ಮುಗಿದ ತರುವಾಯವೇ ೧ನೇ ಕಲಮು ತೆಗೆದುಕೊಳ್ಳುವುದು ಹಿಂದೂ ಮಸೂದೆಗೆ ಸಂಬಂಧಿಸಿದಂತೆ, ಕಲಮು ೧ಕ್ಕೆ ಬಂದಿರುವ ತಿದ್ದುಪಡಿಗಳನ್ನು ನೋಡಿದರೆ, ಅವೆಲ್ಲ ಬಹು ಸಾರಭೂತವಾದ ಪ್ರಶ್ನೆಗಳನ್ನು ಒಳಗೊಂಡಂತೆ ಕಾಣುತ್ತವೆ. ಕೆಲ ರಾಜ್ಯಗಳಲ್ಲಿ ಅವುಗಳನ್ನು ಜಾರಿಗೊಳಿಸುವಂತಹ ಪ್ರಶ್ನೆಗಳಿಗೂ ಸಂಬಂಧಿಸಿವೆ. ಆದೇಶದ ಪತ್ರದ ಮೇಲೆ ಕಲಮು ೧ರ ಕುರಿತು ಬಂದಿರುವ ಎಲ್ಲಾ ತಿದ್ದುಪಡಿಗಳನ್ನೂ ನಮೂದಿಸಿ ಕಲಮು ೧ನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಲು ಸಾಧ್ಯವೇ ಎಂದು ನಾನು ತಮ್ಮಲ್ಲಿ ವಿನಂತಿಸುವೆ.

**ಮಾನ್ಯ ಸಭಾಧ್ಯಕ್ಷರು:** ಕಲಮು ೧ರ ಚರ್ಚೆಯನ್ನು ಕಡೆಯಲ್ಲಿ ಎತ್ತಿಕೊಳ್ಳುವ ಉದ್ದೇಶ, ಅದರ ಸ್ವರೂಪದಲ್ಲಿ ಅಂತಿಮವಾಗಿ ಯಾವ ಯಾವ ಅವಕಾಶಗಳನ್ನು ಅದಕ್ಕೆ ಒದಗಿಸಬಹುದೋ ಎಂಬುದನ್ನು ನೋಡಿ, ಅದಕ್ಕೊಂದು ಖಚಿತ ಸ್ವರೂಪ ಕೊಡಬಹುದೆಂಬ ಉದ್ದೇಶಕ್ಕಾಗಿ. ಬೇಕಾದರೆ ಮಾನ್ಯ ಸದಸ್ಯರು ಕಲಮು(೧)ನ್ನು ನೋಡಿ. ೧ರ ಕಲಮು ಹೀಗೆ ಹೇಳುತ್ತದೆ. (೧)ಮಸೂದೆಗೆ ಯಾವ ಹೆಸರನ್ನು ನೀಡಬೇಕು, ಉಪಕಲಮು – ೨, ಈ ಕಾನೂನಿನ ಪ್ರಾದೇಶಿಕ ವ್ಯಾಪ್ತಿಯ ವಿಸ್ತರಣೆ ಬಗ್ಗೆ ಹೇಳುತ್ತದೆ. ಉಪ ಕಲಮು – ೩ ಯಾವಾಗಿನಿಂದ ಈ ಕಾನೂನನ್ನು ಜಾರಿಗೊಳಿಸಬೇಕೆಂದು ಪ್ರಸ್ತಾಪಿಸುತ್ತದೆ.

**ಪಂಡಿತ ಠಾಕೂರು ದಾಸ್ ಭಾರ್ಗವ:** ಪ್ರಾದೇಶಿಕ ವಿಸ್ತರಣೆಯು ಒಂದು ಮುಖ್ಯ ಪ್ರಶ್ನೆ.

**ಮಾನ್ಯ ಸಭಾಧ್ಯಕ್ಷರು:** ಆ ವಿಷಯಕ್ಕೆ ಸಂಬಂಧವಾಗಿ ಕೂಡ ಇಡೀ ಮಸೂದೆಯನ್ನು ಸರಿಯಾಗಿ ಗ್ರಹಿಸಿ ಅದಕ್ಕೆ ಒದಗಿಸಬಹುದಾದ ಎಲ್ಲಾ ಅಂಶಗಳನ್ನು ಗಮನಿಸಿದ ನಂತರವೇ ಅದರ ಬಗ್ಗೆ ಸ್ಪಷ್ಟವಾಗಿ ಹೇಳಬಹುದು. ಮಸೂದೆಯೊಳಗಿನ ಎಲ್ಲಾ ಅಂಶಗಳನ್ನು ಇಡಿಯಾಗಿ ದೇಶದ ಎಲ್ಲಾ ಭಾಗಗಳಿಗೆ ಅನ್ವಯಿಸಬಹುದೋ, ಅಥವಾ ಕೆಲ ರಾಜ್ಯ ಮತ್ತು ಭಾಗಗಳಿಗೆ ಕೆಲವೊಂದು ಅಂಶಗಳಿಂದ ವಿನಾಯಿತಿ ನೀಡಬಹುದೋ? ನನಗನಿಸಿದಂತೆ, ಕಲಮು ೧ರ ಚರ್ಚೆಯನ್ನು ಕೊನೆಯಲ್ಲಿ ತೆಗೆದುಕೊಂಡರೆ, ಅದರೊಳಗಿನ ಅಂಶಗಳ ಸ್ಪಷ್ಟ ಚಿತ್ರಣವನ್ನು ಸದನವು ಪಡೆಯಬಲ್ಲದು. ಇದೊಂದು ಒಳ್ಳೆಯ ಕ್ರಮವಾಗುತ್ತದೆ. ಈಗ ಕಲಮು–೨ರ ಚರ್ಚೆಯನ್ನು ಮುಂದುವರಿಸೋಣ.

ಪಂಡಿತ ಎಂ.ಬಿ. ಭಾರ್ಗವ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ಕಲಮು ೧ರ ತಿದ್ದುಪಡಿ ಕುರಿತೇ ಹೆಚ್ಚು–ಕಮ್ಮಿ ಹೇಳಬಯಸುತ್ತದೆ. ಮಸೂದೆಯ ಅಂಶಗಳ ಜಾರಿಗೆ ಅವರು ಹೊಸ ಷರತ್ತುಗಳನ್ನು ಮುಂದಿಡಬಯಸಿದ್ದಾರೆ.

**ಡಾ. ಅಂಬೇಡ್ಕರ್ :** ಅದು ನಿಜಕ್ಕೂ ಕಲಮು–೧ರ ತಿದ್ದುಪಡಿಯೆ.

**ಪಂಡಿತ ಎಂ.ಬಿ. ಭಾರ್ಗವ:** ವಿವರಣೆ ನೀಡಲು ನನಗೆ ಅವಕಾಶ ನೀಡಿ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿ ಹೀಗೆ ಹೇಳುತ್ತದೆ. ಈ ಸಂಹಿತೆಯು ಅಥವಾ ಇದರೊಳಗಿನ ಕೆಲಭಾಗಗಳು ಯಾವಾಗ ಪಾರ್ಲಿಮೆಂಟಿನ ಹಿಂದೂ ಮತದಾರರ ಮಂಡಲಿಯ ಬಹುಮತ ಈ ಸದಸನದ ಜನಾಭಿಪ್ರಾಯವನ್ನು ಪಡೆದುಕೊಂಡ ನಂತರವೇ ಜಾರಿಗೆ ತರಲ್ಪಡುತ್ತವೆ. ಇದು ನಿಜಕ್ಕೂ ಕಲಮು ೧ರ ಉಪಕಲಮು ೩ರ ಬಗ್ಗೆ ಮಾತಾಡುತ್ತದೆ. ಆದರೆ ಅದು ಪ್ರತ್ಯೇಕ ಹೊಸ ಕಲಮಿನಂತೆ ತೋರುತ್ತಿದೆ. ಈ ವಿಷಯವಾಗಿ ಮತ್ತೆ ಪ್ರತ್ಯೇಕ ಚರ್ಚೆ ಅಗತ್ಯವಿಲ್ಲ. ಕಲಮು ೨ರ ಚರ್ಚೆಗೆ ನಾನು ಅವಕಾಶ ನೀಡುತ್ತೇನೆ.

**ಶ್ರೀ ಸರ್ವಟೆ(ಮಧ್ಯಭಾರತ):** ಮೊದಲು ಅಧಿಕೃತ ತಿದ್ದುಪಡಿ ಮಂಡಿಸಲ್ಪಡುವುದೋ ಅಥವಾ ನನ್ನದೋ?

**ಮಾನ್ಯ ಸಭಾಧ್ಯಕ್ಷರು:** ನಾನು ಮಸೂದೆಯ ಅಂಶಗಳಿಗನುಗುಣವಾಗಿ ವ್ಯವಸ್ಥಿತವಾಗಿ ಮುಂದುವರಿಯುತ್ತೇನೆ. ಅಧಿಕೃತ ತಿದ್ದುಪಡಿಗಳು ನಂತರ ಬರುತ್ತವೆ.

**ಶ್ರೀಮತಿ ದುರ್ಗಾಬಾಯಿ:** ಮೊದಲು ಅಧಿಕೃತ ತಿದ್ದುಪಡಿಗಳನ್ನು ಮಂಡಿಸಿದರೆ, ನಂತರ ಅವು ಮುಂದೆ ಮಂಡಿಸಬಹುದಾದ ಅಧಿಕೃತವಲ್ಲದ ತಿದ್ದುಪಡಿಗಳನ್ನು ಒಳಗೊಳ್ಳಬಹುದೇನೋ?

**ಮಾನ್ಯ ಸಭಾಧ್ಯಕ್ಷರು:** ವ್ಯವಸ್ಥಿತ ರೀತಿಯಲ್ಲಿ ಮುಂದುವರೆಯೋಣ.

**ಡಾ. ಅಂಬೇಡ್ಕರ್:** ಕಾಲಮಿತಿಯ ದೃಷ್ಟಿಯಿಂದ ನಾನೊಂದು ಸಲಹೆ ಮಂಡಿಸಲೆ?

**ಶ್ರೀತ್ಯಾಗಿ:** ಮಸೂದೆಯನ್ನು ಹಿಂತಕ್ಕೊಳ್ಳಿ. ಅದೇ ಕಾಲವನ್ನು ಉಳಿಸುವ ಸರಿದಾರಿ.

**ಡಾ. ಅಂಬೇಡ್ಕರ್:** ಅದು ಕಾಲವನ್ನು ಅತಿಯಾಗಿ ಉಳಿಸುವ ಮಾತಾಗುತ್ತದೆ. ಸೂಚಿಸಿರುವ ವಿವಿಧ

ತಿದ್ದುಪಡಿಗಳ ಯಾದಿಯನ್ನು ನೀವೊಮ್ಮೆ ನೋಡಿ, ಅವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಒಂದೇ ತೆರನಾಗಿವೆ. ಯಾವುದೇ ತಿದ್ದುಪಡಿಯು, ಇತರ ತಿದ್ದುಪಡಿಗಳಿಗಿಂತ ವಿಶೇಷವಾಗಿ ಎದ್ದು ಕಾಣುತ್ತಿಲ್ಲ. ಆದ್ದರಿಂದ ನಾನೊಂದು ಸಲಹೆ ಸೂಚಿಸುತ್ತಿದ್ದೇನೆ. ಎಲ್ಲಾ ಸದಸ್ಯರು ತಮ್ಮ ತಮ್ಮ ತಿದ್ದುಪಡಿಗಳನ್ನು ಸೂಚಿಸಲು ಅವಕಾಶ ಮಾಡಿಕೊಟ್ಟು ನಂತರ ಒಂದು ಸಾಮಾನ್ಯ ಚರ್ಚೆಯೊಂದನ್ನು ನಡೆಸಿ, ಅದನ್ನು ಮುಗಿಸಿಬಿಟ್ಟು, ನಂತರ ಮತ್ತೊಂದು ತಿದ್ದುಪಡಿಯೊಂದನ್ನು ತೆಗೆದುಕೊಂಡು ಚರ್ಚಿಸಿ ಅದನ್ನು ಮುಗಿಸಿಬಿಡಬಹುದು. ಕಾಲವನ್ನು ಉಳಿಸಬಹುದೆಂಬ ಉದ್ದೇಶದಿಂದ ನಾನು ಈ ಕ್ರಮವನ್ನು ಸೂಚಿಸುತ್ತಿದ್ದೇನೆ. ನಿಮಗೆ ಮನವರಿಕೆಯಾಗಬಹುದು.

**ಮಾನ್ಯ ಸಭಾಧ್ಯಕ್ಷರು :** ಹಾಗೆ ನೋಡಿದರೆ, ನಾವು ಅದೇ ಮಾರ್ಗವನ್ನು ಅನುಸರಿಸುತ್ತಿದ್ದೆವು. ಯಾವಾಗ ತಿದ್ದುಪಡಿಗಳು ಸಮಾನ ಅಂಶವನ್ನು ಹೊಂದಿರುತ್ತಿದ್ದವೋ, ಆಗ ಎಲ್ಲಾ ತಿದ್ದುಪಡಿಗಳನ್ನು ಮಂಡಿಸಿ ಸಾಮಾನ್ಯ ಚರ್ಚೆಯೊಂದನ್ನು ಕೈಗೆತ್ತಿಕೊಳ್ಳಲಾಗುತ್ತಿತ್ತು. ಈ ಹಿಂದೆ ಕೂಡ ಇದೇ ವಿಧಾನವನ್ನು ಪಾಲಿಸಲಾಗುತ್ತಿತ್ತು. ಅದನ್ನೆ ನಾನು ಈಗ ಪಾಲಿಸಬಯಸುತ್ತೇನೆ.

**ಶ್ರೀ ಸರ್ವಟೆ :** ನಾನು ಮಂಡನೆ ಮಾಡಲು ಬೇಡುತ್ತೇನೆ. ಕಲಮು(೨)ರ ಬದಲು ಸೇರಿಸಿ

(೨)ಸಂಹಿತೆಯ ಅನ್ವಯಿಸುವಿಕೆ

(೧) ಈ ಸಂಹಿತೆ ಎಲ್ಲಾ ಹಿಂದುಗಳಿಗೆ ಅನ್ವಯಿಸುತ್ತದೆ.

(೨) ಈ ಸಂಹಿತೆಯಲ್ಲಿನ **"ಹಿಂದೂ"** ಎಂಬ ಪದ, ಬೇರೆ ಯಾವ ರೀತಿಯಲ್ಲಿ ಉಪಬಂಧಿಸದಿದ್ದರೆ, ಭಾರತದ ಪ್ರಜೆಯೆಂದೇ ಅರ್ಥಮಾಡಿಕೊಳ್ಳಬೇಕು.

(೩) ವಿಶೇಷ ವಿವಾದ ಅಧಿನಿಯಮದಲ್ಲಿ ೧೮೭೨(೧೮೭೨ರ iii ನೆಯದು) ಏನೇ ಹೇಳಿರಲಿ ಈ ಸಂಹಿತೆ ಆ ಅಧಿನಿಯಮದಲ್ಲಿ ವಿವರಿಸಿರುವ ಹಾಗೆ ಎಲ್ಲಾ ಹಿಂದೂಗಳಿಗೆ ಅನ್ವಯಿಸುತ್ತದೆ.

ಪ್ರಾರಂಭವಾಗುವ ಮೊದಲು ಯಾರ್‍ಯಾರ ಮದುವೆಗಳು ಆ ಕಾನೂನಿನನ್ವಯ ವಿಧಿವತ್ತಾಗಿ ಜರುಗಿಲ್ಲವೋ, ಆ ಎಲ್ಲ ಹಿಂದೂಗಳಿಗೂ ಅನ್ವಯಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಇನ್ನೊಂದು ವಿಷಯ ಕುರಿತು ಸಲಹೆ ಮಾಡುತ್ತೇನೆ. ಮುದ್ರಿತವಾದ ಆ ಎಲ್ಲಾ ತಿದ್ದುಪಡಿಗಳು, ಹಾಗೆಯೇ ಇತರ ತಿದ್ದುಪಡಿಗಳನ್ನು ಈಗಾಗಲೇ ವಿತರಿಸಲಾಗಿದೆ. ಆದ್ದರಿಂದ ಸದಸ್ಯರು ತಿದ್ದುಪಡಿಗಳನ್ನು ಮಂಡಿಸುವಾಗ ಅವುಗಳ ಸಂಖ್ಯೆ ಹೇಳಿದರೆ ಸಾಕು, ನಾನು ಆ ತಿದ್ದುಪಡಿಗಳನ್ನು ಗಮನಿಸುತ್ತೇನೆ. ಒಂದು ಪ್ರಕರಣಕ್ಕೆ ಸಂಬಂಧಿಸಿದ, ಒಂದು ವಿಷಯ ಕುರಿತ ಎಲ್ಲಾ ತಿದ್ದುಪಡಿಗಳನ್ನು ಪ್ರಸ್ತಾಪಿಸಿ ನಂತರ ಚರ್ಚಿಸಬಹುದು.

**ಶ್ರೀ ತ್ಯಾಗಿ :** ಯಾವ ಅಂಶದ ತಿದ್ದುಪಡಿಯಾಗಬೇಕೋ ಅಂಥ ತಿದ್ದುಪಡಿಯನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಚರ್ಚಿಸಬಹುದು.

**ಸನ್ಮಾನ್ಯ ಸಭಾಧ್ಯಕ್ಷರು :** ಹೌದು.

**ಸಾರಿಗೆ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವರು (ಶ್ರೀ ಸಂತಾನಂ) :** ಮಾನ್ಯರೇ ಹಿಂದೂ ಸಂಹಿತೆಯ ಮೂಲಕ್ಕೇ ವಿರುದ್ಧವಾಗಿ ಹೋಗುವುದು ಸರಿಯಾಗುತ್ತದೆಯೆ? ತಿದ್ದುಪಡಿಯು, ಮಸೂದೆಯನ್ನು ಎಲ್ಲಾ ಕ್ರಿಶ್ಚಿಯನ್ನರಿಗೂ, ಮುಸ್ಲಿಮರಿಗೂ ಮತ್ತು ಇನ್ನಿತರರಿಗೂ ಅನ್ವಯಿಸಬಯಸುತ್ತದೆ. ಇದು ಸಂಹಿತೆಯನ್ನು ಮೀರಿ ಹೋದಂತಾಗುವುದಿಲ್ಲವೆ? ಈ ವಿಷಯವಾಗಿ ನಾನು ತಮ್ಮಿಂದ ಆದೇಶವನ್ನು ಬಯಸುತ್ತೇನೆ.

**ಸನ್ಮಾನ್ಯ ಸಭಾಧ್ಯಕ್ಷರು :** ಮೊದಲು ತಿದ್ದುಪಡಿಗಳನ್ನು ಮಂಡಿಸಲಿ.

**ಶ್ರೀ ತ್ಯಾಗಿ :** ಈ ತಿದ್ದುಪಡಿಯು ಮುಸ್ಲಿಮರನ್ನು ಹಿಂದೂಗಳನ್ನಾಗಿಸಬಯಸುತ್ತದೆ. ಇದು ಕಾನೂನಿನ ಮತ್ತು ಸಂವಿಧಾನ ವಿರೋಧಿ ಕ್ರಮ. ಪ್ರತಿಯೊಬ್ಬರಿಗೂ ಅವರವರ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯವನ್ನು ನೀಡಲಾಗಿದ್ದು, ಹಿಂದೂ ಮಸೂದೆಯ ವ್ಯಾಪ್ತಿಗೆ ಮುಸ್ಲಿಮರನ್ನು, ಕ್ರಿಶ್ಚಿಯನ್ನರನ್ನು ಒಳಪಡಿಸಲೆತ್ನಿಸುವುದು, ಅವರ ಧರ್ಮದೊಳಕ್ಕೆ ತಲೆಹಾಕಿದಂತಾಗುತ್ತದೆ.

**ಸನ್ಮಾನ್ಯ ಸಭಾಧ್ಯಕ್ಷರು :** ಮೊದಲು ತಿದ್ದುಪಡಿಗಳನ್ನು ಮಂಡಿಸಲಿ.

**ಶ್ರೀ ತ್ಯಾಗಿ :** ಈ ತಿದ್ದುಪಡಿಯನ್ನು ಈಗಾಗಲೆ ಮಂಡಿಸಲಾಗಿದೆ. ಆದ್ದರಿಂದ ಅದು ಅಪ್ರಸ್ತುತ.

**ಶ್ರೀ ಇಂದ್ರ ವಿದ್ಯಾವಾಚಸ್ಪತಿ(ಉತ್ತರ ಪ್ರದೇಶ):** ನಾನು ಮಂಡಿಸಲು ವಿನಂತಿಸುತ್ತೇನೆ.

ಕಲಮು೨ರ ಬದಲು: "೨ ಈ ಸಂಹಿತೆಯು ಭಾರತೀಯರೆಲ್ಲರಿಗೂ ಅವರ ಧರ್ಮ, ಜಾತಿ, ಜನಾಂಗಗಳ ಹೊರತಾಗಿಯೂ"

**ಪಂಡಿತ ಠಾಕೂರ್ ದಾಸ್ ಭಾರ್ಗವ:** ನಾನು ಮಂಡಿಸಲು ವಿನಂತಿಸುತ್ತೇನೆ.

ಕಲಮು ೨ರ ಬದಲು

"೨ ಈ ಸಂಹಿತೆಯ ಭಾಗ ೧ರ ಉಪಬಂಧಕ್ಕೆ ಒಳಪಟ್ಟು ಈ ಸಂಹಿತೆ:

(ಎ) ಎಲ್ಲಾ ಜನರಿಗೆ, ಯಾರು ಧರ್ಮದಿಂದ ಹಿಂದೂಗಳು, ಬೌದ್ಧರೂ, ಜೈನರೂ, ಸಿಖ್ಖರೂ ಅವರಿಗೆ

(ಬಿ) ಯಾವ ಜನರು, ಧರ್ಮದಿಂದ ಮುಸ್ಲಿಮರು, ಕ್ರಿಶ್ಚಿಯನ್ನರು, ಪಾರ್ಸಿಗಳು ಅಥವಾ ಯಹೂದಿಗಳಲ್ಲವೋ ಅವರಿಗೆ

(ಸಿ) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮಕ್ಕೆ ಸಂಬಂಧಿಸಿಲ್ಲದವನನ್ನು ಮದುವೆಯಾಗುವ ಪ್ರತಿಯೊಂದು ಹೆಣ್ಣಿಗೂ

(ಡಿ) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಧರ್ಮಕ್ಕೆ ಸಂಬಂಧಿಸಿಲ್ಲದ ಪಾಲಕರಿಗೆ ಜನಿಸುವ ಅಕ್ರಮ ಅಥವಾ ಸಕ್ರಮ ಕೂಸಿಗೆ,

(ಇ) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮಬಿಟ್ಟು ಉಳಿದ ಯಾವುದೇ ಧರ್ಮಕ್ಕೆ ಮತಾಂತರ ಹೊಂದುವವರಿಗೆ

(ಎಫ್) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮ ಬಿಟ್ಟು ಉಳಿದ ಯಾವುದೇ ಧರ್ಮಕ್ಕೆ ಮತಾಂತರ ಹೊಂದುವವರಿಗೆ ಅನ್ವಯಿಸುತ್ತದೆ.

**ಶ್ರೀ ಝುಂಝುನವಾಲಾ (ಬಿಹಾರ) :** ನಾನು ಮಂಡಿಸಲು ವಿನಂತಿಸುತ್ತೇನೆ.

ಕಲಮು೨ರ ಬದಲು

೨ ಸಂಹಿತೆ ಅನ್ವಯವಾಗುವುದು ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅವರ ಜಾತಿ, ಜನಾಂಗ, ಅವರ ಸಂಪನ್ಮೂಲ ಅಥವಾ ಅವರು ಪಾಲಿಸುವ ಧರ್ಮವನ್ನು ಹೊರತುಪಡಿಸಿ, ಈ ಸಂಹಿತೆ ಅನ್ವಯವಾಗುತ್ತದೆ.

**ಡಾ. ಅಂಬೇಡ್ಕರ್ :** ನಾನು ಮಂಡಿಸಲು ವಿನಂತಿಸುತ್ತೇನೆ.

ಕಲಮು ೨ರಲ್ಲಿ

೧) ಉಪ ಕಲಮು ೧

(೧) ಭಾಗ(ಎ)ನಲ್ಲಿ "ಹಿಂದುಗಳೆಂದರೆ–ಹಿಂದೂಧರ್ಮವನ್ನು ಪಾಲಿಸುವ ಎಲ್ಲ ಜನರು" ಎಂಬುದಕ್ಕೆ ಬದಲು "ಧರ್ಮದಿಂದ ಯಾರು ಹಿಂದೂಗಳೋ ಅವರು"

II ರ ಭಾಗದಲ್ಲಿ (ಡಿ) "ಹಿಂದೂಧರ್ಮ"ಕ್ಕೆ ಬದಲು ಹಿಂದೂ, ಬೌದ್ಧ ಅಥವಾ ಜೈನ, ಸಿಖ್ಖ ಧರ್ಮ"

(೨) ೪ನೆಯ ಉಪಕಲಮು ಬಿಟ್ಟುಬಿಡಿ.

**ಶ್ರೀ ನಜೀರುದ್ದೀನ್ ಅಹ್ಮದ್** : ನಾನು ಮಂಡಿಸಲು ವಿನಂತಿಸುತ್ತೇನೆ.

(೧) ಕಲಮು ೨ರ ಉಪಕಲಮು ೧ರ ಭಾಗ(ಎ)ಇದರಲ್ಲಿ "ಹಿಂದೂಗಳೆಂದರೆ, ಹಿಂದೂ ಧರ್ಮವನ್ನು ಪಾಲಿಸುವ ಎಲ್ಲಾ ಜನರು"ಎಂಬುದಕ್ಕೆ ಬದಲಿಗೆ "ಧರ್ಮದಿಂದ ಯಾರು ಹಿಂದೂಗಳೋ ಅವರು"

(೧) ಕಲಮು ೨ರ ಉಪಕಲಮು ೧ರ ಭಾಗ(ಬಿ) ಅನ್ನು ಬಿಟ್ಟುಬಿಡಿ.

(೨) ಕಲಮು ೨ರ ಉಪಕಲಮು ೧ರ (ಬಿ)ಭಾಗಕ್ಕೆ ಬದಲಿಗೆ

(೩) (ಬಿ) ಧರ್ಮದಿಂದ ಯಾರು ಬೌದ್ಧರೋ, ಜೈನರೋ, ಸಿಖ್ಖರೋ ಅವರೆಲ್ಲರಿಗೂ ಎಂದು ಸೇರಿಸಿ.

(೪) ಕಲಮು ೨ರ ಉಪ ಕಲಮು (೧)ರ (ಬಿ) ಭಾಗದಲ್ಲಿ ಜೈನ ಅಥವಾ ಸಿಖ್ ಪದಗಳಿಗೆ ಬದಲಿಗೆ 'ಅಥವಾ ಜೈನ' ಎಂದು ಸೇರಿಸಿ.

**ಸರ್ದಾರ್ ಹುಕುಂ ಸಿಂಗ್ (ಪಂಜಾಬ್)** : ನಾನು ಮಂಡಿಸಲು ಬೇಡುತ್ತೇನೆ

ಕಲಮು ೨ರ ಉಪಕಲಮು (೧)ರ (ಬಿ)ಭಾಗದಿಂದ "ಅಥವಾ ಸಿಖ್ಖ್" ತೆಗೆಯಿರಿ.

**ಶ್ರೀ ನಜೀರುದ್ದೀನ್ ಅಹ್ಮದ್** : ನಾನು ಮಂಡಿಸಲು ಬೇಡುತ್ತೇನೆ.

(೧) ಕಲಮು ೨ರ (೧)ರ ಉಪ ಕಲಮು(೧)ರ (ಸಿ) ಭಾಗದಲ್ಲಿ "ಅಕ್ರಮ" ನಂತರ "ಯಾರಿಗೆ ಹದಿನೆಂಟು ವರ್ಷ ತುಂಬಿರುತ್ತದೋ, ಅವ ತಾನೇ ಹಿಂದೂ ಮತ್ತು" ಎಂದು ಸೇರಿಸಿ

(೨) (೨)ಕಲಮು ೨ರಲ್ಲಿ ಉಪಕಲಮು(೧)ರಲ್ಲಿ (ಸಿ) ಭಾಗದಲ್ಲಿ ಇರುವ "ಯಾರ ತಂದೆ ತಾಯಿ ಹಿಂದೂಗಳೋ" ಎಂಬುದಕ್ಕೆ ಬದಲಿಗೆ ಎಂಬುದನ್ನು ಸೇರಿಸಿ.

(೩) ಕಲಮು ೨ರಲ್ಲಿ ಉಪಕಲಮು (೧)ರ ಭಾಗದ(ii)ಸೇರಿರುವ ಅಥವಾ ಸೇರಿದ್ದ ತರುವಾಯ, "ಯಾರು ಹದಿನೆಂಟು ವರ್ಷಗಳ ವಯಸ್ಸನ್ನು ಮುಟ್ಟುತ್ತಾನೋ, ಅವ ತಾನೆ ಹಿಂದೂ" ಎಂಬುದನ್ನು ಸೇರಿಸಿ.

**ಶ್ರೀ ಎಸ್.ಪಿ ಮಿಶ್ರಾ (ಉತ್ತರ ಪ್ರದೇಶ)** : ನಾನು ಮಂಡಿಸಲು ಬೇಡುತ್ತೇನೆ. ಕಲಮು ೨ರ ಉಪ ಕಲಮು(i)ರ ಭಾಗ(ಸಿ) (ii) ನಂತರ

(iii) "ಯಾವುದೇ ತ್ಯಜಿಸಿಬಿಟ್ಟಿರುವ ಮಗುವನ್ನು ಸಮುದಾಯದ ಗುಂಪೊಂದರ ಕುಟುಂಬವೊಂದರ ಸದಸ್ಯನನ್ನಾಗಿ ಸಲುಹಿದ ಅಂಥ ತಂದೆತಾಯಿಗಳಿಗೆ ಸೇರಿದ" ಎಂಬುದನ್ನು ಸೇರಿಸಿ

**ಶ್ರೀ ನಜೀರುದ್ದೀನ್ ಅಹ್ಮದ್** : ನಾನು ಮಂಡಿಸಲು ಬಯಸುತ್ತೇನೆ.

ಕಲಮು (೨) ಉಪ ಕಲಮು ೧ರ ಡಿ ಭಾಗಕ್ಕೆ ಬದಲಿಗೆ

(ಡಿ) ಮತಾಂತರಕ್ಕೆ ಪೂರ್ವ ಇರುವ ಹಕ್ಕುಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳಿಗೆ ಬದ್ಧನಾಗಿ ಹಿಂದೂಧರ್ಮಕ್ಕೆ ಮತಾಂತರ ಹೊಂದಿದವನು ಎಂದು ಸೇರಿಸಿ.

**ಬಾಬು ಗೋಪಿನಾಥ ಸಿಂಗ್ (ಉತ್ತರ ಪ್ರದೇಶ) :** ನಾನು ಮಂಡಿಸಲು ಬೇಡುತ್ತೇನೆ. ಕಲಮು ೨ರ ಉಪ ಕಲಮು ೧ರ ಭಾಗ(ಡಿ)ಯಲ್ಲಿ ಸೇರಿಸಿ

(ಇ) ತನ್ನ ಜೀವಿತ ಅವಧಿಯಲ್ಲಿ ಬೌದ್ಧ, ಜೈನ ಅಥವಾ ಹಿಂದೂಧರ್ಮದಿಂದ ಮುಸ್ಲಿಂ ಅಥವಾ ಕ್ರಿಶ್ಚಿಯನ್‌ಗೆ ಮತಾಂತರ ಹೊಂದಿದ.......

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮಂಡಿಸಲು ವಿನಂತಿಸುತ್ತೇನೆ.

ಕಲಮು ೨ರ ಉಪಕಲಮು ೨ಅನ್ನು ಬಿಡಿ.

**ಸರ್ದಾರ್ ಹುಕುಂಸಿಂಗ್ :** ನಾನು ಮಂಡಿಸಲು ವಿನಂತಿಸುವೆ.

ಕಲಮು ೨ರ ಉಪಕಲಮು (೨)ರ **"ಫಾರ್ಸಿ"** ನಂತರ "ಸಿಖ್ಖ್" ಸೇರಿಸಿ

**ಶ್ರೀ ಬ್ರಜೇಶ್ವರ ಪ್ರಸಾದ್ (ಬಿಹಾರ) :** ನಾನು ಮಂಡಿಸಲು ವಿನಂತಿಸುತ್ತೇನೆ. ಕಲಮು ೨ರ ಉಪಕಲಮು ೨ರ ನಂತರ

(೨ಎ) "ಹಿಂದೂವನ್ನೋ, ಬೌದ್ಧನನ್ನೋ, ಜೈನನನ್ನೋ ಅಥವಾ ಸಿಖ್ಖನನ್ನೋ ಮದುವೆಯಾದ ಹೆಣ್ಣಿಗೆ ಈ ಕಾನೂನಿನ ಸಂಹಿತೆ ಅನ್ವಯವಾಗುತ್ತದೆ" ಎಂದು ಸೇರಿಸಿ

ಶ್ರೀ ನಜೀರುದ್ದೀನ್ ಅಹ್ಮದ್: ನಾನು ಮಂಡಿಸಲು ವಿನಂತಿಸುತ್ತೇನೆ.

(i) ಕಲಮು ೨ರ ಉಪಕಲಮು(೩)ನ್ನು ಬಿಡಿ

(ii) ಕಲಮು ೨ರ ಉಪಕಲಮು(೪)ನ್ನು ಬಿಡಿ

(iii) ಕಲಮು ೨ರ ಉಪಕಲಮು(೪)ರ ನಂತರ ಸೇರಿಸಿ :

"ಈ ಭಾಗದಲ್ಲಿ ಏನೇ ಹೇಳಿರಲಿ ಈ ಸಂಹಿತೆಯು, ಕಾಲಕಾಲಕ್ಕೆ, ಹಂತಹಂತವಾಗಿ ರಾಜ್ಯಗಳ ಶಾಸಕಾಂಗ ಸಭೆಯು ಹೊರಡಿಸುವ ಅಧಿನಿಯಮದಂತೆ, ಕೇವಲ ಆ ಪ್ರದೇಶಗಳಿಗೆ ಅಥವಾ ಆ ಜನರಿಗೆ, ಅಥವಾ ಆಯಾರಾಜ್ಯದಲ್ಲಿನ ಆ ವರ್ಗದ ಜನರಿಗೆ, ಅನ್ವಯಿಸಲ್ಪಡುವುದು"

**ಶ್ರೀ ಝುಂಝುನವಾಲಾ :** ನಾನು ಮಂಡಿಸಲು ಬೇಡುತ್ತೇನೆ.

ಕಲಮು(೨)ಕ್ಕೆ ಈ ಉಪಬಂಧವನ್ನು ಸೇರಿಸಿ. "ಮೇಲಿನ ಕಲಮುಗಳಲ್ಲಿ ಏನೇ ಹೇಳಿರಲಿ.ಈ ಸಂಹಿತೆ, ಈ ಸದನ ಸೂಚಿಸುವ ರೀತಿಯಲ್ಲಿ ಮತ್ತು ಮಾದರಿಯಲ್ಲಿ ಯಾವುದೇ ವ್ಯಕ್ತಿ ತನ್ನ ಹೆಸರನ್ನು ಈ ಸಂಹಿತೆ ಜಾರಿಗೆ ಬಂದ ಒಂದು ವರ್ಷದೊಳಗೆ ಸೂಚಿತ ಪ್ರಾಧಿಕಾರದ ಕಚೇರಿಯಲ್ಲಿ ನೊಂದಾಯಿಸಿಕೊಳ್ಳದಿದ್ದಲ್ಲಿ ಅವನಿಗೆ ಅನ್ವಯವಾಗುವುದಿಲ್ಲ. ಅಪ್ರಾಪ್ತ ವಯಸ್ಕರು ಪ್ರಾಪ್ತ ವಯಸ್ಸನ್ನು ಮುಟ್ಟಿದ ಒಂದು ವರ್ಷದೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು."

**ಮಾನ್ಯ ಸಭಾಧ್ಯಕ್ಷರು :** ಯಾವ ಸದಸ್ಯರು ತಿದ್ದುಪಡಿಯನ್ನು ಅಥವಾ ತಿದ್ದುಪಡಿಗಳನ್ನು ಕಳಿಸಿದ್ದಾರೋ ನಾನು ಅನುಕ್ರಮವಾಗಿ ಅವರ ಹೆಸರನ್ನು ಕರೆಯುತ್ತಿದ್ದಾಗ, ಶ್ರೀ ಶಿವಚರಣಲಾಲಾ, ಮತ್ತು ಪ್ರೊ. ಕೆ.ಕೆ. ಭಟ್ಟಾಚಾರ್ಯ ಅವರನ್ನು ಕರೆದಾಗ, ಅವರು ಗೈರುಹಾಜರಾಗಿರುವುದು ನನ್ನ ಗಮನಕ್ಕೆ ಬಂದಿದೆ. ನಾವು ತಿದ್ದುಪಡಿಗಳ ಸಂಖ್ಯೆಯ ಪ್ರಕಾರ ಮುಂದುವರಿಯುತ್ತಿರುವ ವಿಧಾನದಿಂದಾಗಿ, ಅವರುಗಳಿಗೆ ಇಷ್ಟು ಬೇಗ ತಮಗೆ ತಿದ್ದುಪಡಿ ಮಂಡಿಸಲು ಕರೆ ಬರುತ್ತದೆಯೆಂದು ಭಾವಿಸಿರಲಿಕ್ಕಿಲ್ಲ. ಮಸೂದೆಯ ಬಗ್ಗೆ ನಾವು ಚರ್ಚೆಯನ್ನು ಆರಂಭಿಸಿದಾಗ, ಅವರು ಸದನದಲ್ಲಿ ಆಸೀನರಾಗಿದ್ದಿರಬೇಕು. ಅವರು ಸದನಕ್ಕೆ ಮರಳಿ ಬಂದಾಗ ಅವರು ಬಯಸಿದಲ್ಲಿ ನಾನು ಅವರಿಗೆ ಅವರ ತಿದ್ದುಪಡಿಗಳನ್ನು ಮಂಡಿಸಲು ಈ ಕಲಮಿನ ಚರ್ಚೆಯ ವೇಳೆ ಅವಕಾಶ ಕಲ್ಪಿಸಬೇಕೆಂದು ಯೋಚಿಸಿದ್ದೇನೆ.

**ಶ್ರೀ ಜೆ.ಆರ್. ಕಪೂರ್(ಉತ್ತರ ಪ್ರದೇಶ) :** ಮಾನ್ಯರೆ, ನಾನು ಎರಡು ತಿದ್ದುಪಡಿಗಳ ಬಗ್ಗೆ ಸೂಚನೆ ಸಲ್ಲಿಸಿದ್ದೇನೆ. ಅದರಲ್ಲಿ ಒಂದು ಝುಂಝುನವಾಲ ಅವರ ತಿದ್ದುಪಡಿ ನಂ. ೧೮ ಪೂರಕ ಪಟ್ಟಿ ನಂ. ೧ಕ್ಕೆ ಸಲ್ಲಿಸಿದ ತಿದ್ದುಪಡಿಯಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಇನ್ನು ಮುಂದಿನ ತಿದ್ದುಪಡಿಯನ್ನು ಸಲ್ಲಿಸುವಿರೋ?

**ಶ್ರೀ ಜೆ.ಆರ್. ಕಪೂರ್ :** ಇಲ್ಲ ಸಾರ್, ನನ್ನನ್ನು ಹಾಗೆ ಕರೆಯಬೇಕಾಗಿತ್ತು, ಆದರೆ ಸಂಖ್ಯೆ –೨ಕ್ಕೆ ಸಂಬಂಧಿಸಿದಂತೆ ಅಲ್ಲ.

**ಮಾನ್ಯ ಸಭಾಧ್ಯಕ್ಷರು :** ಅದು ಸರಿ ನಂ.೨, ಝುಂಝುನ್‌ವಾಲಾ ಅವರ ತಿದ್ದುಪಡಿಗೆ ಕಳಿಸಿದ ತಿದ್ದುಪಡಿ. ಅದನ್ನು ನಾನು ಮಂಡನೆ ಮಾಡುವುದಕ್ಕೆ ಅಂಗೀಕರಿಸಿದ್ದೇನೆ.

**ಶ್ರೀ ಜೆ.ಆರ್. ಕಪೂರ್ :** ಮಾನ್ಯ ಝುಂಝುನವಾಲಾ ಅವರ ತಿದ್ದುಪಡಿ ನಂ.೧೩ಕ್ಕೆ ನಾನು ತಿದ್ದುಪಡಿಯ ನಂ. ೧ನ್ನು ಸೂಚನಾ ಕಚೇರಿಯಲ್ಲಿ ಸಲ್ಲಿಸಿದ್ದರೂ, ಆ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಮೂಲ ತಿದ್ದುಪಡಿಯ ರೂಪದಲ್ಲಿ ರೂಪಿಸಿರುತ್ತೇನೆ. ಅದನ್ನು ಇನ್ನೂ ಸರಿಯಾದ ರೂಪದಲ್ಲಿ ಮಂಡಿಸಲು ಕಚೇರಿಯವರು ಪ್ರತ್ಯೇಕ ತಿದ್ದುಪಡಿಯ ರೂಪದಲ್ಲಿ ನೀಡಿದ್ದಾರೆ. ಆದ್ದರಿಂದ ತಾವು ಅದಕ್ಕೆ ಸಮ್ಮತಿಸುತ್ತೀರಿ ಎಂದು ಭಾವಿಸುತ್ತೇನೆ. ಅದನ್ನು ಚರ್ಚೆಗೆ ತೆಗೆದುಕೊಳ್ಳುವುದರಿಂದ, ಮತ್ತು ಚರ್ಚೆಗೆ ಅಂಗೀಕರಿಸುವುದರಿಂದ, ಸದ್ಯದ ವಿಷಯದ ವಿಲೇವಾರಿಗೆ ಏನು ಬಾಧೆಯಾಗಲಾರದು.

**ಮಾನ್ಯ ಸಭಾಧ್ಯಕ್ಷರು :** ಇದು ವಿಲೇವಾರಿಯ ಪ್ರಶ್ನೆ ಅಲ್ಲ. ಕೊನೆ ಕ್ಷಣಗಳಲ್ಲಿ ಹೀಗೆ ತಿದ್ದುಪಡಿಗಳನ್ನು ಸ್ವೀಕರಿಸುತ್ತಾ ಹೋದರೆ, ಮತದಾನದ ಹಂತದವರೆಗೂ ಅವುಗಳು ಬರುತ್ತಲೇ ಹೋಗುತ್ತವೆ. ಆದ್ದರಿಂದ ನಾನು ಮನ್ನಿಸುವುದಿಲ್ಲ.

**ಶ್ರೀ ಜೆ.ಆರ್. ಕಪೂರ್ :** ಮಾನ್ಯರೆ, ನಾನಿದನ್ನು ಈ ಪ್ರಕರಣದ ಒಂದು ವಿಶೇಷ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲು ಬಯಸಿದ್ದೇನೆ. ನಾನು ಮಾನ್ಯ ಝುಂಝುನವಾಲಾ ಅವರ ತಿದ್ದುಪಡಿ ನಂ.೧೩ರ ಹೆಚ್ಚುವರಿ ಪಟ್ಟಿಯ ನಂ. ೧ಕ್ಕೆ ಮೊದಲ ತಿದ್ದುಪಡಿಯನ್ನು ಸಲ್ಲಿಸಿದ್ದೆ. ಆದರೆ ಆದಕ್ಕೆ ಇನ್ನೂ ಉತ್ತಮ ರೂಪ ಕೊಟ್ಟು ಪ್ರತ್ಯೇಕವಾಗಿ ಮುಖ್ಯ ತಿದ್ದುಪಡಿಯನ್ನಾಗಿ ಮಂಡಿಸಲು ಕಚೇರಿಯವರು ಸೂಚಿಸಿದರು. ಮಾನ್ಯ ಸಭಾಧ್ಯಕ್ಷರು ಬಯಸಿದಲ್ಲಿ ಅದನ್ನು ಮೂಲರೂಪದಲ್ಲಿಯೇ ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ಒಳ್ಳೇದು ಆಗಲಿ, ಅದು ಬೇರೆ ರೂಪದಲ್ಲಿ ಬದಲಾಗಿರುವುದರಿಂದ ಅದನ್ನು ಮಂಡಿಸಲು ಅವಕಾಶ ನೀಡುತ್ತೇನೆ.

**ಶ್ರೀ ಜೆ.ಆರ್.ಕಪೂರ್ :** ನಾನು ಮಂಡಿಸಬಯಸುತ್ತೇನೆ.

(೧) ಕಲಮು ೨ಕ್ಕೆ ಬದಲು

(೨) ಸಂಹಿತೆಯನ್ನು ಅನ್ವಯಿಸುವಿಕೆ "ಈ ಸಂಹಿತೆಯು ಅಥವಾ ಯಾವುದೇ ಭಾಗ ಅಥವಾ ಭಾಗಗಳು ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅನ್ವಯವಾಗುತ್ತವೆ–ಯಾರಿಗೆಂದರೆ, ಯಾರು ಪ್ರಾಪ್ತವಯಸ್ಸನ್ನು ತಲುಪಿದ್ದಾರೋ, ಯಾರು ಕೇಂದ್ರ ಸರ್ಕಾರವು ಹೊರಡಿಸಿದ ನಿಗದಿತ ಕಾನೂನುಗಳ ಅನ್ವಯ, ಈ ಸಂಹಿತೆಯ ಅಥವಾ ಅದರ ಯಾವುದೇ ಭಾಗ ಅಥವಾ ಭಾಗಗಳಿಗೆ ಬದ್ಧರಾಗಿರಲು ಅಧಿಕೃತವಾಗಿ ಬರಹದ ಮೂಲಕ ಘೋಷಿಸಿಕೊಂಡಿದ್ದಾರೋ ಅವರಿಗೆ ಅನ್ವಯವಾಗುತ್ತದೆ"

(ii) ನಾನು ಇದನ್ನೂ ಸಹ ಮಂಡಿಸಲು ಬಯಸುವೆ

ಶ್ರೀ ಬನಾರಸಿ ಪ್ರಸಾದ್ ಝುಂಝುನವಾಲಾ ಪ್ರಸ್ತಾಪಿಸಲ್ಪಟ್ಟಿರುವ ಕಲಮು–೨ರ ಪ್ರಸ್ತಾವಿತ ಉಪಬಂಧದ

ತಿದ್ದುಪಡಿಗೆ ಸಂಬಂಧಿಸಿದಂತೆ– "ಪ್ರಾರಂಭದಲ್ಲಿರುವ "ಅಂಥ ವ್ಯಕ್ತಿಗಲ್ಲದೆ" ಎಂಬ ಶಬ್ದಗಳಿಗೆ ಬದಲಾಗಿ 'ಯಾವ ವ್ಯಕ್ತಿ ಪ್ರಾಪ್ತ ವಯಸ್ಸನ್ನು ಮುಟ್ಟುತ್ತಾನೋ ಸಂದರ್ಭಾನುಸಾರವಾಗಿ ಆತ ಅಥವಾ ಆಕೆ, ಈ ಸಂಹಿತೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊರಡಿಸುವ ಅಧಿನಿಯಮಗಳಿಗನುಸಾರ, ಈ ಸಂಹಿತೆಗೆ ನಾನು ಬದ್ಧನೆಂದು ಬರೆದು ಘೋಷಿಸುವಂತಹ ಅಂಥ ವ್ಯಕ್ತಿಗಳಿಗಲ್ಲದೆ."

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯನ್ನು ಮಂಡಿಸಲಾಗಿದೆ.

೧) ಕಲಮು ೨ಕ್ಕೆ ಬದಲು

"೨. ಸಂಹಿತೆಯನ್ನು ಅನ್ವಯಿಸುವುದು(೧) ಈ ಸಂಹಿತೆ ಎಲ್ಲಾ ಹಿಂದೂಗಳಿಗೂ ಅನ್ವಯಿಸುತ್ತದೆ.

೨) "ಹಿಂದೂ" ಎಂಬ ಅಭಿವಾಚಕ ಬೇರೆಯದನ್ನು ಸೂಚಿಸುವವರೆಗೂ ಈ ಸಂಹಿತೆಯಲ್ಲಿ ಭಾರತದ ನಾಗರಿಕನೆಂದು ಅರ್ಥ ಸೂಚಿಸುತ್ತದೆ.

೩) ವಿಶೇಷ ವಿವಾಹಕಾಯ್ದೆ ೧೮೭೨ (೧೮೭೨ರ iii)ರ ಕಾನೂನಿನಲ್ಲಿ ಏನೇ ಹೇಳಿರಲಿ ಪ್ರಸ್ತುತ ಸಂಹಿತೆಯು ಎಲ್ಲಾ ಹಿಂದೂಗಳಿಗೂ, ಮತ್ತು ವಿಶೇಷ ವಿವಾಹ ಕಾಯ್ದೆಯನ್ವಯ ಈ ಸಂಹಿತೆ ಪ್ರಾರಂಭವಾಗುವುದಕ್ಕೆ ಮುಂಚೆ ವಿವಾಹವಾಗದ ಎಲ್ಲಾ ಹಿಂದೂಗಳಿಗೂ ಈ ಸಂಹಿತೆ ಅನ್ವಯಿಸಲ್ಪಡುತ್ತದೆ.

೨. ಕಲಮು ೨ಕ್ಕೆ ಬದಲು

"೨. ಈ ಸಂಹಿತೆಯು ಎಲ್ಲಾ ಭಾರತೀಯರಿಗೂ, ಅವರ ಧರ್ಮ, ಜಾತಿ ಅಥವಾ ಜನಾಂಗವನ್ನೂ ಹೊರತುಪಡಿಸಿ ಅನ್ವಯಿಸಲ್ಪಡುತ್ತದೆ.

೩ ಕಲಮು ೨ಕ್ಕೆ ಬದಲು

"೨ ಈ ಸಂಹಿತೆಯ ಭಾಗ(೧)ರ ಉಪಬಂಧಗಳಿಗೆ ಒಳಪಟ್ಟು – (ಎ) ಧರ್ಮದಿಂದ ಯಾರು ಹಿಂದೂಗಳೋ ಬೌದ್ಧರೋ, ಜೈನರೋ ಅಥವಾ ಸಿಖ್ಖರೋ ಅವರೆಲ್ಲರಿಗೂ ಈ ಸಂಹಿತೆ ಅನ್ವಯಿಸುತ್ತದೆ

(ಬಿ) ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿ ಅಲ್ಲವೋ ಅವರಿಗೆ

(ಸಿ) ಯಾವ ಹೆಣ್ಣು, ಧರ್ಮದಿಂದ ಮುಸ್ಲಿಮನಲ್ಲದ, ಕ್ರಿಶ್ಚಿಯನ್ನಲ್ಲದ, ಪಾರ್ಸಿಯಲ್ಲದ ಅಥವಾ ಯಹೂದಿ ಅಲ್ಲದವನನ್ನು ಮದುವೆಯಾದ ಪ್ರತಿ ಹೆಣ್ಣು

(ಡಿ) ಅಕ್ರಮವಾಗಿಯೋ, ಸಕ್ರಮವಾಗಿಯೋ, ಜನಿಸಿದ ಮಕ್ಕಳು–ಧರ್ಮದಿಂದ ಅವರ ಪಾಲಕರು ಮುಸ್ಲಿಂರೋ, ಕ್ರಿಶ್ಚಿಯನ್ನರೋ, ಪಾರ್ಸಿಗಳೋ ಅಥವಾ ಯಹೂದಿಗಳೋ ಅಲ್ಲವಾಗಿದ್ದಲ್ಲಿ.

(ಇ) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಧರ್ಮಗಳನ್ನು ಹೊರತುಪಡಿಸಿ ಉಳಿದ ಧರ್ಮಗಳಿಗೆ ಮತಾಂತರ ಹೊಂದಿದವರು.

೪. ಕಲಮು ೨ರ ಬದಲು

೨. ಸಂಹಿತೆಯ ಅನ್ವಯಿಸುವಿಕೆ – ಈ ಸಂಹಿತೆಯು ಇಂಡಿಯಾದ ಅಂದರೆ ಭಾರತದ ಎಲ್ಲಾ ಪೌರರಿಗೂ ಅವರು ಯಾವುದೇ ಜಾತಿ ಜನಾಂಗಕ್ಕೆ ಸೇರಿರಲಿ, ಅವರು ಯಾವುದೇ ಧರ್ಮಕ್ಕೆ ಸೇರಿರಲ್ಲಿ ಅಥವಾ ಪಾಲಿಸುತ್ತಿರಲಿ ಈ ಸಂಹಿತೆಯು ಅನ್ವಯವಾಗುತ್ತದೆ.

೫. ಕಲಮು ೨–ರ

(೧) ಉಪಕಲಮು(೧)ರಲ್ಲಿ

(೨) (i)ಭಾಗ (ಎ)ನಲ್ಲಿ "ಹಿಂದೂ" ಗಳೂ ಅಂದರೆ "ಹಿಂದೂಧರ್ಮವನ್ನು ಪಾಲಿಸುವ ಎಲ್ಲರೂ" ಎಂಬುದಕ್ಕೆ ಬದಲಾಗಿ "ಧರ್ಮದಿಂದ ಯಾರು ಹಿಂದೂಗಳೋ ಅವರೆಲ್ಲರೂ" ಎಂದು ಸೇರಿಸಿ.

(ii) ಭಾಗ(ಡಿ)ಗೆ "ಹಿಂದೂ ಧರ್ಮಕ್ಕೆ" ಬದಲಾಗಿ, "ಹಿಂದೂ, ಬೌದ್ಧ, ಜೈನ, ಹಾಗೂ ಸಿಖ್ಖ್ ಧರ್ಮ" ಎಂದು ಸೇರಿಸಿ.

(೨) ಉಪಕಲಮು (೪)ನ್ನು ಬಿಡಿ

೬. ಕಲಮು ೨ರ ಉಪ–ಪ್ರಕರಣ ೧ರ ಭಾಗ(ಎ)ಗೆ –"ಹಿಂದೂ, ಅಂದರೆ ಯಾರೆಲ್ಲಾ ಹಿಂದೂಧರ್ಮವನ್ನು ಪಾಲಿಸುತ್ತಾರೋ ಅವರೆಲ್ಲಾ" ಎಂಬುದಕ್ಕೆ ಬದಲಾಗಿ "ಧರ್ಮದಿಂದ ಯಾರು ಹಿಂದೂಗಳೋ ಅವರು" ಎಂದು ಸೇರಿಸಿ.

೭. ಕಲಮು ೨ ಉಪಕಲಮು ೧ರ ಭಾಗ(ಬಿ)ಯನ್ನು ಬಿಡಿ.

೮. ಕಲಮು ೨ರ ಉಪಕಲಮು ೧ರ ಭಾಗ(ಬಿ)ಗೆ ಬದಲಿಗೆ

(ಬಿ) "ಧರ್ಮದಿಂದ ಯಾರು ಬೌದ್ಧರೋ, ಜೈನರೋ ಹಾಗೂ ಸಿಖ್ಖರೋ ಅವರೆಲ್ಲರಿಗೂ" ಎಂದು ಸೇರಿಸಿ.

೯. ಕಲಮು ೨ರ ಉಪಕಲಮು (೧)ರ ಭಾಗ (ಬಿ)ಗೆ ಬದಲಿಗೆ

(ಬಿ) ಧರ್ಮದಿಂದ ಯಾರು ಜೈನರೋ ಅವರಿಗೆ ಎಂದು ಸೇರಿಸಿ.

೧೦. ಕಲಮು ೨ರ ಉಪ ಕಲಮು (೧)ರ ಭಾಗ (ಬಿ)ಯ, "ಜೈನ ಅಥವಾ ಸಿಖ್ಖ" ಎಂಬುದಕ್ಕೆ ಬದಲು "ಅಥವಾ ಜೈನ" ಎಂದು ಸೇರಿಸಿ.

೧೧. ಕಲಮು ೨ರ ಉಪಕಲಮು(೧)ರ ಭಾಗ (ಸಿ)ಯಲ್ಲಿನ "ಅಕ್ರಮ"ದ ನಂತರ ಸೇರಿಸಿ – "ಯಾರಿಗೆ ಹದಿನೆಂಟು ವರ್ಷಗಳು ತುಂಬಿದೆಯೋ ಅವನೇ ಹಿಂದು ಎಂದಾಗುತ್ತಾನೆ."

೧೩. ಕಲಮು ೨ರ ಉಪಕಲಮು (೧)ರ (ಸಿ) ಭಾಗದಲ್ಲಿನ "ಯಾರ ತಂದೆ ತಾಯಿ ಹಿಂದೂಗಳೋ" ಎಂಬುದಕ್ಕೆ ಬದಲಾಗಿ "ಯಾರ ತಂದೆ ತಾಯಿ ಹಿಂದೂಗಳು ಅಗಿರುವರೋ ಅಥವಾ ಆಗಿದ್ದರೋ."

೧೪. ಕಲಮು ೨ರ ಉಪಕಲಮು (೧)ರ ಸಿ ಭಾಗದಲ್ಲಿ "ಸೇರಿದ ಅಥವಾ ಸೇರಲ್ಪಟ್ಟ" ಎಂಬುದಕ್ಕೆ "ಮತ್ತು ಯಾರಿಗೆ ಹದಿನೆಂಟು ವರ್ಷಗಳು ತುಂಬಿದೆಯೋ ಅವನೇ ಹಿಂದು ಆಗುತ್ತಾನೆ" ಎಂದು ಸೇರಿಸಿ.

೧೫. ಕಲಮು ೨ರ ಉಪ ಕಲಮು (೧)ರ ಸಿ ಭಾಗದ (ii)ರಲ್ಲಿ ಸೇರಿಸಿ
"ಯಾವ ಸಮುದಾಯಕ್ಕೆ, ಗುಂಪಿಗೆ, ಅಥವಾ ಕುಟುಂಬಕ್ಕೆ ಸೇರಿದ ತಂದೆತಾಯಿ ತಿರಸ್ಕೃತ ಮಗುವನ್ನು ಬೆಳೆಸುತ್ತಾರೋ, ಅಂಥದಕ್ಕೆ."

೧೬. ಕಲಮು ೨ರ ಉಪ ಕಲಮು (೧)ರ (ಡಿ) ಭಾಗಕ್ಕೆ ಬದಲಿಗೆ "ಹಿಂದೂ ಧರ್ಮಕ್ಕೆ ಮತಾಂತರ ಹೊಂದಿದವ ಹಾಗೆ ಮತಾಂತರ ಹೊಂದುವ ಮುನ್ನ ಇದ್ದ ಹಕ್ಕುಬಾಧ್ಯತೆಗಳು ಹಾಗೂ ಹೊಣೆಗಾರಿಕೆಗಳಿಗೆ ಒಳಪಟ್ಟು" ಎಂದು ಸೇರಿಸಿ.

೧೭. ಕಲಮು ೨ ಉಪ ಕಲಮು (೧)ರ ಭಾಗ (ಡಿ) ನಂತರ ಸೇರಿಸಿ
"ತನ್ನ ಜೀವಿತ ಅವಧಿಯಲ್ಲಿ – ಮುಸ್ಲಿಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ –ಬೌದ್ಧ, ಜೈನ,

ಸಿಖ್ಖ್ ಅಥವಾ ಹಿಂದೂಧರ್ಮದಿಂದ ಮತಾಂತರ ಹೊಂದಿದವರು.

೧೮. ಕಲಮು ೨ರ ಉಪಕಲಮು(೨)ನ್ನು ಬಿಡಿ.

೧೯. ಕಲಮು ೨ರ ಉಪ ಕಲಮು ೨ರಲ್ಲಿ "ಪಾರ್ಸಿ"ನಂತರ 'ಸಿಖ್ಖ್' ಸೇರಿಸಿ.

೨೦. ಕಲಮು ೨ರ ಉಪ ಕಲಮು (೨)ರ ನಂತರ ಸೇರಿಸಿ

(೨ಎ) ಯಾವುದೇ ಹೆಣ್ಣು ಮಗಳು ಯಾವುದೇ ಧರ್ಮವನ್ನು ಪಾಲಿಸುತ್ತಿದ್ದರೂ, ಆಕೆ ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖರನ್ನು ಮದುವೆಯಾಗಿದ್ದರೆ, ಈ ಸಂಹಿತೆಯು ಅವಳಿಗೂ ಅನ್ವಯವಾಗುತ್ತದೆ.

೨೧. ಕಲಮು ೨ರ ಉಪ ಕಲಮು (೩)ನ್ನು ಬಿಡಿ.

೨೨. ಕಲಮು ೩ ರ ಉಪ ಕಲಮು ೪ ನ್ನು ಬಿಡಿ.

೨೩. ಕಲಮು ೨ರ ಉಪ ಕಲಮು(೪)ರ ನಂತರ ಇದನ್ನು ಸೇರಿಸಿ:

(೩) ಈ ಖಂಡದಲ್ಲಿ ಏನೇ ಹೇಳಿರಲಿ ಈ ಸಂಹಿತೆಯು ಯಾವುದೇ ಕಾಲಕಾಲಕ್ಕೆ, ಹಂತ ಹಂತವಾಗಿ, ಯಾವುದೇ ರಾಜ್ಯದ ಶಾಸಕಾಂಗ ಸಭೆಯು ಹೊರಡಿಸುವ ಅಧಿನಿಯಮದಂತೆ, ಕೇವಲ ಅಂಥ ಪ್ರದೇಶಗಳಿಗೆ ಅಥವಾ ಆ ಜನರಿಗೆ ಅಥವಾ ಆ ರಾಜ್ಯದಲ್ಲಿನ ಆಯಾಯ ವರ್ಗದ ಜನರಿಗೆ ಅನ್ವಯಿಸಲ್ಪಡುವುದು.

೨೪. ಕಲಮು ೨ಕ್ಕೆ ಈ ಉಪಬಂಧವನ್ನು ಸೇರಿಸಿ "ಮೇಲಿನ ಕಲಮುಗಳಲ್ಲಿ ಏನೇ ಹೇಳಿರಲಿ ಸಂಹಿತೆಯು ಈ ಸದನವು ಸೂಚಿಸುವ ರೀತಿಯಲ್ಲಿ ಯಾವುದೇ ವ್ಯಕ್ತಿ ತನ್ನ ಹೆಸರನ್ನು, ಈ ಸಂಹಿತೆಯನ್ನು ಘೋಷಿಸಿದ ಒಂದು ವರ್ಷದೊಳಗೆ ಸೂಚಿತ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಳ್ಳದಿದ್ದಲ್ಲಿ ಅವನಿಗೆ ಅನ್ವಯವಾಗುವುದಿಲ್ಲ. ಅಪ್ರಾಪ್ತ ವಯಸ್ಕರಿಗೆ ಸಂಬಂಧಿಸಿದಂತೆ, ಅವರು ಪ್ರಾಪ್ತ ವಯಸ್ಸನ್ನು ಮುಟ್ಟಿದ ಒಂದು ವರ್ಷದೊಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು."

೨೫. ಕಲಮು ೨ರ ಅನ್ವಯಿಸುವಿಕೆ:– "ಸಂಹಿತೆಯು ಅಥವಾ ಇದರಲ್ಲಿನ ಯಾವುದೇ ಭಾಗ ಅಥವಾ ಭಾಗಗಳು ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅನ್ವಯವಾಗುತ್ತವೆ– ಅವರು ಯಾರೆಂದರೆ, ಯಾರು ಪ್ರಾಪ್ತ ವಯಸ್ಸನ್ನು ತಲುಪಿದ್ದಾರೋ, ಯಾರು ಕೇಂದ್ರ ಸರ್ಕಾರವು ಹೊರಡಿಸಿದ ನಿಗದಿತ ಕಾನೂನುಗಳ ಅನ್ವಯ, ಈ ಸಂಹಿತೆಯ ಅಥವಾ ಇದರ ಯಾವುದೇ ಭಾಗ ಅಥವಾ ಭಾಗಗಳಿಗೆ ಬದ್ಧರಾಗಿರಲು ಅಧಿಕೃತವಾಗಿ ಬರಹ ಮೂಲಕ ಘೋಷಿಸಿಕೊಂಡಿದ್ದಾರೋ ಅವರಿಗೆ ಅನ್ವಯವಾಗುತ್ತವೆ."

೨೬. ಶ್ರೀ ಬನವಾಸಿ ಪ್ರಸಾದ್ ಝುಂಝುನವಾಲಾ ಕಲಮು ೨ಕ್ಕೆ ಸಂಬಂಧಿಸಿದ ತಿದ್ದುಪಡಿಯಲ್ಲಿ ಪ್ರಸ್ತಾವಿಸಿರುವ ಪ್ರಾರಂಭದಲ್ಲಿ ಶುರುವಾಗುವ 'ಅಂಥ ವ್ಯಕ್ತಿಗಲ್ಲದೆ' ಎಂಬ ಪದಗಳಿಂದ ಪ್ರಾರಂಭಿಸಿ, ಕೊನೆಯ ತನಕ ಇರುವ ಪದಗಳಿಗೆ ಬದಲಿಗೆ "ಯಾವ ವ್ಯಕ್ತಿ ಪ್ರಾಪ್ತ ವಯಸ್ಸನ್ನು ಮುಟ್ಟಿದ ಮೇಲೆ, ಆತ ಅಥವಾ ಆಕೆ ಈ ಕಾನೂನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊರಡಿಸಿರುವ ಅಧಿನಿಯಮಗಳಿಗೆ ಅನುಗುಣವಾಗಿ ಈ ಸಂಹಿತೆಗೆ ನಾನು ಬದ್ಧನೆಂದು ಯಾರು ಘೋಷಿಸಿಕೊಳ್ಳುತ್ತಾರೋ ಅಂಥವ್ಯಕ್ತಿಗಲ್ಲದೆ" – ಎಂದು ಸೇರಿಸಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯರೆ ನಾನೊಂದು ಸುಲಭದಾರಿಯನ್ನು ಸಲಹೆ ಮಾಡುವೆ.

ಬಹಳಷ್ಟು ತಿದ್ದುಪಡಿಗಳು ಮಂಡಿಸಲ್ಪಟ್ಟಿವೆ, ಅವು ಹೆಚ್ಚು ಕಮ್ಮಿ ಒಂದೇ ವಿಷಯಕ್ಕೆ ಸಂಬಂಧಿಸಿವೆ. ಒಟ್ಟಿಗೆ ಇವನ್ನೆಲ್ಲಾ ಚರ್ಚಿಸಿದರೆ ಗೊಂದಲವೇ ಉಂಟಾಗುವುದೆಂದು ನಾನು ನನ್ನ ಅನುಭವದ ಹಿನ್ನೆಲೆಯಲ್ಲಿ ಹೇಳಬಲ್ಲೆ, ಮತ್ತು ನಮ್ಮ ಪ್ರಶ್ನೆಗೆ ಉತ್ತರಗಳೂ ಸಿಗಲಾರವು. ಪ್ರತ್ಯೇಕವಾಗಿ ಪರಿಶೀಲಿಸಿದರೆ, ನಮ್ಮ ಭಾಷಣಗಳನ್ನು ಮೊಟಕು ಮಾಡಿದರೆ ಪುನರಾವರ್ತನೆಯನ್ನಾದರೂ ತಡೆಯಬಹುದು. ಇದು ನನ್ನ ಅಭಿಪ್ರಾಯವೆಂದು ಮಾತ್ರ ಹೇಳುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಪದೇ ಪದೇ ಪುನುರಾವರ್ತನೆಯಾಗುವುದನ್ನು ತಡೆಯಬೇಕೆಂದು ನಾವೆಲ್ಲಾ ನಿರ್ಧರಿಸಿದರೆ ಅದಕ್ಕೆ ಭಯಪಡುವ ಅಗತ್ಯವಿಲ್ಲ. ಆದರೂ ಈ ಸ್ಥಾನವು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವ ಕಠಿಣ ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತದೆ. ಅದರಿಂದ ಎಷ್ಟು ಉತ್ತಮವಾಗಿ ಅದನ್ನು ಮಾಡಬಹುದೋ ಅದನ್ನು ಮಾಡುತ್ತದೆ.

**ಡಾ. ಅಂಬೇಡ್ಕರ್ :** ಮಾನ್ಯ ನಜೀರುದ್ದೀನ್ ಅಹ್ಮದ್ ಅವರಿಗೆ ಮಾತ್ರ ಆ ಕಠಿಣ ಕ್ರಮವನ್ನು ತೆಗೆದುಕೊಳ್ಳಿ!

**ಶ್ರೀ ಸರವಟೆ :** ನನ್ನ ತಿದ್ದುಪಡಿಯು, ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸುತ್ತದೆ ಎಂದು ಆಕ್ಷೇಪಣೆಯನ್ನು ಎತ್ತಲಾಗಿದೆ. ಹಾಗೆ ಆಗಿದ್ದರೆ, ಅದು ಯಾಕೆ ಹಾಗಾಯಿತೆಂಬುದನ್ನು ನನ್ನ ಭಾಷಣದಲ್ಲಿ ಹೇಳುವೆ. ಹಾಗೆ ಆಗಿರುವುದರಿಂದ ಆ ಮಸೂದೆಯ ಉದ್ದೇಶಕ್ಕೆ ಹೊಂದಾಣಿಕೆಯಾಗುವುದಿಲ್ಲವೆಂದಾಗಲೀ, ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿಲ್ಲವೆಂದಾಗಲೀ ಅಲ್ಲ.

(ಸಭಾಧ್ಯಕ್ಷ ಸ್ಥಾನದಲ್ಲಿ ಪಂಡಿತ ಠಾಕೂರ್ ಭಾರ್ಗವ ಆಸೀನರಾಗಿದ್ದಾರೆ)

ನನಗೆ ಗೊತ್ತಿದ್ದಂತೆ 'ಹಿಂದೂ' ಎಂಬುದಕ್ಕೆ ನಿಖರವಾದ ಒಂದು ವ್ಯಾಖ್ಯಾನ ಇದುವರೆಗೂ ಇಲ್ಲ. ಕಾಲಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ "ಹಿಂದೂ" ಪದವು ಹಲವಾರು ಸಂಕೇತಾರ್ಥ ಹಾಗೂ ರೂಢಾರ್ಥಗಳನ್ನು ಪಡಕೊಳ್ಳುತ್ತಾ ಬಂದಿದೆ. ಪ್ರಾಯಶಃ ನಾನು ನನ್ನ ತಿದ್ದುಪಡಿಯಲ್ಲಿ ಭಾವಿಸಿರುವಂತೆ ಒಂದು ಕಾಲದಲ್ಲಿ ಆ ಅರ್ಥವನ್ನು ಅದು ಪಡೆದಿರಬೇಕು. "ಹಿಂದೂ" ಎಂಬುದನ್ನು ಹೇಗೆ ಬೇರೆ ಬೇರೆ ಅರ್ಥಗಳಲ್ಲಿ ವ್ಯಾಖ್ಯಾನಿಸಲಾಗಿದೆ ಎಂಬುದನ್ನು ತೋರಲು ನಾನು ಕೆಲ ಉದಾಹರಣೆಗಳನ್ನು ಕೊಡುತ್ತೇನೆ.

"ಹಿಂದೂ"ಎಂದರೆ "ಯಾರು ಭಾರತದಲ್ಲಿ ಇದ್ದಾರೋ ಅವರು" ಎಂದು ಸತ್ಯಾರ್ಥ ಪ್ರಕಾಶದಲ್ಲಿದೆ ಎಂದು ನನಗೆ ಹೇಳಲಾಗಿದೆ. ಬಾಂಬೆಯ ಸಮಾಜ ಸುಧಾರಕ ಸಾವರಕರ್ ಅವರು –ಯಾರು ಭಾರತದಲ್ಲಿ ಹುಟ್ಟಿದ್ದಾರೋ, ಮತ್ತು ಅದನ್ನು ಪವಿತ್ರ ನೆಲವೆಂದು ಪರಿಗಣಿಸುತ್ತಾರೋ ಅವರೆಲ್ಲಾ ಹಿಂದೂಗಳು.

ಅವರು ಹೀಗೆ ಸೂಚಿಸಿದ್ದಾರೆ:

*ಆ ಸಿಂಧೂ ಸಿಂಧೂ ಪರ್ಯಂತಾ ಯಸ್ಯಾ ಭಾರತ ಭೂಮಿಕಾ/*

*ಪಿತೃಭೂಃಪುಣ್ಯ ಭೂಶ್ಚೈವ, ಸರ್ವೇ ಹಿಂದುರಿತಿ ಸ್ಮೃತಃ/*

ಅಂದರೆ ಯಾರು ಭಾರತವನ್ನು ತನ್ನ ವಾಸಸ್ಥಾನವೆಂದು ಮತ್ತು ಅದನ್ನೊಂದು ಪವಿತ್ರಸ್ಥಾನವೆಂದು ಬಗೆಯುತ್ತಾರೋ ಅವರನ್ನು ಹಿಂದೂಗಳೆಂದು ಪರಿಗಣಿಸಬಹುದು. ಅಮೆರಿಕದಲ್ಲಿ, ಅಷ್ಟೇಕೆ ದಕ್ಷಿಣ ಆಫ್ರಿಕಾದಲ್ಲಿ ಭಾರತದಿಂದ ಬಂದವನನ್ನೊಬ್ಬನನ್ನು ಅವರು "ಹಿಂದೂ" ಎಂದೇ ಕರೆಯುತ್ತಾರೆಂಬುದನ್ನು ನಿಮಗೆ ತೋರಿಸಿ ಹೇಳಬೇಕಿಲ್ಲ. ಆದ್ದರಿಂದ ನನ್ನ ತಿದ್ದುಪಡಿಯು ಯಾವುದೇ ಹೊಸ ಸಾಹಸ ಮಾಡಬೇಕೆಂದು ಕೇಳುತ್ತಿಲ್ಲ. ಅದು ಈಗಾಗಲೇ "ಹಿಂದೂ" ಎಂಬ ಪರಿಕಲ್ಪನೆಗೆ ಇರುವ ವ್ಯಾಖ್ಯಾನಗಳನ್ನು ಸಮರ್ಥಿಸುತ್ತದೆ. ಅಷ್ಟಲ್ಲದೆ, ಮಸೂದೆಯಲ್ಲಿರುವ "ಹಿಂದೂ" ಪರಿಕಲ್ಪನೆ ಕೇವಲ ಹಿಂದೂ ಮಸೂದೆಗೆ ಮಾತ್ರ ಸೀಮಿತವಾಗಿಲ್ಲ

ಎಂಬುದನ್ನು ನಾನು ಎತ್ತಿ ಹೇಳಬೇಕಿಲ್ಲ. ಉಪ–ಕಲಮು (ಎ)ದಲ್ಲಿನ ವ್ಯಾಖ್ಯಾನ ಹೀಗೆ ಹೇಳುತ್ತದೆ.

"ಎಲ್ಲಾ ಹಿಂದೂಗಳಿಗೆ, ಅಂದರೆ, ಹಿಂದೂಧರ್ಮವನ್ನು ಪಾಲಿಸುವ ಎಲ್ಲಾ ಜನರಿಗೆ" ಮತ್ತು (ಬಿ) ಯಲ್ಲಿ

"ಯಾವುದೇ ವ್ಯಕ್ತಿ ಧರ್ಮದಿಂದ ಬೌದ್ಧನಿರಲಿ, ಜೈನನಿರಲಿ ಅಥವಾ ಸಿಖ್ಖನಿರಲಿ" ಆದ್ದರಿಂದ ಈ ಮಸೂದೆಯು ತನ್ನ ಅವಕಾಶಗಳನ್ನು ಹಿಂದೂ ಮತ್ತು ಸಿಖ್ಖ್ ಮತ್ತು ಬೌದ್ಧರು ಮತ್ತು ಜೈನರಿಗೂ ವಿಸ್ತರಿಸಿದೆ. ಹಿಂದೂಧರ್ಮದ ಚರಿತ್ರೆಯ ಬಗ್ಗೆ ಪ್ರಸ್ತಾಪಿಸಲು ನಾನು ಹೋಗುವುದಿಲ್ಲ. ಜೈನಧರ್ಮವು ಒಂದು ಕಾಲದಲ್ಲಿ ಹಿಂದೂಧರ್ಮವನ್ನು ಅಂದರೆ ಸನಾತನ ವೈದಿಕಧರ್ಮವನ್ನು ವಿರೋಧಿಸಿತ್ತು ಹಾಗೂ ಪ್ರತಿಕ್ರಿಯಾತ್ಮಕವಾಗಿತ್ತು. ಸನಾತನ ವೈದಿಕಧರ್ಮವು ವೇದಗಳನ್ನು ಆಶ್ರಯಿಸಿದ್ದರೆ, ಜೈನಧರ್ಮವು ಅವುಗಳನ್ನು ಅವಲಂಬಿಸಿಲ್ಲ. ಆದ್ದರಿಂದ ಜೈನ ಹಾಗೂ ಹಿಂದೂ ಸನಾತನ ವೈದಿಕಧರ್ಮ ಸಂಪೂರ್ಣ ಭಿನ್ನ ಧರ್ಮಗಳು."

ಭೋಜನದ ಸಲುವಾಗಿ ಮಧ್ಯಾಹ್ನ ೨–೩೦ವರೆಗೆ ಸದನವನ್ನು ಮುಂದೂಡಲಾಗಿದೆ.

[ಭೋಜನಾನಂತರ ಸದನ ೨–೩೦ಕ್ಕೆ ಮತ್ತೆ ಸೇರಿತು. ಪಂಡಿತ್ ಥಾಕೂರ್ ದಾಸ್ ಭಾರ್ಗವ ಅಧ್ಯಕ್ಷ ಪೀಠದಲ್ಲಿದ್ದರು.]

**ಶ್ರೀ ಸರ್ವಟೆ :** ಸದನವು ಭೋಜನಕ್ಕೆ ತೆರಳುವ ಮುನ್ನ ಮಸೂದೆಯೊಳಗೆ ಹಿಂದೂಗಳನ್ನಲ್ಲದೆ, ಹಿಂದೂಧರ್ಮವನ್ನು ಅಂದರೆ ಸನಾತನ ವೈದಿಕಧರ್ಮವನ್ನು ವಿರೋಧಿಸಿದಂತಹ ಅದಕ್ಕೆ ತದ್ವಿರುದ್ಧವಾದ ನೀತಿಗಳನ್ನು ಬೋಧಿಸಿದಂತಹ ಧರ್ಮಗಳನ್ನೂ ಸೇರಿಸಲಾಗಿದೆ ಎಂದು ತೋರಿಸಲು ನಾನು ಪ್ರಯತ್ನಿಸುತ್ತಿದ್ದೆ. ಉದಾಹರಣೆಗೆ: ಬೌದ್ಧಧರ್ಮವು ಹಿಂದೂಧರ್ಮದ ವಿರೋಧಿ, ಹಾಗೆಯೇ ಜೈನಧರ್ಮವೂ. ಆದರೆ ಈ ಎರಡೂ ಧರ್ಮಗಳನ್ನು ಹಿಂದೂ ಮಸೂದೆ ಕಾಯ್ದೆಯೊಳಕ್ಕೆ ಸೇರಿಸಲಾಗಿದೆ. ಆದ್ದರಿಂದ ಮಸೂದೆಯನ್ನು ಮಂಡಿಸುವವರು, ಹಿಂದೂಧರ್ಮವನ್ನಲ್ಲದೆ ಇತರೆ ಧರ್ಮಗಳನ್ನು ಸೇರಿಸಲು ಸ್ವಾತಂತ್ರ್ಯವುಳ್ಳವರಾದರೆ, ನಾನು ಅದರೊಳಗೆ ಕೆಲ ಧರ್ಮಗಳನ್ನು ಸೇರಿಸುವ ಹಕ್ಕುಳ್ಳವನಾಗಿದ್ದು – ಹೀಗೆ ನಾನು ಮಾಡುವುದರಿಂದ ಮಸೂದೆಯ ವ್ಯಾಪ್ತಿಯನ್ನು ಮೀರಿದಂತಾಗುವುದಿಲ್ಲ ಎಂದು ಭಾವಿಸಿದ್ದೇನೆ.

ನಾನು ಮುಂದುವರೆದು ಹೇಳಬಯಸುವುದೇನೆಂದರೆ, ಪ್ರಸ್ತುತ ಚರ್ಚಿಸುತ್ತಿರುವ ಮಸೂದೆಗೆ ಸುಧಾರಿತ ಹಿಂದೂ ಕಾಯ್ದೆ ಮತ್ತು ಅವುಗಳ ಸಂಹಿತೆಯನ್ನು, ನಾನು ಸರಿಯಾಗಿ ನೆನಪು ಮಾಡಿಕೊಂಡು ಹೇಳುವುದಾದರೆ, ಉದ್ದೇಶ ಮತ್ತು ಕಾರಣಗಳು ಎಂಬ ಹೇಳಿಕೆಯನ್ವಯ ಅವುಗಳನ್ನು ಸೇರಿಸಬೇಕಾಗುತ್ತದೆ. ಈ ಹಂತದಲ್ಲೋ ಅಥವಾ ಆನಂತರದಲ್ಲೋ ಸಂವಿಧಾನವು ಪ್ರಶ್ನಿಸಬಹುದಾದ ಸಂಭಾವ್ಯ ಸಮಸ್ಯೆಗಳ ದೃಷ್ಟಿಯಿಂದ ಕೆಲವನ್ನು ಸೇರಿಸುವ ಇಲ್ಲವೇ ಬಿಡುವ ಕೆಲಸವನ್ನು ಮಾಡಬೇಕಾಗುತ್ತದೆ. ನಾನು ಹೇಳುವುದು ಇದು. ಭಾರತದ ಎಲ್ಲಾ ನಾಗರಿಕರೂ ತಮ್ಮ ಮನಃಸಾಕ್ಷಿಗನುಗುಣವಾಗಿ ಮುಕ್ತವಾಗಿ ಧರ್ಮವನ್ನು ಅನುಸರಿಸುವ, ಪಾಲಿಸುವ, ಪ್ರಚಾರಮಾಡುವ ಸಮಾನ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ ಎಂದು ಭಾರತದ ಸಂವಿಧಾನದ ೨೫ನೆಯ ಅನುಚ್ಛೇದ ಹೇಳುತ್ತದೆ. ತನಗೆ ಒಪ್ಪಿದ ಧರ್ಮವನ್ನು ಅವನು ಪಾಲಿಸಲು ಸ್ವತಂತ್ರನೆಂದರೆ, ಅವನು ತನ್ನ ಧರ್ಮದ ಕಟ್ಟುಪಾಡುಗಳಂತೆ ವಿವಾಹವಾಗಲೂ ಅವನು ಸ್ವತಂತ್ರನು. ಆದರೆ ಪ್ರಸ್ತುತ ಮಸೂದೆಯ ಮೂಲಕ ಮಾಡಬಯಸುತ್ತಿರುವುದೇನೆಂದರೆ, ಅವನನ್ನು ಒಂದು ನಿಶ್ಚಿತ ರೀತಿಯಲ್ಲಿಯೇ ವಿವಾಹವಾಗಲು ಬಲಾತ್ಕಾರ ಮಾಡುತ್ತಿರುವುದಾಗಿದೆ. ಮಸೂದೆಯಲ್ಲಿ ಮಂಡಿತವಾಗಿರುವ ಅಂಶಗಳು ಸಂಪೂರ್ಣವಾಗಿ ಅವನ ಧರ್ಮದ ವಿಧಿಗಳಿಗೆ ವಿರೋಧವಾಗಿವೆ. ನಾನು ಎತ್ತಿದ ಈ ಪ್ರಶ್ನೆಗಳನ್ನು ೨೫ನೆಯ ಅನುಚ್ಛೇದದ ಮುಂದಿನ ಪ್ರಕರಣಗಳು ಪ್ರಸ್ತಾಪಿಸುವಂತಿವೆ.

(೨) ಈ ಅನುಚ್ಛೇದದೊಳಗಿನ ಯಾವುದೇ ಭಾಗ; ಈಗಿರುವ ಯಾವುದೇ ಕಾನೂನಿನ ಜಾರಿಗಾಗಲಿ– ಅಥವಾ ರಾಜ್ಯಗಳು ಕಾನೂನು ಮಾಡುವುದಕ್ಕಾಗಲಿ ಅಡ್ಡಿಯಾಗಲಾರದು.

(ಎ) ಧರ್ಮಕ್ಕೆ ಸಂಲಗ್ನಗೊಂಡಿರುವ, ಆರ್ಥಿಕ, ವಾಣಿಜ್ಯ, ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನಿರ್ವಹಿಸುವುದನ್ನಾಗಲಿ ಅಥವಾ ನಿಯಂತ್ರಿಸುವುದಕ್ಕಾಗಲಿ–

(ಬಿ) ಸಮಾಜಕಲ್ಯಾಣ ಮತ್ತು ಸುಧಾರಣೆಗಳನ್ನೊದಗಿಸಲು ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಸಾರ್ವಜನಿಕಗೊಳಿಸಿ ಹಿಂದೂಧರ್ಮದ ಎಲ್ಲಾ ವರ್ಗದ, ವಿಭಾಗದ ಜನರಿಗೆ ತೆರೆದಿಡುವುದಕ್ಕಾಗಲಿ.

ನಾನು ನನ್ನ ತಿದ್ದುಪಡಿಯ ಮೂಲಕ ಹಿಂದೂಧರ್ಮವನ್ನು ಸುಧಾರಿಸಲು ಪ್ರಯತ್ನಿಸಿದ್ದೇನೆ. ನಾನು ಹಿಂದೂಧರ್ಮಕ್ಕಿರುವ ವ್ಯಾಪ್ತಿಯನ್ನು ವಿಸ್ತರಿಸಿ ಅದರೊಳಕ್ಕೆ ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಮತ್ತಿತರರೆಲ್ಲರನ್ನೊಳಗೊಂಡಂತೆ ಭಾರತದ ಎಲ್ಲಾ ನಾಗರಿಕರನ್ನು ಅದರೊಳಕ್ಕೆ ಸೇರಿಸುವ ಸುಧಾರಣೆಯನ್ನು ಮಾಡಬಯಸಿದ್ದೇನೆ.

ಮಾನ್ಯರೆ, ಈಗ ಹಿಂದೂ ಕಾನೂನು ಎಂದರೇನು? ಹಿಂದೂ ಕಾನೂನು ಅಂದರೆ, ಶ್ರುತಿ ಮತ್ತು ಸ್ಮೃತಿಗಳಾಧಾರಿತ ವೇದ ಎಂದೇ ಅರ್ಥ. ಮತ್ತೆ ಮುಂದೆ ಹೇಳಲಾಗಿದೆ, ಅದೊಂದೆ ಅದಕ್ಕೆ ಮೂಲ ಅಲ್ಲ ಅಂತ. ಇನ್ನೊಂದು ಮೂಲ ಅಂದರೆ, ಶಾಸಕಾಂಗ ಹಾಗೂ ಸರಿಯಾದ ಪ್ರಾಧಿಕಾರ ಹೊರಡಿಸಿದ ಕಾನೂನುಗಳು. ಹಾಗಾದರೆ ಕಾನೂನು ಮತ್ತು ವೇದ–ಹಿಂದೂ ಕಾನೂನು ಎಂದು ಕರೆಯೋಣವೆ? ಒಬ್ಬ "ಎಕ್ಸ್" ಶ್ರುತಿಯನ್ನು ಮತ್ತು ಸ್ಮೃತಿಯನ್ನು ಪ್ರತಿನಿಧಿಸಿದರೆ, ಇನ್ನೊಬ್ಬ 'ವೈ' ಕಾನೂನು ಪ್ರತಿನಿಧಿಸುತ್ತಾನೆ. ಹಿಂದೂ ಕಾನೂನು ಅಂದರೆ ಎಕ್ಸ್ + ವೈ. ಸಮಯ ಸರಿದಂತೆ, 'ಎಕ್ಸ್' ನಿಂದ ಅಪಹರಿಸಿ ಅವುಗಳನ್ನು ಒಂದೊಂದೆ ಕಾನೂನುಗಳು ಮಾಡುತ್ತಾ ಹೋದದ್ದರ ಫಲಿತಾಂಶ ಪರಿಸ್ಥಿತಿ ಸಂಪೂರ್ಣ ಬದಲಾಗಿ ಹೋಗಿದೆ.

ಹಿಂದೂ ಧರ್ಮದ ಬುನಾದಿ ಜಾತಿ ಪದ್ಧತಿಯೇ, ಮತ್ತು ಎರಡನೆಯದಾಗಿ ವಿವಾಹಗಳೂ ಕೂಡ ಅದೇ ಕ್ರಮದಲ್ಲಿ ಜರುಗಿಸಲ್ಪಡುತ್ತಿದ್ದವು. ಅದೊಂದು ಪವಿತ್ರ ಬಂಧನ ಎಂದು ಪರಿಭಾವಿಸಲಾಗುತ್ತಿತ್ತು. ಅದೊಂದು ಪುಣ್ಯ ಸಂಸ್ಕಾರವೆಂದೆ ಅದನ್ನ ವಿಸರ್ಜಕ ಎಂದು ಹೇಳಲಾಗುತ್ತದೆ. ಅದನ್ನು ವಿಸರ್ಜೀಕರಿಸಕೂಡದು. ಸಂಪ್ರದಾಯದ ಹಿಂದೂಗಳು ಪಾಲಿಸುವ ಸನಾತನ ವೈದಿಕಧರ್ಮದಲ್ಲಿ ವಿಚ್ಛೇದನವೇ ಇಲ್ಲ. ಆದರೆ ನಿಧಾನವಾಗಿ ಈ ಮೂಲ ಅಂಶಗಳನ್ನು ಒಂದೊಂದೆ ತೆಗೆಯುತ್ತಾ ಬರಲಾಯಿತು. ಉದಾಹರಣೆಗೆ: ಈಗ ವಿಚ್ಛೇದನಕ್ಕೆ ಅವಕಾಶವಿದೆ. ಕೆಲವು ಪ್ರಕರಣಗಳಲ್ಲಿ ಒಟ್ಟಾರೆ ಜಾತಿಯನ್ನು ಅಲಕ್ಷಿಸಲಾಗಿದೆ ಮತ್ತು ಜಾತಿಯೆಂಬುದು ಇಲ್ಲವೇ ಇಲ್ಲ ಎಂದು ಈ ಮಸೂದೆಯಲ್ಲಿ ಹೇಳಲಾಗಿದೆ. ಆದ್ದರಿಂದ ಈ ಮಸೂದೆಯು ಸನಾತನ ವೈದಿಕಧರ್ಮದ ಪ್ರಕಾರ "ಹಿಂದುತ್ವ"ವನ್ನೇ ಇಡಿಯಾಗಿ ತನ್ನಿಂದ ತೆಗೆದು ಹಾಕಿದೆ. ಈ ಮಸೂದೆಯು ಏನು ಮಾಡಲು ಪ್ರಯತ್ನಿಸಿದೆಯೆಂದರೆ, – ಈ ಹಿಂದೆ 'ಎಕ್ಸ್' ನೂರು, 'ವೈ' ಸೊನ್ನೆಯಾಗಿ ಒಟ್ಟು ಮೊತ್ತ ನೂರು ಆಗಿತ್ತು. ಈಗ ಎಕ್ಸನ್ನು ಸೊನ್ನೆಗಿಳಿಸಿ "ವೈ" ಅನ್ನು ನೂರಕ್ಕೆ ಏರಿಸಲಾಗಿದೆಯಷ್ಟೆ! ಅವರು ಸ್ಥಿತಿಯನ್ನು ಹಿಂದು–ಮುಂದು ಮಾಡಿದ್ದಾರೆ. ಒಮ್ಮೆ ಎಲ್ಲವೂ ಶ್ರುತಿ ಮತ್ತು ಸ್ಮೃತಿಯೇ ಆಗಿದ್ದೂ ಕಾನೂನು ಸೊನ್ನೆಯಾಗಿತ್ತು. ಈಗ ಎಲ್ಲವೂ ಕಾನೂನು ಆಗಿದ್ದು ಶ್ರುತಿ ಮತ್ತು ಸ್ಮೃತಿಯೇ ಸೊನ್ನೆಗಿಳಿದಿವೆ. ಆದ್ದರಿಂದ ನಾನು ಹೇಳುವುದೇನೆಂದರೆ, ಯಾರು ಸನಾತನ ವೈದಿಕಧರ್ಮೀಯರು ಆಗಿರುವರೋ, ಅವರಿಗೆ ಮಾತ್ರ ಪ್ರಯೋಜನ ಒದಗಿಸದೆ, ಅದನ್ನು ಎಲ್ಲರಿಗೂ ವಿಸ್ತರಿಸತಕ್ಕದ್ದು ಎನ್ನುತ್ತಿರುವೆ. ಅದು ಮಾತ್ರ

ಮಸೂದೆಯ ಉದ್ದೇಶಿತ ಮಾರ್ಗವಾಗಿರಬೇಕಾದದ್ದು. ನನ್ನ ಉದ್ದೇಶ ಭಾರತದ ಚೌಕಟ್ಟಿನೊಳಗಿರುವ ಎಲ್ಲರಿಗೂ ಸಮಾನತೆ ಒದಗಿಸಬೇಕೆಂದಾಗಿದೆಯೇ ಹೊರತು ನಾನು ಹಿಂದೂಗಳ ಪರವೂ ಅಲ್ಲ ಅಥವಾ ಸಿಖ್ಖರ ಅಥವಾ ಇನ್ನಾರ ಪರವೂ ಅಲ್ಲ.

ಇದೊಂದು ಅಂಶವನ್ನು ಪ್ರಾಯಶಃ ಪ್ರಸ್ತಾಪಿಸಬಹುದೇನೊ – ಯಾರನ್ನು ನಾವು ಮಸೂದೆಯೊಳಕ್ಕೆ ಸ್ವೀಕರಿಸಬೇಕೋ, ಬೇಡವೋ ಎಂದು ಪರೀಕ್ಷಿಸಿಲ್ಲವೋ ಅಂಥವರಿಗೂ ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸಬೇಕೆಂದು ನಾನು ಪ್ರಯತ್ನಿಸುತ್ತಿದ್ದೇನೆ. ಉದಾಹರಣೆಗೆ ಕ್ರಿಶ್ಚಿಯನ್ನರನ್ನೋ ಅಥವಾ ಪಾರ್ಸಿಗಳನ್ನೋ ಈ ಸಂಬಂಧ ಪರಿಶೀಲಿಸಿಲ್ಲ. ಇದೊಂದು ಅನುಚಿತ ಕ್ರಮ. ಇದಕ್ಕೆ ನನ್ನ ಉತ್ತರವೇನೆಂದರೆ, ಸಿಖ್ಖ ಜನರನ್ನೂ ಕೂಡ, ಅವರ ಅಭಿಪ್ರಾಯ ಕೇಳಿಲ್ಲವಾದರೆ, ಅವರನ್ನು ಸೇರಿಸುವುದು ಕೂಡ ಅನುಚಿತ ಕ್ರಮವೆ. ಔಚಿತ್ಯದ ದೃಷ್ಟಿಯಿಂದ ನಾನು ಮಂಡಿಸಿರುವ ತಿದ್ದುಪಡಿಯ ಮತ್ತು ಮೂಲ ಮಸೂದೆಯೊಳಗಿನ ಪ್ರಸ್ತಾವಗಳ ಆಯ್ಕೆಯ ಪ್ರಶ್ನೆಯಲ್ಲಿ ಅಂಥ ಗಣನೀಯ ವ್ಯತ್ಯಾಸವಿಲ್ಲ.

ಈ ಹಿಂದೆ ಯಾರನ್ನ ಈ ಬಗ್ಗೆ ಪರೀಕ್ಷಿಸಲಾಗಿಲ್ಲವೋ, ಅವರನ್ನು ಪರೀಕ್ಷಿಸಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದೇ ಈಗಿನ ಒಂದು ವಿವೇಚನಾ ನಡವಳಿಕೆಯಾಗಬಹುದು. ಅವಶ್ಯವಿದ್ದರೆ ಮಸೂದೆಯನ್ನು ತಡೆ ಹಿಡಿಯಬಹುದು ಅಥವಾ ಹೀಗೆ ಮಾಡಲು ಹಿಂದಿರುಗಿಸಬಹುದು.

ಈ ಮಸೂದೆಯನ್ನು ಕುರಿತು ಮುಖ್ಯವಾಗಿ ಹೇಳುತ್ತಿರುವುದೇನೆಂದರೆ, ಇದು ಒಳ್ಳೆಯ ದೃಷ್ಟಿಕೋನಾಧಾರಿತ, ನ್ಯಾಯ ಮತ್ತು ಸಮಾನತೆಯ ಗುಣಗಳನ್ನು ಆಧರಿಸಿದ್ದು ಎಂಬುದಾಗಿದೆ. ಉದಾಹರಣೆಗೆ ಅದು ಹೀಗೆ ಹೇಳುತ್ತದೆ. ಒಬ್ಬಾತನಿಗೆ ಮೂರು ಗಂಡು ಮೂರು ಹೆಣ್ಣು ಇವೆ. ಆತನಿಗೆ ಗಂಡು ಮಕ್ಕಳ ಮೇಲೆ ಮಮತೆ ಇರುತ್ತದೆ. ಅವನಿಗೆ ಜನಿಸಿದವೆಂದು ಗಂಡು ಮಕ್ಕಳು ಅವನ ಆಸ್ತಿಗೆ ಹಕ್ಕುದಾರರಾದರೆ, ಹೆಣ್ಣು ಮಕ್ಕಳು ಕೂಡ ಅವನಿಗೆ ಜನಿಸಿದವುಗಳಾದ್ದರಿಂದ ಅವರೂ ಕೂಡ ಆಸ್ತಿಗೆ ವಾರಸುದಾರರಾಗುತ್ತಾರೆ. ಹೆಣ್ಣು ಮಕ್ಕಳಿಗೆ ಆಸ್ತಿ ಕೊಡಬೇಕೆಂದು ಹೇಳುತ್ತಿರುವವರು ಮುಂದಿಡುವ ಕಾರಣಗಳಲ್ಲಿ ಇದೊಂದೆ ಆಗಿದ್ದು– ಆದ್ದರಿಂದ – ಆವಶ್ಯಕವಾಗಿಯೇ ತಂದೆಯ ಆಸ್ತಿಯಲ್ಲಿ ಆಕೆಗೆ ಪಾಲು ಇದೆ ಎಂಬುದಾಗಿದೆ. ಇದೊಂದು ರೀತಿಯಲ್ಲಿ ಸರಿ. ಈ ಹಕ್ಕು ಕೇವಲ ಹಿಂದೂಗಳ ವಿಷಯದಲ್ಲಿ ಮಾತ್ರವಲ್ಲ ಮುಸ್ಲಿಂ ಮತ್ತು ಸಿಖ್ಖರ ವಿಷಯದಲ್ಲೂ ಹಾಗೆ ಆಗಬೇಕು. ಹಾಗೆಯೇ ಕ್ರಿಶ್ಚಿಯನ್, ಮತ್ತಿತರರ ದೃಷ್ಟಿಯಲ್ಲೂ. ಆದ್ದರಿಂದ ಕಾನೂನಿನಲ್ಲಿ ತಿದ್ದುಪಡಿಯಾಗಬೇಕಿದ್ದಲ್ಲಿ ಅದು ಕೇವಲ ಹಿಂದೂಗಳಿಗೆ ಮಾತ್ರ ಸೀಮಿತವಾಗತಕ್ಕದ್ದಲ್ಲ– ಯಾರ್‍ಯಾರು ನ್ಯಾಯಾಧಿಕರಣದ ಮತ್ತು ಕಾನೂನಿನ ವ್ಯಾಪ್ತಿಯೊಳಗೆ ಬರುತ್ತಾರೋ ಅವರಿಗೆಲ್ಲ ಅನ್ವಯಿಸತಕ್ಕದ್ದು.

ಇದಕ್ಕೆ ನಾನಿಲ್ಲಿ ಒಳ್ಳೆಯ ಬೆಂಬಲವನ್ನು ಹೊಂದಿರುವೆ. ಮಸೂದೆಯ ಹಿಂದಿನ ಹಂತಗಳಲ್ಲಿ ಡಾ. ಅಂಬೇಡ್ಕರ್ ಏನು ಹೇಳಿದ್ದಾರೆಂಬುದನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. ಮೇಲಣ ಸದನದ ಚರ್ಚೆಯ ವರದಿಯ ೩೬೫೧ನೆಯ ಪುಟದಲ್ಲಿದ್ದದ್ದನ್ನು ನಾನು ಉದ್ಧರಿಸುತ್ತೇನೆ.

"ನನ್ನ ಸ್ನೇಹಿತರು ಸೂಚಿಸುವ ಹಾಗೆ, ಎಲ್ಲಾ ಸಮುದಾಯಗಳಿಗೆ, ಎಲ್ಲಾ ವರ್ಗಗಳಿಗೆ, ಎಲ್ಲಾ ನಾಗರಿಕರಿಗೆ, ಅವರ ಜಾತಿ, ಧರ್ಮ ಮತ್ತು ಜನಾಂಗವನ್ನು ಹೊರತುಪಡಿಸಿ ಪ್ರತಿಯೊಬ್ಬರಿಗೂ, ಪಿತ್ರಾರ್ಜಿತ ಕಾನೂನುಗಳು ಮತ್ತು ಜಾತೀಯ ವಿವಾಹ ಕಾನೂನುಗಳಿಗೆ ಬದಲಾಗಿ, ಎಲ್ಲಾ ವರ್ಗಗಳಿಗೆ ಅನ್ವಯವಾಗುವಂತಹ ಸಾಮಾನ್ಯ ನಾಗರಿಕ ಕಾನೂನು ಇರಬೇಕೆಂಬ ಅವರ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಮ್ಮತಿ ಇದೆ."

ಹಿಂದೂ ಮಸೂದೆಯ ಕಾಯ್ದೆ ಕುರಿತು ನಡೆದ ಹಿಂದಿನ ಚರ್ಚೆಯ ಒಂದು ಹಂತದಲ್ಲಿ ಅವರು

ಹೀಗೆ ಹೇಳಿದ್ದಾರೆ.

**ಸದನದ ಒಬ್ಬ ಸದಸ್ಯರು :** ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡಿದ್ದಾರೆ.

**ಶ್ರೀ ಸರ್ವಟೆ :** ಅವರು ತಮ್ಮ ಮಾತುಗಳನ್ನು ಉಳಿಸಿಕೊಳ್ಳಬೇಕು.

ನನ್ನ ಪರವಾಗಿ ಸಂವಿಧಾನದ ಅನುಚ್ಛೇದ ೪೪ ಕೂಡ ಇದೆ ಎಂಬುದನ್ನು ನಾನು ತೋರಿಸುವೆ. ಅದು ಹೀಗೆ ಹೇಳುತ್ತದೆ–

"ಸರ್ಕಾರವು ಇಡೀ ಭಾರತಕ್ಕೆ ಅನ್ವಯವಾಗುವಂತಹ ಸಾರ್ವತ್ರಿಕ ನಾಗರಿಕ ಕಾನೂನನ್ನು ತನ್ನ ನಾಗರಿಕರಿಗಾಗಿ ರೂಪಿಸಲು ಯತ್ನಿಸಬೇಕು."

ನಾಗರಿಕ ಕಾನೂನು ಅವಶ್ಯವೆಂದರೆ, ವಿವಾಹ, ಆಸ್ತಿಯ ಹಕ್ಕು, ದತ್ತಕ ಮುಂತಾದ ಹಲವು ವಿಷಯಗಳನ್ನು ನಿರ್ವಹಿಸಲು ಎಂದು ಮಾತ್ರ. ನಾಗರಿಕ ಕಾನೂನಿನ ವ್ಯಾಪ್ತಿಯ, ಸರಿಸುಮಾರು ಹಿಂದೂ ಕಾಯ್ದೆಯ ರೀತಿಯದೇ ಆಗಿದ್ದು ಅದೊಂದು ಸಹವರ್ತಿ. "ಸರ್ಕಾರವು ಪ್ರಯತ್ನಿಸಬಹುದು" ಎಂಬ ಸಂವಿಧಾನದ ಅನುಚ್ಛೇದದಂತೆ ಈ ತಿದ್ದುಪಡಿಯನ್ನು ರೂಪಿಸಲಾಗಿದೆ. ಆದ್ದರಿಂದ ಆದಷ್ಟೂ ಶೀಘ್ರ ಒಂದು ಅವಕಾಶ ತೆಗೆದುಕೊಂಡು, ಈ ಸಂವಿಧಾನದತ್ತ ಅಧಿಕಾರವನ್ನು ಬಳಸಿಕೊಂಡು ಡಾ. ಅಂಬೇಡ್ಕರ್ ಅವರು ನನ್ನ ತಿದ್ದುಪಡಿಯನ್ನು ಒಪ್ಪುವ ಮೊದಲ ವ್ಯಕ್ತಿಗಳಾಗಲಿ.

ಮಸೂದೆ ಕುರಿತು ಈ ಹಿಂದಿನ ಅಧಿವೇಶನಗಳಲ್ಲಿ ಚರ್ಚೆ ನಡೆಯುತ್ತಿರುವಾಗ ನನ್ನ ಅನೇಕ ಸ್ನೇಹಿತರು, ಅದರಲ್ಲೂ ಕೆಲ ಮುಸ್ಲಿಂ ಸ್ನೇಹಿತರು, ಮತ್ತು ಪಾರ್ಸಿ ಸ್ನೇಹಿತರು, ತಮ್ಮ ಸಂಪೂರ್ಣ ತೃಪ್ತಿಯನ್ನು ವ್ಯಕ್ತಪಡಿಸಿ, ಮಸೂದೆಯಲ್ಲಿನ ಪ್ರಸ್ತಾಪಗಳನ್ನು ಬಹುವಾಗಿ ಕೊಂಡಾಡಿದರು. ಅವರನ್ನೆಲ್ಲಾ ನಾನು ಸ್ವಾಗತಿಸಿ ನನಗೆ ಬೆಂಬಲಿಸಬೇಕೆಂದು ಮನವಿ ಮಾಡುತ್ತೇನೆ. ಪ್ರಸ್ತಾವಗಳು ಯೋಗ್ಯವೂ ಸಕಾರಣವಾಗಿಯೂ ಇವೆ ಎಂದು ಅವರಿಗೆ ಅನ್ನಿಸಿದ್ದಲ್ಲಿ, ಅವರು ನಾನೀಗ ಮಾತಾಡುತ್ತಿರುವಂತೆ, ಮಾತಾಡಿ, ಮಸೂದೆಯು ಎಲ್ಲರಿಗೂ ಅನ್ವಯವಾಗಲಿ ಎಂದು ಹೇಳಲಿ.

ಈ ಮಸೂದೆಯಲ್ಲಿನ "ಹಿಂದೂ" ಅಭಿವಾಚನ, ಅನ್ಯಥಾ ಬೇರೆನೂ ಹೇಳದೆ, ಇದ್ದರೆ ಅವ ಭಾರತದ ನಾಗರಿಕ ಎಂದು ಅರ್ಥ. "ಬೇರೆ ಏನೂ ಹೇಳದ ಹೊರತು ಎಂಬ ಅಭಿವಾಚನ ಬಳಸಿರುವ ಕಾರಣ, ಈ ಮಸೂದೆಯೊಳಗಿನ ಕೆಲ ಪ್ರಸ್ತಾವಗಳು ಕೆಲ ಧರ್ಮೀಯರಿಗೆ ಅನ್ವಯವಾಗಲೊಲ್ಲವು ಅನಿಸಿದಲ್ಲಿ, ಆಗ ಅವರು "ಹಿಂದೂ" ಚೌಕಟ್ಟಿನ ಆಚೆ ಉಳಿವ ಪ್ರಯೋಜನ ಪಡೆಯಬಹುದು. ಉದಾಹರಣೆಗೆ ಮುಸ್ಲಿಮರು, ಕ್ರಿಶ್ಚಿಯನ್ನರು, "ಬೇರೆ ಏನೂ ಹೇಳದ ಹೊರತು' ಎಂಬ ಹೇಳಿಕೆಯೇ ವಿಶಾಲಾರ್ಥವುಳ್ಳದ್ದಾಗಿದ್ದು, ಪ್ರತಿಯೊಂದು ಧರ್ಮದ ತತ್ವಗಳೂ ಅಥವಾ ಮಾನ್ಯ ಸದಸ್ಯರು ತಮ್ಮ ತಮ್ಮ ಧರ್ಮದ ಆವಶ್ಯಕತೆಗಳಲ್ಲಿ ಏನನ್ನು ಬೇಕೆಂದು ಬಯಸುತ್ತಾರೋ, ಅದನ್ನೆಲ್ಲವನ್ನೂ ಈ ಮಸೂದೆಯೊಳಗೆ ಅಳವಡಿಸಬಹುದು. ಆದ್ದರಿಂದ ಈ ದೃಷ್ಟಿಯಿಂದ ಯಾವ ತೊಡಕು ಇರಲಾರದು. ಉದಾಹರಣೆಗೆ ರೋಮನ್ ಕ್ಯಾಥೋಲಿಕ್‌ರು ತಮ್ಮ ವಿಷಯದಲ್ಲಿ "ವಿಚ್ಛೇದನ"ಕ್ಕೆ ಅವಕಾಶವಿಲ್ಲದಂತಾಯ್ತು ಎಂದು ಭಾವಿಸಿದರೆನ್ನಿ. ಆಗ ಅವರಿಗೆ ವಿಚ್ಛೇದನಕ್ಕೆ ಅವಕಾಶ ಕೊಡುವ ಸಲುವಾಗಿ ರೋಮನ್ ಕ್ಯಾಥೋಲಿಕ್‌ರನ್ನು ಈ ಸಂಬಂಧ "ಹಿಂದೂ" ಎಂದು ಅನ್ವಯಿಸದಿರೋಣ.

ಈ ಮಸೂದೆಯ ಅನ್ವಯ ವಿವಾಹದ ಆಚರಣೆಗೆ ಎರಡು ಮಾರ್ಗಗಳಿವೆ. ಒಂದು ಧಾರ್ಮಿಕ ಸಂಸ್ಕಾರ ಮತ್ತು ನಾಗರಿಕ. ಧಾರ್ಮಿಕ ರೀತಿಯ ವಿವಾಹವೆಂದರೆ ಅದನ್ನು ಧರ್ಮದ ಅನ್ವಯ ಮಾಡುವಂತಹದ್ದು – ಅದು ಯಾವುದೇ ರೀತಿಯ ಧರ್ಮವಾಗಿರಬಹುದು. ಅದು ಹಿಂದೂ, ಜೈನ್, ಕ್ರಿಶ್ಚಿಯನ್ ಯಾವುದೇ

ಇರಬಹುದು, ಅದು ಯಾವುದೇ ರೀತಿಯಲ್ಲಿ ಅಡ್ಡಿಯಾಗಲಾರದು. ಉದಾಹರಣೆಗೆ ಸನಾತನ ವೈದಿಕ ಧರ್ಮದಲ್ಲಿ ಆ ಬಗ್ಗೆ ಹಲವಾರು ಆಚರಣೆಗಳಿವೆ. ನಾನು ಏನು ಸಲಹೆ ಮಾಡುತ್ತೇನೆಂದರೆ ನಮ್ಮ ಇಡೀ ಧರ್ಮವೇ ಅದೃಶ್ಯವಾಗುತ್ತದೆಂದು, ಆ ಧರ್ಮದ ಜನತೆ ಹೆದರಬಾರದೆಂಬುದೇ ಆಗಿದೆ.

**ಶ್ರೀ ತ್ಯಾಗಿ :** ಈಗಾಗಲೆ ಬೇರೆ ಮಸೂದೆಯ ಪ್ರಕಾರ ಮದುವೆಯಾಗಿರುವವರ ಗತಿ ಏನು?

**ಶ್ರೀ ಸರ್ವಟೆ :** ಆ ಬಗ್ಗೆ ನಮ್ಮ ಸ್ನೇಹಿತರಾದ ಮಾನ್ಯ ಶ್ರೀ ತ್ಯಾಗಿಯವರು ಆವಶ್ಯಕ ತಿದ್ದುಪಡಿಯನ್ನು ಸರಿಯಾದ ಸಂದರ್ಭದಲ್ಲಿ ಸೂಚಿಸಬಹುದು.

ಆದ್ದರಿಂದ ನಾನು ಮಂಡಿಸಿದ ತಿದ್ದುಪಡಿಗಳು ಸಂವಿಧಾನ ಅಪೇಕ್ಷಿತ ಪ್ರಸ್ತಾವಗಳಾಗಿವೆ; ಹಾಗೂ ಈ ಮಸೂದೆಯನ್ನು ಮಂಡಿಸಿರುವ ಡಾ. ಅಂಬೇಡ್ಕರ್ ಹೇಳಿದ ಮಾತುಗಳನ್ನು ಸಮರ್ಥಿಸುವಂತಿವೆ. ಮಸೂದೆಯಲ್ಲಿರಬೇಕೆಂದು ಆಶಿಸುವ ತರ್ಕಬದ್ಧತೆ, ನ್ಯಾಯ ಹಾಗೂ ಪಾರದರ್ಶಕತೆ ಎಲ್ಲವೂ ಅದರಲ್ಲಿದೆ. ಆದ್ದರಿಂದ ನನ್ನ ತಿದ್ದುಪಡಿಯನ್ನು ಮಂಡಿಸಿರುವೆ ಹಾಗೂ ಮಸೂದೆಯನ್ನು ಮಂಡಿಸಿರುವವರ ಅಂಗೀಕಾರವನ್ನು ಕೇಳುತ್ತಿರುವೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರಾದ ಶ್ರೀ ಗೋಪಿನಾಥ ಸಿಂಗ್ ಅವರಿಂದ ಕೆಲ ತಿದ್ದುಪಡಿಗಳು ಮಂಡಿಸಲ್ಪಟ್ಟಿವೆ. ಅವು ಈ ದಿನ ಬಂದಿವೆ. ಈ ಸದನದ ನಡವಳಿಕೆಯಂತೆ ಮಸೂದೆಯ ಉಸ್ತುವಾರಿ ವಹಿಸಿರುವ ಸದಸ್ಯರು ಅವುಗಳ ಮಂಡನೆಗೆ ಅವಕಾಶ ಕೊಡದೆ ಹೋದರೆ ಈ ಪೀಠವು ಅವುಗಳಿಗೆ ಅವಕಾಶ ಕೊಡಲಾರದು. ಸೂಚನೆ ಈ ದಿನವೇ ಬಂದಿದೆ. ಇದನ್ನು ಒಪ್ಪಿಕೊಳ್ಳುತ್ತೀರಾ– ಎಂದು ನಾನು ಮಾನ್ಯ ಡಾ. ಅಂಬೇಡ್ಕರ್ ಅವರನ್ನು ಕೇಳುತ್ತೇನೆ.

**ಡಾ. ಅಂಬೇಡ್ಕರ್** : ನನಗೆ ತಿದ್ದುಪಡಿಗಳ ನಕಲುಗಳು ಕೈ ಸೇರಿಲ್ಲ. ಆದ್ದರಿಂದ ನಾನು ಏನನ್ನೂ ಹೇಳಲಾರೆ.

**ಶ್ರೀ ಇಂದ್ರ ವಿದ್ಯಾವಾಚಸ್ಪತಿ** (ಹಿಂದಿ ಭಾಷಣವನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಲಾಗಿದೆ)– ಮಾನ್ಯರೆ ನನ್ನ ತಿದ್ದುಪಡಿ ಏನೆಂದರೆ, ಹಿಂದೂ ಮಸೂದೆ ಕಾಯ್ದೆಯನ್ನು ಯಾವಾಗ ಅಂಗೀಕರಿಸಲಾಗುತ್ತದೋ, ಅದನ್ನು ಪ್ರತಿಯೊಬ್ಬ ಭಾರತೀಯನಿಗೂ ಅನ್ವಯಿಸತಕ್ಕದ್ದು. ಜಾತಿ, ಧರ್ಮ ಅಥವಾ ಜನಾಂಗದ ಯಾವ ತಾರತಮ್ಯವೂ ಇರಕೂಡದು. ಇದು ನನ್ನ ತಿದ್ದುಪಡಿ. ಕಳೆದ ಒಂದು ವರ್ಷದಿಂದ ಈ ಸದನದ ಸದಸ್ಯನಾಗಿರುವ ನಾನು, ಇವೊತ್ತು ಯಾಕೆ ಮಾತಾಡುತ್ತಿದ್ದೇನೆ ಎಂಬುದನ್ನು ಆರಂಭದಲ್ಲಿಯೇ ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಆದರೆ ಸದನದ ಒಂದು ನಿಮಿಷವನ್ನೂ ನಾನು ಉಪಯೋಗಿಸಿಲ್ಲ. ಯಾಕೆಂದರೆ, ಸದನದ ಒಂದೊಂದು ನಿಮಿಷಕ್ಕೂ ಐವತ್ತು ರೂಪಾಯಿಯ ಬೆಲೆ ಇದೆಯೆಂದು ಮಾನ್ಯ ಸಭಾಧ್ಯಕ್ಷರು ಹೇಳಿದ್ದರು. ಹೀಗಾಗಿ ನಾನು ಸದನದ ಸಾವಿರಾರು ರೂಪಾಯಿಗಳನ್ನು ಈ ಅರ್ಥದಲ್ಲಿ ಉಳಿಸಿದ್ದೇನೆ. ಆದರೆ ನಾನು ಇವೊತ್ತು ಆ ಉಳಿಸುವ ಕೆಲಸ ಮಾಡಹೋಗುವುದಿಲ್ಲ. ಕಾರಣವೇನೆಂದರೆ, ನನ್ನ ತಲೆಯಲ್ಲಿ ಭಯವು ತಾಂಡವವಾಡುತ್ತಿದೆ, ಭಯ–ಮಸೂದೆಯು ಅಂಗೀಕಾರಗೊಂಡರೂ ಅಥವಾ ಅಂಗೀಕಾರಗೊಳ್ಳದಿದ್ದರೂ ಉದ್ಭವಗೊಳ್ಳುವ ಸಮಸ್ಯೆಗಳಿಂದಾಗಿ ಹುಟ್ಟಿಕೊಂಡದ್ದಾಗಿದೆ. ನಾನೊಬ್ಬ ಕಟ್ಟಾ ಸಮಾಜಸುಧಾರಕ. ಆದ್ದರಿಂದ ಸಮಾಜ ಸುಧಾರಣೆಗೆ ಅವಶ್ಯವಿರುವ ಕಾನೂನುಗಳು ಬೇಕೆಂದು ಬಯಸುವವನು ನಾನು. ಸಮಾಜ ಸುಧಾರಣೆಗೆ ಅವಶ್ಯವಿರುವಂತಹ ಕಾನೂನುಗಳನ್ನು ರೂಪಿಸುವ

---

* ಸಂಸದೀಯ ಚರ್ಚೆ ಸಂಪುಟ : VIII, ಭಾಗ II ಫೆಬ್ರವರಿ ೫, ೧೯೫೧, ಪುಟಗಳು ೩೩೨೭–೯೨

ಹಕ್ಕು ಸರ್ಕಾರಕ್ಕಿದೆ. ಮಸೂದೆಯು ಅಂಗೀಕೃತವಾಗಬಾರದೆಂದು ನಾನು ಹೇಳುತ್ತಿಲ್ಲ. ಆದರೆ ನನ್ನ ಭಯವೇನೆಂದರೆ, ಅದು ಈಗಿರುವ ಸ್ವರೂಪದಲ್ಲಿ, ಅಂದರೆ ಮಾನ್ಯ ಡಾ.ಅಂಬೇಡ್ಕರ್ ಮತ್ತು ಪ್ರಧಾನಮಂತ್ರಿಗಳು ಪದೇ ಪದೇ ಹೇಳುತ್ತಿರುವ ಸ್ವರೂಪದಲ್ಲಿ ಅದು ಅಂಗೀಕೃತವಾಗಬಾರದೆಂಬುದೇ ಆಗಿದೆ. ಬಜೆಟ್ ಅಧಿವೇಶನದಂತಹ ಅತ್ಯಂತ ದೀರ್ಘ ಅಧಿವೇಶನ ನಡೆಸಿದರೂ, ಗೆಲೋಟಿನ್ (ಒತ್ತಾಯ)ಬಳಸದ ಹೊರತು ಈ ಮಸೂದೆಯು ಅಂಗೀಕಾರವಾಗಲಾರದೆಂದು ನಾನು ಯೋಚಿಸಿದ್ದೇನೆ.

ಇಡೀ ದೇಶದ ಮೇಲೆ ಪರಿಣಾಮ ಬೀರಬಹುದಾದಂತಹ ಮಸೂದೆಯನ್ನು ಅಂಗೀಕರಿಸುವಾಗ ಒತ್ತಾಯವನ್ನು (ಗೆಲೋಟಿನ್) ಬಳಸುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಇದು ಮೊದಲ ಸಮಸ್ಯೆ. ಎರಡನೆಯ ಸಮಸ್ಯೆ ಎಂದರೆ, ಮಸೂದೆಯನ್ನು ಈಗಿನ ಸ್ವರೂಪದಲ್ಲಿ ಅಂಗೀಕರಿಸಿದರೆ, ಇರಬಾರದೆಂದು ಇಚ್ಛಿಸುವ ಕೆಡಕಿಗೆ ಪ್ರೋತ್ಸಾಹ ಕೊಟ್ಟು ಕಡೆಗೆ ನಾವೇ ಎದುರು ಸೆಣಸಲು ನಿಲ್ಲುವಂತಾಗುವುದಾಗಿದೆ. ಆ ಕೆಡುಕು ಕೋಮುವಾದವಾಗಿದೆ. ನಾವೇನಾದರೂ ಹಿಂದೂ ಮಸೂದೆ ಕಾಯ್ದೆಗೆ ಅಂಕಿತ ನೀಡಿದರೆ ಕೋಮುವಾದದ ಕೆಡುಕು ತಲೆ ಎತ್ತಿ ಅದು ಚಿರಂತನವಾಗಿ ಉಳಿಯಬಲ್ಲದು. ಈ ಮಸೂದೆಯು ಎಲ್ಲಾ ಜನಸಂಖ್ಯೆಯ ಎಲ್ಲಾ ವರ್ಗಗಳಿಗೆ ಅನ್ವಯವಾಗುವುದಿಲ್ಲವಾದ್ದರಿಂದ ಖಂಡಿತವಾಗಿಯೂ ಕೋಮುವಾದವು ಬೆಳೆಯುತ್ತದೆ. ಮಸೂದೆಯನ್ನು ಜಾರಿಗೊಳಿಸದಿದ್ದರೆ, ಕಾನೂನುಗಳ ಮೂಲಕ ಸಮಾಜಸುಧಾರಣೆ ಮಾಡುವುದಕ್ಕೆ ಮಂಗಳ ಹಾಡಿದಂತೆಯೆ. ಮಸೂದೆ ಅಂಗೀಕಾರವಾಗುವುದಿಲ್ಲವೆಂದು ನನಗೆ ಅಲ್ಪ ಆಸೆಯಿದೆ, ಆದರೆ ಅಕಸ್ಮಾತ್ ಈ ಮಸೂದೆ ಅಂಗೀಕಾರವಾಗಿಬಿಟ್ಟರೆ, ಕೋಮುವಾದವೂ ತಲೆ ಎತ್ತಿ ಯಾವುದು ವರ ಆಗುವುದಕ್ಕೆ ಕಾರಣವಾಗಬೇಕಿತ್ತೋ ಅದು ಶಾಪವಾಗಿ ಪರಿವರ್ತನೆಯಾಗುತ್ತದೆ. ಆದ್ದರಿಂದ ಸಮಾಜಸುಧಾರಣೆಯ ದಾರಿಯಲ್ಲಿ ನಾನು ಹಲವಾರು ತೊಡಕು ಮತ್ತು ಸಮಸ್ಯೆಗಳನ್ನು ಕಾಣುತ್ತಿರುವುದರಿಂದ, ಏನೇ ಆದರೂ ನಾನು ಹೇಳಬೇಕೆಂದು ನಿರ್ಧರಿಸಿದೆ. ಸಮಾಜ ಸುಧಾರಣೆಗೆ ಅಗತ್ಯವಾದ ಕಾನೂನುಗಳನ್ನು ಜಾರಿಗೊಳಿಸುವುದರ ಪರವಾಗಿ ನಾನು ಒಲವುಳ್ಳವನಾಗಿದ್ದೇನೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಉದ್ದೇಶಿತ ಸುಧಾರಣೆಗಳ ವಿವರಗಳಿಗೆ ನಾನೀಗ ಹೋಗಬಯಸುವುದಿಲ್ಲ. ಆದರೆ ಬಹು ಪತ್ನಿತ್ವದ ಬಗ್ಗೆ ಕೆಲ ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಏಕಪತ್ನಿತ್ವ, ವ್ಯವಸ್ಥೆಯನ್ನು ಕೇವಲ ಹಿಂದೂಗಳಿಗೆ ಮಾತ್ರ ಅಲ್ಲ, ಎಲ್ಲರಿಗೂ, ಎಲ್ಲಾ ವರ್ಗದವರಿಗೂ ಕಾನೂನಿನನ್ವಯ ಜಾರಿಗೊಳಿಸಬೇಕು. ಅಷ್ಟಲ್ಲದೆ, ಮಹಿಳೆಯರಿಗೆ ನ್ಯಾಯ ಮತ್ತು ಅವರ ಆರ್ಥಿಕ ಹಕ್ಕುಗಳನ್ನು ಸಮಂಜಸವಾಗಿ ರಕ್ಷಿಸಬೇಕೆಂದು ನಾನು ಹೇಳುತ್ತೇನೆ. ಕೇವಲ ಹಿಂದೂ ಮಹಿಳೆಯರು ಮಾತ್ರ ಶೋಷಣೆಗೆ ಒಳಗಾಗಿದ್ದಾರೆಂಬುದನ್ನು ನಾನು ಒಪ್ಪುವುದಿಲ್ಲ. ಬೇರೆ ಬೇರೆ ಸಮುದಾಯಕ್ಕೆ ಸೇರಿದ ಮಹಿಳೆಯರೂ ಕೂಡ ತುಳಿತಕ್ಕೆ ಒಳಗಾಗಿದ್ದಾರೆ. ಈ ದೌರ್ಜನ್ಯಗಳು ಕೊನೆಗೊಳ್ಳಬೇಕು. ಸಮಾಜವು ತನ್ನಿಂದ ತಾನೇ ಈ ದೌರ್ಜನ್ಯಗಳನ್ನು ನಿರ್ಮೂಲನ ಮಾಡಿದರೆ ಒಳ್ಳೆಯದು. ಇಲ್ಲವಾದರೆ, ಕಾನೂನು ಮಧ್ಯೆ ಪ್ರವೇಶಿಸಬೇಕು. ಸಂವಿಧಾನವು ಇಡೀ ದೇಶಕ್ಕೆ ಅನ್ವಯವಾಗುವಂತಹ ಸಮಾನತೆ ಮತ್ತು ಸ್ವಾತಂತ್ರ್ಯದಂತಹ ನೀತಿಗಳನ್ನು ಜಾರಿಗೆ ತರಬಲ್ಲದಾದರೆ, ಇಡೀ ಸಮಾಜಕ್ಕೆ ಅನ್ವಯವಾಗುವಂತಹ ಕಾನೂನು ತರಲು ಸಾಧ್ಯವಿಲ್ಲವೆ? ವಿಚ್ಛೇದನದಂತಹ ಪ್ರಶ್ನೆಯ ಬಗ್ಗೆಯೂ ನಾನು ಇದೇ ರೀತಿ ಯೋಚಿಸುತ್ತಿದ್ದೇನೆ. ಶಾಸ್ತ್ರಗಳಲ್ಲಿ ಇವನ್ನು ಖಂಡಿಸುವಂತಹ ಉದಾಹರಣೆಗಳನ್ನು ನಾವು ಕೇಳುತ್ತೇವೆ. ನಾನು ಈ ವಿಷಯವಾಗಿ ಚರ್ಚಿಸಲು ಹೋಗುವುದಿಲ್ಲ. ಆದರೆ ಧರ್ಮಶಾಸ್ತ್ರಗಳನ್ನಾಧರಿಸಿ ನಾನು ಹೇಳುವುದೇನೆಂದರೆ, ಇವುಗಳನ್ನೆಲ್ಲಾ ಶಾಸ್ತ್ರಗಳಲ್ಲಿ ನಮೂದಿಸಿಲ್ಲ ಎಂದು ಹೇಳುವುದು ತಪ್ಪು ಎನ್ನುವುದಾಗಿದೆ. ಪ್ರತಿಯೊಂದು ವಿಷಯದ ಪರ /ವಿರೋಧವಾಗಿ ಹೇಳಲಾಗಿದೆ. ಸುಮಾರು ೧೩೭

ಸ್ಮೃತಿಗಳಿವೆ. ಅದರಲ್ಲಿ ಮುಖ್ಯವಾದದ್ದು ಮನುಸ್ಮೃತಿ. ಅದರಲ್ಲಿ ಹೀಗೆ ಬರೆದಿದೆ.

*ವಿದ್ವದ್ಭಿ ಸೇವಿಥ ಸದ್ಭರ್ನಿತ್ಯ ಮದ್ವೇಶರ ಗಿಭಿಃ*
*ಹೃದಯೇನ ಅಭ್ಯನು ಗ್ಯತೋಯೋ ಧರ್ಮಷ್ಠಾನ ಇಭೋದ್ಧಾತ*
*ಸನ್ನಿಬೋಧಃ*

(ಅಂದರೆ ಅರ್ಥ, ಧರ್ಮ ಎನ್ನುವುದು ಸಜ್ಜನರು, ವಿದ್ಯಾವಂತರೂ ಯಾರ ಪೂರ್ವಗ್ರಹ ಮತ್ತು ಮೋಹದಿಂದ ಮುಕ್ತರಾದವರೂ, ಅಂಥವರು ನಿರಂತರವಾಗಿ ಆತ್ಮಸಾಕ್ಷಿಯಾಗಿ ನಡೆಸುವ ಸಾಧನೆಯಾಗಿದೆ.)

ತನಗಿಂತಲೂ ಮೊದಲು ಸ್ಮೃತಿಗಳಿದ್ದವೆಂದು ಸ್ವತಃ ಮನುವೇ ಹೇಳಿದಾನೆ. ಆದ್ದರಿಂದ ಸ್ಮೃತಿಗಳು ಬಹು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ನಮ್ಮ ಸಮಾಜಕ್ಕೆ ಸುಧಾರಣೆಗಳು ಬೇಡವೆಂದು ಹೇಳುವುದು ಕೂಡ ತಪ್ಪು. ಹಾಗೆ ಹೇಳಿದಲ್ಲಿ ನಮ್ಮ ಎಲ್ಲ ಪ್ರಗತಿಗೆ ಕೊನೆ ಹೇಳಿದಂತಾಗುತ್ತದೆ. ಸಮಾಜಕ್ಕೆ ಅವಶ್ಯವಿರುವ ಸುಧಾರಣೆಗಳನ್ನು ಮಾಡಲೇಬೇಕು. ಮಸೂದೆಯ ಪ್ರಕರಣ, ಪ್ರಕರಣ ಕುರಿತ ಚರ್ಚೆ ಮುಂದೆ ತಿದ್ದುಪಡಿಗಳ ಹಂತದಲ್ಲಿ ನಡೆಯಲಿರುವುದರಿಂದ, ನಾನು ವಿವರಗಳಿಗೆ ಹೋಗಬಯಸುವುದಿಲ್ಲ. ಆದ್ದರಿಂದ ನಾನು ಮಸೂದೆಯ ಮಂಡನೆಯ ಮುಂದೂಡಿಕೆಯ ಪರವಾಗಿಲ್ಲ. ಆದರೆ ಒಂದು ಮಾತ್ರ ಸ್ಪಷ್ಟ. ಅದು ಈಗಿರುವ ಸ್ವರೂಪದಲ್ಲಿ ಅಂಗೀಕರಿಸಿದರೆ, ಹಲವಾರು ಸಮಸ್ಯೆಗಳು ಉದ್ಭವವಾಗುವುದು ಖಂಡಿತ. ನನ್ನ ಅಭಿಪ್ರಾಯದಲ್ಲಿ ಇಡೀ ದೇಶಕ್ಕೆ ಅನ್ವಯವಾಗುವ ಭಾರತೀಯ ಮಸೂದೆಯನ್ನು ಕಾನೂನುಗೊಳಿಸುವುದು ಹಾಗೂ ಅದನ್ನು ಇಡೀ ದೇಶಕ್ಕೆ ಅನ್ವಯಿಸುವುದು. ಇಡೀ ದೇಶಕ್ಕೆ ಅನ್ವಯವಾಗುವ ಸುಧಾರಣೆಗಳನ್ನು ಕೂಡ ಜಾರಿಗೊಳಿಸಬೇಕು.

ಕೇವಲ ಹಿಂದೂಗಳಿಗೆ ಮಾತ್ರ ಅನ್ವಯಿಸಿದರೆ ಆಗುವ ಅನನುಕೂಲಗಳನ್ನು ನಾನು ನಿಮ್ಮ ಮುಂದಿಡಬಯಸುತ್ತೇನೆ. ಸ್ವತಂತ್ರ ಭಾರತದ ಸಂವಿಧಾನದ ಪ್ರಕಾರ ನಾವು ಕೋಮುವಾದ ಬೆಳೆಯುವುದನ್ನು ಬಯಸುವುದಿಲ್ಲ. ನಮ್ಮದು ಧರ್ಮನಿರಪೇಕ್ಷ ದೇಶ. ಇಂಥ ಪರಿಸ್ಥಿತಿಯಲ್ಲಿ, ಸರ್ಕಾರವು ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ಅನ್ವಯವಾಗುವಂಥ ಕಾನೂನನ್ನು ಮಾಡುವಂತಿಲ್ಲ. ಇಂಥ ವಿಷಯಗಳ ಬಗ್ಗೆ ನ್ಯಾಯವಾದಿಗಳು ಸಾಕಷ್ಟು ಚರ್ಚಿಸಬಹುದು, ಯಾವ ರಾಜ್ಯದಲ್ಲಿ ಧರ್ಮಕ್ಕೆ ಸ್ಥಾನ ನೀಡಿಲ್ಲವೋ ಅಥವಾ ವಿಶೇಷ ಮನ್ನಣೆ ನೀಡಿಲ್ಲವೋ, ಅಂಥಲ್ಲಿ ನಿರ್ದಿಷ್ಟ ಧರ್ಮಕ್ಕೆ ಸೇರಿದ ಜನರಿಗೆ ಕಾನೂನು ರೂಪಿಸುವುದು ನ್ಯಾಯಯುತವಾಗುವುದಿಲ್ಲ. ಯಾವುದೇ ಇಂಥ ಕ್ರಮವು ಪ್ರತ್ಯೇಕೀಕರಣತ್ವಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ್ದು ಈ ಕಾನೂನು, ಆ ಕಾಲದಲ್ಲಿ, ಮತೀಯವಾದಕ್ಕೆ ಪ್ರೋತ್ಸಾಹ ಕೊಡುವ ಸಲುವಾಗಿ ಹಿಂದೂಗಳನ್ನು ಮತ್ತು ಮುಸ್ಲಿಂರನ್ನು ಪ್ರತ್ಯೇಕವಾಗಿಡಲಾಗುತ್ತಿತ್ತು. ಹಾಗಾಗಿ ಈ ಮಸೂದೆಗೆ ಈ ರೂಪ ಬಂದಿದೆ. ನಾನು ಈಗ ಕೇಳುವುದೇನೆಂದರೆ, ಬ್ರಿಟಿಷರ ಕಾಲದ ಪಳೆಯುಳಿಕೆಯಾದ ಇದು ನಮ್ಮಲ್ಲೇಕೆ ಉಳಿಯಬೇಕು. ಸಮಾಜದ ಯಾವುದೇ ಒಂದು ನಿರ್ದಿಷ್ಟ ಭಾಗಕ್ಕೆ ತಾರತಮ್ಯವಾಗಬಾರದೆಂದೆ, ಅವೆಲ್ಲವನ್ನು ಕಿತ್ತೆಸೆದಿರುವಾಗ ಇದು ಏಕೆ ಉಳಿಯಬೇಕು?

**ಶ್ರೀಮತಿ ದುರ್ಗಾಬಾಯಿ :** ಕ್ರಿಯಾಲೋಪ, ಮಾನ್ಯರೆ, ಈ ಆದರಣೀಯ ಸದಸ್ಯರು ಈ ಸದನದ ಸಾಮರ್ಥ್ಯ ಕುರಿತೇ ಪ್ರಶ್ನೆ ಎತ್ತುತ್ತಿದ್ದಾರೆ.

**ಮಾನ್ಯರಾದ ಸದಸ್ಯರಲ್ಲಿ ಕೆಲವರು:** ಇಲ್ಲ, ಇಲ್ಲ.

**ಶ್ರೀಮತಿ ದುರ್ಗಾಬಾಯಿ :** ಕಡೇ ಪಕ್ಷ ಅವರು ಹಾಗೇ ಹೇಳಿದರೆಂದು ನಾನು ಅರ್ಥಮಾಡಿಕೊಂಡೆ. ಹಾಗಾದಲ್ಲಿ, ನಾನು ಅವರಿಗೆ ಹೇಳಬಯಸುವುದೇನೆಂದರೆ ಈಗಾಗಲೇ ಆ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಕ್ಷಮಿಸಿ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯವನ್ನು ಶ್ರೀಮತಿಯವರು ಸರಿಯಾಗಿ ಕೇಳುತ್ತಿಲ್ಲ. ಈ ಸದನಕ್ಕೆ ಅಂಥ ಸಾಮರ್ಥ್ಯವಿಲ್ಲ ಎಂದು ಅವರು ಹೇಳುತ್ತಿಲ್ಲ. ಅದಕ್ಕೆ ಬದಲಾಗಿ, ಈ ಸದನವು ಸಂಪೂರ್ಣ ಸಮರ್ಥವಾಗಿದೆ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಇಂದಿರಾ ವಿದ್ಯಾವಾಚಸ್ಪತಿ :** ಎಲ್ಲವನ್ನು ಹೇಳಲು ನನಗೆ ಅವಕಾಶ ಕೊಡಿ. ಆಗ ಸಾಮಾನ್ಯವಾಗಿ ನಿಮ್ಮಲ್ಲಿ ಯಾವ ಅನುಮಾನಗಳು ಉಳಿಯಲಿಕ್ಕಿಲ್ಲ.

ಮಹಿಳೆಯರಿಗೆ ಆಗಿರುವ ಅನ್ಯಾಯವನ್ನು ನಿರ್ಮೂಲನಮಾಡುವ ಮಹಾ ಉದ್ದೇಶವನ್ನು ಸರ್ಕಾರವು ಈ ಮಸೂದೆಯ ಮೂಲಕ ಪ್ರಯತ್ನಿಸುತ್ತಿದೆ. ಸರ್ಕಾರದ ಈ ಉದ್ದೇಶದ ಜೊತೆ ಭಾರತದ ಯಾವುದೇ ಸಮಾಜಸುಧಾರಕ ಸಹಕರಿಸದಿರಲು ಅಥವಾ ಇದರ ಪರವಾಗಿ ನಿಲ್ಲದಿರಲು ಯತ್ನಿಸಲಾರ. ಭಾರತೀಯ ಮಹಿಳೆಯರಿಗಾಗಿರುವ ಅನ್ಯಾಯವನ್ನು ಹೊಡೆದೋಡಿಸಲು ಪ್ರಯತ್ನಿಸುವವರಿಗೆ ನಾನೊಂದು ವಿಷಯವನ್ನು ಕೇಳಬಯಸುವೆನು. ವ್ಯಕ್ತಿಯೊಬ್ಬ ಒಂದೇ ಕಾಲಕ್ಕೆ ನಾಲ್ವರನ್ನು ಮದುವೆಯಾಗುವುದು ಮತ್ತು ಮಹಿಳೆಯರಿಗೆ ಹೀಗೆ ಮಾಡಲು ಅವಕಾಶವಿಲ್ಲದಿರುವುದು ಕೂಡ ಅನ್ಯಾಯವೇ. ಈ ಅನ್ಯಾಯ ಹೋಗಬೇಕು ಇದು ಕೇವಲ ಹಿಂದೂ ಮಹಿಳೆಯರಿಗೆ ಮಾತ್ರ ಅಗಿದೆಯೋ ಅಥವಾ ಮುಸ್ಲಿಂ ಮಹಿಳೆಯರಿಗೆ ಅಗಿಲ್ಲವೋ?ನಾನು ನನ್ನ ತಂಗಿಯರನ್ನು ಕೇಳಿಕೊಳ್ಳುತ್ತೇನೆ– ಹಿಂದೂ ಮಹಿಳೆಯರಿಗೆ ಮಾತ್ರ ಆಗುತ್ತಿರುವ ಈ ಅನ್ಯಾಯವನ್ನು ಸಹಿಸುತ್ತಿರೋ ಮತ್ತು ಮುಸ್ಲಿಂ ಮಹಿಳೆಯರದ್ದನ್ನು ಕುರಿತು ಅಲ್ಲವೋ? ಅವರಿಗೆಲ್ಲಾ ಈ ಅನ್ಯಾಯ ಅಗಿದೆ. ಅದನ್ನು ತೆಗೆಯಲೇಬೇಕು. ಅವರ ಮೇಲೆ ಅಗಿರುವ ಈ ಅನ್ಯಾಯವನ್ನು ಸಹಿಸುವುದಾದರೂ ಹೇಗೆ? ಸರ್ಕಾರವು ಅವರನ್ನೆಲ್ಲಾ ಈ ಮಸೂದೆಯೊಳಕ್ಕೆ ಯಾಕೆ ತರುತ್ತಿಲ್ಲ? ಮುಸ್ಲಿಮರಿಗೆ ಮತ್ತು ಇನ್ನಿತರರಿಗೆ ಇಂಥ ಕಾನೂನುಗಳನ್ನು ಹೊರಡಿಸಿದೆ. ಇದು ಅವರ ಧರ್ಮದೊಳಕ್ಕೆ ಕೈ ಹಾಕಿದಂತಾಗುತ್ತದೆ ಎಂದೆಲ್ಲಾ ಹೇಳಲಾಗುತ್ತಿದೆ. ಸಾಮಾಜಿಕ ಕಾನೂನೊಂದು ಅವರ ಧರ್ಮದೊಳಕ್ಕೆ ಕೈ ಹಾಕುತ್ತದೆ ಎಂದು ಹೇಳುವುದಾದರೆ ಅದೇ ಕಾನೂನು ಹಿಂದೂಧರ್ಮದೊಳಕ್ಕೆ ಕೈ ಹಾಕುತ್ತಿಲ್ಲ ಎಂದು ಹೇಳುವುದಾದರೂ ಹೇಗೆ? ಆದ್ದರಿಂದ ಎಲ್ಲರಿಗೂ ಅನ್ವಯವಾಗುವಂತಹ ಕಾನೂನನ್ನು ನಾವು ಹೊರಡಿಸಬೇಕು. ಅದೇನಾದರೂ ಧರ್ಮ ಪ್ರವೇಶ ಮಾಡುತ್ತದೆ ಎಂದಾದರೆ – ಅದು ಎಲ್ಲರಿಗೂ ಅನ್ವಯಿಸುತ್ತದೆ. ನನ್ನ ದೃಷ್ಟಿಯಲ್ಲಿ ಇದು ಧರ್ಮದೊಳಕ್ಕೆ ಕೈ ಹಾಕುವ ಪ್ರಶ್ನೆಯೇ ಅಲ್ಲ. ಕಾನೂನೊಂದು, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಸಿಖ್– ಹೀಗೆ ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಅದರಲ್ಲಿ ತಾರತಮ್ಯ ಭಾವ ಇರಕೂಡದು. ಅಂಥದ್ದರ ಬಗ್ಗೆ ಯಾವ ಭಿನ್ನಭಾವ ನಿಲುವೂ ಇರಕೂಡದು. ಹಿಂದೂ ಮಹಿಳೆಯರಿಗೆ ಹೇಗೆ ನ್ಯಾಯ ಒದಗಿಸುತ್ತೇವೆಯೋ ಹಾಗೆಯೇ ಮುಸ್ಲಿಂ ಮತ್ತು ಇನ್ನಿತರ ಧರ್ಮದ ಮಹಿಳೆಯರಿಗೆ ನ್ಯಾಯ ಒದಗಿಸುವುದು ಕೂಡ ನಮ್ಮ ಕರ್ತವ್ಯವೇ ಆಗಿದೆ. ಆದ್ದರಿಂದ ಪ್ರಸ್ತುತ ಸ್ವರೂಪದಲ್ಲಿ ಈ ಮಸೂದೆ ಇರಬಾರದು.

ಇನ್ನೊಂದು ವಿಷಯ : ಈ ಮಸೂದೆಯ ಜಾರಿಯಲ್ಲಿ ನಾವು ಕೆಲವೊಂದು ಕಷ್ಟಗಳನ್ನು ಎದುರಿಸಬಹುದು. ನಿಮಗೆ ಗೊತ್ತಿದ್ದಂತೆ ದ್ವಿಪತ್ನಿ ಕಾನೂನನ್ನು ಬಾಂಬೆ ಹೈಕೋರ್ಟಿನಲ್ಲಿ ಪ್ರಶ್ನಿಸಲಾಯಿತು. ಇಂಥ ಕಾನೂನು ಸಂವಿಧಾನಾತೀತವಾದದ್ದು ಎಂದು ಕೋರ್ಟು ತೀರ್ಪು ನೀಡಿತು. ಈ ವಿಷಯ ಪತ್ರಿಕೆಯಲ್ಲಿ ಸುದ್ದಿಯಾಗಿ ಬಂತು.

**ಹಲವಾರು ಗೌರವಾನ್ವಿತ ಸದಸ್ಯರು :** ಹೈಕೋರ್ಟಿನಲ್ಲಿ ಅಲ್ಲ ಕೆಳಗಿನ ಕೋರ್ಟ್‌ನಲ್ಲಿ.

**ಶ್ರೀ ಇಂದಿರಾ ವಿದ್ಯಾವಾಚಸ್ಪತಿ :** ಒಳ್ಳೆಯದು, ಕೆಳಕೋರ್ಟಿನಲ್ಲಿಯೇ ಇರಲಿ. ಇಂಥ ತೊಂದರೆಗಳು ಉದ್ಭವವಾಗಬಹುದು. ಈ ಕಾನೂನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಡಾ.ದೇಶಮುಖ ಅವರು ಇತ್ತೀಚೆಗೆ ಬಾಂಬೆಯಲ್ಲಿ ನೀಡಿದ ಹೇಳಿಕೆಯಲ್ಲಿ ಈ ಬಗ್ಗೆ ನಮ್ಮಗಳ ಗಮನ ಸೆಳೆದಿದ್ದಾರೆ. ನಾವೇನಾದರೂ ಈ ಮಸೂದೆಯನ್ನು ಅಂಗೀಕರಿಸಿದರೆ, ಅದನ್ನು ಪ್ರಶ್ನಿಸಿ, ಹೈ ಕೋರ್ಟಿಗೋ, ಅಥವಾ ಸುಪ್ರೀಂ ಕೋರ್ಟಿಗೋ ವರ್ಗಾಯಿಸಿದರೆ ನಾವುಗಳು ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಕೇವಲ ಹಿಂದೂಗಳಿಗೆ ಮಾತ್ರ ಅನ್ವಯಿಸಿ ಜಾರಿಗೊಳಿಸಿದರೂ ಇಂಥ ಸಮಸ್ಯೆಗಳು ಎದುರಾಗಬಹುದು. ಮಸೂದೆಯನ್ನು ಸದನದಲ್ಲಿ ಮಂಡಿಸಿ ಎಷ್ಟೋ ಕಾಲವಾಗಿದ್ದರೂ, ಸರ್ಕಾರವು ಈ ಬಗ್ಗೆ ಸರಿಯಾಗಿ ಯೋಚಿಸಬೇಕಾಗಿತ್ತು. ಯಾಕಾಗಿ ಈ ದಿಕ್ಕಿನಲ್ಲಿ ಯಾವ ಪ್ರಗತಿಯೂ ಸಾಗಿಲ್ಲ. ಹಿಂದೂ ಸುಧಾರಣಾವಾದಿ ಸಂಘಟನೆಗಳು ಕೂಡ ಪೂರ್ಣ ಪ್ರಮಾಣದಲ್ಲಿ ಬೆಂಬಲ ನೀಡಿಲ್ಲ. ಆ ಸುಧಾರಣಾವಾದಿಗಳು ಕೂಡ ತಿದ್ದುಪಡಿಗಳನ್ನು ಮುಂದಿರಿಸಿದ್ದಾರೆ. ಇದೆಲ್ಲದಕ್ಕೂ ಕಾರಣ ಸಾಮಾಜಿಕ ಸುಧಾರಣೆಗಳಿಗೆ ತಪ್ಪು ವಿಧಾನಗಳ ಮೂಲಕ ಹೊರಟಿರುವುದೇ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಿದೆ. ನಾವು ಕೆಲ ತಪ್ಪು ಸಾಲುಗಳನ್ನು ಬರೆದಿದ್ದರೆ – ಅವುಗಳನ್ನು ಸರಿಪಡಿಸಲು ಎರಡು ದಾರಿಗಳಿವೆ. ಮೊದಲನೆಯದು ಅವುಗಳ ಮಧ್ಯೆ ಸರಿಯಾಗಿ ಗೆರೆ ಹಾಕುವುದು ಅಥವಾ ಎರಡನೆಯದು ಎಲ್ಲವನ್ನೂ ಅಳಿಸಿ ಹಾಕಿ ಅದರ ಬದಲು ನೇರವಾಗಿ ಬರೆಯುವುದು. ಆದರೆ ಈಗ ಏನು ಮಾಡಲಾಗಿದೆಯೆಂದರೆ –ಒಂದು ಸಾಲಿಗೆ ಮತ್ತೊಂದು ಸಾಲು ಸೇರಿಸುತ್ತಾ ಹೋಗಲಾಗಿದೆ. ಹಾಗಾಗಿ ಒತ್ತಾಯದ ಸೇರ್ಪಡೆಗಳನ್ನ ಮಾಡಲಾಗಿದೆ.ನನ್ನ ಅಭಿಪ್ರಾಯದ ಪ್ರಕಾರ, ಅತ್ಯುತ್ತಮ ವಿಧಾನವೆಂದರೆ ಮಸೂದೆಯನ್ನು ಹಿಂತೆಗೆದುಕೊಳ್ಳುವುದು ಹಾಗೂ ಪರಿಷ್ಕೃತ ಮಸೂದೆಯನ್ನು ಮರು ಮಂಡಿಸುವುದು. ಅದು ಸಂಪೂರ್ಣ ಬೆಂಬಲ ಪಡೆದೀತು. ಹೇಗೆ ನಾವು ಏಕ ರೀತಿಯ ರಾಜಕೀಯ ವ್ಯವಸ್ಥೆಯನ್ನು ಮತ್ತು ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದೇವೆಯೋ, ಅದೇ ರೀತಿ ಇಡೀ ದೇಶಕ್ಕೆ ಅನ್ವಯವಾಗುವ ಸಾಮಾಜಿಕ ವ್ಯವಸ್ಥೆಯನ್ನು ಹೊಂದಬೇಕು. ಅಂಥ ಮಸೂದೆಯನ್ನು ಮುಂದಿಡಬೇಕು.

ಹಿಂದೂ ಮಹಿಳೆಯರೇನಾದರೂ ತೊಂದರೆಗಳನ್ನು ಎದುರಿಸುತ್ತಿದ್ದರೆ, ಮುಸ್ಲಿಂ ಮಹಿಳೆಯರು ಸಹ ಅವುಗಳನ್ನೇ ಎದುರಿಸುತ್ತಿದ್ದಾರೆ. ಇಡೀ ದೇಶಕ್ಕೆ ಅನ್ವಯವಾಗುವ ಏಕರೀತಿಯ ಆರ್ಥಿಕ ವ್ಯವಸ್ಥೆಯನ್ನು ರಚಿಸಲು ನಾವು ಸಮಗ್ರವಾದ ಸಂವಿಧಾನ ರೂಪಿಸಲು ಸಾಧ್ಯವಾಗಿದ್ದರೆ, ಇಂಥ ಮಸೂದೆಗೆ ಕರಡು ಪ್ರತಿಯನ್ನು ರಚಿಸಲು ಅಂಥ ಕಷ್ಟವೇನಾಗದು. ಸತ್ಯವೆನ್ನುವುದು ಅಮರ ಎಂಬುದು ತಿಳಿದಿರಲಿ; ವ್ಯಕ್ತಿ, ಕಾಲ ಮತ್ತು ಪ್ರದೇಶಗಳು ಅದನ್ನು ಮಲಿನಗೊಳಿಸಲಾರವು. ಈ ತತ್ವಗಳು ಒಳ್ಳೆಯವು ಎನ್ನುವುದಾದರೆ, ಆ ಮಾತು ಎಲ್ಲರಿಗೂ ಸತ್ಯವೆ. ಅವು ಸರಿಯಲ್ಲ ಎಂದಾದರೆ, ಅವು ಎಲ್ಲರಿಗೂ ಸರಿಯಲ್ಲವೆಂದೇ ಅರ್ಥ. ನಾನು ಭಾವಿಸಿದಂತೆ, ಸರ್ಕಾರದ ಉದ್ದೇಶ ಒಳ್ಳೆಯದೆ. ಅಂಥ ಒಳ್ಳೆಯ ಉದ್ದೇಶವನ್ನು ಸಮಗ್ರ ದೇಶಕ್ಕಾಗಿ ಬಳಸುವುದಾದರೆ ಇನ್ನೂ ಒಳ್ಳೆಯದೇ. ಈ ಮಸೂದೆಯನ್ನು ಪರಿಷ್ಕರಿಸಬೇಕು ಮತ್ತು ಇಲ್ಲಿ ಮಂಡಿಸಬೇಕು.

ಇಲ್ಲಿ ನಾನು ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನಾವು ಈ ಸದನದಲ್ಲಿ ಬಹು ಕಠಿಣವಾದ ಕಾನೂನು ತೊಂದರೆಗಳನ್ನು ಮತ್ತು ತೊಡಕುಗಳನ್ನು ಎದುರಿಸಿದ್ದೇವೆ. ಮತ್ತು ಅವುಗಳನ್ನು ಪರಿಹರಿಸಿಕೊಂಡು ಅನೇಕ ಕಾನೂನುಗಳನ್ನು ಜಾರಿಗೊಳಿಸಿದ್ದೇವೆ– ಏಕೆಂದರೆ, ಇವೊತ್ತು ದೇಶವು ಸಮಾನತೆ ಮತ್ತು ಸ್ವಾತಂತ್ರ್ಯದ ತಳಹದಿಯ ಮೇಲೆ ಪ್ರಗತಿಯನ್ನು ಸಾಧಿಸಲು ಬಯಸುತ್ತಿದ್ದು,

ಯಾವ ಕಾನೂನುಗಳು ಸಮಾನತೆಯ ಮೂಲ ಪಾಯವನ್ನು ಹೊಂದಿವೆಯೋ ಅಂಥ ಕಾನೂನುಗಳನ್ನು ಜನ ಸ್ವೀಕರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಮಸೂದೆಯನ್ನೇನಾದರೂ ಇಂಥ ತತ್ತ್ವಗಳ ಆಧಾರದ ಮೇಲೆ ರಚಿಸಿ, ಇಡೀ ದೇಶಕ್ಕೆ ಅನ್ವಯಿಸಿದಲ್ಲಿ ಅದು ಖಂಡಿತ ಸ್ವೀಕರಿಸಲ್ಪಡುತ್ತದೆ. ಇದು ನನ್ನ ಅಭಿಪ್ರಾಯ.

ಆದರೆ ಈ ಮಸೂದೆ ಹಾಗಿಲ್ಲ. ಆದರೆ ಸರ್ಕಾರವು ತುಂಬಾ ಆಶಾದಾಯಕವಾಗಿದೆ. ಅದು ಒಳ್ಳೆಯದೆ. ಅವರು ಆಶಾವಾದಿಗಳು. ಆದರೆ ಈ ಮಸೂದೆಯನ್ನು ಸದನದಲ್ಲಿ ಮನ್ನಣೆಗಳಿಸಿ ಜಾರಿಗೊಳಿಸುವಾಗ ಅನೇಕ ತೊಂದರೆಗಳನ್ನು ಎದುರಿಸಬೇಕಾಗುವುದು, ಅದಕ್ಕೆ ಮೂರು ತಿಂಗಳಾದರೂ ಅವಶ್ಯವಿದೆ. ಇಷ್ಟೆಲಾ ಕಷ್ಟಪಟ್ಟು ಮಸೂದೆ ಜಾರಿಯಾದರೂ, ನಂತರವೂ ಅನೇಕ ತೊಂದರೆಗಳನ್ನು ಅದು ಎದುರಿಸಬೇಕಾಗಿದೆ. ಮಸೂದೆಯು ಸದನದಲ್ಲಿ ಪಾಸು ಮಾಡಲ್ಪಟ್ಟರೂ ಅದನ್ನು ಜಾರಿಗೆ ತರುವಾಗ, ನಾವು ಅನೇಕ ತರವಾದ ಕಾನೂನಿನ ತೊಡಕುಗಳಿಗೆ ಪಕ್ಕಾಗುತ್ತೇವೆ. ಆದ್ದರಿಂದ ಯಾರು ಈ ಮಸೂದೆಯನ್ನು ರೂಪಿಸಿದ್ದಾರೋ, ಅದರಲ್ಲೂ ವಿಶೇಷವಾಗಿ ಅಪಾರ ಶ್ರಮವಹಿಸಿ, ಕಟಿಬದ್ಧರಾಗಿ ಇದಕ್ಕಾಗಿ ದುಡಿದರೋ, ಆ ಡಾ. ಅಂಬೇಡ್ಕರ್ ತಮ್ಮ ವಿಶಾಲ ದೃಷ್ಟಿಕೋನದ ಆಧಾರದಿಂದ, ತಮ್ಮ ಕಾನೂನಿನ ಪಾಂಡಿತ್ಯದ ಬೆಂಬಲದಿಂದ, ಕೇವಲ ಹಿಂದೂಗಳಿಗೆ ಮಾತ್ರವಲ್ಲದೆ ಭಾರತೀಯರೆಲ್ಲರಿಗೂ ಅನ್ವಯವಾಗುವಂತಹ ಕಾಯ್ದೆಯನ್ನು ಅವರು ರೂಪಿಸಲಿ, ಯಾವಾಗ ನಮ್ಮ ದಾರಿ ನೇರವಾಗಿಯೂ ಸತ್ಯವಾಗಿಯೂ ಇರುತ್ತದೋ ಆಗ ಸಹಜವಾಗಿ ಈ ಮಸೂದೆಯೊಳಗಿನ ಎಲ್ಲ ಅರೆ-ಕೊರೆಗಳು ಕಣ್ಮರೆಯಾಗಿ ಬಿಡುತ್ತವೆ.

(ಆಸನದಲ್ಲಿ ಮಾನ್ಯ ಸಭಾಧ್ಯಕ್ಷರು)

ಸಂಪೂರ್ಣ ನ್ಯಾಯವೆನ್ನುವುದು ಹಿಂದೂ ಮಹಿಳೆಯರಿಗೆ ಒದಗಬೇಕೆಂದು ಕೇಳುತ್ತಿರುವ ನನ್ನ ಸಹೋದರಿಯರಿಗೆ ನಾನು ಹೇಳಬಯಸುವುದೇನೆಂದರೆ ಹಾಗೆಯೇ ಆ ಸಂಪೂರ್ಣ ನ್ಯಾಯವು ಮುಸ್ಲಿಂ ಮಹಿಳೆಯರಿಗೆ ಹಾಗೂ ಇನ್ನಿತರ ಧರ್ಮೀಯ ಮಹಿಳೆಯರಿಗೆ ದೊರೆಯಬೇಕು. ನಮ್ಮ ವಾದವನ್ನು ಯಾರು ಒಪ್ಪುತ್ತಾರೆಂದು ಅವರು ವಾದ ಮಾಡಬಹುದು. ಆದರೆ ತುರ್ಕಿಯಲ್ಲಿ ಸುಧಾರಣೆಗಳು ನಡೆಯುತ್ತಿವೆ. ಅದೊಂದು ಮುಸ್ಲಿಂ ದೇಶ, ಆದರೆ ಅವರೆಲ್ಲಾ ಆ ಸುಧಾರಣೆಗಳನ್ನು ಒಪ್ಪಿಕೊಂಡಿದ್ದಾರೆ. ಅಂಥ ಮುಸ್ಲಿಂ ದೇಶದಲ್ಲಿ ಸುಧಾರಣೆಗಳನ್ನು ಆ ಜನ ಒಪ್ಪಿಕೊಂಡಿದ್ದಾರೆಂದರೆ, ಹಾಗೆಯೇ ಇಲ್ಲಿ ಕೂಡ ಈ ಸುಧಾರಣೆಗಳು ಒಪ್ಪಿತವಾಗುತ್ತವೆ. ಆದ್ದರಿಂದ ನಮ್ಮ ಸಹೋದರಿಯರು ತಮ್ಮ ತಮ್ಮೊಳಗೆ ಭೇದ ಭಾವಗಳನ್ನು ಮಾಡಿಕೊಳ್ಳದೆ ಸರಿಯಾದ ಮಾರ್ಗ ಅವಲಂಬಿಸಿ ಈ ಸುಧಾರಣೆಗಳನ್ನು ಒಪ್ಪಿಕೊಳ್ಳಬೇಕು. ಹಾಗಾದಾಗ ಮಾತ್ರ ಈ ಮಸೂದೆಯ ಪಾಸಾಗಿ, ಇಂಥ ವಿಧಾನದಲ್ಲಿ ಪಾಸಾದಾಗ ಮಾತ್ರ ಅದು ಮುಂದೆ ಅಂಥ ತೊಡಕುಗಳ ಉಗಮಕ್ಕೆ ಕಾರಣವಾಗಲಾರದು. ಇಲ್ಲವಾದಲ್ಲಿ ನಮ್ಮ ಮುಂದೆ ಕಠಿಣ ಸಮಸ್ಯೆಗಳು ಬರುತ್ತವೆ ಮತ್ತು ಮಸೂದೆ ಪಾಸಾದರೂ ನಾವುಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನೆಲ್ಲಾ ನಾನು ಹಿಂದೂ ಮಸೂದೆ ಕಾಯ್ದೆಯ ಪ್ರಗತಿಯಲ್ಲಿ ಬಾಧಕಗಳಾಗಲಿ ಎಂದು ಹೇಳುತ್ತಿಲ್ಲ ಎಂದು ಅವರಿಗೆಲ್ಲಾ ಹೇಳಬೇಕಾಗಿದೆ. ನಾನೊಬ್ಬ ಉಗ್ರ ಸುಧಾರಣವಾದಿ, ಆದ್ದರಿಂದಲೇ ಅದು ಪಾಸಾಗಿ ಬರಬೇಕೆಂಬ ಉದ್ದೇಶದಿಂದಲೇ ಮಸೂದೆಯನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಪರಿಷ್ಕರಣಗೊಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅಂಥ ಬದಲಾವಣೆಗಳನ್ನು ಮಾಡಿದಲ್ಲಿ ಮಾತ್ರ ಅದನ್ನು ಅನ್ವಯಿಸಿ, ಇಲ್ಲವಾದರೆ ಬೇಡ.

**ಶ್ರೀ ಶಿವ ಚರಣಲಾಲ್ (ಉತ್ತರ ಪ್ರದೇಶ) :** ನಾನು ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸಲು ಕೇಳಿಕೊಳ್ಳುತ್ತಿದ್ದೇನೆ. ನನ್ನ ಹೆಸರು ಕರೆದಾಗ ನಾನು ಸದನದಲ್ಲಿರಲಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಅವರು ಈಗ ಮಂಡಿಸಬಹುದು.

**ಶ್ರೀ ಶಿವ ಚರಣಲಾಲ್ :** ಮಂಡಿಸಲು ಕೇಳಿಕೊಳ್ಳುವೆ.

ಕಲಮು ೨ರ ಉಪ ಕಲಮು (೨)ರ ಪ್ರಸ್ತಾವ ಕೈ ಬಿಡಿ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿ ಮಂಡಿಸಲಾಗಿದೆ.

ಕಲಮು ೨ರ ಉಪ ಕಲಮು (೨)ರ ಪ್ರಸ್ತಾವ ಕೈ ಬಿಡಿ.

***ಶ್ರೀ ಜೆ.ಆರ್. ಕಪೂರ್ :** ಮಾನ್ಯ ಸದಸ್ಯರಿಗೆ ಮತ್ತೊಮ್ಮೆ ನೆನಪಿಸುವ ಸಲುವಾಗಿ ನಾನು ಮಾತಾಡಲು ಬಯಸಿರುವ ತಿದ್ದುಪಡಿಯನ್ನು ತಮ್ಮ ಅನುಮತಿಯ ಮೇರೆಗೆ ಇನ್ನೊಮ್ಮೆ ಓದುತ್ತೇನೆ. ತಿದ್ದುಪಡಿಯು ಹೀಗೆ ಹೇಳುತ್ತದೆ.

ಕಲಮು ೨ !

**ಶ್ರೀ ಝುಂಝುನವಾಲಾ :** ಮಾನ್ಯ ಸದಸ್ಯರು ಯಾವ ತಿದ್ದುಪಡಿಯನ್ನು ಉದ್ದೇಶಿಸಿ ಮಾತಾಡುತ್ತಿದ್ದಾರೆ?

**ಮಾನ್ಯ ಸಭಾಧ್ಯಕ್ಷರು :** ಇಂದು ಅವರು ಕೊಟ್ಟ ಸೂಚನೆಯ ಆಧಾರದ ಮೇಲೆ ಮಂಡಿಸುತ್ತಿರುವ ತಿದ್ದುಪಡಿ ಅದು. ಅದು ಪಟ್ಟಿಯಲ್ಲಿ ಮುದ್ರಿತವಾಗಿದ್ದಲ್ಲ.

**ಶ್ರೀ ಝುಂಝುನವಾಲಾ :** ನಮಗೆ ಅದರ ಪ್ರತಿಗಳನ್ನು ಪೂರೈಸಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಅದನ್ನು ಒಮ್ಮೆ ಸದನದಲ್ಲಿ ಓದಲಾಗಿದೆ. ಈಗ ಇನ್ನೊಮ್ಮೆ ಅವರು ಓದುತ್ತಾರೆ

**ಶ್ರೀ ಜೆ.ಆರ್. ಕಪೂರ್ :** ತಿದ್ದುಪಡಿಯು ಹೀಗಿದೆ. ಕಲಮು ೨ಕ್ಕೆ ಬದಲು

೨. ಸಂಹಿತೆಯನ್ನು ಅನ್ವಯಿಸುವಿಕೆ: "ಈ ಕಾನೂನಿನ ಸಂಹಿತೆಯು ಅಥವಾ ಅದರ ಯಾವುದೇ ಭಾಗ ಅಥವಾ ಭಾಗಗಳು ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅನ್ವಯವಾಗುತ್ತವೆ. ಯಾರಿಗೆಂದರೆ, ಯಾರು ಪ್ರಾಪ್ತವಯಸ್ಸನ್ನು ತಲುಪಿದ್ದಾರೋ, ಯಾರು ಕೇಂದ್ರ ಸರ್ಕಾರವು ಹೊರಡಿಸಿದ ನಿಗದಿತ ಕಾನೂನುಗಳ ಅನ್ವಯ, ಈ ಸಂಹಿತೆಯ ಅಥವಾ ಯಾವುದೇ ಭಾಗದ ಅಥವಾ ಭಾಗಗಳಿಗೆ ಬದ್ಧರಾಗಿರಲು ಬರಹದ ಮೂಲಕ ಅಧಿಕೃತವಾಗಿ ಘೋಷಿಸಿಕೊಂಡಿದ್ದಾರೋ ಅವರಿಗೆ ಅನ್ವಯವಾಗುತ್ತವೆ"

ಎರಡನೆಯದಾಗಿ, ಈ ತಿದ್ದುಪಡಿ ಒಪ್ಪಿತವಾಗದಿದ್ದಲ್ಲಿ, ಅದಕ್ಕೆ ಪರ್ಯಾಯವಾಗಿ ಇನ್ನೊಂದು ತಿದ್ದುಪಡಿ ಇದೆ. ನಾನು ಆ ಪರ್ಯಾಯ ತಿದ್ದುಪಡಿಯನ್ನು ಸದನವು ಪರಿಭಾವಿಸಲು ಅದರ ಮುಂದಿಡುತ್ತಿದ್ದೇನೆ. ಪರ್ಯಾಯ ತಿದ್ದುಪಡಿ ಹೀಗಿದೆ:

ಶ್ರೀ ಬನಾರಸಿ ಪ್ರಸಾದ್ ಝುಂಝುನವಾಲಾ ಅವರು ಮಂಡಿಸಿರುವ ಕಲಮು ೨ರ ಉದ್ದೇಶಿತ ತಿದ್ದುಪಡಿಯ ನಂ. ೧೮ರ ಹೆಚ್ಚುವರಿ ಪಟ್ಟಿ ೧ರಲ್ಲಿರುವ ಆ ಕಲಮಿನ ಆರಂಭದ ಶಬ್ದಗಳಾದ "ಅಂಥ ವ್ಯಕ್ತಿಗಲ್ಲದೆ" ಎಂಬುದರಿಂದ ಹಿಡಿದು ಕೊನೆ ತನಕ ಸೇರಿಸಬೇಕಾದ ಪರ್ಯಾಯ;

"ಯಾವ ವ್ಯಕ್ತಿ ಪ್ರಾಪ್ತ ವಯಸ್ಸನ್ನು ಮುಟ್ಟುತ್ತಾನೋ, ಈ ಕಲಮಿನ ಅನ್ವಯ ಆತ ಅಥವಾ ಆಕೆ ಈ ಕಾನೂನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊರಡಿಸುವ ಅಧಿನಿಯಮಗಳಿಗನುಸಾರವಾಗಿ ಈ ಸಂಹಿತೆಗೆ ನಾನು ಬದ್ಧನೆಂದು ಬರೆದು ಘೋಷಿಸುವಂಥ ವ್ಯಕ್ತಿಗಳಿಗೆ ಮಾತ್ರವಲ್ಲದೆ"

ಹಾಗೆಯೇ ಶ್ರೀ ಝುಂಝುನವಾಲಾ ಅವರ ತಿದ್ದುಪಡಿಗೆ ನಾನು ಮತ್ತಷ್ಟು ತಿದ್ದುಪಡಿ ಮಾಡಿರುವೆ. ಅದು ಹೀಗಿದೆ:

* ಫೆಬ್ರವರಿ ೫ನೇ ತಾರೀಖು ೧೯೫೧ರಂದು ನಡೆದ ಸದನ ಚರ್ಚೆ ಸಂ. VIII, ಭಾಗ II ಪುಟಗಳು ೨೩೯೨–೯೮

"೨ ಸಂಹಿತೆಯನ್ನು ಅನ್ವಯಿಸುವಿಕೆ: ಈ ಸಂಹಿತೆ ಅಥವಾ ಯಾವುದೇ ಭಾಗ ಅಥವಾ ಭಾಗಗಳು ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅನ್ವಯವಾಗುತ್ತವೆ.

ತಿದ್ದುಪಡಿಯು ಮುಂದುವರೆಯುತ್ತಾ ಯಾರು ಸ್ವತಃ ಅಧಿಕೃತವಾಗಿ ಬರೆದು ಇನ್ನು ಮುಂದೆ ತಾವು ಬದ್ಧರೆಂದು ಘೋಷಿಸುತ್ತಾರೋ ಅಂಥವರಿಗೆ ಅನ್ವಯವಾಗುತ್ತವೆ ಎಂದು ಹೇಳುತ್ತದೆ. ಅದನ್ನು ನಾನು ವರದಿ ಮಾಡುವ ಅಗತ್ಯವಿಲ್ಲ.

ನಾನು ಅತ್ಯಂತ ಜವಾಬ್ದಾರಿಯ ಹಿನ್ನಲೆಯಲ್ಲಿ ಈ ತಿದ್ದುಪಡಿಗಳನ್ನು ಮುಂದಿಟ್ಟಿದ್ದೇನೆ. ನನ್ನನ್ನು ಮತ್ತು ನನಗಿಂತ ಹಿಂದೆ ಮಾತಾಡಿದ ಇಬ್ಬರು ಭಾಷಣಕಾರರ ಭಾಷಣವನ್ನು ತಪ್ಪು ಅರ್ಥೈಸುವುದಿಲ್ಲ ಎಂದು ನಾನಾದರೂ ಆಶಿಸುತ್ತೇನೆ. ನಾನು ಮಂಡಿಸಿದ ತಿದ್ದುಪಡಿಯು ನನ್ನ ಸ್ನೇಹಿತರಾದ ಶ್ರೀ ಸರ್ವಟೆ ಮತ್ತು ಶ್ರೀ ಇಂದ್ರ ವಿದ್ಯಾ ವಾಚಸ್ಪತಿ ಅವರು ಈ ಹಿಂದೆ ಮಂಡಿಸಿದ ಎರಡು ತಿದ್ದುಪಡಿಯ ರೀತಿಯಲ್ಲಿಯೇ ಇದೆ. ನನ್ನದು ಅವರ ತಿದ್ದುಪಡಿಗಳನ್ನು ಸುಧಾರಿಸಿದ್ದು. ಈ ಮಸೂದೆಯನ್ನು ಮಂಡಿಸುವಾಗ ಮೊಟ್ಟಮೊದಲು ನಾನು ಹೇಳುವುದೇನೆಂದರೆ ನಾನು ಈ ಹಿಂದೂ ಮಸೂದೆಯು ಸದನದಲ್ಲಿ ಸುಲಭವಾಗಿ ಅಂಗೀಕೃತಗೊಳ್ಳುವುದರ ಕಡೆಗೆ ವಿಶೇಷವಾಗಿ ಕ್ರಿಯಾತ್ಮಕವಾಗಿದ್ದೇನೆ. ಇದು ನನ್ನ ಮೊದಲ ಲಕ್ಷ್ಯ. ನನ್ನ ಎರಡನೆಯ ಲಕ್ಷ್ಯ, ಇಡೀ ದೇಶ, ಸಮುದಾಯದೊಳಗಿನ ವಿವಿಧ ವರ್ಗಗಳು, ದೇಶದೊಳಗಿನ ವಿವಿಧ ಭಾಗಗಳು ಈ ಮಸೂದೆಯನ್ನು ಸುಲಭವಾಗಿ ಒಪ್ಪುವಂತೆ ಮಾಡುವುದಾಗಿದೆ. ನನ್ನ ಮೂರನೆಯ ಲಕ್ಷ್ಯವೆಂದರೆ, ಅದನ್ನು ಈ ಸದನದಲ್ಲಿ ಹೇಳಬಾರದು. ಏಕೆಂದರೆ ಈ ದೇಶದಲ್ಲಿ ನಾವು ಧರ್ಮನಿರಪೇಕ್ಷ ರಾಜ್ಯ ಹೊಂದಿದ್ದೇವೆ. ಮತ್ತು ಧರ್ಮನಿರಪೇಕ್ಷ ರಾಜ್ಯವನ್ನು ರೂಪಿಸುವ ಹಿನ್ನಲೆಯಲ್ಲಿ, ಅಂಥ ಸಂವಿಧಾನದ ರಚನೆಯಲ್ಲಿ ಬಹಳ ಶ್ರಮಪಟ್ಟಿದ್ದೇವೆ. ಈಗ ನಾವು ಮಾಡ ಹೊರಟ ಕಾಯ್ದೆಗಳಲ್ಲಿ ಕೋಮುವಾದದ ವಾಸನೆ ಕಂಡುಬರುತ್ತಿದೆ. ಇದು ಸ್ಪಷ್ಟವಾಗಿ ಹೇಳುವುದೇನೆಂದರೆ, ನಾವು ಸಮುದಾಯದ ಒಂದು ಭಾಗಕ್ಕೆ ಮಾತ್ರ ಕಾಯ್ದೆ ಮಾಡಲು ಹೊರಟಿದ್ದೇವೆ– ಉಳಿದವರಿಗಲ್ಲ. ಹಾಗೆಯೇ ಒಂದು ಧರ್ಮವನ್ನು ಪಾಲಿಸುವ ಜನರಿಗಾಗಿ ಮಾತ್ರ ಕಾಯ್ದೆ ಮಾಡಿ, ಉಳಿದ ಧರ್ಮಗಳನ್ನು ಪಾಲಿಸುವವರಿಗಲ್ಲ, ಅಥವಾ ತದ್ವಿರುದ್ಧ ಮಾಡುತ್ತಿದ್ದೇವೆ. ಅಂದರೆ ಸಮುದಾಯದ ಒಂದು ವರ್ಗದವರ ಹಕ್ಕು ಮತ್ತು ಅವರ ಧಾರ್ಮಿಕ ಸಂಪ್ರದಾಯದ ಇನ್ನೊಂದು ವರ್ಗದವರು ಪಾಲಿಸುತ್ತಿರುವ ಧರ್ಮದ ಹಕ್ಕು ಬಾಧ್ಯತೆಗಳ ಒಳಕ್ಕೆ ಪ್ರವೇಶಿಸಲು ಹಿಂಜರಿಯುತ್ತಿದ್ದೇವೆ. ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಂಡರೆ ಅದರಿಂದ ಪ್ರಯೋಜನವಾಗುವುದೇ ವಿನಾ ನಷ್ಟವಂತೂ ಖಂಡಿತ ಇಲ್ಲ.

ಇಂದು ಮುಂಜಾನೆ ನನ್ನ ಸ್ನೇಹಿತರಾದ ಶ್ರೀ ನಜೀರುದ್ದೀನ್ ಅಹ್ಮದ್ ಅವರು ಕ್ರಿಯಾಲೋಪವನ್ನು ಎತ್ತಿದ್ದು ಕೇಳಿ ಸಂತೋಷಪಟ್ಟೆ. ಹಾಗೆಂದು ಅವರು ಎತ್ತಿದ ಕ್ರಿಯಾಲೋಪದ ಜೊತೆ ನನಗೆ ಸಮ್ಮತಿ ಇದೆ ಎಂದು ಅರ್ಥವಲ್ಲ. ಆದರೆ ಅದರ ಹಿಂದಿನ ಉದ್ದೇಶ ಮತ್ತು ಕಳಕಳಿ ಅವು ಅವರು ಎತ್ತಿದ ಕ್ರಿಯಾಲೋಪಕ್ಕೆ ಒಂದು ತೂಕವನ್ನು ನೀಡಿವೆ. ತಾರತಮ್ಯವುಂಟುಮಾಡುವ ಕಾನೂನನ್ನು ಮಾಡಲು ಸಂವಿಧಾನದಲ್ಲಿ ಅವಕಾಶವಿಲ್ಲ ಎಂಬುದು ಅವರ ಕ್ರಿಯಾಲೋಪ. ಅದಕ್ಕಾಗಿ ಅವರು ಸಂವಿಧಾನದ ಅನುಚ್ಛೇದ ೧೫ನ್ನು ಉಲ್ಲೇಖಿಸಿದರು. ಹಾಗೆಯೇ ಸಂವಿಧಾನದ ಅನುಚ್ಛೇದ ೨೫ನ್ನೂ ಉಲ್ಲೇಖಿಸಿದರು. ಅವರ ಮನಸ್ಸಿನೊಳಗೆ ಇರುವುದೇನೆಂದರೆ ಹಿಂದೂ ಮಸೂದೆಯು ಬಹಳ ಪ್ರಯೋಜನಕಾರಿ ಮತ್ತು ಲಾಭದಾಯಕ ಎನ್ನುವುದಾದರೆ, ಅದನ್ನು ದೇಶದ ಇನ್ನಿತರ ಸಮುದಾಯಗಳಿಗೂ ಏಕೆ ಅನ್ವಯಿಸುತ್ತಿಲ್ಲ? ಎಂಬುದಾಗಿದೆ. ಹಾಗೆಯೇ ಅವರ ಮನಸ್ಸಿನಲ್ಲಿ ಏನಿದೆ ಎಂಬುದರ ಬಗ್ಗೆ ನನಗೆ ಖಾತ್ರಿ ಇದೆ – ಕಾಲ ಪ್ರಚುರಪಡಿಸುತ್ತಿರುವ ಲಕ್ಷಣಗಳ

ಕಡೆ ಅವರ ದೃಷ್ಟಿ ಇದೆ. ಅವರು ಎತ್ತಿರುವ ಕ್ರಿಯಾಲೋಪದನ್ವಯ, ಒಂದು ಕಾಯ್ದೆಯನ್ನು ರಚಿಸುವ ಪ್ರಯತ್ನ ಮಾಡಿ, ಅದನ್ನು ದೇಶದ ಎಲ್ಲಾ ವರ್ಗಗಳಾದ ಹಿಂದೂ, ಮುಸ್ಲಿಂ, ಪಾರ್ಸಿ ಮತ್ತು ಕ್ರಿಶ್ಚಿಯನ್ ಧರ್ಮೀಯರಿಗೆ ಅನ್ವಯಿಸುವುದಾದರೆ, ನನ್ನ ಪ್ರಕಾರ ಅವರು ಖಂಡಿತ ಸಂತೋಷಪಡುತ್ತಾರೆ.

ಹಾಗೆಯೇ ನನ್ನ ಸ್ನೇಹಿತರಾದ ಶ್ರಿ ಸರ್ವಟೆ ಉಲ್ಲೇಖಿಸಿದ ಸಂವಿಧಾನದ ಅನುಚ್ಛೇದ ೪೪ರ ಪ್ರಕಾರ, ಸರ್ಕಾರವು ಇಡೀ ದೇಶಕ್ಕೆ ಅನ್ವಯವಾಗುವಂತಹ ಒಂದು ನಾಗರಿಕ ಕಾನೂನು ಮಾಡಬಹುದು. ಮೂಲಭೂತ ಹಕ್ಕಿನ ಅಧ್ಯಾಯದಲ್ಲಿ ಅ ಅನುಚ್ಛೇದವನ್ನು ಸೇರಿಸಿಲ್ಲ. ನಿಜ, ಆದರೆ ಅದನ್ನು ನಿರ್ದೇಶಿತ ತತ್ವಗಳ ಅಧ್ಯಾಯದಲ್ಲಿ ಸೇರಿಸಲಾಗಿದೆ. ಇಡೀ ದೇಶಕ್ಕೆ ಅನ್ವಯವಾಗುವಂತಹ ಸಾಮಾನ್ಯ ನಾಗರಿಕ ಕಾನೂನು ಹೊಂದುವಂತೆ ಸ್ಪಷ್ಟವಾಗಿ ನಮ್ಮ ಸಂವಿಧಾನ ನಿರ್ದೇಶನ ನೀಡುತ್ತದೆ. ನಾಗರಿಕ ಕಾನೂನೊಂದನ್ನು ಪಡೆಯಬೇಕೆಂದು ನಾವು ನಡೆಸುತ್ತಿರುವ ಮೊದಲ ಪ್ರಯತ್ನವಿದೆ– ಸರಿ, ಇಂಥ ಸಂದರ್ಭದಲ್ಲಿ ಸಂವಿಧಾನದೊಳಗಿರುವ ಇಂಥ ಒಂದು ಬಹು ಮುಖ್ಯ ಅನುಚ್ಛೇದವನ್ನು ಮರೆಯಬಹುದೆ? ಅದು ಸರಿಯಾದ ಕ್ರಮವೆ? ಸಂವಿಧಾನದತ್ತವಾದ ಸ್ಪಷ್ಟ ನಿರ್ದೇಶನಗಳಿಗೆ ನಾವು ತದ್ವಿರುದ್ಧವಾದುದನ್ನು ಆರಂಭದಲ್ಲಿಯೇ ಮಾಡಲು ಪ್ರಯತ್ನಿಸದಿರೋಣ. ಸಂವಿಧಾನ ರಚನಾಸಭೆಯಲ್ಲಿ, ನಾವೆಲ್ಲಾ, ಮತ್ತು ನಮ್ಮೊಳಗಿನ ಬಹುಜನ, ಮತ್ತು ಈಗ ಇಲ್ಲಿರದ ಬಹು ಪ್ರಖ್ಯಾತ ಪರಿಣಿತರು ಸೇರಿದ್ದರು. ಹಾಗೆಯೇ ಅನೇಕ ಮುಸ್ಲಿಂ ಸದಸ್ಯರು, ಪಾರ್ಸಿಗಳು, ಕ್ರಿಶ್ಚಿಯನ್ನರು, ಹಾಗೆಯೇ ಬೇರೆ ಬೇರೆ ಧರ್ಮ ಪಾಲಿಸುವವರೂ ಇದ್ದರು. ನನ್ನ ನೆನಪಿನ ಪ್ರಕಾರ ಅವರೆಲ್ಲಾ ಸಂವಿಧಾನದೊಳಗಿರುವ ಈ ಅನುಚ್ಛೇದಗಳಾದ ೧೫, ೨೫, ೪೪ರ ಬಗ್ಗೆ ಒಮ್ಮತದ ಅಭಿಪ್ರಾಯವನ್ನು ಸೂಚಿಸಿದ್ದರು. ಬೇರೆ ಬೇರೆ ಧರ್ಮ ಪಾಲಿಸುವ ಅವರೆಲ್ಲಾ ಗಂಭೀರವಾಗಿ, ಶಾಂತವಾಗಿ, ನಿರುದ್ವಿಗ್ನವಾಗಿ ದೇಶಕ್ಕೆ ಎಂಥೆಂಥ ಕಾಯ್ದೆಗಳು ಇರಬೇಕೆಂದು ಯೋಚಿಸಿ, ಅವರೆಲ್ಲಾ ಒಂದು ಸರ್ವ ಸಾಮಾನ್ಯ ಕಾಯ್ದೆ ಇರಬೇಕೆಂದು ಒಮ್ಮತದ ಅಭಿಪ್ರಾಯ ಸೂಚಿಸಿದ್ದರು. ಅಂದರೆ ಅವರು ಸಂವಿಧಾನದ ಅನುಚ್ಛೇದ ೧೫ ಮತ್ತು ೨೫ ಹಾಗೂ ೪೪ರ ಬಗ್ಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದ್ದರು.

ಸಂವಿಧಾನದತ್ತ ಈ ಅನುಚ್ಛೇದಗಳನ್ವಯ ಕೆಲಸ ಮಾಡದಿರಲು ಅಲ್ಲಿಂದ ಇಲ್ಲಿಯವರೆಗೆ ಯಾರು ನಮ್ಮನ್ನು ತಡೆಹಿಡಿದರು? ಅಲ್ಲಿಂದ ಇಲ್ಲಿಯವರೆಗೂ ಏನೂ ಸಂಭವಿಸಿಲ್ಲ. ಅಂಥದ್ದೇನಾದರೂ ಈ ಸಂವಿಧಾನದತ್ತ ಪ್ರಸ್ತಾವಗಳ ವಿರುದ್ಧ ನಮ್ಮನ್ನು ನಡೆಸಬೇಕಿತ್ತು. ಆದರೆ ಮತ್ತೊಂದು ದಿಕ್ಕಿನಲ್ಲಿ, ಕೇವಲ ಹಿಂದೂಧರ್ಮವನ್ನು ಪಾಲಿಸುವವರಲ್ಲದೆ, ಇನ್ನಿತರ ಧರ್ಮಗಳನ್ನು ಪಾಲಿಸುವವರೂ ಕೂಡ ಒಂದು ಸಾಮಾನ್ಯ ನಾಗರಿಕ ಕಾನೂನು ಹೊಂದಬೇಕೆಂದು ಕಾತುರರಾಗಿದ್ದಾರೆ. ಮಾನ್ಯ ನಜೀರುದ್ದೀನ್ ಅವರು ಮುಸ್ಲಿಂ ಸಮುದಾಯದ ಪ್ರತಿನಿಧಿ. ಅವರು ಕೂಡ ದೇಶದ ಒಂದು ವರ್ಗಕ್ಕೆ ಮಾತ್ರ ಅನ್ವಯವಾಗುವ ಕಾಯ್ದೆಯನ್ನು ಮಾಡುವುದು ಸರಿಯಲ್ಲ ಎನ್ನುತ್ತಿದ್ದಾರೆ. ಆದರೆ ಬೇರೆ ಬೇರೆ ಧರ್ಮೀಯರನ್ನೂ ದೇಶದ ಎಲ್ಲಾ ವರ್ಗಗಳನ್ನೂ ಆಳಬಲ್ಲ ಒಂದು ಕಾಯ್ದೆ ಬೇಕೆಂದು ಅವರು ಪ್ರತಿಪಾದಿಸುತ್ತಿದ್ದಾರೆ. ಹೀಗಿರುವುದರಿಂದ ಈಗಾಗಲೇ ಮಂಡಿಸಬೇಕೆಂದು ಸಲ್ಲಿಸಿರುವ ಮತ್ತು ಮಂಡಿಸಿರುವ ತಿದ್ದುಪಡಿಗಳ ಮೂಲಕ, ಬೇರೆ ಬೇರೆ ಧರ್ಮಗಳನ್ನು ಪಾಲಿಸುತ್ತಿರುವವರಿಗೆ ಕಾಯ್ದೆಗಳನ್ನು ಮಾಡಲು ನಾವು ಹಿಂಜರಿಯಲು ಯಾವ ಕಾರಣಗಳೂ ಇಲ್ಲ. ಈ ಮಸೂದೆಯ ಜಾರಿಯ ವ್ಯಾಪ್ತಿಯಿಂದ ಹೊರಗುಳಿಯಲು ಸಿಖ್ಖರು ನಿರ್ಧರಿಸಿದ್ದಾರೆಂದು ನನಗೆ ತಿಳಿದುಬಂದಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆಯೇ ನನ್ನ ಸ್ನೇಹಿತರಾದ ಶ್ರೀ ಸರ್ದಾರ ಹುಕುಂ ಸಿಂಗ್ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಕಲಮು ೨ನ್ನು ತಿದ್ದುಪಡಿ ಮಾಡಬೇಕೆಂದು, ಮತ್ತು ಅದನ್ನು

ಎಲ್ಲಾ ರಾಜ್ಯಗಳಿಗೂ ಮತ್ತು ಸಮುದಾಯಗಳಿಗೂ ಅನ್ವಯಿಸಬೇಕೆಂದು ಒತ್ತಾಯಿಸಬಾರದೆಂದು ನನ್ನ ಸ್ನೇಹಿತರು ಕಾತುರವನ್ನು ತೋರುತ್ತಿದ್ದಾರೆ. ಖ್ಯಾತ ಸಮಾಜ ಸುಧಾರಕರೂ ಪ್ರಸಿದ್ಧರೂ ಆದ ನನ್ನ ಸ್ನೇಹಿತರಾದ ಪಂಡಿತ ಠಾಕೂರ್‌ದಾಸ್ ಭಾರ್ಗವ ಅವರು ಸಾಮಾಜಿಕ ಅಭ್ಯುದಯದ ದೃಷ್ಟಿಯಿಂದ ಈ ಸದನದಲ್ಲಿ ಕೆಲವು ಕಾನೂನುಗಳನ್ನು ತರಬೇಕೆಂದು ಯಾವಾಗಿನಿಂದಲೂ ಕಾತುರರಾಗಿದ್ದಾರೆ. ಅವರ ತಿದ್ದುಪಡಿಯ ಪ್ರಕಾರ, ಈ ಮಸೂದೆಯನ್ನು ಒಪ್ಪಿಕೊಳ್ಳುವುದು ಮತ್ತು ಬಿಡುವ ನಿರ್ಧಾರವನ್ನು ಆಯಾ ರಾಜ್ಯಗಳಿಗೆ ವಹಿಸಿಕೊಡುವುದಾಗಿದೆ. ಈ ಸಂಹಿತೆಯಿಂದ ಆಳಲ್ಪಡಬೇಕೋ ಅಥವಾ ಬೇಡವೋ ಎಂಬ ನಿರ್ಧಾರವನ್ನು ಕೂಡ ವಿವಿಧ ವರ್ಗಗಳ ಇಚ್ಛೆಗೆ ಬಿಡಬೇಕೆಂದು ಅವರು ಬಯಸಿದ್ದಾರೆ.

**ಶ್ರೀ ತ್ಯಾಗಿ :** ಹಾಗೆಂದರೆ, ಅದು ಭೌಗೋಳಿಕವಾಗಿ ಏಕತೆಯೆನಿಸದು.

**ಶ್ರೀ ಜೆ.ಆರ್. ಕಪೂರ್ :** ಖಂಡಿತವಾಗಿಯೂ, ಎಲ್ಲಾ ಭೌಗೋಳಿಕ ಪ್ರದೇಶಗಳಿಗೂ ಮತ್ತು ಸಮುದಾಯಗಳಿಗೂ ಮಸೂದೆಯನ್ನು ಅನ್ವಯಿಸುವುದಾದರೆ ನನ್ನ ತಿದ್ದುಪಡಿಯು ಯೋಗ್ಯವಾಗಿದೆ. ಅದು ಮಸೂದೆಯ ಜಾರಿಯನ್ನು ಯಾವುದೇ ಭೌಗೋಳಿಕ ಪ್ರದೇಶಕ್ಕಾಗಲಿ, ಅಥವಾ ಇನ್ನೊಂದಕ್ಕಾಗಲಿ, ಅಥವಾ ಯಾವುದೇ ಸಮುದಾಯಕ್ಕಾಗಲಿ ಅಥವಾ ಇನ್ನೊಂದಕ್ಕಾಗಲಿ ನಿರ್ಬಂಧಿಸದು. ಹಾಗೆ ನೋಡಿದರೆ ಈ ಕಾಯ್ದೆಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿ ಅದು ತನ್ನ ತೆಕ್ಕೆಯೊಳಗೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಬೇರಾವುದೇ ಧರ್ಮವನ್ನು ಅನುಸರಿಸುತ್ತಿರುವವರನ್ನು ತೆಗೆದುಕೊಳ್ಳುತ್ತದೆ.

ಈ ಮಸೂದೆ ಕುರಿತ ಸಾಮಾನ್ಯ ಚರ್ಚೆಯಲ್ಲಿ ಡಾ. ಟೆಕ್ ಚಂದ ಮತ್ತು ಪಂಡಿತ ಠಾಕೂರ್ ದಾಸ್ ಅವರು ಕೆಲ ಮುಸ್ಲಿಂ ಅಂಶಗಳನ್ನು ಪ್ರಸ್ತಾಪಿಸಿದರು. ಅವರು ಹೇಳಿದ್ದೇನೆಂದರೆ ವಿವಾಹ ಮತ್ತು ವಿಚ್ಛೇದನಗಳು ಸರಳವಾಗಿರುವ ಹಿಂದೂ ಸಮುದಾಯದ ವಿವಿಧ ವರ್ಗಗಳ ಮೇಲೆ ಈ ಮಸೂದೆಯು ಕಟ್ಟುನಿಟ್ಟಿನದಾಗಿರುತ್ತದೆ. ಪಂಜಾಬ್‌ನ ಕೆಲವೆಡೆ ವಿವಾಹಗಳನ್ನು ಸರಳವಾಗಿ ಆಚರಿಸಬಹುದು. ಅವರುಗಳು ಇಂಥ ಸರಳ ವಿವಾಹಗಳಿಂದ ಯಾಕೆ ಹೊರತಾಗಬೇಕು?

**ಡಾ. ದೇಶಮುಖ (ಮಧ್ಯಪ್ರದೇಶ) :** ಸುಲಭ ಮದುವೆ, ಸುಲಭ ವಿಚ್ಛೇದನ.

**ಶ್ರೀ ಜೆ.ಆರ್. ಕಪೂರ್ :** ವಿವಾಹ ವಿಚ್ಛೇದನ ಕುರಿತಂತೆ ದೇಶದ ವಿವಿಧ ಭಾಗಗಳಲ್ಲಿ ಹಾಗೂ ವಿವಿಧ ವರ್ಗದ ಜನರಲ್ಲಿ ಸರಳವಾದ ಕಾನೂನುಗಳಿವೆ. ಅಂಥ ಕಾನೂನುಗಳನ್ನು ಯಾಕೆ ಕಠಿಣಗೊಳಿಸಬೇಕು? ಇನ್ನೊಂದು ರೀತಿಯಲ್ಲಿ ಕೆಲವರ ಪ್ರಕಾರ, ವಿವಾಹ ಮತ್ತು ವಿಚ್ಛೇದನ ಕುರಿತಂತೆ ಪ್ರಸ್ತುತ ಮಸೂದೆಯ ಮೂಲಕ ಕೆಲ ಬಿಗಿಕ್ರಮಗಳನ್ನು ತರಬೇಕೆಂಬುದು ಅವರ ಆಶಯವಾದರೆ, ಇನ್ನು ಕೆಲವರ ಪ್ರಕಾರ, ಯಾವ ವ್ಯಕ್ತಿಗಳಿಗೆ ಇಂಥ ಕಾನೂನುಗಳಲ್ಲಿ ನಂಬಿಕೆಯಿಲ್ಲವೋ ಅಂಥವರ ಮೇಲೆ ಈ ವಿವಾಹ ಮತ್ತು ವಿಚ್ಛೇದನದ ಕಾನೂನುಗಳನ್ನು ಯಾಕೆ ಹೇರುತ್ತೀರಿ ಎನ್ನುವುದಾಗಿದೆ. ಆದ್ದರಿಂದ ನನ್ನ ಅರಿಕೆ ಏನೆಂದರೆ, ಈ ಮಸೂದೆಯು ಯಾವ ಸ್ವರೂಪದಲ್ಲಿಯೇ ಅಂಗೀಕೃತಗೊಳ್ಳಲಿ, ಹಿಂದೂಧರ್ಮದ ಯಾವುದೇ ಸಮುದಾಯದ ಮೇಲಾಗಲಿ ಅಥವಾ ಸಿಖ್ ಅಥವಾ ಜೈನರ ಮೇಲಾಗಲಿ ಒತ್ತಾಯದಿಂದ ಹೇರಕೂಡದು. ಆ ಮಸೂದೆಯಿಂದ ಅವರುಗಳು ಆಳಲ್ಪಡಬೇಕೋ ಅಥವಾ ಬೇಡವೋ ಎಂಬುದನ್ನು ಮುಕ್ತವಾಗಿ ಅವರಿಗೆ ಬಿಟ್ಟುಕೊಡಬೇಕು. ಎರಡನೆಯದಾಗಿ, ಮಸೂದೆಯೊಳಗೆ ಇರುವ ಅವಕಾಶಗಳಲ್ಲಿ ಮುಖ್ಯವಾಗಿ ಏಕಪತ್ನಿತ್ವ ಮತ್ತು ವಿವಾಹ ಕುರಿತಂತೆ, ನಾನು ನನ್ನ ಸಂಪೂರ್ಣ ಸಮ್ಮತಿಯನ್ನು ತೋರುತ್ತಾ ಅವು ಇನ್ನಷ್ಟು ಉದಾರಗೊಳ್ಳಬೇಕೆಂದು ಹೇಳುತ್ತೇನೆ. ಹಾಗೂ ಮುಸ್ಲಿಂ ಸಮುದಾಯಕ್ಕಿರುವ ಪ್ರಯೋಜನವೊಂದನ್ನು ತಡೆಹಿಡಿಯಲು ಯಾವ ಕಾರಣಗಳು ನನಗೆ ಕಂಡುಬರುತ್ತಿಲ್ಲ.

ನನ್ನ ಸ್ನೇಹಿತರಾದ ಶ್ರೀ ಸರ್ವಟೆ ಹಾಗೂ ಶ್ರೀ ಇಂದ್ರ ಅವರು ತಮ್ಮ ತಿದ್ದುಪಡಿಗಳನ್ನು ಸದನದ ಮುಂದೆ ಇರಿಸಿದ್ದಾರೆ. ಇಡೀ ಮಸೂದೆಯನ್ನು ಮುಸ್ಲಿಮರಿಗೂ ಕಡ್ಡಾಯ ಮಾಡಬೇಕೆಂದು ಶ್ರೀ ಇಂದ್ರ ಅವರು ತಮ್ಮ ತಿದ್ದುಪಡಿಯಲ್ಲಿ ವಿಶೇಷವಾಗಿ ಬಯಸಿದ್ದಾರೆ. ಪ್ರತಿಯೊಬ್ಬ ಹಿಂದೂವು ಈ ಮಸೂದೆಯಿಂದ ಆಳಲ್ಪಡಬೇಕೆಂಬ ಪ್ರತಿಬಂಧಕ ಬೇಡವೆಂದು ಬಯಸುತ್ತೇವೋ ಹಾಗೆಯೇ ಇದನ್ನು ಮುಸ್ಲಿಮರ ಮೇಲೂ ಹೇರಬಾರದೆಂದು ಇಚ್ಛಿಸುತ್ತೇನೆ. ಹಿಂದೂ, ಮುಸ್ಲಿಂ, ಪಾರ್ಸಿ ಅಥವಾ ಹಿಂದಿನಿಂದ ಅಥವಾ ಮುಂದೆ, ಯಾರು ಯಾವುದೇ ಧರ್ಮವನ್ನು ಪಾಲಿಸುತ್ತಿದ್ದರೂ ಅವರಿಗೆಲ್ಲ ಮುಕ್ತ ಸ್ವಾತಂತ್ರ್ಯವಿರಬೇಕು. ಹಾಗೆ ನೋಡಿದರೆ ಈ ಮಸೂದೆಯಿಂದ ಆಳಲ್ಪಡಬೇಕೋ ಅಥವಾ ಬೇಡವೋ ಎನ್ನುವ ಸ್ವಾತಂತ್ರ್ಯ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಇರಬೇಕೆಂದು ನಾನು ಆಶಿಸುತ್ತೇನೆ.

**ಡಾ. ಅಂಬೇಡ್ಕರ್ :** ಮಹಾ ಉದಾರಿ!

**ಶ್ರೀ ಜೆ.ಆರ್. ಕಪೂರ್ :** ಇಷ್ಟೇ ಅಲ್ಲ ಮಸೂದೆಯೊಳಗಿಂದ, ಪ್ರತಿಯೊಬ್ಬನು ತನಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಆರಿಸಿಕೊಳ್ಳುವುದಕ್ಕೆ ಮುಕ್ತನಿರಬೇಕು. ನಾನು ಬಹು ಗಂಭೀರವಾಗಿ ಈ ಮಾತಾಡುತ್ತಿದ್ದೇನೆ. ಯಾಕೆಂದರೆ ಈ ಕಾಯ್ದೆಯೊಳಗಿನ ಹಲವು ಪ್ರಕರಣಗಳು ಕೆಲವರಿಗೆ ಕೂಡಲೆ ಒಪ್ಪಿತವಾಗುವಂತಿದ್ದರೆ, ಉಳಿದವರಿಗೆ ಹಾಗೆ ಇಲ್ಲ, ಹಾಗೆಯೇ ಕೆಲ ಪ್ರಕರಣಗಳಲ್ಲಿ ಕೆಲವು ಒಪ್ಪಿತವಾಗುವಂತಿದ್ದರೆ ಉಳಿದವು ಎಂದಿಗೂ ಒಪ್ಪಿತವಾಗುವಂತಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಕಲಮಿನನ್ವಯ ವ್ಯಕ್ತಿಯೊಬ್ಬ ಹೀಗೆ ಆಯ್ಕೆ ಮಾಡಿಕೊಳ್ಳಬಹುದೆಂಬುದು ನನ್ನ ಸ್ನೇಹಿತರ ಅಭಿಮತವೇ?

**ಶ್ರೀ ಜೆ.ಆರ್. ಕಪೂರ್ :** ಕಲಮಿನನ್ವಯ ಅಲ್ಲ, ಆದರೆ ಸಂಹಿತೆಯ ವಿವಿಧ ಭಾಗಗಳನ್ವಯ. ನಾನು ಈ ರೀತಿ ಸಲಹೆ ಮಾಡಿದಾಗ ಇದಕ್ಕೆ ಡಾ. ಅಂಬೇಡ್ಕರ್ ಹಾಗೂ ಪಂಡಿತ ಭಾರ್ಗವ ಅವರಂತಹವರ ಕಾನೂನು ಪಾಂಡಿತ್ಯ ಇರುವವರು ಹಾಗೂ ಇನ್ನುಳಿದ ಖ್ಯಾತ ಕಾನೂನು ತಜ್ಞರ ಸಲಹೆಯು, ನನ್ನ ತಿದ್ದುಪಡಿಯನ್ವಯ ಮಸೂದೆಯ ವಿವಿಧ ಭಾಗಗಳನ್ನು ಪರಿಷ್ಕರಿಸಲು ಅಗತ್ಯವೆಂದು ನನಗೆ ತಿಳಿದಿದೆ. ಈ ಕೆಲಸವು ಡಾ. ಅಂಬೇಡ್ಕರ್ ಮತ್ತು ಪಂಡಿತ ಭಾರ್ಗವ ಅಥವಾ ಇನ್ನಿತರ ಕಾನೂನು ಪರಿಣತರ ಸಾಮರ್ಥ್ಯಕ್ಕೆ ಮೀರಿದ್ದಲ್ಲ ಎಂದು ನನಗೆ ತಿಳಿದಿದೆ. ನನ್ನ ಬಗ್ಗೆ ನಾನು ಹೇಳಿಕೊಳ್ಳುವುದಾದರೆ, ಬಹುಪತ್ನಿತ್ವ ಮತ್ತು ವಿವಾಹ ಕುರಿತು ಇರುವ ಕಲಮಿನ ಪರವಾಗಿ ನಾನು ಒಲವುಳ್ಳವನಾಗಿದ್ದೇನೆ. ಆದರೆ ಇನ್ನು ಕೆಲವು ಕಲಮುಗಳಿವೆ, ಅವುಗಳನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ನನಗೆ ಸಂಬಂಧಿಸಿದಂತೆ, ನಾನು ಏಕಪತ್ನಿತ್ವ ಹಾಗೂ ವಿಚ್ಛೇದನ ಕುರಿತ ಕಲಮುಗಳಿಂದ ಆಳಲ್ಪಡುತ್ತೇನೆ ಹೊರತು ಇತರ ವಿಷಯಗಳಿಂದಲ್ಲ ಎಂದು ಸ್ವತಂತ್ರವಾಗಿ ಘೋಷಿಸಬಯಸುತ್ತೇನೆ. ನನ್ನ ಈ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಈ ಸದನದಲ್ಲಿ ಕೇಳಿಕೊಳ್ಳುತ್ತೇನೆ– ಮೊದಲನೆಯದಾಗಿ, ಈ ಮಸೂದೆಯು ಇಡೀ ದೇಶಕ್ಕೆ ಅನ್ವಯವಾಗಬೇಕು. ಎರಡನೆಯದು– ಈ ಕಾನೂನಿಗೆ ನಾನು ಬದ್ಧನಿದ್ದೇನೆಂದು ಪ್ರತಿಯೊಬ್ಬರೂ ಘೋಷಿಸಲು ಸ್ವತಂತ್ರವಿರಬೇಕು. ಮತ್ತು ಮೂರನೆಯದು, ಇದರಿಂದ ಅಥವಾ ಈ ಅಧ್ಯಾಯದಿಂದ ನಾನು ಆಳಲ್ಪಡಬೇಕು ಎಂದು ಹೇಳಲು ಮುಕ್ತ ಸ್ವಾತಂತ್ರ್ಯ ಇರಬೇಕು.

**ಡಾ. ದೇಶಮುಖ್ :** ವಿಷಯದ ಸಂಬಂಧವಾಗಿ, ಅಂದರೆ ವಿಚ್ಛೇದನ ಕುರಿತಂತೆ ಗಂಡ, ಹೆಂಡರು, ವಿಭಿನ್ನ ನಿಲುವು ತಳೆದರೆ?

**ಮಾನ್ಯ ಉತ್ಪಾದನೆ, ವಿತರಣೆ, ಮತ್ತು ಕಾಮಗಾರಿ ಸಚಿವರು :** ಮಗು ನಿರ್ಧರಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಮುಂದುವರೆಸಲು ಬಿಡಿ.

**ಶ್ರೀ ಜೆ.ಆರ್. ಕಪೂರ್ :** ವಿಚ್ಛೇದನ ಕುರಿತಂತೆ ಗಂಡ–ಹೆಂಡಿರ ಮಧ್ಯೆ ಭಿನ್ನಾಭಿಪ್ರಾಯ ಬಂದರೆ, ನಾನು ಆಯ್ಕೆಯ ಪ್ರಶ್ನೆಯನ್ನು ಹೆಂಡತಿಗೆ ಕೊಡುತ್ತೇನೆ. ಹೀಗೆ ಹೇಳುವುದರಿಂದ ಇಲ್ಲಿನ ಮಹಿಳಾ ಸದಸ್ಯರ ಬೆಂಬಲವನ್ನಾದರೂ ನಾನು ಪಡೆಯಬಹುದು. ನನ್ನ ಸಲಹೆಯನ್ನು ಒಪ್ಪಿಕೊಂಡರೆ, ಈ ಮಸೂದೆಯೊಳಗಿನ ಅನೇಕ ಅವಕಾಶಗಳನ್ನು ಪುನರ್ ರೂಪಿಸಬೇಕಾಗುವುದು. ಇದೆಲ್ಲ ತತ್ತ್ವಗಳಿಗೆ ಸಂಬಂಧಿಸಿದ ವಿಷಯ. ಇಡೀ ದೇಶಕ್ಕೆ ಅನ್ವಯವಾಗುವಂತಹ ಮಸೂದೆಯನ್ನು ನಾವು ರಚಿಸಬೇಕೆಂಬ ಮೊದಲ ತತ್ತ್ವ ಒಪ್ಪಿಕೊಳ್ಳಬೇಕು. ಎರಡನೆಯದಾಗಿ, ಈ ಮಸೂದೆಯಿಂದ ಅವರು ಆಳಲ್ಪಡಬೇಕೋ ಅಥವಾ ಬೇಡವೋ ಎಂದು ಹೇಳುವ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ನಾಗರಿಕನಿಗೂ ನೀಡಬೇಕು ಮತ್ತು ಮೂರನೆಯದು, ಮಸೂದೆಯೊಳಗಿನ ಯಾವುದೇ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ, ಸ್ವೀಕರಿಸುವ ಸ್ವಾತಂತ್ರ್ಯ–ನಂತರ ಅವಶ್ಯ ತಿದ್ದುಪಡಿಗಳನ್ನು ಬೇಕಾದರೆ ರೂಪಿಸಿದರಾಯಿತು. ನನಗೆ ಗೊತ್ತು ಇದೆಲ್ಲಾ ಎಷ್ಟು ಕಷ್ಟ ಎನ್ನುವುದು. ಆದರೆ ಈ ಕಷ್ಟವು –ಸದನದಲ್ಲಿ ಈ ಮಸೂದೆಯನ್ನು ಅಂಗೀಕರಿಸುವಂತೆ ಮಾಡುವುದು, ಈಗಿರುವಂತೆ ಈ ಮಸೂದೆಗೆ ಇಡೀ ದೇಶದ ಬೆಂಬಲ ಪಡೆಯುವುದು, ಮತ್ತು ಒತ್ತಾಯಪೂರ್ವಕವಾಗಿ ಇದನ್ನು ಹಿಂದೂಗಳ, ಸಿಖ್ಖರ, ಜೈನರ ಮತ್ತು ಬೌದ್ಧರ ಮೇಲೆ ಹೇರುವ ಕಷ್ಟಕ್ಕಿಂತ ಸುಲಭವಾದುದು.

ಆದ್ದರಿಂದ ನನ್ನ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಶಾಂತವಾಗಿ, ನಿರುದ್ವಿಗ್ನವಾಗಿ, ನಿರ್ಲಿಪ್ತರಾಗಿ ಪರ ಅಥವಾ ವಿರೋಧದ ಪೂರ್ವಗ್ರಹಗಳಿಲ್ಲದೆ ಯೋಚಿಸಿದಲ್ಲಿ, ಪರಿಹಾರದ ಬಗ್ಗೆ ನಾವೆಲ್ಲ ಒಂದು ಒಪ್ಪಂದಕ್ಕೆ ಬರಬಹುದು. ಅಷ್ಟೇ ಅಲ್ಲ, ಪ್ರಾಯಶಃ ಇನ್ನು ಐದಾರು ದಿನಗಳಲ್ಲಿ ಈ ವಿವಾದಗ್ರಸ್ತ ಮಸೂದೆಯನ್ನು ಅಂಗೀಕೃತಗೊಳ್ಳುವಂತೆ ಮಾಡಬಹುದೆಂದು ನಾನಾದರೂ ಆಶಿಸುತ್ತೇನೆ ಮತ್ತು ನಂಬುತ್ತೇನೆ. ಇದು ಎಲ್ಲರನ್ನೂ ತೃಪ್ತಿಗೊಳಿಸಬಹುದು. ಯಾರು ಸಾಮಾನ್ಯ ಮಸೂದೆ ಬೇಕೆನ್ನುತ್ತಾರೋ ಅವರನ್ನು ಇದು ಸಮಾಧಾನಗೊಳಿಸಬಹುದು. ಹಾಗೆಯೇ ಈ ಮಸೂದೆಯನ್ನು ಕಡ್ಡಾಯವಾಗಿ ಹೇರುತ್ತಿಲ್ಲವಾದ್ದರಿಂದ ಸಂಪ್ರದಾಯವಾದಿ ಹಿಂದೂಗಳು ಕೂಡ ತೃಪ್ತಿ ಹೊಂದಬಹುದು. ಈ ಮಸೂದೆಯಡಿ ಬರಬೇಕೆ ಅಥವಾ ಬೇಡವೆ ಎಂಬುದು ಅವರಿಗೆ ಮುಕ್ತವಾಗಿ ತೆರೆದದ್ದು ಇದೆ. ಮಸೂದೆಯು ಇದೇ ರೀತಿ ಇರಬೇಕೆಂದು, ಅಂತಹ ಕಾನೂನಿಂದ ನಾವು ಆಳಲ್ಪಡಬೇಕೆಂದು ಬಯಸುತ್ತಿದ್ದ ಆ ಸುಧಾರಣಾವಾದಿಗಳೂ ಕೂಡ ತೃಪ್ತಿ ಹೊಂದಬಹುದು. ಆದ್ದರಿಂದ ಇದು ಎಲ್ಲರನ್ನು ಸಂತೃಪ್ತಿಗೊಳಿಸುತ್ತದೆ ಯಾರನ್ನೂ ನೋಯಿಸುವುದಿಲ್ಲ. ಈ ಎಲ್ಲವನ್ನೂ ಅರಿಕೆ ಮಾಡಿದರೆ ನನ್ನ ತಿದ್ದುಪಡಿಯನ್ನು ಸದನವು ಅಂಗೀಕರಿಸಲು ಆದೇಶ ಬೇಡುತ್ತೇನೆ.

ನನ್ನ ಇನ್ನೊಂದು ಬದಲಿ ತಿದ್ದುಪಡಿಯು ಇದೇ ತೆರನಾಗಿದ್ದು, ಅದು ಮಸೂದೆಯ ಜಾರಿಯನ್ನು ಕೇವಲ ಹಿಂದೂಗಳಿಗೆ ಮಾತ್ರ ಮಿತಿಗೊಳಿಸುತ್ತದೆ. ನನ್ನ ಮೊದಲಿನ ತಿದ್ದುಪಡಿಯ ಪ್ರಕಾರ, ಇಡೀ ಮಸೂದೆಯು, ಅದು ಯಾವುದೇ ಸ್ವರೂಪದಲ್ಲಿರಲಿ, ಅದು ಇಡೀ ದೇಶಕ್ಕೆ ಅನ್ವಯವಾಗುವಂತಿರಬೇಕು, ಆದರೆ ಯಾರು ನಾವು ಇದಕ್ಕೆ ಬದ್ಧರಾಗಿರುತ್ತೇವೆ ಎಂದು ಘೋಷಿಸಿಕೊಳ್ಳುತ್ತಾರೋ ಅಂಥವರಿಗೆ ಮಾತ್ರ ಎಂಬ ಕರಾರಿನನ್ವಯ ಅದು ಜಾರಿಯಾಗಬೇಕು. ಆದರೆ, ಯಾವುದೇ ಕಾರಣಕ್ಕೂ ಈ ಸಲಹೆ ಒಪ್ಪಿತವಾಗದಿದ್ದಲ್ಲಿ, ನನ್ನ ಎರಡನೆಯ ತಿದ್ದುಪಡಿಯಂತೆ, ಯಾವ ಹಿಂದೂಗಳು, ಜೈನರು, ಸಿಖ್ಖರು, ಬೌದ್ಧರು, ತಾವು ಮಸೂದೆಯನ್ವಯ ಆಳಲ್ಪಡಬಹುದು ಎಂದು ಘೋಷಿಸುತ್ತಾರೋ ಅಂಥ ಹಿಂದೂ, ಜೈನ, ಸಿಖ್ಖರಿಗೆ

ಮಾತ್ರ ಈ ಮಸೂದೆ ಅನ್ವಯಿಸವಂತಾಗಬೇಕು ಎಂಬುದನ್ನು ನಾನು ಮಂಡಿಸಿದ್ದೇನೆ.

**ಡಾ. ದೇಶಮುಖ್ :** ಈ ತಿದ್ದುಪಡಿಗಳನ್ನು ಕುರಿತಂತೆ ನಾನು ಎರಡು ಅಂಶಗಳನ್ನು ಪ್ರಸ್ತಾಪಿಸಬೇಕೆಂದಿರುವೆ. ಈಗಾಗಲೆ ಹಲವಾರು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಅವುಗಳಲ್ಲಿ ನಾನು ಮೊಟ್ಟ ಮೊದಲನೆಯದಾಗಿ ಶ್ರೀ ಸರ್ವಟೆಯವರ ತಿದ್ದುಪಡಿಯ ಬಗ್ಗೆ, ನಂತರ ಮಾನ್ಯ ಡಾ.ಅಂಬೇಡ್ಕರ್ ಮಂಡಿಸಿರುವ ತಿದ್ದುಪಡಿಗಳ ಬಗ್ಗೆ ಮಾತಾಡಬಯಸುತ್ತೇನೆ. ಸಂವಿಧಾನದನ್ವಯ ನಾನು ಮಾನ್ಯ ಸರ್ವಟೆಯವರ ತಿದ್ದುಪಡಿಯನ್ನು ಬೆಂಬಲಿಸಲು ಹಿಂಜರಿಯುತ್ತೇನೆ. ಹಾಗೆಯೇ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸುವುದರ ಮೂಲಕ ಮುಂಚಿತವಾಗಿಯೇ ಸಂವಿಧಾನದ ವಿವಾದ ತಂದ ಹಾಗೆ ಆಗಿದ್ದು, ಆ ತಿದ್ದುಪಡಿಯನ್ನು ಅಂಗೀಕರಿಸಿದ್ದೆ ಆದಲ್ಲಿ ಕೆಲ ಮುನ್ನೆಚ್ಚರಿಕೆಗಳು ಅವಶ್ಯವಿವೆ. ಈ ಸದನದಲ್ಲಿರುವ ಕೆಲ ವರ್ಗದ ಸದಸ್ಯರು ನಾವು ಸಂವಿಧಾನದಲ್ಲಿ ಅಡಕಗೊಳಿಸಿರುವ ವಿಷಯಗಳ ಬಗ್ಗೆ ಗಂಭೀರವಾಗಿದ್ದರೆಂದು ನಾನು ವೈಯಕ್ತಿಕವಾಗಿ ಚಿಂತಿಸುತ್ತಿದ್ದೇನೆ. ಅನುಚ್ಛೇದ ೪೪ನ್ನು ಉಲ್ಲೇಖಿಸುವುದಕ್ಕೆ ನನಗೆ ಕೆಲ ನಿಮಿಷಗಳ ಅವಕಾಶ ಕೊಡಿ ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

"ಸರ್ಕಾರವು ಇಡೀ ಭಾರತದ ಭೌಗೋಳಿಕ ಪ್ರದೇಶಕ್ಕೆ ಅನ್ವಯವಾಗುವಂತೆ, ತನ್ನ ನಾಗರಿಕರಿಗೆ ಒಂದು ಏಕ ಹೊಸ ನಾಗರಿಕ ಕಾನೂನು ರಚಿಸುವಲ್ಲಿ ಕಾರ್ಯಶೀಲವಾಗಬೇಕು."

ಇದು ರಾಜ್ಯನೀತಿಯಲ್ಲಿರುವ ನಿರ್ದೇಶಕ ತತ್ತ್ವಗಳ ಒಂದು ಅನುಚ್ಛೇದವಾಗಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಳ್ಳುವ ನಿರ್ಧಾರಗಳನ್ನು ಸುಪ್ರೀಂಕೋರ್ಟ್ ವಜಾ ಮಾಡಬಹುದೇ ಅಥವಾ ಅದೊಂದು ಕಾನೂನಿನ ವಿರೋಧ ಕ್ರಮ ಎಂದು ಪರಿಭಾವಿಸಬಹುದೇ ಎನ್ನುವುದರ ಬಗ್ಗೆ ಇಲ್ಲಿ ಚಿಂತಿಸಿದ ಹಾಗೆ ಕಾಣುವುದಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟ್ ತನ್ನ ಹೇಳಿಕೆಯನ್ನು ನೀಡುವಷ್ಟು ಅದು ಶಕ್ತವಾಗಿದೆಯೇ ಎಂಬುದರ ಬಗ್ಗೆ ನನಗೆ ಏನೂ ತಿಳಿದಿಲ್ಲ. ಆದರೆ ಸಂವಿಧಾನದಲ್ಲಿರುವ ರಾಜ್ಯನೀತಿಯ ಈ ನಿರ್ದೇಶಕ ತತ್ತ್ವಗಳಿಗೆ ನಾವೇನಾದರೂ ಗಂಭೀರ ಬೆಲೆ ಅಥವಾ ಮೌಲ್ಯ ನೀಡಬಯಸಿದರೆ, ನಾವು ಮಸೂದೆಯನ್ನು ಜಾರಿ ಮಾಡಿ ಅದನ್ನು ಇಡೀ ಭಾರತದ ಭೌಗೋಳಿಕ ಪ್ರದೇಶಕ್ಕೆ ಅನ್ವಯವಾಗುವಂತೆ ಏಕರೂಪದ ನಾಗರಿಕ ಮಸೂದೆಯನ್ನು ಹೇಗೆ ತರಬಲ್ಲೆವು ಎಂಬುದು ನನಗೆ ಸರಿಯಾಗಿ ಕಾಣಿಸುತ್ತಿಲ್ಲ. ಈ ಮಸೂದೆಯ ಅನ್ವಯ ನಾವು ಮಾಡುತ್ತಿರುವುದು ಅನುಚ್ಛೇದ ೧೪ರಲ್ಲಿ ಹೇಳಿರುವುದಕ್ಕೆ ನೇರವಾಗಿ, ಪೂರ್ಣವಾಗಿ ವಿರೋಧವಾಗಿದೆ. ಏಕೆಂದರೆ, ನಾಗರಿಕರೆಲ್ಲರಿಗೂ ಅನ್ವಯವಾಗುವಂತಹ ಏಕ ನಾಗರಿಕ ಮಸೂದೆಯನ್ನು ಪಡೆಯುವ ಪ್ರಯತ್ನವಷ್ಟೆ ಮಾಡುತ್ತಿಲ್ಲ, ಬೇರೆ ವರ್ಗದ ಜನರಿಗೆ ಬೇರೆ ಬೇರೆ ಮಸೂದೆಗಳನ್ನು ನಾವು ತರಲು ಪ್ರಯತ್ನಿಸುತ್ತಿದ್ದೇವೆ. ನಾವು ಹೀಗೆ ಮುಂದುವರೆಯುವ ಮೊದಲು, ಕಾಲವನ್ನು ವ್ಯರ್ಥ ಮಾಡುವ ಮೊದಲು ಈ ಅಂಶವನ್ನು ನಾವು ವಿವೇಚಿಸಬೇಕು. ನಾವೇನೂ ಮಾಡುತ್ತಿಲ್ಲ. ಬರೀ ಕಾಲಹರಣ ಮಾಡುತ್ತಿದ್ದೇವೆ. ಮುಂದಿನ ಮೂರು ದಿನಗಳಲ್ಲಿ ನಾವು ಕಲಮು ೨ರ ಆಚೆ ಹೋಗುವುದಿಲ್ಲ. ಮತ್ತು ಹಿಂದೂ ಸಂಹಿತೆಯನ್ನು ಯಾವಾಗ ಚರ್ಚೆಗೆ ನಾವು ತೆಗೆದುಕೊಳ್ಳುತ್ತೇವೆಂಬುದು ತಿಳಿದಿಲ್ಲ– ಎಂದು ನನಗೆ ಖಚಿತವಾಗಿ ತಿಳಿದುಬಿಟ್ಟಿದೆ. ನಾವು ನಿಜಕ್ಕೂ ಈ ಮಸೂದೆಯನ್ನು ಪಾಸು ಮಾಡಬೇಕೆಂಬ ಇಚ್ಛೆಯುಳ್ಳವರಾಗಿದ್ದಲ್ಲಿ, ಈಗಾಗಲೇ ಸಲಹೆ ಮಾಡಿದಂತೆ, ಇದಕ್ಕಾಗಿ ಒಂದು ಪೂರ್ಣಾವಧಿಯ ಅಧಿವೇಶನವನ್ನು ಮೀಸಲಿಡುವುದು ಒಳ್ಳೆಯದು. ಮೂರು ದಿನಗಳನ್ನು ಮೀಸಲಿಡುವುದರಿಂದ, ನನಗೆ ಅನಿಸುವಂತೆ ನಾವೇನೂ ಹೆಚ್ಚು ಮುಂದುವರೆಯಲಾರವು. ಕೇವಲ ಇದು ಶುದ್ಧ ಕಾಲಹರಣ, ಶ್ರಮದ ಅಪವ್ಯಯ ಹಾಗೂ ಈ ಸದನದ ಹಣದ ನಿರುಪಯೋಗ ಮಾತ್ರ. ಇದರಿಂದ ಕೇವಲ ಕೆಲ ಜನರ

ಭ್ರಮೆಗಳನ್ನು ಕಲ್ಪನೆಗಳನ್ನು ಅಥವಾ ಹಠಮಾರಿ ನಿಲುವುಗಳನ್ನು ಅಥವಾ ಕೆಲವರ ಒಲವುಗಳನ್ನು ಮಾತ್ರ ಈಡೇರಿಸಲು ಸಾಧ್ಯವಾಗಬಹುದು. ಇದು ಬಹಳ ಸುಲಭ, ಮಸೂದೆಯನ್ನು ಪಾಸು ಮಾಡಬೇಕೆನ್ನುವ ಸಮಯದಲ್ಲಿ, ಇಲ್ಲಿ ಅದನ್ನು ಅಡ್ಡಗಟ್ಟಲು ಸಾವಿರಾರು ಜನರಿರುವಾಗ ಅಥವಾ ಸದಸ್ಯರು ಮಸೂದೆಗೆ ಅಂಗೀಕಾರ ನೀಡದಂತೆ ಅವರನ್ನು ಘೋಷಣೆಗಳಿಂದ ಪ್ರತಿಬಂಧಿಸುತ್ತಿರುವಾಗ – ಇದನ್ನೆ ಒಂದು ನೆಪಮಾಡಿಕೊಂಡು ಒಂದಿಬ್ಬರು ನ್ಯಾಯಾಲಯಕ್ಕೆ ಸಾಗಿ, ನಾವೆಲ್ಲಾ ಸಂವಿಧಾನದ ಪ್ರಸ್ತಾವಗಳಿಗನುಗುಣವಾಗಿ ವರ್ತಿಸುತ್ತಿಲ್ಲ ಅಥವಾ ಸಂವಿಧಾನದಲ್ಲಿರುವುದಕ್ಕೆ ತದ್ವಿರುದ್ಧವಾಗಿ ನಡೆಯುತ್ತಿದ್ದಾರೆಂದು ನ್ಯಾಯಾಲಯದಿಂದ ಆದೇಶ ತರುವಂತಹವರನ್ನು ನಾವು ಕಾಣಬಹುದಾಗಿದೆ.

**ಶ್ರೀಮತಿ ದುರ್ಗಾಬಾಯಿ :** ಉಳಿದವರು ಕೂಡ ನ್ಯಾಯಾಲಯಕ್ಕೆ ಹೋಗುತ್ತಾರೆ.

**ಡಾ. ದೇಶಮುಖ್ :** ಎರಡು ಕಡೆಯವರು ಅಲ್ಲಿರಬಹುದು. ಯಾರು ಮೊದಲು ಹೋಗುತ್ತಾರೋ ಅವರ ಖರ್ಚಿನಲ್ಲಿ ನೀವು ನೋಟೀಸುಗಳನ್ನು ಪಡೆಯುತ್ತೀರಿ.

**ಶ್ರೀಮತಿ ದುರ್ಗಾಬಾಯಿ :** ತಾರತಮ್ಯದ ಉಪಬಂಧಗಳ ಆಧಾರದ ಅನ್ವಯ ಉಳಿದವರು ಅಲ್ಲಿಗೆ ಹೋಗಬಹುದು.

**ಡಾ. ದೇಶಮುಖ್ :** ಸರಿ, ಎಲ್ಲಾ ಕಡೆಯೂ ತಾರತಮ್ಯವಿದೆ ಮತ್ತು ಆ ಆಕ್ಷೇಪಣೆಯೇ ಈಗ ಎದ್ದಿರುವುದು. ಈಗ ಹೇಗಿದೆಯೋ ಹಾಗೆ ಮಸೂದೆಯನ್ನು ಜಾರಿಗೆ ತಂದರೆ, ಕೆಲವು ಜನರ ಪರವಾಗಿ ತಾರತಮ್ಯವು ಮತ್ತು ಇದಕ್ಕಿಂತ ಕೆಟ್ಟದಾಗಿ ಅಲ್ಲದಿದ್ದರೂ ಹೀಗೆಯೇ ಹಿಂದುಳಿದವರಾಗಿರುವ ಅವರ ವಿರುದ್ಧ ತಾರತಮ್ಯವೂ ಆಗುವುದು. ಇದೇ ಅಂಶವು ನಮ್ಮ ಪರವಾಗಿ ನಿಂತಿದೆ.

ನನ್ನ ಎರಡನೆಯ ಅಂಶವೇನೆಂದರೆ, ಈ ತಿದ್ದುಪಡಿಗಳಲ್ಲಿ ಡಾ.ಅಂಬೇಡ್ಕರ್ ಮಂಡಿಸಿರುವ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಪ್ರಕಟಿತ ಪಟ್ಟಿಯಲ್ಲಿರುವ ತಿದ್ದಪಡಿ ನಂ.೧೫ರಲ್ಲಿ ಅವರು "ಧರ್ಮದಿಂದ ಯಾರು ಹಿಂದೂಗಳೋ" ಎಂಬ ಶಬ್ದಗಳಿಗೆ "ಹಿಂದೂಗಳೆಂದರೆ, ಯಾರೆಲ್ಲಾ ಹಿಂದೂಧರ್ಮವನ್ನು ಪಾಲಿಸುತ್ತಾರೋ ಅವರು" ಎಂಬ ಬದಲಿ ಸೇರಿಸಿದ್ದಾರೆ. ಸದ್ಯದ ಸಂದರ್ಭದಲ್ಲಿ ಯಾವ ಹೇಳಿಕೆ ಸರಿ ಎಂದು ಹೇಳುವುದು ಕಷ್ಟವಾಗುತ್ತದೆ. ಯಾಕೆಂದರೆ ಎಷ್ಟೋ ಪರಿಷ್ಕರಣಗಳನ್ನು, ಅಸಂಖ್ಯಾತ ತಿದ್ದುಪಡಿಗಳನ್ನು ಈ ಸಂಬಂಧ ಈಗಾಗಲೆ ಮಂಡಿಸಲಾಗಿದೆ. ನಮ್ಮ ನಿಲುವು ಏನು ಎಂಬುದನ್ನು ಸರಿಯಾಗಿ ಹೇಳಲು ಕಷ್ಟವಾಗುತ್ತಿದೆ. ಆಯ್ಕೆ ಸಮಿತಿಯಿಂದ ಬಂದಿರುವ ಸಂಹಿತೆಯಲ್ಲಿರುವ ಮೂಲ ಪ್ರಸ್ತಾವದಲ್ಲಿ ಏನು ತಪ್ಪಿದೆಯೆಂದು ನನಗೆ ಕಾಣಲಾಗುತ್ತಿಲ್ಲ. ಆ ಶಬ್ದಗಳು ಹೀಗಿವೆ:

"೨(ಎ) ಹಿಂದೂಗಳೆಂದರೆ ಯಾವುದೇ ರೂಪದಲ್ಲಿ ಅಥವಾ ಅದರಿಂದ ವಿಕಸಿತಗೊಂಡಿರುವ ಹಿಂದೂಧರ್ಮವನ್ನು ಪಾಲಿಸುತ್ತಿರುವ ಎಲ್ಲಾ ಹಿಂದೂಗಳಿಗೂ ಈ ಸಂಹಿತೆ ಅನ್ವಯಿಸುತ್ತದೆ" ಈ ಶಬ್ದಗಳಿಗೆ ಡಾ.ಅಂಬೇಡ್ಕರ್ ತಮ್ಮ ತಿದ್ದುಪಡಿಯಲ್ಲಿ ಸೂಚಿಸಿರುವ ಬದಲಿ ಶಬ್ದಗಳೆಂದರೆ "ಧರ್ಮದಿಂದ ಯಾರು ಹಿಂದುಗಳೋ ಆ ವ್ಯಕ್ತಿಗಳಿಗೆ" – ಈ ಎರಡು ರೀತಿಯ ಪದ ಪ್ರಯೋಗಗಳಲ್ಲಿ ನನಗೇನು ವ್ಯತ್ಯಾಸ ಕಾಣುತ್ತಿಲ್ಲ. ನೀವು "ಹಿಂದೂಗಳು" ಎಂಬ ಶಬ್ದದಿಂದ ಯಾರು "ಧರ್ಮದಿಂದ ಹಿಂದೂಗಳು"ಅವರೆಲ್ಲರನ್ನೂ ಉಲ್ಲೇಖಿಸಿದ್ದೀರಿ. ಮೂಲ ಪದಗಳು "ಎಲ್ಲಾ ಹಿಂದೂಗಳೂ" ಎಂಬುದನ್ನು ಮುಂದುವರೆದು ವಿವರಿಸುತ್ತಾ " ಹಿಂದೂ ಧರ್ಮವನ್ನು ಪಾಲಿಸುವವರೆಲ್ಲರೂ" ಎಂದು ಅರ್ಥೈಸಿದೆ.

* ೧೯೫೧ರ ಫೆಬ್ರವರಿ ೫ನೇ ಸದನದ ಚರ್ಚೆ ಸಂಪುಟ VIII, ಭಾಗ II ಪುಟಗಳು ೨೩೯೨–೨೪೦೪

ಅದರರ್ಥ, ಯಾರು ಹಿಂದೂ ಎಂದು ಹೇಳಿಕೊಳ್ಳುತ್ತಾರೋ ಅವರೆಲ್ಲರಿಗೂ ಈ ಸಂಹಿತೆ ಅನ್ವಯವಾಗುತ್ತೇ ಎಂದೇ ಆಗುತ್ತದೆ. ಈಗ ಈ ಪದಗಳು ಪರ್ಯಾಯಗಳನ್ನು ಬಯಸಿವೆ. ಯಾಕೆ ಪರ್ಯಾಯ ಪದಗಳು ಬೇಕು ಎಂಬುದಕ್ಕೆ ಯಾವ ಕಾರಣಗಳನ್ನು ಇದುವರೆಗೂ ನೀಡಿಲ್ಲ. ಅವುಗಳನ್ನು ನಿಜಕ್ಕೂ ಕೈ ಬಿಟ್ಟರೆ, ಮತ್ತು ಕೈಬಿಡಲು ಈ ಸದನವನ್ನು ಡಾ.ಅಂಬೇಡ್ಕರ್ ಕೇಳಿದರೆ, ನನಗನಿಸಿದಂತೆ ನಿಜವಾದ ತೊಂದರೆ ಎದುರಾಗಬಹುದು. ನೀವೇನಾದರೂ "ಪಾಲಿಸುವ" ಎಂಬ ಶಬ್ದವನ್ನು ತೆಗೆದರೆ, ನೀವು ಹೇಗೆ ಯಾರು ಹಿಂದೂ ಮತ್ತು ಯಾರು ಅಲ್ಲ ಎಂದು ವ್ಯಾಖ್ಯಾನಿಸುತ್ತೀರಿ. ಸಲಹೆ ಮಾಡಿರುವ ಪದಗಳೆಂದರೆ "ಯಾರು ಧರ್ಮದಿಂದ ಹಿಂದೂಗಳೋ ಆ ಎಲ್ಲಾ ವ್ಯಕ್ತಿಗಳು" ಆದರೆ ಧರ್ಮದಿಂದ ಹಿಂದೂ ಅಥವಾ ಅಲ್ಲ ಎಂಬುದನ್ನು ಹೇಗೆ ತಿಳಿಯುತ್ತೀರಿ? ಪ್ರತಿಯೊಬ್ಬರು ತಮ್ಮನ್ನು ತಾವು ಹೀಗೆ ಎಂದು ಘೋಷಿಸಿಕೊಳ್ಳಬೇಕೆಂಬ ಆವಶ್ಯಕತೆಯಿಂದೆಯೆಂದು ಸಲಹೆ ಮಾಡುತ್ತಿರೋ? ನಿರ್ದಿಷ್ಟ ವ್ಯಕ್ತಿಯೊಬ್ಬ ಹಿಂದೂ ಅಥವಾ ಅಲ್ಲ ಎಂಬುದನ್ನು ಖಾತ್ರಿಗೊಳಿಸಿಕೊಳ್ಳಲು ಯಾವ ವಿಧಾನವನ್ನು ಸಲಹೆ ಮಾಡಲಾಗುತ್ತದೋ ನನಗಂತೂ ತಿಳಿದಿಲ್ಲ. ಆಯ್ಕೆ ಸಮಿತಿಯಿಂದ ಬಂದಿರುವ ಮೂಲ ಸಂಹಿತೆಯಲ್ಲಿದ ಪದಗಳು ಕಾಲದ ಪರೀಕ್ಷೆಯನ್ನು ದಾಟಿ ಬಂದವುಗಳಾಗಿವೆ. ನನ್ನ ನೆನಪಿನ ಪ್ರಕಾರ ಈ ಶಬ್ದಗಳು ಮುಲ್ಲಾರ "ಹಿಂದೂ ಸಂಹಿತೆ"ಯಲ್ಲಿರುವವು ಮತ್ತು ಬಹು ಕಾಲದಿಂದ ಈ ಪದಗಳನ್ನು ಬಳಕೆ ಮಾಡುತ್ತಾ ಬರಲಾಗಿದೆ. ದೀರ್ಘಾವಧಿ ಬಳಕೆಯ ಅಧಿಕೃತತೆ ಅವುಗಳಿಗಿದೆ.

ಈ ಎಲ್ಲಾ ದೃಷ್ಟಿಯಿಂದ, ನನ್ನ ಅಭಿಪ್ರಾಯದ ಪ್ರಕಾರ, ಈ ತಿದ್ದುಪಡಿಯ ಆವಶ್ಯಕತೆಯಿಲ್ಲ ಮತ್ತು ಅವುಗಳನ್ನು ಒಪ್ಪಿಕೊಳ್ಳಬಾರದೆಂದೂ ನಾನು ಸಲಹೆ ಮಾಡುತ್ತೇನೆ. ನನ್ನ ಸ್ನೇಹಿತರಾದ ಮಾನ್ಯ ಶ್ರೀ ಸರ್ವಟೆ ಅವರು ಮಂಡಿಸಿರುವ ತಿದ್ದುಪಡಿಯನ್ನು ನಾವು ಒಪ್ಪಿಕೊಂಡಲ್ಲಿ, ನಾವು ಸಂವಿಧಾನದ ಮೂಲ ಆಶಯದಂತೆ ನಡೆದುಕೊಳ್ಳುತ್ತೇವೆಂದು ನಾನು ಬೆಂಬಲಿಸುತ್ತೇನೆ. ಇಲ್ಲದೆ ಹೋದಲ್ಲಿ ನಾನು ಹೇಳಿದ ಸಂವಿಧಾನಾತ್ಮಕ ತೊಂದರೆ ಎದುರು ನಮ್ಮೆಲ್ಲಾ ಪ್ರಯತ್ನಗಳು ಫಲರಹಿತವೆಂಬ ಹೆಸರಿಗೆ ಗುರಿಯಾಗುತ್ತವೆ.

**ಶ್ರೀ ಶ್ಯಾಮನಂದನ ಸಹಾಯ್(ಬಿಹಾರ)** : ಈ ಸಂಬಂಧವಾಗಿ ನಾನೊಂದು ಅರಿಕೆ ಮಾಡಿಕೊಳ್ಳಲೇ? ಈ ಹಿಂದೆ ಸದಸ್ಯರುಗಳು ಹಲವಾರು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಆದರೆ ಮಂಡಿಸಿದವರು ತಮ್ಮ ದೃಷ್ಟಿಕೋನವೇನು ಎಂದು ತಮ್ಮ ಭಾಷಣಗಳಲ್ಲಿ ವಿವರಿಸಿಲ್ಲ. ಅಂಥ ತಿದ್ದುಪಡಿಗಳಲ್ಲಿ ಮಾನ್ಯ ಕಾನೂನು ಮಂತ್ರಿಗಳವರದ್ದು ಒಂದು. ಈ ಪ್ರಕರಣಕ್ಕೆ ಯಾವುದೇ ತಿದ್ದುಪಡಿಯನ್ನು ಮಂಡಿಸದ ನಮ್ಮಂತಹವರು, ನಾವು ಸರ್ಕಾರದವರ ದೃಷ್ಟಿಕೋನವೇನು, ಹಾಗೂ ತಿದ್ದುಪಡಿಗಳನ್ನು ಮಂಡಿಸಿದವರ ಅಭಿಮತವೇನು ಎಂದು ಮುಕ್ತ ಮನಸ್ಸಿನಿಂದ ಕೇಳಿ, ಈಗ ನಡೆಯುತ್ತಿರುವ ಕಲಾಪಗಳಲ್ಲಿ ಭಾಗವಹಿಸಬೇಕೆಂದು ಅಥವಾ ಪರಿಸ್ಥಿತಿಗನುಗುಣವಾಗಿ ಯಾವ ರೀತಿ ವರ್ತಿಸಬೇಕೆಂದು ನಿರ್ಧರಿಸಬೇಕಿದೆ. ಆದ್ದರಿಂದ ತಿದ್ದುಪಡಿ ಮಂಡಿಸಿದವರು ಮೊದಲು ಭಾಷಣ ಮಾಡಲಿ, ನಂತರ ಈ ಪ್ರಕರಣ ಕುರಿತು ಸಾಮಾನ್ಯ ಚರ್ಚೆಗೆ ಅವಕಾಶ ಕಲ್ಪಿಸಲಿ ಎಂದು ನಾನು ಸಲಹೆ ಮಾಡುತ್ತೇನೆ. ಇದು ಚರ್ಚೆಗೆ ಮತ್ತು ನಿರ್ಧಾರಕ್ಕೆ ಸಹಾಯವಾಗಬಹುದು. ಏನೇ ಆಗಲಿ, ತಿದ್ದುಪಡಿ ಕುರಿತು ಮಾನ್ಯ ಕಾನೂನು ಮಂತ್ರಿಗಳ ದೃಷ್ಟಿಕೋನವೇನು ಎಂದು ತಿಳಿಯಬಯಸಿ ನಂತರ ನಾವು ಅವರನ್ನು ಬೆಂಬಲಿಸಬಹುದು ಇಲ್ಲವೆ ವಿರೋಧಿಸಬಹುದು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯನ್ನು ಮಂಡಿಸಿದವರನ್ನೊಬ್ಬಬ್ಬರನ್ನಾಗಿ ನಾನು ಕರೆಯಲು ಯೋಚಿಸುತ್ತಿದ್ದೆ, ಆದರೆ ನನ್ನ ಗಮನವನ್ನು ಸೆಳೆಯಲು ಅವರು ಕಾತರರಾದಂತೆ ಕಂಡುಬರದೆ, ಉಳಿದವರು ನನ್ನ ದೃಷ್ಟಿ ಸೆಳೆದರು. ಹೀಗಾಗಿ ನಾನು ಬೇರೆಯವರನ್ನು ಕರೆದೆ.

**ಡಾ. ಅಂಬೇಡ್ಕರ್ :** ಮಂಡಿಸಿದವರು ಹಿಂದೆ ಕೂತಿದ್ದಾರೆ. ಹಾಗೆ ನೋಡಿದರೆ, ನಾನು ಅವರ ಮಾತು ಕೇಳಲು ಕಾಯುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ತಮಗೆ ಅನುಕೂಲವಾದ ವೇಳೆಯನ್ನು ಆಯ್ದುಕೊಳ್ಳಲು ಮಾನ್ಯ ಕಾನೂನು ಸಚಿವರು ಸ್ವತಂತ್ರರು. ಆದರೆ ನಾನು ಈಗ ಅವರನ್ನು ವಿನಂತಿಸುವುದೇಕೆಂದರೆ, ನಾನು ಅವರು ಈಗ ಸ್ವಲ್ಪ ಮಟ್ಟಿಗೆ ಚರ್ಚೆಯಲ್ಲಿ ಪಾಲ್ಗೊಂಡರೆ, ಮುಂದಿನ ಭೂಮಿಕೆ ಸಿದ್ಧಪಡಿಸಿಕೊಳ್ಳಲು ಅವರಿಗೆ ಸ್ಪಷ್ಟತೆ ದೊರಕೀತೆಂಬ ಕಾರಣಕ್ಕೆ.

**ಡಾ. ಅಂಬೇಡ್ಕರ್ :** ನಾನು ಯಾವಾಗ ಬೇಕಾದರೂ ಮಾತಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅವರಿಗೆ ಎರಡು ಭಾಷಣಕ್ಕೆ ಹಕ್ಕು ನೀಡಲಾಗಿದೆ; ಅಂದರೆ, ಈಗ ಅವರು ಚರ್ಚೆಯಲ್ಲಿ ಪಾಲ್ಗೊಂಡರೂ ಕೂಡ, ಅವರು ಉತ್ತರ ಕೊಡಲು ಸಹ ಹಕ್ಕು ಪಡೆದಿದ್ದಾರೆ.

**ಶ್ರೀ ಶ್ಯಾಮನಂದನ ಸಹಾಯ್:** ಪ್ರಕರಣ ಕುರಿತು ಸಾಮಾನ್ಯ ಚರ್ಚೆಗೆ ಅವರು ಉತ್ತರ ಕೊಡಬಹುದು. ಆದರೆ ಅವರು ಸ್ವತಃ ಮಂಡಿಸಿರುವ ತಿದ್ದುಪಡಿ ಕುರಿತಂತೆ, ಸರ್ಕಾರದ ಪರವಾಗಿ ತಿದ್ದುಪಡಿಯನ್ನು ಮಂಡಿಸಲು ಇರುವ ಕೆಲ ಕಾರಣಗಳನ್ನು ಅವರು ಸದನಕ್ಕೆ ಮನವರಿಕೆಯಾಗುವಂತೆ ಹೇಳಬೇಕು.

**ಮಾನ್ಯ ಸಭಾಧ್ಯಕ್ಷರು :** ಅವರ ಸ್ಥಾನ ಸ್ವಲ್ಪ ವಿಭಿನ್ನವಾಗಿದೆ ಎಂದು ನಾನು ತಿಳಿದಿದ್ದೇನೆ. ಅವರು ಮೊದಲು ಇತರರು ಹೇಳುವುದನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಅವರು ತಮ್ಮ ನಿಲುವು ಏನೆಂಬುದನ್ನು ಸರಿಯಾಗಿ ಹೇಳಲು ಸಮರ್ಥರಾಗುತ್ತಾರೆ. ಆದ್ದರಿಂದಲೆ ಅವರನ್ನು ನಂತರದಲ್ಲಿ ಕರೆಯಬೇಕೆಂದು ಯೋಚಿಸಿದ್ದೇನೆ. ಆದರೆ ಕೊನೆಯಲ್ಲಿ ಅಲ್ಲ.

**ಸರ್ದಾರ ಹುಕುಂ ಸಿಂಗ್ :** ತಿದ್ದುಪಡಿಗಳನ್ನು ಮಂಡಿಸಿದವರು, ತಮ್ಮ ತಿದ್ದುಪಡಿಗಳನ್ನು ಕುರಿತು ಮಾತಾಡಲು ಬಯಸಿಲ್ಲವೆಂಬ ಈ ಭಾವನೆ ನಿಮ್ಮ ಮನಸ್ಸಿನಲ್ಲಿ ಅದು ಹೇಗೋ ಮೂಡಿತೋ ನನಗಂತೂ ತಿಳಿಯುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** "ಅವರು ಮಾತಾಡಲು ಬಯಸಿಯೇ ಇಲ್ಲ" ಎಂದು ನಾನು ಯಾವಾಗಲೂ ಹೇಳಿಯೇ ಇಲ್ಲ. ಅವರು ನನ್ನ ಗಮನ ಸೆಳೆಯಲಿಲ್ಲ ಎಂದಷ್ಟೇ ಹೇಳಿರುವೆ. ಈ ಮಧ್ಯೆ ಡಾ.ದೇಶಮುಖ್ ಮೇಲೆದ್ದರು, ನಾನು ಅವರಿಗೆ ಮಾತಾಡಲು ಹೇಳಿದೆ.

**ಹಲವಾರು ಮಾನ್ಯ ಸದಸ್ಯರು :** ಮೇಲೆದ್ದರು–

**ಮಾನ್ಯ ಸಭಾಧ್ಯಕ್ಷರು :** ಈ ಹಂತದಲ್ಲಿ, ವೈಯಕ್ತಿಕ ಕಾರಣಕ್ಕಾಗಿ ನಾನು ಪಂಡಿತ ಭಾರ್ಗವ ಅವರನ್ನು ಕರೆಯಬಹುದೆ ನಿಶ್ಚಿತವಾಗಿ ಗೊತ್ತಿಲ್ಲ. ಮಾನ್ಯ ಝುಂಝುನವಾಲ.....

**ಶ್ರೀಝುಂಝುನವಾಲ :** ಎರಡು ಬದಲಿ ತಿದ್ದುಪಡಿಗಳಿಗೆ ನಾನು ಸೂಚನೆ ಕಳುಹಿಸಿದ್ದೆ. ಅದರಲ್ಲಿ ಒಂದು ಹೀಗಿದೆ– "ಜಾತಿ, ಜನಾಂಗ ಮತ್ತು ಅವರು ಪಾಲಿಸುತ್ತಿರುವ ಧರ್ಮವನ್ನು ಹೊರತುಪಡಿಸಿ ಈ ಸಂಹಿತೆಯು ಇಂಡಿಯಾ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಅನ್ವಯಿಸುತ್ತದೆ"

ನಾನು ಸಲ್ಲಿಸಿದ ಮತ್ತೊಂದು ಬದಲಿ ತಿದ್ದುಪಡಿಯು ಹೀಗಿದೆ–

ಮೇಲಿನ ಪ್ರಕರಣದಲ್ಲಿನ ಯಾವುದೇ ವಿಷಯಕ್ಕೂ ಪ್ರತಿರೋಧವಿರದೆ ಈ ಸಂಹಿತೆಯು ಈ ಸದನವು ಸೂಚಿಸುವ ರೀತಿಯಲ್ಲಿ ಮತ್ತು ಮಾದರಿಯಲ್ಲಿ ಯಾವುದೇ ವ್ಯಕ್ತಿ ತನ್ನ ಹೆಸರನ್ನು ಈ ಕಾನೂನನ್ನು ಘೋಷಿಸಿದ ಒಂದು ವರ್ಷದೊಳಗೆ ಸೂಚಿತ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಳ್ಳದಿದ್ದಲ್ಲಿ ಅವನಿಗೆ ಅನ್ವಯವಾಗುವುದಿಲ್ಲ. ಅಪ್ರಾಪ್ತವಯಸ್ಕರಿಗೆ ಸಂಬಂಧಿಸಿದಂತೆ, ಅವರು ಪ್ರಾಪ್ತ ವಯಸ್ಸನ್ನು ಮುಟ್ಟಿದ

ಒಂದು ವರ್ಷದೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು."

ನಾನು ಮಂಡಿಸಿದ ತಿದ್ದುಪಡಿಗಳು ವಿಳಂಬವನ್ನುಂಟುಮಾಡುವಂತಹಗಳೂ ಅಲ್ಲ, ಇಲ್ಲವೆ ಸಂಹಿತೆಯೊಳಗಿರುವ ಅವಕಾಶಗಳನ್ನು ವಿರೋಧಿಸುವಂತಹವುಗಳೂ ಅಲ್ಲ ಎಂದು ನಾನು ಸದನಕ್ಕೆ ಆಶ್ವಾಸನೆ ನೀಡಬಯಸುತ್ತೇನೆ. ಮೊದಲ ತಿದ್ದುಪಡಿಯನ್ನು ಮಂಡಿಸಿದ ಉದ್ದೇಶ – ನನ್ನ ಸ್ನೇಹಿತರಾದ ಮಾನ್ಯ ನಜೀರುದ್ದೀನ್ ಅಹ್ಮದ್ ಹೇಳಿದ ಹಾಗೆ, ನಾವು ಹಲವಾರು ಕಾಯ್ದೆಗಳನ್ನು ಮಂಜೂರು ಮಾಡಿದ್ದರೂ, ಹೈಕೋರ್ಟ್‌ಗಳೋ ಅಥವಾ ಸುಪ್ರೀಂಕೋರ್ಟ್‌ಗಳೋ ಅವುಗಳನ್ನು ಸಂವಿಧಾನಾತೀತ ಎಂದು ಪರಿಗಣಿಸಿವೆ ಎಂದು ಹೇಳುವುದಕೋಸ್ಕರ. ಅದರಿಂದಾಗಿಯೇ, ನಾವು ಯಾವುದೇ ಕಾನೂನು, ಕಾಯ್ದೆ ಮಸೂದೆಗಳನ್ನು ಕೈಗೆತ್ತಿಕೊಳ್ಳುವಾಗ ಅದು ಅವಶ್ಯವಾಗಿ ಸಂವಿಧಾನಾನುಸಾರ ಇದೆಯೇ ಎಂದು ಯೋಚಿಸುವ ಆವಶ್ಯಕತೆ ಇದೆ. ನಾವು ಯಾವುದಾದರೂ ಕಾನೂನನ್ನು ಮಂಜೂರಿ ಮಾಡೋಣ, ಹಾಗೂ ಅದು ಸಂವಿಧಾನಬಾಹಿರ ಎಂದು ಘೋಷಿಸಲ್ಪಟ್ಟರೆ ಅದು ಸದನದ ವೇಳೆಯ ಅಪವ್ಯಯ ಹಾಗೂ ಅಪಾರ ಹಣದ ದುರ್ವಿನಿಯೋಗವೇ ಆಗುತ್ತದೆ. ಅದು ಯಾವ ಉದ್ದೇಶವನ್ನೂ ಸಾಧಿಸುವುದಿಲ್ಲ. ಸಂವಿಧಾನದ ೧೫ನೇ ಅನುಚ್ಛೇದ ಪ್ರಕಾರ ರಾಜ್ಯವು ತನ್ನ ಪ್ರಜೆಗಳನ್ನು ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಅಥವಾ ಯಾವುದೇ ಮೇಲಿನ ವಿಷಯಗಳನ್ನಾಧರಿಸಿ ತಾರತಮ್ಯ ಮಾಡಕೂಡದು ಎಂದು ಹೇಳಿದೆ.

ನಾನು ಮಂಡಿಸಿದ ತಿದ್ದುಪಡಿಯು, ಇಂಡಿಯಾದ ಅಂದರೆ ಭಾರತದ ಎಲ್ಲಾ ನಾಗರಿಕರಿಗೂ ಸಂಹಿತೆಯು ಅನ್ವಯವಾಗುವಂತೆ ಮಾಡುತ್ತದೆ. ಆದರೆ ಈಗಿರುವ ರೀತಿಯ ಪ್ರಕರಣಗಳು ಕೇವಲ ನಿರ್ದಿಷ್ಟ ವರ್ಗದ ಜನರಿಗೆ ಮಾತ್ರ ಅನ್ವಯಿಸುವಂತಿವೆ. ನಾವು ಮಂಜೂರು ಮಾಡುತ್ತಿರುವ ಕಾನೂನು ಒಳ್ಳೆಯದಾಗಿದ್ದರೆ, ಅದು ಎಲ್ಲ ಜನರಿಗೂ ಒಳ್ಳೆಯದೇ ಆಗಿರುತ್ತದೆ. ಒಂದು ನಿರ್ದಿಷ್ಟ ಸಮುದಾಯವನ್ನು ಮತ್ತೊಂದು ಸಮುದಾಯದ ಎದುರು, ನಾವು ತಾರತಮ್ಯ ಮಾಡುವುದು ಖಂಡಿತ ಸರಿಯಾಗಲಾರದು. ನಮ್ಮ ಕಾನೂನು ಅವರ ಒಳ್ಳೆಯದಕ್ಕೆ ಆಗಿದ್ದರೆ, – ಒಂದು ಧರ್ಮವನ್ನು ಪಾಲಿಸುತ್ತಿರುವ ಒಂದು ವರ್ಗದ ಜನರನ್ನು, ಮತ್ತೊಂದು ಧರ್ಮವನ್ನು ಪಾಲಿಸುತ್ತಿರುವ ಮತ್ತೊಂದು ವರ್ಗದ ಜನರ ಮಧ್ಯೆ ಅದು ತಾರತಮ್ಯ ಮಾಡಕೂಡದು. ಇದು ಅವರಿಗೆ ಒಳಿತು ಮಾಡದಿದ್ದಲ್ಲಿ – ನಿರ್ದಿಷ್ಟ ಧರ್ಮವನ್ನು ಪಾಲಿಸುತ್ತಿರುವ ಜಾತಿಯ ಮೇಲಾಗಲಿ, ನಿರ್ದಿಷ್ಟ ಸಮುದಾಯದ ಮೇಲಾಗಲಿ ನಾವು ಕಾನೂನು ಅಥವಾ ಕಾಯ್ದೆಗಳನ್ನು ತರಬೇಕೆಂದು ತಹತಹಪಡುವುದು ಸರಿಯಾಗಲಾರದು.

ಒಟ್ಟಾರೆ ನಾನು ಹೇಳಲಿಚ್ಛಿಸುವ ಹಲವು ಅಂಶಗಳಲ್ಲಿ ಒಂದೆಂದರೆ ನಿರ್ದಿಷ್ಟ ಧರ್ಮವೊಂದನ್ನು ಪಾಲಿಸುತ್ತಿರುವ ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ಅನ್ವಯಗೊಳ್ಳಲಿರುವಂತಹ ಇಂಥ ಮಸೂದೆಯೊಂದನ್ನು ಈ ಸದನವು ಜಾರಿ ಮಾಡಬಹುದೆ ಎಂದು ಯೋಚಿಸಬೇಕೆನ್ನುವಂತಹದ್ದಾಗಿದೆ. ಅಂಥ ಕಾಯ್ದೆಯನ್ನು ನಾವು ಸಂವಿಧಾನದ ೨೫ನೇ ಅನುಚ್ಛೇದದನ್ವಯ ಹೊಂದಬಹುದು. ಆ ೨೫ನೇ ಅನುಚ್ಛೇದದನ್ವಯ ಇಂಥ ಕಾಯ್ದೆ ತರಲು ಇರುವ ಅವಕಾಶಗಳ ಬಗ್ಗೆ ಸ್ವಲ್ಪ ನೊಡೋಣ. ಅನುಚ್ಛೇದ ೨೫(೧) ಹೀಗಿದೆ:

"ಸಾರ್ವಜನಿಕ ಸುವ್ಯವಸ್ಥೆಗೊಳಪಟ್ಟು, ನೈತಿಕತೆ ಮತ್ತು ಆರೋಗ್ಯ ಮತ್ತು ಈ ಭಾಗದಲ್ಲೊದಗಿಸಿದ ಇನ್ನಿತರ ಅವಕಾಶಗಳನ್ವಯ, ಪ್ರತಿಯೊಬ್ಬ ನಾಗರಿಕರೂ ಆತ್ಮಸಾಕ್ಷಿಗಳಿಗನುಗುಣವಾಗಿ, ಮುಕ್ತವಾಗಿ, ಧರ್ಮವೊಂದನ್ನು ಪಾಲಿಸಲು, ಆಚರಿಸಲು ಮತ್ತು ಬೋಧಿಸಲು ಸಮಾನ ಸ್ವಾತಂತ್ರ್ಯವುಳ್ಳವರಾಗಿದ್ದಾರೆ."

ಮಸೂದೆಯ ಕಲಮು ೨ ಸಂಹಿತೆಯ ಜಾರಿ ಬಗ್ಗೆ ಹೀಗೆ ಹೇಳುತ್ತದೆ

೧) ಈ ಸಂಹಿತೆಯು ಅನ್ವಯಗೊಳ್ಳುವುದು–

(ಎ) ಎಲ್ಲಾ ಹಿಂದೂಗಳಿಗೆ ಅಂದರೆ, ಯಾವುದೇ ಸ್ವರೂಪದಲ್ಲಿರುವ ಅಥವಾ ವೀರಶೈವ ಅಥವಾ ಲಿಂಗಾಯಿತ ಮತ್ತು ಬ್ರಹ್ಮ ಸಮಾಜದ ಸದಸ್ಯರು ಪ್ರಾರ್ಥನೆ ಅಥವಾ ಆರ್ಯ ಸಮಾಜ– ಹೀಗೆ ವಿಕಸಿಸಲ್ಪಟ್ಟ ಹಿಂದೂ ಧರ್ಮೀಯರಿಗೆ:

(ಬಿ) ಧರ್ಮದಿಂದ ಯಾರು ಬೌದ್ಧರು, ಜೈನರು ಅಥವಾ ಸಿಖ್ಖರೋ ಅವರಿಗೆ

(ಸಿ) (i) ಯಾವುದೇ ಮಗು, ಅಕ್ರಮವಾಗಿ ಅಥವ ಸಕ್ರಮವಾಗಿ ಜನಿಸಿರಲಿ ಈ ಭಾಗದ ಅರ್ಥದನ್ವಯ ಅದರ ಪಾಲಕರು ಹಿಂದೂಗಳಾಗಿದ್ದರೆ,

(ii) ಈ ಭಾಗದ ಅರ್ಥದನ್ವಯ, ಯಾವುದೇ ಮಗು ಅಕ್ರಮವಾಗಿ ಅಥವಾ ಸಕ್ರಮವಾಗಿ ಜನಿಸಿರಲಿ, ಅದರ ಪಾಲಕರಲ್ಲಿ ಒಬ್ಬರು ಹಿಂದೂಗಳಾಗಿದ್ದಲ್ಲಿ; ಅಂಥ ಮಗು ಯಾವ ಸಮುದಾಯ, ಗುಂಪು ಅಥವಾ ಕುಟುಂಬಕ್ಕೆ ಸೇರಿದ ಪಾಲಕರಿಂದ ಪಾಲಿಸಲ್ಪಟ್ಟಲ್ಲಿ; ಮತ್ತು

(ಡಿ) ಹಿಂದೂ ಧರ್ಮಕ್ಕೆ ಮತಾಂತರ.

೨) ಯಾರು ಧರ್ಮದಿಂದ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅಲ್ಲವೋ, ಅಂಥವರೆಲ್ಲರಿಗೂ ಈ ಮಸೂದೆ ಅನ್ವಯಿಸಲ್ಪಡುತ್ತದೆ.

ಯಾವ ವ್ಯಕ್ತಿ ಹಿಂದೂ ಕಾನೂನಿನಿಂದ ಆಳಲ್ಪಡುತ್ತಿಲ್ಲವೆಂದೂ ಅಥವಾ ಯಾವುದೇ ಸಂಪ್ರದಾಯ ಅಥವಾ ಈ ಕೆಳಗೆ ವಿವರಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನಿಗೆ ಒಳಪಟ್ಟಿಲ್ಲವೆಂದು ಒಂದು ವೇಳೆ ದೃಢಪಟ್ಟಲ್ಲಿ, ಅಂಥ ವ್ಯಕ್ತಿಗೆ ಈ ಕಾನೂನು ಮೇಲೆ ಹೇಳಲ್ಪಟ್ಟ ವಿಷಯಗಳ ಕುರಿತು ಅನ್ವಯವಾಗುವುದಿಲ್ಲ.

೩) ಈ ಸಂಹಿತೆಯ ಯಾವ ಭಾಗದಲ್ಲಿಯೇ ಆಗಲಿ "ಹಿಂದೂ" ಎಂಬ ಪದ ಬಂದಲ್ಲಿ, ಆ ವ್ಯಕ್ತಿ ಧರ್ಮದಿಂದ ಹಿಂದೂ ಅಲ್ಲದಿದ್ದರೂ, ಅವನು ಈ ಸಂಹಿತೆಯ ಉಪಬಂಧಗಳಿಗೆ ಒಳಪಡುತ್ತಾನೆ.

೪) ವಿಶೇಷ ವಿವಾಹ ಕಾಯ್ದೆ ೧೮೭೨(೧೮೭೨ರ(iii) ಈ ಕಾಯಿದೆಯಲ್ಲಿ ಏನೇ ಹೇಳಿರಲಿ ಈ ಕಾನೂನಿನನ್ವಯ ಯಾವ ಹಿಂದೂಗಳ ವಿವಾಹವು ವಿಧಿವತ್ತಾಗಿ,– ಪ್ರಸ್ತುತ ಸಂಹಿತೆ ಜಾರಿಗೆ ಬರುವ ಮುನ್ನ, ನಡೆದಿದೆಯೋ ಅವರೆಲ್ಲಾ ಹಿಂದೂ ಸಂಹಿತೆಯ ಕೆಳಗೆ ಬರುತ್ತಾರೆ.

ಅನುಚ್ಛೇದ ೨೫ರ ಅನ್ವಯ"ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ ಮತ್ತು ಈ ಭಾಗದಲ್ಲೊದಗಿಸಿದ ಇನ್ನಿತರ ಅವಕಾಶಗಳನ್ವಯ, ಪ್ರತಿಯೊಬ್ಬ ನಾಗರಿಕರೂ, ಆತ್ಮಸಾಕ್ಷಿಗನುಗುಣವಾಗಿ, ಮುಕ್ತವಾಗಿ ಧರ್ಮವೊಂದನ್ನು ಪಾಲಿಸಲು, ಆಚರಿಸಲು, ಮತ್ತು ಬೋಧಿಸಲು ಸಮಾನ ಸ್ವಾತಂತ್ರ್ಯವುಳ್ಳವರಾಗಿದ್ದಾರೆ" ಎಂದು ಹೇಳುವಾಗ ಈ ಮಸೂದೆಯನ್ನು ಕೇವಲ ಹಿಂದೂಗಳಿಗೆ ಮಾತ್ರ ಏಕೆ ಅನ್ವಯಿಸಲಾಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹಿಂದೂಗಳಿಗೆ ಮತ್ತು ಇನ್ನಿತರ ಧರ್ಮವನ್ನು ಪಾಲಿಸುವವರಿಗೆ ಈ ರೀತಿಯ ಹಕ್ಕುಗಳನ್ನು ಕೊಟ್ಟಿರುವಾಗ ಈಗ ನಮ್ಮ ಮುಂದಿರುವಂತಹ–ಕಾನೂನೊಂದನ್ನು ಅಂಗೀಕರಿಸಿ ಹಿಂದೂಗಳಿಂದ ಈ ಹಕ್ಕನ್ನು ಕಸಿದುಕೊಳ್ಳಲು ಯಾವ ಕಾರಣಗಳಿವೆಯೋ ನನಗೆ ಗೊತ್ತಾಗುತ್ತಿಲ್ಲ. ಸಂವಿಧಾನದತ್ತವಾದ ಹಿಂದೂಗಳ ಧಾರ್ಮಿಕ ಸ್ವಾತಂತ್ರ್ಯವನ್ನು ಮಾನ್ಯ ಕಾನೂನು ಮಂತ್ರಿಗಳು ಕಬಳಿಸಲು ಹೊರಟಿಲ್ಲವೇ ಎಂದು ನಾನು ಕೇಳಬಯಸುತ್ತೇನೆ.

ಆದರೂ –೨೫ನೇ ಅನುಚ್ಛೇದ ಕಲಮು(೨)ಹೀಗೆ ಹೇಳುತ್ತದೆ :

ಈ ಅನುಚ್ಛೇದದಲ್ಲಿನ ಈಗಿರುವ ಯಾವುದೇ ಕಾನೂನಿನ ಜಾರಿಗಾಗಲಿ –ಅಥವಾ ರಾಜ್ಯಗಳು ಕಾನೂನು ಮಾಡುವುದಕ್ಕಾಗಲಿ ಅಡ್ಡಿಯಾಗಲಾರದು

(ಎ) ಧರ್ಮಕ್ಕೆ ಸಂಲಗ್ನಗೊಂಡಿರುವ, ಆರ್ಥಿಕ, ವಾಣಿಜ್ಯ, ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನಿರ್ವಹಿಸುವುದನ್ನಾಗಲಿ ಅಥವಾ ನಿಯಂತ್ರಿಸುವುದಕ್ಕಾಗಲಿ

(ಬಿ) ಸಮಾಜ ಕಲ್ಯಾಣ ಮತ್ತು ಸುಧಾರಣೆಗಳನ್ನೊದಗಿಸಲು ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಸಾರ್ವಜನಿಕಗೊಳಿಸಿ ಹಿಂದೂಧರ್ಮಕ್ಕೆ ಸೇರಿದ ಎಲ್ಲಾ ವರ್ಗ ಮತ್ತು ವಿಭಾಗದ ಜನರಿಗೆ ತೆರೆದಿಡುವುದಕ್ಕಾಗಲಿ.

ಸಾಮಾಜಿಕ ಸುಧಾರಣೆ ಮತ್ತು ಜನರ ಕಲ್ಯಾಣಕ್ಕಾಗಿ ಈಗ ಚರ್ಚೆಗೆ ಒಳಪಟ್ಟಿರುವ ಕಾಯ್ದೆಯನ್ನು ತರುವುದಾದರೆ ಅದನ್ನು ಕೇವಲ ಕೆಲ ಧರ್ಮಗಳನ್ನು ಪಾಲಿಸುತ್ತಿರುವವರಿಗೆ ಮಾತ್ರ ಮಿತಿಗೊಳಿಸಿ, ಉಳಿದವರಿಗೆ ವಿಸ್ತರಿಸದೆ ಇರುವುದು ಕೂಡ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ರಾಜ ಬಹುದ್ದೂರ :** ಮಾನ್ಯರೆ, ನಾನೊಂದು ಕ್ರಿಯಾಲೋಪವನ್ನು ಎತ್ತಲೆ? ಈ ಸದನದ ಮೂರು ನಾಲ್ಕು ಸದಸ್ಯರು ಈ ಕಾಯ್ದೆ ವ್ಯಾಪ್ತಿ ಮತ್ತು ಅದರ ಜಾರಿ ಕುರಿತು ಪ್ರಸ್ತಾಪಿಸಿ, ಇದನ್ನು ಭಾರತದ ಎಲ್ಲಾ ನಾಗರಿಕರಿಗೂ ವಿಸ್ತರಿಸಬೇಕೆಂದು ಹೇಳಿದ್ದಾರೆ–

ಮಸೂದೆಯನ್ನು ಮಂಡಿಸುವ ಸಂದರ್ಭದಲ್ಲಿನ ಆರಂಭದ ಚರ್ಚೆಯಲ್ಲಿಯೇ ಸದನವು ಈ ಮಸೂದೆಯು ಕೇವಲ ಹಿಂದೂಗಳಿಗೆ ಮಾತ್ರ ಎಂಬ ತತ್ವಕ್ಕೆ ಬದ್ಧವಾಗಿತ್ತು. ಹೀಗೆ ಒಪ್ಪಿಕೊಂಡು, ಈಗ ಮತ್ತೆ ಅದೇ ವಿಷಯವನ್ನು ಹೊಸದಾಗಿ ಸದಸ್ಯರು ಪ್ರಸ್ತಾಪಿಸಬಹುದೇ?

**ಮಾನ್ಯ ಸಭಾಧ್ಯಕ್ಷರು :** ನಿಜಕ್ಕೂ ಯಾವಾಗ ಕ್ರಿಯಾಲೋಪವಾಗುತ್ತದೆ ಎಂಬುದನ್ನು ನಾನು ಹೀಗೆ ಹೇಳುವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮಸೂದೆಯ ವ್ಯಾಪ್ತಿಯ ವಿಸ್ತರಣೆಯು–ಈಗಾಗಲೆ ಮಸೂದೆಯ ಒಳಗೆ ನಿರ್ದಿಷ್ಟಪಡಿಸಿದ ಸಮುದಾಯಗಳಿಗಲ್ಲದೆ, ಇನ್ನಿತರರಿಗೂ ವಿಸ್ತರಿಸಲು ಸಲ್ಲಿಸಿರುವ ಹಲವು ತಿದ್ದುಪಡಿಗಳ ಉದ್ದೇಶವೂ–ಒಂದೇ ರೀತಿಯದೆಂಬ ಪ್ರಶ್ನೆ ಬಂದಾಗ–ಅದು ಕ್ರಿಯಾಲೋಪವೇ?ಎಂಬುದಾಗಿದೆ.

**ಶ್ರೀ ರಾಜ ಬಹದ್ದೂರ :** ಇಂಡಿಯಾದ ಒಂದು ಸಮುದಾಯಕ್ಕೆ ಮಾತ್ರ ಈ ಮಸೂದೆಯು ಅನ್ವಯಿಸಬೇಕೆಂದು ಸದನವು ನಿರ್ಣಯ ತೆಗೆದುಕೊಂಡಿದೆ. ಈಗ ಇದು ಎಲ್ಲರಿಗೂ ಅನ್ವಯಿಸಬೇಕೆಂಬ ಹೊಸ ನಿರ್ಧಾರವನ್ನು ನಾವು ತೆಗೆದುಕೊಳ್ಳಬೇಕೆ?

**ಮಾನ್ಯ ಸಭಾಧ್ಯಕ್ಷರು :** ಅದಕ್ಕೆ ಅರ್ಥ ಬರುತ್ತದೆ. ಮಸೂದೆ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ ಎಂಬ ಆಕ್ಷೇಪವೂ ಬಂದಿದೆ. ಈಗ ಮಂಡಿಸಿರುವ ಕೆಲ ತಿದ್ದುಪಡಿಗಳು, ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸಬೇಕೆನ್ನುತ್ತಿವೆ. ಅವುಗಳನ್ನು ನಾನು ತೆಗೆದುಕೊಳ್ಳಬೇಕೆ, ಬೇಡವೆ ಎಂಬುದರ ಬಗ್ಗೆ ಅನುಮಾನವುಳ್ಳವನಾಗಿದ್ದೇನೆ, ಆದರೂ ನಾನು ಇನ್ನೂ ಯಾವ ನಿರ್ಣಯಗಳನ್ನೂ ತೆಗೆದುಕೊಂಡಿಲ್ಲ. ನಾನು ಮೊದಲು ಸದಸ್ಯರ ಅಭಿಪ್ರಾಯವನ್ನು ತಿಳಿದು, ಅವುಗಳನ್ನು ಮತಕ್ಕೆ ಇಡಬೇಕೆ ಅಥವಾ ಬೇಡವೆ ಎಂಬುದನ್ನು ಕಡೆಯಲ್ಲಿ ನಿರ್ಧರಿಸುತ್ತೇನೆ.

**ಡಾ. ಪಿ.ಎಸ್. ದೇಶಮುಖ್ :** ಕಾಯ್ದೆಯ ವ್ಯಾಪ್ತಿಯನ್ನು ವಿಸ್ತರಿಸುವ ಅಥವಾ ಅದನ್ನು ಮಿತಿಗೊಳಿಸುವ ವಿಷಯದಲ್ಲಿ ಸದನಕ್ಕೆ ಮುಕ್ತ ಅವಕಾಶವಿದೆ. ನಿರ್ದಿಷ್ಟ ಕಾಯ್ದೆಯೊಂದನ್ನು ಸದನವು ಪಾಸು ಮಾಡದಿರುವವರೆಗೆ ಆ ಬಗ್ಗೆ ಸದನಕ್ಕೆ ಸ್ವಾತಂತ್ರ್ಯವಿದೆ. ಮಸೂದೆಯ ಮೂಲದಲ್ಲಿ ಈ ಕಾಯ್ದೆಯನ್ನು ಇಡೀ ದೇಶಕ್ಕೆ

ಅನ್ವಯಿಸಬೇಕೆಂದು ಇದ್ದರೆ, ಅದನ್ನು ಕೆಲ ರಾಜ್ಯಗಳಿಗೆ ವಿನಾಯಿತಿಗೊಳಿಸುವ ಅಥವಾ ಅದಕ್ಕೆ ವಿರುದ್ಧವಾಗಿ–ಕ್ರಮ ಸೂಚಿಸುವ ತಿದ್ದುಪಡಿಯನ್ನು ಸಲಹೆ ಮಾಡುವ ಅಧಿಕಾರವು ಸದನಕ್ಕಿದೆ. ಹೀಗೆ ಮಾಡುವ ಸದನದ ಸಾಮರ್ಥ್ಯದ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ.

**ಮಾನ್ಯ ಸಭಾಧ್ಯಕ್ಷರು :** ಇಡೀ ಭಾರತಕ್ಕೆ ಕಾಯ್ದೆಯನ್ನು ಅನ್ವಯಿಸುವುದಾಗಲಿ ಅಥವಾ ಕೆಲಭಾಗಗಳಿಗೆ ಮಾತ್ರ ಅದನ್ನು ಮಿತಿಗೊಳಿಸುವುದಾಗಲಿ, ಕಾಯ್ದೆಯ ತತ್ತ್ವಗಳ ವಿಸ್ತೀರ್ಣವಾಗುವುದಿಲ್ಲ. ಕಾನೂನಿನ ತತ್ತ್ವಗಳೇ ಒಂದು ರೀತಿಯಲ್ಲಿ ಸ್ವತಂತ್ರ ಕಾನೂನಿವಂತಿದೆ. ಅವು ಭೌಗೋಳಿಕ ವಿಸ್ತರಣೆಗಿಂತ ಇನ್ನಿತರ ವಿಷಯಕ್ಕೆ ಸಂಬಂಧಿಸಿವೆ. ಸಿಖ್, ಜೈನ ಅಥವಾ ಬೌದ್ಧರಿಗೆ ಅನ್ವಯಿಸುವುದಿಲ್ಲ ಎಂದು ಅದು ಸ್ಪಷ್ಟವಾಗಿ ಹೇಳಲು ಸಮರ್ಥವಾಗಿದೆ. ಆದರೆ ಅದು ಈಗ ಕ್ರಿಶ್ಚಿಯನ್, ಮುಸ್ಲಿಂ, ಪಾರ್ಸಿ ಮತ್ತು ಯಹೂದಿಗಳಿಗೆ ಅನ್ವಯಿಸಬಹುದೆಂದು ಹೇಳಲು ಸಾಧ್ಯವೆ?

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಎರಡು ವಿಜ್ಞಾಪನೆಗಳನ್ನು ಮುಂದಿಡಬಯಸುತ್ತೇನೆ. ನಿರ್ಣಯ ನೀಡುವ ಮೊದಲು ನೀವು ನನಗೊಂದು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಪ್ರತಿಯೊಂದು ಅವಕಾಶವನ್ನು ನಾನು ಸದಸ್ಯರಿಗೆ ನೀಡುತ್ತೇನೆ.

**ಕ್ವಾಜಾ ಇನಾಯಿತ್ ವುಲ್ಲಾ :** (ಬಿಹಾರ) ಈ ಎಲ್ಲಾ ತಿದ್ದುಪಡಿಗಳು ಮುಸ್ಲಿಂರನ್ನು ಹಿಂದೂ ಸಂಹಿತೆಯ ವ್ಯಾಪ್ತಿಯೊಳಗೆ ತರಬಯಸಿ ಮಂಡಿಸಲ್ಪಟ್ಟಿವೆಯೇ ಹಾಗೂ ಸಂವಿಧಾನದ ಅನುಚ್ಛೇದ ೨೫ರ ಮೂಲಭೂತ ಹಕ್ಕುಗಳ ವಿರುದ್ಧವಾಗಿಯೇ?

**ಮಾನ್ಯ ಸಭಾಧ್ಯಕ್ಷರು :** ಈ ಪ್ರಶ್ನೆ ಏಳುವುದಿಲ್ಲ. ಅದು ಈ ಸಂಹಿತೆಯ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿಯೇ ಎಂಬ ವಿಷಯ ಕುರಿತ ವ್ಯಾಪಕ ಪ್ರಶ್ನೆಯನ್ನಾಧರಿಸಿದೆ.

**ಕ್ವಾಜಾ ಇನಾಯಿತ್ ವುಲ್ಲಾ :** ಸ್ಪಷ್ಟವಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಇದು ಸ್ಪಷ್ಟವಾಗಿರಬಹುದು. ಆದರೆ ನನಗೆ ಸ್ಪಷ್ಟವಾಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರುಗಳು ಏನು ಹೇಳುತ್ತಾರೆಂಬುದನ್ನು ಶಾಂತವಾಗಿ ಆಲಿಸೋಣ. ಪೂರ್ವಗ್ರಹಗಳಿಂದ ಏನೂ ಪ್ರಯೋಜನವಾಗದು. ಅಂತಿಮವಾಗಿ ಇದು ಅಸಂಖ್ಯಾತ ವರ್ಗದ ಜನರ ಮೇಲೆ ಪರಿಣಾಮ ಬೀರುವಂತಹದ್ದು. ಇದು ಸಂವಿಧಾನದ ಅವಕಾಶಗಳಿಗೆ ಏನಾದರೂ ಧಕ್ಕೆ ತರುತ್ತದೆಯೇ ಎಂಬ ಪ್ರಶ್ನೆಗೆ ಸಂಬಂಧಪಟ್ಟಿದ್ದು.

**ಶ್ರೀ ಜೆ.ಆರ್. ಕಪೂರ್ :** ತಾವು ಈ ತಿದ್ದುಪಡಿಗಳ ಅಥವಾ ವ್ಯವಸ್ಥಿತವಾಗಿರುವ ಈ ತಿದ್ದುಪಡಿಗಳ ಮೇಲೆ ಆದೇಶ ಹೊರಡಿಸುವ ಮೊದಲು, ಈ ಅಂಶದ ಮೇಲೆ ಮಾತಾಡಲು ನನಗೆ ಅವಕಾಶ ನೀಡಿ ಎಂದು ನಾನು ವಿನಂತಿಸುತ್ತೇನೆ. ಈ ತಿದ್ದುಪಡಿಗಳ ಅನುಮತಿ ಕುರಿತು ನಾವ್ಯಾರೂ ಇದುವರೆಗೂ ಏನನ್ನೂ ಹೇಳಲಾಗಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾನು ಅವರಿಗೆಲ್ಲಾ ಅವಕಾಶ ಕೊಡಬಹುದೆಂದು ತಿಳಿದಿದ್ದೇನೆ. ಮೊಟ್ಟ ಮೊದಲು ಅವರು ನಿಜಕ್ಕೂ ಏನನ್ನು ಹೇಳಲು ಪ್ರಯತ್ನಿಸುತ್ತಾರೆ ಮತ್ತು ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸಲೆತ್ನಿಸುತ್ತಾರೆಯೇ ಎಂಬುದನ್ನು ಕೇಳಬೇಕಾಗಿದೆ. ಆದ್ದರಿಂದ ಅವರಿಗೆ ಮಾತಾಡುವ ಅವಕಾಶ ಕಲ್ಪಿಸುತ್ತೇನೆ.

**ಶ್ರೀ ಝುಂಝುನವಾಲ :** ಆ ನಿರ್ದಿಷ್ಟ ಮಸೂದೆಯು ಸುಧಾರಣೆ ಸ್ವರೂಪದ್ದಾಗಿದ್ದರೆ ಅಥವಾ ಅದು ಸಾರ್ವಜನಿಕರ ಹಿತದೃಷ್ಟಿಯುಳ್ಳದ್ದಾಗಿದ್ದರೆ, ಆಗ ಈ ಸದನವು ಈ ಕಾಯ್ದೆಯನ್ನು ಭಾಗಶಃ ಅನ್ವಯಿಸಲು

ಯತ್ನಿಸಬಾರದೆಂದು ನಾನು ಸದನದ ಗಮನಕ್ಕೆ ತಂದಿದ್ದೆ.

[ಸಭಾಧ್ಯಕ್ಷರ ಸ್ಥಾನದಲ್ಲಿ ಪಂಡಿತ ಠಾಕೂರ್ ದಾಸ್ ಭಾರ್ಗವ]

ಜನರ ಕಲ್ಯಾಣಕ್ಕಾಗಿ ಯಾವಾಗ ಒಂದು ನಿರ್ದಿಷ್ಟ ಕಾಯ್ದೆಯನ್ನು ಹೊರಡಿಸಲಾಗುತ್ತದೋ, ಅದನ್ನು ಯಾಕಾಗಿ ಕೇವಲ ಕೆಲವರ್ಗದ ಜನರಿಗೆ ಮಾತ್ರ ಮಿತಿಗೊಳಿಸಲಾಗಿದೆ ಮತ್ತು ಅದನ್ನು ಯಾಕೆ ಎಲ್ಲರಿಗೂ ವಿಸ್ತರಿಸುತ್ತಿಲ್ಲ? ಅದು ಒಳ್ಳೆಯದಾಗಿದ್ದರೆ; ಒಳ್ಳೆಯದೇ. ಅದು ಕೆಟ್ಟದ್ದಾಗಿದ್ದರೆ ಕೆಟ್ಟದ್ದೆ. ಅದು ಕೆಟ್ಟದ್ದಾಗಿದ್ದರೆ ಅದನ್ನು ಹಿಂದೂಗಳಿಗೆ ಯಾಕೆ ಅನ್ವಯಿಸಬೇಕು? ಹಿಂದೂಗಳಿಗೆ ಹೇರಲು ನಾವೇಕೆ ಕಾತುರರಾಗಿದ್ದೇವೆ? ಅವರ ಸ್ವಂತ ಧರ್ಮವನ್ನು ಮತ್ತು ಅವರ ಪುರಾತನ ವಿಚಾರಗಳನ್ವಯ ಬದುಕುವುದನ್ನು ಅವರಿಗೆ ಮುಕ್ತವಾಗಿ ಆಚರಿಸಲು ಯಾಕಾಗಿ ಬಿಡುತ್ತಿಲ್ಲ. ಸದ್ಯ ಇರುವ ವಿವಾಹ ಪದ್ಧತಿ ಹಾಗೂ ಮತ್ತಿತರ ಸಂಬಂಧಿತ ವಿಷಯಗಳು ಸಮಾಜದ ಒಳಿತಿನ ದೃಷ್ಟಿಯಿಂದ ಸರಿಯಿಲ್ಲವೆಂದೂ, ಅವು ಸಮಾಜವನ್ನು ಹಾಳುಮಾಡುತ್ತಿವೆಯೆಂದೂ, ಅದಕ್ಕಾಗಿ ಸಮಾಜದ ಹಿತದೃಷ್ಟಿಯಿಂದ ಇಂಥ ಕಾಯ್ದೆಯನ್ನು ತರಲಾಗುತ್ತಿದೆಯೆಂದು ಹೇಳಲಾಗುತ್ತಿದೆ. ನಿರ್ದಿಷ್ಟ ಸ್ವರೂಪದ ಕಾಯ್ದೆಯು, ವಿವಾಹದ ಬಗ್ಗೆ ಇರಬಹುದು, ಉತ್ತರಾಧಿಕಾರದ ಬಗ್ಗೆ ಇರಬಹುದು, ಅಥವಾ ಇನ್ನಾವುದರ ಬಗ್ಗೆಯೇ ಇರಬಹುದು. ಈಗ ವಿವರವಾಗಿ ಆ ಬಗ್ಗೆ ನಾನು ಮಾತಾಡಲು ಸಿದ್ಧನಿಲ್ಲ– ಪ್ರಕರಣಗಳ ಚರ್ಚೆ ಬಂದಾಗ ಮಾತಾಡುವೆ, ಆದರೆ ಅವು, ನಾನು ಹೇಳಿದ ಹಾಗೆ ಕೆಲವೇ ನಿರ್ದಿಷ್ಟ ಜನರಿಗೆ ಮಾತ್ರ ಒಳ್ಳೆಯವುಗಳೆಂದಾದರೆ, ಆಧುನಿಕ ಕಾಲದ ಮನು ಎಂದು ಕರೆಸಿಕೊಳ್ಳುವ ಡಾ.ಅಂಬೇಡ್ಕರ್ ಅವರಿಂದ ಇದಕ್ಕೆ ನಾನು ಕಾರಣಗಳನ್ನು ಬಯಸುವೆ. ಮುಸ್ಲಿಂರಿಗೆ ಇದು ಯಾಕೆ ಕೆಟ್ಟದಾಗಿದೆ? ಇದು ಅವರಿಗೆ ಅನ್ವಯವಾಗುವುದಿಲ್ಲ ಎಂದು ಉದ್ದೇಶಪೂರ್ವಕವಾಗಿ ಅವರು ಹೇಳಿ, ಮುಸ್ಲಿಂರಿಗೆ ಇದರಿಂದ ವಿನಾಯಿತಿ ನೀಡಿದ್ದಾರೆ. ಇದನ್ನು ಯಾಕೆ ಎಲ್ಲರಿಗೂ ಅನ್ವಯಿಸಬಾರದು ಮತ್ತು ಯಾಕೆ ಹಿಂದೂಗಳಿಗೆ ಅನ್ವಯಿಸಬೇಕು ಎಂದು ನಾನು ಕೇಳಬಯಸುತ್ತೇನೆ. ಅದು ಒಳ್ಳೆಯದಾಗಿದ್ದರೆ ಅದನ್ನು ನಿಮಗೆ, ನನಗೆ ಮತ್ತು ಎಲ್ಲರಿಗೂ ಅನ್ವಯಿಸಬೇಕು. ಎರಡನೆಯದಾಗಿ ನಾನು ಹೇಳಿದ ಹಾಗೆ, ಅದು ಕೆಟ್ಟದ್ದಾಗಿದ್ದರೆ ಅದನ್ನು ಯಾಕೆ ಕೆಲ ನಿರ್ದಿಷ್ಟ ಜನವರ್ಗಗಳ ಮೇಲೆ ಹೇರಲು ಕಾತುರ ತೋರಬೇಕು. ಕಡೆಯದಾಗಿ, ನನ್ನ ಸ್ನೇಹಿತರಾದ ಮಾನ್ಯ ಜಸ್ಪತ್‌ರಾಯ್ ಕಪೂರ್ ಹೇಳಿದ ಹಾಗೆ ಈ ತಿದ್ದುಪಡಿಗಳನ್ನು ಅಂಗೀಕರಿಸಬೇಕೋ–ಬೇಡವೋ ಎಂಬ ಪ್ರಶ್ನೆ ಬಂದಾಗ, ನಮ್ಮ ನಿಲುವುಗಳನ್ನು ವಿವರಿಸಲು ನಮಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯರೆ, ಡಾ.ಅಂಬೇಡ್ಕರ್ ಅವರು ತಿದ್ದುಪಡಿಯನ್ನು ಮಂಡಿಸಿದ ಆ ಸಮಯದಲ್ಲೇ ನಾನು ಕ್ರಿಯಾಲೋಪವನ್ನು ಎತ್ತಿದ್ದೆ. ನಾನು ಮೊಟ್ಟ ಮೊದಲು ಕ್ರಿಯಾಲೋಪವನ್ನು ವಿವರಿಸಬಯಸುತ್ತೇನೆ. ಏಕೆಂದರೆ ಉಳಿದ ತಿದ್ದುಪಡಿಗಳ ಚರ್ಚೆಯೂ ಆ ಕ್ರಿಯಾಲೋಪವನ್ನು ಅವಲಂಬಿಸಿದೆ. ತಿದ್ದುಪಡಿಗಳನ್ನು ರಚಿಸುವಾಗ ಬಳಸಿರುವ ಭಾಷೆಯು ಸದನವನ್ನು ಅವಮಾನಿಸುವ ರೀತಿಯಲ್ಲಿದೆ ಎಂಬುದನ್ನು ತಾವು ಗಮನಿಸಿರಬೇಕು. ಅದು ಹೀಗಿದೆ: ಕಲಮು ೨ರ ಕಲಮು(ಎ)(೧)ನಲ್ಲಿ ಹಿಂದೂ ಅಂದರೆ, "ಹಿಂದೂಧರ್ಮವನ್ನು ಪಾಲಿಸುವ ಎಲ್ಲ ಜನರೂ" ಇದಕ್ಕೆ ಪರ್ಯಾಯ "ಯಾರು ಹಿಂದುಗಳೋ ಆ ವ್ಯಕ್ತಿಗಳು" ಹೀಗೆ ಮತ್ತು ಇದೇ ರೀತಿ. ಮುಂದಿನ ವಿಷಯದಲ್ಲಿ ಬಳಸಿರುವ ಪದಗಳು "ಪರ್ಯಾಯ" ಮತ್ತಿತ್ಯಾದಿ. ಭಾಗ ೨ರಲ್ಲಿ ಪುನಃ "ಬಿಡಿ" ಮತ್ತಿತ್ಯಾದಿ. ಒಂದು ರೀತಿಯಲ್ಲಿ ಆಜ್ಞಾಧಾರಕ ರೂಪದಲ್ಲಿದೆ. ಡಾ. ಅಂಬೇಡ್ಕರ್ ರವರು ಪ್ರೊಫೆಸರ್ ತರಹ ಮತ್ತು ಸರ್ವಾಧಿಕಾರಿ ಸ್ವರೂಪದಲ್ಲಿ ಮಾತಾಡುತ್ತಾರೆಂದು ಒಂದು ಸಂದರ್ಭದಲ್ಲಿ ಡಾ.ಪಟ್ಟಾಭಿ ಹೇಳಿದ್ದರು. ಈ ತಿದ್ದುಪಡಿಯನ್ನು

ಅದೇ ಭಾಷೆಯಲ್ಲಿ ರಚಿಸಲಾಗಿದೆ. ಕೇವಲ ಇದೊಂದೆ ಅಲ್ಲ, ಎಲ್ಲಾ ತಿದ್ದುಪಡಿಗಳೂ ಹೀಗಿವೆ. ನಾನು ಎಲ್ಲವನ್ನು, ಪ್ರತಿಯೊಂದನ್ನು ಪರೀಕ್ಷಿಸಿದ್ದೇನೆ. ಸರ್ಕಾರದ ಉನ್ನತ ಅಧಿಕಾರಿಯೊಬ್ಬ ತನ್ನ ಕೈಕೆಳಗಿನ ಅಧಿಕಾರಿಗೆ ಆಜ್ಞೆಮಾಡುವ ರೀತಿಯಲ್ಲಿ ಅಥವಾ ಅವು ತಿದ್ದಲು ಕೊಟ್ಟ ಚೀಟಿಗಳ ಸ್ವರೂಪದಲ್ಲಿದೆ. ಸದನಕ್ಕೆ ಹೀಗೆ ಮಾಡು, ಹಾಗೆ ಮಾಡು ಎಂದು. ಇದು ನಿಜಕ್ಕೂ ಆದೇಶ ನೀಡುವ ಆಜ್ಞೆಯೇ. ಸಹಜವಾಗಿ ಇರಬೇಕಾದದ್ದು "ಇಂತಿಂಥ ವಿಷಯಗಳಿಗೆ, ಈ ಕೆಳಗಿನ ಪರ್ಯಾಯಗಳು" ಅಥವಾ ಅದು "ಈ ಕೆಳಗಿನವುಗಳನ್ನು ಕೈ ಬಿಡಬಹುದು"ಎನ್ನುವುದಾಗಿದೆ. ಅದು ನಿಜವಾದ ವಿಧಾನ.

ಕರಡು ರಚನೆಯನ್ನು ಎಷ್ಟೊಂದು ಬೇಜವಾಬ್ದಾರಿಯಿಂದ ರಚಿಸಲಾಗಿದೆ ಮತ್ತು ಅದೊಂದು ಅಧಿಕಾರಿ ಶೈಲಿಯಲ್ಲಿದ್ದು, ಸದನಕ್ಕೊಂದು ಕೆಟ್ಟ ಪರಂಪರೆ ಹಾಕುವ ರೀತಿಯಲ್ಲಿ ಇರುವುದರಿಂದ ಅವುಗಳನ್ನು ಒಪ್ಪಿಕೊಳ್ಳಕೂಡದೆಂದು ನಾನು ನಿವೇದಿಸುತ್ತೇನೆ. ಎಲ್ಲಾ ತಿದ್ದುಪಡಿಗಳನ್ನು ಅದೇ ಭಾಷೆಯಲ್ಲಿ ಹಿಡಿದಿಡಲಾಗಿದೆ. ತಿದ್ದುಪಡಿಗಳನ್ನು ಈ ರೀತಿಯ ಪದಪ್ರಯೋಗಗಳಿಂದ ರಚಿಸಿರುವುದನ್ನು ಸದನವು ಒಪ್ಪಿಕೊಳ್ಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಾನು ಗಂಭೀರವಾಗಿ ಕೇಳುತ್ತಿದ್ದೇನೆ. ಆದ್ದರಿಂದ, ಕೆಲ ತಿದ್ದುಪಡಿಗಳಿರುವ ಆಜ್ಞಾಸ್ವರೂಪವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಸಾಮಾನ್ಯವಾದ ಬಳಕೆಯ ವಿಧಾನವನ್ನು ಸಲಹೆ ಮಾಡುತ್ತೇನೆ. ಈ ಸದನಕ್ಕೆ ಮಾತ್ರ ಸೀಮಿತವಾದುದಲ್ಲ. ಈ ಸಾಮಾನ್ಯ ಬಳಕೆ ಹಿಂದಿನ ಸದನಗಳು ಮತ್ತು ಎಲ್ಲಾ ಶಾಸನಬದ್ಧವಾದ ಸಭೆಗಳೂ ಇದನ್ನೆ ಪಾಲಿಸುತ್ತಿವೆ. ಈಗಿನ ಪ್ರಶ್ನೆ ಎಂದರೆ, ತೀರ ಹೊಸದಾದ, ನವ ಅಳತೆಗೋಲನ್ನು ಬಳಸಲು ಸದನವು ಅನುಮತಿ ನೀಡುತ್ತದೆಯೇ ಅನ್ನುವುದಾಗಿದೆ. ಇದೇ ರೀತಿಯ ಭಾಷೆಯಲ್ಲಿ ಹಿಡಿದಿಡಲಾದ ತಿದ್ದುಪಡಿಗಳನ್ನೊಮ್ಮೆ ತಾವು ಪರೀಕ್ಷಿಸುವ ಕೃಪೆ ಮಾಡಬೇಕು. ಸರಿಯಾದ ರೂಪದಲ್ಲಿದೆಯೇ, ಇಲ್ಲದಿದ್ದರೆ, ಮುಂದಿನ ನನ್ನ ತಿದ್ದುಪಡಿಯ ಪ್ರಕಾರ, ಅದನ್ನು ಆದ್ಯತೆಯ ಮೇಲೆ ಸ್ವೀಕರಿಸಿ, ಸರಿಗೊಳಿಸಬೇಕೆಂಬುದು ನನ್ನ ಕ್ರಿಯಾಲೋಪವಾಗಿತ್ತು. ಇದರಿಂದ ಯಾವುದೇ ನಷ್ಟವಾಗುವುದಿಲ್ಲ ಅದರ ಬದಲಾಗಿ ಸದನಕ್ಕೊಂದು ಸಭ್ಯತೆ ಮತ್ತು ಅಧಿಕೃತ ಸ್ವರೂಪ ಬರುತ್ತದೆ. ಆದ್ದರಿಂದ ತಾವು ಆದೇಶ ನೀಡಬೇಕೆಂದು ಕೇಳಿಕೊಳ್ಳುವೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಕ್ರಿಯಾಲೋಪ ಕುರಿತು ಆಡಿದ ಮಾತುಗಳಿಂದ ನನಗೇನೂ ಆದೇಶ ನೀಡುವ ಆವಶ್ಯಕತೆ ಇದೆ ಎಂದು ಮನವರಿಕೆಯಾಗಲಿಲ್ಲ. ಅವರು ಮಾಡಿದ ಕೆಲ ವಿಷಯಗಳ ಪರಿಶೀಲನೆ ಕುರಿತು ಡಾ. ಅಂಬೇಡ್ಕರ್ ಸಮಯ ಬಂದಾಗ ಉತ್ತರಿಸುತ್ತಾರೆ. ಆದ್ದರಿಂದ ನಾನು ಆದೇಶ ನೀಡುವ ಆವಶ್ಯಕತೆಯಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಸಲಹೆ ಮಾಡಿದ ಎರಡು ತಿದ್ದುಪಡಿಗಳಲ್ಲಿ ಒಂದು ತಿದ್ದುಪಡಿಯ ಸ್ವರೂಪ ತಿರಸ್ಕರಿಸುವುದು ಅಥವಾ ತಿದ್ದುಪಡಿಗಳನ್ನೆ ತಿರಸ್ಕರಿಸುವುದಾಗಿತ್ತು. ಆದ್ದರಿಂದಲೇ ನಾನು ನಿಮ್ಮಿಂದ ಆದೇಶ ಇಚ್ಛಿಸಿದೆ. ಅದೆಲ್ಲಾ ಒಳ್ಳೆಯ ರೂಪದಲ್ಲಿದೆ ಎಂಬುದಾದರೆ, ನಾವು ಅಂಥ ವಿಧಾನಗಳಿಗೆ ಇಳಿಯುತ್ತೇವೆ ಮತ್ತು ಅಂಥ ಸ್ಥಿತಿಗೆ ಸದನವನ್ನು ಇಳಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಕಲಮು ೨ರ ಕುರಿತಂತೆ, ಹಲವಾರು ತಿದ್ದುಪಡಿಗಳ ಮೂಲಕ ಒಂದು ಮುಖ್ಯ ಅಂಶವನ್ನು ಎತ್ತಿಹಿಡಿಯಲಾಗಿದೆ. ಅದಕ್ಕೆ ಹಲವಾರು ಸದಸ್ಯರ ಬೆಂಬಲ ಕೂಡ ಸಿಕ್ಕಿದೆ. ಅದು ಮಸೂದೆಯನ್ನು ಇಂಡಿಯಾದ ಎಲ್ಲಾ ಜನರಿಗೂ ಅನ್ವಯಿಸಬೇಕೆಂಬುದಾಗಿದೆ. ಇಂಥ ವಿಚಾರವನ್ನು ಎತ್ತಲು ನನ್ನನ್ನೆ ಕೇಳಲಾಗಿತ್ತು ಮತ್ತು ನಾನು ಕ್ರಿಯಾಲೋಪ ಎತ್ತಿದಾಗ ನಾನೇನೂ ಹಾಗೆ ಮಾಡಲಿಲ್ಲ. ಆದರೆ ನನ್ನ ವಿಚಾರ ಏನೆಂದರೆ, ಮಸೂದೆಯು ಹಿಂದೂಗಳಿಗೆ ಕೆಟ್ಟದ್ದು. ಅವರಿಗೆ ಕೆಟ್ಟದ್ದಾಗಿದ್ದರೆ, ಅಂಥ ಕೆಟ್ಟ

ಮಸೂದೆಯನ್ನು ಉಳಿದವರಿಗೆ ಯಾಕೆ ಅನ್ವಯಿಸಲು ನೋಡಬೇಕು. ಅದು ಹಿಂದೂಗಳಿಗೆ ಕೆಟ್ಟದಾಗಿದ್ದರೆ, ಅದನ್ನು ತಿರಸ್ಕರಿಸಬೇಕು. ನಾನು ಯಾವ....... ಅಂಶ ಅದರಿಂದ ಹೊರಡಿಸಲು....

**ಶ್ರೀ ಜೆ.ಆರ್. ಕಪೂರ್ :** ಹಣೆಬರಹವನ್ನು ಹಿಂದೂಗಳು ಮತ್ತು ಹಿಂದೂಯೇತರರು ಒಟ್ಟಾಗಿಯೇ ಹಂಚಿಕೊಳ್ಳಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್ :** ನಗೆಗೆ ಕಾರಣವಾಗಬಹುದಾದ ಇಂಥ ತರ್ಕವನ್ನು ನಿಜಕ್ಕೂ ಒಪ್ಪಿಕೊಳ್ಳಬಹುದು. ಆದರೆ ಗಂಭೀರವಾದ ಇಂಥ ಶಾಸಕಾಂಗದ ಸದನದಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕಾನೂನೊಂದು ಕೆಟ್ಟದ್ದಾಗಿದ್ದರೆ, ಯಾರಿಗೆ ಅನ್ವಯಿಸಬೇಕೆಂದಿದೆಯೋ, ಅವರಿಗೆ ವಿಸ್ತರಿಸಿ ಒತ್ತಾಯ ಮಾಡಲಾಗದು. ಸಂವಿಧಾನಾತ್ಮಕವಾಗಿ ಈ ಕಾನೂನು ಹೀನಸ್ಥಿತಿ ತರಲಿದೆ. ಸದನದ ಹೊರಗೆ ಈ ಅಂಶವನ್ನು ಗಂಭೀರವಾಗಿ ಎತ್ತಲಾಗಿದೆ. ಆದರ ಬಗ್ಗೆ ಮುಕ್ತವಾಗಿ ಮಾತಾಡಲಾಗುತ್ತಿದೆ. ಹಾಗೆಯೇ ನ್ಯಾಯಾಲಯದ ಮುಂದೆ ಈ ಕಾನೂನನ್ನು ಒಯ್ಯಲಾಗದು ಎಂಬುದು ನಿಶ್ಚಿತವಾಗಿದೆ. ಸಂವಿಧಾನದಲ್ಲಿ ನಾವು ಕೆಲತತ್ತ್ವಗಳನ್ನು ಅಳವಡಿಸಿದ್ದೇವೆ. ಸಂವಿಧಾನದೊಳಕ್ಕೆ ಕೆಲ ಪ್ರಕರಣಗಳನ್ನು ಸಾಮಾನ್ಯ ರೀತಿಯಲ್ಲಿ ರಚಿಸಿ ಸೇರಿಸಿದ್ದರ ಫಲವಾಗಿ ನಾವೀಗಾಗಲೇ ಸಮಸ್ಯೆಗಳ ಜಾಲಕ್ಕೆ ಸಿಲುಕಿದ್ದೇವೆ. ಈ ಮಸೂದೆಯನ್ನು ಅಂಗೀಕರಿಸಿದ್ದಲ್ಲಿ ಸಂವಿಧಾನವೇ ಅಡ್ಡ ಬರಲಿದೆ.

**ಶ್ರೀ ತ್ಯಾಗಿ :** ನಾವು ಸಂವಿಧಾನವನ್ನೇ ಬದಲಾಯಿಸೋಣ.

**ಶ್ರೀ ನಜೀರುದ್ದೀನ್ ಅಹ್ಮದ್ :** ತಿಳಿವಳಿಕೆಯುಳ್ಳ ನನ್ನ ಸ್ನೇಹಿತರು ಹೇಳುತ್ತಿದ್ದಾರೆ. ಸಂವಿಧಾನವನ್ನು ಕೆಟ್ಟದ್ದಾಗಿ ರಚಿಸಿದ್ದರೆ, ಮತ್ತು ಅದು ಹಲವಾರು ಸಮಸ್ಯೆಗಳಿಗೆ ಕಾರಣವಾಗುವಂತಿದ್ದರೆ, ಸಂವಿಧಾನವನ್ನೇ ಯಾಕೆ ಬದಲಾಯಿಸಬಾರದೆಂದು ನಾನು ಕೇಳುತ್ತೇನೆ. ಹಿಂದೂಗಳಿಗೆ ಕಾನೂನು ಜಾರಿಗೊಳಿಸುವ ಸ್ವಾತಂತ್ರ್ಯವು ನಿಮಗೆ ಹೇಗೆ ಬಂತು? ಕುಟುಂಬದ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಿಂದೂ –ಮುಸ್ಲಿಂರ ಮಧ್ಯೆ ವ್ಯತ್ಯಾಸವುಂಟುಮಾಡುವ ನೀತಿಗಳು ಅವರಿಗೇಕೆ? ನನಗನಿಸುತ್ತದೆ ಇದು ತರ್ಕವಲ್ಲ. ಹಾಗೂ ಇದು ಒಳ್ಳೆಯದಲ್ಲ. ಹಿಂದೂಗಳು ಮನೆಯಲ್ಲಿ ಹಿಂದೂಗಳಾಗಿರಬೇಕು, ಅವರು ಧಾರ್ಮಿಕ ಆಚಾರಗಳಿಗೆ ಮಾತ್ರ ಹಿಂದೂಗಳಾಗಿರಬೇಕು. ಹಾಗೆಯೇ ಕ್ರಿಶ್ಚಿಯನ್ನರೂ, ಮುಸ್ಲಿಂರೂ ಕೂಡ ಸಂವಿಧಾನವು ಮತ್ತೊಂದು ರೀತಿ ಇದನ್ನೆ ಹೇಳಿರುವಂತೆ, ಅವರ ಧರ್ಮ, ಯೋಚನೆ ಮತ್ತು ಪೂಜೆಗಳ ವಿಷಯದಲ್ಲಿ ಸ್ವಾತಂತ್ರ್ಯ ಹೊಂದಿದ್ದಾರೆ. ಸಂವಿಧಾನದಲ್ಲಿ ಕಾಣಿಸಿಕೊಂಡಿರುವ ಹಲವಾರು ದೋಷಗಳ ಹಿನ್ನೆಲೆಯಲ್ಲಿ ಅದರ ಪುನರ್ ಪರಿಶೀಲನೆ ಇದೆಯೇ ಎಂಬುದನ್ನು ಸದನ ವಿವೇಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಂವಿಧಾನ ಜಾರಿಗೆ ಬಂದ ಎರಡು ವರ್ಷದೊಳಗೆ ಅದನ್ನು ತಿದ್ದುಪಡಿಮಾಡುವುದು ಸುಲಭವೇ ಹೊರತು, ಎರಡು ವರ್ಷಗಳಾದನಂತರವಲ್ಲ. ಆದ್ದರಿಂದ ಹಿಂದೂಗಳ ಮೇಲೆ ಪರಿಣಾಮವುಂಟುಮಾಡುವ ಅನುಕೂಲಕರ ಕಾನೂನು ಮಾಡುವುದರ ಸಲುವಾಗಿ ಸಂವಿಧಾನ ತಿದ್ದುಪಡಿ ಮಾಡಲು ನಮಗೆ ಇದು ಸರಿಯಾದ ಕಾಲ. ಧಾರ್ಮಿಕ ಮತ್ತು ಧಾರ್ಮಿಕ ಸ್ವರೂಪದ ವಿಷಯದಲ್ಲಿ, ಕಾನೂನು ಅಡ್ಡಬರಬಾರದು ಹಾಗೂ ಕನಿಷ್ಠ ಪಕ್ಷ ಅದು ಮೇಲಿನಿಂದ ಆಜ್ಞೆಮಾಡುವಂತಿರಬಾರದು. ಇದೊಂದು ರೀತಿ ಸರ್ವಾಧಿಕಾರತ್ವವಾಗಿದ್ದು, ಪ್ರಜಾಸತ್ತಾತ್ಮಕ ಸಮಾಜದಲ್ಲೂ ಉಳಿದುಕೊಂಡುಬಿಟ್ಟಿದೆ.

**ಶ್ರೀ ತ್ಯಾಗಿ :** ವಿವಾಹ ಮತ್ತು ವಿಚ್ಛೇದನಗಳು ಧರ್ಮದಡಿಯಲ್ಲಿ ಬರುವುದಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಹಿಂದೂ ವಿವಾಹವು – ಸಂಸ್ಕಾರಗಳಲ್ಲಿ ಒಂದು ಎಂದು ನಾನು ನಂಬಿದ್ದೇನೆ. ಇದು ಹತ್ತನೆಯ ಸಂಸ್ಕಾರ. ಅದು ಅವರ ಧರ್ಮದ ಒಂದು ಭಾಗ, ಧರ್ಮದ ಭಾಗವಲ್ಲ

ಎಂದು ವಾದಿಸುವುದು ವ್ಯರ್ಥ. ಧರ್ಮವನ್ನು ನಿರ್ಮೂಲನ ಮಾಡಿ, ಕಾನೂನು ನಿಮಗೆ ಸ್ವಾತಂತ್ರ್ಯ ಕೊಡುತ್ತದೆ. ಸಂವಿಧಾನದನ್ವಯ ಈ ಸದನವು ಸಾರ್ವಭೌಮ ಅಧಿಕಾರ ಹೊಂದಿದೆ ಎಂದು ನಾನು ಹೇಳಬಹುದು. ಧರ್ಮವನ್ನು ನಿರ್ಮೂಲನ ಮಾಡಬಹುದು, ನೀವು ಇಚ್ಛಿಸಿದರೆ – ಆದರೆ ನೀವು ಅದನ್ನು ಮಾಡಲು ಸಿದ್ಧರಿದ್ದೀರಾ? ಈ ವಿಷಯ ಕುರಿತಂತೆ, ನಾನು ಅದನ್ನು ಬೆಳೆಸಲು ಇಷ್ಟಪಡುವುದಿಲ್ಲ. ಆದರೆ ಇವೊತ್ತು ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆಂಬುದನ್ನು ನೋಡಬೇಕಿದೆ. ನಮಗೆ ಉಣ್ಣಲೂ ಆಹಾರವಿಲ್ಲ.

ಈ ವರ್ಷದ ಆಹಾರಕ್ಕಾಗಿ ನಾವು ವಿದೇಶಗಳಿಂದ ೨೦೦ಕೋಟಿ ರೂಪಾಯಿಗಳ ದವಸಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಿದೆ(ಗದ್ದಲ). ನಮಗೆ ಉಡಲು ಬಟ್ಟೆಗಳಿಲ್ಲಿ. ನಮ್ಮ ಅನೇಕ ದೇಶವಾಸಿಗಳ ನೆತ್ತಿಯ ಮೇಲೆ ಸೂರಿಲ್ಲ. ಪ್ರಾಥಮಿಕ ಶಿಕ್ಷಣವನ್ನಂತೂ ಕೊಟ್ಟೇ ಇಲ್ಲ. ಆದರೆ ನಾವುಗಳು ಹಿಂದೂಗಳಿಗೆ ಉಚಿತ ಕಾಣಿಕೆಯಾಗಿ ಹಿಂದೂ ಮಸೂದೆಯ ರೂಪದಲ್ಲಿ ಕೊಡುತ್ತಿದ್ದೇವೆ. ನೀವು ಅವರಿಗೆ ಸಂತಸವನ್ನು ಕೊಡುವುದಾಗಿದ್ದರೆ, ನೀವು ಆಹಾರ ಕೊಡಿ, ಶಿಕ್ಷಣ ಕೊಡಿ.

**ಪ್ರಸಾರ ಖಾತೆಯ ಉಪಸಚಿವರು (ಶ್ರೀ ಖುರ್ಷಿದ್ ಲಾಲ್) :** ಮಸೂದೆಯ ಪರಿಗಣನೆ ಕುರಿತಂತೆ ತೆಗೆದುಕೊಳ್ಳುವ ನಡಾವಳಿ ಕುರಿತು ಇದೊಂದು ಒಳ್ಳೆಯ ವಾದವಾಗಬಹುದು.

**ಮಾನ್ಯ ಸಭಾಧ್ಯಕ್ಷರು :** ತಮ್ಮ ಈವರೆಗಿನ ಪರಿವೀಕ್ಷಣೆಯಿಂದ ಅವರು ಯಾವ ನಿಲುವನ್ನು ತರ್ಕಿಸಿ ಪ್ರಸ್ತುತಪಡಿಸುತ್ತಾರೆಂದು, ಅವರ ಭಾಷಣದ ಕೊನೆಯ ಮಾತುಗಳನ್ನು ಕೇಳಲು ನಾನು ಕಾಯುತ್ತಿದ್ದೇನೆ.

**ಶ್ರೀ ತ್ಯಾಗಿ :** ಮುಸ್ಲಿಮರೊಬ್ಬರು ನಮ್ಮ ಶಾಸ್ತ್ರಗಳನ್ನು ಹೇಗೆ ಉಲ್ಲೇಖಿಸುತ್ತಿದ್ದಾರೆಂಬುದನ್ನು ತಿಳಿಯಲು ನಾನು ಇಚ್ಛಿಸುತ್ತಿದ್ದೇನೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ಮಸೂದೆಯ ಬಗ್ಗೆ ನಾವು ಚಿಂತಿಸಬೇಕಿಲ್ಲ. ಪ್ರಾಥಮಿಕ ಶಿಕ್ಷಣ, ಮತ್ತಿತರೆ, ಜನರಿಗೆ ನಿಜಕ್ಕೂ ಸೌಖ್ಯ ಕೊಡುವಂತಹ ವಿಧಾಯಕ ವಿಷಯಗಳ ಬಗ್ಗೆ ನಾವು ಹೆಚ್ಚು ಹೆಚ್ಚಾಗಿ ಚಿಂತಿಸಬೇಕಿದೆ. ಇಂತಹ ಅಪಾಯದ ಸಂದರ್ಭದಲ್ಲಿ, ಜಗತ್ತು ಇನ್ನೊಂದು ಬಗೆಯ ಅಪಾಯದಿಂದ ಜರ್ಜರಿತಗೊಳ್ಳಲಿದೆ. ಯುದ್ಧವು ಒಂದೊಂದೆ ಹೆಜ್ಜೆ ಇರಿಸಿ ಭಾರತವನ್ನು ಸಮೀಪಿಸುತ್ತಿದೆ.

**ಮಾನ್ಯ ಸಭಾಧ್ಯಕ್ಷರು :** ದಯಮಾಡಿ ನನ್ನನ್ನು ಕ್ಷಮಿಸಿ, ನಿಮ್ಮ ಭಾಷಣದ ಮಧ್ಯೆ ಪ್ರವೇಶಿಸಲು ಇಚ್ಛೆಯಿಲ್ಲ. ಆದಾಗ್ಯೂ ಮಾನ್ಯ ಸದಸ್ಯರು ತಮ್ಮ ವಾದದ ಕಡಲಿನಲ್ಲಿ ಮುಳುಗಿಬಿಟ್ಟಿದ್ದಾರೆ ಎಂದು ಹೇಳಲೇಬೇಕಾಗಿದೆ. ಅವರು ತಿದ್ದುಪಡಿಗಳನ್ನು ಕುರಿತು ಮಾತಾಡಲಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ಕಾಯ್ದೆಯನ್ನು ತೆಗೆದುಕೊಳ್ಳಲು ಇದು ಸರಿಯಾದ ಕಾಲವಲ್ಲ ಎಂದಷ್ಟೇ ನಾನು ಮನವರಿಕೆ ಮಾಡಿಕೊಡುತ್ತಿದ್ದೇನೆ.

**ಶ್ರೀ ಖುರ್ಷಿದ್ ಲಾಲ್ :** ನಾವೀಗ ಪ್ರಸ್ತಾವದ ಪರಿಗಣನೆ ಕುರಿತ ಚರ್ಚೆ ನಡೆಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಗಳ ಮೇಲೆಯೇ ಮಾತಾಡಬೇಕೆಂದು ನಾನು ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಡಾ.ಅಂಬೇಡ್ಕರ್ ಅವರು ಮಂಡಿಸಿದ ಕೆಲವು ತಿದ್ದುಪಡಿಗಳನ್ನು ಕುರಿತೇ ಅವರು ಮಾತಾಡುವುದಾದರೆ, ಅದು ಸರಿಯಾಗುವುದಿಲ್ಲ. ಆದಾಗ್ಯೂ ಅವರಿಗೆ ನಾನು ಮಾತಾಡಲು ಅವಕಾಶ ಕೊಡುತ್ತೇನೆ. ಆದರೆ ಅವರು ಮಸೂದೆಯ ಕುರಿತು ಚರ್ಚೆ ಮುಂದುವರಿಕೆ ಅಗತ್ಯವಿಲ್ಲವೆಂದರೆ, ಈ ಹಂತದಲ್ಲಿ ಹಾಗೆ ಹೇಳುವ ಅವಕಾಶ ಅವರಿಗೆ ಮೀರಿದ್ದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಸರ್ಕಾರವು ಈ ಮಸೂದೆ ಕುರಿತು ಕೇವಲ ಎರಡು ಅಥವಾ ಮೂರು ದಿನಗಳು ಮಾತ್ರ ಚರ್ಚೆ ನಡೆಸಲು ನಿರ್ಧರಿಸಿದೆ ಎಂಬ ವಿಷಯ ತಿಳಿದು, ಆ ಕಾರಣದಿಂದ

ಮಾತ್ರ ನನ್ನ ಸಲಹೆ ಮುಂದಿಡಲು ನಾನು ಉತ್ಸಾಹ ಕೋರಿದೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಗಳನ್ನು ಕುರಿತು ತಮ್ಮ ಚರ್ಚೆ ಮುಂದುವರಿಸಲಿ ಎಂದು ನಾನು ಸದಸ್ಯರನ್ನು ಕೇಳೀಕೊಳ್ಳುತ್ತೇನೆ.

**ಶ್ರೀ ನಜೀರುದ್ದೀನ್ ಆಹ್ಮದ್ (ಅಡ್ಡಿಪಡಿಸುವ ಗದ್ದಲ) :** ಗದ್ದಲವೆಬ್ಬಿಸುವುದನ್ನು ಬಿಟ್ಟರೆ ಬಹಳ ಜನ ಸದಸ್ಯರಿಗೆ ಮತ್ತಾವ ಯೋಚನೆಯೂ ಇದ್ದಂತಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯರೆ ನನ್ನ ಹೆಸರಲ್ಲಿ ಹಲವಾರು ತಿದ್ದುಪಡಿಗಳು ಕಾಯುತ್ತಿವೆ. ನಾನು ಅವುಗಳನ್ನು ಒಂದೊಂದಾಗಿ ಕೈಗೆತ್ತಿಕೊಳ್ಳಲೇ. ಮೊದಲ ಎರಡು ತಿದ್ದುಪಡಿಗಳಾದ ನಂ.೧೬ ಮತ್ತು ೧೭ ಡಾ.ಅಂಬೇಡ್ಕರ್ ಮಂಡಿಸಿರುವ ಪ್ರಸ್ತಾವಗಳನ್ನು ಸುಧಾರಿಸುವ ಸಲಹೆಯನ್ನೊಳಗೊಂಡಿವೆ. ಅವುಗಳ ರೂಪ ಸುಧಾರಣೆ ಬಿಟ್ಟರೆ ಮತ್ತಾವ ಉದ್ದೇಶವು ಆ ತಿದ್ದುಪಡಿಗಳಿಗಿಲ್ಲ. ಈಗ ನಾನು ನಂ.೧೯ರ ತಿದ್ದುಪಡಿಗೆ ಬರುತ್ತೇನೆ.

ಕಲಮು ೨ರ ಉಪಕಲಮು(೧) ಭಾಗ (೧) (ಸಿ)ಯಲ್ಲಿ "ಅಕ್ರಮದ" ನಂತರ ಸೇರಿಸಿ,

"ಯಾರು ಹದಿನೆಂಟು ವರ್ಷಗಳು ತುಂಬಿದಮೇಲೆ, ತಾನೇ ಹಿಂದುವಾಗಿದ್ದಾನೋ" ಮತ್ತು ದಯಮಾಡಿ ಕ್ಷಮಿಸಿ, ವಿಭಿನ್ನ ಧೋರಣೆಗಳನ್ನುಳ್ಳ ಅಸಂಖ್ಯ ವಿಷಯಗಳ ಕುರಿತು ಪ್ರತ್ಯೇಕವಾಗಿ ಪ್ರಸ್ತಾಪಿಸಿ, ಅದರ ಮೇಲೆ ಬಹಳಷ್ಟು ಚರ್ಚೆಮಾಡುವ ಅಗತ್ಯವಿದೆ. ಹೀಗಾಗಿ ಕೆಲವು ಸದಸ್ಯರು ತಮ್ಮ ವಾದ ಸರಣಿಯಲ್ಲಿ ದಾರಿ ತಪ್ಪುತ್ತಿದ್ದಾರೆ. ಉಪಕಲಮು(೧)ಕ್ಕೆ ನಾನು ಬಯಸಿದ ತಿದ್ದುಪಡಿ ಹೀಗಿದೆ:

ಈ ಸಂಹಿತೆ ಅನ್ವಯವಾಗುವುದು:

ಸಿ(೧) ಈ ಭಾಗದ ಅರ್ಥದನ್ವಯ ಅಕ್ರಮವಾಗಿ ಅಥವಾ ಸಕ್ರಮವಾಗಿ ಹುಟ್ಟಿದ ಯಾವುದೇ ಮಗುವಿನ ಪಾಲಕರು ಹಿಂದೂಗಳಾಗಿದ್ದರೆ–

**ಶ್ರೀ ಸತೀಶ ಚಂದ್ರ (ಉತ್ತರ ಪ್ರದೇಶ) :** ಇದನ್ನ ಹಲವು ಬಾರಿ ಓದಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಮುಂದುವರಿಸಲಿ ವಾದ ಸರಣಿಯನ್ನುಳಿಸಿಕೊಳ್ಳಲು ಅವರು ಅದನ್ನು ಓದಲು ಅವಕಾಶ ಕೊಡಲಾಗಿದೆ.

**ಶ್ರೀ ತ್ಯಾಗಿ :** ಅಕ್ರಮ ಮಗುವಿನ ವಿಷಯ ಕುರಿತು ಓದಿರಲಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಹಿಂದುವಿನ ಮಗು, ಅದರಲ್ಲೂ ಅದು ಅಕ್ರಮವಾಗಿ ಜನಿಸಿದ್ದರೆ, ಹಿಂದೂವಾಗಿಯೇ ಉಳಿಯುತ್ತಾನೆಂದು ಹೇಳಲು ಬರುವುದಿಲ್ಲ. ಹಿಂದುವಿನ ಮಗು ಹಿಂದೂವಾಗಿಯೇ ಉಳಿಯುತ್ತಾನೆಂದು ಉಪಕಲಮು ಪರಿಭಾವಿಸಿ ಮುಂದುವರೆಯುತ್ತದೆ. ಆದರೆ, ಅವನು ತನ್ನ ಧರ್ಮವನ್ನು ಬದಲಾಯಿಸುವ ಸಾಧ್ಯತೆಯೂ ಇದೆ. ಅವನು ಎಲ್ಲಾ ಧರ್ಮವನ್ನೂ ತೊರೆಯಬಹುದು. ಅವನು ನಾಸ್ತಿಕನೂ ಆಗಬಹುದು. ಅವನು ಯಹೂದಿ, ಕ್ರಿಶ್ಚಿಯನ್ ಅಥವಾ ಮುಸ್ಲಿಮನಾದರೂ ಆಗಬಹುದು. ಪುನಃ ಹಿಂದೂಧರ್ಮಕ್ಕೆ ಮತಾಂತರ ಹೊಂದಬಹುದು. ಹಿಂದೂವಿನ ಆಕ್ರಮ ಮಗು ಹಿಂದೂವೆ ಆಗಿ ಉಳಿಯುತ್ತದೆಂಬ ಪೂರ್ವ ನಿರ್ಧಾರವು ಅವನು ಬದಲಾಗುವುದಿಲ್ಲವೆಂದೇ ಭಾವಿಸುತ್ತದೆ. ವಸ್ತುಸ್ಥಿತಿಗನುಗುಣವಾಗಿ ಅವನು ಬದಲಾಗಬಹುದು. ಅವನೇನಾದರೂ ತನ್ನ ಧರ್ಮ ಬದಲಾಯಿಸಿದರೆ ಅವನು ಹಿಂದೂ ಆಗಲಾರ ಹಾಗೂ ತಂದೆಯ ಆಸ್ತಿ ಮತ್ತಿತರ ವಿಷಯಗಳಿಗೆ ವಾರಸುದಾರನಾಗುವುದಿಲ್ಲ.

ಅಕ್ರಮವಾಗಿ ಹುಟ್ಟಿದ ಹಿಂದೂವಿನ ಮಗು ತನ್ನ ತಂದೆಯ ಆಸ್ತಿಗೆ ಹಕ್ಕುದಾರ ಆಗುತ್ತಾನೆ. ಆದರೆ ಅವನು ತನ್ನ ಧರ್ಮ ಬದಲಾಯಿಸಿದರೆ, ಅವನು ಹಿಂದೂವಾಗಿ ಉಳಿಯಲಾರ ಹಾಗೂ ಅವನ ಹಕ್ಕುದಾರಿಕೆಯೂ ಉಳಿಯದು.

**ಶ್ರೀ ತ್ಯಾಗಿ :** ತಂದೆಯೊಬ್ಬ ಅಕ್ರಮವಾಗಿ ಮಗುವನ್ನು ಎಂದೂ ಹೊಂದಲಾರ. ತಾಯಿ ಮಾತ್ರ ಹೊಂದಬಲ್ಲಳು.

**ಶ್ರೀ ನಜೀರುದ್ದೀನ್ ಅಹ್ಮದ್ :** ಅದು ಕಾನೂನಿನ ಪ್ರಶ್ನೆ. ತಂದೆಯೊಬ್ಬ ಅಕ್ರಮ ಮಗುವನ್ನು ಹೊಂದುವುದಿಲ್ಲವೆನ್ನುವುದಾದರೆ, ಈ ಪ್ರಕರಣವನ್ನು ಅಳಿಸಿ ಹಾಕಬೇಕಾಗುತ್ತದೆ.

**ಶ್ರೀ ತ್ಯಾಗಿ :** ಮಗುವು (ಗದ್ದಲ–ಅಡ್ಡಿ)

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು, ಅವರು ಮುಂದುವರೆಯಲು ಬಿಡಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ನನ್ನ ತಿದ್ದುಪಡಿ ಹೇಳುತ್ತದೆ "ಅವನು ಹದಿನೆಂಟು ವರ್ಷ ತುಂಬಿದ ಕೂಡಲೆ, ತನ್ನಿಂದ ತಾನೆ ಹಿಂದೂ ಆಗುತ್ತಾನೆ" ಅಂದರೆ, ಅವನು ಹದಿನೆಂಟು ವರ್ಷ ತುಂಬಿದ ಕೂಡಲೆ, ನಿರ್ಧಾರ ತೆಗೆದುಕೊಳ್ಳಬಹುದಾದ ವಯಸ್ಸನ್ನು ಅವನು ತಲುಪಿದಾಗ, ಅವನು ಕಾನೂನಿನನ್ವಯ ನಡೆದುಕೊಳ್ಳಲಿಕ್ಕೆ ಅವಕಾಶ ಕೊಡಲ್ಪಟ್ಟವನಾಗುತ್ತಾನೆ. ಆಗಲೂ ಅವನು ಹಿಂದೂವಾಗಿ ಉಳಿದರೆ, ಅವನು ತನ್ನ ತಂದೆಯ ಮಗನಾಗಿ ಹಿಂದೂ ಕಾನೂನಿನನ್ವಯ ಉತ್ತರಾಧಿಕಾರತ್ವ, ಮತ್ತಿತರ ಸೌಲಭ್ಯಗಳನ್ನು ಅನುಭೋಗಿಸುವುದಕ್ಕೆ ಅರ್ಹನಾಗುತ್ತಾನೆ. ಕರಡು ರಚನೆಯಲ್ಲಿರುವ ದೋಷವನ್ನು ಈ ತಿದ್ದುಪಡಿಯು ಸರಿಪಡಿಸಲೆತ್ನಿಸುತ್ತದೆ. ಅಕ್ರಮ ಮಗು ಹದಿನೆಂಟು ವರ್ಷ ಮುಟ್ಟಿದ ತರುವಾಯ, ತನ್ನ ಧರ್ಮವನ್ನು ಬದಲಾಯಿಸದಿದ್ದರೆ, ಪ್ರಾಯಶಃ ಆಗ ಇದು ಅನ್ವಯಿಸುತ್ತದೆ. ಇದನ್ನೇ ನಾನು ಸ್ಪಷ್ಟಪಡಿಸಲು ಪ್ರಯತ್ನಿಸುತ್ತಿರುವುದು.

ಮುಂದಿನ ತಿದ್ದುಪಡಿಗೆ ಬರೋಣ. ಅದು ಕರಡು ರಚನೆಯ ಸ್ವರೂಪಕ್ಕೆ ಸಂಬಂಧಿಸಿದ್ದು, ಅದು ಈ ಕೆಳಕಂಡಂತಿದೆ:

ಕಲಮು ೨ರ ಉಪಕಲಮು (೧)ರ ಭಾಗ(ಸಿ) (೧)ರನ್ವಯ "ಯಾರ ತಂದೆತಾಯಿಗಳು ಹಿಂದೂಗಳೋ" ಎಂಬುದಕ್ಕೆ ಪರ್ಯಾಯ "ಯಾರ ತಂದೆತಾಯಿಗಳು ಹಿಂದೂಗಳು ಅಥವಾ ಹಿಂದೂಗಳಾಗಿದ್ದರೋ"

ಮಗುವಿನ ಪಾಲಕರು ಹಿಂದೂಗಳಾಗಿದ್ದಿರಬಹುದು; ಆದರೆ ಅವರು ಧರ್ಮವನ್ನು ಬದಲಾಯಿಸಿರಬಹುದು. ಆದ್ದರಿಂದ ಇಂಥ ಬಾಂಧವ್ಯವನ್ನು ಸೂಚಿಸಲು ನಾನು.....

**ಶ್ರೀ ಕೆ.ಸಿ. ಶರ್ಮ (ಉತ್ತರ ಪ್ರದೇಶ) :** ಸದನದ ರೂಢಿಯಂತೆ ತಿದ್ದುಪಡಿಗಳ ಕರಡು ರಚನೆಯನ್ನು, ಕರಡು ರಚನಾಕಾರರಿಗೆ ವಹಿಸಿಕೊಟ್ಟಲ್ಲಿ ಸದನದ ವೇಳೆಯ ಅಪವ್ಯಯ ತಪ್ಪಬಹುದೆಂದು ನಾನು ಸಭಾಧ್ಯಕ್ಷರ ಗಮನ ಸೆಳೆಯಲೇ?

**ಮಾನ್ಯ ಸಭಾಧ್ಯಕ್ಷರು :** ಅಂಥ ನಿಖರವಾದ ಯಾವ ರೂಢಿಯೂ ಇರುವುದಿಲ್ಲ; ಇದೆಲ್ಲಾ ಸಂಬಂಧಿಸಿದ ತಿದ್ದುಪಡಿಗಳ ಮೇಲೆ ಅವಲಂಬಿಸಿರುತ್ತದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯ ಸದಸ್ಯರು ನನ್ನ ವಾದವನ್ನು ಕೇಳುತ್ತಿಲ್ಲ, ಕೇವಲ ಆಕ್ಷೇಪಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆಂಬುದನ್ನು ಇದು ಸೂಚಿಸುತ್ತದೆ.

ಇದು ಕರಡು ರಚನೆಯ ಸ್ವರೂಪಕ್ಕಾದರೂ ಸಂಬಂಧಿಸಿರಬಹುದು. ನಾನು ಭಾವಿಸಿದಂತೆ ಅದು ಹೆಚ್ಚುವರಿ ವಿಷಯವನ್ನು ಒಳಗೊಂಡಿದೆ. ಪ್ರಶ್ನೆ ಇದು ಅಕ್ರಮವಾಗಿಯೋ ಅಥವಾ ಸಕ್ರಮವಾಗಿಯೋ ಹಿಂದೂವಿಗೆ ಜನಿಸಿದ ಮಗು, ಹಿಂದೂ ಎಂದು ನೀವು ಹೇಳುತ್ತೀರಿ. ಇಂಥ ಸಂದರ್ಭದಲ್ಲಿ ತಂದೆಯೇನಾದರೂ ತನ್ನ ಧರ್ಮವನ್ನು ಬದಲಾಯಿಸಿದ್ದನೆನ್ನಿ, ಆಗ ಇಂಥ ಪ್ರಶ್ನೆ ಉದ್ಭವಿಸಿದ ಪ್ರಸಂಗದಲ್ಲಿ ಅವನು ಹಿಂದೂ

ಆಗಲಾರ. ಆದ್ದರಿಂದ ನಾನು ಸ್ಪಷ್ಟಪಡಿಸುವುದೇನೆಂದರೆ – ಅವನು ಹಿಂದೂ ಅಥವಾ ಹಿಂದೂ ಆಗಿದ್ದ ಎನ್ನುವುದಾಗಿದೆ. ತಂದೆಯೂ ಹಿಂದೂ ಆಗಿರಲಿಕ್ಕಿಲ್ಲ. ಆದರೆ ನಿಶ್ಚಿತ ಕಾಲದಲ್ಲಿ ಅವನು ಹಿಂದೂಧರ್ಮವನ್ನು ಸ್ವೀಕರಿಸಿರಬಹುದು. ವ್ಯಕ್ತಿಯೊಬ್ಬ ಹಿಂದೂ ಎಂದು ನೀವು ಹೇಳಬಹುದಾದರೂ, ಆ ಕಾಲಕ್ಕನ್ವಯಿಸಿ ಅವನು ಹಿಂದೂ ಎಂದು ಅರ್ಥ. ಅದಕ್ಕಿಂತ ಮೊದಲು ಅವನು ಹಿಂದೂ ಆಗಿರಲಿಕ್ಕಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ "ಯಾವ ವ್ಯಕ್ತಿ ಹಿಂದೂವೂ ಅಥವಾ ಆಗಿದ್ದನೋ" – ಉದ್ದಕ್ಕೂ ಯಾರು ಹಿಂದು ಆಗಿದ್ದಾನೋ ಅವನು. ಅಂಥ ಪಾಲಕರ ಮಗು ಹಿಂದೂವಾಗಬಹುದು. ಉದಾಹರಣೆಗೆ ಇವೊತ್ತು ಒಬ್ಬ ಮುಸ್ಲಿಂ ಹಿಂದೂಧರ್ಮವನ್ನು ಒಪ್ಪಿಕೊಳ್ಳುತ್ತಾನೆಂದು ತಿಳಿಯಿರಿ. ಈಗ ಮಗುವಿನ ಸ್ಥಾನದ ಪ್ರಶ್ನೆ ಮುಖ್ಯ ಸಮಸ್ಯೆಯಾಗಿ ಬರುತ್ತದೆ. ಪಾಲಕರು ಮುಸ್ಲಿಂ ಆಗಿದ್ದಾಗ ಹುಟ್ಟಿದ ಮಗು,– ಪಾಲಕರು ಇವೊತ್ತು ಹಿಂದೂ ಆಗಿದ್ದಾರೆಂಬ ಕಾರಣಕ್ಕೆ ಅದೂ ಹಿಂದೂವೆ? ಆದ್ದರಿಂದಲೇ ನಾನು ಪ್ರಕರಣದಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಿದ್ದೇನೆ. ಅದು ಕರಡು ರಚನೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ಕಂಡರೂ ಅದು ಇನ್ನಿತರ ಹೆಚ್ಚುವರಿಗಳನ್ನು ಒಳಗೊಂಡಿದೆ. ಈ ಚಿಕ್ಕ ವಿಷಯಗಳಿಗೆ ವಿಶೇಷ ಮುತುವರ್ಜಿಯನ್ನು ಕೊಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇವೊತ್ತು ಒಬ್ಬಾತ ಹಿಂದೂಧರ್ಮಕ್ಕೆ ಮತಾಂತರಗೊಂಡಲ್ಲಿ, ಮತಾಂತರ ಪೂರ್ವದಲ್ಲಿ ಆತನಿಂದ ಜನಿಸಿದ ಮಗು ಕ್ರಿಶ್ಚಿಯನ್ ಇರಲಿ, ಅಥವಾ ಮುಸ್ಲಿಂ ಇರಲಿ ಅಥವಾ ಯಹೂದಿ ಇರಲಿ. ಈಗ ಅದು ಆತನ ತಂದೆ ಯಾವ ಧರ್ಮಕ್ಕೆ ಸೇರಿದ್ದಾನೋ ಅದಕ್ಕೆ ಸೇರುತ್ತದೆ ಅಂದರೆ ಹಿಂದು ಆಗುತ್ತದೆ. ಇದೊಂದು ಸಂವಿಧಾನದ ಪ್ರಶ್ನೆ, ಸದನವು ಇದನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ನಾನು ಆಶಿಸುತ್ತೇನೆ. ಆದರೆ ಮಾನ್ಯ ಕಾನೂನು ಮಂತ್ರಿಗಳಿಗೆ ಈ ಎಲ್ಲಾ ಅಂಶಗಳನ್ನು ಎಚ್ಚರಿಕೆಯಿಂದ ಕೇಳಿ ಮತ್ತು ಅವುಗಳಿಗೆ ಉತ್ತರಿಸಲು ಮತ್ತು ಸದನವು ಈ ಎಲ್ಲಾ ವಾದವಿವಾದ ಕೇಳಲು ಮತ್ತು ಉತ್ತರಿಸಲು ಕಷ್ಟವೇ ಆಗಬಹುದು. ಡಾ.ಅಂಬೇಡ್ಕರ್ ಅವರು ಒಂದು ಪಕ್ಷ "ನಾನು ಈ ಎಲ್ಲಾ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ" ಅಂದರೆ ಸದನವು " ನಾವು ಗೌರವಪೂರ್ವಕವಾಗಿ ಒಪ್ಪುತ್ತೇವೆ" ಎಂದು ಹೇಳುವುದು.

**ಅನೇಕ ಸದಸ್ಯರು :** ಇಲ್ಲ ಎಂದಿಗೂ ಸಾಧ್ಯವಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ನನ್ನ ಮುಂದಿನ ತಿದ್ದುಪಡಿ ನಂ. ೨೧. ಯಾರ ಧರ್ಮವು ಪ್ರಶ್ನಾರ್ಹವೋ ಅಂಥ ವ್ಯಕ್ತಿಯ ಕುರಿತಾಗಿ ಒಂದು ನಿಯಮ ಜಾರಿ ತರುವುದರ ಬಗ್ಗೆ ಇದ್ದು ನಾನು ನನ್ನ ವಾದವನ್ನು ಪುನರಾವರ್ತಿಸುತ್ತಿದ್ದೇನೆ. ಹಿಂದುವು ಹದಿನೆಂಟು ವರ್ಷ ದಾಟಿದ ಮೇಲೂ ಹಿಂದೂ ಆಗಿ ಉಳಿದರೆ ಅವನು ಹಿಂದೂ. ಹದಿನೆಂಟು ವರ್ಷ ಯಾಕೆಂದರೆ, ಅವನು ಕಾನೂನಿನ ಪ್ರಕಾರ ನಡೆದುಕೊಳ್ಳುವ ಅಧಿಕಾರಕ್ಕೆ ಅರ್ಹನಾಗುತ್ತಾನೆ. ಹದಿನೆಂಟು ವರ್ಷ ದಾಟಿದ ಮೇಲೆ ಅವನು ತನ್ನ ಧರ್ಮ ಬದಲಾಯಿಸಬಹುದು. ಆದ್ದರಿಂದ ಹದಿನೆಂಟು ವರ್ಷ ದಾಟಿದ ಮೇಲೆ ಹುಡುಗನೊಬ್ಬನಿಗೆ ಧರ್ಮ ಬದಲಾಯಿಸುವ ಅವಕಾಶ ಕೊಡಬೇಕು. ಇಂತಹ ಪರಿಹಾರವೊಂದನ್ನು ಕರಡು ತಯಾರಿಸುವವರು ಯೋಚಿಸಿಲ್ಲ. ಆದ್ದರಿಂದ ನಾನು ತಿದ್ದುಪಡಿಯೊಂದನ್ನು ಮಂಡಿಸಿ, ಸದನ ಅದನ್ನು ಪರಿಗಣಿಸಬೇಕೆಂದು ಕೇಳಿಕೊಂಡಿದ್ದೇನೆ.

ನಾನು ಮುಂದಿನ ತಿದ್ದುಪಡಿ ನಂ.೨೩ಕ್ಕೆ ಬರುತ್ತೇನೆ. ಅದು ಹೀಗೆ ಹೇಳುತ್ತದೆ.

ಕಲಮು ೨ ರ ಉಪಕಲಮು (೧)ರ ಭಾಗ(ಡಿ)ಗೆ ಬದಲಿಗೆ

(ಡಿ) ಹಿಂದೂ ಮತಕ್ಕೆ ಮತಾಂತರ ಹೊಂದಲು–

ಮತಾಂತರಪೂರ್ವ ಇರುವ ಹಕ್ಕು ಮತ್ತು ಹೊಣೆಗಾರಿಕೆಗೆ ಬದ್ಧನಾಗಿ ಹಿಂದೂಧರ್ಮಕ್ಕೆ ಮತಾಂತರ

ಹೊಂದಿದವನು ಹಿಂದೂ ಎಂದು ನೀವು ಹೇಳುತ್ತೀರಿ. ಇದೊಂದು ಸಾಮಾನ್ಯಜ್ಞಾನ. ಹಿಂದೂಧರ್ಮಕ್ಕೆ ಮತಾಂತರ ಹೊಂದಲು ಆತ್ಮಸಾಕ್ಷಿ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಸ್ವಾತಂತ್ರ್ಯಕ್ಕೆ ಆತ ಅರ್ಹನಿದ್ದಾನೆ. ಆದರೆ, ಅವನು ಮತಾಂತರ ಪೂರ್ವಹೊಂದಿದ್ದ ಹಕ್ಕು ಮತ್ತು ಹೊಣೆಗಾರಿಕೆಗಳು ಏನಾಗುತ್ತದೆ? ಆ ಪರಿಸ್ಥಿತಿಯನ್ನು ನಾನು ವಿವರಿಸುತ್ತೇನೆ. ಮದುವೆಯಾದ ಒಬ್ಬ ಕ್ರಿಶ್ಚಿಯನ್ ಇಂದು ಹಿಂದೂಧರ್ಮಕ್ಕೆ ಮತಾಂತರಗೊಂಡ. ಅವನ ಹೆಂಡತಿಗೆ ಏನಾಗುತ್ತದೆ? ಆಕೆ ಹಿಂದೂ ಅಲ್ಲ ಎಂಬ ಕಾರಣಕ್ಕೆ ತನ್ನಿಂದ ತಾನೆ ವಿಚ್ಛೇದನ ಹೊಂದಿಬಿಡುತ್ತಾಳೆಯೆ? ಹಿಂದೂ ಮತ್ತು ಕ್ರಿಶ್ಚಿಯನ್ನರ ನಡುವಿನ ವಿವಾಹ ಅಕ್ರಮವಾದುದು. ಹಿಂದೂಧರ್ಮಕ್ಕೆ ಮತಾಂತರಗೊಂಡವನನ್ನು ಹಿಂದೂ ಆಗಿಯೇ ನೋಡಬೇಕೆಂಬುದರ ಬಗ್ಗೆ ನನಗೂ ಒಪ್ಪಿಗೆ ಇದೆ. ಆದರೆ ಮತಾಂತರಪೂರ್ವ ಅವನು ಹೊಂದಿದ್ದ ಹಕ್ಕು ಮತ್ತು ಹೊಣೆಗಾರಿಕೆಗಳನ್ನು ಏನು ಮಾಡಬೇಕು? ಹಲವಾರು ರೀತಿಯ ಹಕ್ಕು ಮತ್ತು ಹೊಣೆಗಾರಿಕೆಗಳಿವೆ. ಈ ಸಂಬಂಧವಾಗಿ ಉದ್ಭವಿಸುವ ಹಲವಾರು ವಿಷಯಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿ ಸದನವನ್ನು ಹಳಿ ತಪ್ಪಿಸುವ ಇಚ್ಛೆ ನನಗಿಲ್ಲ ಇದನ್ನು ನಾನು ಸರಳವಾಗಿ ಹೀಗೆ ಹೇಳುತ್ತೇನೆ. ಮತಾಂತರ ಹೊಂದಿದವ ಹಿಂದೂವೆ, ಆದರೆ ಮತಾಂತರಪೂರ್ವ ಅವನ ಹೊಂದಿದ ಎಲ್ಲಾ ಹಕ್ಕು ಮತ್ತು ಕರ್ತವ್ಯಗಳಿಗೂ ಅವನು ಬದ್ಧನಾಗಿರುತ್ತಾನೆ. ಉದಾಹರಣೆಗೆ ಅಪಾರ ಆಸ್ತಿ ಹೊಂದಿದ ಒಬ್ಬ ಶ್ರೀಮಂತ ಹಿಂದೂಯೇತರ ವ್ಯಕ್ತಿ ಇದ್ದು, ಅವನೇನಾದರೂ ಹಿಂದೂಧರ್ಮಕ್ಕೆ ಮತಾಂತರಗೊಂಡರೆ, ಅವನು ತನ್ನ ಆಸ್ತಿಯನ್ನೆಲ್ಲಾ ಬಿಟ್ಟುಬಿಡಲಿ ಎಂದು ನೀವು ಹೇಳುತ್ತೀರಾ? ಮತಾಂತರಪೂರ್ವ ಆತ ಮತ್ತಾರಿಂದಲೂ ಉತ್ತರಾಧಿಕಾರಿಯಾಗಿ ಅದನ್ನು ಅರ್ಜಿಸಿದ್ದರೆ, ಮತಾಂತರ ಹೊಂದಿದ ಕಾರಣಕ್ಕೆ ಉತ್ತರಾಧಿಕಾರತ್ವ ಹಕ್ಕು ಕಳೆದುಕೊಳ್ಳುತ್ತಾನೆಯೇ? ಇದಕ್ಕೆ ಸಂಬಂಧಿಸಿದ ಹಲವಾರು ಕಾನೂನುಗಳಿದ್ದು ಅವು ನನಗೂ ಅನ್ವಯವಾಗಿವೆ. ಆದರೆ, ಮತಾಂತರ ಹೊಂದಿದವನ ಎಲ್ಲಾ ಹಕ್ಕು ಮತ್ತು ಹೊಣೆಗಾರಿಕೆಗಳನ್ನು, ಅವನು ಮತಾಂತರಪೂರ್ವದಲ್ಲಿ ಹೊಂದಿದ್ದ ಹಾಗೆಯೇ ಕಾಪಾಡಲು ನಾವು ಯೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಅವನು ಹೊಂದಿದ ಸ್ಥಿತಿಯನ್ನು, ಕದಲಿಸದೆ–ಅದನ್ನೇ ಮುಂದುವರೆಸತಕ್ಕದ್ದು. ಒಮ್ಮೆ ಗಳಿಸಿದ ಹಕ್ಕುಗಳು ಎಂದೂ ಕಳೆದುಹೋಗಲು ಅವಕಾಶ ಕಲ್ಪಿಸಬಾರದು. ಮತಾಂತರ ಹೊಂದಿದ ಕಾರಣಕ್ಕೆ ಅವನಿಗೆ ವಹಿಸಿದ್ದ ಹೊಣೆಗಾರಿಕೆಗಳು ಮಾಯವಾಗಬಾರದು. ಮತಾಂತರವು ಹಿಂದಿನ ವ್ಯವಹಾರ, ಹಿಂದಿನ ಹಕ್ಕು ಮತ್ತು ಹಿಂದಿನ ಹೊಣೆಗಾರಿಕೆಯ ಮೇಲೆ ಏನೂ ಪರಿಣಾಮ ಬೀರಬಾರದು. ನನ್ನ ಮುಂದಿನ ತಿದ್ದುಪಡಿ ಕಲಮು ೨ರ ಉಪಕಲಮು(೨)ನ್ನು ಬಿಡುವುದು. ಈ ಉಪ–ಪ್ರಕರಣ ಹೀಗೆ ಹೇಳುತ್ತದೆ:

"ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಅಲ್ಲವೋ ಆ ಎಲ್ಲಾ ಜನರಿಗೆ ಈ ಸಂಹಿತೆಯು ಅನ್ವಯವಾಗುತ್ತದೆ' ಈ ಉಪಕಲಮು ತಪ್ಪು ಪರಿಗಣನೆಗಳ ಮೇಲೆ ಮತ್ತು ಆಧಾರದ ಮೇಲೆ ರಚಿತವಾಗಿದೆ ಎಂದು ಹೇಳುತ್ತಿರುವೆ. ಭಾಗ(ಎ)ನಲ್ಲಿ ಈ ಸಂಹಿತೆ ಅನ್ವಯಗೊಳ್ಳುವುದನ್ನು ನಾವು ಹೀಗೆ ಹೇಳಿದ್ದೇವೆ.

"ಎಲ್ಲಾ ಹಿಂದೂಗಳಿಗೆ, ಅಂದರೆ, ಯಾವುದೇ ಪ್ರಭೇದ ಅಥವಾ ಬೆಳವಣಿಗೆ ಆಗಿರುವ ಹಿಂದೂಧರ್ಮವನ್ನು ಪಾಲಿಸುವ ಎಲ್ಲಾ ಹಿಂದೂಗಳಿಗೆ"

ಮತ್ತು ಇದು ಅನ್ವಯಗೊಳ್ಳುವುದನ್ನು ನಾವು ಹೀಗೆ ಹೇಳಿದ್ದೇವೆ–

"ಧರ್ಮದಿಂದ ಯಾರು ಬೌದ್ಧರೋ, ಜೈನರೋ ಅಥವಾ ಸಿಖ್ಖರೋ ಅವರಿಗೆ" ಆದರೆ ಸಿಖ್ಖರು ನನಗೆ ತಿಳಿದಂತೆ, ಈ ಸಂಹಿತೆಯಿಂದ ಪ್ರಾಪ್ತವಾಗುವ ಸೌಲಭ್ಯಗಳ ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸಲಾರರು.

ಈಗ ಸಿಖ್ಖರಿಗೆ ಹಿಂದೂ ಸಂಹಿತೆಯನ್ವಯ ಕೊಡಲ್ಪಟ್ಟಿರುವ ಸೌಲಭ್ಯಗಳನ್ನು ಬಿಟ್ಟುಕೊಡಲು ನನ್ನ ಸ್ನೇಹಿತರಾದ ಸರ್ದಾರ್ ಹುಕುಂ ಸಿಂಗ್ ಸಿದ್ಧರಾಗಿದ್ದಾರೆ. ಎಲ್ಲಿಯವರೆಗೆ ಅವರು ಸಿಖ್ಖರಾಗಿರುತ್ತಾರೊ, ಅಲ್ಲಿಯವರೆಗೆ ಅವರ ಮೇಲೆ ಹಿಂದೂ ಸಂಹಿತೆಯನ್ನು ಅನ್ವಯಿಸುವುದನ್ನು ಅವರು ಪ್ರಶಂಸಿಸಲಾರರು.

**ಶ್ರೀ ತ್ಯಾಗಿ :** ಅವರು ಹಿಂದೂಗಳಾಗಬಹುದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರ ಸ್ವಂತ ಸಮುದಾಯದ ಬಗ್ಗೆ ಸರ್ದಾರ್ ಹುಕುಂ ಸಿಂಗ್ ಅವರೇ ಮಾತಾಡಲಿ. ನಾನು ಮಾತ್ರ.....

**ಶ್ರೀ ಖುರ್ಷಿದ್ ಲಾಲ್ :** ಹೌದು, ನೀವು ನಿಮ್ಮವರ ಬಗ್ಗೆಯೇ ಮಾತಾಡುತ್ತಿದ್ದೀರಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾವೀಗ, ಯಾವುದೇ ಮಗು ಅಕ್ರಮ ಅಥವಾ ಸಕ್ರಮ, ಇತ್ಯಾದಿ ಹೇಳುವ ಸಂಹಿತೆಯ ಭಾಗ(ಸಿ)(೧)ಕ್ಕೆ ಬರೋಣ. ಹಿಂದೂ ಹಿಂದೂವೆ, ಹಿಂದೂವಿನ ಮಗು ಕೂಡ ಹಿಂದುವೆ. ಆದರೆ ನಾನು ಹೇಳುವುದು ಇದು. ಕಲಮು (೨)ಎಲ್ಲೊ ಅಡ್ಡಾದಿಡ್ಡಿಯಾದಂತೆ ಕಾಣುತ್ತದೆ. ಏಕೆಂದರೆ, ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅಲ್ಲವೋ ಅವರಿಗೂ ಸಂಹಿತೆ ಅನ್ವಯಿಸುತ್ತದೆಂದು ಹೇಳುತ್ತಿದೆ. ಕರಡು ರಚನಾ ದೃಷ್ಟಿಯಿಂದ ನೋಡಿದರೆ, ಮತ್ತು ವಿಚಾರವೊಂದನ್ನು ಚೂರುಪಾರಾಗಿ ಮಂಡನೆ ಮಾಡಿದಂತೆ ಕಂಡುಬರುತ್ತದೆ. ಇದೇ ವಿಚಾರವನ್ನು ಅವರಿಗೆ ಹೇಳುವುದಾಗಿದ್ದರೆ, ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಯಹೂದಿ ಅಲ್ಲವೋ ಅವರೆಲ್ಲರೂ ಹಿಂದೂಗಳು ಎಂದು ನೇರವಾಗಿ ಹೇಳಬಹುದಿತ್ತಲ್ಲ? ಇದನ್ನು ಮಾಡುವುದನ್ನು ಬಿಟ್ಟು, ನೀವು ಮೊಟ್ಟ ಮೊದಲು ಹೇಳುವುದು– ಹಿಂದೂಗಳು, ಮೊಟ್ಟ ಮೊದಲು ಹಿಂದೂಗಳು. ನಂತರ ನೀವು ಹೇಳುತ್ತೀರಿ, ಬೌದ್ಧರು, ಜೈನರು ಮತ್ತು ಸಿಖ್ಖರು ಹಿಂದೂಗಳು ಮತ್ತು ನಂತರ ನೀವು ಹೇಳುತ್ತೀರಿ, ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಯಹೂದಿಗಳಲ್ಲವೋ ಅವರಿಗೆ ಸಂಹಿತೆ ಅನ್ವಯಿಸುತ್ತದೆ ಎಂದು. ಇದನ್ನೆಲ್ಲಾ ನೇರವಾಗಿ ತಾರ್ಕಿಕವಾಗಿ ವ್ಯಾಖ್ಯಾನಿಸುವುದು ನನ್ನ ಪ್ರಕಾರ ಹೀಗಿರಬಹುದು; ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಯಹೂದಿಗಳಲ್ಲವೋ ಅವರೆಲ್ಲಾ ಹಿಂದೂಗಳು. ಇದನ್ನೇ ಅದು ಹೇಳುವುದು. ಕರಡು ರಚನಾ ಸಂದರ್ಭದಲ್ಲಿ ಕರಡು ರಚನಾಕಾರನ ಮನಸ್ಸಿನಲ್ಲಿ ಸ್ವಲ್ಪ ಹಿಂಜರಿಕೆ ಉದ್ಭವಿಸಿ ನಂತರದ ಹಂತದಲ್ಲಿ ಇದನ್ನೆಲ್ಲಾ ಸೇರಿಸಲಾಗಿದೆ ಎಂದು ನಾನು ಹೇಳುತ್ತಿರುವೆ. ಇಲ್ಲದೆ ಹೋದಲ್ಲಿ, ಇದ್ದದ್ದನ್ನು ಇದ್ದ ಹಾಗೆ ಹೇಳುವುದಕ್ಕೆ ಅವರನ್ನು ಅಡ್ಡಿಪಡಿಸುವಂತಹದ್ದು ಏನೂ ಇರಲಿಲ್ಲ.

ಕಲಮು ೨ರ ಉಪಕಲಮು (೨)ರಲ್ಲಿ ತೊಂದರೆ ಇದೆ. ಯಾವ ಮನುಷ್ಯ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿ ಅಲ್ಲವೊ ಅವನು ಅತ್ಯವಶ್ಯಕವಾಗಿ ಹಿಂದೂ ಹೇಗೆ? ಇಲ್ಲಿ ಒಬ್ಬ ಸ್ನೇಹಿತರು ಸೂಚಿಸಿದ್ದ ಹಾಗೆ ಅವನು ಕಮ್ಯೂನಿಸ್ಟನಿರಬಹುದು ಅಥವ ಜಪಾನಿನಲ್ಲಿರುವ ಶಂಟೋ ಧರ್ಮಕ್ಕೆ ಸೇರಿದವನಾಗಿರಬಹುದು, ಅಥವಾ ಅವನು ಯಾವುದೇ ಧರ್ಮಕ್ಕೆ ಸೇರಿದವನಾಗಿರಬಹುದು. ಮನುಷ್ಯನೊಬ್ಬ ಕ್ರಿಶ್ಚಿಯನ್, ಪಾರ್ಸಿ, ಮುಸ್ಲಿಂ, ಯಹೂದಿ ಅಥವಾ ಹಿಂದೂವೇ ಆಗಿರುತ್ತಾನೆಂಬ ಅಸಾಧ್ಯ ತತ್ವವನ್ನು ಹೇಗೆ ಒಪ್ಪಿಕೊಳ್ಳಬೇಕು. ಯಾವ ಧರ್ಮಕ್ಕೂ ಸೇರದ ಮನುಷ್ಯನೊಬ್ಬನಿರಬಹುದು ಅಥವಾ ಮೇಲೆ ಹೇಳಿದ ಮಹಾಧರ್ಮಗಳನ್ನು ಬಿಟ್ಟು ಮತ್ತಾವುದಾದರೂ ಧರ್ಮಕ್ಕೆ ಸೇರಿದವನಿರಬಹುದು.

**ಶ್ರೀ ತ್ಯಾಗಿ :** ಎಲ್ಲಾ ಧರ್ಮಗಳ ಸಮ್ಮಿಶ್ರ ಪಾನೀಯವೇ ಹಿಂದೂಧರ್ಮ.

**ಶ್ರೀ ನಜೀರುದ್ದೀನ್ ಅಹ್ಮದ್ :** ಇರಬಹುದು. ಎಲ್ಲಾ ಹಿಂದೂಧರ್ಮದೊಳಗೆ ಸೇರಿಕೊಂಡಿವೆ ಎಂದು ಹೇಳಿದರೆ ಹಿಂದೂಗಳ ಕಿವಿಗೆ ಹಿತವಾಗಬಹುದು. ಆದರೆ ಪ್ರಶ್ನೆ ಇರುವುದು, ಬಹುವಾಗಿ

ಸಂಹಿತೆಯ ಲಾಭಗಳನ್ನು ಯಾರ ಮೇಲಾದರೂ ಒತ್ತಾಯದಿಂದ ಹೇರಬಹುದೇ ಎನ್ನುವುದಾಗಿದೆ. ಯಾರನ್ನಾದರೂ ಹಿಂದೂ ಎಂದು ಕರೆದು ಅವನ ಮೇಲೆ ಈ ಸಂಹಿತೆಯನ್ನು ಹೇರಬಹುದೆ? ಇದು ಮುಖ್ಯ ಅಂಶ. ಇಲ್ಲಿ ಯಾರಾದರೂ ವಿದೇಶಿಯರು ಇದ್ದಾರೆನ್ನಿ – ಅಥವಾ ಅವರ ಸೇವಕರು ಅಥವಾ ಅವರ ಸಹಾಯಕರು ಅಥವಾ ಅವರ ಸ್ನೇಹಿತರು ಇದ್ದಾರೆನ್ನಿ. ನಾವು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುತ್ತಿದ್ದೇವೆ, ಹೀಗಾಗಿ ಇಂಥವರು ಬರುವುದನ್ನು ನಿರೀಕ್ಷಿಸುತ್ತೇವೆ. ಒಬ್ಬ ವಿದೇಶಿಯನೇನಾದರೂ ಭಾರತದಲ್ಲಿದ್ದಾಗ ಸತ್ತ ಎನ್ನಿ. ಅವನ ಆಸ್ತಿಗೆ ಯಾರು ಹಕ್ಕುದಾರರಾಗುತ್ತಾರೆ?

**ಡಾ. ಅಂಬೇಡ್ಕರ್ :** ಅವನು ಭಾರತದಲ್ಲೇನಾದರೂ ಸತ್ತರೆ, ಅವನ ಆಸ್ತಿಗೆ ನೀವು ಹಕ್ಕುದಾರರಾಗುತ್ತೀರಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ಪ್ರಶ್ನೆ ಏನೆಂದರೆ ಮೇಲೆ ಹೇಳಲಾದ ಧರ್ಮಗಳಿಗೆ ಸೇರಿದವರ ಮೇಲೆ ಬಹುವಾಗಿ ಪ್ರಶಂಸಿಸುತ್ತಿರುವ ಹಿಂದೂ ಮಸೂದೆಯ ಲಾಭಗಳನ್ನು ಹೇರಿ ಅವರನ್ನು ಬಲಿಪಶು ಮಾಡಬಹುದೆ? ಹಿಂದೂ ಸಮುದಾಯವು ಮೃದು ಧೋರಣೆ ಉಳ್ಳದ್ದು ಮತ್ತು ಈ ಸದನದಲ್ಲಿ ಬಹುಮತವುಳ್ಳದ್ದೂ ಆಗಿದೆ. ಆದರೆ ಹೊರಗಡೆ ತೀವ್ರ ಆಕ್ಷೇಪಗಳನ್ನು ಎತ್ತಲಾಗುತ್ತಿದ್ದು, ಅದರ ಆಧಾರದ ಮೇಲೆ, ನಾವು ಎಲ್ಲರ ಮೇಲೆ ಹೆಸರಾಂತ ಮಸೂದೆಯ ಲಾಭಗಳನ್ನು ಹೇರಬಹುದೆ? ಯಾರು ಮುಸ್ಲಿಮರು, ಕ್ರಿಶ್ಚಿಯನ್ನರು, ಪಾರ್ಸಿ ಅಥವಾ ಯಹೂದಿ ಅಲ್ಲವೋ, ಮತ್ತು ಈ ಧರ್ಮಗಳಿಗೆ ಸೇರಿಲ್ಲವೆಂದು ಭಾವಿಸಿ, ಅವರನ್ನೂ ಹಿಂದೂಧರ್ಮಕ್ಕೆ ಸೇರಿದವರೇ ಎಂದು ಪರಿಭಾವಿಸಿ, ಅವರ ಮೇಲೆ ಈ ಮಸೂದೆಯನ್ನು ಹೇರಬಹುದೆ? ಅವರಿಗೆ ಈ ಮಸೂದೆ ಅನ್ವಯಗೊಳ್ಳಲೇಬೇಕೆ? ಈ ಪ್ರಶ್ನೆಗೆ ಸದನವು ಉತ್ತರ ಹೇಳಲೇಬೇಕಿದೆ? ಆದ್ದರಿಂದ ಕಲಮು ೨ನ್ನು ಕೈಬಿಡಲೇಬೇಕು, ಯಾಕೆಂದರೆ ಅದು ಹೇಳುವ ಅಂಶವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ನಾವು ನಿಧಾನವಾಗಿ ಮುಂದುವರಿಯೋಣ. ಅಂಥ ವ್ಯಕ್ತಿಗಳ ಮೇಲೆ ಮಸೂದೆಯನ್ನು ನೀವು ಹೇರಬಾರದು. ಅದರಲ್ಲಿ ಕೆಲವರು ಬೇರೆ ಧರ್ಮವನ್ನು ಪಾಲಿಸುವವರು ಇರಬಹುದು ಅಥವಾ ಅವರಿಗೆ ಧರ್ಮವೇ ಇಲ್ಲದಿರಬಹುದು. ಅಥವಾ ಈ ಜಗತ್ತಿನಲ್ಲಿ ಹೊಸ ಧರ್ಮವೊಂದು ಉದಯವಾಗಬಹುದು, ಅಂಥವರಿಗೂ ಈ ಮಸೂದೆ ಅನ್ವಯವಾಗುವಂತಿರಬಾರದು.

ಮಸೂದೆಯ ಜಾರಿಯೂ ನಿಧಾನಗತಿಯದ್ದಾಗಿರಬೇಕು. ಅಭೂತಪೂರ್ವವಾದ ಈ ಕ್ರಮದಿಂದಾಗುವ ಪರಿಣಾಮ ಕೂಡ ನಿಧಾನವಾಗಿರತಕ್ಕದ್ದು. ಹಾಗೆ ನೋಡಿದರೆ, ನನ್ನ ಸ್ನೇಹಿತರಾದ ಮಾವೂ ಕಪೂರ್ ಅವರು ಮಂಡಿಸಿದ ತಿದ್ದುಪಡಿಯ ಭಾಗವು ನನ್ನನ್ನು ಬಹುವಾಗಿ ಆಕರ್ಷಿಸಿತು. ಯಾರು ಇಷ್ಟಪಡುತ್ತಾರೊ ಅವರಿಗೆ ಮಸೂದೆಯನ್ನು ಅನ್ವಯಿಸಲಿ ಎಂಬ ಅವರ ತಿದ್ದುಪಡಿಯಲ್ಲಿನ ಭಾಗವು, ಅತ್ಯಂತ ವಿವೇಕಯುತವಾಗಿರುವುದು ಕಂಡುಬರುತ್ತದೆ. ಮಾನ್ಯ ಶ್ರೀ ಝುಂಝುನವಾಲ ಅವರ ತಿದ್ದುಪಡಿಯೂ ಅದನ್ನೇ ಹೇಳುತ್ತದೆ. ವಿವರಗಳೆಲ್ಲ ಸ್ವಲ್ಪ ವ್ಯತ್ಯಾಸ ಇದ್ದರೂ ಇರಬಹುದು. ಆದರೆ ಯಾರು ಇಷ್ಟಪಡುತ್ತಾರೋ ಅವರಿಗೆ ಮಸೂದೆ ಅನ್ವಯಗೊಳ್ಳಲಿ ಎಂಬ ತತ್ವ ಮಾತ್ರ ಒಂದೇ ಆಗಿದೆ. ಆದ್ದರಿಂದ "ಹಿಂದೂ" ಎಂಬ ವ್ಯಾಖ್ಯಾನ ಅನವಶ್ಯಕ. ಹಿಂದೂ ಮಸೂದೆಯು ಒಂದು ವಿವಾದಾತೀತ ಮಸೂದೆಯಾಗಿದ್ದರೆ ಮತ್ತು ಪ್ರತಿಯೊಬ್ಬರೂ ಒಪ್ಪಿಕೊಳ್ಳುವಂತಹದ್ದಾಗಿದ್ದರೆ ಅಲ್ಲಿ ಕಷ್ಟವೆಂಬುದೇ ಇರುತ್ತಿರಲಿಲ್ಲ. ತಿದ್ದುಪಡಿಯ ಆ ಭಾಗವನ್ನು ಒಪ್ಪಿಕೊಳ್ಳುತ್ತಾ......

**ಪಂಡಿತ ಕೃಷ್ಣ ಚಂದರಶರ್ಮ (ಉತ್ತರ ಪ್ರದೇಶ) :** ಪ್ರತಿಯೊಬ್ಬರು ತಮಗೆ ಬೇಕಾದ ಕಾಯ್ದೆ ಮಾಡಿಕೊಳ್ಳಲು ಅವಕಾಶ ಕೊಟ್ಟಂತೆ ಇದರ ಅರ್ಥ.

**ಶ್ರೀ ನಜೀರುದ್ದೀನ್ ಅಹ್ಮದ್ :** ಯಾವುದನ್ನು ಇಷ್ಟಪಡುವುದಿಲ್ಲವೋ ಅಂಥ ಔಷಧಿಯನ್ನು ಆ

ವ್ಯಕ್ತಿಯ ಗಂಟಲಲ್ಲಿ ನೀವು ತುರುಕುವ ಒತ್ತಾಯ ಮಾಡುತ್ತಿರುವಿರಿ. ಮಸೂದೆ ಎಷ್ಟೇ ಒಳ್ಳೆಯದಾಗಿರಲಿ, ಅದನ್ನು ಹಿಂದೂ ಸಮುದಾಯದ ಗಂಟಲಲ್ಲಿ ಒತ್ತಾಯದಿಂದ ತುರುಕಲಾರಿರಿ.

**ಮಾನ್ಯ ಒಬ್ಬ ಸದಸ್ಯರು :** ಅದನ್ನು ಯಾರು ಹೇಳಿದರು? ನಾವೆಲ್ಲಾ ಅದನ್ನು ಬೇಕು ಅನ್ನುತ್ತಿದ್ದೇವೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮೊಟ್ಟಮೊದಲು ನೀವು ಸಾರ್ವಜನಿಕ ಅಭಿಪ್ರಾಯ ಪಡೆದುಕೊಳ್ಳಿ. ನಿಧಾನಕ್ಕೆ ಅವರನ್ನು ಭೇಟಿ ಮಾಡಿ. ಇದನ್ನು ನಿಮ್ಮ ಮೊದಲ ಆದ್ಯತೆ ಮಾಡಿಕೊಳ್ಳಿ. ಆಗ ಕಾಯ್ದೆಯು ಎಲ್ಲರಿಗೂ ಒಳ್ಳೆಯದಾಗಿದ್ದರೆ ಅವರೆಲ್ಲಾ ಅದಕ್ಕೆ ಆಕರ್ಷಿತರಾಗುತ್ತಾರೆ. ಆಗ ಅವರೇ ಒಬ್ಬರನ್ನೊಬ್ಬರು ತಳ್ಳಿಕೊಂಡು ತಮ್ಮ ತಮ್ಮಲ್ಲಿಯೇ ಪೈಪೋಟಿ ಮಾಡಿಕೊಳ್ಳುತ್ತಾ ಆದಷ್ಟು ಬೇಗ ಅವರು ತಮ್ಮನ್ನು ತಾವು ದಾಖಲು ಮಾಡಿಸಿಕೊಳ್ಳುತ್ತಾರೆ. ಕಾನೂನು ಅದಾಗಿಯೇ ಜನರನ್ನು ಆಕರ್ಷಿಸಬೇಕು. ಒತ್ತಾಯ ಮಾಡಬಾರದು. ಈ ಬಹುಮುಖ್ಯ ತತ್ತ್ವವನ್ನೇ ಈ ತಿದ್ದುಪಡಿಗಳು ಮತ್ತು ಸಲಹೆಗಳು ಒತ್ತಿ ಹೇಳುತ್ತಿವೆ. ಇದು ಪ್ರತಿಯೊಬ್ಬರು ತಮಗೆ ತಾವೇ ಕಾನೂನು ಮಾಡಿಕೊಳ್ಳುವಂತಹದ್ದಲ್ಲ, ಕೆಲವೇ ಜನರು ಸೇರಿ ಮೂವತ್ತುಮೂರು ಕೋಟಿ ಜನರ ಮೇಲೆ ಕಾಯ್ದೆಯನ್ನು ಹೇರುವಂತಹದ್ದಾಗಿದೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಅದನ್ನು ಹೇಳಲು ನೀವಾರು?

**ಶ್ರೀ ಶ್ಯಾಮನಂದನ ಸಹಾಯ್ :** ತಡವಾಗಿಯಾದರೂ ಇದು ಒಳ್ಳೆಯ ಪರಿಸ್ಥಿತಿಯೆ, ಮುಂದುವರೆಸಿ, ಅವರೆಲ್ಲಾ ತಮ್ಮ ದೊಡ್ಡ ಗಂಟಲಿನಿಂದ ಕೂಗಲಿ.

**ಸನ್ಮಾನ್ಯ ಸಭಾಧ್ಯಕ್ಷರು :** ಸದನದಲ್ಲಿ ಕುಳಿತಿರುವಾಗ ಮಾನ್ಯ ಸದಸ್ಯರು ತಮ್ಮ ತಮ್ಮಲ್ಲಿ ಮಾತಾಡುತ್ತಾ ಹೋಗದಿರಿ. ಇದರಿಂದ ಗೊಂದಲ ಉಂಟಾಗುತ್ತದೆ. ಗೌರವಾನ್ವಿತ ಸದಸ್ಯರು ಮಾತಾಡಲು ಬಿಡಿ.

**ಶ್ರೀ ನಜೀರುದ್ದೀನ್ ಅಹ್ಮದ್ :** ಆದ್ದರಿಂದಲೇ ಈ ಮಸೂದೆಯ ಜಾರಿಯನ್ನು ಸ್ವಇಚ್ಛೆಗೆ ಬಿಡುವುದರಿಂದ, ಅದರ ತೀಕ್ಷ್ಣತೆಯ ತುದಿಯನ್ನು ಕಿತ್ತಂತಾಗುತ್ತದೆ ಎಂದೇ ನಾನು ಹೃದಯ ತುಂಬಿ ಅದಕ್ಕೆ ಬೆಂಬಲ ನೀಡುತ್ತಿದ್ದೇನೆ. ಕಾನೂನು ಒಳ್ಳೆಯದಾಗಿದ್ದರೆ, ಎಲ್ಲರೂ ಅದನ್ನು ಅಂಗೀಕರಿಸುತ್ತಾರೆಂದು ನಾನು ಧೈರ್ಯದಿಂದ ಹೇಳಬಲ್ಲೆ, ಆದ್ದರಿಂದ ಈ ಕಾನೂನು ಯಾರಿಗೆ ಅನ್ವಯವಾಗುತ್ತದೋ, ಅವರಿಗೆ ಮಾತ್ರ ಅಳವಡಿಸಿ ಎಂದು ನಾನು ಆಗ್ರಹಿಸುತ್ತೇನೆ.

ಭಾರತವು ಒಂದು ವಿಶಾಲ–ಭೂಖಂಡ. ಇಲ್ಲಿ ಹೇಗೆ ಅತಿ ಮುಂದುವರಿದ ಜನರಿರುವರೋ, ಅಷ್ಟೇ ಪ್ರಮಾಣದಲ್ಲಿ ಹಿಂದುಳಿದ ಜನರೂ ಇದ್ದಾರೆ. ಈ ಕಾನೂನು ಮಾನ್ಯ ಸದಸ್ಯರಿಗೆ ಚೆನ್ನಾಗಿಯೇ ಕಂಡುಬರುತ್ತಿರುವುದು ಯಾಕೆಂದರೆ – ಯಾವ ಸಮುದಾಯಕ್ಕೆ ಈ ಕಾನೂನು ಯೋಗ್ಯವೆನಿಸುತ್ತಿದೆಯೋ, ಆ ಸಮುದಾಯದಿಂದಲೇ ಬಂದ ಬಹಳಷ್ಟು ಜನ ಸದಸ್ಯರು ಇಲ್ಲಿದ್ದಾರೆ. ಆದರೆ ಈ ಕಾನೂನನ್ನು ಅಶಿಕ್ಷಿತರೂ, ದಿನಕ್ಕೆ ಎರಡು ಊಟಕ್ಕೂ ಗತಿಯಿಲ್ಲದವರೂ ಆದ ಆದಿವಾಸಿಗಳಿಗೆ, ಬುಡಕಟ್ಟು ಜನರಿಗೆ, ಹಿಂದುಳಿದವರಿಗೆ ಯಾಕೆ ಅನ್ವಯಿಸಲು ಪ್ರಯತ್ನಿಸಬೇಕು. ಅವರ ಇಚ್ಛೆಗೆ ವಿರುದ್ಧವಾಗಿ ಕಾಗದದಲ್ಲಿ ಗೆರೆ ಹೊಡೆಯುವುದರ ಮೂಲಕ ಈ ಮಸೂದೆಯ ಜಾರಿಗೆ ಯಾಕೆ ಪ್ರಯತ್ನಿಸಬೇಕು. ಎರಡು ತಿದ್ದುಪಡಿಯೊಳಗಿರುವ ಇಂತಹ ಸೂಚನೆಗಳನ್ನು ಕುರಿತದ್ದೆ ಈ ಅಂಶವಾಗಿದೆ. ಅನುಭವ ಕಾನೂನಿಗೆ ಮಾರ್ಗದರ್ಶನವಾಗಬೇಕೆ ಹೊರತು ತರ್ಕವಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ಕಾನೂನು ಯಾರಿಗೆ ಅನ್ವಯವಾಗಲು ಯೋಗ್ಯವೋ ಅವರಿಗೆ ಅನ್ವಯಿಸಿ, ನಿಧಾನಕ್ಕೆ ಯಾರು ಅರ್ಧಂಬರ್ಧ ಅನ್ವಯವಾಗುತ್ತಾರೋ ಅವರು ಅದಕ್ಕೆ ಅರ್ಹರಾಗುತ್ತಾ.....

**ಶ್ರೀ ಖುರ್ಷಿದ್ ಲಾಲ್ :** ಆದ್ದರಿಂದಲೆ ಅದು ನಿಮಗೆ ಅನ್ವಯವಾಗುತ್ತಿಲ್ಲ?

**ಶ್ರೀ ನಜೀರುದ್ದೀನ್ ಅಹ್ಮದ್ :** ಮಸೂದೆಯ ಪ್ರಯೋಜನವನ್ನು ಪ್ರಶಂಸೆ ಮಾಡಲಾರದಷ್ಟು ಹಿಂದುಳಿದವನು ನಾನು ಎಂಬುದನ್ನು ಒಪ್ಪುತ್ತೇನೆ. ಈ ಕಾನೂನು ಗೊಂದಲಗಳ ಬೀಡು. ಅದರೊಳಗೆ ಹಿಂದೂ ಮಸೂದೆಯು ಹೆಚ್ಚಾಗಿ ಇಲ್ಲ. ಅದು ಮುಸ್ಲಿಂ ಕಾನೂನು, ಕ್ರಿಶ್ಚಿಯನ್ ಕಾನೂನುಗಳಿಂದ ಕಡ ತಂದ ಕಾನೂನಾಗಿದ್ದು, ಆ ಕಾನೂನುಗಳಲ್ಲಿ ಅಡಕವಾಗಿದ್ದ ಎಲ್ಲ ಕೆಟ್ಟ ಅಂಶಗಳನ್ನು ಇದರೊಳಕ್ಕೆ ಕಡ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಗೆಳೆಯರಾದ ಖುರ್ಷಿದ್ ಲಾಲ್ ಅವರಿಂದ ನಾನು ಒಬ್ಬ ಹಿಂದುಳಿದವ ಎಂದು ಕರೆಸಿಕೊಳ್ಳಲು ತಯಾರಾಗಿದ್ದೇನೆಯೇ ಹೊರತು, ನಾಗರಿಕನೆಂದು ತೋರಿಸಿಕೊಂಡು ನನಗೆ ಅನ್ವಯವಾಗದ, ನನ್ನ ಮನ ಗೆಲ್ಲದ ಕಾನೂನನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ಸರ್ಕಾರವು ಅಪಕ್ವತೆಯಿಂದ ಈ ತತ್ತ್ವಕ್ಕೆ ಕಟ್ಟುಬಿದ್ದಂತಿದೆ. ಹಾಗೂ ಹೊರಗೆ ಜನ ಇದಕ್ಕೆ ವಿರುದ್ಧವಾಗಿದ್ದಾರೆ.

**ಶ್ರೀ ಭಾರತಿ :** ಅದನ್ನು ಹೇಳಲು ನೀವಾರು? ಅದನ್ನು ಯಾರು ಹೇಳಿದರು?

**ಶ್ರೀ ನಜೀರುದ್ದೀನ್ ಅಹ್ಮದ್ :** ಸುಮ್ಮನೆ ಹೊರಗೆ ಹೋಗಿ ನೋಡಿ. ನಿನ್ನೆ ನೀವು ಗಾಂಧಿ ಮೈದಾನಕ್ಕೆ ಹೋಗಿದ್ದಿದ್ದರೆ ಇದನ್ನೆಲ್ಲಾ ನೀವು ಕಾಣಬಹುದಿತ್ತು.

**ಒಬ್ಬ ಸನ್ಮಾನ್ಯ ಸದಸ್ಯರು :** ಮಾನ್ಯ ಸದಸ್ಯರು ಅಲ್ಲಿಗೆ ಯಾಕೆ ಹೋಗಿದ್ದಿರೋ?

**ಶ್ರೀ ನಜೀರುದ್ದೀನ್ ಅಹ್ಮದ್ :** ವಿಷಯವನ್ನು ಹೇಳುವುದು ನನ್ನ ಕರ್ತವ್ಯ. ಅವರಿಗೆ ಸಲಹೆ ಹೇಳುವುದಾಗಲಿ, ಅವರನ್ನು ನಿಯಂತ್ರಿಸುವುದಾಗಲಿ, ಮಾರ್ಗದರ್ಶನ ಮಾಡುವುದಾಗಲಿ, ದಾರಿ ತಪ್ಪಿಸುವುದಾಗಲಿ ನನ್ನ ಭೇಟಿಯ ಉದ್ದೇಶವಲ್ಲ. ಜನರ ಭಾವನೆಯೇನು ಎಂಬುದು ಸದಸ್ಯನಾಗಿ ನಾನು ತಿಳಿಯಬೇಕು. ಹಿಂದೂಗಳ ಭಾವನೆ ಬೇರೆಯಾದ ದಾರಿಯಲ್ಲಿ ಇದೆ ಎಂದೂ ತಿಳಿದು, ನನ್ನನ್ನು ಹಿಂದುಳಿದವ ಎಂದು ಕರೆಯಲ್ಪಡುವ ಅಪಾಯವಿದ್ದರೂ, ನಾನು ಈ ವಿಷಯಗಳನ್ನು ಸದನದ ಮುಂದಿರಿಸಿದ್ದೇನೆ. ಸಾಮಾನ್ಯ ತಿಳಿವಳಿಕೆ ಮತ್ತು ನ್ಯಾಯವನ್ನು ಬಲಿಗೊಟ್ಟು ನಾಗರಿಕನೂ ಬುದ್ಧಿವಂತನೂ ಎಂದು ಕರೆಸಿಕೊಳ್ಳುವುದರಲ್ಲಿ ಅರ್ಥವಿಲ್ಲ.

ಮಾನ್ಯ ಸದಸ್ಯರಲ್ಲಿ ಕೆಲವರು ವಕ್ರವಾಗಿ **"**ಯಾರು ಹಾಗೆ ಹೇಳಿದರು?**"** ಎಂದು ನನ್ನನ್ನು ಕೇಳುತ್ತಿದ್ದಾರೆ. ಅವರಲ್ಲಿ ಈ ಮಸೂದೆಯನ್ನು ಹಿಂದೂ ಸಮುದಾಯ ಒಪ್ಪಿಕೊಂಡು ಬಿಟ್ಟಿದೆ ಮತ್ತು ಅಂಗೀಕಾರಾರ್ಹ ಎಂದು ತಿಳಿದಿದೆಯೆಂದು ಭಾವಿಸಿದ್ದಾರೆ. ನಾನು ಬಂಗಾಳದಿಂದ ಬಂದಿರುವೆ. ಸರ್ಕಾರವು ಅವರ ಅಭಿಪ್ರಾಯಗಳನ್ನು ಸೂಚಿಸಬೇಕೆಂದು ವಿನಂತಿಸಿದಾಗ, ಅದನ್ನು ಅವರು ವಿರೋಧಿಸುವುದಾಗಿ ಹೇಳಿದ್ದಾರೆ.

**ಶ್ರೀಮತಿ ರೇಣುಕಾರಾಮ್ :** ಈಗ ಅವರು ಏನು ಹೇಳಿದ್ದಾರೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರು ಬದಲಾಗಿದ್ದರೆ, ಅವರ ಬಗ್ಗೆ ನನಗೇನೂ ತಿಳಿದಿಲ್ಲ.

**ಶ್ರೀಮತಿ ದುರ್ಗಾಬಾಯಿ :** ಅವರ ಜೊತೆ ನೀವೂ ಬದಲಾಗಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರು ಇತ್ತೀಚಿನ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಗಾಳಿ ಸುದ್ದಿಗಳ ಹೊರತಾಗಿ ಅವರ ನ್ಯಾಯಸಮ್ಮತ ಅಭಿಪ್ರಾಯಗಳನ್ನು ಸರ್ಕಾರವು ನಿಯಮಾನುಸಾರ ಅಂಗೀಕರಿಸಿ ಕಾನೂನು ಕಾರ್ಯದರ್ಶಿಗಳ ಮೂಲಕ ನಮಗೆಲ್ಲಾ ವಿತರಿಸಲಾಗಿದೆ. ಅದರ ಹೊರತಾಗಿ ಮತ್ತಾವ ಅಭಿಪ್ರಾಯವನ್ನು ನಮ್ಮ ನಡುವೆ ವಿತರಿಸಲಾಗಿಲ್ಲ. ಕೆಲವು ಸದಸ್ಯರ ಕಿವಿಗಳಿಗೆ ಮಾತ್ರ ಒದಗಿಸಲಾಗಿದ್ದರೆ ಅಂಥವರ ಬಗ್ಗೆ ನಾನಿಲ್ಲಿ ಗಮನ ಕೊಡಲಾರೆ. ಪಶ್ಚಿಮಬಂಗಾಲ ಸರ್ಕಾರ ಈ ಮಸೂದೆ ವಿರುದ್ಧವಿದೆ. ದೊಡ್ಡ ಜನ ಕೂಡ ಇದರ ವಿರುದ್ಧ ಇದ್ದಾರೆ.

**ಶ್ರೀ ಸೋಂಧಿ :** ಅವರೆಲ್ಲಾ ರಾಜಿಯಾಗಿದ್ದಾರೆಂದು ನನಗೆ ಹೇಳಲಾಗಿದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರು ತಮ್ಮನ್ನು ತಾವು ರಾಜಿ ಪರಿಸ್ಥಿತಿಗೆ ಒಪ್ಪಿಸಿಕೊಂಡಿದ್ದಾರೆಂಬುದನ್ನು ನಾನು ಖಂಡಿತ ಯೋಚಿಸಲಾರೆ. ನೀವು ಯಾವುದೇ ವಕೀಲರ ಸಂಘಕ್ಕೆ ಹೋಗಿ ಅವರಾಡುವ ಮಾತುಗಳನ್ನು ಕೇಳಿರಿ. ಇದರ ಬಗ್ಗೆ ಅವರು ಸುಸ್ತಾಗಿದ್ದಾರೆ. ಸದನದ ಮೂಲಕ ಈ ಮಸೂದೆ ಯಾವ ರೀತಿ ಅತಿಯಾದ ಆತುರದಿಂದ ದಾಟಿಸಲ್ಪಡುತ್ತಿದೆಯೋ.....

**ಸನ್ಮಾನ್ಯ ಸದಸ್ಯರೊಬ್ಬರು :** ತಿದ್ದುಪಡಿಗೆ ಇವೆಲ್ಲಾ ಅವಶ್ಯವೆ?

**ಸನ್ಮಾನ್ಯ ಸಭಾಧ್ಯಕ್ಷರು :** ನಾನು ನಂ. ೩೧ರ ತಿದ್ದುಪಡಿಯ ಕಡೆ ಗಮನ ಸೆಳೆಯುತ್ತಿದ್ದೇನೆ. ಇದು ತೀರಾ ಅವಶ್ಯವಿದೆ.

**ಶ್ರೀಮತಿ ದುರ್ಗಾಬಾಯಿ :** ಅವರು ಅದನ್ನೆ ಪುನಃ ಪುನಃ ತಮಗೆ ಹೇಳಿಕೊಳ್ಳುತ್ತಿದ್ದಾರೆ!

**ಶ್ರೀ ತ್ಯಾಗಿ :** ಬಂಗಾಳ ಸರ್ಕಾರವು ಹಿಂದೂ ಮಸೂದೆಯನ್ನು ವಿರೋಧಿಸುತ್ತಿದೆಯೆಂದು ಸನ್ಮಾನ್ಯ ಸದಸ್ಯರು ಹೇಳುತ್ತಿರುವುದರಿಂದ, ಬಂಗಾಳ ಸರ್ಕಾರದ ಮುಖ್ಯ ಕಾರ್ಯದರ್ಶಿಯೂ ಇದನ್ನು ವಿರೋಧಿಸುತ್ತಿದ್ದಾರೆಯೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಶ್ರೀ ಖುರ್ಷಿದ್‌ಲಾಲ್ :** ಆತನೇನು ಬಂಗಾಳ ಸರ್ಕಾರವಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಭಾರತ ಸರ್ಕಾರ ಮಸೂದೆಯ ಪ್ರತಿಯನ್ನು ವಿತರಿಸಿ ಅಭಿಪ್ರಾಯವನ್ನು ಕೇಳಿದೆ. ವಿವಿಧ ರಾಜ್ಯಗಳು ತಮ್ಮ ಅಭಿಪ್ರಾಯಗಳನ್ನು ನೀಡಿವೆ. ಅವುಗಳನ್ನು ನಮಗೆ ಹಂಚಲಾಗಿದೆ. ಬಂಗಾಳ ಸರ್ಕಾರದೊಂದಿಗೆ ನಾನು ಯಾವುದೇ ಖಾಸಗಿ ಸಂವಹನ ನಡೆಸಿಲ್ಲ. ನಮಗೆ ವಿತರಿಸಿದ ಅಭಿಪ್ರಾಯಗಳು ಈಗ ನಮ್ಮ ಮಧ್ಯೆ ಇದೆ. ಯಾವುದೇ ಸನ್ಮಾನ್ಯ ಸದಸ್ಯ ಕೂಡ ನೋಡಬಹುದು. ಬಂಗಾಳ ಸರ್ಕಾರ ಮಸೂದೆಯನ್ನು ವಿರೋಧಿಸಿರುವುದನ್ನು ಕಾಣಬಹುದು.

**ಪಂಡಿತ ಮಾಳವೀಯ (ಉತ್ತರ ಪ್ರದೇಶ) :** ಅವರಿಗೆ ಅನುಕೂಲಕರವಾಗಿಲ್ಲವೆಂದ ಮೇಲೆ ಅವರೇಕೆ ನೋಡುತ್ತಾರೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ಬಂಗಾಳದ ನೆಲಕ್ಕೆ ಈ ಮಸೂದೆ ಅನುಕೂಲಕರವಲ್ಲವೆಂದು ಅವರು ಭಾವಿಸಿದ್ದಾರೆ. ಅವೆಲ್ಲಕ್ಕಿಂತ ಮುಖ್ಯವಾಗಿ ಕಲ್ಕತ್ತಾದ ಉಚ್ಚನ್ಯಾಯಾಲಯದ ಎಲ್ಲಾ ನ್ಯಾಯಾಧೀಶರೂ ಅತ್ಯಂತ ಶಿಕ್ಷಣವೇತ್ತರೂ ಸಂಪ್ರದಾಯವಾದಿಗಳು, ಆತ್ಮವಂಚಕರಲ್ಲದವರೂ ಎಂದು ನಾನು ಭಾವಿಸಬಹುದಾದ ಸುಸಂಸ್ಕೃತರೂ, ಜ್ಞಾನಿಗಳೂ, ಉತ್ತಮರೂ ಆದ ಅವರೂ, ಈ ಮಸೂದೆಯನ್ನು ವಿರೋಧಿಸುವುದಾಗಿ ಜಂಟಿಯಾಗಿ ಹೇಳಿದ್ದಾರೆ.

**ಶ್ರೀ ರಾಜಬಹದ್ದೂರ್ :** ಮಸೂದೆಯ ಮೂಲ ತಳಹದಿಯನ್ನು ಮತ್ತು ಅದರ ತತ್ವವನ್ನು ಕುರಿತು ಈಗ ಸದಸ್ಯರೊಬ್ಬರು ಪ್ರಹಾರ ನಡೆಸಲು ಅನುಮತಿಯನ್ನು ನೀಡಲಾಗಿದೆಯೆಂದು ನಾನು ತಿಳಿಯಬಯಸುತ್ತೇನೆ. ಅವರೇನು ಕಲಮು ೨ರ ಕುರಿತು ಮಾತಾಡುತ್ತಿದ್ದಾರೋ ಅಥವಾ ಸಮಗ್ರ ಮಸೂದೆಯನ್ನು ಕುರಿತು ಮಾತಾಡುತ್ತಿದ್ದಾರೋ?

**ಸರ್ದಾರ್ ಹುಕುಂಸಿಂಗ್ :** ಅವರ ಹೇಳಿಕೆಯ ಮೇಲೆ ನಡೆದಿರುವ ಈ ಗದ್ದಲವೇ ಹೇಳುತ್ತಿದೆ ಹಿಂದೂಗಳು ಅದನ್ನೆಲ್ಲಾ ಇಷ್ಟಪಡುವುದಿಲ್ಲ ಎಂಬುದನ್ನು.

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು ನಂ.೩೧ರ ತಿದ್ದುಪಡಿಯನ್ವಯ ಮಾನ್ಯ ಸದಸ್ಯರು ಈವರೆಗೆ ಗಮನಿಸಿರುವ ಅಂಶಗಳು ಪ್ರಸ್ತುತವಾಗಿವೆ. ಆದರೆ ಇದೇ ಸಂದರ್ಭದಲ್ಲಿ, ಅವರ ಟೀಕೆಗಳು ಸಾಮಾನ್ಯವಾದ ಸಾಧಾರಣ ಸ್ವರೂಪದ್ದಾಗಿರಲಿ ಎಂದು ವಿನಂತಿಸುತ್ತೇನೆ. ತಾವು ಸೂಚಿಸುವ ತಿದ್ದುಪಡಿಯೊಳಗೆ ನಿಶ್ಚಿತ

ಅಂಶಗಳ ಕಡೆಯೇ ಅವರು ಗಮನಹರಿಸಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್ :** ನಮ್ಮ ಮುಂದಿರುವ ಪ್ರಶ್ನೆ ಎಂದರೆ, ಈ ಮಸೂದೆಯ ವ್ಯಾಪ್ತಿಯೊಳಗೆ ಬರಲಿಚ್ಛಿಸದವರ ಮೇಲೆ ಇದನ್ನು ಅನ್ವಯಿಸಬೇಕೆ ಎನ್ನುವುದಾಗಿದೆ. ಅವರಿಗೆ ಆಯ್ಕೆಯ ಅವಕಾಶ ಕಲ್ಪಿಸದಿದ್ದರೆ, ಇಷ್ಟವಿಲ್ಲದವರ ಮೇಲೆ ಕಾನುನು ಹೇರಿದಂತೆ, ಈ ಅಂಶವನ್ನು ಪುಷ್ಟೀಕರಿಸಲೆಂದೇ ಪ್ರಖ್ಯಾತ ವ್ಯಕ್ತಿಗಳಾದ ಹೈಕೋರ್ಟ್ ಜಡ್ಜ್‌ಗಳು ಮತ್ತು ಬಂಗಾಳ ಸರ್ಕಾರದವರು ವ್ಯಕ್ತಪಡಿಸಿರುವ ಆಕ್ಷೇಪಗಳು ಪ್ರಸ್ತುತವಾಗಿವೆ. ಕೇವಲ ಹಿಂದುಳಿದವರು ಮಾತ್ರವಲ್ಲ. ಖ್ಯಾತ ಬುದ್ಧಿಜೀವಿಗಳು ಸಮಾಜದಲ್ಲಿ ಉನ್ನತಸ್ಥಾನ ಗಳಿಸಿರುವ ವ್ಯಕ್ತಿಗಳು ಕೂಡ ಇದಕ್ಕೆ  ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ನಾನು ಕೆಲ ಉದಾಹರಣೆಗಳನ್ನು ಉದ್ಧರಿಸಿದ್ದು ಇದೇ ಆಶಯದಿಂದ.

ಈ ಎಲ್ಲಾ ಆಕ್ಷೇಪಗಳ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ವಿಶೇಷವಾಗಿ ಯಾರು ಈ ಕಾನೂನಿನ ಚೌಕಟ್ಟಿನೊಳಗೆ ಬರುತ್ತಾರೋ, ಯಾರು ಇದರಿಂದ ಪ್ರಯೋಜನ ಹೊಂದಬಲ್ಲರೋ ಅವರಿಗೆ ಅನ್ವಯಿಸಲಿ. ಆದರೆ ಎಲ್ಲರಿಗೂ ಮತ್ತು ಯಾರು ಬೇಡ ಎನ್ನುತ್ತಾರೋ ಅವರೆಲ್ಲರಿಗೂ ಅನ್ವಯಿಸದಿರಲಿ. ಸದನದಲ್ಲಿ ಯಾರು ಹಿಂದೂ ಮಸೂದೆ ಕಾಯ್ದೆಯನ್ನು ವಿರೋಧಿಸುತ್ತಿದ್ದರೋ ಅವರ ಸಂಖ್ಯೆ ಅಲ್ಪವಾಗಿದೆ. ಅದರೆ ಯಾರು ಮಸೂದೆಯನ್ನು ಬೆಂಬಲಿಸುತ್ತಿದ್ದಾರೋ ಅವರ ಸಂಖ್ಯೆ ಸದನದ ಹೊರಗೆ ಸೂಕ್ಷ್ಮದರ್ಶಕದಲ್ಲಿ ನೋಡಬಹುದಾದಷ್ಟು ಅಲ್ಪವಾಗಿದೆ. ಒಟ್ಟಾರೆ ಪ್ರಶ್ನೆ ಇದು. ಜನಕ್ಕೆ ಇಷ್ಟವಿಲ್ಲದಿದ್ದರೂ ಹಿಂದೂ ಮಸೂದೆ ಕಾಯ್ದೆ ಒಳ್ಳೆಯದೆಂದು ಹರಿಹಾಯುವುದಷ್ಟೇ ನಿಮಗೆ ಸಾಕೆನಿಸುವುದೋ? ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಜನತೆ ನಿರಾಕರಣೆ ಮಾಡುವ ಮನೋಭಾವ ತೋರಿದಲ್ಲಿ ಲಾಭವಾಗುವಂತಹದ್ದನ್ನು ಕಡ್ಡಾಯ ಮಾಡಲಾಗದು. ಜನತೆ ಇಷ್ಟಪಡುತ್ತಿಲ್ಲ. ಆದ್ದರಿಂದ ನೀವು ಅವರ ಮೇಲೆ ಹೇರದಿರಿ. ಆದ್ದರಿಂದ ಮೊದಲು ಈ ಕಾನೂನನ್ನು ಯಾರು ಬೇಕೆನ್ನುತ್ತಾರೋ ಅವರಿಗೆ ಅನ್ವಯಿಸಲಿ ಎಂಬ ಮಾನ್ಯ ಸದಸ್ಯರೊಬ್ಬರು ಮಾಡಿದ ಸಲಹೆಯನ್ನು ನಾನು ತುಂಬು ಹೃದಯದಿಂದ ಬೆಂಬಲಿಸುತ್ತೇನೆ. ಹಿಂದೂಗಳಿಗೆ ಅನುಕೂಲಕರವಾದ ಈ ಮಸೂದೆಯನ್ನು ಅವರು ತಕ್ಷಣ ಒಪ್ಪಿಕೊಂಡರೆ, ಅವರು ಅದನ್ನು ಬಯಸಿದರೆ, ನಂತರ ಸಂಸತ್ತು ಇದನ್ನು ಇನ್ನಿತರ ಜನರಿಗೆ ಅಥವಾ ಇನ್ನಿತರ ವರ್ಗದ ಜನರಿಗೆ ವಿಸ್ತರಿಸಲಿ. ಅದು ಸರಿಯಾದ ಕ್ರಮ. ಹೀಗೆ ಹೇಳಿದಂತೆ, ತಾತ್ವಿಕವಾಗಿ ಒಪ್ಪಿಕೊಂಡರೆ, ಅದರ ಜಾರಿಯನ್ನು ಸ್ವಯಂ ಸಂಖ್ಯಾಬಲ, ಸದನದ ಹೊರಗಿನ ಬಹುಸಂಖ್ಯಾಬಲ– ಎಂಬೆಲ್ಲಾ ವಿಷಮಭಾವಗಳು ಒಮ್ಮೆಗೆ ಮಾಯವಾಗಿ ಬಿಡುತ್ತವೆ. ಆಗ ಭಿನ್ನಾಭಿಪ್ರಾಯವೆಂಬ ಪ್ರಶ್ನೆಯೇ ಉಳಿಯುವುದಿಲ್ಲ. ಒಳ್ಳೆಯದಾಗುವುದೆಂಬುದು ಇದ್ದರೆ ಅದು ಸಮಾಜದ ಉನ್ನತವರ್ಗಕ್ಕೆ ಮಾತ್ರ ಒಳ್ಳೆಯದಾಗಲಿದೆ. ಮಧ್ಯಮ ವರ್ಗ ಮತ್ತು ಹಿಂದುಳಿದ ವರ್ಗದವರ ಸ್ಮೃತಿಗಂತೂ ಇದು ಒಳ್ಳೆಯದೆನಿಸದು. ಈ ಕಾರಣಕ್ಕಾಗಿಯೇ ನಾನು ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ನಾನು ಸೂಚಿಸಿದ ತಿದ್ದುಪಡಿಗಳಲ್ಲಿ ಒಂದು ಉಪಕಲಮು(ಇ)ನ್ನು ತೆಗೆದುಹಾಕಬೇಕೆನ್ನುವುದು. ಆ ಉಪ–ಪ್ರಕರಣ ಹೀಗೆ ಹೇಳುತ್ತದೆ:

ಹಿಂದು ಎಂಬ ಪದ ಈ ಸಂಹಿತೆಯ ಯಾವ ಭಾಗದಲ್ಲಿದ್ದರೂ ಅದರ ವ್ಯಾಪ್ತಿಯೊಳಗೆ ಬರುವ ವ್ಯಕ್ತಿ ಧರ್ಮದಿಂದ ಹಿಂದೂ ಅಲ್ಲದಿದ್ದರೂ ಈ ಸಂಹಿತೆಯ ಉಪಬಂಧಗಳ ಒಳಗೆ ಬರುತ್ತಾನೆ. ಒಟ್ಟಿನಲ್ಲಿ ಅದರ ಅರ್ಥ ವ್ಯಕ್ತಿಯೊಬ್ಬ ಹಿಂದೂ ಅಲ್ಲದಿದ್ದರೂ, ಸಂಹಿತೆ ಅವನಿಗೆ ಅನ್ವಯವಾಗುವುದಾದರೆ ಅವನು ಹಿಂದೂ ಆಗುತ್ತಾನೆ. ಪ್ರಶ್ನೆಯನ್ನೇ ಅದು ಬೇಡುತ್ತದೆ. ಹಿಂದು ಒಬ್ಬನನ್ನು ಹಿಂದೂ ಎಂದೇ ಹೇಳಬಹುದಾಗಿತ್ತು. ಇದರ ಕರಡನ್ನು ಬರೆದವರಿಗೆ ಇಷ್ಟೇ ಸಾಕಾಗಲಿಲ್ಲ. ಉಪಕಲಮು (ಇ)ನ್ನು ಸೇರಿಸಿ ಗೊಂದಲವಾಗಿದ್ದನ್ನು

ಇನ್ನೂ ಗೊಂದಲಮಯ ಮಾಡಿದ್ದಾನೆ. ನೀವು ಯಾರಿಗಾಗಿ ಈ ಸಂಹಿತೆಯನ್ನು ಅನ್ವಯಿಸಲು ಇಚ್ಛಿಸಿದ್ದೀರಿ? ಮಾನವ ಜೀವಿಯನ್ನು ಮನುಷ್ಯನೆಂದು ಕರೆದರೆ, ಅದರಿಂದ ಯಾರಿಗೂ ಉಪಯೋಗವಿಲ್ಲ. ಅದು ಮನಸ್ಸಿನ ಗೊಂದಲವನ್ನು ತೋರಿಸುತ್ತದೆ. ಹಿಂದೂ ಒಬ್ಬನನ್ನು ಹಿಂದೂ ಅಲ್ಲವೆಂದು ಹೇಳಲಾಗುವುದಿಲ್ಲ. ಇದಕ್ಕಿಂತ ಸರಳವಾಗಿ ಹೇಳುವ ವಿಧಾನವೇ ತೃಪ್ತಿಕರವಾಗಿಯೂ ಮತ್ತು ಉತ್ತಮವಾಗಿಯೂ ಇರಬಹುದಿತ್ತು. ಯಾರು ಎರಡು ಕಾಲುಗಳನ್ನು, ಎರಡು ಕೈಗಳನ್ನು ಹೊಂದಿರುವರೋ, ಅವರೆಲ್ಲಾ ಹಿಂದೂಗಳೆಂದು ನೀವು ಹೇಳಿದರೆ ನನ್ನ ಆಕ್ಷೇಪವೇನೂ ಇರುತ್ತಿರಲಿಲ್ಲ. ಹಿಂದೂಗಳೆಲ್ಲರೂ ಹಿಂದೂಗಳೆಂದು ನೀವು ಹೇಳಿದ್ದರೂ ಅದಾದರೂ ಒಂದು ರೀತಿಯಲ್ಲಿ ಸರಿಯೆನಿಸುತ್ತಿತ್ತು. ನೀವು ಹೇಳುತ್ತಿದ್ದೀರಿ ಎಲ್ಲಾ ಹಿಂದೂಗಳೂ ಹಿಂದೂಗಳೇ, ಎಲ್ಲಾ ಜೈನರೂ, ಬೌದ್ಧರೂ, ಮತ್ತು ಸಿಖ್ಖರು– ಹಿಂದೂಗಳು ಎಂದು. ಅಕ್ರಮವಾಗಿ ಜನಿಸಿದ ಎಲ್ಲಾ ಮಕ್ಕಳು ಹಿಂದೂಗಳು ಮತ್ತು ಯಾರು ಮುಸ್ಲಿಂ ಕ್ರಿಶ್ಚಿಯನ್ ಪಾರ್ಸಿ ಅಥವಾ ಯಹೂದಿಗಳಲ್ಲವೋ ಅವರೆಲ್ಲಾ ಹಿಂದೂಗಳು. ಸುತ್ತಿ ಬಳಸಿನ ಮಾತಿನಿಂದಲೂ ನಮಗೆ ತೃಪ್ತಿಯಿಲ್ಲ. ನಿಮ್ಮ ಹೇಳಿಕೆ, ಹೆಚ್ಚು ಸ್ಪಷ್ಟವೂ ನೇರವೂ ತರ್ಕಬದ್ಧವೂ ಆಗಿರಬೇಕು.

ಈ ಕಲಮಿನ ಕರಡು ರಚನೆಯಲ್ಲಿ ಹಲವಾರು ವ್ಯಕ್ತಿಗಳ ಕೈಚಳಕವಿರುವುದು ಕಂಡುಬಂದರೂ ಪ್ರಕರಣವನ್ನು ನಿಖರವಾಗಿ ರೂಪಿಸಿಲ್ಲ. ಆದ್ದರಿಂದಲೇ ಅಲ್ಲಿ ಗೊಂದಲಗಳು ಇಡಿಕಿರಿದಿವೆ. ವಿಪರೀಪ ಸುತ್ತು ಬಳಸು ಕಾಣಿಸಿದೆ. ಆದ್ದರಿಂದ ನಾನು ಉಪಕಲಮು(೩)ನ್ನು ಕೈಬಿಡಿ ಅನ್ನುತ್ತೇನೆ. ಯಾರು ಹಿಂದೂಧರ್ಮವನ್ನು ಪಾಲಿಸುತ್ತಾನೋ, ಅವನೇ ಹಿಂದೂ. ಹಾಗೆಯೇ ಬೌದ್ಧರೂ, ಜೈನರು, ಸಿಖ್ಖರು. ಹಿಂದೂ ಸಂಹಿತೆಯಲ್ಲಿ ಬೌದ್ಧರು, ಜೈನರು ಮತ್ತು ಸಿಖ್ಖರಿಗೆ ಸೇರಲು ಅವಕಾಶವನ್ನು ಅವರು ಒಪ್ಪಿದ್ದರಿಂದ ಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವ ಜೈನ ಧರ್ಮೀಯರು ಅಲ್ಲವೋ, ಅವರೂ ಹಿಂದೂಗಳು. ನೀವು ಹೇಳುತ್ತೀರಿ, ಯಾರು ಈ ಸಂಹಿತೆಯ ವ್ಯಾಪ್ತಿಯೊಳಗೆ ಬರುತ್ತಾರೋ, ಅವರು ಹಿಂದೂಗಳಲ್ಲದಿದ್ದರೂ, ಹಿಂದೂಗಳು ಎಂದೋ, ಏನೋ, ಇದೊಂದು ಅತ್ಯಂತ ಅತೃಪ್ತಿಕರ ವಿಧಾನ.

**ಶ್ರೀ ತ್ಯಾಗಿ :** ವ್ಯಕ್ತಿ ವಾಸ್ತವವಾಗಿ ಹಿಂದೂ ಅಲ್ಲದಿದ್ದರೂ ಕಾನೂನಿನ ಪ್ರಕಾರ ಹಿಂದೂ ಆಗುತ್ತಾನೆ.

**ಶ್ರೀ ನಜೀರುದ್ದೀನ್ ಅಹ್ಮದ್ (ಸಂಜೆ ೫ ಗಂಟೆ) :** ಒಬ್ಬ ವ್ಯಕ್ತಿಯನ್ನು ಹಿಂದೂ ಎಂದು ಕರೆಯಬೇಕೆನಿಸಿದ್ದಲ್ಲಿ ಕರೆಯಿರಿ. ನನ್ನ ತಕರಾರೇನೂ ಇಲ್ಲ. ಇದೊಂದು ನೇರಕ್ರಮ. ಸರಳವಾಗಿ ಅವನನ್ನು **"ಹಿಂದೂ"** ಎಂದು ಹೆಸರಿಸಿ, ಯಾಕೆ ಹೀಗೆ ಸುತ್ತಿ ಬಳಸಿ, ಪ್ರದಕ್ಷಿಣೆಯ ವಿಧಾನವೇಕೆ?ನಾನು ಗೌರವಪೂರ್ವಕವಾಗಿ ಹೇಳುತ್ತೇನೆ – ಇದು ವಿಚಾರದಲ್ಲಿನ ಗೊಂದಲ.

**ಡಾ. ಅಂಬೇಡ್ಕರ್ :** ಈ ಸದನದಲ್ಲಿ ಎಲ್ಲರಿಗಿಂತ ತಾವು ಹೆಚ್ಚು ಗಲಿಬಿಲಿಗೊಂಡಂತೆ ಕಂಡುಬರುತ್ತಿದೆ. ನನಗೆ ಹೆದರಿಕೆಯಾಗುತ್ತಿದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನನಗೆ ಹೀಗೆ ಅಡೆತಡೆ ಮಾಡದಿದ್ದರೆ, ಇತರ ಕೆಲ ತಿದ್ದುಪಡಿಗಳನ್ನು ನಾಳೆ ಮಂಡಿಸಲು ಉದ್ದೇಶಿಸಿದ್ದೇನೆ.

ಈ ಸದನವನ್ನು ೧೯೫೧, ಫೆಬ್ರವರಿ ೬ರ ಮಂಗಳವಾರ ಮುಂಜಾನೆ ೧೦–೪೫ರವರೆಗೆ ಮುಂದೂಡಲಾಗಿದೆ.

## ಹಿಂದೂ ಮಸೂದೆಯ –ಚರ್ಚೆಯ ಮುಂದುವರಿಕೆ

*__ಮಾನ್ಯ ಸಭಾಧ್ಯಕ್ಷರು :__ ಆಯ್ಕೆ ಸಮಿತಿಯ ವರದಿಯಂತೆ, ಸದನವು ಮಸೂದೆ ಕುರಿತು ಚರ್ಚೆಯನ್ನು ಮುಂದುವರೆಸಿ, ಹಿಂದೂ ಕಾನೂನಿಗೆ ಸಂಬಂಧಪಟ್ಟ ತಿದ್ದುಪಡಿ ಹಾಗೂ ಕೆಲ ಅಂಶಗಳನ್ನು ಸಂಹಿತೆಗೊಳಿಸುವ ಪ್ರಕ್ರಿಯೆಯಲ್ಲಿ ಕಲಮು ೨ರ ಚರ್ಚೆಯನ್ನು ಕೈಗೆತ್ತಿಕೊಳ್ಳಲಿದೆ. ಮಾನ್ಯ ನಜೀರುದ್ದೀನ್ ಅಹ್ಮದ್ ಅವರು ಚರ್ಚೆ ಮುಂದುವರೆಸಲಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ (ಪಶ್ಚಿಮ ಬಂಗಾಳ) :** ಮಾನ್ಯರೇ, ಒಟ್ಟಾರೆ ಸದನವು ಹರ್ಷೋಲ್ಲಾಸದ ಔನ್ನತ್ಯದಲ್ಲಿದೆ. ವಿಷಯವು ಅತ್ಯಂತ ಗಂಭೀರವಾದದ್ದು ಮತ್ತು ಅದು ನಮ್ಮ ತೀಕ್ಷ್ಣ ಪರಿಗಣನೆಗೆ ಸಂಬಂಧಿಸಿದ್ದು ಎಂದು ನಾನಾದರೂ ಭಾವಿಸುತ್ತೇನೆ. ನಿನ್ನೆ ನಾನು ಕೆಲ ತಿದ್ದುಪಡಿಗಳನ್ನು ಕುರಿತು ಮಾತಾಡಿದೆ. ಅದು ಹೀಗಿದೆ – ಕಲಮು ೨ರ ನಂತರ ಉಪಕಲಮು(೪)ರ ತರುವಾಯ ಮತ್ತೊಂದು ಉಪಕಲಮು ಹೀಗೆ ಮುಂದುವರಿಯುತ್ತದೆ:

"ಈ ಭಾಗದಲ್ಲಿ ಏನೇ ಹೇಳಿದ್ದರೂ ಈ ಸಂಹಿತೆಯನ್ನು ಕೇವಲ ಕೆಲ ಪ್ರದೇಶಗಳಿಗೆ ಅಥವಾ ಅಂಥ ಜನರಿಗೆ ಅಥವಾ ವರ್ಗಗಳ ಜನರಿಗೆ ಆಯಾ ಆಯಾ ರಾಜ್ಯಗಳ ವಿಧಾನಸಭೆಗಳು, ಕಾಲಕಾಲಕ್ಕೆ ಅಥವಾ ಹಂತಹಂತವಾಗಿ ತೆಗೆದುಕೊಳ್ಳಬಹುದಾದ ಕಾನೂನಿನನ್ವಯ ಜಾರಿಗೊಳಿಸತಕ್ಕದ್ದು."

ಈ ಮಸೂದೆಯು ಅತ್ಯಂತ ವಿರೋಧಾಭಾಸದಿಂದ ಕೂಡಿದೆ. ಇಡೀ ಹಿಂದು ಜನಾಂಗಕ್ಕೆ ಈ ಮಸೂದೆಯನ್ನು ಜಾರಿ ತರುವುದರಿಂದ ಇಡೀ ದೇಶಕ್ಕೆ ಪ್ರಯೋಜನವಿದೆಯೆಂದು ನಂಬುವವರಿಗೂ ಕೂಡ ಇದು ಯೋಗ್ಯವಾಗಿಲ್ಲ. ಸದನವು ಹುಡುಕಿ ಕ್ರಮಕೈಗೊಳ್ಳಬಾರದೆಂದು ವಿನಂತಿಸುವೆ. ಈ ಸದನಕ್ಕೆ ಅಂಥ ನ್ಯಾಯಾಧಿಕರಣವಾದ ಶಕ್ತಿ ಇಲ್ಲವೆಂದು ನಾನು ಹೇಳಲಾರೆ. ಆದರೆ ಇಷ್ಟವಿಲ್ಲದ ಜನತೆಯ ಮೇಲೆ ಈ ಮಸೂದೆಯನ್ನು ಹೇರುವ ಜವಾಬ್ದಾರಿಯನ್ನು ತೆಗೆದುಕೊಳ್ಳಬಾರದೆಂದು ನಾನು ಕೇಳಿಕೊಳ್ಳುತ್ತಿರುವೆ. ಬ್ರಿಟಿಷ್ ಸರ್ಕಾರದಿಂದ ಸ್ವಾತಂತ್ರ್ಯವನ್ನು ಗಳಿಸಲೆಂದೇ ವಿಶೇಷವಾಗಿ ನಿರ್ಮಾಣವಾದ ಈ ಸದನವು, ಕೆಲ ಕಾಲಾನಂತರ ಈ ಸಂವಿಧಾನವನ್ನು ರೂಪಿಸಿ ಅಂಗೀಕರಿಸಿದೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್) :** ಮಾನ್ಯರೆ, ಈ ಹಂತದಲ್ಲಿ ಇದು ಪ್ರಸ್ತುತವೇ? ಚರ್ಚೆಯ ಮಧ್ಯೆ ಪ್ರವೇಶಿಸಲು ನಾನು ಇಷ್ಟಪಡಲಾರೆ, ಆದರೆ ಕೇವಲ ಒಂದು ಕಲಮಿನ ಚರ್ಚೆಯಲ್ಲಿಯೇ ನಾವು ನಾಲ್ಕು ತಾಸು ಕಳೆದಿದ್ದೇವೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ಮಸೂದೆಯನ್ನು ಅಂಗೀಕರಿಸಲು ಈ ಸದನ ದೇಶದ ಮತಾಭಿಪ್ರಾಯವನ್ನು ಪಡೆದಿಲ್ಲವೆಂದು ನಾನು ಹೇಳಬಯಸುತ್ತೇನೆ. ಭಾರತದ ಸಾಮಾಜಿಕ, ಧಾರ್ಮಿಕ ಮೂಲ ತಳಹದಿಗೆ ಪ್ರಭಾವ ಬೀರುವ ಮೂಲಭೂತ ವಿಷಯ ಇದಾಗಿದೆ. ಆದ್ದರಿಂದ ನಮ್ಮ ಸ್ಪಷ್ಟ ಮತ್ತು ಯೋಗ್ಯವಾದ ಖಚಿತ ನಿಲುವನ್ನು ತಳೆಯುವ ಆವಶ್ಯಕತೆ ಇದೆ. ಸರಿಯಾದ ಸಂದರ್ಭದಲ್ಲಿ ತಿಳಿಸಲಾಗದ ಚರಿತ್ರೆಯ ವಿಷಯವನ್ನು ನಾವೀಗ ಅತ್ಯಂತ ವಿಶೇಷವಾಗಿ ವರ್ಣಿಸಲು ಹೋಗುವುದಿಲ್ಲ. ಆದರೆ ಆ ಸಂದರ್ಭದಲ್ಲಿ ಈಗ ಇರುವ ಸದನದ ಬಹುತೇಕ ಸದಸ್ಯರಲ್ಲಿ, ಹೊಸ ಸದಸ್ಯರು ಹಾಜರಿರಲಿಲ್ಲವೆಂಬುದನ್ನೂ ನಾನು ಮರೆತಿಲ್ಲ. ಆದ್ದರಿಂದ ಆ ಅಂಶಗಳನ್ನು ಸಂಕ್ಷೇಪವಾಗಿ ನಾನು ಪ್ರಸ್ತುತಪಡಿಸಿದರೆ, ಅದು ಅನಗತ್ಯವಾಗಲಾರದು.

---

* ೧೯೫೧ರ ಫೆಬ್ರವರಿ ೬ರ ಸದನದ ಚರ್ಚೆ ಸಂಪುಟ VIII, ಭಾಗ II ಪುಟಗಳು ೨೪೨೫–೮೩.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ನಾನು ತಿಳಿಯಪಡಿಸಲು ಬಯಸುವುದೇನೆಂದರೆ, ಮಸೂದೆಯನ್ನು ಕುರಿತು ಚರ್ಚಿಸುವ ಸದನದ ಸಮರ್ಥತೆಯನ್ನಾಗಲಿ, ಅದರ ಪ್ರಾತಿನಿಧಿಕ ಸ್ವರೂಪವನ್ನಾಗಲಿ ಈಗ ಮತ್ತೆ ಪ್ರಸ್ತಾಪಿಸುವ ಅಗತ್ಯವಿಲ್ಲ. ಮಸೂದೆಯನ್ನು ಚರ್ಚೆಗೆ ಅಂಗೀಕರಿಸುವ ಮುನ್ನವೇ ಇದನ್ನೆಲ್ಲಾ ಸಾಕಷ್ಟು ರೀತಿಯಲ್ಲಿ ಪರಿಶೀಲಿಸಿರುವ ಪ್ರಯುಕ್ತ, ಈ ಹಂತದಲ್ಲಿ ಅದರ ಮರುಚರ್ಚೆ ಅವಶ್ಯವಿಲ್ಲ. ನಾವು ಸದನದ ಮುಂದೆ ಈಗ ಕಲಮು ೨ ಪ್ರತಿ ಕಲಮಿನ ಚರ್ಚೆ ಕೈಗೆತ್ತಿಕೊಂಡಿದ್ದೇವೆ. ಆದ್ದರಿಂದ ಅವರ ನಿಲುವುಗಳನ್ನು ಕೇವಲ ಕಲಮು–೨ಕ್ಕೆ ಮೀಸಲಿರಿಸಿ, ಅವಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಸೂಚಿಸಲಿ, ಚರ್ಚೆಯ ವ್ಯಾಪ್ತಿ ದೊಡ್ಡದಿದ್ದರೂ, ಮಸೂದೆಯನ್ನು ಕುರಿತು ಚರ್ಚಿಸುವ, ಸದನದ ಪ್ರಾತಿನಿಧಿಕ ಸಾಮರ್ಥ್ಯವನ್ನೇ ಪ್ರಶ್ನಿಸುವ ಅಥವಾ ಅನುಮಾನಿಸುವ ಹಂತಕ್ಕೆ ಮುಂದುವರೆಯುವ ಅಗತ್ಯವಿಲ್ಲ. ಇದು ಕೇವಲ ಈ ಹಿಂದೆ ಹೇಳಿದ್ದನ್ನೇ ಪುನರಾವರ್ತಿಸುವ ಅನವಶ್ಯಕ ಸಂಗತಿಯಾಗುತ್ತದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯರೆ ನಾನು ನಿಮ್ಮ ಆದೇಶಕ್ಕೆ ತಲೆ ಬಾಗುತ್ತೇನೆ. ನಾನು ಸದನದ ಪ್ರಾತಿನಿಧಿಕ ಗುಣವನ್ನಾಗಲಿ ಅಥವಾ ಅದರ ಸಾಮರ್ಥ್ಯವನ್ನಾಗಲಿ ಪ್ರಶ್ನಿಸುತ್ತಿಲ್ಲ. ಆದರೆ ಪ್ರಶ್ನೆ ಎಂದರೆ ನಾನು ಈ ಬಗ್ಗೆ ಜನರನ್ನು ಸಂಪರ್ಕಿಸಿಲ್ಲ. ಆದರೆ ನಮಗೆ ಆ ಬಗ್ಗೆ ಹಕ್ಕಿಲ್ಲವೆಂದಾಗಲಿ, ನಾವು ಜನರನ್ನ ಪ್ರತಿನಿಧಿಸುತ್ತಿಲ್ಲವೆಂದಾಗಲಿ, ಅಲ್ಲ. ಆದರೆ ಮುಜುಗರಗಳಿಗೆ ಕಾರಣವಾಗಬಹುದಾದ ಇಂಥ ಸಾಮಾಜಿಕ ಕಾನೂನನ್ನು ಜಾರಿಗೊಳಿಸುವಾಗ್ಗೆ ನಾವು ಜನರ ಮತಗಣನೆಯನ್ನು ಪಡೆಯಬೇಕು. ಇದನ್ನೇ ನಾನು ತಮ್ಮೆದುರು ಮಂಡಿಸಲೆತ್ನಿಸುತ್ತಿರುವೆ. ಇದನ್ನು ನಾನು ವಿಸ್ತರಿಸಿ ಹೇಳಬಯಸುವುದಿಲ್ಲ. ನಂ.೩೧ರ ತಿದ್ದುಪಡಿಗೆ ಸಂಬಂಧಿಸಿದಂತೆ ನಡೆಸಬಹುದಾದ ಚರ್ಚೆಗೆ ಪೂರಕವಾಗಿ ನಾನು ಈ ವಿಷಯಗಳನ್ನು ಪ್ರಸ್ತಾಪಿಸುತ್ತಿರುವೆ. ಬೇರೆ ಬೇರೆ ರಾಜ್ಯಗಳಿಗೆ, ಬೇರೆ ಬೇರೆ ಕಾನೂನುಗಳ ಮೂಲಕ, ಅವರ ಜಾರಿಯ ರೀತಿಯನ್ನು– ಬೇರೆ ಬೇರೆ ಜನರಿಗೆ ಅಥವಾ ವರ್ಗಗಳಿಗೆ, ಹೇಗೆ ಈ ಮಸೂದೆಯ ಜಾರಿಯಲ್ಲಿ ನಿಯಂತ್ರಣಗಳನ್ನು ಹಾಕಬಹುದೆಂಬುದರ ಬಗ್ಗೆ ಮತ್ತು ಹಂತ ಹಂತವಾಗಿ ಈ ಮಸೂದೆ ಅನ್ವಯಗೊಳ್ಳಬೇಕೆಂಬುದರ ಬಗ್ಗೆ ಈ ಮಸೂದೆಯ ಅನ್ವಯವನ್ನು ನಿಯಂತ್ರಣಗೊಳಿಸಬೇಕೆಂಬುದರ ಬಯಕೆಯಿಂದ ನಾನು ಈ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. ಆದ್ದರಿಂದ ನನ್ನ ತಿದ್ದುಪಡಿಯ ಉದ್ದೇಶವೇನೆಂದರೆ, ಎಲ್ಲಾ ಜನರಿಗೂ ಏಕಾಏಕಿ ಈ ಮಸೂದೆಯನ್ನು ಅನ್ವಯಗೊಳಿಸಬಾರದೆಂಬುದೇ ಆಗಿದೆ.

ಜನರ ಬಯಕೆಗಳೇನು, ಭಾವನೆಗಳೇನು ಅವರ ಸ್ಥಿತಿಗತಿಗಳೇನು ಎಂಬುದನ್ನು ತಿಳಿಯಲು ರಾಜ್ಯ ಸರ್ಕಾರಗಳೇ ಉತ್ತಮ. ಯಾವ ಪ್ರಮಾಣದಲ್ಲಿ, ಯಾವ ಹಂತದಲ್ಲಿ ಆ ಸರ್ಕಾರಗಳು ಯಾವ ಕಾನೂನಿನನ್ವಯ ಈ ಮಸೂದೆಯನ್ನು ಜಾರಿಗೆ ತರಬೇಕೆಂಬುದರ ವಿವೇಚನೆಯನ್ನು ಅವುಗಳಿಗೆ ಬಿಡುವುದು ಉಚಿತ. ನನಗೆ ತಿಳಿದಮಟ್ಟಿಗೆ ಪಶ್ಚಿಮ ಬಂಗಾಳದ ಸರ್ಕಾರ ಕಳಿಸಿರುವ ವರದಿಯು ಈ ಮಸೂದೆಯನ್ನು ವಿರೋಧಿಸಿದೆ.

ನಿನ್ನೆ ತಾನೆ ವರದಿಯನ್ನು ಒಪ್ಪಿಸಿದ್ದರೂ, ಸನ್ಮಾನ್ಯ ಸದಸ್ಯರೊಬ್ಬರು, ಖಾಸಗಿಯಾಗಿ ಮಾತಾಡುತ್ತಾ, ಬಂಗಾಳದಲ್ಲಿ ಕೆಲ ಸಚಿವರು ವೈಯಕ್ತಿಕವಾಗಿ ಈ ಕಾನೂನು ಪರವಾಗಿದ್ದಾರೆಂದು ಹೇಳಿದ್ದರೂ, ಅದು ಆ ಸರ್ಕಾರದ ಅಧಿಕೃತ ಹೇಳಿಕೆಯಾಗುವುದಿಲ್ಲ. ಪ್ರತಿಯೊಂದು ಸರ್ಕಾರವು ಈ ಮಸೂದೆಗೆ ಸಂಬಂಧಿಸಿದಂತೆ ವಿವಿಧ ಸಮಸ್ಯೆಗಳನ್ನು ಹೊಂದಿವೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಪ್ರತಿಯೊಂದು ರಾಜ್ಯವು

---

* ೧೯೫೧ರ ಫೆಬ್ರವರಿ ೬ರ ಸದನದ ಚರ್ಚೆ ಸಂಪುಟ VIII, ಭಾಗ II ಪುಟಗಳು ೨೪೨೫–೮೩.

ಆಧುನೀಕರಣದ ಹಂತದಲ್ಲಿ, ಅದರ ಆರ್ಥಿಕ ಪರಿಸ್ಥಿತಿಯಲ್ಲಿ ಬೇರೆ ಬೇರೆ ನೆಲೆಗಳಲ್ಲಿದ್ದು, ಅವುಗಳ ವಿಭಿನ್ನ ಶ್ರೇಣಿಯನ್ನೂ, ಪರಿಸ್ಥಿತಿಗಳನ್ನೂ ಬೇರೆ ಬೇರೆ ರಾಜ್ಯಗಳಲ್ಲಿರುವುದನ್ನು ತರಿಸಿಕೊಂಡು ಪರಿಶೀಲಿಸಬೇಕೆಂದು ನಾನು ನಂಬುತ್ತೇನೆ. ಇಲ್ಲ ಯಾವ ಸದಸ್ಯರು ಈ ಮಸೂದೆ ಬಹಳ ಒಳ್ಳೆಯದೆಂದು ಭಾವಿಸುವವರು ಇದ್ದಾರೋ, ಹಾಗೆಯೇ ತಮಗೆ ಈ ಮಸೂದೆ ಬಹಳ ಒಳ್ಳೆಯದಲ್ಲವೆಂದು ಪರಿಭಾವಿಸುವ ಬಹುತೇಕ ಸದಸ್ಯರೂ ಇದ್ದಾರೆಂದೇ ನನ್ನ ಅಭಿಪ್ರಾಯ. ಆದ್ದರಿಂದ ನಾವು ಯಾವುದಾದರೂ ಮಧ್ಯಮಾರ್ಗವನ್ನು ಅವಲಂಬಿಸೋಣ. ಯಾರು ಮಸೂದೆ ಚೆನ್ನಾಗಿದೆಯೆನ್ನುತ್ತಾರೋ, ಅವರು ಒಪ್ಪಿಕೊಳ್ಳಲು ಬಿಡೋಣ, ಆದರೆ ಬೇರೆಯವರ ಮೇಲೆ ಅದನ್ನು ಅವರು ಹೇರದಿರಲಿ.

ಈಗ ರಾಜ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಕಾನೂನನ್ನು ಜಾರಿಗೊಳಿಸಲು ಮತ್ತು ವಿಭಿನ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಸಂಹಿತೆಯನ್ನು ಜಾರಿಗೊಳಿಸಲು ರಾಜ್ಯ ಶಾಸಕಾಂಗ ಪಕ್ಷಗಳೇ ಸರಿಯಾದ ಅಧಿಕಾರವುಳ್ಳಂತಹುಗಳಾಗಿವೆ. ಈ ಕಾನೂನು ಜಾರಿಗೊಳಿಸುವ ಜವಾಬ್ದಾರಿ ಹೊತ್ತಿರುವ ಮಾನ್ಯ ಕಾನೂನು ಸಚಿವರು ಈ ಕಾನೂನುಗಳಲ್ಲಿರುವ ಐಕ್ಯತೆ ಬಗ್ಗೆ ಆಸಕ್ತಿ ಹೊಂದಿರಬಹುದು. ಆದರೆ ಅವು ವಾಸ್ತವಿಕವಾಗಿ ಫಲ ನೀಡುವಂತಿರಬೇಕು. ಮಸೂದೆ ಕುರಿತಂತೆ ನೈಜ ಅಭಿಪ್ರಾಯವನ್ನು ಗ್ರಹಿಸಲು ರಾಜ್ಯ ಸರ್ಕಾರಗಳೇ ಸರಿಯಾದ ಅಧಿಕಾರವನ್ನು ಹೊಂದಿವೆ ಮತ್ತು ಈ ಮಸೂದೆಯ ಜಾರಿಯ ಅಧಿಕಾರವನ್ನು ಅವುಗಳ ನಿಯಂತ್ರಣಕ್ಕೆ ಬಿಟ್ಟುಕೊಡಬೇಕೆಂದು ನಾನು ವಿನಂತಿಸುತ್ತೇನೆ. ನಾನು ಹೇಳಿದ ಈ ತತ್ವಕ್ಕೆ ಯಾವ ಆಕ್ಷೇಪವೂ ಇರಲಾರದು. ಈಗಾಗಲೆ ಹೇಳಿರುವಂತೆ ಈ ಒಂದು ಮಸೂದೆಯು ಪ್ರಯೋಜನಕಾರಿಯಾಗಿದ್ದು, ಜನ ಸ್ವೀಕರಿಸುವಂತಿದ್ದು, ಭಾರತದ ಎಲ್ಲಾ ಹಿಂದೂಗಳಿಗೆ ಒಪ್ಪಿಗೆಯಾಗುವಂತಿದ್ದು ಎನ್ನುವುದಾಗಿದ್ದರೆ ರಾಜ್ಯ ಸರ್ಕಾರಗಳು ಮುಕ್ತವಾಗಿ ತಮ್ಮ ಅಭಿಪ್ರಾಯ ಹೇಳಲು ಅವಕಾಶ ಕೊಡುವುದರಲ್ಲಿ ತಪ್ಪೇನಿಲ್ಲ. ರಾಜ್ಯ ಸರ್ಕಾರಗಳು ತಮ್ಮದೇ ಆದ ವಿಭಾಗಗಳನ್ನು ಹೊಂದಿದ್ದು ಅವುಗಳ ಮೂಲಕ ಜನರ ಆಶಯಗಳೇನೆಂದು ತಿಳಿಯುವ ಸಾಮರ್ಥ್ಯವನ್ನು ಹೊಂದಿವೆ ಹಾಗೂ ರಾಜ್ಯ ಶಾಸಕಾಂಗ ಸದಸ್ಯರೂ ಕೂಡ ಜನರ ಭಾವನೆಗಳೇನು ಎಂದು ಅರ್ಥಮಾಡಿಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಈ ಮಸೂದೆಯ ಜಾರಿಯ ವಿಷಯವನ್ನು ವಿವಿಧ ಪರಿಸ್ಥಿತಿಗಳ ಹಿನ್ನೆಲೆ ಮತ್ತು ವಿಭಿನ್ನ ಜನರಿಗೆ ಅನ್ವಯಿಸುವ ನಿರ್ಧಾರವನ್ನು ಸ್ಥಳೀಯ ಶಾಸಕಾಂಗ ಸಭೆಗಳಿಗೆ ಬಿಟ್ಟುಕೊಡಬೇಕೆಂದು ನಾನು ಆಗ್ರಹಿಸುತ್ತೇನೆ. ಒಮ್ಮೆ ಇದನ್ನು ಮಾಡಿದರೆ ಮಸೂದೆ ಕುರಿತು ಇರುವ ಬಹುಮುಖ್ಯ ತಕರಾರು ಹಾಗೂ ವಿವಾದ ಒಮ್ಮೆಲೆ ಮಾಯವಾಗುತ್ತದೆ. ಮಸೂದೆಯ ಜಾರಿಯೂ ಹೆಚ್ಚು ಒಪ್ಪಿತ ಎಂದು ಹೆಚ್ಚು ಹೆಚ್ಚು ಜನರು ಭಾವಿಸಿದಂತೆಲ್ಲಾ, ಈ ಮಸೂದೆಯನ್ನು ಸ್ಥಳೀಯ ಶಾಸಕಾಂಗಗಳ ಮೂಲಕವೇ ಜಾರಿಗೊಳಿಸಬೇಕೆಂಬ ಪರೀಕ್ಷೆಗೆ ಅವರು ಸಿದ್ಧವಾಗುತ್ತಾರೆ. ಈ ತಿದ್ದುಪಡಿಯು ಬಹು ಮುಖ್ಯ ತತ್ವವನ್ನೇ ಪ್ರಸ್ತಾಪಿಸುತ್ತಿರುವುದರಿಂದ ಮತ್ತು ತಕರಾರುಗಳು ಗಂಭೀರವಾಗಿರುವುದರಿಂದ ಈ ಕ್ರಮವನ್ನೇ ಅಂಗೀಕರಿಸಬೇಕು.

ಈ ಕಾನೂನು ರಾಜ್ಯಗಳ ಕೆಲ ಪ್ರದೇಶಗಳಲ್ಲಿ ಕೆಟ್ಟ ಪ್ರಭಾವವನ್ನು ಬೀರುವ ಲಕ್ಷಣಗಳು ಇವೆ ಎಂದು ಮನವರಿಕೆಯಾಗಿದೆ. ದೇಶದಲ್ಲಿ ವಿವಾಹ ಮತ್ತು ವಿಚ್ಛೇದನ ಕುರಿತಂತೆ ವಿವಿಧ ರೀತಿಯ ಸಂಪ್ರದಾಯಗಳು ಜಾರಿಯಲ್ಲಿವೆ. ನೇರವಾಗಿ ಅವುಗಳ ಮೇಲೆ ಈ ಮಸೂದೆಯನ್ನು ಹೇರಿದರೆ, ಸರಳವಾಗಿರುವ ವಿವಾಹ ಮತ್ತು ವಿಚ್ಛೇದನಗಳು ಸಂಕೀರ್ಣ ವಿವಾಹ ಮತ್ತು ವಿಚ್ಛೇದನಗಳಾಗಿ ಪರಿವರ್ತಿತವಾಗುವ ಸಾಧ್ಯತೆ ಇದೆ. ಅಷ್ಟರಮಟ್ಟಿಗೆ, ಅವರ ಹಕ್ಕುಗಳಿಗೆ ಧಕ್ಕೆಯಾಗುತ್ತದೆ. ಅಲ್ಲದೆ ಅಷ್ಟಲ್ಲದೆ ಅವರಿಗೆ ಇದು ಶ್ರಮದಾಯಕವೂ ಹೌದು. ಆದ್ದರಿಂದ ಯಾವುದೇ ದೃಷ್ಟಿಯಿಂದ ನೋಡಿದರೂ, ವಿಶಿಷ್ಟ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಈ

ಮಸೂದೆ ಗೊತ್ತುಪಡಿಸಿರುವ ವಿವಾಹ ಮತ್ತು ವಿಚ್ಛೇದನದ ಹಕ್ಕನ್ನು ಒಲ್ಲದ ಜನಗಳೂ ಇದ್ದಾರೆ. ಜಾರಿಯನ್ನು ಸ್ಥಳೀಯ ಸರ್ಕಾರಗಳಿಗೇ ಬಿಟ್ಟುಕೊಡಬೇಕು. ಮಾನ್ಯರೇ ಎಷ್ಟೋ ವೇಳೆ ನನ್ನನ್ನೂ ಹೀಗೆ ಹೇಳಿದ ಕಾರಣಕ್ಕೆ ಅಣಕು ಮಾಡಲಾಗಿದೆ. ಅಡೆತಡೆ ಮಾಡಲಾಗಿದೆ.

**ಮಧ್ಯಾಹ್ನ ೧೨**

**ಬಾಬು ನಾರಾಯಣ ಸಿಂಗ್(ಬಿಹಾರ) :** ಇಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಅದು ನನ್ನ ವಿಶೇಷ ಹಕ್ಕು. ವಿಳಂಬವಾಗುತ್ತಿರುವುದಕ್ಕೆ ನನಗೆ ಹೊಳೆದಂತೆ ಎರಡು ಕಾರಣಗಳಿವೆ. ಈ ಎರಡು ಕಾರಣಗಳಿಗೆ ಮಸೂದೆ ರಚನಾಕಾರರಾದ ಡಾ. ಅಂಬೇಡ್ಕರ್ ಅವರೆ ಹೊಣೆಗಾರರಾಗಿದ್ದಾರೆ. ಮೊದಲು ಮಸೂದೆಯನ್ನು ಆಯ್ಕೆ ಸಮಿತಿಗೆ ಕಳುಹಿಸಿಕೊಡಲಾಯಿತು. ಯಾವ ಕಾರಣಗಳಿಗೆ ಎಂಬುದನ್ನು ಅವರೇ ಚೆನ್ನಾಗಿ ಬಲ್ಲರು. ಆಯ್ಕೆ ಸಮಿತಿ ಮರಳಿ ಕಳುಹಿಸಿದಾಗ ಅದು ಒಟ್ಟಾರೆ ಹೊಸ ಮಸೂದೆಯಾಗಿ ಬಂದಿತು. ಅದೇ ಕೆಲ ವಿವಾದಗಳಿಗೆ ಕಾರಣವಾಗಿ, ಅದು ಸರಿಸುಮಾರು ಆರು ತಿಂಗಳು ಸಮಯವನ್ನು ಕಬಳಿಸಿತು. ಈ ವಿಳಂಬವು ನನ್ನಿಂದ ಆಗಿಲ್ಲವೆಂದೂ ನಾನು ಹೇಳುತ್ತಿದ್ದೇನೆ. ನನ್ನಿಂದ ಏನಾದರೂ ತಪ್ಪಾಗಿದ್ದರೆ, ಅದನ್ನು ತೋರಿಸಿ, ಈ ಸದನವು ಆದೇಶವನ್ನು ಹೊರಡಿಸಬಹುದು.

**ಶ್ರೀ ಬಿ. ದಾಸ(ಒರಿಸ್ಸಾ) :** ಕ್ಷಮಾಪಣೆ ಯಾಕೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ಡಾ.ಅಂಬೇಡ್ಕರ್ ಅವರಿಂದಲೇ ವಿಳಂಬವಾಗಿದೆ. ಅದಕ್ಕಾಗಿ ನಾನು ಅವರನ್ನು ನಿಂದಿಸಲಾರೆ. ಅವರಿಗೆ ಏನಾದರೂ ಉದ್ದೇಶವಿದೆ ಎಂದು ನಾನು ಹೇಳುವುದಿಲ್ಲ.

**ಡಾ. ಅಂಬೇಡ್ಕರ್ :** ಅವರು ನನ್ನನ್ನು ಕ್ಷಮಿಸಿದರು!

**ಶ್ರೀ ನಜೀರುದ್ದೀನ್ ಅಹ್ಮದ್ :** ಪ್ರಾಯಶಃ ಅವರು ವಿಷಯವನ್ನು ಸುಧಾರಿಸಲು ಪ್ರಯತ್ನಿಸಿದರು, ಆದರೆ ಅದೇ ಮತ್ತಷ್ಟು ಕಗ್ಗಂಟಾಯಿತು. ವಿಳಂಬಕ್ಕೆ ಮುಂದಿನ ಕಾರಣವೆಂದರೆ,

**ಡಾ. ಅಂಬೇಡ್ಕರ್ :** ಸದನದ ಯಾವುದೇ ಸದಸ್ಯರು ನನ್ನನ್ನು ಮತ್ತು ಮಾನ್ಯ ಸ್ನೇಹಿತರನ್ನು ಕುರಿತು ವಿಳಂಬಕಾರಿ ತಂತ್ರಗಳನ್ನು ಬಳಸುತ್ತಿದ್ದಾರೆಂದು ಆರೋಪಿಸಿದ್ದಾರೆಂದು ನನಗನಿಸುತ್ತಿಲ್ಲ. ನನಗೆ ಸಂಬಂಧಿಸಿದಂತೆ, ಅವರು ಯಾಕೆ ಅಷ್ಟೊಂದು ವಿವರಣೆಗಳನ್ನು ನೀಡುತ್ತಿದ್ದಾರೋ, ಅದರ ಆವಶ್ಯಕತೆಯೂ ಇಲ್ಲ. ಅವರು ಸಮಯವನ್ನು ವ್ಯರ್ಥಮಾಡುತ್ತಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಇಲ್ಲ ಸರ್, ಕನಿಷ್ಠ ಪಕ್ಷ ವಿವರಣೆ ನೀಡಲು ಒಂದು ಶಬ್ದವಾದರೂ ಬೇಕು. ನೇರವಾಗಿ ನನ್ನ ಮೇಲೆ ಆಪಾದನೆ ಮಾಡಿರದಿದ್ದರೂ, ಖಂಡಿತವಾಗಿಯೂ ನನ್ನ ಮೇಲೆ ಅರೋಪ ಮಾಡಲಾಗಿದ್ದು, ನೂರು ವರ್ಷಗಳಾದ ನಂತರವಾದರೂ ಅದನ್ನು ಸದನದ ದಾಖಲೆಗಳಲ್ಲಿ ಓದಬಹುದು. ವಿಳಂಬವಾಗುತ್ತಿರುವುದಕ್ಕೆ ಇನ್ನೊಂದು ಕಾರಣವೆಂದರೆ–ಮಸೂದೆಯನ್ನು ಆಯ್ಕೆ ಸಮಿತಿ ಮುಂದಿಟ್ಟಾಗ ಅದರೊಳಗೆ ಅಪಾರ ಸಂಖ್ಯೆಯ ಅವಶ್ಯ ಬದಲಾವಣೆಗಳ ಅಗತ್ಯವಿದ್ದು, ಅದನ್ನು ಆಯ್ಕೆ ಸಮಿತಿ ಸಾವಧಾನವಾಗಿ ಚರ್ಚಿಸುವ ಅವಕಾಶವಿಲ್ಲವೆಂದು ಭಾವಿಸಿ ಅದನ್ನು ಚರ್ಚೆಯ ಸಲುವಾಗಿ ಸದನದ ಮುಂದೆ ಹಾಗೆಯೇ ಇರಿಸಲಾಗಿದೆ. ಆ ಎಲ್ಲಾ ವಿವಾದಗಳು ಈಗ ಮುಗಿಬಿದ್ದು, ಸಾರ್ವಜನಿಕರ ನೆನಪು ತಾತ್ಕಾಲಿಕ, ಅದರಲ್ಲೂ ಮಂತ್ರಿವರ್ಯರ ನೆನಪೂ ಇನ್ನೂ ತಾತ್ಕಾಲಿಕ, ಆದರೆ ವಿಚಿತ್ರ ಆಕಸ್ಮಿಕದಿಂದ, ವಿಧಿಯ ವೈಚಿತ್ರ್ಯದಿಂದ ಈ ಎಲ್ಲಾ ವಿಳಂಬಕ್ಕೆ ನನ್ನನ್ನು ಹೊಣೆ ಮಾಡಲಾಗುತ್ತಿದೆ. ಇದನ್ನೆಲ್ಲಾ ಎತ್ತಿಕೊಂಡು ಚರ್ಚಿಸುವುದು ತೀರ ಅನವಶ್ಯಕ ಎಂದು ನಾನು ತಿಳಿಯುತ್ತೇನೆ. ಈ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ

– ಡಾ. ಪಟ್ಟಾಭಿ ಸೀತಾರಾಮಯ್ಯ ಅವರು ಒಂದು ಸಂದರ್ಭದಲ್ಲಿ ವಿಳಂಬ ತಂತ್ರಗಳಿಗೂ ಮನ್ನಣೆ ಇದೆ ಎಂದು ಹೇಳಿದ್ದರು. ಯಾವುದೇ ಸದಸ್ಯನಿಗೆ ಮಸೂದೆಯನ್ನು ವಿರೋಧಿಸಲೇಬೇಕೆಂಬ ಬಯಕೆ ಇದ್ದರೆ– ವಿಳಂಬ ತಂತ್ರಗಳಿಗೂ ಅವಕಾಶವಿರಬಲ್ಲದು. ಅವನು ವಿರೋಧಿಸಲೇಬೇಕೆಂದಿದ್ದರೆ ಎಷ್ಟು ಕಾಲ ಸಾಧ್ಯವೋ ಅಷ್ಟು ಕಾಲ,– ನ್ಯಾಯಯುತವಾಗಿಯೂ ಅಥವಾ ನ್ಯಾಯಸಮ್ಮತವಲ್ಲದ ರೀತಿಯಲ್ಲಿಯೋ ವಿರೋಧಿಸಲೇಬೇಕು. ಆದರೆ ನಾನು ಈ ತಂತ್ರವನ್ನು ತಾರಕಕ್ಕೆ ಒಯ್ಯಲಾರೆ ಎಂದು ಹೇಳಬಲ್ಲೆ. ಈ ಮಸೂದೆಯು ವಿವಾದಗಳಿಂದ ಕೂಡಿದ್ದು, ಅದರಿಂದಾಗಿಯೇ ಕೆಲ ವಿವಾದಗಳು ಅನಿವಾರ್ಯವೆಂದು ನಾನು ನಂಬಿದ್ದೇನೆ. ವಿವಾದವೆಂಬುದು ಮಸೂದೆಯೊಳಗೆ ಅಂತರ್ಗತವಾಗಿದೆ.

**ಡಾ. ದೇಶಮುಖ್(ಮಧ್ಯಪ್ರದೇಶ) :** ಡಾ. ಅಂಬೇಡ್ಕರ್ ಅವರೊಳಗೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ಹೌದು, ಇರಬಹುದು. ಯಾವಾಗ ಮಸೂದೆಯ ಕರಡು ಪ್ರತಿಯನ್ನು ವಿತರಿಸಿದಾಗ, ಹಿಂದೂ ಮಸೂದೆ ಸಮಿತಿಯು ದೇಶದ ಸುತ್ತೆಲ್ಲಾ ಸುತ್ತಿ, ಬಹುಜನರ ಅಭಿಪ್ರಾಯವನ್ನು ಸಂಗ್ರಹಿಸಿತು. ಅದರಲ್ಲಿ ಹೆಚ್ಚಿನ ಅಭಿಪ್ರಾಯಗಳು ಮಸೂದೆಯನ್ನು ವಿರೋಧಿಸುವಂತಿದ್ದವು. ಯಾವ ಹೆಣ್ಣುಮಕ್ಕಳು ಈ ಮಸೂದೆಯ ಮೂಲಕವೇ ಬಿಡುಗಡೆಯಾಗಬಹುದೆಂದು ಕಾತುರದಿಂದ ಕಾಯುತ್ತಿದ್ದರೋ ಅವರುಗಳೇ ಬೇರೆ ಬೇರೆ ಸ್ಥಳಗಳಲ್ಲಿ ಸಮಿತಿಯ ಸಭೆಗಳನ್ನು ಬಹುಸಂಖ್ಯೆಯಲ್ಲಿ ಒಗ್ಗೂಡಿ ವಿರೋಧಿಸಿದ್ದಾರೆ.

**ಶ್ರೀ ತ್ಯಾಗಿ (ಉತ್ತರ ಪ್ರದೇಶ) :** ಈಗ ಕಲಮು ೨ ರ ಚರ್ಚೆ ನಡೆಯುತ್ತಿದೆ. ಅದಕ್ಕೆ ಸಂಬಂಧಿಸಿದಂತೆ ಇದೆಲ್ಲಾ ಏನು?

**ಮಾನ್ಯ ಸಭಾಧ್ಯಕ್ಷರು :** ಅದನ್ನೆಲ್ಲಾ ಈ ಪೀಠವು ಕಾಳಜಿ ಮಾಡುತ್ತದೆ. ಆದರೆ ಸದಸ್ಯರೊಬ್ಬರು ಹೀಗೆ ಮಾಡಲು ಬಯಸಿದರೆ, ಅವರು ಮಾಡಬಹುದು; ಆದರೆ ಇವರ ವಿಷಯಕ್ಕೆ ಸಂಬಂಧಿಸಿದಂತೆ ಇವರ ಭಾಷಣವು ಬಹು ದೀರ್ಘವಾಗುತ್ತಿದ್ದು, ನಾಳೆ ಸಂಜೆಯವರೆಗೂ ಹೋಗಬಹುದು. ಆದ್ದರಿಂದ ಅವರನ್ನು ಅವರ ದಾರಿಗೆ ಬಿಟ್ಟುಬಿಡಿ. ಅವರು ಅಪ್ರಸ್ತುತವೆನಿಸಿದಲ್ಲಿ ಅದನ್ನು ಈ ಪೀಠ ನಿಲ್ಲಿಸುತ್ತದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ರೀತಿ ಮಧ್ಯೆ ಮಧ್ಯೆ ತಡೆಯೊಡ್ಡುವುದರಿಂದ ಕೆಲ ಪ್ರಮಾಣದ ತೊಂದರೆಯಾಗುತ್ತಿದೆ. ಯಾವಾಗ ಒಂದು ಪ್ರಶ್ನೆಯನ್ನು ಕೇಳಲಾಗುತ್ತದೋ, ಆಗ ಖಂಡಿತ ಉತ್ತರವನ್ನು ಅಪೇಕ್ಷಿಸಲಾಗಿರುತ್ತದೆ. ನಾನಿಂಥ ತಡೆಯೊಡ್ಡುವಿಕೆಗೆ ಒಗ್ಗಿಹೋಗಿಬಿಟ್ಟಿದ್ದೇನೆ. ನನ್ನಂಥವನಿಗೆ ಇಂಥ ತಡೆಯೊಡ್ಡುವಿಕೆಗಿಂತ ಮತ್ತಾವುದು ಒಪ್ಪಿತವಾದೀತು.

ಮಾನ್ಯರೆ, ಕಲಮು ೨, ಸಂಹಿತೆಯ ಮೂಲ ವಿಷಯಗಳ ಕುರಿತದ್ದಾಗಿರುವುದರಿಂದ, ಅದು ಬಹುಮುಖ್ಯವಾದದ್ದಾಗಿದೆ. ಬಹಳಷ್ಟು ತಿದ್ದುಪಡಿಗಳು ಇದಕ್ಕೆ ಸಂಬಂಧಿಸಿದವುಗಳಾಗಿದ್ದು, ಈ ಕಾಯ್ದೆಯ ಗಂಭೀರತೆಯ ಹಿನ್ನೆಲೆಯಲ್ಲಿ ಅದನ್ನು ಸಾರ್ವತ್ರಿಕವಾಗಿ ಒಮ್ಮೆಗೆ ಜಾರಿಮಾಡುವುದನ್ನು ತಡೆಹಿಡಿಯಲು ಪ್ರಯತ್ನಿಸುತ್ತವೆ. ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಮಸೂದೆಯನ್ನು ಸ್ವೀಕರಿಸುವ ಹಾಗೂ ಮಸೂದೆ ಕುರಿತು ಸಾವಧಾನವಾಗಿ ಚಿಂತಿಸುವ ವಿಷಯವನ್ನು , ಮಸೂದೆಯ ಗಂಭೀರತೆಯ ಹಿನ್ನೆಲೆಯಲ್ಲಿ ಸದನವು ಪರಿಶೀಲಿಸಬೇಕೆಂದು ನಾನು ಭಾವಿಸುತ್ತೇನೆ. ಇದನ್ನು ಮಾಡಿದಲ್ಲಿ, ಮಸೂದೆಯ ಪರಿಣಾಮ ಸಹಿಷ್ಣುಕಾರಿಯೂ ಹಾಗೂ ಅದರ ಕುರಿತಾಗಿರುವ ಬಹು ಆಕ್ಷೇಪಗಳೂ ಮಾಯವಾಗಬಲ್ಲವು. ಮಾನ್ಯರೇ ನನ್ನದು ಮುಗಿಯಿತು.

**ಪಂಡಿತ ಠಾಕೂರ್ ಭಾರ್ಗವ (ಪಂಜಾಬ್) :** ಮಾನ್ಯರೆ, ಬೇರೆ ಬೇರೆ ವಿಷಯಗಳನ್ನು ಕುರಿತಂತೆ ಹಿಂದೂ ಸಂಹಿತೆಯ ಜಾರಿಯನ್ನು ಕುರಿತಂತೆ ಹಾಗೂ ಕಲಮು ೨ರ ಅಡಿ ಬರುವ ಜನರ ಬಗ್ಗೆ, ತಮ್ಮ

ಪರಿಗಣನೆಗೆ ನಾನು ಕೆಲ ಅಂಶಗಳನ್ನು ಪ್ರಸ್ತಾಪಿಸಬಯಸುತ್ತೇನೆ.

ಈ ಹಿಂದೆ ಮಾತಾಡಿದ ಭಾಷಣಕಾರರು ಪ್ರಸ್ತಾಪಿಸಿದ ಕಲಮು ೨ರ ವ್ಯಾಪ್ತಿಯು ದೊಡ್ಡದು ಮತ್ತು ಸದನದ ಮುಂದೆ ಮಂಡಿಸಿದ ಎಲ್ಲಾ ವಿಷಯಗಳು ಗಂಭೀರ ಪರಿಗಣನೆಗೆ ಅರ್ಹವಾದವು. ಕಲಮು ೨ರ ಜಾರಿ ಕುರಿತಂತೆ ಸದನವು ಪರಿಶೀಲಿಸಬೇಕೆಂಬ ಅವರ ಮಾತುಗಳನ್ನು ನಾನು ಒಪ್ಪುತ್ತೇನೆ. ವಸ್ತುಸ್ಥಿತಿಯ ಪರಿಗಣನೆಯ ದೃಷ್ಟಿಯಿಂದ ನನ್ನ ಅಭಿಪ್ರಾಯವೇನೆಂದರೆ, ಕಲಮು ೨ರ ಅನ್ವಯವನ್ನು, ಈ ಹಿಂದಿನ ಹಿಂದೂ ಸಂಹಿತೆಯ ವ್ಯಾಪ್ತಿಯಲ್ಲಿ ಯಾರು ಬರುತ್ತಿದ್ದರೋ ಅವರಿಗೆ ಮಾತ್ರ ಅದನ್ನು ಮಿತಿಗೊಳಿಸುವುದು ಸರಿ ಎನ್ನಿಸುತ್ತದೆ. ಇಡೀ ದೇಶಕ್ಕೆ ಅನ್ವಯವಾಗುವ ನಾಗರಿಕ ಸಂಹಿತೆಯನ್ನು ನಿರ್ದೇಶಿಸಬೇಕೆನ್ನುವವರ ಪ್ರಯತ್ನಗಳನ್ನು, ನಾನು ಈ ಮೂಲಕ ಮಿತಿಗೊಳಿಸುತ್ತಿದ್ದೇನೆಂದು ಇದರ ಅರ್ಥವಲ್ಲ. ನಾನು ಕೂಡ ಅವರ ಪರವಾಗಿ ಇದ್ದೇನೆ. ಇಡೀ ದೇಶವೇ ಅವರ ಪರವಾಗಿದೆ. ಇಡೀ ದೇಶಕ್ಕೆ ಅನ್ವಯವಾಗುವಂತಹ ನಾಗರಿಕ ಸಂಹಿತೆಯೊಂದನ್ನು ಹೊಂದುವ ಪ್ರಯತ್ನದಲ್ಲಿ ನಿರತವಾಗಿರಬೇಕು. ಈ ದೃಷ್ಟಿಯಿಂದ ಸಂವಿಧಾನವನ್ನು ರೂಪಿಸಿ, ಈ ದೇಶಕ್ಕೆ ಬಹಳಷ್ಟು ನೀಡಿರುವ, ಡಾ.ಅಂಬೇಡ್ಕರ್ ಅವರ ಈ ಕಾರ್ಯವನ್ನು ಇಷ್ಟಪಟ್ಟಿರುವೆ. ಅಲ್ಲದೆ ಸುಮಾರು ಮೂವತ್ತು ಕೋಟಿ ಜನರಿಗೆ ಅನ್ವಯವಾಗುವಂಥ ಹಿಂದು ಸಂಹಿತೆಯನ್ನು ರೂಪಿಸಿರುವ ಅವರು, ಸ್ವಲ್ಪ ಕಾಲಾನಂತರದಲ್ಲಿ ಇಡೀ ದೇಶಕ್ಕೆ ಅನ್ವಯವಾಗಬಲ್ಲಂಥ ಹೊಸ ನಾಗರಿಕ ಸಂಹಿತೆಯೊಂದನ್ನು ತರಬಲ್ಲರು.

ಇದೇ ಸಂದರ್ಭದಲ್ಲಿ, ವಾಸ್ತವಿಕವಾಗಿ ಈ ಹಿಂದೂ ಸಂಹಿತೆಯನ್ನು ನಾಗರಿಕ ಸಂಹಿತೆಯಾಗಿ ಪರಿವರ್ತಿಸಲು ಬರುವುದಿಲ್ಲವೆಂದೂ ನಾನು ಭಾವಿಸುತ್ತೇನೆ. (ಯಾಕೆ ಅಗಲ್ಲ: ಒಬ್ಬ ಸದಸ್ಯರು) “ಯಾಕೆ ಆಗಲ್ಲ”? ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿದೆ. ಖಂಡಿತ ಅದಕ್ಕೆ ಕಾರಣಗಳನ್ನು ನೀಡುವೆ. ಈಗ ನಾನು ಎತ್ತಿ ತೋರಿಸಿದಂತೆ – ಇಡೀ ದೇಶಕ್ಕೆ ಅನ್ವಯವಾಗುವಂತಹ ನಾಗರಿಕ ಸಂಹಿತೆಯೊಂದು ಬೇಕೆಂದು ಈ ಹಿಂದೆ ಮಾತಾಡಿದ ಮಾನ್ಯ ಸರ್ವಟೆ, ಶ್ರೀ ವಿದ್ಯಾವಾಚಸ್ಪತಿ ಮತ್ತು ಶ್ರೀ ಜಸ್‌ವಂತ್ ರಾಯ್ ಕಪೂರ್ ಅವರ ಉತ್ಸಾಹವನ್ನು ನಾನು ಮೆಚ್ಚುತ್ತೇನೆ. ಹಿಂದೂ ಸಂಹಿತೆಗೆ ಮೂಲಭೂತ ತಳಹದಿಯಾಗಬಲ್ಲ ಕೆಲ ತತ್ವಗಳನ್ನು ಅದಕ್ಕೆ ಅಂತರ್ಗತಗೊಳಿಸಿ ಅದನ್ನೊಂದು ಕಾಯ್ದೆ ಮಾಡಲು ಪ್ರಯತ್ನಿಸಿರುವ ಡಾ.ಅಂಬೇಡ್ಕರ್ ಅವರ ಪ್ರಯತ್ನ ಶ್ಲಾಘನೀಯ. ಕೆಲವರ ಪ್ರಕಾರ, ಹಿಂದೂ ಸಂಹಿತೆ ಕೇವಲ ಹಿಂದೂಗಳಿಗೆ ಮಾತ್ರ ಅನ್ವಯವಾಗತಕ್ಕದ್ದಲ್ಲ, ಯಾಕೆಂದರೆ ಅದರೊಳಗೆ ಒಂದುಗೂಡಿಸಿರುವ ಅಂಶಗಳು ಕೇವಲ ಹಿಂದೂ ಕಾನೂನುಗಳಿಂದ ಮಾತ್ರ ಆಯ್ದುಕೊಂಡಿದ್ದಲ್ಲ. ಅದರೊಳಗಿನ ಅಂಶಗಳನ್ನು ಪರಿಶೀಲಿಸಿ ಹೇಳುವುದಾದರೆ ಅವುಗಳು ವಿಶಾಲ ತಳಹದಿಯನ್ನು ಹೊಂದಿದ್ದು ನಾಗರಿಕ ಸಂಹಿತೆಯಾಗಿ ರೂಪಗೊಳ್ಳಲು ಬುನಾದಿಯ ರೂಪದಲ್ಲಿದೆ.

ಈ ಹಿಂದೆ ಒಬ್ಬ ಭಾಷಣಕಾರರು ಹೇಳಿದಂತೆ, ವಿವಾಹವು ಖಂಡಿತ ಹತ್ತು ಸಂಸ್ಕಾರಗಳಲ್ಲಿ ಒಂದು. ಅದೊಂದು ಧಾರ್ಮಿಕ ಕ್ರಿಯೆ. ಪ್ರಸ್ತುತ ಮಸೂದೆಯಲ್ಲಿ ಸಹ ನಾವು ಈ ಹಿಂದಿನ ನಾಗರಿಕ ವಿವಾಹ ಕಾಯ್ದೆಯನ್ನು ಸೇರಿಸಿಕೊಂಡಿದ್ದೇವೆ. ನನ್ನ ಅತ್ಯಂತ ವಿನಯಪೂರ್ವಕ ಆಗ್ರಹವೇನೆಂದರೆ ನಾಗರಿಕ ವಿವಾಹ ಕುರಿತಂತೆ, ಅದನ್ನು ನಾಗರಿಕ ಸಂಹಿತೆಯೊಳಕ್ಕೆ ಅಡಕಗೊಳಿಸುವುದು,– ನಾವೆಲ್ಲಾ ಈಗ ಭಾವಿಸಿದಂತೆ, ಹಾಗೂ ಈ ದೇಶದ ಎಲ್ಲಾ ನಾಗರಿಕರ ಹಿತದೃಷ್ಟಿಯಿಂದ ಒಳ್ಳೆಯ ಕ್ರಮವಾಗುತ್ತದೆ.

ಆದ್ದರಿಂದ, ಹಿಂದು ಸಂಹಿತೆ ಹಿಂದೂ ಕಾನೂನನ್ನು, ಅಥವಾ ಯಾವುದೇ ಸಾರ್ವತ್ರಿಕ ಕಾನೂನುಗಳನ್ನು ತಳಹದಿಯಾಗಿ ಹೊಂದಿಲ್ಲವೆಂಬ ವಾದ ಒಂದು ಮಟ್ಟಕ್ಕೆ ಸರಿ. ಆದರೆ ನನ್ನ ದೃಷ್ಟಿಯಲ್ಲಿ ಪ್ರಸ್ತುತ

ಮಸೂದೆಯೊಳಕ್ಕೆ ೧೮೭೨ರ ನಾಗರಿಕ ವಿವಾಹ ಕಾಯ್ದೆಯ ಅಂಶಗಳನ್ನು ಅಂತರ್ಗತಗೊಳಿಸಬಾರದಿತ್ತು. ಆದ್ದರಿಂದ ನನ್ನ ಪ್ರಕಾರ, ಈ ಎಲ್ಲಾ ಅಂಶಗಳನ್ನು ಹಿಂದಕ್ಕೆ ತಕ್ಕೊಂಡು ಹಿಂದೂ ಮಸೂದೆ ಹಿಂದೂ ಕಾಯ್ದೆಯಾಗಿಯೇ ಉಳಿಯಲು ಬಿಡುವುದು ಒಳ್ಳೆಯದು. ಹಿಂದೂ ಸಂಹಿತೆಯೊಳಗೆ ನಾಗರಿಕ ವಿವಾಹ ಕಾಯ್ದೆಯನ್ನು ಬೆರಸುವ ಪ್ರಯತ್ನಕ್ಕೇನೆ ಅವಕಾಶ ಕಲ್ಪಿಸಬಾರದಿತ್ತು.

ನಾವು ಈಗ, ಈ ಹಿಂದೆ ನಮ್ಮ ಪೂರ್ವಜರು ಹೊಂದಿದ್ದಂತಹ ಹಿಂದೂ ಕಾಯ್ದೆಯನ್ನು ಹೊಂದಲು ಸಾಧ್ಯವಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ. ಆ ಕಾಲದಲ್ಲಿ ಹಿಂದೂಗಳು ಪ್ರತ್ಯೇಕವಾಗಿ ಬದುಕುತ್ತಿದ್ದರು. ಹಿಂದೂಗಳಿಗೆ ಸಂಬಂಧಿಸಿದಂತೆ ನಾಗರಿಕತೆಯ ಪ್ರಭಾವ ಹಾಗೂ ಇತರ ಧರ್ಮಗಳ ಪ್ರಭಾವವು ಇದುವರೆಗೂ ಶುರುವಾಗಿಯೇ ಇಲ್ಲ.

ನಾವು ಪ್ರತಿಯೊಂದು ಸಂಹಿತೆಗೂ, ಮುಸ್ಲಿಂ ಕಾನೂನು, ಕ್ರಿಶ್ಚಿಯನ್ ಕಾನೂನು ಹಾಗೂ ಹಿಂದೂ ಕಾನೂನುಗಳಿಂದ ಕೆಲ ಸರ್ವಸಾಮಾನ್ಯ ನೀತಿಗಳನ್ನು ಆಯ್ದುಕೊಂಡಿದ್ದರೂ ಅವು ತಮಗೆ ತಾವೇ ಹೊಂದಿಕೊಳ್ಳಲಾರವಾದರೂ ಇತರ ಒತ್ತಡಗಳ ಕಾರಣದಿಂದ, ಕಾನೂನು ಆಗಿ ಪರಿವರ್ತಿಸಲು ಅವುಗಳನ್ನು ಸಾರ್ವತ್ರೀಕರಣಗೊಳಿಸಲಾಗಿದೆ. ಉದಾಹರಣೆಗೆ ಹಿಂದೂ ಮಸೂದೆಯಲ್ಲಿ ಏಕಪತ್ನಿತ್ವವನ್ನು ಸೇರಿಸಲಾಗಿದೆ. ಇದು ಕ್ರಿಶ್ಚಿಯನ್ ಕಾನೂನಿನ ವಿಶೇಷ ಲಕ್ಷಣವಾಗಿದೆ. ಹಿಂದೂ ಸಂಹಿತೆ ರಚನಾಕಾರರು ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಹಕ್ಕಿರಬೇಕೆಂದು ಬಯಸಿದ್ದಾರೆ. ಎಷ್ಟೋ ವರ್ಷಗಳಿಂದ ಮದುವೆಯಾದ ಹೆಣ್ಣುಮಕ್ಕಳಿಗೆ ಆಸ್ತಿ ವಿಷಯ ಕುರಿತಂತೆ ಈ ಹಿಂದೂ ಕಾನೂನು ಅಪರಿಚಿತವಾಗಿದೆ. ಅಂದ ಹಾಗೆ, ಹಿಂದೂಗಳು ಒಂದಿಲ್ಲೊಂದು ಕಾಲದಲ್ಲಿ ಪ್ರಯೋಗ ಮಾಡದೇ ಇದ್ದ ಯಾವುದೇ ಆಚರಣೆಯಾಗಲೀ ನೀತಿಯಾಗಲೀ ಇಲ್ಲ.

[ಸಭಾಧ್ಯಕ್ಷರ ಸ್ಥಾನದಲ್ಲಿ ಶ್ರೀಮತಿ ದುರ್ಗಾಬಾಯಿ]

ಇದೊಂದು ಬೇರೆ ವಿಷಯ. ಆದರೆ ಈ ದಿನ ಯಾರಾದರೂ ಗತಕಾಲದ ತತ್ವಗಳನ್ನು ಹಿಂದೂ ಸಂಹಿತೆಗೆ ಸೇರಿಸಬೇಕೆನ್ನುವ ಎದೆಗಾರನೆ ಇರಬೇಕು. ಸಮಾಜವು ಪ್ರಗತಿ ಪಥದಲ್ಲಿ ಸಾಗಿದಂತೆ, ಮೌಲ್ಯಗಳಲ್ಲಿ ಪ್ರಗತಿ ಕಾಣಿಸಿಕೊಳ್ಳುತ್ತದೆ. ಈಗ ಯಾರಾದರೂ ಮನುವಿನ ವಿಚಾರಗಳನ್ನು ಭಾರತದ ಗಣರಾಜ್ಯದಲ್ಲಿ ಅಳವಡಿಸಬೇಕೆಂದರೇ ಅವನು ಹುಚ್ಚನೇ ಇರಬೇಕೆಂದು ನಾನು ಭಾವಿಸುತ್ತೇನೆ. ಶೂದ್ರನೊಬ್ಬ ಶ್ರುತಿಯನ್ನು ಓದಬಾರದೆಂದು ಈ ಸದನದಲ್ಲಿರುವವರಲ್ಲಿ ಯಾರಾದರೂ ಹೇಳಬಲ್ಲರೆ? ಅದಕ್ಕೆ ತದ್ವಿರುದ್ದವಾಗಿ ಡಾ.ಅಂಬೇಡ್ಕರ್ ಅವರು ಬೆಂಬಲಿಸುತ್ತಿರುವ ಸಂಹಿತೆಯನ್ನು ಸ್ವಾಗತಿಸುವವರಲ್ಲಿ ನಾನೂ ಒಬ್ಬಳು. ಈಗ ಎಲ್ಲಾ ವಿಷಯಗಳೂ, ಎಲ್ಲಾ ಮೌಲ್ಯಗಳೂ ಬದಲಾಗಿವೆ. ಹಿಂದೂಗಳು ಈಗಾಗಲೆ ತಮ್ಮ ದೋಣಿಗಳನ್ನು ಸುಟ್ಟಿದ್ದಾರೆ. ಯಾರಾದರೂ ಈಗ "ಹಿಂದೂ ಧರ್ಮಾಧಾರಿತ ಜಾತಿ ವ್ಯವಸ್ಥೆಯೇ ಬೇಕು. ಹುಟ್ಟಿನ ಅಧಾರವನ್ನೇ ಹಿಂದೂ ಸಂಹಿತೆಯಲ್ಲಿ ಅಳವಡಿಸಬೇಕೆಂದರೆ" ಅವನೊಬ್ಬ ಉದ್ಧಟನೇ ಇರಬೇಕು. ಹಿಂದೂ ಸಂಹಿತೆನಾದರೂ ಜಾತಿ ಆಧಾರಿತವಾದರೆ, ಅದರ ಗೊಡವೆಯೇ ನನಗಿಲ್ಲ. ನನಗೆ ತಿಳಿದಂತೆ ಮೂಲ ಹಿಂದೂ ಕಾನೂನಿನಲ್ಲಿ, ಜಾತಿಯು ಹುಟ್ಟಿನಾಧಾರವನ್ನು ಒಳಗೊಂಡಿಲ್ಲ. ಹಿಂದೂ ಕಾನೂನು ಅಥವಾ ವ್ಯವಸ್ಥೆಯು ಜಾತಿಯನ್ನೇ ಆಧರಿಸಿತ್ತೆಂದು ನನಗೆ ತೋರಿಸಿ ಕೊಡಲು ನಾನು ಈ ಸದನದ ಒಳಗಿನವರಿಗೆ ಅಥವಾ ಹೊರಗಿನವರಿಗೆ ಸವಾಲು ನೀಡಬಲ್ಲೆ. ಆದರೆ ಇವತ್ತು ನಾವು ಏನನ್ನು ಕಾಣುತ್ತಿದ್ದೇವೆ. ಜನ್ಮವೇ

---

* ಸದನದ ಚರ್ಚೆ, ಫೆಬ್ರವರಿ ೬, ೧೯೫೧ ಸಂಪುಟ VIII, ಭಾಗ II ಪುಟಗಳು ೨೪೫೦-೫೨.

ಜಾತಿಗೆ ನಿಜವಾದ ಕಾರಣವಾಗಿದೆ. ಹಿಂದೂ ಕಾಯ್ದೆಯನ್ನು ಮತ್ತು ಶಾಸ್ತ್ರಗಳ ಕಟ್ಟುನಿಟ್ಟಿನ ಭಾವನೆಗಳ ಪ್ರಕಾರ ಜನ್ಮಕ್ಕೆ ಯಾವ ರೀತಿಯ ಸ್ಥಾನವೂ ಇಲ್ಲ. ಯಾವ ರೀತಿಯಲ್ಲಿ ಹಿಂದೂ ಸಮಾಜ ಇರಬೇಕಿತ್ತೊ ಆ ರೀತಿಯಲ್ಲಿಲ್ಲದ ಹಿಂದೂ ಸಮಾಜ ಈಗ ಇದೆ. ಶೂದ್ರನು ಶ್ರುತಿಯನ್ನು ಓದಬಾರದೆಂದು ಹೇಳಿದ ಮನು ಕಾನೂನನ್ನು ನಾವು ಈಗ ಆಚರಣೆಗೆ ತರಲು ಸಾಧ್ಯವೆ? ಈಗ ಅವೆಲ್ಲವನ್ನು ನಾವು ಮುಗಿಸಿದ್ದೇವೆ.

ಮಸೂದೆಯು ಸರಿಯಿಲ್ಲವೆಂದು ಇದುವರೆಗೂ ನಡೆದ ಚರ್ಚೆ ಹೇಳುತ್ತಿದೆ. ಎಷ್ಟು ಕೆಟ್ಟದ್ದಾಗಿದೆಯೆಂದರೆ ಅದನ್ನು ಕೇವಲ ಹಿಂದೂ, ಮುಸ್ಲಿಂ ಮುಂತಾದವರಿಗೆ ಅನ್ವಯಿಸುವಷ್ಟು, ಕ್ಷಮಿಸಿ ಇಂಥ ಹೇಳಿಕೆಗಳನ್ನು ನಾನು ಪ್ರಶ್ನಿಸುತ್ತೇನೆ ಮತ್ತು ಅವುಗಳ ವಿರುದ್ಧ ಹೋರಾಟ ಮಾಡುತ್ತೇನೆ.

ಈ ಮಸೂದೆಯಲ್ಲಿ ಅಳ್ಳಕಗೊಳಿಸಿರುವ ಕೆಲ ತತ್ವಗಳು ವಿಶೇಷವಾದ ರೀತಿಯಲ್ಲಿ ಅತ್ಯುತ್ತಮವಾಗಿದೆ, ನಾನು ಹೇಳಿದ ಹಾಗೆ ಅವುಗಳನ್ನು ನಾನು ಹಿಂದೂ ಮಸೂದೆಯಲ್ಲಿ ಇರಲಿ ಎನ್ನುತ್ತೇನೆ. ನಾನು ಪ್ರತಿ ಕಲಮಿಗೂ ಪ್ರತಿ ಶಬ್ದಕ್ಕೂ ವಿರೋಧಿ ಅಲ್ಲ. ಯಾವ ಅಂಶಗಳು ಯೋಗ್ಯವೋ, ನಮ್ಮ ಸಮಾಜ ಇವತ್ತು ಯಾವುದನ್ನು ಒಪ್ಪಿಕೊಂಡಿದೆಯೋ, ಆ ಎಲ್ಲಾ ಸಾಮಾನ್ಯ ತತ್ವಗಳನ್ನೂ ನಾನು ಬಯಸುತ್ತೇನೆ. ಮತ್ತು ಸದನವು ಅದಕ್ಕೆ ಅಂಗೀಕಾರ ನೀಡಬೇಕು. ನಾನು ಕೆಲ ಅಂಶಗಳನ್ನು ವಿರೋಧಿಸುತ್ತಿದ್ದೇನೆ. ಸರಿಯಾದ ಸಂದರ್ಭದಲ್ಲಿ, ಅವಕಾಶ ದೊರೆತಾಗ ನಾನು ಅವುಗಳ ಬಗ್ಗೆ ಮಾತಾಡಲಿದ್ದೇನೆ. ಮಸೂದೆಯು ಬಹಳ ಕೆಟ್ಟದಾಗಿದ್ದು, ಅದನ್ನು ಹಿಂದೂಗಳಿಗಾಗಲಿ, ಮುಸ್ಲಿಂಗಳಿಗಾಗಲಿ ಅನ್ವಯಿಸಬಾರದೆಂಬ ಹೇಳಿಕೆ ಕುರಿತಂತೆ, ನಾನು ಹೇಳುವುದೇನೆಂದರೆ, ನನಗೆ ಅದು ಅಂಗೀಕಾರಾರ್ಹವಲ್ಲ.

ಹಿಂದೂಗಳಿಗೆ ಮಾತ್ರವೋ ಅಥವಾ ಎಲ್ಲರಿಗೂ ಅನ್ವಯಿಸಬಹುದೋ ಎಂದು ಪ್ರಶ್ನೆಯನ್ನು ನಾನು ಪರಿಶೀಲಿಸುತ್ತಿದ್ದೇನೆ. ಈ ಬಗ್ಗೆ ಪ್ರಸ್ತಾಪಿಸಲು ಶ್ರೀ ಸರ್ವಟೆ, ಶ್ರೀ ಇಂದ್ರ ವಿದ್ಯಾವಾಚಸ್ಪತಿ, ಹಾಗೂ ಜಸಪತ್ ರಾಯ್ ಕಪೂರ್ ಮೂರೋ ಅಥವಾ ನಾಲ್ಕೋ ಗೊತ್ತುವಳಿಗಳನ್ನು ಮಂಡಿಸಿದ್ದಾರೆ. ಇವುಗಳನ್ನು ಕುರಿತು ನನ್ನ ಅನಿಸಿಕೆ ಏನೆಂದರೆ, ಆ ಗೊತ್ತುವಳಿಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಏನಾದರೂ ಮಾಡಲು ಸಾಧ್ಯವಿದ್ದರೆ ಅವುಗಳನ್ನು ನಾನೇ ಬೆಂಬಲಿಸುತ್ತಿದ್ದೆ. ಆದರೆ ನಾನು ಅತ್ಯಂತ ವಿನಯಪೂರ್ವಕವಾಗಿ ಈ ಸದನದೊಳಗಿನ ಹಿಂದೂಯೇತರ ಸದಸ್ಯರನ್ನು ಇದು ತಮಗೆ ಸಮ್ಮತವೇ ಎಂದು ಕೇಳುತ್ತಿರುವೆ? ಅವರು ಇದನ್ನು ಇಷ್ಟಪಡುವುದಿಲ್ಲ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ) :** ಮಸೂದೆಯ ವ್ಯಾಪ್ತಿಯೊಳಕ್ಕೆ ಈಗಾಗಲೇ ಹಿಂದೂಯೇತರರನ್ನು ತರಲಾಗಿದೆ.

**ಪಂಡಿತ ಟಕೂರ್ ದಾಸ್ ಭಾರ್ಗವ :** ಹಾಗೆ ಹೇಳುವುದು ಒಟ್ಟಾರೆ ತಪ್ಪು ಅಭಿಪ್ರಾಯ. ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿಗಳಿಗೆ ಸಂಬಂಧಿಸಿದಂತೆ ಈ ಕಾನೂನು ಅವರಿಗೆ ಸಂಬಂಧಿಸುವುದಿಲ್ಲ ಎಂದು ವಿಶೇಷವಾಗಿ ಒಪ್ಪಿ ಹೇಳಲಾಗಿದೆ. ಈಗಾಗಲೇ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿಗಳಿಗೆ ಅನ್ವಯಿಸಲಾಗಿದೆ ಎಂಬ ಮಾನ್ಯ ಸದಸ್ಯರ ಸಲಹೆ ಎಲ್ಲಿದೆ?

**ಶ್ರೀ ಜೆ.ಆರ್. ಕಪೂರ್ :** ಮುಸ್ಲಿಂ, ಕ್ರಿಶ್ಚಿಯನ್ ಇನ್ನಿತರರನ್ನು ಹೊರತುಪಡಿಸಿದ್ದು ಹಿಂದೂಯೇತರ ಎಂದು ನಾನು ಹೇಳಿದ್ದು.

**ಮಾನ್ಯ ಸಭಾಧ್ಯಕ್ಷರು :** ಸಾಕು ಮಧ್ಯೆ ಮಧ್ಯೆ ಮಾತಾಡುವುದನ್ನು ನಿಲ್ಲಿಸಿ.

**ಶ್ರೀ ಆರ್.ಕೆ. ಚೌದರಿ :** (ಅಸ್ಸಾಂ) ಮೇಡಂ, ಒಂದು ವಿಷಯದ ಸ್ಪಷ್ಟನೆ, ಈಗಲೂ ಕೂಡ ಹಿಂದೂ ಮಸೂದೆಯು ಮುಸ್ಲಿಂ, ಬೋರ್ಹಾಗಳು ಮತ್ತು ಕಚ್ಚಿ ಮೆಮನ್ನರು ಅವರಿಗೆ ಅನ್ವಯವಾಗುವುದಿಲ್ಲವೇ

ಎಂಬುದನ್ನು ತಿಳಿಯಬಯಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಸ್ನೇಹಿತರು ನನ್ನ ಮಾತನ್ನೆ ಪ್ರಸ್ತಾಪಿಸಿದರು. ಪ್ರಸ್ತುತ ಹಿಂದೂ ಮಸೂದೆಯು, ನಾವು ತಿಳಿದಂತೆ ಬಹಳ ವರ್ಗಗಳ ಜನರಿಗೆ ಅನ್ವಯವಾಗುವುದಿಲ್ಲ. ಯಾರು ಹಿಂದೂಗಳೆಂದು ತಮ್ಮನ್ನ ಕರೆದುಕೊಳ್ಳುವುದಿಲ್ಲವೋ, ಅವರಿಗೂ ಅದು ಅನ್ವಯವಾಗುತ್ತದೆ.

ಆದರೆ ಅದು ಅವರು ಎಲ್ಲಿಯವರೆಗೆ ಅಪಸ್ವರ ಎತ್ತುವುದಿಲ್ಲವೋ ಅಲ್ಲಿವರೆಗೆ ಮಾತ್ರ. ಈ ತನಕ ಸಿಖ್, ಜೈನ, ಬೌದ್ಧರಿಗೆ ಸಂಬಂಧಿಸಿದಂತೆ, ಈ ಹಿಂದೂ ಮಸೂದೆ ಅವರಿಗೂ ಅನ್ವಯವಾಗುತ್ತದೆ. ಅನಾದಿಕಾಲದಿಂದಲೂ ಇದು ಅವರಿಗೆ ಅನ್ವಯಿಸುತ್ತಾ ಬಂದಿದೆ ಮತ್ತು ಬ್ರಿಟಿಷರ ಸರ್ಕಾರ ಸ್ಥಾಪಿತವಾದ ಕಾಲದಿಂದಲೂ ಅದು ಇದೆ. ಅವರೂ ಅದನ್ನೆ ಬಳಸುತ್ತಾ ಬಂದಿದ್ದಾರೆ. ಮುಸ್ಲಿಂರೂ ಸಹ ಬಳಸಿದ್ದಾರೆ. ("ಅವರನ್ನು ಪ್ರತ್ಯೇಕಿಸುತ್ತಿದ್ದೀರಿ" ಸದಸ್ಯರೊಬ್ಬರ ಪ್ರಸ್ತಾಪ) ನಾವು ಅವರನ್ನು ಪ್ರತ್ಯೇಕಿಸುತ್ತಿಲ್ಲ. ಹಿಂದೂ ಕಲಮು–೨ರ ಪ್ರಕಾರ, ಎಲ್ಲರಿಗೂ, ಅಂದರೆ ಮುಸ್ಲಿಂ ಸಂಹಿತೆಯ ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿ ಧರ್ಮೀಯರನ್ನು ಬಿಟ್ಟು ಉಳಿದೆಲ್ಲರಿಗೂ ಮಸೂದೆ ಅನ್ವಯವಾಗುತ್ತದೆ. ಮುಸ್ಲಿಂರಿಗೆ ಸಂಬಂಧಿಸಿದಂತೆ ಮತ್ತು ಅವರ ಕಾನೂನಿಗೆ ಸಂಬಂಧಿಸಿದಂತೆ, ನಾವು ಯಾವುದನ್ನೂ ಬದಲಾಯಿಸಿಲ್ಲ ಹಾಗೂ ನಾವು ಯಾವುದೇ ಕಾನೂನನ್ನು ಮಾಡಿಲ್ಲ. ಹಿಂದೂ ಕಾನೂನಿನಿಂದ ಅವರ ಸಂಪ್ರದಾಯಗಳು ಬದಲಾವಣೆಗಳಿಗೆ ಒಳಗಾಗಿವೆ ಎಂದು ನಾನು ಹೇಳುವ ಅಗತ್ಯವಿಲ್ಲ. ಯಾಕೆಂದರೆ ಅವುಗಳಿಗೆ ಅಸ್ತಿತ್ವವೇ ಇಲ್ಲ.

ಉದಾಹರಣೆಗೆ ಪಂಜಾಬನ್ನೇ ತೆಗೆದುಕೊಳ್ಳಿ, ಹಾಗೆ ನೋಡಿದರೆ ನಾವು ಹಿಂದೂ ಕಾನೂನಿಗೆ ಬದ್ಧರಾಗುವುದಿಲ್ಲ. ನಾನು ಪಂಜಾಬಿನ ಹಳ್ಳಿಗಳನ್ನು ಕುರಿತು ಮಾತಾಡುತ್ತಿದ್ದೇನೆ. ನಗರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಬಹುಜನ ಹಿಂದೂಗಳು ಮತ್ತು ಮುಸ್ಲಿಂರು, ಹಿಂದೂ ಮತ್ತು ಮುಸ್ಲಿಂ ಕಾನೂನುಗಳಿಗೆ ಒಳಪಟ್ಟಿರುತ್ತಾರೆ. ಆದರೆ ಪಂಜಾಬಿನ ಉಳಿದ ಭಾಗಗಳೆಲ್ಲಾ ನಾವು ಸಂಪ್ರದಾಯಗಳಿಂದ ಮಾರ್ಗದರ್ಶನ ಪಡೆದಿದ್ದೇವೆ ಅಥವಾ ಅದಕ್ಕೆ ಕಟ್ಟುಬಿದ್ದಿದ್ದೇವೆ ಅಥವಾ ಅದರ ಹತೋಟಿಗೆ ಒಳಪಟ್ಟಿದ್ದೇವೆ. ಪಂಜಾಬಿನಲ್ಲಿನ ಹಿಂದೂಗಳಿಗೆ ಮುಸ್ಲಿಂರಿಗೆ, ಸಿಖ್ಖರಿಗೆ ನಿರ್ಣಯ ತೆಗೆದುಕೊಳ್ಳುವಾಗ ಸಂಪ್ರದಾಯಕ್ಕೆ ಮೊದಲ ಆದ್ಯತೆ. ಇವೊತ್ತಿಗೆ ಕೂಡ ಸಂಪ್ರದಾಯವೇ ನಮ್ಮನ್ನು ಆಳುತ್ತಿದೆ. ಮೇಡಂ, ತಮ್ಮ ಅನುಮತಿಯಿಂದ, ರ್‍ಯಾಟಿಗನ್ನಿನ– ಪಂಜಾಬ್ ಸಂಪ್ರದಾಯ ಕಾನೂನಿನ ಮೊದಲ ಭಾಗವನ್ನು ಓದಲೇ? ಅದು ಹೀಗೆ ಹೇಳುತ್ತದೆ:

"ಉತ್ತರದಾಯಿತ್ವ, ಮಹಿಳೆಯರ ವಿಶೇಷ ಆಸ್ತಿ ಹಕ್ಕು, ನಿಶ್ಚಿತಾರ್ಥ, ವಿವಾಹ ವಿಚ್ಛೇದನ, ದತ್ತಕ, ಪಾಲಕತ್ವ, ಅಪ್ರಾಪ್ತವಯಸ್ಕತೆ, ಜಾರಜತ್ವ, ಕುಟುಂಬದ ಸಂಬಂಧ ಹಕ್ಕುದಾಯಿತ್ವ, ಕೊಡುಗೆ, ಭಾಗೀಕರಣ, ಯಾವುದೇ ಧಾರ್ಮಿಕ ಬಳಕೆ ಅಥವಾ ಸಂಸ್ಥೆ, ಪ್ರಸ್ತಾವ ಅಥವಾ ನಿಸತ್ವ–ಮುಂತಾದವುಗಳ ಕುರಿತು ನಿರ್ಣಯ ತೆಗೆದುಕೊಳ್ಳುವಾಗ ಈ ಪ್ರಾಂತ್ಯದಲ್ಲಿ ಸಂಪ್ರದಾಯವೇ ಮೊದಲ ನಿಬಂಧನೆ.

ಪಂಜಾಬಿನ ಸಂಪ್ರದಾಯ ಕಾನೂನಿಗೆ ಸಂಬಂಧಪಟ್ಟ ಹಾಗೆ ಹಿಂದೂಗಳಿಗೆ, ಮುಸಲ್ಮಾನರಿಗೆ, ಸಿಖ್‌ಗಳಿಗೆ ಎಲ್ಲರಿಗೂ ಒಂದೇ ಸಂಪ್ರದಾಯವಿದ್ದು ಅದಕ್ಕೆ ಎಲ್ಲರೂ ಬದ್ಧರಾಗಿದ್ದರು. ನಾಗರಿಕ ಕಾನೂನಿಗೆ ಇದೊಂದು ಒಳ್ಳೆಯ ಆಧಾರವಾಗಿದ್ದು, ಇದರ ಫಲಿತಾಂಶ ನಮಗೆ ಪಿತೃಸಂತಾನದ ವಾರಸಾ ಹಕ್ಕು ಇದ್ದು ಅದು ಮತ್ತು ಅದರಿಂದ ಹರಿಯುವ ಎಲ್ಲಾ ಸಂಪ್ರದಾಯಗಳಿಗೂ ನಾವು ಬದ್ಧರಾಗಿದ್ದೆವು. ಪಿತೃವಂಶೀಯ ಸಂಪ್ರದಾಯವನ್ನು ಪಂಜಾಬಿಗಳು ಪಾಲಿಸುತ್ತಿರುವುದರಿಂದ ಅವರಿಗೆ ವಿವಾಹಿತ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯನ್ನು ನೀಡಬೇಕೆಂಬುದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

ಅಸ್ಸಾಂನ ಜನರಲ್ಲೂ ಇದನ್ನೇ ಪಾಲಿಸಲಾಗುತ್ತಿದೆ. ಬಂಗಾಳದ ಉಚ್ಚ ನ್ಯಾಯಾಲಯದ ವ್ಯಾಪ್ತಿಯೊಳಕ್ಕೆ

ಬರುವ ಪೂರ್ವದಲ್ಲೂ ಅಲ್ಲಿ ಇದೇ ಪರಿಸ್ಥಿತಿ ಇತ್ತು. ನಾವು ಸಂಪ್ರದಾಯಗಳ ಹಿಂದಿನ ಮೂಲ ಉದ್ದೇಶವೇನೆಂದು ತಿಳಿದುಕೊಂಡರೆ ದೇಶದಾದ್ಯಂತ ಅಸ್ತಿತ್ವದಲ್ಲಿರುವ ಹಿಂದೂ ಕಾನೂನಿನ ತತ್ವ ಮತ್ತು ಭಾವನೆಗಳು ಪಂಜಾಬ್ ಮತ್ತು ಇತರ ಭಾಗದಲ್ಲಿ ಬೆಳೆದಿರುವ ಸಂಪ್ರದಾಯಗಳಿಗೆ ಮೂಲವೆಂದು ತಿಳಿಯಬಹುದು. ಸಂಪ್ರದಾಯವೆಂಬುದು ಪಂಜಾಬ್‌ಗೆ ಮಾತ್ರ ಸೀಮಿತವಾದ ವಿಶೇಷ ಅಂಶವಲ್ಲ; ಭಾರತದಲ್ಲಿನ ವಿವಿಧ ಭಾಗಗಳಲ್ಲಿರುವ ಸಂಪ್ರದಾಯಗಳು ಬಹುಮಟ್ಟಿಗೆ ಹಿಂದೂ ಕಾನೂನಿನಲ್ಲಿ ಬದಲಾವಣೆ ತರಲು ಕಾರಣವಾಗಿದೆ.

**ಶ್ರೀ ಆರ್.ಕೆ. ಚೌಧರಿ :** ತಡೆಯೊಡ್ಡುತ್ತಿರುವುದಕ್ಕೆ ಕ್ಷಮಿಸಿ. ಹಿಂದೂ ಕಾನೂನಿನ ಪಂಜಾಬ್‌ನಲ್ಲಿರುವ ಸಂಪ್ರದಾಯ ಕಾನೂನು ಸ್ಪಷ್ಟ ತಳ್ಳಿಹಾಕುತ್ತದೆಯೆ? ಅಥವಾ ಈ ಮಸೂದೆಯು ಅಂಗೀಕಾರವಾದಲ್ಲಿ ನಂತರದ ಪಂಜಾಬಿನ ಪರಿಸ್ಥಿತಿ ಏನಾಗಬಹುದೆಂದು ನಾನು ಕೇಳಬಹುದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಪಂಜಾಬಿನ ಕಾನೂನಿಗೆ ಸಂಬಂಧಪಟ್ಟಂತೆ, ಅದರ ಮೂಲವಾದ, ಪಂಜಾಬ್ ಕಾನೂನುಗಳ ಖಂಡ೫ನ್ನು ಪ್ರಸ್ತಾಪಿಸಿದ್ದೇನೆ. ಪಂಜಾಬಿಗೆ ಸಂಬಂಧಪಟ್ಟಂತೆ ನಾನೀಗಾಗಲೆ ರ್‍ಯಾಟಿಗನ್ ಪ್ರಾಥಮಿಕ ತಿಳಿವಳಿಕೆ ಭಾಗ ೧ನ್ನು ನಿಮ್ಮ ಮುಂದೆ ಓದಿದ್ದೇನೆ. ಇದು ೧೮೭೫ರ ಕಾಯ್ದೆಯನ್ನು ಆಧರಿಸಿ ಹೊರಡಿಸಿದ ೧೮೭೨ರ ಕಾನೂನಿನ ೫ನೆಯ ಖಂಡವಾಗಿದೆ. ಹಿಂದೂ ಸಂಹಿತೆಯಿಂದ ಬದಲಾಯಿಸದಿದ್ದರೆ ಸದ್ಯ ಪಂಜಾಬಿನಲ್ಲಿ ಜಾರಿಯಿರುವ ಕಾನೂನು ಇದೇ ಆಗಿದೆ. ಅದಕ್ಕೆ ಸಂಬಂಧಿಸಿದ, ತಿದ್ದುಪಡಿಯನ್ನು ಮಂಡಿಸುವುದೇ ನನ್ನ ಸದ್ಯದ ಕಷ್ಟವಾಗಿದೆ. ತಮ್ಮ ಸ್ವಂತ ಸಂಪ್ರದಾಯಗಳಡಿಯಲ್ಲಿ ಬದುಕಲು ಇಚ್ಛಿಸಿದರೆ ಪಂಜಾಬಿಗಳನ್ನ ಅವರ ಪಾಡಿಗೆ ಅವರನ್ನು ಬಿಟ್ಟು ಬಿಡಿ. ಕಲಮು ೧ಕ್ಕೆ ನಾನು ಕಳಿಸಿರುವ ತಿದ್ದುಪಡಿಯಲ್ಲಿ ಪಂಜಾಬಿಗಳನ್ನು ಆ ಕಲಮಿನಿಂದ ಅವರಿಗೆ ವಿನಾಯ್ತಿ ನೀಡಿ ಎಂದು ಕೇಳಿರುವೆ. ಕಾರಣವೇನೆಂದರೆ, ನಾವು ಅತಿ ಪುರಾತನ ಕಾಲದಿಂದ ಸಂಪ್ರದಾಯಗಳಿಗೆ ಬದ್ಧವಾಗಿ ಬಾಳಿದ್ದೇವೆ ಮತ್ತು ಈಗಲೂ ಅವುಗಳಿಗೆ ಅಂಟಿಕೊಂಡೆ ಬಾಳಬಯಸುತ್ತೇವೆ. ಏಕೆಂದರೆ ಅವು ಹಿಂದೂ ಕಾನೂನಿನ ಹಾಗೂ ಉಳಿದ ನಾಗರಿಕ ಕಾನೂನುಗಳ ಸಮುಚ್ಚಯವೇ ಆಗಿವೆ.

ಸದ್ಯದ ಹಿಂದೂಗಳ, ಒಟ್ಟಾರೆ ಅವರ ಮನೋಭಾವ ಕುರಿತು ಮಾತಾಡಲು, ಒಂದು ನಿಮಿಷ ವಿಷಯ ಬದಲಾವಣೆ ಮಾಡಿದರೆ ನನ್ನನ್ನು ಕ್ಷಮಿಸಲಾಗುತ್ತದೆ ಎಂದು ಭಾವಿಸುತ್ತೇನೆ. ಯಾರು ಹಳೆಯ ಹಿಂದೂತ್ವಕ್ಕೆ ಬದ್ಧರಾಗುತ್ತೇವೆಂದು ಈ ದೇಶದಲ್ಲಿ ಅನ್ನುತ್ತಾರೋ ಅವರನ್ನು ಮಾತ್ರ ನಾನು ಹಿಂದೂಗಳೆಂದು ಕರೆಯಲಿಚ್ಛಿಸುತ್ತೇನೆ.

ಸದ್ಯದ ಅಕ್ಷರಸ್ಥ ಹಿಂದೂಗಳ ಮನೋಭಾವವು ಒಂದು ರೀತಿಯ ಮತತ್ವ ಪ್ರೇರಿತವಾಗಿದೆ. ಕೆಲವರು ಆರ್ಯ ಸಮಾಜ, ಬ್ರಹ್ಮ ಸಮಾಜದ ಅನುಕರಣೆ ಮಾಡುವವರು ಇದ್ದಾರೆ– ಇನ್ನು ಕೆಲವರು ಮನಸ್ಸಿನ ಹಿಂದೆ ಅಥವಾ ಅವರ ಅಂತರಾಳದ ಒಳಗಡೆ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಇನ್ನಿತರ ಧರ್ಮಕಲ್ಪನೆಗಳಿವೆ– ನಾವು ವಿದ್ಯಾವಂತ ಹಿಂದೂಗಳು – ನನ್ನನ್ನು ಸೇರಿಸಿ, ನನ್ನ ಸ್ನೇಹಿತರನ್ನೂ ಒಳಗೊಂಡು ಹೇಳುವುದಾದರೆ ಒಂದು ರೀತಿಯ ಮತತ್ವದ ಆಶಯ ಹೊಂದಿದ್ದೇವೆ. ಎಲ್ಲಾ ಧರ್ಮಗಳ ಒಳಗಿನ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ, ಇದೇ ಹಿಂದೂತ್ವ ಎಂದು ಚಿಂತಿಸಿ, ಅದೇ ಸರಿಯಾದುದೆಂದು ಯೋಚಿಸೋಣ. ಜಗತ್ತಿನ ಎಲ್ಲಾ ಭಾಗಕ್ಕೂ ಇದೇ ಸರಿಯಾದ ವಿಧಾನವು ಆಗಬಹುದು. ಬೈಬಲ್ಲಿನಲ್ಲಿ ಬೋಧಿಸುವುದನ್ನೇ ಬದುಕಿಗೆ ಅಳವಡಿಸಿಕೊಳ್ಳುವ ಶುದ್ಧ ಕ್ರಿಶ್ಚಿಯನ್ ಈಗ ಎಲ್ಲಿದ್ದಾನೆ? ನಾನು ಬೇಕಾದರೆ ಮುಸ್ಲಿಂ ಕಾನೂನನ್ನು ಉಲ್ಲೇಖಿಸಿ ಹೇಳಬಲ್ಲೆ. ಈಗ ನಿಜವಾದ ಮಹಮ್ಮದೀಯನನ್ನು ಎಲ್ಲಿ ಹುಡುಕೋಣ? ನಿಮಗೆ ಎಲ್ಲಾ

ಗೊತ್ತಿದೆ ಪ್ರವಾದಿ ಮಹಮ್ಮದರು ೧೪ ವರ್ಷ ಕಿರಿಯ ಕನ್ಯೆಯನ್ನು ವಿವಾಹವಾಗಿದ್ದರು. ಯಾವಾಗ ಶಾರದಾ ಕಾನೂನನ್ನು ಜಾರಿಗೊಳಿಸಲಾಯಿತೋ, ಮಾನ್ಯ ಸದಸ್ಯರೆಲ್ಲರಿಗೂ ನೆನಪಿರಬಹುದು, ಈ ಕಾನೂನನ್ನು ಉಲ್ಲಂಘಿಸಲೆಂದೇ ಮಾನ್ಯ ಮಹಮ್ಮದ್ ಆಲಿ ಅವರು ಕ್ವೀನ್ಸ್ ಗಾರ್ಡನ್ನಿನಲ್ಲಿ ಮದುವೆಯೊಂದನ್ನು ಏರ್ಪಡಿಸಿದ್ದರು. ಏಕೆಂದರೆ ಶಾರದಾ ಕಾನೂನು ಮುಸ್ಲಿಂ ಧರ್ಮದ ಹಕ್ಕಾದ ಅಪ್ರಾಪ್ತವಯಸ್ಕರನ್ನೂ ಮದುವೆಯಾಗಬಹುದೆಂಬ ಸ್ವಾತಂತ್ರ್ಯವನ್ನೇ ಹರಣ ಮಾಡಿದೆಯೆಂದು, ಧರ್ಮದೊಳಕ್ಕೆ ಅನಗತ್ಯ ಪ್ರವೇಶವಾಗಿದೆಯೆಂದು ಜನತೆ ಆ ಕಾನೂನು ವಿರೋಧಿಸಿ ಬರೆಯುತ್ತಿದ್ದರು. ಧರ್ಮದ ಬಗ್ಗೆ ಪೂರ್ವಗ್ರಹಪೀಡಿತರಾದ ಜನರಿರುವರೋ, ಅವರು ಏನು ಬೇಕಾದರೂ ಹೇಳಿಕೊಳ್ಳಲಿ, ಆದರೆ ಸದ್ಯದ ವರ್ತಮಾನದಲ್ಲಿ ಸಂಪ್ರದಾಯಬದ್ಧ ಹಿಂದೂಧರ್ಮ, ಸಂಪ್ರದಾಯಬದ್ಧ ಮುಸ್ಲಿಂ ಧರ್ಮ, ಅಥವಾ ಸಂಪ್ರದಾಯಬದ್ಧ ಕ್ರಿಶ್ಚಿಯನ್ ಧರ್ಮವಿಲ್ಲ. ಇದೊಂದು ನಗ್ನಸತ್ಯವಾಗಿದ್ದು, ಸದ್ಯದ ಕಾಲಕ್ಕೆ ಅನುಗುಣವಾದ ವಿಷಯಗಳನ್ನು ಡಾ.ಅಂಬೇಡ್ಕರ್ ಮಸೂದೆಯೊಳಗೆ ಸುಲಗ್ನಗೊಳಿಸಿರುವುದು ನನಗೇನೂ ಆಶ್ಚರ್ಯವನ್ನುಂಟುಮಾಡುತ್ತಿಲ್ಲ. ಇದರೊಳಗಿನ ಕೆಲ ಪ್ರಸ್ತಾವಗಳೂ ಸಂಪ್ರದಾಯಬದ್ಧರಿಗೆ, ತೀರಾ ಹೊಸದು ಅನ್ನಿಸಬಹುದು, ಆದರೆ ನಾವು ಆಧುನಿಕ ನಾಗರಿಕತೆಯಲ್ಲಿ ಬಹಳ ಮುಂದೆ ಸಾಗಿ ಬಂದಿದ್ದೇವೆ ಮತ್ತು ಹಿಂದಕ್ಕೆ ಹೋಗಲಾರೆವು ಎಂಬುದನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅವರೇನಾದರೂ ಹಳೆಯ ವಿಚಾರಗಳನ್ನು ಸಮಾಜವು ಒಟ್ಟಾರೆ ಕೈಬಿಟ್ಟ ಸಂಗತಿಗಳನ್ನು ಮರಳಿ ತರಬೇಕೆಂದು ಆಸೆ ಪಟ್ಟರೆ ಅವರು ತಪ್ಪು ಗ್ರಹಿಸಿದ್ದರೆಂದೇ ಅರ್ಥ. ಒಂದು ರೀತಿಯಲ್ಲಿ ಡಾ. ಅಂಬೇಡ್ಕರ್ ಅವರು ಪ್ರಜ್ಞಾಪೂರ್ವಕ ಪ್ರಯತ್ನದಲ್ಲಿ.....

**ಶ್ರೀ ಆರ್.ಕೆ. ಚೌಧರಿ :** ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕೇಳುತ್ತಾ ಕೇಳುತ್ತಾ ನಾವು ಮತ್ತಷ್ಟು ಗೊಂದಲಕ್ಕೊಳಗಾಗುತ್ತಿದ್ದೇವೆ. ಮಾನ್ಯ ಸದಸ್ಯರು ಸದ್ಯದ ಹಿಂದೂ ಮಸೂದೆಯು–ಪಂಜಾಬಿನ ಸಂಪ್ರದಾಯ ಕಾನೂನನ್ನು ತಿದ್ದುಪಡಿ ಮಾಡಬೇಕೆ ಮತ್ತು ಪಂಜಾಬಿನಲ್ಲಿರುವ ಸಂಪ್ರದಾಯ ಕಾನೂನಿನ ದ್ವಿಪತ್ನಿತ್ವವನ್ನು ನಿಷೇಧಿಸಬೇಕೆ ಅಥವಾ ಬೇಡವೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಬಯಸುತ್ತೇನೆ. ದ್ವಿಪತ್ನಿತ್ವ ಪದ್ಧತಿಯನ್ನು ರದ್ದುಪಡಿಸದಿದ್ದರೆ ಹಾಗೂ ಪಂಜಾಬನ್ನು ಸದ್ಯದ ಹಿಂದೂ ಮಸೂದೆಯ ವ್ಯಾಪ್ತಿಯಿಂದ ವಿನಾಯಿತಿಗೊಳಿಸಬೇಕೆಂದು ಈ ಸದಸ್ಯರು ಬಯಸಿದರೆ, ದ್ವಿಪತ್ನಿತ್ವ ವಿವಾಹಗಳ ಬಗ್ಗೆ ಅವರ ವಿಚಾರಗಳೇನು?

**ಮಾನ್ಯ ಸಭಾಧ್ಯಕ್ಷರು :** ಅವರು ವಿಚಾರಗಳನ್ನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆಂಬುದನ್ನು ಮಾನ್ಯ ಸದಸ್ಯರು ಅರಿಯಬೇಕು. ಮತ್ತು ಈಗ ಮಾತಾಡುತ್ತಿರುವ ಸದಸ್ಯರಿಗೆ, ಮಾತಾಡುವ ಅವಕಾಶವನ್ನು ಕಲ್ಪಿಸಲಾಗುವುದು – ಪದೇ ಪದೇ ಅವರು ಮಧ್ಯೆ ಪ್ರವೇಶಿಸುವ ಅಗತ್ಯವಿಲ್ಲ.

**ಪಂಡಿತ ಠಾಕೂರ್ ದಾಸ ಭಾರ್ಗವ :** ನನ್ನ ಸ್ನೇಹಿತರು ನನ್ನನ್ನು ಪ್ರಶ್ನೆ ಮಾಡಿದ್ದಕ್ಕೆ ಸಂತೋಷ ಪಡುತ್ತೇನೆ. ದ್ವಿಪತ್ನಿ ವ್ಯವಸ್ಥೆಯ ಬಗ್ಗೆ ನನ್ನ ನಿಲುವು ಏನೆಂಬುದನ್ನು ನಾನು ಬಹು ಹಿಂದೆಯೇ ಮಸೂದೆಯನ್ನು ಸದನದಲ್ಲಿ ಮಂಡಿಸುವಾಗಲೆ ಸ್ಪಷ್ಟಪಡಿಸಿದ್ದೇನೆ. ಏಕಪತ್ನಿತ್ವ ವ್ಯವಸ್ಥೆಯನ್ನು ಇಡೀ ದೇಶಕ್ಕೆ, ಪಂಜಾಬ್ ಸೇರಿದಂತೆ, ಮುಸ್ಲಿಂ, ಹಿಂದೂ, ಕ್ರಿಶ್ಚಿಯನ್ ಎಲ್ಲರ ಮೇಲೂ ಈ ಮಸೂದೆ ಹೇರಲು ಪ್ರಯತ್ನಿಸುತ್ತಿದೆ. ಆದ್ದರಿಂದ ನಾನು ಸಂಪ್ರದಾಯ ಕಾನೂನು ಇರಬೇಕೆಂದು ಬಯಸುವುದು. ಇಂಥ ಸಂಪ್ರದಾಯ ಕಾನೂನುಗಳು ಸಮಾಜದ, ಮಾನವೀಯತೆಯ ಅಥವಾ ಒಟ್ಟಾರೆ ಸಮಾಜದ ಅಂಗೀಕೃತ ಆದರ್ಶಗಳಾಗಿದ್ದಲ್ಲಿ ಅವುಗಳನ್ನು ನಾವು ಅಳವಡಿಸಿಕೊಳ್ಳಬೇಕು. ಪಂಜಾಬಿನಲ್ಲಿ ಆಗಲಿ ಅಥವಾ ಬೇರೆಡೆಯಲ್ಲಾಗಾಲೀ ದ್ವಿಪತ್ನಿತ್ವ ವ್ಯವಸ್ಥೆ ಇರಬಾರದೆಂದು ನಾನು ಬಯಸುತ್ತೇನೆ. ಇದು ನನ್ನ ವಿನಂತಿಪೂರ್ವಕ ಉತ್ತರ. ಇನ್ನು ಹಿಂದೂ ಮಸೂದೆಯ

ಸಂಪ್ರದಾಯವನ್ನು ಬದಲಿಸಬೇಕೆ ಅಥವಾ ಬೇಡವೇ ಎಂಬ ಸಾಮಾನ್ಯ ಪ್ರಶ್ನೆಯ ಕುರಿತಂತೆ, ನಾನು ಹೇಳುವುದಾದರೆ, ಸಂಪ್ರದಾಯ ಕುರಿತ ನನ್ನ ಭಾವನೆಯೇನೆಂದರೆ, ಅದು ಪಂಜಾಬ್ ಕುರಿತಂತೆ ಹೀಗೆಯೇ ಇರಲಿ, ಮತ್ತು ನಾವು ಅದರೊಂದಿಗೆ ಸಾಗುವ ಇಚ್ಛೆ ಹೊಂದಿದ್ದೇವೆ. ಸಂಪ್ರದಾಯ ಮತ್ತು ಇನ್ನಿತರ ಸಂಗತಿಗಳ ಬಗ್ಗೆ ನನ್ನ ಸ್ನೇಹಿತರು ನಾನು ಮಂಡಿಸಿರುವ ತಿದ್ದುಪಡಿಗಳನ್ನು ಅಭ್ಯಸಿಸಿದರೆ, ಎಲ್ಲೆಲ್ಲಿ ಒಳ್ಳೆಯ ಸಂಪ್ರದಾಯಗಳು ಇವೆಯೋ, ಅವು ಮುಂದುವರಿಯಬೇಕೆಂದು ನಾನು ಸಲಹೆ ಮಾಡಿರುವುದು ಅವರಿಗೆ ತಿಳಿಯುತ್ತದೆ.

ಈ ನೆಲದ ಜನರ ಕಾನೂನುಗಳನ್ನು ಹಿಂಸಾತ್ಮಕವಾಗಿ ಪರಿವರ್ತಿಸಲೆತ್ನಿಸುವ ಈ ಹಿಂದೂ ಮಸೂದೆಯ ಮಾದರಿಯ ಪರವಾಗಿ ನಾನು ಇಲ್ಲ(ಕೇಳಿ, ಕೇಳಿ) ಅದೇ ಸಂದರ್ಭದಲ್ಲಿ ಇದರೊಳಗಿನ ಕೆಲಭಾಗಗಳನ್ನು ಇಡೀ ದೇಶಕ್ಕೆ ಅನ್ವಯಿಸುವುದನ್ನೂ ನಾನು ಒಪ್ಪುವುದಿಲ್ಲ. ಯಾವುದೇ ಕಾರಣಕ್ಕಾಗಿ ನನ್ನನ್ನು ಉಬ್ಬಿಸಲು ಕೇಳಿ ಬಂದ ಕರತಾಡನಗಳನ್ನು, ನಾನು ಸ್ವತಃ ಇಚ್ಛಿಸುವುದಿಲ್ಲ. ಹಾಗೆಯೇ ನಾನು ಒಟ್ಟಾರೆ ಈ ಹಿಂದೂ ಮಸೂದೆಯ ವಿರೋಧಿಯೂ ಆಗಿಲ್ಲ. ಮಸೂದೆಯೊಳಗಿನ ಕೆಲ ಭಾಗಗಳನ್ನು ಖಂಡಿತವಾಗಿ ಕಾನೂನುಗೊಳಿಸಬೇಕು. ಆದರೆ ಅದರಲ್ಲಿನ ಇನ್ನಿತರ ಕೆಲ ಭಾಗಗಳನ್ನು ನಾನು ಇಷ್ಟಪಡುವುದಿಲ್ಲ. (ಗದ್ದಲ) ಹಿಂದೂ ಮಸೂದೆಯ ಕೆಲ ಸಾಮಾನ್ಯ ತತ್ವಗಳು ಮತ್ತು ಯಾವುವು ಸರ್ವಮಾನ್ಯ ಗುಣ ಹೊಂದಿದ್ದು, ಸಮಾಜದ ಅಭಿವೃದ್ಧಿಯ ಪ್ರೇರಕಗುಣಗಳನ್ನೊಂದಿವೆಯೋ, ಅಂಥವುಗಳನ್ನು ಪಂಜಾಬಿಗೂ ಅನ್ವಯಿಸಬೇಕು. ಆ ದೃಷ್ಟಿಯಿಂದಲೇ ನಾನು ತಿದ್ದುಪಡಿಯನ್ನು ಬೆಂಬಲಿಸುತ್ತಿದ್ದೇನೆ. ನಾನು ಮಂಡಿಸಿದ ತಿದ್ದುಪಡಿಗಳನ್ನು ಮಾನ್ಯ ಸದಸ್ಯರು ಓದಿಲ್ಲವೆಂದು ಕಾಣುತ್ತದೆ, ತಿದ್ದುಪಡಿಗಳು ಹೀಗಿವೆ;

ಕಲಮು–೨ ಭಾಗ ೧ರ ವಿಷಯ ಸಂಬಂಧಿಸಿದಂತೆ ಸಂಹಿತೆಯನ್ನು ಅನ್ವಯಿಸುವಿಕೆ:

(ಎ) ಧರ್ಮದಿಂದ ಯಾರು ಹಿಂದುಗಳು, ಬೌದ್ಧರೂ, ಜೈನರೂ ಸಿಖ್ಖರೋ ಅವರೆಲ್ಲರಿಗೂ

(ಬಿ) ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅಲ್ಲವೋ, ಅವರನ್ನು ಬಿಟ್ಟು ಉಳಿದೆಲ್ಲರಿಗೂ

(ಸಿ) ಪ್ರತಿಯೊಬ್ಬ ಹೆಣ್ಣು ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಹಾಗೂ ಯಹೂದಿ ಧರ್ಮದವರನ್ನು ಹೊರತುಪಡಿಸಿ, ಉಳಿದವರನ್ನು ವಿವಾಹವಾಗುತ್ತಾಳೋ ಆಕೆ

(ಡಿ) ಅಕ್ರಮವಾಗಿಯೋ, ಸಕ್ರಮವಾಗಿಯೋ, ಜನಿಸಿದ ಮಗು–ಅವರ ಪಾಲಕರಲ್ಲೊಬ್ಬರು, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮದಲ್ಲದವರಾಗಿದ್ದರೆ ಆ ಮಗು

(ಇ) ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮಗಳನ್ನು ಹೊರತುಪಡಿಸಿ, ಇನ್ನಾವುದೇ ಧರ್ಮಕ್ಕೆ ಆಗುವ ಮತಾಂತರ.

ಸದನವು ಮಾಡುವ ತಿದ್ದುಪಡಿಗಳನ್ನೊಳಗೊಂಡ ಈ ಹಿಂದೂ ಮಸೂದೆಯನ್ನು ನಾನು ನನ್ನ ಆಶಯಗಳನ್ನು ಪಂಜಾಬ್‌ಗೆ ಅನ್ವಯಿಸಬೇಕೆಂದು ಇಚ್ಛಿಸುತ್ತೇನೆ. ಪಂಜಾಬಿಗೆ ಸಂಬಂಧಿಸಿದಂತೆ, ಈಗಾಗಲೇ ನಾವು ಹೊಂದಿರುವ ಸಂಪ್ರದಾಯಗಳನ್ನು ಈ ಮಸೂದೆಯು ಒತ್ತಾಯಪೂರ್ವಕವಾಗಿ ಪರಿವರ್ತನೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಹಾಗೆಯೆ ಕೆಲವು ಒಪ್ಪಲರ್ಹವಾದ ಯೋಗ್ಯ ಅಂಶಗಳನ್ನು ಜಾರಿಗೊಳಿಸಬೇಕೆಂಬುದನ್ನು ನಾನು ಬಯಸುತ್ತೇನೆ. ದ್ವಿಪತ್ನಿತ್ವ ಕುರಿತು ಹೇಳುವುದಾದರೆ ಅದು ಪಂಜಾಬಿನಲ್ಲಿ ಅಸ್ತಿತ್ವ ಹೊಂದಿಯೇ ಇಲ್ಲ. ಪಂಜಾಬಿನಲ್ಲೂ ಏಕಪತ್ನಿತ್ವ ವ್ಯವಸ್ಥೆ ಇರಬೇಕೆಂಬುದೇ ನಮ್ಮ ಬಯಕೆ ಆಗಿದೆ.

**ಶ್ರೀ ಆರ್.ಕೆ. ಚೌಧರಿ :** ಹಾಗಾದರೆ ನಾನು ನನ್ನ ಕರತಾಡನಗಳನ್ನು ವಾಪಸ್ಸು ಪಡೆಯುತ್ತೇನೆ.

**ಶ್ರೀ ಜೆ.ಆರ್. ಕಪೂರ್ :** ದೇಶದ ವಿಭಿನ್ನ ಪ್ರದೇಶಗಳು ಮತ್ತು ಸಮುದಾಯದ ವಿಭಿನ್ನ ವರ್ಗಗಳು ತಮಗೆ ಯೋಗ್ಯವೆನಿಸಿದ ನಿರ್ದಿಷ್ಟ ಅಂಶಗಳನ್ನು ಮಸೂದೆಯೊಳಗಿಂದ ಎತ್ತಿಕೊಳ್ಳುವ ಅನುಮತಿಯನ್ನು ಮಾನ್ಯ ಸದಸ್ಯರು ಸಲಹೆ ಮಾಡುತ್ತಿದ್ದಾರೆಂದು ನಾನಾದರೂ ಅಂದುಕೊಳ್ಳುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾನ್ಯ ಸದಸ್ಯರು ಮಾತಾಡಬೇಕು ಹಾಗೂ ಪ್ರಶ್ನೆಯನ್ನು ಸಭಾಧ್ಯಕ್ಷರ ಮೂಲಕ ಮಂಡಿಸಬೇಕು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮಾನ್ಯ ಕಪೂರ್ ಅವರು ನನಗೆ ಪ್ರಶ್ನೆಯೊಡ್ಡಿದ್ದಕ್ಕೆ ನಾನು ಸಂತೋಷಪಡುತ್ತೇನೆ. ನಿನ್ನೆ ಅವರು ಮಾತಾಡುತ್ತಿದ್ದಾಗ ನಾನು ಅವರನ್ನು ಪ್ರಶ್ನಿಸಿದ್ದೆ. ಇದೊಂದು ರೀತಿ ಮುಯ್ಯಿಗೆ ಮುಯ್ಯಿ, ಪ್ರತಿಯೊಬ್ಬ ವ್ಯಕ್ತಿಗೆ ನಿರ್ದಿಷ್ಟ ಪ್ರಕರಣವನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಇದೆಯೋ ಇಲ್ಲವೋ ಮತ್ತು ಅವನು ಅದಕ್ಕೆ ಬದ್ಧನೋ ಅಲ್ಲವೋ ಎಂದು ನಿನ್ನೆ ಮಾನ್ಯ ಕಪೂರ್ ಅವರು ಮಾತಾಡುವಾಗ ನಾನು ಪ್ರಶ್ನಿಸಿದ್ದೆ. ಹಿಂದೂ ಸಂಹಿತೆಯು ಹಲವಾರು ವಿಭಾಗಗಳನ್ನು ಹೊಂದಿದ್ದು, ಪ್ರತಿಯೊಬ್ಬ ವ್ಯಕ್ತಿ, ಅವನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಅಥವಾ ಪಾರ್ಸಿ ಯಾರೇ ಇರಲಿ, ಅವನು ತನಗೆ ಅನ್ವಯವಾಗುವ ನಿರ್ದಿಷ್ಟ ಭಾಗಗಳನ್ನು ಆಯ್ದುಕೊಂಡು ಅದಕ್ಕೆ ಅವನು ಬದ್ಧವಾಗಬಹುದು ಆದರೆ ಉಳಿದವರಲ್ಲ ಎಂಬುದು ಅವರ ಸಲಹೆಯಾಗಿತ್ತು.

**ಶ್ರೀ ಜೆ.ಆರ್. ಕಪೂರ್ :** ಈ ವಿಷಯದ ಮೇಲೆ ನನ್ನ ವೈಯಕ್ತಿಕ ವಿವರಣೆ. ನಾನು ಹಾಗೆ ಹೇಳಿಯೇ ಇಲ್ಲ. ನಾನು ಹೇಳಿದ್ದು–ಮಸೂದೆಯೊಳಗಿನ ಎಲ್ಲಾ ಭಾಗಗಳಲ್ಲಿ ಕೆಲವನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ವ್ಯಕ್ತಿಗಿರಬೇಕೆಂಬುದು. ವಿವಾಹ, ದತ್ತಕ, ಪಿತ್ರಾರ್ಜಿತ ಸ್ವತ್ತು, ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಲವಾರು ಭಾಗಗಳಿವೆ. ಅವು ಪ್ರತಿಯೊಬ್ಬನಿಗೂ ಮುಕ್ತವಾಗಿದ್ದು, "ನಾನು ಈ ಭಾಗಕ್ಕೆ ಬದ್ಧನಾಗಿರುತ್ತೇನೆ" ವಿವಾಹ ಕುರಿತಂತೆ ಆಯ್ದುಕೊಂಡು ಹೇಳುವ ಸ್ವಾತಂತ್ರ್ಯ ಇರಬೇಕು. ಆದರೆ, ಒಬ್ಬನಿಗೆ ಒಂದು ನಿರ್ದಿಷ್ಟ ಅಂಶವು ಮತ್ತೊಬ್ಬನಿಗೆ ಮತ್ತೊಂದು ಭಾಗವು ಅನ್ವಯವಾಗಬೇಕೆಂದು ನಾನು ಹೇಳಿಯೇ ಇಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮಾನ್ಯ ಸ್ನೇಹಿತರು ನನ್ನ ಹೇಳಿಕೆಯನ್ನು ತಿರುಚುವುದಕ್ಕೆ ನಾನು ವಿಷಾದಪಡುತ್ತೇನೆ. ನಾನು ಆ ಶಬ್ದಗಳಲ್ಲೇ ನಾನು ನನ್ನ ಪ್ರಶ್ನೆಯನ್ನು ಮುಂದಿಟ್ಟಿದ್ದೆ. ಅವರು ಅದಕ್ಕೆ ಉತ್ತರಿಸಿದ್ದಾರೆ ಮತ್ತು ಅವರ ಉತ್ತರ ನಿರ್ದಿಷ್ಟ ಭಾಗಗಳನ್ನು ಆಯ್ದುಕೊಳ್ಳಬಹುದೆಂಬುದನ್ನು ಅವರು ಇಷ್ಟಪಡುತ್ತಾರೆಂಬುದಾಗಿತ್ತು.– ದುರಾದೃಷ್ಟವೆಂದರೆ ಅವರು ಆ ಮಾತುಗಳನ್ನು ಮರೆತಿದ್ದಾರೆ.

**ಶ್ರೀ ಜೆ.ಆರ್. ಕಪೂರ್ :** ನಾನು ನಿನ್ನೆ ಮಾಡಿದ ಭಾಷಣವನ್ನು ಬೇಕಾದರೆ ಉಲ್ಲೇಖಿಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಆ ಭಾಗಗಳನ್ನು ಓದಿದ ಬಳಿಕವೇ ಆ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಜೆ.ಆರ್. ಕಪೂರ್ :** ನಾನು ಭಾವಿಸಿದಂತೆ ಅದು ಹಾಗಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಸ್ನೇಹಿತರು ಏನೂ ಹೇಳುತ್ತಿದ್ದಾರೋ ಅದನ್ನೆ ಸತ್ಯ ಎಂದು ನಾನು ಸ್ವೀಕರಿಸುತ್ತೇನೆ.

ವ್ಯಕ್ತಿಯೊಬ್ಬ ತನಗೆ ಬೇಕಾದ್ದನ್ನು ಹಿಂದೂ ಸಂಹಿತೆಯಿಂದ ಆಯ್ದುಕೊಂಡು ವಿವಾಹಕ್ಕೆ ಸಂಬಂಧಪಟ್ಟಂತೆ ತಾನು ಹಿಂದೂ ಕಾನೂನಿಗೆ ಬದ್ಧವೆಂದೂ ಉತ್ತರದಾಯಿತ್ವಕ್ಕೆ ಸಂಬಂಧಿಸಿದಂತೆ ತಾನು ಇನ್ನೊಂದು

ಕಾನೂನಿಗೆ ಬದ್ಧವೆಂದು ಹೇಳುವುದನ್ನು ನನ್ನ ಸ್ನೇಹಿತರು ಬಯಸುತ್ತಾರೆಯೇ ಎಂದು ಕೇಳಲು ನಾನು ಬಯಸುತ್ತೇನೆ. ವ್ಯಕ್ತಿಯೊಬ್ಬ ಹೀಗೆ ಹಿಂದೂ ಮಸೂದೆಯ ಯಾವುದೋ ಒಂದು ಭಾಗದಿಂದ ನಾನು ಪರಿಗಣಿಸಲ್ಪಡುತ್ತೇನೆ, ಉಳಿದವುಗಳಿಂದ ಅಲ್ಲವೆಂದು ಹೇಳುವುದು ಅಸಾಧ್ಯದ ಸಲಹೆಯೆ ಆಗುತ್ತದೆ. ಕಾನೂನು ಹೇಗೆ ಹೆಣೆಯಲ್ಪಟ್ಟಿದೆ ಮತ್ತು ಅಂತರ ಸಂಬಂಧ ಹೊಂದಿದೆಯೆಂದರೆ ವ್ಯಕ್ತಿಯೊಬ್ಬ ಹೀಗೆ ನಾನು ಯಾವುದೋ ಒಂದು ಭಾಗಕ್ಕೆ ಬದ್ಧ ಉಳಿದ ಭಾಗಗಳ ಉಪಬಂಧಗಳಿಗೆ ಅಲ್ಲವೆಂದು ಹೇಳಬರುವುದಿಲ್ಲ. ಉತ್ತರದಾಯಿತ್ವ, ಉಸ್ತುವಾರಿ, ಪಾಲಕತ್ವ ಮುಂತಾದ ಈ ಎಲ್ಲಾ ಅವಕಾಶಗಳೂ ಎಷ್ಟರಮಟ್ಟಿಗೆ ಅಂತರ್ ಸಂಬಂಧ ಹೊಂದಿವೆಯೆಂದರೆ, ಅವುಗಳನ್ನ ಹಾಗೆ ಪ್ರತ್ಯೇಕಗೊಳಿಸಬರುವುದಿಲ್ಲ. ಇಡೀ ಭಾರತಕ್ಕೆ ಅನ್ವಯವಾಗುವಂತಹ ಸರಿಯಲ್ಲದ ಅವಕಾಶವನ್ನು ನನ್ನ ಸ್ನೇಹಿತರು ಮಂಡಿಸಲೆತ್ನಿಸಿದಾಗ, ನಾನು ಅಂಥ ಅವಕಾಶದಿಂದ ಮುಕ್ತಗೊಳಿಸುವ ಉದ್ದೇಶ ನಿನ್ನೆ ನಾನು ಮಂಡಿಸಿದ ಪ್ರಶ್ನೆಯಲ್ಲಿತ್ತು. ಅವರ ಪ್ರಕಾರ, ಮುಸ್ಲಿಂನೊಬ್ಬ ಮಸೂದೆಯ ಕೆಲಭಾಗಗಳ ಬಗ್ಗೆ ಒಲವುಳ್ಳವನಾಗಿದ್ದು, ಅದಕ್ಕೆ ತಾನು ಬದ್ಧನೆಂದು ಉಳಿದ ವಿಷಯಗಳೆಲ್ಲ ತಾನು ಮುಸ್ಲಿಂ ಕಾನೂನಿನಿಂದ ಆಳಲ್ಪಡಬೇಕೆಂದು ಹೇಳಬಹುದೆಂದಾಗುತ್ತದೆ. ನಾನು ಕೇಳುತ್ತೇನೆ ಇದು ಸಾಧುವೆ? ಸಾಧ್ಯವೆ? ಇಂಥದೊಂದು ಪ್ರಸ್ತಾಪವನ್ನು ಸದನದ ಮುಂದಿಡಬಹುದೆ? ಇಂಥ ವಿಷಯವನ್ನು ಇಂಥ ಪ್ರಶ್ನೆಗಳ ಮೂಲಕ ಎದುರಿಸುವುದು ಸರಿಯಾದ ವಿಧಾನವಲ್ಲ, ಹಾಗೆ ನೋಡಿದರೆ ಈ ವಿಷಯದಲ್ಲಿ ಅದು ಪ್ರಶ್ನೆಯೇ ಅಲ್ಲ– ಎಂದು ನಾನು ತಮ್ಮಗಳ ಗಮನಕ್ಕೆ ತರಬಯಸುತ್ತೇನೆ. ನಾಗರಿಕ ಕಾನೂನಿನ ಪ್ರಶ್ನೆ ಕುರಿತು ನಾನು ಹೇಳುವುದೇನೆಂದರೆ, ಅದು ವಿಷಯಕ್ಕೆ ಸಂಬಂಧಿಸಿದ್ದೇ ಅಲ್ಲ. ಇಡೀ ಭಾರತಕ್ಕೆ ಅನ್ವಯವಾಗುವಂತಹ ಒಂದು ನಾಗರಿಕ ಕಾನೂನು ಬೇಕೆನ್ನುವವರನ್ನು ನಾನು ಮೆಚ್ಚುತ್ತಲೆ, ನಾನು ಅದಕ್ಕೆ ಒಪ್ಪುವುದಿಲ್ಲ. ಹಾಗೆಯೇ ಮುಸ್ಲಿಂ, ಕ್ರಿಶ್ಚಿಯನ್, ಯಹೂದಿಗಳಿಗೆಲ್ಲ ಅನ್ವಯವಾಗುವಂತಹ ಸಾಮಾನ್ಯ ನಾಗರಿಕ ಕಾನೂನು ಬೇಕೆಂಬ ಪ್ರಸ್ತಾಪ ಕೂಡ ವಾಸ್ತವಿಕತೆಯಿಂದ ಕೂಡಿಲ್ಲ. ಇದಕ್ಕೆ ನಮ್ಮ ಸ್ನೇಹಿತರಾದ ಶ್ರೀ ನಜೀರುದೀನ್ ಅಹ್ಮದ್ ಅವರ ಪ್ರತಿಕ್ರಿಯೆ ಏನು? ಅವರ ಮೂಲಭೂತಹಕ್ಕಿನ ಬಗ್ಗೆ ಪ್ರಶ್ನಿಸಿ, ಇಂಥ ಹಿಂದೂ ಮಸೂದೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನೀವು ಈ ಹಿಂದೂ ಮಸೂದೆಯ ಆಳ್ವಿಕೆಗೆ ಒಪ್ಪುತ್ತೀರಾ ಎಂಬ ಪ್ರಶ್ನೆಗೆ ಅವರಿಂದ ಬರಬಹುದಾದ ಉತ್ತರ "ಅದು ಹಿಂದೂಗಳಿಗೆ ಕೆಟ್ಟದ್ದಾಗಿದೆ. ಅದನ್ನು ನೀವು ಮುಸ್ಲಿಂ, ಕ್ರಿಶ್ಚಿಯನ್ ಮೊದಲಾದವರಿಗೆ ಅನ್ವಯಿಸ ಬಯಸುತ್ತಿರಾ–" ಎಂಬುದಾಗಬಹುದು. ಇದು ಅವರ ದೃಷ್ಟಿಕೋನವಾಗಿದೆ. ನಾನು ಅತ್ಯಂತ ವಿನಯಪೂರ್ವಕವಾಗಿ ಮಂಡಿಸಬಯಸುವ ವಿಷಯವೇನೆಂದರೆ, ನನ್ನ ಗೌರವಾನ್ವಿತ ಸ್ನೇಹಿತರು, ಯಾರು ಈ ಹಿಂದೂ ಸಂಹಿತೆಯನ್ನು ಮುಸ್ಲಿಂ, ಕ್ರಿಶ್ಚಿಯನ್ ಅವರಿಗೆ ಅನ್ವಯಿಸಹೊರಟಿದ್ದಾರೋ, ಅವರು ಸಂವಿಧಾನದತ್ತ ಕಾನೂನುಗಳ ಪ್ರಸ್ತಾವಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಇದ್ನೆಲ್ಲಾ ನಾನು ಅತ್ಯಂತ ಹಗುರ ಮನಸ್ಸಿನಿಂದ ತೆಗೆದುಕೊಳ್ಳುತ್ತೇನೆ. ಅವರುಗಳೇನಾದರೂ ಹಿಂದೂ ಸಂಹಿತೆಯನ್ನು ನಿರಾಕರಿಸಿವ ಮನಸ್ಸುಮಾಡಿದ್ದ ಪಕ್ಷದಲ್ಲಿ, ಈ ಮಸೂದೆಯೊಳಗಿನ ಯಾವ ವಿಷಯವನ್ನೆ ಎತ್ತಿಕೊಂಡು ಅದರ ಅಸಂಗತತೆಯನ್ನು ಅವರು ತೋರಬಹುದು. ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಮತ್ತಿತರರಿಗೆ ಹಿಂದೂ ಸಂಹಿತೆಯನ್ನು ಅನ್ವಯಗೊಳಿಸಲು ಇಂಥವುಗಳು ಯೋಗ್ಯ ಮಾರ್ಗಗಳಾಗಲಾರವು ಎಂದು ನಾನು ಸಲಹೆ ಮಾಡಬಯಸುತ್ತೇನೆ.

**ಶ್ರೀ ಆರ್.ಕೆ. ಚೌಧರಿ :** ಸಾಮಾನ್ಯ ನಿಯಮಗಳು.....

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಗೌರವಾನ್ವಿತ ಶ್ರೀ ಚೌಧರಿ ಹೇಳುತ್ತಿದ್ದಾರೆ ಮತ್ತು

ಸಾಮಾನ್ಯ ನಿಯಮಗಳ ಕೂಡ ಅನ್ವಯವಾಗುತ್ತವೆಂದು ನಾನು ಹೇಳಿದರೆ ಅವರು ಮತ್ತೊಮ್ಮೆ ಚಪ್ಪಾಳೆ ತಟ್ಟಲು ಸಿದ್ಧವಾಗಿದ್ದಾರೆಂದು ನಾನು ತಿಳಿದಿದ್ದೇನೆ. ಹಳೆಯ ಹಿಂದೂ ಕಾನೂನಿನಲ್ಲಿರುವ ಕೆಲವೊಂದು ನಿಯಮಗಳು ಸಾರ್ವತ್ರಿಕ ಗುಣಗಳನ್ನು ಹೊಂದಿದ್ದು, ಅವು ಎಲ್ಲ ಧರ್ಮೀಯರಿಗೂ, ಎಲ್ಲಾ ಪರಿಸ್ಥಿತಿಗಳಿಗೂ ಅನ್ವಯಿಸುವಂತಿದೆ ಎಂಬುದನ್ನು ನಾನು ಖಂಡಿತ ಒಪ್ಪುತ್ತೇನೆ. ಅಂಥ ವಿಷಯಗಳು ಸಾಮಾನ್ಯ ನಾಗರಿಕ ಕಾಯ್ದೆಗೆ ಸೂಕ್ತ ತಳಹದಿಯಾಗಬಲ್ಲವು. ಈಗಲೂ ಕೂಡ ನಮ್ಮ ಸದ್ಯದ ಕಾನೂನುಗಳು ಅವೇ ತತ್ವಗಳನ್ನು ಹೊಂದಿದ್ದು, ಅವು ಶಾರದಾ ಕಾನೂನು ಪ್ರಾಪ್ತ ವಯೋಮಿತಿ (Majority Act) ಕಾನೂನು ಮುಂತಾದ ಸಾಮಾನ್ಯ ನಾಗರಿಕ ಕಾನೂನುಗಳಿಗೆ ತಳಹದಿಯಾಗಿದೆ.

ಸಂವಿಧಾನದ ಅನುಚ್ಛೇದ ೨೫ ಮತ್ತು ಸಂವಿಧಾನ ಅನುಚ್ಛೇದ ೧೫ರ ಕಾನೂನು ಮತ್ತು ಅನುಚ್ಛೇದ ೨೫ರ ಒಳಗಿನ ಕೆಲ ಪ್ರಸ್ತಾವಗಳನ್ನು ಪರಿಹಾಸ್ಯ ಮಾಡಲಾಗಿದೆ. ನನ್ನ ಸ್ನೇಹಿತರಾದ ಗೌರವಾನ್ವಿತ ಮಾನ್ಯ ನಜೀರುದ್ದೀನ್ ಅಹ್ಮದ್ ಅವರು **"ಸಾರ್ವಜನಿಕ ಸಂಬಂಧವಾಗಿ ನೈತಿಕತೆ ಮತ್ತು ಆರೋಗ್ಯ"** ಈ ಶಬ್ದಗಳಿಂದ ಯಾವುದೂ ಹೊಳೆಯುತ್ತಿಲ್ಲ. ಅವು ಅರ್ಥಹೀನ ಎಂದು ಹೇಳಿದ್ದಾರೆ. ಅವುಗಳು ಅರ್ಥಹೀನ ಅಲ್ಲ. ಅವುಗಳು ಪರಿಪೂರ್ಣ ಅರ್ಥ ಹೊಂದಿಲ್ಲ. ಕೇವಲ ಪರಿಪೂರ್ಣ ಅರ್ಥ ಮಾತ್ರ ಹೊಂದಿರದೆ, ಅವುಗಳಿಗೆ ವಿಶೇಷ ಮಹತ್ವವಿದೆ. ಅವರು ಅನುಚ್ಛೇದ ೨೫ ಹಾಗೂ ೧೫ರ ಅರ್ಥ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಂತೆ ತೋರುತ್ತದೆ. ಅನುಚ್ಛೇದ ೧೫ರಲ್ಲಿ ಯಾವ ತಾರತಮ್ಯಕ್ಕೂ ಅವಕಾಶ ಇರಕೂಡದು ಎಂದು ಹೇಳಿದೆ. ಆದ್ದರಿಂದ ನಾವು ಹಿಂದೂಸಂಹಿತೆ ಮುಸ್ಲಿಂ ಸಂಹಿತೆ ಮತ್ತು ಇನ್ನಿತರ ಸಂಹಿತೆಗಳನ್ನು ಹೊಂದುವಂತಿಲ್ಲ. ನನ್ನ ವಿನಯಪೂರ್ವಕ ವಿನಂತಿ ಇದೆ. ಇಷ್ಟಾಗಿಯೂ ಇಡೀ ದೇಶಕ್ಕೆ ಅನ್ವಯವಾಗುವಂತಹ ನಾಗರಿಕ ಕಾನೂನು ಹೊಂದಬೇಕೆಂಬುದರ ಬಗ್ಗೆ ನಾನು ಒಲವುಳ್ಳವನಾಗಿದ್ದೇನೆ. ಹಿಂದೂ ಸಂಹಿತೆ, ಮುಸ್ಲಿಂ ಸಂಹಿತೆ ಹಾಗೂ ಇನ್ನಿತರ ಸಂಹಿತೆಯನ್ನು ಸಂವಿಧಾನದ ಕಾನೂನಿನೊಳಗೆ ಅವಕಾಶ ಕಲ್ಪಿಸುವುದು ಅನುಚಿತವಾದುದು ಎಂದು ಕಂಡುಬರುವುದಿಲ್ಲ ಎಂದು ನಾನು ಹೇಳುತ್ತೇನೆ. ಯಾರು ಹಿಂದೂ ಮಸೂದೆಯ ಪರವಾಗಿದ್ದರೋ ಅಂಥ ನನ್ನ ಗೆಳೆಯರು ಸಂವಿಧಾನದ ಅನುಚ್ಛೇದ ೧೫ ಹಾಗೂ ೨೫ರ ಹಿಂದೂ ಸಂಹಿತೆಯ ಉಪಬಂಧಗಳು ಹೊಂದಾಣಿಕೆ ಆಗುವುದಿಲ್ಲ ಎಂಬ ಮಾತುಗಳನ್ನು ಆಡುವುದನ್ನು ನಾನು ಕೇಳುತ್ತಿರುವುದನ್ನು ಹೇಳುತ್ತಿರುವುದಕ್ಕೆ ದಯಮಾಡಿ ಕ್ಷಮಿಸಿ, ಹಾಗೆಯೇ ದಯಮಾಡಿ ಕ್ಷಮಿಸಿ, ಯಾರು ಈ ಹಿಂದೂ ಸಂಹಿತೆಯನ್ನು ರಚಿಸಿದ್ದಾರೋ ಅವರು ಕೂಡ ಸಂವಿಧಾನದ ಪ್ರಕಾರ, ಹಿಂದೂ ಸಂಹಿತೆಯಲ್ಲಿ ಸಹೋದರ ಸಹೋದರಿಯರ ಮಧ್ಯೆ ಪುರುಷ ಮತ್ತು ಸ್ತ್ರೀಯರ ಮಧ್ಯೆ ಕೂಡ ತಾರತಮ್ಯ ಇರಕೂಡದೆಂದು ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ.

**ಡಾ. ಅಂಬೇಡ್ಕರ್ :** ಅದು ಕೇವಲ ಲಿಂಗಾಧಾರಿತವಾದದ್ದು.

**ಪಂಡಿತ ಠಾಕೂರ್ ದಾಸ್ ಭಾರ್ಗವ್ :** ನಾನು ಅದಕ್ಕೆ ಬರುತ್ತೇನೆ. ಸಂವಿಧಾನದ ಅನುಚ್ಛೇದ ೧೫ರ ಪ್ರಕಾರ ಯಾವುದೇ ರೀತಿಯ ಲಿಂಗಾಧಾರಿತ ತಾರತಮ್ಯವಿರಕೂಡದೆಂದಿದೆ. ಈ ಒಂದು ಪ್ರಸ್ತಾಪವೇ ನಮ್ಮ ದಾರಿಗೆ ಅಡ್ಡ ಬರಲಿದೆ. ಮತ್ತೊಬ್ಬ ಸಭ್ಯರು, ಯಾರು, ಈ ಹಿಂದೂ ಸಂಹಿತೆಯನ್ನು ವಿರೋಧಿಸುತ್ತಿರುವರೋ, ಅವರು ಕೂಡ ಅನುಚ್ಛೇದ ೧೫ ಮತ್ತು ೨೫ನ್ನು ಆಧರಿಸಿಯೇ ಯಾವ ತಾರತಮ್ಯ ಇರಕೂಡದು ಎನ್ನುತ್ತಿದ್ದಾರೆ. ಲಿಂಗಾಧಾರಿತವಾದ ಯಾವುದೇ ತಾರತಮ್ಯ ಇರಕೂಡದು ಎನ್ನುವುದಾದರೆ, ನಾನು ಮಾನ್ಯ ಡಾ.ಅಂಬೇಡ್ಕರ್ ಅವರನ್ನು ಅತ್ಯಂತ ವಿನಯಪೂರ್ವಕವಾಗಿ ಕೇಳುತ್ತೇನೆ. ಹಾಗಾದರೆ ಆವರೇಕೆ ಹಿಂದೂ ಮಸೂದೆಯೊಳಗೆ ಲಿಂಗಾಧಾರಿತ ಅನೇಕ ಉಪಬಂಧಗಳಿಗೆ ಅವಕಾಶ

ಕೊಟ್ಟಿದ್ದಾರೆಂದು.

**ಡಾ. ಅಂಬೇಡ್ಕರ್ :** ಕೇವಲ ಲಿಂಗಾಧಾರಿತ ತಾರತಮ್ಯ ಮಾಡುವ ಯಾವ ಪ್ರಸ್ತಾಪಗಳೂ ಅದರಲ್ಲಿ ಇಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮದುವೆಯಾದ ಹೆಣ್ಣಿಗೆ ನಾಲ್ಕನೆಯ ಒಂದು ಭಾಗ, ಮದುವೆಯಾಗದ ಮಗಳಿಗೆ ಒಂದರಲ್ಲಿ ಅರ್ಧ ಎಂಬ ಉಪಬಂಧ ಹಾಗೂ ಒಬ್ಬ ಗಂಡಸು ಸತ್ತರೆ, ಅಥವಾ ಹೆಣ್ಣೊಂದು ಸತ್ತರೆ– ಅವರಿಗೆ ಅನ್ವಯವಾಗುವ ಉತ್ತರಾಧಿಕಾರದಲ್ಲಿ ಏಕೆ ಭಿನ್ನತೆಗಳಿವೆ?

**ಡಾ. ಅಂಬೇಡ್ಕರ್ :** ಇದು ಕೇವಲ ಲಿಂಗಾಧಾರಿತವಾಗಿಯೇ ಮಾಡಿದುದಲ್ಲ.

**ಶ್ರೀ ತ್ಯಾಗಿ :** ಸಾವಿನ ಮೇಲೂ ಕೂಡ.

**ಮಾನ್ಯ ಸಭಾಧ್ಯಕ್ಷರು :** ಆಯ್ಕೆ ಸಮಿತಿಯ ವರದಿಯು ಇಂಥ ಯಾವ ತಾರತಮ್ಯವನ್ನು ಮಾಡಿಲ್ಲವೆಂದು ನಾನು ಅಂದುಕೊಂಡಿರುವೆ.

**ಶ್ರೀ ಕೆ.ಸಿ. ಶರ್ಮ(ಉತ್ತರ ಪ್ರದೇಶ) :** ಈಗ ಆ ಅನುಚ್ಛೇದ ಚರ್ಚೆ ನಡೆದಿಲ್ಲ ಅವರು ತಮ್ಮ ತಿದ್ದುಪಡಿ ಕುರಿತು ಮಾತಾಡಲಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ವಿಷಯ ಕುರಿತು ನಮ್ಮ ಸ್ನೇಹಿತರು ಹೇಳಿದ ಹಾಗೆ, ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಪಾಲು ನೀಡುವ ವಿಚಾರದಲ್ಲಿ ಇರುವ ತಾರತಮ್ಯವು ಕೇವಲ ಲಿಂಗಾಧಾರಿತವಾಗಿಲ್ಲ. ನನ್ನ ವಿನಂತಿ ಏನೆಂದರೆ ವಿವಾಹಿತ ಹೆಣ್ಣು ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಇಲ್ಲ ಎಂಬುದನ್ನು ಹಿಂದೂ ಸಂಹಿತೆಯಲ್ಲಿ ಸೇರಿಸುವುದು ಯೋಗ್ಯ ಎಂಬುದಾಗಿದೆ. ಮಾನ್ಯ ಅಂಬೇಡ್ಕರ್ ಅವರ ಮುಂದಿಟ್ಟ ವಿಚಾರ ಕುರಿತು ಈಗ ತಾನೇ ನಾನು ಚರ್ಚಿಸುತ್ತಿದ್ದೆ. ಪಾಲಿಸುವ ಪ್ರಶ್ನೆ ಕುರಿತು ಹೇಳುವುದಾದರೆ, ಗಂಡನಿಂದ ಪಾಲಿಸಲ್ಪಡುವುದು ಹೆಂಡತಿಯಾದವಳು ಪಡೆದ ಹಕ್ಕು ಹಾಗೆಯೇ ಹೆಂಡತಿಯಾದವಳಿಂದ ಗಂಡ ಪಾಲಿಸಲ್ಪಡುತ್ತಾನೆಯೇ?

**ಶ್ರೀಮತಿ ರೇಣುಕಾ ರೇ (ಪಶ್ಚಿಮ ಬಂಗಾಳ) :** ಯಾಕಾಗಬಾರದು?

**ಮಾನ್ಯರಾದ ಸದಸ್ಯರೊಬ್ಬರು :** ಅಂಥ ಉದಾಹರಣೆಗಳು ಸಾಕಷ್ಟಿವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** "ಯಾಕಾಗಬಾರದು" ಎಂದು ನನ್ನ ಸ್ನೇಹಿತರೊಬ್ಬರು ಕೇಳಿದರು. ಅವರು ಇಂಥ ಸಾಹಸದ ಮನೋಭಾವ ತಾಳಿರುವುದಕ್ಕೆ ನಾನು ಸಂತೋಷಿಸುತ್ತೇನೆ. ಆದರೆ ಅವರು ತಮ್ಮ ಸಹೋದರಿಯರನ್ನು ಈ ಬಗೆಗೆ ಕೇಳಿದ್ದಾರೆಯೆ? ನಮ್ಮ ಸಭಾಧ್ಯಕ್ಷರು ಹೀಗೆ ಹೇಳಲಾರರು. ಸಮಾನತೆ ಎಂಬುದನ್ನು ಯಾವ ರೀತಿಯಲ್ಲಿ ಜಾರಿಗೆ ತರಬೇಕೆಂದರೆ, ಅದು ಬದುಕಿನ ಕೆಲ ಪರಿಸ್ಥಿತಿಗಳಿಗೆ ವಿರೋಧವಾಗಿರುವಂತಿರಬಾರದು ಮತ್ತು ಕೇವಲ ಲಿಂಗಭೇದವನ್ನು ಆಧರಿಸುವುದು ಕೂಡ ತಪ್ಪು ನೀತಿಯಾಗುತ್ತದೆ ಎಂದು ನಾನು ನಿಮ್ಮಗಳ ಗಮನಕ್ಕೆ ತರಬಯಸುತ್ತೇನೆ. ತಂದೆಯ ಆಸ್ತಿಯಲ್ಲಿ ವಿವಾಹಿತ ಹೆಣ್ಣುಮಕ್ಕಳಿಗೆ ಹಕ್ಕು ಇರುವುದಿಲ್ಲವೆಂದು ಹೇಳಿದ ಮಾತ್ರಕ್ಕೆ ಹಿಂದೂ ಮಸೂದೆಯು ಯಾವುದೇ ಉಪಬಂಧವನ್ನು ಉಲ್ಲಂಘಿಸುವಂತಾಗುವುದಿಲ್ಲ. ತನ್ನ ಗಂಡನ ಅಥವಾ ಮಾವನ ಆಸ್ತಿಗೆ ಆಕೆ ಹಕ್ಕುದಾರಳು. ನಾವು ಎಲ್ಲಿಯತನಕ ಹಾಗೂ ಎಲ್ಲಿಯವರೆಗೆ ಮಹಿಳೆಯರ ಹಕ್ಕುಗಳನ್ನು ಗುರುತಿಸುವುದಿಲ್ಲವೋ, ಮತ್ತು ಅವರಿಗೆ ಅವರ ಸಂಪೂರ್ಣ ಹಕ್ಕುಗಳನ್ನು ಕೊಡುವುದಿಲ್ಲವೋ ನಮ್ಮ ನಡತೆಯಲ್ಲಿ ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ. ಇದು ಸಂಭವಿಸಿರುವುದು ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಾದಾಗ. ಇದು ನನಗೆ ಶತಸ್ಸಿದ್ಧ ಎಂದು ಅನಿಸಿದೆ. ಮಸೂದೆಯ ಪರಿಗಣನೆಯ ಹಂತದಲ್ಲಿ ನಾನು ಮಾತಾಡುವಾಗ

ಹೇಳಿದ್ದನ್ನು ಈಗಲೂ ಹೇಳುತ್ತೇನೆ–ನಾವೆಲ್ಲ ಅವರ ಹಕ್ಕಿಗೆ ಬದ್ಧರಾಗಿದ್ದೇವೆ. ಬದ್ಧವಾಗಿರದಿರಲು ಸಾಧ್ಯವಿಲ್ಲ– ನಮ್ಮ ಸಹೋದರಿಯರಿಗೆ ಹಕ್ಕುಗಳನ್ನು ಕೋಡೋಣ, ಅವರಿಗೆ ಅವರ ಸಂಪೂರ್ಣ ಹಕ್ಕುಗಳು ಸಿಗುವಂತೆ ನೋಡಿಕೊಳ್ಳೋಣ. ನಾನು ಅವರಿಗೆ ಕೊಟ್ಟಿರುವ ಆ ಹಕ್ಕುಗಳ ರೀತಿಯನ್ನು ಮಾತ್ರ ವಿರೋಧಿಸುತ್ತಿದ್ದೇನೆ.

ಪಂಜಾಬಿಗೆ ಸಂಬಂಧಿಸಿದಂತೆ, ಮದುವೆಯಾದ ಮಗಳು ಗಂಡನ ಕುಟುಂಬಕ್ಕೆ ಹೋಗುತ್ತಾಳೆ. ಆ ಕುಟುಂಬ ಸದಸ್ಯಳಾಗಿ ಅವರ ಕೇಂದ್ರವಾಗುತ್ತಾಳೆ ಎಂಬ ವಿಷಯಕ್ಕೆ ನಮ್ಮ ವಾದವು ತಳಕು ಹಾಕಿಕೊಂಡಿದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಪಂಜಾಬಿನಲ್ಲಿ ಮಗಳು ತಂದೆಯ ಆಸ್ತಿಗೆ ಉತ್ತರಾಧಿಕಾರಿ ಎಂಬುದನ್ನು ಅವರು ಒಪ್ಪಲಾರರು, ಇದೇ ಅಲ್ಲಿನ ತೊಂದರೆ. ಉಳಿದ ಸಾಮಾನ್ಯ ತತ್ವಗಳ ಬಗ್ಗೆ ಹೇಳುವುದಾದರೆ, ನಾವು ಇನ್ನೂ ಅವುಗಳನ್ನೇ ಪಾಲಿಸುತ್ತಿದ್ದು, ಅವು ಹಿಂದೂ ಮಸೂದೆಗಿಂತ, ನಾಗರಿಕ ಕಾನೂನಿಗೆ ಒಳ್ಳೆಯ ತಳಹದಿಯನ್ನು ಒದಗಿಸಬಲ್ಲವು. ಇದೆಲ್ಲಾ ಲಿಂಗಾಧಾರಿತ ಭೇದವಾಗದೆ ಜೀವನ ವಿಧಾನ ಪರಿಸ್ಥಿತಿಯುಂಟಾಗಿದೆ. ಇವೊತ್ತು ನೀವು ಇನ್ನು ಮುಂದೆ ಎಲ್ಲಾ ಗಂಡಸರು ಅಡುಗೆ ಮಾಡಬೇಕು– ಹೆಂಗಸರು ಮಾಡತಕ್ಕದ್ದಲ್ಲ ಎಂದು ಕಾನೂನು ಹೊರಡಿಸಿದಿರಿ ಎಂದು ಭಾವಿಸಿ; ಅದು ಸರಿಯಾಗುವುದೇ? ಅದು ಪೂರ್ಣವಾಗಿ ತಪ್ಪಾಗುತ್ತದೆ.

**ಪಂಡಿತ ಕೃಷ್ಣಚಂದ್ರ ಶರ್ಮ (ಉತ್ತರ ಪ್ರದೇಶ) :** ಮಾನ್ಯ ಸದಸ್ಯರು ಯಾವ ಕಲಮಿನ ಯಾವ ಭಾಗದ ಮೇಲೆ ಮಾತನಾಡುತ್ತಿದ್ದಾರೆ? ಚರ್ಚೆ ನಡೆಯುತ್ತಿರುವ ಕಲಮಿಗೆ ಇದೆಲ್ಲಾ ಸಂಬಂಧಿಸಿದ್ದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಕಾರ್ಖಾನೆಯ ಕಾನೂನುಗಳಿಗೆ ಸಂಬಂಧಿಸಿದಂತೆ ತಾವು ಹೆರಿಗೆ ಕಾಯ್ದೆ ಉಲ್ಲೇಖಿಸಿದ್ದೀರಿ. ಆ ಕಾಯ್ದೆಗಳೆಲ್ಲಾ ಗಂಡಸರಿಗೆ ಅನ್ವಯ ಮಾಡಬಹುದೋ?

**ಶ್ರೀಮತಿ ರೇಣುಕಾರಾಯ್ :** ಇದೆಲ್ಲಾ ಕಲಮು–೨ಕ್ಕೆ ಯಾವ ರೀತಿ ಸಂಬಂಧಿಸಿದೆ?

**ಮಾನ್ಯ ಸಭಾಧ್ಯಕ್ಷರು :** ಒಂದೇ ಸಮಯಕ್ಕೆ ಬಹಳ ಜನ ಸದಸ್ಯರು ಮಾತಾಡಿದರೆ ಅದು ಗೊಂದಲಕ್ಕೆ ಕಾರಣವಾಗುತ್ತೆ ಹೊರತು ಮತ್ತಾವುದಕ್ಕೂ ಅಲ್ಲ. ಈಗ ಮಾತಾಡುತ್ತಿರುವ ಮಾನ್ಯ ಸದಸ್ಯರನ್ನು ತಮ್ಮ ಮಾತು ಮುಂದುವರಿಸಲು ಬಿಡಿ ಎಂಬುದು ನನ್ನ ಅನಿಸಿಕೆ.

**ಪಂಡಿತ ಠಾಕೂರ ದಾಸ್ ಭಾರ್ಗವ :** ಪ್ರಸ್ತುತತೆಯ ಪ್ರಶ್ನೆ ಯಾರು ತೆಗೆದರೋ, ನನಗನಿಸುತ್ತದೆ ಯಾವುದು ಪ್ರಸ್ತುತ ಮತ್ತು ಯಾವುದು ಅಲ್ಲ ಎಂಬುದು ಅವರಿಗೆ ತಿಳಿದಂತಿಲ್ಲ. ಎಲ್ಲವನ್ನೂ ಒಳಗೊಂಡು, ಬಹು ವಿಸ್ತಾರವಾಗಿ ಮಾತಾಡಿದ ನನ್ನ ಸ್ನೇಹಿತ ಶ್ರೀ ನಜೀರುದ್ದೀನ್ ಅಹ್ಮದ್ ಅವರ ಮಾತುಗಳನ್ನೆಲ್ಲಾ ಅವರು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡುವಾಗ ಕೂಡ ಆ ಎಲ್ಲಾ ಅಂಶಗಳನು ಪ್ರಸ್ತಾಪಿಸುತ್ತಾ ಹೋಗಬೇಕಾಗುತ್ತದೆ. ಅದು ಸಂಬಂಧಿಸಿದ್ದು ಇದು ಅಲ್ಲ ಎಂದು ಸುಮ್ಮನೆ ಹೇಳಿಬಿಡಲಿಕ್ಕಾಗುವುದಿಲ್ಲ. ಅವರು ಆಗ ಹೇಳಿದ್ದು ಸಂಬಂಧಪಟ್ಟಿದ್ದರೆ, ನಾನು ಈಗ ಹೇಳುತ್ತಿರುವುದು ಸಂಬಂಧಪಟ್ಟಿದ್ದೆ. ಇಷ್ಟಲ್ಲದೆ, ಕಲಮು ೨ಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಅದರ ವ್ಯಾಪ್ತಿ ಬಹು ದೊಡ್ಡದಿದ್ದು, ಈ ಕಲಮನ್ನು ಕುರಿತಂತೆ ಪ್ರಸ್ತುತತೆ ಎಂಬ ಪ್ರಶ್ನೆಯೆ ಉದ್ಭವಿಸುವುದಿಲ್ಲ. ಪ್ರಶ್ನೆ ಏನೆಂದರೆ ಹಿಂದೂ ಮಸೂದೆಯನ್ನ ಮುಸ್ಲಿಂರಿಗೆ ಅನ್ವಯಿಸಬಹುದೇ ಅಥವಾ ಮಾನ್ಯ ನಜೀರುದ್ದೀನ್ ಹೇಳಿದ ಹಾಗೆ ಅನ್ವಯಿಸಲು ಬರುವುದಿಲ್ಲವೆನ್ನುವುದೇ ಆಗಿದೆ. ಹೀಗಿರುವಾಗ ಖ್ಯಾತ ವಕೀಲರಾದ ಶ್ರೀ ಕೃಷ್ಣಚಂದ್ರ ಶರ್ಮಾ ಅವರು ನಾನು ಮಾತಾಡುತ್ತಿರುವುದು ಸಂಬಂಧಪಟ್ಟಿದ್ದಲ್ಲ – ಎಂದು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ರಾಜ ಬಹದ್ದೂರ(ರಾಜಸ್ಥಾನ) :** ಮಾನ್ಯರೆ, ನನ್ನದೊಂದು ಕ್ರಿಯಾಲೋಪ. ಮಾನ್ಯ ಸದಸ್ಯರೊಬ್ಬರು ಸದನದ ನಾಯಕರ ಸ್ಥಾನದಲ್ಲಿ ಕೂರಬಹುದೆ?

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ ಕೂರಲಿ.

**ಶ್ರೀ ತ್ಯಾಗಿ :** ಏನು ವಿಷಯ? ನನ್ನನ್ನು ಯಾಕೆ ನಗುವಿಗೆ ಗುರಿಮಾಡಲಾಗಿದೆ ಎಂದು ನಾನು ತಿಳಿಯಬಯಸುತ್ತೇನೆ. ಯಾರಾದರೂ ಕೂರಲಿ ಎಂದು ಇಲ್ಲಿನ ಆಸನಗಳಿವೆ. ಅದು ಖಾಲಿ ಇತ್ತು. ನಾನು ಹೋಗಿ ಕೂತೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮಗಿರುವ ಓಡಾಡುವ ಸ್ವಾತಂತ್ರ್ಯವನ್ನು ಅವರು ಹೀಗೆ ಪ್ರದರ್ಶಿಸಿದ್ದಾರೆ ಅಷ್ಟೇ. ಈ ವಿಷಯದ ಬಗ್ಗೆ ಮತ್ತೇನು ಹೇಳುವ ಆವಶ್ಯಕತೆ ಇಲ್ಲ.

**ಪಂಡಿತ ಠಾಕೂರ ದಾಸ್ ಭಾರ್ಗವ :** ಕಾನೂನಿನ ಮುಂದೆ ಸಮಾನತೆಯ ಪ್ರಶ್ನೆಯನ್ನು ಎತ್ತಲಾಗಿದೆ. ಉಳಿದ ಇನ್ನಿತರ ವಿಷಯಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಅನುಚ್ಛೇದ ೨೫ ಮತ್ತು ೧೫ನ್ನು ಉಲ್ಲೇಖಿಸಿ ಆ ಅನುಚ್ಛೇದಗಳ ಪ್ರಸ್ತಾಪಗಳನ್ನು ಉಲ್ಲಂಘಿಸಲಾಗಿದೆ ಎಂದು ಕೂಡ ಹೇಳಲಾಗಿದೆ. ಆ ಲೇಖನಗಳ ದೃಷ್ಟಿಯಲ್ಲಿ, ಹಿಂದೂ ಮಸೂದೆಯಂತಹ ಸ್ವರೂಪದ ಕಾನೂನನ್ನು ಜಾರಿಗೆ ತರಲಾರೆವು. ಆದರೆ ಹಾಗೆ ನೋಡಿದರೆ ವಿಷಯ ಅದಲ್ಲ. ನಾನು ಹೇಳುವುದೇನೆಂದರೆ ಈಗ ಡಾ. ಅಂಬೇಡ್ಕರ್ ಸಲಹೆ ಮಾಡಿರತಕ್ಕಂತಹ ತಿದ್ದುಪಡಿಗಳಲ್ಲಿ ಕೂಡ, ಈ ಭಾಗವು ಸ್ಪಷ್ಟವಾಗಿಲ್ಲ. ಆದ್ದರಿಂದಾಗಿಯೇ ನಾನು ನನ್ನ ತಿದ್ದುಪಡಿಗಳನ್ನು ಸಲಹೆ ಮಾಡಿದ್ದೇನೆ.

ಹಿಂದೂಗಳಲ್ಲದವರಿಗೆ ಹಿಂದೂ ಮಸೂದೆಯನ್ನು ಅನ್ವಯಿಸಲು ಪ್ರಯತ್ನಿಸಲಾಗುತ್ತಿದೆ ಎಂಬ ಕೆಲ ತಕರಾರುಗಳನ್ನು ನನ್ನ ಸದಸ್ಯರಾದ ಶ್ರೀ ನಜೀರುದ್ದೀನ್ ಅಹ್ಮದ್ ಅವರು ಮಾಡಿದ್ದಾರೆ. ಈ ಮಸೂದೆಯು ಈಗ ಯಾರಿಗೆ ಅನ್ವಯಿಸುತ್ತಿದೆ ಎಂಬುದನ್ನು ತಿಳಿಯಲು ನನ್ನ ಸ್ನೇಹಿತರು ಸ್ವಲ್ಪ ಕಷ್ಟಪಟ್ಟರೆ ಗೊತ್ತಾಗುತ್ತದೆ. ಇವೊತ್ತಿಗೂ ಸಾಮಾನ್ಯವಾಗಿ ಹಾಗೂ ಜನಪ್ರಿಯವಾಗಿ ಕರೆಯಲ್ಪಡುವ "ಹಿಂದೂ" ಗಳಲ್ಲದವರಿಗೂ ಈ ಮಸೂದೆ ಅನ್ವಯಿಸಲ್ಪಡುವಂತಿದೆ ಎಂಬುದನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತೇನೆ. ನೀವು ಗೌರ್ಸ್ ವ್ಯಾಖ್ಯಾನವನ್ನು, ಪ್ರಾಯಶಃ ೧೨೫ನೇ ಪುಟದಲ್ಲಿ ಇರುವುದನ್ನು ನೋಡಿದರೆ ಯಾರು ಹಿಂದೂಗಳಲ್ಲವೆಂದು ಕರೆಯಲ್ಪಡುವರೋ, ಅವರು ಈಗಲೂ ಕೂಡ ಹಿಂದೂ ಕಾನೂನಿನಿಂದ ಆಳಲ್ಪಡುವುದನ್ನು ಕಾಣಬಹುದಾಗಿದೆ. ಭೌಗೋಳಿಕವಾಗಿ ಯಾರು ಹಿಂದುಗಳೋ, ಅವರೆಲ್ಲರಿಗೂ ಅದು ಅನ್ವಯಿಸುತ್ತದೆ. ನಾನು ಹೀಗೆ ಹೇಳುವುದು, ಹಿಂದೂ ಎಂಬುದು ಒಂದು ಜನಾಂಗ ಅಲ್ಲ ಎಂಬುದಕ್ಕಾಗಿ "ಹಿಂದೂ" ಎಂಬುದು ಭೌಗೋಳಿಕವಾಗಿಯೂ ಮಹತ್ವದ ಅಂಶ. ಆದ್ದರಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅಥವಾ ಇನ್ನಾವುದೇ ವಿಶೇಷ ಕಾನೂನುಗಳಿಗೆ ಒಳಪಡುವುದಿಲ್ಲವೋ ಅವರೆಲ್ಲರೂ ಹಿಂದೂ ಕಾನೂನಿಗೆ ಒಳಪಡುತ್ತಾರೆ. ಇದೇನು ಡಾ.ಅಂಬೇಡ್ಕರ್ ಹೊಸದಾಗಿ ಕಂಡುಕೊಂಡ ವಿಚಾರವಲ್ಲ. ಯಾರು ಹಿಂದೂಗಳಲ್ಲವೋ, ಅವರು ಹಿಂದೂ ಕಾಯ್ದೆಯಡಿ ಬರಬಾರದೆಂಬುದು ಅವರ ಬಯಕೆ. ಇಂಥ ಒಂದು ವಾದವನ್ನು ನನ್ನ ಸ್ನೇಹಿತರಾದ ಮಾನ್ಯ ನಜೀರುದ್ದಿನ್ ಬಹಳ ತಪ್ಪಾಗಿ ಪ್ರಸ್ತಾಪಿಸಿದ್ದಾರೆ. ಇದು ಮತಾಂತರದ ಪ್ರಶ್ನೆಯೇ ಅಲ್ಲ. ಒಬ್ಬನಿಗೆ ಹಿಂದೂ ಕಾನೂನು ಅನ್ವಯಿಸುತ್ತದೆ ಎಂದ ಮಾತ್ರಕ್ಕೆ ಅವನು ಹಿಂದೂ ಆಗಬೇಕಿಲ್ಲ. ಒಬ್ಬಾತ ಹಿಂದೂ ಕಾನೂನಿನಲ್ಲಿರುವಂತೆ ಉತ್ತರದಾಯಿತ್ವ, ವಿವಾಹ ವಿಚ್ಛೇದನ ಮೊದಲಾದ ಅಂಶಗಳನ್ನು ಪಾಲಿಸಿದನೆಂದರೆ, ಅವನು ಹಿಂದೂ ಆಗಲಾರ, ನಾನು ಹೇಳುತ್ತೇನೆ ಈ ರೀತಿಯ ಯೋಚನೆಗಳು ನಮಗೆ ಯಾವ ರೀತಿಯಲ್ಲಿ ಪ್ರಯೋಜನಕಾರಿಯಾಗಲಾರವು. ಹಿಂದೂ ಅಥವಾ ಮುಸ್ಲಿಂ ಸಂಖ್ಯೆಗಳನ್ನು ಹೆಚ್ಚಿಸುವುದರಿಂದ ಏನು ಲಾಭವಿದೆ? ಅಗತ್ಯ ಪ್ರಾತಿನಿಧ್ಯ ಅಥವಾ ವಿಶೇಷ ಪ್ರಾತಿನಿಧ್ಯ ಎಂಬ ದಿನಗಳು ಈಗಾಗಲೇ ಹೋಗಿಬಿಟ್ಟಿವೆ. ಎಲ್ಲಿಯವರೆಗೆ ಒಬ್ಬನು ಒಳ್ಳೆಯ

ನಾಗರಿಕನಾಗಿರುತ್ತಾನೋ, ಅಲ್ಲಿಯವರೆಗೆ ಅವನು ಹಿಂದೂವೇ ಅಥವಾ ಮುಸ್ಲಿಮನೇ ಅಥವಾ ಪಾರ್ಸಿಯೇ ಅಥವಾ ಯಹೂದಿಯೇ ಎಂದು ಯೋಚಿಸುವ ಧೈರ್ಯ ಮಾಡಲಾರ. ಯಾರಾದರೂ ತಮ್ಮ ಧರ್ಮವನ್ನು ಕೈಬಿಡಬೇಕೆಂದು ನಾನು ಇಚ್ಛಿಸಲಾರೆ. ಹಿಂದೂಗಳು ಬಹು ಸಂಖ್ಯಾತರು, ಅಥವಾ ಮುಸ್ಲಿಮರು ಅಲ್ಪ ಸಂಖ್ಯಾತರು ಅಥವಾ ಪಾರ್ಸಿಗಳು ಜಾಸ್ತಿ ಹೀಗೆ ನನ್ನ ಸ್ನೇಹಿತರಾದ ನಜೀರುದ್ದೀನ್ ಅವರು ಮಂಡಿಸುತ್ತಿರುವ ವಾದದಲ್ಲಿ ಹಳೆಯ ಮನೋಭಾವವೇ ತುಂಬಿದೆ. ಹಾಗೆ ನೋಡಿದರೆ, ಹಳೆಯ ಹಿಂದೂ ಕಾನೂನಿನಿಂದಲೇ ಕಲಮು ೨ನ್ನು ತೆಗೆದುಕೊಳ್ಳಲಾಗಿದೆ. ಈ ಮಸೂದೆಯ ಮೊದಲ ಭಾಗವು ಹೇಳುವುದೇನೆಂದರೆ ಯಾವುದೇ ವಿಧದಲ್ಲಿ ಹಿಂದೂಧರ್ಮವನ್ನು ಪಾಲಿಸುವ ಅಥವಾ ಹಿಂದೂ ಧರ್ಮದಿಂದ ವಿಕಸಿಸಲ್ಪಟ್ಟ ವೀರಶೈವ ಧರ್ಮವೂ ಸೇರಿದಂತೆ, ಇನ್ನಿತರ ಎಲ್ಲಾ ಧರ್ಮೀಯರಿಗೂ, ಹಿಂದುಧರ್ಮವನ್ನು ಪಾಲಿಸುವ ಪ್ರತಿಯೊಬ್ಬರಿಗೂ ಈ ಮಸೂದೆ ಅನ್ವಯಿಸಲ್ಪಡುತ್ತದೆ. ನನ್ನ ವಿನಯಪೂರ್ವಕ ಮನವಿ ಏನೆಂದರೆ ಈ ಪ್ರಕರಣದ ಈ ಭಾಗವು ಪುನರಾವರ್ತನೆಯಿಂದ ಕೂಡಿದೆ. ಹಿಂದೂಗಳಿಗೆ ಅನ್ವಯಿಸುತ್ತದೆ ಅಂದಿದ್ದರೆ ಸಾಕಿತ್ತು – ಹಿಂದೂಧರ್ಮದ ಎಲ್ಲಾ ನಮೂನೆಗಳಿಗೂ ಅಥವಾ ಹಿಂದೂಧರ್ಮದಿಂದ ವಿಕಸಿಸಲ್ಪಟ್ಟ, ಎಲ್ಲಾ ಧರ್ಮಗಳ ಜನರಿಗೂ ಇದು ಅನ್ವಯಿಸಲ್ಪಡುತ್ತದೆ ಎಂದೆಲ್ಲಾ ಹೇಳುವ ಆವಶ್ಯಕತೆಯಿರಲಿಲ್ಲ. ಆದ್ದರಿಂದ ನಾನು ನನ್ನ ತಿದ್ದುಪಡಿಯಲ್ಲಿ ಈ ಮಸೂದೆ ಕುರಿತಂತೆ

(ಎ) "ಧರ್ಮದಿಂದ ಯಾರು ಹಿಂದೂಗಳು, ಬೌದ್ಧರು, ಜೈನರು ಮತ್ತು ಸಿಖ್ಖರೋ ಅವರಿಗೆಲ್ಲ" ಎಂದು ಸಲಹೆ ಮಾಡಿದ್ದೇನೆ.

ಎರಡನೆಯ ತಿದ್ದುಪಡಿಯು ನಿಷೇಧಾತ್ಮಕ ಸ್ವರೂಪದ್ದಾಗಿದೆ. ಯಾರು ಈ ಸಲಹೆಯಡಿಯಲ್ಲಿ ಬರುವುದಿಲ್ಲವೋ ಅವರನ್ನು ಕುರಿತದ್ದಾಗಿದೆ. ಸಂಪ್ರದಾಯ ಕಾನೂನು ಮತ್ತು ವಿಶೇಷ ಕಾನೂನು ಎಂಬುವವು ಅಲ್ಲಿವೆ. ಉದಾಹರಣೆಗೆ ಪಂಜಾಬ್‌ನ ಮುಸ್ಲಿಂ ತಾನು ಸಾಂಪ್ರದಾಯಿಕ ಕಾನೂನನ್ನು ಪಾಲಿಸುತ್ತೇನೆ "ಶರಿಯತ್"ನಲ್ಲಿ ಎಂದು ಹೇಳಬಹುದು. ಮುಸ್ಲಿಂರಿಗೆ ಅನ್ವಯಿಸಲ್ಪಡುವ ಬಹಳಷ್ಟು ಕಾನೂನುಗಳನ್ನು ಈ ಮಸೂದೆಯು ಪರಿಗಣಿಸಿಯೇ ಇಲ್ಲ. ಆ ಸಾಂಪ್ರದಾಯಿಕ ಕಾನೂನುಗಳು ಬಹಳ ಸುರಕ್ಷಿತ ಸ್ವರೂಪದಲ್ಲಿವೆ. ಈ ಕುರಿತು ನನ್ನ ತಿದ್ದುಪಡಿ ಹೀಗೆ ಹೇಳುತ್ತದೆ.

(ಬಿ) ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅಲ್ಲವೋ ಅವನಿಗೆ

(ಸಿ) ಪ್ರತಿಯೊಬ್ಬ ಹೆಣ್ಣು ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವ ಯಹೂದಿ ಧರ್ಮದಲ್ಲದವನನ್ನು ಮದುವೆಯಾಗುತ್ತಾಳೋ ಆಕೆ–

(ಡಿ) ಈ ಭಾಗದಲ್ಲಿ ಅರ್ಥೈಸುವಂತೆ, ಸಕ್ರಮವಾಗಿ ಅಥವ ಅಕ್ರಮವಾಗಿ ಜನಿಸಿದ ಮಗು, ಅವರ ಪಾಲಕರು ಹಿಂದೂಗಳಾಗಿದ್ದರೆ–

ಭಾಗ(೧)ಪುನರಾವರ್ತನೆಯಾಗಿದೆ ಎಂದು ನಾನು ಹೇಳುತ್ತೇನೆ. ಸಕ್ರಮವಾಗಿಯೋ, ಅಕ್ರಮವಾಗಿಯೋ, ಹುಟ್ಟಿದ ಮಗುವಿನ ಪಾಲಕರು ಹಿಂದೂಗಳಾಗಿದ್ದಲ್ಲಿ ಮಗು ಹಿಂದೂ ಎಂದು ಹೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮಗು ಹಿಂದೂ ಎಂದು ಹೇಳುವುದರಲ್ಲಿ ತಪ್ಪಿಲ್ಲ, ಆದರೆ ಆದೆಲ್ಲಾ ನಾಮಕಾವಸ್ತೆ ಅಷ್ಟೆ. ಹಿಂದೂವಿನ ಮಗು ಸಹಜವಾಗಿ ಹಿಂದೂವೆ! ಆದರೆ ನಾನು ಇದಕ್ಕೆ ತದ್ವಿರುದ್ಧವಾಗಿ ಹೇಳುವುದೇನೆಂದರೆ,– ಈ ಭಾಗವನ್ನು ಕೈಬಿಟ್ಟು ಆಕ್ರಮವಾಗಿ ಇಲ್ಲವೇ ಸಕ್ರಮವಾಗಿ ಜನಿಸಿದ ಮಗುವಿನ ಪಾಲಕರಲ್ಲಿ ಒಬ್ಬರು ಧರ್ಮದಿಂದ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮದವರಿದ್ದರೆ – ಎಂದು ಸೇರಿಸಿ

ಎನ್ನುತ್ತೇನೆ.

ಈ ಕಲಮುಗಳಲ್ಲಿ ಒಂದು ಉಪಬಂಧವಿದೆ. ಅದನ್ನು ಬೇರೆ ಯಾವುದೋ ಉದ್ದೇಶಕ್ಕೆ ಸೇರಿಸಿರಬಹುದು ಎಂದು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ಅದನ್ನು ನೀವು ಅಕ್ಷರಶಃ ತೆಗೆದುಕೊಂಡರೆ ಯಾರನ್ನು ನೀವು ಬಿಡಬಾರದು ಎಂದುಕೊಂಡಿರುತ್ತಿರೋ, ಅವರನ್ನೇ ಬಿಟ್ಟಿರುತ್ತೀರಿ. ಅದನ್ನು ಹಾಗೆಯೇ ಇರುವುದಕ್ಕೆ ಬಿಟ್ಟರೆ ಪಂಜಾಬ್ ವಾರಸ ಕಾಯಿದೆಯ ೫ನೇ ಖಂಡ ಅದಕ್ಕೆ ತೊಡಕಾಗುತ್ತದೆ. ಆ ಉಪಬಂಧ ಹೀಗಿದೆ:

ಈ ಸಂಹಿತೆಯು ಅನುಮೋದಿಸಲ್ಪಡದೇ ಇದ್ದರೆ ಆಗ ಇಲ್ಲಿ ವ್ಯವಹರಿಸಿರುವ ಯಾವುದೇ ವಿಷಯಗಳನ್ನು ಕುರಿತು, ಹಿಂದೂ ಕಾನೂನಾಗಲೀ ಅಥವಾ ಅದರ ಭಾಗವಾಗಿರುವ ಯಾವುದೇ ವಾಡಿಕೆ ಅಥವಾ ಪದ್ಧತಿಯಾಗಲೀ ಇಂಥ ವ್ಯಕ್ತಿಗೆ ಅನ್ವಯವಾಗುವುದಿಲ್ಲವೆಂದು ಪ್ರಮಾಣಿತವಾದರೆ ಆಗ ಆ ವಿಷಯಗಳನ್ನು ಕುರಿತು ಈ ಸಂಹಿತೆ ಅವನಿಗೆ ಅನ್ವಯವಾಗುವುದಿಲ್ಲ.

**ಮಾನ್ಯ ಸದಸ್ಯರೊಬ್ಬರು :** ಆದರಿಂದ ಏನು ಹಾನಿ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಆ ಹಾನಿ ಇದು. ಇಡೀ ಪಂಜಾಬ್ ಮತ್ತು ಭಾರತ ಒಂದೇ ಸಂಹಿತೆಯಡಿಯಲ್ಲಿ ಬರಬೇಕೆನ್ನುವುದು ನನ್ನ ಬಯಕೆ. ನಮ್ಮ ಕಾನೂನುಗಳಿಗೆ ಸಂಬಂಧಿಸಿದಂತೆ ಒಂದು ಏಕತೆ ಇರಬೇಕು. ನಮ್ಮ ಸಂಪ್ರದಾಯಗಳ ಕುರಿತಂತೆ ಹೇಳುವುದಾದರೆ, ನಾವು ಅವುಗಳನ್ನು ರಕ್ಷಿಸಲೇಬೇಕು. ನಾನು ಅದನ್ನು ಕುರಿತೇ ತಿದ್ದುಪಡಿ ಸಲ್ಲಿಸಿದ್ದೇನೆ. ಮಸೂದೆಯೊಳಗಿನ ಕೆಲಭಾಗಗಳನ್ನು ಸ್ವಲ್ಪ ಸಡಿಲಗೊಳಿಸಿ ಪ್ರಾಂತೀಯ ಶಾಸನಸಭೆಗಳು ಮಸೂದೆಯೊಳಗಿನ ಕೆಲಭಾಗಗಳನ್ನು ಮಾತ್ರ ಜಾರಿಗೊಳಿಸಲು ಬಯಸಿದರೆ ಅದಕ್ಕೂ ಅವಕಾಶ ಮಾಡಿಕೊಡಬೇಕೆಂದು ಕೂಡ ನಾನು ಸಲಹೆ ಮಾಡಿದ್ದೇನೆ. ನಾನು ಇನ್ನೂ ಮುಂದುವರಿದು, ನಮ್ಮ ಸಂಪ್ರದಾಯಗಳ ಕುರಿತಂತೆ, ಅದರಲ್ಲೂ, ಉತ್ತರಾಧಿಕಾರತ್ವದಂಥ ವಿಷಯಗಳಲ್ಲಿ, ನಮ್ಮದೇ ಆದ ಕಾನೂನುಗಳನ್ನು ಹೊಂದಲು ಅವಕಾಶಬೇಕೆಂದೂ ಹೇಳಿದ್ದೇನೆ. ಇದೇ ಸಂದರ್ಭದಲ್ಲಿ ಉಳಿದ ಭಾರತದ ಜೊತೆ ಸಂಪರ್ಕವನ್ನು ನಾನು ಕಳೆದುಕೊಳ್ಳಲೂ ಇಷ್ಟಪಡುವುದಿಲ್ಲ. ನಿಜಕ್ಕೂ ಇದೇ ಹಿಂದೂ ಮಸೂದೆಯ ತಳಹದಿಯಾಗಬೇಕು. ಮಸೂದೆಯನ್ನು ಪರಿಗಣನೆಗಾಗಿ ಸದನದಲ್ಲಿ ಮಂಡಿಸುವಾಗ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣದಲ್ಲಿ ಇಡೀ ಭಾರತವೇ ಇಂಥ ಮಸೂದೆಯಡಿಯಲ್ಲಿ ಬರಬೇಕೆಂದು ಹಾಗೂ ಗತವೈಭವದ ಇತಿಹಾಸ ಹೊಂದಿರುವ ಹಿಂದೂ ಆಚಾರಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆಯೆಂದು, ಇದನ್ನು ತಾವು ಬಯಸುವುದಾಗಿಯೂ ಹೇಳಿದರು. ನಾನು ಅವರು ಆಡಿದ ಮಾತುಗಳನ್ನು ಸರಿಯಾಗಿ ಕೇಳಿದ್ದರೆ– ಆದ ಹಾನಿಯನ್ನು ಸರಿಪಡಿಸಬೇಕೆಂದು ಅವರು ನುಡಿದಿದ್ದರು. ಅವರ ಜೊತೆ ನಾನು ಇದ್ದೇನೆ ಮತ್ತು ಹಿಂದೂ ಮಸೂದೆಯ ವ್ಯಾಪ್ತಿಯಿಂದ ಇಡೀ ಪಂಜಾಬನ್ನು ದೂರ ಒಯ್ಯುವುದನ್ನು ನಾನು ಇಷ್ಟಪಡುವುದಿಲ್ಲ. ಇಡೀ ಭಾರತಕ್ಕೆ ಅನ್ವಯವಾಗುವಂತಹ ಮಸೂದೆಯಡಿಯಲ್ಲಿ ನಾನು ಬರಬೇಕೆಂದು ಬಯಸುತ್ತೇನೆಯೇ ಹೊರತು, ನನ್ನದೊಂದೇ ನೇಗಿಲಿನಿಂದ ನಾನು ಗೆರೆ ಎಳೆಯಲು ಹೋಗುವುದಿಲ್ಲ.

ನನ್ನ ತಿದ್ದುಪಡಿಯನ್ನು ಒಪ್ಪಿಕೊಂಡದ್ದೇ ಆದರೆ ಕಲಮುಗಳಾದ (೩)ಮತ್ತು (೪) ಇರುವ ಆವಶ್ಯಕತೆಯೇ ಇಲ್ಲ. ಹಾಗೆಯೇ ನನ್ನ ಪ್ರಕಾರ, ಈ ಕಾನೂನು ಅನ್ವಯಗೊಳ್ಳಲಿರುವ ಐದು ಶ್ರೇಣಿಗಳ ಎಲ್ಲಾ ಜನರೂ ಕೂಡ ನಾನು ಸಲ್ಲಿಸಿದ ತಿದ್ದುಪಡಿಯೊಳಗೆ ಬರುತ್ತಾರೆ. ಮಸೂದೆಯನ್ನು ಮುಂದುವರಿಸಿದವರ ದೃಷ್ಟಿಯಲ್ಲಿರುವ ಆಶಯವನ್ನೇ ನಾನು ಮಂಡಿಸಿರುವ ತಿದ್ದುಪಡಿಯೂ ಅದನ್ನೇ ಹೊಂದಲು ಯತ್ನಿಸುತ್ತದೆ. ಪ್ರಸ್ತುತ ಹಿಂದೂ ಕಾಯ್ದೆಯು ಯಾರು ಯಾರಿಗೆ ಅನ್ವಯವಾಗುತ್ತಿದೆಯೋ, ಅವರೆಲ್ಲರಿಗೂ ಈ ಕಾಯ್ದೆಯ

ವ್ಯಾಪ್ತಿಯನ್ನು ವಿಸ್ತರಿಸಬೇಕೆಂಬ ಅವರ ವಿಚಾರವನ್ನು ನಾನು ಒಪ್ಪುತ್ತೇನೆ. ಯಾವುದೇ ಉದ್ದೇಶದಿಂದ ನಾನು ಅವರನ್ನು ಹೊರಗಿಡಬೇಕೆಂದು ಹೇಳುತ್ತಿಲ್ಲ. ಆದರೆ ಈ ಕಾಯ್ದೆಯಿಂದ ತಾವು ಆಳಲ್ಪಡಬಾರದೆಂದು ಅವರಾಗಿಯೇ ಹೇಳುತ್ತಿರುವುದರಿಂದ ನಾನು ಹಾಗೆ ಹೇಳುತ್ತಿರುವ ಉದ್ದೇಶವಾಗಿದೆ. ಅವರು ಈ ಮಸೂದೆಯಡಿಯಲ್ಲಿ ಬರಬೇಕೆಂದು ಬಯಸಿದಲ್ಲಿ, ಈ ಸಂಬಂಧ ಅವರೊಂದು ನಿರ್ಣಯ ತೆಗೆದುಕೊಳ್ಳಲಿ ಅಥವಾ ಜಾರಿಗೆ ಬರಬೇಕೆಂಬ ಸೂಚನೆ ಮಾಡಲಿ,. ನಾಗರಿಕ ಕಾನೂನಿನ ರಚನೆಗೆ ಹಿಂದೂ ಮಸೂದೆಯೇ ತಳಹದಿಯಾಗಲಿ ಎಂದು ನಾನು ಆಶಿಸುತ್ತೇನೆ. ಭವಿಷ್ಯತ್ತಿನ ನಾಗರಿಕ ಕಾನೂನಿನಲ್ಲಿರಬಹುದಾದ ಸಾಮಾನ್ಯ ತತ್ವಗಳ ಜೊತೆ ಹೊಂದಾಣಿಕೆಯಾಗದ ಯಾವುದೇ ತತ್ವಗಳನ್ನು ಈ ಮಸೂದೆಯಲ್ಲಿ ಸೇರಿಸಬಾರದೆಂದೂ ನಾನು ಹೇಳುತ್ತೇನೆ.

ದತ್ತಕಕ್ಕೆ ಸಂಬಂಧಪಟ್ಟಂತೆ ಆಗ ಹೇಳಿದಂತೆ ಮತ್ತು ಈಗಲೂ ಹೇಳುವಂತೆ ಪಂಜಾಬಿನಲ್ಲಿರುವ ದತ್ತಕ ಸಂಪ್ರದಾಯವು ನಾಗರಿಕ ಮಸೂದೆಯನ್ನೇ ಆಧರಿಸಿದೆ. ಅದೇನೂ ಅಂಥ ಮಹತ್ವ ಹೊಂದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಭೋಜನವಾದನಂತರ ಮುಂದುವರೆಸಲು ಬಯಸುತ್ತಾರೋ ಅಥವಾ ಇನ್ನು ಐದು ನಿಮಿಷಗಳಲ್ಲಿ ಮುಗಿಸುತ್ತಾರೋ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಊಟದ ನಂತರ ನಾನು ಭಾಷಣವನ್ನು ಮುಂದುವರೆಸುವೆ.

ಊಟದ ಸಲುವಾಗಿ ಸದನವನ್ನು ಮಧ್ಯಾಹ್ನ ೨–೩೦ರವರೆಗೆ ಮುಂದೂಡಲಾಗಿದೆ.

ಊಟದ ನಂತರ ಮಧ್ಯಾಹ್ನ ೨–೩೦ಕ್ಕೆ ಸದನ ಪುನಃ ಸೇರಿತು.

[ಪೀಠಸ್ಥಾನದಲ್ಲಿ ಉಪ–ಸಭಾಪತಿಗಳು]

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಸದನವನ್ನು ಮುಂದೂಡಿದಾಗ ನಾನು ಮಸೂದೆಯಲ್ಲಿರುವ ದತ್ತಕಕ್ಕೆ ಸಂಬಂಧಪಟ್ಟ ಅವಕಾಶಗಳನ್ನು ಕುರಿತು ಮಾತಾಡುತ್ತಿದ್ದೆ. ವಸ್ತುಸ್ಥಿತಿಯ ದೃಷ್ಟಿಯಿಂದ ಇಲ್ಲಿನ ಬಹಳ ಸದಸ್ಯರು ಹಿಂದೂ ಕಾಯ್ದೆಗೆ ಬದಲಾಗಿ ನಾಗರಿಕ ಕಾನೂನು ಬೇಕೆನ್ನುತ್ತಿದ್ದಾರೆಂದು ನಾನು ನಿವೇದಿಸುತ್ತಿದ್ದೆ. ಹಿಂದೂ ಕಾಯ್ದೆಯಲ್ಲಿರುವ ದತ್ತಕ ಸಂಬಂಧಪಟ್ಟ ಕೆಲ ಅವಕಾಶಗಳು ಸಂಪ್ರದಾಯದ ದೆಸೆಯಿಂದ ಮಾರ್ಪಾಡು ಹೊಂದಿವೆ. ಹಳೆಯ ದತ್ತಕ ವ್ಯವಸ್ಥೆಯು ಈಗಣ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾಗಿದ್ದು, ತೀರಾ ಧಾರ್ಮಿಕವಲ್ಲದ ಅನೇಕ ಅಭಿಪ್ರಾಯಗಳು ಅದರೊಳಕ್ಕೆ ನುಸುಳಿವೆ, ಹಳೆಯ ವಿಚಾರ ದತ್ತಕದಂತೆ, ದತ್ತು ತೆಗೆದುಕೊಂಡ ವ್ಯಕ್ತಿ, ದತ್ತು ಪಡೆದವನ ಮಗನೇ ಆಗುತ್ತಿದ್ದ. ಅಂಥದ್ದು ಈಗ ಒಂದು ಮಟ್ಟದಲ್ಲಿ ಸಂಸ್ಕಾರಗಳಿಲ್ಲದೆ ದತ್ತಕ ಸ್ವೀಕರಿಸಿದ ಸಂಪ್ರದಾಯವಿದೆ. ಇದು ರೋಮಿನಲ್ಲಿದ್ದ ಹಳೆಯ ನಾಮನಿರ್ದೇಶನದ ವ್ಯವಸ್ಥೆಯಂತಿದ್ದು, ಕುಟುಂಬದ ಹೆಸರನ್ನುಳಿಸಲು ವ್ಯಕ್ತಿಯೊಬ್ಬ ತನಗಿಂತ ವಯಸ್ಸಿನಲ್ಲಿ ದೊಡ್ಡವನಾದವನನ್ನೂ ಕೂಡ ವಾರಸುದಾರನೆಂದು ಸ್ವೀಕರಿಸಬಹುದಾಗಿದ್ದು ಹಿಂದೂ ದತ್ತಕ ವ್ಯವಸ್ಥೆಯಲ್ಲಿರುವ ಸಂಸ್ಕಾರಗಳನ್ನು ಈ ಸಂದರ್ಭದಲ್ಲಿ ಆಚರಿಸಬೇಕಾಗುತ್ತದೆ. ಅಷ್ಟಲ್ಲದೆ ಹಿಂದೂ ಕಾಯ್ದೆಯನ್ವಯ ನಡೆಯುವ ದತ್ತಕ ಪದ್ಧತಿಯ ಪ್ರಕರಣಗಳಲ್ಲಿ ಕಾಣುವ ಸಂಬಂಧಗಳಿಗೂ, ಇಂಥ ದತ್ತಕ ಪ್ರಕರಣಗಳ ಸಂಬಂಧಗಳಲ್ಲಿಯೂ ಸಾಕಷ್ಟು ವ್ಯತ್ಯಾಸವಿದೆ.

**ಶ್ರೀ ತ್ಯಾಗಿ :** ಪಂಜಾಬಿನಲ್ಲಿ – ನಿಮ್ಮ ಮಗ ವಯಸ್ಸಿನಲ್ಲಿ ನಿಮಗಿಂತ ದೊಡ್ಡವನಾಗಿರಲು ಸಾಧ್ಯವೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಹಾಗೆ ನೋಡಿದರೆ, ನನ್ನ ಸ್ನೇಹಿತರು ಕೇಳುತ್ತಿರುವ ಪ್ರಶ್ನೆ ನಿಜವಾಗಿಯೂ ಪ್ರಸ್ತುತವಲ್ಲ. ಕಾನೂನಿನನ್ವಯ ಒಬ್ಬ ವ್ಯಕ್ತಿ ನನ್ನ ವಾರಸುದಾರನನ್ನಾಗಿ ಮಾಡಿದರೆ ಆತ

ಮಗನಾಗಲಾರ ಎಂಬುದು ಆಗಿದೆ. ಇದೇ ವ್ಯತ್ಯಾಸ. ದತ್ತಕದಡಿಯಲ್ಲಿ, ದತ್ತಕ ಮಗನು ಕುಟುಂಬದ ಹೆಸರನ್ನು ಹೊಂದುತ್ತಾನೆ, ತಂದೆಯ ಹೆಸರನ್ನು ಶಾಶ್ವತಗೊಳಿಸುತ್ತಾನೆ. ಹೀಗೆ ಈ ರೀತಿಯಲ್ಲಿ ಕುಟುಂಬವು ಮುಂದುವರೆಯುತ್ತದೆ. ಪಂಜಾಬಿನಲ್ಲಿ ಕುಟುಂಬವು ಬೇರೆ ರೀತಿಯಲ್ಲಿ ಮುಂದುವರೆಯುತ್ತದೆ – ವಾರಸುದಾರನೊಬ್ಬನನ್ನು ನೇಮಕ ಮಾಡಲಾಗುವುದು, ಅವನು ಆ ಕುಟುಂಬದ ಹೆಸರಿನಲ್ಲಿ ಮುಂದುವರೆಯುತ್ತಾನೆ. ಆದ್ದರಿಂದ ಪಂಜಾಬಿನಲ್ಲಿ ಸಾಂಪ್ರದಾಯಿಕ ನೇಮಕ ಅಥವಾ ವಾರಸುದಾರನ ನೇಮಕವೂ ಮಗನನ್ನು ದತ್ತಕ ಮಾಡಿಕೊಳ್ಳುವುದಕ್ಕೆ ಹಿಂದೂ ಕಾನೂನಿನನ್ವಯದ ಮುಖ್ಯ ತತ್ವವೆಂದರೆ, ದತ್ತಕದ ಮೂಲಕ ನೇಮಕ ಮಾಡುವ ವಿಧಾನ. ಹಾಗೆಯೇ ಹಿಂದೂ ಕಾನೂನಿನಲ್ಲಿ ಒಂದು ನಿಯಮವಿದೆ– ಮಹಿಳೆಯೊಬ್ಬಳ ಮಗನನ್ನು ಆ ಮಹಿಳೆಯು ಆ ಮಗನ ತಂದೆಯ ಜೊತೆ ಲಗ್ನವಾಗಲು ಸಾಧ್ಯವಾಗದೇ ಹೋದರೆ ದತ್ತಕ ತೆಗೆದುಕೊಳ್ಳಲು ಬರುವುದಿಲ್ಲ. ಹಾಗೆಯೇ ಮಗಳ ಮಗನನ್ನು ದತ್ತು ತೆಗೆದುಕೊಳ್ಳುವಲ್ಲಿ ಈಗ ಒಂದು ಬಗೆಯ ನಿಷೇಧಗಳಿವೆ. ಹಿಂದೂ ಮಸೂದೆಯನ್ವಯ ದತ್ತಕಕ್ಕೆ ಅರ್ಹನಾಗುವ ಮನುಷ್ಯ ವಿವಾಹವಾಗಿರಕೂಡದು ಮತ್ತು ಅವನು ಹದಿನೈದು ವರ್ಷದೊಳಗಿನವನಾಗಿರಬೇಕು. ಈ ವಿಚಾರಗಳಿಗೆ ಪಂಜಾಬಿನಲ್ಲಿ ಒಲವಿಲ್ಲ. ಈ ಪ್ರಸ್ತಾವಗಳು ಪಂಜಾಬಿನಲ್ಲಿರುವ ಸಂಪ್ರದಾಯಕ್ಕೆ ತೀರಾ ಒಗ್ಗಲಾರದವು. ಮತ್ತು ಆ ಸಂಪ್ರದಾಯಗಳು ವಯಸ್ಸನ್ನು ಕುರಿತು ಅಥವಾ ಸಂಸ್ಕಾರಗಳನ್ನು ಕುರಿತು ಅಥವಾ ಇನ್ನಿತರ ನಿಬಂಧನೆಗಳನ್ನು ಕುರಿತು ಹೆಚ್ಚು ಕಾಳಜಿವಹಿಸುವುದಿಲ್ಲ. ಹಾಗೂ ಇವು ತೊಡಕು ಎಂದೇ ಭಾವಿಸುತ್ತೇವೆ.

**ಶ್ರೀ ತ್ಯಾಗಿ :** ಏಕೆಂದರೆ ಪಂಜಾಬಿನಲ್ಲಿ ಮಗನೆ ಒಬ್ಬ ವ್ಯಕ್ತಿಯ ತಂದೆ!

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಇಡೀ ಜಗತ್ತಿನಲ್ಲಿ ಮಗುವೆ ಮನುಷ್ಯನಿಗೆ ತಂದೆಯಾಗಿದೆ. ಈಗಲೂ ಕೂಡ ವಾರಸುದಾರನನ್ನು ನೇಮಕ ಮಾಡುವ ಸಂಪ್ರದಾಯವು ಪಂಜಾಬಿನಲ್ಲಿದ್ದು, ಅದು ದತ್ತಕವನ್ನೇ ಹೋಲುತ್ತದೆ. ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿರುವ, ಉದಾಹರಣೆಗೆ "ಮರುಮಕ್ಕಯತಾಯಮ್" ಅಂತಹ ವ್ಯವಸ್ಥೆಗಳ ಕಾನೂನಿನ ಬಗ್ಗೆ ಡಾ.ಅಂಬೇಡ್ಕರ್ ಅವರು ಕಳಕಳಿ ತೋರಿದ್ದಾರೆ. ವಿವಾಹ, ವಿಚ್ಛೇದನದಂಥ ವಿಷಯಗಳಲ್ಲಿ ವಿವಿಧ ಸಾಂಪ್ರದಾಯಿಕ ಕಾನೂನುಗಳನ್ನು ಆಚರಿಸುವವರ ಮಧ್ಯೆ ಘರ್ಷಣೆ ಸಂಭವಿಸಿದ ರೀತಿಯಲ್ಲಿ ಹಾಗೂ ಅವರ ಸಂಪ್ರದಾಯಗಳು ಮುಂದುವರೆಯಲನುಗುಣವಾದ ರೀತಿಯಲ್ಲಿ ಮಸೂದೆ ರಚಿಸಬೇಕು–

ಕೆಲ ವಿಷಯಗಳಲ್ಲಿ ಈ ಮಸೂದೆಯು ಹಿಂದೂ ಕಾನೂನಿನ ಮೂಲಕ್ಕೆ ಹೋಗುತ್ತದೆ. ಒಟ್ಟಾರೆ ಅವುಗಳು ಇಡಿಯಾಗಿದ್ದಾಗ ನಾವು ಒಪ್ಪಲು ತಯಾರಿದ್ದೇವೆ. ಆದರೆ ಅವುಗಳಲ್ಲಿ ಏನಾದರೂ ಉಗ್ರ ಬದಲಾವಣೆಗಳಾಗಿ ಜನರ ಭಾವನೆಗಳ ಜೊತೆ ಸಂಘರ್ಷಕ್ಕೆ ಕಾರಣವಾದಲ್ಲಿ, ನಾನು ಡಾ. ಅಂಬೇಡ್ಕರ್ ಅವರಲ್ಲಿ ಅತ್ಯಂತ ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ ಮುಂದಿನ ದಿನಗಳಲ್ಲಿ ಸಂಹಿತೆಯೊಳಗಿನ ಅವಕಾಶಗಳನ್ನು ಪರಿಗಣಿಸುವಾಗ ಈ ರೀತಿಯ ಉಗ್ರ ವರ್ತನೆಗಳ ಕಡೆ ಅವರು ಸಾಕಷ್ಟು ನಿಗಾ ಇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಗೊತ್ತಿದೆ ಅವರು ಈ ಮಸೂದೆಯನ್ನು ಮಂಡಿಸುವಾಗ, ಕೆಲ ತಿದ್ದುಪಡಿಗಳನ್ನು ಒಪ್ಪಿಕೊಳ್ಳುವ ಬಗ್ಗೆ ಮತ್ತು ಅವಕಾಶ ಮಾಡಿಕೊಡುವ ಬಗ್ಗೆ ಒಲವು ತೋರಿದ್ದರು. ಅವೆಲ್ಲಾ ನಾನು ಮೇಲೆ ಹೇಳಿದ ಸ್ವರೂಪದೊಂದಿಗೆ ಸಾಮ್ಯತೆ ಹೊಂದಿವೆ.

ಎರಡು ವಿಚಾರಗಳಾದ ದತ್ತಕ ಹಾಗು ಮಹಿಳೆಯರಿಗೆ ಸಂಬಂಧಿಸಿದ ಉತ್ತರಾಧಿಕಾರದ ಪ್ರಶ್ನೆಗಳನ್ನು ಕುರಿತಂತೆ ನಾನು ಹೇಳಲೇಬೇಕಾದ ವಿಷಯವೆಂದರೆ ಈ ಎರಡು ವಿಚಾರಗಳಲ್ಲಿ ಪಂಜಾಬಿ ಜನತೆ ಪ್ರಕ್ಷುಬ್ಧ

ಮನಸ್ಥಿತಿ ಹೊಂದಿದ್ದು ಅವರು ಇವುಗಳನ್ನು ಹಿಂದೂ ಮಸೂದೆಯ ಅನುಸಾರ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಹಾಗೇನಾದರೂ ಇವುಗಳನ್ನು ಅವರ ಗಂಟಲಲ್ಲಿ ತುರುಕಲು ಹೊರಟರೆ, ಸಮಾಜದಲ್ಲಿ ದಂಗೆಯಾಗುತ್ತದೆಂದು ನಾನು ಈ ಹಿಂದಿನ ಸಂದರ್ಭದಲ್ಲಿಯೇ ಹೇಳಿದ್ದೆ. ನಾವೆಲ್ಲಾ ಶಕ್ತಿವಂತರಾಗಿದ್ದೆವೆಂದೂ– ಇನ್ನೂ ದಂಗೆ ನಡೆದಿಲ್ಲ. ಆದರೆ ನಮ್ಮ ಮನಸ್ಸಿನಲ್ಲಿ ದಂಗೆಯಾಗುವುದಿದ್ದು ಒತ್ತಾಯದಿಂದ ನಾವು ಜೀರ್ಣಿಸಿಕೊಳ್ಳಲಾಗದ್ದನ್ನು ನಮ್ಮ ಗಂಟಲಲ್ಲಿ ತುರುಕುವುದನ್ನು ಖಂಡಿತ ನಾವು ಒಪ್ಪಿಕೊಳ್ಳಲಾರೆವು. ಅಂಥ ಒಂದು ಒತ್ತಾಯದ ಕ್ರಮಗಳಲ್ಲಿ, ತಂದೆಯೊಬ್ಬ ಸಾಯುವಾಗ, ತನ್ನ ಇಚ್ಛೆಗೆ ಅನುಸಾರವಾಗಿ ಉಯಿಲು ಬರೆಯಲು ಇರುವ ಅವಕಾಶ. ಇದರ ಪರಿಣಾಮವೆಂದರೆ, ಹೆಣ್ಣುಮಗಳಿಗೆ ಉತ್ತರಾಧಿಕಾರವಿಲ್ಲವೆಂಬುದನ್ನೇ ಆಧರಿಸಿ ರಚಿತವಾದ ಹಲವಾರು ಉಯಿಲುಗಳು. ಮಗಳಿಗೆ ಉತ್ತರಾಧಿಕಾರವಿರಬೇಕೆಂಬುದನ್ನು ನಾನು ವಿರೋಧಿಸುತ್ತಿಲ್ಲ. ಅದನ್ನು ಎಲ್ಲಿ ಹೊಂದಬಹುದು, ಜನರ ಯಾವ ಭಾವನೆಗಳೊಂದಿಗೆ ಅದು ಸಾಮ್ಯ ಹೊಂದಿದೆ, ಹೀಗೆ ಎಲ್ಲಾ ಮಾರ್ಗಗಳ ಮೂಲಕ ಅದನ್ನು ಹೊಂದಬಹುದು. ಅದರಲ್ಲಿ ತಕರಾರು ಎತ್ತುವುದು ಏನೂ ಇಲ್ಲ. ಆದರೆ ಯಾವ ಸ್ಥಳಗಳಲ್ಲಿ ಅದರ ಆವಶ್ಯಕತೆ ಇಲ್ಲವೋ ಅಲ್ಲಿಗೆ ಅದನ್ನು ವಿಸ್ತರಿಸುವುದು ಸರಿಯಲ್ಲ. ಪಂಜಾಬಿನಲ್ಲಿ ಹೆಣ್ಣುಮಕ್ಕಳು ಅಂಥ ಉತ್ತಮ ಸ್ಥಿತಿಯ ಸಂತೋಷ ಹೊಂದಿಲ್ಲವಾದರೂ, ಅವರೇನನ್ನು ಪಡೆಯುತ್ತಿಲ್ಲ ಎಂದು ನೀವು ಹೇಳಲಾರಿರಿ. ಪಂಜಾಬಿನಂತೆ, ಮದರಾಸು ಮತ್ತಿತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳನ್ನು ಅಷ್ಟೇನೂ ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುತ್ತಿಲ್ಲವೆಂಬುದೂ ನನಗೆ ತಿಳಿದಿದೆ. ಪಂಜಾಬಿನಲ್ಲಿ ಮದುವೆಯ ಸಂದರ್ಭದಲ್ಲಿ ಮಗಳಿಗೆ ವರದಕ್ಷಿಣೆಯ ರೂಪದಲ್ಲಿ ಬಹಳಷ್ಟನ್ನು ಮಾಡಲಾಗುವುದು. ಪಂಜಾಬಿನ ಯಾವುದೇ ಮದುವೆ–ಅದೂ ಶ್ರೀಮಂತನ ಮದುವೆಗೆ ಹೋದರೆ, ಅಲ್ಲಿ ವರದಕ್ಷಿಣೆಯ ರೂಪದಲ್ಲಿ ಸಾವಿರಾರು ರೂಪಾಯಿಗಳನ್ನು ನೀಡುವುದನ್ನು ಕಾಣಬಹುದು. ತಂದೆಯ ಸ್ವಯಾರ್ಜಿತ ಆಸ್ತಿ ಕುರಿತಂತೆ, ಕಳೆದ ಐವತ್ತು ವರ್ಷಗಳಲ್ಲಿ ಹೈಕೋರ್ಟ್‌ಗಳು ಸಾಕಷ್ಟು ಬದಲಾವಣೆಯನ್ನು ಮಾಡಿವೆ. ೧೯೨೯ಕ್ಕಿಂತ ಮೊದಲು ಹೆಣ್ಣುಮಕ್ಕಳಿಗೆ ಪಾಲಕರ ಸ್ವಯಾರ್ಜಿತ ಆಸ್ತಿಯಲ್ಲಿ ಭಾಗವಿರಲಿಲ್ಲ. ಆದರೆ ಈಗ ಮಗನಿಲ್ಲವೆಂದಾದರೆ, ಎಲ್ಲರೊಂದಿಗೆ ಆಕೆ ಕೂಡ ಸ್ವಯಾರ್ಜಿತ ಆಸ್ತಿಯಲ್ಲಿ ಪಾಲುಗಾರರಾಗುತ್ತಾಳೆ. ಆದರೆ ಇದು ನಮ್ಮ ದೇಶದ ಮಹಿಳೆಯರಿಗೆ ಸಂದಿರುವ ಆವಶ್ಯಕ ನ್ಯಾಯವೆಂದೇನೂ ನಾನು ಭಾವಿಸುವುದಿಲ್ಲ. ಅವಿವಾಹಿತ ಹೆಣ್ಣುಮಕ್ಕಳನ್ನು ಕುರಿತು ಹೇಳುವುದಾದರೆ ಗಂಡುಮಕ್ಕಳಂತೆ ಆಕೆಯೂ ಸರಿಯಾದ ಪಾಲನ್ನು ಪಡೆಯಬೇಕು–ಆದರೆ ಅವರಿಗೆ ಅರ್ಧಭಾಗವನ್ನು ಕೊಡಲು ನಾನು ಒಪ್ಪುವುದಿಲ್ಲ. ವಿವಾಹಿತ ಹೆಣ್ಣುಮಕ್ಕಳು, ತಮ್ಮ ಗಂಡನೊಂದಿಗೆ, ತಮ್ಮ ಮಾವನ ಆಸ್ತಿಗೆ ಹಕ್ಕುದಾರರಾಗಬೇಕೆಂದು ನಾನು ಇಚ್ಛಿಸುತ್ತೇನೆ. ಅಂದರೆ, ಮದುವೆಯಾದ ಕೂಡಲೇ ಗಂಡ ಮತ್ತು ಹೆಂಡಿರ ಆಸ್ತಿಯನ್ನು ಒಟ್ಟುಗೂಡಿಸಿ, ನಂತರ ವಿವಾಹಿತ ಮಹಿಳೆ ಆಸ್ತಿ ಸಂಬಂಧಿಸಿದಂತೆ ಪೂರ್ಣ ಸ್ವತಂತ್ರ ಹೊಂದುವಂತಹ ಕಾನೂನನ್ನು ನೀವು ರಚಿಸಿ ಎಂಬುದಾಗಿದೆ.

ಈ ದೇಶದ ಮಹಿಳೆಯರು ತಮ್ಮ ಪೂರ್ಣ ಹಕ್ಕು ಪಡೆಯಬಾರದೆಂದು ನಾನು ಹೇಳಲಿಚ್ಛಿಸುತ್ತಿಲ್ಲ. ಆದರೆ ಹೆಣ್ಣೊಬ್ಬಳು ತನ್ನ ಮಾವನ ಆಸ್ತಿಗೆ ಹಕ್ಕುದಾರಳಾಗುವಂತೆ ತನ್ನ ತಂದೆಯ ಆಸ್ತಿಗೂ ಹಕ್ಕುದಾರಳೇಕೆ ಆಗಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ಅದನ್ನು ನಾನು ಆಕ್ಷೇಪಿಸುತ್ತೇನೆ. ಸಮಾಜದ ಮತ್ತು ಕುಟುಂಬದ ನಂಬುಗೆಗಳನ್ನು ಒರಟಾಗಿ ಕಲಕಬಾರದೆಂದು ನಾನು ಆಶಿಸುತ್ತೇನೆ. ಸದ್ಯ ಮಗನೆ ಕುಟುಂಬದ ಕೇಂದ್ರ, ಆತ ಅದನ್ನು ಮುಂದುವರೆಸುತ್ತಾನೆ. ಹೆಣ್ಣು ಇನ್ನೊಂದು ಕುಟುಂಬಕ್ಕೆ ಹೋಗಿ ಆಕೆ ಆ ಕುಟುಂಬದ ಅವಿಭಾಜ್ಯ ಅಂಗವಾಗುತ್ತಾಳೆ. ಇದೇ ಮುಂದುವರಿಯಲಿ. ನಮ್ಮ ಸಮಾಜದ ನಂಬುಗೆಗಳು ಎಂದಿನವರೆಗೆ, ಎಲ್ಲಿಯವರೆಗೆ ಬದಲಾಗುವುದಿಲ್ಲವೋ, ಅಲ್ಲಿಯವರೆಗೆ ಅವುಗಳನ್ನು ದಿಢೀರೆಂದು ಬದಲಾಯಿಸ

ಹೋಗಬಾರದೆಂದೆ ನನ್ನ ಸವಿನಯ ಪ್ರಾರ್ಥನೆ. ಅಕಸ್ಮಾತ್ ಹಾಗೆ ಮಾಡಿದಲ್ಲಿ ಅಂತಿಮವಾಗಿ ಮಹಿಳೆಯರು ಎರಡೂ ಕಡೆಯಿಂದ ವಂಚಿತರಾಗುತ್ತಾರೆ. ಮದುವೆಯ ಸಂದರ್ಭದಲ್ಲಿ ಮಗನು ಹೇಳಬಹುದು.

"ಆಕೆಗೆ ಅಷ್ಟು ವರದಕ್ಷಿಣೆ ಕೊಡುವುದೇಕೆ?ಆಸ್ತಿಯಲ್ಲಿ ಆಕೆ ವಾರಸು ಪಡೆಯಲಿದ್ದಾಳೆ" ಆಸ್ತಿ ಹಂಚುವ ಸಮಯದಲ್ಲಿ ಗಂಡುಮಕ್ಕಳ ಹಂಗಿಗೆ ಬಿದ್ದ ತಂದೆಯಿಂದ ಹೆಣ್ಣುಮಕ್ಕಳು ಸ್ವಲ್ಪವೆ ಪಡೆಯಬಹುದು ಅಥವಾ ಅಂಥ ಅವಕಾಶದಿಂದಲೇ ವಂಚಿತರಾಗಬಹುದು. ಎರಡು ರೀತಿಯಿಂದಲೂ ಮಹಿಳೆಯರು ಏನು ಪಡೆಯಲಾರರು. ಹೀಗೆ ಮಹಿಳೆಯರನ್ನು ನಡೆಸಿಕೊಳ್ಳುವುದು ಯೋಗ್ಯ ರೀತಿ ಎನಿಸದು.

ಯಾವ ಜನರಿಗೆ ಈ ಕಾಯ್ದೆಯು ಅನ್ವಯಗೊಳ್ಳಲಿದೆಯೋ, ಅಂಥ ಜನರಾದ ನಮ್ಮನ್ನು ನೀವು ಕೇಳಿದರೆ, ಈ ರೀತಿಯಲ್ಲಿರುವ ಮಸೂದೆಯನ್ನು ನಮಗೆ ಅನ್ವಯಿಸುವ ಇಚ್ಛೆಯು, ನೂರಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಸಂಪ್ರದಾಯದ ಬಗ್ಗೆ ನೀವು ಯಾವ ಗೌರವ ಹೊಂದಿಲ್ಲವೆಂದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಹೇಳಬೇಕಾಗುತ್ತದೆ. ನೀವು ಅಂಥ ಸಂಘರ್ಷ ಸೃಷ್ಟಿಸಬಯಸಿದರೆ "ನಮ್ಮ ಹಣೆಬರಹ ನಮಗೆ ಬಿಡಿ" ಎಂದು ಹೇಳಬೇಕಾಗುತ್ತದೆ. ಇದು ನನ್ನ ಅತ್ಯಂತ ವಿನಯಪೂರ್ವಕ ನಿವೇದನೆಯಾಗಿದೆ– ಮಸೂದೆಯೊಳಗಿನ ಒಳ್ಳೆಯ ಅವಕಾಶಗಳ ಪರವಾಗಿ ನಾನು ಇದ್ದರೂ, ಡಾ.ಅಂಬೇಡ್ಕರ್ ಮತ್ತು ಯಾರ್‍ಯಾರು ಈ ಮಸೂದೆಯ ಪರವಾಗಿದ್ದಾರೋ ಅವರಲ್ಲಿ ನಾನು ವಿನಯಪೂರ್ವಕವಾಗಿ ಬೇಡಿಕೊಳ್ಳುವುದೇನೆಂದರೆ, ಈ ವಿಷಯದ ಪರವಾಗಿರುವ ನಮ್ಮ ಒಲವುಗಳ ಬಗ್ಗೆ ಗೌರವ ಬೆಳೆಸಿಕೊಳ್ಳಿ ಮತ್ತು ನಮ್ಮ ಪ್ರದೇಶದ ನಿರ್ದಿಷ್ಟ ಭಾಗದಲ್ಲಿ ಬಹುಸಂಖ್ಯಾತ ಜನ ಪಾಲಿಸುತ್ತಿರುವ ಸಂಪ್ರದಾಯಗಳ ಅಥವಾ ಕಾನೂನಿನ ಪ್ರಸ್ತಾವಗಳನ್ನು ಮುಂದುವರೆಸಿಕೊಂಡು ಹೋಗಲು ಬಿಡಿ ಎನ್ನುವುದಾಗಿದೆ. ಈ ಎಲ್ಲಾ ತಾತ್ಪರ್ಯದಿಂದ, ಮಸೂದೆಯ ಭಾಗ ೧ಕ್ಕೆ ನಾವು ತಿದ್ದುಪಡಿಗಳನ್ನು ಕೊಟ್ಟಿದ್ದೇವೆ.

**ಶ್ರೀ ತ್ಯಾಗಿ :** ಬಹುಸಂಖ್ಯಾತರ ಅಭಿಪ್ರಾಯ ತಿಳಿಯುವುದಾದರೂ ಹೇಗೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಪಂಜಾಬಿನಲ್ಲಿ ಬಹುಸಂಖ್ಯಾತರ ಅಭಿಪ್ರಾಯ ಸ್ಪಷ್ಟ. ನೀವು ಯಾವುದೇ ಹಳ್ಳಿ ಅಥವಾ ಪಟ್ಟಣಕ್ಕೆ ಹೋಗಿ, ಈ ಮಸೂದೆಯ ಪರಿಣಾಮಕ್ಕೆ ಒಳಗಾಗುವಂತಹ ಯಾವುದೇ ವ್ಯಕ್ತಿಯನ್ನು ಕೇಳಿ. ನಾನು ಈಗ ಏನು ಹೇಳಿದೆನೊ ಕರಾರುವಕ್ಕಾಗಿ ಅದನ್ನೇ ಅವನು ಹೇಳುತ್ತಾನೆ. ಪಂಜಾಬಿಗೆ ಸಂಬಂಧಿಸಿದಂತೆ ಅಲ್ಲಿ ಖಂಡಿತ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ಆದ್ದರಿಂದ ಈ ಕಾಯ್ದೆಯನ್ನು ನೀವು ಪಂಜಾಬಿಗೆ ಅನ್ವಯಿಸುವಾಗ–ಪಂಜಾಬಿಗೆ ಇದು ಅನ್ವಯವಾಗಲಿ ಎಂದು ಬಯಸುತ್ತಾ –ನಾನು ಮಂಡಿಸುವುದೇನೆಂದರೆ, ಈ ಎಲ್ಲ ರಿಯಾಯಿತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಜಾರಿಗೆ ತನ್ನಿ ಎನ್ನುವುದಾಗಿದೆ. ಈ ಕಾನೂನೇನು ಕೆಟ್ಟದ್ದಲ್ಲ. ಕಾನೂನಿನ ಅಂತರ್ಯದೊಳಗೆ ತಪ್ಪು ಅಡಗಿದೆ ಎಂದು ಹೇಳುವುದು ಕೂಡ ಶುದ್ಧ ತಪ್ಪು. ನಾವು ನೂರಾರು ವರ್ಷಗಳಿಂದ ಬಾಳಿದ್ದೇವೆ, ನಮ್ಮ ದೇಶಕ್ಕೆ ತಗಲಿರುವ ಹಾನಿಯನ್ನು ನಾವು ಸರಿಪಡಿಸಬೇಕಿದೆ. ಆದ್ದರಿಂದ ನಾನು ಈ ಮಸೂದೆಗೆ ಸಂಪೂರ್ಣ ಬೆಂಬಲ ನೀಡುತ್ತೇನೆ. ಆದರೆ , ಜನರಲ್ಲಿ ವ್ಯಾಪಕವಾಗಿರುವ ಮನೋಭಾವ ಮತ್ತು ಸಂಪ್ರದಾಯಗಳು– ಬಹಳ ಸೂಕ್ಷ್ಮವಾಗಿದ್ದು, ಅವಕ್ಕೆ ಅಲ್ಪ ಧಕ್ಕೆಯಾದರೂ ಹಿಂದೂ ಸಮಾಜದಲ್ಲಿ ಪ್ರತಿಯೊಂದು ಕುಟುಂಬವೂ ಇದರ ಪರಿಣಾಮಕ್ಕೊಳಗಾಗುತ್ತದೆ. ತ್ಯಾಜ್ಯವನ್ನುಳಿದು ಅಲ್ಲಿ ಮತ್ತೇನೋ ಇರಲಾರದು.ಸಾರ್ವಜನಿಕ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ನೀವು ಪಾಲುಹಂಚುವ ಕಾನೂನಿನ ಪ್ರಸ್ತಾವ ತರಹತ್ತಿದ್ದೀರಿ. ಅದರ ಫಲಿತಾಂಶ ಏನಾಗುತ್ತೆ? ಪ್ರತಿಯೊಂದು ಸಾವಿನ ಸಂದರ್ಭದಲ್ಲೂ "ಹೇಗೆ ತಂದೆಯ ಆಸ್ತಿಗೆ ಬೆಲೆ ನಿಗದಿಪಡಿಸೋಣ" ಎಂಬ ಪ್ರಶ್ನೆಯೇ ಹುಟ್ಟಿಕೊಳ್ಳುತ್ತದೆ. ಆಸ್ತಿಗೆ ಬೆಲೆ ನಿಗದಿಪಡಿಸಿ, ಹೆಣ್ಣುಮಕ್ಕಳಿಗೆ ಬಂದ ಆಸ್ತಿಯನ್ನು

ಗಂಡುಮಕ್ಕಳು ಖರೀದಿಸಲು ಅಗತ್ಯವಾದ ಹಣವಿಲ್ಲದೆ, ಸಮಸ್ಯೆ ಆರಂಭಗೊಳ್ಳುತ್ತದೆ. ನಾನು ಈ ಮಾತುಗಳನ್ನು ಕಳೆದ ನಲ್ವತ್ತು ವರ್ಷ ವಕೀಲನಾಗಿ ಗಳಿಸಿದ ಅನುಭವದಿಂದ ನುಡಿಯುತ್ತಿರುವೆ.

**ಪಂಡಿತ ಕೃಷ್ಣ ಚಂದ್ರ ಶರ್ಮ :** ನೀವು ಕ್ರಿಮಿನಲ್ ಕೋರ್ಟ್‌ಗಳಲ್ಲಿ ಸೇವೆ ಸಲ್ಲಿಸುತ್ತಾ ಇದ್ದಿರಿ.

**ಮಾನ್ಯ ಸಭಾಧ್ಯಕ್ಷರು :** ಸಭಾಧ್ಯಕ್ಷ ಸ್ಥಾನವನ್ನುದ್ದೇಶಿಸಿ ಸದಸ್ಯರು ಮಾತಾಡಲಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಗೆಳೆಯರೂ, ಕ್ರಿಮಿನಲ್ ವಕೀಲರೂ ಆದ ಅವರ ಬಗ್ಗೆ ನಾನು ಬಹಳ ಗೌರವ ಹೊಂದಿದ್ದೇನೆ ಹಾಗೆ ಕ್ರಿಮಿನಲ್ ವಕೀಲರ ಬಗ್ಗೆ ಅವರಿಗಿರುವ ಅಭಿಪ್ರಾಯಕ್ಕಿಂತ ನನ್ನದು ಬೇರೆ ತೆರನಾದ್ದು. ನಾನು ಕ್ರಿಮಿನಲ್ ವಕಾಲತ್ತುಗಳನ್ನು ಮಾಡುವಂತೆಯೆ, ಸಿವಿಲ್ ವಕಾಲತ್ತುಗಳನ್ನೂ ಮಾಡುತ್ತಿರುವೆ. ಆದರೆ ನಾನು ಕ್ರಿಮಿನಲ್ ಲಾಯರ್ ಎಂಬುದನ್ನು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ. ಅದೇ ಸಮಯದಲ್ಲಿ ನಾನು ಅಂಧನಂತೆ ಮಾತಾಡಲಾರೆ. ಕ್ರಿಮಿನಲ್ ಲಾಯರ್ ಬಗ್ಗೆ ನನ್ನ ಸ್ನೇಹಿತರು ಕಲ್ಪಿಸಿಕೊಂಡಿರುವುದು ನಿಜವಾಗಿದ್ದಲ್ಲಿ, ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅವರು ತಿಳಿಯಲಿ, ಕ್ರಿಮಿನಲ್ ಲಾಯರ್ ಆಗಿ–ಮೀರತ್ ಆಸುಪಾಸು ಏನು ಸಂಭವಿಸುತ್ತಿದೆ ಎಂಬುದನ್ನು ಅವರು ತಿಳಿಯಲಿ. ನಾನು ಮೀರತ್ ಬಗ್ಗೆ ಮಾತಾಡುವಾಗ–ಅದರ ಬಗ್ಗೆ ನನ್ನ ಸ್ನೇಹಿತರ ವೈಯಕ್ತಿಕ ಭಾವನೆಗಳೇನು ಎಂದು ನಾನು ಅರಿಯೆ–ಆದರೆ ಮೀರತ್‌ನಲ್ಲಿರುವ ಪರಿಸ್ಥಿತಿಗಳು ನನಗೆ ಗೊತ್ತು: ಅವು ಹಿಸ್ಸಾರ್ ಮತ್ತು ರೊಟಕ್‌ನಲ್ಲಿರುವ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ಆದ್ದರಿಂದ ನಾನು ಪಂಜಾಬ್ ಬಗ್ಗೆ ಮಾತಾಡುವಾಗ, ನನ್ನ ಸ್ನೇಹಿತರ ಮತ್ತು ಮೀರತ್ ಪರವಾಗಿ ಮಾತಾಡುತ್ತಿದ್ದೇನೆ. ಏಕೆಂದರೆ ಹಿಂದಿನ ಕಾಲದಲ್ಲಿ ಮೀರತ್ ಪಂಜಾಬಿನ ಒಂದು ಭಾಗವಾಗಿತ್ತು.

**ಪಂಡಿತ ಕೃಷ್ಣಚಂದ್ರ ಶರ್ಮ :** ನನ್ನ ಸ್ನೇಹಿತರ ಗಮನಕ್ಕಾಗಿ ಹೇಳುತ್ತಿದ್ದೇನೆ. ಗೂಳಿಗಳಿಗೆ ಹಿಸ್ಸಾರ್ ಮತ್ತು ಹಸುಗಳಿಗೆ ಮೀರತ್ ಬಹಳ ಪ್ರಸಿದ್ಧಿ

**ಶ್ರೀ ತ್ಯಾಗಿ :** ಗೂಳಿಗಳು ಮತ್ತು ಹಸುಗಳಿಗೂ, ಹಿಂದೂ ಮಸೂದೆಗೂ ಏನು ಸಂಬಂಧ ಎಂದು ನಾನು ತಿಳಿಯಬಯಸುತ್ತೇನೆ.

**ಶ್ರೀ ರಾಜಬಹದ್ದೂರು :** ಈ ಸದನದಲ್ಲಿ ಕಾಗಕ್ಕ–ಗುಬ್ಬಕ್ಕನ ಕಥೆಗೆ ಅನುಮತಿ ಇದೆಯೇ?

**ಮಾನ್ಯ ಸಭಾಧ್ಯಕ್ಷರು :** ಶಾಂತರಾಗಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ವಿವಾಹದ ಪ್ರಶ್ನೆ ಕುರಿತು ನೀವು ಉಲ್ಲೇಖಿಸುವಾಗ, ನಾನು ತಮ್ಮಲ್ಲಿ ಸವಿನಯ ಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಹಿಂದೂ ಮಸೂದೆಯೊಳಕ್ಕೆ ನಾಗರಿಕ ವಿವಾಹದ ಸಾಮಾನ್ಯ ತತ್ವಗಳನ್ನು ಅಳವಡಿಸುವ ವಿಚಾರವಾಗಿ ಸದನವು ವಿಶೇಷ ಲಕ್ಷ್ಯ ವಹಿಸಬೇಕು. ಇದು ಹಿಂದೂ ಮಸೂದೆಯಾಗಿದ್ದಲ್ಲಿ–ಅದರೊಳಕ್ಕೆ ನಾಗರಿಕ ವಿವಾಹ ಸೇರಿಸಬೇಕೆ? ಈ ಪ್ರಸ್ತಾವದಲ್ಲಿನ ವಿವಾಹ ಕುರಿತು ನಾನು ಹೇಳುವುದೇನೆಂದರೆ, ಅದು ಹೇಗಿದೆಯೋ ಹಾಗೆಯೇ ಬಿಡಿ– ಎಂಬುದಾಗಿದೆ. ಮುಸ್ಲಿಂ, ಮತ್ತಿತರರಿಗೆ ಅನ್ವಯವಾಗಲಾರದಂತಹ ಹಿಂದೂ ಮಸೂದೆಯನ್ನು ನೀವು ರೂಪಿಸುವುದಾದರೆ, ಅಲ್ಲಿಗೆ ನಾಗರಿಕ ವಿವಾಹವನ್ನು ತರಬೇಡಿ. ಯಾವುದೇ ಹಿಂದೂ ಮದುವೆಯಾಗಬಯಸಿದರೆ, ಅವನು ಮುಸ್ಲಿಂ ಕ್ರಿಶ್ಚಿಯನ್ ಹಾಗೂ ಉಳಿದೆಲ್ಲರೂ ವಿವಾಹವಾಗುವ ನಾಗರಿಕ ಒಪ್ಪಂದದನ್ವಯ ಮದುವೆಯಾಗುತ್ತಾನೆ. ಇದು ನಮ್ಮ ಜಂಟಿ ನಾಗರಿಕ ಮಸೂದೆ. ಆದ್ದರಿಂದ ನಾಗರಿಕ ವಿವಾಹ ಪ್ರಕರಣವನ್ನು ಇಲ್ಲಿ ಸೇರಿಸಬಾರದೆಂಬುದೆ ನನ್ನ ಪ್ರಾರ್ಥನೆ.

ನಾನು ಮಸೂದೆಯೊಳಗಿರುವ ಎಲ್ಲಾ ಉಪಬಂಧಗಳನ್ನು ಕುರಿತು ಉಲ್ಲೇಖಿಸಲು ಬಯಸಲಾರೆ.

ನಾನು ಏಕೆ ಮಾತಾಡಿದೆನೆಂದರೆ, ಈ ಹಂತದಲ್ಲಿ ನಮ್ಮೆಲ್ಲರ ಧೋರಣೆಗಳನ್ನು ವ್ಯಾಖ್ಯಾನಿಸಿ, ಈ ಮಸೂದೆಯ ಬಗ್ಗೆ ನಮ್ಮ ಮತ್ತು ಒಟ್ಟಾರೆ ದೇಶದ ಸಾಮಾನ್ಯ ಅನಿಸಿಕೆಗಳನ್ನು ಡಾ.ಅಂಬೇಡ್ಕರ್‌ಗೆ ತಿಳಿಸಬೇಕೆಂಬುದಕ್ಕಾಗಿ ಮಾತ್ರ. ಈ ಮಸೂದೆಯು ಕೆಟ್ಟದಾಗಿಲ್ಲ ಮತ್ತು ಅದನ್ನು ಅನುಮೋದನೆ ಪಾಸು ಮಾಡಬೇಕೆಂದು ನಾವು ಮುಂದುವರೆಯುತ್ತಿರುವಾಗ, ಒಳ್ಳೆಯವೆಂದು ಅನ್ನಿಸಿದ ಕೆಲ ಉಪಬಂಧಗಳಿಗೆ ನಾನು ಅಡ್ಡಿಯಾಗಲಾರೆ ಅಥವಾ ವಿಳಂಬಕಾರಿ ತಂತ್ರಗಳನ್ನು ಬಳಸಿ ಮಸೂದೆಯನ್ನು ಅಂಗೀಕಾರಗೊಳಿಸಲು ಮನಸ್ಸಿಲ್ಲ ಎಂಬುದನ್ನು ತೋರಲಾರೆ. ಈ ಅಂಶವನ್ನು ನಾನು ಏಕೆ ಹೇಳುತ್ತಿರುವೆನೆಂದರೆ, ಯಾರು ಯಾರು ಉದ್ದುದ್ದ ಭಾಷಣಗಳನ್ನು ಮಾಡುತ್ತಾರೊ, ಅವರು ನಿಜಕ್ಕೂ ಈ ಮಸೂದೆಯು ಅಂಗೀಕಾರವಾಗುವದನ್ನು ಬಯಸುತ್ತಿಲ್ಲ ಎಂಬ ಚಿತ್ರಣವು ಅನೇಕರ ಮನಸ್ಸಿನಲ್ಲಿ ಮೂಡಿದೆ, ಇದು ಶುದ್ಧ ತಪ್ಪು. ನನ್ನ ಬಗ್ಗೆ ನಾನು ಹೇಳುವುದಾದರೆ, ಈ ಮಸೂದೆಯು ಅಂಗೀಕಾರಗೊಳ್ಳಬೇಕೆಂದು ಬಯಸುತ್ತೇನೆ. ಮತ್ತು ಯಾರು ಇದರ ಪರವಾಗಿದ್ದರೋ, ಅವರನ್ನು ನಾನು ವಿನಂತಿಸುವುದೇನೆಂದರೆ, ಜನರ ಸಂಪ್ರದಾಯ ಮತ್ತು ಭಾವನೆಗಳಿಗೆ ಘಾಸಿ ಮಾಡುವಂತಹ ಅಂಶಗಳು ಅಂಗೀಕಾರಗೊಳ್ಳದಂತೆ ದಯಮಾಡಿ ನೋಡಿಕೊಳ್ಳಿ ಎಂಬುದಾಗಿದೆ.

***ಸರ್ದಾರ್ ಹುಕುಂ ಸಿಂಗ್(ಪಂಜಾಬ್) :** ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರ ಧೋರಣೆ ಬಗ್ಗೆ ನನಗೆ ಸಹಮತವಿದೆ. ಅವರು ಏನು ಹೇಳಿದರೆಂಬುದನ್ನು ನಾನು ಹೀಗೆ ಗ್ರಹಿಸಿದೆ– ಮಸೂದೆಯು ಅಂಗೀಕಾರಗೊಳ್ಳಬೇಕೆಂದು ಅವರು ಇಚ್ಛಿಸುತ್ತಾರೆ. ಆದರೆ ಅದು ತಮಗೂ ಹಾಗೂ ದೇಶದ ತಮ್ಮ ಭಾಗದಲ್ಲಿನ ಜನರಿಗೆ ಅನ್ವಯವಾಗಬಾರದೆಂದೂ ಇಚ್ಛಿಸುತ್ತಾರೆ. ನಿಜ ನಾನೂ ಅದನ್ನೇ ಹೇಳುವವನಿದ್ದೇನೆ. ಮಸೂದೆಯು ಅಂಗೀಕಾರವಾಗಬೇಕೆಂದು ಬಯಸುತ್ತೇನೆ. ಅದರೆ ಅದು ನನಗೆ ಅನ್ವಯವಾಗಬಾರದು. ಅದೇ ರೀತಿ, ನಿರ್ದಿಷ್ಟ ಸಮುದಾಯದ ಮೇಲೂ ಅದನ್ನು ಹೇರಬಾರದೆಂಬ ವಿಷಯದಲ್ಲೂ ನಾನು ಅದೇ ಭಾವನೆ ಹೊಂದಿರುವೆ. ಮಸೂದೆಯ ಅನ್ವಯ ಕುರಿತು ನನಗೆ ಅನ್ನಿಸಿದ್ದೇನೆಂದರೆ, ಅದು ಭೌಗೋಳಿಕತೆಯ ಅಂಶಗಳಿಗಿಂತ ಮುಖ್ಯವಾಗಿ ಕೆಲ ಸಮುದಾಯಗಳ ಕುರಿತಾಗಿದೆ ಎಂಬುದು. ಆದ್ದರಿಂದ ಸಿಖ್ಖರಿಗೆ ಇದು ಅನ್ವಯಿಸುವುದಿಲ್ಲ ಎಂಬ ತಿದ್ದುಪಡಿ ಮಂಡಿಸಲು ಸರಿಯಾಗಿದೆ ಎಂದು ನಾನು ತಿಳಿದಿದ್ದೇನೆ.

ಸಮಾಜವು ಕೊಳೆಯಬೇಕೆಂದು ಯೋಚಿಸುವಂಥವನು ನಾನಲ್ಲ. ಪ್ರಗತಿಯ ಜೊತೆ ಮತ್ತು ಕಾಲದೊಂದಿಗೆ ಹೆಜ್ಜೆ ಹಾಕಬೇಕೆಂಬುದರಲ್ಲಿ ನನಗೆ ನಂಬುಗೆ ಇದೆ. ಸಿಖ್ಖರು ಸಮಾಜದಲ್ಲಿರುವ ಒಂದು ಪ್ರಗತಿಪರ ಸಮುದಾಯ ಎಂದು ನಾನು ಹೇಳಬಲ್ಲೆ. ಸಿಖ್ಖರನ್ನು ಈ ಮಸೂದೆಯ ಆಚೆ ಇಡಬೇಕೆಂದು ನಾನು ಯಾಕೆ ಒತ್ತಾಯಿಸುತ್ತಿರುವೆನೆಂದರೆ, ಅವರು ನೂರಾರು ವರ್ಷಗಳಿಂದ ಪಾಲಿಸುತ್ತಾ ಬಂದಿರುವ ಸಂಪ್ರದಾಯ ಮತ್ತು ಆಚಾರಗಳಿಗೆ, ಮಸೂದೆಯೊಳಗಿನ ಕೆಲ ಉಪಬಂಧಗಳಿಂದ ಹಾನಿಯಾಗುತ್ತಿದೆ ಎಂಬ ಕಾರಣಕ್ಕಾಗಿ

ಕಲಮು ೨ರ ಉಪಕಲಮು(೨)ರ ಉಪಬಂಧವನ್ನು ಉಲ್ಲೇಖಿಸಿ ಪಂಡಿತಜೀ ಮಾತಾಡಿದರು. ಆ ಕಲಮು ಹೀಗಿದೆ:

"ಯಾವುದೇ ವ್ಯಕ್ತಿ ಹಿಂದೂ ಕಾನೂನಿನಿಂದ ಅಥವಾ ಯಾವುದೇ ಸಂಪ್ರದಾಯಿಕ ಕಾನೂನಿನಿಂದ

---

* ೧೯೫೧ನೇ ಫೆಬ್ರವರಿ ೬ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೫೨–೬೨

ಅಥವಾ ಮುಂದೆ ಹೇಳುವ ವಿಷಯಕ್ಕೆ ಸಂಬಂಧಪಟ್ಟಂತೆ ಆ ಕಾನೂನು ಹೇಳುವ ಯಾವುದೇ ವಾಡಿಕೆಯಂತೆ ಆಳಲ್ಪಡದಿದ್ದರೆ, ಸಂಹಿತೆ ಜಾರಿಗೊಳಿಸದೆ ಇದ್ದ ವಿಷಯಗಳಿದ್ದರೆ–ಅಂಥ ವ್ಯಕ್ತಿಗಳಿಗೆ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಈ ಮಸೂದೆ ಅನ್ವಯವಾಗುವುದಿಲ್ಲ"

ಪಂಜಾಬಿನಲ್ಲಿರುವ ಸಂಪ್ರದಾಯ ಮತ್ತು ಬಳಕೆಯನ್ನು ಇದು ಉಳಿಸಬಹುದೆಂದು ಪ್ರಾಯಶಃ ಅವರು ಹೇಳಿದರೆಂದು ನಾನು ಅರ್ಥಮಾಡಿಕೊಂಡಿರುವೆ. ಆದರೆ ನಾನು ಅವರ ಮಾತನ್ನು ಒಪ್ಪುವುದಿಲ್ಲ. ಏಕೆಂದರೆ ಕಲಮು(೨) ಹೀಗೆ ಹೇಳುತ್ತದೆ.

"ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಅವರನ್ನು ಹೊರತುಪಡಿಸಿ ಉಳಿದೆಲ್ಲರಿಗೂ ಈ ಸಂಹಿತೆ ಅನ್ವಯಿಸುತ್ತದೆ."

ಈ ಉಪ–ಕಲಮನ್ನು ಓದಿದರೆ, ಅದು ಹಿಂದೂ ಅಥವಾ ಸಿಖ್ಖರಲ್ಲಿನ ಸಂಪ್ರದಾಯ ಅಥವಾ ಬಳಕೆ ಕುರಿತು ಪ್ರಸ್ತಾಪಿಸುವುದಿಲ್ಲ. ಆದ್ದರಿಂದ ಇದು ಸಂಪ್ರದಾಯವನ್ನಾಗಲಿ ಅಥವಾ ಬಳಕೆಯನ್ನಾಗಲಿ ಸಂರಕ್ಷಿಸುವುದಿಲ್ಲ ಎಂಬುದು ನನ್ನ ನಮ್ರ ಅಭಿಪ್ರಾಯವಾಗಿದೆ. ಹೀಗಾಗಿ ನಾನು ಅವರ ಆಶಾವಾದವನ್ನು ಪುಷ್ಟೀಕರಿಸುವುದಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ಪ್ರಸ್ತಾವಗಳು ಸಂಪ್ರದಾಯ ಅಥವಾ ಬಳಕೆಗಳನ್ನು ಸಂರಕ್ಷಿಸುತ್ತವೆಂದೂ ನಾನು ಯಾವಾಗಲೂ ಹೇಳಿಲ್ಲ. ನಾನು ಏನು ಹೇಳಬಯಸಿದ್ದೆನೆಂದರೆ, ನಾವು ಹಿಂದೂ ಕಾನೂನಿನಿಂದ ಆಳಲ್ಪಡುವುದಿಲ್ಲವೆಂಬುದು "ಇಂಥ ವ್ಯಕ್ತಿಯು ಹಿಂದೂ ಕಾನೂನಿನಿಂದ ಆಳಲ್ಪಡುವುದಿಲ್ಲವೆಂಬುದು ಸಿದ್ಧವಾದ ಪಕ್ಷದಲ್ಲಿ" ಎಂಬ ಸಾಲುಗಳಿಂದ, ಪಂಜಾಬಿಗಳು ಈ ಪ್ರಸ್ತಾವದಡಿಯಲ್ಲಿ ಬರುವುದಿಲ್ಲ ಎಂಬುದನ್ನು ತೋರಿಸುವ ಸಲುವಾಗಿ ನಾನು ಹೇಳಿರುವೆ. ಆದರೆ ನಮ್ಮ ಸಂಪ್ರದಾಯ ಮತ್ತು ಬಳಕೆಗಳು ರಕ್ಷಿಸಲ್ಪಡುವುದಿಲ್ಲ. ಇದು ಎಲ್ಲಾ ಹಿಂದುಗಳಿಗೂ ಅನ್ವಯಿಸುತ್ತದೆ. ವಿಷಯಕ್ಕೆ ಸಂಬಂಧಿಸಿದಂತೆ ನಾನು ಹೇಳುವುದೇನೆಂದರೆ, ನಾವು ನಮ್ಮ ಸಂಪ್ರದಾಯಗಳಿಂದ, ಮತ್ತಿತರ ವಿಷಯಗಳಿಂದ ಆಳಲ್ಪಡುವ ಅವಕಾಶ ಕಲ್ಪಿಸುವ, ಹೊಸ ಅವಕಾಶವೊಂದನ್ನು ರಚಿಸಿ ನಮ್ಮ ಸಂಪ್ರದಾಯ ಮತ್ತು ಬಳಕೆಗಳನ್ನು ರಕ್ಷಿಸಬಹುದು ಎನ್ನುವುದಾಗಿದೆ. ಆದರೆ ಇಂಥ ಅವಕಾಶಗಳು, ಕೆಲಮಟ್ಟಿನ ಅನಿಶ್ಚಿತತೆಗೆ ದಾರಿ ಮಾಡಿಕೊಡುತ್ತವೆ.

**ಸರ್ದಾರ್ ಹುಕುಂ ಸಿಂಗ್ :** ಕಲಮು ೨ರ ಉಪಕಲಮು ೧ ಸ್ಪಷ್ಟವಾಗಿ ಹೇಳುವುದೇನೆಂದರೆ, ಸಂಹಿತೆಯು ಹಿಂದೂಗಳಿಗೆ, ಬೌದ್ಧರಿಗೆ, ಜೈನರಿಗೆ, ಸಿಖ್ಖರಿಗೆ ಮತ್ತು ಹಿಂದೂಧರ್ಮಕ್ಕೆ ಮತಾಂತರಗೊಂಡ ಎಲ್ಲರಿಗೂ ಅನ್ವಯಿಸುತ್ತದೆ.

ಆದ್ದರಿಂದ ನನಗೆ ಸಂಬಂಧಪಟ್ಟಂತೆ, ಅಲ್ಲಿ ಯಾವ ಗೊಂದಲಗಳೂ ಇಲ್ಲ. ಯಾವ ಮಟ್ಟದಲ್ಲೂ ನಮ್ಮ ಸಂಪ್ರದಾಯ ಮತ್ತು ಬಳಕೆಗಳನ್ನು ಉಳಿಸಲು ಸಾಧ್ಯವಿಲ್ಲ ಎಂಬ ನನ್ನ ಮಾತಿನೊಂದಿಗೆ ಹೇಗೋ ಪಂಡಿತಜೀ ಒಪ್ಪಿದ್ದಾರೆ.

ಮಾನ್ಯರೆ ಇಡೀ ಭಾರತದ ನಾಗರಿಕರಿಗೆ ಅನ್ವಯವಾಗುವಂತಹ ಏಕರೂಪದ ಸಂಹಿತೆಯ ರಚನೆಗೆ ಪ್ರಯತ್ನಿಸಿದ್ದರೆ, ಆಗ ಪ್ರಾಯಶಃ ನಾನು ಹೀಗೆ ಎದ್ದು ನಿಂತು ಆಕ್ಷೇಪಗಳನ್ನು ಕೇಳುತ್ತಿರಲಿಲ್ಲ. ಅಷ್ಟೇ ಅಲ್ಲ, ನಾನು ಪಂಜಾಬಿ ಎಂದು, ಕೆಲ ತ್ಯಾಗಗಳನ್ನು ಮಾಡಬೇಕೆಂದು ಕೇಳಿದ್ದರೂ ನಾನು ಆಕ್ಷೇಪಗಳನ್ನು ಎತ್ತುತ್ತಿರಲಿಲ್ಲ. ನಾವೆಲ್ಲಾ ಒಂದೇ ರಾಷ್ಟ್ರವೆಂಬ ಐಕ್ಯತೆಯಿಂದ ಒಂದೇ ಜನವೆಂದು ಹೊರಟಿದ್ದರೆ, ನಿಶ್ಚಿತವಾಗಿ ಇದಕ್ಕಾಗಿ ಕೆಲವರ್ಗಗಳು ಸ್ವಲ್ಪಮಟ್ಟಿಗಾದರೂ ತ್ಯಾಗ ಮಾಡಬೇಕೆಂಬ ದೃಷ್ಟಿಯಿಂದ, ಆಸೆಯಿಂದ ನಾನು ತ್ಯಾಗ ಮಾಡಲು ಸಿದ್ಧನಿರುತ್ತಿದ್ದೆ. ಆದರೆ ಇಲ್ಲಿ ಆ ಉದ್ದೇಶವಿಲ್ಲ. ಈ ಸಂಹಿತೆಯಿಂದ ಎಲ್ಲಾ ಜನರನ್ನು

ಒಂದುಗೂಡಿಸುವ ಯಾವ ಪ್ರಯತ್ನವನ್ನೂ ಮಾಡಲಾಗಿಲ್ಲ. ಅಲ್ಲಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯದ ನಡುವೆ ತಾರತಮ್ಯ ಮಾಡಲಾಗಿದೆ. ಆದ್ದರಿಂದ ಅದನ್ನು ವಿರೋಧಿಸುವ ಮೂಲಕ ಸರಿಯಾದ ನ್ಯಾಯ ಸಲ್ಲಿಸುತ್ತಿದ್ದೇನೆ.

ಆದರೂ ಮಸೂದೆಯ ಕೆಲ ಅಧ್ಯಾಯಗಳ ಕುರಿತಂತೆ ನನಗೆ ಸಂಪೂರ್ಣ ಸಮ್ಮತಿ ಇದೆ ಎಂಬುದನ್ನು ನಾನು ಇಲ್ಲಿ ಸ್ಪಷ್ಟಪಡಿಸಲೇಬೇಕು. ಅದರಲ್ಲಿ ಕೇವಲ ಮೂರು ಭಾಗಗಳನ್ನು ನಾನು ವಿರೋಧಿಸುತ್ತೇನೆ. ಸದನದ ಮುಂದೆ ಬೇರೆ ಬೇರೆ ಭಾಗಗಳನ್ನು ಮಂಡಿಸಿದಲ್ಲಿ, ಖಂಡಿತವಾಗಿ ಅವು ಯಾವುದೇ ವಿವಾದಕ್ಕೊಳಗಾಗದೆ ಖಂಡಿತ ಅಂಗೀಕಾರಗೊಳ್ಳುತ್ತವೆಂದು ನನಗೆ ನಂಬಿಕೆ ಇದೆ. ಈಗ ಅವುಗಳನ್ನು ಒಟ್ಟಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ, ನಾನು ಅವುಗಳನ್ನು ವಿರೋಧಿಸುತ್ತಿದ್ದೇನೆ. ಯಾಕೆಂದರೆ ನನ್ನ ದನಿ ಏನೆಂಬುದು ತಿಳಿಯದೆ ಅವು ಅಂಗೀಕಾರಗೊಳ್ಳಬಾರದೆಂದು.

ಮಸೂದೆಯೊಳಗಿನ ನಾನು ವಿರೋಧಿಸುವ ಮೂರು ಪ್ರಸ್ತಾವಗಳೆಂದರೆ ೧)ವಿವಾಹಕ್ಕೆ ಸಂಬಂಧಿಸಿದವುಗಳು ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದ ಬಿಡುಗಡೆಗಳು ೨) ದತ್ತಕ ೩) ಉತ್ತರದಾಯಿತ್ವ (ಮತ್ತೇನು ಬಿಟ್ಟಂತಾಯಿತು ಸದಸ್ಯರೊಬ್ಬರ ಮಾತು) ಅಷ್ಟಾಗಿಯೂ ಇನ್ನು ಬಹಳ ಉಳಿದಿದೆ. ಪಂಡಿತಜೀ ಹೇಳಿದ ಹಾಗೆ, ಈಗಾಗಲೇ ಹಿಂದೂ ಕಾನೂನಿನ ಒಳಗೆ ಆಳಲ್ಪಡುತ್ತಿರುವವರಿಗೂ ಈ ಮಸೂದೆ ಅನ್ವಯಿಸಲ್ಪಡುತ್ತದೆ. ಇದು ಸರಿ. ಹಿಂದೂ ಕಾನೂನಿನಿಂದ ಆಳಲ್ಪಡಬೇಕೆಂದು ಸಮ್ಮತಿ ತೋರಿದ ಕೂಡಲೆ ಅದಕ್ಕೆ ಕಟ್ಟಿಹಾಕಿದಂತಲ್ಲ. ನಾವು ಬೇರೆ ಕಡೆಯಲ್ಲೂ ಸುತ್ತಾಡಿ ವಿಭಿನ್ನ ನೆಲೆಗಳಲ್ಲಿರುವ, ಇನ್ನಿತರ ಧರ್ಮಗಳಲ್ಲಿರುವ ಇನ್ನಿತರ ಕೆಲ ಅಂಶಗಳನ್ನೂ ತೆಗೆದುಕೊಳ್ಳಬಹುದಾಗಿದೆ. ಅದು ತನ್ನ ಸ್ವಂತ ಕೇಂದ್ರದಲ್ಲಿ ಇಲ್ಲ ಎಂದ ಮಾತ್ರಕ್ಕೆ ನನ್ನನ್ನು ಸುತ್ತು ಹಾಕಲು ಕೂಡ ಒತ್ತಾಯ ಮಾಡುವಂತಿಲ್ಲ.

ಅಲ್ಲದೆ, ಮಾನ್ಯರೆ, ಇದೆಲ್ಲಾ ಒಂದು ತಪ್ಪು ಕಲ್ಪನೆ, ಸಿಖ್ಖರು ಹಿಂದೂ ಕಾನೂನಿನಿಂದ ಆಳಲ್ಪಡಬೇಕೆಂದು ಹಿಂದೂ ಮಸೂದೆ ಹೇಳುತ್ತದೆ. ಈಗಾಗಲೇ ನನ್ನ ಸ್ನೇಹಿತರಾದ ಪಂಡಿತ ಠಾಕೂರ ದಾಸ್ ಭಾರ್ಗವ ಅವರು ಉಲ್ಲೇಖಿಸಿರುವ ಪಂಜಾಬಿನ ಸಾಂಪ್ರದಾಯಿಕ ಕಾನೂನು, ೨೦ಡಿ ಹೀಗೆ ಹೇಳುತ್ತದೆ

"ಉತ್ತರದಾಯಿತ್ವ, ಮಹಿಳೆಯರ ವಿಶೇಷ ಆಸ್ತಿ ಹಕ್ಕು. ನಿಶ್ಚಿತಾರ್ಥ, ವಿವಾಹ ವಿಚ್ಛೇದನ, ದತ್ತಕ, ಪಾಲಕತ್ವ, ಅಪ್ರಾಪ್ತ ವಯಸ್ಕತೆ, ಜಾರಜತ್ವ, ಕುಟುಂಬದ ಸಂಬಂಧ ಹಕ್ಕುದಾಯಿತ್ವ, ಕೊಡುಗೆ, ಭಾಗೀಕರಣ, ಯಾವುದೇ ಧಾರ್ಮಿಕ ಬಳಕೆ ಅಥವಾ ಸಂಸ್ಥೆ, ಪ್ರಸ್ತಾವ ಅಥವಾ ನಿಸತ್ವ– ಮುಂತಾದವುಗಳನ್ನು ಕುರಿತು ನಿರ್ಣಯ ತೆಗೆದುಕೊಳ್ಳುವಾಗ ಈ ಪ್ರಾಂತ್ಯದಲ್ಲಿನ ಸಂಪ್ರದಾಯವೇ ಮೊದಲ ನಿಬಂಧನೆ ಎಂದು ಹೇಳುತ್ತದೆ.

ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಸಂಪ್ರದಾಯ ಕಾನೂನಿನಿಂದ ಆಳಲ್ಪಟ್ಟರೆ, ಹಿಂದೂ ಕಾನೂನು ಎಲ್ಲಿ ನನ್ನನ್ನು ಆಳುತ್ತದೆ? ಎಂದು ನಾನು ಈಗ ಕೇಳುತ್ತೇನೆ. ಆದರೆ ಒಂದು ಅಂಶವನ್ನು ಇಲ್ಲಿ ಬಿಡಲಾಗಿದೆ. ಅದು ನಿರ್ವಹಣೆ ಕುರಿತದ್ದು, ಇದನ್ನು ಹಿಂದೂ ಕಾನೂನು ಪ್ರಸ್ತಾಪಿಸುತ್ತದೆ. ಇದನ್ನು ಸಂಪ್ರದಾಯ ಕಾನೂನಿನಲ್ಲಿ ಬಿಡಲಾಗಿದ್ದು, ನಾನು ಚಾಲ್ತಿಯಲ್ಲಿರುವ ವಾಡಿಕೆಗಳಿಂದ ಈ ವಿಷಯದಲ್ಲಿ ಆಳಲ್ಪಡುತ್ತಿದ್ದೇನೆ.

ಮೂರು ವಿಷಯಗಳಲ್ಲಿ ನಾನು ಕೆಲ ಆಕ್ಷೇಪಗಳನ್ನು ಹೊಂದಿರುವುದನ್ನು ಮತ್ತು ಈಗ ಪ್ರಸ್ತಾಪಿಸಲ್ಪಟ್ಟಿರುವ ಸ್ವರೂಪದಲ್ಲಿರುವ ಹಿಂದೂ ಮಸೂದೆಯಿಂದ ಸಿಖ್ಖರು ಆಳಲ್ಪಡುವುದನ್ನು ಇಷ್ಟಪಡುವುದಿಲ್ಲವೆಂದೂ, ಅದನ್ನು ಅವರ ಮೇಲೆ ಒತ್ತಾಯಪೂರ್ವಕವಾಗಿ ಹೇರಬಾರದೆಂದು ನಾನು ತಮ್ಮಗಳ ಗಮನಕ್ಕೆ ತರುತ್ತಿದ್ದೇನೆ. ನಾನು ಮೊದಲು ವಿವಾಹ ಹಾಗೂ ವಿಚ್ಛೇದನ ಕುರಿತು ಉಲ್ಲೇಖಿಸುತ್ತೇನೆ. (೩ ಗಂಟೆ)

[ಆಸನದಲ್ಲಿ ಈಗ ಮಾನ್ಯ ಸಭಾಧ್ಯಕ್ಷರು]

ಮಾನ್ಯರೆ, ಸಿಖ್ಖರಿಗೆ ಸಂಬಂಧಿಸಿದಂತೆ ಹೇಳುವುದಾದರೆ ವಿವಾಹ ಕುರಿತು ಅವರು ಸರಳ ವಿಧಾನ ಹೊಂದಿದ್ದಾರೆ, ಅದನ್ನು ನಾವು ಪವಿತ್ರ ಅಥವಾ ಧಾರ್ಮಿಕ ವಿವಾಹ ಎನ್ನಬಹುದು. ಆನಂದ ವಿವಾಹ ಎಂದು ಕೂಡ ಅದು ಹೆಸರಾಗಿದೆ. ಇದೊಂದು ಸರಳ ಮತ್ತು ಜಾತ್ಯತೀತ ವಿವಾಹದ ರೂಪ. ಗುರುಗ್ರಂಥ ಸಾಹಿಬ್ ಮುಂದೆ ದಂಪತಿಗಳು ಕೂತು, ತಾವು ಜೀವಂತ ಇರುವವರೆಗೂ ಒಗ್ಗಟ್ಟಾಗಿರುತ್ತೇವೆಂದು ಅವರು ವಚನ ಸ್ವೀಕರಿಸುತ್ತಾರೆ. ಪ್ರಾರ್ಥನೆಯನ್ನು ಆ ಸಂದರ್ಭದಲ್ಲಿ ಮಾಡಲಾಗುವುದು.

ಒಂದು ಪಕ್ಷ ನಾನಿದರ ಜೊತೆ ಮುಖಾಮುಖಿಯಾಗಬಹುದು ಮತ್ತು ಇದಕ್ಕೆ ಆಶ್ರಯ ಕೊಡಬಹುದು ಮತ್ತು ಹಿಂದೂ ಮಸೂದೆಯು ಇದನ್ನು ಸ್ಪರ್ಶಿಸಿಯೂ ಇಲ್ಲ. ಆದರೂ ಕೆಲವಾರು ತೊಡಕುಗಳು ಇದ್ದು, ಅವು ನಮ್ಮ ಮೇಲೆ ಪರಿಣಾಮ ಬೀರಬಹುದೆಂದು ಭಯಗೊಂಡಿದ್ದೇನೆ. ಪರಸ್ಪರ ಮದುವೆಯಾಗುವ ಸಂದರ್ಭದಲ್ಲಿ ಕೆಲವಾರು ಪ್ರತಿಬಂಧಾನಾತ್ಮಕ ಪ್ರಮಾಣಗಳಿದ್ದು, ಅವುಗಳನ್ನು ಎಲ್ಲಾ ನಾಗರಿಕ ಸಮಾಜಗಳು ಕಟ್ಟುನಿಟ್ಟಾಗಿ ಪಾಲಿಸುತ್ತಿವೆ. ಆದರೆ ನಮ್ಮ ಸಮಾಜಕ್ಕೆ ಸಂಬಂಧಿಸಿದಂತೆ ಆ ಪಟ್ಟಿ ಬಹಳ ದೊಡ್ಡದಿಲ್ಲ. ಚಿಕ್ಕಪ್ಪಂದಿರ ಸಹೋದರತ್ವದ ನಡುವೆ ವಿವಾಹಕ್ಕೆ ಅವಕಾಶ ನೀಡಲಾಗಿದೆ. ತಂದೆಯ ತಂಗಿಯ ಮಗಳನ್ನು ಅಥವಾ ತಾಯಿಯ, ತಂಗಿಯ ಮಗಳನ್ನು ವಿವಾಹವಾದ ಹಲವಾರು ಉದಾಹರಣೆಗಳಿದ್ದು ಇವು ನಿಷೇಧದ ಪ್ರಮಾಣಗಳ ಒಳಗೆ ಬರುವುದಿಲ್ಲ. ನಾನು ನಿಮಗೆ ಹೇಳುತ್ತೇನೆ. ನೀವು ಆ ದಾರಿಯ ಕಡೆಗೆ ಸಮಾಜವನ್ನು ಒಯ್ಯುತ್ತಿದ್ದೀರಿ. ನಾವು ನಿಮಗಿಂತ ಬಹಳ ಮುಂದೆ ಇದ್ದೇವೆ. ನೀವೂ ಅದೇ ದಾರಿಗೆ ಬರುತ್ತಿದ್ದೀರಿ ಅದರ ಬಗ್ಗೆ ನೀವು ಆಶ್ಚರ್ಯ ಪಡದಿರಿ. ಹುಡುಗಿಯರಿಗೆ ಪಾಲುಕೊಡುವುದನ್ನು ನೀವು ಪ್ರಸ್ತಾಪಿಸಿರುವಿರಿ, ನಿಜಕ್ಕೂ ನೀವು ಅಲ್ಲಿಗೆ ಬರುತ್ತೀರಿ. ನೀವು ಆ ದಾರಿಯ ಕಡೆ ಸಾಗಲೇಬೇಕು.

**ಸನ್ಮಾನ್ಯ ಸದಸ್ಯರೊಬ್ಬರು :** ಸಿಖ್ ಜಾಟ್ಸ್ ಬಗ್ಗೆ ಏನು ಹೇಳುವಿರಿ?

**ಸರ್ದಾರ್ ಹುಕುಂ ಸಿಂಗ್ :** ನಾನೀಗ ಏನು ಹೇಳುತ್ತಿದ್ದೇನೋ ಅದು ಬಹಳಷ್ಟು ಸಿಖ್ಖ್ ಜಾಟ್ಸಗೂ ಸಂಬಂಧಪಡುತ್ತದೆ. ನಾನು ಈಗ ಹೇಳಿದ ಸಂಪ್ರದಾಯಗಳೆಲ್ಲವೂ ಜಾಟ್ಸರಲ್ಲೂ ಇವೆ ಮತ್ತು ಅವರು ಅದನ್ನು ಪಾಲಿಸುತ್ತಿದ್ದಾರೆ. ಸಿಖ್ಖರಲ್ಲಿ ತೊಂಭತ್ತು ಭಾಗ ರೈತರಿದ್ದು ಅವರೆಲ್ಲಾ ಹಳ್ಳಿಗಳಲ್ಲಿ ಜೀವಿಸುತ್ತಿದ್ದಾರೆ.

ಈಗ ಮಗಳಿಗೆ ಪಾಲು ನೀಡುವಂತಹ ಕಾಯ್ದೆಯನ್ನು ಅಂಗೀಕರಿಸುವ ಉದ್ದೇಶ ಹೊಂದಿರುವ ನಿಮಗೆ ನಾನು ಕೇಳುತ್ತಿದ್ದೇನೆ. ಇಲ್ಲಿ ನಾನು ನನ್ನ ನಿಲುವನ್ನು ಸ್ಪಷ್ಟಪಡಿಸುತ್ತೇನೆ. ಯಾರೂ ಆತಂಕಗೊಳ್ಳುವ ಆವಶ್ಯಕತೆ ಇಲ್ಲ. ಹುಡುಗಿಯರಿಗೆ ಪಾಲು ಕೊಡುವ ಪರವಾಗಿದ್ದೇನೆ ನಾನು. ನಾನು ಅದನ್ನು ವಿರೋಧಿಸುವುದಿಲ್ಲ. ಆದರೆ ನೀವು ಅದನ್ನು ಪ್ರಸ್ತಾಪಿಸಿದಾಗ, ವಿವಾಹಕ್ಕೆ ಸಂಬಂಧಿಸಿದ ನಿಷೇಧಾತ್ಮಕ ಪ್ರಮಾಣಗಳು ಮಸುಕಾಗುತ್ತಾ ಹೋಗಿ ಕಾಲಾಂತರದಲ್ಲಿ ಅವು ಕುಗ್ಗಬಹುದಾದ ಗಂಡಾಂತರಗಳನ್ನು ನೀವು ಎದುರಿಸಬೇಕಾಗಬಹುದು. ಕಟ್ಟುನಿಟ್ಟಾದ ಹಿಂದೂ ಮಸೂದೆಯಲ್ಲಿ ಈಗ ಇರುವ ಪಟ್ಟಿಯು ಬಳಸುತ್ತಾ ಹೋದ ಹಾಗೆ ಅದು ಖಂಡಿತ ಕುಗ್ಗಬಹುದು ಎಂಬುದು ನನ್ನ ಭಾವನೆ.

**ಶ್ರೀ ತ್ಯಾಗಿ :** ಮನೆಯ ಹತ್ತಿರಕ್ಕೂ ಅವು ಬರಬಹುದು.

**ಸರ್ದಾರ್ ಹುಕುಂ ಸಿಂಗ್ :** ಖಂಡಿತವಾಗಿ, ಎರಡು ಸಂಗತಿಗಳನ್ನು ನೀವು ಪ್ರತ್ಯೇಕವಾಗಿ ಇಡಲಾರಿರಿ. ನೀವು ಇದನ್ನು ಮುಸ್ಲಿಂ ಕಾನೂನಿನಿಂದ ತೆಗೆದುಕೊಂಡರೆ, ನಿಷೇಧಾತ್ಮಕ ಪ್ರಮಾಣಗಳಿಂದ ಸಹೋದರತ್ವದ ಮತ್ತು ಹತ್ತಿರದ ಸಂಬಂಧಿಗಳನ್ನು ಹೊರಗಿಡಬೇಕಾಗುತ್ತದೆ. ಅದರ ಬಗ್ಗೆ ಅನುಮಾನವೇ ಇಲ್ಲ. ಅದಕ್ಕೆ ನೀವು ತಯಾರಾಗಿ ನೀವು ಅವರ ಹತ್ತಿರಕ್ಕೆ ಸಾಗಬೇಕು. ಅದರಿಂದ ನೀವು ದೂರ ಹೋಗಲಾರಿರಿ.

ಈಗ ನೀವು ಒಳಗೆ ಬನ್ನಿ ಎಂದು ಮತ್ತು ಧಾರ್ಮಿಕ ಮದುವೆ ಆಗಿ ಎಂದು ಕರೆಯುತ್ತಿರುವಿರಿ, ಆದರೂ ಅಲ್ಲಿ ನಿಷೇಧಾತ್ಮಕ ಅಳತೆಗೋಲು ಇದ್ದೇ ಇರುತ್ತದೆ. ನಾನು ವಿವರಿಸಿದಂಥ ಸಂಬಂಧಗಳಲ್ಲಿ ನನಗಿರುವ ವಿವಾಹದ ಸ್ವಾತಂತ್ರ್ಯ, ಈ ಮಸೂದೆಯಿಂದಾಗಿ ನಿಷಿದ್ಧವಾಗುತ್ತದೆ. ಇದು ಕೇವಲ ಭವಿಷ್ಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಇಂಥ ಹಲವಾರು ವಿವಾಹಗಳಿದ್ದು ಅವೆಲ್ಲಾ ಅನಧಿಕೃತವಾಗಿ ಬಿಡುತ್ತವೆ. ನೀವೇನೋ ಪ್ರಕರಣ ೨೧ರ ಅಡಿಯಲ್ಲಿ, ನಾನು ಧಾರ್ಮಿಕ ವಿವಾಹವಾಗಲು, ದಾಖಲಾತಿಯ ನಾಗರಿಕ ವಿವಾಹವಾಗಲು ಅವಕಾಶವನ್ನೇನೊ ಕೊಟ್ಟಿರುವಿರಿ. ಆದರೆ ಅವುಗಳ ಸಂಖ್ಯೆ ಮತ್ತು ಪ್ರಕರಣಗಳು ಎಷ್ಟೆಂಬುದನ್ನು ಚಿಂತಿಸಿ. ಅಂಥ ಮದುವೆಗಳನ್ನು ಅಧಿಕೃತಗೊಳಿಸಲು ನ್ಯಾಯಾಲಯಕ್ಕೋ ಅಥವ ದಾಖಲಾತಿ ಕಚೇರಿಗೊ ನಾವು ಓಡಾಟ ಮಾಡಬೇಕಾಗುತ್ತದೆ. ನನ್ನಂತಹ ಮುದುಕನ ಮದುವೆಯನ್ನು ದಾಖಲು ಮಾಡಿಸಬೇಕೆಂದು ನೀವು ಇಚ್ಛಿಸುತ್ತಿರೋ?

**ಡಾ. ಅಂಬೇಡ್ಕರ್ :** ಮತ್ತೊಮ್ಮೆ ವಿವಾಹವಾಗಲು ಬಯಸಿದ್ದಿರೋ?

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು.

**ಸರ್ದಾರ್ ಹುಕುಂ ಸಿಂಗ್ :** ನಾನು ಮದುವೆಯಾಗಬಯಸುವ ಹುಡುಗಿ, ನಿಮ್ಮ ಪ್ರಕಾರ ನಿಮ್ಮ ನಿಷೇಧಾತ್ಮಕ ಅಳತೆಗೋಲಿನ ಒಳಗಡೆಯೆ ಇರುತ್ತಾಳೇನೋ? ಆದ್ದರಿಂದ ಈ ಸಂಹಿತೆ ನನ್ನ ಮದುವೆ ಬಗ್ಗೆ ಶಂಕೆ ತಂದಿದೆ. ಅಂಥ ಮದುವೆಯಾದರೆ ಏನಾಗುತ್ತದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ವಿಚಾರಿಸುತ್ತೇನೆ.

**ಶ್ರೀ ತ್ಯಾಗಿ :** ಮತ್ತು ನಿಮ್ಮ ಮಕ್ಕಳ ಬಗ್ಗೆಯೂ ಕೇಳಿ.

**ಸರ್ದಾರ್ ಹುಕುಂ ಸಿಂಗ್ :** ನಿಜ, ಖಂಡಿತವಾಗಿಯೂ, ನನ್ನ ಮದುವೆಯನ್ನು ನಾಗರಿಕ ವಿವಾಹವೆಂದು, ದಾಖಲಿಸದಿದ್ದ ಪಕ್ಷದಲ್ಲಿ– ಅದೂ ಈ ವಯಸ್ಸಿನಲ್ಲಿ ಮಕ್ಕಳೆಲ್ಲ 'ಅಕ್ರಮ' ವಾಗಿಬಿಡುತ್ತಾರೆ. ಎಲ್ಲಾ ಜನರೂ ಈಗ, ಅದೂ ವಯಸ್ಸಾದ ಜನರೆಲ್ಲಾ ದಾಖಲಾತಿ ಕಚೇರಿಗೆ ಓಡಿ, ತಮ್ಮ ವಿವಾಹಗಳನ್ನು ನಾಗರಿಕ ವಿವಾಹವೆಂದು ದಾಖಲಾತಿ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳು ಬಯಸುತ್ತಿದ್ದಾರೋ!

**ಶ್ರೀ ತ್ಯಾಗಿ :** ಅವರು ತಮ್ಮದನ್ನು ಹೀಗೆ ಮಾಡಿದ್ದಾರೋ!

**ಸರ್ದಾರ್ ಹುಕುಂ ಸಿಂಗ್ :** ಇಷ್ಟಲ್ಲದೆ ಇನ್ನೊಂದು ಬಗೆಯ ವಿವಾಹವಿದೆ.ನಮ್ಮ ಭಾಗದ ರೈತಾಪಿ ಜನರಲ್ಲಿ ಬಳಕೆಯಲ್ಲಿರುವ ಈ ವಿವಾಹವನ್ನು "ಕರೀವಾ" ಮದುವೆ ಅಥವಾ ವಿಧವಾ ವಿವಾಹ ಎನ್ನುತ್ತಾರೆ. ಈ ಬಗ್ಗೆ ಪ್ರಸ್ತುತ ಮಸೂದೆ ಯಾವ ಗುಣ ಲಕ್ಷಣಗಳನ್ನು ಹೇಳಿಲ್ಲ. ಯಾಕೆಂದರೆ ನಮ್ಮ ಮದುವೆಗಳು ಅವು ಪವಿತ್ರವೂ ಅಥವಾ ಧಾರ್ಮಿಕವೂ ಅಥವಾ ನಾಗರಿಕ ವಿವಾಹವೂ ಆಗಿರಬೇಕು. ಅದರಾಚೆ ಯಾವುದಕ್ಕೂ ಅವಕಾಶವಿಲ್ಲ. ಹಾಗಾದರೆ ಇಂಥ ಮದುವೆಗಳಿಗೆ ಏನಾಗುತ್ತದೆ? "ಕರೀವಾ" ವಿವಾಹ ನಡೆಯುವ ಸರಳ ವಿಧಾನ ನೋಡಿಬಿಟ್ಟರೆ ಇಲ್ಲಿನ ಗೌರವಾನ್ವಿತ ಸದಸ್ಯರಿಗೆ ಅದೊಂದು ವಿಚಿತ್ರವೆಂದು ಅನ್ನಿಸಬಹುದು. ಅಲ್ಲಿ ಯಾವ ಸಂಸಾರಗಳೂ ಇರುವುದಿಲ್ಲ. ಒಟ್ಟಾರೆ ಅದೊಂದು ಧರ್ಮನಿರಪೇಕ್ಷಿತ ಆಚರಣೆ.

ಅವರ ಮೇಲೆ ಚದ್ದರ್ ಅನ್ನು ಹೊದಿಸಲಾಗುತ್ತದೆ. ಗಂಡು ಮತ್ತು ಆತನ ಕೈ ಹಿಡಿದ ಹೆಂಡತಿ ಒಟ್ಟಿಗೆ ಕುಳಿತಿರುತ್ತಾರೆ. ಸಿಹಿಯನ್ನು ಹಂಚಲಾಗುತ್ತದೆ. ಅವರು ಗಂಡ ಹೆಂಡತಿಯಾಗಿಬಿಡುತ್ತಾರೆ. ಇಂಥ ಮದುವೆಗಳನ್ನು ಗುರುತಿಸಿ, ಇವುಗಳಿಗೂ ಮಸೂದೆಯಲ್ಲಿ ಅವಕಾಶ ಕಲ್ಪಿಸಿಕೊಡುವ ಪ್ರಯತ್ನವನ್ನೇದಾರೂ ಮಾನ್ಯ ಮಂತ್ರಿಗಳು ಮಾಡಿದ್ದಾರೆಯೇ – ನನಗೆ ತೋರಿಸಿ ಕೊಡಲಿ. ಅದು ಅವರಿಗೆ ಸಾಧ್ಯವಿಲ್ಲ ಎಂದು ನಾನು ತಿಳಿಯುತ್ತೇನೆ. ಈ ಮಸೂದೆಯನ್ನು ಅವರು ಬಹಳ ಗೋಜಲಗೊಳಿಸಿದ್ದಾರೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದೇನಾದರೂ ದ್ವಿಪತ್ನಿತ್ವ ವಿವಾಹವಾಗಿದ್ದರೆ ಆಗ ಅದು ಸಮಸ್ಯೆಯನ್ನುಂಟುಮಾಡುತ್ತದೆ.

**ಸರ್ದಾರ್ ಹುಕುಂ ಸಿಂಗ್ :** ನಾನು ನಿಮ್ಮ ಅನುಮತಿಯಿಂದ ಅದು ಯಾವ ರೀತಿಯ ವಿವಾಹವೆಂದು ಮಾನ್ಯ ಸ್ನೇಹಿತರನ್ನು ಕೇಳಲೆ? ಅದು ಯಾವ ಸಂಸ್ಕಾರಗಳನ್ನು ಆಚರಿಸದ ಧಾರ್ಮಿಕ ವಿವಾಹವೇ? (ಅಡೆ ತಡೆ) ಅದು ಧಾರ್ಮಿಕ ವಿವಾಹವಲ್ಲ ಮತ್ತು ಅವರ ಮಾತನ್ನು ನಾನು ಸಮ್ಮತಿಸುವುದಿಲ್ಲ. ಏನೇ ಆಗಲಿ ನಾನು ಆ ಬಗ್ಗೆ ವಾದ ವಿವಾದಗಳಿಗಿಳಿಯುವುದಿಲ್ಲ.

ದತ್ತಕ ಕುರಿತ ಮುಂದಿನ ಅಂಶದ ಬಗ್ಗೆ ನಾನು ಮಾತಾಡುತ್ತೇನೆ. ನಾನು ಏನು ಹೇಳುತ್ತೇನೆಂಬುದನ್ನು ಕೇಳಿ, ನನ್ನ ಸ್ನೇಹಿತರಿಗೆ ಒಂದು ರೀತಿಯ ಆಶ್ಚರ್ಯವೂ ಆಗಬಹುದು.

ಈ ವಿಷಯದಲ್ಲಿ ದೇಶದ ಉಳಿದ ಭಾಗಕ್ಕೆ ಹೋಲಿಸಿದರೆ ನಾವು ಬಹಳ ಮುಂದಿದ್ದೇವೆ.

**ಡಾ. ಅಂಬೇಡ್ಕರ್ :** ನೀವು ಯಾವಾಗಲೂ ಎಲ್ಲರಿಗಿಂತಲೂ ಬಹಳ ಮುಂದು.

**ಸರ್ದಾರ್ ಹುಕುಂ ಸಿಂಗ್ :** ನಾನು ಈಗ ಹೇಳುವಂತೆ, ಈ ವಿಷಯ ಕುರಿತು ನಾವು ಬಹಳ ಮುಂದಿದ್ದೇವೆ ಎಂಬುದನ್ನು ನೀವೂ ಒಪ್ಪುತ್ತೀರಿ. ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಹೇಳಿದ್ದಾರೆ. ಅದು ವಾರಸುದಾರರನ್ನು ಸಾಂಪ್ರದಾಯಿಕವಾಗಿ ನೇಮಕ ಮಾಡುವ ರೀತಿ. ಇದಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ. ಅಲ್ಲಿ ಹಾದರದ ಭಯವಿಲ್ಲ. ಪಿಂಡ ಅರ್ಪಿಸಲು ಮಕ್ಕಳನ್ನು ಹುಟ್ಟಿಸಲು ನಾವು ಕಾತುರರಾಗಿಲ್ಲ–

**ಶ್ರೀಹುಸೇನ್ ಇಮಾನ್(ಬಿಹಾರ) :** ಅಲ್ಲಿ ಪಿಂಡಗಳು ಇವೆಯೇ?

**ಮಾನ್ಯ ಸಭಾಧ್ಯಕ್ಷರು :** ಅವರನ್ನು ಮುಂದುವರೆಸಲು ಬಿಡಿ.

**ಸರ್ದಾರ್ ಹುಕುಂ ಸಿಂಗ್ :** ಆಸ್ತಿಗೆ ಹಕ್ಕುದಾರನಾಗುವ ವಾರಸುದಾರರನ್ನು ಹೊಂದಲು ನಾವು ಇಚ್ಛಿಸುತ್ತೇವೆ.

**ಡಾ. ಅಂಬೇಡ್ಕರ್ :** ಸರ್ಕಾರಕ್ಕೆ ಆಸ್ತಿ ಸೇರಲು ನೀವು ಯಾಕೆ ಅವಕಾಶ ಕೊಡುವುದಿಲ್ಲ?

**ಸರ್ದಾರ್ ಹುಕುಂ ಸಿಂಗ್ :** ಆಗ ಅದು ಮಾನ್ಯ ಮಂತ್ರಿಗಳಿಗೆ ಸೇರಿ ಬಿಡಬಹುದೆಂದು ನಾವು ಅದನ್ನು ಒಪ್ಪಲು ಇಚ್ಛಿಸುತ್ತಿಲ್ಲ. ಆದ್ದರಿಂದ, ಇದು ಅತ್ಯಂತ ಧರ್ಮನಿರಪೇಕ್ಷಿತ ಆಚರಣೆ. ಯಾವುದೇ ಸಂಸ್ಕಾರ ಜಾತಿ ಅಥವಾ ವಯಸ್ಸಿನ ನಿರ್ಬಂಧವಿಲ್ಲ. ಇದೊಂದು ಸರಳ ಘೋಷಣೆ ಹಾಗೂ ಇದನ್ನು ಪಾಲಿಸಲಾಗುತ್ತಿದೆ. ತನಗಿಂತಲೂ ವಯಸ್ಸಾದ ವ್ಯಕ್ತಿಯನ್ನು ಒಬ್ಬ ವ್ಯಕ್ತಿ ತನ್ನ ದತ್ತುವನ್ನಾಗಿ ಸ್ವೀಕರಿಸಬಹುದೆಂದು ನಾನು ಕಳೆದ ಬಾರಿಯೇ ಹೇಳಿದ್ದೆ. ದತ್ತಕ ತೆಗೆದುಕೊಳ್ಳುವ ತನ್ನ ತಂದೆಗಿಂತಲೂ ಹೆಚ್ಚಾದ ವಯಸ್ಸಿನವನನ್ನು ದತ್ತು ಮಾಡಿಕೊಳ್ಳಬಹುದು. ಅದರಲ್ಲಿ ಯಾವ ಹಾನಿಯೂ ಇಲ್ಲ. ಅವನು ಮದುವೆಯಾಗಿರಬಹುದು ಮತ್ತು ಹಲವು ಮಕ್ಕಳನ್ನು ಹೊಂದಿರಲೂಬಹುದು. ಇಂಥ ಆಚರಣೆಯನ್ನು ನೀವು ಎಲ್ಲಿಯೂ ಕಾಣಲಾರಿರಿ. ಇಂಥ ಸಂಪ್ರದಾಯ ಮತ್ತು ಬಳಕೆಗಳಿಗೆ ಧಕ್ಕೆಯಾದರೆ, ಇಂಥ ಪದ್ಧತಿ ಹಾಗೂ ಸಂಪ್ರದಾಯಗಳನ್ನು, ನಾವು ನೂರಾರು ವರ್ಷಗಳಿಂದ ಆಚರಿಸುತ್ತಾ, ಅವುಗಳನ್ನು ಅತ್ಯಂತ ಪ್ರೀತಿಸುತ್ತಾ ಬಂದಿದ್ದೇವೆ. ಇಂಥ ಪರಂಪರೆಗೆ ಧಕ್ಕೆಯಾದರೆ ಏನಾಗುತ್ತದೆ ಎಂದು ನಾನು ಅರ್ಥಮಾಡಿಕೊಳ್ಳಲಾರದವನಾಗಿದ್ದೇನೆ.

ಹಾಗೆಯೇ, ನಾನು ಇನ್ನೊಂದು ವಿಚಿತ್ರ ಉದಾಹರಣೆಯನ್ನು ನಿವೇದಿಸಲಿದ್ದೇನೆ, ಅದು ನನ್ನ ಕೆಲ ಸ್ನೇಹಿತರ ಆಸಕ್ತಿ ಕೆರಳಿಸಬಹುದು ಹಾಗೂ ಆ ನಿರ್ದಿಷ್ಟ ಅಂಶದತ್ತ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯಬಹುದು.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಭಾಷಣ ಮುಂದುವರೆಸಿ.

**ಸರ್ದಾರ್ ಹುಕುಂ ಸಿಂಗ್ :** ಬಹಳ ಆಸಕ್ತಿದಾಯಕ ವಿಷಯಕ್ಕೆ ದಯಮಾಡಿ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುವೆ.

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು,

**ಡಾ. ಅಂಬೇಡ್ಕರ್ :** ಗಂಧರ್ವ ವಿವಾಹಕ್ಕೆ ಅವಕಾಶ ನೀಡಬೇಕೆಂದು ನನ್ನನ್ನು ಕೇಳಿಕೊಳ್ಳಲಾಗಿತ್ತು. ಅದನ್ನೆ ನಾನು ಚರ್ಚೆ ಮಾಡುತ್ತಿದ್ದದ್ದು?

**ಸರ್ದಾರ್ ಹುಕುಂ ಸಿಂಗ್ :** ನಮ್ಮ ಮುಖ್ಯ ನೇತಾರರು ಅದನ್ನು ಬಯಸಿದರೆ ನನ್ನದೇನು ಅಭ್ಯಂತರವಿಲ್ಲ. ಹಾಗೆಯೇ ಮಾನ್ಯರೆ ದತ್ತಕ ವಿಷಯ ಕುರಿತು ನಾನೊಂದು ಕುತೂಹಲದ ವಿಷಯ ಪ್ರಸ್ತಾಪಿಸಲಿದ್ದೇನೆ. ಅದು ದೇಶದ ಯಾವ ಭಾಗದಲ್ಲೂ ಪ್ರಾಯಶಃ ಕಂಡುಬರದು. ಹುಡುಗಿಯರನ್ನು ದತ್ತಕ ತೆಗೆದುಕೊಂಡ ಹಲವಾರು ಪ್ರಸಂಗಗಳಿವೆ. ಅವರನ್ನು ಆಸ್ತಿಗೆ ಹಕ್ಕುದಾರರನ್ನಾಗಿ ಮಾಡಿ, ಉತ್ತರಾಧಿಕಾರವನ್ನು ಅವರು ಸ್ವೀಕರಿಸಿದ್ದಾರೆ. ಸಂಪ್ರದಾಯಗಳು ಇದಕ್ಕೆ ಅವಕಾಶ ಕಲ್ಪಿಸಿ, ಅದಕ್ಕೆ ಮನ್ನಣೆ ನೀಡಿವೆ. ಈ ಮಸೂದೆಯ ಮಂಡನೆಯಿಂದ, ಈ ಎಲ್ಲಾ ಸಂಪ್ರದಾಯಗಳೂ ಪರಂಪರೆಗಳು ಮತ್ತು ಬಳಕೆಗಳೂ ಗಾಳಿಗೆ ತೂರಿದಂತಾಗುವುದಿಲ್ಲವೇ ಎಂದು ನಾನು ಮಾನ್ಯ ಮಂತ್ರಿಗಳನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಹೀಗೆ ಕಟ್ಟಲ್ಪಟ್ಟ ಸಮಾಜವು ಈಗ ಅಧ್ವಾನಗೊಳ್ಳುವುದಿಲ್ಲವೆ? ಸಮಾಜದ ಪ್ರಗತಿಯ ಹಂತವನ್ನು ಅದು ಸಾಧಿಸಿರುವ ಅಭಿವೃದ್ಧಿಯನ್ನು ಕಾನೂನುಗಳು ಪ್ರತಿಬಿಂಬಿಸುವಂತಿರಬೇಕೆಂದು ನಾನು ನಂಬುತ್ತೇನೆ. ಅದರ ಬದಲು ಗುರಿಯೊಂದನ್ನು ನಿಗದಿಪಡಿಸಿ, ಅದನ್ನು ತಲುಪಲು ಸಮಾಜವನ್ನು ಎಳೆಯಬಾರದು. ಇದನ್ನು ಟರ್ಕಿಯಲ್ಲಿ ಪ್ರಯತ್ನಿಸಿ, ಅಲ್ಲಿ ವಿಫಲತೆ ಅನುಭವಿಸಲಾಯಿತು. ನಿಧಾನವಾಗಿ ಮುಂದುವರೆಯಲು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಪ್ರಕರಣದ ಎರಡೂ ಕಡೆಯೂ ವಿಪರೀತ ಅತಿಗಳು ಇರಬಹುದು. ಕೆಲವೊಂದು ಪ್ರಕರಣದಲ್ಲಿ ಕಠಿಣತೆಯೂ ಇರಬಹುದೆಂದು ನಾನು ಭಾವಿಸುತ್ತೇನೆ. ಅದರೆ ನೀವು ಅದನ್ನು ತಪ್ಪಿಸಲಾರಿರಿ. ಮಸೂದೆಯನ್ನು ಅಂಗೀಕರಿಸಿದರೂ, ಇಂಥ ಪ್ರಕರಣಗಳು ಉಳಿಯುತ್ತವೆ. "ದತ್ತಕ"ವು ಬಹಳ ಹಳೆಯ ಪದ್ಧತಿಯಾಗಿದ್ದು, ಇದು ನಮಗೆಲ್ಲಾ ಇಷ್ಟವಾದದ್ದು ಆಗಿದ್ದು, ಅದನ್ನು ಈ ಮಸೂದೆಯು ಅಂಗೀಕಾರಗೊಂಡು ಜಾರಿಗೆ ಬಂದರೂ, ನಾವು ಕಳೆದುಕೊಳ್ಳಲು ಸಿದ್ಧರಿಲ್ಲವೆಂಬುದನ್ನು ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಅಲ್ಲದೆ ನಾನು ಗಂಭೀರವಾದ ಆಕ್ಷೇಪಗಳನ್ನು ಹೊಂದಿರುವ ಮೂರನೆಯ ಅಂಶವೆಂದರೆ ಉತ್ತರಾಧಿಕಾರತ್ವಕ್ಕೆ ಸಂಬಂಧಿಸಿದ್ದು. ಕೆಲ ನಿಮಿಷಗಳ ಹಿಂದೆ ನಾನು ಹೇಳಿದ ಹಾಗೆ, ಹುಡುಗಿಯರಿಗೆ ಪಾಲು ಕೊಡುವುದಕ್ಕೆ ನಾನು ವಿರೋಧ ವ್ಯಕ್ತಪಡಿಸುತ್ತಿಲ್ಲ. ಕೇವಲ ಲಿಂಗ ತಾರತಮ್ಯದಿಂದಾಗಿಯೇ ಆಕೆಗೆ ಸಮಪಾಲು ಸಿಗುತ್ತಿಲ್ಲವೆಂದು ನಾನಾದರೂ ನಂಬುತ್ತೇನೆ. ಕೇವಲ ಲಿಂಗದ ಕಾರಣದಿಂದ ಅಲ್ಲ ಎಂದು ಹೇಳಲಾಗುತ್ತಿದ್ದರೂ, ಆಕೆಗೆ ಸಹೋದರನಿಗೆ ಸರಿಸಮಾನವಾದ ಪಾಲು ಸಿಗದಿರುವುದಕ್ಕೆ ಲಿಂಗದ ವ್ಯತ್ಯಾಸವೇ ಕಾರಣವೆಂದು ನಾನು ತಿಳಿದಿದ್ದೇನೆ. ಒಂದೇ ಪಾಲಕರಿಗೆ ಒಡ ಹುಟ್ಟಿದ ಮಕ್ಕಳಲ್ಲಿ, ಆ ತಾರತಮ್ಯ ಬಿಟ್ಟರೆ ಈ ಭೇದಕ್ಕೆ ಮತ್ತಾವ ಕಾರಣವೂ ಇಲ್ಲ. ಆಕೆಗೆ ಯಾಕೆ ಸಮಪಾಲು ಇಲ್ಲ ಎಂದು ನಾನು ಕೇಳುತ್ತೇನೆ. ಆಕೆಯೂ ಸಮಪಾಲಿಗೆ ಬಾಧ್ಯಸ್ಥಳಾಗುವುದಕ್ಕೆ ಒಡಹುಟ್ಟಿದವಳೆಂಬ ಒಂದೇ ಆಧಾರ ಸಾಕು. ನನ್ನ ಆಕ್ಷೇಪವಿರುವುದು ಈ ಅಂಶದ ಮೇಲೆ ಅಲ್ಲ. ಪ್ರಾಯಶಃ ಆ ಡಿಸೆಂಬರ್ ೧೪ರ ೧೯೪೯ರ ಸಂದರ್ಭದಲ್ಲಿರಬೇಕು. ಎಲ್ಲಿಯವರೆಗೆ ಆಕೆ ಮದುವೆಯಾಗಿರುವುದಿಲ್ಲವೋ, ಅಲ್ಲಿಯತನಕ ಆಕೆ ತನ್ನ

ತಂದೆಯ ಆಸ್ತಿಯಲ್ಲಿ ಸಮಪಾಲು ಹೊಂದಿರುತ್ತಾಳೆಂದು, ನಂತರ ಮದುವೆಯಾದ ಕೂಡಲೆ ಆಕೆ ತನ್ನ ಮಾವನ ಆಸ್ತಿಯಲ್ಲಿ, ಅಂದರೆ ಗಂಡನ ಆಸ್ತಿಯಲ್ಲಿ ಆಕೆ ಪಾಲು ಹೊಂದುವಳು ಎಂದು ನಾನು ಹೇಳಿದ್ದೆ. ಆಕೆ ಖಂಡಿತ ಪಾಲು ಪಡೆಯಲೇಬೇಕು. ಇದು ಪ್ರಸ್ತುತ ಸಮಾಜ ಮತ್ತು ರಚನೆಯನ್ನು ಅಲುಗಾಡಿಸಬಾರದು. ನಾವು ವಿಚಿತ್ರ ಪರಿಸ್ಥಿತಿಯಲ್ಲಿದ್ದೇವೆ. ಈ ಸಂಹಿತೆಯು ಜಮೀನುಗಳಿಗೆ ಅನ್ವಯಿಸುವುದಿಲ್ಲವೆಂದು ನಂಬುತ್ತೇನೆ. ಆದರೆ....

**ಪಂಡಿತ ಎಂ ಬಿ ಭಾರ್ಗವ (ಆಜ್ಮೇರ್) :** ಈಗ ಇದೆ ಅಧಿಕೃತ ತಿದ್ದುಪಡಿಯಾಗಿದೆ.

**ಸರ್ದಾರ್ ಹುಕುಂ ಸಿಂಗ್ :** ಮಾನ್ಯರೆ, ಪಂಜಾಬ್ ರಾಜ್ಯವು ಸಣ್ಣ ಹಿಡುವಳಿಗಳನ್ನೊಳಗೊಂಡ ರಾಜ್ಯ. ಈಗಾಗಲೇ ಅವು ಆರ್ಥಿಕವಾಗಿ ಅನುಪಯುಕ್ತ. ಇಷ್ಟು ಅಲ್ಲದೆ ಪಂಜಾಬಿನಲ್ಲಿ ನಾವು ಗಂಡಸರ ಸಂಖ್ಯೆಗಿಂತ ಹೆಣ್ಣುಮಕ್ಕಳ ಸಂಖ್ಯೆಯನ್ನು ಕಡಿಮೆ ಹೊಂದಿದ್ದೇವೆ.

**ಡಾ. ಅಂಬೇಡ್ಕರ್ :** ಆದ್ದರಿಂದ ಅವರ ಬೆಲೆ ಬಹುದೊಡ್ಡದಾಗಿದೆ.

**ಸರ್ದಾರ್ ಹುಕುಂ ಸಿಂಗ್ :** ಹೌದು, ಮಾನ್ಯರೆ, ನೀವು ಅವರ ಬೆಲೆಯನ್ನು ಹೆಚ್ಚಿಸಲು ನೋಡುತ್ತಿದ್ದೀರಿ ಹೊರತು ಬೇರೆ ವಿಷಯಗಳತ್ತ ಗಮನಹರಿಸುತ್ತಿಲ್ಲ. ಆ ಬೆಲೆಯನ್ನು ಹೇಗೋ ಹೊಂದಿಸಿಕೊಳ್ಳಬಹುದು ಎಂದು ನಾನು ಹೇಳಬಲ್ಲೆ. ನಾನು ಹೇಳಿದ ಹಾಗೆ ಅವರ ಸಂಖ್ಯೆ ಅಲ್ಲ. ಕೆಲ ವರ್ಷಗಳ ಹಿಂದೆ ಜನ ಅಳಿಯಂದಿರನ್ನು ಹೊಂದಲು ಇಚ್ಛಿಸುತ್ತಿರಲಿಲ್ಲವೆಂದು ಬಹಳ ಪ್ರಸಿದ್ಧವಾದ ವಿಷಯವಾಗಿತ್ತು. ಹಾಗಾಗಿ ಹೆಣ್ಣು ಕೂಸುಗಳ ಶಿಶುಹತ್ಯೆ ನಡೆಯುತ್ತಿತ್ತು. ಈಗಾಗಲೇ ಅನುಪಯುಕ್ತ ಹಿಡುವಳಿ ಹೊಂದಿರುವ, ಎರಡು ಜೊತೆ ಎತ್ತು ಮತ್ತು ಒಂದು ಹಸು ಹೊಂದಿರುವ ಭೂ ರೈತನಿಗೆ, ಪಾಲು ಕೊಡುವ ವಿಷಯವು ಪುನಃ ಅವನನ್ನು ಈ ಹಿಂದಿನ ನಡವಳಿಕೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಎಂದು ವಾದಕ್ಕಾಗಿ ನಾನು ಹೇಳುತ್ತಿಲ್ಲ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ತನ್ನ ವ್ಯವಸಾಯಕ್ಕೆ ಅತ್ಯವಶ್ಯವಿರುವ ಆ ಪ್ರಾಣಿಗಳನ್ನು ಪಾಲು ಮಾಡಲು ಅವನಿಗೆ ಅಸಾಧ್ಯವಾಗುತ್ತದೆ ಇನ್ನೊಬ್ಬ ಮಗನನ್ನು ಆತ ಹೊಂದಿದ್ದರೆ, ಆಗ ಅವನು ಪಾಲು ಕೊಡುವುದನ್ನು ಹೇಗೆ ನಿರ್ವಹಿಸುತ್ತಿದ್ದ ಎಂಬ ಉತ್ತರ ಈ ದೃಷ್ಟಿಯಿಂದ ಸರಿಯಾಗಲಾರದು. ಕೆಲವು ನಿಷಿದ್ಧ ಪ್ರಮಾಣಗಳನ್ನು ಇಂಥಲ್ಲಿ ಅಳವಡಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಹಾಗೆಯೇ ಮದುವೆಯಾಗದ ಮಗಳನ್ನು ಇಂಥ ನಿಷಿದ್ಧ ಪ್ರಮಾಣದ ಪಟ್ಟಿಯಿಂದ ಆಚೆ ಇಡಬೇಕೆಂದು ಹೇಳುತ್ತಿದ್ದೇನೆ. ಹೇಳುವುದೇನೆಂದರೆ, – ಒಬ್ಬ ಅಪರಿಚಿತ ಮನುಷ್ಯನನ್ನು ಒಳತರಲಾಗುತ್ತಿದೆ, ಆತ ಮಾಡುವುದೇನೆಂದರೆ, ಮದುವೆಯಾದ ಕೂಡಲೇ ತನ್ನ ಪಾಲನ್ನು ತಾನು ತೆಗೆದುಕೊಳ್ಳುತ್ತಾನೆ. ಪ್ರತಿಯೊಂದು ಹಳ್ಳಿಯಲ್ಲಿ ಒಡಕುತನ ಕಾಣಿಸಿಕೊಳ್ಳುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ಪಂಗಡಗಳು ಹುಟ್ಟಿಕೊಳ್ಳುತ್ತವೆ. ಸ್ನೇಹಿತರು ಆಸ್ತಿಯನ್ನು ಕೊಂಡುಕೊಳ್ಳಲಾರರು, ಆದರೆ ಅದನ್ನು ವೈರಿಗಳಿಗೆ ಮಾರಲ್ಪಡುವುದು. ಇದೆಲ್ಲಾ ಕೊಲೆ ಜಗಳ ಮತ್ತು ಬೀದಿಜಗಳಗಳನ್ನು ಹುಟ್ಟುಹಾಕುತ್ತದೆ.

**ಶ್ರೀ ತ್ಯಾಗಿ :** ಅವರು ಹೇಳುತ್ತಿರುವುದು ಸರಿ.

**ಸರ್ದಾರ್ ಹುಕುಂ ಸಿಂಗ್ :** ದಯಮಾಡಿ ಇದನ್ನು ಪಂಜಾಬಿಗೆ ಜಾರಿಗೊಳಿಸಬೇಡಿ ಎಂದು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇಲ್ಲವಾದಲ್ಲಿ ನೀವು ಅಲ್ಲಿ ಗೊಂದಲ ಮತ್ತು ಅವ್ಯವಸ್ಥೆಯನ್ನು ಸೃಷ್ಟಿಸುತ್ತೀರಿ.

**ಶ್ರೀ ಶ್ಯಾಮನಂದನ ಸಹಾಯ್(ಬಿಹಾರಿ) :** ಉಳಿದ ಪ್ರಾಂತಗಳೇನು ಅಪರಾಧ ಮಾಡಿದ್ದಾವೆ? ಅವುಗಳ ಬಗ್ಗೆಯೂ ಏಕೆ ವಾದ ಮಾಡುತ್ತಿಲ್ಲ?

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು ಮುಂದುವರೆಯೋಣ.

**ಸರ್ದಾರ್ ಹುಕುಂ ಸಿಂಗ್ :** ನಾನಾದರೂ ಅವರ ಪರವಾಗಿ ವಾದ ಮಾಡಿದರೆ, ಯಾರಾದರೂ, ನನ್ನ ಅಧಿಕಾರವನ್ನು ಮತ್ತು ಪ್ರತಿನಿಧಿತ್ವದ ವ್ಯಕ್ತಿತ್ವವನ್ನು ಪ್ರಶ್ನಿಸಬಹುದು. ಆದ್ದರಿಂದ ನಾನು ಕೇವಲ ನನ್ನ ಪ್ರಾಂತ್ಯ ಮತ್ತು ಅದರಲ್ಲೂ ನನ್ನ ರಾಜ್ಯಕ್ಕೆ ಸೀಮಿತಗೊಳಿಸಿಕೊಂಡಿದ್ದೇನೆ. ಇಲ್ಲದಿದ್ದರೆ ನಾನು ಆರಂಭದಲ್ಲಿಯೇ ಕೇಳಿದಂತೆ ನಾನು ಇಡೀ ಪ್ರಾಂತ್ಯವನ್ನೇ ಪ್ರತಿನಿಧಿಸಬಯಸಿದ್ದರೆ, ನಾನು ಪ್ರಶ್ನಿತಗೊಳ್ಳಬಹುದೆಂಬ ಭೀತಿ ನನಗಿದೆ.

ಈ ಮಸೂದೆಯು ಗೊಂದಲ ಮತ್ತು ಅವ್ಯವಸ್ಥೆಯನ್ನು ಹುಟ್ಟುಹಾಕುತ್ತದಲ್ಲದೆ, ಸಮಾಜವನ್ನು ಧೃತಿಗೆಡಿಸುತ್ತದೆ. ನಾವು ಮಸೂದೆಯಿಂದ ಇದನ್ನು ನಿರೀಕ್ಷಿಸಿಲ್ಲ. ಇದು ಪ್ರಗತಿಯಲ್ಲ. ಇದು ಅಭಿವೃದ್ಧಿಯೂ ಅಲ್ಲ. ತದ್ವಿರುದ್ಧವಾಗಿ ಹಿನ್ನಡೆ. ಆದ್ದರಿಂದ ನಮಗೆ ಸಂಬಂಧಿಸಿದಂತೆ ನಮ್ಮನ್ನ ಹಿಂದಕ್ಕೆ ಜಗ್ಗಬೇಡಿ. ಮುಂದಕ್ಕೆ ಸಾಗೋಣ.

ನೀವು ನಮ್ಮನ್ನು ಮುಂಚೂಣಿಯಲ್ಲಿದ್ದೇವೆಂದು ಭಾವಿಸಿ, ನಾವು ಮುಂದೆ ಸಾಗಿದಂತೆಲ್ಲಾ ನಮ್ಮನ್ನು ಹಿಂಬಾಲಿಸಿ, ಪ್ರಾಯಶಃ ಇದು ನಮಗೂ ಇಡೀ ದೇಶಕ್ಕೂ ಮತ್ತು ಸಂಬಂಧಿಸಿದ ಎಲ್ಲರಿಗೂ ಒಳ್ಳೆಯದು.

ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀಮತಿ ದುರ್ಗಾಬಾಯಿ (ಮದರಾಸು) :** ಮಾನ್ಯರೆ, ನಾನೊಂದು ಪ್ರಶ್ನೆ ಕೇಳಲೆ?

**ಮಾನ್ಯ ಸಭಾಧ್ಯಕ್ಷರು :** ನಾವು ನಿಜಕ್ಕೂ ಈ ವಿಷಯದಲ್ಲಿ ಏನನ್ನಾದರೂ ಪ್ರಗತಿ ಸಾಧಿಸಬೇಕೆಂದರೆ ಈ ಎಲ್ಲಾ ವಾದ, ಪ್ರತಿವಾದಗಳಿಂದ ಸದಸ್ಯನನ್ನು ತಡೆಯದೆ ಸದಸ್ಯನು ತನ್ನ ಮಾತುಗಳಲ್ಲಿ ಮುಂದುವರಿಸಲು ಅವಕಾಶ ಮಾಡಿಕೊಡುವುದು ಒಳ್ಳೆಯದು. ನಾನು ಎಲ್ಲಾ ಸದಸ್ಯರನ್ನು ಅತ್ಯಂತ ಕಳಕಳಿಯಿಂದ ವಿನಂತಿಸುವುದೇನೆಂದರೆ, ಪ್ರತಿ ಹಂತದಲ್ಲಿ ಸದಸ್ಯನಿಗೆ ಪ್ರಶ್ನೆ ಒಡ್ಡದೆ, ಆತ ಏನು ಹೇಳುತ್ತಿದ್ದಾನೆಂಬುದನ್ನು ಆಸಕ್ತಿಯಿಂದ ಆಲಿಸಿ, ನಂತರ ಬೇಕಾದರೆ ತಮ್ಮ ವಾದಗಳನ್ನು ಮುಂದಿಡಿ. ಯಾರು ಯಾರು ಮಾತಾಡಬೇಕೆಂದು ಬಯಸಿದ್ದಾರೋ ಅವರೆಲ್ಲರಿಗು ನಾನು ಪೂರ್ಣ ಅವಕಾಶ ನೀಡುತ್ತೇನೆ.

**ಶ್ರೀಮತಿ ದುರ್ಗಾಬಾಯಿ :** ಮಾನ್ಯರೆ, ನಾನು ಕೇವಲ ಒಂದು ಪ್ರಶ್ನೆ ಕೇಳುತ್ತಿರುವೆ.

**ಸನ್ಮಾನ್ಯ ಸಭಾಧ್ಯಕ್ಷರು :** ಆದೇನೆ ಇರಲಿ, ಮೊದಲು ಸದಸ್ಯರು ಏನು ಹೇಳುತ್ತಾರೋ ಹೇಳಲು ಅವಕಾಶ ಕೊಡೋಣ. ಇಲ್ಲದಿದ್ದರೆ, ಈ ಎಲ್ಲಾ ಮಧ್ಯ ಪ್ರವೇಶಗಳು–ಉತ್ತರಕ್ಕಾಗಿ ಒತ್ತಾಯಿಸುವುದು, ನಾನು ಅಡ್ಡಿಮಾಡಬೇಡಿ ಎಂದು ಎಷ್ಟೇ ಮನವಿ ಮಾಡಿದರೂ, ಅದನ್ನು ಮೀರಿ ಮಧ್ಯ ಪ್ರವೇಶಗಳು ನಡೆಯುತ್ತಿರುವುದನ್ನು ನಾನು ಕಾಣುತ್ತಿರುವೆ. ಇದರಿಂದ ಮಾತಾಡುವವರು ತಮ್ಮ ವಾದಸರಣಿಯನ್ನು ಕಳಕೊಳ್ಳುತ್ತಾರಲ್ಲದೆ ಬಹಳಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಚರ್ಚೆಯ ಗಂಭೀರತೆಯೇ ಮಾಯವಾಗಬಹುದೆಂದೂ ನಾನು ಭಾವಿಸುತ್ತೇನೆ. ನಾನು ಗಂಭೀರವಾದ ವಿಷಯದ ಕಾರ್ಯ್ದೆಕರಣ ನಡೆಸಿದ್ದೇವೆ. ಆದ್ದರಿಂದ ವಿನಾಕಾರಣ ಪ್ರಶ್ನೆ ಹಾಕಿ, ಟೀಕೆ ಮಾಡಿ ವಿವರಣೆ ಬಯಸಿ, ಅಥವಾ ಯಾವುದೋ ಶಬ್ದಕ್ಕೆ ವ್ಯಾಖ್ಯಾನ ಬಯಸಿ ಅಡ್ಡಿಪಡಿಸದೆ ಸದಸ್ಯರು ಏನು ಹೇಳುತ್ತಿದ್ದಾರೋ ಅದನ್ನು ಗಂಭೀರವಾಗಿ ಮತ್ತು ಕಾತುರರಾಗಿ ಕೇಳಬೇಕಾಗಿದೆ. ಮಾತಾಡುವವರ ಬಗ್ಗೆ ಸಹನೆ ಹೊಂದಿರೋಣ.

**ಸರ್ದಾರ್ ಹುಕುಂ ಸಿಂಗ್ :** ಮಾನ್ಯರೆ, ಈಗ ನನ್ನ ಕೊನೆಯ ಅಂಶಕ್ಕೆ ಬರುತ್ತೇನೆ. ಆದರೆ ಅದು ಬಹಳ ನೋವಿನಿಂದ ಕೂಡಿದೆ. ಸಿಖ್ಖರು ಹಲವಾರು ಭಯಗಳನ್ನು ಹೊಂದಿದ್ದಾರೆಂದು ಸದನದ ಮುಂದೆ ಇಡಲು ಬಯಸುತ್ತೇನೆ. ಅವುಗಳಲ್ಲಿ ಎಲ್ಲವನ್ನು ಬಿಚ್ಚಿ ಹೇಳಲಾಗಿದೆ. ಏನೇ ಆಗಲಿ, ಸಿಖ್ಖರ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಅಳಿಸಿ ಹಾಕಿ ಸಿಖ್ಖರನ್ನು ನುಂಗುವ ಪ್ರಯತ್ನ ನಡೆಯುತ್ತಿದೆಯೆಂಬ ಭಯವನ್ನು

ನಾವು ಹೊಂದಿದ್ದೇವೆ.

**ಹಲವಾರು ಮಾನ್ಯ ಸದಸ್ಯರು :** ಇಲ್ಲ ಇಲ್ಲ.

**ಸರ್ದಾರ್ ಹುಕುಂ ಸಿಂಗ್ :** ಸಂಪ್ರದಾಯ ಮತ್ತು ಬಳಕೆ – ಅವುಗಳು ಕೆಲ ಆಧಾರಗಳನ್ನು ಹೊಂದಿರುತ್ತವೆ. ಅವುಗಳನ್ನು ಸರಿಯಾಗಿ ನೋಡಿಕೊಂಡಿಲ್ಲವೆಂದು ಈಗಾಗಲೇ ಅವರು ದೂರಿದ್ದಾರೆ. ಅವರು ಕೊಟ್ಟಿರುವ ಉದಾಹರಣೆಯೊಂದರ ಪ್ರಕಾರ, ಸಿಖ್ಖರು ಹಿಂದುಗಳ ಒಂದು ಅವಿಭಾಜ್ಯ ಅಂಗ ಎಂದು ಘೋಷಿಸಿರುವಾಗ, ರಾಷ್ಟ್ರಪತಿಗಳು ಪರಿಶಿಷ್ಟ ಜಾತಿಗಳು ಕುರಿತು ಆಜ್ಞೆ ಹೊರಡಿಸಿದ ಸಮಯದಲ್ಲಿ ಸಿಖ್ಖರನ್ನು ಒಂದು ಗೌರವಯುತ ದೂರದಲ್ಲಿ ಇರಿಸಿದ್ದಾರೆಂಬುದನ್ನು ಹೇಳಿದ್ದಾರೆ. ಇತ್ತೀಚಿನ ರಾಷ್ಟ್ರಪತಿಗಳ ಆಜ್ಞೆಯು ಹಿಂದೂ ಧರ್ಮವನ್ನು ಪಾಲಿಸುತ್ತಿರುವುದಕ್ಕೆ ಬದ್ಧರಾಗಿರುವವರ ಪೈಕಿ ೩೪ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಘೋಷಿಸಿದೆ. ಅದರಲ್ಲಿ ಎಲ್ಲಾ ರಕ್ಷಣೆಗಳನ್ನು ಬಲಿಗೊಟ್ಟು ಹಿಂದೂ ಅಥವಾ ಸಿಖ್ಖ ಧರ್ಮವನ್ನು ಪಾಲಿಸುತ್ತಿರುವ ೪ ಜಾತಿಗಳನ್ನು ಮಾತ್ರ ಪರಿಶಿಷ್ಟ ಜಾತಿಗಳೆಂದು ವರ್ಗೀಕರಿಸಲಾಗಿದೆ. ಯಾವಾಗ ಎಲ್ಲಿ ಒಂದು ಅವಕಾಶ, ಒಂದು ಪ್ರಯೋಜನವಿದೆಯೋ, ಅಲ್ಲಿ ನಮ್ಮನ್ನು ಸೇರಿಸಿಕೊಳ್ಳದೆ ಅಥವಾ ಅದರ ಸಮೀಪಕ್ಕೂ ತರದೆ ದೂರ ಇಡಲಾಗುತ್ತಿದೆ ಎಂಬುದು ನಮ್ಮ ದೂರಾಗಿದೆ. ಆದರೆ ಎಲ್ಲಿ ಏನು ಕೊಡಲಾಗುವುದಿಲ್ಲವೋ ಅಲ್ಲಿ ಈ ಬಳಕೆ, ಸಂಪ್ರದಾಯ ಮತ್ತು ಸಂಸ್ಕೃತಿಗಳನ್ನು ಅಳಿಸಿ ಹಾಕಿ ನಮ್ಮನ್ನು ಅಪ್ಪಿಕೊಳ್ಳಿ ಎಂದು ಕರೆಯಲಾಗುತ್ತದೆ. ನಾನು ಹೇಳುವುದೇನೆಂದರೆ, ಮುಗಸಟ್ಟೆ ಅಪ್ಪಿಗೆ, ಅದು ಎಂಥದ್ದಾದರೂ ಅಂಥ ಹಿತಕರವಲ್ಲ – ಏಕೆಂದರೆ ನಾವು ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಬಹಳಷ್ಟು ಪ್ರೀತಿಸುತ್ತೇವೆ ಹಾಗೂ ಅವುಗಳನ್ನು ಬಹುಕಾಲದಿಂದ ಅವುಗಳೊಂದಿಗೆ ಹೊಂದಿಕೊಂಡು ಬಂದಿದ್ದೇವೆ. ಆದ್ದರಿಂದ ಈ ಮಸೂದೆಯ ಎಲ್ಲಾ ಬಗೆಯ ವ್ಯಾಪ್ತಿಯಿಂದ ನಮ್ಮನ್ನು ಹೊರಗಿಡಬೇಕೆಂದು ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮಾನ್ಯರೆ, ನನ್ನ ಸ್ನೇಹಿತರು ಪ್ರಸ್ತಾಪಿಸಿದ ಕೊನೆಯ ಅಂಶ ಕುರಿತಂತೆ ನಾನೊಂದು ಪ್ರಶ್ನೆಯನ್ನು ತಮ್ಮ ಅನುಮತಿಯಿಂದ ಕೇಳಬಹುದೆ. ಸಿಖ್ಖರು ತಾವಾಗಿಯೇ ಸರ್ದಾರ್ ಪಟೇಲ್ ಹತ್ತಿರ ಬಂದು, ಪರಿಶಿಷ್ಟ ಜಾತಿಯಲ್ಲಿ ಕೇವಲ ನಾಲ್ಕೇ ಜಾತಿಗಳನ್ನು ಮಾತ್ರ ಸೇರಿಸಬೇಕೆಂದು, ಉಳಿದ ಯಾವುದನ್ನು ಸೇರಿಸಬಾರದೆಂದು ಹೇಳಿ ಒಪ್ಪಿರಲಿಲ್ಲವೇ? ಇದು ನಿಜವಾಗಿದ್ದರೆ, ಆ ಒಪ್ಪಂದದ ಅನ್ವಯ ಮಾನ್ಯ ನನ್ನ ಸ್ನೇಹಿತರು ಇಂಥ ಸಮಸ್ಯೆಯನ್ನು ಇಲ್ಲಿ ಎತ್ತಲು ಅಧಿಕಾರವುಳ್ಳವರಾಗಿಲ್ಲ.

**ಸರ್ದಾರ್ ಹುಕುಂ ಸಿಂಗ್ :** ಅದೊಂದು ದೀರ್ಘ ವಿಷಯ. ಸಿಖ್ಖರು ತಾವು ಬಯಸುವ ಎಲ್ಲಾ ರಕ್ಷಣೆಗಳನ್ನು ತ್ಯಾಗ ಮಾಡುವುದಾದರೆ, ಈ ನಾಲ್ಕು ಜಾತಿಗಳನ್ನು ಮಾತ್ರ ಸೇರಿಸಲು ಸಾಧ್ಯ ಎಂದು ತಮ್ಮ ಶಬ್ದಗಳಲ್ಲೇ ಗೌರವಾನ್ವಿತ ಸರ್ದಾರ್ ತಾವಾಗಿಯೇ ಹೇಳಿದ್ದರು. ಆ ತ್ಯಾಗದಿಂದಲೇ ಈ ನಾಲ್ಕು ಜಾತಿಗಳನ್ನು ಪರಿಶಿಷ್ಟ ಜಾತಿ ಎಂದು ಪರಿಗಣಿಸಿರುವುದು. ಅದು ಕೇವಲ ಪಂಜಾಬ್ ಮತ್ತು ಪಿಇಪಿಎಸ್‌ಯು, ಎಂಬ ಎರಡು ಪ್ರಾಂತ್ಯಗಳಲ್ಲಿ ಮಾತ್ರ. ಬೇರೆ ಪ್ರಾಂತ್ಯಗಳಲ್ಲಿ ಅವು ಪರಿಶಿಷ್ಟ ಜಾತಿಯೊಳಗೆ ಬರುವುದಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದು ಒಪ್ಪಂದದನ್ವಯ....

**ಸರ್ದಾರ್ ಹುಕುಂಸಿಂಗ್ :** ಅಲ್ಲ.

**ಮಾನ್ಯ ಸಭಾಧ್ಯಕ್ಷರು :** ಡಾ. ಅಂಬೇಡ್ಕರ್.

**ಟಿ.ಎನ್. ಸಿಂಗ್ (ಉತ್ತರ ಪ್ರದೇಶ) :** ಮಾನ್ಯ ಸಚಿವರ ಭಾಷಣವು ಉತ್ತರ ಕೊಡುವಂಥದ್ದೆ?

**ಹಲವಾರು ಮಾನ್ಯ ಸದಸ್ಯರು:** ಇಲ್ಲ, ಇಲ್ಲ.

***ಡಾ.ಅಂಬೇಡ್ಕರ್ :** ಈ ಪ್ರಕರಣ ಕುರಿತು ಇರುವ ಉಳಿದ ತಿದ್ದುಪಡಿಗಳ ಬಗ್ಗೆ ಮಾತಾಡುವುದಕ್ಕೂ ಮೊದಲು ನಾನು ನನ್ನ ತಿದ್ದುಪಡಿ ಕುರಿತು ಮಾತಾಡುವ ಅಭಿಪ್ರಾಯ ಹೊಂದಿದ್ದೇನೆ. ಮೂರು ನಿರ್ದಿಷ್ಟ ಅಂಶಗಳನ್ನು ನಾನು ಪ್ರಸ್ತಾಪಿಸಿರುವುದನ್ನು ತಿದ್ದುಪಡಿಗಳಲ್ಲಿ ಕಾಣಬಹುದಾಗಿದೆ. ಮೊದಲ ಅಂಶವೆಂದರೆ ಉಪ ಕಲಮು ೧ರಲ್ಲಿರುವ **"ಪಾಲಿಸುವ"** ಎನ್ನುವ ಶಬ್ದವನ್ನು ಕೈಬಿಡಬೇಕೆಂದು ಸಲಹೆ ಮಾಡಿರುವುದು. ಹೀಗೆ ಕೈ ಬಿಡಲು ಕಾರಣ, ಪ್ರಾಯಶಃ ಇವೊತ್ತಿನ ಹಿಂದೂ ಸಮಾಜದಲ್ಲಿ ಹಿಂದೂ ಅನ್ನಿಸಿಕೊಂಡವರು, ತಾತ್ವಿಕ ಅರ್ಥದಲ್ಲಿ **'ಹಿಂದೂ'** ಧರ್ಮವನ್ನು ಆಚರಿಸದಿದ್ದರೂ ಅವರಿಗೆ **"ಪಾಲಿಸುವ"** ಎಂಬ ಅರ್ಥದಲ್ಲಿ ಬಳಸಿದ್ದರ ಕಾರಣದಿಂದ. ಹಳೆಯ ಕಾಲದಲ್ಲಿನ ಉದಾಹರಣೆಗಳನ್ನು ಕೊಡುವುದಾದರೆ, ಹಿಂದು ಸಮುದಾಯದಿಂದ ವಿಕಸಿತವಾದ, ಕಲ್ಕತ್ತದ ಬ್ರಹ್ಮ ಸಮಾಜ ಅಥವಾ ಬಾಂಬೆಯ ಪ್ರಾರ್ಥನಾ ಸಮಾಜವಾದಿಗಳೆಂಬ ಎರಡು ಪಂಗಡಗಳು ತಾವು ಹಿಂದೂಧರ್ಮವನ್ನು ಪಾಲಿಸುತ್ತಿಲ್ಲ ಎಂದು ಬಹಿರಂಗವಾಗಿ ಘೋಷಿಸಿರುವುದನ್ನು ಹೇಳಬಹುದು.

ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರು ತಮ್ಮ ಭಾಷಣದ ಸಂದರ್ಭದಲ್ಲಿ ಗಮನಿಸಿದಂತೆ, ಇವೊತ್ತಿನ ಬಹಳಷ್ಟು ಹಿಂದೂಗಳು, ಧರ್ಮಕುರಿತಂತೆ, ಅದರ ಉತ್ತಮಾಂಶಗಳನ್ನು ಅಳವಡಿಸಿಕೊಳ್ಳುವ ಇಚ್ಛೆ ಹೊಂದಿದವರಾಗಿದ್ದಾರೆ. ತಮಗೆ ಸರಿ ಎನಿಸಿದ್ದನ್ನು ಕೆಲ ಧರ್ಮಗಳಿಂದ ಒಳಗೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರೆ, ಅದಕ್ಕೆ ವ್ಯತಿರಿಕ್ತವಾಗಿ ತಮ್ಮ ಪುರಾತನರಿಂದ ಬಂದ ಧರ್ಮವನ್ನು ವರ್ಜಿಸಲು ಸಿದ್ಧರಿದ್ದಾರೆ. ಆದ್ದರಿಂದ ಇಂಥ ಪರಿಸ್ಥಿತಿಯಲ್ಲಿ **"ಪಾಲಿಸುವ"** ಎಂಬ ಶಬ್ದ ಉಳಿದರೆ, ಹಿಂದೂಧರ್ಮವನ್ನು ಪಾಲಿಸುತ್ತೇನೆನ್ನುವುದು ಸಾಬೀತಾಗದ ಹೊರತು ತನಗೆ ಮಸೂದೆ ಅನ್ವಯವಾಗುವುದಿಲ್ಲವೆಂದು ಯಾರಾದರೂ ವಾದ ಹೂಡಲು ಸಾಧ್ಯವಾಗುತ್ತದೆ. ಖಚಿತತೆಯು ನಿಜಕ್ಕೂ ಮಸೂದೆಯ ಉದ್ದೇಶವಲ್ಲ. ಹಿಂದೂ ನಂಬುಗೆ ಹೊಂದಿರುವ ಎಲ್ಲರಿಗೂ ಮಸೂದೆ ಅನ್ವಯವಾಗಬೇಕೆಂಬುದು ಮಾತ್ರ ಅದರ ಉದ್ದೇಶ. ಆ ಅರ್ಥದಲ್ಲಿ ನಾನು ಆ ಪರಿಕಲ್ಪನೆ ಬಳಸಲು ಬಯಸಿದ್ದೆ. ಆದರೆ 'ಪಾಲಿಸುವ' ಪದ ಪ್ರಯೋಗ ಆಕ್ಷೇಪಕ್ಕೆ ಕಾರಣವಾಗುವುದಾದರೆ ನಾನು ಅದನ್ನು ಅಳಿಸಿ ಹಾಕಲು ಸಲಹೆ ಮಾಡುತ್ತೇನೆ.

ನನ್ನ ಎರಡನೆಯ ತಿದ್ದುಪಡಿಯು ಪ್ರಕರಣ(ಡಿ)ಗೆ ಸಂಬಂಧಿಸಿದ್ದು. ಪ್ರಕರಣವು ಹಿಂದೂಧರ್ಮಕ್ಕೆ ಮತಾಂತರ ಹೊಂದಿದವರಿಗೂ ಈ ಮಸೂದೆ ಅನ್ವಯವಾಗುತ್ತದೆ ಎಂದು ಹೇಳುತ್ತದೆ. ಈ ಸದನಕ್ಕೆ ತಿಳಿದಂತೆ ನಾವು ಈಗ **'ಹಿಂದೂಧರ್ಮ'** ಎಂಬ ಶಬ್ದವನ್ನು ವಿಶಾಲ ಅರ್ಥಮಾಡಿ ಬಳಸುತ್ತಿದ್ದೇವೆ. ಯಾರು ವೇದಗಳನ್ನು ನಂಬುತ್ತಾರೋ, ವೇದಗಳ ಅಪೌರುಷತೆಯನ್ನು ನಂಬುತ್ತಾರೋ, ಚಾತುರ್ವರ್ಣದಲ್ಲಿ ಯಾರು ನಂಬಿಕೆಯಿಟ್ಟಿದ್ದಾರೋ, ಮೋಕ್ಷಕೋಸ್ಕರ ಯಜ್ಞ ಯಾಗಾದಿಗಳನ್ನು ಆಚರಿಸಬೇಕೆನ್ನುತ್ತಾರೋ ಅಂಥವರಿಗೆ ಈ ಸೀಮಿತ ಅರ್ಥದಲ್ಲಿ **'ಹಿಂದೂ'** ಪದ ಬಳಸುತ್ತಿಲ್ಲ. ಬೌದ್ಧರು, ಜೈನರು, ಸಿಖ್ಖರನ್ನು ಒಳಗೊಂಡಂತೆ ಅದನ್ನು ವಿಶಾಲ ಅರ್ಥದಲ್ಲಿ ನಾವು ಆ ಶಬ್ದ ಬಳಸುತ್ತಿದ್ದೇವೆ. ಇಂಥ ಕಂದಾಚಾರಗಳಲ್ಲಿ ನಮಗೆ ನಂಬಿಕೆಯಿಲ್ಲ. ಆದ್ದರಿಂದ ಪ್ರಕರಣ(ಡಿ)ಯಲ್ಲಿನ ಮತಾಂತರ ಹೊಂದುವವನನ್ನು ಕುರಿತಂತೆ ಉಲ್ಲೇಖಿಸುವ ಉಪಪ್ರಕರಣ (ಡಿ) ಹಾಗೆ ಉಳಿದುಬಿಟ್ಟರೆ, ಕೇವಲ ಹಿಂದೂಧರ್ಮಕ್ಕೆ ಮತಾಂತರ ಸೀಮಿತ ಚೌಕಟ್ಟು ಆ ಪದಕ್ಕೆ ಪ್ರಾಪ್ತಿಯಾಗುತ್ತದೆ. ಇದನ್ನು ತಪ್ಪಿಸಲು ನಾನೊಂದು ಹೊಸ ಶಬ್ದ ಸೂಚಿಸಿದ್ದೇನೆ–

* ೧೯೫೧ನೇ ಫೆಬ್ರವರಿ ೬ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೬೨–೭೩

"ಹಿಂದೂ ಧರ್ಮ, ಬೌದ್ಧ ಮತ್ತು ಇತ್ಯಾದಿ ಧರ್ಮಗಳಿಗೆ ಮತಾಂತರ ಹೊಂದುವ"–

ಉಪಕಲಮು ೪ನ್ನು ಅಳಿಸಿಹಾಕುವುದನ್ನು ನನ್ನ ಮೂರನೆ ತಿದ್ದುಪಡಿ ಪ್ರಯತ್ನಿಸುತ್ತದೆ. ಸದನಕ್ಕೆ ತಿಳಿದಂತೆ, ಉಪಕಲಮು ೪ ಮಸೂದೆಯನ್ನು ಮೂಲ ರೂಪದಲ್ಲಿ ಸದನದಲ್ಲಿ ಮೊದಲಬಾರಿ ಮಂಡಿಸಿ, ಓದಿದಾಗ ಅದು ಇರಲಿಲ್ಲ. ಆಯ್ಕೆ ಸಮಿತಿ ನಂತರದ ತನ್ನ ಚರ್ಚಾ ಸಭೆಗಳಲ್ಲಿ ಈ ಕಲಮನ್ನು ಸೇರಿಸಿತು. ಉಪಕಲಮು ೪ನ್ನು ಸೇರಿಸಿದವರ ವಿಚಾರ ಹೀಗಿತ್ತು. ಬೇರೆ ಬೇರೆಯಾಗಿ ವರ್ಣಿಸಲ್ಪಟ್ಟ ಎಲ್ಲಾ ಹಿಂದೂಗಳನ್ನು ಒಂದೇ ನಿಯಮದ ವ್ಯಾಪ್ತಿಯೊಳಕ್ಕೆ ತರಬೇಕೆಂಬುದು ಮಸೂದೆಯ ಇಂಗಿತವಾಗಿದ್ದರಿಂದ ಯಾರು ಯಾರು ಈಗಾಗಲೇ ೧೮೭೨ರ ವಿಶೇಷ ಹಿಂದೂ ವಿವಾಹ ಕಾಯ್ದೆಯಡಿ ವಿವಾಹವಾಗಿದ್ದರೋ ಅವರನ್ನು ದೂರ ಇರಿಸದೆ ಒಳಗೊಳ್ಳುವ ಆಶಯವು ಅವರ ವಿಚಾರವಾಗಿತ್ತು.

ಮಸೂದೆಯನ್ನು ಸಮಗ್ರವಾದ ರೀತಿಯಲ್ಲಿ ರೂಪಿಸುವ ದೃಷ್ಟಿಯಿಂದ ಉಪಕಲಮು ೪ನ್ನು ತರಲಾಯಿತು. ಈ ಕಲಮನ್ನು ತರುವಾಗ, ಪ್ರಾಯಶಃ ಒಂದು ಅಂಶವು ಆಯ್ಕೆ ಸಮಿತಿಯವರ ಬುದ್ಧಿಗೆ ತೋಚಿರಲಿಕ್ಕಿಲ್ಲವೆಂದು ನಾನಾದರೂ ಭಾವಿಸುತ್ತೇನೆ. ಉಪಕಲಮು ೪ ಹಾಗೆ ಉಳಿದು ಬಿಟ್ಟರೆ, ಮತ್ತು ಈಗಾಗಲೆ ೧೮೭೨ರ ವಿಶೇಷ ವಿವಾಹ ಕಾಯ್ದೆಯಡಿ ವಿವಾಹವಾಗುವವರಿಗೆ ಅನ್ವಯಿಸಿದರೆ, ಅವರು ಈಗ ಜಾರಿ ಬರಲಿರುವ ನಿರ್ದಿಷ್ಟ ಮಸೂದೆಯ ಅವಕಾಶಗಳನ್ವಯ, ಉತ್ತರಾಧಿಕಾರತ್ವ ಮತ್ತು ಪಿತ್ರಾರ್ಜಿತ ಹಕ್ಕುಗಳ ವಿಷಯದಲ್ಲಿ ಆಳಲ್ಪಡುತ್ತಾರೆಂಬುದರ ಬಗ್ಗೆ ನಾನು ಖಾತ್ರಿ ಹೊಂದಿದ್ದೇನೆ. ಉತ್ತರಾಧಿಕಾರತ್ವ ಕಾನೂನಿನ ಒಳಗಿರುವ ಉತ್ತರಾಧಿಕತ್ವ ಮತ್ತು ಮಸೂದೆಯೊಳಗಿರುವ – ಅವಕಾಶಗಳ ಬಗ್ಗೆ ಯಾರಿಗಾದರೂ ತಿಳುವಳಿಕೆ ಇದ್ದರೆ ಮಹಿಳೆಯರಿಗೆ ಸಂಬಂಧಿಸಿದಂತೆ, ಪ್ರಸ್ತುತ ಮಸೂದೆಯೊಳಗಿನ ಅವಕಾಶಗಳಿಗಿಂತ ಉತ್ತರಾಧಿಕಾರತ್ವ ಕಾಯ್ದೆಯೊಳಗಿನ ಅವಕಾಶಗಳು ಹೆಚ್ಚು ಉದಾರವಾಗಿರುವುದು ತಿಳಿಯುತ್ತದೆ. ಆದ್ದರಿಂದ ಈಗಾಗಲೇ ಒಂದು ನಿರ್ದಿಷ್ಟ ಕಾಯ್ದೆಯಡಿಯಲ್ಲಿ ವಿವಾಹವಾಗಿ, ಉತ್ತರಾಧಿಕಾರತ್ವದ ಕಾಯ್ದೆಯಡಿ ಹೆಚ್ಚು ಉದಾರ ಅವಕಾಶಗಳನ್ನು ಪಡೆಯುತ್ತಿರುವವರನ್ನು – ಎಳೆದುತಂದು ಪ್ರಸ್ತುತ ಮಸೂದೆಯಲ್ಲಿರುವ ಹೆಚ್ಚು ಉದಾರವಲ್ಲದ ಉತ್ತರಾಧಿಕಾರತ್ವದ ಅವಕಾಶಗಳಿಗೆ ಒಳಪಡಿಸಿರುವುದು ಸರಿಯಾಗಲಾರದು. ಈ ಕಾರಣಕ್ಕಾಗಿ ಉಪಕಲಮು ೪ನ್ನೂ ಕೈಬಿಡಬೇಕೆಂದು ನಾನು ಸಲಹೆ ಮಾಡಿರುವೆ.

ಮಾನ್ಯರೆ, ಕಲಮು ೨ರ ಕುರಿತು ಮಾಡಿದ ವಿಮರ್ಶಕರ ಟೀಕೆಗಳ ಕಡೆ ನಾನು ಗಮನಹರಿಸುತ್ತೇನೆ. ಮಂಡಿಸಲ್ಪಟ್ಟ ತಿದ್ದುಪಡಿಗಳೆಲ್ಲವನ್ನೂ ಪರೀಕ್ಷಿಸಿದಾಗ ನನ್ನ ಮತ್ತು ಪಂಡಿತ ಠಾಕೂರ್ ದಾಸ್ ಅವರ ನಡುವಿನ ತಿದ್ದುಪಡಿಗಳ ಮಧ್ಯೆ ಯಾವ ವ್ಯತ್ಯಾಸವನ್ನು ನಾನು ಕಾಣಲಿಲ್ಲ. ಕಲಮು ೨ರ ಕುರಿತು ಇರುವ ಇತರರ ತಿದ್ದುಪಡಿಗಳಂತೆ ಹೆಚ್ಚು ಕಮ್ಮಿ ಅವರ ತಿದ್ದುಪಡಿಯೂ ಇದೆ. ನಾನು ನನ್ನ ಕರಡಿನಲ್ಲಿ ಹೆಸರಿಸಿರುವ ಕೆಲವು ಸಮುದಾಯಗಳ ಕುರಿತು, ಇದು ಅನವಶ್ಯಕ ಎಂದು ಅವರು ಹೇಳಿರುವುದನ್ನು ಕುರಿತು ನಾನೀಗ ವಿವರಣೆ ನೀಡುತ್ತೇನೆ. ಉಳಿದ ತಿದ್ದುಪಡಿಗಳೂ ಸೇರಿದಂತೆ, ಮುಖ್ಯವಾಗಿ ಮೂರು ಅಂಶಗಳ ಮೇಲೆ ತಿದ್ದುಪಡಿಯ ಅವಶ್ಯವಿದೆ ಎಂಬುದನ್ನು ಯಾರಾದರೂ ನೋಡಬಹುದಾಗಿದೆ. ಮೊದಲನೆಯದು ಹಿಂದೂ ಮಸೂದೆಯ ಆವಶ್ಯಕತೆ ಒಟ್ಟಾರೆ ಇಲ್ಲ. ಅವಶ್ಯವಿರುವುದು ಎಲ್ಲಾ ನಾಗರಿಕರಿಗೂ ಅನ್ವಯವಾಗುವಂತಹ ನಾಗರಿಕ ಮಸೂದೆ. ಇದೊಂದು ಅಂಶವೇ ಎಲ್ಲಾ ತಿದ್ದುಪಡಿಗಳಲ್ಲಿ ಸುಳಿದಿದೆ. ಎರಡನೆಯದೆಂದರೆ ಸದನದ ಮುಂದಿರಿಸಿರುವ ಮಸೂದೆಯು ನಿಯಮಾನುಸಾರ ಹಿಂದೂ ಸಮುದಾಯಕ್ಕೆ ಮಾತ್ರ ಅನ್ವಯವಾಗುವಂತಿದ್ದರೂ, ಹಿಂದೂಯೇತರ ಧರ್ಮಗಳಾದ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಯಹೂದಿ ಮೊದಲಾದ ಧರ್ಮೀಯರಿಗೂ ಅನ್ವಯಿಸಬೇಕೆಂಬುದಾಗಿದೆ. ಅಂದರೆ, ಇದು ಹೇಳುವುದೇನೆಂದರೆ,

ಇದನ್ನು ನಾಗರಿಕ ಮಸೂದೆಯಂತೆ ಪರಿಗಣಿಸಿ ಎಂಬುದಾಗಿದೆ. ಮೂರನೆಯ ಸಲಹೆ ಎಂದರೆ, ಮಸೂದೆಯ ಜಾರಿಯನ್ನು ಸ್ವಇಚ್ಛೆಗೆ ಬಿಟ್ಟು ಬಿಡಿ ಎನ್ನುವುದಾಗಿದೆ. ಯಾವುದೇ ನಾಗರಿಕನಿಗೆ ಅಥವಾ ಹಿಂದೂ ಸಮಾಜಕ್ಕೆ ಸೇರಿದ ಯಾವುದೇ ವ್ಯಕ್ತಿ ಸ್ವಇಚ್ಛೆಯಿಂದ ದಾಖಾಲಾತಿ ಕಚೇರಿಗೆ ಹೋಗಿ, ತಾನು ಈ ಮಸೂದೆಗೆ ಬದ್ಧನಾಗಲಿಚ್ಛಿಸುತ್ತೇನೆಂದು ಘೋಷಿಸಿಕೊಳ್ಳುವ ಆಯ್ಕೆ ಸ್ವಾತಂತ್ರ್ಯವಿರಲಿ ಇದು ಎಂಬುದೂ ಒಂದಾಗಿದೆ. ಇನ್ಯಾವುದೇ ಪರಿಸ್ಥಿತಿಯಲ್ಲಿ ಈ ದೇಶದಲ್ಲಿ ಈ ಮಸೂದೆಯನ್ನು ಅನ್ವಯಮಾಡತಕ್ಕದ್ದಲ್ಲ. ಇನ್ನು ಒಂದು ಸಲಹೆ ಇದೆ. ಅದರ ರಚನಾಕಾರನ ಹೆಸರು. ಈ ಕ್ಷಣ ಮರೆತಿರುವ –ಚುನಾವಣೆಯ ನಂತರವೂ ಅಥವಾ ಹೀಗೆ ಮತ್ತಾವ ಸಂದರ್ಭದಲ್ಲೋ, ಜನಮತಗಣನೆಯನ್ನು ತೆಗೆದುಕೊಳ್ಳದ ತನಕ ಈ ಮಸೂದೆಯನ್ನು ಕಾರ್ಯಗತಗೊಳಿಸಕೂಡದು ಎಂಬುದು ಆಗಿದೆ.

**ಪಂಡಿತ ಎಂ.ಬಿ. ಭಾರ್ಗವ :** ಅದು ಮುಂದೆ ಬರುತ್ತದೆ.

**ಡಾ. ಅಂಬೇಡ್ಕರ್ :** ಅದನ್ನು ಯಾರೋ ಹೇಳಿದರು. ಯಾರು ಅಂತ ನೆನಪಿಗೆ ಬರುತ್ತಿಲ್ಲ.

**ಶ್ರೀ ಜೆ.ಆರ್. ಕಪೂರ್ :** ಅದನ್ನು ಆ ನಂತರ ಹೇಳಬೇಕೆಂದಿರಬೇಕು ಅವರು.

**ಡಾ. ಅಂಬೇಡ್ಕರ್ :** ಹೌದು.

ಇಲ್ಲಿನ ಕೆಲವರು ನಿನ್ನೆಯ ತನಕ ಸಂಹಿತೆಯ ಭಯಂಕರ ವಿರೋಧಿಗಳಾಗಿದ್ದವರು ಮತ್ತು ಹಿಂದೂ ಮಸೂದೆಯ ಶಿಲ್ಪಿಗಳಂತೆ ವೀರರಾಗಿ ಹೋರಾಡಿದವರು, ಇವೊತ್ತು ಒಟ್ಟಿಗೆ ಅಖಿಲ ಭಾರತೀಯ ನಾಗರಿಕ ಮಸೂದೆ ಬೇಕೆಂದು ಕೇಳಲು ಮುಂದೆ ಬರುತ್ತಿರುವುದನ್ನು ನೋಡಿ ನನಗಂತೂ ಬಹಳ ಆಶ್ಚರ್ಯವಾಗಿದೆ. ಒಂದು ಗಾದೆಯಿದೆ. ಚಿರತೆ – ತನ್ನ ಬೇಟೆಯ ಸ್ಥಳವನ್ನು ಬದಲಿಸುವುದಿಲ್ಲವಂತೆ. ನಾನು ಈ ಸದನಕ್ಕೆ ಪ್ರವೇಶಿಸುತ್ತಿದ್ದಂತೆ, ಮಸೂದೆಯ ಮೇಲೆ ಚಿರತೆಗಳಂತೆ ನೆಗೆಯುತ್ತಿದ್ದವರು, ಈಗ ಇದ್ದಕ್ಕಿದ್ದಂತೆ ಮಾನಸಿಕವಾಗಿ ಬದಲಾಗಿ, ಹೊಸ ಮಸೂದೆಯನ್ನೇ ಒಪ್ಪಲು ಸಿದ್ಧವಾಗಿರುವ ಕ್ರಾಂತಿಕಾರಿಗಳಂತೆ ಕಂಡುಬರುತ್ತಿದ್ದಾರೆ. ಅವರು ನಾಗರಿಕ ಸಂಹಿತೆಯೇ ಬೇಕೆನ್ನುವುದಾದರೆ, ಅದನ್ನು ತರಲು ಬಹಳ ಕಾಲಾವಧಿಬೇಕೆಂದು ಅವರೇನು ಭಾವಿಸಿದ್ದಾರೆಯೇ? ಅವರು ಈ ಸಲಹೆಯನ್ನು ಮಂಡಿಸಿರುವ ಒಳ ಉದ್ದೇಶವೇನಿರಬಹುದೆಂದರೆ, ಹಿಂದೂ ಮಸೂದೆಯ ಕರಡು ರಚಿಸಲು ನಾಲ್ಕೈದು ವರ್ಷಗಳಾಗಿವೆ, ನಾಗರಿಕ ಮಸೂದೆ ರಚಿಸಲು ಹತ್ತಾರು ವರ್ಷಗಳಾಗಬಹುದೆಂದು ಅವರು ತಿಳಿದಂತಿದೆ. ಆಗಲೇ ನಾಗರಿಕ ಮಸೂದೆ ಸಿದ್ಧವಾಗಿದೆಯೆಂದು ನಾನು ಅವರಿಗೆ ಹೇಳುವೆ. ಅವರು ಬಯಸಿದರೆ ಅದನ್ನು ಎರಡು ದಿನಗಳಲ್ಲೆ ಸದನದ ಮುಂದಿರಿಸುವೆ. ಅದನ್ನು ಒಪ್ಪಿಕೊಳ್ಳಲು, ನುಂಗಲು ಸಿದ್ಧವಿದ್ದರೆ, ಅದನ್ನು ಅರ್ಧತಾಸಿನಲ್ಲಿ ಈ ಸದನದಿಂದ ಪಾಸು ಮಾಡಿಸಬಹುದು.

ನಾಗರಿಕ ಮಸೂದೆ ಎಂದರೇನು? ನನ್ನನ್ನು ಕೇಳಿ, ಭಾರತೀಯ ಉತ್ತರಾಧಿಕಾರತ್ವದ ಕಾನೂನೇ ನಾಗರಿಕ ಮಸೂದೆ. ದುರದೃಷ್ಟವಶಾತ್ ಅದು ಹಿಂದೂಗಳಿಗೆ ಅನ್ವಯವಾಗುವುದಿಲ್ಲ. ಇಲ್ಲಿ ಯಾರಾದರೂ ಕಾಯ್ದೆಗಳ ಪರಿಜ್ಞಾನ ಉಳ್ಳ ಪಂಡಿತರಿದ್ದರೆ, ನನಗೆ ಗೊತ್ತಿಲ್ಲ, ಅಂಥವರು ಭಾರತೀಯ ಉತ್ತರಾಧಿಕಾರತ್ವ ಕಾನೂನಿಗಿಂತ ಉತ್ತಮವಾದ ನಾಗರಿಕ ಮಸೂದೆಯನ್ನು ಸಲಹೆ ಮಾಡಬಹುದು.

ಭಾರತೀಯ ಉತ್ತರದಾಯಿತ್ವ ಕಾನೂನನ್ನು ಸಾರ್ವತ್ರಿಕ ಮತ್ತು ನಾಗರಿಕ ಕಾನೂನನ್ನು ಮಾಡಿ ಎಲ್ಲ ನಾಗರಿಕರಿಗೂ ಅನ್ವಯಿಸುವಂತೆ ಮಾಡಲು ಆವಶ್ಯಕವಾದುದೇನೆಂದರೆ ಕಾನೂನಿನ ಕಲಮು ೨ರಲ್ಲಿರುವುದಕ್ಕೆ ಮತ್ತೊಂದು ಕಲಮು ಸೇರಿಸಿ, ಹಿಂದೂಗಳಿಗೆ ಅನ್ವಯಿಸುವುದಿಲ್ಲವೆಂಬುದನ್ನು ಅಳಿಸಿಹಾಕಿಬಿಟ್ಟರೆ ನಾಳೆಯೇ ನೀವು ನಾಗರಿಕ ಮಸೂದೆಯನ್ನು ಹೊಂದಬಹುದು. ನಾಗರಿಕ ಮಸೂದೆಯೊಳಗೆ ವಿವಾಹ ಕಾನೂನನ್ನು

ಒಂದು ಭಾಗವನ್ನಾಗಿ ನೀವು ಹೊಂದಲು ಬಯಸಿದರೆ ಅದಕ್ಕೂ ಪಥ್ಯ ಸಿದ್ಧವಾಗಿದೆ. ವಿಶೇಷ ವಿವಾಹ ಕಾನೂನೇ ಇದೆ. ನೀವು ಮಾಡಬೇಕಾದುದೇನೆಂದರೆ ಇಂಥವರಿಗೆ ಅನ್ವಯಿಸುವುದಿಲ್ಲ, ಇಂಥವರಿಗೆ ಮಾತ್ರ ಅನ್ವಯಿಸುತ್ತದೆ ಎಂಬ ಶಬ್ದಗಳನ್ನಷ್ಟೆ ತೆಗೆಯುವುದಾಗಿದೆ. ಕಲಮು ೨ ಎಲ್ಲಾ ನಾಗರಿಕರಿಗೂ ಅನ್ವಯಿಸುತ್ತದೆ ಎಂದಷ್ಟೆ ಹೇಳುವುದನ್ನು ನೀವು ಮಾಡಿದರಾಯಿತು. ಅಲ್ಲಿಗೆ ವಿಷಯ ಮುಕ್ತಾಯವಾದಂತಾಗುತ್ತದೆ. ಯಾರು ಈ ಸಲಹೆಗಳನ್ನು ಮಾಡಿದ್ದಾರೋ ಅವರು ಗಂಭೀರ ಉದ್ದೇಶದಿಂದ ಮತ್ತು ಈ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಕಾನೂನು ಹೊಂದಬೇಕೆಂಬ ಪವಿತ್ರ ದೃಷ್ಟಿಯಿಂದ ಮಾಡಿದ್ದಾರೊ ಎಂಬುದನ್ನು ನಾನು ತಿಳಿಯಬೇಕಿದೆ.

**ಶ್ರೀ ಸೋಂಧಿ (ಪಂಜಾಬ್) :** ಅವರು ಆಡಿದ ಮಾತಿನಂತೇ ತೆಗೆದುಕೊಳ್ಳಿ.

**ಡಾ. ಅಂಬೇಡ್ಕರ್ :** ಅದನ್ನು ನಾನು ಮಾಡಲು ಸಿದ್ಧನಿಲ್ಲ. ಅವರನ್ನು ನಾನು ಚೆನ್ನಾಗಿ ಬಲ್ಲೆ. ಆದ್ದರಿಂದಾಗಿಯೆ ನನ್ನ ಸ್ನೇಹಿತರಾದ ಶ್ರೀ ರೋಹಿನಿ ಕುಮಾರ ಚೌಧರಿ ನಿನ್ನೆ ಮಾಡಿದ ಸಲಹೆಯನ್ನು ಆ ಕಾರಣದಿಂದ ನಾನು ಒಪ್ಪಿಕೊಳ್ಳಲಿಲ್ಲ. "ಅಗತ್ಯವಾದ ಎಲ್ಲ ಕ್ರಮಗಳನ್ನು ಅಳವಡಿಸಿಕೊಳ್ಳಿ ಇಲ್ಲವೇ ಮಸೂದೆಯನ್ನು ಅಂಗೀಕರಿಸಿ ಅಥವಾ ಮಸೂದೆಯನ್ನು ಅಂಗೀಕರಿಸಿಕೊಳ್ಳಲಾಗದಿದ್ದರೆ ಅದನ್ನು ಕೊನೆಯ ತನಕ ಇಟ್ಟುಬಿಡಿ" ಎಂದು ಅವರು ಹೇಳಿದ್ದರು. ನಾನು ಅವರಲ್ಲಿ ನಂಬುಗೆ ಮತ್ತು ವಿಶ್ವಾಸವಿಟ್ಟಿದ್ದರೆ, ಅವರು ಹೇಳಿದ ಮಾತುಗಳನ್ನು ಮತ್ತು ಸಲಹೆಗಳನ್ನಾದರೂ ನಾನು ಒಪ್ಪಿಕೊಳ್ಳಬಹುದಿತ್ತು. ಇಲ್ಲವೇ ಅವರು ಹೇಳಿದ್ದಂತಹ ಕ್ರಮಗಳನ್ನೇನಾದರೂ ನಾನು ಅಳವಡಿಸಿಕೊಂಡಿದ್ದರೆ ಅವರನ್ನು ಯಾರೂ ವಿರೋಧಿಸುತ್ತಿರಲಿಲ್ಲ. ಈಗ ಅವರನ್ನು ಸಂಪೂರ್ಣವಾಗಿ ಏಕಾಂಗಿಯನ್ನಾಗಿ ಮಾಡಲಾಗಿದೆ. ಅವರ ಜೊತೆಜೊತೆಯಾಗಿ ನಡೆದು ಬಂದು ಬಲಿಷ್ಠ ಅಡ್ಡಗಟ್ಟೆಯನ್ನ ಕಟ್ಟಿದವರು, ಈಗ ಅವರೆಲ್ಲ ಸರಿದುಹೋಗಿರುವುದು ನನಗೆ ಕಾಣುತ್ತದೆ. ಈಗ ಅವರಿಗೆ ಬೆಳಕು ಕಾಣಿಸಿ, ಇಡಿಯಾಗಿ ಅಲ್ಲದಿದ್ದರೂ ಕೆಲವು ಭಾಗಗಳಿಗಾದರೂ ಬೆಂಬಲ ನೀಡಲು ಅವರು ಸಿದ್ಧರಾಗಿದ್ದಾರೆ. ಆದ್ದರಿಂದ ನಾಗರಿಕ ಮಸೂದೆಯನ್ನು ಹೊಂದಬೇಕೆಂಬ ವಿಚಾರ ನನಗೆ ಮನವರಿಕೆಯಾಗುತ್ತಿಲ್ಲ. ಮತ್ತು ಈ ಬಗ್ಗೆ ಅವರಿಗೆಲ್ಲ ಒಂದು ನಿಶ್ಚಿತ ಧೋರಣೆ ಅಥವಾ ಇನ್ನೂ ಮುಂದೆ ಹೋಗಿ ನಾನು ಹೇಳುವುದಾದರೆ ಗಂಭೀರತೆ ಇದ್ದಂತೆ ನನಗನ್ನಿಸುತ್ತಿಲ್ಲ.

ಮಸೂದೆಯನ್ನು ಎಲ್ಲ ನಾಗರಿಕರಿಗೂ ಅನ್ವಯಿಸಬೇಕೆಂಬ ಮನವಿಗೆ ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರು ಇಂಥ ಸಲಹೆ ಮಾಡಿದ ಟೀಕಾಕಾರರಿಗೆ ಈಗಾಗಲೇ ಉತ್ತರಿಸಿದ್ದಾರೆ. ಅವರು ಹೇಳಿದ್ದಕ್ಕಿಂತ ಇನ್ನು ಹೆಚ್ಚಿನದನ್ನೇನೂ ಹೇಳುವ ಅಗತ್ಯವಿಲ್ಲ ಎಂದು ಭಾವಿಸಿರುವೆ.

ಇಂಥ ಸಲಹೆ ಮಂಡಿಸಿದವರನ್ನು ಅಜ್ಞಾನಿಗಳೆಂದು ಕರೆಯಬೇಕೋ, ಬೇಡವೋ ನನಗೆ ತಿಳಿದಿಲ್ಲ. ಆದರೆ ಈ ದೇಶದ ವಿಭಿನ್ನ ಸಮುದಾಯಗಳ ಭಾವನೆಗಳನ್ನು ಅರ್ಥಮಾಡಿಕೊಳ್ಳದ ಅವರನ್ನು ಮೂರ್ಖರೆಂದು ಕರೆಯುವವರೆಗೂ ಹೋಗುವೆ. ನಾವು ನಮ್ಮ ಸಂವಿಧಾನದಲ್ಲಿ ಧರ್ಮನಿರಪೇಕ್ಷ ರಾಷ್ಟ್ರವನ್ನೂ ಅಳವಡಿಸಿದ್ದೇವೆಂದಲ್ಲ ಎನ್ನುವುದು ಹೇಳಲು ಒಳ್ಳೆಯದೆ. ಇಲ್ಲಿರುವ ಯಾವುದೇ ಸದಸ್ಯ "ಧರ್ಮನಿರಪೇಕ್ಷ ರಾಷ್ಟ್ರ" ಎಂಬ ಶಬ್ದವನ್ನು ಬಳಸುವಾಗ ಸಂವಿಧಾನ ಉದ್ದೇಶಿಸಿದ ರೀತಿಯಲ್ಲಿ ಬಳಸುತ್ತಾನೋ ಇಲ್ಲವೊ ಎಂಬುದು ನನಗೆ ತಿಳಿದಿಲ್ಲ. ನಾವು ಧರ್ಮವನ್ನು ನಿರ್ಮೂಲನೆ ಮಾಡಬೇಕೆಂಬುದು ಅದರ ಅರ್ಥವಲ್ಲ. ಜನರ ಧಾರ್ಮಿಕ ಭಾವನೆಗಳನ್ನು ಪರಿಗಣಿಸಬಾರದೆಂದು ಇದರ ಅರ್ಥವಲ್ಲ. ಒಟ್ಟಾರೆ ಧರ್ಮನಿರಪೇಕ್ಷ ರಾಷ್ಟ್ರವೆಂದರೆ, ಯಾವುದೇ ಧರ್ಮವನ್ನು ಸಂಸತ್ತು ಉಳಿದ ಜನರ ಮೇಲೆ ಹೇರುವ ಅಧಿಕಾರ ಹೊಂದಿಲ್ಲ ಎನ್ನುವುದಾಗಿದೆ. ಸಂವಿಧಾನವು ಅದೊಂದು ಮಿತಿಯನ್ನು ಮಾತ್ರ ಗುರುತಿಸಿದೆ. ಜನರ ಧಾರ್ಮಿಕ ಭಾವನೆಯನ್ನು

ಹತ್ತಿಕ್ಕಲು ನಾವಿಲ್ಲಿ ಇಲ್ಲ.

**ಬಾಬು ನಾರಾಯಣಸಿಂಗ್ :** ನೀವು ಅದನ್ನೇ ಮಾಡುತ್ತಿರುವಿರಿ.

**ಡಾ. ಅಂಬೇಡ್ಕರ್ :** ನಾನು ಅದನ್ನು ಮಾಡುತ್ತಲೇ ಇಲ್ಲ. ನಾನದನ್ನು ತೋರಿಸುವೆ. ಮಂಡಿಸಿರುವ ಸಲಹೆಗಳು ಸಾಮಾನ್ಯ ಪರಿಜ್ಞಾನವನ್ನು ಹೊಂದಿಲ್ಲವಾದ್ದರಿಂದ, ಅವುಗಳನ್ನು ಚರ್ಚೆಗೆತ್ತಿಕೊಳ್ಳುವುದಕ್ಕೂ ನಾನು ಮಂಡಿಸಲಿಚ್ಛಿಸುವುದಿಲ್ಲ.

ಸ್ವಯಂ ಇಚ್ಛೆಯನುಸಾರ ಅನ್ವಯಗೊಳ್ಳುವಂತೆ ಈ ಮಸೂದೆಯನ್ನು ಜಾರಿಮಾಡಬೇಕೆಂಬ ಪ್ರಶ್ನೆ ಕುರಿತಂತೆ ನಾನು ಹೇಳುವುದೇನೆಂದರೆ ಇದೊಂದು ಭಯಂಕರ ಸಲಹೆ, ಈ ಸಲಹೆಯ ಅರ್ಥವಾದರೂ ಏನು? ಸಂಸತ್ತು ಕೆಲವಿಷಯಗಳನ್ನು ಶಿಫಾರಸು ಮಾಡುವ ಒಂದು ಸಭೆ ಮಾತ್ರ ಎಂಬುದು ಇದರ ಅರ್ಥವಾಗುತ್ತದೆ. ಹೊರಗಿನ ಜನ ಏನು ಹೇಳುತ್ತಾರೋ ಆ ಸಲಹೆಗಳನ್ನು ಒಪ್ಪಿಕೊಳ್ಳುವುದನ್ನಷ್ಟೆ ಸಂಸತ್ತು ಮಾಡುವ ಕೆಲಸವಾಗುತ್ತದೆ. "ನಾವು ಈ ಕಾನೂನು ಅಂಗೀಕರಿಸಿದ್ದೇವೆ. ಇದು ಒಳ್ಳೆಯದೆಂದೇ ಭಾವಿಸಿದ್ದೇವೆ. ಸಭ್ಯರೇ, ನೀವು ಒಪ್ಪಿಕೊಳ್ಳುತ್ತಿರೋ ಇಲ್ಲವೋ ಎಂಬುದು ನಿಮಗೆ ಬಿಟ್ಟಿದ್ದು." ಇಂಥ ವಿಧಾನವನ್ನು ನಾವು ಅಂಗೀಕರಿಸುವುದಾದರೆ ಇದನ್ನೇ ಒಪ್ಪಿಕೊಂಡಲ್ಲಿ, ನಾವೊಂದು ಕೆಟ್ಟಮಾರ್ಗವನ್ನು ಹಾಕಿ, ಲೆಕ್ಕವಿಲ್ಲದಷ್ಟು ಶಿಫಾರಸ್ಸುಗಳನ್ನು ಸಂಸತ್ತು ಅಂಗೀಕರಿಸಿ ಆದರೆ ಕಾರ್‍ಯಿದ್ದೀಕರಣವನ್ನು ಜನಮನದ ಹೆಸರಿನಲ್ಲಿ ಹೊರಗಿನ ಜನರಿಗೆ ಬಿಡುತ್ತಾ ಹೋಗಬೇಕಾಗುತ್ತದೆ. ಸಂಸತ್ತು ಸಾರ್ವಭೌಮ ಅಧಿಕಾರ ಹೊಂದಿದ ಸಂಸತ್ತು ಎಂದು ಕರೆಯಲು ಇಚ್ಛಿಸುತ್ತೇನೆ. ಜನರ ಮತವನ್ನು ಪಡೆಯುವುದರಾಚೆ– ಜನರ ಒಪ್ಪಿಗೆಯನ್ನು ಪಡೆಯಬೇಕೆಂಬ ಯಾವ ಹಂಗೂ ಸಂಸತ್ತಿಗಿಲ್ಲ, ಅದು ಏನನ್ನ ಇಚ್ಛಿಸುತ್ತದೋ ಅದನ್ನು ನಿರ್ಧರಿಸಬಹುದು. ಅದು ಸಾರ್ವಭೌಮ ಕಾನೂನು ಮಾಡುವ, ಮಾಡಿದ ಕಾನೂನು ಕೈ ಬಿಡುವ ಅಧಿಕಾರ ಅದಕ್ಕಿದೆ. ಪ್ರತಿ ಸಂದರ್ಭದಲ್ಲೂ ಸಂಸತ್ತನ್ನೂ ಕಾನೂನಿನ ತಾಂತ್ರಿಕತೆ ಬಗ್ಗೆ ಅ ಆ ಇ ಈ ಏನೊಂದನ್ನು ಅರಿಯದ ಹೊರಗಿನ ಅಜ್ಞಾನಿ ಜನಗಳ ಮತಕ್ಕೆ ಒಪ್ಪಿಸುವುದಾದರೆ ಈ ಸಂಸತ್ತನ್ನು ವಿಸರ್ಜಿಸುವುದಾದರೆ ಒಳ್ಳೆಯದು. ಸಂಸತ್ತನ್ನು ಹೊಂದಿರದೆ ಇರುವುದೇ ಇದಕ್ಕಿಂತ ಅತ್ಯುತ್ತಮವಾದದ್ದು.

ಎರಡನೆಯದಾಗಿ, ಈ ದೇಶದ ಶಾಸಕಾಂಗ ಸಭೆಯ ಇತಿಹಾಸದಲ್ಲಿಯೂ ಸಂಸತ್ತಿಗೆ ಈ ರೀತಿಯ ಶಿಫಾರಸ್ಸನ್ನು ಮಾಡಿರುವ ಒಂದು ಉದಾಹರಣೆಯೂ ನನಗೆ ನೆನಪಿಲ್ಲ. ಹಿಂದೂ ಕಾನೂನು ನಿರ್ವಹಣೆಯಲ್ಲಿ ಇಂಥದ್ದೊಂದು ಕಾನೂನು ಜಾರಿ ಮಾಡಿರುವುದು ಇದೇ ಪ್ರಥಮ ಬಾರಿಯದಲ್ಲ. ಶಾಸಕಾಂಗ ಎಂದು ಅಧಿಕಾರಕ್ಕೆ ಬಂದಿತೋ ಅಂದಿನಿಂದ ಅಂದರೆ ೧೮೩೩ರಿಂದ ಭಾರತೀಯ ಶಾಸಕಾಂಗ ಸಭೆಯು ಮಂಜೂರು ಮಾಡಿರುವ ಎಲ್ಲಾ ಕಾನೂನುಗಳ ಒಂದು ಗಣನೆ ಮಾಡಿದ್ದೇನೆ. ಒಟ್ಟಾರೆ ೨೯ ಕಾನೂನುಗಳನ್ನು ಅಂಗೀಕರಿಸಲಾಗಿದೆ. ಅದರಲ್ಲಿ ಕೆಲವು ಮೂಲಭೂತ ಬದಲಾವಣೆ ಮಾಡುವಂಥ ಸ್ವರೂಪವುಳ್ಳವುಗಳಾಗಿವೆ. ಆದರೆ ಎಂದೂ ಕೂಡ ಸದನದ ಮುಂದೆ ಯಾವುದೇ ಕಾನೂನುಗಳನ್ನು ಕುರಿತಂತೆ, ಅವುಗಳನ್ನು ಜನರ ಅಭಿಪ್ರಾಯಕ್ಕೆ ಅಥವಾ ಜನಮತಗಣನೆಗೆ ಬಿಡಬೇಕೆಂಬ ಮನವಿ ಕಂಡುಬಂದಿಲ್ಲ.(ಮಾನ್ಯ ಸದಸ್ಯರೊಬ್ಬರು ಅವು ಜನರಿಂದ ಆಯ್ಕೆಗೊಂಡ ಶಾಸಕಾಂಗ ಪಕ್ಷಗಳಾಗಿರಲಿಲ್ಲ) ಅದು ಇನ್ನೂ ಕೆಟ್ಟದ್ದು, ಯಾವಾಗ ಶಾಸನಸಭೆಯಲ್ಲಿ ಚುನಾಯಿತ ಶಾಸಕರಿರಲಿಲ್ಲವೋ, ಅವರುಗಳು ಕಾನೂನು ಮಾಡುವ ಶ್ರಮತೆಗೆದುಕೊಂಡು ಜನರ ಮೇಲೆ ಹೇರಿದ್ದಾರೆ. ಈಗ ಹಿಂದಿಗಿಂತಲೂ ಹೆಚ್ಚು ಪ್ರಾತಿನಿಧಿತ್ವವನ್ನು ಹೊಂದಿರುವ ಶಾಸಕಾಂಗವಿರುವಾಗ ಸಂಸತ್ತು ಜನರಿಗಾಗಿ ಕಾನೂನು ಮಾಡಬಾರದೆಂದು ಮನವಿ ಮಾಡಲಾಗುತ್ತಿದೆ.

**ಮಾನ್ಯ ಸದಸ್ಯರೊಬ್ಬರು :** ಹಾಗೆ ಯಾರೂ ಹೇಳಿಲ್ಲ.

**ಡಾ. ಅಂಬೇಡ್ಕರ್ :** ಯಾವಾಗ ಅವರು ಜನಮತಗಣನೆ ಇರಬೇಕೆಂದು ಕೇಳಿದರೋ ಅದನ್ನೇ ಸದಸ್ಯರು ಸಲಹೆ ಮಾಡಿದಂತಾಗಿದೆ.

ನಾನೀಗ ಕಲಮು ೨ ಕುರಿತು ಮಾಡಿದ ಟೀಕೆಗಳ ಕುರಿತಾಗಿ ಹಿಂದಕ್ಕೆ ಹೋಗುತ್ತೇನೆ. ವಿಶೇಷವಾಗಿ ಈ ಟೀಕೆಗಳನ್ನು ಮಾಡಿದವರು ನನ್ನ ಸ್ನೇಹಿತರಾದ ಶ್ರೀ ನಜೀರುದ್ದೀನ್ ಅಹ್ಮದ್ ಮತ್ತು ಪಂಡಿತ ಠಾಕೂರ್ ದಾಸ್ ಭಾರ್ಗವ. ಮಾನ್ಯರೇ ತಾವು ನಿನ್ನೆ ಅಸನದಲ್ಲಿರಲಿಲ್ಲ. ಆದರೆ.....

**ಪ್ರೊ. ರಂಗಾ (ಮದರಾಸು) :** ಆದರೆ ಆಸನ ಅಲ್ಲಿತ್ತು.

**ಡಾ. ಅಂಬೇಡ್ಕರ್ :** ಆಸನ ಅಲ್ಲಿಯೇ ಇತ್ತು. ನಾನು ಏನು ಹೇಳಬಯಸುವೆನೆಂದರೆ ಶ್ರೀ ನಜೀರುದ್ದೀನ್ ಅಹ್ಮದ್ ಅವರು ಆಪಾದನೆಯ ದಾಟಿಯಲ್ಲಿ ಮಾತುಗಳನ್ನು ಶುರು ಮಾಡಿದರು. ತಿದ್ದುಪಡಿಗಳಲ್ಲಿ ನಾನು ಬಳಸಿರುವ ಭಾಷೆ **"ಪರ್ಯಾಯ ಇದು"** ಇತ್ಯಾದಿಗಳಲ್ಲಿ ಹುಕುಂ ನೀಡುವ ಸ್ವರೂಪದ್ದಾಗಿದೆ ಎಂದು ಹೇಳುತ್ತಾ ಅವರು ನನ್ನ ವಿರುದ್ಧ ಸದನದಲ್ಲಿ ದುರಭಿಪ್ರಾಯ ಮೂಡಿಸಲೆತ್ನಿಸಿದ್ದಾರೆ. ಅತ್ಯಂತ ಮೃದುವಾಗಿ ಹೇಳುವ ವಿಧಾನವೆಂದರೆ "ಇಂತಿಂಥ ಪದಗಳು– ಇಂತಿಂಥ ಪದಗಳಿಗೆ ಪರ್ಯಾಯ" ಎಂಬುದು ಅವರ ತಿಳಿವಳಿಕೆಯಾಗಿದೆ. ನಿಜವಾಗಿ ಹೇಳಬೇಕೆಂದರೆ ನಾನು ಇದನ್ನೆಲ್ಲಾ ಗಂಭೀರವಾಗಿ ತೆಗೆದುಕೊಂಡಿಲ್ಲ. ಏಕೆಂದರೆ ಕರಡು ರಚನೆ ನನ್ನ ವ್ಯವಹಾರವಲ್ಲ. ಕರಡು ರಚನೆಯು ಬೇರೆ ಸಭೆಯ ಕೆಲಸವಾಗಿದ್ದು, ಅವರು ಅವರದೆ ಆದ ನಿಯಮಾನುಸಾರ ಕೆಲಸ ಮಾಡುತ್ತಾರೆಂದು ನಾನು ಹೇಳಿ ನನ್ನ ಜವಾಬ್ದಾರಿಯನ್ನು ಸುಲಭವಾಗಿ ತಪ್ಪಿಸಿಕೊಳ್ಳಬಹುದು. ಆದರೆ, ಕರಡು ರಚನಾಕಾರ–ಬಳಸಿರುವ ಭಾಷೆ ನಿಜಕ್ಕೂ ಕೆಟ್ಟದ್ದಾಗಿದ್ದು, ಅದೇನು ದೈವಾನುಗ್ರಹದಿಂದ ಬಂದಿದೆಯೋ ಅಥವಾ ಅದು ಸಾಮಾನ್ಯ ಬಳಕೆಯದ್ದೋ ಎಂಬುದನ್ನು ನಾನು ಈ ವಿಚಾರವಾಗಿ ಪರೀಕ್ಷಿಸಿದೆ. ವಿಷಯ ಇದು. ಉದಾಹರಣೆಗೆ ಮಾನ್ಯ ಶ್ರೀ ನಜೀರುದ್ದೀನ್ ಅಹ್ಮದ್ ಅವರು ಮಾಡಿರುವ ಸಲಹೆ ಇದು "ಇಂತಿಂತಹ ಶಬ್ದಗಳನ್ನು ಪರ್ಯಾಯವಾಗಿ ಬಳಸಬಹುದು" ಎನ್ನುವುದು ಇದನ್ನೆಲ್ಲಾ ಸಾಮಾನ್ಯವಾಗಿ ಕಾನೂನು ಮಾಡುವ ಕರಡಿನಲ್ಲಿ ಬಳಸುತ್ತಾರೆ. ಕಾನೂನು ರಚನಾ ಕರಡಿನಲ್ಲಿ ಬಳಸುವ ಭಾಷೆಗೂ ಮತ್ತು ತಿದ್ದುಪಡಿಗೆ ಬಳಸುವ ಭಾಷೆಗೂ ವ್ಯತ್ಯಾಸವಿದ್ದಂತೆ ತೋರುತ್ತದೆ. ಆದ್ದರಿಂದ ಕರಡು ರಚನಾಕಾರ, ನಾನು ಹೇಳಿದ ಹಾಗೆ ಕಾನೂನು ರಚನಾ ಕರಡಿನಲ್ಲಿ ಬಳಸುವ ಭಾಷೆಯನ್ನು ತಿದ್ದುಪಡಿಗಳ ಕರಡಿನಲ್ಲಿ ಬಳಸಿಲ್ಲ. ಎರಡನೆಯ ವಿಷಯವೆಂದರೆ ಇದು. ಸದನಕ್ಕೆ ನೆನಪಿರುವುದು ಅಧ್ಯಕ್ಷರು ಸಂಸತ್ತಿನ ಹೆಸರಿನಲ್ಲಿ ಕೆಲವು ಆದೇಶಗಳನ್ನು ಹೊರಡಿಸಿರುತ್ತಾರೆ. ಹಾಗೆ ಹೊರಡಿಸುವ ಅಧಿಕಾರಕ್ಕೆ ಅವರು ಅರ್ಹರಿರುತ್ತಾರೆ. ನನಗೆ ತಿಳಿದಂತೆ, ಆ ಅಗಣಿತ ಆದೇಶಗಳು ಒಂದು ದಪ್ಪನೆಯ ಪುಸ್ತಕವಾಗಿದ್ದು, ಅದನ್ನು ನನ್ನ ಸ್ನೇಹಿತರು ನೋಡಿರಬಹುದು. ಅಲ್ಲಿ ಬಳಸಿರುವ ಭಾಷೆಯನ್ನು ಕರಡು ರಚನಾಕಾರ ತಿದ್ದುಪಡಿ ರಚನೆಯ ಸಂದರ್ಭದಲ್ಲೂ ಬಳಸಿದ್ದಾನೆ. ಅವನು ಹೇಳಿದ **"ಮಾನ್ಯ ರಾಷ್ಟ್ರಪತಿಗಳು ಬಳಸಿರುವ ಮಾರ್ಗವನ್ನೇ, ನಾನು ತಿದ್ದುಪಡಿಗಳ ಕರಡು ರಚನೆಯಲ್ಲಿ ಅನುಸರಿಸಿದ್ದೇನೆ"** ಎಂದು. ನಾನು ಮುಂದುವರೆದು **"ಯಾಕೆ ರಾಷ್ಟ್ರಪತಿಗಳು ಸಹಜವಾದ ವಿಧಾನದಿಂದ ದೂರ ಸರಿದಿದ್ದಾರೆ?"** ಎಂದು ವಿಚಾರಿಸಿದೆ. ಅದಕ್ಕೆ ಅವನು ಕೊಟ್ಟ ಉತ್ತರ, ಆದೇಶಗಳು ಆಗಾಧವಾಗಿರುತ್ತವೆ ಮುದ್ರಣ ಕಾಗದ ಮತ್ತು ಮಸಿಯ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹೀಗೆ ಮಾಡಲಾಗುವುದು ಎನ್ನುವುದಾಗಿತ್ತು. ಆದ್ದರಿಂದ ರಾಷ್ಟ್ರಪತಿಗಳ ಆದೇಶ ರಚನೆಯಲ್ಲಿ ಯಾರು ಸಹಾಯ ಮಾಡುತ್ತಿದ್ದಾರೋ ಆ ಕರಡು ರಚನಾಕಾರನೆ ಈ ತಿದ್ದುಪಡಿಗಳನ್ನು ರಚಿಸಿದ್ದಾನೆ. ಆದ್ದರಿಂದ ಇದರಲ್ಲಿ ನನ್ನ ಕರಡು ರಚನಾಕಾರನ ಯಾವ ದೋಷವೂ ಇಲ್ಲ ತಪ್ಪು ಇಲ್ಲ.

ಅವನು ಸಂವಿಧಾನದತ್ತ ಆದೇಶಗಳಲ್ಲಿ ಬಳಸುವ ಭಾಷೆಯನ್ನೇ ಇಲ್ಲಿ ಬಳಸಿರುವುದರಿಂದ, ನಾನು ಹೇಳುವುದೇನೆಂದರೆ, ನನ್ನ ತಿಳುವಳಿಕೆಯುಳ್ಳ ಮಿತ್ರರು ಈ ಬಗ್ಗೆ ನನ್ನನ್ನು ಅಸಹ್ಯಕರವಾಗಿ ಚಿತ್ರಿಸುವ ಅವರ ಪ್ರಯತ್ನ ನೆಲಕ್ಕೆ ಕುಸಿದಿದೆ. ಈ ಬಗ್ಗೆ ನಾನು ಇನ್ನೂ ಹೆಚ್ಚು ಹೇಳಲಾರೆ.

ಈಗ ಉಪಕಲಮು (ಡಿ) ಕುರಿತಂತೆ ಇರುವ ನನ್ನ ಸ್ನೇಹಿತರ ಆಕ್ಷೇಪ. ಹಿಂದೂಧರ್ಮಕ್ಕೆ ಮತಾಂತರವನ್ನು ನಾನು ಪ್ರೋತ್ಸಾಹಿಸುತ್ತಿದ್ದೇನೆಂದು ಅವರು ಹೇಳಿದ್ದಾರೆ. ನಾನು ಸರಿಯಾಗಿ ಗ್ರಹಿಸಿದ್ದರೇ– ಅವರ ವಾದ – ಕುಟುಂಬವೊಂದರಲ್ಲಿ ಜನಿಸಿದವನಿಗೆ ತನ್ನ ಧರ್ಮದಿಂದ ಮತಾಂತರ ಹೊಂದುವ ಹಕ್ಕನ್ನು ಕಲಮು ೨ರಲ್ಲಾಗಲಿ, ಅಥವಾ ಮಸೂದೆಯ ಯಾವ ಭಾಗದಲ್ಲಾಗಲಿ ನಾನು ಅವಕಾಶ ಕಲ್ಪಿಸಿಲ್ಲವೆಂಬುದಾಗಿದೆ.

ಕಾನೂನುಗಳ ವಿಷಯದಲ್ಲಿ ಅಪಾರ ಪರಿಣಿತಿ ಇದೆಯೆಂದು ಅಧಿಕೃತವಾಗಿ ತಮ್ಮನ್ನು ತಾವೇ ಘೋಷಿಸಿಕೊಳ್ಳುವ ನನ್ನ ಸ್ನೇಹಿತರಾದ ನಜೀರುದ್ದೀನ್ ಅಹ್ಮದ್ ಅವರು ಈ ಉದ್ದೇಶಕ್ಕಾಗಿಯೇ ಮಂಜೂರು ಮಾಡಿದ ೧೮೫೦ರ ಅಶಕ್ತತೆಗಳನ್ನು ನಿವಾರಿಸುವ ಕಾಯ್ದೆಯೆಂಬ ಹಳೆಯ ಕಾಯ್ದೆಯನ್ನು ಮರೆತಂತಿದೆ ಎಂದು ನಾನು ಹೇಳಲೇಬೇಕಿದೆ. ತನ್ನ ಆತ್ಮಸಾಕ್ಷಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಯಾರಿಗಾದರೂ ತನ್ನ ಅಶಕ್ತತೆಯನ್ನು ಅಳಿಸಿಕೊಳ್ಳಬೇಕಿನಿಸಿ, ಧರ್ಮ ಬದಲಾವಣೆಗೆ ಇಚ್ಛಿಸಿದರೆ ಅವರಿಗಾಗಿಯೇ ಈ ಕಾನೂನು ಹೊರಡಿಸಲಾಗಿದೆ. ಹಿಂದೂಗಳು, ಪ್ರಾಚೀನ ಹಿಂದೂ ಕಾಯ್ದೆಯನ್ವಯ ಮತಾಂತರ ಮಾಡಿದರೆ ಅವರು ಪತಿತ ಅನ್ನಿಸಿಕೊಳ್ಳುತ್ತಾರೆ. ಪತಿತರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕುದಾರಿಕೆ ಇಲ್ಲವೆಂದು ಹಿಂದೂಗಳು ಹೆದರಿ ಮತಾಂತರ ಮಾಡುತ್ತಿಲ್ಲವೆಂದು ಕ್ರೈಸ್ತ ಪಾದ್ರಿಗಳು ಚಳುವಳಿ ಮಾಡಿದ್ದರಿಂದ ಈ ದೇಶದಲ್ಲಿ ಈ ಕಾನೂನು ತರಲಾಯಿತು. ಹಿಂದೂ ಕಾನೂನನ್ನು ಬದಿಗಿರಿಸಲು ಈ ಕಾನೂನನ್ನು ತರಲಾಯಿತೆ ಹೊರತು ನಾನು ಆ ಕಾನೂನಿನೊಳಗಿರುವ ಅವಕಾಶಗಳನ್ನು ತಿರುಚಿಲ್ಲ. ಮಸೂದೆಯಿಂದ ತೆಗೆದುಹಾಕಲ್ಪಟ್ಟ ಕಾಯ್ದೆಗಳೊಳಗಿನ ಪರಿಶಿಷ್ಟಗಳನ್ನೇನಾದರೂ ನನ್ನ ಸ್ನೇಹಿತರು ಉಲ್ಲೇಖಿಸಿ ನೋಡಿದರೆ, ಜಾತಿ ಅಶಕ್ತತೆಯನ್ನು ನಿವಾರಿಸುವ ಕಾಯ್ದೆಯನ್ನು ಆ ಪರಿಶಿಷ್ಟದೊಳಗೆ ಸೇರಿಸಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ಮತಾಂತರ ಹೊಂದಿದವನು ತನ್ನ ತಂದೆಯ ಕುಟುಂಬದ ಎಲ್ಲಾ ಆಸ್ತಿಗೂ ಹಕ್ಕುದಾರನಾಗುತ್ತಾನೆ – ಧರ್ಮವನ್ನು ಬದಲಾಯಿಸಿದಾಗ ಕೂಡ. ಆದ್ದರಿಂದ ಮಾನ್ಯ ನಜೀರುದ್ದೀನ್ ಅಹ್ಮದ್ ಅವರ ದೂರು ತಳಬುಡವಿಲ್ಲದ್ದು.

ಉಪ–ಕಲಮು ೨ರ ಕುರಿತು ಆಕ್ಷೇಪಗಳಿವೆ ಎಂದು ನನ್ನ ಸ್ನೇಹಿತರು ಹೇಳಿದ್ದಾರೆ. ಉಪಕಲಮು ೨ ಹೀಗೆ ಹೇಳುತ್ತದೆ:

"ಧರ್ಮದಿಂದ ಯಾರು ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಯಹೂದಿ ಅಲ್ಲವೋ ಆ ಎಲ್ಲರಿಗೂ ಈ ಮಸೂದೆಯು ಅನ್ವಯಿಸಲ್ಪಡುತ್ತದೆ"

ಸಹಜವಾಗಿ ಈ ಉಪಕಲಮನ್ನು ನಾನು ಶೇಷ ಕಲಮು ಎಂದು ಕರೆಯುತ್ತೇನೆ. ಈ ಕಲಮು ಯಾವ ಜನರನ್ನು ವಿಶೇಷವಾಗಿ ಸೂಚಿಸಲ್ಪಟ್ಟ ಹಿಂದುಗಳ ನಡುವೆಯೋ ಅಥವಾ ಪಾರ್ಸಿ, ಯಹೂದಿ, ಕ್ರಿಶ್ಚಿಯನ್ ಮತ್ತು ಮುಸ್ಲಿಂರ ನಡುವೆಯೋ ಸೇರಿಸಿಲ್ಲವೋ ಅಂಥವರನ್ನು ಸರಿಯಾಗಿಸಲು ತರಲಾಗಿದೆ. ಈ ದೇಶದಲ್ಲಿ ಅಗಾಧ ಸಂಖ್ಯೆಯ ಜನ ಈ ಮಾನ್ಯ ಮಾಡಿದ ಧರ್ಮಗಳನ್ನು ಪಾಲಿಸುತ್ತಿಲ್ಲವೆಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಇವರ ಬಗ್ಗೆ ನಾವೇನು ಮಾಡಲು ಬರುತ್ತದೆ? ಎಂಬುದನ್ನು ಹೇಳಲೇಬೇಕು. ನಿಶ್ಚಿತವಾಗಿ ಈ ಮಸೂದೆಯು ಅವರಿಗೆ ಅನ್ವಯಿಸುತ್ತದೆ ಎಂದು ಹೇಳಬೇಕು ಅಥವಾ ಅವರಿಗೆ ಅನ್ವಯವಾಗುವುದಿಲ್ಲವೆಂದಾದರೂ ಹೇಳಬೇಕು – ಅಥವಾ ಯಾವ ಹಂತದವರಿಗೆ

ಅನ್ವಯಿಸುತ್ತದೆಯೆಂದಾದರೂ ಹೇಳಬೇಕು. ಈ ದೇಶದಲ್ಲಿ ಅಗಾಧ ಜನರು ಉದಾಹರಣೆಗೆ, ಆದಿ ದ್ರಾವಿಡರು, ಬುಡಕಟ್ಟು ಜನರು, ಆದಿವಾಸಿಗಳು, ಹಿಂದುಳಿದ ವರ್ಗದವರು, ಚೇತನವಾದಿಗಳು ಇತ್ಯಾದಿ, ಹೀಗೆ ಲೆಕ್ಕಹಾಕುತ್ತಾ ಅನಂತಕ್ಕೆ ಸಾಗಬಹುದಾದಷ್ಟು ಜನರು ವಾಸಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅವರ ಬಗ್ಗೆ ಏನು ಮಾಡುವುದು? ನಿಜಕ್ಕೂ ಕೆಲ ಅವಕಾಶಗಳನ್ನು ಅವರಿಗಾಗಿ ಕಲ್ಪಿಸಲೇಬೇಕು. ಆದ್ದರಿಂದ ಕಲಮು (೨) ಈ ವರ್ಗದ ಜನರಿಗೆ ಅನ್ವಯಿಸುತ್ತದೆ, ಇದನ್ನು ನಾನು ಶೇಷ ಕಲಮು ಎಂದು ಕರೆದೆ. ಈ ಕಾಯ್ದೆಯನ್ನು ಮಾಡುವ ಮೂಲಕ ಸರ್ಕಾರವು ರಾಜಕೀಯ ಹಿತಾಸಕ್ತಿಯನ್ನು ಹೊಂದಿದೆ ಎಂದು ಯಾರಾದರೂ ಹೇಳಬಹುದು. ಅಂದರೆ, ಈ ಜನರನ್ನು ಹಿಂದೂ ಸಮುದಾಯಕ್ಕೆ, ಅಂದರೆ ಹಿಂಬಾಗಿಲು ಮೂಲಕ ತರುವ ಪ್ರಯತ್ನ ನಡೆಸಿದೆ ಎಂಬುದಾಗಿದೆ. ಇದು ನಮ್ಮ ಉದ್ದೇಶ ಅಲ್ಲವೇ ಅಲ್ಲ.

ಮಧ್ಯಾಹ್ನ ೪ ಗಂಟೆ

ನೀವು ಬೇಕಾದರೆ, ನಾವು ಏನು ಮಾಡುತ್ತಿದ್ದೇವೆ ಎಂಬುದಕ್ಕೆ ಪ್ರಸ್ತಾವಗಳನ್ನು ನೋಡಬಹುದು. ಯಾರಲ್ಲಿ ಹಿಂದೂ ಸಂಪ್ರದಾಯ ಮತ್ತು ಬಳಕೆಗಳು ಆಚರಿಸಲ್ಪಡುತ್ತಿವೆಯೆಂಬುದು ಸಿದ್ಧವಾಗುತ್ತದೋ ಅಂಥ ವರ್ಗದ ಜನರಿಗೆ ಮಾತ್ರ ಹಿಂದೂ ಮಸೂದೆ ಅನ್ವಯಿಸಲ್ಪಡುತ್ತದೆ. ಇಲ್ಲದಿದ್ದರೆ ಅವರಿಗೇನು ಮಾಡಬೇಕು ಅದನ್ನು ಮಾಡಲು ಅವರು ಸ್ವತಂತ್ರರು. ಆದ್ದರಿಂದ ಮತ್ತೊಮ್ಮೆ ನನ್ನ ಸ್ನೇಹಿತರ ಟೀಕೆ ಹಾದಿತಪ್ಪಿದೆ.

**ಪ್ರೊ. ರಂಗಾ** : ಹೊರಗುಳಿಯುವುದನ್ನು ಅವರಾಗಿಯೇ ಆರಿಸಿಕೊಳ್ಳಬಹುದೋ?

**ಡಾ. ಅಂಬೇಡ್ಕರ್:** ಒಮ್ಮೆ ಅವರು ಸಂಪ್ರದಾಯ ಮತ್ತು ಇನ್ನಿತರ ವಿಷಯಗಳನ್ನು ಅಳವಡಿಸಿಕೊಂಡರೋ, ಅವರು ಒಳಗೆ ಬಂದಂತೆ ಇಲ್ಲವಾದಲ್ಲಿ ಹೊರಗುಳಿದಂತೆ.

ಮಾನ್ಯರೆ, ನಾನೀಗ ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಮತ್ತು ಸರ್ದಾರ್ ಹುಕುಂ ಸಿಂಗ್ ಎತ್ತಿದ ಕೆಲ ಅಂಶಗಳನ್ನು ಕುರಿತು ಪ್ರಸ್ತಾಪಿಸುತ್ತೇನೆ. ಸಿಖ್ಖರಿಗೆ ಮಸೂದೆ ಅನ್ವಯವಾಗಬಾರದೆಂಬ ತಿದ್ದುಪಡಿಯು ಸರ್ದಾರ ಹುಕುಂ ಸಿಂಗ್ ಅವರದ್ದು. ಮುಂದೆ ಅವರು ನಾನು ತಿಳಿದಂತೆ, ತಮ್ಮ ಧೋರಣೆಯನ್ನು ಮಾರ್ಪಡಿಸಿ, ಕೆಲ ಭಾಗಗಳಿಗೆ ಮಾತ್ರ ತಮ್ಮ ಆಕ್ಷೇಪಣೆ ಇದೆಯೆಂದರು. ಈ ಮಸೂದೆಯು, ಪದಶಃ ಹಿಂದುಯೇತರ ವ್ಯಕ್ತಿಗಳಿಗೆ ಅಥವಾ ಸಮುದಾಯಗಳಿಗೆ ಅನ್ವಯಿಸುವ ಪ್ರಶ್ನೆ ಕುರಿತಂತೆ ಒಂದು ಸಾಮಾನ್ಯ ವಿಚಾರವನ್ನು ತಿಳಿಯುವುದು ಉಚಿತ ಎಂದು ನಾನು ಭಾವಿಸಿದ್ದೇನೆ. ಈ ವಿಷಯವನ್ನು ಮಾನ್ಯ ಸದಸ್ಯರು ತಮ್ಮ ಮನಸ್ಸಿನಲ್ಲಿರಿಸಿಕೊಳ್ಳಬೇಕೆಂದು ವಿನಂತಿಸುತ್ತಾ ನಾನು ಮೊಟ್ಟ ಮೊದಲು ಒತ್ತುಕೊಟ್ಟು ಹೇಳುವ ವಿಷಯವೇನೆಂದರೆ, ಸಮಾಜಶಾಸ್ತ್ರದ ದೃಷ್ಟಿಯಿಂದ ನಾವು ಭಾರತದಲ್ಲಿ ಅಥವಾ ಬೇರೆ ಕಡೆಯಲ್ಲಿ ಇರುವ ವಿವಿಧ ಧರ್ಮಗಳು ಎರಡು ಪಂಗಡಗಳಿಗೆ ಸೇರುತ್ತವೆಂದು ನನಗನ್ನಿಸುತ್ತದೆ.

ಕೆಲವು ಧರ್ಮಗಳಿವೆ, ಅವು ತಮ್ಮದೇ ಆದ ಕಾನೂನಿನ ವ್ಯವಸ್ಥೆಯ ಭಾಗವನ್ನು ಹೊಂದಿರುತ್ತವೆ, ಅವುಗಳನ್ನು ನೀವು ಆ ಧರ್ಮಗಳಿಂದ ಬೇರ್ಪಡಿಸಲಾರಿರಿ. ಕೆಲವು ಧರ್ಮಗಳಿವೆ. ಅವುಗಳಿಗೆ ಕಾನೂನಿನ ವ್ಯವಸ್ಥೆ ಇರುವುದಿಲ್ಲ. ಅವು ಕೇವಲ ತತ್ವದ ವಿಷಯ ಒಳಗೊಂಡಿರುತ್ತವೆ. ನಾನು ಅರ್ಥಮಾಡಿಕೊಂಡ ಹಾಗೆ ಹಿಂದೂಧರ್ಮದ ವಿಶೇಷವೆಂದರೆ ಇದೆ. ಇದೊಂದು ಧರ್ಮವು ಕಾನೂನಿನ ಹಂದರದ ಚೌಕಟ್ಟೊಂದನ್ನು ಹೊಂದಿದ್ದು, ಅದನ್ನು ತನ್ನೊಳಗೆ ಅಂತಃಗೊಳಿಸಿಕೊಂಡಿದೆ. ಈಗ ಇದನ್ನು ಚೆನ್ನಾಗಿ ಮನಸ್ಸಲ್ಲಿಟ್ಟುಕೊಂಡರೆ ಮತ್ತು ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ, ಯಾಕೆ ಸಿಖ್ಖರನ್ನು, ಬುದ್ಧರನ್ನು, ಜೈನರನ್ನು

ಹಿಂದೂಧರ್ಮದಡಿಯಲ್ಲಿ ತರಲಾಯಿತೆಂಬುದನ್ನು ಅರಿಯಲು ಕಷ್ಟವಾಗುವುದಿಲ್ಲ. ಯಾವಾಗ ಬುದ್ಧನು ವೈದಿಕ ಬ್ರಾಹ್ಮಣದಿಂದ ಬೇರೆಯಾದನೋ ಆಗ ಅವನ ವ್ಯತ್ಯಾಸವಿರುವುದು ತತ್ವಗಳ ವಿಷಯಕ್ಕೆ ಸೀಮಿತಗೊಂಡು ಮಾತ್ರ. ಬುದ್ಧನೇನೂ ತನ್ನ ಅನುಯಾಯಿಗಳಿಗೆ ಪ್ರತ್ಯೇಕವಾದ ಕಾನೂನಿನ ವ್ಯವಸ್ಥೆಯನ್ನು ಹಾಕಿ ಕೊಡಲಿಲ್ಲ. ಕಾನೂನಿನ ವ್ಯವಸ್ಥೆ ಹೇಗೆ ಇತ್ತೋ ಅದನ್ನು ಹಾಗೆಯೇ ಬಿಟ್ಟು ಪ್ರಾಯಶಃ ಆಗ ಪ್ರಚಲಿತದಲ್ಲಿದ್ದ ಕಾನೂನಿನ ವ್ಯವಸ್ಥೆ ಉತ್ತಮವಾಗಿದ್ದಿರಬಹುದು. ಅದಕ್ಕೆ ಯಾವ ದೋಷ ಮತ್ತು ತಪ್ಪುಗಳು ಇರಲಿಕ್ಕಿಲ್ಲ. ಆದ್ದರಿಂದ ಅವನು ಧಾರ್ಮಿಕ ಭಾವನೆಗಳಲ್ಲಿ ತಂದಂತಹ ಬದಲಾವಣೆಗಳಿಗೆ ಸಮವಾಗಿ ಕಾನೂನಿನ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕೆಂಬುದರ ಕಡೆ ಗಮನ ಹರಿಸಲಿಲ್ಲ.

[ಉಪ– ಸಭಾಪತಿಗಳು ಆಸನದಲ್ಲಿ]

ಇದೇ ರೀತಿ ಯಾವಾಗ ಮಹಾವೀರ ತನ್ನ ಸ್ವಂತ ಧರ್ಮವನ್ನು ಸ್ಥಾಪಿಸಿದನೋ ಆಗ ಜೈನರಿಗಾಗಿ ಪ್ರತ್ಯೇಕ ಕಾನೂನಿನ ವ್ಯವಸ್ಥೆಯನ್ನು ರಚಿಸಲಿಲ್ಲ. ಇರುವ ಕಾನೂನಿನ ವ್ಯವಸ್ಥೆಯನ್ನೇ ಮುಂದುವರೆಯಲು ಅವಕಾಶ ಕೊಟ್ಟ. ಹತ್ತು ಜನ ಗುರುಗಳಲ್ಲಿ ಯಾರೂ ಕೂಡ ಸಿಖ್ಖರಿಗಾಗಿ ಕಾನೂನು ಪುಸ್ತಕ ರಚಿಸಲಿಲ್ಲ ಎಂದು ನಾನು ಹೇಳುವುದು ತಪ್ಪಾಗಿದ್ದಲ್ಲಿ ಸರ್ದಾರ್ ಹುಕುಂ ಸಿಂಗ್ ನನ್ನನ್ನು ತಿದ್ದಬಹುದು. ಸಮಸ್ಯೆ ಎಂದರೆ ಇದೆ. ಇದನ್ನು ನೀವು ಸಮಸ್ಯೆ ಅನ್ನಬಹುದು– ಅದೃಷ್ಟ ಅನ್ನಬಹುದು– ದುರಾದೃಷ್ಟ ಎಂದು ನೀವು ಕರೆಯಬಹುದು. ನಾನು ಶಬ್ದಗಳು ಹೀಗೆ ಇರಬೇಕೆನ್ನುವವನಲ್ಲ– ವಸ್ತುತಃ ಸ್ಥಿತಿ ಇದು. ಈ ದೇಶದಲ್ಲಿ ಧರ್ಮಗಳು ಬದಲಾಗಿರಬಹುದು. ಕಾನೂನು ಮಾತ್ರ ಒಂದೇ ಆಗಿ ಉಳಿದಿದೆ. ಆದ್ದರಿಂದಲೇ ಸಿಖ್ಖರು ಕಾನೂನು ಪಾಲಿಸುತ್ತಿದ್ದಾರೆ.

**ಸರ್ದಾರ್ ಹುಕುಂ ಸಿಂಗ್ :** ಆದರೆ ನೀವೀಗ ಹೊಸ ಕಾನೂನು ಮಾಡುತ್ತಿರುವಿರಿ?

**ಡಾ. ಅಂಬೇಡ್ಕರ್ :** ಈಗ ಅದು ಹೊಸ ವಿಷಯ. ಜೈನರು ಬರುತ್ತಾರೆ. ನೀವು ನಮಗೇನು ಮಾಡುತ್ತೀರಿ? ನಮ್ಮನ್ನು ನೀವು ಹಿಂದೂ ಮಾಡಲು ಹೊರಟಿರುವಿರೋ ಎಂದು ಕೇಳುತ್ತಾರೆ. ಸಿಖ್ಖರು ಅದನ್ನೇ ಹೇಳುತ್ತಾರೆ. ಬೌದ್ಧರು ಅದನ್ನೇ ಹೇಳುತ್ತಾರೆ. ಇದಕ್ಕೆಲ್ಲಾ ನನ್ನ ಉತ್ತರ: ಇದಕ್ಕೆ ನಾನೇನೂ ಸಹಾಯ ಮಾಡಲಾರೆ. ಬಹಳ ದೀರ್ಘಕಾಲದಿಂದ ಕಾನೂನಿನ ವ್ಯವಸ್ಥೆಯನ್ನು ಪಾಲಿಸುತ್ತಾ ಬಂದು, ಈಗ ಇಡಿಯಾಗಿ ಅದನ್ನು ತಿರಸ್ಕರಿಸುತ್ತೇನೆಂದು, ಅದು ನಮಗೆ ಸಂಬಂಧ ಪಟ್ಟದ್ದಲ್ಲವೆಂದು ಯಾರಾದರೂ ಹೇಳಿದರೆ, ಅದು ಬಹಳ ತಡವಾದ ಹೇಳಿಕೆಯಾಗುತ್ತದೆ. ಹಾಗೆ ಮಾಡಲೂ ಬರುವುದಿಲ್ಲ. ಹಿಂದೂ ಕಾನೂನು ಮತ್ತು ಹಿಂದೂ ಮಸೂದೆಯು ಬೌದ್ಧರಿಗೆ, ಜೈನರಿಗೆ, ಸಿಖ್ಖರಿಗೆ ಜಾರಿಯಾಗುತ್ತಿರುವುದು ಚಾರಿತ್ರಿಕ ಬೆಳವಣಿಗೆಯ ಕಾರಣದಿಂದ, ಅದಕ್ಕೆ ನಾನಾಗಲಿ ಅಥವಾ ನೀವಾಗಲಿ ಈಗ ಉತ್ತರ ಕೊಡಲು ಬರುವುದಿಲ್ಲ. ಪರಿಸ್ಥಿತಿಯು ತಪ್ಪು ಜಾಡಿನಲ್ಲಿ ಸಾಗಿದೆ, ಅದನ್ನು ಸುಧಾರಿಸಿ ಅಥವಾ ನ್ಯಾಯಯುಕ್ತವಾಗುವಂತೆ ನೋಡಿಕೊಳ್ಳುವುದೇ ನಾವೆಲ್ಲ ಈಗ ಮಾಡಬಹುದಾದ್ದು, ಅದನ್ನೇ ನಾವೀಗ ಮಾಡುತ್ತಿದ್ದೇವೆ. ಸಿಖ್ಖರಿಗೆ ಸಂಬಂಧಿಸಿದಂತೆ, ಖಾಸಗಿ ಮಂಡಳಿಯು ನೀಡಿರುವ ತೀರ್ಪುಗಳಲ್ಲಿ ಈ ವಿಷಯ ಕುರಿತು ಈ ಹಿಂದೆ ೧೮೩೦ರ ಸುಮಾರಿನಲ್ಲಿ ನಡೆದ ಚರ್ಚೆಗಳಲ್ಲಿ ನಾನು ಈ ವಿಷಯ ನೋಡಿದೆ. ಕಾನೂನು ಕುರಿತಂತೆ– ಸಿಖ್ಖರೂ ಕೂಡ ಹಿಂದೂಗಳಂತೆ ಎಂಬ ನಿರ್ಧಾರವನ್ನು ಅಲ್ಲಿ ತೆಗೆದುಕೊಳ್ಳಲಾಗಿದೆ. ಕಾನೂನಿನ ಉದ್ದೇಶದಿಂದ ಲೆಖ್ಖ ಹಾಕಿ – ೧೮೩೦ರಿಂದ ೧೯೫೦ರ ವರೆಗೆ ಎಷ್ಟು ವರ್ಷ ಕಾಲ ನಿಮ್ಮನ್ನು ಹಿಂದೂಗಳೆಂದು ಪರಿಗಣಿಸಲಾಗಿದೆ.

**ಸರ್ದಾರ್ ಹುಕುಂ ಸಿಂಗ್ :** ಅದರ ಬಗ್ಗೆ ಅನುಮಾನ ಪಟ್ಟಿಲ್ಲ

**ಡಾ. ಅಂಬೇಡ್ಕರ್ :** ಕಾನೂನಿನಲ್ಲಿ ಒಂದು ತತ್ವ ಇದೆ ಅದನ್ನು ನಾವು ಸ್ಟೇರ್ ಡಿಸೀಸ್ ಎಂದು ಕರೆಯುತ್ತೇವೆ. ಬಹಳ ಹಿಂದೆ ಒಂದು ನಿರ್ಣಯವನ್ನು ತೆಗೆದುಕೊಂಡು ಜನರು ಅದರಂತೆ ನಡೆದುಕೊಂಡು ಬಂದಿದ್ದಾರೆ ಅದು ತಪ್ಪಾದರೂ ಉತ್ತಮವಾದದ್ದೆ.

**ಸರ್ದಾರ್ ಹುಕುಂ ಸಿಂಗ್ :** ಈಗ ನೀವು ಅದನ್ನು ಬದಲಾಯಿಸಹೊರಟಿದ್ದೀರಿ ನಾನೇನು ಮಾಡಲಿ?

**ಡಾ. ಅಂಬೇಡ್ಕರ್ :** ಮಾನ್ಯರೇ ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಪ್ರಸ್ತಾಪಿಸಿದ ಅಂಶಗಳನ್ನು ಕುರಿತಂತೆ ಹೇಳುವುದಾದರೆ, ನಾನು ಅವರ ಮಾತುಗಳನ್ನು ಕೇಳಿ ಬಹಳ ಸಂತೋಷಪಟ್ಟೆ.

**ಶ್ರೀ ಜೆ. ಆರ್. ಕಪೂರ್ :** ಯಾವ ಹೊಗಳಿಕೆಯೂ ಅವರನ್ನು ನಿಮ್ಮ ಕಕ್ಷೆಯೊಳಗೆ ಸೆಳೆಯುವುದಿಲ್ಲ.

**ಡಾ. ಅಂಬೇಡ್ಕರ್ :** ನಾನು ಯಾವುದೇ ಪ್ರಲೋಭನೆ ಬಳಸುತ್ತಿಲ್ಲ. ಅವರು ನಿಜಕ್ಕೂ ಒಂದಾದರೆ ಮೇಲೊಂದು ಹಲವಾರು ಕಂದಕಗಳನ್ನು ಅಗೆಯುತ್ತಿರುವುದನ್ನು ನಾನೀಗ ಕಾಣುತ್ತಿದ್ದೇನೆ. ಒಂದು ಕಂದಕವನ್ನಾಗಲಿ, ಅಥವಾ ಎರಡನ್ನಾಗಲಿ ಅಥವಾ ಮೂರನ್ನಾಗಲಿ ಅವರಿಂದ ಸಮರ್ಥಿಸಲಾಗುತ್ತಿಲ್ಲವೆಂದು ಅವರಿಗೆ ಚೆನ್ನಾಗಿ ತಿಳಿದಿದೆ. ಕಡೆಯ ಕಂದಕದಿಂದಲೂ ಅಸಾಧ್ಯವೆಂಬುದನ್ನು ನಾನು ನೋಡಿದ್ದೇನೆಂಬುದು ಅವರಿಗೂ ಚೆನ್ನಾಗಿ ತಿಳಿದಿದೆ. ಅವರ ಕಡೆಯ ಚಿಕ್ಕ ಕಂದಕವಾದ, ವಿವಾಹಿತ ಮಗಳನ್ನು ಹೊರದಬ್ಬುವ ವಿಷಯವನ್ನು ಮಾನ್ಯ ಮಾಡಿದಲ್ಲಿ ಅವರ ಪ್ರತಿರೋಧವು ಸಂಪೂರ್ಣವಾಗಿ ಬತ್ತಿಹೋಗುತ್ತದೆ.

ಸಂಪ್ರದಾಯ ಕಾನೂನು ಕುರಿತು ಕೂಡ ಅವರು ಮತ್ತೊಂದು ಪ್ರಶ್ನೆಯನ್ನು ಎತ್ತಿದರು. ನಾನದನ್ನು ಒಪ್ಪಿ, ಬಹು ಹುಷಾರಿಯಿಂದ ಆ ಪ್ರಶ್ನೆಯನ್ನು ಪರಿಶೀಲಿಸಿದೆ. ಕೆಲ ವಿಷಯಗಳಿಗೆ ಸಂಬಂಧಿಸಿದಂತಹ ವೈಯಕ್ತಿಕ ಕಾನೂನುಗಳ ನಿರ್ಧಾರವನ್ನು ಸಂಪ್ರದಾಯ ಕಾನೂನು ನಿರ್ವಹಿಸುತ್ತದೆಂದು ಪಂಜಾಬ ಕಾನೂನು ತೋರಿಸುತ್ತದೆ. ಆದರೆ ನನಗೂ ಮತ್ತು ನನ್ನ ಸ್ನೇಹಿತರಾದ ಠಾಕೂರ್ ದಾಸ್ ಭಾರ್ಗವ ಅವರಿಗೂ ಗೊತ್ತಿದೆ – ಸಂಪ್ರದಾಯ ಕಾನೂನು, ನಿಜಕ್ಕೂ ಹಿಂದೂ ಕಾನೂನು ಎಂಬುದು. ಇದನ್ನು ಹಿಂದೂ ಕಾನೂನು ಎಂದು ಯಾಕೆ ಕರೆಯಲಿಲ್ಲವೆಂಬುದರ ಕಾರಣ, ಇದೇ ರೀತಿಯ ಸಂಪ್ರದಾಯ ಕಾನೂನೊಂದು ಮುಸ್ಲಿಂರಲ್ಲೂ ಅಸ್ತಿತ್ವದಲ್ಲಿದ್ದು. ಈಸ್ಟ್ ಇಂಡಿಯಾ ಕಂಪನಿಯು ಯಾವಾಗ ಇದನ್ನು ಮುಸ್ಲಿಂರಿಗೂ ಅನ್ವಯಿಸಿತೋ ಆಗ ಇದನ್ನು "ಹಿಂದೂ ಕಾನೂನು" ಎಂಬ ಶಬ್ದದಿಂದ ಹೆಸರಿಸಲು ಹೆದರಿತು. ಇದೆಲ್ಲಾ ಶಬ್ದಗಳ ನಡುವೆ ಇರುವ ವ್ಯತ್ಯಾಸವಷ್ಟೆ. ಹಿಂದೂ ಕಾನೂನಿನಡಿಯಲ್ಲಿ ಪಂಜಾಬ್ ಇರಲಿಲ್ಲವೆಂದು ಹೇಳಲಾಗದು. ಹಿಂದೂ ಕಾನೂನಿಂದಲೇ ಪಂಜಾಬ್ ನಡೆಸಲ್ಪಟ್ಟಿದೆ.

ಅವರ ಇನ್ನೊಂದು ದೊಡ್ಡ ಪ್ರಶ್ನೆಯೆಂದರೆ, ಪ್ರಾಂತ್ಯದಲ್ಲಿರುವ ಸಾಂಪ್ರದಾಯಿಕ ಕಾನೂನುಗಳಿಗೆ ನಾನು ಕೊಡಲಿ ಏಟು ಹಾಕುತ್ತಿರುವೆನೆಂಬುದು. ಸರಿ ನನ್ನ ಸ್ನೇಹಿತರಾದ ಪಂಡಿತ ಠಾಕೂರ ದಾಸ್ ಭಾರ್ಗವ ಮತ್ತು ಸರ್ದಾರ್ ಹುಕುಂ ಸಿಂಗ್ ಅವರು ಹೇಳಿದ ಉದಾಹರಣೆಗಳನ್ನೆಲ್ಲಾ ನಾನು ಕೇಳಿದೆ. ಆದರೆ ಈ ಸಂಪ್ರದಾಯ ಕಾನೂನುಗಳು ನಿಜಕ್ಕೂ ಯಾವ ರೀತಿಯಲ್ಲೂ ಮನದಟ್ಟು ಆಗುವಂತಿಲ್ಲವೆಂದು ನನಗನಿಸಿತು. ನಾನು ಅವರ ಮದುವೆ ಕಾನೂನುಗಳು ಮದುವೆಯನ್ನು ಸುಲಭಗೊಳಿಸುತ್ತವೆ, ಅವರ ವಿಚ್ಛೇದನ ಕಾನೂನುಗಳು ವಿಚ್ಛೇದನಗಳನ್ನು ಸುಲಭಗೊಳಿಸುತ್ತವೆ, ಅವರ ಪಿತ್ರಾರ್ಜಿತ ಕಾನೂನುಗಳು ಪಿತ್ರಾರ್ಜಿತ ವಿಷಯವನ್ನು ಸುಲಭಗೊಳಿಸಿವೆ ಎಂದಷ್ಟೇ ಹೇಳಬಲ್ಲೆ. ಎಷ್ಟರಮಟ್ಟಿಗೆ ಸಾಂಪ್ರದಾಯಿಕ ಕಾನೂನುಗಳನ್ನು ರಕ್ಷಿಸಬಹುದು, ಯಾವ ಹಂತದವರೆಗೆ ಪಂಜಾಬನ್ನು ಅದರಿಂದ ಹೊರಗುಳಿಸಬಹುದು

ಎಂಬುದರ ಬಗ್ಗೆ ನಾನು ಈ ಸಂದರ್ಭದಲ್ಲಿ ಚರ್ಚೆ ಮಾಡಲಾರೆ. ಆದರೆ ನಾನು ಯಾವ ಪ್ರಾಂತ್ಯವನ್ನೂ ಈ ಮಸೂದೆಯ ಕಾರ್ಯಾಚರಣೆಯ ವ್ಯಾಪ್ತಿಯಿಂದ ಹೊರಗಿಡುವ ವಿನಾಯಿತಿಯನ್ನು ಒಪ್ಪಲಾರೆ ಎಂಬ ಹೇಳಿಕೆಯನ್ನು ಮಾಡುತ್ತೇನೆ. ಇಡೀ ಭಾರತಕ್ಕೆ ಅನ್ವಯವಾಗುವಂತಹ ಏಕರೂಪ ಸಂಹಿತೆಯು ಹಿಂದೂ ಮಸೂದೆಯಾಗಿದೆ ಎಂಬುದರ ಬಗ್ಗೆ ಯಾವ ಸಂಶಯವೂ ಇರದಿರಲಿ. ಅದೇ ಸ್ವರೂಪದಲ್ಲಿ ನಾನು ಆ ಮಸೂದೆಯನ್ನು ಇರಬೇಕೆನ್ನುತ್ತೇನೆ. ಇಲ್ಲವಾದರೆ ಅದನ್ನು ಹೊಂದುವುದು ಬೇಡ. ಸಂಪ್ರದಾಯ ಕಾನೂನನ್ನು ರಕ್ಷಿಸುವ ಕುರಿತಾಗಿರುವ ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಕಾಯ್ದೆಯ ವಿವಿಧ ಕಲಮುಗಳ ಸಂದರ್ಭದಲ್ಲಿ ಅವರು ಈ ಪ್ರಶ್ನೆಯನ್ನು ಪ್ರಸ್ತಾಪಿಸಿ, ಎಲ್ಲಿ ಅವರು ಸಂಪ್ರದಾಯ ಕಾನೂನು ತೆಗೆದು ಹಾಕುವ ಸಂದರ್ಭದಲ್ಲಿ ಏನಾದರೂ ತೊಡಕು ಕಾಣಿಸಿಕೊಂಡರೂ ನಾನದನ್ನು ಅತ್ಯಂತ ಕಳಕಳಿಯಿಂದ ನೋಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೂ ಮಸೂದೆಯನ್ನು ಎಷ್ಟು ಸುಲಭಗೊಳಿಸಲು ಸಾಧ್ಯವೋ ಅಷ್ಟನ್ನು ಮಾಡಲು ನಾನು ಇಷ್ಟಪಡುತ್ತೇನೆ.

**ಶ್ರೀ ತ್ಯಾಗಿ :** ಪಂಜಾಬಿನಲ್ಲಿರುವ ವಿವಾಹ!

**ಡಾ. ಅಂಬೇಡ್ಕರ್ :** ಸುಲಭ ಎಂದದ್ದು, ಹಿಂದೂ ಮಸೂದೆಯ ವಿರುದ್ಧವಾಗಲಿ, ಅಥವಾ ಅದರ ವಿರುದ್ಧ ಎದ್ದಿರುವ ಪಂಗಡದ ಯಾವುದೇ ದ್ವೇಷವನ್ನು ನಾನು ಬಯಸುವುದಿಲ್ಲ ಎನ್ನುವ ಅರ್ಥವಲ್ಲ.

ನನ್ನ ಮಾನ್ಯ ಸ್ನೇಹಿತರು ಕಲಮು ೪ನ್ನು ಗಮನಿಸಿದರೆ, ಅದು ಸಂಪ್ರದಾಯಗಳನ್ನು ಹೊರದಬ್ಬುವ ರೀತಿಯಲ್ಲಿ ಇಲ್ಲ ಎನ್ನುವುದು ತಿಳಿಯುತ್ತದೆ, ಆದ್ದರಿಂದ ಯಾವುದೇ ಕಲಮು ಪರಿಗಣನೆಗೆ ಬಂದಾಗ, ನನ್ನ ಸ್ನೇಹಿತರು ಅಂಥ ಕಲಮಿನ ಜಾರಿಯಿಂದ ಪಂಜಾಬಿನಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯವನ್ನು ರಕ್ಷಿಸಬೇಕೆಂದು ಕೇಳಿದರೆ ಮತ್ತು ಸರಳ ವಿನಾಯಿತಿ ಬಯಸಿದರೆ, ಖಂಡಿತ ನಾನು ಅದನ್ನು ಕರುಣೆಯಿಂದ ಪರಿಗಣನೆಗೆ ತೆಗೆದುಕೊಳ್ಳುತ್ತೇನೆ ಎಂಬುದರ ಬಗ್ಗೆ ನನಗಾವ ಸಂಶಯವೂ ಇಲ್ಲ. ಇದಕ್ಕಿಂತ ಹೆಚ್ಚಿನ ವಿವರಣೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಾರೆ, ಏಕೆಂದರೆ ಅದು ಪ್ರಸ್ತುತ ಕಲಮಿನ ವ್ಯಾಪ್ತಿಯಾಚೆಗಿನದು.

*ಶ್ರೀ **ಆರ್.ಕೆ. ಚೌಧರಿ :** ಮೇಲೆದ್ದರು.

**ಶ್ರೀ ರಾಜ ಬಹುದ್ದೂರು :** ತಿದ್ದುಪಡಿಗಳ ಮೇಲೆ ಮಾತಾಡುವ ಜನ ಇನ್ನೂ ಎಷ್ಟಿದ್ದಾರೆಂಬುದನ್ನು ನಾನು ತಿಳಿಯಬಹುದೆ?

**ಡಾ. ಅಂಬೇಡ್ಕರ್ :** ಈ ಕಲಮನ್ನು ಇವೊತ್ತು ಮುಗಿಸಿಬಿಡೋಣ ಎಂಬುದು ನನ್ನ ಸಲಹೆ. ಅದರ ಮೇಲೆ ಎರಡು ದಿನ ಕಳೆದಿದ್ದೇವೆ. ಅದರ ಮೇಲೆ ಬೇಕಾದಷ್ಟು ಚರ್ಚೆ ನಡೆದಿದೆ.

**ಶ್ರೀ ಅರ್.ಕೆ ಚೌಧರಿ :** ಈ ಕಾಯ್ದೆ ಮಾಡುವ ವಿಷಯದಲ್ಲಿ ನನ್ನನ್ನು ಏಕಾಂಗಿ ಮಾಡಲಾಗಿದೆಯೆಂದು ನಾನು ಹೇಳಿಕೊಳ್ಳುತ್ತಿರುವೆ.

**ಶ್ರೀ ಶ್ಯಾಮನಂದನ ಸಹಾಯ್ :** ಮಾನ್ಯ ಸದಸ್ಯರು ಮುಂದಿನ ಬೆಂಚ್‌ಗೆ ಬಂದು ಮಾತಾಡಬಹುದು.

**ಶ್ರೀ ಆರ್.ಕೆ. ಚೌಧರಿ :** ನಾಳೆ ಪ್ರಶ್ನೋತ್ತರ ವೇಳೆಯಲ್ಲಿ ನನಗೆ ಅಲ್ಲಿ ಕೂಡಲು ಅವಕಾಶ ಕೊಡುತ್ತೀರಾ?

ಈ ಸದನದಲ್ಲಿ ನನ್ನನ್ನ ಮೂಲೆಗೆ ತಳ್ಳಲಾಗಿದೆ ಎಂದು ನಾನು ನಿವೇದಿಸುತ್ತೇನೆ. ಈ ವಸ್ತು ಸ್ಥಿತಿಯನ್ನು ಅಂದರೆ ಸಂಪೂರ್ಣವಾಗಿ ನನ್ನನ್ನು ಸದನದಲ್ಲಿ ಏಕಾಂಗಿಯಾಗಿ ಮಾಡಿದ್ದನ್ನು ಮಾನ್ಯ ಕಾನೂನು ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ. ನನಗೊದಗಿದ ಪರಿಸ್ಥಿತಿಯ ಬಗ್ಗೆ

* ೧೯೫೧ನೇ ಫೆಬ್ರವರಿ ೬ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೭೩–೮೩

ನನಗೆ ವಿಷಾದವೂ ಇಲ್ಲ. ಈ ಸದನದಲ್ಲಿರುವ ಮಹಿಳಾ ಸದಸ್ಯರು, ತಾವು ಬಾರಿ ಜಗಳಗಂಟರೆಂಬುದನ್ನು ಸಾಬೀತುಮಾಡಲು ಹೊರಟಿದ್ದಾರೆಂಬ ಸತ್ಯವನ್ನು ಆ ಮಹಿಳಾ ಸದಸ್ಯರಿಗೆ ಹೇಳಲು ಈ ಸದನದ ಸದಸ್ಯರು ಹೆದರುತ್ತಿದ್ದಾರೆಂದು ನನಗೆ ತೋರುತ್ತಿದೆ. ಈ ವಿಷಯವು ನಗುವಂತಹದ್ದಲ್ಲ ಎಂದು ನಾನು ಗೌರವದಿಂದ ಹೇಳುತ್ತೇನೆ. ನಿನ್ನೆ ನನ್ನ ಸ್ನೇಹಿತರಾದ ಗೌರವಾನ್ವಿತ ಬಾಬು ನಾರಾಯಣ ಸಿಂಗ್ ತಮ್ಮ ಆಸನವನ್ನು ಮುರಿದು ಹಾಕಿದ್ದನ್ನು ಸದನದ ಮಾನ್ಯ ಸದಸ್ಯರು ಗಮನಿಸಿರಬೇಕು. ಇದೆಲ್ಲಾ ಒಬ್ಬ ನಿರ್ದಯಿ ಮಹಿಳಾ ಸದಸ್ಯರ ಸಲುವಾಗಿಯೇ ನನ್ನ ಗೌರವಾನ್ವಿತ ಸದಸ್ಯರು ತಮ್ಮ ಆಸನಕ್ಕೆ ಈ ದಾರಿ ತೋರಿದ್ದು.

ಮಾನ್ಯರೇ, ಮಹಿಳೆಯರ ಈ ಕಲಹ ಗುಣದ ವಿರುದ್ಧ ನಾನು ಸದನಕ್ಕೆ ಎಚ್ಚರಿಕೆ ನೀಡುತ್ತಿದ್ದೇನೆ. ನಾವು ಮಾತಾಡಲು ಇದೇ ತಕ್ಕ ಸಮಯ. ಯಾರ ಸಲುವಾಗಿ ಹಿಂದೂ ಮಸೂದೆಯನ್ನು ತರುತ್ತಿದ್ದಾರೆ ಮತ್ತು ಹಿಂದೂ ಸಮಾಜದ ಬಹುಸಂಖ್ಯಾತರ ಆಸೆಆಕಾಂಕ್ಷೆಗಳ ವಿರುದ್ಧ ಅದನ್ನು ತಳ್ಳಲು ಮತ್ತು ಚರ್ಚಿಸಲು ಯಾರು ಬಯಸುತ್ತಿದ್ದಾರೆಂದು ನಾನು ಮಾನ್ಯ ಕಾನೂನು ಮಂತ್ರಿಗಳನ್ನು ಕೇಳಬಯಸುತ್ತೇನೆ. ಹೀಗೆ ಮಾಡಬೇಕೆಂದು ಈ ಸದನದ ಮಹಿಳಾ ಸದಸ್ಯರು ಅವರಿಗೇನಾದರೂ ಹುರಿದಂಬಿಸುತ್ತಿದ್ದಾರೆಯೇ?

ಆದರೂ ಈ ವಿಪತ್ತಿಗೆ ಮಾನ್ಯ ಮಂತ್ರಿಗಳೊಬ್ಬರು ಕಾರಣವೆಂದು ನಾನು ಹೇಳಲಾರೆ. ಆಯ್ಕೆ ಸಮಿತಿಯ ವರದಿಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಸದನದಲ್ಲಿದ್ದ ಒಬ್ಬ ಸದಸ್ಯರು ತಮ್ಮ ಸಂಗಾತಿಯ ಬಗ್ಗೆ ಅನುಸರಿಸಿದ ಧೋರಣೆಯೊಂದನ್ನು ಗೌರವಾನ್ವಿತ ಆಚಾರ್ಯ ಕೃಪಲಾನಿಯವರು ಹೇಳಿದ್ದನ್ನು ಸದನವು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. "ನಾನು ದಿಟ್ಟತನದಿಂದ ಮಾತಾಡುತ್ತಿದ್ದೇನೆ ಏಕೆಂದರೆ ನನ್ನ "ಸಂಗಾತಿ" ವಿದೇಶಕ್ಕೆ ಹೋಗಿದ್ದಾಳೆ, ಆಕೆ ಮರಳಿಬಂದ ಮೇಲೆ ಮನೆಯ ಗೃಹಕೃತ್ಯದ ಹಣಕಾಸನ್ನು ವಿಚಾರಿಸಬಹುದು ಹಾಗೂ ಅವಳ ಗೈರುಹಾಜರಿಯ ಸಂದರ್ಭದಲ್ಲಿ ನನ್ನ ನಡತೆಯನ್ನು ವಿಚಾರಿಸಬಹುದೆಂದು" ಹೇಳಿದ್ದರು.

ಇದು ಈಗ ನಾವು ಎಲ್ಲಿದ್ದೇವೆ ಎಂಬುದನ್ನು ತೋರಿಸುತ್ತದೆ– ಈ ಕಾರಣಕ್ಕಾಗಿಯೇ, ಸರಿಯಾಗಿ ಬಟ್ಟೆಯನ್ನೂ ಧರಿಸಲುಬಾರದ, ಅತಿ ಹಿಂದುಳಿದ ಮಹಿಳೆಯರ ಭಾವನೆಗಳನ್ನು ದೂರೀಕರಿಸಲು ತಾವು ಸಿದ್ಧವಾಗಿದ್ದೀರಾ, ಆ ಮಹಿಳೆಯರಿಗೆ ಉಡಲು ಕಣ್ಣಿಗೆ ಕುಕ್ಕುವಂತಹ ವೈಯಾರದ ಸೀರೆಗಳಿಲ್ಲ, ಅವರಿಗೆ ತಮ್ಮನ್ನು ತಾವು ಶೃಂಗರಿಸಿಕೊಳ್ಳಬೇಕೆಂಬುದು ತಿಳಿದಿಲ್ಲ– ಈ ದಿನ ನೀವು ಹೀಗೆ ಮಾಡುವ ಮೂಲಕ ಅಂತಹ ಹಿಂದೂ ಮಹಿಳಾವರ್ಗವನ್ನು ಹತ್ತಿಕ್ಕಲು ಹೊರಟಿರುವಿರಾ?

**ಮಾನ್ಯ ಸದಸ್ಯರೊಬ್ಬರು :** ಇದೆಲ್ಲಾ ಕಲಮು ೨ರಲ್ಲಿ ಇದೆಯೆ?

**ಶ್ರೀ ಆರ್.ಕೆ. ಚೌಧರಿ :** ನನ್ನ ಸ್ನೇಹಿತರಾದ ಜಸ್ಪತ್ ರಾಯ್ ಕಪೂರ್ ತಿದ್ದುಪಡಿ ಹೊರತುಪಡಿಸಿ, ನನ್ನ ಸ್ನೇಹಿತರಾದ ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳನ್ನೊಳಗೊಂಡಂತೆ ನಾನು ಎಲ್ಲವನ್ನು ವಿರೋಧಿಸುತ್ತೇನೆಂದು ಈ ಮೂಲಕ ಸ್ಪಷ್ಟಪಡಿಸುತ್ತೇನೆ. ನಾನು ತಿದ್ದುಪಡಿಯೊಂದನ್ನು ಬೆಂಬಲಿಸುತ್ತಿರುವ ಕಾರಣ ಅದೂ ಹಿಂದೂ ಮಸೂದೆಯನ್ನು ಸಮವಾಗಿ ವಿರೋಧಿಸುವ ಹಾಗಿದೆ ಎಂಬುದಕ್ಕೆ. ಇದು ಹಿಂದೂ ಮಸೂದೆಯನ್ನು ಜೀವರಹಿತ ಕಾಗದವನ್ನಾಗಿ ಮಾಡುತ್ತದೆ ಹಾಗೂ ಯಾರು ಹಿಂದೂ ಮಸೂದೆ ನಮಗೆ ಅನ್ವಯವಾಗಲಿ ಎಂದು ಮುಂದೆ ಬಂದು ಬಹಿರಂಗವಾಗಿ ಘೋಷಿಸಿಕೊಳ್ಳುತ್ತಾರೊ ಅವರಿಗೆ ಮಾತ್ರ ಹಿಂದೂ ಮಸೂದೆ ಅನ್ವಯವಾಗುವಂತೆ ಈ ತಿದ್ದುಪಡಿ ಮಾಡುತ್ತದೆ.

**ಶ್ರೀ ಜೆ.ಆರ್. ಕಪೂರ್ :** "ನನ್ನ ಬೆಂಬಲಿಗರಿಂದ ನನ್ನನ್ನು ರಕ್ಷಿಸಿ" ಎಂದು ಉದ್ಗರಿಸುವ ಇಚ್ಛೆಯಾಗುತ್ತಿದೆ.

**ಶ್ರೀ ಆರ್.ಕೆ. ಚೌಧರಿ :** ನೀವು ಕಂಬಳಿಯನ್ನು ತೆಗೆದಿರಿಸಿದರೂ, ಕಂಬಳಿಯು ನಿಮ್ಮನ್ನು

ಬಿಡುವುದಿಲ್ಲವೆಂದು ಸ್ನೇಹಿತರಾದ ಕಪೂರ್ ಅವರಿಗೆ ನಾನು ಹೇಳಬಹುದು. ಹಿಂದೂ ಮಸೂದೆ ಮೇಲೆ ನಡೆಯುವ ಚರ್ಚೆಯ ಅಂತಿಮ ಹಂತದವರೆಗೂ, ಅವರು ಎಲ್ಲೆಲ್ಲಿ ಹೋಗುತ್ತಾರೋ, ಅಲ್ಲೆಲ್ಲಾ ನಾನು ಅವರನ್ನು ಹಿಂಬಾಲಿಸುತ್ತೇನೆ. ಮಾನ್ಯ ಸ್ನೇಹಿತರಾದ ಕಪೂರ್ ಅವರ ತಿದ್ದುಪಡಿಯನ್ನು ಕುರಿತು ಚರ್ಚಿಸಿದರೆ, ನಿಜಕ್ಕೂ ನಾವು ಈಗ ಎಲ್ಲಿದ್ದೇವೋ ಆ ಪರಿಸ್ಥಿತಿಗೆ ಬರುತ್ತೇವೆ. ಈ ಹಿಂದೂ ಮಸೂದೆಯು ಹೆಚ್ಚು ಕಮ್ಮಿ ವಿಶೇಷ ಹಿಂದೂ ವಿವಾಹ ಕಾಯ್ದೆಯಂತಿದೆ. ಅದು ಕೆಲ ವಿಷಯಗಳಲ್ಲಿ ಹಾಗೆಯೇ ಇದೆ. ನಾಗರಿಕ ವಿವಾಹ ಕಾನೂನು ಬಯಸುವ ಪ್ರಮಾಣವನ್ನು ವ್ಯಕ್ತಿಯೊಬ್ಬ ಮಾಡಿದಲ್ಲಿ ಆ ಹಿಂದೂವು ನಿಷೇಧಾತ್ಮಕ ಅಂಶಗಳೊಳಗೆ, ಈಗಲೂ ಕೂಡ ಅವನು ವಿವಾಹವಾಗಬಹುದು. ಅದೇ ರೀತಿ ಈ ಹಿಂದೂ ಮಸೂದೆ ಕೂಡ, ಯಾರು ಇದರಿಂದ ಆಳಲ್ಪಡಬೇಕೆಂದು ಬಯಸಿ ಹೇಳಿಕೆ ನೀಡುತ್ತಾರೋ ಅಂಥವರನ್ನು ಮಾತ್ರ ಇದು ಆಳುತ್ತದೆಯಾದರೂ, ನನ್ನ ಸ್ನೇಹಿತರಾದ ಶ್ರೀ ಕಪೂರ್ ಸಲಹೆ ಮಾಡಿದಂತೆ. ಎರಡರಲ್ಲಿ ಮೂರು ಭಾಗ–ಎರಡರಲ್ಲಿ ಮೂರು ಭಾಗವೇಕೆ, ನೂರಕ್ಕೆ ನೂರರಷ್ಟು ಮಂದಿ, ಮುಂದೆ ಬಂದು ಹೇಳಿಕೆ ನೀಡಲು ನಿರಾಕರಿಸುತ್ತಾರೆಂದು ನಾನು ನಂಬಿದ್ದೇನೆ. ವಾಸ್ತವವಾಗಿ ಇದರ ಅರ್ಥವೇನೆಂದರೆ, ಈ ಮಸೂದೆಯನ್ನು ಕೈಬಿಟ್ಟು ಈಗ ನಮಗೆ ಅನ್ವಯಿಸುತ್ತಿರುವ ಹಿಂದೂ ಕಾನೂನೇ ಮುಂದುವರೆಯುತ್ತದೆ.

ಪಂಜಾಬಿನ ಸಂಪ್ರದಾಯ ಕಾನೂನನ್ನು ಹೊಂದಲು ನಾನು ಬಹಳ ಆಸಕ್ತಿ ಹೊಂದಿದ್ದೇನೆ. ಪಂಜಾಬ್ ಸಂಪ್ರದಾಯ ಕಾನೂನನ್ನು ಸದನದಲ್ಲಿ ಮಂಡಿಸಿ ಉಲ್ಲೇಖಿಸುವವರು ನನ್ನ ಸ್ನೇಹಿತರಾದ ಮಾನ್ಯ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರು. ಅದು ದ್ವಿಪತ್ನಿತ್ವವನ್ನು ವಿರೋಧಿಸುವುದಿಲ್ಲ. ಹಿಂದೂ ಮಸೂದೆಯಿಂದ ಸಂಪೂರ್ಣವಾಗಿ ಪಂಜಾಬ್ ಅನ್ನು ಮುಕ್ತಗೊಳಿಸಬೇಕು ಎಂದು ನನ್ನ ಸ್ನೇಹಿತರಾದ ಪಂಡಿತ ಠಾಕೂರ್ ದಾಸ್ ಭಾರ್ಗವ ಬಯಸುತ್ತಾರೆ. ಹಿಂದೂ ಮಸೂದೆಯನ್ನು ದೇಶದ ಉಳಿದ ಭಾಗದ ಮೇಲೆ ಹೇರಬಹುದು, ಆದರೆ ಪಂಜಾಬ್‌ಗಲ್ಲ,– ಅಂದರೆ ದ್ವಿಪತ್ನಿ ಪದ್ಧತಿಯು ಭಾರತದಲ್ಲಿ ಅಪರಾಧ, ಆದರೆ ಪಂಜಾಬಿನಲ್ಲಿ ಇದು ಅಪರಾಧವಲ್ಲ ಮತ್ತು ನನ್ನ ಸ್ನೇಹಿತರು ತಮಗೆ ಇಚ್ಛೆ ಬಂದಂತೆ ಆನಂದಮಯವಾಗಿ ಮುಂದುವರೆಯಬಹುದು. ಇದು ನನಗೆ ಅರ್ಥವಾಗುವುದಿಲ್ಲ. ಈ ಸ್ಥಿತಿಯನ್ನು ನನ್ನ ಸ್ನೇಹಿತರಾದ ಡಾ.ಅಂಬೇಡ್ಕರ್ ಅವರು ವಿವರಿಸಬಹುದೆಂದು ನಾನಾದರೂ ಆಶಿಸುತ್ತೇನೆ. ಇದು ಹೀಗಿದೆ: ಯಾವಾಗ ಸಂಪ್ರದಾಯವು ಕಾನೂನಿನ ಬಲ ಪಡೆಯುತ್ತದೆಯೋ ಆಗ ಆ ಸಂಪ್ರದಾಯವು ಅಚಂಚಲವಾಗುತ್ತದೆ. ಯಾವ ಕಾಯ್ದೆಯೂ ಅವರ ಮೇಲೆ ದಬ್ಬಾಳಿಕೆ ನಡೆಸದು. ಸಾಮಾನ್ಯವಾಗಿ, ಯಾವುದೇ ಸಂಪ್ರದಾಯವನ್ನು ನೀವು ಸಿದ್ಧಮಾಡಿ ತೋರುವಾಗ, ಆ ಸಂಪ್ರದಾಯವು ಬದಲಾಗದೆಂದು ಹೇಳುವ ಹೊಣೆಯನ್ನು ನೀವು ಹೊರಬೇಕಾಗುತ್ತದೆ. ಅಂದರೆ ಸಂಪ್ರದಾಯವು ಅನೈತಿಕವಾದುದಲ್ಲ, ಮತ್ತು ಆ ಸಂಪ್ರದಾಯವನ್ನು ಆಚರಿಸಲಾಗುತ್ತದೆ ಎಂಬುದನ್ನು ಸಿದ್ಧಮಾಡಬೇಕಾಗುತ್ತದೆ. ಯಾವಾಗ ಟಾಟ್ ಸಂಪ್ರದಾಯವನ್ನು ಒಂದು ಕಾಯ್ದೆ ರೂಪದಲ್ಲಿ ಮಾಡಲಾಯಿತೋ, ಅದು ಕೆಲಕಾಲ ಕಾರ್ಯಾಚರಣೆಯಲ್ಲಿದ್ದು, ಯಾವಾಗ ಆ ಸಂಪ್ರದಾಯ ನಶಿಸದೆ ಉಳಿಯಿತೋ, ಆಗ ಅದನ್ನು ಅಧಿಕೃತಗೊಳಿಸಲಾಯಿತು. ಈ ಮಸೂದೆಯಿಂದ ಎಲ್ಲಾ ಕಾನೂನುಗಳನ್ನು ತೆಗೆದುಹಾಕಲಾಗುವುದೆಂದು ಸ್ಪಷ್ಟವಾಗಿ ಹೇಳದ ಹೊರತು, ಈ ಮಸೂದೆಯೊಳಗಿನ ಅವಕಾಶಗಳು ಅದು ಹೇಗೆ ಸಂಪ್ರದಾಯ ಕಾನೂನುಗಳಿಗೆ ಒಳಕ್ಕೆ ತಲೆಹಾಕುತ್ತವೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಹಿಂದೂ ಮಸೂದೆಯನ್ನು ವಿವರವಾಗಿ ಓದದೇ ಇರಬಹುದು. ಆದರೆ, ಪಂಜಾಬಿನ ಸಂಪ್ರದಾಯ ಕಾನೂನುಗಳನ್ನು ತೆಗೆದುಹಾಕುವಂತಹ ಅವಕಾಶಗಳು ಈ ಮಸೂದೆಯೊಳಗಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಹಾಗೆ ತೆಗೆದುಹಾಕದ ಸ್ಥಿತಿ

ಉಳಿದರೆ ಈ ದೇಶದಲ್ಲಿ ನೀವು ಅಸ್ಥಿರ ಕಾಯ್ದೆಗಳನ್ನು ಹೊಂದುತ್ತೀರಿ. ಇಡೀ ಭಾರತದ ಹಿಂದೂಗಳು ಹಿಂದೂ ಮಸೂದೆಯಡಿಯಲ್ಲಿ ಬರುತ್ತಾರೆ. ಆದರೆ ಪಂಜಾಬಿನಂತಹ ಪ್ರಾಂತಗಳು, ಎಲ್ಲಿ ಸಂಪ್ರದಾಯ ಕಾನೂನುಗಳನ್ನು ಸಂಹಿತಗೊಳಿಸಿ, ಜಾರಿಗೊಳಿಸಲಾಗಿದೆಯೋ, ಅವು ಈ ಮಸೂದೆಯ ಪ್ರಭಾವಕ್ಕೆ ಸಿಕ್ಕುವುದಿಲ್ಲ. ಪಂಜಾಬಿನಲ್ಲಿರುವ ಹಿಂದೂಗಳು ದ್ವಿಪತ್ನಿತ್ವ ವಿವಾಹವಾಗಲು ಮತ್ತು ಪಂಜಾಬಿನಲ್ಲಿ ಯಾವುದೇ ರೀತಿಯ ವಿಚ್ಛೇದನಗಳು ಇರದಿರಲು, ಪಂಜಾಬಿನಲ್ಲಿರುವ ಸಹೋದರಿಯರು, ನನ್ನ ಭಾಷೆಯಲ್ಲಿ ಅವರ ಭಾಷೆಯಲ್ಲಿ **"ಹಿಂಸೆಗೆ"** ಒಳಗಾಗಲು ಈ ಸದನದೊಳಗಿರುವ ಮಾನ್ಯ ಮಹಿಳಾ ಸದಸ್ಯರು ಅವಕಾಶ ಮಾಡಿಕೊಡುವರೇ ಎಂದು ನಾನು ಅವರನ್ನು ಕೇಳುತ್ತೇನೆ. ನನ್ನ ಪ್ರಕಾರ ಯಾವ ಮಹಿಳೆಯರೂ ದಂಡನೆಗೆ ಒಳಗಾಗಬಾರದು. ಮಹಿಳೆಯರನ್ನು ಶಿಕ್ಷಿಸುವ ದಿನಗಳು ಕಾಣೆಯಾದವು. ಈಗೇನಿದ್ದರೂ ಹೆಂಗಸರ ಬಲಾತ್ಕಾರದಿಂದ ಗಂಡಸರು ಶಿಕ್ಷೆಗೆ ಒಳಪಡುತ್ತಿದ್ದಾರೆ. ಈ ಸದನದ ಯಾರಾದರೊಬ್ಬ ಸದಸ್ಯ ಆಧುನಿಕ ಹೆಂಗಸರ ಬಲಾತ್ಕಾರ ಕುರಿತು ಧೈರ್ಯದಿಂದ ಸ್ಪಷ್ಟವಾಗಿ ಮಾತಾಡಬಲ್ಲನೆ?

ಆದ್ದರಿಂದ, ಈ ಕಾಯ್ದೆಯ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವ ಮೊದಲು ಸಾವಧಾನದಿಂದ ಪರೀಕ್ಷಿಸಲು ಈ ಸದನವನ್ನು ನಾನು ಕೇಳಿಕೊಳ್ಳುತ್ತೇನೆ. ದೂರಗಾಮಿ ಪರಿಣಾಮ ಬೀರುವಂತಹ ಇಂಥ ಕಾಯ್ದೆಯನ್ನು ಅವಸರದಿಂದ ಬೆಂಬಲಿಸುವ ಮತಗಣನೆಯನ್ನು ಈ ಸದನವು ಪಡೆದಿಲ್ಲವೆಂದು, ಈ ಸದನದ ಸದಸ್ಯರು ನೆನಪಿಡಬೇಕಿದೆ. ನಮ್ಮ ಚುನಾವಣೆಗಳು ಅಪ್ರತ್ಯಕ್ಷ ರೀತಿಯಲ್ಲಿ ನಡೆಯುತ್ತವೆ. ನನ್ನ ಸ್ನೇಹಿತರಾದ ಮಾನ್ಯ ನಜೀರುದ್ದೀನ್ ಅಹ್ಮದ್ ಏನು ಹೇಳಿದ್ದರೋ ಅದನ್ನು ನಾನು ಮತ್ತೊಮ್ಮೆ ಹೇಳುವೆ. ಈ ಕಾಯ್ದೆಯನ್ನು ಪಾಸು ಮಾಡಲಾರದಷ್ಟು ಅಸಮರ್ಥರು ನಾವಲ್ಲ. ಇವೊತ್ತು ಯಾವುದೇ ಕಾಯ್ದೆಯನ್ನು ಪಾಸು ಮಾಡುವಷ್ಟು ಸಾಮರ್ಥ್ಯ ನಮ್ಮಲ್ಲಿದೆ. ಈಗಿರುವ ಯಾವುದೇ ವಿವಾಹಿತ ಮಹಿಳೆಯನ್ನು ಭಾರತೀಯ ವಿದೇಶಿ ಸೇವೆಗೆ ಸೇರಿಸಿಕೊಳ್ಳಬಾರದೆಂಬ ಭಾರತ ಸರ್ಕಾರ ಹೊರಡಿಸಿದ ಸಾಲ್ಯೂಟರಿ ಕಾನೂನನ್ನು ತೆಗೆದುಹಾಕಿ, ಮಹಿಳೆಯರನ್ನು ಮಾತ್ರ ಅಲ್ಲಿ ಸೇರಿಸಿಕೊಳ್ಳಬೇಕೆಂಬ ಕಾಯ್ದೆಯನ್ನು ನಾವು ಜಾರಿಮಾಡುವಂತಹ ಸಾಮರ್ಥ್ಯವನ್ನು ನಾವು ತೋರಲಿಲ್ಲವೆ' ಅದನ್ನು ಮಾಡಲು ನಾವು ಸಂಪೂರ್ಣ ಸಮರ್ಥರು. ಇಲ್ಲಿ ಅಸಮರ್ಥನೆಯ ಪ್ರಶ್ನೆಯೇ ಇಲ್ಲ. ಈಗ ಮಹಿಳೆಯರು ಪೊಲೀಸರಾಗಿ ದೊಣ್ಣೆ ಹಿಡಿಯಬಹುದು. ತಲೆಗೆ ಟೋಪಿ ಹಾಕಿ ಪೈಜಾಮು ಸಿಗಿಸಿಕೊಳ್ಳಬಹುದು. ಅವರು ಗಡ್ಡವನ್ನೂ ಧರಿಸಬಹುದು. ಪೊಲೀಸ್ ದಳದ ಸದಸ್ಯರೂ ಆಗಬಹುದು. ಇಂಥ ಒಂದು ಕಾಯ್ದೆಯನ್ನು ನಾವು ಯಾಕೆ ಅಂಗೀಕರಿಸಬಾರದು? ಹೀಗೆ ಮಾಡಲು ನಮಗೆ ಯಾವುದೂ ಅಡ್ಡಿಯಾಗದು.

**ಮಾನ್ಯ ಉಪ ಸಭಾಪತಿಗಳು :** ಈ ಚರ್ಚೆಯಡಿ ಇವೆಲ್ಲಾ ಹೇಗೆ ಬರುತ್ತವೆ?

**ಶ್ರೀ ಆರ್.ಕೆ. ಚೌಧರಿ :** ನಾನು ಕೇವಲ ಹೋಲಿಕೆಗಳನ್ನು ಕೊಡುತ್ತಿರುವೆ. ನಂತರ ನಾನು ಮುಖ್ಯವಾದ ವಿಷಯಕ್ಕೆ ಬರುತ್ತೇನೆ. ನಮ್ಮ ಮತದಾರರ ಜನಮತವನ್ನು ಪಡೆಯುವ ಯಾವ ಅವಕಾಶವೂ ನಮಗಿಲ್ಲ. ಕಾಯ್ದೆಯು ಸುತ್ತೋಲೆಯಿಂದ ಬಂದ ಅಥವಾ ಸ್ವೀಕರಿಸಿದ ಬಹುಮತದ ಅಭಿಪ್ರಾಯವನ್ನೂ ನಾವು ಕಡೆಗಣಿಸಿದ್ದೇವೆ. ಆದ್ದರಿಂದ ಈ ಕಾಯ್ದೆಯು ಎಷ್ಟರಮಟ್ಟಿಗೆ ನಮ್ಮಿಂದ ಅಂಗೀಕೃತಗೊಳ್ಳಬಹುದೆಂಬುದರ ಬಗ್ಗೆ ನಾವು ಹುಷಾರಿಯಿಂದ ಪರಿಗಣಿಸಬೇಕಿದೆ. ಈ ಕಾಯ್ದೆಯ ಮಂಜೂರಿಗೆ ಜನಮತದ ಅಂಗೀಕಾರ ಅಗತ್ಯವೆಂಬ ನನ್ನ ಸ್ನೇಹಿತ ಮಾನ್ಯ ನಜೀರುದ್ದೀನ್ ಅಹ್ಮದ್ ಅವರ ಮಾತನ್ನು ನಾನು ಒಪ್ಪುತ್ತೇನೆ. ಈಗ ಇದರ ತಾರತಮ್ಯ ಗುಣದ ಬಗ್ಗೆ ಹೇಳುವುದಾದರೆ, ಈ ಕಾಯ್ದೆಯ ಪಟ್ಟಿಯು ಒಳಗೊಂಡಿರುವ ತಾರತಮ್ಯದ ಬಗ್ಗೆ ಮತ್ತು ಸಂವಿಧಾನವು ಯಾವ ರೀತಿ ಬಿಗಿಯಾಗಿ ಬಂಧಿಸಲ್ಪಟ್ಟಿದೆ ಎಂಬುದರ ಬಗ್ಗೆ ನಿನ್ನೆ ಬಹಳಷ್ಟು

ಹೇಳಿಯಾಗಿದೆ. ನನಗೆ ಸರಿಯಾಗಿ ನೆನಪಿರುವ ಹಾಗೆ ಅಂಬೇಡ್ಕರ್ ಸ್ವತಃ ಕೆಲ ಸಂವಿಧಾನದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಬಹುದೆಂದು ಉಲ್ಲೇಖಿಸಿದ್ದರು. ಈ ಮಸೂದೆಯನ್ನು ಯಾವ ಪ್ರಕಾರ ತಿದ್ದುಪಡಿ ಮಾಡಲಾಗುತ್ತಿದೆಯೋ ಹಾಗೆಯೇ ಹಿಂದೂ ಕಾನೂನನ್ನು ತಿದ್ದುಪಡಿ ಮಾಡದೆ ಹೋದರೆ ಯಾರಾದರೂ ವ್ಯಕ್ತಿಗಳು ಸುಪ್ರಿಂಕೋರ್ಟ್ ಅಥವಾ ಹೈಕೋರ್ಟ್‌ನಲ್ಲಿ ಪ್ರಶ್ನೆ ಎತ್ತಿ, ಶೂದ್ರ ಮತ್ತು ಶೂದ್ರೇತರರ ನಡುವೆ ಹಿಂದೂ ಕಾನೂನು ತಾರತಮ್ಯ ಮಾಡುತ್ತಿದೆ ಎಂದೂ ಕೇಳಲೂಬಹುದೆಂದು ಅವರು ಹೇಳಿದ್ದರೂ ಶೂದ್ರನು ಯಾವುದೇ ವಯಸ್ಸಿನ ವ್ಯಕ್ತಿಯನ್ನು ದತ್ತು ತೆಗೆದುಕೊಳ್ಳಬಹುದು; ತನ್ನ ತೀರಾ ಹತ್ತಿರದ ಸಂಬಂಧಿಯನ್ನು ಬೇಕಾದರೂ ಶೂದ್ರನು ದತ್ತು ತೆಗೆದುಕೊಳ್ಳಬಹುದು, ಅದರೆ ಅದೇ ರೀತಿ ಬ್ರಾಹ್ಮಣನು ದತ್ತು ತೆಗೆದುಕೊಳ್ಳುವ ಹಾಗಿಲ್ಲ. ಆದ್ದರಿಂದ ಸದ್ಯದ ಹಿಂದೂ ಕಾನೂನಿನಲ್ಲಿ ತಾರತಮ್ಯತೆ ಅಡಗಿದೆ ಮತ್ತು ಎಲ್ಲಿಯವರೆಗೆ ಪ್ರಸ್ತುತ ಹಿಂದೂ ಮಸೂದೆ ಅಂಗೀಕಾರಗೊಳ್ಳುವುದಿಲ್ಲವೋ, ತಾರತಮ್ಯದ ಆಧಾರದ ಮೇಲೆ ನ್ಯಾಯಾಲಯದಲ್ಲಿ ಹಿಂದೂ ಕಾನೂನು ಟೀಕೆಗೆ ಒಳಪಡುತ್ತಲೇ ಇರುತ್ತದೆ ಎಂದು ಅವರು ಹೇಳಿದ್ದಾರೆ.

ಮಾನ್ಯರೇ, ನಾನೀಗ ಬಹು ಮುಖ್ಯವಾದ ಗಂಭೀರ ಪ್ರಶ್ನೆಗೆ ಬರುತ್ತೇನೆ. ನಾನು ಸಲಹೆ ಮಾಡುವುದೇನೆಂದರೆ, ನಾನು ಮುಂದಿಟ್ಟ ವಾದಗಳನ್ನು ನನ್ನ ಸ್ನೇಹಿತರಾದ ಶ್ರೀ ಝುಂಝುನವಾಲಾ ಮತ್ತು ನಜೀರುದ್ದೀನ್ ಅಹ್ಮದ್ ಅವರ ವಾದಗಳನ್ನು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂಬುದಾಗಿದೆ. ಸಂವಿಧಾನಕ್ಕೆ ಧಕ್ಕೆ ತರುವಂತಿರುವ ಈ ಕಾನೂನಿನ ತಾರತಮ್ಯ ಗುಣದ ಬಗೆಗಿನ ಒಂದು ಮುಖ್ಯ ಅಂಶವನ್ನೂ ಈ ಸದನದ ಗಮನಕ್ಕೆ ನಾನು ತರಬಯಸುತ್ತೇನೆ. ನಾನು ಮತ್ತು ನನ್ನ ಸ್ನೇಹಿತರಾದ ನಜೀರುದ್ದೀನ್ ಅಹ್ಮದ್ ಅವರು, ಒಂದೇ ದೋಣಿಯಲ್ಲಿ ತೇಲುತ್ತಿರುವಂತೆ ವರ್ತಿಸುತ್ತಿದ್ದೇವೆ. ಅವರಿಲ್ಲಿ ಒಂದು ಕಡೆ ಏಕಾಂಗಿಯಾಗಿದ್ದರೆ, ನಾನು ಮತ್ತೊಂದು ಕಡೆ ಏಕಾಂಗಿಯಾಗಿದ್ದೇನೆ. ದೇವರು ಕ್ಷಮಿಸಲಿ, ನನ್ನ ಸ್ನೇಹಿತರಾದ ಗೌರವಾನ್ವಿತ ನಜೀರುದ್ದೀನ್ ಅಹ್ಮದ್, ಅವರು ಇನ್ನೊಂದು ವಿವಾಹವಾಗಬಯಸಿದ್ದರೆ, ಹಿಂದೂ ಪೀನಲ್ ಮಸೂದೆ ಅಥವಾ ಹಿಂದೂ ಕಾನೂನಿನನ್ವಯ ಅವರು ಶಿಕ್ಷೆಗೆ ಅರ್ಹರಲ್ಲ. ಆದರೆ ಈ ಸದನದ ಸದಸ್ಯನಾದ ಮತ್ತು ಅವರ ಅತ್ಯಂತ ನಿಕಟವರ್ತಿಯಾದ ನಾನು ಅವರ ಉದಾಹರಣೆಯನ್ನು ಅನುಸರಿಸುವ ಧೈರ್ಯ ಮಾಡಿದರೆ, ಮತ್ತೊಂದು ವಿವಾಹವಾದರೆ ನನ್ನ ಗತಿ ಏನಾಗುತ್ತದೆ?

ನನ್ನನ್ನು ಸರಾಗವಾಗಿ ಶಿಕ್ಷೆಗೆ, ಅಪರಾಧಿಸ್ಥಾನಕ್ಕೆ, ಹಾಗೂ ದಂಡನೆಗೆ ಗುರಿಪಡಿಸಲಾಗುತ್ತದೆ. ಅಷ್ಟೇ ಅಲ್ಲ, ಜೈಲಿಗೆ ನನ್ನನ್ನು ಒಯ್ಯುವಾಗ ನನ್ನ ಗೆಳೆಯರೆ ನನ್ನನ್ನು ದೈಹಿಕವಾಗಿ ಹಲ್ಲೆಗೆ ಗುರಿ ಮಾಡಬಹುದು. ನನ್ನನ್ನು ಹಾಗೆ ಬಿಟ್ಟರೆ ನಿಮ್ಮ ವಿರುದ್ಧ ಸಾರ್ವಜನಿಕವಾಗಿ ಕೆಟ್ಟ ಅಭಿಪ್ರಾಯ ಮೂಡಬಹುದು. ಇದು ತಾರತಮ್ಯ ಅಲ್ಲವೇ? ಇದು ತಾರತಮ್ಯವಲ್ಲವಾದರೆ "ತಾರತಮ್ಯ" ಎಂಬ ಶಬ್ದದ ಅರ್ಥವನ್ನು ತಳೆಯಲು ನಾನು ವಿಫಲನಾಗಿದ್ದೇನೆ. ನಾವು ಒಂದೇ ಸಾರ್ವಭೌಮ ಅಧಿಕಾರಕ್ಕೊಳಪಟ್ಟಿದ್ದೇವೆ. ಒಂದೇ ಸಂವಿಧಾನಕ್ಕೆ ಬಾಧ್ಯಸ್ಥರಾಗಿದ್ದೇವೆ. ಒಂದೇ ಕಾಲದಲ್ಲಿ ಬದುಕುತ್ತಿದ್ದೇವೆ, ಆದರೆ ಒಬ್ಬರು ನಾಲ್ಕು ಬಾರಿಗೂ ಹೆಚ್ಚು ಮದುವೆಯಾಗುವ ಸೌಭಾಗ್ಯ ಹೊಂದಿದ್ದಾರೆ. ಒಂದಕ್ಕಿಂತ ಹೆಚ್ಚು ಮದುವೆಯಾಗುವ ಧೈರ್ಯ ನನಗಿಲ್ಲ. ಹಾಗಾದರೆ ತಾರತಮ್ಯದ ಅರ್ಥವಾದರೂ ಏನು?

**ಶ್ರೀ ತ್ಯಾಗಿ :** ದುರಾದೃಷ್ಟ.

**ಶ್ರೀ ರಾಜ ಬಹದ್ದೂರ್ :** ಒಂದು ವಿಷಯದ ಬಗ್ಗೆ ವಿವರಣೆ, ಮಾನ್ಯ ಸದಸ್ಯರು ಈಗಾಗಲೇ ಎಷ್ಟು ಬಾರಿ ವಿವಾಹವಾಗಿದ್ದಾರೆಂದು ತಿಳಿಯಬಹುದು?

**ಶ್ರೀ ಆರ್.ಕೆ. ಚೌಧರಿ :** ಅದು ವೈಯಕ್ತಿಕ ವಿಷಯ. ಉದಾಹರಣೆಗಳು ಸೋಂಕಿನಂತೆ ಇಂಥ ತಾರತಮ್ಯ ಸ್ಥಿತಿಗೆ ನನ್ನನ್ನು ದೂಡಿರುವುದು ನನ್ನ ದೌರ್ಭಾಗ್ಯ ಎಂದು ನನ್ನ ಸ್ನೇಹಿತರಾದ ಶ್ರೀ ತ್ಯಾಗಿ ಹೇಳಿದರು. ಸಂಖ್ಯಾಶಾಸ್ತ್ರದನುಗುಣವಾಗಿ ನೋಡಲಿ. ಒಮ್ಮೆ ವಿವಾಹವಾಗಿದ್ದಕ್ಕೆ ನಾನು "ದುರಾದೃಷ್ಟ" ಎಂದು ಕರೆಸಿಕೊಳ್ಳಬೇಕಾಯಿತು. ಬಹಳ ಕಾಲ ಮದುವೆಯಾಗದೇ ಉಳಿದವನನ್ನು ಕುರಿತು ನೀವು ಏನೆಂದು ಕರೆಯುವಿರೋ. ಹಿಂದೂಶಾಸ್ತ್ರವನ್ನು ಉಲ್ಲೇಖಿಸಿದ್ದಕ್ಕಾಗಿಯೇ ಮತಹಾಕುವ ರೂಪದಲ್ಲಿ ಸಹಾಯ ಮಾಡುವುದಾಗಿ ಕೆಲ ಗೌರವಾನ್ವಿತ ಸದಸ್ಯರು ಹೇಳಿದ್ದಾರೆಂದು ನಿನ್ನೆ ನಜೀರುದ್ದೀನ್ ಅಹ್ಮದ್ ಪ್ರಸ್ತಾಪಿಸಿದ್ದರು. ಹಿಂದೂಯೇತರಾಗಿದ್ದರಿಂದ ಅವರು ತಾವು ಹೇಳಬಹುದಾದ ವಿಷಯ ಕುರಿತು ಮುಜುಗರ ಮತ್ತು ಹಿಂಜರಿಕೆ ಅನುಭವಿಸಿರಬೇಕು. ನಾನು ಸ್ಪಷ್ಟವಾಗಿ ಹೇಳುತ್ತೇನೆ ಹಿಂದೂ ಮಸೂದೆಯನ್ನು ಬೆಂಬಲಿಸುತ್ತಿರುವವರ ಅವರ ಮೊದಲ ತರ್ಕ ಇದು: ಹಿಂದೂಧರ್ಮವು ಹಿಂದೂ ಕಾನೂನಿನ ಜೊತೆ ಬೆಸೆದುಕೊಂಡಿದೆ. ಅಂದರೆ ಹಿಂದೂ ಕಾನೂನಿನ ಬೇರ್ಪಡೆ ಎಂದರೆ ಅದಕ್ಕೆ ಅರ್ಥವಿಲ್ಲ. ಇಲ್ಲಿ ಇದೊಂದು ಧಾರ್ಮಿಕ ಪ್ರಶ್ನೆ. ಪುತ್ರನನ್ನು ಹೊಂದದವರು ನರಕಕ್ಕೆ ಹೋಗುತ್ತಾರೆಂದು ಎಷ್ಟು ಜನ ನಂಬುತ್ತಾರೆಂದು ಗೃಹಖಾತೆಯ ಅಧಿಕಾರ ವಹಿಸಿಕೊಂಡಿರುವ ಮಾನ್ಯ ಸಚಿವರು ಒಂದು ಸಮೀಕ್ಷೆ ಮಾಡಿನೋಡಲಿ, ಮೂರರಲ್ಲಿ ಎರಡು ಭಾಗದಷ್ಟು ಹಿಂದೂಗಳು ಇದನ್ನು ನಂಬುತ್ತಾರೆಂದು ತಿಳಿದು ಬರುತ್ತದೆ. ನಿಮಗೆ ಪುತ್ರನಿಲ್ಲವೆಂದಾದರೆ, ನೀವು ನರಕಕ್ಕೆ ಹೋಗುತ್ತೀರಿ ಎಂದು ಅವರು ನಂಬುತ್ತಾರೆ.

**ಶ್ರೀ ತ್ಯಾಗಿ :** ಅವರಿಗೆ ಪುತ್ರನಿಲ್ಲದಿದ್ದಲ್ಲಿ, ಯಾರಾದರೂ ಹೇಗೆ ಸಹಾಯ ಮಾಡಲು ಸಿದ್ಧ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಅವರೇನು ಮಾಡಬೇಕು. ಅದು ಅವರ ಕೈನಲ್ಲಿ ಇಲ್ಲ.

**ಶ್ರೀ ಆರ್.ಕೆ. ಚೌಧರಿ :** ಅಪ್ರಸ್ತುತ ಪ್ರಶ್ನೆಗಳ ಬಗ್ಗೆ ನೀವು ಸಾಗುವ ಅಗತ್ಯವಿಲ್ಲ. ನಾನು ನನ್ನ ಸ್ನೇಹಿತರಿಗೆ ಹೇಳಬಯಸುವುದೇನೆಂದರೆ ಮದುವೆಗೆ ಸಂಬಂಧಿಸಿದಂತೆ ವಯಸ್ಸಿನ ಮಿತಿ ಇಲ್ಲ. ಈ ವಿಷಯದಲ್ಲಿ ಡಾ. ಅಂಬೇಡ್ಕರ್ ದಯಾಳು, ಒಂದಕ್ಕಿಂತ ಹೆಚ್ಚು ಬಾರಿ ವಿವಾಹವಾಗಬೇಡಿ ಎಂದಷ್ಟೇ ಹೇಳಿದ್ದಾರೆ. ಡಜನ್ ಹೆಂಡತಿಯರಿಗೆ ಬೇಕಾದರೆ ವಿಚ್ಛೇದನ ಕೊಡಬಹುದು ಮತ್ತೆ ನೀವು ಮದುವೆಯಾಗಲು ಯಾವ ಅಡ್ಡಿಯೂ ಇಲ್ಲ.

**ಶ್ರೀ ತ್ಯಾಗಿ :** ಒಬ್ಬೊಬ್ಬರನ್ನಾಗಿ

**ಶ್ರೀ ಆರ್.ಕೆ. ಚೌಧರಿ :** ಒಮ್ಮೆ ಒಬ್ಬರನ್ನು ಮಾತ್ರ, ಒಬ್ಬರಿಗಿಂತ ಹೆಚ್ಚಲ್ಲ. ಅದನ್ನೇ ಇಲ್ಲಿ ದಾಖಲಿಸಲಾಗಿದೆ. ವಯಸ್ಸಿನ ಯಾವ ನಿಬಂಧನೆಯನ್ನು ಅವರು ಹಾಕಿಲ್ಲ. ಹೊಸ ಹಿಂದೂ ಮಸೂದೆಯನ್ವಯ ೮೫ ವರ್ಷದ ಮಹಿಳೆ ೨೫ ವರ್ಷದ ಹುಡುಗನನ್ನು ವಿವಾಹವಾಗಬಹುದು. ಹಿಂದೂ ಮಸೂದೆಯಲ್ಲಿ ನಾಗರಿಕ ಪ್ರಜ್ಞೆಯೇ ಇಲ್ಲ.

**ಶ್ರೀ ದೇಶಬಂಧು ಗುಪ್ತಾ(ದೆಹಲಿ) :** ತಿರುಗಮುರುಗ ಆದರೆ ಅದರ ಬಗ್ಗೆ ಏನು?

**ಶ್ರೀ ಆರ್.ಕೆ. ಚೌಧರಿ :** ಹಾಗೂ ಆಗಬಹುದು! ಮದುವೆಯಾಗಬೇಕೆನಿಸಿದಲ್ಲಿ, ಯಾವ ವಯಸ್ಸಿನಲ್ಲಿ ಬೇಕಾದರೂ ಮದುವೆಯಾಗಬಹುದೆಂದು ಸೂಚಿಸಿದ ಸಲಹೆಯಾಗಿ ಹಿಂದೂ ಮಸೂದೆಯ ಕೃತಿಕಾರನು ತೋರಿದ ಅಮಾನವೀಯತೆಯಾಗಿದೆ ಎಂದು ನಾನು ಹೇಳುತ್ತಿರುವೆ.

**ಶ್ರೀ ಭಾರತೀ ಎಲ್. ಕೃಷ್ಣಸ್ವಾಮಿ (ಮದರಾಸು) :** ಕಲಮು ೨ರ ಕುರಿತು ಇದು ಯಾವ ರೀತಿಯಲ್ಲಿ ಪ್ರಸ್ತುತವಿದೆ?

**ಮಾನ್ಯ ಉಪ –ಸಭಾಪತಿಗಳು :** ಯಾರು ಸ್ವಯಂ ಇಚ್ಛೆಯಿಂದ ಮಸೂದೆಯನ್ವಯ ಒಳಗೊಳ್ಳಲು

ಇಚ್ಛೆಪಡುತ್ತಾರೋ, ಅಂಥವರನ್ನು ಹೊರತುಪಡಿಸಿ ಉಳಿದೆಲ್ಲರಿಗೂ ಈ ಮಸೂದೆಯನ್ನು ಅನ್ವಯಿಸಬಾರದೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಅವರು ತಮ್ಮ ವಾದವನ್ನು ಬೆಳೆಸುತ್ತಿದ್ದಾರೆ.

**ಶ್ರೀ ಅರ್.ಕೆ. ಚೌಧರಿ :** ಈಗ ಚರ್ಚೆ ನಡೆಯುತ್ತಿರುವ ಪ್ರಕರಣ ಕುರಿತಂತೆ ಅದರಲ್ಲಿರುವ ಯಾವ ಅವಕಾಶಗಳೂ ಅದರಲ್ಲೂ ಧರ್ಮವನ್ನು ಪಾಲಿಸುವ ಎಂಬ ವಿಷಯವಾಗಿರುವಂಥದ್ದು ಬದಲಾಗದೆ ಉಳಿಯಬೇಕೆಂದು ವೈಯಕ್ತಿಕವಾಗಿ ನಾನು ಇಚ್ಛಿಸುತ್ತೇನೆ. ಧರ್ಮದಿಂದ ಹಿಂದೂಗಳಿಗೆ ಮಾತ್ರ ಇದು ಅನ್ವಯಿಸುತ್ತದೆಂದು ಈ ಅವಕಾಶವನ್ನು ಡಾ.ಅಂಬೇಡ್ಕರ್ ಹಾಗೂ ಮತ್ತಿತರರು ಬದಲಾಯಿಸಲು ತಿದ್ದುಪಡಿ ತಂದಿದ್ದಾರೆ. ಧರ್ಮದಿಂದ ತಾನು ಹಿಂದೂ ಎಂಬುದನ್ನು ಸಿದ್ಧಮಾಡಿ ತೋರಲು ಯಾರಿಗೆ ಆದರೂ ಬಹಳ ಕಷ್ಟವಾಗುತ್ತದೆ. **"ಧರ್ಮ"** ಎಂಬ ಶಬ್ದ ಏನನ್ನು ಸೂಚಿಸುತ್ತದೆ? ಧರ್ಮ ಎಂಬ ಶಬ್ದವು ಕೂಡು(ರಿಲಿಜೋ) ಎಂಬ ಪದದಿಂದ ನಿಷ್ಪತ್ತಿಯಾಗಿದೆ. ಧರ್ಮದಿಂದ ನಾನು ಹಿಂದೂ ಎಂದು ಹೇಳಬಹುದೇ? ಹಿಂದೂ ಪಾಲಕರಿಗೆ ನಾನು ಜನಿಸಿದ್ದೇನೆಂದು ಆದ್ದರಿಂದ ನಾನು ಹಿಂದೂವಿನ ಮಗ, ಆದ್ದರಿಂದ ನಾನು ಹಿಂದೂ ಎಂದು ಹೇಳಬಹುದು. ಆದರೆ ಧರ್ಮದಿಂದ ನಾನು ಹಿಂದೂ ಎಂದು ಹೇಳಿಕೊಳ್ಳುವುದು ಕಷ್ಟವಾಗಬಹುದು. ಹಿಂದೂ ಧರ್ಮವು ಅತ್ಯುನ್ನತ ಆದರ್ಶಗಳನ್ನು ಹಾಕಿಕೊಟ್ಟಿದೆ. ಆ ಮೌಲ್ಯದಿಂದ, ಯಾರು ತಮ್ಮನ್ನು ತಾವು ಹಿಂದೂಗಳೆಂದು ಕರೆದುಕೊಳ್ಳುತ್ತಾರೋ ಅವರನ್ನು ಅಳೆದರೆ ಅವರು ನಿಜಕ್ಕೂ ಹಿಂದೂಗಳೆನಿಸಿಕೊಳ್ಳುವುದಿಲ್ಲ. ಹಿಂದೂ ಎಂದು ನನಗೆ ನಾನೇ ಹೇಳಿಕೊಳ್ಳಬಹುದು, ನಾನು ಹಿಂದೂ ಕಾನೂನಿಂದ ಅಥವಾ ಹಿಂದೂ ಮಸೂದೆಯಿಂದ ಆಳಲ್ಪಡುವುದನ್ನು ಇಷ್ಟಪಡಬಹುದು. ಆದರೂ ಧರ್ಮದಿಂದ ನಾನು ಹಿಂದೂ ಎಂದು ಕರೆದುಕೊಳ್ಳಲಾರೆ. ಆ ಧರ್ಮದ ತತ್ವಗಳನ್ನು ನಾನು ಒಟ್ಟಾರೆ ಪಾಲಿಸುತ್ತಿಲ್ಲ. ಹೀಗಿದ್ದಾಗ ನನ್ನನ್ನು ನಾನು ಹಿಂದು ಎಂದು ಹೇಗೆ ಕರೆದುಕೊಳ್ಳುವುದು. ಹಿಂದೂ ಆದವನು ಮಾಂಸವನ್ನು ತಿನ್ನುವುದಿಲ್ಲ. ಹಿಂದೂಧರ್ಮದ ಪ್ರಕಾರ ಅದು ನಿಷೇಧಿತ ಆಹಾರ. ಈ ಸದನದಲ್ಲಿ ಎಷ್ಟೋ ಮಂದಿ, ತಮ್ಮನ್ನು ತಾವು ಹಿಂದೂಗಳೆಂದು ಕರೆದುಕೊಳ್ಳುವವರು ಎಷ್ಟೋಎಷ್ಟೋ ಇರಬಹುದು. ಆದರೆ ಆ ಮೌಲ್ಯಗಳನ್ವಯ ಹಿಂದೂಗಳಾಗಲಾರರು. ತಮ್ಮನ್ನು ತಾವು ಹಿಂದೂಗಳೆಂದು ಕರೆದುಕೊಳ್ಳುವ ಎಷ್ಟೋ ಜನರು, ಹಿಂದೂಬಾಹಿರ ಚಟುವಟಿಕೆಯಲ್ಲಿ ತೊಡಗಿರಬಹುದು. ಆದರೂ ಅವರು ಹಿಂದೂ ಮಸೂದೆಯಿಂದ ಆಳಲ್ಪಡಬೇಕೆಂದು ಬಯಸುತ್ತಾರೆ. ಯಾರು ಹಿಂದೂ ಧರ್ಮದ ತತ್ವಗಳನ್ನು ಪಾಲಿಸುತ್ತಾರೋ ಅವರಿಗೆ ಈ ಮಸೂದೆ ಅನ್ವಯಗೊಳ್ಳಲಿ ಎಂದು ಹೇಳುವುದು ದಿಕ್ಕುತಪ್ಪಿದ ಹಾಗೂ ಎಲ್ಲಾ ಪ್ರಾಮಾಣಿಕ ತತ್ವಗಳಿಗೆ ವಿರೋಧಿಯಾದ ಕ್ರಮವಾಗುತ್ತದೆ. ನಾನು ಹಿಂದೂ ಅಲ್ಲದಿರಬಹುದು, ನಾನು ಹಿಂದೂ ಧರ್ಮದ ಅವಲಂಬಿಯಲ್ಲದಿರಬಹುದು, ಆದರೂ ನಾನು ಹಿಂದುತ್ವವನ್ನು ಪಾಲಿಸುತ್ತೇನೆಂದು ನಾನು ಹೇಳುವೆ. ನಾನು ಹಿಂದು ಎಂದು ಹೇಳುವೆ. ಎಲ್ಲಿಯವರೆಗೆ ನಾನು ಹಿಂದೂ ಎಂದು ಹೇಳಿಕೊಳ್ಳುತ್ತೇನೋ, ಅಲ್ಲಿಯವರೆಗೆ ಹಿಂದೂ ಕಾನೂನು ಮತ್ತು ಹಿಂದೂ ಮಸೂದೆ ನನಗೂ ಅನ್ವಯಿಸಬಹುದು. ಎಲ್ಲಿಯವರೆಗೆ ನಾನು ನನ್ನ ಧರ್ಮ ಬಿಡುವುದಿಲ್ಲವೋ, ನಾನು ಹಿಂದೂ ಎಂದು ಕರೆದುಕೊಳ್ಳುತ್ತಿರುವೆನೊ, ನಾನು ಹಿಂದು ಕಾನೂನಿಂದ ಆಳಲ್ಪಡುವೆನು ಅಥವಾ ನನ್ನ ಸ್ನೇಹಿತರಾದ ಶ್ರೀ ಜಸ್ಪತ್‌ರಾಯ್ ಕಪೂರ್ ಹೇಳುವ ಹಾಗೆ, ಎಲ್ಲಿಯವರೆಗೆ ಒಬ್ಬಾತ ತಾನು ಹಿಂದೂ ಮಸೂದೆಯಿಂದ ಆಳಲ್ಪಡಬೇಕೆನ್ನುತ್ತಾನೋ, ಅಲ್ಲಿಯವರೆಗೆ ಆತ ಹಿಂದೂ ಮಸೂದೆಯಿಂದ ಆಳಲ್ಪಡುತ್ತಾನೆ. ಇಲ್ಲವೆಂದರೆ ಇಲ್ಲ. ಆದ್ದರಿಂದ ಧರ್ಮದಿಂದ ಹಿಂದೂ ಆಗಿರಬೇಕೆಂಬ ಷರತ್ತನ್ನು ನೀವು ಹೇಗೆ ಹಾಕುತ್ತೀರಿ ಎಂದು ನಾನು ಕೇಳುವೆ. ದೇಶದ ನಮ್ಮ ಭಾಗದಲ್ಲಿ, ಅಂದರೆ ಅಸ್ಸಾಂನಲ್ಲಿ ಆದಿವಾಸಿ ಜನರನ್ನು ಹಿಂದೂ ಕಾನೂನಿನಿಂದ ಆಳಲ್ಪಡಬೇಕೆಂದು ಸೇರಿಸಲಾಗಿದೆ.

ಅವರು ಹಿಂದೂಗಳಲ್ಲ. ಧರ್ಮದಿಂದಲೂ ಅವರು ಹಿಂದುಗಳಲ್ಲ. ಹಿಂದೂಧರ್ಮ ವಿವಾಹ ಕುರಿತು ರೂಪಿಸಿರುವ ತತ್ವಗಳನ್ನು ಅವರು ಪಾಲಿಸುವುದಿಲ್ಲ. ಹಿಂದೂ ವಿವಾಹಕ್ಕಿರುವ ನಿಷೇಧದ ಅಂಶಗಳನ್ನು ಕೂಡ ಅವರ ಹಾಗೆ ಇವರು ಆಚರಿಸುವುದಿಲ್ಲ. ಆದರೂ ಅವರೂ ಹಿಂದೂ ಕಾನೂನಿಂದ ಆಳಲ್ಪಡುತ್ತಿದ್ದಾರೆ. ಏಕೆಂದರೆ ಕೆಲವು ವಿಷಯಗಳಲ್ಲಿ ಅವರಿಗೆ ಕಾನೂನುಗಳೇ ಇಲ್ಲ, ಇನ್ನು ಕೆಲವು ವಿಚಾರಗಳಲ್ಲಿ ಹಿಂದೂವಿನಂತೆ ವರ್ತಿಸುತ್ತಾರೆ. ಆದ್ದರಿಂದ ಈ ಎರಡು ಪದಗುಚ್ಛಗಳಾದ "ಹಿಂದೂಧರ್ಮವನ್ನು ಪಾಲಿಸುವವರು" ಮತ್ತು "ಧರ್ಮದಿಂದ ಹಿಂದೂಗಳು" ಎಂಬ ಪ್ರಶ್ನೆಯಲ್ಲಿ ನಾನು ಮೊದಲನೆಯದನ್ನೇ ಆಯ್ಕೆ ಮಾಡುತ್ತೇನೆ.

ನಾನೀಗ ವಿಷಯದ ಇನ್ನೊಂದು ಮಗ್ಗುಲಿನ ಬಗ್ಗೆ ಬರೆಯುತ್ತೇನೆ. ಅದು ಮತಾಂತರಕ್ಕೆ ಸಂಬಂಧಿಸಿದ್ದು. ಈ ವಿಷಯ ಕುರಿತಂತೆ ಈಗಾಗಲೇ ಡಾ. ಅಂಬೇಡ್ಕರ್ ತಿದ್ದುಪಡಿಯೊಂದನ್ನು ಮುಂದಿರಿಸಿದ್ದಾರೆ. ಹಿಂದೂಧರ್ಮ ಕುರಿತಂತೆ, "ಮತಾಂತರ" ಎಂಬ ಶಬ್ದ ಒಪ್ಪಿಗೆಯಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಹಿಂದೂಧರ್ಮಕ್ಕೆ ಪುನರ್ ಮತಾಂತರಗೊಳ್ಳುವುದನ್ನಾದರೂ, ಅದರ ಬಗ್ಗೆ ನಾನು ಹೆಚ್ಚು ತಿಳಿಯದಿದ್ದರೂ, ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಹಿಂದೂಧರ್ಮಕ್ಕೆ ಮತಾಂತರವಿಲ್ಲ. ಏಕೆಂದರೆ ಹಿಂದೂಧರ್ಮವು ಮತಪ್ರಚಾರಕ ಧರ್ಮವಲ್ಲ (Proselytising Religion) ಯಾವ ಧರ್ಮಕ್ಕೆ ಮತಾಂತರ ಎಂದು ಮಾತಾಡುವುದೇ ಶುದ್ಧಾಂಗ ಅರ್ಥಹೀನ. ಯಾವ ಮತಾಂತರಗಳೂ ಹಿಂದೂಧರ್ಮಕ್ಕೆ ಆಗಿಲ್ಲ. ಯಾರು ಹಿಂದುತ್ವದಲ್ಲಿ ಬದುಕಿದ್ದಾರೋ, ಅವರೆಲ್ಲಾ ಹಿಂದೂಗಳು, ಯಾರು ಸ್ಪಷ್ಟವಾಗಿ ನಾನು ಹಿಂದು ಅಲ್ಲ, ಅಥವಾ ಮುಸ್ಲಿಂ ಅಥವಾ ಪಾರ್ಸಿ, ಕ್ರಿಶ್ಚಿಯನ್, ಯಹೂದಿ ಎಂದು ಹೇಳಿಕೊಳ್ಳುತ್ತಾರೋ, ಅವರನ್ನು ಬಿಟ್ಟು ಗತಕಾಲದಿಂದಲೂ ಇದೇ ಪರಿಸ್ಥಿತಿಯು ಇಡುತ್ತಾ ಬಂದಿದೆ. ಹಿಂದೂತ್ವಕ್ಕೆ ಯಾವ ಮತಾಂತರವೂ ಇಲ್ಲ. ಹಿಂದೂತ್ವಕ್ಕೆ ಮತಾಂತರ ಮಾಡುವಾಗ ಯಾವ ಸಂಸ್ಕಾರಗಳನ್ನಾಚರಿಸುತ್ತಾರೆಂದು ಡಾ.ಅಂಬೇಡ್ಕರ್ ಅವರೆ ದಯಮಾಡಿ ಹೇಳಿ.

**ಡಾ. ಅಂಬೇಡ್ಕರ್ :** ಪ್ರಾಯಶ್ಚಿತ್ತ.

**ಶ್ರೀ ಆರ್.ಕೆ. ಚೌಧರಿ :** ಯಾರನ್ನಾದರೂ ಹಿಂದೂವಾಗಿ ಮತಾಂತರಿಸಬಹುದೆ? ಡಾ. ಅನಿ ಬೆಸೆಂಟ್ ಅವರು ಹಿಂದುತ್ವಕ್ಕೆ ಮತಾಂತರಗೊಂಡರೆ? ಹಿಂದೂತ್ವಕ್ಕೆ ಮತಾಂತರಗೊಂಡ ಯಾವುದಾದರೂ ಉದಾಹರಣೆಯನ್ನು ಡಾ.ಅಂಬೇಡ್ಕರ್ ಕೊಡಬಲ್ಲರೆ?

**ಡಾ. ಅಂಬೇಡ್ಕರ್ :** ಈ ವಿಷಯ ಕುರಿತು ಅನೇಕ ನಿರ್ಧರಿತ ಪ್ರಕರಣಗಳಿವೆ. ನನ್ನ ಸ್ನೇಹಿತರು ಶ್ರೀ ಮುಲ್ಲಾ ಅವರ ಹಿಂದೂ ಕಾನೂನಿನ ಮೊದಲ ಕೆಲ ಪುಟಗಳನ್ನಾದರೂ ನೋಡಿದರೆ ಸಾಕು, ಅವರಿಗೆ ಬೇಕಾದ ಎಲ್ಲಾ ಮಾಹಿತಿಯೂ ಅಲ್ಲಿ ಸಿಗುತ್ತದೆ.

**ಶ್ರೀ ಆರ್.ಕೆ. ಚೌಧರಿ :** ಡಾ.ಅಂಬೇಡ್ಕರ್ ಅವರು ಶುದ್ಧಿ ಬಗ್ಗೆ ಉಲ್ಲೇಖಿಸಿದರೆ ಅದು ಬೇರೆಯಾದ ವಿಷಯ. ಅದು ಹಿಂದೂವೊಬ್ಬ–ಹಿಂದು ಧರ್ಮವನ್ನು ತೊರೆದು ಹೋದನಂತರ ಮರಳಿ ಅವನನ್ನು ಹಿಂದೂ ತೆಕ್ಕೆಗೆ ತರುವುದಕ್ಕೆ ಸಂಬಂಧಪಟ್ಟಿದ್ದು. ಆದರೆ ಹಿಂದೂವಾಗಿ ಒಬ್ಬ ಮತಾಂತರಗೊಂಡರೆ ಆಗ ಅನುಸರಿಸುವ ಸಂಸ್ಕಾರಗಳ ವಿಧಾನಗಳಾವುದು? ಅದು ಮತಾಂತರವಾಗಿದ್ದರೆ ಆ ವಿಧಾನ ನನಗೆ ಗೊತ್ತು. ಸಂಬಂಧಿತ ವ್ಯಕ್ತಿ ನಿರ್ದಿಷ್ಟ ಅವಧಿಯವರೆಗೆ ಉಪವಾಸ ಆಚರಿಸಬೇಕು.

**ಮಾನ್ಯ ಉಪಸಭಾಪತಿಗಳು :** ಈ ಮಸೂದೆಯಲ್ಲಿ, ಮಾನ್ಯ ಸದಸ್ಯರು ಮರು ಮತಾಂತರಗೊಳ್ಳುವ ಹಿಂದೂಗಳಿಗೆ ಏನಾದರೂ ವಿಧಾನಗಳನ್ನು ಅಳವಡಿಸಿರುವರೆ?

**ಶ್ರೀ ಆರ್.ಕೆ. ಚೌಧರಿ :** ಹಿಂದೂತ್ವಕ್ಕೆ ಮರುಮತಾಂತರವಿದೆ, ಆದರೆ ಅಲ್ಲಿ ಮತಾಂತರವಿಲ್ಲವೆಂದಷ್ಟೇ

ನಾನು ಹೇಳುತ್ತಿರುವೆ. "ಮತಾಂತರ" ಎಂಬ ಶಬ್ದವನ್ನು ಇಲ್ಲಿ ಬಳಸಬೇಡಿ. ಬೇರೆ ಯಾವುದಾದರೂ ಶಬ್ದ ಬಳಸಿ.

**ಮಾನ್ಯ ಉಪ ಸಭಾಪತಿಗಳು :** ಮೂಲದಲ್ಲಿ ಆತ ಹಿಂದೂ ತೆಕ್ಕೆಯಲ್ಲಿರದಿದ್ದರೂ, ಅವನನ್ನು ಹಿಂದೂತ್ವಕ್ಕೆ ಮತಾಂತರ ಮಾಡಬಹುದೆಂದು ನ್ಯಾಯಾಲಯಗಳು ನಿರ್ಧರಿಸಿವೆ.

ಶ್ರೀ ಅರ್.ಕೆ.ಚೌಧರಿ: ಮರುಮತಾಂತರ ಅದು. ಮತಾಂತರದ ಬಗ್ಗೆ ಏನು ಹೇಳುತ್ತೀರಿ? ವ್ಯತ್ಯಾಸವಿರುವುದೇ ಆ ಒಂದು ವಿಷಯದಲ್ಲಿ.

**ಶ್ರೀ ವೆಂಕಟ ರಾಮನ್ (ಮದರಾಸು) :** ರತ್ನಾ ಸಿ ಮೊರಾರ್ಜಿ ಮತ್ತು ಅಡ್ಮಿನಿಸ್ಟ್ರೇಟರ್ ಜನರಲ್ ಅವರ ನಡುವಣ ಪ್ರಕರಣದಲ್ಲಿ, ಯಾವುದೇ ವ್ಯಕ್ತಿಯನ್ನು ಹಿಂದೂಧರ್ಮಕ್ಕೆ ಮತಾಂತರಗೊಳಿಸಬಹುದೆಂದು ಮದಾರಾಸು ಹೈಕೋರ್ಟ್ ಹೇಳಿದೆ.

**ಡಾ. ಅಂಬೇಡ್ಕರ್ :** ಇಂಗ್ಲೀಷ್ ಮಹಿಳೆ ಕುರಿತಂತೆ, ಕ್ರಿಶ್ಚಿಯನ್ ಆದವರು ಹಿಂದು ಆಗಿ ಮತಾಂತರ ಹೊಂದಬಹುದೆ ಎನ್ನುವುದಕ್ಕೆ ಉತ್ತರ, ಹೊಂದಬಹುದು ಎನ್ನುವುದಾಗಿದೆ.

**ಶ್ರೀ ಆರ್.ಕೆ. ಚೌಧರಿ :** ಮಾನ್ಯ ಗೌರವಾನ್ವಿತ ಮಂತ್ರಿಗಳು, ಅಂತಹ ಮತಾಂತರದ ವಿಧಾನಗಳನ್ನು ಅಥವಾ ಸಂಸ್ಕಾರಗಳನ್ನು ತಿಳಿಸುವರೇ? ಎಷ್ಟೇ ಆಗಲಿ, ಯಾವಾಗ ಬೇಕಾದರೂ ಕಲಿಯಬಹುದು.

**ಮಾನ್ಯ ಉಪ–ಸಭಾಪತಿಗಳು :** ಹಿಂದೂ ಸಂಪ್ರದಾಯ ಮತ್ತಿತರ ವಿಷಯಗಳನ್ನು ರಕ್ಷಿಸಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಬಹಳ ವಿಶೇಷ ಕಳಕಳಿ ಉಳ್ಳವರಂತೆ ಕಾಣುತ್ತಿದ್ದಾರೆ. ಎಷ್ಟು ಬೇಕೋ ಅಷ್ಟು ಹಿಂದೂಗಳನ್ನು ಮತ್ತು ಎಷ್ಟು ಬೇಕೋ ಅಷ್ಟು ಜನರನ್ನು ಹಿಂದೂ ಕಾನೂನಿನಡಿ ತಂದಲ್ಲಿ ಹಾನಿ ಏನಿದೆ?

**ಶ್ರೀ ಆರ್.ಕೆ. ಚೌಧರಿ :** ಈ ಮಸೂದೆಯ ಕರ್ತೃಗಳೂ, ಸಂವಿಧಾನಶಿಲ್ಪಿಗಳೂ ಆದ ಡಾ.ಅಂಬೇಡ್ಕರ್ ಅವರು ಇಂಥ ಅರ್ಥಹೀನ ಶಬ್ದಗಳಲ್ಲಿ ಮುಳುಗಬಾರದೆಂಬುದೇ ನನ್ನ ಇಚ್ಛೆಯಾಗಿದೆ. "ಮತಾಂತರ" ಎನ್ನುವ ಪದವನ್ನು ಯಾವಾಗ ಹಿಂದೂಗಳಿಗೆ ಅನ್ವಯಿಸುತ್ತವೆಯೋ ಆಗ ಅದಕ್ಕೆ ಅರ್ಥವೇ ಇಲ್ಲ.

**ಡಾ. ಅಂಬೇಡ್ಕರ್ :** ಇದು ಶ್ರೀ ಚೌಧರಿಯವರ ಹಳೆ ಪುರಾತನವಾದ ದೃಷ್ಟಿಕೋನ.

**ಶ್ರೀ ಆರ್.ಕೆ. ಚೌಧರಿ :** ಹಿಂದುತ್ವಕ್ಕೆ ಮತಾಂತರ ಸಾಧ್ಯವೆಂಬುದನ್ನು ಪ್ರತಿಪಾದಿಸುವ ಯಾವುದಾದರೊಂದು ಮೂಲ ಪುಸ್ತಿಕೆಯನ್ನು ಡಾ.ಅಂಬೇಡ್ಕರ್ ದಯಮಾಡಿ ಉಲ್ಲೇಖಿಸಲಿ?

**ಡಾ. ಅಂಬೇಡ್ಕರ್ :** ಮೊರಾರ್ಜಿ ಮತ್ತು ಅಡ್ಮಿನಿಸ್ಟ್ರೇಟರ್ ಜನರಲ್ ಪ್ರಕರಣವನ್ನು ನಾನು ಮಾನ್ಯ ಸದಸ್ಯರಿಗೆ ಉಲ್ಲೇಖಿಸಬಲ್ಲೆ.

**ಸಾರಿಗೆ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವರು (ಶ್ರೀ ಸಂತಾನಂ) :** ಬಿಸ್ಲಾದಲ್ಲೊಂದು ಸ್ಮಾರಕವಿದೆ, ಅದು ಗ್ರೀಕರನ್ನು ಹಿಂದೂಗಳನ್ನಾಗಿ ಮತಾಂತರ ಮಾಡಿದ್ದರ ಬಗ್ಗೆ ಹೇಳುತ್ತದೆ.

**ಡಾ. ಟೆಕ್ ಚಂದ್ (ಪಂಜಾಬ್) :** ಕ್ರಿಶ್ಚಿಯನ್, ಮತ್ತು ಮುಸ್ಲಿಂರಾಗಿ ಹುಟ್ಟಿದ ಎಷ್ಟೋ ಜನ–ಹಿಂದೂಗಳಾಗಿದ್ದಾರೆ. ನಮ್ಮ ಸ್ನೇಹಿತರು ಬಯಸುವುದಾದರೆ, ಅಂಥ ಜನರನ್ನು ಕರೆತಂದು ಆರ್ಯರಿಂದ ಹಿಂದೂತ್ವಕ್ಕೆ ಮತಾಂತರಗೊಳಿಸಿ ಅವರನ್ನು ಹಿಂದೂ ಸಮಾಜಕ್ಕೆ ಐಕ್ಯಗೊಳಿಸಿಕೊಳ್ಳಬಹುದು. ಮತಾಂತರ ಪ್ರಕರಣ ಕುರಿತು, ಮುಸ್ಲಿಂ ಆಡಳಿತದಲ್ಲೂ ಕೂಡ ಮತಾಂತರ ನಡೆದದ್ದನ್ನು ವಿವರಿಸುವ ಹಲವು ಪುಸ್ತಕಗಳನ್ನು ನಾನು ಹೊಂದಿದ್ದೇನೆ. ಬೇಕಾದರೆ ಅವುಗಳನ್ನು ಅವರು ಪಡೆದು, ತಮ್ಮ ವಿರಾಮದ ವೇಳೆಯಲ್ಲಿ ಓದಬಹುದು.

**ಡಾ. ಅಂಬೇಡ್ಕರ್ :** ಓಹೋ, ಅದನ್ನು ಮಾತ್ರ ಮಾಡಬೇಡಿ, ಮಾನ್ಯ ಚೌಧರಿಯವರು ಎಂದೂ ಓದುವುದಿಲ್ಲ.

**ಶ್ರೀ ಆರ್. ಕೆ. ಚೌಧರಿ :** ಮತಾಂತರ ಮರುಮತಾಂತರ ಮತ್ತು ಮತಾಂತರ ಹಾಗೂ ದೀಕ್ಷೆಯ ನಡುವೆ ಸದಸ್ಯರು ಗೊಂದಲಗೊಳ್ಳುತ್ತಿದ್ದಾರೆಂದು ನನಗೆ ಭಯವಾಗುತ್ತಿದೆ. ಯಾರನ್ನು ಬೇಕಾದರೂ ಹಿಂದೂಧರ್ಮಕ್ಕೆ ಸೇರಲು ದೀಕ್ಷೆ ನೀಡಬಹುದು. ನಾನು ಅದರ ಬಗ್ಗೆ ಮಾತಾಡುತ್ತಿಲ್ಲ.

**ಮಾನ್ಯ ಉಪಸಭಾಪತಿಗಳು :** ಆದರೆ ಮತಾಂತರಗಳನ್ನು ಸಾಧ್ಯ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಆರ್. ಕೆ. ಚೌಧರಿ :** ಆ ವಿಷಯವನ್ನು ಈಗ ಬಿಟ್ಟು ಬಿಡೋಣ.

**ಮಾನ್ಯ ಉಪಸಭಾಪತಿಗಳು :** ಸದಸ್ಯರು ಮುಗಿಸಿದರೆಂದು ನಾನು ಅಂದುಕೊಳ್ಳುವೆ?

**ಶ್ರೀ ಆರ್.ಕೆ. ಚೌಧರಿ :** ನಾಳೆ ನಾನು ಬೇರೆ ಕಡೆ ಹೋಗುವುದರಿಂದ, ವಾಸ್ತವವಾಗಿ ಇದು ನನಗೆ ಮುಕ್ತಾಯವೆ.

**ಮಾನ್ಯ ಉಪಸಭಾಪತಿಗಳು :** ಇನ್ನು ಕೆಲ ನಿಮಿಷಗಳು ನಡೆಸಬಹುದೆ?

**ಶ್ರೀ ಆರ್.ಕೆ. ಚೌಧರಿ :** ಬೇಡ ಸಾರ್, ಕೆಲ ನಿಮಿಷಗಳು ಸಾಕಾಗುವುದಿಲ್ಲ.

**ಮಾನ್ಯ ಉಪಸಭಾಪತಿಗಳು :** ಹಾಗಾದರೆ, ನಾವು ಸಭೆಯನ್ನು ಮುಂದಕ್ಕೆ ಹಾಕೋಣ

ಬುಧವಾರ ೭ನೇ ತಾರೀಖು ೧೯೫೧ರ ಮುಂಜಾನೆ ೧೦-೪೫ರವರೆಗೆ ಸದನವನ್ನು ಮುಂದೂಡಲಾಗಿದೆ.

**ಹಿಂದೂ ಸಂಹಿತೆ ಮುಂದುವರಿದಿದ್ದು:**

**ಮಾನ್ಯ ಸಭಾಧ್ಯಕ್ಷರು :** ಹಿಂದೂ ಕಾನೂನಿನ ಕೆಲ ಶಾಖೆಗಳನ್ನು ಸಂಹಿತೆಗೊಳಿಸುವ ಮತ್ತು ತಿದ್ದುಪಡಿ ಮಾಡುವ ಸಲುವಾಗಿ ಮಸೂದೆಯನ್ನು ಮುಂದಿನ ಪರಿಗಣನೆಗಾಗಿ ಸದನವು ಚರ್ಚೆಯನ್ನು ಮುಂದುವರೆಸಲಿದೆ. ಆಯ್ಕೆ ಸಮಿತಿಯ ವರದಿಯನ್ವಯ ಕಲಮು ೨ ಈಗ ಚರ್ಚೆಯಲ್ಲಿದೆ.

**ಶ್ರೀ ಗೌತಮ್ (ಉತ್ತರ ಪ್ರದೇಶ) :** ಒಂದು ವಿಷಯವನ್ನು ಸ್ಪಷ್ಟಗೊಳಿಸುವ ಸಲುವಾಗಿ, ಚರ್ಚೆ ಮುಂದುವರಿಸುವ ಮೊದಲು, ನಾನು ತಮ್ಮನ್ನು ವಿನಂತಿಸುತ್ತೇನೆ. ನನಗೆ ಗೊತ್ತಿದ್ದ ಹಾಗೆ, ನಿನ್ನೆ ಮಧ್ಯಾಹ್ನ ನಾನು ಹಾಜರಿರಲಿಲ್ಲ. ಆದ್ದರಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ. ಈ ಪ್ರಕರಣವನ್ನು ಚರ್ಚಿಸುತ್ತಿದ್ದ ಸಂದರ್ಭದಲ್ಲಿ ಒಬ್ಬ ಸದಸ್ಯರು ಬಳಸಿದ ಭಾಷೆಯನ್ನು ಕುರಿತು ಕೆಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರಂತೆ. ಈ ಕುರಿತು ಮಾನ್ಯ ಸಭಾಧ್ಯಕ್ಷರ ಗಮನವನ್ನು ಸೆಳೆಯಲಾಯಿತೆ? ಆದ್ದರಿಂದ ತಾವು ಸದಸ್ಯರು ತಮ್ಮ ತಮ್ಮ ಮಿತಿಗಳಲ್ಲಿರಬೇಕೆಂದು ಹಾಗೂ ಉಳಿದ ಸದಸ್ಯರ ಭಾವನೆಗಳನ್ನು ನೋಯಿಸಬಾರದೆಂದು ಕೆಲ ಸೂಚನೆಗಳನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ. ಅಯ್ಯಂಗಾರ್ (ಮದರಾಸು) :** ಏನಾಯಿತು ನಾನು ಹೇಳಲೆ ಸಾರ್?

**ಮಾನ್ಯ ಸಭಾಧ್ಯಕ್ಷರು :** ಆ ವಿಷಯವನ್ನು ಅವರು ಪುನಃ ಹೇಳುವ ಅಗತ್ಯವಿಲ್ಲ.

**ಶ್ರೀ ಎಂ.ಎ ಅಯ್ಯಂಗಾರ್ (ಮದರಾಸು) :** ಇಲ್ಲ. ಆ ಹೇಳಿಕೆಗಳನ್ನೆಲ್ಲಾ ನಾನು ಮತ್ತೊಮ್ಮೆ ಪುನರಾವರ್ತನೆ ಮಾಡಿ ತೋರುವೆ, ಏಕೆಂದರೆ ಅದು ನಮ್ಮ ಉದ್ದೇಶವನ್ನೆ ವಿಫಲಗೊಳಿಸುವ ಹಾಗಿದೆ. ನಿನ್ನೆ ಸದಸ್ಯರೊಬ್ಬರು ಮಾತಾಡುತ್ತಿದ್ದಾಗ ಯಾವ ವ್ಯಂಗ್ಯವಿರದೆ, ಅವರ ಬಾಯಿಂದ ಕೆಲ ಟೀಕೆಗಳು ದುರಾದೃಷ್ಟವಶಾತ್ ತಪ್ಪಿ ಬಂದವು. ಅವರು ಯಾವಾಗಲೂ ಹಾಸ್ಯಪೂರ್ಣವಾಗಿ ಮಾತಾಡುತ್ತಾರೆ ಮತ್ತು ಅದನ್ನು ಯಾರೂ ವಿಶೇಷವೆಂದು ಪರಿಗಣಿಸುವುದೂ ಇಲ್ಲ ಎಂಬುದಕ್ಕೆ ಯಾವ ಅನುಮಾನವೂ ಇಲ್ಲ. ಆದರೆ ಅದು,

---

* ೧೯೫೧ನೇ ಫೆಬ್ರವರಿ ೬ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೮೬-೨೫೩೭

ದುರಾದೃಷ್ಟವಶಾತ್ ಯಾರಿಗೂ ಅಪೇಕ್ಷಣೀಯವಲ್ಲದ ಮಟ್ಟಕ್ಕೆ ಇಳಿಯಿತು. ಯಾವಾಗ ಅದನ್ನು ಗಮನಕ್ಕೆ ತರಲಾಯಿತೋ ಕೂಡಲೆ ಸಭಾಧ್ಯಕ್ಷ ಸ್ಥಾನದಲ್ಲಿದ್ದ ನಾನು, ದಾಖಲೆಗಳಿಂದ ಈ ಹೇಳಿಕೆಯ ಭಾಗಗಳನ್ನು ವಿಸರ್ಜಿಸುವಂತೆ ಆದೇಶ ನೀಡಿದೆ. ವಿಷಯ ಇಲ್ಲಿಗೆ ಮುಗಿಯಿತು ಎಂದು ನಾನು ಭಾವಿಸಿದೆ. ಎಲ್ಲರೂ ಸಮ್ಮತಿಸಿದರು. ಮತ್ತು ಮಾನ್ಯ ಸದಸ್ಯರು ಅಂಥ ರಸಿಕ ಹೇಳಿಕೆ ಮಾಡಿದ್ದಕ್ಕೆ ವಿಷಾದವನ್ನೂ ಸೂಚಿಸಿದರು. ಅಲ್ಲಿಗೆ ಆ ಅಧ್ಯಾಯ ಮುಗಿಯಿತು. ಅದನ್ನು ದಾಖಲೆಯ ಭಾಗವನ್ನಾಗಿಯೂ ಮಾಡಲಾಗಿಲ್ಲ. ಆದ್ದರಿಂದ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲು ಮತ್ತೆ ಅದನ್ನು ನಿಮ್ಮ ಮುಂದೆ ಪ್ರಸ್ತಾಪಿಸುವ ಆವಶ್ಯಕತೆಯಿದೆಯೆಂದು ನನಗನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಇದರಿಂದ ಮಾನ್ಯ ಸದಸ್ಯರು ಸಾಧ್ಯವಾದಷ್ಟು ಪಾಠಕಲಿಯುತ್ತಾರೆಂದು, ಹಾಗೂ ಮತ್ತೊಮ್ಮೆ ಇಂಥ ಪ್ರಸಂಗ ಉದ್ಭವವಾಗದ ರೀತಿಯಲ್ಲಿ ಭಾಷಣ ಮಾಡುವಾಗ ಟೀಕೆಗಳನ್ನು ಮಾಡುವುದಿಲ್ಲವೆಂದು ನಾನು ಸದಸ್ಯರನ್ನು ನಂಬುತ್ತೇನೆಂದು ಅಷ್ಟು ಮಾತ್ರ ಹೇಳುತ್ತೇನೆ.

**ಶ್ರೀ ಫ್ರಾಂಕ್ ಅಂಥೋನಿ (ಮಧ್ಯ ಪ್ರದೇಶ) :** ಟ್ರೆಜರಿ ಬೆಂಚ್‌ನವರಿಂದ ಕೆಟ್ಟ ಉದಾಹರಣೆಯೊಂದನ್ನು ಹಾಕಿದಂತಾಯಿತು.

**ಮಾನ್ಯ ಸಭಾಧ್ಯಕ್ಷರು :** ಕಾಯ್ದೆಯನ್ನು ಕುರಿತಂತೆ ಈಗ ಚರ್ಚೆಯನ್ನು ಮುಂದುವರೆಸೋಣ.

**ಶ್ರೀ ಬಿ. ದಾಸ್ (ಒರಿಸ್ಸಾ) :** ಮಾನ್ಯರೇ, ಕಲಮು ೨ರ ಕುರಿತ ಚರ್ಚೆಯು, ಇಡೀ ಮಸೂದೆ ಕುರಿತಂತೆ ಒಂದು ಸಾಮಾನ್ಯ ಚರ್ಚೆಯ ಮಟ್ಟಕ್ಕೆ ಇಳಿದಿರುವುದನ್ನು ನಾನು ನೋಡುತ್ತಿರುವೆ. ಈ ಹಿಂದೂ ಮಸೂದೆಯನ್ನು ಅಂಗೀಕರಿಸಲು ಈ ದಿನವನ್ನೇ ಕಡೆಯ ದಿನವೆಂದು ತಾವು ನಿರ್ದಿಷ್ಟ ಪಡಿಸಿರುವಿರಿ.

**ಹಲವಾರು ಮಾನ್ಯ ಸದಸ್ಯರು :** ಇಲ್ಲ ಇಲ್ಲ.

**ಶ್ರೀ ಬಿ. ದಾಸ್ :** ಕಲಮು ೨ರ ಕುರಿತು ಮುಕ್ತಾಯವೊಂದಿರಬೇಕೆಂಬುದನ್ನು ನಾನು ಬಯಸುತ್ತೇನೆ.

**ಹಲವಾರು ಮಾನ್ಯ ಸದಸ್ಯರು :** ಇಲ್ಲ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು ಮಾನ್ಯ ಸದಸ್ಯರು ಬೇಕು ಅಥವಾ ಬೇಡ ಎಂದು ಹೇಳುವ ಆವಶ್ಯಕತೆಯಿಲ್ಲ. ಮುಕ್ತಾಯ ಬೇಕೆನ್ನುವ ಗೊತ್ತುವಳಿ ಮಂಡಿಸಲು ಈಗಾಗಲೆ ಸಾಕಷ್ಟು ಚರ್ಚೆಯಾಗಿದೆ ಎಂಬುದು ಎಲ್ಲರ ಅಭಿಪ್ರಾಯವಾದಲ್ಲಿ ನಾನು ಅವರ ಮುಕ್ತಾಯಕ್ಕೆ ಅನುಮತಿ ನೀಡುವೆ. ಆದರೆ ನಾನು ಹೀಗೆ ಒಪ್ಪಿಕೊಂಡರೂ ಕೂಡ, ವಿಷಯ ಮಾತ್ರ ಸದನಕ್ಕೇನೆ ಬಿಟ್ಟಿದ್ದು. ಅವರು ಮುಕ್ತಾಯದ ಗೊತ್ತುವಳಿಯನ್ನು ಒಪ್ಪಬಹುದು ಅಥವಾ ನಿರಾಕರಿಸಬಹುದು. ಚರ್ಚೆಯ ಗತಿಯನ್ನು ನೋಡಿದರೆ, ನಾವೆಲ್ಲಾ ಒಂದು ಸರ್ವೇಸಾಮಾನ್ಯ ಹೇಳಿಕೆಯಲ್ಲಿಯೇ ಸಾಗಿದ್ದೇವೆಂಬ ಭಾವನೆ ನನಗೆ ಬರುತ್ತಿದೆ. ಆದರೂ ವಿಶೇಷವಾಗಿ ಕಲಮು ೨ ಲಕ್ಷಣದ ದೃಷ್ಟಿಯಿಂದ, ಈ ಚರ್ಚೆಯನ್ನು ಹೇಗೆ ನಿಯಂತ್ರಿಸಬೇಕೆಂಬುದು ನನಗೆ ತಿಳಿಯದಂತಾಗಿದೆ. ಕೆಲ ಸಮುದಾಯಗಳನ್ನು ಒಳಗೊಳ್ಳಬೇಕಿದೆ. ಕೆಲವನ್ನು ವಿನಾಯ್ತಿಗೊಳಿಸುವ ಅವಕಾಶಗಳನ್ನು ಕುರಿತಂತೆ ಒಂದು ಸಾಮಾನ್ಯ ಸಮೀಕ್ಷೆ ಕನಿಷ್ಠ ಒಂದು ಹಂತದವರೆಗೆ ಅವಶ್ಯವಿದೆಯೆಂದು ಅನ್ನಿಸುತ್ತಿದೆ. ಆದ್ದರಿಂದ ಆ ಅಂಶ ಕುರಿತು ನಾನು ಚರ್ಚೆಯನ್ನು ನಿಯಂತ್ರಿಸಲು ಕಷ್ಟಪಡುವಂತಾಗಿದೆ. ಆದ್ದರಿಂದ, ಯಾವ ಅಂಶವನ್ನಾಗಲಿ ಅಥವಾ ಯಾವ ವಿವರಣೆಯನ್ನಾಗಲಿ ಕೇಳುವಂಥದ್ದು ಇಲ್ಲವೆಂದು ನಾನು ನಂಬುತ್ತೇನೆ. ಮಸೂದೆಯ ಪರಿಗಣನೆಯನ್ನು ತಕ್ಷಣವೆ ಮುಂದುವರಿಸೋಣ.

***ಶ್ರೀ ಶ್ಯಾಮನಂದನ ಸಹಾಯ್ :** ಈಗ ಚರ್ಚೆಯು ಎರಡು ದಿನಪೂರ್ತಿ ನಡೆಯಿತು. ಈ ಸದನದಲ್ಲಿ ಮಾಡಿದ ಭಾಷಣಗಳೇನಾದರೂ, ಮಸೂದೆಯನ್ನು ಸ್ವಾಗತಿಸುವ ಲಕ್ಷಣಗಳನ್ನೇನಾದರೂ ದೇಶದಲ್ಲಿ ಸೃಷ್ಟಿಸಿವೆಯೇ? ಆಶಾವಾದಿಗಳು ಮತ್ತು ಮಸೂದೆಯ ಕಟ್ಟಾ ಬೆಂಬಲಿಗರೂ ಆದ ಮಾನ್ಯ ಡಾ.ಅಂಬೇಡ್ಕರ್ ಅವರಿಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಯಾವ ತೊಂದರೆಯೂ ಆಗಿರಲಾರದು.

**ಶ್ರೀ ಬಿ.ಕೆ.ವಿ ಸಿನ್ಹಾ (ಬಿಹಾರ) :** ಮಾನ್ಯರೇ ನನ್ನನೊಂದು ಪ್ರಶ್ನೆ. ಮಸೂದೆಯ ಬೆಂಬಲಿಗರಾರು ಇದುವರೆಗೂ ಮಾತಾಡಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್ :** ಅದು ಈ ಸದನದ ತಪ್ಪಾಗಲಿ ಅಥವಾ ಮಸೂದೆಯನ್ನು ಬೆಂಬಲಿಸಿದವರಾಗಲಿ ಅಲ್ಲ. ಮಸೂದೆಯನ್ನು ಬೆಂಬಲಿಸುವವನು ಎದ್ದು ನಿಂತು ಬೆಂಬಲಿಸದೆ ಇರುವುದು ಅವರ ತಪ್ಪು. ಅವರೊಳಗೆ ಎಷ್ಟು ಮಂದಿ ಹೃದಯಪೂರ್ವಕವಾಗಿ ಬೆಂಬಲಿಸುತ್ತಾರೋ, ಹೊರಗೆ ಮಾತ್ರ ಹಾಗೆ ತೋರಿಸದೆ ಇರುತ್ತಾರೋ, ನಾವಾದರೂ ತಿಳಿಯುವುದು ಹೇಗೆ?

**ಶ್ರೀಮತಿ ರೇಣುಕಾ ರಾಯ್ (ಪಶ್ಚಿಮ ಬಂಗಾಲ) :** ಮತಕ್ಕೆ ಹಾಕಿ ನೋಡಿ.

**ಶ್ರೀ ರಾಜ ಬಹುದ್ದೂರ (ರಾಜಸ್ಥಾನ) :** ನನ್ನ ಮಾತು ಸರಿಯಿದ್ದರೆ, ಮಾನ್ಯರೆ ಯಾವ ಸದಸ್ಯರು ತಿದ್ದುಪಡಿಗಳನ್ನು ಮಂಡಿಸಿದ್ದಾರೋ ಅವರನ್ನು ಕರೆಯಿರಿ.

**ಮಾನ್ಯ ಸಭಾಧ್ಯಕ್ಷರು :** ಯಾರಾದರೂ ಸರಿ, ಯಾರು ಮಸೂದೆಯನ್ನು ವಿರೋಧಿಸುತ್ತಾರೋ ಅಥವಾ ಬೆಂಬಲಿಸುತ್ತಾರೋ, ಅವರೆಲ್ಲ ಹಾಗೆ ಮಾಡಲು ಸ್ವಾಗತವಿದೆ.

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಹೀಗೆ ಹೇಳಬಹುದಾದರೆ, ಬಹುದಿನಗಳಿಂದ ಈ ಮಸೂದೆಯು, ವಿವಿಧ ಹಂತಗಳಲ್ಲಿ ದೇಶದ ಮುಂದೆ ಇರುತ್ತಾ ಬಂದಿದೆ. ಆನೇಕ ಸಂದರ್ಭಗಳಲ್ಲಿ– ಈ ಸದನದಲ್ಲಿ ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಈ ಮಸೂದೆಯ ಪರವಾಗಿ, ವಿರೋಧವಾಗಿ ಅಭಿಪ್ರಾಯಗಳು ವ್ಯಕ್ತವಾಗಿವೆ. ನನಗೆ ಈ ಬಗ್ಗೆ ಖಂಡಿತ ಶಂಕೆ ಇಲ್ಲ. ನಾವೇನಾದರೂ ಈ ಅಭಿಪ್ರಾಯಗಳನ್ನು ಸರಿಯಾಗಿ ಪರೀಕ್ಷಿಸಿದರೆ, ಕೇವಲ ಅವು ಮಸೂದೆಯ ಉಪಬಂಧಗಳಿಗೆ ವಿರೋಧ ತೋರದೆ.....

**ಶ್ರೀ ಸೋನಾವಣೆ (ಬಾಂಬೆ) :** ಮಾನ್ಯರೇ, ಕ್ರಿಯಾಲೋಪವಾಗುತ್ತಿದೆ. ನಾವೀಗ ಸಂಹಿತೆಯ ಅನ್ವಯಿಸುವಿಕೆಯ ಕುರಿತು ಕಲಮು ೨ರ ಚರ್ಚೆ ನಡೆಸುತ್ತಿದ್ದೇವೆ. ನಮ್ಮ ಚರ್ಚೆಯು ಕಲಮು ೨ರ ವ್ಯಾಪ್ತಿಯೊಳಗೆ ಇರತಕ್ಕದ್ದೇ ಹೊರತು ಸಾಮಾನ್ಯ ಚರ್ಚೆಯಾಗಕೂಡದು. ಹೀಗೆ ಮಾನ್ಯ ಸದಸ್ಯರು ಸಾಮಾನ್ಯ ಚರ್ಚೆಯನ್ನು ನಡೆಸಲು ಅವಕಾಶ ಕೊಡಲಾಗಿದೆಯೆ?

**ಶ್ರೀ ಶ್ಯಾಮನಂದನ ಸಹಾಯ್ :** ಮಾನ್ಯರೆ, ನಾನು, ನಿಮ್ಮ ಅನುಮತಿಯಿಂದ ಹೇಳ....

**ಮಾನ್ಯ ಸಭಾಧ್ಯಕ್ಷರು :** ಇದು ಕ್ರಿಯಾಲೋಪವಲ್ಲ. ಸಂಹಿತೆಯ ಅನ್ವಯಿಸುವಿಕೆಯ ಕುರಿತ ಚರ್ಚೆಯನ್ನು ನೀವು ನಡೆಸುತ್ತಿದ್ದಾಗ ಕೆಲ ನಿಮಿಷಗಳ ಹಿಂದೆ ನಾನು ನಿಮಗೆ ಹೇಳಿದ್ದೇನೆ, ನೀವು ಯಾವಾಗ ಕೆಲ ಸಮುದಾಯಗಳನ್ನು ಸೇರಿಸಬಯಸುತ್ತೀರೋ ಅಥವಾ ಕೆಲವನ್ನು ವಿನಾಯ್ತಿಗೊಳಿಸಬೇಕೆನ್ನುತ್ತಿರೋ, ಹಾಗೆ ಹೇಳಿದಾಗ ಮಾತ್ರ ಸಂಹಿತೆಯ ವಿವಿಧ ಅವಕಾಶಗಳು ಸಮುದಾಯಗಳ ಮೇಲೆ ಕೆಟ್ಟ ಪರಿಣಾಮ ಬರುತ್ತವೋ ಅಥವಾ ಒಳ್ಳೆಯದು ಮಾಡುತ್ತವೋ ಎಂಬುದನ್ನು ತೋರಿಸಲು ಸಮರ್ಥವೂ ಪ್ರಸ್ತುತವೂ ಆಗುತ್ತದೆ ಎಂದು. ಈ ಹಂತದಲ್ಲಿ, ನಿರ್ದಿಷ್ಟವಾಗಿ ಮಸೂದೆಯ ಕೆಲ ಅಂಶಗಳನ್ನು ಕುರಿತು ನಡೆಸುತ್ತಿರುವ

* ೧೯೫೧ರ ಫೆಬ್ರವರಿ ೭ನೆ ತಾರೀಖಿನ ಸಂಸದೀಯ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೮೮–೯೯

ಇಡೀ ಚರ್ಚೆಯನ್ನು ನಿಯಂತ್ರಿಸುವುದು ಬಹಳ ಕಷ್ಟ ಎಂದು ಈ ಕಾರಣಕ್ಕಾಗಿಯೇ ಹೇಳಿದ್ದೆ. ನನಗೆ ತಿಳಿದಂತೆ, ನಿನ್ನೆ ಸರ್ದಾರ್ ಹುಕುಂ ಸಿಂಗ್ ಅವರು, ಮದುವೆಯ ಮತ್ತು ಉತ್ತರಾಧಿಕಾರತ್ವದ ಪ್ರಶ್ನೆಗಳನ್ನು ಪ್ರಸ್ತಾಪಿಸಿದ್ದರು. ಅಂಥ ವಿಷಯವನ್ನು ಅಪ್ರಸ್ತುತವೆಂದು ಹೊರ ನೂಕುವುದಕ್ಕೆ ಬರುವುದಿಲ್ಲ. ಯಾಕೆಂದರೆ ಅದು ಈ ಮಸೂದೆಯ ಕಾನೂನನ್ನು ಸಿಖ್ಖರಿಗೂ ಅನ್ವಯಿಸಬಹುದೆ ಎಂಬ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತು. ವಿವಾಹ, ವಾಡಿಕೆ ಮತ್ತು ಉತ್ತರಾಧಿಕಾರತ್ವದ ವಿಚಾರಗಳಲ್ಲಿ ಈ ಮಸೂದೆಯು ಸಿಖ್ಖರ ಮೇಲೆ ಯಾವ ದುಷ್ಪರಿಣಾಮಗಳನ್ನು ಬೀರುತ್ತದೆಂದು ತೋರಿಸಲು ಅವರು ಸ್ಪಷ್ಟ ಹಕ್ಕುಳ್ಳವರಾಗಿದ್ದಾರೆ. ಹೀಗೆ ಪ್ರತಿಯೊಂದು ವಿಷಯಗಳು ಅಂತರ್ ಸಂಬಂಧ ಹೊಂದಿರುತ್ತವೆ. ಆದರೆ, ಪದೇ ಪದೇ ಇದೇ ಅಂಶಗಳು ಪ್ರಸ್ತಾಪವಾಗದಂತೆ ನೋಡಿಕೊಳ್ಳಬೇಕಿದೆ.

**ಶ್ರೀ ಸೋನಾವಣೆ :** ಆದರೆ ಮಾನ್ಯರೆ,

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು.

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಹೇಳುತ್ತಿದ್ದಂತೆ,ಇದುವರೆಗೂ ವ್ಯಕ್ತವಾದ ಅಭಿಪ್ರಾಯಗಳು ಅಗಾಧ ಪ್ರಮಾಣದಲ್ಲಿದ್ದು, ಅವು ಮಾನ್ಯ ಕಾನೂನು ಮಂತ್ರಿಗಳ ವಶದಲ್ಲಿವೆ. ಅವುಗಳನ್ನು ನಿಗಾವಹಿಸಿ ಪರೀಕ್ಷಿಸಿದರೆ, ಅವು ಕೇವಲ ಮಸೂದೆಯ ವಿವಿಧ ಉಪಬಂಧಗಳ ಬಗ್ಗೆ ಮಾತ್ರ ವಿರೋಧವನ್ನು ತೋರದೆ, ಹಿಂದೂ ಸಮುದಾಯದಲ್ಲಿ ಈ ಮಸೂದೆ ಮೇಲಿರುವ ಸಿಟ್ಟು, ಕಳವಳ ಮತ್ತು ಅಪಾರ ಕಳಕಳಿಯನ್ನು ತೋರುತ್ತದೆ. ವಿವಿಧ ನೆಲಗಟ್ಟುಗಳಲ್ಲಿ ಈ ಸಮುದಾಯವನ್ನು ನಡೆಸಬೇಕೆನ್ನುವವರು ಪ್ರಾಮಾಣಿಕ ಉದ್ದೇಶವನ್ನು ನಾನು ಬಲ್ಲೆ ಮತ್ತು ನನಗೆ ತಿಳಿದಿದೆ. ಇತಿಹಾಸದಲ್ಲಿ ಇದೇನು ಹೊಸದಲ್ಲ. ಪ್ರತಿಯೊಬ್ಬ ಸುಧಾರಕ ಅವನು ತನಗೆ ತಾನೆ ಯಾವುದು ಒಳ್ಳೆಯದು ಮತ್ತು ಉಳಿದ ವಿಚಾರಗಳನ್ನು ಕುರಿತು ಮಾನ್ಯ ಮಂಡನೆಕಾರರು ಹೇಳಿದಂತೆ ಯಾವುದು ಪುರಾತನ ಎಂದು ಯೋಚಿಸದಿದ್ದರೆ ಅವನು ಸುಧಾರಕನಾಗಲಾರ. ಆದ್ದರಿಂದ ಭವಿಷ್ಯದಲ್ಲಿ ಅಂಗೀಕರಿಸಬಹುದೋ ಅಥವಾ ಬಾರದೋ, ಅಂತಹ ಧರ್ಮವೊಂದನ್ನು ಶೋಧಿಸಿದ್ದಕ್ಕಾಗಿ ನಾನು ಮಾನ್ಯ ಕಾನೂನು ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಹಾಗೆಯೇ ಈಗಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಹೊಣೆಗಾರಿಕೆ ಕಾನೂನಾಗಿ ಈ ಮಸೂದೆಯನ್ನು ಮಾಡಿದರೆ ಅದು ಆತ್ಮಘಾತುಕ ಕ್ರಮವಾಗುತ್ತದೆ ಎಂದು ಅವರನ್ನು ಮತ್ತು ಸರ್ಕಾರವನ್ನು ನಾನು ಖಂಡಿತ ಸ್ಪಷ್ಟವಾಗಿ ಎಚ್ಚರಿಸುತ್ತೇನೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್) :** ಆತ್ಮಹತ್ಯೆ ಮಾಡಿಕೊಳ್ಳಲು ನಾವು ಸಿದ್ಧವಿದ್ದೇವೆ.

**ಶ್ರೀ ಶ್ಯಾಮ ನಂದನ ಸಹಾಯ್ :** ಈ ಸುಧಾರಣೆಯನ್ನು ಸಾಮಾಜಿಕ ಸುಧಾರಣೆಯೆಂದೋ ಅಥವಾ ಧಾರ್ಮಿಕ ಸುಧಾರಣೆಯೆಂದೋ ಮಾತ್ರ ಪರಿಗಣಿಸಬೇಕು. ಯಾವಾಗ ಕೆಲ ಗೌರವಾನ್ವಿತ ಸದಸ್ಯರು ಇದನ್ನು ಎಲ್ಲರಿಗೂ ಅನ್ವಯಿಸಬೇಕೆಂದು ಸಲಹೆ ಮುಂದಿಟ್ಟಾಗ ಯಾಕೆ ಕಾನೂನು ಮಂತ್ರಿಗಳು ನಿನ್ನೆ ಎಚ್ಚರಿಕೆ ಪತ್ರ ನೀಡಿದರೆಂಬುದು ನನಗೆ ತಿಳಿಯುತ್ತಿದೆ. ಅದಕ್ಕೆ ಸಂಬಂಧಿಸಿದಂತೆ, ಈ ದೇಶದ ಹಿಂದೂಯೇತರ ಜನರ ಭಾವನೆಗಳನ್ನು, ಮನಸ್ಸನ್ನು ನಾವುಗಳು ಪರಿಗಣಿಸಬೇಕೆಂದು ಅವರು ಆಗ್ರಹಿಸಿದ್ದಾರೆ. ಹಿಂದೂಯೇತರರ ಬಗ್ಗೆ ಅವರು ವಾದ ಮಾಡುತ್ತಿರುವಾಗ ಈ ವಿಷಯ ಕುರಿತು ಹಿಂದೂಗಳ ಭಾವನೆಗಳ ಬಗ್ಗೆ ಅವರಾವ ಕಳಕಳಿಯನ್ನು ಈಗ ತೋರುತ್ತಿಲ್ಲದಿರುವ ಬಗ್ಗೆ ನನಗೆ ಆಶ್ಚರ್ಯವಾಗುತ್ತಿದೆ. ದೇಶದ ವಿವಿಧ ಭಾಗಗಳಿಂದ ಬಂದ ಹಿಂದೂ ಸಮುದಾಯಕ್ಕೆ ಸೇರಿದ ವಿವಿಧ ಪಂಗಡಗಳ ಅಥವಾ ಕೆಲ ವರ್ಗಗಳ ಸದಸ್ಯರು ಒಬ್ಬೊಬ್ಬರಾಗಿ ಈ ಸದನದಲ್ಲಿ ಮಾತಾಡುತ್ತಾ, ಈ ಮಸೂದೆಯ ಉಪಬಂಧಗಳನ್ನು

ತಮಗೆ ಅನ್ವಯಿಸಿದಾಗ ಆಗಬಹುದಾದ ಭಾವನೆಗಳನ್ನು ವಿವರಿಸಿದ್ದಾರೆ. ಕೆಲವರ ಅಭಿಪ್ರಾಯದ ಮೇರೆಗೆ ಈ ಸುಧಾರಣೆಗಳನ್ನು ತರಬೇಕಿದೆ ಅದೂ ತ್ವರೆಯಿಂದ ತರಬೇಕಿದೆ. ಆದರೂ, ಅದನ್ನು ಕಡ್ಡಾಯ ಶಾಸನ ಮಾಡುವುದು ಉಚಿತ ಕ್ರಮವಲ್ಲವೆಂದು ನಾನು ಹೇಳುತ್ತೇನೆ. ಆದ್ದರಿಂದ ನಾನು ಅತ್ಯಂತ ಸಂತೋಷದಿಂದ ಶ್ರೀ ಜಸ್ಪತ್ ರಾಯ್ ಕಪೂರ್ ಅವರ ತಿದ್ದುಪಡಿಗೆ ನನ್ನ ಬೆಂಬಲ ಕೊಡುತ್ತೇನೆ. ಅವರು ಸಲಹೆ ಮಾಡಿದಂತೆ, ಹಿಂದೂ ಸಮುದಾಯದವರಿಗೆ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮುದಾಯದವರಿಗೆ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮಸೂದೆಯನ್ನು ಒಪ್ಪುವ ಮತ್ತು ಅದರಿಂದ ನಾವು ಆಳಲ್ಪಡುತ್ತೇವೆಂದು ತಮ್ಮ ಆತ್ಮಸಾಕ್ಷಿಗನುಗುಣವಾಗಿ ದಾಖಲು ಮಾಡುವ ಮುಕ್ತ ಅವಕಾಶವನ್ನು ಕೊಡಬೇಕು. ಮತ್ತೊಂದು ಕಡೆ ಇದನ್ನು ಒಂದು ಜಾತಿಯ ಧಾರ್ಮಿಕ ಕಾನೂನು ಎಂದು ಕರೆಯುವುದಾದರೆ, ಇಂಥ ಧಾರ್ಮಿಕ ಕಾನೂನು ಮಾಡುವುದಕ್ಕೆ ಸರಿಯಾದ ಕಾಲವಾಗಲಿ ಅಥವಾ ಧರ್ಮನಿರಪೇಕ್ಷ ರಾಷ್ಟ್ರಕ್ಕೆ ತಕ್ಕುದಾಗಲಿ ಅಲ್ಲವೆಂಬುದನ್ನು ಡಾ.ಅಂಬೇಡ್ಕರ್ ಒಪ್ಪುತ್ತಾರೆಂದು ನಾನಾದರೂ ತಿಳಿದಿದ್ದೇನೆ. ಈ ಸುಧಾರಣೆಗೆ ಸಾಮಾಜಿಕ ಸ್ವರೂಪವಿದೆ ಎಂದು ನಾನು ಪರಿಗಣಿಸುತ್ತೇನೆ. ದಾಖಲೆ ಇಡುವಂತಹ ಕಾಲ ಬಂದಂದಿನಿಂದ, ಸಾಮಾಜಿಕ ಸುಧಾರಣೆಗಳು ಆಯ್ಕೆ ಸ್ವಾತಂತ್ರ್ಯವಿರುವ ಸ್ವಭಾವದವಾಗಿರುತ್ತವೆಂದು ನಾವು ಬಲ್ಲೆವು. ಆದ್ದರಿಂದ ಜನತೆ ಅತ್ಯಂತ ಸಂತೋಷದಿಂದ ಅವುಗಳನ್ನು ಅಳವಡಿಸಿಕೊಳ್ಳುತ್ತ ಬಂದಿದ್ದಾರೆ. ನಾಗರಿಕ ಜೀವನದಲ್ಲೂ ಕೂಡ, ಒತ್ತಾಯದಿಂದ ಮತಾಂತರ ಮಾಡುವುದಕ್ಕೆ ಅನುಮತಿ ಇಲ್ಲ. ಆದ್ದರಿಂದ ಡಾ.ಅಂಬೇಡ್ಕರ್ ಅವರು, ಈಗ ಹಿಂದೂ ಮಸೂದೆಯ ಮೂಲಕ ಪ್ರಚುರ ಪಡಿಸುತ್ತಿರುವ ಧರ್ಮಕ್ಕೆ ಒತ್ತಾಯ ಮತಾಂತರದ ಯಾವುದೇ ಕ್ರಮವನ್ನು ಅಳವಡಿಸುವುದಿಲ್ಲವೆಂದು ನಾನು ಭರವಸೆ ಹೊಂದಿದ್ದೇನೆ.

ನಿನ್ನೆ ಕಾನೂನು ಮಂತ್ರಿಗಳು ಭಾಷಣ ಮಾಡುತ್ತಿದ್ದಾಗ– ಅವರು ನಾನು ಹೀಗೆ ಹೇಳುತ್ತಿರುವುದಕ್ಕೆ ದಯಮಾಡಿ ಕ್ಷಮಿಸಬೇಕು– ತಮ್ಮ ವಾದ ಕುರಿತು ಅವರು ಸ್ವಲ್ಪ ಉದ್ರಿಕ್ತರಾದಂತೆ ಕಂಡುಬಂದಿತು. ಸಾಮಾನ್ಯವಾಗಿ ಅವರು ಎಡ–ಬಲ ಅನ್ನದೆ ಬಾರಿಸುವ ಭಾಷಣವನ್ನು ಮಾಡುವ ವಿಧಾನವನ್ನು ಆಶ್ರಯಿಸುವವರಲ್ಲ. ಇಲ್ಲಾಗಲಿ ಅಥವಾ ಸಂವಿಧಾನ ಸಭೆಯಲ್ಲಾಗಲಿ, ಅತ್ಯಂತ ಕಠಿಣ ಸಂದರ್ಭಗಳಲ್ಲೂ ಅವರು ತಮ್ಮ ಸಮರ್ಥವಾದಗಳಿಗೆ ಎಲ್ಲ ಕಾಲದಲ್ಲೂ ಈ ಸದನಕ್ಕೆ ಒಳ್ಳೆಯ ಮಾದರಿಯಾಗಿರುವವರು. ಆದರೆ ನಿನ್ನೆ ಅವರು ಭಾಷಣ ಮಾಡುವಾಗ ಯಾರು ಯಾರು ತಿದ್ದುಪಡಿಗಳನ್ನು ಮಂಡಿಸಿದ್ದಾರೋ ಮತ್ತು ಅವುಗಳನ್ನು ಯಾರು ಯಾರು ಬೆಂಬಲಿಸಿದ್ದಾರೋ ಅವರನ್ನು ಎಡ–ಬಲ ಅನ್ನದೆ ತಮ್ಮ ಭಾಷಣದಲ್ಲಿ ತರಾಟೆಗೆ ತೆಗೆದುಕೊಂಡು, ಅವರನ್ನು ಅಸಂಗತ ಎಂದು ನಾನು ಸರಿಯಾದ ನೆನಪಿನಿಂದ ಹೇಳುವುದಾದರೆ ಮೂರ್ಖರಂತೆ ಮತ್ತು

**ಪಂಡಿತ ಎಂ.ಬಿ. ಭಾರ್ಗವ (ಆಜ್ಮೀರ್) :** ಮತ್ತು ವಿವೇಕಶೂನ್ಯತೆ

**ಶ್ರೀ ಶ್ಯಾಮನಂದನ ಸಹಾಯ್ :** ಹೌದು, ವಿವೇಕದ ಅಭಾವ, ಆಗಲಿ, ಅದನ್ನು ನಾನು ಒಪ್ಪದಿದ್ದರೂ, ನನ್ನನ್ನು ನೋಯಿಸಿದರೂ, ಈಗಿರುವಂತೆ ಹಿಂದೂ ಮಸೂದೆಯು ಜಾರಿಯಾಗುವ ಬಗ್ಗೆ ನಾನು ಅವರೊಂದಿಗೆ ಒಪ್ಪಲಾರೆ. ಮಸೂದೆಯ ರಚನಕಾರರೂ ಎಷ್ಟು ಗಾಬರಿಯಾಗಿದ್ದರೆಂದರೆ ಅವರು ಸ್ತಿಮಿತದಲ್ಲಿ ಇರಲಿಲ್ಲ. ಅದಕ್ಕೆ ನನಗೆ ಕೊಂಚ ಸಂತೋಷವೂ ಆಯಿತು.

**ಶ್ರೀ ಜೆ.ಆರ್. ಕಪೂರ್(ಉತ್ತರ ಪ್ರದೇಶ) :** ಯಾವಾಗ ನಮ್ಮ ವಾದ ದುರ್ಬಲವೋ ಆಗ ಎದುರಾಳಿಯನ್ನು ನಿಂದಿಸು.

**ಮಾನ್ಯ ಉಪಾಧ್ಯಕ್ಷರು :** ಸದ್ದು, ಸದ್ದು.

**ಶ್ರೀ ಶ್ಯಾಮನಂದನ ಸಹಾಯ್ :** ಈಗ ನಾವು ಕಾಯ್ದೆಯೊಳಗಿನ ಉಪಬಂಧಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸೋಣ. ಕೇವಲ ಮಸೂದೆಯನ್ನು ಅಂಗೀಕರಿಸುವುದರಿಂದ ಅದರೊಳಗಿರುವ ಭಾರಿ ತೊಂದರೆಗಳನ್ನು ನಿವಾರಿಸಲಾರೆವು ಎಂಬುದು ನಮಗೆ ತಿಳಿಯುತ್ತದೆ.

[ಆಸನದಲ್ಲೀಗ ಉಪಸಭಾಪತಿಗಳು]

ಸಾಮಾಜಿಕ ಸುಧಾರಣೆಯು ಕೇವಲ ವ್ಯಕ್ತಿಯನ್ನು ಮಾತ್ರ ಗಮನಿಸದೆ ಇಡೀ ಸಮಾಜವನ್ನು ತನ್ನ ಗಮನದಲ್ಲಿರಿಸಿಕೊಳ್ಳಬೇಕು. ಈ ಮಸೂದೆಯೊಳಗಿನ ಕೆಲ ಉಪಬಂಧಗಳನ್ನು ಬಹುಕಾಲದಿಂದ ಸಮಾಜವು ನಡೆಯುತ್ತ ಬಂದ ಮಾರ್ಗದ ಪರಿಗಣನೆಯನ್ನು ಗಮನಿಸಿದೆ. ಕಾರ್ಯಾಚರಣೆಗೆ ತಂದರೆ, ಈಗಿರುವಂತೆ ಸಮಾಜವನ್ನು ಛಿದ್ರೀಕರಣಗೊಳಿಸುವಲ್ಲಿ ಅದು ಮುಕ್ತಾಯವಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಒಂದು ವೇಳೆ ಮಸೂದೆಯೇನಾದರೂ ಅಂಗೀಕಾರಗೊಂಡಲ್ಲಿ, ಯಾರಾದರೂ ಈ ಮಸೂದೆಯಿಂದ ಆಳಲ್ಪಡಬೇಕೆಂದು ಇಚ್ಛಿಸಿದಲ್ಲಿ, ಅವರು ಅದನ್ನು ಮುಕ್ತವಾಗಿ ಒಪ್ಪಿಕೊಳ್ಳುವಂತಹ ಆಯ್ಕೆ ಸ್ವಾತಂತ್ರ್ಯ ಅವಕಾಶವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಿಂದೂ ಮಸೂದೆಯನ್ನು ಯಾರು ಹೊಂದಬೇಕೆಂದು ಆರಂಭದಲ್ಲಿ ನಿರ್ಧರಿಸಲಾಗಿತ್ತೆಂಬುದನ್ನು ಸ್ವಲ್ಪ ನೋಡೋಣ. ರಾವ್ ಸಮಿತಿ ಎಂದು ಪ್ರಸಿದ್ಧವಾಗಿದ್ದ ಹಿಂದೂ ಕಾನೂನು ಸಮಿತಿಯು ತನ್ನ ಮುಖ್ಯ ಶಿಫಾರಸಿನಲ್ಲಿ ಏನು ಹೇಳಿತ್ತು ಎಂಬುದನ್ನು ನಾನು ಸದನದಲ್ಲಿ ಉಲ್ಲೇಖಿಸಬಯಸುತ್ತೇನೆ. ಪುಟ ೧೫ರ ೫೦ನೇ ಕಲಮಿನ ಅದರ ವರದಿ ಹೀಗೆ ಹೇಳುತ್ತದೆ."

"ಈ ಸಂಹಿತೆಯಲ್ಲಿರುವ ಬಹಳಷ್ಟು ಅವಕಾಶಗಳು, ಎಂತಹ ಮೂಲಭೂತವಾದಿಯಾದರೂ ಯಾವುದೇ ರೀತಿಯ ಒತ್ತಡ ಹೇರಿ ಅಥವಾ ಹಂಗಿಗೆ ಸಿಗಿಸಿ, ಹೇರದೆ, ಅನುಮೋದನೆಗೊಳಲ್ಪಡುವ ಅಥವಾ ಅನುಕೂಲಕರ ಗುಣವುಳ್ಳವುಗಳಾಗಿವೆ. ಎಲ್ಲಾ ಹಿಂದೂಗಳಿಗೆ, ಗಂಡು ಹೆಣ್ಣುಗಳಿಗೆ, ಅವರಿಗೆ ಇಚ್ಛಿಸದ ರೀತಿಯಲ್ಲಿ ಜೀವಿಸುವ ವಿಧಾನಕ್ಕೆ ಯಾವುದೇ ರೀತಿಯ ತೊಡಕು ಅಥವಾ ಅಡ್ಡಿಬರದಂತಹ ಸ್ವತಂತ್ರವನ್ನು ಕೊಡಲು, ಇದೇ ರೀತಿಯ ಸ್ವತಂತ್ರವನ್ನು ತಮ್ಮ ಹಳೆಯ ವಿಧಾನಗಳಂತೆ ಜೀವನ ಸಾಗಿಸಲು ಇಚ್ಛಿಸುವವರಿಗೂ ಕೊಡಲು ಮಾತ್ರ ಈ ಸಂಹಿತೆ ಕಾರ್ಯಾಚರಣೆಗೆ ತರಲಿದೆ. ಈ ಶಿಫಾರಸ್ಸು ಸ್ಪಷ್ಟವಾಗಿದೆ. ಸಮಿತಿಯು ಇಡೀ ದೇಶವನ್ನು ಸುತ್ತಿ, ಹಿಂದೂ ಸಮುದಾಯದ ಅಭಿಪ್ರಾಯ ಸಂಗ್ರಹಿಸಿದನಂತರ ಈ ಶಿಫಾರಸ್ಸು ಮಾಡಿರುವುದು ಸ್ಪಷ್ಟವಾಗಿದೆ. ಬಹು ಗಂಭೀರ ದೃಷ್ಟಿಕೋನದಿಂದ ಈ ಶಿಫಾರಸ್ಸನ್ನು ಮಾಡಲಾಗಿದ್ದು, ಈ ಸಮಿತಿಯು ಈ ನಿರ್ಧಾರದಿಂದ ದೂರ ಸರಿಯಲು ಯಾವ ಕಾರಣಗಳೂ ಇಲ್ಲ ಎಂದು ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಸಂಹಿತೆಯ ಮೂಲಾಧಾರವೇ ಅವರುಗಳ ಶಿಫಾರಸ್ಸುಗಳಾಗಿದ್ದು, ನಾವೀಗ ಅವುಗಳನ್ನು ಪರಿಶೀಲಿಸುತ್ತಿದ್ದೇವೆ. ಈ ಸಮಿತಿಯು ಸಂಗ್ರಹಿಸಿದ ಅಪಾರ ಸಾಕ್ಷಿಗಳನ್ನು ಕೂಲಂಕಶವಾಗಿ ಪರಿಶೀಲಿಸಲಾಗಿದೆಯೋ ಇಲ್ಲವೋ ನನಗೆ ತಿಳಿಯದು. ಹಾಗೆ ಮಾಡದಿದ್ದರೆ, ಭಾರತ ಸರ್ಕಾರ ಕೂಡ ಮಸೂದೆಯ ಅನ್ವಯ ಕುರಿತಂತೆ, ಸಮಿತಿಯ ಶಿಫಾರಸ್ಸಿನಂತಹದ್ದೇ ಆದ ನಿರ್ಧಾರಕ್ಕೆ ಬರುತ್ತಿತ್ತೆಂಬುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ."

ಈ ಬಗ್ಗೆ ಜನಮತ ಸಂಗ್ರಹಿಸಬೇಕೆಂದು ನಿನ್ನೆ ನನ್ನ ಕೆಲ ಸ್ನೇಹಿತರು ಸಲಹೆಯೊಂದನ್ನು ಮುಂದಿಟ್ಟರು. ಈಗ ಮತ್ತೆ ಮಾನ್ಯ ಕಾನೂನು ಮಂತ್ರಿಗಳು ಅದನ್ನು ವಿರೋಧಿಸಿ, ಮತದಾರರು ಅಜ್ಞಾನಿಗಳು ಮತ್ತು ಈ ಬಗ್ಗೆ ಏನೂ ತಿಳಿಯದ ಜನರಿದ್ದಾರೆಂಬ ಅತಿರೇಕವನ್ನು ಪ್ರದರ್ಶಿಸಿದ್ದಾರೆ.

**ಶ್ರೀ ಭಾರತಿ (ಮದರಾಸು) :** ವಿಷಯದ ತಾಂತ್ರಿಕ ಆಯಾಮಗಳ ಕುರಿತಂತೆ.

**ಶ್ರೀ ಶ್ಯಾಮನಂದನ ಸಹಾಯ್ :** ಅವರ ಭಾಷಣವನ್ನು, ನನ್ನದನ್ನೂ ನೀವು ಕೇಳಿದ್ದೀರಿ. ದಾಖಲೆಗಳು ಇಲ್ಲಿವೆ. ಇದು ತಾಂತ್ರಿಕತೆಗೆ ಸಂಬಂಧಿಸಿದ ವಿಷಯವಲ್ಲ. ಅವರು ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಕಾನೂನುಗಳ ಮೂಲಕ ಏನನ್ನು ಮಾಡಲು ಬಯಸಿದ್ದಾರೆಂಬುದನ್ನು ಈ ದೇಶದ ಹಿಂದೂ ಸಮುದಾಯದ ಪ್ರತಿಯೊಬ್ಬರೂ ಪೂರ್ಣವಾಗಿ ಬಲ್ಲರು. ಇಂಥ ಪ್ರಶ್ನೆ ಕುರಿತಂತೆ ಜನಮತ ಸಂಗ್ರಹಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ ಎಂಬುದು ನನ್ನ ಅಭಿಮತ. ಯಾರು ಭಾರತದ ಸಂವಿಧಾನದ ಮುಖ್ಯಶಿಲ್ಪಿಗಳೋ, ಯಾರು ವಯಸ್ಕ ಮತದಾನವನ್ನು ಪಟ್ಟುಹಿಡಿದು ವಾದಿಸಿದರೋ, ಆ ನೆನಪಿನ ಹಿನ್ನೆಲೆಯಲ್ಲಿ, ಈಗ ಅವರು ಪ್ರಜಾಪ್ರಭುತ್ವ ತಂತ್ರಗಳ ಬಗ್ಗೆ ತುಚ್ಛವಾಗಿ ಮಾತಾಡುತ್ತಿರುವುದು ಕೇವಲ ನನಗೆ ಆಶ್ಚರ್ಯವಲ್ಲ ಒಂದು ರೀತಿಯ ದಿಗ್ಭ್ರಮೆ. ಚಿರತೆಗಳು ತಮ್ಮ ಚರ್ಮದ ಮೇಲಿನ ಗುರುತಿನ ಚುಕ್ಕೆಗಳನ್ನು ಬದಲಿಸುವುದಿಲ್ಲವೆಂದು ಹೇಳಿದ ಮಾನ್ಯ ಕಾನೂನು ಮಂತ್ರಿಗಳ ಮಾತು ಆಗ ನುಡಿದಂತೆ ಈಗಲೂ ಸತ್ಯವೇ ಆಗಿದೆ. ಎಲ್ಲೆಲ್ಲಿ ಪ್ರಜಾಪ್ರಭುತ್ವ ಆರಂಭವಾಗಿದೆಯೋ, ಮತದಾರರು ಅಕ್ಷರಸ್ಥನಾಗಬೇಕೆಂದು ಬಯಸಿ, ಅಲ್ಲಿಯ ತನಕ ಕಾದು ನಂತರ ಪ್ರಜಾಪ್ರಭುತ್ವವನ್ನು ಆರಂಭಮಾಡಿಲ್ಲವೆಂಬುದನ್ನು ಮರೆಯದಿರೋಣ. ಪ್ರಜಾಪ್ರಭುತ್ವವೆಂಬುದು ತನಗೆ ತಾನೆ ಗುರು, ನೀವು ಹೆಚ್ಚೆಚ್ಚು ಮತದಾರರನ್ನು ಸಂಪರ್ಕಿಸಿದಷ್ಟೂ ಅವನಿಗೆ ತನ್ನ ಅಭಿಪ್ರಾಯ ಹೇಳಲು ಹೆಚ್ಚು ಅವಕಾಶ ಕೊಟ್ಟಂತೆ. ಅವರು ಹೆಚ್ಚು ಹೆಚ್ಚು ಪ್ರಜ್ಞಾವಂತರಾದಂತೆ ನೀವು ಅವರನ್ನು ವಿದ್ಯಾವಂತರನ್ನಾಗಿ ಮಾಡಿದಂತೆ ಎಂಬುದನ್ನು ಮರೆಯದಿರೋಣ. ಹಿಂದೂ ಮಸೂದೆಯ ವಿಷಯವಾಗಿ ಇವೊತ್ತು ಜನಮತ ಸಂಗ್ರಹಿಸುವುದಕ್ಕಿಂತ ಮತದಾರರನ್ನು ಸಂಪರ್ಕಿಸುವುದೇ ಅತ್ಯುತ್ತಮ ಮಾರ್ಗ ಎಂಬುದನ್ನು ನಾನು ಕಾನೂನು ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಮತದಾರ ಈ ದಿನ ರಾಜಕೀಯವಾಗಿ ಅಷ್ಟರಮಟ್ಟಿಗೆ ಪ್ರಜ್ಞಾವಂತನು ಆಗಿದ್ದಾನೋ ಇಲ್ಲವೋ ಆದರೆ ಧಾರ್ಮಿಕ ಮನೋಭಾವನೆಗಳ ಮತ್ತು ಆ ವಿಷಯಗಳ ಕುರಿತು ಮತ್ತು ಧಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದಂತೆ ಅವರು ಸಂಪೂರ್ಣ ಪ್ರಜ್ಞಾವಂತರಾಗಿದ್ದಾರೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಯಾವುದೇ ಪಟ್ಟಣದ ಅಥವಾ ಹಳ್ಳಿಯ ಬೀದಿಯ ಮನುಷ್ಯನನ್ನು ಈ ವಿಷಯದಲ್ಲಿ ಯಾವುದು ಒಳ್ಳೆಯದೆಂದು ಅವನಿಗೆ ಕೇಳಿದರೆ ಅವನು ಹೇಳಲು ಸಮರ್ಥನಾಗಿದ್ದಾನೆ. ಆದ್ದರಿಂದ ಈಗಲೂ ಕೂಡ ಈ ವಿಷಯದಲ್ಲಿ ಮತದಾರರನ್ನು ಸಂಪರ್ಕಿಸಲು ಒಂದು ಅವಕಾಶ ಮತ್ತು ಸಾಧ್ಯತೆ ಮಾನ್ಯ ಮಂತ್ರಿಗಳಿಗೆ ಇದೆ ಎಂದು ನಾನು ತಿಳಿಸುತ್ತೇನೆ.

**ಮಾನ್ಯ ಒಬ್ಬ ಸದಸ್ಯರು :** ಅವರಿಗೆ ಅವರೇ ಮತದಾರ ಮಂಡಲಿ!

**ಶ್ರೀ ಶ್ಯಾಮನಂದನ ಸಹಾಯ್ :** ಈಗ ಅನ್ನಿಸುವಂತೆ, ಅವರು ಇದನ್ನು ಮಾಡದೆ ಇರಲು ಬಯಸಿದರೆ, ಈ ಕಾಯ್ದೆಯನ್ನು ಆಯ್ಕೆಯ ಸ್ವಾತಂತ್ರ್ಯವಿರುವ ಕಾನೂನು ಎಂದಾದರು ಮಾಡಲಿ. ಅವರೇನಾದರೂ ಇದನ್ನೊಂದು ಹೊಣೆಗಾರಿಕೆಯ ಕಾನೂನನ್ನಾಗಿ ಮಾಡಿದರೆ, ನನ್ನ ಎಚ್ಚರಿಕೆಯ ಮಾತುಗಳನ್ನು ಅವರು ಹೇಗೆ ಸ್ವೀಕರಿಸುತ್ತಾರೋ ನನಗೆ ಗೊತ್ತಿಲ್ಲ. ಆದರೆ ಅವರು ಪ್ರಾಚೀನ ಕಾಲದ ರಾಜರಂತೆ ತುಘಲಕ್‌ಗಳು, ಖಿಲ್ಜಿಗಳು, ಸಯ್ಯದ್‌ಗಳು ಮತ್ತು ಮೊಗಲರು ಮತ್ತು ಯಾರ್‍ಯಾರು ಡಾ.ಅಂಬೇಡ್ಕರ್ ಹೇಳಿದ ಹಾಗೆ ಅಂದಿನ ಪುರಾತನ ಧರ್ಮ ಮತ್ತು ಧಾರ್ಮಿಕ ಕಾನೂನುಗಳನ್ನು ಅಳಿಸಿಹಾಕಲು ನಡೆಸಿದ ವಿಫಲ ಯತ್ನದಂತೆ ಇವರದೂ ಆಗುತ್ತದೆ. ಈ ಪುರಾತನ ಕಾಲದ ಕಾನೂನುಗಳನ್ನು ಮುಕ್ತಾಯಗೊಳಿಸಲು ಇವರು ಮಾಡುತ್ತಿರುವ ಪ್ರಯತ್ನ, ಹೀಗೆಯೇ ಸಾವಿರಾರು ವರ್ಷಗಳಿಂದ ಅಧಿಕಾರದಲ್ಲಿ ಕೂತವರು

ಮಾಡಿದ್ದಕ್ಕೆ ಸಮವಾಗಿದ್ದರೂ ಇವರೂ ವಿಫಲರಾಗುವುದರಲ್ಲಿ ನನಗೇನೂ ಸಂದೇಹವಿಲ್ಲ. ಹಿಂದೂ ವ್ಯವಸ್ಥೆಯ ಸಾಮಾಜಿಕ ಸಂಹಿತೆಗಳಲ್ಲಿ ಕಾನೂನಿಗಿಂತ ಮೇಲ್ಪಟ್ಟದ್ದು ಏನೋ ಇದೆ. ಅದರ ಬುನಾದಿಯನ್ನು ಅತ್ಯಂತ ಆಳವಾಗಿ ಹಾಕಲಾಗಿದ್ದು, ಜನರನ್ನು ಸಂಪರ್ಕಿಸದೆ, ಅವಸರದಿಂದ ಈ ರೀತಿಯ ಕಾಯ್ದೆಗಳನ್ನು ಮಾಡಿ ಅವುಗಳನ್ನು ಅಲುಗಾಡಿಸಲಾಗದು.

ಮಾನ್ಯ ಕಾನೂನು ಮಂತ್ರಿಗಳು ಮಾತಾಡುವಾಗ, ಬಹಳ ಹಿಂದೆ ಅಮೃತ ಬಜಾರ ಪತ್ರಿಕೆಯಲ್ಲಿ ನಿರ್ದಿಷ್ಟ ದಿನದಂದು ವರ್ಷಾನುಗಟ್ಟಲೆ ಪ್ರಕಟವಾಗುತ್ತಿದ್ದ ಕತೆಗಳಲ್ಲಿ ಒಂದು ಕತೆ ನನಗೆ ನೆನಪಾಗುತ್ತಿದೆ. ಆ ಕತೆ ಒಬ್ಬ ವೃದ್ಧ ಪಂಡಿತನನ್ನು ಕುರಿತದ್ದು. ಪಂಡಿತ ಅಂದರೆ ಸಾಮಾನ್ಯವಾಗಿ ಬಡವ. ಮನೆ ನಡೆಸಲು ಕಷ್ಟಪಡುತ್ತಿದ್ದ ಅವನ ಹೆಂಡತಿ ಆಗಾಗ ಅವನನ್ನು ಹಣಕ್ಕಾಗಿ ತಗಾದೆ ಮಾಡುತ್ತಿದ್ದಳು. ಆಗೀಗ ಪಂಡಿತನ ಒಂದೋ, ಎರಡೋ ರೂಪಾಯಿಯನ್ನು ತೆಗೆದುಕೊಡುತ್ತಿದ್ದ ಮನೆ ನಡೆಸಲು. ಇದ್ದಕ್ಕಿದ್ದಂತೆ ಒಂದು ಮುಂಜಾನೆ ಅವನಿಗೊಂದು ನವೀನ ವಿಚಾರ ಹೊಳೆದು "ಹಣಕ್ಕಾಗಿ ಇನ್ನು ಮೇಲೆ ನೀನು ಯೋಚನೆ ಮಾಡಬೇಡ. ನಾನೊಂದು ತಂತ್ರವೊಂದನ್ನು ಕಂಡುಹಿಡಿದಿದ್ದೇನೆ. ಅದರಿಂದ ಲಕ್ಷ ಹಣ ಗಳಿಸಬಹುದೆಂದು" ಹೆಂಡತಿಗೆ ಹೇಳಿದ. ಆ ತಂತ್ರ ಏನು ಎಂದು ಹೆಂಡತಿ ಕೇಳಿದಳು. ಅವನು ನಾನು ಕೆಲ ದ್ವಿಪದಿಗಳನ್ನು ನಿನ್ನೆ ರಾತ್ರಿ ರಚಿಸಿದ್ದೇನೆ. ನಾಳೆ ಬೆಳಿಗ್ಗೆ ರಾಜನ ಹತ್ತಿರ ಹೋಗಿ ಅವನ ಮುಂದೆ ಇವುಗಳನ್ನು ಇಡುತ್ತೇನೆ. ಯಾರಾದರೂ ನಿಮ್ಮ ದರ್ಬಾರಿನಲ್ಲಿರುವ ಪಂಡಿತರು ಈ ಪದ್ಯಗಳನ್ನು ಅರ್ಥೈಸಿದರೆ ಅವರಿಗೆ ನಾನೊಂದು ಲಕ್ಷ ರೂಪಾಯಿ ನೀಡುತ್ತೇನೆ. ಯಾರಾದರೂ ಇದ್ದಾರೆಯೇ ಎಂದು ನಾನು ಕೇಳುತ್ತೇನೆ. ಹಾಗೆ ಯಾರೂ ನನ್ನ ಪದ್ಯಗಳನ್ನು ಅರ್ಥೈಸುವವರು ಇರದಿದ್ದರೆ, ರಾಜನು ನನಗೆ ಒಂದು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ" ಎಂದನು. ಹೆಂಡತಿ ನಕ್ಕು "ನೀನೊಬ್ಬ ಮೂರ್ಖ, ಅಕಸ್ಮಾತ್ ಯಾರಾದರೂ ನಿನ್ನ ಪದ್ಯಗಳಿಗೆ ಅರ್ಥ ಹಚ್ಚಿದರೆ, ನೀನು ರಾಜನಿಗೆ ಎಲ್ಲಿಂದ ಒಂದು ಲಕ್ಷ ರೂಪಾಯಿ ತಂದುಕೊಡುತ್ತೀಯಾ?" ಅಂದಳು. ತಿರುಗಿ ಪಂಡಿತ ನಗುತ್ತಾ "ನಿಮಗೆ ಹೆಂಗಸರಿಗೆ ಕಲ್ಪನೆಗಳು ಇರುವುದಿಲ್ಲ. ಹುಟ್ಟಿದಾರಭ್ಯ ನಿಮಗೆ ಅದು ಇಲ್ಲವೇ ಇಲ್ಲ."

**ಮಾನ್ಯ ಸದಸ್ಯರೊಬ್ಬರು :** ಇದು ನಿಮ್ಮ ಅಭಿಪ್ರಾಯವೇ?

**ಶ್ರೀ ಶ್ಯಾಮನಂದನ ಸಹಾಯ್ :** ನನ್ನದಲ್ಲ, ಇದು ಪಂಡಿತನ ಅಭಿಪ್ರಾಯ. ನಾನು ಹೆಂಗಸರ ಕುರಿತು ಅಷ್ಟು ತುಚ್ಛವಾಗಿ ಮಾತಾಡಲಾರೆ. ಮುಂದುವರೆಸುತ್ತಾ ಪಂಡಿತ ಹೇಳಿದ. "ಇದು ಬಹಳ ಸುಲಭ" ಅದು ಏನು ಎಂದು ಆಕೆ ಕೇಳಿದಳು. ಅದಕ್ಕೆ ಪಂಡಿತ "ನಾನು ಯಾರ ವ್ಯಾಖ್ಯಾನವನ್ನೂ ಒಪ್ಪುವುದಿಲ್ಲ. ಪಂಡಿತರು ಬರುತ್ತಾರೆ, ಹೋಗುತ್ತಾರೆ. ಯಾರ ಅರ್ಥಗಳನ್ನು ನಾನು ಒಪ್ಪುವುದಿಲ್ಲ. ಇದು ಅದರ ಅರ್ಥವಲ್ಲ ಎಂದು ಹೇಳುತ್ತಾ ಹೋಗುತ್ತೇನೆ. ಕಡೆಗೆ ರಾಜ ಒಂದು ಲಕ್ಷ ರೂಪಾಯಿ ಕಕ್ಕಲೇ ಬೇಕು" ಹೀಗೆ ನಾವು ಯಾವುದೇ ಸಲಹೆ, ಬುದ್ಧಿವಾದ, ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಲಿ, ಮಾನ್ಯ ಕಾನೂನು ಮಂತ್ರಿಗಳು ಆ ಪಂಡಿತನ ಭಾವನೆಯಲ್ಲಿದ್ದರೆ ನಾವೇನು ಮಾಡುವುದು? ಹೊರಗಡೆಯ ಅಭಿಪ್ರಾಯ ಏನಿದೆ ಎಂದು ಕೇಳಲು ಅವರಿಗೆ ಹೇಳಬಹುದು, ಮನವಿ ಮಾಡಬಹುದು. ಅವರಿಗೆ ಆವಶ್ಯಕವಾದ ಸುದ್ದಿಯನ್ನು ನಮ್ಮ ನಮ್ಮ ಕ್ಷೇತ್ರಗಳಲ್ಲೆಲ್ಲಾ ಅಡ್ಡಾಡಿ, ಸಂಗ್ರಹಿಸಿ ಅವರಿಗೆ ನಾವು ಕೊಡುತ್ತೇವೆಂಬುದರ ಬಗ್ಗೆ ಅವರು ನಮ್ಮನ್ನು ಅವಲಂಬಿಸಬಹುದು, ಇದರಲ್ಲಿ ನನಗಾವ ಶಂಕೆಯೂ ಇಲ್ಲ.

**ಡಾ. ಅಂಬೇಡ್ಕರ್ :** ನಿಮ್ಮಲ್ಲಿ ಇರುವುದಕ್ಕಿಂತ ಹೆಚ್ಚಿನ ವಿಷಯ ನನ್ನಲ್ಲಿದೆ.

**ಶ್ರೀ ಶ್ಯಾಮನಂದನ ಸಹಾಯ್ :** ವೈಯಕ್ತಿಕವಾಗಿ ನಾನು ಹೊಂದಿರುವ ವಿಷಯಕ್ಕಿಂತ ನೀವು ಹೆಚ್ಚು ಹೊಂದಿರಬಹುದು. ಆದರೆ ನಾನು ಸದನದ ಸದಸ್ಯರ ವಿಷಯವಾಗಿ ಮಾತಾಡುತ್ತಿದ್ದೇನೆಯೇ ಹೊರತು, ನನ್ನೊಬ್ಬನದು ಮಾತ್ರವಲ್ಲ. ನಿಮಗಿಂತ ನಾನು ಹೆಚ್ಚು ಮಾಹಿತಿ ಹೊಂದಿದ್ದೇನೆಂದು ಹೇಳುವ ಎದೆಗಾರಿಕೆ ನನಗಿಲ್ಲ.

**ಮಾನ್ಯ ಸದಸ್ಯರೊಬ್ಬರು :** ಆ ಲಕ್ಷ ರೂಪಾಯಿ ಏನಾಯಿತು?

**ಶ್ರೀ ಶ್ಯಾಮನಂದನ ಸಹಾಯ್ :** ಸರಿ,ಪಂಡಿತನು ಆ ಲಕ್ಷ ರೂಪಾಯಿ ಪಡೆದ.

**ಪಂಡಿತ ಠಾಕೂರ್ ದಾಸ್ ಭಾರ್ಗವ(ಪಂಜಾಬ್) :** ಜನರ ಅಭಿಪ್ರಾಯ ಮಸೂದೆಯ ಪರವಾಗಿಲ್ಲ ಎಂದು ಕಾನೂನು ಮಂತ್ರಿಗಳು ಈ ಸದನದ ಮುಂದೆ ಒಪ್ಪಿಕೊಂಡಿರಲಿಲ್ಲವೆ?

**ಶ್ರೀ ಶ್ಯಾಮನಂದನ ಸಹಾಯ್:** ಹಾಗೆ ಮಾಡಿದ್ದರೆ ಅವರು ನನಗೆ ಸಂತೋಷವಾಗುತ್ತದೆ. ಇದು ನನ್ನ ವಾದವನ್ನು ಬಲವಾಗಿ ಸಮರ್ಥಿಸುತ್ತದೆ. ಹಾಗಿದ್ದರೆ ಮಾನ್ಯ ಮಂತ್ರಿಗಳು ಮಸೂದೆಯ ಜೊತೆ ಈ ಸದನಕ್ಕೆ ಬರಲು ಯಾವ ಆಧಾರಗಳೂ ಇಲ್ಲ. ಯಾವುದೇ ವಿಷಯವಿರಲಿ, ನೀವು ಅಧಿಕಾರಕ್ಕೆ ಬಂದ ಕೂಡಲೆ ಅಲ್ಲಿ ತೊಂದರೆಗಳು ಉದ್ಭವವಾಗುತ್ತವೆ. ಆದ್ದರಿಂದ, ಅಧಿಕಾರದ ಹೊರತಾಗಿಯೂ–ನಾನೇ ಎಲ್ಲ ಜ್ಞಾನವನ್ನೂ ಹೊಂದಿದ್ದೇನೆಂಬ, ಎಲ್ಲಾ ವಿಷಯ ತಿಳಿದಿದೆಯೆಂಬ ಮತ್ತಾರೂ ಇದನ್ನು ಹೊಂದಿಲ್ಲವೆಂಬ ಭಾವನೆಯನ್ನು ಅವನು ಹೊಂದುತ್ತಾನೆ. ಒಮ್ಮೆ ವಿಕ್ಟೋರಿಯಾದ ರಾಣಿ, ಮಾನ್ಯ ಗ್ಲಾಡ್‌ಸ್ಟೋನ್ ಅವರಿಗೆ ಹೀಗೆ ಪ್ರತಿಕ್ರಿಯಿಸಿದ್ದರು. "ಮಾನ್ಯ ಪ್ರಧಾನಮಂತ್ರಿಗಳೇ ನಾನು ರಾಣಿ, ಇಂಗ್ಲೆಂಡಿನ ಸಾರ್ವಭೌಮಳು ಎಂಬುದು ನಿಮಗೆ ತಿಳಿದಿರಲಿ" ಎಂದಿದ್ದರು. ಅದಕ್ಕೆ ಹಿಂದಿರುಗಿಸಿ ಗ್ಲಾಡ್‌ಸ್ಟೋನ್ "ಹೌದು ರಾಜಮಾತೆಯವರೇ, ಆದರೆ ನಾನು ಇಂಗ್ಲೆಂಡಿನ ಜನತೆ" ಎಂದಿದ್ದರು. ಆದ್ದರಿಂದ ಇವತ್ತು ಮಾನ್ಯ ಕಾನೂನು ಮಂತ್ರಿಗಳು ಭಾರತದ ಸಾರ್ವಭೌಮರು ಇರಬಹುದು. ನಾವು ಭಾರತದ ಜನತೆ. ನೀವು ನಮ್ಮ ಮಾತುಗಳನ್ನು ಆಲಿಸದಿದ್ದರೆ ಸಾರ್ವಭೌಮರು ಎಲ್ಲಿಗೆ ಹೋದರೋ ನೀವು ಅಲ್ಲಿಗೆ ಹೋಗುತ್ತಿರಿ. ನೀವು ಇದನ್ನು ಇಷ್ಟಪಡುತ್ತಿರೋ ಇಲ್ಲವೋ, ಆದರೆ ಇದೇ ಸಂಭವಿಸುವುದು.

ನನ್ನ ಅಭಿಪ್ರಾಯಕ್ಕೆ ಕ್ಷಮೆ ಇರಲಿ, ಹಿಂದೂ ಮಸೂದೆಯನ್ನು, ಈಗ ತೆಗೆದುಕೊಂಡಿರುವಂತೆ ಖಂಡಿತ ತೆಗೆದುಕೊಳ್ಳಕೂಡದು. ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು ಆವಶ್ಯಕವೇ. ಯಾರಾದರೊಬ್ಬರು ಈ ಸದನದಲ್ಲಿ ಎದ್ದು ನಿಂತು "ಇಲ್ಲಿ, ನಾವು ಎಲ್ಲಿದ್ದೆವೋ ಅಲ್ಲಿಯೇ ಇರುತ್ತೇವೆ" ಎಂದು ಹೇಳುವ ಸಾಧ್ಯತೆ ಇಲ್ಲ. ಹಾಗಾದರೆ ನಾವು ಏನನ್ನು ಮಾಡಲು ನಿಮ್ಮನ್ನು ಕೇಳುತ್ತಿದ್ದೇವೆ? ನಾವು ಕೇವಲ ಈ ಕಾನೂನನ್ನು ಆಯ್ಕೆ ಸ್ವಾತಂತ್ರ್ಯವಿರುವ ಕಾಯ್ದೆಯನ್ನಾಗಿ ಮಾಡಿ ಅನ್ನುತ್ತಿದ್ದೇವೆ. ಜನ ಇದರ ಬಗ್ಗೆ ತಿಳಿಯಲು ಬಿಡಿ. ಈ ವಿಷಯದ ಬಗ್ಗೆ ಚಿಂತನೆ ಮಾಡಲು ಬಿಡಿ. ಇಡೀ ವಿಷಯವನ್ನು ಅವರು ಪರಿಶೀಲಿಸಿ, ಅದು ದೇಶದ ಒಳಿತಿಗೆ, ಸಮಾಜದ ಒಳಿತಿಗೆ ಅವಶ್ಯವಿದೆ ಎಂದೆನಿಸಿದರೆ ಅದನ್ನು ಅವರು ಒಪ್ಪುತ್ತಾರೆ. ಆದರೆ ದೇವರ ಸಾಕ್ಷಿಯಾಗಿ ಅದನ್ನು ಹೊಣೆಗಾರಿಕೆಯನ್ನಾಗಿ ಮಾಡಬೇಡಿ.

**ಶ್ರೀ ಆರ್. ವೇಲಾಯುಧನ್ (ಕೊಚ್ಚಿನ್) :** ಹಾಗಾದರೆ ಶಾಸನದ ಅರ್ಥವೇನು? ಅದನ್ನು ನಾವೇಕೆ ಹೊಂದಬೇಕು?

**ಶ್ರೀ ಶ್ಯಾಮನಂದನ್ ಸಹಾಯ್ :** ಶಾಸನ ಎಂದರೇನು ಎಂಬುದನ್ನು ಸದ್ಯವೇ ನಾನು ನಿಮಗೆ ವಿವರಿಸುತ್ತೇನೆ. ಪ್ರಾಯಶಃ ನೀವು ಸಂಸತ್‌ಗೆ ಹೊಸಬರಿರಬೇಕು. ಇಲ್ಲದಿದ್ದರೆ ನೀವು ಈ ಪ್ರಶ್ನೆ ಕೇಳುತ್ತಿರಲಿಲ್ಲ. ಏನೇ ಆಗಲಿ ಕೆಲವೇ ನಿಮಿಷಗಳಲ್ಲಿ ನಿಮಗೆ ಉತ್ತರ ಕೊಡುತ್ತೇನೆ.

**ಶ್ರೀ ಆರ್. ವೇಲಾಯುಧನ್ :** ನಾನು ಹಿಂದೂ ಮಸೂದೆಯನ್ನು ಓದಿದ್ದೇನೆ.

**ಶ್ರೀ ಶ್ಯಾಮನಂದನ್ ಸಹಾಯ್ :** ನೀವು ಹಿಂದೂ ಮಸೂದೆಯನ್ನು ಓದಿರುವಿರಿ. ಅದು ಒಳ್ಳೆಯದೆ. ಹಾಗಾದರೆ ನೀವು ನೇರವಾಗಿ ಸ್ವರ್ಗಕ್ಕೆ ಹೋಗುವಿರಿ.

ನೀವು ಕಾಯ್ದೆಯನ್ನು ಮತ್ತು ಅದರ ವಿವಿಧ ಭಾಗಗಳನ್ನು ನೋಡಿದರೆ, ಹಲವಾರು ವಿವರಗಳಲ್ಲಿ ಕೆಲವು ಆಕ್ಷೇಪಣೆಗಳು ಮಸೂದೆಯ ಒಳಗೆ ಉಳಿದಿರುವುದನ್ನು ನೀವು ಕಾಣಬಹುದು. ಎರಡು ಸಮುದಾಯಗಳು ಪಾಲಿಸುವ ಮರುಮಕ್ಕಾತಾಯಂ ಮತ್ತು ಅಳಿಯ ಸಂತಾನ ಕಾನೂನು ಕುರಿತು ಕೆಲವು ವಿಷಯಗಳನ್ನು ಮಸೂದೆಯು ಕೈಬಿಟ್ಟಿದೆ. ಯಾರು ವಿಶೇಷ ವಿವಾಹ ಕಾನೂನಿನನ್ವಯ ಮದುವೆಯಾಗಿದ್ದಾರೋ ಅಂಥ ಮದುವೆಯಾದವರು ಉತ್ತರದಾಯತ್ವ ಕಾನೂನಿಗೆ ಬದ್ಧರಾಗುವ ಅವಕಾಶ ಕಲ್ಪಿಸಲು ಉಪಕಲಮು(೪)ನ್ನು ಕೈಬಿಡುವುದಾಗಿ ನಿನ್ನೆ ಮಾನ್ಯ ಮಂತ್ರಿಗಳು ಹೇಳಿದ್ದರು.

**ಮಾನ್ಯ ಸಭಾಧ್ಯಕ್ಷರು :** ಅದು ಬಹಳ ಉದಾರವಾದದ್ದೆಂದು ಅವರು ಹೇಳಿದ್ದರು.

**ಶ್ರೀ ಶ್ಯಾಮನಂದನ ಸಹಾಯ್ :** ಸರಿ, ಅದು ಅವರಿಗೆ ಬಹಳ ಉದಾರವಾದರೆ, ಅಂಥ ಬಹಳ ಉದಾರವಾದ ಕಾನೂನು ಉಳಿದವರಿಗೇಕೆ ಉದಾರವಾಗಲಾರದು ಎಂಬುದು ನನಗೆ ತಿಳಿಯದಂತಾಗಿದೆ. ಹಿಂದೂ ಕಾನೂನನ್ನು ಸಂಹಿತೆಗೊಳಿಸುತ್ತಿರುವ ಅವರು ಇರುವ ಕಾನೂನುಗಳನ್ನೇ, ಇದೀಗ ಅನ್ವಯಗೊಳ್ಳುವಂತೆ ಪರಿಷ್ಕರಿಸಿ, ಕೆಲವು ಸುಧಾರಣೆಗಳನ್ನು ಮಾಡುತ್ತಿದ್ದಾರೆ ವಿನಹ ಹೊಸದನ್ನೇನು ಕೊಡುತ್ತಿಲ್ಲ. ನೀವು ಬಹಳ ಉದಾರಿಗಳಾಗಬೇಕೆಂದು ಬಯಸಿದಲ್ಲಿ– ನಿಮ್ಮನ್ನಾರು ತಡೆಯುತ್ತಾರೆ?

ಒಟ್ಟಾರೆ ನಿಮ್ಮ ಉದ್ದೇಶವು ವಿವಿಧ ಆದೇಶಗಳನ್ನು ವಿವಿಧ ವ್ಯಾಖ್ಯಾನಗಳನ್ನು ಗಮನಿಸಿ, ಅವುಗಳನ್ನು ಚೆನ್ನಾಗಿ ಬಳಸಿಕೊಂಡು, ಪ್ರಗತಿಪರ ಸುಧಾರಣೆಗಳನ್ನು ಅಳವಡಿಸಿಕೊಂಡು ಹಿಂದೂ ಕಾನೂನನ್ನು ಸಂಹಿತೆಗೊಳಿಸುವುದೇ ಈ ಕಾನೂನಿನ ಮುಖ್ಯ ಉದ್ದೇಶ ಎಂದು ನೀವು ಹೇಳುವುದಾದರೆ, ಉತ್ತರದಾಯಿತ್ವದ ಕಾನೂನುಗಳು ಮದುವೆಯಾದ ಹಿಂದೂಗಳ ಒಂದು ವರ್ಗಕ್ಕೆ ಬೇರೆ, ಮತ್ತೊಂದು ವರ್ಗಕ್ಕೆ ಬೇರೆ ಬೇರೆ ಏಕೆ ಎಂಬುದೇ ನನಗೆ ತಿಳಿಯುತ್ತಿಲ್ಲ. ನಿಮಗೆ ಅದನ್ನು ಮಾಡಬೇಕೆಂದು ಅಭಿಲಾಷೆ ಇದ್ದಲ್ಲಿ ಮಾಡಿ. ಮಸೂದೆ ಅಂಗೀಕಾರವಾಗಬೇಕೆಂದು ವಾದಿಸುತ್ತಿರುವ ಇಲ್ಲಿರುವ ಗೆಳೆಯರು ನಿಜಕ್ಕೂ ಅದನ್ನು ಇಷ್ಟಪಡುತ್ತಿಲ್ಲ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಹೀಗೆ ಹೇಳುತ್ತಿರುವುದಕ್ಕೆ ಕ್ಷಮಿಸಿ. ಆದರೆ ಹಾಗಲ್ಲ ಎಂದು ಮಾನ್ಯ ಕಾನೂನು ಮಂತ್ರಿಗಳು ನನಗೆ ಭರವಸೆ ನೀಡಲಿ. ಇಡೀ ದೇಶವನ್ನು ಒಂದು ನಿಶ್ಚಿತ ಆಧಾರದ ಮೇಲೆ, ಕೆಲವು ತ್ಯಾಗವನ್ನಾದರೂ ಮಾಡಿ ನಿಲ್ಲಿಸುವ ಆಶಯ ನಿಮ್ಮದಾಗಿದ್ದರೆ ಹಾಗೆ ಮಾಡಿ, ನಾವು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಈ ವಿಷಯದ ಜೊತೆ ನಿಮ್ಮೊಡನೆ ಪ್ರಾಯಶಃ ಜಗಳವಾಡಿದ ಸಮುದಾಯವೊಂದನ್ನು ಅಥವಾ ಜನರನ್ನು ಎತ್ತಿಕೊಳ್ಳುತ್ತೀರಿ, ಆಶಿಸುತ್ತೀರಿ ಅಥವಾ ಬಿಟ್ಟುಬಿಡುತ್ತೀರಿ. ನೀವು ಸಮುದಾಯವೊಂದನ್ನು ಎತ್ತಿಕೊಂಡು ನೀವು ಮಾಡಬೇಕೆಂಬುದನ್ನು ಮಾಡಿದರೆ, "ನಮ್ಮ ಧಾರ್ಮಿಕ ಸೂಕ್ಷ್ಮತೆಗಳನ್ನು ಮುಟ್ಟಬೇಡಿ' ಎಂದು ಉಳಿದವರು ಹೇಳುತ್ತಾರೆ. ಆಗಲೆ ನಿಜವಾದ ಸಮಸ್ಯೆಗಳು ಉದ್ಭವಗೊಳ್ಳುವುದು.

ಹಿಂದೂ ಮಸೂದೆಯಿದ್ದಾಗಲೂ ಕಾರ್ಯನಿರ್ವಹಿಸುತ್ತಿದ್ದ ಸಂಪ್ರದಾಯ ಕಾನೂನುಗಳನ್ನು ಈ ಸಂಹಿತೆ ಆಗಲೆ ಬಿಟ್ಟುಕೊಟ್ಟಿದೆ. ಬೇರೆ ಬೇರೆ ಸಂಪ್ರದಾಯಗಳಿಂದ ಆಳಲ್ಪಡುತ್ತಿದ್ದ ಅವರು ಹಿಂದೂ ಸಮುದಾಯಕ್ಕೆ ಸೇರಿದ್ದರೂ ಅವರಿಗೆ ಪರವಾನಿಗೆಯ ಅವಕಾಶವನ್ನು ಕಲ್ಪಿಸಲಾಗಿದೆ. ಈ ವ್ಯತ್ಯಾಸಗಳು, ಈ ಪರವಾನಿಗೆಗಳು, ಈ ಅನುಮತಿಗಳು ಇವುಗಳನ್ನೆಲ್ಲಾ ಆಳಲು ಮತ್ತೊಂದು ಕಾನೂನನ್ನು ಈ

ಸಂಹಿತೆಯಲ್ಲಿ ಜೋಡಿಸಿರುವುದನ್ನು ಕೂಡ ಕಾಣಬಹುದಾಗಿದೆ. ಆದ್ದರಿಂದ ನಾನು ಮಾನ್ಯ ಕಾನೂನು ಮಂತ್ರಿಗಳಲ್ಲಿ ಮತ್ತು ಈ ಸದನದಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ, ಈ ಮಸೂದೆಯನ್ನು ಅನುಮೋದಕರವನ್ನಾಗಿ ಮಾಡಬೇಕೆಂಬ ನಮ್ಮ ವಿನಂತಿ ದೊಡ್ಡ ಕೇಳಿಕೆಯಲ್ಲಿ ಎಂಬುದಾಗಿದೆ.

ಇನ್ನು ಕೆಲ ತೊಂದರೆಗಳು ಸಹಾ ಇದ್ದು ನಾನು ಅವುಗಳನ್ನು ಕರುಣೆ ಮತ್ತು ದಯಾದೃಷ್ಟಿಯಿಂದ ಪರಿಗಣಿಸಬೇಕೆಂದು ಕಾನೂನು ಮಂತ್ರಿಗಳ ಮುಂದಿಡುತ್ತೇನೆ. ಉದಾಹರಣೆಗೆ, ಇನ್ನು ಮುಂದೆ ಎಲ್ಲಾ ವಿಚ್ಛೇದನಗಳನ್ನು ದಾಖಲು ಮಾಡಿಸಬೇಕೆಂಬುದು ಒಂದು. ನಾನು ಯಾವಾಗ ಇದನ್ನು ಇದೊಂದೇ ಅಲ್ಲ ಸಂಹಿತೆಯ ಆ ಭಾಗದಲ್ಲಿನ ಇತರ ಕಲಮುಗಳನ್ನು ನಾನು ಓದಿದಾಗ, ಇದು ವಕೀಲರಿಗೆ ಸ್ವರ್ಗವೆಂದು ಉದ್ಗಾರ ತೆಗೆದೆ. ಇದರಿಂದ ಯಾರಿಗಾದರೂ ಲಾಭ ಮತ್ತು ಪ್ರಯೋಜನವಾಗುವುದಾದರೆ, ಅದು ಕಾನೂನು ಮಂತ್ರಿಗಳಿಗಿರುವ ನ್ಯಾಯಾಲಯದಲ್ಲಿನ ಹಳೆಯ ಸಹೋದ್ಯೋಗಿಗಳಿಗೆ. ನಾಳೆ ಈ ಕಾನೂನನ್ನು ಅಂಗೀಕರಿಸುತ್ತೀರಿ ಎಂದು ತಿಳಿಯಿರಿ, ನಾವೆಲ್ಲಾ ಇದಕ್ಕೆ ಒಪ್ಪಿ ಯಾವುದೇ ಚರ್ಚೆ ಇಲ್ಲದೆ ನಾಳೆಯೇ ಮಂಜೂರಿ ನೀಡುತ್ತೇವೆ ಎಂದು ಭಾವಿಸಿ, ನಾವು ಹೀಗೆ ಮಾಡಿದರೂ ಕೂಡ ಹಳ್ಳಿಯಲ್ಲಿ ವಾಸಿಸುವ ಜನರು ಯಾರನ್ನೂ ಅಜ್ಞಾನಿಗಳೆಂದು ಕರೆದು ಜನಮತಗಣನೆ ಸ್ವೀಕರಿಸಲು ಕಾನೂನು ಮಂತ್ರಿಗಳು ನಿರಾಕರಿಸಿದರೋ ಅಂಥ ಜನರು ನಾಳೆಯಿಂದಲೇ ತಮ್ಮ ವಿಚ್ಛೇದನ ಮತ್ತು ಎಲ್ಲಾ ಮದುವೆಗಳನ್ನು ನೋಂದಣಿ ಮಾಡುತ್ತಾರೆಯೇ? ಎಂಬುದನ್ನು ನಾವು ಗಂಭೀರವಾಗಿ ಆಲೋಚಿಸಬೇಕಿದೆ.

**ಡಾ. ಅಂಬೇಡ್ಕರ್ :** ವಿಚ್ಛೇದನಗಳನ್ನು ನೋಂದಣಿ ಮಾಡಬೇಕೆಂದು ಉಪಬಂಧವೇನೂ ಅಲ್ಲಿ ಇಲ್ಲ.

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಸಮಯ ತೆಗೆದುಕೊಂಡರೆ ದಯಮಾಡಿ ಕ್ಷಮಿಸಿ. ಸದನ ಮೇಲೇಳುವ ಮೊದಲು ನಾನು ಆ ಅವಕಾಶವಿರುವ ಪ್ರಸ್ತಾಪವನ್ನು ಮಾನ್ಯ ಮಂತ್ರಿಗಳಿಗೆ ಓದಿ ತೋರಿಸುವೆ. ಆ ಕಲಮನ್ನು ಕುರಿತು ನಾನೀಗಾಗಲೇ ತಿದ್ದುಪಡಿಯನ್ನು ಸಲ್ಲಿಸಿದ್ದೇನೆ.

**ಶ್ರೀ ಭಾರತಿ :** ನೋಂದಣಿ, ವಿವಾಹಕ್ಕೆ ಸಂಬಂಧಿಸಿದಂತೆ ಮಾತ್ರ. ವಿಚ್ಛೇದನಗಳಿಗೆ ನೋಂದಣಿ ಇಲ್ಲ. ನೀವು ತಪ್ಪು ಮಾಡುತ್ತಿರುವಿರಿ.

**ಮಾನ್ಯ ಉಪ ಸಭಾಪತಿಗಳು :** ಮಾನ್ಯ ಸದಸ್ಯರು ಹೇಳುತ್ತಿರುವುದರ ಅರ್ಥ ಕೋರ್ಟಿನ ಡಿಕ್ರಿಯ ಹೊರತಾಗಿ ಸಂಹಿತೆಯೊಳಗೆ ವಿಚ್ಛೇದನವಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್ :** ಹೌದು ಇದನ್ನೇ ಎಲ್ಲಾ ಆಶ್ರಯಿಸುತ್ತಾರೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಕನ್ನಡಿ ಮತ್ತು ಅದರ ಪ್ರತಿಬಿಂಬದ ಮಧ್ಯ ವ್ಯತ್ಯಾಸವನ್ನು ಹೇಳುವಂತಾಗಿದೆ.

ಒಳ್ಳೆಯದು, ಅದು ನೋಂದಣಿ ಅಲ್ಲದಿದ್ದರೂ ಅದು ನ್ಯಾಯಾಲಯದ ಕಾನೂನುಗಳ ಮೂಲಕ ಎನ್ನುವುದಾದರೆ, ನನ್ನ ವಾದವು ಮತ್ತಷ್ಟೂ ಬಲಗೊಳ್ಳುತ್ತದೆ. ಸುಮಾರು ಮೂವತ್ತು ಮೂರು ಕೋಟಿ ಅಗಾಧ ಜನಸಂಖ್ಯೆಯಲ್ಲಿರುವ ಅದರಲ್ಲೂ ಬಹಳಷ್ಟು ಜನ ಹಳ್ಳಿಯಲ್ಲಿ ವಾಸಿಸುವ, ಯಾವುದೇ ಕಾನೂನು, ಕಾಯ್ದೆ, ರೀತಿಗಳ ಬಗ್ಗೆ ಅರಿಯದ ಅವರೆಲ್ಲಾ ಪ್ರತಿಯೊಂದು ವಿವಾಹಕ್ಕೂ ವಿಚ್ಛೇದನಕ್ಕೂ ನ್ಯಾಯಾಲಯಕ್ಕೆ ಹೋಗುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ? ಅದು ಕೇವಲ ನೋಂದಣಿ, ಆದ್ದರಿಂದ ವಕೀಲರು ಅಲ್ಪ ಶುಲ್ಕ ಪಡೆಯುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಇದು ನ್ಯಾಯಾಲಯವಾದ್ದರಿಂದ ಇದು ವಕೀಲರಿಗೆ ಸ್ವರ್ಗವಾಗುವುದೆಂಬುದರ ಬಗ್ಗೆ ಸದನ ಮತ್ತು ಮಾನ್ಯ ಕಾನೂನು ಮಂತ್ರಿಗಳು ನನ್ನ ಜೊತೆ ಒಪ್ಪುತ್ತಾರೆಂದು ತಿಳಿದಿರುವೆ. ಇಂಥ ದೊಡ್ಡ ದೇಶದಲ್ಲಿ ಸ್ವಲ್ಪ ಸಮಯದ ನಂತರ, ನಾನು ಸರಿಯಾಗಿ ಹೇಳುವುದಾದರೆ,

ಬಹಳ ಕಾಲದ ನಂತರ, ಖಂಡಿತ ಆ ಕಾಲ ಬರುವವರೆಗೂ, ಇಂಥ ಹೊಣೆಗಾರಿಕೆಯ ಕಾನೂನನ್ನು ಅಂಗೀಕರಿಸುವುದಕ್ಕೆ ಯಾವ ನ್ಯಾಯಯುತ ಸಮರ್ಥನೆಯೂ ಇಲ್ಲ. ಅವರಿಗೊಂದು ಅವಕಾಶ ಕೊಡಿ. ಇದು ಆವಶ್ಯಕವೆಂದು ಅವರಿಗೆ ಅನ್ನಿಸಿದರೆ ಆಗ ಅದನ್ನು ಅವರು ಅಳವಡಿಸಿಕೊಳ್ಳಲಿ.

ನಾವು ಬಹಳ ಹೇಳಿದ್ದೇವೆ ಮತ್ತು ಸಂಹಿತೆ ಕೂಡ ತನ್ನದೂ ಒಂದು ಮತ್ತು ಪ್ರಗತಿಪರ ದೃಷ್ಟಿ ಎನ್ನುತ್ತಿದೆ. ನೀವು ಈ ದೇಶದ ಮಹಿಳೆಯರಿಗೆ ನಾವು ಅದನ್ನು ಕೊಟ್ಟಿದ್ದೇವೆ, ನಾವು ಇದನ್ನು ಕೊಟ್ಟಿದ್ದೇವೆ ಎಂದು ಹೇಳುವ ಮೂಲಕ ತೋರಿಸಿದ್ದೀರಿ. ನನಗನಿಸಿದಂತೆ, ನಾವು ನಿಶ್ಚಿತ ಅಂಶದವರೆಗೆ ಮಾತ್ರ ಅದರ ಬಗ್ಗೆ ಸ್ವಲ್ಪ ಹೇಳಬಹುದು. ಇವೊತ್ತು ನೀವು ಹಿಂದೂಗಳ ಸಾಮಾಜಿಕ ಸ್ಥಿತಿಯನ್ನು ಅಭ್ಯಸಿಸಿದರೆ, ತಮ್ಮ ಮನೆಯೊಳಗೆ ಇರುವ ಈ ಹೆಂಗಸರು, ಹೆಚ್ಚು ಕಮ್ಮಿ ಪ್ರತಿಯೊಬ್ಬರು ತಮಗೆ ತಾವೇ ಅಲೆಗ್ಸಾಂಡರ್‌ಗಳಾಗಿಲ್ಲವೆ? ಎಂಬುದನ್ನು ನೀವು ಒಪ್ಪಲಾರಿರಾ. ಚಕ್ರವರ್ತಿಗಳಂತೆ ಸಮೀಕ್ಷೆ ನಡೆಸುತ್ತಿರುವ ಅವರ ಸ್ಥಾನವನ್ನು ನೀವು ಈಗ ಸಂಗಾತಿಯ ಮಟ್ಟಕ್ಕೆ ಇಳಿಸಲು ಬಯಸುತ್ತಿರುವಿರಿ. ಸಂಗಾತಿ ಯಾವ ರೀತಿ ಗೌರವ ಪಡೆಯುತ್ತಾನೆಂಬುದು ನಿಮಗೆ ಗೊತ್ತಿದೆಯೆ, ಅದರಲ್ಲೂ ನೀವು ಅವಿಭಕ್ತ ಕುಟುಂಬ ಕುರಿತು ಈ ರೀತಿ ಮಾಡುತ್ತಿರುವಾಗ.

ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಸಹಭಾಗಿಗೆ ಕೆಲ ನಿಶ್ಚಿತ ಸ್ಥಾನ ಮತ್ತು ಗೌರವಗಳಿರುತ್ತವೆ. ಅಲ್ಲಿ ಅಂತರ್‌ಸಂಬಂಧವಿದ್ದು ಒಬ್ಬ ಸಹಭಾಗಿ ಮತ್ತೊಬ್ಬ ಸಹಭಾಗಿಯ ಯೋಗಕ್ಷೇಮ ನೋಡಿಕೊಳ್ಳುತ್ತಾನೆ. ಅಂಥ ಅವಿಭಕ್ತ ಕುಟುಂಬಕ್ಕೆ ನೀವು ಹೀಗೆ ಮಾಡಿ, ಮಹಿಳೆಗಿದ್ದ ಸ್ಥಾನವನ್ನು ಸಹಭಾಗಿಯ ಮಟ್ಟಕ್ಕೆ ಇಳಿಸಲು ನೀವು ಬಯಸುತ್ತಿರುವಿರಿ. ನೀವೊಬ್ಬ ಸಹಭಾಗಿಗಳಾಗಿದ್ದರೆ ನೀವು ನಿಮ್ಮದೆ ಆದ ಹಕ್ಕು ಮತ್ತು ಸ್ಥಾನಕ್ಕೆ ಬದ್ಧರು. ಆದರೆ ಇವೊತ್ತು ಮಹಿಳೆಯರು ಇಡೀ ಮನೆತನದ ಒಡೆಯರಾಗಿದ್ದಾರೆ.

**ಡಾ. ಅಂಬೇಡ್ಕರ್ :** ಹೌದು ಬಹಳ.

**ಶ್ರೀ ಶ್ಯಾಮನಂದನ ಸಹಾಯ್ :** ನಾಳೆ ನೀವು ಅವರನ್ನು ಸಹಭಾಗಿಗಳಾಗಿ ಮಾಡುತ್ತಿರುವಿರಿ.

**ಮಾನ್ಯ ಸದಸ್ಯರೊಬ್ಬರು :** ಯಾವುದರಲ್ಲಿ ಸಹಭಾಗಿಗಳು?

**ಶ್ರೀ ಶ್ಯಾಮನಂದನ ಸಹಾಯ್ :** ಆಸ್ತಿಯಲ್ಲಿ ಸಹಭಾಗಿಗಳು.

**ಮಾನ್ಯ ಸದಸ್ಯರೊಬ್ಬರು :** ಜೀವನದಲ್ಲಿ ಅಲ್ಲವೆ?

**ಶ್ರೀ ಶ್ಯಾಮ ನಂದನ ಸಹಾಯ್ :** ಆಸ್ತಿಯಲ್ಲಿ ಸಹಭಾಗಿಗಳು ಎಂದು ನನ್ನರ್ಥ. ಏನೋ ಆಕೆ ತನ್ನ ತಂದೆಯ ಮನೆಯಿಂದ ಸ್ವಲ್ಪ ಪಡೆಯಬಹುದು. ಆಕೆ ಅದರ ಒಡೆಯಳು. ತನ್ನಿಂದ ತಾನೇ ಸ್ವಲ್ಪ ಪಡೆದ ಭಾವನೆಯನ್ನು ಆಕೆ ಹೊಂದಬಹುದು. ಹೊಸದಾಗಿ ಸ್ವೀಕರಿಸಿದ ಗಂಡನ ಮನೆಯನ್ನೇ ಆಕೆ ಅವಲಂಬಿಸುವಂತೆ ನೀವು ಯಾಕೆ ಮಾಡಬಾರದು? ಆಸ್ತಿಗಳು ಸಮಸ್ಯೆಗಳನ್ನು ಸೃಷ್ಟಿಸುತ್ತವೆಂಬುದನ್ನು ನೀವೆಲ್ಲಾ ಬಲ್ಲಿರಿ. ನಾನು ಕೆಲವು ಕುಟುಂಬಗಳನ್ನು ಕೆಲವೇಕೆ ಹಲವನ್ನು ನೋಡಿದ್ದೇನೆ. ಅಲ್ಲಿ ಹೆಂಡತಿಯ ಅಧಿಕಾರ ಪತ್ರ ಗಂಡನ ಬಳಿ ಇರದೆ, ಮತ್ತಾರದೋ ವ್ಯಕ್ತಿಯಲ್ಲಿರುವುದನ್ನು ಕಂಡಿದ್ದೇನೆ.

**ಡಾ. ಅಂಬೇಡ್ಕರ್ :** ಅದಕ್ಕೆ ಬೇರೆ ಒಳ್ಳೆಯ ಕಾರಣಗಳೂ ಅಲ್ಲಿರಬಹುದು.

**ಶ್ರೀ ಶ್ಯಾಮನಂದನ ಸಹಾಯ್ :** ಹಿಂದೂ ಸಮುದಾಯವನ್ನು ಹೀಗೆಯೇ ಕುಗ್ಗುವಂತೆ ಮಾಡುತ್ತಿರುವುದು ನಿಮ್ಮ ಮಸೂದೆಯೇ. ಕೆಲವು ಜನರು ಅದನ್ನು ಇಷ್ಟಪಟ್ಟರೆ, ಆಗಲಿ, ಅವರು ಅದನ್ನು ಅಳವಡಿಸಿಕೊಳ್ಳಲು ನನ್ನದೇನು ಆಕ್ಷೇಪಣೆ ಇಲ್ಲ.

**ಶ್ರೀ ರಾಜ ಬಹದ್ದೂರ್ :** ಇನ್ನು ಮೇಲೆ ವಿಚ್ಛೇದನದ ಆವಶ್ಯಕತೆ......

**ಶ್ರೀ ಶ್ಯಾಮನಂದನ ಸಹಾಯ್:** ನಿಮ್ಮಂಥ ಯುವಜನ ವಿಚ್ಛೇದನ ಕಾಯ್ದೆ ಹೊಂದಲು ಬಹಳ

ಕಾತುರರಾಗಿದ್ದೀರೆಂಬುದನ್ನು ನಾನು ಬಲ್ಲೆ. ಆದರೆ ನಿಮ್ಮ ಕಲ್ಯಾಣ ಕುರಿತು ಬೇರೆಯವರು ಯೋಚಿಸಬೇಕಾಗಿದೆ. ಈ ಕಾಯ್ದೆ ಮಾಡುವುದರಿಂದ ಈ ಎಲ್ಲಾ ತೊಂದರೆಗಳಿವೆ. ಆದ್ದರಿಂದ, ಸದನವು ಮತ್ತು ಮಾನ್ಯ ಕಾನೂನು ಮಂತ್ರಿಗಳು ತಿದ್ದುಪಡಿಗಳನ್ನು ಒಪ್ಪಿಕೊಂಡು ಕಾಯ್ದೆಯನ್ನು ಐಚ್ಛಿಕವಾಗಿ ಮಾಡಬೇಕೆಂದು ನಾನು ಭಾಷಣ ಮುಗಿಸಿ ಆಸೀನನಾಗುವ ಮುನ್ನ ಬಲವಾಗಿ ಒತ್ತಾಯಿಸುತ್ತಿದ್ದೇನೆ. ಸರ್ಕಾರವು ಭಾವಿಸಿದಂತೆ ಹಿಂದೂಗಳು ಇದನ್ನು ಲಘುವಾಗಿ ಭಾವಿಸುವುದಿಲ್ಲವೆಂಬ ಭಯವೂ ನನಗಿದೆ. ಇದು ಇಡೀ ದೇಶವನ್ನು ಕೋಪೋದ್ರಿಕ್ತವನ್ನಾಗಿ ಮಾಡಲಿದೆ.

**ಡಾ. ಅಂಬೇಡ್ಕರ್ :** ಇಲ್ಲ.

**ಶ್ರೀ ಹಿಮತ್ ಸಿಂಗ್ ಕಾ (ಪಶ್ಚಿಮ ಬಂಗಾಳ) :** ಡಾ. ಅಂಬೇಡ್ಕರ್ ಭಯಪಟ್ಟಿಲ್ಲ.

**ಡಾ. ಅಂಬೇಡ್ಕರ್ :** ನನಗೆ ಆ ಯೋಚನೆಯೇ ಬಂದಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್ :** ಕಾನೂನು ಮಂತ್ರಿಗಳು ಭಯಗೊಂಡಿಲ್ಲವೆಂಬುದರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ಸಂಶಯವೂ ಇಲ್ಲ. ಅವರು ಹೆದರುವ ಆವಶ್ಯಕತೆಯೂ ಇಲ್ಲ. ನಾನು ಹಾಗೆ ಹೇಳಿದ್ದರ ಉದ್ದೇಶ ಕೂಡ ಅದಲ್ಲ. ಈಗ ನಾನು ಅದನ್ನೆ ಮಾಡುವೆ. ನಾನು ಯಾವಾಗ ನನ್ನ ಮತಕ್ಷೇತ್ರಕ್ಕೆ ಹೋಗಿದ್ದೆನೋ ಆಗ ಕೆಲ ಜನ ನನ್ನ ಬಳಿ ಬಂದು "ನೀವು ಮೊದಲು ಕಾಂಗ್ರೆಸ್ಸಿನವರಾಗಿರಲಿಲ್ಲ" ಅಂದರು. ಹೌದು ನಾನು ಮೊದಲು ಕಾಂಗ್ರೆಸ್ಸಿನವನಾಗಿರಲಿಲ್ಲ ಎಂದು ಹೇಳಿದೆ. ಅವರು ಹೇಳಿದರು. "ನೀವು ಮುಸ್ಲಿಂರ ಜೊತೆಯೂ ಊಟ ಮಾಡುತ್ತೀರಿ, ಕಟ್ಟಾ ಸಂಪ್ರದಾಯಿಗಳಲ್ಲ ಮತ್ತು ನೀವಂಥ ಶ್ರದ್ಧಾವಂತ ಹಿಂದೂ ಕೂಡ ಅಲ್ಲ," ಅದಕ್ಕೆ ನಾನು "ಹೌದು ಆ ದೃಷ್ಟಿಯಿಂದ ನಾನಂಥ ಕಟ್ಟಾ ಹಿಂದೂವಲ್ಲ" ಎಂದೆ. ಆಗ ಅವರು ಹೇಳಿದರು "ಆದ್ದರಿಂದಲೇ ಹಿಂದೂ ಸಂಹಿತೆಯನ್ನು ಕಂಡುಹಿಡಿದಿದ್ದೀರಿ. ಒಂದೇ ಗುಂಡಿನಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಪರಿಣಾಮ ಹೊಂದಿರುವ ಅದು, ಹಿಂದೂ ಸಮುದಾಯವನ್ನು ಹಾಗೂ ಕಾಂಗ್ರೆಸ್ಸನ್ನು ಗುರಿಯಾಗಿಸಿಕೊಂಡಿದೆಯಲ್ಲವೆ? ಕಾಂಗ್ರೆಸ್ ಸರ್ಕಾರವು ಸಾರ್ವಜನಿಕ ಅಭಿಪ್ರಾಯ ಮತ್ತು ಪರಿಸ್ಥಿತಿಗೆ ಸ್ಪಂದಿಸುವುದಿಲ್ಲವೆಂದಾದರೆ, ಅವರಿಗೆ ತಿಳಿದ ಹಾದಿಯಲ್ಲಿ ಅವರು ಹೋಗಲಿ ಬಿಡಿ. ಅವರಿಗೇನು ಮಾಡಬೇಕೆಂಬುದನ್ನು ಜನ ಮತ್ತು ದೇಶ ನಿರ್ಧರಿಸುತ್ತದೆ" ಎಂದರು.

***ಶ್ರೀ ಅಲಗೇಶನ್ (ಮದರಾಸು) :** ದುರಾದೃಷ್ಟವಶಾತ್ ನಿನ್ನೆ ಸದನವು ನಮ್ಮ ಮುಂದಿರುವ ಗಂಭೀರ ಪರಿಸ್ಥಿತಿಗೆ ಭಿನ್ನವಾದ ಭಾವನೆಯಿಂದ ಮುಳುಗಿಹೋಗಿ, ತುಂಬಾ ದೂರ ಸರಿದುಹೋಗಿತ್ತು. ಆದರೆ ಈಗ ಪುನಃ ನಮ್ಮ ಮುಂದಿರುವ ಪ್ರಶ್ನೆಯನ್ನು ಮೊದಲಿಗಿಂತಲೂ ಹೆಚ್ಚು ಗಂಭೀರವಾಗಿ ಎದುರಿಸಲು ಸರಿಯಾದ ಭಾವನೆಯನ್ನು ಗಳಿಸಿಕೊಂಡಿದೆಯೆಂಬುದು ನನಗೆ ಸಂತೋಷ ತಂದಿದೆ. ಮಸೂದೆಯನ್ನು ಮತ್ತು ತಿದ್ದುಪಡಿಗಳನ್ನು ಅಂಗೀಕರಿಸಬೇಕೆಂದು ನಿನ್ನೆ ಮಾನ್ಯ ಕಾನೂನು ಮಂತ್ರಿಗಳು ಬಹಳ ಬಿರುಸಿನ ಭಾಷಣ ಮಾಡಿದರು. ಅವರು ಯಾವಾಗಲೂ ಉತ್ಕೃಷ್ಟವಾದ ವಕೀಲರು ಅವರ ಭಾಷಣದ ವಿಷಯ ಒಪ್ಪದಿದ್ದರೂ, ಅವರ ಧೋರಣೆ ಮತ್ತು ದಾಟಿ ಅವರನ್ನು ವಿರೋಧಿಸುವವರನ್ನು ಮನವರಿಕೆ ಮಾಡುವ ಸ್ವರೂಪದಲ್ಲಿತ್ತು.

**ಶ್ರೀ ವರದರಾಮನ್ (ಮದ್ರಾಸು) :** ಆದರೆ ನಿಮಗೆ ಮನವರಿಕೆಯಾಗಲಿಲ್ಲ.

---

* ೧೯೫೧ರ ಫೆಬ್ರವರಿ ೭ನೇ ತಾರೀಖಿನ ಸಂಸದೀಯ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೪೯೯–೨೫೦೪

**ಶ್ರೀ ಸಿ.ಸುಬ್ರಮಣ್ಯ (ಮದ್ರಾಸು) :** ಆದ್ದರಿಂದಲೇ "ಬಹಳ ಹತ್ತಿರ" ಎಂದು ಅವರು ಹೇಳಿದ್ದು.

**ಶ್ರೀ ಅಲಗೇಶನ್ (ಮದರಾಸು) :** ನನಗೆ ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಲು ಇಷ್ಟವಿದೆ. ಆದರೆ ಇದನ್ನು ಹೇಳುತ್ತಿರುವುದಕ್ಕೆ ಕ್ಷಮಿಸಿ, ನನಗೆ ಮನವರಿಕೆಯಾಗಿಲ್ಲ. ಮಾನ್ಯ ಕಾನೂನು ಮಂತ್ರಿಗಳು ಸಾಮಾನ್ಯ ನಾಗರಿಕ ಸಂಹಿತೆಯನ್ನೆ ತರಬೇಕೆಂದೇ ಈಗಲೂ ನಾನು ಅವರನ್ನು ಒತ್ತಾಯಿಸುತ್ತೇನೆ. ಯಾರು ಈ ರೀತಿಯದನ್ನು ಬಯಸುತ್ತಾರೋ ಅಂಥವರ ಉದ್ದೇಶಗಳನ್ನು ಆತ ಹಾಸ್ಯ ಮಾಡಿದರೂ ನಾನು ಅದನ್ನೇ ಒತ್ತಾಯಿಸುತ್ತೇನೆ.

ಉದಾಹರಣೆಗೆ ಅವರು "ಹಿಂದೂ ಮಸೂದೆಯನ್ನು, ಜೀವನ್ಮರಣದ ಪ್ರಶ್ನೆಯಂತೆ ವಿರೋಧಿಸುವವರು ಅದು ಹೇಗೆ ಸಾಮಾನ್ಯ ನಾಗರಿಕ ಕಾನೂನು ಒಪ್ಪಿಕೊಳ್ಳುತ್ತಾರೆಂದು?" ಕೇಳಬಹುದು. ಅವರ ಉದ್ದೇಶಗಳನ್ನೂ ಪ್ರಶ್ನಿಸಬಹುದು. ಆದರೆ ನಾನು ಅತ್ಯಂತ ವಿನಮ್ರಪೂರ್ವಕವಾಗಿ ಅವರನ್ನು ಕೇಳುತ್ತೇನೆ– "ಹಿಂದೂ ಮಸೂದೆಯನ್ನು ಯಾಕಾಗಿ ಅವರು ಆಕ್ಷೇಪಿಸುತ್ತಿದ್ದಾರೆ" ಇದು ವಸ್ತುಸ್ಥಿತಿಯ ಕಾರಣದಿಂದಲ್ಲ– ಕಷ್ಟ ಸ್ವಲ್ಪವಾದರೂ ಅದು ಇಡೀ ದೇಶಕ್ಕೆ ಅನ್ವಯಿಸುವಂತಿಲ್ಲ? ಅದು ಕೇವಲ ಒಂದು ಸಮುದಾಯಕ್ಕೆ ಆ ವರ್ಗ ಎಷ್ಟೇ ದೊಡ್ಡದಿರಲಿ, ಅದಕ್ಕೆ ಮಾತ್ರ ಅನ್ವಯಿಸುವಂತಿದೆ ಎಂಬ ಕಾರಣಕ್ಕೆ. ಆದ್ದರಿಂದ ಮಸೂದೆಯು ಒಂದು ಭಾಗಶಃ ಕ್ರಮವೇ ಹೊರತು ಇದೊಂದು ಎಲ್ಲರಿಗೂ ಅನ್ವಯಿಸುವ ಸಾಮಾನ್ಯ ಕ್ರಮವಾಗಿಲ್ಲ. ಆದ್ದರಿಂದ ವಿರೋಧವು ಭಾಗಶಃವಾದರೂ ಅದಕ್ಕೆ ಅಲ್ಲ. ಅದು ಇಡೀ ದೇಶವನ್ನು ಮತ್ತು ಇಡೀ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿಲ್ಲವಲ್ಲ ಎನ್ನುವುದಕ್ಕೆ?

ಮತ್ತೂ, ಯಾರಾದರೂ ಕಾಯ್ದೆಯ ಪಠ್ಯವನ್ನು ಮಂಡಿಸುವ ಅವರ ಸಾಮರ್ಥ್ಯವನ್ನು ಶಂಕಿಸಿದರೆ, ನಾಳೆಯೇ ಆ ಕಾಯ್ದೆಯನ್ನು ಮಂಡಿಸುವುದಾಗಿ ಅವರು ಹೇಳಿದರು. ನಾಳೆಯೇ ಸಾರ್ವತ್ರಿಕ ಏಕರೂಪದ ಮಸೂದೆಯ ಪಠ್ಯವನ್ನೇ ಮಂಡಿಸಿ, ಸದನವು ಅದನ್ನು ಮಂಡಿಸುವಂತೆ ಒತ್ತಾಯಿಸುವುದಾಗಿಯೂ ಅವರು ಬೆದರಿಸಿದ್ದಾರೆ. ಆದರೆ ಮಸೂದೆ ಕುರಿತು ಅದು ಮುಖ್ಯ ವಿಷಯವಲ್ಲ. ಸಾಮಾನ್ಯ ನಾಗರಿಕ ಕಾಯ್ದೆಯ ಜೊತೆ ಸದನವನ್ನು ಮುಖಾಮುಖಿಗೊಳಿಸುವುದಾದರೆ, ಅದರ ಎಲ್ಲಾ ಮುಖಗಳನ್ನು ಒಂದೊಂದಾಗಿ ಪರಿಶೀಲಿಸುವ ಮತ್ತು ಆ ಮಸೂದೆಗೆ ತಿದ್ದುಪಡಿಗಳನ್ನು ಸೂಚಿಸುವ ಮೊದಲ ವ್ಯಕ್ತಿ ಅವರೇ ಆಗಬೇಕಾಗುತ್ತದೆ. ಭಾರತೀಯ ಉತ್ತರದಾಯಿತ್ವ ಕಾನೂನನ್ನು ಯಾವ ಕಾನೂನಿನ ಬೃಹಸ್ಪತಿಯೂ ಸುಧಾರಿಸಲಾರ ಎಂದು ನಿನ್ನೆ ಅವರು ಹೇಳಿದ್ದರು. ಆದರೆ ನನಗೆ ಖಚಿತವಾಗಿ ತಿಳಿದಿದೆ, ಇವರೆಂಥ ಕಲಾವಿದರೆಂದರೆ, ಅತ್ಯುತ್ತಮವಾದ ಕಾಯ್ದೆಯನ್ನೂ ಕೂಡ ತಿದ್ದುಪಡಿ ಮಾಡಬಲ್ಲರು. ಈ ಹಿಂದೂ ಮಸೂದೆಗೆ ಕೂಡ ಯಾವುದೇ ಸದಸ್ಯ ಸಲ್ಲಿಸಲಾರದಷ್ಟು ತಿದ್ದುಪಡಿಗಳನ್ನು ಇವರು ಸಲಹೆ ಮಾಡಿದ್ದಾರೆ. ಬೇರೆಯವರು ಬಯಸುತ್ತಾರೆ ಮತ್ತು ಇಚ್ಛಿಸುತ್ತಾರೆಂದರೆ ಅವರು ತಿದ್ದುಪಡಿಗಳ ಮೇಲೆ ತಿದ್ದುಪಡಿ ಮಾಡಬಲ್ಲರು.

ಇಷ್ಟಲ್ಲದೆ ಅವರು ಸಂಸತ್ತಿನ ಸಾರ್ವಭೌಮ ಮತ್ತು ಅತ್ಯುನ್ನತ ಗುಣಗಳನ್ನು ಹೊಗಳುತ್ತಾ ಸಾಗಿದರು. ಯಾರೂ ಇದನ್ನು ಪ್ರಶ್ನಿಸಲಿಲ್ಲ. ಆದರೆ ಈ ಸದನದ ಸಾರ್ವಭೌಮತ್ವದ ಮತ್ತು ಅದರ ಅತ್ಯುನ್ನತ ಗುಣಗಳ, ಕಂಠೋಕ್ತಿಯು, ಈ ಸಭೆಯ ಒಡೆಯನನ್ನು ಅವಮಾನಿಸುವುದರ ಪ್ರತಿಫಲವಾಗಿ ಆಗಕೂಡದು. ಇದೆ ಇದರ ದುರಾದೃಷ್ಟದ ಭಾಗ. ನಾವುಗಳು ಒಂದು ಸಾರ್ವಭೌಮ ಸಭೆಯಾದರೂ, ನಾವು ಜನರ ಇಚ್ಛೆಗೆ ಬದ್ಧರು ಮತ್ತು ನಮ್ಮ ಮಂಜೂರಿಗಳು ಜನರ ಇಚ್ಛೆಯಂತೆ.

**ಬಾಬು ರಾಮನಾರಾಯಣ ಸಿಂಗ್(ಬಿಹಾರ) :** ಕೇಳಿ, ಕೇಳಿ.

**ಡಾ. ಅಂಬೇಡ್ಕರ್ :** ಇಲ್ಲಿ ಜೀವಿಸುವ ಬದಲು ನೀವು ಹಳ್ಳಿಗೆ ಹೋಗಿ ಯಾಕೆ ಬಾಳುತ್ತಿಲ್ಲ? ಇಲ್ಲಿಗಿಂತ ನೀವು ಅಲ್ಲಿ ಒಳ್ಳೆಯ ಒಡೆಯರಾಗಬಹುದು.

**ಶ್ರೀ ಅಲಗೇಶನ್ :** ಮಾನ್ಯ ಕಾನೂನು ಮಂತ್ರಿಗಳಿಗೆ ಪ್ರತಿಕ್ರಿಯಾ ಪ್ರಶ್ನೆಯೊಂದನ್ನು ಕೇಳಬಯಸುತ್ತೇನೆ. ಯಾರು ಹಿಂದೂ ಮಸೂದೆಯನ್ನು ವಿರೋಧಿಸುತ್ತಿದ್ದಾರೋ, ಅವರು ಸಾಮಾನ್ಯ ನಾಗರಿಕ ಕಾನೂನು ಒಪ್ಪುವುದಿಲ್ಲವೆಂದು ಅವರು ಹೇಳಿದರು. ಇದು ಅಸಾಧ್ಯ. ಏಕೆಂದರೆ ಆ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಬಲ್ಲೆ ಎಂದು ಕೂಡ ಅವರು ಹೇಳಿದರು. ಇನ್ನೊಂದು ವರ್ಷದೊಳಗೆ ದೇಶದಾದ್ಯಂತ ಈ ಸಂಸತ್ತಿಗೆ ಹಾಗೂ ಬೇರೆ ಬೇರೆ ರಾಜ್ಯಗಳ ಶಾಸನಸಭೆಗಳಿಗೆ ಹೊಸ ಚುನಾವಣೆ ನಡೆಯುತ್ತದೆಂಬುದನ್ನು ಎಲ್ಲರೂ ಬಲ್ಲರು. ಈ ಸದನವು ಸಾರ್ವಭೌಮವು ಮತ್ತು ಅತ್ಯುಚ್ಚ ಅಧಿಕಾರ ಹೊಂದಿದೆಯೆಂದು, ಪ್ರತಿಯೊಂದು ವಿಷಯದ ಮೇಲೂ ಕಾಯ್ದೆ ಮಾಡುವ ಕೆಲಸವನ್ನು ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ. ಅದು ಕೆಲವು ಕಾಯ್ದೆಗಳನ್ನು ಮುಂದೂಡಬಹುದು. ಇನ್ನೊಂದು ವರ್ಷದೊಳಗೆ ಆಯ್ಕೆಯಾಗಿ ಬರುವ ಸದನಕ್ಕೆ ಕೆಲವು ಕಾಯ್ದೆಗಳನ್ನು ಮಾಡುವ ಕೆಲಸವನ್ನು ಬಿಟ್ಟುಬಿಡಬಹುದು. ಆಯ್ಕೆಯಾಗಿ ಬರುವ ಸದನವು ಹೆಚ್ಚು ಸಮಯಾವಕಾಶವನ್ನು ಹಾಗೂ ಈ ಸದನಕ್ಕಿಂತ ಹೆಚ್ಚಾಗಿ ಈ ಬಗ್ಗೆ ಜನತೆಗಿರುವ ಭಾವನೆ ಮತ್ತು ಸ್ಪಂದನಗಳನ್ನು ಚೆನ್ನಾಗಿ ಪ್ರತಿಸ್ಪಂದಿಸುವಂತಹದ್ದೂ ಆಗಿರುತ್ತದೆಂಬುದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಒಪ್ಪುತ್ತಾರೆಂಬುದರ ಬಗ್ಗೆ ನನಗಾವ ಶಂಕೆಗಳೂ ಇಲ್ಲ. ಅಂಥ ಸದನವು ಇಂಥ ಸದನಕ್ಕಿಂತ, ಈ ಕಾಯ್ದೆಯನ್ನು ಕಾನೂನೀಕರಣಗೊಳಿಸುವಲ್ಲಿ ಹೆಚ್ಚು ಸಮರ್ಥವಾಗಿರುತ್ತದೆಂಬುದನ್ನು ಅವರು ಒಪ್ಪಲು ಸಿದ್ಧರಿಲ್ಲವೆ? ಇದನ್ನು ಮಾಡುವ ಆಯ್ಕೆಯನ್ನು ಅವರು ಅಂಗೀಕರಿಸದಿದ್ದಲ್ಲಿ, ಇನ್ನು ಮುಂದೆ ಬರಲಿರುವ ಸದನದ ಕೈಗೆ ಈ ವಿಷಯವನ್ನು ಅವರು ಒಪ್ಪಿಸಲು ಸಿದ್ಧರಾದಂತಿಲ್ಲ. ಆ ಸದನವು ಈ ಕ್ರಮವನ್ನು ಮಂಜೂರು ಮಾಡಲಾರದೆಂಬುದರ ಬಗ್ಗೆ ಅವರಿಗಿರುವ ಭಯವೇ ಇದಕ್ಕೆ ಕಾರಣ. ನನಗೆ ಇಷ್ಟವಿರದಿದ್ದರೂ, ನಾನು ಅವರು ಇಂಥ ಉದ್ದೇಶ ಹೊಂದಿದ್ದಾರೆಂದು ಆಪಾದಿಸಲೇ? (ಮಾನ್ಯ ಸದಸ್ಯರೊಬ್ಬರು ನೀವು ಅದನ್ನೇ ಮಾಡಿದ್ದೀರಿ) ಈ ದೇಶದಲ್ಲಿ ಹೊಸದಾಗಿ ಬರಲಿರುವ ಹೊಸ ಸಂಸತ್ತಿನ ಮುಂದೆ ಈ ಎಲ್ಲಾ ಹಿಂದೂ ಕಾನೂನಿನ ಸಮಗ್ರ ಸಂಹಿತೆಯನ್ನು ಇಡಲು ಯಾಕೆ ಹಿಂಜರಿಕೆಯ ಸಂಕೋಚ ಅವರು ತೋರುತ್ತಿದ್ದಾರೆ? ಈ ಪ್ರಶ್ನೆಗೆ ಸಮಾಧಾನಕರ ಉತ್ತರವನ್ನು ಅವರೇ ಕೊಡಬೇಕು ಎಂದು ನಾನು ಬಯಸುತ್ತೇನೆ.

ಪ್ರಸ್ತುತ ಸರ್ಕಾರದ ವಿರುದ್ಧ ಮುಖ್ಯ ದೂರನ್ನು ಯಾರಾದರೂ ಹೇಳಬಹುದಾದರೆ ಅದು ಇದು. ನಮ್ಮ ಕ್ರಾಂತಿಯ ಜಯದ ನಂತರ ನಾವು ಉಳಿದೆಲ್ಲಾ ವಲಯಗಳಿಗಿಂತ, ನಾವುಗಳು ಮನೋವೈಜ್ಞಾನಿಕ ವಲಯದಲ್ಲಿ ಬಹಳಷ್ಟು ಅಪಜಯ ಅನುಭವಿಸಿದ್ದೇವೆ. ಜನರಲ್ಲಿ ಉತ್ಸಾಹ ತುಂಬಲು ನಾವು ಸೋತಿದ್ದೇವೆ. ಅವರನ್ನು ಒಂದುಗೂಡಿಸುವ ಏಕಮಾತ್ರ ಸಾಧನವಾದ ಭಾವನಾತ್ಮಕ ಅಂಶವನ್ನು ಹುರುಪುಗೊಳಿಸುವಲ್ಲೂ ವಿಫಲರಾಗಿದ್ದೇವೆ. ಪ್ರತಿಯೊಬ್ಬರೂ ಆ ವಿಷಯದಲ್ಲಿ ಚಿಂತಾಕ್ರಾಂತರಾಗಿದ್ದಾರೆ ಯಾಕೆ? ನಾವು ಈ ವಿಷಯವನ್ನು ಪರಿಗಣಿಸುತ್ತಿರುವುದು ಒಳ್ಳೆಯದು ಮತ್ತು ಇದನ್ನು ಸ್ವಲ್ಪ ಗಂಭೀರವಾಗಿ ಪರೀಕ್ಷಿಸಬೇಕು. ಎಲ್ಲವನ್ನೂ ಮುಂದಕ್ಕೆ ಹಾಕುವ ನೀತಿಯ ಆಧಾರದ ಮೇಲೆ ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಜನರ ಮನಸ್ಸನ್ನು ಆಕರ್ಷಿಸುವ ಯಾವುದೇ ಹೊಸತನ್ನು ಮಾಡಿ ತೋರದೆ ಹಳೆಯ ಸಂಪ್ರದಾಯಗಳ ಮೇಲೆ ಸುಮ್ಮನೆ ನಡೆದಿದ್ದೇವೆ. ಈ ವಿಷಯದಲ್ಲಿ ಈ ಹಿಂದೂ ಮಸೂದೆ ಕೂಡ ಒಂದು ಅಂಶವೆ. ವಿಭಿನ್ನವಾದ ಪರಿಸ್ಥಿತಿಯಲ್ಲಿ ಅದರ ರೂಪುರೇಷೆ ತಯಾರಾಗಿ, ಯಾವುದು ಹಿಂದೂ ಎನ್ನುವುದು ಇದೆಯೋ

ಅದು ತಪ್ಪು, ಅದನ್ನು ಸರಿಮಾಡಲು ಸಾಧ್ಯವಿಲ್ಲ ಎಂಬ ಹಿನ್ನೆಲೆಯಲ್ಲಿ ತಯಾರಾಗಿದೆ. ನಾವು ಸುಧಾರಣೆ ಬಯಸುತ್ತೇವೆ, ನಾವು ಬದಲಾವಣೆ ಬಯಸುತ್ತೇವೆ, ಆದರೆ ಸ್ವಲ್ಪವಾದರೂ ಸರಿಯಾದ ಪ್ರಶಂಸೆ ಇದ್ದರೆ ಮಾತ್ರ ಎಂಬುದು ನನ್ನ ಅಭಿಪ್ರಾಯ. ನಾವು ಸುಮ್ಮನೆ ಮುಂದಕ್ಕೆ ಹಾಕುತ್ತಿದ್ದೇವೆ. ಹಿಂದೂ ಸಮುದಾಯಕ್ಕೆ, ಅದು ಬಹುದೊಡ್ಡ ಸಮುದಾಯವಾಗಿದ್ದರೂ ಕೂಡ ಅದಕ್ಕೆ ಅನ್ವಯವಾಗುವಂತಹ ಮಸೂದೆಯೊಂದನ್ನು, ಹಿಂದೂ ಮಸೂದೆಯ ಆದರ್ಶದಲ್ಲಿ ತಯಾರಿಸಲು ಪ್ರಯತ್ನಿಸುತ್ತಿದ್ದೇವೆ.

ಇದಕ್ಕೆ ಕಾರಣವೇನೆಂದರೆ, ನಾವು ಹೊಸ ದೃಷ್ಟಿಕೋನವನ್ನು ಮೂಡಿಸಲು ವಿಫಲವಾಗಿರುವುದರಿಂದ, ನಾವು ಗೊಂದಲದಲ್ಲಿ ಸಿಲುಕಿದ್ದೇವೆ. ಜನತೆಗೆ ಭಾವನಾತ್ಮಕ ಮನವಿಗಳನ್ನು ಮಾಡಬೇಕಾದುದೆಲ್ಲಾ ನಮ್ಮಲ್ಲಿ ಇದೆಯಾದರೂ ನಾವು ಈ ದಿಸೆಯಲ್ಲಿ ದಾರುಣವಾಗಿ ವಿಫಲರಾಗಿರುವೆವು. ಎಲ್ಲಾ ನಿಪುಣ ಕಲಾವಿದರಿದ್ದೂ ಪ್ರೇಕ್ಷಕರ ಮೆಚ್ಚುಗೆಗಳಿಸಲು ವಿಫಲವಾದಂತಹ ನಾಟಕಕ್ಕೆ ನಾನು ನಮ್ಮ ನಿರ್ವಹಣೆಯನ್ನು ಹೋಲಿಸಲಿಚ್ಛಿಸುವೆನು.

ಈ ವಿಧಾನವನ್ನು ತರುವ ಮೂಲಕ ನಾವು ರಾಷ್ಟ್ರದಲ್ಲಿ ಎಂಥ ಪ್ರತಿಕ್ರಿಯೆಯನ್ನು ಹುಟ್ಟುಹಾಕಿದ್ದೇವೆ? ಒಂದು ವೇಳೆ ಪ್ರತಿಯೊಬ್ಬರಿಗೂ ಅನ್ವಯವಾಗುವಂತಹ ಸಂಹಿತೆಯನ್ನು ಜಾರಿಗೊಳಿಸಿದ್ದರೆ, ಆಗ ದೇಶದ ವಾತಾವರಣದಲ್ಲಿ ಮಿಂಚಿನ ಬದಲಾವಣೆಯನ್ನು ತಕ್ಷಣ ತರಬಹುದಿತ್ತು. ಈಗಿರುವ ಸ್ಥಿತಿಗಿಂತ, ಅಂಥ ವಿಧಾನದಿಂದ ಒಂದು ವಾಸ್ತವತೆಯ ವಾತಾವರಣವು ಮೂಡಬಹುದಿತ್ತು. ಅದನ್ನು ಮಾಡಲು ನಾವು ಸೋತುಹೋಗಿದ್ದೇವೆ. ಆ ರೀತಿ ಮಾಡಿದ್ದರೆ ಈಗಿರುವುದಕ್ಕಿಂತಲೂ, ಧರ್ಮನಿರ್ಲಿಪ್ತ ಪ್ರಜಾಪ್ರಭುತ್ವದ ಆಶಯದಂತೆ ನಾವು ಜಾತಿ ಮತ್ತು ಧಾರ್ಮಿಕ ವೈಷಮ್ಯಗಳ ವಿರುದ್ಧ ಗದಾಪ್ರಹಾರ ಮಾಡಲು ಹೊರಟಿದ್ದೇವೆಂದು ದೇಶಕ್ಕೆ ಮನವರಿಕೆ ಮಾಡಿಕೊಡಲು ಅನುಕೂಲವಾಗುತ್ತಿತ್ತು. ನಾವು ನಮ್ಮ ಧರ್ಮ ನಿರ್ಲಿಪ್ತ ಪ್ರಜಾಪ್ರಭುತ್ವ ವ್ಯವಸ್ಥೆಯ ಆದರ್ಶವನ್ನು ಸಾಕ್ಷಾತ್ಕಾರಗೊಳಿಸಬಹುದಿತ್ತು ಹಾಗೂ ಈ ಕುರಿತು ಪ್ರತಿಯೊಬ್ಬರಿಗೂ ಮನವರಿಕೆ ಮಾಡಬಹುದಿತ್ತು. ಆದರೆ ಈಗ ಸದನದ ಹೊರಗೆ ಫಲಕ ಹೊತ್ತ ಪ್ರದರ್ಶನಕಾರರು ಮತ್ತು ಪೊಲೀಸ್ ಕಾವಲನ್ನು ಹೊರತುಪಡಿಸಿದರೆ ಒಂದು ಗದ್ದಲದ ಅಲೆಯೂ ಇಲ್ಲ, ಒಳಗೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂದರ್ಭಾನುಸಾರ ವಿವಿಧ ಬಣ್ಣಗಳ ಸೀರೆ ಧರಿಸಿದ ಮಹಿಳೆಯರನ್ನು ಹೊರತುಪಡಿಸಿದರೆ ಮತ್ತಾರೂ ಇಲ್ಲ. ಈ ವಿಷಯದಲ್ಲಿ ನಾವು ಹೆಚ್ಚಿನ ಆಸಕ್ತಿಯನ್ನು ಮೂಡಿಸುವಲ್ಲಿ ವಿಫಲವಾಗಿರುವೆವು. ಒಂದು ವೇಳೆ ಮಾನ್ಯ ಕಾನೂನು ಮಂತ್ರಿಗಳು ಸಕಲ ಸಮುದಾಯಗಳಿಗೆ ಅನ್ವಯವಾಗುವಂತಹ ಸಾಮಾನ್ಯ ಮಸೂದೆಯನ್ನು ಮಂಡಿಸಿದ್ದರೆ ಇಡೀ ದೇಶ ಅದರಲ್ಲಿ ಆಸೆ ತೋರಿಸಬಹುದಿತ್ತು. ಹಾಗೂ ಅದರ ಬಗ್ಗೆ ಹೆಚ್ಚು ವಾಸ್ತವವಾದಿಯಾಗಿ ಸ್ಪಂದಿಸಬಹುದಿತ್ತು. ಹಾಗೆ ಮಾಡಿದ್ದರೆ ನಮ್ಮ ದೇಶದ ಹೊರಗಿನ ಪ್ರತಿಕ್ರಿಯೆ ಕೂಡ ಹೆಚ್ಚು ಉತ್ತಮವಾಗಿರಬಹುದಿತ್ತು. ಯಾಕೆಂದರೆ ಈಗ ಹೊರ ಜಗತ್ತಿನಲ್ಲಿನ ಕೆಲ ಹಿತಾಸಕ್ತಿ ಸಮೂಹಗಳು ನಮ್ಮನ್ನು ಜಾತಿಗಳಿಗೆ ಅಂಟಿಕೊಂಡ ಜನರಿಗೆ ಅಣಕಿಸುತ್ತಿದ್ದಾರೆ. ಇದರಿಂದ ನಮ್ಮ ಗೌರವಕ್ಕೆ ಧಕ್ಕೆ ತಾಗುತ್ತಿದೆ.

ಅಲ್ಲದೆ, ಹಿಂದೂ ಕಾನೂನನ್ನು ಬೇರೆ ಕೋಮಿನವರು ಅಪ್ಪಿಕೊಂಡ ಉದಾಹರಣೆಗಳಿವೆ. ಮಲಬಾರಿನ ಮೋಸ್ಲಾಗಳು ಕುಚ್‌ನ ಮೋಹಿನರು ಹಾಗು ಖೋಜಾ ಕೋಮಿನವರು, ಆಗಾಖಾನರ ಅನುಯಾಯಿಗಳು ಇವರೆಲ್ಲಾ ಹಿಂದೂ ಕಾನೂನನ್ನು ಪಾಲಿಸುತ್ತಿದ್ದರು ಹಾಗೂ ೧೯೩೭ರಲ್ಲಿ ಶರಿಯತ್ ಕಾನೂನು ಜಾರಿಗೆ ಬರುವವರೆಗೆ ಅವರೂ ಹಿಂದೂ ಕಾನೂನಿನ ಹಿಂಬಾಲಕರಾಗಿದ್ದರೆಂದು ನನಗೆ ತಿಳಿದಿದೆ. ಅಷ್ಟೇ ಏಕೆ 'ಪಾಕಿಸ್ತಾನದ ರಚನಕಾರ'ಕೂಡ ಹಿಂದೂ ಕಾನೂನಿನಿಂದ ಆಳಲ್ಪಟ್ಟಿದ್ದರೆಂದು ನಾನು ಅರಿತಿದ್ದೇನೆ. ಹೀಗಿರುವಾಗ ಹಿಂದೂ, ಮುಸ್ಲಿಮ್, ಕ್ರೈಸ್ತರು ಹಾಗೂ ಉಳಿದೆಲ್ಲರಿಗೂ ಸಾಮಾನ್ಯವಾಗಿ ಅನ್ವಯವಾಗುವಂತಹ ಸಾಮಾನ್ಯ

ನಾಗರಿಕ ಸಂಹಿತೆಯನ್ನು ತರಲು ನೀವೇಕೆ ನಾಚಿಕೆಪಡಬೇಕು.

ನಿನ್ನೆ ಮಾನ್ಯ ಕಾನೂನು ಮಂತ್ರಿಗಳು ನನ್ನ ಗೆಳೆಯ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರ ಭಾಷಣದಿಂದ ತುಂಬಾ ಸಂತೋಷಪಟ್ಟಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಮಸೂದೆಯನ್ನು ಮುಕ್ತಕಂಠದಿಂದ ಹೊಗಳಿದರು. ಈ ಮಸೂದೆಯನ್ನು ಅದೊಂದು ಯೋಗ್ಯ ಕ್ರಮವೆಂದು ವಿಚಾರಿಸಿ ತಂದುದಕ್ಕಾಗಿ ಕಾನೂನು ಮಂತ್ರಿಗಳ ಮೇಲೆ ಅಭಿನಂದನೆಗಳ ಸುರಿಮಳೆ ಸುರಿದರು. ಹಾಗೆಯೇ ಅವರೊಂದು ಮಹತ್ವದ ನಿಬಂಧನೆಯನ್ನು ಕೂಡ ಮಂಡಿಸಿದರು. ಇಷ್ಟೆಲ್ಲವನ್ನೂ, ಅವರು ಈ ಮಸೂದೆ ಪಂಜಾಬಿಗೆ ಅನ್ವಯಿಸಬಾರದೆಂಬ ನಿಬಂಧನೆಯ ಮೇಲೆ ಹೇಳಿದರು. ಈ ಮಸೂದೆಗೆ ತಿದ್ದುಪಡಿ ಮಂಡಿಸಿದವರೆಲ್ಲಾ, ಇತರ ಸಮುದಾಯಗಳನ್ನು, ಹಿಂದೂಯೇತರರನ್ನು ಈ ಮಸೂದೆಯೊಳಕ್ಕೆ ಎಳೆಯುವ ಪ್ರಯತ್ನ ನಡೆಸುತ್ತಿದ್ದಾರೆಂದು, ಇಂಥ ಒತ್ತಡವನ್ನು ಸಹಿಸಿಕೊಳ್ಳಲು ಈ ಸದನದಲ್ಲಿರುವ ಹಿಂದೂಯೇತರರು ಸಿದ್ಧರಾಗಿದ್ದಾರೆಯೇ ಎಂದು ಪ್ರಶ್ನಿಸಿದರು. ಆದರೆ ಅವರೇ ತಮ್ಮ ಪ್ರಶ್ನೆಗೆ ನಕಾರಾತ್ಮಕ ಉತ್ತರ ನೀಡಿದರು. ಆದರೆ ನಾನು, ಈ ಸದನದೊಳಗಿನ ಹಿಂದೂಯೇತರ ಸದಸ್ಯರ ಜೊತೆ ಸಂವಾದ ನಡೆಸಿದ್ದೇನೆ, ಅವರೆಲ್ಲಾ ಸಾಮಾನ್ಯ ಮಸೂದೆಗೆ ಒಪ್ಪಿಕೊಂಡಿದ್ದಾರೆ.

**ಡಾ. ಅಂಬೇಡ್ಕರ್** : ಹಿಂದೂಯೇತರರನ್ನು?

**ಶ್ರೀ ಅಲಗೇಶನ್** : ಹೌದು, ಹಿಂದೂಯೇತರರನ್ನೇ.

**ಶ್ರೀ ಭಾರತಿ** : ನನಗೆ ಆ ಸದಸ್ಯರ ಹೆಸರುಗಳನ್ನು ಕೊಡುವಿರಾ?

**ಶ್ರೀ ಅಲಗೇಶನ್** : ಮಾನ್ಯ ಸದಸ್ಯರು ನಂತರ ಇದನ್ನು ನನ್ನಿಂದ ಪಡೆಯಬಹುದಲ್ಲವೆ? ಆದರೆ ಈಗಿರುವಂತೆ ನಾವು ಈ ಸದನದ ಹಿಂದೂಯೇತರ ಸದಸ್ಯರಿಗೆ ದೊಡ್ಡ ಅನ್ಯಾಯ ಮಾಡುತ್ತಿದ್ದೇವೆ. ಅವರು ಈ ಚರ್ಚೆಯಲ್ಲಿ ಭಾಗವಹಿಸಲು ಆಸಕ್ತಿ ತೋರಿಸಲು ಶಕ್ತವಾಗದಂತಾಗಿದೆ.

**ಡಾ. ಅಂಬೇಡ್ಕರ್** : ಅದು ಹೇಗೆ? ಶ್ರೀ ನಜೀರುದ್ದೀನ್ ಅಹ್ಮದ್ ಭಾಗವಹಿಸಿದ್ದರು.

**ಶ್ರೀ ಅಲಗೇಶನ್** : ಅವರು ತಮ್ಮ ಕಕ್ಷಿದಾರರ ಅಭಿಪ್ರಾಯಗಳನ್ನು ಮಾತ್ರ ವ್ಯಕ್ತಪಡಿಸುತ್ತಾರೆ. ಆದರೆ ಉಳಿದ ಹಿಂದೂಯೇತರ ಸದಸ್ಯರು ಸದನದಲ್ಲಿ ಹಿಂದುಗಡೆ ಕೂತು ಹಾಯಾಗಿದ್ದಾರೆ. ಅವರು ಯಾವುದೇ ಚರ್ಚೆಯಲ್ಲಿ ಭಾಗವಹಿಸುವ ಆಸಕ್ತಿಯನ್ನು ತೋರಿಸುತ್ತಿಲ್ಲ. ಒಂದು ವೇಳೆ ಮಸೂದೆಯನ್ನು ಬೆಂಬಲಿಸಿದರೆ ಹಿಂದೂ ಜನಾಂಗದ ಮಡಿವಂತರ ಸೂಕ್ಷ್ಮ ಭಾವನೆಗಳಿಗೆ ನೋವುಂಟು ಮಾಡಬಹುದೆಂಬ ಹೆದರಿಕೆ. ಒಂದು ವೇಳೆ ವಿರೋಧಿಸಿದರೆ, ಇದಕ್ಕಿಂತ ಭಯಂಕರವಾದ ಶಕ್ತಿಗಳನ್ನೆದುರಿಸುವ ಭಯ ಅವರಿಗೆ. ಹೀಗಾಗಿ ಅವರು ತಟಸ್ಥ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

**ಪ್ರೊ. ರಂಗಾ** : ಅವರು ಮಸೂದೆಯನ್ನು ಬೆಂಬಲಿಸುತ್ತಿದ್ದಾರೆ.

**ಶ್ರೀ ಅಲಗೇಶನ್** : ಇದು ಸಂಶಯಾಸ್ಪದವಾಗಿದೆ. ಆದುದರಿಂದ ಈ ವಿಧೇಯಕವನ್ನು ಹೆಚ್ಚು ಪ್ರಾತಿನಿಧಿಕಗೊಳಿಸುವುದು ಅತ್ಯವಶ್ಯಕವಾಗಿದೆ. ಏಕೆಂದರೆ ಅದರಲ್ಲಿ ಆಕ್ಷೇಪಾರ್ಹವಾದುದೇನೂ ಇರುವುದಿಲ್ಲ. ಬಹುಪತ್ನಿತ್ವ ಒಬ್ಬ ಹಿಂದೂವಿಗೆ ಒಳ್ಳೆಯದೆಂದಾದರೆ ಅದು ಒಬ್ಬ ಮುಸ್ಲಿಂನಿಗೂ ಕೂಡ ಅಷ್ಟೇ ಒಳ್ಳೆಯದಾಗಿರುತ್ತದೆ.

**ಶ್ರೀ ಶ್ಯಾಮನಂದನ ಸಹಾಯ್** : ಇದು ಅವರಿಗೆ ಇನ್ನೂ ಒಳ್ಳೆಯದಾಗಿದೆ.

**ಶ್ರೀ ಅಲಗೇಶನ್** : ಇಂದಿನ ಮುಸ್ಲಿಮರು ಧಾರ್ಮಿಕ ಕಾರಣಗಳಿಂದಾಗಿ ಇದನ್ನು ವಿರೋಧಿಸಬಯಸುವುದಿಲ್ಲ. ಏಕೆಂದರೆ ಮುಸ್ಲಿಮರು ನಾಲ್ಕು ಜನ ಪತ್ನಿಯರನ್ನು ಮದುವೆಯಾಗಲು

ಅವಕಾಶವಿದೆ. ಇದು ಪ್ರಾಯಶಃ ಅರಬ್ ಸಾಮ್ರಾಜ್ಯವನ್ನು ವಿಸ್ತರಿಸುವ ಘಟ್ಟಕ್ಕೆ ಸಂಬಂಧಿಸಿದ್ದಿರಬಹುದು. ಜನಸಂಖ್ಯೆಯನ್ನು ಹೆಚ್ಚಿಸುವ ಮತ್ತು ಪರಿವರ್ತಿಸುವ ಉದ್ದೇಶದಿಂದ ನಾಲ್ಕರವರೆಗೆ ಪತ್ನಿಯರನ್ನು ಮದುವೆಯಾಗಲು ಅವಕಾಶವಿದೆ. ಆದರೆ ಈಗ ನಾವು ಈ ದೇಶದಲ್ಲಿ ಸಂಪೂರ್ಣ ವಿಭಿನ್ನವಾದ ಪರಿಸ್ಥಿತಿಯನ್ನೆದುರಿಸಬೇಕಾಗಿದೆ. ನಮ್ಮ ಪ್ರಧಾನ ಮಂತ್ರಿಗಳು ಮಕ್ಕಳೊಂದಿಗೆ ಆಡುವ ಬಯಕೆ ಇಟ್ಟುಕೊಂಡು, ಅವರ ಹಲವಾರು ಚಿಂತೆಗಳನ್ನು ಮರೆಯಬಯಸುತ್ತಾರೆ ಹೊರತು, ಈ ದೇಶದಲ್ಲಿ ಹುಟ್ಟುವ ಮಕ್ಕಳನ್ನು ಶುಭದಿಂದ ಸ್ವಾಗತಿಸಲು ಸಿದ್ಧರಿಲ್ಲ. ಹೆಚ್ಚು ಹೆಚ್ಚು ಮಕ್ಕಳಾಗುತ್ತಿರುವುದು ತಮ್ಮನ್ನು ಹಾಗೂ ಇನ್ನಿತರರನ್ನು ಭಯಗೊಳಿಸುತ್ತಿದೆಯೆಂದು ಅವರು ಬಹಿರಂಗವಾಗಿಯೇ ಹೇಳಿದ್ದಾರೆ. ಇದೊಂದು ಸ್ವಯಂವೇದ್ಯವಾಗುವ ಸಂಗತಿ. ಇದನ್ನೆಲ್ಲಾ ಅರಿತುಕೊಂಡು ನಮ್ಮ ಮುಸ್ಲಿಂ ಗೆಳೆಯರು, ಅವರ ಪ್ರಸ್ತುತ ಧರ್ಮ ಅಥವಾ ಆಚರಣೆ ಏನೇ ಹೇಳಲಿ, ಎಲ್ಲರಂತೆ ಅವರೂ ಒಂದೇ ದಾರಿಗೆ ಬರಲಿ. ಹೀಗಾಗಿ, ಸಾಮಾನ್ಯ ನಾಗರಿಕ ಮಸೂದೆಯನ್ನು ಈ ದೇಶದಲ್ಲಿ ಜಾರಿಗೆ ತರಲು ಅಸಾಮಾನ್ಯ ಅಡೆತಡೆಗಳನ್ನು ದಾಟಬೇಕೆಂಬುದೇನೂ ಇದ್ದಂತಿಲ್ಲ.

ನಾನು ಚೀನಾದೇಶದ ಉದಾಹರಣೆಯನ್ನು ಕೊಡಬಯಸುತ್ತೇನೆ. ಅದು ನಮ್ಮ ದೇಶದಷ್ಟೇ ಪ್ರಾಚೀನದೇಶವಾಗಿದೆ. ಪ್ರಾಚೀನ ಗ್ರಂಥದಿಂದ ಮಾತ್ರವಲ್ಲದೆ, ಅವರು ಇತ್ತೀಚೆಗೆ ಒಂದು ನಾಗರಿಕ ಸಂಹಿತೆಯನ್ನು ರೂಪಿಸಿದ್ದಾರೆ. ಡಾ.ಸನ್ ಯಾತ್ ಸೇನ್ ರೂಪಿಸಿರುವ ಈ ಸಂಹಿತೆಯು ಮೂರು ಮುಖ್ಯ ತತ್ವಗಳನ್ನಾಧರಿಸಿದ್ದು, ಎಲ್ಲ ಜನತೆಯನ್ನೂ ಒಳಗೊಳ್ಳುವ ಸ್ವರೂಪವನ್ನು ಕಾನೂನು ಹೊಂದಿದೆ. ಈ ಸದನಕ್ಕೆ ತಿಳಿದ ಹಾಗೆ, ಆ ಮೂರು ಮುಖ್ಯ ಅಂಶಗಳೆಂದರೆ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಹಾಗೂ ಜನಪರ ಆರ್ಥಿಕ ಪ್ರಗತಿಯಾಗಿದೆ. ನಾವು ಅದೇ ಸ್ಥಿತಿಯಲ್ಲಿರುವುದರಿಂದ ದೇಶದ ಮುಂದೆ ನಮ್ಮ ರಾಷ್ಟ್ರಪಿತನಿರಿಸಿದ ತತ್ವಗಳನ್ನೆ ಅನುಷ್ಠಾನಗೊಳಿಸಿ ಅವುಗಳನ್ನು ವಾಸ್ತವಕ್ಕಿಳಿಸಲು ನಾವು ನಮ್ಮ ಒಳಿತಿಗಾಗಿ ಚೀನಾದ ಉದಾಹರಣೆಯನ್ನು ಅನುಸರಿಸಬೇಕಾಗಿದೆ. ಈ ದೇಶದಲ್ಲಿರುವ ಎಲ್ಲಾ ಧರ್ಮಗಳನ್ನೂ ಒಂದೇ ನಾಗರಿಕ ಸಂಹಿತೆಯ ಅಪ್ಪಣೆಗೆ ತರುವ ಶ್ರಮಕ್ಕಿಂತ ಮತ್ತಾವುದೂ ಅವನನ್ನು ಸಂತೋಷಪಡಿಸುವುದಿಲ್ಲ.

ನನ್ನ ಮಾನ್ಯ ಮಿತ್ರ ಠಾಕೂರದಾಸ ಭಾರ್ಗವ ಅವರು ಮಸೂದೆಯ ಬಗ್ಗೆ ಮುಕ್ತಕಂಠದಿಂದ ಪ್ರಶಂಸಿಸಿದರು. ಏಕೆಂದರೆ ಅದರಲ್ಲಿ ಅಳವಡಿಸಿರುವ ಬಹಳಷ್ಟು ಅಂಶಗಳು ಅವರಿಗೆ ಅನ್ವಯವಾಗುವುದಿಲ್ಲವೆಂಬ ಕಾರಣದಿಂದಾಗಿಯೇ ಹೊಗಳಿದ್ದಾರೆ. ಮಸೂದೆಯಲ್ಲಿ ಅಡಕವಾಗಿರುವ ಸೂಕ್ಷ್ಮ ಅಂಶಗಳನ್ನು ಸ್ವಾಗತಿಸುತ್ತ ಅವು ಈ ದೇಶದ ಭವಿಷ್ಯದ ನಾಗರಿಕ ಸಂಹಿತೆಯ ಅಡಿಪಾಯಗಳಾಗಲಿವೆ ಎಂಬ ವಿಶ್ವಾಸವಿರುವುದಾಗಿ ಹೇಳುತ್ತಾ, ಅದು ಈ ದೆಸೆಯಲ್ಲಿ ಇಡುತ್ತಿರುವ ದೃಢವಾದ ಹೆಜ್ಜೆಯೆಂಬುದಾಗಿ ಅವರು ಭಾವಿಸುವುದಾಗಿ ಹೇಳಿದರು. ಆದರೆ ನನಗೆ ಭಯವಾಗುತ್ತಿದೆ. ನನಗೆ ಈ ವಾದವನ್ನು ಒಪ್ಪಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ನನಗೆ ಭಯವಾಗುತ್ತಿರುವುದು ಯಾಕೆಂದರೆ, ಈ ಮಸೂದೆ ದಾರಿತಪ್ಪಿಸುತ್ತದೆ, ಮಾತ್ರವಲ್ಲ, ನಾಗರಿಕ ಮಸೂದೆಯನ್ನು ರೂಪಿಸುವ ಸಂಭವವನ್ನು ಮುಂದೂಡಿಬಿಡುತ್ತದೆ.

ಇದು ನಾವು ಹಿಂದೂ ಸಮುದಾಯಕ್ಕೆ ಸಾಕಷ್ಟು ಒಳ್ಳೆಯದನ್ನು ಮಾಡಿರುವೆವೆಂದೂ, ಒಂದು ಸಾಮಾನ್ಯ ನಾಗರಿಕ ಮಸೂದೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲವೆಂದೂ ಆಗುತ್ತದೆ. ಹಿಂದೂ ಎಂಬುದಕ್ಕೆ ಸಂಬಂಧಿಸಿದ ಪ್ರತಿಯೊಂದಕ್ಕೂ ನಾವು ಘರ್ಷಣೆಗಿಳಿಯುತ್ತೇವೆ ಹಾಗೂ ಬೇರೆಯವರ ಪ್ರಶ್ನೆ ಬಂದಾಗ ಅದರ ಬಗ್ಗೆ ಸಂಕೋಚಕ್ಕೊಳಗಾಗಿ ಜಗ್ಗಾಡುತ್ತೇವೆಂಬ ಸಾಮಾನ್ಯ ಅಭಿಪ್ರಾಯ ಮೂಡಿದೆ ಹಾಗೂ ಇಂತಹ ಅಭಿಪ್ರಾಯಕ್ಕೆ ಸಾಕಷ್ಟು ಆಧಾರಗಳಿವೆ.

**ಪ್ರೊ. ರಂಗಾ :** ಒಂದೊಂದಾಗಿ ಹೇಳಿ.

**ಶ್ರೀ ಅಲಗೇಶನ್ :** ನೀವು ಉಳಿದ ಸಮುದಾಯದವರನ್ನು ಸಂಪರ್ಕಿಸಿ, ಅವರನ್ನು ಮಾರ್ಪಡಿಸಲು ಪ್ರಯತ್ನಿಸಿದಾಗ ಮಾತ್ರ ಪ್ರೊಫೆಸರ್ ಅವರ ಭವಿಷ್ಯವಾಣಿ ನಿಜವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಆದರೆ ಈಗ ಪ್ರಚಲಿತವಿರುವ ಅಭಿಪ್ರಾಯದಂತೆ, ಅದೇ ಮುಖ್ಯವಾಗಿರುವ ಅಭಿಪ್ರಾಯದಂತೆ, ಕೇವಲ ಹಿಂದೂ ಸಮುದಾಯದವರನ್ನು ಮಾತ್ರ ಸಂಪರ್ಕಿಸುತ್ತಿದ್ದೇವೆ. ಉಳಿದವರನ್ನಲ್ಲ. ಇದೇ ಮಸೂದೆಯನ್ನು ಅಂಗೀಕರಿಸಲು ಅಡ್ಡಿ ಬಂದಿರುವ ಮಾನಸಿಕ ನಿರ್ಬಂಧವಾಗಿದೆ. ಮಾನ್ಯ ಕಾನೂನು ಮಂತ್ರಿಗಳು ತಮ್ಮ ವಿದ್ವತ್ತನ್ನೆಲ್ಲ ಬಳಸಿ ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಏನಾದರೂ ಮಾಡಬೇಕೆಂದು ನಾನು ಬಯಸುತ್ತೇನೆ ಹಾಗೂ ಕೇವಲ ಈ ಸದನದ ಸದಸ್ಯರನ್ನಷ್ಟೇ ಅಲ್ಲ, ಹೊರಗಿನವರಿಗೂ ಕೂಡ ಮನವರಿಕೆ ಮಾಡಿಕೊಡಬೇಕು, ನಂತರ ಅವರು ತಮಗೆ ಬೇಕಾದ ಅಸ್ತ್ರ ಪ್ರಯೋಗಿಸಲಿ ಎಂದು ನಾನು ಆಶಿಸುತ್ತೇನೆ.

**ಶ್ರೀ ಬಿಸ್ವನಾಥ್ ದಾಸ್ (ಓರಿಸ್ಸಾ) :** ಮಾನ್ಯರೆ ಹಿಂದೂ ಸಂಹಿತೆ ಮಸೂದೆ ಬಗ್ಗೆ ನಡೆಯುತ್ತಿರುವ ಈ ಚರ್ಚೆಯಲ್ಲಿ ನಾನು ನನ್ನ ಅನಿಸಿಕೆಗಳನ್ನು ವ್ಯಕ್ತಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಕೃತಜ್ಞನಾಗಿದ್ದೇನೆ. ಈ ಕಾಯ್ದೆಯ ಚರ್ಚೆಯ ಸಂದರ್ಭದಲ್ಲಿ ನಾನು ಹಿಂದಿನ ಬೆಂಚಿನಲ್ಲಿ ಕೂರುವ ಪಾತ್ರ ವಹಿಸುವುದನ್ನು ಬಯಸಿದ್ದೆ. ಆದರೆ ಮಾನ್ಯ ಕಾನೂನು ಮಂತ್ರಿಗಳು ವ್ಯಕ್ತಪಡಿಸಿರುವ ಕೆಲ ವಿಚಾರಗಳು ನನ್ನನ್ನು ಮಾತನಾಡಲು ಪ್ರೇರೇಪಿಸಿ, ಅದಕ್ಕೆ ನನ್ನ ವಿರೋಧ ವ್ಯಕ್ತಪಡಿಸಲು ಪ್ರೇರಣೆ ಮಾಡಿವೆ.

ಅವರು ಭಾಷಣ ಮಾಡುವ ಸಮಯದಲ್ಲಿ ನಾನು ಆ ಭಾಷಣವನ್ನು ಅತ್ಯಂತ ಪಾರದರ್ಶಕ, ವಿವರಣಾತ್ಮಕ ಭಾಷಣವೆಂದು ಕರೆಯಲೇ?– ಆ ಸಂದರ್ಭದಲ್ಲಿ ಕೆಲವು ಆಯ್ದ ಅನಿಸಿಕೆಗಳನ್ನು ವ್ಯಕ್ತಪಡಿಸಿದರು, ಅವು ಅಸಾಂಧರ್ಬಿಕವೂ, ಯಾರೂ ಬಯಸದಂಥವುಗಳೂ ಆಗಿದ್ದವು. ಅವರು ಜನಮತ ಸಂಗ್ರಹದ ಬೇಡಿಕೆಯನ್ನು ತಳ್ಳಿಹಾಕಿದ್ದಾರೆ. ನಾನೂ ಕೂಡ ಅದರ ಪರವಾಗಿಲ್ಲ. ಇಷ್ಟೆಲ್ಲಾ ಘಟಿಸಿರುವಾಗ ನಾನು ಜನಮತ ಸಂಗ್ರಹದ ಪರವಾಗಿಲ್ಲ. ಆದರೆ ಇದನ್ನು ಅಸಂಬದ್ಧವೆನ್ನುವುದು ಅಸಂಬದ್ಧತೆಯಷ್ಟೇ ಅಸಂಬದ್ಧವಾಗಿದೆ. ನೀವು ಅತ್ಯಂತ ಮಹತ್ವದ ವಿಷಯಗಳಾದ ವಿವಾಹ, ವಿಚ್ಛೇದನ, ದತ್ತು, ಸಂಯುಕ್ತ ಕುಟುಂಬ, ಮಹಿಳೆಯ ಆಸ್ತಿ, ವಾರಸುದಾರಿಕೆ, ನಿರ್ವಹಣೆ ಹಾಗೂ ಉಳಿದ ಮಹತ್ವದ ಸಮಸ್ಯೆಗಳ ಬಗ್ಗೆ ಕಾನೂನು ಮಾಡಲು ಹೊರಟಿರುವಿರಿ. ಮಾನ್ಯ ಕಾನೂನು ಮಂತ್ರಿಗಳು ಸ್ವತಃ ಒಪ್ಪಿಕೊಂಡ ಹಾಗೆ ಹಾಗೂ ಗುರುತಿಸಿದ ಹಾಗೆ ಹಿಂದೂ ಕಾನೂನು ವ್ಯವಸ್ಥೆಯ ಕೇವಲ ಸಮಾಜಕ್ಕೆ ಸಂಬಂಧಿಸಿದ ಕಾನೂನುಗಳನ್ನು ಹೊಂದಿರುವುದಿಲ್ಲ. ಆದರೆ ಅವರ ಜೊತೆಗೆ ನಮ್ಮ ಧಾರ್ಮಿಕ ಶ್ರದ್ಧೆಗಳನ್ನು ಕೂಡ ಹೊಂದಿರುತ್ತದೆ. ಸಮಾಜಕ್ಕೆ ಸಂಬಂಧಿಸಿದ ಇಂಥ ಮಹತ್ವ ವಿಷಯಗಳ ಬಗ್ಗೆ ಕಾನೂನು ಮಾಡಹೊರಡುವುದು ನ್ಯಾಯೋಚಿತವೆನ್ನಬಹುದೆ? ದೇಶದ ಕೋಟಿ ಕೋಟಿ ಜನರಿಗೆ ಸಂಬಂಧಿಸಿದ ಈ ವಿಷಯದ ಬಗ್ಗೆ ಅವರನ್ನು ಸಂಪರ್ಕಿಸದೇ ಕಾನೂನು ಮಾಡಬಹುದೇ?

ತಮ್ಮ ಭಾಷಣದ ಸಂದರ್ಭದಲ್ಲಿ ಅವರು ಜನಮತದ ಆಧಾರದ ಕಾನೂನು ರಚಿಸಿರುವ ಇನ್ನೊಂದು ದೇಶದ ಉದಾಹರಣೆ ಇಲ್ಲವೆಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ ವಿಷಯಗಳಾದ, ರಾಷ್ಟ್ರೀಕರಣ ಹಾಗೂ ಉಳಿದ ವಿಷಯಗಳ ಬಗ್ಗೆ ಕಾನೂನು ಮಾಡುವಾಗ ಕೂಡ ರಾಜಕೀಯ ಪಕ್ಷಗಳ ಜನಾಭಿಪ್ರಾಯವಿಲ್ಲದೆ ಜವಾಬ್ದಾರಿ ನಿರ್ವಹಿಸಲು ನಿರಾಕರಿಸುತ್ತವೆ. ಅವು ಸಂಸತ್ತನ್ನು ವಿಸರ್ಜಿಸಿ, ಚುನಾವಣೆಗಳಲ್ಲಿ ಇಂಥ ಮಹತ್ವದ ಪ್ರಶ್ನೆಗಳನ್ನಿಟ್ಟು ಜನರ ಅಭಿಮತವನ್ನು ಮತದ ರೂಪದಲ್ಲಿ ಪಡೆಯುತ್ತಾರೆ.

* ೧೯೫೧ನೇ ಫೆಬ್ರವರಿ ೭ರ ಸಂಸದೀಯ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೫೯೧–೧೭

ಇಂಗ್ಲೆಂಡ್ ಹಾಗೂ ಇನ್ನಿತರ ಕಡೆ ಸಂಸತ್ತನ್ನು ವಿಸರ್ಜಿಸಿ, ಜನಾಭಿಪ್ರಾಯ ಕೇಳಿ ಪಡೆಯುವ ಹಾಗೆ, ಪಡೆಯಲು ಈ ಮಸೂದೆಯೊಳಗಿನ ಅಂಶಗಳು ಅಂತಹ ಗಂಭೀರವಾದ ವಿಷಯವಲ್ಲವೆ ಎಂದು ನಾನು ಕಾನೂನು ಮಂತ್ರಿಗಳನ್ನು ಕೇಳುತ್ತೇನೆ. ಇಂಥ ವಿಷಯಗಳ ಬಗ್ಗೆ ಜನಮತ ಸಂಗ್ರಹ ಅವಶ್ಯವಿಲ್ಲವೆಂದು ಹೇಳುವುದು ಅವರಿಗೆ ಸರಿ ಕಾಣುತ್ತದೆಯೆ? ನನ್ನ ಕೆಲ ಸ್ನೇಹಿತರು ಒತ್ತಾಯಿಸಿದ ಹಾಗೆ ಜನಮತ ಸಂಗ್ರಹವನ್ನಾಗಲಿ ಅಥವಾ ಸಂಸತ್ತಿನ ವಿಸರ್ಜನೆಯನ್ನಾಗಿ ಅಥವಾ ಇನ್ನಾವುದೇ ಕ್ರಮವನ್ನಾಗಲಿ, ಅವು ಎಷ್ಟೇ ಪ್ರಸ್ತುತ, ತರ್ಕಬದ್ಧ ಹಾಗೂ ಸಂವಿಧಾನಾತ್ಮಕವಾಗಿದ್ದರೂ ಅವುಗಳ ಬಗ್ಗೆ ನಾನು ಯೋಚಿಸಲಾರೆ. ನಾವು ಅಪರೋಕ್ಷವಾಗಿ ಆರಿಸಿ ಬಂದ ಶಾಸನಪ್ರತಿನಿಧಿಗಳಾಗಿದ್ದೇವೆ. ಸಂಸತ್ತು ವ್ಯವಸ್ಥಿತವಾಗಿ ಅಸ್ತಿತ್ವಕ್ಕೆ ಬರುವ ತನಕ ಅದು ತನ್ನ ಕಾರ್ಯನಿರ್ವಹಿಸಬೇಕಿದೆ. ಇದು ಹೆಚ್ಚು ಕಡಿಮೆ ಹಂಗಾಮಿ ಸಂಸತ್ತು ಇದ್ದ ಹಾಗೆ. ಯಾವುದೇ ಕಾಯ್ದೆಗಳನ್ನು ಅನುಮೋದಿಸುವ ಬಗೆಗಿನ ತಾಂತ್ರಿಕತೆಗಳ ಬಗ್ಗೆ ಕೂಡ ನಾನು ಪ್ರಶ್ನಿಸುವುದಿಲ್ಲ. ಆದರೆ ಇಂಥ ಮಹತ್ವದ ಕಾನೂನನ್ನು ಮಾಡುವಾಗ, ಸಂವಿಧಾನಾತ್ಮಕವಾಗಿ ಜನಾಭಿಪ್ರಾಯ ಸಂಗ್ರಹ ಮಾಡಬಾರದೆಂದು ಹೇಳುವುದು ತೀರಾ ವಿಚಿತ್ರವೆನ್ನಿಸುವುದೆಂದು ನಾನು ಹೇಳಬಯಸುತ್ತೇನೆ. ಜನತೆಯನ್ನು ಈ ಬಗ್ಗೆ ಸಂಪರ್ಕಿಸಿದರೆ ಅವರು ಇದನ್ನು ಕಾನೂನು ಮಾಡಹೊರಟಿರುವುದನ್ನು ಬೆಂಬಲಿಸುವುದಿಲ್ಲವೆಂಬ ಸಂಗತಿ ಇವರಿಗೆ ಪೂರ್ಣವಾಗಿ ಮನವರಿಕೆಯಾಗಿದೆಯೆ? ಹಾಗಿಲ್ಲದಿದ್ದರೆ ಇದುವರೆಗೂ ನೆನೆಗುದಿಗೆ ಬಿದ್ದಿರುವ ಈ ಮಸೂದೆಯನ್ನು ಮುಂದೂಡಬಾರದೆಂದು ಒತ್ತಾಯಿಸುತ್ತಿರುವುದು ಹಾಗೂ ಈ ಸದನದಲ್ಲಿಯೇ ಅದನ್ನು ಪಾಸುಮಾಡಬೇಕೆಂಬ ಒತ್ತಡ ಹೇರುತ್ತಿರುವುದೇಕೆ? ಈ ಸದನದಲ್ಲಿಯೇ ಏಕೆ ಎಂದು ನಾನು ಕೇಳುತ್ತೇನೆ. ಈ ಸದನ ಅಂಥ ಪಾಪವನ್ನೇನು ಮಾಡಿದೆ? ಪರೋಕ್ಷ ರೀತಿಯಲ್ಲಿ ಆರಿಸಿ ಬಂದ ಪ್ರತಿನಿಧಿಗಳ ಸಂಸತ್ತು ಇದು ಎಂಬ ಕಾರಣವಾಗಿ ಈ ಒತ್ತಡವೇ? ನನ್ನ ಹಾಗೆಯೇ ಅವರೂ ಕೂಡ ಜನಪ್ರತಿನಿಧಿ ಎಂದು ನಾನು ಅವರಿಗೆ ಹೇಳಬಹುದು. ನಾನು ಓರಿಸ್ಸಾದ ಪ್ರಾಂತೀಯ ವಿಧಾನಸಭೆಯಿಂದ ಆಯ್ಕೆಯಾಗಿದ್ದರೆ, ಅವರು ಮುಂಬೈ ವಿಧಾನಸಭೆಯಿಂದ ಆಯ್ಕೆಯಾಗಿರುವರು. ಮಾನ್ಯ ಕಾನೂನು ಮಂತ್ರಿಗಳು ತಮ್ಮನ್ನು ಆರಿಸಿದವರಿಂದ ಈ ವಿಷಯಗಳ ಬಗ್ಗೆ ಅವರ ಅಭಿಪ್ರಾಯ ಪಡೆದಿದ್ದಾರೆಯೇ ಎಂದು ನಾನು ಕೇಳುವ ಹಕ್ಕು ಹೊಂದಿದ್ದೇನೆ.

**ಡಾ. ಅಂಬೇಡ್ಕರ್** : ಇಲ್ಲ ನನಗೆ ಜನಮತಗಣನೆ ಬೇಕಾಗಿಲ್ಲ.

**ಶ್ರೀ ಬಿಸ್ವನಾಥ್ ದಾಸ್** : ನಿಮಗೆ ಜನಮತ ಸಂಗ್ರಹ ಬೇಕಾಗಿಲ್ಲವೆ? ನಿಮ್ಮನ್ನು ಆರಿಸಿ ಕಳುಹಿಸಿದವರ ಬಗ್ಗೆ ಇದೆಯೇನು ನಿಮ್ಮ ಜವಾಬ್ದಾರಿ? ಇಂಥ ಸಂವಿಧಾನಾತ್ಮಕ ಭಾವನೆಯನ್ನು ಈ ದೇಶದ ಜನರಲ್ಲಿ ನೀವು ಬಿತ್ತಬಯಸುವಿರಾ?

ನಾನು ಕೇವಲ ನಮ್ಮ ಸಂವಿಧಾನದ ಧ್ಯೇಯವಾಕ್ಯಗಳತ್ತ ನಮ್ಮ ಮಾನ್ಯ ಗೆಳೆಯರ ಗಮನ ಸೆಳೆಯುತ್ತೇನೆ. ಈ ಸಂಸತ್ತು, ಈ ಸಂವಿಧಾನದ ಕಾನೂನುಗಳನ್ನು ರಚಿಸಿದ್ದು, ಅದಕ್ಕೆ ಮಾನ್ಯ ಕಾನೂನು ಮಂತ್ರಿಗಳೂ ಮಹತ್ವ ಕಾಣಿಕೆ ನೀಡಿರುವರು. ಸಂವಿಧಾನದ ಧ್ಯೇಯವಾಕ್ಯ ಹೇಳುತ್ತದೆ: "ಭಾರತವನ್ನು ಸಾರ್ವಭೌಮ ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿಸುವುದು ಹಾಗೂ ಅದರ ಎಲ್ಲಾ ನಾಗರಿಕರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಒದಗಿಸಿಕೊಡುವುದು." ಅವರು ಯಾರು ತಮ್ಮ ಪ್ರಾಂತವನ್ನು ಪ್ರತಿನಿಧಿಸಲು ಇಲ್ಲಿಗೆ ಕಳುಹಿಸಿದ್ದಾರೋ, ಯಾರು ನಾನು ಮಂತ್ರಿತ್ವದ ಚುಕ್ಕಾಣಿ ಹಿಡಿಯಲು ಅವಕಾಶ ಕಲ್ಪಿಸಿದ್ದಾರೋ ಮತ್ತು ಯಾವ ನಿರಕ್ಷರಿ ಜನ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೋ, ಅಂಥವರನ್ನು ಸಂಪರ್ಕಿಸಲು ನಿರಾಕರಿಸುತ್ತೇನೆ ಎಂದು ಹೇಳುವುದು ಪ್ರಜಾಪ್ರಭುತ್ವದ ವಿಧಾನವೇ? ಮಾನ್ಯರೆ ಇದೆಲ್ಲಾ ಈ

ಸಂವಿಧಾನದಡಿಯಲ್ಲಿ ನಡೆದಿದೆ. ದೇಶದ ಜನತೆಗೆ ಸಾಮಾಜಿಕ, ಆರ್ಥಿಕ ಹಾಗೂ ಎಲ್ಲಕ್ಕೂ ಮಿಗಿಲಾಗಿ ರಾಜಕೀಯ ನ್ಯಾಯವನ್ನು ಒದಗಿಸುವ ಭರವಸೆ ನೀಡಿಲ್ಲವೆಂದು ಹೇಳಿದರೆ ಈ ವಿಷಯದಲ್ಲಿ ಅವರನ್ನು ನಾನು ಬೆಂಬಲಿಸಬಲ್ಲೆ. ಯಾಕೆಂದರೆ ಅವರು ತಮ್ಮನ್ನು ಇಲ್ಲಿಗೆ ಕಳುಹಿಸಿದ ಜನತೆಯ ಅಭಿಪ್ರಾಯ ಸಂಗ್ರಹ ಬೇಡವೆಂದು ಅವರು ಹೇಳುತ್ತಿದ್ದಾರೆ.

**ಡಾ. ಅಂಬೇಡ್ಕರ್ :** ಮುಂದಿನ ಸಲ ಅವರು ನನ್ನನ್ನು ಆರಿಸಿ ಕಳಿಸಲಿಕ್ಕಿಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಅದೇನೂ ಅಂಥ ಮಹತ್ವದ್ದಲ್ಲ. ನೀವು ನಿಮ್ಮ ವಾದಕ್ಕೆ ಅಂಟಿಕೊಳ್ಳಬಹುದು. ನಿಮಗೆ ಜನರ ಮತ ಬೇಕಾಗಿಲ್ಲ. ಆದುದರಿಂದ ಇದನ್ನೇ ನೀವು ಒಂದು ಹಗುರ ರಕ್ಷಣಾ ತಂತ್ರವನ್ನಾಗಿ ಮಾಡಿಕೊಳ್ಳುತ್ತಿರುವಿರಿ.

**ಡಾ. ಅಂಬೇಡ್ಕರ್ :** ನನ್ನ ಕಾಳಜಿ ನನ್ನ ಮರು ಆಯ್ಕೆಗಿಂತ ಈ ಮಸೂದೆಯ ಬಗೆಗಿದೆ.

**ಶ್ರೀ ಬಿಸ್ವನಾಥ್ ದಾಸ್ :** ನಾನು ನನ್ನ ಮರು ಆಯ್ಕೆಯ ಬಗ್ಗೆ ಚಿಂತಿಸುತ್ತಿಲ್ಲ. ನನ್ನ ಚಿಂತೆ, ಒಬ್ಬ ಸಂಸದನಾಗಿ ನನ್ನ ಜನತೆಯ ಬಗೆಗಿನ ನನ್ನ ಜವಾಬ್ದಾರಿ ಕುರಿತದ್ದಾಗಿದೆ.

**ಡಾ. ಅಂಬೇಡ್ಕರ್ :** ಈಗ ಒಂದು ಗಂಟೆಯ ಸಮಯ. ನೀವು ನಿಮ್ಮ ಭಾಷಣ ಮುಕ್ತಾಯಗೊಳಿಸುವಿರಾ.

**ಶ್ರೀ ಬಿಸ್ವನಾಥ್ ದಾಸ್ :** ನಾನು ಮಧ್ಯಾಹ್ನ ಮುಂದುವರಿಸುತ್ತೇನೆ.

ಭೋಜನದ ಸಲುವಾಗಿ ಸದನವನ್ನು ಮಧ್ಯಾಹ್ನ ೨.೩೦ರ ವರೆಗೆ ಮುಂದೂಡಲಾಯಿತು.

ಸಂಸತ್ತು ಮಧ್ಯಾಹ್ನ ೨.೩೦ರ ಸಮಯಕ್ಕೆ ಪುನಃ ಸಭೆ ಸೇರಿತು.

[ಮಾನ್ಯ ಉಪ–ಸಭಾಪತಿಗಳು ಆಸನದಲ್ಲಿ ಕೂತಿದ್ದರು]

**ಶ್ರೀ ಬಿಸ್ವನಾಥ್ ದಾಸ್ :** ಮಾನ್ಯರೆ, ಬೆಳಿಗ್ಗೆ ನನ್ನ ಭಾಷಣದ ಸಂದರ್ಭದಲ್ಲಿ ಹೇಗೆ ಪ್ರಜಾಪ್ರಭುತ್ವ ದೇಶಗಳಲ್ಲಿ ಮಹತ್ವದ ಕಾನೂನುಗಳನ್ನು ಹೇಗೆ ಎತ್ತಿಕೊಳ್ಳುತ್ತಾರೆ ಹಾಗೂ ಹೇಗೆ ಅವುಗಳನ್ನು ಶಾಸನದ ಪುಸ್ತಕಕ್ಕೆ ಅಳವಡಿಸುತ್ತಾರೆ ಎಂಬ ಬಗ್ಗೆ ಪ್ರಸ್ತಾಪಿಸುತ್ತಲಿದ್ದೆ. ಪಕ್ಷವು ವಿಧೇಯಕದ ಬಗ್ಗೆ ಮುಂಜಾಗ್ರತೆ ವಹಿಸುತ್ತದೆ.

**ಶ್ರೀ ರಾಮರಾಜ ಜಜವಾರೆ (ಬಿಹಾರ) :** ಕ್ರಿಯಾಲೋಪದ ಬಗ್ಗೆ. ಟ್ರಜರಿ ಬೆಂಚ್‌ಗಳಲ್ಲಿ ಯಾವ ಸದಸ್ಯರೂ ಕಂಡುಬರುತ್ತಿಲ್ಲ.

**ಮಾನ್ಯ ಉಪ–ಸಭಾಪತಿಗಳು :** ಸರಕಾರವನ್ನು ಪ್ರತಿನಿಧಿಸಲು ಯಾರೂ ಇಲ್ಲದಿರುವುದು ವಿಷಾದದ ಸಂಗತಿ. ಕಾನೂನು ಮಂತ್ರಿಗಳು ಈಗ ಆಗಮಿಸಿದ್ದಾರೆ.

**ಶ್ರೀ ಬಿಸ್ವನಾಥ್ ದಾಸ್ :** ಅಲ್ಲಿ ತಮ್ಮ ಕಾರ್ಯಕ್ರಮಗಳನ್ನು ಪ್ರಣಾಳಿಕೆ ರೂಪದಲ್ಲಿ ಜನರೆದುರು ಇಡುತ್ತಾರೆ. ಈ ಪ್ರಣಾಳಿಕೆಯ ಆಧಾರದ ಮೇಲೆ ಚುನಾವಣೆಗಳು ನಡೆಯುತ್ತವೆ ಹಾಗೂ ಪಕ್ಷ ಇಂಥ ತತ್ವಗಳ ಪರವಾಗಿ ಮತ ಪಡೆಯುತ್ತದೆ ಹಾಗೂ ಅದಕ್ಕೆ ಅದು ಬದ್ಧವಾಗಿರುತ್ತದೆ. ಆದರೆ ಪರೋಕ್ಷವಾಗಿ ಆಯ್ಕೆಯಾಗಿ ಬಂದಿರುವ ಇಂದಿನ ಸಂಸತ್ತಿನ ಸಂದರ್ಭದಲ್ಲಿ ಯಾವುದೂ ಶಕ್ಯವಾಗುವುದಿಲ್ಲ. ನಮ್ಮನ್ನು ಆರಿಸಿ ಕಳುಹಿಸಿದ ಜನತೆ ಇಲ್ಲವೆಂದೇನಲ್ಲ. ಆದರೆ ಅವರು ಸುಶಿಕ್ಷಿತ ಮತದಾರರು. ಮಾನ್ಯ ಕಾನೂನು ಮಂತ್ರಿಗಳಾಗಲಿ ಹಾಗೂ ಈ ಸದನದ ಒಳಗಿನ ಹಾಗೂ ಹೊರಗಿನ ಅವರ ಗೆಳೆಯರಾಗಲಿ, ನಾವು ಯಾರಿಂದ ಆರಿಸಿ ಬಂದಿರುವ ಗೌರವ ಹೊಂದಿರುವೆವೋ, ನಮ್ಮನ್ನು ಆರಿಸಿ ಕಳುಹಿಸಿದ ಅಂಥ ಜನರಿಗೆ ತಿಳುವಳಿಕೆ ಇಲ್ಲವೆಂದು ಹೇಳುವುದು ಸಾಧ್ಯವಿಲ್ಲ. ನಮ್ಮನ್ನು ಆರಿಸಿ ಕಳುಹಿಸಿದವರು ಬೇರಾರು ಅಲ್ಲ, ರಾಜ್ಯಗಳ ವಿಧಾನಸಭೆಯ ಸದಸ್ಯರು. ಸರ್ಕಾರ ಹಾಗೂ ಮಾನ್ಯ ಕಾನೂನು ಮಂತ್ರಿಗಳು ಈ ವಿಷಯವನ್ನು

ರಾಜ್ಯಗಳ ವಿಧಾನಸಭೆಯ ಸದಸ್ಯರ ಬಳಿಗೆ ಒಯ್ಯುವ ಪ್ರಯತ್ನ ಮಾಡಬಹುದಿತ್ತು ಹಾಗೂ ಅವರಿಗೆ ಇಂಥ ಮಹತ್ವದ ವಿಷಯದ ಮೇಲೆ ತಮ್ಮ ಅನಿಸಿಕೆಗಳನ್ನು ಹೇಳಲು ವಿನಂತಿಸಿ, ಅವಕಾಶ ಮಾಡಿಕೊಟ್ಟು ಆ ಮೂಲಕ ಇಡೀ ದೇಶ ಈ ಬಗ್ಗೆ ಮಾತಾಡುವಂತೆ ಮಾಡಬಹುದಿತ್ತು. ಇದರಿಂದಾಗಿ ಮಸೂದೆಯನ್ನು ಅನುಮೋದನೆ ಮಾಡುವುದು ಇನ್ನಷ್ಟು ಹಗುರ ಹಾಗೂ ಸುಲಭ ಸಾಧ್ಯವಾಗುತ್ತಿತ್ತು. ಹಗುರ ಯಾಕೆಂದರೆ ತಮ್ಮನ್ನು ಆರಿಸಿ ಕಳುಹಿಸಿದರವರ ಆದೇಶ ಇರುತ್ತಿದ್ದರಿಂದ, ಈ ಸದನದ ಗೌರವಾನ್ವಿತ ಸದಸ್ಯರು, ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ನೀಡದೆ ಅದನ್ನು ವಿರೋಧಿಸುವುದು ಶಕ್ಯವಾಗುತ್ತಿರಲಿಲ್ಲ. ಸುಲಭ ಸಾಧ್ಯ ಯಾಕೆಂದರೆ ಯಾವ ಸದಸ್ಯನಿಗೂ "ನಾನು ಈ ಕಾಯ್ದೆಯನ್ನು ವಿರೋಧಿಸುತ್ತೇನೆ" ಹಾಗೂ ಅದೇ ಸಮಯದಲ್ಲಿ ಈ ಸದನದ ಸದಸ್ಯನಾಗಿಯೂ ಮುಂದುವರೆಯುತ್ತೇನೆ ಎಂದು ಹೇಳುವ ಧಾರ್ಷ್ಟ್ಯವಿರುತ್ತಿರಲಿಲ್ಲ. ಈ ಎರಡೂ ರೀತಿಯ ಹೇಳಿಕೆ ಕೊಡುವುದು ಯಾರಿಗೂ ಶಕ್ಯವಿರಲಿಲ್ಲ. ಹಾಗೂ ತನ್ನನ್ನು ಆರಿಸಿಕಳುಹಿಸಿದವರ ಆಣತಿಯನ್ನು ವಿರೋಧಿಸಿಯೂ ಈ ಸದನದ ಸದಸ್ಯನಾಗಿ ಮುಂದುವರಿಯುವುದು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಇಂಥ ಮಹತ್ವದ ವಿಷಯದಲ್ಲಿ ಮಾನ್ಯ ಕಾನೂನು ಮಂತ್ರಿಗಳೂ ಹಾಗೂ ಸರ್ಕಾರ ವಿಫಲವಾಗಿರುವುದೆಂದೂ, ಆದಾಗ್ಯೂ ಈಗಲೂ ಈ ಬಗ್ಗೆ ಇನ್ನೂ ಬಾಗಿಲು ತೆರೆದಿದೆ ಎಂದು ನಾನು ಒತ್ತಿ ಹೇಳುತ್ತೇನೆ. ಈ ಕಾನೂನನ್ನು ಸದನದಲ್ಲಿಯೇ ಜರೂರಾಗಿ ಹಾಗೂ ಈ ಕೂಡಲೆ ಪಾಸುಮಾಡುವುದು ಅವಶ್ಯವಿದೆ ಎಂಬ ಅಂಶವನ್ನು ಬಿಟ್ಟರೆ ಉಳಿದಂತೆ ನಾನು ಕಾನೂನು ಮಂತ್ರಿಗಳ ಅಭಿಪ್ರಾಯವನ್ನು ಒಪ್ಪುತ್ತೇನೆ.

ಏನೇ ಆಗಲಿ ಜನಮತ ಸಂಗ್ರಹಕ್ಕೆ ಅಂಟಿಕೊಳ್ಳದಿರಿ. ಅದರೆ ರಾಜ್ಯ ವಿಧಾನಸಭೆಗಳನ್ನು ಈ ವಿಷಯದಲ್ಲಿ ಸಂಪರ್ಕಿಸಲು ಈಗಲೂ ಸಮಯವಿದೆ. ನಾವೇನು ಈ ಮುಂಗಡಪತ್ರದ ಅಧಿವೇಶನದಲ್ಲಿ ಈ ಕಾಯ್ದೆಯನ್ನು ಅನುಮೋದನೆ ಮಾಡುತ್ತಲಿಲ್ಲ. ಸರ್ಕಾರವು ಈ ಮಸೂದೆಯನ್ನು ಅಂಗೀಕರಿಸುವ ವಿಷಯದಲ್ಲಿ ಪ್ರಾಮಾಣಿಕ ಕಳಕಳಿ ಹೊಂದಿಲ್ಲವೆಂದು, ನಾನು ಈ ಸಂದರ್ಭದಲ್ಲಿ ನನಗೆ ಅನಿಸಿದ ಅನುಮಾನವನ್ನು ಹೇಳಬಯಸುತ್ತೇನೆ.

**ಹಲವಾರು ಗೌರವಾನ್ವಿತ ಸದಸ್ಯರು :** ಇಲ್ಲ, ಇಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಕಾತುರತೆಯಿಂದ ಇರುವ ಗೌರವಾನ್ವಿತ ಸನ್ಮಿತ್ರರು ಮಸೂದೆ ಇಲ್ಲ, ಇಲ್ಲವೆಂದು ಹೇಳಬಹುದು. ಆದರೆ ನನ್ನ ವಾದವನ್ನು ಸಂಸತ್ತಿನ ಸದಸ್ಯರೆದುರು ಮಂಡಿಸುವ ಹಕ್ಕು ನನಗಿದೆ. ಒಂದು ವೇಳೆ ನಿಜಕ್ಕೂ ಮಸೂದೆ ಅಂಗೀಕಾರಗೊಳ್ಳಬೇಕೆಂದು ಅವರು ಕಾತುರರಾಗಿದ್ದಲ್ಲಿ, ಆ ಮಸೂದೆಯು ಕಳೆದ ಮೂರು ದಿನಗಳಿಂದ ಸದನದಲ್ಲಿ ಚರ್ಚಿತಗೊಳ್ಳುತ್ತಿರಲಿಲ್ಲ. ಇದರ ಹಿಂದೆ ಇರುವ ಅರ್ಥವಾದರೂ ಏನು? ಇಂಥ ಮಹತ್ವದ ವಿಷಯಗಳ ಮೇಲೆ ಕಾನೂನು ಮಾಡುವಾಗ, ಈ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿರುವಾಗ ಹಾಗೂ ದೇಶದ ತುಂಬೆಲ್ಲಾ ವಿರೋಧ ಕಂಡುಬರುತ್ತಿರುವಾಗ ನನ್ನ ಸನ್ಮಿತ್ರ ಶ್ರೀ ಬಿ.ದಾಸ್ ಹೇಳುವ ಹಾಗೆ, ಕಾನೂನು ಮಂತ್ರಿಗಳು ಅಥವಾ ಮಂತ್ರಿಮಂಡಳವು ಇದನ್ನೆಲ್ಲಾ ಪರಿಹರಿಸಿ, ಮೂರು ದಿನದ ಅವಧಿಯಲ್ಲಿ ಇದನ್ನು ಶಾಸನ ಪುಸ್ತಿಕೆಯಲ್ಲಿ ಹೇಗೆ ಅಳವಡಿಸುತ್ತಾರೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ನಾನಂತೂ ಮೂರ್ಖರ ರಾಜ್ಯದಲ್ಲಿ ಇರಬಯಸುವುದಿಲ್ಲ. ಇಂಥ ವಿಷಯವೊಂದು ಅದು ಪಕ್ಷವೊಂದರ ಚುನಾವಣಾ ಘೋಷಣಾಪತ್ರದ ಮುಖಾಂತರ ಜನರ ಪರಿಶೀಲನೆಗೆ ಬರಬೇಕು. ಇಲ್ಲವಾದರೆ ಅದರ ಚರ್ಚೆ ಅನುದಿನವೂ ಜರುಗಿ ಪ್ರತಿಯೊಬ್ಬರಿಗೂ ತಮ್ಮ ಅನಿಸಿಕೆಯನ್ನು ವ್ಯಕ್ತಮಾಡಲು ಅವಕಾಶವಾಗಬೇಕು ಹಾಗೂ ಶಕ್ಯವಿದ್ದರೆ ಆ ಅಂಶಗಳನ್ನು ಸದನದ

ಮುಂದಿರಿಸಬೇಕು. ಅದೂ ಈ ಮಸೂದೆಯನ್ನು ಅನುಮೋದಿಸಲು ಅದೂ ಮುಂಗಡಪತ್ರ, ರೈಲ್ವೆ ಮುಂಗಡಪತ್ರ ಹಾಗೂ ಸಾಮಾನ್ಯ ಮುಂಗಡಪತ್ರಗಳು ಮಂಡಿತವಾಗಬೇಕಾಗಿರುವಾಗ, ಇದಲ್ಲದೆ ಇನ್ನೂ ನಲ್ವತ್ತು, ಐವತ್ತು ಮಸೂದೆ ಬಾಕಿ ಉಳಿದಿರುವಾಗ, ಕೇವಲ ಮೂರು ದಿನಗಳನ್ನು ಮೀಸಲಿರಿಸಿರುವುದು ಕಾನೂನು ಮಂತ್ರಿಗಳ ವಿವೇಕದ ಬಗ್ಗೆ ಸಂಶಯ ತರುತ್ತಿದೆ. ಸರ್ಕಾರ ತಾನು ಹಣಕಾಸಿನ ಬಿಕ್ಕಟ್ಟಿನಲ್ಲಿದೆ ಎಂದು ಹೇಳಿಕೊಳ್ಳುತ್ತಿದೆ. ಹೊಸ ತೆರಿಗೆಗಳನ್ನು ಹೇರಲಾಗುವುದೆಂದು ಪತ್ರಿಕೆಗಳು ಬರೆಯುತ್ತಿವೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದು ನನಗೆ ತಿಳಿಯದು. ಕಳೆದ ಒಂದೂವರೆ ವರ್ಷಗಳಿಂದ ಬಿಸಿಯನ್ನುಂಟು ಮಾಡುತ್ತಿರುವ ಎಸ್ಟೇಟ್ ಡ್ಯೂಟಿ ಮಸೂದೆಯನ್ನು ಪಾಸು ಮಾಡುವ ಬಗ್ಗೆ ಯಾವ ಕ್ರಮ ಕೈಗೊಂಡಿರುವಿರಿ ಎಂದು ಮಾನ್ಯ ಟ್ರಜರಿ ಬೆಂಚ್ ಕಡೆ ಆಸೀನರಾಗಿರುವ ಸದಸ್ಯರನ್ನು ಕೇಳುವ ಹಕ್ಕು ನನಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದ್ಯತೆಯ ವಿಷಯಗಳು ಮೊದಲು ಚರ್ಚೆಯಾಗಬೇಕು. ಇದುವರೆಗೂ ನೀವು ಯಾವ ಸಮಸ್ಯೆಗಳನ್ನು ಬಗೆಹರಿಸಿರುವಿರಿ? ಯಾವ ಸಮಸ್ಯೆಗಳನ್ನೂ ಪರಿಹರಿಸಿರುವುದಿಲ್ಲ. ಆದರೆ ಸಮಸ್ಯೆಯನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿರುವಿರಿ.

ಆದುದರಿಂದ ಸರ್ಕಾರ, ಅದರಲ್ಲಿಯೂ ಕಾನೂನು ಮಂತ್ರಿಗಳು ಈ ಬಗ್ಗೆ ಕಾತುರತೆ ಹೊಂದಿಲ್ಲ ಹಾಗೂ ತಮ್ಮ ವಿಧೇಯಕವನ್ನು ಕಾನೂನಾಗಿಸುವಲ್ಲಿ ಆಸಕ್ತಿ ತಳೆದಿಲ್ಲವೆಂಬ ವಿಶ್ವಾಸ ನನಗಿದೆ. ಇಲ್ಲವಾದರೆ ಮಾತುಕೊಟ್ಟಂತೆ ಸಭಾನಾಯಕರು ಮಾತಿನ ಹಾಗೆ ಒಂದು ವಿಶೇಷ ಸಭೆ ಕರೆಯಬಹುದಿತ್ತು ಅಥವಾ ಈ ಬಗ್ಗೆ ವಿಶೇಷ ಅಧಿವೇಶನವನ್ನೇ ಮಸೂದೆಯನ್ನು ಸಂಪೂರ್ಣವಾಗಿ ಚರ್ಚಿಸಿ ಕಾನೂನಾಗಿ ಪರಿವರ್ತಿಸಲು ಕರೆಯಬಹುದಾಗಿತ್ತು.

ಮಾನ್ಯ ಕಾನೂನು ಮಂತ್ರಿಗಳು ಈ ಸದನದಲ್ಲಿ ಯಾವ ರೀತಿ ವರ್ತಿಸಬೇಕೋ ಹಾಗೆ ವರ್ತಿಸದೆ ಸದನದ ಸದಸ್ಯರ ಮೇಲೆ ಬೈಗುಳಗಳನ್ನು ಕಾರಿದ್ದಾರೆಂದು ನಾನು ಹೇಳಿದರೆ, ಮಾನ್ಯ ಸಭಾಪತಿಗಳು ಕ್ಷಮಿಸಬೇಕು. ಇದು ಅಂತಿಮವಾಗಿ ಮಾನ್ಯ ಸಭಾನಾಯಕರೇ ಮಸೂದೆಯ ಜೊತೆ ನಿಲ್ಲುವವರೂ, ಬೀಳುವವರೂ ಆಗಿರುತ್ತಾರೆ.

**ಶ್ರೀ ಶ್ಯಾಮನಂದನ ಸಹಾಯ್ :** ಅದನ್ನು ಮರೆತು ಬಿಡಿ, ಈಗ ಪರಿಸ್ಥಿತಿ ಹಾಗೇನೂ ಇಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ನಾನು ಸದಸ್ಯರನ್ನು ಕುರಿತು ಮಾತಾಡುತ್ತಿಲ್ಲ. ನಾನು ನಿಮ್ಮನ್ನು ಉದ್ದೇಶಿಸಿ ಮಾತಾಡುತ್ತಿದ್ದೇನೆ. ಸದಸ್ಯರನ್ನು, ಅವರು ತೋರಿದ ಪ್ರಶಂಸೆ ಮತ್ತು ಸಹಾಯಕ್ಕೆ ನಾನು ಮೆಚ್ಚುವೆನಾದರೂ, ಅವರು ನನ್ನನ್ನು – ನನ್ನಷ್ಟಕ್ಕೆ ಬಿಟ್ಟರೆ ನನಗೆ ಸಂತೋಷವಾಗುತ್ತದೆ.

ಆದುದರಿಂದ ಕಾನೂನು ಮಂತ್ರಿಗಳು ಈ ಸದನದ ಮಾನ್ಯ ಸದಸ್ಯರ ಬಗ್ಗೆ ಸರಿಯಾದ ಭಾವನೆ ಹೊಂದಿಲ್ಲವೆಂದು ನಾನು ಹೇಳಬಯಸುವೆನು.

ಈಗ ನಾನು ಅವರ ಎರಡನೆಯ ಹೇಳಿಕೆಗೆ ಬರುತ್ತಿದ್ದೇನೆ. ಭಾರತಕ್ಕೆ ಒಂದು ಸಾಮಾನ್ಯ ನಾಗರಿಕ ಸಂಹಿತೆಯನ್ನು ಪ್ರತಿಪಾದಿಸುವವರಲ್ಲಿ ಸಾಮಾನ್ಯ ಜ್ಞಾನವಿಲ್ಲವೆಂದು ಇಲ್ಲಿ ಅವರು ಹೇಳಿರುವುದು ಏಕೆ? ಇಂಥ ಅಪಮಾನದ ಮಾತಾಡಿದ್ದಕ್ಕೆ ಅವರು ಕಾರಣಗಳನ್ನು ಹೇಳಿದರೆ ನಾನು ಸಂತೋಷಪಡುತ್ತೇನೆ. ಇಷ್ಟೇ ಅಲ್ಲ, ಅವರು ಇನ್ನೂ ಮುಂದುವರೆದು ಒಂದು ನಾಗರಿಕ ಸಂಹಿತೆಯನ್ನು ಎರಡು ದಿನಗಳಲ್ಲಿ ಪ್ರಸ್ತುತಪಡಿಸುವುದಾಗಿ ಹೇಳಿದರು.

**ಡಾ. ಅಂಬೇಡ್ಕರ್ :** ಹೌದು.

**ಶ್ರೀ ಬಿಸ್ವನಾಥ್ ದಾಸ್ :** ಹಾಗಿದ್ದರೆ, ಅವರು ಅದನ್ನು ಅವಶ್ಯವಾಗಿ ಹಾಗೆ ಮಾಡಲಿ. ಇದಕ್ಕಾಗಿ

ನಾವು ಕಳೆದ ಹಲವಾರು ತಿಂಗಳುಗಳಿಂದ ಕಾಯುತ್ತಿದ್ದೇವೆ. ಇದು ಸಾಧ್ಯವಿದ್ದರೆ, ಎರಡು ದಿನಗಳಲ್ಲೇ ಒಂದು ಸಾಮಾನ್ಯ ಏಕರೂಪ ನಾಗರಿಕ ಸಂಹಿತೆಯನ್ನು ಹೊಂದೋಣ. ಅವಶ್ಯವಾಗಿ ಅದನ್ನು ಹೊಂದೋಣ. ಅವರು ಅದನ್ನು ನಮಗೆ ಕೃಪೆ ಮಾಡಲಿ.

**ಡಾ. ಅಂಬೇಡ್ಕರ್ :** ಅದು ಆಗುತ್ತದೆ ಶ್ರೀ ದಾಸ್ ಅವರೇ, ಆದರೆ ನೀವು ತುಂಬಾ ದಣಿರುವಿರಿ, ಸುಧಾರಿಸಿಕೊಳ್ಳಿ, ನೀವು ಅಂತಹ ಒಳ್ಳೆಯ ಆರೋಗ್ಯದಲ್ಲಿಲ್ಲವೆಂದು ನನಗನ್ನಿಸುತ್ತಿದೆ.

**ಶ್ರೀ ಬಿಸ್ವನಾಥ್ ದಾಸ್ :** ನನ್ನ ಮಾನ್ಯ ಮಿತ್ರರು ಮಾಡಿದ ಸೂಚನೆಯನ್ನು ಸ್ವೀಕರಿಸುವೆ. ಜಾತಿ ವ್ಯವಸ್ಥೆ ಈ ದೇಶಕ್ಕೆ ಒಳ್ಳೆಯದನ್ನು ಮಾಡಿಲ್ಲವೆಂಬುದನ್ನು ನಾನು ಒಪ್ಪುವೆ. ಇದು ಎಷ್ಟು ಬೇಗ ಹೋದರೆ ಅಷ್ಟು ಒಳ್ಳೆಯದು.

ಅಸ್ಪೃಶ್ಯತೆಯನ್ನು (ಬಾತ್ ಹಂಡಿ) ಆಚರಿಸುವ ಸಮಾಜವೊಂದನ್ನು ನಾನು ಕಲ್ಪಿಸಿಕೊಳ್ಳಲಾರೆ. ಈ ಪದ್ಧತಿಯಲ್ಲಿ ಯಾರಾದರೂ, ನನ್ನ ಜಾತಿಯಲ್ಲದವನು, ನನ್ನ ಗಡಿಗೆಯನ್ನು ಅಥವಾ ಬೇಯಿಸಿದ ಅನ್ನವನ್ನೋ, ಅಥವಾ ರೊಟ್ಟಿಯನ್ನೋ ಮುಟ್ಟಿದರೆ ಜಾತಿ ಪದ್ಧತಿಯನ್ನು ಉಲ್ಲಂಘಿಸಿದಂತೆ. ಇದು ಬಹಳ ಗಂಡಾಂತರಕಾರಿ. ಈ ಪದ್ಧತಿಯನ್ನು ನಿರ್ಮೂಲನೆ ಮಾಡೋಣ. ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು. ಅದೇ ವೇಳೆಯಲ್ಲಿ ನಾವು ನಮ್ಮ ಪೂರ್ವಜರನ್ನು ಒಂದು ಶ್ರೇಷ್ಠವಾದ, ಉದಾರವಾದ, ಅಸ್ಪೃಶ್ಯ ಪದ್ಧತಿಗಿಂತ ಉನ್ನತವಾದ ವ್ಯವಸ್ಥೆಯನ್ನು ಹುಟ್ಟುಹಾಕಿದ್ದರೆಂಬುದನ್ನು ನಾವು ಅರಿತಿಲ್ಲ.

"ಚಾತುರ್ವರ್ಣ್ಯ ಮಯಾ ಸೃಷ್ಟ್ಯಾ ಗುಣಕರ್ಮ ಸ್ವಭಾವಶಃ"

ಗುಣ, ಕರ್ಮ, ಸ್ವಭಾವಗಳಿಗನುಗುಣವಾಗಿ ನಾನು ನಾಲ್ಕು ವರ್ಣಗಳನ್ನು ಸೃಷ್ಟಿಸಿರುವೆ.(ಅಂದರೆ ನಾಲ್ಕು ತರದ ಜಾತಿಗಳನ್ನು) ಎಲ್ಲರಿಗೂ ಒಪ್ಪಿತವಾಗುವಂತಹ ಭಗವದ್ಗೀತೆಯಲ್ಲಿ ಅಡಕಗೊಂಡಿರುವ ತತ್ವಕ್ಕನುಗುಣವಾಗಿ ಈ ಚೌಕಟ್ಟಿದೆ. ಇದಕ್ಕೆ ಬದಲಾಗಿ ನಮ್ಮ ಮಾನ್ಯ ಮಿತ್ರರು ಏನು ಮಾಡಬಹುದು? ಮೇಲ್‌ಸ್ತರಕ್ಕೆ ನನ್ನನ್ನು ಒಯ್ಯುವ ಬದಲು ಅವರು ನನ್ನನ್ನು ಕೆಳ ಹಂತಕ್ಕೆ ಜಗ್ಗುತ್ತಿದ್ದಾರೆ. ನಾನು ಅವರ ಜೊತೆಗೆ ಮೇಲುಸ್ತರಕ್ಕೆ ಹೋಗಬಯಸುವೆ. ಆದರೆ.......

**ಶ್ರೀ ಜೆ.ಆರ್.ಕಪೂರ್ :** ಸ್ವರ್ಗಕ್ಕೆ, ನರಕಕ್ಕಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಸ್ವರ್ಗ ಅಥವಾ ತ್ರಿಶಂಕು ಸ್ವರ್ಗಕ್ಕೆ ಆದರೆ ಅವರ ಜೊತೆಗೆ ಕೆಳಸ್ತರಕ್ಕೆ ಹೋಗಲು ನಾನು ಬಯಸುವುದಿಲ್ಲ.

**ಡಾ. ಅಂಬೇಡ್ಕರ್ :** ನಿಮಗೆ ನಿಮ್ಮ ಗೆಳೆಯರನ್ನು ಹೇಗೆ ಆಯ್ದುಕೊಳ್ಳಬೇಕೆಂದು ಗೊತ್ತಿಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಈ ತಪ್ಪನ್ನು ನಾನು ಮಾಡಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಸರಿ, ಸಾಮಾನ್ಯ ಮಸೂದೆಯೇನೂ ಹೊಸ ವಿಚಾರವಲ್ಲ. ಇವತ್ತಿಗೂ ಪೋರ್ಚುಗೀಸ್ ಸ್ವಾಮ್ಯದ ಭಾರತದಲ್ಲಿ ಅದು ಇದೆ. ಪೋರ್ಚುಗೀಸ್ ಭಾರತದಲ್ಲಿ ಹಿಂದೂಗಳು ವಾಸಿಸುತ್ತಿದ್ದಾರೆ. ಪೋರ್ಚುಗೀಸ್ ಭಾರತಕ್ಕಿಂತ ಸಾಕಷ್ಟು ಮುಂದುವರೆದಿರುವ ಭಾರತದಲ್ಲಿ ಇದನ್ನು ನಾವೇಕೆ ಅನುಸರಿಸಬಾರದು. ನಮ್ಮ ಸ್ನೇಹಿತರು ಹೇಳುವ ಸಾಮಾನ್ಯ ಏಕರೂಪ ಮಸೂದೆಯನ್ನು ಹೊಂದುವುದು ಸುಲಭವಾದರೆ, ಅದನ್ನು ಅವರು ಮಂಡಿಸಲಿ, ಆಗ ಅವರಿಗೆ ವಿರುದ್ಧವಾಗಿರುವ ಕೆಲವರಾದರೂ ಅವರಿಗೆ ಸ್ನೇಹಿತರಾಗುತ್ತಾರೆ. ಆದರೆ ಈ ಹಿಂದೂ ಮಸೂದೆಗೆ ಸಂಬಂಧಿಸಿದಂತೆ ನಾವು ಅವರ ಜೊತೆ ಸಮ್ಮತಿಸಲು ಸಿದ್ಧರಿಲ್ಲ. ಹಾಗೆಯೇ ಮುಸ್ಲಿಮ್ ಸಮಾಜವನ್ನು ಸ್ಪರ್ಶಿಸುವಂತಿಲ್ಲ. ಏಕೆಂದರೆ, ಹಾಗೆ ಮಾಡಿದಲ್ಲಿ ನಮ್ಮ ಧರ್ಮಕ್ಕೆ ಅಪಾಯ ಕಾದಿದೆ ಎಂಬ ಬೊಬ್ಬೆ ಏಳುವುದು. ಹಾಗೆಯೇ ಕ್ರೈಸ್ತ ಧರ್ಮಕ್ಕೂ ಕೈ ಹಾಕಲಾರಿರಿ, ಅವರೂ ಕೂಡ

ನಮ್ಮ ಧರ್ಮಕ್ಕೆ ಅಪಾಯವಿದೆ ಎಂದು ಹೇಳುತ್ತಾರೆ. ಆದರೆ ನೀವು ಹಿಂದೂ ಸಮಾಜಕ್ಕೆ ಜಾಡಿಸಿ ಒದೆಯಬಹುದು, ಅಮಾನವೀಯ ಏಕರೂಪತೆಯನ್ನು, ಹೊಸ ಹೊಸ ಪ್ರಯೋಗಗಳೊಂದಿಗೆ ಇಲ್ಲಿ ಪ್ರಚಾರ ಮಾಡಬಹುದು. ನಾವು ಇದನ್ನು ಒಪ್ಪಲಾರೆವು.

ಅರವತ್ತು ವರ್ಷದ ವಯೋವೃದ್ಧನಾದ ನಾನು, ವಿಚಾರವಾದ ಆಧಾರಿತ, ನಮ್ಮ ಸ್ನೇಹಿತರು ಪ್ರತಿಪಾದಿಸುತ್ತಿರುವ ಸಮಾಜದ ಸಂರಚನೆಯನ್ನು ನಾನು ಒಪ್ಪಲಾರೆ. ನಮ್ಮ ದೇಶದಲ್ಲಿ ದೈವವಾದ ಮತ್ತು ವಿಚಾರವಾದಗಳ ನಡುವೆ ಒಂದು ನಿರಂತರ ಸಂಘರ್ಷ ನಡೆಯುತ್ತಾ ಬಂದಿದೆ. ಈ ಹೋರಾಟದಲ್ಲಿ ದೈವವಾದವು ವಿಜಯಿಯಾಗಿ, ವಿಚಾರವಾದವು ಅಪಜಯ ಅನುಭವಿಸಿದೆ ಮತ್ತು ವಿಚಾರವಾದಿಗಳನ್ನು ನಾಸ್ತಿಕರೆಂದು, ದೈವವಾದಿಗಳನ್ನು ಆಸ್ತಿಕರೆಂದು ಕರೆಯಲಾಗಿದೆ. ನಾನು ನಾಸ್ತಿಕನಾಗಲು ನಿರಾಕರಿಸುತ್ತೇನೆ. ಮಾನ್ಯ ಮಂತ್ರಿಗಳು ತಮ್ಮ ಹಿಂದೂ ಮಸೂದೆಯ ಮೂಲಕ ಪ್ರಸ್ತುತಪಡಿಸುತ್ತಿರುವ ಸಾಮಾಜಿಕ ವ್ಯವಸ್ಥೆಯ ಪ್ರಾಚೀನ ದಿನಗಳಲ್ಲಿ ಯಾವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಆಂದೋಲನ ಮಾಡಲಾಯಿತೋ ಮತ್ತು ಇಡೀ ದೇಶ ಯಾವುದನ್ನು ತಿರಸ್ಕರಿಸಿತೋ, ಅಂಥ ವ್ಯವಸ್ಥೆಗೆ ಇದು ಸಮೀಪವಾಗಿದೆ. ಇವೊತ್ತು ಕೂಡ ದೇಶ, ನಾನು ಬಹಳ ಧೈರ್ಯದಿಂದ ಹೇಳಬಲ್ಲೆ, ಇದನ್ನು ತಿರಸ್ಕರಿಸುತ್ತದೆ, ತಿರಸ್ಕರಿಸಲೇಬೇಕು. ಸಮಾಜವು ತಮ್ಮ ಜೊತೆ ಸಹಮತಿಸಲಾರದೆಂಬ ಭಯದಿಂದ ನನ್ನ ಸ್ನೇಹಿತರು ಆಯ್ಕೆಯ ಅವಕಾಶಗಳನ್ನು ಕೊಡಲು ನಿರಾಕರಿಸುತ್ತಿದ್ದಾರೆ. ತಮ್ಮ ಜೊತೆ ದೇಶವನ್ನು ಕೊಂಡೊಯ್ಯಲಾರೆವೆಂಬ ಭಯದಿಂದಾಗಿ ಕೂಡ ಅವರು ಜನಮತ ಸಂಗ್ರಹಣೆಯ ವಿಷಯಕ್ಕೂ ಭಯಪಡುತ್ತಿದ್ದಾರೆ. ಬೇರಾವುದೇ ಸಂಸತ್ತು ಈ ಕಹಿ ಗುಳಿಗೆಯನ್ನು ನುಂಗಲಾರದೆಂಬ ಹೆದರಿಕೆಯಿಂದ, ಅಪರೋಕ್ಷವಾಗಿ ಆಯ್ಕೆಯಾಗಿ ಬಂದ ಈ ತುಂಬಿದ ಸಂಸತ್ತಿನಲ್ಲಿಯೇ ಅದನ್ನು ಕಾನೂನು ಮಂತ್ರಿಗಳು ಹಾಗೂ ಅವರ ವಿಚಾರಗಳನ್ನೊಪ್ಪುವ ಅವರ ಅನುಯಾಯಿಗಳನ್ನು ಇದೇ ಸಂಸತ್ತಿನಲ್ಲಿ ಈ ಮಸೂದೆಯನ್ನು ಅವಸರದಲ್ಲಿ ಕಾನೂನಾಗಿಸುವುದಕ್ಕೆ ಕಾರಣವಾಗಿದೆ. ನಮ್ಮ ನಾಯಕರಾದ ಮಾನ್ಯ ಪ್ರಧಾನ ಮಂತ್ರಿಗಳು ಈ ಮಸೂದೆಯಲ್ಲಿ ಅವರ ಅಳಿವು ಉಳಿವು ಇರುವುದಾಗಿ ಹೇಳಿರುವರು. ಈ ಹೇಳಿಕೆಯನ್ನು ಅವರು ಪಕ್ಷದ ಸಹ ಸಮ್ಮತಿ ಪಡೆದು ನೀಡಿಲ್ಲವಾದರೂ, ನಾನು ಅವರನ್ನು ಬೆಂಬಲಿಸಬೇಕಿದೆ ಹಾಗೂ ನಾನು ಅವರನ್ನು ಬೆಂಬಲಿಸುತ್ತೇನೆ. ನಾನು ಮನವಿಯನ್ನು ಕಾನೂನು ಮಂತ್ರಿಗಳ ಮೂಲಕ ಮಾಡುತ್ತಿರುವೆನು.

**ಡಾ. ಅಂಬೇಡ್ಕರ್ :** ಕೆಟ್ಟ ಮಾಧ್ಯಮದ ಮೂಲಕ.

**ಶ್ರೀ ಶ್ಯಾಮನಂದನ ಸಹಾಯ್ :** ಅದೊಂದೇ ಮಾಧ್ಯಮ ನಮಗೆ ಲಭ್ಯವಿರುವುದು.

**ಶ್ರೀ ಬಿಸ್ವನಾಥ್ ದಾಸ್ :** ಅದು ಕೆಟ್ಟ ಮಾಧ್ಯಮವಾಗಿದ್ದರೆ, ಅದನ್ನು ಬಿಟ್ಟುಬಿಡುವೆ. ಮಾನ್ಯರೇ, ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿರುವೆ, ಈಗ ನೀವು ಮಾತ್ರ ನನಗೆ ಲಭ್ಯವಿರುವ ಮಾಧ್ಯಮ.

**ಮಾನ್ಯ ಉಪ-ಸಭಾಪತಿಗಳು :** ಇದು ಬಣ್ಣವಿಲ್ಲದ ಮಾಧ್ಯಮ.

**ಶ್ರೀ ಬಿಸ್ವನಾಥ ದಾಸ್ :** ಈ ಮಸೂದೆಯಲ್ಲಿರುವ ಅತ್ಯಂತ ವಿವಾದಗ್ರಸ್ತ ವಿಷಯಗಳನ್ನು ತೆಗೆದುಹಾಕಿರಿ ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದರಿಂದ ಈ ಮಸೂದೆಯನ್ನು ಒಪ್ಪಿಕೊಳ್ಳುವುದು ಸುಲಭವಾಗುತ್ತದೆ. ನಾನು ಈಗಾಗಲೆ ಹೇಳಿದ್ದೇನೆ ಹಾಗೂ ಈಗ ಅದನ್ನು ಪುನುರುಚ್ಚರಿಸುತ್ತೇನೆ. ನಾವು ಒಪ್ಪಿಕೊಳ್ಳುವ ಈ ಮಸೂದೆಯಲ್ಲಿ ಉದ್ದೇಶಿಸಿರುವ ಹಾಗೆ ಆ ವೈಚಾರಿಕತೆ ತಳಹದಿಯಲ್ಲಿ ಹಿಂದೂ ಸಮಾಜವನ್ನು ರೂಪಿಸುವುದಾದಲ್ಲಿ, ನನ್ನ ಮಟ್ಟಿಗೆ ನಾನು ಹೇಳುವುದಾದರೆ ಇದಕ್ಕೆ ನನ್ನ ಸಾವಿನ ಸಂದರ್ಭದಲ್ಲೂ ಕೂಡ**"ಬೇಡಾ"** ಎಂದೇ ಪ್ರತಿರೋಧದ ಮಾತು ಹೇಳುತ್ತೇನೆ.

ತಾವು ಈ ಕಾನೂನನ್ನು ಸರಳೀಕರಿಸುತ್ತಿರುವುದಾಗಿ ನನ್ನ ಮಾನ್ಯ ಮಿತ್ರರು ಹೇಳಿದರು. ನಾನು ಹಾಗೂ ಇಲ್ಲಿರುವ ಬಹಳಷ್ಟು ಮಿತ್ರರು ವಿದ್ಯಾರ್ಥಿಗಳಾಗಿದ್ದಾಗ ನಾವು ಪಠ್ಯ ಪುಸ್ತಕಗಳನ್ನು ಓದುವುದಕ್ಕಿಂತ ಸುಲಭ ಪಠ್ಯಗಳನ್ನು (Made easier) ಓದುವ ರೂಢಿ ಮಾಡಿಕೊಂಡದ್ದು ಚೆನ್ನಾಗಿ ನೆನಪಿದೆ. ಕಲ್ಕತ್ತಾ ವಿಶ್ವವಿದ್ಯಾಲಯದ ಕೆಲ ಪ್ರಾಧ್ಯಾಪಕರು ಈ ಸುಲಭ ಪಠ್ಯಗಳ ಆವೃತ್ತಿಯನ್ನು ಪ್ರಕಟಿಸಿ ಸಾಕಷ್ಟು ಹಣ ಸಂಪಾದಿಸುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ಎಂಥ ಬವಣೆ ಅನುಭವಿಸುತ್ತಿದ್ದರೆಂಬ ಅರಿವು ನನಗಿದೆ. ಈ ಬಗ್ಗೆ ಮಾನ್ಯ ಸದಸ್ಯರು ಕಲಕತ್ತಾ ವಿಶ್ವವಿದ್ಯಾಲಯದ ಸಮಿತಿಯ ವರದಿಯನ್ನು ಪರಿಶೀಲಿಸಬಹುದು. ಈ ಸಮಿತಿಯ ಹೆಸರು–ಸ್ಯಾಡ್ಲರ್ ಕಮಿಷನ್ ವರದಿ ಎಂದು ಇದೆ. ಆ ವರದಿಯ ಪ್ರಕಾರ ಬಾಯಿಪಾಠ ಮಾಡುವ (ಸುಲಭ ಪಠ್ಯ) ಪದ್ಧತಿಯನ್ನು 'ಟೊಳ್ಳು ಪಠ್ಯ ಪದ್ಧತಿ' ಎಂದು ಕರೆದಿದೆ. ನಾನು ಇಂಥ ಜೊಳ್ಳು ಹಿಂದೂ ಮಸೂದೆಯನ್ನು ಬಾಯಿಪಾಠ ಮಾಡಲು ನಿರಾಕರಿಸುತ್ತೇನೆ. ನನ್ನ ಮಾನ್ಯ ಮಿತ್ರರಲ್ಲಿ ದೈನ್ಯದಿಂದ ನಾನು ಪ್ರಾರ್ಥಿಸುತ್ತೇನೆ. ಹಿಂದೂ ಸಮಾಜವನ್ನಷ್ಟೇ ಅಲ್ಲ ಬೇರಾವುದೇ ಸಮಾಜವನ್ನು ಕೂಡ ಬೇರಾವುದೇ ಉದಾಹರಣೆಗಳು ಲಭ್ಯವಿಲ್ಲದ ಕಾರಣ ಹೇಳುತ್ತಿರುವೆ, ಇಂಥ ಜೊಳ್ಳು ಪಠ್ಯಗಳ ಕಾನೂನಿಗೊಳಪಡಿಸಬೇಡಿ.

ನಮ್ಮ ಸಾಮಾನ್ಯ ಬದುಕಿನ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ವೈದ್ಯರಲ್ಲಿ ಎರಡು ತರಹದವರಿದ್ದಾರೆ, ತಜ್ಞ ವೈದ್ಯರು ಹಾಗೂ ನಕಲಿ ವೈದ್ಯರು ಎಂಬುದಾಗಿದೆ. ತಜ್ಞ ವೈದ್ಯರು ರಸ–ಪಾಷಾಣಗಳನ್ನು ಚಿಕಿತ್ಸೆಯಲ್ಲಿ ಉಪಯೋಗಿಸಲು ಹೆದರುತ್ತಾರೆ. ಆದರೆ ನಕಲಿ ವೈದ್ಯರು ಯಾವುದೇ ಅತಂಕವಿಲ್ಲದೆ ಮರ್ಕ್ಯುರಿ ಹಾಗೂ ಆರ್ಸೆನಿಕ್‌ಗಳಂಥಹ ರಸ ಪಾಷಾಣಗಳಿಂದ ಚಿಕಿತ್ಸೆ ನೀಡುತ್ತಾರೆ. ನಾನು ನನ್ನ ಮಿತ್ರರಿಂದ ಇಂಥ ಚಿಕಿತ್ಸೆಯನ್ನು ತಿರಸ್ಕರಿಸುತ್ತೇನೆ. ಸಾವಿರಾರು ವರ್ಷಗಳಿಂದ ಸೌಹಾರ್ದದಿಂದ ಬದುಕಿದ ಹಿಂದೂ ಸಮಾಜಕ್ಕೆ ನೀವು ಇಂಥ ಚಿಕಿತ್ಸೆ ನೀಡಬೇಡಿ ಎಂದು ಬೇಡಿಕೊಳ್ಳುವೆ. ಜಗತ್ತಿನ ಇತಿಹಾಸವನ್ನು ಗಮನಿಸಿದಾಗ ಹಿಂದೂ ಕುಟುಂಬ ಹಾಗೂ ಹಿಂದೂ ಮನೆಯೊಂದೇ ಸುಖಿ ಕುಟುಂಬವಾಗಿರುವುದನ್ನು ಗಮನಿಸಬಹುದು. ಕೆಲವು ಸಂದರ್ಭಗಳಲ್ಲಿ ಕೆಲವು ತೊಂದರೆಗಳು ಕಂಡುಬಂದಿರಬಹುದು. ಆದರೆ ೩೦ ಕೋಟಿ ಜನ ಇರುವ ಸಮಾಜದಲ್ಲಿ ಇವು ಇರುವುದು ಸ್ವಾಭಾವಿಕ. ಆದರೆ ಪಾಶ್ಚಿಮಾತ್ಯ ಜೀವನದಲ್ಲಿರುವ ಭಯಾನಕ ಹಾಗೂ ದುರಂತದ ಛಾಯೆಗಳು ಇಲ್ಲಿ ಇಲ್ಲವೆಂಬುದನ್ನು ನೀವು ನೆನಪಿನಲ್ಲಿಡಬೇಕು.

ಅಂದರೆ ನಮ್ಮ ಸಮಾಜವು ಬದಲಾವಣೆ ಬಯಸುತ್ತಿಲ್ಲ ಎಂದು ನಾನು ಹೇಳಲಾರೆ. ಬದಲಾವಣೆ ಬೇಕು. ಕ್ರಾಂತಿಯಿಂದಲೋ ಅಥವಾ ವಿಕಾಸದಿಂದಲೋ ಯಾವ ರೀತಿ ಬದಲಾವಣೆ ಆಗಬೇಕೆಂದು ನೀವು ಇಚ್ಛಿಸುತ್ತಿರೋ. ಆದರೆ ಈ ಬಗ್ಗೆ ಕಾಯ್ದೆ ಮಾಡುವ ಮುನ್ನ ಜನರಿಗೆ ಆ ಬಗ್ಗೆ ಸರಿಯಾಗಿ ಯೋಚಿಸಲು ಅವಕಾಶ ಕೊಡಿ.

ಈ ಮಸೂದೆಯೊಳಗಿನ ವಿವಾಹ ಕುರಿತಂತೆ, ಬಿಹಾರಿನ ಮತ್ತು ನ್ಯಾಯಶಾಸ್ತ್ರಿಗಳಾದ ನನ್ನ ಸ್ನೇಹಿತರು ಮಾತಾಡುತ್ತಾ, ವಿವಾಹದಲ್ಲಿ ಗಂಡು–ಹೆಣ್ಣು ಸಹಭಾಗಿಗಳು ಎಂದರು. ನಾನು ಈ ಕುರಿತು ಒಪ್ಪುತ್ತಿಲ್ಲ. ಅವರು ಸಹಭಾಗಿಗಳೆಂದಿದ್ದರೆ, ಅದನ್ನು ಒಪ್ಪಿಕೊಳ್ಳುವುದು ನನಗೆ ಸ್ವಲ್ಪ ಕಷ್ಟವಾಗುತ್ತಿತ್ತು. ಆದರೆ ಮಾನ್ಯ ಕಾನೂನು ಮಂತ್ರಿಗಳು ಅದನ್ನು ಒಂದು ರೀತಿಯ ಒಪ್ಪಂದದ ಸಂಬಂಧದಂತೆ ಪರಿಭಾವಿಸಿ, ವಿವಾಹಕ್ಕಿರುವ, ಸಂಸ್ಕಾರಜನ್ಯ ಪಾವಿತ್ರ್ಯವನ್ನು ಕೈಬಿಟ್ಟಿದ್ದಾರೆ. ಅವರು ಪಾಶ್ಚಿಮಾತ್ಯ ಜಗತ್ತಿನಲ್ಲಿರುವ, ಒಪ್ಪಂದದ ಸಂಬಂಧಗಳ ಮಾದರಿಯನ್ನು ಜಾರಿಗೆ ತಂದು, ಅದರೆಲ್ಲ ಕಾಠಿಣ್ಯತೆಗಳನ್ನು ಈ ಮಸೂದೆಯ ಮೂಲಕ ಜಾರಿಮಾಡಲು ಹೊರಟ್ಟಿದ್ದಾರೆ. 'ಬಡವರಿಗೆ' ಮತ್ತು 'ಬಲ್ಲಿದ'ರಿಗೆಂದು ಪ್ರತ್ಯೇಕ ಕಾಯ್ದೆಗಳನ್ನೇನಾದರೂ ನೀವು ಮಾಡಲು ಹೊರಟಿರುವಿರೋ? 'ಬಲ್ಲಿದ'ರಿಗೇನಾದರೂ ನೀವು ಕಾಯ್ದೆ ಮಾಡಿಕೊಳ್ಳಲು ಹೊರಟಿದ್ದರೆ, ಎಲ್ಲಾ

ದೃಷ್ಟಿಯಿಂದಲೂ ನಿಮ್ಮೆಲ್ಲ ವಕೀಲರಿಗೆ, ಅಡ್ವೋಕೇಟ್, ಮತ್ತು ಪ್ಲೀಡರ್‌ಗಳೊಂದಿಗೆ ಮಾಡಿಕೊಳ್ಳಿ.

**ಶ್ರೀ ಶ್ಯಾಮನಂದನ ಸಹಾಯ್ :** ಉಳ್ಳವರು (Haves) ಅಂದರೆ ನೀವು ಪತ್ನಿಯರನ್ನು ಉಳ್ಳವರು ಎಂದು ಹೇಳುತ್ತಿರಾ?

**ಶ್ರೀ ಬಿಸ್ವನಾಥ್ ದಾಸ್ :** ನಾನು ಆ ಸಂಬಂಧವಾಗಿ ಮಾತಾಡುತ್ತಿಲ್ಲ. ನೀವು ಗ್ರಾಮೀಣ ಭಾಗಕ್ಕೆ ಹೋಗಿರಿ. ನಿಜವಾದ ಭಾರತ ಹಳ್ಳಿಗಳಲ್ಲಿದೆ. ಭಾರತೀಯ ಜೀವನವೆಂದರೆ ಗ್ರಾಮೀಣ ಜೀವನ. ಅಲ್ಲಿ ಕೆಲವೊಂದು ಮೇಲ್ವರ್ಗದವರನ್ನು ಹೊರತುಪಡಿಸಿದರೆ, ಉಳಿದ ಜನರು ಹತ್ತತ್ತು, ಹದಿನೈದು ದಿವಸಗಳವರೆಗೆ, ಕೆಲವೊಂದು ಸಂದರ್ಭದಲ್ಲಿ, ಕಡಿಮೆ ಅವಧಿಯವರೆಗೆ ತಮ್ಮ ಮದುವೆ ಸಮಾರಂಭಗಳನ್ನು ಆಚರಿಸುತ್ತಾರೆ. ಈಗ ನೀವು ನೋಂದಣಿ ವಿಭಾಗವನ್ನು ತೆರೆದು ಅದರ ಎಲ್ಲಾ ವಿಧಿ ವಿಧಾನಗಳೊಂದಿಗೆ ಮದುವೆಯನ್ನು ಹೆಚ್ಚು ತುಟ್ಟಿಯಾಗಿಸಹೊರಟಿರುವಿರಿ. ಈ ಸಂಬಂಧ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಖರ್ಚು ತಗಲುತ್ತದೆ ಎಂಬ ಬಗ್ಗೆ ಲೆಕ್ಕ ಮಾಡಿರುವಿರಾ ಎಂದು ನನ್ನ ಮಾನ್ಯ ಮಿತ್ರರನ್ನು ಕೇಳಬಯಸುತ್ತೇನೆ. ಅವುಗಳ ನಿರ್ವಹಣೆಗಾಗಿ ರಾಜ್ಯ ಬೊಕ್ಕಸದ ಮೇಲೆ ಬೀಳುವ ಹೊರೆಯ ಬಗ್ಗೆ ಲೆಕ್ಕಾಚಾರ ಮಾಡದೆ ಈ ಸಂಸತ್ತಿನ ಮೇಲೆ ಹೇರಲಾಗುತ್ತಿದೆ. ಇಂಥ ಎಲ್ಲಾ ಮಸೂದೆಗಳ ಬಗ್ಗೆ ನನ್ನ ಪ್ರತಿರೋಧವಿದೆ. ನಾನು ರಾಜ್ಯದ ಹಳೆಯ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೆ. ಡೆವಲೂಶನ್ ಆಕ್ಟ್ (Divolntion act) ಪ್ರಕಾರ ಪ್ರತಿಯೊಂದು ಮಸೂದೆಯು ತರಬಹುದಾದ ಹಣಕಾಸಿನ ಭಾರವನ್ನು ಲೆಕ್ಕಮಾಡುವುದು ಅಗಿನ ಜವಬ್ದಾರಿರಹಿತ ಸರಕಾರದ ಕರ್ತವ್ಯವಾಗಿತ್ತು. ಇಂಥ ಮಹತ್ವದ ವಿಷಯಗಳಿಗೆ ಸಂಬಂಧಿಸಿದ ಈ ಮಸೂದೆ ಹೊಂದಿರಬಹುದಾದ ಆರ್ಥಿಕ ಹೊರೆಯನ್ನು ಹಾಗೂ ರಾಜ್ಯಗಳ ಬೊಕ್ಕಸಕ್ಕೆ ತಗುಲಬಹುದಾದ ಖರ್ಚಿನ ಹೊರೆಯನ್ನು ನಮಗೆ ತಿಳಿಸಿ ಎಂದು ನನ್ನ ಮಾನ್ಯ ಮಿತ್ರರನ್ನು ಅಧಿಕಾರಯುತವಾಗಿ ಕೇಳುತ್ತಲಿದ್ದೇನೆ.

[ಮಾನ್ಯ ಸಭಾಪತಿಗಳು ಈಗ ತಮ್ಮ ಆಸನದಲ್ಲಿ ಆಸೀನರಾಗಿದ್ದಾರೆ]

ನಿಮ್ಮ ಪ್ರಕರಣಗಳನ್ನು ಬಹುತೇಕ ಜಿಲ್ಲಾ ನ್ಯಾಯಾಲಯಗಳಲ್ಲಿ ಇತ್ಯರ್ಥಪಡಿಸಿಕೊಳ್ಳುವಿರಿ. ಅಂದರೆ ಮುನ್ಸಿಫ್ ಕೋರ್ಟಿಗಿಂತಲೂ ಮೇಲ್ಮಟ್ಟದ ನ್ಯಾಯಾಲಯವಾದಂತಾಯಿತು. ಈ ಮಸೂದೆಗೆ ನನ್ನ ಒಪ್ಪಿಗೆಯನ್ನೂ ಕೂಡ ಕೇಳಲಾಗಿದೆ. ಆದುದರಿಂದ ಇಂಥ ಪ್ರತಿಯೊಂದು ವಿಷಯಗಳಲ್ಲಿ ಖರ್ಚುಮಾಡಬಹುದಾದ ಹಣವೆಷ್ಟು ಎಂಬುದನ್ನು ಅರಿತುಕೊಳ್ಳುವ ಹಕ್ಕು ನನಗಿದೆ. ನೀವು ನೋಂದಣಿ ವಿಭಾಗವನ್ನು ಆರಂಭಿಸಬೇಕಾಗಿದೆ ಹಾಗೂ ವಿವಾಹ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯಗಳನ್ನು ನಾವು ಹೊಂದಬೇಕಾಗಿದೆ. ಈ ವಿಷಯವಾಗಿ ಈಗ ನೀವು ಎಷ್ಟು ಖರ್ಚು ಮಾಡುತ್ತಿರುವಿರಿ ಹಾಗೂ ಇನ್ನು ಮುಂದೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಅರಿತುಕೊಳ್ಳುವ ಹಕ್ಕು ನನಗಿದೆ. ಈ ಬಾಬತ್ತಿನ ಮೇಲೆ ರಾಜ್ಯಗಳ ಖರ್ಚು ಮಾಡಬೇಕಾದ ಹಣದ ಹೊರೆ ಕಲ್ಪನೆಗೂ ನಿಲುಕದಷ್ಟು ದೊಡ್ಡದಾಗಿದೆ ಎಂಬುದನ್ನು ನಾನು ಬಲ್ಲೆ. ೩೩ ಕೋಟಿ ಜನಸಂಖ್ಯೆಯ ಬಗ್ಗೆ ಗಮನಹರಿಸಿರಿ. ನೀವು ನಗಬಹುದು.

**ಮಾನ್ಯ ಸಭಾಪತಿಗಳು :** ಮಾನ್ಯ ಸದಸ್ಯರು ಪೀಠವನ್ನು ಉದ್ದೇಶಿಸಿ ಮಾತಾಡಬೇಕು.

**ಶ್ರೀ ಬಿಸ್ವನಾಥ್ ದಾಸ್ :** ಮಾನ್ಯರೆ ನನ್ನನ್ನು ಕ್ಷಮಿಸಿ. ಮಾನ್ಯ ಕಾನೂನು ಮಂತ್ರಿಗಳು ನಗಬಹುದು ಹಾಗು ಇತರರೂ ನಗಬಹುದು. ನಾನು ಈ ಬಗ್ಗೆ ಚಿಂತಿಸುವುದಿಲ್ಲ. ಆದರೆ ಹಿಂದಿನ ಸರಕಾರಗಳು ನೀಡುತ್ತಿದ್ದ ಹಾಗೆ, ಈ ಸರ್ಕಾರವೂ ಕೂಡ ಈ ಮಸೂದೆಯ ವಿವಿಧ ಅಂಶಗಳನ್ನು ಜಾರಿಗೊಳಿಸಲು ಬರಬಹುದಾದ, ಅವರು ಮಾಡಬಹುದಾದ ಆರ್ಥಿಕ ಖರ್ಚುಗಳ ಬಗ್ಗೆ ಒಂದು ಕಾರ್ಯಪಟ್ಟಿಯನ್ನು (Working Sheet) ಈ ಸದನದ ಮುಂದೆ ಮಂಡಿಸಬೇಕೆಂದು ಕೇಳುವ ಹಕ್ಕು ನನಗಿದೆ. ದೇಶದ

ಜನಸಂಖ್ಯೆಯ ಪ್ರತಿಶತ ಒಂದರಷ್ಟು ಜನರು ನ್ಯಾಯಾಲಯಗಳಿಗೆ ಹೋಗಬೇಕಾಗಿದೆ ಎಂದು ಭಾವಿಸಿದರೂ ಕೂಡ ಈ ದೇಶದ ಕೋರ್ಟು ಮತ್ತು ನೋಂದಣಿ ಇಲಾಖೆಗಳ ಮುಂದೆ ಮಹಾಪೂರವೇ ನೆರೆಯುತ್ತದೆ.

**ಮಾನ್ಯ ಸಭಾಪತಿಗಳು :** ನಾವೀಗ ಮಸೂದೆಯ ೨ನೆಯ ಕಲಮಿನ ಬಗ್ಗೆ, ಅಂದರೆ ಅದನ್ನು ಅನ್ವಯಿಸುವದರ ಕುರಿತು ಚರ್ಚಿಸುತ್ತಿರುವೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರು ಎತ್ತುತ್ತಿರುವ ಪ್ರಶ್ನೆ ಈ ಮಸೂದೆಯ ಎಲ್ಲಾ ಅಂಶಗಳನ್ನು ಆಡಳಿತಾತ್ಮಕವಾಗಿ ಅನ್ವಯಿಸುವಾಗ ಆಗಬಹುದಾದ ಖರ್ಚನ್ನು ಕುರಿತದ್ದಾಗಿದೆ. ವಿವಾಹಗಳ ಬಗ್ಗೆ ಚರ್ಚಿಸುವಾಗ ಈ ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತವಲ್ಲವೆ? ಯಾಕೆಂದರೆ ಕಲಮಿನಲ್ಲಿ ಮದುವೆಗಳು ದಾಖಲ್ಪಡಿಸಬೇಕು ಎಂದು ಹೇಳಲಾಗಿದೆ. ಆಗ ಈ ಪ್ರಶ್ನೆ ಬರುತ್ತದೆ. ಇದೇ ಮಸೂದೆಯನ್ನು ಕುರಿತಾಗಿ ಸಮಗ್ರವಾದ ಸಾಮಾನ್ಯ ಚರ್ಚೆಯನ್ನು ನಡೆಸಲು ಈ ಹಂತದಲ್ಲಿ ಸೂಕ್ತವಾಗಲಾರದು. ಈಗ ಕಲಮು ಕುರಿತಾದ ಚರ್ಚೆಯ ಘಟ್ಟದಲ್ಲಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಮೇಲಿಂದ ಮೇಲೆ ಮಾನ್ಯ ಮಂತ್ರಿಗಳ ಭಾಷಣದ ವಿಷಯದ ಬಗ್ಗೆ ತಕರಾರು ಎತ್ತುವುದನ್ನು ಬಿಟ್ಟು ಚರ್ಚೆ ಬರುವವರಿಗೆ ಕಾದಿರಿಸಿಕೊಳ್ಳಬಾರದೇಕೆ?

**ಶ್ರೀ ಬಿಸ್ವನಾಥ್ ದಾಸ್ :** ಮಾನ್ಯರೆ ತಮ್ಮ ಮಾರ್ಗದರ್ಶನಕ್ಕೆ ನಾನು ಕೃತಜ್ಞನಾಗಿದ್ದು ಅದನ್ನು ನೆನಪಿನಲ್ಲಿಟ್ಟುಕೊಳ್ಳುವೆ. ಆದರೆ ನಾನು ಈ ವಿಷಯದ ಬಗೆಗೂ ನನ್ನ ನಿವೇದನೆಗಳನ್ನು ವ್ಯಕ್ತಪಡಿಸಬೇಕಾಗಿದೆ. ಕಲಮು ೨ಕ್ಕೆ ರಾಜ್ಯಗಳು ಈ ಮಸೂದೆಯು ಕಾನೂನಾಗಿ ಅನುಮೋದನೆಯಾದ ನಂತರ ಅದರ ಅಂಶಗಳನ್ನು ಜಾರಿಗೆ ತರುವ ವಿಷಯದಲ್ಲಿ ರಾಜ್ಯಗಳ ಆಯ್ಕೆಗೆ ಬಿಡಬಹುದಾಗಿದೆ ಎಂಬ ಕುರಿತು ತಿದ್ದುಪಡಿಗಳಿವೆ. ಆದುದರಿಂದ ಈ ವಿಷಯದ ಬಗ್ಗೆ ನಾನು ನಿವೇದಿಸುತ್ತಿದ್ದು, ಆರ್ಥಿಕ ಪ್ರಶ್ನೆಯು ಬಹಳಷ್ಟು ರಾಜ್ಯಗಳಲ್ಲಿ ಪ್ರಮುಖ ಸಮಸ್ಯೆಯಾಗಲಿದೆ ಎಂಬುದಾಗಿದೆ. ತಾವು ವಿವಾಹದ ಪ್ರಕರಣದ ಬಗ್ಗೆ ಪ್ರಸ್ತಾಪಿಸಿ ಒಳ್ಳೆಯನ್ನು ಮಾಡಿದಿರಿ. ಆದರೆ ಇದು ವಿವಾಹದ ಬಗ್ಗೆ ಅಲ್ಲ ವಿವಾಹದ ಖರ್ಚುಗಳ ಕುರಿತದ್ದು

**ಮಾನ್ಯ ಸಭಾಪತಿಗಳು :** ನಾನು ವಿವಾಹದ ಬಗ್ಗೆ ಏಕೆ ಪ್ರಸ್ತಾಪಿಸಿದೆನೆಂದರೆ, ಮಾನ್ಯ ಸದಸ್ಯರು ಅದರ ಬಗ್ಗೆ ಮಾತಾಡುತ್ತಿದ್ದರು. ಇದು ಒಂದು ಉದಾಹರಣೆಯಾಗಿ ಮಾತ್ರ. ಕಲಮಿಗೆ ಅಳವಡಿಸಿರುವ ತಿದ್ದುಪಡಿಗಳು ಒಪ್ಪಿತವಾದರೆ ಆಗ ರಾಜ್ಯಗಳಿಗೆ ಮಸೂದೆಯ ಅಂಶಗಳನ್ನು ಅನುಷ್ಠಾನಗೊಳಿಸುವ ಆವಶ್ಯಕತೆ ಬರುತ್ತದೆ. ಆದರೆ ತಿದ್ದುಪಡಿಮಾಡಿದ ಅಂಶಗಳಿಗೆ ಸದನ ಒಪ್ಪಿಗೆ ನೀಡುತ್ತದೆಯೆಂದು ಭಾವಿಸಿದರೂ ಕೂಡ, ಈ ಸದನ ಒಪ್ಪಿಗೆ ನೀಡಿದ ಉಪಬಂಧಗಳು ಅನುಷ್ಠಾನಕ್ಕೆ ಮಾತ್ರ ಸಮ್ಮತಿ ನೀಡುತ್ತದೆ. ಆದುದರಿಂದ ಯಾವುದೇ ಅವಕಾಶ ಹಣಕಾಸಿನ ಹೊರೆ ಹೊರೆಸುವಂತೆ ಕಂಡರೆ ಆಗ ಸದಸ್ಯರು ಇಂಥ ವಾದವನ್ನು ಮುಂದುವರಿಸುವ ಅವಕಾಶ ಪಡೆಯಲಿದ್ದಾರೆ ಹೊರತು, ಈ ಹಂತದಲ್ಲಿ ಅಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಧನ್ಯವಾದಗಳು. ನಾನು ಮುಂದುವರಿಸುವುದಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಒಂದು ವಿಷಯ ಹೇಳಬಯಸುವೆ. ನಮ್ಮ ನೂತನ ಶಾಸನದ ವಿಧಿಯಂತೆ ಖರ್ಚು ತಗಲುವ ವಿಷಯಗಳ ಬಗೆಗೆ ಆಯವ್ಯಯದ ಮುಂಗಡಪತ್ರದಲ್ಲಿ ಸೂಚಿಸಿ, ಸದನದ ಅನುಮತಿಯನ್ನು ಪಡೆಯಲೇಬೇಕಾಗುತ್ತದೆ. ಬಹುಶಃ ನನ್ನ ಮಿತ್ರರು ಆ ನಿಯಮಗಳ ಬಗೆಗೆ.....

**ಮಾನ್ಯ ಸಭಾಧ್ಯಕ್ಷರು :** ಆ ವಿಷಯದ ಬಗೆಗೆ ಚರ್ಚೆ ಮುಂದುವರಿಸುವುದು ಬೇಡ. ಅದು ಅಪ್ರಸ್ತುತ. ಆದರೆ ನನಗೆ ತೋರಿದಂತೆ ಈ ವಿಧೇಯಕವನ್ನು ಬಹು ಹಿಂದೆಯೇ, ಈ ನಿಯಮ ಜಾರಿಯಲ್ಲಿರದಾಗ ಸದನದಲ್ಲಿ ಮಂಡಿಸಲಾಗಿತ್ತು.

**ಡಾ. ಅಂಬೇಡ್ಕರ್ :** ಹೌದು ಸರ್, ಈ ವಿಧೇಯಕವು ಆದಾಯ ತರಬಲ್ಲದು ಎಂದು ನನ್ನ ಮಿತ್ರರಿಗೆ ಸೂಚಿಸಬಯಸುವೆ.

**ಮಾನ್ಯ ಸಭಾಧ್ಯಕ್ಷರು :** ಅದು ಬೇರೆ ವಿಷಯ ಅದು ನಮಗೆ ಸಂಬಂಧಿಸಿದ್ದಲ್ಲ.

**ಶ್ರೀ ಬಿಸ್ವನಾಥ್ ದಾಸ್ :** ಈ ವಿಧೇಯಕ ಆದಾಯ ತರುವುದೆಂದೆ ನನ್ನ ಮಿತ್ರರ ಹೇಳಿಕೆ.

**ಮಾನ್ಯ ಸಭಾಧ್ಯಕ್ಷರು :** ಈಗ ಅದರ ಬಗೆಗೆ ಪ್ರಸ್ತಾಪಿಸುವುದು ಬೇಡ.

**ಶ್ರೀ ಬಿಸ್ವನಾಥ್ ದಾಸ್ :** ಸರ್ ನಿಮ್ಮ ಸಲಹೆಗೆ ವಂದನೆ. ಆದರೆ ಮಾನ್ಯ ಕಾನೂನು ಸಚಿವರ ಈ ವಿಧೇಯಕ ಪ್ರಗತಿಪರವಾಗಿದೆ ಎಂಬುದಕ್ಕೆ ನಾನು ವಿವರಣೆ ನೀಡಬೇಕಾಯಿತು. ನಾನು ಈಗಾಗಲೇ ವಿವರಿಸಿರುವಂತೆ ಈ ವಿಧೇಯಕವು ಇಲ್ಲದೇ ಇರುವವರ ಪರವಾಗಿದೆ. ಆದುದರಿಂದ ಉಪನಿಬಂಧನೆ ೨ರ ಆವಶ್ಯಕತೆ ಇಲ್ಲ ಮತ್ತು ಅದು ಅನವಶ್ಯಕ. ಅದು ನೂತನ ತೊಂದರೆಗಳಿಗೆ ಅನುವು ಮಾಡುವುದರಿಂದ ಆವಶ್ಯಕತೆ ಇಲ್ಲ. ಅವಶ್ಯವಿಲ್ಲದ ವಿಷಯಗಳಿಂದ, ನೂತನ ತೊಂದರೆಗಳು ಉದ್ಭವಿಸುವುದರಿಂದ ಅದು ಅನುಪಯುಕ್ತ. ಆದರೆ ಉಪನಿಬಂಧನೆ(೪)ನ್ನು ಏಕೆ ಉಳಿಸಿಕೊಳ್ಳಲಾಗಿದೆ ಎಂಬುದೇ ನನಗೆ ತಿಳಿಯಲಾರದ ಸಂಗತಿ. ಮಗನಿಗೆ ಆಗಲಿ ಹಾಗೂ ಮಗಳಿಗೇ ಆಗಲಿ ಆಸ್ತಿಯಲ್ಲಿ ಹೆಚ್ಚು ಅಥವಾ ಕಡಿಮೆ ಪಾಲು ದೊರೆಯುವ ಬಗ್ಗೆ ನನಗೆ ಚಿಂತೆ ಇಲ್ಲ. ಅದು ಮಗ ಅಥವಾ ಮಗಳಿಗೆ ಬಿಟ್ಟ ವಿಚಾರ. ನನಗೆ ಸೇರಿದಂತೆ, ನಾನು ಆಸ್ತಿಯನ್ನು ತುಂಡುತುಂಡಾಗಿ ಅಲ್ಲದೆ ನನ್ನ ಮಾನ್ಯ ಮಿತ್ರರು ಎಲ್ಲಾ ಆಸ್ತಿಯನ್ನು ಮಗಳಿಗೇ ನೀಡುವಂತಹ ಸೂಚನೆ ತಂದರೂ ಸಂತೋಷದಿಂದ ಒಪ್ಪುವೆ. ಸ್ತ್ರೀಯರೇ ಹೊಂದಲಿ; ಏಕೆಂದರೆ ಮಲಬಾರಿನಲ್ಲಿ ಆಸ್ತಿಯ ಹಕ್ಕನ್ನು ಸ್ತ್ರೀಯರೇ ಹೊಂದಿದ್ದಾರೆ. ಆದುದರಿಂದ ತಾವು ಅದನ್ನೇ ಅನುಸರಿಸಬಹುದು. ಇಲ್ಲವೇ ಮಗ ಹಾಗೂ ಮಗಳಿಗೆ ಸಮನಾದ ಆಸ್ತಿ ಪಡೆಯುವ ಹಕ್ಕನ್ನು ನೀಡಬಹುದು. ಅದು ನನಗೆ ಮಹತ್ವವಾದ ವಿಷಯವಾಗಿಲ್ಲ. ನನ್ನ ಮಟ್ಟಿಗೆ ಹೇಳಬಹುದಾದರೆ ಆ ಭಾಗ್ಯ ನನಗಿಲ್ಲ ಏಕೆಂದರೆ ನನಗೆ ಮಗಳೇ ಇಲ್ಲ; ಆದರೆ ನನಗೆ ಮಗಳ ಬಗೆಗೆ ಸಹಾನುಭೂತಿ ಇದೆ. ಈಗ ನೀವು ಉಪನಿಬಂಧನೆ ೪ರ ಅಡಿಯಲ್ಲಿ ಮಗಳಿಗೆ ತಂದೆಯ ಆಸ್ತಿಯಲ್ಲಿ ಪಾಲು ನೀಡುವುದರಿಂದ ಸ್ತ್ರೀಯರಿಗೆ ಹೆಚ್ಚಿನ ಆರ್ಥಿಕ ಸಾಧ್ಯತೆಗಳನ್ನು ಒದಗಿಸಿದಂತಾಗುತ್ತದೆ. ಅಲ್ಲದೆ ಇವಳು ಸ್ತ್ರೀಧನ ಪಡೆಯುವುದರೊಂದಿಗೆ, ೧೮೭೨ರ ವಿಶೇಷ ವಿವಾಹದ ವಿಧೇಯಕದಂತೆ ಹಲವು ವಿಶೇಷ ಆಸ್ತಿಯ ಹಕ್ಕಿನ ಸೌಕರ್ಯಗಳನ್ನು ಪಡೆಯುತ್ತಾಳೆ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಉಪನಿಬಂಧನೆ ೪ರ ಆವಶ್ಯಕತೆಯೇ ಇಲ್ಲ.

ನನ್ನ ಅಭಿಪ್ರಾಯದಲ್ಲಿ ಭಾರತದಲ್ಲಿ ಇಂದು ಸಾಮಾಜಿಕ ರಚನೆಯಲ್ಲಿ ಬದಲಾವಣೆಗಳನ್ನು ತರಬೇಕಾಗಿದೆ. ಆದರೆ ಆ ಕಾರ್ಯವನ್ನು ಜನರ ಸಮ್ಮತಿಯಿಂದ ಅದೂ ವಿಚಾರವಾದಿಗಳ ಸಹಕಾರದಿಂದ ಸಮಾಜದಲ್ಲಿ ಬದಲಾವಣೆಯಾಗಬೇಕು. ಆದುದರಿಂದ ನಾನು ಸರಕಾರದವರಿಗೆ ಹಾಗೂ ನಿಮಗೂ ಕೋರುವುದೇನೆಂದರೆ, ಉಪನಿಬಂಧನೆ ೨ ಹಾಗೂ ವಿಧೇಯಕದಲ್ಲಿರುವ ಇತರ ಆಕ್ಷೇಪಾರ್ಹ ಲಕ್ಷಣಗಳನ್ನು ತೆಗೆದುಹಾಕಿ, ಯಾರ ವಿರೋಧಕ್ಕೂ ಎಡೆನೀಡದಂತೆ, ಸುಗಮವಾಗಿ ವಿಧೇಯಕವು ಜಾರಿಗೆ ಬರುವಲ್ಲಿ ಅವಕಾಶ ಮಾಡಿಕೊಡಿ.

***ಶ್ರೀ ಎಂ.ಎ ಅಯ್ಯಂಗಾರ್ :** ಸರ್, ಈ ವಿಧೇಯಕದ ಯಾವುದೇ ಹಂತದಲ್ಲಿ ಮಾತನಾಡುವ ಸದಾವಕಾಶ ನನಗೆ ದೊರೆತಿರಲಿಲ್ಲ. ಏಕೆಂದರೆ ತಮ್ಮ ಗೈರುಹಾಜರಿಯಲ್ಲಿ ನಾನೇ ಅಧ್ಯಕ್ಷ ಪೀಠವನ್ನು ಅಲಂಕರಿಸುತ್ತಿದ್ದೆ, ಆದುದರಿಂದ ನಾನು ನನ್ನ ಅಭಿಪ್ರಾಯಗಳನ್ನು ನನ್ನಲ್ಲಿಯೇ ಇರಿಸಿಕೊಳ್ಳಬೇಕಾಯಿತು. ಆದರೆ ಈಗ ತಾವು ಪೀಠದಲ್ಲಿರುವುದರಿಂದ ನನ್ನ ಅಭಿಪ್ರಾಯವನ್ನು ಸೂಚಿಸುವ ಅವಕಾಶ ದೊರಕಿದೆ.

ಮೊದಲಿಗೆ, ನಾನು ಸದನಕ್ಕೂ ಹಾಗೂ ಈ ವಿಧೇಯಕವನ್ನು ಮಂಡಿಸಿದ ಮಾನ್ಯ ಮಿತ್ರರಿಗೂ ಹೇಳಬೇಕೆಂದಿರುವ ವಿಷಯವೆಂದರೆ, ನಾನು ಯಾವುದೇ ಪುರಾತನ ಹಾಗೂ ನೂತನ ಅಭಿಪ್ರಾಯಗಳಿಗೆ, ಅವು ನೂತನವೆಂದೇ ಆಗಲಿ ಅಥವಾ ಪುರಾತನವೆಂಬ ವ್ಯಾಮೋಹಕ್ಕೆ ಗುರಿಯಾಗಿಲ್ಲ. ಏಕೆಂದರೆ ಯಾವುದೇ ಒಂದು ಸಂಗತಿ ಸನಾತನ ಎಂದು ಒಪ್ಪುವುದಾಗಲೀ ಅಥವಾ ನಿಂದಿಸುವುದಾಗಲೀ ಹಾಗೂ ನೂತನ ಎಂದು ಪ್ರಶಂಸಿಸುವುದಾಗಲೀ ಅಥವಾ ತಿರಸ್ಕರಿಸುವುದು ಸರಿಯಲ್ಲ. ನಾವು ಬುದ್ಧಿವಂತರೆನಿಸಿಕೊಂಡವರು ಎರಡರ ಪರ ವಿರೋಧಗಳನ್ನು ಸೂಕ್ಷ್ಮವಾಗಿ ಅರಿತುಕೊಂಡು ಅನುಮೋದಿಸಬೇಕು. ಆದುದರಿಂದ ನಾನು ವಿಧೇಯಕದ ಹಲವು ವಿಷಯಗಳನ್ನು ನಿಷ್ಪಕ್ಷವಾಗಿ ಮಂಡಿಸುವೆ. ನಾನು ಅತಿರೇಕಕ್ಕೆ ಹೋಗದೆ, ಹಾಗೂ ಇದನ್ನು ಎರಡನೆ ವರದಿ ವಾಚನದ ಭಾಷಣವೆಂದು ಭಾವಿಸದೆ, ನನ್ನ ಅನಿಸಿಕೆಗಳನ್ನು ಮಂಡಿಸುವೆ.

ನಾನು ಮೊದಲಿಗೆ ಈ ವಿಧೇಯಕಕ್ಕೆ ಸೂಚಿಸಿರುವ ತಿದ್ದುಪಡಿಗಳು ಹಾಗೂ ಅದಕ್ಕೆ ಸೂಚಕರ ವಿರೋಧದ ಬಗ್ಗೆ ಮಾತನಾಡುವೆ. ಈ ವಿಧೇಯಕದ ಒಂದು ತಿದ್ದುಪಡಿಯಂತೆ ಈ ವಿಧೇಯಕವು ತುಂಬಾ ಪರಿಣಾಮಕಾರಿಯಾಗಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಗೂ ಈ ವಿಧೇಯಕದಲ್ಲಿಯ ಅಂಶಗಳಿಗೆ ವಿಧೇಯಕ ಜಾರಿಗೆ ಬಂದ ದಿನದಿಂದಲೇ ಐಚ್ಛಿಕವಾಗಿ ಬದ್ಧನಾಗುವ ಆಸ್ಪದವಿರಬೇಕೆಂದೇ ಸೂಚಿಸಲಾಗಿದೆ. ಆದರೆ ಸನ್ಮಾನ್ಯ ಕಾನೂನು ಮಂತ್ರಿಯವರು ಹೇಳುವಂತೆ ಅನಾದಿ ಕಾಲದಿಂದಾಗಲಿ ಅಥವಾ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯಾಗಲಿ ಯಾವುದೇ ವಿಧೇಯಕವನ್ನು, ಐಚ್ಛಿಕವಾಗಿ ವ್ಯಕ್ತಿಯೇ ಅಗಲಿ ಅಥವಾ ಪಂಗಡಗಳೇ ಆಗಲಿ ಒಪ್ಪುವ ಪ್ರಶ್ನೆಯೇ ಇಲ್ಲ. ಒಂದು ಬಾರಿ ವಿಧೇಯಕ ಅಂಗೀಕೃತವಾದಲ್ಲಿ ನಾಡಿನ ಶಾಸನ, ಅದಕ್ಕೆ ಎಲ್ಲರೂ ಬದ್ಧರು. ನನಗೆ ತಿಳಿದಂತೆ ಅವರ ಸ್ಮರಣಶಕ್ತಿ ಅಗಾಧವಾಗಿದ್ದರೂ, ಅವರೇಕೆ ೧೯೨೦ರ ಕಚ್ಚಿಮೆಮಾನ್ಸ್ ವಿಧೇಯಕವನ್ನು ಮರೆತಿದ್ದಾರೆ? ಏಕೆಂದರೆ, ಭಾರತೀಯರು, ಮುಸಲ್ಮಾನ ಮತಕ್ಕೆ ಮತಾಂತರಗೊಂಡರೂ ಅವರಿಗೆ ಹಿಂದೂ ಲಾ ಕೂಡ ಅನ್ವಯಿಸುತ್ತದೆ; ಏಕೆಂದರೆ ಅವರು ಹಿಂದೂಮತದ ಸಂಜಾತರು, ಆದುದರಿಂದ ಕಚ್ಚಿಮೆಮಾನ್ಸ್‌ರಲ್ಲಿಯೂ ಅವಿಭಕ್ತ ಕುಟುಂಬದ ವ್ಯವಸ್ಥೆಯು ಜಾರಿಯಲ್ಲಿದೆ ಹಾಗೂ ಅವರು ದತ್ತು ಸ್ವಿಕಾರದ ಪದ್ಧತಿಯನ್ನು ಜಾರಿಯಲ್ಲಿರಿಸಿಕೊಂಡಿದ್ದಾರೆ. ಆದರೆ ನಂತರ ಬಂದ ಹಲವಾರು ಸುಧಾರಕರು ಷರೀಯತ್ ಶಾಸನವನ್ನೇ ಮತಾಂತರಿಗಳು ಅಚರಿಸಬೇಕೆಂದು ಕಡ್ಡಾಯಗೊಳಿಸಿದರು. ಇಸ್ಲಾಂ ತನ್ನದೇ ಆದ ಹಲವಾರು ಶಾಸನಗಳನ್ನು ಹಕ್ಕು, ವಿವಾಹ, ವಿಚ್ಛೇದನ, ವಾರಸುದಾರಿಕೆಗಳನ್ನು ಕ್ರೋಡೀಕರಿಸಿದ್ದರೂ ಹಿಂದೂಗಳೂ, ತಮ್ಮ ಸ್ಮೃತಿಕಾರದಿಂದ ರಚಿಸಿದ ಶಾಸನಗಳನ್ನೇ ಮತಾಂತರ ಹೊಂದಿದ ಇಸ್ಲಾಮಿಯರು, ಮುಂದುವರೆಸಿಕೊಂಡು ಹೋಗಲು ಅಪೇಕ್ಷಿಸಿದ್ದರಿಂದಲೇ ಕಚ್ಚಿಮೇಮಾನ್ ಅವರಿಗೆ ಈ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ. ಅವರು ಈ ಐಚ್ಛಿಕ ಅವಕಾಶ ಅಥವಾ ಆಸ್ಪದವನ್ನು ಸೂಕ್ತ ಅಧಿಕಾರಗಳ ಮುಂದೆ ಹೇಳಿಕೆ ನೀಡಿ ತಮಗೆ ಬೇಕಾದ ರೀತಿಯಲ್ಲಿ ನಡೆದುಕೊಳ್ಳಬಹುದಾಗಿದೆ.

**ಶ್ರೀ ರಾಜ್ ಬಹುದ್ದೂರ್ :** ಅದು ಒಂದು ವಿಶೇಷ ಪ್ರಕರಣ.

**ಶ್ರೀ ಎಂ.ಎ ಅಯ್ಯಂಗಾರ್ :** ನಾನು ಒಂದು ಸಾಮಾನ್ಯ ವಿಷಯವನ್ನು ಪ್ರಸ್ತಾಪಿಸುವೆ. ನಮ್ಮ ಮಿತ್ರರು ಸ್ವಲ್ಪ ಸಮಾಧಾನದಿಂದ ಕೇಳಿರಿ. ಕಚ್ಚಿಮೆಮಾನ್ಸ್ ವಿಧೇಯಕಕ್ಕೆ ೧೯೨೩ರಲ್ಲಿ ತಂದ ತಿದ್ದುಪಡಿಯಂತೆ, ಈ ಎರಡು ಉಪಬಂಧಗಳು ಇವೆ.

ಯಾವುದೇ ವ್ಯಕ್ತಿ ನಿಗದಿಪಡಿಸಿದ ಅಧಿಕಾರಿಗೆ ಒಪ್ಪಿಗೆಯಾಗುವಂತೆ ತಿಳಿಸಬೇಕಾದುದೆಂದರೆ;

ಎ) ತಾನು ಓರ್ವ ಕಚ್ಚಿಮೆಮಾನ್, ಹಾಗೂ ನಾನು ಯಾರನ್ನು ಪ್ರತಿನಿಧಿಸುತ್ತಿದ್ದೆನೆಂದು ಹೇಳಿದ್ದೆನೋ

ಅವನೇ ನಾನು

ಬಿ) ಅವನಿಗೆ ಭಾರತದ ಕರಾರು ೧೮೭೨ರ ಕಲಮು IIರಂತೆ ಕರಡು ಮಾಡಿಕೊಳ್ಳುವುದಕ್ಕೆ ಸಕ್ಷಮತೆ ಇದೆ.

ಸಿ) ಅವನು ಬ್ರಿಟಿಷ್ ಭಾರತದ ನಿವಾಸಿ.

ಹೀಗೆ ನಿಗದಿತ ನಮೂನೆಯ ಫಾರಂನ್ನು ತುಂಬಿ ಸಂಬಂಧಿಸಿದ ಅಧಿಕಾರಿಗೆ ನೀಡಿ ಅವನು ಸಕಲ ಸೌಕರ್ಯಗಳನ್ನು ಪಡೆಯಬಹುದು. ಅಲ್ಲದೇ ಅವನ, ಅಪ್ರಾಪ್ತವಯಸ್ಸಿನ ಮಕ್ಕಳೂ ಹಾಗೂ ಅವರ ಸಂತಾನದವರೆಲ್ಲರೂ ಈ ಕಾನೂನಿನ ಸೌಲಭ್ಯ ಪಡೆಯಬಹುದು. ಈಗ ನನ್ನ ಮಿತ್ರ ಶ್ರೀ ರಾಜ ಬಹಾದ್ದೂರರ ಹೇಳಿಕೆಯ ಸತ್ಯಾಂಶ ಹೊರಹೊಮ್ಮಿದೆ, ಏಕೆಂದರೆ ಈ ಬಗೆಯ ಕಾನೂನು ಸಮಸ್ತ ಭಾರತಕ್ಕೆ ಸಂಬಂಧಿಸಿರದೇ ಕೇವಲ ಒಂದು ಸಮೂಹ ಹಿತಾಸಕ್ತಿಯನ್ನು ರಕ್ಷಿಸುವುದಾಗಿತ್ತು. ಇದೊಂದು ಪ್ರಕರಣದ ಪ್ರಮುಖ ಅಂಶವಾಗಿದೆ. ಏಕೆಂದರೆ ಕಚ್ಚಿಮೆಮಾನ್ಸ್‌ರೊಬ್ಬರೇ ಈ ದೇಶದ ಮುಸಲ್ಮಾನರಲ್ಲ. ಈ ದೇಶದ ಮುಸ್ಲಿಂರು ಕಚ್ಚಿಮುಸ್ಲಿಂರಿಗಿಂತ ಅಧಿಕ ಸಂಖ್ಯೆಯಲ್ಲಿದ್ದು ಷರೀಯತ್ ಅನುಸರಿಸುತ್ತಿದ್ದಾರೆ.

ನೂರಕ್ಕೆ ೯೯.೯ ಮುಸ್ಲಿಂರನ್ನು ಹೊರತುಪಡಿಸಿ ಕೇವಲ ಕಚ್ಚಿಮುಸ್ಲಿಂರಿಗೇಕೆ ಈ ಸೌಲಭ್ಯ? ಆದುದರಿಂದ ನನ್ನ ಸ್ನೇಹಿತರ ಹೇಳಿಕೆಯು ಅವರಿಗೆ ಸಹಕಾರಿಯಾಗದೆ ಬೇರೆಯವರಿಗೆ ಸಹಾಯವಾಗುತ್ತದೆ ಈ ಬಗೆಯ ಒಂದೇ ಒಂದು ಉದಾಹರಣೆಯು ಸಾಕು. ಇದರಿಂದ ನೀವು ನನ್ನ ಮೇಲೆ ಬೌದ್ಧಮತವನ್ನೂ, ನಾನು ನಿಮ್ಮ ಮೇಲೆ ಹಿಂದೂಮತವನ್ನು ಹೇರಲು ಆಸ್ಪದ ದೊರೆಯುತ್ತದೆ. ಇದೇ ವಿವಾಹ, ಹಕ್ಕುದಾರಿಕೆ, ವಾರಸುದಾರಿಕೆಗಳಿಗೂ ಅನ್ವಯಿಸಬಹುದು. ಆದರೆ ಒರ್ವನು ಮತಾಂತರ ಹೊಂದಿದ ನಂತರವೂ ಪುರಾತನ ಅಂದರೆ ಮತಾಂತರ ಹೊಂದುವ ಮುಂಚಿನ ಶಾಸನದಂತೆ ಅಥವಾ ನೂತನ ಶಾಸನದಂತೆ, ಬದಲಾಗುವ ಅವಕಾಶ ನೀಡಿದ್ದರೂ, ಅವನು ತನ್ನ ಮತಾಂತರದ ನೂತನ ಶಾಸನಕ್ಕೆ ಸ್ವಯಂ ತಾನೆ ಬದಲಾಯಿಸಿಕೊಳ್ಳಬೇಕು. ಇದರ ಬಗ್ಗೆ ಯಾವ ಒತ್ತಾಯವೂ ಇಲ್ಲ. ಆದರೆ ಈ ಬಗೆಗೆ ತಿದ್ದುಪಡಿ ತಾರದೇ ಹೋದರೆ ಇದೊಂದು ಜುಲುಮೆ ಮಾಡುವ ವಿಧೇಯಕವಾಗುತ್ತದೆ.

ಹಿಂದೂಗಳಿಗೆ ಸಂಬಂಧಿಸಿದಂತೆ, ಪವಿತ್ರ ವಿವಾಹಕ್ಕೆ ಬದಲಾಗಿ ನಾಗರಿಕ ವಿವಾಹ ಪದ್ಧತಿಯನ್ನು ಜಾರಿಗೊಳಿಸಿದೆ. ಆದರೆ ಮೂಲ ವಿಧೇಯಕದಲ್ಲಿ ಯಾರೂ ತಮ್ಮನ್ನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನ, ಪಾರಸಿ ಎಂದು ಹೇಳದೇ ಹೋದರೂ ಆಸ್ಪದ ನೀಡಲಾಗಿತ್ತು. ಆದರೆ ನಂತರ ಅದನ್ನು ಬದಲಾಯಿಸಲಾಯಿತು. ಹೀಗಾಗಿ ಯಾರು ಇಬ್ಬರು ಕ್ರಿಶ್ಚಿಯನ್ ಅಥವಾ ಮುಸ್ಲಿಂರೇ ಆಗಲಿ ತಮ್ಮ ಮತವನ್ನು ಬಿಟ್ಟುಕೊಡದೇ ನಾಗರಿಕ ವಿವಾಹದಡಿಯಲ್ಲಿ ಮದುವೆ ಮಾಡಿಕೊಳ್ಳುವಂತಿಲ್ಲ, ಆದರೆ ನಾವು ಯಾವಾಗಲೂ ಪ್ರಗತಿಪರರು. ನಾವು ಹಾಳಾದರೂ ಅಡ್ಡಿಯಿಲ್ಲ ಅನ್ಯರಿಗೆ ಅನುಕಂಪ ಸೂಸುವವರು; ಹಾಗೂ ಎಲ್ಲವನ್ನು ಸಹಿಸಿಕೊಂಡೇ ಹೋಗುವವರು. ನಾವು ಮಾಡಿದ ತಿದ್ದುಪಡಿಯಂತೆ, ವಿಧೇಯಕದ ಅಡಿಯಲ್ಲಿ ಹಿಂದೂಗಳು ತಮ್ಮ ಮತ ತ್ಯಜಿಸಬೇಕಾಗಿಲ್ಲ. ಅವರು ಯಾವ ಬಗೆಯ ವಿವಾಹವನ್ನೇ ಮಾಡಿಕೊಂಡಿದ್ದರೂ, ನಾಗರಿಕ ವಿವಾಹ ವ್ಯವಸ್ಥೆಯನ್ನು ಅನುಸರಿಸಬಹುದು. ಇದು ನಾವು ಮಾಡಿರುವ ಕಾರ್ಯ. ಇದಕ್ಕಿಂತ ಹೆಚ್ಚೇನು ಬೇಕು? ಈಗ ನೀವು ಬಂದೂಕಿನ ಬೆದರಿಕೆಯಿಂದ, ಸನಾತನಿಗಳನ್ನು ನಿಮ್ಮ ಅಭಿಪ್ರಾಯಕ್ಕೆ ಒಪ್ಪುವಂತೆ ಮಾಡುತ್ತಿರುವಾಗ ಯಾವ ಕಾರಣಕ್ಕಾಗಿ ಮತ ಬದಲಾಯಿಸಬೇಕು? ನಾನು ಈಗಾಗಲೇ ಹೇಳಿದಂತೆ ಸೂಕ್ಷ್ಮರೂಪಿ ಸಂಖ್ಯೆಯಲ್ಲಿರುವ ಕಚ್ಚಿಗಳಿಗೆಂದೇ ಮಾಡಿರುವಾಗ, ಬಹುಶಃ ಡಾ.ಅಂಬೇಡ್ಕರ್‌ರ ದೃಷ್ಟಿಯಲ್ಲಿ ನಾವೆಲ್ಲರೂ ಪುರಾತನರು ಎಂದೇ ಭಾವಿಸಿ, ನಮಗೆಂದೇ ಈ ಒಂದು

ತುಂಡು ವಿಧೇಯಕ ಜಾರಿಯಲ್ಲಿ ತಂದಿದ್ದಾರೆ. ನಾನು ಒಂದು ವಿಷಯ ಹೇಳಿದರೆ ತಪ್ಪಾಗಲಾರದು. ಅದೇನೆಂದರೆ ೬೦ ವರ್ಷ ವಯಸ್ಸು ಆಗಿದ್ದರೂ ಅಂಬೇಡ್ಕರ್‌ರು ತಾವು ಯಾವ ಧರ್ಮಕ್ಕೆ ಸೇರಿದವರು ಎಂದು ತಿಳಿಯಲಾಗದೇ ಇದ್ದಾರೆ. ಆದರೆ ಅವರು ನನ್ನನ್ನು ಬೆಳಗಾಗುವ ಮುನ್ನವೇ ನನ್ನ ಧರ್ಮವನ್ನು ಬದಲಾಯಿಸುವಂತೆ ಆಗ್ರಹಿಸುತ್ತಿದ್ದಾರೆ. ಇದರ ವಿರುದ್ಧ ಮಾತನಾಡಿದರೆ ನನ್ನನ್ನು ತಪ್ಪು ಭಾವಿಸದಿರಿ. ನನಗೂ, ಬೇರೆಯವರಿಗಿದ್ದಂತೆ, ಈ ಸಮಾಜದಲ್ಲಿ ಬಾಳುವ ಅಧಿಕಾರವಿದೆ. ನಾನು ನನ್ನ ಧರ್ಮದ ಬಗೆಗೆ ನಾಚಿಕೆಪಡಬೇಕಾಗಿಲ್ಲ. ನಾನು ಕೇವಲ ಭಾರತದ ಸ್ತ್ರೀ ಪುರುಷರಿಗಲ್ಲದೆ, ಪ್ರಪಂಚದ ಜನತೆಯ ಬಗೆಗೂ ಮಾತನಾಡುತ್ತೇನೆ. ಅವರು ನೀಡಿದ ಶಾಸನಗಳಂತೆ ಬದುಕು ನಡೆಸುವಲ್ಲಿ ನಮಗೆ ಯಾವ ಮುಜುಗರವಿಲ್ಲ. ಇದಕ್ಕಾಗಿ ಯಾರ ದಯೆ ನಮಗೆ ಬೇಕಾಗಿಲ್ಲ. ಬಹುಶಃ ವಿಶ್ವದ ಇತರ ಜನಾಂಗದವರು, ನಮ್ಮ ಧರ್ಮಸೂತ್ರಗಳನ್ನು ಅಳವಡಿಸಿಕೊಂಡಿದ್ದಲ್ಲಿ, ಈ ಸಮರಗಳ ಸಮಸ್ಯೆಯೇ ಇರದೆ ಶಾಂತಿ ಸುಖಮಯ ಜೀವನವನ್ನು ನಡೆಸಬಹುದಾಗಿತ್ತು. ಶೋಚನೀಯ ಸಂಗತಿ ಎಂದರೆ ಪಾಶ್ಚಿಮಾತ್ಯರಲ್ಲಿ ತ್ಯಾಜ್ಯನೀಯವಾದ ವಿಷಯಗಳನ್ನು ನಾವು ಆಯ್ದುಕೊಂಡು ಅನುಸರಿಸುತ್ತಿರುವುದು. ಉದಾಹರಣೆಗೆ ಇಂದು ನಮ್ಮಲ್ಲಿ ಅದಕ್ಕೆ ಅಪಾರ ಆದರ ಗೌರವ. ಆದರೆ ಅದು ಪಾಶ್ಚಿಮಾತ್ಯರಲ್ಲಿ ತ್ಯಾಜ್ಯನೀಯ. ಇದರಂತೆಯೇ ಅವರಿಂದ ತಿರಸ್ಕರಿಸಲಾದ ಅನೇಕ ಸಂಗತಿಗಳು ನಮ್ಮಲ್ಲಿ ಆದರ ಹಾಗೂ ಗೌರವ ಪಡೆದಿವೆ.

೧೯೩೭ರಲ್ಲಿ ನಾವು ಈ ಸದನದಲ್ಲಿ ಒಂದು ಶಾಸನ ಮಾಡಿದೆವು. ಅದರಂತೆ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರಿಗೆ ಅವರ ಹಿಂದೂ ಸಂಪ್ರದಾಯದಂತೆ ದತ್ತು ತೆಗೆದುಕೊಳ್ಳುವುದಕ್ಕೆ ಆಸ್ಪದ ನೀಡಲಾಗಿತ್ತು. ಅದರಂತೆಯೇ ದಕ್ಷಿಣ–ಭಾರತದ ಮಲಬಾರಿನ ಮಾಪ್ಲಾ ಜನಾಂಗವು, ತಾವು ಮುಸಲ್ಮಾನರಾದರೂ ಅನೇಕ ಹಿಂದೂ ಸಂಪ್ರದಾಯಗಳನ್ನೇ ಅನುಸರಿಸಿಕೊಂಡು ಬಂದಿದ್ದಾರೆ. ಅದು ಕೇವಲ ದತ್ತು ಸ್ವೀಕಾರಕ್ಕೆ ಮಾತ್ರವಲ್ಲದೆ, ಅವರು ಜನಿಸಿದ ಸಮಾಜದ ಅನೇಕ ಸಂಪ್ರದಾಯಗಳಿಗೂ ಅನ್ವಯಿಸುತ್ತದೆ. ಆದುದರಿಂದ ಅವರು ತಮ್ಮ ಆನುವಂಶಿಕ ಹಕ್ಕಿಗಾಗಿ ಒಂದನ್ನು ಹಾಗೂ ಬಾಕಿ ವಿಷಯಗಳಲ್ಲಿ ತಮ್ಮ ನಂಬಿಕೆಗೆ ಅನುಗುಣವಾಗಿ ಆಚರಿಸಿಕೊಂಡು ಬಂದರು. ೧೯೩೭ರಲ್ಲಿ ಷರೀಯತ್ ಕಾನೂನನ್ನು, ಭಾರತದ ಎಲ್ಲಾ ಮುಸಲ್ಮಾನರಿಗೂ ಅನ್ವಯವಾಗುವಂತೆ ಜಾರಿಗೆ ತರಲಾಯಿತು.

ಆ ಷರೀಯತ್ ಕಾನೂನಿನ ૩ನೆಯ ಪ್ರಕರಣದಲ್ಲಿ ಹೀಗೆ ಹೇಳಲಾಗಿದೆ?

೧) ಯಾರೇ ಆಗಲಿ ಸಂಬಂಧಿಸಿದ ಅಧಿಕಾರಿಯ ಮುಂದೇ ಹೇಳಿಕೆ ನೀಡಬೇಕು.

ಎ) ನಾನು ಮುಸ್ಲಿಂ ಬಿ) ನಾನು ಭಾರತ ಕರಾರು ಅಧಿನಿಯಮ ೧೧ರ ಪ್ರಕಾರ ಕರಾರು ಮಾಡಿಕೊಳ್ಳುವುದಕ್ಕೆ ಅರ್ಹನು ಸಿ) ನಾನು ಬ್ರಿಟಿಷ್ ಭಾರತದ ನಿವಾಸಿ, ಹೀಗೆ ನಿಗದಿತ ನಮೂನೆಯ ಫಾರಂನ್ನು ತುಂಬಿ ತಾನು ಈ ವಿಧೇಯಕ ಉಪನಿಬಂಧನೆ ೨ರಲ್ಲಿಯ ಸೌಲಭ್ಯಗಳನ್ನು ಪಡೆಯಬಹುದು. ಈ ಸೌಲಭ್ಯವು ಅವನ ಅಪ್ರಾಪ್ತವಯಸ್ಸಿನ ಮಕ್ಕಳಿಗೂ ಹಾಗೂ ಅವರ ವಂಶಸ್ಥರಿಗೂ ದತ್ತು ಹಾಗೂ ವಾರಸುದಾರಿಕೆ ಮುಂತಾದ ವಿಷಯಗಳಿಗೂ ಅನ್ವಯಿಸುತ್ತದೆ. ಆದುದರಿಂದ, ನನ್ನ ಮಿತ್ರರಾದ ಜಸ್ಪತ್‌ರಾಯ ಅವರ ತಿದ್ದುಪಡಿಯಲ್ಲಿ ಏನೂ ಹುರುಳಿಲ್ಲ ಹಾಗೂ ಅದು ನೂತನವಾಗಿಲ್ಲ. ಈ ಒಂದು ಕ್ರಮವನ್ನು ನಾವು ತುಂಬಾ ಎಚ್ಚರದಿಂದ ನೋಡಬೇಕು. ಏಕೆಂದರೆ ಸಮಾಜದ ಬಹುತೇಕರಿಗೆ ಇದು ಸಮ್ಮತವಾಗಿಲ್ಲ. ಅವರು ತಮ್ಮ ಹಿತಾಸಕ್ತಿಯನ್ನು ಹೇಗೆ ರಕ್ಷಿಸಕೊಳ್ಳಬೇಕೆಂಬುದನ್ನು ಬಲ್ಲರು. ಆದುದರಿಂದ ಈ ಸದನವು ಅದರಲ್ಲಿಯೂ ನನ್ನ ಸನ್ಮಾನ್ಯ ಮಿತ್ರರು ಬೇರೆಯವರಿಗೆ ಅವರ ವಿಧಾನ ತಪ್ಪು ಎಂದು ಉಪದೇಶ ಮಾಡುವುದು ಸರಿಯೇ? ನಾನು ಇಲ್ಲಿ ಸಂಸತ್ತಿನ ಅಧಿಕಾರದ ಬಗೆಗೆ ಮಾತನಾಡುತ್ತಿಲ್ಲ ಅದು ನನಗೆ ಸಂಬಂಧಿಸಿದ

ವಿಷಯವೂ ಅಲ್ಲ; ಆದರೆ ಈ ವಿಧವಾಗಿ ಸಂಸತ್ತು ಶಾಸನ ಮಾಡುವುದು ಸರಿಯಲ್ಲ. ಏಕೆಂದರೆ ಇಂದು ನಾವು ಸ್ವತಂತ್ರರು, ಹೀಗಾಗಿ ಬ್ರಿಟಿಷರ ಆಳ್ವಿಕೆಯಲ್ಲಿಯ ವಿಧಾನಕ್ಕೂ ಇಂದಿನ ವಿಧಾನಕ್ಕೂ ಅಜಗಜಾಂತರ ಭೇದವಿದೆ. ಇಂದು ನಮಗೆ ನಮ್ಮದೇ ಆದ ಸಂವಿಧಾನವಿದೆ. ನನ್ನದೇ ಆದ ಭಾವನೆಯಂತೆ, ಯಾವುದೇ ವ್ಯಕ್ತಿಯ ವೈಯಕ್ತಿಕ ವಿಷಯ ಮತ್ತು ಆಚಾರಗಳ ಬಗೆಗೆ, ಅದೂ ಅವನ ವೈವಾಹಿಕ ಜೀವನಕ್ಕೆ ಸಂಬಂಧಿಸಿದ ಸಂಗತಿಗಳು ಮೂಲಭೂತ ಹಕ್ಕುಗಳಾಗಿರುವುದರಿಂದ ಅದನ್ನು ಯಾರೂ ಮುಟ್ಟಕೂಡದು. ಎಲ್ಲಿಯವರೆಗೂ ನನ್ನ ಆಚಾರ–ವಿಚಾರ ಸಾರ್ವಜನಿಕರಿಗೆ ಧಕ್ಕೆ ಉಂಟು ಮಾಡಲಾರವೋ ಅಲ್ಲಿಯವರೆಗೂ ಅವು ಕೇವಲ ನನಗೆ ವ್ಯಕ್ತಿಗತವಾದ ವಿಷಯಗಳು. ಅದುದರಿಂದ ಇದರಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಯಾರಿಗೂ ಇಲ್ಲ. ಆದುದರಿಂದ ಈ ವಿಷಯದಲ್ಲಿ ಆತುರಬೇಡ. ಸಮಾಧಾನವಿರಲಿ.

ಪ್ರಗತಿಪರ ಅಂಶಗಳಿಗೆ ಸಂಬಂಧಿಸಿದಂತೆ ನಾವು ಈಗಾಗಲೇ ಹಲವಾರು ಶಾಸನಗಳನ್ನು ರಚಿಸಿರುವೆವು. ಹಿಂದೂ ವಿಧವಾ ಪುನರ್ ವಿವಾಹ ಕಾಯ್ದೆ ಜಾರಿಯಲ್ಲಿದೆ. ನನ್ನ ಸ್ನೇಹಿತರು ಸೂಚಿಸಿದಂತೆ ಬಾಲ್ಯ ವಿವಾಹ ನಿರ್ಬಂಧನೆಯೂ ಜಾರಿಯಲ್ಲಿದೆ. ನಿಜ ಅದು ಬಾಲ್ಯ ವಿವಾಹವನ್ನು ನಿರ್ಬಂಧಿಸಿದೆ. ಆದರೆ ಅದು ಮದುವೆಗಳನ್ನು ನಿರ್ಬಂಧಿಸಿದೆ. ಆದರೆ ಇಂದು ನೂತನ ಸಮಸ್ಯೆಗಳು ತಲೆದೋರಿವೆ. ಇಂದು ಸಹಸ್ರಾರು ಬಾಲಿಕೆಯರು ಕನ್ನಿಕೆಯರಾಗಿ ಉಳಿದಿದ್ದಾರೆ. ಇಂದು ಈ ಕನ್ನಿಕೆಯರನ್ನು ನೀವು ಸೈನ್ಯದಲ್ಲಿ ದಾದಿ ಹಾಗೂ ವೈದ್ಯರಾಗಿ ನೇಮಿಸಿದರೆ ಅದಕ್ಕೆ ಕೊರತೆಯೇ ಇಲ್ಲ. ಈ ಒಂದು ಹೊಸ ಸಮಸ್ಯೆಗೆ ನೀವು ಕಾರಣರಾಗಿದ್ದೀರಿ. ಇದನ್ನು ನಾವು ಹಿಂದೆ ಎಂದಾದರೂ ಕೇಳಿದ್ದೆವೆ? ನಮ್ಮ ಅನೇಕ ಮಿತ್ರರು, ಪಂಡಿತ ಠಾಕೂರ್ ದಾಸ್ ಭಾರ್ಗವರನ್ನು ಕೂಡಿದಂತೆ ಬಾಲ ವಿವಾಹದಿಂದ ಅನೇಕರು ವಿಧವೆಯಾದರೆಂದೇ ಕೂಗಿದರು. ಆದರೆ ೧೫ ವರ್ಷದ ಬಾಲೆಯನ್ನು ವಿವಾಹವಾದ ಪುರುಷನು ಬಹುದಿನ ಬದುಕಬಲ್ಲ ಎಂಬುದಕ್ಕೆ ಏನು ಆಧಾರವಿದೆ? ಬಾಲಿಕೆಯನ್ನು ಮದುವೆಯಾದವನು ಬೇಗನೆ ಮರಣಕ್ಕೆ ಗುರಿಯಾಗಬಲ್ಲನು ಎಂಬುದಕ್ಕೆ ಏನಾದರೂ ಆಧಾರವಿದೆಯೇ? ಇದಕ್ಕೆ ಯಾರು ಭರವಸೆ ನಿಡಲಾರರು. ಅದು ಅವರವರ ವಿಷಯ.

ನಾವು ಮಾನವ ಸಮುದಾಯದಲ್ಲಿ ಮಾತ್ರ ಮದುವೆಯ ವಿಷಯ ಕೇಳಿರುವೆವು. ಆದರೆ ಪ್ರಾಣಿ ಸಮುದಾಯದಲ್ಲಿ ಮದುವೆಯ ಪ್ರಶ್ನೆಯೆ ಇಲ್ಲ. ವಿಚ್ಛೇದನ ಕುಟುಂಬಗಳೇ ಇಲ್ಲ. ಆದರೆ ಹಲವಾರು ತೊಂದರೆಗಳನ್ನು ನಿವಾರಿಸಲೆಂದೇ ಮಾನವನು ವಿವಾಹ ಸಂಸ್ಥೆಯನ್ನು ಹುಟ್ಟುಹಾಕಿದ. ಪುರುಷಾರ್ಥ ಸಾಧನೆಗೆ ಸಹಕಾರವಾಗಲಿ ಎಂಬುದೇ ಇವರ ಉದ್ದೇಶ. ಮಹರ್ಷಿಯವರು ಹೇಳಿದಂತೆ ನಾಲ್ಕು ಪುರುಷಾರ್ಥಗಳ ಸಾಧನೆಗೆಂದೇ ಕುಟುಂಬ ವ್ಯವಸ್ಥೆ ಜಾರಿಗೆ ಬಂದಿದೆ. ಆದರೆ ಈ ವಿಧವಾದ ಕಲ್ಪನೆ ಪಾಶ್ಚಿಮಾತ್ಯರಲ್ಲಿಲ್ಲ. ನಮ್ಮಲ್ಲಿ ಕುಟುಂಬ ಸಮಾಜದ ಅಡಿಪಾಯ. ಹೀಗೆಂದ ಮಾತ್ರಕ್ಕೆ ಮಾನವನಿರ್ಮಿತ ಸಂಸ್ಥೆಗಳೂ ದೋಷಯುಕ್ತ ಎಂದು ಹೇಳಲಾರೆ. ಆದರೆ ನಮ್ಮಲ್ಲಿಯ ವಿವಾಹ ಪದ್ಧತಿಯಂತೆ ಯಾವ ಸ್ತ್ರೀಯೂ, ಅವಿವಾಹಿತಳಾಗಿರಲು ಬಯಸಲಾರಳು. ಕೇವಲ ಸನ್ಯಾಸಿಯಾದವಳು ವಿವಾಹ ಬಯಸಳು.

ಒಂದು ಸಂಸ್ಕೃತ ಶ್ಲೋಕವು ನಾರಿಯರಿಗೆ ಸ್ವಾತಂತ್ರ್ಯವೇ ಇಲ್ಲ ಎಂದೇ ಹೇಳಿದೆ. ಆದರೆ ಅದು ಶ್ಲೋಕದ ಅರ್ಥವಾಗಿಲ್ಲ, ಅದು ಕೇವಲ ತಪ್ಪು ಗ್ರಹಿಕೆ. ಯಾವ ಸ್ತ್ರೀಯೂ ೨೫ ವರ್ಷ ವಯಸ್ಸಿನವಳಾಗಿಯೇ ಹುಟ್ಟಿರಲಾರಳು, ಅವಳೂ ತನ್ನ ತಾಯಿಯ ಗರ್ಭದಿಂದ ಜನಿಸಿ ಬೆಳೆದು ಯುವತಿಯಾಗಿ ತಾನೇ ಮುದುಕಿಯಾಗುವುದು. ಪುರುಷನೇ ಆಗಲೀ ಅಥವಾ ಸ್ತ್ರೀಯೇ ಇರಲಿ ಬಾಲ್ಯಾವಸ್ಥೆಯನ್ನು ತಮ್ಮ ಪೋಷಕರ ಪೋಷಣೆಯಲ್ಲಿಯೇ ಕಳೆಯುವುದು ಸಹಜ. ಬಾಲಿಕೆಯು, ಬಾಲ್ಯಾವಸ್ಥೆಯನ್ನು ತಂದೆಯಲ್ಲಿಯೂ, ಮುದುಕಿಯಾದ ಮೇಲೆ ಮಗನಿಗಿಂತ ಬೇರೆಯವರ ಆಶ್ರಯ ಬೇಕೆ? ಹೀಗಾಗಿ ಪುರುಷರೇ ಆಗಲಿ

ಅಥವಾ ಸ್ತ್ರೀಯರೇ ಆಗಲಿ ತಮ್ಮ ತಂದೆ ತಾಯಿ ಅಥವಾ ಮಗನ ಮೇಲೆ ಅವಲಂಬಿಸಿರುವುದು ಸಹಜವೇ. ಪ್ರಶ್ನೆ ಎಂದರೆ ವಿವಾಹ ಜೀವನದ ಬಗ್ಗೆ. ಹೆಣ್ಣೆ ಆಗಲೀ ಗಂಡೇ ಆಗಲಿ ಒಬ್ಬರನ್ನೊಬ್ಬರು ಅವಲಂಬಿಸಿರಲೇಬೇಕಲ್ಲವೇ? ಇದರಲ್ಲಿ ಗಂಡು–ಹೆಣ್ಣಿನ ಮಾತೇ ಇಲ್ಲ. ಉತ್ತಮ ವಿವಾಹ ಜೀವನ ಎಂದರೆ ಗಂಡ ಹೆಂಡತಿಯ ಹೊಂದಾಣಿಕೆಯೇ ಹೊರತು ಗಂಡನ ಅಥವಾ ಹೆಂಡತಿಯ ಪ್ರತಿಷ್ಠೆಯ ಪ್ರಶ್ನೆ ಅಲ್ಲ. ಇದಕ್ಕೆ ಮಧ್ಯೆ ಬೇರೆ ಯಾವ ಮಾರ್ಗವೂ ಇಲ್ಲ. ನಾನು ಡಾ.ಅಂಬೇಡ್ಕರ್‌ರನ್ನು (ಅವರೂ ಕೂಡಿಯೇ ಇದ್ದಾರೆ) ಹೌದು ಅವರು ಕೂಡಿರುವುದು ನನಗೂ ತಿಳಿದಿದೆ. ಮನೆಯಲ್ಲಿ ಗಂಡನ ಮಾತೇ ಜೋರು ಎಂದರೂ ಅಡ್ಡಿಯಿಲ್ಲ. ಅಥವಾ ಅಮ್ಮ ಅವರ ಮಾತೇ ಜೋರು ಎಂದರೂ ಚಿಂತೆಯಿಲ್ಲ. ಆದರೆ ಹುಡುಗಿಯನ್ನು ಯಾರಿಗೆ ಕೊಡಬೇಕು. ಹೇಗೆ ಮದುವೆ ಮಾಡಬೇಕು. ಎಂಬ ವಿಷಯದ ಬಗೆಗೆ ನಾವು ಯೋಚಿಸಬೇಕಾಗಿದೆ. ಆದುದರಿಂದ ಗಂಭೀರವಾಗಿ ನಾವು ಯೋಚಿಸಬೇಕಾದ ಸಂಗತಿ ಎಂದರೆ ಆಸ್ತಿಯಲ್ಲಿಯ ಮಗಳ ಪಾಲಿನ ವಿಷಯ. ಇದೊಂದು ಕ್ಷುಲ್ಲಕ ವಿಷಯವೆಂದೇ ಹೇಳಬಯಸುವೆ. ಮಗು ಯಾರಿಗೆ ಸೇರಿದೆ ಎಂದು ತಂದೆ ತಾಯಿ ಕಲಹ ಮಾಡಿದಂತಿದೆ ಈ ವಿಷಯ. ಹೀಗಾಗಿ ಈ ವಿಧೇಯಕವೇನಾದರೂ ಜಾರಿಗೆ ಬಂದಲ್ಲಿ ಅದು ಈ ದೇಶದ ಗಂಡು ಹೆಣ್ಣುಗಳೆರಡಕ್ಕೂ ಸಂಬಂಧಿಸಿದೆ. ಹೀಗಾಗಿ ಇದನ್ನು ವ್ಯಾಮೋಹದಿಂದ ನೋಡಕೂಡದು.

ಕಳೆದ ಮೂರು ಸಹಸ್ರ ವರ್ಷಗಳಿಂದಲೂ ನಾವು ಒಂದು ಸಂಸ್ಥೆಯ ಅಡಿಯಲ್ಲಿಯೇ ಬೆಳೆದು ಬಂದಿದ್ದೇವೆ. ನಾನು ಸದ್ಯದಲ್ಲಿ ತಮ್ಮ ಗಮನವನ್ನು ಪಶ್ಚಿಮದಿಂದ ಬಂದ ಅನೇಕ ನ್ಯಾಯ ಪರಿಣಿತರು ನಮ್ಮಲ್ಲಿಯ ಸಂಸ್ಥೆಗಳ ಮೆಚ್ಚುಗೆ ವ್ಯಕ್ತಪಡಿಸಿರುವ, ಸಂಗತಿಗೆ ಎಳೆಯುವೆ. ಅಲ್ಲದೆ ಅನೇಕರು ಮತಾಂತರ ಹೊಂದಿದರು. ಮ್ಯಾಕ್ಸ್‌ಮುಲ್ಲರು ತಮ್ಮದೇ ಆಶ್ರಮವನ್ನು ನಿರ್ಮಿಸಿದರು. ಅವರ ಅಭಿಪ್ರಾಯ ತಮಗೆ ತಿಳಿದಿದೆ. ಅಲ್ಲದೆ ಅವರು ತಮ್ಮಲ್ಲಿಯ ಸಂಸ್ಥೆಗಳೊಂದಿಗೆ ನಮ್ಮ ಸಂಸ್ಥೆಗಳನ್ನು ಹೋಲಿಸಿ ನೋಡಿ ನಮ್ಮ ಆಚಾರ–ವಿಚಾರಗಳಿಂದ ಪ್ರಭಾವಗೊಂಡಿದ್ದಾರೆ. ಅದರಂತೆಯೇ ನಾವು ಅವರ ಸಂಸ್ಥೆಗಳಿಂದ ಆಕರ್ಷಿತರಾಗಿದ್ದೇವೆ.

ಈಗ ಅದರಿಂದಲೇನಾದರೂ ಪ್ರಯೋಜನವಾಗಬಲ್ಲದೆ? ಎಂದು ಪರಿಶೀಲಿಸೋಣ. ಹಿಂದೂ ಲಾ ಸಮಿತಿಯ ಸದಸ್ಯರು ಅದರಲ್ಲಿಯೂ ಶ್ರೀ ರಾವ್ ಅವರು ಹೇಳಿದಂತೆ ಈ ವಿಷಯ ಸಂವಿಧಾನದ ಸಮವರ್ತಿ ಪಟ್ಟಿಯ ವಿಷಯವಾಗಿದೆ. ಆದುದರಿಂದ ಈ ವಿಧೇಯಕದ ಹಲವು ಪ್ರಕರಣಗಳು ಪ್ರಾಂತ್ಯಗಳಿಗೆ ಸೇರಿದ ಸಂಗತಿ. ಆದುದರಿಂದ ಅಲ್ಲಿಯ ಸಮುದಾಯದ ಅಭಿಪ್ರಾಯವನ್ನೂ ಪಡೆಯಲೇಬೇಕೆಂದಿದ್ದಾರೆ. ಯಾವ ಪ್ರದೇಶಗಳಲ್ಲಿ ಜಾರಿಗೊಳಿಸಬೇಕು ಹಾಗೂ ಈಗಲೇ ಅಥವಾ ಮುಂದೆ ಯಾವ ಸಮಯದಲ್ಲಿ ಇದನ್ನು ಕೈಗೆತ್ತಿಕೊಳ್ಳಬಹುದು ಎಂಬುದನ್ನು ಆಲೋಚಿಸಬೇಕು. ಏಕೆಂದರೆ ಈ ವಿಷಯಗಳೆಲ್ಲಾ ಸುಧಾರಣೆಗೆ ಸಂಬಂಧಿಸಿರುವುದರಿಂದ ಯಾವ ಸುಧಾರಕರೇ ಆಗಲಿ ಅಥವಾ ಸೂಚಿಸಿದ ಮಹನೀಯನೇ ಆಗಲಿ ಸಮಾಧಾನದಿಂದ ಪರಿಶೀಲಿಸಬೇಕು. ಏಕೆಂದರೆ ಯಾರಿಗೂ ತಮ್ಮ ಧಾರ್ಮಿಕ ಭಾವನೆಗಳಿಗೆ ಆಡಚಣೆ ಅಥವಾ ದಬ್ಬಾಳಿಕೆಗೆ ಗುರಿಯಾದೆವು ಎಂಬ ಭಾವನೆಗೆ ಆಸ್ಪದವಿರಕೂಡದು. ನಾವು ಸಮಾಧಾನದಿಂದ ಜನತೆಯನ್ನು ಒಲಿಸಬೇಕು. ನಾವು ಹಿಂದೂಗಳ ಶೀಘ್ರ ಪ್ರಶ್ನೆ ಅಂದರೆ, ನಾವು ಅಮೆರಿಕಾದ ಬೆಂಬಲಿಗರೋ ಅಥವಾ ಚೀನಾ ದೇಶವನ್ನು ಆಕ್ರಮಣಕಾರಿ ಎಂದು ಹೇಳುವಂತಹ ವಿಷಯವಲ್ಲ. ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ತೊಂದರೆಗಳಿರಬಹುದು. ಆದಾಗ್ಯೂ ಇದರ ಬಗೆಗೆ ಆತುರವಿಲ್ಲದೆ ಸಮಾಧಾನಚಿತ್ತದಿಂದ ಕೈಕೊಳ್ಳವುದು ಸೂಕ್ತ ಎಂದೇ ವಿನಂತಿಸುತ್ತೇನೆ.

ವಿವಾಹದ ಇತರ ವಿವರಗಳ ಬಗೆಗೆ ಚರ್ಚಿಸದೆ, ಶಾರದಾ ಆಕ್ಟ್ ಜಾರಿಗೆ ಬರುವವರೆಗೂ ನಮ್ಮಲ್ಲಿ ಶೇಕಡಾ ೯೯ ಸ್ತ್ರೀಯರು ವಿವಾಹವಾದದ್ದನ್ನು ನೋಡಿರುವಿರಿ ಅಥವಾ ವಿವಾಹವಾಗದೆ ಸ್ತ್ರೀ ಹಾಗೂ ಪುರುಷರು ಜೀವಿಸಬಾರದೆ? ಎಂದು ಸೂಚಿಸುವಿರಾ? ನಲವತ್ತು ಸಾವಿರ ಸಮರ ಶಿಶುಗಳಂತೆ ಪೋಷಕರೇ ಇಲ್ಲದೆ ಇರುವ ಸ್ಥಿತಿಯನ್ನು ಮುಂದುವರಿಯಲು ಬಿಡುವಿರಾ? ಅದು ನಮ್ಮ ದೇಶಕ್ಕೆ ಸೂಕ್ತವೆ? ನೀವು ನೂತನ ಸಮಸ್ಯೆಗಳಿಗೆ ಆಮಂತ್ರಣ ನೀಡುವುದು ಸರಿಯೆ?

ಕುಟುಂಬ ಅಥವಾ ವಿವಾಹ ಜೀವನದಲ್ಲಿ ಗಂಡಹೆಂಡತಿಯ ಅಥವಾ ಹೆಂಡತಿ ಗಂಡನ ಮಾತನ್ನು ಕೇಳುವುದರಲ್ಲಿ ಅಪರಾಧವೇನೂ ಇಲ್ಲ. ಇಲ್ಲದೇ ಹೋದಲ್ಲಿ ದಾಂಪತ್ಯ ಜೀವನಕ್ಕೆ ಅರ್ಥವೇ ಇರಲಾರದು. ಇದೇ ಕಾರಣಕ್ಕಾಗಿ ಕಾನೂನಿನಲ್ಲಿ ಸ್ತ್ರೀಯರನ್ನು ಕೈಬಿಡಲಾಗಿದೆ. ಆದರೆ ಆಧುನಿಕ ಮಹಿಳೆಯರು ಪಾಶ್ಚಿಮಾತ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಬೆಳೆದು, ತಮ್ಮ ಸಂಸ್ಕೃತಿಯ ನೆಲೆಯನ್ನೇ ಅರಿಯದೇ ಹೋದುದರಿಂದ ತಂದೆಯ ಆಸ್ತಿಯ ಪಾಲನ್ನು ಬೇಡುವುದು ಕಾನೂನುಬದ್ಧ ಎಂದೇ ಭಾವಿಸಿ ಮಾವನ ಆಸ್ತಿಯಲ್ಲಿ ಪಾಲು ಬೇಡುವುದನ್ನೇ ಮರೆತಿದ್ದಾರೆ. ಅವಳು ಬೇಜವಾಬ್ದಾರಿಯಾಗಿ ಕಿಸೆಯಲ್ಲಿ ಹಣವಿದೆ, ನಾನೇಕೆ ಅನ್ಯರಿಗೆ ವಿಧೇಯಳಾಗಿರಬೇಕು ಎಂದೇ ಹೇಳುತ್ತಿದ್ದಾಳೆ. ಇದು ಎಲ್ಲ ಕುಟುಂಬಗಳಲ್ಲಿಯೂ ಕಂಡುಬರುವ ವಿಷಯ. ಅಲ್ಲದೆ ಇಂದಿನ ಯುವತಿಯರು ನಾವೇಕೆ ಮದುವೆಯಾಗಿ ಒಬ್ಬರ ಅಧೀನದಲ್ಲಿರಬೇಕೆಂದೇ ಪ್ರಶ್ನಿಸುತ್ತಿದ್ದಾರೆ. ನಮಗೆ ನಮ್ಮ ಪಾಲು ನೀಡಿರಿ ಎಂದೇ ಹೇಳುತ್ತಾರೆ. ಆದರೆ ಹಣದಿಂದ ಸಂತಸಜೀವ ದೊರೆಯದು, ಇದು ಅವರಿಗೆ ತಿಳಿಯದು. ಓರ್ವ ಶ್ರೀಮಂತನ ಮಗಳು ತಂದೆಯಿಂದ ಆಸ್ತಿ ಪಡೆಯುತ್ತಾಳೆ ಎಂದೇ ಭಾವಿಸೋಣ. ಆದರೆ ಅವಳನ್ನು ವಿವಾಹವಾದವನು ಪೀಡಿಸಲಾರ ಎಂದು ಹೇಗೆ ಹೇಳಲಾಗುತ್ತದೆ. ಪರಿಸ್ಥಿತಿಯ ಅರಿವಿದ್ದರೂ ಹಲವಾರು ವ್ಯಕ್ತಿಗಳು ಈ ಹಿಂದೂ ಕೋಡ್‌ಗೆ ಸಮರ್ಥಿಸುತ್ತಿರುವುದು ಶೋಚನೀಯ. ನಾನು ಸಂಸತ್ತಿನ ಸದಸ್ಯರ ಬಗ್ಗೆ ಮಾತನಾಡುತ್ತಿಲ್ಲ. ಏಕೆಂದರೆ ಅವರಿಗೆ ಎಲ್ಲ ಸಂಗತಿ ತಿಳಿದಿದೆ. ಆದರೆ ನಾನು ಹೊರಗಡೆ ಇರುವ ಜನತೆಯ ಬಗೆಗೆ ಮಾತನಾಡುವೆ. ಅವರ ಅಭಿಪ್ರಾಯವೇನು? ಇಂದಿನ ಹಿಂದೂ ಲಾ ಅಡಿಯಲ್ಲಿ ಬಾಲಿಕೆಗೆ ಯಾವ ಬಹಿಷ್ಕಾರಗಳೂ ಇಲ್ಲ. ಪುರುಷ ಮಕ್ಕಳಿಲ್ಲದೇ ಮರಣ ಹೊಂದಿದರೆ, ಅವನ ವಿಧವೆ ಸಕಲ ಆಸ್ತಿಯ ಒಡತಿಯಾಗುತ್ತಾಳೆ. ದೇಶಮುಖ ವಿಧೇಯಕದ ಹೊರತಾಗಿ ಸನಾತನ ಹಿಂದೂಧರ್ಮದಲ್ಲಿಯೂ ಅವಳೇ ಒಡತಿ ಹಾಗೂ ಹಕ್ಕುದಾರಳು. ಎರಡನೆಯದಾಗಿ ಮಗಳಿದ್ದು, ತಾಯಿ ಮುಂಚೆ ತೀರಿದರೆ, ಅವಳು ಆಸ್ತಿಗೆ ಬಾಧ್ಯಸ್ಥಳಾಗುತ್ತಾಳೆ. ಆದುದರಿಂದ ಯಾವ ತೊಂದರೆಯೂ ಇಲ್ಲ. ಆದರೆ ಈಗ ನಾವು ಮಾಡುತ್ತಿರುವುದೇನೆಂದರೆ ಮಗ–ಮಗಳಿಗೆ ಆಸ್ತಿಯಲ್ಲಿ ಭಾಗ ನೀಡುತ್ತಿದ್ದೇವೆ. ಆದರೆ ಸಂಸಾರದ ಹೊಣೆಗಾರಿಕೆ ಮಗನ ಮೇಲಿದೆ. ನಾವು ಶ್ರೀಮಂತರಲ್ಲ. ಜಮೀನ್ದಾರಿ ರಾಜಮಹಾರಾಜರು ಹೊರಟುಹೋದರು. ಈಗ ಉಳಿದಿರುವುದು ಮಧ್ಯಮ ವರ್ಗದವರು ಮಾತ್ರ. ನಾವು ಅವರ ಬಗೆಗೆ ಮಾತನಾಡುವೆ. ನಮ್ಮಲ್ಲಿ ಅಧಿಕರು ಬಡವರಿದ್ದು, ಹೊಟ್ಟೆಪಾಡಿಗಾಗಿ ಗಂಡ ಹಾಗೂ ಹೆಂಡತಿ ಇಬ್ಬರೂ ಕೂಲಿಮಾಡಿ ತಮ್ಮ ಸಂಸಾರ ನಡೆಸುತ್ತಿದ್ದಾರೆ. ಮತ್ತು ಮಧ್ಯಮ ವರ್ಗದವರ ಸ್ಥಿತಿ–ಗತಿ ಏನು? ಗಂಡನಾದವನು, ಗುಮಾಸ್ತನಾಗಿ ಕೇವಲ ೧೦೦ ಅಥವಾ ೨೦೦ ರೂಪಾಯಿ ಗಳಿಸುವವನು. ಅವನು ಅದೇ ಆದಾಯದಲ್ಲಿ ಮಗನ ವಿದ್ಯಾಭ್ಯಾಸವನ್ನು ಕೈಗೆತ್ತಿಕೊಂಡು, ಅವನು ವಯಸ್ಸಿಗೆ ಬಂದ ನಂತರ ತನ್ನನ್ನು ಪೋಷಿಸಿ ಪರಿಪಾಲನೆ ಮಾಡುವನು ಎಂದು ಸ್ವಪ್ನವನ್ನು ಕಾಣುತ್ತಾನೆ. ಅಲ್ಲದೆ ತಾನು ನಿವೃತ್ತಿ ಹೊಂದಿದ ನಂತರ ಮಗ ಕುಟುಂಬದ ಜವಾಬ್ದಾರಿಯನ್ನು ಮುಂದುವರಿಸಿಕೊಂಡು ಹೋಗುತ್ತಾನೆ ಎಂದೇ ಭಾವಿಸುತ್ತಾನೆ. ಅವನು ಗಳಿಸಿರುವ ಆಸ್ತಿಯಾದರೂ ಅಲ್ಪ. ನನಗೆ ತಿಳಿದಂತೆ, ದೇಶದ ನಮ್ಮ ಭಾಗದಲ್ಲಿ ೫ ಎಕ್ರೆಗಿಂತ

ಕಡಿಮೆ ಭೂಮಿ ಉಳ್ಳವರೇ ಅಧಿಕ. ನಮ್ಮ ದೇಶದಲ್ಲಿ ಭೂಮಿಯೇ ಆಸ್ತಿ. ಬೊಂಬಾಯಿ ಹಾಗೂ ಅಹಮದಾಬಾದಿನಲ್ಲಿ ಕೆಲವು ಶ್ರೀಮಂತ ಉದ್ದಿಮೆದಾರರು ಇರಬಹುದು. ಆದರೆ ಸಾಮಾನ್ಯ ಜನರು ಉದ್ದಿಮೆ ಹಾಗೂ ಭೂಮಿ ಎರಡನ್ನು ಹೊಂದಿದವರಲ್ಲ. ಮಧ್ಯಮ ವರ್ಗದ ಉದ್ದಿಮೆ ಎಂದರೆ ಗುಮಾಸ್ತನ ನೌಕರಿ ಮಾಡಿ ಹಣ ಸಂಪಾದಿಸಿ ಸಂಸಾರ ನಡೆಸುವುದು. ಬೆವರು ಸುರಿಸುವುದೇ ಅವರ ಉದ್ದಿಮೆ. ಸಂಸಾರ ಹೊಣೆಗಾರಿಕೆಯು ಮಗನನ್ನೇ ಅವಲಂಬಿಸಿರುತ್ತದೆ, ಅವನಿಗೆ ಬರಬಹುದಾದ ಪಿತ್ರಾರ್ಜಿತ ಆಸ್ತಿ ಎಂದರೆ ತುಂಡು ಭೂಮಿ ಇಲ್ಲವೇ ಮುರುಕುಮನೆ. ಅಲ್ಲದೆ ಸಮಾಜವು ಅವನನ್ನು ಸಹೋದರ-ಸಹೋದರಿಯರ ಜವಾಬ್ದಾರಿಯನ್ನು ನಿಭಾಯಿಸಬೇಕೆಂದು ಬಯಸುತ್ತದೆ ಹಾಗೂ ವೃದ್ಧ ತಂದೆತಾಯಿಗಳನ್ನೂ ಕಾಪಾಡುವ ಕರ್ತವ್ಯವೂ ಅವನ ಭಾಗಕ್ಕೆ ಮೀಸಲು. ಬ್ರಿಟಿಷರು ನಮ್ಮನ್ನು ಆಳುತ್ತಿದ್ದಾಗ, ರೈಲ್ವೆನೌಕರರಿಗೆ ವಾರ್ಷಿಕ ಪಾಸ್ ಒಂದನ್ನು ನೀಡುತ್ತಿದ್ದರು. ಅದು ಕುಟುಂಬದ ಪಾಸಾಗಿದ್ದು, ಅದರಲ್ಲಿ ತಂದೆ ದಂಪತಿ ಹಾಗೂ ಅವರ ಸಂತಾನ, ತಂದೆ-ತಾಯಿಯನ್ನು ಕೈಬಿಡಲಾಯಿತು. ಇದು ಪಾಶ್ಚಿಮಾತ್ಯರಲ್ಲಿ ಜಾರಿಯಲ್ಲಿರಬಹುದು. ಏಕೆಂದರೆ ಅವರ ಆಚಾರ-ವಿಚಾರಗಳಂತೆ ಮದುವೆಯಾದ ಕೂಡಲೇ ಮಗ ಮನೆಯಿಂದ ಬೇರೆ ಇರುತ್ತಾನೆ. ವೃದ್ಧ ಮಾತಾಪಿತರು ವೃದ್ಧಾಶ್ರಮ ಸೇರಿ ನೀರಸ ಹಾಗೂ ಅಸಹಾಯಕ ಜೀವನ ನಡೆಸುತ್ತಾರೆ. ಆ ಮಾದರಿಯ ಜೀವನವನ್ನು ನಾವೂ ನಡೆಸಬೇಕೆ? ನಮ್ಮಲ್ಲಿಯ ಜಂಟಿ ಕುಟುಂಬ ವ್ಯವಸ್ಥೆ ಅದಕ್ಕಿಂತಲೂ ಉತ್ತಮವಾಗಿಲ್ಲವೇ? ನನಗೆ ಬೇರೆ ಯಾವುದರ ಬಗೆಗೂ ತಕರಾರಿಲ್ಲ. ವ್ಯಕ್ತಿ ಪೂಜೆ ನಡೆದಿರುವುದು ಶೋಚನೀಯ.

ಗಂಡ-ಹೆಂಡತಿ ಅವರ ಸಂತಾನ ಒಂದು ಘಟಕ ಆದರೆ ಅವರು ವೃದ್ಧರನ್ನೂ ಸಾಕಿ ಸಲಹ ಬೇಡವೇ? ಈ ದಿಶೆಯಲ್ಲಿ ನಮ್ಮ ಅವಿಭಕ್ತ ಕುಟುಂಬದ ವ್ಯವಸ್ಥೆಯು ಉತ್ತಮವಾಗಿದ್ದು ಸಮಾಜವಾದದ ಸೂತ್ರವನ್ನೇ ಎತ್ತಿ ಹಿಡಿಯುತ್ತದೆ. ಹಾಗಿದ್ದರೂ ಅದನ್ನು ತಿರಸ್ಕರಿಸುವುದೇಕೆ? ಈ ವ್ಯವಸ್ಥೆಯಲ್ಲಿ ಎಲ್ಲರಿಗೂ ಉತ್ತಮ ಅವಕಾಶಗಳಿದ್ದು, ಸುಖೀ ಸಂಸಾರ ಬುನಾದಿಯಾಗಿದೆ. ಆಬಾಲವೃದ್ಧರಿಗೆ ರಕ್ಷಣೆ ನೀಡುತ್ತದೆ. ಪರಸ್ಪರಾವಲಂಬನೆಯಿಂದ ಸುಖ-ಶಾಂತಿ ಒದಗಿಸುತ್ತದೆ.

ಮದ್ರಾಸ್ ಭಾಗದಲ್ಲಿ ವಿವಾಹ ವಿಚ್ಛೇದನೆ ಜಾರಿಗೆ ಬಂದ ನಂತರ ೩೮ ಅರ್ಜಿಗಳು ವಿಚಾರಣೆಗೆ ಬಂದವು. ಬಾಲಕರು ಮಾತ್ರ ಪುನರ್ ವಿವಾಹಕ್ಕೆ ಅರ್ಹರು ಆದರೆ ಬಾಲಿಕೆಯರು ಅನರ್ಹರೇ? ಏಕೆಂದರೆ ೩೮ ಅರ್ಜಿಗಳಲ್ಲಿ ೩೦ ಪುರುಷರಿಂದ ಬಂದ ಅರ್ಜಿಗಳು.

ಆಹಾರ ಮತ್ತು ವ್ಯವಸಾಯದ ಉಪಮಂತ್ರಿ ಜಿ.ತಿರುಮಲರಾವ್ ಅವರೆಲ್ಲರೂ ಮಧ್ಯಮ ವರ್ಗದವರೇ?

**ಶ್ರೀ ಎಂ. ಅಯ್ಯಂಗಾರ್ :** ಅವರಲ್ಲಿ ಅನೇಕರು ಮಧ್ಯಮ ವರ್ಗದವರು, ಶಿಕ್ಷಣ ಪಡೆದವರು. ಆದರೆ ಪಾಶ್ಚಿಮಾತ್ಯ ಶಿಕ್ಷಣ ಪಡೆದವರು. ನಾನು ಹೇಳಿದಂತೆ ಅಧಿಕ ವಿಚ್ಛೇದನದ ಅರ್ಜಿಗಳು ಗಂಡಂದಿರದೇ. ಒಂದು ಪ್ರಕರಣ ಮಾತ್ರ ಸ್ತ್ರೀಗೆ ಸೇರಿದ್ದು, ಅದೂ ಅವಳು ಬಂಜೆ. ಈ ಕೋಡ್ ಅಡಿಯಲ್ಲಿ ಮತ್ತೊಂದು ಪ್ರಕರಣವನ್ನು ಉದಾಹರಿಸುವೆ. ಅದೆಂದರೆ ನ್ಯಾಯವಾದಿ ಪತಿಯ ವಾಸ ಮುಂಬೈನಲ್ಲಿ ಅವನ ಮಾಸಿಕ ವೇತನ ೧೦೦ ರೂಪಾಯಿ, ಪತ್ನಿ ವೈದ್ಯೆ, ಬೇರೆ ಎಡೆಯಲ್ಲಿ ವಾಸ. ಅವಳ ಮಾಸಿಕ ಆದಾಯ ೪೦೦ ರೂಪಾಯಿ. ಪತಿ ತನ್ನಲ್ಲಿ ಬಂದಿರಬೇಕೆಂದು ಪತ್ನಿಯ ಹೇಳಿಕೆ. ಪತ್ನಿ ತನ್ನಲ್ಲಿ ಬಂದು ಇರಬೇಕೆಂದು ಪತಿಯ ಆಸೆ. ಮೂರು ವರ್ಷದಿಂದ ಇದು ಹೀಗೆ ನಡೆದಿದ್ದು ಕೊನೆಗೆ ಪತಿ ಕೋರ್ಟಿಗೆ ಮೊರೆ ಹೊಕ್ಕು ವಿಚ್ಛೇದನೆಯನ್ನು ಪಡೆದ. ಇದನ್ನು ಸದನದಲ್ಲಿಯ ಮಹಿಳಾ ಸದಸ್ಯರು ಒಪ್ಪುವರೇ? ನಾನು ನನ್ನ ಸಹೋದರಿಯರನ್ನು ವಿಧವಾ ವಿವಾಹದ ಬಗೆಗೆ ಕೇಳುವುದೇನೆಂದರೆ ಗಂಡನ ಮರಣದ ನಂತರ

ವಿಧವೆಯನ್ನು ಮದುವೆಯಾಗಲು ಎಷ್ಟು ಜನ ಮುಂದೆ ಬಂದಿರುವರು; ಇದರ ಅರ್ಥವೇನು? ವಿಧವಾ ವಿವಾಹವು ಇನ್ನೂ ನಮ್ಮಲ್ಲಿ ಜನಪ್ರಿಯವಾಗಿಲ್ಲ. ನನ್ನ ಮಿತ್ರರು ನಾನು ಉಪನ್ಯಾಸ ನೀಡುತ್ತಿರುವೆನೆಂದೇ ಭಾವಿಸಿದ್ದಾರೆ. ವಿಧವಾ ಪುನರ್ವಿವಾಹ ಜಾರಿಗೆ ಬಂದು ಅನೇಕ ಕಾಲವಾಗಿದ್ದರೂ ಇನ್ನೂ ಅದನ್ನು ಪ್ರೋತ್ಸಾಹಿಸಲಾಗಿಲ್ಲ. ಈ ಸದನದ ಸನ್ಮಾನ್ಯ ಬಂಗಾಲದ ಸದಸ್ಯರು ಒಂದು ತಿದ್ದುಪಡಿಯನ್ನು ತಂದಿದ್ದರು. ಅದರಂತೆ ವಿದುರರು ಕೇವಲ ವಿಧವೆಯರನ್ನೇ ವಿವಾಹವಾಗಬೇಕು. ಆದರೆ ಸದನ ಆ ತಿದ್ದುಪಡಿಯನ್ನು ನಗೆಪಾಟಲಿಗೆ ಈಡುಮಾಡಿದ್ದರಿಂದ ಅದನ್ನು ಸನ್ಮಾನ್ಯ ಸದಸ್ಯ ತಾನು ಒಂದು ಅಪರಾಧವೆಸಗಿದೆ ಎಂದೇ ಭಾವಿಸಿ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡರು. ಒಂದು ಬಾರಿ ಸ್ತ್ರೀಯು ವಿಚ್ಛೇದನೆಗೆ ಗುರಿಯಾದಲ್ಲಿ ಅವಳನ್ನು ಗೌರವದಿಂದ ಯಾರೊಬ್ಬರೂ ವಿವಾಹವಾಗಲಾರರು. ಅವಳಿಗೆ ಮತ್ತೆ ಪತ್ನಿಯಾಗುವ ಅವಕಾಶವೇ ಇರಲಾರದು. ಕೇವಲ ಕೆಲವರು ಸ್ವಾರ್ಥಕ್ಕೆ ಸಮಾಜವನ್ನು ಬಲಿಪಶು ಮಾಡುವ ಕ್ರಮವನ್ನು ನಾನು ಸಹಿಸಲಾರೆ, ತೊಂದರೆಗಳಿವೆ. ಆದರೆ ಈ ಕ್ರಮದಿಂದ ಉದ್ಭವಿಸುವ ತೊಂದರೆಗಳನ್ನು ಕಡೆಗಣಿಸಲಾಗದು.

ನನಗೆ ಈ ದಿನ ಬೆಳಿಗ್ಗೆ ತಿಳಿದುಬಂದಂತೆ, ಪಾಕಿಸ್ತಾನದಿಂದ ಓಡಿಸಿಕೊಂಡು ಬಂದ ಸ್ತ್ರೀಯರನ್ನು ಮರಳಿ ಪಡೆಯಲೆಂದೇ ಒಂದು ನಿಯೋಗ ಬಂದಿದೆಯಂತೆ. ನಾವು ಎಲ್ಲಿಯಾದರೂ ಗಂಡಸರನ್ನು ಓಡಿಸಿಕೊಂಡು ಬಂದಿರುವುದನ್ನು ನೋಡಿದ್ದೇವೆಯೇ. ಪ್ರಕೃತಿ ನಮ್ಮನ್ನು ಸೃಷ್ಟಿಸಿ ಗಂಡ–ಹೆಂಡಿರು ಸುಖದಲ್ಲಿಯೇ ಒಗ್ಗಟ್ಟು ಅಡಗಿದೆ. ಪಾಟಾಗೋನಿಯನ್ ಸಮೂಹದಲ್ಲಿ ಕೂಡ ಪತ್ನಿಗೆ, ಪತಿಯಂತೆ ಉನ್ನತ ಸ್ಥಾನವನ್ನೇ ನೀಡಿದೆ. ಬೇರೆ ಎಲ್ಲಾ ಸಮೂಹಗಳಲ್ಲಿ ಗಂಡಸರಿಗೆ ವಿಶೇಷ ಸ್ಥಾನ ನೀಡಲಾಗಿದೆ. ನಾನು ಸ್ತ್ರೀಯರಂತೆ ಮಾತನಾಡುವುದು. ಸ್ತ್ರೀಯರು ಪುರುಷರಂತೆ ಮಾತನಾಡುವುದು ಸರಿಯಲ್ಲ. ಪುರುಷ ಪುರುಷರಂತೆ, ಸ್ತ್ರೀ ಸ್ತ್ರೀಯಂತೆ ಮಾತನಾಡುವುದು ಸಹಜ. ನನ್ನ ಈ ಹೇಳಿಕೆಯು ಹಾಸ್ಯಾಸ್ಪದ ಎಂದೇ ನನ್ನ ಮಿತ್ರರು ಭಾವಿಸಬಹುದು. ಆದರೆ ನನಗೆ ಗೋಚರಿಸುವಂತೆ ದೇವರು ಈ ಒಂದು ವ್ಯವಸ್ಥೆಯನ್ನು, ಕುಟುಂಬದ ಸೌಖ್ಯಕ್ಕೆ ಹಾಗೂ ಪೋಷಕರ ರಕ್ಷಣೆಗೆಂದೇ ಮಾಡಿದ್ದಾನೆ. ಈ ಒಂದು ಪ್ರೀತಿ ಸಂಪತ್ತಿನಿಂದಲ್ಲ, ಸಂಬಂಧಗಳಿಂದ ಬರುತ್ತದೆ. ನಮ್ಮಲ್ಲಿ ಅಧಿಕರು ಬಡವರು, ನಾವು ವಿವಾಹವಾಗಿ ಮಕ್ಕಳನ್ನು ಪಡೆದು, ಅವರು ನಮ್ಮನ್ನು ನಮ್ಮ ವೃದ್ಧಾಪ್ಯದಲ್ಲಿ ಕಾಪಾಡಿ ಸಂಸಾರದ ಹೊಣೆಯನ್ನು ಹೊರುತ್ತಾರೆ ಎಂದು ಭಾವಿಸಿದ್ದೇವೆ. ಈ ಭಾವನೆಗೆ ಕಳೆದ ೩೦೦೦ ವರ್ಷಗಳಿಂದ ಮನ್ನಣೆ ದೊರಕಿದೆ, ಇದೊಂದು ಅಗಾಧ ಬೆಂಬಲವೇ ಆಗಿದೆ.

ಆದರೆ ನಾನು ಸಂಸತ್ತಿನ ಸನ್ಮಾನ್ಯ ಸದಸ್ಯನಾಗಿ ಮುಂದುವರಿಯಬೇಕಾದರೆ, ನಾನು ಪ್ರಮಾಣಮಾಡಿ, ನನ್ನ ವಿಧೇಯತೆಯನ್ನು ಮನವರಿಕೆ ಮಾಡಬೇಕು. ಆದರೆ ವಿವಾಹದ ಬಗೆಗೆ ಬಂದಿರುವ ಪರಂಪರೆ ಎಂದರೆ ಪತಿ ಪತ್ನಿಯ ಹಸ್ತ ಹಿಡಿದು ಅಗ್ನಿಸಾಕ್ಷಿಯಾಗಿ ನೀಡಿರುವ ಭರವಸೆಯ ಬಗೆಗೆ?

ನನ್ನ ನಿನ್ನ ಹೃದಯಗಳು ಗಂಗೆ ಯಮುನೆಯ ಪವಿತ್ರ ಸಂಗಮದಂತೆ ಎಂದು ನೀಡಿದ ಭರವಸೆಯನ್ನು ತೃಣಸಮಾನ ಎಂದು ಭಾವಿಸಬಹುದೇ? ಈ ಒಂದು ಪವಿತ್ರ ದಾಂಪತ್ಯ ಜೀವನಕ್ಕೆಂದೇ ಪುರುಷ ಹಾಗೂ ಸ್ತ್ರೀಯರು ವಿವಾಹವಾಗುವರು. ಪವಿತ್ರ ಸಂತಾನದ ಹಂಬಲವೇ ವಿವಾಹದ ಗುರಿ. ನನ್ನ ವಿಚಾರದಲ್ಲಿ ಕುಂಟ, ಕುರುಡ ಸಂತಾನವನ್ನು ಸೃಷ್ಟಿಸುವುದಿಲ್ಲ. ಭವಿಷ್ಯತ್ತಿಗೆ ಉತ್ತಮ ಸಂತಾನ ನೀಡುವುದೇ ವಿವಾಹದ ಗುರಿ. ಜೂಜುಕುದುರೆಗಳಲ್ಲಿ ಕೂಡ ಉತ್ತಮ ತಳಿಯನ್ನೇ ಬಯಸಲಾಗಿದೆ. ಆದರೆ ಮಾನವರಲ್ಲಿ ಯಾರು ಯಾರನ್ನೇ ವಿವಾಹವಾಗಿ, ಉತ್ತಮ ಹಾಗೂ ದೃಢಶಾಲಿ ಸಂತಾನವನ್ನು ಬಯಸುವುದು ಸರಿಯೆ? ಬಹುಶಃ ನೂತನ ವಿವಾಹ ಪದ್ಧತಿಯು ಇದಕ್ಕೆ ನಾಂದಿಯಾಗುವುದು. ಅದು ನಮಗೆ ಬೇಕಾದ ಜೂಜಿನ

ಕುದುರೆಯ ಬದಲಿಗೆ ಕತ್ತೆಯನ್ನು ನೀಡುತ್ತದೆ. ಉತ್ತಮ ಟೀಕಾಕಾರರಾದ ಜಯಸ್‌ವಾಲಾ ಅವರು ಹಿಂದೂ ಲಾ ದ ಬಗೆಗೆ ಹೇಳುತ್ತಾ ನಮ್ಮ ಪೂರ್ವಿಕರು ದನಗಾಹಿಗಳಾಗಿದ್ದು, ಉತ್ತಮ ತಳಿಗಳನ್ನು ಹೊಂದುವ ಹಿರಿಯಾಸೆ ಹೊಂದಿದ್ದರಂತೆ. ಇದು ನಮ್ಮ ದೇಶದಲ್ಲಿ ನಡೆದುಬಂದ ಪರಂಪರೆ. ಹಿಟ್ಲರನು ಕೂಡಾ ತನ್ನ ದೇಶಕ್ಕೆ ಉತ್ತಮ ಸಂತಾನವನ್ನೇ ಬಯಸಿದ್ದ. ಈ ಉದ್ದೇಶಕ್ಕೆಂದೇ ಮುಸಲೇನಿಯೊ ತನ್ನ ದೇಶದಲ್ಲಿ ಅನೇಕ ವಿವಾಹಗಳನ್ನೇ ಏರ್ಪಡಿಸಿದ್ದ.

ನಾವು ನಮ್ಮ ಶಾಸ್ತ್ರದಲ್ಲಿ ಸಂತಾನ ಪಡೆಯದವರು ನರಕಕ್ಕೆ ಹೋಗುತ್ತಾರೆ ಎಂದೇ ಹೇಳಿರುವುದನ್ನು ಕೇಳಿರುವೆವು. ಹೀಗೆ ತಂದೆ ನರಕಕ್ಕೆ ಹೋಗುವುದನ್ನು ಕೇವಲ ಮಗ ಮಾತ್ರ ತಡೆಯಬಲ್ಲ. ಈ ಒಂದು ನಂಬಿಕೆಯಿಂದಲೇ ನಮ್ಮಲ್ಲಿ ಅಧಿಕ ಸಂತಾನೋತ್ಪತ್ತಿ ಇಲ್ಲದೇ ಹೋಗಿದ್ದರೆ, ನೂರು ಪೌಂಡು ಬಹುಮಾನ ನೀಡಿ ಹೆರಿಗೆಗೆ ಪ್ರೋತ್ಸಾಹಿಸಬೇಕಾದ ಸ್ಥಿತಿ ಇರುತ್ತಿತ್ತೇನೋ! ಈ ಎಲ್ಲವನ್ನು ಏಕೆ ಹೇಳಬೇಕಾಗಿದೆ ಎಂದರೆ ಸಮಿತಿಯ ಅಧ್ಯಕ್ಷರಾದ ಶ್ರೀರಾವ್ ಅವರು ಹಿಂದೂ ಸಂಪ್ರದಾಯದಂತೆ ವಿವಾಹವಾದವರಲ್ಲ. ಅಲ್ಲದೆ ಸಮಿತಿಯ ಅನೇಕ ಸದಸ್ಯರೂ ಹಿಂದೂ ಸಂಪ್ರದಾಯದಂತೆ ವಿವಾಹವಾಗಿಲ್ಲ ಮತ್ತೆ ಕೆಲವು ಸದಸ್ಯರು ಅವಿವಾಹಿತರು.

**ಶ್ರೀ ಕೇಶವರಾವ್ (ಮದ್ರಾಸ್) :** ಅವರು ಮದುವೆಯಾಗಿಲ್ಲ ಎಂದು ಯಾರು ಹೇಳಿದರು?

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು, ನನಗೆ ತೋರಿದಂತೆ ಚರ್ಚೆ ಹದ್ದು ಮೀರಿಹೋಗುತ್ತಲಿದೆ.

**ಶ್ರೀ ಎಂ.ವಿ. ಅಯ್ಯಂಗಾರ್ :** ನಾನು ವಿಧೇಯಕದ ಹದ್ದಿನಲ್ಲಿ ಬರುವೆ.

**ಮಾನ್ಯ ಸಭಾಧ್ಯಕ್ಷರು :** ಈಗಾಗಲೇ ಅವರು ೩೫ ನಿಮಿಷ ತೆಗೆದುಕೊಂಡಿದ್ದಾರೆ. ಅದು ದೀರ್ಘವಾದ ಅವಧಿ ಆದುದರಿಂದ ಸಂಕ್ಷಿಪ್ತಗೊಳಿಸಿ.

**ಶ್ರೀ ಎಂ.ಎ ಅಯ್ಯಂಗಾರ್ :** ನಾನು ಯಾವುದರ ಬಗ್ಗೆ ಪ್ರಸ್ತಾಪಿಸಿದ್ದೆ.

**ಶ್ರೀ ತಿರುಮಲರಾವ್ :** ಸಮಿತಿಯ ಸದಸ್ಯರ ಬಗ್ಗೆ ತುಂಬಾ ವ್ಯಕ್ತಿಗತವಾಗಿ ಮಾತನಾಡುತ್ತಿರುವಿರಿ.

**ಶ್ರೀ ಎಂ.ಎ ಅಯ್ಯಂಗಾರ್ :** ಆದುದರಿಂದಲೇ ಇದು ಉತ್ತಮವಾದ ಅಭಿಪ್ರಾಯ ಎಂದು ಸದನದ ಹೊರಗಡೆ ಹೇಳಬೇಕಾಗಿಲ್ಲ. ಇಲ್ಲಿ ಮಾತ್ರ ಇದು ವೈಯಕ್ತಿಕ ಅಭಿಪ್ರಾಯ. ಇದರಿಂದ ನಾನೂ ಉಲ್ಲಾಸ ಹೊಂದಿಲ್ಲ. ಆದರೆ ಸ್ಮೃತಿಕಾರರ ಬಗ್ಗೆ ಅವರು ಹೇಳಿದ್ದನ್ನು ಕೇಳಿ ತಲೆಬಾಗಲಾರೆ. ಏಕೆಂದರೆ ಸ್ಮೃತಿಕಾರರು ಅನೇಕ ಬಾರಿ ಸ್ಮೃತಿಗಳನ್ನೇ ಬದಲಾಯಿಸಿದ್ದಾರೆ ಎಂದು ಹೇಳುವ ಅಧಿಕಾರವೆಲ್ಲಿದೆ? ನಾವು ಬೆಳಿಗ್ಗೆ ಜಾರಿಗೊಳಿಸಿದ ಕಾನೂನನ್ನು ಸಾಯಂಕಾಲ ಬದಲಾಯಿಸುತ್ತಿದ್ದೇವೆ. ಅದರೆ ಸ್ಮೃತಿಕಾರರು ಕಾಲಬದಲಾದಂತೆ ಬದಲಾವಣೆ ತಂದರು. ಆದರೆ ಅವರನ್ನು ಬಹಿಷ್ಕರಿಸಲಾಗಿದೆ. ಅವರು ಅನವಶ್ಯಕ ಬದಲಾವಣೆ ಮಾಡಿದ್ದರೆ ಅವರೂ ನಿಂದನೆಗೆ ಅರ್ಹರು. ಆದರೆ ಪ್ರತಿಯೊಂದು ಸ್ಮೃತಿಯು ಒಂದೊಂದು ಕಾನೂನಿನ ಅಂಶವಾಗಿತ್ತು. ನಾನು ಹೇಳುವುದೇನೆಂದರೆ ಕಾನೂನಿನ ಬಗೆ ಗೌರವವನ್ನು ಈ ಆಗಾಧ ಪ್ರಮಾಣದಲ್ಲಿ ಬದಲಾಯಿಸಿರಲಿಲ್ಲ. ಏಕೆಂದರೆ ಯಾವ ದೃಷ್ಟಿಕೋನದಿಂದ ನೋಡಿದಾಗ್ಯೂ ಈ ವಿಧೇಯಕವು ಹಿಂದೂ ಸಮಾಜವನ್ನು ಛಿದ್ರವಿಚ್ಛಿದ್ರಗೊಳಿಸುತ್ತದೆ. ಆದರೆ ನೀವು ಹಿಂದೂ ಪಂಥಕ್ಕೆ ಸೇರಿದವರಲ್ಲವೆಂದೇ ಹೇಳಲೂಬಹುದು. ನೋಡಿ ಪದಗಳು ಕೂಡಾ ಮನಸ್ಸಿಗೆ ಮುಜುಗರ ಉಂಟುಮಾಡುತ್ತದೆ. "ಹಿಂದೂಧರ್ಮದ ಹೇಳಿಕೆ" ಎಂದಾಗ ನೀವು ನಿಮ್ಮನ್ನು ಹಿಂದೂಗಳೆಂದೇಕೆ ಭಾವಿಸಿರುವಿರಿ? ಹಿಂದೂಧರ್ಮ ಎಂದರೇನು? ಅದರಲ್ಲಿ ಕೆಲವು ವಿಷಯಗಳಿವೆ, ಸಿದ್ಧಾಂತಗಳಿವೆ, ಕರ್ಮಸಿದ್ಧಾಂತ. ಜೈನರೂ, ಬೌದ್ಧರೂ ಕೂಡ ಇದನ್ನು ನಂಬಿದ್ದರು. ವೇದಗಳಿಗಿಂತ ಅವುಗಳ ಪುರಾತನತತ್ವದಲ್ಲಿ ನನಗೆ ಅಧಿಕ ನಂಬಿಕೆ. ಏಕೆಂದರೆ ಅದರಿಂದಲೇ ನಾವು

ಪ್ರೋತ್ಸಾಹಿತರಾಗಿದ್ದೇವೆ.

ಸುಧಾರಿತ ಧರ್ಮವನ್ನು ಪಾಲಿಸುತ್ತಿರುವ ಸಿಖ್ ಜನಾಂಗ ಗ್ರಂಥವನ್ನು ಪೂಜಿಸುತ್ತಾರೆ. ಹೀಗೆಂದಾಗ ನಾವು ನಮ್ಮ ವೇದಗಳ ಬಗೆಗೆ ನಾಚಿಕೆಪಡಬೇಕಾದುದೇ ಇಲ್ಲ. ನಾನು ಬ್ರಹ್ಮಸಮಾಜದ, ಆರ್ಯಸಮಾಜದ ಅಥವಾ ವೈಷ್ಣವಸಮಾಜದವನೇ ಇರಲಿ, ವೇದಗಳಲ್ಲಿ ನಂಬಿಕೆ ಇಲ್ಲ ಎಂದರೆ ಹಿಂದೂವೇ ಅಲ್ಲ.

ದುರದೃಷ್ಟಕರ ವಿಷಯವೆಂದರೆ, ಈ ದೇಶದಲ್ಲಿ ಧರ್ಮವನ್ನು ರಾಜಕಾರಣದೊಂದಿಗೆ ಸೇರ್ಪಡಿಸಿರುವುದು. ನಮ್ಮಲ್ಲಿರುವ ವಿಭಿನ್ನ ಜಾತಿ ಪದ್ಧತಿಯಿಂದಾಗಿ ಅನೇಕರು ಮತಾಂತರಗೊಂಡು ಇಸ್ಲಾಂ ಧರ್ಮ ಸ್ವೀಕರಿಸಿದರು. ಆದರೆ ನಾನು ಕೇಳುವುದೇನೆಂದರೆ ಚೈನಾ ಹಾಗೂ ಇಂಡೋನೇಷಿಯಾದಲ್ಲಿ ಒಂದೇ ಒಂದಾದ ಬೌದ್ಧಧರ್ಮ ಜಾರಿಯಲ್ಲಿರಲಿಲ್ಲವೇ? ಆದರೆ ಇಂದು ಮಲೇಶಿಯಾ, ಇಂಡೋನೇಷಿಯಾದಲ್ಲಿ ಬೌದ್ಧಮತವಿದೆಯೇ? ಚೈನಾದಲ್ಲಿ ಇಸ್ಲಾಂಗೆ ಮತಾಂತರ ಹೊಂದಿದವರಿಲ್ಲವೇ? ದೇಶದಲ್ಲಿಯ ಎಲ್ಲಾ ತೊಂದರೆಗಳಿಗೂ, ಬಾರಿ ಬಾರಿ ನೀವು ಸನಾತನ ಧರ್ಮವನ್ನೇ ಗುರಿ ಮಾಡಿರುವಿರಿ. ಆದರೆ ಪರಿಹಾರ ಬೇರೆಡೆಯಲ್ಲಿದೆ. ಅನನುಕೂಲತೆಗಳಿಂದ ಹಿಂದೂಧರ್ಮವು ಒಡಗೂಡಿದ್ದರೂ, ಹಿಂದೂಧರ್ಮವು ವಿಚ್ಛೇದನೆಗೆ ಆಸ್ಪದ ನೀಡಿಲ್ಲ. ಆಸ್ತಿಯ ವಿಭಜನೆಯಿಂದಾಗಲೀ ಅಥವಾ ಇತರ ಕಾರಣಗಳಿಂದ ಮಗಳಿಗೆ ಸಂಸಾರದ ಹೊರೆಯನ್ನು ನೀಡದಿರುವುದೇ ಹಿಂದೂ ಕುಟುಂಬದ ಸಾಮರ್ಥ್ಯ ಎಂದೇ ಹೇಳಬಹುದಾಗಿದೆ. ನಾನು ಒಂದು ಸರಳ ಪ್ರಶ್ನೆ ಕೇಳುವೆ. ನನ್ನ ಮಗಳ ವಿವಾಹದ ನಂತರ ನನ್ನನ್ನು ಅಳಿಯನ ಮನೆಯಲ್ಲಿ ಅಥವಾ ಮಗನ ಮನೆಯಲ್ಲಿರಬೇಕೆಂದು ಬಯಸುವಿರಾ? 'ಜಾಮಾತ ದಶಮಗ್ರಹ' ಎಂದೇ ಹೇಳಿದೆ. ನನಗೆ ಮುಪ್ಪಿನ ವಯಸ್ಸಿನಲ್ಲಿ ಯಾರದಾದರೂ ಒಬ್ಬರ ಆಶ್ರಯ ಬೇಕಲ್ಲವೆ? ಮಗನ ಬದಲಾಗಿ ಅಳಿಯನೇಕೆ ಆಗಬಾರದು? ಮಗಳಿಗೆ ಪಾಲು ಏಕೆ ನೀಡಬಾರದು? ಅವಳೂ ತನ್ನೊಡನೆ ಬಂದು ವಾಸಮಾಡುವಂತೆ ಕೋರಬಹುದು. ಆದರೆ, ಕಿಂಗ್‌ಲೀಯರ್‌ನ ಹಣೆಬರಹವಾದಂತೆ ನನ್ನ ಹಣೆಬರಹವಾಗಬಾರದು. ಆದುದರಿಂದ ಸದನದ ಸದಸ್ಯರಲ್ಲಿ ಕೋರಿಕೆ ಎಂದರೆ ಸಮಾಧಾನದಿಂದ ಯೋಚಿಸಿರಿ. ಈ ಬಗ್ಗೆ ನಾನು ನನ್ನ ಮಡದಿಯೊಂದಿಗೆ ಕೂಡಾ ತುಂಬಾ ಚರ್ಚೆಯನ್ನು ಮಾಡಿರುವೆ.

ಈ ಪರಿಸ್ಥಿತಿಯಲ್ಲಿ ನಾನು ಹೇಳುವುದಿಷ್ಟೆ. ನಾವು ಸಮಾಧಾನದಿಂದ ಮುನ್ನಡೆಯೋಣ. ಯಾರಾದರೂ ಉದಾರ ಭಾವನೆಗಳನ್ನು ಹೊಂದಿದ್ದರೆ ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿ. ಆಕಸ್ಮಿಕವಾಗಿ ಹೇಳಬಹುದಾದರೆ ಸತೀ ವ್ಯವಸ್ಥೆ ನೈತಿಕವಾಗಿ ವಿರುದ್ಧವಾದುದು, ಅದನ್ನು ನಿರ್ಮೂಲನೆ ಮಾಡಲಿಲ್ಲವೆ? ನೀವು ಹೇಳಬಹುದು ಅದರಂತೆ ಅನೇಕ ಅಂಶಗಳನ್ನು ನಿವಾರಿಸಬಹುದಲ್ಲವೇ ಎಂದು. ಹೀಗೆಂದಾಗ ಅಣ್ಣ ತಂಗಿಯರು ಏಕೆ ವಿವಾಹವಾಗಬಾರದು? ಆದುದರಿಂದ ನಾನು ಸೂಚಿಸುವುದೇನೆಂದರೆ, ವಿವಾಹಕ್ಕೆ ಇತಿಮಿತಿಗಳಿವೆ. ಆದರೆ ಅದನ್ನು ಮೂರು ಅಥವಾ ಏಳು ತಲೆಗಳ ನಡುವೆ ಜರುಗಿಸುವ, ಬಿಡುವ ವಿಚಾರ ಮಾಡಬೇಡವೆ? ನಾವು ಒಂದು ಹದ್ದನ್ನು ಮೀರಿಹೋಗುವುದು ಸರಿಯೇ? ಈ ಬಗೆಗೆ ನಾನು ಕೂಡಾ ನೂತನವಾಗಿ ಕಂಡುಹಿಡಿಯಲಾದ ಸಂತಾನಶಾಸ್ತ್ರದ ಪುಸ್ತಕಗಳನ್ನು ಬಲ್ಲೆ. ಅದರಲ್ಲಿ ತಿಳಿಸಿದಂತೆ ರಕ್ತದಲ್ಲಿ ಮೂರು ವರ್ಗಗಳಿವೆ. ಒಂದರೊಡನೆ ಒಂದು ಹೊಂದಲಾರವು. ಅದರಂತೆಯೇ ನಾನು ಪುರಾತನ ಜ್ಯೋತಿಷ್ಯಶಾಸ್ತ್ರವನ್ನೂ ಓದಿಕೊಂಡಿರುವೆ. ಅದರಲ್ಲಿ ಹೇಳಿದಂತೆ ವಿವಾಹಪೂರ್ವದಲ್ಲಿ ನಾವು ರಜ್ಜು, ಸರ್ಪ ಮತ್ತು ಗಣಗಳನ್ನು ಅವಲೋಕಿಸಬೇಕು. ಅವು ಕೂಡಿ ಬಂದಲ್ಲಿ ಮಾತ್ರ ವಿವಾಹ ಸಾಧ್ಯ. ಈ ಗಣವನ್ನೇ ಬಹುಶಃ ಪಾಶ್ಚಿಮಾತ್ಯರು ಆವಿಷ್ಕರಿಸಿರಬೇಕು. ದಿವಂಗತ ಡಾ.ರವೀಂದ್ರನಾಥ ಟಾಗೂರರು ಶ್ರೇಷ್ಠಕವಿಯಾಗಿದ್ದರು. ಆದರೆ ಪಾಶ್ಚಿಮಾತ್ಯರು ಅವರನ್ನು ಕವಿ ಎಂದಾಗಲೇ ನಾವೂ ಅವರನ್ನು ಗುರುತಿಸಿದೆವು.

ಇದೇ ರೀತಿಯಲ್ಲಿ ಪಾಶ್ಚಿಮಾತ್ಯರು, ಸ್ಮೃತಿಯಲ್ಲಿಯ ವಿವಾಹ ಪದ್ಧತಿಗಳೇ ಶ್ರೇಷ್ಠ ಎಂದಾಗ ಮಾತ್ರ ನಾವು ಅದನ್ನು ಅಂಗೀಕರಿಸುತ್ತೇವೆ. ಈ ದಿಶೆಯಲ್ಲಿ ನಾನು ಉದಾರವಾದಿಯಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಕಾಲಕಾಲಾಂತರದಿಂದ ಬಂದಿರಬಹುದಾದ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದೇ ಸರಿ. ಈ ಬಗ್ಗೆ ಆತುರ ಸರಿಯಲ್ಲ.

ಮುಕ್ತಾಯ ಮಾಡುವ ಮುನ್ನ ಇನ್ನೊಂದು ಪ್ರಶ್ನೆಯ ಬಗೆಗೆ ಪ್ರಸ್ತಾಪಿಸಲು ಬಯಸುವೆ. ಅದು ಮರುಮುಕ್ಕಾತ್ತಾಯಂ ಕಾನೂನು. ಅವರೆಲ್ಲರೂ ತೀಕ್ಷ್ಣಬುದ್ಧಿಯವರು. ಕಾರ್ಯಾಲಯದಲ್ಲಿಯ ಕಾರ್ಯದರ್ಶಿಗಳೆಲ್ಲರೂ ಮೆನನ್‌ರು ಮಲಬಾರಿನಿಂದಲೇ ಬಂದಿರುವರು. ಅವರ ಬಗ್ಗೆ ನನಗೆ ಹೆಮ್ಮೆ. ಅವರು ತಮ್ಮದೇ ಆದ ಜೀವನ ಶೈಲಿ ಹೊಂದಿದ್ದಾರೆ. ಅವರನ್ನು ಪ್ರಶ್ನಿಸಿ, ಈ ವ್ಯವಸ್ಥೆಯಿಂದ ಅವರಿಗೆ ಸಂತೋಷವೇ? ನೀವು ಈ ಕಾನೂನನ್ನು ಅವರಿಗೆ ಏಕೆ ವಿಧಿಸಲಿಲ್ಲ? ಅಳಿಯ ಸಂತಾನ ವಿಧಾನದ ಬಗ್ಗೆ ವಿಚಾರಿಸಿ. ಅದು ಪ್ರಕೃತಿ ವಿರೋಧವೆಂಬುದು ನಿಮಗೇ ಅರಿವಾಗಬಹುದು.

ಏಕೆಂದರೆ ಅಲ್ಲಿ ಸಂತಾನ ಪೋಷಣೆ ಕೇವಲ ತಾಯಿ ಹಾಗೂ ಅವಳ ಸಹೋದರಿಯಿಂದ ನಡೆಯುತ್ತದೆ. ತಂದೆಯಾದವನಿಂದಲ್ಲ, ಅದು ನಿಮಗೆ ತುಂಬಾ ವಿಚಿತ್ರವೆನಿಸುತ್ತದೆ. ಪ್ರೀತಿಯ ವಿಷಯವೇ ಬೇರೆ, ಏಕೆಂದರೆ ನಾನು ನನ್ನ ಮಕ್ಕಳನ್ನು ಪ್ರೀತಿಸಿದಂತೆ ನನ್ನ ತಂಗಿಯ ಮಕ್ಕಳನ್ನು ಪ್ರೀತಿಸಲಾರೆ. ಆಗ ನೀವು ಹೇಳುವುದೇನೆಂದರೆ ಅದು ಅವರಿಗೆ ಸಂಬಂಧಿಸಿದ ಕಾನೂನು. ಹೀಗಾಗಿ ಅದರಂತೆಯೇ ಅವರನ್ನು ನಡೆದುಕೊಂಡು ಹೋಗಲು ಬಿಟ್ಟಿರುವೆವು. ಆದರೆ ನನ್ನ ಮಾನ್ಯ ಮಿತ್ರರಾದ ಪಂಡಿತಠಾಕೂರ್ ದಾಸ್ ಅವರು ಪಂಜಾಬಿನಲ್ಲಿಯೂ ವಿಶಿಷ್ಟ ಸಂಪ್ರದಾಯಗಳಿವೆ ಎಂದಾಗ ಅದನ್ನು ನೀವು ಗಾಳಿಗೆ ತೂರಿದಿರಿ. ಏಕೆಂದರೆ ಅವರ ಪ್ರತಿಭಟನೆ ತೀವ್ರವಾಗಿರಲಿಲ್ಲ. ಇದು ನ್ಯಾಯಸಮ್ಮತವಲ್ಲ. ಏಕೆಂದರೆ ಸಂಪ್ರದಾಯಗಳನ್ನು ಮೀರಿದ ಕಾನೂನುಗಳಿಲ್ಲ. ಅದೊಂದು ಮಾನವೀಯ ಸಂಘವೆ, ಭಾಷೆಯಿಂದ ವ್ಯಾಕರಣವೇ ಹೊರತು ವ್ಯಾಕರಣಕ್ಕೆಂದೇ ಭಾಷೆಯಲ್ಲ. ಮಗು ಮೊದಲು ಭಾಷೆಯನ್ನು ಕಲಿಯುತ್ತದೆ ನಂತರ ವ್ಯಾಕರಣವನ್ನು. ಆದುದರಿಂದ ನ್ಯಾಯದ ದೃಷ್ಟಿಯಿಂದ ಸಂಪ್ರದಾಯಗಳನ್ನು ತಪ್ಪೆಂದು ಹೇಳಲಾಗದು. ಏಕೆಂದರೆ ಯಾವುದೇ ಸಂಪ್ರದಾಯ ಜಾರಿಯಲ್ಲಿ ಬರಬೇಕಾದರೆ ಅದು ನೈತಿಕವಾಗಿದ್ದರೇ ಜಾರಿಯಲ್ಲಿ ಉಳಿಯುವುದು. ಆದುದರಿಂದಲೇ ನ್ಯಾಯಾಲಯಗಳೂ ಸಂಪ್ರದಾಯಗಳನ್ನು ಗೌರವಿಸಿ ಮನ್ನಣೆ ನೀಡುತ್ತವೆ. ಆದುದರಿಂದ ತಲತಲಾಂತರದಿಂದ ಜಾರಿಯಲ್ಲಿರುವ ಸಂಪ್ರದಾಯಗಳನ್ನು ನಮಗೆ ಮನಸ್ಸು ಬಂದಾಗ ಬದಲಾಯಿಸುವುದು ಸೂಕ್ತವಲ್ಲ. ಅವುಗಳ ವಿರುದ್ಧ ಹೇಳುವ ಅಧಿಕಾರ ನಿಮಗೆಲ್ಲಿದೆ? ಹೀಗೆಂದಾಗ ನಾನು ಸಂಸತ್ತಿನ ಅಧಿಕಾರವನ್ನು ಪ್ರಶ್ನಿಸುತ್ತಿಲ್ಲ. ನಾನು ನನ್ನ ಮಿತ್ರರಿಗೆ ಈ ವಿಧೇಯಕವನ್ನು ಸಮೂಹದ ಮೇಲೆ ಹೇರದಿರುವಂತೆ ಕೋರುತ್ತೇನೆ. ಈ ವಿಧೇಯಕ ಜಾರಿಗೊಳಿಸಿದರೂ, ಅದೊಂದು ಮೃತ ದಾಖಲೆಯಾಗಿ ಉಳಿಯುತ್ತದೆ. ಜನತೆ ಮುಂದೆ ಬಂದು ಸುಧಾರಣೆಗಳಿಗಾಗಿ ಆಗ್ರಹಿಸಿಲಿ, ನಾನು ನಾಗರಿಕ ವಿವಾಹದಡಿಯಲ್ಲಿ ಮದುವೆಯಾಗಿರುವವರ ವಿವರಗಳನ್ನು ತಿಳಿಯಬಯಸುವೆ. ನಾವು ಜನತೆಯನ್ನು ಮೂರ್ಖರೆಂದು ತಿಳಿಯುವುದು ಬೇಡ. ಕಾಲ, ಯಾರು ಮೂರ್ಖರೆಂದು ತೋರಿಸಬಲ್ಲದು. ಆದುದರಿಂದ, ಈ ದಿಶೆಯಲ್ಲಿ ತರಾತುರಿ ಕಾರ್ಯಕೈಗೊಳ್ಳದೇ ಕಾಯೋಣ. ಅಲ್ಲದೆ ನೆಲೆಯನ್ನು ಭದ್ರಗೊಳಿಸಿ ಹಂತ ಹಂತವಾಗಿ ವಿಧೇಯಕವನ್ನು ಜಾರಿಗೊಳಿಸುವುದು ಉತ್ತಮ. ವಿಧವಾ ಪುನರ್‌ವಿವಾಹ ಜಾರಿಯಲ್ಲಿದೆ. ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕು ನೀಡುವುದೂ ಜಾರಿಯಲ್ಲಿದೆ. ಬಾಲವಿವಾಹ ನಿರ್ಬಂಧನೆಯೂ ಜಾರಿಯಲ್ಲಿದೆ. ಆದುದರಿಂದ ಕಾದು ನೋಡೋಣ. ಅದರಿಂದ ಯಾವ ಹಾನಿಯೂ ಸಂಭವಿಸದು. ವಿಚ್ಛೇದನ ಒಂದರಿಂದಲೇ ಹೆಚ್ಚಿನ ಸುಧಾರಣೆಯಾಗಬಲ್ಲದು ಎಂಬುದು

ಕೇವಲ ಭ್ರಮೆ. ನಾಗರಿಕ ವಿವಾಹ ಪದ್ಧತಿಯಲ್ಲಿಯೇ ವಿವಾಹವಾಗಬೇಕೆಂದಿರುವವರು ಗಂಭೀರವಾಗಿ ಯೋಚಿಸಲಿ, ವಿಧೇಯಕದ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸಲಿ. ಅಭಿಪ್ರಾಯಕ್ಕೆ ಅನುಗುಣವಾಗಿ ಬದಲಾವಣೆಯನ್ನು ತರೋಣ. ಆದುದರಿಂದ ಸನ್ಮಾನ್ಯ ಸದಸ್ಯರು ಶಾಂತಮನೋಭಾವನೆಯಿಂದ ಈ ವಿಷಯ ಚರ್ಚಿಸಲಿ. ಹೀಗಾಗಿ ಜಾರಿಯಲ್ಲಿರುವ ವ್ಯವಸ್ಥೆಯನ್ನು ತಿಳಿಯದೇ ಹೋದ ಯಾವುದೋ ನೂತನ ವ್ಯವಸ್ಥೆಗೆ ಮೋಹಗೊಂಡು ಕೈಬಿಡಬೇಡಿ.

ಕ್ರಿಶ್ಚಿಯನ್ ಧರ್ಮ ಎಂದರೇನು ಎಂಬುದನ್ನು ಅರಿಯವೇ? ಜರ್ಮನಿ ಕ್ರಿಶ್ಚಿಯನ್ ರಾಷ್ಟ್ರ ಆದರೂ ಅಲ್ಲಿ ಕಲಹಗಳಿಲ್ಲವೇ? ಕ್ರಿಶ್ಚಿಯನ್ನರಲ್ಲಿ ಅಂತಃಕಲಹಗಳಿಲ್ಲವೆ? ನಮ್ಮ ದೇಶದಲ್ಲಿಯ ಜಾತೀಯ ಕಲಹಗಳಿಂದಲೇ ದೇಶ ಗ್ರೀಕರ ಆಕ್ರಮಣಕ್ಕೆ ಗುರಿಯಾಯಿತು ಎಂದು ಹೇಗೆ ಹೇಳಬಹುದು? ಹೀಗೆ ನಾವೇ ಬೇರೆಯವರಿಗೆ ಆಸ್ಪದ ನೀಡಿ ನಮ್ಮನ್ನು ತೆಗಳಲು ಆಸ್ಪದ ನೀಡುವುದು ಸರಿಯಾದ ಕ್ರಮವೆ? ನಾವು ಮುಂದುವರೆದಿರುವೆವು, ಸಾಕಷ್ಟು ಪ್ರಗತಿಯನ್ನೂ ಹೊಂದಿರುವೆವು. ಸ್ವಿಟ್ಜರ್‌ಲ್ಯಾಂಡಿನಲ್ಲಿ ಇಂದಿಗೂ ಸ್ತ್ರೀಯರಿಗೆ ಮತದಾನದ ಹಕ್ಕನ್ನೇ ನೀಡಿಲ್ಲ. ನಮ್ಮ ಸ್ತ್ರೀಯರು ಅಲ್ಲಿಗೆ ಹೋಗಿ ಅಲ್ಲಿಯ ಸ್ತ್ರೀಯರಿಗೆ ಮತದಾನದ ಹಕ್ಕು ದೊರಕಿಸಿಕೊಡಲು ಏಕೆ ಹೋರಾಟ ನಡೆಸಬಾರದು? ಆದುದರಿಂದ ನಮ್ಮ ಸಮಾಜದ ಸ್ತ್ರೀಯರ ಬಗೆಗೆ ಕುರೂಪವಾದ ಚಿತ್ರವನ್ನು ನೀಡುವುದನ್ನು ನಿಲ್ಲಿಸಿ. ಏಕೆಂದರೆ ನಮ್ಮಲ್ಲಿ ಸೀತಾ, ಸಾವಿತ್ರಿಯರಂಥ ಮಹಾಮಹಿಳೆಯರು ಆಗಿ ಹೋಗಿದ್ದಾರೆ. ಅವರು ತಮ್ಮ ಪತಿಗಳನ್ನು ಬೆಂಬಲಿಸಿದ್ದಾರೆ. ಈಗ ನಾವು ನಮ್ಮ ಸತಿಯರನ್ನು ಅನುಸರಿಸಬೇಕು. ಆದುದರಿಂದ ಈಗ ಮತ್ತೊಂದು ಪುರಾಣ ಬರೆದು, ಸಾಮಾಜಿಕವಾಗಿ ಶಾಂತಿಗಾಗಿ ಪುರುಷರು ಸ್ತ್ರೀಯರನ್ನು ಅನುಸರಿಸಲು ಎಂದೇ ಸಾರಲಿ. ಈಗ ನಾವು ಗಂಡ–ಹೆಂಡತಿ ನಾಳೆ ನಾನು ಒಂದು ಸಿನಿಮಾ ನೋಡಲು ಹೋಗಿ ಅಲ್ಲಿ ಮುಖಕ್ಕೆ ಪೌಡರು ಹಚ್ಚಿಕೊಂಡ ಸ್ತ್ರೀಯನ್ನು ಕಂಡು, ಅವಳಂತೆ ನನ್ನ ಹೆಂಡತಿ ಏಕೆ ಇಲ್ಲ ಎಂದು, ಹೆಂಡತಿಯನ್ನು ಬಡಿಯಲಾಗುವುದೇ? ಅಲ್ಲದೆ, ಈ ಕಾರಣಕ್ಕೆಂದೇ ನಾನು ಮಾರನೇ ದಿನ ವಿಚ್ಛೇದನಕ್ಕೆ ಅರ್ಜಿಹಾಕಲಾಗಬಹುದೇ? ಇಲ್ಲ, ಸ್ತ್ರೀಯರು ಅಬಲೆಯರು. ನನ್ನ ಈ ಹೇಳಿಕೆಗೆ ಅವರು ವಿರೋಧ ವ್ಯಕ್ತಪಡಿಸಿ ನನ್ನೊಂದಿಗೆ ರಗಳೆ ಮಾಡಲೂಬಹುದು. ಆದರೆ ಈ ಪ್ರಕೃತಿ ನಿಯಮಗಳನ್ನು ನಾವು ಬದಲಾಯಿಸಬಲ್ಲೆವೇ? ಕುಟುಂಬ ಜೀವನದ ಸುಖ–ಶಾಂತಿಗೆ ಇದು ಅನಿವಾರ್ಯ. ಈ ವಿಧವಾದ ಸಂಸ್ಥೆಗಳು ಅಥವಾ ಘಟಕಗಳು, ಸಮಾಜದ ಆರ್ಥಿಕ ಹಾಗೂ ಸಮಗ್ರತೆಗೆ ಅನಿವಾರ್ಯ. ನಿರುದ್ಯೋಗ ನಿವಾರಣೆಗೆ ಸಹಕಾರಿ. ಒಂದು ವೇಳೆ ಗಂಡ ತೀರಿಹೋದರೆ, ಇತರರು ಅವಳನ್ನು ರಕ್ಷಿಸುವರು. ಅಲ್ಲದೆ ನಾವು ವಿಧವೆಯ ರಕ್ಷಣೆಗೆಂದೇ ತಾತ್ಕಾಲಿಕವಾಗಿ ಅನೇಕ ಕಾನೂನುಗಳನ್ನು ರಚಿಸಿರುವೆವು. ನಾನು ಕೇವಲ ಆ ಸ್ತ್ರೀ ವರ್ಗದವರನ್ನು ವಿರೋಧಿಸುವೆ. ಏಕೆಂದರೆ ಆಸ್ತಿಯಲ್ಲಿ ಪಾಲು ಪಡೆದು ಗಂಡಂದಿರನ್ನೇ ಗಾಳಿಗೆ ತೂರಿಬಿಡಲು ಸಿದ್ಧರಿದ್ದಾರೆ. ಪರಮಾತ್ಮ ನಮ್ಮನ್ನು ಅವರಿಂದ ಹಾಗೂ ಅವಿವಾಹಿತ ಮಹಿಳೆಯರ ದಂಡಿನಿಂದ ರಕ್ಷಿಸಲಿ ಎಂದೇ ಪ್ರಾರ್ಥಿಸುವೆ.

**ಶ್ರೀ ಟಿ.ಎನ್. ಸಿಂಗ್ (ಉ.ಪ್ರ) :** ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿ ಇದೆ.

**ಮಾನ್ಯ ಸಭಾಧ್ಯಕ್ಷರು :** ಯಾರು ತಿದ್ದುಪಡಿಗಳನ್ನು ಮಂಡಿಸಿರುವರೋ ಹಾಗೂ ಇತರ ಎಲ್ಲರಿಗೂ ಅವಕಾಶ ನೀಡಲಾಗುವುದು.

**ಶ್ರೀ ರಾಜ್ ಬಹದ್ದೂರ್ :** ನನ್ನ ಸನ್ಮಾನ್ಯ ಸದಸ್ಯರ ಹೇಳಿಕೆಯನ್ನು ಶಾಂತರೀತಿಯಿಂದ ಕೇಳಿರುವೆ.

---

* ೧೯೫೧ನೇ ಫೆಬ್ರವರಿ ೭ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೫೩೨–೩೬

ಆದರೂ ನಾನು ಕೇಳಿದ ಹಲವಾರು ಪ್ರಶ್ನೆಗಳಿಗೆ ಅವರಿಂದ ಯಾವ ಮಾರ್ಗದರ್ಶನ ದೊರೆಯಲಿಲ್ಲ. (ನಾನು ಈ ವಿಧೇಯಕದ ಅಂಶಗಳೊಂದಿಗೆ ಸಹಮತ ಹೊಂದಿರುವೆ) ಆದರೆ ಈ ನನ್ನ ಸಹಮತವು ಯೌವನದ ಭಾವೋದ್ವೇಗದಿಂದಾಗಲಿ ಅಥವಾ ಅತಿ ಉದ್ವೇಗದಿಂದಾಗಿರದೆ, ಇಂದಿನ ಪರಿಸ್ಥಿತಿಯಲ್ಲಿ ಈ ಬಗೆಯ ವಿಧೇಯಕವು ಅನಿವಾರ್ಯವೆಂದೇ ನನ್ನ ಭಾವನೆ. ನಾವು ಪ್ರಗತಿಪರರಾಗಬೇಕಾದಲ್ಲಿ ಈ ಬಗೆಯ ವಿಧೇಯಕವು ಬೇಕು; ಇಲ್ಲದೇ ಹೋದಲ್ಲಿ ನಾವು ವಿಫಲರಾಗುವೆವು.

ಎಲ್ಲರಿಗೂ ತಿಳಿದಂತೆ, ಕಳೆದ ಮೂರು ವರ್ಷಗಳಿಂದ, ಬೇರೆ ಯಾವ ವಿಧೇಯಕವೂ ಈ ವಿಧೇಯಕದಂತೆ ಸಾರ್ವಜನಿಕರ ಗಮನವನ್ನು ಸೆಳೆದಿಲ್ಲ. ಹೀಗಾಗಿ ಈ ಹಿಂದೂ ಕೋಡ್ ಬಿಲ್ ಉದ್ವೇಗ, ಅಸೂಯೆ, ಕಂದಾಚಾರ ಮುಂತಾದ ಅನೇಕ ವಿರೋಧಾಭಾಸಗಳಿಗೆ ಈಡಾಗಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಸರಳವಾಗಿಲ್ಲ. ಈ ಬಗೆಯ ಹಿನ್ನೆಲೆಯಲ್ಲಿ ಅಂದರೆ ಸಂದೇಹ ಹಾಗೂ ಸಂಶಯಗಳಿಂದಾಗಿ ಈ ವಿಧೇಯಕದ ಬಗೆಗೆ ನ್ಯಾಯಸಮ್ಮತವಾದ ನಿರ್ಣಯ ತೆಗೆದುಕೊಳ್ಳಲಾಗುತ್ತಿಲ್ಲ.

ಇದರ ಬಗ್ಗೆ ಬಂದಿರಬಹುದಾದ ಟೀಕೆಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ಮೊಟ್ಟಮೊದಲಿಗೆ ಮಾನ್ಯ ಉಪಾಧ್ಯಕ್ಷರು ಭಾವಿಸಿದಂತೆ ನಾವು ಕಾಲಕ್ಕೆ ಮುಂಚೆ ಮುಂದುವರಿದಂತಾಗಿ ಈ ಬಗೆಯ ಮಸೂದೆಯು ಅಪಾಯಕಾರಿಯಾಗಬಹುದು. ಅಲ್ಲದೆ ಈ ವಿಧೇಯಕವು ಹಿಂದೂ ಸಮಾಜಕ್ಕೆ ತುಂಬಲಾರದ ಹಾನಿಯನ್ನು ತರುತ್ತದೆ. ಬೇರೆ ಪಂಗಡದವರೂ ಈ ವಿಧೇಯಕವನ್ನು ಮಂಡಿಸಿದವರ ಬಗ್ಗೆ ದಿನಂಪ್ರತಿ ಟೀಕೆಗಳ ಸುರಿಮಳೆಯನ್ನೇ ಸುರಿಸುತ್ತಿದ್ದಾರೆ. ಈ ವರ್ಗದವರಿಗೆ ವಿಧೇಯಕದಲ್ಲಿ ಅಡಕವಾಗಿರುವ ವಿಷಯಗಳಿಗಿಂತ, ವಿಧೇಯಕವನ್ನು ಮಂಡಿಸಿದವರ ಬಗ್ಗೆ ಕೆಂಡಕಾರುತ್ತಿದ್ದಾರೆ. ಅಲ್ಲದೆ ಅವರಿಗೆ ಜನಾಭಿಪ್ರಾಯದ ಬಗೆಗೂ ಸ್ಪಷ್ಟ ಕಲ್ಪನೆಯೇ ಇರದೆ, ಮುಸುಗಿದ ಅಭಿಪ್ರಾಯವನ್ನೇ ಹೊಂದಿದ್ದಾರೆ. ಸ್ವಾತಂತ್ರ್ಯದೊಡನೆ ಜನರು, ಜಾರಿಯಲ್ಲಿರಬಹುದಾದ ವಿವಿಧ ಕಾನೂನುಗಳನ್ನು ಒಂದುಗೂಡಿಸುವಲ್ಲಿ ಈ ಬಗೆಯ ಕ್ರೋಡೀಕರಣವನ್ನು ಬಯಸುವುದು ಸಹಜ. ಈ ಪ್ರಕ್ರಿಯೆಯು ಸ್ವಾತಂತ್ರ್ಯದಿಂದ ಒಡಮೂಡಿಬಂದಿರುವುದು ಸೂಕ್ತವೇ. ಈ ವಿಧವಾದ ಕ್ರಮ ಇದೇ ಮೊದಲ ಬಾರಿಯಾಗಿರದೇ ೧೯೨೧ರಷ್ಟು ಹಿಂದೆಯೇ ಜನಪ್ರತಿನಿಧಿಗಳು ಶಾಸಕಾಂಗದಲ್ಲಿ ಗೊತ್ತುವಳಿಯ ಮೂಲಕ ತಂದಿದ್ದನ್ನು ಸ್ಮರಿಸಬಹುದಾಗಿದೆ. ಸರ್ವಶ್ರೀ ಕೆ.ಜಿ. ಬಾಗ್ಡೆ ಹಾಗೂ ಸರ್ ತೇಜ ಬಹದ್ದೂರ್ ಸಪ್ರು ಅವರು ಕಾನೂನು ಸದಸ್ಯರಾಗಿದ್ದರು. ಅಂದಿನ ಗೊತ್ತುವಳಿಯಂತೆ, ಹಿಂದು ಲಾ ದ ವಿವಿಧ ಶಾಖೆಗಳನ್ನು ಒಂದುಗೂಡಿಸಿ ಸಮಗ್ರವಾಗಿ ಕ್ರೋಡೀಕರಿಸಬೇಕು ಎಂದಿತ್ತು. ಈ ಪ್ರಶ್ನೆಯನ್ನು ಬಾರಿ ಬಾರಿ ಕೇಂದ್ರ ಶಾಸನಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೆ ಶ್ರೀ ಗಂಗಾನಾಥ ಜಾರಂಥ ಶ್ರೇಷ್ಠ ವ್ಯಕ್ತಿಯೇ ಈ ಬಗ್ಗೆ ಸದನದಲ್ಲಿ ಪ್ರಶ್ನೆಯ ಮೂಲಕ ಪ್ರಸ್ತಾಪಿಸಿದ್ದನ್ನು ಸ್ಮರಿಸಬಹುದಾಗಿದೆ. ನಮಗೆಲ್ಲಾ ತಿಳಿದಂತೆ ಅದೂ ರಾಷ್ಟ್ರೀಯ ಆಂದೋಲನದ ಕಾಲವೇ ಆಗಿದ್ದು, ಈ ಪ್ರಶ್ನೆಯನ್ನು ಕಾಲಕಾಲಕ್ಕೆ ಒತ್ತಾಯಿಸುತ್ತಲೇ ಇದೆ. ಆದುದರಿಂದ ಇದು ಇಂದಿನ ಪ್ರಶ್ನೆಯಲ್ಲ.

ಹಲವಾರು ಸದಸ್ಯರು ಹೇಳುವಂತೆ, ಇದನ್ನು ಐಚ್ಛಿಕವಾಗಿರಿಸದೆ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರಿಗೂ ಅನ್ವಯಿಸಬೇಕು. ಮತ್ತೆ ಹಲವರು ಹೇಳುವಂತೆ ದೇಶದಾದ್ಯಂತ ಒಂದೇ ಒಂದು ನಾಗರಿಕ ಸಂಹಿತೆ ಜಾರಿಗೊಳಿಸಬೇಕೆಂದಿದೆ. ಕೆಲವರ ಅಭಿಪ್ರಾಯದಲ್ಲಿ ಈ ವಿಧೇಯಕವು, ಸಂವಿಧಾನದ ಹಲವು ವಿಧಿಗಳಿಗೆ ವಿರೋಧಿಯಾಗಿರುವುದರಿಂದ ಸಂವಿಧಾನವನ್ನು ಉಲ್ಲಂಘಿಸಿದಂತಾಗುವುದು. ಆದರೆ ನನಗೆ ಖಚಿತವಾಗಿ ಗೋಚರಿಸುವುದೇನೆಂದರೆ ನಾಗರಿಕ ಸಂಹಿತೆ ಜಾರಿಬಂದ ನಂತರವೂ ಈ ಪಂಗಡದವರು, ನಾಗರಿಕ ಸಂಹಿತೆ ೪೪ನೆಯ ವಿಧಿಗೆ ವಿರೋಧವಾಗಿದೆ ಎಂದೇ ಹೇಳುವರು. ಏಕೆಂದರೆ ೪೪ನೆಯ ವಿಧಿಯು

ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ. ಈ ಹಿನ್ನೆಲೆಯಲ್ಲಿ ಏಕರೂಪ ನಾಗರಿಕ ಸಂಹಿತೆಯ ಬೇಡಿಕೆ ಕೇವಲ ಕಪಟ ಎಂದೇ ಹೇಳಬಹುದು.

ನಾವು ಇಂದಿನ ಹಿಂದೂ ಸಮಾಜದ ಸ್ಥಿತಿಗತಿಯನ್ನು ಅವಲೋಕಿಸಿದರೆ ಆಸ್ತಿ, ಮದುವೆ, ದತ್ತು ಮುಂತಾದ ವಿಷಯಗಳ ಬಗೆಗೆ ವಿವಿಧ ಕಾನೂನುಗಳಿವೆ. ಇದರಿಂದಾಗಿ ದೇಶದ ಪ್ರಗತಿಗೆ ಅಡಚಣೆಯಿದೆ. ಆದುದರಿಂದ ಇದಕ್ಕೆ ಪರಿಹಾರ ಮಾರ್ಗವೆಂದರೆ ಕ್ರೋಡೀಕರಣ. ಉದಾಹರಣೆಗೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮಗಳಲ್ಲಿ ಹಲವಾರು ಹಕ್ಕು ಮತ್ತು ಸೌಲಭ್ಯಗಳಿವೆ. ಈ ವಿಧವಾದ ಹಕ್ಕುಗಳನ್ನು ನಾವು ಹಿಂದೂ ಸ್ತ್ರೀಯರಿಗೂ ನೀಡಬೇಕು. ಕ್ರಿಶ್ಚಿಯನ್, ಮುಸಲ್ಮಾನ ಸ್ತ್ರೀಯರಿಗೆ ವಾರಸುದಾರಿಕೆಯ ಹಕ್ಕೂ ನೀಡಿದೆ. ಮುಸಲ್ಮಾನರಲ್ಲಿ ಸ್ತ್ರೀಯರಿಗೂ ವಿಚ್ಛೇದನದ ಹಕ್ಕು ನೀಡಲಾಗಿದೆ.

**ಓರ್ವ ಸದಸ್ಯ :** ಇಲ್ಲ.

**ಶ್ರೀ ತ್ಯಾಗಿ :** ಅದು ಹಕ್ಕಾಗಿರದೆ ಒಂದು ಹೊರೆಯಾಗಿದೆ.

**ಶ್ರೀ ರಾಜಾ ಬಹದ್ದೂರ್ :** ಅದು ನಿಮಗೆ ಹೊರೆ ಎನಿಸಿರಬಹುದು. ಆದರೆ ಈ ವಿಧೇಯಕದ ಅಂಶಗಳ ಬಗ್ಗೆ ನಿಮ್ಮ ಮನಸ್ಸನ್ನು ಹರಿಸಿನೋಡಿರಿ. ಓರ್ವ ಹಿಂದೂ ಪುರುಷನು, ಐದು ವರ್ಷಗಳ ಅವಧಿಯವರೆಗೂ ತನ್ನ ಮಡದಿಯಿಂದ ದೂರವಿದ್ದಾನೆ. ಹಿಂದೂ ತನ್ನ ಮತವನ್ನು ಬದಲಾಯಿಸಿದ್ದಾನೆ. ಅಲ್ಲದೆ ಮೊದಲನೆಯ ಮಡದಿ ಇರುವಾಗಲೇ ಬೇರೆ ಪ್ರೇಮಿಯೊಡನೆ ಬಾಳು ನಡೆಸುತ್ತಿದ್ದಾನೆ. ಈ ಅನೈತಿಕ ವಿಷಯಗಳಲ್ಲಿ ನಿಮ್ಮ ಶೌರ್ಯ ಅಥವಾ ಸಾಹಸಗಳಿಂದ ಇಂತಹ ಭಗಿನಿಯರಿಗೆ ವಿಚ್ಛೇದನೆಯ ದ್ವಾರ ಮುಕ್ತಿ ನೀಡಲಾರಿರಾ? ಆದರೆ ಹಿಂದೂ ಪುರುಷನಿಗೆ ಐದುಬಾರಿ ಮದುವೆಯಾಗಲು ಆಸ್ಪದ ನೀಡಿರುವುದು ವಿವಾಹದ ಪಾವಿತ್ರ್ಯತೆಯನ್ನೇ ಭಂಗಗೊಳಿಸಿದೆ. ಇದು ಸರಿಯೆ? ಅದೇ ಹಕ್ಕೂ ಗಂಡೂ–ಹೆಣ್ಣು ಇಬ್ಬರಿಗೂ ಏಕೆ ನೀಡಬಾರದು. ಹೆಣ್ಣಿನ ಪಾವಿತ್ರ್ಯತೆಯನ್ನು ಗಂಡು ಸಂಶಯಿಸಬಹುದಾದರೆ, ಹೆಣ್ಣು ಗಂಡಿನ ಅನೈತಿಕತೆಯನ್ನು ಪ್ರಶ್ನಿಸಬಾರದೆ? ಪವಿತ್ರತೆ ಈರ್ವರಿಗೂ ಏಕೆ ಅನ್ವಯಿಸಬಾರದು. ಪುರುಷನೇ ಪರಮಾತ್ಮನ ಪ್ರೇಮಕ್ಕೆ ಪಾತ್ರನಾದ ಪ್ರಾಣಿಯೇ? ಈ ಬಗೆಯ ಕಲ್ಪನೆಗಳು ದೇಶಕ್ಕೆ ಸಹಕಾರಿಯಾಗಲಾರವು.

ಈ ವಿಷಯವನ್ನು ಬೇರೆ ದೃಷ್ಟಿಕೋನದಿಂದ ನೋಡುವಾ. ಇಂದಿನ ಪ್ರಪಂಚದಲ್ಲಿ ದೇಶದ ಸರಹದ್ದುಗಳನ್ನು ಕಾಪಾಡಲು ಕಠಿಣವಾದ ಸಮಯದಲ್ಲಿ ಯೋಧರು ಗಡಿಕಾವಲು ಕಾರ್ಯಕೈಗೆತ್ತಿಕೊಂಡಾಗ, ಅವರಿಗೆ ಬೇಕಾದ ಯುದ್ಧಸಾಮಗ್ರಿಗಳ ಉತ್ಪಾದನೆ, ಸರಬರಾಜು ರೈಲು ಗಾಡಿಗಳನ್ನು ಓಡಿಸುವ ಮುಂತಾದ ಅನೇಕ ಕಾರ್ಯಗಳಲ್ಲಿ ಮಹಿಳೆಯರು ಮುನ್ನುಗ್ಗಿ ಕಾರ್ಯಮಾಡುತ್ತಿದ್ದಾರೆ. ಆದಾಗ್ಯೂ ನಾವು ಸ್ತ್ರೀಯರನ್ನು ಹೊರೆ ಎಂದು ಭಾವಿಸುವುದು ದುರದೃಷ್ಟ ಸಂಗತಿಯಾಗಿದೆ. ಸಾಮಾನ್ಯರ ಅಭಿಪ್ರಾಯದಲ್ಲಿ ಸ್ತ್ರೀಯು ಪಾದರಕ್ಷೆ ಸಮಾನ. ಹರಿದಾಗ ಬೇರೆ ಪಾದರಕ್ಷೆಯನ್ನು ಪಡೆಯುವಂತೆ ಸ್ತ್ರೀಯರನ್ನೂ ಬದಲಾಯಿಸಬಹುದೆಂಬ ಕಲ್ಪನೆಯೇ ಅಧಿಕವಾಗಿದೆ.

**ಓರ್ವ ಸದಸ್ಯ :** ರಾಜಾಸ್ಥಾನದಲ್ಲಿ ಇರುವುದು ಆ ಕಲ್ಪನೆಯೇ?

**ಶ್ರೀ ರಾಜ್‌ಬಹಾದೂರ್ :** ಇದು ಕೇವಲ ರಾಜಾಸ್ಥಾನದಲ್ಲಿ ಮಾತ್ರವಲ್ಲ. ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಹರಡಿದೆ. ಇದು ಉನ್ನತ ಕುಟುಂಬಗಳಲ್ಲಿಯೂ ಇದೆ. ಈಗ ಈ ಸತ್ಯವನ್ನು ಅರಿಯುವ ಸಮಯ ಬಂದಿದೆ. ಇದನ್ನು ಸ್ವಾತಂತ್ರ್ಯದ ಜಬಾಬ್ದಾರಿಯನ್ನು ಹೊತ್ತಿರುವ ನಾವು ಅರಿಯಬೇಕಾಗಿದೆ. ಈ ದೇಶವನ್ನು ಭಾರತ ವರ್ಷವೆಂದು ಪರಿಗಣಿಸಬೇಕಾದರೆ ನಾವು ಸ್ತ್ರೀಯರಿಗೆ ಪುರುಷನೊಂದಿಗೆ ಸಮಾನತೆಯನ್ನು ಕಲ್ಪಿಸಲೇಬೇಕು. ಇದು ಆಧುನೀಕರಣವಲ್ಲ. ಪಾಶ್ಚಿಮಾತ್ಯತೆಯೂ ಅಲ್ಲ. ಇದು ಇಂದಿನ ಅನಿವಾರ್ಯತೆ.

ದೇಶಕ್ಕೆ ಒದಗಬಹುದಾದ ಅಪಾಯಗಳನ್ನು ನಾವು ಎದುರಿಸಬೇಕಾದರೆ ನಾವು ಸ್ತ್ರೀಯರ ಬಗೆಗೆ ನಮ್ಮ ಅಭಿಪ್ರಾಯವನ್ನು ಬದಲಾಯಿಸಬೇಕು. ನಾವು ಪ್ರಗತಿ ಸಾಧಿಸಬೇಕಾದರೆ, ಸ್ತ್ರೀಯರಿಗೆ ಸ್ಥಾನಮಾನವನ್ನು ನೀಡಲೇಬೇಕು. ಇದಕ್ಕೆ ಇರಬಹುದಾದ ಒಂದೇ ಮಾರ್ಗವೆಂದರೆ ಎಲ್ಲಾ ಅಸಮಾನತೆಗಳನ್ನು ನಿವಾರಿಸಬಲ್ಲ ಕಾನೂನುಗಳ ಕ್ರೋಡೀಕರಣ.

ನಾನು ಈ ದಿಶೆಯಲ್ಲಿ ನಾವು ಎದುರಿಸುತ್ತಿರುವ ತೊಂದರೆಗಳೇನು ಎಂದು ವಿವರಿಸಬಹುದಾದರೆ, ನಮ್ಮ ಕಾನೂನುಗಳು ಬ್ರಿಟಿಷ್ ನ್ಯಾಯಾಧೀಶರು ಮತ್ತು ಪ್ರಿವಿಕೌನ್ಸಿಲ್‌ನ ಪರಾಮರ್ಶೆಯಿಂದ ಹೊಮ್ಮಿದೆ. ಹೀಗಾಗಿ ಒಂದೇ ವಿಷಯದ ಬಗೆಗೆ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಲಾಗಿದೆ. ಇದಕ್ಕೆ ಅನೇಕ ಉದಾಹರಣೆಗಳಿವೆ. ಅಲ್ಲದೆ ಇಂದಿನ ಕಾನೂನು ಕೇವಲ ತಜ್ಞರಲ್ಲಿ ಮಾತ್ರ ಉಳಿದಿದೆ. ಏಕೆಂದರೆ ಶ್ರೀಸಾಮಾನ್ಯನಿಗೆ ಕಾನೂನಿನ ಬಗೆಗೆ ಯಾವ ಅರಿವೂ ಮತ್ತು ಕಾಳಜಿಯೂ ಇಲ್ಲ.

ಆದುದರಿಂದ ಅದನ್ನು ಕ್ರೋಡೀಕರಿಸಿ ಶ್ರೀಸಾಮಾನ್ಯರಿಗೆ ತಲುಪುವಂತೆ ಮಾಡಕೂಡದೇ? ಈ ಕಾರ್ಯಮಾಡದೇ ಹೋದರೆ ಐಕ್ಯತೆ, ಸಮಗ್ರತೆಯು ಕೇವಲ ಕನಸಾಗಬಹುದು. ನಮ್ಮ ಮುಂದಿರಬಹುದಾದ ಪ್ರಶ್ನೆ ಎಂದರೆ ಕ್ರೋಡೀಕರಣ ಮಾಡಬೇಕೆ ಅಥವಾ ಬೇಡವೇ ಎಂಬುದಲ್ಲ. ಏನನ್ನು ಕ್ರೋಡೀಕರಿಸಬೇಕು ಎಂಬುದು ಮುಖ್ಯ. ಈ ದಿಶೆಯಲ್ಲಿ ಮೂರು ನಾಲ್ಕು ಅಂಶಗಳ ಬಗ್ಗೆ ಕಟು ವಿರೋಧ.

**ಓರ್ವ ಸದಸ್ಯ :** ಇದು ಸಾಮಾನ್ಯ ಚರ್ಚೆಯಲ್ಲ.

**ಶ್ರೀ ರಾಜ್ ಬಹದ್ದೂರ್ :** ಈ ಚರ್ಚೆ ಸನ್ಮಾನ್ಯ ಸದಸ್ಯರು ಹೇಳಿದಂತೆ ದೇಶಕ್ಕೆಲ್ಲಾ ಅನ್ವಯಿಸುವ ಸಂಹಿತೆಯ ಚರ್ಚೆಯಾಗಿದೆ.

ವಿವಾಹ ವಿಚ್ಛೇದನೆ ಹಾಗೂ ವಿವಾಹ ಶಾಸನಗಳ ಬಗ್ಗೆ ವಿರೋಧ ವ್ಯಕ್ತವಾಗಿದೆ. ಎರಡನೆಯದಾಗಿ ವಾರಸುದಾರಿಕೆಯ ಬಗೆಗೆ. ನಾನು ಈ ಎರಡನ್ನೇ ಕುರಿತು ಮಾತನಾಡುವೆ. ಈ ವಿಧೇಯಕದ ಅಂಶಗಳು ಹಾಗೂ ಮಾನ್ಯ ಕಾನೂನು ಸಚಿವರು ಸೂಚಿಸಿದ ತಿದ್ದುಪಡಿಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಎಲ್ಲವನ್ನು ಅನುಮೋದಿಸಬೇಕು.

ನಾನು ಒಂದು ಉದಾಹರಣೆಯ ಬಗ್ಗೆ ತಮ್ಮ ಗಮನ ಸೆಳೆಯಬಯಸುವೆ. ಓರ್ವ ಪುರುಷ ತನ್ನ ಮತ ಬದಲಾಯಿಸಿದ ಎಂದರೆ ಈಗಿನ ಪರಿಸ್ಥಿತಿಯಲ್ಲಿ ಅದು ಹೆಂಡತಿ ಹಾಗೂ ಮಕ್ಕಳು ಕಡ್ಡಾಯವಾಗಿ ಮತ ಬದಲಾಯಿಸಿಲೇಬೇಕಾಗಿದೆ. ಆದುದರಿಂದ ಇಂಥ ಪ್ರಕರಣಗಳಿಂದಾದರೂ ನಮ್ಮ ಸ್ತ್ರೀಯರಿಗೆ ವಿಮೋಚನೆ ದೊರೆಯಬಾರದೇ? ಈ ಹಿನ್ನೆಲೆಯಲ್ಲಿ ವಿಚ್ಛೇದನೆಯನ್ನು ವಿರೋಧಿಸಬಹುದೆ?

ಮದುವೆಯಾದ ಮಗಳಿಗೆ, ತಂದೆಯ ಆಸ್ತಿಯಲ್ಲಿ ಪಾಲು ನೀಡುವುದನ್ನು ನಾನು ಒಪ್ಪಲಾರೆ. ಆದರೆ ಅವಿವಾಹಿತ ಮಗಳಿಗೆ ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ನೀಡುವುದಕ್ಕೆ ಸಹಮತವಿದೆ. ಈ ನನ್ನ ಅಭಿಪ್ರಾಯ ನನ್ನ ಮಿತ್ರರಾದ ಪಂಡಿತ ಠಾಕೂರದಾಸರು ಮಂಡಿಸಿರುವ ತಿದ್ದುಪಡಿಯನ್ನು ಅನುಮೋದಿಸುತ್ತದೆ.

ಮುಕ್ತಾಯ ರೂಪದಲ್ಲಿ, ಈ ವಿಧೇಯಕದ ಬಗೆಗೆ ಹೇಳಬಹುದಾದಲ್ಲಿ, ಇದು ಕೆಲವು ರಾಜಕೀಯ ಉದ್ದೇಶಗಳಿಂದಲೂ ಮುಕ್ತವಾಗಿಲ್ಲ. ರಾಜಕೀಯ ದಿಗಂತದಲ್ಲಿ ಚುನಾವಣೆಗಳ ಗಾಳಿ ಬೀಸತೊಡಗಿದೆ. ಆದುದರಿಂದ ಕಾಂಗ್ರೆಸ್ಸಿನ ವಿರುದ್ಧ ಪ್ರಚಾರ ಮಾಡಲು ದೊರೆಯುವ ಎಲ್ಲಾ ಅವಕಾಶಗಳನ್ನೂ ಉಪಯೋಗಿಸಿಕೊಳ್ಳಲು ಜನ ಸಿದ್ಧರಿದ್ದಾರೆ. ಹೀಗಾಗಿ ಕಾಂಗ್ರೆಸ್ಸಿಗರು ಈ ವಿಧೇಯಕದ ಸಂಪೂರ್ಣ ಲಾಭ ಪಡೆದುಕೊಳ್ಳುತ್ತಾರೆ. ಇದನ್ನು ಚುನಾವಣೆಯ ಆಯುಧವನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಆದುದರಿಂದ ನಾವು ಈ ವಿಧೇಯಕವನ್ನು ಸಂಪೂರ್ಣವಾಗಿ ಪರಿಶೀಲಿಸಿ ಅಂಗೀಕರಿಸುವುದು ಸೂಕ್ತ. ಬಹುಶಃ ಅದು

ಉಪನಿಬಂಧನೆಗಳ ಚರ್ಚೆಯ ಸಮಯದಲ್ಲಿ ಸಾಧ್ಯವಾಗಬಹುದು. ಆಗ ನಾವು ಈ ವಿಧೇಯಕದ ಬಗೆಗೆ ಇರಬಹುದಾದ, ಸಂದೇಹ, ಸಂಶಯ, ಕಂದಾಚಾರದಲ್ಲಿಯ ನಂಬಿಕೆಗಳನ್ನು ನಿವಾರಿಸಬಹುದು. ಆದುದರಿಂದ ಈ ವಿಧೇಯಕದ ವಿರುದ್ಧ ಮಂಡಿಸಿರುವ ಎಲ್ಲಾ ತಿದ್ದುಪಡಿಗಳನ್ನು ವಿರೋಧಿಸಿ ವಿಧೇಯಕವನ್ನು ಬೆಂಬಲಿಸುವೆ.

[ಪೀಠದಲ್ಲಿ ಉಪಾಧ್ಯಕ್ಷರು]

**ಸೇಠ್ ಗೋವಿಂದದಾಸ್(ಮಧ್ಯ ಪ್ರದೇಶ):** ಮೊಟ್ಟಮೊದಲನೆಯದಾಗಿ ನಾನು ಹೇಳಬಯಸುವುದೇನೆಂದರೆ ಅದು ಬಹಳ ಚೆನ್ನಾಗಿರುತ್ತಿತ್ತು.

**ಶ್ರೀ ಹುಸೇನ್ ಇಮಾಮ್(ಬಿಹಾರ) :** ವಿಷಯ ಅರಿಯಬೇಕೆಂದಿರುವುದರಿಂದ ಉತ್ಪಾದನೆ–ಸರಬರಾಜಿನ ಸನ್ಮಾನ್ಯ ಮಂತ್ರಿಗಳು ಸದನದಲ್ಲಿಯೇ ಇರುವುದರಿಂದ ದೆಹಲಿ ಗಡಿಯಾರ ಗೋಪುರ ಬಿದ್ದುಹೋದ ದುರಂತದ ಬಗೆಗೆ, ಏನಾದರೂ ವಿವರ ತಿಳಿಸುವರೇ?

**ಹಲವು ಸದಸ್ಯರು :** ಇದು ಸೂಕ್ತ ಸಮಯವಲ್ಲ.

**ಸೇಠ್ ಗೋವಿಂದದಾಸ್ :** ನನ್ನ ಭಾಷಣ ಮುಗಿದ ಮೇಲೆ ತಾವು ಕೇಳಬಹುದಲ್ಲವೇ?

**ಉಪಾಧ್ಯಕ್ಷರು :** ಅದು ಸಾಧ್ಯ. ಸನ್ಮಾನ್ಯ ಸದಸ್ಯರು ದುರಂತದ ಬಗೆಗೆ ಅರಿಯಬೇಕೆಂದಿರುವವರು, ಸನ್ಮಾನ್ಯ ಮಂತ್ರಿವರ್ಯರು, ಸೇಠ್‌ಗೋವಿಂದದಾಸರ ಹೇಳಿಕೆಯ ನಂತರ ವಿವರಿಸಲು ಅವರಿಗೆ ಅವಕಾಶ ನೀಡುವೆ.

**ಸಾರ್ವಜನಿಕ ಕಾಮಗಾರಿ ಉತ್ಪಾದನೆ, ಸರಬರಾಜು ಮಂತ್ರಿ (ಗಾಡಗೀಳ) :** ನಾನೂ ಒಂದು ತಾಸಿನ ಹಿಂದೆ ಘಟನೆಯ ಬಗೆಗೆ ಕೇಳಿರುವೆ. ಎರಡನೆಯದಾಗಿ ಆಡಳಿತ ದೃಷ್ಟಿಯಿಂದ ಅದು ದೆಹಲಿ ಆಡಳಿತಕ್ಕೆ ಸಂಬಂಧಿಸಿರುವುದರಿಂದ ನಾನು ಹೇಳಿಕೆ ನೀಡಲಾರೆ. ಆದರೆ ಸದನಕ್ಕೆ ಮಾಹಿತಿ ಸಂಗ್ರಹಿಸಿ ೫ ಗಂಟೆಗೆ ವಿಷಯ ತಿಳಿಸಬಲ್ಲೆ.

**ಉಪಾಧ್ಯಕ್ಷ :** ಸನ್ಮಾನ್ಯ ಸದಸ್ಯರು ಹೇಳಿಕೆಯನ್ನು ಮುಂದುವರಿಸಬಹುದು.

**ಸೇಠ್ ಗೋವಿಂದದಾಸ್ :** (ಅವರ ಹಿಂದಿ ಹೇಳಿಕೆಯನ್ನು ಆಂಗ್ಲಭಾಷೆಗೆ ಅನುವಾದಿಸಿದೆ): ನಾನು ಏನು ಹೇಳಬಯಸುವೆ ಎಂದರೆ, ಸನ್ಮಾನ್ಯ ಕಾನೂನು ಸಚಿವರು ಈ ವಿಧೇಯಕವನ್ನು ಸದ್ಯದ ಸಮಯದಲ್ಲಿ ಮಂಡಿಸಬಾರದಿತ್ತು. ಹೀಗೆಂದ ಮಾತ್ರಕ್ಕೆ ನಾನು ಸಂಪ್ರದಾಯವಾದಿ ಎಂದಾಗಲೀ ಅಥವಾ ಕೇವಲ ಸ್ಮೃತಿ ಅಥವಾ ವೇದಗಳ ಸಂಪ್ರದಾಯಗಳನ್ನೇ ಅನುಸರಿಸಬೇಕೆಂಬ ಛಲವಾದಿಯೂ ನಾನಲ್ಲ. ನನಗೆ ಸಂಸ್ಕೃತದ ಅಲ್ಪಜ್ಞಾನವಿದೆ. ನನಗೆ ಭಾರತೀಯ ಸಂಸ್ಕೃತಿಯ ಬಗೆಗೆ ಪ್ರೀತಿಯೂ ಇದೆ; ಆದುದರಿಂದ ಸ್ಮೃತಿ ಮತ್ತು ವೇದಗಳ ಬಗೆಗೆ ಹೇಳಬಹುದಾದರೆ, ಒಂದೇ ವಿಷಯದ ಮೇಲೆ ಭಿನ್ನಾಭಿಪ್ರಾಯವನ್ನು ನಾವು ಕಾಣುತ್ತೇವೆ. ನಾವು ಜ್ಞಾನಪ್ರೇಮಿಗಳು. ಆದುದರಿಂದ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ನಾವು ಜ್ಞಾನಕ್ಕೆ ಮಹತ್ವ ನೀಡಿರುವೆವು. ಆದುದರಿಂದಲೇ ಕಾಲಭೇದೇನ ಧರ್ಮಭೇದ ಎಂಬುದಕ್ಕೆ ನಾವು ಮಹತ್ವ ನೀಡಿರುವೆವು; ಏಕೆಂದರೆ ಕಾಲಕ್ಕೆ ತಕ್ಕಂತೆ ಧರ್ಮದಲ್ಲಿಯೂ ಬದಲಾವಣೆಗಳಾಗುತ್ತವೆ. ನಾನು ಸುಧಾರಣೆಗಳು ಅವಶ್ಯ ಎಂದೇ ನಂಬಿರುವೆ, ಅಲ್ಲದೆ ಈ ವಿಧವಾದ ಸುಧಾರಣೆಗಳನ್ನು ಶಾಸನದ ಮುಖಾಂತರ ಜಾರಿಗೊಳಿಸುವ ವಿಧಾನವನ್ನೂ ಸಮರ್ಥಿಸುವೆ. ಸತೀಪದ್ಧತಿಯ ನಿರ್ಮೂಲನೆಗೆ ರಾಜಾರಾಯ ಮೋಹನರಾಯರ ಹೋರಾಟ ನನಗಿನ್ನೂ ನೆನಪಿನಲ್ಲಿದೆ. ಅಂದಿನ ದಿನಗಳಲ್ಲಿಯೂ ಸತೀಪದ್ಧತಿಯ ಪರವಾಗಿ ಅನೇಕ ಜನರಿದ್ದರು. ಅದರಂತೆಯೇ

---

* ೧೯೫೧ನೇ ಫೆಬ್ರವರಿ ೭ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೫೪೫–೪೫

ವಿಧವಾ ಪುನರ್‌ವಿವಾಹದ ಬಗೆಗೆ, ಈಶ್ವರ ಚಂದ್ರ ವಿದ್ಯಾಸಾಗರ ಅವರ ಹೋರಾಟವೂ ನನಗೆ ನೆನಪಿದೆ. ಅದನ್ನೂ ಪ್ರಬಲವಾಗಿ ಪ್ರತಿಭಟಿಸಿದರು. ಶಾರದಾ ಆಕ್ಟ್ ಬಗೆಗೆ ಸಾಕಷ್ಟು ಹೇಳಲಾಗಿದೆ. ನನಗೆ ತಿಳಿದಂತೆ, ಈ ವಿಧೇಯಕದಂತೆ ಬಾಲ್ಯ–ವಿವಾಹವನ್ನು ಸಾಕಷ್ಟು ತಡೆಯಲಾಗಿದೆ. ಅಲ್ಲದೆ ಈ ವಿಧೇಯಕಗಳು ನಮ್ಮಲ್ಲಿಯ ಕಂದಾಚಾರಗಳನ್ನು ತಡೆಗಟ್ಟುವಲ್ಲಿ ಸಹಕಾರಿಯಾಗಿವೆ. ಆದುದರಿಂದ ನಾವು ವೇದ ಅಥವಾ ಸ್ಮೃತಿಗಳನ್ನು ಅಂಧಶ್ರದ್ಧೆಯಿಂದ ಎಂದೂ ಒಪ್ಪಿಕೊಳ್ಳಬಾರದು. ನಮ್ಮ ಸಮಾಜದ ಸುಧಾರಣೆಗೆ ಬೇಕಾದ ಕಾನೂನುಗಳ ಆವಶ್ಯಕತೆ ಇದೆ. ಆದರೆ ನನಗೆ, ನಿನ್ನೆ ನಮ್ಮ ಕಾನೂನು ಮಂತ್ರಿ ಈ ವಿಧೇಯಕವನ್ನು ಎಲ್ಲರಿಗೂ ಅನ್ವಯಿಸಬೇಕೆಂದಾಗ, ಏಕೆ ನಕ್ಕರೋ ನನಗೆ ತಿಳಿಯದಾಗಿದೆ. ನಮಗೆ ವರ್ಗ ವರ್ಣರಹಿತ ಸಮಾಜ ಬೇಕೆಂದಿದ್ದರೆ, ನನ್ನ ಅಭಿಪ್ರಾಯದಲ್ಲಿ ಸಮಸ್ತ ದೇಶಕ್ಕೂ ಒಂದೇ ಬಗೆಯ ಕಾನೂನನ್ನು ಜಾರಿಗೊಳಿಸಬೇಕು.

ನಿನ್ನೆಯ ದಿನ ಮಾನ್ಯ ಕಾನೂನು ಸಚಿವರು, ನನ್ನ ಹೇಳಿಕೆಯಿಂದ ಯಾವ ಪ್ರಯೋಜನವೂ ಆಗಲಾರದು ಎಂದೇ ಹೇಳಿದರು. ಬಹುಶಃ ನನ್ನ ಅಭಿಪ್ರಾಯ ತಪ್ಪಾಗಿರಬಹುದು; ಆದರೆ ಅವರು ಕೋಪಗೊಳ್ಳಬೇಕಾದ ಕಾರಣವಿಲ್ಲ. ಅವರಿಗೆ ನಾವು ವಿಧೇಯಕಕ್ಕೆ ಆತಂಕ ಒಡ್ಡುವೆವೋ ಎಂಬ ಭಯವಿದೆ. ಆದರೆ ಅದು ನನ್ನ ಅಭಿಪ್ರಾಯ ಒಂದೇ ಆಗಿರದೆ ಅನೇಕರ ಅಭಿಪ್ರಾಯವೂ ಆಗಿದೆ. ಈ ಕಾನೂನನ್ನು ದೇಶದ ಸಮಸ್ತ ಪ್ರಜೆಗಳಿಗೂ ಅನ್ವಯಿಸಿದ್ದರೆ ಅದೊಂದು ಉತ್ತಮ ಕ್ರಮವೇ ಆಗುತ್ತಿತ್ತು. ಕಾನೂನು ಮಂತ್ರಿಯವರ ಅಭಿಪ್ರಾಯದಲ್ಲಿ ಆ ಬಗೆಯ ವಿಧೇಯಕವನ್ನು ಸದನದಲ್ಲಿ ಎರಡು ದಿನಗಳಲ್ಲಿ ಯಾರಾದರೂ ಮಂಡಿಸಿದರೆ ಸ್ವಾಗತಾರ್ಹ ಎಂದಿದ್ದಾರೆ. ಅದಲ್ಲದೆ ಈ ವಿಧೇಯಕ ಅರ್ಧ ಗಂಟೆಯಲ್ಲಿಯೇ ಅಂಗೀಕರಿಸಿದರೆ ಇನ್ನೂ ಉತ್ತಮ. ಆದರೆ ಬೇರೆಯವರ ಅಭಿಪ್ರಾಯಕ್ಕೆ ಮಾನ್ಯ ಕಾನೂನು ಸಚಿವರು ನಗುವುದು ಅವರ ಗೌರವಕ್ಕೆ ಸಲ್ಲದು. ಏಕೆಂದರೆ ಮೂಲಭೂತ ಹಕ್ಕಿನ ಅಧ್ಯಾಯದಲ್ಲಲ್ಲದೇ ಹೋದರೂ ನಮ್ಮ ಸಂವಿಧಾನದ ಬೇರೆ ಎಡೆಯಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ. ಪೂರ್ವ ಪೀಠಿಕೆಯಲ್ಲಿ ಕಾಣಬಹುದಾಗಿದೆ.

"ರಾಜ್ಯವು, ಭಾರತದ ಸಮಸ್ತ ನಾಗರಿಕರಿಗೆಲ್ಲಾ ಅನ್ವಯಿಸುವಂಥ ಒಂದು ಏಕರೂಪ ನಾಗರಿಕ ಸಂಹಿತೆಗೆ ಪ್ರಯತ್ನಿಸಬೇಕು".

ಈ ವಿಧವಾಗಿ ನಮ್ಮ ಸಂವಿಧಾನದಲ್ಲಿ ಸ್ಪಷ್ಟಗೊಳಿಸಿದೆ, ಆದುದರಿಂದ, ಈಗ ಸದನದ ಮುಂದಿರುವ ವಿಧೇಯಕವು ಅದಕ್ಕೆ ವಿರೋಧವಾಗಿದೆ. ನಾವು ವರ್ಗ ಹಾಗೂ ಜಾತಿ ಭೇದಗಳಿಂದ ತುಂಬಾ ತೊಂದರೆಗಳನ್ನು ಅನುಭವಿಸಿದ್ದೇವೆ. ಸ್ವಾತಂತ್ರ್ಯ ಪಡೆದ ನಂತರ ಪ್ರಥಮ ಸಾಮಾಜಿಕ ವಿಧೇಯಕ ಸದನದ ಮುಂದೆ ಬಂದಿದೆ. ಹೀಗಾಗಿ ನಾವು ಈ ವಿಧೇಯಕದಲ್ಲಿ ಹಲವಾರು ಸಾಮಾಜಿಕ ಧ್ಯೇಯಗಳನ್ನು ಅಳವಡಿಸಿದ್ದರೆ ಅದನ್ನು ಸುಲಭವಾಗಿ ಅಂಗೀಕರಿಸಬಹುದಾಗಿತ್ತು; ಅದನ್ನು ಈ ವಿಧೇಯಕವನ್ನು ಸರ್ವರಿಗೂ ಅನ್ವಯಿಸುವಂತೆ ನಿರ್ಣಯಿಸಿದ್ದರೆ ಉತ್ತಮವಾಗುತ್ತಿತ್ತು. ಈ ವಿಧೇಯಕದಲ್ಲಿಯ ಹಲವಾರು ಉಪನಿಬಂಧನೆಗಳ ಅಲ್ಪಸ್ವಲ್ಪ ಬದಲಾವಣೆಗಳಿಂದ ಈ ಕಾರ್ಯವನ್ನು ಸರಳವಾಗಿ ಕೈಗೆತ್ತಿಕೊಳ್ಳಬಹುದು. ಆಗ ಈ ವಿಧೇಯಕಕ್ಕೆ ಯಾರೂ ವಿರೋಧವನ್ನೇ ಒಡ್ಡುತ್ತಿರಲಿಲ್ಲ.

ಇನ್ನೊಂದು ವಿಷಯ ಸಕಲರಿಗೂ ತಿಳಿದಿದೆ. ಅದೇನೆಂದರೆ ಈ ವಿಧೇಯಕದಲ್ಲಿ ಹಲವಾರು ಉತ್ತಮ ಅಂಶಗಳಿವೆ. ನನ್ನ ಅಭಿಪ್ರಾಯದಲ್ಲಿ ಈ ವಿಧೇಯಕ ಬಹುತೇಕ ಉತ್ತಮ ಅಂಶಗಳಿಂದ ಕೂಡಿದ್ದು, ಭಿನ್ನಾಭಿಪ್ರಾಯಕ್ಕೆ ವಿಶೇಷ ಆಸ್ಪದಗಳೇ ಇಲ್ಲ. ಈ ವಿಧೇಯಕದಲ್ಲಿ ಮೂಲಭೂತವಾಗಿ ಒಂದು ಪ್ರಮುಖ ಅಂಶವನ್ನೂ ಅಳವಡಿಸಲಾಗಿದೆ. ಅದೇ ಭಿನ್ನಾಭಿಪ್ರಾಯಕ್ಕೆ ಆಸ್ಪದ ನೀಡಿರುವ ಅಂಶ, ಎಂದರೆ ಮಗಳಿಗೆ

ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು. ನನ್ನ ಮಾನ್ಯ ಮಿತ್ರರಾದ ಶ್ಯಾಮನಂದನ ಸಹಾಯ್ ಅವರು ಹೇಳುವಂತೆ, ನಾವು ಸ್ತ್ರೀಯರನ್ನು ಗೌರವಿಸುತ್ತೇವೆ ಎಂದು ಹೇಳುವುದು ಸೂಕ್ತ. ಆದರೆ ಗಾದೆ ಮಾತಿನಂತೆ "ತಿಜೋರಿ ನಿನ್ನದು ಆದರೆ ಅದರ ಕೀಲಿ ನನ್ನಲ್ಲಿರಲಿ" ಎಂದಂತೆ ನಾವು ಸ್ತ್ರೀಯರಿಗೆ ನೀಡುವ ಗೌರವ; ಏಕೆಂದರೆ ನಾವು ಆಸ್ತಿಹೀನ ಸ್ತ್ರೀಯರ ಗೋಳನ್ನು ನೋಡಿದ್ದೇವೆ. ಕೇವಲ ಶ್ಯಾಮನಂದನ ಸಹಾಯ್ ಅಥವಾ ಬೇರೆ ಯಾರ ಹೇಳಿಕೆಯೂ ಅವರಿಗೆ ಅಂದರೆ ಸ್ತ್ರೀಯರಿಗೆ ದೊರೆಯಬೇಕಾದ ಹಕ್ಕುಗಳನ್ನು ದೊರಕಿಸುವಲ್ಲಿ ಫಲಕಾರಿಯಾಗಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಸ್ತ್ರೀಯರಿಗೆ ತಂದೆಯ ಆಸ್ತಿಯಲ್ಲಿ ಭಾಗ ದೊರೆಯಲೇಬೇಕು. ಮಾವನ ಆಸ್ತಿ ಹಾಗೂ ಪಾಲಿನ ವಿಷಯ ಬೇರೆ.

**ಗ್ಯಾನಿ ಜಿ.ಎಸ್. ಮುಸಾಫಿರ್ :** ಮಾವನ ಆಸ್ತಿಯ ಬಗೆಗೂ ಏನೂ ತಕರಾರು ಇಲ್ಲ.

**ಸೇಠ್ ಗೋವಿಂದದಾಸ್ :** ಇದೊಂದು ಅಗಾಧವಾದ ಪ್ರಶ್ನೆಯಾಗಿದೆ. ಇಂದಿನ ವ್ಯವಸ್ಥೆಯಲ್ಲಿ ನಮ್ಮ ಸ್ತ್ರೀಯರು ವಿವಾಹವಾದ ನಂತರ ಗಂಡನ ಮನೆಗೆ ತೆರಳುತ್ತಾರೆ. ಆದರೆ, ಸಮಾಜದ ಒಂದು ಕಾಲದಲ್ಲಿ ವಿವಾಹ ವ್ಯವಸ್ಥೆಯ ವಿಧಾನವೇ ಇರಲಿಲ್ಲ. ಮಹಾಭಾರತದಲ್ಲಿಯ ಉದ್ದಾಲಕ ಹಾಗೂ ಶ್ವೇತಕೇತುವಿನ ಕಥೆಗಳು ಅಂದಿನ ದಿನಗಳಲ್ಲಿ ವಿವಾಹ ವ್ಯವಸ್ಥೆ ಪದ್ಧತಿ ಇರಲಿಲ್ಲವೆಂಬುದಕ್ಕೆ ಉದಾಹರಣೆಯಾಗಿವೆ. ನಂತರ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿ ಬಂದಿತು. ಈ ವ್ಯವಸ್ಥೆಯಲ್ಲಿ ಗಂಡನು ಹೆಂಡತಿಯ ಮನೆಗೆ ತೆರಳುತ್ತಿದ್ದ. ಸ್ತ್ರೀಯೇ ಆಸ್ತಿಗೆ ಹಕ್ಕುದಾರಳಾಗಿದ್ದಳು. ಈ ಪದ್ಧತಿ ಇನ್ನೂ ಮಲಬಾರ ಪ್ರದೇಶದಲ್ಲಿದೆ. ನಂತರ ಜಾರಿಯಲ್ಲಿ ಬಂದಿದ್ದು ಪಿತೃಪ್ರಧಾನ ವ್ಯವಸ್ಥೆ. ಆದುದರಿಂದ ಇಂದಿನ ಸಾಮಾಜಿಕ ವ್ಯವಸ್ಥೆ ಪಿತೃಪ್ರಧಾನವಾಗಿದೆ ಹೊರತು ಮಾತೃಪ್ರಧಾನವಲ್ಲ. ಹೀಗಿರುವಾಗ, ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕು ನೀಡುವುದು ವಿವಾದಾತ್ಮಕವಾಗಿದೆ. ಆದರೆ ನನ್ನ ಅಭಿಪ್ರಾಯದಂತೆ ಆಸ್ತಿಯಲ್ಲಿ ಸ್ತ್ರೀಯರಿಗೆ ಹಕ್ಕು ಇರಬೇಕು, ಆದರೆ ಅದು ಅವಿವಾಹಿತ ಮಹಿಳೆಯರಿಗೆ ತಂದೆಯ ಆಸ್ತಿಯಲ್ಲಿಯೂ, ವಿವಾಹಿತ ಮಹಿಳೆಗೆ ಮಾವನ ಆಸ್ತಿಯಲ್ಲಿ ಹಕ್ಕು ಇರಬೇಕು.

ಈ ವಿಧೇಯಕದಲ್ಲಿ ಹಲವಾರು ಅಂಶಗಳ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಆದರೆ ಈ ವಿಧೇಯಕದಲ್ಲಿ ಎರಡು ವಿಷಯಗಳು ಪ್ರಮುಖವಾಗಿವೆ. ಮೊದಲನೆಯದೆಂದರೆ ಜಾರಿಯಲ್ಲಿರುವ ವಿವಿಧ ಕಾನೂನುಗಳನ್ನು ಏಕೀಕರಿಸಿರುವುದು. ಎರಡನೆಯದಾಗಿ ಸಾಮಾಜಿಕ ಸುಧಾರಣೆಗೆಂದೇ ಹಲವು ಉಪ ನಿಬಂಧನೆಗಳ ಸೇರ್ಪಡೆ. ನಾನು ಈಗಾಗಲೇ ಹೇಳಿದಂತೆ, ಡಾ.ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ, ಈ ಮಾದರಿಯ ವಿಧೇಯಕವನ್ನು ಸದ್ಯದ ಪರಿಸ್ಥಿತಿಯಲ್ಲಿ ಜಾರಿಯಲ್ಲಿ ತರಬಾರದೆಂದೇ ಆಗ್ರಹಿಸಿದ್ದರು. ಅದರೆ ಈಗ ಇದನ್ನು ಸದನದ ಮುಂದೆ ಮಂಡಿಸಿದ್ದು, ಈಗ ಇದನ್ನು ಮರಳಿ ಪಡೆದರೆ ನೂರಾರು ಬಗೆಯ ಅರ್ಥಕ್ಕೆ ಅವಕಾಶ ನೀಡಿದಂತಾಗುತ್ತದೆ. ಜನರ ಮುಂದೆ ಚುನಾವಣೆ ಇದೆ. ಆದರೆ ನನಗೆ ತಿಳಿದಂತೆ ಈ ವಿಧೇಯಕವನ್ನು ಕಾಂಗ್ರೆಸ್ ಪಕ್ಷ ಮಂಡಿಸಿದೆ ಎಂದು ಅದರ ಪ್ರಭಾವಕ್ಕೆ ಯಾವ ತೊಂದರೆಯೂ ಇಲ್ಲ ಅಥವಾ ಇದೇ ಕಾರಣಕ್ಕೆಂದೇ ಕಾಂಗ್ರೆಸ್ ಸೋಲನ್ನು ಅನುಭವಿಸಲಾರದು. ಇದಕ್ಕೆಂದೇ ಕಾಂಗ್ರೆಸ್ ಸೋಲಬಹುದಾದರೆ ಅದು ಈ ಹಂತದಲ್ಲಿಯೇ ಸೋಲನ್ನು ಅನುಭವಿಸುವುದು ಉತ್ತಮ. ಈ ವಿಧವಾದ ಅಲ್ಪಕಾರಣಗಳಿಗೇ ಕಾಂಗ್ರೆಸ್ ಸೋಲುವುದಾದರೆ, ಅದು ಸೋಲನ್ನು ಅನುಭವಿಸುವುದೇ ಸರಿ. ಏಕೆಂದರೆ ನನಗೆ ತಿಳಿದಂತೆ, ಚುನಾವಣೆಗೂ ಹಾಗೂ ಈ ವಿಧೇಯಕಕ್ಕೂ ಅಧಿಕ ಸಂಬಂಧವಿಲ್ಲ. ನನ್ನ ನೆನಪಿನಂತೆ ೧೯೨೩-೧೯೨೬ರ ಅವಧಿಯಲ್ಲಿ ಸ್ವರಾಜ್ಯಪಕ್ಷವು ಚುನಾವಣೆಗೆ ಸ್ಪರ್ಧಿಸಿತ್ತು. ನಾನು ಜಮೀನ್ದಾರರ ಪಕ್ಷದಿಂದ ಕೇಂದ್ರ ಶಾಸನಸಭೆಗೆ ಸ್ಪರ್ಧಿಸಿದ್ದೆ. ಆಗ ಹೇಳುತ್ತಿದ್ದ ವಿಷಯವೆಂದರೆ ಜಮೀನ್ದಾರರು ಹಾಗೂ

ಕಾಂಗ್ರೆಸ್ ಪರಸ್ಪರ ವಿರೋಧಿಗಳು ಮತ್ತು ಜಮೀನ್ದಾರರು ಕಾಂಗ್ರೆಸ್ಸಿಗೆ ಮತಹಾಕುವರೋ ಇಲ್ಲವೋ ಎಂದೇ ಶಂಕಿಸಲಾಗಿತ್ತು. ಸರ್ ಮಾನಿಕೇಜಿ ದಾದಾಬಾಯಿ ಮತ್ತು ಸರ್ ಹರಿಸಿಂಗ್ ಗೌರ್ ಅವರು ನನಗೆ ಪ್ರತಿಸ್ಪರ್ಧಿಗಳಾಗಿದ್ದರು, ಆದರೆ ನನಗೆ ಮೂರು ನಾಲ್ಕಂಶ ಮತಗಳು ದೊರಕಿದ್ದವು. ಆದುದರಿಂದ ಕಾಂಗ್ರೆಸ್ ನಾವು ಭಾವಿಸಿದಂತೆ ಅಸ್ಪೃಶ್ಯವಾಗಿಲ್ಲ. ಈ ವಿಧೇಯಕವನ್ನು ಅಂಗೀಕರಿಸುವುದರಿಂದಲೇ ಕಾಂಗ್ರೆಸ್ ಪಕ್ಷಕ್ಕೆ ಪರಾಭವ ಉಂಟಾಗುತ್ತದೆ ಎಂದು ನಾನು ಭಾವಿಸಲಾರೆ.

ನಾನು ಹೇಳುವುದೇನೆಂದರೆ, ನಮ್ಮ ಪ್ರಧಾನಿಯು ಈ ವಿಧೇಯಕವನ್ನು ಅನುಮೋದಿಸಬೇಕೆಂದು ಕೋರಿದರೆ ಅದನ್ನು ಅನುಮೋದಿಸೋಣ, ಆದರೆ ಅದರಿಂದ ಕಾಂಗ್ರೆಸ್ಸಿಗೆ ಪರಾಭವವಾಗುತ್ತದೆ ಎಂದು ಭಾವಿಸುವುದೇ ಬೇಡ. ಏಕೆಂದರೆ ಕಾಂಗ್ರೆಸ್ಸಿಗೆ ಹಾಗೂ ವಿಧೇಯಕಕ್ಕೂ ಯಾವ ಸಂಬಂಧವಿಲ್ಲ. ಆದರೂ ಪರಾಭವಕ್ಕೆ ಅಂಜಿ, ಈ ವಿಧೇಯಕ ಅನುಮೋದಿಸದೇ ಹೋದಲ್ಲಿ ಅದಕ್ಕಿಂತ ಮಿಗಿಲಾದ ಪರಾಭವವಿಲ್ಲ. ಚುನಾವಣೆಗಳಿಗೆ ಅಂಜಿ ಈ ವಿಧೇಯಕವನ್ನು ಅಂಗೀಕರಿಸದಂತಿರುವವರಿಗೆ ನಾನೊಂದು ಮಾತನ್ನು ಹೇಳಬಯಸುವೆ. ಅದೇನೆಂದರೆ ಈಗ ಈ ವಿಧೇಯಕ ಅಂಗೀಕಾರವಾಗದೆ ಹೋದಲ್ಲಿ, ಜನರು ಕಾಂಗ್ರೆಸ್ಸಿನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೇರುತ್ತಾರೆ. ಅಲ್ಲದೆ ಈ ವಿಧೇಯಕದಲ್ಲಿರಲಾರದ ಅನೇಕ ಅರೋಪಗಳಿಗೂ ಗುರಿಯಾಗುತ್ತೇವೆ. ಆದುದರಿಂದ ಈ ವಿಧೇಯಕವನ್ನು ಚುನಾವಣೆಗಳ ಬೆದರಿಕೆಯ ದೃಷ್ಟಿಯಿಂದ ನೋಡದೆ, ಅದರ ಅನುಕೂಲತೆಗಳನ್ನು ಪರಿಶೀಲಿಸುವುದು ಸೂಕ್ತ. ಈ ದಿಶೆಯಲ್ಲಿ ನಾನು ಈಗಾಗಲೇ ಹೇಳಿದ ವಿಷಯದ ಬಗ್ಗೆ ಮಾನ್ಯ ಕಾನೂನು ಸಚಿವರಿಗೆ ಮನವರಿಕೆ ಮಾಡಲು ಬಯಸುವೆ. ಅದೇನೆಂದರೆ, ಈ ವಿಧೇಯಕದಲ್ಲಿ ಎರಡು ಭಾಗಗಳಿವೆ. ಒಂದು ವಿವಿಧ ಕಾನೂನುಗಳನ್ನು ಏಕೀಕೃತಗೊಳಿಸಿರುವುದು, ಎರಡನೆಯದು ಸಾಮಾಜಿಕ ಸುಧಾರಣೆಗಳನ್ನು ಜಾರಿಗೊಳಿಸುವುದು. ನಾವು ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ ಅನೇಕ ಅಂಶಗಳಿಗೆ ವಿರೋಧವಾಗಿದ್ದೇವೆ. ಏಕೆಂದರೆ ದೇಶದ ಇಂದಿನ ಪರಿಸ್ಥಿತಿಯಲ್ಲಿ ಅವು ಅನಿವಾರ್ಯ ಎಂದು ಭಾವಿಸಲಾಗದು. ಆದರೆ ಕಾನೂನುಗಳ ಏಕೀಕರಣವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈ ದಿಶೆಯಲ್ಲಿ ನನ್ನ ಹೇಳಿಕೆಯನ್ನು ಕಾನೂನು ಸಚಿವರು ಅರ್ಥ ಮಾಡಿಕೊಳ್ಳುವರೆಂದು ಭಾವಿಸುವೆ. ಈ ಬಗೆಯ ಕಾನೂನು ಏಕೀಕೃತಗೊಳಿಸುವಲ್ಲಿ ವಿವಾದಾತ್ಮಕ ವಿಷಯಗಳನ್ನು ಬದಿಗಿರಿಸಿ ಮಿಕ್ಕ ವಿಷಯಗಳ ಬಗೆಗೆ ಮುಂದುವರಿಯುವುದು ಸೂಕ್ತ. ಈ ದಿಶೆಯಲ್ಲಿ ಮುಂಬರುವ ಚುನಾವಣೆಗಳ ದ್ವಾರ ಪ್ರೌಢ ವಯಸ್ಕರ ಮತದಾನ ಪದ್ಧತಿಯ ಮೂಲಕ ಚುನಾಯಿತಗೊಂಡ ಜನಪ್ರತಿನಿಧಿಗಳ ನಿರ್ಣಯ ತೆಗೆದುಕೊಳ್ಳುವುದು ಸರಿಯಲ್ಲ. ನಮ್ಮ ಸಮಾಜ ಸುಧಾರಣೆ ಹಾಗೂ ಇತರ ಭಿನ್ನಾಭಿಪ್ರಾಯಗಳೇನಿದ್ದರೂ, ಪ್ರಜಾಪ್ರತಿನಿಧಿಗಳು ನಿರ್ಣಯಿಸಬಹುದು.

ಆದರೆ ಒಂದು ವಿಷಯ, ನನ್ನ ಮಿತ್ರರಾದ ಶ್ರೀ ಜಸ್ಪತ್ ರಾಯ್ ಅವರು ಹೇಳಿದಂತೆ ಇದನ್ನು ಸಕಲರಿಗೂ ಕಡ್ಡಾಯಗೊಳಿಸಬಾರದು. ಸಮಾಜ ಸುಧಾರಣೆಗಳನ್ನು ಶಾಸಕಾಂಗ ದ್ವಾರ ತರಬಹುದು. ಆದರೆ ಅದಕ್ಕೆ ಸಾರ್ವಜನಿಕ ಅಭಿಪ್ರಾಯದ ಬೆಂಬಲ ಇರಲೇಬೇಕು. ಅಲ್ಲದೆ ಒಪ್ಪದೇ ಇರುವವರ ಮೇಲೆ ಕಡ್ಡಾಯವಾಗಿ ಕಾನೂನು ಹೇರುವುದು ಸೂಕ್ತವಲ್ಲ. ಆದುದರಿಂದ ನಾನು ಮತ್ತೊಮ್ಮೆ ಹೇಳುವುದೇನೆಂದರೆ ಈ ವಿಧೇಯಕವು ನಮ್ಮ ಮುಂದೆ ಬಾರದೇ ಹೋಗಿದ್ದರೆ ಉತ್ತಮವಾಗುತ್ತಿತ್ತು. ಅಲ್ಲದೆ ನಮ್ಮ ಸಂವಿಧಾನದ ಆದರ್ಶಗಳಿಗೆ ಸ್ಪಂದಿಸುವಂತೆ, ಜಸ್ಪತ್‌ರಾಯ್‌ರು ತಂದಿರುವ ತಿದ್ದುಪಡಿ ವಿಧೇಯಕಗಳನ್ನು ಸೂಕ್ತ ಸಮಯದಲ್ಲಿ ಕೈಗೆತ್ತಿಕೊಳ್ಳಬಹುದು. ಆಗ ಇದನ್ನು ಸಾರ್ವತ್ರಿಕವಾಗಿ ಕಡ್ಡಾಯಗೊಳಿಸಲೂಬಹುದು. ಆದರೆ ಸದ್ಯದಲ್ಲಿಯೇ ಕೈಗೆತ್ತಿಕೊಳ್ಳಲೇಬೇಕೆಂದಿದ್ದರೆ, ವಿವಾದಾತ್ಮಕ ಅಂಶಗಳನ್ನು ಕೈಬಿಡಲೇಬೇಕು.

**ಶ್ರೀ ಹುಸೇನ್ ಇಮಾಮ್ :** ಈ ದಿನ ನಾನೂ, ಶ್ರೀ ಗೋವಿಂದ ದಾಸರಂತೆ, ನನ್ನ ಹೇಳಿಕೆಯನ್ನು ನನ್ನ ಮಾತೃ ಭಾಷೆಯಲ್ಲಿ ಹೇಳಬಯಸುವೆ. ಏಕೆಂದರೆ ಶ್ರೀ ಗೋವಿಂದ ದಾಸ್‌ರು ಉತ್ತಮ ಭಾಷಣ ಮಾಡಿದ್ದಾರೆ.

**ಪ್ರೊ.ರಂಗಾ :** ಇಂಗ್ಲಿಷ್‌ನಲ್ಲಿ ಮಾತನಾಡಬಾರದೆ? ನಮಗೆಲ್ಲಾ ಅರ್ಥವಾಗುತ್ತದೆ.

**ಶ್ರೀ ಹುಸೇನ್ ಇಮಾಮ್:** ಹಿಂದೂಕೋಡ್‌ನ ಬಗೆಗೆ ನಾನು ಚರ್ಚೆಗೆ ಸಿದ್ಧವಿರಲಿಲ್ಲ; ಆದರೆ ನನ್ನ ಸಹೋದರಿ ಸಮುದಾಯಕ್ಕೆ ಅನ್ವಯಿಸುವ ಈ ವಿಧೇಯಕದ ಬಗೆಗೆ ಮಾತನಾಡದೇ ಹೋದರೆ ಸರಿಯಲ್ಲ ಎಂದೇ ಚರ್ಚೆಯಲ್ಲಿ ಭಾಗವಹಿಸುವೆ.

**ಶ್ರೀ ತ್ಯಾಗಿ (ಯು.ಪಿ) :** ಆದರೆ ತಿದ್ದುಪಡಿ ವಿಧೇಯಕ ನಿಮಗೂ ಅನ್ವಯಿಸುತ್ತದೆ.

**ಶ್ರೀ ಹುಸೇನ್ ಇಮಾಮ್ :** ಆ ಕಾರಣಕ್ಕಂದೇ ಭಾಗವಹಿಸುತ್ತಿರುವೆ. ಏಕೆಂದರೆ ಈ ವಿಧೇಯಕದಡಿಯಲ್ಲಿ ನಮ್ಮನ್ನೂ ಸೇರಿಸಲು ನನ್ನ ಮಿತ್ರರು ಉತ್ಸುಕರಿದ್ದಾರೆ. ನಮಗೆ ಏಕರೂಪ ನಾಗರಿಕ ಸಂಹಿತೆಯಡಿಯಲ್ಲಿ ಬರಲು ಆತಂಕವಿಲ್ಲ.

ಆದರೆ ನನ್ನ ದೂರು ಏನೆಂದರೆ, ನಾವು ಏಕರೂಪ ನಾಗರಿಕ ಸಂಹಿತೆಗೆ ಒಳಪಡಲು ನಿಮ್ಮಷ್ಟು ಹಿಂದೆ ಬಿದ್ದಿಲ್ಲ. ಆದುದರಿಂದ ನಾನು ನಿಮ್ಮ ಮಟ್ಟಕ್ಕೆ ಇಳಿಯಲು ಸಿದ್ಧನಿಲ್ಲ. ಕ್ಷಮಿಸಿ.

ನಾನು ತಿಳಿಸುವುದೇನೆಂದರೆ ಈ ಹಿಂದೂ ಕೋಡ್ ಬಿಲ್ಲಿಗೆ ಒಂದು ಇತಿಹಾಸವೇ ಇದೆ. ಒಂದು ಹಂತದಲ್ಲಿ ಅಂದರೆ ೧೯೪೪–೪೫ರಲ್ಲಿ ಈ ಬಗೆಗೆ ನೇಮಿಸಿದ ಹಿಂದೂ ಲಾ ಕಮಿಟಿಯ ಕಲಾಪದಲ್ಲಿ ಭಾಗವಹಿಸುವ ಅವಕಾಶ ದೊರಕಿತ್ತು. ಆದುದರಿಂದ ಅಬಲೆಯರ ವಿಶ್ವಾಸಕ್ಕೆ ಹೆಣಗಾಡುವವರ ಬಗೆಗೆ ಅನುಕಂಪವಿದೆ. ನನ್ನ ನಂಬಿಕೆಯಂತೆ ಯಾವುದೇ ಸಮಾಜದಲ್ಲಿಯ ಒಂದು ಜನಾಂಗವನ್ನು ಹತ್ತಿಕ್ಕುವುದರಿಂದ ಅದು ಏಳಿಗೆ ಹೊಂದಲಾರದು. ಏಕೆಂದರೆ ಸಮಾಜದ ಪ್ರತಿಯೊಬ್ಬ ಸದಸ್ಯನಿಗೂ ಕಾನೂನಿನ ಮುಂದೆ ಸಮಾನತೆಯ ಹಕ್ಕು ಇರಲೇಬೇಕು ಮತ್ತು ಆಸ್ತಿಯಲ್ಲಿಯ ಹಕ್ಕು ಇರಬೇಕು. ಆದರೆ ಈ ವಿಷಯದ ಬಗೆಗೆ ಆಲಸ್ಯ ತೋರುವುದು ಸರಿಯಲ್ಲ. ಬೇರೆಯವರ ಭಾವನೆಗಳಿಗೆ ಗೌರವ ತೋರಿಸಬೇಕು ಆದರೆ ಸರ್ವಾಧಿಕಾರಿ ಅಭಿಪ್ರಾಯಕ್ಕಲ್ಲ.

ನಾವು ಸಂವಿಧಾನದ ರಚನೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಿದ ದಿನ ಮಾನ್ಯ ಕಾನೂನು ಸಚಿವರು ಹೀಗೆ ಹೇಳಿಕೆ ನೀಡಿದ್ದರು:

ಭಾರತದಂತಹ ಒಂದು ದೇಶದಲ್ಲಿ ಪ್ರಜಾಪ್ರಭುತ್ವ ಅನೇಕ ಶತಮಾನಗಳಿಂದ ಜಾರಿಯಲ್ಲಿರದೇ ಹೋದುದರಿಂದ ಈಗ ಅದೊಂದು ನೂತನ ವಿಷಯವಾಗಿದ್ದು, ಪ್ರಜಾಪ್ರಭುತ್ವದ ಹೆಸರಿನಲ್ಲಿ, ಸರ್ವಾಧಿಕಾರಕ್ಕೆ ಆಸ್ಪದ ನೀಡುವ ಅಪಾಯಕ್ಕೆ ಆಸ್ಪದವಿದೆ. ಏಕೆಂದರೆ ಅದು ಪ್ರಜಾಪ್ರಭುತ್ವದ ಸ್ವರೂಪವನ್ನು ಹೊಂದಿದ್ದರೂ ಸರ್ವಾಧಿಕಾರಕ್ಕೆ ಅವಕಾಶ ನೀಡುವುದು ಖಚಿತವಾದ ಅಂಶವಾಗಿದೆ. ಏನಾದರೂ ಅಪಾಯ ಒದಗಿದರೆ ಅದು ಈ ಸರ್ವಾಧಿಕಾರದಿಂದಲೇ ಅಧಿಕ ಎಂದು ಹೇಳಬಹುದು.

ಅವರ ಭಾಷಣವನ್ನು ಹೊಗಳುವೆ; ಆದರೆ ಅವರೇ ಹೇಳಿದಂತೆ, ಸದನದ ಸರ್ವಾಧಿಕಾರವನ್ನು ನಾವು ೩೬ ಕೋಟಿ ಜನತೆಯ ಮೇಲೆ ಹೇರುವುದು ಸೂಕ್ತವೇ? ಸಮಾಜವನ್ನು ವಿಕಾಸದತ್ತ ಮುಂದುವರಿಯಲು ಸನಾತನಿಗಳು ಬಿಡದೆ ಇರುವಂತೆ, ಅಲ್ಪಮತದ ಸರ್ವಾಧಿಕಾರಿಯಾದ ಸದನವು, ಬಹುಮತದ ಸಮಾಜದ

---

* ೧೯೫೧ನೇ ಫೆಬ್ರವರಿ ೬ರ ಸದನದ ಚರ್ಚೆ, ಸಂಪುಟ VIII, ಭಾಗ II ಪುಟಗಳು ೨೫೫೦–೫೫

ಮೇಲೆ ತನ್ನ ವಿಚಾರವನ್ನು ಹೇರುವುದು ಸರಿಯಲ್ಲ. ಆದುದರಿಂದ ಸುಧಾರಕರಿಗೂ, ಭಗಿನಿಯರಿಗೂ ಹೇಳುವುದಿಷ್ಟೇ ಯಾವುದೇ ಕಾರ್ಯಕ್ಕೆ ಅವಕಾಶವಿದೆ, ಕ್ಷೇತ್ರವಿದೆ. ಆದುದರಿಂದ ಸನಾತನಿಗಳ ವಿರೋಧ ಬಹುದಿನ ಇರಲಾರದು. ಹೀಗೆಂದ ಮಾತ್ರಕ್ಕೆ ಅವರು ಅಂದರೆ ಸುಧಾರಣೆವಾದಿಗಳು, ಆಕ್ರಮಣ ಮಾರ್ಗವನ್ನು ಅನುಸರಿಸಬೇಕೆಂದಿಲ್ಲ. ಸನಾತನಿಗಳ ಮೊಂಡುಮಾರ್ಗವನ್ನು ಅನುಸರಿಸುತ್ತಾರೆಂದು ನಾವೂ ಆ ಮಾರ್ಗವನ್ನು ಅನುಸರಿಸಬೇಕೆಂಬುದು ಸರಿಯಲ್ಲ. ಆದುದರಿಂದಲೇ ನನ್ನ ಸಮೂಹದವರೂ ಇದರಲ್ಲಿ ಭಾಗವಹಿಸಬೇಕಾಗಿದೆ.

ನಾನು ಹೇಳಬಹುದಾದರೆ, ನಮ್ಮ ಕಾನೂನು ಪದ್ಧತಿ, ಆಸ್ತಿ ಹಂಚಿಕೆಯು ಹೆಚ್ಚು ಪ್ರಜಾಸತ್ತಾತ್ಮಕ, ಸಮಾಜವಾದಿ ಅಷ್ಟೇ ಅಲ್ಲ ಸಮತಾವಾದಿಯಾಗಿದ್ದು, ಈಗ ಸದನದ ಮುಂದೆ ತಂದಿರುವ ವಿಧೇಯಕಕ್ಕಿಂತ ಉತ್ತಮವಾಗಿದೆ.

ನನಗೆ ತೋಚಿದಂತೆ, ಉಪನಿಬಂಧನೆ ಇನ್ನು ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯದಾಗಿ ೧೩ ಮತ್ತು ೧೪ ತಿದ್ದುಪಡಿಗಳು ಒಗ್ಗೂಡಿಸಿದ ಪಟ್ಟಿಯಲ್ಲಿ; ಹೆಚ್ಚು ವಿಸ್ತರಿಸಬೇಕು. ತಿದ್ದುಪಡಿ ನಂ. ೧೮ರ ವಿಸ್ತರಣೆಯನ್ನು ಕನಿಷ್ಠಗೊಳಿಸುವುದು. ಮೂರನೆಯ ತಿದ್ದುಪಡಿ ಎಂದರೆ, ವಿಧೇಯಕವನ್ನು ಅಂಗೀಕರಿಸುವರಿಗೆ ಮಾತ್ರ ಸೀಮಿತಗೊಳಿಸುವುದು. ಇದೇ ಜಸ್ವತ್‌ರಾಯ್ ಕಪೂರರ ತಿದ್ದುಪಡಿ. ಇದಕ್ಕೆ ಅಧಿಕ ಗಮನ ಹರಿಸಬೇಕು. ನಾವು ಗಮನಿಸಬೇಕಾದ ವಿಷಯ ಎಂದರೆ ಡಾ. ಅಂಬೇಡ್ಕರ್‌ರು ಮಂಡಿಸಿದ ವಿಧೇಯಕಕ್ಕಿಂತ, ಸುಧಾರಿಸಿದ ವಿಧೇಯಕದಿಂದ ನಮ್ಮ ಗುರಿಯನ್ನು ಸಾಧಿಸಲಾಗದೆ? ಆದುದರಿಂದ ಡಾ. ಅಂಬೇಡ್ಕರ್‌ರು ತಮಗೆ ಒಪ್ಪಿಗೆ ಇಲ್ಲದೆಹೋದರೂ ಕೆಲವು ರಿಯಾಯಿತಿಗಳನ್ನು ಸ್ವೀಕರಿಸಬೇಕು.

ಈ ಸದನದ ವಿಚಾರಕ್ಕೆ ನಾನು ಕೆಲವು ವಿಷಯಗಳನ್ನು ತರಬಯಸುವೆ. ಡಾ. ಅಂಬೇಡ್ಕರ್ ಅವರು ಮಂಡಿಸಿರುವ ತಿದ್ದುಪಡಿಗಳು, ಆಯ್ಕೆ ಸಮಿತಿಯು ಸಲ್ಲಿಸಿರುವ ವರದಿಗೆ ಸಂಪೂರ್ಣವಾಗಿವೆ; ಆದುದರಿಂದ ಈ ತಿದ್ದುಪಡಿಗಳನ್ನು ಪ್ರಕಟಿಸಿ ದೇಶದ ಜನತೆಯ ಅಭಿಪ್ರಾಯವನ್ನು ಪಡೆಯುವುದು ನ್ಯಾಯಸಮ್ಮತವಾದ ಮತ್ತು ಕ್ರಮಬದ್ಧವಾದ ವಿಚಾರವಾಗಿದೆ. ಆದರೆ ಅದಕ್ಕೆ ಸಮಯಾವಕಾಶವಿಲ್ಲ ಹಾಗೂ ಸದ್ಯದಲ್ಲಿಯೇ ಸದನವನ್ನು ವಿಸರ್ಜಿಸುವಿರಿ, ಆದುದರಿಂದ ಈ ಅವಕಾಶ ಕೊನೆಯದಾಗಬಹುದು, ಏಕೆಂದರೆ ಇಂದಿನ ಸಮರ ಪರಿಸ್ಥಿತಿಯೇ ಹಾಗಿದೆ. ಇದರಿಂದಾಗಿ ನಾವು ಮುಂದಿನ ಅನೇಕ ತಿಂಗಳು ಕಾಯಬೇಕಾದ ಪರಿಸ್ಥಿತಿ ಉದ್ಭವಿಸಲೂಬಹುದು. ಆದುದರಿಂದ ನನ್ನ ಕೋರಿಕೆಯಂತೆ, ಸುಧಾರಣೆ ಬಯಸುವವರು ಹಾಗೂ ಸ್ತ್ರೀ ಸದಸ್ಯರು ಸಂಪ್ರದಾಯವಾದಿಗಳ ಸವಾಲನ್ನು ಈಗಲೇ ಏಕೆ ಎದುರಿಸಬಾರದು? ಶ್ರೀ ಜಸ್ವತ್‌ರಾಯ್ ಅವರ ತಿದ್ದುಪಡಿಯಂತೆ ಈ ವಿಧೇಯಕದ ಬಗ್ಗೆ ಸಹಕರಿಸಿ ತಮ್ಮ ಅಂಗೀಕಾರವನ್ನು ಎಷ್ಟು ಸದಸ್ಯರು ನೀಡುವರು? ಇದಕ್ಕೆ ಚುನಾವಣೆಗಿಂತ ಉತ್ತಮವಾದ ಬೇರೆ ಅವಕಾಶವಿಲ್ಲ. ಏಕೆಂದರೆ ದೇಶದ ಸಮಸ್ತ ವಯಸ್ಕರೂ, ಮತಗಟ್ಟೆಗೆ ಬಂದೇ ಬರುತ್ತಾರೆ. ಈ ಸಂದರ್ಭದಲ್ಲಿ ಮತಗಟ್ಟೆಯಲ್ಲಿ ಒಂದು ಪುಸ್ತಕವನ್ನು ಇರಿಸಿ ಹಿಂದೂಕೋಡ್ ಬಿಲ್ ಬಗೆಗೆ ಜನತೆಯ ಅಭಿಪ್ರಾಯವನ್ನು ಸಂಗ್ರಹಿಸಬಹುದಲ್ಲವೆ? ನಂತರ ನೀವು ಸಂಪ್ರದಾಯವಾದಿಗಳಿಗೆ, ಜನತೆಯು ಸುಧಾರಣೆಯನ್ನು ಒಪ್ಪಿದೆ, ಆದುದರಿಂದ ಸಂಪ್ರದಾಯ ವಾದಕ್ಕೆ ಸಮರ್ಥನೆ ದೊರೆತಿಲ್ಲ. ಆದರೆ ನೀವು ಈ ಸೂಚನೆಗೆ ಒಪ್ಪಲಾರಿರಿ. ನೀವು ಗಂಭೀರವಾಗಿ ಜನತೆಯ ಮನವೊಲಿಸದಿರುವಾಗ, ನಿಮ್ಮ ಅಭಿಪ್ರಾಯವನ್ನು ಕಡ್ಡಾಯವಾಗಿ ಈ ಸದನದ ಸದಸ್ಯರ ಮೇಲೆ ಏಕೆ ಒತ್ತಾಯಿಸುವಿರಿ?

ಆದುದರಿಂದ ಮಾನ್ಯ ಕಾನೂನು ಸಚಿವರಿಗೆ ನನ್ನ ಸಲಹೆ ಎಂದರೆ, ಶ್ರೀ ಜಸ್ವತ್ ರಾಯ್ ಅವರ

ಸಲಹೆಯನ್ನು ಸಂಪೂರ್ಣವಾಗಿ ಅಂಗೀಕರಿಸಿರಿ ಅಥವಾ ಷರೀಯತ್ ವಿಧೇಯಕದ ಮಾದರಿಯಂತೆ, ಎಲ್ಲರಿಗೂ ಈ ವಿಧೇಯಕ ಅನ್ವಯಿಸುವಂತೆ ಹಾಗೂ ಕೆಲವು ಅಂಶಗಳನ್ನು ಕಾದಿರಿಸಿ, ಎಲ್ಲರೂ ನೋಂದಾಯಿಸುವಂತೆ ಆಗ್ರಹಿಸಿರಿ. ಎರಡನೆಯ ಸಲಹೆ ಎಂದರೆ.....

**ಶ್ರೀ ಜೆ.ಆರ್. ಕಪೂರ್ :** ಆ ಅಂಶಗಳೇನು ಎಂಬುದನ್ನು ತಿಳಿಸುವಿರಾ?

**ಶ್ರೀ ಹುಸೇನ್ ಇಮಾಮ್ :** ಈ ವಿಧೇಯಕದ ಕೆಲವು ಅಂಶಗಳ ಬಗ್ಗೆ ಪ್ರಬಲ ವಿರೋಧ ವ್ಯಕ್ತವಾಗಿದೆ. ಅದರಲ್ಲಿ ಮಗಳಿಗೆ ಆಸ್ತಿ ನೀಡುವಲ್ಲಿ ತಮ್ಮಿಂದ ವಿರೋಧ ವ್ಯಕ್ತವಾಗಿದೆ. ಆದುದರಿಂದ, ಈ ಭಾಗವು ಎಲ್ಲರಿಗೂ ಅನ್ವಯಿಸಬಾರದೆಂಬ ಉದ್ದೇಶ ತಮಗಿದ್ದಲ್ಲಿ ಅಂಥ ಒಂದು ಸ್ವರೂಪದ ಸೂಚನೆಯನ್ನು ತಾವು ಪ್ರಕರಣ IVರಲ್ಲಿ ಯಾರು ಈ ವಿಧೇಯಕವನ್ನು ಅಂಗೀಕರಿಸದೇ ಇರುವರೋ ಅವರಿಗೆ ಬೇರೆ ಆಸ್ಪದ ಕಲ್ಪಿಸಿಕೊಡಿ. ನಾನು ಸೂಚಿಸಬಯಸುವುದೇನೆಂದರೆ, ಆಸ್ತಿಯ ಹಂಚಿಕೆಯಲ್ಲಿ ಡಾ. ಅಂಬೇಡ್ಕರ್‌ರು ಸೂಚಿಸಿದ ತಿದ್ದುಪಡಿಯೂ ಅಪಾಯದಿಂದ ಮುಕ್ತವಾಗಿಲ್ಲ. ನನ್ನ ಮಿತ್ರ ಪಂಡಿತ ಠಾಕೂರದಾಸ ಅವರ ಸಲಹೆಯಂತೆ ಅವಿವಾಹಿತ ಪುತ್ರಿಯರಿಗೆ ಮಾತ್ರ ಆಸ್ತಿಯಲ್ಲಿ ಪಾಲು ನೀಡಬಹುದು, ಅವರು ವಿವಾಹವಾದಾಗ ಅವರಿಗೆ ತನ್ನ ಪತಿಯ ಆಸ್ತಿಯಲ್ಲಿ ಪಾಲು ನೀಡಬೇಕು, ತಂದೆಯ ಆಸ್ತಿಯಲ್ಲಿ ಅಲ್ಲ. ಆದರೆ ನೀವು ವಿವಾಹ ವಿಚ್ಛೇದನಕ್ಕೆ ಗುರಿಯಾದ ಸ್ತ್ರೀಯರನ್ನು ಮರೆಯಲಾಗದು. ಈ ದಿಶೆಯಲ್ಲಿ ನಮ್ಮ ಆಧುನಿಕ ಮನು ಅವರ ಅಭಿಪ್ರಾಯವೇನು? ಅವರು ಈ ಬಗೆಗೆ ಯಾವ ಸೂಚನೆಯನ್ನೇ ನೀಡಿಲ್ಲ. ಅವರು ಕೇವಲ ಕುವರಿಯರಿಗೆ ಮಾತ್ರ ಅರ್ಧ ಪಾಲು ವಿವಾಹವಾದ ನಂತರ ಕಾಲು ಭಾಗ ಆಸ್ತಿಗೆ ಹಕ್ಕನ್ನು ನೀಡಿರುವರು. ಪಂಡಿತ ಠಾಕೂರ ದಾಸಜೀ ಅವರು ವಿಚ್ಛೇದಿತ ಸ್ತ್ರೀಗೆ ಯಾವ ಪಾಲನ್ನು ನೀಡಿಲ್ಲ. ಆದರೆ ಅಂಬೇಡ್ಕರ್‌ರ ಸೂತ್ರದಲ್ಲಿ ಅವಳಿಗೆ ಕಾಲು ಭಾಗವಿದೆ. ಠಾಕೂರದಾಸಜೀ ಅದನ್ನೂ ನೀಡಲು ನಿರಾಕರಿಸುವರು. ಏಕೆಂದರೆ ವಿವಾಹದ ನಂತರ ಯಾವ ಪಾಲೂ ಇಲ್ಲ.

**ಪಂಡಿತ ಠಾಕೂರದಾಸ ಭಾರ್ಗವ :** ನನ್ನ ಪ್ರಕಾರ, ವಿವಾಹವಾದ ನಂತರ ಅವಳಿಗೆ ಗಂಡನ ಆಸ್ತಿಯಲ್ಲಿ ಪಾಲು ದೊರೆಯಬೇಕು. ತಂದೆಯ ಆಸ್ತಿಯಲ್ಲಿ ಅಲ್ಲ. ಸರ್ ಹುಸೇನ್ ಇಮಾಮ, ಅವಳು ಮದುವೆಯಾಗದೇ ಹೋದರೆ ? ಆದುದರಿಂದ ಅಂಬೇಡ್ಕರ್‌ರ ಸಲಹೆಯಲ್ಲಿ ಈ ಅಪಾಯವಿದೆ; ಏಕೆಂದರೆ ಆಸ್ತಿಯಲ್ಲಿನ ಹಕ್ಕು ಅರ್ಧದಿಂದ, ಕಾಲುಭಾಗಕ್ಕೆ ಇಳಿದು ಹೋಗುವುದರಿಂದ, ಶ್ರೀಮಂತ ಮನೆಯ ಹುಡುಗಿಯರು ಮದುವೆಯಾಗದೇ ಇರಲು ಅಪೇಕ್ಷಿಸಬಹುದು. ಇದು ಅನೈತಿಕತೆಗೆ ಆಮಂತ್ರಣ ನೀಡಿದಂತೆ.

**ಡಾ. ಅಂಬೇಡ್ಕರ್ :** ಶ್ರೀಮಂತರ ಬಗೆಗೆ ಏಕೆ ಚಿಂತಿಸುವಿರಿ?

**ಶ್ರೀ ಹುಸೇನ್ ಇಮಾಮ್ :** ನೀವು ವ್ಯವಸ್ಥೆಯನ್ನು ಬದಲಾಯಿಸದೇ ಮತ್ತು ಮಾಸ್ಕೋ ವಿಕಿಂಗ್ ಮಾರ್ಗವನ್ನು ನನ್ನ ಮಿತ್ರರಾದ ಬ್ರಿಜೇಶ್ವರ ಪ್ರಸಾದರಂತೆ, ಅನುಸರಿಸುವುದಾದರೆ, ಮಾತ್ರ ನೀವು ಐಶ್ವರ್ಯ ಹಾಗೂ ಪೂಂಜಿವಾದವನ್ನು ಮರೆಯಬಹುದು. ಆದರೆ ನಾವಿನ್ನೂ ಆ ಮಾರ್ಗಕ್ಕೆ ಬಂದಿಲ್ಲ. ಹೀಗಾಗಿ, ಹಣವಂತರ ಬಗೆಗೂ ಚಿಂತನೆ ಮಾಡಲೇಬೇಕು.

ಪ್ರಜಾಸತ್ತಾತ್ಮಕವಾದಿಯಾಗಿರುವ ಡಾ. ಅಂಬೇಡ್ಕರ್‌ರು, ಮತದಾರರ ಬಗ್ಗೆ ತಾತ್ಸಾರ ತೋರಿರುವುದನ್ನು ಕಂಡು ನನಗೆ ತುಂಬಾ ಆಶ್ಚರ್ಯವಾಗಿದೆ. ಮತದಾರರು ಅನಕ್ಷರಕುಕ್ಷಿಗಳಾಗಿದ್ದರೂ, ಅವರೇ ಪ್ರಜಾಪ್ರಭುತ್ವದ ಒರೆಗಲ್ಲು. ಪ್ರಜಾಪ್ರಭುತ್ವದ ಭದ್ರಬುನಾದಿ ಅವರೇ. ಅವರೇ ಇರದೇ ಹೋದರೆ ಪ್ರಜಾಪ್ರಭುತ್ವ, ಅರ್ಥಹೀನ. ನಶ್ವರ, ಕೇವಲ ಬೂಟಾಟಿಕೆ ಏಕೆಂದರೆ ಹಿಟ್ಲರ್ ಮಾಡಿದ್ದೇನು? ಅವನು ಚುನಾವಣೆಯನ್ನು ಜರುಗಿಸಿದ, ಆದರೆ ಅದೊಂದು ಕೇವಲ ತಾಂತ್ರಿಕ ಚುನಾವಣೆ, ಸರ್ವಾಧಿಕಾರಕ್ಕೆ ಎಡೆ ಮಾಡಿಕೊಟ್ಟಿತು. ಅದೊಂದು

ಬೂಟಾಟಿಕೆ ವ್ಯವಸ್ಥೆ, ಸರ್ವಾಧಿಕಾರಿಯ ಕೈಗೊಂಬೆ. ಇಂದು ಸದನದ ಅಂಗೀಕಾರವೇ ಅಂತಿಮ ಎಂದು ಭಾವಿಸಿದಲ್ಲಿ, ಅದೊಂದು ಸರ್ವಾಧಿಕಾರಿ ಕ್ರಮ ಎಂದೇ ಹೇಳಬೇಕಾಗುತ್ತದೆ. ಸದನದ ಅಧಿಕಾರದ ಬಗೆಗೆ ನಾನು ಟೀಕಿಸುತ್ತಿಲ್ಲ. ಆದರೆ ಸಾರ್ವಜನಿಕ ಅಭಿಪ್ರಾಯವನ್ನೇ ಅರಿಯದೇ ಸದನದ ನಿರ್ಣಯವನ್ನು ಹೇರುವುದನ್ನು ಮಾತ್ರ ಒಪ್ಪಲಾರೆ. ಈ ಕ್ರಮ ಯಾವ ಸರ್ವಾಧಿಕಾರಿ ಕ್ರಮಕ್ಕೂ ಕಡಿಮೆಯಿಲ್ಲ ಎಂದೇ ಹೇಳಬಯಸುವೆ.

ನಾನು ಮತ್ತೊಮ್ಮೆ ಹೇಳುವುದೇನೆಂದರೆ, ಈ ಸದನಕ್ಕೆ ಅಧಿಕಾರವಿಲ್ಲ ಎಂದು ಹೇಳಲಾರೆ, ಏಕೆಂದರೆ ನಾನು ೨೦ವರ್ಷ ಕೇಂದ್ರ ಶಾಸನಸಭೆಯ ಸದಸ್ಯನಾಗಿದ್ದೆ. ಆದರೆ ನಾನು ಹೇಳುವುದಿಷ್ಟೇ, ಈ ಬಗೆಯ ಮಹತ್ವದ ವಿಷಯಗಳನ್ನು ಚುನಾಯಿತ ಸದಸ್ಯರಿಗೆ ಬಿಟ್ಟುಕೊಡುವುದು ಸರಿಯಾದ ಕ್ರಮ. ನಾವು ಪ್ರಜಾಪ್ರಭುತ್ವದ ಬಗೆಗೆ ಕನಿಷ್ಠ ಕಾಳಜಿ ಹೊಂದಿದ್ದರೆ, ಅದನ್ನು ಚುನಾವಣೆಯ ಮೂಲಕ ಜಾರಿಯಲ್ಲಿ ಬರುವ ಸಂಸತ್ತಿಗೇ ಬಿಡಬೇಕು ; ಏಕೆಂದರೆ ಮತದಾತರೇ ನಮ್ಮ ಹಣೆಬರಹವನ್ನು ನಿರ್ಣಯಿಸಬಲ್ಲ ನಿರ್ಣಯಕಾರರು. ಈ ವಿಧೇಯಕವು ಎಲ್ಲರ ಆಸ್ತಿಗೆ ಸಂಬಂಧಿಸಿದೆ ಹಾಗೂ ಆಯ್ಕೆ ಸಮಿತಿಯ ನಿರ್ಣಯಕ್ಕೆ ವಿರೋಧವಾಗಿದೆ ಮತ್ತು ಸಂವಿಧಾನದಲ್ಲಿ ಯಾವ ಬದಲಾವಣೆಗಳಿವೆ. ಈ ವಿಧೇಯಕದಿಂದ ಭೂ ಆಸ್ತಿಗೆ ಧಕ್ಕೆ ಬರುತ್ತದೆ. ಅಲ್ಲದೆ ಇದು ಕೇಂದ್ರ ಸರ್ಕಾರದ ವಿಷಯವಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿಯೇ, ನಾನು ಹೇಳುವುದೇನೆಂದರೆ, ಆಯ್ಕೆ ಸಮಿತಿಯ ಪರಿಶೀಲನೆಗೆ ಕೂಡಾ ಆಸ್ಪದ ನೀಡದೆ, ಅಂಗೀಕರಿಸುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವೆಂದೆ ಹೇಳುವೆ. ಈಗ ಭೂಸ್ವಾಮ್ಯ ಕೇಂದ್ರದಡಿಯಲ್ಲಿದೆ ಹೀಗಾಗಿ ಎಲ್ಲರಿಗೂ ಈ ವಿಧೇಯಕದ ಬಿಸಿ ತಟ್ಟುತ್ತದೆ. ಆದುದರಿಂದ ನಾವು ನೇರವಾಗಿ ಈ ಮಸೂದೆಗೆ ಬೆಂಬಲ ನೀಡುವ ಮುನ್ನ ಇದನ್ನು ಆಯ್ಕೆ ಸಮಿತಿಗೆ ಕಳಿಸೋಣ. ಇದೂ ನಿಮಗೆ ಬೇಡವಾದಲ್ಲಿ, ಮಾನವಂತರಾದ ನಾವು ಜನತೆಯ ಆಶೀರ್ವಾದವನ್ನಾದರೂ ಚುನಾವಣೆಯ ಮುಖಾಂತರ ಪಡೆಯೋಣ. ಈ ದಿಶೆಯಲ್ಲಿ ಜಸ್ಪತ್‌ರಾಯ್ ಅವರ ಸಲಹೆ ಸೂಕ್ತವಾದದ್ದು. ಅದನ್ನಾದರೂ ಸರ್ಕಾರ (ಅಧ್ಯಕ್ಷರು ಪೀಠದಲ್ಲಿ) ಪರಿಶೀಲಿಸಿ. ಸರ್ಕಾರಕ್ಕೆ ಸಾಕಷ್ಟು ಸಮಯಾವಕಾಶವಿದೆ ಆದುದರಿಂದ ತರಾತುರಿ ಕ್ರಮ ಕೈಬಿಟ್ಟು ಸಮಾಧಾನದಿಂದ ಪರಿಶೀಲಿಸಿ ಎಂದೇ ಕೋರುವೆ.

**ಮಾನ್ಯ ಸಭಾಧ್ಯಕ್ಷರು** : ಇನ್ನೊಂದು ಅರ್ಧಗಂಟೆ ಚರ್ಚೆ ಮುಂದುವರಿಯಬಹುದು.

**ಶ್ರೀ ಗಾಡಗೀಳ್** : ಒಂದು ಅರಿಕೆ. ಸದನದ ಸದಸ್ಯರು ನಗರದಲ್ಲಿ ನಡೆದ ಒಂದು ಘಟನೆಯ ಬಗೆಗೆ ಚಾಂದನೀಚೌಕದ ವಿವರಗಳನ್ನು ಮುಂಜಾನೆಯೇ ತಿಳಿಯಬಯಸಿದ್ದರು.

**ಮಾನ್ಯ ಸಭಾಧ್ಯಕ್ಷರು** : ಅದನ್ನು ೫–೩೦ರ ನಂತರ ತೆಗೆದುಕೊಳ್ಳಬಹುದು.

## *ಹಿಂದೂ ಕೋಡ್ – ಮುಂದುವರಿಕೆ

ಉಪನಿಬಂಧನೆ ೨–ಸಂಹಿತೆಯನ್ನು ಅನ್ವಯಿಸುವುದು – (ಮುಂದುವರಿದಿದೆ)

**ಶ್ರೀ ನಜೀರುದ್ದೀನ್ ಅಹ್ಮದ್ (ಪ.ಬಂ.)** : ನಾನೊಂದು ಕ್ರಿಯಾಲೋಪದ ಬಗ್ಗೆ ಹೇಳುತ್ತೇನೆ.

**ಶ್ರೀಮತಿ ದುರ್ಗಾಬಾಯಿ (ಮದ್ರಾಸ್)** : ಯಾವ ವಿಷಯದ ಬಗ್ಗೆ ಮಾನ್ಯ ಸದಸ್ಯರು ಕ್ರಿಯಾ ಲೋಪವೆತ್ತ ಬಯಸುತ್ತಾರೆ ಎಂದು ತಿಳಿಯಬಯಸುವೆ? ಸದನದ ಮುಂದೆ ಬೇರೆ ಯಾವ ವಿಷಯವೂ

---

* ೧೯೫೧ರ ಸೆಪ್ಟಂಬರ್ ೧೭ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೬೭೪–೨೭೩೮

ಇಲ್ಲದೆ ಇರುವುದರಿಂದ ಸದಸ್ಯರು ಗೊತ್ತುವಳಿ ಮಂಡನೆಯ ಮೂಲಕ ಮಂಡಿಸಬೇಕಲ್ಲವೆ?

**ಶ್ರೀ ಸೋಂಧಿ :** (ಪಂಜಾಬ್), ತಾವು ಯಾರು? ತಾವೇನೂ ಪೀಠದಲ್ಲಿಲ್ಲ.

**ಶ್ರೀಮತಿ ದುರ್ಗಾಬಾಯಿ :** ಮೊದಲು ಗೊತ್ತುವಳಿ ಮಂಡಿಸಬೇಕು. (ಗೊಂದಲ).

**ಉಪಾಧ್ಯಕ್ಷರು :** ಈಗ ಸದನದ ಮುಂದಿರುವ ವಿಷಯ, ಆಯ್ಕೆ ಸಮಿತಿಯ ಉಪನಿಬಂಧನೆ ೨ ಹಿಂದೂ ಕೋಡ್ ಬಿಲ್ ಕಾನೂನುಗಳನ್ನು ಏಕೀಕೃತಗೊಳಿಸುವ.....

**ಶ್ರೀ ಆರ್.ಕೆ. ಚೌಧರಿ (ಅಸ್ಸಾಂ) :** ಸರ್ ಏನೇ ವಿಷಯದ ಕುರಿತು ಸದನದಲ್ಲಿ ಚರ್ಚೆಯಾದರೂ ಅದು ಉದ್ವೇಗಕ್ಕೆ ಆಸ್ಪದ ನೀಡಬಾರದು ಎಂದೇ ನಿಮ್ಮ ದ್ವಾರಾ ಕೋರುವೆ. ಶ್ರೀಮತಿ ದುರ್ಗಾಬಾಯಿಯವರ ವರ್ತನೆಯಿಂದ ನಾನು ಈ ವಿಷಯ ಅನಿವಾರ್ಯವಾಗಿ ಪ್ರಸ್ತಾಪಿಸಬೇಕಾಯಿತು (ಗೊಂದಲ)

ಮುಂದುವರಿದು ನಿನ್ನೆಯ ಸುದ್ದಿ ಮಾಧ್ಯಮದ ಬಗೆಗೆ ಸರಕಾರ ಗಮನಹರಿಸಿದೆಯೆ? ವಿಧೇಯಕ ಸದನ ಅಂಗೀಕರಿಸಿದರೂ, ಅಧ್ಯಕ್ಷರು ತಮ್ಮ ಅಂಗೀಕಾರ (ಸದನದಲ್ಲಿ ಗೊಂದಲ).

**ಉಪಾಧ್ಯಕ್ಷರು :** ಸದ್ದು, ಸದ್ದು.

**ಶ್ರೀಮತಿ ದುರ್ಗಾಬಾಯಿ :** ಮಾನ್ಯ ಸದಸ್ಯರಿಗೆ ನಾನು ಉತ್ತರಿಸಬಹುದೆ?

**ಉಪಾಧ್ಯಕ್ಷರು :** ಸದ್ದು, ಸದ್ದು, ಮಾನ್ಯ ಸದಸ್ಯರು ಬೇರೊಬ್ಬರಿಗೆ ಉದ್ವೇಗಕ್ಕೊಳಗಾಗಬಾರದು ಎಂದೇ ಹೇಳಿ ತಾವು ಉದ್ವೇಗಕ್ಕೆ ಗುರಿಯಾಗಬಾರದು. ಒಬ್ಬರು ಬಲಗಡೆಯಾದರೆ ಮತ್ತೊಬ್ಬರು ಎಡಗಡೆಯವರು.

ಆದರೆ ಯಾರೂ ರಾಷ್ಟ್ರಪತಿಯವರ ಹೆಸರಿನಲ್ಲಿ ವಿಧೇಯಕವನ್ನು ಪ್ರಚಾರ ಮಾಡಲಾಗದು. ರೂಲ್ ೧೫೫ ರಾಷ್ಟ್ರಪತಿಯವರ ಹೆಸರನ್ನು ಸೂಚಿಸಬಾರದೆಂದೇ ತಿಳಿಸುತ್ತದೆ. ಆದುದರಿಂದ ವಿಧೇಯಕದ ಪ್ರಚಾರದಲ್ಲಿ ರಾಷ್ಟ್ರಪತಿಯವರ ಹೆಸರನ್ನು ಪ್ರಯೋಗಿಸಲಾಗದು.

**ಶ್ರೀ ಕಾಮತ್ (ಮ.ಪ್ರ) :** ಪಾಇಂಟ್ ಆಫ್ ಆರ್ಡರಿನ ಮೇಲೆ ಅಲ್ಲ ಹಿಂದೂತ್ವದ ಬಗ್ಗೆ ಹಿಂದೂ ಕೋಡ್‌ನಂತಹ ಮಹತ್ವ ವಿಷಯದ ಬಗೆಗೆ ಸದನದಲ್ಲಿ ಚರ್ಚೆ ನಡೆದಿರುವಾಗ ಕಾನೂನು ಸಚಿವರು ತಮ್ಮ ಮುಂದೆ ಅಪಾರ ಗಾತ್ರದ ಬುಟ್ಟಿಯೊಂದನ್ನು ಇಟ್ಟುಕೊಂಡಿರುವುದು ಸೂಕ್ತವೇ?

**ಶ್ರೀ ಆರ್.ಕೆ. ಚೌಧರಿ :** ಗಂಭೀರವಾದ ವಿಷಯು ಸಭೆಯಲ್ಲಿ ಚರ್ಚೆಯಾಗುವಾಗ, ಈ ವಿಚಾರ ಸಲ್ಲದು. ನಾನು ರಾಷ್ಟ್ರಪತಿಯವರು ಈ ವಿಧೇಯಕ ಕುರಿತಂತೆ ಸದನವನ್ನುದ್ದೇಶಿಸಿ ಮಾತನಾಡುವರೇ? ತಿಳಿಯಬಯಸುವೆ.

**ಉಪಾಧ್ಯಕ್ಷರು :** ಅಧ್ಯಕ್ಷರ ಬಗೆಗೆ ವರ್ತಮಾನ ಪತ್ರಿಕೆಯಲ್ಲಿ ಕಂಡು ಬಂದ ವಿಷಯಕ್ಕಿಂತ ಹೆಚ್ಚೇನೂ ತಿಳಿಯದು. ನಜೀರುದ್ದೀನ್ ನೀವು ಏನೋ ಕ್ರಿಯೋಲೋಪದ ಬಗೆಗೆ ಹೇಳುತ್ತಿದ್ದೀರಿ...?

**ಶ್ರೀ ನಜೀರುದ್ದೀನ್ ಆಹಮದ್ :** ನಿಂತರು.....

**ಸರದಾರ್ ಬಿ.ಎಸ್. ಮಾನ್ (ಪಂಜಾಬ್) :** ಮಾನ್ಯ ಸದಸ್ಯರು ಕ್ರಿಯಾಲೋಪದ ಬಗ್ಗೆ ಮಾತನಾಡುವ ಮುನ್ನ, ತಾವು ಚರ್ಚೆ ನಡೆದ ಸಮಯದಲ್ಲಿ ಹಲವು ಸದಸ್ಯರಿಗೆ ರಿಯಾಯಿತಿ ನೀಡುವ ಭರವಸೆ ನೀಡಿದ್ದೀರಿ. ಆದರೆ ಈ ಚರ್ಚೆಯಲ್ಲಿ ಸ್ತ್ರೀ ಸದಸ್ಯರು ಹಾಗೂ ಪುರುಷರು ಎಂಬ ಭೇದಭಾವನೆಯನ್ನು ತೋರಬಾರದೆಂದೇ ನನ್ನ ಮನವಿ. ಏಕೆಂದರೆ ಈ ಹೊತ್ತಿಗೆ ಅವರು ರಿಯಾಯಿತಿ ಅಥವಾ ಹಿಂದೂ ಕೋಡ್ ಬೇಕೆ ಎಂದು ನಿರ್ಧರಿಸಬೇಕು (ಗೊಂದಲ).

**ಶ್ರೀಮತಿ ದುರ್ಗಾಬಾಯಿ :** ಈ ಬಗ್ಗೆ ಪೀಠವು ನಿರ್ಣಯ ನೀಡಬೇಕೆಂದು ಕೋರುವೆ, ನಿಜ

ಹಲವಾರು ರಿಯಾಯಿತಿಗಳನ್ನು ನೀಡಲಾಗುವುದು ಎಂದೇ ಹೇಳಲಾಗಿದ್ದರೂ, ಅದನ್ನು ಮಹಿಳಾ ಸದಸ್ಯರು ಪ್ರತಿಭಟಿಸಿ, ಯಾವ ಬಗೆಯ ರಿಯಾಯಿತಿ ಬೇಡವೆಂದೂ ಹೇಳಿದ್ದಾರೆ. ಆದುದರಿಂದ ಮಾನ್ಯ ಸದಸ್ಯರ ಹೇಳಿಕೆ ಸತ್ಯಕ್ಕೆ ದೂರ ಹಾಗೂ ತಪ್ಪು.

**ಉಪಾಧ್ಯಕ್ಷರು :** ನನಗೆ ತಿಳಿದಂತೆ, ಸ್ತ್ರೀ ಸದಸ್ಯರು ರಿಯಾಯಿತಿಗಳನ್ನು ಕೋರಿಲ್ಲ. ಅದನ್ನು ಅವರಿಗೆ ನೀಡುವುದರಿಂದ, ಅವರ ಘನತೆಗೆ ಅಗೌರವ ಸೂಚಿಸಬೇಕೆಂಬ ಮನೋಭಾವನೆ ನನ್ನದಾಗಿಲ್ಲ. ಆದುದರಿಂದ ನನ್ನ ಹೇಳಿಕೆಯನ್ನು ಅಪಾರ್ಥಗೊಳಿಸಬಾರದು. ನನಗೆ ತಿಳಿದಂತೆ ಸದನದ ಯಾವ ಸ್ತ್ರೀ ಸದಸ್ಯರೂ ಈ ಬಗೆಗೆ ಹೇಳಿಲ್ಲ. ನನಗೂ ಗಂಡು–ಹೆಣ್ಣು ಮಕ್ಕಳಿದ್ದಾರೆ, ನಾನು ನ್ಯಾಯಯುತವಾಗಿ ನಡೆಯುವೆ. ಈಗ ಕ್ರಿಯಾಲೋಪವೇನು? ಈ ಕ್ರಿಯಾಲೋಪಗಳ ಬಗೆಗೆ ಸದಸ್ಯರು ಯಾವುದೇ ದೀರ್ಘ ಭಾಷಣ ಮಾಡದೆ ಚುಟುಕಾಗಿ ಹೇಳಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಕ್ರಿಯಾಲೋಪವನ್ನು ಚುಟುಕಾಗಿಯೇ ವಿವರಿಸುವೆ.

**ಉಪಾಧ್ಯಕ್ಷರು :** ನನಗೆ ಅರ್ಥವಾಗದೇ ಹೋದಲ್ಲಿ ವಿವರಿಸುವಂತೆ ಕೋರುವೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನನ್ನ ಕ್ರಿಯಾಲೋಪದ ವಿಷಯವೆಂದರೆ ಈ ವಿಧೇಯಕವು ಮುಂಚಿನ ಭಾರತೀಯ ಸಂಸ್ಥಾನಗಳಿಗೆ ಹೇಗೆ ಅನ್ವಯಿಸುತ್ತದೆ? ಏಕೆಂದರೆ ಅವುಗಳಲ್ಲಿ ಹಲವನ್ನು ಬಿ ರಾಜ್ಯಗಳೆಂದೂ, ಮತ್ತೆ ಕೆಲವನ್ನು ಎ ರಾಜ್ಯಗಳೊಂದಿಗೆ ವಿಲೀನಿಕರಣಗೊಳಿಸಿದೆ. ಈ ಬಗೆಯ ಪ್ರಶ್ನೆ ನನಗೆ ತೋಚಿದೆ.

**ಪಂಡಿತ ಮೈತ್ರ (ಪಂ.ಬಂ.) :** ಅಂದರೆ ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಈ ವಿಧೇಯಕವನ್ನು ಅವರಿಗಾಗಿ ಪ್ರಕಟಿಸಿಲ್ಲವೆಂದೇ?

**ಶ್ರೀ ನಜೀರುದ್ದೀನ್ ಅಹ್ಮದ್ :** ಹೌದು ಅವರಿಗೆಂದೇ ಈ ವಿಧೇಯಕವನ್ನು ಪ್ರಕಟಿಸಿಲ್ಲ.

**ಉಪಾಧ್ಯಕ್ಷರು :** ಅವರು ಎತ್ತಿದ ಕ್ರಿಯಾಲೋಪದ ವಿಷಯ ಈಗ ನನಗೆ ಅರ್ಥವಾಗಿದೆ. (೧೦ ಗಂಟೆ).

**ಶ್ರೀ ನಜೀರುದ್ದೀನ್ ಅಹ್ಮದ್ :** ನನಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

**ಉಪಾಧ್ಯಕ್ಷರು :** "ಹಲವು ವಿಷಯ" ಈ ಕ್ರಿಯಾಲೋಪಕ್ಕೆ ಸಂಬಂಧಿಸಿದಂತೆ ಏನೂ ವಿಷಯ ಬೇಕಾಗಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ಬಗ್ಗೆ ಕೆಲವು ನಿರ್ಣಯಗಳನ್ನು ತಾವು ನೀಡಿರುವಿರಿ. ಅದರೆಡೆಗೆ ನಿಮ್ಮ ಗಮನ ಸೆಳೆಯಬಯಸುವೆ. ಶ್ರೀ ಸಾರ್‌ವಾಟೆಯವರು ದಿನಾಂಕ ೨೪ ಫೆಬ್ರವರಿ ೧೯೪೯....

**ಉಪಾಧ್ಯಕ್ಷರು :** ಸದನ ಈಗ ವಿಧೇಯಕದ ಉಪ ನಿಬಂಧನೆ ೨ ಕೈಗೆತ್ತಿಕೊಂಡಿರುವುದರಿಂದ ತಮ್ಮ ಹೇಳಿಕೆಯ ಔಚಿತ್ಯವೇನು?

**ಶ್ರೀ ನಜೀರುದ್ದೀನ್ ಅಹ್ಮದ್ :** ಹೌದು ಉಪನಿಬಂಧನೆ ೨ ಹಲವು ಭಾರತೀಯ ಸಂಸ್ಥಾನಗಳಿಗೆ ಅನ್ವಯಿಸುತ್ತದೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು ಉಪನಿಬಂಧನೆಯ ಕಾರ್ಯಾಚರಣೆಯ ವ್ಯಾಪ್ತಿಯನ್ನು ಅರಿಯಬೇಕು. ಅದು ಹೀಗಿದೆ.

"ಇದು ಭಾರತದ ಎಲ್ಲಾ ಪ್ರಾಂತಗಳಿಗೂ ಅನ್ವಯಿಸಬಹುದು"

ಕ್ರಿಯಾಲೋಪ ಸೂಕ್ತವಾಗಿರಬಹುದು ಏಕೆಂದರೆ ಈ ಉಪನಿಬಂಧನೆಯನ್ನು ಅನಿರ್ಬಂಧವಾಗಿ ಅಥವಾ ಮೂಲದಲ್ಲಿ ತಿಳಿಸಿದಂತೆ, ಇದು ಸಂವಿಧಾನಕ್ಕೆ ಅನ್ವಯಿಸುವುದಿಲ್ಲವೇ. ಆದರೆ ಈ ವಿಷಯದ ಪರ

ಹಾಗೂ ವಿರೋಧ ಅಭಿಪ್ರಾಯಗಳನ್ನು ಈಗ ಸಾಮಾನ್ಯ ಚರ್ಚೆಯಲ್ಲಿ ತೆಗೆದುಕೊಳ್ಳದೇ ಅವು ಬಿ ಮತ್ತು ಎ ರಾಜ್ಯಗಳಿಗೆ ಅನ್ವಯಿಸಬಹುದೆ ಎಂಬ ವಿಷಯವನ್ನು ಉಪನಿಬಂಧನೆ ೧ರ ಚರ್ಚೆಯ ಕಾಲದಲ್ಲಿ ಕೈಗೆತ್ತಿಕೊಳ್ಳೋಣ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಿಜ ಅದನ್ನು ಆ ಸಂದರ್ಭದಲ್ಲಿ ಕೈಗೆತ್ತಿಕೊಳ್ಳಬಹುದು. ಆದರೆ ಅಲ್ಲಿಯವರೆಗೆ ಕಾಯುವುದು, ತೊಂದರೆಯಾಗುತ್ತದೆ.

**ಉಪಾಧ್ಯಕ್ಷರು :** ನಾನು ನಿರ್ಣಯ ನೀಡಿರುವೆ. ಮಾನ್ಯ ಸದಸ್ಯರು ಉಪನಿಬಂಧನೆ ೨ ಯಾವುದೇ ರಾಜ್ಯಕ್ಕೆ ಅನ್ವಯಿಸುವುದಿಲ್ಲ ಎಂದು ಹೇಳುತ್ತಿಲ್ಲ. ಅದು ಎಲ್ಲಾ ಪ್ರಾಂತಗಳಿಗೂ ಅನ್ವಯಿಸಲಾಗುವುದು. ಅದರ ಬಗೆಗೆ ಉಪನಿಬಂಧನೆ ೧ನ್ನು ಚರ್ಚೆಗೆ ತೆಗೆದುಕೊಂಡಾಗ ಸಂವಿಧಾನದಂತೆ ಅನ್ವಯಗೊಳ್ಳುವುದೋ ಇಲ್ಲವೋ ಎಂಬುದನ್ನು ಯೋಚಿಸೋಣ.

**ಶ್ರೀ ನಜೀರುದ್ದೀನ್ ಅಹ್ಮದ್ :** ತೊಂದರೆ ಏನೆಂದರೆ, ಹಲವು ರಾಜ್ಯಗಳಿಗೆ ಅನ್ವಯಿಸಲಾರದು ಎಂದು ತಿಳಿದರೆ, ಆ ಸದಸ್ಯರು ವಿಧೇಯಕದ ಚರ್ಚೆಯಲ್ಲಿ ಭಾಗವಹಿಸರು. ಇದರಿಂದ ಸದನದ ಸಮಯದಲ್ಲಿ ಉಳಿತಾಯವಾಗುತ್ತದೆ. ಆದುದರಿಂದ ಅವರನ್ನು ಅಂಧಕಾರದಲ್ಲಿಡದೆ ತಿಳಿಸಿದರೆ ಅವರಿಗೆ ಆಗಬಹುದಾದ ಸಂಶಯ ನಿವಾರಿಸಿದಂತಾಗುತ್ತದೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಚೆನ್ನಾಗಿ ತಿಳಿವಳಿಕೆ ಇದೆ. ಅವರಿಗೆ ನಾವು ಈ ಬಗ್ಗೆ ಮತ್ತೊಮ್ಮೆ ಚರ್ಚಿಸುತ್ತೇವೆ ಎಂದು ತಿಳಿದಿದ್ದರೂ ಪ್ರಸ್ತಾಪಿಸುತ್ತಿದ್ದಾರೆ. ಆದುದರಿಂದ ಯಾರಾದರೂ ಸಂಸ್ಥಾನಗಳ ಪ್ರತಿನಿಧಿಗಳು ಈ ವಿಧೇಯಕ ತಮಗೂ ಅನ್ವಯಿಸಬಲ್ಲದು ಎಂಬುದನ್ನು ಸನ್ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಬಹುದು. ಸಮಯಾವಕಾಶವಿದೆ.

**ಶ್ರೀ ಶ್ಯಾಮನಂದನ ಸಹಾಯ್ (ಬಿಹಾರ) :** ಸರ್ ನಾನು ತಮ್ಮ ಮೂಲಕ ಸದನದ ಹಾಗೂ ಮಾನ್ಯ ಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, ಈ ವಿಧೇಯಕವು ಎರಡು ಭಾಗಗಳಿಂದ ಕೂಡಿದೆ. ಒಂದು ವಿವಾಹ, ಮತ್ತೊಂದು ವಿಚ್ಛೇದನೆ. ಈ ದಿಶೆಯಲ್ಲಿ ಮಸೂದೆಯು ಹೇಗೆ ಮತ್ತು ಯಾವ ದಿಶೆಯಲ್ಲಿ ಮುಂದುವರಿಯಬೇಕೆಂಬುದನ್ನು, ಸಚಿವರು ಸ್ಪಷ್ಟಗೊಳಿಸಬೇಕು. ಎರಡನೆಯ ವಿಷಯವೆಂದರೆ, ಈಗ ಸದನದ ಮುಂದೆ ಬಂದಿರುವ ಈ ವಿಧೇಯಕವನ್ನು ಒಪ್ಪುವುದು ಕಠಿಣ ಕಾರ್ಯವಾಗಿದೆ. ಏಕೆಂದರೆ ಮೊನ್ನೆ ಕಾನೂನು ಸಚಿವರು ತಾವೇ ಮಂಡಿಸಿದ ವಿಧೇಯಕದ ಬಗ್ಗೆ ತಾವೇ ಅನೇಕ ತಿದ್ದುಪಡಿಗಳನ್ನೂ ಮಂಡಿಸಿದ್ದಾರೆ. ಅವು ನಮಗೆ ನಿನ್ನೆಯ ದಿನವೇ ಕೈಸೇರಿವೆ. ತಮಗೆ ತಿಳಿದಂತೆ ಹಿಂದೂ ಕೋಡ್ ಬಿಲ್ ಒಂದು ಗಂಭೀರವಾದ ಮಸೂದೆ, ಅಲ್ಲದೆ ಸದಸ್ಯರು ಇದರ ಬಗೆಗೆ ತೋರಿಸಿರುವ ಆಸಕ್ತಿ ಬಗೆಗೂ ತಮಗೇ ತಿಳಿದಿರುವಾಗ, ಸಚಿವರು ಮಂಡಿಸಿರುವ ತಿದ್ದುಪಡಿಗಳು ನಮ್ಮನ್ನೆಲ್ಲಾ ಗೊಂದಲಕ್ಕೀಡುಮಾಡಿವೆ. ಈ ತಿದ್ದುಪಡಿಗಳಿಗೆ, ತಿದ್ದುಪಡಿಗಳನ್ನು ಹೇಗೆ ಕಳಿಸಬೇಕು ಎಂಬುದೇ ತಿಳಿಯದಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ವಿಧೇಯಕ ತಿದ್ದುಪಡಿಗಳನ್ನು ಅರಿಯಲು ಸಮಯಾವಕಾಶ ಬೇಕು. ತಮಗೆ ತಿಳಿದಂತೆ, ವಿಧೇಯಕವನ್ನು ಮಂಡಿಸಿದ ನಂತರ, ಅದನ್ನು ಆಯ್ಕೆ ಸಮಿತಿಗೆ ಕಳಿಸಿಕೊಡಲಾಯಿತು. ಅದರ ವರದಿಯೂ ಬಂದಿದೆ. ನಂತರ ಡಾ. ಅಂಬೇಡ್ಕರ್‌ರು ಹಲವಾರು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಹೀಗಾಗಿ ಒಂದೆಡೆ ಆಯ್ಕೆ ಸಮಿತಿಯ ವರದಿ ಮತ್ತೊಂದೆಡೆ ಅಂಬೇಡ್ಕರ್‌ರ ತಿದ್ದುಪಡಿಗಳು ಅಲ್ಲದೆ ಇನ್ನೂ ಅನೇಕ ನೂತನ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಏರ್ಪಡಿಸಬೇಕು. ಹೀಗಾಗಿ ನಾವು ಈ ದಿಶೆಯಲ್ಲಿ ಕ್ರಮಬದ್ಧವಾದ ವಿಧಾನವನ್ನು ಅನುಸರಿಸದೇ ಹೋದರೆ

ಗಂಭೀರವಾದ, ವಿಧೇಯಕಕ್ಕೆ ಅಪಚಾರ ಹಾಗೂ ದ್ರೋಹ ಬಗೆದಂತಾಗುತ್ತದೆ.

**ಶ್ರೀ ಆರ್.ಕೆ. ಚೌಧರಿ :** ನನ್ನ ಒಂದು ಪ್ರಶ್ನೆಯನ್ನೂ ಸೇರಿಸುವೆ. ಒಟ್ಟಾರೆ ಉತ್ತರ ನೀಡಲು ಸಹಕಾರಿಯಾಗಬಲ್ಲದು.

**ಶ್ರೀ ಬಿ. ದಾಸ್ (ಒರಿಸ್ಸಾ) :** ನಾನು ಮನವಿ ಮಾಡಬಹುದೆ ?...

**ಉಪಾಧ್ಯಕ್ಷರು :** ಹೆಚ್ಚಿನ ವಿಷಯಗಳು ಬೇಡ.

ತಿದ್ದುಪಡಿಗಳ ಬಗೆಗೆ, ಮೂಲ ವಿಧೇಯಕ ಗುಂಪಿಗೆ ಹಲವನ್ನು ಸಚಿವರು ಮಂಡಿಸಿದ್ದರು ಹಾಗೂ ಈಗ ಕೂಡಾ ತಿದ್ದುಪಡಿಗಳನ್ನು ಮಂಡಿಸಿರುವರು.

**ಕಾನೂನು ಸಚಿವ (ಡಾ. ಅಂಬೇಡ್ಕರ್) :** ಹಲವು–ಮೌಖಿಕ.

**ಉಪಾಧ್ಯಕ್ಷ :** ಈ ಎಲ್ಲಾ ತಿದ್ದುಪಡಿಗಳನ್ನು ಸೆಪ್ಟೆಂಬರ್ ೫ರಂದೆ ಸುತ್ತೋಲೆ ಮೂಲಕ ನೀಡಲಾಗಿದೆ. ಯಾರಿಗಾದರೂ ಈ ತಿದ್ದುಪಡಿಗಳಿಗೆ, ತಿದ್ದುಪಡಿ ಸೂಚಿಸಬೇಕೆಂದಿದ್ದು, ಅವು ಸೂಕ್ತವಿದ್ದಲ್ಲಿ ಅವಕಾಶ ಕಲ್ಪಿಸಲಾಗುವುದು.

**ಡಾ. ಅಂಬೇಡ್ಕರ್ :** ನನಗೆ ಯಾವ ತಕರಾರೂ ಇಲ್ಲ.

**ಉಪಾಧ್ಯಕ್ಷರು :** ಈ ಬಗೆಯ ವಿಷಯಗಳ ಬಗೆಗೆ ನಾನು ತುಂಬಾ ವಿಶಾಲ ಮನೋಭಾವನೆ ಹೊಂದಿದ್ದು, ಕೇವಲ ತಾಂತ್ರಿಕವಾಗಿರಲಾರೆ. ಅಲ್ಲದೆ ಮಾನ್ಯ ಸಚಿವರೂ ಈ ಸಮಸ್ಯೆಯ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಪಡೆಯಲು ಅತೀವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಸದನದ ಎಲ್ಲ ವರ್ಗದವರ ಸಹಕಾರ ಬೇಕು. ನಾನೂ ಕೂಡ ಎಲ್ಲ ವಿಧಗಳಿಂದಲೂ ಸಹಕರಿಸುವೆ, ಈ ದಿಶೆಯಲ್ಲಿ ಸನ್ಮಾನ್ಯ ಸದಸ್ಯರಿಗೆ ಎಲ್ಲಾ ಸಹಕಾರ ನೀಡುವೆ. ಆದರೆ ಪದೇ ಪದೇ ತಿದ್ದುಪಡಿಗಳಿಂದ ವಿಧೇಯಕವನ್ನು ಛಿದ್ರಗೊಳಿಸುವುದು ಬೇಡ. ಏಕೆಂದರೆ ಸನ್ಮಾನ್ಯ ಸದಸ್ಯರಿಗೆಲ್ಲಾ ತಿಳಿದಂತೆ, ನಾವು ಈಗಾಗಲೆ ತಿದ್ದುಪಡಿಯ ವಿಧೇಯಕಗಳ ಸಮುದ್ರದಲ್ಲಿ ದಿಕ್ಕೆಟ್ಟಿದ್ದೇವೆ. ಇದಕ್ಕೆ ಉದಾಹರಣೆ ಎಂದರೆ ಪ್ರಜಾಪ್ರತಿನಿಧಿ ಕಾನೂನು. ಸಭಾಧ್ಯಕ್ಷರೇ ತಿದ್ದುಪಡಿ ಮಸೂದೆಗಳ ಬಗ್ಗೆ ದಿಗ್ಭ್ರಾಂತಿ ಹೊಂದಿದ ವಿಷಯ ತಿಳಿದೇ ಇದೆ. ಆದರೆ ಈ ವಿಧೇಯಕವು ಆ ರೀತಿ ಇಲ್ಲ ಆದುದರಿಂದ ನಾವು ಮೂಲ ತಿದ್ದುಪಡಿಗಳಿಂದ ಚರ್ಚೆಯನ್ನು ಮುಂದುವರಿಸಬಹುದು.

**ಶ್ರೀ ಶ್ಯಾಮನಂದನ ಸಹಾಯ್ :** ಇನ್ನೊಂದು ಮನವಿ ಸ್ವಾಮಿ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು ವಿಧೇಯಕವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನಿರ್ಧರಿಸಬೇಕು.

**ಶ್ರೀ ಶ್ಯಾಮನಂದನ ಸಹಾಯ್ :** ಅದನ್ನು ನಾವು ದೃಢಪಡಿಸಿರುವೆವು.

**ಶ್ರೀ ಬಿ. ದಾಸ್ :** ಅವರಿಗೆ ಮತ್ತೊಮ್ಮೆ ಮಾತನಾಡಲು ಅಪ್ಪಣೆ ಇದೆಯೇ?

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಹೇಳಬೇಕೆಂದಿರುವ ವಿಷಯ ಒಂದಿದೆ. ಸರ್ ನಾವು ಅನುಸರಿಸಬೇಕಾದ ವಿಧಾನವೊಂದಿದೆ; ಅದೇನೆಂದರೆ ಮೊದಲಿಗೆ ಎಲ್ಲಾ ತಿದ್ದುಪಡಿ ಮಸೂದೆಗಳನ್ನು ಮಂಡಿಸುವುದು ಹಾಗೂ ಅವನ್ನು ಒಟ್ಟಿಗೆ ಚರ್ಚಿಸಿ ಒಂದು ನಿರ್ಣಯಕ್ಕೆ ಬರುವುದು. ಆದರೆ ನನ್ನ ಹೇಳಿಕೆಯಂತೆ, ಆ ವಿಧಾನವು ಹಿಂದೂ ಕೋಡ್‌ಬಿಲ್‌ನ ಬಗೆಗೆ ಸಾಧ್ಯವಾಗದು. ಏಕೆಂದರೆ ಈ ದಿಶೆಯಲ್ಲಿ ಪ್ರತಿಯೊಂದು ತಿದ್ದುಪಡಿಯೂ ಬಹು ಮಹತ್ವದಿಂದ ಕೂಡಿದೆ. ಇದು ಮುಂಗಡಪತ್ರದ ಬಗೆಗೆ ಚರ್ಚಿಸಬಹುದಾದ ಹಾಗೂ ಅಂಗೀಕರಿಸುವ ವಿಧೇಯಕವಾಗಿರದೆ ಪ್ರತಿಯೊಂದು ತಿದ್ದುಪಡಿಯು ಗಂಭೀರ

ಹಾಗೂ ಮಹತ್ವಪೂರ್ಣವಾಗಿದೆ. ಆದುದರಿಂದ ನಾನು ಸೂಚಿಸುವುದೇನೆಂದರೆ ಹಿಂದೂ ಕೋಡ್ ತಿದ್ದುಪಡಿಯ ಬಗೆಗೆ ಪ್ರತಿಯೊಂದು ತಿದ್ದುಪಡಿಯನ್ನು' ಬೇರೆ ಬೇರೆಯಾಗಿಯೇ ಚರ್ಚಿಸಬೇಕು. ಒಂದೊಂದು ತಿದ್ದುಪಡಿಯನ್ನೇ ಅಂಗೀಕರಿಸಿದ ಅಥವಾ ತಿರಸ್ಕರಿಸಿದ ನಂತರ ಬೇರೊಂದು ತಿದ್ದುಪಡಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಬೇಕು. ಈ ವಿಧೇಯಕದ ಬಗೆಗೆ ಈ ಮಾದರಿಯ ವಿಧಾನವನ್ನೇ ಅನುಸರಿಬೇಕು.

**ಶ್ರೀ ಆರ್.ಕೆ. ಚೌಧರಿ :** ನಾನು ಒಂದೇ ಒಂದು ಸಣ್ಣ ಮಾಹಿತಿಯನ್ನು ಪಡೆಯಬಹುದೇ? ಫೆಬ್ರವರಿಯಲ್ಲಿ ಈ ವಿಧೇಯಕದ ಬಗ್ಗೆ ಚರ್ಚೆಯಾದ ನಂತರ ಅನೇಕ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಆದರೆ ಈಗ ಸದನದ ಮುಂದೆ ಮಂಡಿಸಿದ ತಿದ್ದುಪಡಿಗಳು ನೂತನ ತಿದ್ದುಪಡಿಗಳು. ಆದುದರಿಂದ ಫೆಬ್ರವರಿ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಿಗೆ ಈಗ ಚರ್ಚೆಯಲ್ಲಿ ಭಾಗವಹಿಸಲು ಆಸ್ಪದ ನೀಡಲಾಗುವುದೇ?

**ಉಪಾಧ್ಯಕ್ಷರು :** ನಾನು ಸೂಕ್ತ ಸಮಯ ಬಂದಾಗ ಇದರ ಬಗೆಗೆ ಯೋಚಿಸುವೆ. ಆದರೆ ಈಗ ಬಂದಿರುವ ತಿದ್ದುಪಡಿಗಳ ಬಗೆಗೆ ನಾನು ಸೂಚಿಸುವುದೇನೆಂದರೆ ತಿದ್ದುಪಡಿ ಸ್ವರೂಪ ಬೇರೆಯಾಗಿದ್ದು ಸಾರಾಂಶ ಒಂದೇ ಇದ್ದಲ್ಲಿ ಆ ಬಗೆಯ ಎಲ್ಲಾ ತಿದ್ದುಪಡಿಗಳ ಬಗೆಗೆ ಒಟ್ಟಿಗೇ ಚರ್ಚಿಸಿ ನಿರ್ಣಯ ತೆಗೆದುಕೊಳ್ಳೋಣ. ಯಾವುದೇ ತಿದ್ದುಪಡಿಯು ಸಂಪೂರ್ಣ ಬೇರೆ/ಸ್ವರೂಪ ಹಾಗೂ ಸಾರಾಂಶ ಹೊಂದಿದ್ದರೆ ಅದನ್ನೊಂದೇ ಚರ್ಚಿಸಿ ನಿರ್ಣಯಕ್ಕೆ ಬರೋಣ. ಈ ವಿಷಯದಲ್ಲಿ ಮಾನ್ಯ ಸಚಿವರು ತಿದ್ದುಪಡಿಯ ಸ್ವರೂಪಗಳನ್ನು ತಿಳಿಸಿದರೆ ಅನುಕೂಲವಾಗುತ್ತದೆ. ನಾನು ಸದಸ್ಯರಲ್ಲಿ ಕೂಡಾ ಈ ಬಗೆಗೆ ಸಹಕರಿಸಬೇಕೆಂದು ಕೋರುವೆ.

**ಶ್ರೀಮತಿ ರೇಣುಕಾರಾಯ್ (ಪ.ಬಂ) :** ಸದಸ್ಯರು ಸಹಕರಿಸಿದರೆ ಕಾಲಮಿತಿಯನ್ನು ಅನುಸರಿಸಬಹುದು.

**ಮಾನ್ಯ ಸದಸ್ಯರು :** ಇಲ್ಲ, ಇಲ್ಲ.

**ಕಾಮಗಾರಿ ಉತ್ಪಾದನೆ–ಸರಬರಾಜು ಸಚಿವರು (ಶ್ರೀ ಗಾಡಗೀಳ್) :** ಅಧ್ಯಕ್ಷರೇ ಒಂದೇ ವಿಧವಾದ ತಿದ್ದುಪಡಿ ಮಸೂದೆಗಳನ್ನು ಒಟ್ಟೂಗೂಡಿಸಿ ಚರ್ಚೆಗೆ ಆಸ್ಪದ ಮಾಡಿದರೆ ಒಳ್ಳೆಯದು. ಅದರಿಂದ ಸಮಯ ನಷ್ಟವಾಗದು.

**ಉಪಾಧ್ಯಕ್ಷರು :** ನನಗೆ ವಿಂಗಡಿಸಲಾಗದು. ಆದುದರಿಂದ ಮಾನ್ಯ ಮಂತ್ರಿಯವರು ತಿದ್ದುಪಡಿ ಮಂಡಿಸಿದಾಗ, ಅದೇ ಮಾದರಿಯ ತಿದ್ದುಪಡಿಗಳನ್ನು ಯಾರಾದರೂ ಮಂಡಿಸಿದಲ್ಲಿ ಎಲ್ಲವನ್ನೂ ಒಟ್ಟುಗೂಡಿಸಿ ನಾಳೆಯ ದಿನ ಚರ್ಚೆಗೆ ಆಸ್ಪದ ಕಲ್ಪಿಸುವೆ. ಈ ದಿನ ಉಪನಿಬಂಧನೆ ೨ರ ಬಗೆಗೆ ಚರ್ಚೆ ಮುಂದುವರಿಸೋಣ.

**ಶ್ರೀಮತಿ ರೇಣುಕಾರಾಯ್ :** ನನ್ನ ಸಲಹೆಯನ್ನು ಸದನದ ಅವಗಾಹನೆಗೆ ತರುವಿರಾ?

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಸೂಚಿಸಿದ ವಿಷಯದ ಬಗೆಗೆ ಮಾನ್ಯ ಸಚಿವರ ಪ್ರತಿಕ್ರಿಯೆ ಏನು?

**ಉಪಾಧ್ಯಕ್ಷರು :** ಬಹುಶಃ ಯಾವ ಪ್ರತಿಕ್ರಿಯೆ ಇರಲಾರದು ಹೌದೇ?

**ಡಾ. ಅಂಬೇಡ್ಕರ್ :** ಹೌದು, ಸರ್.

**ಶಿಕ್ಷಣ ಮಂತ್ರಿ (ಅಬ್ದುಲ್ ಕಲಾಂ ಆಜಾದ್) :** ಪ್ರಧಾನಿಯವರು ವಿವರಿಸುತ್ತಾರೆ.

**ಪ್ರಧಾನಿ (ಜವಹರಲಾಲ್ ನೆಹರು) :** ನಾನು ವಿಷಾದವ್ಯಕ್ತಪಡಿಸುವೆ, ಸದಸ್ಯರು ಮಾತನಾಡಿದಾಗ ನಾನು ಸದನದಲ್ಲಿರಲಿಲ್ಲ.

**ಉಪಾಧ್ಯಕ್ಷರು :** ಉಪ ನಿಬಂಧನೆಯ ೨ರ ಅಡಿಯಲ್ಲಿ ಬೇರೆ ಏನಾದರೂ ಚರ್ಚೆ ಮಾಡಬಹುದೇ ಎಂದೇ ಅವರ ಹೇಳಿಕೆಯಾಗಿದೆ. ನಾನು ಸಹಜವಾದ ರೀತಿಯಲ್ಲಿಯೇ ತಿದ್ದುಪಡಿಗಳ ಬಗೆಗೆ ಚರ್ಚೆ

ಮುಂದುವರಿಯಬಹುದೆಂದು ಸೂಚಿಸಿರುವೆ. ಈ ಮಧ್ಯೆ ಮಾನ್ಯ ಸದಸ್ಯರು ಈ ವಿಧೇಯಕದ ಬಗೆಗೆ ಯಾವುದಾದರೂ ಪ್ರಮುಖ ಅಂಶವಿದ್ದಲ್ಲಿ ಅದಕ್ಕೆ ಆದ್ಯತೆ ನೀಡುವ ಬಗೆಗೆ ಪ್ರಸ್ತಾಪಿಸಿದ್ದಾರೆ.

**ಶ್ರೀ ಶ್ಯಾಮನಂದನ ಸಹಾಯ್ :** ಪತ್ರಿಕೆಯಲ್ಲಿ ವರದಿಯಾದ ವಿಷಯದ ಬಗ್ಗೆ ಸೂಕ್ತ ಮಾಹಿತಿಯನ್ನು ನಾನು ತಿಳಿಯಬಯಸುವೆ.

**ಶ್ರೀ ಜವಹರಲಾಲ್ ನೆಹರು :** ನನಗೆ ತಿಳಿದಂತೆ ಮೊನ್ನೆಯ ದಿನ ನಾನು ಈ ಬಗೆಗೆ ಹೇಳಿದಂತೆ ಭಾಗ I & IIನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳೋಣ. ಸಮಯಾವಕಾಶವಿದ್ದರೆ ಇತರ ವಿಷಯ ಚರ್ಚಿಸೋಣ. ಈ ಎರಡು ಭಾಗಗಳನ್ನೂ ಚರ್ಚೆಮಾಡಿ ಮುಕ್ತಾಯಗೊಳಿಸುವುದೇ ಸೂಕ್ತ. ಅದರ ಚರ್ಚೆಯಾದ ಮೇಲೆ ಸಮಯ ದೊರಕಿದರೆ ಇತರ ಅಂಶಗಳನ್ನು ಚರ್ಚಿಸೋಣ.

**ಶ್ರೀ ಕಾಮತ್ :** ಈ ವಿಧೇಯಕದ ಬಗೆಗೆಂದೇ ಏನಾದರೂ ಸಮಯ ನಿಗದಿಪಡಿಸಿದೆಯೇ?

**ಶ್ರೀ ಜವಹರಲಾಲ್ ನೆಹರು :** ನನಗೆ ತಿಳಿದಂತೆ ಒಂದು ವಾರದೊಳಗೆ ಮುಕ್ತಾಯಗೊಳಿಸಬಹುದು.

**ಶ್ರೀ ಶ್ಯಾಮನಂದನ ಸಹಾಯ್ :** ಈ ತಿಂಗಳೊ ಅಥವಾ ಈ ವಾರದಲ್ಲಿಯೋ?

**ಶ್ರೀ ಜವಹರಲಾಲ್ ನೆಹರು :** ನಾನು ಹೇಳಿದ್ದು ಈ ವಾರದಲ್ಲಿ.

**ಡಾ. ಅಂಬೇಡ್ಕರ್ :** ನಿಮ್ಮ ಅನುಮತಿಯ ಮೇರೆಗೆ ಪಟ್ಟಿ ೧ರ ನಾಲ್ಕನೆಯ ತಿದ್ದುಪಡಿಯನ್ನು ಮಂಡಿಸುವೆ. ಅದರಲ್ಲಿಯ ಮಾರ್ಪಾಡೆಂದರೆ "ಪಂಗಡ ಅಥವಾ ಸಮೂಹ" ಇತರ ಉಪನಿಬಂಧನೆಯೊಂದಿಗೆ ನಾನು ಮಂಡಿಸುವೆ. ನನ್ನ ೩ನೆಯ ತಿದ್ದುಪಡಿ ಭಾಗ (i) (ii)ರ ನಂತರ ಸೇರ್ಪಡಿಸಬೇಕು.

"(ಎ) ಭಾಗ (ಸಿ) (ii) ರ "ಸಮೂಹ" ಬದಲು "ಪಂಗಡ ಅಥವಾ ಸಮೂಹ".

**ಉಪಾಧ್ಯಕ್ಷರು :** ಮೇಲಿನ ತಿದ್ದುಪಡಿ ಮಂಡಿಸಲಾಗಿದೆ.

**ಡಾ. ಅಂಬೇಡ್ಕರ್ :** ಮೇಲಿನ ತಿದ್ದುಪಡಿ ೩ ಕಳೆದ ಅಧಿವೇಶನದಲ್ಲಿಯೇ ಮಂಡಿಸಿದ್ದಾರೆ. ಈಗ ಎರಡೂ ಸದನದ ಮುಂದಿವೆ. ಇದೇ ಮಾದರಿಯ ತಿದ್ದುಪಡಿ ಯಾರಾದರೂ ಸದಸ್ಯರು ಮಂಡಿಸಬಹುದು.

**ಶ್ರೀ ಜೆ.ಆರ್. ಕಪೂರ್ (ಉ.ಪ್ರ) :** ಸರ್ ಅಂಬೇಡ್ಕರ್‌ರ ೩೮೪ ತಿದ್ದುಪಡಿಗಳಿಗೆ ನಾವು ತಿದ್ದುಪಡಿಯನ್ನು ಮಂಡಿಸಬಹುದೇ?

**ಉಪಾಧ್ಯಕ್ಷರು :** ನೀವು ಮಂಡಿಸಬಹುದು.

**ಶ್ರೀ ಜೆ. ಆರ್. ಕಪೂರ್ :** ನಿಮ್ಮ ಅನುಮತಿ ಪಡೆದು ನಾನು ಮೊದಲಿಗೆ ಎರಡನೆಯ ಪಟ್ಟಿಯ ೯೫ರ ಬಗೆಗೆ ಮಂಡಿಸುವೆ. ವಾಸ್ತವಿಕವಾಗಿ ನಾನು ನನ್ನ ಮೂಲ ನೋಟೀಸ್‌ನಲ್ಲಿ ಅದನ್ನು ಅಂಬೇಡ್ಕರ್‌ರ ತಿದ್ದುಪಡಿ ೩ಕ್ಕೆ ತಿದ್ದುಪಡಿ ಎಂದೇ ಹೇಳಿದ್ದೆ. ಆದರೆ ಅದನ್ನು ಸ್ವತಂತ್ರ ತಿದ್ದುಪಡಿ ಎಂದು ಸೂಚಿಸಲಾಗಿದೆ. ಅದು ಸೌಕರ್ಯಕ್ಕೆಂದೇ ಕಾರ್ಯಾಲಯದವರು ಮಾಡಿರಬಹುದು. ನಾನು ಯಾರೂ ವಿರೋಧಿಸಬಾರದೆಂದೇ ಹೇಳುತ್ತಿರುವೆ. ನಂ. ೯೫ರ ಅಂಬೇಡ್ಕರ್‌ರ ತಿದ್ದುಪಡಿಯ ತಿದ್ದುಪಡಿಯಾಗಿರದೆ ನಾನು ಮಂಡಿಸುವುದು (೧) ಉಪ ನಿಂಬಂಧನೆ ೨ ಬದಲು

(i) ಸಂಹಿತೆಯನ್ನು ಅನ್ವಯಿಸುವಿಕೆ. ಈ ಕೋಡ್ ಭಾರತದ ಎಲ್ಲಾ ನಾಗರಿಕರಿಗೂ ವಯಸ್ಸಿಗೆ ಬಂದ ಮೇಲೆ ಲಿಖಿತರೂಪ ಒಪ್ಪಿಗೆ ನೀಡಿದ ಮೇಲೆ ಅನ್ವಯಿಸುವುದು; ಮತ್ತು ಆ ವಿಧವಾದ ಹೇಳಿಕೆಯನ್ನು ಸಂಬಂಧಿಸಿದ ಅಧಿಕಾರಿಗಳಲ್ಲಿ ನೋಂದಾಯಿಸಬೇಕು.

ಭಾಗ IIರ ಅಂಶಗಳು ವಿವಾಹ ಹಾಗೂ ವಿಚ್ಛೇದನಕ್ಕೆ ಅನ್ವಯಿಸದಂತೆ ವಿವಾಹವಾದ ದಂಪತಿಗಳು ಲಿಖಿತ ಹೇಳಿಕೆ ನೀಡಿದ್ದರೆ ಮಾತ್ರ ಅನ್ವಯಿಸಲಾಗುವುದು. ಈ ಹಿನ್ನೆಲೆಯಲ್ಲಿಯೇ ನಾನು ತಿದ್ದುಪಡಿ ನಂ

೯೭ ಪಟ್ಟಿ ೨ರ ಬಗೆಗೂ ತಿದ್ದುಪಡಿ ಮಂಡಿಸಲು ತಮ್ಮ ಅನುಮತಿ ಕೋರುವೆ.

(ii) ಡಾ. ಅಂಬೇಡ್ಕರ್‌ರ ತಿದ್ದುಪಡಿ ಮಸೂದೆ ನಂ ೩ ಭಾಗ (೨) ನಂತರ ಸೇರ್ಪಡಿಸಬೇಕಾದ (೩) ಉಪನಿಬಂಧನೆ (೩) ನಂತರ ಈ ಕೆಳಗಿನ ನೂತನ ಉಪನಿಬಂಧನೆಯನ್ನು ಸೇರ್ಪಡಿಸಬೇಕು:– ಅದೇನೆಂದರೆ.

(೪) ಈ ಕೋಡ್ ಅಥವಾ ಅದರ ಯಾವುದೇ ಅಂಶಗಳಿಗೆ, ಪ್ರಾಪ್ತ ವಯಸ್ಸಿಗೆ ಬಂದ ವ್ಯಕ್ತಿ ತನಗೆ ಈ ಕೋಡ್ ಹಾಗೂ ಅದರ ಯಾವುದೇ ಅಂಶಗಳಿಗೆ ತನ್ನ ಸಮ್ಮತಿಯನ್ನು ನಿಗದಿಪಡಿಸಿದ ನಮೂನೆಯಲ್ಲಿ ಬರಹರೂಪದಲ್ಲಿ ನೀಡಿ ಸೂಕ್ತ ಅಧಿಕಾರಿಯಲ್ಲಿ ನೋಂದಾಯಿಸಬೇಕು. ಆಗ ಇದು ಅವರಿಗೆ ಅನ್ವಯಿಸಲಾಗುವುದು.

ಆದುದರಿಂದ ಭಾಗ IIರಲ್ಲಿಯ ವಿವಾಹ ಹಾಗೂ ವಿಚ್ಛೇದನ ಅಂಶಗಳು ವಧೂ ಹಾಗೂ ವರ ತಮ್ಮ ವಿವಾಹದ ಮುನ್ನ ಅಥವಾ ನಂತರದಲ್ಲಿ ಮೇಲೆ ಹೇಳಿದಂತೆ ನಿರ್ಧರಿಸಿದರೆ ಮಾತ್ರ ಅನ್ವಯಿಸಲಾಗುವುದು.

ನಾನು ಕೋರಿಕೆಯ ದ್ವಾರ ಮಂಡಿಸಬಯಸುವೆ.

(iii) ಡಾ. ಅಂಬೇಡ್ಕರ್‌ರರು ಮಂಡಿಸಿದ ತಿದ್ದುಪಡಿ ನಂ. ೩ ಭಾಗ (೧) ii ಸೂಚಿಸಿದ

(ii) ತಿದ್ದುಪಡಿ ಉಪನಿಬಂಧನೆ (೧) ಕ್ಲಾಸ್ (೨) ನಂತರ "ಸಿಖ್‌ಧರ್ಮ" ಸೇರ್ಪಡೆ ಅಥವಾ ಯಾವುದೇ ಧರ್ಮ ಅಥವಾ ನಂಬಿಕೆ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮಗಳನ್ನು ಬಿಟ್ಟು.

(iv) ಭಾಗ (ಸಿ) (೧೧) ನಂತರ ಉಪನಿಬಂಧನೆ (೧) ನಿಬಂಧನೆ (೨) ಸೇರ್ಪಡಿಸಬೇಕಾದ:

"(iii) ಯಾವ ಅನಾಥನಿಗಾದರೂ ಅಥವಾ ತೊರೆದಿರುವ ಮಗು, ರಾಜ್ಯದಿಂದ ಪೋಷಿಸಲಾದ"

**ಶ್ರೀ ಬಿ.ಕೆ.ಪಿ. ಸಿನ್ಹಾ (ಬಿಹಾರ) :** ನನ್ನ ಸೂಚನೆ ಏನೆಂದರೆ ಮಾನ್ಯ ಸದಸ್ಯರು ತಿದ್ದುಪಡಿಯನ್ನು ಓದುವುದರ ಬದಲಿಗೆ ಅವುಗಳ ಕ್ರಮ ಸಂಖ್ಯೆ ಸೂಚಿಸಿದರೆ ಸಾಕು. ತಿದ್ದುಪಡಿಯ ಪಠಣವೆಂದರೆ ಅದೊಂದು ಭಾಷಣವೇ ಆಗುತ್ತದೆ.

**ಉಪಾಧ್ಯಕ್ಷರು :** ನಾವು ಕಣ್ಮುಚ್ಚಿಕೊಡುವುದು ಸೂಕ್ತವಲ್ಲ. ಈ ಮಾದರಿಯ ಸೂಚನೆಗಳ ಮಿತಿ ಇರಲಿ. ತಿದ್ದುಪಡಿಗಳನ್ನು ಓದಲೇಬೇಕು; ಈ ಬಗ್ಗೆ ಆತುರ ಸರಿಯಲ್ಲ. ನಾನು ಸೂಕ್ತವಾಗಿ ಚರ್ಚೆಗೆ ಆಸ್ಪದ ಕಲ್ಪಿಸಿಕೊಡಬಲ್ಲೆ. ಅನೇಕ ಬಾರಿ ನನಗೇ ವಿಷಯ ಅರ್ಥವಾಗದೇ ಇದೆ; ಏಕೆಂದರೆ ವಿಷಯ ಜಟಿಲ, ಆದುದರಿಂದ ತಿದ್ದುಪಡಿಯನ್ನು ಓದಲೇಬೇಕು.

**ಶ್ರೀ ಜೆ.ಆರ್. ಕಪೂರ್ :** ನಿಮ್ಮ ನಿರ್ದೇಶನಕ್ಕೆ ವಂದನೆಗಳು.

**ಉಪಾಧ್ಯಕ್ಷರು :** ಇದರ ಅರ್ಥ ನೀವು ಎಳೆದಾಡಬಹುದೆಂದಲ್ಲ.

**ಶ್ರೀ ಜೆ.ಆರ್. ಕಪೂರ್ :** ನನ್ನ ಮಾನ್ಯ ಸ್ನೇಹಿತರ ಸಲಹೆಯನ್ನು ಅದರ ತಾರ್ಕಿಕ ಕೊನೆಗೆ ಮುಟ್ಟಿಸಿದರೆ, ಮಾನ್ಯ ಸದಸ್ಯರ ಹೆಸರಿನಲ್ಲಿರುವ ಎಲ್ಲಾ ತಿದ್ದುಪಡಿಗಳನ್ನು ಮಂಡಿಸಲಾಗಿದೆ ಎಂದು ಹೇಳುವುದು.

**ಉಪಾಧ್ಯಕ್ಷರು :** ಅದನ್ನೇ ಮತ್ತೆ ಹಿಗ್ಗಿಸಿ ಮಾತನಾಡಬೇಕಿಲ್ಲ.

**ಶ್ರೀ ಜೆ.ಆರ್. ಕಪೂರ್ :** ನಾನು ಮಂಡಿಸಲು, ಕೋರುವೆ.

(v) ಉಪಕಲಮು (೩) ಕಲಮು (೨) ಬದಲಾಗಿ, ಸೇರಿಸಿ.

ಹಿಂದೂ ಎಂಬ ಪದ ಈ ಸಂಹಿತೆಯಲ್ಲಿ ಎಲ್ಲೇ ಇರಲಿ, ಅವನು ಒಬ್ಬ ಹಿಂದೂ ಅಲ್ಲದಿದ್ದರೂ,

ತಾನು ಈ ಸಂಹಿತೆಯ ಉಪಬಂಧಗಳಲ್ಲಿ ಒಂದಕ್ಕೆ ಒಳಪಟ್ಟಿರುತ್ತೇನೆಂದು, ಕೇಂದ್ರ ಸರ್ಕಾರ ನಿಗದಿಪಡಿಸಿದ ರೀತಿಯಲ್ಲಿ ಘೋಷಣೆ ಮಾಡಿದರೆ, ಈ ಸಂಹಿತೆಯ ಉಪಬಂಧಗಳಿಗೆ ಅವನು ಒಳಪಡುತ್ತಾನೆ.

ನಂತರ ನಾನು ೫ನೆ ಪಟ್ಟಿಯ ನಂ. ೨೭೨ ತಿದ್ದುಪಡಿಯ ಬಗ್ಗೆ ಬರುತ್ತೇನೆ.

**ಉಪಾಧ್ಯಕ್ಷರು :** ನನ್ನ ಸೂಚನೆಯಂತೆ, ಒಂದೊಂದು ಉಪಕಲಮುಗಳನ್ನೇ ಚರ್ಚೆಗೆ ಎತ್ತಿಕೊಳ್ಳೋಣ. ೨ನೇ ಕಲಮಿನಲ್ಲಿ ಅನೇಕ ಉಪಕಲಮುಗಳಿವೆ. ಈ ಕಲಮಿನ ಬಗೆಗೆ ತಿದ್ದುಪಡಿ ಮಂಡಿಸುವವರೆಗೂ, ಉಪಕಲಮು (೧)ರ ಚರ್ಚೆಯನ್ನೇ ಮುಂದುವರಿಸಿ, ನಂತರ ಇತರ ತಿದ್ದುಪಡಿಗಳ ಬಗೆಗೆ ಪ್ರಸ್ತಾಪಿಸೋಣ. ಈ ಸಲಹೆಗೆ ಮಾನ್ಯ ಸಚಿವರ ಪ್ರತಿಕ್ರಿಯೆ ಏನು?.

**ಡಾ. ಅಂಬೇಡ್ಕರ್ :** ನಾನು ಸಹಮತನಿರುವೆ.

**ಶ್ರೀ ಜೆ.ಆರ್. ಕಪೂರ್ :** ನಾನು ಸೂಚಿಸುವುದೇನೆಂದರೆ, ಎಲ್ಲಾ ತಿದ್ದುಪಡಿಗಳನ್ನು ಮಂಡಿಸಿ ನಂತರ ಸಂವಿಧಾನ ಸಮಿತಿಯಲ್ಲಿ ಅನುಸರಿಸಿದ ವಿಧಾನದಂತೆ, ನಾಳೆ ದಿನ ನಾವು ವಿಷಯವನ್ನು ಚರ್ಚಿಸಬಹುದಲ್ಲವೇ?

**ಉಪಾಧ್ಯಕ್ಷರು :** ಹಾಗಾದರೆ, ಈ ದಿನ ನಾನು, ತಿದ್ದುಪಡಿಗಳನ್ನು ಮಂಡಿಸಲು ಸದಸ್ಯರಿಗೆ ಅವಕಾಶ ನೀಡುವೆ. ನಾಳೆ ಅವನ್ನು ಒಟ್ಟುಗೂಡಿಸಿ, ಒಂದೊಂದೇ ಉಪಕಲಮಿಗೆ ಆಸ್ಪದ ನೀಡುವೆ.

**ಜೆ.ಆರ್. ಕಪೂರ್ :** ನಾನು ಮಂಡನೆಮಾಡಲು ಬೇಡುತ್ತೇನೆ.

(vi) ಡಾ. ಅಂಬೇಡ್ಕರ್‌ರು ಸೂಚಿಸಿದ ಭಾಗ (೨)ನಂ ೩ರಲ್ಲಿ ಮುದ್ರಿಸಿದ್ದಕ್ಕೆ ಬದಲಾಗಿ

"(೨) ಉಪಕಲಮು (೪)ಕ್ಕೆ ಬದಲಾಗಿ ಕೆಳಗಿನದನ್ನು ಸೇರ್ಪಡಿಸಬೇಕು.

(೪) ಈ ಕೋಡ್ ಅಥವಾ ಇದರ ಯಾವ ಅಂಶದ ಬಗೆಗೆ ಆಗಲೀ, ಕೇಂದ್ರ ಸರಕಾರ ನಿಗದಿಸಪಡಿಸಿದಂತೆ, ನಮೂದಿಸಲಾದ ಅರ್ಜಿಯಲ್ಲಿ ಓರ್ವ ವ್ಯಕ್ತಿ ಸಮ್ಮತಿಸಿದಾಗ.

(vii) ಅಂಬೇಡ್ಕರ್‌ರು ಸೂಚಿಸಿದ ನಂ ೩ ಎಂದು ಮುದ್ರಿಸಿರುವ ತಿದ್ದುಪಡಿಯಲ್ಲಿ ಕಲಮು ೨ಕ್ಕೆ ಮಾಡಬೇಕೆಂದು ಪ್ರಸ್ತಾವಿಸಿದ ತಿದ್ದುಪಡಿಗೆ, ಭಾಗ (೧)ರ ನಂತರ ಕೆಳಗೆ ಇರುವುದನ್ನು ಸೇರಿಸಿ.

(೧ಎ) ಉಪಕಲಮು (೨)ರ ಉಪಬಂಧದಲ್ಲಿ ಕಡೆಯಲ್ಲಿ ಇದನ್ನು ಸೇರಿಸಿ : ಕೇಂದ್ರ ಸರ್ಕಾರ ಈ ಕುರಿತು ನಿಗದಿಪಡಿಸಿದ ರೀತಿಯಲ್ಲಿ, ಈ ವಿಷಯಗಳಲ್ಲಿ ಕೂಡಾ ತಾನು ಸಂಹಿತೆಯಲ್ಲಿ ಇರುವುದಕ್ಕೆ ಒಳಪಡುತ್ತೇನೆ ಎಂದು ಘೋಷಿಸಿದ ಹೊರತು.

(viii) ಡಾ. ಅಂಬೇಡ್ಕರ್ ಅವರು ಸೂಚಿಸಿದ ನಂ. ೩ ಉಪನಿಬಂಧನೆ (೨) ಭಾಗ ೧ರಲ್ಲಿ ಸೇರ್ಪಡಿಸಬೇಕಾದದ್ದು :

(೧ಎ) ಉಪಕಲಮು (೩)ರಲ್ಲಿ "ಉಪಬಂಧಗಳು" ಎಂಬ ಪದಗಳಿಗೆ ಬದಲಾಗಿ "ಯಾವುದೇ ಅಥವಾ ಹೆಚ್ಚಿನ ಉಪಬಂಧಗಳ" ಎಂಬ ಪದಗಳನ್ನು ಸೇರಿಸಬೇಕು. ಅಥವಾ, ಬದಲಿಗೆ, ಅದು ಸದನಕ್ಕೆ ಒಪ್ಪಿಗೆಯಾಗದಿದ್ದರೆ :

(ix) ಡಾ. ಅಂಬೇಡ್ಕರ್‌ರು ಸೂಚಿಸಿದ ನಂ. ೩ ಉಪಕಲಮು (೨) ಭಾಗ (೧)ರಲ್ಲಿ

(೧ಎ) ಉಪಕಲಮು ೩ರಲ್ಲಿ ಕೊನೆಯಲ್ಲಿ "ಯಾವುದರ ಬಗೆಗಾಗಲೀ ಅಥವಾ ಇಲ್ಲಿ ಪ್ರಸ್ತಾಪಿಸಿರುವ ಯಾವುದೇ ಅಧಿಕ ವಿಷಯದ ಬಗ್ಗೆ" ಎಂಬ ಪದಗಳನ್ನು ಸೇರ್ಪಡಿಸಬೇಕು.

**ಉಪಾಧ್ಯಕ್ಷರು :** ಯಾವುದೇ ಅಥವಾ ಅಧಿಕ ಎಂದೇ ಸಾಮಾನ್ಯವಾಗಿ ಪ್ರಯೋಗಿಸುವುದು ಸೂಕ್ತವಲ್ಲವೇ?

**ಶ್ರೀ ಜೆ.ಆರ್. ಕಪೂರ್ :** ನಾನು ನಿಮ್ಮ ಸಲಹೆಗೆ ಒಪ್ಪಿರುವೆ. ಅದು ತಿದ್ದುಪಡಿ

ಡಾ. ಅಂಬೇಡ್ಕರ್‌ರು ಸೂಚಿಸಿದ ನಂ. ೩ಕ್ಕೆ ನನ್ನ ತಿದ್ದುಪಡಿಗಳು ಮುಗಿಯುತ್ತವೆ.

ನಾನೇ ಸೂಚಿಸಿದ ತಿದ್ದುಪಡಿಗೆ ಒಂದು ತಿದ್ದುಪಡಿ ಸೂಚಿಸಲು ಅಪ್ಪಣೆಕೋರುವೆ, ಮಂಡಿಸುವೆ.

(x) ನಾನು ಪ್ರಸ್ತಾವಿಸಿ ೯೩ನೇ ನಂ. ಆಗಿ ಮುದ್ರಿಸಲ್ಪಟ್ಟಿರುವ, ತಿದ್ದುಪಡಿಯಲ್ಲಿ ಪ್ರಸ್ತಾವಿಸಿದ ಕಲಮು ೨ಕ್ಕೆ ಈ ಪರಂತುಕವನ್ನು ಸೇರಿಸಿ :

ಭಾಗ IIರ ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಪಟ್ಟ ಉಪಬಂಧಗಳು, ವಧು ಮತ್ತು ವರ ಇಬ್ಬರೂ, ಮದುವೆಗೆ ಮುಂಚೆ ಅಥವಾ ಗಂಡ ಹೆಂಡತಿ ಮದುವೆಯ ನಂತರ, ಇಂಥ ಘೋಷಣೆಯನ್ನು ಮಾಡಿದರೆ ಮಾತ್ರ.

**ಉಪಾಧ್ಯಕ್ಷರು :** ಈ ಮಾದರಿಯ ತಿದ್ದುಪಡಿಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ.

**ಶ್ರೀ ಜೆ.ಆರ್. ಕಪೂರ್ :** ಇದು ನಾನೇ ಮಂಡಿಸಿದ ತಿದ್ದುಪಡಿಗೆ ತಿದ್ದುಪಡಿ. ಹಾಗಾದರೆ ನಾನು ನನ್ನ ನಂ. ೧೨೫ ತಿದ್ದುಪಡಿಯನ್ನು ಮಂಡಿಸುವೆ.

(xi) ಉಪನಿಬಂಧನೆ (೨)ಕ್ಕೆ ಸೇರ್ಪಡಿಸುವುದು;

ಭಾಗ II ಅಥವಾ ಮತ್ತು VII ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಅಂಶಗಳು ಮತ್ತು ವಾರಸುದಾರಿಕೆಯ ಅಂಶಗಳು, ಪ್ರಾಪ್ತವಯಸ್ಸಿಗೆ ಬಂದ ವ್ಯಕ್ತಿ, ಲಿಖಿತರೂಪದಲ್ಲಿ ತನ್ನ ಸಮ್ಮತಿಯನ್ನು ನೀಡಿದರೆ ಮಾತ್ರ ಅವನಿಗೆ ಅನ್ವಯಿಸಲಾಗುವುದು.

ಅಲ್ಲದೆ, ವಿವಾಹ ಹಾಗೂ ವಿಚ್ಛೇದನೆಯ ಅಂಶಗಳು ಕೇವಲ, ವಿವಾಹಿತ ದಂಪತಿಗಳು ವಿವಾಹದ ಮುನ್ನ ಅಥವಾ ನಂತರ, ಕೇಂದ್ರ ಸರ್ಕಾರ ನಿಗದಿಪಡಿಸಿದ ಅರ್ಜಿಯಲ್ಲಿ ಭರ್ತಿ ಮಾಡಿ ತಮ್ಮ ಒಪ್ಪಿಗೆ ನೀಡಿದಲ್ಲಿ ಮಾತ್ರ ಅನ್ವಯಿಸಲಾಗುವುದು. ನಾನು ಈ ದಿನ ಬೆಳಿಗ್ಗೆ ನೋಟೀಸ್ ನೀಡಿದ್ದು ಅದರಂತೆ ಇನ್ನೊಂದು ತಿದ್ದುಪಡಿಯನ್ನು ಮಂಡಿಸಲು ಅಪ್ಪಣೆ ಕೋರಿ ಮಂಡಿಸುವೆ.

(xii) ಡಾ. ಅಂಬೇಡ್ಕರ್‌ರು ಸೂಚಿಸಿದ ನಂ. ೩ ನಿಬಂಧನೆ (೨) (೧) (ii) ಸೇರಿಸಬಹುದಾದ:

(iii) ಹೊಸಬಾಗ (ಇ) ಕೆಳಕಂಡಂತೆ ಸೇರ್ಪಡಿಸಬೇಕು.

(ಇ) "ಈ ಕೋಡ್ ಜಾರಿಗೆ ಬಂದ ನಂತರ ಯಾವುದೇ ಧರ್ಮ ಅಥವಾ ಪಂಥಕ್ಕೆ ಮತಾಂತರ ಹೊಂದುವ."

**ಉಪಾಧ್ಯಕ್ಷರು :** ನೀವು ಹೇಳಬಯಸುವುದು ಇದು ಜಾರಿಗೆ ಬಂದ ನಂತರ, ಮತಾಂತರ ಹೊಂದಿದವರಿಗೂ ಇದೇ ಕೋಡ್ ಜಾರಿಗೊಳಿಸಲಾಗುವುದು ಎಂದಲ್ಲವೆ?

**ಶ್ರೀ ಜೆ.ಆರ್. ಕಪೂರ್ :** ಈ ಕೋಡ್ ಜಾರಿಯಲ್ಲಿ ಬಂದ ನಂತರ, ಕೇವಲ ಒಂದಕ್ಕಿಂತ ಅಧಿಕ ಮಡದಿಯರನ್ನು ಪಡೆಯುವ ಉದ್ದೇಶದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡವನಿಗೂ ಈ ಕೋಡ್ ಅನ್ವಯಿಸಬೇಕು ಹಾಗೂ ಅಧಿಕ ಮಡದಿಯರನ್ನು ಪಡೆಯಲು ನಿರ್ಬಂಧಿಸಬೇಕು.

**ಶ್ರೀ ನಜೀರುದ್ದೀನ್ ಅಹ್ಮದ್ :** ಒಬ್ಬ ಮಡದಿಯೊಂದಿಗೆ ಸಾಕಷ್ಟು ತಾಪತ್ರಯ. ಇಬ್ಬರು ಹೆಂಡಿರು ಅನ್ನುವ ಪ್ರಶ್ನೆಯೇ ಇಲ್ಲ.

**ಉಪಾಧ್ಯಕ್ಷರು :** ಈ ದಿನ ನಾನು ತಿದ್ದುಪಡಿಗಳಿಗೆ ಅವಕಾಶ ನೀಡುವೆ. ನಾಳೆಯ ದಿನ ಅವನ್ನೆಲ್ಲಾ ಒಟ್ಟಾರೆ ಸೇರಿಸಿ ಚರ್ಚೆಗೆ ಕಲಮು (೨) ಸಚಿವರಿಂದ ಮಂಡಿಸಿದ ತಿದ್ದುಪಡಿಯ ಬಗೆಗೆ ಚರ್ಚೆಗೆ ಅನುವು ಮಾಡಿಕೊಡುವೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ (ಪಂಜಾಬ್) :** ನನ್ನ ಸ್ನೇಹಿತರು ಈಗ ಮಂಡಿಸಿದ ತಿದ್ದುಪಡಿಗಳನ್ನು

ಫೆಬ್ರವರಿಯಲ್ಲಿ ಏನಾದರೂ ಮಂಡಿಸಿದ್ದರೇ ಎಂದು ತಿಳಿಯಬಯಸುವೆ? ಏಕೆಂದರೆ ಒಂದು ತಿದ್ದುಪಡಿಯನ್ನು ಚರ್ಚಿಸಿದಂತೆ – ತಿದ್ದುಪಡಿ ಹಿಂದೂ ಕೋಡ್ ವ್ಯಕ್ತಿಗೆ ಅನ್ವಯಿಸುವ ಬಗೆಗೆ ಅವರು ಭಾಷಣವನ್ನೂ ಮಾಡಿದಂತೆ ನನಗೆ ಜ್ಞಾಪಕ.

**ಶ್ರೀ ಜೆ.ಆರ್. ಕಪೂರ್ :** ನಾನು ಪುನರೋಕ್ತಿಯ ಬಗೆಗೆ ಜಾಗರೂಕತೆಯನ್ನು ಹೊಂದಿರುವೆ. ಹೀಗಾಗಿ ನನ್ನ ಸ್ನೇಹಿತರು ಭಯಪಡಬೇಕಾಗಿಲ್ಲ. ಏಕೆಂದರೆ ಇದೇ ತೆರನಾದ ಹಲವಾರು ವಿಷಯಗಳನ್ನು ನಾನು ಅಂದೂ ಪ್ರಸ್ತಾಪಿಸಿದ್ದೆ. ಆದರೆ ನಿರ್ದಿಷ್ಟ ತಿದ್ದುಪಡಿಯಿಂದ ಉದ್ದೇಶ ಫಲಿಸದು ಮತ್ತು ನನ್ನ ಮಿತ್ರರಾದ ಠಾಕೂರ್ ದಾಸರು ಎತ್ತಿದ್ದ ವಿರೋಧಗಳಿಗೆ, ಸಮಾಧಾನ ದೊರೆಯಲೆಂದೇ ಅಂದಿನ ತಿದ್ದುಪಡಿಗಳಿಗೆ ಸೂಕ್ತ ತಿದ್ದುಪಡಿಗಳನ್ನು ಮಂಡಿಸಿರುವೆ.

**ಶ್ರೀ ಶ್ಯಾಮನಂದನ ಸಹಾಯ್ :** ನಾನು ಮಂಡನೆಗೆ ಕೋರುತ್ತಾ ಕಲಮು (೨)ಕ್ಕೆ ಸೇರ್ಪಡಿಸಬೇಕಾದ:

"ಈ ವಿಧೇಯಕದಲ್ಲಿಯ ಅಂಶಗಳನ್ನು ನಿಗದಿತ ರೂಪದಲ್ಲಿಯ ನಮೂನೆಯ ಮುಖಾಂತರ ನೋಂದಾಯಿಸಿ ತಮ್ಮ ಸಮ್ಮತಿಯನ್ನು ಸೂಚಿಸಿದ ವ್ಯಕ್ತಿಗಳಿಗೆ ಮಾತ್ರ ಇದು ಅನ್ವಯಿಸಬಲ್ಲದು"

**ಸರದಾರ ಬಿ.ಎಸ್. ಮಾನ್ (ಪಂಜಾಬ್) :** ನಾನು ಮಂಡನೆಗೆ ಕೋರುವೆ. ಕಲಮು (೨)ರಲ್ಲಿಯ "ಸಿಖ್" ಪದವನ್ನು ಕೈ ಬಿಡಬೇಕು.

**ಉಪಾಧ್ಯಕ್ಷರು :** ಸನ್ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಅದು ಸಿಖ್ ಜನಾಂಗಕ್ಕೆ ಅನ್ವಯಿಸಬಾರದೆಂದೇ ಇದೆಯೇ?

**ಸರದಾರ ಬಿ.ಎಸ್. ಮಾನ್ :** ಹೌದು.

**ಉಪಾಧ್ಯಕ್ಷರು :** ಪ್ರತಿಯೊಂದು ಹಂತದಲ್ಲಿ ತಿದ್ದುಪಡಿಯ ವ್ಯಾಪ್ತಿ ಏನು ಎಂಬುದನ್ನು ಅರಿಯೋಣವೇ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಈ ವಿಧವಾದ ತಿದ್ದುಪಡಿಯನ್ನು ಆಗಲೇ ಮಂಡಿಸಿದೆ. ಅದರ ವಿಷಯ ನಂ. ೨೫೬ರಲ್ಲಿಯ ಸರದಾರ ಹುಕುಮ್ ಸಿಂಗರ ತಿದ್ದುಪಡಿಯ ವಿಷಯವೇ ಆಗಿದೆ.

**ಉಪಾಧ್ಯಕ್ಷರು :** ಹಿಂದೆ ನಡೆದದ್ದನ್ನು ಮರೆತುಬಿಡೋಣ. ಕಲಮಿನ ನಂತರ ಕಲಮನ್ನು ಚರ್ಚಿಸಬೇಕೆಂಬುದೇ ಈಗ ಸಭೆಯ ಉದ್ದೇಶ. ಅಲ್ಲದೇ ನಮಗೆ ಸಂಬಂಧಿಸಿದ ಚಿತ್ರದ ಕಲ್ಪನೆಯು ದೊರೆತಿರುವುದರಿಂದ, ಎಲ್ಲಿಯಾದರೂ ಪುನರುಕ್ತಿಯಾದಲ್ಲಿ ಅಪಾಯವೇನೂ ಇರಲಾರದು. ಏಕೆಂದರೆ ಆ ವಿಷಯದ ಬಗೆಗೆ ಅಧಿಕ ಗಮನ ಹರಿಸಿದಂತಾಗುತ್ತದೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಹಾಗಿದ್ದಲ್ಲಿ ನಾನು ಫೆಬ್ರವರಿ ಅಧಿವೇಶನದಲ್ಲಿ ತಿದ್ದುಪಡಿಯನ್ನು ಮಂಡಿಸಿ ಮಾತನಾಡಿದ್ದೆ. ಈಗ ಅದರ ಬಗೆಗೆ ಮತ್ತೊಮ್ಮೆ ಮಾತನಾಡಬಹುದೇ?.

**ಉಪಾಧ್ಯಕ್ಷರು :** ಆವಶ್ಯಕತೆ ಇಲ್ಲ.

**ಡಾ. ಅಂಬೇಡ್ಕರ್ :** ಬೇಡ ನಮಗೆ ಅದರ ಬಗ್ಗೆ ತಿಳಿದಿದೆ.

**ಶ್ರೀ ಆರ್.ಕೆ. ಚೌಧರಿ :** ನಾನು ತಿದ್ದುಪಡಿ ೧೨೫ಕ್ಕೆ ತಮ್ಮ ಗಮನ ಸೆಳೆಯಬಹುದೇ? ಇದು ಝುಂಝುನ್‌ವಾಲಾ ಅವರಿಗೆ ಸಂಬಂಧಿಸಿದ್ದು. ಅವರು ಈವರೆಗೂ ಸದನದಲ್ಲಿದ್ದರು. ಅವರು ಈ ವಿಷಯವನ್ನು ತಮ್ಮ ಗಮನಕ್ಕೆ ತರುವಂತೆ ನನಗೆ ಸೂಚಿಸಿದ್ದಾರೆ. ಅವರು ಜರೂರು ಕಾರ್ಯದಿಂದ ಹೊರಗೆ ಹೋಗಿದ್ದಾರೆ.

**ಉಪಾಧ್ಯಕ್ಷರು :** ಅವರೇ ಬಂದು ಮಂಡಿಸಲಿ.

**ಶ್ರೀಮತಿ ರೇಣುಕಾರಾಯ್ :** ಈ ದಿನ ಬೆಳಿಗ್ಗೆ ತಾವು ಹೇಳಿದಂತೆ ವಿಷಯ ಒಂದೇ ಆಗಿದ್ದಲ್ಲಿ ಅಂತಹ ತಿದ್ದುಪಡಿಗಳನ್ನೆಲ್ಲಾ ಏಕೀಕರಿಸಿ ಒಂದೇ ತಿದ್ದುಪಡಿಯಲ್ಲಿ ಮಂಡಿಸಬಹುದು ಎಂದಿದ್ದೀರಿ. ಆದರೆ

ಇದರ ಬಗೆಗೆ ಮೂರು ದಿನ ಮಾತನಾಡಿದವರಿಗೂ ಮತ್ತೊಮ್ಮೆ ಅವಕಾಶ ನೀಡಲಾಗುವುದೇ?

**ಉಪಾಧ್ಯಕ್ಷ :** ಅವನ್ನೆಲ್ಲಾ ಬದಿಗಿರಿಸಲಾಗಿದೆ.

**ಶ್ರೀಮತಿ ರೇಣುಕಾರಾಯ್ :** ಹಲವು ತಿದ್ದುಪಡಿಗಳ ಬಗೆಗೆ ಫೆಬ್ರವರಿ ಅಧಿವೇಶನದಲ್ಲಿಯೇ ಮೂರು ಹಾಗೂ ನಾಲ್ಕು ದಿನ ಭಾಷಣ ಮಾಡಿದ್ದಾರೆ, ಅವರಿಗೆ ಮತ್ತೆ ಆಸ್ಪದ ನೀಡಲಾಗುವುದೇ?

**ಉಪಾಧ್ಯಕ್ಷರು :** ನಾನೇನು ಮಾಡಬಹುದು ಎಂದರೆ ಯಾರಾದರೂ ಈ ಹಿಂದೆಯೇ ತಾನು ಮಂಡಿಸಿರಬಹುದಾದ ತಿದ್ದುಪಡಿಯನ್ನು ಸೂಚಿಸಿದರೆ ಸಾಕು. ನಾನು ಅದನ್ನು ಗುರುತುಹಾಕಿಕೊಳ್ಳುವೆ. ಕಾರ್ಯಾಲಯವೂ ಅದನ್ನು ಟಿಪ್ಪಣಿ ಮಾಡಿಕೊಳ್ಳುತ್ತದೆ. ಸಮಯ ಒದಗಿದಾಗ ನಾನು ಅದನ್ನು ಸೇರಿಸಿಕೊಳ್ಳುವೆ. ಭಾಷಣಕ್ಕೆ ಸಂಬಂಧಿಸಿದಂತೆ ಪುನರುಕ್ತಿಯಾಗಲು ಆಸ್ಪದ ನೀಡಲಾರೆ. ಇಷ್ಟನ್ನು ನಾನು ಸ್ಪಷ್ಟಗೊಳಿಸುವೆ.

**ಶ್ರೀ ಕಾಮತ್ :** ಆದರೆ, ಆ ತಿದ್ದುಪಡಿಗಳ ಬಗೆಗೆ ಚರ್ಚೆಯನ್ನು ವಿರೋಧಿಸಿಲ್ಲ ತಾನೆ? ಅಥವಾ ಆ ಎಲ್ಲಾ ತಿದ್ದುಪಡಿಗಳನ್ನು ಮುಕ್ತಾಯಗೊಳಿಸಲಾಗಿದೆ ಎಂದು ಭಾವಿಸಬೇಕೆ?

**ಉಪಾಧ್ಯಕ್ಷರು :** ಎಲ್ಲಾ ತಿದ್ದುಪಡಿ ವಿಧೇಯಕಗಳನ್ನೂ ಚರ್ಚಿಸಲಾಗುವುದು. ಯಾವ ತಿದ್ದುಪಡಿಯನ್ನೂ ಮುಕ್ತಾಯಗೊಳಿಸಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಕೆಲವು ಪುನರುಕ್ತಿಗಳಾಗಬಹುದು. ಏಕೆಂದರೆ ಈ ಅವಧಿಯಲ್ಲಿ ಸದನವು ಮರೆತಿರಲೂಬಹುದು.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರಿಗೆ, ಪುನರುಕ್ತಿಯಿಂದಾಗಬಹುದಾದ ಅಸಹಾಯಕತೆಯ ಅರಿವಿದೆ. ಆದುದರಿಂದ ನಾನು, ತೊಂದರೆಗೀಡಾದರೂ ಹೆಚ್ಚು ಜಾಗರೂಕತೆಯನ್ನು ವಹಿಸುವೆನು.

ಭಾಗ (ಎ) ಉಪನಿಬಂಧನೆ (೧) ನಿಬಂಧನೆ (೨)ರ "ಸದಸ್ಯರು" ಬದಲಾಗಿ "ಅನುಯಾಯಿಗಳು" ಸೇರ್ಪಡಿಸಬೇಕು.

ಇದೊಂದು ಸಾಧಾರಣ ತಿದ್ದುಪಡಿ. ಇದನ್ನು ಡಾ. ಅಂಬೇಡ್ಕರ್‌ರೂ ಒಪ್ಪಿದ್ದಾರೆ. ನಿಬಂಧನೆಯನ್ನು ಹೀಗೆ ಓದಬಹುದು. "ಮತ್ತು ಬ್ರಾಹ್ಮಣ, ಪ್ರಾರ್ಥನಾ ಹಾಗೂ ಆರ್ಯಸಮಾಜದ ಅನುಯಾಯಿಗಳು"

**ಶ್ರೀ ಭಟ್ (ಬೊಂಬಾಯಿ) :** ನಾನು ಮಂಡಿಸುವೆ.

ಕಲಮು (೨)ರ ಉಪಕಲಮು (೨) ಬದಲು ಸೇರಿಸಿ :

'೯೨) ಈ ಕೋಡ್ ಯಾವ ಜಾತಿಬೇಧವಿಲ್ಲದೇ ಹಿಂದೂ ಲಾ ಅನುಸರಿಸುವ ಎಲ್ಲರಿಗೂ ಅನ್ವಯಿಸಲಾಗುವುದು ಅಥವಾ ಸಂಪ್ರದಾಯ ಜಾರಿಯಲ್ಲಿ ಇರುವ ಎಲ್ಲಾ ಕಾನೂನುಗಳಿಗೂ ಅನ್ವಯಿಸಲಾಗುವುದು.'

ನಾನು ಬೇರೆ ಯಾವ ತಿದ್ದುಪಡಿಯನ್ನೂ ಮಂಡಿಸಲಿಲ್ಲ. ಆದರೆ ಡಾ. ಅಂಬೇಡ್ಕರ್‌ರು 'ಪಂಗಡ' ಪದದೊಂದಿಗೆ 'ಸಮುದಾಯ' ಪದವನ್ನೂ ಪ್ರಯೋಗಿಸಿರುವರು. ಅದರೊಂದಿಗೆ 'ಕ್ಲಾನ್' ಅಂದರೆ 'ಕುಲ'ವನ್ನೂ ಸೇರ್ಪಡಿಸಬಹುದಲ್ಲವೆ?

**ಶ್ರೀ ಬಾರ್‌ಮನ್ (ಪ.ಬಂ) :** ನಾನು ಮಂಡಿಸುವೆ.

ಎರಡನೆ ಕಲಮು (೨) ಉಪಕಲಮು "ಆ ವಿಷಯಗಳಿಗೆ ಸಂಬಂಧಿಸಿದಂತೆ" ಎಂಬುದರ ಕೊನೆಯಲ್ಲಿ "ಆ ವಿಷಯಗಳ ಬಗೆಗೆ ಆ ವ್ಯಕ್ತಿಯು ಸ್ವಯಂ ಆಯ್ಕೆ ಮಾಡದೇ ಹೋದರೆ" ಎಂದು ಸೇರ್ಪಡಿಸಬೇಕು.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರ ಅಭಿಪ್ರಾಯದಂತೆ, ವ್ಯಕ್ತಿಗೆ ಹಿಂದೂ ಕೋಡ್‌ನ ವ್ಯಾಪ್ತಿಗೆ ಬರಲು ಆಸ್ಪದ ನೀಡಬೇಕೆಂದಾಯಿತು.

**ಡಾ. ಅಂಬೇಡ್ಕರ್ :** ಅಲ್ಪಸ್ವಲ್ಪ ಹಾಗೇ.

**ಶ್ರೀ ಬಾರ್‌ಮಾನ್ :** ನನ್ನ ಉದ್ದೇಶವೆಂದರೆ, ಯಾವ ವ್ಯಕ್ತಿ ಸ್ವಯಂಪ್ರೇರಣೆಯಿಂದ ಹಿಂದೂ ಲಾ ಹಾಗೂ ಸಂಪ್ರದಾಯಗಳಿಗೆ ತನ್ನ ಸಮ್ಮತಿಯನ್ನು ಸೂಚಿಸಿದ ನಂತರ, ಅವನು ಆ ಕಾನೂನಿಗೆ ವಿರೋಧ ವ್ಯಕ್ತಪಡಿಸಲಾರ. ಆದರೆ ಬೇರೆ ಯಾರಾದರೂ ಇದನ್ನು ಪ್ರಶ್ನಿಸಬಹುದು ಅಥವಾ ಆ ವ್ಯಕ್ತಿ ಹಿಂದೂ ಲಾ ಹಾಗೂ ಸಂಪ್ರದಾಯಗಳಿಗೆ ಬದ್ಧನಾಗಿಲ್ಲ ಎಂದೂ ಪ್ರತಿಪಾದಿಸಬಹುದು. ಹೀಗಾಗಿ ಆ ವ್ಯಕ್ತಿಯೇ ಸ್ವಯಂ ಘೋಷಿಸಿದಾಗ ಈ ತಾಪತ್ರಯವಿರದು.

**ಉಪಾಧ್ಯಕ್ಷರು :** ಅವರು ಈಗಾಗಲೇ ಆಯ್ಕೆಮಾಡಿಕೊಂಡಿದ್ದರೆ, ಅವರು ಹಿಂದೂ ಲಾ ದ ಪೂರ್ವಭಾಗಗಳಿಂದ ಮುಕ್ತವಾಗಬಹುದೇ ಎಂಬುದನ್ನು ಸ್ಪಷ್ಟಪಡಿಸಿದಂತಾಗಬಲ್ಲದು.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮಂಡಿಸಬಯಸುವೆ.

i) ಉಪಕಲಮು ೨ರ ಉಪಕಲಮು ಭಾಗ (ಬಿ) ಕೈಬಿಡಬೇಕು.

ii) ಕಲಮು ೨ ಕಲಮು ೧ರ ಭಾಗ (ಎ)ನಲ್ಲಿಯ "ಹಿಂದೂಗಳು ಅಂದರೆ ಹಿಂದೂ ಧರ್ಮ ಆಚರಿಸುವ" ಬದಲಾಗಿ "ಹಿಂದೂಧರ್ಮಕ್ಕೆ ಸೇರಿದ ವ್ಯಕ್ತಿಗಳು" ಸೇರ್ಪಡಿಸಬೇಕು.

**ಉಪಾಧ್ಯಕ್ಷರು :** ಇದು ಮಾನ್ಯ ಮಂತ್ರಿಗಳು ಮಂಡಿಸಿದ ತಿದ್ದುಪಡಿಯಂತೆ ಇದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ವಾಕ್ಯರಚನೆಯಲ್ಲಿ ಭೇದವಿದೆ. ನಂತರ ನಾನು ಮಂಡಿಸಲು ಬಯಸುವೆ.

iii) ಭಾಗ (ಎ) ಉಪಕಲಮು (೧) ಕಲಮು ೨ ಸೇರ್ಪಡಿಸಬೇಕಾದ "(ಬಿ) ಯಾವುದೇ ವ್ಯಕ್ತಿ ಜೈನಧರ್ಮಕ್ಕೆ ಸೇರಿದವ"

**ಉಪಾಧ್ಯಕ್ಷರು :** ಅವರು ಬೌದ್ಧರನ್ನು ಹಾಗೂ ಸಿಖ್ ಜನಾಂಗದವರನ್ನು ಕೈಬಿಡಬೇಕೆಂದಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಹೌದು ಸರ್.

**ಡಾ. ಅಂಬೇಡ್ಕರ್ :** ಬಹು ವಿಧವಾದ ತಿದ್ದುಪಡಿಗಳಿವೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಅದರಲ್ಲಿ ಕೆಲವು ಆಯ್ಕೆಗಳು ಮಾತ್ರ.

**ಡಾ. ಅಂಬೇಡ್ಕರ್ :** ಒಂದು ತಿದ್ದುಪಡಿಯಂತೆ, ಬೌದ್ಧರನ್ನು ಮತ್ತು ಸಿಖ್ಖರನ್ನು ಕೈಬಿಡಬೇಕೆಂದು ಸೂಚಿಸಿದರೆ, ಮತ್ತೊಂದು ತಿದ್ದುಪಡಿಯು ಜೈನರನ್ನು ಕೈಬಿಡಬೇಕೆಂದು ಸೂಚಿಸುತ್ತದೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರೊಬ್ಬರು ಜೈನರನ್ನು ಕೈಬಿಡಲಾಗದು ಎಂದೇ ಸೂಚಿಸಿದ್ದಾರೆ.

**ಶ್ರೀ ನಜೀರುದ್ದೀನ್ ಅಹಮ್ಮದ್ :** 'ಜೈನರು' ಇರಲೇಬೇಕು. ಮಾನ್ಯ ಸದಸ್ಯರು ಅದರಲ್ಲಿಯೂ ಮಾನ್ಯ ಸಚಿವರು ಯಾವ ಬಗೆಯ ನಿರ್ಣಯ ಕೈಕೊಳ್ಳುವರೋ ಎಂಬುದನ್ನು ಅರಿಯದೇ ಹೋಗಿದ್ದಾರೆ.

**ಉಪಾಧ್ಯಕ್ಷರು :** ಅವರ ಎಲ್ಲ ತಿದ್ದುಪಡಿಗಳಲ್ಲಿ "ಜೈನರ"ನ್ನು ಸೇರಿಸಿದ್ದಾರೆ. ಅವರು ಬೇರೆಯವರಾದ ಬೌದ್ಧರನ್ನು ಮತ್ತು ಸಿಖ್‌ರನ್ನು ಕೈಬಿಡಬೇಕೆಂದಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** 'ಜೈನ'ರಿಗೆ ನನ್ನದೇನೂ ವಿರೋಧವಿಲ್ಲ. ಆದರೆ ಸಿಖ್ಖರ ಬಗೆಗೆ ಗಂಭೀರವಾದ ವಿರೋಧವಿದೆ.

**ಉಪಾಧ್ಯಕ್ಷರು :** ಅವರು ಈಗ ಹಿಂದೂ ಕೋಡ್‌ನ ವ್ಯಾಪ್ತಿಗೆ ಒಳಪಟ್ಟಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಇಡೀ ಪ್ರಶ್ನೆ ಎಂದರೆ ಈ ವಿಧವಾದ ಹಿಂದೂ ಲಾ ಅನ್ನು ಹೇರುವುದು ಸೂಕ್ತವೇ? ಅವರು ಹಿಂದೂಗಳು ಅಂದರೆ ಸಂದೇಹವೇ ಇಲ್ಲ. ಆದರೆ ಈ ವಿಧವಾದ ನಾನ್ ಹಿಂದೂ ಲಾ ಅಥವಾ ಹಿಂದೂ ಲಾ ಅನ್ನು ಅವರ ಮೇಲೆ ಹೇರಬಹುದೇ?

ನಂತರ ನಾನು ಮಂಡಿಸುವುದೇನೆಂದರೆ :

....................ಕಲಮು (೨) ಉಪಕಲಮು (೧)ರಲ್ಲಿ **"**ಅನೈತಿಕ**"** ಪದದ ನಂತರ

**"**ಹದಿನೆಂಟು ವರ್ಷ ವಯಸ್ಸಿನವನಾಗಿ ಯಾರು ಹಿಂದೂಗಳೂ**"** ಮತ್ತು

(vi) ಭಾಗ (ಸಿ) (೧) ಉಪನಿಬಂಧನೆ (೧) ನಿಬಂಧನೆ (೨) **"**ಪಾಲಕರು**"** ನಂತರ ಅಥವಾ **"**ಇದ್ದಾಗ**"** (vii) ಭಾಗ (ಡಿ) ಉಪನಿಬಂಧನೆ (೧) ನಿಬಂಧನೆ (೨)ರ ಅಂತ್ಯದಲ್ಲಿ ಸೇರ್ಪಡಿಸಬೇಕಾದ **"**ಮತಾಂತರ ಹೊಂದುವ ಮುನ್ನ ಇದ್ದ ಹಕ್ಕುಬಾಧ್ಯತೆಗಳು**"**

**ಉಪಾಧ್ಯಕ್ಷರು :** ಸ್ವಲ್ಪ ಸಮಯ ನಿಲ್ಲೋಣ. ಏಕೆಂದರೆ ಜಸ್ಪತ್‌ರಾಯರ ಹೇಳಿಕೆಯಂತೆ ಮತಾಂತರ ಹೊಂದಿದ ನಂತರವೂ ಇದೇ ಹಿಂದೂ ಕೋಡ್ ಬಿಲ್ಲಿನಂತೆ ಅವರ ಹಕ್ಕು ಬಾಧ್ಯತೆಗಳಿರಬೇಕು ಎಂಬುದನ್ನು ಹೇಗೆ ಅನ್ವಯಿಸಬಹುದು ಎಂಬುದನ್ನು ಆಲೋಚಿಸಬೇಕಾಗಿದೆ. ಏಕೆಂದರೆ ತಿದ್ದುಪಡಿಯಂತೆ, ಮುತಾಂತರ ಹೊಂದಿದ ವ್ಯಕ್ತಿಗೆ ಅವನ ಮೂಲ ಧರ್ಮದ ಹಕ್ಕುಬಾಧ್ಯತೆಗಳನ್ನು ನೀಡಕೂಡದು ಎಂದಿದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರ ಹೇಳಿಕೆ ತಪ್ಪಾಗಿದ್ದರೆ ನನ್ನ ಹೇಳಿಕೆಯೂ ತಪ್ಪೇ. ನಾವು ಒಂದು ವಿಷವರ್ತುಲದಲ್ಲಿದ್ದೇವೆ, ಏಕೆಂದರೆ ಮತಾಂತರದ ಮೂಲ ಉದ್ದೇಶವೆಂದರೆ, ಅವನ ಹಿಂದಿನ ಜೀವನದಿಂದ ಮುಕ್ತಿ ಪಡೆದು ನೂತನ ಅಧ್ಯಾಯವನ್ನು ಅನುಸರಿಸುವುದು. ಕಪೂರರು ತಿದ್ದುಪಡಿ ಮಂಡಿಸಿದಂತೆ, ನಾನೂ ತಿದ್ದುಪಡಿಯನ್ನು ಮಂಡಿಸಿರುವೆ. ಒಪ್ಪಿದರೆ ಎರಡನ್ನೂ ಒಪ್ಪಿರಿ, ಇಲ್ಲದೇ ಹೋದಲ್ಲಿ ಎರಡನ್ನೂ ತಿರಸ್ಕರಿಸಿ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರಿಬ್ಬರೂ ಮತಾಂತರದ ನಂತರದ ಬಗೆಗಿನ ಹಕ್ಕುಗಳಿಗೆ ಕುರಿತಂತೆ ತಮ್ಮ ನಿಲುವಿಗೇ ಭದ್ರವಾಗಿ ಅಂಟಿಕೊಂಡಿದ್ದಾರೆ. ಆದರೆ ಮತಾಂತರದಿಂದಾಗಿ ಆಸ್ತಿ ಹಾಗೂ ವಾರಸುದಾರ ಹಕ್ಕುಬಾಧ್ಯತೆಗಳಿಗೆ ಧಕ್ಕೆ ತಗುಲಬಾರದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಒಂದು ಪುರಾತನ ವಿಧೇಯಕವಿದೆ. ಅದರಂತೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದವರಿಗೆ ಅವರ ಹಿಂದಿನ ಧರ್ಮದ ಹಕ್ಕುಬಾಧ್ಯತೆಗಳನ್ನು ನೀಡಲಾಗಿದೆ.

(viii) ನಂತರ ನಾನು ಮಂಡಿಸುವುದೇನೆಂದರೆ

(೧)ನೆ ಉಪನಿಬಂಧನೆ, ನಿಬಂಧನೆ (೨)ರ ನಂತರ ಸೇರ್ಪಡಿಸಬೇಕು.

(೧ಎ) ಈ ಕೋಡ್ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಅನ್ವಯಿಸಲಾಗದು.

**ಡಾ. ಎಂ.ಎಂ. ದಾಸ್ (ಪ.ಬ) :** ಮಾನ್ಯ ಸದಸ್ಯರಿಗೆ ಪರಿಶಿಷ್ಟ ಜಾತಿ ಪಂಗಡಗಳ ಬಗೆಗೆ ಮಾತನಾಡಲು ಏನು ಅಧಿಕಾರವಿದೆ ಎಂದು ತಿಳಿಯಬಯಸುವೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಈಗ ತಿದ್ದುಪಡಿಗಳನ್ನು ಮಾತ್ರ ಮಂಡಿಸುತ್ತಿರುವೆ. ಅದನ್ನು ನಾನು ವಿವರಿಸುತ್ತಿಲ್ಲ. ಹಾಗೂ ನನ್ನ ಸ್ನೇಹಿತರಿಗೆ ತಿಳಿಸುತ್ತಲೂ ಇಲ್ಲ.

**ಉಪಾಧ್ಯಕ್ಷರು :** ಹಲವರು ಬೇರೆಯವರಿಗೆ ತಮಗಿಂತಲೂ ಹೆಚ್ಚು ವಿಧೇಯರಾಗಿರುತ್ತಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಕಾರಣಗಳನ್ನು ಹೇಳುವೆ. ಹಲವರಲ್ಲಿ ಸರಳ ವಿವಾಹ ಹಾಗೂ ವಿಚ್ಛೇದನ ವಿಧಾನಗಳಿವೆ. ಅವನ್ನು ಅಧಿಕ ಗೊಂದಲಕ್ಕೆ ಈಡುಮಾಡುತ್ತಿರುವಿರಿ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು, ಸಂಪೂರ್ಣವಾಗಿ ಈ ಕೋಡ್‌ಅನ್ನೇ ವಿರೋಧಿಸಿದ್ದಾರೆ ಎಂಬುದನ್ನು ಮರೆತಂತೆ ತೋರುತ್ತದೆ. ಅವರೇ ಹೇಳುವಂತೆ ವಿವಾಹ ಹಾಗೂ ವಿಚ್ಛೇದನ ವಿಧಾನಗಳು ಸರಳವಾಗಿದ್ದಲ್ಲಿ ಈ ವಿಧೇಯಕವನ್ನೇ ಮಂಡಿಸಬಾರದಾಗಿತ್ತು. ಇದೊಂದು ವಿಚಾರ ಮಾಡಬೇಕಾದ

ವಿಷಯವೇ ಆಗಿದೆ. (ಈ ಕೋಡ್ ಹಿಂದೂ ಸಮಾಜಕ್ಕೆ ಸೇರಿಲ್ಲವೆಂದೇ ಹೇಳಬೇಕಾಗುತ್ತದೆ).

**ಶ್ರೀ ನಜೀರುದ್ದೀನ್ ಅಹ್ಮದ್ :** ನನ್ನ ವಿರೋಧ ಸಂಪೂರ್ಣ ಕೋಡ್‌ನ ಹಾಗೂ ಅದರ ಅಂಶಗಳ ವಿರುದ್ಧವಾಗಿದೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು, ವಿಧೇಯಕದ ಹಲವಾರು ಭಾಗಗಳನ್ನು ಏಕೀಕರಿಸುವುದಿದೆ ಎಂಬ ಸಂಗತಿಯನ್ನೇ ಮರೆತಂತೆ ತೋರುತ್ತದೆ. ಅವರ ತಿದ್ದುಪಡಿಗಳೇ ಇದಕ್ಕೆ ಅಪವಾದಗಳಾಗಿವೆ. ಅಲ್ಲದೆ ಈಗ ಪ್ರಥಮವಾಗಿ ನಾವು ಕೇವಲ ಚರ್ಚಿಸುತ್ತಿದ್ದೇವೆ. ಹೀಗಾಗಿ ಸದಸ್ಯರು ತಮ್ಮ ಅಭಿಪ್ರಾಯವೇನು ಎಂದು ಸ್ಪಷ್ಟೀಕರಿಸಿದರೆ ಉತ್ತಮ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮಂಡಿಸುವುದೇನೆಂದರೆ (ix) ನಿಬಂಧನೆ (೨)ರ ಉಪನಿಬಂಧನೆ (೨)ನ್ನು ಕೈಬಿಡಿ.

**ಉಪಾಧ್ಯಕ್ಷರು :** ಇದೊಂದು ಶೇಷ ತಿದ್ದುಪಡಿ. ಅರ್ಥಹೀನವೆಂದೇ ಹೇಳುವೆ. ಯಾವ ಕೋಡ್? ಏನನ್ನು ಕುರಿತಿದೆ? ಹಿಂದೂ ವಾರಸುದಾರಿಕೆ ವಿಧೇಯಕವೇ?

**ಶ್ರೀ ನಜೀರುದ್ದೀನ್ ಅಹ್ಮದ್ :** ಯಾರಾದರೊಬ್ಬರು ನೂತನ ಧರ್ಮಕ್ಕೆ ಸೇರಿದವರು ಉದಾ: ಜಪಾನಿನಲ್ಲಿಯ ಷಿಂಟೋಯಿಸ್‌ಮಾಗೆ ಸಂಬಂಧಿಸಿದವರು ಭಾರತಕ್ಕೆ ಬಂದಾಗ ಅವರಿಗೆ ಹಿಂದೂ ಕೋಡ್ ಅಥವಾ ಮುಸ್ಲಿಂ ಕೋಡ್‌ನ್ನು ಅನ್ವಯಿಸುವಿರಾ? ಅವರಿಗೆ ಅವರದೇ ಆದ ಕೋಡ್‌ನ್ನು ಅನ್ವಯಿಸಲಾಗುವುದು. ವಿಧೇಯಕದ ಅಂಶವೇ ಹೇಳುವಂತೆ, ಅಂದರೆ ಬೇರೆಯ ಕಾನೂನಿನಡಿಯಲ್ಲಿ ಓರ್ವ ವ್ಯಕ್ತಿ ಬರುವಂತೆ ಇದ್ದುದು ಖಚಿತವಾದಲ್ಲಿ ಅವನಿಗೆ ಹಿಂದೂ ಕೋಡ್ ಅನ್ವಯಿಸಲಾಗದು. ಆಗ ಹೊಣೆ ಯಾರದು? ಯಾವುದೇ ವ್ಯಕ್ತಿ ಧರ್ಮದಲ್ಲಿಯೇ ನಂಬಿಕೆಯನ್ನೇ ಹೊಂದಿರದವನು ಭಾರತಕ್ಕೆ ಬಂದಲ್ಲಿ ಅವನಿಗೆ ನಾಗರಿಕ ಹಕ್ಕುಬಾಧ್ಯತೆಗಳಿವೆ. ಅವನಿಗೆ ಹಿಂದೂ ಕೋಡ್ ಅನ್ವಯಿಸಲಾಗುವುದೇ? ಮುಸ್ಲಿಂ, ಸಿಖ್, ಅಥವಾ ಕ್ರಿಶ್ಚಿಯನ್ ಕೋಡ್‌ಗಳ್ಳು ಏಕೆ ಅನ್ವಯಿಸಬಾರದು? ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಕೋಡ್‌ಗೆ ಅಧೀನನಾಗಿರಬೇಕು. ಈ ಅಂಶವನ್ನು ನಾನು ಸೂಕ್ತ ಸಮಯದಲ್ಲಿ ವಿವರಿಸುವೆ. ಈ ಅಂಶ ದೂರಗಾಮಿಯಾಗಿದೆ; ಏಕೆಂದರೆ ಭಾರತಕ್ಕೆ ಬರುವ ವ್ಯಕ್ತಿಯನ್ನೇ ಇದು ಅವಲಂಬಿಸಿದೆ. ಅದು ಕ್ರಿಶ್ಚಿಯನ್, ಮುಸ್ಲಿಂ, ಯಹೂದಿ ಅಥವಾ ಪಾರ್ಸಿ ಧರ್ಮಗಳನ್ನಲ್ಲ. ಹಿಂದೂ ಕೋಡ್‌ನಿಂದ ಅವನು ತನ್ನ ಸ್ಥಾನಮಾನ ಸಿದ್ಧಪಡಿಸಲಾರ.

**ಉಪಾಧ್ಯಕ್ಷರು :** ಅವರನ್ನು ಪ್ರೈವೇಟ್ ಇಂಟರ್‌ನ್ಯಾಷನಲ್ ಲಾದಂತೆ ಪರಿಗಣಿಸಲಾಗುತ್ತದೆ. ಅವರಿಗೆ ಹಿಂದೂ ಕೋಡ್ ಅನ್ವಯಿಸಲಾಗದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಜವಾಬ್ದಾರಿಯನ್ನು ಅಪರಿಚಿತರ ಮೇಲೆ ಹೇರಿದಂತೆ ಅಪಾಯಕ್ಕೆ ಈಡಾಗುತ್ತೇವೆ.

**ಶ್ರೀ ಜೆ.ಆರ್. ಕಪೂರ್ :** ಈ ಕೋಡ್‌ನ ಕೆಲವು ಅಂಶಗಳು ಹಿಂದೂಗಳಲ್ಲದವರಿಗೂ ಅನ್ವಯಿಸುತ್ತದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ಕೋಡಿನ ಸಮಗ್ರ ಅನ್ವಯಿಕೆಯು ವಿಧೇಯಕದಲ್ಲಿ ಬಳಸಿರುವ ಪದಗಳ ಮೇಲೆ ಅವಲಂಬಿಸಿದೆಯೇ ಹೊರತು ಅದರಲ್ಲಿ ಅಡಕವಾಗಿರುವ ಅರ್ಥದಂತಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮಂಡಿಸಬಯಸುವೆ.

(x) ನಿಬಂಧನೆ (೨)ರ ಉಪನಿಬಂಧನೆ (೩) ಕೈಬಿಡಬೇಕು.

ನನಗೆ ಈ ಉಪನಿಬಂಧನೆಯ ಪ್ರಶ್ನೆ ಬೇಡುವುದೇನೆಂದರೆ : ಅದು ಹೇಳುವಂತೆ ಹಿಂದೂ "ಈ

ಕೋಡ್‌ನ ಯಾವ ಅಂಶದಲ್ಲಿಯೇ ಉಪಯೋಗಿಸಿದಲ್ಲಿ ಅದು ಹಿಂದೂಧರ್ಮದಲ್ಲದವರಿಗೂ ಅನ್ವಯವಾಗುವಂತೇ ಬಳಸಲಾಗಿದೆ"

ಈ ಪ್ರಶ್ನೆಯನ್ನು ಸ್ಪಷ್ಟಪಡಿಸಲೇಬೇಕು. ಈ ಕೋಡ್ ಯಾರಿಗೆ ಅನ್ವಯಿಸುತ್ತದೆ? ನಾನು ಹೇಳುವಂತೆ ಈ ಕೋಡ್ ಕೇವಲ ಹಿಂದೂಗಳಿಗೆ ಅನ್ವಯಿಸುವುದಾದರೆ ಹಿಂದೂಗಳಲ್ಲದವರಿಗೆ ಎಷ್ಟರಮಟ್ಟಿಗೆ ಈ ಕೋಡ್ ಅನ್ವಯಿಸಬಹುದು?. "ಹಿಂದೂ" ಪದ ಯಾರಿಗೆ ಅನ್ವಯಿಸಬಹುದು ಎಂದು ಬೇಡಿದಂತಾಗುತ್ತದೆ. ಈ ವಿಷಯಗಳನ್ನು ನಾನು ಸೃಷ್ಟೀಕರಿಸಬೇಕು. ಇದರಲ್ಲಿ ತೊಂದರೆಗಳಿವೆ. ನಾನು ಅದಕ್ಕೆ ಮಂಡಿಸಬಯಸುವೆ.

(xi) ನಿಬಂಧನೆ (೨)ರ (ಎ) ಉಪನಿಬಂಧನೆ ಕೈಬಿಡಿ.

**ಡಾ. ಅಂಬೇಡ್ಕರ್ :** ನನ್ನದೂ ಅದೇ ತಿದ್ದುಪಡಿಯಾಗಿದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಮತ್ತೂ ಮಂಡಿಸುವುದೇನೆಂದರೆ

(x) ನಿಬಂಧನೆ (೨) ಉಪನಿಬಂಧನೆ (೪)ರ ನಂತರ ಸೇರ್ಪಡಿಸಿ :

೫) ಈ ಭಾಗಕ್ಕೆ ಅಡ್ಡಿಬಾರದಂತೆ "ಈ ಕೋಡ್ ಯಾವುದೇ ಪ್ರದೇಶದ ಶಾಸಕಾಂಗವು ಯಾವುದೇ ಸಮಯದಲ್ಲಿ ಯಾವ ಹಂತದಲ್ಲಿ ಜಾರಿಗೊಳಿಸಲು ಬಯಸುವುದೋ ಆ ಹಂತ ಹಾಗೂ ಸಮಯದಲ್ಲಿ ವಿಧೇಯಕರೂಪದಲ್ಲಿ ಜಾರಿಗೆ ಬರಲಿ"

**ಉಪಾಧ್ಯಕ್ಷರು :** ಈ ತಿದ್ದುಪಡಿಗೆ ಸಂಬಂಧಿಸಿದಂತೆ ನಾವು ಇದನ್ನು ಈ ಸದನವು ಪರಿಶೀಲಿಸಬಹುದೇ ಅಥವಾ ಅದನ್ನು....

**ಡಾ. ಅಂಬೇಡ್ಕರ್ :** ಅದನ್ನು ಒಂದನೆಯ ನಿಬಂಧನೆಯಲ್ಲಿ ತರಬಹುದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಅದನ್ನು ಒಂದನೇ ನಿಬಂಧನೆಯಲ್ಲಿಯೇ ಸೂಕ್ತವಾಗಿ ಪರಿಶೀಲಿಸಲಾಗುವುದು....

**ಉಪಾಧ್ಯಕ್ಷರು :** ಈ ವಿಧೇಯಕವನ್ನು ಎತ್ತಿ ಹಿಡಿಯಲಾಗಿದೆ ಮತ್ತು...

**ಶ್ರೀ ಝುಂಝುನವಾಲ (ಬಿಹಾರ) :** ನಾನು ಮಂಡಿಸುವೆ.

ಎರಡನೆಯ ನಿಬಂಧನೆಯ ಅಂಶಕ್ಕೆ "ಐದು ವರ್ಷಕ್ಕೆ ಮುಂಚೆ ಅಂದರೆ ಈ ಕೋಡ್ ಜಾರಿಗೆ ಬಂದಂದಿನಿಂದ ಈ ಮೇಲೆ ತಿಳಿಸಿದ ನಿಬಂಧನೆಗೆ ಅಡ್ಡಿಬಾರದಂತೆ ಸಂಸತ್ತಿನಿಂದ ನಿರ್ಣಯಿಸಿದ ನಮೂನೆಯ ಮೂಲಕ ನೋಂದಾಯಿಸದೇ ಹೋಗದ ವ್ಯಕ್ತಿಗೆ ಈ ಕೋಡ್ ಅನ್ವಯಿಸಲಾಗದು. ಆದರೆ ಅಪ್ರಾಪ್ತ ವಯಸ್ಸಿನವರಿಗೆ ಅವರು ಪ್ರಾಪ್ತವಯಸ್ಕರಾದ ನಂತರ ಅವರು ಈ ಕೋಡ್‌ಗೆ ಸಮ್ಮತಿಸಿದಲ್ಲಿ ಮಾತ್ರ ಅನ್ವಯಿಸಬಹುದು"

**ಶ್ರೀಭಟ್ :** ನಾನು ಮಂಡಿಸುವೆ.

ಎರಡನೆಯ ನಿಬಂಧನೆಯ ಉಪನಿಬಂಧನೆ (೩)ರ ನಂತರ "ಆಡಳಿತಕ್ಕೆ ಒಳಪಡಿಸಿದರೆ" ಬದಲಾಗಿ "ಆಡಳಿತಕ್ಕೆ ಸಮ್ಮತಿಸಿದರೆ".

**ಉಪಾಧ್ಯಕ್ಷರು :** ನಾನು ಸಾಧಾರಣ ಸ್ವರೂಪದಲ್ಲಿಯೇ ಈ ತಿದ್ದುಪಡಿಗಳನ್ನು ಸದನದ ಮುಂದೆ ಮಂಡಿಸುವೆ; ಆದರೆ ಅವು ಸದನದ ಮುಂದೆ ಇವೆ. ಇನ್ನು ಮುಂದೆ ಚರ್ಚೆಯ ಮುನ್ನ ಸಮಯದಲ್ಲಿಯೇ ತಿದ್ದುಪಡಿಗಳನ್ನೂ ಮಂಡಿಸಬಹುದು, ಏಕೆಂದರೆ ಈಗಾಗಲೇ ಚರ್ಚೆಯಲ್ಲಿ ಭಾಗವಹಿಸಿದ ಸನ್ಮಾನ್ಯ ಸದಸ್ಯರಿಗೆ ನೂತನ ತಿದ್ದುಪಡಿಗಳ ಚರ್ಚೆಯಲ್ಲಿ ಭಾಗವಹಿಸುವ ಆಸ್ಪದ ದೊರೆಯುತ್ತದೆ. ಅದೊಂದು ತಾಂತ್ರಿಕ ದೋಷ ಎಂದು ಹೇಳಲಾಗದು. ಏಕೆಂದರೆ ಇವೆಲ್ಲಾ ಸತ್ವಯುತವಾದ ತಿದ್ದುಪಡಿಗಳು. ಹೀಗಾಗಿ

ಮುಂಚೆಯೇ ಮಾತನಾಡಿದ ಸನ್ಮಾನ್ಯ ಸದಸ್ಯರಿಗೂ ನಾನು ಅವಕಾಶ ನೀಡುವೆ. ಅವಶ್ಯವೆನಿಸಿದರೆ ಮಾತ್ರ....

**ಡಾ. ಅಂಬೇಡ್ಕರ್ :** ಅವಕಾಶ ತುಂಬಾ ಕಡಿಮೆ.

**ಉಪಾಧ್ಯಕ್ಷರು :** ಆಸ್ಪದ ಕಡಿಮೆ ಇರಬಹುದು. ಆದರೆ ಸದಸ್ಯರು ಪುನರುಕ್ತಿಗೆ ಅವಕಾಶವಿಲ್ಲ, ಅದೊಂದನ್ನು ಬಿಟ್ಟು ಸದಸ್ಯರಲ್ಲಿ ನನ್ನ ಮನವಿ ಏನೆಂದರೆ ಎಲ್ಲಾ ತಿದ್ದುಪಡಿ ವಿಧೇಯಕಗಳನ್ನೂ ಸದಸ್ಯರು ನಿಬಂಧನೆ ಹಾಗೂ ಉಪನಿಬಂಧನೆಯ ಚರ್ಚೆಯ ಸಮಯದಲ್ಲಿಯೇ ಮಂಡಿಸಬೇಕು. ಇಲ್ಲದೇ ಹೋದರೆ ಸಂವಿಧಾನದಲ್ಲಿ ಪುನರುಕ್ತಿಗೆ ಆಸ್ಪದ ನೀಡಿದಂತಾಗುತ್ತದೆ.

ನಾನು ಈಗಾಗಲೇ ಸದನದ ಮುಂದೆ ಈ ದಿನ ಡಾ. ಅಂಬೇಡ್ಕರ್‌ರ ತಿದ್ದುಪಡಿಗಳನ್ನು ಮಂಡಿಸಿರುವೆ. ಈಗ ನಾನು ಸದನದ ಮುಂದೆ ಬಂದಿರಬಹುದಾದ ತಿದ್ದುಪಡಿಗಳನ್ನು ಮಂಡಿಸುವೆ.

(೧) ಶ್ರೀ ಜೆ.ಆರ್. ಕಪೂರ್ ಅವರಿಂದ ಸೂಚಿಸಿದ ತಿದ್ದುಪಡಿಯನ್ನು ನಂ. ೯೩ ಎಂದು ಮುದ್ರಿಸಲಾಗಿದೆ. ನಿಬಂಧನೆ ೨ಕ್ಕೆ ಕೆಳಗಿನದನ್ನು ಸೇರ್ಪಡಿಸಬೇಕು.

"ಭಾಗ IIರ ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದ ಅಂಶಗಳು ವಿವಾಹದ ಮುನ್ನವೇ ಅಥವಾ ವಿವಾಹದ ನಂತರ, ದಂಪತಿಗಳು ಒಪ್ಪಿಗೆಯನ್ನು ಘೋಷಿಸಿದಾಗ ಮಾತ್ರ ಅವರಿಗೆ ಅನ್ವಯಿಸಲಾಗುವುದು."

(೨) ಎರಡನೆ ನಿಬಂಧನೆಗೆ ಬದಲಾಗಿ

"ಕೋಡ್‌ನ್ನು ಅನ್ವಯಿಸುವಿಕೆ : ಈ ಕೋಡ್ ಅಥವಾ ವಿಧೇಯಕವು ಭಾರತದ ಪ್ರಬುದ್ಧ ವಯಸ್ಸಿಗೆ ಬಂದ ನಾಗರಿಕರು ತಮ್ಮ ಸ್ವಯಂಪ್ರೇರಣೆಯಿಂದ, ತಾವು ಈ ವಿಧೇಯಕಕ್ಕೆ ಬದ್ಧರಾಗಿರಲು ಬಯಸಿದ್ದೇವೆ ಎಂದು ಒಪ್ಪಿಗೆ ಸಾರಿದಾಗ ಮಾತ್ರ ಅನ್ವಯಿಸಲಾಗುವುದು. ಈ ವಿಧವಾದ ಒಪ್ಪಿಗೆಯನ್ನು ಕೇಂದ್ರ ಸರಕಾರ ನಿಗದಿಪಡಿಸಿದ ನಮೂನೆಯಲ್ಲಿ ನೀಡಬೇಕು. ಆದರೆ ಭಾಗ IIರ ವಿವಾಹ ಮತ್ತು ವಿಚ್ಛೇದನೆಗೆ ಸಂಬಂಧಿಸಿದ ಅಂಶಗಳು ವಿವಾಹದ ಮುನ್ನ ಅಥವಾ ವಿವಾಹದ ನಂತರ ದಂಪತಿಗಳು ಒಪ್ಪಿಗೆಯನ್ನು ನೀಡಿದರೆ ಮಾತ್ರ ಅನ್ವಯಿಸಲಾಗುವುದು.

(೩) ಡಾ. ಅಂಬೇಡ್ಕರ್‌ರು ಸೂಚಿಸಿದ ತಿದ್ದುಪಡಿಗಳನ್ನು ನಂ. ೩ ಮುದ್ರಿಸಿದೆ. ಅವರು ಸೂಚಿಸಿದ ತಿದ್ದುಪಡಿಯ ನಿಬಂಧನೆ ೨ ಉಪನಿಬಂಧನೆ (೧) ಭಾಗ (೧) (ii) ಸೇರಿಸಬೇಕು.

() (ಇ) ನೂತನ ಭಾಗವನ್ನು ಕೆಳಕಂಡಂತೆ ಸೇರಿಸಬೇಕು.

(ಇ) ಈ ವಿಧೇಯಕ ಜಾರಿಗೆ ಬಂದನಂತರ ಯಾವ ಧರ್ಮ ಹಾಗೂ ನಂಬಿಕೆಗೆ ಮತಾಂತರ ಹೊಂದಿದ್ದರೆ.

(೧೪) ಡಾ. ಅಂಬೇಡ್ಕರ್‌ರ ತಿದ್ದುಪಡಿ ನಂ ೩ರಲ್ಲಿ ಮುದ್ರಿಸಿದ ಭಾಗ (೧) (ii)ಯ (೨) ನಿಬಂಧನೆ ಉಪನಿಬಂಧನೆ (೧)ರಲ್ಲಿ "ಸಿಖ್‌ಧರ್ಮ"ದ ನಂತರ ಸೇರಿಸಬೇಕಾದ ಅಥವಾ ಯಾವುದೇ ಇತರ ಧರ್ಮ ಅಥವಾ ನಂಬಿಕೆ : ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮಗಳನ್ನು ಹೊರತುಪಡಿಸಿ.

(೫) ಡಾ. ಅಂಬೇಡ್ಕರ್‌ರ ತಿದ್ದುಪಡಿ ಮಸೂದೆ ೩ ಮುದ್ರಿಸಿದಂತೆ ನಿಬಂಧನೆ ೨ರ ಭಾಗ (೧)ರ ನಂತರ ಸೇರ್ಪಡಿಸಬೇಕಾದ.

(೧೪) ಉಪಕಲಮು (೨) ಅಂಶ ಕೊನೆಯಲ್ಲಿ ಸೇರ್ಪಡಿಸಬೇಕು.

"ಕೇಂದ್ರ ಸರಕಾರ ನಿಗದಿಪಡಿಸಿದ ನಮೂನೆಯಂತೆ ಯಾವನೇ ಆಗಲೀ ತನ್ನ ಅನುಮತಿಯನ್ನು ನೀಡಿ, ಇತರ ವಿಷಯಗಳ ಬಗೆಗೂ ಈ ಕೋಡ್‌ನಂತೆ ನಡೆದುಕೊಳ್ಳುವಂತೆ ಅಂಗೀಕಾರ ನೀಡಿರಬೇಕು".

(೬) ಡಾ. ಅಂಬೇಡ್ಕರ್ ತಿದ್ದುಪಡಿಯನ್ನು ನಂ. ೩ ಎರಡನೆ ನಿಬಂಧನೆ ಭಾಗ (೧)ರ ನಂತರ

"(೧) ಉಪಕಲಮು (೩)ರ "ಏರ್ಪಾಡುಗಳು" ಪದದ ಬದಲಾಗಿ "ಯಾವುದೇ ಅಥವಾ ಹೆಚ್ಚುವರಿ ಏರ್ಪಾಡುಗಳು" ಪದಗಳನ್ನು ಸೇರ್ಪಡಿಸಬೇಕು.

(೭) ನಂ. ೩ರಲ್ಲಿ ಮುದ್ರಿಸಿದ ಡಾ. ಅಂಬೇಡ್ಕರರ ತಿದ್ದುಪಡಿ ನಿಬಂಧನೆಯ ೨ ಭಾಗ (ii)ರ ನಂತರ ಸೇರ್ಪಡಿಸಬೇಕು.

"(೧A) ಉಪಕಲಮು (೩)ಇಲ್ಲಿ ಸೇರ್ಪಡಿಸಿದ ಅಥವಾ ಹೆಚ್ಚು ವಿಷಯಗಳ ಬಗೆಗೆ ಪ್ರಸ್ತಾಪಿಸಿರುವ"

(೮) ನಂ ೩ ಮುದ್ರಿಸಿರುವ ಡಾ. ಅಂಬೇಡ್ಕರ್‌ರ ತಿದ್ದುಪಡಿ ಭಾಗ (೨) ಸೇರ್ಪಡಿಸಬೇಕು.

"(೨) ಉಪಕಲಮು (೪) ಈ ಕೆಳಕಂಡಂತೆ ಸೇರ್ಪಡಿಸಬೇಕಾದ ವಿಷಯ:

"(೪) ಈ ಕೋಡ್ ಅಥವಾ ಅದರ ಯಾವ ಅಂಶವೇ ಆಗಲೀ ಬೇರೆಯವರು ಅಂದರೆ ಯಾರು ಕೇಂದ್ರ ಸರಕಾರ ನಮೂದಿಸಿದ ಅರ್ಜಿಯ ಮುಖಾಂತರ ತಮ್ಮ ಸಮ್ಮತಿಯನ್ನು ಸೂಚಿಸಿರುವರೋ ಅವರಿಗೆಲ್ಲಾ ಸಂದರ್ಭಕ್ಕೆ ಅನುಸರಿಸಲಾಗುವುದು."

(೯) ನಂ ೩ರಲ್ಲಿ ಮುದ್ರಿಸಿದಂತೆ ಡಾ. ಅಂಬೇಡ್ಕರ್‌ರ ತಿದ್ದುಪಡಿ ಭಾಗ (೨) ಸೇರ್ಪಡಿಸುವಿಕೆ

"(೩) ಉಪಕಲಮು (೩) ಈ ನೂತನ
ಉಪಕಲಮು ಸೇರ್ಪಡಿಸಬೇಕು.

"(೪) ಈ ಕೋಡ್ ಹಾಗೂ ಇದರ ಅಂಶಗಳು, ಯಾವುದೇ ಪ್ರಾಪ್ತವಯಸ್ಸಿನ ವ್ಯಕ್ತಿ ಕೇಂದ್ರ ಸರಕಾರ ನಿಗದಿಪಡಿಸಿದ ನಮೂನೆಯಲ್ಲಿ ಒಪ್ಪಿಗೆ ನೀಡಿದಲ್ಲಿ ಅವನು ಒಪ್ಪಿದ ಅಂಶಗಳನ್ನು ಅನ್ವಯಿಸಲಾಗುವುದು."

ಆದರೆ, ಭಾಗ IIರಲ್ಲಿ ಸೂಚಿಸಿದ ವಿವಾಹ ಹಾಗೂ ವಿಚ್ಛೇದನೆಯ ವಿಷಯ "ವಿವಾಹದ ಮುನ್ನ ಇಲ್ಲವೇ ವಿವಾಹದ ನಂತರ ದಂಪತಿಗಳು ಸಮ್ಮತಿ ನೀಡಿದ್ದಲ್ಲಿ ಮಾತ್ರ ಅನ್ವಯಿಸಲಾಗುವುದು."

(೧೦) ಭಾಗ (ಎ) ಉಪಕಲಮು (೧) ನಿಬಂಧನೆ (೨)ರಲ್ಲಿಯ "ಹಿಂದೂಗಳು ಅಂದರೆ ಹಿಂದೂಧರ್ಮವನ್ನು ಅನುಸರಿಸುತ್ತಿರುವ ಎಲ್ಲಾ ವ್ಯಕ್ತಿಗಳು" ಬದಲಿಗೆ ಸೇರ್ಪಡಿಸಬೇಕಾದುದೆಂದರೆ, "ಹಿಂದೂಧರ್ಮಕ್ಕೆ ಸೇರಿದ ವ್ಯಕ್ತಿಗಳು"

(೧೧) ಕಲಮು ೨ರ ಉಪಕಲಮು (೧) ಭಾಗ (ಎ)ರಲ್ಲಿಯ "ಸದಸ್ಯರು" ಪದಕ್ಕೆ ಬದಲು "ಅನುಯಾಯಿಗಳು" ಸೇರಿಸಬೇಕು.

(೧೨) ಕಲಮು (೨) ಉಪಕಲಮು (೧) ಭಾಗ (ಎ) ಕೈಬಿಡಬೇಕು.

(೧೩) ಕಲಮು (೨) ಉಪಕಲಮು (೧) ಭಾಗ (ಬಿ) ಸೇರ್ಪಡಿಸಬೇಕು.

(೧೪) ಕಲಮು ೨ ಉಪಕಲಮು (೧) ಭಾಗ (ಬಿ)ಯ "ಜೈನ ಅಥವಾ ಸಿಖ್" ಅಥವಾ "ಜೈನ" ಸೇರ್ಪಡಿಸಬೇಕು.

(೧೫) ಕಲಮು ೨ರಲ್ಲಿ 'ಸಿಖ್' ಪದವನ್ನು ಎಲ್ಲೆಡೆಗೂ ಕೈಬಿಡಬೇಕು.

(೧೬) ನಿಬಂಧನೆ (೨) ಉಪನಿಬಂಧನೆ (೧) ಭಾಗ (ಸಿ) ಅನ್ಯೈತಿಕ ಬದಲಾಗಿ ಯಾರು ೧೮

ವಯಸ್ಸನ್ನು ಹೊಂದಿ ಹಿಂದೂ ಆಗಿರುತ್ತಾರೋ ಮತ್ತು

(೧೭) ಕಲಮು (೨) ಉಪಕಲಮು (೧) ಭಾಗ (ಸಿ)ಯ "ಪೋಷಕರ" ಬದಲು "ಪೋಷಕರಾದವರು" ಸೇರಿಸಬೇಕು.

(೧೮) ನಿಬಂಧನೆ (೨) ಉಪನಿಬಂಧನೆ (ii) ಭಾಗ (ಸಿ)ಯ (ii) ಸೇರ್ಪಡಿಸುವಿಕೆ (iii) "ಯಾವ ಅನಾಥವೇ ಅಥವಾ ತೊರೆದಿರುವ ಮಗುವನ್ನು ರಾಜ್ಯ ರಕ್ಷಿಸಿ ಬೆಳೆಸಿದ್ದಲ್ಲಿ"

(೧೯) ಕಲಮು (೨) ಉಪಕಲಮು (೧) ಭಾಗ (ಡಿ)ಯ ಕೊನೆಯಲ್ಲಿ ಸೇರ್ಪಡಿಸುವಿಕೆ. "ಅವನ ಹಕ್ಕುಬಾಧ್ಯತೆಗಳು ಮತಾಂತರ ಹೊಂದುವ ಮುನ್ನ"

(೨೦) ಕಲಮು (೨) ಉಪಕಲಮು (೧)ನಂತರ ಸೇರಿಸಬೇಕು. (೧೪) ಈ ಕೋಡ್ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ವಯಿಸುವುದಿಲ್ಲ.

(೨೧) ಕಲಮು (೨) ಉಪಕಲಮು (೨) ಕೈಬಿಡಬೇಕು.

(೨೨) ಕಲಮು (೨) ಉಪಕಲಮು (೨) ಬದಲಿಗೆ "(೨) ಯಾರು ಹಿಂದೂ ಲಾಗೆ ಒಳಪಟ್ಟಿರುತ್ತಾರೆಯೋ, ಧರ್ಮ ಭೇದವೆಣಿಸದೆ ಅವರಿಗೆಲ್ಲಾ ಕೋಡ್ ಅನ್ವಯಿಸಲಾಗುವುದು"

(೨೩) ಕಲಮು (೨) ಉಪಕಲಮು (೨) ರಲ್ಲಿಯ "ಯಾವ ವಿಷಯಗಳಿಗೆ ಸಂಬಂಧಿಸಿದೆಯೋ" ಕೊನೆಯಲ್ಲಿ :

"ಆ ವಿಷಯಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯು ಸ್ವಯಂನಿರ್ಣಯದಂತೆ ನಿರ್ಧರಿಸದಿದ್ದರೆ"

(೨೪) ನಿಬಂಧನೆ (೨) ಉಪನಿಬಂಧನೆ (೩) ಕೈಬಿಡಬೇಕು.

(೨೫) ಕಲಮು (೨) ಉಪಕಲಮು (೩) ಬದಲಾಗಿ ಸೇರಿಸಿ.

"(೩) ಹಿಂದೂ" ಎಂದು ಹೇಳಿದಲ್ಲೆಲ್ಲಾ ಅದನ್ನು ಹಿಂದೂಗಳಲ್ಲದೇ ಹೋದವರಿಗೂ ಅಂದರೆ ಧರ್ಮದಿಂದ ಹಿಂದೂ ಆಗಿರದೆ, ಕೇಂದ್ರ ಸರ್ಕಾರ ನಿಗದಿಪಡಿಸಿದ ನಮೂನೆಯಲ್ಲಿ ತನ್ನ ಅಂಗೀಕಾರ ನೀಡಿದವರಿಗೆ ಈ ಕೋಡ್‌ಅನ್ನು ಅನ್ವಯಿಸಬಹುದು.

(೨೬) ನಿಬಂಧನೆ (೨) ಉಪನಿಬಂಧನೆ (೩) ನಂತರ : "ಆಳ್ವಿಕೆಗೆ ಒಳಪಟ್ಟ"ದ ಬದಲಾಗಿ "ಆಳ್ವಿಕೆಗೆ ಒಳಪಡುವ ಆಶೆಹೊಂದಿದ" ಸೇರಿಸಬೇಕು.

(೨೭) ಕಲಮು (೨) ಉಪಕಲಮು (೪)ನ್ನು ಬಿಡಬೇಕು.

(೨೮) ಕಲಮು (೨) ಕ್ಕೆ ಉಪಬಂಧವನ್ನು ಸೇರಿಸಬೇಕು.

ಭಾಗಗಳು II ಅಥವಾ/ಮತ್ತು ರಲ್ಲಿಯ ವಿವಾಹ ಮತ್ತು ವಿಚ್ಛೇದನದ ಅಂಶಗಳಿಗೆ ಸಂಬಂಧಿಸಿದಂತೆ ಮತ್ತು ವಾರಸುದಾರಿಕೆಯ, ವಿಷಯಗಳು ಅಪ್ರಾಪ್ತವಯಸ್ಸಿನವರಿಗೆ ಅನ್ವಯಿಸಲಾಗದು. ಆದರೆ ಪ್ರಾಪ್ತವಯಸ್ಸಿಗೆ ಬಂದ ನಂತರ, ಅವರು ಲಿಖಿತರೂಪದಲ್ಲಿ ಸಮ್ಮತಿ ಸೂಚಿಸಿದರೆ ಕೇಂದ್ರ ಸರ್ಕಾರ ನಮೂದಿಸಿರುವ ನಮೂನೆಯಲ್ಲಿ ತಿಳಿಸಿದವರಿಗೆ ಈ ಅಂಶಗಳು ಅನ್ವಯವಾಗುವುವು.

ಆದರೆ ಭಾಗ IIರಲ್ಲಿ ವಿವಾಹ ಹಾಗೂ ವಿಚ್ಛೇದನಗಳಿಗೆ ಸಂಬಂಧಿಸಿದ ವಿಷಯ, ಅವರು ವಿವಾಹ ಮುನ್ನ ಅಥವಾ ದಂಪತಿಗಳಾದ ಮೇಲೆ ಲಿಖಿತರೂಪದಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿದರೆ ಮಾತ್ರ ಅನ್ವಯಿಸಲಾಗುವುದು.

(೨೯) ಕಲಮು (೨)ರಲ್ಲಿ ಈ ಉಪಬಂಧವನ್ನು

ಆದರೆ ಮೇಲೆ ತಿಳಿಸಿದ ನಿಬಂಧನೆಯ ಯಾವ ಅಂಶವೂ, ಬಂಧನಕಾರಿಯಾಗಿರದು, ಅವರುಗಳೆಂದರೆ,

ಯಾವುದೇ ವ್ಯಕ್ತಿ ನಿಗದಿತ ಅಧಿಕಾರಿಗಳ ಮುಂದೆ ತನ್ನ ಹೆಸರನ್ನು ನೋಂದಾಯಿಸಿದ್ದರೆ, ಮತ್ತು ಮುಂದೆ ಸಂಸತ್ತಿನಿಂದ ಜಾರಿಗೊಳಿಸಬಹುದಾದ ನಿಯಮಗಳು, ಈ ಕೋಡ್ ಜಾರಿಗೆ ಬಂದ ಐದು ವರ್ಷಗಳ ನಂತರವೇ, ಈ ಅವಧಿಯಲ್ಲಿ ಅಪ್ರಾಪ್ತ ವಯಸ್ಸಿನವನಿದ್ದು, ಪ್ರಾಪ್ತವಯಸ್ಸಿನವನಾದಲ್ಲಿ ಮಾತ್ರ ಈ ಕೋಡ್‌ನ ಅಂಶಗಳ ವ್ಯಾಪ್ತಿಗೆ ಬರುವನು. ಅದು ಅವರ ನಿರ್ಣಯಕ್ಕೆ ಸಂಬಂಧಿಸಿದ್ದು."

(೩೦) ಕಲಮು (೨) ಉಪಬಂಧವನ್ನು ಸೇರಿಸುವುದು. ಆದರೆ ಈ ಮೇಲಿನ ನಿಬಂಧನೆ ಅಡ್ಡಿಯಾಗದಂತೆ, ಈ ಕೋಡ್‌ನಂತೆ ನಡೆದುಕೊಳ್ಳಲು ಸಮ್ಮತಿಸಿದ ವ್ಯಕ್ತಿಗಳಿಗೆ ಮಾತ್ರ ಅನ್ವಯಿಸಲಾಗುವುದು. ಮಿಕ್ಕ ತಿದ್ದುಪಡಿಗಳು, ಹಾಗೂ ನಕ್ಷತ್ರ ಗುರುತು ಹೊಂದಿರುವ ತಿದ್ದುಪಡಿಗಳನ್ನು ಚರ್ಚಿಸಬಹುದು. ಆದರೆ ನಾನು ಕೋರುವದೇನೆಂದರೆ ಈವರೆಗೂ ಚರ್ಚೆಯಲ್ಲಿ ಭಾಗವಹಿಸದೆ ಇರುವವರು ತಮ್ಮ ಸ್ಥಾನದಲ್ಲಿ ನಿಂತುಕೊಂಡರೆ ಗುರುತಿಸಬಹುದು.

ಈಗಾಗಲೇ ಚರ್ಚೆಯಲ್ಲಿ ಭಾಗವಹಿಸಿದವರು, ನೂತನವಾಗಿ ಏನನ್ನಾದರೂ ಹೇಳಬಯಸಿದರೆ, ಅವರಿಗೂ ಆಸ್ಪದ ಕಲ್ಪಿಸುವೆ.

**ಪಂಡಿತ ಮಾಳವೀಯ (ಉ.ಪ್ರ) :** ಸರ್, ಚರ್ಚೆಯ ಸಮಯದಲ್ಲಿ ಮತ್ತೆ ತಿದ್ದುಪಡಿಯ ವಿಧೇಯಕಗಳನ್ನು ಮಂಡಿಸಲು ಆಸ್ಪದ ನೀಡುವಿರಾ?.

**ಉಪಾಧ್ಯಕ್ಷರು :** ಚರ್ಚೆಯ ಸಮಯದಲ್ಲಿ ತಿದ್ದುಪಡಿಗೆ ಒಮ್ಮತ ಮೂಡಬೇಕಾದ ಸಂದರ್ಭದಲ್ಲಿ, ತಿದ್ದುಪಡಿಗೆ ಆಸ್ಪದ ನೀಡಲೂಬಹುದು. ಇದನ್ನು ಪರಿಶೀಲಿಸುವೆ. ಆದರೆ ನೂತನ ತಿದ್ದುಪಡಿಗಳು, ಹೊಸ ಬೆಳಕನ್ನು ಚೆಲ್ಲುವುದರಿಂದ ಸದನ ಅದಕ್ಕೆ ಹಾಗೂ ಅದರ ಚರ್ಚೆಗೆ ಆಸ್ಪದ ನೀಡಲಾರದೆಂದೇ ಭಾವಿಸುವೆ.

**ಕ್ವಾಜಾ ಇನಾಯತ್ ಉಲ್ಲಾ (ಬಿಹಾರ) :** ಸಂವಿಧಾನಕ್ಕೆ ವಿರೋಧವಾದ ತಿದ್ದುಪಡಿಯು ಕ್ರಮಬಾಹಿರವಾಗದೇ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು, ಈ ಬಗೆಗೆ ಉಲ್ಲಂಘನೆಯಾದಾಗ ನನ್ನ ಗಮನ ಸೆಳೆಯಬಹುದು.

**ಶ್ರೀ ಎಂ. ನಾಯಕ (ಒರಿಸ್ಸಾ) :** ಮಂಡಿಸಲಾದ ತಿದ್ದುಪಡಿ ಓರ್ವರಿಗಿಂತ ಮಿಗಿಲಾದ ಹೆಸರುಗಳಲ್ಲಿದ್ದರೆ, ಅದನ್ನು ಒಬ್ಬ ಸದಸ್ಯನ ಹೆಸರಿನಲ್ಲಿ ಪರಿಗಣಿಸಲಾಗುವುದೇ ಅಥವಾ ಎಲ್ಲರ ಹೆಸರಿನಲ್ಲಿ ಪರಿಗಣಿಸುವಿರಾ?

**ಉಪಾಧ್ಯಕ್ಷರು :** ಎಲ್ಲ ಸದಸ್ಯರೂ ನೋಟೀಸ್ ನೀಡಿದಂತೆ ಪರಿಗಣಿಸುವೆ.

**ಶ್ರೀ ಎಂ. ನಾಯಕ :** ಮಸೂದೆಯನ್ನು ಮಂಡಿಸಿದ ಮಾನ್ಯ ಸದಸ್ಯರು ಗೈರು ಹಾಜರಿದ್ದಲ್ಲಿ ಏನು ಮಾಡುವಿರಿ?

**ಉಪಾಧ್ಯಕ್ಷರು :** ನಾನು ಸುರಕ್ಷಿತ ಮಾರ್ಗ ಅನುಸರಿಸುವೆ. ಹಲವಾರು ಸದಸ್ಯರು ಕೂಡಿ ಮಂಡಿಸಿದ ಸಮಯದಲ್ಲಿ ಹಾಜರಿದ್ದ ಬೇರೆ ಸದಸ್ಯರು ಅದನ್ನು ಮಂಡಿಸಬಹುದು. ಪ್ರಶ್ನೆ ಎಂದರೆ ಎಲ್ಲಾ ಸದಸ್ಯರು ತಮ್ಮ ಸ್ಥಾನದಲ್ಲಿದ್ದರೆ ಎಲ್ಲರೂ ಮಂಡಿಸಿದ್ದಾರೆ ಎಂದೇ ಭಾವಿಸಬಹುದು. ಎಚ್ಚರದಿಂದ ಎಲ್ಲರೂ ಕೂಡಿಯೇ ಮಂಡಿಸಿದ್ದಾರೆ ಎಂದು ಹೇಳಬಹುದು. ಆದರೆ ಮರಳಿ ಪಡೆಯುವಲ್ಲಿ ಸದಸ್ಯನು ಸ್ಥಾನದಲ್ಲಿರದೇ ಹೋದರೆ ಅನ್ಯರು ಅದನ್ನು ಮರಳಿ ಪಡೆಯಬಹುದು.

**ಶ್ರೀ ಆರ್.ಕೆ. ಚೌಧರಿ :** ನಾನು ನೂತನ ತಿದ್ದುಪಡಿಗಳನ್ನು ವಿರೋಧಿಸಬೇಕೆಂದಿದ್ದೇನೆ. ಅದನ್ನು ಯಾವ ಸಮಯದಲ್ಲಿ ಮಾಡಬಹುದು?

**ಉಪಾಧ್ಯಕ್ಷರು :** ಯಾವ ಸಮಯದಲ್ಲಾದರೂ, ತಿದ್ದುಪಡಿಗಳ ಬಗೆಗೆ ಮಾತನಾಡಬಹುದು. ಇದರಲ್ಲಿ ಯಾವ ವರ್ಗದ ಸದಸ್ಯರ ಭೇದಭಾವಕ್ಕೆ ಆಸ್ಪದವಿಲ್ಲ. ಎಲ್ಲಾ ವರ್ಗೀಕರಣ ಮುಗಿದುಹೋಗಿವೆ.

ನಿಬಂಧನೆ ೨ಕ್ಕೆ ಸಂಬಂಧಿಸಿದಂತೆ (ಮಾಡಿಲ್ಲ)...ಅವುಗಳ ಸಾರಾಂಶವನ್ನೂ ಆಧರಿಸಿ ನಿಬಂಧನೆಗಳನ್ನು ಚರ್ಚಿಸಬಹುದು, ತಿದ್ದುಪಡಿಗಳ ಹಾಗೂ ಅವುಗಳ ತಿದ್ದುಪಡಿಗಳ ಬಗೆಗೂ ಚರ್ಚಿಸಬಹುದು.

**ಶ್ರೀ ಜೆ.ಆರ್. ಕಪೂರ್ :** ತಾವು ಈ ದಿನ ಮಂಡಿಸಲಾದ ಎಲ್ಲಾ ತಿದ್ದುಪಡಿಗಳನ್ನು ಶೇಖರಿಸಿ ಅದರ ಒಂದು ಪ್ರತಿಯನ್ನು ನಮಗೆಲ್ಲಾ ನೀಡುವಂತೆ ಕಾರ್ಯಾಲಯಕ್ಕೆ ಸೂಚಿಸಬೇಕು ಮತ್ತು ಈ ಹಿಂದೆ ಮಂಡಿಸಿದ ತಿದ್ದುಪಡಿಗಳನ್ನು ನೀಡಬೇಕು. ಇದು ನಮಗೆ ಸರಳ ಶೀಘ್ರ ಕೈಪಿಡಿಯಾಗಿ ಸಹಾಯವಾಗುತ್ತದೆ.

**ಉಪಾಧ್ಯಕ್ಷರು :** ಹಲವಾರು ಬಗೆಯ ತಿದ್ದುಪಡಿಗಳನ್ನು ಕ್ರಮಬದ್ಧವಾಗಿರಿಸಿದೆ, ಆದುದರಿಂದ ಅದನ್ನು ಮತ್ತೆ ಜೋಡಿಸುವ ಆವಶ್ಯಕತೆ ಇಲ್ಲ. ಅದನ್ನು ಹಂಚುವ ಬಗೆಗೆ ಮಾನ್ಯ ಸದಸ್ಯರಿಗೆ ನಾನು ಕೈಗೆತ್ತಿಕೊಂಡಿರುವ ಕ್ರಮ ಈಗಾಗಲೇ ತಿಳಿದಿದೆ.

**ಡಾ. ಅಂಬೇಡ್ಕರ್ :** ನಾನೂ ಅದನ್ನು ಗುರುತುಹಾಕಿಕೊಂಡಿದ್ದೇನೆ.

**ಶ್ರೀ ಜೆ.ಆರ್. ಕಪೂರ್ :** ಒಂದೇ ಭಾಗಕ್ಕೆ ಸೇರಿರಬಹುದಾದ ತಿದ್ದುಪಡಿಗಳನ್ನು ಒಂದೇ ಸ್ಥಾನದಲ್ಲಿದ್ದರೆ ಸೂಕ್ತ.

**ಉಪಾಧ್ಯಕ್ಷರು :** ನಾನು ಕಾರ್ಯಾಲಯಕ್ಕೆ ಸೂಚನೆ ನೀಡಿ ತಿದ್ದುಪಡಿಗಳನ್ನು ಕ್ರಮವಾಗಿ ಜೋಡಣೆ ಮಾಡಿ ಹಂಚಲು ಹೇಳುವೆ. ತಿದ್ದುಪಡಿಗಳು ಪುನರುಕ್ತಿಯಾಗದಂತೆ ನೋಡುವೆ.

**ಶ್ರೀ ಜೆ.ಆರ್. ಕಪೂರ್ :** ಅದು ಕಲಮಿನಿಂದ ಕಲಮಿಗೆ ಅನುಕೂಲವಾಗುವಂತಿರಬೇಕು.

**ಉಪಾಧ್ಯಕ್ಷರು :** ಅನೇಕ ಸನ್ಮಾನ್ಯ ಸದಸ್ಯರು ತಮ್ಮ ಗೃಹಗಳಿಗೆ ತೆರಳಿದ್ದಾರೆ. ಅವರು ಸಂಸದೀಯ ಕಾರ್ಯಕ್ಕೆಂದು ಮರಳಿ ಬರುತ್ತಾರೆ. ಆದುದರಿಂದ ಈ ಕಾರ್ಯವನ್ನು ಕಾರ್ಯಾಲಯ ಮಾಡದೇ ಸದಸ್ಯರೇ ಮಾಡಿದರೆ ಸರಿಯಲ್ಲವೇ? ಏಕೆಂದರೆ ಕಾರ್ಯಾಲಯ ಮಾಡಿದ್ದು ಸದಸ್ಯರಿಗೆ ಸಮ್ಮತಿಯಾಗದೇ ಹೋಗಬಹುದು, ಅಲ್ಲದೆ ಈ ದಿಶೆಯಲ್ಲಿ ಕಾರ್ಯದರ್ಶಿಯವರ ಅಭಿಪ್ರಾಯವನ್ನೂ ಅರಿಯಬಹುದಲ್ಲವೇ?

ಪಂಡಿತ ಮಾಳವೀಯರ ತಿದ್ದುಪಡಿಯನ್ನು ಅಪವಾದವೆಂದೇ ಪರಿಗಣಿಸಿ ಅಪ್ಪಣೆ ನೀಡುವೆ. ಆದರೆ ಇತರ ವಿಷಯಗಳ ಬಗೆಗೆ ಚರ್ಚೆಗೆ ಮುನ್ನ ನನಗೂ ಹಾಗೂ ಕಾನೂನು ಮಂತ್ರಿಗಳಿಗೂ ಮುಂಗಡವಾಗಿ ಒಂದು ಪ್ರತಿಯನ್ನು ನೀಡಲೇಬೇಕು ಇದು ಖಂಡಿತ. ಈ ದಿನ ಸದಸ್ಯರಿಗೆ ತಿದ್ದುಪಡಿಯನ್ನು ಯೋಚಿಸುವಲ್ಲಿ ಸಮಯ ಇರದೇ ಹೋಗಿರಲೂಬಹುದು. ಪಂಡಿತ ಮಾಳವೀಯಾ ಅವರು ತಮ್ಮ ತಿದ್ದುಪಡಿಯನ್ನು ಓದಲಿ.

**ಪಂಡಿತ ಮಾಳವೀಯ :** ನಾನು ಎರಡನೆಯ ಕಲಮಿಗೆ ಉಪಬಂಧವನ್ನು ಸೇರಿಸುವೆ. ಈ ಮಸೂದೆಗೆ ಯಾವ ಬಗೆಯ ವಿರೋಧವಾಗದಂತೆ, ಈ ಮಸೂದೆಯನ್ನು ಜನಾಭಿಪ್ರಾಯ ಸಂಗ್ರಹಣೆಗೆ ಮುನ್ನ ಅನ್ವಯಿಸಲಾಗದು. ಈ ಮಸೂದೆಯ ಜಾರಿಗೆ ಸಂಬಂಧಿಸಿದಂತೆ ವ್ಯಕ್ತಿಯು ವಾಸವಾಗಿರುವ ರಾಜ್ಯ ಹಾಗೂ ಶಾಸನಸಭೆ ಜನಾಭಿಪ್ರಾಯದಂತೆ ಈ ವಿಧೇಯಕದ ಅಂಶಗಳಿಗೆ ಅನುಮತಿ ನೀಡಿದ್ದರೆ ಮಾತ್ರ ಅನ್ವಯಿಸಲಾಗುವುದು. ಮುಂದುವರಿದು ಈ ಅಧಿನಿಯಮವು ತಮಗೆ ಅನ್ವಯಿಸುವುದಿಲ್ಲವೆಂದೂ ಘೋಷಣೆ ಮಾಡಬಹುದು.

**ಶ್ರೀಮತಿ ರೇಣುಕಾರಾಯ್ :** ಸರ್ ಎರಡು ಕಾರಣಗಳಿವೆ. ಅವನ್ನು ಸೂಚಿಸಬಯಸುವೆ. ಇದೊಂದು ಕಾಲಹರಣದ ಗೊತ್ತುವಳಿ. ಈ ದಿಶೆಯಲ್ಲಿ ಅಧ್ಯಕ್ಷರು ಈಗಾಗಲೇ ಹಿಂದಿನ ಅಧಿವೇಶನದಲ್ಲಿ ಅಪ್ಪಣೆ ನೀಡಿದ್ದಾರೆ.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರು ನೇರವಾಗಿ ಮಧ್ಯೆ ಪ್ರವೇಶ ಮಾಡಕೂಡದು, ನನ್ನ ಅಪ್ಪಣೆ

ಪಡೆಯಬೇಕು. ಉತ್ತಮ ಅಂಶವಿರಲೂಬಹುದು.....

**ಶ್ರೀಮತಿ ರೇಣುಕಾರಾಯ್ :** ಪಾಯಿಂಟ್ ಆಫ್ ಆರ್ಡರ್.

**ಉಪಾಧ್ಯಕ್ಷರು :** ಇರಬಹುದು. ಆದರೆ ಸದಸ್ಯರು ತಮ್ಮ ಆಸನದಲ್ಲಿ ನಿಂತು ನನ್ನ ಗಮನ ಸೆಳೆದು ನಾನು ಕರೆದಾಗ ಮಾತ್ರ ಮಾತನಾಡಬಹುದು.

**ಡಾ. ಅಂಬೇಡ್ಕರ್ :** ಇದು ಒಂದನೇ ಕಲಮಿನ ಕೆಳಗೆ ಬರಬಹುದು.

**ಪಂಡಿತ ಮಾಳವೀಯ :** ಇದು ಅನ್ವಯಿಸುವ ವಿಷಯಕ್ಕೆ ಸಂಬಂಧಿಸಿದೆ ; ಎಲ್ಲಿಯವರೆಗೆ ಎಂಬ ವಿಷಯವಲ್ಲ.

**ಉಪಾಧ್ಯಕ್ಷರು :** ಅದು ಹಾಗೇ ಇರಲಿ.

**ಶ್ರೀಮತಿ ರೇಣುಕಾರಾಯ್ :** ನಾನು ಎರಡು ವಿಷಯಗಳನ್ನು ಎತ್ತುತ್ತೇನೆ. ಮೊದಲನೆಯದೆಂದರೆ ಈ ತಿದ್ದುಪಡಿಯು ಸದನಕ್ಕೆ ಹಾಗೂ ಅದರ ವಿಧಾನಕ್ಕೆ ಹೊರತಾದ ಆದೇಶವನ್ನೇ ನೀಡಿದೆ. ಈ ವಿಧಾನವನ್ನೇ ನಾನು ಅರಿಯೆ, ಎರಡನೆಯದಾಗಿ ಇದೊಂದು ಕಾಲಹರಣ ಮಾರ್ಗವಾಗಿದೆ.

**ಪಂಡಿತ ಮಾಳವೀಯ :** ನಾನು, ಕಾಲಹರಣ ಪದಕ್ಕೆ ವಿರೋಧಿಸುವೆ.

**ಶ್ರೀಮತಿ ರೇಣುಕಾರಾಯ್ :** ಕಳೆದ ಸಲ ಅಧ್ಯಕ್ಷರು ಈ ಬಗೆಯ ಕಾಲಹರಣ ಸೂಚನೆಗಳ ಬಗ್ಗೆ ತಮ್ಮ ಆಜ್ಞೆಯನ್ನೇ ನೀಡಿದ್ದಾರೆ. ಎರಡನೆಯದಾಗಿ ಈ ಬಗೆಯ ತಿದ್ದುಪಡಿಗಳನ್ನು ಸದನಕ್ಕೆ ಆದೇಶ ರೂಪವಾಗಿ, ಅದೂ ಸದನ ಜಾರಿಯಲ್ಲಿದ್ದಾಗ ನೀಡಿದರೆ ಅದೊಂದು ಸಂಪ್ರದಾಯವೇ ಆಗಿ ಪರಿಣಮಿಸಬಹುದು.

**ಉಪಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ತಿಳಿದಂತೆ, ಈ ಬಗೆಯ ಕಾಲಹರಣ ಗೊತ್ತುವಳಿಯನ್ನು ನಿರಾಕರಿಸುವ ಅಧಿಕಾರ ಸದನಕ್ಕೆ ಇದೆ. ಸದನ ತನ್ನ ಚರ್ಚೆಯ ಮುಖಾಂತರ ಗೊತ್ತುವಳಿಯನ್ನೇ ತಿರಸ್ಕರಿಸಬಹುದು. ನಾನು ಮಹಿಳಾ ಸದಸ್ಯೆಯ ಸೂಚನೆಯನ್ನು ಅನುಸರಿಸುವೆ. ಆದರೆ ಅದರ ಔಚಿತ್ಯದ ಬಗೆಗೆ ನನಗೆ ಸಮಯ ಬೇಕು. ಅದು ಸದನದ ಮುಂದೆ ಬಂದಾಗ ಮಾತ್ರ ಹೇಳಬಲ್ಲೆ. ಆದುದರಿಂದ ನನ್ನ ನಿರ್ಣಯವನ್ನು ತಡೆ ಹಿಡಿಯುವೆ.

ಆದೇಶದ ಬಗೆಗೆ ನಾವು ಒಗ್ಗಿದ್ದೇವೆ. ಅದೊಂದು ಚಿಕ್ಕ ವಾಕ್ಯವಾಗಿದ್ದುದರಿಂದ ನಾನು ಅವರ ಹೇಳಿಕೆಯನ್ನು ಅನುಸರಿಸಿರುವೆ. ಮುಂದುವರಿಯೋಣ. ನಾನು ಈಗ ಸದನದ ಮುಂದೆ ಮಂಡಿಸುವೆ. ತಿದ್ದುಪಡಿಯನ್ನು ಮಂಡಿಸುವೆ. ನಿಬಂಧನೆ (೨) ಈ ಅಂಶ ಸೇರಿಸಬೇಕು.

ಈ ವಿಧೇಯಕಕ್ಕೆ ಯಾವ ಬಗೆಯ ವಿರೋಧವಾಗದಂತೆ, ಈ ವಿಧೇಯಕದ ಯಾವ ಅಂಶವನ್ನೂ, ಜನಮತಗಣನೆಯಾಗದೇ ಅನ್ವಯಿಸಬಾರದು. ಈ ದಿಶೆಯಲ್ಲಿ ವ್ಯಕ್ತಿಯು ವಾಸವಾಗಿರುವ ರಾಜ್ಯ ಅಥವಾ ಶಾಸಕಾಂಗವು ಜನಮತಗಣನೆಯ ಪರಿಣಾಮದ ಆಧಾರದ ಮೇಲೆ ನಿರ್ಣಯ ತೆಗೆದುಕೊಂಡ ನಂತರ ಅನ್ವಯಿಸಬಹುದು. ನಂತರ ಈ ವಿಧೇಯಕವು ತನಗೆ ಅನ್ವಯಿಸಬಾರದು ಎಂದು ಹೇಳುವ ವ್ಯಕ್ತಿಗೆ ಇದನ್ನು ಅನ್ವಯಿಸಲಾಗದು.

**ಪಂಡಿತ ಮಾಳವೀಯ :** ನನ್ನದೊಂದು ಕೋರಿಕೆ. ಈಗ ನಾನು ಚರ್ಚಿಸುತ್ತಿರುವ ವಿಷಯ ತುಂಬಾ ಗಂಭೀರವಾದದ್ದು.....

**ಉಪಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಅವಕಾಶ ಬರುತ್ತದೆ.

**ಪಂಡಿತ ಮಾಳವೀಯ :** ನಾನು ನಿಮ್ಮ ಗಮನಕ್ಕೆ ತರಬಯಸುವುದೇನೆಂದರೆ ನಾವು ಈ ಬಗೆಯ

ಗಂಭೀರ ವಿಷಯ ಚರ್ಚಿಸುವಾಗ ನಮ್ಮ ಭಾಷೆಯ ಬಗೆಗೆ ಅಧಿಕ ಗಮನ ನೀಡಬೇಕು. ಅದು ಸದನದ ಸಮಯ ಪೋಲಾಗಲು ಆಸ್ಪದ ನೀಡಬಾರದು. ಹಾಗೂ ಕೇವಲ ಸಮಯ ಹಾಳಾಗುತ್ತದೆ ಎಂಬ ಭಾವನೆಯೂ ಸರಿಯಲ್ಲ. ಏಕೆಂದರೆ ಸದಸ್ಯರು ವಿವಿಧ ಅಭಿಪ್ರಾಯವನ್ನು ಹೊಂದಿರುತ್ತಾರೆ. ಆದುದರಿಂದ ಚರ್ಚೆ ಅನಿವಾರ್ಯ. ಹಲವು ವಿಷಯಗಳನ್ನು ಮುಂಚಿತವಾಗಿಯೇ ಮಾಡದೇ ಹೋದರೆ ಕಾರ್ಯ ಕಷ್ಟಕರವಾಗಬಹುದು. ಅದನ್ನು ಕಾಲಹರಣ ಎಂದು ಕರೆಯಲಾಗದು. ನಾವು ವಿಶೇಷ ಜಾಗರೂಕತೆಯನ್ನು ವಹಿಸಬೇಕು.

**ಉಪಾಧ್ಯಕ್ಷರು :** ನಾನು ಈಗಾಗಲೇ ಸದಸ್ಯರಲ್ಲಿ ಮನವಿ ಮಾಡಿರುವೆ. ಅದನ್ನೇ ಮತ್ತೊಮ್ಮೆ ಪುನರುಚ್ಚರಿಸುವೆ. ಮಾನ್ಯ ಸದಸ್ಯರು ಚರ್ಚೆಯ ಸಮಯದಲ್ಲಿ ಭಾವೋದ್ವೇಗಕ್ಕೆ ಗುರಿಯಾಗಬಾರದು. **"ಕಾಲಹರಣ"** ಅಸಂಸದೀಯವಲ್ಲ. ಅದರ ಬಳಕೆಯಿಂದ ಯಾರಿಗೂ ಅವಮಾನ ಮಾಡಿದಂತಾಗಲಾರದು. ಏಕೆಂದರೆ ಸದನದ ಮುಂದಿರಬಹುದಾದ ಕ್ರಮಗಳನ್ನು ಶೀಘ್ರಗೊಳಿಸಲೆಂದೇ ಈ ಬಗೆಯ ಪದಗಳನ್ನು ಬಳಸಿದರೆ ಅದನ್ನು ತಪ್ಪಾಗಿ ಭಾವಿಸಬಾರದು, ಏಕೆಂದರೆ ಹಲವು ನಿಲುವಳಿಗಳು ಸೂಕ್ತವಾಗಿದ್ದರೆ ಇನ್ನು ಕೆಲವು ಕಾಲಹರಣವಾಗಿರಬಹುದು.

ಸದನದ ವಿವಿಧ ಸದಸ್ಯರಲ್ಲಿ ನನ್ನ ಮನವಿ ಎಂದರೆ, ನಾವು ಹಿಂದೂ ಲಾ ಹಾಗೂ ತತ್ಸಂಬಂಧಿ ವಿಷಯ ಒಂದು ಪವಿತ್ರ ಕಾರ್ಯವನ್ನು ಕೈಗೆತ್ತಿಕೊಂಡಿರುವೆವು. ಆದುದರಿಂದ ಗಂಭೀರವಾಗಿ ಈ ಸಮಸ್ಯೆಯನ್ನು ನಮ್ಮಲ್ಲಿರುವ ಭೇದಭಾವನೆಗಳನ್ನು ಬದಿರಿಗಿಸಿ, ಒಂದು ಉತ್ತಮ ವಾತಾವರಣವನ್ನು ನಿರ್ಮಿಸಿ ಕಾರ್ಯ ಪೂರೈಸೋಣ. ಆದುದರಿಂದ ಸದನದಲ್ಲಿ ಸಂಭ್ರಮ ಮತ್ತು ಆಹ್ಲಾದಕರ ವಾತಾವರಣ ಮತ್ತು ಮುಕ್ತ ಮನಸ್ಸಿನಿಂದ, ಹಾಗೂ ಶಾಂತಿಯಿಂದ ವರ್ತಿಸೋಣ.

**ಶ್ರೀ ಆರ್.ಕೆ. ಚೌಧುರಿ :** ನಾನು ನಿಮ್ಮನ್ನೊಂದು ಸಲಹೆ ಕೇಳಲೇ?

**ಡಾ. ಅಂಬೇಡ್ಕರ್ :** ಅದೇನು ಬಾರಿ ಬಾರಿ ಸಲಹೆ ಕೇಳುವಿರಿ?

**ಶ್ರೀ ಆರ್.ಕೆ. ಚೌಧುರಿ :** ಸರ್ ಈಗ ತಾನೇ ತಾವು ಶ್ರೀಮತಿ ರೇಣುಕಾರಾಯ್ ಅವರನ್ನು ಮ್ಯಾಡಂ ಎಂದೇ ಸಂಭೋದಿಸಿದಿರಿ. ಪೀಠವು ಈ ಬಗ್ಗೆ ಓರ್ವ ಸದಸ್ಯರನ್ನು ಹಾಗೆ ಸಂಭೋದಿಸಬಹುದೇ?

**ಉಪಾಧ್ಯಕ್ಷರು :** ನಾನು ವಿಷಾದವ್ಯಕ್ತಡಿಸುವೆ. ಅಲ್ಲದೆ ತಿದ್ದಿಕೊಳ್ಳುವೆ. ಯಾವ ಸದಸ್ಯರನ್ನೂ ಹಾಗೆ ಕರೆಯಬಾರದು. ಇನ್ನೂ ಮುಂದೆ ಜಾಗರೂಕನಾಗಿರುವೆ. ಉಪದೇಶಗಳು ವಿಪರೀತವಾದವು. ಚರ್ಚೆ ಮುಂದುವರಿಸೋಣ.

**ಗೃಹಮಂತ್ರಿ (ಶ್ರೀ ರಾಜಗೋಪಾಲಾಚಾರಿ) :** ಸರ್, ಕಳೆದ ತಿದ್ದುಪಡಿಯಲ್ಲಿ ಕ್ರಮಕ್ಕೆ ಸಂಬಂಧಿಸಿದ ಪ್ರಶ್ನೆ ಇನ್ನೂ ಮುಕ್ತವಾಗಿದೆಯೇ?

**ಉಪಾಧ್ಯಕ್ಷರು :** ಎಲ್ಲ ತಿದ್ದುಪಡಿಗಳೂ ಮುಕ್ತವಾಗಿಯೇ ಇದೆ. ನಾನು ಚರ್ಚೆಗೋಸ್ಕರವಾಗಿ ಅದನ್ನು ಮುಂದೆ ಮಂಡಿಸಿರುವೆ. ಸದನ ಯಾವಾಗಲಾದರೂ ಚರ್ಚಿಸಬಹುದು.

ನಾನು ಈಗ, ಹೆಚ್ಚು ತಿದ್ದುಪಡಿಗಳನ್ನು ಮಂಡಿಸಿದ ಮಹನೀಯರಿಗೆ ಮೊದಲು ಅವಕಾಶ ನೀಡಬಯಸುವೆ. ಈ ಕ್ರಮದಂತೆ ಮಾತನಾಡುವವರಿಗೆಲ್ಲಾ ಆಸ್ಪದ ಒದಗಿಸುವೆ. ಈಗಾಗಲೇ ಮಾತನಾಡಿದ ಸದಸ್ಯರಿಗೆ ಅಂತ್ಯದಲ್ಲಿ ಆವಶ್ಯಕ ಎಂದಲ್ಲಿ ಅವಕಾಶ ನೋಡಿ ಆಸ್ಪದ ನೀಡುವೆ.

**ಶ್ರೀ ರಾಜಗೋಪಾಲಾಚಾರಿ :** ನಾನು ಒಂದು ವಿಷಯವನ್ನು ಸೂಚಿಸಬಹುದೇ? ಯಾರು ಕನಿಷ್ಠ ಸಮಯದಲ್ಲಿ ಭಾಷಣ ಮುಗಿಸುವ ಭರವಸೆ ಹಾಗೂ ನಂಬಿಕೆಯಿಂದ ಹೇಳಬಯಸುವರೋ ಅವರಿಗೆ

ಮೊದಲು ಅವಕಾಶ ನೀಡಿ.

**ಮಾನ್ಯ ಸದಸ್ಯರು :** ಇಲ್ಲ, ಇಲ್ಲ.

**ಶ್ರೀ ರಾಜಗೋಪಾಲಾಚಾರಿ :** ಅವರ ನಂತರ ಬೇರೆಯವರಿಗೆ ಆಸ್ಪದ ನೀಡಬಹುದಲ್ಲವೇ? ಯಾರಾದರೂ ದೀರ್ಘ ಭಾಷಣ ಮಾಡಬಯಸಿದಲ್ಲಿ ಅದನ್ನು, ನಾವು ನಿರ್ಭಿಡೆಯಿಂದ ನಿರ್ಬಂಧಿಸಬಹುದು. ಏಕೆಂದರೆ ಕೇವಲ ಐದೇ ನಿಮಿಷದಲ್ಲಿ ಹೇಳಿಕೆಯನ್ನು ಮುಕ್ತಾಯಗೊಳಿಸುವವರಿಗೆ ದೀರ್ಘ ಭಾಷಣಗಳು ಅಡ್ಡಿಬರಬಾರದು.

**ಉಪಾಧ್ಯಕ್ಷರು :** ಈ ಸಲಹೆ ಉತ್ತಮವಾಗಿದೆ. ಆದರೆ ನನಗೆ ಒಂದು ತೊಂದರೆ. ಒಂದು ವಿಧೇಯಕದ ಬಗ್ಗೆ ಸಾಮಾನ್ಯ ಚರ್ಚೆ ನಡೆದಾಗ, ನಾನು ಕನಿಷ್ಠ ಅವಧಿಯಲ್ಲಿ ಮಾತನಾಡಿ ಮುಕ್ತಾಯಗೊಳಿಸುವವರಿಗೇ ಆದ್ಯತೆ ನೀಡುವೆ. ಹೀಗಾಗಿ ವಿಧೇಯಕದ ಮೇಲೆ ಹೆಚ್ಚು ಸದಸ್ಯರು ಭಾಗವಹಿಸಬಹುದು. ಆದರೆ ತಿದ್ದುಪಡಿಗಳ ಬಗೆಗೆ ಏನನ್ನೂ ಮಂಡಿಸಿರದ ಸದಸ್ಯರೇ ಅಧಿಕ ಸಮಯ ತೆಗೆದುಕೊಳ್ಳುತ್ತಾರೆ.

**ಶ್ರೀ ರಾಜಗೋಪಾಲಾಚಾರಿ :** ಯಾರ ಬಗೆಗೂ ಪೂರ್ವಗ್ರಹ ಹೊಂದಿರದೇ ನಾನು ಸಲಹೆ ಸೂಚಿಸಿದೆ. ಏಕೆಂದರೆ, ವಿಧೇಯಕದ ಚರ್ಚೆ ಯಾವ ಸಮಯದಲ್ಲಿಯೂ ಮುಕ್ತಾಯ ಹೊಂದಬಹುದು. ಹೀಗಾಗಿ ಮಹತ್ವದ ವಿಷಯ ಹೇಳುವವರಿಗೆ ಅಡಚಣೆ ಒದಗಬಹುದು.

**ಪಂಡಿತ ಠಾಕೂರ ದಾಸ ಭಾರ್ಗವ :** ಸದಸ್ಯರು ಲಘು ಅಥವಾ ದೀರ್ಘ ಭಾಷಣ ಮಾಡುವರೋ ಎಂಬುದನ್ನು ಹೇಗೆ ಅರಿಯಬಹುದು?

**ಶ್ರೀ ರಾಜಗೋಪಾಲಾಚಾರಿ :** ಇದು ಲಘು–ದೀರ್ಘಗಳ ಹೋರಾಟ?

**ಉಪಾಧ್ಯಕ್ಷರು :** ಸಾಮಾನ್ಯವಾಗಿ ಎಲ್ಲರೂ ಲಘು ಅವಧಿಯಲ್ಲಿಯೇ ಚರ್ಚೆ ಮುಕ್ತಾಯಗೊಳಿಸಬೇಕು.

**ಕ್ವಾಜಾ ಇನಾಯತುಲ್ಲಾ :** ನಾನು ಹಿಂದಿನ ಅಧಿವೇಶನದಲ್ಲಿ ಮಂಡಿಸಲಾದ ಹಲವು ತಿದ್ದುಪಡಿಗಳನ್ನು ವಿರೋಧಿಸಬಯಸುವೆ.

**ಉಪಾಧ್ಯಕ್ಷರು :** ಯಾರೂ ನಿಮ್ಮನ್ನು ಪ್ರತಿಬಂಧಿಸುವುದಿಲ್ಲ.

**ಶ್ರೀ ಭಾರತಿ (ಮದ್ರಾಸು) :** ನೀವು ತಿದ್ದುಪಡಿಗಳನ್ನು ಮಂಡಿಸಿದವರಿಗೆ ಆದ್ಯತೆ ನೀಡುತ್ತೇವೆ ಎಂದಿರಲ್ಲ ಅದೇ ಅವರ ತೊಂದರೆ.

**ಉಪಾಧ್ಯಕ್ಷರು :** ನಾನು ಅದನ್ನು ಕಡಿತಕ್ಕೆ ಗುರಿಮಾಡುವೆ ಎಂದು ಹೇಳಿಲ್ಲವಲ್ಲ, ಪ್ರತಿಯೊಬ್ಬರಿಗೂ, ಸದನ ಒಪ್ಪುವವರೆಗೂ ಅವಕಾಶವಿದೆ. ನಾನು ಕೇವಲ ಅಧಿಕ ತಿದ್ದುಪಡಿಗಳನ್ನು ಮಂಡಿಸಿದ ಮಾನ್ಯ ಸದಸ್ಯರಿಗೆ ಆದ್ಯತೆ ನೀಡಲಾಗುವುದು ಎಂದು ಮಾತ್ರ ಹೇಳಿರುವೆ. ಬೇರೆಯವರೂ ಮಾತನಾಡಬಹುದು.

**ಡಾ. ಎಸ್.ಪಿ. ಮುಖರ್ಜಿ (ಪ.ಬಂ) :** ಎದ್ದು ನಿಂತರು–

**ಉಪಾಧ್ಯಕ್ಷರು :** ಡಾ. ಮುಖರ್ಜಿ ಅವರು ಯಾವ ತಿದ್ದುಪಡಿಯನ್ನು ಮಂಡಿಸಿಲ್ಲ.

**ಡಾ. ಎಸ್.ಪಿ. ಮುಖರ್ಜಿ :** ನಾನು ಆ ಬಗೆಯ ಸದಸ್ಯರಲ್ಲಿ ಓರ್ವ....

**ಶ್ರೀ ರಾಜಗೋಪಾಲಾಚಾರಿ :** ಇದು ಎಲ್ಲಾ ನಿಯಮಗಳಿಗೂ ವಿರೋಧವಾಗಿದೆ.

**ಡಾ. ಎಸ್.ಪಿ. ಮುಖರ್ಜಿ :** .................ಯಾರು ಯಾವ ತಿದ್ದುಪಡಿಯನ್ನು ಮಂಡಿಸಿಲ್ಲ. ಅಲ್ಲದೆ ಸರ್ ನಾನು ಈ ಗಮನಾರ್ಹವಾದ ಕ್ರಮದ ಬಗೆಗೆ, ಈ ವಿಧೇಯಕದ ಮಂಡನೆಯಾದಂದಿನಿಂದಲೂ ಮಾತನ್ನೇ ಆಡಿಲ್ಲ.

**ಶ್ರೀ ನಜೀರುದ್ದೀನ್ ಅಹ್ಮದ್ :** ಅವರು ಆಗ ಮಂತ್ರಿಯಾಗಿದ್ದರು.

**ಡಾ. ಎಸ್.ಪಿ. ಮುಖರ್ಜಿ :** ಸರ್ ನಾವು ಏಳು ತಿಂಗಳ ಅವಧಿಯ ನಂತರ ಹಿಂದೂ ಕೋಡ್ ಬಿಲ್‌ನ ಬಗೆಗೆ ಯೋಚಿಸಲು ಸೇರಿದ್ದೇವೆ. ಈ ಅವಧಿಯಲ್ಲಿ ಅನೇಕ ವಿಷಯಗಳು ಜರುಗಿವೆ. ನಾನು ಹೇಳಬಹುದಾದರೆ ಸರಕಾರದವರು ಈ ವಿಧೇಯಕದ ಬಗೆಗೆ ಸದನದಲ್ಲಿ ಅಥವಾ ಸದನದ ಹೊರಗಡೆ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಿರುವುದು ಪ್ರಶಂಸನೀಯ.

**ಶ್ರೀ ಗಾಡಿಗೀಳ್ :** ಸಕಾರಣವಾಗಿದೆ.

**ಡಾ. ಎಸ್.ಪಿ. ಮುಖರ್ಜಿ :** ನನ್ನ ನಂಬಿಕೆಯಂತೆ, ನಮ್ಮ ದೇಶದ ಇತಿಹಾಸದಲ್ಲಿಯೇ ಈ ಬಗೆಯ ಚರ್ಚಾಸ್ಪದ ವಿಧೇಯಕವನ್ನೇ ನಾನು ಕಂಡಿಲ್ಲ. ಅಲ್ಲದೆ ಈ ಬಗೆಯ ಪರ–ವಿರೋಧ ಅಗಾಧ ಪ್ರಮಾಣ ಚರ್ಚೆಯನ್ನೂ ನಾನು ನೋಡಿಲ್ಲ.

**ಶ್ರೀಮತಿ ರೇಣುಕಾರಾಯ್ :** ಸತೀಪದ್ಧತಿ ತೊಡೆದು ಹಾಕಿದ ಬಗೆಗೆ?

**ಉಪಾಧ್ಯಕ್ಷರು :** ಓರ್ವ ಸದಸ್ಯರು ಮಾತನಾಡುತ್ತಿರುವಾಗ ಯಾರೂ ಮಧ್ಯೆ ಪ್ರವೇಶ ಮಾಡಬಾರದು; ಏಕೆಂದರೆ ಅದು ಉದ್ವೇಗಕ್ಕೆ ಆಸ್ಪದ ಮಾಡಿಕೊಡುತ್ತದೆ. ತಮ್ಮ ಅಭಿಪ್ರಾಯವನ್ನು ಬೇರೆಯವರ ಮೇಲೆ ಹೇರುವುದು ಸರಿಯಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಈಗ ನಾವು ಚರ್ಚೆಗೆ ಎತ್ತಿಕೊಂಡಿರುವ ನಿಬಂಧನೆಯು ಸಾಮಾನ್ಯವಾದುದು. ಒಂದು ದೃಷ್ಟಿಕೋನದಿಂದ ಈ ಕೋಡನ್ನು ಅನ್ವಯಿಸುವ ಪ್ರಶ್ನೆ ಕುರಿತಂತೆ ನಾನು ಹಲವಾರು ಸಾಮಾನ್ಯ ವಿಷಯಗಳ ಬಗೆಗೆ ಪ್ರಸ್ತಾಪಿಸಲು ಉದ್ದೇಶಿಸಿರುವೆ.

ಈಗ ನಮ್ಮೆದುರಿನ ಪ್ರಶ್ನೆ ಎಂದರೆ, ಈ ಕೋಡ್‌ಅನ್ನು ಕೇವಲ ಹಿಂದೂಗಳಿಗೆ ಮಾತ್ರ ಅನ್ವಯಿಸಬೇಕೇ ಅಥವಾ ಇತರ ವರ್ಗಗಳಿಗೆ ಅಂದರೆ ಸಿಖ್, ಜೈನ್, ಬುದ್ಧ ಜನಾಂಗಗಳಿಗೂ, ಕಾನೂನು ಸಚಿವರ ತಿದ್ದುಪಡಿಯಂತೆ ಅನ್ವಯಿಸಲಾಗುವುದೇ? ಮತ್ತೊಂದು ಪ್ರಶ್ನೆ ಎಂದರೆ, ಈ ಕೋಡ್‌ಅನ್ನು ಸಮಸ್ತ ಭಾರತೀಯ ಪ್ರಜೆಗಳಿಗೇಕೆ ಅನ್ವಯಿಸಬಾರದು. ನನಗೆ ತಿಳಿದಂತೆ ಈ ವಿಷಯವನ್ನು ಕಳೆದ ಫೆಬ್ರವರಿ ಅಧಿವೇಶನದಲ್ಲಿಯೇ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು; ಅದನ್ನು ಮತ್ತೆ ಪ್ರಸ್ತಾಪಿಸಿ ಕಾಲಹರಣ ಮಾಡಲಾರೆ. ಆದರೆ ನಾನು ಖಚಿತವಾಗಿ ಹೇಳುವುದೇನೆಂದರೆ ಸಂವಿಧಾನದಲ್ಲಿ ರಾಜ್ಯಾಂಗ ನಿರ್ದೇಶನ ತತ್ವಗಳ ಪ್ರಕರಣದಲ್ಲಿ, ಸಮಸ್ತ ಭಾರತೀಯರಿಗೂ ಅನ್ವಯಿಸುವಂತೆ ಏಕರೂಪ ನಾಗರಿಕ ಸಂಹಿತೆಯೊಂದನ್ನು ನಿರ್ಮಿಸಬೇಕೆಂದು ನಿರ್ದೇಶಿಸಲಾಗಿದೆ. ಈ ವಿಧೇಯಕವು ಚರ್ಚೆಗೆ ಬಂದಾಗಿನ ಪರಿಸ್ಥಿತಿಗಳು ಬೇರೆಯಾಗಿದ್ದವು. ಖೇದನೀಯ ವಿಚಾರವೆಂದರೆ, ಸಂವಿಧಾನ ರಚನೆಗೊಂಡ ನಂತರವೂ ಸರಕಾರವು ಈ ವಿಧೇಯಕವನ್ನು ಕೇವಲ ಒಂದು ಸಮೂಹಕ್ಕೆ ಮಾತ್ರ ಅನ್ವಯಿಸುವ ಬಗೆಗೆ ಚರ್ಚಿಸುತ್ತಿರುವುದು. ಅಲ್ಲದೆ ನಾವು ನಮ್ಮನ್ನು ಜಾತ್ಯತೀತ ರಾಜ್ಯವೆಂದೇ ಹೇಳಿಕೊಳ್ಳುತ್ತಿರುವುದು. ನಿಜ ಹೇಳಬೇಕೆಂದರೆ ನಾವು ಈ ಜ್ಯಾತ್ಯತೀತ ರಾಜ್ಯದ ಹುಸಿ ಕಲ್ಪನೆಯ ವ್ಯಾಧಿಗೆ ತುತ್ತಾಗಿದ್ದೇವೆ. ಏಕೆಂದರೆ.....

ಸಂಸತ್ತು ಸಮಸ್ತ ಭಾರತಕ್ಕೆ ಸಂಬಂಧಿಸಿದ ವಿಷಯವನ್ನು ಬದಿಗೊತ್ತಿ ಕೇವಲ ಒಂದು ಸಮೂಹದ ಜನತೆಗೆ ಕಾನೂನನ್ನು ರಚಿಸ ಹೊರಟಿದೆ. ಇದು ಸಮಂಜಸವೇ ಅಲ್ಲವೋ ಆ ತಾಂತ್ರಿಕ ವಿಷಯ ನಾನು ಎತ್ತಲಾರೆ. ಏಕೆಂದರೆ ಅದಕ್ಕೆ ಕಾನೂನು ಸಚಿವರು ಏನು ಉತ್ತರ ನೀಡುತ್ತಾರೆ ಎಂಬುದನ್ನು ನಾನು ಬಲ್ಲೆ. ಈ ಹಿಂದೆಯೇ ಅವರು ತಮ್ಮ ಹಲವಾರು ಭಾಷಣಗಳಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಅವರ ಹೇಳಿಕೆಯಂತೆ ಜನತೆಗೆ ಬೇಕಾಗಿದ್ದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವದು ಕಷ್ಟದಾಯಕವಲ್ಲ. ಒಂದು ವೇಳೆ ಇದೇ ಅವರ ಖಚಿತ ಅಭಿಪ್ರಾಯವಾಗಿದ್ದಲ್ಲಿ ನಾವು ಏಕರೂಪ ನಾಗರಿಕ

ಸಂಹಿತೆಯನ್ನು ಏಕೆ ರೂಪಿಸಲಿಲ್ಲ? ನನ್ನ ಸಂದೇಹದಂತೆ ಈ ವಿಧೇಯಕದ ಕೆಲವು ಅಂಶಗಳನ್ನು ಇತರ ಸಮೂಹಗಳಿಗೇಕೆ ಅನ್ವಯಿಸಬಾರದು? ಅದರಲ್ಲಿಯೂ ವಿಶೇಷವಾಗಿ ಮುಸ್ಲಿಂ ಸಮೂಹಕ್ಕೆ? ನಾವು ಏಕಪತ್ನಿ ವಿವಾಹದ ಬಗೆಗೆ ಚರ್ಚಿಸಿದ್ದೇವೆ. ಅದು ಎಲ್ಲ ಸಮೂಹಕ್ಕೂ ಸೂಕ್ತವಾದದ್ದು. ಅದು ಕೇವಲ ಹಿಂದೂಗಳಿಗಲ್ಲದೇ ಬೌದ್ಧರಿಗೂ ಸಿಖ್ಖರಿಗೂ ಸರಿಯಾದುದ್ದೇ. ನನಗೆ ತಿಳಿದಂತೆ ಏಕಪತ್ನಿ ವಿವಾಹದ ವಾದಿಗಳಂತೆ ಈ ಸೂತ್ರವನ್ನು ಎಲ್ಲಾ ಸಮುದಾಯಗಳಿಗೂ ಅನ್ವಯಿಸಬೇಕು. ನಾಗರಿಕ ಜಗತ್ತಿಗೆಲ್ಲಾ ಆಗದೇ ಹೋದರೂ, ಕನಿಷ್ಠ ಭಾರತದ ನಾಗರಿಕರಿಗೆಲ್ಲಾ ಅನ್ವಯಿಸಬೇಕು. ಏಕೆಂದರೆ ಅದು ಸಂಸತ್ತಿನ ಕಾನೂನು. ಆದುದರಿಂದ ಈಗ ನಾವು ಕೇವಲ ಏಕಪತ್ನಿ ವಿವಾಹದ ಬಗ್ಗೆ ಕಾನೂನು ರಚಿಸಿ ಅದನ್ನು ಸಮಸ್ತ ನಾಗರಿಕರಿಗೆ ಏಕೆ ಅನ್ವಯಿಸಬಾರದು? ಇದಕ್ಕೆ ಯಾವ ವಿರೋಧವಿದೆ? ಯಾವ ಸಮೂಹದಿಂದ ವಿರೋಧ ಬರಬಹುದು ಎಂಬುದನ್ನು ಕಾನೂನು ಸಚಿವರು ಮಾನ್ಯ ನಜೀರುದ್ದೀನ್‌ರವರ ಕಡೆಗೆ ಬೆರಳು ಮಾಡಿ ತೋರಿಸಿದ್ದಾರೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ನಾನು ಒಬ್ಬ ಪತ್ನಿಯಿಂದಲೇ ಸಾಕಷ್ಟು ತೊಂದರೆಗೆ ಗುರಿಯಾಗಿರುವಾಗ, ಖಂಡಿತವಾಗಿ ಇಬ್ಬರು ಹೆಂಡಂದಿರನ್ನು ಹೊಂದುವ ಆಸೆಯೇ ಇಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಅದಕ್ಕೆ ಕಾನೂನು ಸಚಿವರಲ್ಲಿ ಉತ್ತರವಿದೆ. ಏನೇ ಆಗಲಿ ಏಕಪತ್ನಿ ವಿವಾಹ ಜಾರಿಗೊಳಿಸುವುದಾದರೆ.....................

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ಬಗ್ಗೆ ನಾನೇ ಈ ಸದನದಲ್ಲಿ ಒಂದು ವಿಧೇಯಕವನ್ನು ಮಂಡಿಸಿರುವೆ.

**ಡಾ. ಎಸ್.ಪಿ. ಮುಖರ್ಜಿ :** ಈ ಬಗ್ಗೆ ವಿಧೇಯಕವನ್ನು ಮಂಡಿಸಿದ್ದೇ ಆಗಿದ್ದರೆ ಕಾನೂನು ಸಚಿವರಿಗೆ ನಜೀರುದ್ದೀನ್ ಅಹಮದ್‌ರ ಸಹಕಾರವಿದೆ. ಆದರೆ ನಿಜ ವಿಷಯವೇನೆಂದರೆ ಸರ್ಕಾರವು ಮುಸ್ಲಿಂ ಜನಾಂಗಕ್ಕೆ ಹೆದರಿ ಅವರ ಬಗ್ಗೆ ಏನನ್ನೂ ಮಾಡಲಾರದೆ ಹೋಗಿದೆ.

**ಶ್ರೀ ಭಾರತಿ :** ಏಕೆ ?

**ಡಾ. ಎಸ್.ಪಿ. ಮುಖರ್ಜಿ :** ನೀವು ಪರೀಕ್ಷೆಮಾಡಿ ನೋಡಿರಿ.

**ಶ್ರೀ ಗಾಡಗೀಳ್ :** ಕಾದು ನೋಡಿ.

**ಡಾ. ಎಸ್.ಪಿ. ಮುಖರ್ಜಿ :** ನಾನು ಒಂದು ಸಲಹೆ ಮಾಡುವೆ. ಕಾನೂನು ಸಚಿವರು ಮಸೂದೆಯನ್ನು ತಿದ್ದುಪಡಿ ಮಾಡಿದ ಹಲವು ಅಂಶಗಳು ಮುಸ್ಲಿಂರಿಗೂ ಅನ್ವಯಿಸಲಾಗುವುದು ಎಂದು ಘೋಷಿಸಲಿ.

**ಶ್ರೀ ರಾಜಗೋಪಾಲಚಾರಿ :** ಧೈರ್ಯವನ್ನು ಪರೀಕ್ಷಿಸಲೆಂದೇ ನಾವು ಕಾನೂನನ್ನು ಮಾಡಬಹುದೇ?.

**ಡಾ. ಎಸ್.ಪಿ. ಮುಖರ್ಜಿ :** ಕಾನೂನನ್ನು ಹಲವು ಬಾರಿ ವ್ಯಕ್ತಿ ಹಾಗೂ ಸರ್ಕಾರದ ನಿಷ್ಠೆಯನ್ನು ಅರಿಯಲು ಮಾಡಲಾಗುತ್ತದೆ ಮತ್ತು ಗೃಹಸಚಿವರ ಹಾಗೂ ಸರ್ಕಾರದ ಪಕ್ಷಪಾತವೇ ಇಂದು ಸಂದೇಹಾಸ್ಪದವಾಗಿದೆ.

**ಶ್ರೀ ಭಾರತಿ :** ಅದು ಖಂಡಿತವಾಗಿಯೂ ಅಲ್ಲ.

**ಡಾ. ಅಂಬೇಡ್ಕರ್ :** ಇಲ್ಲ, ಇಲ್ಲ.

**ಡಾ. ಎಸ್.ಪಿ. ಮುಖರ್ಜಿ :** ನಾನು ಈ ಪ್ರಶ್ನೆಯನ್ನು ಬಾರಿಬಾರಿ ಕೇಳಲಾರೆ. ಏಕೆಂದರೆ ಈ ಮಸೂದೆಯನ್ನು ಮಂಡಿಸಿದವರ ದುರ್ಬಲತೆ ನನಗೆ ಚೆನ್ನಾಗಿ ತಿಳಿದಿದೆ. ಅವರಿಗೆ ಮುಸ್ಲಿಂ ಸಮೂಹವನ್ನು ಮುಟ್ಟುವ ಧೈರ್ಯವಿಲ್ಲ. ನಜೀರುದ್ದೀನ್ ಅಹಮದ್‌ರಂಥವರಿಂದ ಭಯವಿಲ್ಲ. ಆದರೆ ಸರ್ಕಾರವು ಭಾರತಾದ್ಯಂತ

ಹಬ್ಬಿರುವ ಮುಸ್ಲಿಂರಿಗೆ ಭಯಬೀಳುತ್ತದೆ. ಆದರೆ ನೀವು ಹಿಂದೂ ಸಮೂಹದೊಂದಿಗೆ ಯಾವಾಗಲಾದರೂ ಹೇಗೆಯಾದರೂ ವರ್ತಿಸಬಹುದು. ಆದರೆ ಅದರಿಂದ ಯಾವ ಪರಿಣಾಮವೂ ಉಂಟಾಗದು.

**ಶ್ರೀ ರಾಜಗೋಪಾಲಾಚಾರಿ :** ನಾವು ಒಂದು ಸಮೂಹವಲ್ಲವೇ.

**ಡಾ. ಎಸ್.ಪಿ. ಮುಖರ್ಜಿ :** ನಾನು ಸದಸ್ಯರಲ್ಲಿ ಹಾಗೂ ಸರ್ಕಾರಕ್ಕೆ ಆಗ್ರಹಿಸುವುದೇನೆಂದರೆ, ನನ್ನ ಹೇಳಿಕೆಯನ್ನು ವಿವಾದಗ್ರಸ್ತವಾಗದಂತೆ ಸಲಹೆ ನೀಡಬಯಸುವೆ.

**ಶ್ರೀ ಕಾಮತ್ :** ಏಕೆ? ತಾವು ವಿವಾದಗ್ರಸ್ತ ಹೇಳಿಕೆಯನ್ನು ನೀಡಬಹುದಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಏಕೆಂದರೆ, ಸಾಮಾಜಿಕ ಸುಧಾರಣೆಯ ವಿಷಯಗಳ ಬಗೆಗೆ ಕೊಟ್ಟು ತೆಗೆದುಕೊಳ್ಳುವ ಮನೋಭಾವನೆ ಹೊಂದಿರಬೇಕು. ಕಾನೂನು ಸಚಿವರು, ಗೃಹಸಚಿವರ ಪರವಾಗಿ ಮಾಧ್ಯಮದ ಮಸೂದೆಯನ್ನು ಮಂಡಿಸುತ್ತಿಲ್ಲ ತಾನೆ? ಏಕೆಂದರೆ, ಸಾಮಾಜಿಕ ಸುಧಾರಣೆಯ ಮಸೂದೆಯನ್ನು ಚರ್ಚಿಸುವ ಸಮಯದಲ್ಲಿ ಸದನಕ್ಕೆ ಪೊಲೀಸರ ರಕ್ಷಣೆ ಏನೂ ಬೇಕಾಗಿಲ್ಲ. ಇದು ಯಾರಿಗೂ ಸಹಕಾರಿಯಾಗಿಲ್ಲ. ಏಕೆಂದರೆ ಈ ವಿಧವಾದ ಸಾಮಾಜಿಕ ಬದಲಾವಣೆಯನ್ನು ಜಾರಿಗೊಳಿಸುವ ಉದ್ದೇಶ ಹೊಂದಿದ ಈ ರಾಷ್ಟ್ರದ ಜನತೆಯ ಅಪಾರ ಬೆಂಬಲ ದೊರೆಯಬೇಕಲ್ಲವೇ? ಗೃಹಸಚಿವರು ಏನೋ ಹೇಳಬಯಸುತ್ತಿದ್ದಾರೆ.

**ಶ್ರೀ ರಾಜಗೋಪಾಲಾಚಾರಿ :** ನಾನು ಮಧ್ಯೆ ಪ್ರವೇಶಿಸುತ್ತಿಲ್ಲ. ಅವರಿಗೆ ಸಹಾಯ ಮಾಡುವೆ. ನನ್ನ ಮಧ್ಯ ಪ್ರವೇಶವು ಸದಸ್ಯರ ವಾದಕ್ಕೆ ತಿರುವು ನೀಡಿದೆ. ನಾನು ಕೇವಲ ಒಂದು ವಾದವನ್ನು ಮಾತ್ರ ವಿರೋಧಿಸಿದೆ. ಅವರ ಯಾವ ಸೂಚನೆಯಂತೆ ನಡೆದರೂ ನಾನು ಅವರೊಂದಿಗೆ ಸಹಮತನಾಗಿರುವೆ.

**ಒಬ್ಬ ಸದಸ್ಯ :** ಹಾಗಿದ್ದಲ್ಲಿ, ನೀವು ಅವರ ಬೆಂಬಲಿಗರು!.

**ಡಾ. ಎಸ್.ಪಿ. ಮುಖರ್ಜಿ :** ಅವರು ತಮ್ಮ ಕಾರ್ಯದಿಂದ ನಿವೃತ್ತರಾಗುತ್ತಿದ್ದಂತೆ ಗೃಹಮಂತ್ರಿಗಳಿಗೆ ಬೇಗಬೇಗನೆ ಜ್ಞಾನೋದಯವೂ ಆಗತೊಡಗಿದೆ. ಆದರೆ ಯಾವುದೇ ಕಾರಣದಿಂದಾಗಲೀ, ಈ ದೇಶದಲ್ಲಿ ಸಾಮಾಜಿಕ ಸುಧಾರಣೆಗಳಾಗಬೇಕಾದಲ್ಲಿ ನಾವು ಅಧಿಕ ಪಂಗಡಗಳ ಬೆಂಬಲ ಪಡೆಯಲೇಬೇಕು. ನಾನು ಸಂಸತ್ತಿಗೆ ಸಮಾಜ ಸುಧಾರಣೆಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರವಿಲ್ಲ ಎಂದು ಹೇಳಲಾರೆ. ನನಗೆ ನಮ್ಮ ಪುರಾತನ ಪವಿತ್ರ ಗ್ರಂಥಗಳಾದ ವೇದ, ಸ್ಮೃತಿಗಳ ಅರಿವು ಇದೆ. ಆದರೆ ಚರಿತ್ರೆಯಂತೆ ಮೂಲ ಶಾಸನಗಳ ಬಗೆಗೆ ವ್ಯಾಖ್ಯೆ ನೀಡುವ ಟೀಕಾಚಾರ್ಯರಿದ್ದರು. ಆದರೆ ಈಗ ಅವರ ಪಂಥವೂ ಕಣ್ಮರೆಯಾಗಿದೆ. ಆದರೆ ಕಳೆದ ಒಂದೂವರೆ ಶತಮಾನದಿಂದ ಕಂಡುಬಂದ ಸಂಗತಿ ಎಂದರೆ, ಬಹುದೂರದ ಯೂರೋಪಿನ ನ್ಯಾಯಮೂರ್ತಿಗಳು, ಇಲ್ಲವೇ ಲಂಡನ್ ಶಾಸಕಾಂಗದ ಸದಸ್ಯರು, ಈ ದೇಶದ ಸಾಮಾಜಿಕ ಸುಧಾರಣೆಗಳನ್ನು ಜಾರಿಗೊಳಿಸತೊಡಗಿದ್ದಾರೆ. ಆದುದರಿಂದ ಸಮಯ ಮೀರಿ ಹೋದ ಈ ಸಂದರ್ಭದಲ್ಲಿ ಸಂಸತ್ತು ಸಾಮಾಜಿಕ ಸುಧಾರಣೆ ಹಾಗೂ ವ್ಯಕ್ತಿಗೆ ಸಂಬಂಧಿಸಿದ ಮೂಲಭೂತ ಹಕ್ಕುಗಳ ಬಗೆಗೆ ಶಾಸನ ರಚಿಸಿರಬಾರದೆಂದು ಹೇಳುವ ಹಾಗೆ ಇಲ್ಲ. ಇವೆಲ್ಲವೂ ಇಂದು ಕಾನೂನಿನ ಅಧೀನವಾಗಿದೆ.

**ಪಂಡಿತ ಮೈತ್ರ :** ಈಗ ಪ್ರಸ್ತುತದಲ್ಲಿ ರಚನೆ ಆಗಿರುವ ಸಂಸತ್ತು ಅಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಈಗ ರಚನೆಗೊಂಡಿರುವ ಸಂಸತ್ತಿನ ಅಧಿಕಾರದ ಬಗೆಗೆ ಮಾತನಾಡುವುದು ತುಂಬಾ ಸೂಕ್ಷ್ಮವಾದ ಸಂಗತಿ. ಏಕೆಂದರೆ ಈ ಸಂಸತ್ತಿನ ಸದಸ್ಯನಾದ ನನಗೆ ಅದರ ಅಧಿಕಾರವ್ಯಾಪ್ತಿಯನ್ನು ಪ್ರಶ್ನಿಸುವುದು ಕಠಿಣವಾದ ಕಾರ್ಯ. ಆದರೆ ಜನಾಭಿಪ್ರಾಯವನ್ನು ಮಂಡಿಸುವ ಬಗ್ಗೆ ಇನ್ನು ಕೆಲವೇ ದಿನಗಳಲ್ಲಿ ಜನರೇ ಅದನ್ನು ನಿರ್ಣಯಿಸುತ್ತಾರೆ. ನಾನು ಇಂದು ಸರ್ಕಾರದಲ್ಲಿಯೇ ಇರಲಿ ಅಥವಾ ಬೇರೆ ಯಾವ ಪಂಗಡಕ್ಕೇ ಸೇರಿರಲಿ ಸಂಸತ್ತಿನ ನ್ಯಾಯಬದ್ಧ ನಿರ್ದಿಷ್ಟ ಅಧಿಕಾರ ಏನೆಂಬುದು ಆಗ ಸ್ಪಷ್ಟಗೊಳ್ಳುತ್ತದೆ.

ಆದರೆ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಒಂದು ಬಲಿಷ್ಠವಾದ ಅಭಿಪ್ರಾಯವಿದೆ. ಇದರ ಮೂಲಭೂತ ಲಕ್ಷಣಗಳ ಬಗೆಗೆ ಒಂದು ಅಭಿಪ್ರಾಯವಿರುವುದರಿಂದ, ಸನ್ಮಾನ್ಯ ಸದಸ್ಯರು ಅಂದರೆ ಇದನ್ನು ಬೆಂಬಲಿಸುವವರು ದಯಮಾಡಿ ಟೀಕೆಗಳನ್ನು ಆಳವಾದ ಅಧ್ಯಯನ ನಂತರ ಬೆಂಬಲಿಸಿ. ಈ ವಿಧೇಯಕದ ಕೆಲವು ಲಕ್ಷಣಗಳೊಂದಿಗೆ ನನ್ನ ಸಹಮತವಿದೆ; ಆದರೆ ನಾನು ಈ ಮಸೂದೆಯನ್ನು ವಿರೋಧಿಸುವವರ ದೃಷ್ಟಿಯಿಂದ ನೋಡಬಯಸುವೆ. ಈ ಮಸೂದೆಯನ್ನು ಬೆಂಬಲಿಸುವರ ದೃಷ್ಟಿಯಿಂದ ನೋಡಬಯಸುವೆ. ಈ ಮಸೂದೆಯನ್ನು ಬೆಂಬಲಿಸುವಂತೆ ವಿರೋಧಿಸುವವರೂ ಇರುವುದರಿಂದ ಅವರಿಬ್ಬರ ದೃಷ್ಟಿಕೋನವನ್ನು ಆಳವಾಗಿ ಅಧ್ಯಯನ ಮಾಡಬೇಕು ಹಾಗೂ ಅದನ್ನು ಹೊಗಳಲೂಬೇಕು. ಏಕೆಂದರೆ ನಾವು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ವೃತ್ತಪತ್ರಿಕೆಗಳಲ್ಲಿ ವರದಿಯಾದಂತೆ ಹಲವಾರು ವಿವರಗಳನ್ನು ಕೈಬಿಡಲಾಗಿದೆ.

**ಡಾ. ಅಂಬೇಡ್ಕರ್ :** ವ್ಯೂಹೋಪಾಯದ ಕಾರಣಗಳು?

**ಡಾ. ಎಸ್.ಪಿ. ಮುಖರ್ಜಿ :** ಒಂದು ರೀತಿಯ ಟಾಸ್ ಹಾಕಿದಂತೆ ಇದೆ. ಏಕೆಂದರೆ ಒಂದೆಡೆ ವಿವಾಹ ಮತ್ತು ವಿಚ್ಛೇದನೆಗಳಿದ್ದರೆ ಮತ್ತೊಂದೆಡೆ ಆಸ್ತಿ. ಯಾವುದೋ ಬಗೆಯ ವಿವಾಹ ಮತ್ತು ವಿಚ್ಛೇದನೆಗಳು ಜಯ ಸಾಧಿಸಿದ್ದರೆ; ಆಸ್ತಿಯ ವಿಷಯವನ್ನು ಕಡೆಗಣಿಸಿ ಹಿಂದಕ್ಕೆ ತಳ್ಳಲಾಗಿದೆ.

**ಓರ್ವ ಸದಸ್ಯ :** ಆಸ್ತಿಯ ವಿಷಯವೂ ಜಯಗಳಿಸಿದೆ.

**ಡಾ. ಎಸ್.ಪಿ. ಮುಖರ್ಜಿ :** ಇಂದು ಈ ವಿಧೇಯಕದ ಕಲಮು ೨ರಂತೆ ಸ್ವಯಂ ಪ್ರೇರಣೆಯಿಂದ ಅಂಗೀಕರಿಸುವವರಿಗೆ ಹಾಗೂ ಇದರಲ್ಲಿ ನಂಬಿಕೆ ಇಲ್ಲದೇ ಹೋದವರಿಗೆ ಸದನ ಜಾರಿಯಲ್ಲಿರುವ ಹಿಂದೂ ಕೋಡ್ ಬಿಲ್‌ನಡಿಯಲ್ಲಿ ಏನಾದರೂ ಪರಿಹಾರ ನೀಡಬಹುದೇ?

**ಶ್ರೀ ಭಾರತಿ :** ಅದು ಏಕರೂಪತೆ.

**ಡಾ. ಎಸ್.ಪಿ. ಮುಖರ್ಜಿ :** ನಾನು ಸದನದ ಮುಂದೆ ಚರ್ಚೆಗೆಂದೇ ಮಂಡಿಸಲಾದ ಎಲ್ಲಾ ತಿದ್ದುಪಡಿಗಳನ್ನು ಗಮನಿಸಿ ಅದನ್ನೇ ಹೇಳುತ್ತಿರುವೆ. ನನ್ನ ಹಲವಾರು ಮಿತ್ರರು ಹೇಳುವಂತೆ ನಾವು ಹಿಂದುಳಿದವರೆಂದೇ ಪರದೇಶಿಯರು ಟೀಕಿಸುತ್ತಿದ್ದಾರಂತೆ, ಕಳೆದ ಕೆಲವು ದಿನಗಳಿಂದ ಚೈನಾದೇಶವು ನಾವು ಯಾವಾಗ ಹಿಂದೂ ಕೋಡ್ ಬಿಲ್ಲನ್ನು ಜಾರಿಗೊಳಿಸುತ್ತೇವೆ ಎಂಬುದನ್ನು ಕಾದುನೋಡುತ್ತಲಿದೆಯಂತೆ.

**ಶ್ರೀ ಗಾಡ್ಗೀಳ್ :** ಪುರಾತನ ಋಷಿಗಳೂ ಸ್ವರ್ಗದಿಂದ ನೋಡುತ್ತಲಿದ್ದಾರೆ.

**ಡಾ. ಎಸ್.ಪಿ. ಮುಖರ್ಜಿ :** ಅದೊಂದು ಅಧಿಕ ಪ್ರಸಂಗ. ಅನವಶ್ಯಕ ವಿಷಯ. ನಾವು ಅಮೆರಿಕೆಯ ಶಾಸನಗಳನ್ನು ನೋಡುವಾ; ಏಕೆಂದರೆ ಈ ದಿಶೆಯಲ್ಲಿ ಅಮೆರಿಕೆಯಲ್ಲಿ ಏನು ಶಾಸನಗಳನ್ನು ಮಾಡಲಾಗಿದೆ ಎಂದು ನಾನು ವಿಚಾರಿಸಿದೆ. ಅಮೆರಿಕೆಯ ೨೬ ರಾಜ್ಯಗಳಲ್ಲಿ ಅಮೆರಿಕನ್ನರೊಂದಿಗೆ ನೀಗ್ರೋ ಅವರ ವಿವಾಹವನ್ನು ಪ್ರತಿಬಂಧಿಸಲಾಗಿದೆ. ಅಲ್ಲದೇ ಯಾರೇ ನೀಗ್ರೋ ರಕ್ತಸಂಬಂಧಿಗಳಿದ್ದರೂ ಅವರೊಂದಿಗೆ ಕೂಡಾ ಅಮೆರಿಕನ್ನರ ವಿವಾಹವನ್ನು ನಿರ್ಬಂಧಿಸಲಾಗಿದೆ. ಕೆಲವು ರಾಜ್ಯಗಳಲ್ಲಿ ಅಮೆರಿಕನ್ ಹಾಗೂ ಚೈನಿಗಳ ನಡುವಿನ ವಿವಾಹವನ್ನು ನಿರ್ಬಂಧಿಸಲಾಗಿದೆ. ಮಂಗೋಲಿಯನ್ನರಿಗೂ ಇದು ಅನ್ವಯಿಸುತ್ತದೆ. ವಾಸ್ತವಿಕವಾಗಿ ಪ್ರತಿಯೊಂದು ರಾಜ್ಯದಲ್ಲಿ ವಿವಿಧ ವಿವಾಹಶಾಸನಗಳಿವೆ. ನನಗೆ ಯಾರೋ ಅಡ್ಡಿಯುಂಟುಮಾಡಿದರು – ಏಕರೂಪತೆ ಎಲ್ಲಿದೆ? ಅಮೆರಿಕನ್ನರು ತಮ್ಮ ಶಾಸನದಿಂದ ಉಲ್ಲಾಸವಾಗಿದ್ದಾರೆ. ಆದುದರಿಂದ ಏಕರೂಪತೆ ಒಂದೇ ಉಪಾಯವಾಗಲಾರದು. ಏಕೆಂದರೆ ಏಕರೂಪತೆ ಪ್ರಗತಿ ಪರವಾದುದ್ದಲ್ಲ, ಅದೊಂದು ಜಡತೆ.....

**ಶ್ರೀಮತಿ ರೇಣುಕಾರಾಯ್ :** ಎದ್ದುನಿಂತರು.

**ಡಾ. ಎಸ್.ಪಿ. ಮುಖರ್ಜಿ :** ...ನನಗೆ ತೋಚಿದಂತೆ ರೇಣುಕಾರಾಯ್ ಅವರು ಇನ್ನೂ ಆ ಹಂತವನ್ನು ತಲುಪಿಲ್ಲ.

**ಶ್ರೀಮತಿ ರೇಣುಕಾರಾಯ್ :** ನಾವೂ ಅಮೆರಿಕೆಯನ್ನೇ ಹಿಂಬಾಲಿಸೋಣವೇ?

**ಡಾ. ಎಸ್.ಪಿ. ಮುಖರ್ಜಿ :** ನಾನು, ನೀವು ಅಮೆರಿಕೆಯನ್ನು ಹಿಂಬಾಲಿಸಬೇಕೆಂದು ಹೇಳಲಿಲ್ಲ. ನಾನು ಸೂಚಿಸುವುದೇನೆಂದರೆ, ನಮ್ಮ ದೇಶವನ್ನೇ ಅನುಸರಿಸೋಣ. ಅದೂ, ಶ್ರೀಮತಿ ರಾಯ್‌ಯವರನ್ನೇ ಹಿಂಬಾಲಿಸೋಣ. ಅವರೇ ಅದನ್ನು ಅನುಸರಿಸುತ್ತಿಲ್ಲ. ಅಮೆರಿಕೆಯ ಬಗೆಗೆ ತಿಳಿದುಕೊಂಡಂತಾಯಿತು. ಈಗ ರೋಮನ್ ಕ್ಯಾಥೋಲಿಕರನ್ನು ನೋಡೋಣ. ಅವರ ಕಠಿಣ ಕಾನೂನು, ಹಾಗೂ ಅವರ ಧರ್ಮದಂತೆ ವಿಚ್ಛೇದನೆಗೆ ಅವಕಾಶವೇ ಇಲ್ಲ. ಆದರೆ ಅವರ ಎಲ್ಲಾ ದೇಶಗಳಲ್ಲಿ ನಾಗರಿಕ ಸಂಹಿತೆಯೊಂದನ್ನು ರಚಿಸಿಕೊಂಡು, ರೋಮನ್ ಕ್ಯಾಥೋಲಿಕರೂ ವಿವಾಹ ವಿಚ್ಛೇದನೆ ಪಡೆದಿದ್ದಾರೆ. ಆದರೆ ಅವರು ತಮ್ಮ ಧರ್ಮದ ಗೋಜಿಗೆ ಹೋಗಿಲ್ಲ. ಅವರು ಧರ್ಮವನ್ನು ಬೇರೆಯಾಗಿ ಬಾಳಲು ಬಿಟ್ಟಿದ್ದಾರೆ. ಆದರೆ ಅವರಲ್ಲಿ ಯಾರು ನಾಗರಿಕ ಶಾಸನದೊಂದಿಗೆ ಬಾಳಲು ಬಯಸುವರೋ ಅವರು ಅದನ್ನು ಅನುಸರಿಸಬಹುದು. ಡಾ. ಅಂಬೇಡ್ಕರರು ತಮ್ಮ ತಲೆದೂಗುತ್ತಿದ್ದಾರೆ. ಆದರೆ ಅದು ಪರವೋ ಅಥವಾ ವಿರೋಧವೋ ತಿಳಿಯದಾಗಿದೆ. ಅವರು ನಂತರ ಹೇಳಲಿ ನಾನು ತಿದ್ದುಕೊಳ್ಳಲು ಸಿದ್ಧ. ಈ ಶಾಸನಗಳು ತುಂಬಾ ಕಠಿಣವಾದವು. ಆದರೆ ಸಂಸತ್ತಿನ ಪುಸ್ತಕ ಭಂಡಾರದಲ್ಲಿ ಲಭ್ಯವಿರುವ ಎಲ್ಲಾ ಪುಸ್ತಕಗಳನ್ನು ನೋಡಿದಾಗ ಎರಡು ವ್ಯವಸ್ಥೆಗಳಲ್ಲಿ ವ್ಯತ್ಯಾಸ ಕಂಡುಬಂದಿದೆ. ಈ ದೇಶದ ಪ್ರಗತಿಪರ ಮತ್ತು ವಿಚ್ಛೇದನ ವಿಷಯಕ್ಕೆ ಮಾತ್ರ ಸೀಮಿತಗೊಳಿಸೋಣ ಈ ದೇಶದ ಪರಗತಿಪರ ವ್ಯಕ್ತಿಗಳಿಗೆ, ಸ್ತ್ರೀಯರನ್ನೂ ಒಳಗೊಂಡಂತೆ ಆಗಿರುವ ಬಾಧೆ ಏನು?

**ಶ್ರೀ ಕಾಮತ್ :** ಸದನದಲ್ಲಿಯೋ ಅಥವಾ ಹೊರಗೋ?

**ಡಾ. ಎಸ್.ಪಿ. ಮುಖರ್ಜಿ :** ಏಕಪತ್ನಿ ವ್ಯವಸ್ಥೆ ಹಾಗೂ ವಿವಾಹ ವಿಚ್ಛೇದನೆಗೆ ಆಸ್ಪದವಿರಬೇಕೆಂಬ ಬಗೆಗೆ ಎಲ್ಲರೂ ಆತುರಹೊಂದಿದ್ದಾರೆ. ಈ ಎರಡರ ಬಗೆಗೆ ಅಧಿಕ ಆತಂಕವಿದೆ, ಆದುದರಿಂದ ಸದ್ಯ ವಿವಾಹ ವಿಚ್ಛೇದನೆಯ ಬಗ್ಗೆ ಶಾಸನಗಳನ್ನು ರಚಿಸಿವೆ. ಒಂದು ಹಂತದಲ್ಲಿ ನಾಗರಿಕ ಕಾನೂನಿನಡಿಯಲ್ಲಿ ಹಿಂದೂಗಳು, ತಾವು ಹಿಂದೂಗಳಲ್ಲವೆಂದು ಸಾರಿದರೂ, ಪುನರ್‌ವಿವಾಹವಾಗಲಿಕ್ಕೆ ಆಸ್ಪದವಿರಲಿಲ್ಲ. ಈಗ ಅದು ಬದಲಾಗಿದೆ. ಆದರೆ ಈಗ ಯಾವ ಹಿಂದೂ ದಂಪತಿಗಳು ತಮ್ಮ ಮನಸ್ಸಿನಂತೆ ವಿವಾಹ ಒಪ್ಪಂದವನ್ನೂ ಮಾಡಿಕೊಳ್ಳಬಹುದು. ಮುಂದುವರಿದು, ಕ್ರಾಂತಿಕಾರಿಯಾದ, ಸಗೋತ್ರವಿವಾಹಕ್ಕೂ ಸಂಸತ್ತು ತನ್ನ ಅನುಮತಿಯನ್ನು ನೀಡಿದೆ.

**ಡಾ. ಟೇಕ್‌ಚಂದ್ :** ಹಿಂದಿನ ಸಂಸತ್ತಿನಿಂದ.

**ಡಾ. ಎಸ್.ಪಿ. ಮುಖರ್ಜಿ :** ಶಾಸಕಾಂಗದಿಂದ ಈ ಎಲ್ಲವೂ ಪ್ರಗತಿಯ ಸಂಕೇತಗಳು. ನಾನು ಹೇಳಬಹುದಾದರೆ ನಮ್ಮ ದೇಶದ ಶಾಸಕಾಂಗಗಳು ವಿವಾಹಕಾನೂನುಗಳಿಗೆ ಸ್ಪಂದಿಸಿವೆ. ಈ ಒಂದು ವಿಷಯವನ್ನು ನಮ್ಮ ಸಂವಿಧಾನದಲ್ಲಿ ಸಮವರ್ತಿ ಪಟ್ಟಿಯಲ್ಲಿ ತೋರಿಸಲಾಗಿದೆ. ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತಗಳು ಈ ಬಗೆಗೆ ಶಾಸನಗಳನ್ನೂ ರಚಿಸಿವೆ (ಓರ್ವ ಸದಸ್ಯ: ಮೈಸೂರು ಕೂಡಾ) ಒಟ್ಟಾರೆ ಅನೇಕ ರಾಜ್ಯಗಳು ಒಂದಲ್ಲ ಒಂದು ವಿಧವಾಗಿ ಶಾಸನಗಳನ್ನು ರಚಿಸಿವೆ. (ಓರ್ವ ಸದಸ್ಯ ಆದರೆ ಉತ್ತರ ಭಾಗದಲ್ಲಿ ಅಲ್ಲ) ಈ ಶಾಸನಗಳು ಜನತೆಯ ಅಭಿಪ್ರಾಯದಂತೆ ರಚಿಸಲಾಗಿದೆ. ಪರಿಸ್ಥಿತಿ ಹೀಗಿರುವಾಗ ಮತ್ತೊಮ್ಮೆ ಶಾಸನ ರಚಿಸಿ ಜನತೆಯ ಮೇಲೆ ಹೇರುವುದು ಸೂಕ್ತವೇ? ಅದರಲ್ಲಿಯೂ ಹಿಂದೂಗಳ

ಮೇಲೆ ಏಕೆ ಕಡ್ಡಾಯ? ವಿವಾಹ ವಿಚ್ಛೇದನೆಯ ಲಾಭವನ್ನು ಪಡೆಯಬೇಕೋ ಬೇಡವೋ! ಜನತೆಯ ವಿರೋಧವೇ ಇರದಾಗ ಹಾಗೂ ಈಗಾಗಲೇ ಜಾರಿಯಲ್ಲಿರಬಹುದಾದ ಶಾಸನಗಳಲ್ಲಿ ಆಸ್ಪದವಿದ್ದಾಗ ಈ ಕ್ರಮವೇಕೆ? ಅಲ್ಲದೆ, ಈ ಕ್ರಮದಿಂದಾಗಿ ನೀವು ಜನತೆಗೆ ಆಘಾತವನ್ನುಂಟುಮಾಡುತ್ತಿದ್ದೀರಿ? ಏಕೆಂದರೆ ಪವಿತ್ರ ವಿವಾಹವನ್ನು ಮತ್ತೆ ಚರ್ಚೆಗೆ ಗುರಿಮಾಡಿ ಅದರ ಧಾರ್ಮಿಕ ಭಾವನೆಗೆ ಧಕ್ಕೆ ಉಂಟುಮಾಡುತ್ತಿದ್ದೀರಿ. ನೀವು ಅದಕ್ಕೆ ಆಲಂಕಾರಿಕ ಪೌರ್ವಾತ್ಯ ರಂಗನ್ನು ನೀಡಲು ಉದ್ಯುಕ್ತರಾಗಿದ್ದೀರಿ ಹೊರತು ಬೇರೆ ಯಾವ ಗಂಧವೂ ಇದರಲ್ಲಿಲ್ಲ. ನಾನು ಸದನದ ಸದಸ್ಯರನ್ನು ಗಂಭೀರವಾಗಿ ಕೇಳುವುದೇನೆಂದರೆ, ಇದರಿಂದ ಏನನ್ನು ಸಾಧಿಸಿದಂತಾಗಿದೆ?

ವಿವಾಹ ಬಂಧನ ಶಾಶ್ವತ ಎಂಬ ಧಾರ್ಮಿಕ ಭಾವನೆಯು, ಶಿಕ್ಷಿತ, ಅಶಿಕ್ಷಿತ ಅನೇಕ ಸಹಸ್ರಾರು ಹಿಂದೂಗಳ ಮನದಲ್ಲಿ ನೆಲೆಯೂರಿದೆ. ಇದು ಧಾರ್ಮಿಕ ಭಾವನೆ ಶರೀರಕ್ಕೆ ಸಂಬಂಧಿಸಿಲ್ಲ. ಈ ವಿಚಾರದ ಬಗೆಗೆ ನಾನು ಅನೇಕರೊಂದಿಗೆ ಕೇವಲ ನನ್ನ ಪ್ರಾಂತದಲ್ಲಿ ಅಲ್ಲ ಅವರ ಪ್ರಾಂತದವರೊಂದಿಗೆ ಚರ್ಚಿಸಿರುವೆ. ನನಗೆ ತಿಳಿದಂತೆ, ವಿವಾಹ ವಿಚ್ಛೇದನೆಯ ಲಾಭವನ್ನು ಪಡೆಯುವ ಲವಲೇಶ ಇಚ್ಛೆ ಯಾರೂ ಹೊಂದಿಲ್ಲ. ಇನ್ನು ಸುಧಾರಣೆ ಬೇಡುವವರಿಗೆ, ಜಾರಿಯಲ್ಲಿರುವ ಶಾಸನಗಳ ಅಡಿಯಲ್ಲಿಯೇ ಅಪಾರ ಆಸ್ಪದವಿದೆ. ಅದನ್ನು ಅವರು ನೂತನ ಮಾದರಿಯ ವಿವಾಹಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ. ಅವರಿಗೆ ಆಸ್ಪದವನ್ನು ಕಲ್ಪಿಸಲೇಬೇಕೆಂದಿದ್ದರೆ ಬದಲಾವಣೆಯನ್ನು ತರಬಹುದು. ಆದರೆ ಪವಿತ್ರ ವಿವಾಹ ಪದ್ಧತಿಯನ್ನು ಏಕೆ ಬದಲಾಯಿಸಬೇಕು? ಅದರಿಂದ ನಿಮಗಾಗುವ ಲಾಭವೇನು? ಈ ನನ್ನ ಪ್ರಶ್ನೆಗೆ ಸರಿಯಾದ ಉತ್ತರವೇ ದೊರೆಯುತ್ತಿಲ್ಲ. ಏಕೆಂದರೆ ಇದು ಯಾರಿಗೂ ಸಂಬಂಧಿಸಿದ ವಿಷಯ ಹಾಗೂ ನೂತನ ವಿಧಾನಗಳು ಕಡ್ಡಾಯಗೊಳಿಸಲಾಗಿದೆ. ಜನರಿಗೆ ಆಯ್ಕೆ ಮಾಡಲು ಅವಕಾಶ ನೀಡಿದಾಗ ಮಾತ್ರ ನಿಮ್ಮ ಶ್ರಮ ಫಲಪ್ರದವಾಗಬಹುದು.

ನನಗೆ ತಿಳಿದಂತೆ, ಇಂದು ಕೂಡಾ ಭಾರತದಲ್ಲಿಯ ಶೂದ್ರ ಜನಾಂಗದಲ್ಲಿ ಕೂಡಾ ಒಂದಲ್ಲ ಒಂದು ವಿಧವಾದ ವಿವಾಹ ವಿಚ್ಛೇದನ ಪದ್ಧತಿ ಶೇಕಡಾ ೯೦ರಷ್ಟು ಜಾರಿಯಲ್ಲಿದೆ. ಆದುದರಿಂದ ನಮಗೆ ಬೇಕಾದ ಉತ್ತರ ಸಿಕ್ಕಂತಾಯಿತು. ಆದುದರಿಂದ, ನಮಗೆ ಬೇಕಾದ, ಹಿಂದೂ ಲಾ ದ ವಿಚ್ಛೇದನೆ ನಾವು ಬಯಸಿದ ಸಮೂಹಗಳಲ್ಲಿ, ಜಾತಿಗಳಲ್ಲಿ ಜಾರಿಯಲ್ಲಿದೆ ಎಂದಾಯಿತು.

ಈ ಬಗ್ಗೆ ಹೆಚ್ಚು, ವಿವರಣೆ ನೀಡಲಾರೆ. ಆದರೆ ಪ್ರಮುಖವಾಗಿ ನಮಗೆ ಗೋಚರವಾಗುವ ವಿಷಯ ಎಂದರೆ, ಬುದ್ಧನು ತನ್ನ ಧರ್ಮವನ್ನು ಪ್ರಚಾರ ಮಾಡಿದ ಸಮಯದಲ್ಲಿ ಅದು ಭಾರತಕ್ಕೆ ಅನಿವಾರ್ಯವಾಗಿತ್ತು. ಅಂದಿನ ದಿನಗಳಲ್ಲಿ ಜಾರಿಯಲ್ಲಿದ್ದಿರಬಹುದಾದ ಅನಿಷ್ಟಗಳ ನಿವಾರಣೆಗೆ ಬೌದ್ಧಧರ್ಮ ರಾಮಬಾಣವಾಗಿತ್ತು. ನಂತರ ಹಲವು ಕಾಲದ ಮೇಲೆ ಅದನ್ನು ವಿರೋಧಿಸಿದರೂ ಬುದ್ಧನನ್ನು ಅವತಾರಪುರುಷನೆಂದು ಪರಿಗಣಿಸಿ ಹಿಂದೂಧರ್ಮದಲ್ಲಿಯೇ ಅದು ಬೆರೆತುಹೋದುದು ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣ. ಈ ಬಗೆಗೆ ಹೆಚ್ಚು ವಿವರಣೆಯ ಅಗತ್ಯವಿಲ್ಲ. ಏಕೆಂದರೆ ಭಾರತದ ಭೂಮಿಯ ಗುಣವೆಂದರೆ ತನ್ನೆಡೆಗೆ ಬಂದ ಎಲ್ಲಾ ಧರ್ಮಗಳನ್ನು ಅರಗಿಸಿಕೊಳ್ಳುವುದು.

**ಶ್ರೀ ಗಾಡ್ಗೀಳ್ :** ಈ ಕೋಡ್‌ಗೂ ಅದೇ ಪರಿಸ್ಥಿತಿ ಒದಗುವುದು.

**ಡಾ. ಎಸ್.ಪಿ. ಮುಖರ್ಜಿ :** ನನ್ನ ಸ್ನೇಹತರ ಬಯಕೆ ಅಗಾಧವಾಗಿದ್ದರೂ, ಅವರು ಅದರಲ್ಲಿ ಸುಖ–ಶಾಂತಿಯನ್ನು ಪಡೆಯಲಿ.

ಆದರೆ ಬೌದ್ಧಧರ್ಮದ ಬಗೆಗೆ ಹೇಳಬಹುದಾದರೆ ಅದು ಬೇರೆದೇಶಗಳಿಗೆ ಹಬ್ಬಿತು. ಅದರ

ತತ್ವಗಳು ಹಿಂದೂ ಆದರ್ಶಗಳಲ್ಲಿ ಬೆರೆತುಹೋದವು. ನಾನು ಹೇಳುವ ಉದ್ದೇಶ ಎಷ್ಟೇ ಯಾರೇ ಆಗಲಿ ಅದರಲ್ಲಿಯೂ ವಿದೇಶಿಯರೂ ಹಿಂದೂಧರ್ಮದ ಬಗೆಗೆ ಮೂದಲಿಸಿ ಮಾತನಾಡಿದರೆ ನಾವು ಅದನ್ನು ಅಲ್ಲಗಳೆಯಬೇಕು. ಏಕೆಂದರೆ ಈ ಧರ್ಮವು ವಿಶಾಲ ತಳಹದಿಯನ್ನು ಹೊಂದಿರುವುದಲ್ಲದೆ, ಜೀವ ಮತ್ತು ಚೈತನ್ಯಯುತವಾಗಿದೆ. ಪರಂಪರೆ ಹೊಂದಿದ ಹಿಂದೂಧರ್ಮ ಸಚೇತನದಿಂದ ಕೂಡಿದೆ. ಭಾರತ ಪರರ ಆಡಳಿತಕ್ಕೆ ಒಳಪಟ್ಟಾಗ ನಮ್ಮ ಜನರು ತಮ್ಮ ಧರ್ಮವನ್ನು ಕಾಪಾಡಿಕೊಂಡು ಬಂದಿರುವುದು ಸಾಮಾನ್ಯ ಸಂಗತಿಯಲ್ಲ. ಮುಂದುವರಿದು ಹೇಳಬಹುದಾದರೆ ಕಾಲಕ್ಕೆ ತಕ್ಕ ಬದಲಾವಣೆಗಳನ್ನು ಅಳವಡಿಸಿಕೊಂಡು ಬರಲಾಗಿದೆ. ಆದರೆ ಈಗ ಹಿಂದೂ ಕೋಡ್ ಅದಕ್ಕೆ ಅನುಬಂಧ ೪ನ್ನು ನೋಡಿದರೆ ಮೈ ನಡುಗುತ್ತದೆ. ನೀವೇ ದ್ವಾರವನ್ನೇ ಮುಚ್ಚಲು ಪ್ರಯತ್ನಿಸಿದ್ದೀರಿ. ತಾವು ಸಂಪ್ರದಾಯಗಳನ್ನೇ ಬದಿಗೊತ್ತಿ ಕೇವಲ ಈ ಕೋಡ್‌ನಲ್ಲಿ ತಿಳಿಸಲಾದ ವಿಧಾನ ಒಂದನ್ನೇ ಮನ್ನಿಸುವುದಾಗಿ ಹೇಳಿದ್ದೀರಿ. ಪರಿಸ್ಥಿತಿ ಹೀಗಿರುವಾಗ ನನ್ನ ಮಿತ್ರರಾದ (ಓರ್ವ ಸದಸ್ಯ: ಎಂಥ ಅಧೋಗತಿ) ಪುರಾತನ ಸಂಪ್ರದಾಯಗಳ ಆಧಾರದ ಮೇಲೆಯೇ ಹಿಂದೂ ಸಮಾಜವು ಕಾಲಕಾಲಕ್ಕೆ ಅಭಿವೃದ್ಧಿ ಹೊಂದುತ್ತಾ ಬಂದಿದೆ.

**ಮಧ್ಯಾಹ್ನ ೧೨**

ಈ ದಿನ, ಈ ಸಭೆಯ ಗೌರವಾನ್ವಿತ ಹಾಗೂ ಸುಶಿಕ್ಷಿತ ಸದಸ್ಯರಾದ ನಾವೆಲ್ಲರೂ, ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಕರೆಂದೇ, ಸದ್ಯಕ್ಕೆ ಈ ಕೋಡ್ ಅನ್ನೇ ಅಂತಿಮವೆಂದು ನಿರ್ಧರಿಸಿ, ನ್ಯಾಯಾಲಯಗಳಿಗೂ ನಿಲುಕದ ರೀತಿಯನ್ನು ಅನುಸರಿಸುತ್ತಿರುವುದು ವಿಷಾದನೀಯ. ೧೯೫೧ರಲ್ಲಿ ಸ್ವಾತಂತ್ರ್ಯ ದೊರೆತ ನಂತರವೂ ನಮ್ಮ ಸರ್ವೋನ್ನತ ನ್ಯಾಯಾಲಯವು ಹಿಂದೂ ಲಾ ದ ಬಗೆಗೆ ವಿಚಾರಣೆ ನಡೆಸಿದಾಗ, ಸಂಪ್ರದಾಯಗಳನ್ನೇ ಆಧಾರವಾಗಿರಿಸಿಕೊಂಡ ಸಂಗತಿ ಸದನ ಅರಿಯದೇ? ಏಕೆಂದರೆ ಈ ತೆರನಾದ ವಿಷಯಗಳನ್ನು ನಾವು ಯಾವ ಕಾನೂನು ಪಠ್ಯಪುಸ್ತಕದಿಂದ ಪಡೆಯಲಾರೆವು. ಮುನ್ನಡೆಯ ಹೆಸರಿನಲ್ಲಿ ಭಾರತೀಯ ಸಂಪ್ರದಾಯಗಳ ಮೂಲಕ್ಕೆ ಧಕ್ಕೆ ಉಂಟುಮಾಡುತ್ತಿದ್ದೀರಿ. ನಿಮ್ಮ ಈ ಕಾನೂನು ಯಾರಿಗೂ ಉಪಯುಕ್ತವಾಗಲಾರದು. ಇದು ಮುನ್ನಡೆಯ ಕ್ರಮವಾಗಿರದೆ ಹಿನ್ನಡೆಯಾಗಿದೆ. ಇದರಿಂದಾಗಿ ದೇಶದಲ್ಲಿ ಭೇದಭಾವನೆಗಳಿಗೆ ಕುಮ್ಮಕ್ಕು ನೀಡಿದಂತಾಗುತ್ತದೆ. ನಾನು ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ತಮ್ಮದೇ ಆದ ಉದ್ದೇಶಗಳನ್ನು ಹೊಂದಿದವರು ಈ ಶಾಸನದ ಪರ ಇರಬಹುದು. ನಾನು ಹೇಳುವುದು ಇಷ್ಟೇ. ದಯಮಾಡಿ ಇದನ್ನು ಕಡ್ಡಾಯವೆಂದು ಜನಾಂಗದ ಮೇಲೆ ಹೇರದಿರಿ. (ಓರ್ವ ಸದಸ್ಯರು ಕಡ್ಡಾಯದ ಪರಿಣಾಮ ಎಲ್ಲಿದೆ) ವಿಚ್ಛೇದನೆ ಕಡ್ಡಾಯವಾಗಿರದೇ ಇರಬಹುದು. ಆದರೆ ಧಾರ್ಮಿಕ ಮತ್ತು ಪವಿತ್ರ ವಿವಾಹಗಳನ್ನು ಮುರಿಯುವ ದುರುದ್ದೇಶದ ಹಿಂದೆ ಅಡಗಿರುವ ಗುರಿ ಅನಿಷ್ಟವಾಗಿದೆ. ವಿಚ್ಛೇದನೆ ಬರಲೂಬಹುದು, ಬಾರದೆ ಇರಲೂಬಹುದು. ಆದರೆ ಸಂಪ್ರದಾಯಗಳಿಗೆ ಆಘಾತ ಉಂಟಾಗುವುದು. ನಾನು ಮಾತನಾಡುತ್ತಿದ್ದಾಗ, ಸದನದಲ್ಲಿ; ದಕ್ಷಿಣ ಭಾರತದಲ್ಲಿ ಈ ಬಗ್ಗೆ ಮುನ್ನಡೆ ಸಾಧಿಸಲಾಗಿದೆ, ಹಾಗೂ ಶಾಸನಗಳನ್ನೂ ರಚಿಸಲಾಗಿದೆ ಎಂದು ಹೇಳಿದರು. ನಾನು ದಕ್ಷಿಣಭಾರತಕ್ಕೆ ಶುಭಕೋರುವೆ. ದಕ್ಷಿಣಭಾರತ ವಿಚ್ಛೇದನದಿಂದ ವಿಚ್ಛೇದನಕ್ಕೆ ಮುಂದುವರಿಯುವಲ್ಲಿ ಪ್ರಗತಿ ಸಾಧಿಸಲಿ. ದಕ್ಷಿಣಭಾರತದ ಬಗೆಗೆ ನನಗೆ ಯಾವ ದೂರು ಇಲ್ಲ ; ಆದರೆ ಈ ಶಾಸನವನ್ನು ಕಡ್ಡಾಯವಾಗಿ ಜನರಮೇಲೆ ಹೇರುವುದು ಸರಿಯಲ್ಲ. ನನಗೆ ಈ ದಿಶೆಯಲ್ಲಿ ಎರಡು ದಿನಗಳ ಹಿಂದೆಯೇ ಒಂದು ಅಂಚೆಪತ್ರ ಬಂದಿದೆ. ಬರೆದ ಮಹನೀಯರು ಯಾರು ಎಂಬುದು ತಿಳಿಯೆ.

**ಶ್ರೀ ಗಾಡ್ಗೀಳ್ :** ಮೃತ್ಯುಪತ್ರ ಕಾರ್ಯಾಲಯದಿಂದಲೇ?

**ಡಾ. ಎಸ್.ಪಿ. ಮುಖರ್ಜಿ :** ಪತ್ರ ಮೃತ್ಯುಪತ್ರ ಕಾರ್ಯಾಲಯದಿಂದಲ್ಲ. ನಾನು ಅದನ್ನು ಕಾಣಿಕೆಯಾಗಿ ಗಾಡಿಗೀಳರು ಸಮ್ಮತಿಸಿದಲ್ಲಿ ನೀಡುವೆ. ಏಕೆಂದರೆ ಅದೊಂದು ಮೃತ್ಯುಪತ್ರವಾಗಿಲ್ಲ. ನಮ್ಮ ದೇಶದಲ್ಲಿಯ ಸಂಪ್ರದಾಯಗಳ ವೈವಿಧ್ಯತೆಯನ್ನು ಓರ್ವ ಮಹನೀಯರು ಈ ಪತ್ರದಲ್ಲಿ ಎತ್ತಿತೋರಿಸಿದ್ದಾರೆ.

ಹಿಂದೂ ಲಾ ದ ಬಗೆಗೆ ಪ್ರಕಟಿಸಲಾದ ಮಸೂದೆಯಲ್ಲಿ ಸೋದರ ಮಾವನೊಂದಿಗೆ ವಿವಾಹವನ್ನು ಹಲವು ಮಟ್ಟಿಗೆ ನಿಷೇಧಿಸಲಾಗಿದೆ. ಆದರೆ ಈ ಸಂಪ್ರದಾಯವು ಆಂಧ್ರ ಹಾಗೂ ತಮಿಳುನಾಡುಗಳಲ್ಲಿ ಪ್ರಚಾರದಲ್ಲಿದೆ. ಬ್ರಾಹ್ಮಣ ವರ್ಗದವರೂ ಸೋದರಮಾವನ ಸಂಬಂಧ, ಬಾಲಕಿಯರಿಗೆ ಉತ್ತಮವೆಂದೇ ಪರಿಗಣಿಸಿದ್ದಾರೆ. ಈ ವಿವಾಹ ಪದ್ಧತಿಯೂ, ಕಾನೂನು ವಿರೋಧ ಎಂಬುದು ವಕೀಲರಿಗೆ ಹಾಗೂ ಇತರರಿಗೆ ತಿಳಿದಿಲ್ಲ. ನನಗೆ ತಿಳಿದಂತೆ ನಮ್ಮ ಭಾಗದ ಬಹುಸಂಖ್ಯಾತ ಜನರಿಗೆ ಈ ವಿಷಯ ತಿಳಿಯದೇ ಅನೇಕ ವಿವಾಹಗಳು ಜರುಗಿರುವುದರಿಂದ, ಅವರು ತೊಂದರೆಗೆ ಗುರಿಯಾಗುವುದರಿಂದ ತಾವು ದಯಮಾಡಿ ಒಂದು ತಿದ್ದುಪಡಿಯನ್ನು ಮಂಡಿಸಬೇಕೆಂದು ಕೋರುವೆ.

ಅವರು ಈ ವಿಷಯವನ್ನು ಅಂಬೇಡ್ಕರ್‌ರಿಗೆ ತಿಳಿಸದೇ ನನಗೇಕೆ ಬರೆದಿರುವರೋ ನಾನು ಅರಿಯೆ.

"ಸಂಪ್ರದಾಯವನ್ನು ನಿಷೇಧದಿಂದ ರಕ್ಷಿಸುವ ಹಾಗೂ ಕಾಲಾವಕಾಶ ನೀಡುವ ಕ್ರಮವನ್ನು, ಈ ವಿವಾಹಗಳ ಬಗೆ ಜಾರಿಗೊಳಿಸುವುದು ಸೂಕ್ತ."

ಆ ಭಾಗದ ಜನತೆಯು ಮುಂದುವರಿದವರು ಎಂದು ಹೇಳುವವರಿಗೆ ಇದೊಂದು ಮಾದರಿ. ಸಹಜವಾಗಿಯೇ ಅವರು ತುಂಬಾ ಮುಂದುವರಿದವರೇ (ಓರ್ವ ಸದಸ್ಯ: ನಿಜವಾಗಿಯೂ) ಆದುದರಿಂದ, ಈ ಪತ್ರ ಮೃತ್ಯುಪತ್ರಗಳ ಕಾರ್ಯಾಲಯದಿಂದ ಬಂದಿದೆಯೇ ಎಂಬುದು ಮಹತ್ವದ್ದಲ್ಲ. ಆದರೆ ಸಂಪ್ರದಾಯದ ಸತ್ಯಾಸತ್ಯತೆಯನ್ನು ದಕ್ಷಿಣ ಭಾರತದ ಸದಸ್ಯರು ದೃಢಪಡಿಸಲಿ. ನಾನು ಭಾರತಿಯವರನ್ನು ಸಂಪರ್ಕಿಸುವಂತೆ ಉತ್ತರ ಬರೆಯುವೆ. ನಾನು ಹೇಳಬೇಕಾದ ವಿಷಯ ಎಂದರೆ.

**ಶ್ರೀ ಜೆ.ಆರ್. ಕಪೂರ್ :** ಅದೊಂದು ಪುರೋಗಾಮಿ ರಾಜ್ಯವಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಯಾರು ಇವರನ್ನು ಅನುಸರಿಸುತ್ತಾರೆಯೋ ಅವರೆಲ್ಲರೂ ಪ್ರಗತಿಪರರು. ಅದು ಅವರ ಭಾವನೆ. ನಾನು ಆ ರಾಜ್ಯದ ವಿವೇಕ ಹಾಗೂ ಅವಿವೇಕತನವನ್ನು ಪ್ರಶ್ನಿಸಿಲ್ಲ. ಈ ದೇಶದಲ್ಲಿಯ ಲಕ್ಷಾನುಲಕ್ಷ ಮಂದಿ ಈ ವ್ಯವಸ್ಥೆಯನ್ನು ಪಾಲಿಸುತ್ತಿರಬಹುದು. ಸಹಜವಾಗಿಯೇ ಸಂಪ್ರದಾಯಗಳು ಒಂದು ವಿಧಾನದಂತೆ ಬೆಳೆದು ಬಂದಿರಬಹುದು. ನನ್ನ ಹೇಳಿಕೆ ಎಂದರೆ, ನೀವು ಈ ಶಾಸನವನ್ನು ಕಡ್ಡಾಯ ಮಾಡದಿರಿ–ನಾನು ಸದ್ಯದ ಪರಿಸ್ಥಿತಿಯಲ್ಲಿ ಕೇವಲ ವಿವಾಹ ಮತ್ತು ವಿಚ್ಛೇದನದ ವಿಷಯ ಮಾತ್ರ ಪ್ರಸ್ತಾಪಿಸಿರುವೆ. ಇನ್ನು ಮುಂದೆ ವಿವಾಹವಾಗುವವರನ್ನು ಮುಕ್ತವಾಗಿರಲು ಬಿಡಿ. ಅವರ ವಿವಾಹ ಧಾರ್ಮಿಕವಿರಲಿ ಅಥವಾ ಬೇರೆಯದಾಗಿರಲಿ ಅದು ಅವರಿಗೆ ಸಂಬಂಧಿಸಿದ ವಿಷಯ. ಆದುದರಿಂದ ಈಗಲೇ ಶಾಸನದ ರಚನೆ ಬೇಡ. (ಓರ್ವ ಸದಸ್ಯ : ಈಗಾಗಲೇ ನಡೆದಿರುವ ವಿವಾಹಗಳ ಬಗ್ಗೆ ಏನು?) ಅದು ಭವಿಷ್ಯದಲ್ಲಿ ಬರುವವರನ್ನು ಸೇರಿಸಿಕೊಳ್ಳುತ್ತದೆ. ಈಗ ಇರುವ ಪಾರ್ಲಿಮೆಂಟ್ ಸದಸ್ಯರುಗಳ ವಿವಾಹ ವಿಚ್ಛೇದನದ ಉದ್ದೇಶಕ್ಕಾಗಿ ನಾವು ಶಾಸನ ಮಾಡುತ್ತಿಲ್ಲ. ಮುಂದಿನ ಪೀಳಿಗೆಗೆ ಏನಾದರೊಂದನ್ನು ಕೊಡಬೇಕೆಂದು ನಾವು ಆಲೋಚಿಸುತ್ತಿದ್ದೇವೆ. ಅದರಿಂದಾಗಿ ಅವರು ಶಾಂತ ಮತ್ತು ಸುಖೀಜೀವನವನ್ನು ನಡೆಸಬಹುದಾಗಿದೆ. ಆದರೆ, ನೀವು ಅದನ್ನು ಆಗಲೇ ಮದುವೆಯಾಗಿರುವವರಿಗೆ ಅನ್ವಯಿಸಲು ಇಚ್ಛಿಸಿದರೆ....

**ಡಾ. ಅಂಬೇಡ್ಕರ್ :** ಈ ಶಾಸನ ಈಗಾಗಲೇ ವಿವಾಹವಾದವರಿಗೆ ಅನ್ವಯಿಸುವುದಿಲ್ಲ.

**ಡಾ. ಎಸ್.ಪಿ. ಮುಖರ್ಜಿ :** ಅಲ್ಲಿ, ನೀವು ಹಲವು ಅಂಶಗಳನ್ನು ಸೇರ್ಪಡಿಸಬಹುದು. ಒಂದು ವೇಳೆ

ನೀವು ಈ ಶಾಸನವನ್ನು ಎಲ್ಲರಿಗೂ ಕಡ್ಡಾಯಗೊಳಿಸಬೇಕೆಂದಿದ್ದಲ್ಲಿ ಅದೂ ವಿವಾಹವಾದವರಿಗೂ ಎಂದಿದ್ದರೆ ನಾನು ಒಂದು ಪರಿಹಾರ ಸೂಚಿಸುವೆ. ಅದೇನೆಂದರೆ, ಒಂದು ಅಥವಾ ಎರಡು ವರ್ಷದ ಗಡುವು ನೀಡಿ. ಬೇಕಾದವರು ಯಾವ ಪದ್ಧತಿಗೆ ಬೇಕೋ ಅದರಂತೆ ನೋಂದಾಯಿಸಲು ಆಸ್ಪದ ಮಾಡಿಕೊಡಿ. (ಓರ್ವ ಸದಸ್ಯ : ಎಲ್ಲ ಕಡೆಗೂ ಏಕಾಗಬಾರದು?) ಎಲ್ಲರಿಗೂ ಎಲ್ಲೆಡೆಯಲ್ಲಿ ಎಂಬುದನ್ನು ನಾನು ಒಪ್ಪಲಾರೆ. ಏಕೆಂದರೆ, ಬೇರೆಯವರಿಗೆ, ಮತ್ತೊಂದು ವಿಧಾನವನ್ನು ಅನುಸರಿಸಿರುವಿರಿ. ಆದುದರಿಂದ ಆ ಹಕ್ಕು ನಿಮಗಿಲ್ಲ. ನೀವು ಇಂದು ಜಾರಿಗೊಳಿಸುತ್ತಿರುವ ಶಾಸನದಂತೆ ಧಾರ್ಮಿಕ ವಿವಾಹವೂ ಮುಂದುವರಿಯುವುದು, ಬೇರೆ ವಿಧಾನದಿಂದ ವಿವಾಹವಾಗುವವರಿಗೂ, ಆಸ್ಪದ ಕಲ್ಪಿಸಿದ್ದೀರಿ. ಆದುದರಿಂದ ಜನರು ತಮಗೆ ಬೇಕಾದ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲಿ. ಕಡ್ಡಾಯಕ್ಕೆ ಆಸ್ಪದವಿಲ್ಲ. ವಿವಾಹವಾದವರಿಗೆ ಗಡುವು ನೀಡಬಹುದು ಅಥವಾ ನೀಡದೇ ಇರಲೂಬಹುದು. ಈ ಹಿಂದೂ ಕೋಡ್ ಅನ್ನು ಅಂಗೀಕರಿಸಿದವರು ರಿಜಿಸ್ಟ್ರಾರ್ ಅಥವಾ ರಿಜಿಸ್ಟ್ರಾರ್ ಜನರಲ್‌ನ ಮುಂದೆ ತಮ್ಮ ಒಪ್ಪಿಗೆಯನ್ನು ಸೂಚಿಸಲಿ. ಹೀಗೆ, ಅವರು ಹಿಂದೂ ಕೋಡ್‌ನಲ್ಲಿ ಸೂಚಿಸಲಾದ ಪರಿಹಾರ ಪಡೆಯುವಲ್ಲಿ ಯಾವ ಹಾನಿಯೂ ಇರಲಾರದೆಂದೇ ಗಂಭೀರವಾಗಿ ಹೇಳಬಯಸುವೆ.

**ಪಂಡಿತ್ ಕುಂಝ್ರು (ಉ.ಪ್ರ) :** ಅದರಿಂದ ಆಗುವ ಲಾಭವೇನು?

**ಡಾ. ಎಸ್.ಪಿ. ಮುಖರ್ಜಿ :** ಅದರಿಂದ ಆಗಬಹುದಾದ ಲಾಭ ಎಂದರೆ ದೇಶದ ಐಕ್ಯಮತ್ಯವನ್ನು ಕಾಪಾಡಬಹುದು.

**ಪಂಡಿತ ಕುಂಝ್ರು :** ಈ ಶಾಸನವು ಸುಗಮವಾಗಿರುತ್ತದೆ. ಯಾವ ದಂಪತಿಗಳೂ ಈ ಶಾಸನವನ್ನು ದುರುಪಯೋಗಪಡಿಸಿಕೊಂಡು, ವಿಚ್ಛೇದನ ಪಡೆಯಲಾರರು. ಅಂತಿಮದಲ್ಲಿ ಈ ಶಾಸನದ ಅಂಶಗಳ ಅನ್ವಯತೆಯ ಆಯ್ಕೆ ದಂಪತಿಗಳಿಗೆ ಬಿಟ್ಟಿದ್ದು.

**ಡಾ. ಎಸ್.ಪಿ. ಮುಖರ್ಜಿ :** ಈ ಒಂದು ದೃಷ್ಟಿಕೋನವನ್ನು ಅಗತ್ಯವಾಗಿ ಒತ್ತಾಯಿಸಬಹುದು. ಆದರೆ ವ್ಯತ್ಯಾಸವಿಷ್ಟೆ. ನೀವು ಹಿಂದೂ ವಿವಾಹದ ಅವಿಭಾಜ್ಯತೆಯನ್ನೇ ನಾಶಮಾಡಲು ಹೊರಟಿರುವಿರಿ. ಸಹಸ್ರಾರು ಮಂದಿಯ ಪವಿತ್ರ ಭಾವನೆಗೆ ವಿರುದ್ಧ ಹೊರಟಿರುವಿರಿ. ಪಂಡಿತ ಕುಂಝ್ರು ಹಾಗೂ ಸದನದ ಅನೇಕ ಸದಸ್ಯರು ನಿಮ್ಮ ಕ್ರಮದ ಪರವಾಗಿಲ್ಲ. ನಾನು ವಿವಾಹ ಒಂದು ಒಪ್ಪಂದ ಎಂದು ಭಾವಿಸುವವರ ವಿರೋಧಿಯಲ್ಲ. ಅವರು ಆ ಬಗೆಯ ಅಭಿಪ್ರಾಯವನ್ನು ಹೊಂದಲು ಸ್ವತಂತ್ರರಿದ್ದಾರೆ. ಆದರೆ ಅದರಂತೆಯೇ ಕಾಯಾ ವಾಚಾ ಮನಸಾ ಈ ಮಸೂದೆಯನ್ನು ಒಪ್ಪದೇ ಶತಮಾನಗಳಿಂದ ತಮ್ಮದೇ ಆದ ಪವಿತ್ರ ಸಂಪ್ರದಾಯಗಳನ್ನೇ ನೆಚ್ಚಿಕೊಂಡವರ ಮೇಲೆ ಏಕೆ ಈ ಗದಾಪ್ರಹಾರ? ಈ ಸದನಕ್ಕೆ ಯಾವ ಅಧಿಕಾರ? ಕೇವಲ ಲೆಕ್ಕಣಿಕೆಯ ಬರಹದಿಂದ ಸಹಸ್ರಾರು ವರ್ಷಗಳ ಸಂಪ್ರದಾಯ ಮತ್ತು ನಂಬಿಕೆಗಳನ್ನು ಅನೂರ್ಜಿತಗೊಳಿಸುವ ಕ್ರಮ ಸರಿಯೆ? ಪಂಡಿತ ಕುಂಝ್ರು ಅವರಿಗೆ ನಾನು ನೀಡಬಹುದಾದ ಉತ್ತರ ಇಷ್ಟೆ. (ಏಕಪತ್ನಿ ಪದ್ಧತಿ) ಭಾರತೀಯವರು ಹೇಳಿದ ಏಕಪತ್ನಿ ವ್ಯವಸ್ಥೆಯನ್ನು ಸದ್ಯದಲ್ಲಿಯೇ ಪ್ರಸ್ತಾಪಿಸುವೆ. ಭಾರತಿಯವರು ಆತುರದಿಂದಿದ್ದಾರೆ. ನಾನು ಅನುಸರಿಸಬಲ್ಲ ಮಾರ್ಗವೂ ಅದೇ ಏಕಪತ್ನಿ ವ್ಯವಸ್ಥೆಯದೇ. ನಂಬಿರಿ, ಈ ಹಿಂದೂ ಕೋಡ್‌ನಿಂದಾಗಿ ಭಾರತದೇಶದಲ್ಲಿ ಭಯಂಕರ ಭೇಧಭಾವನೆಗಳ ಅಲೆಗಳೇ ಎದ್ದು, ದೇಶಕ್ಕೆ ಅಪಘಾತ ಉಂಟುಮಾಡಿರುವುದು ಸರಿಯಲ್ಲ. ನಾನು ಪ್ರಗತಿ ಸಾಧಿಸಬೇಕು. ಆದರೆ ಜನತೆಯ ಅಸಹಕಾರದಿಂದಲ್ಲ. ಕಾಲಕ್ರಮೇಣವಾಗಿ ಜನರ ಆಶೆ–ಆಕಾಂಕ್ಷೆಗಳಿಗೆ ಸ್ಪಂದಿಸಿ ಅವರ ಮನವೊಲಿಸಿ, ಅವರಲ್ಲಿ ಬದಲಾವಣೆಯನ್ನು ತರಬೇಕು. ಸಂಪ್ರದಾಯವಾದಿಗಳ ಮನಸ್ಸನ್ನು ಚರ್ಚೆಯಿಂದ ಒಲಿಸಿಕೊಳ್ಳಬೇಕು...

**ಡಾ. ಅಂಬೇಡ್ಕರ್ :** ತಾವು, ಕರಪ್ರತೀಜೀಯ ಬಗೆಗೆ ಹೇಳುತ್ತಿದ್ದೀರಿ.

**ಪಂಡಿತ ಮೈತ್ರ :** ಭೇಟಿ ಮಾಡುವಲ್ಲಿ ತಪ್ಪೇನಿದೆ?

**ಡಾ. ಅಂಬೇಡ್ಕರ್ :** ಅಪಾಯವೇನೂ ಇಲ್ಲ. ನಾನು ಅವರನ್ನು ಚರ್ಚೆಗೆಂದೇ ಆಹ್ವಾನಿಸಿದೆ. ಮೊದಲು ಒಪ್ಪಿದರು. ಆದರೆ ಅದೇಕೋ ಬರಲೇ ಇಲ್ಲ. ನಾನೇನೂ ಬೇಜಾರುಗೊಂಡಿಲ್ಲ.

**ಡಾ. ಎಸ್.ಪಿ. ಮುಖರ್ಜಿ :** ನಾನು ಈ ಬಗ್ಗೆ ಅವರೊಂದಿಗೆ ಚರ್ಚಿಸಿಲ್ಲ. ಚರ್ಚಿಸಲು ಯಾವ ಸಂಕೋಚವಿಲ್ಲ.

**ಡಾ. ಅಂಬೇಡ್ಕರ್ :** ವಾಸ್ತವವಾಗಿ ನಾನು ಅವರನ್ನು ಚರ್ಚೆಗೆ ಆಹ್ವಾನಿಸಿರುವೆ. ಆದರೆ ಅವರು ಬಂದಿಲ್ಲ.

**ಡಾ. ಎಸ್.ಪಿ. ಮುಖರ್ಜಿ :** ನಾನು, ಅವರಂತೆ ಮನೋಭಾವನೆಯನ್ನು ಹೊಂದಿರುವ ಅನೇಕರೊಂದಿಗೆ ಚರ್ಚಿಸಿದ್ದೇನೆ. ಅಲ್ಲದೆ ಸಂಪ್ರದಾಯೇತರರೊಂದಿಗೂ ಚರ್ಚಿಸಿರುವೆ. ಆದರೆ ಇಂದು ದೇಶವು ಈ ಬಗೆಗೆ ಇಬ್ಭಾಗವಾಗಿದೆ. ವಿಷಯದಲ್ಲಿ ಹೇಗೆ ಮುಂದುವರಿಯಬೇಕೋ ತಿಳಿಯದಾಗಿದೆ. ಇದು ಪತ್ರಿಕಾ ಕಾಯ್ದೆಯಲ್ಲ. ಹೇಗೋ? ಅಂಗೀಕರಿಸಲೇಬೇಕೆಂಬ ಅಗ್ರಹವಿಲ್ಲ. ಹಾಗೂ ಅಪಾಯವೂ ಇಲ್ಲ. ಅಲ್ಲದೆ ಇದು ಸಂವಿಧಾನದ ತಿದ್ದುಪಡಿಯ ಮಸೂದೆಯೂ ಅಲ್ಲ. ರಾಜಕೀಯ ವಿಷಯವೂ ಅಲ್ಲ. ನಾವು ರಾಜಕೀಯದಲ್ಲಿ ಭಿನ್ನಾಭಿಪ್ರಾಯವಿರಬೇಕು. ಕಾನೂನು ಪ್ರಗತಿಯ ಮೂಲಭೂತ ವಿಷಯಗಳಲ್ಲಿ ಏಕಾಭಿಪ್ರಾಯವಿರಬೇಕು. ಕಾನೂನು ಪ್ರಗತಿಯಪರವಾಗಿರಬೇಕೇ ಹೊರತು ಹಿನ್ನೆಡೆಯ ಮಾರ್ಗ ಸೂಚಿಸಬಾರದು. ಸರ್ವರೂ ಹೊಂದಿಕೊಂಡು ಹೋಗುವ ಮಾರ್ಗವನ್ನು ಅನುಸರಿಸಬೇಕು. ಶೋಚನೀಯ ವಿಷಯ ಎಂದರೆ ಈ ಮಸೂದೆಯಪರರು ತಾವು ಹೇಳಿದ್ದೇ ಸೂಕ್ತ ಎಂಬ ಭಾವನೆ ಹೊಂದಿದ್ದಾರೆ. ಇದು ವಿಷದಾನೀಯ. (ಓರ್ವ ಸದಸ್ಯ ತುಟಿ ಶೃಂಗಾರ) ನಾನು ತುಟಿ ಶೃಂಗಾರದ ಬಗೆಗೆ ಹೇಳುತ್ತಿಲ್ಲ. ಪ್ರಗತಿಯ ಬಗೆಗೆ ಹೇಳುತ್ತಿರುವೆ, ನಾವು ಬೇರೆಯವರ ಅಭಿಪ್ರಾಯಗಳನ್ನೂ ಗಮನಿಸಬೇಕು. ಹೀಗೆಂದು ಮಾತ್ರಕ್ಕೆ ಅಸಂಗತ ಹಾಗೂ ಓಭಿರಾಯನಕಾಲದ ವಿಷಯಗಳನ್ನು ಒಪ್ಪಬೇಕೆಂದಲ್ಲ. ನಾನು ಪ್ರಗತಿಪರ ಮತ್ತು ಡಾ. ಅಂಬೇಡ್ಕರ್‌ರೊಂದಿಗೆ ಸಹಮತನಿದ್ದೇನೆ. ಆದರೆ ಹಲವು ಭಿನ್ನಾಭಿಪ್ರಾಯಗಳಿವೆ. ಅದು, ಕೇವಲ ದೃಷ್ಟಿಕೋನದಲ್ಲಿ ಮಾತ್ರ. ನೀವು ನಿಮ್ಮ ದೃಷ್ಟಿಕೋನದವರೊಂದಿಗೆ ಏನನ್ನಾದರೂ ಮಾಡಿ, ಆದರೆ ಬೇರೆಯವರ ಮೇಲೆ ಅದನ್ನು ಕಡ್ಡಾಯವಾಗಿ ಹೇರಬೇಡಿ. ಈ ಒಂದು ವಿಷಯವನ್ನು ಕಾನೂನು ಸಚಿವರ ಗಮನಕ್ಕೆ ಗಂಭೀರವಾಗಿ ತರಬಯಸುವೆ. ನಾನೇನಾದರೂ ಈ ಹಿಂದೂ ಕೋಡ್‌ನ ಪರವಾದ ಅಭಿಪ್ರಾಯ ಹೊಂದಿದವರ ಮೇಲೆ ಆಪಾದನೆ ಹೊರಿಸುತ್ತಿಲ್ಲ. ನಾನು ನಿಮಗೆ ಶುಭ ಹಾರೈಸುವೆ. ನೀವು ಮುಂದುವರಿಯಿರಿ, ನಂಬಿಕೆಗಳನ್ನು ಮುಂದುವರಿಸಿಕೊಂಡೇ ಬರಬೇಕೆಂಬುವರ ಮೇಲೆ ನಿಮ್ಮ ಅಭಿಪ್ರಾಯ ಹೇರಬೇಡಿರಿ. ಅವರೂ ನಿಮ್ಮಂತೆಯೇ ದೇಶಾಭಿಮಾನಿಗಳು. ಅವರ ಮೇಲೆ ಏಕೆ ನಿಮ್ಮ ಆಗ್ರಹ? ವಿವಾಹ ವಿಚ್ಛೇದನೆಯ ಶಾಸನವು, ಎಲ್ಲ ಸಮಸ್ಯೆಗಳನ್ನು ಬಗೆ ಹರಿಸಿದೆಯೇ? ಈಗ ಅದರ ಸ್ಥಾನ–ಮಾನವೇನು?

**ಶ್ರೀ ಹಿಮತ್ ಸಿಂಗಕ :** ಅಧಿಕಗೊಂಡಿದೆ.

**ಡಾ. ಎಸ್.ಪಿ. ಮುಖರ್ಜಿ :** ಈಚೆಗೆ ನಾನು ಹಲವಾರು ಸಮಾಜಶಾಸ್ತ್ರದ ಪುಸ್ತಕಗಳ ಅಧ್ಯಯನ ಮಾಡಿರುವೆ. ಜನರು ಗಲಬಿಲಿಗೆ ತುತ್ತಾಗಿದ್ದಾರೆ. ಏಕೆಂದರೆ ಮಾನವರ ಸಮಸ್ಯೆಗಳು ಸಂಕೀರ್ಣಗೊಳ್ಳುತ್ತಿವೆ. ಆದರೆ ಈ ಸಮಸ್ಯೆಗಳಿಗೆ ಜಗತ್ತು ಪರಿಹಾರವನ್ನು ನೀಡಿಲ್ಲ. ವಿವಾಹ ವಿಚ್ಛೇದನ ಪಡೆದವರ ಸಂಖ್ಯೆ ಹೆಚ್ಚಿದೆ. ಆದರೆ ಅದರಿಂದ ಯಾರೂ ಶಾಂತಿ ಪಡೆದಿಲ್ಲ. ಅವರು ಏಕೆ ಶಾಂತಿ ಪಡೆಯಲಿಲ್ಲ?

**ಓರ್ವ ಸದಸ್ಯ :** ಇಲ್ಲ.

**ಡಾ. ಎಸ್.ಪಿ. ಮುಖರ್ಜಿ :** ನೂತನ ಸಮಸ್ಯೆಗಳು ಉದ್ಭವಿಸಿವೆ. ದಯಮಾಡಿ ಮನಶಾಸ್ತ್ರದ ಪುಸ್ತಕಗಳನ್ನು ಅಧ್ಯಯನ ಮಾಡಿರಿ. ಪಾಶ್ಚಿಮಾತ್ಯ ಜಗತ್ತಿನ ನೂರಾರು ಸಮಸ್ಯೆಗಳಿಗೆ ಅವರಲ್ಲಿ ಲಿಂಗ ಹೊಂದಾಣಿಕೆಯ ಅಭಾವವೇ ಕಾರಣ ಎಂದೇ ತಿಳಿಯಲಾಗಿದೆ. ಇದೊಂದು ಸಂಕೀರ್ಣ ಸಮಸ್ಯೆ. ಸ್ತ್ರೀ–ಪುರುಷರ ಮಧ್ಯೆ ಸಮರಸ ಜೀವನದ ಅಭಾವ. ಆದುದರಿಂದ ಪಾಶ್ಚಿಮಾತ್ಯರ ರೀತಿ–ನೀತಿಗಳ ಬಗೆಗೆ ಅಂಧಾನುಕರಣ ಸರ್ವಥಾ ಸಲ್ಲದು. ಯಾರಾದರೂ ಅದನ್ನೇ ಪ್ರಗತಿ ಎಂದು ಭಾವಿಸಿದರೆ.

ಏಕಪತ್ನಿ ವ್ಯವಸ್ಥೆಯನ್ನು ಅನುಮೋದಿಸುವೆ. ಆದರೆ ಅದನ್ನು ಎಲ್ಲರಿಗೂ ಕಡ್ಡಾಯ ಮಾಡಿ. ಅದು ಕೇವಲ ಹಿಂದೂಗಳಿಗೆ ಮಾತ್ರ ಉತ್ತಮವಲ್ಲ, ಎಲ್ಲರಿಗೂ ಉತ್ತಮವಾದದ್ದು, ಯಾವುದಾದರೂ ಒಂದು ಸಾಮಾಜಿಕ ಸಿದ್ಧಾಂತಕ್ಕೆ ಬದ್ಧರಾಗಿರಿ.

**ಪಂಡಿತ ಠಾಕೂರ್‌ದಾಸ ಭಾರ್ಗವ :** ನಂಬಿಕೆಯಿಲ್ಲದವರ ಮೇಲೆ ಏಕೆ ಒತ್ತಾಯ?

**ಡಾ. ಎಸ್.ಪಿ. ಮುಖರ್ಜಿ :** ಒಂದು ವೇಳೆ ಏಕಪತ್ನಿ ವ್ಯವಸ್ಥೆಯೇ ಭಾರತಕ್ಕೆ ಉತ್ತಮಮಾರ್ಗ ಎಂದು ನೀವು ಪರಿಗಣಿಸಿದಲ್ಲಿ, ಅದನ್ನು ಕೇವಲ ಹಿಂದೂಗಳ ದೃಷ್ಟಿಕೋನದಿಂದ ಕಾಣದೆ, ಸಮಸ್ತ ಭಾರತದ ನಾಗರಿಕರೆಲ್ಲರೂ ಅನ್ವಯಿಸಿರಿ. ಈ ಒಂದು ದಿಶೆಯಲ್ಲಿಯಾದರೂ ಧರ್ಮಾತೀತ ರಾಷ್ಟ್ರದಂತೆ ವರ್ತಿಸಿರಿ. ಧೈರ್ಯವಹಿಸಿ, ರಾಷ್ಟ್ರದ ಎಲ್ಲಾ ವರ್ಗಗಳಿಗೂ, ಏಕಪತ್ನೀ ವ್ಯವಸ್ಥೆ ಅನ್ವಯಿಸಲಾಗುವುದು ಎಂದು ಘೋಷಣೆ ಮಾಡಿರಿ. ನಿಮಗೆ ಹಾಗೆ ಮಾಡಲಾಗದೇ ಹೋದರೆ, ಅದನ್ನು ಒಂದೇ ವರ್ಗಕ್ಕೆ ಅನ್ವಯಿಸದಿರಿ. ನಾವು ಇಂದು ಸಂಖ್ಯಾಶಾಸ್ತ್ರದ ಯುಗದಲ್ಲಿದ್ದೇವೆ. ಆ ಸಂಖ್ಯೆಗಳು ನಿಜವಿರಬಹುದು ಅಥವಾ ಕೃತ್ರಿಮವಾಗಿರಲೂ ಬಹುದು. ನಾವು ಅದನ್ನೇ ಪ್ರಮಾಣವೆಂದು ಭಾವಿಸುವೆವು. ನಾನು ಭಾರತದಲ್ಲಿ ಎಷ್ಟು ಜನ ಎರಡನೆ ಬಾರಿ ವಿವಾಹವಾಗಿರುವರು ಎಂಬುದನ್ನು ಅರಿಯಬಯಸಿದೆ. ಆದರೆ ಅಂಕಿಸಂಖ್ಯೆಗಳೇ ದೊರೆಯುತ್ತಿಲ್ಲ.

**ಶ್ರೀ ಹಿಮತ್ ಸಿಂಗಕ :** ಒಂದೇ ಬಾರಿಗೆ ಇಬ್ಬರು ಹೆಂಡಂದಿರನ್ನು ಹೊಂದಿರುವುದು.

**ಡಾ. ಎಸ್.ಪಿ. ಮುಖರ್ಜಿ :** ನಾನೂ ಅದನ್ನೇ ಹೇಳುತ್ತಿರುವೆ. ಮೊದಲನೆಯ ಮಡದಿ ಬದುಕಿರುವಾಗಲೇ ಎರಡನೆಯವಳನ್ನು ಹೊಂದಿರುವುದು. ಈ ಸಂಖ್ಯೆ ತುಂಬಾ ಕಡಿಮೆ ಇದೆ. ಇದೊಂದು ಸಮಸ್ಯೆಯಲ್ಲ. ಏಕೆಂದರೆ ಸಮಾಜ ಮುಂದುವರಿದಿದೆ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದೆ. ಸಾರ್ವಜನಿಕರು ಈ ವಿಧಾನವನ್ನು ಅಲ್ಲಗಳೆದಿದ್ದಾರೆ. ಹೀಗಾಗಿ ಈ ವಿಧಾನವು ನಶಿಸಿಹೋಗಿದೆ. ಪರಿಸ್ಥಿತಿ ಹೀಗಿರುವಾಗ ನೀವು ವಿವಾಹ ವಿಚ್ಛೇದನೆಯ ವಿಡಂಬನೆಯ ನಾಟಕ ಏಕೆ ಆಡುತ್ತಿದ್ದೀರಿ? ನಶಿಸಿಹೋಗುತ್ತಿರುವ ವಿಧಾನಕ್ಕೆ ಮತ್ತೆ ಜೀವ ನೀಡುವ ವ್ಯರ್ಥ ಸಾಹಸಕ್ಕೆ ಕೈಹಾಕಿರುವಿರಿ. ಅದಕ್ಕೆ ಸುಧಾರಣೆ ಮತ್ತು ಕಾನೂನಿನ ಲೇಪನವನ್ನು ಏಕೆ ನೀಡುವಿರಿ? ನೀವು ಇದನ್ನು ಸೂಕ್ತವೆಂದೇ ಭಾವಿಸಿದರೆ ಸಮಸ್ತ ಭಾರತಕ್ಕೆ ಅನ್ವಯಿಸಿರಿ.

ಹಿಂದೂ ಕೋಡ್ ಬಿಲ್ಲಿನ ಬಗೆಗೆ ಹೇಳಬಹುದಾದರೆ, ಅದರ ಪರಿಣಾಮ ಏನಾಗುವುದು ಎಂದು ಹೇಳಲಾರೆ. ಪ್ರಧಾನಿಯವರು ಹೇಳಿದಂತೆ, ಸದ್ಯದಲ್ಲಿ ನಾವು ಇದನ್ನು ಮುಂದುವರಿಸದೇ ಇರಬಹುದು. ಹೀಗಿದ್ದ ಪಕ್ಷದಲ್ಲಿ ನನ್ನದೊಂದು ಸಲಹೆ. ಹಿಂದೂ ಕೋಡ್ ಬಿಲ್ಲನ್ನು ಅಂಗೀಕರಿಸಿರಿ. ಅದನ್ನು ಐಚ್ಛಿಕಗೊಳಿಸಿ. ಬೇಕಾದವರು ಅದನ್ನು ಆಚರಿಸಲಿ. ಈ ಬಗೆಗೆ ನಾನು ಕಟ್ಟಾ ಸಂಪ್ರದಾಯವಾದಿಗಳೊಂದಿಗೆ ಚರ್ಚಿಸಿರುವೆ. ಅವರಲ್ಲಿ ಕೆಲವರು ಮಾತ್ರ ವಿರೋಧಿಸಿದ್ದಾರೆ. ಆದುದರಿಂದ ತಮ್ಮ ನಿರ್ಣಯವನ್ನು ತಮ್ಮ ಭವಿಷ್ಯತ್ತಿಗಾಗಿ ನಿರ್ಧರಿಸುವ ಆಸ್ಪದ ನೀಡಬೇಕು. ಹೀಗೆ ಮಾಡಿದಲ್ಲಿ ಇದೊಂದು ಅದ್ಭುತ ಆರಂಭವಾಗಬಹುದು.

ಯಾರಿಂದ ಏನೇ ವಿರೋಧ ಬಂದರೂ, ನಾನು ಇದೊಂದು ಅಂಬೇಡ್ಕರ್‌ರ ಅದ್ಭುತ ಪವಾಡವೆಂದೇ ಪರಿಗಣಿಸುವೆ. ಅವರು ತಮ್ಮ ಜಾಣ್ಮೆ ಹಾಗೂ ಸಾಮರ್ಥ್ಯದಿಂದ, ಎದುರಾದ ಎಲ್ಲಾ ಸಮಸ್ಯೆಗಳನ್ನು ನಿಭಾಯಿಸಿದ್ದಾರೆ. ಅವರು ಒಪ್ಪುವುದಾದರೆ ಸಂಸತ್ತಿನಿಂದ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸುವೆ. ಆದರೆ ಒಲ್ಲದ ಹಿಂದೂಗಳ ಗಂಟಲಿನಲ್ಲಿ ತುರುಕಬಾರದು. ಅದರಿಂದ ನೀವು ಯಾವ ಸೇವೆಯನ್ನೂ ಮಾಡಿದಂತಾಗದು.ಈ ಹಂತದಲ್ಲಿಯೂ ನೀವು ಮುಂದುವರಿಯಬೇಕೆಂದರೆ ನಾವು ನಮ್ಮಲ್ಲಿ ಕಲಹ ಮಾಡದೇ, ಮೂಲಭೂತ ವಿಷಯಗಳ ಬಗೆಗೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಒಪ್ಪಿಕೊಳ್ಳಬೇಕು. ನೀವು ಇಂದಿನ ಭಾರತೀಯ ಸಮಾಜಕ್ಕೆ ಘಾತುಕಕಾರಿಯಾದ ಅಂಶಗಳನ್ನು ಎತ್ತಿತೋರಿಸಿದ್ದೀರಿ. ಅವನ್ನು ಪರಿಶೀಲಿಸಿ, ಅದರ ಬಗೆಗೆ ಕಡ್ಡಾಯಗೊಳಿಸಬಹುದು. ಇಲ್ಲದೇ ಹೋದಲ್ಲಿ ನೀವು ಸೃಷ್ಟಿಸಿರುವ ನೂತನ ಹಾಗೂ ಭವ್ಯರಚನೆಯನ್ನು ಹಲವು ಕಾಲದವರೆಗೂ ಸ್ಥಗಿತಗೊಳಿಸಬೇಕು; ಹಾಗೂ ಹಿಂದೂವೇ ಇರಲಿ ಅಥವಾ ಹಿಂದೂಯೇತರರೇ ಇರಲಿ ಅವರಿಗೆ ಆಯ್ಕೆ ಮಾಡಿಕೊಳ್ಳಲು ಆಸ್ಪದ ನೀಡಬೇಕು. ಈ ಆಯ್ಕೆ, ವಿವಾಹ, ವಿಚ್ಛೇದನೆ, ವಾರಸುದಾರಿಕೆ ಎಲ್ಲಾ ವಿಷಯಗಳಿಗೂ ನೀಡಬೇಕು. ಇದೊಂದು ನವಮನ್ವಂತರಕ್ಕೆ ನಾಂದಿಯಾಗುವುದು. ಆಗ ನೀವೂ ಮುಂದುವರಿಯಬಹುದು. ಪ್ರಧಾನಿಯವರು ಈ ದಿಶೆಯಲ್ಲಿ ಎಲ್ಲಾ ವಿರೋಧಗಳನ್ನು ತಮ್ಮ ಪ್ರಭಾವಶಾಲಿ ವ್ಯಕ್ತಿತ್ವದಿಂದ ನಿವಾರಿಸುವ ಸಾಮರ್ಥ್ಯ ಹೊಂದಿದ್ದಾರೆ.

**ಶ್ರೀ ಕಾಮತ್ :** ಸುಂಟರಗಾಳಿಯಂತೆ.

**ಡಾ. ಎಸ್.ಪಿ.ಮುಖರ್ಜಿ :** ಹೌದು ಸುಂಟರಗಾಳಿ ಬರುವುದು. ಹಿಂದೂ ಕೋಡ್ ಬಿಲ್ಲಿನ ಬಗೆಗೆ, ಸುಂಟರಗಾಳಿ ಬೀಸಲಿ. ಮೊದಲು ಅವರು ಜನರಿಗೆ, ಯಾವ ಕಡ್ಡಾಯವಿಲ್ಲ ಎಂಬುದನ್ನು ತಿಳಿಸಿ, ಮನವರಿಕೆ ಮಾಡಲಿ. "ನಿಮಗೆ ಆಯ್ಕೆಯ ಅವಕಾಶವಿದೆ. ನಾವು ನಿಮಗೆಂದೇ ಸ್ವರ್ಗವನ್ನು ಸೃಷ್ಟಿಸಿದ್ದೇವೆ. ಒಂದು ಮೋಕ್ಷ ಪಡೆಯಿರಿ" ಎಂದೇ ಸಾರಲಿ. ಜನರಿಗೆ ಅದು ಸ್ವರ್ಗವೆಂದೇ ಮನವರಿಕೆಯಾದಲ್ಲಿ ಇದು ಡಿಲ್ಲಿಯ ಲಡ್ಡು ಎಂದೇ ಮುಕ್ತ ಹೃದಯದಿಂದ ಸ್ವೀಕರಿಸುವರು. ಅಪಾರ ಸಮಯವಿದೆ. ಹಿಂದೂ ಸಂಸ್ಕೃತಿಯು ಅನೇಕ ಶತಮಾನಗಳಿಂದ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ದಾಳಿಗಳನ್ನು ಎದುರಿಸುತ್ತಲೇ ಬಂದಿದ್ದು ಎಲ್ಲವನ್ನು ನುಂಗಿಕೊಂಡು ತನ್ನ ಭವಿಷತ್ತನ್ನು ಬೆಳಗಿಸಿಕೊಂಡೇ ಬಂದಿದೆ. ಆದರೆ ಈ ಮಾದರಿಯ ಅಗಾಧ ಸಾಮಾಜಿಕ ಸುಧಾರಣೆಯ ಬಗೆಗೆ, ಮಸೂದೆಯನ್ನು ತರುವ ಬಗೆಗೆ, ಭಿನ್ನಾಭಿಪ್ರಾಯ ಸಿದ್ಧಾಂತಗಳ ವೈವಿಧ್ಯತೆಗಳು ಸಹಜ. ಹೀಗಾಗಿ ಈ ಬಗ್ಗೆ ಸಮಾಧಾನದಿಂದ ಮುಂದುವರಿಯುವುದೇ ಲೇಸು. ನಾನು ನೀವು ಸತ್ಯವೆಂದೇ ಭಾವಿಸಿರುವ ಸೂತ್ರಗಳನ್ನು ಕೈಬಿಡಿ ಎಂದು ಹೇಳಲಾರೆ. ಆದರೆ ಅದನ್ನು ದಯಮಾಡಿ ಜನತೆಗೆ ಮನದಟ್ಟು ಮಾಡಿ; ಏಕೆಂದರೆ ಜನರು, ಇಂದಿನ ಶಾಸನಕ್ಕಿಂತಲೂ ಉತ್ತಮವಾದ ನಿಯಮ ಹಾಗೂ ಶಾಸನಗಳಡಿಯಲ್ಲಿ ಶಾಂತ ಮತ್ತು ಸುಖಜೀವನ ನಡೆಸುತ್ತಿದ್ದಾರೆ. ಅವರಿಗೆ ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಿ. ಸರಕಾರಕ್ಕೂ ಹಾಗೂ ಸದನಕ್ಕೂ ಇದೇ ನನ್ನ ಕೋರಿಕೆ. ಸದನವು ಈ ನನ್ನ ಮನವಿಯನ್ನು ಮನಗಾಣುವುದೆಂದೇ ನಂಬಿದ್ದೇನೆ.

**ಶ್ರೀ ಬಿ.ಕೆ.ಪಿ. ಸಿನ್ಹಾ :** ನನ್ನ ದುರಂತ. ದೈವವು, ಯಾವಾಗಲೂ, ಮೇಧಾವಿ, ಉತ್ತಮ ವಾಕ್ಪಟು ಆದ ಡಾ. ಮುಖರ್ಜಿಯವರ, ವಿರೋಧ ವಾದಿಸುವ ಆಸ್ಪದವನ್ನೇ ಒದಗಿಸಿದೆ. ಡಾ. ಮುಖರ್ಜಿ ಹಾಗೂ ಇತರರು ಹಲವಾರು ಸಲಹೆಗಳನ್ನು ಮಂಡಿಸಿದ್ದಾರೆ. ಅವರ ಸೂಚನೆಯಂತೆ, ನಾಗರಿಕ ಸಂಹಿತೆಯೊಂದನ್ನು

---

* ೧೯೫೧ರ ಸೆಪ್ಟಂಬರ್ ೧೭ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೭೨೩-೩೨

ಏಕೆ ಜಾರಿಗೊಳಿಸಬಾರದು? ಅಲ್ಲದೆ, ಈ ವಿಷಯವನ್ನು ರಾಜ್ಯಗಳಿಗೇಕೆ ಬಿಟ್ಟುಕೊಡಬಾರದು?. ಈ ಮಸೂದೆಯನ್ನು ಮಂಡಿಸಿದವರು, ಇವಕ್ಕೆಲ್ಲಾ ಸಮರ್ಥನೀಯವಾಗಿ ಉತ್ತರಿಸಿದ್ದಾರೆ. ಈ ಮಸೂದೆಯನ್ನು ವಿರೋಧಿಸಿದವರು, ಸಂವಿಧಾನದಲ್ಲಿಯ ಕಲಂನಂತೆ, ವಿವಿಧ ಜನರ ಮಧ್ಯೆ ಇರಬಹುದಾದ ತಾರತಮ್ಯವನ್ನೂ ಪ್ರಸ್ತಾಪಿಸಿದ್ದಾರೆ. ಅವರ ಈ ಹೇಳಿಕೆಯು ಸಂವಿಧಾನದಲ್ಲಿಯ ನಿಬಂಧನೆಯನ್ನು ಆಧರಿಸಿದೆ. ಆದರೆ ಈ ವಿಧೇಯಕದ ಅಂಶಗಳು, ಕೇವಲ ಒಂದೇ ಸಮುದಾಯಕ್ಕೆ ಅನ್ವಯಿಸುವುದಾದರೆ, ಬಹುಶಃ ಅದು ಸಂವಿಧಾನಬಾಹಿರವೆಂದು ಪರಿಗಣಿಸಬಹುದು. ಈ ದಿಶೆಯಲ್ಲಿ ಅವರು ಬೊಂಬಾಯಿ ಹಾಗೂ ಮದ್ರಾಸಿನ ನ್ಯಾಯಾಲಯಗಳ ತೀರ್ಪನ್ನೂ ಗಮನಕ್ಕೆ ತಂದಿದ್ದಾರೆ. ಅವು ಕೆಳಮಟ್ಟದ ನ್ಯಾಯಾಲಯಗಳ ತೀರ್ಪಾಗಿದೆ. ಈ ನಿರ್ಣಯಗಳನ್ನು ಶ್ರೇಷ್ಠ ನ್ಯಾಯಾಲಯಕ್ಕೆ ತಂದಾಗ, ಬೊಂಬಾಯಿ ನ್ಯಾಯಾಲಯವು, ಆ ಬಗೆಯ ತಾರತಮ್ಯಗಳು ಸಂವಿಧಾನದಲ್ಲಿಲ್ಲ ಎಂದೇ ಹೇಳಿ, ಹಿಂದೂ ಸಮುದಾಯಕ್ಕೆಂದೇ ಶಾಸನಗಳನ್ನು ರಚಿಸಿದರೆ, ತಪ್ಪೇನಿಲ್ಲ ಎಂದೇ ಹೇಳಿವೆ. ಆದುದರಿಂದ ಆ ಬಗೆಗೆ ಪ್ರಸ್ತಾಪಿಸಬೇಕಾಗಿಲ್ಲ.

ಇನ್ನು ವಿವಿಧ ರಾಜ್ಯಗಳಿಗೆ ಅಥವಾ ಜನಾಂಗಗಳಿಗೆ ಜನಾದೇಶ ಪಡೆಯುವ ಬಗೆಗೆ ಅವರು ಮುಂದೊಡ್ಡಿರುವ ವಾದವೇನು? ಅವರ ಹೇಳಿಕೆಯಂತೆ, ಈ ಶಾಸನದ ಹಲವಾರು ಅಂಶಗಳು, ಮೂಲಭೂತ ಹಿಂದೂ ಶಾಸನಗಳಿಗೆ ವ್ಯತಿರಿಕ್ತವಾಗಿವೆ, ಕ್ರಾಂತಿಕಾರಿಯಾಗಿದ್ದು ಕಾನೂನಿನ ಮೇಲೆ ದೂರಗಾಮಿ ಪರಿಣಾಮ ಬೀರಬಹುದು. ಆದುದರಿಂದ ಈ ಬದಲಾವಣೆಗಳು ಅತ್ಯವಶ್ಯಕವಲ್ಲ. ನಾನು ಮಸೂದೆಯನ್ನು ಪರಿಶೋಧಿಸಿ ನೋಡಿದಾಗ ಅವರ ಹೇಳಿಕೆಯಲ್ಲಿ ತಥ್ಯವಿಲ್ಲವೆಂದೇ ತೋರಿತು. ನಾನು ಈಗ ಕೇವಲ ವಿವಾಹ, ಹಾಗೂ ವಿಚ್ಛೇದನೆಗಳ ಅಂಶಕ್ಕೆ ಮಾತ್ರ ಚರ್ಚೆಯನ್ನು ಸೀಮಿತಗೊಳಿಸುವೆ.

**ಪಂಡಿತ ಎಂ.ಬಿ. ಭಾರ್ಗವ (ಅಜಮೀರ್) :** ದಯಮಾಡಿ ಕೇವಲ ಕಲಮು ೨ಕ್ಕೆ ಮಾತ್ರ ನಿಮ್ಮ ಚರ್ಚೆ ಇರಲಿ.

**ಶ್ರೀ ಬಿ.ಕೆ.ಪಿ. ಸಿನ್ಹಾ :** ಹೌದು, ನಾನು ಕೇವಲ ಅನುಬಂಧ ೨ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡುವೆ, ಅಂದರೆ ವಿವಾಹ ಮತ್ತು ವಿಚ್ಛೇದನಾ ಪ್ರಕರಣಗಳಿಗೆ ಮಾತ್ರ. ಅದನ್ನು ಮೀರಿ ಹೋಗುವುದಿಲ್ಲ. ಈ ಪ್ರಕರಣದ ಪ್ರಮುಖ ಲಕ್ಷಣಗಳೇನು? ಅದು ನಾಲ್ಕು ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಒಂದನೆಯದೆಂದರೆ ಈ ವಿಧೇಯಕ ವಿವಾಹ ವ್ಯಾಪ್ತಿಯನ್ನು ವಿಸ್ತರಿಸಿದೆ. ಎರಡನೆಯದಾಗಿ ವಿವಾಹಗಳ ಬಗೆಗೆ ಇದ್ದಿರಬಹುದಾದ ವಿರೋಧಗಳನ್ನು ನಿವಾರಿಸಿದೆ; ಏಕೆಂದರೆ ಜಾತಿಯಿಂದ ಹೊರಗೆ ವಿವಾಹವಾಗಲು ಆಸ್ಪದವೇ ಇರಲಿಲ್ಲ. ಸಗೋತ್ರ ವಿವಾಹವನ್ನು ಕ್ರಮಬದ್ಧಗೊಳಿಸಿದೆ. ತಂದೆ, ತಾಯಿಯವರ ಆಪ್ತವರ್ಗಗಳಲ್ಲಿ ವಿವಾಹವಾಗಲು ಆಸ್ಪದ ಕಲ್ಪಿಸಿದೆ. ವಿರೋಧಗಳನ್ನು ನಿವಾರಿಸಿ, ಏಕಪತ್ನಿ ವಿವಾಹದ ವ್ಯವಸ್ಥೆಗೆ ಅವಕಾಶ ಕಲ್ಪಿಸಿದೆ. ಎಲ್ಲದಕ್ಕೂ ಮಿಗಿಲಾಗಿ, ವಿಚ್ಛೇದನೆಗೆ ಆಸ್ಪದ ನೀಡಿದೆ.

ಮೊಟ್ಟಮೊದಲಾಗಿ ವಿವಾಹ ಕ್ಷೇತ್ರ ತುಂಬಾ ಅಂತರಗಳಿಂದ ಕೂಡಿದೆ. ಅಲ್ಲದೆ ಈ ಮಸೂದೆಯ ಅಂಶಗಳು ನಿಜವಾಗಿಯೂ, ಹಿಂದೂ ಶಾಸನ ಮತ್ತು ಹಿಂದೂಧರ್ಮದ ವಿರೋಧವಾಗಿವೆಯೇ? ನನ್ನ ಅಭಿಪ್ರಾಯದಲ್ಲಿ ಅವು ಧರ್ಮವಿರೋಧಿಯಲ್ಲ. ಡಾ. ಮುಖರ್ಜಿಯವರ ಹೇಳಿಕೆಯಂತೆ ಧಾರ್ಮಿಕ ಮನೋಭಾವನೆ ಹಾಗೂ ಸಂಪ್ರದಾಯವಾದಿಗಳ ಭಾವನೆಗೆ ಆಘಾತ ಉಂಟುಮಾಡುವಂತಿದೆ ಎಂದಿದ್ದಾರೆ. ನಾನೂ ಓರ್ವ ಸಂಪ್ರದಾಯವಾದಿ ಎಂದೇ ಹೇಳಿಕೊಳ್ಳಲು ನನಗೆ ನಾಚಿಕೆ ಏನೂ ಇಲ್ಲ. ನಾನು ಗಂಗಾನದಿಯಲ್ಲಿ ಮೀಯಲು ಹೋದಾಗೆಲ್ಲಾ ಡಾ. ಮುಖರ್ಜಿಯವರನ್ನು ಭೇಟಿಯಾಗುತ್ತಲೇ ಇರುವೆ. ಅಲ್ಲದೆ ವಿಶ್ವನಾಥನ ಮಂದಿರದಲ್ಲಿಯೂ ನಾವು ಪರಸ್ಪರ ಭೇಟಿಯಾಗುತ್ತಲೇ ಇರುವೆವು. ಹೀಗಾಗಿ

ನಾವಿಬ್ಬರೂ ಸಂಪ್ರದಾಯಸ್ಥರೇ, ಹೀಗಾಗಿ ನಾನು ಈ ವಿಧೇಯಕದಲ್ಲಿ ಧಾರ್ಮಿಕ ಭಾವನೆಗಳಿಗೆ ವಿರೋಧವಾದುದನ್ನೇನೂ ಕಂಡಿಲ್ಲ. ನಮ್ಮ ಹಿಂದೂ ಸಮಾಜದ ಮೂಲ ಮತ್ತು ನಿರ್ಮಲವಾದ ಸ್ಥಿತಿ ಏನು? ಇದನ್ನು ನಾವು ಮಹಾಭಾರತ ಮುಂತಾದ ಗ್ರಂಥಗಳಿಂದ ಅರಿಯಬಹುದಾಗಿದೆ. ಅಂದಿನ ದಿನಗಳಲ್ಲಿ, ನಾವು ಇಂದು ಕಾಣುತ್ತಿರುವ ಜಾತಿಭೇದಗಳೇ ಇರಲಿಲ್ಲ. ಅವು ಕೇವಲ ಕಾರ್ಯ ಅಥವಾ ಕಾಯಕ ಭೇದಗಳಾಗಿದ್ದವು.

**ಶ್ರೀ ಶ್ಯಾಮಾನಂದನ ಸಹಾಯ್ :** ಜನ್ಮತಃ ಎಲ್ಲರೂ ಶೂದ್ರರೇ, ಧಾರ್ಮಿಕ ಸಂಸ್ಕಾರಗಳಿಂದ ಬ್ರಾಹ್ಮಣನಾಗುತ್ತಾನೆ.

**ಶ್ರೀ ಬಿ.ಕೆ.ಪಿ. ಸಿನ್ಹಾ :** ಆದರೆ ಹಲವಾರು ಕಾರಣಗಳಿಂದ ಅನಿಷ್ಟ ಬದಲಾವಣೆಗಳು ಜಾರಿಯಲ್ಲಿ ಬಂದವು. ಅದನ್ನು ನಾನು ವಿವರಿಸಲಾರೆ; ಏಕೆಂದರೆ ನಾನೂ ನಿಮ್ಮಂತೆ ಭಾಷಣದ ಆಟವಾಡಲು ಬಯಸಲಾರೆ. ಇಂದಿನ ಭೇದಭಾವನೆಗಳಿಗೆ ಅವಕಾಶವಿರಲಿಲ್ಲ. ಯಾವ ಆರ್ಯನೂ ಮತ್ತೊಬ್ಬ ಆರ್ಯನೊಂದಿಗೆ ವಿವಾಹವಾಗಬಹುದಾಗಿತ್ತು. ಹಿಂದೂ ಶಾಸನದಡಿಯಲ್ಲಿ ಅನುಲೋಮ ಮತ್ತು ಪ್ರತಿಲೋಮ ವಿವಾಹಗಳಿಗೆ ಅವಕಾಶವಿದ್ದುದು ತಮ್ಮೆಲ್ಲರಿಗೂ ತಿಳಿದಿದೆ. ನಾವು ಇಂದಿನ ಈ ವಿಧೇಯಕದಿಂದ ಪುರಾತನ ವಿಧಾನವನ್ನೇ ಅನುಸರಿಸುತ್ತಿದ್ದೇವೆ. ಆದರೆ ಪುರಾತನ ವ್ಯವಸ್ಥೆಯನ್ನು ಹಲವಾರು ದುಷ್ಟಶಕ್ತಿಗಳು ಹಾಳುಮಾಡಿದರು. ಅದರಿಂದ ದೇಶ ಈ ಅವಸ್ಥೆಗೆ ಬಂದಿತು.

**ಪಂಡಿತ ಮಾಳವೀಯ :** ದಯಮಾಡಿ ಮಾನ್ಯ ಸದಸ್ಯರು ಈ ಅಂಶವನ್ನು ವಿಶದವಾಗಿ ಹೇಳಬೇಕು.

**ಶ್ರೀ ಬಿ.ಕೆ.ಪಿ. ಸಿನ್ಹಾ :** ನಾನು ಸಾಕಷ್ಟು ವಿಶದವಾಗಿಯೇ ವಿವರಿಸಿದ್ದೇನೆ. ಹೇಳುತ್ತಾ ಹೋದರೆ ಒಂದು ವಾರದ ಅವಧಿ ಬೇಕಾಗಬಹುದು.

**ಪಂಡಿತ ಮಾಳವೀಯ :** ನಾನು ಅರಿತುಕೊಳ್ಳಬಯಸುವೆ. ಮಾನ್ಯ ಸದಸ್ಯರು ಹೇಳಿದಂತೆ ಭಾರತದಲ್ಲಿ ಪ್ರತಿಲೋಮ ವಿವಾಹಕ್ಕೆ ಯಾವಾಗ ಆಸ್ಪದ ನೀಡಿದರು?

**ಶ್ರೀ ಬಿ.ಕೆ.ಪಿ. ಸಿನ್ಹಾ :** ಹಿಂದೂ ಲಾ ದ ಯಾವ ಗ್ರಂಥದಲ್ಲಿಯೂ ತಾವು ಕಾಣಬಹುದು. ಅನುಲೋಮ–ಪ್ರತಿಲೋಮ ವಿವಾಹಗಳು ಸಾಮಾನ್ಯವಾಗಿದ್ದವು.

**ಉಪಾಧ್ಯಕ್ಷರು :** ಅನುಲೋಮ ವಿವಾಹಗಳಿಗೆ ಆಸ್ಪದವಿತ್ತು. ಆದರೆ ಪ್ರತಿಲೋಮ ವಿವಾಹಗಳಿಗಲ್ಲ.

**ಶ್ರೀ ಬಿ.ಕೆ.ಪಿ. ಸಿನ್ಹಾ :** ಈ ದಿಶೆಯಲ್ಲಿ ಅನೇಕ ಸಂಸದೀಯ ಶಾಸನಗಳಿವೆ. ಉದಾಹರಣೆಗೆ ೧೮೭೨ರ ವಿಶೇಷ ವಿವಾಹ ಕಾಯ್ದೆ, ೧೯೪೯ರ ಹಿಂದೂ ವಿವಾಹ ಮನ್ನಣೆ ಕಾಯ್ದೆಯಂತೆ, ಹಿಂದೂ, ಸಿಖ್, ಜೈನ ಹಾಗೂ ಇತರ ಜಾತಿ, ಉಪಜಾತಿಗಳೊಂದಿಗೆ ನಡೆದ ವಿವಾಹಕ್ಕೆ ಮನ್ನಣೆ ನೀಡಲಾಗಿದೆ. ಈ ಬಗೆಯ ಅಖಿಲ ಭಾರತ ಮಟ್ಟದ ಶಾಸನಗಳಿದ್ದು ಹಿಂದೂಗಳು ಒಬ್ಬರನ್ನೊಬ್ಬರು ವಿವಾಹವಾಗಲೂ ಅಡ್ಡಿಯಿಲ್ಲ. ಈ ಹಿನ್ನೆಲೆಯಲ್ಲಿ ನಾವು ನಮ್ಮಲ್ಲಿ ಜಾರಿಯಲಿದ್ದ ಪುರಾತನ ಶಾಸನಗಳನ್ನೇ ಪುನಃ ರಚಿಸುತ್ತಿದ್ದೇವೆ. ಆದುದರಿಂದ ಡಾ. ಮುಖರ್ಜಿಯವರಂತೆ ಹಳೆಯ ಶಾಸನಗಳನ್ನೇಕೆ ಪುನರ್ರಚಿಸಬೇಕು? ಆದರೆ ನಾನು ಅವರಿಗೆ ಮನವರಿಕೆ ಮಾಡಬಯಸುವುದೇನೆಂದರೆ ಹಳೆಯ ಶಾಸನಗಳನ್ನು ಪುನಃ ರಚಿಸುವುದರಲ್ಲಿ ಅಪರಾಧವೇನು?

ಈಗ ನಾನು ಎರಡನೆಯ ಲಕ್ಷಣದ ಬಗೆಗೆ ಪ್ರಸ್ತಾಪಿಸುವೆ. ಅದು ವಿವಾಹದಲ್ಲಿಯ ವಿರೋಧಗಳನ್ನು ತಗ್ಗಿಸಲು ಕುರಿತದ್ದು. ಹಿಂದೂ ವಿವಾಹ ಪದ್ಧತಿಯಲ್ಲಿರುವ ಆತಂಕಗಳನ್ನು ನಿವಾರಿಸುವ ಮಸೂದೆಯಡಿಯಲ್ಲಿ ಸಗೋತ್ರ ಮತ್ತು ಸ್ವಪ್ರವರಗಳಿಗೆ ಆಸ್ಪದ ನೀಡಿದೆ ಎಂಬುದು ಸತ್ಯವಾಗಿರದೆ, ಈ ಮಸೂದೆಯಲ್ಲಿ

ನೂತನವಾದುದೇನೂ ಇಲ್ಲ. ಈ ಅಂಶವು ಈಗಾಗಲೇ ಹಿಂದೂ ಲಾ ದಲ್ಲಿ ಅಡಕವಾಗಿದೆ. ಏಕೆಂದರೆ ಹಿಂದೂ ಸಮಾಜದಲ್ಲಿ ಕೇವಲ ಬ್ರಾಹ್ಮಣ ವರ್ಗದಲ್ಲಿ ಮಾತ್ರ ಸಗೋತ್ರ ವಿವಾಹವನ್ನು ನಿಷೇಧಿಸಲಾಗಿದೆ. ಕ್ಷತ್ರಿಯರಿಗೆ ಹಾಗೂ ವೈಶ್ಯರಿಗೆ ಗೋತ್ರಗಳು ಕೇವಲ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಭಾವನೆಗಳ ಸಂಕೇತವಾಗಿದೆ. ಅವರಿಗೆ ಗೋತ್ರ ಎಂದರೆ ತಾವು ತಮ್ಮ ಪೂರ್ವಜರ ವಂಶದವರು ಎಂಬ ಕಲ್ಪನೆ ಇಲ್ಲ. ಆದುದರಿಂದ ಕೇವಲ ಬ್ರಾಹ್ಮಣರಲ್ಲಿ ಮಾತ್ರ ತಾವು ಒಂದೇ ವಂಶದ ಸಂಜಾತರು ಎಂಬ ನಂಬಿಕೆ ಇದೆ. ಶೂದ್ರವರ್ಗದಲ್ಲಿ ಸಗೋತ್ರ ವಿವಾಹಕ್ಕೆ ಯಾವಾಗಲೂ ಅವಕಾಶವಿದೆ. ಅಂದಿನ ಅಥವಾ ಇಂದಿನ ಶಾಸನಗಳಲ್ಲಿ ಸಗೋತ್ರ ವಿವಾಹಕ್ಕೆ ಕಾನೂನಿನ ಮನ್ನಣೆ ಇದ್ದು, ಅದನ್ನೇ ನಾವು ಇಂದು ಹಿಂದೂಕೋಡ್ ಬಿಲ್ಲಿನಲ್ಲಿ ಅಳವಡಿಸಿದ್ದೇವೆ.

ಮತ್ತೊಂದು ನಿರ್ಬಂಧನೆಯನ್ನು ವಿಧಿಸಿದೆ. ಅದೇನೆಂದರೆ, ವಿವಾಹ ಪದ್ಧತಿಯಲ್ಲಿಯ ವಿರೋಧವನ್ನು ತಂದೆಯ ಕಡೆಗೆ ಐದು ತಲೆಗಳಿಗೆ ಹಾಗೂ ತಾಯಿಯ ಕಡೆಗೆ ಮೂರು ತಲೆಗಳಿಗೆ ಸೀಮಿತಗೊಳಿಸಲಾಗಿದೆ. ಹಿಂದೂ ಲಾ ಹಾಗೂ ಜಾರಿಯ ಆಚರಣೆ ಕುರಿತಂತೆ ಏಕರೂಪ ವ್ಯವಸ್ಥೆಯಿಲ್ಲ. ಏಕಂದರೆ ಹಲವರು ಏಳು ಮತ್ತು ಐದು, ಮತ್ತೆ ಕೆಲವರು ಐದು ಹಾಗೂ ಮೂರು ತಲೆಮಾರಿನ ಅವಧಿಯವರಿಗೆ ವಿವಾಹಗಳನ್ನು ನಿಷೇಧಿಸಿದ್ದಾರೆ. ಅವರ ವಿಚಾರದಂತೆ ಐದು ಹಾಗೂ ಮೂರು ತಲೆಮಾರಿಗಿಂತ ನಿಷೇಧವನ್ನು ವಿಸ್ತರಿಸುವ ಅಗತ್ಯವಿಲ್ಲ ಎಂದೇ ಇತ್ತು. ಯಜುರ್ವೇದದಲ್ಲಿ ವಿವಾಹ ನಿಷೇಧ ಮೂರು ಮತ್ತು ಎರಡಕ್ಕೆ ಸೀಮಿತಗೊಳಿಸಿದೆ. ಇತರ ವೇದಗಳ ಪಾಠದಂತೆ ಎರಡನ್ನು ಮೀರಿಲ್ಲ. ಹಾಗಾಗಿ ನಾವು ಈ ವಿಧೇಯಕದಲ್ಲಿ ಹಿಂದಿನ ಪದ್ಧತಿಗೆ ಮರಳಿರುವೆವು. ಈ ಮಧ್ಯೆ ಹಿಂದೂಧರ್ಮ ಇತರರ ಸಂಪರ್ಕದಿಂದ ಸಂಕರಣಕ್ಕೆ ಗುರಿಯಾಗಿತ್ತು. ಈಗ ಸರಿಪಡಿಸಲಾಗಿದೆ ಎಂದೇ ಭಾವಿಸುವೆ.

(ಶ್ರೀ ಹಿಮತ್‌ಕಾ ಸಿಂಗ್ ಅಧ್ಯಕ್ಷ ಪೀಠದಲ್ಲಿ)

ಏಕಪತ್ನಿ ವ್ಯವಸ್ಥೆಗೆ ಸಂಬಂಧಿಸಿದಂತೆ, ಹಿಂದೂ ಲಾ ದ ಅಡಿಯಲ್ಲಿ ಹಿಂದೂ ಸ್ತ್ರೀ ಏಕಪತಿಯನ್ನೇ ಹೊಂದಿರುತ್ತಾಳೆ.

**ಶ್ರೀ ಕಾಮತ್ :** ಓರ್ವ ಜೀವಂತ ಪತ್ನಿ.

**ಬಿ.ಕೆ.ಪಿ. ಸಿನ್ಹಾ :** ಜೀವಂತ ಅಥವಾ ಮೃತ.

**ಶ್ರೀ ಕಾಮತ್ :** ಓರ್ವ ಮೃತ ಹಾಗೂ ಓರ್ವ ಜೀವಂತ ಪತ್ನಿ ಹೊಂದಿರಬಹುದು.

**ಶ್ರೀ ಬಿ.ಕೆ.ಪಿ. ಸಿನ್ಹಾ :** ಹಲವು ಪ್ರಕರಣಗಳಲ್ಲಿ ಕೇವಲ ಒಬ್ಬ ಪತ್ನಿಯನ್ನೇ ಹೊಂದಲು ಆಸ್ಪದ. ಆದರೆ ಪುರುಷರ ಬಗೆಗೆ, ಹಿಂದೂ ಲಾ ಬಹುಪತ್ನಿಯರ ವಿವಾಹಕ್ಕೆ ಆಸ್ಪದ ನೀಡಿದೆ ಎಂಬ ತಪ್ಪು ಭಾವನೆ ಬೆಳೆದು ಬಂದಿದೆ. ಆದರೆ ನಾನು ಕಂಡಂತೆ ಹಲವಾರು ಗ್ರಂಥಗಳಲ್ಲಿ ಹಾಗೂ ಯಾಜ್ಞವಲ್ಕ್ಯ, ಮನು ಮತ್ತು ಆಪಸ್ತಂಭಗಳಲ್ಲಿ ಹೇಳಿದಂತೆ ಹಲವು ಪ್ರಸಂಗಗಳಲ್ಲಿ ಮಾತ್ರ ಎರಡನೆಯ ಪತ್ನಿಯನ್ನು ಹೊಂದಬಹುದಾಗಿದೆ. ಸೂಕ್ತ ಸಮಯದಲ್ಲಿ ನಾನು ಸದನದಲ್ಲಿ ಆ ಶ್ಲೋಕಗಳನ್ನೂ ಉದಾಹರಿಸುವೆ.

**ಪಂಡಿತ ಮಾಳವೀಯ :** ನೀವು ಅದನ್ನೇ ಸಲಹೆ ಮಾಡುವಿರೋ?

**ಶ್ರೀ ಬಿ.ಕೆ.ಪಿ. ಸಿನ್ಹಾ :** ಇಲ್ಲ, ಈಗ ಬೊಂಬಾಯಿ ಮತ್ತು ಮದ್ರಾಸಿನಲ್ಲಿ ಏಕಪತ್ನಿವಿವಾಹ ಶಾಸನ ಜಾರಿಗೊಳಿಸಿದ್ದಾರೆ. ಈ ಒಂದು ಸೂತ್ರವನ್ನು ಹಿಂದೂ ವಿಶೇಷ ವಿವಾಹ ಮಸೂದೆ ಹಾಗೂ ನಾಗರಿಕ ವಿವಾಹ ಮಸೂದೆ ಅಡಿಯಲ್ಲಿ ಅಂಗೀಕರಿಸಲಾಗಿದೆ. ನಾನು ಕಂಡಂತೆ, ಈ ಸೂತ್ರವನ್ನು ಅಪರೋಕ್ಷವಾಗಿ ವಿವಾಹಿತ ಸ್ತ್ರೀಯರ ಜೋಪಾನ ಹಾಗೂ ಬೇರೆ ವಾಸಸ್ಥಾನ ಮಸೂದೆಯಲ್ಲಿಯೂ ಕಾಣಬಹುದು. ಈ ಕಾನೂನಿನಂತೆ ಪತಿಯು ಬೇರೆ ಸ್ತ್ರೀಯನ್ನು ವಿವಾಹವಾದಲ್ಲಿ,

ಮೊದಲಿನವಳಿಗೆ ಜೀವನಾಂಶ ಹಾಗೂ ಬೇರೆ ವಸತಿ ಸೌಕರ್ಯ ನೀಡಬೇಕು. ಹೀಗಾಗಿ ಓರ್ವಪತ್ನಿಯನ್ನೇ ಹೊಂದುವುದನ್ನು ಬೆಂಬಲಪಡಿಸಿದೆ. ಈ ವ್ಯವಸ್ಥೆಯಿಂದ ದೂರ ಸರಿಯುವುದು ಸೂಕ್ತವಲ್ಲ. ಅನಿವಾರ್ಯವಾದಲ್ಲಿ ಸ್ತ್ರೀಗೆ ಬೇರೆ ವಸತಿ ಮತ್ತು ಜೀವನಾಂಶ ನೀಡಲೇಬೇಕು.

**ಶ್ರೀಕಾಮತ್ :** ಬಹುಪತಿಯ ಬಗೆಗೆ ಏನು?

**ಶ್ರೀ ಬಿ.ಕೆ.ಪಿ. ಸಿನ್ಹಾ :** ನಾನು ಈಗ ವಿಚ್ಛೇದನದ ಕುರಿತು ಹೇಳುವೆ. ಡಾ. ಮುಖರ್ಜಿಯರು, ರೋಷದಿಂದ, ಹಿಂದೂ ವಿವಾಹಗಳು, ಅವಿಚ್ಛಿನ್ನ ಹಾಗೂ ಪವಿತ್ರಬಂಧನ ಅದನ್ನು ಯಾರೂ ಮುರಿಯಲಾಗದು ಎಂದೇ ಹೇಳಿದ್ದಾರೆ. ಹೀಗೆಂದಾಗ ಯಾವ ಸ್ತ್ರೀಯೊಂದಿಗೆ ಆಗಿರಬಹುದಾದ ವಿವಾಹದಿಂದ ಮುಕ್ತಿಯೇ ಇಲ್ಲವೆಂದಾಯ್ತು! ಆದರೆ ನಾನು ಕಂಡ ಹಲವು ಗ್ರಂಥಗಳಲ್ಲಿ ವಿವಾಹ ಅವಿಚ್ಛಿನ್ನವೆಂದು ಹೇಳಿಲ್ಲ. ಏಕೆಂದರೆ ನಾರದ ಹಾಗೂ ಪರಾಶರರ ಹೇಳಿಕೆಯಂತೆ  ಸ್ತ್ರೀಯರಿಗೂ ವಿಶಿಷ್ಟ ಪ್ರಸಂಗಗಳಲ್ಲಿ ಬೇರೆ ಪತಿಯನ್ನು ಹೊಂದುವ ಅವಕಾಶವಿದೆ. ಈ ಹೇಳಿಕೆಯಂತೆ ಐದು ಪ್ರಸಂಗದಲ್ಲಿ ಅಂದರೆ ಪತಿ ಮೃತನಾದಾಗ ಅಥವಾ ದೇಶಾಂತರದಿಂದ ಮರಳದಿರುವಾಗ, ಬೇರೆ ಧರ್ಮವನ್ನು ಸ್ವೀಕರಿಸಿದಾಗ, ನಪುಂಸಕನಿದ್ದಾಗ ಅಥವಾ ಜಾತಿಯಿಂದ ಬಹಿಷ್ಕರಿಸಿದಾಗ ಅವಳು ಬೇರೆ ಪತಿಯನ್ನು ಪಡೆಯಬಹದು.

**ಪಂಡಿತ ಮಾಳವೀಯ :** ದಯಮಾಡಿ ಅದರ ಟೀಕೆಯನ್ನೂ ಓದುವಿರೋ?

**ಶ್ರೀ ಬಿ.ಕೆ.ಪಿ. ಸಿನ್ಹಾ :** ಅದನ್ನು ತಮಗೇ ಬಿಟ್ಟಿದ್ದೇನೆ. ಮುಖರ್ಜಿಯವರು ಹೇಳಿದಂತೆ ವಿವಾಹವು ಮುರಿಯಲಾಗದು ಎಂಬುದು ಸತ್ಯಕ್ಕೆ ದೂರವಾದ ಸಂಗತಿ, ಏಕೆಂದರೆ ಹಲವಾರು ವಿಶಿಷ್ಟ ಪ್ರಸಂಗಗಳಲ್ಲಿ ಅದಕ್ಕೆ ಅವಕಾಶ ನೀಡಲಾಗಿತ್ತು. ಹೀಗಾಗಿ ವಿವಾಹ ಒಂದು ಒಪ್ಪಂದವೆಂಬ ಭಾವನೆಯನ್ನು ಅಪರೋಕ್ಷವಾಗಿ ಸ್ವೀಕರಿಸಿದಂತೆ. ಆಧುನಿಕ ಕಾಲದ, ನಾಗರಿಕ ವಿವಾಹ ವಿಧಾನವೂ ವಿಚ್ಛೇದನದ ಅಧಿಕಾರವನ್ನು ಎರಡೂ ಪಕ್ಷಗಳಿಗೆ ನೀಡಿದೆ. ವಿವಾಹ ವಿಚ್ಛೇದನೆಗೆ ಹಿಂದೂ ಸಮಾಜದಲ್ಲಿ ಆಸ್ಪದವಿಲ್ಲದೇ ಹೋದಲ್ಲಿ ಅದು ಅನೈಕ್ಯತೆಗೆ ಗುರಿಯಾಗಿ ಹಿಂದೂ ಸಮಾಜವೇ ವಿಸರ್ಜನೆಗೆ ಈಡಾಗಬಹುದು.

ಈ ದಿಶೆಯಲ್ಲಿ ಡಾ. ಮುಖರ್ಜಿಯವರ ಮಾತೃ ಪ್ರಾಂತವಾದ ಬಂಗಾಲದಲ್ಲಿ ಹುಯಿಲೆದ್ದ ಎರಡು ಮೂರು ಪ್ರಕರಣಗಳು ನನ್ನ ಜ್ಞಾಪಕಕ್ಕೆ ಬರುತ್ತವೆ, ಏಕೆಂದರೆ ಅಲ್ಲಿ ಅನುಸರಿಸುತ್ತಿರುವ ಹಿಂದೂ ಲಾ ದಂತೆ ವಿಚ್ಛೇದನೆಗೆ ಆಸ್ಪದವೇ ಇಲ್ಲ. ನನಗೆ ತಿಳಿದಂತೆ ಎರಡು ಪ್ರಕರಣಗಳೂ ಬ್ರಾಹ್ಮಣರ ಜಾತಿಗೆ ಸೇರಿದವು. ಅವರು ವಿವಾಹವಾಗಿ ಹಲವು ಕಾಲ ಸುಖವಾಗಿ ಬಾಳಿದರು. ನಂತರ ಅವರ ದಾಂಪತ್ಯ ಜೀವನ ವಿರಸಮಯಗೊಂಡಿತು. ಇದರಿಂದ ಪಾರಾಗುವ ಪ್ರಶ್ನೆಯೇ ಇರಲಿಲ್ಲ. ಈ ಎರಡೂ ಪ್ರಕರಣಗಳಲ್ಲಿ, ಮಡದಿಯರು, ಕಲಕತ್ತಾದ ಪ್ರಸಿದ್ಧ ಮಸೀದಿಗೆ ತೆರಳಿ ಮತಾಂತರ ಹೊಂದಿ, ತಮ್ಮ ಹಿಂದಿನ ವಿವಾಹದಿಂದ ವಿಸರ್ಜನೆ ಪಡೆದು ಮುಕ್ತರಾದರು. ವಿವಾಹ ವಿಚ್ಛೇದನೆ ಇರದೇ ಹೋದಲ್ಲಿ ಸಮಾಜದ ಪರಿಸ್ಥಿತಿ ಈ ಅಧೋಗತಿ ತಲುಪುತ್ತದೆ. ಹೀಗಾಗಿ, ಈ ಪದ್ಧತಿಯನ್ನು ವಿರೋಧಿಸುವುದರಿಂದ ಡಾ. ಮುಖರ್ಜಿಯವರು ಯಾವ ಹಿಂದೂಗಳಿಗೆ ಉಪಕಾರ ಮಾಡಬಲ್ಲರೋ ತಿಳಿಯದು. ಅವರ ಧೋರಣೆಯು ಕಟ್ಟಾವಾದಗಳಿಗೆ ಬೆಂಬಲನೀಡಿ, ಹಿಂದೂ ಸಮಾಜಕ್ಕೆ ಹಾನಿ ಉಂಟುಮಾಡುತ್ತದೆ.

**ಶ್ರೀ ಚಟ್ಟೋಪಾಧ್ಯಾಯ (ಪ.ಬಂ) :** ನಂತರ ಅವರು ಹಿಂದೂಗಳಾಗಿ ಮತಾಂತರಗೊಂಡರೇ?

**ಬಿ.ಕೆ.ಪಿ. ಸಿನ್ಹಾ :** ಒಟ್ಟಾರೆ ನಿಮಗೆ ವಿಚ್ಛೇದನೆ ಬೇಕಾದಲ್ಲಿ ಅನ್ಯಮತಕ್ಕೆ ಮತಾಂತರ ಹೊಂದಬೇಕೆಂದೇ ನಾನು ಹೇಳಬಯಸುವೇ, ಈ ಬಗೆಯ ಅನೇಕ ಉದಾಹರಣೆಗಳಿವೆ. ಪ್ರಗತಿಯ ಬಗ್ಗೆ ಮಾತನಾಡುವವರು ಇದನ್ನು ಗಮನಿಸಬೇಕು. ಸಮಾಜ ಯಾವ ಮಟ್ಟಕ್ಕೆ ಹೋಗಬಹುದು ಎಂಬುದನ್ನೂ ಅರಿಯಬೇಕು;

ಏಕೆಂದರೆ ನಾವು ಇಂದು ಬಾಹ್ಯಪ್ರಪಂಚದೊಂದಿಗೆ ಸಂಪರ್ಕ ಹೊಂದಿದ್ದೇವೆ. ಇಂದು ವಿಚಾರ ಯುಗ. ವಿಚಾರಗಳಿಗೆ ಯಾವ ಸರಹದ್ದೂ ಇಲ್ಲ ಅವು ವಿಶ್ವವ್ಯಾಪಿ. ಅಲ್ಲದೆ ಹಕ್ಕು, ಸ್ವಾತಂತ್ರ್ಯ ಸಿದ್ಧಾಂತಗಳನ್ನು ಸ್ತ್ರೀ ಹಾಗೂ ಪುರುಷರಿಬ್ಬರೂ ಬಲ್ಲರು. ಅದರಲ್ಲಿಯೂ ವಿಶೇಷವಾಗಿ ಯುವಜನಾಂಗವನ್ನು ನಾವು ಪುರಾತನ ಹಿಂದೂ ಸಮಾಜದ ಆದರ್ಶಗಳ ಬಂಧನಕ್ಕೆ ಗುರಿ ಮಾಡಲಾರದೆ ಹೋಗುವುದರಿಂದ ಹಿಂದೂ ಸಮಾಜವು ತನ್ನ ಉಳಿವನ್ನು ಬಹುದಿನ ಮುಂದುವರಿಸಲಾರದೆಂಬ ಭೀತಿ ನನಗೆ.

ನಂತರ ನನ್ನ ಹಲವು ಮಿತ್ರರು, ಪ್ರಾಂತೀಯ ಶಾಸಕಾಂಗಗಳು ಈ ದಿಶೆಯಲ್ಲಿ ಶಾಸನಗಳನ್ನು ಈಗಾಗಲೇ ರಚಿಸಿರುವುದರಿಂದ ಈ ವಿಷಯವನ್ನು ಪ್ರಾಂತಗಳಿಗೇ ಏಕೆ ಬಿಟ್ಟುಕೊಡಬಾರದೆಂದು ಸೂಚಿಸಿದ್ದಾರೆ. ಈ ಒಂದೇ ಒಂದು ಕಾರಣಕ್ಕೆ ನಾನು ಕೇಂದ್ರ ಶಾಸನ ಒಂದು ಇರಬೇಕೆಂದು ಆಗ್ರಹಿಸುವೆ. ವಿವಾಹ ವಿಚ್ಛೇದನೆ, ದತ್ತುಸ್ವೀಕಾರ, ವಾರಸುದಾರಿಕೆಗಳು ಸಮವರ್ತಿ ಪಟ್ಟಿಯ ೫ ಕಲಂನಲ್ಲಿವೆ. ಆದುದರಿಂದ ಯಾವುದೇ ರಾಜ್ಯವು ಈ ಬಗೆಗೆ ಶಾಸನ ರಚಿಸಬಹುದು, ಈಗಾಗಲೇ ಹಲವು ರಾಜ್ಯಗಳು ಶಾಸನ ರಚಿಸಿವೆ. ಒಂದು ವೇಳೆ ನಾವು ಶಾಸನ ರಚಿಸದೇ ಹೋದರೆ ಏನಾಗಬಹುದು?. ಪರಿಣಾಮವೆಂದರೆ, ಸಂಪ್ರದಾಯ, ಮುಖರ್ಜಿಯವರು ಕಣ್ಣೀರು ಹರಿಸಿದ ಸಂಪ್ರದಾಯ, ವಿವಿಧ ರಾಜ್ಯಗಳು ರಚಿಸಬಹುದಾದ ಶಾಸನಗಳಿಂದ ತನ್ನ ಸ್ವರೂಪವನ್ನೇ ಕಳೆದುಕೊಳ್ಳಲೂಬಹುದು. ಆದುದರಿಂದ, ಪ್ರಗತಿಗೆ ಪೂರಕವಾಗಿರುವ ಏಕೈಕ ಮಾಧ್ಯಮವಾದ ಸಂಪ್ರದಾಯವನ್ನು ನಶಿಸಿಹೋಗದಂತೆ ನೋಡಿಕೊಳ್ಳಬೇಕು. ಇಲ್ಲದೆ ಹೋದಲ್ಲಿ ೨೬–೩೦ ವಿವಿಧ ಶಾಸನಗಳಿಗೆ ಸಂಪ್ರದಾಯ ಸಿಕ್ಕಿಹೋಗುವ ಭಯವಿದೆ. ರಾಷ್ಟ್ರದ ಮೇಲೆ ಆಗಬಹುದಾದ ಪರಿಣಾಮ ನೆನಸಿಕೊಂಡರೆ ನಡುಕ ಉಂಟಾಗುತ್ತದೆ. ಸಶಕ್ತ ಹಾಗೂ ಸುಭದ್ರ ರಾಷ್ಟ್ರಕ್ಕೆ, ಏಕರೂಪ ಮತ್ತು ಭದ್ರ ಸಮಾಜದ ಆವಶ್ಯಕತೆ ಇದೆ. ನಂತರ ಅಂತರ–ವಿವಾಹದ ಪ್ರಶ್ನೆ. ಹಿಂದಿನ ಕಾಲದಲ್ಲಿ ಜನರು ಒಂದು ಪ್ರದೇಶದಲ್ಲಿಯೇ ಜನಿಸಿ ಅಲ್ಲಿಯೇ ವಾಸಮಾಡುತ್ತಿದ್ದರು. ಹೀಗಾಗಿ ಅವರಿಗೆ ತಮ್ಮದೇ ಆದ ಸಂಪ್ರದಾಯಗಳಿದ್ದವು. ಅದನ್ನೇ ಆ ಪ್ರದೇಶದ ಜನರು ಪರಿಪಾಲಿಸುತ್ತಿದ್ದರು. ಆದರೆ ನಾವು ಇಂದು ಏನನ್ನು ಕಾಣುತ್ತಿದ್ದೇವೆ? ಈ ಸಂಸತ್ತಿನಲ್ಲಿ ಹಾಗೂ ಇದರ ಗ್ಯಾಲರಿಗಳಲ್ಲಿ ನಾವು ದೇಶದ ವಿವಿಧ ಪ್ರದೇಶಗಳಿಂದ ಬಂದಿರುವ ಜನರನ್ನು ನೋಡುತ್ತಿರುವೆವು.

**ಶ್ರೀ ಕಾಮತ್** : ಗ್ಯಾಲರಿಗಳ ಹೆಸರನ್ನು ತೆಗೆದುಕೊಳ್ಳಬಹುದೇ?

**ಬಿ.ಕೆ.ವಿ. ಸಿನ್ಹಾ** : ನಾನು ಗ್ಯಾಲರಿ ಉದ್ದೇಶಿಸಿ ಮಾತನಾಡುತ್ತಿಲ್ಲ. ನಾನು ದೇಶದ ಬಗೆಗೇ ಮಾತನಾಡುತ್ತಿರುವಾಗ, ಗ್ಯಾಲರಿಯ ಬಗೆಗೆ ಮಾತನಾಡಿದರೂ ತಪ್ಪೇನಿಲ್ಲ. ದೇಶದ ನಾನಾ ಭಾಗಗಳಿಂದ ಬಂದವರು ಈ ಸದನದಲ್ಲಿದ್ದಾರೆ. ಈ ನಗರದಲ್ಲಿ ದೇಶದ ಪ್ರಮುಖ ನಗರಗಳವರೂ ಇದ್ದಾರೆ. ವಿವಿಧ ಪ್ರಾಂತಗಳ ಪ್ರಮುಖ ನಗರದವರೂ ಕಲಕತ್ತಾ, ತಿರುವನಂತಪುರದವರಿದ್ದಾರೆ. ಅದರಂತೆಯೇ ತಿರುವನಂತಪುರದಲ್ಲಿ, ಬಿಹಾರ ಹಾಗೂ ಕಲಕತ್ತಾದವರಿದ್ದಾರೆ. ಅನೇಕ ಬಾರಿ ವಿವಿಧ ಪ್ರಾಂತದವರಾಗಿದ್ದರೂ, ಸಂಪ್ರದಾಯಗಳ ನಿರ್ಬಂಧನೆಗಳೂ, ಆಚಾರ ವಿಚಾರಗಳು ಭಿನ್ನವಾಗಿದ್ದರೂ, ಜನರು ಒಬ್ಬರನ್ನೊಬ್ಬರು ವಿವಾಹವಾಗುತ್ತಾರೆ. ಸಂಪ್ರದಾಯಸ್ಥರ ವಿರೋಧವಿದ್ದರೂ ಈ ಬಗೆಯ ಸಂಬಂಧಗಳು ಬೆಳೆದುಬಂದಿವೆ. ನಾವು ಒಂದು ವೇಳೆ ಹಲವಾರು ಪ್ರಾಂತಗಳಲ್ಲಿಯ ಶಾಸನವನ್ನೇ ಆಚರಣೆಯಲ್ಲಿ ತಂದಿದ್ದೇ ಆದರೆ ಈ ಬಗೆಯ ಸಂಜಾತರ ಗತಿ ಏನು? ಒಂದು ವೇಳೆ ಬೊಂಬಾಯಿ ನಿವಾಸಿ ಬಿಹಾರದ ಹುಡುಗಿಯನ್ನು ಮದುವೆಯಾಗಿ, ಬಿಹಾರಿನಲ್ಲಿ, ಬಿಹಾರಿಯೋರ್ವಳನ್ನು ಮದುವೆಯಾಗುತ್ತಾನೆ. ಆಗ ಬೊಂಬಾಯಿಯಲ್ಲಿ ಏಕಪತ್ನಿ ಶಾಸನ ಜಾರಿಯಲ್ಲಿರುವುದರಿಂದ ಅವನ ಬಿಹಾರ ವಿವಾಹದ ಗತಿ ಏನು? ಅಲ್ಲದೆ ಬಿಹಾರ

ಪತ್ನಿಯಿಂದ ಹುಟ್ಟಿದ ಮಕ್ಕಳು ಬೊಂಬಾಯಿಗೆ ಹೋದಲ್ಲಿ ಅವರಿಗೆ ನಾಗರಿಕ ಹಕ್ಕುಗಳೇ ದೊರೆಯದೇ ಹೋಗಬಹುದು. ದೇಶದ ವಿವಿಧ ಭಾಗ ಹಾಗೂ ವಿವಿಧ ಜಾತಿಗಳಿಂದ ನೂರಾರು ಜನರ ಗತಿ ಏನು? ಅಲ್ಲದೆ ಅವರ ಮಕ್ಕಳ ಹಕ್ಕುಗಳ ಗತಿ ಏನು?

ವ್ಯಕ್ತಿಗಳಿಗೆ ಆಯ್ಕೆಯನ್ನು ಬಿಟ್ಟಿಲ್ಲ ಅನೇಕ ತೊಂದರೆಗಳಿಗೆ ಆಹ್ವಾನ ನೀಡಿದಂತೆ. ಓರ್ವ ವ್ಯಕ್ತಿ ಹಿಂದೂ ಕೋಡ್‌ಅನ್ನು ಆಯ್ದುಕೊಳ್ಳಬಹುದು. ಆದರೆ ಅವನ ತಂದೆ ಪುರಾತನ ಹಿಂದೂ ಲಾ ದಂತೆ ನಡೆದುಕೊಳ್ಳುತ್ತಿರಬಹುದು. ಆದರೆ ಹಿಂದೂ ಕೋಡ್‌ಅನ್ನು ಆಯ್ದುಕೊಂಡವನ ಪುತ್ರ ಅದನ್ನು ಆಯ್ದುಕೊಳ್ಳದೇ ಹೋದಾಗ ಆ ಕುಟುಂಬದ ಪರಿಸ್ಥಿತಿ ಏನು? ಆದುದರಿಂದ ನನ್ನ ಸನ್ಮಾನ್ಯ ಸ್ನೇಹಿತರ ಸಲಹೆಗಳನ್ನು ಅಂಗೀಕರಿಸಿದಲ್ಲಿ ಗೊಂದಲಮಯ ವಾತಾವರಣ ಉಂಟಾಗುವುದರಲ್ಲಿ ಸಂದೇಹವೇ ಇಲ್ಲ. ಅಲ್ಲದೇ ಈ ಸಂದೇಹಗಳನ್ನು ನಿವಾರಿಸುವಲ್ಲಿ ನ್ಯಾಯಾಂಗ ಬಹುಶಃ ಒಂದು ಶತಮಾನ ಅವಧಿ ತೆಗೆದುಕೊಂಡರೆ ಅಚ್ಚರಿಯೇನೂ ಇಲ್ಲ. ಈ ಒಂದು ಗೊಂದಲದಿಂದ, ಹಿಂದೂ ಸಮಾಜವನ್ನು ರಕ್ಷಿಸಲೆಂದೇ ಈ ಶಾಸನವನ್ನು ಜಾರಿಗೊಳಿಸಲಾಗುವುದು.

ಹಿಂದೆ, ಪ್ರಾಂತಗಳಲ್ಲಿ ಒಂದು ವಿಧವಾದ ಬಂಧನವಿದ್ದು, ಅಲ್ಲಿಯ ಜನತೆಯು ತಮ್ಮದೇ ಆದ ಸಾಮಾಜಿಕ ಕಟ್ಟುಪಾಡುಗಳಿಗೆ ಗುರಿಯಾಗಿದ್ದರು. ಒಂದು ಜಾತಿಗೆ ಸೇರಿದ ಜನಾಂಗ ಒಂದೇ ಮಟ್ಟದ ಬುದ್ಧಿ ವಿಕಾಸ, ಸಾಂಸ್ಕೃತಿಕ ಕಟ್ಟಳೆ ಹೊಂದಿದವರಾಗಿದ್ದರು. ಈ ಹಿನ್ನೆಲೆಯಲ್ಲಿ ಯಾರಾದರೂ ತಮ್ಮ ಜಾತಿ ಬಿಟ್ಟು ಪರಕೀಯರನ್ನು ವಿವಾಹವಾದಲ್ಲಿ ಅವರು ಬೇರೆ ಪ್ರಪಂಚಕ್ಕೆ ಹೋದಂತೆ. ಆದರೆ ಇಂದು ಸಾಂಸ್ಕೃತಿಕ, ಆರ್ಥಿಕ ಮತ್ತು ಬೌದ್ಧಿಕ, ಭೇದಭಾವನೆಗಳು ಕಣ್ಮರೆಯಾಗಿವೆ. ಭಾರತದಲ್ಲಿ ಇಂದು ಸಮಾಜ ಏಕತ್ರವಾಗಿದೆ. ಹೀಗಾಗಿ ಇಂದು ಬೇರೆ ಪ್ರಾಂತ ಅಥವಾ ಜಾತಿಯಲ್ಲಿ ವಿವಾಹವಾದಲ್ಲಿ ಯಾವ ಅಭ್ಯಂತರವೂ ಇಲ್ಲ; ಏಕೆಂದರೆ ಆರ್ಥಿಕ ಸಾಮಾಜಿಕ ಬೌದ್ಧಿಕ ಮಟ್ಟದಲ್ಲಿ ಸಮಾನತೆ ಹೊರಹೊಮ್ಮಿದೆ. ಅಲ್ಲದೆ, ಹಿಂದೆ, ಸಂತಾನ ಶಾಸ್ತ್ರದಂತೆ ಬೇರೆ ಜಾತಿಯ ವಿವಾಹಗಳನ್ನು ನಿಷೇಧಿಸಲಾಗಿತ್ತು. ಆದರೆ ಇಂದಿನ ಸಂತಾನಶಾಸ್ತ್ರದಂತೆ ಅನ್ಯಜಾತಿಯ ವಿವಾಹದಿಂದ ಜನಿಸಿದ ಮಕ್ಕಳು ಹೆಚ್ಚು ಆರೋಗ್ಯವಂತರಾಗಿರುತ್ತಾರೆ ಎಂದೇ ಹೇಳಲಾಗುತ್ತದೆ. ಹೀಗಾಗಿ ಆ ದಿಶೆಯಲ್ಲಿಯೇ ಮಾನ್ಯ ಸದಸ್ಯರು ಮಸೂದೆಯನ್ನು ಮಂಡಿಸಿರುವರೇನೋ.

ಡಾ. ಮುಖರ್ಜಿಯವರು, ಈ ಮಸೂದೆಯ ಬಗೆಗೆ ಇರುವ ವಿರೋಧವನ್ನು ಹಾಗೂ ಅವರ ಅಳಲನ್ನೂ ಹೇಳಿದ್ದಾರೆ. ನಾನೋರ್ವ ಹಳ್ಳಿಯವ. ಹೀಗಾಗಿ ಆಧುನಿಕ ಸಿದ್ಧಾಂತಗಳಿಗೆ ತವರಿನಂತೆ ಇರುವ ಪಟ್ಟಣಗಳ ಸಂಪರ್ಕ ಹೊಂದಿಲ್ಲ. ಹೀಗಾಗಿ ಈ ಮಸೂದೆಯ ಬಗೆಗೆ ಹಳ್ಳಿಗರ ಪ್ರತಿಕ್ರಿಯೆ ಏನು ಎಂಬುದನ್ನು ಅರಿತಿರುವೆ. ನನಗೆ ತಿಳಿದಂತೆ, ಅವರಿಗೆ ಈ ಮಸೂದೆಯ ಬಗೆಗೆ ಅನೇಕ ಸಂಶಯಗಳಿವೆ. ಏಕೆಂದರೆ ಈ ಮಸೂದೆಯ ವಿರೋಧಕರು ಕಳೆದ ಐದು ವರ್ಷಗಳಿಂದ ಇದರ ಬಗೆಗೆ ಸಾಕಷ್ಟು ಅಪಪ್ರಚಾರ ಮಾಡಿದ್ದಾರೆ. ನನ್ನ ಭಾಗದಲ್ಲಿಯೂ, ಅನೇಕರು ಈ ಮಸೂದೆಗೆ ವಿರೋಧವನ್ನೇ ವ್ಯಕ್ತಪಡಿಸಿದರು. ಆದರೆ ನಾನು ಅವರಿಗೆ ಈ ವಿಧೇಯಕದ ಅಂಶಗಳನ್ನು ವಿವರವಾಗಿ ವಿವರಿಸಿರುವೆ. ಇದರಿಂದಾಗಿ ಶೇಕಡಾ ೭೦ರಷ್ಟು ಜನರಲ್ಲಿ ಸಂಶಯ ನಿವಾರಣೆಯಾಗಿದೆ; ಹಾಗೂ ಅವರು ಸಮಾಜಕ್ಕೆ ಈ ಬಗೆಯ ವಿಧೇಯಕವೊಂದು ಅನಿವಾರ್ಯ ಎಂಬ ಭಾವನೆ ಹೊಂದಿದ್ದಾರೆ. ಆದರೂ ಡಾ. ಮುಖರ್ಜಿಯವರ ಹೇಳಿಕೆಯನ್ನು ನಾನು ಅಲ್ಲಗಳೆಯಲಾರೆ. ಆದರೆ ಅವರು ಹೇಳುವಂತೆ ಪ್ರಬಲ ವಿರೋಧವಿಲ್ಲ. ಅಲ್ಲದೆ ವಿರೋಧವು ಅಜ್ಞಾನದಿಂದ ಕೂಡಿದೆ. ಹಲವಾರು ಶ್ರೀಮಂತ ವರ್ಗದವರು ತಮ್ಮ ಆಸ್ತಿಪಾಸ್ತಿ ಹಾಗೂ ಸಂತಾನಕ್ಕಾಗಿ ಈ ವಿಧೇಯಕದ ಬಗೆಗೆ ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಸಂಪ್ರದಾಯವಾದಿಗಳೊಂದಿಗೂ

ಚರ್ಚಿಸಿರುವೆ. ಅವರು ಇದರ ಬಗೆಗೆ ನಿರ್ವಿಕಾರ ಮನೋಭಾವನೆಯನ್ನೇ ಹೊಂದಿದ್ದಾರೆ. ಆದರೆ ಅವರಿಗೆ ಆತಂಕ ಮೂಡಿರುವ ವಿಷಯ ಎಂದರೆ ಆಸ್ತಿಯ ಹಕ್ಕಿನ ಬಗೆಗೆ.

**ಶ್ರೀ ಆರ್.ಕೆ. ಚೌಧುರಿ :** ಅದನ್ನು ಈಗ ಕೈ ಬಿಡಲಾಗಿದೆ.

**ಡಾ. ದೇಶಮುಖ (ಮ.ಪ್ರ) :** ಮಡದಿಯೂ ಆಸ್ತಿಯಲ್ಲವೇ.

**ಶ್ರೀ ಬಿ.ಕೆ.ಪಿ. ಸಿನ್ಹಾ :** ನನ್ನ ವಾದ ಈ ಮೂರು ತಳಹದಿಯ ಮೇಲಿದೆ; ಆದುದರಿಂದ ಈ ವಿಧೇಯಕದಲ್ಲಿ ಕ್ರಾಂತಿಕಾರಿ ಸಂಗತಿ ಏನೂ ಇಲ್ಲ. ಇದರಲ್ಲಿರುವ ಸಂಗತಿ ಈಗಾಗಲೇ ಶಾಸನ ಗ್ರಂಥಗಳಲ್ಲಿ ಅಡಕವಾಗಿದೆ. ಎರಡನೆಯದಾಗಿ ಈ ವಿಧೇಯಕ ಹಿಂದೂ ಧರ್ಮದ ವಿರೋಧವಾಗಿರದೆ ಅದನ್ನು ಪರಿಪೂರ್ಣಗೊಳಿಸುತ್ತದೆ. ಹಿಂದೂ ಧರ್ಮಚಕ್ರ ಸಂಪೂರ್ಣವಾಗಿ ತಿರುಗಿದ್ದು ಈಗ ಅದನ್ನು ಅದರ ಪೂರ್ವಪವಿತ್ರತೆಗೆ ಮರಳಿ ಕೊಂಡೊಯ್ಯಲಾಗುತ್ತಿದೆ.

ಮೂರನೆಯದಾಗಿ, ಇಂದಿನ ಪರಿಸ್ಥಿತಿಯಲ್ಲಿ ಹಿಂದೂಧರ್ಮ ಬಾಳಿಬದುಕಲು ಈ ವಿಧೇಯಕ ಅನಿವಾರ್ಯವಾಗಿದೆ.

ನನ್ನ ಬಿಹಾರ ಮಿತ್ರರಾದ ಶ್ಯಾಮನಂದನ ಸಹಾಯ್ ಅವರು ತಮ್ಮ ಭಾಷಣದಲ್ಲಿ ಡಾ. ಜಯಕರ ಅವರ ಬಗ್ಗೆ ಪ್ರಸ್ತಾಪಿಸಿದರು. ಈ ದಿಶೆಯಲ್ಲಿ ಒಂದು ಪುಟ್ಟ ಪ್ಯಾರಾವನ್ನು ಹೇಳಬಯಸುವೆ. ಅವರು ೧೯೫೧ರಲ್ಲಿ ಬರೆದ "ಭಾರತದಲ್ಲಿ ಹಿಂದೂ ಲಾ" ಎಂಬ ಪುಸ್ತಕದ ಮುನ್ನುಡಿಯಲ್ಲಿ ಈ ಬಗೆಗೆ ಹೇಳಿರುವುದೇನೆಂದರೆ: ಲೇಖಕನು "ಹಿಂದೂ ಲಾ ದಲ್ಲಿರಬಹುದಾದ ಕೊರತೆಗಳನ್ನು ತಿಳಿಸಿದ್ದು, ಇಂದಿನ ಹಿಂದೂ ಲಾ ದಲ್ಲಿ ಅವನ್ನು ನಿವಾರಿಸಬೇಕೆಂದು ಸೂಚಿಸಿದ್ದಾನೆ."

**ಓರ್ವ ಸದಸ್ಯ :** ಆ ಲೇಖಕ ಯಾರು?

**ಬಿ.ಕೆ.ಪಿ. ಸಿನ್ಹಾ :** ಲೇಖಕನು ಬೇರೆ, ಆದರೆ ಮುನ್ನುಡಿ ಡಾ. ಜಯಕರರದು. ಅವರು ರಾಜಕಾರಣಿಯಾಗಿರದೆ ಹಿಂದೂ ಲಾ ದ ವಿದ್ವಾಂಸರು.

**ಶ್ರೀ ಶ್ಯಾಮಾನಂದನ ಸಹಾಯ್ :** ರಾಜಕಾರಣಿಯೂ ಹೌದು.

ಬಿ.ಕೆ.ಪಿ. ಸಿನ್ಹಾ : ಹೀಗಿದ್ದಲ್ಲಿ, ಬಹುಶಃ ನನ್ನ ಮಿತ್ರ ಶ್ಯಾಮಾನಂದನ ಸಹಾಯ್ ಅವರು ರಾಜಕಾರಣಿ ಜಯಕರರನ್ನು ಉದಾಹರಿಸಿದ್ದಾರೆ, ನಾನು ವಿದ್ವಾಂಸ ಜಯಕರರನ್ನು ಉದಾಹರಿಸಿರುವೆ.

**ಶ್ರೀ ಶ್ಯಾಮಾನಂದನ ಸಹಾಯ್ :** ರಾಜಕಾರಣಿಗಳು, ವಿದ್ವಾಂಸರಾಗಿರಕೂಡದು ಎಂದೇ ನಿಮ್ಮ ಭಾವನೆಯೇ?

**ಶ್ರೀ ಬಿ.ಕೆ.ಪಿ. ಸಿನ್ಹಾ :** ಅವರೂ ವಿದ್ವಾಂಸರಾಗಿರಬಹುದು. ಆದರೆ ಜಯಕರರು ತಮ್ಮ ಮುನ್ನುಡಿಯಲ್ಲಿ ಹೇಳಿರುವುದೆಂದರೆ; "ಅವರ ಅನಿಸಿಕೆಯಂತೆ ಆಧುನಿಕ ಕಾಲದ, ಸಂಪರ್ಕ ಸೌಕರ್ಯಗಳು ಮತ್ತು ಒಡನಾಟಗಳ ಕಾರಣದಿಂದಾಗಿ, ವಿವಿಧ ಜನಾಂಗದ ಜನತೆಯು ಒಂದೇ ಪ್ರದೇಶದಲ್ಲಿ, ವಿವಿಧ ಶಾಸನಗಳಡಿಯಲ್ಲಿ ವಾಸಿಸುತ್ತಿರುವುದು ಅನಿವಾರ್ಯವಾಗಿದೆ ಈ ಕಾರಣದಿಂದಾಗಿ ಸಹಜವಾಗಿ, ಅವರ ಸಂಬಂಧಗಳ ಬಗೆಗೆ ರಚಿಸಿರಬಹುದಾದ, ಸ್ಥಳೀಯ ಶಾಸನಗಳು ಪರಿಪೂರ್ಣವಾಗಿರದೇ ಅನೇಕ ಸಮಸ್ಯೆ ಮತ್ತು ತೊಂದರೆಗಳಿಗೆ ಆಸ್ಪದ ನೀಡಿವೆ. ಏಕೆಂದರೆ, ವಿದೇಶೀಲಕ್ಷಣಗಳು ಈ ಪ್ರದೇಶಗಳಲ್ಲಿ ಪ್ರವೇಶಿಸಿದ್ದು, ನೂತನ ಸಮಸ್ಯೆ ಸೃಷ್ಟಿಸಿರುವುದರಿಂದ ಶಾಸನಗಳನ್ನು ನೂತನ ಪರಿಸರಕ್ಕೆ ಅನುಗುಣವಾಗಿ ಪರಿಷ್ಕರಿಸಬೇಕು".

**ಡಾ. ದೇಶಮುಖ :** ನಾನು ಮಾತನಾಡಬೇಕೆಂದು ನಿಂತಾಗ ನನ್ನ ಮಿತ್ರರು "ಹಿಯರ್ ಹಿಯರ್" ಎಂದು ಸ್ವಾಗತಿಸಿದ್ದಾರೆ. ಆದರೆ ನಾನು ಮಾತನಾಡಬಹುದಾದ ವಿಷಯದಿಂದ ಅವರು ನಿರುತ್ಸಾಹಕ್ಕೆ

ಗುರಿಯಾಗಬಹುದೆಂಬ ಭಯ ನನಗೆ.

**ಶ್ರೀ ಆರ್.ಕೆ. ಚೌಧರಿ :** ಅಂದರೆ ನೀವು ನಿಮ್ಮ ನಿಲುವನ್ನು ಬದಲಾಯಿಸಿದ್ದೀರಾ?

**ಡಾ. ದೇಶಮುಖ :** ಹೌದು, ಅಲ್ಪ ಬದಲಾವಣೆ.

**ಓರ್ವ ಸದಸ್ಯ :** ಜಾಣರು ಹಾಗೆಯೇ ಮಾಡುತ್ತಾರೆ.

**ಡಾ. ದೇಶಮುಖ :** ನಾನು ಈ ಮಸೂದೆಯ ಆಯ್ಕೆ ಸಮಿತಿ ಸದಸ್ಯನಾಗಿ, ಸಮಿತಿಯ ವರದಿಗೆ ನನ್ನ ಭಿನ್ನಾಭಿಪ್ರಾಯವನ್ನು ಸೂಚಿಸಿದ್ದೇನೆ. ಆದರೆ ಅದು ಕೇವಲ ನಾಲ್ಕು ವಿಷಯಗಳಿಗೆ ಸಂಬಂಧಿಸಿದೆ. ಈ ನಾಲ್ಕು ವಿಷಯ ಬಿಟ್ಟು ನಾನು ವಿಧೇಯಕದಲ್ಲಿಯ ಅಭಿಪ್ರಾಯಗಳೊಂದಿಗೆ ಸಹಮತ ಹೊಂದಿರುವೆ. ಅದೇ ಸಮಯದಲ್ಲಿ ಹಿಂದೂ ಸಮಾಜದ ಸಮಗ್ರ ಬದಲಾವಣೆಗೆ ಸಮಯ ಒದಗಿ ಬಂದಿಲ್ಲ ಎಂದೇ ಹೇಳಬಯಸುವೆ. ನಮ್ಮ ದೇಶ ತುಂಬಾ ವಿಶಾಲವಾದ ದೇಶ ಮತ್ತು ಹಿಂದೂ ಸಮಾಜ ವೈವಿಧ್ಯ ಹಾಗೂ ವಿಶಾಲವಾದುದು. ಅಲ್ಲದೆ ನಾವು ಅನಕ್ಷರಸ್ಥರು ಮತ್ತು ಹಿಂದುಳಿದವರು. ಈ ದೃಷ್ಟಿಯಿಂದ ನಾವು ಹಿಂದೂ ಸಮಾಜದಲ್ಲಿ ಮೂಲ ಬದಲಾವಣೆ ಮಾಡಹೋದರೆ, ಅದು ಹಾನಿಕರ. ಏಕೆಂದರೆ, ಈ ಸುಧಾರಣೆಗಳನ್ನು ಅರಿಯುವ ಸಾಮರ್ಥ್ಯ ನಮ್ಮ ಜನರಿಗೆ ಇಲ್ಲ. ಆದುದರಿಂದ ಹಿಂದೂ ಲಾ ದಲ್ಲಿ ನಾವು ತರಬೇಕೆಂದಿರುವ ಸುಧಾರಣೆಗೆ ಸೂಕ್ತವಾದ ಸಮಯ ಇನ್ನೂ ಒದಗಿ ಬಂದಿಲ್ಲ. ಸಾರ್ವಜನಿಕರಲ್ಲಿ ಈ ಬಗೆಗೆ ಇನ್ನೂ ಒಟ್ಟಭಿಪ್ರಾಯ ಮೂಡಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾಜಿಕ ರಚನೆಯಲ್ಲಿ ಬದಲಾವಣೆ ತರುವುದು ಸರಿಯಲ್ಲ. ಸಾಕಷ್ಟು ಕಾಲಾವಕಾಶ ಪಡೆದು ಈ ವಿಧದ ಬದಲಾವಣೆ ತರುವುದು ಸಮಂಜಸ.

ನನ್ನ ವಿಚಾರದಲ್ಲಿ ಹಿಂದೂ ಲಾ ವನ್ನು ಕ್ರೋಡೀಕರಿಸಿದ ಮಾತ್ರಕ್ಕೆ ನಾವು ಬಯಸಿರುವ ಮಾದರಿಯ ಸಮಾಜ ನಿರ್ಮಾಣವಾಗದು. ಇದಕ್ಕೆ ಕಾಲಾವಕಾಶ ಬೇಕು. ಹೀಗಾಗಿ ಈ ಬದಲಾವಣೆಗೆ ಸಮಯ ಒದಗಿಲ್ಲ. ಸ್ಮೃತಿಗಳು ಮತ್ತು ನ್ಯಾಯಾಲಯ ಹಾಗೂ ಪ್ರಿವಿ ಕೌನ್ಸಿಲುಗಳು ನೀಡಿರಬಹುದು. ಒಕ್ಕಣೆಗಳು ಸಾಕಷ್ಟು ನಿರ್ದಿಷ್ಟ ರೂಪ ತಾಳಿವೆ, ಅಲ್ಲಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು. ಅಲ್ಲದೆ ವ್ಯಾಖ್ಯಾನಿಸುವಲ್ಲಿಯೂ ಭಿನ್ನಾಭಿಪ್ರಾಯಗಳಿರಬಹುದು. ಹೀಗೆ ನಾವು ಕಳೆದ ಒಂದೂವರೆ ಶತಮಾನದಿಂದ ಪಡೆದಿರುವ ಅನುಭವ ವಿಶೇಷ ತೊಂದರೆಗೆ ಆಸ್ಪದ ನೀಡಿಲ್ಲ.

**ಶ್ರೀ ಲಕ್ಷ್ಮಣನ್ (ತಿರುವಾಂಕೂರು ಕೊಚ್ಚಿನ್) :** ಪಾಯಿಂಟ್ ಆಫ್ ಆರ್ಡರ್. ನಾವು ಸಾಮಾನ್ಯ ಚರ್ಚೆ ಮಾಡುತ್ತಿದ್ದೇವೆಯೋ ಅಥವಾ ಕಲಮು ೨ನ್ನು ಚರ್ಚಿಸುತ್ತಿದ್ದೇವೆಯೋ?

**ಅಧ್ಯಕ್ಷರು :** ಅವರು ಕ್ರಮಬದ್ಧವಾಗಿದ್ದಾರೆ.

**ಡಾ. ದೇಶಮುಖ :** ನನ್ನ ಹೇಳಿಕೆ ಕಲಮಿಗೆ ಪ್ರಸ್ತುತವಾಗಿದೆ. ನಾನು ಹೇಳಬಯಸುವುದು ಏನೆಂದರೆ, ನಾವು ಸಮಾಜವನ್ನು ಆಧುನಿಕ ರೀತಿಯಲ್ಲಿ ಪರಿವರ್ತಿಸುವುದಾದರೆ ನಮ್ಮ ವಿಚಾರ ಬೇರೆ, ಆದರೆ ನಾವು ಈಗ ನಡೆಸುವ ಪ್ರಯತ್ನ ಬೇರೆಯಾಗಿದೆ. ಏಕೆಂದರೆ ನಾವು ಚರ್ಚಿಸುತ್ತಿರುವ ಹಿಂದೂ ಕೋಡ್ ವಿಧೇಯಕವು ಪರಿಪೂರ್ಣವಾಗಿಲ್ಲ. ಅದು ನಮ್ಮ ಸಮಾಜವನ್ನು ಸಮಗ್ರವಾಗಿ ಪುನರ್‌ರೂಪಿಸುವಲ್ಲಿ ಫಲಕಾರಿಯಾಗಿಲ್ಲ. ನಾವು ಜಾರಿಯಲ್ಲಿರುವ ವಿಷಯಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಕ್ರೋಡೀಕರಣ ಕಾರ್ಯ ಕೈಗೆತ್ತಿಕೊಂಡಿದ್ದೇವೆ. ಏಕೆಂದರೆ ಈ ಸಮಯದಲ್ಲಿ ಆಧುನಿಕ ಯುಗದಲ್ಲಿಯ ವಿಚಾರಗಳಂತೆ, ಖಾಸಗಿ ಆಸ್ತಿಯ ಕಲ್ಪನೆಯ ಸಮಂಜಸತೆ ಎಷ್ಟು ಕಾಲ ಬದುಕಿ ಉಳಿಯಬಲ್ಲದು ಎಂಬುದೇ ಅನಿಶ್ಚಿತವಾಗಿದೆ. ಆದುದರಿಂದ ಆಸ್ತಿಯ ಬಗ್ಗೆ ಮಿತಾಕ್ಷರ ಮತ್ತು ದಯಾಭಾಗ ಶಾಸನದ ಬಗೆಗಾಗಲೀ ಅಥವಾ ಚೊಚ್ಚಲ ಸಂತಾನಕ್ಕೆ ಆಸ್ತಿಯ ಹಕ್ಕನ್ನು ಕೊಡುವ ಶಾಸನಗಳ ಬಗೆಗೆ ಚರ್ಚೆ ನಡೆಸುವುದು ಅರ್ಥಹೀನ. ಏಕೆಂದರೆ

ಈಗ ಜಾರಿಯಲಿರುವ ಹಿಂದೂ ಲಾ ವನ್ನು ಸಕಲರೂ ಆಚರಿಸುತ್ತಿರುವ ಅವಧಿಯವರೆಗೂ ಬೇರೆ ಮಾರ್ಪಾಟುಗಳನ್ನು ಮಾಡುವುದು ಸರಿಯಲ್ಲ. ಅದಕ್ಕೆ ಕಾಲ ಕೂಡಿಬಂದಿಲ್ಲ. ಪ್ರಗತಿಪರ ಕಾನೂನುಗಳು ಜಾರಿಗೊಳಿಸಲು ಸಮಯ ಸೂಕ್ತವಾಗಿಲ್ಲ. ಆದರೆ ಅದೇ ಸಮಯದಲ್ಲಿ ಜಾರಿಯಲ್ಲಿರುವ ಶಾಸನದಲ್ಲಿರುವ ತೊಂದರೆಗಳನ್ನು ನಿವಾರಿಸಬೇಕೆಂದೇ ಆಗ್ರಹಿಸುವೆ. ಇಲ್ಲದೇ ಹೋದಲ್ಲಿ ಜನರು ತೊಂದರೆಗೆ ಈಡಾಗುತ್ತಾರೆ. ಈ ಒಂದು ಕಾರಣದಿಂದ, ಈ ವಿಧೇಯಕಕ್ಕೆ ಸಂಸತ್ತಿನ ಸಕಲ ಸದಸ್ಯರೂ ಬೆಂಬಲ ನೀಡಬೇಕೆಂದೇ ಕೋರುವೆ. ನಮ್ಮ ಸಮಾಜದಲ್ಲಿಯ ಕುಂದುಕೊರತೆಗಳು ಕಂಡಾಗ ಅವನ್ನು ನಿವಾರಿಸಲೇಬೇಕು. ಈ ದಿಶೆಯಲ್ಲಿ ಸಂಪ್ರದಾಯವಾದಿಗಳೊಂದಿಗೆ ರಾಜಿ ಪ್ರಶ್ನೆಯೇ ಇಲ್ಲ.

**೧.೦೦ ಮಧ್ಯಾಹ್ನ**

**ಶ್ರೀ ಕಾಮತ್ :** ನಾವು ಸದಸ್ಯರ ಹೇಳಿಕೆಯನ್ನು ಕೇಳಲು ಬಯಸಿರುವುದರಿಂದ ಅರ್ಧಗಂಟೆ ಕಾಲಾವಕಾಶ ಮುಂದುವರಿಸಬೇಕು.

**ಅಧ್ಯಕ್ಷ :** ಅದನ್ನು ಮುಂದೂಡಲಾಗಿದೆ.

**ಶ್ರೀ ಕಾಮತ್ :** ನಮಗೆ ಅದರ ಬಗೆಗೆ ಸೂಚನೆ ಒದಗಿಸಿಲ್ಲ.

**ಅಧ್ಯಕ್ಷ :** ಅದನ್ನು ಇಲ್ಲಿ ತೆಗೆದುಹಾಕಲಾಗಿದೆ.

**ಡಾ. ದೇಶಮುಖ :** ಈ ತೊಂದರೆಗಳನ್ನು ನಿವಾರಿಸುವಲ್ಲಿ ನಾನು ವಿಧೇಯಕವನ್ನು ಮಂಡಿಸದವರಿಗಿಂತ ಒಂದು ಹೆಜ್ಜೆ ಮುಂದುಹೋಗಲು ಸಿದ್ಧ. ಈ ದಿಶೆಯಲ್ಲಿ ಬಹುಪತ್ನಿ ವಿವಾಹ ನಿಷೇಧಿಸಿ, ಏಕಪತ್ನಿ ವಿವಾಹವನ್ನು ಕಡ್ಡಾಯಗೊಳಿಸುವುದು ಸುಧಾರಣೆಯ ದೃಷ್ಟಿಯಿಂದ ಅನಿವಾರ್ಯವಾಗಿ ಕೈಗೆತ್ತಿಕೊಳ್ಳಬೇಕಾದ ಕ್ರಮ. ಅದರಂತೆಯೇ, ನನ್ನ ಅಭಿಪ್ರಾಯದಲ್ಲಿ ಹಿಂದೂ ಸಮಾಜವು, ವಿವಾಹ ವಿಚ್ಛೇದನೆಯನ್ನೂ ಕೈಗೆತ್ತಿಕೊಳ್ಳಲೇಬೇಕು. ಕೆಲವು ನಿರ್ಬಂಧಗಳಿರಬಹುದು. ಆದರೆ ಈ ಬಗೆಗೆ ನಾವು ಕಣ್ಣುಮುಚ್ಚಿ ಕೂಡಬಾರದು. ನಮ್ಮ ಈ ಕ್ರಮವನ್ನು ಸನಾತನಿಗಳು ಒಪ್ಪದೇ ಇರಬಹುದು. ಅದು ವಿಷಾದನೀಯ. ಈ ಸಂದೇಹವನ್ನು ನಾನು ನಿವಾರಿಸಬೇಕೆಂದೇ ಬಯಸುವೆ. ಹಲವು ಸನಾತನಿಗಳ ಅಭಿಪ್ರಾಯದಲ್ಲಿ ನಾನು ಈ ವಿಧೇಯಕದ ವಿರೋಧಿ ಎಂಬ ಭಾವನೆ ಇದೆ. ಆದರೆ ಈ ವಿಧೇಯಕದ ಹಲವು ಅಭಿಪ್ರಾಯಗಳೊಂದಿಗೆ ವಿರೋಧವಿದೆ ಆದರೆ ಸಂಪೂರ್ಣವಲ್ಲ. ಆದುದರಿಂದಲೇ ನಾನು ನನ್ನ ಮಿತ್ರರಾದ ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ ಅವರ ಹೇಳಿಕೆಯನ್ನು ಪ್ರಸ್ತಾಪಿಸಿ ನನ್ನ ಚರ್ಚೆ ಆರಂಭಿಸಿದೆ. ಆದರೆ ನಾನು ಈಗ ಹೇಳಬಯಸಿರುವ ಎರಡು ಸಂಗತಿಗಳನ್ನು ಅವರು ಸ್ವಾಗತಿಸದೇ ಹೋಗಬಹುದು.

ನನ್ನ ವಿವೇಚನೆಯಂತೆ ನಾವು ನಮ್ಮ ವಿಧವೆಯರ ಸ್ಥಿತಿಗತಿಯನ್ನು ಸುಧಾರಿಸಬೇಕು. ಏಕೆಂದರೆ ಅವರು ಅಮಾನವೀಯ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಅದರಲ್ಲಿ ಆಸ್ತಿಹೊಂದುವ ದಿಶೆಯಲ್ಲಿ ನಾವು ಈ ವಿಧೇಯಕದಲ್ಲಿ ಅವಕಾಶ ಒದಗಿಸಬೇಕು. ಏಕೆಂದರೆ ನಾವು ಒದಗಿಸಿರುವ ಸೌಲಭ್ಯ ಸಾಲದು, ಹೀಗಾಗಿ ಸದನದ ಸದಸ್ಯರು ಈ ಬಗೆಗೆ ಕ್ರಮ ಕೈಗೊಳ್ಳಬೇಕೆಂದೇ ನನ್ನ ಕೋರಿಕೆ.

**ಶ್ರೀ ಭಾರತಿ :** ಅದನ್ನು ನಾವು ಈಗ ಚರ್ಚಿಸುತ್ತಿಲ್ಲ.

**ಡಾ. ದೇಶಮುಖ :** ಈ ವಿಷಯದ ಬಗೆಗೆ ನನಗೆ ತಿಳಿಯದು. ನಾನು ಸದನದಲ್ಲಿರಲಿಲ್ಲ. ಕೇವಲ ವಿವಾಹ ಹಾಗೂ ವಿಚ್ಛೇದನೆ ಎರಡನ್ನೇ ಚರ್ಚಿಸಿ ಮಿಕ್ಕ ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಶ್ರೀ ಭಾರತಿ :** ನಾವು ಬೇರೆ ವಿಷಯಗಳನ್ನು ಬಹುಶಃ ಕೈಗೆತ್ತಿಕೊಳ್ಳಲಾರೆವು.

**ಮಾನ್ಯ ಸಭಾಧ್ಯಕ್ಷರು :** ಅವರು ತಮ್ಮ ಹೇಳಿಕೆಯನ್ನು ಮುಂದುವರಿಸಲು ಬಿಡಿ.

**ಡಾ. ದೇಶಮುಖ :** ನಮ್ಮ ಉದ್ದೇಶದಂತೆ ಓರ್ವ ವ್ಯಕ್ತಿ ಒಂದು ಬಾರಿ ಒಬ್ಬಳೇ ಮಡದಿಯನ್ನೇ ಹೊಂದಿರಬೇಕೆಂಬ ಶಾಸನ ರಚಿಸುವುದೇ ನಮ್ಮ ಉದ್ದೇಶವಾಗಿದ್ದರೆ ಅದನ್ನು ನಾನು ಉಪೇಕ್ಷಿಸಲಾರೆ. ಆದರೆ, ನನ್ನ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹೇಳುವಂತೆ ಅವಸಾನದ ಅಂಚಿನಲ್ಲಿಯ ವ್ಯವಸ್ಥೆಯ ಬಗೆಗೆ ಪ್ರಲಾಪವೇಕೆ, ಏಕೆಂದರೆ ಇಂದಿನ ಆರ್ಥಿಕ ಪರಿಸ್ಥಿತಿ ಹಾಗೂ ಜೀವನದ ಹೋರಾಟ ನಾವು ಬಯಸಿದ ಗಂಭೀರ ಹೋರಾಟ ನಡೆಸಬೇಕಾದ ಪ್ರಸಂಗವಿಲ್ಲ ಎಂದೇ ಭಾವಿಸುವೆ.

ವಿಚ್ಛೇದನೆಗೆ ಸಂಬಂಧಿಸಿದಂತೆ ಹೇಳುವುದು ಅಧಿಕವಿದೆ. ಆದಷ್ಟು ಶೀಘ್ರದಲ್ಲಿ ಈ ಬಗೆಗೆ ವ್ಯವಸ್ಥೆ ಮಾಡಲೇಬೇಕು. ಅನೇಕರು ಹೇಳಿದಂತೆ ಕೇವಲ ವಿಚ್ಛೇದನೆಗೆ ಅವಕಾಶ ಕಲ್ಪಿಸಿದರೆ ಸಾಲದು; ಏಕೆಂದರೆ ಅದನ್ನು ದುರುಪಯೋಗ ಮಾಡಲಾಗುವುದು. ಈ ಬಗ್ಗೆ ಇಂದಿನ ಪರಿಸ್ಥಿತಿ ಏನು? ಹಲವಾರು ರಾಜ್ಯಗಳಲ್ಲಿ ಬಡೋದೆಯಲ್ಲಿ ವಿವಾಹದಿಂದ ಅಸಂತೃಪ್ತರಾದವರು ವಿಚ್ಛೇದನ ಪಡೆಯಬಹುದು. ಹೀಗೆ ವಿಚ್ಛೇದನ ಪಡೆಯಬೇಕೆಂಬುವವರು ಬಡೋದೆಗೆ ತೆರಳಿ ಪಡೆಯಬಹುದು. ವಿವಾಹವಾದವರು ಅನೇಕ ಕಾರಣಗಳಿಗಾಗಿ ವಿಚ್ಛೇದನವನ್ನು ಪಡೆಯಬಹುದು. ಇಂದಿನ ಆಧುನಿಕಯುಗದಲ್ಲಿ ಈ ಮಾನವೀಯ ಸೌಲಭ್ಯ ಹೊಂದಿರುವುದು ಆಕ್ಷೇಪಣೀಯ ಸಂಗತಿಯಲ್ಲ. ಆದರೆ ಡಾ. ಅಂಬೇಡ್ಕರ್‌ರೊಂದಿಗೆ ನನ್ನ ಭಿನ್ನಾಭಿಪ್ರಾಯ ಎಂದರೆ ಸಾಂಪ್ರದಾಯಿಕ ವಿಚ್ಛೇದನೆಯ ಬಗ್ಗೆ ಅವರು....

**ಆರ್.ಕೆ. ಚೌಧರಿ :** ನನಗೆ ಒಂದು ವಿಷಯ ತಿಳಿದುಕೊಳ್ಳಬೇಕಾಗಿದೆ. ಮಾನ್ಯ ಸದಸ್ಯರು ಪವಿತ್ರ ವಿವಾಹ ಬಾಂಧವ್ಯವನ್ನೂ ವಿಚ್ಛೇದನೆಗೆ ಗುರಿಮಾಡಿ ಅದನ್ನು ಮುಂದುವರಿಸಬೇಕೆಂದು ಪ್ರತಿಪಾದಿಸುತ್ತಿರುವರೋ?

**ಡಾ. ದೇಶಮುಖ :** ತೊಂದರೆ ಏನೂ ಇಲ್ಲ. ಏಕೆಂದರೆ ಅನೇಕ ಪವಿತ್ರ ವಿವಾಹಗಳೂ ಮುರಿದಿವೆ. ಇದು ಅನೇಕ ರೀತಿಯಲ್ಲಿ ಹಾಗೂ ಹಿಂದೂ ಲಾ ಕೆಳಗೆ ಸಂಭವಿಸಿದೆ. ಹೀಗಿದ್ದಾಗ ಹಿಂದುಳಿದ ವರ್ಗಗಳಲ್ಲಿ ಮಾತ್ರ ವಿವಾಹ ವಿಧಾನವು ಪ್ರಗತಿ ಪರವಾಗಿದೆ ಎಂದು ಹೇಳುವುದು ಸರಿಯಲ್ಲ. ಅಲ್ಲಿಯೂ ಪವಿತ್ರ ವಿವಾಹದಂತೆ ಅನೇಕ ವಿವಾಹಗಳು ಮುರಿದಿವೆ. ಆದರೆ ಅವರ ಸಂಪ್ರದಾಯಗಳಲ್ಲಿ, ವಿಚ್ಛೇದನವನ್ನು ಜಾತಿ ಪಂಚಾಯಿತಿಗಳಿಂದ ನಿರ್ಧರಿಸಲಾಗುತ್ತದೆ. ಆದರೆ ಮಾನ್ಯ ಕಾನೂನು ಸಚಿವರು ಈ ವ್ಯವಸ್ಥೆಯನ್ನು ನ್ಯಾಯವಾದಿ ಮತ್ತು ಸಾಕ್ಷಿಗಳ ಮುಖಾಂತರ ನಡೆಸಬೇಕೆಂದು ಹಾರೈಸುತ್ತಾರೆ. ಇದು ಜನರಿಗೆ ತೊಂದರೆ ನೀಡುತ್ತದೆ.

**ಡಾ. ಅಂಬೇಡ್ಕರ್ :** ಹಾಗಾದರೆ ಸಾಂಪ್ರದಾಯಿಕ ವಿವಾಹವೂ ಜಾರಿಯಲ್ಲಿರಲಿ.

**ಡಾ. ದೇಶಮುಖ :** ಇಂದಿನ ಸಮಾಜದಲ್ಲಿಯ ಕುಂದುಗಳನ್ನು ನಿವಾರಿಸುವಲ್ಲಿ ಮಾತ್ರ ಈ ವಿಧೇಯಕದ ಉದ್ದೇಶವಾಗಿದ್ದರೆ, ನಾನು ಅದನ್ನು ವಿರೋಧಿಸುವುದಿಲ್ಲ ಹಾಗೂ ಈ ವಿಧೇಯಕವನ್ನು ಎಲ್ಲರಿಗೂ ಅನ್ವಯಿಸುವಂತೆ ಆಗ್ರಹಿಸುವುದಿಲ್ಲ. ಆದುದರಿಂದ ಈ ವಿಧೇಯಕವು ಹಿಂದೂಗಳಿಗೂ ಕಡ್ಡಾಯ ಮಾಡಕೂಡದು. ಈ ಒಂದು ವಿಷಯವನ್ನೇ ಪ್ರಮುಖವಾಗಿ ನಾನು ಎತ್ತಿದೆ : ಏಕೆಂದರೆ ಹಿಂದೂ ಸಮಾಜದ ಆಮೂಲಾಗ್ರ ಬದಲಾವಣೆ ಮಾಡಬೇಕಾದರೆ, ಭಾರತದಲ್ಲಿರುವವರಿಗೆಲ್ಲಾ ಈ ಅಂಶಗಳನ್ನು ಕಡ್ಡಾಯ ಮಾಡಬೇಕು. ಆದರೆ ಇದೊಂದು ಸುಧಾರಣೆಯ ಕ್ರಮವಾಗಿದ್ದು ಅದರ ವ್ಯಾಪ್ತಿ ಕೆಲವು ಭಾಗಗಳಿಗೆ ಅನ್ವಯಿಸುವುದರಿಂದ ನಾನು ಕಲಹ ಮಾಡುವುದಿಲ್ಲ.

ಡಾ. ಮುಖರ್ಜಿಯವರು ಈ ವಿಧೇಯಕವನ್ನು ಸರ್ವರಿಗೂ ಕಡ್ಡಾಯಗೊಳಿಸದೆ ಜನರ ಆಯ್ಕೆಗೆ ಬಿಡಬೇಕೆಂದು ಹೇಳಿದ್ದು ಅಲ್ಪಮಟ್ಟಿಗೆ ಅನುಚಿತವೆಂದೇ ಹೇಳಬಯಸುವೆ. ಏಕೆಂದರೆ ನಾವು ಆ ಕ್ರಮವನ್ನೇ

ಅನುಸರಿಸಿದಲ್ಲಿ ಯಾವ ಸರಳ ಸುಧಾರಣೆಗಳನ್ನು ಜಾರಿಗೊಳಿಸಲಾರದೇ ಹೋಗುತ್ತೇವೆ. ಆದಾಗ್ಯೂ ಅವರೇಕೆ ಈ ನಿಲುವು ತೆಗೆದುಕೊಂಡರೋ ನಾನು ಅರಿಯೆ. ಅವರು ಈ ದಿಶೆಯಲ್ಲಿ ಅನೇಕ ವಿಷಯಗಳಿಗೆ ಬೆಂಬಲ ನೀಡಿದ್ದು, ಏಕಪತ್ನಿ ವ್ಯವಸ್ಥೆ ಕಡ್ಡಾಯ ಮಾಡಿದಲ್ಲಿ ವಿಚ್ಛೇದನೆಗೂ ಬೆಂಬಲ ನೀಡುವಂತೆ ಅವರು ಸಾರಿದ್ದರು. ಅವರ ಈ ಕ್ರಮ ಬದಲಾವಣೆ ವಿರೋಧಕ್ರಮವಾಗಿದೆ. ಅವರ ಈ ಹೇಳಿಕೆ ಕಾರ್ಯಸಾಧುವಾದರೂ ಅಡಚಣೆ ಒಡ್ಡುವ ಉಪಾಯವೆಂದೇ ಹೇಳಬೇಕಾಗಿದೆ. ಇದು ಹಿಂದೂ ಕೋಡ್ ಜಾರಿಗೆ ಸಹಕಾರಿಯಾಗದು. ನಾನು, ಸಮಗ್ರ ಸುಧಾರಣೆಗೆ ಸಿದ್ಧ; ಆದರೆ ಅವು ಹಿಂದೂ ಸಮಾಜದಲ್ಲಿ ಗೊಂದಲಕ್ಕೆ ಆಸ್ಪದ ನೀಡದಂತಿರಬೇಕು. ಈ ವಿಧೇಯಕದಲ್ಲಿಯ ಅಂಶಗಳು ಗೊಂದಲಕ್ಕೆ ಅವಕಾಶ ನೀಡಲಾರವು. ಏಕೆಂದರೆ ಎಲ್ಲರೂ ವಿಚ್ಛೇದನೆಯನ್ನೇ ಅನುಸರಿಸದೇ ಅದನ್ನು ದುರುಪಯೋಗ ಮಾಡಲಾರರೆಂದೇ ಭಾವಿಸುವೆ. ಎಲ್ಲಿ ದಂಪತಿಗಳು ಸಮರಸ ಜೀವನ ನಡೆಸದೆ ವಿಚ್ಛೇದನವನ್ನು ಬಯಸುವರೋ ಅಲ್ಲಿ ಜಾರಿಗೊಳಿಸುವುದು ಸೂಕ್ತ. ಇದಕ್ಕೆ ನಮ್ಮ ಪುರಾತನ ಪವಿತ್ರ ವಿವಾಹಗಳೂ ಸಂಪ್ರದಾಯದಂತೆ ಬಿಡುಗಡೆಗೆ ಆಸ್ಪದ ನೀಡಿವೆ. ಪವಿತ್ರ ವಿವಾಹಗಳೂ, ಸಂಪ್ರದಾಯಗಳೇ ಹೊರತು ಹೆಚ್ಚಿನದೇನೂ ಇಲ್ಲ; ಏಕೆಂದರೆ ವಿವಾಹಗಳಲ್ಲಿಯೂ ವಿವಿಧ ಸಂಪ್ರದಾಯಗಳಿವೆ. ಹಲವರಲ್ಲಿ ಸಪ್ತಪದಿ ವ್ಯವಸ್ಥೆ ಇದೆ. ಆದುದರಿಂದ ನಾನು ವಿಚ್ಛೇದನೆಯ ಬಗೆಗೆ ಸೂಚಿಸಿರುವ ಸುಧಾರಣೆಯು ಸೂಕ್ತವಲ್ಲವೇ? ಮೂಲದಲ್ಲಿ ಎಲ್ಲಾ ಸಂಪ್ರದಾಯಗಳನ್ನೂ ಕಿತ್ತುಹಾಕಬೇಕೆಂದು ಸೂಚಿಸಲಾಗಿತ್ತು. ಸಂತಸದ ಸಂಗತಿ, ಡಾ. ಅಂಬೇಡ್ಕರ್‌ರು ತಮ್ಮ ನಿಲುವನ್ನು ಬದಲಾಯಿಸಿದರೂ ಬಹುಶಃ ಇನ್ನೂ ಹೆಚ್ಚು ಬದಲಾವಣೆಗಳಿಗೆ ಆಸ್ಪದ ನೀಡುವರೆಂದೇ ಹಾರೈಸುವೆ. ಒಂದೆಡೆ ಅವರು ವಿವರಣೆ ನೀಡುವಾಗ, ಸಂಪ್ರದಾಯಗಳು ಸಕಾರಣ ಹಾಗೂ ಸುಸಂಬದ್ಧವಾಗಿರಬೇಕು ಹಾಗೂ ಆವಶ್ಯಕತೆಗಳಿಗೆ ಪೂರಕವಾಗಿರಬೇಕೆಂದು ಹೇಳಿದ್ದರು. ಅವರು, ಸುಸಂಬದ್ಧತೆಯ ಮಟ್ಟವನ್ನು ಸಂಪ್ರದಾಯಗಳಿಂದ ವಿವರಣೆ ಪಡೆಯಲಿಚ್ಛಿಸಿದ್ದಾರೆ. ಆದರೆ ಅದು ಹೇಗೆ ಸಾಧ್ಯ ? ಏಕೆಂದರೆ ಅದು ಮಾನವನಿಂದ ಮಾನವರಲ್ಲಿ ಹಾಗೂ ಸಮೂಹಗಳಲ್ಲಿ ವಿವಿಧ ಮಟ್ಟದಲ್ಲಿರುತ್ತದೆ. ಅಂಬೇಡ್ಕರ್‌ರಿಗೆ ಸಕಾರಣವಾದದ್ದು ಕಾಮತ್‌ರಿಗಾಗಲೀ ಪಂಡಿತರವರಿಗಾಗಲೀ ಸಕಾರಣವಾಗದೇ ಹೋಗಬಹುದಲ್ಲವೇ?....

**ಶ್ರೀಕಾಮತ್** : ನಮ್ಮನ್ನೆಲ್ಲಾ ಒಟ್ಟುಗೂಡಿಸಿದಿರಿ?

**ಡಾ. ದೇಶಮುಖ** : ಹಾಗಲ್ಲ ! ಸಾಮೂಹಿಕವಾಗಿ ಅಲ್ಲ. ಬೇರೆ ಬೇರೆಯಾಗಿ, ಸಂಪ್ರದಾಯಗಳ ಬಗೆಗೆ ಡಾಕ್ಟರ ಸಾಹೇಬ್ ಅವರು ಇನ್ನೂ ಮುಂದೆ ಹೋಗಿ ಆಲೋಚಿಸಬೇಕು. ಏಕೆಂದರೆ ಸಂಪ್ರದಾಯಗಳಿಗೆ ತನ್ನದೇ ಆದ ಚರಿತ್ರೆ ಹಾಗೂ ಹಿನ್ನೆಲೆಗಳಿವೆ. ಅಲ್ಲದೆ ಅದು ಯಾವ ಕಾರಣದ ತಳಹದಿಯನ್ನೂ ಹೊಂದಿರದೇ ಇರಬಹುದು. ಮೂಲತಃ ಈ ವಿಧೇಯಕವನ್ನು ಪ್ರಾಯೋಜಿಸಿದವರ ದೃಷ್ಟಿಯಲ್ಲಿ ಸಂಪ್ರದಾಯಗಳು ಅವು ಏನೇ ಇರಲಿ ಅವೆಲ್ಲವೂ ಅಸಂಬದ್ಧ ಹಾಗೂ ಅನಿಷ್ಟಗಳೆಂದೇ ಭಾವಿಸಿದ್ದರು. ಆದುದರಿಂದ ಅವರು ಸಂಪ್ರದಾಯಗಳನ್ನೇ ಹೋಗಲಾಡಿಸಬೇಕೆಂದರು. ಅಲ್ಲದೆ ಸಮಸ್ತ ಸಮಾಜವು ಶಾಸನದಲ್ಲಿ ತಿಳಿಸಿದಂತೆ ಅಕ್ಷರಶಃ ಪರಿಪಾಲಿಸಬೇಕೆಂದೇ ಆಗ್ರಹಿಸಿದರು. ಆದರೆ ಈ ಪ್ರಶ್ನೆ ಯಾವ ಹಂತದವರೆಗೂ? ಅಥವಾ ಮಟ್ಟಿನವರೆಗೆ?. ಒಂದೆಡೆ ಸಕಾರಣವಾಗಿರಬೇಕೆಂದು ಹೇಳುವಿರಿ ಇದು ವಿರೋಧಾಭಾಸವಲ್ಲವೇ...

**ಡಾ. ಅಂಬೇಡ್ಕರ್** : ಹೇಗೆ?

**ಪಂಡಿತ ಠಾಕೂರ ದಾಸ ಭಾರ್ಗವ** : ಅದನ್ನು ಅಂಗೀಕರಿಸುವ ಮುನ್ನ ಅದೂ ಸಕಾರಣವಾಗಿಯೇ ಇದ್ದಿರಬಹುದು.

**ಡಾ. ದೇಶಮುಖ** : ಸಂಪ್ರದಾಯ ವಿವಾಹ ಪದ್ಧತಿಯಲ್ಲಿ ವಧೂ ಮತ್ತು ವರ ಈರ್ವರು ಅಗ್ನಿಸಾಕ್ಷಿಯಾಗಿ

ಸಪ್ತಪದಿಯನ್ನು ತುಳಿಯುವುದು ಅಡಕವಾಗಿದೆ. ಆದರೆ ಅದು ಸಕಾರಣವೆಂಬುದನ್ನು ನಾನು ನಂಬಲಾರೆ. ಅದು ಏನನ್ನು ತಿಳಿಸುತ್ತದೆ? ಅಥವಾ ಯಾವ ಕಾರಣವನ್ನು ಹೊಂದಿದೆ? ಅದು ವಿವಾಹ ಬಂಧನದ ಬಗೆಗೆ ಹೇಗೆ ಸಂಬಂಧವನ್ನು ಕಲ್ಪಿಸಬಲ್ಲದು?

**ಶ್ರೀಕಾಮತ್ :** ಅದು ಸೂಚನಾತ್ಮಕ.

**ಡಾ. ದೇಶಮುಖ :** ಅದರಂತೆಯೇ..

**ಮಾನ್ಯಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಹೇಳಿಕೆಯನ್ನು ಮುಂದುವರಿಸಲಿಚ್ಛಿಸಿದ್ದಾರೆಯೇ?

**ಡಾ. ದೇಶಮುಖ :** ಹೌದು ಸರ್ ನಾನು ಇನ್ನು ಸ್ವಲ್ಪ ಸಮಯ ಮುಂದುವರಿಸುವೆ. ಸದನವನ್ನು ಮಂಗಳವಾರ ೧೮ ಸೆಪ್ಟೆಂಬರ್ ೧೯೫೧ರಂದು ಬೆಳಗಿನ ೮.೩೦ ಗಂಟೆವರೆಗೂ ಮುಂದೂಡಲಾಯಿತು.

## ಹಿಂದೂ ಮಸೂದೆ – ಮುಂದುವರಿದದ್ದು

ಕಲಮು ೨ – [ಕೋಡ್‌ನ ಅನ್ವಯಿಸುವಿಕೆ (ಮುಂದುವರಿದಿದೆ)]

**ಉಪಾಧ್ಯಕ್ಷರು :** ಆಯ್ಕೆ ಸಮಿತಿಯ ಸೂಚನೆಯ ಮೇರೆಗೆ ಸದನವು, ಹಿಂದೂ ಲಾ ದ ಹಲವಾರು ಶಾಖೆಗಳನ್ನು ಕ್ರೋಡೀಕರಿಸುವ, ಕಾರ್ಯವನ್ನು ಮುಂದುವರಿಸುತ್ತದೆ.

**ಡಾ. ದೇಶಮುಖ (ಮ.ಪ್ರ.) :** ಸರ್. ನಿನ್ನೆ ನಾನು ನನ್ನ ಹೇಳಿಕೆಯನ್ನು ಪೂರ್ಣಗೊಳಿಸದಿರುವ, ಮಧ್ಯೆ ಅವಧಿಯಲ್ಲಿ, ಹಾಗೂ ನಾನು ಈ ದಿನ ಮುಂದುವರಿಸುವಲ್ಲಿ ಸದನದಲ್ಲಿಯ ಈರ್ವ ಸುಸಂಸ್ಕೃತ ಮಹಿಳೆಯರು ಚರ್ಚೆಯಲ್ಲಿ ಭಾಗವಹಿಸಲೇ...

**ಶ್ರೀ ಸೋಂಧೀ (ಪಂಜಾಬ್) :** ಸುಸಂಸ್ಕೃತ ಮಹಿಳೆಯರೆಂದರೇನು?

**ಡಾ. ದೇಶಮುಖ :** ಸುಸಂಸ್ಕೃತ ಈರ್ವ ಮಹಿಳೆಯರು...

**ಶ್ರೀ ಸೋಂಧಿ :** ನೀವು ಅವರನ್ನು ಆಧುನಿಕ ಮಹಿಳೆಯರೆಂದು ಸಂಬೋಧಿಸಬಹುದು.

**ಡಾ. ದೇಶಮುಖ :** ಇಲ್ಲ ನಾವು ಅನುಕರಣೆ ಮಾಡುತ್ತಿರುವಷ್ಟು ಆಧುನಿಕರಲ್ಲ. ನಾನು ಹೇಳಬಯಸುವುದೇನೆಂದರೆ, ಈ ಈರ್ವ ಮಹಿಳೆಯರು ತಮ್ಮ ಅಭಿಪ್ರಾಯಗಳನ್ನು ಗಂಭೀರವಾಗಿ ನನ್ನೊಂದಿಗೆ ಚರ್ಚಿಸಿದ್ದಾರೆ. ಅವರು ಈ ವಿಧೇಯಕವನ್ನು ತಮ್ಮ ದೃಷ್ಟಿಕೋನದಿಂದ ಪರಿಶೀಲಿಸಿದ್ದಾರೆ. ಸದನದಲ್ಲಿ ಸನ್ಮಾನ್ಯ ಪ್ರಧಾನಿಗಳಿದ್ದಾಗಲೇ ನಾನು ಸ್ಪಷ್ಟಪಡಿಸುವುದೇನೆಂದರೆ, ಮಹಿಳೆಯರ ದೂರಿನಂತೆ ಅವರು ಸೂಚಿಸಿದ ಅಭಿಪ್ರಾಯಕ್ಕೆ ಸಾಕಷ್ಟು ಗಮನವನ್ನು ಪ್ರಧಾನಿಗಳು ನೀಡಲಿಲ್ಲವಂತೆ. ಅಲ್ಲದೆ ಅವರ ಅಭಿಪ್ರಾಯವನ್ನು ತಿಳಿಸುವಲ್ಲಿ ಸಾಕಷ್ಟು ಅಡೆತಡೆಗಳು ಉಂಟಾದವಂತೆ. ಈ ಸಂಗತಿ ಸತ್ಯವಾಗಿದ್ದಲ್ಲಿ ಮತ್ತು ಸಮಯದ ಅಭಾವ ಇಲ್ಲದೆ ಹೋದಲ್ಲಿ ಈ ಈರ್ವ ಮಹಿಳೆಯರು ಪ್ರಧಾನಿಯವರಿಗೆ ತಮ್ಮ ಅಭಿಪ್ರಾಯಗಳನ್ನು ಮನವರಿಕೆ ಮಾಡಬಹುದು; ಏಕೆಂದರೆ ಅವರು ಯಾವುದೇ ರೀತಿಯಲ್ಲೂ ಹಿಂದೂ ಕೋಡ್‌ಗೆ ವಿರೋಧವಿದ್ದಾರೆ. ವಿವಾಹ ಮತ್ತು ವಿಚ್ಛೇದನೆಗೂ ಅವರ ವಿರೋಧವಿದೆ. ಅವರು ಹೇಳುವಂತೆ ಈ ವಿಧೇಯಕವು ಹಿಂದೂಧರ್ಮದ ಮೇಲೆ ಪ್ರಹಾರ ಮಾಡಿದೆ; ಹಾಗೂ ಇದರಿಂದ ಯಾರಿಗೂ ಎಳ್ಳಷ್ಟೂ ಪ್ರಯೋಜನವಿಲ್ಲ, ಅಲ್ಲದೆ ಇದು ಕೆಲವೇ ಹಿತಾಸಕ್ತಿಗಳಿಂದ ಕೂಡಿದವರ ಮಸಲತ್ತು ಎಂದೇ ಹೇಳುತ್ತಿದ್ದಾರೆ........

**ಕಾನೂನು ಸಚಿವ (ಡಾ. ಅಂಬೇಡ್ಕರ್) :** ನನ್ನ ಸಂತೋಷಕ್ಕಾಗಿ, ಮಾನ್ಯ ಸದಸ್ಯರು "ಅವರು" ಎಂಬುದನ್ನು ವಿವರಿಸಬೇಕು. ನಾನು ಅವರ ಹೇಳಿಕೆಯನ್ನು ಸರಿಯಾಗಿ ಕೇಳಿಸಿಕೊಳ್ಳದೇ ಹೋದೆ.

**ಓರ್ವ ಸದಸ್ಯ :** ಈರ್ವ ಸುಸಂಸ್ಕೃತ ಮಹಿಳೆಯರೆಂದು ಹೇಳಿದರು.

**ಶ್ರೀಮತಿ ದುರ್ಗಾಬಾಯಿ (ಮದ್ರಾಸು) :** ಮಾನ್ಯ ಸದಸ್ಯರು ನಮಗಾಗಿ ಅವರೀರ್ವರ ಹೆಸರನ್ನು

ಬಹಿರಂಗಪಡಿಸುವರೇ? ಏಕೆಂದರೆ ಅದು ಎಲ್ಲ ಮಹಿಳೆಯರ ಅಭಿಪ್ರಾಯವನ್ನು ಬಿಂಬಿಸುತ್ತಿಲ್ಲ. ಮಸೂದೆಯ ಪರವಾಗಿ ಹಲವರಿದ್ದಾರೆ.

**ಉಪಾಧ್ಯಕ್ಷರು :** ಈರ್ವ ಮಹಿಳೆಯರೇ ಸಮಸ್ತ ಜಗತ್ತಿನ ಪ್ರತಿನಿಧಿಗಳಲ್ಲ.

**ಡಾ. ದೇಶಮುಖ :** ಅವರು ನನ್ನ ವಿದ್ಯಾವಂತೆ ಸಹೋದರಿಯರಂತೆ ಈ ಸದನದ ಪ್ರತಿನಿಧಿಗಳು ಮತ್ತು ಅವರ ಹೇಳಿಕೆಯಂತೆ ಬೇರೆಯವರೊಡನೆ ಚರ್ಚಿಸಿ ಅವರ ಮನಸ್ಸನ್ನು ಬದಲಾಯಿಸುವಲ್ಲಿ, ನನ್ನ ಸನ್ಮಾನ್ಯ ಸಹೋದರಿಯರಂತೆ ಅನೇಕರು ವಿವಾಹವಿಚ್ಛೇದನೆಯನ್ನು ವಿರೋಧಿಸು....

**ಪ್ರಧಾನಿ ಹಾಗೂ ವಿದೇಶಾಂಗ ಸಚಿವ (ಶ್ರೀ ಜವಹರಲಾಲ್ ನೆಹರೂ) :** ಅವರು ಯಾರು?

**ಡಾ. ದೇಶಮುಖ್ :** ಸರ್. ಅವರ ಈ ಪ್ರವೇಶದಿಂದ ಮಾನ್ಯ ಪ್ರಧಾನಿಗಳು ನನ್ನ ಹೇಳಿಕೆಯಂತೆ, ಅವರನ್ನು ಕಂಡಿಲ್ಲವೆಂಬುದು ಖಚಿತವಾಯಿತು.

**ಶ್ರೀ ಜವಹರಲಾಲ್ ನೆಹರೂ :** ಅವರು ಯಾರು ಎಂಬುದು ನನಗೆ ತಿಳಿಯದು.

**ಡಾ. ದೇಶಮುಖ್ :** ಭಾರತದಲ್ಲಿ ಸ್ತ್ರೀಯರ ಲೀಗ್ ಎಂಬ ಒಂದು ಸಂಸ್ಥೆ....

**ಶ್ರೀಮತಿ ದುರ್ಗಾಬಾಯಿ :** ಹೌದು ಅದನ್ನು ಯಾರೂ ಅಲ್ಲಗಳೆಯಲಾರರು. ಆದರೆ ನಮಗೆ ಈ ಈರ್ವರ ಸ್ತ್ರೀಯರ ಹೆಸರು ಬೇಕಾಗಿದೆ.

**ಆಹಾರ ಹಾಗೂ ಕೃಷಿ ಉಪಮಂತ್ರಿ (ಶ್ರೀ ತಿರುಮಲರಾವ್) :** ಅವರು ಸದನದ ಹೊರಗಿನ ವ್ಯಕ್ತಿಗಳ ಬಗೆಗೆ ಹೇಳುತ್ತಿದ್ದಾರೆ. ಹೀಗಾಗಿ ಆ ವ್ಯಕ್ತಿಗಳು ತಮ್ಮನ್ನು ರಕ್ಷಿಸಿಕೊಳ್ಳಲು ಈ ಸದನದಲ್ಲಿಲ್ಲ.

**ಉಪಸಭಾಧ್ಯಕ್ಷರು :** ಇಲ್ಲಿ ರಕ್ಷಣೆಯ ಪ್ರಶ್ನೆಯೇ ಇಲ್ಲ.

**ಡಾ. ದೇಶಮುಖ್ :** ಶ್ರೀಮತಿ ದುರ್ಗಾಬಾಯಿ ಅವರು ಸ್ತ್ರೀಯರ ಲೀಗ್‌ನ್ನು ಒಪ್ಪಿದ್ದು ಸಂತೋಷ.

**ಉಪ ಸಭಾಧ್ಯಕ್ಷರು :** ಈ ಕೋಡ್‌ನ ಬಗೆಗೆ ಅಭಿಪ್ರಾಯಗಳ ಸುರಿಮಳೆಯೇ ಇದೆ. ಮಾನ್ಯ ಸದಸ್ಯರಿಗೆ ಒಂದಲ್ಲ ಒಂದು ಅಭಿಪ್ರಾಯವನ್ನು ಹೇಳುವ ಹಕ್ಕೂ ಇದೆ; ಹೀಗಾಗಿ ಹಲವು ಸ್ತ್ರೀಯರು ಬಂದು ತಮ್ಮ ಅನಿಸಿಕೆಗಳನ್ನು ಹೇಳಿರಲೂಬಹುದು. ಆದರೆ ಆ ಸ್ತ್ರೀಯರ ಪ್ರಸ್ತಾಪ ಬೇಕಾಗಿಲ್ಲ. ಸದನ ಅವರ ಅಭಿಪ್ರಾಯವನ್ನು ಒಪ್ಪಲೂಬಹುದು ಅಥವಾ ಒಪ್ಪದೇ ಹೋಗಲೂಬಹುದು, ಅದು ಸದನದ ವಿವೇಚನೆಗೆ ಬಿಟ್ಟ ವಿಷಯ. ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ಒಪ್ಪಿರುವರೋ ಅಥವಾ ತಿರಸ್ಕರಿಸಿರುವರೋ ಅದು ಮುಖ್ಯವೇ ಹೊರತು ಈರ್ವ ಸ್ತ್ರೀಯರು ಮುಖ್ಯವಲ್ಲ. ಅದನ್ನು ಪದೇಪದೇ ಹೇಳುವ ಕಾರಣವಿಲ್ಲ.

**ಡಾ. ದೇಶಮುಖ್ :** ಅವರು ಅಗೋಚರರೂ ಅಲ್ಲ ಅನಾಮಧೇಯರೂ ಅಲ್ಲ, ಏಕೆಂದರೆ ಅವರು ಶೀಘ್ರದಲ್ಲಿಯೇ ಪ್ರಧಾನಿಯವರ ಮುಂದೆ ಹಾಜರಾಗುವವರಿದ್ದಾರೆ.

**ಶ್ರೀ ಕರುಣಾಕರ ಮೆನನ್ (ಮದ್ರಾಸ್) :** ಅವರು ಅರವತ್ತು ವಯಸ್ಸು ಮೀರಿದವರೋ ಅಥವಾ ಮೀರದೇ ಇರುವವರೋ?

**ಉಪ ಸಭಾಧ್ಯಕ್ಷರು :** ಖಂಡಿತವಾಗಿ ಪ್ರಧಾನಿಯವರು ಅವರಿಗೆ ಸಂದರ್ಶನ ನೀಡಿಲ್ಲ. ಹೀಗಾಗಿ ಮಾನ್ಯ ಸದಸ್ಯರು ಹೆಸರುಗಳನ್ನು ಹೇಳದೇ ಹೋದರೂ ಅದನ್ನು ತಿಳಿಸಬಹುದಲ್ಲವೇ?.

**ಶ್ರೀಮತಿ ದುರ್ಗಾಬಾಯಿ :** ಅವರು ಅನಾಮಧೇಯರಾಗಿ ಉಳಿಯಬಯಸಿದ್ದಲ್ಲಿ.....

**ಡಾ. ದೇಶಮುಖ್ :** ಖಂಡಿತವಾಗಿ ಅಲ್ಲ, ಅವರು ಬೇರೊಂದು ಪಂಗಡದ ಸ್ತ್ರೀಯರು ಎಂದ ಮಾತ್ರಕ್ಕೆ ನಮ್ಮ ಸಹೋದರಿಯರು ಉದ್ವೇಗಕ್ಕೆ ಈಡಾಗಿದ್ದಾರೆ. (ಗೊಂದಲ) ಅವರಿಗೆ ತಿಳಿದಂತೆ ಅನೇಕ

ಸ್ತ್ರೀಯರು, ನನ್ನನ್ನು ನೋಡಬಂದವರು, ಅಖಿಲಭಾರತ ಸ್ತ್ರೀ ಅಧಿವೇಶನಕ್ಕೆ ತಮ್ಮ ರಾಜೀನಾಮೆ ನೀಡಿದ್ದಾರೆ. ಇವರ ಸಂಖ್ಯೆ ಅಧಿಕ.

**ಅನೇಕ ಸದಸ್ಯರು :** ಅವರು ಯಾರು? (ಗೊಂದಲ).

**ಡಾ. ದೇಶಮುಖ್ :** ನಾನು ಅವರ ಹೆಸರುಗಳನ್ನು ತಿಳಿಸದೇ, ಅವರನ್ನು ತಮ್ಮ ಮುಂದೆ ತಂದು ನಿಲ್ಲಿಸಿದರೆ, ಅವರ ಅಧಿಕ ಸಂಖ್ಯೆಯನ್ನು ಕಂಡು ನೀವು ಬೆಚ್ಚಿ ಬೀಳುವಿರಿ. ಅವರ ಸಂಖ್ಯೆ ಅಧಿಕವಾಗಿರುವುದರಿಂದ ಅವರ ಹೆಸರುಗಳನ್ನು ಹೇಳಲಾಗದು.

**ಶ್ರೀ ಸಿದ್ವಾ (ಮ.ಪ್ರ) :** ಅವರು ಅನಾಮಧೇಯರು. ನಿನ್ನೆ ಸಂವಿಧಾನ ಸೌಧದಲ್ಲಿ ಪ್ರಚಾರಮಾಡುತ್ತಿದ್ದರು.

**ಡಾ. ದೇಶಮುಖ್ :** ನೀವು ನಿನ್ನೆಯೇ ಆ ಈರ್ವ ಸ್ತ್ರೀಯರನ್ನು ನೋಡಿರುವಿರಿ.

**ಶ್ರೀ ಸಿದ್ವಾ :** ಅವರು ಅಪರಿಚಿತ ಸ್ತ್ರೀಯರು.

**ಡಾ. ದೇಶಮುಖ್ :** ಅದೇ ಸ್ತ್ರೀಯರ ಬಗೆಗೆ ನಾನು ಪ್ರಸ್ತಾಪಿಸುತ್ತಿರುವೆ.

**ಉಪ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಆಸನಗಳನ್ನು ಸ್ವೀಕರಿಸಬೇಕು. ಇದು ತುಂಬಾ ಗೊಂದಲದ ವಿಷಯ. ಏಕೆಂದರೆ ವಿಧೇಯಕದ ಬಗೆಗೆ ಪರ ಹಾಗೂ ವಿರೋಧ ಅಭಿಪ್ರಾಯಗಳಿವೆ. ಹೀಗಾಗಿ ಯಾರೋ ಅಪರಿಚಿತ ಸ್ತ್ರೀಯರ ಹಾಗೂ ಪುರುಷರ ಬಗೆಗೆ ಚರ್ಚಿಸುವುದು ಸರಿಯಲ್ಲ; ಏಕೆಂದರೆ ಅದು ಸದನದ ಗೌರವಕ್ಕೆ ಉಚಿತವಾಗಲಾರದು. ಆದುದರಿಂದ ಮಾನ್ಯ ಸದಸ್ಯರು ಅಪರಿಚಿತ ಸ್ತ್ರೀಯರ ವಿಷಯ ಪ್ರಸ್ತಾಪಿಸದಿರುವುದೇ ಸೂಕ್ತ. ಅದು ಸಂಸದೀಯ ವ್ಯವಸ್ಥೆಗೆ ಶೋಭೆ ನೀಡಲಾರದು.

**ಡಾ. ದೇಶಮುಖ್ :** ಸದಸ್ಯರ ಮಧ್ಯೆ ಪ್ರವೇಶದಿಂದ ನಾನು ಮತ್ತೆ ಮತ್ತೆ ಸ್ತ್ರೀಯರನ್ನು ಪ್ರಸ್ತಾಪಿಸಬೇಕಾಯಿತೇ ಹೊರತು ನನಗೆ ಆ ಬಗ್ಗೆ ಯಾವ ಆಕಾಂಕ್ಷೆ ಇಲ್ಲ. ಸರ್ ಈಗ ನಾನು ಈ ಸದನದಲ್ಲಿ ಮಂಡಿಸಿದ ತಿದ್ದುಪಡಿಗಳ ಬಗೆಗೆ ಮಾತ್ರ ಪ್ರಸ್ತಾಪಿಸುವೆ. ಈ ಕೋಡ್‌ಅನ್ನು ಅಂಗೀಕರಿಸುವಲ್ಲಿ ನನ್ನ ಮಾನ್ಯ ಮಿತ್ರರಾದ ಡಾ. ಮುಖರ್ಜಿ ಅವರು ಹಲವಾರು ಬೇರೆ ಬೇರೆ ಸೂಚನೆಗಳನ್ನು ನೀಡಿದ್ದಾರೆ. ಅದರಲ್ಲಿ ಒಂದು, ಈ ಕೋಡನ್ನು ಕಡ್ಡಾಯಗೊಳಿಸದೆ, ಐಚ್ಛಿಕವಾಗಿರಬೇಕೆಂದು ತಿಳಿಸಿದ್ದಾರೆ. ಅಲ್ಲದೆ ಅವರ ಮತ್ತೊಂದು ಸಲಹೆ ಎಂದರೆ, ಈ ವಿಧೇಯಕವನ್ನು ಮತಗಣನೆಗೆ ಮಂಡಿಸಬೇಕು.

ಮತಗಣನೆಯಲ್ಲಿ ಬಹುಮತ ದೊರೆತಲ್ಲಿ ಅದನ್ನು ಜಾರಿಗೊಳಿಸಬಹುದು. ಈ ದಿಶೆಯಲ್ಲಿ ನಾನು ಸಹಾ ಒಂದು ತಿದ್ದುಪಡಿಯನ್ನು ಮಂಡಿಸಿದ್ದು ಅದರಂತೆ ವಿವಿಧ ರಾಜ್ಯಗಳಲ್ಲಿ ಚುನಾವಣೆಗಳು ನಡೆದು ಅಲ್ಲಿಯ ಶಾಸಕಾಂಗವು ತನ್ನ ಸಹಮತವನ್ನು ವ್ಯಕ್ತಪಡಿಸಿದ ನಂತರ ಈ ವಿಧೇಯಕವನ್ನು ಜಾರಿಗೊಳಿಸಬಹುದು. ಈ ಒಂದು ಕ್ರಮದಲ್ಲಿ ಔಚಿತ್ಯದ ಒಲವಿದೆ. ಅದೇನೆಂದರೆ ರಾಜ್ಯ ಸರಕಾರ ಮತ್ತು ಶಾಸಕಾಂಗದ ಬೆಂಬಲ ದೊರೆಯುತ್ತದೆ. ಏಕೆಂದರೆ ನಾವು ಹಿಟ್ಲರ್ ಹಾಗೂ ಇತರ ಸರ್ವಾಧಿಕಾರಿಗಳ ವಿಧಾನವನ್ನು ಅನುಸರಿಸುತ್ತಿಲ್ಲ. ನಾವು ಪ್ರಜಾಪ್ರಭುತ್ವ ಆಡಳಿತ ಹೊಂದಿರುವ ರಾಷ್ಟ್ರ. ಆದುದರಿಂದ ಪ್ರಜಾಸತ್ತಾತ್ಮಕ ವಿಧಾನಗಳಿಗೇ ಅಂಟಿಕೊಂಡಿರಬೇಕು. ಪ್ರಜಾಪ್ರಭುತ್ವ ಮುಂದುವರಿಯಬೇಕು. ಇದು ಕೇವಲ ವ್ಯಕ್ತಿಗತ ಶಾಸನವಾದುದರಿಂದ ಹಾಗೂ ಶಾಸನ ಸುವ್ಯವಸ್ಥೆಯನ್ನು ರಕ್ಷಿಸುವಲ್ಲಿ ಆತಂಕಕಾರಿ ಅಲ್ಲದೇ ಹೋದುದರಿಂದ (ಸಾಮಾಜಿಕ ಹಿತವನ್ನು ಎತ್ತಿಹಿಡಿಯುವ) ಈ ವಿಧೇಯಕದ ಬಗ್ಗೆ ಎರಡು ಅಭಿಪ್ರಾಯಗಳೇ ಇಲ್ಲ.

ಈ ದಿಶೆಯಲ್ಲಿ ಸೂಚಿಸಲಾದ ಸುಧಾರಣೆಗಳಲ್ಲಿ, ವಿಶ್ವದಲ್ಲಿ ಇತರರ ಅನುಭವಗಳು ಆಶಾದಾಯಕವಾಗಿಲ್ಲ. ಉದಾಹರಣೆಗೆ ವಿವಾಹ–ವಿಚ್ಛೇದನೆಯನ್ನೇ ನೋಡಿರಿ. ಇಂದಿನ ಜಗತ್ತಿನಲ್ಲಿ ಈ ಬಗೆಗೆ ವಿವಿಧ ಮಟ್ಟದ,

ವಿವಿಧ ವಿಚ್ಛೇದನೆಯ ಶಾಸನಗಳನ್ನು ಕಾಣಬಹುದು. ವಿವಾಹ ವಿಚ್ಛೇದನೆಗೆ ಪರವಾದಿಗಳು, ವ್ಯಕ್ತಿ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಿ ಸಮಾಜದಲ್ಲಿ ಸುಧಾರಣೆಗಳನ್ನು ತರಬೇಕೆಂದು ಈ ವಿಧೇಯಕವನ್ನು ಬೆಂಬಲಿಸಿದರೆ; ವಿಚ್ಛೇದನೆಯಿಂದ ಆಗಬಹುದಾದ ಅನಾಹುತಗಳಿಗಾಗಿ, ಇದನ್ನು ಬೆಂಬಲಿಸದೇ ಇದ್ದಾರೆ. ಈ ಸಂಪ್ರದಾಯವಾದಿಗಳು ಹೇಳುವಂತೆ ನಾವು ವಿದೇಶೀಯರ ವಿಧಾನಗಳನ್ನು ಅಂಧವಾಗಿಯೇ ಅನುಕರಣೆ ಮಾಡುತ್ತಿದ್ದೇವೆ. ಈ ಹೇಳಿಕೆಯಲ್ಲಿ ಹುರುಳಿಲ್ಲ ಎಂದು ಹೇಳಲಾರೆ. ಏಕೆಂದರೆ ಸಹಸ್ರಾರು ಶತಮಾನಗಳಿಂದ ತನ್ನ ಸಂಪ್ರದಾಯಗಳನ್ನು ಬಿಟ್ಟುಕೊಡದೆ, ಕಾಲಕಾಲಕ್ಕೆ ಬೇಕಾದ ಬದಲಾವಣೆಗಳಿಗೆ ಆಸ್ಪದ ನೀಡಿರುವ ಹಿಂದೂಧರ್ಮ ಅಗಾಧ ಹಾಗೂ ನಿತ್ಯನೂತನವಾಗಿದೆ. ಈ ವಿಧವಾದ ಹೊಂದಾಣಿಕೆಯ ಹಿಂದೂಧರ್ಮವನ್ನು ಅರ್ಥಮಾಡಿಕೊಳ್ಳದೇ ಅಂಧಾನುಕರಣಕ್ಕೆ ಮೊರೆಹೋಗುವುದು ಶೋಚನೀಯ. ವೈವಿಧ್ಯತೆಗಳಿಂದ ಕೂಡಿದ ಹಿಂದೂಧರ್ಮವನ್ನು ಅಥವಾ ಸಮಾಜವನ್ನು ಏಕರೂಪಕ್ಕೆ ಮಾರ್ಪಡಿಸುವುದು ಸೂಕ್ತವಲ್ಲವೆಂದೇ ಹೇಳಬಹುದು. ಅಲ್ಲದೆ ಈ ಕ್ರಮದಿಂದ ಇದ್ದಿರಬಹುದಾದ ಸುಖ–ಶಾಂತಿ ಜೀವನಕ್ಕೆ ಅಪಾರ ಹಾನಿ ಉಂಟಾಗುವುದು. ಶತಮಾನಗಳಿಂದ ಪರಕೀಯ ದಾಳಿ ಹಾಗೂ ಪರಕೀಯ ಸಂಸ್ಕೃತಿಗಳನ್ನು ದಿಟ್ಟವಾಗಿ ಎದುರಿಸಿ, ಅದನ್ನು ಅರಗಿಸಿಕೊಂಡು ತನ್ನತನವನ್ನು ಮುಂದುವರಿಸಿಕೊಂಡು ಬಂದಿರುವಾಗ ಅಂಧಾನುಕರಣೆ ಏಕೆ? ಈ ಎಲ್ಲಾ ಕಾರಣಗಳಿಂದ ನಮ್ಮ ಧರ್ಮ ನಿಂತ ನೀರಿನಂತೆ ಇರದೆ, ಸತತವಾಗಿ ಹರಿಯುವ ಸಲಿಲ ಜಲವಾಹಿನಿಯಿಂತೆ ಶುಭ್ರ ಮತ್ತು ಸೂಕ್ತವಾಗಿದೆ. ಇದನ್ನು ಡಾ. ಅಂಬೇಡ್ಕರ್‌ರು ಅಲ್ಲಗಳೆಯಲಾರರು. ಏಕೆಂದರೆ ನಮ್ಮ ಧರ್ಮ ಕಾಲಕಾಲಕ್ಕೆ ಆಗಿರಬಹುದಾದ ಬದಲಾವಣೆಗೆ ಅವಕಾಶ ನೀಡಿದೆ.

ಪರಿಸ್ಥಿತಿ ಹೀಗಿರುವಾಗ ಚೈನಾ ಮತ್ತು ಅಮೆರಿಕಾದವರು ನಮ್ಮನ್ನು ಹಿಂದುಳಿದವರು ಎಂದೇ ಹೇಳುತ್ತಿದ್ದಾರೆ. ಅವರಿಗೇನು ಗೊತ್ತು ನಮ್ಮ ಧರ್ಮದ ವಿಷಯ? ಅವರು ಈ ವಿಧವಾದ ಅವಹೇಳನದ ಹೇಳಿಕೆಯನ್ನು ನೀಡುವ ಮುನ್ನ ನಮ್ಮ ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆಯೆ? ಆದುದರಿಂದ ಯಾರೋ ಹಲವರು ಈ ವಿದೇಶಿಯರ ಹೇಳಿಕೆಗಳಿಗೆ ಮರುಳಾಗಿ, ಶತಮಾನಗಳಿಂದ ಜಾರಿಯಲ್ಲಿರುವ ಸಂಪ್ರದಾಯಗಳಿಗೆ ತಿಲಾಂಜಲಿ ನೀಡುವ ಸಲಹೆಗಳನ್ನು ಸೂಚಿಸುವುದು ಸೂಕ್ತವಾಗಲಾರದು. ಈ ದಿಶೆಯಲ್ಲಿ ನನಗೆ ಒಂದು ಕಥೆ ನೆನಪಿಗೆ ಬರುತ್ತದೆ. ಅದೇನೆಂದರೆ ಒಬ್ಬ ಮುದುಕ ಹಾಗೂ ಅವನ ಮಗ ಒಂದು ಕತ್ತೆಯನ್ನು ಹೊಡೆದುಕೊಂಡು ಹೋಗುತ್ತಿದ್ದ ಕಥೆ ನಿಮಗೆಲ್ಲರಿಗೂ ತಿಳಿದೇ ಇದೆ. ಕಥೆಯ ಸಾರಾಂಶವೆಂದರೆ ಕಂಡವರು ಕಂಡಂತೆ ಸಲಹೆ ಹೇಳುತ್ತಾರೆ. ಆದರೆ ಬುದ್ಧಿವಂತನು ಸೂಕ್ತ ಸಲಹೆಯನ್ನು ಮಾತ್ರ ಅಂಗೀಕರಿಸುತ್ತಾನೆ.

**ಉಪಾಧ್ಯಕ್ಷರು :** ಈ ಕಥೆಯನ್ನು ಎಲ್ಲರೂ ಬಲ್ಲರು.

**ಶ್ರೀ ಭಾರತೀ (ಮದ್ರಾಸ್) :** ಆದರೆ ಇಲ್ಲಿ ಕತ್ತೆ ಯಾರು?

**ಡಾ. ದೇಶಮುಖ :** ಈಗ ನಮ್ಮನ್ನೆಲ್ಲಾ ಈ ಅಪಹಾಸ್ಯಕ್ಕೆ ಗುರಿಮಾಡಿದ್ದಾರೆ ಎಂಬುದನ್ನು ತಿಳಿಸಬಯಸುವೆ.

**ಉಪಾಧ್ಯಕ್ಷರು :** ಕತ್ತೆಯ ಕಥೆಯನ್ನು ವಿವರಿಸಬೇಕಾಗಿಲ್ಲ.

**ಡಾ. ದೇಶಮುಖ್ :** ನಾನು ಈ ಕಥೆಯನ್ನು ವಿವರಿಸುತ್ತಿರಲಿಲ್ಲ. ಆದರೆ ಇಲ್ಲಿ ಮೂರ್ಖರ ಆಟ ನಡೆದಿದೆ : ಏಕೆಂದರೆ ಬುದ್ಧಿಜೀವಿಗಳೂ ವಿದೇಶಿಯರ ಆಚಾರ ವಿಚಾರಗಳನ್ನು ಸರಿಯಾಗಿ ಅರಿಯದೇ, ಅಂಧಾನುಕರಣೆ ಮಾಡುತ್ತಿರುವುದು ತೀರಾ ಶೋಚನೀಯ. ಅಲ್ಲದೆ ಅದನ್ನೇ ಅನುಸರಿಸಬೇಕೆಂದು ಆಗ್ರಹಿಸುತ್ತಿರುವುದು ದುರದೃಷ್ಟಕರ. ಯಾರೋ ಕೆಲವು ವಿದೇಶಿಯರ ಹೇಳಿಕೆಗೆ ಬೆಲೆಕೊಟ್ಟು ನಮ್ಮ ಪರಂಪರೆಯನ್ನೇ ಮೂಲೆಗುಂಪಾಗಿಸುವುದು ಸರಿಯಲ್ಲ. ನಾನು ಅದನ್ನು ಕೇಳಲೂ ಸಿದ್ಧನಿಲ್ಲ, ಹಾಗೂ

ಈ ದಿಶೆಯಲ್ಲಿ ಯಾರೋ ಏನೋ ಹೇಳುವುದನ್ನು ಖಂಡಿಸುವೆ.

ಈ ಹಿಂದೂ ಕೋಡ್‌ನ ಬಗೆಗೆ ಹೇಳಬಹುದಾದ ವಿಷಯವೆಂದರೆ, ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅನಿವಾರ್ಯವಾದ ಸಂಗತಿಗಳಲ್ಲಿ ಜಾರಿಗೊಳಿಸಬೇಕೇ ಹೊರತು ಇದನ್ನು ಜನರ ಮೇಲೆ ಕಡ್ಡಾಯವಾಗಿ ಹೇರುವುದು ಸರಿಯಲ್ಲ. ಈ ವಿಧೇಯಕವನ್ನು ಸಾಕಷ್ಟು ವಿದ್ಯಾವಂತ ಮಹಿಳೆಯರು ಬೆಂಬಲಿಸಿರುವುದು ಸತ್ಯ. ಅವರ ಅಭಿಪ್ರಾಯದಲ್ಲಿ ವಿದ್ಯಾವಂತ ಮಹಿಳೆಯರ ಸಂಖ್ಯೆಯನ್ನು ಗಮನಿಸಿದರೆ ಅದು ಸಾಗರದಲ್ಲಿಯ ಒಂದು ಬಿಂದುವಿಗೆ ಸಮನಾಗಿದೆ; ಹೀಗಾಗಿ ಸುಧಾರಣೆ ಕೋರುವವರ ಸಂಖ್ಯೆ ಅತ್ಯಲ್ಪ. ಅಲ್ಲದೆ ಅಭಿಪ್ರಾಯವನ್ನೂ ಆಲಿಸದಷ್ಟು ಅಸಡ್ಡೆ ಮನೋಭಾವ ಹೊಂದಿದ್ದಾರೆ. ಆದರೆ ನಾನು ಹೇಳಬಯಸಿದ ಗ್ರಾಮಾಂತರ ಮಹಿಳೆಯರು ತಮ್ಮ ಸಾಮಾನ್ಯ ವಿವೇಕದಿಂದ ತಾವು ಹೇಗೆ ಬಾಳಬೇಕೆಂದು ಅರಿತಿದ್ದು, ಅವರು ಈ ವಿಧೇಯಕದ ಬಗೆಗೆ ಆತಂಕವ್ಯಕ್ತಪಡಿಸಿದ್ದಾರೆ. ನೀವು ಜಾರಿಗೆ ತರಬೇಕೆಂದಿರುವ ವಿಚ್ಛೇದನೆ ಸಮಾಜದಲ್ಲಿ ಎಲ್ಲರನ್ನೂ ಬದಲಾಯಿಸಲಾರದು. ನಾನು ಕೇಳುವ ಒಂದು ಪ್ರಶ್ನೆ ಎಂದರೆ, ವಿಚ್ಛೇದನದ ವಿಷಯವನ್ನೇ ಮುಂದಿರಿಸಿಕೊಂಡು ವಿವಾಹಬಾಂಧವ್ಯ ಬೆಳೆಸುವಿರೋ? ಅಥವಾ ಅದು ಅಮರ ಎಂಬ ಭಾವನೆಯನ್ನೇ ಪ್ರೋತ್ಸಾಹಿಸುವಿರೋ? ನೀವು ಸುಲಭ ವಿಚ್ಛೇದನೆ ವಿಧಾನಗಳನ್ನು ಅನುಸರಿಸಿದರೆ, ಸಮಾಜದಲ್ಲಿ ಅಗಾಧ ಪರಿವರ್ತನೆಯಾಗಬಹುದು. ನಾವು ಆ ವಿಧದ ಬದಲಾವಣೆಗಳಿಂದ ತೊಂದರೆಯಾದರೂ ಅದನ್ನು ಸಹಿಸಲು ನಿರ್ಧರಿಸಿದ್ದೇವೆ. ಆದರೆ, ವಿದ್ಯಾವಂತ ಮಹಿಳೆಯರು, ಹಳ್ಳಿಯ ಅವಿದ್ಯಾವಂತ ಮಹಿಳೆಯರಿಗೆ ಆಗಬಹುದಾದ ಅನಾಹುತಗಳನ್ನು ಅರಿಯದೇ ಈ ವಿಧೇಯಕಕ್ಕೆ ಬೆಂಬಲ ಸೂಚಿಸುವುದು ಸರಿಯಲ್ಲ, ಏಕೆಂದರೆ, ವಿದ್ಯಾವಂತೆ, ವಿವಾಹ ವಿಚ್ಛೇದನೆ ಪಡೆದ ಮೇಲೆ ಸ್ವಾವಲಂಬಿಯಾಗಿ ಜೀವನ ನಡೆಸಬಹುದು. ಅವಳಿಗೆ ತನ್ನ ವಿದ್ಯೆಯಿಂದ ಯಾವುದಾದರೂ ನೌಕರಿ ದೊರೆಯುತ್ತದೆ; ಅಲ್ಲದೆ ಅವಳು ಮನಸ್ಸು ಮಾಡಿದರೆ ಬೇರೊಬ್ಬ ಉತ್ತಮ ಗಂಡನನ್ನೂ ಪಡೆಯಬಹುದು. ಆದರೆ ಅವಿದ್ಯಾವಂತ ಮಹಿಳೆಯರ ಪಾಡೇನು? ಪರಿಸ್ಥಿತಿಯನ್ನು ಅರಿತಿರುವ ವಿದ್ಯಾವಂತ ಮಹಿಳೆಯರು ಪುರುಷ ಪ್ರಾಧಾನ್ಯತೆಯ ಬಗೆಗೆ ಮಾತನಾಡುತ್ತಾ, ಪುರುಷನ ಸರ್ವಾಧಿಕಾರಿ ಮನೋಭಾವನೆಯನ್ನು ಟೀಕಿಸುತ್ತಲೇ ಇದ್ದಾರೆ. ಆದರೆ ಈ ಪುರುಷರಿಂದ ಹಳ್ಳಿಗಳ ಅವಿದ್ಯಾವಂತ ಮಹಿಳೆಯರಿಗೆ ಆಗಬಹುದಾದ ಅನ್ಯಾಯಗಳ ಕಲ್ಪನೆಯೇ ಈ ಮಹಿಳೆಯರಿಗೆ ಇಲ್ಲ. ಈ ಒಂದು ಪರಿಸ್ಥಿತಿಯಲ್ಲಿ ವಿವಾಹ ವಿಚ್ಛೇದನದಿಂದ ಮಕ್ಕಳಿಗೆ ಆಗಬಹುದಾದ ಅನಾಹುತದ ಕಲ್ಪನೆ ಏನಾದರೂ ಈ ಮಹಿಳೆಯರಿಗಿದೆಯೇ?

ಆದರೂ, ನಾನು ಈ ವಿಧೇಯಕದ ಪರವಾಗಿರುವೆ. ಒಂದು ಎಚ್ಚರಿಕೆಯ ಮಾತನ್ನು ಹೇಳಬಯಸುವೆ, ಅದೇನೆಂದರೆ ನಾವು ಯಾವುದೇ ಸುಧಾರಣೆಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಅದರಿಂದಾಗಬಹುದಾದ ಪರಿಣಾಮಗಳನ್ನು ಯೋಚಿಸಬೇಕು. ಅದನ್ನು ಮಾಡದೇ ಹೋದರೆ, ಅನವಶ್ಯಕ ವಿಷಯವನ್ನು ಮಾಡಿದಂತಾಗುತ್ತದೆ. ಏಕೆಂದರೆ, ಹಿಂದೂ ಲಾ ಮತ್ತು ಹಿಂದೂ ಧರ್ಮದಲ್ಲಿ ಅನೇಕ ವಿಷಯಗಳು ಉಪಯುಕ್ತವಾಗಿವೆ. ಅಲ್ಪಸ್ವಲ್ಪ ಸುಧಾರಣೆಗಳೊಂದಿಗೆ ಮುಂದುವರಿಸಬಹುದು. ಆದರೆ ಹಲವು ವಿಷಯಗಳ ಹಿಂದೆ ಇರಬಹುದಾದ ಉದ್ದೇಶ ಸಂದೇಹಕ್ಕೆ ಆಸ್ಪದ ನೀಡಿದ್ದು, ಅವು ಹಿಂದೂ ವಿರೋಧಿ ಭಾವನೆಗಳಿಂದ ಕೂಡಿರುವುದು ಶೋಚನೀಯ. ಅವರ ದೃಷ್ಟಿಯಲ್ಲಿ ಹಿಂದೂಧರ್ಮದಲ್ಲಿ ಏನೋ ಕುಂದುಗಳಿವೆ. ಅವನ್ನು ನಿವಾರಿಸುವಲ್ಲಿ ವಿದೇಶೀಯ ಆದರ್ಶಗಳನ್ನು ಅಳವಡಿಸಬೇಕೆಂಬ ಹಂಬಲ. ಆದರೆ ಅದು ಸದುದ್ದೇಶದಿಂದ ಕೂಡಿದ್ದರೆ ನಾವು ಒಪ್ಪಬಹುದು. ಏಕೆಂದರೆ ಇದು ಕೇವಲ ಅಂಧಾನುಕರಣಕ್ಕೆ ಆಸ್ಪದ ನೀಡಬಾರದು. ನಾವು ಬಾಳಿ ಬದುಕಬೇಕಾದರೆ, ಕಾಲಕ್ಕೆ ತಕ್ಕ ಬದಲಾವಣೆಗಳನ್ನು ನಮ್ಮ ಸಮಾಜದ ಮೂಲ ಶಾಸನಗಳಲ್ಲಿ

ತರಬೇಕು. ಆದರೆ ಎಚ್ಚರತಪ್ಪದೇ ಇರಬೇಕು. ನಾನು ನಿನ್ನೆ ಮಾತನಾಡಿದಾಗ, ಈ ವಿಧೇಯಕವು ಕೇವಲ ವಿವಾಹ ಹಾಗೂ ವಿಚ್ಛೇದನಗಳ ವಿಷಯ ಒಂದನ್ನೇ ಈಗ ಜಾರಿ ಮಾಡಿ ಇತರ ವಿಷಯಗಳನ್ನು ನಂತರ ಕೈಗೆತ್ತಿಕೊಳ್ಳುವುದೆಂದೇ ಭಾವಿಸಿದ್ದೆ, ಆದರೆ, ಈ ವಿಧೇಯಕದ ಅನುಮೋದಕರು, ಇತರ ವಿಷಯಗಳನ್ನು ಕೈಬಿಡುವಂತೆ ತೋರುತ್ತಿಲ್ಲ. ಅವರು ಈ ಎರಡು ಪ್ರಕರಣಗಳಿಗೆ ಸೀಮಿತವಾಗದೇ ಹೋದಲ್ಲಿ ಸದನದ ಸದಸ್ಯರು ತಮ್ಮ ಅಭಿಪ್ರಾಯವನ್ನು ಬದಲಿಸಬಹುದೆಂಬ ಭೀತಿ ಇದೆ. ಏಕೆಂದರೆ ಈ ಎರಡು ಅನುಬಂಧಗಳು ಅಂಗೀಕರಿಸಿದ ಮೇಲೆ, ಸಮಯ ಸಾಧಿಸಿ ಆಸ್ತಿಯ ಅನುಬಂಧಕ್ಕೂ ಅವರು ಒತ್ತಾಯಿಸುವ ಭೀತಿ ಇದೆ. ನಾವು ಈ ವಿಧೇಯಕದ ಕ್ರೋಡೀಕರಣದ ಚರಿತ್ರೆಯನ್ನು ಅವಲೋಕಿಸಿದರೆ, ಅದಕ್ಕೆ ಇರಬಹುದಾದ ವಿರೋಧದ ಅರಿವಾಗುತ್ತದೆ. ದೇಶದ ವಕೀಲರ ಸಂಘಗಳು ಈ ವಿಧೇಯಕದ ವಿರುದ್ಧವಾಗಿವೆ. ಕ್ರೋಡೀಕರಣವೂ ಸಮಂಜಸವಾಗಿಲ್ಲವೆಂದೇ ಸಾರಿವೆ. ಈ ವಿಧೇಯಕಕ್ಕೆ ಜನರು ಬಲಿಷ್ಠ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ಪರಿಸ್ಥಿತಿಯಲ್ಲಿ ಈ ಎರಡು ಅನುಬಂಧಗಳ ನಂತರ ಮಿಕ್ಕ ವಿಷಯಗಳನ್ನೂ ಕೈಗೆತ್ತಿಕೊಳ್ಳುತ್ತೇವೆ ಎಂಬುದು ಸರಿಯಲ್ಲ. ನಾವು ಅರಿಯಲೇಬೇಕಾದ ವಿಷಯ ಎಂದರೆ, ಈ ಸದನವು ಕೇವಲ ವಿವಾಹಕ್ಕೆ ಈ ವಿಧೇಯಕದಲ್ಲಿ ಸೂಚಿಸಿದ ಅಂಶಗಳನ್ನು ಮಾತ್ರ ಚರ್ಚಿಸಬೇಕೇ ಹೊರತು ಇತರ ವಿಷಯಗಳನ್ನಲ್ಲ.

ಆಸ್ತಿಯ ಸಂಬಂಧದ ಬಗೆಗೆ ಚರ್ಚೆಯನ್ನು ಕೈಗೆತ್ತಿಕೊಳ್ಳುವುದೇ ಆದಲ್ಲಿ ಈ ವಿಧೇಯಕಕ್ಕೆ ಇರಬಹುದಾದ ವಿರೋಧ ಮತ್ತು ಬೆಂಬಲ ಖಚಿತವಾಗಬಲ್ಲದು. ಒಂದು ವೇಳೆ ಸಮಗ್ರ ಕೋಡ್‌ಅನ್ನೇ ಕೈಗೆತ್ತಿಕೊಳ್ಳಬೇಕೆಂದಿದ್ದರೆ, ಅದನ್ನು ಸಂಪೂರ್ಣವಾಗಿ, ಪ್ರಾಂತೀಯ ಶಾಸನಸಭೆಗಳಿಗೆ ವಹಿಸಿಕೊಡುವುದು ಸೂಕ್ತ. ಏಕೆಂದರೆ ಸಾರ್ವಜನಿಕ ಅಭಿಪ್ರಾಯವನ್ನು ಅರಿಯಲು ಸಾಕಷ್ಟು ಸಮಯಾವಕಾಶವನ್ನು ಒದಗಿಸಿದಂತಾಗುತ್ತದೆ. ಇದರಿಂದ ವಿಧೇಯಕದಲ್ಲಿ ಆಗಬೇಕಾದ ಮಾರ್ಪಾಟುಗಳ ಒಪ್ಪಿಗೆ ನೀಡಬೇಕೆಂಬುದು ಕಡ್ಡಾಯವಲ್ಲ. ಆದುದರಿಂದ ಕೆಲವು ರಾಜ್ಯಗಳು ಒಪ್ಪಬಹುದು. ಬೇರೆ ಹಲವು ಒಪ್ಪದೇ ಇರಲೂಬಹುದು, ಅದರಿಂದ ಕೆಡುಕೇನೂ ಇಲ್ಲ.

ನಾನು ಏಕಪತಿ ಹಾಗೂ ವಿಚ್ಛೇದನಗಳಿಗೆ ಬೆಂಬಲ ನೀಡುವೆ; ಆದರೆ ಹಲವು ಸೂಚನೆಗಳಿವೆ. ಅವನ್ನು ನಿನ್ನೆಯೇ ವಿವರಿಸಿರುವೆ. ಅದೇನೆಂದರೆ ಸಂಪ್ರದಾಯ ವಿಚ್ಛೇದನ ವ್ಯವಸ್ಥೆಯೂ ಮುಂದುವರಿಯಬೇಕು. ಅದನ್ನು ಒಪ್ಪುವರು ಎಂಬ ವಿಷಯ ತಿಳಿದುಬಂದು ನನಗೆ ಸಂತೋಷವಾಗಿದೆ. ಆದುದರಿಂದ ಈ ವಿಧೇಯಕದಲ್ಲಿ ಸೂಚಿಸಲಾದ ಅಂಶಗಳು ಕೇವಲ ವಿವಾಹ ಹಾಗೂ ವಿಚ್ಛೇದನೆಗಳಿಗೆ ಸೀಮಿತವಾಗಿರಬೇಕು. ಈ ಸಂಸತ್ತು ಬೇರೆ ಯಾವ ವಿಷಯಕ್ಕೂ ತನ್ನ ಸಮ್ಮತಿ ನೀಡಬಾರದು.

**ಶ್ರೀಮತಿ ಜಯಶ್ರೀ (ಬಾಂಬೆ) :** ನಾನು ಕಾನೂನು ಸಚಿವರಿಂದ ೨ನೆ ಕಲಮಿಗೆ ಮಂಡಿಸಲಾದ ತಿದ್ದುಪಡಿಗೆ ಬೆಂಬಲ ಸೂಚಿಸುವೆ. ಎರಡನೆಯ ಕಲಮಿನ ಉಪಕಲಮ (೪)ನ್ನು ಕೈಬಿಡುವುದನ್ನು ಕೇಳಿ ಹರ್ಷವಾಗಿದೆ. ಅದೇನೆಂದರೆ : ೧೮೭೨ರ ವಿಶೇಷ ವಿವಾಹ ಮಸೂದೆ (೧೮೭೨)ಯಂತೆ ಕ್ರಮಬದ್ಧಗೊಳಿಸಲಾದ ಎಲ್ಲಾ ಹಿಂದೂ ವಿವಾಹಗಳಿಗೂ ಈ ಕೋಡನ್ನು ಅನ್ವಯಿಸಲಾಗುವುದು.

**೧೦. ಬೆಳಗಿನ ಸಮಯ**

ಈ ಉಪನಿಬಂಧನೆಯನ್ನು ಕೈಬಿಟ್ಟಿರುವುದು ಸಂತಸದ ವಿಷಯ. ಏಕೆಂದರೆ ವಿಶೇಷ ವಿವಾಹ ಶಾಸನದಡಿಯಲ್ಲಿ ಅಧಿಕ ಹಕ್ಕುಗಳನ್ನು ಹೊಂದಲಾಗಿದೆ. ಇದು ಭಾರತೀಯ ವಾರಸುದಾರಿಕೆಗೂ ಅನ್ವಯಿಸಬೇಕು. ನಾವು ಹಿಂದೂ ಕೋಡ್‌ನಲ್ಲಿ ಸುಧಾರಣೆಗಳನ್ನು ತರಬಯಸಿದರೂ ಅದು ವಿಶೇಷ ವಿವಾಹ ಶಾಸನದಷ್ಟು ವಿಶಾಲವಾದ ಹಕ್ಕುಗಳನ್ನು ನೀಡುವುದಿಲ್ಲ.

**ಉಪಾಧ್ಯಕ್ಷರು :** ವಿಶೇಷ ವಿವಾಹ ಶಾಸನದಲ್ಲಿ ದತ್ತು ಸ್ವೀಕಾರಕ್ಕೆ ಅವಕಾಶ ಇಲ್ಲ. ಆದರೆ ಹಿಂದೂ ಕೋಡ್‌ನಲ್ಲಿ ಆಸ್ಪದ ಕಲ್ಪಿಸಲಾಗಿದೆ. ಇದು ಪ್ರಗತಿಯಲ್ಲವೆ?

**ಶ್ರೀಮತಿ ಜಯಶ್ರೀ :** ನಾನು ಹೇಳಿರುವುದು, ವಾರಸುದಾರಿಕೆಯ ಬಗೆಗೆ ಈ ಹಿಂದೂ ಕೋಡ್‌ಗಿಂತ ಅದರಲ್ಲಿ ಹಕ್ಕುಗಳು ವಿಶಾಲವಾಗಿವೆ. ಅದನ್ನು ಕೈಬಿಟ್ಟಿರುವುದು ಸಂತಸದ ಸಂಗತಿ. ಈ ವಿಧೇಯಕವನ್ನು ಎಲ್ಲರಿಗೂ ಕಡ್ಡಾಯಗೊಳಿಸಬೇಕು ಎಂಬುದರ ಬಗೆಗೆ ಮುಸಲ್ಮಾನ, ಪಾರ್ಸಿ ಮತ್ತು ಕ್ರಿಶ್ಚಿಯನ್ ಬಂಧುಗಳ ಅಭಿಪ್ರಾಯಪಡೆದು ಕಡ್ಡಾಯಗೊಳಿಸಿದರೆ ಅದೊಂದು ಆದರ್ಶವಾಗಬಹುದು. ಇದರಂತೆಯೇ ವಾರಸುದಾರಿಕೆ ಹಾಗೂ ನಾಗರಿಕ ವಿವಾಹ ಕಟ್ಟಳೆಗಳೂ ಜಾರಿಗೆ ಬಂದರೆ ಉತ್ತಮ, ಆದರೆ ನಮ್ಮ ಸಮಾಜ ಅದಕ್ಕೆ ಸಿದ್ಧವಿಲ್ಲ. ಆದುದರಿಂದ ವಿಶೇಷ ವಿವಾಹ ಶಾಸನದಲ್ಲಿಯ ವಿಶಾಲ ತತ್ವಗಳನ್ನು ಸದಸ್ಯರು ಸ್ವಾಗತಿಸುವರೇ ಎಂಬುದೇ ಕೌತುಕದ ವಿಷಯ.

ನಿನ್ನೆ ಡಾ. ಮುಖರ್ಜಿಯವರು ಮುಸಲ್ಮಾನರೂ ಏಕಪತ್ನಿ ವ್ಯವಸ್ಥೆಯನ್ನು ಅಂಗೀಕರಿಸಬೇಕೆಂದು ಆಗ್ರಹಿಸಿದರು. ಆದರೆ ಮುಸ್ಲಿಂ ಲಾ ಸ್ತ್ರೀಯರಿಗೆ ವಿಶೇಷ ಹಕ್ಕುಗಳನ್ನು ನೀಡಿದೆ. ಅದರಂತೆ ನಮ್ಮಲ್ಲಿ ಜಾರಿಯಲ್ಲಿರುವ ಹಿಂದೂ ಲಾ ಹಕ್ಕುಗಳನ್ನು ಸ್ತ್ರೀಯರಿಗೆ ನೀಡಿಲ್ಲ.

**ಉಪಾಧ್ಯಕ್ಷರು :** ಅವರು ಏಕಪತ್ನಿ ವ್ಯವಸ್ಥೆಯ ಬಗ್ಗೆ ಪ್ರಸ್ತಾಪಿಸಿದ್ದು.

**ಶ್ರೀಮತಿ ಜಯಶ್ರೀ :** ಏಕಪತ್ನಿ ವ್ಯವಸ್ಥೆ ಮತ್ತು ಪವಿತ್ರ ವಿವಾಹ ವ್ಯವಸ್ಥೆ ಪವಿತ್ರವಿವಾಹದ ಬಗೆಗೆ ವಿವಾಹ ಹೊಂದಿದ ದಂಪತಿಗಳ ಪ್ರತಿಜ್ಞೆಯ ವಿವರ ಹೀಗಿದೆ.

"ನನ್ನೊಂದಿಗೆ ಸಪ್ತಪದಿ ಸ್ವೀಕರಿಸಿರುವೆ. ಆದುದರಿಂದ ನಾವು ಬಾಳ ಸಂಗಾತಿಗಳು. ನಾವು ಒಬ್ಬರನ್ನೊಬ್ಬರು ಅಗಲದಂತಹ ಬಂಧನ ಹೊಂದಿರುವೆವು. ನಾವು ಒಟ್ಟಾಗಿರೋಣ. ಪರಸ್ಪರ ಸಮಾಲೋಚಿಸೋಣ. ಒಬ್ಬರನ್ನೊಬ್ಬರು ದಿನನಿತ್ಯ ಪ್ರೀತಿಸುತ್ತಿರೋಣ. ಒಡನಾಡಿಗಳಾಗಿ ಬದುಕುವಾ. ಮಾನಸಿಕವಾಗಿ ಒಮ್ಮನಸ್ಸಿನಿಂದ ಕೂಡಿ ಶಕ್ತಿಯುತವಾದ ಮತ್ತು ಸಮೃದ್ಧಿಯ ಜೀವನವನ್ನು ಪಡೆಯುವಾ. ನಮ್ಮ ಈರ್ವರ ಹಿರಿಯಾಸೆ ಸುಖ-ದುಃಖಗಳು ಒಂದಾಗಿರಲಿ"

ಈ ಆದರ್ಶವನ್ನು ನಮ್ಮ ಸಮಾಜ ಉಳಿಸಿಕೊಂಡು ಬಂದಿದೆಯೇ? ಈ ಪವಿತ್ರ ವಿವಾಹ ಬಂಧನ ಉಳಿದಿದೆಯೇ? ಎಂದು ನಾನು ಕೇಳಲು ಬಯಸುವೆ. ನಾನು ಡಾ. ಮುಖರ್ಜಿಯವರನ್ನು ಕೇಳಬಯಸುವುದೇನೆಂದರೆ ಇದರ ಬಗೆಗೆ ಅವರ ನಿಜವಾದ ಅಭಿಪ್ರಾಯವೇನು? ಹಾಗೂ ನಮ್ಮ ಇಂದಿನ ಹಿಂದೂ ವಿವಾಹದ ಬಗೆಗೆ ಯಾವ ಸುಧಾರಣೆಗಳೂ ಬೇಕಿಲ್ಲವೇ? ಏಕೆಂದರೆ ನಿಮಗೆಲ್ಲಾ ತಿಳಿದಂತೆ ನಮ್ಮ ಹಿಂದೂ ಸಮಾಜವು ಪುರುಷನಿಗೆ ಅನೇಕ ಬಾರಿ ವಿವಾಹಮಾಡಿಕೊಳ್ಳುವ ಅವಕಾಶ ನೀಡುತ್ತದೆ. ಹೀಗೆಂದಾಗ ಈ ಮೇಲಿನ ಪ್ರಮಾಣವಚನ ಅಥವಾ ಪ್ರತಿಜ್ಞೆ ಕೇವಲ ಸ್ತ್ರೀಯರಿಗೆ ಮಾತ್ರವೇ? ಅಂದರೆ ನಮ್ಮ ಶಾಸನಗಳು ಏಕಪಕ್ಷೀಯವಾಗಿವೆ. ಅವು ಕೇವಲ ಸ್ತ್ರೀಯರಿಗೆ ಮಾತ್ರವೆಂದಾಯಿತು. ಪುರುಷನು, ವಿದುರನಾದಾಗ, ಅವನು ತನ್ನ ಪತ್ನಿಯನ್ನು ಸಮಾಧಿಗೆ ತೆಗೆದುಕೊಂಡು ಹೋಗುವಾಗಲೇ ಬೇರೊಂದು ವಿವಾಹದ ತಯಾರಿ ನಡೆಸಬಹುದು ಅಂದರೆ ಅವನಿಗೆ ವಿವಾಹ ಅಷ್ಟು ಲಘು. ವಿಪರ್ಯಾಸವೆಂದರೆ ಪರಿಸ್ಥಿತಿ ಹೀಗಿದ್ದರೂ ನಾವು ವಿವಾಹವನ್ನು ಪವಿತ್ರವೆಂದೇ ಭಾವಿಸುತ್ತೇವೆ.

**ಉಪಾಧ್ಯಕ್ಷರು :** ವಿಧವೆಯರೂ, ವಿವಾಹವಾಗಬಹುದಲ್ಲವೇ?

---

* ೧೯೫೧ರ ಸೆಪ್ಟಂಬರ್ ೧೮ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೭೫೦-೫೪

**ಶ್ರೀಮತಿ ಜಯಶ್ರೀ :** ಈ ಬಗೆಗೆ ಸ್ತ್ರೀಯರು ಮಂದಗಾಮಿಗಳು. ವಿಧವೆಯಾದರೂ ಬೇರೊಂದು ವಿವಾಹವಾಗಲು ಅವರು ಬಯಸಲಾರರು. ಅವರು ಎರಡನೆ ವಿವಾಹ ಒಪ್ಪರು. ಆದರೆ ಹಿಂದೂ ಲಾ ಏಕಪಕ್ಷೀಯವಾದುದುರಿಂದ 'ನಾರಿ ಪ್ರತಿಷ್ಠೆ'ಯು ಕುಂದಿದೆ. ಹರಿಜನ ಪತ್ರಿಕೆಯಲ್ಲಿ ಮಸ್ರುವಾಲಾ ಅವರ ಲೇಖನವನ್ನು ಮಾನ್ಯ ಸದಸ್ಯರು ಓದಿರಬಹುದು. ಅವರು ಸ್ತ್ರೀಯರನ್ನು, ನಾವು ಎಷ್ಟು ಕೀಳಾಗಿ ಕಾಣುತ್ತಿರುವೆವು ಎಂಬುದನ್ನು ವಿವರಿಸಿದ್ದಾರೆ. ನಮಗೆಲ್ಲಾ ತಿಳಿದಂತೆ ಮಹಾಭಾರತದಲ್ಲಿ ದ್ರೌಪದಿಯ ವಸ್ತ್ರಾಪಹರಣ ಜರುಗಿದಾಗ ಅವಳು ಕಾಪಾಡುವಂತೆ ಕೃಷ್ಣನ ಮೊರೆಹೋದಳು. "ಕೌರವರ ಸಮುದ್ರದಲ್ಲಿ ಮುಳುಗಿದ ನನ್ನನ್ನು ರಕ್ಷಿಸು ಕೃಷ್ಣಾ" ಎಂದೇ ಗೋಗರೆದಳು. ನಾವು ಇಂದಿನ ಸಮಾಜದಲ್ಲಿ ಅಪಮಾನಕ್ಕೆ ಗುರಿಯಾದ ಸ್ತ್ರೀಯರಿಂದ ಈ ಆರ್ತನಾದವನ್ನು ಕೇಳುತ್ತಿರುವೆವು. ಹಿಂದೂ ಸಮಾಜ ಸನಾತನ ಎಂದೇ ಕರೆಯುತ್ತೇವೆ. ಹೀಗೆಂದರೆ ಸದಾ ನೂತನ ಅಂದರೆ ಸದಾ ಬದಲಾಯಿಸುವ ಎಂದೇ ಅರ್ಥ. ಬದಲಾವಣೆ ಬದುಕಿನ ಸಾರ. ಸಮಾಜ ಬದಲಾಗದೇ ಹೋದಲ್ಲಿ ಅದು ಸ್ಥಾಯಿಯಾಗಿ ಉಳಿಯುತ್ತದೆ. ಸಹಸ್ರಾರು ವರ್ಷಗಳಿಂದ ನಮ್ಮ ಸಮಾಜ ಬದುಕಿಬಂದಿರುವುದರ ರಹಸ್ಯವೆಂದರೆ ಅದು ಬದಲಾವಣೆಗಳನ್ನು ಅಂಗೀಕರಿಸಿದೆ.

ನಾವು ಇಂದು ವಿವಾಹ ವಿಚ್ಛೇದನೆಯನ್ನು ಪ್ರತಿಭಟಿಸುತ್ತೇವೆ ಎಂಬ ಕಲ್ಪನೆ ಈಗ ತಾನೆ ಡಾ. ದೇಶಮುಖರ ಹೇಳಿಕೆಯಂತೆ ಸ್ಪಷ್ಟವಾಗಿದೆ. ಆದರೆ ನಾವು ಪೂರ್ವಕಾಲದ ಸ್ಮೃತಿಗಳನ್ನು ಅವಲೋಕಿಸಿದಾಗ (ಪರಾಶರ ಮತ್ತು ನಾರದ) ಹಲವು ಸಂದರ್ಭಗಳಲ್ಲಿ ವಿಚ್ಛೇದನವನ್ನು ಅಂಗೀಕರಿಸಿದಂತೆ ತೋರಿಬರುತ್ತದೆ. ಹಿಂದೂ ಕೋಡಿನಲ್ಲಿ ನಾವು ವಿವಾಹದ ಪಾವಿತ್ರ್ಯ ಮತ್ತು ದಂಪತಿಗಳ ಕಲ್ಯಾಣವನ್ನು ಕಾಪಾಡುತ್ತಿದ್ದೇವೆ. ವಿಧೇಯಕದ ಪ್ರತಿಪಾದಕರು ಅದು ದುರುಪಯೋಗವಾಗದಂತೆ ಪೂರ್ವ ಉಪಾಯಗಳನ್ನು ನೀಡಿರುವುದರಿಂದ ದಾಂಪತ್ಯ ಹಕ್ಕುಗಳನ್ನು ಪುನಃಸ್ಥಾಪಿಸುವುದು ಮತ್ತು ನ್ಯಾಯ ಪ್ರತ್ಯೇಕೀಕರಣ ಭಿನ್ನವಾಗಿದೆ. ಹೀಗಾಗಿ ವಿವಾಹ ವಿಚ್ಛೇದನೆ ನಾವು ಎಣಿಸಿದಷ್ಟು ಸುಲಭವಲ್ಲ. ಬರೋಡಾದಲ್ಲಿ ವಿವಾಹ ವಿಚ್ಛೇದನೆಯ ಮಸೂದೆಯನ್ನು ೧೯೩೮ರಲ್ಲಿಯೇ ಜಾರಿಗೆ ತರಲಾಯಿತು. ಒಂದು ಪರಿಶೀಲನೆಯಂತೆ ೪೨ ಪ್ರಕರಣಗಳು ವರದಿಯಾಗಿದ್ದವು. ಇದರಲ್ಲಿ ಹನ್ನೊಂದು ಪ್ರಕರಣಗಳು ಹಿಂಸೆಯಿಂದ, ಎರಡು ಹಿಂಸೆ ಮತ್ತು ಹೊರದೂಡಲ್ಪಟ್ಟ, ಏಳು ಗಂಡಂದಿರು ಬಿಟ್ಟ ಕಾರಣದಿಂದ, ಒಂದು ಪತ್ನಿಯೇ ಗಂಡನನ್ನು ತಿರಸ್ಕರಿಸಿದ, ಆರು ಕುಡಿತದ ದುಷ್ಪರಿಣಾಮದ ಹಿಂಸೆಯಿಂದ ಮತ್ತು ಮರುಮದುವೆಯಿಂದ ಕೂಡಿದ್ದವು. ಒಂದೇ ಒಂದು ಪ್ರಕರಣ ವಿಚ್ಛೇದನೆಯ ಮಸೂದೆಯಂತೆ ನಡೆದದ್ದು.

ನಮಗೆ ತಿಳಿದಂತೆ ಕೆಳದರ್ಜೆಯ ವರ್ಗಗಳಲ್ಲಿ ವಿಚ್ಛೇದನೆ ಸಾಮಾನ್ಯ, ಹೀಗಾಗಿ ಕೇವಲ ಮೇಲುದರ್ಜೆಯ ವರ್ಗಗಳಲ್ಲಿ ಮಾತ್ರ ಈ ವಿಧೇಯಕವು ಸುಧಾರಣೆಗಳನ್ನು ಜಾರಿಗೊಳಿಸಬಹುದು. "ಧರ್ಮ ಗಂಡಾಂತರದಲ್ಲಿದೆ" ಎಂದೇ ನಿನ್ನೆ ಡಾ. ಮುಖರ್ಜಿಯವರು ಬೊಬ್ಬೆ ಹಾಕಿದರು. ಹೀಗಾಗಿ ಪತ್ನಿಯನ್ನು ಹೊಡೆಯುವುದು ಧಾರ್ಮಿಕವೇ ಎಂದು ನಾನು ಕೇಳಬಯಸುವೆ. ಈ ಕಾರಣಕ್ಕೆಂದೇ ಮದ್ರಾಸ್ ನ್ಯಾಯಾಲಯದಲ್ಲಿ ಮಹಿಳೆಯೋರ್ವಳು ತನ್ನ ಪತಿಯ ವಿರುದ್ಧ ದೂರು ಸಲ್ಲಿಸಿದ್ದಾಳೆ. ನ್ಯಾಯಮೂರ್ತಿ ಮಹಾಶಯರು ಹಿಂದೂಧರ್ಮ ಅಥವಾ ಶಾಸನದಲ್ಲಿ ಹೊಡೆಯಲು ಆಸ್ಪದ ನೀಡಿದೆ ಎಂದೇ ತೀರ್ಪು ನೀಡಿದ್ದಾರೆ. ಹೀಗಾಗಿ ಈ ವಿಧವಾದ ಹಿಂಸಾತ್ಮಕ ಸಂಪ್ರದಾಯಗಳನ್ನು ಧಾರ್ಮಿಕ ಎಂದು ಪರಿಗಣಿಸಬಹುದೇ? ಏಕೆಂದರೆ ಧರ್ಮದ ಮುಖಾಂತರ ಭಗವಂತನ ಸಾನ್ನಿಧ್ಯ ಪಡೆಯಬಹುದು.

"ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ" ಅಂದರೆ ಎಲೆ ಅರ್ಜುನಾ ಪ್ರತಿಯೊಬ್ಬರ

ಹೃದಯದಲ್ಲಿ ಭಗವಂತನಿದ್ದಾನೆ.

ಕೆಲವೇ ಕೆಲವು ಕಾನೂನುಗಳನ್ನು ಜಾರಿಗೆ ತರುವುದರಿಂದ ಧರ್ಮ ಗಂಡಾಂತರಕ್ಕೆ ಬಲಿಯಾಗದು. ನಾನು ಕೇಳಿದಂತೆ ಹಿಂದೂಧರ್ಮ ವಿಶಾಲ ಸಾಗರದಂತಿದೆ. ಅದರಲ್ಲಿ ಬದಲಾವಣೆಗಳಾಗುತ್ತಲೇ ಇವೆ; ಆದುದರಿಂದಲೇ ನಮ್ಮ ಧರ್ಮ ಹಾಗೂ ಅದರ ರಚನೆ ಸಹಸ್ರಾರು ಸಂವತ್ಸರಗಳಿಂದ ಬದುಕಿಬಂದಿದೆ. ಹಾಗೂ ಅದರ ರಚನೆಯಲ್ಲಿ ತರಬಹುದಾದ ಬದಲಾವಣೆಗಳ ಬಗೆಗೆ ನಿಮ್ಮ ಗಮನ ಸೆಳೆಯಬಯಸುವೆ; ಏಕೆಂದರೆ ಈಗ ನಾವು ಜಾರಿಗೊಳಿಸುವ ಶಾಸನ ಏಕಪಕ್ಷೀಯವಾಗಿದೆ. ನಾವು ಈ ಶಾಸನದಲ್ಲಿ ಸ್ತ್ರೀಯರಿಗೆ ಯಾವ ಸಹಾಯ ನೀಡಿಲ್ಲ. ನಮಗೆ ನಮ್ಮ ಯೋಜನಾ ಮಂಡಳಿಯೊಂದಿದೆ. ಆದರೆ ಸಾಮಾಜಿಕ ರಚನೆಯಲ್ಲಿ ಬದಲಾವಣೆ ತರದೇ ಹೋದಲ್ಲಿ ಯೋಜನಾ ಮಂಡಳಿಯ ಯೋಜನೆಗಳೆಲ್ಲಾ ನಿಷ್ಪ್ರಯೋಜಕವಾಗುವುವು. ಹೀಗಾಗಿ ನಮ್ಮ ಸಮಾಜವನ್ನು ಸುಧಾರಿಸಬಲ್ಲ ಹಲವು ವಿಷಯಗಳನ್ನು ಹೇಳಬಯಸುವೆ. ಯೋಜನಾಬದ್ಧ ಸಮಾಜದಲ್ಲಿ ಸ್ತ್ರೀಯರಿಗೆ ಸಮಾನ ಹಕ್ಕು ಅವಕಾಶ ಆಸ್ಪದಗಳಿರಬೇಕು. ಸ್ತ್ರೀಯರನ್ನು ಯಾವ ಕಾರ್ಯಕ್ಷೇತ್ರದಿಂದ ಕೈಬಿಡಬಾರದು. ಲಿಂಗಭೇದಕ್ಕೆ ಅವಕಾಶ ಇರಬಾರದು. ನಾಗರಿಕ, ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳಿಗೆ ವಿವಾಹ ಅಡಚಣೆಯಾಗಿರಬಾರದು.

ಇಂದಿನ ಸಮಾಜದಲ್ಲಿ ಸ್ತ್ರೀಯರ ಅಂತಸ್ತನ್ನು ಯಾವ ವಿಧವಾಗಿ ಕಾಪಾಡಬಹುದು ಎಂಬುದರ ಬಗೆಗೆ ಏನು ಯೋಜನೆ ಮಾಡಿದ್ದೇವೆ? ಇದಕ್ಕೆ ಇಂದಿನ ಸಮಾಜದಲ್ಲಿ ಕುಟುಂಬ ಜೀವನವಾಗಿದೆ. ಅಲ್ಲದೆ ವಿವಾಹ ಹಾಗೂ ವಾರಸುದಾರಿಕೆಯ ಶಾಸನಗಳು ಅತಿ ಮುಖ್ಯವಾಗಿ ಬೇಕಾಗಿವೆ. ನನಗೆ ಹೊಳೆದಂತೆ ನಾವು ಇಂದಿನ ಸಮಾಜದ ರಚನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ತರದೇ ನೂತನ ಸಮಾಜದ ನಿರ್ಮಾಣ ಆಗದು.

ಸ್ತ್ರೀ ಸಮ್ಮೇಳನಗಳು, ಏಕರೂಪ ನಾಗರಿಕ ಶಾಸನಕ್ಕಾಗಿ ಒತ್ತಾಯಿಸಿವೆ. ಅಲ್ಲದೆ ನಾವು ಏಕರೂಪ ಕೋಡ್‌ನ್ನೂ ಅನುಮೋದಿಸುತ್ತೇವೆ. ನಾವು ಕೇವಲ ಹಿಂದೂ ಮಹಿಳೆಯರಿಗಾಗಿ ಯಾವ ವಿಶೇಷ ಸೌಲಭ್ಯಗಳನ್ನೂ ಕೋರಿಲ್ಲ. ನಮ್ಮೆಲ್ಲರಿಗೂ ತಿಳಿದಂತೆ ನಮ್ಮ ಸ್ತ್ರೀಯರು ಹಿಂದುಳಿದಿದ್ದು, ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದಾರೆ. ಈ ವಿಷಯದಲ್ಲಿ ಪಾರ್ಸಿ, ಕ್ರಿಶ್ಚಿಯನ್, ಮುಸ್ಲಿಂ ಮಹಿಳೆಯರು ಮುಂದೆ ಇದ್ದಾರೆ. ಹೀಗಾಗಿ ನಾವು ಈ ವಿಧೇಯಕವನ್ನು ಬೆಂಬಲಿಸುತ್ತಿದ್ದೇವೆ. ನಾನು ಈಗಾಗಲೇ ಹೇಳಿದಂತೆ ನಾವು ಹಿಂದೂ ಕೋಡ್‌ನ್ನು ಆದರ್ಶಗೊಳಿಸಿದರೆ, ಇತರ ಸಮೂಹದವರೂ, ಇದನ್ನು ಅಂಗೀಕರಿಸಬಹುದು.

ಅಖಿಲ ಭಾರತ ಸ್ತ್ರೀ ಸಮ್ಮೇಳನದ, ಅನೇಕ ಸದಸ್ಯರು ಈ ವಿಧೇಯಕವನ್ನು ವಿರೋಧಿಸಿ ರಾಜೀನಾಮೆ ನೀಡಿದ್ದಾರೆಂದು ಡಾ. ದೇಶಮುಖರು ಹೇಳಿದ್ದಾರೆ. ಆದರೆ ನಾನು ಹೇಳುವುದೇನೆಂದರೆ ನಮ್ಮ ಸಮ್ಮೇಳನದವರು ಅನೇಕ ಸಂವತ್ಸರಗಳಿಂದ ಈ ಬಗೆಯ ಬದಲಾವಣೆಗೆ ಆಗ್ರಹಿಸುತ್ತಲೇ ಇದ್ದೇವೆ. ನಮ್ಮ ಒತ್ತಾಯದಿಂದಲೇ, ವಿವಾಹ, ಮಹಿಳೆಯರಿಗೆ ಆಸ್ತಿಯಲ್ಲಿ ಪಾಲು ಮುಂತಾದ ವಿಷಯಗಳು ಈ ವಿಧೇಯಕದಲ್ಲಿ ಅಡಕವಾಗಿವೆ. ಡಾ. ದೇಶಮುಖ ಅವರು ಬೊಂಬಾಯಿಯಲ್ಲಿ ವಿಧವೆಯರಿಗೆ ಆಸ್ತಿಯಲ್ಲಿ ಪಾಲುದೊರಕುವ ಮಸೂದೆಯನ್ನು ತರಬೇಕೆಂದಾಗ, ನಾವು ಅವರನ್ನು ಆತುರಪಡಬೇಡಿ; ಏಕೆಂದರೆ ಈ ಬಗೆಗೆ ಒಂದು ಸಮಗ್ರ ವಿಧೇಯಕವನ್ನು ತಂದು ಅದರಲ್ಲಿ ಹೆಣ್ಣುಮಕ್ಕಳಿಗೆ ಹಾಗೂ ದತ್ತು ತೆಗೆದುಕೊಂಡವರಿಗೂ ಭಾಗ ಸಿಗುವಂತಹ ಪ್ರಯತ್ನ ಮಾಡಲಾಗುವುದು ಎಂದಾಗ ಅವರು ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದರು. ಆದುದರಿಂದ ಈ ವಿಧೇಯಕದಲ್ಲಿಯ ಸುಧಾರಣೆಗಳ ಬಗೆಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿಲ್ಲ ಎಂಬುದು ಸರಿಯಲ್ಲ. ಏಕೆಂದರೆ ಈ ಹಿಂದೂಕೋಡ್ ಕಳೆದ ಒಂದು ದಶಕದಿಂದ ಸಾರ್ವಜನಿಕರ ಪರಿಶೀಲನೆಯಲ್ಲಿದೆ. ನನಗೆ

ತಿಳಿದಂತೆ ಈ ವಿಧೇಯಕದ ಬಗೆಗೆ ಸಾಕಷ್ಟು ಸಾರ್ವಜನಿಕ ಅಭಿಪ್ರಾಯವನ್ನು ನಿರೂಪಿಸಲಾಗಿದೆ. ಕೇವಲ ಕೆಲವೇ ಮಹಿಳೆಯರು ಈ ವಿಧೇಯಕದ ಪರವಾಗಿದ್ದಾರೆ ಎಂದು ಹೇಳುವುದು ತಪ್ಪು. ಭಾರತದಾದ್ಯಂತ ಅನೇಕ ಸಾರ್ವಜನಿಕ ಸಭೆಗಳಲ್ಲಿ ಈ ವಿಧೇಯಕಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಆದುದರಿಂದ ನಾನು ಮಹಿಳೆಯರ ಪರವಾಗಿ, ಈ ವಿಧೇಯಕಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುವೆ.

***ಉತ್ಪಾದನೆ, ಹಂಚಿಕೆ, ಕಾಮಗಾರಿಕೆ ಮಂತ್ರಿ (ಶ್ರೀ ಗಾಡ್ಗೀಳ್) :** ನಾನು ನನ್ನ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿ ಅವರ ಹೇಳಿಕೆಯನ್ನು ಜಾಗರೂಕತೆಯಿಂದ ಆಲಿಸಿರುವೆ. ಅದು ಸಂಪೂರ್ಣ ಸಹಕಾರಿ ಅಲ್ಲವೆಂದು ಹೇಳಲಾಗದು. ಅವರು ಹೇಳಿದ ಎರಡು ವಿಷಯಗಳನ್ನು ನನ್ನನ್ನು ಆಕರ್ಷಿಸಿವೆ. ಒಂದು ಸಾಮಾಜಿಕ ಸುಧಾರಣೆಗಳ ಬಗೆಗೆ ಸಾಧ್ಯವಾದಷ್ಟು ಅಧಿಕ ಬಹುಮತವನ್ನು ಸಂಗ್ರಹಿಸುವುದು. ಎರಡನೆಯದಾಗಿ, ಈ ವಿಷಯ ರಾಜಕಾರಣದ್ದಾಗಿರದೆ ಸಾಮಾಜಿಕವಾದ್ದರಿಂದ, ಪ್ರತಿಯೊಬ್ಬ ನಾಗರಿಕನು ಪಕ್ಷಬೇಧವಿಲ್ಲದೆ ಇದನ್ನು ಪರಾಂಬರಿಸಬೇಕು. ಈ ಎರಡು ಕಾರಣಗಳಿಂದಾಗಿ ನಾವು ಕೊಟ್ಟು – ಕೊಳ್ಳುವ ಮನೋಭಾವನೆಯಿಂದ ಈ ಸದನದಲ್ಲಿ ಹೆಮ್ಮೆಯಿಂದ ಯಾವುದಾದರೊಂದು ನಿರ್ಣಯಕ್ಕೆ ಬರಬಹುದೆಂದೇ ಹಾರೈಸುವೆ.

ಡಾ. ಶ್ಯಾಮಪ್ರಸಾದ ಮುಖರ್ಜಿ ಅವರು ಹಿಂದೂ ಸಂಸ್ಕೃತಿಯನ್ನು ಹೊಗಳಿದ್ದಾರೆ. ಅದಕ್ಕೆ ನಾನೂ ಸಮ್ಮತಿಸುವೆ. ಏಕೆಂದರೆ ಹಿಂದೂ ಸಂಸ್ಕೃತಿಯು ಅಗಾಧ ತಾಳ್ಮೆ ಹಾಗೂ ಹೊಂದಾಣಿಕೆಯ ಮನೋಭೂಮಿಕೆಯನ್ನು ಹೊಂದಿದೆ. ಅದು ನೂತನ ವಿಧಾನಗಳನ್ನು ತೆರೆದ ಮನಸ್ಸಿನಿಂದ ಬರಮಾಡಿಕೊಳ್ಳುತ್ತದೆ. ಇದು ನಾವೆಲ್ಲರೂ ಹೆಮ್ಮೆಪಡಲೇಬೇಕಾದ ಸಂಗತಿ. ಇಂದು ಸಾರ್ವಜನಿಕ ರಂಗದಲ್ಲಿ ನೀತಿ ಮೌಲ್ಯಗಳನ್ನು ಹೇಗೆ ಕಾಪಾಡಬೇಕು ಎಂಬುದನ್ನು ತಿಳಿಸಿಕೊಡಬೇಕಾದ ನಾಯಕರು ಬೇಕಾಗಿದೆ. ಹಾಗೂ ನಾವು ಯಾವ ಬಗೆಯ ಸುಧಾರಣೆಗಳನ್ನು ಅಳವಡಿಸಬೇಕೆಂದು ಚಿಂತನೆ ಮಾಡುವವರೂ ಬೇಕಾಗಿದ್ದಾರೆ. ಪುರಾತನ ವಿಧಾನಗಳು, ನೂತನ ಪರಿಸರಕ್ಕೆ ಸರಿಯೊಂದದೇ ಇರುವಾಗ, ನೂತನವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ನಮ್ಮ ಇಂದಿನ ವ್ಯವಸ್ಥೆಯಲ್ಲಿ ಹಲವಾರು ಅನಿಷ್ಟಗಳಿವೆ ಎಂಬುದರ ಬಗೆಗೆ ಸಂದೇಹವೇ ಇಲ್ಲ. ನಾನು ಓರ್ವ ಉತ್ತಮ ಹಿಂದೂ ಆಗಿರುವುದರಿಂದ ಅದರ ಹೊಗಳಿಕೆಯಲ್ಲಿ ಹಿಂದೆ ಬೀಳಲಾರೆ. ಆದರೆ ಅದರಲ್ಲಿಯ ನ್ಯೂನತೆಗಳ ಬಗೆಗೆ ಅಂಧನಾಗಲಾರೆ. ನಾವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆಧಾರದ ಮೇಲೆ ನೂತನ ಸಂವಿಧಾನವನ್ನು ರಚಿಸಿರುವೆವು; ಅಲ್ಲದೆ ಹೊಣೆಗಾರಿಕೆಯನ್ನೂ ಹೊತ್ತಿದ್ದೇವೆ. ನಾವು ನೂತನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಗೆ ಸ್ಥಾನ ನೀಡಿದ್ದೇವೆ. ಈ ಗುರಿಯನ್ನು ಸಾಧಿಸಬೇಕೆಂದರೆ ಪುರಾತನ ವಿಧಾನಗಳಿಂದ ಸಾಧ್ಯವಾಗುವುದಿಲ್ಲ. ನಾವು ವಯಸ್ಕರ ಮತದಾನ ಪದ್ಧತಿಯಿಂದ,

ರಾಜಕೀಯ ಸಮಾನತೆಯನ್ನು ನೀಡಿದ್ದೇವೆ. ಆರ್ಥಿಕ ಸಮಾನತೆಯ ದ್ವಾರ, ಸಾಮಾಜಿಕ ನ್ಯಾಯಮಾರ್ಗದಿಂದ ದೀನದಲಿತರನ್ನು ಹಾಗೂ ಅವರ ಜೀವನ ಮಟ್ಟವನ್ನು ಸುಧಾರಿಸಬೇಕೆಂದಿದ್ದೇವೆ. ರಾಷ್ಟ್ರದ ಉತ್ಪಾದನೆ ಮತ್ತು ಹಂಚಿಕೆಯ ವ್ಯವಸ್ಥೆಯನ್ನು ರಾಷ್ಟ್ರೀಕರಣಕ್ಕೆ ಗುರಿಪಡಿಸಿದರೆ ಮಾತ್ರ ಇದು ಸಾಧ್ಯ. ಲಾಭಗಳಿಕೆಯನ್ನು ನಿಯಂತ್ರಿಸಿ ಉತ್ತಮ ಮಟ್ಟದ ಕೂಲಿಯನ್ನು ನೀಡಿದರೆ ಮಾತ್ರ ಈ ಗುರಿಯನ್ನು ಸಾಧಿಸಬಹುದು. ನಾವು ವಿಧೇಯಕಗಳ ಮೂಲಕ ಆರ್ಥಿಕ, ರಾಜಕೀಯ, ಸಾಮಾಜಿಕ ನ್ಯಾಯಗಳನ್ನು ಸಾಧಿಸಿರುವಾಗ ಅದೇ ವಿಧೇಯಕ ರಚನೆಯ ದ್ವಾರ ಸಾಮಾಜಿಕ ಸಮಾನತೆಯನ್ನು ಏಕೆ ವಿಧೇಯಕದ

---

* ೧೯೫೧ರ ಸೆಪ್ಟಂಬರ್ ೧೭ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೭೫೪–೬೮

ಮೂಲಕ ಸಾಧಿಸಬಾರದು?

ನನ್ನ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹಿಂದೂ ಲಾ ದ ಕ್ರೋಡೀಕರಣದಿಂದ, ಶತಮಾನಗಳಿಂದ ಜಾರಿಯಲ್ಲಿರುವ ಹಿಂದೂಧರ್ಮದ ಮೂಲಗಳನ್ನು ಮುಚ್ಚಿಹಾಕಿದಂತಾಗುತ್ತದೆ ಎಂದೇ ಹೇಳಿದರು. ನಾನು ಒಪ್ಪುವೆ, ಹಿಂದೂ ಲಾ ದ ಮೂಲಗಳೆಂದರೆ ಸ್ಮೃತಿ. ಸ್ಮೃತಿ ಮತ್ತು ಸದಾಚಾರಗಳು ಹಾಗೂ ಜನರ ಆತ್ಮಸಾಕ್ಷಿ ಇದೆಲ್ಲವೂ ನಿಜ. ಆದರೆ ಈ ಎಲ್ಲ ಬದಲಾದ ರಾಜಕೀಯ ವ್ಯವಸ್ಥೆಯಲ್ಲಿ ಎಷ್ಟು ಸಮಂಜಸ? ಪಾಶ್ಚಿಮಾತ್ಯ ಸಮಾಜಗಳಲ್ಲಿ ಕೂಡಾ ಸುಧಾರಣೆಗಳು ಶಾಸನರಚನೆಯಿಂದ ಮಾತ್ರ ಸಾಧ್ಯ. ಅಲ್ಲದೆ, ಇದು ಮೂಲಭೂತವಾದ ಶಾಸನಗಳಿಗೆ, ಸಂಪ್ರದಾಯಗಳಿಗೆ ಕೇವಲ ತಿದ್ದುಪಡಿಯನ್ನು ತರುವ ವಿಧಾನವಾಗಿದೆಯೇ ಹೊರತು ಆಮೂಲಾಗ್ರ ಬದಲಾವಣೆಯಲ್ಲ. ಕಾನೂನು ಸಾಮಾನ್ಯವಾಗಿ ಸಾರ್ವಜನಿಕ ನೀತಿಯನ್ನೇ ಅವಲಂಬಿಸಿರುತ್ತದೆ. ಹೀಗಾಗಿ ಸುಧಾರಣೆಗೆ ಕಾಲ ಪಕ್ವವಾದಾಗ ಮಾತ್ರ ಸಾಧ್ಯ. ಏಕೆಂದರೆ ಅದು ಸಾರ್ವಜನಿಕ ನೀತಿಯನ್ನೇ ಅವಲಂಬಿಸಿದೆ. ಇದು ಜೀವನದ ವಿಧಾನ. ಕಾಲಕ್ಕೆ ಮೀರಿದ ಸುಧಾರಣೆಗಳು ಬದುಕಿ ಬಾಳಲಾರವು. ಹೀಗಾಗಿ ಶಾಸನದ ಪಾತ್ರ ಎರಡನೆಯ ಹಂತದ್ದು. ಆದುದರಿಂದ ಈ ಎರಡರ ನಡುವೆ ವಿಶೇಷ ಅಂತರವಿರಬಾರದು ಹಾಗಿದ್ದಲ್ಲಿ ಅದು ಸಮಾಜಕ್ಕೆ ಸುಖ–ಶಾಂತಿ ನೀಡಲಾರದ ಸುಧಾರಣೆಯಾಗುತ್ತದೆ. ಇದರಿಂದ ಪ್ರತಿಯೊಬ್ಬ ನಾಗರಿಕನು ಈ ವಿಧೇಯಕದ ಬಗೆಗೆ ಚಿಂತನೆ ಮಾಡಲೇಬೇಕು.

ಮೂರನೆಯದಾಗಿ, ಸಂಪ್ರದಾಯ, ಆಧುನಿಕ ಪರಿಸ್ಥಿತಿಗೆ ಅವು ಬೇಕಾಗಿಲ್ಲ; ಏಕೆಂದರೆ ರಾಜ್ಯದ ಕಾನೂನಿನ ಸ್ಥಿತಿಗತಿ ಸಮರ್ಪಕವಿಲ್ಲದೆ ಹೋದ ಸಮಯದಲ್ಲಿ ಅವುಗಳ ಪಾತ್ರಕ್ಕೆ ಆಸ್ಪದವಿತ್ತು; ಈಗ ಆ ಪರಿಸ್ಥಿತಿ ಇಲ್ಲ. ಆದುದರಿಂದ ಕಾನೂನಿನ ಮೇಲೆ ಸಂಪ್ರದಾಯಗಳ ಭಾರ ಹೇರುವುದು ಅಸಂಗತ. ಅಲ್ಲದೆ ಶಾಸನಗಳನ್ನು ರಚಿಸುವಾಗ ಶಾಸಕರು ಸಂಪ್ರದಾಯಗಳನ್ನು ಗಮನಿಸಿಯೇ ಶಾಸನ ರಚಿಸುವರು. ಅದನ್ನೇ ಗೌರವವಾಗಿ ಶಾಸನಾಡಳಿತವೆಂದೇ ಕರೆಯಲಾಗಿದೆ.

ಪರಿಸ್ಥಿತಿ ಹೀಗಿರುವಾಗ, ನನ್ನ ಮಿತ್ರ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ನಾವು ನಮ್ಮ ಕ್ರಾಂತಿಕಾರಿ ಧೋರಣೆಯಿಂದ ಹಿಂದೂಧರ್ಮದ ಮೂಲಗಳನ್ನೇ ಮುಚ್ಚುತ್ತೇವೆ ಎಂದು ಹೇಳುವುದು ನನಗೆ ಅರ್ಥವಾಗುತ್ತಿಲ್ಲ. ಆದರೆ ಅದು ಹಾಗಿಲ್ಲ. ನಮ್ಮ ಪರಂಪರೆ ಎಂಬುದನ್ನು ವಿವಿಧ ಅಂಗಗಳಲ್ಲಿ ಮುಂದುವರಿಸಿಕೊಂಡು ಹೋಗುವುದರ ಬದಲಾಗಿ ಹಿಂದೂ ಕೋಡ್‌ನಲ್ಲಿ ಕ್ರೋಡೀಕರಿಸಿದ್ದೇವೆ. ಉದಾಹರಣೆಗೆ ನಮ್ಮ ಉಳಿತಾಯವನ್ನು ವಿವಿಧ ಬ್ಯಾಂಕುಗಳಲ್ಲಿಡದೆ ಭಾರತದ ರಿಸರ್ವ್‌ಬ್ಯಾಂಕಿನಲ್ಲಿಟ್ಟಂತೆ ಈ ಹಿಂದೂ ಕೋಡ್ ಭಾರತೀಯ ರಿಸರ್ವ್‌ಬ್ಯಾಂಕಿನಂತೆ ಭದ್ರವಾಗಿದೆ. ನಾವು ಮಾಡಿರುವುದು ಇದನ್ನೇ. ಈಗ ಸದನದ ಮುಂದೆ ಇರುವ ಹಿಂದೂ ಕೋಡ್‌ನಲ್ಲಿ ನಾವು ಜಾರಿಯಲಿದ್ದ ಸುಮಾರು ಶೇಕಡಾ ೮೦ ಕಾನೂನುಗಳನ್ನು ಸಮನ್ವಯಗೊಳಿಸಿದ್ದೇವೆ. ಇದು ಪ್ರಗತಿಯ ಸಂಕೇತವೆಂದೇ ಹೇಳಬಹುದು. ಒಂದು ರೀತಿಯಲ್ಲಿ ಈ ವಿಧೇಯಕವು ಸಾರ್ವಜನಿಕ ಅಭಿಪ್ರಾಯಕ್ಕೂ ಮುಂದುವರಿದು ಸಾಗಿದೆ ಎಂದರೆ ತಪ್ಪೇನಿಲ್ಲ. ಆದರೆ ನಾನು ಸದನದ ಸದಸ್ಯರನ್ನು ಒಂದು ಪ್ರಶ್ನೆ ಕೇಳುವೆ. ನಾವು ನಮ್ಮ ಸಮಾಜದ ಇಂದಿನದ್ದಲ್ಲದೆ, ಮುಂದಿನ ಬಗೆಗೆ ಆಲೋಚಿಸುವುದು ಅಪರಾಧವೇ? ಆರ್ಥಿಕರಂಗದಲ್ಲಿ ಯೋಜನೆ ಉತ್ತಮವಾದಲ್ಲಿ ಸಾಮಾಜಿಕ ಕ್ಷೇತ್ರದಲ್ಲೇಕೆ ಅದನ್ನೇ ಅನುಕರಣೆ ಮಾಡಬಾರದು? ನಾವು ನಮ್ಮ ಸಮಾಜ ಮಾದರಿಯಾಗಬೇಕೆಂದು ಹಾರೈಸಿ ಅದರ ಬಗ್ಗೆ ಯೋಜನೆ ಕೈಕೊಳ್ಳುವುದರಲ್ಲಿ ಹಾಗೂ ಅದನ್ನೇ ನಮ್ಮ ಸಂವಿಧಾನದಲ್ಲಿ ಅಳವಡಿಸಿರುವಾಗ, ನಮ್ಮ ಸಮಾಜವನ್ನು ಆ ಗುರಿಯತ್ತ ಕೊಂಡೊಯ್ಯಬಾರದೇಕೆ? ನಾವು ಕೇವಲ ಮುಕ್ತ ಮಾರುಕಟ್ಟೆಯ ವಿಷಯಕ್ಕೆ ಸೀಮಿತರಾಗದೇ ಮುಂದೆ ಸಾಗುವುದರಲ್ಲಿ ಯಾವ ಹಾನಿಯೂ ಇಲ್ಲ;

ಅದನ್ನೇ ನಾವು ಶಾಸನ ದ್ವಾರ, ಕ್ರಮಬದ್ಧವಾಗಿ ಸಮುದಾಯ ಜೀವನದಲ್ಲಿ ಅಳವಡಿಸಿದರೆ ಅಪರಾಧವೇ?

**ಶ್ರೀ ಆರ್.ಕೆ. ಚೌಧರಿ (ಅಸ್ಸಾಂ) :** ಪ್ರಶ್ನಾಸ್ಪದವಾಗಿದೆ.

**ಶ್ರೀ ಗಾಡ್ಗೀಳ್ :** ಕಾರ್ಯವನ್ನು ಅಧಿಕಾರೇತರ ವರ್ಗಕ್ಕೆ ಬಿಟ್ಟುಕೊಟ್ಟರೆ ನನ್ನಂತೆ ನಾವು ಹಾರೈಸಿದ ಕಾರ್ಯವು ಬಹುಶಃ ಎರಡು ತಲೆಮಾರಿನ ನಂತರ ಜಾರಿಯಲ್ಲಿ ಬರಬಹುದು. ಆದರೆ ಆ ಅವಧಿಯಲ್ಲಿ ಸಾರ್ವಜನಿಕ ಅಭಿಪ್ರಾಯ ಮತ್ತಷ್ಟು ಮುಂದೆ ಸಾಗಿರುತ್ತದೆ. ಸ್ಪಷ್ಟಗೊಳಿಸಬೇಕಾದ ವಿಷಯ ಎಂದರೆ ಬೆಳೆಯುವ ಸಾರ್ವಜನಿಕ ಅಭಿಪ್ರಾಯ ಹಾಗೂ ಶಾಸನರಚನೆಯ ಬಗೆಗೆ ನಿಗದಿತವಾದ ಸಮಯಕ್ಕೆ ಆಸ್ಪದವಿರಲಾರದು. ಆದುದರಿಂದ ಪ್ರಗತಿ ಎಂದೇನಾದರೂ ಈ ವಿಧೇಯಕದಲ್ಲಿದ್ದರೆ ಅದು ಸಮರ್ಥನೀಯ ಹಾಗೂ ಜಾಣ್ಮೆಯಿಂದಲೇ ಕೂಡಿದೆ ಎಂದು ನನ್ನ ಅಭಿಪ್ರಾಯ.

ಈ ವಿಧೇಯಕಕ್ಕೆ ವಿರೋಧವನ್ನು ಅನೇಕ ದೃಷ್ಟಿಗಳಿಂದ ಸೂಚಿಸಲಾಗಿದೆ. ಅನೇಕರು, ಶಾಸಕಾಂಗದ ಹಸ್ತಕ್ಷೇಪವನ್ನು ಸಹಿಸರು. ಇನ್ನೂ ಹಲವರ ಅಭಿಪ್ರಾಯವೆಂದರೆ ನಾಡಿನ ಸಂಸತ್ತು ಆದರೆ ಈ ಸಂಸತ್ತಿಗೆ ಹಸ್ತಕ್ಷೇಪಮಾಡುವ ಅಧಿಕಾರವೇ ಇಲ್ಲ ಎಂದಿದ್ದಾರೆ. ಈ ಸಂಸತ್ತು ವಿಸರ್ಜನೆ ಹೊಂದಿ, ನೂತನ ಸಂಸತ್ತು ಜಾರಿಗೆ ಬಂದಾಗ ಮಾತ್ರ ಈ ಬಗೆಗೆ ನಿರ್ಧರಿಸಬಹುದೆಂದು ಹೇಳುತ್ತಾರೆ. ಮೊದಲನೆ ವಿಚಾರವಾದಿಗಳಂತೆ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹೇಳುವಂತೆ ಕಾಲಾವಧಿ ಮೀರಿಹೋಗಿದೆ. ಆದರೆ ಕಳೆದ ೧೫೦ ವರ್ಷಗಳಿಂದ ಈ ದಿಶೆಯಲ್ಲಿ ಒಂದಲ್ಲ ಒಂದು ಶಾಸನವನ್ನು ಜಾರಿಗೊಳಿಸುತ್ತಲೇ ಬಂದಿರುವ ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗಗಳಿಂದ ರಚಿಸಿದ ಶಾಸನಗಳು ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿ ಹೋಗಿವೆ. ಅದರಂತೆಯೇ ಈ ವಿಧೇಯಕವೂ ಮಂಜೂರಾದ ನಂತರ ಅಂಗೀಕೃತವಾಗುವುದರಲ್ಲಿ ಸಂದೇಹವಿಲ್ಲ. ಆದರೆ ನನ್ನ ಈ ಅಭಿಪ್ರಾಯವನ್ನು ಹಾಗೂ ಸರ್ಕಾರವನ್ನು ಜಾತ್ಯತೀತರು ಎಂದೇ ನಿಂದಿಸುತ್ತಿದ್ದಾರೆ. ನನಗೆ ಹೊಳೆಯುವಂತೆ ಸಾಮಾಜಿಕ ಸುಧಾರಣೆಗಳ ಬಗ್ಗೆ ಅವರ ಅಭಿಪ್ರಾಯ; ಅವರು ಬಂಗಾಲಿಗಳಾಗಿರುವುದರಿಂದ ಅವರ ಪ್ರಾಂತದಲ್ಲಿಯೇ ಮೊಟ್ಟಮೊದಲಿಗೆ, ರಾಜಾರಾಮ ಮೋಹನರಾಯ, ಸಾಮಾಜಿಕ ಸುಧಾರಣೆ ಆರಂಭಿಸಿದರು. ಅದನ್ನೇ ಕೇಶವಚಂದ್ರ ಸೇನ್, ಟಾಗೂರ್ ಮುಂತಾದವರು ಮುಂದುವರಿಸಿಕೊಂಡು ಬಂದಿರುವಾಗ, ಅದನ್ನೇ ಹಿಂದೂ ಕೋಡ್‌ನಲ್ಲಿ ಅಳವಡಿಸಿದಾಗ ಅವರೇಕೆ ವಿರೋಧಿಸುತ್ತಾರೆಯೋ ಅರಿಯೆ. ಬಹುಶಃ ಅವರು ಮುಂಬರಲಿರುವ "ಚುನಾವಣಾ ಜ್ವರ"ದಿಂದ ನರಳುತ್ತಿರಬಹುದು. ಇದಕ್ಕೆ ಚುನಾವಣೆಯೇ ಪರಿಹಾರ ಸೂಚಿಸಬಹುದು. ಅವರೇ ಹೇಳಿದಂತೆ ಈ ವಿಷಯಕ್ಕೆ ಪರವಾಗಿಯೋ ಅಥವಾ ವಿರೋಧವಾಗಿಯೋ ಅಭಿಪ್ರಾಯ ಹೊರಬೀಳುವುದು.

**ಪಂಡಿತ ಮಾಳವೀಯ (ಉ.ಪ್ರ) :** ಈ ಹಿಂದೂ ಕೋಡ್ ವಿಧೇಯಕವನ್ನು ಸರಕಾರವು ಚುನಾವಣೆಯ ಘೋಷಣೆಯನ್ನಾಗಿ ಮಾಡುವುದೇ?

**ಶ್ರೀ ಗಾಡ್ಗೀಳ್ :** ಸರಕಾರದ ಮರ್ಜಿ ಏನೇ ಇರಲಿ ಅದು ಈಗಾಗಲೇ ಚುನಾವಣೆಯ ವಿಷಯವಾಗಿದೆ. ಆದರೆ ಸಾರ್ವಜನಿಕ ಅಭಿಪ್ರಾಯದ ಬಗೆಗೆ ಹೇಳಲಾಗದು. ಅದು ಯಾರನ್ನು ಬೆಂಬಲಿಸುವುದೋ! ನಾನು ವಿನಮ್ರತೆಯಿಂದ ಈ ಸದನದ ಸದಸ್ಯರನ್ನು ಒಂದು ಪ್ರಶ್ನೆ ಕೇಳಬಯಸುವೆ. ಅದೇನೆಂದರೆ ಸದನದ ವಿಶ್ವಾಸವನ್ನು ಪಡೆದಿರುವ ಈ ಸರಕಾರಕ್ಕೆ ಸುಧಾರಣೆಯ ಬಗೆಗೆ ಮಸೂದೆಯನ್ನು ಮಂಡಿಸುವ ಅಧಿಕಾರವಿಲ್ಲವೇ? ಸಂವಿಧಾನದಲ್ಲಿಯ ನಿಬಂಧನೆಗಳಂತೆ ಅಧಿಕಾರವಲ್ಲ, ಅದು ಸರಕಾರದ ಕರ್ತವ್ಯವೇ ಆಗಿದೆ; ಏಕೆಂದರೆ ನೀವು ನಮಗೆ ಸಂವಿಧಾನದಲ್ಲಿ ಹಲವಾರು ಆದೇಶಗಳನ್ನೇ ನೀಡಿರುವಿರಿ. ಈ ಕರ್ತವ್ಯಗಳನ್ನು ಸರಕಾರ ಪಾಲಿಸದೇ ಹೋದರೆ ಅದು ಮತದಾರರಿಗೆ ದ್ರೋಹ ಬಗೆದಂತಾಗುತ್ತದೆ. ಮತದಾರರು ನಮಗೆ

ಛೀಮಾರಿ ಹಾಕುವರು. ಅರ್ಧಕ್ಕಿಂತ ಹೆಚ್ಚು ಸ್ತ್ರೀಯರನ್ನು ಹೊಂದಿರುವ ಈ ದೇಶದ ಮಹಿಳೆಯರು ಸಾಮಾಜಿಕ ಸುಧಾರಣೆಗಳ ಬಗೆಗೆ ಏನು ಮಾಡಿದಿರಿ ಎಂದು ನಮ್ಮನ್ನು ಪ್ರಶ್ನಿಸಬಹುದು (ಓರ್ವ ಸದಸ್ಯನ ಪ್ರಶ್ನೆ) ನನಗೆ ಖಚಿತವಾಗಿ ತಿಳಿದಂತೆ ಈ ಬಗೆಗೆ ಜನಾದೇಶವನ್ನು ಬಯಸಿದ ಸದಸ್ಯ ತನ್ನ ಮನೆಯಲ್ಲಿಯೇ ಪರಾಭವಗೊಳ್ಳುತ್ತಾನೆ.

**ಪಂಡಿತ ಮೈತ್ರ :** (ಪ.ಬಂ) ಸದಸ್ಯರು ಅರ್ಧ ಜನಸಂಖ್ಯೆಯ ಅರ್ಧ ಡಜನ್ ಮಹಿಳೆಯರನ್ನು ಕುರಿತು ಮಾತನಾಡುತ್ತಿರುವರೋ?

**ಶ್ರೀ ಗಾಡ್ಗೀಳ್ :** ನಾನು, ನನ್ನ ಮಿತ್ರರಿಗಿಂತ, ಮಿಗಿಲಾಗಿ ನನ್ನ ಸಹೋದರಿಯರ ಹಿತಾಸಕ್ತಿಯನ್ನು ಅರ್ಥಮಾಡಿಕೊಂಡಿರುವೆ. ಆದಾಗ್ಯೂ ನನ್ನ ಮಿತ್ರರ ಹೇಳಿಕೆಯಂತೆ ಕೆಲವೇ ತಿಂಗಳ ನಂತರ ಅದು ಬಹಿರಂಗಗೊಳ್ಳುವುದು. ಶಾಸಕಾಂಗವು ಹಿಂದೂ ಜೀವನಕ್ಕೆ ಸಂಬಂಧಿಸಿದಂತೆ, ವಿವಾಹ, ವಿಚ್ಛೇದನೆ ಮುಂತಾದದ್ದನ್ನು ಕುರಿತು ಶಾಸನಗಳನ್ನು ರಚಿಸಿದೆ. ಹೀಗಾಗಿ ನಾವು ಈಗ ಈ ಸದನಕ್ಕೆ ಈ ಬಗೆಯ ಹಕ್ಕು ಇಲ್ಲ ಎಂದು ಹೇಳುವುದು ಸರಿಯಲ್ಲ. ಈ ಸದನಕ್ಕೆ ಹಕ್ಕಿಲ್ಲ ಎಂಬುದರ ಬಗೆಗೆ ನಾನು ಆಗಲೇ ಹೇಳಿರುವೆ. ಈ ಸದನವು ದೇಶಕ್ಕೆ ಸಂವಿಧಾನವನ್ನೇ ನೀಡುವ ಹಕ್ಕನ್ನು ಹೊಂದಿರುವಾಗ, ಸುಧಾರಣೆಯ ಶಾಸನಗಳನ್ನು ಮಾಡಲಾರದೇ? ಏಕೆಂದರೆ ಅದೊಂದು ಸಾಮಾನ್ಯ ಶಾಸನ. ಅದನ್ನು ಅಂಗೀಕರಿಸುವ ಹಕ್ಕು ಈ ಸದನ ಹೊಂದಿದೆ.

**ಪಂಡಿತ ಮೈತ್ರ :** ಕೇವಲ ಸಂವಿಧಾನವನ್ನು ರಚಿಸಲು ಮಾತ್ರ ಈ ಸದನದ ಅಧಿಕಾರ.

**ಶ್ರೀ ಗಾಡ್ಗೀಳ್ :** ಈ ಸದನವೇ ಸಂವಿಧಾನವನ್ನು ರಚಿಸಿದ್ದು ಅದರಲ್ಲಿ ತಾತ್ಕಾಲಿಕ ಅಂಶ ಅಧಿಕಾರಗಳನ್ನೂ ಅಂಗೀಕರಿಸಿದೆ. ಆಗ ನನ್ನ ಮಾನ್ಯ ಮಿತ್ರರಾದ ಮೈತ್ರರು ಯಾವ ತಕರಾರನ್ನು ಮಂಡಿಸದೆ ಹೋದವರು ಈಗ ಈ ಸದನಕ್ಕೆ ದೇಶವನ್ನು ಆಳುವ ಅಧಿಕಾರವಿಲ್ಲ. ಆ ಅಧಿಕಾರ ನೂತನವಾಗಿ ಚುನಾವಣೆಗೊಂಡ ಸದನಕ್ಕೆ ಸಂಬಂಧಿಸಿದೆ ಎಂದು ಹೇಳುತ್ತಿದ್ದಾರೆ.

**ಪಂಡಿತ ಮೈತ್ರ :** ಅದು ಯಾರಿಗೂ ಸಂಬಂಧಿಸದ ಸಂಗತಿ.

**ಶ್ರೀ ಗಾಡ್ಗೀಳ್ :** ನನಗೆ ಹರ್ಷವಾಗಿದೆ. ಹಾಗಿದ್ದಲ್ಲಿ ಇಲ್ಲಿ ಏನು ಮಾಡಬೇಕೆಂಬ ಪ್ರಯತ್ನ ನಡೆಸಿರುವಿರಿ? ನಾನು ಈಗಾಗಲೇ ಹೇಳಿದಂತೆ ಈ ವಿಧೇಯಕದಲ್ಲಿ ಶೇಕಡಾ ೮೦ ಈಗಾಗಲೇ ಕೇಂದ್ರ ಮತ್ತು ಪ್ರಾಂತಶಾಸನ ಸಭೆಗಳಿಂದ ಅಂಗೀಕರಿಸಿದ ಮಸೂದೆಗಳನ್ನೇ ಅಳವಡಿಸಿದೆ. ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಧಾರ್ಮಿಕ ವಿವಾಹದ ಬಗ್ಗೆ ಧಾರಾಳವಾಗಿ ಮಾತನಾಡಿದ್ದಾರೆ. ನನಗೆ ತಿಳಿದಂತೆ ಈ ಹಿಂದೂ ಕೋಡ್ ಅದಕ್ಕೆ ಅಡ್ಡಿಯಾಗಲಾರದು. ದುಷ್ಯಂತನಿಂದ, ಪೃಥ್ವೀರಾಜ ಸಂಯುಕ್ತ ಮಾದರಿಯ ಎಲ್ಲಾ ಬಗೆಯ ವಿವಾಹಗಳಿಗೂ ಅಂದರೆ ಗಾಂಧರ್ವದಿಂದ ರಾಕ್ಷಸೀಯ ವಿವಾಹ ಅಂದರೆ ಎಂಟು ಬಗೆಯ ವಿವಾಹಗಳನ್ನು ಸಾರ್ವಜನಿಕರು ಆಚರಿಸಬಹುದು.ಈ ವಿಧೇಯಕವು ಯಾರ ಪ್ರೇಮಕ್ಕೂ ಅಡ್ಡಿಮಾಡಲಾರದು. ಪಾಲಕರ ಅಪ್ಪಣೆ ಪಡೆಯದೆ, ಕನ್ಯೆಯನ್ನು ಪರಾರಿ ಮಾಡಿಕೊಂಡು ಹೋಗಲೂ ಈ ವಿಧೇಯಕ ಅಡ್ಡಿಮಾಡದು. ಹಿಂದೂ ಧಾರ್ಮಿಕ ವಿವಾಹಕ್ಕೂ ಅಡ್ಡಿ ಇಲ್ಲ. ಹೀಗಿರುವಾಗ ಯಾವ ಕೊರತೆ? ಅದು ಕೇವಲ "ಪವಿತ್ರ" ಪದಕ್ಕಾಗಿಯೇ? ಹಾಗಿದ್ದಲ್ಲಿ ಅದನ್ನೂ 'ಧಾರ್ಮಿಕ' ಎಂದು ಪರಿವರ್ತಿಸಿದೆ, ಆ ಬದಲಾವಣೆ ನಮ್ಮೆಲ್ಲರ ಅಪೇಕ್ಷೆಯಿಂದಲೇ ಮಾಡಿದೆ. ಅದು ಯಾವ ವಿಶಿಷ್ಟ ಅರ್ಥವನ್ನು ನೀಡದೇ ಇರುವುದರಿಂದಲೇ 'ಧಾರ್ಮಿಕ' ಪದವನ್ನು ಪ್ರಯೋಗಿಸಲಾಗಿದೆ.

**ಓರ್ವ ಸದಸ್ಯ :** ಅದೊಂದು ತಪ್ಪು ಪದಪ್ರಯೋಗ.

**ಶ್ರೀ ಗಾಡ್ಗೀಳ್ :** ನನ್ನ ಮಾನ್ಯ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹಿಂದೂ ವಿವಾಹದ ಬಗೆಗೆ ಉದಾರವಾಗಿ ಮಾತನಾಡಿದ್ದಾರೆ. ಆ ಉತ್ತಮಭಾವನೆಗಳನ್ನು ನಾನೂ ಗೌರವಿಸುವೆ. ಏಕೆಂದರೆ ವಿವಾಹ ಕೇವಲ ದೇಹಗಳ ಬಂಧನವಲ್ಲ. ಅದೊಂದು ಸಹಜೀವನದ ಬದುಕು. ಅದೊಂದು ಅಧ್ಯಾತ್ಮದ ಸಂಬಂಧ. ಅದನ್ನು ಸಾಮಾನ್ಯ ಪದಗಳಲ್ಲಿ ಹೇಳಲಾಗದು, ಅದೊಂದು ಅನಪಮ ಅನುಭವ ಮತ್ತು ಭಾವನೆಗಳಿಂದ ಕೂಡಿದ ಕಲ್ಪನೆ. ಅದೆಲ್ಲವೂ ಸರಿ. ಆದರೆ ಹಲವು ಬಾರಿ ನಾವು ಭಾವಿಸಿರುವ ಆದರ್ಶಗಳು ಬುಡಮೇಲಾಗುತ್ತವೆ. ಹೀಗಾಗಿ ಪ್ರಗತಿಶೀಲ ಸಮಾಜದ ಧುರೀಣರು, ಚಿಂತಕರು, ಈ ಎಲ್ಲವನ್ನೂ ಗಮನಿಸಲೇಬೇಕಾಗುತ್ತದೆ. ಇಂದು ವಿಶೇಷವಾಗಿ ಪಾಶ್ಚಿಮಾತ್ಯ ಸಂಸ್ಕೃತಿಯ ಹಲವಾರು ವಿಷಯಗಳಿಗೆ ಮಣಿಯಲೇಬೇಕಾಗಿದೆ. ಹೀಗೆಂದ ಮಾತ್ರಕ್ಕೆ ನಮ್ಮ ಸಂಸ್ಕೃತಿಯು ಕೀಳು ಎಂಬ ಭಾವನೆ ಅಲ್ಲ. ಅದೊಂದು ಸುಧಾರಣೆಗೆ ಸವಾಲು. ನಮಗೆ ಹೊಂದಾಣಿಕೆಯ ಜಾಣ್ಮೆ ಇದೆ. ಹೀಗಾಗಿ ಎಷ್ಟು ಅರಗಿಸಿಕೊಳ್ಳಬಲ್ಲವೋ ಅಷ್ಟನ್ನು ನನ್ನ ಮಿತ್ರರಾದ ಶ್ಯಾಮಪ್ರಸಾದ ಮುಖರ್ಜಿಯವರು ಹೇಳಿದ್ದು ಸಮರ್ಥನೀಯ.

ಬೇರೆ ಬೇರೆ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ವಿವಾಹಕ್ಕೆ ಅಡ್ಡಿ ಎಲ್ಲಿದೆ? ಇಂದು ೧೯೫೧ರ ಅವಧಿಯಲ್ಲಿ ಆ ವಿಧವಾಗಿ ಯೋಚಿಸುವುದು ಸರಿಯೆ? ಹುಟ್ಟು ಆಕಸ್ಮಿಕ. ಹೀಗಾಗಿ ಒಂದು ಜಾತಿಯಲ್ಲಿ ಅಥವಾ ಹಳ್ಳಿಯಲ್ಲಿ ಹುಟ್ಟಿದುದರಿಂದ ಅಲ್ಲಿಯೇ ನೆಲೆಯೂರಬೇಕೆಂಬ ನಿಬಂಧನೆಗಳೇನೂ ಇಲ್ಲ. ಆದುದರಿಂದ ಯಾವುದೇ ನಿಮ್ನವರ್ಗದ ವ್ಯಕ್ತಿ ತನ್ನ ಬುದ್ಧಿ ಹಾಗೂ ಪರಿಶ್ರಮದಿಂದ ಉನ್ನತ ಸ್ಥಿತಿಗೆ ತಲುಪಿದಾಗ ಅವನಿಗೆ ಉಚ್ಚವರ್ಗದ ಸ್ಥಾನಮಾನಗಳನ್ನು ನೀಡದೇ ಹೋದರೆ ಅದು ಸೂಕ್ತವಲ್ಲ. ವರ್ಣವನ್ನು ಗುಣಗಳ ಆಧಾರದ ಮೇಲೆ ನಿರ್ಧರಿಸಬೇಕು. ಸಾಧನೆ ಇಂದು ನಮ್ಮ ಬುದ್ಧಿಗೆ ಸವಾಲು ಒಡ್ಡಿದೆ. ಆದುದರಿಂದ ಪ್ರತಿಲೋಮ ವಿವಾಹದ ಬಗೆಗೆ ಇದ್ದಿರಬಹುದಾದ ಹಳೆಯ ನಿಷೇಧಗಳನ್ನು ನಾವು ನಿರ್ಲಕ್ಷಿಸಬೇಕು. ಅದನ್ನೆ ಇಲ್ಲಿ ಪ್ರಯತ್ನಿಸಲಾಗಿದೆ. ಆ ಬಗೆಯ ವ್ಯತ್ಯಾಸಗಳೇಕೆ? ಮದುವೆ ಒಂದು ಮುಕ್ತ ಆಯ್ಕೆಯಾದಾಗ ಶಾಸನದ ಅಡಚಣೆ ಏಕೆ? ಹೀಗಿದ್ದಾಗ ಅಂತರಜಾತಿ ವಿವಾಹಕ್ಕೆ ಏಕೆ ಅಡ್ಡಿ ಇರಬೇಕು? ಇವೆಲ್ಲಾ ಮಾನವ ನಿರ್ಮಿತ ಅಡಚಣೆಗಳು. ನನಗೆ ಹೊಳೆಯುವಂತೆ ಯಾವ ಬ್ರಾಹ್ಮಣ ಪುತ್ರನೂ ವೇದದ ಹೊತ್ತಗೆಯನ್ನೂ ಕ್ಷತ್ರಿಯ ಕತ್ತಿ ಹಿಡಿದುಕೊಂಡು, ಹರಿಜನರು ಪೊರಕೆ ಹಿಡಿದುಕೊಂಡು ಜನಿಸಿಲ್ಲ. ಜನನ ಮತ್ತು ಮರಣದಲ್ಲಿ ನಾವೆಲ್ಲರೂಸಮಾನರೆ. ಈ ಎರಡರ ಮಧ್ಯೆ ಸಮಾನತೆಯನ್ನು ರಕ್ಷಿಸುವುದೇ ರಾಜ್ಯ ಮತ್ತು ಸಮಾಜದ ಕರ್ತವ್ಯವಾಗಿದೆ. ಇದನ್ನು ವಿರೋಧಿಸುವವರು, ಮಾನವೀಯತೆಯನ್ನೇ ವಿರೋಧಿಸಿದಂತೆ. ಸ್ವಾಭಿಮಾನತೆಯನ್ನು ತಿರಸ್ಕರಿಸಿದಂತೆ. ನಾವು ಇಂದು ಕೈಗೆತ್ತಿಕೊಂಡಿರುವುದಾದರೂ ಏನು? ನಮ್ಮ ಪುರಾತನ ಸಂಪ್ರದಾಯಗಳನ್ನೇ ಎತ್ತಿ ಹಿಡಿಯಲು ಹೊರಟಿರುವೆವು. ಡಾ. ಅಂಬೇಡ್ಕರ್‌ರ ವಿರುದ್ಧ ನಾನು ದೂರಬಹುದಾದರೆ ಅವರು ಹಿರಿಯ ವಯಸ್ಕರಾಗುತ್ತಿದ್ದಂತೆ, ಸುಧಾರಣೆಗಳ ಬಗ್ಗೆ ಹೆಚ್ಚು ಉತ್ಸಾಹವನ್ನು ತೋರುತ್ತಿಲ್ಲ. ಅದೇ ಈಗ ಒಂದು ದಶಕದ ಕೆಳಗೆ ಅವರ ಭಾಷೆ ಕಟುತೀಕ್ಷ್ಣವಾದ ಭಾಷೆಯಾಗಿತ್ತು. ಆದರೆ ವಯಸ್ಸಾದಂತೆ ಅವರೂ ನೂತನ ಭಾಷೆಯ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆ. ಅವರೊಂದು ದಿನ ನೀಡಿದ ಹೇಳಿಕೆಯು : ಹೇಗಾದರೂ ಅಲ್ಲಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಕೆಲವನ್ನು ಕೈ ಬಿಟ್ಟು ಮತ್ತೆ ಕೆಲವು ವಿಷಯಗಳ ಜೋಡಣೆಯೊಂದಿಗೆ, ಹಿಂದೂ ಕೋಡ್‌ಅನ್ನು ತಯಾರಿಸಿರುವುದೇ ನಮ್ಮ ಶುದ್ಧ ಪ್ರಯತ್ನವಾಗಿದ್ದು, ಈ ತಲೆಮಾರಿನಲ್ಲಿಯೇ ತಪ್ಪುಗಳನ್ನು ತಿದ್ದಿಕೊಂಡೆವಲ್ಲಾ ಎಂದೇ ಅವರು ಉದ್ಗರಿಸಿದರು. ಇದು ಅವರು ಹೊಂದಿರುವ ತೀಕ್ಷ್ಣ ಆತುರದ ಸೂಚನೆಯಾಗಿದೆ. ಅವರು ಕೊಟ್ಟುಕೊಳ್ಳುವ ಭಾವನೆ ಹೊಂದಿದ್ದಾರೆ.

ಆದುದರಿಂದ ನಾನು ಸದನದ ಸದಸ್ಯರಲ್ಲಿ ಅರಿಕೆಮಾಡುವುದೇನೆಂದರೆ, ಚುನಾವಣೆಯ ನಂತರ ಅಸ್ತಿತ್ವದಲ್ಲಿ ಬರಬಹುದಾದ ಸಂಸತ್ತು ಈ ಬಗೆಗೆ ಹೆಚ್ಚು ಮೂಲಭೂತವಾದ ಧೋರಣೆಯನ್ನು ತಾಳಬಹುದು. ಏಕೆಂದರೆ ಅದು ವಯಸ್ಕರ ಮತದಾನ ಪದ್ಧತಿಯಿಂದ ಚುನಾಯಿತ ಹೊಂದಿರುತ್ತದೆ...

**ಹಲವು ಸದಸ್ಯರು :** ಅದನ್ನು ಮುಂದಿನ ಸಂಸತ್ತಿಗೆ ಬಿಡಿ.

**ಶ್ರೀ ಗಾಡ್ಗೀಳ್ :** ಆಸ್ತಿಯ ಬಗೆಗೆ ಆರಂಭಿಸುವುದು ಅಷ್ಟು ಪ್ರಗತಿಪರವಾಗದೇ ಹೋದರೂ, ವಿವಾಹ ಹಾಗೂ ವಿಚ್ಛೇದನೆಯ ಬಗೆಗೆ ನನಗೆ ಮಹಾರಾಷ್ಟ್ರದಲ್ಲಿ ಅಂಥ ವಿರೋಧವೇನೂ ಕಂಡು ಬಂದಿಲ್ಲ.

**ಶ್ರೀ ಭಟ್ಟ (ಬೊಂಬಾಯಿ) :** ಮುಂದಿನ ಸಂಸತ್ತಿಗೆ ಬಿಟ್ಟುಬಿಡಿ.

**ಶ್ರೀ ಗಾಡ್ಗೀಳ್ :** ನಾನು ಅದನ್ನು ಸ್ವಾಗತಿಸುವೆ. ಆದರೆ ಸಂವಿಧಾನದಲ್ಲಿಯ ಆದರ್ಶಗಳನ್ನು ಜಾರಿಗೊಳಿಸುವ ಆದೇಶದ ಹೊಣೆಗಾರಿಕೆಯನ್ನು ಸಾಧ್ಯವಾದಷ್ಟು ಜಾರಿಗೆ ತರಬೇಕಾದುದು ನಮ್ಮೆಲ್ಲರ ಕರ್ತವ್ಯವಲ್ಲವೇ? ಹೀಗಾಗಿ ನಾನು ಈ ವಿಧೇಯಕವನ್ನು ಬೆಂಬಲಿಸುವೆ.

**ಶ್ರೀ ಭಟ್ಟ :** ಆಕಾಶ ಈ ದಿನ  ಬಿದ್ದು ಹೋಗುತ್ತಿಲ್ಲ.

**ಶ್ರೀ ಗಾಡ್ಗೀಳ್ :** ವಿಧೇಯಕವನ್ನು ಅಂಗೀಕರಿಸಿದರೆ ಆಕಾಶ ತಲೆಮೇಲೆ ಬೀಳದು. ಆಕಾಶ ಮೇಲಿದೆ ನಾವು ಅದರಡಿಯಲ್ಲಿದ್ದೇವೆ. ಇಲ್ಲಿ ಏನು ನಡೆಯಹತ್ತಿದೆ ಎಂದು ನೋಡಿ.

**ಶ್ರೀ ಆರ್.ಸಿ. ಉಪಾಧ್ಯಾಯ (ರಾಜಾಸ್ಥಾನ) :** ಅದಕ್ಕಾಗಿಯೇ ಮಳೆಯೇ ಬೀಳುತ್ತಿಲ್ಲ.

**ಶ್ರೀ ಗಾಡ್ಗೀಳ್ :** ಡಾ. ಶ್ಯಾಮಪ್ರಸಾದರ ಹೇಳಿಕೆಯಂತೆ ಏಕಪತ್ನಿ ವ್ಯವಸ್ಥೆಯು ಹಿಂದೂಗಳಿಗೆ ಮಾತ್ರ ಏಕೆ? ನಾನೂ ಒಂದು ಪ್ರಶ್ನೆ ಕೇಳುವೆ. ಏಕಪತ್ನಿ ವ್ಯವಸ್ಥೆಯು ಒಂದು ಆದರ್ಶವೇ ಆಗಿದ್ದಲ್ಲಿ; ಅದನ್ನು ಯಾರೋ ಒಬ್ಬರು ಅನುಸರಿಸುವುದಿಲ್ಲವೆಂದರೆ ಅದು ಹೀನವಾಗುವುದೇ? ನಾವು ರಾಮರಾಜ್ಯದ ಬಗೆಗೆ ಮಾತನಾಡುತ್ತೇವೆ. ಅಲ್ಲಿ ರಾಮನ ಜೀವನದಲ್ಲಿ ಗಹನ ಹಾಗೂ ಶ್ರೇಷ್ಠವಾದ ಸಂಗತಿ ಎಂದರೆ ಏಕಪತ್ನಿ ವ್ರತವೊಂದೆಯೇ? ನಾನು ನಿಮ್ಮ ವಿಧೇಯತೆಯನ್ನು ಪರೀಕ್ಷಿಸಬಯಸುವೆ. ನೀವು ರಾಮರಾಜ್ಯವನ್ನೇ ಬಯಸುವಿರೋ? ಹಾಗಾದರೆ ಈ ವಿಧೇಯಕಕ್ಕೆ ಬೆಂಬಲಿಸಿ. ಕೇವಲ ಚುನಾವಣೆಯ ದೃಷ್ಟಿಯಿಂದ ರಾಮರಾಜ್ಯ ಕುರಿತು ಮಾತನಾಡುವುದು ಬೇಡ...

**ಶ್ರೀ ಆರ್.ಕೆ. ಚೌಧರಿ :** ದಶರಥ ರಾಜ್ಯದ ಬಗೆಗೆ ಏನು? ರಾಮನ ತಂದೆಯಾದ ದಶರಥ ಮಾಡಿದ್ದೇನು?

**ಶ್ರೀ ಗಾಡ್ಗೀಳ್ :** ಅದೇ ನೂತನ ತಲೆಮಾರಿನ ಕಾರ್ಯ. ಹಳೆಯದನ್ನು ಹೋಗಲಾಡಿಸಿ ನೂತನ ಸಂಪ್ರದಾಯ ರಚಿಸುವುದು. ಅವನಿಗೆ ಮೂವರು ತಾಯಿಯರ ತಾಪತ್ರಯ ತಿಳಿದುದರಿಂದಲೇ ಅವನು ಪ್ರಗತಿಯನ್ನು ಬಯಸಿ ತನ್ನ ಮಕ್ಕಳಿಗೆ ಓರ್ವ ಮಾತೆ ಇರುವಂತೆ ನೋಡಿಕೊಂಡ.

**ಓರ್ವ ಸದಸ್ಯ :** ವಿವಾಹ ವಿಚ್ಛೇದನೆಯು ಇತ್ತೇ?

**ಶ್ರೀ ಗಾಡ್ಗೀಳ್ :** ಆ ಸಂಪ್ರದಾಯ ಜಾರಿಯಲ್ಲಿತ್ತು.

*ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇಚ ಪತಿತೆ ಪತೌ ।*

*ಪತಿರನ್ಯತು ವಿಧೀಯತೆ ।*

ಗಂಡನು ನಾಪತ್ತೆಯಾದಾಗ, ಮರಣಹೊಂದಿದಾಗ, ಬೇರೆ ದೇಶಕ್ಕೆ ಹೋದಾಗ, ನಪುಂಸಕನಿದ್ದರೆ, ನೀತಿಭ್ರಷ್ಟನಾಗಿದ್ದರೆ ಬೇರೆ ಪತಿಯನ್ನು ಪಡೆಯಬಹುದು.

ಡಾ. ಶ್ಯಾಮಪ್ರಸಾದ ಮುಖರ್ಜಿಯವರ ಸಲಹೆ ಉತ್ತಮವಾಗಿದ್ದಲ್ಲಿ ಅದನ್ನು ಮುಸಲ್ಮಾನರಿಗೂ ಅನ್ವಯಿಸಬಹುದು. ನನಗೆ ಈ ಬಗ್ಗೆ ಈಗಿನ ಅಥವಾ ಚುನಾವಣೆಯ ನಂತರ ಬರುವ ಸರಕಾರ ಕ್ರಮ ಕೈಕೊಳ್ಳುವಲ್ಲಿ ಯಾವ ಸಂದೇಹವಿಲ್ಲ. ಕಾನೂನು ಎಲ್ಲರಿಗೂ ಒಂದೇ ಇರಬೇಕು. ಅದರಲ್ಲಿ ಧರ್ಮಭೇದ ಸಲ್ಲದು.

**ಓರ್ವ ಸದಸ್ಯ :** ಈಗಲೇ ಏಕೆ ಆಗಬಾರದು?

**ಶ್ರೀ ಗಾಡ್ಗೀಳ್ :** ಸತ್ಯ ಸಂಗತಿ ಎಂದರೆ, ಬೊಂಬಾಯಿ ಶಾಸನಸಭೆಯಲ್ಲಿ ಏಕಪತ್ನಿ ವಿವಾಹ ಪದ್ಧತಿಯ ಬಗ್ಗೆ ಶಾಸನ ರಚಿಸುವ ಸಮಯದಲ್ಲಿ, ನನಗೆ ತಿಳಿದಂತೆ ಅಲ್ಲಿಯ ಅನೇಕ ಶಾಸಕರು ಡಾ. ಶ್ಯಾಮಪ್ರಸಾದ ಮುಖರ್ಜಿಯವರ ನಿಲುವನ್ನೇ ತಳೆದಿದ್ದರು. ಆಗ ಬೊಂಬಾಯಿ ಸರಕಾರವು ತಮ್ಮ ಮಂತ್ರಿಯೋರ್ವರ ದ್ವಾರ ಆ ಬಗೆಯ ಮಸೂದೆಯನ್ನು ಸ್ವಾಗತಿಸುವುದಾಗಿಯೇ ಸಾರಿತು. ಡಾ. ಶ್ಯಾಮಪ್ರಸಾದ ಮುಖರ್ಜಿಯವರ ಮನಸ್ಸಿನಲ್ಲಿ ಸರಕಾರವು ಈ ಬಗೆಯ ವಿಧೇಯಕವನ್ನು ಮುಸ್ಲಿಂ ಜನಾಂಗದವರಿಗೆ ಅನ್ವಯಿಸಲು ಹಿಂದೇಟು ಹಾಕುತ್ತಿದೆ ಎಂದೇ ತಿಳಿದಿದ್ದಾರೆ. ಏಕೆಂದರೆ ಅದು ಮುಸ್ಲಿಂ ಜನಾಂಗದ ಮನಸ್ಸಿಗೆ ನೋವು ಉಂಟುಮಾಡುತ್ತದೆ. ನಾನು ಅವರನ್ನು ಒಂದು ಪ್ರಶ್ನೆ ಕೇಳುವೆ. ಈ ದೇಶದಲ್ಲಿಯ ಶೇಕಡಾ ೯೦ ಪ್ರಜೆಗಳಾದ ಹಿಂದೂಗಳು ಈ ಬಗೆಯ ವಿಧೇಯಕವನ್ನು ಅಂಗೀಕರಿಸಿದಾಗ, ಅದು ಸರಕಾರದ ಕೈಯನ್ನು ಬಲಪಡಿಸುವುದರಿಂದ ಮಿಕ್ಕ ಶೇಕಡಾ ಹತ್ತು ಪ್ರಜೆಗಳಿಗೆ ಸರಕಾರವು ಈ ಶಾಸನವನ್ನು ಜಾರಿಗೊಳಿಸದೇ ಇರುವುದೇ?

ನಾನು ನಿಮಗೆ ಈ ಬಗೆಗೆ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರಬಯಸುವೆ. ೧೯೩೦ರಲ್ಲಿ ಬಾಲ್ಯವಿವಾಹ ನಿಷೇಧಾಜ್ಞೆಯನ್ನು ಜಾರಿಗೊಳಿಸುವ ಮಸೂದೆಯನ್ನು ಇದೇ ಸದನದಲ್ಲಿ ಮಂಡಿಸಲಾಗಿತ್ತು. ಈ ವಿಧೇಯಕಕ್ಕೆ ನನ್ನ ಮಿತ್ರರಾದ ಬಿ. ದಾಸ ಅವರು ೧೯೩೬ರಲ್ಲಿ ಹಲವಾರು ತಿದ್ದುಪಡಿಗಳನ್ನು ಮಂಡಿಸಿದರು. ಮೂಲವಿಧೇಯಕದ ಚರ್ಚೆ ಸಮಯದಲ್ಲಿ, ಸದನದ ಅನೇಕ ಮುಸಲ್ಮಾನ ಸದಸ್ಯರು ವಿಧೇಯಕವನ್ನು ವಿರೋಧಿಸಿದರೂ, ಶ್ರೀ ಜಿನ್ನಾ ಅವರು ವಿಧೇಯಕವನ್ನು ಬೆಂಬಲಿಸಿದರು. ಮುಸಲ್ಮಾನ ಸದಸ್ಯರ ಹೇಳಿಕೆಯಂತೆ ಆ ವಿಧೇಯಕ ಅವರ ವೈಯಕ್ತಿಕ ಕಾನೂನಿನ ಹಸ್ತಕ್ಷೇಪವಾಗುತ್ತದೆ ಎಂದಿದ್ದರೂ, ಜಿನ್ನಾರ ಹೇಳಿಕೆಯಿಂತಿದೆ, ಮುಲ್ಲರು ಒಪ್ಪಲಿ ಒಪ್ಪದೇ ಹೋಗಲಿ, ಧರ್ಮ ಮತ್ತು ಸಾರ್ವಜನಿಕ ನೀತಿ ಅಥವಾ ನೈತಿಕತೆ ಪ್ರಶ್ನೆ ಬಂದಾಗ, ಸಾರ್ವಜನಿಕ ನೀತಿಗೆ ಬೆಂಬಲ ನೀಡಬೇಕು, ಧರ್ಮಕ್ಕಲ್ಲ, ಎಂದೇ ಹೇಳಿದುದನ್ನು ಹಿಂದಿನ ಕಡತಗಳಲ್ಲಿ ನೋಡಬಹುದು. ನಾವು, ಏಕಪತ್ನಿ ವ್ಯವಸ್ಥೆಯು ಸಾರ್ವಜನಿಕ ನೈತಿಕತೆಗೆ ಅನಿವಾರ್ಯ ಎಂದು ಒಪ್ಪಿದಲ್ಲಿ ಅದಕ್ಕೆ ಬೆಂಬಲ ನೀಡಬೇಕು. ಏಕೆಂದರೆ, ಸಮುದಾಯದ ಹಿತದೃಷ್ಟಿಯಿಂದ, ಸಾಮಾಜಿಕ ರಂಗದಲ್ಲಿ ಅದನ್ನು ಜಾರಿಗೊಳಿಸಬೇಕು. ಈ ಬಗೆಗೆ ಮುಸಲ್ಮಾನ ಬಾಂಧವರೂ ತಮ್ಮ ಒಪ್ಪಿಗೆಯನ್ನು ನೀಡುವರು ಎಂದೇ ನನ್ನ ದೃಢನಂಬಿಕೆ. ಒಂದು ವೇಳೆ ಪ್ರಗತಿ ವಿರೋಧಿಗಳು ಒಪ್ಪದೇ ಹೋದಲ್ಲಿ, ಸರಕಾರವು ಅದನ್ನು ಕಡ್ಡಾಯಗೊಳಿಸಬೇಕು. ನಾನು ಒಂದು ವೇಳೆ ಸರಕಾರದಲ್ಲಿದ್ದಿದ್ದರೆ ಅದನ್ನು ಕಡ್ಡಾಯಗೊಳಿಸಲು ಹಿಂಜರಿಯುತ್ತಿರಲಿಲ್ಲ. ನನ್ನ ಅಭಿಪ್ರಾಯದಂತೆ, ಅಮೃತವನ್ನು ಕೆಲವರು ಸೇವಿಸದೇ ಹೋದರೆ ಅದು ಕಾಲಕೂಟ ವಿಷವಾಗುವುದೇ? ಈ ಬಗೆಯ ವಿಚಾರ ಸದನಕ್ಕೆ ಶೋಭೆ ತರಲಾರದು.

ವಿವಾಹ ವಿಚ್ಛೇದನೆಯ ಬಗೆಗೆ ಹೇಳಬಹುದಾದರೆ, ಪ್ರತಿಯೊಬ್ಬ ವಿವಾಹವಾದ ದಂಪತಿಗಳು ವಿಚ್ಛೇದನೆಗೆ ಗುರಿಯಾಗಬೇಕೆಂದಿಲ್ಲ. ಆದರೆ ರಾಜ್ಯವು ದಾಂಪತ್ಯ ಜೀವನದಲ್ಲಿಯ ಒತ್ತಡಗಳಿಂದ, ಅವರ

ಜೀವನವನ್ನು ಹಸನಾಗಿ ಮಾಡಬೇಕು. ಇದಕ್ಕಾಗಿ ಸೂಕ್ತವಾದ ಸಾಮಾಜಿಕ ವಾತಾವರಣ ಅಗತ್ಯವಾದ ನ್ಯಾಯ ಹಾಗೂ ಕಾನೂನುಗಳನ್ನು ನಿರ್ಮಿಸುವುದು ರಾಜ್ಯದ ಕರ್ತವ್ಯ. ಈ ದೇಶದಲ್ಲಿ ಶೇಕಡಾ ಎಂಬತ್ತಕ್ಕೂ ಅಧಿಕವಾಗಿ ವಿಚ್ಛೇದನೆಯ ಸಂಪ್ರದಾಯಗಳು ಜಾರಿಯಲ್ಲಿವೆ. ಅವರಿಗೆ ಯಾವ ಆತಂಕವೂ ಇಲ್ಲ. ಆದರೆ ಅಲ್ಪ ಪ್ರಮಾಣದಲ್ಲಿ ಕೆಲವು ವರ್ಗಗಳಲ್ಲಿ ಹಲವಾರು ಕಾರಣಗಳಿಗಾಗಿ ಸ್ತ್ರೀಯರು ದಾಂಪತ್ಯ ಜೀವನದಿಂದ ವಂಚಿತರಾಗಿದ್ದಾರೆ. ಅವರಿಗೆ ವಿವಾಹವು ಜೀವನಪರ್ಯಂತವಾದ ಬಂಧನವಾಗಬಾರದು. ಅವರಲ್ಲಿ ಒಬ್ಬರು ಮರಣಹೊಂದಿದ ಮೇಲೆ ಆತಂಕ ಮುಕ್ತರಾಗುವ ಪರಿಸ್ಥಿತಿ ನಿರ್ಮಾಣವಾಗಕೂಡದು. ಈ ಎಲ್ಲಾ ಕಾರಣಗಳಿಗಾಗಿ ಅಂಥವರನ್ನು ಆತಂಕಗಳಿಂದ ಮುಕ್ತಿಗೊಳಿಸುವ ಮಾರ್ಗವಿರಲೇಬೇಕು. ವಿಚ್ಛೇದನ ಮಾರ್ಗ ಪಾಶ್ಚಿಮಾತ್ಯರಂತೆ ಸುಲಭ ಮಾಡದೆ, ಕಠಿಣವಾಗಿರಲಿ. ನನಗೆ ತಿಳಿದಂತೆ ನೀವು ತುಂಬಾ ಸಂಪ್ರದಾಯಬದ್ಧ ಪ್ರತಿಗಾಮಿ ವ್ಯವಸ್ಥೆ ಮಾಡಿರುವಿರಿ. ನನ್ನ ದೃಷ್ಟಿಯಲ್ಲಿ ದಂಪತಿಗಳಲ್ಲಿ ಸಾಮರಸ್ಯವಿಲ್ಲದೇ ಇದ್ದಲ್ಲಿ ಅವರು ತಮ್ಮ ವಿವಾಹದ ಬಂಧನದಿಂದ ಮುಕ್ತಿ ಪಡೆಯುವಂತೆ ಇರಬೇಕು. ಈ ವಿಚ್ಛೇದನದಡಿಯಲ್ಲಿರಬಹುದಾದ ಅಂಶಗಳಾದರೂ ಏನು? ದಂಪತಿಗಳು ಸುಖಜೀವನ ನಡೆಸಲಾರರು. ಹೀಗೆಂದ ಮಾತ್ರಕ್ಕೆ ಹಾದರ, ಚಿತ್ರಹಿಂಸೆ, ಬೇರ್ಪಡೆ ಮುಂತಾದ ಮಾರ್ಗಗಳನ್ನು ನಮೂದಿಸುವ ಅಗತ್ಯವೇನಿದೆ? ದೇಶದ ಶೇಕಡಾ ೯೦ರಷ್ಟು ಜನರು ಒಂದಲ್ಲ ಒಂದು ವಿಧಾನವನ್ನು ಅಳವಡಿಸಿಕೊಂಡಿರುವಾಗ ಕೇವಲ ಕೆಲವರಿಗೆಂದೇ ದ್ರಾವಿಡ ಪ್ರಾಣಾಯಾಮ ವ್ಯವಸ್ಥೆಯನ್ನು ಜಾರಿಗೊಳಿಸುವುದು ಯಾವ ಜಾಣ್ಮೆ? ಈ ದಿಶೆಯಲ್ಲಿ ವಿವಾಹ ನಿರ್ಬಂಧನೆಗಳ ಬಗ್ಗೆ ಇದ್ದಿರಬಹುದಾದ ಸಗೋತ್ರ, ಸಪಿಂಡ ವಿವಾಹಪದ್ಧತಿಗಳ ಮರುಪರಿಶೀಲನೆ ನಡೆಸಿದರೆ ಸಾಕು.

**ಶ್ರೀ ಎ.ಸಿ. ಶುಕ್ಲಾ (ಮ.ಪ್ರ) :** ವಯಸ್ಸಾದ ಮುದುಕರು, ಬಾಲಕಿಯನ್ನು ವಿವಾಹವಾಗುವುದು ಸಂತಾನಶಾಸ್ತ್ರ ಸಮ್ಮತವೇ?

**ಶ್ರೀ ಗಾಡ್ಗೀಳ್ :** ಅದನ್ನು ಖಂಡಿತವಾಗಿ ಪ್ರತಿಬಂಧಿಸಬೇಕು.

**ಶ್ರೀ ಎ.ಸಿ. ಶುಕ್ಲ :** ವೃದ್ಧನಿಂದ ಚಿಕ್ಕ ವಯಸ್ಸಿನ ಸ್ತ್ರೀಯಲ್ಲಿ ಜನಿಸಿದ ಮಗುವಿನ ಪರಿಸ್ಥಿತಿ ಹೇಗೆ?

**ಶ್ರೀ ಗಾಡ್ಗೀಳ್ :** ಅದು ಆರೋಗ್ಯಕರವಾಗಿಯೇ ಇರುತ್ತದೆ.

ಹಿಂದೂ ಸಮಾಜದ ಪ್ರಗತಿಪರಧೋರಣೆಗೆ ಭಂಗಬರುವಂಥ ಶಾಸನ ಹಾಗೂ ಸಂಪ್ರದಾಯಗಳೇನಿದ್ದರೂ ಅವು ತೊಲಗಬೇಕು. ಡಾ. ಎಸ್.ಪಿ. ಮುಖರ್ಜಿಯವರು ಉದಾಹರಿಸಿದ ಬ್ರಹ್ಮಸಮಾಜ, ಸಾಧನಸಮಾಜಗಳಿಗೆ ಹಾಗೂ ರಾಜರಾಮ ಮೋಹನರಾಯರಿಂದ ರ್‍ಯಾನಡೆ, ತಿಲಕ್, ಅಗರಕರ್ ಮುಂತಾದ ಸಮಾಜ ಸುಧಾರಕರ ಬಗೆಗೆ ನಾವೆಲ್ಲರೂ ಹೆಮ್ಮೆಪಡಬೇಕು. ಆದರೆ ಸುಧಾರಣೆ ಮುಂದುವರಿಯಬೇಕಲ್ಲವೇ? ಹಿಂದೆ ನಡೆದ ಉತ್ತಮ ಮತ್ತು ಸುಧಾರಣೆ ಹಾಗೂ ಪ್ರಗತಿ ಸೂತ್ರಗಳನ್ನು ನಾವು ಅನುಸರಿಸಬಹುದಲ್ಲವೇ? ಅದಕ್ಕೆ ನಾವು ಅಂಜಬಾರದು. ಅಲ್ಲದೇ ಮುಂದುವರಿಸಿಕೊಂಡು ಹೋಗಲೇಬೇಕು. ಮನು ಮರಣಹೊಂದಿದ ಮೇಲೆ ಶತಮಾನಗಳು ಉರುಳಿವೆ. ಮನುವಿನಂತೆ ಮತ್ತೊಬ್ಬ ಪ್ರಖ್ಯಾತ ಪುರುಷನೇ ಇಲ್ಲವೆಂದು ಹೇಳುವುದು ಸರಿಯಲ್ಲ. ನಾನು ಯೋಚಿಸುವಂತೆ ಶ್ರೀ ಅಹಮದ್ ಅವರು ಯಾಜ್ಞವಲ್ಕ್ಯನಷ್ಟೇ ಮೇಧಾವಿಗಳಾಗಿದ್ದಾರೆ **'ಜೆನುವಾ'** ಹೊರತುಪಡಿಸಿ, ಅವರ ಉತ್ತಮ ವ್ಯಾಖ್ಯೆಯನ್ನು ನೀಡುವ ಸಾಮರ್ಥ್ಯ ಹೊಂದಿದ್ದಾರೆ. ಡಾ. ಅಂಬೇಡ್ಕರ್ ಅವರು, ಮನು ಹಾಗೂ ಗಾರ್ಗಿಯರಿಗೆ ಸಮಾನರಾಗಿದ್ದಾರೆ.

**ಓರ್ವ ಸದಸ್ಯ :** ಅವರೇ ಮನು.

**ಶ್ರೀ ಗಾಡ್ಗೀಳ್ :** ನಾನು ಪುರಾತನ ಯಾವ ನಾಗರಿಕನಿಗೂ ಕಡಿಮೆ ಇಲ್ಲ. ಆದುದರಿಂದ ಈ ತಲೆಮಾರಿನವರು ಸುಧಾರಣೆಗಳನ್ನು ಏಕೆ ಕೈಗೆತ್ತಿಕೊಳ್ಳಬಾರದು? ಭಾರತವು ಕಳೆದ ಹತ್ತು ಶತಮಾನಗಳಿಂದ ತನ್ನದೇ ಆದ ರಾಷ್ಟ್ರಧ್ವಜದಡಿಯಲ್ಲಿ ಏಕೀಕೃತವಾದ ರಾಜ್ಯವಾಗಿರಲಿಲ್ಲ. ಆದರೆ ಆ ಕಾರ್ಯವನ್ನು ನಾವು ಇಂದು ಸಾಧಿಸಿದ್ದೇವೆ. ಆದುದರಿಂದ ನಾವು ಸಾಮಾಜಿಕ ರಂಗದಲ್ಲಿ, ಸಮಾಜ ಸುಧಾರಣೆಗೆ ಕ್ರಮ ತೆಗೆದುಕೊಳ್ಳಲಾರೆವೇ? ನನಗೆ ಈ ಪ್ರಶ್ನೆಗೆ ಉತ್ತರ ಬೇಕು. ನೀವು ನಾವು ರಾಜಕೀಯರಂಗದಲ್ಲಿ ಸಾಧಿಸಿದ ಕಾರ್ಯವನ್ನು ಪ್ರಶಂಸಿಸಿರಿ. ಸಾಮಾಜಿಕರಂಗದಲ್ಲಿಯೂ ಸಾಧಿಸುವ ಬಗ್ಗೆ ಅಂಜುವುದೇಕೆ? ಆ ಕೀಳರಿಮೆ ಏಕೆ? ಮನು ಉತ್ತಮಕಾರ್ಯ ಮಾಡಿಲ್ಲ ಎಂಬುದು ನಮ್ಮ ಭಾವನೆ ಅಲ್ಲ. ಆದರೆ–

*ತಾತಸ್ಯಕೂಪೋಯಮಿತಿ ಬ್ರೂವಣಾ*
*ಕ್ಷಾರಂ ಜಲ ಕಾಪುರೂಷಾಃ ಪಿವನ್ತಿ ॥*

ಮುತ್ತಜ್ಜ ತೆಗೆದಿರುವ ಬಾವಿಯ ನೀರು ಉಪ್ಪಿದ್ದರೂ ಕುಡಿಯಲೇಬೇಕೆಂಬ ಕಡ್ಡಾಯಕ್ಕೆ ನಾನು ಒಳಪಡಲಾರೆ.

**ಶ್ರೀ ಆರ್.ಕೆ. ಚೌಧರಿ :** ಹಾಗಾದರೆ ನಿಮ್ಮ ಪವಿತ್ರ ಯಜ್ಞೋಪವೀತವನ್ನು ಬಿಸಾಡಿರಿ.

**ಶ್ರೀ ಗಾಡ್ಗೀಳ್ :** ನಾನು ಎಂದೋ ಅದನ್ನು ಬಿಸಾಡಿರುವೆ ನೋಡಿರಿ.

**ಪಂಡಿತ ಮಾಳವೀಯ :** ನನಗೆ ತಿಳಿದಂತೆ ಮಾನ್ಯಮಂತ್ರಿಗಳು ಬೇಕಾದಾಗ ಅದನ್ನು ಧರಿಸುತ್ತಾರೆ.

**ಶ್ರೀ ಗಾಡ್ಗೀಳ್ :** ಅಂಥದೇನೂ ಇಲ್ಲ. ಈ ವಿಷಯ ವೈಯಕ್ತಿಕವಾಗಿ ನನಗೆ ಸಂಬಂಧಿಸಿದೆ. ಹೆಚ್ಚು ಹೇಳುವುದು ಸರಿಯಾಗಲಾರದು.

**ಶ್ರೀ ಬೃಜೇಶ್ವರ ಪ್ರಸಾದ (ಬಿಹಾರ) :** ಸರ್ ಸದಸ್ಯರು ತಮ್ಮ ಉದರವನ್ನು ಪ್ರದರ್ಶಿಸುವುದೂ ಸಂಸದೀಯ ನಡವಳಿಕೆಯೇ?

**ಶ್ರೀ ಗಾಡ್ಗೀಳ್ :** ಒಬ್ಬರಾದರೂ ಪ್ರಶಂಸಿಸಿದರಲ್ಲಾ.

**ಉಪ ಸಭಾಧ್ಯಕ್ಷರು :** ಈ ಪ್ರಶ್ನೆಯನ್ನು ಎತ್ತಿದ್ದಕ್ಕೆ ನನಗೆ ಸಂತೋಷವಾಗಿದೆ.

ಎಲ್ಲಿ ಯಾವ ವ್ಯಕ್ತಿ ಏನು ಧರಿಸುತ್ತಾನೆ. ಏನು ನೋಡುತ್ತಾನೆ ಅವು ಇಲ್ಲಿ ಅಪ್ರಸ್ತುತ. ಅದರಿಂದ ಆ ವಿಷಯಗಳನ್ನು ಸದನದಲ್ಲಿ ಎತ್ತಿ ತೊಂದರೆಗೆ ಆಸ್ಪದ ನೀಡದಿರಿ.

**ಶ್ರೀ ಭಟ್ಟ :** ಅವರು ಯಜ್ಞ ಸಮಯದಲ್ಲಿ ಯಜ್ಞೋಪವೀತವನ್ನು ಧರಿಸಬಹುದಲ್ಲವೇ?

**ಶ್ರೀ ಗಾಡ್ಗೀಳ್ :** ನಾನು ಮಾನ್ಯ ಸದಸ್ಯರ ಕುತೂಹಲವನ್ನು ತಣಿಸಲು ಯತ್ನಿಸುವೆ.

**ಉಪ ಸಭಾಧ್ಯಕ್ಷರು :** ಮಾನ್ಯ ಮಂತ್ರಿಮಹೋದಯರು ಈ ವಿಧೇಯಕಕ್ಕೆ ಬೆಂಬಲ ಸೂಚಿಸಲಿಕ್ಕೆಂದೇ ಯಜ್ಞೋಪವೀತವನ್ನು ತೆಗೆಯಬೇಕಾಗಿಲ್ಲ. ಅದನ್ನು ಧರಿಸಿಕೊಂಡೂ ಬೆಂಬಲಸೂಚಿಸಬಹುದು.

**ಶ್ರೀ ಗಾಡ್ಗೀಳ್ :** ಹಲವು ವರ್ಷಗಳ ಹಿಂದೆ, ನಾನು ಥಾನಾ ಸೆರೆಮನೆಯಲ್ಲಿದ್ದಾಗ ಹಿಂದೂಧರ್ಮದ ಬಗೆಗೆ ಗಾಢವಾಗಿ ಯೋಚಿಸಿದೆ. ಆಗ ನಾನು ಒಬ್ಬ ಉತ್ತಮ ಬ್ರಾಹ್ಮಣನಲ್ಲ, ಕೇವಲ ಜೇನುವಿನಿಂದ ಮಾತ್ರ ಬ್ರಾಹ್ಮಣನಾಗಲಾರೆ ಎಂದು ಜನಿವಾರವನ್ನೆ ಕಿತ್ತು ಒಗೆದೆ. ನಾನು ಯಾವಾಗ ಉತ್ತಮ ಬ್ರಾಹ್ಮಣನಾಗುವೆನೋ ಆಗ ಮಾತ್ರ ಜನಿವಾರ ಧರಿಸುವೆ. ಇದನ್ನು ನಾನು ಸೋಮನಾಥನ ಸ್ಥಾಪನೆಯ ಸಮಯದಲ್ಲಿ, ನನಗೆ ಸ್ಫೂರ್ತಿ ಒದಗಿದುದರಿಂದ ಅದನ್ನು ಧರಿಸಿದೆ. ನಂತರ ಮತ್ತೆ ಅದನ್ನು ಬಿಸಾಡಿದೆ. ಏಕೆಂದರೆ ನಾನು ಸ್ವರ್ಗದಿಂದ ಮತ್ತೆ ಧೂಳು ಮುಸುಕಿದ ಭೂಮಿಗೆ ಮರಳಿ ಬಂದೆ. ನಾನು ಜೇನು ಧರಿಸಿ ಗೀತೆಯಲ್ಲಿ ಹೇಳಿದಂತೆ ಆಚರಿಸುವ ವ್ಯಕ್ತಿಯನ್ನು ಮಾತ್ರ ಬ್ರಾಹ್ಮಣನೆಂದು ಭಾವಿಸುವೆ. ಅಭಯ, ಅಹಿಂಸೆ, ಆಸ್ತೇಯ

ಅರ್ಜವಂ, ಅಂದರೆ ನಿರ್ಭಯ, ಅಹಿಂಸೆ, ಕದಿಯದಿರುವ ಹಾಗೂ ನೇರ ನುಡಿಯ ವ್ಯಕ್ತಿ ಜೀವಿಯು ಜನಿವಾರ ಧರಿಸಲು ಯೋಗ್ಯ ಎಂದೇ ನನ್ನ ಭಾವನೆ.

ಪ್ರಶ್ನೆಯೆಂದರೆ ಯಾವುದೇ ಬದಲಾವಣೆ ಮಾಡಲು ನಮಗೆ ಅರ್ಹತೆ ಇದೆಯೆ ಎಂದು. ಏಕೆಂದರೆ ಹಿಂದೂ ಧರ್ಮ ಸಮಗ್ರ ಇತಿಹಾಸವೇ ಸತತ ಬದಲಾವಣೆ ಮತ್ತು ಪ್ರಗತಿಯಿಂದ ಒಡಗೂಡಿದೆ. ಇಲ್ಲದೇ ಹೋದಲ್ಲಿ ವಿವಿಧ ಸ್ಮೃತಿಗಳು ಹೇಗೆ ಜಾರಿಯಲ್ಲಿ ಬಂದವು? ಇದನ್ನು ವಿವರಿಸುವ ಬಗೆ ಹೇಗೆ? ಸಮಾಜ ಸದಾ ಬದಲಾಗುತ್ತಲೇ ಬಂದಿದೆ. ಸದಾಚಾರ ವ್ಯವಹಾರ ಧರ್ಮಗಳನ್ನು ಮುಂದುವರಿಸಿಕೊಂಡೇ ಬಂದಿದೆ. ಹೀಗಾಗಿ ಮಹಾನ್ ಶಾಸ್ತ್ರಿಯವರ ಹೇಳಿಕೆಯಂತೆ ಸನಾತನವೆಂದರೆ ನಿತ್ಯನೂತನ. ಬದಲಾವಣೆ ಪ್ರಕೃತಿಯ ಗುಟ್ಟು. ಬದಲಾವಣೆ ತೊರೆದರೆ ನಾಶ ಖಚಿತ. ನಾವು ಪ್ರಗತಿಪರ ಜೀವಂತ ಸಮಾಜ ಹೊಂದಿದ್ದೇವೆ. ಹೀಗಾಗಿ ಕಾಲಕ್ಕೆ ತಕ್ಕ ಬದಲಾವಣೆಗಳಿಗೆ ಸ್ಪಂದಿಸುತ್ತಲೇ ಬಂದಿರುವೆವು. ಹೀಗೆಂದ ಮಾತ್ರಕ್ಕೆ ನಾವು ಅಸ್ಥಿರ ಪರಿಸ್ಥಿತಿಯಲ್ಲಿದ್ದೇವೆ ಎಂದು ಭಾವಿಸಕೂಡದು.

**ಪಂಡಿತ ಮೈತ್ರ :** ಸಂಸ್ಕೃತ ಸಾಹಿತ್ಯದಲ್ಲಿ ಸನಾತನದ ವ್ಯಾಖ್ಯೆ ಎಂದರೆ ..........ಸದಾಭವ ಇತಿ ಸನಾತನಃ ಅಂದರೆ ಅದು ನಿತ್ಯ. ಇದು ಶಬ್ದಾರ್ಥ ಹಾಗೂ ವ್ಯಾಕರಣ.

**ಶ್ರೀ ಗಾಡ್ಗೀಳ್ :** ನಾನು ವ್ಯಾಕರಣದ ಅರ್ಥವನ್ನು ಒಪ್ಪಲಾರೆ.

**ಶ್ರೀ ಭಟ್ಟ :** ಕಾಕಾ ಸಾಹೇಬರು ತಮ್ಮದೇ ಆದ ವ್ಯಾಖ್ಯೆಯನ್ನು ಹೊಂದಬಹುದು.

**ಶ್ರೀ ಗಾಡ್ಗೀಳ್ :** ಅದು ಕಡಿಮೆ ಪ್ರಾಮುಖ್ಯತೆ ಪಡೆದಿದೆ ಎಂದಲ್ಲ. ಏಕೆಂದರೆ ಕಾಕಾ ಸಾಹೇಬರೂ ಸಂಸ್ಕೃತವನ್ನು ಬಲ್ಲವರು. ನನ್ನ ಉದ್ದೇಶವೆಂದರೆ ಹಿಂದೂ ಸಮಾಜದ ಇತಿಹಾಸ ಸದಾ ಬದಲಾಗುತ್ತಲೇ ಬಂದಿದೆ. ಅದು ಪ್ರಗತಿಪರ. ಅದನ್ನು ಈಗ ನಾವು ಏಕೆ ತಡೆಹಿಡಿಯಬೇಕು? ಆಧುನಿಕ ಪರಿಸ್ಥಿತಿಯು ಬದಲಾವಣೆಯನ್ನು ಬಯಸಿರುವುದಿರಿಂದ ಸಂಪ್ರದಾಯದಿಂದಲ್ಲ ಶಾಸನದಿಂದ ನಾವು ಬದಲಾವಣೆ ತರಲೇಬೇಕಾಗಿದೆ. ಈ ವಿಷಯವನ್ನು ಶಾಂತ ವಾತಾವರಣದಲ್ಲಿ ಹಾಗೂ ತಿಳುವಳಿಕೆಯಿಂದ ಆಲೋಚಿಸಬೇಕೆಂದೂ ಬಲ್ಲೆ. ಈ ದಿಶೆಯಲ್ಲಿ ಹಲವಾರು ಲೋಪದೋಷಗಳಿವೆ ಎಂದಾಗ ಅವನ್ನು ನಿವಾರಿಸಬೇಡವೇ? ನನಗೆ ಜ್ಞಾಪಕವಿದ್ದಂತೆ ಬಾಲ್ಯವಿವಾಹದ ಬಗೆಗೆ ಮಾತನಾಡಿದಾಗ ನನ್ನ ಮಿತ್ರರಾದ ಶ್ರೀ ಬಿ.ದಾಸ ಅವರಿಗೆ ೧೯೩೧ನೆ (ಜನಗಣತಿ) ಅಂಕಿಸಂಖ್ಯೆಗಳನ್ನು ಆಧರಿಸಿ ನಾನು; ಒಂದು ವರ್ಷಕ್ಕಿಂತಲೂ ಚಿಕ್ಕಮಕ್ಕಳ ಬಾಲವಿಧವೆಯರ ಸಂಖ್ಯೆ ೧,೩೦೦ ಎಂದೇ ತಿಳಿಸಿದ್ದೆ. ಇದು ಅನಿಷ್ಟವಲ್ಲವೇ? ಒಂದು ಲಕ್ಷ, ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಕನ್ನಿಕೆಯರು ಇಂತಹವರನ್ನು ಮರುಮದುವೆಯಾಗದಂತೆ ಪ್ರತಿಬಂಧಿಸಿದರೆ, ಸಮಾಜದ ಮೇಲೆ ಅದರ ಪರಿಣಾಮ ಏನು ಎಂದು ಯಾರಾದರೂ ಯೋಚಿಸಿರುವಿರಾ? ಈ ವಿಧೇಯಕದ ಅಂಗೀಕಾರದಿಂದ ಸಮಾಜಕ್ಕೆ ಒಳ್ಳೆಯದೇ ಆಗಿದೆ. ಇಂದು ವಿವಾಹದ ವಯಸ್ಸಿನಲ್ಲಿಯೂ ಅರಿವು ಮೂಡಿದೆ; ಹೀಗಾಗಿ ಸರಾಸರಿ ವಿವಾಹದ ವಯಸ್ಸು ಏರಿದೆ. ಇಂದು ಚಿಕ್ಕವಯಸ್ಸಿನ ವಿವಾಹವಲ್ಲ, ವಿವಾಹವೇ ಒಂದು ಪ್ರಬಲ ಸಮಸ್ಯೆಯಾಗಿದೆ.

**೧೧ ಗಂಟೆ**

೧೯೩೦ರಲ್ಲಿ ಎಲ್ಲ ವಿರೋಧ ಪಕ್ಷಗಳಿಂದ ಈ ವಿಧೇಯಕಕ್ಕೆ ಪ್ರಬಲ ಪ್ರತಿಭಟನೆ ಒಡ್ಡಲಾಯಿತು. ನನಗೆ ಜ್ಞಾಪಕವಿದ್ದಂತೆ ಇದಕ್ಕೆ ಅಂದು ನೀಡಲಾದ ವಿವರಣೆ ಎಂದರೆ ಈ ವಿಧೇಯಕವು ಜಾರಿಗೆ ಬರುವ ಮುನ್ನವೇ, ಸಾವಿರಾರು ಮಕ್ಕಳನ್ನು ಕಲಕತ್ತಾದಿಂದ ಚಂದ್ರನಗರಕ್ಕೆ ಕರೆದುಕೊಂಡು ಹೋಗಿ ವಿವಾಹಮಾಡಲಾಯಿತು. ಅಂದು ಚಂದ್ರನಗರ ಬ್ರಿಟಿಷ್ ಭಾಗದಲ್ಲಿರಲಿಲ್ಲ; ಅಲ್ಲದೆ ಅನೇಕ ಬಾಲಕಿಯರನ್ನು

ಸಿಂಧೂನದಿಯಲ್ಲಿ ತೆಪ್ಪಗಳಲ್ಲಿ ತೆಗೆದುಕೊಂಡು ಹೋಗಿ ಮದುವೆ ಮಾಡಲಾಯಿತು. ಅಂದು ವಿಧೇಯಕದಲ್ಲಿ ಪ್ರಾದೇಶಿಕ ನಿರ್ಬಂಧನೆಗಳನ್ನು ಸೂಚಿಸಿರಲಿಲ್ಲ. ನಂತರ ಬಿ. ದಾಸ ಅವರ ಸಲಹೆಯಂತೆ ಪ್ರಾದೇಶಿಕ ನಿರ್ಬಂಧನೆಗಳನ್ನು ಅಳವಡಿಸಲಾಯಿತು. ಇಲ್ಲಿ ನಾವು ಅರಿಯಬೇಕಾದ ವಿಷಯವೆಂದರೆ, ಲೋಪದೋಷ ಹಾಗೂ ಅನಿಷ್ಟತೆಗಳು. ಅವನ್ನು ಮುಂದುವರಿಸಿಕೊಂಡು ಹೋಗಬಾರದೆಂಬ ಅಭಿಪ್ರಾಯಕ್ಕೆ ಯಾರ ಅಡ್ಡಿಯೂ ಇಲ್ಲ. ಈ ವಿಷಯದ ಪರಿಹಾರಕ್ಕೆ ಕಠಿಣ ಅಥವಾ ಮೃದು ಉಪಾಯಗಳು, ಸದಸ್ಯರಿಗೆ ಬಿಟ್ಟ ವಿಷಯ. ಈ ದಿಶೆಯಲ್ಲಿ ನನ್ನ ಮಾನ್ಯ ಮಿತ್ರರಾದ ಡಾ. ಅಂಬೇಡ್ಕರ್‌ರೊಂದಿಗೆ ವಿರೋಧ ಪಕ್ಷದವರು ಚರ್ಚಿಸಬಹುದು. ಆದರೆ ನನ್ನ ದೃಷ್ಟಿಯಲ್ಲಿ, ಹಿಂದೂ ಸಮಾಜದ ಸುಧಾರಣೆಗೆ ಈ ನಿಟ್ಟಿನಲ್ಲಿ ಒಂದಲ್ಲ ಒಂದು ಕ್ರಮ ಕೈಕೊಳ್ಳಲೇಬೇಕು. ಅದೊಂದು ಸಾಮೂಹಿಕ ಹಾಗೂ ವೈಯಕ್ತಿಕ ಜಯ ಎಂದೇ ಭಾವಿಸುವೆ. ಸದನವು ಈ ಮಟ್ಟಕ್ಕೆ ಬರಬೇಕೆಂದೇ ಹಾರೈಸುವೆ. ಹೀಗೆಂದ ಮಾತ್ರಕ್ಕೆ ಸದನ ಸೂಚಿಸಿದ್ದನ್ನು ಅಂಗೀಕರಿಸಲೇಬೇಕೆಂದು ಭಾವಿಸಬಾರದು. ಚರ್ಚೆ ಮುಕ್ತ ಮನಸ್ಸಿನಿಂದ ಕೂಡಿರಬೇಕು. ಆದರೆ ಸಮಾಜದಲ್ಲಿ ಅನಿಷ್ಟಗಳಿವೆ ಎಂಬುದನ್ನು ಒಪ್ಪಿ ಅದನ್ನು ಹೇಗೆ ನಿವಾರಿಸಬಹುದು ಎಂಬುದನ್ನು ಪರ್ಯಾಲೋಚಿಸಿ ಸದನ ಈ ವಿಧೇಯಕಕ್ಕೆ ಬೆಂಬಲ ನೀಡಲಿ ಎಂದೇ ಹಾರೈಸುವೆ.

**ಉಪಾಧ್ಯಕ್ಷರು :** ನಾನು ಪಂಡಿತ ಕುಂಝ್ರು ಅವರನ್ನು ಮಾತನಾಡಲು ಕೇಳುವುದಕ್ಕೆ ಮುನ್ನ ಒಂದು ವಿಷಯ ಸದನದ ಗಮನಕ್ಕೆ ತರಬಯಸುವೆ. ಸದನದ ಮುಂದೆ ಚರ್ಚೆಗೆ ಇರುವ ವಿಷಯ ಕಲಮು ೨ ಹೊರತು ಸಾಮಾನ್ಯ ಚರ್ಚೆ ಅಲ್ಲ. ಅನೇಕರು ಇದನ್ನು ಗಮನಿಸದೆ ಸದನದಲ್ಲಿ ಈ ವಿಧೇಯಕದ ಪರ–ವಿರೋಧವಾಗಿ ಮಾತನಾಡುತ್ತಿದ್ದಾರೆ. ಆದರೆ ನಾನು ಈ ಬಗ್ಗೆ ಚರ್ಚೆಯನ್ನು ಇಂದೇ ಸಮಾಪ್ತಿಗೊಳಿಸಬೇಕೆಂದೇ ಇದ್ದೆ..

**ಅನೇಕ ಸದಸ್ಯರು :** ಬೇಡ ಬೇಡ.

**ಪಂಡಿತ ಮೈತ್ರ :** ಅದೊಂದು ಮಹತ್ವದ ಕಲಮು; ವಿಧೇಯಕದ ಜೀವಾಳ.

**ಡಾ. ಅಂಬೇಡ್ಕರ್ :** ನಾನು ಹತ್ತನೆಯ ದಿನದಂದೇ ಮುಕ್ತಾಯಕ್ಕೆ ಸಿದ್ಧ.

**ಪಂಡಿತ ಮೈತ್ರ :** ಅದನ್ನು ೧೫ ದಿನಕ್ಕೆ ಮುಂದುವರಿಸಿ ಅದರ ಕಾರ್ಯಾಚರಣೆ ಐಚ್ಛಿಕವೆಂದು ಸಾರಿದರೆ ನಾವು ನೇರವಾಗಿ ಅಂಗೀಕರಿಸುವೆವು.

**ಉಪಾಧ್ಯಕ್ಷರು :** ಈ ಕಲಮಿನ ಬಗೆಗೆ ಈಗಾಗಲೇ ೧೭ ಅಥವಾ ೧೮ ಸದಸ್ಯರು ಮಾತನಾಡಿದ್ದಾರೆ.

**ಶ್ರೀ ನಜೀರುದ್ದೀನ್ ಅಹಮದ್ (ಪ.ಬಂ) :** ಅದೆಲ್ಲವನ್ನೂ ಮರೆಯಲಾಗಿದೆ.

**ಉಪಾಧ್ಯಕ್ಷರು :** ಆದುದರಿಂದಲೇ ನಾನು ಎಲ್ಲಾ ಕಲಮುಗಳ ಸೂಚನೆಗೆ ಅನುಮತಿಸಿದ್ದೇನೆ. ಹೀಗಾಗಿ ಕೇವಲ ಕಲಮು ೨ಕ್ಕೆ ಮಾತ್ರ ವಿಧೇಯಕದ ಚರ್ಚೆ ಸೀಮಿತವಾಗಿರದೇ ಸಮಗ್ರ ಚರ್ಚೆಗೆ ಆಸ್ಪದ ನೀಡಲಾಗಿದೆ. ಆದರೆ ನಾವು ಯಾವುದೇ ಒಂದು ನಿಗದಿತ ಸಮಯದಲ್ಲಿ ಚರ್ಚೆಯನ್ನು ಮುಗಿಸಲೇಬೇಕು. ಆದುದರಿಂದ ನಾನು ಸದಸ್ಯರನ್ನು ೨ನೆ ಕಲಮು ಹಾಗೂ ಅದಕ್ಕೆ ಸೂಚಿಸಬಹುದಾದ ತಿದ್ದುಪಡಿಗಳಿಗೆ ಮಾತ್ರ ಸೀಮಿತವಾಗಲಿ ಎಂದೇ ಹೇಳಿರುವೆ. ನಾನು ಸಾಮಾನ್ಯ ಚರ್ಚೆಗೆ ಅಡ್ಡಿಮಾಡಲಾರೆ, ಆದರೆ ಚರ್ಚೆ ಬೆಳೆಯದಂತೆ ಕೂಡಾ ನೋಡಿಕೊಳ್ಳಬೇಕಾಗಿದೆ. ಹೀಗಾಗಿ ಪಂಡಿತ ಕುಂಝ್ರು ಅವರು ಭಾಷಣ ಮಾಡುವ ಮುನ್ನ ಸದನಕ್ಕೆ ಸಲಹೆ ಸೂಚಿಸಿರುವೆ. ಇದನ್ನು ಪಂಡಿತ ಕುಂಝ್ರು ಅವರು ಅಪಾರ್ಥ ಮಾಡಿಕೊಳ್ಳಬಾರದು.

**ಶ್ರೀ ಆರ್.ಕೆ. ಚೌಧರಿ :** ಮಾನ್ಯ ಮಂತ್ರಿಗಳು ಮಾತನಾಡಿದ್ದಾರೆ. ಅದಕ್ಕೆ ಉತ್ತರ ನೀಡದೇ ಅವರನ್ನೇ ಅನುಸರಿಸುವಂತೆ ಹೇಳುವಿರೋ?

**ಪಂಡಿತ ಮೈತ್ರ :** ಈಗ ತಮ್ಮ ಹೇಳಿಕೆಯಂತೆ ಈ ವಿಧೇಯಕದ ಮೊದಲಿನ ಎರಡು ಭಾಗಗಳ ಬಗ್ಗೆ ಚರ್ಚೆ ಮುಂದುವರಿಯುವುದು, ಹೀಗೆಂದಾಗ ಕಲಮು ೨ ಹಾಗೂ ೪ ಈ ವಿಧೇಯಕದ ಮೂಲಭೂತ ವಿಷಯಗಳೇ ಎಂದಂತಾಯಿತು. ಈ ಎರಡು ಕಲಮುಗಳ ಚರ್ಚೆಯ ನಂತರ. ಫ್ರಾಂಟಿಯರ್ ಅಥವಾ ಪಂಜಾಬ್ ಮೇಲಿನಂತೆ ಮುಂದಿನ ಚರ್ಚೆ ಅತಿ ವೇಗದಿಂದ ಮುನ್ನಡೆಯಬಹುದು. ಪ್ರಮುಖವಾದ ಪ್ರಶ್ನೆ ಎಂದರೆ, ಬೇರೆ ಸಮೂಹಗಳಿಗೆ ಈ ಶಾಸನ ಹೇಗೆ ಜಾರಿಗೊಳಿಸಲಾಗುವುದು. ಆದುದರಿಂದ ತಾವು ಕೇವಲ ೧೬ ಹಾಗೂ ೧೭ ಸದಸ್ಯರ ಹೇಳಿಕೆಯಿಂದ ತೃಪ್ತರಾಗಬಾರದು. ಏಕೆಂದರೆ ನಾವು ೩೦ ಕೋಟಿ ಜನಾಂಗಕ್ಕೆ ಶಾಸನ ರಚಿಸುತ್ತಿದ್ದೇವೆ; ಹೀಗಾಗಿ ಈ ವಿಧೇಯಕದ ಬಗೆಗೆ ಗಂಭೀರ ಚರ್ಚೆಯಾಗಲೇಬೇಕು. ಅದು ಕ್ಷಣಿಕವಾಗಕೂಡದು. ವಿಧೇಯಕದ ಚರ್ಚೆ ಅಡ್ಡಾದಿಡ್ಡವಾದರೆ ಅದಕ್ಕೆ ನಾವು ಹೊಣೆಗಾರರಲ್ಲ. ಏಕೆಂದರೆ ಆಡಳಿತಪಕ್ಷದವರು ವಿಧೇಯಕವನ್ನು ಸಮಗ್ರವಾಗಿ ಮಂಡಿಸದೇ ವಿರೋಧ ವ್ಯಕ್ತವಾದಂತೆ ಅದನ್ನು ತಿದ್ದುತ್ತಲೇ ಮುಂದುವರಿದಿದ್ದಾರೆ. ಹೀಗಾಗಿ ಇದು ನಮ್ಮ ತಪ್ಪಲ್ಲ. ಈ ವಿಧೇಯಕಕ್ಕೆಂದೇ ವಿಶೇಷ ಸಮಾವೇಶವನ್ನು ಕರೆದಿದ್ದರೆ ಈ ಗೊಂದಲಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಈಗ ನಮ್ಮ ಮುಂದೆ ಇರುವುದು ನೂತನ ವಿಧೇಯಕವೇ ಹೊರತು ಹಳೆಯದಲ್ಲ.

**ಸರದಾರ ಬಿ.ಎಸ್. ಮಾನ್ (ಪಂಜಾಬ್) :** ಸರ್ ತಾವು ವಿಧೇಯಕದ ಬಗೆಗೆ ಚರ್ಚೆಯನ್ನು ಮುಕ್ತಾಯಗೊಳಿಸುವ ಬೆದರಿಕೆ ಒಡ್ಡಿದ್ದೀರಿ. ಆದುದರಿಂದ ನಾನು ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ ಹಲವರು ವಿವಿಧ ಸಮುದಾಯಗಳಿಗೆ ಸಂಬಂಧಿಸಿದಂತೆ ಹಲವಾರು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಅವರಿಗೆ ಅವಕಾಶ ನೀಡದೆ ಚರ್ಚೆಯನ್ನು ಮುಕ್ತಾಯಗೊಳಿಸಬಾರದು, ಏಕೆಂದರೆ ತಿದ್ದುಪಡಿಗಳು ಮತ್ತು ಅವರು ಈ ವಿಧೇಯಕದ ಬಗೆಗೆ ಹೊಂದಿರುವ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ.

**ಉಪಾಧ್ಯಕ್ಷರು :** ನನ್ನ ತೊಂದರೆ ಎಂದರೆ ನಾನು ಈಗಾಗಲೇ ತಿದ್ದುಪಡಿ ಮಂಡಿಸಿದ್ದ ನಾಲ್ಕು ಸದಸ್ಯರಿಗೆ ಅವಕಾಶ ಕಲ್ಪಿಸಿಕೊಟ್ಟಿರುವೆ. ಆದರೆ ಮಿಕ್ಕವರು ನಿನ್ನೆ ನನ್ನ ಗಮನಸೆಳೆಯದೇ ಆಸೀನರಾಗಿದ್ದರು. ಹೀಗಿದ್ದಾಗ ಅವರು ಚರ್ಚೆಯನ್ನು ಮುಕ್ತಾಯಗೊಳಿಸಬಾರದೆಂದು ಹೇಳಬಾರದು. ಏಕೆಂದರೆ ಅವರು ಸದನದಲ್ಲಿದ್ದು ನನ್ನ ಗಮನ ಸೆಳೆಯದೇ ಸುಮ್ಮನೆ ಕುಳಿತಲ್ಲಿ ಅವರಿಗೆ ಚರ್ಚೆಯಲ್ಲಿ ಭಾಗವಹಿಸುವ ಇಚ್ಛೆ ಇಲ್ಲವೆಂದಂತೆ ಭಾವಿಸುವೆ. ಈ ದಿನ ಸನ್ಮಾನ್ಯ ಬಿ.ಎಸ್. ಮಾನ್ ಅವರು ಚೀಟಿ ಕಳಿಸಿ ತಾವು ಮಾತನಾಡುವ ಬಯಕೆ ಸೂಚಿಸಿದ್ದಾರೆ. ಆದರೆ ನಿನ್ನೆ ನನ್ನ ಗಮನಸೆಳೆಯದೇ ಹೋಗಿದ್ದಾರೆ.

**ಸರದಾರ್ ಮಾನ್ :** ಸರ್ ನಾನು ನಿಮ್ಮ ಗಮನಸೆಳೆಯಲೆಂದೇ ನಿನ್ನ ಸಭೆಯಲ್ಲಿ ಎದ್ದು ನಿಂತೆ ಆದರೆ...

**ಉಪಾಧ್ಯಕ್ಷರು :** ಸಾಮಾನ್ಯ ಚರ್ಚೆಯ ಅಡಿಯಲ್ಲಿ ವಿಧೇಯಕದ ಸೂತ್ರಗಳನ್ನು ಸಂಪೂರ್ಣವಾಗಿ ಅನೇಕ ಹಂತಗಳಲ್ಲಿ ಚರ್ಚಿಸಲಾಗಿದೆ. ಈಗ ಈ ಕಲಮುಗಳು ಬೇರೆ ಸಮೂಹದವರಿಗೆ ಅನ್ವಯಿಸುವ ಬಗೆಗೆ ವಿವಿಧ ತಿದ್ದುಪಡಿಗಳನ್ನು ಮಂಡಿಸಲಾಗಿದ್ದು, ಈ ವಿಧೇಯಕ ಕೂಡಲೇ ಜಾರಿಗೆ ಬರಬೇಕೆ ಅಥವಾ ಅದನ್ನು ಐಚ್ಛಿಕಗೊಳಿಸಬೇಕೆ ಎಂಬುದನ್ನು ನಿರ್ಧರಿಸಬೇಕಾಗಿದೆ. ಆದರೆ ಸಂಪೂರ್ಣವಾಗಿ ಮಸೂದೆಯನ್ನು ಬೇರೆ ಮಸೂದೆಗಳಂತೆ ಅಂಗೀಕರಿಸಬೇಕೆ ಅಥವಾ ಬೇಡವೇ? ಎಂಬುದು ಈಗ ಅಪ್ರಸ್ತುತವಲ್ಲವೇ?

**ಶ್ರೀ ಜೆ. ಆರ್. ಕಪೂರ್ (ಉ.ಪ್ರ) :** ನಾನು ನಿಮ್ಮ ಗಮನವನ್ನು ನಿನ್ನೆ ಸೆಳೆಯದೇ ಹೋದೆ. ಏಕೆಂದರೆ ತಿದ್ದುಪಡಿಯನ್ನು ಮಂಡಿಸಿದ್ದು ಮಾತನಾಡದೇ ಇರುವರಿಗೆ ಅವಕಾಶ ತಾವು ಒದಗಿಸಬಹುದೆಂದೇ ನಾನು ಭಾವಿಸಿದೆ.

**ಉಪಾಧ್ಯಕ್ಷರು :** ಒಂದು ವೇಳೆ ನೀವು ಎದ್ದು ನಿಂತಿದ್ದರೂ ನಾನು ನಿಮಗೆ ಅವಕಾಶ ನೀಡುತ್ತಿರಲಿಲ್ಲ.

**ಶ್ರೀ ಜೆ.ಆರ್. ಕಪೂರ್ :** ನೂತನ ತಿದ್ದುಪಡಿಗಳಿಗೂ ನೀವು ಆಸ್ಪದ ನೀಡುವುದಿಲ್ಲವೇ?

**ಉಪಾಧ್ಯಕ್ಷರು :** ನಾನು ತಿದ್ದುಪಡಿಗಳ ಪಟ್ಟಿಯೊಂದನ್ನು ಸಿದ್ಧಪಡಿಸಿ ಅದನ್ನು ಸುತ್ತೋಲೆ ಮೂಲಕ ಪ್ರಕಟಿಸಿರುವೆ. ಸದಸ್ಯರು ಯಾವ ನೂತನ ತಿದ್ದುಪಡಿಗಳನ್ನು ಸೂಚಿಸಿರದೆ ಅವು ಕೇವಲ ಪುನರಾವೃತ್ತಿಗಳಾಗಿವೆ. ಬೇರೆಯವರಿಗೆ ಅವಕಾಶ ನೀಡಿದ ನಂತರ ನಿಮ್ಮ ವಿಚಾರ. ಆದರೆ ನಿಯಮಾವಳಿಯಂತೆ ನಿಮಗೆ ಆಸ್ಪದ ನೀಡಲಾರೆ. ನನ್ನ ಗೈರುಹಾಜರಿಯಲ್ಲಿ ಡಾ. ದೇಶಮುಖರಿಗೆ ಕೇಳಿಕೊಂಡಿದ್ದು ತಪ್ಪು. ನಾನು ಇದ್ದಿದ್ದರೆ ಅವರಿಗೆ ಅವಕಾಶ ನೀಡುತ್ತಿರಲಿಲ್ಲ.

**ಶ್ರೀ ಜೆ.ಆರ್. ಕಪೂರ್ :** ನನ್ನ ತಿದ್ದುಪಡಿಗಳು ನೂತನ ಮತ್ತು ಪುರಾತನ ಎರಡೂ ವರ್ಗಗಳಲ್ಲಿದೆ.

**ಉಪಾಧ್ಯಕ್ಷರು :** ಬೇರೆಯವರಿಗೆ ಅವಕಾಶ ನೀಡಿದ ಮೇಲೆ ನಿಮ್ಮ ವಿಷಯ ಗಮನಿಸುವೆ.

**ಶ್ರೀ ಭಟ್ಟ :** ಸರ್, ನಾನು ನಿಮ್ಮೆದುರಿಗೇ ಕುಳಿತಿದ್ದರೂ, ನಿಮ್ಮ ಗಮನಸೆಳೆಯಲಾಗದೆ ಕುಳಿತಿರುವೆ. ನಾನು ನಿನ್ನೆಯಿಂದಲೂ ಏಳಲು ಪ್ರಯತ್ನಿಸುತ್ತಿದ್ದರೂ, ತಾವು ನೋಟೀಸು ನೀಡಿದವರಿಗೆ ಮಾತ್ರ ಆಸ್ಪದ ಎಂದೇ ಹೇಳುತ್ತಾ ಬಂದಿರುವಿರಿ. ತಾವು ನನ್ನನ್ನು ಮರೆತಂತೆ ತೋರುತ್ತದೆ.

**ಉಪಾಧ್ಯಕ್ಷರು :** ಸದ್ದು ಸದ್ದು, ಸನ್ಮಾನ್ಯ ಸದಸ್ಯರು ಆಪಾದನೆ ಮಾಡಬಾರದು. ಸದಸ್ಯರು ಶಾಂತಿಯಿಂದ ತಮ್ಮ ಪಾಳಿಗಾಗಿ ಕಾಯಬೇಕು. ಅವರು ಕೂಡಲೇ ತಮ್ಮನ್ನು ಕರೆಯದೇ ಹೋದಲ್ಲಿ ಸದನದಿಂದ ಎದ್ದು ಹೋಗದೆ ತಮ್ಮ ಪಾಳಿಗಾಗಿ ಕಾಯಬೇಕು. ನಾನು ಈ ವಿಷಯವನ್ನೆಲ್ಲಾ ಗಮನಿಸಬೇಕೆಂದು ಹೇಳುವುದು ಸರಿಯಲ್ಲ. ನನಗೆ ಯಾರನ್ನು ಕರೆಯಬೇಕು ಎಂಬುದರ ಅರಿವಿದೆ. ನಾನು ಕ್ರಮಬದ್ಧವಾಗಿಯೇ ಕರೆಯಬೇಕೆಂಬ ನಿಯಮವಿಲ್ಲ. ಈ ಸಂಪ್ರದಾಯ ಬ್ರಿಟಿಷ್ ಕಾಮನ್ಸ್ ಸಭೆಯಲ್ಲಿಯೂ ಜಾರಿಯಲ್ಲಿದೆ. ನಾನು ಆಸನದಲ್ಲಿದ್ದಾಗ ಮಾನ್ಯ ಸದಸ್ಯರು ಎದ್ದು ನಿಂತಂತೆ ಕಾಣಲಿಲ್ಲ. ಏನೇ ಇರಲಿ ಸದಸ್ಯರು ಶಾಂತಿಯಿಂದ ಸ್ಥಾನಗಳಲ್ಲಿ ಆಸೀನರಾಗಿ ತಮ್ಮ ಪಾಳಿಗಾಗಿ ಕಾಯಬೇಕು. ಸದನ ಬಿಟ್ಟು ಲಾಬಿಗೆ ತೆರಳಬಾರದು.

**ಪಂಡಿತ ಮೈತ್ರ :** ನಿಮ್ಮ ಕಾರ್ಯಾಚರಣೆಯ ಬಗೆಗೆ ಯಾರಲ್ಲೂ ಅಸಂತೃಪ್ತಿ ಇಲ್ಲ. ನಮಗೆಲ್ಲರಿಗೂ ತಮ್ಮಿಂದ ನ್ಯಾಯ ದೊರೆಯುವ ಭರವಸೆ ಇದೆ. ಏಕೆಂದರೆ ತಾವು ನಿಷ್ಪಕ್ಷವಾಗಿದ್ದೀರಿ. ಆದುದರಿಂದ ಪೀಠದ ಬಗೆಗೆ ನಮಗೆಲ್ಲರಿಗೂ ಗೌರವವಿದೆ.

**ಪಂಡಿತ ಕೃಷ್ಣ ಚಂದ್ರಶರ್ಮ (ಯು.ಪಿ) :** ಶ್ರೀ ಭಟ್ಟರು ಬಳಸಿದ ಪದಗಳನ್ನು ಮರಳಿ ಪಡೆಯಬೇಕೆಂದೇ ನಾನು ಸೂಚಿಸುವೆ.

**ಪಂಡಿತ ಮೈತ್ರ :** ಅವರು ಯಾವ ವಿರೋಧವನ್ನೂ ವ್ಯಕ್ತಪಡಿಸಿಲ್ಲ.

**ಶ್ರೀ ಭಟ್ :** ನಿಮ್ಮ ಅನುಮತಿ ಕೋರಿ, ನಾನು ಎದ್ದು ನಿಂತಾಗಲೂ ತಾವು ಗಮನಿಸದೇ ಹೋದಿರಿ ಎಂದು ತಿಳಿಸುವುದೇ ನನ್ನ ಉದ್ದೇಶವಾಗಿತ್ತು.

**ಉಪಾಧ್ಯಕ್ಷರು :** ಈಗ ಯಾರು ಮಾತನಾಡಿಲ್ಲವೋ ಅವರ ಬಗೆಗೆ ವಿಚಾರಿಸುವಾ.

**ಪಂಡಿತ ಕುಂರ್ಝ್ರು (ಯು.ಪಿ) :** ನಾನು ನಿಮ್ಮ ಅಭಿಪ್ರಾಯಕ್ಕೆ ಸಹಮತ. ಏಕೆಂದರೆ ಚರ್ಚೆಯು ಕೇವಲ ಕಲಮಿಗೆ ಮಾತ್ರ ಸಂಬಂಧಿಸಿರಬೇಕಾಗಿತ್ತು. ಅಲ್ಲದೆ ಈ ಕಲಮಿನ ಸಾಧಕಬಾಧಕಗಳನ್ನು ಮಾತ್ರ ಪರಿಶೀಲಿಸಬೇಕಾಗಿತ್ತು. ಆದರೆ ನಿನ್ನೆಯ ಚರ್ಚೆಯಲ್ಲಿ ಹಲವಾರು ಪ್ರಾಮುಖ್ಯ ಸೂತ್ರಗಳನ್ನೇ ಪ್ರಸ್ತಾಪಿಸಲಾಗಿದೆ.

---

* ೧೯೫೧ರ ಸೆಪ್ಟಂಬರ್ ೧೮ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೭೭೨–೭೭

ಇದು ಸದಸ್ಯರ ಸಂದೇಹಗಳನ್ನು ಸೂಚಿಸುವುದಲ್ಲದೇ ಅವರ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳನ್ನು ಸೂಚಿಸಿದೆ. ಅದನ್ನು ನಿವಾರಿಸಲೇಬೇಕಾಗಿದೆ.

ನನ್ನ ಮಾನ್ಯ ಮಿತ್ರರಾದ ಶ್ರೀ ಎನ್.ವಿ. ಗಾಡಗೀಳ್ ಅವರು ಸಮರ್ಥನೀಯವಾಗಿ ನಿನ್ನೆಯ ಚರ್ಚೆಯಲ್ಲಿ ಹಲವಾರು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ನಾನು ಅವರು ನಿನ್ನೆ ಹಿಂದೂ ಲಾ ದಲ್ಲಿ ಆಗಿರಬಹುದಾದ ಬದಲಾವಣೆಗಳ ಬಗ್ಗೆ ಅವರಿಗಿಂತ ಅಧಿಕವಾಗಿ ಪ್ರಸ್ತಾಪಿಸುವ ಸಾಹಸಕ್ಕೆ ಕೈಹಾಕುವೆ. ಈ ವಿಧೇಯಕವನ್ನು ಚರ್ಚಿಸುವಾಗ ಕೇವಲ ಅದರಲ್ಲಿಯ ಅಂಶಗಳೊಂದನ್ನೇ ಗಮನಕ್ಕೆ ತೆಗೆದುಕೊಳ್ಳದೇ ನಾವು ಯಾವ ಸಮಾಜಕ್ಕೆ ಈ ಶಾಸನ ತರಲಿದ್ದೇವೆ ಎಂಬುದನ್ನು ಗಮನಿಸಬೇಕು. ಏಕೆಂದರೆ ವಿಧೇಯಕದ ಪ್ರಮುಖ ಗುರಿ ಎಂದರೆ ಬದಲಾವಣೆ. ಇಂದು ನಮ್ಮ ಸಮಾಜ ಪರಿವರ್ತನೆಯ ಮಾರ್ಗದಲ್ಲಿದೆ. ಈ ದಿಶೆಯಲ್ಲಿ ಪ್ರಮುಖವಾದ ಬದಲಾವಣೆ ಎಂದರೆ ಜಾಗರೂಕತೆ. ಇಂದು ನಮ್ಮ ಜನ ಎಚ್ಚೆತ್ತಿದ್ದಾರೆ. ಅದರಲ್ಲಿಯೂ ಕಳೆದ ಇಪ್ಪತ್ತೈದು ವರ್ಷಗಳಿಂದ ನಮ್ಮ ಸಹೋದರಿ ಬಂಧುಗಳಲ್ಲಿ ಅಪಾರ ಜಾಗರೂಕತೆ ಮೂಡಿಬರಹತ್ತಿದೆ. ಅವರು ತಮ್ಮ ಹಕ್ಕುಬಾಧ್ಯತೆಯನ್ನು ಹರ್ಷಯುಕ್ತವಾಗಿ ಅರಿತುಕೊಳ್ಳತೊಡಗಿದ್ದಾರೆ. ಅಲ್ಲದೆ ಅದನ್ನು ಪಡೆಯಲು ಸಾಮೂಹಿಕ ಪ್ರಯತ್ನಗಳನ್ನು ಆರಂಭಿಸಿದ್ದಾರೆ. ಈ ವಿಧೇಯಕವು ಶಿಕ್ಷಿತ ಮಹಿಳೆಯರ ಸಾಹಸದಿಂದಲೇ ಸದನದಲ್ಲಿ ಮಂಡಿಸಲಾಗಿದೆ ಎಂದರೆ ತಪ್ಪಲ್ಲ. ಏಕೆಂದರೆ, ಇಂದು ಮಹಿಳೆಯರಲ್ಲಿ ವಿದ್ಯಾಪ್ರಚಾರ ಶೀಘ್ರವಾಗತೊಡಗಿದೆ.

**ಶ್ರೀ ಆರ್.ಕೆ. ಚೌಧರಿ :** ನಿಮ್ಮ ಅಭಿಪ್ರಾಯದಂತೆ ಪಾಶ್ಚಿಮಾತ್ಯ ಶಿಕ್ಷಣವೇ?

**ಪಂಡಿತ ಕುಂರ್ಝು :** ನೀವು ಓರ್ವ ಉತ್ತಮ ಹಿಂದೂ ಎಂದು ಭಾವಿಸಿದ್ದರೂ, ತಾವು ಆ ಶಿಕ್ಷಣವನ್ನೇ ಪಡೆದಿರುವಿರಿ. ಆದುದರಿಂದ ನಮ್ಮ ಭಗಿನಿಯರೂ ಅದೇ ಶಿಕ್ಷಣ ಪಡೆಯುವುದರಿಂದ ತಮ್ಮ ಧರ್ಮದ ಬಗೆಗೆ ಅಗೌರವ ಸೂಚಿಸುತ್ತಾರೆ. ಅಥವಾ ಅಂತಾರಾಷ್ಟ್ರೀಯರಾಗುತ್ತಾರೆ ಮತ್ತು ಸಂಸ್ಕೃತಿಗೆ ವಿರೋಧಮಾಡುತ್ತಾರೆ ಎಂದು ಭಾವಿಸಬೇಡಿ. ನಮ್ಮ ಸ್ತ್ರೀಯರು ಅಧಿಕವಾಗಿ ವಿದ್ಯಾವಂತರಾಗುತ್ತಿದ್ದಾರೆ. ಅವರು ಸಮಾನತೆಯ ಆಧಾರದ ಮೇಲೆ ಮತದಾನದ ಹಕ್ಕನ್ನೂ ಪುರುಷರಂತೆ ಪಡೆದಿದ್ದಾರೆ. ಈ ವಿಧವಾಗಿ ರೂಪಗೊಳ್ಳುತ್ತಿರುವ ಸಮಾಜದಲ್ಲಿ ಸ್ತ್ರೀ ಪುರುಷರಲ್ಲಿಯ ಅಸಮಾನತೆಯನ್ನು ಸಹಿಸಲಾಗುವುದೇ? ಧರ್ಮದ ಹೆಸರಿನಲ್ಲಿ ಅಸಮಾನತೆಯ ಹಾಗೂ ಸಾಮಾಜಿಕ ನ್ಯಾಯ ನಿರಾಕರಿಸುವವರಿಂದಲೇ ಹಿಂದೂಧರ್ಮಕ್ಕೆ ದ್ರೋಹ ಬಗೆಯುತ್ತಾರೆ. ನಾವು ಚರ್ಚಿಸುತ್ತಿರುವ ವಿಧೇಯಕವು ಯಾವ ದೃಷ್ಟಿಯಿಂದಲೂ ಹಿಂದೂಧರ್ಮ ಮತ್ತು ಅದರ ಭಾವನೆಗಳಿಗೆ ವ್ಯತಿರಿಕ್ತವಾಗಿಲ್ಲ.

ನಾವು ಚರ್ಚಿಸುತ್ತಿರುವ ವಿಧೇಯಕದ ಪ್ರಮುಖ ಲಕ್ಷಣಗಳೇನು? ಅವು ಏಕಪತ್ನಿ ವ್ಯವಸ್ಥೆ ಹಾಗೂ ವಿವಾಹ ವಿಚ್ಛೇದನೆ. ಏಕಪತ್ನಿ ವ್ಯವಸ್ಥೆಯನ್ನು ಕುರಿತು ನನ್ನ ಮಾನ್ಯ ಮಿತ್ರರಾದ ಡಾ. ಶ್ಯಾಮ ಪ್ರಸಾದ ಮುಖರ್ಜಿಯವರು, ನಿನ್ನೆಯ ಚರ್ಚೆಯಲ್ಲಿ ಸೂಕ್ತವಾಗಿ ವಿವರಿಸಿದ್ದಾರೆ. ಹಿಂದಿನ ಅನಿಷ್ಟ ಪದ್ಧತಿಗಳನ್ನು ನಿವಾರಿಸುವಲ್ಲಿ ವಿಳಂಬವಾದುದಷ್ಟೇ ಅಪರಾಧ. ಹೀಗಾಗಿ ಈ ಪಾರ್ಲಿಮೆಂಟಿಗೆ ಅದನ್ನು ಸರಿಪಡಿಸುವ ಅಧಿಕಾರವಿಲ್ಲ ಎಂದರೆ ಅದು ಮೌಢ್ಯದ ಮಾತಾಗಬಹುದೆಂದೇ ಅವರು ಹೇಳಿದ್ದಾರೆ. ಅವರು ಏಕಪತ್ನಿ ವ್ಯವಸ್ಥೆ ಅಡಿಯಲ್ಲಿ ಮುಸ್ಲಿಂರನ್ನೂ ಸೇರ್ಪಡಿಸಿದರೆ ಅದನ್ನು ಸ್ವಾಗತಿಸುವುದಾಗಿ ಹೇಳಿದ್ದಾರೆ. ನನಗೆ ತಿಳಿದಂತೆ ಈ ವಿಧೇಯಕದ ಬಗೆಗೆ ಸಾಮಾನ್ಯ ಚರ್ಚೆ ನಡೆದಾಗ, ಹಲವು ಸದಸ್ಯರು ನಾವು ಮುಸಲ್ಮಾನ ಸಂಪ್ರದಾಯವನ್ನು ಅನುಸರಿಸುತ್ತಿದ್ದೇವೆ ಎಂದೇ ಸಂದೇಹ ವ್ಯಕ್ತಪಡಿಸಿದರು. ಆದರೆ ನಮಗೆಲ್ಲರಿಗೂ ತಿಳಿದಂತೆ ಮುಸ್ಲಿಂ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಅಧಿಕಾರವಿದೆ. ಪರಿಸ್ಥಿತಿ

ಹೀಗಿದ್ದಾಗಲೂ ನಾವು ಹಿಂದೂ ಮುಸ್ಲಿಂರಲ್ಲಿ ಸಾಮರಸ್ಯವನ್ನು ಒಪ್ಪದೇ ಇರುವುದು ಶೋಚನೀಯ. ಈ ಒಂದು ಹಿನ್ನೆಲೆಯಲ್ಲಿ ಹಿಂದೂ ವಿವಾಹ ವಿಧಾನಗಳಲ್ಲಿ ಬದಲಾವಣೆಯನ್ನು ಶಾಸನದ ಮೂಲಕ ತರಕೂಡದು ಎಂದು ಹೇಳುವ ಹಕ್ಕು ನಮಗಿದೆಯೇ? ಯಾರು ಸ್ತ್ರೀಯರಿಗೆ ಅವರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ನೀಡಬಾರದೆಂದೇ ಪ್ರತಿಪಾದಿಸುತ್ತಿರುವರೋ ಅವರಿಗೆ ವಿವಾಹದ ವಿಚಾರಗಳಲ್ಲಿ ಮಾತನಾಡಲು ಯಾವ ಹಕ್ಕಿದೆ? ಅದನ್ನು ಮುಸಲ್ಮಾನರಿಗೂ ಏಕೆ ಅನ್ವಯಿಸಬಾರದು ಎಂದು ವಾದಿಸುವ ನೈತಿಕ ಹಕ್ಕು ಅವರಿಗಿಲ್ಲ.

ಈ ದಿಶೆಯಲ್ಲಿ ಮಂಡಿಸಲಾದ ಅಭಿಪ್ರಾಯಗಳನ್ನು ಹಿಂದೂ ಲಾ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದೆ. ಅಲ್ಲದೆ ಈ ಸಮಿತಿಯು ವಿರೋಧ ಅಭಿಪ್ರಾಯಗಳನ್ನು ಗಮನಿಸಿಯೇ ಈ ನಿರ್ಧಾರಕ್ಕೆ ಬಂದಿದೆ ಎಂದೇ ನಾನು ಜ್ಞಾಪಿಸಬಯಸುವೆ. ಈ ಬಗ್ಗೆ ಅದರ ಅಭಿಪ್ರಾಯ ಹೀಗಿದೆ:

"ನಾವು ಎಲ್ಲವನ್ನೂ ಗಮನಿಸಿಯೇ ಏಕಪತ್ನಿವ್ಯವಸ್ಥೆಯನ್ನು ಈ ಕರಡಿನಲ್ಲಿ ಉಳಿಸಿಕೊಳ್ಳಬೇಕೆಂಬ ನಿರ್ಣಯಕ್ಕೆ ಬಂದಿದ್ದೇವೆ. ಏಕೆಂದರೆ ಅದು ಮೊದಲನೆಯ ಪತ್ನಿಯನ್ನು ತೊರೆದು ಎರಡನೆಯ ವಿವಾಹಕ್ಕೆ ವಿರೋಧ ಸೂಚಿಸುತ್ತದೆ. ನಮಗೆ ಸಾಕಷ್ಟು ಪ್ರಮಾಣಗಳಿರುವುದರಿಂದಲೇ ಮರುವಿವಾಹವನ್ನು ನಿರ್ಬಂಧಿಸಲೆಂದೇ ಏಕಪತ್ನಿ ವ್ಯವಸ್ಥೆಯನ್ನು ಶಾಸನಬದ್ಧ ಮಾಡಬೇಕೆಂಬ ನಿರ್ಣಯಕ್ಕೆ ಬರಲಾಗಿದೆ".

ನನಗೆ ತಿಳಿದಂತೆ ಸಮಿತಿಯವರ ನಿರ್ಣಯ ಸೂಕ್ತವಾಗಿದೆ. ಅಲ್ಲದೆ ಬೊಂಬಾಯಿ ಪ್ರಾಂತದಲ್ಲಿ ಜಾರಿಯಲ್ಲಿದ್ದ ಏಕಪತ್ನಿ ವಿವಾಹ ಪದ್ಧತಿಯನ್ನು ಸಮಿತಿಯು ಎತ್ತಿ ಹಿಡಿದಿದೆ. ಆ ಪ್ರಾಂತದಲ್ಲಿ ಕೇವಲ ನಾಲ್ಕು ಐದು ವರ್ಷಗಳಿಂದ ಬಹುಪತ್ನಿ ವಿವಾಹವನ್ನು ಹಿಂದೂಗಳಲ್ಲಿ ರದ್ದುಗೊಳಿಸಲಾಗಿದೆ. ಅಂಥ ಕಾನೂನನ್ನೇ ಮದ್ರಾಸು ಈಗ ಜಾರಿಗೊಳಿಸಿದೆ. ಸೋಜಿಗದ ಸಂಗತಿ ಎಂದರೆ ಅಧಿಕ ಹಿಂದೂಗಳಿದ್ದ ಬರೋಡಾ ಸಂಸ್ಥಾನದ ಹಿಂದೂ-ದೊರೆಯು ಬಹುವರ್ಷಗಳ ಹಿಂದೆಯೇ ಈ ಪದ್ಧತಿಯನ್ನು ಜಾರಿಗೆ ತಂದಿರುವುದನ್ನು ನಾವು ಶ್ಲಾಘಿಸಬೇಕು.

**ಶ್ರೀ ಡಿ.ಡಿ. ಪಂತ (ಯು.ಪಿ.) :** ಅದರ ಅರಸೇ ಅದನ್ನು ಉಲ್ಲಂಘಿಸಿದ್ದಾನೆ.

**ಪಂಡಿತ ಕುಂಝ್ರು :** ಈ ಪ್ರದೇಶಗಳ ಹಿಂದೂ ಜನತೆಯೇ ಹಿಂದೂ ಲಾ ವನ್ನು ವಿರೋಧಿಸಿದರೆ ನಾವು ನಿಜ ಅಥವಾ ಪ್ರಾಮಾಣಿಕ ಹಿಂದೂಗಳನ್ನೆಲ್ಲಿ ಕಾಣಬೇಕು. ಈ ಸದನದಲ್ಲಿಯೇ? ಕೇವಲ ನಿನ್ನೆಯ ದಿನದಂದೇ ಈ ವಿಧೇಯಕವನ್ನು ಅಂಗೀಕರಿಸಿ ಅದರ ಕಾರ್ಯಾಚರಣೆ ಭಾಗವನ್ನು ರಾಜ್ಯಗಳಿಗೆ ಬಿಟ್ಟುಕೊಡಬೇಕೆಂದು ಸೂಚಿಸಲಾಯಿತು. ಈಗ ಪ್ರಮುಖ ವಿಷಯ ಎಂದರೆ ಈಗಾಗಲೇ ಎರಡು ರಾಜ್ಯಗಳಲ್ಲಿ ಏಕಪತ್ನಿ ಶಾಸನ ಜಾರಿಯಲ್ಲಿದೆ.

ಅದರಂತೆಯೇ, ದೇಶದ ಹಲವು ಪ್ರದೇಶಗಳಲ್ಲಿ ತಿರುವಾಂಕೂರು, ಕೊಚ್ಚಿನ್ನಿನ ಮಲಬಾರ ಜಿಲ್ಲೆಯಲ್ಲಿ ಹಿಂದೂಗಳಲ್ಲಿ ಬಹುಪತ್ನಿ ವಿವಾಹವನ್ನು ನಿಷೇಧಿಸಲಾಗಿದೆ. ಈ ಒಂದು ಹಿನ್ನೆಲೆಯಲ್ಲಿ ಹಾಗೂ ಅಧಿಕ ಪ್ರಕರಣಗಳಲ್ಲಿ ವಿವಾಹವು ಏಕಪತ್ನಿ ವಿಧಾನದಿಂದ ಕೂಡಿರುವಾಗ ಏಕಪತ್ನಿ ವ್ಯವಸ್ಥೆಯನ್ನು ಹಾಗೂ ಅದರ ಅಂಶಗಳನ್ನು ಐಚ್ಛಿಕಗೊಳಿಸುವ ಉದ್ದೇಶವೇನು? ಏಕೆಂದರೆ ಈ ವಿಧೇಯಕದಲ್ಲಿ ಇದು ಕಡ್ಡಾಯಗೊಳಿಸಲಾಗಿದೆ ಮತ್ತು ಅದು ಸಕಾರಣವೂ ಆಗಿದೆ. ಅದು ಕಡ್ಡಾಯ, ಆದರೆ ಈ ಸೂತ್ರವನ್ನು ಹಿಂದೂ ಸಮಾಜದ ಅನೇಕ ಪಂಗಡಗಳು ಒಪ್ಪಿದಂತಿವೆ. ಹೀಗಾಗಿ ಅಂಥ ಪ್ರದೇಶಗಳಲ್ಲಿ ಹಿಂದೂ ಲಾ ದ ಬಗೆಗೆ ಯಾವ ವಿದ್ರೋಹಿ ಕಾರ್ಯಾಚರಣೆಗಳೂ ಇಲ್ಲ. ಅಲ್ಲಿ ಸದನದಲ್ಲಿರುವ ಹಿಂದೂಗಳಂತಹ ಹಿಂದೂಗಳೇ ಇರುವುದರಿಂದ ನನ್ನ ಮಾನ್ಯ ಮಿತ್ರರಾದ ಡಾ. ಅಂಬೇಡ್ಕರ್‌ರು, ಈ ವಿಧೇಯಕವನ್ನು ಕಡ್ಡಾಯಗೊಳಿಸಬೇಕೆಂದು ಹೇಳುವುದು ಸಮಂಜಸವಾಗಿದೆ.

ಮತ್ತೊಂದು ವಿಷಯ ನಾನು ಮಾತನಾಡಲು ಬಯಸಿರುವೆ. ಅದು ವಿವಾಹ ವಿಚ್ಛೇದನೆ. ಇಲ್ಲಿ ಕೂಡಾ ವಿಧೇಯಕದ ಅಂಶಗಳನ್ನು ಐಚ್ಛಿಕಗೊಳಿಸಬೇಕೆಂದೇ ಹೇಳಲಾಗಿದೆ. ಆದರೆ ಅದನ್ನು ಆಗಲೇ ಐಚ್ಛಿಕವಾಗಿ ಸಮಾಜವೇ ಅಂಗೀಕರಿಸಿದೆ. ಈ ಶಾಸನ ಜಾರಿಗೆ ಬಂದಾಗ ಅಸಂತೃಪ್ತ ದಂಪತಿಗಳು ಕೋರ್ಟಿಗೆ ಧಾವಿಸಿ ಬರುವರೆಂಬುದು ಭ್ರಮೆ. ಏಕೆಂದರೆ ಈಗಾಗಲೇ ಜಾರಿಯಲ್ಲಿರಬಹುದಾದ ವಿಧಾನಗಳಿಂದ ಪರಿಹಾರ ದೊರೆಯದೇ ಹೋದಲ್ಲಿ ಮಾತ್ರ ಇದರ ಲಾಭ ಪಡೆಯಬಹುದು.

ಈ ಅಂಶದ ಬಗೆಗೆ ಹಿಂದೂ ಲಾ ಸಮಿತಿಯ ಅಭಿಪ್ರಾಯ:

"ನಮಗೆ ದೊರೆತಿರುವ ಸಾಕ್ಷ್ಯಾಧಾರಗಳಂತೆ, ಬ್ರಿಟಿಷ್ ಭಾರತದಲ್ಲಿ ಅನೇಕ ಸ್ತ್ರೀಯರನ್ನು ಅವರ ಗಂಡಂದಿರು ತೊರೆದಿರುವ ಘಟನೆಗಳು ಗಮನಕ್ಕೆ ಬಂದಿವೆ" ಮುಂದುವರಿದು ಸಮಿತಿಯು ಹೇಳುವಂತೆ:

"ಅಲ್ಲದೆ ನಮ್ಮ ಗಮನಕ್ಕೆ ಅನೇಕ ಪುನರ್‌ವಿವಾಹದ ಪ್ರಕರಣಗಳನ್ನೂ ತರಲಾಗಿದೆ. ಆದರೆ ಶಾಸನದಲ್ಲಿ ಅವಕಾಶವಿಲ್ಲದೇ ಹೋದುದರಿಂದ ಪುನರ್‌ವಿವಾಹಗಳು ಜರುಗದೇ ಹೋಗಿವೆ. ಈ ಬಗೆಯ ಪ್ರಕರಣಗಳು ಅಧಿಕವಿರದೇ ಹೋದರೂ ಆತಂಕದ ವಿಷಯವಾಗಿದೆ. ಈ ಬಗೆಯ ಸಾವಿರಾರು ಸ್ತ್ರೀಯರು ಪುನರ್‌ವಿವಾಹದಿಂದ ಮುಕ್ತಿ ಪಡೆಯುವುದೇ ಆದರೆ ಅದಕ್ಕೆ ನಕಾರ ನೀಡುವುದು ಸರಿಯೇ? ಅಲ್ಲದೆ ನಮ್ಮ ಅವಗಾಹನೆಗೆ ಗೌಪ್ಯವಾಗಿ ಪುನರ್‌ವಿವಾಹ ಹೊಂದಿದ ಪ್ರಕರಣಗಳಲ್ಲಿ ಸಮಾಜ ಮೂಕಪ್ರೇಕ್ಷಕನಂತೆ ಮೌನ ಸಮ್ಮತಿಯನ್ನು ಸೂಚಿಸಿದ ಸಂಗತಿಯನ್ನು ತಿಳಿಸಲಾಗಿದೆ."

ಆದುದರಿಂದ ವಿವಾಹ ವಿಚ್ಛೇದನೆಯನ್ನು ನಮ್ಮ ವಿವಾಹ ಶಾಸನಗಳಲ್ಲಿ ಅಳವಡಿಸಬಾರದೆಂಬುದಕ್ಕೆ ಯಾವ ವಿರೋಧವಿದೆ? ಅದರ ಸೌಲಭ್ಯ ಪಡೆಯುವವರೇ ಇಲ್ಲ ಎಂದು ಹೇಳದೆ ಪರಿಹಾರ ಸೂಚಿಸುವ ಶಾಸನ ರಚಿಸುವುದರಿಂದ ಅಪಾಯವೇನೂ ಇಲ್ಲ; ಏಕೆಂದರೆ ಈಗಾಗಲೇ ಶಾಸನಬದ್ಧವಾಗಿ ಈ ವಿಷಯವನ್ನು ಜಾರಿಗೆ ತಂದಿರುವ ರಾಜ್ಯಗಳ ಬಗೆಗೆ ನಾನು ಹೇಳಿರುವೆ. ನಾನು ಹೇಳಿದ ರಾಜ್ಯಗಳಲ್ಲಿ ಏಕಪತ್ನಿ ವಿಧಾನದೊಂದಿಗೆ ವಿಚ್ಛೇದನೆಯ ಆಸ್ಪದವನ್ನೂ ಕಲ್ಪಿಸಿದಲ್ಲಿ ಹಿಂದೂಗಳಿಗೆ ಆಗುವ ನಷ್ಟವೇನು? ಈ ಕ್ರಮದಿಂದಾಗಿ ಹಿಂದೂ ವಿವಾಹದ ಪಾವಿತ್ರ್ಯತೆಗೆ ಧಕ್ಕೆ ಉಂಟಾಗಬಹುದೇ? ಅಲ್ಲಿಯ ಹಿಂದೂಗಳು ವಿವಾಹವನ್ನು ಪವಿತ್ರ ಎಂದು ಪರಿಗಣಿಸುವುದಿಲ್ಲವೇ? ಅವರಿಗೆ ಹಿಂದೂ ಧರ್ಮ ಅಥವಾ ಹಿಂದೂ ಸಂಸ್ಕೃತಿಯ ಬಗೆಗೆ ಗೌರವವಿಲ್ಲವೇ?

**ಪಂಡಿತ ಮೈತ್ರ :** ಅದರ ಉದಾಹರಣೆಯೇ ಇಲ್ಲಿದೆ.

**ಪಂಡಿತ ಕುಂರ್ಝ್ರು :** ನನ್ನ ಸನ್ಮಾನ್ಯ ಮಿತ್ರರಾದ ಮೈತ್ರ ಹಾಗೂ ನಾನು ಹೇಳಿದ ರಾಜ್ಯದ ಜನರೊಂದಿಗೆ ಮಾತನಾಡಿದಾಗ ಮೈತ್ರರಷ್ಟೇ ಅವರೂ ಹಿಂದೂಗಳಾಗಿದ್ದಾರೆ ಎಂದು ಮನವರಿಕೆ ಉಂಟಾಗಬಹುದು.

**ಪಂಡಿತ ಮೈತ್ರ :** ಹಾಗಿದ್ದಲ್ಲಿ ರಾಜ್ಯಗಳಿಗೆ ಬಿಟ್ಟುಬಿಡಿ. ಅದನ್ನೇಕೆ ಒತ್ತಾಯಿಸುತ್ತೀರಿ?

**ಪಂಡಿತ ಕುಂರ್ಝ್ರು :** ನಾನು ಈಗಾಗಲೇ ಹೇಳಿದಂತೆ ಈ ಬಗೆಯ ಕಾನೂನು ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿದೆ. ಎರಡನೆಯದಾಗಿ, ಈ ಕಾನೂನು ಸಮ್ಮತಿಯಿಂದಲೇ ಜಾರಿಗೊಳ್ಳಬೇಕೆಂದೇ ಹೇಳಿರುವಾಗ ಮತ್ತೆ ಅದನ್ನು ಪ್ರಶ್ನಿಸುವುದು ಸರಿಯೇ?

**ಪಂಡಿತ ಮೈತ್ರ :** ಎಲ್ಲರಿಗೂ ಐಚ್ಛಿಕಗೊಳಿಸಿರಿ.

**ಪಂಡಿತ ಕುಂರ್ಝ್ರು :** ಅಸಂತೃಪ್ತ ದಂಪತಿಗಳಿಗೆ ಪರಿಹಾರ ಪಡೆಯಲು ಇದು ಐಚ್ಛಿಕವಾಗಿಯೇ ಇದೆ. ಏಕೆಂದರೆ ವಿಚ್ಛೇದನೆ ಅವರ ಇಚ್ಛೆಗೆ ಸಂಬಂಧಿಸಿದ್ದು, ಅದನ್ನು ಯಾರೂ ಕಡ್ಡಾಯವಾಗಿ

ಹೇರಬೇಕಾಗಿಲ್ಲ. ಇದಕ್ಕಿಂತಲೂ ಅಧಿಕ ಏನು ಮಾಡಬಹುದು? ಈ ದಿಶೆಯಲ್ಲಿ ಮದ್ರಾಸ್ ಮತ್ತು ಬೊಂಬಾಯಿಗಳಿಗಿಂತ ಬಹುಮುಂಚೆಯೇ ಬರೋಡಾದಲ್ಲಿ ಈ ಶಾಸನ ಜಾರಿಯಲ್ಲಿದೆ. ಆದರೆ ಹಿಂದೂ ಲಾ ಸಮಿತಿಯ ಮುಂದೆ ನೀಡಿದ ಸಾಕ್ಷಿಯಲ್ಲಿ ೧೯೪೦–೪೧–೪೨ರಲ್ಲಿ ಯಾವ ಜಾತಿಯಲ್ಲಿ ವಿಚ್ಛೇದನೆಗೆ ಅವಕಾಶವಿಲ್ಲವೋ ಅವರಿಂದ ಕೇವಲ ಮೂರೇ ಮೂರು ದಾವೆಗಳು ದಾಖಲಾದಂತೆ ತಿಳಿಸಲಾಗಿದೆ. ಆದರೆ ನನ್ನ ಮಾನ್ಯ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ನಿನ್ನೆ ಹೇಳಿದಂತೆ ಶೇಕಡಾ ೯೦ ಜನತೆಗೆ ವಿಚ್ಛೇದನೆಯ ಅವಕಾಶವಿರುವಾಗ, ಯಾರಿಗಾಗಿ ಈ ಕಾನೂನನ್ನು ಜಾರಿಗೊಳಿಸಬೇಕು? ಇದು ಕೇವಲ ಶೇಕಡಾ ೧೦ ಜನತೆಯಲ್ಲಿ ವಿವಾಹ ಬಂಧನ ಶಾಶ್ವತ ಎಂದು ಪರಿಗಣಿಸುವವರಿಗೆ ಮಾತ್ರವೇ? ಖೇದದ ವಿಷಯ ಅವರು ಆಸನದಲ್ಲಿಲ್ಲ. ಆದರೂ ಈ ವಿಷಯ ಅವರ ಗಮನಕ್ಕೆ ತರಬಯಸುವೆ.

ಇದಲ್ಲದೆ, ನಮಗೆಲ್ಲಾ ಹಿಂದೂ ಸಮಾಜದಲ್ಲಿ ಏನು ಜರುಗುತ್ತಿದೆ ಎಂಬುದು ತಿಳಿದೇ ಇದೆ. ಪತಿಯು ಕುಡಿದು ಪತ್ನಿಯನ್ನು ಥಳಿಸುವುದು, ಅವಳನ್ನು ಬಿಡುವುದು ಇವು ಪವಿತ್ರ ಕಾರ್ಯಗಳೇ? ಇದು ಹಿಂದೂ ಪವಿತ್ರ ವಿವಾಹ ಪದ್ಧತಿಗೆ ಪೂರಕವೇ? ನನ್ನ ಹಿಂದೆ ಇರುವ ಓರ್ವ ಸದಸ್ಯರು ಅದನ್ನು ಏಕೆ ನಿರ್ಬಂಧಿಸಬಾರದು? ಎಂದೇ ಕೇಳುತ್ತಿದ್ದಾರೆ.

**ಪಂಡಿತ ಮೈತ್ರ :** ಕೆಲವು ಪತ್ನಿಯರೂ ಗಂಡಂದಿರನ್ನು ಥಳಿಸುತ್ತಾರೆ.

**ಪಂಡಿತ ಕುಂಝ್ರು :** ನಾನು ಪತ್ನಿಯರು ಕಳಂಕರಹಿತರು ಎಂದು ಹೇಳಿಲ್ಲ. ಅವರೂ ತಮ್ಮದೇ ಆದ ಲೋಪದೋಷಗಳಿಂದ ಕೂಡಿದ್ದಾರೆ. ಹೀಗಾಗಿ ಕಾನೂನು ಕೇವಲ ಗಂಡಂದಿರಿಗಾಗಿ ಮಾತ್ರ ಇರದೇ ಹೆಂಡಂದಿರಿಗೂ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜದ ಉನ್ನತ ವರ್ಗಗಳಾದ ಬ್ರಾಹ್ಮಣ, ವೈಶ್ಯ, ಕ್ಷತ್ರಿಯರು ಮಾತ್ರ ಉನ್ನತ ಆದರ್ಶಗಳನ್ನು ಹೊಂದಿದ್ದಾರೆ ಎಂಬುದು ಸರಿಯಲ್ಲ.

ಅಲ್ಲದೆ ಈ ವಿಧೇಯಕವು ಸಮಾಜದಲ್ಲಿ ಆತಂಕಕ್ಕೆ ಆಸ್ಪದ ನೀಡಿದೆ ಎಂದೇ ಆಪಾದಿಸಲಾಗಿದೆ. ಇದು ವಿಧೇಯಕದ ಅಂಶಗಳನ್ನು ಸರಿಯಾಗಿ ಅರಿಯದೇ ಹೋದುದರ ಪರಿಣಾಮವೆಂದೇ ಹೇಳಬೇಕು. ಈ ಅಂಶಗಳನ್ನು ಸೂಕ್ತವಾಗಿ ವಿವರಿಸಿದರೆ ಯಾವ ಆತಂಕವೂ ಇರಲಾರದು. ಈ ಆತಂಕದ ಬಗೆಗೆ ಮಾತನಾಡಿದ ಮಾನ್ಯ ಸದಸ್ಯರು ಈ ಬಗೆಗೆ ಕಾಳಜಿ ವಹಿಸಿ ಜನರಿಗೆ ತಿಳಿಸಿ ಹೇಳಿದರೆ...

**ಪಂಡಿತ ಮೈತ್ರ :** ಸರಕಾರ ಆ ಕಾರ್ಯ ಮಾಡಲಿ.

**ಪಂಡಿತ ಕುಂಝ್ರು :** ಬಹುಭಾಗ ಅಸಂತೃಪ್ತಿಯು ನಿವಾರಣೆ ಹೊಂದಬಲ್ಲದು. ಸರಕಾರ ಮಾಡಬೇಕಾದುದನ್ನೆಲ್ಲಾ ಮಾಡಿದರೂ, ಜನತೆಯೂ ಈ ದಿಶೆಯಲ್ಲಿ ಕಾರ್ಯ ಮಾಡಬೇಕಾದುದು ಅವರ ನೈತಿಕ ಹೊಣೆಯಲ್ಲವೇ? ಅವರೇಕೆ ಈ ವಿಧೇಯಕದ ಬಗೆಗೆ ಉಂಟಾಗಿರುವ ತಪ್ಪು ಅಭಿಪ್ರಾಯಗಳನ್ನು ನಿವಾರಿಸಬಾರದು?

**ಪಂಡಿತ ಮೈತ್ರ :** ಅದನ್ನು ಅವರೇ ನಿರ್ಧರಿಸಲು ಬಿಡಿ.

**ಪಂಡತಿ ಕುಂಝ್ರು :** ನಾನು ಹೇಳಿದ್ದನ್ನು ನಂಬದೇ ಹೋದ ನನ್ನ ಮಿತ್ರರಿಗೆ ಏನೂ ಹೇಳಲಾರೆ.

**ಪಂಡಿತ ಮೈತ್ರ :** ಅದು ನನ್ನ ದುರ್ದೈವ.

**ಪಂಡಿತ ಕುಂಝ್ರು :** ಅವರು ಸತ್ಯ ಸಂಗತಿಗೆ ಕಣ್ಣುಮುಚ್ಚಿ ಕುಳಿತರೆ...

**ಪಂಡಿತ ಮೈತ್ರ :** ಇಲ್ಲ ನಾನು ನೇರವಾಗಿಯೇ ನೋಡುತ್ತಿರುವೆ.

**ಪಂಡಿತ ಕುಂಝ್ರು :** ಈ ವಿಧೇಯಕಕ್ಕೆ ಮುನ್ನ ವಿಚ್ಛೇದನೆ ಹಾಗೂ ಏಕಪತ್ನಿ ವ್ಯವಸ್ಥೆಯನ್ನು ಭಾರತದಲ್ಲಿ ಕೇಳಿರಲಿಲ್ಲ ಎಂದೇ ಹೇಳಿದರೆ.

**ಆರ್.ಕೆ. ಚೌಧರಿ :** ಏಕಪತ್ನಿ ಎಂದರೆ ಏಕತಾನತೆ ಎಂದೇ.

**ಪಂಡಿತ ಕುಂಝ್ರು :** ನನಗೆ ತಿಳಿದಂತೆ, ಈ ವಿಧೇಯಕಕ್ಕೆ ಬೆಂಬಲ ಸೂಚಿಸುವವರು, ಸ್ತ್ರೀ ಮತ್ತು ಪುರುಷರಲ್ಲಿ ಸಮಾನತೆ ಹಾಗೂ ಹಿಂದೂ ಸಮಾಜದ ಪುನರುತ್ಥಾನದಿಂದ ಅದರ ಗತವೈಭವವನ್ನು ಮರಳಿ ಪಡೆಯುವಲ್ಲಿ ಹಿಂದೂ ಸಮಾಜ ಮತ್ತು ಅದರ ಸಂಸ್ಕೃತಿಗೆ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ ಎಂದೇ ಭಾವಿಸುವೆ. ಆದುದರಿಂದ ಅವರು ತಮ್ಮ ಸತತ ಪ್ರಯತ್ನದಿಂದ ಹಿಂದೂಧರ್ಮವು ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಬಲ್ಲರೆಂದೇ ನಂಬಿರುವೆ.

* **ಶ್ರೀ ಭಟ್ (ಭಾಷಣದ ಇಂಗ್ಲಿಷ್ ಭಾಷಾಂತರ) :** ಸರ್, ನನಗೆ ಆಂಗ್ಲ ಭಾಷೆಯಲ್ಲಿ ಮಾತನಾಡಬೇಕೆಂದೇ ಸೂಚಿಸಲಾದರೂ, ನನಗೆ ಆಂಗ್ಲಭಾಷೆಯಲ್ಲಿ ನನ್ನ ಭಾವನೆಗಳನ್ನು ವ್ಯಕ್ತ ಮಾಡಲಾರದ ಪರಿಸ್ಥಿತಿಯಲ್ಲಿ, ನಾನು ಹಿಂದೂಸ್ಥಾನಿಯಲ್ಲಿ ಮಾತನಾಡುವೆ. ದಯಮಾಡಿ ಕ್ಷಮಿಸಬೇಕು.

**ಶ್ರೀ ಆರ್.ಕೆ. ಚೌಧರಿ :** ಸರ್, ನಮಗೆ ಉನ್ನತ ಶೈಲಿಯ ಹಿಂದಿಭಾಷೆ ಅರ್ಥವಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ನಿವೇದಿಸುವ ವಿಷಯ ನಮಗೆ ಅರ್ಥವಾಗುವುದಿಲ್ಲ. ಅವರು ಸಾವಧಾನವಾಗಿ ಮಾತನಾಡಿದಲ್ಲಿ ಮಾತ್ರ ಅದು ಅರ್ಥವಾಗಬಹುದು.

**ಶ್ರೀ ಭಟ್ :** ನಾನು ಮಂತ್ರಿವರ್ಯರ ಹೇಳಿಕೆಗೆ ಉತ್ತರ ಕೊಡಲು ಮಾತ್ರವಲ್ಲದೇ ನನ್ನ ಅನಿಸಿಕೆಗಳನ್ನು ಹೇಳಲು ಸಭೆಯ ಮುಂದೆ ನಿಂತಿರುವೆ. ನಾನು ಹಿಮಾಲಯ ಸದೃಶ ಕಾರ್ಯವನ್ನು ಮಾಡಲು ಮುಂದುವರಿದಿದ್ದೇವೆ. ನಾವು ಭರತ, ಭಗೀರಥ, ರಾಮಕೃಷ್ಣ, ಮನು ಮತ್ತು ಯಾಜ್ಞವಲ್ಕ್ಯರ ಅನುಯಾಯಿಗಳು. ಈಗ ನಾವು ಕೈಗೆತ್ತಿಕೊಂಡಿರುವ ಹಿಂದೂ ಲಾ ದ ಕ್ರೋಡೀಕರಣ ಹಾಗೂ ಕ್ರಮ ವ್ಯವಸ್ಥೆಗೊಳಿಸುವ ಕಾರ್ಯ ಮಹಾನ್ ಕಾರ್ಯ. ಇದಕ್ಕೆ ಸಂಬಂಧಿಸಿದಂತೆ ಶ್ರೀ ಗೌರ್ ಅವರು, ಇಂಗ್ಲೆಂಡ್ ಬಗ್ಗೆ ಹೀಗೆ ಹೇಳಿದ್ದಾರೆ:

"ಇಂಗ್ಲೆಂಡಿನ ವಿವಿಧ ಶಾಸನಗಳನ್ನು ಕ್ರೋಡೀಕರಿಸುವ ಹಲವಾರು ಪ್ರಯತ್ನಗಳು ವಿಫಲವಾಗಿವೆ." ಇಂಗ್ಲೆಂಡ್ ಮುಂದುವರಿದ ದೇಶ. ಅಲ್ಲಿಯೇ ಕ್ರೋಡೀಕರಣ ವಿಫಲವಾಗಿವೆ. ನಮ್ಮ ದೇಶದಲ್ಲಿಯಂತೂ ವಿವಿಧ ತೊಂದರೆಗಳಿವೆ. ವಿವಿಧ ಸಂಪ್ರದಾಯ ವಿರೋಧಾಭಾಸಗಳಿವೆ, ಹೀಗಾಗಿ ನಮ್ಮ ಕಾರ್ಯ ಸುಲಭ ಸಾಧ್ಯವಲ್ಲ. ಆದರೆ ಮಂತ್ರಿವರ್ಯರಾದ ಕಾಕಾ ಸಾಹೇಬ್ ಗಾಡಗೀಳರು ಹೇಳಿದಂತೆ ಈ ಕಾರ್ಯ ಮಾಡದೇ ಹೋದರೆ ನಾವು ಗಂಗೆ ಯಮುನೆಯರನ್ನು ಧರೆಗೆ ತರುವ ಭಗೀರಥನನ್ನು ಭಂಗಗೊಳಿಸಿದಂತಾಗುವುದಿಲ್ಲವೇ? ಹೀಗಾಗಿ ನಾನು ಅವರನ್ನು ಅಭಿನಂದಿಸುವೆ. ಅವರ ಯತ್ನಕ್ಕೆ ಭಂಗ ತರಲಾರೆ. ನಾನು ಹೇಳುವುದೇನೆಂದರೆ, ಸಮಯಕ್ಕೆ ಸರಿಯಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಸೂಕ್ತವಾದ ವಿಧಾನಗಳನ್ನು ಅನುಸರಿಸಬೇಕು. ಪಂಡಿತ ಕುಂಝ್ರು ಅವರ ಹೇಳಿಕೆಯಂತೆ ಹಿಂದೂ ಶಾಸ್ತ್ರಗಳ ಪಾವಿತ್ರ್ಯತೆಗೆ ಭಂಗಬರುವ ವಿಧಾನದಲ್ಲಿ ಭೌತಿಕವಾದವನ್ನೇ ಅನುಸರಿಸಬೇಕೆಂಬುದು ನನ್ನ ವಾದವಲ್ಲ. ನಾವು ನಮ್ಮ ಅನುಕೂಲತೆಗಳನ್ನೂ ಗಮನಿಸಬೇಕು. ನಮ್ಮ ಹಿಂದೂ ಲಾ ಅಥವಾ ಶಾಸ್ತ್ರಗಳೂ ತಿದ್ದುಪಡಿಗೆ ಗುರಿಯಾಗಿರುವುದರಿಂದ ಕೇವಲ ಅವರು ಹೇಳಿದ ಶಾಸನಗಳೇ ಜಾರಿಯಲ್ಲಿರಬಲ್ಲವು

* ೧೯೫೧ರ ಸೆಪ್ಟಂಬರ್ ೧೮ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೮೧೫-೩೫

ಎಂದೂ ಹೇಳಲಾಗದು. ಇಂದು ಅವರು ಅಂಬೇಡ್ಕರ್‌ರನ್ನು ಮನುವೆಂದೂ, ಗಾಡಗೀಳರನ್ನು ಯಾಜ್ಞವಲ್ಕ್ಯರೆಂದೂ ಕರೆಯಬಹುದು. ಆದರೆ ಗಾಡಗೀಳರು ಅದೇ ಬಗೆಯಾದ ಹೆಸರನ್ನು ನಜೀರುದ್ದೀನ್ ಅಹಮದ್ ಅವರಿಗೆ ನೀಡಬಲ್ಲರೇ?

**ಶ್ರೀ ಶ್ಯಾಮಾನಂದನ ಸಹಾಯ್ :** ಅವರನ್ನು ನಾರದನೆಂದು ಕರೆಯಲಿ.

**ಶ್ರೀ ಭಟ್ಟ :** ಇಂದಿನ ದಿನಗಳಲ್ಲಿ ನಾವು ಮುಂದುವರಿದಿದ್ದೇವೆ ಅಥವಾ ಹಿಂದೆ ಬಿದ್ದಿರುವುವೇ ಎಂದೇ ಹೇಳಲು ಬಾರದಂತಹ ಸ್ಥಿತಿ–ಗತಿಯಲ್ಲಿದ್ದೇವೆ. ಇದನ್ನು ನಮ್ಮ ಆಹಾರ–ವಿಹಾರ, ಊಟ, ಉಡಿಗೆ–ತೊಡಿಗೆಗಳನ್ನು ಕಂಡಾಗ ತಿಳಿದುಬರುತ್ತದೆ, ಏಕೆಂದರೆ ನಾವು ಮೊಗಲರ ಅವಧಿಯಲ್ಲಿದ್ದಂತೆಯೇ ಇಂದೂ ಅದೇ ಅವಸ್ಥೆಯಲ್ಲಿದ್ದೇವೆ. ನಮ್ಮ ಜೀವನ ಮಟ್ಟವು ೧೫೦ ವರ್ಷಗಳ ಹಿಂದಿನಂತಿಲ್ಲವೇ? ವರ್ಷಗಳ ಹಿಂದಿನ ಸೌಕರ್ಯಗಳು ಇಂದಿವೆಯೇ?

ಈ ಎಲ್ಲವನ್ನೂ ಗಮನಿಸಿದಲ್ಲಿ ನಾವು ಮುಂದುವರಿದಿದ್ದೇವೆ ಎಂಬುದೇ ಸಂದೇಹಾಸ್ಪದ. ನಾವು ಅಧಿಕ ಕಾನೂನುಗಳನ್ನು ಜಾರಿಗೆ ತಂದಿದ್ದೇವೆ ಎಂಬ ಒಂದೇ ಕಾರಣಕ್ಕಾಗಿ ನಾವು ಮುಂದುವರಿದವರು ಎಂಬುದು ಸರಿಯೇ? ಅಥವಾ ನಾವು ಧೈರ್ಯ ಹಾಗೂ ಆರೋಗ್ಯಕರ ಆರ್ಯನ್ನರಾಗಿ ಮುಂದುವರಿದಿರುವೆವೋ? ಇವೆಲ್ಲಾ ಕ್ಲಿಷ್ಟ ಪ್ರಶ್ನೆಗಳು, ಇದಕ್ಕೆ ಉತ್ತರ ನೀಡಲಾರೆ ಹಾಗೂ ಅದಕ್ಕೆ ಸಮಯಾವಕಾಶವೂ ಇಲ್ಲ. ಇದೊಂದು ನೂತನ ವಿಷಯವಾಗಿರುವುದರಿಂದ ಅದರ ವಿವಿಧ ಆಯಾಮಗಳನ್ನು ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ನಾನು ಕಲಮು ೨ಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಸ್ತಾಪಿಸುವೆ. ನಮ್ಮ ಶಾಸ್ತ್ರ ಹಾಗೂ ಸ್ಮೃತಿಗಳು ಕಾಲಕಾಲಕ್ಕೆ ಬದಲಾಯಿಸುತ್ತಲೇ ಬಂದಿವೆ. ನಮ್ಮ ಮಾನ್ಯ ಮಂತ್ರಿಗಳು ಹೇಳಿದಂತೆ ನಮ್ಮ ಧರ್ಮಶಾಸ್ತ್ರಗಳಿದ್ದು ಅದಕ್ಕೆ ಗಾಡಗೀಳರು, ಅಂಬೇಡ್ಕರ್‌ರೂ ಮೈತ್ರ ಮುಂತಾದವರು ತಮ್ಮದೇ ಆದ ವ್ಯಾಖ್ಯೆಗಳನ್ನು ಒದಗಿಸಿದ್ದರು. ನಾನು ಶಾಸ್ತ್ರದ ಪಂಡಿತನಲ್ಲವಾದರೂ ನಾನು ಹೇಳುವುದೇನೆಂದರೆ ನಮ್ಮ ಧರ್ಮಶಾಸ್ತ್ರ ಹಾಗೂ ಸ್ಮೃತಿಗಳು ಅಮರವಾಗಿವೆ. ಆದರೂ ಕಾಲಕಾಲಕ್ಕೆ ಅದರಲ್ಲಿ ಬದಲಾವಣೆಗಳಾಗಿವೆ. ಕಾಲಕ್ಕೆ ತಕ್ಕಂತೆ ನಾವು ಮುಂದುವರಿಯುತ್ತಲೇ ಬಂದಿದ್ದೇವೆ. ಆದುದರಿಂದಲೇ ಹಿಂದೂ ಸಮಾಜವು ಇಂದಿಗೂ ಬದುಕಿ ಬಂದಿದೆ. ಇದನ್ನೇ ನಾನು ಅಮರ ಎಂದು ಭಾವಿಸುವೆ.

**ಪಂಡಿತ ಮಾಳವೀಯ :** ಈ ಕೋಡ್ ಜಾರಿಗೆ ಬಂದ ಮೇಲೆ ಅದು ಹಾಗೆ ಉಳಿಯಲಾರದು.

**ಶ್ರೀ ಭಟ್ಟ :** ನಾವು ಅವರಿಗೆ ಭೀತಿಯನ್ನುಂಟುಮಾಡಬಾರದು. ಏಕೆಂದರೆ ಹಿಂದೂ ಕೋಡ್ ಬಿಲ್ ಸಮಿತಿಯು ಏಪ್ರಿಲ್ ೧೯೪೭ರಲ್ಲಿಯೇ ವಿಧೇಯಕದ ಕರಡು ಪ್ರತಿಯನ್ನು ಸದನಕ್ಕೆ ಸಲ್ಲಿಸಿದೆ. ಅಲ್ಲದೆ ವಿಧೇಯಕದ ಗೊತ್ತುಗುರಿಗಳ ಬಗ್ಗೆ ಹೇಳಿದ ವಾಕ್ಯ ಹೀಗಿದೆ. "ಕ್ರೋಡೀಕರಣ ಮತ್ತು ಏಕರೂಪ ಶಾಸನದ ಬಗೆಗೆ ಬಲವಾದ ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗಿದೆ" ಹಾಗೂ ನಮ್ಮ ಕಾಕಾ ಸಾಹೇಬರು ಹೇಳುವಂತೆ "ಯಾವ ಅಭಿಪ್ರಾಯಕ್ಕೆ ಅಧಿಕ ಬೆಂಬಲವಿದೆ ಎಂದು ಹೇಳಲಾಗದು."

**ಉಪಾಧ್ಯಕ್ಷರು :** ಕಾರ್ಯಾಲಯದ ಅಧಿಕೃತ ವರದಿಯಲ್ಲಿ "ಕಾಕಾ ಸಾಹೇಬ್" ಎಂದರೆ ಯಾರು ಎಂದು ತಿಳಿಯಲು ಸಾಧ್ಯವಾಗದು.

**ಶ್ರೀ ಭಟ್ಟ :** ನೀವು ಹೇಳುವುದು ಸತ್ಯ. ನಾನು ಒಪ್ಪುವೆ. ಕಾಕಾ ಸಾಹೇಬ್ ಅಂದರೆ ಮಾನ್ಯ ಮಂತ್ರಿಗಳಾದ ಶ್ರೀ ಗಾಡಗೀಳ್ ಹಾಗೂ ಇತರರು ಹೇಳಿದಂತೆ, ಆಂಗ್ಲಭಾಷೆ ಬಲ್ಲವರು ಮತ್ತು ಆಂಗ್ಲಭಾಷೆಯನ್ನು ಅರಿಯದೇ ಹೋದವರೂ ಪ್ರಗತಿಪರ ವಿಚಾರಗಳನ್ನು ಹೊಂದಿರುವವರು ಈ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ. ಇದು ನಿಜವೇ ಆಗಿದ್ದಲ್ಲಿ ಈ ವಿಧೇಯಕದ ವಿರುದ್ಧ ಪ್ರತಿಭಟನೆಗಳೇಕೆ?

ಎರಡೂ ಪಕ್ಷದವರೂ ಪಾರ್ಲಿಮೆಂಟಿನ ಮುಂದೆ ಏಕೆ ಪ್ರತಿಭಟನೆ ಜರುಗಿಸುತ್ತಿದ್ದಾರೆ? ನನಗೆ ತಿಳಿದಂತೆ ಎರಡೂ ಪಕ್ಷಗಳಲ್ಲಿ ಬುದ್ಧಿವಂತ, ವಿದ್ವಾಂಸ ಪುರುಷರು ಮತ್ತು ಮಹಿಳೆಯರಿದ್ದಾರೆ.

**ಡಾ. ಅಂಬೇಡ್ಕರ್ :** ಅವರೆಲ್ಲರೂ ಹುಚ್ಚರು. ನಮ್ಮ ಹುಚ್ಚಾಸ್ಪತ್ರೆಯಲ್ಲಿ ಸ್ಥಳ ಸಂಕೋಚವಾದುದರಿಂದ ಅವರು ಹೊರಗಡೆ ಬಂದಿದ್ದಾರೆ.

**ಶ್ರೀ ಭಟ್ಟ :** ಮಾನ್ಯ ಡಾ. ಅಂಬೇಡ್ಕರ್‌ರ ಅಭಿಪ್ರಾಯದಂತೆ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿದವರೆಲ್ಲರೂ ಹುಚ್ಚರು ಎಂದಂತೆ. ನಾನು ಅವರ ಈ ಹೇಳಿಕೆಯನ್ನು ವಿರೋಧಿಸುವೆ. ನೀವು ಅವರನ್ನು ಹುಚ್ಚರು ಎಂದರೆ ಅವರು ನಿಮ್ಮನ್ನು ನೂರು ಪಟ್ಟು ಅಧಿಕ ಹುಚ್ಚನೆಂದೇ ಕರೆಯುತ್ತಾರೆ. ಓರ್ವ ಸದಸ್ಯನು ತನ್ನ ಸಮಕಾಲೀನರನ್ನು ಹುಚ್ಚರೆಂದು ಭಾವಿಸಿದರೆ, ಅವರು ನಾವೆಲ್ಲರೂ ಅಸಹ್ಯ ಪಟ್ಟ ಬ್ರಿಟಿಷ್ ಆಡಳಿತದ ವ್ಯವಸ್ಥೆಗೆ ಸೇರಿದವರೆಂದೇ ಭಾವಿಸಬೇಕಾಗುತ್ತದೆ. ಯಾವ ಅಂಬೇಡ್ಕರ್‌ರನ್ನು ಮನುವಿಗೆ ಹೋಲಿಸಿರುವರೋ ಅಂಥವರ ಈ ಹೇಳಿಕೆಯನ್ನು ನಾನು ಪ್ರಬಲವಾಗಿ ವಿರೋಧಿಸುವೆ............

**ಶ್ರೀ ಆರ್.ಕೆ. ಚೌಧರಿ :** ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತಾಡುವುದರಿಂದ ಅವರ ಹಾಸ್ಯವನ್ನು ನಾವು ಸವಿಯಲಾರದೇ ಹೋಗಿದ್ದೇವೆ.

**ಪಂಡಿತ ಮಾಳವೀಯ : ಅದೊಂ**ದು ಹಾಸ್ಯವಾಗಿರದೆ, ಗಂಭೀರ ಹಾಸ್ಯವಾಗಿದೆ.

**ಪಂಡಿತ ಠಾಕೂರ ದಾಸ ಭಾರ್ಗವ (ಪಂಜಾಬ್) :** ನನ್ನ ಮಾನ್ಯ ಸ್ನೇಹಿತರು ಅರ್ಥ ಮಾಡಿಕೊಂಡಿಲ್ಲ. ಇಲ್ಲವಾದರೆ ಅವರು ಡಾ. ಅಂಬೇಡ್ಕರ್‌ರ ಹೇಳಿಕೆಯಂತೆ ಎಲ್ಲಿಯೋ ಇರುತ್ತಿದ್ದರು.

**ಶ್ರೀ ಆರ್.ಕೆ. ಚೌಧರಿ :** ನಾನು ಅಂಬೇಡ್ಕರ್‌ರ ಹೇಳಿಕೆಯನ್ನು ಅರ್ಥಮಾಡಿಕೊಂಡಿರುವೆ. ವಿಧೇಯಕವನ್ನು ವಿರೋಧಿಸಿದವರು ಹುಚ್ಚರೆಂದೇ ಅವರು ಕರೆದಿದ್ದಾರಲ್ಲವೇ? ಅದು ಕ್ರಮಬದ್ಧವೇ?

**ಉಪಾಧ್ಯಕ್ಷರು :** ಅವರು ಹಾಗೆ ಹೇಳಿಲ್ಲ.

**ಶ್ರೀ ಭಟ್ಟ :** ನಾನು ಹೇಳುವುದೇನೆಂದರೆ ಡಾ. ಅಂಬೇಡ್ಕರ್‌ರು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿರಬಹುದು, ಆದರೆ ನನ್ನ ಅಭಿಪ್ರಾಯಗಳು ಭಿನ್ನವಾಗಿವೆ. ೧೯೪೭ರ ನಂತರ ವಿಧೇಯಕವನ್ನು ಆಯ್ಕೆ ಸಮಿತಿಯ ಪರಿಶೀಲನೆಗೆ ಕಳುಹಿಸಿ ಕೊಡಲಾಯಿತು. ಆ ಸಮಿತಿ ಆಗಸ್ಟ್ ೧೯೪೮ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ನಂತರ ಈ ವಿಧೇಯಕವನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಗಿದೆ. ಸರ್ ತಮಗೆ ತಿಳಿದಂತೆ ನಮ್ಮ ಸರಕಾರವು ಯಾರನ್ನೂ ನೋಯಿಸಲು ಇಚ್ಛೆಪಡುವುದಿಲ್ಲ; ಹಾಗೂ ಜನತೆಯಲ್ಲಿ ಯಾವ ಬಗೆಯ ಗೊಂದಲಕ್ಕೂ ಅವಕಾಶ ನೀಡುವುದಿಲ್ಲ. ಹೀಗಾಗಿ ಸರಕಾರ ಹಲವಾರು ಪಂಡಿತರ ಅಭಿಪ್ರಾಯ ಪಡೆದಿದ್ದರೆ ಡಾ. ಅಂಬೇಡ್ಕರ್‌ರೂ ಅನೇಕ ಪಂಡಿತರ ಅಭಿಪ್ರಾಯ ಕೇಳಿದ್ದಾರೆ. ಆದುದರಿಂದ ಅವರು ಪಂಡಿತರಿಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಒದಗಿಸಿದ್ದಾರೆ. ಅದು ಅವರಿಗೆ ತೃಪ್ತಿ ನೀಡದೇ ಹೋಗಿರಲೂಬಹುದು. ಏಕೆಂದರೆ ಅವರ ಅಭಿಪ್ರಾಯಗಳನ್ನು ಡಾ. ಅಂಬೇಡ್ಕರ್‌ರು ಅಂಗೀಕರಿಸಿದರೋ ಇಲ್ಲವೋ ಅದು ನನಗೆ ತಿಳಿಯದು. ಆದರೆ ಅವರ ಸಲಹೆಗಳ ನಂತರವೇ ಅಂಬೇಡ್ಕರ್‌ರು ವಿವಿಧ ತಿದ್ದುಪಡಿಗಳಿಂದ ಕೂಡಿದ ವಿಧೇಯಕವನ್ನು ಮಂಡಿಸಿದ್ದಾರೆ. ಅಲ್ಲದೆ ಅವರು ಪ್ರತಿ ದಿನವೂ ನೂತನ ತಿದ್ದಿಪಡಿಗಳನ್ನು ಮಂಡಿಸುತ್ತಲೇ ಮುಂದುವರಿದಿದ್ದಾರೆ. ಅದೊಂದು ಉತ್ತಮ ಲಕ್ಷಣ. ಅದರಲ್ಲಿ ಯಾವ ತಪ್ಪಿಲ್ಲ. ಅವರು ತಮ್ಮ ವಿರೋಧಿಗಳ ಮನ ಒಲಿಸಿ ಸರ್ವಸಮ್ಮತವಾದ ಒಂದು ವಿಧೇಯಕವನ್ನೇ ಅಂಗೀಕರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಈ ಒಂದು ಉದ್ದೇಶದಿಂದಲೇ ಸರಕಾರವು ವಿಧೇಯಕವನ್ನು ಮಂಡಿಸಿದ್ದು. ಅದರಂತೆಯೇ ನಾವು ಕಲಮು ೨ರ ಬಗೆಗೆ ಚರ್ಚಿಸುತ್ತಿದ್ದೇವೆ. ಈ ವಿಧೇಯಕವು ಅನೇಕ

ನೂತನ ವಿಷಯಗಳಿಂದ ಒಡಗೂಡಿದೆ. ಆದರೆ ನಾವು ಕೇವಲ ಎರಡನ್ನು ಮಾತ್ರ ಚರ್ಚೆಗೆ ಎತ್ತಿಕೊಂಡಿದ್ದೇವೆ. ನಾವು ಒಂದೇ ವಿಷಯವನ್ನು ಶ್ರೀ ಗಾಡಗೀಳರು ಹೇಳಿದಂತೆ ಕೈಗೆತ್ತಿಕೊಂಡಿದ್ದರೆ ಅದು ನಮ್ಮ ವಿಚಾರವನ್ನು ಇನ್ನೂ ಅಧಿಕವಾಗಿ ಬಲಪಡಿಸುತ್ತಿತ್ತು. ಅದು ಅವರಿಗೆ ಸಾಧ್ಯವಾಗಬಹುದಾದ ವಿಚಾರವೇನಾದರೂ ಇದ್ದಲ್ಲಿ ಅಲ್ಲಿಗೇ ನಿಲ್ಲಿಸುವಂತೆ ಕೇಳುವೆ. ನಾನು ಈಗಾಗಲೇ ಹೇಳಿದ ನನ್ನ ಹೇಳಿಕೆಯನ್ನು ಪುನರುಚ್ಚರಿಸುವೆ. ಅದೇನೆಂದರೆ ಸರ್ಕಾರ ಚುನಾವಣೆಗಳಾಗಿ ಮುಂದಿನ ಸಂಸತ್ತು ಜಾರಿಗೆ ಬರುವ ಅವಧಿಯವರೆಗೂ ಈ ವಿಧೇಯಕದ ಬಗೆಗೆ ಆತುರ ತೋರಬಾರದು. ಏಕೆಂದರೆ ಈ ಪ್ರಶ್ನೆ ಮತದಾರರ ಮುಂದೆ ಮಂಡಿಸುವುದೇ ಸರಿ ಎಂದೇ ನನ್ನ ಅಭಿಪ್ರಾಯ. ಇದೊಂದು ಜ್ವಲಂತ ಸಮಸ್ಯೆ. ಇದನ್ನು ಮತದಾತರಿಗೆ ಬಿಡುವುದು ಸೂಕ್ತ; ಏಕೆಂದರೆ ಮುಂದಿನ ಸಂಸತ್ತು ಈ ದಿಶೆಯಲ್ಲಿ ಜನಾಭಿಪ್ರಾಯವನ್ನು ಪಡೆದುಕೊಂಡಿರುತ್ತದೆ. ೧೯೨೯ರಲ್ಲಿ ಬಾಲ್ಯವಿವಾಹ ನಿರ್ಬಂಧನೆಯ ಮಸೂದೆಯ ಬಗೆಗೆ ಕ್ವಾಯಿದ್ – ಇ – ಅಜ಼ಮ್ ಜಿನ್ನಾ ಅವರು ಹೇಳಿದಂತೆ "೧೪ ವರ್ಷಕ್ಕಿಂತ ಚಿಕ್ಕ ಬಾಲಕರು ವಿವಾಹವಾಗಕೂಡದು. ಆದರೆ ಈ ಅಭಿಪ್ರಾಯಕ್ಕೆ ನನ್ನ ಮತದಾರರು ಒಪ್ಪದೇ ಹೋದಲ್ಲಿ ನಾನು ರಾಜೀನಾಮೆ ನೀಡಬೇಕಾಗುತ್ತದೆ; ಅವರು ತಮಗೆ ಬೇಕಾದವರನ್ನು ಚುನಾಯಿಸಬಹುದು." ನಾವು ನಮಗೆ ಬೇಕಾದ ವಿಷಯದ ಬಗೆಗೆ ಖಚಿತವಾಗಿರಬೇಕು. ನಾವು ಯಾರನ್ನೂ ವಿರೋಧಕ್ಕೆ ಗುರಿಯಾಗದಂಥ ಹಂತಕ್ಕೆ ತಲುಪಿದ್ದೇವೆ. ಆದುದರಿಂದ ನಮಗೆಲ್ಲರಿಗೂ ಬೇಕಾದ ವಿಧೇಯಕವನ್ನು ಮಂಡಿಸಿ, ನಾವು ಹೇಗೆ ಹಾಗೂ ಎತ್ತ ಸಾಗಿರುವೆವು ಎಂಬುದನ್ನು ತಿಳಿಸಿಕೊಡಬೇಕು. ಆದುದರಿಂದ ಕೇವಲ ಒಂದೇ ವಿಷಯವನ್ನೇಕೆ ನಮ್ಮ ಮುಂದೆ ಇಡಬೇಕು? ನಾವು ಎಲ್ಲಾ ಅನುಬಂಧಗಳನ್ನೂ ಪರಿಶೀಲಿಸೋಣ. ಡಾ. ಅಂಬೇಡ್ಕರ್‌ರು ಆತುರದಿಂದ ಅಂಗವಿಕಲ ಕೂಸೊಂದನ್ನು ತರಲು ಇಷ್ಟಪಡಬಾರದು. ನಮಗೆ ಪಿಂಡ ಪ್ರದಾನಕ್ಕೆ ಬೇಕಾಗಿರುವುದು ಓರ್ವ ಪುತ್ರ ತಾನೆ?

**ಓರ್ವ ಸದಸ್ಯ :** ಅದರಿಂದಾಗಿ ಮುಕ್ತಿ ದೊರೆಯಲೆಂದೇ?

**ಶ್ರೀ ಭಟ್ಟ :** ದಯಮಾಡಿ ಕ್ಷಮಿಸಿ, ಅವರು ಇನ್ನೂ ಸಹಸ್ರ ಸಂವತ್ಸರ ಬಾಳಿ ಬದುಕಲಿ. ನಾನು ಅಲಂಕಾರವಾಗಿ ಮಾತ್ರ ಮಾತನಾಡುತ್ತಿರುವೆ. ಒಂದು ವೇಳೆ ಅಂಬೇಡ್ಕರ್‌ರು ಹಾಗೂ ಜವಾಹರಲಾಲರೂ ಇಚ್ಛಿಸಿದಲ್ಲಿ ನಾವು ಇತರರ ಮನ ಬದಲಿಸುವ ಕಾರ್ಯ(ಹುಚ್ಚರನ್ನು) ಕೈಗೆತ್ತಿಕೊಳ್ಳುವೆವು. ನೀವು ಯಾವ ಮಾರ್ಗವನ್ನಾದರೂ ಅನುಸರಿಸಿರಿ, ಬೇಕೆಂದರೆ ನಾವೂ ನಿಮ್ಮ ಬೆಂಬಲಕ್ಕೆ ಧಾವಿಸುತ್ತೇವೆ. ಆದರೆ ದಯಮಾಡಿ ಈ ಅರೆಬೆಂದ, ಅಪೂರ್ಣ, ಅಸಂಗತ ವಿಧೇಯಕವನ್ನು ಮಾತ್ರ ಆತುರದಿಂದ ಅನುಷ್ಠಾನಗೊಳಿಸದಂತೆ ನೋಡಿಕೊಳ್ಳಿರಿ. ಒಂದು ದೃಷ್ಟಿಯಲ್ಲಿ ಅದು ಉನ್ನತವಾಗಿಯೇ ಇರಬೇಕು, ಆದುದರಿಂದ ಯಾರನ್ನೋ ಸಂತುಷ್ಟಗೊಳಿಸಲು ಏನನ್ನೋ ಮಾಡುವುದು ಸರಿಯಾಗಲಾರದು. ನಿಮಗೆ ಸರಿ ಎಂದದ್ದನ್ನೇ ಮಾಡಿ. ನಾವು ಮುಂದಿನ ಚುನಾವಣೆಗಳಲ್ಲಿ ಜಯಗಳಿಸಿ ಮರಳಿಬಂದಾಗ ನಮಗೆ ಅಧಿಕ ಬಲವಿರುತ್ತದೆ. ಆಗ ನಾವು ಜನರಿಂದ ಆದೇಶ ಪಡೆದು ಬಂದಿರುವುದರಿಂದ, ಯಾರಿಗೂ ತಲೆಬಾಗಬೇಕಾದ ಪ್ರಶ್ನೆಯೇ ಇಲ್ಲ. ನಾವು ಜನತೆ ಇಚ್ಛೆಗೆ ಮಾತ್ರ ತಲೆಬಾಗಬೇಕು. ಬೇರೆಯವರಿಗಲ್ಲ. ನಾನು ಈ ವಿಷಯದ ಬಗೆಗೆ ಅಧಿಕವಾಗಿ ಪ್ರಸ್ತಾಪಿಸಲಾರೆ. ನಾನು ಕೆಲವು ದಿನಗಳ ಹಿಂದೆ ಒಂದು ಕಾರ್ಖಾನೆಗೆ ಹೋದಾಗ ಅಲ್ಲಿಯ ಕಾರ್ಮಿಕರು ಹಿಂದೂ ಕೋಡ್ ಬಿಲ್ಲಿನ ಅವಾಂತರವೇನು ಎಂದೇ ಪ್ರಶ್ನಿಸಿದರು. ನಾನು ನೀವೇಕೆ ಬೆದರುವಿರಿ ಎಂದಾಗ "ಅದು ನಮ್ಮ ಧರ್ಮವನ್ನು ನಾಶಮಾಡಿ ಗೊಂದಲ ಪರಿಸ್ಥಿತಿಯನ್ನು ನಿರ್ಮಿಸಿ ನಮ್ಮ ಸಮಾಜದ ಅಧಃಪತನಕ್ಕೆ ಕಾರಣವಾಗುತ್ತದೆ" ಎಂದೇ ನುಡಿದರು. ನಾನು ಅವರೊಂದಿಗೆ ಮಾತನಾಡಿದೆ. ಅವರಲ್ಲಿ ಅನೇಕರು ಜಾಣರು, ವಿಧೇಯಕದ ಅರಿವು ಅವರಲ್ಲಿದೆ. ಆದುದರಿಂದ ವಿಧೇಯಕವನ್ನು ವಿರೋಧಿಸುವವರು,

ಅದನ್ನು ಅರಿತೇ ವಿರೋಧಿಸುತ್ತಾರೆ ಹೊರತು, ಕೇವಲ ವಿರೋಧಕ್ಕಾಗಿ ಅಲ್ಲ. ಅವರು ವಿಚ್ಛೇದನೆಯ ಅಂಶದ ಬಗೆಗೆ ವಿವರಿಸುತ್ತಾ ಜಾರಿಯಲ್ಲಿರುವ ಸಂಪ್ರದಾಯಗಳಂತೆ ವಿಚ್ಛೇದನವನ್ನು ಸುಲಭ ಹಾಗೂ ಸರಳವಾಗಿ ಪಡೆಯುವಾಗ, ನೀವು ಈ ಕಠಿಣ ಮಾರ್ಗವನ್ನು ಏಕೆ ವಿಧಿಸುತ್ತಿರುವಿರಿ? ಸ್ತ್ರೀಪುರುಷರನ್ನು ಹಾದರ ಹಾಗೂ ಅನೈತಿಕ ಆರೋಪಗಳಿಗೇಕೆ ಗುರಿಮಾಡುವಿರಿ? ನಮ್ಮ ಪಂಚಾಯಿತಿಗಳ ಬಗೆಗೆ ಎಲ್ಲರಿಗೂ ತಿಳಿಯುವಂತೆ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬಹುದಲ್ಲವೇ? ನೀವು ಸೂಚಿಸಿದ ಮಾರ್ಗ ಸುಲಭವಲ್ಲ. ಡಾ. ಅಂಬೇಡ್ಕರ್‌ರು ಹೇಳಿದ ಮಾತ್ರಕ್ಕೆ ವಿಚ್ಛೇದನೆಗಳು ಸರಳಗೊಳ್ಳಬಲ್ಲವೇ? ಅಥವಾ ಅದರಿಂದ ಹಿಂದೂಧರ್ಮ ಅಪಾಯದಿಂದ ಪಾರಾಗಬಲ್ಲದೇ? ಈ ಯಾವ ಕಾರಣಗಳಿಂದಲೂ ಹಿಂದೂಧರ್ಮಕ್ಕೆ ಅಪಾಯವಾಗಲಾರದು. ನಾವು ನಮ್ಮ ವಿವೇಚನೆಯಿಂದ ಸರಿ ತಪ್ಪು ಏನು ಎಂದು ವಿಚಾರಿಸಬೇಕು. ಪ್ರತಿಯೋರ್ವರು ಇದನ್ನು ಅನುಸರಿಸಬೇಕು. ಈ ಹಿನ್ನೆಲೆಯಲ್ಲಿ ನಾನು ಭೇಟಿ ನೀಡಿದ ಕಾರ್ಖಾನೆಯ ಕಾರ್ಮಿಕರನ್ನು ಮತ್ತೇನಾದರೂ ತಿಳಿಸಬಲ್ಲಿರಾ ಎಂದಾಗ ಅವರು ಆಸ್ತಿಯ ಹಕ್ಕಿನ ಬಗೆಗೂ, ಅದರಲ್ಲಿ ಪುತ್ರಿಯರ ಪಾಲಿನ ವಿಷಯಗಳನ್ನು ಪ್ರಸ್ತಾಪಿಸಿದರು. ನಾನು ಸೂಚಿಸಬಯಸುವುದೇನೆಂದರೆ, ವಿಧೇಯಕವನ್ನು ವಿರೋಧಿಸುವವರು ಹುಚ್ಚರಾಗಿರದೆ ಬುದ್ಧಿವಂತರು ಎಂದೇ ಹೇಳುವೆ. ಆದರೆ ಮಹಿಳಾ ಸಂಘದ ಹಲವು ಸದಸ್ಯರು ನನ್ನನ್ನು ಭೇಟಿ ಮಾಡಿ ಇದೇ ಪ್ರಶ್ನೆಯನ್ನು ಕೇಳಿದರು. ಅವರೂ ಈಗ ಬುದ್ಧಿವಂತರಾಗಿದ್ದಾರೆ. ಶ್ರೀ ರೇಣುಕಾರಾಯ್, ದುರ್ಗಾಬಾಯಿ ಅವರೂ ವಿದ್ಯಾವಂತರು, ಮುಂದುವರಿದವರಿರ ಬಹುದು. ಹೀಗೆಂದ ಮಾತ್ರಕ್ಕೆ ಸದನದ ಹೊರಗೆ ಇರುವ ಮಹಿಳೆಯರಿಗೆ ತಿಳಿವಳಿಕೆಯೇ ಇಲ್ಲ ಎಂದು ಭಾವಿಸುವುದು ಸರಿಯಲ್ಲ. ನಾನು ಸೂಚಿಸಿದ ಮಹಿಳೆಯರು ದಡ್ಡರಲ್ಲ. ಅವರು ಹೇಳುವಂತೆ ಸಮಾಜದ ರಚನೆಗೆ ಧಕ್ಕೆ ಉಂಟುಮಾಡುವ ಯಾವ ಕಾರ್ಯವನ್ನೂ ಮಾಡದಿರುವುದೇ ಲೇಸು. ನಾವು ನಾಗರಿಕ ವಿವಾಹ ಶಾಸನ ರಚಿಸಿರುವೆವು, ಈ ಶಾಸನದಡಿಯಲ್ಲಿಯೇ ವಿಚ್ಛೇದನೆಗೆ ಆಸ್ಪದ ನೀಡಿದರೆ ಸಾಕು. ಮುಂದುವರಿದು ಹೋಗಬೇಕೇ? ಕಾಲ ಬಂದಾಗ ಜನರೇ ಅರ್ಥ ಮಾಡಿಕೊಳ್ಳುತ್ತಾರೆ.

ಶ್ರೀ ಕುಂಝ್ರು ಅವರು ಏಕಪತ್ನಿ ವಿವಾಹದ ಬಗೆಗೆ ಮಾತನಾಡಿದರು. ಜನರಿಗೆ ಜೀವನ ನಡೆಸುವುದೇ ದುರ್ಲಭವಾಗಿದೆ. ಅನೇಕ ಬಾರಿ ಇದ್ದ ಓರ್ವ ಹೆಂಡತಿಯೊಂದಿಗೆ ಬಾಳುವೆ ಮಾಡುವುದೇ ಕಷ್ಟಕರವಾಗಿದೆ. ಈ ಪರಿಸ್ಥಿತಿಯಲ್ಲಿ ಇಬ್ಬರು ಹೆಂಡಂದಿರೊಂದಿಗೆ ಜೀವನ ಹೇಗೆ ಸಾಧ್ಯ? ಮುಸ್ಲಿಂರಿಗೆ ನಾಲ್ಕು ಮಡದಿಯರನ್ನು ಪಡೆಯಲು ಆಸ್ಪದವಿದೆ. ಆದರೆ ಎಲ್ಲರೂ ನಾಲ್ಕು ಮಡದಿಯರನ್ನು ಹೊಂದಿದ್ದಾರೆಯೆ? ಈ ಬಗೆಗೆ ನನಗೆ ಜನ ಮತಗಣನೆಯ ವಿವರಗಳು ಲಭ್ಯವಿಲ್ಲ. ನಮ್ಮ ಅಂಕಿಸಂಖ್ಯೆ ವಿಭಾಗವು ಇನ್ನೂ ಹಿಂದುಳಿದ ಪರಿಸ್ಥಿತಿಯಲ್ಲಿದೆ.

ನಮ್ಮ ಮುಂದಿರಬಹುದಾದ ಪ್ರಶ್ನೆ ಎಂದರೆ, ಮುಸ್ಲಿಂರಿಗೆ ನಾಲ್ಕು ಮಡದಿಯರನ್ನು ಪಡೆಯುವ ಅವಕಾಶ ಹೇಗೆ ನೀಡಲಾಯಿತು? ಹಜರತ್ ಮಹಮದ್ ಒಹಾದ್ ಯುದ್ಧದಲ್ಲಿ ಹೋರಾಡಿ ಅನೇಕರು ಸಾವನ್ನು ಅಪ್ಪಿದರು. ಹೀಗಾಗಿ ಸ್ತ್ರೀಯರು ಅಧಿಕ ಸಂಖ್ಯಾತರಾದರು. ಅವರನ್ನು ರಕ್ಷಿಸಲೆಂದೇ ನಾಲ್ಕು ಮಂದಿ ಮಡದಿಯರ ಸಂಪ್ರದಾಯ ಜಾರಿಗೊಳಿಸಲಾಯಿತು. ಇದೇ ರೀತಿ ಜರ್ಮನಿ ಮತ್ತು ಫ್ರಾನ್ಸ್ ದೇಶಗಳಲ್ಲಿಯೂ ವಿವಿಧ ಕಾಲದಲ್ಲಿ ಜರುಗಿದೆ. ಆದರೆ ನಮ್ಮ ದೇಶದಲ್ಲಿ ಸ್ತ್ರೀ ಮತ್ತು ಪುರುಷರಲ್ಲಿಯ ಸಂಖ್ಯೆಯು ಸಮಾನವಾಗಿದೆ. ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಸುಮಾರಾಗಿ ಹಲವಾರು ಸಾವಿರ ಕಡಿಮೆಯಾಗಿದೆ. ಆದರೆ ದುರ್ದೈವದಿಂದ ಅಧ್ಯಕ್ಷ ಪೀಠದಲ್ಲಿ ಪಂಡಿತ್ ಠಾಕೂರ್ ದಾಸ್ ಸ್ತ್ರೀಯರ ಸಂಖ್ಯೆ ಏನಾದರೂ ಎರಡು ಕೋಟಿ ಅಧಿಕವಾದಲ್ಲಿ ನೂತನ ಶಾಸನವನ್ನೇ ರಚಿಸಬೇಕಾಗಬಹುದು. ಈ ಬಗೆಗೆ

ನಮ್ಮ ಶಾಸನಗಳನ್ನು ಕಾಲಕ್ಕೆ ತಕ್ಕಂತೆ ಹೇಗೆ ರಚಿಸಲಾಯಿತು ಎಂಬುದನ್ನು ಪ್ರಸ್ತಾಪಿಸುವೆ. ಅಲ್ಲದೆ ನೂತನ ಮಟ್ಟಗಳಿಗೆ ಅನುಗುಣವಾಗಿಯೂ ಮಾರ್ಪಾಟುಗಳನ್ನು ಮಾಡಿರುವೆವು. ಡಾ. ಅಂಬೇಡ್ಕರ್‌ರು ನೂತನ ಶಾಸನ ಒಂದನ್ನು ಜಾರಿಗೊಳಿಸಬೇಕೆಂದಿದ್ದಾರೆ. ಆದರೆ ಆ ಬಗೆಯ ಶಾಸನ ಪರಿಣಾಮಕಾರಿಯಾದ ಪರಿಹಾರವನ್ನು ಹೊಂದಿರಬೇಕು. ಏಕೆಂದರೆ ನಮ್ಮ ದೇಶದಲ್ಲಿ ವಿವಾಹ ಒಂದು ಒಪ್ಪಂದವಾಗಿಲ್ಲ. ಅವರು ಆ ಅಭಿಪ್ರಾಯವನ್ನು ಹೊಂದಿರಬಹುದು. ಆದರೆ ವಿವಾಹ ಪವಿತ್ರ ಹಾಗೂ ಸರಳವಾದುದು. ಈ ಪದಗಳು ಪ್ರಸಿದ್ಧ ನ್ಯಾಯವಾದಿಗಳಿಂದ ಉಪಯೋಗಿಸಲ್ಪಟ್ಟಿವೆ. ನಮ್ಮ ಸಮಾಜದ ತಳಪಾಯ, ಪ್ರಾಣಿ ಹಾಗೂ ಸಮಾಜಶಾಸ್ತ್ರಗಳಿಂದ ಕೂಡಿದೆ. ಈ ಒಂದು ಮೂಲದಂತೆ ಕತ್ತೆ ಹಾಗೂ ಕುದುರೆ ಒಂದೇ ಪಂಗಡಕ್ಕೆ ಸೇರಿದ್ದರೆ, ನಾವೆಲ್ಲರೂ ಮಾನವ ಪಂಗಡದವರು. ಆದರೆ ವಿವಿಧ ದೇಶಗಳಲ್ಲಿ ಮಾನವರು ಒಂದೇ ವಿಧವಾಗಿಲ್ಲ. ಓರ್ವ ವ್ಯಕ್ತಿ ತಾನು ಬೆಳೆದು ಬಂದಿರುವ ಪರಿಸರವನ್ನೇ ಪ್ರೀತಿಸುತ್ತಾನೆ, ಇದು ಇತರ ಪ್ರಾಣಿವರ್ಗಕ್ಕೂ ಅನ್ವಯಿಸುತ್ತದೆ. ಯಾರನ್ನಾದರೂ ಹಿಸ್ಸಾರದಿಂದ ಬೇರೆ ಭಾಗಕ್ಕೆ ತೆಗೆದುಕೊಂಡು ಹೋಗಿ, ಪ್ರತಿಕ್ರಿಯೆಯ ಅರಿವಾಗುವುದು. ಗಿಡಮರಗಳ ಉದಾಹರಣೆಯನ್ನೇ ನೋಡಿರಿ. ಕಾಶ್ಮೀರದ ಗಿಡಮರಗಳು ರಾಜಸ್ಥಾನದಲ್ಲಿ ಬದುಕಬಲ್ಲವೇ? ಮಾವಿನ ಮರಗಳನ್ನು ಬೆಳೆಸುವ ಅನೇಕ ಪ್ರಯತ್ನಗಳು ರಾಜಸ್ಥಾನದಲ್ಲಿ ನಡೆದವು. ಆದರೆ ಅವೆಲ್ಲವೂ ವಿಫಲವಾಗಿವೆ. ಈ ಎಲ್ಲದರಲ್ಲಿಯೂ ಒಂದು ಸೂತ್ರವಿದೆ. ನೆಲ, ಜಲ, ಬೀಜ, ವಾತಾವರಣಗಳ ಪ್ರಭಾವ ಮರೆಯಲಾಗದು. ಯಾವುದೋ ಒಂದು ಮರವನ್ನು ಎಲ್ಲಿ ಬೇಕಾದರೂ ಬೆಳೆಸಲಾಗದು. ವಿವಾಹದ ಬಗೆಗೂ ಇದು ಅನ್ವಯಿಸುತ್ತದೆ. ಯಾರನ್ನು ಯಾರು ಬೇಕಾದರೂ ವಿವಾಹವಾಗಲಾರರು. ಮರಗಳನ್ನು ಕಸಿಮಾಡುವಲ್ಲಿ ಹಲವಾರು ವಿಧಾನಗಳನ್ನು ಅನುಸರಿಸಲೇಬೇಕು. ಇನ್ನು ವಿವಾಹಗಳ ಬಗೆಗೆ ಹೆಚ್ಚು ಹೇಳಲಾರೆ. ನಮ್ಮ ಸಮಾಜ ಹಲವಾರು ರಾಜಕೀಯ ಶೈಕ್ಷಣಿಕ ಸಂತಾನ ಆರೋಗ್ಯ ಹಾಗೂ ಲೈಂಗಿಕ ಸೂತ್ರಗಳಿಂದ ಒಡಗೂಡಿದೆ. ಇದಕ್ಕೆ ಉದಾಹರಣೆ ಬೇಕಿದ್ದರೆ ಡಾ. ಭಗವಾನದಾಸರ ಭಾಷಣಗಳನ್ನು ಗಮನಿಸಬಹುದು. ಅವರು ಅನೇಕ ಶಾಸ್ತ್ರಗಳ ಆಧಾರವನ್ನು ನೀಡಿದ್ದಾರೆ. ಡಾ. ಭಗವಾನದಾಸರ ಹೇಳಿಕೆ:

"ಜನಾಂಗೀಯ ಹಾಗೂ ವ್ಯಕ್ತಿಯ ಆರೋಗ್ಯ ಮತ್ತು ಸುಖ ಸಂತೋಷ ಜೀವನಕ್ಕಾಗಿ ಆರೋಗ್ಯ ಸಂತಾನ, ಲೈಂಗಿಕ ನಿಯಮಗಳನ್ನು ಪರಿಪಾಲಿಸುವುದು ಅಗತ್ಯ. ಆಹಾರ ಹಾಗೂ ವಿವಾಹಗಳ ಬಗೆಗೆ ಇದು ಅನುಕರಣೀಯ. ಒಂದೇ ಬಗೆಯ ಅಭಿರುಚಿ, ಆಚಾರ-ವಿಚಾರ, ಪವಿತ್ರಭಾವನೆಗಳನ್ನು ಹೊಂದಿದವರು ಸಹಭೋಜನ ಹಾಗೂ ವಿವಾಹಗಳನ್ನು ನಡೆಸುವುದು ಹಿತಕಾರಿ."

ತಿನ್ನುವ ಮತ್ತು ಉಣ್ಣುವ ಬಗೆಗೆ ನಾನು ಹೆಚ್ಚು ಗಮನ ಹರಿಸಿರಲಿಲ್ಲ ಆದರೆ ಗಾಂಧೀಜಿಯವರು ಬಂದ ನಂತರವೂ, ಮತ್ಸ್ಯಹಾರಿಯೊಂದಿಗೆ ಭೋಜನ ಮಾಡುವ ಎಂದರೆ ಆಗದು. ಅವನನ್ನು ಅಸ್ಪೃಶ್ಯನೆಂದು ಭಾವಿಸದೇ ಹೋದರೂ ಆಹಾರದ ಬಗೆಗೆ ತಮ್ಮದೇ ಆದ ಶಿಷ್ಟಾಚಾರಗಳಿವೆ ಎಂಬುದನ್ನು ಮರೆಯಲಾಗದು. ಅದರಂತೆಯೇ ಯಾವಳೋ ಒಬ್ಬಳೊಂದಿಗೆ ವಿವಾಹ...

**ಡಾ. ಅಂಬೇಡ್ಕರ್** : ಎಲ್ಲರಿಗೂ ಸರಬರಾಜು ಮಾಡುವಷ್ಟು ಮೀನುಗಳೇ ಇಲ್ಲ.

**ಶ್ರೀ ಭಟ್ಟ** : ನಾನು ಜನಮತಗಣನೆಯ ವಿವರಗಳ ಮೇಲೆ ಕಣ್ಣಾಡಿಸಿದಾಗ, ನನ್ನ ಗಮನಕ್ಕೆ ಬಂದ ವಿಷಯ, ಶ್ರೀ ಸಿದ್ವಾ ಹಾಗು ಇತರರ ಕ್ಷಮೆ ಕೋರಿ ತಿಳಿಸಬಯಸುವೆ. ಅನೇಕರು ೬೦ ವರ್ಷದ ನಂತರವೂ ವಿವಾಹವಾಗಿದ್ದಾರೆ. ಆದರೆ ನಾನು ವಿವಾಹವಾಗಲು ಬಯಸಲಾರೆ.

ನಮ್ಮ ಜೀವನ ಶೈಲಿಯನ್ನು ಕಡ್ಡಾಯಕ್ಕೆ ಗುರಿಪಡಿಸದೆ, ಅವರವರ ಇಚ್ಛೆಯಂತೆ ನಡೆದುಕೊಳ್ಳಲು

ಅವಕಾಶವಿರಬೇಕು. ಇಂದಲ್ಲದೇ ಹೋದರೆ ಮುಂದೆ ಈ ವಿಷಯವನ್ನು ಪ್ರಸ್ತಾಪಿಸುವೆ. ನನ್ನ ನಂಬಿಕೆಯಂತೆ ಪಂಡಿತಜೀ ಅವರು, ದೇಶದ ಹಿತಾಸಕ್ತಿಯನ್ನೇ ಗಣನೆಗೆ ತೆಗೆದುಕೊಳ್ಳುತ್ತಾರೆ ಎಂಬ ಭರವಸೆ ಇದೆ. ಹೀಗಾಗಿ ಅವರನ್ನು ನಮ್ಮ ನಾಯಕರೆಂದು ಮಾನ್ಯತೆ ನೀಡಿದ್ದೇವೆ. ಅವರಲ್ಲಿ ನಂಬಿಕೆ ಇರದೇ ಹೋಗಿದ್ದರೆ, ಅವರು ನಮ್ಮ ನಾಯಕರಾಗಿರುತ್ತಿರಲಿಲ್ಲ. ಇದರಂತೆಯೇ ನಮ್ಮ ಪೋಷಕರಲ್ಲಿಯೂ ನಮಗೆ ನಂಬಿಕೆ ಇದೆ. ಅವರು ಏನು ಮಾಡಿದರೂ ಅದು ನಮ್ಮ ಹಿತರಕ್ಷಣೆಗೆಂದೂ ನಾವು ನಂಬಿದ್ದೇವೆ. ಒಂದು ವೇಳೆ ಅವರಲ್ಲಿ ನಂಬಿಕೆ ಇರದೇ ಹೋದಲ್ಲಿ, ನಾವೇ ನಮ್ಮ ಪ್ರಕೃತಿಗೆ ಸರಿಹೊಂದುವ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಹೀಗೆ ನಂಬಿಕೆಗಳು ಜಾರಿಯಲ್ಲಿವೆ. ಇದಕ್ಕೆ ವ್ಯತಿರಿಕ್ತವಾದ ಕಾರ್ಯವನ್ನು ಮಾಡಬಾರದು. ಹಾಗೂ ಸಮಾಜದಲ್ಲಿ ಅಸಂತೃಪ್ತಿಗೆ ಆಸ್ಪದ ನೀಡಬಾರದು. ಎಲ್ಲಾ ಶಾಸನಗಳ ಉದ್ದೇಶವೂ ಸಮಾಜದ ಉನ್ನತಿಗೇ ಮೀಸಲಾಗಿರಬೇಕು. ಜನರ ನಂಬಿಕೆಗೆ ಚ್ಯುತಿ ಬರಬಹುದೆಂದಲ್ಲಿ, ಅವರ ಮನ ಒಲಿಸುವ ಕಾರ್ಯ ಕೈಗೆತ್ತಿಕೊಳ್ಳಬೇಕು. ಡಾ. ಅಂಬೇಡ್ಕರರು ಈ ವಿಧೇಯಕದ ಬಗೆಗೆ ದೃಢನಿಶ್ಚಯ ನಿಲುವನ್ನು ಹೊಂದಿದ್ದರೆ, ಅವರು ಲಕ್ಷಮಂದಿಯನ್ನು ಉದ್ದೇಶಿಸಿ ವಿವರಿಸಲಿ. ಅದೇ ಸಮಯದಲ್ಲಿ ಯಾವ ಪಂಡಿತನಾದರೂ ಇದಕ್ಕೆ ವಿರೋಧ ವ್ಯಕ್ತಪಡಿಸಬೇಕೆಂದರೆ, ಅವರಿಗೆ ಅವಕಾಶ ನೀಡಲಿ. ಜನರು ತಮ್ಮ ಸಮ್ಮತಿಯನ್ನು ರಹಸ್ಯ ಮತದಾನ ಮೂಲಕ ಬೆಂಬಲಿಸಲಿ.

**ಶ್ರೀ ನಜೀರುದ್ದೀನ್ ಅಹಮದ್ :** ಅದೇ ಅಂತ್ಯ.

**ಶ್ರೀ ಶ್ಯಾಮ ನಂದನ ಸಹಾಯ್ :** ಈ ಸದನದಲ್ಲಿಯೇ ರಹಸ್ಯ ಮತದಾನ ನಡೆಯಲಿ. ಆಗ ವಿಷಯ ಮುಕ್ತಾಯ ಹೊಂದುವುದು.

**ಶ್ರೀ ಭಟ್ಟ :** ನೀವು ಭಯ ಪಡುತ್ತಿರುವಿರಿ, ಅದಕ್ಕೆಂದೇ ಅದನ್ನು ಜನತೆಯ ಮುಂದೆ ತರಲಾಗದು ಎಂದು ಸೂಚಿಸುತ್ತಿರುವಿರಿ. ಕೇವಲ ಮಹಾತ್ಮಾಗಾಂಧೀಜಿ ಅವರು ಮಾತ್ರ ಪ್ರತಿಯೊಂದು ಸಂಗತಿಯನ್ನೂ ಸಾರ್ವಜನಿಕ ಗಮನಕ್ಕೆ ತರಲು ಅಳುಕುತ್ತಿರಲಿಲ್ಲ. ಅವರು ಅಸ್ಪೃಶ್ಯತೆಯನ್ನು ನೀಗಬೇಕೆಂದು ನಿರ್ಣಯಿಸಿದರು. ಪೂಂಜ ಪತಿಗಳು ಅವರ ಈ ಧೋರಣೆಯನ್ನು ವಿರೋಧಿಸಿದರು. ಅವರು ತಿಲಕ ಸ್ವರಾಜ್ಯ ನಿಧಿಗೆ ಹಣ ಸಂಗ್ರಹಿಸಲೆಂದೇ ಬೊಂಬಾಯಿಯ ಮುಲಜೀಜೆತಾ ಮಾರುಕಟ್ಟೆಗೆ ತೆರಳಿದರು. ಅವರು ಒಂದುಕೋಟಿ ನಿಧಿ ಸಂಗ್ರಹಕ್ಕೆ ಕೋರಿದಾಗ, ಅಲ್ಲಿಯ ವರ್ತಕರು, ಗಾಂಧೀಜೀ ಅವರು ಅಸ್ಪೃಶ್ಯತೆಯ ಕಾರ್ಯಕ್ರಮವನ್ನು ಕೈ ಬಿಟ್ಟರೆ ಐದುಕೋಟಿ ಹಣವನ್ನು ನಿಧಿಗೆ ನೀಡುವುದಾಗಿ ತಿಳಿಸಿದರು. ಆಗ ಗಾಂಧೀಜಿಯವರು ಅವರಿಂದ ಒಂದು ಪೈಸಾವನ್ನೂ ಕಾಣಿಕೆ ಪಡೆಯುವುದಿಲ್ಲವೆಂದೇ ದೃಢವಾಗಿ ಹೇಳಿದರು. ಮುಂದುವರಿದು ತಮ್ಮ ಸತ್ಯಾಗ್ರಹಸೂತ್ರಗಳಂತೆ ಸ್ವರಾಜ್ಯಕ್ಕೆ ಹೋರಾಡುವೆ ಎಂದೇ ಹೇಳಿದರು. ಜನತೆಯ ಮುಂದೆ ಹೋಗುವುದು ಸರಕಾರದ ಕರ್ತವ್ಯ. ನಾವು ಸಾಮಾನ್ಯರು ವಿಶೇಷವಾಗಿ ಶಾಸ್ತ್ರಾಭ್ಯಾಸ ಮಾಡಿದವರಲ್ಲ. ನೀವು ಬುದ್ಧಿವಂತರು, ಪಂಡಿತರ ಬಳಿಗೆ ಹೋಗಿ, ವಿಧೇಯಕವನ್ನು ವಿರೋಧಿಸಿದ ಶಂಕರಾಚಾರ್ಯರನ್ನು ಮತ್ತು ಸ್ತ್ರೀಯರನ್ನು ಸಂಪರ್ಕಿಸಿರಿ. ಇದು ಕೇವಲ ಸ್ತ್ರೀಯರಿಗೆ ಸಂಬಂಧಿಸಿದ ವಿಷಯ ಎಂದು ಹೇಳಲಾರೆ. ಸಮಾಜಕ್ಕೆ ಅನುಕೂಲವಾಗಲೆಂದೇ ಇದನ್ನು ಮಂಡಿಸಿದ್ದೀರಿ. ಇದರಲ್ಲಿ ಹೊಸದಾದುದೇನೂ ಇಲ್ಲ. ೧೯೪೨ರಲ್ಲಿ ಅಲ್ಲ ೧೯೩೯ರಂದೇ ಡಾ. ದೇಶಮುಖ ಅವರು ಇಂಥ ವಿಧೇಯಕವೊಂದನ್ನು ಮಂಡಿಸಿದ್ದರು. ೧೮೫೬ರಲ್ಲಿಯೇ ಈಶ್ವರಚಂಧ್ರ ವಿದ್ಯಾಸಾಗರ ಹಾಗೂ ರಾಜಾರಾಮಮೋಹನರಾಯರು ವಿಧವಾ ವಿವಾಹದ ಬಗೆಗೆ ಪ್ರತಿಪಾದಿಸಿದ್ದರು, ಆದುದರಿಂದ ಈ ಬಗೆಗೆ ಆತುರಪಡದೆ ಜನರ ಅಭಿಪ್ರಾಯ ಅರಿಯುವುದು ಸರಿಯಾದ ಕ್ರಮ. ಈ ವಿಧೇಯಕವನ್ನು ಅಂಗೀಕರಿಸಬೇಡಿ ಎಂದು ಹೇಳುವುದಿಲ್ಲ ಆದರೆ ಅದರ ಬಗೆಗೆ

ಆತುರ ಮತ್ತು ಆಗ್ರಹ ತೋರಿಸಬೇಡಿ. ದಯಮಾಡಿ ಶಾಂತರೀತಿಯಿಂದ ಇನ್ನೂ ಕೆಲವೇ ದಿನ ತಾಳಿರಿ ; ಏಕೆಂದರೆ ಸಾರ್ವಜನಿಕ ಚುನಾವಣೆಗಳ ನಂತರ ಸೇರಲಿರುವ ಸಭೆ ಈ ಬಗ್ಗೆ ನಿರ್ಧರಿಸಲಿ. ಈ ಅವಧಿಯಲ್ಲಿ ಉತ್ತಮ ಶಾಸನಗಳನ್ನು ರಚಿಸಿ ಮಂಜೂರು ಮಾಡಬಹುದು. ಈ ಸದನದ ಹಲವು ಸದಸ್ಯರು ಪುನರಾಯ್ಕೆ ಪಡೆಯಲೂಬಹುದು. ನಾನೂ ಪುನರಾಯ್ಕೆಯಾದರೆ ಸಭೆಯ ಕಲಾಪಗಳಲಿ ಭಾಗವಹಿಸುವೆ. ಆದರೆ ಅಲ್ಲಿಯವರೆಗೆ ವಿಧೇಯಕವನ್ನು ತಡೆಹಿಡಿಯಿರಿ ಹಾಗೂ ಜನತೆಯ ಮುಂದೆ ಸಮಗ್ರ ವಿಧೇಯಕವನ್ನು ಮಂಡಿಸಿ "ಗೋಕುಲಭಾಯಿ ದಯಮಾಡಿ ಅಂಗೀಕರಿಸುವಂತೆ ಮಾಡಿ". ಈ ವಿಧವಾದ ಅರೆವಿಧೇಯಕವನ್ನು ನಾನು ಒಪ್ಪಲಾರೆ. ಸಮಗ್ರವಾದ ಒಂದು ಮಸೂದೆ ಬೇಕು. ನನಗೆ ಉತ್ತಮವಾದ ಆಹಾರ ತಿನ್ನಲು ನೀಡಿ, ಕಂಟ್ರೋಲ್ ಅಕ್ಕಿ ನೀಡಿದರೆ ನಾನು ತಿನ್ನುವವನಲ್ಲ. ಅದರಂತೆಯೇ ಉತ್ತಮ ಹಾಗೂ ಸಮಗ್ರ ವಿಧೇಯಕವನ್ನು ರಚಿಸಿರಿ. ಈ ಹಸಿವಿನ ಬಾಧೆ ನನ್ನನ್ನು ಕಾಡುತ್ತಿದೆ. ನಾನು ಉತ್ತಮ ಆಹಾರದಂತೆ, ಉತ್ತಮ ವಿಧೇಯಕಕ್ಕಾಗಿ ಹಾತೊರೆಯುತ್ತಿರುವೆ. ಆದುದರಿಂದ ದಯಮಾಡಿ ಈ ವಿಧೇಯಕವನ್ನು ತಡೆಹಿಡಿಯಿರಿ. ನೀವು ನಮಗೆ ಸಹಕಾರ ನೀಡಿರುವಿರಿ ಅದಕ್ಕೆ ವಂದನೆಗಳು. ನೀವು ಸಮಯಕ್ಕೆ ಅನುಸರಿಸಿ ವಿಧೇಯಕವನ್ನು ಜಾರಿಗೊಳಿಸಬೇಕೆಂದಿರುವ ನಿಮ್ಮ ಯೋಜನೆಗೆ ನಿಮ್ಮನ್ನು ಅಭಿನಂದಿಸುವೆ. ಆದರೆ ಉದಾರತೆಯಿಂದ ಅಲ್ಪ ಸಮಯದವರೆಗೆ ಮುಂದೂಡಿರಿ ಎಂದೇ ಕೋರುವೆ. ನಾನು ನನ್ನ ಸಹೋದರಿಯನ್ನು ಕೇಳುವುದಿಷ್ಟೇ. ಈಗಲೇ ವಿಧೇಯಕವನ್ನು ಅಂಗೀಕರಿಸುವುದರಿಂದ ಆಗುವ ಲಾಭ ಏನು? ಇನ್ನು ಹಲವಾರು ತಿಂಗಳ ನಂತರ ಅಂಗೀಕರಿಸಿದರೆ ಆಗಬಹುದಾದ ಹಾನಿ ಏನು? ಆಕಾಶ ಕಳಚಿ ಬೀಳದು. ಆರ್ಥಿಕ ಹಾನಿಯಾಗದು ಹಾಗೂ ಯಾವ ಅಪಾಯ ಉಂಟಾಗದು. ಆದುದರಿಂದ ನನ್ನ ಕೋರಿಕೆಯಂತೆ ವಿಧೇಯಕವನ್ನು ಮುಂದೂಡಿರಿ.

ನಾನು, ಮತ್ತೆ ಕಾರಖಾನೆಯ ಕಾರ್ಮಿಕರೊಂದಿಗಿನ ಮಾತನ್ನು ಪ್ರಸ್ತಾಪಿಸುವೆ. ಅವರು ಸಂಪ್ರದಾಯ ಪದ್ಧತಿಗೆ ಅನುಗುಣವಾಗಿ ವಿವಾಹವಿಚ್ಛೇದನೆಯುನ್ನು ಬಗೆಹರಿಸಬೇಕೆನ್ನುತ್ತಾರೆ. ಆದರೆ ಸಂಪ್ರದಾಯಗಳೆಂದರೇನು? ಸಂಪ್ರದಾಯಗಳು ಪ್ರಭಾವಶಾಲಿಯಾಗಿವೆ ಎಂಬ ಸಂಗತಿಯನ್ನು ಡಾ. ಅಂಬೇಡ್ಕರರೂ ಅಲ್ಲಗಳೆಯಲಾರರು. ಆದರೆ ಅವರು ಸಂಪ್ರದಾಯಗಳನ್ನೇ ಕೈಬಿಡಬೇಕೆನ್ನುತ್ತಾರೆ. ಇದು ಸಾಧುವಲ್ಲ. ಏಕೆಂದರೆ ಇನ್ನೂ ಹಲವು ಕಾಲ ಅದು ಕೈಗೂಡುವುದಿಲ್ಲ. ನೀವು ನಿಮ್ಮ ವರ್ಗದವರನ್ನೇ ನಿಮ್ಮೊಡನೆ ಕೊಂಡೊಯ್ಯಲು ಇನ್ನೂ ಸಮಯ ಬೇಕು. ಶಾಂತಿ ಸಮಾಧಾನಗಳಿಂದ ಮಾತ್ರ ಅವರು ನಿಮ್ಮ ಹಿಂದೆ ಬರಬಹುದು. ಮಹಾತ್ಮರು ತುಂಬಾ ಪ್ರಗತಿಪರರಾಗಿದ್ದರು. ಫೈಜಾಪುರ ಕಾಂಗ್ರೆಸ್ ಅಧಿವೇಶನಕ್ಕೆ ಎಂ.ಎನ್.ರಾಯ್ ಅವರು ಬಂದಿದ್ದರು. ಅವರು ಗಾಂಧಿಯವರೊಂದಿಗೆ ಸಮಾಜವಾದದ ಬಗೆಗೆ ದೀರ್ಘ ಮತ್ತು ಗಂಭೀರ ಚರ್ಚೆ ನಡೆಸಿದರು. ಆಗ ಗಾಂಧೀಜಿ ಅವರು ರಾಯ್ ಅವರಿಗೆ ಗಂಭೀರವಾಗಿ ಇಂದಿನ ಪೂಂಜಪತಿಗಳ ಬಗ್ಗೆ ಏನು ಹೇಳಬೇಕೆಂದಿರುವಿರೋ ಅದನ್ನು ಧೈರ್ಯವಾಗಿ ಹೇಳಿರಿ ಎಂದರಂತೆ. ರಾಯ್ ಅವರು ಧೀರ್ಘ ಭಾಷಣವನ್ನೇ ಮಾಡಿದಾಗ ಗಾಂಧೀಜಿ ಅವರು ಇಷ್ಟೆತಾನೇ? ಎಂದು ಉದ್ಗಾರ ಮಾಡಿ ಕೆಲವೇ ನಿಮಿಷ ಮಾತನಾಡಿದಾಗ ರಾಯ್ ಅವರು ದಿಗ್ಭ್ರಮೆಗೊಂಡರಂತೆ. ಅಲ್ಲದೆ ಅವರ ವಿಚಾರದಿಂದ ಪ್ರಭಾವಗೊಂಡು ನನಗೆ ನಿಮ್ಮ ವಿಚಾರ ತಿಳಿದಿರಲಿಲ್ಲ. ಸಮಾಜ ಮುಂದುವರಿದಂತೆ ನಾನು ನನ್ನ ವಿಚಾರಗಳನ್ನು ತಿಳಿಸುವೆ ಎಂದರಂತೆ. ಈಗ ನಮ್ಮ ಸಮಾಜ ಹಿಂದುಳಿದಿದೆ. ಹೀಗಾಗಿ ಅನೇಕ ವಿಚಾರಗಳು ಇನ್ನೂ ವಿಕಾಸಗೊಳ್ಳಬೇಕಾಗಿದೆ. ಈ ದಿಕ್ಕಿನಲ್ಲಿ ನಾನು ನಮ್ಮ ಜನತೆಯನ್ನು ನನ್ನೊಡನೆ ಕರೆದುಕೊಂಡು ಹೋಗಬೇಕು ಎಂದರಂತೆ. ವಿಚಾರಗಳು ಎಷ್ಟೇ ಉನ್ನತವಾಗಿದ್ದರೂ, ಜನತೆಯು

ಅರ್ಥಮಾಡಿಕೊಂಡಾಗ ಮಾತ್ರ ಅದಕ್ಕೆ ಬೆಲೆ. ಹೀಗಾಗಿ ಡಾ. ಅಂಬೇಡ್ಕರರು, ಸದನದ ಕೆಲವೇ ಅಂದರೆ ೨೦–೨೫ ಸದಸ್ಯರ ಬೆಂಬಲದಿಂದ ಏನೂ ಸಾಧಿಸಲಾರದೇ ಹೋಗಬಹುದು. ನಾವು ನಿಮಗೆ ಬೆಂಬಲ ನೀಡಬೇಕು. ನೆಹರು ಮತ್ತು ಅಂಬೇಡ್ಕರರ ಹೇಳಿಕೆ ಪ್ರಭಾವಶಾಲಿ ಎಂದೇ ಹೇಳುವೆ. ನನ್ನಂಥವನ ಹೇಳಿಕೆ ಯಾರೂ ಕೇಳಲಾರರು. ಆದರೆ ನಾವು ಮತದಾರರ ಅನುಗ್ರಹ ಸಂಪಾದಿಸದೆ ಈ ಕಾರ್ಯವನ್ನು ಯಶಸ್ವಿಗೊಳಿಸಲಾರೆವು ಎಂಬುದೇ ನನ್ನ ಖಚಿತ ಅಭಿಪ್ರಾಯ.

ನಾನು ನಿಮಗೆ ದ್ರೋಹ ಬಗೆಯದೆ ಮತದಾರರನ್ನು ಅಂತರಂಗಕ್ಕೆ ತೆಗೆದುಕೊಂಡು ಈ ಕಾರ್ಯವನ್ನು ಮುಂದುವರಿಸಿರಿ ಎಂದೇ ಹೇಳುವೆ; ಏಕೆಂದರೆ ನಾವು ಅವರ ಹಿತಾಸಕ್ತಿಯನ್ನು ಕಾಪಾಡಬೇಕು. ನಿಮಗೆಲ್ಲರಿಗೂ ತಿಳಿದಂತೆ, 'ಶಾಸ್ತ್ರ ರೂಢೀ ಬಲೀಯಸಿ' ಅಂದರೆ ಶಾಸ್ತ್ರಗಳು ಸಂಪ್ರದಾಯಕ್ಕೆ ಬದ್ಧ ಎಂದೇ ಹೇಳಲಾಗಿದೆ. ಈ ವಿಧವಾಗಿ ಸಂಪ್ರದಾಯಗಳು ನಮ್ಮ ಶಾಸ್ತ್ರಗಳ ಮೇಲೆ ಪ್ರಭಾವ ಪಡೆದಿರುವುದರಿಂದ ಶಾಸನಗಳ ಮೇಲೆ ನಮ್ಮ ಸಮಾಜ ಏಕೆ ಸವಾರಿ ಮಾಡದು? ಈ ಎಲ್ಲವನ್ನೂ ಗಮನಿಸಬೇಕೆಂದೇ ಕೋರುವೆ.

ಇನ್ನೊಂದು ಕೊರತೆ, ಕುಂಝ್ರು, ಅವರು ಆಸನದಲ್ಲಿಲ್ಲ; ಡಾ. ಅಂಬೇಡ್ಕರ್‌ರ ಕ್ಷಮೆ ಕೋರುವೆ. ನಾವು ಅನೇಕ ಬಾರಿ ವಿಚಾರಶೂನ್ಯರಾಗಿ, ವಿದೇಶಿಯರು ನಮ್ಮ ಶಾಸ್ತ್ರ, ಸಂಸ್ಕೃತಿಗಳ ಬಗ್ಗೆ ಹೇಳಿದ ವಿಷಯವನ್ನು ಗೌರವಿಸಿ ಅಂಗೀಕರಿಸುತ್ತೇವೆ. ಏಕೆಂದರೆ, ಮ್ಯಾಕ್ಸಮುಲ್ಲರು ನಮ್ಮ ಶಾಸ್ತ್ರ, ಉಪನಿಷತ್‌ಗಳು ಉತ್ತಮ ಎಂದಾಗ ನಾವು ಅದನ್ನು ಮಾನ್ಯ ಮಾಡುತ್ತೇವೆ. ಆದರೆ ಅಷ್ಟೇ ಉತ್ತಮ ಅಭಿಪ್ರಾಯವನ್ನು ನಮ್ಮವರೇ ಹೇಳಿದರೆ ಅದನ್ನು ತುಚ್ಛವಾಗಿ ಕಾಣುತ್ತೇವೆ. ಇದು ನಮ್ಮ ಅಭಿಮಾನಶೂನ್ಯತೆಯ ದ್ಯೋತಕವಲ್ಲವೇ?

ದಿಲ್ಲಿಯಲ್ಲಿ ಹುಡುಕಿದರೂ, ಯಾಜ್ಞವಲ್ಕ್ಯ ಸ್ಮೃತಿಯ ಒಂದು ಪ್ರತಿಯೂ ದೊರಕದೇ ಹೋಗಿರುವುದು ಶೋಚನೀಯ.

**ಡಾ. ಅಂಬೇಡ್ಕರ್** : ನನ್ನಲ್ಲಿ ಅನೇಕ ಪ್ರತಿಗಳಿವೆ.

**ಶ್ರೀ ಭಟ್ಟ** : ತಮ್ಮಲ್ಲಿದ್ದರೆ ದಯಮಾಡಿ ನಮಗೆ ಕೊಡಿ. ಅದರ ಪ್ರತಿ ಯಾವ ಗ್ರಂಥ ಭಂಡಾರದಲ್ಲಿಯೂ ದೊರೆಯುತ್ತಿಲ್ಲ. ಶಂಕರ ಕೌಸ್ತುಭ ಮತ್ತು ಯಾಜ್ಞವಲ್ಕ್ಯದ ಪ್ರತಿಗಳು ಯಾವ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತಿಲ್ಲ. ನಿಮ್ಮಲ್ಲಿ ಅವು ಲಭ್ಯ. ನೀವು ಅವನ್ನು ಖರೀದಿಸಿರಬಹುದು. ನಿಮಗೆ ಜ್ಞಾನ ಸಂಪಾದಿಸುವ ಹಂಬಲ ಹಾಗೂ ತಾವು ವಿದ್ವಾಂಸರು, ಮತ್ತು ಪಂಡಿತೋತ್ತಮರು. ದಯಮಾಡಿ ಪ್ರತಿಗಳನ್ನು ಹಲವು ಸಮಯದವರೆಗೂ ಗ್ರಂಥ ಭಂಡಾರದಲ್ಲಿಡಿ. ಅದರಿಂದ ನಮಗೂ ಪ್ರಯೋಜನವಾಗುತ್ತದೆ. ಏಕೆಂದರೆ ಭಾಷಾಂತರಗಳನ್ನು ಓದುವುದರಿಂದ ನೆಮ್ಮದಿ ದೊರೆಯದು. ನಾನು ಈಟ್ಸ್ ಅವರ ಭಾಷಾಂತರದ 'ಗೀತಾಂಜಲಿ'ಯನ್ನು ಓದಿರುವೆ. ಮೂಲ ಸೌಂದರ್ಯ ಭಾಷಾಂತರದಲ್ಲಿ ದೊರಕದು. ಹೀಗಾಗಿ ನಾನು ನನ್ನ ಕಾಲೇಜಿನ ದಿನಗಳಲ್ಲಿಯೇ ಒಂದು ನಿರ್ಣಯಕ್ಕೆ ಬಂದೆ. ಅದೇನೆಂದರೆ, ಬಂಗಾಲಿ ಭಾಷೆಯನ್ನು ಕಲಿತೇ ರವೀಂದ್ರರ 'ಗೀತಾಂಜಲಿ'ಯನ್ನು ಓದಬೇಕು. ಈ ಬಗೆಯ ಕೃತಿಗಳನ್ನು ಭಾಷೆಯ ಸೊಗಸನ್ನು ಅರಿಯದೇ ಓದಲೇಬಾರದು. ನನಗೆ ತಮಿಳು ಬಾರದು. ಅದನ್ನು ಕಲಿಯಬೇಕೆಂಬ ಆಶೆಯಾಗಿದೆ. ನಾನು ಗೀತಾಂಜಲಿಯನ್ನು ಕಂಡಾಗ ಈಟ್ಸರ ಭಾಷಾಂತರ ಸಪ್ಪೆ ಎಂದೇ ತೋರಿತು. ನಾನು ಮರಾಠಿ ಅಭಂಗಗಳಲ್ಲಿ ಗೀತಾಂಜಲಿಯ ಉತ್ತಮ ಭಾಷಾಂತರವನ್ನು ಓದಿರುವೆ. ಶೋಚನೀಯ ಸಂಗತಿ ಎಂದರೆ ನಾವು ಭಾರತೀಯರು ಕಣ್ಣುಮುಚ್ಚಿ ಅಂಧಾನುಕರಣೆ ಮಾಡುತ್ತೇವೆ. ವಿದೇಶೀಯರು ನಮ್ಮ ಕಣ್ಣುತೆರೆಸುವಲ್ಲಿ ಹೇಗೆ ಸಫಲರು? ನಮ್ಮಲ್ಲಿಯ ಕೊರತೆ ಏನು? ಇದನ್ನೆಲ್ಲಾ ನಾವು ಗಮನಿಸಬೇಕು.

ಈಗ ನಾನು ವಿಷಯಕ್ಕೆ ಬರುವೆ. 'ಹಿಂದೂ' ಅಂದರೇನು? ಆ ಪದ ಹೇಗೆ ಜಾರಿಯಲ್ಲಿ ಬಂದಿತು? ಸರ್, ನಾನು ಅಲ್ಪ ಅಧಿಕ ಸಮಯ ತೆಗೆದುಕೊಳ್ಳುವೆ, ಕ್ಷಮಿಸಿ ನನ್ನ ಉದ್ದೇಶ ಚರಿತ್ರೆಯನ್ನಾಗಲೀ ಅಥವಾ ಇರಾನ್ ಹಾಗೂ ಗ್ರೀಕ್ ದೇಶಗಳೊಂದಿಗಿನ ನಮ್ಮ ಸಂಬಂಧಗಳನ್ನು ವಿವರಿಸುವುದಾಗಲೀ ಅಲ್ಲ. ನಾನು ಕೇವಲ 'ಹಿಂದೂ' ಪದದ ಬಗ್ಗೆ ಮಾತ್ರ ವಿವರಿಸುವೆ. ಒಂದು ಅಭಿಪ್ರಾಯದಂತೆ, ಗಾಂಧರ್ವದೇಶದಲ್ಲಿ 'ಹಿಂದಾಸ್' ಎಂಬ ಒಂದು ಪಟ್ಟಣವಿತ್ತಂತೆ, ಅದರಿಂದ 'ಹಿಂದೂ' ಪದದ ಉತ್ಪತ್ತಿಯಾಗಿದೆ. ಎರಡನೆಯ ಅಭಿಪ್ರಾಯದಂತೆ 'ಸಿಂಧೂ' ಪದದಿಂದ 'ಹಿಂದೂ' ಪದ ಉತ್ಪತ್ತಿಯಾಗಿದೆ. "ಸ" ಅಕ್ಷರ "ಹ" ಅಕ್ಷರವಾಗಿ ಮಾರ್ಪಟ್ಟಿದೆ. 'ಹಿಂದೂವಾನಿ' ಪದ ಅನೇಕ ಕಡೆ ಬಳಸಲಾಗಿದೆ. ಈ ಪದದ ಮೂಲ ಅರಿಯುವುದು ಕಷ್ಟಕರವೆಂದೇ ಹೇಳುವೆ. ಯಾವ ಗ್ರಂಥ ಭಂಡಾರದಲ್ಲಿಯೂ ಸೂಕ್ತ ಪರಿಹಾರ ನನಗೆ ದೊರೆಯಲಿಲ್ಲ. ಇದು ನಮ್ಮ ಗ್ರಂಥ ಭಂಡಾರಗಳ ಸ್ಥಿತಿಗತಿ.

ಈ ಬಗ್ಗೆ ಕೆಲವು ಮಾಸಿಕ ಪತ್ರಿಕೆಗಳಲ್ಲಿ ಮಾತ್ರ ಲೇಖನಗಳು ಬಂದಿವೆ. ನಾನು 'ರಾಯಲ್ ಏಷಿಯಾಟಿಕ್ ಸೊಸೈಟಿ'ಗೆ ತೆರಳಿದ್ದರೆ ಇದರ ಬಗೆಗೆ ನನಗೆ ಅಧಿಕೃತ ಮಾಹಿತಿ ದೊರೆಯುತ್ತಿತ್ತು. ಆದರೆ ನನಗೆ ಸಮಯವಿರಲಿಲ್ಲ. ಹಿಂದೂ ಕೋಡ್ ಹಾಗೂ ಪ್ರೆಸ್ ಬಗೆಗಿನ ವಿಧೇಯಕಗಳಿಂದ ನನಗೆ ಸಮಯದ ಅಭಾವ.

ಏನೇ ಇರಲಿ ಇದು 'ಹಿಂದೂ' ಪದದ ಭಾವಾರ್ಥ. ಹಿಂದೂ ಎಂದರೆ ಒಂದು ಪ್ರದೇಶದಲ್ಲಿ ವಾಸಮಾಡುವ ಜನಾಂಗ–ಅವರು ಆರ್ಯರಿರಲಿ ಅಥವಾ ದಸ್ಯುಗಳಿರಲಿ. ಏಕೆಂದರೆ ಪುರಾತನ ಭಾರತದಲ್ಲಿ ಕೇವಲ ಎರಡೇ ಜನಾಂಗಗಳಿದ್ದವು. ಒಂದು ಆರ್ಯರು. ಎರಡನೆಯದು ದಸ್ಯು. ಹೀಗಾಗಿ ನಾನು ಈಗ ಹಿಂದೂ ಕೋಡ್ ಪದಪ್ರಯೋಗವಾಗಿರುವುದರಿಂದ ಎಲ್ಲ ಪ್ರದೇಶಗಳಲ್ಲಿ ವಾಸಿಸುವರೆಲ್ಲರೂ 'ಹಿಂದೂ'ಗಳೇ. ಈ ಬಗೆಗೆ ಎಷ್ಟು ಜನ ತಮ್ಮ ಸಮ್ಮತಿ ಸೂಚಿಸಿರುವರು. ಕುಂಝು ಅವರು ಈ ಬಗೆಗೆ ಮಾಹಿತಿ ನೀಡಿರುವುದಿರಂದ ಅವರೇ ಪರಿಹಾರ ನೀಡಲು ಸಮರ್ಥರಲ್ಲವೇ? ಈ ಎಲ್ಲ ವಿವರಗಳನ್ನು ನಾನು ಪ್ರಸ್ತಾಪಿಸಲಾರೆ.

ಡಾ. ಭಗವಾನ್‌ದಾಸರು ವಿವಾಹ ಸಮರ್ಥನೆ ವಿಧೇಯಕದ ಬಗೆಗೆ ಮಾತನಾಡಿದಾಗ, ಅವರು 'ಹಿಂದೂ' ಎಂದರೆ ಯಾರು ಎಂಬುದನ್ನು ವಿವರಿಸಿದ್ದಾರೆ. ಹಿಂದೂ ಕೇವಲ ರಾಷ್ಟ್ರೀಯವಲ್ಲ. ಷರೀಯತ್ ವಿಧೇಯಕವು ಮಂಡಿಸಲ್ಪಟ್ಟಾಗ ಅಂದರೆ ೧೯೩೭ರಲ್ಲಿ ಅವರಿಗೆ ಅವರ ಸೂಫಿ ಸ್ನೇಹಿತರು ಹೇಳಿದಂತೆ ಮುಸಲ್ಮಾನ ಎಂದರೆ ಯಾರು ಎಂಬುದನ್ನು ಸಭೆಗೆ ತಿಳಿಸಿದ್ದರು : "ಇಸ್ಲಾಂನಲ್ಲಿ ಹಲವಾರು ಪಂಗಡಗಳಿವೆ. ಆದರೆ ನಂಬಿಕೆಯನ್ನೇ ಆಧರಿಸಿ ಹೇಳುವುದಾದರೆ 'ಕಲೀಮಾ'ದ ಎರಡನೇ ಭಾಗದಲ್ಲಿ ನಂಬಿಕೆ ಹೊಂದಿರುವ ಹಲವು ಪಂಗಡಗಳನ್ನು ಕೆಲವರು ಮುಸ್ಲಿಂ ಎಂದು ಭಾವಿಸುವುದಿಲ್ಲವಂತೆ, ಏಕೆಂದರೆ ಪ್ರವಾದಿ ಪೈಗಂಬರರಂತೆ ಅನೇಕ ದೇವದೂತರು ಭೂಮಿಗೆ ಬಂದಿದ್ದಾರೆ. ಇದಕ್ಕೆ ಪ್ರತಿ ಉತ್ತರವಾಗಿ ಸರ್ ಯಾಮಿನ್ ಖಾನ್ (ಆಗ್ರ)ರವರು ಹೀಗೆ ಹೇಳಿದರು:

"ಇದನ್ನು ಯಾವ ಮುಸಲ್ಮಾನನೂ, ನಂಬಲಾರ, ಏಕೆಂದರೆ ಕಲೀಮಾದ ಎರಡೂ ಭಾಗಗಳನ್ನು ನಂಬಲೇಬೇಕು. ಅದೇನೆಂದರೆ 'ಲಾ ಇಲ್ಲಾ ಇಲ್ಲಾಹ ಮತ್ತು ಮಹಮದ್ ರಸೂಲಾಲ.' ಇದಕ್ಕೆ ಡಾ. ಭಗವಾನ್ ದಾಸರು ತಾವು ತಮ್ಮ ಸೂಫಿ ಸ್ನೇಹಿತರು ಸೂಚಿಸಿದ್ದನ್ನೇ ಹೇಳಿರುವೆ ಎಂದು ಉತ್ತರಿಸಿದರು. ಇಲ್ಲಿ ನಾನು ಹೇಳಬೇಕಾದ ವಿಷಯ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಹಿಂದೂ ಮತದಿಂದ ಮತಾಂತರಗೊಂಡವರಿಗೂ ಈ ವಿಧೇಯಕವನ್ನು ಅನ್ವಯಿಸಬಹುದೇ? ಅದಕ್ಕೇನು ಅಡಚಣೆ? ಏಕೆಂದರೆ

ಅವರು ಮತಾಂತರ ಹೊಂದಿದರೂ ಹಳೆಯ ಸಂಪ್ರದಾಯಗಳನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಇದಕ್ಕೆ ಕ್ರಿಶ್ಚಿಯನ್ನರ ಉದಾಹರಣೆ ಅನೇಕ. ಹೀಗಾಗಿ ಅವರಿಗೇಕೆ ಈ ವಿಧೇಯಕ ಅನ್ವಯಿಸಬಾರದು. ಹೀಗಾಗಿ ಡಾಕ್ಟರು ಈ ಎಲ್ಲಾ ಅಂಶಗಳನ್ನು ಗಮನಿಸಬೇಕೆಂದು ಕೋರುವೆ. ಇದರ ಬಗೆಗೆ ಹೆಚ್ಚು ವಿವರಿಸದೇ ಡಾ. ಗೌರ್ ಮತ್ತು ಗುಪ್ತಾ ಹಿಂದೂ ಲಾ ದಲ್ಲಿ ಪರಿಣಿತರು. ಅವರು ಹಿಂದೂ–ಹಿಂದೂಯೇತರ ಪಂಗಡಗಳನ್ನು ಸೂಚಿಸಿ ಇದನ್ನು ಯಾರಿಗೆ ಅನ್ವಯಿಸಬಹುದು ಎಂಬುದನ್ನು ಹೇಳಿದ್ದಾರೆ. ಕಚ್ಚಿಮೆಮಾನ್ಸ್....

**ಶ್ರೀ ಶ್ಯಾಮನಂದನ್ ಸಹಾಯ್ :** ನಿಮಗೆ ತಿಳಿದಿದೆ. ಅವರಿಗೆ ತಿಳಿದಿದೆ. ಆದರೆ ನಮಗೆ ತಿಳಿದಿಲ್ಲ ದಯಮಾಡಿ ಓದಿರಿ.

**ಡಾ. ಅಂಬೇಡ್ಕರ್ :** ಸಂಕ್ಷಿಪ್ತಗೊಳಿಸದೇ ಎಲ್ಲವನ್ನೂ ಓದಿ ಬಿಡಿ.

**ಶ್ರೀ ಭಟ್ಟ :** ಮೆಮನ್ ವಿಧೇಯಕ ತಯಾರಿಸಿದೆ...

**ಡಾ. ಅಂಬೇಡ್ಕರ್ :** ಸಮಯದ ಬಗ್ಗೆ ಚಿಂತಿಸದೇ ಎಲ್ಲವನ್ನೂ ಓದಿ ಬಿಡಿ.

**ಶ್ರೀ ಭಟ್ಟ :** ನಾನು ಓದುವೆ.

**"**ಕಚ್ಚಿ ಮೆಮನ್ಸ್‌ಗೆ ಸಂಬಂಧಿಸಿದಂತೆ, ಯಾರಾದರೂ ವಾರಸುದಾರ ಮತ್ತು ಆಸ್ತಿಯಲ್ಲಿ ಪಾಲುದಾರಿಕೆಯ ಬಗೆಗೆ ಮಹಮದೀಯ ಲಾ ಅನುಸರಿಸಬೇಕೆಂದವರಿಗೆ**"** ಕಾರ್ಯಾಚರಣೆ ಭಾಗದಲ್ಲಿ ಹೀಗೆ ಹೇಳಿದೆ : **"**ಕಚ್ಚಿಮೆಮಾನನು ಪ್ರಾಪ್ತವಯಸ್ಸಿಗೆ ಬಂದ ಮೇಲೆ, ಬ್ರಿಟಿಷ್ ಭಾರತವಾಸಿಯಾಗಿದ್ದಲ್ಲಿ, ನಿಗದಿತ ಅಧಿಕಾರಿಯ ಮುಂದೆ ನಿಗದಿತ ನಮೂನೆಯಲ್ಲಿ ಈ ವಿಧೇಯಕಕ್ಕೆ ಸಮ್ಮತಿ ಸೂಚಿಸಿ ತನ್ನ ಸಂತಾನದವರೆಲ್ಲರೂ ಮುಸ್ಲಿಂ ಲಾ ವನ್ನೇ ಅನುಸರಿಸುತ್ತೇವೆ ಎಂದು ಹೇಳಿಕೆ ನೀಡಬೇಕು.**"**

**ಶ್ರೀ ಶ್ಯಾಮನಂದನ ಸಹಾಯ್ :** ಇದೊಂದು ಐಚ್ಛಿಕ, ಪೂರ್ವ ನಿದರ್ಶನವಿದೆ.

**ಶ್ರೀ ಭಟ್ :** ಮಾನ್ಯ ಕಾನೂನು ಮಂತ್ರಿಗಳು ಮೇಲಿನ ಕಲಮಿನಲ್ಲಿ ಬದಲಾವಣೆಗೆ ಒಂದಿಷ್ಟು ಅವಕಾಶಮಾಡಿಕೊಟ್ಟಿರುವಂತೆಯೇ ಇದರಲ್ಲಿಯೂ ಸ್ವಲ್ಪ ಅವಕಾಶಮಾಡಿಕೊಡುತ್ತಾರೆ ಎಂದು ಭಾವಿಸಿದ್ದೇನೆ. ಇಲ್ಲವಾದಲ್ಲಿ ನೀವು ಅದರ ವ್ಯಾಪ್ತಿಯನ್ನು ಸಂಕುಚಿತಗೊಳಿಸಿದಂತಾಗುತ್ತದೆ. ಆಗಿನ ಗೃಹಮಂತ್ರಿಗಳಾಗಿದ್ದ ಶ್ರಿ ಹೆನ್ರಿ ಕೇಕ್ ಅವರು ತಮ್ಮ ಭಾಷಣದಲ್ಲಿ ಆ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು.

**"**ಇದನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕಾದ ಆವಶ್ಯಕತೆಯಿದೆ. ಇಂಥ ವಿಚಾರಗಳಲ್ಲಿ ವ್ಯಕ್ತಿಗೇ ಆಯ್ಕೆಯ ಸ್ವಾತಂತ್ರ್ಯವನ್ನು ನೀಡುವುದು ಸೂಕ್ತವಲ್ಲವೇ? ಮತ್ತು ಅವನಿಗೆ ಸಂಪೂರ್ಣವಾಗಿ ಅಪರಿಚಿತವಾದ ಕಾನೂನು ಅಥವಾ ಕಾಯಿದೆಯನ್ನು ಒಪ್ಪಿಕೊಳ್ಳುವಂತೆ ಜುಲುಮೆಮಾಡುವುದು ಅವಿವೇಕದ ವಿಚಾರವಲ್ಲವೇ?**"**

**ಶ್ರೀ ಬಿ.ದಾಸ್ (ಒರಿಸ್ಸಾ) :** ಪ್ರಾಯಶಃ ಶ್ರೀ ಹೆನ್ರಿ ಕ್ರೇಕ್ ಅವರು ಅವಿವಾಹಿತರೆಂದು ಕಾಣುತ್ತದೆ– ಸಮಾಜ ಅವರಿಗೆ ಅರ್ಥವಾಗಿಲ್ಲ.

**ಶ್ರೀ ಭಟ್ :** ನಾನು ಉದ್ಧೃತ ಭಾಗವನ್ನು ೧೯೩೭ರ ಚರ್ಚೆಯಿಂದ ಆಯ್ದುಕೊಂಡಿದ್ದೇನೆ. ಇದು ೩ನೇ ಸಂಪುಟದ ೨೫೪೪ನೇ ಪುಟದಲ್ಲಿದೆ. ಆದ್ದರಿಂದ ಇಂಥದ್ದೇ ಒಂದು ನಿಬಂಧನೆಯನ್ನು ನಾವು ಕೂಡ ಸೇರಿಸಬೇಕು ಎನ್ನುವುದು ನನ್ನ ಮನವಿ. ನಾವೆಲ್ಲರೂ ಮೆಚ್ಚುವ ಬರೋಡ ಕಾಯಿದೆಯನ್ನು ನಾವು ಒಮ್ಮೆ ಗಮನಿಸಬೇಕು. ಬರೋಡ ಸಂಸ್ಥಾನವು ಸುಧಾರಣೆ ತರುವುದರಲ್ಲಿ ನಮ್ಮೆಲ್ಲರಿಗಿಂತಲೂ ಹಲವಾರು ವರ್ಷ ಮುಂದಿದೆ. ಅವರು ಯಾವ ಸೌಲಭ್ಯಗಳನ್ನು ಈಗಾಗಲೇ ಅನುಭವಿಸಿದ್ದಾರೆ, ಯಾವ ತೊಂದರೆಗಳಿಂದ ನರಳುತ್ತಿದ್ದಾರೆ, ಮತ್ತು ಯಾವ ರೀತಿಯಲ್ಲಿ ಅವರು ಬೇರೆ ಬೇರೆ ಕಾನೂನುಗಳನ್ನು ಜಾರಿಗೆ ತರುತ್ತಾರೆ

ಎಂದು ಅವರನ್ನು ಕೇಳಿನೋಡಿ. ಬಹುಶಃ ಅವರು ಹಿಂದಿನ ದಿನಗಳೇ ಎಷ್ಟೋ ಚೆನ್ನಾಗಿದ್ದವು ಎಂದು ಒಪ್ಪಿಕೊಳ್ಳಲೂಬಹುದು. ಇದನ್ನೆಲ್ಲಾ ನಾನು ಯಾವುದೇ ವಿಶೇಷ ಉದ್ದೇಶದಿಂದ ಹೇಳುತ್ತಿಲ್ಲ. ಸಾಮಾಜಿಕ ಕಾನೂನುಗಳಿಗೆ ಸಂಬಂಧಿಸಿದಂತೆ ಭಾರತದ ಇತರ ಎಲ್ಲಾ ಪ್ರಾಂತ್ಯಗಳಿಗಿಂತ ಮೈಸೂರು ಮುಂದಿದೆ. ನನಗೆ ತಿಳಿದಮಟ್ಟಿಗೆ, ಸರ್ ಸಯ್ಯಾಜಿರಾವ್ ಗಾಯಕವಾಡ್ ಮೈಸೂರು–ಮೈಸೂರಿನ ಗೆಳೆಯರು ಕ್ಷಮಿಸಬೇಕು, ಹಾಗೂ ಇತರ ರಾಜ್ಯಗಳಿಗಿಂತ ಮೊದಲೇ ಶಿಕ್ಷಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಯನ್ನು ತಂದಿದ್ದರು.

**ಡಾ. ಅಂಬೇಡ್ಕರ್ :** ಆತ ತಪ್ಪು ಮಾಡಿದ.

**ಶ್ರೀ ಭಟ್ :** ನೀವು ನಮ್ಮನ್ನು – ರಾಜಾಸ್ಥಾನಿಯರನ್ನು ಅಭಿವೃದ್ಧಿಯ ದಾರಿಯಲ್ಲಿ ಒಯ್ಯಬೇಕೆಂದಿದ್ದೀರಿ. ನಾವು ಮಂದಗತಿಯ ಜನ. ನೀವೂ ನಿಧಾನವಾಗೇ ಮುಂದುವರೆಯಿರಿ. ನಮ್ಮದು ಆಮೆ ನಡಿಗೆ. ನಿಮ್ಮ ಏರೋಪ್ಲೇನಿನ ವೇಗದಲ್ಲಿ ನಮಗೆ ಬರಲಾಗುವುದಿಲ್ಲ. ಹಾಗಾಗಿ ನಿಮ್ಮ ವೇಗವನ್ನೇ ಸ್ವಲ್ಪ ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು.

ಬರೋಡ ಹಿಂದೂ ಕಾಯಿದೆ ಕೂಡ ಇದನ್ನೇ ಹೇಳುವುದು :

"ಈ ಕಾಯಿದೆ ಬರೋಡದಲ್ಲಿ ವಾಸಿಸುತ್ತಿರುವ :–

ಅ) ಹುಟ್ಟಿನಿಂದ ಹಿಂದೂ ಆಗಿರುವ ಅಥವಾ ಹಿಂದೂಧರ್ಮಕ್ಕೆ ಮತಾಂತರಗೊಂಡವರಿಗೆ ಅಥವಾ ಈ ಶಾಸನದಿಂದಾಗಿ ಈ ಕಾಯಿದೆ, ಅಥವಾ ಅದರ ಯಾವುದಾದರೂ ಭಾಗ ಅನ್ವಯವಾಗುವಂತಹವರಿಗೆಲ್ಲ ಇದು ಅನ್ವಯವಾಗುತ್ತದೆ.

ವಿವರಣೆ ೧ : ಯಾರಿಗೆ ಹಿಂದೂ ಕಾನೂನು ಪಾರಂಪರಿಕವಾಗಿ ಅನ್ವಯವಾಗುತ್ತದೋ ಅಥವಾ ಯಾರು ಅದನ್ನು ಬಳಸುತ್ತಾರೋ ಅವರನ್ನೆಲ್ಲಾ ಹಿಂದೂಗಳೆಂದೇ ಭಾವಿಸಲಾಗುತ್ತದೆ"

**ಶ್ರೀ ಶ್ಯಾಮನಂದನ ಸಹಾಯ್ :** ಅದು ಯಾವ ಕಾಯಿದೆ?

**ಶ್ರೀ ಭಟ್ :** ಬರೋಡ ಹಿಂದೂ ಕಾಯಿದೆ.

**ಶ್ರೀ ಶ್ಯಾಮನಂದನ ಸಹಾಯ್ :** ಏಕವಿವಾಹ ಪದ್ಧತಿ ಕಾಯಿದೆಯೇ?

**ಶ್ರೀ ಭಟ್ :** ಹೌದು, ಅದರ ಪ್ರಕಾರ :

" ಹಿಂದೂ ಕಾಯಿದೆ ಯಾರಿಗೆ ಪಾರಂಪರಿಕವಾಗಿ ಅನ್ವಯವಾಗುತ್ತದೋ ಅಥವಾ ಯಾರಲ್ಲಿ ಅದು ಬಳಕೆಯಲ್ಲಿದೆಯೋ ಅವರನ್ನು ಈ ಕಾಯಿದೆಯ ಉದ್ದೇಶಕ್ಕಾಗಿ, ಈ ಕಾಯಿದೆ ಅಥವಾ ಅದರ ಭಾಗ ಅನ್ವಯವಾಗುವ ಮಟ್ಟಿಗೆ ಹಿಂದೂಗಳೆಂದು ಭಾವಿಸಲಾಗುತ್ತದೆ"

ನೀವು, ಇದು ಯಾರಿಗೆ ಅನ್ವಯವಾಗುತ್ತದೋ ಅವರನ್ನೆಲ್ಲಾ–ಅವರು ಹಿಂದೂಧರ್ಮ ಆಚರಿಸುತ್ತಿರಲಿ, ಇಲ್ಲದಿರಲಿ–ಹಿಂದೂಗಳೆಂದೇ ಭಾವಿಸಲಾಗುತ್ತದೆ ಎಂದು ಹೇಳುತ್ತಿರುವಿರಿ. ಆದರೆ ಭಾರತದಲ್ಲಿ ಇರುವವರೆಲ್ಲಾ ಹಿಂದೂಗಳೇ ಎಂಬುದು ನನ್ನ ಅಭಿಪ್ರಾಯ. ನಾನು ಇದನ್ನು ಕೇವಲ ಸಾಂಸ್ಕೃತಿಕ ದೃಷ್ಟಿಯಿಂದ ಮಾತ್ರ ಹೇಳುತ್ತಿಲ್ಲ. ನಾನು ಇಂಗ್ಲೀಷ್ ದೃಷ್ಟಿಯಿಂದಲೂ ಹೇಳುತ್ತಿದ್ದೇನೆ. ನಮ್ಮನ್ನೆಲ್ಲಾ ಭಾರತೀಯರು ಅಥವಾ ಹಿಂದೂಸ್ಥಾನಿಗಳೆಂದೂ ಏಕೆ ಕರೆಯುತ್ತಾರೆ? ಹಿಂದೂ ಎಂಬ ಪದ ಒಂದು ನಿರ್ದಿಷ್ಟ ಪ್ರಾಂತ್ಯದಲ್ಲಿ ಜನಿಸಿದವನಿಗೆ ಅನ್ವಯವಾಗುತ್ತದೆ. ಅದು ಅವನ ಧರ್ಮವನ್ನು ಖಂಡಿತಾ ಸೂಚಿಸುವುದಿಲ್ಲ. ಅದು ಒಬ್ಬನ ಧರ್ಮವನ್ನು ಸೂಚಿಸದೇ ಆತ ಹುಟ್ಟಿದ ಒಂದು ನಿರ್ದಿಷ್ಟ ಸ್ಥಳವನ್ನು ಸೂಚಿಸುವುದರಿಂದ ಅದು ಆ ಪ್ರಾಂತ್ಯದ ಎಲ್ಲರಿಗೂ ಅನ್ವಯವಾಗುತ್ತದೆ. ಈ ಕೆಳಗಿನ ಉಲ್ಲೇಖವನ್ನು ನೋಡಿ :

"(ಆ) ಯಾರು ಕೆಳಗಿನ ಹಿಂದೂ ಕಾನೂನನ್ನು ತ್ಯಜಿಸಿಲ್ಲವೋ ಅವರೆಲ್ಲರನ್ನೂ ಹಿಂದೂಗಳೆಂದೇ ಪರಿಗಣಿಸಲಾಗುವುದು" ಹಾಗಾಗಿಯೇ ನಾನು ಸನ್ಮಾನ್ಯ ಮಂತ್ರಿಯವರನ್ನು ನನ್ನ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತೇನೆ. ಈಗ ಈ ವಿಚಾರದ ವ್ಯಾಪ್ತಿಯೊಳಗೆ ಈವರೆಗೂ ಬಾರದಿರುವ ಭಾಗಕ್ಕೆ ಬರುತ್ತೇನೆ.

**ಶ್ರೀ ಜೆ.ಆರ್. ಕಪೂರ್ :** ನೀವು ವಿಶೇಷವಾಗಿ ಯಾವ ತಿದ್ದುಪಡಿಯನ್ನು ಬೆಂಬಲಿಸುತ್ತೀರಿ?

**ಶ್ರೀ ಭಟ್ :** "ಯಾರು ಆಡಳಿತದ ವ್ಯಾಪ್ತಿಯಲ್ಲಿ ಬರುತ್ತಾರೋ" ಎಂಬ ನನ್ನ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ. ಅದು ಎಲ್ಲವನ್ನೂ ಒಳಗೊಳ್ಳುತ್ತದೆ.

ಮತ್ತೊಂದು ವಿಚಾರವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ಶ್ರೀ ಗಾಡ್ಗೀಳ್ ಮತ್ತು ಪಂಡಿತ್ ಕುಂಝ್ರು ಕೂಡ ಪ್ರಸ್ತಾಪಿಸಿದ್ದಾರೆ. ೧೯೨೮ರಲ್ಲಿ ಶಾರದಾ ಕಾಯಿದೆಯನ್ನು ಅಂದರೆ ಬಾಲ್ಯವಿವಾಹ ನಿಷೇಧ ಕಾಯಿದೆಯನ್ನು ಮಂಡಿಸಿದಾಗ ಮೊದಲು ಅದರ ಹೆಸರು "ಹಿಂದೂ ಬಾಲ್ಯವಿವಾಹ ಮಸೂದೆ" ಎಂದಿತ್ತು. ಆದರೆ ೧೯೨೯ರಲ್ಲಿ ಸಮಿತಿಯ ವರದಿ ಅದರಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿ, ಅದನ್ನು ಬಾಲ್ಯ ವಿವಾಹ ನಿಷೇಧ ಕಾಯಿದೆ ಎಂದು ಕರೆಯಿತು. ಆ ಸಮಿತಿಯಲ್ಲಿ ಕೆಲವು ಮುಸ್ಲಿಂ ಸದಸ್ಯರೂ ಇದ್ದರು. ಈ ಕಾಯಿದೆಗೆ ಅವರ ವಿರೋಧವಿತ್ತು. ೧೯೨೯ರಲ್ಲಿ ಸದನದಲ್ಲಿ ಈ ಮಸೂದೆಯು ಚರ್ಚೆಗೆ ಬಂದಾಗ ಅವರು ಅದನ್ನು ಮತ್ತೆ ವಿರೋಧಿಸಿದರು. ಆದರೆ ಅವರ ವಿರೋಧವನ್ನು ಲೆಕ್ಕಿಸದೆ ಕಾಯಿದೆಯನ್ನು ದೇಶದಾದ್ಯಂತ ಜಾರಿಗೆ ತರಬೇಕು. ಏಕೆಂದರೆ ಅದು ತುಂಬ ಒಳ್ಳೆಯ ಕಾಯಿದೆ ಎಂಬ ಅಭಿಪ್ರಾಯವು ವ್ಯಕ್ತವಾಯಿತು. ಜಿನ್ನಾ ಒಬ್ಬರನ್ನು ಬಿಟ್ಟು ಉಳಿದ ಮುಸ್ಲಿಂ ಸದಸ್ಯರೆಲ್ಲರೂ ಆ ಕಾಯಿದೆಯನ್ನು ಮುಸ್ಲಿಮರಿಗೆ ಅನ್ವಯಿಸಬಾರದು, ಏಕೆಂದರೆ ಅದು ತಮ್ಮ ಪವಿತ್ರ ಧರ್ಮಕ್ಕೆ ವಿರುದ್ಧವಾದುದು ಎಂದರು. ಸದನದಲ್ಲಿ ಆ ದಿನಗಳಲ್ಲಿ ಚಟರ್ಜಿ ಎಂಬ ಕ್ರೈಸ್ತ ಸದಸ್ಯರು ಇದ್ದರು. ಅವರೂ ಕೂಡ ಅದು ತಮ್ಮ ಧರ್ಮಕ್ಕೆ ವಿರೋಧವಾಗಿದೆ ಎಂಬ ಕಾರಣಕ್ಕಾಗಿ ಅದನ್ನು ಕ್ರೈಸ್ತರಿಗೆ ಅನ್ವಯಿಸಬಾರದು ಎಂದು ಕೇಳಿಕೊಂಡರು. ಇಂಥ ಹಲವಾರು ಅಭಿಪ್ರಾಯಗಳು ವ್ಯಕ್ತವಾದವು. ಆದರೆ ಸರ್ಕಾರ, ಇಷ್ಟೆಲ್ಲಾ ವಿರೋಧಗಳ ನಡುವೆಯೂ ಅದೊಂದು ಉತ್ತಮವಾದ ಸುಧಾರಣೆ ಎಂಬ ಕಾರಣಕ್ಕಾಗಿ ಅದನ್ನು ದೇಶದಾದ್ಯಂತ ಜಾರಿಗೊಳಿಸಿತು. ನಾನು ಕೇಳಿಕೊಳ್ಳುವುದೇನೆಂದರೆ ಏಕವಿವಾಹ ಪದ್ಧತಿ ಒಳ್ಳೆಯದು ಎಂದಾದ ಪಕ್ಷದಲ್ಲಿ ಅದನ್ನು ಎಲ್ಲರಿಗೂ ಅನ್ವಯವಾಗುವಂತೆ ಜಾರಿಗೊಳಿಸಿ. ಹಾಗೆ ಮಾಡದೆ ಕೆಲವರಿಗೆ ಮಾತ್ರ ಯಾಕೆ ವಿನಾಯ್ತಿ ನೀಡುತ್ತೀರಿ? ಕೆಲವು ಮುಸ್ಲಿಂ ಗೆಳೆಯರಿಗೆ ಇಬ್ಬರು ಪತ್ನಿಯರಿದ್ದಿರಬಹುದು, ಹಿಂದೂ ಸಮಾಜದಲ್ಲಿ ಅಂಥ ಉದಾಹರಣೆಗಳು ಕಡಿಮೆ. ಸಾಮಾನ್ಯವಾಗಿ ಹಿಂದೂಗಳಲ್ಲಿ ಕೆಳವರ್ಗದವರಲ್ಲಿ ಮಾತ್ರ ದ್ವಿಪತ್ನಿತ್ವವನ್ನು ಕಾಣಬಹುದು. ಆದರೆ ಅವರಲ್ಲಿ ಕೂಡ ಅವರ ಕೆಲಸದಲ್ಲಿ ಅನುಕೂಲವಾಗಲಿ ಎಂಬ ಕಾರಣಕ್ಕಾಗಿ ಹೊಂದಿರುತ್ತಾರೆಯೇ ಹೊರತು ಬೇರೇ ಯಾವುದೇ ಕಾರಣಕ್ಕಲ್ಲ. ಸಾಮಾನ್ಯವಾಗಿ ಹಿಂದೂಗಳಲ್ಲಿ ಏಕಪತ್ನಿತ್ವವೇ ಹೆಚ್ಚು. ಅದಕ್ಕೆ ಅವರ ಸ್ವಭಾವ ಕಾರಣವಿರಬಹುದು ಅಥವಾ ಪರಿಸ್ಥಿತಿಯ ಒತ್ತಡ ಕೂಡ ಕಾರಣವಿರಬಹುದು. ಒಬ್ಬಳು ಹೆಂಡತಿಯೇ ಸಿಗುವುದು ಕಷ್ಟವಾಗಿರುವಾಗ ಇಬ್ಬರನ್ನು ಎಲ್ಲಿಂದ ತರುವುದು? ಆ ಕಾಲದಲ್ಲಿ ಸೆಲೆಕ್ಟ್ ಸಮಿತಿ ತನ್ನ ವರದಿಯಲ್ಲಿ ಈ ಕೆಳಕಂಡಂತೆ ಹೇಳಿತ್ತು:

"ಒಂದು ನಿರ್ದಿಷ್ಟ ವಯೋಮಿತಿಯೊಳಗಿರುವ ಬಾಲಕ–ಬಾಲಕಿಯರ ವಿವಾಹವನ್ನು ಅನೂರ್ಜಿತಗೊಳಿಸುವುದರ ಮುಖಾಂತರ ಬಾಲ್ಯವಿವಾಹವನ್ನು ನಿಯಂತ್ರಿಸುವುದು ಈ ಮಸೂದೆಯ ಉದ್ದೇಶ ಎಂಬ ಘೋಷಣೆಯೊಂದಿಗೆ ಮಸೂದೆಯನ್ನು ಸದನದಲ್ಲಿ ಮಂಡಿಸಲಾಯಿತು".

"ಆ ಮದುವೆಗಳನ್ನು ಅನೂರ್ಜಿತವೆಂದು ಘೋಷಿಸುವುದು" ಶಾರದಾ ಕಾಯಿದೆಯ ಉದ್ದೇಶ ಹಾಗೂ ಗುರಿಯಾಗಿತ್ತು ಎಂಬ ಅಂಶವನ್ನು ನೀವು ಗಮನಿಸಬೇಕು. ಆದರೆ ನಂತರದಲ್ಲಿ ಈ ಉದ್ದೇಶ ಬದಲಾಯಿತು. ಹಾಗಾದರೆ ಏಕೆ ಈ ರೀತಿ ಬದಲಾಯಿಸಿದರು? ಏಕೆಂದರೆ ಅದು ತೀರಾ ಶಿಸ್ತಿನ ಕ್ರಮವಾಗಿಬಿಡುತ್ತದೆ ಎಂಬ ಕಾರಣಕ್ಕಾಗಿ ಬದಲಾಯಿಸಿದರು. ನೀವು ಕೂಡ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮುಂದೆ ನಾನು ಏಕವಿವಾಹ ಪದ್ಧತಿಯ ಬಗ್ಗೆಯೂ ಮಾತನಾಡುತ್ತೇನೆ. ಆದರೆ ಅದಕ್ಕೆ ಮೊದಲು, ಶಾರದಾ ಕಾಯಿದೆಯಲ್ಲಿ ಮಾಡಿದ ಮಾರ್ಪಾಡುಗಳನ್ನು ಹೇಳಿಬಿಡುತ್ತೇನೆ:

"ಮಸೂದೆಯನ್ನು ಸರ್ಕಾರಿ ಆಜ್ಞೆಯ ಪ್ರಕಾರ ಪ್ರಕಟಿಸಲಾಯಿತು. ಅದು ಧಾರ್ಮಿಕ ಮತ್ತು ಕಾನೂನು ರೀತ್ಯಾ ಆಕ್ಷೇಪಾರ್ಹವಾದುದು, ಏಕೆಂದರೆ ಈಗಾಗಲೇ ನಡೆದುಹೋಗಿರುವ ವಿವಾಹಗಳನ್ನು ಅದು ಅನೂರ್ಜಿತಗೊಳಿಸುತ್ತದೆ ಎಂಬ ಬಲವಾದ ಅಭಿಪ್ರಾಯಗಳು ವ್ಯಕ್ತವಾದವು.

ನಮ್ಮ ದೃಷ್ಟಿಯಲ್ಲಿ, ಸದ್ಯದ ಪರಿಸ್ಥಿತಿಯಲ್ಲಿ ಈ ಆಕ್ಷೇಪಗಳೆಲ್ಲವನ್ನೂ ಪರಿಹರಿಸಲು ಸಾಧ್ಯವಿಲ್ಲ. ಹಾಗಾಗಿ ನಾವು ಬಹುಜನರ ಸಲಹೆಯ ಮೇರೆಗೆ ಆ ವಿವಾಹಗಳನ್ನು ಅನೂರ್ಜಿತಗೊಳಿಸುವ ಬದಲು ಸಂಬಂಧಪಟ್ಟವರನ್ನು ಶಿಕ್ಷಿಸುವ ಮೂಲಕ ಈ ಮಸೂದೆಯ ಉದ್ದೇಶವನ್ನು ಜಾರಿಗೊಳಿಸಲು ಪ್ರಯತ್ನಿಸುತ್ತೇವೆ."

ಇದರ ಪರಿಣಾಮವನ್ನು ನೀವು ಗಮನಿಸಬಹುದು. ಮೊದಲು ತಿರಸ್ಕರಿಸಬೇಕೆಂದು ಆಲೋಚಿಸಿದ್ದ ವಿಚಾರಗಳನ್ನು ತಿರಸ್ಕರಿಸಲಿಲ್ಲ. ಆ ಮದುವೆಗಳನ್ನು ಅನೂರ್ಜಿತಗೊಳಿಸಲಿಲ್ಲ. ಆದರೆ ಸಂಬಂಧಪಟ್ಟವರನ್ನು ಶಿಕ್ಷಿಸಲಾಯಿತು. ಕೆಲವು ನಿಯಮಗಳನ್ನೂ ರೂಪಿಸಲಾಯಿತು.

ವಿವಾಹದ ಸಮಂಜಸತೆಗೆ ಸಂಬಂಧಿಸಿದಂತೆ ಹಿಂದೂ, ಸಿಖ್, ಜೈನ, ಬ್ರಹ್ಮಸಮಾಜದವರಿಗೆ, ಆರ್ಯಸಮಾಜದವರಿಗೆ ಮತ್ತು ಬೌದ್ಧರಿಗೆ ಈ ಮಸೂದೆಯು ಅನ್ವಯಿಸುತ್ತದೆ. ಈ ಕಾಯಿದೆಯು ಮದುವೆಯ ಸಮಂಜಸತೆಯ ಬಗೆಗಿನ ಮಸೂದೆ. ಬಾಲ್ಯವಿವಾಹದಲ್ಲಿ ಭಾಗವಹಿಸುವವರಿಗೆ ಕ್ರಿಮಿನಲ್ ಶಿಕ್ಷೆಗಳನ್ನು ವಿಧಿಸಲಾಗುವುದು ಎಂಬ ತಿದ್ದುಪಡಿಯನ್ನು ಮಸೂದೆಗೆ ತರಲು ಬಯಸಿರುವುದರಿಂದ ನಿರ್ದಿಷ್ಟ ಸಮುದಾಯಗಳಿಗೆ ಮಾತ್ರ ಈ ಮಸೂದೆ ಅನ್ವಯಿಸುವಂತೆ ಮಾಡುವುದು ಪಕ್ಷಪಾತದ ಕ್ರಮವಾಗುತ್ತದೆ. ಏಕೆಂದರೆ, ಉಳಿದ ಸಮುದಾಯಗಳಲ್ಲೂ ಅಪರೂಪವಾಗಿಯಾದರೂ ಬಾಲ್ಯವಿವಾಹವು ನಡೆಯುತ್ತಿರುತ್ತದೆ. ಆದ್ದರಿಂದ ತಿದ್ದುಪಡಿಯಾದ ಮಸೂದೆಯ ವ್ಯಾಪ್ತಿಯು ಸಾರ್ವಜನಿಕವಾಗಿದ್ದು ಬ್ರಿಟಿಷ್ ಇಂಡಿಯಾದ ಎಲ್ಲಾ ವರ್ಗ ಹಾಗೂ ಜನಾಂಗಗಳಿಗೆ ಅನ್ವಯಿಸಬೇಕೆಂದು ನಾವು ಸೂಚಿಸುತ್ತೇವೆ.

ಇದೊಂದು ಗಮನಾರ್ಹವಾದ ಬದಲಾವಣೆ. ಜನಾಭಿಪ್ರಾಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಈ ಕ್ರಮವನ್ನು ಕೈಗೊಂಡರು. ಹಾಗಾಗಿ ಮಾನ್ಯ ಕಾನೂನು ಮಂತ್ರಿಗಳು ಕೂಡ ಸಾರ್ವಜನಿಕ ಅಭಿಪ್ರಾಯವನ್ನು ಮತ್ತು ಒಟ್ಟು ಸಮಾಜದ ಒಲವನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕು. ಇದು ನನ್ನ ಏಕೈಕ ಬೇಡಿಕೆ.

ಕ್ರೈಸ್ತ ವಿವಾಹ ಕಾಯಿದೆಯಲ್ಲಿ ಭಾರತೀಯ ಕ್ರೈಸ್ತರಿಗೆ ಯಾವ ನಿಯಮಗಳನ್ನು ರೂಪಿಸಲಾಗಿದೆ ಎನ್ನುವುದನ್ನು ಗಮನಿಸಬೇಕು ಮತ್ತು ಪಾರ್ಸಿ ಕಾಯಿದೆಯಲ್ಲಿ ಯಾರನ್ನು ನಿಜವಾದ ಪಾರ್ಸಿಗಳು ಎಂದು ವ್ಯಾಖ್ಯಾನಿಸಲಾಗಿದೆ ಎನ್ನುವುದನ್ನು ಪರಿಶೀಲಿಸಬೇಕು. ಇದು ತುಂಬಾ ಸುಲಭದ ಕೆಲಸ. ಜೊರಾಷ್ಟ್ರಿಯನ್ ತತ್ವವನ್ನು ಆಚರಿಸುವವನೇ ಪಾರ್ಸಿ ಎನ್ನುತ್ತದೆ ಪಾರ್ಸಿ ಕಾಯಿದೆ. ಆದರೆ ಈ ದೇಶದಲ್ಲಿ ಹಲವಾರು ಪಂಥಗಳಿವೆ ಮತ್ತು ಜನರು ಬೇರೆ ಬೇರೆ ಪಂಥಗಳ ಅನುಯಾಯಿಗಳಾಗಿರುತ್ತಾರೆ. ಆದ್ದರಿಂದ ಇವರೆಲ್ಲರನ್ನೂ ಹಿಂದೂಗಳೆಂದೇ ಪರಿಗಣಿಸಬೇಕೆಂಬುದು ನನ್ನ ಮನವಿ.

ಶಾರದಾ ಕಾಯಿದೆಯನ್ನು ಬಿ ಭಾಗದ ರಾಜ್ಯಗಳಿಗೆ ಈವರೆಗೆ ಅನ್ವಯಿಸಿಲ್ಲ. ೧೯೫೦ರ ತಿದ್ದುಪಡಿಯ ಪ್ರಕಾರ ಈ ವಿಷಯವು ಸಮವರ್ತಿ (ಕನ್‌ಕರೆಂಟ್) ಪಟ್ಟಿಯಲ್ಲಿ ಬರುತ್ತದೆ. ಹಾಗಾಗಿ ಯಾವ ರಾಜ್ಯಕ್ಕೆ ಬೇಕಾದರೂ ಇದನ್ನು ಅನ್ವಯಿಸಬಹುದು. ಈ ನಿಬಂಧನೆ ಇದ್ದಾಗ್ಯೂ ಕೂಡ ಆ ಕಾಯಿದೆಯನ್ನು ಬಿ ಭಾಗದ ರಾಜ್ಯಗಳಲ್ಲಿ ಈವರೆಗೆ ಜಾರಿಗೊಳಿಸಿಲ್ಲ.

**ಶ್ರೀ ಬಿ. ದಾಸ್ :** ಡಾ. ಅಂಬೇಡ್ಕರ್‌ರು ಈ ಬಗ್ಗೆ ಗಮನ ಹರಿಸುತ್ತಾರೆ ಎಂದು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್ :** ಅವೆಲ್ಲವನ್ನೂ ರದ್ದುಮಾಡಲಾಗುತ್ತದೆ.

**ಶ್ರೀ ಭಟ್ :** ನಾನು ಮಾನ್ಯ ಕಾನೂನು ಮಂತ್ರಿಗಳ ಜೊತೆ ವಿಚ್ಛೇದನದ ಬಗ್ಗೆ ಮಾತನಾಡುತ್ತಿದ್ದೆ. ಕಾನೂನು, ಸಾಮಾಜಿಕ ರಿವಾಜುಗಳಿಗೆ ಪ್ರತಿಕೂಲವಾಗದೇ ಇರುವ ತನಕ ಅದು ಜಾರಿಯಲ್ಲಿರಲು ಅವಕಾಶ ಮಾಡಿಕೊಡಬೇಕೆಂದು ನಾನು ಕಾನೂನು ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸುಧಾರಣೆಗಳನ್ನು ಬಯಸುವವರಿಗೆ ನಾಗರಿಕ ವಿವಾಹ ಕಾಯಿದೆ ಹೇಗೂ ಇದ್ದೇ ಇದೆ.

**ಡಾ. ಅಂಬೇಡ್ಕರ್ :** ಅವರಿಗೆ ಕೂಡ ಈ ಅವಕಾಶ ಇರಬಾರದು.

**ಶ್ರೀ ಭಟ್ :** ಈಗಾಗಲೇ ಈ ಅವಕಾಶವಿರುವವರನ್ನು – ಅವರು ಬಾಗಿಲಿನಿಂದಲೇ ಬರಲಿ ಅಥವಾ ಕಿಟಕಿಯಿಂದಲೇ ಬರಲಿ – ಈ ಅವಕಾಶದಿಂದ ವಂಚಿತಗೊಳಿಸಬೇಡಿ. ಬೇರೆ ಬೇರೆ ಸಮುದಾಯಗಳಲ್ಲಿ ಚಾಲ್ತಿಯಲ್ಲಿರುವ ಈ ವಿಭಿನ್ನ ಸಂಪ್ರದಾಯಗಳು ಮತ್ತು ರಿವಾಜುಗಳನ್ನು, ಹಿಂದು ಸಮುದಾಯದಲ್ಲಿ ಕೊನೇಪಕ್ಷ ಶೈಕ್ಷಣಿಕವಾಗಿ ಮತ್ತು ಉಳಿದಂತೆ ಹಿಂದುಳಿದಿರುವ ಗುಂಪುಗಳಲ್ಲಿ ಹಾಗೇ ಮುಂದುವರಿಯಲು ಬಿಡಿ. ನಮ್ಮ ಮಾನ್ಯ ಕಾನೂನು ಮಂತ್ರಿಗಳು ವಾಸ್ತವವಾಗಿ ಹಿಂದೂ ಸಮಾಜವು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ತಿಳಿದಿಲ್ಲ. ದಯವಿಟ್ಟು ಅಂಥದ್ದೊಂದು ಪ್ರವಾಸ ಕೈಗೊಂಡು ಜನರನ್ನು ಸಂಪರ್ಕಿಸಿ. ಅವರಿಗೆ ನಿಮ್ಮ ಪುಸ್ತಕಗಳನ್ನು ತೋರಿಸಿ ನೀವು ಅವರಿಗಾಗಿ ಏನು ಮಾಡುತ್ತಿದ್ದೀರಿ ಎನ್ನುವುದನ್ನು ಅವರಿಗೆ ಮನದಟ್ಟು ಮಾಡಿಕೊಡಿ. ಸತ್ಯವು ತನ್ನ ಸತ್ಯತೆಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ, ಬಂಗಾರವು ಯಾವುದೇ ಕಾರಣಕ್ಕೂ ಕಲ್ಲಾಗಿ ಮಾರ್ಪಾಡಾಗುವುದು ಸಾಧ್ಯವಿಲ್ಲ. ಅದಿನ್ನೂ ಪುಟವಿಟ್ಟ ಅಪರಂಜಿ ಚಿನ್ನವಾಗಬಹುದು ಅಷ್ಟೆ. ಹಾಗಾಗಿ ಬಂಗಾರ ಶುದ್ಧವಾಗಲು ಕಾಲಾವಕಾಶ ನೀಡಿ. ನಿಜವಾಗಿಯೂ ವಿಚ್ಛೇದನ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸ್ವಲ್ಪ ಸಮಯ ಕೊಡಿ. ಇಲ್ಲಿ ವಿವಾದ ಹುಟ್ಟಿಕೊಳ್ಳಲು ಅವಕಾಶ ನೀಡಬೇಡಿ. ಸುಧಾರಣೆಗಳು ಬೇಕೆನ್ನುವವರು ನಾಗರಿಕ ವಿವಾಹ ಕಾಯಿದೆಯನ್ನು ಬಳಸಿಕೊಳ್ಳಲು ಸದಾ ಸ್ವತಂತ್ರರಾಗಿದ್ದಾರೆ. ಈ ಕಾನೂನಿನನ್ವಯ ಅವರು ವಿಚ್ಛೇದನದ ಸೌಲಭ್ಯವನ್ನು ಖಂಡಿತವಾಗಿಯೂ ಪಡೆಯಬಹುದು. ಅವರ ಸಮಸ್ಯೆಗೆ ಪರಿಹಾರರೂಪವಾಗಿ ನನ್ನದೊಂದು ಸಲಹೆ ಇದೆ. ಅವರ ಮದುವೆಗಳನ್ನು ನಾಗರಿಕ ವಿವಾಹ ಕಾಯ್ದೆಯ ಅನ್ವಯ ನೋಂದಣಿ ಮಾಡಲು ಅವಕಾಶ ನೀಡಿ. ಆಗ ಅವರು ಇಚ್ಛಿಸಿದ್ದಲ್ಲಿ ವಿಚ್ಛೇದನದ ಸೌಲಭ್ಯವನ್ನು ಹೊಂದಬಹುದು. ಹಾಗಾಗಿ ಅವರ ಬಯಕೆಗಳನ್ನು ಈಡೇರಿಸಿಕೊಳ್ಳಲು ಹೆಚ್ಚಿನ ಅವಕಾಶ ದೊರಕಿದಂತಾಗುತ್ತದೆ.

**ಶ್ರೀ ಆರ್.ಸಿ. ಉಪಾಧ್ಯಾಯ :** ಒಂದು ವೇಳೆ ಪತಿ ಅದನ್ನು ಬೆಂಬಲಿಸಿ ಪತ್ನಿ ಅದನ್ನು ವಿರೋಧಿಸಿದಲ್ಲಿ ನಿಮ್ಮ ಸಲಹೆ ಏನು?

**ಶ್ರೀ ಭಟ್ :** ಪತ್ನಿಯು ತನ್ನ ಪತಿಯ ಮಾತನ್ನು ಖಂಡಿತವಾಗಿಯೂ ಬೆಂಬಲಿಸುತ್ತಾಳೆ. ಆಕೆ ಸುಶಿಕ್ಷಿತೆಯಾಗಿದ್ದರೇನಂತೆ ಮನೆಯ ಮಟ್ಟಿಗಂತೂ ಆಕೆ ತನ್ನ ಪತಿಯನ್ನು ದೇವರೆಂದೇ ಭಾವಿಸುತ್ತಾಳೆ. ಅದರರ್ಥ ಹಿಂದೂಗಳು ತಮ್ಮ ಪತ್ನಿಯರನ್ನು ಗುಲಾಮರೆಂದು ಪರಿಗಣಿಸುತ್ತಾರೆ ಎಂದು ಭಾವಿಸಬಾರದು.

ಆಕೆ ಮನೆಯ ಒಡತಿ ಮತ್ತು ಗೃಹದೇವತೆ. ಇವು ಮಹಿಳೆಯರನ್ನು ಕುರಿತಂತೆ ಬಳಸುವ ಪದಗಳು. ಮಹಿಳೆಯರನ್ನು ಗುಲಾಮರಂತೆ ಪರಿಗಣಿಸುವಷ್ಟು ಅಧೋಗತಿಗೆ ಹಿಂದೂ ಸಮಾಜ ಇಳಿದಿಲ್ಲ. ಅಂಥ ಭಾವನೆ ಯಾವ ಮನಸ್ಸಿನಲ್ಲಾದರೂ ಇದ್ದಲ್ಲಿ ಅದನ್ನು ತೊಡೆದುಹಾಕುವುದು ಲೇಸು. ಅತ್ಯಂತ ಹಿಂದುಳಿದ ಪಂಗಡಗಳಲ್ಲಿಯೂ ಹೆಣ್ಣು ತನ್ನ ಮನೆಯ ಒಡತಿ. ಅವಳ ಇಚ್ಛೆಯನ್ನು ಅವಳ ಪತಿ ಕಾರ್ಯರೂಪಕ್ಕೆ ತರುತ್ತಾನೆ. ರಾಜಾಸ್ಥಾನ ಮತ್ತು ಇನ್ನೂ ಮುಂತಾದ ಕಡೆಗಳಲ್ಲಿ ಹಲವಾರು ಸಾಮಾಜಿಕ ರಿವಾಜುಗಳನ್ನು ಶಾಸ್ತ್ರದಲ್ಲಿ ಸೇರಿಸಿದ್ದಾರೆ. ಆ ಶಾಸ್ತ್ರವನ್ನು ದೋಶಿಶಾಸ್ತ್ರವೆಂದು ಕರೆಯುತ್ತಾರೆ. ಅಲ್ಲಿನ ಜನರು ತಮ್ಮ ಎಲ್ಲಾ ಕಲಾಪಗಳನ್ನೂ ವೃದ್ಧ ಮಹಿಳೆಯರ ಸಲಹೆಯ ಮೇರೆಗೆ ಮಾಡುತ್ತಾರೆ. ಸಾಂಪ್ರದಾಯಿಕ ವಿವಾಹ ಸಮಾರಂಭದಲ್ಲಿ ಅಕಸ್ಮಾತ್ ಪಂಡಿತನು ಎಲ್ಲಿಯಾದರೂ ತಪ್ಪು ಮಾಡಿದಲ್ಲಿ, ಹಾಡುಗಳ ಸಹಾಯದಿಂದ ಅವನು ಎಲ್ಲಿ ತಪ್ಪಿದ್ದಾನೆ ಎಂಬುದನ್ನು ತಕ್ಷಣವೇ ತೋರಿಸಲಾಗುತ್ತದೆ. ಸಪ್ತಪದಿ ಮುಂತಾದವುಗಳಲ್ಲಿ ಎಲ್ಲಿಯಾದರೂ ಲೋಪವಾದಲ್ಲಿ ಅದು ಕೂಡಲೇ ಹಾಡಿನ ಮೂಲಕ ನಮ್ಮ ಗಮನಕ್ಕೆ ಬಂದು ಬಿಡುತ್ತದೆ. ಹೀಗೆ ಈ ರಿವಾಜುಗಳೆಲ್ಲವೂ ಹಾಡುಗಳ ಸಹಾಯದಿಂದ ಸಾಂಗವಾಗಿ ನಡೆಯುತ್ತದೆ. ಹಾಗಾಗಿ ಹಿಂದೂ ಸಮಾಜದಲ್ಲಿ ಮಹಿಳೆಯರನ್ನು ಗೌರವಿಸುವುದಿಲ್ಲ ಎಂದು ಭಾವಿಸಬಾರದು.

ಕುಡುಕನೊಬ್ಬನು ಒಳ್ಳೆಯವನು, ಮಹಾತ್ಮ ಅಥವಾ ಸುಶಿಕ್ಷಿತನಿರಬಹುದು. ಆದರೆ ಅಷ್ಟಾಗಿಯು ಅವನು ಕುಡುಕನೇ ಅಲ್ಲವೆ? ಕುಡಿತವು ಮನುಷ್ಯನಿಗೆ ಮತ್ತೇರಿಸುವುದಲ್ಲದೆ ಮತ್ತೇನನ್ನು ತಾನೆ ಮಾಡಬಹುದು? ಕುಡುಕನು ಮೇಲ್ವರ್ಗ ಅಥವಾ ಕೆಳವರ್ಗ – ಯಾವುದೇ ವರ್ಗಕ್ಕೆ ಸೇರಿದವನಾಗಲಿ ಅವನು ಮೂರ್ಖನಲ್ಲದೆ ಮತ್ತೇನಾಗಲು ಸಾಧ್ಯ?

**ಶ್ರೀ ಆರ್**.ಸಿ. **ಉಪಾಧ್ಯಾಯ** : ಅವರಿಗೇನು ಮಾಡಬೇಕು?

**ಶ್ರೀ ಭಟ್** : ಮರುದಿನ ನಶೆ ತನ್ನಿಂದ ತಾನೇ ಇಳಿಯುತ್ತದೆ. ಆಗ ಎಲ್ಲವೂ ಸರಿಯಾಗುತ್ತದೆ. ಅದು ಅವರ ಚಟವಾಗಿಬಿಡುತ್ತದೆ ಎನ್ನುವುದು ನಿಮಗೆ ತಿಳಿದಿಲ್ಲ. ನಮ್ಮೆಲ್ಲರಿಗೂ ಹಲವಾರು ಒಳ್ಳೆಯ ಹಾಗೂ ಕೆಟ್ಟ ಚಟಗಳಿವೆ. ಇನ್ನು ನಶೆಗೆ ಸಂಬಂಧಿಸಿದಂತೆ ನಾನು ಹಲವಾರು ಮಂದಿಯನ್ನು ಗಮನಿಸಿದ್ದೇನೆ ಎರಡು ಅಥವಾ ಮೂರು ಬಾಟ್ಲಿ ವಿಸ್ಕಿಯನ್ನು ಕುಡಿದ ನಂತರವೂ ಅವರಿಗೆ ಮತ್ತೇರುವುದಿಲ್ಲ. ಬಾಂಬೆ ವಕೀಲರ ಸಂಘದಲ್ಲಿ ಒಂದೆರೆಡು ಮೂರು ಪೆಗ್ ವಿಸ್ಕಿಯನ್ನಾದರೂ ಹಾಕದಿದ್ದಲ್ಲಿ ಕೇಸನ್ನು ವಾದಿಸಲು ಸಾಧ್ಯವಾಗದಿದ್ದ ಹಲವಾರು ವಕೀಲರಿದ್ದರು ಎಂಬುದು ಮಾನ್ಯ ವೈದ್ಯರಿಗೆ ನೆನಪಿರಬಹುದು.

**ಸಭಾಧ್ಯಕ್ಷರು** : ಮಾನ್ಯ ಸದಸ್ಯರು ಎರಡನೇ ಕಲಮಿನ ಯಾವ ನಿಬಂಧನೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆಂಬುದನ್ನು ನಾನು ತಿಳಿಯಬಹುದೇ?

**ಡಾ. ಅಂಬೇಡ್ಕರ್** : ನಾವು ನಿರ್ವಾಸಿತ ಆಸ್ತಿ ಮಸೂದೆಯ ಬಗ್ಗೆ ಚರ್ಚಿಸುತ್ತಿದ್ದೇವೆ.

**ಶ್ರೀ ಭಟ್** : ಸರ್, ದಯವಿಟ್ಟು ಕ್ಷಮಿಸಬೇಕು. ಸ್ವಲ್ಪ ವಿಷಯಾಂತರವಾಯಿತು. ನನ್ನ ಕೆಲವು ಗೆಳೆಯರು ಆ ಬಗ್ಗೆ ಮಾತನಾಡಿದ್ದರು ಎಂದು ನಿಮಗೆ ನೆನಪುಮಾಡಲು ಬಯಸುತ್ತೇನೆ. ನಾನು ಹೇಳಬೇಕೆಂದಿರುವುದು ಇಷ್ಟು–ಏಕವಿವಾಹದ ನಿಬಂಧನೆಯನ್ನು ಸೇರಿಸುವ ಅಥವಾ ಬಿಡುವ ಮೂಲಕ ನೀವು ಆ ಮಸೂದೆಯಲ್ಲಿ ಯಾವ ಸುಧಾರಣೆಯನ್ನೂ ತರುತ್ತಿಲ್ಲವೆಂದಾಗಲಿ ಅಥವಾ ಯಾವ ಕೇಡನ್ನೂ ಉಂಟುಮಾಡುತ್ತಿಲ್ಲವೆಂದಾಗಲಿ ಯಾರೂ ಹೇಳಿಲ್ಲ. ಕಾನೂನು ನಿರ್ಬಂಧಗಳನ್ನು ಅದರ ಮೇಲೆ ಹೇರುವ ಆವಶ್ಯಕತೆಯಿದೆಯೇ? ನಿಮಗದನ್ನು ಹೇರಲೇಬೇಕು ಎಂಬ ಹಟವಿದ್ದರೆ ನಮ್ಮದೇನೂ ಆಕ್ಷೇಪವಿಲ್ಲ. ಆದರೆ ಎಲ್ಲರಿಗೂ ಅನ್ವಯವಾಗುವಂತೆ ಜಾರಿಗೊಳಿಸಿ. ಏಕೆಂದರೆ ಆಗ ಮುಸ್ಲಿಮರಿಗೂ ಏನೂ ಅನ್ನಿಸುವುದಿಲ್ಲ.

ಅದು ಒಳ್ಳೆಯದೆಂದು ಅವರೂ ಒಪ್ಪಿಕೊಳ್ಳುತ್ತಾರೆ ಮತ್ತು ಅದು ಅವರಿಗೂ ಅನ್ವಯಿಸಬೇಕು. ಶಾರದಾ ಕಾಯಿದೆಯನ್ನು ಎಲ್ಲಾ ಪಂಗಡ ಹಾಗೂ ವರ್ಗದವರಿಗೂ ಅನ್ವಯಿಸುವಂತೆ ಹೇಗೆ ಜಾರಿಗೊಳಿಸಿದಿರೋ ಅದೇ ರೀತಿ ಇದನ್ನೂ ಎಲ್ಲರಿಗೂ ಅನ್ವಯಿಸಿ ಜಾರಿಗೊಳಿಸಬೇಕು. ಇನ್ನೂ ವಿಚ್ಛೇದನವಂತೂ ಈಗಾಗಲೇ ಮುಸ್ಲಿಂ ಸಮುದಾಯದಲ್ಲಿ ಪ್ರಚಲಿತದಲ್ಲಿದೆ. ಆದ್ದರಿಂದ ನಾನು ಕೇಳಿಕೊಳ್ಳುವುದೇನೆಂದರೆ ಯಾವ ಕಾಯದೆಯನ್ನೇ ಆಗಲಿ ಎಲ್ಲರಿಗೂ ಅನ್ವಯಿಸಿ. ಯಾರಿಗೂ ವಿನಾಯ್ತಿಯನ್ನು ನೀಡಬೇಡಿ. ಅದು ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯವಾಗಬೇಕು.

ನೀವು, ನಾವು ಹೇಳಿದ ವಿಚಾರವನ್ನು ಒಪ್ಪಿಕೊಂಡು ಅದಕ್ಕೆ ಅವಕಾಶಮಾಡಿಕೊಡುತ್ತೀರಿ ಎಂದು ಭಾವಿಸಿದ್ದೇವೆ. ಈಗ ನಮ್ಮ ನಿಲುವನ್ನು ಅರ್ಥಮಾಡಿಕೊಂಡಿರುವ ನೀವು ತುಂಬಾ ಉಪಕಾರಶೀಲ ಪ್ರವೃತ್ತಿಯವರಾಗಿದ್ದೀರಿ. ಈಗ ಬೇರೇನೂ ಮಾಡಲಾಗದಿದ್ದರೆ, ಕೊನೆಯ ಪಕ್ಷ ಒಂದು ಕೆಲಸ ಮಾಡಿ. ಮೂಲ ಮಸೂದೆಯಿಂದ ಮದುವೆ ಮತ್ತು ವಿಚ್ಛೇದನದ ಕಲಮುಗಳನ್ನು ಕಿತ್ತುಹಾಕಿ ಅವುಗಳನ್ನು ಒಂದು ಬೇರೆ ಕಾನೂನಾಗಿ ಜಾರಿಗೊಳಿಸಿ ಮತ್ತು ಅದು ಎಲ್ಲರಿಗೂ ಅನ್ವಯವಾಗುವಂತೆ ಮಾಡಿ. ನೀವು ಹಾಗೆ ಮಾಡಿದಲ್ಲಿ ಖಂಡಿತವಾಗಿಯೂ ಎಲ್ಲರೂ ಸಂತೋಷಗೊಂಡು ನೀವು ಧೀರ ಕಾರ್ಯವೊಂದನ್ನು ಮಾಡಿದ್ದೀರೆಂದು ನಿಮ್ಮನ್ನು ಹೊಗಳುತ್ತಾರೆ. ಎಲ್ಲಾ ವಿರೋಧವು ತನ್ನಿಂದ ತಾನೇ ಮರೆಯಾಗಿ ಹೋಗುತ್ತದೆ. ಮತ್ತು ಸರ್ಕಾರವು ಗರಿಷ್ಠ ತೃಪ್ತಿ ಕೊಡುವಂಥ ಸೂಕ್ತ ಕ್ರಮವನ್ನು ಕೈಗೊಂಡಿದೆ ಎಂದು ಜನರು ಹೇಳುತ್ತಾರೆ. ಅದು ಸಂಪೂರ್ಣವಾಗಿ ತೃಪ್ತಿಕರವಲ್ಲ, ಆದರೆ ಈ ಪ್ರಸ್ತುತ ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚಿಗೆ ಇನ್ನೇನನ್ನೂ ಮಾಡಲಾಗುವುದಿಲ್ಲ. ಆದ್ದರಿಂದ ಇಂದಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕ್ರಮವನ್ನು ದಯವಿಟ್ಟು ಅಂಗೀಕರಿಸಿ, ಅದನ್ನು ಜಾರಿಗೊಳಿಸಲು ಹೊರಟಾಗ ಮತ್ತೇನನ್ನು ಅದಕ್ಕೆ ಸೇರಿಸಬೇಕು ಮತ್ತು ಅದರಲ್ಲಿ ಇನ್ನೇನು ಸುಧಾರಣೆಗಳನ್ನು ಮಾಡಬಹುದು ಎನ್ನುವುದು ತಾನಾಗಿಯೇ ನಿಮ್ಮ ಗಮನಕ್ಕೆ ಬರುತ್ತದೆ. (ಅಡಚಣೆ) ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ನಿಜವಾದ ತೊಂದರೆ ಎಲ್ಲಿದೆ ಎನ್ನುವುದು ಸ್ಪಷ್ಟವಾಗುತ್ತದೆ. ತೊಡುವವನಿಗೆ ಚಪ್ಪಲಿ ಎಲ್ಲಿ ಕಚ್ಚುತ್ತಿದೆ ಎಂದು ಚೆನ್ನಾಗಿ ತಿಳಿದಿರುತ್ತದೆ. ಹಲವಾರು ಸಹೋದರಿಯರು ಇಲ್ಲಿಗೆ ಬಂದು ನಿಮ್ಮನ್ನು ಕೇಳಿಕೊಳ್ಳುತ್ತಾರೆ, ಆಗ ನಿಮಗೆ ವಾಸ್ತವವಾಗಿ ಪರಿಸ್ಥಿತಿ ಏನು ಎನ್ನುವುದು ಅರ್ಥವಾಗುತ್ತದೆ. ಇನ್ನೊಂದಿಷ್ಟು ಬೇರೆಯ ರೀತಿಯ ಜನ ಇಲ್ಲಿಗೆ ಬರುತ್ತಾರೆ ಮತ್ತು ಆಗ ಈ ಸುಧಾರಣೆಯನ್ನು ಎಷ್ಟರಮಟ್ಟಿಗೆ ವಿರೋಧಿಸುತ್ತಿದ್ದಾರೆ ಎನ್ನುವುದೂ ನಿಮಗೆ ಅರಿವಾಗುತ್ತದೆ. ವಿರೋಧವು ಎಲ್ಲಿಂದಲೇ ಬರಲಿ ನೀವು ಅದಕ್ಕೆ ಬಾಗಬೇಡಿ. ಸ್ವಲ್ಪ ಕಾಲ ಸುಮ್ಮನಿದ್ದುಬಿಡಿ. ನಂತರ ಯಾವ ವಿರೋಧವನ್ನೂ ಲೆಕ್ಕಿಸದೇ ಸರ್ಕಾರ ಶಾರದಾ ಕಾಯಿದೆಯನ್ನು ಜಾರಿಗೊಳಿಸಿದಂತೆ ಇದನ್ನೂ ಎಲ್ಲರಿಗೂ ಅನ್ವಯಿಸುವಂತೆ ಜಾರಿಗೊಳಿಸಿ. ಕಾಲಾವಕಾಶ ನೀಡುವ ಪ್ರಶ್ನೆಯೇ ಇಲ್ಲ. ಹೊಸ ಮಸೂದೆಯ ಕರಡು ಪ್ರತಿಯನ್ನು ಸಿದ್ಧಪಡಿಸಿ ಬರುವ ಫೆಬ್ರವರಿಯಲ್ಲಿ ಸದನದ ಸಮಾವೇಶದಲ್ಲಿ ಅದನ್ನು ಮಂಡಿಸಿ.

**ಶ್ರೀ ಶ್ಯಾಮನಂದನ ಸಹಾಯ್ :** ಅದು ಫಾಲ್ಗುಣ ಮಾಸವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಅದು ತುಂಬಾ ಸೂಕ್ತವಾದ ಕಾಲ.

**ಶ್ರೀ ಭಟ್ :** ಹೌದು ಅದು ಫಾಲ್ಗುಣ ಮಾಸವಾಗುತ್ತದೆ. ಯಾವ ತಿಂಗಳಾದರೇನಂತೆ ನಾನಂತು ನನ್ನ ಸಲಹೆಯನ್ನು ಮುಂದಿಡುತ್ತೇನೆ. ಇದನ್ನೆಲ್ಲಾ ನಾನು ಹಾಸ್ಯಕ್ಕಾಗಿ ಹೇಳುತ್ತಿಲ್ಲ. ಇದು ಭಾರತಕ್ಕೆ ತುಂಬಾ ಲಾಭಕರ, ಕೆಲವೇ ಕೆಲವು ಹಿಂದೂಗಳಿಗೆ ಅನುಕೂಲವಾಗುವಂತೇಕೆ ಮಾಡುತ್ತೀರಿ? ಇಡೀ ದೇಶಕ್ಕೇ ಅನುಕೂಲವಾಗುವಂಥ ಕೆಲಸ ಮಾಡಿರಿ. ಎಲ್ಲರಿಗೂ ಆಹ್ವಾನ ಕಳಿಸಿ ಈ ಕಾನೂನಿಗೆ ಪರಿಪೂರ್ಣತೆಯನ್ನು

ಒದಗಿಸಿಕೊಡಿ.

ಮಾನ್ಯ ಮಂತ್ರಿಗಳು ನನ್ನ ಸಲಹೆಯನ್ನು ಮತ್ತೊಮ್ಮೆ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮತ್ತೊಮ್ಮೆ ನಿಮ್ಮಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಈ ಶಾಸನವನ್ನು ಮುಂದುವರಿಸಿಕೊಂಡು ಹೋಗಲು ಇದು ಖಂಡಿತವಾಗಿಯೂ ಸೂಕ್ತವಾದ ಸಮಯವಲ್ಲ. ಇದನ್ನು ಇಲ್ಲಿಗೇ ಕೈಬಿಡಿ. ಇದರಿಂದ ದೇಶಕ್ಕೇನು ಹಾನಿಯಿಲ್ಲ. ಇದನ್ನು ಕೈಬಿಟ್ಟರೆ ಸರ್ಕಾರಕ್ಕೆ ಮತ್ತಷ್ಟು ಪ್ರಶಂಸೆ ದಕ್ಕುತ್ತದೆ. ಸ್ವಾಮಿ, ನಾನು ಈಗಾಗಲೇ ನಿಮ್ಮ ಅಮೂಲ್ಯ ಸಮಯವನ್ನು ಸಾಕಷ್ಟು ಬಳಸಿಕೊಂಡಿದ್ದೇನೆ. ಆದರೆ ಮಾತನ್ನು ಬೆಳೆಸುವ ಪ್ರಯತ್ನ ಖಂಡಿತವಾಗಿಯೂ ಮಾಡಿಲ್ಲ. ಸರ್ಕಾರದ ಪ್ರತಿನಿಧಿಯಾಗಿ ನಮ್ಮ ಮುಂದಿರುವ ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ, ನಮ್ಮ ಸರಳವಾದ, ವಿನಯಪೂರ್ವಕ ಮನವಿಯನ್ನು ಪರಿಗಣಿಸಿ, ಅದರಿಂದ ಸರ್ಕಾರಕ್ಕೆ ಕೀರ್ತಿ ದೊರಕಲಿ.

* **ಸರ್ದಾರ್ ಬಿ.ಎಸ್. ಮಾನ್ :** ಮಾನ್ಯರೇ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ಕೇಳಿದ್ದಕ್ಕೆ ತುಂಬಾ ಕೃತಜ್ಞತೆಗಳು.

ಸಿಖ್ಖರಿಗೆ ಈ ಮಸೂದೆಯಿಂದ ವಿನಾಯ್ತಿ ನೀಡಬೇಕೆಂದು ತಿದ್ದುಪಡಿಯೊಂದನ್ನು ಮುಂದಿಡುತ್ತೇನೆ. ಮಸೂದೆಯ ವ್ಯಾಪ್ತಿಯೊಳಗೆ (೩೧೫ ಪಿ ಎಸ್ ಡಿ) ಸಿಖ್ಖ್ ಸಮುದಾಯವನ್ನು ಸೇರಿಸಿಕೊಳ್ಳಬಾರದು. ಕೇವಲ ಸಿಖ್ಖರನ್ನು ಮಾತ್ರವಲ್ಲ. ಹಿಂದೂ ಅಥವಾ ಮುಸ್ಲಿಮರನ್ನೂ ಸೇರಿಸಿಕೊಳ್ಳಬೇಡಿ ಎಂದೇ ತಿದ್ದುಪಡಿಯನ್ನು ಮುಂದಿಡುತ್ತಿದ್ದೆ. ಆದರೆ ಅದರಲ್ಲಿ ಬಳಸಿದ ಮುಖ್ಯ ಕಲಮನ್ನು ಗಮನಿಸಿದಾಗ ಸಿಖ್ಖ್ ಎನ್ನುವ ಪದವನ್ನು ಬಳಸುವುದು ಅನಿವಾರ್ಯವಾಯಿತು. ನಾನು ಪಂಜಾಬಿಗಳಿಗೆ ವಿನಾಯ್ತಿ ನೀಡಿ ಎಂದು ಪ್ರಾಂತ್ಯಸೂಚಕ ಪದವನ್ನೋ ಅಥವಾ ರೈತರಿಗೆ ವಿನಾಯ್ತಿನೀಡಿ ಎಂದು ವರ್ಗಸೂಚಿ ಪದವನ್ನೋ ಬಳಸಬಹುದಿತ್ತು. ಆದರೆ ಮಸೂದೆಯ ರೂವಾರಿಗಳೇ ಹಿಂದು, ಜೈನ, ಬೌದ್ಧ ಹಾಗೂ ಸಿಖ್ಖ್ ಎಂಬ ಪದಗಳನ್ನು ಬಳಸಿರುವುದರಿಂದ ನಾನು ತಿದ್ದುಪಡಿಯಲ್ಲಿ ಸಿಖ್ಖ್ ಎಂಬ ಪದವನ್ನು ಬಳಸಿದ್ದೇನೆ. ಮಸೂದೆಯನ್ನು ಪಂಜಾಬ್ ಮತ್ತು ಪಿ.ಇ.ಪಿ.ಎಸ್. ಯು.ಗೆ ಅನ್ವಯಿಸಬಾರದು ಎಂದು ಒಂದನೇ ಕಲಮಿಗೇ ನಾನು ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. ನನ್ನ ವಾದವು ಸಂಕುಚಿತ ಮನೋಭಾವದ ಮತೀಯ ಅಥವಾ ಧಾರ್ಮಿಕ ವಿಚಾರಗಳನ್ನು ಆಧರಿಸಿಲ್ಲ. ಆ ಬಗ್ಗೆ ನಂತರ ಮಾತನಾಡುತ್ತೇನೆ. ಸಿಖ್ಖರನ್ನು ಹಿಂದು ಕಾನೂನಿನ ವ್ಯಾಪ್ತಿಯೊಳಗೆ ತರುವ ಈ ಪ್ರಯತ್ನ ಕೆಟ್ಟ ರಾಜಕೀಯ ಮತೀಯತೆಯ ಸೂಚನೆಯನ್ನು ನೀಡುತ್ತದೆ ಎಂಬ ಅಂಶವನ್ನು ನಾನು ಕ್ಷುಲ್ಲಕವಾಗಿ ಪರಿಗಣಿಸುತ್ತಿಲ್ಲ.

ಸಿಖ್ಖರೂ ಹಿಂದೂ ಕಾನೂನಿನ ಆಳ್ವಿಕೆಗೇ ಒಳಪಟ್ಟಿದ್ದಾರೆ ಎನ್ನುವುದನ್ನು ಹಿಂದಿನ ಒಂದು ಸಂದರ್ಭದಲ್ಲಿ ಮಾನ್ಯ ವೈದ್ಯರು ಸೋದಾಹರಣವಾಗಿ ವಿವರಿಸಿದ್ದಾರೆ. ಆದರೆ ಅವರಲ್ಲಿ ಕ್ಷಮೆಬೇಡುತ್ತಾ, ಅವರ ಗಮನಕ್ಕೆ ನಾನು ತರಲಿಚ್ಛಿಸುವುದೇನೆಂದರೆ, ಅವರು ಉದಾಹರಿಸಿದ ಕಾನೂನು ಕೃಷಿಯೇತರ ಆಸ್ತಿಗೆ ಮಾತ್ರ ಸಂಬಂಧಿಸಿದ್ದು. ಸಿಖ್ಖರಲ್ಲಿ ಹೆಚ್ಚಿನವರು ರೈತರು. ಸಿಖ್ಖರಲ್ಲಿ ರೈತರೇ ಶೇಕಡ ೯೫ ಮಂದಿ ಇದ್ದಾರೆ. ನೀವು ಅವರಿಗೆ ಯಾವುದು ಅನ್ವಯವಾಗುತ್ತದೆ ಎಂಬುದನ್ನು ಈ ರೀತಿಯಲ್ಲಿ ಸ್ಪಷ್ಟವಾಗಿ ವಿವೇಚಿಸಿ, ಸಾರ್ವತ್ರೀಕರಿಸಬೇಕಾದರೆ, ನೀವು ಪಟ್ಟಣದಲ್ಲಿ ನೆಲೆಸಿರುವ ಖತ್ರಿ ಸಿಖ್‌ರನ್ನಾಗಲಿ ಅಥವಾ ಇನ್ನಿತರ ವಾಣಿಜ್ಯ ವರ್ಗದ ಸಿಖ್ಖರನ್ನಾಗಲೀ ನೋಡುವ ಆವಶ್ಯಕತೆಯಿಲ್ಲ, ಬದಲಾಗಿ ಸಿಖ್ ಸಮುದಾಯದಲ್ಲಿ

* ೧೯೫೧ರ ಸೆಪ್ಟಂಬರ್ ೧೮ರ ಸದನದ ಚರ್ಚೆ. ಸಂಪುಟ XV, ಭಾಗ II ಪುಟಗಳು ೨೮೩೫–೪೦

ಹೆಚ್ಚಿನವರನ್ನು, ಅಂದರೆ ಕೃಷಿಕಾರ ರೈತಾಪಿ ಸಿಖ್ಖರನ್ನು ನೋಡಬೇಕು. ಅವರ ಕಾನೂನುಗಳು ಯಾವುವು ಎಂಬುದನ್ನು ತಿಳಿಯಬೇಕು. ನಾನು ಒಂದಲ್ಲ, ಅಸಂಖ್ಯಾತ ಉದಾಹರಣೆಗಳನ್ನು ನೀಡಬಲ್ಲೆ. ಪಂಜಾಬಿನಲ್ಲಿ ರೈತಾಪಿ ಸಿಖ್ಖರು ಹಾಗೂ ಉಳಿದ ಕೃಷಿ ಸಮುದಾಯದವರು ಜಾತ್ಯತೀತ ಕಾನೂನಿನ ಆಳ್ವಿಕೆಗೆ ಒಳಪಟ್ಟಿದ್ದಾರೆ ಎಂಬುದನ್ನು ತೋರಿಸಲು ಒಂದಾದ ಮೇಲೆ ಒಂದರಂತೆ ನೂರಾರು ಉದಾಹರಣೆಗಳನ್ನು ನೀಡಬಲ್ಲೆ. ಪ್ರಾಸಂಗಿಕವಾಗಿ ನಮ್ಮದು ಈ ಹಿಂದೂ ಕಾಯಿದೆಯಲ್ಲಿ ಸೂಚಿಸಿರುವುದಕ್ಕಿಂತ ಹೆಚ್ಚು ಮುಂದುವರಿದ ಕಾಯಿದೆ ಎನ್ನಬಹುದು. ಹಾಗಾಗಿ ನಮ್ಮದು ಸಂಪೂರ್ಣವಾಗಿ ಜಾತ್ಯತೀತ ಕಾನೂನು. ಅಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾದ ಕೃಷಿ ಸಮುದಾಯಕ್ಕೆಲ್ಲಾ ಅನ್ವಯವಾಗುವುದು ಒಂದೇ ಕಾನೂನು. ನಾವು ತೀರಾ ಅಲ್ಪಸಂಖ್ಯಾತರಿಗೆ ಅನ್ವಯವಾಗುವ ಕಾನೂನನ್ನು ಗಣನೆಗೆ ತೆಗೆದುಕೊಳ್ಳಬಾರದು. ಜನಸಂಖ್ಯೆಯ ಬಹುಪಾಲು ಜನರಿಗೆ, ಈ ಸಂದರ್ಭದಲ್ಲಿ ಸುಮಾರು ಶೇ. ೯೫ರಷ್ಟು ಜನರಿಗೆ ಅನ್ವಯವಾಗುವ ಕಾನೂನನ್ನು ಪರಿಗಣಿಸಬೇಕು. ಅಲ್ಲಿ ನಾನು ಈಗಾಗಲೇ ಹೇಳಿದಂತೆ ಪ್ರಗತಿಪರವಾದ ಕಾನೂನು ಚಾಲ್ತಿಯಲ್ಲಿದೆ. ಅವನು ಹಿಂದೂವೇ ಆಗಿರಲಿ ಮುಸ್ಲಿಮನೇ ಆಗಿರಲಿ ಅಥವಾ ಸಿಖ್ಖನೇ ಆಗಿರಲಿ ಆಸ್ತಿಯ ವಾರಸುದಾರಿಕೆಗೆ ಸಂಬಂಧಿಸಿದಂತೆ ಇರುವುದು ಒಂದೇ ಕಾನೂನು. ಅದು ಸಾಂಪ್ರದಾಯಿಕ ಕಾನೂನು. ಆದರೆ ಇಲ್ಲಿ ನೀವು ಹಿಂದೂ ಕಾನೂನನ್ನು ಮುಂದಿಡುತ್ತಿದ್ದೀರಿ. ಹಾಗಾಗಿ ನಾನು, ಎಲ್ಲಾ ಜಾತಿಯ ಎಲ್ಲೆಗಳನ್ನು, ಸಂಕುಚಿತ ಕೋಮುವಾದಿ ಭಾವನೆಯನ್ನು ಮೀರಿಕೊಂಡ ಒಂದು ಸಾಮಾನ್ಯ, ಏಕರೂಪಿಯಾದ ಕಾನೂನು ಪಂಜಾಬಿನಲ್ಲಿ ಜಾರಿಯಲ್ಲಿದೆ ಎಂಬ ಕಾರಣಕ್ಕಾಗಿ ನಿಮ್ಮನ್ನು ವಿರೋಧಿಸುತ್ತಿದ್ದೇನೆ. ಈ ಸುಧಾರಣೆಯ ಮೂಲಕ ನೀವು ಮೊದಲ ಬಾರಿಗೆ ಪಂಜಾಬಿನಲ್ಲಿ ಮತೀಯವಾದವನ್ನು ಪರಿಚಯಿಸುತ್ತಿದ್ದೀರಿ. (ಅಡಚಣೆ) ಹೌದು ಸಂಪ್ರದಾಯಗಳಿವೆ. ಮತ್ತು ಅವು ಬಹಳಕಾಲ ಬಳಕೆಯಲ್ಲಿದ್ದುದರಿಂದಲೇ ಆ ಸ್ವರೂಪವನ್ನು ಪಡೆದಿವೆ. ಈ ಸಂಪ್ರದಾಯಗಳನ್ನು ಬದಿಗೊತ್ತುವ ಹಾಗೂ ರದ್ದುಗೊಳಿಸುವ ಹಲವಾರು ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ಇದು ತುಂಬಾ ಕೆಟ್ಟದು. ಮತ್ತು ಇದೊಂದು ಕೆಟ್ಟ ಧೋರಣೆ. ಮೇಲಿನಿಂದ ಕಾನೂನುಗಳನ್ನು ಮಾಡುವುದು ಮತ್ತು ತಲತಲಾಂತರದಿಂದ ನಡೆದುಕೊಂಡು ಬಂದಿರುವ ಹಾಗೂ ವಿವೇಕಯುತವಾಗಿರುವ ಸಾಮಾಜಿಕ ಸಂರಚನೆಯನ್ನು ಕೇವಲ ೧೫ ದಿನಗಳಲ್ಲಿ ಬದಲಿಸಲು ಹೊರಟಿರುವುದು ಖಂಡಿತವಾಗಿಯೂ ಒಂದು ಅವಿವೇಕದ ಕ್ರಮವಲ್ಲದೆ ಮತ್ತೇನಲ್ಲ. ಈ ಕಾನೂನುಗಳನ್ನು ಪುರಾತನ ಬ್ರಾಹ್ಮಣನೊಬ್ಬನು ರೂಪಿಸಿದ್ದಾನೆ, ಹಾಗಾಗಿ ಇದನ್ನು ಇತರರು ಬದಲಿಸಲು ಸಾಧ್ಯವಿಲ್ಲ ಎಂಬುದು ನನ್ನ ಅಭಿಪ್ರಾಯವಲ್ಲ. ನನ್ನ ಅಭಿಪ್ರಾಯ ಅಂಥ ಪಾವಿತ್ರ್ಯದ ಕಲ್ಪನೆಯನ್ನು ಆಧರಿಸಿಲ್ಲ. ಸಂಪ್ರದಾಯವೊಂದು ನಮ್ಮ ಕಾಲದವರೆಗೂ ಬೆಳೆದು ಬಂದಿದೆ ಮತ್ತು ಅದು ತೀರಾ ಕಟ್ಟುನಿಟ್ಟಾಗಿಲ್ಲದ ಕಾರಣ ಬೆಳವಣಿಗೆಯ ಕ್ರಿಯೆಯಲ್ಲಿ ಪ್ರಾಯೋಗಿಕವಾಗಿ ಜನರಿಗೆ ಅನುಕೂಲವಾಗುವ ಪದ್ಧತಿಗಳನ್ನು ಮೈಗೂಡಿಸಿಕೊಂಡು ಜನೋಪಯೋಗಿಯಾಗಿದೆ ಎನ್ನುವ ಅಂಶವನ್ನು ಹೇಳಲು ಬಯಸುತ್ತೇನೆ. ಈ ಬಗ್ಗೆ ಮುಂದೆ ಮಾತನಾಡುತ್ತೇನೆ. ಲಿಖಿತ ಕಾನೂನನ್ನು ವಾಡಿಕೆ ಹಾಗೂ ಸಂಪ್ರದಾಯ ತಳ್ಳಿಹಾಕುತ್ತದೆ. ಸಾಂಪ್ರದಾಯಿಕ ಕಾನೂನು ಪಂಜಾಬಿನಲ್ಲಿದೆ ಮತ್ತು ಅದು ಇಂದಿಗೂ ಕೂಡ ಅಲ್ಲಿನ ಕಾನೂನೇ ಆಗಿದೆ.

ಇದರೊಂದಿಗೆ ನನ್ನ ಸಂಪ್ರದಾಯವು ನೀವು ಸೂಚಿಸಿರುವ ಪ್ರತಿಗಾಮಿ ಸಲಹೆಗಳಿಗಿಂತ ಹೆಚ್ಚು ಪ್ರಗತಿಪರವಾಗಿದೆ ಎಂಬುದನ್ನು ಸಾಬೀತುಮಾಡಲು ಬಯಸುತ್ತೇನೆ, ಹಲವಾರು ದೃಷ್ಟಿಯಿಂದ ಅವು ಹೆಚ್ಚು ಪುರೋಗಾಮಿಯಾಗಿದೆ.

ಈ ಕಾರಣಕ್ಕಾಗಿಯೂ ಸಿಖ್ಖರಿಗೆ ವಿನಾಯ್ತಿ ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಈ ಹಿಂದೂ ಕೋಡ್ ಮಸೂದೆಯನ್ನು ಶ್ರೀ ಮಂಡಲ್ ಅವರು ಸದನದಲ್ಲಿ ಮಂಡಿಸಿದ ದಿನದಿಂದ ಇಂದಿನವರೆಗೆ – ಅಂಬೇಡ್ಕರ್ ಅವರು ಕೂಡ ಮಂಡಲ್ ಅವರ ಜಾಡಿನಲ್ಲಿಯೆ ನಡೆಯುತ್ತಿದ್ದಾರೆ. ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಆಯ್ಕೆ ಸಮಿತಿಯಲ್ಲಿ ಒಬ್ಬನೇ ಒಬ್ಬ ಸಿಖ್ ಸದಸ್ಯನಿಲ್ಲ ಎಂಬ ವಿಚಾರವು ತಿಳಿದರೆ ನನಗೆ ಆಶ್ಚರ್ಯವಾಗುತ್ತದೆ. ಮಾನ್ಯ ಸದಸ್ಯರಿಗೆಲ್ಲರಿಗೂ ಖಂಡಿತವಾಗಿಯೂ ಆಶ್ಚರ್ಯವಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

**ಡಾ. ಅಂಬೇಡ್ಕರ್ :** ಜ್ಞಾನಿ ಗುರಮುಖ್ ಸಿಂಗ್?

**ಸರ್ದಾರ್ ಬಿ.ಎಸ್. ಮಾನ್ :** ಇಲ್ಲ, ಅತಿಮುಖ್ಯವಾದ ಈ ವಿಚಾರಕ್ಕೆ ಸಂಬಂಧಿಸಿದಂತೆ ಸಿಖ್ ಅಭಿಪ್ರಾಯವೆನೆಂದು ಒಂದೇ ಒಂದೂ ಸಮಾಲೋಚನೆ ನಡೆಸಿಲ್ಲ. ಅಂತೆಯೇ ಸಿಖ್ ಸಮುದಾಯದವರಿಗೆ ಹೇಳಿಕೊಳ್ಳುವಂಥ ವಿರೋಧವೇನೂ ವ್ಯಕ್ತವಾಗಿಲ್ಲ. ಏಕೆಂದರೆ, ಹಿಂದೂ ಕಾನೂನು ಮಸೂದೆಯ ವ್ಯಾಪ್ತಿಯಲ್ಲಿ ಕೃಷಿ ಸ್ವತ್ತನ್ನು ಸೇರಿಸಿಲ್ಲ, ಅದಕ್ಕೆ ವಿನಾಯಿತಿ ನೀಡಲಾಗಿದೆ ಎಂದು ಹೇಳಲಾಗಿದೆ. ಹಾಗಾಗಿ ಈ ಮಸೂದೆಯ ಬಗ್ಗೆ ಸಿಖ್ ಸಮುದಾಯದಲ್ಲಿ ಒಂದು ರೀತಿಯ ಅಲಕ್ಷ್ಯ ಉಂಟಾಗಿದೆ. ಶೇಕಡ ೯೫ರಷ್ಟು ಜನರಿಗೆ, ಹಿಂದೂ ಕಾನೂನು ಮಸೂದೆ ತಮ್ಮ ಬದುಕಿನ ಮೇಲೆ ತುಂಬಾ ಗಂಭೀರವಾದ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎಂದು ಅನಿಸಿಯೇ ಇಲ್ಲ.

**ಶ್ರೀ ಎ.ಸಿ. ಶುಕ್ಲ :** ಈ ಹಿಂದೂ ಕಾನೂನು ಮಸೂದೆಯನ್ನು ವಿರೋಧಿಸಿ ಸಿಖ್ಖರೂ ತಮ್ಮ ಸಮ್ಮೇಳನಗಳಲ್ಲಿ ಯಾವುದಾದರೂ ಠರಾವನ್ನೂ ಜಾರಿಗೊಳಿಸಿದ್ದಾರೇನೋ?

**ಸರ್ದಾರ್ ಬಿ.ಎಸ್. ಮಾನ್ :** ಸಿಖ್ಖರ ಪರವಾಗಿ ಮಾನ್ಯ ಸದಸ್ಯರಿಗಿಂತಲೂ ಉತ್ತಮವಾಗಿ ನಾನು ಮಾತನಾಡಬಲ್ಲೆ. ಇಲ್ಲಿ ಕೆಲವು ಮಹಿಳೆಯರಿದ್ದಾರೆ. ಇಂಥ ಗಂಭೀರವಾದ ವಿಚಾರದ ಬಗ್ಗೆ ಅವರೊಡನೆ ಚರ್ಚಿಸಿ, ಅವರ ಅಭಿಪ್ರಾಯವನ್ನು ಕೇಳಿ ಅವರ ಸಲಹೆಯನ್ನು ಸ್ವೀಕರಿಸಲಾಗಿದೆ. ಆದರೆ ಈ ಸದನದಲ್ಲಿ ನಾವು ಏಳು ಮಂದಿ ಸಿಖ್ ಸಮುದಾಯಕ್ಕೆ ಸೇರಿದ ಸದಸ್ಯರಿದ್ದೇವೆ. ಈ ಮಸೂದೆಯನ್ನು ಸಂಪೂರ್ಣವಾಗಿ, ಸಾರಸಗಟಾಗಿ ಬೆಂಬಲಿಸುವ ಒಬ್ಬನೇ ಒಬ್ಬ ಸಿಖ್‌ನನ್ನು ತೋರಿಸುವುದು ಮಾನ್ಯ ಸದಸ್ಯರಿಗೆ ಸಾಧ್ಯವಿಲ್ಲ ಎಂದು ನಾನು ಬೇಕಾದರೆ ಬಾಜಿಕಟ್ಟುತ್ತೇನೆ.

**ಶ್ರೀ ಎ.ಸಿ. ಶುಕ್ಲ :** ಸದನದ ಆಚೆ ಇರುವವರ ಅಭಿಪ್ರಾಯವೇನು?

**ಸರ್ದಾರ್ ಬಿ.ಎಸ್. ಮಾನ್ :** ಮತ್ತೆ ಮತ್ತೆ ಒಬ್ಬ ಸಭಾಧ್ಯಕ್ಷನ ನಂತರ ಮತ್ತೊಬ್ಬ ಸಭಾಧ್ಯಕ್ಷ ಸದನದಲ್ಲಿ ಬಹುಸಂಖ್ಯಾತ ಸದಸ್ಯರ ಅಭಿಪ್ರಾಯಕ್ಕೆ ಜೋತುಬೀಳುವುದು ಬೇಡ ಎಂದು ಮನವಿ ಮಾಡಿಕೊಂಡಿದ್ದಾರೆ. ಹೊರಗಿರುವ ಜನಗಳ ಅಭಿಪ್ರಾಯವನ್ನು ಸಂಗ್ರಹಿಸೋಣ. (ಜನಮತ ಗಣನೆ) ನಿಮಗೆ ಅಷ್ಟು ಬೇಕೆನಿಸಿದರೆ ಅದನ್ನು ಸಿಖ್ ಜನಮತಗಣನೆ ಎಂದೇ ಕರೆಯೋಣ. ಅಲ್ಲಿಯವರೆಗೆ ಇಲ್ಲಿರುವ ಬಹುಸಂಖ್ಯಾತ ಹಿಂದೂಗಳ ಬೆಂಬಲದೊಂದಿಗೆ ಮಸೂದೆಯನ್ನು ಅಂಗೀಕರಿಸಬಾರದು. ನಾನು ಹಿಂದೂ ಅಲ್ಲ. ಹಿಂದೂ ಕಾನೂನನ್ನು ನಾನೆಂದೂ ಆಚರಣೆಯಲ್ಲಿಟ್ಟುಕೊಂಡಿಲ್ಲ. ಈ ಕಾಯಿದೆ ಸಿಖ್ಖರ ಪಾಲಿಗೆ ಮತಾಂತರದ ಕಾಯಿದೆ ಎಂದು ಹೇಳುವುದಕ್ಕೆ ನನಗೆ ಮುಜುಗರವಾಗುತ್ತದೆ. ಹಿಂದೆಂದೂ ಆಚರಣೆಯಲ್ಲಿಲ್ಲದಿದ್ದ ಮತ್ತು ಗ್ರಾಮನಿವಾಸಿಗಳು ಕೇಳರಿಯದಿದ್ದ ತೀರ ಅಸಹ್ಯಕರವಾದ ಸಿದ್ಧಾಂತಗಳನ್ನು ನವೀನವಾದ ಆವಿಷ್ಕಾರಗಳನ್ನು ಹಾಗೂ ನನಗೆ ತೀರ ಅಪರಿಚಿತವಾದ ವಿಚಾರಗಳನ್ನು ಬಲವಂತವಾಗಿ ನಮ್ಮ ಮೇಲೆ ತಾವು ಹೇರುತ್ತಿದ್ದೀರಿ. ಇಲ್ಲಿರುವ ಮಹಿಳೆಯರ ಸಂಖ್ಯೆ ಕಡಿಮೆ ಇದ್ದರೂ ಕೂಡ, ಅವರೆಲ್ಲರೊಡನೆಯೂ ಸಮಾಲೋಚಿಸಿದ್ದೀರಿ. ಅವರ ಅಭಿಪ್ರಾಯ ಕೇಳಿದ್ದೀರಿ. ನಾವು ಏಳು ಮಂದಿ

ಸದಸ್ಯರೂ ಸಿಖ್ ಅಭಿಪ್ರಾಯದ ಬಗ್ಗೆ ಒಂದು ಒಮ್ಮತದ ನಿರ್ಧಾರಕ್ಕೆ ಬಂದಿದ್ದೇವೆ. ತೀರ ಪ್ರತಿಗಾಮಿ ಸ್ವರೂಪವುಳ್ಳ ಹಾಗೂ ಅಸಹ್ಯಕರವಾದ ಕೆಲವು ನಿಬಂಧನೆಗಳನ್ನು ಬಲವಂತದಿಂದ ಹೇರಬಾರದು. ಇದಕ್ಕೆ ಸಂಬಂಧಿಸಿದಂತೆ ಠರಾವೇನನ್ನಾದರೂ ಜಾರಿಗೊಳಿಸಿದ್ದೀರಾ ಎಂದು ನನ್ನ ಗೆಳೆಯರು ಕೇಳುತ್ತಾರೆ. ಸಿಖ್ಖರ ಅಭಿಪ್ರಾಯವನ್ನು ಕೇಳಿ ಇಲ್ಲ ಎನ್ನುವುದು ನನಗೆ ಅತ್ಯಂತ ನೋವಿನ ಸಂಗತಿ. ಸಿಖ್ ಸಮಾಜಗಳ ಮತ್ತು ಸಿಖ್ಖ ಜನಾಂಗದ ವೈಯಕ್ತಿಕ ಕಾನೂನು ಮತ್ತು ಧಾರ್ಮಿಕ ಸಿದ್ಧಾಂತಗಳ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡಬಲ್ಲ ಎಸ್.ಜಿ.ಪಿ.ಸಿ. ವತಿಯಿಂದ ಯಾವ ಮನವಿಯೂ ಡಾ. ಅಂಬೇಡ್ಕರ್ ಅವರಿಗೆ ತಲುಪಿಲ್ಲ ಎನ್ನುವುದೇ ಸಿಖ್ ಸಮುದಾಯದೊಂದಿಗೆ ಸಮಾಲೋಚನೆ ನಡೆಸಿಲ್ಲ ಎಂಬುದಕ್ಕೆ ಸಾಕ್ಷಿ...............

**ಸರ್ದಾರ್ ಹುಕುಂ ಸಿಂಗ್ (ಪಂಜಾಬ್) :** ಈ ಸಂಹಿತೆಯ ವಿರುದ್ಧ ಕೆಲವು ಸಿಖ್ ಸಮ್ಮೇಳನಗಳಲ್ಲಿ ಠರಾವನ್ನು ಕೂಡ ಹೊರಡಿಸಲಾಗಿದೆ.

**ಸರ್ದಾರ್ ಬಿ.ಎಸ್. ಮಾನ್ :** ಈ ಸಂಹಿತೆಯ ಬಗ್ಗೆ ಠರಾವನ್ನು ಜಾರಿಗೊಳಿಸಿದ್ದಾರೆ ಎಂಬ ಹೆಚ್ಚಿನ ಮಾಹಿತಿಯನ್ನು ನನ್ನ ಮಾನ್ಯ ಗೆಳೆಯ ಸರ್ದಾರ್ ಹುಕುಂ ಸಿಂಗ್ ನೀಡಿ ಈ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸಿದ್ದಾರೆ. ಮಸೂದೆಯನ್ನು ಮೊದಲಬಾರಿಗೆ ಸದನದಲ್ಲಿ ಮಂಡಿಸುವ ಸಂದರ್ಭದಲ್ಲಾಗಲಿ ಅಥವಾ ಆಯ್ಕೆ ಸಮಿತಿಯನ್ನು ರೂಪಿಸುವ ಸಂದರ್ಭದಲ್ಲಾಗಲಿ ಒಬ್ಬನೇ ಒಬ್ಬ ಸಿಖ್ ಸದಸ್ಯನ್ನೊಂದಿಗಾಗಲಿ ಸಮಾಲೋಚನೆ ನಡೆಸಿಲ್ಲ ಅಥವಾ ಒಬ್ಬನೇ ಒಬ್ಬ ಸಿಖ್ ಪ್ರತಿನಿಧಿಯನ್ನಾಗಲಿ ಸಮಿತಿಗೆ ನೇಮಕಮಾಡಿಕೊಂಡಿಲ್ಲ. ಜ್ಞಾನಿ ಗುರುಮುಖ್ ಸಿಂಗ್ ಮುಸಾಫಿರ್ ಅವರು ಇದ್ದರು ಎಂದು ಡಾ. ಅಂಬೇಡ್ಕರ್ ಅವರು ಹೇಳುತ್ತಾರೆ. ಅವರು ಇದ್ದದ್ದೇ ಆದರೆ ಅವರ ಸಲಹೆಯನ್ನು ಕೇಳಲಾಗಿತ್ತೆ? ಒಬ್ಬನೇ ಒಬ್ಬ ಸಿಖ್ ಸದಸ್ಯ ಇದ್ದ ಸಂದರ್ಭದಲ್ಲಿ ಅವರ ಅಭಿಪ್ರಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕೊಡುತ್ತಿದ್ದರೆ? ಆಗ ಅವರು ಆಯ್ಕೆ ಸಮಿತಿಯ ಸದಸ್ಯರಾಗಿರಲಿಲ್ಲ. ಆದರೆ ಸದನವನ್ನು ಮುಂದೂಡಬೇಕಾಗಿ ಬಂದಾಗ ಇನ್ನೂ ಹಲವು ಪಂಡಿತರ ಸಲಹೆಯನ್ನು ಕೇಳುವುದಕ್ಕೆ ಅಂಬೇಡ್ಕರ್ ಸಮ್ಮತಿಸಿದರು. ಆನುಷಂಗಿಕವಾಗಿ ಅನೌಪಚಾರಿಕ ಮಾತುಕತೆ ನಡೆಯುತ್ತಿದ್ದ ಈ ಸಂದರ್ಭದಲ್ಲಿ ಅಲ್ಲಿದ್ದ ಜ್ಞಾನಿ ಗುರುಮುಖ್ ಸಿಂಗ್ ಅವರ ಸಲಹೆಯನ್ನು ಕೇಳಿದರು. ಸರ್ದಾರ್ ಗುರುಮುಖ್ ಸಿಂಗ್ ಅವರೊಂದಿಗೆ ಸಮಾಲೋಚಿಸುವ ಮೂಲಕ ನೀವು ಸಿಖ್‌ರ ಅಭಿಪ್ರಾಯವನ್ನು ಕೇಳಿದ್ದೇವೆ ಎನ್ನುವುದಾದರೆ ಸಿಖ್ ಸಮುದಾಯಕ್ಕೆ ಸಂಬಂಧಿಸಿದಂತೆ ಅವರ ಅಭಿಪ್ರಾಯ ದಯವಿಟ್ಟು ಪರಿಗಣಿಸಿ ಸಿಖ್ಖರನ್ನು ಆಯ್ಕೆ ಸಮಿತಿಯಲ್ಲಿ ಸೇರಿಸುವುದು ಸೂಕ್ತವೆಂದು ಘನಸರ್ಕಾರಕ್ಕೆ ಅನ್ನಿಸಿಲ್ಲ ಮತ್ತು ಕೃಷಿ ಆಸ್ತಿಯ ತಂಟೆಗೆ ಸರ್ಕಾರ ಬರುವುದಿಲ್ಲ ಮತ್ತು ಈ ಮಸೂದೆಯ ವ್ಯಾಪ್ತಿಗೆ ಅದು ಬರುವುದಿಲ್ಲ ಎಂದು ನಂಬಿಕೊಂಡಿದ್ದ ಸಿಖ್ ಸಮುದಾಯವು ಈ ಬಗ್ಗೆ ಸ್ವಲ್ಪವಾದರೂ ಉದ್ವಿಗ್ನಗೊಂಡಿಲ್ಲ. ಮಸೂದೆಯನ್ನು ಸದನದಲ್ಲಿ ಮಂಡಿಸಿದಾಗ ಕೃಷಿ ಆಸ್ತಿ ಕೂಡ ಇದರ ವ್ಯಾಪ್ತಿಯೊಳಗೆ ಬರುತ್ತದೆ ಎಂದು ಏಕಾಏಕಿ ಅವರ ಬುದ್ಧಿಗೆ ಹೊಳೆದಿದೆ. ಕೃಷಿ ಆಸ್ತಿಗೆ ವಿನಾಯಿತಿ ನೀಡಿದ್ದಾರೆ ಎಂದು ಮೊದಲು ನಾವು ತೀರ ಉದಾಸೀನದಿಂದ ಇದ್ದೆವು ಆದರೆ ಮಸೂದೆಯ ನಿಬಂಧನೆಗಳು ಹೇಗಿವೆ ಎಂಬುದರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಕ್ಕೆ ಹೋಗಿಲ್ಲ. ಆದರೆ ಈಗ ಧುತ್ತನೆ ಈ ಮಸೂದೆ ಬಂದಿದೆ. ಅದೊಂದು ಕಲಸುಮೇಲೋಗರವಾಗಿರುವ ಮತ್ತು ಕೆಲವು ವಿಚಾರಗಳಲ್ಲಿ ತೀರ ಪ್ರತಿಗಾಮಿಯಾದ ಮತ್ತು ಇನ್ನು ಕೆಲವು ದೃಷ್ಟಿಗಳಲ್ಲಿ ಪುರೋಗಾಮಿಯಾದ, ಅಸಂಗತವಾದ ಮತ್ತು ಇನ್ನು ಕೆಲವು ದೃಷ್ಟಿಗಳಲ್ಲಿ ಎಸೆದು ಅದನ್ನು ಒಪ್ಪಿಕೊಳ್ಳಿ ಎನ್ನುತ್ತಿದ್ದಾರೆ. ಅದರ ಹಲವಾರು ನಿಬಂಧನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ನನಗೆ ಆಗಿಲ್ಲ ಎಂದು ನಾನಂತೂ ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳುತ್ತೇನೆ. ಇನ್ನು ಹಳ್ಳಿಯ ಅನಕ್ಷರಸ್ಥರಿಗೆ ಅಥವಾ

ರೈತರಿಗಂತೂ ಇದನ್ನು ಅರ್ಥಮಾಡಿಕೊಳ್ಳುವುದು ಮತ್ತೂ ಕಷ್ಟ. ಸಿಖ್ಖರ ಅಭಿಪ್ರಾಯವನ್ನು ತೀರಾ ಗಂಭೀರವಾದ ರೀತಿಯಲ್ಲಿ ಸಂಗ್ರಹಿಸಿಲ್ಲ ಎನ್ನುವುದು ನನಗೆ ಅತ್ಯಂತ ಬೇಸರದ ಸಂಗತಿ. ಮತ್ತು ಈಗ ನೀವು ಬಹುಸಂಖ್ಯಾತರಾದ ಹಿಂದೂಗಳ ಬೆಂಬಲದಿಂದ ಈ ಮಸೂದೆಯನ್ನು, ಸ್ವೀಕರಿಸಿಬಿಟ್ಟರೆ, ಸಿಖ್ಖರ ಮನಸ್ಸಿನಲ್ಲಿ – ತಾವು ಒಮ್ಮತದಿಂದ ಈ ಮಸೂದೆಯನ್ನು ವಿರೋಧಿಸಿದ್ದರೂ, ಹಾಗೂ ಮಸೂದೆಯ ನಿಬಂಧನೆಗಳು ಸಿಖ್ಖರಿಗೆ ಅನ್ವಯಿಸುವುದಿಲ್ಲ ಎಂದು ತಮ್ಮನ್ನು ನಂಬಿಸಿ ನಂತರ ಏಕಾಏಕಿ ಅಧಿವೇಶನದ ಕೊನೆಯಲ್ಲಿ ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಈ ಮಸೂದೆಯನ್ನು ಅಂಗೀಕರಿಸಿದ್ದಾರೆ–ಎಂಬ ಕಹಿ ನೆನಪು ಉಳಿಯುತ್ತದೆ.

**ಒಬ್ಬ ಮಾನ್ಯ ಸದಸ್ಯರು :** ನಿಮ್ಮ ಸದಸ್ಯರು ವಿರೋಧವನ್ನು ವ್ಯಕ್ತಪಡಿಸಲಿ.

**ಸರ್ದಾರ್ ಬಿ.ಎಸ್. ಮಾನ್ :** ಸರಿ, ಸಿಖ್ ಸಮುದಾಯದ ಪರವಾಗಿ ನನಗಿಂತ ಸಮರ್ಥವಾಗಿ ಮಾತನಾಡಬಲ್ಲ ನನ್ನ ಮಾನ್ಯ ಗೆಳೆಯರಾದ ಶ್ರೀ ಸರ್ದಾರ್ ಹುಕುಂ ಸಿಂಗ್ ಅವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಅವರ ಸಲಹೆಯನ್ನು ಒಪ್ಪಿಕೊಳ್ಳದಿರಲು ಅದೇನೂ ರಾಜಕೀಯ ವಿಚಾರವಲ್ಲ ಮತ್ತು ಅವರು ವಿರೋಧಿ ಬಣದಲ್ಲಿದ್ದಾರೆ. ಹಾಗಾಗಿ ಅವರ ಅಭಿಪ್ರಾಯವನ್ನು ತಳ್ಳಿಹಾಕಬೇಕು ಎನ್ನುವಂಥ ವಿಚಾರವೂ ಇದಲ್ಲ. ವೈಯಕ್ತಿಕ ಕಾನೂನಿನ ವಿಚಾರದಲ್ಲಿ, ಧಾರ್ಮಿಕ ಸಿದ್ಧಾಂತಗಳ ವಿಚಾರದಲ್ಲಿ, ಹಿಂದೂ ಸಾಮುದಾಯಿಕ ಕಾನೂನನ್ನು ಅಳವಡಿಸಿಕೊಳ್ಳುವ ವಿಚಾರದಲ್ಲಿ ನೀವು ಇಲ್ಲಿರುವ ಪ್ರತಿನಿಧಿಗಳ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕು ; ಮತ್ತು ಒಮ್ಮತದಿಂದ ಇದನ್ನು ವಿರೋಧಿಸುತ್ತೇವೆ. ಇಷ್ಟಾಗಿ ನಮ್ಮ ವಿರೋಧವನ್ನು ಲೆಕ್ಕಿಸದೆ, ನೀವು ನಿಬಂಧನೆಗಳನ್ನು ನಮಗೂ ಅನ್ವಯಿಸಿದಲ್ಲಿ, ಆಗ ಅದು ತೀರ ವಿಚಿತ್ರವೆನಿಸಿಕೊಳ್ಳುತ್ತದೆ – ನಿರಂಕುಶ ಧೋರಣೆಯೆನಿಸಿಕೊಳ್ಳುತ್ತದೆ, ಕೋಮುವಾದಿ ಎನಿಸಿಕೊಳ್ಳುತ್ತದೆ. ನಾವು ಏಳು ಮಂದಿ ಸಿಖ್ ಸದಸ್ಯರು ಮಾತ್ರ ಇಲ್ಲಿದ್ದೇವೆ. ಆದರೆ ಧಾರ್ಮಿಕ ವಿಚಾರಗಳಲ್ಲಿ, ವೈಯುಕ್ತಿಕ ಕಾನೂನಿಗೆ ಸಂಬಂಧಿಸಿದಂತೆ ಯಾವುದೇ ಸಮುದಾಯದ ಸಂಖ್ಯಾಬಲವನ್ನು ಲೆಕ್ಕಕ್ಕಿಟ್ಟುಕೊಳ್ಳದೆ ಅವರ ಅಭಿಪ್ರಾಯಕ್ಕೆ ಸರಿಯಾದ ಮನ್ನಣೆಯನ್ನು ಕೊಡಬೇಕು ಎಂದು ನಾವು ಬಯಸುತ್ತೇವೆ. ನೀವು ಈಗಾಗಲೇ ಹಲವರಿಗೆ ವಿನಾಯ್ತಿ ನೀಡಿದ್ದೀರಿ. ಆದರೆ ನೀವು ವಿನಾಯ್ತಿಗಳನ್ನು ತೋರಿಸಿದ್ದೀರಿ ಎಂಬ ಕಾರಣಕ್ಕಾಗಿ ಹೀಗೆ ವಾದಿಸುತ್ತಿಲ್ಲ. ಮುಸ್ಲಿಮನೊಬ್ಬ ನಾಲ್ಕು ಮಹಿಳೆಯರನ್ನು ವಿವಾಹವಾಗಬಹುದು ಎಂದು ನನಗೂ ನಾಲ್ವರನ್ನು ವಿವಾಹವಾಗಲು ಅವಕಾಶಕೊಡಬೇಕೆಂದು ನಾನು ಕೇಳುತ್ತಿಲ್ಲ. ನೀವು ರಿಯಾಯ್ತಿಗಳನ್ನು ತೋರಿಸಿರುವುದು ಸತ್ಯ. ಯಾಕೆ ರಿಯಾಯಿತಿ ತೋರಿಸಿದ್ದೀರಿ? ಏಕೆಂದರೆ, ವೈಯಕ್ತಿಕ ಕಾನೂನಿಗೆ ಸಂಬಂಧಿಸಿದಂತೆ ಮುಸ್ಲಿಂ ಕಾನೂನು, ಕ್ರೈಸ್ತ ಕಾನೂನು, ತುಂಬಾ ಭಿನ್ನವಾಗಿದೆ. ಮತ್ತು ಹಲವು ರೀತಿಗಳಲ್ಲಿ ಹಿಂದೂ ಸಂಹಿತೆಗೆ ನೇರವಾಗಿ ವಿರುದ್ಧವಾಗಿದೆ. ಹಾಗಾಗಿ, ಹಿಂದೂ ಸಂಹಿತೆಯನ್ನು ಅವರ ಮೇಲೆ ಹೇರದೆ ರಿಯಾಯ್ತಿಯನ್ನು ತೋರಿಸಿದ್ದೀರಿ. ಹೀಗೆ ಔದಾರ್ಯವನ್ನು ತೋರಿಸುವುದರ ಮೂಲಕ, ಹಿಂದೂಗಳು ಬಹುಸಂಖ್ಯಾತರಾಗಿದ್ದರೂ ಕೂಡ ಹಿಂದೂ ಕಾನೂನನ್ನು, ವೈಯಕ್ತಿಕ ಹಾಗೂ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಮೇಲೆ ಹೇರುವುದಿಲ್ಲ ಎಂದು ಸೈದ್ಧಾಂತಿಕವಾಗಿ ಒಪ್ಪಿಕೊಂಡಂತಾಗಿದೆ. ನೀವು ಮುಸ್ಲಿಂ ಕಾನೂನು, ಕ್ರೈಸ್ತ ಕಾನೂನು ಹಾಗೂ ಪಾರ್ಸಿ ಕಾನೂನು ಕೂಡ ಮೂಲಭೂತವಾಗಿ ತುಂಬಾ ವಿಭಿನ್ನವಾಗಿದೆ ಎಂಬ ಕಾರಣಕ್ಕಾಗಿ ರಿಯಾಯಿತಿ ಕೊಡಲು ಒಪ್ಪಿಕೊಂಡಿರುವುದಾದರೆ, ವಿವಾಹ, ವಿಚ್ಛೇದನ ಹಾಗೂ ವಾರಸುದಾರಿಕೆಗೆ ಸಂಬಂಧಿಸಿದಂತೆ ಸಿಖ್ ಕಾನೂನು ಸಂಪೂರ್ಣವಾಗಿ ಬೇರೆಯಾಗಿದೆ ಎನ್ನುವುದನ್ನು ನಾನು ಇದೇ ಸದನದಲ್ಲಿ ಸಾಬೀತುಪಡಿಸಬಲ್ಲೆ. ನೀವು ಮುಸ್ಲಿಮರಿಗೆ ತೋರಿಸಿರುವ ರಿಯಾಯಿತಿಯನ್ನೇ ನಮಗೂ

ತೋರಬೇಕೆಂದು ಕೇಳಿಕೊಳ್ಳುತ್ತೇನೆ. ಮುಸ್ಲಿಮರು ತಮ್ಮ ವೈಯಕ್ತಿಕ ಕಾನೂನು ಸಂಪೂರ್ಣವಾಗಿ ಬೇರೆಯಾಗಿದೆ ಎನ್ನುವುದನ್ನು ಸಾಬೀತುಗೊಳಿಸಿದ್ದಕ್ಕಾಗಿ ಅವರಿಗೆ ರಿಯಾಯ್ತಿಯನ್ನು ನೀಡಿದ್ದರೆ, ನಾನೂ ಕೂಡ ಸಿಖ್ ಕಾನೂನು ಪ್ರತಿಯೊಂದು ಸಣ್ಣ ವಿಚಾರದಲ್ಲಿಯೂ ನೀವು ಜಾರಿಗೊಳಿಸಲು ಪ್ರಯತ್ನಿಸುತ್ತಿರುವ ಕಾನೂನಿಗಿಂತ ಮೂಲಭೂತವಾಗಿ ತುಂಬಾ ಭಿನ್ನವಾಗಿದೆ ಎನ್ನುವುದನ್ನು ತೋರಿಸಬಲ್ಲೆ. ಹಾಗಾಗಿ ಪಾರ್ಸಿಗಳಿಗೆ, ಮುಸ್ಲಿಮರಿಗೆ, ಕ್ರೈಸ್ತರಿಗೆ ನೀಡಿರುವ ರಿಯಾಯ್ತಿಯನ್ನೇ ನಮಗೂ ವಿಸ್ತರಿಸಿ ಎಂದು ಕೇಳಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಚರ್ಚೆಯನ್ನು ನಾಳೆಗೆ ಮುಂದುವರೆಸಬಹುದು.

ಸದನವನ್ನು ೧೯ ಸೆಪ್ಟೆಂಬರ್ ೧೯೫೧ ಬುಧವಾರ ಬೆಳಗಿನ ೮–೩೦ಕ್ಕೆ ಮುಂದೂಡಲಾಯಿತು.

## *ಹಿಂದೂ ಮಸೂದೆಯ – ಮುಂದುವರಿಕೆ

(ಬೆಳಿಗ್ಗೆ ೯.೩೦)

**ಕಲಂ – ೨ –** ಕಾಯಿದೆಯ ಅನ್ವಯಿಸುವಿಕೆ ಮುಂದುವರಿದ ಚರ್ಚೆ

**ಮಾನ್ಯ ಉಪಸಭಾಧ್ಯಕ್ಷರು :** ಚರ್ಚೆ ಪ್ರಾರಂಭವಾಗುವ ಮೊದಲು ಒಂದು ಮಾತು. ಇದು ಕಲಂ–೨ನ್ನು ಕುರಿತಂತೆ ಚರ್ಚೆಯ ಆರನೇ ದಿನ ಎಂಬುದನ್ನು ನಿಮ್ಮ ಗಮನಕ್ಕೆ ತರಲುಬಯಸುತ್ತೇನೆ (ಅಡಚಣೆ). ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡಲು ಅವಕಾಶ ನೀಡಲೇಬೇಕೆಂದಿಲ್ಲ. ಸಭೆಯಲ್ಲಿ ಒಟ್ಟಾರೆಯಾಗಿ ಕಾಯಿದೆಯನ್ನು ಕುರಿತಂತೆ ಹಾಗೂ ಈ ನಿರ್ದಿಷ್ಟ ಕಲಂ ಅನ್ನು ಕುರಿತಂತೆ ಸಾಕಷ್ಟು ಚರ್ಚೆಗೆ ಅವಕಾಶ ನೀಡಲಾಗಿದೆ. ಈ ಎರಡನೆಯ ಕಲಮನ್ನು ಕುರಿತು ಚರ್ಚೆಯನ್ನು ಮುಕ್ತಾಯಗೊಳಿಸಬೇಕಾಗಿದೆ. ಹಾಗಾಗಿ ಇಡೀ ಸಮಯವನ್ನು ಕೆಲವೇ ಸದಸ್ಯರು ಬಳಸಿಕೊಳ್ಳದೇ, ಉಳಿದ ಸದಸ್ಯರಿಗೂ ಅವಕಾಶ ಮಾಡಿಕೊಡಬೇಕು. ಹಾಗೂ ಈ ಕಲಮಿನ ಬಗ್ಗೆ ಚರ್ಚೆಯನ್ನು ಇಂದೇ ಮುಗಿಸಲು ಅವಕಾಶ ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಸದಸ್ಯರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಬಗ್ಗೆ ಎಲ್ಲಾ ಅಂಶಗಳನ್ನು ಈಗಾಗಲೇ ಚರ್ಚಿಸಿರುವುದರಿಂದ ಸದಸ್ಯರು ತಮ್ಮ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ತಿಳಿಸಬೇಕು.

** **ಸರ್ದಾರ್ ಬಿ.ಎಸ್. ಮಾನ್ :** ನಿನ್ನೆ ಸಭೆಯನ್ನು ಮುಂದಕ್ಕೆ ಹಾಕಿದಾಗ, ನಾನು ಸಿಖ್ಖರಿಗೆ ಈ ಕಾಯಿದೆಯಿಂದ ವಿನಾಯಿತಿ ನೀಡುವಂತೆ ಕೇಳಿಕೊಂಡಿದ್ದೆ. ನನ್ನ ಈ ವಾದಕ್ಕೆ ಎರಡು ಕಾರಣಗಳಿವೆ. ಒಂದು ಪಂಜಾಬಿನಲ್ಲಿ ಕೃಷಿಕರ ಸಂಖ್ಯೆ ಹೆಚ್ಚಿಗೆ ಇದೆ. ಒಟ್ಟು ಜನಸಂಖ್ಯೆಯ ಶೇ. ೯೫ರಷ್ಟು ಜನ ರೈತರಿದ್ದಾರೆ. ಅವರಲ್ಲಿ ಸಿಖ್ಖರೇ ಹೆಚ್ಚು. ನಾವು ಯಾವುದೇ ವೈದಿಕ ಕಾನೂನಿಗೆ ಒಳಪಟ್ಟಿಲ್ಲ.

ನಮ್ಮದು ಸಂಪೂರ್ಣ ಜಾತ್ಯತೀತವಾದ ಕಾನೂನು. ಈಗ ನೀವು ತರಬೇಕೆಂದಿರುವ ಕಾಯಿದೆಗಿಂತ ಮೂಲಭೂತವಾಗಿ ಭಿನ್ನವಾಗಿರುವ ಸಂಪ್ರದಾಯಕ್ಕೆ, ಜಾತ್ಯತೀತ ಸಂಪ್ರದಾಯಕ್ಕೆ ಸೇರಿದ ಕಾನೂನು. ಎರಡನೆಯದಾಗಿ ಇಂತಹ ಪ್ರಮುಖ ವಿಷಯಕ್ಕೆ ಸಂಬಂಧಿಸಿದಂತೆ ಸಿಖ್ಖರ ಅಭಿಪ್ರಾಯವನ್ನು ತಾವು ತೆಗೆದುಕೊಂಡೇ ಇಲ್ಲ. ಈ ಎರಡನೆಯ ವಿಷಯಕ್ಕೆ ಸಂಬಂಧಿಸಿದಂತೆ ನಾನು ಈಗ ಮಾತನಾಡುತ್ತಿದ್ದೇನೆ.

ನಾನು ಈ ವಿಷಯವನ್ನು ಪರಿಶೀಲಿಸಿದ್ದೇನೆ. ಹಿಂದೂ ಕಾನೂನು ಸಮಿತಿಯ ವರದಿಯಲ್ಲಿ ಸಂಗ್ರಹಿಸಿರುವ ಎಲ್ಲಾ ಅಭಿಪ್ರಾಯಗಳನ್ನು ಗಮನಿಸಿದ್ದೇನೆ. ಆದರೆ ಗಾಬರಿಯ ವಿಷಯವೆಂದರೆ, ಸಿಖ್

* P.D., Vol XV, ಭಾಗ ಎರಡು, ೧೯ನೇ ಸೆಪ್ಟೆಂಬರ್ ೧೯೫೧, ಪುಟ ೨೮೪೧–೯೮.

** ಅದೇ, ೧೯ನೇ ಸೆಪ್ಟೆಂಬರ್ ೧೯೫೧, ಪುಟ ೨೯೪೧–೪೮

ಸಮುದಾಯದ ಒಂದೇ ಒಂದು ವಿಶ್ವಾಸಾರ್ಹ ಅಭಿಪ್ರಾಯವೂ ಈ ಕಾಯಿದೆಯನ್ನು ಅನುಮೋದಿಸಿಲ್ಲ. (ಒಬ್ಬರು ಸದಸ್ಯರು : ಅದು ಹೇಗೆ ವಿಶ್ವಾಸಾರ್ಹವಾಗುತ್ತದೆ) ಯಾರೋ ಮಧ್ಯದಲ್ಲಿ ಅದು ಹೇಗೆ ವಿಶ್ವಾಸಾರ್ಹವಾಗುತ್ತದೆ ಎಂದು ಕೇಳಿದರು. ಬಹುಶಃ ಸದನದ ಹೆಚ್ಚಿನ ಸದಸ್ಯರಿಗೆ ತಿಳಿದಿರಲಿಕ್ಕಿಲ್ಲ. ಸಿಖ್ಖರಲ್ಲಿ ಶಾಸನಬದ್ಧ ನಿಕಾಯವೊಂದಿದೆ.

ಅಲ್ಲಿ ಭಾರತ ಸರ್ಕಾರದ ಕಾನೂನಿನ ಅನ್ವಯವೇ ಸದಸ್ಯರನ್ನು ಆರಿಸಲಾಗುತ್ತದೆ. ಗುರುದ್ವಾರದ ಮೇಲ್ವಿಚಾರಣೆಗಾಗಿ ಹಾಗೂ ಧಾರ್ಮಿಕ ಕಾನೂನಿನ ಆಡಳಿತಕ್ಕಾಗಿ ಅದರಲ್ಲಿ ಇಡೀ ಸಿಖ್ ಸಮುದಾಯವನ್ನು ಪ್ರತಿನಿಧಿಸುವ ೧೫೧ ಜನ ಸದಸ್ಯರಿರುತ್ತಾರೆ. ಅದನ್ನು ಶಿರೋಮಣಿ ಗುರುದ್ವಾರ್ ಪ್ರಬಂಧಕ್ ಸಮಿತಿ ಎಂದು ಕರೆಯುತ್ತಾರೆ. ಇದನ್ನು ತೀರಾ ತೀವ್ರವಾದಿಗಳಾದ ಅಥವಾ ಕೋಮುವಾದಿಗಳಾದ ಕೆಲವರು ಸಿಖ್ಖರು ನಿಯಂತ್ರಿಸುತ್ತಿದ್ದಾರೆ ಎಂಬ ಅಭಿಪ್ರಾಯವಿದ್ದಂತೆ ಅನಿಸುತ್ತದೆ. ಆದರೆ ಅದರ ಹಾಲಿ ಸದಸ್ಯರು ಕಟ್ಟಾ ಕಾಂಗ್ರೆಸ್ಸಿಗರಾದ ಸರ್ದಾರ್ ನಾನೋಕೆಯವರು ಅಂದರೆ ಸದನದ ಸದಸ್ಯರಿಗೆ ಆಶ್ಚರ್ಯವಾಗಬಹುದು. ಈ ನಿಕಾಯವನ್ನು ನಿಜವಾಗಿ ನಿಯಂತ್ರಿಸುತ್ತಿರುವವರು ಕಾಂಗ್ರೆಸ್ಸಿಗರು. ಸ್ವಲ್ಪವೂ ಕೋಮುವಾದಿಯಲ್ಲದ, ಶಾಸನಬದ್ಧ ಕಾನೂನಿನ ಅನ್ವಯ ಸ್ಥಾಪಿತವಾದ ಈ ಸಮಿತಿಯು, ಈ ಮಸೂದೆಯನ್ನು ಸ್ಪಷ್ಟವಾಗಿ ವಿರೋಧಿಸಿದೆ. ಅಸಂಖ್ಯಾತ ಸಿಖ್ಖರ ಸಮ್ಮೇಳನಗಳು, ಸಭೆಗಳು, ಈ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರೂ ಕೂಡ ಎಸ್.ಜಿ.ಪಿ.ಸಿಯ ಅಭಿಪ್ರಾಯವೇ ಹೆಚ್ಚು ಪ್ರಾತಿನಿಧಿಕವಾದುದು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್) :** ಎಲ್ಲಿ ವಿರೋಧಿಸಿದ್ದಾರೆ?

**ಸರ್ದಾರ್ ಬಿ.ಎಸ್. ಮಾನ್ :** ಸದನದ ಹೊರಗೆ, ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಸದನದಲ್ಲಿರುವ ವಿವಿಧ ಸಮುದಾಯಗಳನ್ನು ಪ್ರತಿನಿಧಿಸುತ್ತಿರುವ ಬಹುಸಂಖ್ಯಾತ ಸದಸ್ಯರಿಗೆ ಈ ಕಾಯಿದೆ ಬೇಕಾಗಿದೆ, ಹಾಗಾಗಿ ಈ ಮಸೂದೆಯನ್ನು ಅಂಗೀಕರಿಸುತ್ತೇವೆ ಎನ್ನಿ ಅಥವಾ ಇದನ್ನು ವಿರೋಧಿಸುತ್ತಿರುವ ಈ ನಿರ್ದಿಷ್ಟ ಸಮುದಾಯದ ಜನ ಹಳೆಯ ಕಂದಾಚಾರದ ಜನ, ಅವರು ಸದನದ ಹೊರಗಿರುವ, ಈ ಮಸೂದೆಯನ್ನು ಒಪ್ಪಿಕೊಳ್ಳುತ್ತಿರುವ ಜನರ ನಿಜವಾದ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತಿಲ್ಲ ಎನ್ನಿ. ಇವೆರಡರಲ್ಲಿ ಒಂದು ನಿಲುವಿಗೆ ನೀವು ಬರಬೇಕು. ಸಿಖ್ ಸಮುದಾಯವನ್ನು ಪ್ರತಿನಿಧಿಸುವಂತಹ ನಾವು ಆರು ಜನರಿದ್ದೇವೆ. (ಒಬ್ಬ ಸದಸ್ಯರು : ನಿನ್ನೆ ಏಳು ಜನ ಅಂದಿರಿ?) ಏಳನೇಯವರು ಉತ್ತರಪ್ರದೇಶದವರು. ನೀವು ಅವರ ಅಭಿಪ್ರಾಯದ ಮೇಲೆ ನಿರ್ಧಾರ ತೆಗೆದುಕೊಳ್ಳುವುದಿದ್ದರೂ ನಾನು ಅದಕ್ಕೂ ತಯಾರು. ನಾನು ಅವರ ಜೊತೆ ಮಾತನಾಡಿಲ್ಲ. ಆದರೂ ರೈತಾಪಿ ಜನರ ಅಭಿಪ್ರಾಯ ಚೆನ್ನಾಗಿ ಗೊತ್ತು. ಅವರೂ ರೈತರೇ. ನಾವು ಪಿ.ಇ.ಪಿ.ಎಸ್.ಯು. ಹಾಗೂ ಪಂಜಾಬು ಎರಡನ್ನೂ ಪ್ರತಿನಿಧಿಸುತ್ತೇವೆ. ನಾವೆಲ್ಲಾ ಒಂದೇ ಪಕ್ಷಕ್ಕೆ ಸೇರಿದವರು ಎಂದು ನೀವು ಆಪಾದಿಸಲಾಗುವುದಿಲ್ಲ. ಇಲ್ಲಿ ಮಂತ್ರಿಗಳಿದ್ದಾರೆ, ಸೂಚೇತ್ ಸಿಂಗ್ ಅವರಂತಹ ಸ್ವತಂತ್ರ ಸದಸ್ಯರಿದ್ದಾರೆ. ಕಾಂಗ್ರೆಸ್ಸನ್ನು ತೀವ್ರವಾಗಿ ವಿರೋಧಿಸುವ ಅಕಾಲಿ ನಾಯಕ ಸರ್ದಾರ್ ಹುಕುಂ ಸಿಂಗ್ ಇದ್ದಾರೆ. ಸರ್ದಾರ್ ಗುರುಮುಖ್ ಸಿಂಗ್ ಮುಸಾಫಿರ್ ಅವರು ಕಾಂಗ್ರೆಸ್ಸಿಗರು. ಅಂತಹುದರಲ್ಲಿ ನೀವು ಯಾರ ಅಭಿಪ್ರಾಯದ ಮೇಲೆ, ಸಿಖ್ಖರು ಈ ಕಾಯಿದೆಯನ್ನು ಬೆಂಬಲಿಸುತ್ತಾರೆ ಎಂಬ ಅಭಿಪ್ರಾಯಕ್ಕೆ ಬಂದಿರಿ ಎಂದು ಸರ್ಕಾರವನ್ನು ನಾನು ಕೇಳಬೇಕಾಗಿದೆ. ನಾವೆಲ್ಲಾ ಇದನ್ನು ಒಕ್ಕೊರಲಿನಿಂದ ವಿರೋಧಿಸುತ್ತೇವೆ ಎಂದು ಸವಾಲು ಮಾಡಬಲ್ಲೆ. ಇದನ್ನು ನೀವು ನಮ್ಮ ಮೇಲೆ ಹೇರಬೇಡಿ. ನೀವು ಇದನ್ನು ಕ್ರಿಶ್ಚಿಯನ್ನರ ಮೇಲೆ ಹೇರಿಲ್ಲ. ಸಂಖ್ಯೆಯ ದೃಷ್ಟಿಯಿಂದ ಪಂಜಾಬಿಗಳು ಹಾಗೂ ಕ್ರೈಸ್ತರ ಸಂಖ್ಯೆ ಸುಮಾರಿಗೆ ಸಮ ಸಮವಿದೆ. ಕಾಯಿದೆಯಲ್ಲಿ ಕ್ರೈಸ್ತರಿಗೆ ವಿನಾಯಿತಿ ನೀಡಿದ್ದೀರಿ,

ಆದರೆ ಸಿಖ್ಖರಿಗೆ ಮಾತ್ರ ವಿನಾಯಿತಿ ನೀಡಲು ನೀವು ತಯಾರಿಲ್ಲ. ಸದನದ ಒಳಗೆ ಪ್ರತಿನಿಧಿಗಳಾಗಿ ನಾವು ಇದನ್ನು ವಿರೋಧಿಸುತ್ತಿದ್ದೇವೆ. ಸದನದ ಆಚೆಯಿರುವ ಜನರಿಗೆ ಅದು ಬೇಕು ಅನ್ನುವುದು ನಿಮ್ಮ ಅಭಿಪ್ರಾಯವಾದರೆ, ನಮಗೆ ಇದು ಬೇಕು ಅನ್ನುವ ಒಬ್ಬರನ್ನಾದರೂ ತೋರಿಸಿ ಎಂದು ನಾನು ಕಾನೂನು ಮಂತ್ರಿಗಳನ್ನು ಹಾಗೂ ಈಗ ಸರ್ಕಾರದ ಬೆಂಬಲಿಗರಾಗಿರುವ ರಾಜ್ಯ ಹಣಕಾಸು ಮಂತ್ರಿಗಳಾದ ಸನ್ಮಾನ್ಯ ತ್ಯಾಗಿಯವರನ್ನು ನಾನು ಕೇಳಿಕೊಳ್ಳುತ್ತೇನೆ (ಅಡಚಣೆ).

**ರಾಜ್ಯ ಹಣಕಾಸು ಮಂತ್ರಿಗಳು (ಶ್ರೀ ತ್ಯಾಗಿ) :** ಇದಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು.

**ಸರ್ದಾರ್ ಬಿ.ಎಸ್. ಮಾನ್ :** ಕ್ಷಮಿಸಬೇಕು. ತ್ಯಾಗಿಯವರು ಈಗ ಸರ್ಕಾರದ ಬೆಂಬಲಿಗರಾಗಿರುವುದರಿಂದ ಹಾಗೂ ನಾನು ಸರ್ಕಾರದ ವಿರೋಧಿಯಾಗಿರುವುದರಿಂದ, ಅಡ್ಡಿ ತ್ಯಾಗಿಯವರಿಂದಲೇ ಬಂದಿರಬೇಕು ಎಂಬ ಭಾವನೆಯಿಂದ ತ್ಯಾಗಿಯವರು ಇದಕ್ಕೆ ಅಪವಾದ. ಅವರು ವಿಧುರರಾಗಿದ್ದರೂ ವಿಚ್ಛೇದನದ ವಿರೋಧಿಯಾಗಿದ್ದಾರೆ. ಇದು ವಿಚಿತ್ರವಾದ ಸಂಗತಿ.

**ಸರ್ದಾರ್ ಸೋಚೇತ್ ಸಿಂಗ್ (ಪಿ.ಇ.ಪಿ.ಎಸ್.ವಿ) :** ಬಹುಶಃ ಅವರು ಪಕ್ಕದ ಮನೆಯಲ್ಲಿ ವಿಚ್ಛೇದನವಾಗಲಿ ಎಂದು ಬಯಸುತ್ತಿರಬಹುದು.

**ಸರ್ದಾರ್ ಬಿ.ಎಸ್. ಮಾನ್ :** ಹಾಗಾಗಿ ನಾನು ಈ ಮೊದಲೇ ಹೇಳಿದಂತೆ, ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೇಳಿಲ್ಲ. ಸಿಖ್ ಸಮುದಾಯದಲ್ಲಿ ವಿಭಿನ್ನವಾದ ರಾಜಕೀಯ ನಿಲುವಿನ ಜನರಿದ್ದಾರೆ, ಕಾಂಗ್ರೆಸಿಗರಿದ್ದಾರೆ, ಸ್ವತಂತ್ರ ಸದಸ್ಯರಿದ್ದಾರೆ, ಅಕಾಲಿದಳದವರಿದ್ದಾರೆ. ಆದರೂ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿಲ್ಲ. ಹೀಗಿದ್ದೂ ಸಿಖ್ಖರ ಅಭಿಪ್ರಾಯವನ್ನು ಸಾಕಷ್ಟು ಪಡೆಯಲಾಗಿದೆ ಎಂಬ ನಿರ್ಧಾರಕ್ಕೆ ಸರ್ಕಾರ ಅದ್ಹೇಗೆ ಬಂತೋ, ನಿಜಕ್ಕೂ ನನಗೆ ಆಶ್ಚರ್ಯವಾಗಿದೆ. ನಿನ್ನೆ ನನ್ನ ಭಾಷಣ ಮುಗಿದ ಮೇಲೆ ನನ್ನ ಕೆಲವು ಗೆಳೆಯರು ನನ್ನ ಬಳಿ ಬಂದು ಹೇಳಿದರು– "ಮಿಸ್ಟರ್ ಮಾನ್, ನಿಜ. ನಿಮ್ಮ ಸಂಪ್ರದಾಯ ವಿಭಿನ್ನವಾದದ್ದು, ನಿಮ್ಮ ಅಭಿಪ್ರಾಯವನ್ನು ಪೂರ್ತಿಯಾಗಿ ತಿಳಿದಿಲ್ಲ. ಒಪ್ಪಿಕೊಳ್ಳುತ್ತೇವೆ. ಆದರೆ ನಿಮಗಾಗಿ ನಾವು ಕಾಯಿದೆಯನ್ನು ಯಾಕೆ ಜಾರಿಗೆ ತರಬಾರದು? ಯಾಕೆಂದರೆ ನೀವು ಲಾಗಾಯ್ತಿನಿಂದ ಹಿಂದೂಗಳೇ. ನೀವು ಹಿಂದೂ ಕಾಯಿದೆಗೆ ಒಳಪಟ್ಟವರೆ" ನಮ್ಮದೂ ಹಿಂದೂ ಕಾನೂನೇ ಅಲ್ಲವೇ ಎಂಬ ವಿಷಯಕ್ಕೆ ನಂತರ ಬರುತ್ತೇನೆ. ಆದರೆ ನಾವು ಹಿಂದೂಗಳೋ ಅಲ್ಲವೋ ಎನ್ನುವ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಮತ್ತೆ ನನ್ನ ಇಡೀ ವಾದವನ್ನು ಪುನರುಕ್ತಿ ಮಾಡಲು ಬಯಸುವುದಿಲ್ಲ. ಆದರೆ ಸಂಬಂಧದಲ್ಲಿ ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ನಿನ್ನೆ ಒಂದು ಕರಪತ್ರವನ್ನು ನೋಡಿದೆ. ಅದರಲ್ಲಿ ನೀವು ಯಾವುದಾದರೂ ಹಳ್ಳಿಗೆ ಹೋಗಿ ಸಿಖ್‌ನೊಬ್ಬನನ್ನು "ನೀನೊಬ್ಬ ಹಿಂದೂ" ಅಂತ ನೀವೇನಾದರೂ ಹೇಳಿದರೆ, ನಿಮಗೆ ಮಾತಿನಲ್ಲಿ ಉತ್ತರ ಸಿಗುವುದಿಲ್ಲ. ಬದಲಾಗಿ ಕೆನ್ನೆಗೊಂದು ಬಾರಿಸುತ್ತಾರೆ ಎನ್ನಲಾಗಿದೆ. ನಾನು ಆ ವಾದವನ್ನು ಇಲ್ಲಿ ಬಳಸುವುದಿಲ್ಲ. ಬಳಸುವ ಧೈರ್ಯವನ್ನೂ ಮಾಡುವುದಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ (ಪಂಜಾಬ್) :** ಪಂಜಾಬಿನಲ್ಲಿ ಹಿಂದೂ ರೈತರು ಸಿಖ್ ರೈತರಿಗಿಂತ ಹೇಗೆ ಭಿನ್ನ?

**ಸರ್ದಾರ್ ಬಿ.ಎಸ್. ಮಾನ್ :** ನಾನು ಈ ಬಗ್ಗೆ ತುಂಬಾ ಮಾತನಾಡಬಹುದು. ನನ್ನ ಇಡೀ ವಾದವೇ ಅದರ ಮೇಲೆ ನಿಂತಿದೆ. ರೈತರಾಗಿ ಹಿಂದೂ ಹಾಗೂ ಮುಸ್ಲಿಮ್ ರೈತರು ನನ್ನ ಸಂಗಾತಿಗಳೇ. ಹಿಂದೂ, ಮುಸ್ಲಿಂ ಹಾಗೂ ಸಿಖ್ಖ ರೈತರಿಗೆಲ್ಲಾ ಒಂದು ಸಾಂಪ್ರದಾಯಿಕ ಕಾನೂನು ಸಂಹಿತೆ ಸಮಾನವಾಗಿ ಅನ್ವಯವಾಗುತ್ತದೆ. ಇದು ನನ್ನ ವಕೀಲ ಮಿತ್ರನಿಗೂ ಚೆನ್ನಾಗಿ ಗೊತ್ತು. ಆದರೂ ನಾನು ಸಿಖ್ ಎಂಬ

ಪದವನ್ನು ಬಳಸುತ್ತಿದ್ದರೆ ಅದಕ್ಕೆ ಈ ಕಾಯಿದೆ ಬಿತ್ತಿರುವ ನಂಜೆ ಕಾರಣ. ಪಂಜಾಬಿನ ರೈತರನ್ನೆಲ್ಲಾ ಇದರಿಂದ ಮುಕ್ತಿಗೊಳಿಸಿ ಎಂದು ವಾದಿಸಬೇಕೆಂಬುದೇ ನನ್ನ ಇಚ್ಛೆ. ಆದರೆ ಈ ಮಸೂದೆ ಹಿಂದೂಗಳಿಗೆ, ಸಿಖ್‌ರಿಗೆ, ಜೈನರಿಗೆ ಮುಂತಾದವರಿಗೆ ಪ್ರತ್ಯೇಕ ಕಾನೂನು ಮಾಡುತ್ತಿರುವಾಗ (ಅದರಿಂದಲೇ ಇದು ತೀರಾ ಹಿಂದುಳಿದ ಹಾಗೂ ಕೋಮುವಾದಿ ಕಾನೂನಾಗಿರುವುದು), ಜಾತ್ಯತೀತ ಪರಿಭಾಷೆಯಲ್ಲಿ ಮಾತಾನಾಡದೇ ಕೋಮುವಾದಿ ಪರಿಭಾಷೆಯನ್ನು ಬಳಸುತ್ತಿರುವಾಗ ನಾನೇನು ತಾನೇ ಮಾಡಲಿ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಹಳ್ಳಿಗಳಲ್ಲಿ ವಾಸಿಸುತ್ತಿರುವ ಕೃಷಿಯೇತರ ಹಿಂದೂ ಸಮುದಾಯದವರು ಕೂಡ ಹಿಂದೂ ರೈತರ ಸಂಪ್ರದಾಯವನ್ನೇ ಅನುಸರಿಸುತ್ತಿದ್ದಾರೆ ಎಂಬುದು ಸತ್ಯವಲ್ಲವೇ?

**ಸರ್ದಾರ್ ಬಿ.ಎಸ್. ಮಾನ್ :** ನಿಜ. ಅದೇ ಪಂಜಾಬಿನ ಇಡೀ ಕಾನೂನಿನ ಸೊಗಸು. ಉಳಿದ ಪ್ರಾಂತ್ಯಗಳಿಗೆ ಹೋಲಿಸಿದಾಗ ನಾವು ಮುಂದಿದ್ದೇವೆ. ನಮ್ಮಲ್ಲಿ ಗ್ರಾಮೀಣ ಸಮುದಾಯದ್ದೇ ಆಡಳಿತ. ಧಾರ್ಮಿಕ ಕಾನೂನಿಗೆ ನಮ್ಮಲ್ಲಿ ಅವಕಾಶವಿಲ್ಲ. ನಮ್ಮಲ್ಲಿ ನಮ್ಮದೇ ನೆಲದ ಕಾನೂನುಗಳಿವೆ. ಜಾತ್ಯತೀತವಾಗಿರುವ, ನಮ್ಮ ಈ ನೆಲದ ಕಾನೂನೇ ನಮಗೆ ಎಲ್ಲದಕ್ಕೂ ಆಧಾರ. ಮಧ್ಯ ಪ್ರವೇಶಿಸಿ ಗೆಳೆಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಒಂದು ಉಲ್ಲೇಖವನ್ನು ನೀಡುತ್ತೇನೆ. ರತ್ತಿಗನ್ ಡೈಜೆಸ್ಟ್‌ನಿಂದ ನಾನು ಇದನ್ನು ಉಲ್ಲೇಖಿಸುತ್ತಿದ್ದೇನೆ. ಈಗ ನೀವು ಪಂಜಾಬಿಗೆ ಅನ್ವಯಿಸಲು ಉದ್ದೇಶಿಸಿರುವ ಕಾನೂನು ಸುಧಾರಕವಾಗಿಲ್ಲ. ಪ್ರಗತಿಪರವಾದುದಲ್ಲ. ಯಾಕೆಂದರೆ, ಅದು ತುಂಬಾ ಸಾಂಪ್ರದಾಯಿಕವಾದದ್ದು, ಅದು ತುಂಬಾ ಪ್ರತಿಗಾಮಿಯಾದದ್ದು. ಪಂಜಾಬಿನಲ್ಲಿ ಚಾಲ್ತಿಯಿರುವ ಕಾನೂನು ಕಡೆಯ ಪಕ್ಷ ಜಾತ್ಯತೀತತೆಯ ದೃಷ್ಟಿಯಿಂದಲಾದರೂ ಸಾಕಷ್ಟು ಮುಂದಿದೆ. ನಮ್ಮ ಇಡೀ ಗ್ರಾಮೀಣ ಸಮುದಾಯಗಳಿಗೆ ಒಂದೇ ರೀತಿಯ ಕಾನೂನು ಅನ್ವಯವಾಗುತ್ತದೆ. ಹಿಂದೂಗಳು, ಮುಸ್ಲಿಂರು, ಸಿಖ್ಖರು, ಕೃಷಿಕರು, ಕೃಷಿಯೇತರರು ಎಲ್ಲರೂ ಮೊದಲಿನಿಂದ ಭೂಮಿಗೇ ಅಂಟಿಕೊಂಡಿರುವವರು. ಅವರಲ್ಲಿ ತಲತಲಾಂತರದಿಂದ ವಿವೇಕ, ಅಂತಃಕರಣ ಹರಿದುಬಂದಿದೆ ಮತ್ತು ಅವರು ಮೊದಲಿನಿಂದಲೂ ಒಂದೇ ರೀತಿಯ ಕಾನೂನಿಗೆ ಒಳಪಟ್ಟಂತಹ ಜನ. ಆದರೆ ಡಾ. ಅಂಬೇಡ್ಕರ್ ಅವರು ಒಮ್ಮೆಗೆ ತನ್ನ ಹಿಂದೂ ಕಾನೂನು ಮಸೂದೆಯನ್ನು ತಂದು ಬಹುಶಃ ಅವರಿಗೆ ನಮ್ಮನ್ನು ಕಂಡರೆ ಅಸೂಯೆ, "ನಾನು ನಿಮ್ಮನ್ನೆಲ್ಲಾ ಬೇರೆ ಬೇರೆ ಮಾಡುತ್ತಿದ್ದೇನೆ. ನಿಮ್ಮನ್ನೆಲ್ಲಾ ಕೋಮುವಾರು ಆಧಾರದ ಮೇಲೆ ಬೇರ್ಪಡಿಸುತ್ತಿದ್ದೇನೆ! ನೀವು ಇನ್ನು ಮೇಲೆ ಹಿಂದೂಗಳಾಗಿ ಇಲ್ಲವೇ ಮುಸ್ಲಿಮರಾಗಿ!" ಎನ್ನುತ್ತಿದ್ದಾರೆ. ಇದೇ ಇದರ ಪರಿಣಾಮ.

**ಶ್ರೀ ನಜೀರುದ್ದೀನ್ ಅಹಮದ್ (ಪಶ್ಚಿಮ ಬಂಗಾಲ) :** ಬದಲಾಗಿ ಎಲ್ಲಾ ಧರ್ಮಗಳನ್ನು ಬಿಟ್ಟುಬಿಡಿ!

**ಸರ್ದಾರ್ ಬಿ.ಎಸ್. ಮಾನ್ :** ರತ್ತಿಗನ್ ಡೈಜೆಸ್ಟ್ ಈ ಬಗ್ಗೆ ಏನು ಹೇಳಲಾಗಿದೆ ನೋಡಿ. ಅದರ ಪ್ರಕಾರ "ಗ್ರಾಮೀಣ ಜನರ ಸಂಪ್ರದಾಯ ಹಾಗೂ ಅಭ್ಯಾಸವನ್ನು ನಿಕಟವಾಗಿ ಬಲ್ಲವರಿಗೆ ಅವರ ಬದುಕಿನ ಮೇಲೆ ಶಾಸ್ತ್ರಗ್ರಂಥಗಳ ಅಥವಾ ಷರಿಯತ್‌ನ ನೇರ ಪ್ರಭಾವ ಇಲ್ಲ ಎಂಬುದರ ಅರಿವಿರುತ್ತದೆ."

ನಂತರ :

"ಹಿಂದೂ ಕಾನೂನು ಬ್ರಾಹ್ಮಣರ ಔನ್ನತ್ಯವನ್ನು ಮೆರೆಸುತ್ತದೆ. ಅದು ಧರ್ಮನಿರಪೇಕ್ಷ ನಿಯಮಗಳಿಗೆ ಪೌರೋಹಿತ್ಯದ ಕಾರಣಗಳನ್ನು ನೀಡುತ್ತದೆ.(?) ಪಂಜಾಬಿನಲ್ಲಿ ಹಿಂದೂಗಳು ಅಥವಾ ಹಿಂದೂಧರ್ಮದಿಂದ ಮುಸಲ್ಮಾನರಾಗಿ ಮತಾಂತರ ಹೊಂದಿದವರು ಬ್ರಾಹ್ಮಣರಿಗೆ ಹೆದರಬಹುದು ಅಥವಾ ಉಣಬಡಿಸಬಹುದು; ಆದರೆ, ನಾಗರಿಕ ವಿಚಾರಗಳಿಗೆ ಬಂದಾಗ ಪಂಜಾಬಿನ ಸಾಂಪ್ರದಾಯಿಕ ಕಾನೂನು ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರರನ್ನು ಸಮಾನರು ಎಂದೇ ಭಾವಿಸುತ್ತದೆ. ಅದು ಖಂಡಿತವಾಗಿಯೂ ಪುರೋಹಿತ ಪ್ರಾಧಾನ್ಯವಿಲ್ಲದ, ಅಶಾಸ್ತ್ರೀಯವಾದ, ಧರ್ಮನಿರಪೇಕ್ಷ ಕಾನೂನು."

**ಮಾನ್ಯ ಉಪಸಭಾಧ್ಯಕ್ಷರು :** ಈಗ ಷರಿಯತ್ ಪಂಜಾಬಿನಲ್ಲಿ ಅನ್ವಯವಾಗುವುದಿಲ್ಲವೇ?

**ಸರ್ದಾರ್ ಬಿ.ಎಸ್. ಮಾನ್ :** ನಾನು ಪಂಜಾಬಿನ ಜನರನ್ನು ಎರಡು ಗುಂಪಾಗಿ ವಿಂಗಡಿಸುತ್ತಿದ್ದೇನೆ. ಒಂದು ಗುಂಪು ಒಟ್ಟು ಜನಸಂಖ್ಯೆಯ ಶೇಕಡ ೯೫ರಷ್ಟಿರುವ ಜನರ ಗುಂಪು; ಮತ್ತೊಂದು ಶೇಕಡ ೫ ರಷ್ಟಿರುವ ಜನರ ಗುಂಪು. ಶೇಕಡ ೯೫ಕ್ಕಿಂತ ಹೆಚ್ಚು ಜನ ಹಳ್ಳಿಯಲ್ಲೇ ವಾಸಿಸುತ್ತಿದ್ದಾರೆ. ಅವರೆಲ್ಲಾ ಭೂಮಿಗೆ ಅಂಟಿಕೊಂಡಿರುವವರು.............

**ಮಾನ್ಯ ಉಪಸಭಾಧ್ಯಕ್ಷರು :** ಭಾರತದಲ್ಲಿ ವಿಭಜನೆಗೆ ಮೊದಲೇ ಷರೀಯತ್ತನ್ನು ಜಾರಿಗೊಳಿಸಿರಲಿಲ್ಲವೇ?

**ಸರ್ದಾರ್ ಬಿ.ಎಸ್. ಮಾನ್ :** ನಾನು ಪಂಜಾಬಿನ ಕಾನೂನಿನ ಬಗ್ಗೆ ಈಗ ಪ್ರಸ್ತಾಪಿಸುತ್ತೇನೆ. ಅಲ್ಲಿ ತೀರ್ಪು ನೀಡುವಲ್ಲಿ ಷರೀಯತ್ ಅಥವಾ ಹಿಂದೂ ಕಾನೂನಿನ ತೀರ್ಮಾನಕ್ಕಿಂತಲೂ ಸಂಪ್ರದಾಯವೇ ಹೆಚ್ಚು ಮುಖ್ಯವಾದುದು.

**ಡಾ. ಅಂಬೇಡ್ಕರ್ :** ಈಗ ಷರಿಯತ್ ಅದನ್ನು ರದ್ದುಗೊಳಿಸಿದೆ.

**ಸರ್ದಾರ್ ಬಿ.ಎಸ್. ಮಾನ್ :** ಸಾಂಪ್ರದಾಯಿಕ ಕಾನೂನು ಪ್ರಚಲಿತದಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಷರಿಯತ್ ಅದರ ಜಾಗವನ್ನು ತುಂಬುತ್ತಿತ್ತು. ಅದು ತುಂಬಾ ವಿಶಿಷ್ಟವಾಗಿದೆ. ನಾನು ಅದನ್ನು ಉಲ್ಲೇಖಿಸಲೇಬೇಕು. ಆದರೆ ನಂತರ ಉಲ್ಲೇಖಿಸುತ್ತೇನೆ. ಏಕೆಂದರೆ ಈಗ ಹೇಳಹೊರಟರೆ ನನ್ನ ಈ ವಾದಕ್ಕೆ ಅಡಚಣೆಯುಂಟಾಗುತ್ತದೆ. ನಮ್ಮಲ್ಲಿ ೧೮೭೨ರ ಪಂಜಾಬ್ ಕಾನೂನು ಕಾಯಿದೆ ಇದೆ. ಅದರ ೫ನೇ ಕಲಮಿನಲ್ಲಿ ಪಂಜಾಬಿನಲ್ಲಿ ತೀರ್ಪು ನೀಡುವಾಗ ಮೊದಲ ಆದ್ಯತೆ ಸಾಂಪ್ರದಾಯಿಕ ಕಾನೂನಿಗೇ ನೀಡಬೇಕು ಮತ್ತು ಸಂಪ್ರದಾಯವಿಲ್ಲದಿದ್ದ ಪಕ್ಷದಲ್ಲಿ ಮಾತ್ರ ಹಿಂದೂ ಅಥವಾ ಷರೀಯತ್ ಕಾನೂನನ್ನು ಬಳಸಿಕೊಳ್ಳಬೇಕು ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

**ಶ್ರೀ ಆರ್.ಸಿ. ಉಪಾಧ್ಯಾಯ (ರಾಜಾಸ್ಥಾನ) :** ಸಂಪ್ರದಾಯಗಳು ದಾಖಲಾಗಿವೆಯೇ?

**ಸರ್ದಾರ್ ಬಿ.ಎಸ್. ಮಾನ್ :** ದಾಖಲಾಗಿದೆ ಅಷ್ಟೇ ಅಲ್ಲ ಅವುಗಳನ್ನು ಕ್ರೋಡೀಕರಿಸಲಾಗಿದೆ, ಆಲಿಸಲಾಗಿದೆ ಮತ್ತು ಅದನ್ನಾಧರಿಸಿ ತೀರ್ಪುಗಳನ್ನು ನೀಡಲಾಗಿದೆ.

**ಒಬ್ಬ ಸನ್ಮಾನ್ಯ ಸದಸ್ಯ :** ನಿಮ್ಮ ಪರಂಪರೆಯೂ ಹಿಂದೂ ಪರಂಪರೆಯೂ ಒಂದೇ ಅಲ್ಲವೇ?

**ಸರ್ದಾರ್ ಬಿ.ಎಸ್. ಮಾನ್ :** ಎಂಥ ಮುಗ್ಧಜನ! ಹಿಂದೂ ಕಾನೂನಿಗಿಂತ ನಮ್ಮ ಪರಂಪರೆ ಸಂಪೂರ್ಣವಾಗಿ ಹಾಗೂ ಮೂಲಭೂತವಾಗಿ ಭಿನ್ನವಾದುದು ಎಂದು ತೋರಿಸಿದರೆ, ನಮಗೆ ಇದರಿಂದ ವಿನಾಯಿತಿ ನೀಡಲು ನನ್ನ ಗೆಳೆಯರು ಸಿದ್ಧರಾಗಿರುವರೇ?

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ಒಂದು ಪರಂಪರೆ ನ್ಯಾಯಯುತವಾಗಿರುತ್ತದೆ ಎಂದು ಡಾ. ಅಂಬೇಡ್ಕರ್ ಒಪ್ಪಿಕೊಳ್ಳಲೇಬೇಕಾಗುತ್ತದೆ. (ಅಡಚಣೆ)

**ಸರ್ದಾರ್ ಬಿ.ಎಸ್. ಮಾನ್ :** ತುಂಬಾ ಅಡಚಣೆ ಕೇಳಿ ಬರುತ್ತಿದೆ. ಅವರು ಹೇಳುತ್ತಿದ್ದಾರೆ– ಅವರನ್ನು ಒಪ್ಪಿಸಿದರೆ ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ ಎಂದು. ಆದರೆ ಒಪ್ಪಲು ಸಿದ್ಧರಿಲ್ಲದವರನ್ನು ಒಪ್ಪಿಸಲು ನನ್ನಿಂದ ಸಾಧ್ಯವೇ? ನನಗೆ ಗೊತ್ತಿಲ್ಲ. ಡಾ. ಅಂಬೇಡ್ಕರ್ ಹೇಳುತ್ತಾರೆ, ಅವರಿಗೆ ಮನದಟ್ಟಾದರೂ ಕೂಡ ಅವರು ಅದನ್ನು ಒಪ್ಪುವುದಿಲ್ಲವಂತೆ. ನಾನೀಗ ಮೇಯ್ನ್ ಅವರ ಹಿಂದೂ ಕಾಯಿದೆಯಿಂದ ಉಲ್ಲೇಖಿಸುತ್ತೇನೆ. ಅದು ದೀರ್ಘಕಾಲದಿಂದ ಚಾಲ್ತಿಯಲ್ಲಿದೆ. ಹಾಗೂ ಅದು ಸಾಕಷ್ಟು ಅಧಿಕೃತವಾದ ಭಾಷೆ. ಅದರ ಪ್ರಕಾರ "ಗ್ರಾಮೀಣ ಸಮುದಾಯಗಳ ಬಗ್ಗೆ ಹೇಳುವುದಾದರೆ ಅವುಗಳು ಪಂಜಾಬ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಾತ್ರ ತನ್ನ ಅಧಿಕಾರವನ್ನು ಹಾಗೂ ಹುರುಪನ್ನು ಉಳಿಸಿಕೊಂಡಿರುವುದು.

ಅದು ಆರ್ಯರು ಭಾರತಕ್ಕೆ ಬಂದ ಪ್ರಾರಂಭದಲ್ಲಿ ಅಡ್ಡಾಡಿದ ಹಾದಿಯಿರಬೇಕು. ಆದರೂ ಕೂಡ ಬ್ರಾಹ್ಮಣ್ಯವು ಅಲ್ಲಿ ನೆಲೆಯೂರಲು ಸಂಪೂರ್ಣವಾಗಿ ಸೋತಿದೆ. .................. ಮತ್ತು ಧಾರ್ಮಿಕ ಅಂಶಗಳು ಅವರ ಜಾತ್ಯತೀತ ಕಾನೂನಿನಲ್ಲಿ ತಲೆಹಾಕಿಯೇ ಇಲ್ಲ"

ನಾವು ಅಷ್ಟೊಂದು ಕಾಲ ಮನುವಿನಿಂದ ಮುಕ್ತರಾಗಿದ್ದು ವಿಮೋಚನೆಯನ್ನು ಅನುಭವಿಸಿರಬೇಕಾದರೆ, ಈಗ ನಾನು ಆಧುನಿಕ ಮನುವಿಗೆ ಶರಣಾಗುವುದು ಕಾಲದ ನಿರಂಕುಶಪ್ರಭುತ್ವ ಎಂದಾಗುವುದಿಲ್ಲವೇ? ಬ್ರಾಹ್ಮಣ ಆಳ್ವಿಕೆಯನ್ನು ಈವರೆಗೆ ನಾವು ಇಲ್ಲಿಗೆ ಬರಗೊಟ್ಟಿರಲಿಲ್ಲ. ಪಂಜಾಬಿನಲ್ಲಿ ಬಹಳ ಕಾಲದಿಂದಲೂ ಜಾತ್ಯತೀತ ಕಾನೂನೇ ಇದೆ. ನಾನು ಮನು ಮತವನ್ನು ಈವರೆಗೆ ಒಪ್ಪಿಕೊಂಡಿರಲಿಲ್ಲ. ಹಾಗಾಗಿ ಮುಂದೆ ಕೂಡ ನಾವು ಅಂಬೇಡ್ಕರ್ ಧರ್ಮವನ್ನು ಒಪ್ಪಿಕೊಳ್ಳುವ ಸಾಧ್ಯತೆಗಳು ಇಲ್ಲ ಎಂದು ನಾನು ಸಭೆಗೆ ಭರವಸೆ ನೀಡುತ್ತೇನೆ. (ಅಡಚಣೆ) ಮನುವಿಗೆ ಕೊನೆಯ ಪಕ್ಷ ಹಲವು ಅಂಶಗಳಲ್ಲಿ ಸ್ವಂತಿಕೆಯಾದರೂ ಇತ್ತು. ಆದರೆ ನಮ್ಮ ಆಧುನಿಕ ಮನು ಓ ಎಂಥ ಸೋಲು! ಆತನಿಗೆ ಸ್ವಂತಿಕೆಯಿಲ್ಲ, ಜೊತೆಗೆ ಪ್ರಗತಿಪರನೂ ಅಲ್ಲ. ಈ ಆಧುನಿಕ ಮನು ಯಾರು ಎಂದು ಕೇಳುತ್ತೀರಾ? ನಾನೇನು ಹೇಳಬೇಕಾಗಿಲ್ಲ.

**ಡಾ. ಅಂಬೇಡ್ಕರ್ :** ನಾನು ಆಧುನಿಕ ಮನುವಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಪಂಜಾಬಿನಲ್ಲಿ ನಾವು ಕೋಮುವಾರು ಗುಂಪುಗಳನ್ನು ಮಾನ್ಯಮಾಡುವುದಿಲ್ಲ. ಹಾಗಾಗಿ ಕಾಯಿದೆಯನ್ನು ಅಲ್ಲಿ ಜಾರಿಗೊಳಿಸುವುದರಿಂದ ಅಲ್ಲಿ ಮೊಟ್ಟ ಮೊದಲ ಬಾರಿಗೆ ಮತೀಯ ಭಾವನೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಾನು ನಿಮಗೆ ಮೇನ್ ಅವರ ಹಿಂದೂ ಕಾನೂನಿನ ೯ನೇ ಆವೃತ್ತಿಯ ಭಾಗವನ್ನು ಓದುತ್ತೇನೆ:

"ಪಂಜಾಬ್ ಸಂಪ್ರದಾಯದ ವಿಶೇಷವಾದ ಹಾಗೂ ಕುತೂಹಲಕಾರಿ ವಿಷಯವೇನೆಂದರೆ ಅಲ್ಲಿ ವೈದಿಕತೆ ಎಂದೂ ಯಶಸ್ವಿಯಾದಂತಿಲ್ಲ. ಹಾಗಾಗಿ ಯಾವುದಾದರೂ ಅಂಶ ಪಂಜಾಬಿನ ಸಾಂಪ್ರದಾಯಿಕ ಕಾನೂನಿನಲ್ಲಿ ಹಾಗೂ ಸಂಸ್ಕೃತ ಕಾನೂನು ಎರಡರಲ್ಲೂ ಕಂಡುಬಂದರೆ, ಅದರ ಮೂಲದಲ್ಲಿ ವೈದಿಕವಾದುದೇನೂ ಇಲ್ಲ ಎಂದೇ ಭಾವಿಸಬೇಕಾಗುತ್ತೆ. ಪಂಜಾಬಿನಲ್ಲಿ ಸಾಂಪ್ರದಾಯಿಕ ಕಾನೂನು ಬ್ರಾಹ್ಮಣರ ಸ್ವತ್ತಲ್ಲ. ಇದನ್ನು ಖಾತ್ರಿಮಾಡಿಕೊಳ್ಳಬೇಕಾದರೆ, ನಾವು ಜಿರ್ಗಾ ಅಥವಾ ಬುಡಕಟ್ಟು ಸಮಿತಿಯನ್ನು ಪರಿಶೀಲಿಸಬೇಕಾಗುತ್ತದೆ. ಅವು ಅಸ್ತಿತ್ವದಲ್ಲಿಲ್ಲದಿದ್ದ ಪಕ್ಷದಲ್ಲಿ ಬುಡಕಟ್ಟಿನ ಹಿರಿಯರನ್ನು ಕೇಳಿದರೆ ತಿಳಿಯುತ್ತದೆ.

**ಶ್ರೀ ಆರ್.ಕೆ. ಚೌಧರಿ :** ಮಧ್ಯೆ ಪ್ರವೇಶಿಸುತ್ತಿದ್ದೇನೆ, ಕ್ಷಮಿಸಿ. ನೇರವಾಗಿ ವಿಷಯಕ್ಕೆ ಬರೋಣ. ಸನ್ಮಾನ್ಯ ಸದಸ್ಯರಿಗೆ ಏಕವಿವಾಹ ಪದ್ಧತಿ ಬೇಕೋ, ಬೇಡವೋ, ಅದೇ ಈಗಿನ ಪ್ರಶ್ನೆ.

**ಶ್ರೀ ತ್ಯಾಗಿ :** ಏಕೆ ಸುಮ್ಮನೆ ಸುತ್ತಿ ಬಳಸಿ ಮಾತನಾಡುತ್ತೀರಿ?

**ಸರ್ದಾರ್ ಬಿ.ಎಸ್. ಮಾನ್ :** ಪತ್ರಿಕೆಗಳ ಮೂಲಕ ಸದನದಲ್ಲಿ ಒಂದು ಸುರಕ್ಷತೆ ಭಾವನೆಯನ್ನು ಸೃಷ್ಟಿಸಲಾಗಿದೆ. ಸರ್ಕಾರ ಕೇವಲ ಮದುವೆ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದಂತೆ ಮಾತ್ರ ಕಾನೂನು ಜಾರಿಗೊಳಿಸುತ್ತದೆಂಬ ಭಾವನೆ ಅವರಲ್ಲಿದೆ. ಉಳಿದ ಎಲ್ಲಾ ಅಂಶಗಳನ್ನೂ ಬದಿಗಿಟ್ಟು ಕೇವಲ ಮದುವೆ ಮತ್ತು ವಿಚ್ಛೇದನದ ವಿಷಯವನ್ನು ಮಾತ್ರ ಪರಿಗಣಿಸುತ್ತೇವೆ ಎಂದು ಡಾ. ಅಂಬೇಡ್ಕರ್ ಅವರು ಸದನದಲ್ಲೇನಾದರೂ ಘೋಷಿಸಿದ್ದಾರೆಯೆ? ನಾನು ಈ ಮಸೂದೆಯನ್ನು ಒಟ್ಟಾರೆಯಾಗಿ ಪರಿಶೀಲಿಸುತ್ತಿದ್ದೇನೆ. ನಾನು ಉಳಿದ ಭಾಗಗಳನ್ನು ಕೈಬಿಡುವುದಿಲ್ಲ ಎಂಬ ಅಭಿಪ್ರಾಯದಿಂದ ಮಾತನಾಡುತ್ತಿದ್ದೇನೆ. ನನ್ನ ಸ್ನೇಹಿತರನ್ನೂ ಎಚ್ಚರಿಸುತ್ತಿದ್ದೇನೆ. ನಿಮ್ಮನ್ನು ಸರ್ಕಾರ ನಿರ್ಲಕ್ಷ್ಯತನದ ಮನೋಭಾವನೆಯಲ್ಲಿ ಹಾಗೂ ನೆಮ್ಮದಿಯ ಭಾವನೆಯಲ್ಲಿ ಮುಳುಗಿಸಿಬಿಟ್ಟು ನಂತರ ಅವರು ಉಳಿದ ಭಾಗಗಳನ್ನು ಜಾರಿಗೊಳಿಸುತ್ತಾರೆ.

**ಶ್ರೀ ಆರ್.ಕೆ. ಚೌಧರಿ :** ದಯವಿಟ್ಟು ನನ್ನ ಪ್ರಶ್ನೆಗೆ ಉತ್ತರಿಸಿ. ಸಾಂಪ್ರದಾಯಿಕ ಕಾಯಿದೆಯ ಪ್ರಕಾರ ಏಕವಿವಾಹಕ್ಕೆ ಪಂಜಾಬಿನಲ್ಲಿ ಅವಕಾಶವಿದೆಯೆ? ನೀವು ಏಕವಿವಾಹದ ಕಾಯಿದೆಯನ್ನು ರೂಪಿಸಲು ಅವಕಾಶ ನೀಡುತ್ತಿರೋ ಇಲ್ಲವೊ?

**ಸರ್ದಾರ್ ಬಿ.ಎಸ್. ಮಾನ್ :** ಅದನ್ನು ಎಳೆಎಳೆಯಾಗಿ ಚರ್ಚಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಉಳಿದ ವಿಚಾರಗಳನ್ನು ಪರಿಗಣಿಸುವುದಿಲ್ಲ ಎಂದು ಮಾನ್ಯ ಪ್ರಧಾನ ಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಕೇವಲ ವಿವಾಹ ಮತ್ತು ವಿಚ್ಛೇದನವನ್ನು ಮಾತ್ರ ಪರಿಗಣಿಸುವುದಾಗಿ ಅವರು ಹೇಳಿದ್ದಾರೆ. ಇದು ಒಪ್ಪಿಗೆಯಾದರೆ, ಮಾನ್ಯ ಸದಸ್ಯರು ಸುಮ್ಮನಾಗುತ್ತಾರೆಂದು ಭಾವಿಸಿದ್ದೇನೆ.

**ಸರ್ದಾರ್ ಹುಕುಂ ಸಿಂಗ್ (ಪಂಜಾಬ್) :** ಈ ಹಂತದಲ್ಲಿ ಈ ಕಲಮನ್ನು ಅಂಗೀಕರಿಸಿದರೆ, ಬೇರೆ ಅಧ್ಯಾಯಗಳು ಚರ್ಚೆಗೆ ಬಂದಾಗ ಮತ್ತೆ ಇದನ್ನು ಚರ್ಚಿಸಲಾಗುವುದೆ? ಅದನ್ನು ಜಾರಿಗೆ ತರುವುದಾದರೆ, ಅದನ್ನು ಸಂಪೂರ್ಣವಾಗಿ ಈ ಹಂತದಲ್ಲಿಯೇ ನಿರ್ಧರಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಈ ಮಸೂದೆಯನ್ನು ಕೇವಲ ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತಗೊಳಿಸಿ, ಉಳಿದ ಭಾಗಗಳನ್ನು ಒಂದು ಪ್ರತ್ಯೇಕ ಕಾಯಿದೆಯಲ್ಲಿ ಜಾರಿಗೊಳಿಸಿದರೆ ಸನ್ಮಾನ್ಯ ಸದಸ್ಯರು ಈ ಕಲಂ ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ ಎಂದು ಭಾವಿಸುತ್ತಾರಾ?

**ಶ್ರೀಮತಿ ದುರ್ಗಾಬಾಯಿ :** ವಾರಸುದಾರಿಕೆಗೆ ಸಂಬಂಧಿಸಿದ ಬಹು ಮುಖ್ಯ ಅಧ್ಯಾಯಗಳನ್ನು ಕೈಬಿಡಲಾಗುತ್ತದೆ ಎಂದು ಸನ್ಮಾನ್ಯ ಸದಸ್ಯರ ಹೇಳಿಕೆಗೆ ಏನಾದರೂ ಆಧಾರಗಳಿವೆಯೊ? ನಿಮಗೆ ಆ ಮಾಹಿತಿ ಎಲ್ಲಿ ದೊರಕಿತು?

**ಸರ್ದಾರ್ ಬಿ.ಎಸ್. ಮಾನ್ :** ಸನ್ಮಾನ್ಯ ಮಹಿಳಾ ಸದಸ್ಯೆ ಮೊಟ್ಟ ಮೊದಲ ಬಾರಿಗೆ ನನ್ನ ನೆರವಿಗೆ ಬರುತ್ತಿದ್ದಾರೆ. ಉಳಿದ ಭಾಗಗಳನ್ನು ಕೈಬಿಟ್ಟಿಲ್ಲ ಎಂಬ ಕಾರಣಕ್ಕಾಗಿಯೇ ನನಗೆ ಇಡೀ ಮಸೂದೆಯನ್ನು ಚರ್ಚಿಸುವ ಹಕ್ಕಿದೆ.

**ಶ್ರೀ ಭಾರತಿ (ಮದ್ರಾಸ್) :** ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಕಾನೂನು ಮಂತ್ರಿಗಳು ಸಮಯದ ಅಭಾವ ಹಾಗೂ ಇನ್ನಿತರ ಕಾರಣಗಳಿಂದಾಗಿ ಉಳಿದ ಅಧ್ಯಾಯಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಸಾಧ್ಯತೆಗಳು ಕಡಿಮೆ ಎಂದು ಈಗಾಗಲೇ ಹೇಳಿದ್ದಾರೆ. ಇದೊಂದು ಸ್ಪಷ್ಟ ಹೇಳಿಕೆಯಲ್ಲದಿರಬಹುದು. ಆದರೆ ಎಲ್ಲಾ ಪ್ರಾಯೋಗಿಕ ಕಾರಣಗಳಿಗಾಗಿ ಇದನ್ನು ಅಧಿಕೃತ ತೀರ್ಮಾನ ಎಂದು ಭಾವಿಸಬಹುದು. ಪ್ರಾಯೋಗಿಕವಾಗಿ ನೋಡಿದರೆ, ಹೆಚ್ಚಿನಂಶ, ಶೇ ೯೯ರಷ್ಟು ಅನ್ನಬಹುದು ಪ್ರಸ್ತುತ ಅಧಿವೇಶನದಲ್ಲಿ ಉಳಿದ ಅಧ್ಯಾಯಗಳು ಚರ್ಚೆಗೆ ಬರುವುದು ಸಾಧ್ಯವಿಲ್ಲ ಅನ್ನಬಹುದು. ಅದನ್ನು ಮುಂದಿನ ಫೆಬ್ರವರಿಯಲ್ಲೋ ಮಾರ್ಚಿಯಲ್ಲೋ ಕೈಗೆತ್ತಿಕೊಳ್ಳಬಹುದು. ಈ ಅಧಿವೇಶನದಲ್ಲಂತೂ ಉಳಿದ ಅಧ್ಯಾಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದು ಖಂಡಿತಾ ಸಾಧ್ಯವಿಲ್ಲ. ನಾವು ಎರಡನೆಯ ಅಧ್ಯಾಯವನ್ನು ಮುಗಿಸಿದರೆ ಅದೇ ದೊಡ್ಡದು. ಹಾಗಾಗಿ ಈ ವಿಷಯದಲ್ಲಿ ಸಹಕರಿಸಬೇಕೆಂದು ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ. ಕೊನೆಯ ಪಕ್ಷ ಈ ಭಾಗವನ್ನಾದರೂ ಜಾರಿ ಮಾಡೋಣ. ಹಾಗಾಗಿ ಚರ್ಚೆಯ ದೃಷ್ಟಿಯಿಂದ ಡಾ. ಅಂಬೇಡ್ಕರ್ ಅವರು ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಕಾಯಿದೆಯನ್ನು ಮಾತ್ರ ಅಂಕಗೀಕರಿಸುವುದು ಎಂಬ ಹೇಳಿಕೆಯನ್ನು ನೀಡಿದರೆ ಅನುಕೂಲವಾಗುತ್ತದೆ. ಸ್ಪಷ್ಟ ಭರವಸೆ ನೀಡದಿದ್ದರೂ ಪರವಾಗಿಲ್ಲ. ಕಡೆಯ ಪಕ್ಷ ಸೂಚನೆಯನ್ನಾದರೂ ನೀಡಿದರೆ ಒಳ್ಳೆಯದು.

**ಪಂಡಿತ ಭಾರ್ಗವ ಎಂ.ಡಿ (ಅಜಮೀರ್) :** ಸನ್ಮಾನ್ಯ ಸದಸ್ಯರಿಗೆ ಈ ನಿಲುವನ್ನು ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರ ಕೇಳಿಕೊಂಡಿದೆಯೇನು?

**ಮಾನ್ಯ ಉಪಸಭಾಧ್ಯಕ್ಷರು :** ಸದಸ್ಯರಿಗೆ ಎರಡೂ ಪಕ್ಷದ ನಿಲುವನ್ನು ಹೇಳುವ ಹಕ್ಕಿದೆ.

**ಡಾ. ದೇಶಮುಖ್ :** ಪ್ರಸ್ತುತ ಈಗ ನಮ್ಮ ಮುಂದಿಟ್ಟಿರುವ ೨ನೇ ಕಲಮು ಮಸೂದೆಯ ವಿಭಿನ್ನ ಭಾಗಗಳ ನಡುವೆ ಯಾವ ಭೇದವನ್ನೂ ಮಾಡುವುದಿಲ್ಲ. ನನ್ನ ಮಾನ್ಯ ಗೆಳೆಯರು ಉಳಿದ ಅಧ್ಯಾಯಗಳಿಗೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯವನ್ನು ಈ ಹಂತದಲ್ಲಿ ವ್ಯಕ್ತಪಡಿಸದಿದ್ದರೆ, ಅವರಿಗೆ ಮುಂದೆ ವ್ಯಕ್ತಪಡಿಸಲು ಅವಕಾಶ ಸಿಗುವುದಿಲ್ಲ. ಏಕೆಂದರೆ ೨ನೇ ಕಲಮು ಇಡೀ ಮಸೂದೆಗೆ ಒಟ್ಟಾಗಿ ಅನ್ವಯವಾಗುತ್ತದೆ. ಅದು ಕೇವಲ ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತವಾಗಿಲ್ಲ. ಒಮ್ಮೆ ೨ನೇ ಕಲಂ ಅನ್ನು ಒಪ್ಪಿಕೊಂಡುಬಿಟ್ಟರೆ, ಅದು ಇಡೀ ಮಸೂದೆಗೆ ಅನ್ವಯಿಸುತ್ತದೆ. ಅದು ವಿವಾಹ ಹಾಗೂ ವಿಚ್ಛೇದನಕ್ಕೆ ಮಾತ್ರ ಅನ್ವಯವಾಗಬೇಕಾದರೆ ಅದಕ್ಕೆ ಒಂದು ತಿದ್ದುಪಡಿ ಅಗತ್ಯ. ಆದರೆ ಸರ್ಕಾರ ಅಂತಹ ಯಾವುದೇ ತಿದ್ದುಪಡಿಯನ್ನು ನಮ್ಮ ಮುಂದೆ ಇಟ್ಟಿಲ್ಲ. ಹಾಗಾಗಿ ಸನ್ಮಾನ್ಯ ಸದಸ್ಯರು ಬೇರೆ ಅಧ್ಯಾಯಗಳ ಬಗ್ಗೆ ಚರ್ಚಿಸಿದರೆ ಅದನ್ನು ಪಡೆಯಲಾಗುವುದಿಲ್ಲ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ) :** ಕಲಂ ೨ನ್ನು ಈಗಿರುವ ಸ್ವರೂಪದಲ್ಲಿಯೇ ಆಗಲಿ ಅಥವಾ ತಿದ್ದುಪಡಿ ಮಾಡಿಯಾಗಲಿ ಅಂಗೀಕರಿಸಿದರೂ ಕೂಡ ಮುಂದೆ ಯಾವುದಾದರೂ ಒಂದು ಹಂತದಲ್ಲಿ ಯಾವುದೇ ನಿರ್ದಿಷ್ಟ ಭಾಗವಾಗಲಿ, ಅಧ್ಯಾಯವಾಗಲಿ ಈ ಕೋಮಿನವರಿಗೆ ಅನ್ವಯಿಸುವುದಿಲ್ಲ ಎಂದು ಹೇಳುವುದಕ್ಕೆ ಯಾವುದೇ ಅಡ್ಡಿಯೂ ಇರುವುದಿಲ್ಲ. ಉದಾಹರಣೆಗೆ, ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಆ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ, ಈ ಕಾಯಿದೆಯು ಸಿಖ್ಖರು ಅಥವಾ ಇನ್ನಾವುದೇ ಜನಾಂಗದವರಿಗೆ ಅನ್ವಯವಾಗುವುದಿಲ್ಲ ಎಂಬ ನಿಬಂಧನೆಯನ್ನು ಸೇರಿಸಲು ಖಂಡಿತವಾಗಿ ಅವಕಾಶವಿರುತ್ತದೆ. ಕಲಂ –೨ನ್ನು ಅಂಗೀಕರಿಸಿದರೂ ನಂತರ ಆ ವಿಷಯವನ್ನು ಚರ್ಚಿಸಲು ಅವಕಾಶವಿರುತ್ತದೆ. ಮತ್ತು ಕೆಲವು ತಿದ್ದುಪಡಿಗಳಿಗೆ ಒಳಪಟ್ಟು ವಿವಾಹ ಮತ್ತು ವಿಚ್ಛೇದನ ಕಾಯಿದೆಯನ್ನು ನಾವು ಅಂಗೀಕರಿಸುತ್ತೇವೆ ಎಂದು ಒಪ್ಪಿಕೊಂಡಲ್ಲಿ ಮಸೂದೆಯ ಬಗ್ಗೆ ಚರ್ಚೆಯನ್ನು ಮುಂದುವರಿಸಬಹುದು. ಜೊತೆಗೆ ಅದು ಸೂಕ್ತವಾದ ನಿಲುವು ಎಂದು ನನಗನ್ನಿಸುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನೀಗ ಸಂದಿಗ್ಧದಲ್ಲಿದ್ದೇನೆ. ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದ ಭಾಗವನ್ನು ಮಾತ್ರ ಪರಿಗಣಿಸಲಾಗುವುದು ಎಂದು ಸನ್ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಚರ್ಚೆಯನ್ನು ಇಂದೇ ಮುಗಿಸಲು ಕೇಳಿಕೊಳ್ಳಬಹುದು ಎಂದುಕೊಂಡಿದ್ದೆ. ಆದರೆ ಈಗ ಕಲಂ–೨, ಉಳಿದ ಎಲ್ಲಾ ಅಧ್ಯಾಯಗಳಿಗೂ ಅನ್ವಯವಾಗುತ್ತದೆ ಎಂದಾದಲ್ಲಿ ಉಳಿದ ಭಾಗಗಳನ್ನು ಉಲ್ಲೇಖಿಸಬೇಡಿ ಎಂದು ಸದಸ್ಯರಿಗೆ ನಾನು ಹೇಗೆ ತಾನೇ ಹೇಳಲು ಸಾಧ್ಯ? ಅದೇ ನನಗೀಗ ಆತಂಕವುಂಟುಮಾಡುತ್ತಿರುವುದು. ಹಾಗಾಗಿ ಈ ಬಗ್ಗೆ ನಾನು ಮಂತ್ರಿಗಳಿಂದ ವಿವರಣೆಯನ್ನು ಕೇಳುತ್ತೇನೆ. ಇಲ್ಲದೇ ಹೋದಲ್ಲಿ ಇದರ ವ್ಯಾಪ್ತಿ ವಿಶಾಲವಾಗುತ್ತದೆ. ಆಗ ಚರ್ಚೆಯನ್ನು ಅಷ್ಟೊಂದು ಬೇಗ ಮುಗಿಸಿಬಿಡಿ ಎನ್ನುವುದು ಉಚಿತವಾಗುವುದಿಲ್ಲ.

**ಡಾ. ಅಂಬೇಡ್ಕರ್ :** ೬ನೇ ತಾರೀಖು ಸದನದ ಅಧಿವೇಶನ ಮುಕ್ತಾಯವಾಗುವುದು ಎಂದು ಮಾನ್ಯ ಪ್ರಧಾನಮಂತ್ರಿಯವರು ಆಗಲೇ ಹೇಳಿದ್ದಾರಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಅದು ತಾತ್ಕಾಲಿಕ.

**ಡಾ. ಅಂಬೇಡ್ಕರ್ :** ಅದೇನೇ ಇರಬಹುದು. ಆದರೆ ಅದು ಇದೆ. ನಾನು ಸರ್ಕಾರದ ನಿಲುವನ್ನು

ಬಿಟ್ಟುಕೊಡದೇ ಇಷ್ಟು ಹೇಳಬಲ್ಲೆ. ಈ ಅಧಿವೇಶನದಲ್ಲಿ ವಿವಾಹ ಮತ್ತು ವಿಚ್ಛೇದನ ಇರುವ ಭಾಗಕ್ಕಿಂತ ಹೆಚ್ಚಿನದನ್ನು ಚರ್ಚೆ ಮಾಡಲು ಸಾಧ್ಯವಿಲ್ಲ. ಈ ಅಧ್ಯಾಯದ ಕೊನೆಯಲ್ಲಿ ಈ ಎರಡೂ ಭಾಗಗಳಿಗೆ ಸ್ವಯಂ ಸಂಪೂರ್ಣ ಸ್ವರೂಪ ನೀಡುವ ಕೆಲವು ತಿದ್ದುಪಡಿಗಳನ್ನು ಮಂಡಿಸುತ್ತೇನೆ ಹಾಗೂ ಅದರಲ್ಲಿ ವಿವಾಹ, ವಿಚ್ಛೇದನಕ್ಕೆ ಸಂಬಂಧಿಸಿದಂತೆ ಕೆಲವು ಅನುಸೂಚಿಗಳನ್ನು ಸೇರಿಸಬೇಕೆಂದಿದ್ದೇನೆ. ಅಧಿವೇಶನಕ್ಕೆ ಸಂಬಂಧಿಸಿದಂತೆ ಇದು ಸರ್ಕಾರದ ಉದ್ದೇಶ ಎಂಬುದನ್ನು ಸದಸ್ಯರು ತಿಳಿದುಕೊಳ್ಳಬಹುದು. ಉಳಿದ ಭಾಗಗಳನ್ನು ಕೈಗೆ ತೆಗೆದುಕೊಂಡಾಗ ಅದನ್ನು ಮಂಡಿಸುವ ಯಾವುದೇ ಕಾನೂನು ಮಂತ್ರಿಗಳೂ ಮತ್ತು ಕರಡುಕಾರರು ಆ ಭಾಗಗಳನ್ನು ಸದನದಲ್ಲಿ ಮಂಡಿಸಿದಾಗ, ಆ ಭಾಗಗಳು ಸ್ವಯಂಸಂಪೂರ್ಣವಾಗಿರುವಂತೆ ಮತ್ತು ಇದೇ ವ್ಯಾಖ್ಯೆಗಳು, ಕಾನೂನುಗಳು ಉಳಿದ ಭಾಗಗಳಲ್ಲೂ ಪುನರಾವೃತ್ತಿಯಾಗುವಂತೆ ನೋಡಿಕೊಳ್ಳುತ್ತಾರೆ. ಆದುದರಿಂದ ಕಲಂ ಅನ್ವಯಿಕೆಗೆ ಸಂಬಂಧಿಸಿದಂತೆ, ಅವು ಈ ಭಾಗಕ್ಕಷ್ಟೇ ಸೀಮಿತಗೊಂಡಾಗ, ಅವು ಉಳಿದ ಭಾಗಗಳಿಗೆ–ಅಲ್ಲಿ ಮತ್ತೆ ಉಲ್ಲೇಖಗೊಂಡಿಲ್ಲದಿದ್ದರೆ–ವಿಸ್ತಾರಗೊಳ್ಳುವ ಸಾಧ್ಯತೆಯಿಲ್ಲ. ಸದನದ ಯಾವುದೇ ವಕೀಲ ಮಿತ್ರರಿಗೆ ಇದು ತಿಳಿಯುತ್ತದೆ ಅಂದುಕೊಂಡಿದ್ದೇನೆ. ಉಳಿದ ಭಾಗಗಳು ಚರ್ಚೆಗೆ ಬಂದಾಗ ಈ ಭಾಗದ ಪ್ರಾಂತೀಯ ಅನ್ವಯಿಕೆಗೆ ಸಂಬಂಧಿಸಿದ ಹಾಗೂ ಸಾಮಾಜಿಕ ಅನ್ವಯಿಕೆಯ ವ್ಯಾಖ್ಯೆಗಳೂ ಅಲ್ಲಿಗೂ ಇರಬೇಕೆ, ಬೇಡವೇ ಎಂಬುದು ಸದನಕ್ಕೆ ಬಿಟ್ಟದ್ದು. ಆ ಭಾಗಗಳನ್ನು ಇಡೀ ಭಾರತಕ್ಕೆ ಅನ್ವಯಿಸಬೇಕೆ ಅಥವಾ ಎಲ್ಲಾ ಕೋಮಿನವರಿಗೂ ಅನ್ವಯಿಸಬೇಕೆ ಅಥವಾ ಏನಾದರೂ ವಿನಾಯ್ತಿ ತೋರಬೇಕೆ ಎಂಬುದು ಸದನಕ್ಕೆ ಮತ್ತು ಸರ್ಕಾರಕ್ಕೆ ಬಿಟ್ಟ ವಿಷಯ. ಆ ವಿಷಯವನ್ನು ಮುಂದಿನ ಸರ್ಕಾರಕ್ಕೆ, ಮುಂದಿನ ಕಾನೂನು ಮಂತ್ರಿಗಳಿಗೆ ಮತ್ತು ಮುಂದಿನ ಪಾರ್ಲಿಮೆಂಟಿಗೆ ಬಿಡಬೇಕು ಅನ್ನಿಸುತ್ತದೆ.

**ಶ್ರೀಮತಿ ರೇಣುಕಾ ರಾಯ್ :** ಕ್ರಿಯಾಲೋಪದ ಪ್ರಶ್ನೆ. ಮಾನ್ಯರೇ, ಕಲಂ ೨ನ್ನು ಕುರಿತಂತೆ ಹಿಂದಿನ ಅಧಿವೇಶನದಲ್ಲಿ ೩ ದಿನ ಹಾಗೂ ಈ ಅಧಿವೇಶನದಲ್ಲಿ ೩ ದಿನ, ಒಟ್ಟು ೬ ದಿನ ಚರ್ಚೆಯಾಗಲಿದೆ. ಹೆಚ್ಚು ಕಮ್ಮಿ ಎಲ್ಲಾ ಭಾಷಣಗಳು ಇಡೀ ಮಸೂದೆಯ ನಿಬಂಧನೆಗಳ ಗುಣಾವಗುಣಗಳ ಬಗ್ಗೆ ವಿವೇಚಿಸಿವೆ. ಒಮ್ಮೆ ಪರಿಶೀಲನೆಯ ಹಂತ ಮುಗಿದ ಮೇಲೆ, ಕಲಂ ೨ರ ಚರ್ಚೆಯಲ್ಲಿ ನಡೆದಂತೆ, ಮತ್ತೆ ಮಸೂದೆಯ ಪ್ರತಿ ವಿವರಗಳ ಬಗ್ಗೆ ಚರ್ಚೆ ಸಾಧ್ಯವೆ?

**ಶ್ರೀಮತಿ ದುರ್ಗಾಬಾಯಿ :** ಒಂದು ಸ್ಪಷ್ಟನೆ ಬೇಕು. ಮಾನ್ಯ ಕಾನೂನು ಮಂತ್ರಿಗಳ ಹೇಳಿಕೆಯ ಹಿನ್ನೆಲೆಯಲ್ಲಿ ಹಾಗೂ ವಾರಸುದಾರಿಕೆಯ ಕಾನೂನು, ಸಮಾನತೆಯ ತತ್ವಗಳನ್ನು ಆಧರಿಸಿದೆ ಎಂಬ ಕಾರಣಕ್ಕಾಗಿ ಅದಕ್ಕೆ ಈ ಸದನ ಸಾಕಷ್ಟು ಪ್ರಾಮುಖ್ಯ – ಅತಿ ಪ್ರಾಮುಖ್ಯ–ನೀಡಿರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಕಾನೂನುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಕಾನೂನನ್ನು ಈ ಅಧಿವೇಶನದಲ್ಲಿ, ಸಾಧ್ಯವಾಗದೇ ಹೋದರೆ ಮುಂದಿನ ಅಧಿವೇಶನದಲ್ಲಿ ತರುವ ಉದ್ದೇಶ ಸರ್ಕಾರಕ್ಕೆ ಇದೆಯಾ?

**ಡಾ. ಅಂಬೇಡ್ಕರ್ :** ಅದು ಸಂಪೂರ್ಣ ನನ್ನ ಅಧಿಕಾರವ್ಯಾಪ್ತಿಗೆ ಮೀರಿದ ವಿಷಯ. ಈ ವಿಷಯವನ್ನು ಪ್ರಧಾನ ಮಂತ್ರಿಗಳಿಗೆ ಉತ್ತರಿಸಲು ನಿಡುತ್ತೇನೆ.

**ಶ್ರೀ ದೇಶಬಂಧು ಗುಪ್ತ :** ಮಾನ್ಯ ಕಾನೂನು ಮಂತ್ರಿಗಳು ನೀಡಿರುವ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಕೇಳುತ್ತಿದ್ದೇನೆ. ಸರ್ಕಾರಕ್ಕೆ ಮಸೂದೆಯ ಹೆಸರನ್ನು ಬದಲಿಸುವ ಉದ್ದೇಶವಿದೆಯೆ? ಏಕೆಂದರೆ ಈಗ ಅದು ಸಂಹಿತೆಯಲ್ಲ.

**ಡಾ. ಅಂಬೇಡ್ಕರ್ :** ಕಲಂ ೫೫ಕ್ಕೆ ನಾವು ಬಂದಾಗ, ನಾನು ಇದನ್ನು ಒಂದು ಸ್ವತಂತ್ರ ಮಸೂದೆಯನ್ನಾಗಿ ಮಾಡಲು ಹಾಗೂ ಅದನ್ನು ಈ ಸಂಹಿತೆಯಿಂದ ಪ್ರತ್ಯೇಕಗೊಳಿಸಲು ಎಲ್ಲ ಆವಶ್ಯಕ ತಿದ್ದುಪಡಿಗಳನ್ನು ಮಂಡಿಸುತ್ತೇವೆ.

**ಪ್ರಧಾನ ಮಂತ್ರಿಗಳು ಹಾಗೂ ವಿದೇಶ ವ್ಯವಹಾರ ಮಂತ್ರಿಗಳು (ಜವಹರಲಾಲ್ ನೆಹರು) :** ನಾನು ಸನ್ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರಿಯಾಗಿ ಗ್ರಹಿಸಿದ್ದರೆ, ಅವರ ಪ್ರಶ್ನೆ–ಮಸೂದೆಯ ಉಳಿದ ಭಾಗಗಳನ್ನು ಈ ಅಧಿವೇಶನದಲ್ಲಿ ಮಂಡಿಸಲಾಗುವುದೊ ಅಥವಾ ನಂತರದ ಅಧಿವೇಶನದಲ್ಲಿ ಮಂಡಿಸಲಾಗುವುದೊ? ಸರ್ಕಾರಕ್ಕೆ ಸಂಬಂಧಿಸಿದಂತೆ ನಾವು ಇಡೀ ಮಸೂದೆಯನ್ನು ಬೆಂಬಲಿಸುತ್ತೇವೆ. ನಮಗಿರುವ ಸಮಸ್ಯೆ ಸಮಯದ ಅಭಾವ. ಆದುದರಿಂದ ಈ ಅಧಿವೇಶನದಲ್ಲಿ ಭಾಗ ೨ನ್ನು ಮಂಡಿಸಿ ಅದನ್ನು ಅಂಗೀಕರಿಸೋಣ ಎಂದು ತೀರ್ಮಾನಿಸಿದ್ದೇವೆ. ಅಂದರೆ ನಾವು ಉಳಿದ ಯಾವುದೇ ಭಾಗವನ್ನು ಬಿಟ್ಟುಬಿಡುತ್ತೇವೆ ಎಂದು ಅರ್ಥವಲ್ಲ. ಉಳಿದ ಎಲ್ಲಾ ಭಾಗಗಳನ್ನು ಅಂಗೀಕರಿಸಬೇಕೆಂದೇ ನಮಗೆ ತುಂಬಾ ಆಸೆ. ಆದರೆ ಈ ಪ್ರಸಕ್ತ ಅಧಿವೇಶನದಲ್ಲಿ ಅದನ್ನು ಮಾಡಲು ಸಾಧ್ಯವಿಲ್ಲ. ನಮಗೆ ಅವಕಾಶ ಸಿಕ್ಕಾಗ ಉಳಿದ ಭಾಗಗಳನ್ನು ಕೈಗೆತ್ತಿಕೊಳ್ಳುತ್ತೇವೆ.

**ಉಪಸಭಾಧ್ಯಕ್ಷರು :** ಈ ಪ್ರಶ್ನೆಯನ್ನು ಎತ್ತಿದಾಗ, ಮಾನ್ಯ ಪ್ರಧಾನ ಮಂತ್ರಿಗಳು ಇಲ್ಲಿರಲಿಲ್ಲ. ಸರ್ದಾರ್ ಮಾನ್ ಅವರು ಮಾತನಾಡುತ್ತಿದ್ದಾಗ, ಅವರು ಮಸೂದೆಯ ಉಳಿದ ಭಾಗಗಳ ಬಗ್ಗೆಯೂ ಅವು ಸಿಖ್ಖರಿಗೆ ಅನ್ವಯವಾಗುವಷ್ಟರಮಟ್ಟಿಗೆ – ಉಲ್ಲೇಖಿಸುತ್ತಿದ್ದರು. ಆಗ ಮಾನ್ಯ ಪ್ರಧಾನಮಂತ್ರಿಗಳು ಈಗಾಗಲೇ, ಈ ಮಸೂದೆ ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತವಾಗುತ್ತದೆ ಎಂದು ಹೇಳಿರುವುದರಿಂದ ಚರ್ಚೆಯನ್ನು ಆ ಎರಡು ವಿಷಯಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕೆಂಬ ಅಭಿಪ್ರಾಯ ಬಂತು. ಈ ಕಲಂ ಬಗ್ಗೆ ಚರ್ಚೆಗಾಗಿ ದಿನಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆಯನ್ನು ಇಂದೇ ಮುಗಿಸಬೇಕೆಂದುಕೊಂಡಿದ್ದೆ. ಆಗ ಮಾನ್ಯ ಕಾನೂನು ಮಂತ್ರಿಗಳು ಇದನ್ನು ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತಗೊಳಿಸುವ ಉದ್ದೇಶವಿದೆ. ಹಾಗೂ ಹೆಸರಿನ ಬಗೆಗೂ ಸೂಕ್ತ ತಿದ್ದುಪಡಿಯನ್ನು ಮಂಡಿಸಲಾಗುವುದು ಎಂದರು. ಮಸೂದೆಯ ಉಳಿದ ಭಾಗಗಳಿಗೆ ಸಂಬಂಧಿಸಿದಂತೆ, ಹೊಸ ಮಸೂದೆಯನ್ನು ಮಂಡಿಸಲಾಗುವುದು. ಅದು ಈ ಮಸೂದೆಯನ್ನು ಪ್ರಾಂತ್ಯಗಳಿಗೆ ಅಥವಾ ಕೋಮುಗಳಿಗೆ ಅನ್ವಯಿಸುವ ವಿಷಯವನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದರು. ನಂತರ ಆ ಮಸೂದೆಯನ್ನು ಯಾವಾಗ ಮಂಡಿಸಲಾಗುತ್ತದೆ ಎಂದು ಪ್ರಶ್ನೆಯನ್ನು ಕೇಳಲಾಯಿತು. ಅದನ್ನು ಪ್ರಧಾನ ಮಂತ್ರಿಗಳೇ ಉತ್ತರಿಸಬೇಕು ಎಂದು ಕಾನೂನು ಮಂತ್ರಿಗಳು ಹೇಳಿದರು. ಆದುದರಿಂದಲೇ ನನಗೆ, ಇಲ್ಲಿ ಚರ್ಚೆಯನ್ನು ತಮ್ಮ ಗಮನಕ್ಕೆ ತಂದಿಲ್ಲ ಎಂಬ ಅನುಮಾನ ಬಂತು.

**ಡಾ. ಅಂಬೇಡ್ಕರ್ :** ಕಲಂ ೫೫ ಮುಗಿದ ನಂತರ, ನಾನು ಈ ಭಾಗವನ್ನು ಸ್ವಯಂಪೂರ್ಣಗೊಳಿಸುವ ಉದ್ದೇಶದಿಂದ ಸೂಕ್ತ ತಿದ್ದುಪಡಿಯನ್ನು ಮಂಡಿಸುತ್ತೇನೆ. ಅಷ್ಟೇ ಅಲ್ಲ ಈ ತಿದ್ದುಪಡಿಗೊಂಡ ಮಸೂದೆಯನ್ನು ಉಳಿದ ಭಾಗಗಳಿಂದ ಪ್ರತ್ಯೇಕವಾಗಿ ಸ್ವತಂತ್ರವಾಗಿ ಅಂಗೀಕರಿಸಲು ಸಾಧ್ಯವಾಗುವಂತೆ ಸೂಚನೆಯನ್ನು ಮಂಡಿಸುತ್ತೇನೆ. ಬಹುಶಃ ಆ ವಿಷಯವನ್ನು ಹೇಳಲು ಮರೆತಿದ್ದೆ.

ಮತ್ತೊಂದು ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಕಾರ್ಯವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ಪರಿಶೀಲಿಸಿದ್ದೇನೆ. ನನಗಿರುವ ಒಂದು ದಾರಿಯೆಂದರೆ, ಉಳಿದ ಕಲಂಗಳನ್ನು ಓಟಿಗೆ ಹಾಕಬೇಕು. ಅದು ತಿರಸ್ಕೃತವಾದ ಮೇಲೆ, ಅವುಗಳನ್ನು ಒಟ್ಟಾಗಿ ಪ್ರತ್ಯೇಕ ಮಸೂದೆಯಾಗಿಯೊ ಅಥವಾ ಪ್ರತ್ಯೇಕ ಭಾಗವಾಗಿಯೊ,

ಅಥವಾ ಪ್ರತ್ಯೇಕ ಕಾನೂನಾಗಿಯೊ ತನಗೆ ಬೇಕೆನಿಸಿದಾಗ ತರಲು ಸರ್ಕಾರ ಸ್ವತಂತ್ರವಾಗುತ್ತದೆ. ಇನ್ನೊಂದು ಮಾರ್ಗವೆಂದರೆ–ಅದು ನಿಮ್ಮ ರೂಲಿಂಗ್‌ಗೆ ಒಳಪಟ್ಟಿರುತ್ತದೆ. ಕಾರ್ಯವಿಧಾನಕ್ಕೆ ಸಂಬಂಧಿಸಿದ ನಿಯಮಗಳ ಪ್ರಕಾರ ಆ ಭಾಗಗಳನ್ನು ಹಾಗೇ ಉಳಿಸಿಕೊಳ್ಳುವುದು. ನಾನು ನಿಯಮಗಳನ್ನು ಗಮನಿಸಿದಾಗ, ಇಡೀ ಮಸೂದೆಯಿಂದ ಯಾವುದೇ ಭಾಗವನ್ನಾಗಲಿ ತೆಗೆದು, ಒಂದು ಪ್ರತ್ಯೇಕ ಮಸೂದೆಯನ್ನಾಗಿ ಅಂಗೀಕರಿಸುವುದಕ್ಕೆ ಸಂಸತ್ತಿಗೆ ಸಂಪೂರ್ಣ ಅಧಿಕಾರವಿದೆ ಎಂಬುದು ತಿಳಿಯಿತು. ಈ ವಿಷಯವನ್ನು ನಿಮಗೆ ಹಾಗೂ ಸದನಕ್ಕೆ ಬಿಡುತ್ತೇನೆ. ನಮ್ಮ ಸದ್ಯದ ಉದ್ದೇಶ ೫೫ನೇ ಕಲಂ ಹಾಗೂ ಸಂಬಂಧಪಟ್ಟ ಅನುಸೂಚಿಗಳನ್ನು ಜಾರಿಗೆ ತರುವುದು. ನಮ್ಮ ನಿಲುವು ಸ್ಪಷ್ಟವಾಯಿತು ಅಂದುಕೊಂಡಿದ್ದೇನೆ.

**ಶ್ರೀ ಜವಹರಲಾಲ್ ನೆಹರು :** ನನ್ನ ಮಾನ್ಯ ಸಹೋದ್ಯೋಗಿಯವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ನಾನು ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾವೀಗ ಭಾಗ–೩ಕ್ಕೆ ನಮ್ಮನ್ನು ಸೀಮಿತಗೊಳ್ಳುತ್ತೇವೆ. ಅದನ್ನು ಉಳಿದ ಭಾಗಗಳಿಂದ ಪ್ರತ್ಯೇಕವಾಗಿ ಸ್ವೀಕರಿಸಲಾಗುತ್ತದೆ. ನಂತರ ಮಸೂದೆಯ ಉಳಿದ ಭಾಗಗಳನ್ನು ಹೇಗೆ ಪರಿಗಣಿಸಬೇಕೆಂಬುದು ಇರುವ ವಿವಿಧ ಸಾಧ್ಯತೆಗಳನ್ನು ಆಧರಿಸಿದೆ. ಆದರೆ ಈ ಭಾಗವನ್ನು ಪ್ರತ್ಯೇಕವಾಗಿಯೇ ಇಡಬೇಕಾಗುತ್ತದೆ.

ನಾನು ಅಧಿವೇಶನದ ಅವಧಿಯ ಬಗ್ಗೆ ಮಾಡಿದ ಹೇಳಿಕೆಯನ್ನು ಸ್ಪಷ್ಟಪಡಿಸಬೇಕು ಅಥವಾ ಮಾರ್ಪಾಡು ಮಾಡಬೇಕಾಗಿದೆ. ಅದನ್ನು ಅಕ್ಟೋಬರ್ ೬ರಂದು ಮುಗಿಸಲು ಇಚ್ಛಿಸಿದ್ದೇವೆ ಎಂದು ಹೇಳಿದ್ದೆ. ಅಧಿವೇಶನದ ಪ್ರಗತಿಯನ್ನು ನೋಡಿದರೆ, ಅದು ಅಕ್ಟೋಬರ್ ೬ರಂದು ಮುಗಿಯುವ ಸಾಧ್ಯತೆಯಿಲ್ಲ. ನಾವು ಮುಖ್ಯ ಕೆಲಸ ಮುಗಿಸುವವರೆಗೆ ಅದು ಮುಂದುವರಿಯುತ್ತದೆ.

**ರಾಮಲಿಂಗಮ್ ಚಟ್ಟಿಯಾರ್ (ಮದ್ರಾಸು) :** ಈಗಾಗಲೇ ಏಕವಿವಾಹ ಪದ್ಧತಿ ಹಾಗೂ ವಿಚ್ಛೇದನವನ್ನು ಕುರಿತ ಕಾನೂನುಗಳು ಹಲವಾರು ಪ್ರಾಂತ್ಯಗಳಲ್ಲಿ ಇವೆ. ನಾವು ಒಪ್ಪಿಕೊಳ್ಳುತ್ತಿರುವ ಕಾನೂನು ಒಂದು ಹೊಂದಾಣಿಕೆಯಾಗಿದ್ದರೂ, ಅದೇ ಬಹುಶಃ ಉತ್ತಮ ಅನ್ನಿಸುತ್ತದೆ. ಒಂದು ಮಸೂದೆಯನ್ನು ರೂಪಿಸುವ ಕಾರಣಕ್ಕಾಗಿ ಈ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಈ ಪ್ರಸ್ತುತ ಕಾನೂನನ್ನು ವಿವಾಹ ಮತ್ತು ವಿಚ್ಛೇದನಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತೇವೆ ಎಂದಾದಲ್ಲಿ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಜಾರಿಯಾಗಿರುವ ಕಾನೂನುಗಳನ್ನು ಹಾಗೆಯೇ ಇರಗೊಟ್ಟು ಆಯ್ಕೆಯನ್ನು ಆಯಾ ಪ್ರಾಂತ್ಯದ ಜನರಿಗೆ ಏಕೆ ಬಿಟ್ಟುಬಿಡಬಾರದು? ಇದು ತಾವು ಪರಿಗಣಿಸಬೇಕಾದ ಬಹು ಮುಖ್ಯ ವಿಚಾರ.

**ಪಂಡಿತ ಮಾಳವೀಯ (ಉತ್ತರ ಪ್ರದೇಶ) :** ಮಾನ್ಯ ಕಾನೂನು ಮಂತ್ರಿಗಳು ಕೊನೆಯತನಕ ಕಾಯುವುದಕ್ಕೆ ಬದಲಾಗಿ ಅದನ್ನು ಈ ಹಂತದಲ್ಲೆ ಮಾಡಿದರೆ ಒಳ್ಳೆಯದಲ್ಲವೆ?

**ಡಾ. ಅಂಬೇಡ್ಕರ್ :** ಸರ್ಕಾರದ ಉದ್ದೇಶವನ್ನು ಅನುಮಾನಿಸಬೇಕಾದ ಆವಶ್ಯಕತೆ ನನಗೇನೂ ಕಂಡುಬರುತ್ತಿಲ್ಲ. ನಾನು ಈಗ ಏನು ಹೇಳಿದ್ದೆನೋ ಅದಕ್ಕೆ ನಾನು ಬದ್ಧನಾಗಿದ್ದೇನೆ.

**ಪಂಡಿತ ಮಾಳವೀಯ :** ಅವರ ಉದ್ದೇಶಗಳ ಬಗ್ಗೆ ನನಗೇನೋ ಸಂಶಯವಿದೆ ಎಂದು ಅವರು ಭಾವಿಸುತ್ತಿರುವುದನ್ನು ಕಂಡು ನನಗೆ ಆಶ್ಚರ್ಯವಾಗುತ್ತಿದೆ. ಈ ಹಂತದಲ್ಲೇ ಅದನ್ನು ಮಾಡಿಬಿಟ್ಟರೆ ಅನುಕೂಲವಲ್ಲವೆ ಎಂದು ನಾನು ಕೇಳಿದ್ದೇಕೆಂದರೆ, ನಾವೆಲ್ಲರೂ ಒಂದು ವೇಳೆ ಆಲೋಚಿಸುತ್ತಿರುವುದು ಅದೇ ವಿಷಯವಾಗಿದ್ದಲ್ಲಿ ನಮ್ಮಲ್ಲಿ ಕೆಲವರ ಪಾಲಿಗೆ ಅದು ಸ್ವಲ್ಪ ವಿಭಿನ್ನವಾದ ಸನ್ನಿವೇಶವಾಗಬಹುದು.

**ಡಾ. ಅಂಬೇಡ್ಕರ್ :** ಹಾಗೇ ಅಂದುಕೊಳ್ಳಿ.

**ಪಂಡಿತ ಮಾಳವೀಯ :** ಸಂಸತ್ತಿನಲ್ಲಿ ಶಾಸನವನ್ನು ರೂಪಿಸುವಾಗ ಅದೊಂದು ಪೂರ್ಣರೂಪ

ತಳೆಯುವ ಮೊದಲು ಅದನ್ನು ಒಪ್ಪಿಕೊಳ್ಳುವುದು ಕಷ್ಟ. ಹಾಗಾಗಿಯೇ ಅದನ್ನು ಈಗಲೇ ಮುಗಿಸುವುದು ಅನುಕೂಲಕರವಲ್ಲವೆ ಎಂದು ನಾನು ಕೇಳಿದ್ದು.

**ಮಾನ್ಯ ಉಪಸಭಾಧ್ಯಕ್ಷರು :** ಸರ್ಕಾರದ ಉದ್ದೇಶವನ್ನು ಮಾನ್ಯ ಕಾನೂನು ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ನನಗಿರುವ ಒಂದೇ ಒಂದು ಸಮಸ್ಯೆಯೆಂದರೆ – ತಕ್ಷಣ ಮಾಡಿ ಎಂದು ನಾನವರನ್ನು ಕೇಳುತ್ತಿಲ್ಲ – ಕಲಂ – ೨ನ್ನು ಅಂಗೀಕರಿಸಿದ ನಂತರ ಕಲಂ–೫೫ನ್ನು ಚರ್ಚೆಗೆ ಎತ್ತಿಕೊಂಡರೆ, ಆ ಹಂತದಲ್ಲಿ ಕಲಂ–೨ಕ್ಕೆ ತಿದ್ದುಪಡಿಗಳು ತಾಂತ್ರಿಕವಾಗಿ ಸಾಧ್ಯವೆ?

**ಡಾ. ಅಂಬೇಡ್ಕರ್ :** ಕಲಂ–೨ನ್ನು ಮಂಡಿಸುವಾಗ ಈ ಕಲಂಗೆ ಕೆಲವು ತಿದ್ದುಪಡಿಗಳನ್ನು ಮಾಡುವ ಸ್ವಾತಂತ್ರ್ಯವನ್ನು ನನ್ನೊಬ್ಬನಿಗೆ ಮಾತ್ರ ಮೀಸಲಿಟ್ಟುಕೊಳ್ಳುತ್ತೇನೆ.

**ಕೆಲವು ಮಾನ್ಯ ಸದಸ್ಯರು :** ಅದು ಹೇಗೆ ಸಾಧ್ಯ?

**ಡಾ. ಅಂಬೇಡ್ಕರ್ :** ಅದು ಖಂಡಿತವಾಗಿಯೂ ಸಾಧ್ಯ.

**ಪಂಡಿತ ಮಾಳವೀಯ :** ಆಗ ಅದು ನಿರುಂಕುಶಾಧಿಕಾರವಾಗುತ್ತದೆಯೆ ಹೊರತು ಸಂಸತ್ತು ಆಗುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಇದರಲ್ಲಿ ಅಸಂವಿಧಾನಾತ್ಮಕವಾದುದು ಏನೂ ಇಲ್ಲ. ಅವರು ಹೇಳುತ್ತಿರುವುದು ಸೂಕ್ತವಾಗಿಯೇ ಇದೆ. ವಿಚಾರವಂತಿಕೆಯನ್ನು ಕಳೆದುಕೊಳ್ಳುವುದಾಗಲಿ ಹಾಗೂ ಆರೋಪ ಪ್ರತ್ಯಾರೋಪಗಳನ್ನು ಮಾಡುವುದಾಗಲಿ ಸದನದ ಶಾಂತಿಗೆ ಭಂಗತರುತ್ತದೆ. ಕಾನೂನು ಮಂತ್ರಿಗಳ ಉದ್ದೇಶ ನನಗೆ ಚೆನ್ನಾಗಿ ಅರ್ಥವಾಗಿದೆ. ಅವರಿಗೆ ಯಾವುದೇ ರೀತಿಯ ಬೌದ್ಧಿಕ ಹಿಂಜರಿಕೆಗಳಿಲ್ಲ. ಕಲಂ–೫೫ಕ್ಕೆ ತಿದ್ದುಪಡಿಯ ರೂಪದಲ್ಲಿ ಅವರು ಅದನ್ನು ತರಬಯಸಿದ್ದರು. ಆಗ ನನಗನ್ನಿಸಿತ್ತು, ಆ ಹಂತದಲ್ಲಿ ತಂದರೆ ಅದು ತೀರಾ ತಡವಾಗಬಹುದೇನೊ ಎಂದು. ಅದಕ್ಕೆ ಅವರು ಕಲಂ–೨ಕ್ಕೆ ಆವಶ್ಯಕವಾಗುವ ತಿದ್ದುಪಡಿಗಳನ್ನು ಮಾಡಲು ಅವಕಾಶವನ್ನು ಮೀಸಲಿಟ್ಟುಕೊಳ್ಳುತ್ತೇನೆ ಎಂದು ಪರ್ಯಾಯವನ್ನು ಸೂಚಿಸಿದ್ದಾರೆ. ಇಲ್ಲಿ ಕೂಡ ನನಗೊಂದು ತೊಡಕು ಕಂಡುಬರುತ್ತಿದೆ. ಕಲಂ–೨ ಕೇವಲ ಮದುವೆ ಮತ್ತು ವಿಚ್ಛೇದನಕ್ಕೆ ಮಾತ್ರ ಅನ್ವಯಿಸುತ್ತದೆ ಎಂಬ ಹಿನ್ನೆಲೆಯಲ್ಲಿ ಈ ಕಲಂ ಕುರಿತ ಚರ್ಚೆಯನ್ನು ಮುಗಿಸುತ್ತೇವೆ ಎಂಬ ವಿಚಾರದಲ್ಲಿ ಸಂಶಯವಿಲ್ಲ. ಆದರೆ ಅದನ್ನು ಸದನದ ಮುಂದೆ ಇಡುವುದನ್ನು ತಡೆಹಿಡಿಯುತ್ತೇನೆ. ಅದಕ್ಕೆ ಸಂಬಂಧಿಸಿದ ಚರ್ಚೆಯನ್ನು ಮುಗಿಸಿ, ನಂತರ ಈ ಅಧ್ಯಾಯ ಸಂಪೂರ್ಣವಾಗಿ ಮುಂದುವರೆದ ಮೇಲೆ ಅದನ್ನು ಮತ್ತೆ ಕೈಗೆತ್ತಿಕೊಳ್ಳುತ್ತೇನೆ. ಹಾಗಾಗಿ ಈಗ ಹೇಳಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾನ್ಯ ಸದಸ್ಯರೆಲ್ಲರೂ ಇಂದು ಚರ್ಚೆಯನ್ನು ಮುಗಿಸಲು ಸಿದ್ಧರಾಗಬೇಕು.

**ಸರ್ದಾರ್ ಬಿ.ಎಸ್. ಮಾನ್ :** ಉಳಿದ ವಿಚಾರಗಳನ್ನು ವಿಸ್ತಾರಮಾಡುವ ಆವಶ್ಯಕತೆಯಿಲ್ಲ.

**ಶ್ರೀಮತಿ ದುರ್ಗಾಬಾಯಿ :** ಈಗ ಒಬ್ಬ ಸನ್ಮಾನ್ಯ ಸದಸ್ಯರು ಕೆಲವು ರಾಜ್ಯಗಳ ವಿಧಾನಮಂಡಲಗಳು ಏಕವಿವಾಹ ಕಾಯಿದೆಯನ್ನು ಅಂಗೀಕರಿಸಿವೆ ಎಂದರು. ಕೇವಲ ಮೂರು ರಾಜ್ಯಗಳು ಮದ್ರಾಸು, ಬಾಂಬೆ ಮತ್ತು ಬರೋಡ ಮತ್ತು ಅಂತಹ ಕಾಯಿದೆಗಳನ್ನು ಜಾರಿಗೊಳಿಸಿವೆ. ಎಲ್ಲಾ ರಾಜ್ಯಗಳ ವಿಧಾನಮಂಡಲಗಳು ಆ ಕಾಯಿದೆಯನ್ನು ಅಂಗೀಕರಿಸದೆ ಇರುವುದರಿಂದ ಹಾಗೂ ಉನ್ನತ ನ್ಯಾಯಾಲಯಗಳ ವಿಭಿನ್ನ ತೀರ್ಪಿನಿಂದಾಗಿ ಉಂಟಾಗಿರುವ ಗೊಂದಲದಿಂದಾಗಿ ಏಕವಿವಾಹ ಹಾಗೂ ವಿಚ್ಛೇದನದ ಬಗ್ಗೆ ಎಲ್ಲಾ ರಾಜ್ಯಗಳಿಗೂ–ಅವುಗಳು ಬಯಸಲಿ– ಬಿಡಲಿ– ಅನ್ವಯವಾಗುವಂಥ ಒಂದು ಕೇಂದ್ರ ಕಾನೂನಿನ ಆವಶ್ಯಕತೆ ಇಂದು ತೀರಾ ತೀವ್ರವಾಗಿದೆ. ಹಾಗಾಗಿ ಎಲ್ಲಾ ಸದಸ್ಯರು ಚರ್ಚಿಸಿ ಕಲಂ–೫೫ರವರೆಗೆ ಮಸೂದೆಯ

ಜಾರಿಯಾಗಲು ಅನುವು ಮಾಡಿಕೊಡಬೇಕು.

**ಮಾನ್ಯ ಉಪ ಸಭಾಧ್ಯಕ್ಷರು :** ಈಗ ಚರ್ಚೆಯ ವ್ಯಾಪ್ತಿಯನ್ನು ತುಂಬಾ ಸೀಮಿತಗೊಳಿಸಿಕೊಂಡಿರುವುದರಿಂದ ಅದನ್ನು ಎಷ್ಟು ಬೇಗ ಸಾಧ್ಯವೊ ಅಷ್ಟು ಬೇಗ ಮುಗಿಸೋಣ.

**ಪಂಡಿತ ಮಾಳವೀಯ :** ಅಕ್ಟೋಬರ್ ೬ರ ನಂತರವೂ ಅಧಿವೇಶನವನ್ನು ಮುಂದುವರೆಸುವುದು ಅನಿವಾರ್ಯವಾದಲ್ಲಿ ಖಂಡಿತವಾಗಿ ಮುಂದುವರೆಸೋಣ. ಆದರೆ, ದಸರೆಯಲ್ಲಿ ಬೇಡ. ಅದು ಮುಗಿದ ಮೇಲೆ ಸೇರೋಣ.

**ಮಾನ್ಯ ಉಪಸಭಾಧ್ಯಕ್ಷರು :** ಹಾಗೆಯೇ ಆಗಲಿ. ಸಾರ್ವತ್ರಿಕ ರಜೆಯಂದು ಸೇರುವುದು ಬೇಡ.

**ಸರ್ದಾರ್ ಬಿ.ಎಸ್. ಮಾನ್ :** ನಿಜವಾಗಿ ಹೇಳಬೇಕೆಂದರೆ, ನನಗೆ ಸಂಪೂರ್ಣವಾಗಿ ಅರ್ಥವಾಗಿಲ್ಲ......

**ಮಾನ್ಯ ಉಪಸಭಾಧ್ಯಕ್ಷರು :** ಕಲಂ–೨ನ್ನು ಚರ್ಚಿಸುವಾಗ ಮುಂದೆ ಬರುವ ಉಳಿದ ಎಲ್ಲಾ ಕಲಂಗಳ ಗುಣಾತ್ಮಕ ಅಂಶಗಳ ಬಗ್ಗೆ ಉಲ್ಲೇಖಿಸುವ ಆವಶ್ಯಕತೆಯೇನಿಲ್ಲ. ಅಲ್ಲಿ ಇಲ್ಲಿ ಅನಿವಾರ್ಯವಾದಾಗ ಉಲ್ಲೇಖಿಸಿದರೆ ಸಾಕು. ಹಾಗಾಗಿ ಈಗ ಮಾತನಾಡಲು ನಿಂತಿರುವ ಸದಸ್ಯರ ಹಾಗೂ ಉಳಿದ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಇನ್ನುಳಿದ ಕಲಮುಗಳ ಅನ್ವಯಿಕತೆಗಳ ಬಗ್ಗೆ ಅಲ್ಲಿ ಇಲ್ಲಿ ಪ್ರಸ್ತಾವಿಕವಾಗಿ ಸೂಚಿಸಬಹುದೇ ಹೊರತು, ಅವು ಹೇಗಿರಬೇಕು, ಹೇಗಿರಬಾರದು, ಅವುಗಳನ್ನು ಹೇಗೆ ಬದಲಾಯಿಸಬೇಕು ಮುಂತಾದವುಗಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮುಂದೆ ಈ ಕಲಮುಗಳನ್ನು ಚರ್ಚೆಗೆ ಎತ್ತಿಕೊಂಡಾಗ ವಿಚಾರ ಮಾಡೋಣ. ಈಗ ಬೇಡ.

**ಶ್ರೀ ಸರ್ವಟೆ (ಮಧ್ಯಪ್ರದೇಶ) :** ಈ ಕಲಮನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು ಮುಂದೂಡುವುದು ಎಂದಾದಲ್ಲಿ ಅಲ್ಲಿಯವರೆಗೆ ಈ ಕಲಮಿಗೆ ಸಂಬಂಧಿಸಿದ ಎಲ್ಲಾ ಚರ್ಚೆಯನ್ನೂ ತಡೆಹಿಡಿಯುವುದು ಒಳ್ಳೆಯದಲ್ಲವೇ?

**ಮಾನ್ಯ ಉಪಸಭಾಧ್ಯಕ್ಷರು :** ಈ ಕಲಂ ಬಗ್ಗೆ ಈಗಾಗಲೇ ಸಾಕಷ್ಟು ಸಮಯವನ್ನು ವ್ಯಯಿಸಿದ್ದೇವೆ. ಹಾಗಾಗಿ ಈ ಕಲಮನ್ನು ವಿವಾಹ ಮತ್ತು ವಿಚ್ಛೇದನಕ್ಕೆ ಮಾತ್ರ ಸೀಮಿತಗೊಳಿಸುತ್ತೇವೆ ಎಂಬ ಕಾನೂನು ಮಂತ್ರಿಗಳ ಹೇಳಿಕೆ ಸರ್ಕಾರದ ಅಧಿಕೃತ ಹೇಳಿಕೆಯೂ ಆಗಿದೆ. ಈ ಆಧಾರದ ಮೇಲೆ ಸದಸ್ಯರು ಎಲ್ಲಿ ಅದನ್ನು ಅನ್ವಯಿಸಬೇಕು, ಎಲ್ಲಿ ಅದನ್ನು ಅನ್ವಯಿಸಬಾರದು–ಸಿಖ್ಖರು ಅಥವಾ ಬೌದ್ಧರು ಅಥವಾ ಹಿಂದೂಗಳಿಗೆ ಅಥವಾ ಯಾವ ನಿರ್ದಿಷ್ಟ ಪ್ರಾಂತ್ಯಗಳಿಗೆ ಇತ್ಯಾದಿ, ಇತ್ಯಾದಿ–ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕು. ಆದರೆ ಚರ್ಚೆ ಅಷ್ಟಕ್ಕೆ ಮಾತ್ರ ಸೀಮಿತವಾಗಿರಬೇಕು. ಅದರಿಂದಾಚೆಗೆ ಉಳಿದ ವಿಚಾರಗಳಿಗೆ ವಿಸ್ತರಿಸಬಾರದು.

**ಪಂಡಿತ ಮಾಳವೀಯ :** ಮಾನ್ಯ ಕಾನೂನು ಮಂತ್ರಿಗಳು ಪರಿಗಣಿಸಬಹುದಾದ ಕ್ರಮದ ಬಗ್ಗೆ ಒಂದು ಸೂಚನೆ ನೀಡಲೆ? ಇಂದು ಕಲಂ–೨ರ ಬಗ್ಗೆ ಚರ್ಚೆಯನ್ನು ಮುಗಿಸಿಬಿಡಬಹುದು. ಆದರೆ ಚರ್ಚೆಯ ನಂತರ ಸದನದ ಮುಂದೆ ಮಂಡಿಸುವ ಬದಲು, ಅದನ್ನು ತಾತ್ಕಾಲಿಕವಾಗಿ ಹಾಗೇ ಇಟ್ಟುಬಿಡೋಣ. ಅದರ ಬಗ್ಗೆ ಮತ್ತೇನೂ ಚರ್ಚೆ ಬೇಡ. ನಾನು ರಚನಾತ್ಮಕವಾದ ಸೂಚನೆಯನ್ನು ನೀಡುತ್ತಿದ್ದೇನೆ. ಅಷ್ಟೆ.

**ಮಾನ್ಯ ಉಪ ಸಭಾಧ್ಯಕ್ಷರು :** ನಾನು ಈಗಾಗಲೇ ಅದನ್ನು ಹೇಳಿದ್ದೇನೆ. ನಾನು ಚರ್ಚೆಯನ್ನು ಮುಗಿಸುತ್ತೇನೆ ಮತ್ತು ಮಧ್ಯಾಹ್ನ ಒಂದು ಗಂಟೆಗೆ ಕಾನೂನು ಮಂತ್ರಿಗಳನ್ನು ಕರೆಯುತ್ತೇನೆ.

**ಶ್ರೀ ಶ್ಯಾಮನಂದನ ಸಹಾಯ್ (ಬಿಹಾರ) :** ಕಲಂ–೨ ಕೇವಲ ಮದುವೆ ಮತ್ತು ವಿಚ್ಛೇದನಕ್ಕೆ ಮಾತ್ರ ಅನ್ವಯಿಸುತ್ತದೆ ಎಂದಾದರೆ, ಉಳಿದ ಕಲಮುಗಳು ಯಾವುದಕ್ಕೆ ಅನ್ವಯಿಸುತ್ತದೆ? ಮಸೂದೆಯ ಉಳಿದ

ಕಲಮುಗಳನ್ನು ಕುರಿತು ಏನು ಮಾಡುವುದು? ಆ ಕಲಮುಗಳ ಅನ್ವಯಿಕತೆಯ ವಿಚಾರವೇನು?

**ಮಾನ್ಯ ಉಪಸಭಾಧ್ಯಕ್ಷರು :** ಉಳಿದ ಕಲಮುಗಳನ್ನೂ ಸೂಕ್ತವಾಗಿ ಮಾರ್ಪಾಡು ಮಾಡಲಾಗುತ್ತದೆ. ಅವುಗಳನ್ನು ಚರ್ಚೆಗೆ ಮಂಡಿಸಿದಾಗ ಸಲಹೆಗಳನ್ನು ನೀಡಬಹುದು.

**ಶ್ರೀ ಶ್ಯಾಮನಂದನ ಸಹಾಯ್ :** ಒಂದೇ ಮಸೂದೆಯಲ್ಲಿ ಎರಡು ಅನ್ವಯಿಕ ಕಲಮುಗಳಿರಬೇಕೇ?

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ಪ್ರಾಯಶಃ ಸದನದಲ್ಲಿರಲಿಲ್ಲ ಅಥವಾ ಸರಿಯಾಗಿ ಕೇಳಿಸಿಕೊಳ್ಳುತ್ತಿರಲಿಲ್ಲ ಎಂದು ತೋರುತ್ತದೆ.................

**ಶ್ರೀ ಸರ್ವಟೆ :** ಒಂದಂಶವನ್ನು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದೇವೆ. ಅವು ಕಲಂ–೨ರ ವ್ಯಾಪ್ತಿಯನ್ನು ಅವಲಂಬಿಸಿದೆ. ಹಾಗಾಗಿ ಆ ತಿದ್ದುಪಡಿಗಳನ್ನು ಮಂಡಿಸಲು ನಮಗೆ ಅವಕಾಶ ನೀಡಬೇಕು, ಇಲ್ಲವೇ ಆ ತಿದ್ದುಪಡಿಗಳನ್ನು ನಂತರ ಚರ್ಚೆಗೆ ಎತ್ತಿಕೊಳ್ಳಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಎಲ್ಲಾ ತಿದ್ದುಪಡಿಗಳನ್ನೂ ಈಗಲೇ ಚರ್ಚಿಸುತ್ತಿದ್ದೇವೆ. ಇನ್ಯಾವುದೇ ತಿದ್ದುಪಡಿಗೂ ನಾನು ಅವಕಾಶ ನೀಡುವುದಿಲ್ಲ. ತಿದ್ದುಪಡಿಗಳೂ ಸೇರಿದಂತೆ ಕಲಮನ್ನು ಚರ್ಚಿಸಲಾಗಿದೆ. ಅದರಲ್ಲಿ ಮಾನ್ಯ ಕಾನೂನು ಮಂತ್ರಿಯವರು ಮಂಡಿಸಿದ ತಿದ್ದುಪಡಿಗಳೂ ಸೇರಿವೆ. ಈಗ ಒಂದು ಹಂತವನ್ನು ತಲುಪಿದ್ದೇವೆ. ನಾವು ಉಳಿದ ಎಲ್ಲಾ ಇತರ ಕಾಯಿದೆಗಳನ್ನು ಮಂಡಿಸಿ ಸ್ವೀಕರಿಸುವ ಉದ್ದೇಶದಿಂದ ಮತ್ತೆ ಕಲಂ ೨ಕ್ಕೆ ಹೋಗಬೇಕಾಗಿ ಬಂದರೆ ಹಾಗೂ ಪ್ರಾಸಂಗಿಕವಾಗಿ ಯಾವುದಾದರೂ ತಿದ್ದುಪಡಿಗಳನ್ನು ಮಾಡಬೇಕಾಗಿದ್ದರೆ ಮಾತ್ರ ಮತ್ತೆ ಕಲಂ–೨ನ್ನು ಚರ್ಚಿಸುತ್ತೇವೆ. ಆದರೆ ಚರ್ಚೆ ಆ ಆನುಷಂಗಿಕವಾದ ಹಾಗೂ ಅನುವರ್ತಿ ತಿದ್ದುಪಡಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಇಂದು ಚರ್ಚೆ ಮುಗಿಯಿತು ಎಂದೇ ಭಾವಿಸಿಕೊಳ್ಳಬೇಕು.

**ಶ್ರೀ ಆರ್.ಕೆ. ಚೌಧರಿ :** ಈ ಬಗ್ಗೆ ನನಗೆ ಕೆಲವು ಸ್ಪಷ್ಟೀಕರಣ ಬೇಕು. ಕಲಂ–೨ ವಿವಾಹ ಮತ್ತು ವಿಚ್ಛೇದನಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ನನಗೆ ಅರ್ಥವಾಗಿದೆ. ಆದರೆ ಉತ್ತರಾಧಿಕಾರದ ಪರಿಚ್ಛೇದ ಚರ್ಚೆಗೆ ಬಂದಾಗ ಅದರಲ್ಲಿ ಒಂದು ಉಳಿಸುವಿಕೆ ಖಂಡ (saving clause) ಇರುತ್ತದೆಯೆ? ಮತ್ತು ಅದು ಉಳಿದದ್ದಕ್ಕೆ ಅನ್ವಯವಾಗುವುದಿಲ್ಲವೆ ಎನ್ನುವುದನ್ನು ತಿಳಿದುಕೊಳ್ಳಲು ಬಯಸುತ್ತೇನೆ. ಇದು ಎಲ್ಲರಿಗೂ ಅನ್ವಯವಾಗದೆ, ಅದರ ಆಳ್ವಿಕೆಗೆ ಒಳಪಡಲು ಸಮ್ಮತಿಸಿದವರಿಗೆ ಮಾತ್ರ ಅನ್ವಯಿಸುತ್ತದೆಯೆ? ಆ ಭಾಗದಲ್ಲಿ ಅಂಥ ಒಂದು ಉಳಿಸುವಿಕೆ ಖಂಡವಿರುತ್ತದೆಯೆ?

**ಮಾನ್ಯ ಉಪಸಭಾಧ್ಯಕ್ಷರು :** ಈಗ ಸದ್ಯಕ್ಕೆ ಈ ಕಾನೂನು ಎರಡೂ ಕೂಡ ವಿವಾಹ ಮತ್ತು ವಿಚ್ಛೇದನಕ್ಕೆ ಸೀಮಿತಗೊಂಡಿದೆ. ಮಾನ್ಯ ಮಂತ್ರಿಗಳೂ ತಮ್ಮನ್ನು ಅದಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ ಮತ್ತು ಉಳಿದ ಎಲ್ಲಾ ಸಾಮಾನ್ಯ ಕಲಮುಗಳನ್ನು ಸೂಕ್ತವಾಗಿ ಬದಲಾವಣೆ ಮಾಡಲಾಗುತ್ತದೆ. ಈ ಕಾನೂನು ಮಂತ್ರಿಯಾಗಲಿ ಅಥವಾ ಬೇರೆ ಕಾನೂನು ಮಂತ್ರಿಗಳಾಗಲಿ ನಂತರದಲ್ಲಿ ಏನನ್ನಾದರೂ ಮಂಡಿಸಿದಾಗ ಏನಾಗುತ್ತದೆ ಎನ್ನುವುದನ್ನು ಕೇವಲ ಊಹಿಸಬಹುದು. ಮುಂದೇನಾಗುತ್ತದೆ ಎಂಬುದನ್ನು ಮುನ್ಸೂಚಿಸಲು ಇಷ್ಟು ಬೇಗ ಸಾಧ್ಯವಿಲ್ಲ.

**ಶ್ರೀ ಆರ್.ಕೆ. ಚೌಧರಿ :** ಈ ಕಲಮನ್ನು ಜಾರಿಗೊಳಿಸಲು ಹೇಗೆ ಅವಕಾಶ ಮಾಡಿಕೊಡುತ್ತೀರಿ? ಇದು ಡೆಮೋಕ್ಲಸ್ಸನ ಕತ್ತಿಯಿದ್ದಂತೆ, ನಮ್ಮ ತಲೆಯ ಮೇಲೆ ನೇತಾಡುತ್ತಿರುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಇನ್ನೊಂದು ಕಲಮನ್ನು ಮಂಡಿಸುತ್ತೇವೆ. ಸೂಕ್ತವಾದ ತಿದ್ದುಪಡಿಗಳೊಡನೆ ಇದೇ ರೀತಿಯ ಕಲಮನ್ನು ಮಂಡಿಸುತ್ತೇವೆ. ಆಗ ಮಾನ್ಯ ಸದಸ್ಯರು ಇಷ್ಟೇ ಉತ್ಸಾಹದಿಂದ ಮಾತನಾಡಬಹುದು.

ಈಗ ಈ ಬಗ್ಗೆ ಕಾಲಹರಣ ಮಾಡುವುದು ಬೇಡ.

**ಶ್ರೀ ಜೆ. ಆರ್. ಕಪೂರ್ :** ಹಾಗಾದರೆ ಇಂದು ೧ ಗಂಟೆಯ ಒಳಗೆ ಚರ್ಚೆಯನ್ನು ಮುಗಿಸುವುದಕ್ಕೆ ತಾವು ಕಾತುರರಾಗಿದ್ದೀರೆಂದು ಭಾವಿಸಲೇ? ಈಗ ಚರ್ಚೆಯನ್ನು ಸಾಮಾನ್ಯ ಅಂಶಗಳ ಬಗ್ಗೆ ಮುಂದುವರಿಸುವುದಕ್ಕೆ ಬದಲಾಗಿ ತಿದ್ದುಪಡಿಗಳ ಬಗ್ಗೆಯೇ ಪ್ರಾರಂಭಿಸೋಣ. ಕಲಂ–೨ನ್ನು ಕುರಿತ ಕೆಲವು ಬಹಳ ಮುಖ್ಯವಾದ ಅಂಶಗಳ ಬಗ್ಗೆ ಮುಂದುವರೆಸುವುದಕ್ಕೆ ಬದಲಾಗಿ ತಿದ್ದುಪಡಿಗಳ ಬಗ್ಗೆಯೇ ಪ್ರಾರಂಭಿಸೋಣ. ಕಲಂ–೨ನ್ನು ಕುರಿತು ಕೆಲವು ಬಹಳ ಮುಖ್ಯವಾದ ನಿರ್ದಿಷ್ಟ ತಿದ್ದುಪಡಿಗಳ ಬಗ್ಗೆ ಚರ್ಚಿಸಲು ಸಮಯವೇ ಉಳಿದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಆ ಕಲಂ ಮತ್ತು ಅದಕ್ಕೆ ಸಂಬಂಧಿಸಿದ ನಿರ್ದಿಷ್ಟ ತಿದ್ದುಪಡಿಗಳೆರಡರ ಬಗ್ಗೆಯೂ ಚರ್ಚೆಯಿರುತ್ತದೆ. ತಿದ್ದುಪಡಿ ಸೂಚನೆಯನ್ನು ನೀಡಿದ್ದಾರೆ ಎಂದ ಮಾತ್ರಕ್ಕೆ ಯಾವ ಸದಸ್ಯರಿಗೂ ಮಾತನಾಡುತ್ತಲೇ ಇರಲು ನಾನು ಅವಕಾಶ ನೀಡುವುದಿಲ್ಲ.

**ಶ್ರೀ ಭಟ್ (ಬಾಂಬೆ) :** ಕಲಂ–೨ನ್ನು ಇಂದು ಮತಕ್ಕಿಡುವುದಿಲ್ಲ ಎಂಬ ವಿಚಾರವನ್ನು ನೀವಿಂದು ಸದನದಲ್ಲಿ ತೀರ್ಮಾನಿಸಿ ಸದನದ ಗಮನಕ್ಕೆ ತಂದಿದ್ದೀರಿ. ಹಾಗಾಗಿ ಮಾನ್ಯ ಕಾನೂನು ಮಂತ್ರಿಗಳು ತಳೆದಿರುವ ನಿಲುವನ್ನು ಗಮನದಲ್ಲಿಟ್ಟುಕೊಂಡು ನಮಗೆ ನಮ್ಮ ಉಳಿದ ತಿದ್ದುಪಡಿಗಳನ್ನು ಮಂಡಿಸುವ ಸಾಧ್ಯತೆಗಳೇನಾದರೂ ಇದೆಯೇ ಎನ್ನುವುದನ್ನು ತಿಳಿದುಕೊಳ್ಳಬಯಸುತ್ತೇನೆ. ಅವರು ವಿವಾಹ ಮತ್ತು ವಿಚ್ಛೇದನದ ಕಾಯಿದೆಯನ್ನು ಪ್ರತ್ಯೇಕವಾಗಿ ಜಾರಿಗೊಳಿಸಲು ಬಯಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಇದು ಇಡೀ ಭಾರತಕ್ಕೆ ಅನ್ವಯಿಸಲಿ ಎಂಬ ತಿದ್ದುಪಡಿಯನ್ನು ಮಂಡಿಸಲು ಅವಕಾಶವಿದೆಯೆ? ಅದಕ್ಕೆ ಅನುಮತಿ ನೀಡುತ್ತೀರೇನು?

**ಡಾ. ಅಂಬೇಡ್ಕರ್ :** ಆ ಬಗ್ಗೆ ನೀವು ಈಗಾಗಲೇ ಒಂದು ತಿದ್ದುಪಡಿಯನ್ನು ಮಂಡಿಸಿದ್ದೀರಿ.

**ಶ್ರೀ ಭಟ್ :** ನಾನು ಮಂಡಿಸಿದ ತಿದ್ದುಪಡಿಯು ಶಾರದಾ ಕಾಯಿದೆಗೆ ಸೂಚಿಸಿದ ತಿದ್ದುಪಡಿಯ ರೀತಿಯದಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಈ ಕಾಯಿದೆಯನ್ನು ಭಾರತದ ಪ್ರತಿಯೊಬ್ಬ ಪ್ರಜೆಗೂ ಹಾಗೂ ಪ್ರತಿಯೊಂದು ಪ್ರಾಂತ್ಯಕ್ಕೂ ಅನ್ವಯಿಸಲು ಬಯಸುತ್ತಾರೆಯೆ ಎಂದು ಕಾನೂನು ಮಂತ್ರಿಗಳನ್ನು ಕೇಳಿದರೆ ಯಾವ ಪ್ರಯೋಜನವೂ ಇಲ್ಲ. ತಿದ್ದುಪಡಿಗಳನ್ನು ಈಗಾಗಲೇ ಮಂಡಿಸಲಾಗಿದೆ. ಅವುಗಳನ್ನು ಮತಕ್ಕೆ ಹಾಕಲಾಗಿದೆ. ನಿರ್ಧಾರ ಕಾನೂನು ಮಂತ್ರಿಗಳ ವಿರುದ್ಧವಾದರೂ ಕೂಡ ಕಾನೂನು ಮಂತ್ರಿಗಳು ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಪರಿಮಿತಿಯ ಬಗ್ಗೆಯಾಗಲಿ ಅಥವಾ ಕೋಮಿಗೆ ಸಂಬಂಧಿಸಿದ ಪರಿಮಿತಿಯ ಬಗ್ಗೆಯಾಗಲಿ ಇನ್ಯಾವ ತಿದ್ದುಪಡಿಯ ಪ್ರಶ್ನೆಯೇ ಇಲ್ಲ. ಪ್ರತಿಯೊಂದನ್ನೂ ಸದನದ ಮುಂದೆ ಮಂಡಿಸಲಾಗಿದೆ. ಮತ್ತು ಅದನ್ನು ಇಂದು ನಾನು ಮತಕ್ಕೆ ಹಾಕುತ್ತಿಲ್ಲ. ಅದನ್ನು ನಂತರ ಹಾಕುತ್ತೇನೆ. ಈ ವಿಷಯವನ್ನು ಒಪ್ಪುವುದಾಗಲಿ ಅಥವಾ ತಿರಸ್ಕರಿಸುವುದಾಗಲಿ ಸದನದ ಮರ್ಜಿಗೆ ಬಿಟ್ಟಿದ್ದು.

**ಪಂಡಿತ ಮೈತ್ರ :** ಮಾನ್ಯ ಕಾನೂನು ಮಂತ್ರಿಗಳು ತಾವು ಒಪ್ಪಿಲ್ಲವೆಂದು ಹೇಳುತ್ತಾರೆ. ಅವರೆನ್ನುತ್ತಾರೆ "ನಾನು ಸಂತೋಷವಾಗಿ ನಾನು ಒಪ್ಪಿಕೊಳ್ಳುತ್ತಿಲ್ಲ."

**ಡಾ. ಅಂಬೇಡ್ಕರ್ :** ನಾನು ಹೇಳಿದ್ದು ನಾನು ಸಂತೋಷದಿಂದ ಒಪ್ಪಿಕೊಳ್ಳುವುದಿಲ್ಲ ಎಂದು.

**ಶ್ರೀ ರಾಧೇಲಾಲ್ ವ್ಯಾಸ್ (ಮಧ್ಯಪ್ರದೇಶ) :** ಕ್ರಿಯಾ ಲೋಪದ ಪ್ರಶ್ನೆ, ಇಂದು ಕಲಂ–೨ರ ಬಗ್ಗೆ

ಚರ್ಚೆಯು ಮುಕ್ತಾಯವಾಗುವುದರಿಂದ ಹಾಗೂ ಮಾನ್ಯ ಕಾನೂನು ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರಿಸುತ್ತಿರುವುದರಿಂದ ಮುಂದಿನ ಹಂತದಲ್ಲಿ ನಂತರ ಕಲಂ–೨ಕ್ಕೆ ಏನಾದರೂ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುತ್ತದಾ?

**ಮಾನ್ಯ ಉಪ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಅನವಶ್ಯಕವಾಗಿ ಕ್ರಿಯಾಲೋಪವನ್ನು ಎತ್ತುತ್ತಿದ್ದಾರೆ. ತಿದ್ದುಪಡಿಯೊಂದನ್ನು ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ವಿಷಯವಲ್ಲ. ಆದೇಶದಲ್ಲಿ ಅನುವರ್ತಿ ತಿದ್ದುಪಡಿಗಳು ಇದ್ದಲ್ಲಿ ಖಂಡಿತವಾಗಿಯೂ ಅವನ್ನು ಮಂಡಿಸುತ್ತೇನೆ ಮತ್ತು ಅನುಮೋದಿಸುತ್ತೇನೆ. ಎರಡನೆಯದಾಗಿ ಕಲಂ–೨ಕ್ಕೆ ಸಂಬಂಧಿಸಿದ ಈ ಚರ್ಚೆಗಳೆಲ್ಲವೂ ಇಂದು ಮುಕ್ತಾಯವಾಗುತ್ತದೆ. ಕಲಮಿಗೆ ಸಂಬಂಧಿಸಿದಂತೆ ಯಾವುದಾದರೂ ಹೊಸ ಅನುವರ್ತಿ ತಿದ್ದುಪಡಿಗಳಿದ್ದಲ್ಲಿ ಅವುಗಳನ್ನು ಈಗ ಸದನದ ಮುಂದೆ ಮಂಡಿಸಿ, ಅವುಗಳನ್ನು ಜಾರಿಗೊಳಿಸುತ್ತೇನೆ.

ಕಲಂ–೨ಕ್ಕೆ ಅಂಥ ಅನುವರ್ತಿ ತಿದ್ದುಪಡಿಗಳನ್ನು ಕಾನೂನು ಮಂತ್ರಿಗಳಾಗಲಿ ಅಥವಾ ಯಾರಾದರೂ ಸದಸ್ಯರಾಗಲಿ ಅವಶ್ಯವಾಗಿ ಮಂಡಿಸುತ್ತಾರೆ. ಮತ್ತು

**ಶ್ರೀ ರಾಮಲಿಂಗಂ ಚೆಟ್ಟಿಯಾರ್ :** ತತ್ಪರಿಣಾಮವಾದ (ಅನುಷಂಗಿಕ) ತಿದ್ದುಪಡಿ ಎಂದರೇನು ಎಂದು ನನಗೆ ತಿಳಿಯದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ಕೇವಲ ಮದುವೆ ಮತ್ತು ವಿಚ್ಛೇದನ ಇವುಗಳನ್ನೇ ಚರ್ಚಿಸುವುದು ಸೂಕ್ತವೆ? ವಿವಾಹ ಮತ್ತು ವಿಚ್ಛೇದನ ಇವುಗಳ ಪರಿಣಾಮವೇನು ಮತ್ತು ಪತಿ ಪತ್ನಿಯರ ಕರ್ತವ್ಯ ಹಾಗೂ ಹಕ್ಕುಗಳು ಹಾಗೂ ಅವರು ಪರಸ್ಪರ ಹೇಗೆ ಉತ್ತರಾಧಿಕಾರಿಗಳಾಗುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳದೆ ಚರ್ಚಿಸುವ ಇಂಥ ಪ್ರಕ್ರಿಯೆಯನ್ನು ಪ್ರಪಂಚದ ಯಾವುದೇ ಸದನದಲ್ಲಾದರೂ ನೋಡಲು ಸಾಧ್ಯವೆ? ಇದು ತೀರಾ ದಡ್ಡತನವಾಗುತ್ತದೆ ಹಾಗೂ ನಿಜವಾಗಿಯೂ ಚರ್ಚಿಸಬೇಕಾದ ವಿಚಾರಗಳು ಚರ್ಚೆಯಾಗದೆ ಹೋಗಿಬಿಡಬಹುದು ಎಂದು ನನಗನ್ನಿಸುತ್ತದೆ.

**ಪಂಡಿತ್ ಮಿಶ್ರಾ :** ಮಾನ್ಯರೇ ತಾವು ಈಗ ತಾನೇ ಕೇವಲ ತತ್ಪರಿಣಾಮವಾದ ತಿದ್ದುಪಡಿಗಳ ಚರ್ಚೆಗೆ ಮಾತ್ರವೆ ಅವಕಾಶ ನೀಡಲಾಗುತ್ತದೆ ಎಂದು ಆಜ್ಞೆಮಾಡಿದಿರಿ. ಆದರೆ, ತಿದ್ದುಪಡಿಗಳನ್ನು ಮತಚಲಾವಣೆಗೆ ಹಾಕಿ, ಅವು ಸ್ವೀಕೃತವೊ, ತಿರಸ್ಕೃತವೊ ಆಗುವವರೆಗೆ, ಅವುಗಳ ಪರಿಣಾಮ ಏನೆಂದು ಹೇಗೆ ತಿಳಿಯುತ್ತದೆ? ಹಾಗಾಗಿ ಈ ಬಗ್ಗೆ ಸ್ಪಷ್ಟೀಕರಣದ ಆವಶ್ಯಕತೆ ಇದೆ. ಸದನದ ಮುಂದಿಟ್ಟಿರುವ ತಿದ್ದುಪಡಿಗಳನ್ನು ಒಪ್ಪಿಕೊಂಡರೆ ಅಥವಾ ತಿರಸ್ಕರಿಸಿದಾಗ ಮಾತ್ರ ತತ್ಪರಿಣಾಮವಾದ ತಿದ್ದುಪಡಿಯನ್ನು ಮಂಡಿಸಬಹುದು. ಯಾವ ನಿರ್ದಿಷ್ಟ ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಯಾವುದನ್ನು ತಿರಸ್ಕರಿಸಲಾಗಿದೆ ಎಂಬುದು ತಿಳಿಯುವವರೆಗೆ ತತ್ಪರಿಣಾಮದಾದ ತಿದ್ದುಪಡಿಯ ಪ್ರಶ್ನೆ ಬರುವುದು ಸಾಧ್ಯವೇ ಇಲ್ಲ. ಯಾವುದಾದರೊಂದು ನಿರ್ದಿಷ್ಟ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರ ಅಥವಾ ತಿರಸ್ಕರಿಸುವ ಪರಿಣಾಮವೇನಾಗುತ್ತದೆ ಎನ್ನುವುದು ಸಂಪೂರ್ಣವಾಗಿ ಅರಿವಾದಾಗ ಮಾತ್ರ ತತ್ಪರಿಣಾಮವಾದ ತಿದ್ದುಪಡಿಯ ಪ್ರಶ್ನೆ ಉದ್ಭವಿಸುತ್ತದೆ.

**ಶ್ರೀಮತಿ ರೇಣುಕ ರಾಯ್ :** ಯಾವುದು ಆನುಷಂಗಿಕ ಹಾಗೂ ಯಾವುದಲ್ಲ ಎನ್ನುವುದನ್ನು ನಂತರ ಚರ್ಚಿಸಲು ಸಾಧ್ಯವಿಲ್ಲವೆ? ಇದು ಮತ್ತೆ ೬ ದಿನಗಳನ್ನು ತೆಗೆದುಕೊಳ್ಳಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನಿರ್ದಿಷ್ಟ ಪಂಗಡಗಳಿಗೆ ರಿಯಾಯ್ತಿ ನೀಡಲಾಗುತ್ತದೆಯೆ ಮತ್ತು ಯಾವುದಾದರೂ ನಿರ್ದಿಷ್ಟ ಭೌಗೋಳಿಕ ಪ್ರಾಂತ್ಯಗಳಿಗೆ ರಿಯಾಯ್ತಿ ನೀಡಲಾಗುತ್ತದೆಯೆ ಹಾಗೂ ಈ

ರಿಯಾಯ್ತಿಯನ್ನು ಸಾರಾಸಗಟಾಗಿ ಜಾರಿಗೆ ತರುತ್ತಾರೊ ಅಥವಾ ಕೆಲವು ಭಾಗಗಳಿಗೆ ಸೀಮಿತ ಗೊಳಿಸುತ್ತಾರೊ ಮುಂತಾದವುಗಳ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಏನು ಹೇಳುತ್ತಾರೊ–ನನಗೆ ಒಂದಿಷ್ಟು ಮಾಹಿತಿ ಬೇಕು–ಎಂಬುದನ್ನು ಸ್ವಲ್ಪ ಮುಂಚಿತವಾಗಿಯೆ ತಿಳಿದುಕೊಳ್ಳಲು ಮಾನ್ಯ ಸದಸ್ಯರು ಕಾತರರಾಗಿದ್ದಾರೆ. ಇವೆಲ್ಲವೂ ಬೇರೆ ಬೇರೆ ತಿದ್ದುಪಡಿಗಳ ವಸ್ತುಗಳಾಗಿವೆ. ಇವು ಕೇವಲ ವಿವಾಹ ಮತ್ತು ವಿಚ್ಛೇದನಕ್ಕೆ ಮಾತ್ರ ಅನ್ವಯಿಸುವುದಲ್ಲ. ಎಲ್ಲಾ ವಿವರಗಳಿಗೂ ಅನ್ವಯಿಸುತ್ತವೆ. ಇದನ್ನು ಮದುವೆ ಮತ್ತು ವಿಚ್ಛೇದನಕ್ಕೆ ಹಾಗೆಯೇ ಅನ್ವಯಿಸಲಾಗುವುದಿಲ್ಲ ಎನ್ನುವುದರಲ್ಲಿ ವಿಚಿತ್ರವೇನಿಲ್ಲ. ಮಾನ್ಯ ಕಾನೂನು ಮಂತ್ರಿಗಳು ಈಗಾಗಲೇ ಸೂಚಿಸಿರುವಂತೆ, ಅವರು ಇನ್ನುಳಿದ ವಿಚಾರಗಳ ಚರ್ಚೆಯನ್ನು ಮುಂದುವರೆಸುವುದಿಲ್ಲ. "ಹಿಂದೂ ಸಂಹಿತೆ" ಎಂಬ ಪದಗಳಿಗೆ ಸಂಬಂಧಿಸಿದಂತೆ ಮಾತ್ರ, ಅವರು ಇದನ್ನು ತಿದ್ದುಪಡಿ...................

**ಡಾ. ಅಂಬೇಡ್ಕರ್ :** ನಾನು "ಕಾಯಿದೆ" ಎಂಬ ಪದ ಬಳಸಲು ಬಯಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾದರೆ "ಸಂಹಿತೆ"ಗೆ ಬದಲಾಗಿ "ವಿವಾಹ ಹಾಗೂ ವಿಚ್ಛೇದನ ಕಾಯಿದೆ' ಎನ್ನುತ್ತೀರಿ. ಇದನ್ನು ಸದನದಲ್ಲಿ ಮತಚಲಾವಣೆಗೆ ಹಾಕಬೇಕು ಎನ್ನಿಸುತ್ತದೆ. ಮಾನ್ಯ ಕಾನೂನು ಮಂತ್ರಿಗಳ ಭಾಷಣ ಮುಗಿದ ಕೂಡಲೇ ಈ ಬಗ್ಗೆ ಮತ ಚಲಾಯಿಸಲು ಸದನದ ಮುಂದಿಡುತ್ತೇನೆ.

**ಶ್ರೀ ರಾಮಲಿಂಗಂ ಚೆಟ್ಟಿಯಾರ್ :** ಮೇಲೇಳುತ್ತಾ....

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಮಂತ್ರಿಗಳ ಪ್ರಶ್ನೆಗೆ ಈಗಾಗಲೇ ಉತ್ತರಿಸಿಯಾಗಿದೆ. ಇದಕ್ಕಿಂತಲೂ ಹೆಚ್ಚು ಪುರೋಗಾಮಿಯಾದ ಕಾಯಿದೆಗಳು ಬೇರೆಬೇರೆ ರಾಜ್ಯದಲ್ಲಿವೆ ಎಂದು ಮಾನ್ಯ ಮಂತ್ರಿಗಳು ಭಾವಿಸಿದಲ್ಲಿ ಪ್ರತಿಯೊಂದು ಕಲಮನ್ನೂ ಪರಿಶೀಲಿಸುವ ಹಂತದಲ್ಲಿ ಈ ಕಲಮಿಗೆ ಕೆಲವು ತಿದ್ದುಪಡಿಗಳನ್ನು ಸದನದ ಮುಂದಿಡಬಹುದು. ಆಗ ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ತೆರನಾದ ಕಾಯಿದೆ ಇರುವಂತೆ ಮಾಡಬಹುದು. ಮಾನ್ಯ ಮಂತ್ರಿಗಳು ಮೂರು ರಾಜ್ಯಗಳಲ್ಲಿ ಅಂಥ ಕಾಯಿದೆಗಳಿವೆ ಎಂದು ಹೇಳಿದ್ದೀರಿ. ಸಮಾನರೂಪವಾಗಿರಲು, ಅದರಲ್ಲೂ ಇದು ಉಭಯ ಹಕ್ಕಿನ ವಿಚಾರವಾಗಿದ್ದರಿಂದ ಒಂದು ಕೇಂದ್ರ ಕಾನೂನು ಇರಲೇಬೇಕು. ಇದು ಮೀರಿಕೊಳ್ಳಲಾಗದ ತೊಂದರೆಯೇನಲ್ಲ.

**ಶ್ರೀ ರಾಮಲಿಂಗಂ ಚೆಟ್ಟಿಯಾರ್ :** ಇದು ಮೀರಿಕೊಳ್ಳಲಾಗದ ತೊಂದರೆ.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಕಾನೂನು ಮಂತ್ರಿಗಳು ಈ ವಿಚಾರದಲ್ಲಿ ಯಾವ ಒಪ್ಪಂದಕ್ಕೂ ಸಿದ್ಧರಿಲ್ಲ.

**ಶ್ರೀ ರಾಮಲಿಂಗಂ ಚೆಟ್ಟಿಯಾರ್ :** ತಿದ್ದುಪಡಿಯೊಂದನ್ನು ಮುಂದಿಡಲು ನನಗೆ ಅವಕಾಶ ನೀಡಲೇ ಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅವರಿಗೆ ಈಗಾಗಲೇ ಒಂದು ಅವಕಾಶ ನೀಡಲಾಗಿದೆ. ಇನ್ನೂ ಹೆಚ್ಚಿನ ತಿದ್ದುಪಡಿಗಳನ್ನು ಮುಂದಿಡಲು ನಾನು ಅವರಿಗೆ ಅವಕಾಶ ನೀಡುವುದಿಲ್ಲ. ಈ ನಿರ್ದಿಷ್ಟ ತಿದ್ದುಪಡಿಯನ್ನು ಮೊದಲೇ ಮುಂದಿಡಲು ಅವರಿಗೇನಾಯಿತು? ಸಮಯ ಬಂದಾಗ ಈ ತಿದ್ದುಪಡಿಯ ಬಗ್ಗೆ ನಾನು ನಿರ್ಣಯ ಕೈಗೊಳ್ಳುತ್ತೇನೆ. ವಾರಸುದಾರಿಕೆ ಕಲಮುಗಳೂ, ಇತ್ಯಾದಿಗಳು ಸದನದ ಮುಂದಿವೆ ಎಂದು ಭಾವಿಸಿಕೊಳ್ಳೋಣ ಹಾಗೂ ನಾವು ಪ್ರತಿದಿನವೂ ಈ ಬಗ್ಗೆ ಚರ್ಚಿಸಿದ್ದೇವೆ. ಅವರು ರಾಜ್ಯ ಶಾಸಕಾಂಗಕ್ಕೆ ಅನುಗುಣವಾಗಿ ಈ ಮಸೂದೆಯನ್ನು ರೂಪಿಸುವವರೆಗೆ ಸದನವು ಕಾಯಬೇಕಾಗಿಲ್ಲ. ಇದೊಂದು

ಅತಾರ್ಕಿಕವಾದ ಬೇಡಿಕೆ. ೨ನೇ ಕಲಂ ಎಲ್ಲಾ ಭಾಗಕ್ಕೂ ಅನ್ವಯವಾಗುತ್ತದೆ. ಇನ್ನು ಉಳಿದ ಭಾಗಗಳನ್ನು ಆಯಾ ಭಾಗಗಳಿಗೆ ಸೀಮಿತಗೊಳಿಸಿಕೊಳ್ಳೋಣ. ಆ ಬಗ್ಗೆ ಈಗ ಚರ್ಚೆ ಬೇಡ. ಚರ್ಚೆ ದೀರ್ಘವಾಗಿ ಮುಂದುವರೆದುಕೊಂಡು ಹೋಗುವುದಕ್ಕೆ ಹಾಗೂ ಸದನದಲ್ಲಿ ಮಂಡಿಸದೇ ಇರಬಹುದಾದ ಕೆಲವು ಕಾಲ್ಪನಿಕ ವಿಚಾರಗಳ ಬಗ್ಗೆ ಸದನದಲ್ಲಿ ಚರ್ಚಿಸಲು ನಾನು ಬಿಡುವುದಿಲ್ಲ. ಚರ್ಚೆಯನ್ನು ಆದಷ್ಟು ಕ್ಲುಪ್ತಗೊಳಿಸಲು ಬಯಸುತ್ತೇನೆ. ಈ ಸಂಹಿತೆಯ ಹೆಸರಿಗೆ (ಪರಿಭಾಷೆಗೆ) ಸಂಬಂಧಿಸಿದಂತೆ ಮಾತ್ರ ತತ್ಪರಿಣಾಮವಾದ ತಿದ್ದುಪಡಿಯು ಅನ್ವಯಿಸುತ್ತದೆ ಎಂದು ಮಾನ್ಯ ಮಂತ್ರಿಗಳು ಈಗಾಗಲೇ ವಿವರಿಸಿದ್ದಾರೆ. ೫೫ನೇ ಕಲಮಿಗೆ ಬಂದಾಗ ನಾನು ಅದನ್ನು ಮಂಡಿಸುತ್ತೇನೆ. ಅದನ್ನು ಮೂರನೇ ಸುತ್ತಿನಲ್ಲಿ ಅಂಗೀಕರಿಸಿದರೂ ಪರವಾಗಿಲ್ಲ. ಚರ್ಚೆಯು ಒಂದೇ ಪಟ್ಟಿಗೆ (ಹರವಿನಲ್ಲಿ) ನಡೆಯಲು ನಾನು ಅವಕಾಶ ನೀಡುತ್ತೇನೆ. ನಂತರ ಮಾನ್ಯ ಕಾನೂನು ಮಂತ್ರಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಾರೆ. ಆ ಸಂದರ್ಭದಲ್ಲಿ ಯಾರಿಗೆ ಈ ನಿಬಂಧನೆಗಳು ಅನ್ವಯಿಸುತ್ತದೆ ಹಾಗೂ ಅದರ ಬಗ್ಗೆ ಇನ್ನೇನಾದರೂ ಕ್ರಮವನ್ನು ತೆಗೆದುಕೊಳ್ಳಬೇಕೆ ಎಂಬುದನ್ನು ತೀರ್ಮಾನಿಸಲು ಕಷ್ಟವಾಗದಂತೆ ನಾನು ಎಲ್ಲಾ ತಿದ್ದುಪಡಿಗಳನ್ನೂ ಮತ ಚಲಾವಣೆಗಾಗಿ ಸದನದ ಮುಂದಿಡುತ್ತೇನೆ.

**ಡಾ. ಅಂಬೇಡ್ಕರ್** : ನೀವು ಒಂದು ಗಂಟೆಯ ಹೊತ್ತಿಗೆ ನನ್ನನ್ನು ಕರೆಯುವುದಾಗಿ ಈಗ ತಾನೇ ಹೇಳಿದ್ದು ನನ್ನ ಕಿವಿಗೆ ಬಿತ್ತು. ಆದರೆ ಒಂದು ಗಂಟೆಯ ಹೊತ್ತಿಗೆ ಬೇರೇನೋ ಕಾರ್ಯಕ್ರಮವಿದೆ ಎಂದು ಭಾವಿಸಿದ್ದೆ. ಪ್ರಾರಂಭಿಸಲು ನನಗೊಂದು ನಿಮಿಷದ ಕಾಲಾವಕಾಶ ಬೇಕು.

**ಶ್ರೀ ಆರ್.ಕೆ. ಚೌಧರಿ** : ಮದುವೆ ಮತ್ತು ವಿಚ್ಛೇದನದ ಪರಿಣಾಮಗಳು ಏನೆಂದು ನಾವು ಮೊದಲು ತಿಳಿಯಬೇಕು. ಮಾನ್ಯರೇ, ಹಾಗಾದರೆ, ನೀವು ವಿವಾಹ ಮತ್ತು ವಿಚ್ಛೇದನದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ. ಆದರೆ, ವಿವಾಹದ ಪರಿಣಾಮದ ಬಗ್ಗೆಯೆ ನಮಗೆ ಸರಿಯಾಗಿ ಗೊತ್ತಿಲ್ಲ. ಮಕ್ಕಳಿಗೆ ವಾರಸುದಾರಿಕೆಯ ಅಧಿಕಾರ ದೊರೆಯುತ್ತದೊ ಇಲ್ಲವೋ ಗೊತ್ತಿಲ್ಲ. ಇದು ನಮಗೆ ತುಂಬಾ ಮಹತ್ವದ ವಿಷಯ. ನಾನು ಮದುವೆಯಾಗುತ್ತೇನೆ ಆದರೂ ಅದರ ಪರಿಣಾಮವೇನು ಎಂಬುದೆ ನನಗೆ ತಿಳಿದಿರುವುದಿಲ್ಲ.........

**ಶ್ರೀ ಶ್ಯಾಮಾನಂದನ್ ಸಹಾಯ್** : ನಾವು ಅದನ್ನು ವಿರೋಧಿಸುತ್ತೇವೆ.

**ಶ್ರೀ ದೇಶಬಂಧು ಗುಪ್ತಾ** : ಸನ್ಮಾನ್ಯ ಸದಸ್ಯರಿಗೆ ವಿವಾಹ ಹಾಗೂ ವಿಚ್ಛೇದನದ ಪರಿಣಾಮವೇನೂ ಎನ್ನುವುದೆ ತಿಳಿದಿಲ್ಲ ಎಂದು ಭಾವಿಸಬೇಕೆ?

**ಶ್ರೀ ಆರ್.ಕೆ. ಚೌಧರಿ** : ನಾನು ಇದನ್ನು ವಿರೋಧಿಸುತ್ತೇನೆ. ನಾನು.......

**ಮಾನ್ಯ ಉಪಸಭಾಧ್ಯಕ್ಷರು** : ಎಂತಹ ಗಂಭೀರ ವಿಷಯದಲ್ಲೂ, ನಮ್ಮ ಸನ್ಮಾನ್ಯ ಸದಸ್ಯರಿಗೆ ತಮಾಷೆಯ ವಾತಾವರಣವನ್ನು ಸೃಷ್ಟಿಸುವ ಕಲೆ ಗೊತ್ತಿದೆ. ಆ ಮಟ್ಟಿಗೆ ಆತ ಆತಂಕದಿಂದ ಪಾರಾಗಬಹುದು. ದಾಂಪತ್ಯ ಸೌಖ್ಯದ ವಿಚಾರಕ್ಕಾಗಲಿ ಅಥವಾ ಬೇರೆ ಯಾವ ವಿಚಾರದಲ್ಲಿಯೆ ಆಗಲಿ ಅವರು ಕೈಗೊಳ್ಳುವ ಕ್ರಮಗಳಿಗೆಲ್ಲಾ ನೇರವಾಗಿ ಅವರೇ ಹೊಣೆಯಾಗುತ್ತಾರೆ ಎನ್ನುವುದು ಮಾನ್ಯ ಸದಸ್ಯರಿಗೆ ಚೆನ್ನಾಗಿ ತಿಳಿದಿದೆ ಎಂದು ಭಾವಿಸದ್ದೇನೆ. ಈಗ ಸರ್ದಾರ್ ಮಾನ್.

**ಸರ್ದಾರ್ ಬಿ.ಎಸ್. ಮಾನ್*** : ಇಷ್ಟು ಹೊತ್ತು ಅಡಚಣೆ ಉಂಟುಮಾಡಿದ್ದರೂ ಕೂಡ ಹಿರಿಯ

---

* ೧೯೫೧ರ ಸೆಪ್ಟಂಬರ್ ೧೭ರ ಸದನದ ಚರ್ಚೆ. ನಂ ೧೫ ಭಾಗವು ಪುಟಗಳು ೨೮೬೧ – ೭೨.

ಸದಸ್ಯರಾಗಿರುವ ತಾವು ನನ್ನ ಬಗ್ಗೆ ಸಹಾನುಭೂತಿಯನ್ನು ತೋರಿಸುತ್ತೀರೆಂದು ಭಾವಿಸಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ಈ ಮಸೂದೆ ಅನ್ವಯವಾಗಬೇಕೆ ಅಥವಾ ಇಲ್ಲವೆ ಎನ್ನುವ ತಿದ್ದುಪಡಿಗೆ ಮಾತ್ರ ಚರ್ಚೆಯನ್ನು ಸದ್ಯಕ್ಕೆ ಸೀಮಿತಗೊಳಿಸಕೊಳ್ಳಬೇಕು. ಈಗಾಗಲೇ ಅವರು ಸಾಕಷ್ಟು ಮಾತನಾಡಿಯಾಗಿದೆ.

**ಸರ್ದಾರ್ ಬಿ.ಎಸ್. ಮಾನ್ :** ಕಿರಿಯ ಸದಸ್ಯರಿಗೆ ತೋರಿಸಬಹುದಾದ ರಿಯಾಯ್ತಿಯನ್ನು ನನಗೂ ತೋರಿಸಿ. ಸರ್ಕಾರದ ಉದ್ದೇಶ ಏನು ಎಂಬುದು ನನಗೆ ಸ್ಪಷ್ಟವಾಗಿಲ್ಲ. ಕೆಲವು ಆಕ್ಷೇಪಗಳ ಭಯ ಕಾಡುತ್ತಿದೆ. ಕೆಲವು ತಿದ್ದುಪಡಿಗಳನ್ನು ಅಂಗೀಕರಿಸುವ ಬಗ್ಗೆ ಕೆಲವು ಮಾನಸಿಕ ಆಕ್ಷೇಪಗಳಿವೆ; ನಂತರ ಪ್ರಧಾನ ಮಂತ್ರಿಗಳು ಸಮಯದ ಕೊರತೆಯಿಂದ ಮಸೂದೆಯ ಎರಡು ಭಾಗವನ್ನು ಕುರಿತು ಮಾತ್ರ ಚರ್ಚೆ ಮಾಡುತ್ತೇವೆ ಎಂದರು. ಪ್ರಾಸಂಗಿಕವಾಗಿ ಒಂದು ವೇಳೆ ಸದನಕ್ಕೆ ನಾಳೆಯೆ ಇದನ್ನು ಮುಕ್ತಾಯ ಮಾಡುವ ಮನಸ್ಸಿದ್ದಲ್ಲಿ, ಆಗ ಇದೇ ಪರಿಸ್ಥಿತಿ ಉಳಿಯುತ್ತದೆ. ಏಕೆಂದರೆ ಆಗ ಸಮಯ ಉಳಿಯುವುದರಿಂದ ಮಸೂದೆಯ ಉಳಿದ ಭಾಗವನ್ನು ಚರ್ಚಿಸಬಹುದು. ಹಾಗಾಗಿ ಮಸೂದೆಯ ಉಳಿದ ಭಾಗವನ್ನು ಈ ಅಧಿವೇಶನದಲ್ಲಿ ಮಾತ್ರವಲ್ಲ, ಈಗ ಮತ್ತು ಮುಂದಕ್ಕೂ ಬಿಟ್ಟುಬಿಡುವ ಉದ್ದೇಶ ಸರ್ಕಾರಕ್ಕೆ ಇದೆಯೇನು? ಎಂಬ ಸ್ಪಷ್ಟ ಪ್ರಶ್ನೆ ಕೇಳುವುದು ಅನಿವಾರ್ಯವಾಗುತ್ತದೆ. ಅಕ್ಟೋಬರ್ ೬ನೇ ತಾರೀಖಿನವರೆಗೆ ಇದನ್ನು ಚರ್ಚೆಗೆ ಎತ್ತಿಕೊಳ್ಳುವುದಿಲ್ಲ ಅಥವಾ ಈ ಅಧಿವೇಶನದಲ್ಲಿ ಇದನ್ನು ಚರ್ಚಿಸುವುದಿಲ್ಲ ಅಥವಾ ಸಮಯದ ಅಭಾವದಿಂದ ಇದನ್ನು ಚರ್ಚಿಸುವುದಿಲ್ಲ ಎಂಬ ಭರವಸೆಗಳು ನನಗೆ ಸಮಾಧಾನ ನೀಡುವುದಿಲ್ಲ. ಇಂಥ ವಾದಗಳಿಂದ ಯಾವ ಪ್ರಯೋಜನವೂ ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಈ ಬಗ್ಗೆ ಸ್ಪಷ್ಟೀಕರಣ ನೀಡಬಯಸುತ್ತೇನೆ. ಈ ಮಸೂದೆಯ ರೂವಾರಿಯಾದ ಮಾನ್ಯ ಕಾನೂನು ಮಂತ್ರಿಗಳ ಅಭಿಪ್ರಾಯವನ್ನು ನಾನು ಸರ್ಕಾರದ ಅಧಿಕೃತ ಅಭಿಪ್ರಾಯವೆಂದು ಪರಿಗಣಿಸುತ್ತೇನೆ. ಅವರು ಈ ಮಸೂದೆಯನ್ನು ವಿವಾಹ ಮತ್ತು ವಿಚ್ಛೇದನಕ್ಕೆ ಸೀಮಿತಗೊಳಿಸುತ್ತಾರೆ ಎಂಬ ಆಧಾರದ ಮೇಲೆ ಮಾನ್ಯ ಸದಸ್ಯರು ಚರ್ಚೆಯನ್ನು ಮುಂದುವರಿಸಬಹುದು. ನಾನು ಅರ್ಥಮಾಡಿಕೊಂಡಿರುವುದು ಹಾಗೆ. ಅದರಲ್ಲೇನಾದರೂ ತಪ್ಪಿದ್ದಲ್ಲಿ ನನ್ನನ್ನು ತಿದ್ದಬಹುದು.

**ಸರ್ದಾರ್ ಬಿ.ಎಸ್. ಮಾನ್ :** ನಾನು ಪ್ರಧಾನ ಮಂತ್ರಿಗಳ ಹೇಳಿಕೆಯನ್ನು ಕೂಡ ತೀರಾ ಮಹತ್ವದ್ದೆಂದು ಭಾವಿಸುತ್ತೇನೆ. ಈ ಮಸೂದೆಯ ವ್ಯಾಪ್ತಿಯಿಂದ ಸಿಖ್ಖರನ್ನು ಮುಕ್ತಗೊಳಿಸಬೇಕು ಎಂಬುದಕ್ಕಷ್ಟೇ ನನ್ನ ತಿದ್ದುಪಡಿಯನ್ನು ಸೀಮಿತಗೊಳಿಸಿಕೊಳ್ಳುತ್ತೇನೆ.

ಅದ್ಹೇಗೋ ಸಿಖ್ಖರೆಲ್ಲರೂ ಹಿಂದುಗಳು, ಹಾಗೂ ಬಹುಕಾಲದಿಂದಲೂ ಹಿಂದೂ ಕಾನೂನನ್ನೆ ಆಚರಣೆಯಲ್ಲಿ ಇಟ್ಟುಕೊಂಡಿದ್ದಾರೆ ಎಂಬ ಕೆಲವು ತಪ್ಪು ಕಲ್ಪನೆಗಳು ಹುಟ್ಟಿಕೊಂಡಿವೆ. ಸಿಖ್ಖರು ಹಿಂದೂಗಳಲ್ಲ ಹಾಗೂ ಅವರು ಹಿಂದೂ ಸಂಪ್ರದಾಯದಂತೆ ನಡೆದುಕೊಳ್ಳುತ್ತಿಲ್ಲ ಎಂಬುದನ್ನು ಸಾಬೀತುಪಡಿಸಿದಲ್ಲಿ ಸಿಖ್ಖರಿಗೆ ಈ ಮಸೂದೆಯಿಂದ ವಿನಾಯ್ತಿ ನೀಡಬೇಕು ಎಂಬುದು ನನ್ನ ವಾದ. ಈ ಹಂತದಲ್ಲಿ ನನ್ನನ್ನು ಮತ್ತೆ ಮತ್ತೆ ನಮ್ಮ ಕಾನೂನು ಅವರ ಮುಖ್ಯ ಕಾನೂನು ಸಂಹಿತೆಗಿಂತ ಯಾವ ವಿಚಾರದಲ್ಲಿ ಭಿನ್ನವಾಗಿದೆ ಎಂದು ಪ್ರಶ್ನಿಸುತ್ತಿದ್ದಾರೆ. ಅದೇ ನನ್ನ ಸಮಸ್ಯೆ. ಪಂಜಾಬಿನಲ್ಲಿ ಒಬ್ಬ ಸಿಖ್ ರೈತನ ಇಡೀ ಮಾನಸಿಕ ಸ್ಥಿತಿಯೆ – ಹಿಂದೂ ಹಾಗೂ ಮುಸ್ಲಿಮರೂ ಸೇರಿದಂತೆ–ಬೇರೆ, ಮತ್ತು ಈ ಪ್ರಸ್ತುತ ಕಾನೂನಿನ ಮಾದರಿಯೆ ಸಂಪೂರ್ಣವಾಗಿ ಬೇರೆ ಎಂಬುದನ್ನು ನಾನು ಸಾಬೀತುಗೊಳಿಸಬೇಕು.

**ಶ್ರೀ ಭಾರತಿ :** ಮದುವೆಗೆ ಸಂಬಂಧಿಸಿದಂತೆ?

**ಸರ್ದಾರ್ ಬಿ.ಎಸ್. ಮಾನ್ :** ಮದುವೆಗೆ ಸಂಬಂಧಿಸಿದಂತೆಯೂ ಸಂಪೂರ್ಣ ಬೇರೆಯಾಗಿದೆ. ಸ್ವಲ್ಪ ಕಾದು ನೋಡಿ.

**ಶ್ರೀ ಭಾರತಿ :** ಇದು ಹೆಚ್ಚು ಮುಖ್ಯವಾದುದು.

**ಸರ್ದಾರ್ ಬಿ.ಎಸ್. ಮಾನ್ :** ಸರ್ ಚಾರಲ್ಸ್ ರೋ ಅವರ 'ಟ್ರೈಬಲ್ ಲಾಸ್ ಆಫ್ ಪಂಜಾಬ್' ಎಂಬ ಕೃತಿಯಿಂದ ಉದ್ಧರಿಸಲು ಬಯಸುತ್ತೇನೆ. ಇದನ್ನು ೫೫ ಪಂಜಾಬ್ ರೆಕಾರ್ಡ್, ೧೯೦೩ ಪೂರ್ಣ ಬೆಂಚ್ ಪ್ರಶಂಸಿಸುತ್ತಾ ಉಲ್ಲೇಖಿಸಿದ್ದಾರೆ. ಅವರು ಹೇಳುತ್ತಾರೆ.

"ಪಂಜಾಬಿನ ಹಿಂದೂ ರೈತ............"

ಸಿಖ್ ರೈತನು ಆಚರಣೆಯಲ್ಲಿಟ್ಟುಕೊಂಡಿರುವ ಕಾನೂನನ್ನೇ ಹಿಂದೂ ರೈತನೂ ಆಚರಿಸುತ್ತಾನೆ.

"ಅವರಿಗೆ ಜಾತಿಯ ಬಗ್ಗೆ ಏನೂ ತಿಳಿದಿಲ್ಲ........."

ಮಾನ್ಯರೇ ವಿವಾಹ ಕಾಯಿದೆಯಲ್ಲಿ ಕೆಲವು ನಿಷಿದ್ಧ ತಲೆಮಾರುಗಳನ್ನು ಸೂಚಿಸಲಾಗಿದೆ. ವಿವಾಹಕ್ಕೆ ಸಂಬಂಧಿಸಿದಂತೆ ನಮ್ಮ ಕಾನೂನು ಪ್ರಸ್ತುತ ಹಿಂದೂ ಕಾನೂನಿಗಿಂತ ಭಿನ್ನವಷ್ಟೇ ಅಲ್ಲ ಹೆಚ್ಚು ಉದಾರವೂ ಆಗಿದೆ. ಈಗ ನೀಡಿರುವ ಭರವಸೆಯ ಪ್ರಕಾರ ಕೇವಲ ೫೫ ಕಲಂಗಳನ್ನು ಮಾತ್ರ ಇತ್ಯರ್ಥಗೊಳಿಸಲಾಗುತ್ತದೆ. ಅದು ಹಿಂದೂ ಮಸೂದೆಯೊ ಅಲ್ಲವೊ ಅಥವಾ ಅದು ಯಾವ ಮಸೂದೆಯಾಗುತ್ತದೊ ಒಂದೂ ತಿಳಿಯದು. ಹೆಸರಾಗಲಿ ಅಥವಾ ಅದರ ಕಾರ್ಯಾಚರಣೆಯಾಗಲಿ ತಿಳಿಯದ ಮಸೂದೆಯ ಬಗ್ಗೆ ಮಾತನಾಡಲು ನನ್ನನ್ನು ಕೇಳುತ್ತಿದ್ದೀರಿ. ಅದೊಂದು ಸಿವಿಲ್ ಮಸೂದೆಯೊ ಅಥವಾ ಒಂದು ವಿವಾಹ ಕಾಯಿದೆಯೊ ಅಥವಾ ಆ ರೀತಿಯ ಯಾವುದೊ ಒಂದು ಕಾಯಿದೆ ಆಗುತ್ತದೆ. "ಹಿಂದೂ" ಎಂಬ ಪದವನ್ನು ಅಲ್ಲಿ ಕೈಬಿಡಲಾಗುತ್ತದೆ ಎಂದು ಭಾವಿಸುತ್ತೇನೆ. ಅವರು ಹೇಳುತ್ತಾರೆ:

"ಪಂಜಾಬಿನ ರೈತರಿಗೆ ಅವರ ಬುಡಕಟ್ಟು ಪ್ರತಿನಿಧಿಸುವುದನ್ನು ಬಿಟ್ಟರೆ ಜಾತಿಯ ಬಗ್ಗೆ ಏನೂ ಗೊತ್ತಿಲ್ಲ. ಅವರು ಬ್ರಾಹ್ಮಣರನ್ನು ಗೌರವಿಸುತ್ತಾರೆ ಹಾಗೂ ಸುಖದುಃಖದ ಸಂದರ್ಭದಲ್ಲಿ ಅವರನ್ನು ಕರೆದು ಊಟಹಾಕುತ್ತಾರೆ. ಆದರೆ, ತಮ್ಮ ದಿನನಿತ್ಯದ ಬದುಕಿನಲ್ಲಿ ಮಾರ್ಗದರ್ಶನಕ್ಕಾಗಿ ಬ್ರಾಹ್ಮಣರನ್ನಾಗಲಿ, ಹಿಂದೂ ಕಾಯಿದೆಯನ್ನಾಗಲಿ ಬಳಸಿಕೊಳ್ಳುವುದನ್ನು ಕನಸಿನಲ್ಲಿಯೂ ಅವರು ಯೋಚಿಸಿರಲಾರರು ಅವನು ಧರ್ಮಶಾಸ್ತ್ರದ ಬಗ್ಗೆ ಏನಾದರೂ ಕೇಳಿದ್ದರೆ–ಅದರ ಸಾಧ್ಯತೆಯೂ ತೀರಾ ಕಡಿಮೆ–ಅದು ಒಬ್ಬ ಸ್ಪಾನಿಷ್ ರೈತ ಬೈಬಲ್ಲಿನ ಬಗ್ಗೆ ತಿಳಿದಿರುವಷ್ಟೆ. ಅವನಿಗೆ ಅದರ ವಸ್ತುವಿನ ಬಗ್ಗೆಯಾಗಲಿ ಅದರ ತತ್ವಗಳ ಬಗ್ಗೆಯಾಗಲಿ ಏನೂ ತಿಳಿದಿಲ್ಲ. ಬ್ರಾಹ್ಮಣ ಕೂಡ ಅವನಿಗೆ ಈ ಬಗ್ಗೆ ತಿಳಿವಳಿಕೆ ನೀಡಲಾರ...................ಹಿಂದೂ ಕಾಯಿದೆಯು ಹಿಂದೂ ಬುಡಕಟ್ಟಿನವರಿಗೆ ಅನ್ವಯವಾಗುವುದಿಲ್ಲ. ಏಕೆಂದರೆ ಅದನ್ನು ಅವರು ಎಂದೂ ಭಾವಿಸಿಯೆ ಇಲ್ಲ ಅಥವಾ ಅದರ ಬಗ್ಗೆ ಅವರೂ ಕೇಳಿಯೂ ಇಲ್ಲ. ಅದು ಬೇರೆಯದೆ ಆದ ಸಾಮಾಜಿಕ ಸ್ತರಕ್ಕಾಗಿ ರೂಪುಗೊಂಡಿದೆ.

**ಮಾನ್ಯ ಸಭಾಧ್ಯಕ್ಷರು :** ಪುಸ್ತಕದ ಉಲ್ಲೇಖಗಳು ಚಿಕ್ಕದಾಗಿ ಇರಬೇಕು. ಇಡೀ ಪುಸ್ತಕವನ್ನಾಗಲಿ, ಅಧ್ಯಾಯವನ್ನಾಗಲಿ, ಕಾವ್ಯವನ್ನಾಗಲಿ ಓದಬೇಡಿ.

**ಸರ್ದಾರ್ ಬಿ.ಎಸ್. ಮಾನ್ :** ಉಲ್ಲೇಖ ತುಂಬಾ ದೊಡ್ಡದಿದೆ. ಅದನ್ನು ಸಂಕ್ಷಿಪ್ತಮಾಡಿದ್ದೇನೆ. ನಾನು ಅದರ ಪ್ರಾರಂಭದ ಹಾಗೂ ಕೊನೆಯ ಸಾಲುಗಳನ್ನಷ್ಟೆ ಓದುತ್ತೇನೆ. ನನ್ನ ಸಮಸ್ಯೆಯೆ ಇದು. ನಾನು ಕಾನೂನನ್ನು ಉಲ್ಲೇಖಿಸಬೇಕಾಗಿ ಬಂದಾಗ.....................

**ಮಾನ್ಯ ಉಪಸಭಾಧ್ಯಕ್ಷರು :** ಯಾವ ಪುಸ್ತಕ?

**ಸರ್ದಾರ್ ಬಿ.ಎಸ್. ಮಾನ್ :** ನಾನು ಉಲ್ಲೇಖಿಸುತ್ತಿರುವುದು ರುಸ್ತುಂಜಿಯವರ ಪಂಜಾಬ್‌ನ ಕಾನೂನು ಎಂಬ ಪುಸ್ತಕ. ಇದು ೫೫ ಪಂಜಾಬ ರೆಕಾರ್ಡ್ ೧೯೦೩ ಪೂರ್ಣ ಬೆಂಚಿನ ತೀರ್ಮಾನಿತ ಕೇಸ್‌ಗೆ ಸಂಬಂಧಿಸಿದ್ದು. ನಾನು ಕಾನೂನನ್ನೇ ಉಲ್ಲೇಖಿಸುತ್ತೇನೆ. ಏಕೆಂದರೆ ಸ್ವತಃ ಡಾ. ಅಂಬೇಡ್ಕರ್ ಅವರೇ ತಮ್ಮ ಹಿಂದಿನ ಭಾಷಣದಲ್ಲಿ ಬಹುಕಾಲದಿಂದಲೂ ಸಿಖ್ಖರಿಗೆ ಹಿಂದು ಕಾನೂನೇ ಅನ್ವಯವಾಗುತ್ತಿದೆ ಎಂದು ತೋರಿಸಲು ಪ್ರೀವಿ ಕೌನ್ಸಿಲಿನ ತೀರ್ಪನ್ನು ಉಲ್ಲೇಖಿಸಿದ್ದರು. ಆ ತಪ್ಪು ಅಭಿಪ್ರಾಯವನ್ನು ತೊಡೆದು ಹಾಕಲು ನಾವು ಹಿಂದೂ ಕಾನೂನಿಗೆ ಬದ್ಧರಲ್ಲ ಎಂದು ತೋರಿಸಲು ನನಗೆ ಸಂಪೂರ್ಣ ಹಕ್ಕಿದೆ. ಇಂದಿನವರೆಗೆ, ನಮ್ಮ ಹಾಗೂ ಅವರ ಕಾನೂನು ಬೇರೆಯದೇ ಆಗಿತ್ತು. ಅವರು ತಮ್ಮ ತೀರ್ಪನ್ನು ಆಧರಿಸಿ ಮಾತನಾಡುತ್ತಿದ್ದಾರೆ. ನಾನು ನನ್ನದನ್ನು ಆಧರಿಸಿದ್ದೇನೆ. ಹಾಗಾಗಿ ಸದನದ ಒಂದಿಷ್ಟು ಸಮಯವನ್ನು ಇದಕ್ಕಾಗಿ ಬಳಸಿಕೊಳ್ಳಬೇಕಾಯಿತು. ಇದನ್ನು ಬೇಗ ಮುಗಿಸಿಬಿಡಬೇಕೆಂಬ ತಮ್ಮ ಆತಂಕ ನನಗೆ ಅರ್ಥ ಆಗುತ್ತದೆ. ಆದರೆ ಮಾನ್ಯರೇ ಈ ಮಸೂದೆಯ ವ್ಯಾಪ್ತಿಯಿಂದ ಸಿಖ್ಖರಿಗೆ ವಿನಾಯ್ತಿ ನೀಡಬೇಕೆನ್ನುವ ತಿದ್ದುಪಡಿಯನ್ನು ಮೊಟ್ಟ ಮೊದಲ ಬಾರಿಗೆ ಮಂಡಿಸಲಾಗುತ್ತಿದೆ. ಹಾಗೂ ಇದು ಸಿಖ್ ಸಮುದಾಯದವರಿಗೆ ತೀರಾ ಮುಖ್ಯವಾದ ವಿಷಯ. ಇದನ್ನು ಗಮನದಲ್ಲಿಟ್ಟುಕೊಂಡು ನನಗೆ ಸ್ವಲ್ಪ ವಿಷಯಾಂತರಕ್ಕೆ ಅವಕಾಶ ಕಲ್ಪಿಸಿಕೊಡಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಈ ಮಸೂದೆ ಕೇವಲ ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತವಾಗಿರುವುದರಿಂದ ಸನ್ಮಾನ್ಯ ಸದಸ್ಯರು ಈ ಕಾನೂನು ತಮ್ಮ ಕಾನೂನಿಗಿಂತ ಪ್ರತಿಗಾಮಿಯಾದದ್ದು ಹಾಗೂ ಅಸಮಂಜಸವಾದದ್ದು ಹಾಗೂ ಇದನ್ನು ಜಾರಿಗೊಳಿಸುವುದರಿಂದ ಆಗುವ ತೊಂದರೆಗಳೇನು ಎಂಬುದನ್ನು ವಿವರಿಸಬೇಕು.

**ಸರ್ದಾರ್ ಬಿ.ಎಸ್. ಮಾನ್ :** ನಾನೂ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನನ್ನೇ ಇಲ್ಲಿ ಉಲ್ಲೇಖಿಸುತ್ತಿರುವುದು. ಈ ಕಾನೂನಿನಲ್ಲಿ ಕೆಲವು ನಿಷಿದ್ಧ ತಲೆಮಾರುಗಳನ್ನು ಸೇರಿಸಲು ಉದ್ದೇಶಿಸಲಾಗಿದೆ. ಇವು ಸಿಖ್ಖರಲ್ಲಿ ಆಚರಣೆಯಲ್ಲಿದ್ದದ್ದು ಇತಿಹಾಸದಲ್ಲೆಲ್ಲೂ ಕಂಡುಬರುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನೊಂದು ಅಪವಾದವೆಂದು ಭಾವಿಸಿದರೆ ಆಗುವುದಿಲ್ಲವೆ? ದಕ್ಷಿಣ ಭಾರತದಲ್ಲಿ ಸೋದರಮಾವನ ಮಗಳನ್ನು ಮದುವೆಯಾಗುವುದನ್ನು ಸಂಪ್ರದಾಯ ಮಾನ್ಯ ಮಾಡುತ್ತದೆ. ಅದನ್ನು ಹಿಂದೂ ಸಂಹಿತೆಯೂ ಮಾನ್ಯ ಮಾಡುತ್ತದೆ. ಯಾವುದೇ ನಿಷಿದ್ಧ ತಲೆಮಾರುಗಳಿಂದ, ಬೇರೆಯಾದದ್ದನ್ನು ಒಂದು ಅಪವಾದವಾಗಿ ಪರಿಗಣಿಸಲಾಗುತ್ತದೆ.

**ಸರ್ದಾರ್ ಬಿ.ಎಸ್. ಮಾನ್ :** ಸರಿಯಾಗಿ ಹೇಳಿದಿರಿ. ನನ್ನ ನೆರವಿಗೆ ಬರುತ್ತಿದ್ದೀರಿ. ಸನ್ಮಾನ್ಯ ಕಾನೂನು ಮಂತ್ರಿಗಳು ವಿವಾಹ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಪಂಜಾಬಿನ ಸಂಪ್ರದಾಯವನ್ನೆ ಅಥವಾ ಸಿಖ್ಖರ ಸಂಪ್ರದಾಯವನ್ನೆ ಗೌರವಿಸುತ್ತಾರೆ ಎಂದಾದಲ್ಲಿ ನನ್ನದೇನೂ ತಕರಾರೇ ಇಲ್ಲ. ನಾನು ಸುಮ್ಮನಾಗಿ ಬಿಡುತ್ತೇನೆ.

**ಶ್ರೀ ಭಾರತಿ :** ೭ನೇ ಕಲಮಿನ ೫ನೇ ಭಾಗದೆಡೆಗೆ ನಿಮ್ಮ ಗಮನ ಸೆಳೆಯ ಬಯಸುತ್ತೇನೆ. ಅದರಲ್ಲಿ "ಅವರಿಬ್ಬರ ನಡುವಿನ ಪವಿತ್ರ ಧಾರ್ಮಿಕ ವಿವಾಹವನ್ನು ಸಂಪ್ರದಾಯ ಅಥವಾ ವಾಡಿಕೆಯು ಮಾನ್ಯ ಮಾಡಿದಾಗ ಮಾತ್ರ" ಎಂದಿದೆ. ಸಂಪ್ರದಾಯವು ಸ್ಥಳೀಯವಾಗಿ ಆಚರಣೆಯಲ್ಲಿ ಇರುವಂಥದ್ದು. ಅದಕ್ಕೆ ಉಳಿದ ಎಲ್ಲವನ್ನೂ ಬದಿಗೊತ್ತಬಲ್ಲ ಸಾಮರ್ಥ್ಯವಿದೆ. ನಾವು ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ಭಾರತದಾದ್ಯಂತ

ಈಗಾಗಲೇ ಅದಕ್ಕೆಲ್ಲಾ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಸಂಪ್ರದಾಯದಲ್ಲಿ ಅದಕ್ಕೆ ಅವಕಾಶವಿದ್ದಾಗ ಮುಗಿಯಿತು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಆದರೆ ಅವರು ಕೇಳುತ್ತಿರುವುದು ವಿವಾಹಕ್ಕೆ ಆನುಷಂಗಿಕವಾದ ಅಂಶಗಳನ್ನು ಕೂಡ ಸಾಂಪ್ರದಾಯಿಕ ಕಾನೂನೇ ನಿರ್ಧರಿಸಬೇಕು ಎಂದು. ಅದೇ ಅವರ ವಾದ.

**ಶ್ರೀ ಭಾರತಿ :** ಆದರೆ ಅವರು ನಿಷಿದ್ಧ ತಲೆಮಾರಿನ ವಿಷಯ ಮಾತನಾಡುತ್ತಿದ್ದಾರೆ ಈ ಅಪವಾದಗಳಿಗೆ ಆವಶ್ಯಕವಾದ ಅವಕಾಶವನ್ನು ಈಗಾಗಲೇ ಕಲ್ಪಿಸಿಕೊಡಲಾಗಿದೆ.

**ಮಾನ್ಯ ಉಪ ಸಭಾಧ್ಯಕ್ಷರು :** ಯಾವುದೇ ಕಾನೂನು ಸೋದರ ಸೋದರಿಯರ ನಡುವೆ ವಿವಾಹಸಂಬಂಧವನ್ನು ಮಾನ್ಯ ಮಾಡುವುದಿಲ್ಲ. ನ್ಯಾಯಾಲಯಗಳು ಒಪ್ಪಿಕೊಂಡಿರುವ ನಿಷೇಧಿತ ತಲೆಮಾರುಗಳು ಇವೆ. ಅವುಗಳಲ್ಲದೆ ಬೇರೆ ಯಾವುದಾದರೂ ಪ್ರಕರಣಗಳಿದ್ದರೆ ಮತ್ತು ಅವು ೭ನೇ ಅಥವಾ ೫ನೇ ಕಲಮಿನಲ್ಲಿ ಬರಲಿ ಅಥವಾ ಇನ್ಯಾವುದೇ ಕಲಮಿನಲ್ಲಿ ಬರಲಿ, ಸೂಕ್ತವಾದ ತಿದ್ದುಪಡಿಯನ್ನು ಸೂಚಿಸಬಹುದು ಮತ್ತು ಆ ಬಗ್ಗೆ ಚರ್ಚಿಸಬಹುದು.

**ಸರ್ದಾರ್ ಬಿ.ಎಸ್. ಮಾನ್ :** ನಾನು ಹೇಳುತ್ತಿರುವುದು ಕ್ರೈಸ್ತರು ಮತ್ತು ಮುಸ್ಲಿಮರ ವೈಯಕ್ತಿಕ ಕಾನೂನು ಸಂಪೂರ್ಣವಾಗಿ ಭಿನ್ನವಾಗಿದೆ ಎಂಬ ಕಾರಣಕ್ಕಾಗಿ ಅವರಿಗೆ ವಿನಾಯಿತಿ ನೀಡಿರುವಂತೆ, ನಮಗೂ ನಮ್ಮ ಸಂಖ್ಯೆ ಕಡಿಮೆಯಿದ್ದರೂ, ನೀಡಬಾರದೇ.........

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ಮತ್ತೆ ಮತ್ತೆ ತಮ್ಮ ವಾದವನ್ನು ಹೇಳಬೇಕಾಗಿಲ್ಲ. ಮುಸ್ಲಿಮರಿಗೆ ವಿನಾಯಿತಿ ನೀಡಿರುವಂತೆ ಸಿಖ್ಖರಿಗೆ ವಿನಾಯಿತಿ ನೀಡಬೇಕೆಂದು ಈಗಾಗಲೇ ನೀವು ಹೇಳಿದ್ದೀರಿ.

**ಸರ್ದಾರ್ ಬಿ.ಎಸ್. ಮಾನ್ :** ಮಾನ್ಯರೇ ಸದನದಲ್ಲಿ ಒಂದು ಸತ್ಸಂಪ್ರದಾಯವಿದೆ. ಒಬ್ಬ ವ್ಯಕ್ತಿಯ ವೈಯಕ್ತಿಕ ಕಾನೂನು ಹಾಗೂ ಅವರ ಧಾರ್ಮಿಕ ಸಂಸ್ಥೆಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಆಯಾ ಕೋಮಿನ ಸದಸ್ಯರ ಅಭಿಪ್ರಾಯವನ್ನು ಇಲ್ಲೂ ಅಳವಡಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ. ನಮಗೆ ಆ ಸಂಪ್ರದಾಯ ಅನ್ವಯಿಸುವುದಿಲ್ಲವೆ? ಅದನ್ನು ನಮಗೂ ಅನ್ವಯಿಸಿಬಿಟ್ಟರೆ, ಇಡೀ ಸಮಸ್ಯೆ ಪರಿಹಾರವಾಗುತ್ತದೆ. ನಾನು ಸುಮ್ಮನೆ ಕುಳಿತುಬಿಡುತ್ತೇನೆ. ಸದನದ ಬಹುಸಂಖ್ಯಾತರ – ಹಿಂದು ಬಹುಸಂಖ್ಯಾತರು ಎಂಬ ಪದವನ್ನು ಬಳಸಲು ಕೊಡಿ–ಅನುಮೋದನೆಯ ಸಹಾಯದಿಂದ ಈ ಮಸೂದೆಯನ್ನು ಜಾರಿಗೊಳಿಸಿದಲ್ಲಿ ಅದು ಅತ್ಯಂತ ದೊಡ್ಡ ಹಾನಿಕಾರಕ ವಿಚಾರ, ಏಕೆಂದರೆ, ಮೊಟ್ಟಮೊದಲ ಬಾರಿಗೆ ಹಿಂದೂ, ಸಿಖ್ ಎಂಬ ಕೋಮುಸೂಚಕ ಪದಗಳನ್ನು ಈ ಚರ್ಚೆಯಲ್ಲಿ ಬಳಸಲಾಗುತ್ತಿದೆ.

**ಡಾ. ಎಂ.ಎಂ. ದಾಸ್ (ಪಶ್ಚಿಮ ಬಂಗಾಳ) :** ಮಾನ್ಯರೇ ಒಂದು ಮಾಹಿತಿಗೆ ಸಂಬಂಧಿಸಿ ದಂತೆ.....................

**ಸರ್ದಾರ್ ಬಿ.ಎಸ್. ಮಾನ್ :** ಅದು ಕ್ರಿಯಾಲೋಪವೆ? ಇಲ್ಲದಿದ್ದರೆ ಒಪ್ಪುವುದಿಲ್ಲ.

**ಡಾ. ಎಂ.ಎಂ. ದಾಸ್ :** ಮಾನ್ಯ ಸದಸ್ಯರು ಪಂಜಾಬಿನ ಸಿಖ್ಖರ ಪರವಾಗಿ ಮಾತನಾಡುತ್ತಿದ್ದಾರೊ ಅಥವಾ ಪ್ರತಿ ಪಂಜಾಬಿ ನಾಗರಿಕನ ಪರವಾಗಿ ಮಾತನಾಡುತ್ತಿದ್ದಾರೊ?

**ಸನ್ಮಾನ್ಯ ಉಪಸಭಾಧ್ಯಕ್ಷರು :** ಸದಸ್ಯರು ಒಪ್ಪುತ್ತಿಲ್ಲ. ನಾನು ಇನ್ನು ಅಡಚಣೆಗೆ ಅವಕಾಶ ನೀಡುವುದಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಸಮಸ್ಯೆಯೆಂದರೆ, ಕಾನೂನಿನ ಬಗ್ಗೆ ಸಾಕಷ್ಟು ತಿಳಿವಳಿಕೆ ಇಲ್ಲದ ಮಾನ್ಯ ಸದಸ್ಯರು ನನ್ನ ವಾದವನ್ನು ಅರ್ಥಮಾಡಿಕೊಳ್ಳದೆ ಅಡ್ಡಿಮಾಡುತ್ತಿದ್ದಾರೆ. ನಾನು ಹೇಳುತ್ತಿದ್ದ ಹಾಗೆ

ಅದೊಂದು ಒಳ್ಳೆಯ ಸಂಪ್ರದಾಯವಾಗಿತ್ತು ಮತ್ತು ........................

**ಮಾನ್ಯ ಉಪಸಭಾಧ್ಯಕ್ಷರು :** ಈ ಅಂಶವನ್ನು ಮಾನ್ಯ ಸದಸ್ಯರು ಈಗಾಗಲೇ ಒತ್ತಿ ಹೇಳಿದ್ದಾರೆ. ಯಾವುದೇ ಕೋಮಿನ ಇಚ್ಛೆಗೆ ವಿರುದ್ಧವಾಗಿ ವೈಯಕ್ತಿಕ ಕಾನೂನಿನಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು. ಆ ಅಂಶವನ್ನು ಸದನ ಪರಿಗಣಿಸುತ್ತದೆ. ಮುಂದಿನ ಅಂಶಕ್ಕೆ ಹೋಗಬಹುದು.

**ಸರ್ದಾರ್ ಬಿ.ಎಸ್. ಮಾನ್ :** ವಿವಾಹದ ಕಾನೂನಿನ ವಿಷಯಕ್ಕೆ ಬಂದಾಗ ಇಲ್ಲಿಯ ಕಾನೂನು ತುಂಬಾ ಕಟ್ಟುನಿಟ್ಟಾಗಿದೆ. ನನ್ನ ಸಹ ಸದಸ್ಯಮಿತ್ರ ಪ್ರಖ್ಯಾತ ನ್ಯಾಯಾಧೀಶರಾದ ಡಾ. ತೇಜ್‌ಚಂದ್ ಅವರ ಹೇಳಿಕೆಯನ್ನು ಈ ಸಂಬಂಧದಲ್ಲಿ ಉಲ್ಲೇಖಿಸಲು ಅವಕಾಶ ನೀಡಿ. ಅವರು ಈ ಬಗ್ಗೆ ತಮ್ಮದೇ ಆದಂತಹ ಸ್ವಚ್ಛ ಹಾಗೂ ಸ್ಪಷ್ಟವಾದ ಶೈಲಿಯಲ್ಲಿ ವಿವರಿಸಿದ್ದಾರೆ. ಇಲ್ಲಿ ಮತ್ತೊಂದು ಅಂಶವನ್ನು ಹೇಳಲು ಬಯಸುತ್ತೇನೆ. ಈ ಉಲ್ಲೇಖವು ಸ್ವತಃ ಸಿಖ್ಖರಲ್ಲದ, ವೃತ್ತಿಯಿಂದ ರೈತನಲ್ಲದ ಆದರೆ ಸಿಖ್ ಕಾನೂನು, ಪಂಜಾಬಿನ ಸಂಪ್ರದಾಯ ಹಾಗೂ ಆಚರಣೆಗಳ ಬಗೆಗೆ ಒಳ್ಳೆಯ ತಿಳುವಳಿಕೆ ಹೊಂದಿರುವ ವ್ಯಕ್ತಿಯ ಮಾತುಗಳು. ಅವರು ಹೇಳುವುದೇನೆಂದರೆ : "ಜಾಟರು ಅದರಲ್ಲಿಯೂ ಸಿಖ್ ಜಾಟರು ವಿವಾಹ ಸಂಬಂಧಿ ವಿಚಾರಗಳಲ್ಲಿ ತುಂಬಾ ಉದಾರಿಗಳು. ಬ್ರಾಹ್ಮಣ ಪಾರಮ್ಯವು ಪರಾಕಾಷ್ಠತೆಯಲ್ಲಿ ಇದ್ದಾಗಲೂ ಹಾಗೂ ಹಿಂದೂ ಸ್ಮೃತಿಗಳು ಅಂತರಜಾತೀಯ ವಿವಾಹಗಳನ್ನು ನಿಷೇಧಿಸಿ; ವಿವಾಹಕ್ಕೆ ಸಂಬಂಧಿಸಿದಂತೆ ಸುದೀರ್ಘವಾದ ವಿಧಿಯಾಚರಣೆಗಳನ್ನು ವಿಧಿಸಿದಾಗಲೂ ಜಾಟರು ಆ ಕಟ್ಟುನಿಟ್ಟಾದ ಕಾನೂನನ್ನು ಒಪ್ಪಿಕೊಳ್ಳುವ ಒಲವನ್ನು ತೋರಿಸಲಿಲ್ಲ. ಜಾಟರಲ್ಲಿ ವಿಧವಾ ವಿವಾಹದ ಸಂಪ್ರದಾಯ ಮೊದಲಿನಿಂದಲೂ ಇದೆ. ಕನಿಷ್ಠ ವಿಧಿಯಾಚರಣೆ ಇರುವ ಛಾದರ್–ಅಂದಾಜಿಯನ್ನು ಅಧಿಕೃತ ವಿವಾಹ ಸಂಪ್ರದಾಯದ ಒಂದು ಮಾದರಿ ಎಂದೇ ಪರಿಗಣಿಸಿದ್ದರು" ಇದು ಆಯ್ಕೆ ಸಮಿತಿಯ ಸದಸ್ಯರೂ, ಘನ ಪಂಡಿತರೂ ಆಗಿರುವ ನ್ಯಾಯಮೂರ್ತಿಯೊಬ್ಬರ ಅಭಿಪ್ರಾಯ. ಇದೇ ಅಂಶದ ಬಗ್ಗೆ ಇದೇ ವಾದಗಳನ್ನು ಮುಂದಿಟ್ಟುಕೊಂಡು ಅವರು ಆಯ್ಕೆ ಸಮಿತಿಯ ಸದಸ್ಯರಾಗಿದ್ದಾಗ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ. ಈ ಹಿಂದೂ ಕಾನೂನು ಮಸೂದೆಯಲ್ಲಿ ಬಾರದ ಶಿಫಾರಸ್ಸು ಮಾಡಿರುವ ವಿವಾಹ ಸಂಪ್ರದಾಯಗಳನ್ನು ಮಾತ್ರವೇ ನೀವು ಸಿಂಧುವೆಂದು ಪರಿಗಣಿಸಿಬಿಟ್ಟಲ್ಲಿ, ನೀವು ಪಂಜಾಬಿನಲ್ಲಿ ಸಿಖ್ಖರಲ್ಲಿ ಚಾಲ್ತಿಯಲ್ಲಿರುವ ಹಾಗೂ ಸಾಂಪ್ರದಾಯಿಕವಾಗಿರುವ ಹಲವಾರು ರೀತಿಯ ವಿವಾಹ ಕ್ರಮಗಳನ್ನು ಕೈಬಿಟ್ಟಂತಾಗುವುದು. ವಿಧಿಪೂರ್ವಕವಲ್ಲದ ಕರೇವಾ ವಿವಾಹ ಪದ್ಧತಿಯೂ ಪಂಜಾಬಿನಲ್ಲಿ ಸರ್ವೇಸಾಧಾರಣವಾಗಿ ಕಂಡುಬರುತ್ತದೆ.

**ಡಾ. ಅಂಬೇಡ್ಕರ್ :** ಯಾವ ವಿವಾಹ?

**ಸರ್ದಾರ್ ಬಿ.ಎಸ್. ಮಾನ್ :** ಕರೇವಾ ವಿವಾಹ. ಅದರಲ್ಲಿ ಹುಡುಗ ಹುಡುಗಿಯರು ಯಾರನ್ನೂ ಆಹ್ವಾನಿಸುವುದಿಲ್ಲ. ಪುರೋಹಿತರನ್ನೂ ಕರೆಯುವುದಿಲ್ಲ, ಯಾವ ವಿಧಿಯಾಚರಣೆಯನ್ನೂ ಆಚರಿಸುವುದಿಲ್ಲ. ಗ್ರಂಥ ಸಾಹೇಬವನ್ನಾಗಲೀ ಅಥವಾ ಅಗ್ನಿಯನ್ನಾಗಲೀ ಸಾಕ್ಷಿಯನ್ನಾಗಿ ಭಾವಿಸಿ ಪ್ರದಕ್ಷಿಣೆ ಮಾಡುವುದಿಲ್ಲ. ಸುಮ್ಮನೆ ಒಟ್ಟಿಗೆ ಕೂರುತ್ತಾರೆ. ಅವರಿಗೆ ಒಂದು ಛಾದರವನ್ನು ಹೊದಿಸುತ್ತಾರೆ. ಅದು ಕೂಡ ವಿವಾಹವೆನ್ನಿಸಿಕೊಳ್ಳುತ್ತದೆ. ಛಾದರ್–ಅಂದಾಜಿ ಎಂಬುದರ ಅರ್ಥವೂ ಇದೇ ಆಗಿದೆ.

**ಶ್ರೀ ಅಮೋಲಾಕ್ ಚಂದ್ (ಉತ್ತರ ಪ್ರದೇಶ) :** ಅದೊಂದು ಧಾರ್ಮಿಕ ವಿವಾಹವೇ?

**ಸರ್ದಾರ್ ಬಿ.ಎಸ್. ಮಾನ್ :** ಧರ್ಮದ ವ್ಯಾಖ್ಯೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಮನು ಧರ್ಮಕ್ಕೆ ತನ್ನದೇ ವ್ಯಾಖ್ಯೆ ನೀಡಿದ್ದ. ಅಂಬೇಡ್ಕರ್ ಅವರು ಧರ್ಮಕ್ಕೆ ಮತ್ತೊಂದು ವ್ಯಾಖ್ಯೆ ನೀಡಿದ್ದಾರೆ. ಈ ರೀತಿ ಧರ್ಮದ ವ್ಯಾಖ್ಯೆ ತ್ವರಿತವಾಗಿ ಬದಲಾಗುತ್ತಿರುವಾಗ ಅಂಥ ಧರ್ಮದ ನೆರಳಲ್ಲಿ ರಕ್ಷಣೆಯನ್ನು

ಪಡೆಯಲು ನಾನು ಸಿದ್ಧನಿಲ್ಲ. ಬದಲಾಗಿ ನನಗೆ ತುಂಬಾ ಸ್ಪಷ್ಟವಾಗಿರುವ ನಾನು ಬಹಳ ಕಾಲದಿಂದಲೂ ಆಚರಣೆಯಲಿಟ್ಟುಕೊಂಡಿರುವ ನನ್ನ ಜಾತ್ಯತೀತ ಕಾನೂನಿಗೇ ನಾನು ಅಂಟಿಕೊಳ್ಳಲು ಬಯಸುತ್ತೇನೆ.

**ಶ್ರೀ ಅಮೋಲಾಕ್ ಚಂದ್ :** ಅದು ಔರಸ ಸಂತಾನವಾಗುತ್ತದೆಯೆ?

**ಸರ್ದಾರ್ ಬಿ.ಎಸ್. ಮಾನ್ :** ಖಂಡಿತವಾಗಿಯೂ. ಡಾ. ಅಂಬೇಡ್ಕರರು ಕಳೆದ ಸಲದ ಭಾಷಣದಲ್ಲಾಡಿದ ಚುಚ್ಚುನುಡಿಯು ನನಗಿನ್ನೂ ನೆನಪಿದೆ. ಅವರು ಹೇಳಿದ್ದರು : ಪಂಜಾಬಿನ ಜನ ಮದುವೆಯ ಬಗ್ಗೆ ಮಾತನಾಡುವಾಗ ಅವರು ಬೇರೆ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಾರೆ ಅವು............

**ಮಾನ್ಯ ಉಪಸಭಾಧ್ಯಕ್ಷರು :** ೯ನೆಯ ಅಥವಾ ಇನ್ನಿತರ ಕಲಮುಗಳಾಗಲಿ ಅಥವಾ ಇತರ ವಿವಾಹ ಪದ್ಧತಿಗಳಾಗಲಿ ಸನ್ಮಾನ್ಯ ಸದಸ್ಯರಿಗೆ ಅನ್ವಯವಾಗುವುದಿಲ್ಲ ಎಂಬುದನ್ನು ಅವರ ಗಮನಕ್ಕೆ ತರುತ್ತೇನೆ. ಸಿಖ್ ಸಮುದಾಯದಲ್ಲಿ ಬೇರೆ ಬೇರೆ ವಿವಾಹ ಸಂಪ್ರದಾಯಗಳಿರಬಹುದು. ಮದುವೆ ಸಿಂಧುವಾಗಲು ಅವೇ ಸಾಕು. ಉಳಿದ ವಿಚಾರಗಳ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು?

**ಸರ್ದಾರ್ ಬಿ.ಎಸ್. ಮಾನ್ :** ನನ್ನ ಸಮಸ್ಯೆಯೆಂದರೆ, ಡಾ. ಅಂಬೇಡ್ಕರ್ ಅವರ ಕಳೆದ ಭಾಷಣವನ್ನು ಓದುತ್ತಿದ್ದಾಗ ಕರೇವಾ ವಿವಾಹಗಳಿಗೆ ಅವಕಾಶವಿರುವುದಿಲ್ಲ ಎಂಬ ಅವರ ಹೇಳಿಕೆಯನ್ನು ಗಮನಿಸಿದೆ. ಉಳಿದ ವಿಧಿಯಾಚರಣೆಯ ಬಗ್ಗೆ ೮ನೇ ಕಲಂ ಇದೆ. ಕರೇವಾ ವಿವಾಹ ಹಾಗೂ ಧಾರ್ಮಿಕವಾಗಿ ಶಾಸ್ತ್ರೋಕ್ತವಲ್ಲದ ಆಚರಣೆಯಲ್ಲಿರುವ ಮತ್ತೊಂದು ವಿವಾಹ ಸಂಪ್ರದಾಯದ ಉದಾಹರಣೆಯನ್ನು ನಾನು ನೀಡಬಲ್ಲೆ.

**ಮಾನ್ಯ ಉಪಸಭಾಧ್ಯಕ್ಷರು :** ಯಾವ ರೀತಿಯ ಮದುವೆಯೆ ಆಗಲಿ–ಛಾದರ ಹೊದಿಸುವುದೆ ಆಗಲಿ ಅಥವಾ ಮತ್ತೇನೆ ಆಗಲಿ ಅದನ್ನು ಬೇಡ ಎಂದು ಇಲ್ಲಿ ಹೇಳಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ದಯವಿಟ್ಟು ಅವಕಾಶ ಕೊಟ್ಟರೆ ನನ್ನ ವಿಚಾರವನ್ನು ಸ್ಪಷ್ಟಪಡಿಸುತ್ತೇನೆ. ಈ ರೀತಿಯ ಮದುವೆಯಲ್ಲಿ ಅವರು ಯಾವುದೇ ವಿಧಿಗಳನ್ನು ಆಚರಿಸುವುದಿಲ್ಲ. ಛಾದರ್ ಹೊದೆಸುವಂಥ ಕ್ಷುಲ್ಲಕ ಆಚರಣೆಯೂ ಇರುವುದಿಲ್ಲ. ಗಂಡು ಹೆಣ್ಣು ಇಬ್ಬರೂ ಹಳ್ಳಿಯಲ್ಲಿ ಒಟ್ಟಾಗಿ ಸಾಕಷ್ಟು ದೀರ್ಘಕಾಲ–ಅಂದರೆ ಗ್ರಾಮೀಣ ಸಮುದಾಯಕ್ಕೆ ಅವರು ಪತಿ ಪತ್ನಿ ಎಂಬ ನಂಬಿಕೆ ಬರುವಷ್ಟು ಕಾಲ ಬಾಳ್ವೆ ನಡೆಸಿದ್ದರೆ ಸಾಕು, ಯಾವುದೇ ವಿಧಿಯಾಚರಣೆಗಳು ನಡೆಯದಿದ್ದಾಗ್ಯೂ ಅವರನ್ನು ಗಂಡ ಹೆಂಡತಿಯೆಂದು ಪರಿಗಣಿಸಲಾಗುತ್ತದೆ. ಈ ಬಗ್ಗೆ ನ್ಯಾಯಾಲಯದ ತೀರ್ಪುಗಳೂ ಲಭ್ಯವಿದೆ.

**ಮಾನ್ಯ ಉಪ ಸಭಾಧ್ಯಕ್ಷರು :** ಸಾಕ್ಷ್ಯ ಅಧಿನಿಯಮದ ಪ್ರಕಾರ ಅದಕ್ಕೂ ಅನುಮತಿ ಇದೆ.

**ಸರ್ದಾರ್ ಬಿ.ಎಸ್. ಮಾನ್ :** ಇಲ್ಲ ಕ್ಷಮಿಸಬೇಕು. ಈ ಕಾನೂನು ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ನಿಲುವು ಸರಿಯಲ್ಲ. ಶಾಸ್ತ್ರೋಕ್ತವಲ್ಲದ ಅಥವಾ ಇನ್ನಾವುದೇ ವಿಧಿಯಾಚರಣೆಯ ವ್ಯಾಪ್ತಿಯಲ್ಲಿ ಬಾರದಿರುವ ಅಂಥ ಮದುವೆಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅಲ್ಲಿ ವಿಧಿಯಾಚರಣೆಗೆ ಮಹತ್ವ ನೀಡಲಾಗಿದೆ. ಒಂದಿಷ್ಟು ವಿಧಿಗಳನ್ನು ಆಚರಿಸಲೇಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅವರು ಎಷ್ಟು ದಿನ ಒಟ್ಟಿಗೆ ಸಂಸಾರ ನಡೆಸಿರಲೇಬೇಕು?

**ಸರ್ದಾರ್ ಬಿ.ಎಸ್. ಮಾನ್ :** ಮೊಕದ್ದಮೆಯೊಂದರಲ್ಲಿ ತೀರ್ಮಾನ ನೀಡಲಾಗಿದೆ. ಮತ್ತೆ ಡಾ. ಟೇಕ್‌ಚಂದ್ ಅವರನ್ನು ಉಲ್ಲೇಖಿಸುವುದಾದರೆ, "ಜಿಲ್ಲೆಗಳಲ್ಲಿ ರಿವಾಜ್–ಇ–ಆಮ್ಸ್ ಹಾಗೂ ನ್ಯಾಯಾಲಯಗಳಲ್ಲಿ ನಿರ್ಧರಿತ ಮೊಕದ್ದಮೆಗಳ ದಾಖಲೆಗಳನ್ನು ನೋಡಿದರೆ, ಯಾವುದೇ ವೈವಾಹಿಕ

ವಿಧಿಯಾಚರಣೆಗಳು ಇಲ್ಲದಿದ್ದಾಗ್ಯೂ ಗಂಡ ಹೆಂಡತಿ ಒಟ್ಟಿಗೆ ಬಹುಕಾಲ ವಾಸಿಸುತ್ತಿದ್ದರೆ ಸಾಕು, ವಿವಾಹವನ್ನು ಸಿಂಧುವೆಂದು ಭಾವಿಸಿರುವ ಅಸಂಖ್ಯಾತ ಉದಾಹರಣೆಗಳು ದೊರೆಯುತ್ತವೆ." ಇದು ಇಂದಿನ ಪಂಜಾಬಿನ ಕಾನೂನಿನ ಸ್ಥಿತಿ, ಗಂಡ ಹೆಂಡಿರು ಬಹುಕಾಲ ಒಟ್ಟಿಗೆ ಬದುಕು ನಡೆಸಿ ವಿವಾಹವಾದ ಈ...

**ಮಾನ್ಯ ಉಪಸಭಾಧ್ಯಕ್ಷರು :** ಎಷ್ಟು ಕಾಲ?

**ಸರ್ದಾರ್ ಬಿ.ಎಸ್. ಮಾನ್ :** ಕೆಲವು ಪ್ರಕರಣಗಳಲ್ಲಿ ೭ ವರ್ಷಗಳು ಎಂದು ಪರಿಗಣಿಸಲಾಗಿದೆ ಮತ್ತೆ ಕೆಲವು ಸಂದರ್ಭಗಳಲ್ಲಿ ೨೦ ವರ್ಷವೆಂದೂ ತೀರ್ಮಾನಿಸಲಾಗಿದೆ. ೪ ರಿಂದ ೫ ವರ್ಷಗಳೂ ಸಾಕು ಎಂದು ನಿರ್ಧರಿಸಿರುವ ಪ್ರಕರಣಗಳೂ ಉಂಟು. ಮದುವೆ ಸಿಂಧುವಾಗುವುದು ಗ್ರಾಮೀಣ ಸಮುದಾಯದಲ್ಲಿ. ಅವರು ಪ್ರತಿದಿನ ನಡೆದುಕೊಳ್ಳುವ ರೀತಿಯನ್ನು ಅವಲಂಬಿಸಿದೆಯೆ ಹೊರತು ಯಾವ ರೀತಿಯ ವಿಧಿಯಾಚರಣೆಯನ್ನು ಅಲ್ಲ. ಆದರೆ ಈ ರೀತಿಯ ವಿವಾಹವನ್ನು ಅಂಬೇಡ್ಕರ್ ಮಾನ್ಯ ಮಾಡುವುದಿಲ್ಲ. "ಈ ರೀತಿಯ ಅನೈತಿಕತೆಗೆ ನಾನು ಅವಕಾಶ ಮಾಡಿಕೊಡುವುದಿಲ್ಲ." ಎನ್ನುತ್ತಾರೆ. ಇವೆಲ್ಲಾ "ಸುಲಭಗೊಳಿಸಿದ ಮದುವೆಗಳು" ಎನ್ನುತ್ತಾರೆ. ಕೆಲವು ಅರ್ಥಹೀನ ವಿಧಿಯಾಚರಣೆಗಳನ್ನು ಗೌರವಿಸುವುದು ಸುಲಭವಾಗಬಹುದು. ಆದರೆ ನಾನು ಅವನ್ನು ಗೌರವಿಸಲಾರೆ. ಒಂದು ಮದುವೆಯ ಪಾವಿತ್ರ್ಯವು ಇಬ್ಬರ ಅನ್ಯೋನ್ಯತೆ ಮತ್ತು ಅವರ ಪರಸ್ಪರ ನಡವಳಿಕೆಯನ್ನು ಆಧರಿಸಬಹುದು. ಕೆಲವು ವಿಧಿಯಾಚರಣೆಗಳನ್ನು ಆಚರಿಸಿದ್ದಾರೆಯೊ ಇಲ್ಲವೊ ಎಂಬುದು ಅಮುಖ್ಯ.

**ರೆವರೆಂಡ್ ಡಿಸೋಜಾ (ಮದ್ರಾಸು) :** ಮಾಹಿತಿಗಾಗಿ ಕೇಳುತ್ತಿದ್ದೇನೆ. ಅಂತಹ ಮದುವೆಗಳು ಅಧಿಕೃತವೆನಿಸಿಕೊಳ್ಳಲು ಏನಾದರೂ ನಿರ್ಬಂಧಗಳು ಇವೆಯೆ? ಇಬ್ಬರಲ್ಲಿ ಒಬ್ಬರು ಈಗಾಗಲೇ ವಿವಾಹಿತರಾಗಿದ್ದರೂ, ಈಗ ಇನ್ನೊಬ್ಬರ ಜೊತೆಗೆ ವಾಸಿಸುತ್ತಿದ್ದಾರೆ ಎಂದ ಕೂಡಲೇ ಅವರ ಮದುವೆ ಅಧಿಕೃತವೆನಿಸಿಕೊಳ್ಳುತ್ತದೆಯೆ?

**ಸರ್ದಾರ್ ಬಿ.ಎಸ್. ಮಾನ್ :** ಆ ವಿಷಯಕ್ಕೆ ನಂತರ ಬರುತ್ತೇನೆ. ನಾನೀಗ ಮದುವೆಯ ವಿಧಾನದ ಬಗ್ಗೆ ಮಾತನಾಡುತ್ತೇನೆ.

**ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ವಿಷಯವನ್ನು ಸರಿಯಾಗಿ ಗ್ರಹಿಸಲಿಲ್ಲ. ಒಂದು ಮದುವೆಯನ್ನು ಅಧಿಕೃತವೆಂದು ಘೋಷಿಸುವಾಗ ರಕ್ತ ಸಂಬಧದ ಬಗ್ಗೆ ಕೆಲವು ಷರತ್ತುಗಳು ಈಡೇರಿರಬೇಕು ಅಥವಾ ಅವು ಯಾವುದೇ ನಿಷಿದ್ಧ ತಲೆಮಾರು ನಿಯಮವನ್ನು ಉಲ್ಲಂಘಿಸಬಾರದು ಅಥವಾ ಹೆಂಗಸಿಗೆ ಈಗಾಗಲೇ ಮದುವೆಯಾಗಿರಬಾರದು. ವಿವಾಹಿತ ಹೆಂಗಸು ಮತ್ತೊಬ್ಬನ ಜೊತೆಯಲ್ಲಿ ಬಾಳ್ವೆ ನಡೆಸಿದ ಮಾತ್ರಕ್ಕೆ ಆತ ಅವಳ ಗಂಡನಾಗುತ್ತಾನೆಯೆ? ಮದುವೆಯ ಎಲ್ಲಾ ಪೂರ್ವಾಪೇಕ್ಷಿತ ನಿಬಂಧನೆಗಳನ್ನೂ ಅದು ಪೂರ್ಣಗೊಳಿಸಬೇಕು. ಕೇವಲ ಒಬ್ಬನ ಜೊತೆ ವಾಸಿಸುತ್ತಿದ್ದರೆ ಸಾಲದು.

**ಸರ್ದಾರ್ ಬಿ.ಎಸ್. ಮಾನ್ :** ಸಾಮಾನ್ಯ ಕಾನೂನಿನಲ್ಲಿ ಉಳಿದ ನಿಯಮಗಳು ಪೂರ್ತಿಯಾಗದಿದ್ದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುತ್ತದೆ. ಅದು ಈ ಮಸೂದೆಯ ವ್ಯಾಪ್ತಿಯಲ್ಲಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಅದು ವಿವಾಹದ ವಿಧಾನವನ್ನು ಸೂಚಿಸುತ್ತದೆ. ಗಂಡು ಹೆಣ್ಣು ಒಟ್ಟಿಗೆ ಕೂತು ಅವರಿಗೆ ಛಾದರ ಹೊದಿಸುವಂಥ ಸರಳ ವಿವಾಹವೂ ಕೂಡ ಈ ಮಸೂದೆಯ ವ್ಯಾಪ್ತಿಗೆ ಬರುತ್ತದೆ. ನಿಷಿದ್ಧ ತಲೆಮಾರುಗಳು ಏನೇ ಆಗಿರಲಿ, ಮದುವೆಯನ್ನು ಸಿಂಧುವೆಂದು ಪರಿಗಣಿಸಬೇಕು ಎಂದು ಮಾನ್ಯ ಸದಸ್ಯರು ಒತ್ತಾಯಿಸುತ್ತಿದ್ದೀರೊ ಏನೊ ನನಗೆ ತಿಳಿಯುತ್ತಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಯಾವುದಾದರೂ ಒಂದು ಸಂಪ್ರದಾಯವು ಅನಾಗರಿಕವಾಗಿದ್ದರೆ,

ಸಾರ್ವಜನಿಕ ನೈತಿಕತೆಗೆ ಹಾಗೂ ಪ್ರಜ್ಞೆಗೆ ವಿರುದ್ಧವಾಗಿದ್ದಲ್ಲಿ ಆ ಸಂಪ್ರದಾಯವನ್ನು ಒಂದು ಕ್ಷಣವೂ ನಾನು ಸಹಿಸುವುದಿಲ್ಲ. ನೀವು ಎರಡು ರೀತಿಯ ವಿವಾಹವನ್ನು ಸೂಚಿಸುತ್ತಿದ್ದೀರಿ. ಒಂದು ಧಾರ್ಮಿಕವಾದುದು. ಮತ್ತೊಂದು ನಾಗರಿಕ ವಿವಾಹ. ನಾನು ಅವುಗಳಿಗಿಂತಲೂ ಭಿನ್ನವಾದ ವಿವಾಹದ ಉದಾಹರಣೆಯನ್ನು ನೀಡುತ್ತಿದ್ದೇನೆ. ನಿಮ್ಮ ವಿಶ್ಲೇಷಣೆಯಲ್ಲಿ ಕರೇವಾ ವಿವಾಹಕ್ಕೆ ಅವಕಾಶವಿದೆಯೆಂದು ತಿಳಿಸಿದಿರಿ. ಆದರೆ ಅಲ್ಲಿ ಒಂದಿಷ್ಟು ವಿಧಿಗಳಿವೆ. ಯಾವ ಕಲಾಪಗಳೂ ಹಾಗೂ ವಿಧಿಗಳೂ ಇಲ್ಲದೆ ಗಂಡು ಹೆಣ್ಣುಗಳು ದೀರ್ಘಕಾಲ ಪತಿಪತ್ನಿಯರಾಗಿ ಒಟ್ಟಿಗೆ ವಾಸಿಸುತ್ತಿರುವ ವಿವಾಹಗಳ ಬಗ್ಗೆ ಉಳಿದವರೊಂದಿಗೆ ವಿಚಾರ ಮಾಡಿದೆ. ಅಲ್ಲಿ ಅವಳು ವಿವಾಹಿತಳೆ ಮತ್ತು ಆಕೆಯ ಪತಿ ಜೀವಂತವಾಗಿದ್ದಾನೆಯೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಒಂದು ವೇಳೆ ಪತಿ ಜೀವಂತವಿದ್ದೂ ಅವರು ಬೇರೆಯಾಗಿದ್ದಾರೆಯೆ ಮತ್ತು ಅವಳು ಇನ್ನೂ ಪರಪುರುಷನ ಪತ್ನಿಯಾಗಿದ್ದಾಳೆಯೆ? ಹಾಗಾಗಿದ್ದಲ್ಲಿ ಅದು ಸಾಮಾನ್ಯ ಕಾನೂನುರೀತ್ಯ ಶಿಕ್ಷಾರ್ಹ ಅಪರಾಧ. ಈಗ ಪ್ರಶ್ನೆ ಇರುವುದು ಯಾವ ವಿಧಿಯಾಚರಣೆ ಹಾಗೂ ಕಲಾಪಗಳೂ ಇಲ್ಲದೆ ಮಾನ್ಯಗೊಂಡಿರುವ ಮದುವೆಗಳದ್ದು. ಅದನ್ನು ರದ್ದುಗೊಳಿಸುವ ಪ್ರಯತ್ನ ಇಲ್ಲಿ ನಡೆದಿದೆ. ಪಂಜಾಬಿನಲ್ಲಿ ಸೋದರ ಸಂಬಂಧಿಗಳನ್ನು ಮದುವೆಯಗುವ ಸಂಪ್ರದಾಯವಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಇದು ಸಾಕ್ಷ್ಯ ಅಧಿನಿಯಮದ ಕಾಯಿದೆಯ ನಿಬಂಧನೆಗಳನ್ನು ರದ್ದುಗೊಳಿಸುವುದಿಲ್ಲ ಮತ್ತು ಒಬ್ಬ ಪುರುಷ ಹಾಗೂ ಮಹಿಳೆ ಒಟ್ಟಿಗೆ ವಾಸ ಮಾಡುವುದು ವಿವಾಹವನ್ನು ಸಾಬೀತುಗೊಳಿಸಲು ಸಮರ್ಥ ಪುರಾವೆ ಎಂಬುದು ಕಾಯಿದೆಯ ಕಲಮಿಗೆ ವಿರುದ್ಧವಾಗಿಯೂ ಇಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಈ ಕಾನೂನನ್ನು ಜಾರಿಗೆ ತಂದ ಮೇಲೆ ಅಂಥ ಮದುವೆಗಳ ಸಿಂಧುತ್ವದ ಬಗ್ಗೆ ನ್ಯಾಯಾಲಯಗಳು ಅನುಮಾನ ವ್ಯಕ್ತಪಡಿಸುತ್ತವೆ. ಅದಕ್ಕೆ ಸೂಚಿಸಲಾಗಿರುವ ಒಂದೇ ಪರಿಹಾರವೆಂದರೆ ಆ ಮದುವೆಯನ್ನು ನೋಂದಾಯಿಸಬೇಕೆಂಬುದು. ಕಾನೂನು ಮಂತ್ರಿಗಳು ಶಾಸ್ತ್ರೋಕ್ತವಾಗಿ ನಡೆಯದೆ, ಕೇವಲ ದೀರ್ಘಕಾಲ ಒಟ್ಟಿಗೆ ಬದುಕುವ ಮೂಲಕ ಹಾಗೂ ಪರಸ್ಪರ ನಡವಳಿಕೆಯ ಮೂಲಕ ಮದುವೆಯಾದವರನ್ನು ಗಂಡ ಹೆಂಡತಿಯರನ್ನಾಗಿ ನೋಂದಣಿ ಕಛೇರಿಗೆ ಹೋಗಬೇಕಾಗಿಲ್ಲ ಎಂದರೆ ನನ್ನ ಆತಂಕ ಇಲ್ಲವಾಗುವುದು.

**ಶ್ರೀ ತ್ಯಾಗಿ :** ಇಬ್ಬರೂ ಒಪ್ಪಿಕೊಳ್ಳಬೇಕು.

**ಸರ್ದಾರ್ ಬಿ.ಎಸ್. ಮಾನ್ :** ಖಂಡಿತಾ, ಗಂಡ ಹೆಂಡತಿ ಪರಸ್ಪರ ಸಮ್ಮತಿಸಿರಲೇಬೇಕು. (ಅಡಚಣೆ) ನನ್ನ ಗೆಳೆಯ ಶ್ರೀ ಯಶವಂತರಾಯ್ ಅಂಥ ಪ್ರಕರಣಗಳು ಜಾಟ್ ಸಿಖ್ಖರಲ್ಲಿ ತುಂಬಾ ಸಾಮಾನ್ಯವೇ ಎಂದು ಕೇಳುತ್ತಿದ್ದಾರೆ. ಅವರಲ್ಲಿ, ಹಾಗೂ ಪರಿಶಿಷ್ಟ ಜಾತಿಯವರಲ್ಲಿ ವಿಶೇಷವಾಗಿ ಪಂಜಾಬಿನಲ್ಲಿರುವ ಅವರ ಜಾತಿಯವರಲ್ಲಿ ಸಾಮಾನ್ಯ.

ಈಗಿನ ಮಸೂದೆಯ ಮುಖ್ಯ ಉದ್ದೇಶ ಕ್ರೋಡೀಕರಣ. ಕ್ರೋಡೀಕರಣ ಮಾಡುವುದಕ್ಕೆ ಒಂದಿಷ್ಟು ಕಾನೂನು ಅಸ್ತಿತ್ವದಲ್ಲಿರಬೇಕು. ನಾವು ಪ್ರಾಮಾಣಿಕರಾಗಿದ್ದರೆ ಹಾಗೂ ಕ್ರೋಡೀಕರಣವಾಗಲೇಬೇಕೆಂದು ನಿಜವಾಗಿ ಬಯಸಿದ್ದಲ್ಲಿ, ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಸೇರಿಸಿಕೊಳ್ಳಬೇಕು. ಆದರೆ, ಪ್ರಸಕ್ತ ಮಸೂದೆಯಲ್ಲಿ ನಡೆಯುತ್ತಿರುವ ಕ್ರೋಡೀಕರಣ ಬರಿಯ ಕ್ರೋಡೀಕರಣವಲ್ಲ. ಸಿಖ್ಖರೂ ಹಾಗೂ ಪಂಜಾಬಿನ ಉಳಿದ ರೈತರ ಪಾಲಿಗೆ ಇದು ತಮ್ಮ ಕಾನೂನುಗಳನ್ನು ಬಹಿಷ್ಕರಿಸುತ್ತಿರುವ ಮಸೂದೆಯಾಗಿದೆ. (ಸದಸ್ಯರೊಬ್ಬರು:– ಮಾರ್ಪಾಡು) ಅಥವಾ ಮೂಲ ಕಾನೂನುಗಳು ಸಂಪೂರ್ಣವಾಗಿ ಕಳೆದೇ ಹೋಗಿ, ಪೂರ್ತಿಯಾಗಿ ಪರಕೀಯವಾದ ಮತ್ತು ಹಲವು ವಿಧದಲ್ಲಿ ಅಸಹ್ಯಕರವಾದ ಬದಲಾವಣೆಗಳಾಗಿವೆ. ಜೊತೆಗೆ ಅದನ್ನು

ನಮ್ಮ ಮೇಲೆ ಬಲವಂತವಾಗಿ ಹೇರಲಾಗುತ್ತಿದೆ. ವೋಲ್ಟೇರ್ ಹೇಳುತ್ತಾರೆ : "ಒಂದು ರಾಜ್ಯ ಗಾತ್ರದಲ್ಲಿ ವಿಶಾಲವಾದಷ್ಟು ವಿವಿಧ ಜನರಿಂದ ಕೂಡಿದ್ದಾಗ, ಎಲ್ಲವನ್ನೂ ಒಂದೇ ಒಂದು ಕಾನೂನಿನಡಿಯಲ್ಲಿ ಒಗ್ಗೂಡಿಸುವುದು ಕಷ್ಟ." ಕೇವಲ ಎರಡು ದಿನಗಳ ಹಿಂದೆ ಪ್ರಧಾನ ಮಂತ್ರಿಯವರು ಭಾರತದಲ್ಲಿ ಒಂದು ರಾಷ್ಟ್ರೀಯ ಸಾಂಪ್ರದಾಯಿಕ ಉಡುಪು ಏಕಿಲ್ಲ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಮಧ್ಯ ಏಷ್ಯಾದವರೆಗೆ ಬೇರೆ ಬೇರೆ ಜನ ಬೇರೆ ಬೇರೆ ಸಂಪ್ರದಾಯಕ್ಕೆ ಒಗ್ಗಿಹೋಗಿದ್ದಾರೆ. ಹಾಗಾಗಿ ಒಂದು ರಾಷ್ಟ್ರೀಯ ಉಡುಪನ್ನು ಹೊಂದುವುದು ಕಷ್ಟ. ಭೌತಿಕ ಉಡುಪಿಗೆ ಅನ್ವಯವಾಗುವ ಸತ್ಯ ನ್ಯಾಯಿಕ ಉಡುಪಿಗೂ–ಅಂಬೇಡ್ಕರ್ ಸಿದ್ಧಪಡಿಸಲು ಹೊರಟಿರುವ ನ್ಯಾಯಿಕ ಉಡುಪಿಗೂ–ಅನ್ವಯಿಸುತ್ತದೆ. ಈ ಹಿಂದೆ ಇದೇ ಪ್ರಯತ್ನ ನಡೆದಿತ್ತು. ಆದರೆ ಅದು ಸೂಕ್ತವಲ್ಲ ಎನ್ನುವ ಕಾರಣಕ್ಕಾಗಿ ಕೈಬಿಡುವ ಕಾಲವಾಗಿತ್ತು. ಸಾಂಪ್ರದಾಯಿಕ ಕಾನೂನಿನ ತತ್ವಗಳನ್ನು ನೆನಪಿಡಿ ೧೮೭೨ರಿಂದ ಬಹುದೀರ್ಘಕಾಲದಿಂದ ಈ ಕಾನೂನು ಜಾರಿಯಲ್ಲಿದೆ. ಈಗ ಇದ್ದಕ್ಕಿದ್ದಂತೆ ಅಧಿವೇಶನದ ಕೊನೆಯಲ್ಲಿ ಅಂಥ ಕ್ರಾಂತಿಕಾರಿಯೂ ಅಲ್ಲದ, ನಮಗೆ ಸಂಪೂರ್ಣವಾಗಿ ಹೊಸತಾದ ಹಾಗೂ ಪ್ರತಿಗಾಮಿಯಾದ ಕಾನೂನನ್ನು ಅದರ ಪರಿಣಾಮಗಳೇನು ಎನ್ನುವುದು ನಮಗೆ ಸರಿಯಾಗಿ ಅರ್ಥವಾಗದಿದ್ದಾಗ್ಯೂ ಅದನ್ನು ಸ್ವೀಕರಿಸುವಂತೆ ನಮ್ಮನ್ನು ಒತ್ತಾಯಿಸಲಾಗುತ್ತಿದೆ. ನನಗಂತೂ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಏಕೆಂದರೆ, ವಾರಸುದಾರಿಕೆ, ವಿವಾಹ, ವಿಚ್ಛೇದನ, ಮಹಿಳೆ ಆಸ್ತಿಹಕ್ಕು, ವರದಕ್ಷಿಣೆ ಇವುಗಳಿಗೆ ಸಂಬಂಧಿಸಿದಂತೆ ಬಹುಕಾಲದಿಂದ ಚಾಲ್ತಿಯಲ್ಲಿರುವ ಸತ್ಸಂಪ್ರದಾಯವನ್ನು ನನ್ನ ಸಾಮಾಜಿಕ ಸಂರಚನೆಯೂ ಆಧರಿಸಿದೆ. ಕಾನೂನಿನ ಎಲ್ಲಾ ಗ್ರಾಹ್ಯ ಅಂಶಗಳೂ ಅದರಲ್ಲಿವೆ. ಅದರ ಪ್ರಕಾರ,

"ಸಂಬಂಧಪಟ್ಟ ಪಕ್ಷಕಾರರಿಗೆ ಅನ್ವಯವಾಗುವ ಯಾವುದೇ ಸಂಪ್ರದಾಯವಾಗಲಿ, ನ್ಯಾಯಕ್ಕೆ, ಸಮಾನತೆಗೆ ಹಾಗೂ ಅಂತಃಸಾಕ್ಷಿಗೆ ವ್ಯತಿರಿಕ್ತವಾಗಿರದೆ, ಈ ಮಸೂದೆ ಅಥವಾ ಇನ್ನಾವುದೇ ಅಧಿನಿಯಮದಿಂದ ರದ್ದಾಗದೆ ಅಥವಾ ಬದಲಾವಣೆ ಆಗದಿದ್ದ ಪಕ್ಷದಲ್ಲಿ ಮತ್ತು ಅದನ್ನು ಸಮರ್ಥ ಅಧಿಕಾರಿಯು ಅಸಿಂಧುವೆಂದು ಘೋಷಿಸದಿದ್ದಲ್ಲಿ ಅದು ಸಾಂಪ್ರದಾಯಿಕ ಕಾನೂನು ಎನಿಸಿಕೊಳ್ಳುತ್ತದೆ."

ಆಗ ಇಂಥದ್ದೇ ಪ್ರಯತ್ನವನ್ನು ಮಾಡಿದಾಗ ಅಂಬೇಡ್ಕರ್‌ರಷ್ಟೇ ಮೇಧಾವಿಗಳಾಗಿದ್ದ ಆಗಿನ ಕಾನೂನು ಪಾಲಕರಾಗಿದ್ದ ಸರ್ ಜಾರ್ಜ ಕ್ಯಾಂಪ್‌ಬೆಲ್ ಈ ಮಾತುಗಳನ್ನು ಹೇಳಿದ್ದರು. ಅದು ಇಂದಿಗೂ ಅನ್ವಯವಾಗುತ್ತದೆ. ಹಿಂದೂ ಹಾಗೂ ಮುಸ್ಲಿಂ ಕಾನೂನು ಸಂಬಂಧಪಟ್ಟ ಪಕ್ಷಕಾರರಿಗೆ ಅನ್ವಯವಾಗಬೇಕೆಂದು ಮಸೂದೆ ಬಯಸಿತು. ಸೂಕ್ತ ತಿದ್ದುಪಡಿಯನ್ನು ತರಲಾಯಿತು. ತಿದ್ದುಪಡಿಯಾದ ೧೮೭೨ರ ಕಾಯಿದೆಯ ೫ನೇ ಭಾಗದ ಪ್ರಕಾರ ಸಾಂಪ್ರದಾಯಿಕ ಕಾನೂನು ಇಲ್ಲದಿದ್ದಾಗ ಮಾತ್ರ ಹಿಂದೂ ಅಥವಾ ಮುಸ್ಲಿಂ ಕಾನೂನನ್ನು ಅನ್ವಯಿಸಬೇಕು. ಶ್ರೀ ಕ್ಯಾಂಪ್‌ಬೆಲ್ ಹೇಳುತ್ತಾರೆ:

"ಪರಿಷತ್ ಮಂಡಲಿಯು ಈಗ ಸೂಚಿಸಿರುವ ತಿದ್ದುಪಡಿಯನ್ನು ಸ್ವೀಕರಿಸಿದರೆ, ಮಸೂದೆಯ ಬಗ್ಗೆ ಇರುವ ಹೆಚ್ಚಿನ ಆಕ್ಷೇಪಗಳನ್ನು ತೊಡೆದು ಹಾಕಿದಂತಾಗುತ್ತದೆ............ ಅದನ್ನು ಜಾರಿಗೆ ತಂದರೆ.......... ತೀರ್ಪು ನೀಡುವಾಗ ಪಕ್ಷಕಾರರು ಮುಸ್ಲಿಮರಾಗಿದ್ದ ಪ್ರಕರಣದಲ್ಲಿ ಮುಸ್ಲಿಂ ಕಾನೂನನ್ನು ಹಾಗೂ ಹಿಂದೂಗಳಾಗಿದ್ದ ಸಂದರ್ಭದಲ್ಲಿ ಹಿಂದೂ ಕಾನೂನನ್ನು ಪರಿಗಣಿಸಬೇಕು. ಕಾನೂನು ಮಾರ್ಪಾಡಾಗಿದ್ದಾಗ ಅಥವಾ ಕಾನೂನಾತ್ಮಕ ಅಧಿನಿಯಮಿತಿಯ ಮೂಲಕ ರದ್ದಾಗಿದ್ದಾಗ ಅಥವಾ ಕಾಯಿದೆಯ ನಿಬಂಧನೆಗಳಿಗೆ ವಿರುದ್ಧವಾಗಿದ್ದಾಗ ಮಾತ್ರ ಮೇಲಿನಂತೆ ನಡೆಯಲಾಗುವುದಿಲ್ಲ. ಹಿಂದೂ ಹಾಗೂ ಮುಸ್ಲಿಂ ಕಾನೂನುಗಳೆರಡರಿಂದಲೂ ಆರಿಸಿಕೊಂಡಿದ್ದ ಕೆಲವು ಸರಳ ಕಾನೂನುಗಳು ಪಂಜಾಬಿನಲ್ಲಿ ಸ್ವಲ್ಪಮಟ್ಟಿಗೆ

ಪ್ರಚಲಿತದಲ್ಲಿತ್ತು ಎನ್ನುವುದನ್ನು ಒಪ್ಪಿಕೊಳ್ಳಲು ಅವರೂ ಸಿದ್ಧರಿದ್ದರು. ಆದರೆ, ೧೮೭೨ರಲ್ಲಿ ಜಾರಿಯಾದಂಥ ಕಾಯಿದೆಗಳು ಪಂಜಾಬಿನಲ್ಲಿ ಅದೇ ಪ್ರಾಂತ್ಯದ ಸರಳವಾದ ಕಾನೂನುಗಳನ್ನು ಜಾರಿಗೆ ತರುವ ಬದಲು ಹಿಂದೂ ಮತ್ತು ಮುಸ್ಲಿಂ ಲಿಖಿತ ಕಾನೂನಿನ ತೊಡಕುಗಳನ್ನು ಹಾಗೂ ದೇಶದಾದ್ಯಂತ ಹೊರಬಂದಿರುವ ನ್ಯಾಯಾಲಯದ ತೀರ್ಪುಗಳನ್ನು ಆಧರಿಸಿದ ಕೇಸ್ ಲಾಗಳ ಬೃಹತ್ ಹೊತ್ತಿಗೆಯನ್ನೇ ಪಂಜಾಬಿಗೆ ತರುತ್ತದೆ ಎಂಬ ಅರಿವು ಅವರಿಗೆ ತುಂಬಾ ಸ್ಪಷ್ಟವಾಗಿತ್ತು. ಆ ಬಗ್ಗೆ ಅವರಿಗೆ ತುಂಬಾ ಗಂಭೀರವಾದ ಗಾಬರಿಗಳಿದ್ದವು. ಏಕೆಂದರೆ ಇದು ಪಂಜಾಬಿನ ಕಾನೂನು ಅಲ್ಲ ಮತ್ತು ಎರಡನೆಯದಾಗಿ, ವಕೀಲರ ಆಗಮನಕ್ಕೆ ಇದು ಅವಕಾಶ ಮಾಡಿಕೊಡುತ್ತದೆ. ಪಂಜಾಬಿನಲ್ಲಿ ೧೦ರಲ್ಲಿ ಒಬ್ಬರು, ಅಷ್ಟೇ ಏಕೆ ೧೦೦ರಲ್ಲಿ ಒಬ್ಬರು ಕೂಡ ಹಿಂದೂ ಮತ್ತು ಮುಸ್ಲಿಂ ಕಾನೂನಿನ ಕಟ್ಟುನಿಟ್ಟಾದ ನಿಬಂಧನೆಗಳಿಗೆ ಒಳಪಟ್ಟಿರಲಿಲ್ಲ. ಆಗ ಕ್ರೋಡೀಕರಣದ ಪ್ರಯತ್ನ ಮಾಡಲಾಗಿತ್ತು. ಆದರೆ ಕ್ರೋಡೀಕರಣದಿಂದ ಕಾನೂನು ಅಮಾನ್ಯವಾಗುತ್ತದೆ. ಆದರೆ ಸಂಪ್ರದಾಯ ಅಷ್ಟು ಅಮಾನ್ಯವಲ್ಲ. ಕ್ರೋಡೀಕರಣ ಮತ್ತು ಕಾನೂನು ಮಾಡುವುದು ಎರಡೂ ಕೂಡ ಮೇಲಿನಿಂದ ಆಗುವ ಪ್ರಕ್ರಿಯೆ. ಆದರೆ ಸಂಪ್ರದಾಯವು ಒಂದು ಸಮುದಾಯದ ಜೀವಂತ ಪರಿಸ್ಥಿತಿ ಹಾಗೂ ವಿವೇಕದ ಪ್ರತೀಕವಾಗಿದೆ. ಸಾಂಪ್ರದಾಯಿಕ ಕಾನೂನು ಬೆಳೆಯಲು ಹಾಗೂ ಬಲಿಷ್ಠವಾಗಲು ಅದು ಸಮುದಾಯದ ತಳಮಟ್ಟದಿಂದ ಮೇಲ್ಮುಖವಾಗಿ ಬೆಳಯುತ್ತಾ ಹೋಗುವುದೇ ಕಾರಣ. ಅಭಿವೃದ್ಧಿಯನ್ನು ಸೀಮಿತಗೊಳಿಸುವ ಲಿಖಿತ ಕಾಯಿದೆಯಂತೆ ಇದು ಪ್ರತಿಗಾಮಿ ಸ್ವರೂಪದ್ದಲ್ಲ. ಸಾಂಪ್ರದಾಯಿಕ ಕಾನೂನು ಒಂದು ಪರಿಸ್ಥಿತಿಯ ಉತ್ತಮ ಅಂಶಗಳನ್ನೂ ಹಾಗೂ ಪ್ರಾಯೋಗಿಕತೆಯನ್ನೂ ಒಳಗೊಂಡಿರುತ್ತದೆ."

ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಕ್ರೋಡೀಕರಣವನ್ನು ನಂಬುವ ಜನ ಅದರ ಅಪಾಯವನ್ನೂ ಅರಿತಿರಬೇಕು. ಅದು ಬೆಳವಣಿಗೆಗೆ ಅಡಚಣೆ ಉಂಟುಮಾಡುತ್ತದೆ. ಜನರ ಬದಲಾಗುತ್ತಿರುವ ಬೇಡಿಕೆ ಹಾಗೂ ಆಶಯಗಳಿಗೆ ತಕ್ಕಂತೆ ಬದಲಾಗುತ್ತಾ ಹೋಗುವ ಸಮುದಾಯದ ಇಚ್ಛಾ ಸ್ವಾತಂತ್ರ್ಯ ಮತ್ತು ತೀರ್ಮಾನ ಸ್ವಾತಂತ್ರ್ಯಗಳಿಗೆ ಅದು ಅಡ್ಡಿಯಾಗುತ್ತದೆ. ಡಾ. ಅಂಬೇಡ್ಕರ್ ಅವರ ಸಾಮರ್ಥ್ಯದ ಬಗ್ಗೆ ಪೂರ್ಣ ಗೌರವವನ್ನು ಇಟ್ಟುಕೊಂಡೇ ನ್ಯಾಯಿಕ ಪೋಷಾಕನ್ನು ರೂಪಿಸುವ ಅವರ ಪ್ರಯತ್ನದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಉತ್ತರದಿಂದ ದಕ್ಷಿಣದವರೆಗೆ ಎಲ್ಲರ ಖಾಯಿಲೆಗೆ ಉತ್ತರವಾಗಬಲ್ಲ ಒಂದು ಅಮೃತಧಾರೆಯನ್ನು ಸೃಷ್ಟಿಸಲು ಹೊರಟಿದ್ದಾರೆ. ಅವರ ಬಗ್ಗೆ ಎಲ್ಲಾ ರೀತಿ ಗೌರವಾದರಗಳನ್ನು ಇಟ್ಟುಕೊಂಡೇ ಅವರು ರೂಪಿಸಿ ಸಿದ್ಧಪಡಿಸುತ್ತಿರುವ ಈ ಉಡುಪು ದಕ್ಷಿಣದವರಿಗೆ ತೀರಾ ಸಡಿಲವಾಗಿಬಿಡುತ್ತದೆ ಇಲ್ಲವೇ ಉತ್ತರದವರಿಗೆ ತುಂಬಾ ಬಿಗಿಯಾಗಿಬಿಡುತ್ತದೆ ಎಂಬುದನ್ನು ಹೇಳಲೇಬೇಕಾಗುತ್ತದೆ. ಅವರು ನನ್ನ ಗಾತ್ರವನ್ನು ಸಮಾಜದ ಗಾತ್ರವನ್ನು ಮತ್ತು ಆವಶ್ಯಕತೆಯನ್ನು ನೋಡಬೇಕು. ಅದಕ್ಕೆ ತಕ್ಕಂತೆ ಉಡುಪನ್ನು ರೂಪಿಸಿ ಸಿದ್ಧಪಡಿಸಬೇಕು. ನಮಗೆ ಸಿದ್ಧ ಉಡುಪುಗಳಾಗಲಿ, ಸಿದ್ಧ ಔಷಧಿಗಳಾಗಲಿ, ಪ್ರತಿಯೊಂದು ಕಾಯಿಲೆಗೂ ಆಗುವ ಒಂದು ರೀತಿಯ ಅಮೃತ ಧಾರೆಯಾಗಲೇಬೇಕಿಲ್ಲ. ದಯಮಾಡಿ ಸಿಖ್ಖರ ಮೇಲೆ, ಪರಕೀಯವಾದ ಮತ್ತು ಅವರ ಅಂತಃಕರಣಕ್ಕೆ ಹೊಂದಿಕೆಯಾಗದ ಯಾವುದೇ ಕಾನೂನನ್ನು ಹೇರಬೇಡಿ ಎಂದು ವಿನಂತಿಸಿಕೊಳ್ಳುತ್ತೇನೆ. ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅದನ್ನು ಎಂದಿಗೂ ಗೌರವಿಸುವುದಿಲ್ಲ. ಏಕೆಂದರೆ, ಪ್ರಾಚೀನ ಬ್ರಾಹ್ಮಣರ ಬಗ್ಗೆ ನನಗೆ ಎಂದಿಗೂ ಗೌರವವಿರಲಿಲ್ಲ ಮತ್ತು ಅದಕ್ಕಿಂತ ಹೆಚ್ಚಾಗಿ ಆಧುನಿಕ ಬ್ರಾಹ್ಮಣರ ಬಗ್ಗೆಯೂ ನನಗೆ ಗೌರವವಿಲ್ಲ.

***ಪಂಡಿತ ಮಾಳವೀಯ :** ಹಿಂದೂ ಸಂಹಿತೆಯ ಮಸೂದೆಯನ್ನು ಕುರಿತು ನಾನು ಅಧಿವೇಶನದ

* ೧೯೫೧ರ ಸೆಪ್ಟಂಬರ್ ೧೯೫೧ ಸದನದ ಚರ್ಚೆ. ಸಂಪುಟ XV, ಭಾಗವು ಪುಟಗಳು ೨೮೭೨ – ೯೬

ಸಮಯವನ್ನು ಯಾವ ಹಂತದಲ್ಲೂ ಬಳಸಿಕೊಂಡಿಲ್ಲ. ನಾನು ಈವರೆಗೂ ನಮ್ಮ ಮುಂದಿರುವ ಹಿಂದೂ ಸಂಹಿತೆಯ ಮಸೂದೆಯನ್ನು ರೂಪಿಸುವಂಥ ವಿಚಾರದ ಬಗ್ಗೆ ನಾವು ಗಂಭೀರವಾಗಿ ಗಮನಹರಿಸಬೇಕಾದ ದುರ್ದಿನ ಬಾರದಿರಲಿ ಎಂದು ನಾನು ಯಾವಾಗಲೂ ಹಾರೈಸುತ್ತಿದ್ದೆ. ಈ ಸದನದ ಒಳಗೆ ಹಾಗೂ ಹೊರಗಿನ ಕೆಲವರು, ಈ ಮಸೂದೆಯನ್ನು ಜಾರಿಗೆ ತರುವ ಬಗ್ಗೆ ತುಂಬಾ ಕಾತುರರಾಗಿರುವುದು ನನ್ನನ್ನೂ ಸೇರಿದಂತೆ ಇಲ್ಲಿರುವ ಹೆಚ್ಚಿನವರಿಗೆ ತಿಳಿದಿದೆ. ಆದರೆ ಭಾರತದ ಉದ್ದಗಲಕ್ಕೂ ಪ್ರಧಾನವಾಗಿ ಕಂಡುಬರುತ್ತಿರುವ ಜನಾಭಿಪ್ರಾಯವನ್ನು ಕಡೆಗಣಿಸಲಾಗುವುದಿಲ್ಲ ಎಂದು ಭಾವಿಸಿದ್ದೇವೆ. ಮಸೂದೆಯ ಬಗ್ಗೆ ಯೋಜನೆ ಮಾಡುತ್ತಿದ್ದಾಗಲೂ ಈ ನೆಲದ ಜನರ ಸಾಮಾಜಿಕ ಬಂಧವನ್ನೇ, ಅಡಿಪಾಯವನ್ನೇ ಅಲ್ಲಾಡಿಸುವ ಮಸೂದೆಯನ್ನು ಶಾಸನವೆಂದು ಮಾಡಲು ಗಂಭೀರವಾದ ಪ್ರಯತ್ನ ನಡೆಯುವುದಿಲ್ಲ. ಅದರಲ್ಲೂ ಇಷ್ಟು ಅವ್ಯವಸ್ಥಿತವಾಗಂತೂ ನಡೆಯುವುದಿಲ್ಲ ಎಂದು ಭಾವಿಸಿದ್ದೆ. ಈ ದೇಶದಲ್ಲಿ ಜನ ಅದರ ಪರವಾಗಿಯೊ, ವಿರೋಧವಾಗಿಯೊ ಹೋರಾಡುತ್ತಲೇ ಇದ್ದಾರೆ. ಅಂಥ ಕಾಯಿದೆಯನ್ನು ಜಾರಿಗೆ ತರುವ ಸಾಧ್ಯತೆಯ ಬಗ್ಗೆ ಬೇಸರಗೊಂಡಿರುವ ಹಲವರು, ಮಸೂದೆಯ ವಿರುದ್ಧ ವ್ಯಾಪಕವಾದ ವಿರೋಧವನ್ನು, ಅತೃಪ್ತಿಯನ್ನು ಸರ್ಕಾರದ ಗಮನಕ್ಕೆ ತರಲು ತಮ್ಮ ಕೈಲಾದದ್ದನ್ನೆಲ್ಲಾ ಮಾಡುತ್ತಿದ್ದಾರೆ. ಆದರೆ ನಾನು ವೈಯಕ್ತಿಕವಾಗಿ ಎಲ್ಲಿಯೂ ಒಮ್ಮೆಯೂ ಸಾರ್ವಜನಿಕ ವೇದಿಕೆಯಲ್ಲಿ ಮಾತನಾಡಿಲ್ಲ ಅಂಥ ಚಳುವಳಿಯಲ್ಲಿ ಒಮ್ಮೆಯೂ ಭಾಗವಹಿಸಿಲ್ಲ. ತಾತ್ವಿಕವಾಗಿ ಅಷ್ಟೊಂದು ದೋಷಯುಕ್ತವಾಗಿರುವ, ವಿವರಗಳಲ್ಲಿ ಅಷ್ಟೊಂದು ಘೋರವಾಗಿರುವ, ಔಚಿತ್ಯಪೂರ್ಣವಲ್ಲದ ಕಾಯಿದೆಯನ್ನು ಸದನದ ಮುಂದೆ ಗಂಭೀರವಾಗಿ ಮಂಡಿಸುವುದಿಲ್ಲ ಎಂಬ ನಂಬಿಕೆ ಹಾಗೂ ನಿರೀಕ್ಷೆಯಲ್ಲಿದ್ದೆ. ಆದರೆ ಈಗ ಸದನದಲ್ಲಿ ಅದು ತನ್ನ ಪ್ರಯಾಣದ ಕೊನೆಯ ಹಂತದಲ್ಲಿರುವಾಗ ೩೦೦ ಮಿಲಿಯನ್ ಜನರ ಬದುಕಿಗೆ ತೊಂದರೆ ಮಾಡಬಲ್ಲ ವಿವಾದಾತ್ಮಕ ಕ್ರಮವೊಂದನ್ನು ತೆಗೆದುಕೊಳ್ಳಲಾಗಿದೆ. ಅದನ್ನು ಜಾರಿಗೆ ತರುವ ಪ್ರಯತ್ನ ಕೂಡ ನಡೆಯುತ್ತಿದೆ. ಮತ್ತೆ ಅದನ್ನು ಕಾನೂನು ಸಂಗ್ರಹದಲ್ಲಿ ಸೇರಿಸಿ, ಅದಕ್ಕೆ ಬಲವಾದ ವಿರೋಧವನ್ನು ಎದುರುಹಾಕಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಈ ಮಸೂದೆಯನ್ನು ಬೆಂಬಲಿಸುವ ಜನವೇ ಈ ದೇಶದಲ್ಲಿಲ್ಲ ಎಂದು ನಾನು ಹೇಳುತ್ತಿಲ್ಲ (ಪಂಡಿತ ಮೈತ್ರ: ಕೆಲವೇ ಕೆಲವರಿದ್ದಾರೆ). ಸಾಮಾಜಿಕ ಹಿತದೃಷ್ಟಿಯಿಂದ ಇಂಥ ಕಾನೂನನ್ನು ಜಾರಿಗೆ ತರಬೇಕೆಂದು ಪ್ರಾಮಾಣಿಕವಾಗಿ ನಂಬುವ ಜನರೇ ಭಾರತದಲ್ಲಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರೊಂದಿಗೆ ನನ್ನ ಜಗಳವಿಲ್ಲ. ನಾನೊಬ್ಬ ಹಿಂದೂ. ಅಸಹನೆ, ಅದು ಬೌದ್ಧಿಕವಾಗಿರಬಹುದು ಅಥವಾ ಸೈದ್ಧಾಂತಿಕವಾಗಿರಬಹುದು ಅದು ನನ್ನಲ್ಲಿ ಬರಲು ಸಾಧ್ಯವಿಲ್ಲ. ಹಾಗಾಗಿ ಈ ದೇಶದಲ್ಲಿ ಈ ರೀತಿಯ ಕ್ರಮವನ್ನು ಅಥವಾ ಇದಕ್ಕಿಂತ ಕ್ರಾಂತಿಕಾರಕವಾದ ಕ್ರಮಗಳನ್ನು ಸಮಾಜದಲ್ಲಿ ತೆಗೆದುಕೊಳ್ಳಬೇಕೆಂಬ ಜನರಿದ್ದರೆ, ನಾನು ಅವರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಅವರ ಅಭಿಪ್ರಾಯದ ಬಗ್ಗೆ ವಿಷಾದಿಸುತ್ತೇವೆ. ಆದರೆ ಅವರೊಂದಿಗೆ ನನ್ನ ಜಗಳವಿಲ್ಲ. ಹಾಗಾಗಿ ಈ ಮಸೂದೆ ಬೇಕೆನ್ನುವವರು ಯಾರೂ ಈ ದೇಶದಲ್ಲಿಲ್ಲ ಎಂಬ ನಿಲುವು ನನ್ನದಲ್ಲ. ಆದರೆ ಬಹುಸಂಖ್ಯಾತ ಜನ ಈ ಮಸೂದೆಯನ್ನು ಬೆಂಬಲಿಸುತ್ತಿಲ್ಲ. ಅಷ್ಟೇ ಅಲ್ಲ..................

**ಕೆಲ ಸನ್ಮಾನ್ಯ ಸದಸ್ಯರು :** ಪ್ರಶ್ನೆ.

**ಪಂಡಿತ ಮಾಳವೀಯ :** ಈ ಬಗ್ಗೆ ಗಂಭೀರವಾಗಿ ವಿಚಲಿತರಾಗಿದ್ದಾರೆ (ಅಡಚಣೆ) ಅವರಿಂದು ದಿಗ್ಭ್ರಮೆಗೊಂಡು ತಬ್ಬಿಬ್ಬಾಗಿದ್ದಾರೆ. ಇದು ಕಾಣಲಾರದವರಿಗೆ ಮಾತ್ರ ಕಾಣಿಸದ ಸಂಗತಿ. ನನ್ನ ಕೆಲವು ಗೆಳೆಯರು ಅಭ್ಯಾಸ ಬಲದಿಂದಲೋ ಏನೋ ಪದೇ ಪದೇ "ಪ್ರಶ್ನೆ" ಎಂದು ಹೇಳುತ್ತಲೇ ಇರುತ್ತಾರೆ. ದೇಶದ ಯಾವ ಭಾಗದಲ್ಲಾದರೂ ಸರಿ ಬಂದು ನನ್ನ ಹೇಳಿಕೆಯನ್ನು ಪ್ರಶ್ನಿಸಿ ಎಂದು ವಿನಯದಿಂದಲೇ

ಅವರಿಗೆ ಸವಾಲು ಹಾಕುತ್ತೇನೆ. ಇಂಥ ಸಾರ್ವತ್ರಿಕ ಮಹತ್ವದ ವಿಷಯದಲ್ಲಿ ಈ ರೀತಿಯಲ್ಲಿ ಕಾನೂನು ಜಾರಿಗೊಳಿಸುವುದು ಕಾನೂನಿನ ದೃಷ್ಟಿಯಿಂದ ತಪ್ಪಿಲ್ಲದಿರಬಹುದು, ಆದರೆ ಇದರಿಂದ ತೊಂದರೆಗೊಳಗಾಗುವವರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಕಷ್ಟು ಅವಕಾಶಕೊಡದೆ ಇಂಥ ವಿಷಯಗಳನ್ನು ಕೈಗೆತ್ತಿಕೊಳ್ಳುವುದು ನೈತಿಕವಾಗಿ ಅನ್ಯಾಯದ ಪರಮಾವಧಿ. ಈ ಅಭಿಪ್ರಾಯವನ್ನು ನಾನು ಬೇರೊಂದೆಡೆ ನಡೆದ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯಲ್ಲಿ ವ್ಯಕ್ತಪಡಿಸಿದ್ದೇನೆ. ಈ ರೀತಿಯ ವಿಚಾರವನ್ನು ಕನಿಷ್ಠ ಪಕ್ಷ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಜನತೆಯ ಮುಂದಿಡಬಹುದಾಗಿತ್ತು. ಕೊನೆಯ ಪಕ್ಷ ಇದಕ್ಕೆ ಸಂಬಂಧಿಸಿದಂತೆ ಮತಗಣನೆಯನ್ನಾದರೂ ನಡೆಸಲು ಅವಕಾಶ ನೀಡಬೇಕು.

**ಶ್ರೀ ಭಾರತಿ :** ಏಕವಿವಾಹವನ್ನು ಕುರಿತು?

**ಪಂಡಿತ ಮಾಳವೀಯ :** ನನ್ನ ಗಣ್ಯ ಮಿತ್ರ ಶ್ರೀ ಭಾರತಿಯವರಿಗೆ ಯಾವುದೇ ಸಂದರ್ಭದಲ್ಲಾಗಲಿ ಕೇಳಲು ಒಂದೇ ಒಂದು ಸವಕಲು ಪ್ರಶ್ನೆ. ಅದು ಸೂಕ್ತವಿರಲಿ ಇಲ್ಲದಿರಲಿ, ಸಮಂಜಸವಿರಲಿ ಅಥವಾ ಅಸಮಂಜಸವಿರಲಿ. ಆ ಪ್ರಶ್ನೆಗೆ ನಂತರ ಬರುತ್ತೇನೆ ಮತ್ತು ಆ ಪ್ರಶ್ನೆಯ ಮಹತ್ವವನ್ನು ತೋರಿಸುತ್ತೇನೆ. ಏಕವಿವಾಹದ ಪ್ರಸ್ತಾಪವನ್ನು ಮಧ್ಯೆ ತರುವುದರಿಂದ ಈ ವಿಷಯದಲ್ಲಿ ಮತಗಣನೆಗೆ ಅವಕಾಶ ನೀಡುವುದೊಂದೆ ಸರಿಯಾದ ದಾರಿ ಎಂಬ ನನ್ನ ವಾದವನ್ನು ಮುಚ್ಚಿಹಾಕಲಾಗುವುದಿಲ್ಲ. ಆ ಮೂಲಕ ಈ ನಾಡಿನ ಜನರಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತಾಗಬೇಕು. ಮತಗಣನೆಯ ಫಲಿತಾಂಶ ಏನೇ ಆಗಲಿ, ಬಹುಸಂಖ್ಯಾತರಲ್ಲಾಗಿದ್ದರೂ, ಪರವಾಗಿಲ್ಲ ಕೆಲವರಾದರೂ (ಈ ಬಗ್ಗೆ ನಂತರ ಚರ್ಚಿಸುತ್ತೇನೆ) ಮಸೂದೆಯ ಪರವಾಗಿ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದರೆ, ನಾವು ಗಂಭೀರವಾಗಿ ಕೂತು ಅದನ್ನು ರೂಪಿಸಬೇಕು. ಅದು ಸಾಧ್ಯವಾಗದಿದ್ದರೆ, ಅರ್ಧದಷ್ಟು ಸದಸ್ಯರಿಗೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲು ಅವಕಾಶಮಾಡಿ ಕೊಡಬೇಕು. ಅದರಲ್ಲಿ ನಾನೂ ಒಬ್ಬನಾಗಲು ಸಿದ್ಧನಿದ್ದೇನೆ. ಇದಕ್ಕೆ ಇಂದಿನ ಸರ್ಕಾರ ಮತ್ತು ಈಗಿನ ಕಾನೂನು ಮಂತ್ರಿಯವರ ಮನವೊಲಿಸಲು ನನ್ನ ಹೇಳಿಕೆಯನ್ನು ಪ್ರಶ್ನಿಸುತ್ತಿರುವ ನನ್ನ ಗೆಳೆಯರನ್ನು ಕೇಳಿಕೊಳ್ಳುತ್ತೇನೆ. ನಾಲ್ಕು ವಾರಗಳಲ್ಲಿ ವಿಶೇಷವಾಗಿ ಈ ಕಾನೂನು ಸಂಹಿತೆಯ ಬಗ್ಗೆ ಉಪಚುನಾವಣೆ ಇಟ್ಟುಕೊಳ್ಳೋಣ.

**ಶ್ರೀ ಭಾರತಿ** : ಏಕ ವಿವಾಹದ ಬಗ್ಗೆ?

**ಪಂಡಿತ ಮಾಳವೀಯ :** ಉಪಚುನಾವಣೆಯಲ್ಲಿ ಆ ಆರರಲ್ಲಿ ಕೆಲವು ಕ್ಷೇತ್ರಗಳಿಂದಲಾದರೂ ಹಿಂದೂ ಸಂಹಿತೆಯನ್ನು ಬೆಂಬಲಿಸುವವರು ಆರಿಸಿಬಂದರೂ............

**ಒಬ್ಬರು ಸದಸ್ಯರು :** ಉತ್ತರ ಭಾರತದಲ್ಲಾ?

**ಪಂಡಿತ ಮಾಳವೀಯ :** ಇಡೀ ಭಾರತದಲ್ಲಿ ಎಲ್ಲಾದರೂ ಸರಿ. ಅವರು ಮತ್ತೆ ಆರಿಸಿಬಂದರೆ ನನ್ನ ವಿರೋಧವನ್ನು ಹಿಂತೆಗೆದುಕೊಳ್ಳಲು ತಯಾರಿದ್ದೇನೆ.

**ಶ್ರೀ ಮುನವಳ್ಳಿ (ಬಾಂಬೆ) :** ಸವಾಲನ್ನು ಸ್ವೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರತಿ ಚಿತ್ರಕ್ಕೂ ಎರಡು ಮಗ್ಗುಲಿರುತ್ತದೆ, ಅವರು ಮಾತನಾಡಲಿ.

**ಪಂಡಿತ ಮಾಳವೀಯ :** ಮಧ್ಯ ಪ್ರದೇಶದಿಂದ ನನಗೆ ಬೇಸರವಿಲ್ಲ. ಮಾತಿನಲ್ಲಿ ಎರಡು ರೀತಿಯುಂಟು. ಒಂದು ಬರಿಯ ಶಬ್ದ. ಎರಡನೆಯದು, ಅರ್ಥಪೂರ್ಣವಾದ ಮಾತುಗಳು. ಮಾನ್ಯ ಸದಸ್ಯರು ಸವಾಲನ್ನು ಸ್ವೀಕರಿಸಲಾಗಿದೆ ಎಂದು ಹೇಳುತ್ತಿದ್ದಾರೆ. ಅದು ಕೇವಲ ಶಬ್ದವಾಗದೆ ಅರ್ಥಪೂರ್ಣ ಮಾತಾಗಿದೆ ಎಂದು

ಭಾವಿಸಿದ್ದೇನೆ.

**ಶ್ರೀ ಮುನವಳ್ಳಿ :** ನಿಜವಾಗಿಯೂ ಹೇಳುತ್ತಿದ್ದೇನೆ.

**ಪಂಡಿತ ಮಾಳವೀಯ :** ನನ್ನ ಕೋರಿಕೆ ಇದು. ಸರ್ಕಾರ ಹಾಗೂ ಕಾನೂನು ಮಂತ್ರಿಗಳು ಅವರಿಗೆ ಇಚ್ಛೆಯಿದ್ದ ಪಕ್ಷದಲ್ಲಿ ಮಸೂದೆಯನ್ನು ಪರೀಕ್ಷೆಗೆ ಒಡ್ಡಲಿ. ನನ್ನ ಅಭಿಪ್ರಾಯವನ್ನು ಅನುಮೋದಿಸುವ ಸದಸ್ಯರು, ಚುನಾವಣೆಗೆ ಒಂದು ವಾರ ಮುಂಚಿತವಾಗಿ ಒಂದು ಅಧಿವೇಶನವನ್ನು ಏರ್ಪಡಿಸಬೇಕು. ಉಪಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಅದಕ್ಕನುಗುಣವಾಗಿ ಕೆಲಸ ಮಾಡಬೇಕು ಎನ್ನುವ ನನ್ನ ಸಲಹೆಯನ್ನು ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸಿದ್ದೇನೆ. ಸವಾಲನ್ನು ಒಪ್ಪಿಕೊಂಡಿದ್ದೇನೆ ಎನ್ನುವ ಸದಸ್ಯರಿಗೆ – ಅವರಿಗೆ ಅವಮಾನ ಮಾಡಬೇಕು ಎಂಬ ಉದ್ದೇಶ ಖಂಡಿತಾ ನನ್ನದಲ್ಲ – ಸವಾಲನ್ನೆದುರಿಸುವ ಅವಕಾಶವೇ ಬರುವುದಿಲ್ಲ ಎಂಬುದು ನನಗೆ ತಿಳಿದಿದೆ. ಆದರೆ ಈ ಸವಾಲನ್ನು ಒಪ್ಪಿಕೊಂಡಿದ್ದೇನೆ ಎನ್ನುವ ಸದಸ್ಯರು ಹೇಳಲಿ. ಈ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು, ಇವೆರಡರಲ್ಲಿ ಒಂದು ಮಾರ್ಗವನ್ನು ಆರಿಸಿಕೊಳ್ಳುವುದೇ ನಮ್ಮ ಮುಂದಿರುವ ಏಕೈಕ ದಾರಿ. ಅದನ್ನು ಮಾಡದಿದ್ದರೆ ನಮ್ಮ ನಾಡಿನ ಬಹುಸಂಖ್ಯಾತರು ಈ ಕಾಯಿದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾರೆ ಎಂಬ ನನ್ನ ಹೇಳಿಕೆಯನ್ನು ಸುಳ್ಳು ಎನ್ನುವುದನ್ನು ಹೇಗೆ ಒಪ್ಪಿಕೊಳ್ಳುವುದು? (ಒಬ್ಬ ಸದಸ್ಯ–ಪ್ರಶ್ನೆ) ನಾನು ಇದನ್ನು ಹೇಳುವಾಗ ಕೇವಲ "ಸಂಪ್ರದಾಯವಾದಿ"ಗಳನ್ನು ಮಾತ್ರ ಉಲ್ಲೇಖಿಸುತ್ತಿಲ್ಲ. ನಾನು ಈ ದೇಶದ ಮುಂದುವರಿದವರಲ್ಲೂ ಮುಂದುವರಿದಿರುವ ಜನರನ್ನೂ, ಈ ದೇಶದ ಹಿರಿಯರು ತಮ್ಮ ಅನುಭವದಿಂದ ನಮ್ಮ ಮೇಲೆ ಹೇರಿರುವ ನಿಬಂಧನೆಗಳಿಗೆ ಅಂಟಿಕೊಳ್ಳಲು ಸಾಮರ್ಥ್ಯ ಸಾಲದೆ ಹಾಗೂ ಬಲಹೀನವಾದ, ಸಲೀಸಾದ ಬದುಕನ್ನು ಬಯಸುವಂಥವರು, ಎರಡೂ ಜಗತ್ತಿನ ಅನುಕೂಲಗಳೆಲ್ಲವೂ ತಮಗೇ ಇರಲಿ ಎನ್ನುವಂಥವರು, ಶತಮಾನಗಳಿಂದ ಬಂದಿರುವ ಕಟ್ಟುಪಾಡುಗಳನ್ನು ಕಿತ್ತುಹಾಕಬೇಕೆನ್ನುವವರು ಇದರಲ್ಲಿ ಸೇರಿದ್ದಾರೆ.

**ಡಾ. ಎಂ.ಎಂ. ದಾಸ್ :** ಕ್ರಿಯಾ ಲೋಪದ ಬಗ್ಗೆ ಮಾನ್ಯ ಸದಸ್ಯರು ಸದನದಲ್ಲಿ ಈಗಾಗಲೇ ಜಿಗುಪ್ಸೆ ಹುಟ್ಟಿಸುವಷ್ಟು ಸಲ ಹೇಳಿದ ವಿಷಯಗಳನ್ನು ಮತ್ತೆ ಮತ್ತೆ ಹೇಳುತ್ತಿದ್ದಾರೆ. ಅವರಿಗೆ ಹೊಸ ವಾದವೇ ಇಲ್ಲ. ಉಳಿದ ಸದಸ್ಯರು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾರೆ.

**ಪಂಡಿತ ಮಾಳವೀಯ :** ಸಾಮಾನ್ಯವಾಗಿ ಮದ್ಯಪಾನದ ನಶೆಯಲ್ಲಿದ್ದಾಗ ಕೆಲವರಿಗೆ ಅವರ ಮುಂದೆ ಅತ್ಯುತ್ತಮವಾದ ಖಾದ್ಯಗಳನ್ನು ಇಟ್ಟರೂ ವಾಕರಿಕೆ ಬರುತ್ತದಂತೆ! ಹಾಗಾಗಿ ನನ್ನ ಗೆಳೆಯನ ಬಗ್ಗೆ ನನಗೆ ಆಶ್ಚರ್ಯವೇನಾಗುತ್ತಿಲ್ಲ.

**ಶ್ರೀ ಭಾರತಿ :** ಸನ್ಮಾನ್ಯ ಸದಸ್ಯರು ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಅಂದರೆ ವಿವಾಹ ಹಾಗೂ ವಿಚ್ಛೇದನಕ್ಕೆ ತಮ್ಮ ಹೇಳಿಕೆಯನ್ನು ಸೀಮಿತಗೊಳಿಸಿಕೊಂಡರೆ, ಸ್ಪಷ್ಟ ಗ್ರಹಿಕೆಗೆ ಅನುಕೂಲವಾಗುವುದಿಲ್ಲವೆ?

**ಪಂಡಿತ ಮಾಳವೀಯ :** ಬಹುಶಃ ನನ್ನ ಗೆಳೆಯ ಶ್ರೀ ಭಾರತಿಯವರಷ್ಟು ನಿಖರತೆ ಮತ್ತು ಸಾಮರ್ಥ್ಯ ನನಗಿಲ್ಲದಿರಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನಾನೇ ಅದನ್ನು ಸ್ವತಃ ಸೂಚಿಸಬೇಕೆಂದಿದ್ದೆ. ಈ ವ್ಯಾಪ್ತಿಯನ್ನು ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತಗೊಳಿಸಲಾಗಿದೆ. ಸದಸ್ಯರು ತಮ್ಮ ಹೇಳಿಕೆಯನ್ನು ಅದಕ್ಕೆ ಸೀಮಿತಗೊಳಿಸಿ ಕೊಳ್ಳಬಹುದು. ಸದಸ್ಯರಿಗೆ ಈಗ ನಾನು ಮಂಡಿಸುತ್ತಿರುವಂತೆ ಶಕ್ತಿಯುತವಾಗಿ ತನ್ನ ವಾದವನ್ನು ಮಂಡಿಸಲಾಗದೇ ಹೋಗಬಹುದು ಅನ್ನಿಸುತ್ತಿರಬಹುದು. ಆದರೂ ಕೆಲವು ವಿಷಯಗಳನ್ನು ಈಗಾಗಲೇ ಹೇಳಿಯಾಗಿದೆ. ಆ ಬಗ್ಗೆ ಅಷ್ಟೊಂದು ವಿವರವಾಗಿ ಮಾತನಾಡಬೇಕಾಗಿಲ್ಲ. ತಮ್ಮ ಹೇಳಿಕೆಗಳನ್ನು ಈ

ವರೆಗೂ ಚರ್ಚಿಸದೇ ಇರುವ ವಿಷಯಗಳಿಗಷ್ಟೇ ಸೀಮಿತಗೊಳಿಸಿಕೊಳ್ಳಬಹುದು.

**ಶ್ರೀ ಆರ್.ಕೆ. ಚೌಧರಿ :** ಅದು ಪುನರುಕ್ತಿಯಾದರೂ ಪಂಡಿತ ಮಾಳವೀಯ ಅವರಂತಹ ಖ್ಯಾತ ವ್ಯಕ್ತಿಗಳ ಅಭಿಪ್ರಾಯವನ್ನು ನಾವು ತಿಳಿಯಬೇಕು ಎಂದು ಗೌರವದಿಂದ ಮನವಿ ಮಾಡಿಕೊಳ್ಳುತ್ತೇನೆ.

**ಡಾ. ಎಂ.ಎಂ. ದಾಸ್ :** ಸನ್ಮಾನ್ಯ ಸದಸ್ಯರು ಒಬ್ಬ ಸದಸ್ಯ ಹಾಗೂ ಇನ್ನೊಬ್ಬ ಸದಸ್ಯರ ನಡುವೆ ಭೇದ ಮಾಡುತ್ತಿದ್ದಾರೆ.

**ಪಂಡಿತ ಮಾಳವೀಯ :** ನಾನು ಆ ಭೇದವನ್ನು ಒಪ್ಪುವುದಿಲ್ಲವಾದ್ದರಿಂದ ಆ ಬಗ್ಗೆ ಯಾವ ಸದಸ್ಯನೂ ಗಾಬರಿಗೊಳ್ಳಬೇಕಾಗಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಚರ್ಚೆಯನ್ನು ಇಂದೇ ಸಮಾಪ್ತಿಗೊಳಿಸಬೇಕೆಂದಿದ್ದೇನೆ. ಯಾವುದೇ ಅಡಚಣೆಯೂ ಬೇಡ.

**ಪಂಡಿತ ಮಾಳವೀಯ :** ನಾನು ತಮ್ಮ ಮಾರ್ಗದರ್ಶನಕ್ಕೆ ಋಣಿ. ಈ ಮಸೂದೆಯನ್ನು ಹಿಂದೂಗಳ ಸಾಮಾಜಿಕ ರಚನೆಗೆ ಸಂಬಂಧಿಸಿದಂತೆ ಒಂದು ಕಲಂ ಇರಬಹುದು ಅಥವಾ ಒಂದುನೂರು ಕಲಂಗಳೂ ಇರಬಹುದು. ಆದರೆ ಅದು ಹಿಂದೂಗಳ ಸಾಮಾಜಿಕ ರಚನೆಯ ಮೇಲೆ ಪರಿಣಾಮ ಬೀರುತ್ತದೆ ಎಂದಾದರೆ, ಆ ಕಾಯಿದೆ ಅದರ ಮೇಲೆ ಹೇಗೆ ಹಾಗೂ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ ಎನ್ನುವುದನ್ನು ಚರ್ಚಿಸದೇ ಯಾರೂ ಮುಂದುವರಿಯಬಾರದು. ಸಾಮಾಜಿಕ ರಚನೆಯನ್ನು ಇಡಿಯಾಗಿಯೇ ನೋಡಬೇಕೆ ಹೊರತು ಚೂರುಚೂರಾಗಿ, ಪ್ರತ್ಯೇಕ ಭಾಗಗಳಾಗಿ ಪರಿಗಣಿಸಬಾರದು. ಅದು ಪ್ರಾಯೋಗಿಕವಲ್ಲ.

ಈವರೆಗೆ ಆಗಿರುವ ಚರ್ಚೆಯ ನಂತರ ಒಂದು ವಿಷಯದ ಬಗ್ಗೆ ಮಾತ್ರ ಏರುಪೇರಾದ ನಿಲುವನ್ನು ತೆಗೆದುಕೊಂಡು ಉಳಿದ ಸಾಮಾನ್ಯ ಅಂಶಗಳನ್ನು ಹೊರಗಿಡುವುದು ಸಾಧ್ಯವೂ ಇಲ್ಲ ಮತ್ತು ಸೂಕ್ತವೂ ಅಲ್ಲ ಎನ್ನುವುದು ನನ್ನ ಭಾವನೆ. ಮಾನ್ಯರೇ, ನಿಮ್ಮ ಮಾರ್ಗದರ್ಶನಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತೇನೆ ಎಂಬ ಭರವಸೆ ಕೊಡುತ್ತೇನೆ. ಯಾವುದೇ ಹಂತದಲ್ಲಾಗಲಿ ನಾನು ಮಾಡುತ್ತಿರುವ ಯಾವುದಾದರೂ ನಿರ್ದಿಷ್ಟ ವಾದವನ್ನು ಮುಂದುವರಿಸಬಾರದು ಎಂದು ನೀವು ಅಭಿಪ್ರಾಯಪಟ್ಟರೆ, ನಾನು ತಕ್ಷಣ ನಿಮ್ಮ ಆದೇಶವನ್ನು ಪಾಲಿಸುತ್ತೇನೆ.

ಈ ಮಸೂದೆಯನ್ನು ಈಗ ಎರಡೇ ವಿಷಯಕ್ಕೆ ಅಂದರೆ ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತಗೊಳಿಸಿಕೊಳ್ಳಿ ಎನ್ನಲಾಗಿದೆ. ಹಿಂದೂ ಸಮಾಜದ ಇಡೀ ರಚನೆಯೆ ವಿವಾಹದ ಅಡಿಪಾಯದ ಮೇಲೆ ನಿಂತಿದೆ. ಹಿಂದೂ ಸಮಾಜದ ವಿವಾಹ ವ್ಯವಸ್ಥೆಗೆ ಸಂಬಂಧವಿಲ್ಲ ಎಂದು ಪ್ರತ್ಯೇಕಿಸಿ ಹೇಳಬಹುದಾದ ಯಾವ ವಿಷಯವೂ ಇಲ್ಲ. ಹಾಗಾಗಿ, ಇಡೀ ಸಮಾಜದ ಸಾಮಾನ್ಯ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಹಿಂದೂ ಸಮಾಜದ ವಿವಾಹದ ವಿಷಯವನ್ನು ಚರ್ಚಿಸುವುದು ಸಾಧ್ಯವಿಲ್ಲ. ನಾನು ಹೇಳುತ್ತಿರುವುದೆಲ್ಲಾ ನೇರವಾಗಿ ವಿವಾಹ ಹಾಗೂ ವಿಚ್ಛೇದನಕ್ಕೆ ಕೂಡ ಅನ್ವಯಿಸುತ್ತದೆ. ಹಾಗಾಗಿ, ನಾನು ಹೇಳುವುದಿಷ್ಟೇ, ಈ ಕ್ರಮವನ್ನು ಸಂಪ್ರದಾಯಸ್ಥರು ಮಾತ್ರವಲ್ಲದೆ ಉಳಿದವರು ಕೂಡ ವಿರೋಧಿಸುತ್ತಿದ್ದಾರೆ. ಸದನದಲ್ಲಿ ನಿನ್ನೆ ಹಾಗೂ ಮೊನ್ನೆ ಕೆಲವು ಸದಸ್ಯರು ಆ ಉಳಿದವರ ಬಗ್ಗೆ ತುಂಬಾ ಚರ್ಚೆ ಮಾಡಿದ್ದಾರೆ ಹಾಗೂ ಅವರೇ ಈ ದೇಶದ ಶೇಕಡಾ ೮೦ರಷ್ಟಿದ್ದಾರೆ ಎನ್ನಲಾಗಿದೆ. ಹಾಗೂ ಈ ಮಸೂದೆಯಲ್ಲಿ ಸೂಚಿಸಿರುವ ಹೆಚ್ಚಿನ ನಿಬಂಧನೆಗಳೂ ಅವರಲ್ಲಿ ಈಗಾಗಲೇ ಚಾಲ್ತಿಯಲ್ಲಿವೆ ಎನ್ನುವ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ. ಆದರೆ, ಆ ಬಗ್ಗೆ ನನಗೆ ಅನುಮಾನಗಳಿವೆ. ವಿಚ್ಛೇದನ ಹಾಗೂ ಸರಳವಾದ ವಿವಾಹ ಸೌಲಭ್ಯ ಹೊಂದಿರುವ ಈ ಬಹುಸಂಖ್ಯಾತ ಜನರ ಬದುಕಿನಲ್ಲಿ ಈ ಮಸೂದೆ ಬಹು ದೊಡ್ಡ ವ್ಯತ್ಯಾಸವನ್ನು ಉಂಟುಮಾಡುತ್ತದೆ.

ಈ ಸಲಹೆಗಳ ಒಳಿತಿನ ಬಗ್ಗೆ ನನ್ನ ಅಭಿಪ್ರಾಯವನ್ನು ಇಲ್ಲಿ ನಾನು ವ್ಯಕ್ತಪಡಿಸುತ್ತಿಲ್ಲ. ಬೌದ್ಧಿಕ, ನೈತಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಅವಕಾಶವಾಗಲಿ ಅನುಕೂಲವಾಗಲಿ ಇಲ್ಲದೆ ಹಳ್ಳಿಯಲ್ಲಿ ಬದುಕುತ್ತಿರುವ ಅನೇಕ ಜನರಿದ್ದಾರೆ. ಅವರಿಗೆ ನಮ್ಮ ಗೌರವಾನ್ವಿತ ಕಾನೂನು ಮಂತ್ರಿಗಳಾದ ಅಂಬೇಡ್ಕರ್ ಅಂಥವರಿಗೆ ದೊರಕಿದ ಆತ್ಮಸಂಯಮದ ಅಭ್ಯಾಸವಾಗಲಿ, ಒಳ್ಳೆಯದು ಮತ್ತು ಉತ್ಕೃಷ್ಟವಾದುದು ಹಾಗೂ ಕೆಟ್ಟದ್ದು ಮತ್ತು ಅತಿಕೆಟ್ಟದ್ದು ಇವುಗಳ ಸೂಕ್ಷ್ಮವಾದ ಅಂತರವನ್ನು ಅರ್ಥಮಾಡಿಕೊಳ್ಳುವ ಅಭ್ಯಾಸವಾಗಲಿ ಸ್ವಾಭಾವಿಕವಾಗಿಯೇ ಬೇರೆಯವರಷ್ಟು ಸಹಜವಾಗಿ ಹಾಗೂ ಬೇಗನೆ ಸಾಧ್ಯವಾಗುವುದಿಲ್ಲ. ಹಿಂದೂ ಸಮಾಜವನ್ನು ವಿವಿಧ ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದು ಗುಂಪಿನ ಜನರಿಗೆ ಅನ್ಯಾಯ ಮಾಡಬೇಕೆಂಬ ಅಮಾನವೀಯ ಅಥವಾ ವಿಷಪೂರಿತ ಉದ್ದೇಶದಿಂದ ಈ ರೀತಿಯ ವಿಂಗಡನೆಯನ್ನು ಮಾಡಿಲ್ಲ. ಕೆಲ ವರ್ಗದವರಿಗೆ ಅನ್ಯಾಯವಾಗಿದೆ ಎಂಬುದನ್ನು ನಾನು ಒಪ್ಪುತ್ತಿಲ್ಲ ಎಂದು ನನ್ನ ಬಗ್ಗೆ ತಪ್ಪಾಗಿ ಭಾವಿಸಬಾರದು. ಅನ್ಯಾಯ ಆಗಿದೆ. ಅಪಾರ ಯಾತನೆಯನ್ನು ನೀಡಲಾಗಿದೆ. ಕಷ್ಟವನ್ನು ಕೊಟ್ಟಿದ್ದಾರೆ. ಇದನ್ನು ಯಾವ ವಿವೇಕಿಯೂ ಸಮರ್ಥಿಸಲಾರ. ಆದರೆ ನಾನು ವರ್ಗೀಕರಣಕ್ಕೆ ಆಧಾರವಾಗಿರುವ ವಿಶಾಲವಾದ ಪರಿಕಲ್ಪನೆಯ ಬಗ್ಗೆ ಮಾತನಾಡುತ್ತಿದ್ದೇನೆ. ಅನ್ಯಾಯ ಮಾಡುವುದು ಅದರ ಉದ್ದೇಶವಲ್ಲ.

**ಶ್ರೀ ಮುನವಳ್ಳಿ :** ಆದರೆ ಅದರ ಪರಿಣಾಮ ಏನಾಗಿದೆ?

**ಪಂಡಿತ ಮಾಳವೀಯ :** ಪರಿಣಾಮದ ಬಗ್ಗೆ ಹೇಳಬೇಕಾದರೆ ತುಂಬಾ ಸಮಯ ಹಿಡಿಯುತ್ತದೆ. ಏಕೆಂದರೆ ಪರಿಣಾಮ ಕಾಲದಿಂದ ಕಾಲಕ್ಕೆ ಬದಲಾಗುತಿತ್ತು. ನನ್ನ ಗೌರವಾನ್ವಿತ ಗೆಳೆಯರು ಚರಿತ್ರೆಯ ಪುಟಗಳನ್ನು ನೋಡುವ ಶ್ರಮತೆಗೆದುಕೊಂಡರೆ ಅದು ಅವರಿಗೇ ಸ್ಪಷ್ಟವಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಅದರ ಬಗೆಗಿನ ಚರ್ಚೆ ವಿವಾಹ ಹಾಗೂ ವಿಚ್ಛೇದನಕ್ಕೆ ಆವಶ್ಯಕವೇ?

**ಪಂಡಿತ ಮಾಳವೀಯ :** ನಾನು ಹೇಳಬಯಸುತ್ತಿರುವುದೇನೆಂದರೆ, ನಾವು ಒಬ್ಬ ವ್ಯಕ್ತಿಯಿಂದ ನಿರೀಕ್ಷಿಸುವುದನ್ನು, ಮತ್ತೊಬ್ಬನಿಂದಲೂ ನಿರೀಕ್ಷಿಸುವುದು ಸಾಧ್ಯವಿಲ್ಲ, ಇದು ವಸ್ತುವಿನ ಸ್ವಭಾವದಲ್ಲೇ ಇರುವಂತಹದ್ದು. ಇಂದು ಕಾನೂನನ್ನು ಕುರಿತಂತೆ ಯಾವುದಾದರೂ ಕ್ಲಿಷ್ಟ ಅಂಶ ಬಂದರೆ ನಾವು ನಮ್ಮ ಘನಪಂಡಿತರಾದ ಕಾನೂನು ಮಂತ್ರಿಗಳನ್ನು ಅದರ ಎಲ್ಲಾ ಮಗ್ಗುಲುಗಳನ್ನು ವಿವರಿಸಲು ಕೇಳುವುದು ಸೂಕ್ತ, ನಿಮಗೆ ಅದೇ ಮಾಹಿತಿ ಹಾಗೂ ತಿಳುವಳಿಕೆ ನನ್ನಂತಹ ದಡ್ಡನಿಂದ ಸಿಗುವುದಿಲ್ಲ. (ಒಬ್ಬ ಸದಸ್ಯ: ಇಲ್ಲ ಇಲ್ಲ; ಮತ್ತೊಬ್ಬ ಸದಸ್ಯ:ಅದು ಕೇವಲ ವಿನಯದ ಮಾತು) ಅದೇ ರೀತಿ ಮತ್ತೊಂದು ವಿಷಯದ ಬಗ್ಗೆ ಇನ್ನೊಬ್ಬರಿಗೆ ತುಂಬಾ ತಿಳಿದಿರಬಹುದು. ಆದರೆ ಆ ಬಗ್ಗೆ ನನ್ನ ಗೌರವಾನ್ವಿತ, ಆತ್ಮೀಯ ಹಾಗೂ ಜ್ಞಾನಿಯಾದ ಶ್ರೀ ಭಾರತಿ ದಡ್ಡನಾಗಿ ತೋರಬಹುದು. ಸಮಾಜದಲ್ಲಿ ಯಾವ ವರ್ಗದ ಜನರಿಗೆ ಕ್ಷಣಕ್ಷಣಕ್ಕೂ ಗಂಟೆಗಂಟೆಗೂ, ಹಗಲಿನಿಂದ ಇರುಳಿನವರೆಗೆ, ಇರುಳಿನಿಂದ ಹಗಲಿನವರೆಗೆ, ತಮ್ಮ ಅಸ್ತಿತ್ವವೇ–ಜೀವನದಲ್ಲಿ ಸರ್ವಸ್ವವೂ ಅಲ್ಲದೆ ಹೋದರೂ ಕೂಡ ಅವರ ಅಸ್ತಿತ್ವದ ಬಹುಮುಖ್ಯ ಅಂಶವಾಗಿರುತ್ತದೆ. ಬದುಕಿನ ನಿಜವಾದ (ಜೆಸ್ಟ್) ಸಂತೋಷ ಮತ್ತು ಸಾರವಾಗಿದೆಯೋ ಅವರಿಗೆ ವಿವಾಹ ವಿಚ್ಛೇದನ ಕಾನೂನು ಸರಳವಾಗಿರಬೇಕು ಹಾಗೂ ಸಲೀಸಾಗಿ ಲಭ್ಯವಾಗಬೇಕು ಎನ್ನುವ ದೃಷ್ಟಿಯಿಂದ ಈ ಕಾನೂನನ್ನು ರೂಪಿಸಲಾಗಿದೆ. ಇಂದು ಗಂಡು ಮತ್ತು ಹೆಣ್ಣು ಒಂದು ಮದುವೆ ಸಂಬಂಧವನ್ನು ಕಣ್ಣುಮಿಟುಕಿಸುವುದರಲ್ಲಿ ತಳ್ಳಿಹಾಕಿ ಇನ್ನೊಂದು ಮದುವೆಯಾಗಬಹುದು. ಆದರೆ ಹೊಸ ಮಸೂದೆಯಲ್ಲಿ ಅವರು ಇದಕ್ಕಾಗಿ ತಿಂಗಳುಗಟ್ಟಲೆ ಕಾಯಬೇಕು. ನ್ಯಾಯಾಲಯಕ್ಕೆ ಅಲೆಯಬೇಕು. ಒಂದು ಇಂತಹ ಪ್ರಕ್ರಿಯೆಗಳ ಸರಣಿಯನ್ನೇ ಹಾದುಹೋಗಬೇಕು. ಇದರ ಒಳಿತಿನ ಬಗ್ಗೆ ಸಂತೋಷವಾಗಿದೆ ಮತ್ತು ಈ ಸುಧಾರಣೆಯನ್ನು ಗ್ರಹಿಸಿದ

ಕಾನೂನು ಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ನಾನಿಲ್ಲಿ ಅದರ ಪ್ರಾಯೋಗಿಕ ಪರಿಣಾಮಗಳ ಬಗ್ಗೆ ಮಾತನಾಡುತ್ತಿದ್ದೇನೆ. ವಾಸ್ತವದಲ್ಲಿ ಇದರಿಂದ ಹಳ್ಳಿಗಳಲ್ಲಿ ಕೊಲೆಗಳಾಗಿ ಬಿಡುತ್ತವೆ.

**ಡಾ. ಅಂಬೇಡ್ಕರ್** : ನಮ್ಮಲ್ಲಿ ಸಾಕಷ್ಟು ಪೊಲೀಸರಿದ್ದಾರೆ.

**ಪಂಡಿತ ಮಾಳವೀಯ** : ಇನ್ನೂ ಹೆಚ್ಚಾಗಿ ಪ್ರಾಣಿಗಳ ಹಂತದಲ್ಲೇ ಇರುವವನಿಗೆ..................

**ಶ್ರೀಮತಿ ರೇಣುಕಾ ರಾಯ್** : ಪ್ರಶ್ನೆ?

**ಪಂಡಿತ ಮಾಳವೀಯ** : ನಾನಿದನ್ನು ಅಗೌರವದಿಂದ ಹೇಳುತ್ತಿಲ್ಲ. ನಾನು ಕೇವಲ ಸಮಾಜಶಾಸ್ತ್ರಜ್ಞನಾಗಿ ಮಾತನಾಡುತ್ತಿದ್ದೇನೆ. ಅವರಿಗೆ ಬಳಕೆಯಲ್ಲಿಲ್ಲದ, ವಾಡಿಕೆಯಲ್ಲಿಲ್ಲದ, ಅವರಿಗೆ ತೀರಾ ಪ್ರಯಾಸಕರ ಎನಿಸುವ ಅಡ್ಡಿಆತಂಕಗಳು ಎದುರಾದರೆ, ಅವರಲ್ಲಿ ಅದನ್ನು ಎದುರಿಸಲು ಬೇಕಾದ ಆತ್ಮಸಂಯಮ ಇಲ್ಲದೇ ಹೋಗಬಹುದು. ಕಾನೂನಿಗೆ ಕಾಯುವಷ್ಟು ಪ್ರಬುದ್ಧತೆಯಾಗಲಿ, ತಾಳ್ಮೆಯಾಗಲಿ ಇಲ್ಲದೇ ಹೋಗಬಹುದು. ಆಗ ಅವರು ದಂಗೆಯೆದ್ದುಬಿಡಬಹುದು. ಬಹುಶಃ ನಾವು ಆ ಬಗ್ಗೆ ಕಲ್ಪಿಸಿಕೊಂಡೂ ಇಲ್ಲ. ಹಾಗಾಗಿ ಈ ಮಸೂದೆಯನ್ನು ಅನಾದಿಕಾಲದಿಂದ ಬಂದಿರುವ ಸಂಪ್ರದಾಯವನ್ನು ಗೌರವಿಸಿ, ಎತ್ತಿ ಹಿಡಿಯಬೇಕೆನ್ನುವ ನನ್ನಂತಹವನು ಮಾತ್ರವಲ್ಲ ಅದರಿಂದ ತಕ್ಷಣ ಹಾಗೂ ತುಂಬಾ ತೊಂದರೆಗೊಳಗಾಗುವ ಜನ ಕೂಡ ವಿರೋಧಿಸುತ್ತಾರೆ. ಈ ಮಸೂದೆಯ ಕಾಯಿದೆಗಳ ಬಗ್ಗೆ ಅತ್ಯುತ್ಸಾಹದಿಂದ, ಗಟ್ಟಿಯಾಗಿ ಮಾತನಾಡುತ್ತಿರುವ ಸದನದ ಸದಸ್ಯರಿಗೂ ಮತ್ತು ಆ ಜನರಿಗೂ ಯಾವುದೇ ಸಮಾನ ಅಂಶಗಳಿಲ್ಲ ಎಂಬುದನ್ನು ಗೌರವಯುತವಾಗಿಯೆ ನಿಮ್ಮ ಮುಂದೆ ಇಡುತ್ತಿದ್ದೇನೆ.

**ಡಾ. ಅಂಬೇಡ್ಕರ್** : ನನಗೂ ಇಲ್ಲವೆ?

**ಪಂಡಿತ ಮಾಳವೀಯ** : ಖಂಡಿತಾ ಇಲ್ಲ, ಕಾನೂನು ಮಂತ್ರಿಗಳೇ! ಕಾನೂನು ಮಂತ್ರಿಗಳನ್ನು, ಅಗೌರವದಿಂದ ಮನುವಿನಂಥ ಮುನಿಗೆ ಹೋಲಿಸಲಾಗಿದೆ. ನನಗೆ ಒಂದು ಶ್ಲೋಕ ನೆನಪಾಗುತ್ತದೆ (ಅಡಚಣೆ) ನನಗೆ ಹೊಟ್ಟೆಯುರಿ ಯಾಕೆಂದು ಯಾರೋ ಕೇಳುತ್ತಿದ್ದಾರೆ. ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಕಾನೂನು ಮಂತ್ರಿಗಳ ಬಗ್ಗೆ ಅಸೂಯೆಪಡಬೇಕಾದ ಸಂದರ್ಭವೇ ನನಗೆ ದೊರಕಿಲ್ಲ.

**ಡಾ. ಅಂಬೇಡ್ಕರ್** : ಅಸ್ಪೃಶ್ಯನ ಬಗ್ಗೆ ಬ್ರಾಹ್ಮಣನೊಬ್ಬನಿಗೆ ಅಸೂಯೆ ಬರುವುದು ಹೇಗೆ ಸಾಧ್ಯ?

**ಪಂಡಿತ ಮಾಳವೀಯ** : ಅವರಿಗೆ ಹೇಳಿ! ನನಗೆ ಒಂದು ಶ್ಲೋಕ ನೆನಪಾಗುತ್ತಿದೆ. ಅದರಲ್ಲಿ ಕುಂಭಕರ್ಣ ರಾವಣನನ್ನು ಕೇಳುತ್ತಾನೆ. (ಅಡಚಣೆ) ಸನ್ಮಾನ್ಯ ಸದಸ್ಯರು ಶ್ಲೋಕದ ಅರ್ಥವನ್ನು ಮನದಟ್ಟು ಮಾಡಿಕೊಂಡರೆ ಮೊದಲಿಗಿಂತ ಉತ್ತಮ ಮಾನವರಾಗಬಹುದು. ಕುಂಭಕರ್ಣ ರಾವಣನನ್ನು ಕೇಳುತ್ತಾನೆ "ಸೀತೆಯನ್ನು ಒಲಿಸಿಕೊಳ್ಳಲು, ರಾಕ್ಷಸರಿಗಿರುವ ಇಚ್ಛಾರೂಪ ಧರಿಸುವ ಶಕ್ತಿಯನ್ನು ಬಳಸಿಕೊಂಡು ರಾಮನ ರೂಪದಲ್ಲಿ ಸೀತೆಯ ಬಳಿಗೇಕೆ ಹೋಗಬಾರದು?" ಅದಕ್ಕೆ ರಾವಣ ಹೇಳುತ್ತಾನೆ. "ಸಮಸ್ಯೆಯೆಂದರೆ ನಾನು ರಾಮನ ರೂಪ ಪಡೆದ ತಕ್ಷಣ, ಅಥವಾ ಅವನ ಬಗ್ಗೆ ಯೋಚಿಸಿದ ತಕ್ಷಣ, ಕೇವಲ ಅವನ ವಿಚಾರದೊಂದಿಗೆ ಸಂಪರ್ಕ ಉಂಟಾದರೂ ಸಾಕು ನನ್ನ ಮನಸ್ಸಿಗೆ ಯಾವುದೇ ಕೆಟ್ಟ ಯೋಚನೆಯೂ ಬರುವುದು ಸಾಧ್ಯವಿಲ್ಲ" (ಕೇಳಿ, ಕೇಳಿ) (ಮಾನ್ಯ ಸದಸ್ಯರು : ಶ್ಲೋಕವನ್ನು ಮತ್ತೊಮ್ಮೆ ಹೇಳಿ) ನನ್ನ ಸನ್ಮಾನ್ಯ ಗೆಳೆಯರು ಸಮಯಾವಕಾಶ ಮಾಡಿಕೊಟ್ಟರೆ ಇನ್ನೂ ಹಲವಾರು ಶ್ಲೋಕಗಳನ್ನು ಹೇಳಬಲ್ಲೆ. ಅದೇ ರೀತಿಯಲ್ಲಿ ಮನು ಬಗ್ಗೆ ಕೂಡ. ನಾನು ಹೇಳುತ್ತಿದ್ದೆ ಈ ಸದನದ ಸದಸ್ಯರಿಗೆ ಸಾಧ್ಯವಾಗುವ ಕೆಲವು ಸಂಗತಿಗಳು – ಕೆಲವೇ ಕ್ಷಣಗಳಲ್ಲಿ ವಿಚ್ಛೇದನ ಪಡೆಯುವ ಆವಶ್ಯಕತೆ ಸಾದ್ಯತೆ ಬಹುಶಃ ಇರಲಿಕ್ಕಿಲ್ಲ – ಅದು ಶೇಕಡ ೮೦ರಷ್ಟು ಜನರಿಗೂ ಸಾಧ್ಯ ಎಂದು ನಾವು ನಿರೀಕ್ಷಿಸಬೇಕಾಗಿಲ್ಲ. ಹಾಗಾಗಿ, ಈ ವಿಷಯದ

ಬಗ್ಗೆ ನಿಲುವು ತೆಗೆದುಕೊಳ್ಳುವಾಗ ನಾವು ಜಾಗರೂಕತೆಯಿಂದ ಇರಬೇಕು. ಯಾರಾದರೂ ಈ ಅಭಿಪ್ರಾಯವನ್ನು ನಿರಾಕರಿಸುವವರು ಇದ್ದರೆ, ಅವರ ಅಭಿಪ್ರಾಯವನ್ನು ಕೇಳಲು ನಾನು ಬಯಸುತ್ತೇನೆ.

ಹಾಗಾಗಿ ನಾನು ಮತ್ತೆ ಹೇಳುತ್ತೇನೆ, ಈ ಮಸೂದೆಯನ್ನು ಸಂಪ್ರದಾಯಸ್ಥ ಜನ ಮಾತ್ರವಲ್ಲ. ಈ ನಾಡಿನ ಬಹುಸಂಖ್ಯಾತ ಜನ ಕೂಡ ವಿರೋಧಿಸುತ್ತಾರೆ. (ಕೆಲ ಸದಸ್ಯರು : ಇಲ್ಲ ಇಲ್ಲ) ಯಾರೋ ಹೇಳಿದರು ನೀವು ಹೇಳಿದ್ದಕ್ಕಿಂತ ಬೇರೆ ಕಾರಣಕ್ಕಾಗಿ ಅಂತ. ಇರಬಹುದು. ಅದರ ಕಾರಣ ಏನೇ ಇರಲಿ ಬಹುಸಂಖ್ಯಾತ ಜನ ಇದನ್ನು ಒಪ್ಪುವುದಿಲ್ಲ. ನಾನು ಮಸೂದೆಯ ವಿಷಯಕ್ಕೇ ಬರುತ್ತೇನೆ. ಈಗ ಮಸೂದೆಯ ಎರಡನೆಯ ಭಾಗವನ್ನು ಮಾತ್ರ ಪರಿಶೀಲಿಸಲಾಗುತ್ತದೆ ಎನ್ನಲಾಗಿದೆ. ಈಗ ಇದನ್ನು ಹಿಂದೂ ಸಂಹಿತೆ ಮಸೂದೆ ಎಂದು ಕರೆಯುವ ಆವಶ್ಯಕತೆಯಿಲ್ಲ. ಉಳಿದ ಭಾಗಗಳನ್ನು ಇದರಿಂದ ಹೊರಗಿಡುತ್ತಾರೊ ಇಲ್ಲವೊ ಅದು ಏನೇ ಆಗಲಿ ವೈಯಕ್ತಿಕವಾಗಿ ಇದನ್ನು ಹಿಂದೂ ಸಂಹಿತೆ ಮಸೂದೆ ಎಂದು ಕರೆಯದಿದ್ದಲ್ಲಿ ನನಗೆ ಈ ಬಗ್ಗೆ ಆಕ್ಷೇಪವೇನೂ ಇರುವುದಿಲ್ಲ. ನಮ್ಮ ಸಂವಿಧಾನದಲ್ಲಿ ನಾವು "ಇಂಡಿಯಾ ಅಂದರೆ ಭಾರತ" ಎಂಬ ಹೆಸರನ್ನು ನಮ್ಮ ದೇಶಕ್ಕೆ ನೀಡಿದ್ದೇವೆ. ಈ ಮಸೂದೆಯನ್ನು ಭಾರತೀಯ ಮಸೂದೆ ಎಂದು ಯಾಕೆ ಕರೆದಿಲ್ಲ? ಇದು ಎಲ್ಲರಿಗೂ ಅನ್ವಯವಾಗಬೇಕೆನ್ನುವ ಪ್ರಶ್ನೆಗೆ ನಾನು ಹೋಗುತ್ತಿಲ್ಲ. ಆ ಬಗ್ಗೆ ನನಗೆ ಆಸಕ್ತಿಯಿಲ್ಲ. ಅದರ ಆಧಾರದ ಮೇಲೆ ನಾನೀಗ ಮಾತನಾಡುತ್ತಿಲ್ಲ. ಆದರೆ ಈ ದೇಶವನ್ನು "ಭಾರತ" ಎಂದು ಕರೆಯಲಾಗಿದೆ. ಈ ಮಸೂದೆಯನ್ನು "ಭಾರತೀಯ ಮಸೂದೆ" ಎಂದು ಕರೆದಿದ್ದರೆ ಅದರ ಅರ್ಥ ಮತ್ತು ಮಹತ್ವ ಬೇರೆ ಆಗುತ್ತಿತ್ತು. ಆದರೆ "ಹಿಂದೂ ಮಸೂದೆ" ಎಂದಾಕ್ಷಣ ಆ ಪದ ಸೂಚಿಸುವ ಇಡೀ ಚಿತ್ರ ನಮ್ಮ ಕಣ್ಣಿನ ಮುಂದೆ ಬರುತ್ತದೆ. ಹಾಗಾಗಿ ನಾವು, "ಹಿಂದೂ" ಎಂಬ ಪದದ ಅರ್ಥವೇನು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಒಂದು ವಾಕ್ಯದಲ್ಲಿ ವಿವರಿಸುವುದು ಕಷ್ಟ. ಆದರೆ, ಅದರ ಅತಿಮುಖ್ಯ ಲಕ್ಷಣ ಎಂಬುದು ಏನಾದರೂ ಇದೆಯೆಂದಾದರೆ ಅದು ಅದರ ಮಿತಿಯಿಲ್ಲದ ಸಹಿಷ್ಣುತೆ ಮತ್ತು ಪರಧರ್ಮ ಸಹಿಷ್ಣುತೆ. ನಮ್ಮ ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರಲಾಲ್ ನೆಹರೂ ಅವರೇ ಸ್ವತಃ ಹಿಂದೂ ಧರ್ಮದ ಬಗ್ಗೆ ಮಾತನಾಡಿದ್ದಾರೆ. ಹಿಂದೂ ಧರ್ಮವನ್ನು, ಅದು ಬದುಕು ಹಾಗೂ ಬದುಕಲು ಬಿಡು ಎನ್ನುವ ತತ್ವವನ್ನು ಆಧರಿಸಿದೆ ಎಂದು ವಿವರಿಸುವುದು ಸಮಂಜಸ ಎಂದಿದ್ದಾರೆ. ಹಿಂದೂಗಳಲ್ಲಿ ತೀರಾ ವಿಭಿನ್ನವಾದ ಹಾಗೂ ಪರಸ್ಪರ ವಿರುದ್ಧವಾದ ದೃಷ್ಟಿಕೋನಗಳಿವೆ. ನಮ್ಮ ಪವಿತ್ರ ಗ್ರಂಥಗಳಲ್ಲಿ ತಾತ್ವಿಕ ಶಾಖೆಗಳಲ್ಲಿ ಆರು ದರ್ಶನಗಳಿವೆ. ಅದರಲ್ಲಿ ಒಂದಂತೂ ಕತ್ತಿಮೊನೆಯ ನಿಖರತೆಯಿಂದ ಹಾಗೂ ಜೈಮಿನಿ, ಶಂಕರ, ಕುಮಾರಿಲ ಅಂಥ ಅತಿಮಾನವ ಕುಶಾಗ್ರಮತಿಗಳ ಒಳನೋಟದಿಂದ ಪ್ರಜ್ವಲಿಸುತ್ತಿದೆ. ಅವರನ್ನು ಹೊಗಳಲು ಯಾವುದೇ ವಿಶೇಷಣಗಳನ್ನು ನಾನು ಬಳಸುವುದಿಲ್ಲ. ಏಕೆಂದರೆ ಸೂಕ್ತಪದಗಳು ದೊರೆಯುವುದು ಕಷ್ಟ. ಮತ್ತೊಂದು ಕಡೆ ಅಷ್ಟೊಂದು ಹರಿತವಲ್ಲದ, ತೀರಾ ಒರಟಾದ, ಇನ್ನೂ ಕೆಟ್ಟದಾಗಿ ಹೇಳಬೇಕೆಂದರೆ, ಭೌತಿಕ ಕಣ್ಣುಗಳಿಗೆ ಗೋಚರವಾಗದಿರುವುದನ್ನು ನೋಡಲು ಅಥವಾ ಅರ್ಥಮಾಡಿಕೊಳ್ಳಲು ತಯಾರಿಲ್ಲದ ದರ್ಶನವೊಂದಿದೆ. ಪಾಪ ಚಾರ್ವಾಕರು ತನ್ನ ಅಂಗೈಯನ್ನು ಮುಂದೆ ಇಟ್ಟುಕೊಂಡು ತನ್ನ ಕೈನ ಹಿಂಗೈ ಕೂಡ ಅಸ್ತಿತ್ವದಲ್ಲಿದೆ ಎಂಬುದನ್ನು ಒಪ್ಪಿಕೊಳ್ಳಲು ವಿರೋಧಿಸುತ್ತಾರೆ. ಏಕೆಂದರೆ ಅದು ಪ್ರತ್ಯಕ್ಷವಲ್ಲ ಎಂಬ ಕಾರಣಕ್ಕೆ.

**ಡಾ. ಎಂ.ಎಂ. ದಾಸ್ :** ನಾವಿಲ್ಲಿ ಹಿಂದೂ ತತ್ವಶಾಸ್ತ್ರದ ಬಗ್ಗೆ ಹಾಗೂ ಪ್ರಾಚೀನ ಋಷಿಗಳ ಬಗ್ಗೆ ಭಾಷಣ ಕೇಳಲು ಬಂದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಶಿಸ್ತು, ಶಿಸ್ತು, ಮಾನ್ಯ ಸದಸ್ಯರು ತೀರಾ ಅಸಹನೆಗೊಂಡಿದ್ದಾರೆ. ಅವರು

ಮತ್ತೊಂದು ದೃಷ್ಟಿಕೋನವನ್ನು ಪರಿಗಣಿಸಲೇಬೇಕು. ಸನ್ಮಾನ್ಯ ಸದಸ್ಯರು ಈ ರೀತಿ ಪದೇ ಪದೇ ಅಡ್ಡಿ ಮಾಡುತ್ತಾರೆ ಎಂದು ನಾನು ನಿರೀಕ್ಷಿಸಿರಲಿಲ್ಲ. ನಾನು ಮತ್ತೆ ಮತ್ತೆ ಹೇಳುತ್ತೇನೆ, ಇದು ವಾದಗ್ರಸ್ತ ವಿಷಯ. ಇದಕ್ಕೆ ಸಾಕಷ್ಟು ಕಾಲಾವಕಾಶ ನೀಡಲಾಗುತ್ತದೆ. ಹಲವಾರು ಸದಸ್ಯರು ಈಗಾಗಲೇ ಮಾತನಾಡಿದ್ದಾರೆ ಎಂಬುದು ತಿಳಿದಿದೆ. ಈಗಲೇ ಚರ್ಚೆಯನ್ನು ಸಮಾಪ್ತಿಗೊಳಿಸುತ್ತಿಲ್ಲ. ಅಡ್ಡಿ ಕಡಿಮೆಯಾದಷ್ಟು ಬೇಗ ಮುಗಿಸುವ ಸಾಧ್ಯತೆಗಳೂ ಹೆಚ್ಚು. ಇಲ್ಲದಿದ್ದರೆ ಅವರು ಇನ್ನೊಂದು ದಿನ ಬೇಕು ಎಂದು ಒತ್ತಾಯಿಸುತ್ತಾರೆ.

**ಪಂಡಿತ ಮಾಳವೀಯ :** ನಾನು ಹಿಂದೂಗಳಲ್ಲಿ ತೀರಾ ವೈವಿಧ್ಯಮಯವಾದ, ಪರಧರ್ಮ ಸಹಿಷ್ಣುವಾದ ತಾತ್ವಿಕ ಹಾಗೂ ಆಧ್ಯಾತ್ಮಿಕ ವಿಚಾರಗಳು ಚಾಲ್ತಿಯಲ್ಲಿದೆ ಎಂಬ ಸಂಗತಿಯನ್ನಷ್ಟೇ ಹೇಳುತ್ತಿದ್ದೆ. ಒಂದು ವಿಷಯದ ತಾತ್ವಿಕ ಮಗ್ಗುಲಿನ ಬಗ್ಗೆ ಮಾತನಾಡುವ ಆವಶ್ಯಕತೆಯೆ ಬರದಂತಾಗಿದ್ದರೆ ಚೆನ್ನಾಗಿತ್ತು. ಅದು ಅನವಶ್ಯಕ ಎಂದು ಭಾವಿಸಬಹುದಿತ್ತು. ಆದರೆ ಅಂತಹ ಹೇಳಿಕೆಯಿಂದಾಗಿ ದುರಾದೃಷ್ಟವೆಂದರೆ ಅದು ಆವಶ್ಯಕವಾಗಿದೆ. ನಾನು ಉಲ್ಲೇಖಿಸುತ್ತಿದ್ದ ವಿಷಯವೆಂದರೆ ದರ್ಶನಗಳಲ್ಲಿ ಕೂಡ ಒಂದೆಡೆ ಶುದ್ಧ ವೇದಾಂತವಿದ್ದರೆ ಮತ್ತೊಂದೆಡೆ ಕುಡಿತ ಹಾಗೂ ಭೋಗ ವಿಲಾಸಗಳಲ್ಲಿ ಪಂಚಕರ್ಮಗಳಲ್ಲಿ ಮುಳುಗಿರುವ ಚಾರ್ವಾಕನಂಥ ದಾರ್ಶನಿಕರಿದ್ದಾರೆ. ನಾನು ಪಂಚಕರ್ಮಗಳ ಬಗ್ಗೆ ವಿವರಗಳಿಗೆ ಹೋಗುವುದಿಲ್ಲ....................

**ಮಾನ್ಯ ಉಪಸಭಾಧ್ಯಕ್ಷರು :** ಮುಂದುವರೆಸಿ, ಮುಂದುವರೆಸಿ.

**ಪಂಡಿತ ಮಾಳವೀಯ :** ನನ್ನದೇ ಆದ ಸಭ್ಯತೆಯ ಕಾರಣಕ್ಕಾಗಿ ಜೊತೆಗೆ ಆಧ್ಯಾತ್ಮಿಕ ಚಿಂತನೆಯಲ್ಲಿ ಆಳವಾದ ಆಸಕ್ತಿ ಇಲ್ಲದಿರುವ ಕೆಲ ಸದಸ್ಯರಿಗೂ ಇದು ತಿಳಿದಿರುತ್ತದೆ ಎಂದು ಭಾವಿಸಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಅವು ಈ ವಿಷಯದ ಬಗ್ಗೆ ಚರ್ಚೆಗೆ ಹೇಗೆ ಉಪಯುಕ್ತವಾಗುತ್ತದೆ?

**ಪಂಡಿತ ಮಾಳವೀಯ :** ನಾನು ಹೇಳಲು ಪ್ರಯತ್ನಿಸುತ್ತಿರುವ ವಿಷಯವೆಂದರೆ...........................

**ಡಾ. ಅಂಬೇಡ್ಕರ್ :** ಮಕರಗಳನ್ನು ತುಂಬಾ ಉಪಯುಕ್ತವೆಂದುಕೊಂಡಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಐದು ಮಕರಗಳು ಕಲುಷಿತಗೊಳಿಸುತ್ತವೆಯೆ?

**ಪಂಡಿತ ಮಾಳವೀಯ :** ನಮ್ಮ ಪ್ರಮುಖ ದರ್ಶನಗಳಲ್ಲೂ ವೈವಿಧ್ಯತೆಗಳಿವೆ. ಅವುಗಳಲ್ಲಿ ಆಸ್ತಿಕ ದರ್ಶನಗಳಿವೆ, ನಾಸ್ತಿಕ ದರ್ಶನಗಳಿವೆ. ಏಕದೇವತೋಪಾಸನೆಯ ತತ್ವಗಳಾದ ಬ್ರಹ್ಮ, ಪರಬ್ರಹ್ಮ ಮತ್ತು ಜೀವದ ಬಗ್ಗೆ ಮಾತನಾಡುವ ದರ್ಶನಗಳಿವೆ. ಬ್ರಹ್ಮನಿಲ್ಲ, ದೇವರಿಲ್ಲ, ವೇದವಿಲ್ಲ ಎನ್ನುವ ನಾಸ್ತಿಕ ದರ್ಶನಗಳೂ ಇವೆ. ಉಳಿದ ಕ್ಷೇತ್ರಗಳಲ್ಲೂ ಅಷ್ಟೇ ವೈವಿಧ್ಯಮಯವಾದ ಅಭಿಪ್ರಾಯಗಳು, ವೈವಿಧ್ಯಮಯವಾದ ಪರಿಸ್ಥಿತಿ ಇದೆ. ಹಿಂದೂಗಳಲ್ಲಿ ಕೆಲ ಋಷಿಗಳು ಮತ್ತಿತರರು ಗೋಮಾಂಸ ತಿನ್ನುತ್ತಾರೆ ಎಂದು ನಮಗೆ ನೆನಪಿಸುವುದು ಇಂದು ಕೆಲವರಿಗೆ ಫ್ಯಾಷನ್ ಆಗಿದೆ. ಆದರೆ ಜೊತೆಗೆ ಗೋವಿನ ಬಗ್ಗೆ ಸಾರ್ವತ್ರಿಕ ಪೂಜಾ ಮನೋಭಾವವನ್ನು ಹಿಂದೂಧರ್ಮದಲ್ಲಿ ತುಂಬಿರುವುದನ್ನು ಕಾಣಬಹುದು. ನಾವು ಹಿಂದೂ ಸಮಾಜದಲ್ಲಿ ಸಣ್ಣವಯಸ್ಸಿನಲ್ಲೇ ವಿವಾಹವಾದವರನ್ನು ಕಾಣಬಹುದು. ಅದೇ ರೀತಿಯಲ್ಲಿ ಯುವ ಸನ್ಯಾಸಿಯರನ್ನೂ ಕಾಣಬಹುದು. ಹಿಂದೂ ಸಮಾಜದಲ್ಲಿ ತೀರಾ ಕಠಿಣವಾದ ಮತ್ತು ಕಲ್ಪಿಸಿಕೊಳ್ಳುವುದಕ್ಕೇ ಕಷ್ಟವಾದ ತಪಸ್ಸು ಇದೆ. ಅದೇ ಹಿಂದೂ ಧರ್ಮದಲ್ಲಿ ತೀರಾ ಭೋಗಪ್ರಧಾನವಾದ ಹಾಗೂ ಸ್ವೇಚ್ಛಭರಿತ ಇಂದ್ರಿಯ ಲೋಲುಪತೆಯನ್ನೂ ಕಾಣಬಹುದು. ಹಿಂದೂ ಸಮಾಜದಲ್ಲಿ ಬ್ರಾಹ್ಮಣರಂತೆಯೇ ಕರ್ತವ್ಯ ಹಾಗೂ ಹಕ್ಕುಗಳನ್ನು ಹೊಂದಿರುವ ಚಾಂಡಾಲರು (ಅಡಚಣೆ)......

**ಮಾನ್ಯ ಉಪಸಭಾಧ್ಯಕ್ಷರು :** ಇನ್ನು ಮುಂದೆ ಯಾವುದೇ ವ್ಯಕ್ತಿಯನ್ನು ಚಾಂಡಾಲನೆಂದಾಗಲಿ ಅಸ್ಪೃಶ್ಯನೆಂದಾಗಲೀ ಕರೆಯುವುದು ಸಂವಿಧಾನಾತ್ಮಕವಾಗಿ ಅಪರಾಧ.

**ಪಂಡಿತ ಮಾಳವೀಯ** : ತುಂಬಾ ಜನ ಒಟ್ಟಿಗೆ ಮಾತನಾಡುತ್ತಿದ್ದಾರೆ, ನಿಮ್ಮ ಮಾತು ನನಗೆ ಕೇಳಿಸುತ್ತಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು** : ಸಂವಿಧಾನದ ಅಂಶವನ್ನು ಬಿಟ್ಟು ಕೂಡ ಚಾಂಡಾಲ ಎಂಬ ಪದವನ್ನು ಉಲ್ಲೇಖಿಸುವುದು ಸೂಕ್ತವಲ್ಲ. ಸಂವಿಧಾನದಲ್ಲಿ ಅದನ್ನು ಅಪರಾಧ ಎಂದು ಪರಿಗಣಿಸಲಾಗಿದೆ.

**ಡಾ. ದೇಶ್‌ಮುಖ್** : ಅವರು ಕೇವಲ ಚರಿತ್ರೆಯನ್ನು ಉಲ್ಲೇಖಿಸುತ್ತಿದ್ದಾರೆ.

**ಮಾನ್ಯ ಉಪಸಭಾಧ್ಯಕ್ಷರು** : ಕೇವಲ ಚರಿತ್ರೆಯೇ ಇರಬಹುದು. ಚರಿತ್ರೆಯ ಎಲ್ಲವೂ ಉಲ್ಲೇಖನೀಯವಲ್ಲ. ಕೆಲವು ಚರಿತ್ರೆಯನ್ನು ಮರೆತುಬಿಡೋಣ.

**ಪಂಡಿತ ಮಾಳವೀಯ** : ನಾನು ಅದನ್ನು ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ ಹೇಳುತ್ತಿಲ್ಲ. ಹಿಂದೆ ಇದ್ದ ಒಂದು ವ್ಯವಸ್ಥೆಯನ್ನು ಉಲ್ಲೇಖಿಸಿದೆ. ಆದರೆ ನೀವು ಹೇಳಿದ್ದಕ್ಕೆ ಬದ್ಧನಾಗಿರುತ್ತೇನೆ.

**ಡಾ. ಅಂಬೇಡ್ಕರ್** : ಯಾಕೆ ಬದ್ಧರಾಗಿರಬೇಕು?

**ಪಂಡಿತ ಮಾಳವೀಯ** : ಮಾನ್ಯ ಕಾನೂನು ಮಂತ್ರಿಗಳು ಕೇಳುತ್ತಿದ್ದಾರೆ, ಯಾಕೆ ಬದ್ಧರಾಗಿರಬೇಕು ಅಂತ. ಯಾಕೆಂದರೆ ನಾನೊಬ್ಬ ನ್ಯಾಯಸಂಧ (ಧರ್ಮಭೀರು) ಸದಸ್ಯ. ಈಗ ತಾನೇ ಉಲ್ಲೇಖಿಸಿರುವ ಇನ್ನೊಂದು ಹೆಸರಿನವಲ್ಲ. ಹಿಂದೂ ಸಮಾಜದಲ್ಲಿ ವಿವಿಧ ವಸ್ತುಗಳು ಗೌರವದಿಂದ ಶಾಂತಿಯುತವಾಗಿ ಒಟ್ಟೊಟ್ಟಿಗೆ ಅಸ್ತಿತ್ವದಲ್ಲಿದೆ. ಅದು ಹಿಂದೂಧರ್ಮದ ಪ್ರಮುಖ ಲಕ್ಷಣ. ಅದು ಪ್ರಶ್ನಾತೀತವಾಗಿ, ವಿವಾದಾತೀತವಾಗಿ ಅನಾದಿಕಾಲದಿಂದ ನಡೆದುಕೊಂಡು ಬಂದಿವೆ. ಅವು ಸಂಕುಚಿತವಾದ, ಮತೀಯವಾದ ಅಂಧಶ್ರದ್ಧೆಯಾಗಲಿ, ವಿಧಿಗಳಾಗಲಿ ವಿವಾದಾತ್ಮಕ ವಿಷಯವಾಗಲಿ, ನಿಯಮವಾಗಲಿ ಅಲ್ಲ. ಅವುಗಳನ್ನು ಒಂದು ಸಮಾಜ ಸ್ಥಿರವಾಗಿ ಹಾಗೂ ಸುಗಮವಾಗಿ ಮುಂದುವರಿಯಲು ಅನಿವಾರ್ಯವಾದ ಕೆಲವು ಮೂಲಭೂತ ತತ್ವಗಳೆಂದು ಪರಿಗಣಿಸಲಾಗಿತ್ತು. ಆ ತತ್ವವನ್ನು ಯಾವುದೇ ಹೆಸರಿನಿಂದ ಕರೆಯಿರಿ, ಆದರೆ ಅವು ಒಂದು ಆರೋಗ್ಯಕರ ಸಮಾಜ ಆಧರಿಸಲೇಬೇಕಾದ ಶಾಶ್ವತ ಭದ್ರ ಬುನಾದಿಯಾಗಿ ಉಳಿಯುತ್ತದೆ. ಈ ದೇಶದಲ್ಲಿ ಈ ತತ್ವಗಳನ್ನು ಸನಾತನ ಎಂದು ಕರೆಯಲಾಗಿದೆ. ಸನಾತನ ಎಂದರೆ ನನ್ನ ಜ್ಞಾನಿ ಗೆಳೆಯರು ನಿನ್ನೆ ಮಾತನಾಡುತ್ತಾ ಹೇಳಿದಂತೆ ಸದಾ ಬದಲಾಗುತ್ತಿರುವ, ನಿತ್ಯ ನೂತನವಾದ ತತ್ವವಲ್ಲ. ಅವು ಯಾವಾಗಲೂ ಇರುವಂಥ ಸತ್ಯ. ಹಾಗಾಗಿ, ಹಿಂದೂ ಸಮಾಜದ ರಚನೆಯಲ್ಲೇ ಏನಾದರೂ ಬದಲಾವಣೆ ತರಬೇಕೆಂದಿದ್ದಲ್ಲಿ ದೊಡ್ಡ ಮರವೊಂದರ ಎಲೆ ಹಾಗೂ ರೆಂಬೆಗಳಂತಿರುವ ಅದರ ಹೊರರೂಪ, ಪರಿಕರಗಳ ಮೇಲೆ ಕೈಯ್ಯಾಡಿಸಬಹುದೆ ಹೊರತು ಮರದ ಬುಡಕ್ಕೇ ಕೊಡಲಿ ಪೆಟ್ಟು ನೀಡಬಾರದು. ಅಂದರೆ ಸಮಾಜದ ಆಧಾರಸ್ಥಂಭವಾಗಿರುವ ಅದರ ಮೂಲತತ್ವಗಳನ್ನೇ ಅಲುಗಾಡಿಸಬಾರದು. ಕಾಲದ ಹಾವಳಿಯಿಂದ ಸಮಾಜವನ್ನು ಇವು ಕಾಪಾಡಿಕೊಂಡು ಬಂದಿವೆ. ಜಗತ್ತಿನಲ್ಲೇ ಸಮಾಜವನ್ನು ಕಾಪಾಡಿಕೊಂಡು ಬಂದ ಇಂಥ ವ್ಯವಸ್ಥೆ ಇನ್ನೊಂದಿಲ್ಲ. ಹಾಗಾಗಿ ನಾವು, ಮೊದಲು ಈ ಮೂಲಭೂತ ತತ್ವಗಳ್ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಉದ್ದೇಶಿತ ಹಿಂದೂ ಮಸೂದೆಯಲ್ಲಿರುವ ಕಾನೂನುಗಳು ಹಿಂದೂ ಶಾಸ್ತ್ರಗಳಿಗೆ ಅನುಗುಣವಾಗಿದೆ ಎಂದು ನಾಳೆ ಸರ್ಕಾರ ರಚಿಸಬೇಕಾಗಿರುವ ಮೂರಕ್ಕಿಂತ ಹೆಚ್ಚು ಮಹನೀಯರು ಹೇಳಿದ್ದನ್ನು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಅಷ್ಟೇ ಅಲ್ಲ ಮಸೂದೆಯನ್ನು ಈ ರೂಪದಲ್ಲಿ ರಚಿಸುವ ಉದ್ದೇಶದಿಂದ ಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಲಾಗಿದೆ ಎಂದು ಸಹ ಹೇಳಲಾಯಿತು. ಅಂಥ ಜ್ಞಾನಿಗಳನ್ನು ವಿರೋಧಿಸಲು ಹಿಂದೇಟುಹಾಕುವುದು ಸ್ವಾಭಾವಿಕವೇ. ಆದರೆ, ಹಿಂದೂ ಶಾಸ್ತ್ರಗಳು ಲಾಗಾಯ್ತಿನಿಂದ ಜಗತ್ತಿನ ಆಸ್ತಿ. ಹಲವಾರು ಜನ ಅದನ್ನು ಓದಿದ್ದಾರೆ ಅಥವಾ ಓದಬಹುದು. ನನಗೆ ಅದರ ಬಗ್ಗೆ ಇರುವ

ತೀರಾ ಸೀಮಿತ ಜ್ಞಾನದಿಂದ ಇಂತಹ ಹೇಳಿಕೆಗಳನ್ನು ಸಮರ್ಥಿಸಲು ಸಾಧ್ಯವಿಲ್ಲ. ಹಾಗಾಗಿ, ಹಿಂದೂ ಮಸೂದೆಯನ್ನು ಹಿಂದೂ ಶಾಸ್ತ್ರಗಳಲ್ಲಿರುವ ಕಾನೂನನ್ನು ಆಧರಿಸಿ ರೂಪಿಸಲಾಗುತ್ತಿದೆ ಎಂಬುದು ಸರ್ಕಾರದ ನಿಲುವಾದರೆ, ಅದೇ ನೆಲೆಯಿಂದ ಪ್ರಾರಂಭಿಸಬೇಕು. ಆದರೆ ಈ ಮಸೂದೆಯು ಹಿಂದೂ ಶಾಸ್ತ್ರಗಳನ್ನಾಗಲಿ ಅದರಲ್ಲಿರುವ ನಿಯಮಗಳನ್ನಾಗಲಿ ಆಧರಿಸಿಲ್ಲ. ಬದಲಾಗಿ ಈ ಮಸೂದೆಯ ಕರ್ತೃಗಳ ವಿವೇಕ ಹಾಗೂ ಇಚ್ಛೆಗೆ ತಕ್ಕಂತೆ, ಆದರೆ ಹಿಂದಿರುವವರ ಒಲವಿಗೆ ಹಾಗೂ ಆಸೆಗೆ ತಕ್ಕಂತೆ ಈ ಕಾಯಿದೆಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ವಿವರಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರೆ ಅದು ಬೇರೆ ವಿಷಯ. ನನಗೆ ತಿಳಿದಮಟ್ಟಿಗೆ ಯಾರೂ ಅಂಥ ಹೇಳಿಕೆಯನ್ನು ಈವರೆಗೆ ಮಾಡಿಲ್ಲ, ಹಾಗಾಗಿ ಕಾಯಿದೆ ಮತ್ತು ಅದರ ನಿಬಂಧನೆಗಳೆಲ್ಲಾ ಹಿಂದೂ ಶಾಸ್ತ್ರಗಳನ್ನು ಆಧರಿಸಿವೆ ಎಂದು ಭಾವಿಸಿಕೊಂಡೇ ಮುಂದುವರೆಯುತ್ತೇನೆ. ಇದು ನಿಜ ಆದರೆ, ಒಂದು ನಿರ್ದಿಷ್ಟ ಅಂಶದ ಬಗ್ಗೆ ಶಾಸ್ತ್ರಗಳು ಏನು ಹೇಳುತ್ತವೆ ಮತ್ತು ಆ ಹೇಳಿಕೆಗೆ ಶಾಸ್ತ್ರದಲ್ಲಿ ಯಾವ ಅರ್ಥವಿದೆ ಎಂಬುದನ್ನು ನಿರ್ಧರಿಸುವುದು ಹೇಗೆ? ಈ ಬಗ್ಗೆ ಕಾನೂನು ಮಂತ್ರಿಗಳಿಂದ ಸ್ಪಷ್ಟೀಕರಣವನ್ನು ಬಯಸುತ್ತೇನೆ. ನಾನು ಏನು ಹೇಳುತ್ತಿದ್ದೇನೆ ಎಂಬುದು ಸುಶಿಕ್ಷಿತರಾದ ಕಾನೂನು ಮಂತ್ರಿಗಳಿಗೆ ಖಂಡಿತಾ ತಿಳಿದಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಹಾಗಾಗಿ ಅವರಿಗೆ ಇದು ಕಾಲಹರಣ ಎನ್ನಿಸಬಹುದು. ಆದರೆ ನಾವು ಸದನದ ಸದಸ್ಯರು ಒಂದು ತುಂಬಾ ಮುಖ್ಯ ವಿಷಯವನ್ನು ಶಾಸನ ಮಾಡಲು ಹೊರಟಿದ್ದೇವೆ. ನಾವು ಅಷ್ಟೊಂದು ಸಾರ್ವತ್ರಿಕ ಮಹತ್ವದ ವಿಷಯದ ಬಗ್ಗೆ ಕಾನೂನು ಮಾಡುತ್ತಿರುವುದರಿಂದ ಹಾಗೂ ಒಂದು ವೇಳೆ ಅದನ್ನು ಹಿಂದೂ ಶಾಸ್ತ್ರಗಳಿಗೆ ಅನುಗುಣವಾಗಿ ಮಾಡುವ ಉದ್ದೇಶವಿದ್ದಲ್ಲಿ ಮತ್ತು ಒಂದು ನಿರ್ದಿಷ್ಟ ಸಿದ್ಧಾಂತದ ನೆಲೆಯಲ್ಲಿ ಮಾಡಹೊರಟಿದ್ದ ಆಗ ಶಾಸ್ತ್ರಗಳನ್ನು ಮತ್ತು ಅದರ ಸಾಲುಗಳನ್ನು ವ್ಯಾಖ್ಯಾನಿಸಲು ಬಳಸುವ ಸ್ವೀಕೃತವಾದ ನಿಯಮಗಳು, ವಿಧಾನಗಳು ಹಾಗೂ ಅಂಗೀಕೃತ ಕ್ರಮಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂಬುದು ನನ್ನ ಭಾವನೆ. ಮೀಮಾಂಸೆಗಳಿರುವುದೇ ಈ ಉನ್ನತ ಉದ್ದೇಶಕ್ಕಾಗಿ. ಯಾಕೆಂದರೆ ಹಿಂದೂ ಸಮಾಜದಂಥ ಸಮಾಜದಲ್ಲಿ ಸರ್ಕಾರವಾಗಲಿ, ಮಂತ್ರಿಯಾಗಲಿ ಅವನೆಷ್ಟೇ ದೊಡ್ಡವನಾಗಿರಲಿ, ಬಲಶಾಲಿಯಾಗಿರಲಿ ಕಾನೂನು ಮಾಡುವುದಿಲ್ಲ....

**ಶ್ರೀ ಸಿದ್ವಾ (ಮಧ್ಯಪ್ರದೇಶ) :** ದಯವಿಟ್ಟು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಿ.

**ಪಂಡಿತ ಮಾಳವೀಯ :** ನನ್ನ ಗಣ್ಯ ಗೆಳೆಯ ಸಿದ್ವಾ ನನ್ನನ್ನು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಿ ಎಂದು ನನ್ನನ್ನು ಕೇಳುತ್ತಿದ್ದಾರೆ. ನಾನು ಅದನ್ನೇ ಮಾಡುತ್ತಿರುವುದು. ಅದನ್ನು ಸಿದ್ವಾ ಅಷ್ಟು ಸಲೀಸಾಗಿ ಮರೆಯುವುದಿಲ್ಲ ಎಂದುಕೊಳ್ಳುತ್ತೇನೆ. ಸದನದ ಸದಸ್ಯರಿಗೆ ಹಿಂದೂ ಸಮಾಜದಂತಹ ಸಮಾಜದಲ್ಲಿ ಎಲ್ಲವೂ – ಎಷ್ಟು ಮಿಲಿಯನ್ ವರ್ಷಗಳಿಂದ ಹೀಗೆ ನಡೆದುಕೊಂಡು ಬಂದಿದೆಯೋ ಎಂಬುದು ದೇವರಿಗೆ ಗೊತ್ತು – ಕೆಲವು ಗ್ರಂಥಗಳನ್ನು ಆಧರಿಸಿದೆ. ಅಲ್ಲಿ ಮುದ್ರಣ ಯಂತ್ರಗಳಾಗಲಿ ಮುದ್ರಣ ಕಾಗದವಾಗಲಿ ಇರಲಿಲ್ಲ. ಪ್ರತಿಯೊಂದೂ ಮೌಖಿಕವಾಗಿ ಗುರುವಿನಿಂದ ಶಿಷ್ಯನಿಗೆ, ತಂದೆಯಿಂದ ಮಗನಿಗೆ, ಹರಿದು ಬರಬೇಕಿತ್ತು. ಪ್ರತಿಯೊಂದೂ, ಅವುಗಳ ಸೂಕ್ತ ಉಚ್ಚಾರ, ಪಠಣವನ್ನು ಹಾಗೂ ಸರಿಯಾದ ಗ್ರಂಥವನ್ನು ಹಾಗೂ ಹಳೆಯ ಮತ್ತು ಪ್ರಾಚೀನ ಪದಗಳ ಹಾಗೂ ಮಂತ್ರಗಳ ಸರಿಯಾದ ವ್ಯಾಖ್ಯಾನವನ್ನು ಅವಲಂಬಿಸಿದೆ. ಆಗ ಹೊಸ ಕಾಯಿದೆಗಳು, ಸಂಹಿತೆಗಳು ಹಾಳೆಗಳಲ್ಲಿ ಮುದ್ರಿತವಾಗುತ್ತಿರಲಿಲ್ಲ. ಮನುಷ್ಯನ ಮನಸ್ಸಿನಲ್ಲಿ, ನೆನಪಿನಲ್ಲಿ ಕಾಲದಿಂದ ಕಾಲಕ್ಕೆ ಹರಿದು ಬರುತ್ತಿತ್ತು. ಅವುಗಳಿಗೆ ಸೂಕ್ತ ಮಹತ್ವ ಹಾಗೂ ಸ್ಥಾನ ಸಿಗಬೇಕು. ಅಂತಹ ಸಮಾಜದಲ್ಲಿ ಆ ಗ್ರಂಥಗಳನ್ನು ವ್ಯಾಖ್ಯಾನಕ್ಕಾಗಿ ಸಮಗ್ರವಾದ, ಧನಾತ್ಮಕವಾದ

ವಿವರವಾದ ನಿಯಮಗಳನ್ನು ಅನುಸರಿಸದೇ ಹೋಗಿದ್ದರೆ, ಅಂತಹ ಒಂದು ಸಮಾಜದಲ್ಲಿ ಒಂದು ದೊಡ್ಡ ದುರಂತವೇ ನಡೆದುಹೋಗಿಬಿಡುತ್ತಿತ್ತು. ಮೀಮಾಂಸದಲ್ಲಿ ಶ್ರುತಿಯನ್ನಾಗಲಿ, ಸ್ಮೃತಿಯನ್ನಾಗಲಿ ಹೇಗೆ ವ್ಯಾಖ್ಯಾನಿಸಬೇಕೆಂದು ತಿಳಿಸಲಾಗಿದೆ. ಎಲ್ಲೋ ಒಂದು ಕಡೆಯಲ್ಲಿ ಒಂದು ವ್ಯಾಖ್ಯೆಯನ್ನು ನೋಡಿ ಕಾನೂನಿನ ಅರ್ಥವನ್ನು ತಿಳಿಯಲಾಗುವುದಿಲ್ಲ. ಅದಕ್ಕೆ ಹಲವಾರು ರೀತಿಯ ಪರೀಕ್ಷೆಗಳನ್ನು ಒರೆಗೆ ಹಚ್ಚುವ ಪರೀಕ್ಷೆಗಳನ್ನು – ಮಾಡಬೇಕಾಗುತ್ತದೆ.

(ಪಂಡಿತ ಠಾಕೂರ್ ದಾಸ್ ಭಾರ್ಗವ ಅಧ್ಯಕ್ಷ ಸ್ಥಾನದಲ್ಲಿ)

ಹಾಗಾಗಿ ಹಿಂದೂ ಮಸೂದೆ, ಹಿಂದೂ ಶಾಸ್ತ್ರಗಳಲ್ಲಿ ಅಡಕವಾಗಿರುವ ತತ್ವಗಳು ಹಾಗೂ ಸಿದ್ಧಾಂತಗಳನ್ನು ಆಧರಿಸಿದೆ ಎಂಬುದು ಸರ್ಕಾರದ ನಿಲುವಾದರೆ, ಆಗ ಮಸೂದೆಯ ವಿವಿಧ ನಿಬಂಧನೆಗಳು, ನಿಯಮಗಳಿಗೆ ಅನುಗುಣವಾಗಿ ಇದೆಯೇ ಎಂದು ಸೂಕ್ಷ್ಮವಾಗಿ ಪರೀಕ್ಷಿಸಿ ಶಾಸ್ತ್ರಗಳಲ್ಲಿ ಹೇಳುತ್ತಿರುವುದನ್ನು ಅವು ಉಲ್ಲಂಘಿಸುತ್ತಿದೆಯೆ ಎಂಬುದನ್ನು ತಿಳಿಯಬೇಕು. ಆದರೆ ಅವು ಹಿಂದೂ ಶಾಸ್ತ್ರಗಳಿಗೆ ಪೂರಕವಾಗಿಲ್ಲ ಅಷ್ಟೆ ಅಲ್ಲ, ಅವು ಅದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ನಾನು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ನಾನು ಈ ವಿಷಯಗಳನ್ನು ವಿಸ್ತರಿಸ ಹೊರಟರೆ, ಮುಗಿಸುವುದಕ್ಕೆ ದಿನಗಳೇ ಬೇಕಾಗುತ್ತವೆ ಎಂಬುದನ್ನು ನನ್ನ ಗೆಳೆಯರು ತಿಳಿದರೆ ಒಳ್ಳೆಯದು.

**ಶ್ರೀ ಮುನವಳ್ಳಿ :** ಅದು ನಿಮ್ಮ ಉದ್ದೇಶ ಕೂಡ.

**ಪಂಡಿತ ಮಾಳವೀಯ :** ನಿಮಗೆ ಸರ್ವಜ್ಞತ್ವದ ಪರಿಕಲ್ಪನೆಯ ಪರಿಚಯವಿದೆ. ಇಲ್ಲಿ ನನಗೆ ಹೊಸ ಶಕ್ತಿಯೊಂದು ಕಾಣಿಸುತ್ತಿದೆ, ಬೇರೆಯವರ ಮನಸ್ಸನ್ನು ತಿಳಿಯುವ ಜನ ಇದ್ದಾರೆ.

**ಶ್ರೀ ಮುನವಳ್ಳಿ :** ಖಂಡಿತಾ.

**ಪಂಡಿತ ಮಾಳವೀಯ :** ಗಣ್ಯ ಸದಸ್ಯರಿಗೆ ಅಭಿನಂದನೆಗಳು. ನಾನು ಸಾಧ್ಯವಾದಷ್ಟು ಕ್ಲುಪ್ತವಾಗಿ ವಿವರಣೆ ನೀಡಲು ಪ್ರಯತ್ನಿಸುತ್ತಿದ್ದೇನೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಕರ್ತವ್ಯಪ್ರಜ್ಞೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದ ಯಾವುದೇ ಸದಸ್ಯನಿಗೆ ಈ ಬಗ್ಗೆ ಸಮಗ್ರವಾದ, ವಿಸ್ತಾರವಾದ ವಿವರಣೆ ಬೇಕಿದ್ದರೆ, ಈ ಸಭೆ ಮುಗಿದ ನಂತರ ದಯಮಾಡಿ ನನ್ನನ್ನು ಭೇಟಿ ಮಾಡಲಿ. ನಾನು ಹೇಳಿದ ಪ್ರತಿಯೊಂದು ಅಂಶದ ಬಗ್ಗೆ ಯೋಚಿಸಲು, ಹೇಳಲು, ಅಧ್ಯಯನ ಮಾಡಲು ಎಷ್ಟೊಂದಿದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ. ನಾವು ಶಾಸ್ತ್ರಗಳ ಪ್ರಕಾರವೇ ನಡೆಯುವುದಾದರೆ ಇಡೀ ವಿಷಯ ತೀರಾ ಸಲೀಸಾಗಿಬಿಡುತ್ತದೆ. ಯಾಕೆಂದರೆ ಆಗ ಯಾವುದೇ ಭಿನ್ನಾಭಿಪ್ರಾಯಕ್ಕೆ, ವಿವಾದಕ್ಕೆ ಅವಕಾಶವಿರುವುದಿಲ್ಲ. ಎರಡೂ ಪಕ್ಷದವರು ಒಂದು ಅಳತೆಗೋಲನ್ನು ಒಪ್ಪಿಕೊಂಡರೆ, ಆ ಬಗ್ಗೆ ಪರಸ್ಪರ ಅವರಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದರೆ, ಗಜದ ಕಡ್ಡಿ ಹಿಡಿದು, ಪರಸ್ಪರ ಇಬ್ಬರಿಗೂ ತೃಪ್ತಿಯಾಗುವಂತೆ ಬಟ್ಟೆಯನ್ನು, ಯಾವುದೇ ಸಾಮಾನ್ಯ ಮನುಷ್ಯನನ್ನೂ ಅಳೆಯಬಹುದು. ಶಾಸ್ತ್ರಗಳ ಆಧಾರದ ಮೇಲೆ ನಾವು ಕಾನೂನು ಮಾಡುತ್ತಿದ್ದೇವೆ ಎಂದಾದರೆ, ತೀರಾ ಸ್ಪಷ್ಟವಾಗಿ ನಿರೂಪಿಸಿರುವ ವಿಶ್ಲೇಷಣೆಯ ನಿಯಮಗಳಿಗೆ ಅನುಗುಣವಾಗಿ ಕಾನೂನು ಮಂತ್ರಿಗಳಿಗಾಗಲಿ ಮತ್ತು ಇತರರಿಗಾಗಲಿ ಕುಳಿತು ಒಂದೊಂದೇ ಕಲಮನ್ನು ಪರೀಕ್ಷಿಸಿ, ಪರಿಶೀಲಿಸಿ ನಿರ್ಧರಿಸುವುದು ಸುಲಭವಾಗುತ್ತದೆ. (ಅಡಚಣೆ) ಗಣ್ಯ ಕಾನೂನು ಮಂತ್ರಿಗಳಿಗೆ, ಸ್ಪಷ್ಟ ಕಾಣ್ಕೆ ಇದೆ ಎಂಬುದರ ಸ್ಪಷ್ಟ ಅರಿವು ನನಗಿದೆ. ಕಾನೂನು ಮಂತ್ರಿಗಳಿಗೆ ಅಥವಾ ಇತರ ಯಾವುದೇ ಸದಸ್ಯನಿಗೆ, ಅಥವಾ ಸ್ವತಃ ನನಗೆ ಒಂದು ವಿಷಯದ ಬಗ್ಗೆ ಯಾವುದೇ ಅಭಿಪ್ರಾಯವಿರಬಹುದು. ಆದರೆ ಮಾನ್ಯ ಕಾನೂನು ಮಂತ್ರಿಗಳು ಮತ್ತು ಉಳಿದವರು ಒಂದು ಬಟ್ಟೆಯ ಚೂರನ್ನು ಅಳತೆ ಮಾಡಲು ಅಳತೆಗೋಲು

ಯಾವುದಿರಬೇಕೆಂದು ಒಪ್ಪಿಕೊಂಡರೆ ಯಾವುದೇ ರೀತಿಯ ಭಿನ್ನಾಭಿಪ್ರಾಯಕ್ಕಾಗಲಿ ವಿವಾದಕ್ಕಾಗಲಿ ಅವಕಾಶವೇ ಇರುವುದಿಲ್ಲ. (ಅಡಚಣೆ) ತಲೆಮಾರಿನಿಂದ ಬಳಸುತ್ತಾ ಬಂದಿರುವ ಒಂದು ಅಳತೆಗೋಲಿನ ಬಗ್ಗೆ ನಾನೀಗಲೇ ಸಾಕಷ್ಟು ಹೇಳಿದ್ದೇನೆ. (ಶ್ರೀ ಭಾರತಿ : ಅಳತೆಯಲ್ಲಿ ತುಂಬಾ ವ್ಯತ್ಯಾಸವಿದೆ) ಅದನ್ನು ಬಳಸಿ ಪವಿತ್ರ ಗ್ರಂಥಗಳ ವಿಶ್ಲೇಷಣೆ ಮಾಡಬಹುದು. ಆದರೆ ಮಿತ್ರ ಭಾರತಿಗೆ ಇನ್ನೂ ಈ ಬಗ್ಗೆ ತೃಪ್ತಿಯಾಗಿಲ್ಲ.

**ಶ್ರೀ ಭಾರತಿ :** ಆದರೆ ಅಳತೆಗೋಲಿನ ವ್ಯತ್ಯಾಸ ಒಂದು ಅಂಗುಲದಿಂದ ಒಂದು ಮೈಲಿನಷ್ಟಿದೆ.

**ಪಂಡಿತ ಮಾಳವೀಯ :** ನನ್ನ ಮಿತ್ರ ಶ್ರೀ ಭಾರತಿಯವರು ಹೇಳುತ್ತಿದ್ದಾರೆ ಅಳತೆಗೋಲಿನಲ್ಲಿಯೇ ಒಂದು ಅಂಗುಲದಿಂದ ಒಂದು ಮೈಲಿಯ ವ್ಯತ್ಯಾಸವಿರುತ್ತದೆ ಎಂದು. ಈ ಬಗ್ಗೆ ನಾನು ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಯಾಕೆಂದರೆ, ನನ್ನ ಮಿತ್ರರಿಗೆ ನಾನು ಉಲ್ಲೇಖಿಸುತ್ತಿರುವ ಅಳತೆಗೋಲಿನ ಸ್ವಭಾವದ ಬಗೆಗೆ ಅರಿವಿಲ್ಲ ಎಂಬುದು ಇದರಿಂದಲೇ ತಿಳಿಯುತ್ತದೆ. ಇಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವ ಪ್ರಶ್ನೆಯೇ ಬರುವುದಿಲ್ಲ. ಒಂದು ಮಿಲಿಮೀಟರ್‌ನ ಒಂದು ದಶಲಕ್ಷ ಭಾಗದ ವ್ಯತ್ಯಾಸವೂ ಬರುವುದಿಲ್ಲ. ಹಾಗಾಗಿ ಅದನ್ನು ಒಪ್ಪಿಕೊಂಡರೆ ಈ ಬಗ್ಗೆ ಎಲ್ಲಾ ವಿವಾದಗಳಿಗೆ ತೆರೆಬೀಳುತ್ತದೆ. ಈ ಹಂತದಲ್ಲಿ ಬೇರೆ ಏನನ್ನೂ ಹೇಳುವ ಆವಶ್ಯಕತೆ ಬರುವುದಿಲ್ಲ. ಆಗ ವಿಷಯವನ್ನು ಮಾನ್ಯ ಕಾನೂನು ಮಂತ್ರಿಗಳಿಗೆ ಒಪ್ಪಿಸಿಬಿಡಬಹುದು. ನಾನು ಕಾನೂನು ಮಂತ್ರಿಯವರ ಕೈಗೆ ಇಂಥ ಜವಾಬ್ದಾರಿಯನ್ನು ಒಪ್ಪಿಸಲು ತಯಾರಿದ್ದೇನೆ. ಕೇವಲ ಕಾನೂನಿನ ಪರ ಇರುವ ಸದಸ್ಯರುಗಳ ಪ್ರತಿನಿಧಿಯಾಗಿ ಮಾತ್ರವಲ್ಲ, ಶಾಸ್ತ್ರಗ್ರಂಥಗಳಿಗೆ ಅನುಗುಣವಾಗಿ ಕಲಂನ ಒಂದೊಂದೇ ಅಂಶವನ್ನು ಪರಿಶೀಲಿಸಿ ಮೀಮಾಂಸೆಗಳ ಮೂಲಕ ಅವನ್ನು ವ್ಯಾಖ್ಯಾನಿಸಿ, ಕಾಯಿದೆಯ ನಿಬಂಧನೆಗಳಿಗೆ ಅವನ್ನು ಅನ್ವಯಿಸಿ ಅವು ಶಾಸ್ತ್ರಗ್ರಂಥಗಳನ್ನು ಉಲ್ಲಂಘಿಸುತ್ತವೆಯೆ ಇಲ್ಲವೇ ಎಂಬುದನ್ನು ನೋಡಬೇಕೆನ್ನುವ ನನ್ನಂಥವರ ಅಂಪೈರಾಗಿ ಅಥವಾ ತೀರ್ಪುಗಾರನಾಗಿ ಇದನ್ನು ಒಪ್ಪಿಸಲು ಸಿದ್ಧನಿದ್ದೇನೆ. ಅವರು ಅದನ್ನೊಮ್ಮೆ ಒಪ್ಪಿಕೊಂಡರೆ ನಾನು ತೃಪ್ತನಾಗುತ್ತೇನೆ. ಈ ಬಗ್ಗೆ ಯಾವುದೇ ಬೇರೆ ವಿರೋಧವೂ ಇಲ್ಲ. ಇದಕ್ಕಿಂತ ಯುಕ್ತವಾದದ್ದು ಮತ್ತು ನ್ಯಾಯಯುತವಾದದ್ದು ಇದೆ ಎಂದು ನನಗನ್ನಿಸುವುದಿಲ್ಲ. ಆದರೆ ಅದು ಸಾಧ್ಯವಾಗದಿದ್ದ ಪಕ್ಷದಲ್ಲಿ ಹಿಂದೂ ಕಾನೂನು ಮಸೂದೆಯಲ್ಲಿರುವುದು ಶಾಸ್ತ್ರಗ್ರಂಥಗಳ ಆಧಾರದ ಮೇಲೆ ರಚಿತವಾಗಿದೆ ಎಂಬ ನಿಲುವನ್ನು ಬಿಡಬೇಕು ಮತ್ತು ಹಿಂತೆಗೆದುಕೊಳ್ಳಬೇಕು. ಯಾಕೆಂದರೆ ಅಂತಹ ಹೇಳಿಕೆಗಳ ಆಧಾರಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಲು ಅವಕಾಶಗಳಿಲ್ಲದ ನಮ್ಮ ಲಕ್ಷಾಂತರ ಜನ ಈ ರೀತಿಯ ತಪ್ಪಾದ ಹಾಗೂ ಸಂಪೂರ್ಣವಾಗಿ ದಾರಿತಪ್ಪಿಸುವ ಹೇಳಿಕೆಗಳಿಂದ ದಾರಿತಪ್ಪುವುದು ಬೇಡ. ಆ ಅಪಾಯಕಾರಿಯಾದ ಹೊಂಡದಲ್ಲಿ ಅವರು ಬೀಳುವುದು ತಪ್ಪಲಿ. ಬಹುಶಃ ಮಸೂದೆಯನ್ನು ಅವರು ಯಾವ ದುರುದ್ದೇಶವನ್ನೂ ಇಟ್ಟುಕೊಳ್ಳದೇ ಮಾಡಿರಬಹುದು ಆದರೆ ಅದರಿಂದ ಅಪಾರವಾದ ಹಾನಿಯಾಗುವ ಸಾಧ್ಯತೆಯಿದೆ. ಅದೂ ಸಾಧ್ಯವಾಗದಿದ್ದ ಪಕ್ಷದಲ್ಲಿ ಈ ಸದನದ ಸದಸ್ಯರಿಗೆ ಅಥವಾ ನನ್ನಂತೆ ಯೋಚಿಸುವ ಸದಸ್ಯರಿಗೆ, ಈ ಎಲ್ಲಾ ಪ್ರಸ್ತಾವನೆಗಳನ್ನು – ಆ ಬಗ್ಗೆ ಶಾಸ್ತ್ರಗಳನ್ನು ಏನು ಹೇಳಿದೆ ಎಂಬುದರ ಬೆಳಕಿನಲ್ಲಿ ತೀರಾ ವಿವರವಾಗಿ ಪರಿಶೀಲಿಸುವುದು ಅನಿವಾರ್ಯವಾಗುತ್ತದೆ. ಇದು ಸುದೀರ್ಘವಾದ ಪ್ರಕ್ರಿಯೆ. ಯಾಕೆಂದರೆ, ಇದರಲ್ಲಿ ಪ್ರಸ್ತಾಪವಿರುವುದೆಲ್ಲಾ ಬೇರೆಯೆಡೆಯಲ್ಲಿ ವಿಧಿಸಿರುವ ಅಂಶಗಳೇ ಎಂದು ಸಾಧಿಸುತ್ತಿರುವಾಗ, ಪರಸ್ಪರ ಒಪ್ಪಂದದ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಅಥವಾ ಅಭಿಪ್ರಾಯಕ್ಕಿಂತ ವಾಸ್ತವ ಸಂಗತಿಗಳ ಬಲದ ಮೇಲೆ ಪರಿಹಾರ ಕಂಡುಕೊಳ್ಳಬಹುದು. ಚರ್ಚೆಯಾಗುವ ಪ್ರತಿ ವಿಷಯದ ಬಗೆಗೆ, ಪ್ರತಿಪದದ ಬಗ್ಗೆ ಇರುವ ಪ್ರತಿಯೊಂದು ಕಲಮನ್ನೂ ಉಪಖಂಡದ ಅಪಾರ

ಶಾಸ್ತ್ರಗಳ ಹಾಗೂ ಕಾನೂನು ಗ್ರಂಥಗಳ (ಧರ್ಮಶಾಸ್ತ್ರಗಳ) ಅಪಾರ ರಾಶಿಯಿಂದ ಸೂಕ್ತ ಗ್ರಂಥಗಳನ್ನು ಈ ಸದನದ ಗಮನಕ್ಕೆ ತರಬೇಕು. ಅದು ಸಾಧ್ಯ ಎಂದು ಪರಿಗಣಿಸಲಾಗುತ್ತದೊ ಇಲ್ಲವೊ ನನಗೆ ತಿಳಿಯದು. ಅದಕ್ಕೆ ಅವಕಾಶವಿರಬೇಕು ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ. ಆದರೆ ಅದು ಸಾಧ್ಯ ಹಾಗೂ ಪ್ರಾಯೋಗಿಕ ಎಂದು ಪರಿಗಣಿಸುತ್ತಾರೊ ಇಲ್ಲವೊ ತಿಳಿಯದು. ಹಾಗಾಗಿ ಸರ್ಕಾರದಲ್ಲಿ ನನ್ನ ಮನವಿಯೇನೆಂದರೆ – ನಮ್ಮ ಮುಂದಿರುವ ವಿಷಯದ ಬಗ್ಗೆ ಹಾಗೂ ಅದರಿಂದ ತೊಂದರೆಗೆ ಒಳಗಾಗುವವರ ಬಗ್ಗೆ ನ್ಯಾಯಯುತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು ಎಂಬ ಕಾರಣದಿಂದ ಮತ್ತು ಈ ಸದನದಲ್ಲಿ ಈ ಮಸೂದೆಯನ್ನು ಅಂಗೀಕರಿಸುವ ದೃಷ್ಟಿಯಿಂದ ಈ ಅಂಶದ ಬಗ್ಗೆ ತನ್ನ ನಿಲುವನ್ನು ಸರ್ಕಾರ ಪರಿಶೀಲಿಸಬೇಕು. ಹಾಗೂ ಈ ಹಿಂದೂ ಮಸೂದೆ ಹಿಂದೂ ಶಾಸ್ತ್ರಗಳನ್ನು ಅವಲಂಬಿಸಿಲ್ಲ ಅದರಲ್ಲಿ ಹೇಳಿರುವುದನ್ನು ತಾನು ಲೆಕ್ಕಿಸುವುದಿಲ್ಲ ಹಾಗೂ ಈ ಮಸೂದೆ ಅದನ್ನು ರಚಿಸಿದವನ ವಿವೇಕ ಹಾಗೂ ಇಚ್ಛೆಯನ್ನು ಅವಲಂಬಿಸಿದೆ ಎಂದು ಜಗತ್ತಿಗೆ ಘೋಷಿಸಬೇಕು ಅಥವಾ ನಾನು ಹೇಳಿದ ವಿಧಾನವನ್ನು ಅಂದರೆ ಪ್ರತಿಯೊಂದು ಕಲಮನ್ನೂ ಆಮೂಲಾಗ್ರವಾಗಿ ಹಾಗಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿ ವಿವಾದಾತೀತವಾಗಿ ಸ್ವೀಕೃತವಾದ ಪ್ರಾಚೀನ ಶಾಸ್ತ್ರಗಳಿಗೆ ಅನುಗುಣವಾಗಿರುವ ಕಲಮುಗಳನ್ನು ಮಾತ್ರ ಸದನದ ಮುಂದೆ ಇಡಬೇಕು.

ಈ ವಿಷಯದ ಬಗ್ಗೆ ಇನ್ನೂ ಕೆಲ ಸಮಸ್ಯೆಗಳಿವೆ. ಈ ಮಸೂದೆಯನ್ನು ವಿವಾಹ ಹಾಗೂ ವಿಚ್ಛೇದನದ ವಿಷಯಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ ಎಂದು ಹೇಳಲಾಗುತ್ತಿದೆ. ನನ್ನ ಸಮಸ್ಯೆಯೆಂದರೆ, ಅಷ್ಟಕ್ಕೇ ಸಮಸ್ಯೆಯ ಸ್ವರೂಪ ಬದಲಾಗುವುದಿಲ್ಲ. ಅದರಲ್ಲಿ ಸ್ವಲ್ಪವೂ ವಿವಾದಾತ್ಮಕವಲ್ಲದ ಯಾವುದಾದರೂ ಭಾಗವಿದ್ದಲ್ಲಿ ಹಾಗೂ ಅದನ್ನು ಸದನದಲ್ಲಿ ಮಂಡಿಸಿದ ಪಕ್ಷದಲ್ಲಿ ಹೆಚ್ಚು ತೊಂದರೆ ಹಾಗೂ ವಿವಾದವಿಲ್ಲದೆ ಅದು ಅಂಗೀಕೃತವಾಗುವುದು ಎಂದು ಭಾವಿಸಿದ್ದೇನೆ. ಆದರೆ ಹಿಂದೂಗಳಲ್ಲಿ ವಿವಾಹಕ್ಕಿಂತ ತೀರಾ ಮೂಲಭೂತವಾದ, ವಿವಾದಾತ್ಮಕವಾದ ಪ್ರಶ್ನೆ ಇರಲು ಸಾಧ್ಯವೆ? ಇದಕ್ಕಿಂತ ವಾದಗ್ರಸ್ತವಾದ ವಿಷಯ ಬೇರೊಂದಿಲ್ಲ ಎಂಬುದು ನನ್ನ ಭಾವನೆ. ಕೆಲವರು ಮಸೂದೆಯ ಇತರ ಭಾಗಗಳು ಇದಕ್ಕಿಂತ ವಾದಗ್ರಸ್ತವೆನ್ನಬಹುದು. ವಿವಾಹ ಹಾಗೂ ವಿಚ್ಛೇದನ ಹೆಚ್ಚು ವಿವಾದಗ್ರಸ್ತವಾದ ವಿಷಯ ಎಂದು ಇನ್ನೂ ಕೆಲವರು ಅಷ್ಟೇ ಬಲವಾಗಿ ಹೇಳುತ್ತಾರೆ ಎನ್ನುವುದರಲ್ಲಿ ನನಗೆ ಅನುಮಾನವಿಲ್ಲ. ಹಾಗಾಗಿ ಈ ಮಸೂದೆಯನ್ನು ಈ ಅಂಶಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ ಎಂದು ತೀರ್ಮಾನಿಸಿದ್ದರೂ, ಈ ಪ್ರಶ್ನೆಯ ಮೂಲಭೂತ ಅಂಶ ಬದಲಾಗುವುದಿಲ್ಲ. ಹಾಗಾಗಿ ನಾವು ಈ ನಿಟ್ಟಿನಲ್ಲಿ ಮುಂದುವರೆಯಬೇಕಾದರೆ, ತೀರಾ ಜಾಗರೂಕರಾಗಿರಬೇಕು. ಜನರಲ್ಲಿ ಬಹುಸಂಖ್ಯಾತರು ಇದರ ವಿರುದ್ಧವಿದ್ದಾರೆ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಅದಕ್ಕಿಂತ ಮೂಲಭೂತವಾದ ತೊಂದರೆಯೊಂದಿದೆ – ಮಾನ್ಯ ಕಾನೂನು ಮಂತ್ರಿಗಳು ಒಂದು ಹಂತದಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸುತ್ತಾ ಆಗ ಭಾರತೀಯ ರಾಜ್ಯಗಳು ಎನ್ನಲಾಗುತ್ತಿದ್ದ ಜನರಿಗೆ ಮಸೂದೆಯನ್ನು ಅನ್ವಯಿಸುವ ಉದ್ದೇಶವಿರಲಿಲ್ಲ ಎಂದರು. ನಂತರ ತಮ್ಮ ಮಾಮೂಲಾದ ಜಾಗರೂಕ ಹಾಗೂ ಕರಾರುವಾಕ್ಕಾದ ಶೈಲಿಯಲ್ಲಿ ಮುಂದೆ ಯಾವುದೋ ಹಂತದಲ್ಲಿ ಈ ರಾಜ್ಯಗಳ ಪ್ರಶ್ನೆ ಬಂದರೆ, ಆಗ ಈ ವಿಷಯವನ್ನು ಇಡಿಯಾಗಿ ಪರಿಶೀಲಿಸಬೇಕಾಗುತ್ತದೆ ಅಥವಾ ಆ ಅರ್ಥಬರುವ ಮಾತುಗಳನ್ನಾಡಿದರು. ನಾನು ಅವರ ಮಾತನ್ನೇ ಯಥಾವತ್ತಾಗಿ ಇಲ್ಲಿ ಉಲ್ಲೇಖಿಸುತ್ತಿಲ್ಲ. ಆ ರಾಜ್ಯಗಳ ಯಾವುದೇ ಗೆಜೆಟ್ಟಿನಲ್ಲಿ ಈ ಮಸೂದೆ ಪ್ರಕಟವಾಗಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಭಾರತ ಸರ್ಕಾರದ ಗೆಜೆಟ್ಟಿನಲಿ ಇದು ಪ್ರಕಟವಾಗಿತ್ತು. ಕೆಲವು ಪ್ರಾಂತ್ಯಗಳ ಗೆಜೆಟ್ಟಿನಲ್ಲಿಯೂ ಇದು

ಪ್ರಕಟವಾಗಿತ್ತು. ಅಂಥ ಸಂದರ್ಭ ಬರಲಾರದು ಎಂಬ ಭಾವನೆಯಿಂದ ಆ ರಾಜ್ಯಗಳ ಗೆಜೆಟ್ಟಿನಲ್ಲಿ ಇದನ್ನು ಪ್ರಕಟಿಸಿರಲಿಲ್ಲ. ಹಾಗಾಗಿ ಆ ರಾಜ್ಯಗಳ ಜನತೆಗೆ ಇದನ್ನು ಪರಿಶೀಲಿಸುವ ಆವಶ್ಯಕತೆಯೇ ಬರಲಿಲ್ಲ. ನಿಜ, ಅವರಿಗೆ ಇದರ ಬಗ್ಗೆ ಯಾವುದೇ ಕಾಳಜಿಯೂ ಇಲ್ಲ. ಅದರ ಪರಿಣಾಮ? ಇಂದು ನಮ್ಮ ಹೊಸ ಸಂವಿಧಾನದಿಂದಾಗಿ, ಪ್ರತಿಯೊಂದು ಪ್ರಾಂತ್ಯವೂ ಈ ನಾಡಿನ ಭಾಗವೇ ಆಗುತ್ತದೆ. ಇಂದು ನಾವು ಅಂಗೀಕರಿಸುವ ಕಾನೂನುಗಳು ಪ್ರತಿಯೊಂದು ಪ್ರದೇಶದ ಜನರಿಗೂ ಅನ್ವಯವಾಗುತ್ತದೆ. ಪರಿಸ್ಥಿತಿಯ ಅಸಂಬದ್ಧತೆಯ ಬಗ್ಗೆ ಯಾರಾದರೂ ಯೋಚಿಸುತ್ತಿದ್ದಾರೆಯೆ! ದೇಶದ ಮೂರನೇ ಒಂದು ಭಾಗದಷ್ಟು.........

**ಶ್ರೀ ಮುನವಳ್ಳಿ :** ಅದು ಸರಿಯಲ್ಲ, ಯಾಕೆಂದರೆ ಈಗಾಗಲೇ ಹಲವಾರು ರಾಜ್ಯಗಳು ಪ್ರಾಂತ್ಯಗಳಲ್ಲಿ ವಿಲೀನ ಹೊಂದಿವೆ.

**ಪಂಡಿತ ಮಾಳವೀಯ :** ನನ್ನ ಗೆಳೆಯರು "ಅದು ಸರಿಯಲ್ಲ. ಯಾಕೆಂದರೆ ಈಗಾಗಲೇ ಹಲವಾರು ರಾಜ್ಯಗಳು ಪ್ರಾಂತ್ಯಗಳಲ್ಲಿ ವಿಲೀನಗೊಂಡಿವೆ" ಎನ್ನುತ್ತಾರೆ. ನಾನು ಅತಂಹ ಜಾಣ ಹೇಳಿಕೆಯನ್ನು ವಿರೋಧಿಸುವ ಧೈರ್ಯ ಮಾಡುವುದಿಲ್ಲ. ಆದರೆ ಅವು ವಿಲೀನಗೊಳ್ಳುವ ಮೊದಲು ಹಾಗೂ ವಿಲೀನಗೊಂಡ ನಂತರವಂತೂ ಎಲ್ಲಾ ಮಸೂದೆಯನ್ನು ಪ್ರಕಟಿಸಿಲ್ಲ ಎಂದು ಭಾವಿಸಿದ್ದೇನೆ.

**ಶ್ರೀ ಮುನವಳ್ಳಿ :** ಪ್ರಶ್ನೆ.

**ಪಂಡಿತ ಮಾಳವೀಯ :** ನನ್ನ ಸ್ನೇಹಿತರು ಈ ಹೇಳಿಕೆಯನ್ನು ಪ್ರಶ್ನಿಸುತ್ತಿದ್ದಾರೆ. ಇದು ನನಗೆ ಮೀರಿದ್ದು ಎನಿಸುತ್ತದೆ. ಮೂರನೇ ಒಂದು ಭಾಗಕ್ಕೆ – ನಾನು ಮತ್ತೆ ಹೇಳುತ್ತೇನೆ. ಈ ಮಹಾನ್ ಉಪಖಂಡದಲ್ಲಿ, ಜನತೆಯ ಬದುಕಿಗೆ ಅಸ್ತಿತ್ವಕ್ಕೆ ತೊಂದರೆಮಾಡಬಲ್ಲಂಥ ಕಾನೂನೊಂದು ಜಾರಿಗೆ ಬರುತ್ತಿದೆ : ಅದೇನು ಎಂದು ತಿಳಿಯುವ ಹಾಗೂ ಪರಾಮರ್ಶಿಸುವ ಅವಕಾಶವೂ ಜನರಿಗೆ ಸಿಕ್ಕಿಲ್ಲ.

**ಶ್ರೀ ಲಕ್ಷ್ಮಣನ್ (ತಿರುವಾಂಕೂರ್ – ಕೊಚ್ಚಿನ್) :** ಕೆಲವು ರಾಜ್ಯಗಳಲ್ಲಿ ಉದಾಹರಣೆಗೆ ತಿರುವಾಂಕೂರ್ ಕೊಚ್ಚಿನ್ ಮುಂತಾದ ಕೆಲವು ಭಾಗಗಳಲ್ಲಿ ಈ ಮಸೂದೆ ಪ್ರಕಟವಾಗಿದೆ.

**ಶ್ರೀ ಭಾರತಿ :** ಗಣ್ಯ ಸದಸ್ಯರಿಗೆ ಬೇರೆ ರಾಜ್ಯಗಳ ಬಗ್ಗೆ ಏನಾದರೂ ತಿಳಿದಿದೆಯೆ ಎಂದು ಅನುಮಾನ ಬರುತ್ತದೆ.

**ಪಂಡಿತ ಮಾಳವೀಯ :** ಕಣ್ಣಿಗೆ ಕಾಣುವುದು ಬಿಟ್ಟು ಬೇರೇನನ್ನು ನೋಡಲು ತಯಾರಿಲ್ಲದ ಗುಂಪಿಗೆ ನಾನು ಸೇರಿಲ್ಲ. ನಾನು ಏನು ಹೇಳಬೇಕೆಂದಿದ್ದೇನೆ, ನಾನು ಏನು ಹೇಳುತ್ತಿದ್ದೇನೆ ಎಂಬುದು ನನಗೆ ಗೊತ್ತು. ಹಾಗಾಗಿ ಎಷ್ಟೇ ಅಡಚಣೆಗಳು ಬಂದರೂ ಬೇಸರವಿಲ್ಲ. ಏನೋ ಹೇಳಬೇಕು ಎಂದಾಗಲಿ, ಯಾರನ್ನೊ ಸಂತೋಷಪಡಿಸುವುದಕ್ಕಾಗಲಿ ಈ ಮಾತುಗಳನ್ನು ಆಡುತ್ತಿಲ್ಲ. ನನಗೆ ನಾನು ಹೇಳುವ ಮಾತಿನಲ್ಲಿ ನಂಬಿಕೆಯಿದೆ. ಹಾಗಾಗಿ ಹೇಳುತ್ತಿದ್ದೇನೆ. ಎಷ್ಟೇ ಅಡಚಣೆ ಮಾಡಲಿ, ಪ್ರಶ್ನೆ ಎಂದೂ ಸತ್ಯವನ್ನು ಸುಳ್ಳಾಗಿಸುವುದಿಲ್ಲ. ಒಂದು ಸಂಗತಿ ಸತ್ಯವಾಗಿದ್ದರೆ, ಸರಿಯಾಗಿದ್ದರೆ, ಯಾರು ಏನೇ ಹೇಳಲಿ ಈ ಪ್ರಶ್ನೆಗಳು ವಿಷಯವನ್ನು ಮತ್ತಷ್ಟು ಸ್ಪಷ್ಟಪಡಿಸಬಹುದು ಅಷ್ಟೆ.

**ಶ್ರಿ ಜೆ.ಆರ್. ಕಪೂರ್** : ಪ್ರಶ್ನೆಗಳೂ ಸಹಕಾರಿಯೇ.

**ಪಂಡಿತ ಮಾಳವೀಯ :** ಪ್ರಶ್ನೆಯನ್ನು ಸಹಾಯವಾಗಲಿ ಎಂಬ ಉದ್ದೇಶದಿಂದ ಕೇಳುತ್ತಿದ್ದಾರೊ ಇಲ್ಲವೊ, ನನಗಂತೂ ಅದರ ಬಗ್ಗೆ ಲವಲೇಶವೂ ಬೇಸರವಿಲ್ಲ. ಅಂಥ ಪ್ರಮುಖ ಹಾಗೂ ಗುರುತರವಾದ ವಿಷಯದ ಬಗ್ಗೆ ಸದಸ್ಯರಲ್ಲಿ ಯಾವುದೇ ಅನುಮಾನವಿದ್ದಲ್ಲಿ ಹಾಗೂ ಸದಸ್ಯರಿಗೆ ತಮ್ಮ ಅನುಮಾನವನ್ನು ಪ್ರಶ್ನೆಯನ್ನು ಕೇಳಲು ಅವಕಾಶ ಸಿಗದೆ ಹೋದಲ್ಲಿ ಮತ್ತು ಮಾತನಾಡುತ್ತಿರುವವರು ಸದಸ್ಯರು ಎತ್ತಿದ

ಪ್ರಶ್ನೆಗಳಿಗೆ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಉತ್ತರಿಸುವ ಪ್ರಯತ್ನ ಮಾಡದೇ ಹೋದಲ್ಲಿ ಕಾನೂನು ಹಾಗೂ ಸಂಸತ್ತಿನ ಮೂಲಭೂತ ಉದ್ದೇಶವೆ ವಿಫಲವಾದಂತೆ. ಹಾಗಾಗಿ ನಾನು ಅಡಚಣೆಗಳನ್ನು ವಿರೋಧಿಸುವುದಿಲ್ಲ.

**ಶ್ರೀ ರಾಧೇಲಾಲ್ ವ್ಯಾಸ್ :** ಮದ್ರಾಸಿನಲ್ಲಿ ಹಾಗೂ ಬಾಂಬೆಯಲ್ಲಿ ಜಾರಿಯಲ್ಲಿರುವ ಏಕವಿವಾಹ ಹಾಗೂ ವಿಚ್ಛೇದನ ಕುರಿತ ಕಾಯಿದೆಯಿಂದ ಹಿಂದೂ ಸಮಾಜದ ಮೇಲೆ ಎಂಥ ಪರಿಣಾಮವಾಗಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಬಲ್ಲರೆ?

**ಪಂಡಿತ ಮಾಳವೀಯ :** ನಾನು ತಮಗೆ ಆಭಾರಿ. ನನ್ನನ್ನು ದಾರಿ ತಪ್ಪಿಸುವ ಸಾಧ್ಯತೆಗಳು ಕಡಿಮೆ ಎಂಬ ಭರವಸೆಯನ್ನು ನಿಮಗೆ ನೀಡುತ್ತೇನೆ. ಈ ರಾಜ್ಯಗಳಲ್ಲಿ ಜನತೆಗೆ ಈ ಮಸೂದೆಯ ಬಗ್ಗೆ ತಿಳಿಯಲು ಅವಕಾಶವೇ ಇರಲಿಲ್ಲ ಎಂದು ಹೇಳುತ್ತಿದ್ದೆ. ಈ ಬಗ್ಗೆ ತೀರಾ ಆಳಕ್ಕೆ ಹೋಗಬಲ್ಲೆ. ಶಾಸನರಚನೆಗೆ ಸಂಬಂಧಿಸಿದಂತೆ ಎಲ್ಲರಿಗೂ ತಿಳಿಸಿರುವ ಹಾಗೂ ಸಾರ್ವತ್ರಿಕವಾಗಿ ಅಂಗೀಕರಿಸಲಾಗಿರುವ ತತ್ವಗಳನ್ನು ಮತ್ತು ವಿಧಾನಗಳನ್ನು ಹಾಗೂ ಈಗ ನಡೆದಿರುವ ಅಗಾಧ ಅಪಚಾರವನ್ನು ತೋರಿಸಬಲ್ಲೆ. ಅದಕ್ಕೆ ಬದಲಾಗಿ, ಈ ವಿಷಯದಲ್ಲಿ ಎಂಥ ಘೋರ ಅನ್ಯಾಯ ಆಗಿಬಿಡಬಹುದು ಹಾಗೂ ಪೂರ್ತಿಯಾಗಿ ಅಲ್ಲದಿದ್ದರೂ ಸ್ವಲ್ಪವಾದರೂ ಅದನ್ನು ತಪ್ಪಿಸಲು ಸಾಧ್ಯವೇ ಎಂಬುದನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದೇನೆ. ಸರ್ಕಾರ ಘೋಷಿಸಿರುವಂತೆ ಈ ಮಸೂದೆಯನ್ನು ತಕ್ಷಣದಲ್ಲಿ ಜಾರಿಗೊಳಿಸಬೇಕಾಗಿದ್ದಲ್ಲಿ, ಆ ಜನರ ನಡುವೆ ಮಸೂದೆಯನ್ನು ಪ್ರಚಾರಮಾಡುವುದಕ್ಕಾಗಲಿ, ಪ್ರಕಟಿಸುವುದಕ್ಕಾಗಲಿ, ಸಾಧ್ಯವಿಲ್ಲ. ಹಾಗಾಗಿ ನಾನು ಕಾಲಹರಣದ ಕ್ರಮವನ್ನು ಸೂಚಿಸುವುದಿಲ್ಲ. ನನ್ನ ಕಿವಿಯಲ್ಲಿ ಪದೇ ಪದೇ ಒಂದಲ್ಲದಿದ್ದರೆ ಇನ್ನೊಂದು ಮಾತನ್ನು ಉಸುರುತ್ತಿರುವ ಸಹೋದರಿಯೊಬ್ಬಳು ಬದಿಯಲ್ಲಿರುವುದು ನನ್ನ ಭಾಗ್ಯವಾಗಿದೆ.

**ಶ್ರೀಮತಿ ರೇಣುಕಾ ರಾಯ್ :** ಮಸೂದೆಯಲ್ಲಿ ಸೂಚಿಸಿರುವ ಸುಧಾರಣೆಗಳನ್ನು ಜಾರಿಗೆ ತರುವುದನ್ನು ಸಮರ್ಥಿಸಿದ ಅತ್ಯುತ್ತಮ ಭಾಷಣ ಇದು ಎಂದು ಹೇಳುತ್ತಿದ್ದೆ.

**ಶ್ರೀ ಮುನವಳ್ಳಿ :** ಈ ಬಗ್ಗೆ ನನ್ನ ಗೆಳೆಯರಿಗೆ ತಿಳಿಸಿ ಹೇಳಬೇಕು ಏಕೆಂದರೆ...........

**ಸರ್ದಾರ್ ಬಿ.ಎಸ್.ಮಾನ್ :** ಸದನಕ್ಕೆ ಈ ಬಗ್ಗೆ ತಿಳಿಸಿ ಹೇಳಲು ತುದಿಗಾಲಿನಲ್ಲಿ ನಿಂತಿರುವ ಸನ್ಮಾನ್ಯ ಸದಸ್ಯರಿಗೆ ಇದು ಒಳ್ಳೆಯ ಅವಕಾಶ.

**ಪಂಡಿತ ಮೈತ್ರ :** ಈ ಮಸೂದೆಯನ್ನು ರಾಜ್ಯಗಳಲ್ಲಿ ಪ್ರಕಟಿಸಿಲ್ಲ ಎಂಬ ಬಹಳ ಮುಖ್ಯ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ಆ ಬಗ್ಗೆ ಮಾನ್ಯ ಸದಸ್ಯರೇಕೆ ವಕಾಲತ್ತು ವಹಿಸಬೇಕೆಂದು ನನಗೆ ತಿಳಿಯದು.

**ಪಂಡಿತ ಮಾಳವೀಯ :** ಈ ಮಸೂದೆಯನ್ನು ರಾಜ್ಯಗಳಲ್ಲಿ ಪ್ರಕಟಿಸದಿರುವುದು ಮತ್ತು ಈಗ ಅದನ್ನು ಅವರಿಗೆ ಅನ್ವಯಿಸುತ್ತಿರುವುದು ತುಂಬಾ ಅನ್ಯಾಯದ ವಿಚಾರ. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಏನಾದರು ಮಾಡಬೇಕು. ಅದನ್ನು ಸರಿಪಡಿಸುವ ವಿಧಾನವನ್ನು ಮಾನ್ಯ ಕಾನೂನು ಮಂತ್ರಿಗಳು ರೂಪಿಸಬೇಕು. ನಾನು ಈಗಾಗಲೇ ಹೇಳಿರುವಂತೆ ಈ ಹಂತದಲ್ಲಿ ಅಸಾಧ್ಯವಾದ, ಪ್ರಾಯೋಗಿಕವಲ್ಲದ ಗ್ರಾಂಥಿಕ ಸಲಹೆಗಳನ್ನು ನೀಡಬಾರದು. ಆದ್ದರಿಂದ ಈ ಮಸೂದೆಯನ್ನು ಮಾಹಿತಿಯ ದೃಷ್ಟಿಯಿಂದ ಪ್ರಕಟಿಸಿ ಅಥವಾ ಪ್ರಚಾರ ಮಾಡಿ ಎಂದು ನಾನು ಸೂಚಿಸುತ್ತಿಲ್ಲ. ಆದರೆ ಈ ತೊಡಕನ್ನು ಸ್ವಲ್ಪಮಟ್ಟಿಗಾದರೂ ಸರಿಪಡಿಸಿಕೊಳ್ಳುವಂಥ ಪರಿಹಾರವನ್ನೇನಾದರೂ ಹುಡುಕಿಕೊಳ್ಳಬೇಕು. ನಾನೊಂದು ಸಲಹೆಯನ್ನು ಕಾನೂನು ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮಸೂದೆಯನ್ನು ವಿರೋಧಿಸುವವರ ನೆಲೆಯಲ್ಲಿ ನಿಂತು ಹೇಳುತ್ತಿಲ್ಲ. ಬದಲಾಗಿ

ಬೆಂಬಲಿಗನ ನೆಲೆಯಿಂದ ಮಾತನಾಡುತ್ತಿದ್ದೇನೆ – ಅದೇನೆಂದರೆ, ದೇಶದ ಬಹುಸಂಖ್ಯಾತರಿಗೆ ಇಂಥ ಗಂಭೀರವಾದ, ಕಾನೂನುಬದ್ಧವಾದ ಕಷ್ಟವನ್ನು ನೀಡಬಾರದು. ಈ ಸಲಹೆಯನ್ನು ಎಲ್ಲರ ವಿಷಯದಲ್ಲದಿದ್ದರೂ ಕೊನೆಯ ಪಕ್ಷ ಆ ರಾಜ್ಯಗಳ ಬಗ್ಗೆಯಾದರೂ ಸಹಾನುಭೂತಿಯಿಂದ ಪರಿಶೀಲಿಸುವಂತೆ ಕೇಳಿಕೊಳ್ಳುತ್ತೇನೆ. ನಾನೀಗ ಮುಂದಿಟ್ಟಿರುವ ತಿದ್ದುಪಡಿ ಸೂಚನೆಯಲ್ಲಿ ಪ್ರತಿ ರಾಜ್ಯದವರಿಂದಲೂ ಮಸೂದೆಯ ಬಗ್ಗೆ ಮತಗಣನೆಯನ್ನು ಪಡೆದು, ನಂತರ ಅದರ ಫಲಿತಾಂಶಕ್ಕೆ ಅನುಗುಣವಾಗಿ ಮಸೂದೆಯನ್ನು ಜಾರಿಗೊಳಿಸುವುದರ ಬಗ್ಗೆ ರಾಜ್ಯದ ಶಾಸಕಾಂಗವು ತೀರ್ಮಾನಿಸಬೇಕು. ಅದರ ಬಗ್ಗೆ ನಂತರ ಮಾತನಾಡುತ್ತೇನೆ. ನನ್ನದೊಂದು ಸಲಹೆ – ನನ್ನ ತಿದ್ದುಪಡಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾರೊ ಇಲ್ಲವೊ – ಈವರೆಗೆ ಈ ಮಸೂದೆಯನ್ನು ಪ್ರಕಟಿಸದಿರುವ ಭಾರತೀಯ ರಾಜ್ಯಗಳೆಂದು ಕರೆಯಲಾಗುವ ದೇಶದ ಭಾಗಗಳಿಗೆ ಈ ಮಸೂದೆಯನ್ನು ಜಾರಿಗೊಳಿಸುವುದು ಎಷ್ಟು ಸೂಕ್ತ ಎಂದು ಕಾನೂನು ಮಂತ್ರಿಗಳು ಆಲೋಚಿಸಬೇಕು. ಆ ರಾಜ್ಯಗಳಲ್ಲಿ ಈ ಮಸೂದೆಯನ್ನು ಪ್ರಕಟಿಸಿ, ಪ್ರಚಾರ ಮಾಡಿ ಸಂಬಂಧಪಟ್ಟ ಶಾಸಕಾಂಗಗಳಲ್ಲಿ ಅದು ತಮಗೆ ಅನ್ವಯವಾಗಬೇಕು ಎಂದು ತೀರ್ಮಾನಿಸುವವರೆಗೆ ಮಸೂದೆಯನ್ನು ಕಾರ್ಯರೂಪಕ್ಕೆ ತರಬಾರದು. ಇಂದು ನಮ್ಮೆದುರಿಗೆ ಭೂತಾಕಾರವಾಗಿ ನಿಂತಿರುವ ಈ ತೊಡಕನ್ನು ಇದು ನಿವಾರಿಸುತ್ತದೆ.

**ಶ್ರೀಮತಿ ರೇಣುಕಾ ರಾಯ್ :** ಮುಂದಿನ ಸಾವಿರ ವರ್ಷಗಳಿಗೂ ಬ್ರಾಹ್ಮಣ ಸಮಾಜದ ನಿರಂಕುಶ ಪ್ರಭುತ್ವವೇ ಇರಲಿ!

**ಪಂಡಿತ ಮಾಳವೀಯ :** ಮುಂದಿನ ಸಾವಿರ ವರ್ಷಗಳಿಗೂ ಬ್ರಾಹ್ಮಣ ಸಮಾಜದ ನಿರಂಕುಶ ಪ್ರಭುತ್ವವೇ ಮುಂದುವರಿಯಲಿ' ಎಂದು ನನ್ನ ಸಹೋದರಿ ಹೇಳಿದ್ದಾರೆ. ಆದರೆ ಕೇವಲ ೧೦೦೦ ವರ್ಷಗಳಿಗೆ ನಿರಂತರವಾಗಿ ಮುಂದುವರೆಯಲಿ ಎಂದು ಹಾರೈಸುತ್ತೇನೆ ಹಾಗೂ ಪ್ರಾರ್ಥಿಸುತ್ತೇನೆ. ಕರ್ತವ್ಯ ಪರಿಪಾಲನೆಗೆ, ನ್ಯಾಯ ನೀತಿ ಪ್ರತೀಕವಾಗಿರುವ, ಸ್ವಾರ್ಥಕ್ಕೆ ಹಕ್ಕುಗಳನ್ನು ಬಯಸದ ಆದರೆ ಪರಹಿತವನ್ನ ಅನ್ಯರಿಗೆ ಅನುಕೂಲವನ್ನು ಬಯಸುವ, ಆಕ್ರಮಣಕಾರಿಯಾದ ಸ್ವಾರ್ಥಪರ ಕ್ಷುಲ್ಲಕ ಕ್ಷುದ್ರ ಜೀವನ ಕ್ರಮವನ್ನು ಪ್ರತಿಪಾದಿಸದೆ ಉದಾತ್ತವಾದ ಆದರ್ಶಮಯ ಹಾಗೂ ಸ್ವಾರ್ಥರಹಿತ ಜೀವನಕ್ರಮವನ್ನು ಪ್ರತಿಪಾದಿಸುವ ಈ ವ್ಯವಸ್ಥೆ ಮುಂದುವರಿಯಲಿ. ನನ್ನ ಸಹೋದರಿಯೇನು ಉಳಿದವರು ಕೂಡ ಬ್ರಾಹ್ಮಣ್ಯದ ಆ ಸ್ಥಿತಿಯನ್ನು ಹೊಂದುತ್ತಾರೆ. ಬ್ರಾಹ್ಮಣರು ಮಾತ್ರವಲ್ಲ ಆ ಸಮಾಜದ ಪ್ರತಿಯೊಬ್ಬ ಸದಸ್ಯನೂ ಸ್ವಾರ್ಥ ಹಾಗೂ ಸ್ವಪ್ರಾಮುಖ್ಯತೆಯನ್ನು ತ್ಯಜಿಸಿ ತನ್ನನ್ನು ಕಷ್ಟಕ್ಕೆ ಒಡ್ಡಿಕೊಂಡು ಇತರರ ಅಭಿವೃದ್ಧಿಗೆ ಮತ್ತು ಏಳಿಗೆಗೆ ಅನುಕೂಲ ಮಾಡಿಕೊಡುತ್ತಾನೆ. ಈ ಸಿದ್ಧಾಂತದ ಚೆಲುವು ಹಾಗೂ ಔನ್ನತ್ಯ ನಮ್ಮ ಹಲವಾರು ಸದಸ್ಯರಿಗೆ ಅರ್ಥವಾಗಿಲ್ಲ ಎನ್ನುವುದು ನನಗೆ ತಿಳಿದಿದೆ. (ಕೇಳಿ, ಕೇಳಿ) ಯಾವ ಸಮಾಜದಲ್ಲಿ ಬ್ರಾಹ್ಮಣನು ನಿಜವಾದ ಅರ್ಥದಲ್ಲಿ ಬ್ರಾಹ್ಮಣನಾಗಿರುತ್ತಾನೊ ಆ ಸಮಾಜವು ನೈತಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ, ವೈಚಾರಿಕವಾಗಿ, ಧಾರ್ಮಿಕವಾಗಿ ಔನ್ನತ್ಯವನ್ನು ಹೊಂದುತ್ತದೆ. ಉಳಿದವರಂತೆ ಬ್ರಾಹ್ಮಣರೂ ಅವನತಿ ಹೊಂದಿದ್ದಾರೆ ಎಂಬ ಸತ್ಯವನ್ನು ನಾನು ಕಡೆಗಾಣಿಸುತ್ತಿಲ್ಲ.

**ಶ್ರೀಮತಿ ದುರ್ಗಾಬಾಯಿ :** ಬೋಧನೆ ಆಚರಣೆಗಳೆರಡರಲ್ಲೂ.

**ಶ್ರೀ ಆರ್.ಕೆ. ಚೌಧರಿ :** ಮಹಿಳಾ ಸದಸ್ಯೆಯು ಮಧ್ಯದಲ್ಲೇಕೆ ಮೂಗು ತೂರಿಸಬೇಕು?

**ಪಂಡಿತ ಮಾಳವೀಯ :** ನಾವು ಬೇರೆ ಬೇರೆ ತಂದೆ ತಾಯಿಯರ ಮಕ್ಕಳಾದರೂ ಕೂಡ ನಾವೆಲ್ಲಾ ಸಹೋದರ ಸಹೋದರಿಯರೇ, ಏಕೆಂದರೆ ನಾವು ಇದೇ ದೇಶದಲ್ಲಿ ಹುಟ್ಟಿದವರು. ಬ್ರಾಹ್ಮಣರು ಆಚರಣೆ

ಮತ್ತು ಸಿದ್ಧಾಂತಗಳೆರಡರಲ್ಲೂ ಇನ್ನೂ ಮೇಲ್ಮಟ್ಟಕ್ಕೆ ಏರಬೇಕು ಎಂದು ಈ ನನ್ನ ಸಹೋದರಿ ಹೇಳುತ್ತಿದ್ದಾರೆ. ಬ್ರಾಹ್ಮಣರಷ್ಟೇ ಅಲ್ಲ ಉಳಿದವರಿಗೂ ಹಾಗಾಗಲಿ ಎಂದು ನಾನು ಕೂಡ ಅವರೊಡನೆ ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಡಾ. ಅಂಬೇಡ್ಕರ್ :** ಈಗ ಮತ್ತೆ ಹಿಂದೂ ಮಸೂದೆಯ ವಿಚಾರಕ್ಕೆ ಬರೋಣ.

**ಪಂಡಿತ ಮಾಳವೀಯ :** ನಮಗೆ ಮತ್ತೊಮ್ಮೆ ಶುದ್ಧವಾದ ಹಾಗೂ ಉದಾತ್ತವಾದ ಬ್ರಾಹ್ಮಣದ ಆದರ್ಶಕ್ಕೆ ಏರುವುದು ಸಾಧ್ಯವಾದಲ್ಲಿ ಆಗ ಹಿಂದೂ ಸಮಾಜದಲ್ಲಿ ಯಾವ ತೊಂದರೆ ತಾಪತ್ರಯಗಳೂ ಇರುವುದಿಲ್ಲ. ಹಿಂದೆ ಇದ್ದಂತೆ, ಅದು ಮತ್ತೊಮ್ಮೆ ಮನುಜ ಕುಲದ ಮುಂದಾಳಾಗುತ್ತದೆ. ಆ ಸಮಾಜದಲ್ಲಿ ಒಂದು ವರ್ಗದವರು ಇನ್ನೊಂದು ವರ್ಗದವರ ಮೇಲೆ ದಬ್ಬಾಳಿಕೆಯನ್ನೂ ಮಾಡುತ್ತಿರಲಿಲ್ಲ. ಹಾಗೂ ಅವರಿಗೆ ಅನ್ಯಾಯವನ್ನೂ ಮಾಡುತ್ತಿರಲಿಲ್ಲ. ಆ ಕಾಲದಲ್ಲಿ ಪ್ರತಿಯೊಬ್ಬ ಸದಸ್ಯನೂ.....

**ಶ್ರೀಮತಿ ರೇಣುಕಾ ರಾಯ್ :** ಅದನ್ನು ನೆನಪಿಡಿ.

**ಪಂಡಿತ ಮಾಳವೀಯ :** ಖಂಡಿತವಾಗಿಯೂ ನೆನಪಿಟ್ಟುಕೊಂಡಿದ್ದೇನೆ. ಇಲ್ಲವಾದಲ್ಲಿ ನಾನ್ಹೇಗೆ ಅದನ್ನು ಹೇಳಬಲ್ಲೆ? ಅದನ್ನು ತಿಳಿದುಕೊಂಡು ನೆನಪಿಟ್ಟುಕೊಳ್ಳಬೇಕಾದವರು ಶ್ರೀಮತಿ ರೇಣುಕಾ ರಾಯ್ ಅವರು.

**ಶ್ರೀಮತಿ ರೇಣುಕಾ ರಾಯ್ :** ತಾವು ಹಿಂದೂ ಸಮಾಜದ ಅವನತಿಯ ಕಾಲದ ಬಗ್ಗೆ ಮಾತನಾಡುತ್ತಿದ್ದೀರಿ. ದಯವಿಟ್ಟು ವೇದ ಮತ್ತು ಉಪನಿಷತ್ತುಗಳ ಕಾಲವನ್ನು ನೆನಪಿಸಿಕೊಳ್ಳಿ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಈ ಪ್ರಶ್ನೆಗಳಿಗೆ ಉತ್ತರ ನೀಡಲು ಪ್ರಯತ್ನಿಸದೆ, ತಮ್ಮ ಮಾತನ್ನು ಮುಂದುವರಿಸಬಹುದು. ಇಲ್ಲವಾದಲ್ಲಿ ಮುಖ್ಯ ವಿಚಾರದ ಎಳೆಯೇ ತಪ್ಪಿಹೋಗುತ್ತದೆ. ಮಾನ್ಯ ಸದಸ್ಯರು ಸಭಾಧ್ಯಕ್ಷರಿಗೆ ನಡುನಡುವೆ ತೊಂದರೆ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ದುರ್ಗಾಬಾಯಿ :** ಮಾನ್ಯರೇ ಒಂದು ನಿಮಿಷ ಅಡಚಣೆ ಮಾಡಬಹುದೆ? ರಾಮನ ಮಾದರಿಯನ್ನು ಉಳಿದವರಿಗೂ ಅನ್ವಯಿಸುವುದು ಈ ಮಸೂದೆಯ ಉದ್ದೇಶವಲ್ಲವೆ? ಅದು ಈಗಿನ ಚರ್ಚೆಯ ವಿಚಾರವಲ್ಲವೆ?

**ಮಾನ್ಯ ಸಭಾಧ್ಯಕ್ಷರು :** ಇದು ಸ್ಪಷ್ಟವಾಗಿ ಅಡಚಣೆ.

**ಸರ್ದಾರ್ ಬಿ.ಎಸ್. ಮಾನ್ :** ಮಾನ್ಯ ಸದಸ್ಯರ ಪ್ರಶ್ನೆಯನ್ನು ನಿರ್ಲಕ್ಷಿಸುವುದು ಈಚಿನ ದಿನಗಳಲ್ಲಿ ಅಪಾಯಕಾರಿ.

**ಶ್ರೀಮತಿ ದುರ್ಗಾಬಾಯಿ :** ಅಡಚಣೆಯ ವಿಷಯದಲ್ಲಿ ಮಹಿಳಾ ಸದಸ್ಯರಿಗೂ ಹಾಗೂ ಇತರರಿಗೂ ವ್ಯತ್ಯಾಸವಿಲ್ಲ.

**ಪಂಡಿತ ಮಾಳವೀಯ :** ವೈದಿಕ ಸಮಾಜದಲ್ಲಿ ಮಹಿಳೆಗೆ ಉನ್ನತ ಸ್ಥಾನ ನೀಡಲಾಗಿದೆ. ತಾಯಿಗಿಂತ ಉನ್ನತವಾದದ್ದು ಬೇರೆ ಯಾವುದೂ ಇಲ್ಲ.

**ಡಾ. ಎಂ.ಎಂ. ದಾಸ್ :** ಒಬ್ಬ ಪುರುಷ ೨೫೦ ಹೆಂಡತಿಯರನ್ನು ಮದುವೆಯಾಗುವುದು. ಇದೇನಾ ಹೆಂಗಸರಿಗೆ ನೀಡಿರುವ ಮರ್ಯಾದೆ?

**ಮಾನ್ಯ ಸಭಾಧ್ಯಕ್ಷರು :** ಶಿಸ್ತು, ಶಿಸ್ತು. ಮಾನ್ಯ ಸದಸ್ಯರು ಮುಂದುವರಿಸಲಿ.

**ಪಂಡಿತ ಮೈತ್ರ :** ಯಾರು ೨೫೦ ಹೆಂಡತಿಯರನ್ನು ಮದುವೆಯಾಗಿರುವುದು?

**ಡಾ. ಎಂ.ಎಂ. ದಾಸ್ :** ನಾನು ಉಲ್ಲೇಖಿಸುತ್ತಿರುವುದು............

ಮಾನ್ಯ ಸಭಾಧ್ಯಕ್ಷರು : ಶಿಸ್ತು, ಶಿಸ್ತು, ಪರಸ್ಪರ ಕಿತ್ತಾಟ ಬೇಡ. ನಾವು ಸದನದ ಮರ್ಯಾದೆಯನ್ನು ಕಾಪಾಡಬೇಕು.

**ಪಂಡಿತ ಮಾಳವೀಯ :** ನನ್ನ ಮಾತನ್ನು ಮುಂದುವರಿಸುತ್ತೇನೆ. ಬೇರೆ ಏನೂ ಮಾಡಲಾಗದಿದ್ದರೆ ಹಿಂದೆ ಭಾರತೀಯ ರಾಜ್ಯಗಳೆನಿಸಿಕೊಂಡಿದ್ದ ಪ್ರದೇಶಗಳಿಗಾದರೂ ಈ ಕ್ರಮವನ್ನು ಅನ್ವಯಿಸಿ, ಅಲ್ಲಿ ಮಸೂದೆಯನ್ನು ಪ್ರಕಟಿಸಿ, ಪ್ರಚಾರ ಮಾಡಿದ ಮೇಲೆ, ಸಂಬಂಧಪಟ್ಟ ಸಂಸದರು ತೀರ್ಮಾನಿಸಿದ ಮೇಲಷ್ಟೇ ಇದನ್ನು ಅವರಿಗೆ ಅನ್ವಯಿಸಬಹುದು. ನನಗೆ ಮತ್ತೊಂದು ಸಮಸ್ಯೆಯಿದೆ. ಹಿಂದೂ ಕಾಯಿದೆಯನ್ನು ಮೊದಲು ರೂಪಿಸಿದಾಗ ಈ ದೇಶದಲ್ಲಿ ಸಂವಿಧಾನದ ಪ್ರಕಾರ ಕೃಷಿ ಆಸ್ತಿಯು ಕೇಂದ್ರ ಸಂಸತ್ತಿನ ಕಾನೂನಿನ ವಿಷಯವಾಗಿರಲಿಲ್ಲ. ಹಾಗಾಗಿ ಶೇಕಡಾ ೯೦ರಷ್ಟು ಜನ ಅಥವಾ ಅದಕ್ಕಿಂತ ಹೆಚ್ಚು ಮಂದಿ ಈ ದೇಶದಲ್ಲಿ ಭೂ ಆಸ್ತಿಯ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ.

(ಮಾನ್ಯ ಉಪ ಸಭಾಧ್ಯಕ್ಷರು ಪೀಠದಲ್ಲಿ)

ಈಗ ಕೃಷಿ ಆಸ್ತಿಯನ್ನು ಸಮವರ್ತಿ ಸೂಚಿಯಲ್ಲಿ ಸೇರಿಸಲಾಗಿದೆ. ಈಗ ಈ ಕಾನೂನು ವಿಧೇಯಕವನ್ನು ಜಾರಿಗೊಳಿಸಿದರೆ ಇದು ಇಡೀ ರಾಷ್ಟ್ರದ ಕೃಷಿ ಆಸ್ತಿಗೆ ಅನ್ವಯವಾಗುತ್ತದೆ. ಹಾಗಾಗಿ ಈ ಮಸೂದೆಯ ವ್ಯಾಪ್ತಿಯನ್ನು ಸುಮಾರು ೯೦೦ ಪಟ್ಟು ಹೆಚ್ಚಿಸಿದಂತಾಯ್ತು. ಮೊದಲೇ ಇದ್ದಂತೆ ದೇಶದ ಸಣ್ಣ ಭಾಗದ ಆಸ್ತಿಗಷ್ಟೇ ಇದು ಅನ್ವಯವಾಗಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಇದು ಆ ಮಸೂದೆಯ ವಿಷಯವಲ್ಲ. ಈ ವಿವಾಹದಿಂದ ಹುಟ್ಟುವ ಮಕ್ಕಳಿಗೂ ಅದರ ಹಕ್ಕೂ ಬರುತ್ತದೆ ಎಂದು ಮಾನ್ಯ ಸದಸ್ಯರು ಭಾವಿಸಿದ್ದರೆ ಮಾತ್ರ ಇದು ವಿಷಯಕ್ಕೆ ಸಂಬಂಧಪಡುತ್ತದೆ.

**ಪಂಡಿತ ಮಾಳವೀಯ :** ನಾನೀಗ ಮಸೂದೆಯನ್ನು ಜಾರಿಗೊಳಿಸುವುದರ ಬಗ್ಗೆ ಹಾಗೂ ಅದರ ಪ್ರಾಮುಖ್ಯದ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಕೇಳುತ್ತಿದ್ದೆ......

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ಆಗ ಸದನದಲ್ಲಿರಲಿಲ್ಲ. ಈ ಮಸೂದೆಯನ್ನು ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತಗೊಳಿಸಲಾಗಿದೆ. ಆಸ್ತಿ, ವಾರಸುದಾರಿಕೆ, ಉತ್ತರಾಧಿಕಾರ, ಇವುಗಳ ಬಗ್ಗೆ ಈಗ ನಾವು ಚರ್ಚಿಸುತ್ತಿಲ್ಲ. ಮದುವೆಯ ಪರಿಣಾಮವಾಗಿ ಹುಟ್ಟುವ ಮಕ್ಕಳಿಗೆ ಭೂಸ್ವತ್ತಿನ ಮೇಲೆ ಅಧಿಕಾರವಿರುತ್ತದೆ. ಹಾಗಾಗಿ ಪರೋಕ್ಷವಾಗಿಯಾದರೂ ಬೇಕಾಗುತ್ತದೆ ಎಂದು ಸದಸ್ಯರು ವಾದಿಸುವುದಾದರೆ ಮಾತ್ರ ಸರಿ.

**ಪಂಡಿತ ಮಾಳವೀಯ :** ಸ್ವಾಮಿ, ಮತ್ತೆ ಅದೇ ತೊಂದರೆ, ಒಟ್ಟಿಗೆ ಅಷ್ಟೊಂದು ಜನ ಮಾತನಾಡುತ್ತಿದ್ದಾರೆ. ನಿಮ್ಮ ಮಾತು ನನಗೆ ಕೇಳಿಸುತ್ತಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಆಸ್ತಿಗೆ ಸಂಬಂಧಿಸಿದ ಭಾಗವನ್ನು ಮತ್ತು ಉಳಿದ ಭಾಗಗಳನ್ನು ಮಸೂದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ನಾವು ವಿವಾಹ ಹಾಗೂ ವಿಚ್ಛೇದನಕ್ಕೆ ನಮ್ಮನ್ನು ಸೀಮಿತಗೊಳಿಸಿಕೊಳ್ಳಬೇಕು ಹಾಗೂ ಮಾನ್ಯ ಸದಸ್ಯರು ಆ ವಿಷಯಗಳ ಬಗೆಗೆ ವಿಸ್ತರಿಸಬೇಕಾಗಿಲ್ಲ.

**ಪಂಡಿತ ಮಾಳವೀಯ :** ನಾನು ಆಸ್ತಿಗೆ ಸಂಬಂಧಿಸಿದ ನಿಬಂಧನೆಗಳ ಬಗ್ಗೆ ಪ್ರಸ್ತಾಪಿಸುತ್ತಿಲ್ಲ. ಈ ಮಸೂದೆಯನ್ನು ಸದನದಲ್ಲಿ ಮಂಡಿಸುತ್ತಿರುವ ಸಂದರ್ಭ ಹಾಗೂ ಅದರ ಆಕ್ಷೇಪಾರ್ಹ ಸನ್ನಿವೇಶ ಮತ್ತು ಲಕ್ಷಣಗಳ ಬಗ್ಗೆ ನಾನೀಗ ಪ್ರಸ್ತಾಪ ಮಾಡುತ್ತಿದ್ದೇನೆ ಹಾಗೂ ನೀವು ಬರುವ ಮೊದಲು ಪ್ರಸ್ತಾಪಿಸುತ್ತಿದ್ದೇನೆ. ಮಸೂದೆಯನ್ನು ಮೊದಲು ರೂಪಿಸಿದಾಗ ಅದು ಈ ನಾಡಿನ ಶೇ. ೯೦ರಷ್ಟು ಮಂದಿಗೆ ಅನ್ವಯವಾಗುತ್ತಿರಲಿಲ್ಲ.

ಆದರೆ ಈಗ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಕೃಷಿ ಭೂಮಿಯನ್ನು ಹಾಗೂ ಆಸ್ತಿಯನ್ನು ಸೇರಿಸುವುದರಿಂದ........

**ಮಾನ್ಯ ಉಪ ಸಭಾಧ್ಯಕ್ಷರು :** ಆದರೆ ಮಸೂದೆಯನ್ನು ಈವರೆಗೂ ಬಲವಂತದಿಂದ ಒತ್ತಾಯಪೂರ್ವಕವಾಗಿ ಹೇರಿಲ್ಲ. ಈಗ ಇದು ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಭಾಗಕ್ಕೆ ಸೀಮಿತಗೊಂಡಿದೆ. ಮತ್ತೊಂದು ಮಸೂದೆಯನ್ನು ಮಂಡಿಸಿದಾಗ ಅದು ಕೃಷಿ ಭೂಮಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಚರ್ಚಿಸಲು ಮಾನ್ಯ ಸದಸ್ಯರಿಗೆ ಸಾಕಷ್ಟು ಕಾಲಾವಕಾಶ ದೊರಕುತ್ತದೆ. ಈಗ ನಾವು ಆ ವಿಷಯಗಳ ಬಗ್ಗೆ ವಿವರಗಳಿಗೆ ಹೋಗಬೇಕಾಗಿಲ್ಲ. ಕೃಷಿ ಭೂಮಿಯನ್ನು ಸಮವರ್ತಿ ಸೂಚಿಯಲ್ಲಿ ಸೇರಿಸುವುದರಿಂದ ಆಗಿರಬಹುದಾದ ಬದಲಾವಣೆ ಏನೇ ಇರಲಿ, ಅದು ನಮಗೆ ಸಂಬಂಧಿಸಿಲ್ಲ.

**ಪಂಡಿತ ಮಾಳವೀಯ :** ನಿಮ್ಮ ಆಜ್ಞೆಗೆ ನಾನು ವಿಧೇಯನಾಗಿರುತ್ತೇನೆ. ನಾನು ಹೇಳಬೇಕೆಂದಿರುವುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಅದನ್ನು ನೀವು ನಿರ್ದೇಶಿಸಿದಂತೆ ಮಾಡುತ್ತೇನೆ. ಆದರೆ ಯಾವುದೇ ಸಂದರ್ಭದಲ್ಲಿಯೇ ಆಗಲಿ, ಕೃಷಿ ಆಸ್ತಿಗೆ ಸಂಬಂಧಿಸಿದ ಕಾಯಿದೆಯಿರುವ ಮಸೂದೆ ಚರ್ಚೆಗೆ ಬಂದರೆ, ಆಗ ಮಸೂದೆಯ ಕಾಯಿದೆಗಳನ್ನು ವಿವರವಾಗಿ ಚರ್ಚಿಸಿ ಆ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಮಗೆ ಸಮಯ ಸಿಗಬೇಕು. ಆದರೆ ಈ ಹಂತದಲ್ಲಿ ನೀವು ಹೇಳಿರುವಂತೆ, ಈ ರಾಷ್ಟ್ರದ ಕೃಷಿ ಆಸ್ತಿಯ ಬಗ್ಗೆಯಾಗಲಿ, ಅದನ್ನು ವಿಲೇವಾರಿಮಾಡುವ ಬಗ್ಗೆಯಾಗಲಿ ನಾನು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿಲ್ಲ. ಆ ವಿಷಯದ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಮಸೂದೆಯ ವ್ಯಾಪ್ತಿಯ ಬಗ್ಗೆಯೇ ಮಾತನಾಡುತ್ತಿದ್ದೇನೆ. ಅದರಲ್ಲಿನ ನಿಬಂಧನೆಗಳು ಏನೇ ಆಗಿರಲಿ, ಅದು ಮದುವೆಗೆ ಸಂಬಂಧಿಸಿರಲಿ, ಸಾವಿಗೆ ಸಂಬಂಧಿಸಿರಲಿ, ಅಥವಾ ಬೇರೆ ಏನೇ ಆಗಿರಲಿ ಅದು ಎಲ್ಲಾದಕ್ಕೂ ಅನ್ವಯಿಸುತ್ತದೆ. ಈ ನಿಬಂಧನೆಗಳು ಯಾರಿಗೆ ಅನ್ವಯಿಸುತ್ತದೆ ಎಂಬುದನ್ನು ತೋರಿಸಲು ಪ್ರಯತ್ನಿಸುತ್ತಿದ್ದೇನೆ. ಉದಾಹರಣೆಗೆ ತಾವು ಪೀಠಕ್ಕೆ ಬರುವ ಮೊದಲು, ಯಾವ ರಾಜ್ಯಗಳಲ್ಲಿ ಈ ಮಸೂದೆಯನ್ನು ಪ್ರಕಟಿಸಿಲ್ಲವೋ ಅಲ್ಲಿ ಈ ಮಸೂದೆಯನ್ನು ನೇರವಾಗಿ ಜಾರಿಗೊಳಿಸಿಬಿಡಬಾರದು ಎಂದು ನಾನು ವಾದಿಸುತ್ತಿದ್ದೆ. ಸಂಬಂಧಪಟ್ಟ ರಾಜ್ಯಗಳಲ್ಲಿ ಅದನ್ನು ಪ್ರಕಟಿಸಿದ ಮೇಲೆ ಸಂಬಂಧಿಸಿದ ಎಲ್ಲಾ ಶಾಸಕಾಂಗಗಳು ಆ ಬಗ್ಗೆ ನಿರ್ಧಾರ ತೆಗೆದುಕೊಂಡ ಮೇಲಷ್ಟೇ ಜಾರಿಗೊಳಿಸಲಾಗುವುದು ಎಂಬ ಒಂದು ನಿಬಂಧನೆಯನ್ನಾದರೂ ಸೇರಿಸಬೇಕು. ನಾನು ಕೃಷಿ ಸೊತ್ತಿನ ಬಗ್ಗೆಯಾಗಲಿ ಅಥವಾ ಇನ್ನಾವುದೇ ಆಸ್ತಿಯ ಬಗ್ಗೆಯಾಗಲಿ ಮಾತನಾಡುತ್ತಿಲ್ಲ. ಅದನ್ನು ಜಾರಿಗೊಳಿಸುವ ವಿಧಾನದ ಬಗ್ಗೆ ಮಾತನಾಡುತ್ತಿದ್ದೇನೆ. ಈ ಮಸೂದೆಯನ್ನಾಗಲಿ ಅಥವಾ ಈ ರೀತಿಯ ಇನ್ನಾವುದೇ ಮಸೂದೆಯನ್ನಾಗಲಿ ಹಿಂದೆ ಗ್ರಹಿಸುವುದಕ್ಕಿಂತ ಭಿನ್ನವಾಗಿ ಈಗ ಗ್ರಹಿಸುತ್ತಿರುವುದರ ಬಗ್ಗೆ ಮಾತನಾಡುತ್ತಿದ್ದೆ. ಹಾಗಾಗಿ ಈ ಅಂಶದ ಬಗ್ಗೆಯೇ ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತೇನೆ. ಆಸ್ತಿಯ ವಿಷಯಕ್ಕೆ ಹೋಗುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ಎರಡು ಗಂಟೆ ತೆಗೆದುಕೊಂಡಿದ್ದಾರೆ. ನಮಗೆ ಬೇರೆ ಕೆಲಸ ಕೂಡ ಇದೆ. ಸನ್ಮಾನ್ಯ ಸದಸ್ಯರು ಮುಗಿಸುತ್ತಾರೆ ಅಂತ ಅಂದುಕೊಂಡಿದ್ದೆ. ಸನ್ಮಾನ್ಯ ಕಾನೂನು ಮಂತ್ರಿಗಳನ್ನು ಮಾತನಾಡಲು ಕರೆಯಲು ಉತ್ಸುಕನಾಗಿದ್ದೆ. ಮಾನ್ಯ ಸದಸ್ಯರಿಗೆ ಇನ್ನೂ ಎಷ್ಟು ಸಮಯ ಬೇಕಾಗಬಹುದು? ಈಗ ಇನ್ನೂ ೧೫ ನಿಮಿಷ ಉಳಿದಿದೆ. ಹಾಗಾಗಿ ಸನ್ಮಾನ್ಯ ಮಂತ್ರಿಗಳು ಮುಗಿಸುವ ಸಾಧ್ಯತೆ ಇದ್ದರೆ, ಅರ್ಧಗಂಟೆಯ ಚರ್ಚೆಯನ್ನು ಇನ್ನೊಂದು ದಿನಕ್ಕೆ ಇಟ್ಟುಕೊಳ್ಳಬಹುದು.

**ಪಂಡಿತ ಮಾಳವೀಯ :** ನನ್ನ ಕೆಲವು ಸನ್ಮಾನ್ಯ ಗೆಳೆಯರಿಗೆ ನಗು ಬರಬಹುದು. ಆದರೆ ಮಾನ್ಯರೇ

ನಾನು ಎಷ್ಟು ಸಮಯ ತೆಗೆದುಕೊಳ್ಳುತ್ತೇನೆ ಎಂದು ಹೇಳುವುದು ನನಗೆ ಕಷ್ಟ. ನೀವು ನನ್ನನ್ನು ನಂಬುತ್ತೀರಿ ಎಂದು ಭಾವಿಸಿದ್ದೀನಿ. ನಾನು ನನ್ನ ವಾದವನ್ನು ವಿಸ್ತರಿಸುತ್ತಿಲ್ಲ. ಯಾರಾದರೂ ಸದಸ್ಯರು ಸದನದ ಆಚೆ ಬಂದು ನನ್ನನ್ನು ಕಾಣುವ ಕೃಪೆ ಮಾಡಿದ್ದರೆ, ಇಲ್ಲಿ ನಾನು ಸೂಚಿಸುತ್ತಿರುವ ಯಾವುದೇ ವಿಷಯದ ಬಗ್ಗೆ ನನಗೆ ವಿವರಿಸಲು ಅವಕಾಶಮಾಡಿಕೊಟ್ಟರೆ ಪ್ರತಿಯೊಂದು ವಿಷಯದ ಬಗ್ಗೆ ಹೇಳಲು ಎಷ್ಟೊಂದಿದೆ ಹಾಗೂ ನಾನೂ ತೀರಾ ಆವಶ್ಯಕ ವಿಷಯದ ಬಗ್ಗೆ ಮಾತ್ರ ನನ್ನನ್ನು ಸೀಮಿತಗೊಳಿಸಿಕೊಂಡಿದ್ದೇನೆ ಎಂಬುದು ತಿಳಿಯುತ್ತದೆ. ಹಾಗಾಗಿ.........

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಇನ್ನು ಹದಿನೈದು ನಿಮಿಷಗಳಲ್ಲಿ ಮುಗಿಸಲು ಸಾಧ್ಯವಾಗಬಹುದೆ?

**ಪಂಡಿತ ಮಾಳವೀಯ :** ಸಾಧ್ಯವೆಂದು ನನಗನ್ನಿಸುವುದಿಲ್ಲ. ಮಾನ್ಯರೇ ನನ್ನ ಬಳಿ ನಾನು ಮಾಡಿಕೊಂಡ ಟಿಪ್ಪಣಿ ಹಾಗೂ ಪುಸ್ತಕಗಳ ರಾಶಿಯೇ ಇದೆ. ಅವನ್ನು ಈವರೆಗೆ ಒಂದು ಬಾರಿಯೂ ಮುಟ್ಟಿಲ್ಲ. ಇದನ್ನೆಲ್ಲಾ ನಾನು ತೀರಾ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ಮತ್ತು ತೀರಾ ಆವಶ್ಯಕ ಅಂಶಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. ನಾನು ಪ್ರತಿಯೊಂದು ವಿಷಯವನ್ನು ವಿವರವಾಗಿ ಮಾತನಾಡಬೇಕೆಂದಿದ್ದರೆ, ಅದು ಬೇರೆಯೇ ಆಗುತ್ತಿತ್ತು. ಆದರೂ ಈ ವಿಷಯದ ಬಗ್ಗೆ ಆಳವಾದ ಹಾಗೂ ಬಲವಾದ ಭಾವನೆಗಳಿವೆ. ಈ ವಿಷಯ ಎಷ್ಟೊಂದು ಮುಖ್ಯ ಹಾಗೂ ವಿಶಾಲವಾದ್ದು ಎಂದರೆ ಇಂದು ನನಗೆ ಮುಗಿಸಲು ಸಾಧ್ಯವಾಗುವುದಿಲ್ಲ. ಆದರೆ ನಾನು ನಿಮ್ಮ ನಿಯಂತ್ರಣದಲ್ಲಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಇನ್ನೆಷ್ಟು ಕಾಲಾವಕಾಶ ಬೇಕಾಗಬಹುದು.

**ಡಾ. ಅಂಬೇಡ್ಕರ್ :** ಐದು ದಿನಗಳು.

**ಪಂಡಿತ ಮಾಳವೀಯ :** ಕಾನೂನು ಮಂತ್ರಿಗಳು ಐದು ದಿನ ಎನ್ನುತ್ತಿದ್ದಾರೆ. ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಸೋಂದಿ (ಪಂಜಾಬ್) :** ಸವಾಲನ್ನು ಸ್ವೀಕರಿಸಲಾಗಿದೆ.

**ಶ್ರೀಮತಿ ದುರ್ಗಾಬಾಯಿ :** ನನ್ನ ಸಹೋದರ ಸದಸ್ಯರಿಗೆ ಅವರ ಸಿದ್ಧಾಂತವನ್ನು ಪ್ರಕಟಿಸಿ, ಹಂಚಿ ಅದನ್ನು ಓದಲಾಗಿದೆ ಎಂದು ಭಾವಿಸಬಹುದೆ? ಎಂದು ನನ್ನ ಸಹೋದರ ಮಿತ್ರರನ್ನು ಕೇಳುತ್ತೇನೆ.

**ಸದಸ್ಯರು :** ಇಲ್ಲ, ಇಲ್ಲ.

**ಪಂಡಿತ ಮಾಳವೀಯ :** ನನ್ನ ಸನ್ಮಾನ್ಯ ಸಹೋದರಿ ಈ ದೇಶದ ಸಂವಿಧಾನವನ್ನು ಹಾಗೂ ಸಂಸತ್ತಿನ ನಿಯಮಗಳನ್ನು ರೂಪಿಸುವಾಗ ಬಹುಶಃ ಅಂಥ ಕ್ರಮ ಬರಬಹುದು.

**ಸರ್ದಾರ್ ಬಿ.ಎಸ್. ಮಾನ್ :** ಆ ದಿನವೇನೂ ದೂರವಿಲ್ಲ.

**ಪಂಡಿತ ಮಾಳವೀಯ :** ನಾನು ಅನವಶ್ಯಕವಾಗಿ ಹೆಚ್ಚು ಸಮಯ ತೆಗೆದುಕೊಳ್ಳುತ್ತಿಲ್ಲ. ಆದರೆ ಇಂದು ಮುಗಿಸಲು ಸಾಧ್ಯವಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಇನ್ನು ಎಷ್ಟು ಸಮಯ ಬೇಕು ?

**ಡಾ. ಅಂಬೇಡ್ಕರ್ :** ಐದು ದಿನ ಇಲ್ಲದಿದ್ದರೆ ಐದು ಗಂಟೆ.

**ಪಂಡಿತ ಮಾಳವೀಯ :** ನನಗೆ ಹೇಳಲು ತುಂಬಾ ಇದೆ. ನಾನು ಸಂಪೂರ್ಣವಾಗಿ ನೀವು ನಿರ್ದೇಶಿಸಿದಂತೆಯೇ ನಡೆದುಕೊಳ್ಳುತ್ತೇನೆ. ಅಪ್ಪಣೆ ಕೊಟ್ಟರೆ, ವಿಷಯವನ್ನು ನಿಮಗೇ ಬಿಟ್ಟುಬಿಡುತ್ತೇನೆ. ನಿಮ್ಮ ಬಳಿಗೆ ಬಂದು ನನ್ನ ಬಳಿ ಇರುವ ಸಾಮಗ್ರಿಯನ್ನು ನಿಮಗೆ ತೋರಿಸುತ್ತೇನೆ. ನಾನು ಎಷ್ಟು ಸಮಯ ತೆಗೆದುಕೊಳ್ಳಬಹುದು ಎಂಬ ನಿರ್ಧಾರವನ್ನು ಸದನದ ಸದಸ್ಯರ ಸವಲತ್ತುಗಳ ರಕ್ಷಕರಾದ

ತಮಗೇ ಬಿಡುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ಯಾವುದೇ ಘಟ್ಟದಲ್ಲಿಯೂ ಚರ್ಚೆಯನ್ನು ತಡೆಯುವ ಮೊಟಕುಗೊಳಿಸುವ ಉದ್ದೇಶವಿಲ್ಲ. ಸನ್ಮಾನ್ಯ ಸದಸ್ಯರು ಈಗಾಗಲೇ ೨ ಗಂಟೆ ಸಮಯ ತೆಗೆದುಕೊಂಡಿದ್ದಾರೆ. ಮತ್ತು ನಾವೀಗಾಗಲೇ ೬ ದಿನಗಳು ಚರ್ಚಿಸಿಯಾಗಿದೆ. ಸದಸ್ಯರು ಪ್ರಸ್ತಾಪಿಸಿದ ಪುಸ್ತಕ ಹಾಗೂ ಉಳಿದ ಉಲ್ಲೇಖಗಳ ಬಗ್ಗೆ ವಿವರವಾಗಿ ಪರಿಶೀಲಿಸಬಹುದು. ಆದರೆ ಅವಕಾಶದಿಂದ ವಂಚಿತರಾಗಬೇಕಾಗಿಲ್ಲ. ಬೇರೆ ಕಲಮುಗಳ ಬಗ್ಗೆಯೂ ಅವರು ತಮ್ಮ ಜ್ಞಾನವನ್ನು ತೋರಿಸಬಹುದು. ಈಗಿನ ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರಿಗೆ ಅರ್ಧಗಂಟೆ ಸಾಕಾಗಬಹುದು.

**ಪಂಡಿತ ಮಾಳವೀಯ :** ಮಾನ್ಯರೇ ಸಾಲುವುದಿಲ್ಲ. ನೀವು ಅಪ್ಪಣೆ ಕೊಟ್ಟರೆ ಅದನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತೇನೆ. ನಾನು ಎಷ್ಟು ಸಾಧ್ಯವೊ ಅಷ್ಟು ಸಂಕ್ಷಿಪ್ತಗೊಳಿಸುತ್ತೇನೆ ಅಥವಾ ಸಾಧ್ಯವಾದಷ್ಟು ಚಿಕ್ಕದು ಮಾಡಿ ಎರಡು ವಿಷಯಕ್ಕೆ ಅಂದರೆ ಮದುವೆ ಹಾಗೂ ವಿಚ್ಛೇದನಕ್ಕೆ ಸೀಮಿತ ಮಾಡಿಕೊಂಡು ನಾಳೆ ಅದನ್ನು ಆದಷ್ಟು ಬೇಗ ಮುಗಿಸುತ್ತೇನೆ. ನನಗೆ ............

**ಡಾ. ಅಂಬೇಡ್ಕರ್ :** ೫ ಗಂಟೆ ಬೇಕಾಗಬಹುದು.

**ಪಂಡಿತ ಮಾಳವೀಯ :** ಅವರು ಐದು ದಿನದಿಂದ ೫ ಗಂಟೆಗೆ ಬಂದಿದ್ದಾರೆ. ಮಾನ್ಯರೇ ನಿಮಗೆ ಅದು ಅಸಮಂಜಸ ಅನ್ನಿಸುತ್ತದೆಯೆ? ನಾನು ಎಷ್ಟು ಕ್ಲುಪ್ತವಾಗಿ ಸಾಧ್ಯವೋ ಅಷ್ಟು ಕ್ಲುಪ್ತವಾಗಿ ಮಾಡುತ್ತೇನೆ. ನಾನು ಇದನ್ನು ಹಗುರವಾಗಿ ಹೇಳುತ್ತಿಲ್ಲ. ನಾನು ಪ್ರಾಮಾಣಿಕವಾಗಿ ಎಷ್ಟು ಸಂಕ್ಷಿಪ್ತಗೊಳಿಸಲು ಸಾಧ್ಯವೋ ಅಷ್ಟು ಸಂಕ್ಷಿಪ್ತಗೊಳಿಸಲು ಪ್ರಯತ್ನಿಸುತ್ತೇನೆ. ಬಹುಶಃ ೨ರಿಂದ ಎರಡೂವರೆ ಗಂಟೆ ಬೇಕಾಗಬಹುದು.

**ಶ್ರೀಮತಿ ರೇಣುಕಾ ರಾಯ್ :** ಮಾನ್ಯರೇ ನಾನೊಂದು ಪ್ರಶ್ನೆಯನ್ನು ಕೇಳಬೇಕು. ಈ ಕಲಂ – ೨ ಅನ್ವಯದ ಸಾಧ್ಯತೆಯ ಬಗ್ಗೆ ನಾನು ಮತ್ತೆ ಕೇಳುತ್ತೇನೆ. ಪರಿಶೀಲನೆಯ ಹಂತ ಮುಗಿದ ಮೇಲೂ ಇಡೀ ವಿವಾಹ ಹಾಗೂ ವಿಚ್ಛೇದನದ ವಿಷಯವನ್ನು ಮತ್ತೆ ತೆಗೆದುಕೊಳ್ಳಲು ಸಾಧ್ಯವೆ?

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರಿಗೆ ಮತ್ತೆ ಮತ್ತೆ ನನ್ನ ರೂಲಿಂಗ್ ಬೇಕು. ಚರ್ಚೆಯ ಕೊನೆಯಲ್ಲಿ ರೂಲಿಂಗ್ ನೀಡುವುದು ಆವಶ್ಯಕವೇ ಎಂದು ಕೇಳಬಯಸುತ್ತೇನೆ. ಇಷ್ಟಂತೂ ಸ್ಪಷ್ಟ, ಸನ್ಮಾನ್ಯ ಸದಸ್ಯರು ನಾಳೆ ಆದಷ್ಟು ಬೇಗ ಮುಕ್ತಾಯ ಮಾಡಲು ಪ್ರಯತ್ನಿಸುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಯನ್ನು ಅವರು ಮುಗಿಸಿದ ಮೇಲೆ ತಕ್ಷಣವೇ ಅರ್ಧಗಂಟೆಯ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತೇನೆ. ಅದು ಒಂದೂವರೆಯವರೆಗೆ ಮುಂದುವರೆಯಬಹುದು. ನಾವು ಈವತ್ತೇ ಇನ್ನೊಂದರ್ಧ ಗಂಟೆ ಕುಳಿತುಕೊಂಡರೆ ಪಂಡಿತ ಮಾಳವೀಯ ಅವರು ಮುಗಿಸಬಹುದು ಎಂದು ಭಾವಿಸಿದ್ದೆ. ಆದರೆ ಅದರ ಸಾಧ್ಯತೆಯಿಲ್ಲ. ಹಾಗಾಗಿ ನಾಳೆಗೆ ಇನ್ನೊಂದಿಷ್ಟು ಸಮಯ ತೆಗೆದುಕೊಂಡರೆ ಅವರದ್ದಾದ ತಕ್ಷಣ ನಾನು ಸನ್ಮಾನ್ಯ ಕಾನೂನು ಮಂತ್ರಿಗಳನ್ನು ಕರೆಯಬೇಕೆಂದಿದ್ದೇನೆ.

**ಶ್ರೀ ಬಿ. ದಾಸ್ (ಒರಿಸ್ಸಾ) :** ಮಾನ್ಯರೇ ಸುಧಾರಣಾವಾದಿಗಳು ಈ ಸದನದಲ್ಲಿ ತಾಳ್ಮೆಯಿಂದ ಇದ್ದಾರೆ. ಎರಡು ತೀಕ್ಷ್ಣವಾದ ಅಮೋಘವಾದ ಭಾಷಣಗಳನ್ನು ನನ್ನ ಗೆಳೆಯರಾದ ಸರ್ದಾರ್ ಮಾನ್ ಮತ್ತು ಪಂಡಿತ ಮಾಳವೀಯ ಮಾಡಿದ್ದಾರೆ. ಹಾಗಾಗಿ ಸರ್ಕಾರದ ಪರವಾಗಿ ಅಂಬೇಡ್ಕರ್ ತನ್ನ ಅಂತಿಮ ಉತ್ತರವಾಗಿ ಹೇಳುವ ವಿಚಾರಗಳ ಜೊತೆಜೊತೆಗೇ ಈ ಸದನದಲ್ಲಿ ಬಹುಸಂಖ್ಯಾತರಾಗಿರುವ ನಮಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶಕೊಡಿ.

**ಸನ್ಮಾನ್ಯ ಸದಸ್ಯರು :** ಹೌದು.

**ಶ್ರೀ ಶ್ಯಾಮನಂದನ್ ಸಹಾಯ್ :** ಹೌದು ಸದನದ ಪಿತೃವಾಗಿ ಅವಕಾಶ ನೀಡಬೇಕು.

**ಶ್ರೀ ಶಿವಚರಣ್‌ಲಾಲ್ (ಉತ್ತರ ಪ್ರದೇಶ) :** ಮಾನ್ಯರೆ ನಮ್ಮದೂ ಕೆಲವು ತಿದ್ದುಪಡಿಗಳಿವೆ. ಆ ಬಗ್ಗೆ ನಾನು ಮಾತನಾಡಲೇಬೇಕು.

**ಖ್ವಾಜಿ ಇನಾಯತ್ ಉಲ್ಲಾ (ಬಿಹಾರ) :** ಮಾನ್ಯರೇ ಈ ಕಲಂಗೆ ಸಂಬಂಧಿಸಿದಂತೆ ಅಷ್ಟೊಂದು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಎಲ್ಲಾ ಭಾರತೀಯರನ್ನು ವ್ಯಾಪ್ತಿಯಲ್ಲಿ ತರುವ ಉದ್ದೇಶದಿಂದ ಈ ಬಗ್ಗೆ ಬಹಳಷ್ಟು ಮಾತನಾಡಲಾಗಿದೆ. ಹಾಗಾಗಿ ನಾನು ಮುಸ್ಲಿಮರ ನಿಲುವನ್ನು ತಿಳಿಸಬೇಕು. ಹಾಗಾಗಿ ನನಗೆ ಸ್ವಲ್ಪ ಕಾಲಾವಕಾಶ ಬೇಕು.

**ಶ್ರೀ ಆರ್.ಕೆ. ಚೌಧರಿ :** ನಾನು ನೆನ್ನೆ ಒಂದು ತಿದ್ದುಪಡಿಗೆ ವಿರುದ್ಧವಾಗಿ ಪ್ರಶ್ನೆ ಎತ್ತಿದಾಗ ತಾವು ಅಂತಹ ವಿರೋಧಕ್ಕೆ ಅವಕಾಶವಿರುತ್ತದೆ ಎಂದು ಭರವಸೆ ನೀಡಿದ್ದನ್ನು ನಾನು ಗೌರವಾದರಗಳಿಂದ ಗಮನಕ್ಕೆ ತರುತ್ತೇನೆ. ವಿಶೇಷವಾಗಿ ಅಂಬೇಡ್ಕರ್ ಮಂಡಿಸಿದ ತಿದ್ದುಪಡಿಯು **"ಬುಡಕಟ್ಟು"** ಎಂಬುದನ್ನು ಸೇರಿಸಲು ಒತ್ತು ನೀಡಿದೆ. ಆ ಬಗ್ಗೆ ನಾನು ಮಾತನಾಡಲೇಬೇಕು. ಬೇರೆ ಇತರ ವಿಷಯದ ಬಗ್ಗೆ ನಾನು ಮಾತನಾಡುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಒಬ್ಬ ಸನ್ಮಾನ್ಯ ಸದಸ್ಯರು ತಿದ್ದುಪಡಿಯೊಂದನ್ನು ಮಂಡಿಸಿದ ಮಾತ್ರಕ್ಕೆ ಮಾತನಾಡುವ ಹಕ್ಕು ಬರುವುದಿಲ್ಲ. ತಿದ್ದುಪಡಿಯೊಂದನ್ನು ಮಂಡಿಸಿದವರಿಗೆ ವಿಷಯದ ಬಗ್ಗೆ ಎಲ್ಲಾ ವಿವರಣೆಗೂ ಅವಕಾಶ ನೀಡುತ್ತೇನೆ. ಆದರೆ ಒಂದೇ ರೀತಿಯ ತಿದ್ದುಪಡಿಗಳನ್ನು ಹಲವರು ಮಂಡಿಸಿದಾಗ, ಹಾಗೂ ಒಬ್ಬರೋ ಇಬ್ಬರು ಸದಸ್ಯರು ಮಾತ್ರ ಮಾತನಾಡಿ, ಅವರು ಈಗಾಗಲೇ ತೆಗೆದುಕೊಂಡ ಸಮಯದಿಂದಾಗಿ ಕೆಲವು ಸನ್ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಸಿಗದೇ ಹೋದರೆ, ಆ ವಿಷಯಕ್ಕೆ ಸಂಬಂಧಿಸಿದಂತೆ ನಾನು ಕಾಯುವ ಆವಶ್ಯಕತೆಯಿಲ್ಲ. ನಾನು ಕಲಂ – ೨ನ್ನು ಎರಡನೇ ಬಾರಿ ಪರಿಶೀಲಿಸುತ್ತೇನೆ. ನನ್ನ ಸನ್ಮಾನ್ಯ ಗೆಳೆಯ ಖ್ವಾಜಾ ಇನಾಐತ್ ಉಲ್ಲಾ ಅವರ ಕೋರಿಕೆಗೆ ಸಂಬಂಧಿಸಿದಂತೆ, ಈ ಮಸೂದೆಯನ್ನು ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರಿಗೂ ಅನ್ವಯಿಸಬೇಕೆನ್ನುವ ತಿದ್ದುಪಡಿ ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸುವುದೆ ಇಲ್ಲವೆ ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದೇನೆ. ಆ ಬಗ್ಗೆ ಹೆಚ್ಚು ಚರ್ಚೆ ಬೇಕು ಎನ್ನಿಸುವುದಿಲ್ಲ. ಪಂಡಿತ ಮಾಳವೀಯ ಅವರದು ಮುಗಿದ ಕೂಡಲೇ ಮಾನ್ಯ ಮಂತ್ರಿಗಳನ್ನು ಕರೆಯುತ್ತೇನೆ.

**ಶ್ರೀ ಆರ್.ಕೆ. ಚೌಧರಿ : "**ಬುಡಕಟ್ಟು**"** ಎಂಬುದನ್ನು ಸೇರಿಸಲು ಅಂಬೇಡ್ಕರ್ ಮಂಡಿಸಿದ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಶ್ರೀ ಜೆ.ಆರ್. ಕಪೂರ್ :** ಮಸೂದೆಯ ವ್ಯಾಪ್ತಿಯ ವಿಸ್ತಾರವನ್ನು ಬಯಸಿ ಮಂಡಿಸುತ್ತಿರುವ ತಿದ್ದುಪಡಿಯ ಅಂಗೀಕಾರಾರ್ಹತೆಯ ಬಗ್ಗೆ ನೀವು ಹೇಳುತ್ತಿರುವುದರ ಬಗ್ಗೆ ಈ ಮೊದಲೇ ಒಂದು ಹಂತದಲ್ಲಿ ಈ ವಿಷಯವನ್ನು ಕೈಗೆತ್ತಿಕೊಂಡಿದ್ದಾಗ, ಈ ಬಗ್ಗೆ ಯಾವುದೇ ನಿರ್ಣಯಕ್ಕೆ ಬರುವ ಮೊದಲು, ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ನೀಡುವುದಾಗಿ ಮಾನ್ಯಸಭಾಧ್ಯಕ್ಷರು ಭರವಸೆ ನೀಡಿದ್ದರು ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಮೊದಲ ನೋಟಕ್ಕೆ ಇದು ವ್ಯಾಪ್ತಿಯೊಳಗೆ ಬರುವುದಿಲ್ಲವೆಂದು ಅಧ್ಯಕ್ಷರಿಗೆ ಅನ್ನಿಸಬಹುದು. ಆದರೆ ಇದು ವಿಷಯದ ವ್ಯಾಪ್ತಿಯಲ್ಲಿ ಸಲೀಸಾಗಿ ಬರುತ್ತದೆ ಎಂದು ನಿಮಗೆ ಮನವರಿಕೆ ಮಾಡಿಕೊಡುವುದಕ್ಕಾಗಿ ದಯಮಾಡಿ ಅವಕಾಶ ಮಾಡಿಕೊಡಬೇಕು. ಇದು ವ್ಯಾಪ್ತಿಯೊಳಗೆ ಬರುವುದಿಲ್ಲ ಎಂಬುದು ನಿಮ್ಮ ನಿರ್ಣಯವಾದರೆ, ಡಾ. ಅಂಬೇಡ್ಕರ್ ಅವರ ಹಲವಾರು ತಿದ್ದುಪಡಿಗಳೂ ವ್ಯಾಪ್ತಿಯ ಹೊರಗೆ ಇದೆ ಎಂದು ಘೋಷಿಸಬೇಕಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಡಾ. ಅಂಬೇಡ್ಕರ್ ಅವರನ್ನೇ ಸದನದ ಹೊರಗೆ ಎಂದು ನಿರ್ಣಯಿಸಬೇಕಾ?

**ಶ್ರೀ ಜೆ.ಆರ್. ಕಪೂರ್ :** ಅವರನ್ನಲ್ಲ, ಅವರ ಕೆಲವು ತಿದ್ದುಪಡಿಗಳನ್ನು. ಯಾಕೆಂದರೆ ಅವು ಈ ತಿದ್ದುಪಡಿಯ ರೀತಿಯಲ್ಲೇ ಇವೆ.

**ಮಾನ್ಯ ಉಪಸಭಾಧ್ಯಕ್ಷರು :** ಒಂದು ತಪ್ಪು ತಿದ್ದುಪಡಿ ಮತ್ತೊಂದನ್ನು ಒಳ್ಳೆಯ ತಿದ್ದುಪಡಿಯನ್ನಾಗಿಸುವುದಿಲ್ಲ. ಕಾನೂನು ಮಂತ್ರಿಗಳು ಮಂಡಿಸಿದ ಯಾವುದಾದರೂ ತಿದ್ದುಪಡಿ ವ್ಯಾಪ್ತಿಯನ್ನು ಹಿಗ್ಗಿಸುತ್ತಿದ್ದರೆ, ಅದೂ ಕೂಡ ಸರಿಯಲ್ಲ. ನಾನು ವಿಷಯವನ್ನು ಪರಿಗಣಿಸುತ್ತೇನೆ.

**ಪಂಡಿತ ಮಾಳವೀಯ :** ನನ್ನ ಮತ್ತೊಂದು ತಿದ್ದುಪಡಿ ಇದೆ. ಈ ಬಗ್ಗೆ ಸೂಚನೆ ನೀಡಿದ್ದೇನೆ. ಅದನ್ನು ನಾಳೆ ನನ್ನ ಭಾಷಣದ ಕೊನೆಗೆ ಮಂಡಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಅದು ಪೂರ್ತಿಯಾಗಿ ಕ್ರಮಬದ್ಧವಾಗಿದ್ದರೆ.

**ಪಂಡಿತ ಮಾಳವೀಯ :** ಈ ಬಗ್ಗೆ ಮೊನ್ನೆಯೇ ಸೂಚನೆ ನೀಡಿದ್ದೇನೆ.

**ಶ್ರೀ ಖ್ವಾಜಾ ಇನಾಯತ್ ಉಲ್ಲಾ :** ಕೆಲವೇ ನಿಮಿಷಗಳು, ಹೆಚ್ಚು ಸಮಯವನ್ನು ನಾನು ತೆಗೆದುಕೊಳ್ಳುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸಾಧ್ಯವಿಲ್ಲ ಸಾಕು.

**ಶ್ರೀ ಆರ್.ಕೆ. ಚೌಧರಿ :** ನನ್ನ ವಿಷಯದ ಬಗ್ಗೆ?

**ಮಾನ್ಯ ಉಪಸಭಾಧ್ಯಕ್ಷರು :** "ಹೌದು" ಎನ್ನುವ ಮತ್ತು "ಇಲ್ಲ" ಎನ್ನುವ ಗುಂಪುಗಳಿವೆ. ಅವರು ಇಚ್ಛಿಸಿದರೆ ಕಾಯಿದೆಯ ವಿರುದ್ಧ ಮತ ಚಲಾಯಿಸಬಹುದು. ತುಂಬಾ ಸಮಯವಾಗಿದೆ. ಈಗ ಅರ್ಧ ಗಂಟೆಯ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗುವುದಿಲ್ಲ.

ಗುರುವಾರ ೨೦ ಸೆಪ್ಟೆಂಬರ್ ೧೯೫೧ರ ಬೆಳಿಗ್ಗೆ ೮.೩೦ರ ವರೆಗೆ ಅಧಿವೇಶನವನ್ನು ಮುಂದೂಡಲಾಗಿದೆ.

## *ಹಿಂದೂ ಕಾಯಿದೆ – ಮುಂದುವರೆದಿದೆ

**ಶ್ರೀ ಅಮೋಲಾಕ್ ಚಂದ್ (ಉತ್ತರ ಪ್ರದೇಶ) :** ಪಂಡಿತ ಮಾಳವೀಯ ಅವರ ಭಾಷಣವನ್ನು ಮುಮದುವರೆಸುವ ಮೊದಲು ಈ ದಿನ ಇಂಡಿಯನ್ ನ್ಯೂಸ್ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ವ್ಯಂಗ್ಯ ಚಿತ್ರದ ಬಗ್ಗೆ ನಿಮ್ಮ ಗಮನಸೆಳೆಯಬಯಸುತ್ತೇನೆ. ಆ ಬಗ್ಗೆ ನಿಮಗೆ ಒಂದು ಟಿಪ್ಪಣಿ ಕಳುಹಿಸಿದ್ದೇನೆ. ಅದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳುತ್ತಿರೋ ಅಥವಾ ಬೇರೆ ಯಾವುದಾದರೂ ದಿನಕ್ಕೆ ಇಟ್ಟುಕೊಳ್ಳುತ್ತೀರೋ?

**ಸನ್ಮಾನ್ಯ ಸದಸ್ಯರು :** ವ್ಯಂಗ್ಯಚಿತ್ರದ ವಿಷಯವೇನು?

**ಶ್ರೀ ಅಮೋಲಾಕ್ ಚಂದ್ :** ನಾನು ಅಧ್ಯಕ್ಷರ ಅಪ್ಪಣೆ ಪಡೆದು ವ್ಯಂಗ್ಯಚಿತ್ರದ ಬಗ್ಗೆ ಮಾನ್ಯ ಸದಸ್ಯರ ಕುತೂಹಲವನ್ನು ತಣಿಸಲೆ?

**ಮಾನ್ಯ ಉಪಸಭಾಧ್ಯಕ್ಷರು :** ಇಂಡಿಯನ್ ನ್ಯೂಸ್ ಕ್ರಾನಿಕಲ್‌ನಲ್ಲಿ ಪ್ರಕಟವಾದ ಆ ವ್ಯಂಗ್ಯ ಚಿತ್ರ

---

* ೧೯೫೧ನೆಯ ಸೆಪ್ಟಂಬರ್ ೨೦ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೯೦೧–೯

* ೧೯೫೧ನೆಯ ಸೆಪ್ಟಂಬರ್ ೨೦ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೯೦೨–೧೮

ಸಿಕ್ಕಿದೆ. ಅದು ನನ್ನನ್ನೇ ಹೋಲುತ್ತದೆ ಎನ್ನಿಸುತ್ತದೆ. ಅದೊಂದು ಗಡಿಯಾರದ ವ್ಯಂಗ್ಯಚಿತ್ರ. ಅದರ ಎರಡು ಮುಳ್ಳುಗಳನ್ನು ಮಸೂದೆಯನ್ನು ವಿರೋಧಿಸುವ ಕೆಲ ಸದಸ್ಯರು ಎತ್ತಿ ಹಿಡಿದಿದ್ದಾರೆ. ಹಿಂದೆ ಮುಂದೆ ಚಲಿಸದೆ ಸ್ಥಿರವಾಗಿ ನಿಂತಿರುವ ಪೆಂಡುಲಂ ಕೆಳಗೆ ನನ್ನನ್ನು ಪ್ರತಿನಿಧಿಸಲಾಗಿದೆ. ಇಲ್ಲಿ ಸಭಾಧ್ಯಕ್ಷರು ಇರುವವರೆಗೂ ವಿಷಯ ಬೇರೆ. ಆದರೆ ಅಧ್ಯಕ್ಷರ ಮೇಲೆ ಕಳಂಕ ಹೊರಿಸುವುದು ಕೇವಲ ಅಸಮರ್ಥನೀಯ ಅಷ್ಟೇ ಅಲ್ಲ ಘನತೆಗೂ ತಕ್ಕುದಲ್ಲ. ಆದರೆ ಇದು ಸತ್ಯಕ್ಕೂ ದೂರವಾಗಿದೆ. ನನ್ನ ಭಿನ್ನಾಭಿಪ್ರಾಯಗಳು ಏನೇ ಇರಲಿ, ಆದರೆ ನಾನು ಸದನದಲ್ಲಿ ಅನ್ಯಾಯ ಮಾಡುತ್ತಿದ್ದೇನೆ ಎಂದು ಯಾರಾದರೂ ಸದಸ್ಯರು ಆಪಾದಿಸುತ್ತಾರಾ ಎಂಬುದು ನನಗೆ ತಿಳಿಯದು.

**ಸನ್ಮಾನ್ಯ ಸದಸ್ಯರು :** ಇಲ್ಲ, ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಆದುದರಿಂದ ನಾನು ಈ ವಿಷಯವನ್ನು ಪರಿಶೀಲಿಸುತ್ತೇನೆ. ಅಧ್ಯಕ್ಷ ಸ್ಥಾನದಲ್ಲಿ ಯಾರೇ ಇರಲಿ, ಅವರ ಮೇಲೆ, ದೋಷಾರೋಪಣೆ ಮಾಡುವುದು ತೀರಾ ಗಂಭೀರವಾದ ವಿಷಯ. ಅಧ್ಯಕ್ಷ ಗಾದಿಯಲ್ಲಿರುವ ವ್ಯಕ್ತಿ ಅನ್ಯಾಯಮಾಡುತ್ತಿದ್ದಾನೆ ಎಂದು ಸದನದ ಸದಸ್ಯರಿಗೆ ಅನ್ನಿಸಿದರೆ, ಆ ವ್ಯಕ್ತಿಗೆ ಸಂಬಂಧಿಸಿದಂತೆ ಏನು ಮಾಡಬೇಕೆಂದು ಅವರಿಗೆ ಗೊತ್ತು. ಹೊರಗಿನವರು ಈ ಬಗ್ಗೆ ವ್ಯಂಗ್ಯ ಮಾಡುವುದಿಲ್ಲ. ಅದು ಇಡೀ ಸದನದ ಮೇಲೆ ದೋಷಾರೋಪಣೆ ಮಾಡಿದಂತೆ. ನಾನು ಈ ವಿಷಯವನ್ನು ನಿಧಾನವಾಗಿ ಪರಿಶೀಲಿಸುತ್ತೇನೆ ಮತ್ತು ಯಾವ ಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೂ ಸದನ ಆ ಬಗ್ಗೆ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಬೇಕು ಎಂದು ಒತ್ತಾಯಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಆ ಬಗ್ಗೆ ತೀರ್ಮಾನಿಸಲು ನನಗೆ ಸಮಯ ಬೇಕು.

***ಪಂಡಿತ ಮಾಳವೀಯ :** ನಿನ್ನೆ ನಾನು ನಿಲ್ಲಿಸಿದಾಗ, ಇನ್ನೂ ತಾವು ನನಗೆ ಎಷ್ಟು ಹೊತ್ತು ಬೇಕು ಎಂದು ಕೇಳುವ ಕೃಪೆ ಮಾಡಿದಿರಿ. ನಾನು ನನಗೆ ನಿಖರವಾಗಿ ಎಷ್ಟು ಸಮಯ ಬೇಕು ಎಂದು ಹೇಳುವುದು ಕಷ್ಟವಾಗುತ್ತದೆ ಮತ್ತು ನಾನು ಎಷ್ಟು ಕಡಿಮೆ ಸಾಧ್ಯವೋ ಅಷ್ಟು ಕಡಿಮೆ ಸಮಯ ತೆಗೆದುಕೊಳ್ಳಬೇಕೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಾರಂಭಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡೆ. ನಾನು ಎರಡೂ ಕಾಲು ಗಂಟೆಗಿಂತ ಹೆಚ್ಚಿನ ಸಮಯ ತೆಗೆದುಕೊಳ್ಳಬಾರದೆಂದು, ಹೆಚ್ಚು ಕಡಿಮೆ ಒಂದು ಕಾಲಮಿತಿಯನ್ನು ಸೂಚಿಸಿದಿರಿ.

**ಶ್ರೀ ಸಿಧ್ವ (ಮಧ್ಯಪ್ರದೇಶ) :** ತಾವು ಅರ್ಧ ಗಂಟೆ ಅಂದಿರಿ.

**ಪಂಡಿತ ಮಾಳವೀಯ :** ನನ್ನ ಕಿವಿಗೆ.................

**ಮಾನ್ಯ ಉಪಸಭಾಧ್ಯಕ್ಷರು :** ನಾನು ಅಭಿಪ್ರಾಯವನ್ನಷ್ಟೇ ಹೇಳಬಹುದು. ಮಾನ್ಯ ಕಾನೂನು ಮಂತ್ರಿಗಳು ತಮಾಷೆಯಾಗಿ ನೀಡಿದ ಸಲಹೆಯಿಂದ ಉತ್ತೇಜಿತರಾಗಿ ಸನ್ಮಾನ್ಯ ಸದಸ್ಯರು ೫ ದಿನಗಳ ಕಾಲಾವಧಿಯನ್ನು ಕೇಳಲು ಉತ್ಸುಕರಾಗಿದ್ದರು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್) :** ಅವರು ೫ ದಿನ ಅಂದರು, ನಾನು ೫ ಗಂಟೆ ಎಂದು ಸಲಹೆ ಮಾಡಿದೆ.

**ಪಂಡಿತ ಮಾಳವೀಯ :** ನಾನು ಹೇಳಬಹುದೇ....................

**ಮಾನ್ಯ ಉಪಸಭಾಧ್ಯಕ್ಷರು :** ನಾನು ಸದಸ್ಯರಿಗೆ ಸಾಕಷ್ಟು ಸಮಯ ಕೊಡುತ್ತೇನೆ. ಈಗ ಕಾನೂನು ಮಂತ್ರಿಗಳಿಗೆ ಉತ್ತರ ನೀಡಲು ಎಷ್ಟು ಸಮಯ ಬೇಕು?

**ಕಾನೂನು ಮಂತ್ರಿಗಳು :** ಸಂಕ್ಷಿಪ್ತವಾಗಿರಬೇಕೆಂಬುದು ನನ್ನ ಉದ್ದೇಶ. ಆದರೆ ಎತ್ತಿದ ಕೆಲವು

ಅಂಶಗಳಿಗೆ ಉತ್ತರ ಕೊಡಬಯಸುತ್ತೇನೆ. ಒಂದೂ ಕಾಲು ಗಂಟೆ ಸಾಕಾಗಬಹುದು.

**ಮಾನ್ಯ ಉಪ ಸಭಾಧ್ಯಕ್ಷರು :** ಮಾತನಾಡಲು ನಿಂತಿರುವ ಮಾನ್ಯ ಸದಸ್ಯರ ಮಾತು ಮುಗಿದ ತಕ್ಷಣ, ಸನ್ಮಾನ್ಯ ಕಾನೂನು ಮಂತ್ರಿಗಳಿಗೆ ಅವಕಾಶ ನೀಡಬೇಕೆಂದಿದ್ದೇನೆ. ಅವರು ಎರಡು ಕಾಲು ಗಂಟೆ ತೆಗೆದುಕೊಂಡರೂ ಮಾನ್ಯ ಕಾನೂನು ಮಂತ್ರಿಯವರಿಗೆ ಸಾಕಷ್ಟು ಸಮಯ ಉಳಿದಿರುತ್ತದೆ. ಕಾನೂನು ಮಂತ್ರಿಗಳಿಗೆ ೧೨ ಗಂಟೆಯ ಹೊತ್ತಿಗೆ ಅವಕಾಶ ನೀಡುತ್ತೇನೆ.

**ಶ್ರೀಮತಿ ದುರ್ಗಾಬಾಯಿ :** ಈಗ ಭಾಷಣ ಮಾಡಲು ನಿಂತಿರುವ ಸನ್ಮಾನ್ಯ ಸದಸ್ಯರು ೫ ಗಂಟೆಯೋ, ೫ ನಿಮಿಷವೋ ಅಥವಾ ಅದೆಷ್ಟೋ ಸಮಯಬೇಕೆಂದು ಹೇಳಿದ ಮೇಲೆ ಅಧ್ಯಕ್ಷರ ನಿರ್ಣಯಕ್ಕೆ ತಲೆಬಾಗುವುದಾಗಿ ಹೇಳಿದರು. ತಾವು ಅರ್ಧ ಗಂಟೆಗಿಂತ ಹೆಚ್ಚು ಸಮಯಬೇಕಾಗುವುದಿಲ್ಲ ಅಂದಿರಿ. ಈಗ ಸದಸ್ಯರಿಗೆ ತಮ್ಮ ವಾಗ್ದಾನವನ್ನು ಹಿಂತೆಗೆದುಕೊಳ್ಳಲು ಅವಕಾಶಮಾಡಿಕೊಡಲಾಗುವುದೆ?

**ಮಾನ್ಯ ಉಪಸಭಾಧ್ಯಕ್ಷರು :** ನಾನು ಇದನ್ನು ಸನ್ಮಾನ್ಯ ಸದಸ್ಯರಿಗೆ ಬಿಡುತ್ತೇನೆ.

**ಪಂಡಿತ ಮಾಳವೀಯ :** ನಾನು ಮತ್ತೊಂದು ವಿಷಯವನ್ನು ಕುರಿತು ನಿನ್ನೆ, ನನ್ನ ಸಹೋದರಿ ನಿಯಮಗಳನ್ನು ಮಾಡಿದಾಗ ಅದೃಷ್ಟವಶಾತ್ ಈಗ ನಾನು ಸ್ವತಂತ್ರವಾಗಿರುವ ಎಷ್ಟೋ ವಿಷಯಗಳಿಗೆ ನಾವು ಶರಣಾಗಬೇಕಾಗುತ್ತದೆ ಎಂದು ಹೇಳಿದೆ.

**ಶ್ರೀಮತಿ ದುರ್ಗಾಬಾಯಿ :** ಇದು ಈಗಾಗಲೇ ನಿಯಮಗಳಲ್ಲಿದೆ.

**ಪಂಡಿತ ಮಾಳವೀಯ :** ನಾನು ಏನನ್ನು ಹೇಳಲು ಬಯಸಿದ್ದೇನೆಂದರೆ...

**ಮಾನ್ಯ ಉಪಸಭಾಧ್ಯಕ್ಷರು :** ಕಾನೂನಿನಲ್ಲಿ ಹಣಕಾಸು ಮಸೂದೆಗಳಿಗೆ ಸಂಬಂಧಿಸಿದಂತೆ ನಾನು ಕಾಲಮಿತಿಯನ್ನು ಹಾಕಬಹುದು. ಉಳಿದ ಮಸೂದೆಗಳಿಗೆ ಸಂಬಂಧಿಸಿದಂತೆ ಭಾಷಣಗಳಿಗೆ ಕಾಲಮಿತಿಯನ್ನು ಹಾಕಲು ಅವಕಾಶವಿಲ್ಲ.

**ಶ್ರೀಮತಿ ದುರ್ಗಾಬಾಯಿ :** ನನ್ನ ವಾದ ಇಷ್ಟೆ. ಒಮ್ಮೆ ಅಧ್ಯಕ್ಷರು ನಿರ್ಣಯ ನೀಡಿದ ಮೇಲೆ............

**ಮಾನ್ಯ ಉಪಸಭಾಧ್ಯಕ್ಷರು :** ಅದು ನಿರ್ಣಯವಲ್ಲ.

**ಶ್ರೀಮತಿ ದುರ್ಗಾಬಾಯಿ :** .......... ಮಾನ್ಯ ಸದಸ್ಯರಿಗೆ ಆ ನಿರ್ಣಯದ ವಿರುದ್ಧ ಹೋಗಲು ಅವಕಾಶ ಕೊಡಬಹುದೇ?

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನು ನಿರ್ಣಯ ಎಂದು ವ್ಯಾಖ್ಯಾನಿಸಬಾರದು. ಅದು ಕೇವಲ ಸಲಹೆ. ಒಂದು ವಿಷಯ ಮರೆತೆ. ತಿದ್ದುಪಡಿಗಳನ್ನು ಸದನದಲ್ಲಿ ಮತಕ್ಕೆ ಹಾಕಬೇಕಾಗಬಹುದು. ಆದುದರಿಂದ ಸನ್ಮಾನ್ಯ ಸದಸ್ಯರು ೨ ಗಂಟೆಗಳ ಕಾಲಾವಧಿಯಲ್ಲಿ ತಮ್ಮ ಮಾತನ್ನು ಮುಗಿಸಿದರೆ, ಅರ್ಧ ಗಂಟೆ ಅಧ್ಯಕ್ಷರಿಗೆ ದೊರಕುತ್ತದೆ. ನಾನು ಕಾನೂನು ಮಂತ್ರಿಗನ್ನು ೧೧.೩೦ಕ್ಕೆ ಕರೆಯಬಹುದು. ಆಗ ಈ ಕಲಮು ಮತ್ತೆ ಅದಕ್ಕೆ ಸಂಬಂಧಿಸಿದ ಎಲ್ಲಾ ತಿದ್ದುಪಡಿಗಳನ್ನೂ ಈ ಅಧಿವೇಶನ ಮುಗಿಯುವುದರ ಒಳಗೆ ಮುಗಿಸಬಹುದು. ಮಾನ್ಯ ಸದಸ್ಯರು ಎರಡು ಗಂಟೆ ತೆಗೆದುಕೊಳ್ಳಬಹುದು.

**ಪಂಡಿತ ಮಾಳವೀಯ :** ನಾನು ನಿಮಗೆ ಆಭಾರಿಯಾಗಿದ್ದೇನೆ. ನಾನು ಪ್ರಾರಂಭದಲ್ಲಿ ಹೇಳಹೊರಟಿರುವುದು ಏನೆಂದರೆ, ವ್ಯವಸ್ಥೆ ಏನೇ ಇರಲಿ ನಾವು ಹೆಚ್ಚು ಕಡಿಮೆ ಒಂದು ತೀರ್ಮಾನಕ್ಕೆ.............

**ಮಾನ್ಯ ಉಪಸಭಾಧ್ಯಕ್ಷರು :** ಆ ಬಗ್ಗೆ ವಿವರಿಸುವುದು ಬೇಡ.

**ಪಂಡಿತ ಮಾಳವೀಯ :** ........... ಆಗಿನಿಂದ ಕೆಲ ಆತ್ಮೀಯ ಮಿತ್ರರು ಸದನದ ಸದಸ್ಯರು ಆದಷ್ಟು ಕಡಿಮೆ ಸಮಯ ತೆಗೆದುಕೊಳ್ಳಬೇಕೆಂಬ ನಿಲುವನ್ನು ಹೊಂದಿದ್ದಾರೆ. ಅವರ ನಿಲುವು ಹಾಗೂ ಅಭಿಪ್ರಾಯದ

ಬಗ್ಗೆ ಈ ಸದನದ ಹೆಚ್ಚು ಮಂದಿಗೆ ಗೌರವ ಹಾಗೂ ಆದರಗಳಿವೆ. ನಾನು ಸದನಕ್ಕೆ ಈಗಷ್ಟೇ ಬಂದೆ. ನನಗೆ ಕೆಲನಿಮಿಷಗಳಲ್ಲಿ ಮುಗಿಸಬೇಕೆಂದು ತಿಳಿಸಲಾಯಿತು. ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿ ಎಷ್ಟು ಸಮಯವನ್ನು ಬೇಕಾದರೂ ತೆಗೆದುಕೊಳ್ಳಬಹುದು. ತಾವು ಅದನ್ನೇ ಅನುಸರಿಸುವುದಾಗಿ ಹೇಳಿದ್ದು ತುಂಬಾ ಒಳ್ಳೆಯದು. ಅದೂ ಇಷ್ಟೊಂದು ಮಹತ್ವದ ವಿಷಯದಲ್ಲಿ ಲಕ್ಷಾಂತರ ವರ್ಷಗಳಿಂದ ನಡೆದುಕೊಂಡು ಬಂದಿರುವುದು ಛಿದ್ರವಾಗುತ್ತಿರುವಾಗ, ನಿಮಿಷ, ಗಂಟೆಗಳನ್ನು ಎಣಿಸಬಾರದು. ಯಾರಿಗಾದರೂ ಈ ಬಗ್ಗೆ ಹೇಳುವುದೇನಾದರೂ ಇದ್ದರೆ, ಅದು ಅಸಮಂಜಸ ಹಾಗೂ ಸಂಪೂರ್ಣವಾಗಿ ಅರ್ಥಹೀನವಲ್ಲದಿದ್ದ ಪಕ್ಷದಲ್ಲಿ ಸಮಯದ ಪ್ರಶ್ನೆಯೇ ಏಳಬಾರದು. ಅವನು ಒಂದು ದಿನ, ಎರಡು ದಿನ ಅಥವಾ ೨೦ ದಿನಗಳನ್ನೇ ತೆಗೆದುಕೊಳ್ಳಲಿ. ನಾನು ಹಿರಿಯರ ಹಾಗೂ ನನ್ನ ಮುಖಂಡರ ಇಚ್ಛೆಯನ್ನು ಗೌರವಿಸುತ್ತೇನೆ. ನಿಯಮಗಳಿಗನುಗುಣವಾಗಿ ನನಗೆ ಹೆಚ್ಚಿನ ಸಮಯವನ್ನು ಕೃಪೆಯಿಟ್ಟು ನೀಡಿದ್ದೀರಿ. ಆದರೆ ಅವೆಲ್ಲವನ್ನೂ ಬಿಟ್ಟು ಕೆಲವೇ ನಿಮಿಷಗಳಿಗೆ ನನ್ನ ಮಾತನ್ನು ಸೀಮಿತಗೊಳಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ನನಗೆ ಈ ಮಸೂದೆಯ ಚರ್ಚೆಯ ವಿಷಯಕ್ಕೆ ಸಂಬಂಧಿಸಿದಂತೆ ಆದ ಈ ಅನ್ಯಾಯವನ್ನು ತೀರಾ ನೋವಿನಿಂದ ಹೇಳುತ್ತಿದ್ದೇನೆ. ನಾನು ಈಗಾಗಲೇ ಹೇಳಿದಂತೆ ಹಿಂದೂ ಸಹಿಷ್ಣುತೆಯಲ್ಲಿ ನಂಬಿಕೆಯನ್ನಿಟ್ಟ ಮನುಷ್ಯ. ಹಾಗಾಗಿ ನನ್ನ ಮೇಲೆ ನ್ಯಾಯಯುತವಲ್ಲದ್ದನ್ನು ಹೇರಿದರೂ..................

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ಕುಳಿತುಕೊಳ್ಳಬಹುದು. ಮಸೂದೆಯನ್ನು ತೀರಾ ಅವಸರದಲ್ಲಿ ಸ್ವಿಕರಿಸಲಾಯಿತು. ಅಥವಾ ತುಂಬಾ ಎಳೆಯಲಾಯಿತು ಎಂಬ ಭಾವನೆ ಬಾರದಿರಲಿ ಎಂದು ಪ್ರಯತ್ನಿಸುತ್ತಿದ್ದೇನೆ. ಎರಡರಲ್ಲಿ ಯಾವುದೇ ಅಭಿಪ್ರಾಯವೂ ಬಾರದಂತೆ ನೋಡಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ಈ ಬಗ್ಗೆ ಸಾಕಷ್ಟು ಸಮಯ ವ್ಯಯಿಸಿದ್ದೇವೆ. ಚರ್ಚೆ ಮುಕ್ತಾಯದ ಹಂತದಲ್ಲಿದೆ. ಈಗ ಸಮಾಪ್ತಿಯ ಗೊತ್ತುವಳಿಯನ್ನು ಮಂಡಿಸಿದರೆ ನಾನು ಅಂಗೀಕರಿಸಲು ತಯಾರಿದ್ದೇನೆ. ಯಾಕೆಂದರೆ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕೆಲವೊಬ್ಬ ಸದಸ್ಯರು ಮಾತನಾಡದೇ ಇರಬಹುದು. ಆದರೆ ಬಂದಿರುವ ಪ್ರಶ್ನೆಗಳ ಬಗ್ಗೆ ಸಾಮೂಹಿಕವಾಗಿ ಎಲ್ಲರೂ ಮಾತನಾಡಿದ್ದಾರೆ. ಈ ಸಮಯದಲ್ಲಿ ಸನ್ಮಾನ್ಯ ಸದಸ್ಯರು ಬೇಸರ ಮಾಡಿಕೊಂಡು, ಸಮಯದ ಅಭಾವದಿಂದ ಹಾಗೂ ಯಾವುದೋ ರೀತಿಯ ಮಿತಿಯಿಂದಾಗಿ ಮತ್ತು ಒತ್ತಡದಿಂದಾಗಿ ತನ್ನ ಅಭಿಪ್ರಾಯಗಳನ್ನೆಲ್ಲಾ ಹೇಳುತ್ತಿಲ್ಲ ಅಂದರೆ, ಅವರು ಇಲ್ಲಿರುವ ಯಾರಿಗೂ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ನಾವು ಆತುರಮಾಡುತ್ತಿದ್ದೇವೆ ಎಂಬ ಭಾವನೆ ಬಾರದಿರಲಿ ಎಂದು ನಾನು ಪ್ರಯತ್ನಿಸುತ್ತಿದ್ದೇನೆ. ಸನ್ಮಾನ್ಯ ಸದಸ್ಯರು ಈಗಾಗಲೇ ೨ ಗಂಟೆ ತೆಗೆದುಕೊಂಡಿದ್ದಾರೆ. ಅವರಿಗೆ ಬೇಕಾದರೆ ಇನ್ನೆರಡು ಗಂಟೆ ತೆಗೆದುಕೊಳ್ಳಲಿ. ಆದರೆ ಯಾವುದೋ ಕಾರಣಕ್ಕೆ ಅವರಿಗೆ ಮುಂದುವರೆಸುವುದು ಸಾಧ್ಯವಾಗದಿದ್ದರೆ, ಅದನ್ನೇ ದೊಡ್ಡ ಸುದ್ದಿ ಮಾಡಬೇಕಾಗಿಲ್ಲ. ಅದರಿಂದ ನಾವು ತರಾತುರಿಯಲ್ಲಿ ಮುಗಿಸಿಬಿಡುತ್ತಿದ್ದೇವೆ ಎಂಬ ಭಾವನೆ ಬರುವುದಂತೂ ಬೇಡ. ಮಾತನಾಡುವುದು ಬಿಡುವುದು ಅವರಿಗೆ ಬಿಟ್ಟಿದ್ದು. ಅದಕ್ಕೆ ಹಲವಾರು ಕಾರಣಗಳಿರಬಹುದು. ಅದು ಬೇರೆ ವಿಚಾರ. ನನ್ನ ಕಾಳಜಿಯೆಲ್ಲಾ ಇರುವುದು ಸದನದೊಳಗಿನ ಪ್ರಕ್ರಿಯೆಯ ಬಗ್ಗೆ ಮತ್ತು ಸದನದೊಳಗಿನ ಹಾಗೂ ಹೊರಗಿನವರಿಗೆ ನಾವು ತೀರಾ ಮುಖ್ಯವಾದ ವಿಷಯವನ್ನು ತರಾತುರಿಯಲ್ಲಿ ಮುಗಿಸುತ್ತಿದ್ದೇವೆ ಎಂದಾಗಲಿ ಅಥವಾ ಯಾವುದೋ ಆತಂಕದಿಂದ ಅನವಶ್ಯಕವಾಗಿ ಚರ್ಚೆಯನ್ನು ಎಳೆಯುವ ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದಾಗಲಿ ಅಭಿಪ್ರಾಯಬಾರದಂತೆ ನೋಡಿಕೊಳ್ಳುವುದಕ್ಕೆ ಸೀಮಿತವಾಗಿದೆ. ಆದುದರಿಂದ ಈ ಎರಡೂ ಭಾವನೆಗಳ ಪ್ರಭಾತಕ್ಕೆ ಬೀಳದಂತೆ ಮಸೂದೆಯನ್ನು ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದೇನೆ. ಸನ್ಮಾನ್ಯ ಸದಸ್ಯರು ಇದನ್ನೆಲ್ಲಾ

ಉಲ್ಲೇಖಿಸಬೇಕಾಗಿಲ್ಲ. ತಮಗನ್ನಿಸಿದ್ದನ್ನು ಹೇಳಬಹುದು ಅಥವಾ ಮುಂದಿನ ಕಲಂಗಳನ್ನು ಉಲ್ಲೇಖಿಸಬಹುದು ಅಥವಾ ಉಲ್ಲೇಖಿಸದೇ ಇರಬಹುದು. ಅಥವಾ ತಮಗೆ ಸೂಕ್ತ ಹಾಗೂ ಯೋಗ್ಯ ಅನ್ನಿಸಿದ ಟೀಕೆಗಳನ್ನು ಮಾಡಬಹುದು. ಇದೆಲ್ಲಾ ಅವರ ಇಚ್ಛೆ ಹಾಗೂ ಸಂತೋಷಕ್ಕೆ ಬಿಟ್ಟಿದ್ದು.

**ಪಂಡಿತ ಮಾಳವೀಯ :** ನಿಮ್ಮ ಹೇಳಿಕೆಗಳನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ನಾನು ಆಕ್ಷೇಪಣೆ ಮಾಡುತ್ತಿಲ್ಲ. ನೀವು ಹೇಳಿದ ಕಾರಣಕ್ಕಿಂತ ಬೇರೆಯದೇ ಆದ ಕಾರಣಕ್ಕಾಗಿ ನನಗೆ ಬೇಕಾದಷ್ಟು ಹಾಗೂ ನಾನು ತೆಗೆದುಕೊಳ್ಳಲು ಬಯಸಿದ್ದಷ್ಟು ಸಮಯವನ್ನು ನಾನು ತೆಗೆದುಕೊಳ್ಳುವುದಿಲ್ಲ. ಇದೇ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬಯಸಿದ್ದು. ಜೊತೆಗೆ ಇದರಿಂದ ನಿನ್ನೆ ತಮ್ಮ ಅಭಿಪ್ರಾಯವನ್ನು ಹೇಳಲು ತವಕಿಸುತ್ತಿದ್ದ ಹಲವಾರು ಸದಸ್ಯರಿಗೆ ಅವಕಾಶ ಸಿಕ್ಕಂತಾಗುತ್ತದೆ. ಇದನ್ನು ಆಕ್ಷೇಪಣೆಯಾಗಿ ನಾನು ಹೇಳುತ್ತಿಲ್ಲ. ನಾನು ಹೇಳಬೇಕಾದುದನ್ನೆಲ್ಲಾ ಬಿಟ್ಟು ನೇರವಾಗಿ ಒಂದೋ ಎರಡೋ ವಿಷಯದ ಬಗ್ಗೆ ಮಾತನಾಡಬೇಕಾಗಿದೆ ಎಂಬ ವಾಸ್ತವ ಸಂಗತಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ನಿನ್ನೆ ಸಭೆ ಮುಗಿಯುತ್ತಿರುವ ಸಮಯದಲ್ಲಿ ಕೃಷಿಯನ್ನು ಸಮವರ್ತಿ ಪಟ್ಟಿಗೆ ಸೇರಿಸುವುದರ ಮೂಲಕ ಹೊಸ ಸಂವಿಧಾನವು ಈ ಮಸೂದೆಯ ವ್ಯಾಪ್ತಿಯನ್ನು ಏಕಾಏಕಿ ವಿಸ್ತರಿಸಿದೆ ಎಂಬ ವಿಷಯವನ್ನು ಹೇಳುತ್ತಿದ್ದೆ. ನಾನು ಮತ್ತೊಂದು ಬಹು ಮುಖ್ಯ ಅಂಶವನ್ನು ಕೇವಲ ಪ್ರಸ್ತಾಪ ಮಾಡುತ್ತೇನೆ. ಈಗ ನಮ್ಮ ಮುಂದಿರುವ ಮಸೂದೆ ಎಷ್ಟೊಂದು ಬದಲಾಗಿದೆಯೆಂದರೆ, ಅದನ್ನು ಮೊದಲು ಮಂಡಿಸಿದಾಗ, ಇದ್ದುದ್ದಕ್ಕೆ ಹೋಲಿಸಿದರೆ ಈಗ ಅದರ ಗುರುತೇ ಸಿಗುವುದಿಲ್ಲ. ಆಯ್ಕೆ ಸಮಿತಿಯು ತಮ್ಮ ವರದಿಯ ಕೊನೆಯಲ್ಲಿ ಮಸೂದೆಯ ಸ್ವರೂಪವನ್ನೇ ಬದಲಿಸಿಬಿಡುವ ತಿದ್ದುಪಡಿಗಳನ್ನು ಮಾಡಿಲ್ಲ ಮತ್ತು ತಿದ್ದುಪಡಿಗೊಂಡ ಮಸೂದೆಯನ್ನು ಪುನರ್ ಮುದ್ರಿಸುವ, ಪುನರ್ ಪ್ರಚಾರಮಡುವ ಆವಶ್ಯಕತೆಯಿಲ್ಲ ಎಂದು ಹೇಳಿಕೆ ನೀಡಬೇಕು. ಹಾಗಾಗಿ ಆಯ್ಕೆ ಸಮಿತಿಯಲ್ಲಿ ಒಂದು ಮಸೂದೆ ತುಂಬಾ ಬದಲಾಗಿಬಿಟ್ಟಿದ್ದರೆ, ಅದನ್ನು ಪುನರ್ ಮುದ್ರಣ ಮಾಡಿ ಹಂಚಬೇಕು. ಯಾಕೆಂದರೆ, ಈ ನಿಯಮಗಳನ್ನು ಶಾಂತ ವಾತಾವರಣದಲ್ಲಿ ನಿಷ್ಪಕ್ಷಪಾತವಾದ ಮನಸ್ಸಿನಿಂದ ರೂಪಿಸಲಾಗಿದೆ. ಯಾವುದೇ ಒಂದು ವಿಷಯದ ಬಗ್ಗೆಯಾಗಲಿ ಅಥವಾ ಯಾವುದೇ ನಿರ್ದಿಷ್ಟ ದೃಷ್ಟಿಕೋನದಿಂದ ಇದನ್ನು ರೂಪಿಸಿಲ್ಲ. ಜಾಗರೂಕತೆಯಿಂದ ಚಿಂತಿಸಿ, ಎಚ್ಚರಿಕೆಯಿಂದ ಜಾರಿಗೆ ಮಾಡುವ ಮೂಲಭೂತ ಉದ್ದೇಶದಿಂದ ರಚಿಸಲಾಗಿದೆ. ಆದುದರಿಂದ ಅಂತಹ ನಿಯಮಗಳು ತೀರಾ ಮೌಲಿಕವಾದವುಗಳು. ಒಂದು ನಿರ್ದಿಷ್ಟ ವಿಷಯ ಹಾಗೂ ಸಂದರ್ಭಕ್ಕೆ ಬೇಕಾದಂತೆ, ಅದನ್ನು ಹಗುರಗೊಳಿಸಲು ಪ್ರಾರಂಭಿಸಿದರೆ, ಯಾವುದೇ ರಾಷ್ಟ್ರದ ಆರೋಗ್ಯವಂತ ಸಂಸದೀಯ ಸಂಪ್ರದಾಯ ಹಾಗೂ ಸಂಸ್ಥೆಗೆ ಅದೊಂದು ದುರ್ದಿನ. ಆದುದರಿಂದ, ಈ ಮಸೂದೆ ಸಂಪೂರ್ಣವಾಗಿ ಮಾರ್ಪಾಡಾಗಿರುವುದರಿಂದ ಆ ಕ್ರಮವನ್ನು ಅನುಸರಿಸದೇ, ಅದರ ಬಗ್ಗೆಯಾಗಲಿ ಅಥವಾ ಅದರ ಯಾವುದೇ ಭಾಗವನ್ನು ಕುರಿತಾಗಲಿ ಮುಂದುವರಿಯುವುದಕ್ಕೆ ಸಂವಿಧಾನಾತ್ಮಕವಾಗಿ ಯಾವುದೆ ಸಮರ್ಥನೆಯೂ ಇಲ್ಲ. ಈ ವಿಷಯವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಇನ್ನೊಂದು ಎರಡೊ ಮೂರೊ ವಿಷಯವನ್ನು ಪ್ರಸ್ತಾಪಿಸಿ ನಾನು ವಿರಮಿಸುತ್ತೇನೆ. ಮಸೂದೆಯ ಬೆಂಬಲಿಗರಲ್ಲಿ ಕೆಲವು ಮಿತ್ರರು ಈ ಮಸೂದೆಯನ್ನು ಸ್ಮೃತಿಗಳು ಮತ್ತು ಧರ್ಮಶಾಸ್ತ್ರಗಳ ತತ್ವಗಳಿಗೆ ಅನುಗುಣವಾಗಿ ರೂಪಿಸಲಾಗಿದೆ ಎಂದು ಹೇಳಿದ್ದಾರೆ. ನನಗೆ ಸಮಯ ಇದ್ದರೆ ಬೇರೆ ಬೇರೆ ಸ್ಮೃತಿಗಳಿಂದ ಧರ್ಮಶಾಸ್ತ್ರಗಳಿಂದ ನಿರ್ದಿಷ್ಟ ಭಾಗಗಳನ್ನು ಉಲ್ಲೇಖಿಸಿ ಇವರ ಹೇಳಿಕೆಯ ಪೊಳ್ಳುತನವನ್ನು ತೋರಿಸುತ್ತಿದ್ದೆ. ಈಗ ನನಗೆ ಅದು ಸಾಧ್ಯವಿಲ್ಲ. ಆದುದರಿಂದ ನೇರವಾಗಿ ಈಗ ಕೈಗೊಳ್ಳಬೇಕಾಗಿರುವ ಕ್ರಮಗಳಿಗೆ

ಸಂಬಂಧಿಸಿದ ಎರಡು ಮುಖ್ಯ ತತ್ವಗಳಿಗೆ ಬರುತ್ತೇನೆ. ಮೊದಲನೆಯದು ಸಪಿಂಡ ವಿವಾಹದ ನಿಷೇಧ. ಎರಡನೆಯದು ಹಿಂದೂಗಳಲ್ಲಿ ವಿವಾಹಿತ ಮಹಿಳೆ ಮರು ವಿವಾಹವಾಗಬಹುದು ಎಂಬ ಪ್ರಶ್ನೆಯ ಬಗ್ಗೆ.

ಈ ಎರಡು ವಿಷಯಗಳ ಬಗ್ಗೆ ಕೆಲವು ಸ್ಮೃತಿಗಳಿಂದ ಉಲ್ಲೇಖಿಸಲಾಗಿದೆ. ಸಪಿಂಡ ವಿವಾಹದ ಪ್ರಶ್ನೆಗೆ ಸಂಬಂಧಿಸಿದಂತೆ, ಸ್ಮೃತಿಗಳು ಕಾಲದಿಂದ ಕಾಲಕ್ಕೆ ನಿಯಮಗಳನ್ನು ಬದಲಿಸುತ್ತಾ ಹೋಗುತ್ತದೆ ಎಂದು ವಾದಿಸಲಾಗಿದೆ. ಒಂದು ಸ್ಮೃತಿ ಒಂದು ಅಭಿಪ್ರಾಯವನ್ನು ಹೇಳಿದರೆ, ಮತ್ತೊಂದು ಸ್ಮೃತಿ ಮತ್ತೊಂದು ಅಭಿಪ್ರಾಯವನ್ನು ಹೇಳುತ್ತದೆ. ಆದುದರಿಂದ ಅದು ಬದಲಾಗಬಾರದು ಎಂಬುದು ಮುಖ್ಯವಲ್ಲ. ಕಾಲದಿಂದ ಕಾಲಕ್ಕೆ ಆಚರಣೆಗಳು ಹಾಗೂ ಅಭಿಪ್ರಾಯಗಳಿಗೆ ತಕ್ಕಂತೆ ವಿವಿಧ ಸ್ಮೃತಿಗಳು, ವಿವಿಧ ಗ್ರಂಥಗಳನ್ನು ನೀಡಿವೆ – ಎಂಬ ತೀರ್ಮಾನಕ್ಕೆ ಬರುವ ಪ್ರಯತ್ನ ಮಾಡಲಾಗಿದೆ. ನಾನು ನಿನ್ನೆ ಹೇಳುತ್ತಿದ್ದೆ – ಧರ್ಮಶಾಸ್ತ್ರಗಳನ್ನು ವ್ಯಾಖ್ಯಾನಿಸಲು ಸ್ಪಷ್ಟವಾದ ನಿಯಮಗಳಿವೆ. ಆ ನಿಯಮಗಳು ಅನುಸರಿಸಬೇಕಾದ ಕ್ರಮ ಹಾಗೂ ತಳೆಯಬೇಕಾದ ನಿಲುವುಗಳನ್ನು ಉಲ್ಲೇಖಿಸಿವೆ ಮತ್ತು ಮೀಮಾಂಸದ ನಿಯಮಗಳನ್ನು ಬಳಸಿಕೊಂಡಾಗ ಮಾತ್ರ ಧರ್ಮಶಾಸ್ತ್ರಗಳನ್ನು ವ್ಯಾಖ್ಯಾನಿಸಬಹುದು ಎಂದು ಹೇಳಲಾಗಿದೆ. ಅವುಗಳನ್ನು ನಿರ್ಧರಿಸಲು ೧೪ ಮೂಲಗಳನ್ನು ಬಳಸಬೇಕು. ಅವೆಲ್ಲವನ್ನೂ ಉಲ್ಲೇಖಿಸಲಾಗಿದೆ. ಹಾಗಾಗಿ ಯಾರಾದರೂ ಅದನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳಬೇಕೆಂದಿದ್ದರೆ, ಅದರ ಆಳಕ್ಕೆ ಹೋಗಬೇಕು.

ಮದುವೆಯ ವಿಷಯಕ್ಕೆ ಬಂದಾಗ, ಪ್ರತಿಯೊಂದು ಸ್ಮೃತಿ ಹಾಗೂ ಧರ್ಮಶಾಸ್ತ್ರಗಳಲ್ಲಿ, ಸಪಿಂಡ ವಿವಾಹವಾಗುವ ವಧು-ವರರ ಸಂಬಂಧಕ್ಕೆ ತಂದೆಯ ಕಡೆಯಿಂದ ೭ ತಲೆಮಾರಿನಷ್ಟು ಅಂತರವೂ ತಾಯಿಯ ಕಡೆಯಿಂದ ಐದು ತಲೆಮಾರಿನಷ್ಟಾದರೂ ಇರಬೇಕು. ಈ ಕನಿಷ್ಠ ಅಂತರಕ್ಕಿಂತ ಕಡಿಮೆ ಅಂತರದ ವೈವಾಹಿಕ ಸಂಬಂಧವನ್ನು ನಿಷಿದ್ಧ ಎಂದು ನಮೂದಿಸಿವೆ. ಇದನ್ನು ಯಾರು ಅಲ್ಲಗಳೆದಿಲ್ಲ. ಕೆಲವು ಸ್ಮೃತಿಗಳಲ್ಲಿ ೭-೫ರ ಬದಲು ೫ ಹಾಗೂ ೩ ಎಂದು ನಮೂದಿಸಲಾಗಿದೆ ಎಂಬ ಪ್ರಸ್ತಾಪ ಬಂತು. ಈ ಉದ್ದೇಶಕ್ಕೆ ಅವರು ಪೈಥಿನಾಸೀ ಸ್ಮೃತಿಯನ್ನು ಅವಲಂಬಿಸುತ್ತಾರೆ ಎಂದುಕೊಂಡಿದ್ದೇನೆ. ಸ್ಮೃತಿಯಲ್ಲಿ ಅದು ೫ ಮತ್ತು ೩ ಇರಬೇಕು ಎಂದು ಕಟ್ಟುನಿಟ್ಟಾಗಿ ಹೇಳಿದೆಯೋ ಇಲ್ಲವೋ ಎಂಬುದನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂಬ ಭಾವನೆಯಿಂದ ಅದನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ. ಪೈಥಿನಾಸೀ ಸ್ಮೃತಿಯಲ್ಲಿ...........

**ಮಾನ್ಯ ಉಪಸಭಾಧ್ಯಕ್ಷರು** : ಸನ್ಮಾನ್ಯ ಕಾನೂನು ಮಂತ್ರಿಗಳು ಆ ಬಗ್ಗೆ ಅಂಧಾಭಿಮಾನ ಹೊಂದಿಲ್ಲ ಎಂದು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್** : ಸಮಯ ಬಂದಾಗ ಅದನ್ನು ಪರಿಶೀಲಿಸೋಣ.

**ಪಂಡಿತ ಮಾಳವೀಯ** : ಮಸೂದೆಯ ಪ್ರತಿಯೊಂದು ನಿಬಂಧನೆಯೂ ತಪ್ಪು ಗ್ರಹಿಕೆಯನ್ನೇ ಆಧರಿಸಿದೆ ಎಂಬುದನ್ನು ತೋರಿಸಲು ಇದನ್ನು ಒಂದು ಉದಾಹರಣೆಯಾಗಿ ತೆಗೆದುಕೊಂಡೆ ಅಷ್ಟೇ. ಪೈಥಿನಾಸೀ ಸ್ಮೃತಿಯಲ್ಲಿ:

*ಪಂಚಮೀ ಮಾತೃತಃ । ಪರಿಹರೇತ್ ಸಪ್ತಮೀಂ ಪಿತೃತಃ ।*

ತಾಯಿಯ ಕಡೆಯಿಂದ ೫ ತಲೆಮಾರುಗಳು, ತಂದೆಯ ಕಡೆಯಿಂದ ೭ ತಲೆಮಾರು ಎಂದಿದೆ ಈವರೆಗೆ ಸ್ಮೃತಿಯೂ ಅದನ್ನೇ ಹೇಳುತ್ತಿದೆ. ಅದರಲ್ಲಿ ಮುಂದೆ-

*"ತ್ರೀನ್ ಮಾತೃತಃ ಪಂಚ ಪಿತೃತೋ ವಾ"* ಅಂದರೆ ತಾಯಿಯ ಕಡೆಯಿಂದ ಮೂರು ತಲೆಮಾರುಗಳು, ತಂದೆಯ ಕಡೆಯಿಂದ ೫ ತಲೆಮಾರುಗಳಾಗಬೇಕು ಎಂದು ಪ್ರಸ್ತಾಪಿಸಲಾಗಿದೆ. ನನಗೆ ಸಮಯವಿದ್ದರೆ, ಸ್ಮೃತಿಗಳು ವಿಭಿನ್ನ ನಿಯಮಗಳನ್ನು ವಿಧಿಸುತ್ತವೆ. ಒಂದು ಸಂದರ್ಭದಲ್ಲಿ ೫ ಮತ್ತು ೭ ಎಂದು ಹೇಳುತ್ತದೆ. ಆಯ್ಕೆಯನ್ನು

ನಾವು ಮಾಡಿಕೊಳ್ಳಬೇಕಾಗುತ್ತದೆ ಎಂಬ ನನ್ನ ಗೆಳೆಯರ ವಾದವನ್ನು ಎಲ್ಲಾ ಇತರ ಸ್ಮೃತಿಗಳನ್ನು ಉಲ್ಲೇಖಿಸಿ ತಪ್ಪು ಎಂದು ತೋರಿಸುತ್ತಿದ್ದೆ.

ಮೀಮಾಂಸಗಳಲ್ಲಿ ಗ್ರಂಥಗಳನ್ನು ವ್ಯಾಖ್ಯಾನಿಸುವ ಕ್ರಮವನ್ನು ತಿಳಿಸಲಾಗಿದೆ. ಕಾನೂನಿನ ಮೂಲ ಶ್ರುತಿಗಳು – ಎಂಬ ಸಂಗತಿಯ ಮೇಲೇ ಇಡೀ ಹಿಂದೂ ಕಾನೂನಿನ ಕಟ್ಟಡ ನಿಂತಿರುವುದು. ಶ್ರುತಿಗಳು ಸ್ವಯಂ ಪ್ರಾಮಾಣ್ಯಗಳು. ಶ್ರುತಿಯಲ್ಲಿ ಇರುವುದು ಅದರಷ್ಟೇ ಅದೇ ಸಾಬೀತಾಗಿರುವಂಥದ್ದು. ಅದಕ್ಕೇ ಬೇರೆ ಪ್ರಾಮಾಣ್ಯ ಬೇಕಾಗಿಲ್ಲ. ಸ್ಮೃತಿಗಳು "ಪರತಃ ಪ್ರಮಾಣಃ" ಅಂದರೆ ಅವು ಸ್ವತಃ ಅಧಿಕೃತವಲ್ಲ. ಯಾಕೆಂದರೆ ಅವು ಶ್ರುತಿಮೂಲವನ್ನು ಆಧರಿಸಿವೆ. ಸ್ಮೃತಿಗಳು, ಶ್ರುತಿಗಳಿಂದ ಅಧಿಕೃತತೆಯನ್ನು ಪಡೆದುಕೊಳ್ಳುವ ಗುಂಪಿಗೆ ಸೇರಿವೆ. ಈಗ ಎಲ್ಲಾ ಸ್ಮೃತಿಗಳೂ ಒಂದೇ ಮೂಲದಿಂದ ಬಂದಿವೆ ಎಂದಾದ ಮೇಲೆ, ಅವುಗಳಲ್ಲಿ ವಿರೋಧಾತ್ಮಕ ನಿಲುವುಗಳು ಯಾಕಿವೆ ಎಂಬ ತಕರಾರು ಬರುವುದು ಸ್ವಾಭಾವಿಕ. ಆ ಆಕ್ಷೇಪವನ್ನು ನೀವು ಊಹಿಸಬಹುದು.

ಶ್ರುತಿಯಲ್ಲಿಯೇ ಅವಿಕಲ್ಪ ಇರಬಹುದು. ಅಂದರೆ ಶ್ರುತಿಯೇ ಎರಡು ಪರ್ಯಾಯವನ್ನು – ಇದು ಅಥವಾ ಇನ್ನೊಂದು – ಸೂಚಿಸಿರಬಹುದು ಎಂಬುದಾಗಿ ಮೀಮಾಂಸಗಳು ಹೇಳುತ್ತವೆ. ಆ ರೀತಿಯ ಉದಾಹರಣೆಗಳು ಶ್ರುತಿಯಲ್ಲಿಯೇ. ಇವೆ. (ಬೆಳಿಗ್ಗೆ ೧೦ ಗಂಟೆ)

*"ಉದಿತೇ ಜುಹೋತಿ। ಅನುದಿತೆ ಜುಹೋತಿ."*

ಇದು ಶ್ರುತಿಯಲ್ಲಿದೆ. ಇದರ ಪ್ರಕಾರ ಯಜ್ಞವನ್ನು ಸೂರ್ಯೋದಯಕ್ಕೆ ಮುಂಚಿತವಾಗಿ ಮಾಡಬಹುದು. ನಂತರವೂ ಮಾಡಬಹುದು. ಅದರಲ್ಲಿ ವಿರೋಧಾತ್ಮಕವಾದದ್ದೇನೂ ಇಲ್ಲ. ಯಾಕೆಂದರೆ ಎರಡನ್ನೂ ಶ್ರುತಿಯಲ್ಲಿ ಪ್ರಸ್ತಾಪಿಸಲಾಗಿದೆ. ಮೀಮಾಂಸೆ ಶಾಸ್ತ್ರಗಳ ಪ್ರಕಾರ ಇತರ ವಿಷಯಗಳನ್ನು ಗಮನಿಸಬೇಕಾಗುತ್ತದೆ. ತಾಂತ್ರಿಕವಾಗಿ ಇದನ್ನೂ ಆತ್ಮತುಷ್ಟಿ ಎನ್ನುತ್ತಾರೆ. ಆತ್ಮತುಷ್ಟಿಯ ಸಿದ್ಧಾಂತಕ್ಕೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಆತ್ಮತುಷ್ಟಿ ಎಂದರೆ ಇಚ್ಛೆಯಲ್ಲ. ಇವತ್ತೊಂದು ನಿರ್ಧಾರ, ನಾಳೆ ಇನ್ನೊಂದು ನಿರ್ಧಾರವನ್ನು ತೆಗೆದುಕೊಳ್ಳುವ ಲಹರಿಯಲ್ಲ. ಇಂದು ಅನ್ನ ತಿಂದೆ, ನಾಳೆ ಚಪಾತಿ ತಿನ್ನುತ್ತೇನೆ ಅನ್ನುವ ಹಾಗಲ್ಲ. ಆತ್ಮತೃಪ್ತಿಗೆ ಒಂದು ಮೂಲಭೂತವಾದ ಧಾರ್ಮಿಕ ಮಹತ್ವ ಉಂಟು. ಆತ್ಮತುಷ್ಟಿಯ ಪ್ರಕಾರ ಧರ್ಮವನ್ನು ಆಯ್ಕೆ ಮಾಡಿಕೊಳ್ಳಬೇಕು. ಒಮ್ಮೆ ಆಯ್ಕೆ ಮಾಡಿಕೊಂಡ ತಕ್ಷಣ ಅದು ಶಾಶ್ವತವಾಗಿ ಉಳಿಯುತ್ತದೆ. ಶ್ರುತಿಯಲ್ಲಿ ಎರಡೂ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ವಿಕಲ್ಪ ಬರುತ್ತದೆ ಉದಾಹರಣೆಗೆ :

*ಅತಿರಾತ್ರೇ ಷೋಡಶಿನಂ ಗೃಹ್ಣಾತಿ। ನಾತಿರಾತ್ರೇ ಷೋಡಶಿನಂ ಗೃಹ್ಣಾತಿ ।*

ಅತಿ ರಾತ್ರಿಯಲ್ಲಿ ಷೋಡಶಿಯನ್ನು ಗ್ರಹಿಸಬೇಕು. ಅತಿ ರಾತ್ರಿಯಲ್ಲಿ ಷೋಡಶಿಯನ್ನು ಗ್ರಹಿಸಬಾರದು. ಪರಸ್ಪರ ವ್ಯತಿರಿಕ್ತವಾದ ವಿಷಯ ಶ್ರುತಿಯಲ್ಲಿದೆ. ಆದರೆ ಎರಡೂ ಬರುವುದರಿಂದ ವಿಕಲ್ಪ ಸಾಧ್ಯವಾಗುತ್ತದೆ. ಸ್ಮೃತಿಯಲ್ಲಿ ಎರಡು ವಿಭಿನ್ನ ವಿಚಾರಗಳು ಬಂದು, ಶ್ರುತಿಯಲ್ಲಿಯೂ ಎರಡು ಉಲ್ಲೇಖಗಳು ಇದ್ದರೆ, ವಿಕಲ್ಪ ಸಾಧ್ಯವಾಗುತ್ತದೆ. ಆಗ ಈ ಕಾಯಿದೆಗಳು ಶ್ರುತಿಯನ್ನು ಆಧರಿಸಿವೆ ಎಂಬ ನನ್ನ ಸನ್ಮಾನ್ಯ ಮಿತ್ರರಾದ ಕಾನೂನು ಮಂತ್ರಿಗಳು ಹಾಗೂ ಇತರರ ಹೇಳಿಕೆ ಸರಿ. ಆದರೆ ಉಪಲಬ್ಧವಿರುವ ಶ್ರುತಿಗಳು ಆ ಬಗ್ಗೆ ಮೌನವಾಗಿವೆ. ಈ ವಿಷಯವನ್ನು ಕುರಿತಂತೆ ಯಾವುದೇ ನಿರ್ದೇಶನವೂ ಇಲ್ಲ. ಆಗ, ಸ್ಮೃತಿಗಳೆಲ್ಲಾ ಶ್ರುತಿಯಿಂದಲೇ ಬಂದವು ಅಂತಾದರೆ ಅವುಗಳಲ್ಲೇಕೆ ಬೇರೆ ಬೇರೆ ನಿಯಮಗಳಿವೆ ಎಂಬ ಪ್ರಶ್ನೆ ಏಳುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ಮಸೂದೆ ಸ್ಮೃತಿಗೆ ಅನುಗುಣವಾಗಿರಬೇಕು ಮತ್ತು ಸಾಧ್ಯವಾದರೆ ಸ್ಮೃತಿ ಇಲ್ಲದಿದ್ದರೂ ಪರವಾಗಿಲ್ಲ ಅಂದುಕೊಂಡಿದ್ದೇನೆ. ಆದುದರಿಂದ ವ್ಯಾಖ್ಯಾನದ ಕಟ್ಟುನಿಟ್ಟಾದ ನಿಯಮಗಳ

ಪ್ರಕಾರ ಅದು ೩ ಮತ್ತು ೫ ಹೌದೊ ಅಲ್ಲವೊ ಎಂಬ ಸಂದೇಹವಿದ್ದಾಗ್ಯೂ ಅದನ್ನು ಸಂಗತಗೊಳಿಸಬೇಕಾಗುತ್ತದೆ. ಎಲ್ಲಾ ಕಡೆಯೂ ಅಸಂಗತತೆಯನ್ನು ತೆಗೆಯುವ ಪ್ರಯತ್ನ ನಡೆದಿದೆ ಎಂಬ ವಿಚಾರವನ್ನು ಅವರು ವಿರೋಧಿಸುವುದಿಲ್ಲ. ಅದು ವ್ಯಾಖ್ಯಾನದ ಕಟ್ಟುನಿಟ್ಟಾದ ನಿಯಮಗಳಿಗೆ ಅನುಗುಣವಾಗಿ ಇಲ್ಲದಿರಬಹುದು. ಆದರೂ ಅದು ಸರಿಯಾಗಿದೆ ಹಾಗಾಗಿ ಅದನ್ನು ಜಾರಿಗೊಳಿಸಬೇಕು ಎಂದು ಅವರು ಹೇಳುತ್ತಾರೆ. ಅದಕ್ಕೆ ಸದನದ ಒಪ್ಪಿಗೆ ಸಿಗಬೇಕು ಅಷ್ಟೇ. ಅದು ಕಾನೂನು ಮಂತ್ರಿಗಳ ನಿಲುವು ಎಂದುಕೊಂಡಿದ್ದೇನೆ.

**ಡಾ. ಅಂಬೇಡ್ಕರ್ :** ಹೌದು.

**ಮಾನ್ಯ ಉಪಸಭಾಧ್ಯಕ್ಷರು :** ಆದುದರಿಂದ ನಿಜವಾದ ವ್ಯಾಖ್ಯಾನ ಯಾವುದು ಎಂದು ಶ್ರಮ ಪಡಬೇಕಾಗಿಲ್ಲ.

**ಪಂಡಿತ ಮಾಳವೀಯ :** ನಾನು ಇದನ್ನೆಲ್ಲಾ ಕೇವಲ ಇದರ ವ್ಯಾಖ್ಯಾನಕ್ಕಾಗಿ ಮಾಡುತ್ತಿಲ್ಲ. ನಾನು ಈ ಉದಾಹರಣೆಯನ್ನು ಆರಿಸಿಕೊಂಡಿದ್ದು ವಿಷಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದನ್ನು ತೋರಿಸಲು. ಮೀಮಾಂಸಶಾಸ್ತ್ರದ ಪ್ರಕಾರ ಒಂದು ಗ್ರಂಥ ೫ ಮತ್ತು ೭ ಎನ್ನುತ್ತಿದ್ದು ಮತ್ತೊಂದು ೩ ಹಾಗೂ ೫ ಎಂದು ಹೇಳುತ್ತಿದ್ದಾಗ, ಎರಡರ ನಡುವೆ ರಾಜಿಯಾಗಬೇಕು. ಒಂದು ನಿಶ್ಚಿತವಾದ, ಪ್ರಶ್ನಾತೀತವಾದ ವ್ಯಾಖ್ಯಾನ ಸಾಧ್ಯವಾಗಲೇಬೇಕು. ಇಲ್ಲದೇ ಹೋದರೆ, ಸ್ಮೃತಿ ಸ್ಮೃತಿಯಾಗೇ ಉಳಿಯುವುದಿಲ್ಲ. ನಿಬಂಧಕಾರರಲ್ಲಿ ಈ ವ್ಯತ್ಯಾಸಗಳ ಬಗ್ಗೆ ಸ್ಪಷ್ಟವಾದ ವಿವರಣೆಯಿದೆ. ಅದರಲ್ಲಿ ಪೈಥನಾಸಿಯ ನಿಯಮಗಳು ಎಲ್ಲರಿಗೂ ಅನ್ವಯಿಸುವುದಿಲ್ಲ. ಅದು ಔರಸರು ಹಾಗೂ ಇತರರಿಗೆ ಅನ್ವಯಿಸುವುದಿಲ್ಲ ಎಂದು ಸಾಧಿಸಿ ತೋರಿಸಲಾಗಿದೆ. ಅದನ್ನು ವಿವರಿಸಹೊರಟರೆ, ತುಂಬಾ ಸಮಯ ಹಿಡಿಯುತ್ತದೆ. ಹಾಗಾಗಿ ಆ ಕೆಲಸಕ್ಕೆ ಕೈಹಾಕುವುದಿಲ್ಲ. ಅವರ ವಿಷಯದಲ್ಲಿ ೭ ಮತ್ತು ೫ ಅನ್ವಯವಾಗುತ್ತದೆ ಮತ್ತು ೩ ಕೇವಲ ದತ್ತಕ ಪುತ್ರರಿಗೆ ಅಥವಾ ಸಪತ್ನಿ ಮಾತೆಯರಿಗೆ ಅನ್ವಯವಾಗುತ್ತದೆ. ಈ ರೀತಿಯಲ್ಲಿ ಮೀಮಾಂಸಶಾಸ್ತ್ರ ಎರಡು ನಿಲುವುಗಳಲ್ಲಿ ರಾಜಿ ಮಾಡಿಸುತ್ತದೆ. ಶಾಸ್ತ್ರಗಳನ್ನು ವ್ಯಾಖ್ಯಾನಿಸಲು ನಿರ್ದಿಷ್ಟವಾದ ಸ್ಪಷ್ಟವಾದ ಕ್ರಮವಿದೆ ಎಂಬುದನ್ನು ತೋರಿಸಲು ಈ ಉದಾಹರಣೆಯನ್ನು ಉಲ್ಲೇಖಿಸಿದೆ. ನಾವು ಶಾಸ್ತ್ರಗಳ ಪ್ರಕಾರ ನಡೆಯಬೇಕು ಎಂದು ಅಂದುಕೊಂಡಲ್ಲಿ ಅದರ ಪ್ರಕಾರವೇ ನಡೆಯಬೇಕು. ಶಾಸ್ತ್ರದಲ್ಲಿ ಸಪಿಂಡ ವಿವಾಹ ನಿಷೇಧ. ತಾಯಿಯ ಕಡೆ ೫ ತಲೆಮಾರು ಮತ್ತು ತಂದೆಯ ಕಡೆ ೭ ತಲೆಮಾರು ಅಂತರ ಇರಬೇಕು. ಇದನ್ನು ಉಲ್ಲಂಘಿಸಲು ಅನುಮತಿ ಇಲ್ಲ. ಅದೇ ರೀತಿ ಮತ್ತೊಂದು ಪ್ರಶ್ನೆಯನ್ನು ಎತ್ತಿಕೊಳ್ಳುತ್ತೇನೆ. ಗೆಳೆಯರೊಬ್ಬರು ವಿವಾಹಿತ ಮಹಿಳೆಗೆ ಮರು ಮದುವೆಯಾಗಲು ಸ್ಮೃತಿಗಳಲ್ಲಿ ಅವಕಾಶವಿದೆ ಎಂದು ತೋರಿಸಲು ಕೆಲವು ಭಾಗಗಳನ್ನು ಉಲ್ಲೇಖಿಸಿದರು. ನನ್ನ ಸನ್ಮಾನ್ಯ ಮಿತ್ರರು ಪ್ರಖ್ಯಾತವಾದ ನಾರದ ಸ್ಮೃತಿ ಹಾಗೂ ಪರಾಶರ ಗ್ರಂಥಗಳನ್ನು ಉಲ್ಲೇಖಿಸಿದರು. ಮಹಿಳೆ ಎರಡನೇ ಬಾರಿ ಮದುವೆಯಾಗಬಹುದು ಎಂದು ಸ್ಮೃತಿಗಳಲ್ಲಿಯೇ ಇದೆ ಎಂದರು. ಅದರಿಂದ ಕೆಲ ಸ್ನೇಹಿತರು ತೃಪ್ತರಾದರು. ಇದು ದುರಂತದ ವಿಷಯ. ಯಾಕೆಂದರೆ ಅವರು ಉಲ್ಲೇಖಿಸಿದ ಶ್ಲೋಕ ವಿವಾಹಿತ ದಂಪತಿಯರಿಗೆ ಸಂಬಂಧಿಸಿದೆ ಎಂಬರ್ಥದಲ್ಲಿ ವ್ಯಾಖ್ಯಾನಿಸಿ ಬಿಟ್ಟರೆ ಅದರರ್ಥವೇ ವಿಕೃತಗೊಳ್ಳುತ್ತದೆ. ನಾನು ಗಾಳಿಯಲ್ಲಿ ಮಾತನಾಡುತ್ತಿದ್ದೇನೆ ಎಂದು ಸದಸ್ಯರು ಭಾವಿಸುವುದಿಲ್ಲ ಅಂದುಕೊಂಡಿದ್ದೇನೆ. (ಸನ್ಮಾನ್ಯ ಸದಸ್ಯರೊಬ್ಬರು–ಇಲ್ಲ ಇಲ್ಲ). ಆ ಸಾಲು ತೀರಾ ಸರಳವಾಗಿದೆ.

*ನಷ್ಟೇ ಮೃತೇ ಪ್ರವ್ರಜಿತೆ, ಕ್ಲೀಬೇ ಚ ಪತಿತೇ ಪತೌ।*
*ಪಂಚಸ್ವಾಪತ್ಸು ನಾರೀಣಾಮ್, ಪತಿರನ್ಯೋ ವಿಧೀಯತೆ।*

ಗಂಡ ಕಾಣೆಯಾಗಿದ್ದಾಗ, ಸತ್ತಾಗ, ಸನ್ಯಾಸ ಸ್ವೀಕರಿಸಿದಾಗ, ಷಂಡನಾಗಿದ್ದಾಗ, ಪಾಪ ಮಾಡಿದ್ದಾಗ ಅವಕಾಶವಿದೆ. ಮೇಲ್ನೋಟಕ್ಕೆ ಇದು ತೀರಾ ಸರಳವಾಗಿದೆ. 'ಗಂಡಂದಿರು' ಈ ರೀತಿಯಾಗಿದ್ದಾಗ, ಆ ಸಂದರ್ಭದಲ್ಲಿ ಮತ್ತೊಬ್ಬ ಗಂಡನನ್ನು ಪಡೆಯಬಹುದು ಎಂಬುದು ಇದರರ್ಥ ಎಂದು ನನ್ನ ಗೆಳೆಯರು ಭಾವಿಸುತ್ತಿದ್ದಾರೆ.

ಆದರೆ ದಯವಿಟ್ಟು ಈ ಸದನದ ಸದಸ್ಯರು ಇದನ್ನು ಕುರಿತು ಯೋಚಿಸಬೇಕು. ವ್ಯಾಕರಣದ ಸರಳ ನಿಯಮಗಳ ಪ್ರಶ್ನೆ ಇಲ್ಲಿ ಏಳುತ್ತದೆ.

ಯಾರೋ ಗೆಳೆಯರು "*ವ್ಯಾಕರಣ ಪಢಾವೋ*" ಎನ್ನುತ್ತಿದ್ದಾರೆ. ಇಷ್ಟೊಂದು ಗಣ್ಯರ ವರ್ಗಕ್ಕೆ ಬೋಧಕನಾಗಿ ಕೆಲಸ ಮಾಡುವ ಚಪಲವಾಗಬಹುದು. ಆದರೆ ನಾನು ಚಪಲವನ್ನು ಹತ್ತಿಕ್ಕಿಕೊಂಡು ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಏಕೆಂದರೆ ಇಡೀ ಹಿಂದೂ ಕಾಯಿದೆಯೇ ಈ ಅಂಶದ ಮೇಲೆ ನಿಂತಿದೆ. ಅ ಒಂದು ವ್ಯಾಖ್ಯೆಯ ಮೇಲೇ ಪ್ರತಿಯೊಬ್ಬರು ತಮ್ಮ ನಿಲುವಿಗೆ ಬರುತ್ತಿದ್ದಾರೆ. ಇದು ತೀರಾ ಸರಳವಾದ ವಿಷಯ. ವ್ಯಾಕರಣದ ನಿಯಮದ ಪ್ರಕಾರ ಸಪ್ತಮೀ ವಿಭಕ್ತಿಯಲ್ಲಿ ಪತಿಯ ಏಕವಚನವು ಪತೌ ಎಂಬ ಎರಡು ಪದಗಳು ಹೇಗೆ ಆಗಿವೆ ಎಂಬುದರ ವಿವರಕ್ಕೆ ಹೋಗಲು ಅನುಮತಿ ನೀಡುತ್ತೀರೊ ಇಲ್ಲವೊ ತಿಳಿಯದು. ಅದು ಖಂಡಿತಾ ತುಂಬಾ ಕುತೂಹಲಕರವಾಗಿದೆ. ಆದರೆ ಸಮಯ ಹಿಡಿಯುತ್ತದೆ. ಆದರೆ ಅದನ್ನು ಅರ್ಥಮಾಡಿಕೊಂಡರೆ ಎಲ್ಲವೂ ಸ್ಪಷ್ಟವಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು** : ಹರಿಗೆ ಏನಾಗುತ್ತದೆ? ಅದು ಪುಲ್ಲಿಂಗ.

**ಪಂಡಿತ ಮಾಳವೀಯ** : ನಿಮಗೆ ಆಸಕ್ತಿಯಿದೆ. ನೀವು ಅವಕಾಶ ಕೊಟ್ಟರೆ.......

**ಮಾನ್ಯ ಉಪಸಭಾಧ್ಯಕ್ಷರು** : ಆಗ ಹರಿ ಇಕಾರಾಂತ ಪುಲ್ಲಿಂಗ ಮತ್ತು ಸಪ್ತಮಿ ವಿಭಕ್ತಿಯಲ್ಲಿ ಅದು ಹರೌ ಮತ್ತು ಪತಿ ಎನ್ನುವುದು ಪತೌ ಎಂದಾಗಬೇಕು. ಅದೇ ನನ್ನ ಸಮಸ್ಯೆ. ಅವೆರಡೂ ಬೇರೆ ಬೇರೆಯೋ ಗೊತ್ತಿಲ್ಲ.

**ಪಂಡಿತ ಮಾಳವೀಯ** : ಅದು ಸರಿ. ಹರಿಯಿಂದ ಹರೌ ಪತಿಯಿಂದ ಪತೌ ಎಂಬುದು ನಮಗೆಲ್ಲಾ ಗೊತ್ತು. ಆದರೆ ಅದು ಪತ್ಯೌ ಏಕೆ? ಈ ವ್ಯತ್ಯಾಸಕ್ಕೆ ಕಾರಣವೇನೆಂದರೆ, ಸಪ್ತಮಿ ಏಕವಚನದಲ್ಲಿ 'ಙ್ನಿ' ಬರುತ್ತದೆ. ಆಗ 'ಪತಿಃ ಸಮಾಸ ಏವ' ಸೂತ್ರ ಕಾರ್ಯರೂಪಕ್ಕೆ ಬರುತ್ತದೆ. ಮತ್ತು 'ಘೀ' ಸಂಜ್ಞೆ ಹೋಗಿ ಮತ್ತೊಂದು ಸೂತ್ರವಾದ 'ಔತ್' ಬರುತ್ತದೆ ಮತ್ತು ಅದು ಪತಿ+ಔ ಆಗುತ್ತದೆ. ಏಕೋಯಾನಚಿ ಸೂತ್ರದ ಪ್ರಕಾರ "ಇ" ಎನ್ನುವುದು "ಯ" ಆಗುತ್ತದೆ ಮತ್ತು ಪತ್ಯೌ ಎಂದು ಆಗುತ್ತದೆ. ಪತಿ ಎಂಬುದಕ್ಕೆ ಗಂಡ ಎಂಬ ಅರ್ಥವಿದೆ. ಆದರೆ ಪತ್ಯೌ ಎಂಬುದಕ್ಕೆ ಬದಲು ಪತೌ ಎಂದೇಕೆ ಬಳಸಿದ್ದಾರೆ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಈ ವ್ಯತ್ಯಾಸ ಎಷ್ಟು ಸ್ಪಷ್ಟವಾಗಿದೆ ಎಂದರೆ ಇದು ಕುರುಡನಿಗೂ ಕಾಣುತ್ತದೆ. ಇದಕ್ಕೆ ಖಂಡಿತವಾಗಿಯೂ ಏನೋ ಒಂದು ಉದ್ದೇಶವಿರಬೇಕು. ಮಾನ್ಯ ಕಾನೂನು ಮಂತ್ರಿಗಳು ಕೂಡ ಪತಿ ಎಂಬುದರ ಸಪ್ತಮಿ ವಿಭಕ್ತಿಯ ರೂಪ ಪತ್ಯೌ ಎಂದು ಆಗುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸಿದ್ದೇನೆ. ಆದರೆ ಈ ಗ್ರಂಥದಲ್ಲಿ ಪತೌ ಎಂದಿದೆ (ಅಡಚಣೆ). ಅವರಿಗೆ ಇದು ಅನುಮಾನಾಸ್ಪದವಾಗಿದೆ ಎನ್ನುತ್ತಿದ್ದಾರೆ ಸದಸ್ಯರೊಬ್ಬರು. ಈ ವಿಷಯದಲ್ಲಿ ನಾನು ಅವರಷ್ಟು ವಿವೇಕಿ ಎಂದು ಹೇಳುತ್ತಿಲ್ಲ. ಆದರೆ, ಪಾಣಿನಿಯ ಅಷ್ಟಾಧ್ಯಾಯಿ ಇದೆ ಮತ್ತು ಮಾನ್ಯ ಸದಸ್ಯರು ಅದಕ್ಕೆ ವ್ಯತಿರಿಕ್ತವಾದುದನ್ನು ಏನಾದರೂ ಹೇಳುವುದಿದ್ದರೆ, ಮಾನ್ಯ ಸದಸ್ಯರು ಏನು ಹೇಳುತ್ತಾರೋ ಅದನ್ನು ಮಾಡುತ್ತೇನೆ.

**ಶ್ರೀ ಅಮಲಾಕ್ಷ ಚಂದ್** : ಮಾನ್ಯ ಸದಸ್ಯರು ಆ ಶ್ಲೋಕವನ್ನು ಹೇಳುತ್ತಾರೇನು?

**ಪಂಡಿತ ಮಾಳವೀಯ :** ನಾನೀಗ ಆ ವಿಷಯಕ್ಕೇ ಬರುತ್ತಿದ್ದೇನೆ. ಹಾಗಾಗಿ ಅಲ್ಲಿ ಬಳಸಿರುವ ಪದವು ಸಾಮಾನ್ಯವಾಗಿ ಬಳಸುವ 'ಪತ್ಯೌ'ಗಿಂತ ಭಿನ್ನವಾದುದು. ಇಲ್ಲಿನ ಪದ 'ಪತೌ' ಎನ್ನುವುದು ಸಂಸ್ಕೃತ ವ್ಯಾಕರಣದ ನಿಯಮಗಳ ಪ್ರಕಾರ ........

**ಮಾನ್ಯ ಉಪಸಭಾಧ್ಯಕ್ಷರು :** ಅದೇನು ಆವಶ್ಯಕವಲ್ಲ. ಅದು ತಪ್ಪು ಎಂಬುದೇ ಮಾನ್ಯ ಸದಸ್ಯರ ಅಭಿಪ್ರಾಯ.

**ಪಂಡಿತ ಮಾಳವೀಯ :** ಇಲ್ಲ, ಇಲ್ಲ. ಅದು ತಪ್ಪಲ್ಲ. ಇಲ್ಲಿ ಪತಿ ಎಂಬುದನ್ನು ಸಾಮಾನ್ಯವಾದ ಅರ್ಥದಲ್ಲಿ ಅಂದರೆ ಗಂಡ ಎಂಬ ಅರ್ಥದಲ್ಲಿ ಬಳಸಿಲ್ಲ. ಬದಲಾಗಿ ವ್ಯಾಕರಣ ನಿಯಮಗಳ ಪ್ರಕಾರ ಬಳಸಿದ್ದಾರೆ ಎಂದು ಹೇಳಲು ಹೊರಟಿದ್ದೆ – ಅದು ನನ್ನ ಮಾತಲ್ಲ, ಬದಲಾಗಿ ವ್ಯಾಕರಣದ ನಿಯಮಗಳೇ ಆ ರೀತಿ ಇವೆ. ಅದರ ಪ್ರಕಾರ ಅಚರಾರ್ಥೆಯ ಅರ್ಥ ಬಂದಾಗ ಮಾತ್ರ 'ಪತಿ' ಎಂಬುದನ್ನು ಬಳಸಬಹುದು. ಆದರೆ ಗಂಡ ಎಂಬ ಅರ್ಥದಲ್ಲಿ ಅಲ್ಲ. ಆಗ "ಪತಿಃ ಸಮಾಸ ಏವ" ಎಂಬ ಸಾಮಾನ್ಯವಾಗಿ ಅನ್ವಯಿಸುವ ಸೂತ್ರವು ಮತ್ತು ಅದರ ಪರಿಣಾಮವಾಗಿ ಉಂಟಾಗುವ ಪತ್ಯೌ ಎಂಬ ರೂಪವನ್ನು ತಳೆಯುವುದಿಲ್ಲ. ಅದಕ್ಕೆ ಬದಲಾಗಿ "ಘೀ" ಸಂಜ್ಞೆಯು ಅದರ ಸ್ಥಳದಲ್ಲಿ ಬರುತ್ತದೆ. "ಘೀ" ಸಂಜ್ಞೆಯು ಯಾವಾಗ ಬರುತ್ತದೋ ಆವಾಗ ಸೂತ್ರ "ಅಚ್ಚಘೇಃ" ಅನ್ವಯಿಸುತ್ತದೆ. ಮತ್ತು "ಪತಿ+ಔ" ವೃದ್ಧಿ ನಿಯಮದ ಪ್ರಕಾರ ಅದು "ಪತೌ" ಎಂದಾಗುತ್ತದೆ. ಅದನ್ನು ಇಲ್ಲಿ ಈ ರೂಪದಲ್ಲಿ ಬಳಸಿರುವುದು ತಪ್ಪಲ್ಲ. ಆಗ ಅದನ್ನು ಅಜಾಗರೂಕತೆಯಿಂದ ಬಳಸಿಲ್ಲ. ಅದು ಪಾಣಿನಿಯ ಸಂಸ್ಕೃತ ವ್ಯಾಕರಣದಲ್ಲಿ ಚೆನ್ನಾಗಿ ಅಂಗೀಕೃತವಾದ ವಿಚಾರ. ಪತ್ಯೌಗೆ ಬದಲಾಗಿ ಪತೌ ಎನ್ನುವುದಕ್ಕೆ ಬೇರೊಂದು ಅರ್ಥವಿದೆ. ಪತೌ ಎಂದರೆ ಗಂಡನಾಗಬೇಕಾಗಿರುವವನು. ಅಂದರೆ ಇನ್ನೂ ಪತಿಯಾಗದವನು. ಇದು ಆ ಪದದ ಅರ್ಥ. ನಾನು ಹೇಳುತ್ತಿರುವುದನ್ನು ಯಾರು ಬೇಕಾದರೂ ಪ್ರಶ್ನಿಸಬಹುದು. ೪೦೦೦ ವರ್ಷಗಳಿಂದ ಆ ವ್ಯಾಕರಣವಿದೆ ಹಾಗೂ ಅದನ್ನು ಯಾರೂ ಪ್ರಶ್ನಿಸಿಲ್ಲ. ಪತೌ ಎಂದರೆ ಗಂಡ ಅಲ್ಲ ಆದರೆ ಪತಿಯಾಗುವ ಪ್ರಕ್ರಿಯೆಯಲ್ಲಿರುವವನು. ಸರಿಯಾದ ಈ ಅರ್ಥವನ್ನು ನೀಡಿದಾಗ ಆ ಶ್ಲೋಕವು ಸಂಪೂರ್ಣವಾಗಿ ಬದಲಾಗುತ್ತದೆ.

**ಪ್ರೊ. ಕೆ.ಟಿ. ಷಾ** (ಬಿಹಾರ) : ಅನ್ಯೋ ಎಂಬುದು ಆಗ ಬರುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಪತ್ರಾನ್ಯೋವಿಧೀಯತೆ ಬರುತ್ತದೆ. ಅದು ಗಂಡ ಎಂದೇ ಇರಬೇಕು.

**ಪಂಡಿತ ಮಾಳವೀಯ :** ನೀವು ಆ ಪ್ರಶ್ನೆಯನ್ನು ಎತ್ತಿದ್ದು ನನಗೆ ತುಂಬಾ ಸಂತೋಷವಾಗಿದೆ. ನಾನೀಗ ಅದೇ ವಿಷಯಕ್ಕೆ ಬರುತ್ತೀದ್ದೇನೆ. ಪತಿ ಎಂಬುದಕ್ಕೆ ಕನ್ಯಾರ್ಥಿ, ಗಂಡ ಎಂಬ ಎರಡು ಅರ್ಥವಿದೆ. ಪ್ರಥಮಾ ವಿಭಕ್ತಿಯಲ್ಲಿ ಎರಡಕ್ಕೂ ಸಮಾನ ಪ್ರತ್ಯಯವೇ ಸೇರುತ್ತದೆ. ಆದರೆ ಸಪ್ತಮೀ ವಿಭಕ್ತಿಯಲ್ಲಿ ಒಂದೊಂದಕ್ಕೂ ಬೇರೆ ಅರ್ಥಸೂಚಿಸುವುದಕ್ಕಾಗಿ ಬೇರೆ ಬೇರೆ ಪ್ರತ್ಯಯಗಳನ್ನು ಬಳಸುತ್ತಾರೆ. ಒಂದರ್ಥದ ಪತಿ ಶಬ್ದಕ್ಕೆ ಸಪ್ತಮೀ ಪ್ರತ್ಯಯ ಸೇರಿದಾಗ ಪತಯೌ ಆಗುತ್ತದೆ. ಆದರೆ, ಕನ್ಯಾರ್ಥಿ ಎಂಬ ಅರ್ಥದ ಪತಿ ಶಬ್ದಕ್ಕೆ ಸಪ್ತಮೀ ಪ್ರತ್ಯಯ ಸೇರಿದಾಗ ಪತೌ ಆಗುತ್ತದೆ. ಈ ಕಾರಣದಿಂದಲೇ ಶ್ಲೋಕದ ಪೂರ್ವಾರ್ಧದಲ್ಲಿ ಈ ವ್ಯತ್ಯಾಸವನ್ನು ಸ್ಪಷ್ಟಪಡಿಸುವುದಕ್ಕಾಗಿ 'ಪತೌ' ಎಂಬ ಪದ ಬಂದಿದೆ. ಇಲ್ಲಿನ ಅರ್ಥ ಇಂಥವರೊಂದಿಗೆ ವಿವಾಹ ಪ್ರಸ್ತಾಪ ನಡೆದಿದೆ ಎಂದೇ ವಿನಃ ಕನ್ಯೆಯ ವಿವಾಹ ನಡೆದಿಲ್ಲ ಎಂದಲ್ಲ. ಶ್ಲೋಕದ ಉತ್ತರಾರ್ಧದಲ್ಲಿ ಪತಿಃ ಎನ್ನುವ ಶಬ್ದಕ್ಕೆ ಗಂಡ ಎಂಬ ಅರ್ಥವೇ ಇದೆ. ಅಂದರೆ, ಇಂಥವರನ್ನು ಬಿಟ್ಟು ಬೇರೆ ಗಂಡನನ್ನು (ಕನ್ಯಾರ್ಥಿ ಎಂದಷ್ಟೇ ಅಲ್ಲ) ವಿಧಿಸಬೇಕು ಎಂದರ್ಥ. ಹಾಗಾಗಿ ಶ್ಲೋಕದ ಉತ್ತರಾರ್ಧದ ಪತಿರನ್ಯೋ ವಿಧೀಯತೇ ಎಂಬ ಮಾತು ತುಂಬಾ ಸುಸಂಗತವಾಗಿಯೇ ಇದೆ.

**ಮಾನ್ಯ ಉಪಸಭಾಧ್ಯಕ್ಷರು :** ಅನ್ಯೋ ಎಂದರೆ ಅದಕ್ಕೆ ಮುಂಚಿನದು ಎಂಬ ಅರ್ಥವೂ ಇದೆ.

**ಪಂಡಿತ ಮಾಳವೀಯ :** ಮತ್ತೆ ಅನ್ಯೋ ಎನ್ನುವುದು ಪ್ರಥಮಾ ವಿಭಕ್ತಿ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಥಮಾನ್ಯಃ ಎಂದರೂ ಕೂಡ ಗಂಡ ಎಂದೇ ಆಗಬೇಕು.

**ಪಂಡಿತ ಮಾಳವೀಯ :** ಅವೆರಡೂ ಒಂದೇ ಎಂದಾದಲ್ಲಿ ಆಗ ಅದು ಪತ್ಯೌ ಎಂದೇ ಆಗಿರಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ನಿಬಂಧನೆಗಳಲ್ಲಿ ಉದ್ದೇಶ ಏನೇ ಇರಲಿ, ಅದು ಪರಸ್ಪರ ಹೊಂದಿಕೊಳ್ಳಬೇಕು.

**ಪಂಡಿತ ಮಾಳವೀಯ :** ಸ್ವಾಮಿ ಉದ್ದೇಶವೇ ಬೇರೆಯಾದಾಗ ಅದು ಹೇಗೆ ಸಾಧ್ಯ? ಸಂಸ್ಕೃತ ಭಾಷೆಯ ಸೌಂದರ್ಯವೇ ಆ ರೀತಿಯದು. ಬೇರೆ ಭಾಷೆಯಲ್ಲಿ ಯಾವುದನ್ನು ಹೇಳಲು ಒಂದು ವಾಕ್ಯ ಬೇಕೋ ಅದನ್ನೇ ಸಂಸ್ಕೃತದಲ್ಲಿ ಕೇವಲ ಒಂದು ಪದದಲ್ಲಿ ಹೇಳಿಬಿಡಬಹುದು. ಸಂಸ್ಕೃತದ ಚೆಲುವು ಅಂಥದ್ದು. ವಾಕ್ಯವೊಂದು **"**ಮಾವಿನ ಹಣ್ಣು ದೊರಕದಿದ್ದಲ್ಲಿ ಸೀಬೇಹಣ್ಣುಗಳನ್ನು ತೆಗೆದುಕೊಳ್ಳಬಹುದು**"** ಎಂದಿದ್ದರೆ, ನಾವು ಮಾವು ಸೀಬೆ ಒಂದೇ ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಪರಸ್ಪರ ಸಂಬಂಧವೇ ಇಲ್ಲದ ಎರಡು ವಸ್ತುಗಳ ನಡುವೆ ಹೋಲಿಕೆ ಸಾಧ್ಯವೇ ಇಲ್ಲ. ಅನ್ಯೋ ಎಂಬುದನ್ನು ಬಳಸಿದರೆ ಆ ಪದ ಅಥವಾ ಇನ್ನೊಂದು ಪದವು ಒಂದೇ ಗುಂಪಿಗೆ ಸೇರಿದ ವಸ್ತುವನ್ನು ಸೂಚಿಸುವಂಥದ್ದಾಗಿರಬೇಕು. ಒಂದು ಸಂದರ್ಭದಲ್ಲಿ ಅದು ಮದುವೆ ಅಲ್ಲ ಎಂದೇ ಆಗಬೇಕು. ಒಂದು ಸಂದರ್ಭದಲ್ಲಿ ಅದರ ಅರ್ಥ ಮದುವೆ ಎಂದಾದಲ್ಲಿ ಇನ್ನೊಂದು ಸಂದರ್ಭದಲ್ಲಿಯೂ ಅದರ ಅರ್ಥ ಮದುವೆ ಎಂದಾಗುತ್ತದೆ. ಅವೆರಡನ್ನೂ ಪತಿಯ ಮದುವೆ ಎಂದೇ ಅರ್ಥೈಸಿಕೊಳ್ಳಬೇಕು.

**ಪಂಡಿತ ಮಾಳವೀಯ :** ನಾವು ಪದಗಳ ಅರ್ಥವನ್ನು ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಬಿ.ಕೆ.ಪಿ. ಸಿನ್ಹಾ** (ಬಿಹಾರ) ಪತ್ಯೌ ಎರಡನ್ನೂ ಬಳಸಿದ್ದಾರೆ ಅದರೆ ಪತೌ ಎನ್ನುವುದನ್ನು ಬಳಸಿಲ್ಲ.

**ಪಂಡಿತ ಮಾಳವೀಯ :** ಅದು ಮುದ್ರಣ ದೋಷವಿರಬೇಕು. ನಾನದನ್ನು ತಮಾಷೆ ಹೇಳುತ್ತಿಲ್ಲ. ಮೂಲವು ಪತೌ. ಛೌಡಾ ..................

**ಮಾನ್ಯ ಉಪಸಭಾಧ್ಯಕ್ಷರು :** ಪತಿತೆ ಪತ್ಯೌ ಎಂಬುದು ತಪ್ಪಿರಲೇಬೇಕು. ಏಕೆಂದರೆ ಅದು ಗುರು ಆಗಿರಲೇಬೇಕು. ಪತಿ ಮತ್ತು ಪತೌನ ಪ್ರಾಸವೇ ಬೇರೆ. ಹಾಗಾಗಿ ಇದು ಖಂಡಿತವಾಗಿಯೂ ತಪ್ಪು.

**ಪಂಡಿತ ಮಾಳವೀಯ :** ಅದು ಪತ್ಯೌ ಆಗಿರುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ನಾನು ಹೇಳಲು ಬಯಸುವುದು ಇಷ್ಟೇ. ಇಡೀ ವಾದ ನಿಂತಿರುವ ತಳಹದಿಯೇ ಸರಿಯಲ್ಲ. ಆ ಪದದ ಅರ್ಥ ಪತಿ ಅಲ್ಲ. ಪತಿಯಾಗಹೊರಟಿರುವವನು – ಪತೌ. ಹಾಗಾಗಿ ಶಾಸ್ತ್ರದಲ್ಲೆಲ್ಲೂ ಹಿಂದೂ ಹೆಂಗಸಿಗೆ ಮರು ಮದುವೆಯಾಗಬಹುದೆಂದು ಸೂಚನೆಯಿಲ್ಲ.

ನಾನು ಸದನದ ಹೆಚ್ಚು ವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ನನಗೆ ಹೇಳಲು ತುಂಬಾ ವಿಷಯಗಳಿವೆ. ನಾನೀಗಾಗಲೇ ಹೇಳಿದಂತೆ, ಯಾರ ಇಚ್ಛೆ ಹಾಗೂ ಮಾತುಗಳನ್ನು ನಾವು ಕಾನೂನುಗಳೆಂದು ಭಾವಿಸಿದ್ದೇವೆಯೋ ಅವರ ಇಚ್ಛೆಗೆ ವಿರುದ್ಧವಾಗಿ ಹೋಗುವ ಬಯಕೆಯಿಲ್ಲ. ಆದುದರಿಂದ ನನಗೆ ಹೆಚ್ಚಿನ ವಿಷಯಗಳನ್ನು ಹೇಳಬೇಕಾಗಿದ್ದರೂ ಕೂಡ ಇನ್ನೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ಎರಡು ಉದಾಹರಣೆಗಳ ಮೂಲಕ ನಾನು ಹಿಂದೂ ಮಸೂದೆ ಮುಂದುವರಿಯುತ್ತಿರುವ ನೆಲೆಯೇ ಸಂಪೂರ್ಣವಾಗಿ ದೋಷಪೂರ್ಣವಾಗಿದೆ ಎಂದು ತೋರಿಸಿದ್ದೇನೆ.

ಇನ್ನೊಂದು ವಿಷಯವನ್ನು ಪ್ರಸ್ತಾಪಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಹಿಂದೂ ಸಮಾಜದಲ್ಲಿ

ಅನಾದಿಕಾಲದಿಂದಲೂ ಪ್ರಭುತ್ವ, ಪೊಲೀಸರು ಹಾಗೂ ಶಾಸನದ ಬಲವಿಲ್ಲದೆಯೇ ಕಾನೂನುಗಳು ನಡೆದುಕೊಂಡು ಬಂದಿವೆ. ಜಾರಿಯಲ್ಲಿರುವ ಪರಿಪೂರ್ಣತೆಯನ್ನು ಸಾಧಿಸಿದವರು, ಸಾರ್ವತ್ರಿಕ ಗೌರವಕ್ಕೆ ಪಾತ್ರರಾದವರೂ, ಜನತೆಯ ಒಳಿತಿಗಾಗಿ ದುಡಿದಂಥವರು ಈ ಕಾನೂನುಗಳನ್ನು ರೂಪಿಸಿದ್ದರು. ಕೆಲವು ಸಂದರ್ಭಗಳಲ್ಲಿ ಕಣ್ಣಿಗೆ ಕಾಣದಂತಹ (ಶಾಸ್ತ್ರಗಳಲ್ಲಿ ಅಪೂರ್ವ ಎನ್ನುತ್ತಿದ್ದ) ಸಂಗತಿಗಳ ಭೀತಿ ಇರುತ್ತಿತ್ತು. ಇಂದು ಮಾನವನೊಬ್ಬನು ಮಾಡುವ ಕೆಲಸವು ನಂತರ ಪರಿಣಾಮ ಬೀರುತ್ತದೆ ಎಂಬ ವಿಚಾರ ಮತ್ತು ಆತ್ಮಕ್ಕೆ ಹಲವಾರು ಜನ್ಮಗಳಿರುತ್ತವೆ, ಅದು ಮತ್ತೆ ಮತ್ತೆ ಜನ್ಮ ತಳೆಯುತ್ತಲೇ ಇರುತ್ತದೆ ಮತ್ತು ಒಂದು ಜನ್ಮದ ಕರ್ಮವು ಹಿಂದಿನ ಹಾಗೂ ಮುಂದಿನ ಜನ್ಮದ ಕ್ರಿಯೆ ಮತ್ತು ಫಲದೊಂದಿಗೆ ತಳುಕು ಹಾಕಿಕೊಂಡಿರುತ್ತದೆ; ಪುಣ್ಯ ನಿಷ್ಠೆ ಹಾಗೂ ನ್ಯಾಯಯುತ ಕೃತ್ಯಕ್ಕೆ ಸಿಗುವ ಪ್ರತಿಫಲವು ನೀವು ಈ ಬದುಕಿನಲ್ಲಿ ಅನುಭವಿಸುವ ಸುಖಕ್ಕಿಂತಲೂ ಹೆಚ್ಚಿನದು, ನಶ್ವರವಾದ ಅಂಶಕ್ಕಿಂತ ಭಿನ್ನವಾದ, ಒಂದು ವಸ್ತುವಿನ ನಿಜವಾದ ಮೌಲ್ಯದ ಬಗ್ಗೆ ಸ್ಪಷ್ಟ ಕಲ್ಪನೆ ಮನಸ್ಸಿನಲ್ಲಿರುತ್ತಿತ್ತು. ಈ ಭೀತಿ ಮತ್ತು ನಂಬಿಕೆಯ ಬಲದಿಂದ ಜಾರಿಗೊಂಡ ಕಾಯಿದೆಗಳನ್ನು ಜನ ಯಾವಾಗಲೂ ಪಾಲಿಸುತ್ತಿದ್ದರು. ನಮ್ಮ ಇಡೀ ರಾಷ್ಟ್ರದಲ್ಲಿ, ಅದರ ಉದ್ದಗಲಕ್ಕೂ ಹಿಂದೂಗಳ ಕಾನೂನನ್ನು ಪಾಲಿಸಿಕೊಂಡು ಬರಲು ಕಾರಣ ಅದು ಯಾರಿಗೋ ಅನುಕೂಲಕರವಾಗಿತ್ತು ಅಥವಾ ಆಗಿರಲಿಲ್ಲ ಎನ್ನುವುದಲ್ಲ. ಯಾರಿಗೋ ಹಿತಕರವಾಗಿತ್ತು ಅಥವಾ ಮತ್ಯಾರಿಗೋ ಬೇಸರ ಉಂಟುಮಾಡುತ್ತಿತ್ತು ಅನ್ನುವ ಕಾರಣಕ್ಕಾಗಿಯಲ್ಲ. ಉದಾಹರಣೆಗೆ, ಅದು ನನ್ನ ಆತ್ಮೀಯ ಸನ್ಮಾನ್ಯ ಮಿತ್ರ ಕಾಕ ಸಾಹೇಬ್ ಗಾಡ್ಗೀಳ್ ಸದನಕ್ಕೆ ಒಂದು ಹಿರಿಯ ಜವಾಬ್ದಾರಿಯುತ ಮನುಷ್ಯರಂತೆ ಮಾತನಾಡದೇ ಯಾವುದೋ ಒಬ್ಬ ಎಳಸು ಪಡ್ಡೆ ಹುಡುಗನ ರೀತಿಯಲ್ಲಿ ಈ ಸಂಹಿತೆಯ ಇತರ ೩೦೦ ಮಿಲಿಯನ್ ಜನರಲ್ಲಿ ಇಂದು ಅವರು ಮಾಡುವುದರ ಫಲ ಮುಂದೆ ಕಾದಿದೆ, ಅವರ ಪ್ರತಿಕೆಲಸಕ್ಕೆ ಅದರದೇ ಆದ ಪ್ರತಿಫಲ ಇರುತ್ತದೆ ಎಂದು ನಂಬಿಕೆಯಲ್ಲಿ ಮುಳುಗಿದ್ದಾರೆ. ಬದುಕಿನಲ್ಲಿ ವಸ್ತುವಿನ ಪ್ರೇಯವಷ್ಟೆ ನಮಗೆ ಮುಖ್ಯವಲ್ಲ ಅದರ ಶ್ರೇಯಸ್ಸು ಕೂಡ ಮುಖ್ಯ ಎಂಬ ಭಾವನೆ ಅವರ ಹುಟ್ಟಿನಿಂದಲೇ ಬಂದಿರುತ್ತದೆ. ಸರ್ಕಾರವು, ಕಾನೂನಿನ ಬಗ್ಗೆ ಇರುವ ಬದ್ಧತೆ ಹಾಗೂ ಗೌರವದ ಅಡಿಪಾಯವನ್ನೇ ಧ್ವಂಸಮಾಡುವ ಅವಿವೇಕದ, ಆತುರದ ತಪ್ಪುಮಾಡದಿರಲಿ. ಒಂದು ಗುಂಪಿನ ಶಾಸಕರು, ಒಂದು ಬುದ್ಧಿವಂತರ ಗುಂಪು, ಇಂದು ತಮಗೆ ಸೂಕ್ತ ಎನ್ನುವ ರೀತಿಯಲ್ಲಿ ಶಾಸನ ಮಾಡಿದರೆ, ಜನ ಅಪೂರ್ವವಾದುದರ ಬಗ್ಗೆ ಚಿಂತನೆಯನ್ನೇ ಮಾಡುವುದಿಲ್ಲ. ನಾಳೆ ತಮ್ಮ ಅನುಕೂಲ ಹಾಗೂ ಇಚ್ಛೆಗೆ ತಕ್ಕಂತೆ ಇನ್ನೊಂದು ಕಾನೂನು ಮಾಡಬಹುದು ಎಂದು ಅವರಿಗೆ ತಿಳಿಯುತ್ತದೆ. ನೈತಿಕ ವ್ಯವಸ್ಥೆಯೇ ಹೋಗಿಬಿಡುತ್ತದೆ. ಮದುವೆಯ ಯಾವುದೇ ಕ್ರಮ ಅಥವಾ ವ್ಯವಸ್ಥೆ ಇಲ್ಲದಿದ್ದರೆ ಮನುಷ್ಯನು ಪ್ರಾಚೀನ ಕಾಲಕ್ಕೇ ಮತ್ತೆ ಹೋಗಿ ಬೀಡುತ್ತಾನೆ. ಆ ಕಾಲದ ಸ್ಥಿತಿಗತಿಗಳನ್ನು ಬಹಶಃ ಗೌರವಯುತ ಸಮಾಜದಲ್ಲಿ ಪ್ರಸ್ತಾಪಿಸುವುದಕ್ಕೂ ಯೋಗ್ಯ ಅಂತ ಯಾರೂ ಭಾವಿಸಿರಲಿಕ್ಕಿಲ್ಲ. ಇದು ಈ ನಿರ್ಧಾರದ ಈಡಾಗಿದೆ.

ನಾನು ವಿಚ್ಛೇದನದ ಪ್ರಶ್ನೆಯ ಬಗ್ಗೆ ಮಾತನಾಡಬಹುದಿತ್ತು ವಿಧವಾ ವಿವಾಹದ ಪ್ರಶ್ನೆಯ ಬಗ್ಗೆ ಮಾತನಾಡಬಹುದಿತ್ತು. ಅಂತರಜಾತೀಯ ಮದುವೆಯ ಬಗ್ಗೆ ಮಾತನಾಡಬೇಕಾಗಿತ್ತು. ಸಂಬಂಧಪಟ್ಟ ಕಲಂಗಳು ಚರ್ಚೆಗೆ ಬಂದಾಗ ಸೂಕ್ತ ಸಂದರ್ಭದಲ್ಲಿ ನನಗೆ ಈ ಎಲ್ಲಾ ವಿಷಯಗಳ ಬಗ್ಗೆ ಮಾತನಾಡಲು ಅವಕಾಶ ಸಿಗುತ್ತದೆ ಅಂದುಕೊಂಡಿದ್ದೇನೆ. ನಾವು ಇಂಥ ಸಮಾಜದ ಆಸಕ್ತಿಯ ಹಾಗೂ ಹಿತದೃಷ್ಟಿಯಿಂದ ಈ ಸಮಸ್ಯೆಗಳಿಗೆ ಪರಿಹಾರಕಂಡುಕೊಳ್ಳಬೇಕು. ನಾನು ಸಮಾಜ ಅಂದೆ. ಸಮಾಜ ಅಂದರೆ ಇಡೀ ಜನತೆ, ಇಲ್ಲಿಯ ಎಲ್ಲಾ ನಿವಾಸಿಗಳೂ ಒಟ್ಟಿಗೆ ಸೇರಿ ಆಗಿರುವುದು. ಅವರಲ್ಲಿ ಘಟಕಗಳಿರುತ್ತವೆ, ವ್ಯಕ್ತಿಗಳಿರುತ್ತಾರೆ. ಆದರೆ ಘಟಕಗಳಿಗೆ ಹಾಗೂ ಸಮಾಜದ ಸಂಬಂಧ ಅವಿಭಾಜ್ಯವಾಗಿದ್ದರೂ ಕೂಡ ಪರಸ್ಪರ ಒಂದನ್ನೊಂದು

ಅವಲಂಬಿಸಿದ್ದರೂ ಕೂಡ ಅವುಗಳಿಗೆ ತಮ್ಮದೇ ಆದ ಒಂದು ಅಸ್ತಿತ್ವ ಸಹ ಇರುತ್ತದೆ. ದೇಹವು ವಿವಿಧ ಅಂಗಗಳಿಂದಾಗಿದೆ. ಅದರ ಕೈಗೆ ಅದರದ್ದೇ ಆದ ಅಸ್ತಿತ್ವ ಇರುತ್ತದೆ. ತಲೆಗೆ ಅದರದೇ ಆದ ಅಸ್ತಿತ್ವವಿರುತ್ತದೆ. ಕೈ ಕಾಲು ತಲೆ ಇಲ್ಲದಿದ್ದರೆ ದೇಹ ದೇಹವಾಗುವುದಿಲ್ಲ.

(ಶ್ರೀಮತಿ ದುರ್ಗಾಬಾಯಿ ಅಧ್ಯಕ್ಷರಾಗುತ್ತಾರೆ)

ಆದರೆ ದೇಹ ಕೇವಲ ಕೈಯ್ಯಾಗಲಿ ಅಥವಾ ಕಾಲಾಗಲಿ, ತಲೆಯಾಗಲಿ ಅಲ್ಲ. ಅದು ಇವೆಲ್ಲದರ ಮೊತ್ತ. ಆದುದರಿಂದ ನಾನು ಸಮಾಜದ ಬಗ್ಗೆ ಯೋಚಿಸುವಾಗ, ನಾವು ಇಡೀ ಸಮಾಜದ ಒಳಿತನ್ನು, ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವುದಾದರೂ ಎಲ್ಲರ ಒಳಿತಿಗೆ, ಹಿತಾಸಕ್ತಿಗೆ ಅನುಗುಣವಾಗಿದ್ದು ಯಾರೋ ನಾಲ್ಕು ಜನರಿಗೆ ಹಿತಕಾರಿಯಾಗಿಲ್ಲದಿದ್ದರೂ ಅದನ್ನು ಜಾರಿಗೆ ತರಬೇಕು. ಈ ವಿಷಯಗಳನ್ನು ಕೈಗೆತ್ತಿಕೊಂಡಾಗ ನನಗೆ ಅವುಗಳನ್ನು ಪರಿಶೀಲಿಸುವ ಅವಕಾಶ ಸಿಗುತ್ತದೆ ಅಂದುಕೊಂಡಿದ್ದೇನೆ. ಚರ್ಚಿತ ವಿಷಯಗಳ ಬಗ್ಗೆ ಈಗ ಹಿಂದಿರುವ ಮಾರ್ಗದ ಗುಣಾವಗುಣಗಳ ಬಗ್ಗೆ ಹಾಗೂ ನಾವು ತೆಗೆದುಕೊಳ್ಳಲೇಬೇಕಾದ ತೀರ್ಮಾನದ ಬಗ್ಗೆ ಸ್ಪಷ್ಟ ದೃಷ್ಟಿಕೋನವನ್ನು ರೂಪಿಸುವುದಕ್ಕಾಗಿ ನನಗೆ ಹೇಳಲು ತುಂಬಾ ಇತ್ತು. ಮೇಡಂ ಈಗ ನನಗೆ ಇನ್ನೊಂದು ಅನುಕೂಲ ಇದೆ. ಈ ಸದನದ ಒಬ್ಬ ಸನ್ಮಾನ್ಯ ಸದಸ್ಯೆ ಅಧ್ಯಕ್ಷೆಯಾಗಿರುವುದರಿಂದ ಆ ಸನ್ಮಾನ್ಯ ಸ್ಥಾನಕ್ಕೆ ತಕ್ಕಂತೆ ಅವರು ಉಳಿದವರಂತೆಯೇ ಈಗ ನನ್ನ ಬಗೆಗೂ ನ್ಯಾಯಯುತವಾಗಿರಬೇಕಾಗುತ್ತದೆ.

ನಾನೀಗಾಗಲೇ ಹೇಳಿದಂತೆ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನಾನು ಸದನದ ಗೌರವಾನ್ವಿತ ನಾಯಕರ ಇಚ್ಛೆಯನ್ನು, ನಿರ್ಧಾರವನ್ನು ಗೌರವಿಸುತ್ತೇನೆ. ಹಾಗಾಗಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ೩೦೦ ಮಿಲಿಯನ್ ಜನರ ಬದುಕಿನ ಮೇಲೆ ಪರಿಣಾಮ ಬೀರಬಲ್ಲ ಇಷ್ಟೊಂದು ಗಂಭೀರವಾದ ವಿಷಯವನ್ನು ಮಾನವ ಸಾಧ್ಯವಾದಷ್ಟು ವಿವರವಾಗಿ ಹಾಗೂ ಜಾಗರೂಕತೆಯಿಂದ ಪರಿಶೀಲಿಸಬೇಕೆಂಬ ವಿನಯಪೂರ್ವಕ ಮನವಿಯೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ. ಒಂದೇ ಒಂದು ಸಾಂಪ್ರದಾಯಿಕ ರೂಢಿ ಉಳಿದಿದೆ. ನಾನು ಮೂರು ದಿನದ ಹಿಂದೆ ನೀಡಿದ್ದ ಸೂಚನೆ ತಿದ್ದುಪಡಿಯನ್ನು ಮಂಡಿಸಬೇಕು. ನಾನು ಮಂಡಿಸಲಿರುವ ತಿದ್ದುಪಡಿ :

ಕಲಂ–೨ರ ಉಪಕಲಂ (ಎ) ಭಾಗ (೧)ರಲ್ಲಿ "ಸೇರಿದಂತೆ" ನಂತರ "ಬೌದ್ಧರು, ಜೈನರು ಸಿಖ್ಖರು" ಎಂಬುದು ಸೇರ್ಪಡೆಯಾಗಬೇಕು.

ಕಲಂ–೨ ಉಪಕಲಂ ೧ ಅದರ ೩ನೇ ಭಾಗವನ್ನು ಕೈಬಿಡಬೇಕು.

ತಿದ್ದುಪಡಿಯಾದ ನಂತರ, ಕಲಂ ಕೆಳಕಂಡಂತಾಗುತ್ತದೆ.

"ಎಲ್ಲಾ ಹಿಂದೂಗಳಿಗೂ ಅಂದರೆ ಹಿಂದೂಧರ್ಮವನ್ನು ಅದರ ಯಾವುದೇ ರೂಪದಲ್ಲಿ ಅಥವಾ ಅದರ ಯಾವುದೇ ಹಂತದಲ್ಲಿ ಬೌದ್ಧರು, ಜೈನರು, ವೈಷ್ಣವರು, ಲಿಂಗಾಯತರು, ಬ್ರಹ್ಮಸಮಾಜದ ಸದಸ್ಯರು, ಪ್ರಾರ್ಥನ ಸಮಾಜದವರು ಇತ್ಯಾದಿ ಇತ್ಯಾದಿ ಸೇರಿದಂತೆ". ಈ ತಿದ್ದುಪಡಿಯನ್ನು ಒಂದು ಸರಳ ಕಾರಣದಿಂದ ಮಂಡಿಸುತ್ತಿದ್ದೇನೆ. ನಾನು ಒಬ್ಬ ಧರ್ಮನಿಷ್ಠ ಹಿಂದೂ ಎಂದು ಭಾವಿಸಿದ್ದೇನೆ. ಅದನ್ನು ಹೇಳಿಕೊಳ್ಳಲಿಕ್ಕೆ ನಾನು ಯೋಗ್ಯನೋ ಇಲ್ಲವೊ ಗೊತ್ತಿಲ್ಲ.

**ಡಾ. ಅಂಬೇಡ್ಕರ್ :** ಇಂಥ ಭಾಷಣದ ನಂತರ ಬೇರೆ ಯಾರು ತಾನೇ ಈ ಹೆಗ್ಗಳಿಕೆಗೆ ಯೋಗ್ಯರು?

**ಪಂಡಿತ ಮಾಳವೀಯ :** ಎಲ್ಲಾ ಸಂದರ್ಭಗಳಲ್ಲಿ ನಾನು ಮಾಡುವ ಸಂಕಲ್ಪದಲ್ಲಿ ಬೌದ್ಧಾವತಾರೆ ಎನ್ನುತ್ತೇವೆ. ನನಗೆ ಸಮಯವಿದ್ದರೆ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ ಮೊದಲಾದುವುಗಳಿಗೆ ಅವುಗಳದ್ದೇ

ಆದ ಸ್ವತಂತ್ರವಾದ ಸ್ಥಾನಮಾನವಿದ್ದರೂ ಅವನ್ನು ಹಿಂದೂಧರ್ಮಕ್ಕೆ ಹೊರಗಿನದ್ದೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ ಎಂದು ಸಾಧಿಸಿ ತೋರಿಸುತ್ತಿದ್ದೆ. ಇದರರ್ಥ ಹಿಂದೂಧರ್ಮ ಅವುಗಳ ಮೇಲೆ ಅಧಿಕಾರ ಚಲಾಯಿಸುತ್ತದೆ ಎಂದಾಗಲಿ ಅವುಗಳ ಸಂಪೂರ್ಣ ಸ್ವಾತಂತ್ರ್ಯವನ್ನಾಗಲಿ ಪ್ರತ್ಯೇಕ ಅಸ್ತಿತ್ವವನ್ನಾಗಲಿ ಮೊಟಕುಗೊಳಿಸಲು ಬಯಸುತ್ತೇನೆ ಎಂದಾಗಲಿ ಅಲ್ಲ. ನಾನು ಚಾರಿತ್ರಿಕ ಸಂದರ್ಭದ ಬಗ್ಗೆ ಮಾತನಾಡುತ್ತಿದ್ದೇನೆ. ಅವೆಲ್ಲಾ ಹಿಂದೂಧರ್ಮದಿಂದಲೇ ಹುಟ್ಟಿ ಬಂದಿವೆ ಮತ್ತು ಎಂದೆಂದಿಗೂ ಅವು ಅದರ ಭಾಗವೇ ಆಗಿರುತ್ತದೆ. ಅವರ ಧಾರ್ಮಿಕ ಗ್ರಂಥಗಳಲ್ಲಿ ಹಾಗೂ ವಿಧಾನಗಳಲ್ಲಿ ಅವರ ದಿನನಿತ್ಯದ ಆಚರಣೆಗಳಲ್ಲಿ ಮತ್ತು ದಿನನಿತ್ಯದ ಬದುಕಿನಲ್ಲಿ ಹಲವಾರು ಸಮಾನ ಅಂಶಗಳು ಇಂದಿಗೂ ಉಳಿದಿವೆ. ಆದುದರಿಂದ ಈ ನಾಡಿನಲ್ಲಿ ಅವುಗಳನ್ನು ಪ್ರತ್ಯೇಕವಾಗಿ ನೋಡುವ ಆವಶ್ಯಕತೆಯಿಲ್ಲ. ನನ್ನ ಈ ತಿದ್ದುಪಡಿಯಿಂದ ಪರಿಣಾಮದಲ್ಲಿ ಯಾವುದೇ ಬದಲಾವಣೆಯೂ ಆಗುವುದಿಲ್ಲ. ಈ ಕಲಂ ಪ್ರತ್ಯೇಕವಾಗಿ ಬರುವುದರ ಬದಲು ಹಿಂದಿನದರ ಭಾಗವಾಗಿಯೇ ಬರುತ್ತದೆ.

ದಯವಿಟ್ಟು ವಿಷಯವನ್ನು ನಿಷ್ಪಕ್ಷಪಾತವಾಗಿ ನೋಡಿ ಎಂದು ಸದನದ ಸದಸ್ಯರಲ್ಲಿ ವಿನಂತಿಯಷ್ಟೇ ಮಾಡಿಕೊಳ್ಳಬಲ್ಲೆ. ಅಂಥ ಕಾಯಿದೆಯನ್ನು ತಂದರೆ, ಸಮಾಜಕ್ಕೆ ಒಳ್ಳೆಯದು ಎಂದು ಭಾವಿಸುವ ಜನರಿದ್ದಾರೆ ಎಂಬುದನ್ನು ನಾನು ಅಲ್ಲಗಳೆಯುತ್ತಿಲ್ಲ. ಈ ಬಗ್ಗೆ ಸರಿಯಾದ ಮಾರ್ಗದಲ್ಲಿ ಮುಂದುವರಿಯಿರಿ ಎಂಬುದೇ ಅವರಲ್ಲಿ ನಾನು ಮಾಡಿಕೊಳ್ಳುವ ವಿನಂತಿ. ಸ್ವಲ್ಪ ಸಮಯದ ಹಿಂದೆ, ಆರ್ಯಸಮಾಜಗಳಲ್ಲಿ ಅಂತರ್‌ಜಾತೀಯ ವಿವಾಹವನ್ನು ಸಿಂಧುಗೊಳಿಸುವ ಉದ್ದೇಶದಿಂದ ಅಂತರ್‌ಜಾತೀಯ ಕಾಯಿದೆಯನ್ನು ಅಂಗೀಕರಿಸಲಾಯಿತು. ಅದೇ ಸಮಯದಲ್ಲಿ ಘನ ವಿದ್ವಾಂಸರಾದ ಮನುವಿನ ಭಕ್ತರಾದ ಡಾ. ಭಗವಾನ್ ದಾಸ್ ಅವರು ಆಗಿನ ಕೇಂದ್ರ ಅಸೆಂಬ್ಲಿಯ ಮುಂದೆ ಆ ಕಾಯಿದೆಯನ್ನು ಇಡೀ ಹಿಂದೂಗಳಿಗೆ ಅನ್ವಯಿಸಬೇಕೆಂಬ ಒಂದು ಮಸೂದೆಯನ್ನು ಮಂಡಿಸಿದ್ದರು. ನಂತರ ದೀರ್ಘವಾದ ಹಾಗೂ ಸೂಕ್ಷ್ಮವಾದ ಚರ್ಚೆಯ ನಂತರ ಅದನ್ನು ಕೈಬಿಡಲಾಯಿತು. ಆರ್ಯ ಸಮಾಜದಲ್ಲಿ ಅಂತರಜಾತೀಯ ವಿವಾಹ ಹಲವಾರು ದಶಕಗಳಿಂದ ನಡೆಯುತ್ತಿದೆ. ಅವರು ತಮ್ಮ ಚಳವಳಿಯನ್ನು ಸುಮಾರು ಕಾಲ ನಡೆಸಿದ್ದಾರೆ. ಅದು ಹೆಚ್ಚೆಚ್ಚು ರೂಢಿಗೆ ಬಂದಾಗ ಮಸೂದೆಯನ್ನು ಅಂಗೀಕರಿಸಲಾಯಿತು. ನಾವೂ ಅದನ್ನು ಅನುಸರಿಸೋಣ. ಸಾಮಾಜಿಕ ಸುಧಾರಣೆ ಅನಿವಾರ್ಯವಾದರೆ, ಸಂಬಂಧಪಟ್ಟವರೆಲ್ಲಾ ಬಯಸಿದರೆ ಯಾರೂ ವಿರೋಧಿಸುವುದು ಸಾಧ್ಯವಿಲ್ಲ. ಆದುದರಿಂದ ನಾವು ಯಾವುದೇ ಪರಿಣಾಮವನ್ನು ಮಾಡದ ಕಾಗದದ ಮೇಲಿನ ಬರಿಯ ಜೀವವಿಲ್ಲದ ಕಾಯಿದೆಗಳಾಗಿ ಅವು ಉಳಿಯುವುದು ಬೇಡ ಎನ್ನುವ ಉದ್ದೇಶದಿಂದಲಾದರೂ ಆ ದಾರಿಯನ್ನು ಅನುಸರಿಸೋಣ.

ನಾವೀಗ ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಮಸೂದೆಯ ಭಾಗವನ್ನಷ್ಟೇ ಕೈಗೆತ್ತಿಕೊಂಡಿದ್ದೇವೆ. ಆ ನಿಟ್ಟಿನಲ್ಲಿ ಒಂದು ಅಖಿಲ ಭಾರತ ಮಟ್ಟದ ಹಾಗೂ ಎಲ್ಲಾ ಕೋಮುಗಳಿಗೂ ಅನ್ವಯವಾಗುವ ಮಸೂದೆಯನ್ನು ತರುವ ಸಾಧ್ಯತೆಯ ಬಗ್ಗೆ ಪರಿಶೀಲಿಸಬೇಕು ಎಂಬ ಪ್ರಸ್ತಾಪವನ್ನು ಮಾಡಲಾಗಿದೆ. ನಾನು ಏಕವಿವಾಹ ಪದ್ಧತಿಯು ಹಿಂದೂಗಳಿಗೆ ಒಳ್ಳೆಯದಾದರೆ ಅದನ್ನು ಅವಶ್ಯವಾಗಿ ಎಲ್ಲರಿಗೂ ಅನ್ವಯಿಸಬೇಕೆಂದು ವಾದಿಸುವ ಪೈಕಿಯವನಲ್ಲ. ಅದನ್ನು ನಾನು ಹೇಳುವುದು ಇಲ್ಲ. ಏಕವಿವಾಹ ಒಳ್ಳೆಯದಾದರೆ ಬೇರೆಯರಿಗೆ ಅದು ಅನ್ವಯವಾಗುತ್ತದೋ ಇಲ್ಲವೋ ಅದು ಹಿಂದೂಗಳಿಗೆ ಜಾರಿಯಾಗಲಿ. ಏಕವಿವಾಹ ಪದ್ಧತಿ ಒಳ್ಳೆಯದು ಎಂದಾದರೆ ಅದು ಬೇರೆಯವರಿಗೆ ಅನ್ವಯವಾಗುವವರೆಗೆ ಹಿಂದೂಗಳಿಗೆ ಅನ್ವಯವಾಗಬಾರದು ಎಂದು ನಾನು ವಾದಿಸುವುದಿಲ್ಲ. ಆ ಬಗ್ಗೆ ತೀರ್ಮಾನವನ್ನು ಅವರು ತೆಗೆದುಕೊಳ್ಳಬೇಕು. ಅವರಿಗೆ ಬೇಡದಿದ್ದರೆ ಬೇಡ. ಆದರೆ ಅದು ಹಿಂದೂಗಳಿಗೆ ಒಳ್ಳೆಯದಾದರೆ ಅದು ಅವರಿಗೆ ಬರಲಿ. (ಒಬ್ಬ ಮಾನ್ಯ ಸದಸ್ಯ ಅದು

ಒಳ್ಳೆಯದೇ?) ಅದು ಒಳ್ಳೆಯದು ತನ್ನಷ್ಟಕ್ಕೇ ಒಳ್ಳೆಯದಾಗಿದ್ದರೆ ಸಾಲದು ಅಥವಾ ಅದಕ್ಕೆ ಸಂಬಂಧಿಸಿದ ಇತರ ಸಂಗತಿಗಳನ್ನೂ ಮತ್ತು ಪ್ರಸ್ತುತವಾದ ಅಂಶಗಳನ್ನೂ ಪರಿಶೀಲಿಸಬೇಕಾಗುತ್ತದೆ. ಏಕವಿವಾಹ ಪದ್ಧತಿಗೆ ನನ್ನದೇನೂ ಆಕ್ಷೇಪಣೆಯಿರುವುದು ಸಾಧ್ಯವಿಲ್ಲ. ಯಾರಿಗೂ ಆ ಬಗ್ಗೆ ಯಾವ ಆಕ್ಷೇಪವೂ ಇರಲು ಸಾಧ್ಯವಿಲ್ಲ. ಏಕವಿವಾಹ ಬಿಟ್ಟು ಬೇರೆ ಏನೂ, ಎಲ್ಲೂ ಆಚರಣೆಯಲ್ಲಿಲ್ಲದೇ ಹೋದರೆ ನನಗೆ ಸಂತೋಷವೇ.........

**ಗ್ಯಾನಿ ಜಿ.ಎಸ್. ಮುಸಾಫಿರ್** (ಪಂಜಾಬ್) : ತನ್ನಷ್ಟಕ್ಕೇ ಒಳ್ಳೆಯದಾಗಿರುವ ವಿಚಾರಗಳನ್ನು ಬಯಸಿದರೆ ತಪ್ಪೇನಿಲ್ಲ.

**ಪಂಡಿತ ಮಾಳವೀಯ :** ಅದು ಎಲ್ಲರಿಗೂ ಅನ್ವಯವಾಗಲೇಬೇಕೆಂದು ನಾನು ಹೇಳುವುದಿಲ್ಲ. ಸರ್ಕಾರ ಮತ್ತು ಇತರರು ಆ ಬಗ್ಗೆ ಯೋಚಿಸಬೇಕು. ಈಗ ಅವರು ವಿವಾಹ ಹಾಗೂ ವಿಚ್ಛೇದನಕ್ಕೆ ಸೀಮಿತವಾದ ಕ್ರಮವನ್ನು ಮುಂದಿಟ್ಟಿದ್ದಾರೆ. ಅವರಿಗೆ ಅದು ಇಡೀ ದೇಶಕ್ಕೆ ಅನ್ವಯವಾಗುವುದು ಒಳ್ಳೆಯದು ಅನ್ನಿಸಿದರೆ ಹಾಗೆ ಮಾಡಲಿ. ಅದು ಸರ್ಕಾರ ಖಂಡಿತವಾಗಿ ಪರಿಗಣಿಸಲೇಬೇಕಾದ ಮತ್ತೊಂದು ಅಂಶ.

**ಶ್ರೀ ಭಟ್ :** ಆದರೆ ನಾವು ಸದಸ್ಯರು, ಅದನ್ನು ಎಲ್ಲರಿಗೂ ಅನ್ವಯವಾಗಬೇಕೆಂದು ಸರ್ಕಾರಕ್ಕೆ ಹೇಳಬಹುದಲ್ಲವೆ?

**ಪಂಡಿತ ಮಾಳವೀಯ :** ಖಂಡಿತಾ, ಹಲವು ಜನ ಅದನ್ನು ಹೇಳಿದ್ದಾರೆ.

**ಗ್ಯಾನಿ ಜಿ. ಎಸ್. ಮುಸಾಫಿರ್ :** ಅದನ್ನು ಕೇಳುವುದು ನಮ್ಮ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

**ಪಂಡಿತ ಮಾಳವೀಯ :** ಅದೊಂದು ಮುಖ್ಯ ವಿಷಯ. ಸರ್ಕಾರ ಅದನ್ನು ಪರಿಗಣಿಸುತ್ತದೆ ಅಂತ ಭಾವಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ನಾವು ಬೇರೆಯವರಿಗೆ ಉಪದೇಶ ಮಾಡುವ ಮೊದಲು ನಾವು ಅದನ್ನು ಆಚರಿಸುವುದು ಒಳ್ಳೆಯದು ಅಂತ ಸನ್ಮಾನ್ಯ ಸದಸ್ಯರು ಭಾವಿಸುದಿಲ್ಲವೊ ಹಾಗೂ ಆಗ ನಮ್ಮ ವಾದಕ್ಕೆ ನಿಜವಾದ ಬಲ ಬರುವುದು ಎಂದು ಅವರಿಗೆ ಅನ್ನಿಸುವುದಿಲ್ಲವೆ?

**ಪಂಡಿತ ಮಾಳವೀಯ :** ಅಧ್ಯಕ್ಷರ ಬಳಿ ಅಷ್ಟೊಂದು ಅಧಿಕಪ್ರಸಂಗಿತನದಿಂದ ಮಾತನಾಡಬಯಸುವುದಿಲ್ಲ. ಸದಸ್ಯರು ತಮ್ಮ ಸ್ಥಾನದ ಹೊಣೆಗಾರಿಕೆಯನ್ನು ಅರಿತು, ಗುರುತರವಾದ ವಿವೇಕದಿಂದ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಈ ಮೂಲಕ ಅನಾದಿಕಾಲದಿಂದ ಬಂದಿರುವ ತೀರಾ ಪವಿತ್ರವಾದ ಸಂಪ್ರದಾಯಗಳಲ್ಲಿ ಮತ್ತು ಹಿಂದೂ ಸಮುದಾಯದ ಜೀವನದ ಬುನಾದಿಯಲ್ಲಿ ಹಸ್ತಕ್ಷೇಪವಾಗದಂತೆ ನೋಡಿಕೊಳ್ಳಬೇಕು ಹಾಗೂ ಅದನ್ನು ತೀರಾ ಹಗುರವಾಗಿ, ಲೌಕಿಕವಾದ ರೀತಿಯಲ್ಲಿ ನಾಶಮಾಡದೇ ಇರುವಂತೆ ನೋಡಿಕೊಳ್ಳಬೇಕು ಎಂದು ಸದಸ್ಯರಲ್ಲಿ ಹೇಳಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಜಾಜೋ**(ಮಧ್ಯಪ್ರದೇಶ) : ಮೇಡಂ, ಈಗ ಪ್ರಶ್ನೆಯನ್ನು ಮತಕ್ಕೆ ಹಾಕಬಹುದು. (ಅಡಚಣೆ)

**ಬಾಬು ರಾಮನಾರಾಯಣ ಸಿಂಗ್** (ಬಿಹಾರ): ಮೇಡಂ, ನಾನು ಮಾತನಾಡಬೇಕು.

**ಮಾನ್ಯ ಸಭಾಧ್ಯಕ್ಷರು:** ನಾನೇ ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲ. ಅದನ್ನು ಸದನಕ್ಕೆ ಬಿಡುತ್ತೇನೆ. ಸನ್ಮಾನ್ಯ ಕಾನೂನು ಮಂತ್ರಿಗಳಿಗೆ ಎಷ್ಟು ಸಮಯ ಬೇಕಾಗಬಹುದು?

**ಡಾ. ಅಂಬೇಡ್ಕರ್:** ದೀರ್ಘ ಭಾಷಣಗಳು ಹಾಗೂ ಮುಂದಿಟ್ಟಿರುವ ವಿಭಿನ್ನ ವಾದಗಳ ಹಿನ್ನೆಲೆಯಲ್ಲಿ ನನಗೆ ಒಂದೂ ಕಾಲು ಗಂಟೆ ಬೇಕಾಗಬಹುದು. ಹೆಚ್ಚು ಸಮಯವೂ ಬೇಕಾಗಬಹುದೇನೋ ಗೊತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾವು ೧೧.೩೦ಕ್ಕೆ ಚರ್ಚೆಯನ್ನು ಮುಗಿಸಬೇಕು. ತಿದ್ದುಪಡಿಗಳನ್ನು ಸೂಚಿಸಲು ಅರ್ಧಗಂಟೆ ತೆಗೆದುಕೊಂಡರೆ ಹಾಗೂ ಕಾನೂನು ಮಂತ್ರಿಗಳು ತಮ್ಮ ಉತ್ತರಕ್ಕೆ ಒಂದೂ ಕಾಲು ಗಂಟೆ

ತೆಗೆದುಕೊಳ್ಳುತ್ತಾರೆ. ಸನ್ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಹತ್ತು ನಿಮಿಷಕ್ಕೆ ಸೀಮಿತಗೊಳಿಸಿಕೊಂಡರೆ, ಹೆಚ್ಚು ಜನ ಸದಸ್ಯರಿಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ. ನಾನು ಸರಿಯಾಗಿ ೧೧.೩೦ಕ್ಕೆ ಚರ್ಚೆಯನ್ನು ಸಮಾಪ್ತಿಗೊಳಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹಮದ್(ಪಶ್ಚಿಮ ಬಂಗಾಳ):** ತಿದ್ದುಪಡಿಗಳನ್ನು ಸದನದಲ್ಲಿ ಹಾಕುವುದೇ ಇಲ್ಲ ಎಂದು ನಿರ್ಧರಿಸಲಾಗಿತ್ತು.

**ಪಂಡಿತ ಮಾಳವೀಯ :** ಡೆಪ್ಯೂಟಿ ಸ್ಪೀಕರ್ ಅವರು ಕಾನೂನು ಮಂತ್ರಿಗಳನ್ನು ೧೧.೩೦ಕ್ಕೆ ಕರೆಯುವುದಾಗಿ ಹೇಳಿದರು. ನಮಗೆ ಸಮಯವಿರುವುದರಿಂದ ಉಳಿದ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಬಹುದು. ೧೦ ನಿಮಿಷದ ನಿಯಮವನ್ನು ನಿಮಗೆ ಅನವಶ್ಯಕ ಎನ್ನಿಸಿದರೆ ಬಿಡಬಹುದು.

**ಮಾನ್ಯ ಸಭಾಧ್ಯಕ್ಷರು:** ಒಬ್ಬ ಮಹಿಳೆ ಪೀಠದಲ್ಲಿರುವುದರಿಂದ, ಆಕೆ ಸದನದಲ್ಲಿ ನಿಷ್ಪಕ್ಷಪಾತದಿಂದ ನಡೆದುಕೊಳ್ಳುವುದಿಲ್ಲ ಎಂಬ ತೀರ್ಮಾನಕ್ಕೆ ಸದಸ್ಯರು ಬರಬೇಕಾಗಿಲ್ಲ. ಸದನದ ಧಾರ್ಮಿಕ ಸೂಕ್ಷ್ಮತೆಯನ್ನು ಅವರು ಅರ್ಧಗಂಟೆಯನ್ನು ತಿದ್ದುಪಡಿಗಳಿಗೆ ಮೀಸಲಿಡುವುದಕ್ಕಾಗಿ ಸದನಕ್ಕೆ ತಿಳಿಸಿದ್ದಾರೆ. ಕಾನೂನು ಮಂತ್ರಿಗಳನ್ನು ೧೧.೩೦ಕ್ಕೆ ಕರೆಯಲಾಗುತ್ತದೆ ಎಂಬುದು ನಿಜ. ಮತ್ತೊಂದು ಸಾಂಪ್ರದಾಯಿಕ ಕೆಲಸವಿದೆ, ಅದು ಸಮಾಪ್ತಿ ಸೂಚನೆಯನ್ನು ಮಂಡಿಸುವುದು. ಈ ಎರಡೂ ಅಂಶಗಳ ಹಿನ್ನೆಲೆಯಲ್ಲಿ ಚರ್ಚೆ ೧೧.೩೦ಕ್ಕಿಂತ ತಡವಾಗಬಾರದು ಎಂದು ಬಯಸುತ್ತೇನೆ.

**ಶ್ರೀ ವಿ.ಜಿ. ಗುಪ್ತ :** ಸಮಾಪ್ತಿ ಸೂಚನೆಯ ಕಥೆ ಏನು? ಏನು ಮಾಡುತ್ತೀರಿ?

**ಮಾನ್ಯ ಸಭಾಧ್ಯಕ್ಷರು :** ಈಗ ಚರ್ಚೆಗೆ ಉತ್ತರ ಕೊಡಲು ಸನ್ಮಾನ್ಯ ಕಾನೂನು ಮಂತ್ರಿಗಳನ್ನು ೧೧.೩೦ಕ್ಕೆ ಕರೆದಿರುವುದರಿಂದ ಆ ಸೂಚನೆಯ ಆವಶ್ಯಕತೆ ಇಲ್ಲ. ಸಮಾಪ್ತಿ ಹಾಗೂ ಅದರ ಸ್ವೀಕಾರಕ್ಕಿಂತ ಒಪ್ಪಂದ ಯಾವತ್ತೂ ಒಳ್ಳೆಯದು.

**ಖ್ವಾಜಾ ಇನಾಯತುಲ್ಲಾ** (ಬಿಹಾರ): (ಉರ್ದು ಭಾಷಣದ ಇಂಗ್ಲಿಷ್ ಅನುವಾದ) ನಾನು ಹೇಳಬೇಕು. ಆದರೆ ಹೇಳುವ ಬಯಕೆಯಿಲ್ಲ. ನಾನು ಸ್ವತಃ ನನ್ನ ಸಹೋದರಿಯನ್ನು ಹೆಣ್ಣುಮಕ್ಕಳನ್ನು ನೋಡಿಕೊಳ್ಳುವಂತೆಯೇ ಅವರು ತಮ್ಮ ಸಹೋದರಿಯರನ್ನು ಹೆಣ್ಣುಮಕ್ಕಳನ್ನು ನೋಡಿಕೊಳ್ಳಬೇಕೆಂಬುದು ಬೇರೆ ವಿಷಯ. ಆದರೆ "ಹಿಂದೂ ಕಾಯಿದೆ ಮಸೂದೆ" ಎಂಬ ಹೆಸರನ್ನು ಈ ಮಸೂದೆಗೆ ಇಟ್ಟಿರುವುದರಿಂದ ಮತ್ತು ಈ ಮಸೂದೆಯನ್ನು ನಿರ್ದಿಷ್ಟವಾಗಿ ಹಿಂದೂಧರ್ಮದ ಅನುಯಾಯಿಗಳಿಗೇ ರೂಪಿಸಿರುವುದು ಎಂದು ಹೇಳಿದ್ದರಿಂದ, ಧರ್ಮದ ದೃಷ್ಟಿಯಿಂದ, ನಾನೊಬ್ಬ ಮುಸ್ಲಿಮನಾಗಿ ಹಿಂದೂಗಳ ಸಾಮಾಜಿಕ ಕಾನೂನಿನಲ್ಲಿ ತರಬಯಸುತ್ತಿರುವ ಅಥವಾ ತರುತ್ತಿರುವ ಬದಲಾವಣೆಗಳಲ್ಲಿ ಹಸ್ತಕ್ಷೇಪ ಮಾಡುವುದು ಸೂಕ್ತವಲ್ಲ.

**ಒಬ್ಬ ಸನ್ಮಾನ್ಯ ಸದಸ್ಯ :** ಒಬ್ಬ ಮನುಷ್ಯನಾಗಿ ಮಾಡಬೇಕಾಗುತ್ತದೆ.

**ಖ್ವಾಜಾ ಇನಾಯತುಲ್ಲಾ:** ನಾನು ಒಬ್ಬ ಮನುಷ್ಯನಾಗಿ ಅದನ್ನು ಮಾಡುತ್ತೇನೆ. ಆದರೆ ನಾನು ಮನುಷ್ಯನಾಗಿ ಒಬ್ಬ ಭಾರತೀಯ ಹಾಗೂ ಒಬ್ಬ ಮುಸ್ಲಿಂ ಕೂಡ. ಆದರೆ ನಾನು ನನ್ನ ಧರ್ಮಕ್ಕೆ ಅನುಗುಣವಾಗಿ ಮಾತ್ರ ನನ್ನ ಅಭಿಪ್ರಾಯವನ್ನು ನೀಡಬಲ್ಲೆ. ಎಲ್ಲರಿಗೂ ಅಂದರೆ, ಕಾನೂನಿನ ವ್ಯಾಪ್ತಿಯಿಂದ ವಿನಾಯಿತಿ ನೀಡಿರುವ ಮುಸ್ಲಿಮರು, ಕ್ರೈಸ್ತರು, ಮತ್ತು ಇತರರಿಗೂ ಇದನ್ನು ಅನ್ವಯಿಸಿ ಎಂಬ ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಶ್ರೀ ಜೆ.ಆರ್. ಕಪೂರ್** (ಉತ್ತರ ಪ್ರದೇಶ): ಕೇವಲ ಅವರು ಬಯಸಿದರೆ ಮಾತ್ರ.

**ಖ್ವಾಜಾ ಇನಾಯತುಲ್ಲಾ:** ಬಯಸಿದವರು ಹಾಗೂ ಬಯಸದವರು ಇಬ್ಬರಿಗೂ. ೯೦ನೇ ತಿದ್ದುಪಡಿಯ

ಪ್ರಕಾರ "ಈ ಕಾಯಿದೆ ಎಲ್ಲಾ ಭಾರತೀಯರಿಗೂ – ಅವರು ಯಾವುದೇ ಧರ್ಮ, ಜಾತಿ, ಜನಾಂಗಕ್ಕೆ ಸೇರಿರಲಿ, ಅನ್ವಯವಾಗುತ್ತದೆ." ಇದೇ ರೀತಿ ೯೧, ೯೨, ೯೩ನೇ ತಿದ್ದುಪಡಿಯಲ್ಲೂ ಆಗಿದೆ. ಕೆಲ ಸದಸ್ಯರು, ಅದರಲ್ಲೂ, ನನ್ನ ಸನ್ಮಾನ್ಯ ಮಿತ್ರರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ವಿಶೇಷವಾಗಿ ಈ ತಿದ್ದುಪಡಿಯನ್ನು ಮಂಡಿಸುವಾಗ "ಜಾತ್ಯತೀತತೆ" ಎಂಬುದು ಭಾರತದಲ್ಲಿ ಒಂದು ಖಾಯಿಲೆಯಂತೆ ಹರಡುತ್ತಿದೆ ಎಂದರು. ಜಾತ್ಯತೀತತೆ ಒಂದು ಖಾಯಿಲೆಯಲ್ಲ. ಒಂದು ಪರಿಹಾರ. ಆದರೆ ವಿಷಾದದ ಸಂಗತಿಯೆಂದರೆ, ತುಂಬಾ ಸಮರ್ಥರಾದ ನನ್ನ ಗೆಳೆಯರು– ಜಾತ್ಯತೀತತೆಯನ್ನು ಒಂದು ಖಾಯಿಲೆಯಾಗಿ ಕಾಣುತ್ತಾರೆ ಮತ್ತು ಅದರ ಕಾನೂನನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕೆನ್ನುತ್ತಾರೆ. ಅಂದರೆ ಹಿಂದುಗಳಿಗೆ ಮಾಡಿದ ಕಾನೂನು ಮುಸ್ಲಿಮರಿಗೂ ಅನ್ವಯವಾಗಬೇಕು. ಅದು ಯಾರದೋ ನಡತೆಯ ಮೇಲೆ ಅಥವಾ ಭಾರತದ ಸಾಮಾಜಿಕ ಬದುಕಿನ ಮೇಲೆ ಪ್ರಭಾವ ಬೀರುವ, ಆರ್ಥಿಕತೆಗೆ ಅಥವಾ ರಾಜಕೀಯಕ್ಕೆ ಸಂಬಂಧಿಸಿದ ಕಾನೂನೇನಾದರೂ ಆಗಿದ್ದರೆ, ಅವರು ಹೇಳುವುದು ಸರಿ. ಎಲ್ಲರಿಗೂ ಒಂದೇ ಕಾನೂನು ಇರಬೇಕು. ಜಾತ್ಯತೀತತೆ ಎಂದರೆ, ಅಂತಹ ಕಾನೂನುಗಳನ್ನು ಹಾಗೂ ವೈಯಕ್ತಿಕ ಕಾನೂನುಗಳೆರಡೂ ಹಿಂದೂ ಮತ್ತು ಮುಸ್ಲಿಮರಿಗೆ ಒಂದೇ ಆಗಿರಬೇಕೆಂದು ಅರ್ಥವಲ್ಲ. ಹಿಂದೂಗಳನ್ನು ಮುಸ್ಲಿಮರನ್ನೂ ಒಂದೇ ರೀತಿಯಲ್ಲಿ ನೋಡಲಾಗುತ್ತದೆಯೆಂಬುದು, ಅವರ ವೈಯಕ್ತಿಕ ಕಾನೂನಿಗೆ ಅನ್ವಯವಾಗುವುದಿಲ್ಲ. ನಮ್ಮಲ್ಲಿ ಹಿಂದೂಗಳಿಗಿಂತ ಭಿನ್ನವಾದ ಅನೇಕ ಕಾನೂನುಗಳಿವೆ. ಇದನ್ನೇ ನಿನ್ನೆ ತಾನೆ ನನ್ನ ಸಿಖ್ ಮಿತ್ರರು ಕೂಡ ಹೇಳುತ್ತಿದ್ದರು. ಅವರ ಕಾನೂನು ಕೂಡ ಹಿಂದುಗಳ ಕಾನೂನಿಗಿಂತ ಭಿನ್ನ ಎಂದು ಹೇಳುತ್ತಿದ್ದರು. ಆ ಅಂಶದ ಬಗ್ಗೆ ಹೆಚ್ಚು ಮಾತನಾಡುವ ಉದ್ದೇಶ ನನಗಿಲ್ಲ. ನಾನು ಅದನ್ನು ಮುಸ್ಲಿಮರಿಗೆ ಅನ್ವಯಿಸುವುದಕ್ಕೆ ಸಂಬಂಧಿಸಿದಂತೆ ಅರಿಕೆ ಮಾಡಿಕೊಳ್ಳುತ್ತೇನೆ. ನಿನ್ನೆ ನಮ್ಮ ಸನ್ಮಾನ್ಯ ಮಂತ್ರಿಗಳಾದ ಗಾಡ್ಗೀಳ್ ಅವರು ಹಿಂದೂಗಳ ಸಾಮಾಜಿಕ ಕಾನೂನನ್ನು ತಾವು ಬದಲಾಯಿಸಬಯಸುವುದಾಗಿ ಹೇಳಿದರು. ಈ ರೀತಿಯ ಬದಲಾವಣೆಗೆ ತಮ್ಮ ವಾದವನ್ನು ಯಶಸ್ವಿಯಾಗಿ ಮಂಡಿಸಿದರು. ಹಿಂದೂ ಕಾನೂನಿನಲ್ಲಿ ಬದಲಾವಣೆ ಕಂಡುಬರುತ್ತಿರುವುದರಿಂದ, ನಾವು ಕೂಡ ಅದನ್ನು ಬದಲಿಸಬೇಕು ಎಂಬುದು ಅವರ ವಾದವಾಗಿತ್ತು. ಆದರೆ ಅವರು ಮುಂದುವರಿದು ಹೇಳಿದರು. ಈ ರೀತಿಯಲ್ಲಿ ಪ್ರಯತ್ನಿಸಿದರೆ, ಮುಂಬರುವ ದಿನಗಳಲ್ಲಿ, ಮುಸ್ಲಿಮರನ್ನು ಇದರಲ್ಲಿ ಸೇರಿಸಬಹುದು. ನಾನು ಅವರಲ್ಲಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ– ಅವರು ಆ ಕಾನೂನನ್ನು ಬದಲಿಸಬಹುದು. ಯಾಕೆಂದರೆ ಅವರೇ ಹೇಳಿದಂತೆ ಹಿಂದೂ ಕಾಯಿದೆಯಲ್ಲಿ ಬದಲಾವಣೆ ಕಂಡುಬರುತ್ತಿದೆ. ಆದರೆ ಇಲ್ಲಿ ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೇ, ಮುಸ್ಲಿಂ ಕಾನೂನು ಕಳೆದ ೧೩೫೦ ವರ್ಷಗಳಿಂದ ಬದಲಾಗಿಲ್ಲ. ಮುಂಬರುವ ದಿನಗಳಲ್ಲಿ ಅದು ಬದಲಾಗುವುದೂ ಇಲ್ಲ. ಯಾಕೆಂದರೆ, ಮುಸ್ಲಿಮರು ಮದುವೆ ಹಾಗೂ ಆಸ್ತಿ ವಿಭಜನೆಗೆ ಸಂಬಂಧಿಸಿದ ಕಾನೂನನ್ನು ತಮ್ಮ ದೇವರೆ ಮಾಡಿದ್ದು ಹಾಗೂ ಕುರಾನಿನಲ್ಲಿ ಹೇಳಿರುವಂತೆಯೇ ಇದೆ ಎಂದು ನಂಬಿದ್ದಾರೆ. ಹಾಗಾಗಿ ಈ ಪೃಥ್ವಿಯ ಮೇಲಿನ ಯಾರಿಗೂ ಅದನ್ನು ಬದಲಿಸುವ ಹಕ್ಕಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಪಂಜಾಬಿನ ಮುಸ್ಲಿಮರು ಷರಿಯತ್ ಕಾನೂನನ್ನು ಅನುಸರಿಸುತ್ತಾರೋ ಅಥವಾ ಷರಿಯತ್ತಿಗಿಂತ ಪೂರ್ಣ ಭಿನ್ನವಾದ ಸಾಂಪ್ರದಾಯಿಕ ಕಾನೂನನ್ನು ಅನುಸರಿಸುತ್ತಾರೋ?

**ಖ್ವಾಜಾ ಇನಾಯತುಲ್ಲಾ :** ಯಾರಾದರೂ ಪಂಜಾಬಿನ ಮುಸ್ಲಿಮರು ಕುಡಿಯುತ್ತಾರೆ ಎಂದರೆ ಎಲ್ಲಾ ಮುಸ್ಲಿಮರು ವೈನ್ ಕುಡಿಯಲು ಅವಕಾಶ ಕೊಡಬೇಕು ಎಂದು ಅರ್ಥವೆ? ಯಾವುದೋ ಒಬ್ಬ ಮುಸ್ಲಿಂ ಒಂದು ತಪ್ಪು ಮಾಡಿದರೆ, ಅದರರ್ಥ ಎಲ್ಲರಿಗೂ ಅದೇ ತಪ್ಪನ್ನು ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ ಎಂದೇ? ಯಾವನೋ ಒಬ್ಬ ಮುಸ್ಲಿಂ ಇಸ್ಲಾಂ ಕಾನೂನನ್ನು ಅನುಸರಿಸದಿದ್ದರೆ, ನಾನು ಬಲವಂತವಾಗಿ

ಅವನು ಅದನ್ನು ಅನುಸರಿಸುವಂತೆ ಮಾಡಲಾರೆ. ಅವನಿಗೆ ಸ್ವಾತಂತ್ರ್ಯವಿದೆ, ಅವನು ತನ್ನ ಅಂತಃಕರಣದ ವಿರುದ್ಧ ಹೋಗಬಹುದು. ತನ್ನ ಧರ್ಮದ ವಿರುದ್ಧ, ತನ್ನ ಸಮಾಜದ ವಿರುದ್ಧ ಹೋಗಬಹುದು ಆದರೆ ಎಲ್ಲಿಯವರೆಗೂ ಅವನ ಕ್ರಿಯೆ ಸಮಾಜಕ್ಕೆ ಹಾನಿಕಾರಕವಲ್ಲವೊ ಅಲ್ಲಿಯವರೆಗೆ ನಾನಾಗಲಿ, ಸರ್ಕಾರವಾಗಲೀ, ಅದರಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಇಸ್ಲಾಮಿಕ್ ಕಾನೂನಿನ ಪ್ರಕಾರ ಕಳ್ಳನನ್ನು ಜೀವಂತವಾಗಿ ಹೂಳಬೇಕು ಅಥವಾ ಅವನ ಕೈಯನ್ನು ಕೊಚ್ಚಿ ಹಾಕಬೇಕು, ಇದನ್ನು ಯಾವುದಾದರೂ ಇಸ್ಲಾಮಿಕ್ ದೇಶಗಳಲ್ಲಿ ಅನುಸರಿಸಲಾಗುತ್ತಿದೆಯೆ?

**ಖ್ವಾಜಾ ಇನಾಯತುಲ್ಲಾ :** ನನ್ನ ಮಿತ್ರ ಮಾನ್ ಒಂದು ನ್ಯಾಯವಾದ ಪ್ರಶ್ನೆಯನ್ನೇ ಕೇಳಿದ್ದಾರೆ. ಅವರು ನನ್ನನ್ನು ಹೊರಗೆ ಬೇಕಾದರೆ ಭೇಟಿ ಮಾಡಲಿ. ನಾನು ಅದಕ್ಕೆ ತೃಪ್ತಿಕರವಾದ ಉತ್ತರ ನೀಡಬಲ್ಲೆ. ಇಲ್ಲಿ ನಾನು ಸದನದ ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ಇಸ್ಲಾಮೀ ಕಾನೂನನ್ನು ಆಯಾ ದೇಶದ ಕಾನೂನಿಗೆ ಸರಿಹೊಂದುವಂತೆ ಮಾಡುವುದಕ್ಕಾಗಿ, ಇಸ್ಲಾಮಿನಲ್ಲಿ ಕೆಲವು ಕಾನೂನುಗಳಿಗೆ ಅವಕಾಶವಿದೆ. ಆದರೆ ದೇಶದ ಕಾನೂನಿನ ಹಾದಿಗೆ ತರುವ ಉದ್ದೇಶದಿಂದ ಎಷ್ಟರಮಟ್ಟಿಗೆ ಇಸ್ಲಾಮಿಕ್ ಕಾನೂನನ್ನು ಬದಲಿಸಬಹುದು ಮತ್ತು ಯಾವ ಮಿತಿಯನ್ನು ದಾಟಿ ಹೋಗಬಾರದು ಎಂಬುದನ್ನು ಹೇಳಬಲ್ಲೆ. ಒಂದು ಇಸ್ಲಾಮಿಕ್ ದೇಶದಲ್ಲಿ ಒಬ್ಬ ಕಳ್ಳನನ್ನು ಇಸ್ಲಾಮಿಕ್ ಕಾನೂನಿನ ಪ್ರಕಾರ ಶಿಕ್ಷಿಸಲು ಸಾಧ್ಯವಾಗದಿದ್ದರೆ, ಅದನ್ನು ಬದಲಿಸಲು ಅವಕಾಶವಿದೆ. ಆದರೆ ಕೆಲವು ಕಾನೂನುಗಳನ್ನು ಬದಲಿಸಲು ಸಾಧ್ಯವಿಲ್ಲ. ಆದುದರಿಂದ ಈ ನನ್ನ ಗೆಳೆಯರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ...... ನನ್ನ ಹೆಚ್ಚಿನ ಸಮಯವನ್ನು ಮಧ್ಯ ಪ್ರವೇಶಿಸಿ ನನ್ನ ಗೆಳೆಯರು ತೆಗೆದುಕೊಂಡಿದ್ದಾರೆ. ನನಗೆ ಆ ಕಾಲಾವಕಾಶವನ್ನು ತುಂಬಿಕೊಡಬೇಕು.

**ಮಾನ್ಯ ಸಭಾಧ್ಯಕ್ಷರು :** ಅದನ್ನು ತೂಗಿಸಿಕೊಡಲು ಸಾಧ್ಯವಿಲ್ಲ.

**ಖ್ವಾಜಾ ಇನಾಯತುಲ್ಲಾ :** ಮುಸ್ಲಿಮರ ಧಾರ್ಮಿಕ ಕಟ್ಟಳೆಗಳಿಗೆ ವಿರುದ್ಧವಾಗಿರುವಂಥದ್ದನ್ನು ಮಾಡುವುದು ಮುಸ್ಲಿಮರ ಹಾಗೂ ಕಾನೂನಿನ ದೃಷ್ಟಿಯಿಂದ ಸರಿಯಲ್ಲ ಎಂಬುದು ನನ್ನ ಮನವಿ. ಈ ಮಸೂದೆಯನ್ನು ಬಹುಮತದಿಂದ ಅಂಗೀಕರಿಸಬಹುದು. ಆದರೆ ಯಾರಿಗೂ ಬಲವಂತವಾಗಿ ಒಂದು ಕಾನೂನನ್ನು ಅನುಸರಿಸುವಂತೆ ಕೇಳುವುದು ಸಾಧ್ಯವಿಲ್ಲ ಎಂದು ವಿನಯದಿಂದಲೇ ಮನವಿ ಮಾಡಿಕೊಳ್ಳುತ್ತೇನೆ. ಬಹುಸಂಖ್ಯಾತರು ನಮ್ಮನ್ನು ಬಲವಂತಪಡಿಸಬಾರದು. ಈ ಕಾನೂನನ್ನು ಒಪ್ಪಿಕೊಳ್ಳುವಂತೆ ಮುಸ್ಲಿಮರನ್ನು ಬಲವಂತಪಡಿಸಬಾರದು. ಯಾರೂ ಬಹುಸಂಖ್ಯಾತರು ಒಪ್ಪಿರುವ ಇತರ ಕಾನೂನಿನ ಬಗ್ಗೆ ತಕರಾರು ಮಾಡುವುದಿಲ್ಲ.

ನನ್ನ ಕೆಲವು ಗೆಳೆಯರು ಭಾರತದಲ್ಲಿ ಇರುವವರೆಲ್ಲಾ ಹಿಂದೂಗಳು ಎಂದು ಹೇಳಿದರು. ನನ್ನನ್ನು ನಾನು ಹಿಂದೂ ಎಂದು ಕರೆದುಕೊಳ್ಳುವುದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ. ನಾನು ಕೂಡ ಭಾರತದ ನಿವಾಸಿಗಳೆಲ್ಲಾ ಹಿಂದುಗಳೇ ಎಂದು ಹೇಳಿಕೊಳ್ಳುತ್ತೇನೆ. ರಾಜಕೀಯವಾಗಿ ನಾನು ಒಬ್ಬ ಹಿಂದೂ. ಇಂದಲ್ಲ, ಕಳೆದ ೨೦ರಿಂದ ೨೫ ವರ್ಷಗಳಿಂದ ನನ್ನನ್ನು ನಾನು ಒಬ್ಬ ರಾಜಕೀಯ ಹಿಂದೂ ಎಂದೇ ಕರೆದುಕೊಳ್ಳುತ್ತಿದ್ದೇನೆ. ಇಲ್ಲಿ ಮತ್ತೊಂದು ವಿಷಯವನ್ನು ಹೇಳಬೇಕು. ನಾನು ರಾಜಕೀಯವಾಗಿ ಹಿಂದೂವಾಗಿರುವುದರ ಜೊತೆಗೆ ಧಾರ್ಮಿಕವಾಗಿ ಮುಸ್ಲಿಂ ಹಾಗೂ ಮುಸ್ಲಿಮನಾಗಿಯೇ ಮುಂದುವರಿಯುತ್ತೇನೆ.

* ೧೯೫೧ನೆಯ ಸೆಪ್ಟಂಬರ್ ೨೦ರ ಸದನದ ಚರ್ಚೆ, ಸಂಪುಟ XV, ಭಾಗ II ಪುಟಗಳು ೨೯೨೧–೩೩

**ಒಬ್ಬ ಸನ್ಮಾನ್ಯ ಸದಸ್ಯರು :** ತಾವು ಜನಾಂಗೀಯವಾಗಿ ಏನು?

**ಖ್ವಾಜಾ ಇನಾಯತುಲ್ಲಾ :** ನಾನೊಬ್ಬ ಹಿಂದೂ, ನನ್ನ ಪೂರ್ವಜರು ಬ್ರಾಹ್ಮಣರು. ನನ್ನ ನರದಲ್ಲಿ ಬ್ರಾಹ್ಮಣ ರಕ್ತ ಹರಿಯುತ್ತಿದೆ. ಶುದ್ಧ ರಕ್ತ. ಈವರೆಗೆ ಕಲುಷಿತಗೊಂಡಿಲ್ಲ. ನನ್ನ ಭಾಷಣದ ಒಟ್ಟಾರೆ ಸಾರವೇನೆಂದರೆ, ನಮ್ಮ ದೇವರ ಹಾಗೂ ಧರ್ಮದ ಕಟ್ಟಳೆಗಳ ವಿರುದ್ಧವಿರುವ ಯಾವುದೇ ಕಾನೂನನ್ನು ನಮ್ಮ ಮೇಲೆ ಹೇರಬೇಡಿ. ಆದರೆ ಭಾರತೀಯನಾಗಿ ಯಾವುದೇ ಸಾಮಾಜಿಕ ಅಥವಾ ಆರ್ಥಿಕ ಶಾಸನಗಳನ್ನು ಒಪ್ಪಿಕೊಳ್ಳುವುದಕ್ಕೆ ನನ್ನ ಯಾವುದೇ ತಕರಾರಿಲ್ಲ.

**ಕುಮಾರಿ ಪದ್ಮಜಾ ನಾಯ್ಡು :** ಈ ಮಸೂದೆಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಲು ಸಿಕ್ಕ ಈ ಅವಕಾಶವನ್ನು ಸ್ವಾಗತಿಸುತ್ತೇನೆ. ಪ್ರತಿಗಾಮಿಗಳ ದುಷ್ಪ್ರೇರಣೆಯಿಂದ ಬಂದಂಥ ವ್ಯಾಪಕವಾದ ಹಾಗೂ ಉಗ್ರವಾದ ವಿರೋಧದ ನಡುವೆಯೂ ಈ ಮಸೂದೆಯನ್ನು ಮಂಡಿಸಿದ ಸರ್ಕಾರವನ್ನು ಅದರ ಎದೆಗಾರಿಕೆಗೆ ಅಭಿನಂದಿಸುತ್ತೇನೆ. ಅಯ್ಯೋ! ಇಂದಿಗೂ ಅಂಥ ಪ್ರತಿಗಾಮಿ ಶಕ್ತಿಗಳು ಈ ದೇಶದ ಕೆಲವು ಭಾಗಗಳಲ್ಲಿ ಪ್ರಾಬಲ್ಯ ಹೊಂದಿವೆ. ಈ ಮಸೂದೆಯ ಶಿಲ್ಪಿಗೆ ನನ್ನ ಹೊಗಳಿಕೆಯ ಆವಶ್ಯಕತೆಯೇನೂ ಇಲ್ಲ. ಸದನ ಅದನ್ನು ಸ್ವೀಕರಿಸಲಿ ಅಥವಾ ತಿರಸ್ಕರಿಸಲಿ, ಅಂಬೇಡ್ಕರ್ ಅವರ ಕ್ರಮದಿಂದಾಗಿ ಅವರ ಹೆಸರು ಸಾಮಾಜಿಕ ಅನ್ಯಾಯವನ್ನು ನಿರ್ಮೂಲನ ಮಾಡಲು ಮತ್ತು ಮಾನವನ ಒಟ್ಟಾರೆ ಸಂತೋಷವನ್ನು ಹೆಚ್ಚಿಸಲು ತೀವ್ರ ವಿರೋಧಗಳು ಹಾಗೂ ಕಿರುಕುಳದ ನಡುವೆಯೂ ಜೀವನವಿಡೀ ದೃಢಮನಸ್ಸಿನಿಂದ ದುಡಿದ ಸಾಮಾಜಿಕ ಶಾಸಕರ ದೊಡ್ಡ ಪಟ್ಟಿಯಲ್ಲಿ ಸೇರುತ್ತದೆ. ಹಲವಾರು ವರ್ಷಗಳಿಂದ ಈ ವಿಶಾಲ ರಾಷ್ಟ್ರದ ಉದ್ದಗಲಕ್ಕೂ ಗಂಡಸರು, ಹೆಂಗಸರು ಈ ಮಸೂದೆ ಜಾರಿಯಾಗಲಿ ಎಂದು ಕಾತರದಿಂದ ಕಾಯುತ್ತಿದ್ದರು. ಮಸೂದೆಗೆ ಗರಿಷ್ಠ ಬೆಂಬಲ ಸಿಗುವ ಉದ್ದೇಶದಿಂದ ಹೊಂದಾಣಿಕೆಯ ಮೇಲೆ ಹೊಂದಾಣಿಕೆ ಮಾಡಿಕೊಳ್ಳುವುದು ಉಚಿತವೆಂದು ಪರಿಗಣಿಸಿದ್ದರಿಂದ ಅದರ ಮೂಲದಲ್ಲಿದ್ದ ಬಲ ಕ್ರಮೇಣ ಕಡಿಮೆಯಾಗುತ್ತಿದ್ದುದ್ದನ್ನು ಅವರು ಗಾಬರಿಯಿಂದ ಗಮನಿಸುತ್ತಿದ್ದರು. ಆದರೆ ಅದರ ಈಗಿನ ಊನಗೊಂಡಿರುವ ಸ್ಥಿತಿಯಲ್ಲೂ ಈ ಮಸೂದೆಯೊಂದೇ ಇಂದಿಗೂ ಅಸಮವಾದ ಕಾನೂನಿನ ಪುರಾತನ ಬಂಧನಕ್ಕೆ ಒಳಗಾಗಿರುವ ಹಿಂದೂ ಹೆಂಗಸನ್ನು ಅದರಿಂದ ವಿಮೋಚನೆಗೊಳಿಸಲು ತೆಗೆದುಕೊಂಡ ಸಮಗ್ರ ಕ್ರಮ. ವಂಚನೆಗೊಳಗಾದ ಬಡ ಹೆಂಗಸರ ವಿರೋಧವನ್ನು ನಾನು ಉಪೇಕ್ಷಿಸುತ್ತಿಲ್ಲ ಅಥವಾ ಆ ವಿರೋಧವನ್ನು ಉತ್ಪ್ರೇಕ್ಷೆಯನ್ನೂ ಮಾಡುವ ತಪ್ಪು ಮಾಡುತ್ತಿಲ್ಲ. ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸೂಕ್ಷ್ಮವಾಗಿ ಅವರನ್ನು ಎತ್ತಿಕಟ್ಟುತ್ತಿದ್ದಾರೆ. ಭಾರತದಲ್ಲಿ ಇಂದು ಹಿಂದೂ ಹೆಂಗಸರು ತಮಗೆ ಸಂವಿಧಾನಾತ್ಮಕವಾಗಿ ದೊರಕಬೇಕಾದ ಕಾನೂನಿನಲ್ಲಿ ಸಮಾನತೆಯನ್ನು ದೊರಕಿಸಿಕೊಡುವುದಕ್ಕಾಗಿ ತೀರಾ ಜಾಗರೂಕತೆಯಿಂದ ರೂಪಿಸಿರುವ ಮಸೂದೆಯನ್ನು ವಿರೋಧಿಸುವಂತೆ ವಶೀಕರಣದ ಪ್ರಯತ್ನಕ್ಕೆ ತಮ್ಮನ್ನು ತಾವೇ ಒಪ್ಪಿಸಿಕೊಂಡಿದ್ದಾರೆ. ಎಂಥ ದುರಂತಮಯ ದೃಶ್ಯ! ಆದರೆ ನಾನು ಇಂದು ಒಬ್ಬ ಹಿಂದೂವಾಗಿಯಾಗಲಿ ಅಥವಾ ಮಹಿಳೆಯಾಗಿ ಆಗಲಿ, ಈ ಮಸೂದೆಯನ್ನು ಬೆಂಬಲಿಸುತ್ತಿಲ್ಲ. ನಾನು ನ್ಯಾಯಪೂರ್ಣವಲ್ಲದ ಕಾನೂನಿನಿಂದ ಆದಂಥ ಮಾನವನ ನೋವನ್ನು ನಿರ್ಮೂಲನ ಮಾಡಲು ಹಾಗೂ ಘೋರವಾದ ತಪ್ಪುಗಳನ್ನು ಸರಿಪಡಿಸಲು ಆವಶ್ಯಕವಾದ ಇತರ ಎಲ್ಲಾ ಸಾಮಾಜಿಕ ಶಾಸನಗಳಿಗಾಗಿ ವಾಗ್ದಾನ ಮಾಡಿರುವ ಭಾರತದ ಪ್ರತಿಷ್ಠೆಯ ಬಗ್ಗೆ ಹೆಮ್ಮೆ ಇರುವ ಭಾರತೀಯಳಾಗಿ ಮಾತನಾಡುತ್ತಿದ್ದೇನೆ. ಎಲ್ಲಿಯವರೆಗೆ ಈ ದೇಶದ ಜನತೆಯ ಒಂದು ಗುಂಪನ್ನು ಜಾತಿ, ಧರ್ಮ, ಲಿಂಗದ ಕಾರಣಕ್ಕಾಗಿ ಸಮಾನ ಹಕ್ಕು ಸಂಪೂರ್ಣವಾಗಿ ದಕ್ಕದಂತೆ, ಅವರನ್ನು ವಂಚಿಸಿ ಹೊರಗಿಡಲಾಗುತ್ತದೊ ಅಲ್ಲಿಯವರೆಗೆ ನಮ್ಮ ಸಂವಿಧಾನ ಒಂದು ಪೊಳ್ಳು ಹಾಸ್ಯಾಸ್ಪದವಾದ

ಸಂವಿಧಾನವಾಗಿರುತ್ತದೆ. ಸ್ವಾತಂತ್ರ್ಯಕ್ಕಾಗಿ ವೀರಾವೇಶದಿಂದ ದೀರ್ಘಕಾಲ ಮಾಡಿದ ಯುದ್ಧದಿಂದ ಮಹಿಳೆಗೆ ಏನು ಪ್ರಯೋಜನ ಆದಂತಾಯ್ತು? ಜೀವನದಲ್ಲಿ ಮೊದಲ ಬಾರಿಗೆ ತಮಗೆ ನೆಲೆ ನೀಡಿದ್ದ ತಮ್ಮ ಅಮೂಲ್ಯ ಆಶ್ರಯಗಳನ್ನು ಬಿಟ್ಟು ಈ ಯುದ್ಧದಲ್ಲಿ ಪಾಲ್ಗೊಂಡ ಅವರು, ಯುದ್ಧಭೂಮಿಗೆ ಬಂದು ತಮ್ಮ ಸೋದರರ ಜೊತೆಯಲ್ಲಿ ನಿಂತು ಜೈಲು ಹಾಗೂ ಲಾಠಿ ಏಟನ್ನು ಮತ್ತು ಹಲವು ಸಲ ಸಾವಿಗಿಂತ ಹೊಲಸಾದ ಅವಮಾನವನ್ನು ಎದುರಿಸಿದ್ದಾರೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಆ ಸಾವಿರಾರು ಹಿಂದೂ ಮಹಿಳೆಯರಿಗೆ ನ್ಯಾಯಯುತವಾದ ಹಕ್ಕುಗಳನ್ನು ನೀಡದೇ ಹೋದರೆ ಕಷ್ಟಪಟ್ಟು ಸಂಪಾದಿಸಿದ ನಮ್ಮ ಸ್ವಾತಂತ್ರ್ಯ ಒಂದು ಹಿಡಿ ಧೂಳಿಗಿಂತ ಹೆಚ್ಚಲ್ಲ.

ನಾನು ಸದನದ ವಿವಿಧ ಸದಸ್ಯರ ಅಸಂಖ್ಯಾತ ಭಾಷಣಗಳನ್ನು ಹೇಳಿಕೆಗಳನ್ನು ಗಮನವಿಟ್ಟು ಅಧ್ಯಯನ ಮಾಡಿದ್ದೇನೆ. ಮಸೂದೆಯ ಬಗ್ಗೆ ಅವರ ಹೇಳಿಕೆಗಳನ್ನು ಗಮನವಿಟ್ಟು ಅಧ್ಯಯನ ಮಾಡಿದ್ದೇನೆ. ಮಸೂದೆಯ ತಾಂತ್ರಿಕ ಪರಿಣಾಮಗಳನ್ನು ತೀರ್ಮಾನಿಸಲು ಅವರು ನನಗಿಂತ ಹೆಚ್ಚು ಯೋಗ್ಯರು. ಆದರೆ ಅವರಿಗೆ ಅಷ್ಟೆಲ್ಲಾ ವಾದಮಾಡುವ ಚತುರತೆ ಹಾಗೂ ತಾರ್ಕಿಕ ನಿಪುಣತೆಯಿದ್ದರೂ ಅವರಿಗೆ ಈ ಮಸೂದೆಯನ್ನು ಸದೆ ಬಡಿಯುವ ಒಂದು ಒಳ್ಳೆಯ ಆಯುಧವನ್ನು ರಚಿಸಲು ಸಾಧ್ಯವಾಗಿಲ್ಲ. ಅವರ ಯಾವುದೇ ಆಯುಧವೂ ಸಾಕಷ್ಟು ಪರಿಣಾಮಕಾರಿಯಾಗಿಲ್ಲ. ಹಿಂದೂ ಸಮಾಜದ ಮೂಲಬಂಧ, ತಿರುಳು ಹಾಗೂ ರಚನೆಯನ್ನೇ ನಾಶಮಾಡಿಬಿಡುತ್ತದೆ ಎಂಬ ಕೂಗನ್ನು ಬೇರೆ ಬೇರೆ ಭಾಷೆಯಲ್ಲಿ, ತರಾವಾರಿ ರೀತಿಯಲ್ಲಿ, ದಿನಾ ಮನೆಯ ಮಾಡುಗಳಲ್ಲಿ, ಮಾರುಕಟ್ಟೆಗಳಲ್ಲಿ, ಹೆದ್ದಾರಿಯಲ್ಲಿ, ಗಲ್ಲಿಗಲ್ಲಿಗಳಲ್ಲಿ ಕೇಳಿಕೇಳಿ ನಮಗೆ ಸುಸ್ತಾಗಿದೆ. ಅಮೇರಿಕಾದಲ್ಲಿ ದುರದೃಷ್ಟವಶಾತ್ ರಾಷ್ಟ್ರವ್ಯಾಪಿ ಪ್ರಚಾರ ಸಿಕ್ಕಿ ಈ ಸದನದ ಒಬ್ಬ ಪ್ರಖ್ಯಾತ ಸದಸ್ಯರು ತಮ್ಮ ಹೇಳಿಕೆಯಲ್ಲಿ ಸಾವಿರ ವರ್ಷಗಳಿಂದ ಉಳಿದುಕೊಂಡು ಬಂದಿರುವ ಪ್ರಾಚೀನವಾದ ಹಾಗೂ ಒಂದು ಸಭ್ಯವಾದ ಧರ್ಮದ ಮೇಲೆ ಈ ಮಸೂದೆ ದಾಳಿ ನಡೆಸಿದೆ ಎಂದು ಘೋಷಿಸಿದ್ದಾರೆ. "ಹಿಂದೂ ಸಮಾಜದ ರಚನೆಯೇ ಅಪಾಯದಲ್ಲಿರುವುದರಿಂದ ಅದರ ವಿರುದ್ಧ ಹೋರಾಡುತ್ತೇನೆ. ಹೋರಾಡುತ್ತಲೇ ಇರುತ್ತೇನೆ" ಎಂದು ಪ್ರಕಟಿಸಿದ್ದಾರೆ. ತನ್ನನ್ನು ಹಿಂದೂ ಎಂದು ಕರೆದುಕೊಳ್ಳಲು ಹೆಮ್ಮೆಪಡುವ ಯಾರೇ ಆಗಲಿ ತಾನು ರಕ್ಷಿಸಬೇಕೆಂದುಕೊಂಡಿರುವ ಧರ್ಮಕ್ಕೆ ಅವಮಾನಮಾಡುತ್ತಿದ್ದೇನೆ ಎಂಬುದನ್ನು ಅರಿಯದೆ ಈ ರೀತಿಯಲ್ಲಿ ಮಾತನಾಡುವುದು, ಯೋಚಿಸುವುದಾದರೂ ಹೇಗೆ ಸಾಧ್ಯ ಎಂಬುದನ್ನು ನನಗೆ ಗ್ರಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಮಾನವನ ಚರಿತ್ರೆಯಲ್ಲಿ ಶತಮಾನಗಳಿಂದ ಉಳಿದುಕೊಂಡು ಬಂದಿರುವ ಪ್ರಪಂಚದ ಯಾವುದೇ ಧರ್ಮವನ್ನೂ, ಸಾಮಾಜಿಕ ಶಾಸನಗಳಿಂದಾಗಲಿ, ಯಾವುದೇ ಭಾಷಣಗಳಿಂದಾಗಲಿ, ಬರವಣಿಗೆಗಳಿಂದಾಗಲಿ ಅಥವಾ ಮಾನವನ ಯಾವುದೇ ಇತರ ಕೃತ್ಯಗಳಿಂದಾಗಲಿ ನಾಶಮಾಡಿಬಿಡಬಹುದೆಂದು ಭಾವಿಸಿದಂತಿದೆ. ಪ್ರಪಂಚದಲ್ಲಿ ಯಾವುದಾದರೂ ಧರ್ಮ ಇಂಥ ಸಣ್ಣ ವಿಷಯಗಳಿಂದ ನಾಶವಾಗುವುದು ಸಾಧ್ಯವಿದ್ದರೆ, ಅಂಥದ್ದನ್ನು ಹಾಳಾಗಲು ಬಿಡುವುದೇ ಒಳ್ಳೆಯದು.

ಮೂರು ದಿನಗಳ ಹಿಂದೆ ಈ ಸದನದಲ್ಲಿ ಶ್ಯಾಮಪ್ರಸಾದ್ ಮುಖರ್ಜಿಯವರು ಹಿಂದೂ ವಿಚಾರಗಳ ವಿವೇಕವನ್ನು ಅದರ ಅಸಾಧರಣ ಸೌಂದರ್ಯವನ್ನು ತುಂಬಾ ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಶತಮಾನಗಳ ವಿದೇಶಿ ಆಕ್ರಮಣ ಹಾಗೂ ಪರಕೀಯ ಪ್ರಾಬಲ್ಯವನ್ನು ತಾಳಿಕೊಳ್ಳಲು ಹಾಗೂ ಅಲೆಅಲೆಯಾಗಿ ಅಪ್ಪಳಿಸಿದ ಕ್ರೂರವಾದ ರಾಜಕೀಯ, ಧಾರ್ಮಿಕ ಹಾಗೂ ಆರ್ಥಿಕ ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯವಾದ ಹಿಂದೂಧರ್ಮದ ನಮ್ಯತೆಯ ಬಗ್ಗೆ – ಬಹುಶಃ ಅವರು ಹೊಂದಾಣಿಕೆ ಎಂಬ ಪದವನ್ನು ಬಳಸಿದ್ದಾರೆ – ಮಾತನಾಡಿದ್ದಾರೆ. ಬದುಕಿನ ಮುರಿಯಲಾಗದ ಏಕತೆ ಹಾಗೂ ಉದಾತ್ತ ಧ್ಯೇಯಗಳನ್ನು ಆಧರಿಸಿ ನಿಂತ

ಪ್ರಾಚೀನ ಧರ್ಮವೊಂದು ಶೋಷಿತರಿಗೆ ನ್ಯಾಯದೊರಕಿಸಿಕೊಡಲು ಉದ್ದೇಶಿಸಿರುವ ಸಾಮಾಜಿಕ ಶಾಸನದಿಂದ ನಾಶವಾಗಿ ಬಿಡಬಹುದು ಎಂಬ ನಿರರ್ಥಕ ಹಾಗೂ ಮೂರ್ಖವಾದಕ್ಕೆ ಖಂಡಿತವಾಗಿಯೂ ಶ್ಯಾಮಪ್ರಸಾದ್ ಮುಖರ್ಜಿಯವರು ಎಂದೆಂದಿಗೂ ಅನ್ವಯವಾಗುವಂಥ ಉತ್ತರ ನೀಡಿದ್ದಾರೆ. ಈ ದೇಶದ ಶೇಕಡ ೭೫ಕ್ಕಿಂತ ಹೆಚ್ಚು ಹಿಂದೂಗಳಿಗೆ ಸುಲಭವಾದ, ಸರಳವಾದ ಹಾಗೂ ಪರಿಣಾಮಕಾರಿಯಾದ ವಿಚ್ಛೇದನ ವ್ಯವಸ್ಥೆಯ ಸೌಲಭ್ಯವಿದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿ. ಹಾಗಾಗಿ, ಈ ವಾದದಲ್ಲಿ ಯಾವುದೇ ಹುರುಳಿದ್ದಂತಿಲ್ಲ. ಈ ವಾದವನ್ನು ಕೇವಲ ಪಡುವಣ ರಾಷ್ಟ್ರಗಳ ಹಾಗೂ ಅವರ ವಿಧಾನವನ್ನು ಜರಿಯುವ ಉದ್ದೇಶದಿಂದಷ್ಟೇ ಮಾಡಲಾಗುತ್ತಿದೆ ಅನ್ನಿಸುತ್ತದೆ. ಈ ರೀತಿ ಜರಿಯುವುದು ಈ ದೇಶದ ರಾಷ್ಟ್ರೀಯ ಕಾಲಕ್ಷೇಪದ ವಿಧಾನವಾಗಿಬಿಡುತ್ತಿದೆ. ಉಳಿದ ರಾಷ್ಟ್ರಗಳ, ಉಳಿದ ಜನಾಂಗಗಳ ನೈತಿಕತೆ ಹಾಗೂ ಶೈಲಿಯ ಬಗ್ಗೆ ಹುಚ್ಚಾಪಟ್ಟೆಯಾದ ಸಾರ್ವತ್ರೀಕರಣ ಮಾಡುವ ೩೨೫ ಪಿ ಎಸ್ ಡಿ ಯ ಪ್ರವೃತ್ತಿಯು ಹೆಚ್ಚುತ್ತಿರುವ ಬಗ್ಗೆ ನನಗೆ ವಿಷಾದವಾಗುತ್ತದೆ ಹಾಗೂ ಯಾರೋ ಕೆಲವು ಮನೋರೋಗಿಗಳು ಮತ್ತು ಲೋಲುಪರು ಮಾಡುವ ಕೆಲಸಕ್ಕೆ ಸರಿಯಾದ ತಿಳಿವಳಿಕೆಯಿಲ್ಲದೆ, ನೀಡಿರುವ ಉದ್ದೀಪನಕಾರಿಯಾದ ಪ್ರಚಾರವನ್ನು ನೋಡಿ ಈ ರೀತಿಯ ಆತುರದ ತೀರ್ಮಾನಗಳಿಗೆ ಬರಲಾಗಿದೆ. ಅಂತಹವರು ಎಲ್ಲಾ ದೇಶಗಳಲ್ಲೂ ಇರುತ್ತಾರೆ. ಖಂಡಿತವಾಗಿ ಅವುಗಳನ್ನು ಭಾರತದ ಎಲ್ಲಾ ದೊಡ್ಡ ಪಟ್ಟಣಗಳಲ್ಲೂ ನೋಡಬಹುದು. ಹಾಗಾಗಿ ಈ ಪ್ರವೃತ್ತಿ ಇನ್ನೂ ಖಂಡನಾರ್ಹ ಎನಿಸಿಕೊಳ್ಳುತ್ತದೆ.

ಮುಖರ್ಜಿಯವರು ಪಡುವಣದ ಮನೋವೈದ್ಯರನ್ನು ಕಾಡುತ್ತಿರುವ ಸಮಸ್ಯೆಯ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಅವರು ಹೇಳಿದ್ದು ಸರಿ. ಏರುತ್ತಿರುವ ವಿಚ್ಛೇದನಕ್ಕೆ ಅನುಗುಣವಾಗಿ ಮನೋರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಡಾ. ಮುಖರ್ಜಿಯವರು ಒಂದು ಕ್ಷಣ ಈ ಸಮಸ್ಯೆಯ ಬಗ್ಗೆ ವಿಚಾರ ಮಾಡಿದರೆ, ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಈ ಮನೋರೋಗಕ್ಕೆ ವಿಚ್ಛೇದನ ಮೂಲ ಕಾರಣವಲ್ಲ ಎಂಬುದು ತಿಳಿಯುತ್ತದೆ. ಹೆಚ್ಚಿನ ಪಡುವಣ ರಾಷ್ಟ್ರಗಳಲ್ಲಿ, ಅದರಲ್ಲೂ ವಿಶೇಷವಾಗಿ ಎರಡನೆಯ ಮಹಾಯುದ್ಧದಿಂದ ಹಾನಿಗೊಳಗಾದ ರಾಷ್ಟ್ರಗಳಲ್ಲಿ ಇಡೀ ಜೀವನದ ಸಮತೋಲನವೇ ಗಂಭೀರವಾಗಿ ಕದಡಿಹೋಗಿದೆ. ತೀವ್ರ ಆರ್ಥಿಕ ಕ್ಷೋಭೆ, ಅಣುಬಾಂಬಿನ ಹಾಗೂ ಮತ್ತೊಂದು ಜಾಗತಿಕ ಯುದ್ಧದ ಗಾಬರಿ ಅವರನ್ನು ಆವರಿಸಿದೆ. ಈ ಎಲ್ಲಾ ಹೊಯ್ದಾಟಗಳು ಅವರಲ್ಲಿ ದೈಹಿಕ ಮಾನಸಿಕ ಅಸ್ಥಿರತೆಯನ್ನು ಉಂಟುಮಾಡಿದೆ. ಇದು ಅನಿವಾರ್ಯವಾಗಿ ಭಾವನಾತ್ಮಕ ಅಸ್ಥಿರತೆಗೆ ಕಾರಣವಾಗುತ್ತದೆ. ಅದು ಅವರ ಕುಟುಂಬದ ಮೇಲೂ ಪರಿಣಾಮ ಉಂಟು ಮಾಡುತ್ತದೆ. ಆದರೆ, ವಾಸ್ತವವೇನೆಂದರೆ, ಯಾವುದೇ ದೇಶದಲ್ಲಿ ಏನೇ ವಿಪರೀತ ಪರಿಸ್ಥಿತಿ ಇರಲಿ, ಬೇರೆ ಬೇರೆ ಜನಾಂಗಗಳಲ್ಲಿ ಮೇಲ್‌ನೋಟಕ್ಕೆ ಕಾಣುವ ನೈತಿಕತೆ ಹಾಗೂ ಜೀವನ ಶೈಲಿಯ ಭಿನ್ನತೆ ಏನೇ ಇರಲಿ, ಎಲ್ಲೆಡೆಯಲ್ಲೂ ಮೂಲಭೂತವಾಗಿ ಮಾನವ ಜನಾಂಗ ಒಂದೇ. ಇಂದಿಗೂ ಕೂಡ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ, ಮಾನವ ಸಮಾಜದ ಕೇಂದ್ರವು ಕುಟುಂಬವೇ ಆಗಿದೆ. ಸಾಮಾನ್ಯವಾಗಿ ವಿವೇಚನೆ ಇರುವ ಗಂಡು – ಹೆಣ್ಣುಗಳಿಬ್ಬರೂ, ಮಾನವ ಸಂಬಂಧದಲ್ಲಿ ಒಂದು ಘನತೆ ಗೌರವಕ್ಕೆ ಬೆಲೆ ಕೊಡುತ್ತಾರೆ. ತೀರಾ ಹಗುರವಾಗಿ ವಿಚ್ಛೇದನ ಮಾಡಿಕೊಳ್ಳುವುದಿಲ್ಲ. ಪರಿಸ್ಥಿತಿ ಸಹಿಸಲಸಾಧ್ಯವಾದಾಗ, ಅದು ಬಿಟ್ಟು ಬೇರೆ ಪರಿಹಾರವೇ ಇಲ್ಲದೇ ಹೋದಾಗ ಮಾತ್ರ ಅವರು ವಿಚ್ಛೇದನದ ಮೊರೆ ಹೋಗುತ್ತಾರೆ. ಇದು ಗಂಡಸರ ವಿಷಯದಲ್ಲಿ ನಿಜವಾದರೆ, ಇದು ಹೆಂಗಸರ ವಿಷಯದಲ್ಲಿ ಇದಕ್ಕಿಂತ ನೂರುಪಟ್ಟು ನಿಜ. ಯುದ್ಧಗಳಿಂದ, ಕ್ರಾಂತಿಯಿಂದ, ಕ್ಷಾಮಗಳಿಂದ ಹಾಳಾಗಿಹೋಗಿರುವ, ನೈತಿಕ ಮೌಲ್ಯಗಳೆಲ್ಲವೂ ತತ್ತರಿಸುತ್ತಿರುವಾಗ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ನೈತಿಕತೆಯ ನಿಯಮಗಳೆಲ್ಲಾ ಡೋಲಾಯಮಾನ ಸ್ಥಿತಿಯಲ್ಲಿರುವಾಗ, ಸದಾ

ಬದಲಾಗುತ್ತಿರುವ ಹಾಗೂ ಅಸ್ಥಿರವಾದ ಈ ಜಗತ್ತಿನಲ್ಲಿ ಇನ್ನೂ ಬದಲಾಗದೆ ಸೃಷ್ಟಿಯಾದಾಗ ಹೇಗಿತ್ತೋ ಹಾಗೆ ಉಳಿದಿರುವ, ಉಳಿಯುವ ಒಂದೇ ಒಂದು ವಸ್ತುವಿದೆ. ಅದು ಮಹಿಳೆಯಲ್ಲಿ ಬದುಕಿನ ಪವಿತ್ರ ಜ್ವಾಲೆಯ ಸೃಷ್ಟಿಕರ್ತೆಯಾಗಿ, ರಕ್ಷಕಿಯಾಗಿ ಅವಳ ಗುರುತರ ಹೊಣೆಯ ಅಂತರ್ಗತವಾಗಿರುವ ಪ್ರಜ್ಞೆ. ಬಹುಶಃ ಈ ಪ್ರಜ್ಞೆ ಜಗತ್ತಿನ ಬೇರೆ ಯಾವ ದೇಶದಲ್ಲೂ ನಮ್ಮ ಪ್ರಾಚೀನ ನಾಡಿಯಲ್ಲಿ ವಿಕಾಸ ಹೊಂದಿರುವಂತೆ, ಇಷ್ಟೊಂದು ಪರಿಪಕ್ವವಾದ ಸೌಂದರ್ಯದಿಂದ ಅರಳಿರುವುದನ್ನು ಕಾಣಲಾರೆವು. ನಮ್ಮ ದೇಶದ ಚಾರಿತ್ರಿಕ ದಾಖಲೆಗಳಲ್ಲಿ ಮಹಿಳೆಯರ ಉನ್ನತ ಧ್ಯೇಯಗಳಿಂದ ಪ್ರೇರಿತವಾದ ಸಾಹಿತ್ಯ ಹಾಗೂ ಐತಿಹ್ಯಗಳು ಹೇರಳವಾಗಿ ದೊರಕುತ್ತವೆ. ಹಾಗಾಗಿ ಸ್ವಾತಂತ್ರ್ಯವನ್ನು ಘನತೆಯಿಂದ ಉಳಿಸಿಕೊಳ್ಳುವ ಭಾರತೀಯ ಮಹಿಳೆಯ ಸಾಮರ್ಥ್ಯದ ಬಗ್ಗೆ ಹಗುರವಾಗಿ ಹುಡುಗಾಟದಿಂದ ಮಾತನಾಡುವುದು ಯೋಗ್ಯವಲ್ಲ. ಆ ರೀತಿ ಮಾಡುವುದು, ನಮ್ಮ ಜನಾಂಗದ ದೊಡ್ಡ ಪ್ರತಿಭೆಯ ಬಗ್ಗೆ ನಮಗೆ ಅರಿವಿಲ್ಲ ಎಂಬುದನ್ನು ಒಪ್ಪಿಕೊಂಡಂತೆ.

ಮಸೂದೆಯನ್ನು ಕೇವಲ ವಿದೇಶದವರು ನಮ್ಮನ್ನು ಗಮನಿಸುತ್ತಿದ್ದಾರೆ ಎಂಬ ಕಾರಣಕ್ಕೆ ಅಂಗೀಕರಿಸಬಾರದು ಎಂಬ ಭಾವನೆಯನ್ನು ಮಸೂದೆ ವಿರೋಧಿಸಿದ ಕೆಲವು ಸದಸ್ಯರು ವ್ಯಕ್ತಪಡಿಸುತ್ತಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಾವು ಬೇರೆ ರಾಷ್ಟ್ರಗಳ ಒಳ್ಳೆಯ ಭಾವನೆಗೆ ಎಷ್ಟೇ ಬೆಲೆಕೊಟ್ಟರೂ, ಬೇರೊಬ್ಬರ ಮಟ್ಟಕ್ಕೆ ಸರಿಹೊಂದುವ ರೀತಿಯಲ್ಲಿ ನಾವು ನಮ್ಮ ಬದುಕನ್ನು ಹಾಗೂ ಕಾನೂನನ್ನು ರೂಪಿಸಿಕೊಳ್ಳಲಾಗುವುದಿಲ್ಲ. ಮಸೂದೆಯನ್ನು ಅಂಗೀಕರಿಸುವುದಕ್ಕೆ ಅದಕ್ಕಿಂತ ಮುಖ್ಯವಾದ ತುರ್ತಾದ ಕಾರಣಗಳಿವೆ. ಅದು ನಮ್ಮ ರಾಷ್ಟ್ರೀಯ ಸುಭದ್ರತೆಗೆ ಸಂಬಂಧಿಸಿದ್ದು. ನಮ್ಮ ಜನರ ಆತ್ಮಗೌರವ ಆಪತ್ತಿನಲ್ಲಿದೆ.

ಈ ಸದನದ ಹಲವಾರು ಗಣ್ಯ ಸದಸ್ಯರಿಗೆ ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸುವ ಉನ್ನತ ಅವಕಾಶ ದೊರಕಿದೆ. ಅದರಲ್ಲಿ ಅಡಕವಾಗಿರುವ ವಾಗ್ದಾನಗಳನ್ನು ಕಾರ್ಯರೂಪಕ್ಕೆ ತರುವ ದೊಡ್ಡ ಹೊಣೆಗಾರಿಕೆ ಅವರ ಮೇಲಿದೆ. ಹಾಗಾಗಿ ಈ ಮಸೂದೆಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಎಂದರೆ ಸರಳವಾಗಿ ನಮ್ಮ ಸಂವಿಧಾನದ ಮೂಲಭೂತ ತತ್ವಗಳನ್ನು ಒಪ್ಪುವುದು ಅಥವಾ ವಿರೋಧಿಸುವುದು ಎಂದಾಗುತ್ತದೆ.

**ಶ್ರೀ ಬೃಜೇಶ್ವರ್ ಪ್ರಸಾದ್** (ಬಿಹಾರ್) : ನಾನು ಹಿಂದೂ ಮಸೂದೆಯ ಕಲಮು–೨ಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಲು ನಿಂತಿದ್ದೇನೆ. ಮಸೂದೆಯ ಈ ಕಲಮನ್ನು ಅಂಗೀಕರಿಸಿಬಿಟ್ಟರೆ ಹಿಂದೂ ಸಮಾಜದಲ್ಲಿ ಒಂದು ದೊಡ್ಡ ದೋಷವನ್ನು ನಿರಂತರವಾಗಿ ಮುಂದುವರಿಸಿದಂತೆ ಆಗಿಬಿಡುತ್ತದೆ. ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಅನೈತಿಕ ಭೇದ ಹಾಗೆಯೇ ಉಳಿದುಬಿಡುತ್ತದೆ. ಆ ಕಲಮು ಔರಸ ಹಾಗೂ ಅನೌರಸ ಮಕ್ಕಳಿಬ್ಬರಿಗೂ ಅನ್ಯಾಯವಾಗುತ್ತದೆ. ನಿಜ, ನಾನು ನಿರೀಕ್ಷಿಸುವಷ್ಟು ದೂರಕ್ಕೆ ಸರ್ಕಾರ ಹೋಗಲಾಗುವುದಿಲ್ಲ. ಆದರೂ, ಸರ್ಕಾರವೂ ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಭೇದವನ್ನು ಅಳಿಸಿಹಾಕಬೇಕು. ಅನೌರಸ ಎಂಬ ಕಳಂಕ ಮಕ್ಕಳ ವ್ಯಕ್ತಿತ್ವವನ್ನು ಕುಂಠಿತಗೊಳಿಸುತ್ತದೆ. ಈ ದೇಶದ ಲಕ್ಷಾಂತರ ಜನ, ತಮ್ಮ ಯಾವುದೇ ತಪ್ಪಿಲ್ಲದಿದ್ದಾಗ್ಯೂ ಜೀವನವಿಡೀ ಮಾನಸಿಕ ಹಾಗೂ ಸಾಮಾಜಿಕ ನ್ಯೂನತೆಯಿಂದ ನರಳುವಂತೆ ಆಗುವುದು ಅಮಾನುಷವಾದದ್ದು ಹಾಗೂ ತೀರಾ ಕ್ರೂರವಾದುದ್ದು. ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಭೇದವನ್ನು ಅಳಿಸಿಹಾಕಿಬಿಟ್ಟರೆ ಮದುವೆಯ ವ್ಯವಸ್ಥೆಯೇ ದುರ್ಬಲವಾಗಿ

---

(೧೯೫೧ನೆ ಸೆಪ್ಟಂಬರ್ ೧೯೫೧ ಸದನದ ಚರ್ಚೆ, ಸಂಪುಟ ೧೫ ಭಾಗವು ಪುಟಗಳು ೨೯೩೩–೩೫)

ಬಿಡುತ್ತದೆ ಎಂದು ವಾದಿಸಬಹುದು. ಯಾವುದಾದರೊಂದು ರೀತಿಯಲ್ಲಿ ವಿವಾಹವ್ಯವಸ್ಥೆ ಶಿಥಿಲಗೊಂಡರೆ ಸ್ವರ್ಗವೇನೂ ತಲೆಯ ಮೇಲೆ ಬಿದ್ದುಬಿಡುವುದಿಲ್ಲ.

**ಪಂಡಿತ ಮೈತ್ರ** (ಪಶ್ಚಿಮ ಬಂಗಾಳ) : ಮಾನ್ಯ ಮಂತ್ರಿಗಳಿಗೆ ಮದುವೆ ರದ್ದಾಗಿಬಿಡಬೇಕೆಂಬ ಇಚ್ಛೆಯೆ?

**ಒಬ್ಬ ಮಾನ್ಯ ಸದಸ್ಯ :** ಇಲ್ಲ ವಾರಾಂತ್ಯ ಮದುವೆ.

**ಶ್ರೀ ಬೃಜೇಶ್ವರ ಪ್ರಸಾದ್ :** ಸಮಾಜಕ್ಕೆ ವಿವಾಹದಿಂದ ತುಂಬಾ ಒಳ್ಳೆಯದಾಗಿದೆ. ಅನೌರಸತೆಯಿಂದ ಅಷ್ಟೇ ಪ್ರಮಾಣದ, ತೀರಾ ಗಂಭೀರವಾದ ಹಾನಿಯೂ ಆಗಿದೆ. ಸರ್ಕಾರಕ್ಕೆ ಕಳಂಕತರುವ ಸಾಮಾಜಿಕ ವ್ಯವಸ್ಥೆಯ ಬುನಾದಿಯನ್ನು ಬಲಪಡಿಸುವುದು ಸಾಧ್ಯವೂ ಇಲ್ಲ ಮತ್ತು ಅದು ಅಪೇಕ್ಷಣೀಯವೂ ಅಲ್ಲ. ಮದುವೆಯೇ ಇಲ್ಲದ ಒಂದು ಸಮಾಜವನ್ನು ನಾನು ಗ್ರಹಿಸಿಕೊಳ್ಳಬಲ್ಲೆ. ಪ್ಲೇಟೊ ಕಾಲದಲ್ಲಿ ಮಾನ್ಯವಾಗಿದ್ದ ಗಣಪತಿ ಹಾಗೂ ಮಕ್ಕಳ ಪ್ಲೇಟೋನಿಕ್ ದೃಷ್ಟಿ ಇಂದಿಗೂ ಸಾಧ್ಯ. ನಾವು ಜಾತ್ಯತೀತತೆ ಬಗ್ಗೆ ಪ್ರಾಮಾಣಿಕವಾಗಿದ್ದರೆ, ನಮಗೆ ಜಾತ್ಯತೀತತೆಯಲ್ಲಿ ನಂಬಿಕೆಯಿದ್ದರೆ, ನಾವು ಧರ್ಮದ ಹಿಡಿತದಿಂದ ಆಸ್ತಿ ಹಾಗೂ ಮದುವೆಯ ವ್ಯವಸ್ಥೆಯನ್ನು ಮುಕ್ತಗೊಳಿಸಬೇಕು. ನಿಜ. ಜಾತ್ಯತೀತ ಆದರ್ಶಗಳು ಜಗತ್ತಿನ ಯಾವುದೇ ಭಾಗದಲ್ಲೂ ಕಾರ್ಯರೂಪಕ್ಕೆ ಬಂದಿಲ್ಲ.

ಅಮೇರಿಕಾ ಹಾಗೂ ಯುರೋಪಿನಲ್ಲಿ ವಿವಾಹ ಹಾಗೂ ಆಸ್ತಿಯ ಸಂಸ್ಥೆಗಳನ್ನು ನಿರ್ದೇಶಿಸುತ್ತಿರುವುದು ಕ್ರೈಸ್ತಧರ್ಮ, ಜಾತ್ಯತೀತತೆಯಲ್ಲ. ನನ್ನ ಅಭಿಪ್ರಾಯದಲ್ಲಿ ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಭೇದವನ್ನು ಅಳಿಸಿಬಿಟ್ಟರೆ ಮದುವೆಯ ವ್ಯವಸ್ಥೆಯೇನೂ ಶಿಥಿಲಗೊಳ್ಳುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವಿವಾಹದ ಅಧ್ಯಾಯಕ್ಕೆ ಕಾದಿರಿಸಿಕೊಳ್ಳಬಹುದು.

**ಶ್ರೀ ಬೃಜೇಶ್ವರ ಪ್ರಸಾದ್ :** ನಾನು ವಿವಾಹದ ಅಧ್ಯಾಯದ ಬಗ್ಗೆ ನನ್ನ ನಿಲುವನ್ನು ವ್ಯಕ್ತಪಡಿಸುತ್ತಿಲ್ಲ. ನಾನು, ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಭೇದವನ್ನು ಅಳಿಸಿಹಾಕಬೇಕೆನ್ನುವ ನನ್ನ ಸಲಹೆಗೆ ಬರಬಹುದಾದ ಆಕ್ಷೇಪಗಳ ಬಗ್ಗೆ ಊಹಿಸಿಕೊಳ್ಳುತ್ತಿದ್ದೆ ಅಷ್ಟೇ.

**ಶ್ರೀ ಟಿ. ಹುಸೇನ್** (ಬಿಹಾರ್): ಕೇವಲ ಮಾಹಿತಿಗಾಗಿ ಕೇಳುತ್ತಿದ್ದೇನೆ. ನನ್ನ ಮಾನ್ಯ ಗೆಳೆಯರಿಗೆ ಕಾನೂನುಬದ್ಧ ವಿವಾಹ ಬೇಕೊ ಬೇಡವೊ?

**ಶ್ರೀ ಬೃಜೇಶ್ವರ ಪ್ರಸಾದ್ :** ಮದುವೆಯ ಕಲಮಿನ ಬಗ್ಗೆ ಮಾತನಾಡಲು ನನಗೆ ಅವಕಾಶ ಸಿಕ್ಕರೆ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ತಯಾರಿದ್ದೇನೆ. ಔರಸ ಹಾಗೂ ಅನೌರಸ ಮಕ್ಕಳ ನಡುವಿನ ಭೇದವನ್ನು ಅಳಿಸಿಬಿಟ್ಟರೆ ಮದುವೆಯ ವ್ಯತ್ಯಾಸವೇನೂ ಶಿಥಿಲಗೊಳ್ಳುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಯಾಕೆಂದರೆ ಮದುವೆಗೆ ಆಧಾರವೇನು? ಮದುವೆಯ ವ್ಯವಸ್ಥೆ ಯಾಕೆ ಉಳಿದಿದೆ? ಅದಕ್ಕೆ ಕಾರಣ ಮುಪ್ಪು, ಹೃದಯ ಹಾಗೂ ಮನಸ್ಸಿನ ಮಾನಸಿಕ ದುರ್ಬಲತೆಯೇ ವಿವಾಹದ ವ್ಯವಸ್ಥೆ ಉಳಿದುಕೊಂಡಿರುವುದಕ್ಕೆ ಮುಖ್ಯ ಕಾರಣ. ಲೈಂಗಿಕ ತೃಷೆಯಿಂದಾಗಲಿ, ಮಕ್ಕಳನ್ನು ಪಡೆಯುವ ಉದ್ದೇಶದಿಂದಾಗಲಿ, ಇಂದು ಸಮಾಜದಲ್ಲಿ ವಿವಾಹ ವ್ಯವಸ್ಥೆ ಉಳಿದಿಲ್ಲ. ಈ ಎರಡು ಉದ್ದೇಶಗಳನ್ನೂ ಮದುವೆಯ ಸಂಬಂಧದ ಆಚೆಯೂ ನೆರವೇರಿಸಿಕೊಳ್ಳಬಹುದು. ನಾನು ಅನೌರಸತ್ವಕ್ಕೆ ವಿರೋಧಿ. ಯಾಕೆಂದರೆ ಅದು ಗರ್ಭಪಾತ, ದಾರಿದ್ರ್ಯ, ಸೂಳೆಗಾರಿಕೆ, ಅಪರಾಧ, ಮತ್ತಷ್ಟು ಕಾನೂನುಬಾಹಿರತೆ, ಸತ್ತು ಹುಟ್ಟುವ ಮಕ್ಕಳು, ಶಿಶುಹತ್ಯೆ, ಲೈಂಗಿಕ ಖಾಯಿಲೆಗಳು, ಮಕ್ಕಳ ಹಾಗೂ ಹೆಂಗಸರ ಮೇಲಿನ ಕ್ರೌರ್ಯಕ್ಕೆ ಕಾರಣವಾಗುತ್ತದೆ.

ನಾನು ನಮ್ಮ ಸಮಾಜದಲ್ಲಿ ಆಗಿರುವ ಗುರುತರವಾದ ಅಪರಾಧವನ್ನು ಮುಂದುವರೆಸಿಕೊಂಡು ಹೋಗುವ ಕಾನೂನಿಗೆ ನನ್ನ ನೈತಿಕ ಬೆಂಬಲವನ್ನು ನೀಡಲು ತಯಾರಿಲ್ಲ.

***ಶ್ರೀ ಬಿ.ಎಸ್. ದಾಸ್**(ಒರಿಸ್ಸಾ) : ಮೊದಲಿಗೆ ನಾನು ಅಂಬೇಡ್ಕರ್ ಅವರನ್ನು ನನ್ನ ಪರವಾಗಿ ಹಾಗೂ ಸದನದ ಸುಧಾರಣವಾದಿ ಸದಸ್ಯರ ಪರವಾಗಿ ಹಾಗೂ ಸದನದ ಹೊರಗಿನ ಸುಧಾರಣವಾದಿಗಳ ಪರವಾಗಿ, ಹಿಂದೂ ಕಾಯಿದೆಯನ್ನು ಕ್ರೋಡೀಕರಿಸಲು ಅವರು ತೆಗೆದುಕೊಂಡ ದಿಟ್ಟ ಹೆಜ್ಜೆಗಾಗಿ ಅಭಿನಂದಿಸುತ್ತೇನೆ. ಅವರು ಅಸಾಧಾರಣ ತಾಳ್ಮೆಯನ್ನು ತೋರಿದ್ದಾರೆ. ಅವರನ್ನು ನಮ್ಮ ಕಾಲದ ಮನು ಎಂದು ವರ್ಣಿಸಲಾಗಿದೆ. ಆದರೆ ಅವರು ಬುದ್ಧನ ನೀತಿಬೋಧೆಯನ್ನು ಅನುಸರಿಸಿದ್ದಾರೆ ಮತ್ತು ಸದ್ಯಕ್ಕೆ ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಅಧ್ಯಾಯಗಳನ್ನು ಮಾತ್ರ ಅಂಗೀಕರಿಸುವಲ್ಲಿ ಹೆಚ್ಚಿನ ತಾಳ್ಮೆಯನ್ನು ತೋರಿದ್ದಾರೆ.

ಸದನದಲ್ಲಿ ಮಹತ್ತರ ಭಾಷಣಗಳನ್ನು ಕೇಳಿದ್ದೇವೆ. ಮಸೂದೆಯ ಪರವಾಗಿ ನನ್ನ ಮಾನ್ಯ ಗೆಳೆಯ ಶ್ರೀ ಗಾಡ್ಗೀಳ್ ಸೊಗಸಾದ ಭಾಷಣವನ್ನು ಮಾಡಿದ್ದಾರೆ. ಪಂಡಿತ್ ಕುಂಜ್ರು ಕೂಡ ಒಳ್ಳೆಯ ಭಾಷಣವನ್ನು ಮಾಡಿದರು. ಮಸೂದೆಗೆ ವಿರುದ್ಧವಾಗಿ ಮಾತಾಡಿದವರಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ, ಸರ್ದಾರ್ ಮಾನ್ ಮತ್ತು ನನ್ನ ತರುಣ ಮಿತ್ರ ಪಂಡಿತ ಗೋವಿಂದ ಮಾಳವೀಯ ಅವರು ಗಮನಾರ್ಹರು.

ಡಾ. ಮುಖರ್ಜಿಯವರು ಬಹುಶಃ ಬುದ್ಧ ಮತ್ತು ಗಾಂಧಿಯ ನಡುವಿನ ಕಾಲದಲ್ಲಿ ಸುಧಾರಣೆಯನ್ನು ಮಾಡಿದ ಬಂಗಾಳದ ರಾಜರಾಮ್ ಮೋಹನ್‌ರಾಯ್, ಕೇಶವಚಂದ್ರ ಸೇನ್ ಮತ್ತು ರಾಮಕೃಷ್ಣ ಪರಮಹಂಸ ಮುಂತಾದವರನ್ನು ಮರೆತಿದ್ದಾರೆ ಅನಿಸುತ್ತದೆ. ಇಂತಹ ಸುಧಾರಣೆಗಳನ್ನು ಕೊನೆಗೊಳಿಸುವಂತೆ ಹೇಳುವುದು ಬಂಗಾಳಿ ನಾಯಕನೊಬ್ಬನಿಗೆ ಶೋಭೆ ತರುವುದಿಲ್ಲ. ಅದು ಸರಿಯಾದ ಮಾರ್ಗವಲ್ಲ. ಹಿಂದೂಧರ್ಮ ಒಂದು ಪ್ರಗತಿಪರವಾದ ಧರ್ಮ. ಸ್ಮೃತಿ, ಮಿಮಾಂಸೆಗಳೆಲ್ಲಾ ಹಿಂದೂ ಕಾನೂನಿನ ಕ್ರೋಡೀಕರಣವೇ. ನನ್ನ ಗೆಳತಿ ಶ್ರೀಮತಿ ಪದ್ಮಜಾ ನಾಯ್ಡು ಅವರು ತಮ್ಮದೇ ಆದ ಕಾವ್ಯಾತ್ಮಕ ಶೈಲಿಯಲ್ಲಿ ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತಾ ಹೇಳಿದಂತೆ, ನಮ್ಮ ಸಂವಿಧಾನ ಭಾರತದ ಹೆಂಗಸರಿಗೆ ಕೆಲವು ಹಕ್ಕನ್ನು ನೀಡಿದೆ ಮತ್ತು ಅಂಬೇಡ್ಕರ್ ಅವರು ಸಂವಿಧಾನದ ಉದ್ದೇಶಗಳನ್ನು ಜಾರಿಗೊಳಿಸುತ್ತಿದ್ದಾರೆ ಅಷ್ಟೇ. ಬೇರೇನೂ ಮಾಡುತ್ತಿಲ್ಲ.

ನನ್ನ ಗೆಳೆಯರಾದ ಸರ್ದಾರ್ ಮಾನ್ ಮಹಾನ್ ದೇಶವೊಂದರ ಪ್ರಜೆ. ಭಾರತದ ಸ್ವಾತಂತ್ರ್ಯವನ್ನು ಕಾದಾಡಿ ಉಳಿಸಿ, ರಕ್ಷಿಸುತ್ತಿರುವ ಪ್ರಾಂತ್ಯಕ್ಕೆ ಸೇರಿದವರು. ಆದರೆ ಸಿಖ್ಖರು ಹಿಂದೂಗಳಲ್ಲ ಎನ್ನುವುದರ ಮೂಲಕ ಅವರು ಮಸೂದೆಯನ್ನು ವಿರೋಧಿಸಿದರು. ನನಗೆ ಹಲವಾರು ಸಿಖ್ ನಾಯಕರ ಜೊತೆ ಇರುವ ಸೌಭಾಗ್ಯ ದೊರೆತಿದೆ. ಹಿಂದೂ ಕಾನೂನು ಸಂಹಿತೆಯ ಬಗೆಗಿನ ಭಿನ್ನಾಭಿಪ್ರಾಯದ ಬಗ್ಗೆ ಮತ್ತೆ ಮತ್ತೆ ಅದನ್ನೇ ಹೇಳುವುದು ಬೇಡ. ಆದರೆ ನೀವು ಮುಂದೆ ಸಿಖ್ಖರ ಅಭಿಪ್ರಾಯವನ್ನು ಕೇಳಿದರೆ ಅವರು ಎಂದೂ ಬದಲಾಗದೇ ನಿಂತ ನೀರಾಗಿ ಉಳಿಯಲು ಬಯಸುವವರಲ್ಲ. ಹಾಗೂ ಸಿಖ್ಖ ಹೆಂಗಸರು ಪ್ರಗತಿಯನ್ನು ಬಯಸುತ್ತಾರೆ ಎಂಬುದು ತಿಳಿಯುತ್ತದೆ.

ಪಂಡಿತ ಗೋವಿಂದ ಮಾಲವೀಯರ ಬಗ್ಗೆ ನನಗೆ ಅಪಾರವಾದ ವಾತ್ಸಲ್ಯವಿದೆ. ಯಾಕೆಂದರೆ ನಾನು ಅವರ ತಂದೆಯವರಾದ ಪೂಜ್ಯ ಹಾಗೂ ಗೌರವಾನ್ವಿತ ಪಂಡಿತ ಮದನಮೋಹನ ಮಾಲವೀಯ ಅವರ ನೆಚ್ಚಿನ ಶಿಷ್ಯನಾಗಿದ್ದೆ. ನನ್ನ ನೆನಪು ೩೦ರ ದಶಕಕ್ಕೆ ಹೋಗುತ್ತದೆ. ಆಗ ಬಾಲ್ಯವಿವಾಹ ನಿಷೇಧ ಕಾಯಿದೆಯನ್ನು

* ಸಂಪುಟ ೧೫ ಭಾಗ ೧೧ ೨೦ ನೆಯ ಸೆಪ್ಟಂಬರ್ ೧೯೫೧ ಪುಟ ೨೯೩೫–೩೭

ಸದನದಲ್ಲಿ ಅಂಗೀಕರಿಸಲಾಯಿತು. ಮಹಾಸಂತರಾದ ಪಂಡಿತ ಮದನಮೋಹನ ಮಾಲವೀಯ ಅವರು ಕಾಲ ಬದಲಾಗುತ್ತಿದ್ದುದ್ದನ್ನು ಅರ್ಥಮಾಡಿಕೊಂಡಿದ್ದರು. ಶಾರದ ಕಾಯಿದೆ ಎಂದು ಕರೆಯಲಾಗುತ್ತಿದ್ದ ಬಾಲ್ಯವಿವಾಹ ನಿಷೇಧ ಕಾಯಿದೆಯನ್ನು ಸದನದಲ್ಲಿ ಅಂಗೀಕರಿಸಿದ್ದು ಅವರಿಗೆ ಬೇಸರವಾಗಿದ್ದರೂ ಅದನ್ನು ಅವರು ಅಷ್ಟೊಂದು ಕಟುವಾದ ಮಾತುಗಳಲ್ಲಿ ವಿರೋಧಿಸಲಿಲ್ಲ. ನನ್ನ ತರುಣ ಗೆಳೆಯ ಪಂಡಿತ ಗೋವಿಂದ ಮಾಲವೀಯರಂತೆ ಗುಡುಗಲಿಲ್ಲ.

**ಪಂಡಿತ ಮಾಲವೀಯ:** ಯಾಕೆಂದರೆ ಆಗ ಇದನ್ನು ಮಂಡಿಸಿರಲಿಲ್ಲ.

**ಶ್ರೀ ಬಿ. ದಾಸ್:** ನಿಜ, ಆದರೆ ನಾನು ನನ್ನ ಗುರುವನ್ನು ಮತ್ತು ಅವರ ತಂದೆಯನ್ನು ಉಲ್ಲೇಖಿಸುತ್ತಿರುವುದಕ್ಕೆ ಕಾರಣ, ಅವರು ಪ್ರಗತಿಯನ್ನು, ಮುನ್ನಡೆಯನ್ನು ಬಯಸುತ್ತಿದ್ದರು. ಇದಿಷ್ಟೇ ನನ್ನ ಅರಿಕೆ.

**ಶ್ರೀ ಎ.ಸಿ. ಶುಕ್ಲ** (ಮಧ್ಯಪ್ರದೇಶ): ನಿಶ್ಶಕ್ತರಿಗೆ ನೀವು ಉದಾತ್ತವಾದ ಧ್ಯೇಯಗಳನ್ನು ಹೇಳಲು ಆಗುವುದಿಲ್ಲವೇ?

**ಶ್ರೀ ಬಿ. ದಾಸ್ :** ಭಾರತದಲ್ಲಿ ಸಂಪ್ರದಾಯವಾದಿಗಳು ಹಾಗೂ ಆಚಾರವಂತರು ಸಂವಿಧಾನವನ್ನು ಅಂಗೀಕರಿಸುವಲ್ಲಿ ಸಹಕರಿಸಿದ್ದಾರೆ. ನಾವು ಹಲವಾರು ವರ್ಷ ನಡೆಸಿದ ಸ್ವಾತಂತ್ರ್ಯ ಹೋರಾಟದಲ್ಲಿ ಕೆಲವೊಮ್ಮೆ ಕ್ಷೀಣವಾಗಿಯಾದರೂ ಸಹಾಯ ಮಾಡಿದ್ದಾರೆ. ೧೯೪೭ರಿಂದ ನಾವು ಮುನ್ನಡೆಯುತ್ತಿದ್ದೇವೆ. ಈಗ **"ನಡೆ ಮುಂದೆ"** ಎಂಬುದು ನಮ್ಮ ಧ್ಯೇಯವಾದರೆ, ಭಾರತದ ಹಾಗೂ ನಮ್ಮ ಸಮುದಾಯದ ಒಂದು ಗುಂಪಿನ – ಅವರು ಹಿಂದೂಗಳಾಗಿರಲಿ, ಮುಸ್ಲಿಮರಾಗಿರಲಿ ಅಥವಾ ಯಾರೇ ಆಗಿರಲಿ– ಬೆಳವಣಿಗೆಯನ್ನು ಹಾಗೂ ಪ್ರಗತಿಯನ್ನು ಯಾರೂ ತಡೆಯಲಾರರು. ಹಾಗಾಗಿ ನಮ್ಮೊಂದಿಗೆ ತೀವ್ರವಾದ ಭಿನ್ನಾಭಿಪ್ರಾಯವನ್ನು ತೋರಿಸುವ ಬದಲು ಭಾರತ ಒಂದು ದೇಶವಾಗಿ ಪ್ರಗತಿ ಹೊಂದಬೇಕು ಎಂಬ ನಿಲುವನ್ನು ಒಪ್ಪಿಕೊಳ್ಳುವುದೇ ಸೂಕ್ತ. ನಾವೇ ಏಷ್ಯಾದಲ್ಲಿ ಮೊದಲ ರಾಷ್ಟ್ರವಾದರೆ, ನಾವೇ ಜಗತ್ತಿನಲ್ಲಿ ಮೊದಲ ದೇಶವಾದರೆ ಅವರು ಪ್ರಗತಿಗೆ ಹಾಗೂ ಮುನ್ನಡೆಗೆ ಸಹಾಯ ಮಾಡುತ್ತಾರೆಯೇ ಹೊರತು ಅಡ್ಡಿಮಾಡುವುದಿಲ್ಲ.

ಹಿಂದೂ ಮಸೂದೆ ಹಾಗೂ ವಿವಾಹ ಕಾಯಿದೆಯ ಸುಧಾರಣೆಯು ಹೊಸದೇನಲ್ಲ ಎಂಬುದನ್ನು ಸದನದ ಸಂಪ್ರದಾಯವಾದಿ ಮಿತ್ರರ ಗಮನಕ್ಕೆ ತರುವುದರ ಮೂಲಕ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾವು ಇತ್ತೀಚೆಗಷ್ಟೆ ಸರ್ ಹರಿಸಿಂಗ್ ಗೌರ್ ಅಥವಾ ಎಮ್ ಆರ್. ಜಯಕರ್ ಅವರು ನಮ್ಮ ಪ್ರಾಚೀನ ಸಂಪ್ರದಾಯ ಹಾಗೂ ಹಿಂದೂ ಕಾನೂನಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಬದಲಾವಣೆಯನ್ನು ತರಲು ಮಾಡಿದ ಪ್ರಯತ್ನವನ್ನು ಮರೆತಿದ್ದೇವೆ. ಹಾಗಾಗಿ ಅಂಬೇಡ್ಕರ್ ನಮ್ಮ ಸಂಪ್ರದಾಯವಾದಿ ಗೆಳೆಯರ ಮೇಲೆ ಒಂದು ಬಾಂಬನ್ನು ಸಿಡಿಸಿದರು ಎಂದಾಗಲಿ, ಇದು ಅನಿರೀಕ್ಷಿತವಾದದ್ದು ಎಂದಾಗಲಿ ಹೇಳುವುದು ಅರ್ಥಹೀನ. ನಾವು ಮುನ್ನಡೆಯುತ್ತಿದ್ದೇವೆ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಒಂದು ಪ್ರಯತ್ನ ಮಾಡಿದ್ದಾರೆ. ಅವರು ಇಡೀ ಸಮಸ್ಯೆಗೆ ಮುಖಾಮುಖಿಯಾಗಿ ನಿಂತಿದ್ದಾರೆ. ಅವ್ಯವಸ್ಥಿತವಾದ ತುಂಡುತುಂಡಾದ ಕಾನೂನನ್ನು ರೂಪಿಸುವುದು ಅವರ ಉದ್ದೇಶವಲ್ಲ. ಆದರೂ ಸದನದ ನಮ್ಮ ಸಂಪ್ರದಾಯವಾದಿ ಗೆಳೆಯರನ್ನು ತೃಪ್ತಿಪಡಿಸುವುದಕ್ಕಾಗಿ ಸದನವು ಹಿಂದೂ ಮಸೂದೆಯ ಕೇವಲ ಒಂದೇ ಒಂದು ಭಾಗವನ್ನು ಅಂಗೀಕರಿಸುವುದಕ್ಕೆ ಹೆಚ್ಚೂಕಮ್ಮಿ ಒಪ್ಪಿಕೊಂಡಿದೆ. ನಾನು ಮಸೂದೆಯನ್ನು ಬೆಂಬಲಿಸುತ್ತೇನೆ.

*__ಡಾ. ಅಂಬೇಡ್ಕರ್ :__ ಬಿಲ್‌ಗೆ ಸಂಬಂಧಿಸಿದ ಒಂದೇ ಒಂದು ಕಲಮನ್ನು ಕುರಿತು ಏಳು ದಿನಗಳ

* ಸಂಪುಟ ೧೫ ೨೦ನೆಯ ಸೆಪ್ಟಂಬರ್ ೧೯೫೧ ಪುಟ ೨೯೩೭–೪೯

ಕಾಲ ಚರ್ಚಿಸಿರುವುದು ನಮ್ಮ ಸಂಪತ್ತು ಮತ್ತು ಶಾಸನಗಳ ಇತಿಹಾಸದಲ್ಲಿ ಒಂದು ಅಸಾಮಾನ್ಯವಾದ ಘಟನೆ ಎಂದು ತಿಳಿದಿದ್ದೇನೆ. ಇಂಥ ಸಂದರ್ಭ ಹಿಂದೆಂದೂ ಬಂದಿರಲಿಲ್ಲ. ಅನೇಕ ಸದಸ್ಯರು ಈ ಮಸೂದೆಯು ತಮ್ಮ ಪ್ರಜ್ಞೆಯನ್ನು ತಾಗಿ ಅಲುಗಿಸುತ್ತದೆ ಎಂದು ಹೇಳಿದ್ದರಿಂದ ಮಾನ್ಯ ಪ್ರಧಾನಿಯವರು, ಸೂಕ್ತವಾದ ಧೋರಣೆಯನ್ನು ತಾಳಿ, ಎಲ್ಲ ಸದಸ್ಯರಿಗೂ ಹಾಗೂ ಮಾನ್ಯ ಸಭಾಧ್ಯಕ್ಷರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ ಒದಗಿಸಿಕೊಟ್ಟಿದ್ದಾರೆ. ಸದಸ್ಯರು ತಮಗೆ ಇಷ್ಟಬಂದಷ್ಟು ಕಾಲವನ್ನು ಬಳಸಿಕೊಂಡು ವಿಷಯದ ಬಗ್ಗೆ ತಮ್ಮ ಮನಸ್ಸಿನ ಭಾವನೆಗಳನ್ನು ತಿಳಿಸಲು ಅನುವು ಮಾಡಿಕೊಟ್ಟಿದ್ದಾರೆ. (ಒಬ್ಬ ಮಾನ್ಯ ಸದಸ್ಯರು : ತಪ್ಪು) ಈ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ಏಕೆಂದರೆ, ಪ್ರತಿಯೊಬ್ಬ ಸದಸ್ಯರೂ, ಅವರು ವಿಷಯದ ಪರವಾಗಿಯೆ ಮಾತನಾಡಲಿ, ವಿರುದ್ಧವಾಗಿಯೆ ಮಾತನಾಡಲಿ, ಸರ್ಕಾರ ತಮ್ಮ ಅಭಿಪ್ರಾಯದ ಕೊರಳು ಹಿಚುಕಿತು ಎಂದು ಭಾವಿಸುವುದಕ್ಕಿಂತ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪೂರ್ಣವಾದ ಅವಕಾಶವನ್ನು ಪಡೆಯುವುದು ಒಳ್ಳೆಯದು. ಈಗಾಗಲೇ ಏಳು ಅಮೂಲ್ಯ ದಿನಗಳನ್ನು ಕಳೆದಿದ್ದರೂ, ಈ ಕಲಮು ಮೇಲೆ ಮತ ಚಲಾಯಿಸುವ ಸಂದರ್ಭ ಬಂದಾಗ ಯಾವ ಸದಸ್ಯರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶ ದೊರೆಯಲಿಲ್ಲವೆಂದು ದೂರುವುದಕ್ಕೆ ಸಾಧ್ಯವಿರುವುದಿಲ್ಲ.

**ಬಾಬು ರಾಮನಾರಾಯಣ ಸಿಂಗ್:** ಈ ಬಗ್ಗೆ ನನ್ನದೊಂದು ದೂರಿದೆ.

**ಡಾ. ಅಂಬೇಡ್ಕರ್ :** ಈ ಕಲಮು ಬಗ್ಗೆ ನಡೆದಿರುವ ಚರ್ಚೆ ಎರಡು ಭಾಗಗಳಲ್ಲಿ ನಡೆದಿದೆ. ಪಾರ್ಲಿಮೆಂಟಿನ ಕಳೆದ ಅಧಿವೇಶನದಲ್ಲಿ ಒಂದು ಭಾಗದ ಚರ್ಚೆ ನಡೆದಿತ್ತು. ಈಗ ನಡೆಯುತ್ತಿರುವುದು ಆಗ ನಡೆದ ಮೂಲಚರ್ಚೆಗೆ ಪೂರಕವಾದ ಚರ್ಚೆ. ಪೂರಕ ಚರ್ಚೆಯಲ್ಲಿ ಮಾಡಲಾಗಿರುವ ಎಲ್ಲ ಭಾಷಣಗಳನ್ನೂ ಗಮನಕೊಟ್ಟು ಕೇಳಿದ್ದರೂ ಕೂಡ ಮೂಲ ಚರ್ಚೆಯಲ್ಲಿ ಪ್ರಸ್ತಾಪಿಸಿರದ ಯಾವ ಹೊಸ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ ಎಂಬುದು ನನಗೆ ಅರ್ಥವಾಗಿಲ್ಲ. ಪೂರಕ ಚರ್ಚೆಯಲ್ಲಿ ಗೆಳೆಯರಾದ ಡಾ. ಶಾಮಪ್ರಸಾದ ಮುಖರ್ಜಿ ಮತ್ತು ಶ್ರೀ ಮಾನ್ ಅವರ ಭಾಷಣಗಳಲ್ಲಿ ಮಾತ್ರ ಹೊಸ ವಿಷಯಗಳು ಪ್ರಸ್ತಾಪಗೊಂಡವು. ಇದನ್ನು ಹೊರತುಪಡಿಸಿದರೆ ಮೂಲ ಚರ್ಚೆಯಲ್ಲಿ ಪ್ರಸ್ತಾಪಗೊಂಡ ವಿಷಯಗಳೇ ಇಲ್ಲಿ ಮತ್ತೆ ವಿಸ್ತೃತಗೊಂಡವು.

ಡಾ. ಶಾಮಪ್ರಸಾದ ಮುಖರ್ಜಿಯವರ ಬಗ್ಗೆ ಪೂರ್ಣ ಗೌರವವನ್ನಿಟ್ಟುಕೊಂಡೂ ಕೂಡ, ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸುವುದು ಅನಗತ್ಯವೆಂದು ಭಾವಿಸುತ್ತೇನೆ. ಅವರಿಗೆ ಸ್ವಂತದ ಮನಸ್ಸು ಎಂಬುದೇ ಇಲ್ಲ.

**ಬಾಬು ರಾಮನಾರಾಯಣ ಸಿಂಗ್ :** ನಿಮಗೆ ಸ್ವಂತ ಮನಸ್ಸು ಇದೆಯೋ?

**ಡಾ. ಅಂಬೇಡ್ಕರ್ :** ಖಂಡಿತ ಇದೆ.

ಈ ಸಂಸತ್ತಿನಲ್ಲಿ ಮಾನ್ಯ ಸದಸ್ಯರು ತಿಳಿದಿರುವಂತೆ, ಶ್ರೀ ಮುಖರ್ಜಿಯವರು ಈ ಮಸೂದೆಯು ಸಿದ್ಧವಾಗುತ್ತಿದ್ದ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ, ಬಹುಮಟ್ಟಿಗೆ, ಈ ಮಸೂದೆಯನ್ನು ಸದನದ ಮುಂದೆ ಮಂಡಿಸಿದ ಆಳುವ ಸರ್ಕಾರದ ಅಂದರೆ, ಈ ಸರ್ಕಾರದ ಸದಸ್ಯರಾಗಿಯೇ ಇದ್ದರು. ಆದರೆ ಸರ್ಕಾರದ ಸದಸ್ಯರಾಗಿ, ಈ ಮಸೂದೆಯನ್ನು ಸಿದ್ಧಪಡಿಸುವಾಗ, ಅದನ್ನು ಸದನದಲ್ಲಿ ಮಂಡಿಸಿದಾಗ, ಚರ್ಚೆ ಪ್ರಾರಂಭವಾದಾಗ, ಮಸೂದೆಯ ಭಾಗಗಳನ್ನು ಸದಸ್ಯರು ಚರ್ಚಿಸುತ್ತಿದ್ದಾಗ ಅಥವಾ ಕ್ಯಾಬಿನೆಟ್‌ನಲ್ಲಿ ಎಲ್ಲೂ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಈ ಮಸೂದೆಯ ವಿರುದ್ಧವಾಗಿಯಾಗಲಿ, ಸರ್ಕಾರದ ವಿರುದ್ಧವಾಗಿ ಆಗಲಿ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದು ನನಗೆ ನೆನಪಿಲ್ಲ.

**ಶ್ರೀ ಶ್ಯಾಮನಂದನ್ ಸಹಾಯ್ :** ಅಲ್ಲಿ ಏನಾಯಿತು ಅಥವಾ ಏನಾಗಲಿಲ್ಲ ಎಂಬುದನ್ನು ಮಾನ್ಯ

ಮಂತ್ರಿಗಳು ಬಹಿರಂಗಪಡಿಸಬಹುದೆ?

**ಡಾ. ಅಂಬೇಡ್ಕರ್ :** ನಾನು ಅದನ್ನು ಹೇಳುತ್ತಿದ್ದೇನೆ. ಮೊದಲ ಭಾಗದಲ್ಲಿ ಈ ನಿರ್ದಿಷ್ಟ ಮಸೂದೆಯ ಬಗ್ಗೆ ಏನು ಮಾಡಬೇಕು ಎಂಬುದರ ಬಗ್ಗೆ ಪಕ್ಷದ ಹಲವಾರು ಸಭೆಗಳು ನಡೆದಿದ್ದು ನನಗೆ ನನಪಿದೆ. ಅದರಲ್ಲಿ ಹೆಚ್ಚಿನ ಸಭೆಗಳಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಪಾಲ್ಗೊಂಡಿದ್ದು ನನಗೆ ಚೆನ್ನಾಗಿ ನೆನಪಿದೆ. ಆದರೆ ಅಲ್ಲಿ ಒಂದೇ ಒಂದು ಸಭೆಯಲ್ಲೂ ಅವರು ಮಸೂದೆಯ ವಿರುದ್ಧ ಮಾತನಾಡಿದ್ದು ನನಗೆ ನೆನಪಿಲ್ಲ. ಅವು ಅನೌಪಚಾರಿಕ ಸಭೆಗಳಾದ್ದರಿಂದ ಅಲ್ಲಿ ಸರ್ಕಾರದ ಸದಸ್ಯರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸ್ವತಂತ್ರರು. ಸಾಮಾಜಿಕ ಜವಾಬ್ದಾರಿಯ ಕಾರಣದಿಂದಾಗಿ ಅವರಿಗೆ ತಮ್ಮ ಅಭಿಪ್ರಾಯವನ್ನು ಹೊರಗೆ ಹೇಳಲು ಸಾಧ್ಯವಾಗದೇ ಹೋಗಬಹುದು. ಆದುದರಿಂದ ಅದು ಮನಸ್ಥಿತಿಯ ವಿಷಯ ಅಲ್ಲ. ಯಾಕೆಂದರೆ ಮನುಷ್ಯನಿಗೆ ಬದ್ಧತೆಯಿರುತ್ತದೆ ಅಥವಾ ಇರುವುದಿಲ್ಲ. ಅದು ನಾನು ಹೇಳುತ್ತಿರುವ ಅಂಶ. (ಒಬ್ಬ ಸನ್ಮಾನ್ಯ ಸದಸ್ಯ: ಅವರು ಕ್ಯಾಬಿನೆಟ್‌ಗೆ ರಾಜೀನಾಮೆ ನೀಡಿದ್ದಾರೆ) ನನ್ನ ದೃಷ್ಟಿಯಲ್ಲಿ ಅವರದು ಒಂದು ದುರಂತ ಕಥೆ – ಒಬ್ಬ ನಿಧಾನಸ್ಥ, ಸನ್ನಡತೆಯ ವ್ಯಕ್ತಿ ಕುಡುಕರ ಗುಂಪಿಗೆ ಸೇರಿ ಒಂದು ಬದಿಯಿಂದ ಇನ್ನೊಂದು ಬದಿಗೆ ಹೊರಳುತ್ತಾ ತಾನೇ ಕುಡಿದು ಮತ್ತೇರಿಸಿಕೊಂಡವನ ದುರಂತದ ಕಥೆ ಎಂದು ಹೇಳಲು ನನಗೆ ವ್ಯಥೆಯಾಗುತ್ತದೆ.

**ಒಬ್ಬ ಮಾನ್ಯ ಸದಸ್ಯ:** ಒಳ್ಳೆಯ ಹೇಳಿಕೆ.

**ಡಾ. ಅಂಬೇಡ್ಕರ್ :** ಎರಡನೆಯದಾಗಿ, ಅವರು ಸರ್ಕಾರ ಬಿಟ್ಟು ವಿರೋಧ ಪಕ್ಷದ ಒಬ್ಬ ಪ್ರಮುಖ ಸದಸ್ಯರಾದಾಗಿನಿಂದ ಅವರನ್ನು ಗಮನಿಸುತ್ತಿದ್ದೇನೆ. ಕೆಲವು ವಿರೋಧ ಪಕ್ಷದ ನಾಯಕರು ಬೆಳೆಸಿಕೊಳ್ಳುವ ಪ್ರವೃತ್ತಿ – ಸರ್ಕಾರದ ಎಲ್ಲ ಕ್ರಮಗಳನ್ನು ವಿರೋಧಿಸುವ ದುರದೃಷ್ಟಕರ ಪ್ರವೃತ್ತಿ ಅವರಲ್ಲಿ ಬೆಳೆಯುತ್ತಿರುವುದನ್ನು ನಾನು ಗಮನಿಸಿದ್ದೇನೆ. ಆದುದರಿಂದ ಒಬ್ಬ ವ್ಯಕ್ತಿ ಒಂದು ವಿಷಯದ ಗುಣಾವಗುಣಗಳ ಆಧಾರದ ಮೇಲೆ ಅದನ್ನು ಚರ್ಚಿಸದೆ, ಕೇವಲ ವಿರೋಧಿಸಬೇಕು ಎಂಬ ಕಾರಣಕ್ಕಾಗಿಯೇ ವಿರೋಧಿಸುತ್ತಿದ್ದಾಗ ಅವರೊಂದಿಗೆ ವಾದಿಸುವುದಕ್ಕಾಗಿ ಕಾಲ, ಹಾಗೂ ಶ್ರಮವನ್ನು ವ್ಯಯಿಸುವುದು ನಿಷ್ಪ್ರಯೋಜಕ ಎಂಬುದಾಗಿ ನಾನು ಭಾವಿಸುತ್ತೇನೆ. ನಾನು ಈ ಕಾರಣಕ್ಕಾಗಿಯೇ ಶ್ಯಾಮಪ್ರಸಾದ್ ಮುಖರ್ಜಿಯವರು ಹೇಳಿದ್ದನ್ನು ನಾನು ತುಂಬಾ ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದಿದ್ದು.

ಆದುದರಿಂದ ನಾನು, ಕಲಮು–೨ರ ವಿರುದ್ಧ ಎತ್ತಿದ ಸಾಮಾನ್ಯ ಅಂಶಗಳನ್ನು ಹಾಗೂ ಈ ಮಸೂದೆಯ ವಿರುದ್ಧ ಎತ್ತಿದ ಸಾಮಾನ್ಯ ಅಂಶಗಳನ್ನು ಪರಿಶೀಲಿಸಲು ಉದ್ದೇಶಿಸಿದ್ದೇನೆ. ಅವುಗಳಲ್ಲಿ ಮೊದಲ ಅಂಶ – ಅದು ಬಹುಶಃ ಹೊಸ ಅಂಶ ಎನ್ನಿಸುತ್ತದೆ. ಈ ರೀತಿಯ ಮಸೂದೆಯನ್ನು ಮಂಡಿಸುವ ಆವಶ್ಯಕತೆಯೇ ಇರಲಿಲ್ಲ ಎಂಬುದು. ಅವರ ಪ್ರಕಾರ ಹಿಂದೂ ಸಮಾಜ ತೀರಾ ಪ್ರಾಚೀನ ಸಮಾಜ. ರೋಮನ್ ಹಾಗೂ ಗ್ರೀಕ್ ಸಮಾಜಕ್ಕಿಂತ ಪ್ರಾಚೀನ ಸಮಾಜ ಮತ್ತು ಈಜಿಪ್ಷಿಯನ್ ಸಮಾಜದಷ್ಟೇ ಪುರಾತನ ಸಮಾಜ. ಇಂದು ನಮಗೆ ರೋಮನ್ ಅಥವಾ ಗ್ರೀಕ್ ಅಥವಾ ಈಜಿಪ್ಷಿಯನ್ ಸಮಾಜದ ಬಗ್ಗೆ ಗೊತ್ತಿರುವುದೆಲ್ಲಾ ಅದರ ಚರಿತ್ರೆ; ಅದು ಈಗ ಅಸ್ತಿತ್ವದಲ್ಲಿಲ್ಲ. ಅವು ಕಣ್ಮರೆಯಾಗಿವೆ. ಈಗ ಉಳಿದಿರುವ ಒಂದೇ ಒಂದು ಪ್ರಾಚೀನ ಸಮಾಜವೆಂದರೆ ಹಿಂದೂ ಸಮಾಜ. ಹಾಗಾಗಿ ಉಳಿದೆಲ್ಲಾ ಪ್ರಾಚೀನ ಸಮಾಜಗಳು ಕಣ್ಮರೆಯಾಗಿ ಹಿಂದೂ ಸಮಾಜವೊಂದೇ ಉಳಿದಿರಬೇಕಾದರೆ, ಅವುಗಳ ಕಾನೂನು, ಅವುಗಳ ಸಾಮಾಜಿಕ ರಚನೆ, ಅವುಗಳ ತತ್ವ ಒಳ್ಳೆಯದಾಗಿರಬೇಕು. ಇಲ್ಲದಿದ್ದರೆ ಅವುಗಳು ಉಳಿಯುವುದು ಸಾಧ್ಯವಿರಲಿಲ್ಲ. ಇದು ಅವರ ವಾದ.

ಇದೇನು ಮೊದಲ ಬಾರಿಗೆ ನಾನು ಈ ವಾದವನ್ನು ಕೇಳುತ್ತಿಲ್ಲ. ಇದನ್ನು ತುಂಬಾ ಹಿಂದೆಯೇ ಕೇಳಿದ್ದೆ. ಸಾಮಾನ್ಯ ಜನರಿಂದ ಮಾತ್ರವಲ್ಲ. ಭಾರತದ ಇತಿಹಾಸತಜ್ಞರು ಎನಿಸಿಕೊಂಡ ಪ್ರಮುಖ ವ್ಯಕ್ತಿಗಳು ಕೂಡ ಈ ಮಾತನ್ನು ಹೇಳಿದ್ದನ್ನು ಕೇಳಿದ್ದೇನೆ. ಈ ಸಮಾಜದ ಪ್ರಾಚೀನ ವ್ಯವಸ್ಥೆಯ ಪಾವಿತ್ರ್ಯವನ್ನು ನಂಬುವವರು ಯಾವಾಗಲೂ ಈ ವಾದವನ್ನು ಮುಂದಿಡುತ್ತಲೇ ಬಂದಿದ್ದಾರೆ. ನಾನು ಕೂಡ ಚರಿತ್ರೆಯ ವಿದ್ಯಾರ್ಥಿಯೇ. ನಮ್ಮ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಚರಿತ್ರೆಯ ಪೀಠವನ್ನು ಅಲಂಕರಿಸಿರುವವರಷ್ಟು ಒಳ್ಳೆಯ ವಿದ್ಯಾರ್ಥಿ ಅಲ್ಲದಿರಬಹುದು. ನನಗೆ ಭಾರತದ ಚರಿತ್ರೆಯ ಬಗ್ಗೆ ಸಾಕಷ್ಟು ತಿಳಿವಳಿಕೆ ಇದೆ ಎಂದು ನಂಬಿದ್ದೇನೆ. ನಾನೊಂದು ಪ್ರಶ್ನೆಯನ್ನು ಎತ್ತಬೇಕೆಂದಿದ್ದೇನೆ. ಕೇವಲ ಅದೊಂದು ಮಾತ್ರ ಉಳಿದುಕೊಂಡು ಬಂದಿದೆ ಎಂದರೆ ಸಾಕೊ ಅಥವಾ ಅದಕ್ಕಿಂತ ಅದು ಯಾವ ಪಾತಾಳಿಯ ಮೇಲೆ ಉಳಿದುಕೊಂಡು ಬಂದಿದೆ ಎಂಬುದು ಮುಖ್ಯವಾಗುತ್ತದೊ? ಒಬ್ಬ ಯೋಧನು ಯುದ್ಧದಲ್ಲಿ ವೈರಿಯೊಡನೆ ಸೆಣಸಾಡಿ ಅವನನ್ನು ಸೋಲಿಸಿ ತಾನು ಗೆದ್ದು ಉಳಿದುಕೊಳ್ಳಬಹುದು. ಅಥವಾ ವೈರಿಯನ್ನು ನೋಡಿ, ಹೇಡಿಯಂತೆ ಓಡಿಹೋಗಿ ಕೂಡ ಜೀವ ಉಳಿಸಿಕೊಳ್ಳಬಹುದು. ಗೆದ್ದು ಉಳಿದುಕೊಳ್ಳುವುದು ಹಾಗೂ ಹೇಡಿಯಂತೆ ಉಳಿದುಕೊಳ್ಳುವುದು ಎರಡೂ ಒಂದೇನಾ? ನಾವು ಈ ಪ್ರಶ್ನೆಯನ್ನು ಪರಿಶೀಲಿಸಬೇಕು. ಹಿಂದೂ ಸಮಾಜ ಯಾವ ಪಾತಳಿಯ ಮೇಲೆ ಉಳಿದುಕೊಂಡಿದೆ? (ಒಬ್ಬ ಸದಸ್ಯ: ಶಕ್ತಿಯಿದ್ದವನು ಉಳಿದುಕೊಳ್ಳುತ್ತಾನೆ) ನನ್ನ ಸ್ನೇಹಿತರು ನನ್ನನ್ನು ಕ್ಷಮಿಸಬೇಕು. ನಾನು ಭಾರತದ ಚರಿತ್ರೆಯನ್ನು ಪರೀಕ್ಷಿಸಿದಾಗ ನಾವು ಉಳಿದುಕೊಂಡಿರುವುದು ನಿಜ. ಆದರೆ ನಾವು ಕಾಲದಿಂದ ಕಾಲಕ್ಕೆ ದಾಸ್ಯಕ್ಕೆ ಒಳಗಾಗಿ, ಸೋತು, ಗುಲಾಮರಾದಂತಹ ಜನರಾಗಿ ಉಳಿದುಕೊಂಡಿದ್ದೇವೆ. (ಒಬ್ಬ ಮಾನ್ಯ ಸದಸ್ಯರು : ಯಾರು ಆಗಿಲ್ಲ?) ಹೌದು, "ಯಾರಾಗಿಲ್ಲ?" ಎಂಬ ಪ್ರಶ್ನೆಯನ್ನು ನನ್ನ ಮಾನ್ಯ ಗೆಳೆಯರು ಕೇಳುತ್ತಿದ್ದಾರೆ. ಹಲವಾರು ರಾಷ್ಟ್ರಗಳು, ಹಲವಾರು ಸಮುದಾಯಗಳು ಯುದ್ಧದಲ್ಲಿ ಸೋತಿವೆ, ಗುಲಾಮರಾಗಿವೆ. ಆದರೆ ಎಲ್ಲಾ ಸೋತ ಜನರ ಚರಿತ್ರೆಯನ್ನು ನೋಡಿದರೆ, ಸೋತ ಜನರು ಕೆಲವು ದಿನ, ಕೆಲವು ಸಮಯದಲ್ಲಿ ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿರುವುದು ಮನವರಿಕೆಯಾಗುತ್ತದೆ ಎಂಬುದನ್ನು ನೆನಪಿಸಲು ಪ್ರಯತ್ನಿಸುತ್ತೇನೆ. ಆದರೆ ಈ ದೇಶದಲ್ಲಿ ಅಂತಹ ಪ್ರಯತ್ನವನ್ನು ನೋಡಿಲ್ಲ. ಆದುದರಿಂದ ಬೇರೆ ದೇಶಗಳು ಸೋತು ಚರಿತ್ರೆ ಸೇರಿಹೋದಾಗ ನಾವು ಉಳಿದುಕೊಂಡೆವು ಎಂಬುದೊಂದರಿಂದಲೇ ನಮ್ಮ ಸಾಮಾಜಿಕ ರಚನೆ ಒಳ್ಳೆಯದು ಮತ್ತು ಶಕ್ತಿಶಾಲಿಯೆಂಬುದನ್ನು ನನಗೆ ಒಪ್ಪಿಕೊಳ್ಳಲಾಗುವುದಿಲ್ಲ. ಹಿಂದೂ ಸಮಾಜ ತೀರಾ ಪ್ರಗತಿ ಪರವಾದ ಸಮಾಜ ಎಂದು ಹೇಳಲಾಗಿದೆ. ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಈ ವಾದವನ್ನು ತೀರಾ ದೀರ್ಘವಾಗಿ ವಿವರಿಸಿದ್ದಾರೆ. ಬುದ್ಧನಂತಹ ಕ್ರಾಂತಿಕಾರಿ ಸುಧಾರಕನನ್ನು ಹಿಂದೂ ಸಮಾಜ ಮಹಾನ್ ವ್ಯಕ್ತಿಯಾಗಿ ಸ್ವೀಕರಿಸಿದೆ. ಬರೀ ಸ್ವೀಕರಿಸಿದೆ ಅಷ್ಟೇ ಅಲ್ಲ, ಅವನು ತನ್ನ ಜೀವಿತ ಕಾಲದಲ್ಲಿ ಬೋಧಿಸಿದ ಹಲವು ತತ್ವಗಳನ್ನು ಸ್ವೀಕರಿಸಿ ಅಳವಡಿಸಿಕೊಂಡಿದೆ.

ತನ್ನನ್ನು ವಿರೋಧಿಸುವವರ ಕೆಲವು ಅಂಶಗಳನ್ನು ಹೀರಿಕೊಳ್ಳುವುದು ಹಿಂದೂ ಸಮಾಜದ ಒಂದು ದೊಡ್ಡ ಗುಣ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ನನ್ನ ಪ್ರಶ್ನೆಯೆಂದರೆ, ತಮ್ಮ ವಿರೋಧಿಗಳ ಸಿದ್ಧಾಂತಗಳನ್ನು ತನ್ನದು ಮಾಡಿಕೊಳ್ಳುವುದರ ಮೂಲಕ ಹಿಂದೂ ಸಮಾಜದ ರಚನೆಯಲ್ಲಿ ಬದಲಾವಣೆಯಾಗಿದೆಯೆ? ಬುದ್ಧನಿಗೆ ಸಂಬಂಧಿಸಿದಂತೆ ನನ್ನ ನಿಲುವನ್ನು ವಿವರಿಸುತ್ತೇನೆ. ಆತ ಏನು ಬೋಧಿಸಿದ? ಆತ ಸಮಾನತೆಯನ್ನು ಬೋಧಿಸಿದ. ಆತ ಚಾತುರ್ವರ್ಣ್ಯದ ಕಡುವಿರೋಧಿ. ಅವನು ವೇದ ಪ್ರಾಮಾಣ್ಯವನ್ನು ವಿರೋಧಿಸಿದ. ಆತನೊಬ್ಬ ವಿಚಾರವಾದಿ, ಯಾವುದೇ ಗ್ರಂಥ ತಪ್ಪುಮಾಡುವುದೇ ಇಲ್ಲ ಎಂಬುದನ್ನು ಅವನು ನಂಬುತ್ತಿರಲಿಲ್ಲ. ಆತ

ಅಹಿಂಸೆಯನ್ನು ಪ್ರತಿಪಾದಿಸುತ್ತಿದ್ದ. ವೈದಿಕ ಸಮಾಜ ಅವನ ಕೆಲವು ತತ್ವವನ್ನು ಸ್ವೀಕರಿಸಿತು. ಆದರೆ ಅವರು ಯಾವುದನ್ನು ಸ್ವೀಕರಿಸಿದರು? ಅವರು ತೀರ ನಿರುಪದ್ರವಿಯಾಗಿದ್ದ ಅಹಿಂಸಾ ತತ್ವವನ್ನು ಸ್ವೀಕರಿಸಿದರು. ಆದರೆ ಯಾರೂ ಅವನ ಸಮಾನತೆಯ ತತ್ವವನ್ನು ಸ್ವೀಕರಿಸಲು ತಯಾರಿರಲಿಲ್ಲ. ಅವರು ಅದನ್ನು ವಿರೋಧಿಸಿದರು. ಅಲ್ಪಸ್ವಲ್ಪ ನಿರುಪದ್ರವಿಯಾದ ಕೆಲವು ತತ್ವಗಳನ್ನು ತೆಗೆದುಕೊಂಡರು. ಆದರೆ ಮುಖ್ಯ ವಿಷಯಕ್ಕೆ ಕೈಹಾಕಲೇ ಇಲ್ಲ. ಚಾತುರ್ವರ್ಣ್ಯ ಉಳಿಸಿಕೊಳ್ಳುವ ವಿಷಯದಲ್ಲಿ ಅವರೆಲ್ಲಾ ಒಗ್ಗಟ್ಟಾಗಿದ್ದರು. ಆದುದರಿಂದಲೇ ಹಿಂದೂಧರ್ಮಕ್ಕೆ ಹೀರಿಕೊಳ್ಳುವ ಹಾಗೂ ಅಳವಡಿಸಿಕೊಳ್ಳುವ ಗುಣವಿದ್ದಾಗ್ಯೂ ಅದು ಮೊದಲಿದ್ದಂತೆಯೇ ಉಳಿದಿದೆ. ಈ ದೇಶದಲ್ಲಿ ಅಥವಾ ಬೇರೆ ದೇಶದಲ್ಲಿ ಹುಟ್ಟಿದ ಮಹಾನ್ ವ್ಯಕ್ತಿಗಳು ಬೋಧಿಸಿದ ತತ್ವವನ್ನು ಅಳವಡಿಸಿಕೊಳ್ಳುವುದರ ಮೂಲಕ ಭಾರತದ ಸಾಮಾಜಿಕ ಸಂರಚನೆ ಬದಲಾಗುತ್ತದೆ ಎಂದು ತುಂಬಾ ಕಾದು ನೋಡಿದೆವು. ಆದರೆ ನಮಗೆ ಸಂಪೂರ್ಣ ನಿರಾಸೆಯಾಗಿದೆ. ಹಿಂದೂ ಸಮಾಜ ಏನನ್ನು ಬೇಕಾದರೂ ಅಳವಡಿಸಿಕೊಳ್ಳಬಹುದು. ಆದರೆ ಮಹಿಳೆಯರ ಹಾಗೂ ಶೂದ್ರದ ದಾಸತ್ವವನ್ನು ಮಾತ್ರ ತನ್ನ ಸಾಮಾಜಿಕ ರಚನೆಯಿಂದ ಬಿಟ್ಟುಕೊಡುವುದಿಲ್ಲ. ಈ ಕಾರಣಕ್ಕಾಗಿ ಸಮಾಜವನ್ನು ಮುನ್ನಡೆಸಲು ಕಾನೂನು ಈಗ ಅವರ ಸಹಾಯಕ್ಕೆ ಬರಬೇಕಾಯಿತು.

**ಪಂಡಿತ ಮಾಲವೀಯ:** ಬುದ್ಧನಿಗೂ ಸಾಧ್ಯವಾಗದ್ದನ್ನು ಮಾಡಲು.

**ಡಾ. ಅಂಬೇಡ್ಕರ್ :** ಜನರು ಹಿಂದೂ ಸಮಾಜ ಬದಲಾಗುತ್ತಿದೆ ಎನ್ನುತ್ತಿದ್ದಾರೆ. ನಾನು ಕೇಳುವ ಪ್ರಶ್ನೆ – ಬದಲಾವಣೆಯು ಪ್ರಗತಿಯೆಡೆಗೆ ಆಗುತ್ತಿದೆಯೊ ಅಥವಾ ಅದರ ವಿರುದ್ಧ ದಿಕ್ಕಿನಲ್ಲಿ ಆಗುತ್ತಿದೆಯೊ? ಆರ್ಯ ಸಮಾಜದ ಚರಿತ್ರೆಯನ್ನು ಪ್ರಾರಂಭದಿಂದ ಇಂದಿನವರೆಗೆ ಓದಿದವರಿಗೆ, ಅವರು ಚರಿತ್ರೆಯ ನಿಷ್ಪಕ್ಷಪಾತ ವಿದ್ಯಾರ್ಥಿಯಾಗಿದ್ದರೆ, ಎಲ್ಲಾ ಬದಲಾವಣೆಗಳೂ ಅವನತಿಯತ್ತಲೆ ಸಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಎಲ್ಲರಿಗೂ ತಿಳಿದಿರುವಂತೆ ಆರ್ಯರ ಕಾಲದಲ್ಲಿ ಜಾತಿವ್ಯವಸ್ಥೆ ಇರಲಿಲ್ಲ. ಒಂದು ರೀತಿಯ ವರ್ಣವ್ಯವಸ್ಥೆ ಇದ್ದಿರಬಹುದು. ಆದರೆ ವರ್ಣವ್ಯವಸ್ಥೆ ಎಂದೂ ಅಂತರ್‌ಜಾತೀಯ ಮದುವೆಗೆ ಅಡ್ಡಿಯಾಗಿರಲಿಲ್ಲ. ಬ್ರಾಹ್ಮಣರು ಅಸ್ಪೃಶ್ಯರ ಹೆಂಗಸರನ್ನು ಮದುವೆಯಾದ ಕೆಲವು ಉದಾಹರಣೆಗಳಿವೆ.

**ಪಂಡಿತ ಮಾಲವೀಯ :** ಎಲ್ಲಿದೆ ಉದಾಹರಣೆ?

**ಡಾ. ಅಂಬೇಡ್ಕರ್ :** ನೀವು ನನ್ನ ಕೊಠಡಿಗೆ ಬಂದರೆ ಹಲವಾರು ಉದಾಹರಣೆಗಳನ್ನು ಕೊಡಬಲ್ಲೆ. ನನ್ನ ಬಳಿ ಇವೆ.

**ಪಂಡಿತ ಮಾಲವೀಯ :** ಈಗಲೇ ಯಾಕೆ ಕೊಡಬಾರದು?

**ಡಾ. ಅಂಬೇಡ್ಕರ್ :** ಆರ್ಯರಲ್ಲಿ ಒಂದು ವರ್ಗ ವಿಭಜನೆಯ ಸಂಕುಚಿತ ವ್ಯವಸ್ಥೆ ಇರಲಿಲ್ಲ. ಅವುಗಳು ನಂತರ ಬಂದವು. ಅವು ನಂತರದ ಬದಲಾವಣೆ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ಹಿಂದೂ ಮಹಿಳೆಯ ಸ್ಥಿತಿಯನ್ನು ಪರೀಕ್ಷಿಸಿ ನಮ್ಮ ಮಿತ್ರ ಮೈತ್ರ, ಅವರು ಕಲ್ಕತ್ತ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಗಾಗಿ ಒಂದು ಮಹಾಪ್ರಬಂಧವಾಗಿ "ಹಿಂದೂಶಾಸ್ತ್ರಗಳಲ್ಲಿ ಹೆಂಗಸರ ಸ್ಥಾನಮಾನ" ಎಂಬ ಪುಸ್ತಕವೊಂದನ್ನು ಬರೆದಿದ್ದಾರೆ. ಅದನ್ನು ಓದಿದ ಯಾರಿಗಾದರೂ ಹೆಂಗಸರಿಗೆ ಪುರುಷರಷ್ಟೇ ಸಮಾನ ಹಕ್ಕು ಆಸ್ತಿಯಲ್ಲಿ ಇತ್ತು ಎಂಬುದು ತಿಳಿಯುತ್ತದೆ. ಆಕೆಗೂ ಆಸ್ತಿ ಪಡೆಯುವ ಹಕ್ಕಿತ್ತು. ಮನುವಿನಲ್ಲೂ ಈ ಹೇಳಿಕೆ ಬರುತ್ತದೆ. ಇಂದು ಹಿಂದೂ ಸಮಾಜದಲ್ಲಿ ಆಗಿರುವ ಬದಲಾವಣೆಯಿಂದ ಆಗಿರುವ ಪರಿಣಾಮವೇನು? ಹೆಂಗಸರು ಆಸ್ತಿಯ ಹಕ್ಕಿನಿಂದ ಸಂಪೂರ್ಣವಾಗಿ ವಂಚಿತರಾಗಿದ್ದಾರೆ. ಈ ಬದಲಾವಣೆಯನ್ನು ಪ್ರಗತಿ ಎನ್ನುತ್ತೀರೊ ಅಥವಾ ಅವನತಿ ಎನ್ನುತ್ತೀರೊ? ಆದುದರಿಂದ ಈ ಪ್ರಶ್ನೆಯನ್ನು ಬೇರೆಯದೇ ಆದ ದೃಷ್ಟಿಯಿಂದ

ನೋಡುವುದಕ್ಕೆ ಇದು ಸರಿಯಾದ ಸಮಯ. ನನ್ನ ಮಾತನ್ನು ಮುಂದುವರೆಸಿ ಹೇಳುವುದಾದರೆ ಕಾನೂನು, ಸಮಾಜವನ್ನು ಮುಂದಕ್ಕೆ ಒಯ್ಯದಿದ್ದರೆ ಸಮಾಜ ಮುಂದೆ ಹೋಗುವುದಿಲ್ಲ.

ಈ ಸದನದಲ್ಲಿ ಮುಂದೆ ಬಂದ ಇನ್ನೊಂದು ವಾದವೆಂದರೆ, ನಮಗೆ ನೀತಿಯೆಂಬುದಾಗಲಿ, ತತ್ವವೆಂಬುದಾಗಲಿ ಇಲ್ಲ. ನಮಗೆ ಮುಂದುವರೆಯಲು ಒಂದು ಆಧಾರವೇ ಇಲ್ಲ. ಪಡುವಣ ದೇಶಗಳ ಒಂದು ರೀತಿಯ ಅನುಕರಣೆಯೊಂದೆ ನಮ್ಮ ಈ ಕ್ರಮಕ್ಕೆ ಆಧಾರ. ಪಡುವಣ ದೇಶಗಳಲ್ಲಿ ಏಕವಿವಾಹ ಪದ್ಧತಿಯಿರುವುದರಿಂದ, ಪಡುವಣ ದೇಶಗಳಲ್ಲಿ ವಿಚ್ಛೇದನ ವ್ಯವಸ್ಥೆ ಇರುವುದರಿಂದ ಅಥವಾ ಚೀನಾ ದೇಶದವರು ಈ ರೀತಿಯಲ್ಲಿ ಏನನ್ನೊ ಮಾಡಲು ಪ್ರಯತ್ನಿಸುತ್ತಿರುವುದರಿಂದ; ನಾವು ಕೂಡ ಪ್ರಪಂಚದ ಕಣ್ಣಲ್ಲಿ ಒಳ್ಳೆಯವರಾಗುವ ಉದ್ದೇಶದಿಂದ ಅವರನ್ನು ನಾವು ಅನುಕರಿಸುತ್ತಿದ್ದೇವೆ ಎಂಬ ವಾದವೂ ಸದನದಲ್ಲಿದೆ. ಹಾಗಾದರೆ ನಮ್ಮ ಆದರ್ಶವೇನಾಗಬೇಕು? ಹಲವು ಸಲಹೆಯನ್ನು ನೀಡಿದ್ದಾರೆ. ಕೆಲವರು ರಾಮ ನಮ್ಮ ಆದರ್ಶವಾಗಬೇಕು ಎಂದರು, ಕೆಲವರು ದಶರಥ ಎಂದರು, ಕೆಲವರು ಕೃಷ್ಣ ಎಂದರು. ಹೀಗೆ ಹತ್ತು ಹಲವಾರು ಹೆಸರುಗಳು ಬಂದವು. ಸದನದಲ್ಲಿ ಸೂಚಿಸಿದ ಈ ಆದರ್ಶಗಳ ಬಗ್ಗೆ ನಾನು ಮಾತನಾಡುವುದಿಲ್ಲ.

**ಶ್ರೀ ಶ್ಯಾಮನಂದನ್ ಸಹಾಯ್ :** ನೀವು ಮಾತನಾಡದೇ ಇರುವುದೇ ಸೂಕ್ತ.

**ಮಾನ್ಯ ಅಧ್ಯಕ್ಷರು :** ಶಿಸ್ತು, ಶಿಸ್ತು.

**ಡಾ. ಅಂಬೇಡ್ಕರ್ :** ನಾನು ರಚಿಸಿರುವ ಸಂವಿಧಾನವೇ ನನ್ನ ಆದರ್ಶ, ಸಂವಿಧಾನದ ಪ್ರಸ್ತಾವನೆಯಲ್ಲಿ ಸ್ವತಂತ್ರ ಸಮಾನತೆ ಹಾಗೂ ಭ್ರಾತೃತ್ವದ ಮಾತು ಬರುತ್ತದೆ. ಆದುದರಿಂದ ಈ ದೇಶದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯನ್ನು ಪರೀಕ್ಷಿಸಿ ಅವು ಸಂವಿಧಾನದಲ್ಲಿ ವಿಧಿಸಿರುವ ತತ್ವಗಳಿಗೆ ಅನುಗುಣವಾಗಿವೆಯೆ ಎಂಬುದನ್ನು ಪರೀಕ್ಷಿಸಿ ನೋಡಬೇಕು. ನಿಮ್ಮ ಶಾಸ್ತ್ರೋಕ್ತ ವಿವಾಹದ ಬಗ್ಗೆ ಹೇಳುವುದಾದರೆ – ನನ್ನನ್ನು ಕ್ಷಮಿಸಬೇಕು–ನಿಷ್ಪಕ್ಷಪಾತವಾಗಿ, ಪ್ರಾಮಾಣಿಕನಾದ, ಉದಾರವಾದ ಮನಸ್ಸಿನ ಯಾರೇ ಅದನ್ನು ಪರಿಶೀಲಿಸಿದರೂ ನಮ್ಮ ಶಾಸ್ತ್ರೋಕ್ತ ವಿವಾಹಪದ್ಧತಿಯು ಸ್ವಾತಂತ್ರ್ಯದ ತತ್ವಕ್ಕಾಗಲಿ, ಸಮಾನತೆಯ ತತ್ವಕ್ಕಾಗಲಿ, ಅನುಗುಣವಾಗಿಲ್ಲ ಎಂಬುದನ್ನು ಒಪ್ಪುತ್ತಾರೆ ಎಂಬುದು ನನಗೆ ಮನವರಿಕೆಯಾಗಿದೆ. ಶಾಸ್ತ್ರೋಕ್ತ ವಿವಾಹದ ಆದರ್ಶಗಳೇನು? ಕೆಲವೇ ಪದಗಳಲ್ಲಿ ಹೇಳುವುದಾದರೆ, ಅದು ಗಂಡನಿಗೆ ಬಹುಪತ್ನಿತ್ವ, ಹೆಂಗಸಿಗೆ ನಿರಂತರ ಗುಲಾಮಗಿರಿ.

**ಒಬ್ಬ ಮಾನ್ಯ ಸದಸ್ಯರು :** ಅದ್ಭುತ ಚಿತ್ರಣ!

**ಡಾ. ಅಂಬೇಡ್ಕರ್ :** ಅದು ಯಾಕೆಂದರೆ, ಹೆಂಗಸಿಗೆ ಗಂಡನಿಂದ ಅವನು ಎಷ್ಟೇ ಕೆಟ್ಟವನಿರಲಿ, ಎಷ್ಟೇ ಅನಪೇಕ್ಷನೀಯನಿರಲಿ ಬಿಡುಗಡೆ ಸಾಧ್ಯವಿಲ್ಲ. ನಮಗೆ ಗುಲಾಮಗಿರಿ ಬೇಕೊ ಅಥವಾ ಮುಕ್ತವಾದ ದುಡಿಮೆ ಬೇಕೊ? ಈಗ ನಾವು ಎಲ್ಲಾ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಉದ್ದಕ್ಕೂ ಮುಕ್ತ ಶ್ರಮಕ್ಕಾಗಿ ಒತ್ತಾಯ ಮಾಡುತ್ತಾ ಬಂದಿದ್ದೇವೆ. ಗುಲಾಮಗಿರಿಯನ್ನು ನಾವು ಎಂದಿಗೂ ಸಹಿಸುವುದಿಲ್ಲ.

**ಒಬ್ಬ ಮಾನ್ಯ ಸದಸ್ಯರು:** ಇದೇನು ಗುಲಾಮಗಿರಿಯೆ?

**ಡಾ. ಅಂಬೇಡ್ಕರ್ :** ಗುಲಾಮಗಿರಿಗೂ, ಮುಕ್ತ ದುಡಿಮೆಗೂ ಇರುವ ವ್ಯತ್ಯಾಸವೇನು? ನೀವು ಸೂಕ್ಷ್ಮವಾಗಿ ಗಮನಿಸಿದರೆ, ನಿಮಗೆ ಒಪ್ಪಂದವನ್ನು ಮುರಿಯುವುದು ಅನಿವಾರ್ಯವಾದಾಗ, ಒಪ್ಪಂದವನ್ನು ಮುರಿಯುವ ಸಾಮರ್ಥ್ಯ, ಹಾಗೂ ತಾಕತ್ತೇ ಮುಕ್ತ ದುಡಿಮೆಯೆಂಬ ತೀರ್ಮಾನಕ್ಕೆ ಬರಬಹುದು.

**ಶ್ರೀ ಆರ್. ಕೆ. ಚೌದರಿ** (ಅಸ್ಸಾಂ) : ಇದೊಂದು ಒಪ್ಪಂದವೆ?

**ಡಾ. ಅಂಬೇಡ್ಕರ್ :** ಹೌದು. ಆ ವಿಷಯಕ್ಕೆ ಬರುತ್ತೇನೆ.

..........ಹಾಗಾಗಿ ಶಾಸ್ತ್ರೋಕ್ತವಾಗಿ ವಿವಾಹವಾಗುವ ಹೆಂಗಸಿಗೆ ಸ್ವಾತಂತ್ರ್ಯ ಸಿಗಬೇಕಾದರೆ (ನಿಮ್ಮ ಸಂವಿಧಾನದಲ್ಲಿ–ಪ್ರತಿಯೊಬ್ಬ ಪ್ರಜೆಗೂ ಸ್ವಾತಂತ್ರ್ಯ ಹಾಗೂ ಸಮಾನತೆಯ ಭರವಸೆಯನ್ನು ನೀಡಿರುವ, ನೀವು ಕೊಂಡಾಡಿದ ಸಂವಿಧಾನದಲ್ಲಿ – ಸ್ವಾತಂತ್ರ್ಯಕ್ಕೆ ಅವಕಾಶವಿರುವುದರಿಂದ ನೀವು ಅದನ್ನು ತಿರಸ್ಕರಿಸಲಾಗುವುದಿಲ್ಲ) ಈಗಿರುವ ಈ ವ್ಯವಸ್ಥೆ ಉಳಿಯಲು ಸಾಧ್ಯವಿಲ್ಲ. ಆಕೆಯ ಸ್ವಾತಂತ್ರ್ಯಕ್ಕಾಗಿ, ಈಗ ಮಸೂದೆಯಲ್ಲಿ ಸೂಚಿಸಿರುವ ವಿವಾಹಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಕಡಿಮೆಮಾಡುವ ದಿಕ್ಕಿನಲ್ಲಿ ಸದನದ ಯಾವುದೇ ಸದಸ್ಯರಾದರೂ ಪರವಾಗಿಲ್ಲ. ಯಾವುದೇ ಸಲಹೆಗಳನ್ನು ಸೂಚಿಸಿದರೂ ಅದನ್ನು ಪರಿಗಣಿಸಲು ನಾನು ತಯಾರಾಗಿದ್ದೇನೆ. ಈ ಕಾರಣದಿಂದ ಈ ಮಸೂದೆಯನ್ನು ಮಂಡಿಸುತ್ತಿದ್ದೇವೆಯೆ ಹೊರತು ಯಾರನ್ನೊ ಅನುಕರಿಸುವ ಉದ್ದೇಶದಿಂದಲ್ಲ. ನಮಗೆ ನಮ್ಮ ಪ್ರಾಚೀನ ಮೌಲ್ಯಗಳಿಗೆ ಮರಳುವ ಬಯಕೆಯೂ ಇಲ್ಲ. ಅವು ನನ್ನ ದೃಷ್ಟಿಯಲ್ಲಿ ತೀರಾ ಪುರಾತನವಾದದ್ದು ಹಾಗೂ ಯಾರಿಗೂ ಅವುಗಳನ್ನು ಆಚರಣೆಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವಿಲ್ಲ.

**ಡಾ. ಡಿ.ಸಿ. ಪಾಂಡೆ** (ಉತ್ತರ ಪ್ರದೇಶ) : ನಾವು ಮಸೂದೆಯನ್ನು ಬೆಂಬಲಿಸಲು ತಯಾರಿದ್ದೇವೆ. ಆದರೆ ಈ ನಿಂದನೆಯನ್ನು ಕೇಳಲು ತಯಾರಿಲ್ಲ. ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಮಾತನಾಡುತ್ತಾ ಈ ರೀತಿ ನಿಂದನೆಯನ್ನು ಮಾಡುವುದು ಎಷ್ಟರಮಟ್ಟಿಗೆ ಸಮರ್ಥನೀಯ? ನನಗೆ ಗೊತ್ತಿಲ್ಲ.

**ಒಬ್ಬ ಮಾನ್ಯ ಸದಸ್ಯರು :** ಹಿಂದೂಧರ್ಮವನ್ನೇಕೆ ನಿಂದಿಸಬೇಕು?

**ಡಾ. ಅಂಬೇಡ್ಕರ್ :** ಕಲಮು–೨ರ ಬಗ್ಗೆ ವಿವಿಧ ಸದಸ್ಯರು ಮಂಡಿಸಿರುವ ನಿರ್ದಿಷ್ಟ ತಿದ್ದುಪಡಿಗಳ ವಿಷಯಕ್ಕೆ ಬರುತ್ತೇನೆ.

**ಶ್ರೀ ಕೃಷ್ಣಾನಂದ ರಾಯ್** (ಉತ್ತರ ಪ್ರದೇಶ): ಸದನವು ವಿಚ್ಛೇದನ ಹಾಗೂ ಏಕವಿವಾಹ ಪದ್ಧತಿಯನ್ನು ಅನುಮೋದಿಸುತ್ತದೆ. ಆದರೆ ಈ ರೀತಿಯ ನಿಂದನೆಗಳನ್ನಲ್ಲ.

**ಡಾ. ಅಂಬೇಡ್ಕರ್ :** ನೀವಿದನ್ನು ಮೊದಲೇ ಹೇಳಿದ್ದರೆ, ನನಗೆ ಈ ಭಾಷಣವನ್ನು ಮಾಡುವ ಆವಶ್ಯಕತೆಯೆ ಇರುತ್ತಿರಲಿಲ್ಲ. ಈ ಮಸೂದೆಗಾಗಿ ೭ ದಿನ ವ್ಯಯಿಸುವ ಆವಶ್ಯಕತೆಯೆ ಇರುತ್ತಿರಲಿಲ್ಲ.

**ಪ್ರಧಾನಮಂತ್ರಿಗಳು** (ಶ್ರೀ ಜವಾಹರ್ ಲಾಲ್ ನೆಹರು): ನನಗೆ ಕೆಲ ಸದಸ್ಯರ ಎಳೆಯ ಚರ್ಮದ ಬಗ್ಗೆ ಆಶ್ಚರ್ಯವಾಗುತ್ತದೆ. ನಾವು ಸಹಿಸಿಕೊಂಡಿದ್ದೇವೆ. ನಮ್ಮನ್ನು ತೀರಾ ನೋಯಿಸುವ ಮಾತುಗಳನ್ನು ಭಾಷಣಗಳ ಸರಮಾಲೆಯನ್ನು ನಾವು ಸಹಿಸಿಕೊಂಡಿದ್ದೇವೆ. ಅದರ ಬಗ್ಗೆ ಆಕ್ಷೇಪವೇ ಬರದಿದ್ದ ಮೇಲೆ, ಡಾ. ಅಂಬೇಡ್ಕರ್ ವಿಚಾರವನ್ನು ಒಪ್ಪದಿದ್ದವರು ಈಗ ಇದಕ್ಕೆ ಆಕ್ಷೇಪಿಸಬಾರದು.

**ಪಂಡಿತ ಮೈತ್ರ :** ಡಾ. ಅಂಬೇಡ್ಕರ್ ಅವರ ಭಾಷಣವನ್ನು ತೀರಾ ಗಮನಕೊಟ್ಟು ಕೇಳಿಸಿಕೊಂಡಿದ್ದೇವೆ. ಆದರೆ ನಮ್ಮ ಅತ್ಯುತ್ತಮ ಆದರ್ಶಗಳ ಬಗ್ಗೆ ಈ ರೀತಿಯ ನಿಂದನೆಗಳು ಬೇಕಾಗಿಲ್ಲ. ಈ ಕಾಯಿದೆಗಳನ್ನು, ಸದಸ್ಯರ ಧಾರ್ಮಿಕ ಭಾವನೆಗಳನ್ನು ನೋಯಿಸದೆಯೇ ಸಮರ್ಥಿಸಿಕೊಳ್ಳಬಹುದಿತ್ತು.

**ಮಾನ್ಯ ಅಧ್ಯಕ್ಷರು :** ಯಾವುದೇ ರೀತಿಯ ಉದ್ವೇಗಕ್ಕೂ ಕಾರಣವಿಲ್ಲ. ಪ್ರಧಾನಮಂತ್ರಿಗಳು ಹೇಳಿದಂತೆ, ಹಲವು ಸದಸ್ಯರು ಹಲವು ಮಾತುಗಳನ್ನು ಆಡಿದ್ದಾರೆ. ಸ್ವಾಭಾವಿಕವಾಗಿಯೇ ಕಾನೂನು ಮಂತ್ರಿಗಳು ಉತ್ತರ ಕೊಡುವಾಗ ಕೆಲವು ಹೇಳಿಕೆಗಳನ್ನು ಮಾಡಲೇಬೇಕಾಗುತ್ತದೆ. ಅವರ ಮಾತನ್ನು ಕೇಳಬೇಕು.

**ಡಾ. ಅಂಬೇಡ್ಕರ್ :** ಮಸೂದೆಯನ್ನು ಐಚ್ಛಿಕವಾಗಿ ಮಾಡಬೇಕಿತ್ತು ಎಂಬ ಒಂದು ಸಾಮಾನ್ಯ ತಿದ್ದುಪಡಿಯಿದೆ. ಇದನ್ನು ಬೇರೆ ರೀತಿಯಲ್ಲಿ ಬೇರೆ ಬೇರೆ ರೂಪಗಳಲ್ಲಿ ಹೇಳಲಾಗಿದೆ. ಒಂದು ತಿದ್ದುಪಡಿಯ ಪ್ರಕಾರ ಈ ಮಸೂದೆ ಅನ್ವಯವಾಗುವ ಹಿಂದುಗಳಿಗೆ, ಅದು ತಮಗೆ ಅನ್ವಯವಾಗಬೇಕೊ

ಬೇಡವೊ ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯವಿರಬೇಕು. ಅದರ ಇನ್ನೊಂದು ರೂಪದಲ್ಲಿ ಈ ಮಸೂದೆ ಅನ್ವಯವಾಗುವ ಇತರರಿಗೆ, ಉದಾಹರಣೆಗೆ ಮುಸ್ಲಿಮರಿಗೆ, ಅವರು ಬಯಸಿದರೆ ತಮಗೂ ಇದನ್ನು ಅನ್ವಯಿಸಿಕೊಳ್ಳಲು ಅವಕಾಶವಿರಬೇಕು. ಇನ್ನೊಂದು ರೂಪಾಂತರ ಹೇಳುತ್ತದೆ. ಮಸೂದೆಯನ್ನು ಸ್ವೀಕರಿಸುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಆಯಾ ರಾಜ್ಯಗಳಿಗೆ ಬಿಡಬೇಕು. ನಮ್ಮ ಮುಂದೆ ಮಂಡಿಸಿದ ಈ ತಿದ್ದುಪಡಿಯ ಮೂರು ರೂಪಗಳನ್ನು ನಾನು ಪರಿಶೀಲಿಸುತ್ತೇನೆ.

ಹಿಂದೂಗಳಿಗೆ ಕೂಡ ಅದನ್ನು ಐಚ್ಛಿಕವಾಗಿ ಮಾಡಬೇಕೆಂಬ ಮೊದಲ ಸಲಹೆಯನ್ನು ಮೊದಲು ಪರಿಶೀಲಿಸೋಣ. ಕಳೆದ ಸಲ ಡೆಪ್ಯೂಟಿ ಸ್ಪೀಕರ್ ಇದಕ್ಕೆ ಪೂರ್ವ ನಿದರ್ಶನವಿದೆ ಎಂದು ಸೂಚಿಸುವ ಮೂಲಕ ಕೆಲವು ಸದಸ್ಯರ ಸಹಾಯಕ್ಕೆ ಬಂದರು. ಸದಸ್ಯರಿಗೆ ಬಹುಶಃ ನೆನಪಿರಬಹುದು ಅಂದುಕೊಂಡಿದ್ದೇನೆ. ಅವರು ಷರಿಯತ್ ಕಾಯಿದೆ ಹಾಗೂ ಖೋಜಾ ಮೋಮಿನ್ ಅಥವಾ ಖೋಜ ಕಾಯಿದೆಯನ್ನು ಉಲ್ಲೇಖಿಸಿದರು. ಹಿಂದೂಗಳಿಗೆ ಸಂಬಂಧಿಸಿದಂತೆ ಅಂತಹ ಕಾಯಿದೆಯನ್ನು ಮಾಡುವುದರಲ್ಲಿ ಯಾವುದೇ ಅಪಾಯವೂ ಇಲ್ಲ. ಅದೇನು ಹೊಸದೂ ಅಲ್ಲ ಎಂದರು. ಆಗಿನಿಂದ ಮಾನ್ಯ ಡೆಪ್ಯುಟಿ ಸ್ಪೀಕರ್ – ಕ್ಷಮಿಸಬೇಕು. ಅವರಿಲ್ಲಿ ಇಲ್ಲ. ಅವರ ಹೇಳಿಕೆ ಸರಿಯೇ ಎಂಬುದನ್ನು ಪರೀಕ್ಷಿಸಲು ಒಂದಿಷ್ಟು ಸಮಯ ಕಳೆದಿದ್ದೇನೆ. ಅವರು ಸ್ವಲ್ಪ ಮರೆತಿದ್ದಾರೆ ಅನಿಸುತ್ತದೆ.

**ಶ್ರೀ ಶ್ಯಾಮನಂದನ್ ಸಹಾಯ್:** ನೀವು ಡೆಪ್ಯೂಟಿ ಸ್ಪೀಕರ್ ಅವರ ರೂಲಿಂಗನ್ನು ಟೀಕಿಸುತ್ತಿದ್ದಿರೊ ಅಥವಾ ಶ್ರೀ ಅನಂತಶಯನಂ ಅಯ್ಯಂಗಾರ್‍ಯರ ಹೇಳಿಕೆಯನ್ನು ಟೀಕಿಸುತ್ತಿದ್ದಿರೊ?

**ಡಾ. ಅಂಬೇಡ್ಕರ್:** ನಾನು ಶ್ರೀ ಅನಂತಶಯನಂ ಅಯ್ಯಂಗಾರ್‍ಯರ ಹೇಳಿಕೆಯನ್ನು ಪರಿಶೀಲಿಸುತ್ತಿದ್ದೇನೆ. ಇಂದು ಮಾನ್ಯ ಸದಸ್ಯರು ಇಷ್ಟೊಂದು ಕಾನೂನು ಪ್ರಕಾರ ಮಾತನಾಡುತ್ತಿರುವುದನ್ನು ನೋಡಿ ಸಂತೋಷವಾಗುತ್ತಿದೆ.

**ಶ್ರೀ ಶ್ಯಾಮನಂದನ್ ಸಹಾಯ್:** ನಾನು ಯಾವಾಗಲೂ ಹೀಗೆ ಇದ್ದೆ. ಆದರೆ ಮಾನ್ಯ ಮಂತ್ರಿಗಳು ತಮ್ಮ ಕ್ಯಾಬಿನೆಟ್ ಸದಸ್ಯರ ಸ್ಥಾನದ ಲಾಭವನ್ನು ಬಳಸಿಕೊಳ್ಳುತ್ತಿದ್ದಾರೆ.

**ಡಾ. ಅಂಬೇಡ್ಕರ್:** ೧೯೩೭ರಲ್ಲಿ ನಡೆದ ಮಸೂದೆಯನ್ನು ಕುರಿತ ಚರ್ಚೆಯಲ್ಲಿ ಅನಂತಶಯನಂ ಅಯ್ಯಂಗಾರರೇ ಮಸೂದೆಯ ಅನ್ವಯಿಕೆಗೆ ಸಂಬಂಧಿಸಿದಂತೆ ಈ ಪ್ರಶ್ನೆಯನ್ನು ಎತ್ತಿದ್ದರು. ಈ ಬಗ್ಗೆ ಅವರ ಭಾಷಣ ಎರಡು ಪುಟಗಳಷ್ಟಿದೆ. ಖೋಜಾಗಳಿಗೆ ನೀಡಿದ್ದ ಆಯ್ಕೆಯ ಅವಕಾಶವನ್ನು ಹಿಂತೆಗೆದು ಕೊಳ್ಳಲಾಗುತ್ತದೆಯೆ ಎಂದು ನೇರವಾಗಿ ಅವರು ಜಿನ್ನಾ ಅವರನ್ನೇ ಕೇಳಿದರು. ಯಾಕೆಂದರೆ ಈ ಮಸೂದೆ ಸರ್ಕಾರದ ಮಸೂದೆಯಾಗಿರಲಿಲ್ಲ. ಅದೊಂದು ಖಾಸಗಿ ಸದಸ್ಯರ ಮಸೂದೆ. ನೇರವಾಗಿ ಅದು ಜಿನ್ನಾರವರ ಸುಪರ್ದಿಗೆ ಒಳಪಟ್ಟಿತ್ತು. ಜಿನ್ನಾ ಅವರು ಅನಂತಶಯನಂ ಅಯ್ಯಂಗಾರರಿಗೆ ನೇರವಾಗಿ ಉತ್ತರ ನೀಡಿದರು. ಈ ಮಸೂದೆ ಕಡ್ಡಾಯ ಅಷ್ಟೇ ಅಲ್ಲ. ಖೋಜ ಅವರಿಗೆ ನೀಡಿದ್ದ ಆಯ್ಕೆಯ ಸ್ವಾತಂತ್ರ್ಯವನ್ನು ಹಿಂತೆಗೆದುಕೊಳ್ಳಲಾಗುತ್ತದೆ ಎಂದರು.

**ಪಂಡಿತ ಮೈತ್ರ :** ಮಸೂದೆಯ ಹಿನ್ನೆಲೆಯ ಬಗ್ಗೆಯೂ ಯಾಕೆ ಸದನಕ್ಕೆ ಮಾಹಿತಿ ನೀಡಬಾರದು? ಆ ಮಸೂದೆಯ ಬಗ್ಗೆ ಚರ್ಚೆಯಾದಾಗ ನಾನಿದ್ದೆ. ಜಿನ್ನಾರವರಿಗೆ ಹಿಂದೂ ಮಸೂದೆಯನ್ನು ಮುಸ್ಲಿಮರಿಗೆ ಅನ್ವಯಿಸುವುದು ಇಷ್ಟವಿರಲಿಲ್ಲ.

**ಡಾ. ಅಂಬೇಡ್ಕರ್ :** ನಾನು ಪುಸ್ತಕವನ್ನು ಕೊಡಬಲ್ಲೆ. ಇಲ್ಲಿ ಯಾರಿಗಾದರೂ ಇಡೀ ಚರ್ಚೆಯನ್ನು ಪರಿಶೀಲಿಸಬೇಕೆಂದಿದ್ದರೆ ನೋಡಬಹುದು. ನಾನು ಇದಕ್ಕೆ ಹೆಚ್ಚಿನ ಸಮಯ ವ್ಯಯಮಾಡಲು ಸಾಧ್ಯವಿಲ್ಲ.

ಯಾಕೆಂದರೆ ನಾನು ಸೂಚಿಸಿರುವ ತಿದ್ದುಪಡಿಗಳನ್ನು ಪರಿಶೀಲಿಸಬೇಕು.

**ಶ್ರೀ ಜೆ.ಆರ್. ಕಪೂರ್ :** ಈ ವಾಗ್ವಾದ ಯಾವ ವರ್ಷ ನಡೆಯಿತು.

**ಡಾ. ಅಂಬೇಡ್ಕರ್ :** ೧೯೩೭ರಲ್ಲಿ. ಒಂದೇ ಸಮಸ್ಯೆಯೆಂದರೆ......

**ಶ್ರೀ ಭಟ್ :** ಷರಿಯತ್ ಮಸೂದೆಯನ್ನು ಅಂಗೀಕರಿಸಲಾಯಿತೆ ಅಥವಾ ಸೆಲೆಕ್ಟ್ ಸಮಿತಿಗೆ ವರ್ಗಾಯಿಸಲಾಯಿತೆ ಅಥವಾ ಕೈಬಿಡಲಾಯಿತೆ?

**ಡಾ. ಅಂಬೇಡ್ಕರ್ :** ಮಸೂದೆಯನ್ನು ಅಂಗೀಕರಿಸಲಾಯಿತು. ಜೊತೆಗೆ ಯಾವುದೇ ರೀತಿಯ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಬಾರದು ಎಂದು ತೀರ್ಮಾನಿಸಲಾಯಿತು.

ಬಂದ ಒಂದೇ ಒಂದು ಸಮಸ್ಯೆ ಎಂದರೆ, ಕಲಮು–೩ನ್ನು ಅವರು ಮಂಡಿಸಿದಾಗ ಕರಡುಗಾರನ ಸಹಾಯವಿಲ್ಲದೆ ಅದನ್ನು ಮಂಡಿಸಲಾಯಿತು. ಅದರಿಂದ ಏನಾಯಿತು ಎಂದರೆ ಅದನ್ನು **"ಕಲಮು"** ಎಂದು ಕರೆಯದೆ **"ಕಾಯಿದೆ"** ಎಂದು ಕರೆಯಲಾಯಿತು. ಈ ಸಮಸ್ಯೆಯನ್ನು ನನ್ನ ಗೆಳೆಯ ೧೯೪೭ರಲ್ಲಿ ಮಸೂದೆಯನ್ನು ತಂದು **"ಕಾಯಿದೆ"** ಪದದ ಸ್ಥಳದಲ್ಲಿ **"ಕಲಮು"** ಎಂಬ ಪದವನ್ನು ಸೇರಿಸಿ ಬಗೆಹರಿಸಿದ. ಹಾಗಾಗಿ......

**(೧೨ ಗಂಟೆ)**

**ಶ್ರೀ. ಜೆ. ಆರ್. ಕಪೂರ್:** ೧೯೩೭ರ ಈ ಕಾಯಿದೆ ಹಿಂದಿನ ಕಚ್ಚ್ ಮೆಮನ್ ಕಾಯಿದೆಯನ್ನು ರದ್ದುಮಾಡುತ್ತದೆ. ಅದರ ಪ್ರಕಾರ ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು ಮತ್ತು ಡೆಪ್ಯೂಟಿ ಸ್ಪೀಕರ್ ಅವರು ಸದನದ ಸದಸ್ಯರಾಗಿ ಸದನದ ಗಮನಕ್ಕೆ ತಂದಂತೆ, ಆಯ್ಕೆಯ ಅವಕಾಶವಿದ್ದ ಶಾಸನ ಹಲವಾರು ವರ್ಷ ಜಾರಿಯಲ್ಲಿತ್ತು ಎಂಬುದನ್ನು ಕಾನೂನು ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

**ಡಾ. ಅಂಬೇಡ್ಕರ್ :** ಅದು ಮೊದಲು, ನಂತರ ಅದನ್ನು ಹಿಂತೆಗೆದುಕೊಳ್ಳಲಾಯಿತು.

**ಶ್ರೀ. ಜೆ. ಆರ್. ಕಪೂರ್ :** ಆದರೂ ಹಲವಾರು ವರ್ಷ ಆ ರೀತಿಯ ಕಾಯಿದೆ ಜಾರಿಯಲ್ಲಿತ್ತು. ಅದನ್ನೇ ಅವರು ಹೇಳಿದ್ದು.

**ಡಾ. ಅಂಬೇಡ್ಕರ್ :** ನಾವು ೧೯೩೭ರ ಕಾಯಿದೆಯಲ್ಲಿ ಆಯ್ಕೆಯ ಅವಕಾಶವಿತ್ತೇ ಇಲ್ಲವೇ ಎಂಬುದನ್ನು ಚರ್ಚಿಸುತ್ತಿದ್ದೇವೆ.

**ಶ್ರೀ ಜೆ. ಆರ್. ಕಪೂರ್:** ಮಾನ್ಯ ಅಯ್ಯಂಗಾರರು ಹೇಳಿದ್ದು ೧೯೨೩ರ ಕಾಯಿದೆಯಲ್ಲಿ ಅವಕಾಶವಿತ್ತು ಅಂತ.

**ಡಾ. ಅಂಬೇಡ್ಕರ್ :** ಕ್ಷಮಿಸಬೇಕು. ನಾನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಭಾಷಣದಲ್ಲಿ ಏನಾದರೂ ಸಂದಿಗ್ಧತೆಯಿದ್ದರೆ ಮಾನ್ಯ ಸದಸ್ಯರು ನಂತರ, ಅದಕ್ಕೆ ಸಾಕಷ್ಟು ಸಮಯವಿದ್ದಾಗ ಅದನ್ನು ತೆಗೆದುಕೊಳ್ಳಬಹುದು.

**ಶ್ರೀ ಅಮಲೋಕ್ ಚಂದ್ :** ಇತ್ತೀಚಿನ ಸ್ಥಿತಿಯೇನು?

**ಡಾ. ಅಂಬೇಡ್ಕರ್ :** ಆಯ್ಕೆಗೆ ಅವಕಾಶವಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ದೀರ್ಘಕಾಲ ಅವಕಾಶವಿತ್ತು.

**ಡಾ. ಅಂಬೇಡ್ಕರ್ :** ಕಚ್ಚಿಗಳಿಗೆ ಐಚ್ಛಿಕ ಮಾಡುವ ಸಲಹೆಯನ್ನು ತೆಗೆದುಕೊಳ್ಳೋಣ. ಪೂರ್ವನಿದರ್ಶನದ ವಿಷಯವನ್ನು ಬದಿಗಿಟ್ಟು ನೋಡಿದರೂ, ನಾವು ಐಚ್ಛಿಕ ಮಾಡುವ ಸಲಹೆಯನ್ನು ಒಪ್ಪಿಕೊಂಡರೆ ಏನಾಗುತ್ತದೆ? ನೋಡೋಣ. ಮಾನ್ಯ ಸದಸ್ಯರಿಗೆ ನೆನಪಿರಬಹುದು. ಬಾಂಬೆ ಮತ್ತು

ಮದ್ರಾಸಿನವರು ಕೆಲ ರಾಜ್ಯಗಳಲ್ಲಿ ವಿವಾಹ ಹಾಗೂ ವಿಚ್ಛೇದನಗಳನ್ನು ನಿಯಂತ್ರಿಸಲು ಶಾಸನಗಳನ್ನು ತರಲಾಯಿತು. ಆ ಎರಡು ಕಾಯ್ದೆಯಲ್ಲೂ ಯಾವುದೇ ರೀತಿಯ ಆಯ್ಕೆಗೂ ಅವಕಾಶವಿರಲಿಲ್ಲ. ಅಲ್ಲಿ ನೆಲೆಸಿರುವ ಅಥವಾ ಅಲ್ಲಿಯೇ ಜನಿಸಿದ ಪ್ರತಿಯೊಬ್ಬನಿಗೂ ಅದು ಕಡ್ಡಾಯವಾಗಿತ್ತು. ನಾವು ನಮ್ಮ ಮಸೂದೆಯನ್ನು ಅಂಗೀಕರಿಸಿದರೆ ಈ ಕಾನೂನು ಅವುಗಳೊಂದಿಗೆ ಸಂಗತವಾಗುವುದಿಲ್ಲ ಎಂಬ ಕಾರಣಕ್ಕಾಗಿ ಪ್ರಾಂತೀಯ ಕಾಯಿದೆಗಳನ್ನು ತಳ್ಳಿಹಾಕಿಬಿಡುತ್ತದೆ. ಯಾಕೆಂದರೆ ಇದು ಸಮವರ್ತಿ ಕ್ಷೇತ್ರದಲ್ಲಿ ಬರುವ ಕಾಯಿದೆ. ಇದರ ಒಂದು ಪರಿಣಾಮವೆಂದರೆ, ಬಾಂಬೆ ಹಾಗೂ ಮದ್ರಾಸ್ ರಾಜ್ಯಗಳು ಏಕವಿವಾಹ ಪದ್ಧತಿ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದಂತೆ ಸಾಧಿಸಿದ ಪ್ರಗತಿಯೆಲ್ಲಾ ಪೂರ್ಣವಾಗಿ ನಾಶವಾಗುತ್ತದೆ.

**ಶ್ರೀ ಗೌತಮ್ (ಉತ್ತರ ಪ್ರದೇಶ) :** ಬಾಂಬೆಯಲ್ಲಿ ಮುಸ್ಲಿಮರ ಪರಿಸ್ಥಿತಿ ಏನು?

**ಡಾ. ಅಂಬೇಡ್ಕರ್ :** ಅದು ಹಿಂದೂಗಳಿಗೆ ಮಾತ್ರ ಅನ್ವಯಿಸುತ್ತದೆ. ಮುಸ್ಲಿಮರ ವಿಷಯಕ್ಕೆ ಸದ್ಯದಲ್ಲೇ ಬರುತ್ತೇನೆ, ಯೋಚಿಸಬೇಡಿ. ನಾನು ಆ ವಿಷಯದಿಂದ ತಪ್ಪಿಸಿಕೊಂಡು ಹೋಗಿಬಿಡುವುದಿಲ್ಲ. ಆದುದರಿಂದ ಸ್ವಲ್ಪಮಟ್ಟಿನ ಸಾಮಾಜಿಕ ಪ್ರಗತಿಯನ್ನು ಸಾಧಿಸಿದ ಈ ಎರಡೂ ರಾಷ್ಟ್ರಗಳು ಹಿಂದಕ್ಕೆ ಸರಿದಂತಾಗುತ್ತದೆ.

**ಶ್ರೀ ಜೆ. ಆರ್. ಕಪೂರ್ :** ಅವನ್ನು ಹಾಗೆ ಉಳಿಸಿಕೊಳ್ಳಿ.

**ಡಾ. ಅಂಬೇಡ್ಕರ್ :** ಹೇಗೆ ಸಾಧ್ಯ?

**ಶ್ರೀ ಜೆ. ಆರ್. ಕಪೂರ್ :** ಒಂದು ಸಾಲನ್ನು ಸೇರಿಸಿ– "ಇದಕ್ಕೆ ವ್ಯತಿರಿಕ್ತವಾಗಿ ಏನೇ ಇದ್ದರೂ ಈ ಕಾಯಿದೆ ಉಳಿಯುತ್ತದೆ....."

**ಡಾ. ಅಂಬೇಡ್ಕರ್ :** ಆಗ ಅದು ಕೇವಲ ನನ್ನ ಸ್ನೇಹಿತರನ್ನು ತೃಪ್ತಿಪಡಿಸುವುದಕ್ಕಾಗಿ ಮಾಡಿದ ಒಂದು ಅದ್ಭುತ ಕಾಯಿದೆಯಾಗುತ್ತದೆ. ಆದುದರಿಂದ ಇದರ ಪರಿಣಾಮವನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕು.

ಇಂದಿನ ಸ್ಥಿತಿ ಏನು? ಕೆಲವು ರಾಜ್ಯಗಳಲ್ಲಿ ಏಕವಿವಾಹ ಪದ್ಧತಿ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನುಗಳಿವೆ. ಕೆಲವು ರಾಜ್ಯಗಳಲ್ಲಿ ಅಂತಹ ಕಾನೂನುಗಳಿಲ್ಲ. ನಮ್ಮ ಸಂವಿಧಾನದಲ್ಲಿ ಯಾವುದೇ ರಾಜ್ಯಕ್ಕೂ ತನ್ನ ಪ್ರಾಂತ್ಯದಿಂದಾಚೆಗೆ ಅಧಿಕಾರವ್ಯಾಪ್ತಿ ಇರುವುದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಒಬ್ಬ ವ್ಯಕ್ತಿ ಆ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದಾಗ ಅಥವಾ ಅದೇ ಅವನ ಜನ್ಮಸ್ಥಳವಾಗಿದ್ದಾಗ ಕಾನೂನು ಅವನಿಗೆ ಅನ್ವಯವಾಗುತ್ತದೆ. ಒಬ್ಬ ವ್ಯಕ್ತಿ ಬಾಂಬೆಯಲ್ಲಿ ವಿವಾಹವಾದರೆ ಅವನು ಬಾಂಬೆಯ ಕಾನೂನಿನನ್ವಯ ಮದುವೆಯಾಗಬೇಕು. ಅವನು ಹೆಂಡತಿಗೆ ವಿಚ್ಛೇದನ ಕೊಡಬೇಕೆಂದಿದ್ದರೆ, ಅದು ಬಾಂಬೆಯಲ್ಲಿ ಸಾಧ್ಯವಾಗದಿದ್ದರೆ ಅವನು ಉತ್ತರ ಪ್ರದೇಶಕ್ಕೆ ಹೋಗಿ ಸಲೀಸಾಗಿ ವಿಚ್ಛೇದನ ನೀಡಿ, ಇನ್ನೊಂದು ಮದುವೆಯಾಗಿಬಿಡಬಹುದು. ಯಾಕೆಂದರೆ ಅಲ್ಲಿ ಅಂಥ ಕಾನೂನಿಲ್ಲ. ಹಾಗಾಗಿ ಬಾಂಬೆಯ ಕಾನೂನು ವಿಫಲವಾಗುತ್ತದೆ. ಅದು ಮದ್ಯಪಾನ ನಿಷೇಧ ಮಾಡಿದ ಹಾಗೆ. ಅದನ್ನು ಒಂದು ರಾಜ್ಯದಲ್ಲಿ ಮಾಡಲಾಗುವುದಿಲ್ಲ. ಅದನ್ನು ಇಡೀ ರಾಷ್ಟ್ರದಲ್ಲಿ ಜಾರಿಗೊಳಿಸಬೇಕು. ಆಗ ಒಬ್ಬ ವ್ಯಕ್ತಿ ಮತ್ತೊಂದು ರಾಜ್ಯಕ್ಕೆ ಹೋಗಿ ತನ್ನ ರಾಜ್ಯದ ಕಾನೂನನ್ನು ಮುರಿಯಲಾಗುವುದಿಲ್ಲ. ಆದುದರಿಂದ ಎರಡೇ ದಾರಿ ಇರುವುದು. ಒಂದು, ಈ ವಿಷಯದಲ್ಲಿ ಕಾನೂನೇ ಬೇಡ, ಅದು ಹೇಗಿದೆಯೋ ಹಾಗೆ ಇರಲಿ ಎನ್ನುವುದು ಒಂದು ದಾರಿ. ಇನ್ನೊಂದು, ಅದು ಅಖಿಲ ಭಾರತ ಮಟ್ಟದ ಕಾನೂನಾಗಬೇಕು. ಆಗ ಯಾವುದೇ ಪುರುಷನಿಗಾಗಲಿ ಅಥವಾ ಮಹಿಳೆಗಾಗಲಿ ಕಾನೂನನ್ನು ಮುರಿಯುವುದು ಸಾಧ್ಯವಾಗುವುದಿಲ್ಲ.

ಮೂರನೆಯ ಸಮಸ್ಯೆಯೆಂದರೆ, ಮಸೂದೆಯನ್ನು ಐಚ್ಛಿಕವನ್ನಾಗಿ ಮಾಡಬೇಕು ಎನ್ನುವ ತಿದ್ದುಪಡಿಯನ್ನು ಮಂಡಿಸಿರುವವರು ಅದರ ಸ್ವರೂಪ ಹೇಗಿರಬೇಕೆಂದು ಸೂಚಿಸಿಲ್ಲ. ಹೆಂಗಸರಿಗೆ ಆಯ್ಕೆಯ

ಸ್ವಾತಂತ್ರ್ಯವಿರುತ್ತದೆಯೊ ಇಲ್ಲವೊ? ತಂದೆಯು ಈ ಕಾನೂನನ್ನು ಆಯ್ಕೆ ಮಾಡಿಕೊಂಡರೆ ಅದು ಮಕ್ಕಳಿಗೆ ಹಾಗೂ ಅವನ ವಂಶಸ್ಥರಿಗೂ ಅನ್ವಯವಾಗುವುದೆ? ಗಂಡ ಆಯ್ಕೆ ಮಾಡಿಕೊಂಡರೆ ಅದು ಹೆಂಡತಿಗೂ ಅನ್ವಯವಾಗುವುದೆ? ಗಂಡ ಬೇಡ ಅಂದರೆ ಹೆಂಡತಿಗೆ ಆಯ್ಕೆಯ ಸ್ವಾತಂತ್ರ್ಯವಿರುತ್ತದೆಯೆ?

**ಶ್ರೀ ಭಾರತಿ** (ಮದ್ರಾಸ್): ಬರೀ ಗೊಂದಲಗಳು.

**ಡಾ. ಅಂಬೇಡ್ಕರ್ :** ಅಂತಹ ತಿದ್ದುಪಡಿಗಳನ್ನು ಒಪ್ಪಿಕೊಂಡರೆ ಬರೀ ಗೊಂದಲವೆ ಆಗಿಬಿಡುತ್ತದೆ.

**ಶ್ರೀ ಜೆ. ಆರ್. ಕಪೂರ್ :** ಕಲಮು – ೨ರ ಉಪಬಂಧ ಏನು ಹೇಳುತ್ತದೆ?

**ಡಾ. ಅಂಬೇಡ್ಕರ್ :** ಕಲಮು –೨ರ ಉಪಬಂಧವನ್ನು ಸೇರಿಸಲಾಗುವುದಿಲ್ಲ. ನಮ್ಮ ಕಾನೂನು ವಿಕೃತಗೊಂಡು ಅದು ಪೂರ್ತಿಯಾಗಿ ಕುರೂಪಗೊಳ್ಳುತ್ತದೆ. ನೋಡುವುದಕ್ಕೂ ಸುಂದರವಾಗಿರಬೇಕು.

ಈಗ ಬೇರೆಯವರಿಗೂ ಕಾನೂನನ್ನು ಅನ್ವಯಿಸಿಕೊಳ್ಳಲು ಅವಕಾಶವಿರಬೇಕು ಎಂಬ ತಿದ್ದುಪಡಿಯನ್ನು ಗಮನಿಸೋಣ. ಈ ಅಂಶದ ಬಗ್ಗೆ ಮಾತನಾಡುವ ಆವಶ್ಯಕತೆಯಿರಲಿಲ್ಲ. ಆದರೆ ಡಾ. ಮುಖರ್ಜಿಯವರು ಇದನ್ನು ಮುಸ್ಲಿಮರಿಗೆ ಅನ್ವಯಿಸಿಲ್ಲ. ಸರ್ಕಾರಕ್ಕೆ ಪ್ರಾಮಾಣಿಕತೆಯಿಲ್ಲ, ಮುಸ್ಲಿಮರಿಗೆ ಅದನ್ನು ಅನ್ವಯಿಸುವ ಧೈರ್ಯವಿಲ್ಲ ಎಂದಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸದಸ್ಯರು ಹೇಳಿದರು, ನಾವು ಜಾರಿಗೆ ತರುತ್ತಿರುವ ಕಾನೂನು ನಿಷ್ಪಕ್ಷಪಾತವಾಗಿಲ್ಲ. ಯಾಕೆಂದರೆ, ಇಂದು ಹಿಂದೂಗಳಿಗೆ ಒಂದಕ್ಕಿಂತ ಹೆಚ್ಚು ಹೆಂಗಸರನ್ನು ಮದುವೆಯಾಗುವ ಹಕ್ಕಿದೆ. ಮುಸ್ಲಿಮರೂ ಕೂಡ ನಾಲ್ಕು ಜನರನ್ನು ಬೇಕಾದರೂ ಮದುವೆಯಾಗಬಹುದು. ಈಗ ಹಿಂದೂಗಳಿಂದ ಈ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಆದರೆ ಮುಸ್ಲಿಮರಿಗೆ ಯಾವ ರೀತಿಯ ತೊಂದರೆಯೂ ಆಗಿಲ್ಲ. ಇದು ಅವರ ಪ್ರಕಾರ ಪಕ್ಷಪಾತ. ಗೌರವಪೂರ್ವಕವಾಗಿ ನಾನು ಸಂವಿಧಾನದ ೨೫ನೇ ಅನುಚ್ಛೇದದತ್ತ ಸದಸ್ಯರ ಗಮನವನ್ನು ಸೆಳೆಯಲು ಪ್ರಯತ್ನಿಸುತ್ತೇನೆ. ಅದರ ಪ್ರಕಾರ: "ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಹಾಗೂ ಆರೋಗ್ಯ ಹಾಗೂ ಈ ಭಾಗದ ಕಾಯಿದೆಯ ಇತರ ನಿಬಂಧನೆಗಳಿಗೆ ಒಳಪಟ್ಟಿರುವ ಪ್ರತಿಯೊಬ್ಬ ವ್ಯಕ್ತಿಗೂ ಆತ್ಮಸಾಕ್ಷಿ ಸ್ವಾತಂತ್ರ್ಯ ಹಾಗೂ ಧರ್ಮವನ್ನು ಆಚರಿಸುವ ಹಾಗೂ ಪ್ರಚಾರ ಮಾಡುವ ಅಧಿಕಾರವಿರುತ್ತದೆ."

ನಾನು ಸದಸ್ಯರ ಗಮನವನ್ನು "ಧರ್ಮವನ್ನು ಆಚರಿಸುವ ಹಾಗೂ ಪ್ರಚಾರ ಮಾಡುವ ಸ್ವಾತಂತ್ರ್ಯ" ಎಂಬ ವಾಕ್ಯದ ಕಡೆಗೆ ಸೆಳೆಯಲುಬಯಸುತ್ತೇನೆ. ನಾನು ಸದ್ಯಕ್ಕೆ ಧರ್ಮದ ಪ್ರಚಾರದ ಬಗ್ಗೆ ಕಾಳಜಿ ವಹಿಸುತ್ತಿಲ್ಲ.

ನಾನು ಕಳೆದ ಸಲ ಈ ಮಸೂದೆಯ ಬಗ್ಗೆ ಮಾತನಾಡಿದಾಗ, ನಮ್ಮ ದೇಶದಲ್ಲಿ ಅದೃಷ್ಟವೋ ದುರಾದೃಷ್ಟವೊ ಒಂದು ನಿರ್ದಿಷ್ಟ ಧರ್ಮದೊಂದಿಗೆ ಅದರ ವೈಯಕ್ತಿಕ ಕಾನೂನು ತೆಕ್ಕೆಹಾಕಿಕೊಂಡಿರುತ್ತದೆ ಎಂಬ ವಿಷಯವನ್ನು ಸ್ಪಷ್ಟಪಡಿಸಿದ್ದೇನೆ. ಆ ಸ್ಥಿತಿಯಿಂದ ನಾವು ಹೊರಬರಲಾಗುವುದಿಲ್ಲ. ಅದೇ ರೀತಿಯಲ್ಲಿ ಒಬ್ಬ ಮುಸ್ಲಿಮನಿಗೆ ನೀವು ಒಂದು ಧರ್ಮವನ್ನು ಬೋಧಿಸಲು ಮತ್ತು ಆಚರಿಸಲು ಸ್ವಾತಂತ್ರ್ಯವಿದೆ ಎಂದರೆ, ನೀವು ಅವನಿಗೆ ತನ್ನ ವೈಯಕ್ತಿಕ ಕಾನೂನನ್ನು ಆಚರಿಸಲು ಅವಕಾಶಮಾಡಿಕೊಟ್ಟಂತೆ. ಹಾಗಾಗಿ ಸಂವಿಧಾನದಲ್ಲಿ ವಿವಿಧ ಕೋಮಿನವರಿಗೆ ತಮ್ಮ ಧರ್ಮವನ್ನು ಆಚರಿಸುವ ಅವಕಾಶವಿದ್ದಾಗ ಮತ್ತು ಅವರ ವೈಯಕ್ತಿಕ ಕಾನೂನನ್ನು ಹೊಂದುವ ಅವಕಾಶ ಕೊಟ್ಟಮೇಲೆ ಒಂದು ಸಮುದಾಯಕ್ಕೆ ತಮ್ಮ ಕಾನೂನನ್ನು ಹೊಂದುವ ಅಥವಾ ಅದನ್ನು ಅವರಿಗೆ ಇಷ್ಟಬಂದಂತೆ ಮಾರ್ಪಡಿಸುವ ಮತ್ತು ಬೇರೆ ಸಮುದಾಯದ ಕಾನೂನನ್ನು ಬೇರೆ ರೀತಿಯಲ್ಲಿ ನೋಡುವ ಅಥವಾ ಮಾರ್ಪಡಿಸುವ ಅವಕಾಶ ಮಾಡಿಕೊಟ್ಟರೆ ಅದು ಯಾವ ರೀತಿಯಲ್ಲೂ ಪಕ್ಷಪಾತವಾಗುವುದಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ**(ಪಂಜಾಬ್) : ಹಿಂದೂ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿ ಒಬ್ಬಳಿಗಿಂತ ಹೆಚ್ಚು ಹೆಂಡತಿಯರನ್ನು ಪಡೆಯಬಹುದು. ಇಸ್ಲಾಮಿಕ್ ಕಾನೂನಿನ ಪ್ರಕಾರವೂ ಒಬ್ಬ ವ್ಯಕ್ತಿಗೆ ಒಬ್ಬಳಿಗಿಂತ ಹೆಚ್ಚು ಜನ ಹೆಂಡತಿಯರನ್ನು ಹೊಂದುವ ಅವಕಾಶವಿದೆ. ಆದರೆ ಮುಸ್ಲಿಮರ ಕಾನೂನಿನಲ್ಲಾಗಲಿ ಹಿಂದೂ ಕಾನೂನಿನಲ್ಲಾಗಲಿ ಒಬ್ಬಳಿಗಿಂತ ಹೆಚ್ಚು ಹೆಂಡತಿ ಇರಲೇಬೇಕೆಂಬ ನಿರ್ಬಂಧವೂ ಇಲ್ಲ. ಹಾಗಾಗಿ ಈ ಅಂಶದ ಬಗ್ಗೆ ಎರಡೂ ವೈಯಕ್ತಿಕ ಕಾನೂನು ಒಂದೇ ಆಗಿದೆ. ಇದೇ ರೀತಿ ಮುಸ್ಲಿಮರಲ್ಲೂ ಬಾಲ್ಯವಿವಾಹಕ್ಕೆ ಅವಕಾಶವಿಲ್ಲ, ಹಿಂದೂಗಳಲ್ಲೂ ಬಾಲ್ಯವಿವಾಹ ಆಚರಿಸಲು ಅವಕಾಶವಿಲ್ಲ. ಯಾಕೆಂದರೆ ಸ್ಮೃತಿ ಹಾಗೂ ಹದಿಸ್‌ಗಳೆರಡೂ ಈ ಬಗ್ಗೆ ಒಂದೇ ನಿಲುವನ್ನು ಹೊಂದಿವೆ. ಹಾಗಾಗಿ ಬಾಲ್ಯವಿವಾಹ ಕಾಯಿದೆ ಮುಸ್ಲಿಮರಿಗೂ ಅನ್ವಯಿಸಲಾಗಿದೆ. ಹಾಗಾಗಿ ಇಂದು ಈ ಕಾನೂನನ್ನು ಮುಸ್ಲಿಮರಿಗೂ ಅನ್ವಯಿಸಿದರೆ ಅದು ಷರಿಯತ್ ಕಾನೂನು ಅಥವಾ ಮುಸ್ಲಿಂ ಕಾನೂನಿನ ವಿರುದ್ಧವಾಗುವುದಿಲ್ಲ. ಆದರೆ ೨೫ನೇ ಅನುಚ್ಛೇದಕ್ಕೆ ಸಂಬಂಧಿಸಿದಂತೆ ನೀವು ಇದನ್ನು ಅನುಸರಿಸುತ್ತಿಲ್ಲ.

**ಡಾ. ಅಂಬೇಡ್ಕರ್ :** ನಾವು ಪಕ್ಷಪಾತ ಮಾಡುತ್ತಿದ್ದೇವೆ ಎಂಬ ಮತ್ತೊಂದು ವಾದಕ್ಕೆ ಉತ್ತರಿಸುತ್ತೇನೆ. ಅದಕ್ಕೆ ನನ್ನ ಉತ್ತರ ಸಂವಿಧಾನದಲ್ಲಿ ನಮಗೆ ವಿವಿಧ ಸಮುದಾಯಗಳನ್ನು ಬೇರೆ ಬೇರೆ ರೀತಿಯಲ್ಲಿ ಕಂಡರೆ ಸರ್ಕಾರ ಪಕ್ಷಪಾತ ಮಾಡುತ್ತಿದೆ ಎಂದು ಯಾರೂ ಆಕ್ಷೇಪಿಸಲಾಗುವುದಿಲ್ಲ. ಅದು ಇಲ್ಲಿ ಮುಖ್ಯ. ಈ ಕಾರಣಕ್ಕಾಗಿ ಅನುಚ್ಛೇದ ೨೫ ತುಂಬಾ ಮುಖ್ಯ ಎಂಬುದು ನಾನು ಸದನಕ್ಕೆ ಹೇಳಲು ಬಯಸುವ ಮತ್ತೊಂದು ಅಂಶ. ಸದನಕ್ಕೆ ನೆನಪಿರುವಂತೆ ಯುರೋಪಿನ ಚರಿತ್ರೆಯುದ್ದಕ್ಕೂ ಚರ್ಚ್ ಹಾಗೂ ಪ್ರಭುತ್ವದ ನಡುವೆ ದೊಡ್ಡ ಕಾಳಗವೇ ನಡೆದಿದೆ. ಸರ್ಕಾರದ ಪ್ರಕಾರ ಚರ್ಚು ಧರ್ಮದಲ್ಲಿ ಹಸ್ತಕ್ಷೇಪ ಮಾಡಬಾರದು ಮತ್ತು ಸರ್ಕಾರ ಕೆಲಸ ನಿರ್ವಹಿಸಬಹುದು. ಅದು ಸಾಮಾನ್ಯ ನಿಲುವು. ನಾವು ಸಂವಿಧಾನದಲ್ಲಿ ಮಧ್ಯದ ದಾರಿಯನ್ನು ಹಿಡಿದಿದ್ದೇವೆ. ನಾವು ಹಿಡಿದ ದಾರಿ ಇದು: ನಾವು ಜನತೆಗೆ ತಮ್ಮ ಧರ್ಮವನ್ನು ಆಚರಿಸಲು ಬೋಧಿಸಲು ಅವಕಾಶ ಮಾಡಿಕೊಡುತ್ತೇವೆ. ಅವರ ವ್ಯಯಕ್ತಿಕ ಕಾನೂನು ಅವರ ಧರ್ಮದಲ್ಲಿ ಸೇರಿರುವುದರಿಂದ ಅವರ ವೈಯಕ್ತಿಕ ಕಾನೂನನ್ನು ಹೊಂದಲೂ ಅವಕಾಶವಿದೆ. ಆದರೆ ಅನುಚ್ಛೇದ ೨೫ರಲ್ಲಿ ಸರ್ಕಾರ ಈ ದೇಶದ ಯಾವುದೇ ಕೋಮಿನ ವೈಯಕ್ತಿಕ ಕಾನೂನಲ್ಲಿ ಹಸ್ತಕ್ಷೇಪ ಮಾಡುವ ಹಕ್ಕನ್ನು ಉಳಿಸಿಕೊಂಡಿದೆ. ಈ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವೂ ಸಾಧ್ಯವಿಲ್ಲ. ಅದು ಮುಖ್ಯ. ಅದು ಕೇವಲ ಸಮಯ, ಸಂದರ್ಭ ಹಾಗೂ ಸನ್ನಿವೇಶದ ಪ್ರಶ್ನೆ ಅಷ್ಟೆ.

ನಾನು ಈ ಸದನದಲ್ಲಿ ಇರುವವರೆಗೆ ಯಾವುದೇ ಕೋಮಿನವರಾಗಲಿ ನಮ್ಮ ವೈಯಕ್ತಿಕ ಕಾನೂನು ಅಥವಾ ಇತರ ಯಾವುದೇ ಕಾನೂನಿನಲ್ಲಿ ಸಂಸತ್ತಿಗೆ ಹಸ್ತಕ್ಷೇಪ ಮಾಡುವ ಹಕ್ಕಿಲ್ಲ ಎಂದು ಯಾರೂ ಹೇಳುವಂತಿಲ್ಲ ಎಂಬುದನ್ನು ಒತ್ತಿಹೇಳಲು ಬಯಸುತ್ತೇನೆ. ಈ ಸಂಸತ್ತು ಎಲ್ಲದಕ್ಕಿಂತ ದೊಡ್ಡದು. ನಾವು ಯಾವುದೇ ಧರ್ಮದ ವೈಯಕ್ತಿಕ ಕಾನೂನಿನಲ್ಲಿ ಹಸ್ತಕ್ಷೇಪ ಮಾಡಬಹುದು. ಈ ದೇಶದ ಯಾವುದೇ ಕೋಮಿನವರಾಗಲಿ ನಾವು ಈ ಸಂಸತ್ತಿನ ಅಧಿಕಾರದಿಂದ ಅಬಾಧಿತರು ಎಂದು ಭಾವಿಸುವುದು ಬೇಡ.

**ಶ್ರೀ ಎ.ಸಿ. ಶುಕ್ಲ :** ಕಾನೂನನ್ನು ನೀವು ಅಂಗೀಕರಿಸುತ್ತಿದ್ದೀರಿ. ಆದರೆ ನಿಮ್ಮ ಕೈಯಲ್ಲಿ ಅದನ್ನು ಜಾರಿಮಾಡಲಾಗುವುದಿಲ್ಲ.

**ಡಾ. ಅಂಬೇಡ್ಕರ್ :** ಈ ಪ್ರಶ್ನೆ ತೀರಾ ಸಂಕುಚಿತವಾದದ್ದು. ಈಗ ವಿಷಯ ಇಷ್ಟೇ,

ಉದ್ದೇಶಪೂರ್ವಕವಾಗಿ, ಚಿಂತಿಸಿ ಹಿಂದೂ ಸಮುದಾಯಕ್ಕೆ ಅನ್ವಯಿಸುವ ದೃಷ್ಟಿಯಿಂದಲೇ ಮಾಡಿರುವ ಈ ಹಿಂದೂ ಸಂಹಿತೆ ಮಸೂದೆಯನ್ನು ನಾವು ಈಗಲೇ ಮುಸ್ಲಿಮರಿಗೆ ಅನ್ವಯಿಸಬೇಕೆ?

**ಶ್ರೀ ಜೆ. ಆರ್. ಕಪೂರ್ :** ಹಿಂದೂಗಳಲ್ಲದವರಿಗೂ.

**ಡಾ. ಅಂಬೇಡ್ಕರ್ :** ಈ ರೀತಿಯ ಶಾಸನವನ್ನು ಮಾಡುವಾಗ ನಾವು ಒಂದು ಆವಶ್ಯಕ ಕ್ರಮವನ್ನು ಅನುಸರಿಸಿದ್ದೇವೆ. ಸಾಮಾನ್ಯವಾಗಿ ಸರ್ಕಾರವು, ಪ್ರತಿಯೊಂದು ಸಾಮಾಜಿಕ ಶಾಸನಮಾಡುವ ಸಮಯದಲ್ಲೂ, ಒಂದು ನಿರ್ದಿಷ್ಟ ಶಾಸನ ಮಾಡುವ ಮೊದಲು – ನನ್ನನ್ನು ಕೇಳಿದರೆ ಇದು ಸಾಂಪ್ರದಾಯಿಕವಾಗಿ, ಪಾಲಿಸಲೇಬೇಕಾದ ರೂಢಿ–ಸಂಬಂಧಪಟ್ಟ ಜನರನ್ನು ಸಂಪರ್ಕಿಸುವ ನಿಯಮವನ್ನು ಪಾಲಿಸುತ್ತಾ ಬಂದಿದೆ. ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತು. ಈ ಮಸೂದೆಗೆ ಸಂಬಂಧಿಸಿದಂತೆಯೂ ಒಂದು ಸಮಿತಿಯಿತ್ತು. ಅದು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ರಾಜ್ಯದಿಂದ ರಾಜ್ಯಕ್ಕೆ ಸುತ್ತಿ, ಪ್ರತಿ ಗುಂಪಿನ, ಪ್ರತಿ ಸಮುದಾಯದ, ವ್ಯಕ್ತಿಗಳ, ಸಂಘಟಿತ ಜನರ ಅಭಿಪ್ರಾಯವೇನೆಂದು ತಿಳಿಯುವ ಉದ್ದೇಶದಿಂದ ಸಾಕ್ಷ್ಯವನ್ನು ಸಂಗ್ರಹಿಸುತ್ತಾ ಬಂದಿದೆ. ಆದರೆ ಈ ಮಸೂದೆಗೆ ಸಂಬಂಧಿಸಿದಂತೆ ಯಾವ ಸಮಿತಿಯಾಗಲಿ, ಸರ್ಕಾರವಾಗಲಿ ಮುಸ್ಲಿಂ ಸಮುದಾಯವನ್ನು ಸಂಪರ್ಕಿಸಿಲ್ಲ. ನೋಡಿ, ನಾವು ಹಿಂದೂಗಳಿಗಾಗಿ ಏಕವಿವಾಹ ಕಾಯಿದೆಯನ್ನು ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಕಾಯಿದೆಯನ್ನು ಮಾಡಲು ಹೊರಟಿದ್ದೇವೆ. ಇದನ್ನು ಅವರಿಗೆ ಅನ್ವಯಿಸಲು ಹೊರಟಿದ್ದೇವೆ, ನಿಮ್ಮ ಅಭಿಪ್ರಾಯವೇನು? ಎಂದು ಅವರನ್ನು ಕೇಳಿಲ್ಲ. ಅಂತಹ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮೊದಲೇ ಅವರನ್ನು ಕೇಳದೆ, ಮುಸ್ಲಿಂ ಸಮುದಾಯಕ್ಕೆ ಇದನ್ನು ಅನ್ವಯಿಸುವುದು ದಡ್ಡತನವಷ್ಟೇ ಅಲ್ಲ. ತೀರಾ ನಿರಂಕುಶ ರಾಜಕೀಯ ಕ್ರಮವಾಗುತ್ತದೆ.

**ಪಂಡಿತ ಮೈತ್ರ :** ಯಾಕೆ ಅವರನ್ನು ಮೊದಲೇ ಕೇಳಲಿಲ್ಲ?

**ಡಾ. ಅಂಬೇಡ್ಕರ್ :** ನಾವು ಯಾಕೆ ಹಾಗೆ ಮಾಡಲಿಲ್ಲ ಅಂದರೆ ಹಿಂದೂ ಸಮುದಾಯದಂತಹ ಕೆಲವು ಸಮುದಾಯಗಳಿಗೆ ಸುಧಾರಣೆ ತೀರಾ ತುರ್ತಾಗಿ ಬೇಕಿತ್ತು. ಇದು ಒಂದು ಕೊಳಚೆಪ್ರದೇಶ ನಿರ್ಮೂಲನ ಕೆಲಸ.

**ಪಂಡಿತ ಮೈತ್ರ :** ಅದನ್ನು ಮಾಡಲು ನಿಮಗೆ ಧೈರ್ಯ ಇರಲಿಲ್ಲ.

**ಡಾ. ಅಂಬೇಡ್ಕರ್ :** ಇದೊಂದು ಕೊಳಚೆಪ್ರದೇಶ ನಿರ್ಮೂಲನ ಕೆಲಸ.

**ಶ್ರೀ ಶ್ಯಾಮನಂದನ ಸಹಾಯ್ :** ನೀವು ಸಿಖ್ ಸಮುದಾಯದವರನ್ನು ಸಂಪರ್ಕಿಸಿದ್ದೀರಾ?

**ಡಾ. ಅಂಬೇಡ್ಕರ್ :** ಖಂಡಿತಾ. ನಾನು ಅದಕ್ಕೆ ಬರುತ್ತೇನೆ. ತಾಳ್ಮೆ ಕಳೆದುಕೊಳ್ಳಬೇಡಿ. ನಾವು ಅವರನ್ನು ಸಂಪರ್ಕಿಸಿದ್ದೇವೆ.

**ಶ್ರೀ ಭಟ್ :** ಪಾರ್ಲಿಮೆಂಟ್ ಇಚ್ಛೆಪಟ್ಟರೆ ಈಗಲೂ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಅಭಿಪ್ರಾಯವನ್ನು ತಿಳಿಯಬಹುದಲ್ಲವೆ. ಮಾನ್ಯ ಕಾನೂನು ಮಂತ್ರಿಗಳು ಏನನ್ನುತ್ತಾರೆ? ಇರುವ ತೊಂದರೆ ಏನು?

**ಡಾ. ಅಂಬೇಡ್ಕರ್ :** ಇರುವ ಅಡ್ಡಿಯೆಂದರೆ ಈಗ ಊಟ ತಯಾರಾಗಿದೆ. ಬಡಿಸುತ್ತಿದ್ದಾರೆ. ನಾವು ತಿನ್ನೋಣ. ಬೇರೆಯವರನ್ನು ಆಹ್ವಾನಿಸುವುದಕ್ಕೆ ಸಮಯಬೇಕು. ಜೊತೆಗೆ ಬೇರೆಯವರಿಗೆ ಬಡಿಸಲು ಬೇಕಾದಷ್ಟು ಆಹಾರವೂ ಇಲ್ಲ.

**ಮಾನ್ಯ ಅಧ್ಯಕ್ಷರು :** ಮಾನ್ಯ ಸದಸ್ಯರು ಚರ್ಚೆಯ ಉದ್ದಕ್ಕೂ ಈ ರೀತಿ ಅಡ್ಡಿಮಾಡುತ್ತಾ ಹೋಗುವುದು ಸರಿಯಲ್ಲ.

**ಶ್ರೀ ಭಟ್ :** ಇವೆಲ್ಲಾ ಸಿಹಿ ತಿನಿಸುಗಳು. ಸುಮಾರು ದಿನ ಇಟ್ಟರೂ ಹಾಳಾಗುವುದಿಲ್ಲ.

**ಡಾ. ಅಂಬೇಡ್ಕರ್ :** ಇನ್ನು ರಾಜ್ಯಗಳಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಡಬೇಕೆನ್ನುವ ಸಲಹೆಗೆ ಸಂಬಂಧಿಸಿದಂತೆ, ಒಂದಂಶವನ್ನು ನಾನೀಗಾಗಲೇ ತಿಳಿಸಿದ್ದೇನೆ. ಕೆಲ ರಾಜ್ಯಗಳು ಕಾನೂನು ಜಾರಿಗೆ ತಂದು ಕೆಲವು ರಾಜ್ಯಗಳು ಜಾರಿಗೆ ತರದಿದ್ದರೆ ನಾನು ಈಗಾಗಲೇ ಹೇಳಿದಂತಹ ಗೊಂದಲಗಳು ಹುಟ್ಟಿಕೊಳ್ಳುತ್ತವೆ. ಅಂತಹ ಮೂಲಭೂತ ವಿಷಯಗಳಾದ ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಗೊಂದಲವನ್ನು ಸೃಷ್ಟಿಸುವಂತಹ ಆಯ್ಕೆಯ ಅವಕಾಶವನ್ನು ರಾಜ್ಯಗಳಿಗೆ ಕೊಡುವುದು ಸೂಕ್ತ ಎಂದು ನನಗೆ ಅನ್ನಿಸುವುದಿಲ್ಲ. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಬೇಕು. ರಾವ್ ಸಮಿತಿಯು ಬಿ ವಿಭಾಗದ ರಾಜ್ಯಗಳಿಗೆ ಭೇಟಿ ನೀಡಿದ್ದಾಗ್ಯೂ, ಔಪಚಾರಿಕ ಸಮ್ಮೇಳನ ನಡೆದಾಗ ಬಿ ವಿಭಾಗದ ರಾಜ್ಯಗಳ ಕೆಲವು ಪ್ರತಿನಿಧಿಗಳನ್ನು ಕರೆದಿದ್ದೆವು. ಅದರಲ್ಲಿ ಸೌರಾಷ್ಟ್ರದ ಮುಖ್ಯ ನ್ಯಾಯಾಧೀಶರು, ಮೈಸೂರಿನ ಅಡ್ವೋಕೇಟ್ ಜನರಲ್ ಇದ್ದರು ಅಂದುಕೊಂಡಿದ್ದೇನೆ.

**ಶ್ರೀ ಭಟ್ :** ಸೌರಾಷ್ಟ್ರದ ಮುಖ್ಯ ನ್ಯಾಯಾಧೀಶರನ್ನು ಯಾಕೆ ಕರೆದಿದ್ದಿರಿ? ಅವರು ಆ ರಾಜ್ಯದಲ್ಲಿ ಸೇವೆಯಲ್ಲಿದ್ದರು.

**ಡಾ. ಅಂಬೇಡ್ಕರ್ :** ಅವರಿಗೆ ಅಲ್ಲಿಯ ಪರಿಸ್ಥಿತಿ ಗೊತ್ತಿತ್ತು.

ನಾವು ಅದನ್ನು ಮಾಡಿದ್ದೆವು. ಈಗ ಸಿಖ್ಖರ ಪ್ರಶ್ನೆಗೆ ಬರುತ್ತೇನೆ. ನನ್ನ ಸ್ನೇಹಿತರಾದ ಶ್ಯಾಮನಂದನ್ ಸಹಾಯ್ ಎಲ್ಲೋ ಹೋಗಿದ್ದಾರೆ.....

**ಶ್ರೀ ಶ್ಯಾಮನಂದನ್ ಸಹಾಯ್ :** ಡಾ. ಅಂಬೇಡ್ಕರ್ ಅವರೇ, ನಾನಿಲ್ಲೇ ಇದ್ದೇನೆ.

**ಡಾ. ಅಂಬೇಡ್ಕರ್ :** ನಾನೀಗ ನನ್ನ ಸ್ನೇಹಿತ ಮಾನ್ಯ ಭೂಪೀಂದ್ರ ಸಿಂಗ್ ಮಾನ್ ಎತ್ತಿದ ಪ್ರಶ್ನೆಗೆ ಬರುತ್ತೇನೆ. ಅವರು ಮಂಡಿಸಿದ ತಿದ್ದಪಡಿಯೇನೆಂದರೆ ಈ ಮಸೂದೆಯನ್ನು ಸಿಖ್ಖರಿಗೆ ಅನ್ವಯಿಸಬಾರದು ಎಂಬುದು. ನನಗೆ ವೈಯಕ್ತಿಕವಾಗಿ ಈ ತಿದ್ದುಪಡಿಯ ಬಗ್ಗೆ ಹೇಳಲಿಕ್ಕೆ ಏನೂ ಇಲ್ಲ. ಏಕೆಂದರೆ ಇವರೊಬ್ಬರೇ ಅಲ್ಲ ಈ ರೀತಿಯ ತಿದ್ದುಪಡಿಯನ್ನು ಮಂಡಿಸಿರುವುದು. ನನ್ನ ಗೆಳೆಯ ನಾಸಿರುದ್ದೀನ್ ಅಹಮದ್ ಅವರು ಬೌದ್ಧರು, ಜೈನರು, ಸಿಖ್ಖರು ಮೊದಲಾದವರನ್ನು ಕೈಬಿಡಲು ತಿದ್ದುಪಡಿಯನ್ನು ಮಂಡಿಸಿದ್ದಾರೆ. ಎಲ್ಲರಿಗೂ ತಮ್ಮ ದೃಷ್ಟಿಕೋನವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿರುತ್ತದೆ. ಅವರ ಭಾಷಣದ ಧ್ವನಿ ತೀರಾ ದ್ವೇಷದಿಂದ ಕೂಡಿತ್ತು. ನನಗೆ ತುಂಬಾ ನೋವಾಯಿತು ಎಂದು ಹೇಳಲು ಅವಕಾಶಕೊಡುತ್ತೀರೆಂದು ನಂಬಿದ್ದೇನೆ

**ಸರ್ದಾರ್ ಬಿ.ಎಸ್. ಮಾನ್ :** ನಿಲ್ಲುತ್ತಾ.....

**ಮಾನ್ಯ ಅಧ್ಯಕ್ಷರು :** ಈ ರೀತಿ ಮಾನ್ಯ ಸದಸ್ಯರು ನಿರಂತರವಾಗಿ ಅಡಚಣೆ ಮಾಡುವುದು ಸರಿಯಲ್ಲ.

**ಶ್ರೀ ಶ್ಯಾಮನಂದನ್ ಸಹಾಯ್ :** ಮಾನ್ಯ ಮಂತ್ರಿಗಳು ಮಸೂದೆಯನ್ನು ವಿರೋಧಿಸುವವರ ಬಗ್ಗೆ ಅಂತಹ ಟೀಕೆಗಳನ್ನು ಮಾಡುತ್ತಾ ಹೋದರೆ, ನಮಗೆ ಅಡಚಣೆ ಮಾಡಲು ಸ್ವಾತಂತ್ರ್ಯವಿರುತ್ತದೆ.

**ಮಾನ್ಯ ಅಧ್ಯಕ್ಷರು :** ಶಿಸ್ತು, ಶಿಸ್ತು,

**ಶ್ರೀ ಶ್ಯಾಮನಂದನ್ ಸಹಾಯ್ :** ಅವರು ಇದೇ ರೀತಿ ಮುಂದುವರಿದರೆ, ಪರಿಸ್ಥಿತಿ ಇನ್ನೂ ಹದಗೆಡುತ್ತದೆ.

**ಡಾ. ಅಂಬೇಡ್ಕರ್ :** ನನಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಕ್ಕಿದೆ.

**ಮಾನ್ಯ ಅಧ್ಯಕ್ಷರು :** ಶಿಸ್ತು, ಶಿಸ್ತು.

**ಶ್ರೀ ಆರ್.ಕೆ. ಚೌಧರಿ :** ನೀವು ಯಾಕೆ ಮಂತ್ರಿಗಳಿಗೆ ಕುಳಿತುಕೊಳ್ಳಲು ಹೇಳಬಾರದು?

**ಮಾನ್ಯ ಅಧ್ಯಕ್ಷರು :** ಏನಿದು? ನಿರಂತರ ಗದ್ದಲ. ಸದಸ್ಯರು ಶಿಸ್ತನ್ನು ಕಾಪಾಡಿಕೊಂಡು ಬರಬೇಕು.

**ಶ್ರೀ ಆರ್.ಕೆ. ಚೌಧರಿ :** ಮಾನ್ಯ ಮಂತ್ರಿಗಳು ಕುಳಿತುಕೊಳ್ಳದೇ ಹೋದರೆ ಶಿಸ್ತು ಎಂದು ಅರ್ಥವೇನು? ನೀವು ನಮ್ಮನ್ನು ಮಾತ್ರ ನಿಯಂತ್ರಿಸುತ್ತಿರುವಿರಿ. ಬೇರೆಯವರನ್ನಲ್ಲ.

**ಡಾ. ಅಂಬೇಡ್ಕರ್ :** ನಾನು ಹೇಳುತ್ತಿರುವುದು (ಅಡಚಣೆ).

**ಸರ್ದಾರ್ ಬಿ.ಎಸ್. ಮಾನ್ :** ನಾನು ತೇಜೋವಧೆಯನ್ನು ವಿನೋದವಾಗಿಯೇ ತೆಗೆದುಕೊಳ್ಳುತ್ತೇನೆ. ಅವರ ಭಾಷಣವೂ ಕೂಡ ಇಂದು ಅಷ್ಟೇ ಜಿಗುಪ್ಸೆ ಹುಟ್ಟಿಸುವಂತೆ ಇತ್ತು.

**ಡಾ. ಅಂಬೇಡ್ಕರ್ :** ನಾನು ಒಪ್ಪಿಕೊಳ್ಳಲು ತಯಾರು.

**ಮಾನ್ಯ ಅಧ್ಯಕ್ಷರು :** ನಾನು ಮಾನ್ಯ ಸದಸ್ಯರಿಗೆ ಹೇಳುವುದಿಷ್ಟೆ. ಮಂತ್ರಿಗಳ ಮಾತು ಯಾರಿಗೆ ಸಂಬಂಧಪಡುತ್ತದೊ ವಿಷಯವನ್ನು ಅವರಿಗೇ ಬಿಡುವುದು ಒಳ್ಳೆಯದು.

**ಡಾ. ಅಂಬೇಡ್ಕರ್ :** ನನ್ನ ಅಭಿಪ್ರಾಯ ತೀರಾ ಸರಳ. ಈಗ ಭಾರತೀಯರು ಮುಸ್ಲಿಮರನ್ನು ಹೊರಗಿಟ್ಟಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ.....

**ಶ್ರೀ ಸೋಂಧಿ :** ಅವರು ಭಾರತೀಯರಲ್ಲ. ಹೌದಾ?

**ಡಾ. ಅಂಬೇಡ್ಕರ್ :** ಹಾಗೇ ಅಂದುಕೊಂಡೇ ಮುಂದುವರಿಯುತ್ತೇನೆ. ಯಾಕೆಂದರೆ ನನಗೆ ಬೇರೆ ಸೂಕ್ತ ಪದ ಸಿಗುತ್ತಿಲ್ಲ. ಮುಸ್ಲಿಮೇತರರಾದ ನಮ್ಮದು ತುಂಬಾ ಒಗ್ಗಟ್ಟಿನ ಕುಟುಂಬವೇನಲ್ಲ. ನಾವೆಲ್ಲಾ ಒಂದು ಎಂಬ ಅವಾಸ್ತವಿಕವಾದ ನಿಲುವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ನನಗೆ ತೋರುವುದಿಲ್ಲ. ನಾವು ಒಂದಲ್ಲ. ನಾವು ಸಾಧ್ಯವಾದಷ್ಟು ಒಂದಾಗುವುದಕ್ಕೆ ಪ್ರಯತ್ನವನ್ನು ಮಾಡಬಾರದೆಂದು ನಾನು ಹೇಳುತ್ತಿಲ್ಲ. ನಾವು ದ್ವೇಷದ ಬೀಜವನ್ನು ಯಾವಾಗಲೂ ಬಿತ್ತುತ್ತಿರಬಾರದು. ಸದನದಲ್ಲಿ ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ ನಡೆದಾಗ ಯಾರಾದರೂ "ನಾವು ಈ ಗುಂಪಿಗೆ ಸೇರಿಲ್ಲ ಮತ್ತು ಈ ಕಾನೂನು ನಮಗೆ ಅನ್ವಯವಾಗುವುದಿಲ್ಲ" ಎಂದರೆ ......

**ಸರ್ದಾರ್ ಹುಕಂ ಸಿಂಗ್** (ಪಂಜಾಬ್) **:** ಪರಿಶಿಷ್ಟ ಜಾತಿಯವರು ಯಾರು ಎಂದು ಅಧ್ಯಕ್ಷರು ಘೋಷಣೆ ಮಾಡುತ್ತಿದ್ದಾಗ ನೀವು ಯಾಕೆ ಅವರನ್ನು ವಿನಂತಿಸಿಕೊಳ್ಳಲಿಲ್ಲ? ಅವರು ಆ ಭೇದವನ್ನು ಮಾಡಿದರು.

**ಡಾ. ಅಂಬೇಡ್ಕರ್ :** ನೀವು ಏನಾಯಿತು ಎಂಬುದನ್ನು ನೆನಪಿಸಿಕೊಂಡರೆ, ಅವರು ಅದನ್ನು ತಮ್ಮ ಉದಾರವಾದಿ ಮನೋಭಾವದಿಂದ ಮಾಡಿರಬೇಕೆಂದು ತೋರುತ್ತದೆ.

ನನಗೆ ಅದೇ ಇಷ್ಟವಿಲ್ಲ. ನನ್ನ ದೃಷ್ಟಿಯಲ್ಲಿ, ನಾವೆಲ್ಲರೂ ಏನೇ ಆಗಲಿ ಒಂದಾಗುವ ಪ್ರಾಮಾಣಿಕ ಪ್ರಯತ್ನಮಾಡಬೇಕು. ನಮಗೆ ನಮ್ಮದೇ ಆದ ಧಾರ್ಮಿಕ ನಂಬಿಕೆಗಳಿರಬಹುದು. ಕೆಲವರು ದೇವರನ್ನು ನಂಬಬಹುದು, ಕೆಲವರು ಆತ್ಮವನ್ನು ನಂಬಬಹುದು. ಅವೆಲ್ಲ ಆಧ್ಯಾತ್ಮಿಕ ವಿಷಯಗಳು. ಆದರೆ ನಮ್ಮಲ್ಲಿ ನಮ್ಮ ನಂಬಿಕೆಗಳಿಗೆ ಸಂಬಂಧಿಸಿದಂತೆ ಎಷ್ಟೇ ವ್ಯತ್ಯಾಸವಿದ್ದರೂ, ನಮ್ಮ ಆಂತರಿಕ ಸಂಬಂಧವನ್ನು ನಿರ್ಧರಿಸುವ ಒಂದು ಸಮಾನ ಕಾನೂನು ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಸೂಕ್ತವೆಂದು ಅನ್ನಿಸುವುದಿಲ್ಲವೆ?

**ಸರ್ದಾರ್ ಹುಕಂ ಸಿಂಗ್ :** ಇದು ನಿಮ್ಮಿಂದಲೆ ಪ್ರಾರಂಭವಾಗುವುದು ಒಳ್ಳೆಯದಲ್ಲವೆ?

**ಡಾ. ಅಂಬೇಡ್ಕರ್ :** ನೀವು ಪ್ರತಿಬಾರಿಯೂ "ನಾನು ಬೇರೆ, ನಮಗೆ ಇದು ಅನ್ವಯವಾಗುವುದಿಲ್ಲ, ನಮಗೆ ಅದು ಅನ್ವಯವಾಗುವುದಿಲ್ಲ. ಹಾಗಾಗಿ ನಿಮ್ಮ ಕಾನೂನನ್ನು ನಮ್ಮ ಮೇಲೆ ಹೇರಬೇಡಿ" ಎಂದು ಯಾಕೆ ಹೇಳುತ್ತೀರಿ, ಇದನ್ನೇ ನಾನು ವಿರೋಧಿಸುವುದು.

**ಶ್ರೀ ಎ. ಸಿ. ಶುಕ್ಲ :** ಸ್ವಭಾವ ಭಿನ್ನಭಿನ್ನವಾಗಿರುತ್ತದೆ.

**ಡಾ. ಅಂಬೇಡ್ಕರ್ :** ನನ್ನ ಮಿತ್ರ, ಸನ್ಮಾನ್ಯ ಸರ್ದಾರ್ ಮಾನ್‌ರವರ ಪ್ರಧಾನ ಆಪಾದನೆಯೆಂದರೆ ಈ ವಿಷಯದಲ್ಲಿ ಸಿಖ್ಖರ ಅಭಿಪ್ರಾಯವನ್ನು ಕೇಳಲಿಲ್ಲ ಎಂಬುದು. ಇದಕ್ಕೆ ನಾನು ಎರಡು ರೀತಿಯಲ್ಲಿ ಉತ್ತರಿಸುತ್ತೇನೆ. ಸಿಖ್ಖರನ್ನು ಸಂಪರ್ಕಿಸಿಲ್ಲದಿದ್ದರೆ ನನ್ನ ಅಭಿಪ್ರಾಯದಲ್ಲಿ ಅವರ ಅಭಿಪ್ರಾಯ ಕೇಳಬೇಕಾಗಿಲ್ಲ.

**ಸರ್ದಾರ್ ಬಿ.ಎಸ್. ಮಾನ್ :** ಓಹ್!

**ಡಾ. ಅಂಬೇಡ್ಕರ್ :** ದಯವಿಟ್ಟು ನನ್ನ ಮಾತನ್ನು ಪೂರ್ತಿ ಕೇಳಿ.

.......... ಯಾಕೆಂದರೆ ಈವರೆಗೂ ಕಾನೂನಿನ ಉದ್ದೇಶಕ್ಕೆ ಸಿಖ್ಖರನ್ನು ಹಿಂದೂಗಳೆಂದೇ ಭಾವಿಸಲಾಗಿದೆ. ನಾನು ಮುಲ್ಲರವರ ಹಿಂದೂ ಕಾನೂನು ಗ್ರಂಥವನ್ನು ನೋಡಿದ್ದೇನೆ. ಅದು ಸಲೀಸಾಗಿ ಕೈಗೆಟುಕುವ ಸಂಪುಟ. ಅದರ ಪರಿವಿಡಿಯನ್ನು ನನ್ನ ಮಾನ್ಯ ಗೆಳೆಯರು ಪರಿಶೀಲಿಸಿದರೆ, ಅದರಲ್ಲಿ ಹಿಂದು ಕಾನೂನನ್ನು ತಿದ್ದುಪಡಿ ಮಾಡಲು ಈ ದೇಶದ ವಿಧಾನಸಭೆಯಲ್ಲಿ ಅಂಗೀಕರಿಸಿರುವ ಕೆಲವು ಕಾಯ್ದೆಗಳನ್ನು ನೋಡಬಹುದು. ಅಂಥ ಹಲವಾರು ಕಾಯ್ದೆಗಳಿವೆ. ನಾನು ನನ್ನ ಗೆಳೆಯರನ್ನು ಕೇಳುವುದಿಷ್ಟೆ–ಹಿಂದೂ ಕಾನೂನನ್ನು ಬದಲಿಸಲು ರೂಪಿಸಿದ ಆ ಕಾನೂನುಗಳನ್ನು ಮಾಡುವಾಗ ಮತ್ತು ಅದನ್ನು ಸಿಖ್ಖರಿಗೆ ಅನ್ವಯಿಸಿದಾಗ ಸಿಖ್ಖರ ಅಭಿಪ್ರಾಯವನ್ನು ಕೇಳಿದ್ದರೆ? ಅಥವಾ ಸಿಖ್ಖರನ್ನು ಅದರ ವ್ಯಾಪ್ತಿಯಿಂದ ಹೊರಗಿಟ್ಟಿದ್ದರೆ? ದಯವಿಟ್ಟು ತಿಳಿಸಿ.

**ಸರ್ದಾರ್ ಹುಕಂ ಸಿಂಗ್ :** ಯಾಕೆಂದರೆ ಅಲ್ಲಿ ಸಂಪ್ರದಾಯ ಚಾಲ್ತಿಯಲ್ಲಿತ್ತು.

**ಡಾ. ಅಂಬೇಡ್ಕರ್ :** ಸಮಾಲೋಚನೆ ನಡೆಸಿದ ಯಾವ ಉದಾಹರಣೆಯೂ ನನಗೆ ದೊರಕಿಲ್ಲ. ಹಿಂದೂ ಕಾನೂನನ್ನು ತಿದ್ದುಪಡಿಮಾಡಲು ಯಾವುದೇ ಕಾನೂನನ್ನು ಜಾರಿಗೆ ತಂದಾಗಲೂ ಅದನ್ನು ನ್ಯಾಯಿಕ ವ್ಯಾಖ್ಯಾನಗಳಲ್ಲಿ 'ಹಿಂದೂ' ಎಂಬ ಪದದ ವ್ಯಾಪ್ತಿಗೆ ಬರುವವರಿಗೆಲ್ಲ ಅನ್ವಯಿಸಲಾಗುತ್ತಿತ್ತು.

**ಪಂಡಿತ ಮೈತ್ರ :** ಹಾಗಾದರೆ ಈಗ ಅದನ್ನು ಇಲ್ಲಿ ಇಡುವ ಆವಶ್ಯಕತೆಯೇನು?

**ಡಾ. ಅಂಬೇಡ್ಕರ್ :** ಯಾಕೆಂದರೆ, ನಿಮ್ಮಂತಹವರು ಅನುಮಾನಿಸಬಹುದು.

ನಾನೀಗ ಉತ್ತರದ ಇನ್ನೊಂದು ಭಾಗಕ್ಕೆ ಬರುತ್ತೇನೆ. ಸಿಖ್ಖರನ್ನು ಸಂಪರ್ಕಿಸಲಿಲ್ಲ ಎಂಬುದು ಆಧಾರರಹಿತ ಆಪಾದನೆ ಎಂಬುದನ್ನು ಈಗ ಸಾಬೀತುಪಡಿಸುತ್ತೇನೆ. ರಾವ್ ಸಮಿತಿಯು ಲಾಹೋರ್ ಪ್ರವಾಸ ಕೈಗೊಂಡಾಗ, ಅವರು ಸಂಗ್ರಹಿಸಿದ ಸಾಕ್ಷ್ಯಗಳನ್ನು ಪರಿಶೀಲಿಸಿದ್ದೇನೆ. ಕೆಳಕಂಡ ಮಹನೀಯರು ಸಮಿತಿಯ ಮುಂದೆ ಹಾಜರಾಗಿದ್ದರು ಅಥವಾ ಹೇಳಿಕೆ ನೀಡಿದ್ದರು. ನಾನು ಉಲ್ಲೇಖಿಸಲು ಬಯಸುವ ಮೊದಲ ವ್ಯಕ್ತಿ ಲಾಹೋರ್ ಉನ್ನತ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ತೇಜ್‌ಸಿಂಗ್. ಅವರು ಪಂಜಾಬಿನ ಉನ್ನತ ನ್ಯಾಯಾಲಯದ ಸದಸ್ಯರಾಗಿ ರಾವ್ ಸಮಿತಿಗೆ ಒಂದು ಹೇಳಿಕೆ ನೀಡಿದ್ದಾರೆ. ನಾನು ಅದರ ಪ್ರಧಾನ ಭಾಗವನ್ನು ನೋಡಿದ್ದೇನೆ. ಅದರಲ್ಲಿ ಎಲ್ಲೂ ತೇಜ್‌ಸಿಂಗ್‌ರವರು ಇದನ್ನು ಸಿಖ್ಖರಿಗೆ ಅನ್ವಯ ಮಾಡಬಾರದು ಎಂಬ ಒಂದೇ ಒಂದು ಸಾಲನ್ನು ಬರೆದಿರುವುದು ಕಾಣಲಿಲ್ಲ. ನ್ಯಾಯಮೂರ್ತಿ ತೇಜ್‌ಸಿಂಗ್ ಅವರಿಗೆ ಸಿಖ್ಖ್ ಸಮುದಾಯದ ಪರವಾಗಿ ಮಾತನಾಡುವ ಹಕ್ಕಿದೆ ಎಂಬುದನ್ನು ನನ್ನ ಮಾನ್ಯ ಗೆಳೆಯರು ಒಪ್ಪುತ್ತಾರೊ ಇಲ್ಲವೊ ಗೊತ್ತಿಲ್ಲ.

ನನಗೆ ದಾಖಲೆಗಳಲ್ಲಿ ಕಾಣುವ ಇನ್ನೊಂದು ಹೆಸರು ಸರ್ದಾರ್ ವರ್ಯಾಮ್‌ಸಿಂಗ್. ಅವರು ಆಕಾಲಿ ದರ್ಬಾರಿನ ಪ್ರತಿನಿಧಿಯಾಗಿ ಬಂದಿದ್ದರು. ಅವರು ಈ ಮಸೂದೆಯನ್ನು ಸಿಖ್ಖರಿಗೆ ಅನ್ವಯಮಾಡಬಾರದು, ಯಾಕೆಂದರೆ ಸಿಖ್ಖರು ಹೆಚ್ಚು ಉದಾರವಾದಿ ಜನ ಎಂದಿದ್ದಾರೆ.

**ಸರ್ದಾರ್ ಹುಕಂ ಸಿಂಗ್ :** ಯಾರೀತ? ಅವರ ಬಗ್ಗೆ ಏನಾದರೂ ವಿವರಗಳಿವೆಯೆ?

**ಡಾ. ಅಂಬೇಡ್ಕರ್ :** ಅಕಾಲಿ ದರ್ಬಾರ್‌ನ ಸೆಕ್ರೆಟರಿ–ಅದು ದಾಖಲೆಗಳಲ್ಲಿ ಇರುವ ವಿವರಣೆ.

ರಾವ್ ಸಮಿತಿಯ ಮುಂದೆ ಸಾಕ್ಷ್ಯ ನೀಡಿದ ಮತ್ತೊಬ್ಬರು ಸರ್ದಾರ್ ಇಕ್ಬಾಲ್ ಸಿಂಗ್. ಆತ ಒಬ್ಬ ಲಾಯರ್. ತಮ್ಮ ವೈಯಕ್ತಿಕ ಆಸಕ್ತಿಯಿಂದ ಬಂದಿದ್ದರು.

(ಮಾನ್ಯ ಡೆಪ್ಯೂಟಿ ಸ್ಪೀಕರ್ ಪೀಠದಲ್ಲಿ)

**ಸರ್ದಾರ್ ಬಿ.ಎಸ್. ಮಾನ್ :** ಅವರು ಏನು ಹೇಳಿದರು?

**ಡಾ. ಅಂಬೇಡ್ಕರ್ :** ಏನೂ ಹೇಳಲಿಲ್ಲ.

**ಸರ್ದಾರ್ ಹುಕಂ ಸಿಂಗ್ :** ಹಾಗಾದರೆ ಅವರನ್ನು ಸಲೀಸಾಗಿ ಉಲ್ಲೇಖಿಸಬಹುದು.

**ಒಬ್ಬ ಮಾನ್ಯ ಸದಸ್ಯರು :** ಅವರು ಹೇಳಿಕೆಯನ್ನು ಓದಿಲಿ.

**ಡಾ. ಅಂಬೇಡ್ಕರ್ :** ದಾಖಲೆ ಇಲ್ಲಿದೆ. ನಿಮಗೆ ಬೇಕಾದ ಸಂಪೂರ್ಣ ಮಾಹಿತಿ ಇಲ್ಲಿದೆ. ಅವರು ಸಿಖ್ಖರಿಗೆ ಈ ಕಾಯಿದೆಯನ್ನು ಅನ್ವಯಿಸುವುದರ ವಿರುದ್ಧವಾಗಿ ಏನು ಹೇಳಲಿಲ್ಲ.

ನಂತರ ಸರ್ದಾರ್ ಹರ್‌ನಾಮ್‌ಸಿಂಗ್. ಈಗಿನ ಪಂಜಾಬಿನ ಉನ್ನತ ನ್ಯಾಯಾಲಯದ ನ್ಯಾಯಾಧೀಶರು ಬಂದು ಸಾಕ್ಷ್ಯ ನೀಡಿದ್ದರು. ಅವರು ಓರ್ವ ಸಿಖ್ಖರಾಗಿ ಬಂದಿರಲಿಲ್ಲ. ಬಾರ್ ಕೌನ್ಸಿಲ್‌ನ ಪ್ರತಿನಿಧಿಯಾಗಿ ಬಂದಿದ್ದರು. ಅವರು ಕೂಡ ಇದನ್ನು ಸಿಖ್ಖರಿಗೆ ಅನ್ವಯಿಸಬಾರದು ಇತ್ಯಾದಿ ಪ್ರಶ್ನೆಗಳನ್ನು ಎತ್ತಲಿಲ್ಲ.

**ಸರ್ದಾರ್ ಹುಕಂ ಸಿಂಗ್ :** ಹಿಂದೂ ಸಂಹಿತೆ ಮಸೂದೆಯ ಬಗ್ಗೆ ಅವರ ಅಭಿಪ್ರಾಯವೇನು?

**ಡಾ. ಅಂಬೇಡ್ಕರ್ :** ಅವರು ಅದನ್ನು ವಿರೋಧಿಸಲಿಲ್ಲ.

ನಾನೀಗ ಮುಖ್ಯ ಸನ್ನಿವೇಶಕ್ಕೆ ಬರುತ್ತೇನೆ. ಆ ಬಗ್ಗೆ ನಾನು ಸ್ಪಷ್ಟ ಉಲ್ಲೇಖ ನೀಡಲುಬಯಸುತ್ತೇನೆ. ರಾವ್ ಸಮಿತಿಯ ತನಿಖೆ ಮುಗಿದ ಮೇಲೆ ಮಾನ್ಯ ಮಂಡಲ್ ಅವರು ಮಸೂದೆಯನ್ನು ಮಂಡಿಸಿದ ನಂತರವೂ ಸರ್ಕಾರ ಒಂದು ಕಾರ್ಯನಿರ್ವಾಹಕ ಸುತ್ತೋಲೆಯನ್ನು ಪ್ರಾಂತೀಯ ಸರ್ಕಾರಕ್ಕೆ ಕಳುಹಿಸಿ ಮಸೂದೆಯ ಬಗ್ಗೆ ಅವರ ಅಭಿಪ್ರಾಯವನ್ನು ಸ್ವಾಗತಿಸುವುದಾಗಿ ಭರವಸೆ ನೀಡಿತ್ತು. ಇದು ಸದಸ್ಯರಿಗೆ ನೆನಪಿದೆ ಅಂದಕೊಂಡಿದ್ದೇನೆ. ಆ ಸುತ್ತೋಲೆಯನ್ನು ಪಂಜಾಬಿಗೂ ಕಳುಹಿಸಲಾಗಿತ್ತು.

**ಶ್ರೀ ಸೋಂಧಿ :** ಯಾವ ವರ್ಷ?

**ಡಾ. ಅಂಬೇಡ್ಕರ್ :** ೧೯೪೭ರಲ್ಲಿ.

**ಶ್ರೀ ಸೋಂಧಿ :** ವಿಭಜನೆಗೆ ಮೊದಲೆ?

**ಡಾ. ಅಂಬೇಡ್ಕರ್ :** ಅಲ್ಲ. ವಿಭಜನೆಯ ನಂತರ. ಯಾಕೆಂದರೆ ಪತ್ರವನ್ನು ಪೂರ್ವ ಬಂಗಾಲದ ಸರ್ಕಾರಕ್ಕೆ ಕಳುಹಿಸಲಾಗಿತ್ತು. ನಾನು ಪೂರ್ವ ಬಂಗಾಲದ ಗೃಹ ಕಾರ್ಯದರ್ಶಿಯವರಿಂದ, ನವದೆಹಲಿಯಲ್ಲಿದ್ದ ಭಾರತ ಸರ್ಕಾರದ ಶಾಸನ ವಿಭಾಗದ ಕಾರ್ಯದರ್ಶಿಯವರಿಂದ ಬಂದ ಪತ್ರದ ಸಾರಾಂಶವನ್ನು ನೀಡುತ್ತೇನೆ. (ನಂ.೨೧೧, ದಿನಾಂಕ ೩ ಅಕ್ಟೋಬರ್ ೧೯೪೭). ಅದರಲ್ಲಿ ಕೆಳಕಂಡ ಪ್ರಸ್ತಾವನೆಯನ್ನು ಮಾಡಲಾಗಿದೆ. "ಲಾಹೋರ್ ಉಚ್ಚನ್ಯಾಯಾಲಯದ ರಿಜಿಸ್ಟ್ರಾರ್ ಅವರಿಂದ, ಸನ್ಮಾನ್ಯ ನ್ಯಾಯಾಧೀಶರು ಹಾಗೂ ಇತರರ ಅಭಿಪ್ರಾಯವನ್ನು ವರದಿಮಾಡಿರುವ ಲೇಖನದ ಒಂದು ಪ್ರತಿಯನ್ನು ಕಳುಹಿಸಲು ನನಗೆ ನಿರ್ದೇಶಿಸಲಾಗಿದೆ. ಪಂಜಾಬ್ ಸರ್ಕಾರವು, ಕಮೀಷನರ್ ಅವರಿಗೆ, ಜಿಲ್ಲಾ ಕಮೀಷನರಿಗೆ, ಉನ್ನತ ನ್ಯಾಯಾಲಯದ ಬಾರ್ ಅಸೋಷಿಯೇಷನ್ ಹಾಗೂ ೫ ವಿಭಾಗೀಯ ಪ್ರಧಾನ ಕಛೇರಿಗಳಿಗೆ ಮತ್ತು ಹಿಂದೂ ಹಾಗೂ ಸಿಖ್ಖರ ಅಭಿಪ್ರಾಯವನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸಲಾದ ಸರ್ಕಾರೇತರ ಸಂಘಟನೆಗಳಿಗೆ ಕೂಡ ಅಭಿಪ್ರಾಯವನ್ನು ಕಳುಹಿಸಲು ಕೋರಿ ಕಾಗದ ಬರೆದಿದ್ದರು. ಈ ಸಂಘಟನೆಗಳಲ್ಲಿ ಲಾಹೋರಿನ ಶ್ರೀ ಸನಾತನಧರ್ಮ ಪ್ರತಿನಿಧಿ

ಮಾತ್ರ ಉತ್ತರಿಸಿದರು."

ನಮ್ಮ ಈ ಪ್ರಯತ್ನಗಳ ಹಿನ್ನಲೆಯಲ್ಲಿ ಸನ್ಮಾನ್ಯ ಮಿತ್ರರು ಸಿಖ್ ಸಮುದಾಯದ ಅಭಿಪ್ರಾಯವನ್ನು ತಿಳಿಯುವ ಯಾವುದೇ ಪ್ರಯತ್ನಮಾಡಿಲ್ಲ ಎಂದು ಹೇಳಲಾರರು ಅಂದುಕೊಂಡಿದ್ದೇನೆ. ತನ್ನನ್ನು ಸಂಪರ್ಕಿಸಿದ ೭ ಜನರಲ್ಲಿ ೬ ಜನ ವಿರೋಧಿಸಿದರು ಎಂದು ಕೂಡ ಮಾನ್ಯ ಸದಸ್ಯರು ತಿಳಿಸಿದರು. ಆ ಬಗ್ಗೆ ಅವರಿಗೆ ಇನ್ನೂ ಹೆಚ್ಚು ತಿಳಿದಿರಬಹುದು. ನನ್ನ ಮಾನ್ಯ ಮಿತ್ರರು ಈ ಭಾಷಣವನ್ನು ಮಾಡುವ ಮೊದಲು, ಅವರೊಂದಿಗೂ ಒಂದೆರಡು ಸಲ ಚರ್ಚಿಸಿದ್ದೆ. ಅವರು ಹೇಳಿದ್ದರು: ಆನಂದ ವಿವಾಹ ಅಥವಾ ಸಾಂಪ್ರದಾಯಿಕ ವಿವಾಹ ತನಗೆ ತುಂಬಾ ಮುಖ್ಯ ಎಂದು. ನಾನು ಅವರಿಗೆ ಹೇಳಿದೆ – ನಾವು ಈ ಮಸೂದೆಯನ್ನು ಅಂಗೀಕರಿಸಿದ್ದಾಗ್ಯೂ ಸಿಖ್ಖರು ತಮ್ಮ ವಿವಾಹವನ್ನು ಶಾಸ್ತ್ರಸಮ್ಮತ ಮಾಡಿಕೊಳ್ಳುವುದಕ್ಕಾಗಿ ಆಚರಿಸುವ ಕೆಲವು ವಿಧಿಗಳನ್ನು ಕ್ರಮಬದ್ಧಗೊಳಿಸಲೆಂದು ಶಾಸನಸಭೆಯು ಅಂಗೀಕರಿಸಿದ್ದ ಆನಂದ ವಿವಾಹ ಕಾಯ್ದೆಯನ್ನು ನಾವು ರದ್ದುಗೊಳಿಸುವುದಿಲ್ಲ. ಅವರಿಗೆ ಅದರಿಂದ ಪೂರ್ತಿ ತೃಪ್ತಿಯಾಗಿತ್ತು ಅಂತ ಅಂದುಕೊಂಡಿದ್ದೆ. ಅವರಲ್ಲಿ ಸುಪ್ತವಾಗಿದ್ದ ಭಾವನೆಗಳನ್ನು ಬಡಿದೆಬ್ಬಿಸಲು ಬೇರೆ ಯಾವುದೋ ಕಾರಣ ನಂತರ ಸೃಷ್ಟಿಯಾಗಿರಬೇಕು.

ನನ್ನ ಮಾನ್ಯ ಮಿತ್ರರು ಡಾ. ಭಕ್ಷಿ ಟೇಕ್‌ಸಿಂಗ್ ಅವರ ತೀರ್ಪನ್ನು ಓದಿದರು. ಅದು ೧೦, ಲಾಹೋರ್ ಕಾಬೂಲ್ ಸಿಂಗ್ ಮೊಕದ್ದಮೆಯಲ್ಲಿ ವರದಿಯಾಗಿದೆ. ಅಲ್ಲಿದ್ದ ಒಂದೇ ಒಂದು ವಾದಗ್ರಸ್ತ ವಿಷಯವೆಂದರೆ ಒಬ್ಬ ಜಾಟ್ ಸಿಂಗ್ ಹಾಗೂ ಒಬ್ಬಳು ಮಜಹಬಿ ಹೆಂಗಸಿನ ನಡುವಿನ ವಿವಾಹ ಕಾನೂನುಬದ್ಧ ವಿವಾಹವಾಗುವುದೆ ಇಲ್ಲವೆ ಎಂಬುದು. ಪ್ರತಿಪಕ್ಷದವರ ಪ್ರಕಾರ ಜಾಟ್ ಉನ್ನತ ಜಾತಿಯವನಾಗಿದ್ದು, ಆ ಹೆಂಗಸು ಕೆಳಜಾತಿಗೆ ಸೇರಿರುವುದರಿಂದ ಅಂತರಜಾತೀಯ ವಿವಾಹಕ್ಕೆ ಅವಕಾಶವಿಲ್ಲ. ಮಾನ್ಯ ಟೇಕ್‌ಚಂದರು; ಜಾಟರು, ಶೂದ್ರರು. ತ್ರಿವರ್ಣೀಯರಿಗೆ ಅನ್ವಯಿಸುವ ನಿಯಮಗಳು ಶೂದ್ರರಿಗೆ ಅನ್ವಯಿಸುವುದಿಲ್ಲ. ಶಾಸ್ತ್ರಗಳು ಅಸ್ಪೃಶ್ಯರನ್ನು ಶೂದ್ರರೆಂದೇ ಪರಿಗಣಿಸುತ್ತವೆ. ಆದುದರಿಂದ ಶೂದ್ರರ ನಡುವಿನ ವಿವಾಹ, ಸಿಂಧುವಾದ ವಿವಾಹವಾಗುತ್ತದೆ.

**ಸರ್ದಾರ್ ಬಿ. ಎಸ್. ಮಾನ್ :** ಅಸ್ಪೃಶ್ಯನಿಗೂ ಶೂದ್ರನಿಗೂ ವ್ಯತ್ಯಾಸವಿದೆ.

**ಡಾ. ಅಂಬೇಡ್ಕರ್ :** ಆದರೆ ಮಾನ್ಯ ಮಿತ್ರರೇ, ಅದು ನ್ಯಾಯಾಲಯದ ತೀರ್ಪು, ನ್ಯಾಯಾಲಯ ಇವರನ್ನು ಶೂದ್ರರೆಂದು ಪರಿಗಣಿಸಿದೆ. ಆದರೆ ಅವರಲ್ಲಿ ವ್ಯತ್ಯಾಸವಿದೆ ಎಂಬುದು ನಿಮಗೆ ಗೊತ್ತು.

ನನ್ನ ಮಿತ್ರರು ಆಧರಿಸಿಕೊಳ್ಳಬಹುದಾದ ಒಂದೇ ಒಂದು ಅಂಶವೆಂದರೆ ಸಿಖ್ಖರು ಉದಾರವಾದಿಗಳು. ಅವರು ಜಾತಿಯನ್ನು ಒಪ್ಪುತ್ತಿರಲಿಲ್ಲ. ಆ ನೆಲೆಯಲ್ಲಿ ಅವರು ನಮ್ಮನ್ನು ಸ್ವಾಗತಿಸಬೇಕು. ನಾವು ಕೂಡ ಜಾತಿಯ ನಿರ್ಮೂಲನಕ್ಕೆ ಪ್ರಯತ್ನಿಸಿದ್ದೇವೆ. ಆದುದರಿಂದ ಇದು ಯಾವ ರೀತಿಯಲ್ಲೂ ಸಿಖ್ ಸಮುದಾಯದಲ್ಲಿ ನಡೆಯುತ್ತಿರುವುದಕ್ಕೆ ವಿರುದ್ಧವಾಗಿಲ್ಲ.

**ಸರ್ದಾರ್ ಹುಕಂಸಿಂಗ್ :** ನಮ್ಮ ದೂರೇನೆಂದರೆ, ನೀವು ಮುಂದೆ ತರುತ್ತೇನೆ ಅಂತ ಹೇಳುತ್ತಿರುವ ಹಂತಕ್ಕಿಂತ ನಾವು ತುಂಬಾ ಮುಂದುವರೆದಿದ್ದೇವೆ. ನಮ್ಮನ್ನು ಹಿಂದಕ್ಕೆಳೆಯಬೇಡಿ.

**ಡಾ. ಅಂಬೇಡ್ಕರ್ :** ಬೇರೆ ಬೇರೆ ಜನರಿಗೆ ಪ್ರಗತಿಯ ಬಗ್ಗೆ ಬೇರೆ ಬೇರೆ ರೀತಿಯ ಕಲ್ಪನೆಯಿರುತ್ತದೆ. ನನಗೆ ನನ್ನದೇ ಆದ ಕಲ್ಪನೆಯಿದೆ. ಕೆಲವರಿಗೆ ಕಾನೂನು ಇಲ್ಲದಿರುವುದು ಹಾಗೂ ಅವ್ಯವಸ್ಥೆಯೇ ಪ್ರಗತಿಯಾಗಬಹುದು. ವಿವಿಧ ಭಾಷಣಕಾರರು ತಮ್ಮ ತಮ್ಮ ತಿದ್ದುಪಡಿಯ ಬಗ್ಗೆ ಮಾತಾಡಿದ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಿದ್ದೇನೆ ಅಂದುಕೊಂಡಿದ್ದೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ವಿಚ್ಛೇದನ ಪ್ರಕರಣಗಳನ್ನು ಜಾತಿಯ ಪಂಚಾಯಿತಿಗಳು ನಿರ್ಧರಿಸಲಿ ಅನ್ನುವ ಮೂಲಕ ನೀವು ಜಾತೀಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುತ್ತಿಲ್ಲವೇ?

**ಡಾ. ಅಂಬೇಡ್ಕರ್ :** ನಾವು ಇನ್ನೂ ಆ ವಿಷಯಕ್ಕೆ ಬಂದಿಲ್ಲ. ಹಾಗಾಗಿ ಈಗಲೇ ಆ ಬಗ್ಗೆ ಮಾತನಾಡುವುದೇಕೆ? ಬಂದಾಗ ನೋಡೋಣ. ಸದ್ಯಕ್ಕೆ ನಾನು ಇಲ್ಲಿ ಎಲ್ಲಾ ತಿದ್ದುಪಡಿಗಳನ್ನು ಚರ್ಚಿಸಿದ್ದೇನೆ. ಹಾಗೂ ಸದಸ್ಯರು ಸೂಚಿಸಿದ ಯಾವುದೇ ತಿದ್ದುಪಡಿಯನ್ನಾಗಲಿ ಯಾಕೆ ಅನುಸರಿಸಲು ಸಾಧ್ಯವಾಗುವುದಿಲ್ಲ ಎಂದು ವಿವರಿಸಿದ್ದೇನೆ. ಡಾ. ಭಕ್ಷಿ ಟೇಕ್‌ಚಂದ್ ಅವರು ಮಂಡಿಸಿದ ತಿದ್ದುಪಡಿಯನ್ನು ಮಾತ್ರ ಅಂಗೀಕರಿಸಲು ನಾನು ತಯಾರಿದ್ದೇನೆ. ಅವರು "ಸದಸ್ಯರು" ಅನ್ನುವ ಬದಲು "ಅನುಸರಿಸುವವರು" ಎಂದು ಪದ ಉಪಯೋಗಿಸಲು ಸೂಚಿಸಿದ್ದಾರೆ.

**ಶ್ರೀ ನಜೀರುದ್ದೀನ್ ಅಹಮದ್ :** ಡಾ. ಅಂಬೇಡ್ಕರರ ಭಾಷಣದ ಸಂದರ್ಭದಲ್ಲಿ ನಡೆದ ಚರ್ಚೆಯಲ್ಲಿ ನುಸುಳಿಕೊಂಡಿರುವ ತಪ್ಪೊಂದನ್ನು ಸರಿಪಡಿಸಲು ಅನುಮತಿಯನ್ನು ಕೋರುತ್ತೇನೆ.(ಅಡಚಣೆಗಳು)

**ಮಾನ್ಯ ಉಪಸಭಾಧ್ಯಕ್ಷರು :** ಅವರು ತಪ್ಪುಮಾಡಿದ್ದರೆ, ಅದನ್ನು ಸರಿಪಡಿಸುವುದು ಅವರಿಗೆ ಬಿಟ್ಟಿದ್ದು. ಮಾನ್ಯ ಸದಸ್ಯರು ಅದನ್ನು ನನಗೆ ತೋರಿಸಬಹುದು. ಆ ಬಗ್ಗೆ ಮಾತನಾಡುವ ಆವಶ್ಯಕತೆಯಿಲ್ಲ. ಅವರು ಭಾಷಣದಲ್ಲಿ ಹೇಳಿದ್ದಕ್ಕೆಲ್ಲಾ ಆಕ್ಷೇಪಣೆ ಎತ್ತಬಹುದು. ಆದರೆ ಭಾಷಣಗಳನ್ನೆಲ್ಲಾ ಸರಿಮಾಡುವುದು ನಮ್ಮ ಉದ್ಯೋಗವಲ್ಲ.

ಇಲ್ಲಿ ಹಲವಾರು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಮಾನ್ಯ ಸದಸ್ಯರಿಗೇ ಮಂಡಿಸಲಾದ ತಿದ್ದುಪಡಿಗಳು ಮರೆತುಹೋಗಿರಬಹುದು. ಆದುದರಿಂದ ಈ ತಿದ್ದುಪಡಿಗಳನ್ನು ಆಯಾ ವಿಷಯ ಹಾಗೂ ಕಲಮುಗಳ ಪ್ರಕಾರ ವಿಂಗಡಿಸಿದ್ದೇನೆ.

**ಕೆಲಸ, ಉತ್ಪಾದನೆ ಮತ್ತು ಪೂರೈಕೆಯ ಮಂತ್ರಿಗಳು (ಶ್ರೀ ಗಾಡ್ಗೀಳ್):** ಈ ಕಲಮಿನಲ್ಲಿ ಮಾನ್ಯ ಮಂತ್ರಿಗಳೇ ಮಂಡಿಸಿದ ಎರಡು ತಿದ್ದುಪಡಿಗಳಿವೆ.

**ಡಾ. ಅಂಬೇಡ್ಕರ್ :** ಎರಡೇ ಎರಡು ತಿದ್ದುಪಡಿಗಳಿವೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಎಲ್ಲ ತಿದ್ದುಪಡಿಗಳನ್ನು ಉಲ್ಲೇಖಿಸುತ್ತೇನೆ. ಮಾನ್ಯ ಮಂತ್ರಿಗಳು ಮಂಡಿಸಿದ ಹಾಗೂ ಮಂತ್ರಿಗಳು ಒಪ್ಪಿಕೊಳ್ಳಲು ತಯಾರಿರುವ ಡಾ. ಟೇಕ್‌ಚಂದ್ ಹೆಸರಿನಲ್ಲಿರುವ ತಿದ್ದುಪಡಿಗಳನ್ನು ಖಂಡಿತಾ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸದಸ್ಯರು ಪರ ಅಥವಾ ವಿರುದ್ಧ ಮತ ಚಲಾಯಿಸಬೇಕಾದ ತಿದ್ದುಪಡಿಗಳು ನಿಖರವಾಗಿ ಏನು ಹೇಳುತ್ತವೆ ಎಂದು ಸದನದ ಸದಸ್ಯರಿಗೆ ತಿಳಿಸುವುದು ನನ್ನ ಕರ್ತವ್ಯ. ವಿವರಗಳಿಗೆ ಹೋಗುವ ಬದಲು, ಅನುಕೂಲದ ದೃಷ್ಟಿಯಿಂದ ನಾನು ಪ್ರತಿ ವಿಭಾಗದ ತಿದ್ದುಪಡಿಗಳನ್ನು ಒಂದೊಂದಾಗಿ ಇಡುತ್ತಾ ಹೋಗುತ್ತೇನೆ. ಮೊದಲಿಗೆ, "ಎಲ್ಲಾ ಭಾರತೀಯರಿಗೂ ಕಡ್ಡಾಯವಾಗಿ ಅನ್ವಯವಾಗಬೇಕು" ಬರಿಯ ಹಿಂದೂಗಳಿಗೆ ಮಾತ್ರವಲ್ಲ– ಮಸೂದೆಯ ವ್ಯಾಪ್ತಿಯಲ್ಲಿ ಬರುವ ಬೌದ್ಧರಿಗೆ, ಜೈನರಿಗೆ, ಹಿಂದುಗಳಲ್ಲದವರಿಗೆ, ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ಮುಂತಾದವರಿಗೆಲ್ಲಾ ಅನ್ವಯವಾಗಬೇಕು – ಎನ್ನುವ ಗುಂಪಿನ ತಿದ್ದುಪಡಿಗಳನ್ನು ತೆಗೆದುಕೊಳ್ಳೋಣ.

ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ನ್ನು ಕೆಳಕಂಡಂತೆ ಬದಲಿಸಬೇಕು.

"*೨. ಮಸೂದೆ ಅನ್ವಯಿಕೆ.* – ೧) ಈ ಮಸೂದೆ ಎಲ್ಲಾ ಹಿಂದೂಗಳಿಗೂ ಅನ್ವಯವಾಗುತ್ತದೆ. ೨) ಈ ಮಸೂದೆಯಲ್ಲಿ 'ಹಿಂದೂ' ಎಂದರೆ ವ್ಯತಿರಿಕ್ತವಾಗಿ ನಮೂದಿಸದಿದ್ದ ಪಕ್ಷದಲ್ಲಿ ಭಾರತದ ಪ್ರಜೆ

ಎಂದೇ ಅರ್ಥ. ೩) ವಿಶೇಷ ವಿವಾಹ ಕಾಯಿದೆ, ೧೮೭೨ (೧೮೭೨ ರ ೧೧೧) ಯಾವುದೇ ತದ್ವಿರುದ್ಧವಾದ ಉಲ್ಲೇಖ ಇದ್ದರೂ ಕೂಡ ಈ ಮಸೂದೆಯು ವ್ಯಾಖ್ಯಾನಿಸಿದಂತೆ ಹಿಂದೂಗಳಿಗೆ ಹಾಗೂ ಈ ಮಸೂದೆಗೆ ಮುಂಚಿನ ಕಾಯಿದೆಯ ನಿಬಂಧನೆಗಳ ಪ್ರಕಾರ ಶಾಸ್ತ್ರೋಕ್ತವಾಗಿ ಮದುವೆಯಾದರಿಗೆ ಅನ್ವಯಿಸುತ್ತದೆ."

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು ೨ನ್ನು ಕೆಳಕಂಡಂತೆ ಬದಲಿಸಿ:

"೨. ಈ ಮಸೂದೆ ಎಲ್ಲಾ ಭಾರತೀಯರಿಗೂ ಅವರು ಯಾವುದೇ ಜಾತಿ, ಮತ, ಜನಾಂಗಕ್ಕೆ ಸೇರಿರಲಿ ಅನ್ವಯವಾಗುತ್ತದೆ."

ಸೂಚನೆ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ಝುಂಝುನವಾಲ ಅವರ ತಿದ್ದುಪಡಿ ಕಲಮು, ೨ರ ಬದಲಾವಣೆಗೆ ಸಂಬಂಧಿಸಿದ್ದು. ತಿದ್ದುಪಡಿಯನ್ನು ಪ್ರತಿಷೇಧಿಸಲಾಗಿದೆ. ಸದನ ಈ ಬಗ್ಗೆ ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ.

ತಿದ್ದುಪಡಿಗಳ ಇನ್ನೊಂದು ಗುಂಪಿಗೆ ಬರುತ್ತೇನೆ. ಘೋಷಣೆ ಮಾಡಿದವರಿಗೆ ಮಾತ್ರ ಈ ಮಸೂದೆ ಅನ್ವಯವಾಗತಕ್ಕದ್ದು. ಆಗಲೂ ಘೋಷಿಸಿದ ಭಾಗವನ್ನು ಮಾತ್ರ ಅನ್ವಯಿಸಬೇಕು.

ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು ೨ನ್ನು ಕೆಳಕಂಡಂತೆ ಬದಲಿಸಬೇಕು.

"*೨. ಮಸೂದೆಯ ಅನ್ವಯಿಕೆ.* – ಯಾರು ತಾವು ಪ್ರಾಪ್ತವಯಸ್ಕರಾದ ಮೇಲೆ ಲಿಖಿತರೂಪದಲ್ಲಿ ಈ ಮಸೂದೆ ಅಥವಾ ಅದರ ಯಾವುದೋ ಭಾಗ ತಮಗೆ ಅನ್ವಯವಾಗಬೇಕು ಎಂದು ಘೋಷಿಸಿಕೊಳ್ಳುತ್ತಾರೊ ಹಾಗೂ ಅಂತಹ ಘೋಷಣೆಯನ್ನು ಈ ಉದ್ದೇಶಕ್ಕಾಗಿಯೆ ಕೇಂದ್ರ ಸರ್ಕಾರ ಸೂಚಿಸಿರುವ ನಿಯಮಗಳ ಪ್ರಕಾರ ನೋಂದಾಯಿಸಿಕೊಳ್ಳುತ್ತಾರೊ ಅಂತಹ ಭಾರತದ ಎಲ್ಲಾ ಪ್ರಜೆಗಳಿಗೂ ಅನ್ವಯವಾಗತಕ್ಕದ್ದು.

ಸೂಚನೆ ತಿರಸ್ಕೃತವಾಯಿತು.

**ಡೆಪ್ಯೂಟಿ ಸ್ಪೀಕರ್ :** ಶ್ರೀ ಜೆ. ಆರ್. ಕಪೂರ್ ಅವರ ಮುಂದಿನ ಎರಡೂ ತಿದ್ದುಪಡಿಗಳನ್ನು ನಾವೀಗಷ್ಟೇ ತಿರಸ್ಕರಿಸಿದ ತಿದ್ದುಪಡಿಗಳ ರೀತಿಯವೇ ಆಗಿವೆ. ಹಾಗಾಗಿ ಅವುಗಳನ್ನು ತಿರಸ್ಕರಿಸಲಾಗಿದೆ ಎಂದು ಭಾವಿಸಲಾಗಿದೆ.

ಶ್ರೀ ಬನ್ಸಾರಿ ಪ್ರಸಾದ್ ಜುಂಜುನ್‌ವಾಲ ಅವರು ಮಂಡಿಸಿದ ತಿದ್ದುಪಡಿಯಲ್ಲಿ ಕಲಮು–೨ಕ್ಕೆ ಒಂದು ಷರತ್ತನ್ನು (ಪ್ರಾವಿಸೋ) ಸೂಚಿಸಿದ್ದಾರೆ. "ಅಂತಹ ವ್ಯಕ್ತಿಗಳು, ಪ್ರಾಪ್ತವಯಸ್ಕರಾದ ಮೇಲೆ, ಲಿಖಿತರೂಪದಲ್ಲಿ ಅವನು/ಅವಳು ಈ ಕಾಯಿದೆಯ ಪ್ರಕಾರ ನಡೆದುಕೊಳ್ಳುತ್ತೇವೆ ಎಂದು ಘೋಷಿಸಿ ಅಂತಹ ಘೋಷಣೆಯನ್ನು ಈ ಉದ್ದೇಶಕ್ಕಾಗಿಯೇ ಕೇಂದ್ರ ಸರ್ಕಾರ ಸೂಚಿಸಿರುವ ನಿಯಮಗಳ ಪ್ರಕಾರ ನೋಂದಾಯಿಸಿಕೊಳ್ಳುವವರೆಗೆ ....."

ಸೂಚನೆ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು:** ಮತಕ್ಕೆ ಹಾಕಬೇಕಾದ ವಿಷಯ:

ಎರಡನೆಯ ಕಲಮುಗೆ ಈ ಷರತ್ತನ್ನು ಸೇರಿಸಬೇಕು:

"ಮೇಲಿನ ಕಲಮುಗಳಲ್ಲಿ ವ್ಯತಿರಿಕ್ತವಾದದ್ದು ಏನೇ ಇದ್ದರೂ ಕೂಡ, ಯಾವುದೇ ವ್ಯಕ್ತಿಯು ತನ್ನ

ಹೆಸರನ್ನು ಒಂದು ವರ್ಷದೊಳಗೆ ಅಥವಾ ಆತ ಅಪ್ರಾಪ್ತ ವಯಸ್ಕನಾಗಿದ್ದರೆ ಪ್ರಾಪ್ತವಯಸ್ಕನಾದ ತಕ್ಷಣ ಸೂಕ್ತ ಅಧಿಕಾರಿಯಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳುವ ತನಕ. ಅದೂ ಪಾರ್ಲಿಮೆಂಟ್ ಸೂಚಿಸಿದ ರೀತಿಯಲ್ಲಿ ನೋಂದಾಯಿಸಿಕೊಳ್ಳುವ ತನಕ ಈ ಮಸೂದೆ ಅವನಿಗೆ ಅನ್ವಯವಾಗುತ್ತದೆ."

ಗೊತ್ತುವಳಿ ತಿರಸ್ಕೃತವಾಯಿತು.

ಮತಕ್ಕೆ ಹಾಕಬೇಕಾದ ವಿಷಯ:

"ವಿವಾಹ ಹಾಗೂ ವಿಚ್ಛೇದನ ಹಾಗೂ ವಾರಸುದಾರಿಕೆಗೆ ಸಂಬಂಧಿಸಿದ ಭಾಗ–೨ ಅಥವಾ/ಹಾಗೂ ಭಾಗ–೭ರ ಅನುಬಂಧಗಳು ಯಾವ ವ್ಯಕ್ತಿಗಳು ಪ್ರಾಪ್ತವಯಸ್ಕರಾದ ಮೇಲೆ, ಲಿಖಿತರೂಪದಲ್ಲಿ ಈ ಕಾಯಿದೆಯ ಪ್ರಕಾರ ನಡೆದುಕೊಳ್ಳುತ್ತೇವೆ ಎಂದು ಘೋಷಿಸಿ ಅಂತಹ ಘೋಷಣೆಯನ್ನು ಈ ಉದ್ದೇಶಕ್ಕಾಗಿಯೇ ಕೇಂದ್ರ ಸರ್ಕಾರ ಸೂಚಿಸಿರುವ ನಿಯಮಗಳ ಪ್ರಕಾರ ನೋಂದಾಯಿಸಿಕೊಳ್ಳುವುದಿಲ್ಲವೊ ಅವರಿಗೆ ಅನ್ವಯವಾಗುವುದಿಲ್ಲ.

ವಿವಾಹ ಹಾಗೂ ವಿಚ್ಛೇದನಕ್ಕೆ ಸಂಬಂಧಿಸಿದ ಭಾಗ೨, ಮದುವೆಯ ನಂತರವಾದರೆ ಗಂಡ ಮತ್ತು ಹೆಂಡತಿ ಇಬ್ಬರೂ ಅಥವಾ ಮದುವೆಯ ಮೊದಲಾದರೆ ವಧು ವರರಿಬ್ಬರೂ ಅಂತಹ ಘೋಷಣೆಯನ್ನು ಮಾಡಿದ್ದರೆ ಮಾತ್ರ ಅವರಿಗೆ ಅನ್ವಯವಾಗತಕ್ಕದ್ದು."

ಗೊತ್ತುವಳಿ ತಿರಸ್ಕೃತವಾಯಿತು.

**ಶ್ರೀ. ಜೆ. ಆರ್. ಕಪೂರ್ :** ಮಾನ್ಯರೇ, ಪ್ರಕರಣದ ಬದಲಾದ ಪರಿಸ್ಥಿತಿಯಿಂದಾಗಿ, ನಾನು ನನ್ನ ೯೭ ಹಾಗೂ ೨೭೨ನೇ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಕೋರಿಕೊಳ್ಳುತ್ತೇನೆ. ಆದರೆ ನಂತರದ ಹಂತದಲ್ಲಿ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಇಡೀ ಅಧ್ಯಾಯ ಮುಗಿದ ಮೇಲೆ ಈ ಭಾಗದ ನಿಲುವು ಸ್ಪಷ್ಟವಾದ ಮೇಲೆ ನಾನೊಂದು ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ.

ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ನಂತರ ಶ್ರೀ ಜೆ. ಆರ್. ಕಪೂರ್ ಅವರ ಹೆಸರಿನಲ್ಲಿ ತಿದ್ದುಪಡಿ ನಂ. ೩೩೬ ಇದೆ. ಅವರು ಇದನ್ನು ಮಂಡಿಸಲು ಇಚ್ಛಿಸುತ್ತಾರಾ?

**ಶ್ರೀ ಜೆ. ಆರ್. ಕಪೂರ್ :** ಹೌದು ಮತ್ತು ಮಾನ್ಯ ಕಾನೂನು ಮಂತ್ರಿಗಳು ಇದನ್ನು ಅದರ ಅರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕು ಎಂದು ವಿನಂತಿಸಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಅವರು ಜಾರಿಗೊಳಿಸಲು ಬಯಸಿರುವುದನ್ನು ಜಾರಿಗೊಳಿಸುವುದು ಕಷ್ಟವಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ಹಂತದಲ್ಲಿ ಯಾಕೆ? ಮನವೊಲಿಸುವ ಪ್ರಯತ್ನಗಳೆಲ್ಲಾ ಈಗಾಗಲೇ ಮುಗಿದಿದೆಯಲ್ಲಾ. ಮತಕ್ಕೆ ಹಾಕಬೇಕಾದ ವಿಷಯ:

ಮಾನ್ಯ ಡಾ. ಅಂಬೇಡ್ಕರ್ ಕಲಮು–೨ಕ್ಕೆ ಸೂಚಿಸಿರುವ ತಿದ್ದುಪಡಿ ನಂ ೩ ಎಂದು ಮುದ್ರಿತವಾಗಿರುವ ತಿದ್ದುಪಡಿಯಲ್ಲಿ ಭಾಗ (೧) ಆದ ಮೇಲೆ.

"(೧ ಎ) ಉಪಕಲಮು (೩) ರಲ್ಲಿ 'ನಿಬಂಧನೆಗಳು' ಎಂಬ ಪದಕ್ಕೆ ಬದಲಾಗಿ "ಅದರಲ್ಲಿ ಪರಿಗಣಿಸಿರುವ ಯಾವುದೇ ಅಥವಾ ಹೆಚ್ಚಿನ ವಿಷಯಗಳಿಗೆ" ಎಂಬುದನ್ನು ಸೇರಿಸಬೇಕು.

ಸೂಚನೆ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ನಾನು ಇನ್ನೊಂದು ವಿಷಯಕ್ಕೆ ಬರುತ್ತೇನೆ– ಒಂದು ಗುಂಪಿನ ಜನರನ್ನು ಸೇರಿಸುವ ಅಥವಾ ಬಿಡುವ ಬಗ್ಗೆ.

ಈಗ ಮತಕ್ಕೆ ಹಾಕಬೇಕಾದ ವಿಷಯ:

ಮಾನ್ಯ ಡಾ. ಅಂಬೇಡ್ಕರ್ ಕಲಮು ೨ರ ಉಪಕಲಮು (೧)ರಲ್ಲಿ "ಸಿಖ್ಖ್ ಧರ್ಮ" ಎಂದಾದ ಮೇಲೆ "ಅಥವಾ ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಅಥವಾ ಯಹೂದಿ ಧರ್ಮವನ್ನು ಬಿಟ್ಟು ಇತರ ಯಾವುದೇ ಧರ್ಮ ಅಥವಾ ನಂಬಿಕೆ" ಎಂಬುದನ್ನು ಸೇರಿಸಬೇಕು ಎಂದು ಈ ತಿದ್ದುಪಡಿ ಹೇಳುತ್ತದೆ.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು ೨ರ ೧ನೇ ಉಪಕಲಮಿನ ಭಾಗ(ಡಿ) ನಲ್ಲಿ, ಕೊನೆಗೆ

"ಮತಾಂತರಕ್ಕೆ ಮೊದಲಿನ ಅವನ ಹಕ್ಕು ಬಾಧ್ಯತೆಗೆ ಒಳಪಟ್ಟು" ಎಂದು ಸೇರಿಸಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು ೨ರ ೧ನೇ ಉಪಕಲಮಿನ ಭಾಗ (ಡಿ) ಆದಮೇಲೆ,

"(ಇ) ಬುದ್ಧ, ಜೈನ್, ಸಿಖ್ ಅಥವಾ ಹಿಂದೂಧರ್ಮದಿಂದ ತನ್ನ ಜೀವಿತ ಕಾಲದಲ್ಲಿ ಒಬ್ಬ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ" ಎಂಬುದನ್ನು ಸೇರಿಸಬೇಕು.

ಸೂಚನೆ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು ೨ರ ೧ನೇ ಉಪಕಲಮಿನ ಭಾಗ (ಬಿ)ಯನ್ನು ಬಿಡಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ನಜೀರುದ್ದೀನ್ ಮಂಡಿಸಿರುವ ೨೭೪ನೇ ನಂಬರಿನ ತಿದ್ದುಪಡಿ ಕೂಡ ಈಗಷ್ಟೇ ಸದನದಲ್ಲಿ ತಿರಸ್ಕರಿಸಲಾದ ತಿದ್ದುಪಡಿಯ ಮಾದರಿಯದೇ ಆಗಿದೆ. ಹಾಗಾಗಿ ಅದನ್ನು ಮತಕ್ಕೆ ಹಾಕಬೇಕಾಗಿಲ್ಲ.

ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು ೨ರ ೧ನೇ ಉಪಕಲಮಿನ ಭಾಗ(ಬಿ)ಯನ್ನು ಕೆಳಕಂಡಂತೆ ಬದಲಿಸಬೇಕು.

"(ಬಿ) ಧರ್ಮದಿಂದ ಜೈನನಾಗಿರುವ ಯಾವುದೇ ವ್ಯಕ್ತಿಗೂ".

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು ೨ರ ೧ನೇ ಉಪಕಲಮಿನ ಭಾಗ (ಡಿ)ನಲ್ಲಿ "ಜೈನ ಅಥವಾ ಸಿಖ್" ಎಂಬುದಕ್ಕೆ ಬದಲಾಗಿ "ಜೈನ ಅಥವಾ" ಎಂದು ಇರಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ೧೦೧ ಹಾಗೂ ೧೦೨ನೇ ತಿದ್ದುಪಡಿಗಳನ್ನು ಈಗಷ್ಟೇ ಸದನ ತಿರಸ್ಕರಿಸಿದ ತಿದ್ದುಪಡಿಗಳ ರೀತಿಯವೇ. ನಾನು ಅದನ್ನು ಮತಕ್ಕೆ ಹಾಕಬೇಕಾಗಿಲ್ಲ.

ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು ೨ರ ೧ನೇ ಉಪಕಲಮಿನ ಭಾಗ (ಬಿ)ಯಲ್ಲಿ "ಅಥವಾ ಸಿಖ್" ಎಂಬುದನ್ನು ಬಿಡಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

"ಕಲಮು ೨ರಲ್ಲಿ ಎಲ್ಲೆಲ್ಲಿ ಸಿಖ್ ಎಂಬ ಪದ ಬರುತ್ತದೋ ಅವೆಲ್ಲವನ್ನೂ ಬಿಡಬೇಕು."

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

೧ನೇ ಉಪಕಲಮಿನ ಭಾಗ (ಸಿ)(೧)ರಲ್ಲಿ "ಅನೌರಸ" ಎಂದಾದ ಮೇಲೆ

"ಯಾರಿಗೆ ಹದಿನೆಂಟು ವರ್ಷವಾಗಿದೆಯೋ ಅವರೆಲ್ಲಾ ಹಿಂದೂಗಳು" ಎಂದು ಸೇರಿಸಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

**ಮಾನ್ಯ ಉಪಸಭಾಧ್ಯಕ್ಷರು** :

ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು ೨ರ ೧ನೇ ಉಪಕಲಮಿನ ಭಾಗ (ಸಿ)(೨)ರಲ್ಲಿ, "ಸೇರಿದ ಅಥವಾ ಸೇರುವ" ಎಂದಾದ ಮೇಲೆ "ಯಾರಿಗಾದರೂ ೧೮ ವರ್ಷವಾಗಿದ್ದರೆ ಆತನೇ ಹಿಂದೂ" ಎಂದು ಸೇರಿಸಬೇಕು.

ಗೊತ್ತುವಳಿ ತಿರಸ್ಕೃತವಾಯಿತು.

(ಮ. ೧ ಗಂಟೆ)

**ಮಾನ್ಯ ಉಪಸಭಾಧ್ಯಕ್ಷರು** : ೨೭೭ನೇ ತಿದ್ದುಪಡಿ ಹಿಂದಿನ ಒಂದು ತಿದ್ದುಪಡಿಯಿಂದ ಪ್ರತಿಷೇಧಿತವಾಗಿದೆ. ಹಾಗಾಗಿ ಅದನ್ನು ಮತಕ್ಕೆ ಹಾಕಬೇಕಾಗಿಲ್ಲ.

**ಶ್ರೀ ಜೆ. ಆರ್. ಕಪೂರ್** : ನನ್ನ ಮುಂದಿನ ತಿದ್ದುಪಡಿಯು ಸಮ್ಮತಿಗೆ ಯೋಗ್ಯವಾಗಿದೆ. ಅದಕ್ಕೆ ಸುಧಾರಿತ ಭಾಷೆಯನ್ನು ಬಳಸಲಾಗಿದೆ.

**ಡಾ. ಅಂಬೇಡ್ಕರ್** : ನನ್ನ ಭಾಷೆಯನ್ನೇ ನಾನು ಉತ್ತಮಪಡಿಸಿಕೊಳ್ಳುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ** : ಅದೊಂದು ವ್ಯಾಕರಣದ ಬದಲಾವಣೆ ಅಷ್ಟೇ. ವರ್ತಮಾನವನ್ನಷ್ಟೇ ಅಲ್ಲದೆ ಅದು ಭೂತವನ್ನು ಕೂಡ ತನ್ನ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಬಯಸುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು** : ಆ ನಿಬಂಧನೆಯ ವಾಕ್ಯರಚನೆಯು ಕೇವಲ ವರ್ತಮಾನಕ್ಕೆ ಸಂಬಂಧಿಸಿದಂತೆ ಮಾತ್ರ ಇದೆ. ವ್ಯತ್ಯಾಸ ಖಂಡಿತವಾಗಿಯೂ ಇದೆ. ಅದೊಂದು ಔಪಚಾರಿಕ ತಿದ್ದುಪಡಿ ಅಲ್ಲ. ಪ್ರಶ್ನೆಯೆಂದರೆ: "ಸಿ" ವಿಭಾಗದಲ್ಲಿ ಕಲಮು–೨ರ ಉಪಕಲಮು–೧ರಲ್ಲಿ "ತಂದೆ ತಾಯಿಯರು" (are)ಎಂದಿದೆ ಅದರ ನಂತರ "ಆಗಿರುವಂಥವರು" (have been) ಎಂದು ಸೇರಿಸಬೇಕು.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಇದು ೧೦೫ನೇ ತಿದ್ದುಪಡಿಯ ವ್ಯಾಪ್ತಿಯಲ್ಲಿಯೇ ಬಂದುಬಿಡುತ್ತದೆ. ಹಾಗಾಗಿ ಮತ್ತೊಮ್ಮೆ ಮಂಡಿಸಬೇಕಾಗಿಲ್ಲ.

ಈಗ ಮತಕ್ಕೆ ಹಾಕಬೇಕಾದ ವಿಷಯ :

"ಸಿ" ವಿಭಾಗದಲ್ಲಿ ಕಲಮು–೨ರ ಉಪಕಲಮು–೧ರ ೨ನೇ ಭಾಗಕ್ಕೆ ಸೇರಿರಬೇಕು.

"ಸಮುದಾಯ ಗುಂಪು ಅಥವಾ ಕುಟುಂಬವೊಂದಕ್ಕೆ ಸೇರಿದ ತಂದೆ ತಾಯಿಯರು ಬೆಳೆಸುವ ಯಾವುದೇ ಪರಿತ್ಯಕ್ತ ಮಗು"

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** :

ಈಗ ಮತಕ್ಕೆ ಹಾಕಬೇಕಾದ ವಿಷಯ :

ನಂತರರ "ಸಿ" ವಿಭಾಗದಲ್ಲಿ ಕಲಮು –೨ ಉಪಕಲಂ ೧ರ ೨ನೇ ಭಾಗಕ್ಕೆ ಸೇರಿಸಬೇಕು.

"(iii) ರಾಜ್ಯವೇ ಸಂರಕ್ಷಿಸಿ ಬೆಳೆಸುವ ಅನಾಥ ಅಥವಾ ಪರಿತ್ಯಕ್ತ ಮಗು"

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ಕ್ಕೇ ಉಪಕಲಂ–೨ ಸೇರಿಸಬಹುದು.

"(೨ಎ) ಈ ಮಸೂದೆಯು ಹಿಂದು, ಬೌದ್ಧ, ಜೈನ ಅಥವಾ ಸಿಖ್‌ನೊಬ್ಬನನ್ನು ವಿವಾಹವಾಗುವ ಯಾವುದೇ ಧರ್ಮದ ಮಹಿಳೆಗೂ ಅನ್ವಯಿಸುತ್ತದೆ."

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ನಂತರ ಕಲಮು – ೨ರ ಉಪಕಲಮು–೨ನ್ನು ಬಿಟ್ಟುಬಿಡಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ನಂತರ ಕಲಮು–೨ರ ಉಪಕಲಮು–೨ಕ್ಕೆ ಬದಲಾಗಿ ಸೇರಿಸಿ:

"(೨) ಈ ಮಸೂದೆಯಲ್ಲಿ ಸೇರಿಸಿರುವ ಯಾವುದೇ ಸಾಂಪ್ರದಾಯಿಕ ಕಾನೂನಾಗಲಿ ಅದರ ಒಂದು ಭಾಗವಾಗಲಿ ಅಥವಾ ಹಿಂದೂ ಕಾನೂನಿನ ಕಟ್ಟಳೆಗಳಿಗಾಗಲಿ ಒಳಪಡುವ ವ್ಯಕ್ತಿಯು ಯಾವುದೇ ಧರ್ಮಕ್ಕೆ ಸೇರಿದವನಾಗಿರಲಿ ಅವನಿಗೆ ಈ ಕಾನೂನು ಅನ್ವಯಿಸುತ್ತದೆ."

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ರ ಉಪಕಲಂ–೨ರಲ್ಲಿ 'ಪಾರ್ಸಿ'ಯ ನಂತರ 'ಸಿಖ್' ಎಂಬುದನ್ನು ಸೇರಿಸಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ರ ಉಪಕಲಂ–೨ಕ್ಕೆ ಇರುವ ಉಪಬಂಧವನ್ನು ಬಿಟ್ಟುಬಿಡಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ರ ಉಪಕಲಂ–೨ಕ್ಕೆ ಇರುವ ಷರತ್ತಿನ ಕೊನೆಯಲ್ಲಿ ಬರುವ "ಆ ವಿಷಯಗಳಿಗೆ ಸಂಬಂಧಿಸಿದಂತೆ" ಎಂಬುದಕ್ಕೆ ಬದಲಾಗಿ:

"ಸ್ವಂತ ಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳದಿದ್ದ ಆ ವ್ಯಕ್ತಿಗೆ ಸಂಬಂಧಿಸಿದಂತೆ" ಎಂದು ಸೇರಿಸಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ ಉಪಕಲಂ–೧ ಕ್ಕೆ ಸೇರಿಸಿ:

"(ಎ೧) ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಈ ಮಸೂದೆ ಅನ್ವಯಿಸುವುದಿಲ್ಲ."

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ೨೮೧ನೇ ತಿದ್ದುಪಡಿಯನ್ನು ಪ್ರತಿಷೇಧಿಸಲಾಗಿದೆ. ಈಗ ಔಪಚಾರಿಕವಾದ ಮತ್ತು ವಾಚ್ಯ ಸ್ವರೂಪದ ತಿದ್ದುಪಡಿಗಳ ವಿಷಯಕ್ಕೆ ಬರುತ್ತೇನೆ. ಮೊದಲನೆಯದಾಗಿ ಡಾ. ಅಂಬೇಡ್ಕರ್ ಅವರ ತಿದ್ದುಪಡಿ–೩ನ್ನು ಮಂಡಿಸುತ್ತೇನೆ.

ಈಗ ಮತಕ್ಕೆ ಹಾಕಬೇಕಾದ ವಿಷಯ :

ಕಲಮು–೨ರಲ್ಲಿ

ಉಪಕಲಮು (೧)ರಲ್ಲಿ (i)

ಭಾಗ (ಅ)ದಲ್ಲಿ (i) ಹಿಂದೂಗಳಿಗೆ "ಹಿಂದೂಗಳು ಅಂದರೆ ಹಿಂದೂಧರ್ಮದ ಅನುಯಾಯಿಗಳು" ಎನ್ನುವುದಕ್ಕೆ ಬದಲಾಗಿ "ಧರ್ಮದಿಂದ ಹಿಂದೂಗಳು" ಎಂದು,

ಭಾಗ (ಡಿ)ಯಲ್ಲಿ (ii) "ಹಿಂದೂಧರ್ಮ" ಎನ್ನುವುದಕ್ಕೆ ಬದಲಾಗಿ "ಹಿಂದೂ, ಬೌದ್ಧ, ಜೈನ್, ಸಿಖ್ ಧರ್ಮ" ಎಂದು ಹಾಕಿ.

(೨) ಉಪಕಲಮು–೪ನ್ನು ಬಿಟ್ಟುಬಿಡಿ.

ಸೂಚನೆಯನ್ನು ಅಂಗೀಕರಿಸಲಾಗಿದೆ.

**ಶ್ರೀ ಆರ್. ಕೆ. ಚೌಧರಿ :** ಸ್ವಾಮಿ, ಅಂಬೇಡ್ಕರ್ ಅವರ ಮುಂದಿನ ತಿದ್ದುಪಡಿಗೆ ನನ್ನ ವಿರೋಧವಿದೆ. ನನ್ನ ಪ್ರಕಾರ ಅವರು ತಮ್ಮ ಜೀವನದ ಅತಿದೊಡ್ಡ ತಪ್ಪನ್ನು ಮಾಡುತ್ತಿದ್ದಾರೆ.

**ಶ್ರೀ ಜೆ. ಆರ್. ಕಪೂರ್ :** ವಿಷಯ ಏನು?

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ಚೌಧರಿಯವರು ಅದನ್ನು ವಿರೋಧಿಸುತ್ತಿದ್ದಾರೆ. ಏಕೆಂದರೆ, ಅಂಬೇಡ್ಕರ್ ಅವರು ಕೋಮು ಎನ್ನುವುದಕ್ಕೆ ಬದಲಾಗಿ "ಕೋಮು ಅಥವಾ ಬುಡಕಟ್ಟು" ಎಂದು ಬಳಸಬೇಕೆನ್ನುತ್ತಾರೆ. ಏಕೆಂದರೆ "ಕೋಮು" ಎನ್ನುವುದರಲ್ಲಿ "ಬುಡಕಟ್ಟು" ಎನ್ನುವುದು ಸೇರದೇ ಹೋಗಬಹುದು ಎನ್ನುವುದು ಅವರಿಗಿರುವ ಭಯ. ಹಾಗಾಗಿ ಅವರು ಅದನ್ನು ಇನ್ನೂ ಸ್ಪಷ್ಟಪಡಿಸಲು ಬಯಸುತ್ತಾರೆ.

ಈಗ ಮತಕ್ಕೆ ಹಾಕಬೇಕಾಗಿರುವ ವಿಷಯ :

ನಂ–೩ ಎಂದು ಮುದ್ರಿತವಾಗಿರುವ ಡಾ. ಅಂಬೇಡ್ಕರ್ ಅವರು ಮುಂದಿಟ್ಟಿರುವ ತಿದ್ದುಪಡಿಯನ್ನು ಭಾಗ(೧)ರ ನಂತರ ಸೇರಿಸಿ:

ಸಿ ವಿಭಾಗದಲ್ಲಿ "ಐ ಎ" ನಲ್ಲಿ "ಕೋಮು" ಎನ್ನುವುದಕ್ಕೆ ಬದಲಾಗಿ "ಬುಡಕಟ್ಟು ಅಥವಾ ಕೋಮು" ಎಂದು ಸೇರಿಸಿ.

ಸೂಚನೆಯನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ :

ಭಾಗ – ಎ, ಕಲಮು–೨ ಉಪಕಲಮು–೧ರಲ್ಲಿ ಹಿಂದೂಗಳು ಅಂದರೆ, ಧರ್ಮದಿಂದ ಹಿಂದುಗಳು ಎನ್ನುವುದಕ್ಕೆ ಬದಲಾಗಿ "ಹಿಂದುಧರ್ಮವನ್ನು ಅನುಸರಿಸುವವರು" ಎಂದು ಹಾಕಿ.

ಸೂಚನೆಯನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ :

ಭಾಗ–ಬಿ, ಕಲಮು–೨ ಉಪಕಲಮು–೧ರಲ್ಲಿ

"ಧರ್ಮದಿಂದ ಬೌದ್ಧರು, ಜೈನರು ಅಥವಾ ಸಿಖ್ಖರು ಎನ್ನುವುದಕ್ಕೆ ಬದಲಾಗಿ(ಬಿ) ಅನ್ನು" ಬಳಸಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಡಾ. ದೇಶ್‌ಮುಖ್ :** (ಮಧ್ಯ ಪ್ರದೇಶ) ಈ ಕಲಮನ್ನು ಅಖೈರಾಗಿ ಜಾರಿಗೊಳಿಸುವುದನ್ನು ಅಮಾನತಿನಲ್ಲಿಡಲು ಬಯಸುತ್ತೇನೆಂಬ ಸೂಚನೆಯನ್ನು ಅಂಬೇಡ್ಕರ್ ಅವರು ನೀಡಿದ್ದಾರೆ ಎಂಬುದನ್ನು ನಾನು ಹೇಳಲು ಬಯಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನು ಹಿಂದೂ ಮಸೂದೆ ಎಂದು ಕರೆಯಬೇಕೊ ಅಥವಾ ಹಿಂದೂ ವಿವಾಹ ವಿಚ್ಛೇದನ (ತಿದ್ದುಪಡಿ) ಕಾಯಿದೆ ಎಂದು ಕರೆಯಬೇಕೊ ಎಂಬುದು ಕೇವಲ ಹೆಸರಿನಲ್ಲಿ ಮಾಡಿರುವ ಒಂದು ಔಪಚಾರಿಕ ಬದಲಾವಣೆ. ನಂತರ ನಾನು ಬದಲಾವಣೆಯನ್ನು ಮಾಡಿದಾಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣುತ್ತದೆ. ಅದೊಂದು ಔಪಚಾರಿಕ ಅಷ್ಟೇ.

ಈಗ ಮತಕ್ಕೆ ಹಾಕಬೇಕಾದ ವಿಷಯ :

ಈಗ ಸೂಚಿತವಾಗಿರುವ ತಿದ್ದುಪಡಿಗಳಲ್ಲಿ ನಂ–೩ ಎಂದು ಮುದ್ರಿತವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರು ಸೂಚಿಸಿದ ತಿದ್ದುಪಡಿಯನ್ನು

ಕಲಮು–೨ ಉಪಕಲಮು–೧ ಭಾಗ ಒಂದು (ii)ಕ್ಕೆ ಸೇರಿಸಿ.

"(iii) ಹೊಸಭಾಗ (ಇ) ಸೇರಿಸಿ. ಈ ಕೆಳಗಿನಂತೆ.

'(ಇ) ಮಸೂದೆ ಜಾರಿಗೆ ಬಂದನಂತರ ಯಾವುದೇ ಧರ್ಮ ಅಥವಾ ಮತಕ್ಕೆ ಮತಾಂತರ ಹೊಂದುವಿಕೆ'

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪಂಡಿತ ಠಾಕೂರ್ ದಾಸ್ ಭಾರ್ಗವ ಅವರು ಸೂಚಿಸಿರುವ ತಿದ್ದುಪಡಿ ಸಂಖ್ಯೆ ೯೧ನ್ನು ಏನು ಮಾಡುವುದು?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದನ್ನು ವಾಪಸ್ಸು ಪಡೆಯಲು ಅನುಮತಿಯನ್ನು ಕೋರುತ್ತೇನೆ.

ಅನುಮತಿಯ ಮೇರೆಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :**

ಈಗ ಮತಕ್ಕೆ ಹಾಕಬೇಕಾದ ವಿಷಯ :

ಈಗ ಸೂಚಿತವಾಗಿರುವ ತಿದ್ದುಪಡಿಗಳಲ್ಲಿ ನಂ–೩ ಎಂದು ಮುದ್ರಿತವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರು ಸೂಚಿಸಿದ ತಿದ್ದುಪಡಿಯನ್ನು ಕಲಮು–೨ ಭಾಗ ಒಂದಕ್ಕೆ ಸೇರಿಸಿ.

(೧ಎ) ಕಲಮು–೨ರ ಷರತ್ತಿನಲ್ಲಿ ಕೊನೆಯ ಭಾಗಕ್ಕೆ 'ಈ ವಿಷಯಕ್ಕೆ ಸಂಬಂಧಿಸಿದಂತೆ ಈ ಮಸೂದೆಯ ವ್ಯಾಪ್ತಿಗೆ ಒಳಪಡುವ ವಿಚಾರಗಳ ಬಗ್ಗೆ ಕೇಂದ್ರ ಸರ್ಕಾರ ಸೂಚಿಸಿರುವ ನಿಯಮಗಳಿಗೆ ಬದ್ಧನಾಗಿದ್ದೇನೆಂದು ಒಪ್ಪಿಗೆ ನೀಡದ ಹೊರತು' ಎಂದು.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೯೩ನ್ನೂ ಪ್ರತಿಷೇಧಿಸಲಾಗಿದೆ. ಏಕೆಂದರೆ ಅದು ಈಗಾಗಲೇ ಪ್ರತಿಷೇಧಿತವಾಗಿರುವ ಸೂಚನೆಯಂತೆಯೇ ಇದೆ.

ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ರ ಉಪಕಲಂ–೩ನ್ನು ಬಿಟ್ಟುಬಿಡಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೨೮೩ ಕೂಡ ಅದೇ ಆಗಿರುವುದರಿಂದ ಅದನ್ನೂ

ಪ್ರತಿಷೇಧಿಸಲಾಗಿದೆ. ಶ್ರೀ ಜಸ್ಪತ್ ರಾಯ್ ಕಪೂರ್ ಸೂಚಿಸಿರುವ ತಿದ್ದುಪಡಿ ಸಂಖ್ಯೆ ೨೩೮ನ್ನು ಏನು ಮಾಡುವುದು. ಮಾನ್ಯ ಸದಸ್ಯರು ಗಮನಿಸವಿಡಬೇಕು.

**ಒಬ್ಬ ಮಾನ್ಯ ಸದಸ್ಯ :** ನಿಮ್ಮ ತಿದ್ದುಪಡಿಗಳೆಲ್ಲಾ ತಿರಸ್ಕೃತವಾಗುತ್ತಿವೆ.

**ಶ್ರೀ ಜೆ.ಆರ್. ಕಪೂರ್ :** ಕ್ಷಮಿಸಿ, ಆದರೆ ಈ ಬಗ್ಗೆ ಚರ್ಚೆ ನಡೆಯುತ್ತಿದೆ.

**ಮಾನ್ಯ ಉಪಸಭಾಧ್ಯಕ್ಷರು :** ತಾವೇ ಮಾತನಾಡುತ್ತೀರಿ ಮತ್ತು ಉಳಿದ ಸದಸ್ಯರೊಡನೆ ಜಗಳ ಕಾಯುತ್ತಿದ್ದೀರಿ.

**ಶ್ರೀ ಜೆ.ಆರ್. ಕಪೂರ್ :** ದಯವಿಟ್ಟು ಹಿಂತೆಗೆದುಕೊಳ್ಳಲು ಅನುಮತಿ ನೀಡಬೇಕು.

ಅನುಮತಿಯ ಮೇರೆಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ಗೋಕುಲ್ ಭಾಯ್ ಭಟ್ ಸೂಚಿಸಿದ ತಿದ್ದುಪಡಿ ಸಂಖ್ಯೆ ೧೧೬ರ ಬಗ್ಗೆ ಏನು ಹೇಳುತ್ತೀರಿ?

**ಶ್ರೀ ಭಟ್ :** ದಯವಿಟ್ಟು ಹಿಂತೆಗೆದುಕೊಳ್ಳಲು ಅನುಮತಿ ನೀಡಬೇಕು. ಅದರ

ಆವಶ್ಯಕತೆ ಇಲ್ಲ.

ಅನುಮತಿ ಮೇರೆಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ ಉಪಕಲಮು–೪ ನ್ನು ಬಿಟ್ಟುಬಿಡಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿ ಸಂಖ್ಯೆ ೨೮೪ ಕೂಡ ಅದೇ ಆಗಿರುವುದರಿಂದ ಅದನ್ನು ಪ್ರತಿಷೇಧಿಸಲಾಗಿದೆ. ಮುಂದಿನ ತಿದ್ದುಪಡಿ (ಸಂಖ್ಯೆ ೧೧೮) ಶ್ರೀ ನಜೀರುದ್ದೀನ್ ಅಹಮದ್ ಅವರದು. ಅದನ್ನು ಕಲಮು–೨ ಉಪಕಲಮು–೪ರಲ್ಲಿ ಒಂದು ಹೊಸ ಉಪಕಲಂ ಆಗಿ ಸೇರಿಸಿರಿ. ಏನೆಂದರೆ, "ಈ ಭಾಗದಲ್ಲಿ ಏನೇ ಷರತ್ತುಗಳು ಇದ್ದರೂ ಕೂಡ ಈ ಮಸೂದೆಯು ಒಂದು ರಾಜ್ಯದ ಕೆಲವು ನಿರ್ದಿಷ್ಟ ಪ್ರದೇಶಗಳು ಅಥವಾ ನಿರ್ದಿಷ್ಟ ವ್ಯಕ್ತಿಗಳು ಇಲ್ಲವೇ ನಿರ್ದಿಷ್ಟ ವರ್ಗದ ಜನರಿಗೆ ಮಾತ್ರ ಅನ್ವಯಿಸುತ್ತದೆ .......... ಇತ್ಯಾದಿ, ಇತ್ಯಾದಿ." ಇದನ್ನು ಕಲಮು–೧ಕ್ಕೆ ಸೇರಿಸಲಾಗಿದೆ. ತಿದ್ದುಪಡಿ ೧೧೮ ಮತ್ತು ೨೮೫ ಇವೆರಡೂ ಒಂದಕ್ಕೊಂದು ಸಹವರ್ತಿಯಾಗಿದೆ. ಹಾಗಾಗಿ ಅವೆರಡನ್ನೂ ಸೇರಿಸಲಾಗಿದೆ. ಕಲಮು–೧ಕ್ಕೆ ಸಂಬಂಧಿಸಿದಂತೆ ಇದನ್ನು ಕೈಗೆತ್ತಿಕೊಳ್ಳಲು ಮಾನ್ಯ ಸದಸ್ಯರು ಬಯಸಿದಲ್ಲಿ ಅವರು ಬೇರೆ ಒಂದು ತಿದ್ದುಪಡಿಯನ್ನು ಮಂಡಿಸಲಿ ಎಂದು ಸೂಚಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹಮದ್ :** ಕಲಮು–೧ರ ಸಂದರ್ಭಕ್ಕೆ ಹೊಂದುವಂಥ ಒಂದು ಪ್ರತ್ಯೇಕ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ರ ಉಪಕಲಮು–೧ರ ಡಿ–ವಿಭಾಗಕ್ಕೆ ಬದಲಿಯಾಗಿ

"(ಡಿ) ಹಿಂದೂಧರ್ಮಕ್ಕೆ ಮತಾಂತರ ಹೊಂದಿದವರಿಗೆ, ಮತಾಂತರಕ್ಕೆ ಮೊದಲು ಇದ್ದ ಹಕ್ಕು ಮತ್ತು ಹೊಣೆಗಾರಿಕೆಗಳನ್ನು ಕುರಿತು" ಎಂದು ಸೇರಿಸಿ.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪ ಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ಕ್ಕೆ ಈ ಷರತ್ತನ್ನು ಸೇರಿಸಿ :

"ಈ ಮೇಲಿನ ಕಲಮುಗಳಲ್ಲಿ ಏನು ಬೇಕಾದರೂ ಇರಲಿ ಆದರೆ ಇನ್ನು ಮುಂದೆ ಸಂಸತ್ತು ಹೇಳುವ ರೀತಿಯಲ್ಲಿ ಅವನ/ಅವಳ ಹೆಸರನ್ನು ಸಂಸತ್ತು ಸೂಚಿಸುವ ಅಧಿಕಾರಿಯಲ್ಲಿ, ಅದು ಹೇಳುವ ವಿಧಾನದಲ್ಲಿ ಈ ಮಸೂದೆಯು ಜಾರಿಗೆ ಬಂದ ೫ ವರ್ಷದೊಳಗೆ ನೋಂದಾಯಿಸದಿದ್ದಲ್ಲಿ, ಈ ಮಸೂದೆಯು ಅವರಿಗೆ ಅನ್ವಯಿಸುವುದಿಲ್ಲ. ಮತ್ತು ಅಪ್ರಾಪ್ತ ವಯಸ್ಕರು ಪ್ರಾಪ್ತವಯಸ್ಕರಾದ ೫ ವರ್ಷದೊಳಗೆ ನೋಂದಾಯಿಸದಿದ್ದಲ್ಲಿ, ಈ ಮಸೂದೆಯು ಅವರಿಗೆ ಅನ್ವಯಿಸುವುದಿಲ್ಲ. ಆಗ ಅವರಿಗೆ ಈ ಮಸೂದೆಯ ಆಳ್ವಿಕೆಗೆ ಒಳಪಡುವುದು ಇಷ್ಟ ಇಲ್ಲ ಎಂದರ್ಥವಾಗುತ್ತದೆ."

ಸೂಚನೆಯನ್ನು ತಿರಸ್ಕರಿಸಲಾಯಿತು

**ಮಾನ್ಯ ಉಪಸಭಾಧ್ಯಕ್ಷರು :**

ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ಕ್ಕೆ ಉಪಬಂಧವನ್ನು ಸೇರಿಸಬೇಕು.

"ಈ ವಿಭಾಗದಲ್ಲಿ ಏನೇ ಇರಲಿ, ಸೂಚಿತ ಅಧಿಕಾರಿಯಲ್ಲಿ, ಸೂಚಿತ ಮಾದರಿಯಲ್ಲಿ ಯಾರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು, ಈ ಮಸೂದೆಯ ವ್ಯಾಪ್ತಿಗೊಳಪಡಲು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸುವುದಿಲ್ಲವೊ ಅವರಿಗೆ ಈ ಮಸೂದೆಯು ಅನ್ವಯವಾಗುವುದಿಲ್ಲ."

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :**

ಈಗ ಮತಕ್ಕೆ ಹಾಕಬೇಕಾದ ವಿಷಯ

ಕಲಮು–೨ಕ್ಕೆ ಉಪಬಂಧವನ್ನು ಸೇರಿಸಬೇಕು.

"ಈ ಮಸೂದೆಯ ಕಲಮುಗಳಲ್ಲಿ ಏನೇ ನಿಬಂಧನೆಗಳಿರಲಿ, ಒಂದು ನಿರ್ದಿಷ್ಟ ರಾಜ್ಯದಲ್ಲಿ ಈ ಮಸೂದೆಗೆ ಸಂಬಂಧಿಸಿದಂತೆ ಮತ ಸಂಗ್ರಹಣೆ ನಡೆಸಿ, ನಂತರ ಆ ರಾಜ್ಯದ ಶಾಸಕಾಂಗವು ಮತಗಣನೆಯ ಫಲಿತಾಂಶಕ್ಕೆ ಅನುಗುಣವಾಗಿ ಈ ಕಾಯಿದೆಯ ನಿಬಂಧನೆಗಳನ್ನು ಈ ರಾಜ್ಯದ ನಿವಾಸಿಗಳಿಗೆ ಅನ್ವಯಿಸಬೇಕು. ಅಲ್ಲಿಯವರಿಗೆ ಇದು ಯಾವೊಬ್ಬ ವ್ಯಕ್ತಿಗೂ ವೈಯಕ್ತಿಕವಾಗಿ ಅನ್ವಯಿಸುವುದಿಲ್ಲ. ಜೊತೆಗೆ ಈ ಮಸೂದೆಯ ಆಳ್ವಿಕೆಗೆ ಒಳಪಡಲು ಇಚ್ಛಿಸುವುದಿಲ್ಲ ಎಂದು ಘೋಷಿಸಿಕೊಳ್ಳುವ ಮುಕ್ತವಾದ ಹಕ್ಕಿದೆ ಮತ್ತು ಆಗ ಈ ಕಾಯಿದೆ ಅವನಿಗೆ ಅನ್ವಯಿಸುವುದಿಲ್ಲ."

ಸೂಚನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಮತಕ್ಕೆ ಹಾಕಬೇಕಾದ ವಿಷಯ:

ಕಲಮು–೨ರ ಉಪಕಲಮು–೧ರ (ಎ) ವಿಭಾಗದಲ್ಲಿ "ಸೇರಿಸಿಕೊಂಡು" ಎಂದಾದ ಕೂಡಲೇ "ಬೌದ್ಧರು, ಜೈನರು ಮತ್ತು ಸಿಖ್ಖರು" ಎಂದು ಸೇರಿಸಬೇಕು.

ಸೂಚನೆಯನ್ನು ತಿರಸ್ಕರಿಸಲಾಯಿತು.

**ಪಂಡಿತ ಮಾಲವೀಯ :** ನಾನು ಸೂಚಿಸಿರುವ ಮುಂದಿನ ತಿದ್ದುಪಡಿಗಾಗಿ ನಾನು ಬಲವಂತ ಮಾಡುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಎಲ್ಲಾ ತಿದ್ದುಪಡಿಗಳನ್ನೂ ಇತ್ಯರ್ಥಗೊಳಿಸಿದ್ದೇವೆ. ನಾನು ಸದನದ ಮುಂದೆ ಇಡದೇ ಇರುವ, ಆದರೆ ಸದಸ್ಯರು ಸೂಚಿಸಿರುವ ತಿದ್ದುಪಡಿಗಳೇನಾದರೂ ಇವೆಯೇ? ಯಾವುದೂ

ಇಲ್ಲವೆಂದು ಭಾವಿಸುತ್ತೇನೆ.

ಈಗ ಮತಕ್ಕೆ ಹಾಕಬೇಕಾದ ವಿಷಯ:

"ತಿದ್ದುಪಡಿಗೊಂಡಿರುವ ಕಲಮು–೨ ಈಗ ಮಸೂದೆಯ ಭಾಗವಾಗಿದೆ."

ಸೂಚನೆಯನ್ನು ಅಂಗೀಕರಿಸಲಾಗಿದೆ.

ತಿದ್ದುಪಡಿಯಾಗಿರುವ ಕಲಮು–೨ನ್ನು ಮಸೂದೆಗೆ ಸೇರಿಸಲಾಗಿದೆ.

## *ಹಿಂದೂ ಮಸೂದೆಯ – ಮುಂದುವರಿಕೆ

**ಮಾನ್ಯ ಉಪಸಭಾಧ್ಯಕ್ಷರು :** ಸೆಲೆಕ್ಟ್ ಸಮಿತಿಯಲ್ಲಿ ವರದಿಯಾಗಿರುವ ಸಲಹೆಗೆ ಅನುಗುಣವಾಗಿ ಮಸೂದೆಯ ಹಿಂದೂ ಕಾನೂನಿನ ಕೆಲವು ಭಾಗಗಳನ್ನು ತಿದ್ದುಪಡಿಮಾಡಿ ಕ್ರೋಡೀಕರಿಸುವ ಕೆಲಸವನ್ನು ಸದನವು ಮುಂದುವರೆಸುತ್ತದೆ. ನೆನ್ನೆ ನಾವು ಕಲಮು–೨ನ್ನು ಇತ್ಯರ್ಥ ಮಾಡಿದೆವು. ಅಲ್ಲಿಗೆ ಪ್ರಮುಖ ವಿವಾದಾತ್ಮಕ ಕಲಮು ಮುಗಿದಂತಾಯ್ತು. ಉಳಿದ ಕಲಮುಗಳು ಬೇಗಬೇಗನೆ ಇತ್ಯರ್ಥವಾಗುತ್ತವೆ ಎಂದುಕೊಂಡಿದ್ದೇನೆ.

ಕಲಮು.೩ – (ವ್ಯಾಖ್ಯೆಗಳು)

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್) :** ಸೂಚನೆಯನ್ನು ಮುಂದಿಡಲು ಕೇಳಿಕೊಳ್ಳುತ್ತೇನೆ.

ಕಲಂ–೩ ರಲ್ಲಿ

(೧) **"**ವಿಷಯ ಅಥವಾ ಸಂದರ್ಭದಲ್ಲಿ ಏನಾದರೂ ಅಸಂಗತವಾದುದು ಇಲ್ಲವಾದಲ್ಲಿ**"** ಎನ್ನುವುದಕ್ಕೆ ಬದಲಾಗಿ **"**ಸಂದರ್ಭಕ್ಕೆ ಆವಶ್ಯಕವಾಗದೇ ಹೋದಲ್ಲಿ**"** ಎಂದು ಹಾಕಿ;

(೨) ಈಗಿರುವ ೧, ೨, ೩ ಮತ್ತು ೪ನೇ ಬಾಬುಗಳಿಗೆ ೨, ೩, ೪ ಮತ್ತು ೫ ಎಂದು ಬೇರೆ ಕ್ರಮಸಂಖ್ಯೆಗಳನ್ನು ನೀಡಬೇಕು ಮತ್ತು ಕೆಳಗಿನದನ್ನು ಬಾಬು – ೧ ಎಂದು ಕರೆಯಬೇಕು. ಅದೇನೆಂದರೆ: (೧) ಒಂದು ವೇಳೆ ಈ ಕಾಯಿದೆ ಜಾರಿಯಾಗದೇ ಇದ್ದಲ್ಲಿ ಮದ್ರಾಸ್ ಅಳಿಯಸಂತಾನ ಕಾಯಿದೆ, ೧೯೪೯(ಮದ್ರಾಸ್ ಕಾಯಿದೆ ೯, ೧೧೯೪೯)ರ ವ್ಯಾಪ್ತಿಗೆ ಒಳಪಡುತ್ತಿದ್ದ ವ್ಯಕ್ತಿಗಳಿಗೆ ಅನ್ವಯವಾಗುವ ಕಾಯಿದೆಯನ್ನು 'ಅಳಿಯಸಂತಾನ ಕಾನೂನು' ಎನ್ನುತ್ತಾರೆ.

೩) ಪದಪುಂಜ ೩(ಹೊಸ ಸಂಖ್ಯೆ ನೀಡಿದ ನಂತರ) **"**೪೧ ಮತ್ತು ೪೯ ನೇ ಪ್ರಕರಣವನ್ನು ಹೊರತುಪಡಿಸಿ**"** ಎಂಬುದನ್ನು ಬಿಟ್ಟುಬಿಡಬೇಕು.

೪) ಬಾಬು ೫ರ ವಿವರಣೆಯಲ್ಲಿ (ಹೊಸ ಸಂಖ್ಯೆ ನೀಡಿದ ನಂತರ) **"**ಈ ಕಲಮು**"** ಎಂಬುದಕ್ಕೆ ಬದಲಾಗಿ **"**ಕಲಮು ೪ ಮತ್ತು ೫**"** ಎಂದು ಮಾಡಿ.

೫) ಈಗಿನ ೫, ೬, ೭ ಮತ್ತು ೮ನೇ ಕಲಮುಗಳಿಗೆ ೮, ೯, ೧೦ ಮತ್ತು ೧೧ ಎಂದು ಹೊಸ ಸಂಖ್ಯಾ ಕ್ರಮವನ್ನು ನೀಡಬೇಕು ಮತ್ತು ಕೆಳಗಿನದನ್ನು ಬಾಬು ೬ ಮತ್ತು ೭ ಎಂದು ಸೇರಿಸಬೇಕು:

(೬) **"**ಬಾಬು ೬– ಮರುಮಕ್ಕತಾಯಂ ಕಾಯಿದೆ. (ಎ) ಈ ಮಸೂದೆ ಜಾರಿಯಾಗದಿದ್ದಲ್ಲಿ ಮದ್ರಾಸ್ ಮರುಮಕ್ಕತಾಯಂ ಕಾಯಿದೆ ೧೯೩೨. (ಮದ್ರಾಸ್ ಕಾಯಿದೆ ೨೨, ೧೯೩೩) ತಿರುವಾಂಕೂರು ನಯ್ಯರ್ ಕಾಯಿದೆ. ೧೧೦೦ರಲ್ಲಿ ೨, ತಿರುವಾಂಕೂರು ಯಳವಾ ಕಾಯಿದೆ ೧೧೦೦ರಲ್ಲಿ ೩, ನಂಜಿನಡಾಡ್ ವಲ್ಲಾಲ ಕಾಯಿದೆ. ೧೧೦೧, ತಿರುವಾಂಕೂರು ಕ್ಷತ್ರಿಯ ಕಾಯಿದೆ. ೧೧೦೮, ತಿರುವಾಂಕೂರು ಕೃಷ್ಣವಾಕ ಮರುಮಕ್ಕತಾಯಂ ಕಾಯಿದೆ, ೧೧೧೫, ಕೊಚ್ಚಿನ್ ತೀಯಾ ಕಾಯಿದೆ, ೧೧೦೭ರಲ್ಲಿ ೮, ಕೊಚ್ಚಿನ್ ನಯ್ಯರ್ ಕಾಯಿದೆ, ೧೧೧೩ ರಲ್ಲಿ ೨೯, ಅಥವಾ ಕೊಚ್ಚಿನ್ ಮರುಮಕ್ಕತ್ತಾಯಂ ಕಾಯಿದೆ. ೧೧೧೩ರಲ್ಲಿ ೩೩, ಅಥವಾ, (ಬಿ) ಯಾವುದೇ

---

* ಸಂಪುಟ XV, ಭಾಗ II ೨೧ನೆಯ ಸೆಪ್ಟೆಂಬರ್ ೧೯೫೧ ಪುಟ ೨೧೭೪–೩೦೦೮

ಕೋಮಿಗೆ ಸೇರಿದ ಸದಸ್ಯರು, ಹೆಚ್ಚಾಗಿ ತಿರುವಾಂಕೂರು, ಕೊಚ್ಚಿನ್ ಅಥವಾ ಮದ್ರಾಸ್ ರಾಜ್ಯಗಳ ನಿವಾಸಿಗಳಾಗಿರುವವರು, ಈ ಕಾನೂನನ್ನು ಜಾರಿಗೊಳಿಸದಿದ್ದಲ್ಲಿ ತಾಯಿಯ ಮೂಲಕ ವಂಶಾವಳಿಯನ್ನು ಗುರುತಿಸುವ ವಾರಸುದಾರಿಕೆ ವ್ಯವಸ್ಥಾಕ್ರಮದ ಆಳ್ವಿಕೆಗೆ ಒಳಪಡುತ್ತಿದ್ದರೂ ಅವರಿಗೆ ಅನ್ವಯವಾಗುವ ಕಾನೂನನ್ನು ಮರುಮಕ್ಕತ್ತಾಯಂ ಕಾಯಿದೆ ಎನ್ನುತ್ತಾರೆ. ಆದರೆ ಇದರಲ್ಲಿ ಅಳಿಯಸಂತಾನ ಕಾಯಿದೆ ಸೇರಿಕೊಂಡಿಲ್ಲ.

೭) "ನಂಬೂದಿರಿ ಕಾಯಿದೆ" ಎಂದರೆ: ಈ ಕಾನೂನು ಜಾರಿಯಾಗದಿದ್ದಲ್ಲಿ ಮದ್ರಾಸ್ ನಂಬೂದರಿ ಕಾಯಿದೆ ೧೯೩೨ (ಮದ್ರಾಸ್ ಕಾಯಿದೆ ೧೯೩೩ ರ ೨೧). ಕೊಚ್ಚಿನ್ ನಂಬೂದರಿ ಕಾಯಿದೆ (೧೧೧೪ ರ ೧೭) ಅಥವಾ ೧೧೦೬ರ ತಿರುವಾಂಕೂರು ಮಲಯಾಳ ಬ್ರಾಹ್ಮಿನ್ ಕಾಯಿದೆ ೧೧೦೬ರ ರೆಗ್ಯುಲೇಷನ್ ೩) ಇವುಗಳ ಆಳ್ವಿಕೆಗೆ ಒಳಪಡುತ್ತಿದ್ದರೂ ಅವರಿಗೆ ಅನ್ವಯಿಸುತ್ತಿದ್ದ ಕಾನೂನು.

೮) ಹೊಸ ಸಂಖ್ಯೆಯನ್ನು ನೀಡಿರುವ ಬಾಬು ೮ಕ್ಕೆ "ಒಂದು" ಎಂಬುದಕ್ಕೆ ಬದಲಾಗಿ "ಯಾವುದಾದರೂ" ಎಂಬುದನ್ನು ಹಾಕಬೇಕು.

**ಶ್ರೀ ನಜೀರುದ್ದೀನ್ ಅಹಮದ್** (ಪಶ್ಚಿಮ ಬಂಗಾಲ): ಕ್ರಮಬದ್ಧವಾಗಿ ಒಂದು ವಿಷಯವಾದ ನಂತರ ಮತ್ತೊಂದು ವಿಷಯ ಹಾಗೂ ಒಂದು ಉಪಕಲಮು ಆದ ನಂತರ ಇನ್ನೊಂದು ಉಪಕಲಮನ್ನು ಪರಿಶೀಲಿಸುತ್ತಾ ಹೋಗುವುದು ಉತ್ತಮ ಎಂದು ನನಗನ್ನಿಸುತ್ತದೆ. ಇಲ್ಲವಾದಲ್ಲಿ ತೊಂದರೆಯೆಂದರೆ, ಚರ್ಚೆಗಳು ಖಚಿತವಲ್ಲದೆ ಅನಿರ್ದಿಷ್ಟವಾಗಿ ಉಳಿದುಬಿಡುತ್ತದೆ. ಕಲಮು-೨ರಲ್ಲಿ ಚರ್ಚೆಯು ತುಂಬಾ ಅನಿರ್ದಿಷ್ಟವಾಗಿತ್ತು ಏಕೆಂದರೆ, ನಾವು ಒಂದೊಂದೇ ಬಾಬುಗಳನ್ನು ಅಥವಾ ವಿಚಾರಗಳನ್ನು ಕೈಗೆತ್ತಿಕೊಳ್ಳಲಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು** : ನಾನು ಒಪ್ಪಿಕೊಳ್ಳುತ್ತೇನೆ. ಆದೇಶಪತ್ರದಲ್ಲಿ ಇರುವ ಕ್ರಮದಲ್ಲಿ ವಿಷಯವನ್ನು ಕೈಗೆತ್ತಿಕೊಳ್ಳುತ್ತೇನೆ.

**ಡಾ. ಅಂಬೇಡ್ಕರ್** : ನನ್ನ ತಿದ್ದುಪಡಿಯನ್ನು ಎರಡು ಭಾಗಗಳಲ್ಲಿ ಮಂಡಿಸುತ್ತೇನೆ. ನನ್ನ ತಿದ್ದುಪಡಿಯ ೧ನೇ ಬಾಬು ಕೇವಲ ಒಂದು ವಾಚ್ಯಾರ್ಥದ ಬದಲಾವಣೆ, ಈಗಿನ ಕಲಮಿನಲ್ಲಿರುವ "ವಿಷಯ ಅಥವಾ ಸಂದರ್ಭದಲ್ಲಿ ಏನೂ ಇಲ್ಲವಾದಲ್ಲಿ" ಎಂಬುದು ಸಂವಿಧಾನದಲ್ಲಿ ಬಳಕೆಯಾಗಿರುವ ಭಾಷೆಗೆ ಹೊಂದಿಕೊಳ್ಳುತ್ತಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದರು. ಈ ಮಸೂದೆಯ ಭಾಷೆಯನ್ನು ಸಂವಿಧಾನದಲ್ಲಿ "ಸಂದರ್ಭಕ್ಕೆ ಬೇರೆ ಬಗೆಯ ಆವಶ್ಯಕತೆ ಇಲ್ಲವಾದಲ್ಲಿ" ಎಂಬ ಪದಗಳನ್ನು ಬಳಸಲಾಗಿದೆ. ಹಾಗಾಗಿ ನಾನು ಆ ತಿದ್ದುಪಡಿಯನ್ನು ಮಾಡುತ್ತಿದ್ದೇನೆ. ಅದು ಕೇವಲ ಪದಗಳ ಬದಲಾವಣೆ ಅಷ್ಟೇ.

ವಿವಾಹ ಮತ್ತು ವಿಚ್ಛೇದನ ಕಾಯಿದೆಯನ್ನು ಮರಮಕ್ಕತ್ತಾಯಂ ಮತ್ತು ಅಳಿಯಸಂತಾನ ಕಾನೂನಿಗೆ ಒಳಪಟ್ಟವರಿಗೂ ಅನ್ವಯಿಸಬೇಕೆಂದು ಸೂಚಿಸಿರುವುದರಿಂದ ಇನ್ನುಳಿದ ತಿದ್ದುಪಡಿಗಳು ತೀರಾ ಆವಶ್ಯಕ. ಮುಂದಿನ ವಿಭಾಗಗಳೆಲ್ಲವೂ ಅದೇ ವಿಷಯಕ್ಕೆ ಸಂಬಂಧಿಸಿರುವುದರಿಂದ ಅದಕ್ಕೆ ಸಂಬಂಧಿಸಿರುವ ಉಳಿದ ವ್ಯಾಖ್ಯೆಗಳನ್ನೆಲ್ಲಾ ಈ ಕಲಮಿನ ವ್ಯಾಪ್ತಿಗೆ ತರಲು ಕಲಮನ್ನು ಪುನರ್ ವ್ಯಾಖ್ಯಾನಿಸುವುದು ಮತ್ತು ವಿಸ್ತರಿಸುವುದು ಮತ್ತು ಅದಕ್ಕೊಂದು ಪೂರ್ಣತೆಯನ್ನು ಕೊಡುವುದು ಅನಿವಾರ್ಯವಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು** : ತಿದ್ದುಪಡಿಯನ್ನು ಸೂಚಿಸಲಾಗಿದೆ.

ಕಲಮು-೩ರಲ್ಲಿ

೧) "ವಿಷಯ ಹಾಗೂ ಸಂದರ್ಭದಲ್ಲಿ ಅಸಂಗತವಾದುದು ಏನಾದರೂ ಇಲ್ಲವಾದಲ್ಲಿ" ಎಂಬುದಕ್ಕೆ

ಬದಲಾಗಿ "ಸಂದರ್ಭಕ್ಕೆ ಅನಿವಾರ್ಯವಾಗದ ಹೊರತು" ಎಂದು ಮಾಡಬೇಕು.

೨) ಪ್ರಸ್ತುತ ೧, ೨, ೩ ಮತ್ತು ೪ನೇ ಬಾಬುಗಳ ಸಂಖ್ಯೆಯನ್ನು ಬದಲಿಸಿ ೨, ೩, ೪ ಮತ್ತು ೫ ಎಂದು ಹೊಸ ಕ್ರಮಸಂಖ್ಯೆಯನ್ನು ನೀಡಬೇಕು ಮತ್ತು ಈ ಕೆಳಗಿನ ಸೇರ್ಪಡೆಯನ್ನು ೧ನೇ ಬಾಬು ಎಂದು ಪರಿಗಣಿಸಬೇಕು: "ಈ ಮಸೂದೆ ಜಾರಿಯಾಗದೇ ಇದ್ದಲ್ಲಿ ಮದ್ರಾಸ್ ಅಳಿಯಸಂತಾನ ಕಾಯಿದೆ, ೧೯೪೯ರ (ಮದ್ರಾಸ್ ಕಾಯಿದೆ ೧೯೪೯ರ ೯) ವ್ಯಾಪ್ತಿಗೆ ಬರುತ್ತಿದ್ದ ವ್ಯಕ್ತಿಗಳಿಗೆ ಅನ್ವಯಿಸುತ್ತಿದ್ದ ಕಾಯಿದೆಯೇ ಅಳಿಯಸಂತಾನ ಕಾಯಿದೆ."

೩) ಹೊಸ ಕ್ರಮಸಂಖ್ಯೆಯ ಬಾಬು–೩ ರಲ್ಲಿ "೪೪ ಮತ್ತು ೪೯ನೇ ಪ್ರಕರಣಗಳನ್ನು ಹೊರತುಪಡಿಸಿ" ಎಂಬುದನ್ನು ತೆಗೆದುಹಾಕಬೇಕು.

೪) ಹೊಸ ಕ್ರಮಸಂಖ್ಯೆಯ ಬಾಬು–೫ಕ್ಕೆ ನೀಡಿರುವ ವಿವರಣೆಯಲ್ಲಿ "ಈ ಕಲಮು" ಎಂಬದಕ್ಕೆ ಬದಲಾಗಿ "ಕಲಮುಗಳು ೪ ಮತ್ತು ೫" ಎಂದು ಹಾಕಬೇಕು.

೫) ಈಗಿರುವ ೫, ೬, ೭ ಮತ್ತು ೮ನೇ ಬಾಬುಗಳಿಗೆ ಹೊಸ ಕ್ರಮಸಂಖ್ಯೆಯನ್ನು ನೀಡಿ ೮, ೯, ೧೦ ಮತ್ತು ೧೧ ಎಂದು ಮಾಡಬೇಕು. ೬ ಮತ್ತು ೭ನೇ ಬಾಬಿನಲ್ಲಿ ಸೇರಿಸಬೇಕಾದದ್ದು (ಎ) "ಮರುಮಕ್ಕತ್ತಾಯಂ ಕಾಯಿದೆ ಅಂದರೆ, ಈ ಮಸೂದೆ ಜಾರಿಯಾಗದಿದ್ದಲ್ಲಿ ಮದ್ರಾಸ್ ಮರುಮಕ್ಕತ್ತಾಯಂ ಕಾಯಿದೆ ೧೯೩೨, (ಮದ್ರಾಸ್ ಕಾಯಿದೆ ೧೯೩೩ರ ೨೨) ತಿರುವಾಂಕೂರು ನಾಯರ್ ಕಾಯಿದೆ ೧೧೦೦ರ ೨, ನಂಜಿನದಾದ್ ವೆಲ್ಲಾಲ ಕಾಯಿದೆ ೧೧೦೧, ತಿರುವಾಂಕೂರು ಕ್ಷತ್ರಿಯ ಕಾಯಿದೆ ೧೧೦೮, ತಿರುವಾಂಕೂರು ಕೃಷ್ಣವಾಕ ಮರುಮಕ್ಕಟ್ಟಾಯಂ ಕಾಯಿದೆ ೧೧೧೫, ಕೊಚ್ಚಿನ್ ತೀಯಾ ಕಾಯಿದೆ ೧೧೦೭ರ ೮, ಕೊಚ್ಚಿನ್ ನಾಯರ್ ಕಾಯಿದೆ ೧೧೧೩ರ ಕೊಚ್ಚಿನ್ ಮರುಮಕ್ಕತ್ತಾಯಂ ಕಾಯಿದೆ ೧೧೨೩ರ ೩೩ರ ಆಳ್ವಿಕೆಯ ವ್ಯಾಪ್ತಿಗೆ ಬರುತ್ತಿದ್ದ ವ್ಯಕ್ತಿಗಳಿಗೆ ಅನ್ವಯಿಸುತ್ತಿದ್ದ ಕಾಯಿದೆ.

(ಬಿ) ತಿರುವಾಂಕೂರು, ಕೊಚ್ಚಿನ್ ಅಥವಾ ಮದ್ರಾಸ್ ನಗರಗಳಲ್ಲಿಯೇ ಹೆಚ್ಚಾಗಿ ವಾಸಮಾಡುವವರಿಗೆ ಮತ್ತು ಈ ಮಸೂದೆ ಜಾರಿಯಾಗದಿದ್ದಲ್ಲಿ ತಾಯಾಳಿಕೆಯನ್ವಯ ವಾರಸುದಾರಿಕೆಯನ್ನು ಹೊಂದುತ್ತಿದ್ದ ಕೋಮುಗಳಿಗೆ ಸೇರಿದವರಿಗೆ ಅನ್ವಯಿಸುತ್ತದೆ. ಆದರೆ ಇದರಲ್ಲಿ ಅಳಿಯಸಂತಾನ ಪದ್ಧತಿ ಸೇರಿರುವುದಿಲ್ಲ.

ಸಿ) ಈ ಕಾಯಿದೆ ಜಾರಿಯಾಗದಿದ್ದಲ್ಲಿ ಮದ್ರಾಸ್ ನಂಬೂದರಿ ಕಾಯಿದೆ ೧೯೩೨. (೧೯೩೩ರ ೨೧ನೇ ಮದ್ರಾಸ್ ಕಾಯಿದೆ) ಕೊಚ್ಚಿನ್ ನಂಬೂದರಿ ಕಾಯಿದೆ (೧೧೧೪ನೇ ೧೭) ಅಥವಾ ೧೧೦೬ರ ತಿರುವಾಂಕೂರು ಮಲೆಯಾಳ ಬ್ರಾಹ್ಮಣ ಕಾಯಿದೆಯ (೧೧೦೬ರ ३ನೇ ರೆಗ್ಯುಲೇಷನ್) ಆಳ್ವಿಕೆಗೆ ಒಳಪಟ್ಟಿದ್ದವರಿಗೆ ಅನ್ವಯಿಸುತ್ತಿದ್ದ ಕಾಯಿದೆಗೆ ನಂಬೂದರಿ ಕಾಯಿದೆ ಎನ್ನುತ್ತಿದ್ದರು.

೬) ಹೊಸ ಕ್ರಮಸಂಖ್ಯೆಯ ಪ್ರಕಾರ ೮ನೇ ಬಾಬಿನಲ್ಲಿ "ಒಂದು" ಎಂದಿರುವ ಕಡೆ "ಯಾವುದಾದರೂ" ಎಂದು ತಿದ್ದುಪಡಿ ಮಾಡಬೇಕು.

**ಶ್ರೀ ನಜೀರುದ್ದೀನ್ ಅಹಮದ್ :** ವಿಷಯದ ದೃಷ್ಟಿಯಿಂದ ನನ್ನ ತಿದ್ದುಪಡಿ ಸಂಖ್ಯೆ ೪೧೧ ಮುಖ್ಯವಾಗುತ್ತದೆ ಏಕೆಂದರೆ, ಈ ತಿದ್ದುಪಡಿ ನಿಜವಾಗಿಯೂ ಒಂದು ಕಲಮು. ನನ್ನ ತಿದ್ದುಪಡಿಯು ಅಳಿಯಸಂತಾನ ಎಂಬುದನ್ನು ಕಿತ್ತುಹಾಕಲು ಬಯಸುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಗಣ್ಯ ಸದಸ್ಯರು ಅದನ್ನು ಮಂಡಿಸಬಹುದು.

**ಶ್ರೀ ನಜೀರುದ್ದೀನ್ ಅಹಮದ್ :** ಮಂಡಿಸಲು ಅವಕಾಶ ಕೇಳಿಕೊಳ್ಳುತ್ತೇನೆ.

ಡಾ. ಅಂಬೇಡ್ಕರ್ ಸೂಚಿಸಿದ ತಿದ್ದುಪಡಿ ಭಾಗ–೨ರಲ್ಲಿ ಕಲಮು–೩ರ ಸೂಚಿತ ಭಾಗ–೧ನ್ನು ತೆಗೆದುಹಾಕಿ. ಅದಕ್ಕೂ ಮೊದಲು ಕೆಲವು ಮೌಖಿಕವಾದ ಮತ್ತು ಔಪಚಾರಿಕವಾದ ಕೆಲವು ತಿದ್ದುಪಡಿಗಳನ್ನು ಒತ್ತಾಯದಿಂದ ಸದನದ ಮುಂದೆ ಇಡಬೇಕಾಗಿಲ್ಲ. ಅಂದರೆ, ಮಾನ್ಯ ಕಾನೂನು ಮಂತ್ರಿಗಳು ಬಾಬು–೨ರಲ್ಲಿ ಹೊಸ ಕ್ರಮಸಂಖ್ಯೆಗಳನ್ನು ನೀಡುವ ಬಗ್ಗೆ ಸೂಚಿಸಿರುವ ತಿದ್ದುಪಡಿಯು ಮಿಕ್ಕ ಎಲ್ಲಾ ತಿದ್ದುಪಡಿಗಳಿಗೂ ಅನ್ವಯಿಸುತ್ತದೆ. ಈ ಹಂತದಲ್ಲಿ ನಾವು ಹೊಸ ಕ್ರಮಸಂಖ್ಯೆಯನ್ನು ನೀಡಲು ಹೊರಟರೆ ಅದು ತುಂಬಾ ಗೊಂದಲಕ್ಕೆ ಎಡೆಮಾಡಿಕೊಡುತ್ತದೆ ಮತ್ತು ಇದರಿಂದಾಗಿ ನಾವು ಎಲ್ಲಿ ನಿಲ್ಲುತ್ತೇವೆ ಎನ್ನುವುದೇ ತಿಳಿಯುವುದಿಲ್ಲ. ಅದನ್ನು ಕಾರ್ಯದರ್ಶಿಗಳು ಅಥವಾ ಕರಡುಗಾರರು ಮಾಡಬೇಕು. ಹಾಗಾಗಿ ಈಗ ಸದ್ಯಕ್ಕೆ ಈ ಹೊಸ ಕ್ರಮಸಂಖ್ಯೆ ತಿದ್ದುಪಡಿಗಳನ್ನು ತೆಗೆದುಹಾಕಿಬಿಡಬೇಕು ಎಂಬುದು ನನ್ನ ಸಲಹೆ. ಈ ಮೌಖಿಕ ಅಸಂಗತತೆಗಳನ್ನು ಸರಿಪಡಿಸಲು ನನ್ನ ಬಳಿ ಹಲವಾರು ತಿದ್ದುಪಡಿಗಳಿವೆ. ಆದರೆ ಅವನ್ನೆಲ್ಲಾ ನಾನು ಈಗ ಮಂಡಿಸುವುದಕ್ಕೆ ಹೋಗುವುದಿಲ್ಲ. ಅದನ್ನೆಲ್ಲಾ ಸಂಪೂರ್ಣವಾಗಿ ಕಾರ್ಯದರ್ಶಿಗಳಿಗೇ ಬಿಟ್ಟುಬಿಟ್ಟಿದ್ದೇನೆ.

ಇನ್ನು ನನ್ನ ತಿದ್ದುಪಡಿಗಳೆಲ್ಲವೂ ಅಳಿಯಸಂತಾನ ಕಾನೂನು ಎಂಬುದರ ವ್ಯಾಖ್ಯೆಯನ್ನು ತೆಗೆದುಹಾಕಬೇಕು ಎನ್ನುವುದಕ್ಕಾಗಿಯೇ. ಮರುಮಕ್ಕತ್ತಾಯಂ ಮತ್ತು ನಂಬೂದರಿ ಕಾಯಿದೆ ಇವುಗಳ ವ್ಯಾಖ್ಯೆಯನ್ನು ತೆಗದುಹಾಕಲು ಆವಶ್ಯಕವಾದ ಬೇರೆ ತಿದ್ದುಪಡಿಗಳೂ ನನ್ನ ಬಳಿ ಇವೆ. ಇದು ಹಾಗೂ ಉಳಿದ ತಿದ್ದುಪಡಿಗಳು ನಾನು ತೆಗೆದುಹಾಕಲು ಬಯಸುವ ವಿಶೇಷ ಕಾಯಿದೆಗಳಿಗೆ ಸಂಬಂಧಪಟ್ಟಂಥವು. ಇವುಗಳನ್ನು ನಾನು ತೆಗದುಹಾಕಲು ಬಯಸುತ್ತೇನೆ. ಏಕೆಂದರೆ, ಯಾವುದೇ ಮೀಸಲಾತಿಯನ್ನು, ವಿನಾಯ್ತಿಯನ್ನು ಯಾವ ಸಂದರ್ಭದಲ್ಲಿಯೂ ಮಾಡಬಾರದು ಎಂಬುದು ಈ ಮಸೂದೆಯ ನಿಯಮ. ಸಿಖ್ಖರಿಗೆ ವಿನಾಯ್ತಿಯನ್ನು ನೀಡಬಾರದು ಎಂದು ನಾವು ತೀರ್ಮಾನಿಸಿದ್ದೇವೆ. ಉಳಿದವರಿಗೂ ಕೂಡ ಈ ಮಸೂದೆಯಿಂದ ವಿನಾಯ್ತಿ ನೀಡಿಲ್ಲ. ಅದು ಒಪ್ಪಿಗೆಯಾಗಿರುವ ನಿಯಮ. ಇದೇ ನಾನು ಈ ತಿದ್ದುಪಡಿಯನ್ನು ಸೂಚಿಸಲು ಕಾರಣ.....

**ಮಾನ್ಯ ಉಪಸಭಾಧ್ಯಕ್ಷರು :** ಈ ಕಾಯಿದೆಯ ಕಲಂಗಳನ್ನು ಉಳಿದ ಈ ಎರಡು ವರ್ಗಗಳಿಗೂ ವಿಸ್ತರಿಸುವ ಸೂಚನೆಯನ್ನು ಮಾನ್ಯ ಕಾನೂನು ಮಂತ್ರಿಗಳು ನೀಡುತ್ತಿದ್ದಾರೆ ಎಂದು ಭಾವಿಸಿದ್ದೇನೆ.

**ಶ್ರೀ ನಜೀರುದ್ದೀನ್ ಅಹಮದ್ :** ಇದರರ್ಥ, ಈ ಮಸೂದೆಯಲ್ಲಿರುವ ವಿವಾಹ ಮತ್ತು ವಿಚ್ಛೇದನ ಕಾಯಿದೆಯು ಪ್ರತ್ಯೇಕವಾಗಿ ಅಳಿಯಸಂತಾನ, ಮರುಮಕ್ಕತ್ತಾಯಂ ಹಾಗೂ ನಂಬೂದರಿ ವಿವಾಹ ಪದ್ಧತಿಗಳಿಗೆ ಒಳಪಟ್ಟಿದ್ದ ಹಿಂದೂಗಳಿಗೆ ಅನ್ವಯಿಸುತ್ತದೆ ಎಂದಾಯ್ತು.

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾಗಿ, ಆಕ್ಷೇಪಣೆಗಳೆಲ್ಲಾ ಮುಗಿದಂತಾಯ್ತು.

**ಶ್ರೀ ನಜೀರುದ್ದೀನ್ ಅಹಮದ್ :** ಮದುವೆ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಬಂಧನೆಗಳು ಹಿಂದೂಗಳೆಲ್ಲರಿಗೂ ಅನ್ವಯಿಸುತ್ತದೆ ಎಂದಾದಲ್ಲಿ ವ್ಯಾಖ್ಯೆಯು ಸಂಪೂರ್ಣವಾಗಿ ಅನವಶ್ಯಕ. ಅದು ಹಾದಿ ತಪ್ಪಿಸುತ್ತದೆ ಎಂಬುದೇ ಈಗಿರುವ ಆಕ್ಷೇಪ.

**ಮಾನ್ಯ ಉಪಸಭಾಧ್ಯಕ್ಷರು:** ಇದನ್ನು ನಾವು ಅಂಗೀಕರಿಸಿದ್ದೇವೆ. ಸಿಖ್ಖರಂತೆಯೇ ನಾವು ಉಳಿದವರನ್ನೂ ಸೇರಿಸಿದ್ದೇವೆ. ಪ್ರತ್ಯೇಕವಾದ ವ್ಯಾಖ್ಯೆಯ ಆವಶ್ಯಕತೆಯಿಲ್ಲ. ಮಸೂದೆಯಲ್ಲಿ ಅದೂ ಸೇರಿದೆ ಹಾಗೂ ಅದು ಆವಶ್ಯಕವೂ ಅಲ್ಲ. ಅಳಿಯಸಂತಾನ ಮತ್ತು ಮರುಮಕ್ಕತ್ತಾಯಂ ಕಾಯಿದೆಗಳಿಗೆ ವಿನಾಯ್ತಿ ನೀಡಲಾಗಿದೆ. ಮಸೂದೆಯಲ್ಲಿ ಸೂಚಿಸಿರುವ ವಿವಾಹ ಮತ್ತು ವಿಚ್ಛೇದನ ಕಾನೂನು ಅವರಿಗೆ ಅನ್ವಯಿಸುವುದಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಅವರಿಗೂ ಕೂಡ ವಿನಾಯ್ತಿ ನೀಡಬೇಕಾಗಿಲ್ಲ ಎಂಬುದು ನನ್ನ ಅಭಿಪ್ರಾಯ.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಕಾನೂನು ಮಂತ್ರಿಗಳು ಕೂಡ ಅದನ್ನೇ ಹೇಳಲು ಪ್ರಯತ್ನಿಸುತ್ತಿದ್ದಾರೆ.

**ಡಾ. ಅಂಬೇಡ್ಕರ್ :** ನಾನು ಹೇಳಲು ಪ್ರಯತ್ನಿಸುತ್ತಿರುವುದೂ ಕೂಡ ಅದನ್ನೇ.

**ಶ್ರೀ ನಜೀರುದ್ದೀನ್ ಅಹಮದ್ :** ಈ ವ್ಯಾಖ್ಯೆಯನ್ನು ಸೇರಿಸುವುದರ ಮೂಲಕ ಪ್ರಯತ್ನಿಸುತ್ತಿದ್ದಾರೇನು? ಅದೇ ನಿರ್ದಿಷ್ಟ ಉದ್ದೇಶವಾಗಿದ್ದಲ್ಲಿ, ನಾನು ಸೂಚಿಸಿರುವ ತಿದ್ದುಪಡಿಯು ಅನವಶ್ಯಕ.

**ಮಾನ್ಯ ಉಪಸಭಾಧ್ಯಕ್ಷರು :** ಮೂಲತಃ ಅಳಿಯಸಂತಾನ ಮತ್ತು ಮರುಮಕ್ಕತ್ತಾಯಂ ಕಾಯಿದೆಗಳಿಗೆ ಒಳಪಟ್ಟಿದ್ದವರಿಗೆ ವಿನಾಯಿತಿ ನೀಡಲಾಗಿತ್ತು. ಮತ್ತು ಅವರು ಆ ಕಾನೂನುಗಳ ಆಳ್ವಿಕೆಗೇ ಒಳಪಟ್ಟಿದ್ದರು. ಈಗ ಸಮಾನತೆಯನ್ನು ತರುವ ಉದ್ದೇಶದಿಂದ ಅವರನ್ನೂ ಕಾಯಿದೆಯ ವ್ಯಾಪ್ತಿಗೆ ತರಬೇಕೆಂಬುದು ಮಾನ್ಯ ಕಾನೂನು ಮಂತ್ರಿಗಳ ಅಭಿಪ್ರಾಯ. ಹಾಗಾಗಿ ಅವರು ಇದನ್ನು ಸೇರಿಸುತ್ತಿದ್ದಾರೆ.

**ಶ್ರೀ ನಜೀರುದ್ದೀನ್ ಅಹಮದ್ :** ಈ ವ್ಯಾಖ್ಯೆಯು ಇಲ್ಲದೇ ಹೋದರೂ ಕೂಡ, ಸಹಜವಾಗಿಯೆ ಅವರು ಈ ಕಾಯಿದೆಯ ವ್ಯಾಪ್ತಿಯೊಳಗೆ ಬರುತ್ತಾರೆ. ಹಾಗಿದ್ದ ಮೇಲೂ ಈ ವ್ಯಾಖ್ಯೆ ಏಕೆ ಎಂಬುದರ ಬಗ್ಗೆ ನನಗೆ ಗೊಂದಲವಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಮಸೂದೆ ನಿರ್ದಿಷ್ಟವಾಗಿ ಅವರಿಗೆ ವಿನಾಯಿತಿ ನೀಡಿದೆ.

**ಶ್ರೀ ನಜೀರುದ್ದೀನ್ ಅಹಮದ್ :** ಆ ಭಾಗವನ್ನು ತೆಗೆದುಹಾಕಬೇಕು. ಅದು ಪುನರುಕ್ತಿಯಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಮೂಲತಃ ಅವರು ಮಸೂದೆಯ ವ್ಯಾಪ್ತಿಯಲ್ಲಿಯೇ ಬರುತ್ತಿದ್ದರು ಮತ್ತು ಕಾನೂನು ಮಂತ್ರಿಗಳು ಅವರಿಗೆ ವಿನಾಯಿತಿ ನೀಡಲು ಬಯಸುತ್ತಿದ್ದರು ಎಂಬ ತಪ್ಪುಗ್ರಹಿಕೆಯಿಂದ ಮಾನ್ಯ ಸದಸ್ಯರು ಪ್ರಾರಂಭಿಸಿದರು.

**ಶ್ರೀ ನಜೀರುದ್ದೀನ್ ಅಹಮದ್ :** ಇದು ಸಾಮಾನ್ಯ. ಕಲಮನ್ನು ತಿದ್ದುಪಡಿ ಮಾಡುವುದರ ಮೂಲಕ ಮಾಡಬೇಕೇ ಹೊರತು, ವ್ಯಾಖ್ಯೆಯಲ್ಲಿ ತಿದ್ದುಪಡಿ ಮಾಡುವುದರಿಂದ ಅಲ್ಲ.

**ಮಾನ್ಯ ಉಪ ಸಭಾಧ್ಯಕ್ಷರು :** ಅದು ಬೇರೆ ವಿಚಾರ. ವಾಸ್ತವವಾಗಿ ಮಾನ್ಯ ಸದಸ್ಯರ ತಿದ್ದುಪಡಿಯು ಸಂಪೂರ್ಣವಾಗಿ ಅರ್ಥಹೀನ.

**ಶ್ರೀ ನಜೀರುದ್ದೀನ್ ಅಹಮದ್ :** ನಾನೂ ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾದರೆ ಔಪಚಾರಿಕ ವಿಚಾರಗಳ ಬಗ್ಗೆಯಾಗಲಿ ಅಥವಾ ಪದಗಳ ತಿದ್ದುಪಡಿಗಳ ಬಗ್ಗೆಯಾಗಲಿ ಅವರೇಕೆ ಚರ್ಚಿಸಬೇಕು? ಅದು ಆವಶ್ಯಕವಾದಲ್ಲಿ ನಾವು ಈ ವ್ಯಾಖ್ಯೆಯನ್ನು ಸ್ಪಷ್ಟೀಕರಣಕ್ಕಾಗಿ ಉಳಿಸಿಕೊಳ್ಳೋಣ. ಯಾವುದೋ ಒಂದು ಸಾಮಾನ್ಯ ಕಲಮು ಕಾಯಿದೆಗೆ ಸೇರಿಸಿಬಿಡುವುದು ಬೇಡ.

**ಶ್ರೀ ನಜೀರುದ್ದೀನ್ ಅಹಮದ್ :** ಸಾಮಾನ್ಯ ಕಲಮುಗಳ ಕಾಯಿದೆಗಲ್ಲ. ಆದರೆ ಈ ಕಾಯಿದೆಯಲ್ಲಿ ಹಿಂದೂಗಳ ಬಗ್ಗೆ ಇರುವ ಸಾಮಾನ್ಯ ವ್ಯಾಖ್ಯೆಗೆ ಸೇರಿಸಬೇಕು. ಇದು ಎಲ್ಲಾ ಹಿಂದೂಗಳಿಗೂ ಅನ್ವಯಿಸಬೇಕು. ಅಳಿಯಸಂತಾನ ಕಾಯಿದೆಯೂ ಹಿಂದೂಗಳಿಗೆ ಅನ್ವಯಿಸುವಂಥದ್ದು. ಇವು ವಿಶೇಷ ಉಲ್ಲೇಖ ಮತ್ತು ವಿಶೇಷ ಸೇರ್ಪಡೆಯಾಗುತ್ತದೆ. ಇದು ಈಗಾಗಲೇ ಸೇರಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಅವರ ಆಕ್ಷೇಪಕ್ಕೆ ಈಗ ಕಸುವಿಲ್ಲ. ಹಾಗಾಗಿ ಮಾನ್ಯ ಸದಸ್ಯರು ಇನ್ಯಾವುದೊ ಔಪಚಾರಿಕ ವಿಚಾರದ ಕಡೆಗೆ ಹೋಗುತ್ತಿದ್ದಾರೆ. ಅದು ಆವಶ್ಯಕವೆ?

**ಗೃಹಮಂತ್ರಿ :** (ಶ್ರೀ ರಾಜಗೋಪಾಲಾಚಾರಿ) ನನಗನ್ನಿಸುತ್ತದೆ, ಮಾನ್ಯ ಸದಸ್ಯರು ನಿಜವಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿಲ್ಲ. ಕೆಲವು ವರ್ಗಗಳು ಅಥವಾ ಗುಂಪುಗಳನ್ನು ಎರಡು ರೀತಿಯಲ್ಲಿ ಹೊರಗಿಡಬಹುದು; ಒಂದು ಇಡೀ ಮಸೂದೆಯಲ್ಲಿ ಅವರನ್ನು ಸಂಪೂರ್ಣವಾಗಿ ಕಡೆಗಾಣಿಸುವುದರ ಮೂಲಕ ಹಾಗೂ ಮತ್ತೊಂದು ಅವರನ್ನು ಉಲ್ಲೇಖಿಸಿ ಅವರಿಗೆ ವಿನಾಯಿತಿ ನೀಡುವ ಮೂಲಕ. ಕಾನೂನು ಮಂತ್ರಿ ಒಂದು ವೇಳೆ ಅವರಿಗೆ ಮಸೂದೆಯಲ್ಲಿ ವಿನಾಯಿತಿ ಸೂಚಿಸಿ ಅವಕಾಶ ಮಾಡಿಕೊಡುವುದಿದ್ದರೆ, ಅದಕ್ಕೊಂದು ಮಿತಿಯನ್ನು ನಿಗದಿಪಡಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನು ಮತ್ತೊಂದು ರೀತಿಯಲ್ಲಿ ಮಾಡಿದ್ದಾರೆ. ಅವರು ಈ ಗುಂಪುಗಳಿಗೆ ಈಗಾಗಲೇ ವಿನಾಯಿತಿಯನ್ನು ನೀಡಿದ್ದಾರೆ ಮತ್ತು ಮಸೂದೆಯನ್ನು ವ್ಯಾಪ್ತಿಯಿಂದ ಹೊರಗಿಟ್ಟಿದ್ದಾರೆ.

**ಶ್ರೀ ರಾಜಗೋಪಾಲಾಚಾರಿ :** ನಾನು ಹೇಳಿದ್ದೂ ಅದೇ.

**ಮಾನ್ಯ ಉಪಸಭಾಧ್ಯಕ್ಷರು :** ಆದರೆ ಅವರು ಆ ಗುಂಪುಗಳನ್ನು ಸೇರಿಸಲು ಬಯಸುತ್ತಾರೆ.

**ಶ್ರೀ ರಾಜಗೋಪಾಲಾಚಾರಿ :** ಈ ತಿದ್ದುಪಡಿಯನ್ನು ಮಂಡಿಸಿದರೆ ಮಾನ್ಯ ಸದಸ್ಯರು ಈ ಮಸೂದೆಯನ್ನು ಸಾರಾಸಗಟಾಗಿ ಈ ಜನಗಳಿಗೆ ಅನ್ವಯಿಸುತ್ತಾರೆ ಎಂದು ಭಾವಿಸಿದಂತೆ ಕಾಣುತ್ತದೆ. ಹಾಗಾಗಿ ನೀವು ಹಿಂದೂ ಎನ್ನುವುದನ್ನು ವ್ಯಾಖ್ಯಾನಿಸಿದ ನಂತರ ಮತ್ತೆ ಈ ಜನಗಳು ಯಾರು ಎಂಬ ವ್ಯಾಖ್ಯಾನವನ್ನೇಕೆ ನೀಡಬೇಕು? ಎಂದು ಕೇಳುತ್ತಾರೆ. ಇದಕ್ಕೆ ಉತ್ತರವೆಂದರೆ ನಾವು ಈ ಮಸೂದೆಯ ನಿಬಂಧನೆಗಳನ್ನು ಈ ಜನಗಳಿಗೆ ಸಾರಾಸಗಟಾಗಿ ಅನ್ವಯಿಸುತ್ತಿಲ್ಲ ಬದಲಾಗಿ ಅವರಿಗೆ ವಿನಾಯಿತಿಯನ್ನು ನೀಡುತ್ತಿದ್ದೇವೆ. ಹಾಗಾಗಿ ಅವರು ಯಾರು ಎಂಬುದನ್ನು ವ್ಯಾಖ್ಯಾನಿಸುವುದು ಅವಶ್ಯಕವಾಗುತ್ತದೆ.

**ಶ್ರೀ ನಜೀರುದ್ದೀನ್ ಅಹಮದ್ :** ಈ ಸೂಕ್ಷ್ಮಗಳನ್ನು ನನಗೆ ಗ್ರಹಿಸಲಾಗುತ್ತಿಲ್ಲ. ಮಸೂದೆಯನ್ನು ಅನ್ವಯಿಸುವುದಾದರೆ ವಿನಾಯಿತಿಗಳನ್ನೇನೂ ನೀಡದೆ ಅದನ್ನು ನೇರವಾಗಿ ಅನ್ವಯಿಸಬೇಕು.

**ಶ್ರೀ ರಾಜಗೋಪಾಲಾಚಾರಿ :** ಒಂದು ವೇಳೆ ಅವರಿಗೆ ಅನ್ವಯಿಸಿದಲ್ಲಿ ಆಗ **"ಅವರು"** ಯಾರು ಎಂಬುದನ್ನು ವ್ಯಾಖ್ಯಾನಿಸಬೇಕು. ಈಗ ಮಾಡುತ್ತಿರುವುದು ಅದನ್ನೇ.

**ಶ್ರೀ ನಜೀರುದ್ದೀನ್ ಅಹಮದ್ :** ಅದು ಎಲ್ಲರಿಗೂ ಅನ್ವಯಿಸಬೇಕು. ಹಿಂದೂ ಎಂಬ ವ್ಯಾಖ್ಯೆಯಲ್ಲಿ ಅವರನ್ನೂ ಸೇರಿಸಲಾಗಿದೆ.

**ಶ್ರೀ ರಾಜಗೋಪಾಲಾಚಾರಿ :** ಈ ಜನಗಳಿಗೆ ಕೆಲವು ನಿಬಂಧನೆಗಳಿಂದ ವಿನಾಯ್ತಿ ನೀಡಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಮೊದಲು ನಾನದನ್ನು ಅರ್ಥಮಾಡಿಕೊಳ್ಳುತ್ತೇನೆ. ನಾನದನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದಲ್ಲಿ ಅದನ್ನು ಸದನದ ಮುಂದೆ ಮಂಡಿಸುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ಈಗ ಮಸೂದೆಯು ಇರುವ ಸ್ವರೂಪದಲ್ಲಿ ಕಲಮು–೫೧ರ ಪ್ರಕಾರ:

" ಈ ಮಸೂದೆಯು ಜಾರಿಗೆ ಬರುವುದಕ್ಕೆ ಮೊದಲಾಗಲಿ ಅಥವಾ ನಂತರವಾಗಲಿ ನಡೆದಿರುವ ಶಾಸ್ತ್ರೋಕ್ತ ವಿವಾಹವನ್ನು ರದ್ದುಪಡಿಸಲು ಮದ್ರಾಸ್ ಮರುಮಕ್ಕತ್ತಾಯಂ ಕಾಯಿದೆ ನೀಡಿದ್ದ ಯಾವ ಹಕ್ಕಿನ ಮೇಲೂ ಈ ಭಾಗದಲ್ಲಿರುವ ಯಾವ ವಿಚಾರವೂ ಪ್ರಭಾವವನ್ನು ಬೀರುವುದಿಲ್ಲ." ಹಾಗಾಗಿ, ಈಗ ಸೆಲೆಕ್ಟ್ ಸಮಿತಿಯು ಅಂಗೀಕರಿಸಿರುವ ಮಸೂದೆಯ ಪ್ರಕಾರ ಈ ಕಾಯಿದೆಯ ವ್ಯಾಪ್ತಿಗೆ ಒಳಪಡುವವರಿಗೆ ಮರುಮಕ್ಕತ್ತಾಯಂ ಕಾಯಿದೆಯನ್ನು ಅನ್ವಯಿಸುವುದಕ್ಕೆ ಅನುಮತಿಯಿದೆ. ಕಾನೂನು ಮಂತ್ರಿಗಳು ಯಾವ ವರ್ಗದವರಿಗೂ ವಿಶೇಷ ಸವಲತ್ತುಗಳನ್ನು ನೀಡದೇ ಎಲ್ಲರನ್ನೂ ಆ ಕಾಯಿದೆಯ ವ್ಯಾಪ್ತಿಗೆ ತರಲು

ಬಯಸುತ್ತಿದ್ದಾರೆ.

**ಡಾ. ಅಂಬೇಡ್ಕರ್ :** ಹೌದು.

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ನಜೀರುದ್ದೀನ್ ಅಹಮದ್ ಅವರು ಬಯಸುತ್ತಿರುವುದೂ ಅದನ್ನೇ. ಮೂಲತಃ ಅವರು ವಿನಾಯಿತಿಯನ್ನು ತೋರಿಸುತ್ತಿದ್ದೀರಿ ಎಂದು ಭಾವಿಸಿದ್ದರು. ಮೊದಲು ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನ ಕಾಯಿದೆಗೆ ಒಳಪಟ್ಟಿದ್ದವರು ಈ ಮಸೂದೆಯ ಆಳ್ವಿಕೆಗೆ ಒಳಪಡುತ್ತಿದ್ದರು ಹಾಗೂ ಕಾನೂನು ಮಂತ್ರಿಗಳು ಅವರಿಗೆ ರಿಯಾಯ್ತಿ ನೀಡಲು ಬಯಸುತ್ತಿದ್ದಾರೆ ಎಂದು ನಜೀರುದ್ದೀನ್ ಅಹಮದ್ ಅವರು ಭಾವಿಸಿದ್ದರು. ಈಗ ಮೂಲ ಕಾನೂನಿಗೆ ವಿನಾಯ್ತಿಯನ್ನು ನೀಡಿ ಮತ್ತು ಅವರನ್ನು ಈ ಕಾನೂನಿನ ವ್ಯಾಪ್ತಿಗೇ ತರುತ್ತಿದೆ ಎಂದು ತಿಳಿದ ಮೇಲೆ ಅವರು ತಮ್ಮ ಆಕ್ಷೇಪವನ್ನು ಹಿಂತೆಗೆದುಕೊಂಡಿದ್ದಾರೆ. ಆದರೆ, ಅವರು ಒಂದು ವಿಷಯಕ್ಕೆ ಪಟ್ಟುಹಿಡಿದಿದ್ದಾರೆ– ಆ ಪದವನ್ನು ಹಿಂತೆಗೆದುಕೊಳ್ಳುತ್ತೇನೆ– ಅವರು ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನ ಎಂಬುದರ ವ್ಯಾಖ್ಯೆಯ ಬಗ್ಗೆ ಒಂದು ಔಪಚಾರಿಕ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತಾರೆ. ಆದರೆ ಮುಖ್ಯ ವಿಷಯವೇ ಈಗ ಇತ್ಯರ್ಥವಾಗಿದೆ. ಇನ್ನು ಸಣ್ಣಪುಟ್ಟ ಔಪಚಾರಿಕ ವಿಚಾರಗಳ ಬಗ್ಗೆ ಏಕೆ ತಲೆಕೆಡಿಸಿಕೊಳ್ಳುತ್ತಾರೆ?

**ಶ್ರೀ ನಜೀರುದ್ದೀನ್ ಅಹಮದ್ :** ಕಲಮು–೫೧ನ್ನು ತೆಗೆದುಹಾಕಿಬಿಡಬೇಕು. ಅಷ್ಟು ಸಾಕು.

**ಮಾನ್ಯ ಉಪಸಭಾಧ್ಯಕ್ಷರು :** ಅದು ಕ್ರಮಕ್ಕೆ ಸಂಬಂಧಿಸಿದ ವಿಚಾರ.

**ಡಾ. ಅಂಬೇಡ್ಕರ್ :** ಆ ಬಗ್ಗೆ ನಂತರ ಚರ್ಚಿಸೋಣ.

**ಶ್ರೀ ನಜೀರುದ್ದೀನ್ ಅಹಮದ್ :** ಈ ಎಲ್ಲಾ ಜನರಿಗೂ ಈ ಮಸೂದೆಯಲ್ಲಿ ವಿಶೇಷ ನಿಬಂಧನೆಗಳಿವೆ.(ಸವಲತ್ತುಗಳಿವೆ) ಅದನ್ನು ಬಿಡಬೇಕು. ವ್ಯಾಖ್ಯೆಯನ್ನು ಬಿಡಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನು ಸ್ಪಷ್ಟಪಡಿಸಿಕೊಳ್ಳುವುದರಲ್ಲಿ ಹಾನಿಯೇನಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಅದು ಸುತ್ತಿ ಬಳಸಿ ಮಾತನಾಡುವುದಷ್ಟೇ.

**ಮಾನ್ಯ ಉಪಸಭಾಧ್ಯಕ್ಷರು :** ಅಳಿಯಸಂತಾನ ಕಾಯಿದೆಯು ಒಂದು ಸರ್ವವ್ಯಾಪಿ ಕಾಯಿದೆಯಲ್ಲ. ಅದು ಸಂಪ್ರದಾಯ ಮತ್ತಿತರ ವಿಷಯಗಳ ಬಗ್ಗೆ ವಿಚಾರ ಮಾಡುವುದಿಲ್ಲ. ಆದರೆ ಹಿಂದೂ ಕಾನೂನು. ಒಂದು ಮಸೂದೆ.

**ಸಾರಿಗೆ ಮತ್ತು ರೈಲ್ವೇ ರಾಜ್ಯ ಮಂತ್ರಿಗಳು :** (ಶ್ರೀ ಸಂತಾನಂ) ಇದನ್ನೆಲ್ಲಾ ನಾವು ಮುಗಿಸಿದ ನಂತರ, ಅಳಿಯಸಂತಾನ ಕಾಯಿದೆಯ ಮುಖ್ಯವಾದ ಯಾವುದಾದರೂ ನಿಬಂಧನೆ ಇದರೊಳಗೆ ಸೇರಿಲ್ಲವಾದಲ್ಲಿ ಆಗ ಈ ವಿಚಾರವನ್ನು ಮತ್ತೆ ಚರ್ಚಿಸಬಹುದು. ಈಗ ವ್ಯಾಖ್ಯೆಯೊಂದಿಗೆ ಪ್ರಾರಂಭಿಸುವುದು ಒಳ್ಳೆಯದು. ಏಕೆಂದರೆ, ಈಗಿರುವ ಕೆಲವು ನಿಬಂಧನೆಗಳಲ್ಲಿ ಆ ಬಗ್ಗೆ ಉಲ್ಲೇಖಗಳಿವೆ.

**ಮಾನ್ಯ ಉಪ ಸಭಾಧ್ಯಕ್ಷರು :** ಮಾನ್ಯ ಸದಸ್ಯರಾದ ಶ್ರೀ ನಜೀರುದ್ದೀನ್ ಅಹಮದ್ ಅವರು ಇದನ್ನು ಆವಶ್ಯಕವೆಂದು ಪರಿಗಣಿಸಿಲ್ಲ ಎಂದು ಭಾವಿಸುತ್ತೇನೆ. ವಾಸ್ತವವಾಗಿ, ಮಾನ್ಯ ಕಾನೂನು ಮಂತ್ರಿಗಳ ತಿದ್ದುಪಡಿಯಲ್ಲಿ ಅವರು ಹೇಳಿದ ವಿಚಾರವೂ ಸೇರಿದೆ. ಹಾಗಾಗಿ ಶ್ರೀ ನಜೀರುದ್ದೀನ್ ಅಹಮದ್ ಅವರು ಸೂಚಿಸಿರುವ ಯಾವ ತಿದ್ದುಪಡಿಯನ್ನೂ ಮಂಡಿಸುತ್ತಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಇಲ್ಲ, ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ೩೭೨ನೇ ತಿದ್ದುಪಡಿ ಬರೀ ಔಪಚಾರಿಕವಾದುದು. ಹೊಸ ಕ್ರಮ ಸಂಖ್ಯೆಯನ್ನು ನೀಡುವ ಹೊಣೆಗಾರಿಕೆ ನನ್ನದು.

**ಶ್ರೀ ನಜೀರುದ್ದೀನ್ ಅಹಮದ್ :** ೪೧೦ನೇ ತಿದ್ದುಪಡಿಯನ್ನು ಮಂಡಿಸಬೇಕೆಂದು ಒತ್ತಾಯವೇನಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಇನ್ನು ೩೭೪ ಮತ್ತು ೩೭೫ನೇ ತಿದ್ದುಪಡಿಗಳಿವೆ.

**ಶ್ರೀ ನಜೀರುದ್ದೀನ್ ಅಹಮದ್ :** ೩೭೪ನೇ ತಿದ್ದುಪಡಿಯನ್ನು ಮಂಡಿಸಲೇಬೇಕೆಂಬ ಒತ್ತಾಯ ನನ್ನದು. ಆದರೆ ಅದಕ್ಕಿಂತ ಮೊದಲು ನಾನು ಸೂಚಿಸಿರುವ ೩೭೭ನೇ ತಿದ್ದುಪಡಿಯನ್ನು ಗಮನಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು ಅದನ್ನು ಮಂಡಿಸಬಹುದು. ಇನ್ನು ಔಪಚಾರಿಕವಾದ ಬ್ರಾಕೆಟ್ಟುಗಳು ಮುಂತಾದುವುಗಳಿಗೆ ಸಂಬಂಧಿಸಿದ ತಿದ್ದುಪಡಿಗಳ ಬಗ್ಗೆ ಕಚೇರಿಗೆ ನಿರ್ದೇಶನವನ್ನು ನಾನು ನೀಡುತ್ತೇನೆ.

**ಶ್ರೀ ನಜೀರುದ್ದೀನ್ ಅಹಮದ್ :** ನಾನು ೩೭೭ನೇ ತಿದ್ದುಪಡಿಯೊಂದನ್ನು ಮಾತ್ರ ಮಂಡಿಸುತ್ತೇನೆ. ಉಳಿದ ಯಾವ ತಿದ್ದುಪಡಿಗಳನ್ನೂ ನಾನು ಮಂಡಿಸುವುದಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ** (ಪಂಜಾಬ್): ಅಂದರೆ ಉಪಕಲಮು–೧ರ ಬಗ್ಗೆ ತಾವು ಚರ್ಚೆಯನ್ನು ಸಮಾಪ್ತಿಗೊಳಿಸುತ್ತಿದ್ದೀರೇನು? ನನ್ನದೊಂದು ತಿದ್ದುಪಡಿ ಇದೆ.

**ಡೆಪ್ಯೂಟಿ ಸ್ಪೀಕರ್ :** ಸ್ವಲ್ಪ ಇರಿ. ಕಲಮು–೧ನ್ನು ಮುಗಿಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ತಮ್ಮೆಲ್ಲಾ ತಿದ್ದುಪಡಿಗಳನ್ನು ಮೊದಲು ಮಂಡಿಸಿಬಿಡಬೇಕು ಎಂದು ನಜೀರುದ್ದೀನ್ ಅವರಿಗೆ ಹಠವಿದ್ದಲ್ಲಿ ಆ ಬಗ್ಗೆ ನನ್ನದೇನೂ ಆಕ್ಷೇಪವಿಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಅದರಲ್ಲಿ ಹಠವೇನಿಲ್ಲ. ಅದು ಅನುಕೂಲ ಎಂಬ ಕಾರಣಕ್ಕಾಗಿ ಅಷ್ಟೇ.

**ಮಾನ್ಯ ಉಪಸಭಾಧ್ಯಕ್ಷರು :** ಸ್ವಲ್ಪ ಇರಿ. ಕಲಮು–೩ರ ಪ್ರಕಾರ ಉಪಕಲಮು–೧ನ್ನು ಮೊದಲು ಮುಗಿಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮಂಡಿಸುವುದಕ್ಕೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

ಕಲಮು–೩ರ ೧ನೇ ಭಾಗದಲ್ಲಿ **"**ಹಿಂದೂಗಳಲ್ಲಿ**"** ಎನ್ನುವುದಕ್ಕೆ ಬದಲಾಗಿ ಈ ಮಸೂದೆ ಯಾವ ಯಾವ ವ್ಯಕ್ತಿಗಳಿಗೆ ಅನ್ವಯಿಸುತ್ತದೋ ಅವರ ನಡುವೆ ಎಂದು ಬಳಸಿ. ನಾನು ಈ ಬಗ್ಗೆ ಹೆಚ್ಚು ಮಾತನಾಡಲು ಬಯಸುವುದಿಲ್ಲ. ಏಕೆಂದರೆ ವಿಷಯ ತೀರಾ ಸ್ಪಷ್ಟವಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಿದ್ದೇನೆ.

ಕಲಮು–೩ ಭಾಗ–೧ರಲ್ಲಿ **"**ಹಿಂದೂಗಳಲ್ಲಿ**"** ಎನ್ನುವುದಕ್ಕೆ ಬದಲಾಗಿ, ಈ ಮಸೂದೆ **"**ಯಾವ ವ್ಯಕ್ತಿಗಳಿಗೆ ಅನ್ವಯಿಸುತ್ತದೋ ಅವರ ನಡುವೆ**"** ಎಂದು ಬಳಸಿ.

**ಶ್ರೀ ಸಂತಾನಂ :** ಕಲಮು–೨ ಉಪಕಲಮು–೩ ಈ ಅಂಶವನ್ನು ಸಂಪೂರ್ಣವಾಗಿ ನಿರೂಪಿಸುತ್ತದೆ. **"**ಹಿಂದೂಗಳು**"** ಎಂದರೆ ಈ ಮಸೂದೆ ಯಾರ್ಯಾರಿಗೆ ಅನ್ವಯಿಸುತ್ತದೋ ಅವರು.

**ಮಾನ್ಯ ಉಪಸಭಾಧ್ಯಕ್ಷರು :** ಈ ವ್ಯಾಖ್ಯಾನವನ್ನು ಸದನದಲ್ಲಿ ಈಗಾಗಲೇ ಅಂಗೀಕರಿಸಲಾಗಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದು ನನಗೆ ಗೊತ್ತು. ಇಷ್ಟು ಅರ್ಥಗರ್ಭಿತವಾದ ಮಾತುಗಳನ್ನು ಬಳಸಿದರೆ ನಾವೇನನ್ನೂ ಕಳೆದುಕೊಳ್ಳುವುದಿಲ್ಲ. ಒಂದು ವೇಳೆ ಯಾರಾದರೂ ಬೇರೆ ಒಂದು ಪರಿಚ್ಛೇದವನ್ನು ಓದಿದರೆ ಆಗ ಅವರು ಈ ವ್ಯಾಖ್ಯೆಯನ್ನೂ ತಿಳಿದಿರುವುದು ಅನಿವಾರ್ಯವಾಗುತ್ತದೆ. ಈ ವ್ಯಾಖ್ಯೆಯು ನೆನಪಿಲ್ಲದೇ ಹೋದಲ್ಲಿ ಈ ಮಸೂದೆಯು ಯಾರಿಗೆ ಅನ್ವಯಿಸುತ್ತದೆ ಎನ್ನುವುದೇ ಅರ್ಥವಾಗುವುದಿಲ್ಲ. ಈಗಿರುವ ವಾಕ್ಯಗಳು ತುಂಬಾ ಅರ್ಥಪೂರ್ಣವಾಗಿವೆ. ವಿಷಯವು ಚೆನ್ನಾಗಿ ಅರ್ಥವಾಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಆದರೂ ಕೂಡ ಈ ಮಸೂದೆ ಯಾವ ಯಾವ ವ್ಯಕ್ತಿಗಳಿಗೆ ಅನ್ವಯಿಸುತ್ತದೆ ಎಂಬುದನ್ನು ಅಂದರೆ ಆ ವ್ಯಕ್ತಿಗಳು ಯಾರು ಎಂಬುದನ್ನು ಅರ್ಥಮಾಡಿಕೊಳ್ಳಲು ಮತ್ತೆ ಹಿಂದಿನ ಉಲ್ಲೇಖವನ್ನು ನೋಡಬೇಕಾಗುತ್ತದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** "ಯಾರಿಗೆ ಈ ಮಸೂದೆಯು ಅನ್ವಯಿಸುತ್ತದೆಯೊ" ಎಂಬುದಕ್ಕೆ ಈ ವ್ಯಾಖ್ಯಾನವನ್ನು ಎಲ್ಲಾ ಕಡೆಯೂ ನೆನಪಿಸಿಕೊಳ್ಳಬೇಕಾಗುತ್ತದೆ. ಇದು ತುಂಬಾ ನಿರ್ದಿಷ್ಟವಾಗಿದೆ. ತೀರ್ಮಾನವನ್ನು ನಾನು ಸದನಕ್ಕೆ ಬಿಡುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು:** ಅದು ತುಂಬಾ ಒತ್ತು ನೀಡಬೇಕಾದ ವಿಷಯವೆ ಅಥವಾ ಕೇವಲ ಔಪಚಾರಿಕವಾದ ವಿಚಾರವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಹೇಗಾದರಾಗಲಿ, ಅದನ್ನು ಮಂಡಿಸುತ್ತೇನೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಮಂಡಿಸಲು ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಭಾಗ–೧ರಲ್ಲಿ "ಮತ್ತು ಏಕರೂಪ" ಎಂಬುದನ್ನು ಕಿತ್ತುಹಾಕಿ.

**ಶ್ರೀ ಸಂತಾನಂ :** ಒಂದು ಅಂಶದ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ, ಒಂದು ಸಾವಿರ ವರ್ಷಗಳ ಹಿಂದೆ ಯಾವುದಾದರೊಂದು ಸಂಪ್ರದಾಯ ಒಂದು ನಿರ್ದಿಷ್ಟ....

**ಪಂಡಿತ ಠಾಕೂರ್ ದಾಸ್ ಭಾರ್ಗವ:** ನನ್ನ ತಿದ್ದುಪಡಿಯನ್ನು ನಾನು ಇನ್ನೂ ಮಂಡಿಸೇ ಇಲ್ಲ. ಆಗಲೇ ನನ್ನ ಮಾನ್ಯ ಗೆಳೆಯರು ಅದನ್ನು ವಿರೋಧಿಸುತ್ತಿದ್ದಾರೆ.

**ಮಾನ್ಯ ಉಪಸಭಾಧ್ಯಕ್ಷರು :** ಇಲ್ಲ. ಮಸೂದೆಯನ್ನು ಮಂಡಿಸುತ್ತಿರುವವರು ಇಡೀ ಭಾರತದ ದೃಷ್ಟಿಯಿಂದ ಏಕರೂಪ ಎನ್ನುವುದು ಕಷ್ಟ ಎಂಬುದನ್ನು ಹೇಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ ಅಷ್ಟೇ. ತಿದ್ದುಪಡಿಯನ್ನು ಮಂಡಿಸಲಾಗಿದೆ.

ಭಾಗ–೧ರಲ್ಲಿ "ಮತ್ತು ಏಕರೂಪತೆ" ಎಂಬುದನ್ನು ಕಿತ್ತುಹಾಕಿ.

**ಪಂಡಿತ ಠಾಕೂರ್ ದಾಸ ಭಾರ್ಗವ :** ನೀವು ಅನುಮತಿ ನೀಡಿದ್ದಲ್ಲಿ ನಾನು ಇನ್ನೊಂದು ತಿದ್ದುಪಡಿಯನ್ನು ಕೂಡ ಮಂಡಿಸುತ್ತೇನೆ.

ಕಲಮು – ೩ರ ಭಾಗ–೧ರಲ್ಲಿ:

(ಎ) ನಾಲ್ಕನೇ ಸಾಲಿನಲ್ಲಿ "ಕುಟುಂಬಗಳ ಗುಂಪು" ಎಂಬ ವಾಕ್ಯವಾದ ಮೇಲೆ, ಈ ಕೆಳಗಿನ ವಾಕ್ಯಗಳನ್ನು ಸೇರಿಸಿ:

"ಅಥವಾ ಯಾವುದಾದರೂ ಒಂದು ಪ್ರಾಂತ್ಯ, ಬುಡಕಟ್ಟು, ಕೋಮು, ಗುಂಪು ಅಥವಾ ಕುಟುಂಬದಲ್ಲಿ ವಿಚಾರಹೀನ ಎಂದು ಭಾವಿಸದೇ ಇರುವ, ಕಾನೂನು ರೀತ್ಯಾ ಅಧಿಕೃತ ಹಾಗೂ ಸಿಂಧು ಎಂದು ಭಾವಿಸಿರುವ ಯಾವುದೇ ಕಾನೂನಾದರೂ ಕೂಡ",

ಮತ್ತು

(ಬಿ) ಮೊದಲನೆಯ ಉಪಬಂಧವನ್ನು ಕಿತ್ತುಹಾಕಿ:

ನೀವು ಅವಕಾಶ ನೀಡಿದ್ದಲ್ಲಿ, ಈ ತಿದ್ದುಪಡಿಗಳನ್ನೇಕೆ ಮಂಡಿಸಬೇಕು ಎಂಬುದನ್ನು ಬೇಕಾದರೆ ವಿವರಿಸಿ ಹೇಳುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಬೇಡ. ನೀವು ಹೇಳಬೇಕೆಂದಿರುವುದನ್ನು ನಂತರ ಕೇಳುತ್ತೇನೆ. ಈಗ ತಿದ್ದುಪಡಿಯನ್ನು ಮಂಡಿಸುತ್ತೇನೆ:

**ಶ್ರೀ ಝುಂಝುನ್‌ವಾಲಾ**(ಬಿಹಾರ): ನನ್ನ ತಿದ್ದುಪಡಿ–ಸಂಖ್ಯೆ ೪೧೩ರನ್ನು ಸ್ವಲ್ಪ ಬದಲಾವಣೆ ಮಾಡಿ ಮಂಡಿಸಲು ಬಯಸುತ್ತೇನೆ. ಅಲ್ಲಿ "ಜಾತಿ" ಎಂದಿರುವ ಕಡೆ "ವರ್ಣ" ಎಂದು ಬಳಸಲು ಬಯಸುತ್ತೇನೆ.

**ಡಾ. ಅಂಬೇಡ್ಕರ್ :** ಕಲಮುಗಳಲ್ಲಿ ಈ ಭಾಗಗಳನ್ನು ಅಥವಾ ಬಾಬುಗಳನ್ನು ಉಲ್ಲೇಖಿಸುವಾಗ "ಉಪಕಲಂ" ಎಂದು ಬಳಸಿದರೆ ನನಗೆ ಗೊಂದಲವುಂಟಾಗುತ್ತದೆ. ಇಂಥ ವಿಚಾರಗಳಲ್ಲಿ ನಾವು ಬಾಬುಗಳನ್ನು ಕುರಿತು ಮಾತನಾಡುತ್ತಿರುತ್ತೇವೆ. ಹಾಗಾಗಿ ಬಾಬು–೧ ಬಾಬು–೨ ಎಂದು ಸೂಚಿಸಿದರೆ ಒಳ್ಳೆಯದು. ಈ ಕಲಮುಗಳಲ್ಲಿ ಉಪಕಲಮುಗಳು ಇಲ್ಲ. ಆದ್ದರಿಂದ ದಯವಿಟ್ಟು ಅವುಗಳನ್ನು ಬಾಬುಗಳು ಅಥವಾ ದಾಖಲೆಗಳು ಎಂದು ಉಲ್ಲೇಖಿಸಿದರೆ ಒಳ್ಳೆಯದು.

**ಮಾನ್ಯ ಉಪಸಭಾಧ್ಯಕ್ಷರು :** ಇವೆಲ್ಲವೂ ಕಲಮುಗಳು ಮತ್ತು ನಂತರ ಈ ಉಪಕಲಮುಗಳು ಮತ್ತು ಹಾಗಾಗಿ ನಾನು ..........

**ಶ್ರೀ ಸಂತಾನಂ :** ಇಲ್ಲಿ, ಉಪಕಲಮುಗಳಿಗೆ ಎಂದಿನಂತೆಯೇ ಕ್ರಮಸಂಖ್ಯೆ ಇದೆ.

**ಡಾ. ಅಂಬೇಡ್ಕರ್ :** ಬೇರೆ ಯಾವ ಪದವನ್ನು ಬೇಕಾದರೂ ಬಳಸಿರಿ, ಆದರೆ "ಉಪಕಲಮು" ಎಂಬ ಪದವನ್ನು ಮಾತ್ರ ಬಳಸಬೇಡಿ.

**ಮಾನ್ಯ ಉಪಸಭಾಧ್ಯಕ್ಷರು :** ಸರಿ. ನಾನು ಬಾಬು ಅಥವಾ ಭಾಗ ಎಂಬ ಪದವನ್ನು ಬಳಸುತ್ತೇನೆ. ಶ್ರೀಝುಂಝುನ್‌ವಾಲಾ ಅವರು "ಜಾತಿ" ಎಂಬುದಕ್ಕೆ ಬದಲಾಗಿ ಮಾನ್ಯ ಕಾನೂನು ಮಂತ್ರಿಯವರು ನಿನ್ನೆ ಸೂಚಿಸಿದಂತೆ "ವರ್ಣ" ಎಂಬ ಪದವನ್ನು ಬಳಸಿ ತಮ್ಮ ತಿದ್ದುಪಡಿಯನ್ನು ಮಂಡಿಸಲು ಬಯಸುತ್ತಾರೆ.

**ಶ್ರೀಝುಂಝುನ್‌ವಾಲಾ :** ಮಂಡಿಸಲು ಅನುಮತಿ ಕೋರುತ್ತೇನೆ.

ಭಾಗ–೧ರಲ್ಲಿ "ಬುಡಕಟ್ಟು" ಎಂಬ ಪದದ ನಂತರ "ವರ್ಣ" ಎಂಬ ಪದವನ್ನು ಸೇರಿಸಿ.

ಸಣ್ಣ ಪುಟ್ಟ ಮಾರ್ಪಾಡು ಮಾಡಿ "ಮುಖ್ಯ ಜಾತಿಗಳು" ಎಂಬ ಪದಪುಂಜದ ನಂತರ ಬರುವ ಪದಗಳನ್ನು ಕಿತ್ತುಹಾಕಿ ತಿದ್ದುಪಡಿ–೪೧೪ನ್ನು ಮಂಡಿಸಲು ಬಯಸುತ್ತೇನೆ.

ಭಾಗ–೧ರ ನಂತರ "ವರ್ಣ" ಎಂದರೆ ಆ ಸಂದರ್ಭದಲ್ಲಿ ನಾಲ್ಕು ಪ್ರಮುಖ "ವರ್ಣಗಳು" ಎಂದರ್ಥ.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಭಾಗ–೧ರ ನಂತರ ಈ ಕೆಳಗಿನ ಹೊಸ ಭಾಗವನ್ನು ಸೇರಿಸಿ.

"ವರ್ಣ" ಎಂದರೆ ಆ ಸಂದರ್ಭದಲ್ಲಿ ನಾಲ್ಕು ಪ್ರಮುಖ "ವರ್ಣಗಳು" ಎಂದರ್ಥ.

**ಶ್ರೀ ಆರ್.ಕೆ. ಚೌಧರಿ** (ಅಸ್ಸಾಂ) : ನಾನೊಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ:

**ಮಾನ್ಯ ಉಪಸಭಾಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಕಲಮು–೩ ಭಾಗ ೧ಕ್ಕಿರುವ ನಿಬಂಧನೆಗಳನ್ನು ಬಿಟ್ಟುಬಿಡಿ.

**ಶ್ರೀ ಶ್ಯಾಮನಂದನ್ ಸಹಾಯ್** (ಬಿಹಾರ್): ನಾನೂ ತಿದ್ದುಪಡಿಯೊಂದನ್ನು ಮಂಡಿಸಲು ಬಯಸುತ್ತೇನೆ. ನಾವಿಬ್ಬರೂ ತಿದ್ದುಪಡಿ ಸೂಚನೆಯನ್ನು ಜಂಟಿಯಾಗಿ ನೀಡಿದ್ದೆವು.

**ಮಾನ್ಯ ಉಪ ಸಭಾಧ್ಯಕ್ಷರು :** ಎಲ್ಲಾ ಸದಸ್ಯರು ತಿದ್ದುಪಡಿಯನ್ನು ಮಂಡಿಸಿದರೂ ನನಗೆ ಅದು ದೊಡ್ಡದೆನಿಸುವುದಿಲ್ಲ. ಆದರೆ, ಮಾನ್ಯ ಸದಸ್ಯರು ಯಾವುದಾದರೂ ತಿದ್ದುಪಡಿಯನ್ನು ಹಿಂದೆ ತೆಗೆದುಕೊಳ್ಳಲು ಬಯಸಿದ್ದಲ್ಲಿ ಆಗ, ಇನ್ನೊಬ್ಬ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ನೀಡುತ್ತೇನೆ. ಅಥವಾ ಯಾರಾದರೂ ಸದಸ್ಯರು ಗೈರುಹಾಜರಾಗಿದ್ದರೆ, ಆಗ ಇನ್ನೊಬ್ಬ ಸದಸ್ಯ ಅದನ್ನು ಹಿಂತೆಗೆದುಕೊಳ್ಳಬಹುದು.

**ಕ್ಯಾಪ್ಟನ್ ಎ.ಪಿ. ಸಿಂಗ್** (ವಿಂಧ್ಯ ಪ್ರದೇಶ): ಭಾಗ – ೮ಕ್ಕೆ ಸಂಬಂಧಿಸಿದ ನನ್ನ ತಿದ್ದುಪಡಿ–೩೭೮–ನ್ನು

ಮಂಡಿಸಲು ಬಯಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು:** ನಾವಿನ್ನು ಆ ಭಾಗಕ್ಕೆ ಬಂದಿಲ್ಲ.

**ಶ್ರೀ ಶ್ಯಾಮನಂದನ್ ಸಹಾಯ್ :** ಒಂದು ಗುಂಪಿಗೆ ಅಥವಾ ಒಂದು ವರ್ಗಕ್ಕೆ ಸೇರಿದ ಎಲ್ಲಾ ತಿದ್ದುಪಡಿಗಳನ್ನೂ ಒಂದು ಬಾರಿ ಇತ್ಯರ್ಥಮಾಡಿಬಿಡುತ್ತೇವೆ ಎಂಬ ಅಭಿಪ್ರಾಯ ನಿಮ್ಮದೆಂದು ಕಾಣುತ್ತದೆ. ಒಂದು ವಿಷಯದ ವ್ಯಾಖ್ಯೆಗೆ ಸಂಬಂಧಿಸಿ ತಿದ್ದುಪಡಿಗಳನ್ನು ಈಗ ಕೈಗೆತ್ತಿಕೊಂಡು, ಚರ್ಚಿಸಿ, ಇತ್ಯರ್ಥ ಮಾಡಿದ ನಂತರ ಇನ್ನೊಂದು ವಿಚಾರದ ಬಗ್ಗೆ ಇರುವ ತಿದ್ದುಪಡಿಗಳ ಚರ್ಚೆಗೆ ಹೋಗುವುದು ಸೂಕ್ತ ಎಂಬುದು ನನ್ನ ಸಲಹೆ. ಇಲ್ಲವಾದಲ್ಲಿ ಅದು ತೊಂದರೆಗಳಿಗೆ ಎಡೆಮಾಡಿಕೊಡುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನೀಗ ಮಾಡುತ್ತಿರುವುದೂ ಅದೇ. ನಾವೀಗ ಭಾಗ–೧ರ "ಸಂಪ್ರದಾಯಗಳು ಮತ್ತು ಪದ್ಧತಿಗಳು" ಇವುಗಳಿಗೆ ಸಂಬಂಧಿಸಿದ ತಿದ್ದುಪಡಿಗಳನ್ನೇ ಚರ್ಚಿಸುತ್ತಿದ್ದೇವೆ.

ಸಂಪುಟ – ೧೪ಪುಟ ೧೧೯೬–೧೩೨೭

**ಶ್ರೀ ಭಟ್** (ಬೊಂಬಾಯಿ): ನಾನು ಆಚಾರ ಹಾಗೂ ಪದ್ಧತಿಗಳು ಕುರಿತಂತೆ, ಒಂದು ತಿದ್ದುಪಡಿಯನ್ನು, ಕಳಿಸಿಕೊಟ್ಟಿದ್ದೆ. ಅದು ತಮಗೆ ತಲುಪಿರಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಹೌದೇ, ಅದೇನು?

**ಶ್ರೀ ಭಟ್:** ಅದು ಭಾಗ(೧)ಕ್ಕೆ ಸಂಬಂಧಿಸಿದ್ದು.

**ಮಾನ್ಯ ಉಪಸಭಾಧ್ಯಕ್ಷರು :** ಆದರೆ ಅದು ನನಗೆ ತಲುಪಿಲ್ಲ. ತಾವು ಸಭೆಯನ್ನು ಹೀಗೆ ಅಚ್ಚರಿಗೊಳಿಸುವ ವಿಧಾನವನ್ನು ನಾನು ಒಪ್ಪಲಾರೆ. ಕನಿಷ್ಠ ಮಟ್ಟದಲ್ಲಿ ಈ ವಿಧೇಯಕವನ್ನು ಮಂಡಿಸಿದವರಿಗಾದರೂ ಮುಂಗಡವಾಗಿ ಒಂದು ಪ್ರತಿಯನ್ನು ನೀಡಬಹುದಿತ್ತಲ್ಲವೇ, ನನಗಾದರೂ ಪ್ರತಿಯನ್ನು ನೀಡಬಹುದಿತ್ತಲ್ಲ. ಹೀಗೆ ಸದನವನ್ನು ಅಚ್ಚರಿಗೆ ಗುರಿ ಮಾಡುವುದು ಉತ್ತಮವಲ್ಲ. ಎಂದೇ ಹೇಳುವೆ.

**ಶ್ರೀ ಭಟ್:** ನಾನು ನಿಮಗೆ ಒಂದು ಪ್ರತಿ ನೀಡಿರಬಹುದೆಂದೇ ಭಾವಿಸಿರುವೆ. ಏಕೆಂದರೆ ನನಗೆ ಕೂಡಾ ಒಂದು ಅರ್ಧಗಂಟೆ ಮುಂಚೆ ಕಾರ್ಯಾಲಯದಿಂದ ಒಂದು ಪ್ರತಿ ತಲುಪಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಯಾವಾಗ ತಮಗೆ ತಲುಪಿಸಿದರು?

**ಶ್ರೀ ಭಟ್ :** ಈ ದಿನ ಬೆಳಗ್ಗೆ.

**ಮಾನ್ಯ ಉಪಸಭಾಧ್ಯಕ್ಷರು :** ಕೊನೆಯ ಸಮಯದಲ್ಲಿ ನನಗೆ ತಿಳಿದಂತೆ, ಹಲವು ತಿದ್ದುಪಡಿಗಳಿಗೆ,

ಸರ್ಕಾರದಿಂದಾಗಲಿ ಅಥವಾ ಬೇರೆಯವರಿಂದಾಗಲಿ ಮಂಡಿಸಲು ಆಸ್ಪದ ನೀಡಬಹುದಾಗಿದೆ. ಆದರೆ ನನ್ನ ಸಲಹೆ ಏನೆಂದರೆ ಕನಿಷ್ಠ ಪಕ್ಷ ಕಾನೂನು ಮಂತ್ರಿಗಳಿಗಾದರೂ, ತಿದ್ದುಪಡಿಯ ಪ್ರತಿ ಅಥವಾ ವಿಷಯವನ್ನು ತಿಳಿಸಿ, ಅದನ್ನು ನನ್ನ ಗಮನಕ್ಕೆ ತರಬೇಕು. ಈ ಒಂದು ವಿಧಾನವನ್ನು ನಾನು ಕಠಿಣವಾಗಿ ನೂತನ ತಿದ್ದುಪಡಿಗಳಿಗೆ ಅನ್ವಯಿಸುವೆ. ಈ ಒಂದು ನಿಯಮವನ್ನು ಸದನದ ಎಲ್ಲಾ ಸದಸ್ಯರಿಗೂ ಅನ್ವಯಿಸಲಾಗುತ್ತದೆ.

**ಶ್ರೀ ಭಟ್ :** ಭಾಗ(೧)ಕ್ಕೆ ಸಂಬಂಧಿಸಿದಂತೆ ನಾನು ಮಂಡಿಸುವುದೇನೆಂದರೆ ಭಾಗ(೧) ೩ನೇ ವಿಧಿಯಲ್ಲಿ ಕೆಳಕಂಡಂತೆ ಬದಲಾಯಿಸಬೇಕು:

"(೧) 'ಸಂಪ್ರದಾಯ' ಮತ್ತು 'ಆಚರಣೆ' ಎಂಬ ಭಾವನೆಗಳು, ಹಿಂದೂ ಜನಾಂಗದಲ್ಲಿ ಅಧಿಕವಾಗಿ, ಜಾರಿಯಲ್ಲಿರುವ ಕಾನೂನುಗಳಿಗೆ ಸಮಾನವಾಗಿವೆ ಅಥವಾ ಕಾನೂನುಗಳಂತೆಯೆ ಪರಿಗಣಿಸಲಾಗಿದೆ. ಇದು ಸ್ಥಳೀಯವಾಗಿ ಎಲ್ಲಾ ಕುಟುಂಬ, ಜಾತಿ, ಉಪಜಾತಿ, ಸಮೂಹ, ಪಂಗಡ, ಅಥವಾ ಗುಂಪುಗಳಿಗೆ ಅನ್ವಯಿಸಿದೆ.

ಆದರೆ ಈ ನಿಯಮ ಖಚಿತ ಹಾಗೂ ಸಮಂಜಸ, ಮುಂದುವರಿದು ಇದು ಒಂದು ಕುಟುಂಬಕ್ಕೆ

ಸಂಬಂಧಿಸಿದ್ದೇ ಆದರೆ ಅದನ್ನು ಕುಟುಂಬದವರು ನಿರಾಕರಿಸುವುದಿಲ್ಲ."

**ಮಾನ್ಯ ಉಪಸಭಾಧ್ಯಕ್ಷರು** : ಹಾಗಾದರೆ ಎರಡರಲ್ಲಿಯ ಭೇದಗಳೇನು?

**ಶ್ರೀ ಭಟ್** : ಅದನ್ನು ತೆಗೆದುಹಾಕಿದ್ದು, ಅದರ ಒಂದು ಭಾಗವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಆದುದರಿಂದಲೇ ನಾನು ಈ ರೀತಿಯಲ್ಲಿ ತಿದ್ದುಪಡಿಯನ್ನು ತಂದಿರುವೆ.

**ಮಾನ್ಯ ಉಪಸಭಾಧ್ಯಕ್ಷರು** : ಹಾಗಾದರೆ ತಿದ್ದುಪಡಿಯನ್ನು ಮಂಡಿಸಬಹುದು; ಭಾಗ(೧) ೩ನೆ ವಿಧಿಯಲ್ಲಿ ಇದನ್ನು ಅಳವಡಿಸಬೇಕು;

"(೧) ಹೇಳಿಕೆಗಳು 'ಸಂಪ್ರದಾಯ' ಮತ್ತು 'ಆಚರಣೆ'ಗಳು ಹಲವಾರು ಕಾಲದಿಂದ ಜಾರಿಯಲ್ಲಿರುವ ನಿಯಮಗಳ ಮಹತ್ವವನ್ನು ಸೂಚಿಸುತ್ತವೆ. ಹೀಗಾಗಿ ಅವು ಕಾನೂನಿನಂತೆ ಹಿಂದೂಗಳ ಜಾತಿ, ಉಪಜಾತಿ, ಪಂಗಡ, ಸಮೂಹ, ಗುಂಪು ಹಾಗೂ ಕುಟುಂಬಗಳಲ್ಲಿ ಜಾರಿಯಲ್ಲಿವೆ.

ಹೀಗಾಗಿ ಈ ನಿಯಮ ಖಚಿತ ಹಾಗೂ ಸಕಾರಣವಾಗಿದ್ದು, ಕುಟುಂಬಗಳಲ್ಲಿ ಮುಂದುವರಿದು ಬಂದಿದೆ."

**ಶ್ರೀ ಶ್ಯಾಮನಂದನ್ ಸಹಾಯ್:** ಶ್ರೀ ಆರ್. ಕೆ. ಚೌಧುರಿ ಅವರು ಮಂಡಿಸಿದ ತಿದ್ದುಪಡಿಯು ಭಾಗ ೨ಕ್ಕೆ ಸಂಬಂಧಿಸಿದೆ. ಭಾಗ ಒಂದಕ್ಕಲ್ಲ.

**ಡಾ. ಅಂಬೇಡ್ಕರ್** : ಇದು ಈಗಿನ ವಿಧಿಗೆ ಅನ್ವಯಿಸುತ್ತದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ನನ್ನ ೪೪೪ ಮತ್ತು ೪೪೬ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ, ನಾನು, ಸಂಪ್ರದಾಯಗಳ ಬಗೆಗೆ ಸಾಮಾನ್ಯ ಅನಿಸಿಕೆಗಳನ್ನು ಹೇಳಬಯಸುವೆ. ಈಗ ನಮ್ಮ ಮುಂದಿರುವ ಶಾಸನದ ಪ್ರಮುಖ ನೆಲೆಗಟ್ಟು ಎಂದರೆ, ಸಂಪ್ರದಾಯಗಳು ಮತ್ತು ಕಾನೂನುಗಳು, ಈ ಶಾಸನಕ್ಕೆ ಹಾಗೂ ಅದರ ಸೂತ್ರಗಳಿಗೆ ವಿರುದ್ಧವಾಗಿದ್ದಲ್ಲಿ ಅವನ್ನು ಖಾಯಂ ಆಗಿ ಕಿತ್ತುಹಾಕಲಾಗುವುದು. ನನಗೆ ತಿಳಿದಂತೆ ಈ ಶಾಸನದ ತಿರುಳು ಎಂದರೆ, ದೇಶಾದ್ಯಂತ ಹಾಗೂ ಎಲ್ಲಾ ಸಮೂಹಗಳಿಗೆ ಅನ್ವಯಿಸುವಂತೆ ಒಂದೇ ಕಾನೂನು ಜಾರಿಯಲ್ಲಿ ಬಂದು, ವಿವಿಧ ಸಮೂಹ ಹಾಗೂ ಸಂಪ್ರದಾಯಗಳನ್ನು ಹೊರದೂಡಿ ರಾಷ್ಟ್ರಾದ್ಯಂತ ಏಕರೂಪ ಶಾಸನ ಒಂದು ಜಾರಿಗೊಳ್ಳುವುದು. ಈ ಉತ್ತಮ ನೆಲೆಗಟ್ಟನ್ನು ನಾನು ಸ್ವಾಗತಿಸುತ್ತೇನೆ. ಆದುದರಿಂದಲೇ ನಾನು ಈ ಕ್ರೋಡೀಕರಣಕ್ಕೆ ಸಮ್ಮತಿಸಿರುವೆ. ಏಕೆಂದರೆ, ಆಗ ನಮ್ಮ ಕಾನೂನುಗಳ ಖಚಿತ ರೂಪವನ್ನು ಹೊಂದುತ್ತವೆ ಹಾಗೂ ದೇಶದ ಎಲ್ಲಾ ಹಿಂದೂಗಳಿಗೆ ಅನ್ವಯಿಸುತ್ತವೆ.

ಈ ಸಂಹಿತೆಯಲ್ಲಿ ವಿವಿಧ ಸಂಪ್ರದಾಯಗಳನ್ನು ಏಕೀಕೃತಗೊಳಿಸುವುದರೊಂದಿಗೆ ನಾವು ಹಲವಾರು ಕಾನೂನು ಮತ್ತು ಸಂಪ್ರದಾಯಗಳನ್ನೂ ಬದಲಾಯಿಸಬೇಕು. ಈ ಪ್ರಯತ್ನ ಕೇವಲ ಸಂಹಿತೆಯ ಕ್ರೋಡೀಕರಣಕ್ಕೆ ಸೀಮಿತವಾಗಿಲ್ಲ. ಏಕೆಂದರೆ ಈ ಸಂಹಿತೆಯಲ್ಲಿ ನಾವು ನಮ್ಮಲ್ಲಿ ಜಾರಿಯಲ್ಲಿರಬಹುದಾದ ದುಷ್ಟ ಮತ್ತು ಅನಿಷ್ಟ ಶಾಸನ ಮತ್ತು ಸಂಪ್ರದಾಯಗಳನ್ನು ತೊಡೆದುಹಾಕಬೇಕು. ಆಗ ಮಾತ್ರ ಸುಧಾರಣೆ ಸಾಧ್ಯ. ನಾನು ಈ ಮಸೂದೆಯ ಅಂಶಗಳನ್ನು ಗಮನಿಸಿದ್ದು ಅವು ಜಾರಿಯಲ್ಲಿರುವ ಅನಿಷ್ಟ ಶಾಸನಗಳಿಗಿಂತ ಉತ್ತಮವಾಗಿವೆ. ಹೀಗಾಗಿ ನಾನು ಅವನ್ನು ಒಪ್ಪಿರುವೆ.

ಆದರೆ, ನಾನು ಕಂಡಂತೆ, ಅಂಬೇಡ್ಕರರು ಇದನ್ನು ಅಂಗೀಕರಿಸುವರೊ ಅಥವಾ ಸಂಪ್ರದಾಯಗಳಿಗೆ ಶರಣಾಗುವರೊ ಅರಿಯೆ. ಆದರೆ ನನಗೆ ತೋಚಿದಂತೆ ಸಂಹಿತೆಯ ಮಹತ್ವ ಸೂತ್ರಗಳನ್ನು, ಅವಕಾಶವಾದಿತ್ವಕ್ಕೆ ಬಲಿ ನೀಡಲಾಗುತ್ತಿದೆ. ಅವರ ಸಂದಿಗ್ಧತೆಯನ್ನು ನಾನೂ ಬಲ್ಲೆ. ಆದರೆ ನಾನು ಕೇವಲ ಕರುಣೆಯನ್ನು ಮಾತ್ರ ತೋರಬಹುದು. ವಿಧಿಯಿಲ್ಲ. ಅವರಿಗೇ ನಿರ್ಣಯಿಸಲು ಬಿಟ್ಟಲ್ಲಿ ಅವರು ಖಚಿತವಾಗಿ ಸಂಪ್ರದಾಯಗಳನ್ನು ವಿರೋಧಿಸುವರು. ಆದರೆ ನನಗೆ ಬಿಟ್ಟಲ್ಲಿ ನಾನು ಹೀಗೆಯೇ ಮುಂದುವರಿಯುವೆ. ಹೀಗಾಗಿ ನಮ್ಮ ದೃಷ್ಟಿಕೋನದಲ್ಲಿ

ಬದಲಾವಣೆ ಇರಲಾರದು............

**ಮಾನ್ಯ ಉಪಸಭಾಧ್ಯಕ್ಷರು:** ನಾನು ಕೇವಲ ವ್ಯಾಖ್ಯೆಗಳ ಬಗೆಗೆ ಅಂದರೆ ಸಂಬಂಧ, ಸಗೋತ್ರಗಳ ಅಥವಾ ಅವುಗಳಲ್ಲಿಯ ವ್ಯತ್ಯಾಸಗಳು ಕುರಿತಂತೆ ಜಾರಿಯಲ್ಲಿರಬಹುದಾದ ಸಂಪ್ರದಾಯಗಳು ಇರಬೇಕೆ? ಅಥವಾ ಕೂಡದೇ ಎಂಬುವ ಸಂಗತಿಯನ್ನು ಬೇರೆಯಾಗಿ ಪರಿಶೀಲಿಸೋಣ. ಈಗ ನಾವು ವ್ಯಕ್ತಿಗತ ಪ್ರಕರಣಗಳನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ಸಂಪ್ರದಾಯಗಳ ವ್ಯಾಖ್ಯೆಗಳನ್ನು ನಿವಾರಿಸಬಹುದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ:** 'ಸಂಪ್ರದಾಯ' ಎಂಬ ಪದದ ವ್ಯಾಖ್ಯೆಯು ನಾವು ಆ ಪದವನ್ನು ಉಪಯೋಗಿಸಿದ ಎಲ್ಲಾ ಸಂದರ್ಭಗಳಿಗು ಅನ್ವಯಿಸುತ್ತದೆ. ನಾನು ನೀಡಬಹುದಾದ ಅರ್ಥವನ್ನೇ ಅದು ಅವಲಂಬಿಸಿದೆ. ಆದುದರಿಂದ ನಾವು ಆ ಪದದ ಅರ್ಥವನ್ನು ಸೂಕ್ತವಾಗಿ ಅರಿಯಬೇಕಾದುದು ಅನಿವಾರ್ಯ. 'ಸಂಪ್ರದಾಯ' ಎಷ್ಟು ಗಂಭೀರವಾಗಿ ನಮ್ಮ ತತ್ವಗಳಿಗೆ ಬಾಧಕವಾಗಬಹುದು ಎಂಬುದನ್ನು ಪರಿಶೀಲಿಸಿದಾಗ, ಈ ಕ್ರೋಡೀಕರಣದಲ್ಲಿಯ ಅಂಶಗಳನ್ನು ಹೇಗೆ ಬದಲಾಯಿಸಬಹುದು, ಎಂಬ ವಿಷಯ 'ಸಂಪ್ರದಾಯ' ಪದದ ವ್ಯಾಖ್ಯೆಯನ್ನೇ ಅವಲಂಬಿಸಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ಹಿರಿಯ ಸಂಸದೀಯ ಪಟುಗಳು. ಆದರೆ ನನ್ನ ತಿಳಿವಳಿಕೆಗೆಂದೇ ಈ ವಿಷಯವನ್ನು ಅರಿಯಬಯಸುವೆ. ಹಲವು ವ್ಯಕ್ತಿಗತ ವಿಷಯಗಳಾದ ಮದುವೆ, ವಿಚ್ಛೇದನಗಳು ನಮ್ಮ ಮಂದೆ ಬಂದಾಗ ನಾವು ಯಾವ ವಿಧವಾದ ಬದಲಾವಣೆಗಳನ್ನು ಮಾಡಬಹುದು ಎಂಬುದನ್ನೂ ವಿಚಾರಿಸೋಣ. ಆಗ ನಾವು ಈ ವಿಷಯದ ಬಗ್ಗೆ ನಿರ್ಧರಿಸಬಹುದು. ಈಗ ಸದ್ಯದ ಪರಿಸ್ಥಿತಿಯಲ್ಲಿ ನಾವು ವ್ಯಾಖ್ಯೆಗಳನ್ನು ಪರಾಂಬರಿಸಿ ಅವುಗಳನ್ನು ಅಧಿಕವಾಗಿ ವಿಸ್ತರಿಸದೆ ಅವು ಹೇಗೆ ಪರಿಣಾಮ ಬೀರಿ, ಸಂಕಷ್ಟಕ್ಕೆ ಗುರಿಪಡಿಸಬಹುದು ಎಂಬುದು ಸಾಮಾನ್ಯ ಚರ್ಚೆಯ ಅಂಶವಾಗಿದೆ.

**ಪಂಡಿತ ಠಾಕೂರ್‌ದಾಸ್ ಭಾರ್ಗವ :** ನಾನು ನೀವು ಹೇಳಿದ್ದನ್ನು ಅರ್ಥಮಾಡಿಕೊಂಡಿರುವೆ. ತಾವು ಬಹಿರಂಗಪಡಿಸಿದ ಅಭಿಪ್ರಾಯದ ಹಿಂದೆ ಅಡಕವಾಗಿರುವ ಪ್ರಬಲ ಸಂಗತಿಯ ಅರಿವೂ ನನಗಾಗಿದೆ. ಆದರೆ ತಾವು ಈ ಸಮಯದಲ್ಲಿ ನೀಡಬಹುದಾದ ಸಂಪ್ರದಾಯ ಪದದ ವ್ಯಾಖ್ಯೆ ಕೇವಲ ಹಲವು ವಿಷಯಗಳಿಗೆ ಮಾತ್ರ ಕೆಲವು ಸಂದರ್ಭಗಳಿಗೆ ಸೀಮಿತವಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಅದು ಸರಿಯಲ್ಲ, ಏಕೆಂದರೆ ಸಿಖ್ ಜನಾಂಗದವರಿಗೆ ಅಥವಾ ಇತರರಿಗೆ ನಾವು ಹೇಳಿದ ಈ ಸಂಪ್ರದಾಯಗಳು ಅನ್ವಯವಾಗದೆ ಹೋಗಬಹುದಿತ್ತಲ್ಲವೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಹಾಗಾದರೆ ಮದುವೆಯ ಬಗೆಗೆ ಸಂಪ್ರದಾಯಗಳನ್ನು ಕುರಿತು ಮಾತನಾಡುವ ಅಭಿಪ್ರಾಯದ ಔಚಿತ್ಯವೆಲ್ಲಿದೆ. ಆದುದರಿಂದ ಯಾವುದೇ ರೀತಿಯ ನಿಯಮವನ್ನು ನಾವು ನಿರ್ಣಯಿಸಿದಾಗ, ಅದು ಸಾರ್ವಜನಿಕ ಅಭಿಪ್ರಾಯಕ್ಕೆ ಸೂಕ್ತವಾಗಿದೆಯೆ ಅಥವಾ ಕೇವಲ ಕಾನೂನಿನ ಬಲವನ್ನು ಮಾತ್ರ ಹೊಂದಿದೆಯೊ ಎಂಬುದನ್ನು ಅರಿಯಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಹೀಗೆಂದಾಗ ಸಂಪ್ರದಾಯದ ಪಾತ್ರವೇನು ಎಂಬುದನ್ನು ಅರಿಯಲೇಬೇಕೆಂದು ಸದಸ್ಯರ ಅಭಿಪ್ರಾಯವಾಗಿದ್ದರೆ, ಅದರ ಬಗೆಗೆ ಚರ್ಚೆಯನ್ನು ತೆಗೆದುಕೊಳ್ಳಬಹುದು. ಆದರೆ ಎಲ್ಲಾ ಸಂಪ್ರದಾಯಗಳ ವಿವರಣೆ ಮಾತ್ರ ಅಸಾಧ್ಯ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ಕ್ಷಣದಲ್ಲಿ ನನ್ನಲ್ಲಿ ಯಾವುದೇ ವಿವರಗಳಿಲ್ಲ. ಸಮಯ ಒದಗಿ ಬಂದಾಗ, ಸಂಪ್ರದಾಯಗಳನ್ನು ಮುಂದುವರಿಯಲು ಆಸ್ಪದ ನೀಡಬೇಕೆ? ಅಥವಾ ಬೇಡವೆ ಎಂಬುದನ್ನು ಪರಿಶೀಲಿಸಬಹುದು. ಆದರೆ ಈಗ ನಾನು ನನ್ನ ಸಾಮಾನ್ಯ ಅನಿಸಿಕೆಗಳನ್ನು ಡಾ. ಅಂಬೇಡ್ಕರ್‌ರ ಮುಂದೆ

ಮಂಡಿಸುತ್ತಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ನಿಮ್ಮ ಸಾಮಾನ್ಯ ಅನಿಸಿಕೆಗಳನ್ನು ಮೊದಲನೆಯ ಅಥವಾ ಎರಡನೆಯ ಹಂತದಲ್ಲಿ ವಿವರಿಸಬಹುದಲ್ಲವೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಯಾವುದೇ ಸಂಪ್ರದಾಯವನ್ನು ಅನುಸರಿಸಬಾರದೆಂದು ಹೇಳುತ್ತಿಲ್ಲ. ನಾನು ಅವರಿಗೆ ಸೂಚಿಸುವುದೇನೆಂದರೆ, ಅವರು ಎಲ್ಲ ಸಂಪ್ರದಾಯಗಳ ಬಗೆಗೆ ಉದಾರವಾಗಿರಕೂಡದು, ಏಕೆಂದರೆ ಆ ವಿಧದ ಧೋರಣೆಯು ಈ ವಿಧೇಯಕದ ಮೇಲೆ ದುಷ್ಪರಿಣಾಮ ಬೀರಬಹುದು. ನಾವು ಸಂಪ್ರದಾಯಗಳನ್ನೇ ನೆಚ್ಚಿದಲ್ಲಿ ಈ ವಿಧೇಯಕದ ಆವಶ್ಯಕತೆಯೇ ಇರಲಾರದು.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಅವುಗಳ ವಿವರಗಳನ್ನು ಬೇರೆಯಾಗಿ ಪರಿಶೀಲಿಸೋಣ. ಏಕೆಂದರೆ ಈ ಹಂತದಲ್ಲಿಯೇ ಯಾವ ಸಂಪ್ರದಾಯಗಳನ್ನೂ ಅನುಸರಿಸಲಾಗದು ಎಂದು ಹೇಳದೆ, ಕಾನೂನು ಮಾತ್ರ ಜಾರಿಯಲ್ಲಿರುತ್ತದೆ ಎಂದು ಹೇಳಬಹುದು. ಆದರೆ ಕೆಲವು ಸಂಪ್ರದಾಯಗಳನ್ನು ಉಳಿಸಿಕೊಳ್ಳಬೇಕೆಂಬ ಮಾತು ಬೇರೆ. ಅದರ ಬಗೆಗೆ ಆಲೋಚಿಸಿ, ಯಾವುದನ್ನು ಉಳಿಸಬೇಕು ಹಾಗೂ ಯಾವುದನ್ನು ಕೈ ಬಿಡಬೇಕು ಎಂಬುದನ್ನು ಆಲೋಚಿಸಬಹುದು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ವ್ಯಾಖ್ಯೆಗಳನ್ನು ಉದಾಹರಿಸುವ ಮುಖಾಂತರ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತಿದ್ದೇನೆ. ಯಾವ ಸಂಪ್ರದಾಯಗಳನ್ನು ನ್ಯಾಯಾಂಗವು ಅಂಗೀಕರಿಸಿದೆಯೊ ಅಂತಹ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗಬಹುದು; ಏಕೆಂದರೆ ಅದು ಸಂಪ್ರದಾಯದ ವ್ಯಾಪ್ತಿಯನ್ನು ನಿರ್ಬಂಧಿಸುತ್ತದೆ. ನಾವು ಸಂಪ್ರದಾಯಗಳನ್ನು ಯಾವ ನಿರ್ಬಂಧನೆಗಳಿಲ್ಲದೆ ಮುಂದುವರಿಯಲು ಬಿಟ್ಟಲ್ಲಿ ತುಂಬಾ ತೊಂದರೆಗೆ ಗುರಿಯಾಗಬಹುದು. ಏಕೆಂದರೆ ಅವುಗಳು ಕೇವಲ ಉದಾಹರಣೆಗಳೆ ಹೊರತು ಸಾಕ್ಷಿ ಆಧಾರಗಳಿಂದ ಕೂಡಿಲ್ಲ. ಆದುದರಿಂದ ಸಂಪ್ರದಾಯಗಳ ವ್ಯಾಪ್ತಿಯನ್ನು ನಿರ್ಬಂಧಿಸಬೇಕೆಂದೆ ಸೂಚಿಸುವೆ. ನಾನು ಯಾವುದೇ ಒಂದು ಪ್ರಸಂಗವನ್ನು ಹೆಕ್ಕಿಕೊಂಡು ಡಾ. ಅಂಬೇಡ್ಕರ್‌ರ ಮುಂದೆ ಪ್ರಸ್ತಾಪಿಸುತ್ತಿಲ್ಲ. ಆದರೆ ಅವರು ಸಂಪ್ರದಾಯಗಳ ಬಗೆಗೆ ತಳೆದಿರುವ ಉದಾರ ಮನೋಭಾವನೆ ಸರಿಯಲ್ಲ ಎಂದೇ ತಿಳಿಸಬಯಸುವೆ. ಅದಕ್ಕೆಂದೇ ನಾನು ತಿದ್ದುಪಡಿ ನಂ. ೪೪೬ ಮಂಡಿಸಿದ್ದು. ಅವರು ಈ ದಿಶೆಯಲ್ಲಿ ಜಾಗರೂಕತೆ ವಹಿಸಬೇಕೆಂದೇ ನನ್ನ ಬಯಕೆ.

"ನ್ಯಾಯಾಂಗವು ಗುರುತಿಸಿದ, ಯಾವುದೇ ನಿಯಮವು, ಒಂದು ಪ್ರದೇಶದ ಪಂಗಡ, ಸಮುದಾಯ, ಗುಂಪು ಅಥವಾ ಕುಟುಂಬಕ್ಕೆ ಸೂಕ್ತ ಎಂದಲ್ಲಿ" ನನಗೆ ತಿಳಿದಂತೆ ಹಲವು ಸಂಪ್ರದಾಯಗಳು ಮುಂದುವರಿಯುವ ಸಂಪ್ರದಾಯಗಳಿಗೆ ಕಡಿವಾಣ ಹಾಕಬೇಕಾದುದೆ ಇಲ್ಲ. ಏಕೆಂದರೆ ಅವು ಕಾನೂನಿನಂತೆಯೇ ಪರಿಣಾಮಕಾರಿಯಾಗಿವೆ. ಯಾವ ಸಂಪ್ರದಾಯಗಳನ್ನು ನ್ಯಾಯಾಂಗ ಮನ್ನಿಸಿಲ್ಲವೊ ಅವನ್ನು ನಾವು ಈ ಮಸೂದೆಯ ವ್ಯಾಪ್ತಿಗೆ ಗುರಿಪಡಿಸಬಾರದು ಎಂದೇ ನನ್ನ ಅಭಿಪ್ರಾಯ.

ಹಿಂದೂ ಸಮಾಜವು, ಸಂಪ್ರದಾಯಗಳನ್ನೆ ಕಾನೂನುಗಳೆಂದು ಅಂಗೀಕರಿಸಿದ್ದಲ್ಲಿ, ಬೇರೆ ಕಾನೂನುಗಳ ನಿರ್ಮಾಣಕ್ಕೆ ಆಸ್ಪದವಿರಕೂಡದು. ಈ ಪರಿಸ್ಥಿತಿ ಹಿಂದೆ ಜಾರಿಯಲ್ಲಿತ್ತು. ಹೀಗೆ ಸಂಪ್ರದಾಯಗಳೇ ಎಲ್ಲೆಡೆ ಜಾರಿಯಲ್ಲಿದ್ದು ಏಕರೂಪತೆಯನ್ನು ಹೊಂದಲೂಬಹುದು ಅಥವಾ ನಾವು ಕಾನೂನುಗಳ ಬಲದಿಂದ ಯಾವ ಯಾವ ಸಂಪ್ರದಾಯಗಳನ್ನು ಜಾರಿಯಲ್ಲಿರಬೇಕು, ಯಾವುದು ಇರಕೂಡದು ಎಂಬುದನ್ನು ನಿರ್ಧರಿಸಬೇಕು. ಈ ದಿಶೆಯಲ್ಲಿ ನ್ಯಾಯಾಂಗ ಮನ್ನಣೆಯನ್ನು ಪಡೆದಿರುವ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವುದು ಉತ್ತಮ ಎಂದೇ ಸಲಹೆ ಮಾಡುವೆ. ಆದರೆ ಪ್ರಸ್ತುತ ಮಸೂದೆಯಲ್ಲಿ, ನ್ಯಾಯಾಂಗದ ಮನ್ನಣೆ

ಪಡೆದ ಸಂಪ್ರದಾಯಗಳ ಪ್ರಸ್ತಾವನೆಯೆ ಇಲ್ಲ. ಅದಕ್ಕೆ ವಿರೋಧವಾಗಿ ಮೊದಲನೆಯ ಭಾಗದಲ್ಲಿ ಈ ಪದಗಳಿವೆ: **"**ಶಾಸನವು ನಿಖರವಾಗಿದ್ದು, ಸೂಕ್ತವಾಗಿದೆ ಹಾಗೂ ಸಾರ್ವಜನಿಕ ನೀತಿ ವಿರೋಧವಾಗಿಲ್ಲ.**"**

ನಾನು ಈ ಪದಗಳ ಪ್ರಯೋಗವನ್ನು ವಿರೋಧಿಸುವೆ. **"**ಸಾರ್ವಜನಿಕ ನೀತಿ**"** ಎಂಬುದೇ ಏನು ಎಂದು ತಿಳಿಯದೆ ಇರುವಾಗ ಅದರ ಪ್ರಯೋಗ ಸಾಧುವಲ್ಲ. ಉದಾಹರಣೆಗೆ ಏಕಪತ್ನಿ ವಿವಾಹದ ಬಗೆಗೆ ಸರಕಾರದ ದೃಷ್ಟಿಯಲ್ಲಿ ಹಿಂದೂಗಳಿಗೆ ಉತ್ತಮವಾಗಿದೆ, ಎಂದೇ ಇದ್ದಲ್ಲಿ ಅದು ಬೇರೆಯ ಪಂಗಡದವರಿಗೆ ತಿಳಿದಂತೆ ನನ್ನ ಅನೇಕ ಮುಸ್ಲಿಂ ಬಂಧುಗಳ ದೃಷ್ಟಿಯಲ್ಲಿ ಬಹುಪತ್ನಿ ವಿವಾಹ ಪದ್ಧತಿ ಸೂಕ್ತವಲ್ಲ ಎಂದೇ ಇದೆ. ಪರಿಸ್ಥಿತಿ ಹೀಗೆ ಇದ್ದಾಗಲೂ ಕೂಡಾ ಸರಕಾರವು ಯಾವುದೊ ಕುಂಟುನೆಪವನ್ನು ಮುಂದಿಡುತ್ತಿರುವುದು ಸರಿಯಲ್ಲ. **"**ಸಾರ್ವಜನಿಕ ನೀತಿ**"** ಎಂದರೆ ಅದು ಅರ್ಥಹೀನ. ಏಕೆಂದರೆ ಅದು ಸಮಾಜದ ಎಲ್ಲಾ ವರ್ಗಗಳಿಗೂ ಅನ್ವಯಿಸುವಂತೆ ಇರಬೇಕು. ನನಗೆ ತಿಳಿದಂತೆ ಪಂಜಾಬಿನಲ್ಲಿ ಖರ್ವ ವಿವಾಹ ಪದ್ಧತಿ ಜಾರಿಯಲ್ಲಿದೆ. ಆದರೆ ಆ ಪದ್ಧತಿಯ ವಿವಾಹವನ್ನು ಬಹುಪತ್ನಿ ವಿವಾಹ ಎಂದು ಹೇಳಲಾಗದು; ಆದರೂ ಅದೊಂದು ಮಾದರಿಯ ಬಹುಪತ್ನಿ ವಿವಾಹವಾಗಿದೆ. ಏಕೆಂದರೆ ಪತಿ ತೀರಿಹೋದ ಅಣ್ಣನ ಹೆಂಡತಿಯನ್ನು, ಮೈದುನನೇ ವಿವಾಹವಾಗುತ್ತಾನೆ. ಮೈದುನನಿಗೆ ಹೆಂಡತಿಯಿದ್ದರೂ ಅವನು ಅತ್ತಿಗೆಯನ್ನೇ ವಿವಾಹವಾಗಲು ಆಸ್ಪದ ನೀಡಲಾಗಿದೆ. ಇದರಿಂದಾಗಿ ಕುಟುಂಬದ ಆಸ್ತಿ ಮತ್ತು ಕುಟುಂಬದ ಸ್ತ್ರೀ ಪರರ ಸೊತ್ತು ಆಗಲಾರದು. ಆದುದರಿಂದ ಸಾರ್ವಜನಿಕ ನೀತಿಗೆ ವಿರೋಧ ಎಂದಾಗ ಹೇಗಾದರೂ ಅರ್ಥ ಕಲ್ಪಿಸಲು ಅವಕಾಶ ದೊರೆಯುತ್ತದೆ. ಈ ಬಗೆಯ ಪದಪ್ರಯೋಗ ತುಂಬಾ ಸಡಿಲಾಗಿದ್ದು ಅದನ್ನು ದುರುಪಯೋಗಗೊಳಿಸುವ ಆಸ್ಪದಗಳೇ ಅಧಿಕ. ಆದುದರಿಂದ ನಾನು ಅದನ್ನು ವಿರೋಧಿಸುವೆ. ಹೀಗಾಗಿ ನಾನು ನ್ಯಾಯಾಂಗದಿಂದ ಮನ್ನಣೆ ಪಡೆದಿರುವ ಪದ್ಧತಿಗಳನ್ನು ಅಂಗೀಕರಿಸುವೆ, ಏಕೆಂದರೆ ಕಾನೂನು ಮಂತ್ರಿಗಳಿಗೆ ಆ ಪ್ರಸಂಗಗಳಲ್ಲಿ ಪದ್ಧತಿಗಳನ್ನು ತಿರುಚಲು ಅವಕಾಶವಿರಲಾರದು.

**ಮಾನ್ಯ ಉಪಸಭಾಧ್ಯಕ್ಷರು :** ಇನ್ನು ಮುಂದೆ ಯಾವ ಪದ್ಧತಿಗಳೂ ಇರಲಾರವು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಕೋರಿಕೆ ಎಂದರೆ ಹಿಂದೂ ಕೋಡ್ ಮಸೂದೆಯನ್ನು ಜಾರಿಗೊಳಿಸುವಾಗ, ಯಾವ ವಿಧದ ಸಂಪ್ರದಾಯ ಅಥವಾ ಪದ್ಧತಿಗಳಿಗೆ ಅವಕಾಶ ನೀಡಬಾರದು. ಹಾಗೆ ಮಾಡದೆ ಹೋದರೆ ಮಸೂದೆಯ ಗುರಿಯನ್ನೇ ತಲುಪದೆ ಹೋಗಬಹುದು. ತಾವು ಇನ್ನು ಮುಂದೆ ಯಾವ ಪದ್ಧತಿಗೂ ಅವಕಾಶವಿರಲಾರದು ಎಂದು ತಾವು ಹೇಳಿರುವುದು ಬಹು ಸೂಕ್ತವಾಗಿದೆ......

**ಮಾನ್ಯ ಉಪಸಭಾಧ್ಯಕ್ಷರು :** ಆದರೆ ಸರ್ಮಸಮ್ಮತ ಅಂದರೆ ವಿವಾಹರಹಿತ ಪದ್ಧತಿಗಳು ಜಾರಿಯಲ್ಲಿದ್ದರೆ ಏನು ಹಾನಿ? ಅದು ನ್ಯಾಯಾಲಯಕ್ಕೆ ಬಾರದೆ ಇರಬಹುದು; ಏಕೆಂದರೆ ಕೇವಲ ವಿವಾದಾತ್ಮಕ ಸಂಪ್ರದಾಯಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು. ಆದುದರಿಂದ ಸಾರ್ವಜನಿಕ ಧೋರಣೆಗೆ ವಿರೋಧವಾಗಿರದ ಸಂಪ್ರದಾಯಗಳನ್ನು ಸಮುದಾಯ ನಿರಾಕರಿಸುವುದಿಲ್ಲ. ಕೇವಲ ನ್ಯಾಯಾಂಗ ಮನ್ನಿಸಿಲ್ಲ ಎಂಬ ಆಧಾರ ಒಂದೇ ಪ್ರಮುಖವಾಗಲಾರದು ಅಲ್ಲವೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ:** ನನ್ನ ಹೇಳಿಕೆ ಏನೆಂದರೆ ಈ ಅಂಶವನ್ನೂ ಶಾಸನದಲ್ಲಿ ಅಳವಡಿಸಿದಾಗ, ಸಂಪ್ರದಾಯ ಬೆಳೆಯಲಾರದು. ಅದನ್ನು ಅಡಕಗೊಳಿಸದೆ ಹೋದಲ್ಲಿ ಸಂಪ್ರದಾಯಗಳ ವೃದ್ಧಿಗೆ ಆಸ್ಪದವಾಗಬಹುದು. ನೀವು ಒಂದು ಬಾರಿ ಸಾರ್ವಜನಿಕ ಧೋರಣೆಗೆ ವಿರೋಧ ಎಂಬುದನ್ನು ತೆಗೆದುಹಾಕಿದರೂ ಅದು ಶಾಸನದ ಮಾದರಿಯಲ್ಲಿ ಜಾರಿಯಲ್ಲಿರುತ್ತದೆ. ಒಂದು ವೇಳೆ ಸಂಪ್ರದಾಯ ಉತ್ತಮವಿದ್ದರೂ, ಈ ಪದಗಳ ಪ್ರಯೋಗದಿಂದ, ಉತ್ತಮ ಸಂಪ್ರದಾಯಗಳ ವೃದ್ಧಿಯನ್ನು ತಡೆಹಿಡಿಯಲು

ಅವಕಾಶ ನೀಡದಂತೆ ಆಗಲೂಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು, ಓರ್ವ ಉತ್ತಮ ನ್ಯಾಯವಾದಿಗಳಾಗಿದ್ದಾರೆ. ಆದರೆ ನನ್ನ ಅರ್ಥವೇ ಬೇರೆಯಾಗಿದೆ. ಯಾವ ಸಂದರ್ಭಗಳಲ್ಲಿ ಈ ಕೋಡ್ ಅಥವಾ ಶಾಸನವನ್ನು ಒಂದು ವಿಷಯಕ್ಕೆ ಅನ್ವಯಿಸಲಾಗುವುದೊ, ಅಪವಾದಗಳನ್ನು ಹೊರತುಪಡಿಸಿ, ಒಂದು ಪದ್ಧತಿಯನ್ನು ಕೈಬಿಟ್ಟಾಗ, ಅದು ಸಾರ್ವಜನಿಕ ಧೋರಣೆಗೆ ಪರವೊ ಅಥವಾ ವಿರೋಧವೊ ಎಂಬುದರ ಬಗೆಗೆ ಸದಸ್ಯರು ತಲೆಕೆಡಿಸಿಕೊಂಡಂತೆ ಕಾಣುತ್ತದೆ. ಏಕೆಂದರೆ ಈ ನಿಟ್ಟಿನಲ್ಲಿ ನಿರ್ಣಯಿಸಲು ನ್ಯಾಯಾಂಗವಿದೆ. ಆದರೂ ಕೆಟ್ಟ ಸಂಪ್ರದಾಯಗಳ ಬಗೆಗೆ ನಿರ್ಣಯ ತೆಗೆದುಕೊಳ್ಳುವ ಬಗೆಗೆ ನ್ಯಾಯಾಲಯದ ದ್ವಾರಕ್ಕೆ ಹೋಗುವ ಆವಶ್ಯಕತೆ ಏನು? ಆದುದರಿಂದ ಈ ಎಲ್ಲಾ ವಿಷಯಗಳ ಬಗೆಗೆ ಶಾಸನ ನಿರ್ಮಿಸುವುದು ಸಾಧ್ಯವಿಲ್ಲ.

**ಡಾ. ಅಂಬೇಡ್ಕರ್ :** ಎರಡೂ ಅಂಶಗಳನ್ನು ವಿವರಿಸಲು ಆಸ್ಪದ ನೀಡಬಲ್ಲಿರಾ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಅಭಿಪ್ರಾಯವೂ ತಮ್ಮಂತೇ ಇದೆ. ಆದರೆ ನಾನು ಅದನ್ನೇ ಬೇರೆ ರೀತಿಯಾಗಿ ಹೇಳುತ್ತಿರುವೆ. ನಾನು ಸಂಪ್ರದಾಯಗಳ ಬಗೆಗೆ ಹಸ್ತಕ್ಷೇಪ ಮಾಡಲಾರೆ, ಏಕೆಂದರೆ ಅದಕ್ಕೆ ಅವಕಾಶವಿಲ್ಲ ಮತ್ತು ದೇಶದಲ್ಲಿರುವ ಸಂಪ್ರದಾಯಗಳನ್ನು ಚರ್ಚಿಸಲೂ ಆಗದು. ಆದರೆ ನನಗೆ ಭೀತಿ ಎಂದರೆ ಸಾರ್ವಜನಿಕ ಧೋರಣೆಯ ಅಡಿಯಲ್ಲಿ ಉತ್ತಮ ಸಂಪ್ರದಾಯಗಳಿಗೆ ಧಕ್ಕೆ ತಗುಲಬಾರದಲ್ಲವೆ? ಏಕೆಂದರೆ ಆ ಬಗೆಯ ಸಂಪ್ರದಾಯಗಳಿಗೆ ನ್ಯಾಯಾಂಗದ ಬೆಂಬಲವಿದೆ.

**ಡಾ. ಅಂಬೇಡ್ಕರ್ :** ನನ್ನ ಮಿತ್ರರಾದ ಪಂಡಿತ ಭಾರ್ಗವರು ಎತ್ತಿರಬಹುದಾದ ಪ್ರಶ್ನೆಗಳು ಪ್ರಮುಖವಾಗಿವೆ. ನನಗೆ ತಿಳಿದಂತೆ ಅವರು ತೆಗೆದುಕೊಂಡ ನಿಲುವು ಹಾಗೂ ನನ್ನ ನಿಲುವೂ ಒಂದೇ ಎಂಬುದು ನಿಸ್ಸಂದೇಹವಾದುದು. ಆದರೆ ಅವರು ನನಗೆ ತಿಳಿದಂತೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ, ಆದೂ ಒಂದು ವಿಧಿಯ ಬಗೆಗೆ ಅವರಿಗೆ ತಪ್ಪು ಭಾವನೆ ಉಂಟಾಗಿದೆ ಎಂದೇ ಹೇಳಬಯಸುವೆ. ಅದರಿಂದಾಗಿ ಅವರು ಗೊಂದಲಕ್ಕೀಡಾಗಿದ್ದಾರೆ. ಸಂಪ್ರದಾಯ ಮತ್ತು ಶಾಸನದ ಬಗೆಗೆ ಅಭಿರುಚಿ ಹೊಂದಿರುವ, ಸನ್ಮಾನ್ಯ ಸದಸ್ಯರು ಮತ್ತೊಮ್ಮೆ ವಿಧಿ ೩–೪ರ ಬಗೆಗೆ ಮರು ಆಲೋಚನೆ ಮಾಡಲಿ; ಏಕೆಂದರೆ ಅವರು ಶಾಸನ ಮತ್ತು ಸಂಪ್ರದಾಯಗಳ ಅಧಿಕಾರದ ವ್ಯಾಪ್ತಿಗೆ ಸಂಬಂಧಿಸಿವೆ. ತಮಗೆ ತೋರಿದಂತೆ, ಯಾವುದೇ ಸಂಪ್ರದಾಯ ಅವ್ಯಾಹತವಾಗಿ ಉಳಿದುಬಂದಿದೆಯೊ ಅದು ಈ ಶಾಸನಕ್ಕೆ ವಿರೋಧವಾಗಲಾರದು.

ಆದರೆ ಯಾವುದೇ ನಿರ್ದಿಷ್ಟ ಸಂಪ್ರದಾಯ ಉಳಿದು ಬಂದಿದೆಯೊ ಅಥವಾ ಇಲ್ಲವೊ ಎಂಬ ಸಂಗತಿ, ಈ ಮಸೂದೆಯಡಿಯಲ್ಲಿ ಚರ್ಚಿಸಲು ಸದಸ್ಯರಿಗೆ ಅವಕಾಶವಿದೆ. ಹೀಗಾಗಿ ಯಾವುದೇ ಒಂದು ಪದ್ಧತಿಯ ವಿರುದ್ಧ ಶಾಸನ ರಚನೆಯಾಗಿದ್ದಲ್ಲಿ ಅದನ್ನು ಚರ್ಚಿಸಿ ತಿದ್ದಬಹುದು. ಹೀಗಾಗಿ ಈ ಶಾಸನದಲ್ಲಿ ಸಂಪ್ರದಾಯಕ್ಕೆ ವಿರೋಧವಾಗಿದೆ ಎಂಬ ವಿಷಯವನ್ನು ಸ್ಪಷ್ಟಗೊಳಿಸುವ ಉದ್ದೇಶವನ್ನು ಈ ಮಸೂದೆ ಹೊಂದಿದೆ. ಆದುದರಿಂದ ಇದಕ್ಕೆ ಸಂಬಂಧಿಸಿದಂತೆ ಯಾವ ಅನುಮಾನಗಳಿಗೂ ಅವಕಾಶವಿಲ್ಲ. ಏಕೆಂದರೆ ಸಂಪ್ರದಾಯಗಳು ಶಾಸನವನ್ನು ಮೀರಿ ನಡೆಯಲಾಗದು.

ಆದರೆ ನನ್ನ ಈ ಸಂದರ್ಭದಲ್ಲಿ ನನ್ನ ಮಿತ್ರರು, ನಾನು ಸಂಪ್ರದಾಯಗಳ ಬಗೆಗೆ ಎಲ್ಲಿ ಮೃದು ಧೋರಣೆಯನ್ನು ಅನುಸರಿಸುವೆ ಎಂಬ ಸಂಶಯ ವ್ಯಕ್ತಪಡಿಸಿದ್ದಾರೆ. ಆದರೆ ನಾನು ಒಂದು ವಿಷಯ ಸ್ಪಷ್ಟಪಡಿಸುವೆ. ಅದೇನೆಂದರೆ ಯಾರಾದರೂ ಸಂಪ್ರದಾಯಗಳನ್ನು ಪ್ರತಿಪಾದಿಸಿದಲ್ಲಿ ಅವರು ನನಗೆ, ಕಾನೂನಿಗಿಂತ ಸಂಪ್ರದಾಯ ಉತ್ತಮಾಂಶಗಳಿಂದ ಕೂಡಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಆದುದರಿಂದ ಆ ಸಂಶಯಕ್ಕೆ ಸದಸ್ಯರು ಈಡಾಗಬಾರದು.

ಈಗ, ನಾವು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಏನನ್ನಾದರೂ ಹೇಳಬೇಕೆಂದಾಗ, ಯಾವುದೇ ಒಂದು ವಿಧಿಯು, ಸಂಪ್ರದಾಯಕ್ಕೆ ಪೂರಕವೊ ಅಥವಾ ವಿರೋಧವೊ ಎಂಬ ಪ್ರಶ್ನೆ ನಮ್ಮ ಮುಂದೆ ತೋರಿದಾಗ, ಆ ಸಂಪ್ರದಾಯ ಕಾನೂನಿಗಿಂತ ಹೇಗೆ ಮಿಗಿಲಾದುದು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಆದುದರಿಂದ ಈ ಒಂದು ಅಂಶವನ್ನು ಗಮನಿಸಿಯೆ ಸಂಪ್ರದಾಯದ ವ್ಯಾಖ್ಯೆಯನ್ನು ನಿರ್ಧರಿಸಬೇಕು. ಹೀಗಾಗಿ ಸಂಪ್ರದಾಯದ ವ್ಯಾಖ್ಯೆ ವಿಧೇಯಕದ ಯಾವ ವಿಧಿಗಳಿಗೆ ಹೇಗೆ ಮತ್ತು ಎಷ್ಟರಮಟ್ಟಿಗೆ ಅನ್ವಯಿಸಬಹುದು ಹಾಗೂ ನ್ಯಾಯಾಂಗ ಅದನ್ನು ಒಪ್ಪಬಹುದೆ ಎಂಬ ಅನೇಕ ಅಂಶಗಳನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕಾದ ಒಂದು ಪರಿಸ್ಥಿತಿ ಒದಗಿದೆ.

ವಿಧಿ ೩(೧೧)ರ ಬಗೆಗೆ ಹೇಳಬಹುದಾದರೆ, ಈ ವಿಧಿಯು ದೇಶದ ನ್ಯಾಯಾಲಯಗಳು ನೀಡಿರಬಹುದಾದ ತೀರ್ಪಿಗೆ ವ್ಯತಿರಿಕ್ತವಾಗಿರದೆ, ಅವು ಸಂಪ್ರದಾಯಗಳ ಬಗೆಗೆ ನೀಡಿದ ಅಂಗೀಕಾರವನ್ನೇ ಅವಲಂಬಿಸಿದೆ. ಆದುದರಿಂದ ಸಂಪ್ರದಾಯದ ವ್ಯಾಖ್ಯೆಯ ಬಗೆಗೆ ಯಾವ ತಕರಾರೂ ಇರದೆ ಅದನ್ನು ಅನುಸರಿಸಬಹುದು. ಒಂದು ವೇಳೆ ಎಲ್ಲಿ ಸಂಪ್ರದಾಯಗಳಿಗೆ ಅವಕಾಶ ನೀಡಲಾಗಿದೆಯೊ, ಆ ಬಗೆಯ ಸಂಪ್ರದಾಯಗಳ ಮಟ್ಟ ನ್ಯಾಯಾಂಗಗಳ ನಿರ್ಣಯವನ್ನೆ ಅನುಸರಿಸಿದೆ. ಈ ಅಂಶ ನಮ್ಮ ದೇಶದಲ್ಲಿಯ ಎಲ್ಲಾ ನ್ಯಾಯಾಲಯಗಳಿಗೂ ಅನ್ವಯಿಸುತ್ತದೆ.

**ಶ್ರೀ ನಜೀರುದ್ದೀನ್ ಅಹಮದ್ :** ಇದನ್ನು ವಿದೇಶಿಯ ನ್ಯಾಯಾಲಯಗಳಲ್ಲಿಯೂ ಕಾಣಬಹುದಾಗಿದೆ.

**ಡಾ. ಅಂಬೇಡ್ಕರ್ :** ಎಲ್ಲೆಡೆಯಲ್ಲಿಯೂ ನಾವು ಇದನ್ನೇ ಕಾಣಬಹುದು. ಏಕೆಂದರೆ ನಾನು ಆ ಬಗ್ಗೆ ಆಂಗ್ಲ ಕಾನೂನಿನ ಸ್ಟೀಫನ್ ಅವರ ಡೈಜೆಸ್ಟ್(ಕೋಶ)ವನ್ನು ಪರಾಂಬರಿಸಿದಾಗ ನಾವು ಪ್ರಯೋಗಿಸಿದ ಪದಗಳೇ ಅದರಲ್ಲಿಯೂ ಉಪಯೋಗಿಸಲಾಗಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ನಮ್ಮ ಮಿತ್ರರಾದ, ಕಾನೂನು ಮಂತ್ರಿಗಳು ಈ ಬಗೆಗೆ ವಿವರ ನೀಡಿದ್ದಕ್ಕೆ ಅವರಿಗೆ ಋಣಿ.

**ಶ್ರೀ ಜೆ. ಆರ್. ಕಪೂರ್** (ಉ. ಪ್ರದೇಶ) : ಸನ್ಮಾನ ಸದಸ್ಯರ ಹೇಳಿಕೆ ಇನ್ನೂ ಮುಗಿಯಲಿಲ್ಲವೆ?

**ಮಾನ್ಯ ಉಪಸಭಾಧ್ಯಕ್ಷರು :** ಇಲ್ಲ. ಅವರು ಮುಂದುವರಿಸಲಿದ್ದಾರೆ. ಅವರು ನಿಂತಿದ್ದಾರೆ, ಸಂಸತ್ತಿನ ಸದಸ್ಯರಲ್ಲದೆ, ದೇಶದ ಬೇರೆ ಜನರೂ ಕಲಾಪಗಳ ಪ್ರಗತಿಯನ್ನು ಗಮನಿಸುತ್ತಿದ್ದಾರೆ ಎಂಬ ಅಂಶವನ್ನು ಮರೆಯಬಾರದು. ಏಕೆಂದರೆ, ಈಗಾಗಲೇ ನನ್ನ ಬಗೆಗೆ ತಪ್ಪು ಕಲ್ಪನೆಗಳು ಮೂಡಿವೆ. ನಾನು ಈ ಪೀಠದಲ್ಲಿದ್ದಾಗ ಯಾವ ಬಣಕ್ಕೂ ಸೇರಿದವನಲ್ಲ ಅಥವಾ ಜಾತಿ ಪಂಗಡಗಳ ಪ್ರಭಾವಕ್ಕೂ ಈಡಾಗುವುದಿಲ್ಲ. ಇದು ನನ್ನ ನಿಜವಾದ ಸ್ಥಾನ–ಮಾನ. ನಾನು ನನ್ನ ಮನಸಾಕ್ಷಿಯಂತೆ ಯಾರಿಗೂ ಅನ್ಯಾಯವಾಗದಂತೆ ವರ್ತಿಸುವೆ. ನಿಷ್ಪಕ್ಷಪಾತದಿಂದ ನಡೆದುಕೊಂಡಿರುವೆ. ಆದರೂ ನನ್ನ ಕರ್ತವ್ಯ ನಿರ್ವಹಣೆಯಲ್ಲಿ ಲೋಪದೋಷಗಳೇನಾದರೂ ಕಂಡುಬಂದಲ್ಲಿ ಮಾನ್ಯ ಸದಸ್ಯರು ನನ್ನ ಗಮನವನ್ನು ಖಾಸಗಿಯಾಗಿ ಸೆಳೆಯಬಹುದು. ಹಾಗೂ ನಾನು ಏನು ಮಾಡಬೇಕೆಂದೂ ಸೂಚಿಸಬಹುದು.

ನಿಮಗೆಲ್ಲರಿಗೂ ತಿಳಿದಂತೆ ಸದನದ ಯಾವ ಸದಸ್ಯನೇ ಇರಲಿ, ಅವನು ಎದ್ದು ನಿಂತಾಗ, ಅವರಿಗೆ ಕುಳಿತುಕೊಳ್ಳುವಂತೆ ಆದೇಶ ನೀಡುವ ಅಧಿಕಾರ ನನಗಿದೆ. ಆದರೆ ಕೆಲವು ಗಂಭೀರ ವಿಷಯಗಳನ್ನು ಪ್ರಸ್ತಾಪಿಸಿದಾಗ ನಾನು ಅಧಿಕ ಕಾಲಾವಕಾಶ ನೀಡಬೇಕಾಗುತ್ತದೆ. ಆದರೆ ಪುನರುಕ್ತಿಗೆ ಆಸ್ಪದವಿಲ್ಲ. ಹೀಗಾಗಿ ಯಾರೇ ಮಾತನಾಡುವಾಗ ಅವರನ್ನು ನಿರ್ಬಂಧಿಸುವುದು ಸೂಕ್ತವೆನಿಸಲಾರದು. ಒಂದು ವೇಳೆ ಈ ದಿಶೆಯಲ್ಲಿ ಕಾನೂನು ಸಚಿವರು ಆ ಬಗೆಯ ನಿಯಮವನ್ನು ತಿಳಿಸಿದಲ್ಲಿ ಸಂತೋಷದಿಂದ ಅದನ್ನು ಪಾಲಿಸುವೆ.

**ಡಾ. ಅಂಬೇಡ್ಕರ್ :** ಆ ಬಗೆಯ ನಿರ್ಬಂಧಗಳು ಸ್ವಯಂಪ್ರೇರಿತವಾಗಿರಬೇಕೆ ಹೊರತು, ಹೇರಲಾಗದು.

**ಮಾನ್ಯ ಉಪಸಭಾಧ್ಯಕ್ಷರು :** ಈ ಹೇಳಿಕೆಯನ್ನು ಸ್ವಾಗತಿಸುವೆ. ಏಕೆಂದರೆ ಈ ದಿಶೆಯಲ್ಲಿ ಪೀಠವನ್ನು ಅಲ್ಲಸಲ್ಲದ ಆಪಾದನೆಗಳಿಗೆ ಗುರಿಮಾಡಬಾರದು. ಆದರೆ ಹಣಕಾಸಿನ ಮಸೂದೆಯ ಸಮಯದಲ್ಲಿ ನಾನು ನಿರ್ಬಂಧಗಳನ್ನು ಹೇರಬಹುದು. ಈ ಸಂಪ್ರದಾಯವನ್ನು ಈಚಿನ ದಿನಗಳಲ್ಲಿ ಜಾರಿಮಾಡಲಾಗಿದೆ. ಇಲ್ಲಿ ಕೂಡಾ ಹಣಕಾಸಿಗೆ ಸಂಬಂಧಿಸಿದ ವಿಷಯವಿದ್ದರೆ ನಾನು ನಿರ್ಬಂಧಿಸಬಹುದು, ನಾನು ಒಂದು ವೇಳೆ ಸಮಯವನ್ನು ನಿಗದಿಮಾಡಿದರೆ ತಿದ್ದುಪಡಿಗಳಿಗೆ ಅವಕಾಶ ನಿರಾಕರಿಸಿದಂತಾಗುತ್ತದೆ. ಆದುದರಿಂದ ಸಮಯಕ್ಕೆ ಕಡಿವಾಣ ಹಾಕಲಾರೆ. ಇದು ನನ್ನ ಪರಿಸ್ಥಿತಿ. ಯಾವುದೇ ಒಂದು ವಿಷಯದ ಬಗೆಗೆ ಸಾಕಷ್ಟು ಚರ್ಚೆಯಾಗಿದೆ ಎಂದು ತೋರಿದಲ್ಲಿ, ಸದಸ್ಯರು ನನ್ನ ಗಮನಸೆಳೆದಲ್ಲಿ ನಾನು ನಿರ್ಣಯ ತೆಗೆದುಕೊಳ್ಳುವೆ. ನನಗೆ ಅದು ಮನವರಿಕೆಯಾದಲ್ಲಿ ಚರ್ಚೆಯನ್ನು ಮುಕ್ತಾಯಗೊಳಿಸುವೆ. ಆದುದರಿಂದ ಸಲಹೆ ಹಾಗೂ ಸೂಚನೆ ನೀಡಬಯಸಿದ ಸನ್ಮಾನ್ಯ ಸದಸ್ಯರು ಈ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ನನ್ನ ಕಾರ್ಯಾಚರಣೆಯ ಬಗೆಗೆ ಹಲವಾರು ಸಂದೇಹಗಳನ್ನು ಹಾಗೂ ನಾನೇ ಕಾರ್ಯಕ್ಕೆ ಅಡಚಣೆ ಉಂಟುಮಾಡುತ್ತಿರುವೆ ಎಂಬ ಆರೋಪವನ್ನು ಮಾಡಲಾಗಿದೆ.

ಈ ದಿಶೆಯಲ್ಲಿ ನನಗೆ **"**ಇಂಡಿಯನ್ ಕ್ರಾನಿಕಲ್**"** ಪತ್ರಿಕೆಯ ಆಡಳಿತ ಸಂಪಾದಕನಿಂದ ಒಂದು ಪತ್ರವೂ ಬಂದಿದೆ ಎಂದು ಹೇಳಬಯಸುವೆ. ಈ ಪತ್ರಿಕೆಯಲ್ಲಿ ಒಂದು ಅಣಕು ಚಿತ್ರವನ್ನು ಮುದ್ರಿಸಲಾಗಿದೆ. ಈ ಚಿತ್ರದಲ್ಲಿ ಸದಸ್ಯರು ಗಡಿಯಾರದ ಎರಡೂ ಮುಳ್ಳುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ಮಾನ್ಯ ಉಪಸಭಾಧ್ಯಕ್ಷರು ಗಡಿಯಾರದ ಲೋಲಕ ಅಂದರೆ ಪೆಂಡುಲಮ್ಮನ್ನೇ ಹಿಡಿದು ಗಡಿಯಾರ ಮುಂದೆ ಚಲಿಸದಂತೆ ಹಿಡಿದಿದ್ದಾರೆ ಎಂದೇ ಇದು ಪ್ರದರ್ಶಿಸುತ್ತದೆ. ನನ್ನ ಗಮನವನ್ನು ಸೆಳೆದವರೆಂದರೆ ಶ್ರೀ ಅಮಲೋಕ ಚಾಂದರು. ಈ ಚಿತ್ರದಲ್ಲಿ ಸನ್ಮಾನ್ಯ ಸದಸ್ಯರು ಏಕೆ ಈ ಮನುಷ್ಯ ಗಡಿಯಾರದ ಚಲನೆಯನ್ನು ಪ್ರತಿಬಂಧಿಸುತ್ತಿದ್ದಾನೆ ಎಂದು ಆಶ್ಚರ್ಯದಿಂದ ತಮ್ಮ ಮುಖಗಳನ್ನು ಮೇಲೆತ್ತಿದ್ದಾರೆ. ಈ ಸಂಬಂಧವಾಗಿ ಪತ್ರಿಕೆಯ ಆಡಳಿತ ಸಂಪಾದಕರಾದ ಶ್ರೀ ದೇಶಬಂಧು ಗುಪ್ತ ಅವರು ಬರೆದಿರುವ ಪತ್ರವನ್ನು ಸಭೆಯ ಮುಂದೆ ಓದುವೆ.

ಶ್ರೀ ಅನಂತಶಯನಂ ಅಯ್ಯಂಗಾರರಿಗೆ,

ತಾವು **'**ಇಂಡಿಯನ್ ಕ್ರಾನಿಕಲ್**'** ದಿನಪತ್ರಿಕೆಯಲ್ಲಿ ನಿನ್ನೆ ಪ್ರಕಟಿಸಿದ ವ್ಯಂಗ್ಯಚಿತ್ರದ ಬಗೆಗೆ ಆಕ್ಷೇಪಿಸಿದಿರೆಂದು ನನಗೆ ತಿಳಿದುಬಂದಿದೆ. ಈ ವ್ಯಂಗ್ಯಚಿತ್ರದ ಶಿರೋನಾಮೆ ಸಮಯವನ್ನು ಹಿಂದೆ ತಳ್ಳುವುದು (putting the clock back) ಎಂದಿದೆ. ಇದು ತಮ್ಮನ್ನು ಕುರಿತು ಮಾಡಲಾದ ಆರೋಪ ಎಂದೇ ತಾವು ಹೇಳಿದಂತೆ ತಿಳಿದು ಬಂದಿದೆ. ದಯವಿಟ್ಟು ಕ್ಷಮೆ ಕೋರುವೆ. ಏಕೆಂದರೆ ವೈಯಕ್ತಿಕವಾಗಿ ಅಥವಾ ಉಪಾಧ್ಯಕ್ಷರಾಗಿ ತಮಗೆ ನೋವು ಉಂಟಾಗಿರಬಹುದು. ಆದರೆ ಚಿತ್ರವನ್ನು ಬರೆದಿರುವ ಚಿತ್ರಕಾರನು ಹೇಳಿದಂತೆ ತಮಗಾಗಲಿ ಅಥವಾ ತಾವು ಆಸೀನರಾದ ಪೀಠಕ್ಕೆ ಅಗೌರವ ಸೂಚಿಸಬೇಕೆಂಬ ಉದ್ದೇಶವಿಲ್ಲ. ಆದುದರಿಂದ ನಾನು, ಚಿತ್ರಕಾರ ಹಾಗೂ ನಮ್ಮ ಪತ್ರಿಕೆ ನಿಮ್ಮ ಹಾಗೂ ಸದನದ ಗೌರವಕ್ಕೆ ಯಾವುದೇ ಚ್ಯುತಿಬಾರದಂತೆ ವರ್ತಿಸುತ್ತೇವೆ ಎಂಬ ಭರವಸೆ ನೀಡಬಯಸುವೆ.

ಈ ಚಿತ್ರದ ಉದ್ದೇಶ ತಮ್ಮೆಲ್ಲರಿಗೂ ಮನವರಿಕೆಯಾಗಿರಬಹುದು. ನಾನು ಸಂಸತ್ತಿನ ಕಾರ್ಯಕಲಾಪಗಳನ್ನು, ಅದರ ಚರ್ಚೆಗಳನ್ನು, ಉನ್ನತ ಸಂಪ್ರದಾಯಗಳನ್ನೂ ಸದಾ ಎತ್ತಿ ಹಿಡಿದಿರುವೆ. ಆದರೂ ಹಲವು ಬಾರಿ ಸದಸ್ಯರು ಅಧಿಕ ಸಮಯ ತಮ್ಮ ಚರ್ಚೆಗೆ ಬಳಸಿಕೊಂಡಿದ್ದಾರೆ. ಅದು ಮಸೂದೆಯ ಪ್ರಗತಿಗೆ ಎಂದೇ ನನ್ನ ಅನಿಸಿಕೆ. ಹೀಗಾಗಿ ವ್ಯಂಗ್ಯಚಿತ್ರಕಾರ ನನ್ನನ್ನು ಯಾವ ದುರುದ್ದೇಶದಿಂದಲೂ ಬಳಸಿಕೊಂಡಿಲ್ಲ ಎಂದೇ ಭಾವಿಸುವೆ.

ಹೀಗಾಗಿ ಈ ಚಿತ್ರದಿಂದ ಯಾರಿಗೂ ನೋವನ್ನು ನೀಡಬೇಕು ಎಂಬ ದುರುದ್ದೇಶವಿಲ್ಲ ಎಂದೇ ಹೇಳಬಯಸುವೆ.

**ಡಾ. ದೇಶಮುಖ :** ಅವರು ಪೀಠವನ್ನಲ್ಲ, ಸದಸ್ಯರನ್ನೂ ಛೇಡಿಸಿರುವುದು ಅವಮಾನಕರ.

**ಶ್ರೀ ರಾಧೇಲಾಲ್ ವ್ಯಾಸ** (ಮಧ್ಯಭಾರತ) : ಈ ವಿಷಯವನ್ನ ಹಕ್ಕುಬಾಧ್ಯತೆ ಸಮಿತಿಗೆ ವಹಿಸಬೇಕು.

**ಶ್ರೀ ಭಟ್ :** ಯಾವ ಸದಸ್ಯರಿಗೂ ಅಪಮಾನ ಮಾಡುವ ಉದ್ದೇಶವಿರಲಿಲ್ಲ ಎಂಬುದನ್ನು ಸ್ಪಷ್ಟಗೊಳಿಸಬೇಕು.

**ಡಾ. ದೇಶಮುಖ :** ಶ್ರೀ ದೇಶಬಂಧು ಗುಪ್ತ ಅವರು ಸದನದ ಕ್ಷಮಾಪಣೆ ಕೋರಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅವರ ಉದ್ದೇಶ ಬಹುಶಃ ಚರ್ಚೆ ಶೀಘ್ರವಾಗಿ ನಡೆಯಲಿ ಎಂದಿದ್ದಿರಬೇಕು. ನಾನು ಅಪಮಾನದ ಪ್ರಶ್ನೆ ಇದೆಯೇ ಎಂದು ಪರಿಶೀಲಿಸುವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ತಮ್ಮ ಅನುಮತಿಯಂತೆ, ತಮ್ಮ ಹೇಳಿಕೆ ಕುರಿತಂತೆ ನಾನು ಪ್ರಸ್ತಾಪಿಸಬಹುದೆ? ಸದನದ ಸದಸ್ಯರು ತಾವು ಭಯಭೀತರಾಗಿದ್ದೀರಿ ಎಂದೇ ತಿಳಿದಿದ್ದಾರೆ. ಈ ಪೀಠದಲ್ಲಿಯೆ ವಿಠಲಭಾಯಿ ಪಟೇಲರು ಆಸೀನರಾಗಿದ್ದು ಅದರ ಗೌರವವನ್ನು ಕಾಪಾಡಿದ್ದರು. ಅವರ ನಂತರವೂ ಅನೇಕ ಮಹನೀಯರು ಈ ಸ್ಥಾನವನ್ನು ಅಲಂಕರಿಸಿದರು. ನಮಗೆ ತಿಳಿದಂತೆ ಅವರೆಲ್ಲರೂ ನ್ಯಾಯದ ತಕ್ಕಡಿಯ ಸಮತೋಲನೆಯನ್ನೇ ಎತ್ತಿ ಹಿಡಿದವರಾಗಿದ್ದರು. ಆದುದರಿಂದ ಬಾಹ್ಯ ಜಗತ್ತಿಗೆ ಇದು ಸಂಬಂಧಿಸಿದ ವಿಷಯವಲ್ಲ. ಪೀಠದ ಕಾರ್ಯಾಚರಣೆಯ ಬಗೆಗೆ ಸಂಶಯಕ್ಕೆ ಆಸ್ಪದವೆ ಇರಕೂಡದು.

ಆದರೂ, ಉದ್ರೇಕಗೊಂಡ ಸಮಯದಲ್ಲಿ ಸದಸ್ಯರು ಭಾವೋದ್ರಿಕ್ತರಾಗಿ ತಮ್ಮನ್ನು ತಪ್ಪು ದೃಷ್ಟಿಯಿಂದ ನೋಡಿರಲೂಬಹುದು. ಕೆಲವು ಬಾರಿ ಹಲವರ ಚರ್ಚೆಯನ್ನು ಮೊಟಕುಗೊಳಿಸಬೇಕೆಂದೂ ಆಗ್ರಹಿಸಿದ್ದಾರೆ. ಆದರೆ ಸದಸ್ಯರು ಏಕೆ ಅಧಿಕ ಸಮಯ ತೆಗೆದುಕೊಳ್ಳುತ್ತಾರೆ ಎಂಬುದರ ಅರಿವೂ ನನಗಿದೆ. ಡಾ. ಅಂಬೇಡ್ಕರ್‌ರ ಚರ್ಚೆಗೂ ಆಕ್ಷೇಪಿಸಿದ ಸದಸ್ಯರು ಸದನದಲ್ಲಿದ್ದಾರೆ. ಆದರೆ ನಾನು ಅದರಂತೆ ಮಾಡಿಲ್ಲ.

ನಾವು ಈ ಬಗೆಯ ಟೀಕೆಗಳಿಗೆ ಒಗ್ಗಿಹೋಗಿದ್ದೇವೆ. ಆದರೆ ಸದನದ ಯಾವ ಸದಸ್ಯನಿಗೂ ಪೀಠವು ತಾರತಮ್ಯ ಭಾವನೆಯನ್ನು ಹೊಂದದೇ ನಿಷ್ಪಕ್ಷಪಾತದಿಂದ ವರ್ತಿಸುತ್ತಿದೆ ಎಂದೇ ಹೇಳಬಯಸುವೆ. ಅಲ್ಲದೆ ಪತ್ರಿಕೆಗಳಿಗೆ ಟೀಕಿಸುವ ಹಕ್ಕಿದೆ, ಹೀಗಾಗಿ ಅವರು ಯಾರನ್ನಾದರೂ ಟೀಕಿಸಬಹುದು. ಅದಕ್ಕೆ ನಾವು ಮನಗೊಡಬಾರದು. ಏಕೆಂದರೆ ಪತ್ರಿಕಾಕರ್ತರ ದೃಷ್ಟಿಕೋನವೇ ಬೇರೆಯಾದುದು.

ಪೀಠದ ಗೌರವಕ್ಕೆ ಸಂಬಂಧಿಸಿದಂತೆ, ಒಳಗಿನಿಂದಾಗಲಿ ಅಥವಾ ಹೊರಗಿನಿಂದಾಗಲಿ ಅಗೌರವ ಉಂಟಾಗಿದೆ ಎಂದರೆ ಅದನ್ನು ಸಹಿಸಬಾರದು. ಈಗ ಸಂಪಾದಕರು ನೀಡಿದ ವಿವರಣೆಯು ತಮಗೆ ತೃಪ್ತಿಯಾಗಿರದೆ ಹೋದಲ್ಲಿ, ತಾವು ತಮಗೆ ಸೂಕ್ತವೆನಿಸಿದ ಕ್ರಮಕೈಗೆತ್ತಿಕೊಳ್ಳಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ಅವರು ನೀಡಿದ ಸಮಜಾಯಿಷಿಯಿಂದ ತೃಪ್ತಿಯಾಗಿದೆ. ಆದರೆ ಯಾವ ಸದಸ್ಯನಿಗಾದರೂ ಅಪಮಾನವಾಗಿದೆ ಎಂದಾದಲ್ಲಿ ಅದನ್ನು ಪರಿಶೀಲಿಸಬಹುದು. ಸದ್ಯ ನನಗೆ ತಿಳಿದಂತೆ ಅವರು ಬರೆದಿರುವ ಪತ್ರದಿಂದ ಯಾರಿಗೂ ಅವಮಾನವಾಗಿಲ್ಲವೆಂದೆ ಭಾವಿಸಿರುವೆ.

**ಶ್ರೀ ಸಂತಾನಂ :** ನನಗೆ ತಿಳಿದಂತೆ, ಸರ್ಕಾರವನ್ನು ಟೀಕಿಸಬಹುದೆ ಹೊರತು ಸದಸ್ಯರನ್ನಲ್ಲ?

**ಡಾ. ದೇಶಮುಖ :** ಶ್ರೀ ಗುಪ್ತ ಅವರು ತಮ್ಮ ನಿಲುವನ್ನು ಪತ್ರದಲ್ಲಿ ಸ್ಪಷ್ಟಗೊಳಿಸಿದ್ದಾರೆ. ಆದರೆ ಚಿತ್ರದಲ್ಲಿ ಸದನದ ಸದಸ್ಯರನ್ನು ಆಪಾದಿಸಿರುವುದು ಶೋಚನೀಯ.

**ಮಾನ್ಯ ಉಪಸಭಾಧ್ಯಕ್ಷರು :** ಈ ಪತ್ರ ಎರಡು ಭಾಗಗಳಿಂದ ಕೂಡಿದೆ. ಒಂದು ಪೀಠ ಕುರಿತಂತೆ, ಎರಡನೆಯದಾಗಿ ಸದನದ ಹಕ್ಕುಬಾಧ್ಯತೆಗೆ ಸಂಬಂಧಿಸಿದ್ದು. ಆದುದರಿಂದ ಈ ವಿಷಯ ನನಗೆ ಬಿಡಿ. ನನಗೆ ಅವರು ಬರೆದ ಪತ್ರದಿಂದ ತೃಪ್ತಿಯಾಗಿದೆ. ಆದರೆ ಯಾವ ಸದಸ್ಯನಿಗೆ ಅಪಮಾನ ಅಥವಾ ಅಗೌರವವಾಗಿದೆ

ಎಂದಲ್ಲಿ ಅವರು ನನ್ನನ್ನು ನನ್ನ ಕೊಠಡಿಯಲ್ಲಿ ಬಂದು ಕಾಣಬಹುದು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಏನೆಂದು ವಿರೋಧಿಸಬೇಕು? ದೇಶಬಂಧು ಗುಪ್ತರೇ ಪತ್ರಿಕಾ ಮಸೂದೆಗೆ ಸಂಬಂಧಿಸಿದ ಚರ್ಚೆಯಲ್ಲಿ ೪ ಗಂಟೆ ಮಾತನಾಡಿದ್ದಾರೆ. ಶ್ರೀ ನಜೀರುದ್ದೀನ್ ಅಹಮದ್ ಅವರು ಈ ಮಸೂದೆಯ ಮೇಲೆ ೭ ತಾಸು ಮಾತನಾಡಿದ್ದಾರೆ.

**ಡಾ. ದೇಶಮುಖ :** ಮಡಕೆ ಕೆಟಲ್‌ಅನ್ನು ಕಪ್ಪಾಗಿದ್ದೀಯಾ ಎಂದು ಹೇಳಿದಂತೆ ಇದೊಂದು ಮೋಜಿನ ಸಂಗತಿಯಾಗಿದೆ. ತಾವು ಸದನದ ಕಾರ್ಯಕಲಾಪದ ಬಗೆಗೆ ಹೇಳಿದಂತೆ ತಮ್ಮ ಸಮ್ಮತಿ ಕೋರಿ ಒಂದು ಮಾತನ್ನು ಹೇಳಬಯಸುವೆ. ತಾವು ಪ್ರಸ್ತಾಪಿಸಿದ ವಿಷಯವನ್ನು ಸ್ವಾಗತಿಸುತ್ತಾ ಹೇಳಬಯಸುವುದೇನೆಂದರೆ, ಚರ್ಚೆಯನ್ನು ಸಂಕ್ಷಿಪ್ತಗೊಳಿಸುವಲ್ಲಿ ಸಹಕರಿಸಿದ್ದರೆ ಉತ್ತಮವಾಗುತ್ತಿತ್ತು.

**ಶ್ರೀ ಭಾರತಿ** (ಮದ್ರಾಸ್): ಪೀಠಕ್ಕೆ ನಿರ್ದೇಶನ ನೀಡುವುದು ಸೂಕ್ತವಲ್ಲ.

**ಡಾ. ದೇಶಮುಖ:** ಪೀಠವು ನಮ್ಮ ಸಲಹೆಗಳನ್ನು ಕೋರಿದೆ.

**ಶ್ರೀ ಭಾರತಿ :** ಸಲಹೆಯ ನೆಪದಲ್ಲಿ ನಿರ್ದೇಶಿಸುವುದು ಸರಿಯಾಗದು.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ನಾನು ಈ ಸದನದ ಸದಸ್ಯನಾಗಿ, ಮುಕ್ತ ಚರ್ಚೆಗೆ ಇದು ಆತಂಕವನ್ನುಂಟುಮಾಡುತ್ತದೆ ಎಂದೇ ಹೇಳಬಯಸುವೆ. ನಾನು ವಿಧೇಯಕದ ಜಾರಿಗೆ ಯಾವ ಅಡ್ಡಿಆತಂಕಗಳನ್ನು ಒಡ್ಡುವುದಿಲ್ಲ. ಆದರೂ ನನಗೆ ವಿಧೇಯಕದ ಬಗ್ಗೆ ಇನ್ನೂ ಮಾತನಾಡಬೇಕೆಂಬ ಹಿರಿಯಾಸೆ ಹೊಂದಿದ್ದರೂ, ಅಧ್ಯಕ್ಷರು ನನಗೆ ಅಡಚಣೆ ಮಾಡುತ್ತಿರುವುದು ಶೋಚನೀಯ. ಎಲ್ಲರೂ ಸ್ವಯಂಪ್ರೇರಣೆಯಿಂದ ಚರ್ಚೆಯನ್ನು ಆದಷ್ಟೂ ಶೀಘ್ರವಾಗಿ ಮುಕ್ತಾಯಗೊಳಿಸಬೇಕಾದುದರಿಂದ ನಾನು ನೇರವಾಗಿ ವಿಷಯವನ್ನೇ ಪ್ರಸ್ತಾಪಿಸುವೆ.

ಈ ಕಾನೂನಿನ ಬಗ್ಗೆ ವಿವರ ನೀಡಿದ ಡಾ. ಅಂಬೇಡ್ಕರ್‌ರಿಗೆ ನಾನು ಋಣಿ. ನನಗೆ ತಿಳಿದಂತೆ ಅನೇಕ ನ್ಯಾಯನಿರ್ಣಯಗಳಿಂದ, ಸಂಪ್ರದಾಯದ ವ್ಯಾಖ್ಯೆಯನ್ನು ನಿರ್ಧರಿಸಲಾಗಿದೆ. ಆದರೆ ಅದು ನನ್ನ ಉದ್ದೇಶವಲ್ಲ. ನನ್ನ ಅಭಿಪ್ರಾಯವೆಂದರೆ ಸಂಪ್ರದಾಯವನ್ನು ನ್ಯಾಯಾಂಗವು ನಿಖರವಾಗಿ ಸಮ್ಮತಿಸಿರಬೇಕು. ಆದುದರಿಂದ ನನ್ನ ಸಲಹೆ ಏನೆಂದರೆ, ಸಂಪ್ರದಾಯವನ್ನು ನ್ಯಾಯಾಂಗ ಬೆಂಬಲಿಸಿದೆ ಎಂಬ ಒಂದೇ ಕಾರಣದಿಂದ ಅವು ಸಾರ್ವಜನಿಕ ನೀತಿಗೆ ವಿರೋಧವಾಗಿದ್ದಲ್ಲಿ ಒಪ್ಪಕೂಡದು. ಏಕೆಂದರೆ, ಯಾವುದೇ ಒಂದು ಸಂಪ್ರದಾಯವನ್ನು ನ್ಯಾಯಾಂಗ ಒಪ್ಪಿದೆ ಎಂದರೆ ಅದು ಕೋರ್ಟಿನ ಕಡಲಿನಲ್ಲಿ ಪಾರಾಗಿ ನ್ಯಾಯಾಂಗದ ಅಂಗೀಕಾರವನ್ನು ಹೊಂದಿರಬಹುದು.

**ಡಾ. ಅಂಬೇಡ್ಕರ್ :** ನಾನು ಕೇವಲ ಒಂದು ಕ್ಷಣ ಮಧ್ಯಪ್ರವೇಶ ಮಾಡಬಯಸುವೆ. ಅದೇನೆಂದರೆ ನಾವು ಇದಕ್ಕೆ ಸಂಬಂಧಿಸಿದ ವಿಧಿಯನ್ನು ಚರ್ಚಿಸುತ್ತಿದ್ದಾಗ ಮಾನ್ಯ ಸದಸ್ಯರು ಹೇಳಿದ್ದೇನೆಂದರೆ "ಯಾವುದೇ ಸಂಪ್ರದಾಯ ನ್ಯಾಯಾಂಗ ಮನ್ನಿಸಿದ್ದರೆ" ಎಂದಿದ್ದರು. ಈಗ ಇದು ಅವರಿಗೆ ಬಿಟ್ಟ ವಿಷಯ. ಆದರೆ ತಾವು ಹೇಳಿಕೆ ನೀಡಿದಂತೆ ನಾವು ನ್ಯಾಯಾಂಗ ಮನ್ನಿಸಿರಬಹುದಾದ ಸಂಪ್ರದಾಯಗಳಿಗೆ ಸೀಮಿತವಾಗುವುದು ಉತ್ತಮ, ಏಕೆಂದರೆ ಅನೇಕ ಸಂಪ್ರದಾಯಗಳು ಉತ್ತಮವಾಗಿದ್ದರೂ, ನ್ಯಾಯಾಂಗ ಮನ್ನಣೆ ದೊರಕಿಲ್ಲ. ಹೀಗಾಗಿ ನಾವು ತೊಂದರೆಗಳನ್ನು ಎದುರಿಸಬೇಕಾಗಬಹುದು ಎಂದೇ ಸೂಚಿಸುವೆ.

**ಶ್ರೀ ಸಂತಾನಂ :** "ನ್ಯಾಯಾಂಗ ಸಮ್ಮತಿಸಿದೆ" ಎಂದರೆ, ಜಿಲ್ಲಾ ನ್ಯಾಯಾಲಯವೇ ಅಥವಾ ಶ್ರೇಷ್ಠ ನ್ಯಾಯಾಲಯವೇ ಅಥವಾ ಸರ್ವೋಚ್ಚ ನ್ಯಾಯಾಲಯವೇ ಎಂದು ಹೇಳುವುದು ಕಷ್ಟಕರವಾದ ವಿಷಯ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದು ನ್ಯಾಯಾಂಗದಿಂದ ನಿಖರವಾಗಿಯೇ ನಿರ್ಧರಿಸಿರಬೇಕು, ಹಾಗೂ ಸೂಕ್ತವಾಗಿರಬೇಕು. ಅಲ್ಲದೇ ಅದಕ್ಕೆ ಕಾನೂನಿನ ಬಲವಿರಬೇಕು. ಹಾಗೂ ಜಾರಿಯಲ್ಲಿರಬೇಕು;

ಮತ್ತು ಸಾರ್ವಜನಿಕ ಧೋರಣೆಗೆ ವಿರುದ್ಧವಿರಬಾರದು. ಆದುದರಿಂದ ಕೇವಲ ನ್ಯಾಯಾಂಗ ಸಮ್ಮತಿಯೊಂದೇ ಪ್ರಮುಖವಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾದರೆ "ನಿಯಮ ನಿಖರ"ವಾಗಿರಬೇಕೆಂಬ ಅಂಶ ಸೇರಿಸಬೇಕು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದು ಸೂಕ್ತ ಹಾಗೂ ನಿಖರ ಹಾಗೂ ಕಾನೂನಿನ ಬಲ ಹೊಂದಿದೆ; ಆದರೆ "ಏಕರೂಪ" ಅಥವಾ "ಸಾರ್ವಜನಿಕ ನೀತಿಗೆ ವಿರೋಧ" ಎಂಬ ಪದ ಪ್ರಯೋಗವಿರಕೂಡದು. ಈ ಒಂದು ವ್ಯತ್ಯಾಸವನ್ನೇ ನಾನು ಬಯಸುವೆ ಮತ್ತು ಜಾರಿಗೊಳಿಸಿಕೊಳ್ಳಬೇಕೆಂದು ಕೋರುವೆ.

**ಮಾನ್ಯ ಉಪಸಭಾಧ್ಯಕ್ಷರು :** ಎಲ್ಲಾ ಮಾನವ ವರ್ಗಕ್ಕೂ ಜಾರಿಯಾಗುವ ಸಂಪ್ರದಾಯ ಅದು ಕೇವಲ ಪ್ರಕೃತಿ..

**ಪಂಡಿತ ಠಾಕೂರ್ ದಾಸ್ ಭಾರ್ಗವ :** ದಯಮಾಡಿ ಕ್ಷಮಿಸಬೇಕು. ಯಾವುದೇ ಒಂದು ಸಂಪ್ರದಾಯ ಮಾನವ ಜನಾಂಗಕ್ಕೆಲ್ಲಾ ಅನ್ವಯಿಸಬೇಕೆಂದರೆ ಅದು ಸಾರ್ವತ್ರಿಕ ವಿಶ್ವಕಾನೂನು ಅಥವಾ ನಿಯಮವಾಗಿದ್ದರೆ ಸಾಧ್ಯ. ಈ ಬಗೆಯ ನಿಯಮವು ಪಂಗಡಗಳಿಗೆ, ಸಮುದಾಯಕ್ಕೆ ಅಥವಾ ಕುಟುಂಬಗಳಿಗೆ ಅನ್ವಯಿಸಬಲ್ಲದೆಂದೆ ನಮ್ಮ ವ್ಯಾಖ್ಯೆಯಲ್ಲಿ ತಿಳಿಸಲಾಗಿದೆ. ಇದೊಂದು 'ಏಕರೂಪ' ಪದ್ಧತಿ. ಎಂದಾಗ ಅದು ಎಲ್ಲಾ ವರ್ಗಗಳಿಗೂ ಅನ್ವಯಿಸುತ್ತದೆ. ಹೀಗೆಂದಾಗ 'ಸತತ' ಹಾಗೂ 'ಶಾಸನ' ಪದ ಪ್ರಯೋಗವಾಗಿರುವುದರಿಂದ 'ಏಕರೂಪ' ಪದ ಅನಿವಾರ್ಯವೆ?

**ಮಾನ್ಯ ಉಪಸಭಾಧ್ಯಕ್ಷರು :** 'ಏಕರೂಪ' ಎಂದರೆ ಯಾವ ಬದಲಾವಣೆಗೆ ಗುರಿಯಾಗದೆ ಇರುವ ಎಂದೇ ಹೇಳಬಹುದು ಎಂದೇ ನನ್ನ ಭಾವನೆಯಾಗಿದೆ.

**ಡಾ. ಅಂಬೇಡ್ಕರ್ :** ಈ ಒಂದು ಅಂಶವನ್ನೇ ಪ್ರಸ್ತಾವಿಸಬೇಕೆಂದಿದ್ದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ವಿವಿಧ ಕುಟುಂಬಗಳಲ್ಲಿ ವಿವಿಧ ಸಂಪ್ರದಾಯಗಳಿವೆ. ಅದನ್ನು 'ಏಕರೂಪ' ಎಂದು ಹೇಗೆ ಕರೆಯಬಹುದು?

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು, ವಿಷಯದ ಅಂಶವನ್ನು ಅರಿತಂತೆ ತೋರುವುದಿಲ್ಲ. ಉದಾಹರಣೆಗೆ ಒಂದು ಸಂಪ್ರದಾಯ ಸತತವಾಗಿ ವಿವಿಧ ರೂಪದಲ್ಲಿ ಜಾರಿಯಲ್ಲಿರಬಹುದು. ಉದಾಹರಣೆಯಾಗಿ ಒಂದು ಅವಧಿಗೆ ಕೆಲವರು ರೂ. ೧೦ ಕೆಲವರು ೧೫ ಹಾಗೂ ರೂ ೨೦ ಸಂಗ್ರಹಿಸುತ್ತಿರಬಹುದು. ಆದುದರಿಂದ ಕೇವಲ ಸಂಪ್ರದಾಯಗಳನ್ನೆ ಗಣನೆಗೆ ತೆಗೆದುಕೊಳ್ಳದೆ ಅದರ ಹಿಂದಿನ ನಿಯಮ ಮತ್ತು ದಾನಗಳನ್ನು ಪರಿಶೀಲಿಸಬೇಕು. ಒಂದು ಬಾರಿ ನ್ಯಾಯಾಂಗದಿಂದ ಇದು ಏಕರೂಪವಲ್ಲ ಎಂದೇ ಹೇಳಿದಾಗ ಮೇಲೆ ತಿಳಿಸಿದಂತೆ ಏಕರೂಪ ಎಂದರೆ ಯಾವ ಬದಲಾವಣೆಗೂ ಗುರಿಯಾಗದ ಎಂದೇ ಭಾವಿಸಬೇಕಾಗುತ್ತದೆ.

**ಡಾ. ಅಂಬೇಡ್ಕರ್ :** 'ಯಾವ ಬದಲಾವಣೆಗೆ ಗುರಿಯಾಗದೇ' ಎಂಬುದೇ ಅದರ ಅರ್ಥ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅಂದರೆ ಬದಲಾವಣೆಯಾದ ಸಂಪ್ರದಾಯಗಳನ್ನು ನ್ಯಾಯಾಂಗ ಮನ್ನಿಸಲಾರದು. ಸಂಪ್ರದಾಯ ಜಾರಿಯಲ್ಲಿರದೇ..

**ಮಾನ್ಯ ಉಪಸಭಾಧ್ಯಕ್ಷರು :** ಬದಲಾವಣೆಯಿದ್ದಲ್ಲಿ ಅದು ಸತತ, ನಿಖರ ಹಾಗೂ ಸರ್ವಕಾಲೀನ...

**ಪಂಡಿತ ಠಾಕೂರ್ ದಾಸ್ ಭಾರ್ಗವ :** 'ಸತತ' ಪದಕ್ಕೆ ನನ್ನ ಆತಂಕವಿಲ್ಲ, ಆದರೆ 'ಏಕರೂಪ' ಪದಕ್ಕೆ ನನ್ನ ವಿರೋಧವಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ನಜೀರುದ್ದೀನ್ ಅಹಮದರು ಏನಾದರೂ ತಿದ್ದುಪಡಿಯನ್ನು ಸೂಚಿಸುವರೆ? ನನಗೆ ತಿಳಿದಂತೆ ಬಹುಶಃ ಇರಲಾರದು.

**ಶ್ರೀ ನಜೀರುದ್ದೀನ್ ಅಹಮದ್ :** 'ಸಂಪ್ರದಾಯ'ದ ಬಗೆಗೆ ಮಾತನಾಡಲು ಬಯಸುವೆ.

**ಮಾನ್ಯ ಉಪಸಭಾಧ್ಯಕ್ಷರು :** ಮೊದಲು ತಿದ್ದುಪಡಿಗಳ ಬಗೆಗೆ ಪ್ರಸ್ತಾಪಿಸೋಣ. ಶ್ರೀ ಜುನ್‌ಜುನ್‌ವಾಲಾ ಅವರು ತಮ್ಮ ತಿದ್ದುಪಡಿಯ ಬಗೆಗೆ ಪ್ರಸ್ತಾಪಿಸುವರೆ? ಆದರೆ ನಾನು ಅದನ್ನು ಮಾಡಲೇಬೇಕೆಂದು ಹೇಳಲಾರೆ.

**ಶ್ರೀ ಝುಂಝುನ್‌ವಾಲಾ :** ನಾನೂ ಮಾತನಾಡಬೇಕೆಂದಿದ್ದೇನೆ. ನನ್ನ ತಿದ್ದುಪಡಿಯಲ್ಲಿ, 'ಪಂಗಡ' ಪದದ ನಂತರ 'ವರ್ಣ' ಪದವನ್ನು ಸೇರ್ಪಡಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅವರು ಜಾತಿ ಪದ್ಧತಿ ಅಥವಾ ಸಂಪ್ರದಾಯಗಳನ್ನು ಪರಿಗಣಿಸಬೇಕು ಎಂದಿದ್ದಾರೆ. ಅವರ 'ಪಂಗಡ'ದ ನಂತರ ವಿವಿಧ ವರ್ಗಗಳಿಗೆ ಸೇರಿದ 'ಜಾತಿ'ಯನ್ನೂ ಸೇರ್ಪಡಿಸಬೇಕೆಂದಿದ್ದಾರೆ. ಈ ಬಗೆಗೆ ಅವರು ಈಗಾಗಲೇ ಒಂದು ತಿದ್ದುಪಡಿಯನ್ನು ಮಂಡಿಸಿದ್ದು ಈಗ 'ಜಾತಿ' ಪದದ ಬದಲಾಗಿ 'ವರ್ಣ' ಪದವನ್ನು ಸೇರ್ಪಡಿಸಬೇಕೆಂದು ಸೂಚಿಸಿದ್ದಾರೆ.

**ಶ್ರೀ ಝುಂಝುನ್‌ವಾಲಾ :** ನನ್ನ ಸೂಚನೆಯಂತೆ 'ವರ್ಣ' ಪದವು 'ಪಂಗಡ ವಿಧಿ ೩(೧)'ರ ನಂತರ ಸೇರ್ಪಡೆಯಾಗಬೇಕು. ಈ ತಿದ್ದುಪಡಿಯನ್ನು ಮಂಡಿಸುವಲ್ಲಿ ನನ್ನ ಉದ್ದೇಶವೆಂದರೆ ಸಂಪ್ರದಾಯ ಅಥವಾ ನಡವಳಿಕೆಗಳು ಪಂಗಡ, ಗುಂಪು, ಸಮುದಾಯ ಹಾಗೂ ಕುಟುಂಬಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿಧವಾಗಿರುತ್ತವೆ. ಇದನ್ನು ಡಾ. ಅಂಬೇಡ್ಕರರು ಸೂಕ್ತವಾಗಿ ವಿವರಿಸಿಲ್ಲ. ಆದರೆ ಹಲವಾರು ಸಂಪ್ರದಾಯಗಳನ್ನು ಗುರುತಿಸಲಾಗುವುದು ಎಂಬ ಸೂತ್ರ ಅಂಗೀಕರಿಸಿದಾಗ, ಅವರು ಈ ಬಗೆಯ ಸಂಪ್ರದಾಯಗಳು ವಿವಿಧ ವರ್ಣ ಅಥವಾ ವರ್ಣಾಶ್ರಮ ಧರ್ಮದಂತೆ ಗುರುತಿಸಲಾಗುವುದು ಎಂದು ಹೇಳಬಹುದಾಗಿತ್ತು. ಏಕೆಂದರೆ ವರ್ಣಾಶ್ರಮ ಧರ್ಮದ ಸಂಪ್ರದಾಯ ಇಂದಿನ ದಿನಗಳಲ್ಲಾದದ್ದಲ್ಲ. ಹಲವರು ಹೇಳುವಂತೆ ಅವು ಕೇವಲ ಪುರಾಣಕಾಲಕ್ಕೆ ಸೇರಿರದೆ, ಸುಮಾರು ೩೦೦೦ ವರ್ಷಗಳ ಹಿಂದಿನಿಂದಲೂ ಆರ್ಥಿಕ ಜೀವನದ ಮೇಲೆ ಅಗಾಧ ಪರಿಣಾಮ ಬೀರಿವೆ. ಜಾರಿಯಲ್ಲಿರುವ ನಾಲ್ಕು ವರ್ಣಗಳಲ್ಲಿಯೂ ವಿವಿಧ ಸಂಪ್ರದಾಯಗಳು ರೂಢಿಯಲ್ಲಿವೆ; ಹಾಗೂ ಅರ್ಥಪೂರ್ಣವಾಗಿವೆ. ಪ್ರತಿಯೊಂದು ವರ್ಣದವರಿಗೂ ಕರ್ತವ್ಯ ನಿರ್ಣಯಿಸಲಾಗಿದೆ. ಈ ಕರ್ತವ್ಯಗಳು ಅವರ ಸಾಮರ್ಥ್ಯವನ್ನು ಅವಲಂಬಿಸಿವೆ. ಈ ಹಿಂದೆ ಗಾಡ್ಗೀಳರಿಗೆ ಬ್ರಾಹ್ಮಣ್ಯವನ್ನು ಪಾಲಿಸದೇ ಹೋದುದರಿಂದ, ಯಜ್ಞೋಪವೀತವನ್ನು ಧರಿಸುವುದು ಸರಿಯಲ್ಲ ಹೀಗಾಗಿ ನಾನು ಅದನ್ನು ತೆಗೆದು ಹಾಕಲೂ ಸಿದ್ಧ ಎಂದು ಹೇಳುತ್ತಾ ತಮ್ಮ ಕೋಟನ್ನು ಮೇಲೆತ್ತಿದ್ದರು.

**ಮಾನ್ಯ ಉಪಸಭಾಧ್ಯಕ್ಷರು :** ಅವರು ಕೋಟನ್ನು ತೆರೆಯಲಿಲ್ಲ.

**ಶ್ರೀ ಝುಂಝುನ್‌ವಾಲಾ :** ನಾನು ತಿದ್ದಿಕೊಳ್ಳುವೆ. ಅವರು ಕೋಟನ್ನು ಕಳಚದೇ ಹೋದರೂ, ಅವರು ನೀಡಿದ ಉತ್ತರದಿಂದ ಸಂಪ್ರದಾಯದ ಮಹತ್ವ ಅರಿಯಬಹುದಾಗಿದೆ. ಇದರಿಂದ ಗಾಡ್ಗೀಳರೂ ಸಂಪ್ರದಾಯಗಳ ಮಹತ್ವವನ್ನು ಅರಿತಿರುವರೆಂದೇ ಹೇಳಬಹುದು. ಹೀಗಾಗಿ ಪ್ರತಿಯೊಂದು ವರ್ಣಕ್ಕೂ ತನ್ನದೇ ಆದ ಸಂಪ್ರದಾಯಗಳಿವೆ ಅವು ಬೇರೆ ಬೇರೆಯಾಗಿವೆ. ಅವು ಮಾನ್ಯ ಕಾನೂನು ಸಚಿವರಿಂದ ನಿರ್ಮಿಸಲಾದ ಪರಿಸ್ಥಿತಿಗೆ ಸಮರ್ಪಕವಾಗಿವೆಯೊ? ಈ ಕಾರಣದಿಂದಲೇ ನಾನು ಈ ತಿದ್ದುಪಡಿಯನ್ನು ಮಂಡಿಸಿರುವೆ. ಅದರಲ್ಲಿಯೂ ವಿವಾಹ ಮತ್ತು ವಿಚ್ಛೇದನೆಗೆ ಸೇರಿದಂತೆ ಪಂಗಡ ಹಾಗೂ ಸಮೂಹಗಳಲ್ಲಿ ಜಾರಿಯಲ್ಲಿರದೆ ಹೋದರೂ, ವರ್ಣಗಳಲ್ಲಿವೆ. ಆದುದರಿಂದಲೇ ನಾನು "ವರ್ಣ" ಪದವನ್ನು ಸೇರ್ಪಡಿಸಿರುವೆ.

**ಶ್ರೀ ಬಿ.ಕೆ.ಪಿ. ಸಿನ್ಹಾ** (ಬಿಹಾರ) : ಸರ್, ನಾನು ಮಾನ್ಯ ಸದಸ್ಯರಿಂದ ಒಂದು ಸಂಗತಿ ತಿಳಿಯಬಯಸುವೆ. ನಾವು ಶ್ರುತಿ ಹಾಗೂ ಸ್ಮೃತಿಗಳನ್ನು ಕೈಬಿಟ್ಟಾಗಲೂ, ಸಂಪ್ರದಾಯಗಳನ್ನು ಮುಂದುವರಿಸಬೇಕೆ?

**ಮಾನ್ಯ ಉಪಸಭಾಧ್ಯಕ್ಷರು** : ಶ್ರುತಿ ಹಾಗೂ ಸ್ಮೃತಿಗಳನ್ನು ಕೈಬಿಡದೆ ಸೇರ್ಪಡಿಸಿಕೊಂಡಿದೆ.

**ಶ್ರೀ ಝುಂಝುನ್‌ವಾಲಾ** : ಕಾನೂನು ಸಚಿವರು ಅದನ್ನು ಗುರುತಿಸುವಂತೆ ಮಾಡುವುದು ಅವರಿಗೇ ಸೇರಿದೆ.

**ಶ್ರೀ ಶ್ಯಾಮನಂದನ ಸಹಾಯ್** : ನಾನು ಉಪವಿಧಿಗೆ ಸೂಚಿಸಿರಬಹುದಾದ ತಿದ್ದುಪಡಿಯಲ್ಲಿ 'ಸಂಪ್ರದಾಯ' ಮತ್ತು 'ನಡವಳಿಕೆ' ಪದಗಳನ್ನು ಪ್ರಯೋಗಿಸಿಲ್ಲ ಏಕೆಂದರೆ ನಾನೂ ಕೂಡಾ ಕಾನೂನು ಮಂತ್ರಿಗಳ ಸಲಹೆಯನ್ನು ಸ್ವೀಕರಿಸಿದ್ದೇನೆ. ಅವರು ಹೇಳಿದಂತೆ ಸಂಪ್ರದಾಯದ ವ್ಯಾಖ್ಯೆ ನ್ಯಾಯಾಂಗದ ಮನ್ನಣೆಯಂತೆ ಮಾಡಲಾಗಿದೆ. ಈ ಪದಗಳನ್ನು ನ್ಯಾಯಾಂಗವು ಪದೇ ಪದೇ ತನ್ನ ನಿರ್ಣಯಗಳಲ್ಲಿ ಉಪಯೋಗಿಸಿರುವುದರಿಂದ ಅದನ್ನು ಪುನಃ ವ್ಯಾಖ್ಯೆಯಲ್ಲಿ ಅಳವಡಿಸುವುದು ಸೂಕ್ತವಲ್ಲ ಎಂದೇ ಹೇಳುವೆ....

**ಮಾನ್ಯ ಉಪಸಭಾಧ್ಯಕ್ಷರು** : ನನಗೆ ಅರ್ಥವಾಗಿದೆ. ನ್ಯಾಯಾಂಗ ನಿರ್ಣಯಗಳೇ ಜಾರಿಯಲ್ಲಿರುವಾಗ ಬೇರೆ ವ್ಯಾಖ್ಯೆಯ ಪ್ರಯೋಜನವೇನು?

**ಡಾ. ಅಂಬೇಡ್ಕರ್** : ನ್ಯಾಯಾಲಯ ಯಾವಾಗಲೂ ಮುಕ್ತ...

**ಮಾನ್ಯ ಉಪಸಭಾಧ್ಯಕ್ಷರು** : ಸಂಪ್ರದಾಯಗಳು ಸತತ ಮತ್ತು ಏಕರೂಪದವು.

**ಶ್ರೀ ಶ್ಯಾಮನಂದನ್ ಸಹಾಯ್** : ಶಾಸನದಲ್ಲಿ ನ್ಯಾಯಾಂಗದಿಂದ ಮನ್ನಿಸಲಾದ ಪದಪ್ರಯೋಗ ಮಾಡಿದಾಗ, ಅದು ನ್ಯಾಯಾಂಗ ನಿರ್ಣಯದಂತೆಯೇ ಅರ್ಥೈಸಲೇಬೇಕು. ಆದರೆ ನನ್ನ ಅಭಿಪ್ರಾಯದಂತೆ ನಾವು ಈಗ ಕೈಗೆತ್ತಿಕೊಂಡಿರುವ ಹಿಂದೂ ಶಾಸನದ ವಿಧೇಯಕವು ತುಂಬಾ ಪ್ರಭಾವಶಾಲಿ ಹಾಗೂ ಅಗಾಧ ಬದಲಾವಣೆಗಳಿಗೆ ಅವಕಾಶ ನೀಡುವುದಾಗಿದೆ. ಹೀಗಾಗಿ ನ್ಯಾಯಾಂಗವೂ 'ಸಂಪ್ರದಾಯ' ಮತ್ತು 'ನಡವಳಿಕೆ'ಗಳ ಬಗೆಗೆ ನೂತನ ಹೇಳಿಕೆ ನೀಡಲು ಬಯಸಬಹುದು. ಹೀಗಾಗಿ "ಸಾರ್ವಜನಿಕ ನೀತಿ" ಪದವು ಬದಲಾದ ಪರಿಸ್ಥಿತಿಯಲ್ಲಿ ತೊಂದರೆಗೆ ಗುರಿ ಮಾಡಬಹುದು.

**ಮಾನ್ಯ ಉಪಸಭಾಧ್ಯಕ್ಷರು** : ಅದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಹಲವು ಸಂದರ್ಭಗಳಲ್ಲಿ 'ಸಾರ್ವಜನಿಕ ನೀತಿ' ಎಂದರೇನು ಎಂಬುದನ್ನು ನಿರ್ಧರಿಸಬೇಕು......

**ಶ್ರೀ ಶ್ಯಾಮನಂದನ ಸಹಾಯ್** : ಕೇವಲ ಕೆಲವು ಸಂದರ್ಭಗಳಲ್ಲಿ ಮಾತ್ರ ಅಲ್ಲ, ಬದಲಾದ ಸರಕಾರಗಳ ಪರಿಸ್ಥಿತಿಯಲ್ಲಿ. ಏಕೆಂದರೆ ಒಂದೊಂದು ಸರ್ಕಾರ ಒಂದೊಂದು ಧೋರಣೆಯನ್ನು ಅನುಸರಿಸುತ್ತದೆ.

**ಡಾ. ಅಂಬೇಡ್ಕರ್** : ಕಾನೂನಿನ ಒಪ್ಪಂದಗಳಲ್ಲಿಯೂ "ಸಾರ್ವಜನಿಕ ನೀತಿ" ಪದ ಪ್ರಯೋಗವಿದೆ.

**ಮಾನ್ಯ ಉಪಸಭಾಧ್ಯಕ್ಷರು** : ಆಸ್ತಿಯನ್ನು ವರ್ಗಾಯಿಸುವ ಕಾಯಿದೆಯಲ್ಲಿ ಕೂಡಾ "ಸಾರ್ವಜನಿಕ ನೀತಿಗೆ" ವಿರೋಧವಾಗಿ ಆಸ್ತಿಯನ್ನು ವರ್ಗಾಯಿಸಲು ಅವಕಾಶವಿಲ್ಲ.

**ಶ್ರೀ ಶ್ಯಾಮನಂದನ್ ಸಹಾಯ್** : ನಾನು ಕೂಡಾ ಪಂಡಿತ ಠಾಕೂರ್ ದಾಸ್ ಭಾರ್ಗವ ಅವರ ತಿದ್ದುಪಡಿಯನ್ನು ಬೆಂಬಲಿಸುವೆ. 'ಸಂಪ್ರದಾಯ' ಮತ್ತು 'ನಡವಳಿಕೆ' ಪದಗಳು ತೊಂದರೆಗೆ ಗುರಿಮಾಡಬಹುದು, ಏಕೆಂದರೆ ಸಂಪ್ರದಾಯಗಳಾಗಲಿ ಅಥವಾ ನಡವಳಿಕೆಗಳಾಗಲಿ ಏಕರೂಪವನ್ನು ಹೊಂದದೆ ಇರಬಹುದು ಹಾಗೂ ಎಲ್ಲರೂ ಅದನ್ನು ಏಕರೂಪದಲ್ಲಿ ಪರಿಪಾಲಿಸುವುದರ ಬಗೆಗೆ ಅನುಮಾನಗಳಿವೆ. ಈ ದಿಸೆಯಲ್ಲಿ ಪ್ರಿವಿ ಕೌನ್ಸಿಲ್‌ನ ಒಂದು ಪ್ರಕರಣ ಮೊಗಲ್ ಸಾಮ್ರಾಜ್ಯದ ವಾರಸುದಾರಿಕೆಗೆ ಸಂಬಂಧಿಸಿದ್ದನ್ನು ಸ್ಮರಿಸಬಹುದು. ಈ ಎರಡೂ ಬಣಗಳ ವಾರಸುದಾರಿಕೆಯ ಪ್ರಕರಣದಲ್ಲಿ "ಸುನ್ನತ್" ಸಂಪ್ರದಾಯ ಬಹು ಮಹತ್ವದ ಪಾತ್ರವನ್ನು ವಹಿಸಿತು.

**ಡಾ. ಅಂಬೇಡ್ಕರ್** : ನನಗೆ ಆ ಪ್ರಕರಣದ ಅರಿವಿದೆ.

**ಶ್ರೀ ಶ್ಯಾಮನಂದನ್ ಸಹಾಯ್ :** ಈ ಪ್ರಕರಣದಲ್ಲಿ ಪ್ರಿವಿ ಕೌನ್ಸಿಲ್, ಮುಸ್ಲಿಂ ಸಮುದಾಯದಲ್ಲಿ ಜಾರಿಯಲ್ಲಿರುವ **"**ಸುನ್ನತ್**"** ಸಂಪ್ರದಾಯವನ್ನು ಎತ್ತಿ ಹಿಡಿಯಿತು. ಸೋಜಿಗದ ಸಂಗತಿ ಎಂದರೆ ಮೊಗಲ್ ಸಾಮ್ರಾಜ್ಯದ ಹಿಂದೂ ಪತ್ನಿಯ ಪುತ್ರರಿಗೆ **"**ಸುನ್ನತ್**"** ಸಂಪ್ರದಾಯ ಜಾರಿ ಇರದೇ ಹೋದರೂ ಪಿಂಚಣಿ ಮುಂತಾದ ಸೌಲಭ್ಯಗಳಿಗೆ ಅರ್ಹತೆ ಇತ್ತು. ಆದುದರಿಂದ ಒಂದು ಕುಟುಂಬದಲ್ಲಿ ಕೂಡಾ ಸಂಪ್ರದಾಯಗಳು ಏಕರೂಪ ಹೊಂದಿರಲಾರವು ಎಂಬ ಅಂಶವನ್ನು ಕಾನೂನು ಮಂತ್ರಿಗಳು ಗಮನಿಸಬೇಕು. ಆದುದರಿಂದ ಪಂಡಿತ್ ಠಾಕೂರ್ ದಾಸ್ ಭಾರ್ಗವರ ಸಲಹೆಯಂತೆ **'**ಏಕರೂಪ**'** ಪದವನ್ನು ಕೈಬಿಡಬೇಕು.

**ಡಾ. ಅಂಬೇಡ್ಕರ್ :** ಇದಕ್ಕೆ ನ್ಯಾಯಾಂಗದ ಮೌಲ್ಯವಿಲ್ಲ. ಅಲ್ಲಿ ಗುರುತಿಸಿದ ಅಂಶ ಎಂದರೆ ಸಂಪ್ರದಾಯ ಮತ್ತು ನಡವಳಿಕೆ. ಕಾನೂನಿನ ದೃಷ್ಟಿಯಲ್ಲಿ ನಡವಳಿಕೆಗಳಿಗೆ ಮಾನ್ಯತೆ ಇಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ನಾನು 'ಸಂಪ್ರದಾಯ' ಪದದ ವ್ಯಾಖ್ಯೆಯ ಬಗೆಗೆ ಮಾತನಾಡಬಯಸುವೆ; ನಾನು ಸರ್ಕಾರದಿಂದ ಬರೆದಿರುವ ಒಕ್ಕಣೆಯ ಪರವಾಗಿದ್ದೇನೆ.

**ಶ್ರೀ ಶ್ಯಾಮನಂದನ್ ಸಹಾಯ್ :** ಒಮ್ಮೆಯಾದರೂ......

**ಶ್ರೀ ನಜೀರುದ್ದೀನ್ ಅಹಮದ್ :** ನಾನು ಸಾಮಾನ್ಯವಾಗಿ ಮಾನ್ಯ ಮಂತ್ರಿಗಳ ಹೇಳಿಕೆಯನ್ನೇ ಅನುಮೋದಿಸುವೆ. ಆದರೆ **"**ಸಂಪ್ರದಾಯ**"** ವ್ಯಾಖ್ಯೆಯ ಬಗೆಗೆ ಹೇಳಲಾರೆ. ಏಕೆಂದರೆ ಅದು ಕೇವಲ ಭಾರತದಲ್ಲಿ ಮಾತ್ರವಲ್ಲ ವಿಶ್ವವ್ಯಾಪ್ತಿ ಚರ್ಚಾಸ್ಪದವಾದ ವಿಷಯ. ನನ್ನ ಬಳಿ ಹಾಲೆಂಡ್ ಅವರ ನ್ಯಾಯಾಂಗದ ಪುಸ್ತಕವಿದೆ. ಅವರ ಹೇಳಿಕೆಯಂತೆ ಯಾವುದೇ ಒಂದು ಸಂಪ್ರದಾಯವನ್ನು ಅನುಸರಿಸಬೇಕಾದರೆ, ಅದು ಸಕಾರಣವಾಗಿರಬೇಕು ಹಾಗೂ ಸತತವಾಗಿ ಜಾರಿಯಲ್ಲಿರಬೇಕು ಹಾಗೂ ಪುರಾತನಕಾಲದಿಂದ ನಡೆದು ಬಂದಿರಬೇಕು. ಹೀಗೆ ಅವರು ವರ್ಣಿಸಿದ್ದಾರೆ. ನ್ಯಾಯಾಂಗದಲ್ಲಿ ಸಂಪ್ರದಾಯದ ಏಕರೂಪತೆಯನ್ನು ಒತ್ತಿ ಹೇಳಲಾಗಿದೆ ಹಾಗೂ ಅದೊಂದು ಅನಿವಾರ್ಯ ಅಂಶ ಎಂದೇ ಪರಿಗಣಿಸಲಾಗಿದೆ. ಒಂದು ಬಾರಿ ಸಂಪ್ರದಾಯ ಮುರಿದುಹೋದಲ್ಲಿ ಅದನ್ನು ಸಂಪ್ರದಾಯ ಎಂದು ಪರಿಗಣಿಸಲಾಗದು. ಇದು ನಡೆದು ಬಂದ ದಾರಿ. ಆದುದರಿಂದ ಈಗ ಸಂಪ್ರದಾಯದ ಬಗೆಗೆ ಸಭೆಯ ಮುಂದೆ ಇರುವ ವ್ಯಾಖ್ಯೆಯನ್ನು ಬೆಂಬಲಿಸುವುದೆ ಸೂಕ್ತ. ಈ ದಿಶೆಯಲ್ಲಿ ನ್ಯಾಯಾಂಗ ನಿರ್ಧಾರಗಳು ಇರಬಹುದು, ಆದರೆ ನ್ಯಾಯಾಂಗ ಈ ಬಗೆಯ ನಿರ್ಧಾರ ತೆಗೆದುಕೊಳ್ಳುವಲ್ಲಿ ತನ್ನದೇ ಆದ ವಿಚಾರಗಳನ್ನು ಹೊಂದಿದ್ದು ಅವು ಸರ್ವಕಾಲೀನ ಸತ್ಯ ಎಂದು ಭಾವಿಸಲಾಗದು. ಅವು ಕೇವಲ ಅಧ್ಯಯನಕ್ಕೆಂದೇ ಪುಸ್ತಕ ಅಥವಾ ಗ್ರಂಥಗಳಲ್ಲಿ ವರ್ಣಿಸಿರಬಹುದು. ಆದುದರಿಂದ ಸತತ ಹಾಗೂ ಏಕರೂಪ ಹೊಂದಿರುವುದು ಅನಿವಾರ್ಯವೆಂದು ಭಾವಿಸಿ ಈಗ ಸಭೆಯ ಮುಂದೆ ಮಂಡಿಸಿರುವ ವ್ಯಾಖ್ಯೆಯನ್ನು ಉಳಿಸಿಕೊಂಡು ಹೋಗುವುದು ಸೂಕ್ತ.

**ಶ್ರೀ ಜೆ.ಆರ್. ಕಪೂರ್ :** ನನಗೆ ತಿಳಿದಂತೆ, ನನ್ನ ಮಿತ್ರರಾದ ಪಂಡಿತ ಠಾಕೂರ ದಾಸ ಭಾರ್ಗವರು ಮಂಡಿಸಿರುವ ಎರಡು ತಿದ್ದುಪಡಿಗಳು, ಅವರ ಅಭಿಪ್ರಾಯದಂತೆಯೆ ಅನಿವಾರ್ಯವಾಗಿಲ್ಲ. ಅವರ ಅಭಿಪ್ರಾಯದಂತೆ 'ಸಂಪ್ರದಾಯ' ಸಮಸ್ತ ದೇಶಕ್ಕೆ ಹಾಗೂ ಎಲ್ಲಾ ಪ್ರದೇಶಗಳಲ್ಲಿ ಒಂದೇ ಆಗಿರಬೇಕೆಂದಿದೆ. ಅವರ ಈ ಅಭಿಪ್ರಾಯ ಸಮರ್ಥನೀಯ, ಆದರೆ 'ಸಂಪ್ರದಾಯ' ಪದ ತುಂಬಾ ಗರ್ಭವತ್ತಾದ ಗಂಭೀರತೆಯನ್ನು ಹೊಂದುವುದು ಸೂಕ್ತವಲ್ಲ. ಈ ಒಂದು ವಿಧೇಯಕದ ಉತ್ತಮಾಂಶ ಎಂದರೆ ಅದು ಭಾರತೀಯರನ್ನೆಲ್ಲಾ ಒಂದುಗೂಡಿಸುತ್ತದೆ; ಹಾಗೂ ಹಿಂದೂ ಸಮಾಜದಲ್ಲಿಯ ವಿವಿಧ ಸಂಪ್ರದಾಯಗಳನ್ನು ದೂರಮಾಡುತ್ತದೆ. ಆದುದರಿಂದ ಈ ವಿಧೇಯಕದ ಏಕಮಾತ್ರ ಉದ್ದೇಶವನ್ನು ನಾವು ಕೈಬಿಡಬಾರದು. ಈ ದಿಶೆಯಲ್ಲಿ ಠಾಕೂರ್ ದಾಸ್ ಭಾರ್ಗವರ ಅಭಿಪ್ರಾಯವೇನು? ಯಾವುದೇ ಸಂಪ್ರದಾಯ ಏಕರೂಪತೆಯನ್ನು ಪಡೆಯದೆಹೋದರೂ

ಅದು ಸಂಪ್ರದಾಯವಾಗಿ ಮುಂದುವರಿಯಬಹುದೆ? ಎರಡನೆಯದಾಗಿ ಸಂಪ್ರದಾಯ "ಸಾರ್ವಜನಿಕ ಧೋರಣೆಗೆ" ಎಂಬ ಪದಗಳನ್ನು ಕೈಬಿಡುವಂತೆ ಸೂಚಿಸಿದ್ದಾರೆ ಈ ಸಲಹೆಗಳು ಸೂಕ್ತವೆ? ಒಂದು ನಾವು ಸ್ಮರಿಸಬೇಕಾದ ಸಂಗತಿ ಎಂದರೆ ಸಂಪ್ರದಾಯ ಸಾರ್ವಜನಿಕ ನೀತಿ ನಿರ್ಮಿಸುವುದೆ ಅಥವಾ ಸಾರ್ವಜನಿಕ ನೀತಿಯಂತೆ ಸಂಪ್ರದಾಯಗಳು ಜನಿಸಬಲ್ಲವೆ? ಈ ಹಿನ್ನೆಲೆಯಲ್ಲಿ ಸಂಪ್ರದಾಯದ ಅರ್ಥ ತುಂಬಾ ಗಂಭೀರತೆಯನ್ನು ಪಡೆಯುತ್ತದೆ. ಈ ಒಂದು ದೃಷ್ಟಿಕೋನದಿಂದ ಅವರ ತಿದ್ದುಪಡಿಯನ್ನು ಒಪ್ಪಬಾರದೆಂದೆ ನನ್ನ ಹೇಳಿಕೆ. ಏಕೆಂದರೆ ಸಮಾಜ ಯಾವಾಗಲೂ ಪ್ರಗತಿ ಹೊಂದುತ್ತಲೆ ಇರುತ್ತದೆ. ಹೀಗಾಗಿ ಅವರ ಹೇಳಿಕೆಯನ್ನು ಅಂಗೀಕರಿಸಿದಲ್ಲಿ ಸಮಾಜದ ವಿಕಾಸಕ್ಕೆ ಅಡಚಣೆ ಉಂಟಾಗುವ ಅಪಾಯವಿದೆ. ನ್ಯಾಯಾಂಗ ಸಮ್ಮತಿಸಿದ ಸಂಪ್ರದಾಯಗಳೂ ೧೦–೧೨ ವರ್ಷಗಳ ನಂತರ ಸರಿದೋರದೆ ಹೋಗಲೂಬಹುದು. ಏಕೆಂದರೆ ಈ ಅವಧಿಯಲ್ಲಿ ಸಮಾಜ ಪ್ರಗತಿ ಸಾಧಿಸಿರುತ್ತದೆ. ಹೀಗಾಗಿ ಕಾಲಕ್ಕೆ ತಕ್ಕಂತೆ ನ್ಯಾಯನಿರ್ಣಯಗಳೂ ಬದಲಾಗಬೇಕು. ಆದುದರಿಂದ ಸದನದ ಮುಂದೆ ಇರುವ ನಿಲುವುಗಳಿಗೆ ನನ್ನ ಬೆಂಬಲವಿದೆ.

ಮುಂದುವರಿದು, ನನ್ನ ಮಿತ್ರರಾದ ಶ್ರೀ ಝುಂಝುನ್‌ವಾಲಾ ಅವರ ತಿದ್ದುಪಡಿಯನ್ನು ಅನುಮೋದಿಸಬಹುದು, ಏಕೆಂದರೆ ಅದು ಯಾವ ಅಪಾಯದಿಂದ ಕೂಡಿಲ್ಲ. ಆದರೆ ಅದನ್ನು ಮುಂದೆ ಚರ್ಚಿಸಬಹುದು. ಕಾನೂನು ಸಚಿವರು ಸೂಚಿಸಿದ **"ಕುಟುಂಬ"** ಪದವನ್ನು ಕೈಬಿಡಬೇಕು ಏಕೆಂದರೆ...

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿ ಎಲ್ಲಿದೆ?

**ಶ್ರೀ ಜೆ.ಆರ್. ಕಪೂರ್ :** ... ಕೇವಲ ಒಂದು ಕುಟುಂಬದಲ್ಲಿ ಮಾತ್ರ ಜಾರಿಯಲ್ಲಿರುವ ಸಂಪ್ರದಾಯಕ್ಕೆ ಅಧಿಕ ಮನ್ನಣೆ ನೀಡಲಾಗದು.

**ಡಾ. ದೇಶಮುಖ :** ಅದನ್ನು ಹಿಂದೂ ಲಾ ಈಗಾಗಲೇ ಅಂಗೀಕರಿಸಿದೆ.

**ಶ್ರೀ ಜೆ.ಆರ್. ಕಪೂರ್ :** ನಮ್ಮ ಉಪವಿಧಿಯಲ್ಲಿಯ ಪದಗಳೆಂದರೆ :

ಯಾವುದೇ "ಒಂದು ನಿಯಮಾವಳಿಯ ಮಹತ್ವವೆಂದರೆ, ಅದು ನಿರಂತರ ಹಾಗೂ ಏಕರೂಪದಿಂದ ಬಹುದಿನಗಳಿಂದ ಜಾರಿಯಲ್ಲಿದ್ದು ಕಾನೂನಿನ ಮಹತ್ವವನ್ನು ಹಲವು ಪ್ರದೇಶದಲ್ಲಿ ಹಿಂದೂ ಜನಾಂಗದ, ಸಮೂಹ, ಪಂಗಡ ಹಾಗೂ ಕುಟುಂಬದಲ್ಲಿ ಜಾರಿಯಲ್ಲಿದ್ದರೆ."

**ಮಾನ್ಯ ಉಪಸಭಾಧ್ಯಕ್ಷರು :** ಸದನಕ್ಕೆ ಈ ಮಾಹಿತಿಯ ಅರಿವಿದೆ. ಸನ್ಮಾನ್ಯರು ಈಗಾಗಲೇ ಹಲವಾರು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಆಗ ಅವರಿಗೆ ಈ ಪದಗಳನ್ನು ಕೈಬಿಡಬೇಕೆಂದು ಏಕೆ ಹೊಳೆಯಲಿಲ್ಲ. ಸದನದ ಸಮಯ ವ್ಯರ್ಥವಾಗಲಿಕ್ಕೆ ನಾನು ಆಸ್ಪದ ನೀಡುವುದಿಲ್ಲ.

**ಶ್ರೀ ಜೆ.ಆರ್. ಕಪೂರ್ :** ನಾನು ಯಾವ ತಿದ್ದುಪಡಿಯನ್ನೂ ಮಂಡಿಸುತ್ತಿಲ್ಲ. ನಾನು ಈ ವಿಧಿಯ ಒಂದು ಭಾಗವನ್ನು ಮಾತ್ರ ವಿರೋಧಿಸುತ್ತಿರುವೆ. ಈ ಅವಕಾಶಬಿಟ್ಟರೆ ನನಗೆ ಬೇರೆ ಅವಕಾಶವೇ ಇರಲಾರದು. ನನ್ನ ತಿದ್ದುಪಡಿಗಳ ಶೋಚನೀಯ ಪರಿಸ್ಥಿತಿ ಎಂದರೆ, ನನ್ನ ಯಾವುದೇ ತಿದ್ದುಪಡಿಗಳನ್ನು ಕಾನೂನು ಮಂತ್ರಿಗಳು ಸ್ವೀಕರಿಸದೆ ಇರುವುದು. ಆದುದರಿಂದ ತಿದ್ದುಪಡಿಗಳನ್ನು ಮಂಡಿಸುವುದರ ಬದಲಾಗಿ ಈ ಬಗೆಯ ಸೂಚನೆಗಳನ್ನು ಮಾಡಬೇಕೆಂದಿದ್ದೇನೆ. ಹೀಗಾಗಿ ಈ ವಿಷಯ ಹೆಚ್ಚೇನೂ ಹೇಳುವ ಬಯಕೆ ನನಗಿಲ್ಲ.

**ಶ್ರೀ ಶಿವಚರಣಲಾಲ್** (ಉ.ಪ್ರ) : ಯಾವ ತಿದ್ದುಪಡಿಗಳನ್ನು ಸ್ವೀಕರಿಸದೆ, ಮಸೂದೆಯನ್ನು ಈಗ ಹೇಗಿದೆಯೊ ಅದರಂತೆಯೆ ಅಂಗೀಕರಿಸಬೇಕು. ನ್ಯಾಯವಾದಿಗಳಾಗಿರುವ ಪಂಡಿತ ಠಾಕೂರ್ ದಾಸ್ ಭಾರ್ಗವರ ಧೋರಣೆ ನೋಡಿ ನನಗೆ ಆಶ್ಚರ್ಯವಾಗಿದೆ ಏಕೆಂದರೆ ಅವರು "ಸಾರ್ವಜನಿಕ ನೀತಿಗೆ ವಿರೋಧವಾದ" ಎಂಬ ಪದಗಳನ್ನು ಕೈಬಿಡಬೇಕೆಂದೆ ವಾದಿಸಿದ್ದಾರೆ. ಆದರೆ ಆ ಪದಗಳು ಅನಿವಾರ್ಯ

ಎಂದೇ ಹೇಳಬಯಸುವೆ. ಏಕೆಂದರೆ ಸಮಾಜ ಮುಂದುವರಿದಂತೆ ಸಾರ್ವಜನಿಕ ಅಭಿಪ್ರಾಯಕ್ಕೆ ಅಧಿಕ ಮಹತ್ವ ದೊರೆಯುತ್ತದೆ. ಸಂಪ್ರದಾಯ ಎಷ್ಟೇ ಪುರಾತನವಾಗಿದ್ದರೂ, ಅದು ಸಾರ್ವಜನಿಕ ನೀತಿಗೆ ವಿರೋಧವಾಗಿದ್ದರೆ ಅಂಗೀಕರಿಸಲೂಬಾರದು. ಅಲ್ಲಿ ಭಾರ್ಗವರ ಹೇಳಿಕೆಯಂತೆ "ಏಕರೂಪ" ಪದವನ್ನೂ ಕೈಬಿಡುವಂತೆ ಸೂಚಿಸಿದ್ದಾರೆ. ಅವರು ಈ ಪದವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಏಕೆಂದರೆ ಅದನ್ನು ಅವರು ಸಕಲರಿಗೂ ಅನ್ವಯಿಸಬಲ್ಲ ಎಂದೇ ತಿಳಿದಿದ್ದಾರೆ. ಆದರೆ ಅದು ಹಾಗಿರದೆ, ಸತತವಾಗಿ ಏಕರೂಪದಲ್ಲಿ ಯಾವ ಬದಲಾವಣೆಗೆ ಗುರಿಯಾಗದ ಎಂದೇ ತಿಳಿಯಬೇಕು. ಆದುದರಿಂದ 'ಏಕರೂಪ' ಪದವನ್ನು ಕೈ ಬಿಡಲಾಗದು. ಅವರು ಹೇಳುವಂತೆ ಕೇವಲ ನ್ಯಾಯಾಂಗ ಮನ್ನಿಸಿದ ಸಂಪ್ರದಾಯಗಳನ್ನು ಒಪ್ಪಬೇಕು ಎಂದಿದ್ದಾರೆ. ಅದೂ ಕೂಡಾ ಸರಿಯಲ್ಲ. ಹಲವಾರು ನ್ಯಾಯಾಂಗ ನಿರ್ಣಯಗಳು ಉತ್ತಮ ಕಾನೂನುಗಳೆಂದೆ ಭಾವಿಸಲಾಗದು. ಏಕೆಂದರೆ ಸಾರ್ವಜನಿಕ ಅಭಿಪ್ರಾಯ ಬದಲಾಗುತ್ತಲೆ ಇರುತ್ತದೆ. ಹೀಗಾಗಿ ಜನತೆಯು ಹಳೆಯ ಸಂಪ್ರದಾಯಗಳೆ ಮುಂದುವರಿಯಬೇಕೆಂದು ಆಶಿಸುವುದಿಲ್ಲ. ಆದರೆ ಕೆಲವು ಸಂಪ್ರದಾಯಗಳನ್ನು ಜನರು ಕೋರ್ಟಿಗೆ ಹೋಗದೆ ಅನುಸರಿಸುತ್ತಲೆ ಬಂದಿರುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಪಂಡಿತ ಠಾಕೂರ್ ದಾಸ್ ಭಾರ್ಗವರು ಮಂಡಿಸಿದ ತಿದ್ದುಪಡಿಗಳಿಗೆ ಆಸ್ಪದವೆ ಇಲ್ಲ ಎಂದೇ ಹೇಳಬೇಕಾಗಿದೆ.

ಝುಂಝುನವಾಲಾ ಅವರು 'ವರ್ಣ' ಸೇರ್ಪಡಿಸಬೇಕೆಂದು ತಮ್ಮ ತಿದ್ದುಪಡಿಯಲ್ಲಿ ಸೂಚಿಸಿದ್ದಾರೆ. ಆದರೆ 'ವರ್ಣ'ಗಳಿಗೆ ಸಂಬಂಧಿಸಿದಂತೆ ಯಾವ ಸಂಪ್ರದಾಯಗಳೂ ಜಾರಿಯಲ್ಲಿ ಇಲ್ಲ. ಏಕೆಂದರೆ ಸಂಪ್ರದಾಯಗಳು ಕೇವಲ ಕೆಲವು ಪ್ರದೇಶಗಳ ಜಾತಿ ಹಾಗೂ ಕುಟುಂಬಗಳಿಗೆ ಮಾತ್ರ ಅನ್ವಯಿಸಿವೆ. ನನಗೆ ತಿಳಿದಂತೆ ಯಾವ ನ್ಯಾಯಾಂಗವೂ 'ವರ್ಣ'ಗಳಿಗೆ ಸೇರಬಹುದಾದ ಸಂಪ್ರದಾಯಗಳನ್ನು ತಿಳಿಸಿಲ್ಲ; ಏಕೆಂದರೆ ಈ ಬಗೆಯ ವಿಷಯ ಯಾವ ನ್ಯಾಯಾಲಯದ ಮುಂದೆಯೂ ಪ್ರಸ್ತಾಪಕ್ಕೆ ಬಂದೇ ಇಲ್ಲ. ಶ್ರೀ ಶ್ಯಾಮನಂದನ ಸಹಾಯ್ ಅವರ ತಿದ್ದುಪಡಿಯಂತೆ ಎರಡು ಅಂಶಗಳನ್ನು ಕೈಬಿಡಬೇಕೆಂದಿದ್ದಾರೆ. ಆದರೆ ಆ ಅಂಶಗಳು ವಿಧೇಯಕದ ಜೀವಾಳಗಳೆ ಆಗಿವೆ. ಆದುದರಿಂದ, ಸರ್, ನಾವು ವಿಧಿ (೧) ಇದ್ದಂತೆಯೆ ಇರುವುದಕ್ಕೆ ಸಮ್ಮತಿಸದ್ದೇನೆ.

**ಶ್ರೀ ಬಿ.ಕೆ.ಪಿ ಸಿನ್ಹಾ :** ನನಗೆ ತಿಳಿದಂತೆ ಈ ವಿಧೇಯಕಕ್ಕೆ ಸೂಚಿಸಲಾದ ತಿದ್ದುಪಡಿಗಳು ಬಲಹೀನವಾಗಿವೆ. ಈ ವಿಧಿಯು, ಕಾನೂನು ಮಂತ್ರಿಯವರು ಮಂಡಿಸಿದ್ದು, ಅದು ತುಂಬಾ ಸರಳವಾಗಿದೆ; ಹಾಗೂ ಕಾನೂನನ್ನು ಪ್ರತಿಪಾದಿಸುತ್ತದೆ. ಆದರೂ ಟೀಕೆಕಾರರು 'ಏಕರೂಪ' ಹಾಗೂ 'ಸಾರ್ವಜನಿಕ ಧೋರಣೆಗೆ ವಿರೋಧ' ಪದಗಳ ಬಗೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಅವನ್ನು ಅನೇಕ ನ್ಯಾಯಾಲಯಗಳು ತಮ್ಮ ತೀರ್ಪಿನಲ್ಲಿ ಬೆಂಬಲಿಸಿವೆ. ಈ ದಿಶೆಯಲ್ಲಿ ಶ್ರೀ ಶ್ಯಾಮನಂದನ ಸಹಾಯ್ ಅವರು ಪ್ರಿವಿ ಕೌನ್ಸಿಲ್‌ನ ಪ್ರಕರಣವನ್ನೇ ಉದಾಹರಿಸಿದ್ದಾರೆ. ಆದರೆ ಅವರ ಗ್ರಹಿಕೆ ನನಗೆ ಅರ್ಥವಾಗುತ್ತಿಲ್ಲ. ನಾನು ತಪ್ಪಿರಬಹುದು. ಆದರೆ ಸಂಪ್ರದಾಯಗಳು ಸಾಮಾಜಿಕ, ಧಾರ್ಮಿಕ, ವ್ಯವಸಾಯ ಮತ್ತು ವಾಣಿಜ್ಯ ರಂಗಗಳಲ್ಲಿ ಬೇರೆಬೇರೆಯಾಗಿವೆ. ಸಾಮಾಜಿಕ ಹಾಗೂ ಧಾರ್ಮಿಕ ಸಂಪ್ರದಾಯಗಳು ಪರಸ್ಪರ ಬದಲಾಯಿಸಬಹುದು. ಏಕೆಂದರೆ, ಅವೆರಡರಲ್ಲಿ ಅಧಿಕ ವ್ಯತ್ಯಾಸಗಳಿಲ್ಲ. ಆದರೆ ವಾಣಿಜ್ಯ ಮತ್ತು ವ್ಯವಸಾಯದ ರಂಗದಲ್ಲಿ ಅದು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಸಂಪ್ರದಾಯ ಮತ್ತು ನಡವಳಿಕೆಗಳಲ್ಲಿಯ ವ್ಯತ್ಯಾಸವನ್ನು ಗುರುತಿಸಲಾಗಿದೆ. ಸಂಪ್ರದಾಯ ತಲೆತಲಾಂತರದಿಂದ ನಡೆದು ಬಂದ ವಿಷಯವಾಗಿದೆ. ಆದರೆ ನಡವಳಿಕೆ ಬೆಳವಣಿಗೆಯ ವಿಧಾನವಾಗಿದೆ. ಅದು ನೂತನ ಸಮಯಕ್ಕೆ ಸೇರಿದ್ದು. ಹೀಗಾಗಿ ನನಗೆ ತಿಳಿದಂತೆ ಪ್ರಿವಿ ಕೌನ್ಸಿಲ್‌ನ ನಿರ್ಣಯವು ವಾಣಿಜ್ಯ ವ್ಯವಸಾಯಗಳಿಗೆ ಸಂಬಂಧಿಸಿಲ್ಲ. ನನಗೆ ಕಂಡುಬಂದಂತೆ 'ಏಕರೂಪತೆ'ಯು ಸಂಪ್ರದಾಯವನ್ನು ವೀಕ್ಷಣೆಗೆ ಗುರಿಪಡಿಸುವ ದಂಡಮಾಪಕವಾಗಿದೆ ಎಂದೇ

ಹೇಳಬಹುದು. ಆದರೆ, ಸಾರ್ವಜನಿಕ ನೀತಿಯನ್ನು ಪ್ರಿವಿ ಕೌನ್ಸಿಲ್, ಪಟ್ನಾ ಮತ್ತು ಕಲಕತ್ತಾ ಕೋರ್ಟುಗಳು ಅನುಸರಿಸಿವೆ. ಈ ನ್ಯಾಯಾಲಯಗಳ ಹೇಳಿಕೆಯಂತೆ ಯಾವುದೇ ಸಂಪ್ರದಾಯ, ಸಾರ್ವಜನಿಕ ನೀತಿಗೆ ವಿರೋಧವಾಗಿದ್ದಲ್ಲಿ ಅದು ಊರ್ಜಿತವಲ್ಲ. ಈ ಬಗೆಗೆ ಕಾನೂನು ಸಚಿವರು ತಮ್ಮಿಂದ ಸೂಚಿಸಲಾದ ವಿಧಿಯಲ್ಲಿ ಕಾನೂನನ್ನು ಇದ್ದಂತೆಯೇ ಮಂಡಿಸಿದ್ದಾರೆ. ಅಲ್ಲವೆ ನಾವು ಪ್ರತಿಯೊಂದು ಬಗೆಯ ಸಂಪ್ರದಾಯಗಳಿಗೆ ಆಸ್ಪದ ನೀಡಿದಲ್ಲಿ ಶಾಸನದ ರಚನೆಯಾದರೂ ಏಕೆ ಬೇಕು. ಆಗ ದೇಶಾದ್ಯಂತ ಒಂದೇ ಕಾನೂನು ಇರಬೇಕೆಂಬ ಉದ್ದೇಶವೇ ಫಲಕಾರಿಯಾಗದು. ಎರಡನೆಯದಾಗಿ ಈ ಶಾಸನದ ಉದ್ದೇಶವೆಂದರೆ ದೇಶದ ಜನರಿಗೆ ಉಪಯೋಗವಾಗಬಲ್ಲ ಒಂದು ಶಾಸನವಿದ್ದಲ್ಲಿ ಅನೂಕೂಲವಾಗುವುದು. ಈ ಎಲ್ಲಾ ಕಾರಣಗಳಿಂದಾಗಿ ಈ ಶಾಸನವನ್ನು ಯಾವ ತಿದ್ದುಪಡಿಗಳಿಗೆ ಅವಕಾಶ ನೀಡದೆ, ಇದ್ದ ಸ್ಥಿತಿಯಲ್ಲಿಯೆ ಅಂಗೀಕರಿಸಬೇಕೆಂದೆ ಹೇಳುವೆ.

**ಮಾನ್ಯ ಉಪಸಭಾಧ್ಯಕ್ಷರು** : ನಾನು ಈಗ ಕಾನೂನು ಸಚಿವರನ್ನು ಕರೆಯುವೆ.

**ಬಾಬು ರಾಮನಾರಾಯಣ ಸಿಂಗ್** (ಬಿಹಾರ್) : ನಾನು ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿರುವೆ.

**ಮಾನ್ಯ ಉಪಸಭಾಧ್ಯಕ್ಷರು** : ಈ ಬಗ್ಗೆ ಸಾಕಷ್ಟು ಪ್ರಸ್ತಾಪಿಸಲಾಗಿಲ್ಲವೆ?

***ಶ್ರೀಭಟ್** (ಹಿಂದೀ ಭಾಷಣದ ಆಂಗ್ಲ ಭಾಷಾಂತರ) : ನನ್ನ ಒಂದು ತಿದ್ದುಪಡಿ ಇದೆ.

**ಮಾನ್ಯ ಉಪಸಭಾಧ್ಯಕ್ಷರು** : ತಮ್ಮ ತಿದ್ದುಪಡಿ ಏನು? ನಾನು ಅದಕ್ಕೆ ಅವಕಾಶ ನೀಡಿಲ್ಲ.

**ಶ್ರೀ ಭಟ್** : ತಾವು ಅವಕಾಶ ನೀಡಿದ್ದೀರಿ.

**ಮಾನ್ಯ ಉಪಸಭಾಧ್ಯಕ್ಷರು** : ಅದು ಕೇವಲ ಪದಗಳ ಬದಲಾಯಿಸುವ ಬಗೆಗೆ ಇದೆ. ಅದು ಆಕರ್ಷಣೀಯವಾದುದೇನೂ ಅಲ್ಲ.

**ಶ್ರೀ ಭಟ್** : ನಾನು ಅದನ್ನು ಕೇವಲ ಪದಗಳನ್ನು ಬದಲಾಯಿಸುವ ಉದ್ದೇಶದಿಂದಲ್ಲ. ನಾನು ಹೇಳಬಯಸುವ ವಿಷಯವನ್ನು ಪ್ರಸ್ತಾಪಿಸಲು ಬಯಸಿರುವೆ.

**ಬಾಬು ರಾಮನಾರಾಯಣ ಸಿಂಗ್** : ನಾನು ನಿಂತಿರುವೆ.

**ಮಾನ್ಯ ಉಪಸಭಾಧ್ಯಕ್ಷರು** : ಅದಕ್ಕೆ ನಾನೇನು ಮಾಡಲಿ.

**ಶ್ರೀ ವಿ. ಜಿ. ಗುಪ್ತ** (ಮದ್ರಾಸ್) : ಸರ್, ನಾನು ಭಾಷಣ ಮಾಡುವುದಿಲ್ಲ. ನನ್ನ ಒಂದು ಸಂಶಯ ನಿವಾರಿಸಬೇಕು.

**ಬಾಬು ರಾಮನಾರಾಯಣ ಸಿಂಗ್** : ತಾವು ತಮ್ಮ ದೃಷ್ಟಿಯನ್ನು ನನ್ನೆಡೆಗೆ ಬೀರಬೇಕು.

**ಮಾನ್ಯ ಉಪಸಭಾಧ್ಯಕ್ಷರು** : ಓರ್ವ ಸದಸ್ಯರು ಸದನದಲ್ಲಿ ಎದ್ದು ನಿಂತ ಮಾತ್ರಕ್ಕೆ ನಾನು ಅವರೆಡೆ ದೃಷ್ಟಿ ಬೀರಲೇಬೇಕೆಂದಿಲ್ಲ. ನನಗೆ ಚರ್ಚೆಯನ್ನು ನನ್ನದೇ ಆದ ರೀತಿಯಲ್ಲಿ ಜರುಗಿಸುವ ಆಸ್ಪದವಿದೆ; ಹೀಗಾಗಿ ನಾನು ಕೆಲವರನ್ನು ಕರೆಯಬಹುದು ಅಥವಾ ಬಿಡಲೂಬಹುದು. ಇನ್ನೂ ಅವಕಾಶವಿದೆ. ಪರಿಶೀಲಿಸೋಣ.

**ಡಾ. ಅಂಬೇಡ್ಕರ್** : ಒಂದೇ ಒಂದು ವಿಷಯವನ್ನು ವಿವರಿಸಲಿದೆ.

**ಶ್ರೀ ಭಟ್** : ನೀವು ನನಗೆ ಕಾಲಾವಕಾಶ ನೀಡಿರುವಿರಿ.

**ಮಾನ್ಯ ಉಪಸಭಾಧ್ಯಕ್ಷರು** : ಸರಿ, ನಾನು ಕಾನೂನು ಸಚಿವರಿಗೆ ಬೇರೆ ಅವಕಾಶ ಒದಗಿಸುವೆ. ಆದರೆ ಕೇವಲ ಸಾಮಾನ್ಯ ವಿಷಯ ತಮ್ಮ ತಿದ್ದುಪಡಿಯಲ್ಲಿದೆ.

---

* ಸಂ. ಚ. ಸಂಪುಟ XV, ಭಾಗ II ೨೧ ಸೆಪ್ಟೆಂಬರ್ ೧೯೫೧ ಪುಟ ೩೦೧೪–೫೪

**ಬಾಬು ರಾಮನಾರಾಯಣ ಸಿಂಗ್ :** ಸರ್, ತಾವು ಹೇಳಿರುವುದು ಸರಿಯಲ್ಲ, ಅದೊಂದು ಮಹತ್ವದ ವಿಷಯವೆ ಆಗಿದೆ.

**ಶ್ರೀ ಭಟ್ :** ನಾನು ಮಂಡಿಸುತ್ತಿರುವ ತಿದ್ದುಪಡಿ ಕೇವಲ ಬಾಯಿಮಾತಿನಿಂದ ಹೇಳಿದ್ದಲ್ಲ. ನಾನು ಹೇಳಬಯಸುವ ವಿಷಯ ಬಹುಶಃ ಕಾನೂನು ಸಚಿವರಿಗೆ ಒಪ್ಪಿಗೆಯಾಗಲಾರದು; ಏಕೆಂದರೆ ಅವರು ತಮ್ಮ ನಿಲುವನ್ನು ಬದಲಾಯಿಸಲು ಸಿದ್ಧರಿಲ್ಲ. ಆದರೆ ನ್ಯಾಯವಾದಿಯಾದ ನಾನು ಅವರನ್ನು ಒಪ್ಪಿಸಲೇಬೇಕೆಂಬುದೇನೂ ಇಲ್ಲ. ಆದರೆ ಅವರ ಗಮನ ಸೆಳೆದು ಅವರು ಸೂಚಿಸಿದ ತಿದ್ದುಪಡಿಯಲ್ಲಿರುವ ದೋಷಗಳನ್ನು ಎತ್ತಿತೋರಿಸುವೆ.

ಮೊದಲನೆಯದೆಂದರೆ ಅವರು ಈ ವ್ಯಾಖ್ಯೆಯಲ್ಲಿ ಪ್ರಯೋಗಿಸಿದ "ಸಂಪ್ರದಾಯ, ನಡವಳಿಕೆ" ಪದಗಳು ಅಸಮರ್ಥ ಹಾಗೂ ಅಪೂರ್ಣವಾಗಿವೆ. ಈ ಬಗೆಗೆ ಅವರೇ ಆಲೋಚಿಸಿದರೆ, ಇನ್ನೂ ಹಲವು ಪದಗಳಿರಬೇಕು ಎಂಬ ನಿರ್ಣಯಕ್ಕೆ ಅವರೇ ಬರುತ್ತಾರೆ. "ಸಂಪ್ರದಾಯ ಮತ್ತು ನಡವಳಿಕೆ" ಎಂದರೆ ಪರಂಪರೆ, ಪದ್ಧತಿಗಳೆಂದೇ ಅರ್ಥ. ಹೀಗಾಗಿ ಅವರು ಹೇಳಿದ ವ್ಯಾಖ್ಯೆ ನಾಲ್ಕು ಪ್ರಮುಖ ಗುಣಗಳಿಂದ ಕೂಡಿದೆ. ನಿತ್ಯ ಆಚರಣೆಯಲ್ಲಿರುವ, ಏಕರೂಪದ, ನಿಖರವಾದ ಹಾಗೂ ಸಾರ್ವಜನಿಕ ನೀತಿಗೆ ವಿರೋಧವಾಗಿರದ. ಅದರ ಬದಲಾಗಿ ನಾನು ಅದೇ ಉದ್ದೇಶ ಹೊಂದಿದ ಒಂದು ಸರಳ ವ್ಯಾಖ್ಯೆಯನ್ನು ನೀಡಬಯಸುವೆ. ಆದರೆ ಅವರು ಏಕರೂಪತೆಯನ್ನು ಹೇಳಿದ್ದಾರೆ. ಈ ಏಕರೂಪತೆ ಎಂದರೇನು? ವಿವಿಧ ಜಾತಿಗಳು, ವಿವಿಧ ಪದ್ಧತಿಗಳನ್ನು ಹೊಂದಿವೆ. ಅಲ್ಲದೆ ನೂರು ಹಳ್ಳಿಗಳಿಗೆ ಹಬ್ಬಿದ ಒಂದೇ ಜಾತಿಯು ವಿವಿಧ ಸಂಪ್ರದಾಯಗಳನ್ನು ಹಾಗೂ ಪದ್ಧತಿಗಳನ್ನು ಹೊಂದಿರುವುದನ್ನು ಬೇರೆ ಬೇರೆ ಗುಂಪುಗಳಿಂದ, ರಿಯಾಯಿತಿಗಳನ್ನು ಹೊಂದಿರುವಾಗ ಒಂದೊಂದು ಪ್ರದೇಶ ಒಂದು ರೂಪವನ್ನು ಪಡೆದಾಗ ಈ ಏಕರೂಪತೆ ಪದವು ವಿವಾದಕ್ಕೆ ಆಸ್ಪದ ನೀಡುತ್ತದೆ. ಅದು ಕೇವಲ ನ್ಯಾಯವಾದಿಗಳಿಗೆ ಗ್ರಾಸವಾಗುವುದರಿಂದ, ಆ ಪದಗಳನ್ನು ಕೈಬಿಡುವುದೇ ಸೂಕ್ತ.

ಯಾವುದೇ ಒಂದು ಸಮೂಹ ಅಥವಾ ಸಮುದಾಯ ಏನಾದರೂ ಬದಲಾವಣೆ ತನ್ನ ನಡವಳಿಕೆಯಲ್ಲಿ ಮಾಡಿದ್ದೇ ಆದರೆ ಅದು ರೂ. ೫೦ ದಂಡ ತೆರಬೇಕಾಗುತ್ತದೆ. ಆದರೆ ಇಂದಿನ ದಿನಗಳಲ್ಲಿ ರೂ ೫೦ ಮಹಾಮೊತ್ತವೇನೂ ಅಲ್ಲ. ಆದುದರಿಂದ ದಂಡ ನಾವು ಎಣಿಸಿದ ಪ್ರಭಾವವನ್ನೇ ಬೀರಲಾರದು ಅದನ್ನು ರೂ. ನೂರೆಂದು ಘೋಷಿಸಿದರೆ ಅದು ಏಕರೂಪತೆ ಎಂದಾಗದು. ಪರಿಸ್ಥಿತಿ ಹೀಗಿದ್ದಾಗ ಏಕರೂಪತೆ ಎಂದರೇನು?

ನಾನು ಕಾನೂನು ಎಂದರೇನು? ಎಂಬುದನ್ನು ಸಂವಿಧಾನದ ೧೩ನೇ ಅನುಚ್ಛೇದದಲ್ಲಿ ಹೇಗೆ ವಿವರಿಸಲಾಗಿದೆ ಎಂಬುದನ್ನು ಹೇಳಬಯಸುವೆ.

"ಕಾನೂನು ಎಂದರೆ" ಸುಗ್ರೀವಾಜ್ಞೆ, ಆಜ್ಞೆಗಳು, ಉಪಶಾಸನಗಳು, ನಿಯಮಾವಳಿ ಪ್ರಕಟಣೆಗಳು, ಸಂಪ್ರದಾಯ ಅಥವಾ ಪದ್ಧತಿಗಳು ಭಾರತೀಯ ಪ್ರದೇಶದಲ್ಲಿ ಜಾರಿಯಲ್ಲಿದ್ದು ಕಾನೂನಿನ ಬಲ ಪಡೆದವುಗಳನ್ನೇ ಕಾನೂನು ಎಂದು ಭಾವಿಸಬೇಕು. ಇಲ್ಲಿ ಭಾರತೀಯ ಪ್ರದೇಶ ಎಂದರೆ ಒಂದೇ ಸಂಪ್ರದಾಯಕ್ಕೆ ಒಳಗಾದ ಭಾರತ ಎಂದು ಭಾವಿಸಲಾಗದು. ಕೇವಲ ಒಂದೇ ಕಾನೂನಿನಂತೆ ಎಂದು ಭಾವಿಸಬಾರದು. ಏಕೆಂದರೆ ಭಾರತದಲ್ಲಿ ವಿವಿಧ ರಾಜ್ಯಗಳಿಗನುಗುಣವಾಗಿ ಶಾಸನಗಳನ್ನು ರಚಿಸಲಾಗಿದೆ.

'ಜಾರಿಯಲ್ಲಿರುವ ಕಾಯ್ದೆ' ಎಂದರೇನು ಎಂಬುದನ್ನು ನಾನು ಹೇಳಬಯಸುವೆ. ಈ ವಿವರಣೆಯಿಂದ ಬದಲಾಯಿಸುವ ಹಾಗೂ ಏಕರೂಪತೆಯನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ.

'ಜಾರಿಯಲ್ಲಿರುವ ಕಾಯ್ದೆಯು, ಶಾಸಕಾಂಗದಿಂದ ಮಾಡಿದ ಶಾಸನಗಳು ಅಥವಾ ಬೇರೆ ನಿಗದಿತ ಅಧಿಕಾರ ಹೊಂದಿರುವ ಸಂಸ್ಥೆಗಳು, ಭಾರತ ಸಂವಿಧಾನ ಜಾರಿಗೆ ಬರುವ ಮುನ್ನ ಭಾರತೀಯ ಪ್ರದೇಶದಲ್ಲಿದ್ದು,

ನಂತರ ಸಂವಿಧಾನ ಅದನ್ನು ರದ್ದುಪಡಿಸಿದ್ದಲ್ಲಿ ಅಂತಹ ಶಾಸನಗಳು ಜಾರಿಯಲ್ಲಿರಲಾರವು."

ಆದುದರಿಂದ "ಏಕರೂಪತೆ" ಪದಪ್ರಯೋಗವು ವಿವಾದಾತ್ಮಕವಾಗಿರುವುದರಿಂದ ಅದನ್ನು ಕೈಬಿಟ್ಟಲ್ಲಿ ಏನೂ ಹಾನಿಯಾಗಲಾರದು. ಸಂಪ್ರದಾಯ ಎಂದರೇನು? ನಾವೆಲ್ಲರೂ ಸುಶಿಕ್ಷಿತರು. 'ಸಂಪ್ರದಾಯ' ಎಂದರೆ ನಮಗೆ ಅರ್ಥವಾಗದೆ? ಅದೊಂದು ಕಾಲಕಾಲಕ್ಕೆ ಅಂದರೆ ಹಿರಿಯ ತಲೆಮಾರಿನಿಂದ ಜಾರಿಯಲ್ಲಿರುವ ಸಂಪ್ರದಾಯ. ಈ ದಿಶೆಯಲ್ಲಿ ನಿನ್ನೆಯ ದಿನದವರೆಗೂ ಜಾರಿಯಲ್ಲಿದ್ದು, ಈ ದಿನ ಬದಲಾಯಿಸಿದ್ದಲ್ಲಿ ಅದನ್ನು ನಾವು ಸಂಪ್ರದಾಯವೆಂದು ಹೇಳಲಾಗುವುದೆ? ಆದುದರಿಂದ "ಸಂಪ್ರದಾಯ" ಪದದಿಂದ ಜನತೆಗೆ ಏನಾದರೂ ಲಭಿಸಲಿದ್ದರೆ ಅದನ್ನು ಮುಂದುವರೆಸಿಕೊಂಡು ಹೋಗಬಹುದಲ್ಲವೆ?

ಕಾನೂನಿನ ಪದಕೋಶದಲ್ಲಿ ಸಂಪ್ರದಾಯದ ವ್ಯಾಖ್ಯೆಯನ್ನು ಹೀಗೆ ತಿಳಿಸಲಾಗಿದೆ. "ಅದೊಂದು ಸತತವಾಗಿ ಜಾರಿಯಲ್ಲಿದ್ದು, ಶಾಂತ ಹಾಗೂ ಸಕಾರಣದಿಂದ ಕೂಡಿದ್ದು, ಯಾರೇ ಅದರ ವಿರೋಧವಾಗಿ ನಡೆದುಕೊಳ್ಳದೇ ಇರುವ ವ್ಯವಸ್ಥೆ."

"ಅದು ಮುಂದುವರಿಯುತ್ತ, ಶಾಂತಿಯುತ, ಸಕಾರಣ, ನಿಖರ ಮತ್ತು ಕಡ್ಡಾಯವಾಗಿದ್ದು, ಯಾರ ಮನಸ್ಸಿನಂತೆ ಬದಲಾಯಿಸಲಾಗದ, ಇತರ ಸಂಪ್ರದಾಯಗಳ ಸಂಪರ್ಕಹೊಂದಿ ಒಂದಕ್ಕೊಂದು ವಿರೋಧವಾಗಿರದ ವ್ಯವಸ್ಥೆ."

ಈ ಎಲ್ಲ ಸಂಗತಿ ಗಣನೆಗೆ ತೆಗೆದುಕೊಂಡಾಗ ನಾನು ಸೂಚಿಸುವ "ಸತತ" ಎಂಬ ಪದವು ಆಚರಣೆಯಲ್ಲಿರುವ "ಪದಕ್ಕೆ" ಸಮಾನವಾಗಿರುತ್ತದೆ. ಇದೊಂದು ಸರಿಯಾದ ಪದಪ್ರಯೋಗ. ಆಂಗ್ಲಭಾಷೆಯಲ್ಲಿ ದೊರೆಯಬಹುದಾದ ಅರ್ಥವನ್ನು ಅರಿತೇ ನಾನು "ಬಹುಕಾಲದಿಂದ ಆಚರಣೆಯಲ್ಲಿರುವ" ಪದವನ್ನು ಪ್ರಯೋಗಿಸಿರುವೆ.

ಎರಡನೆಯದಾಗಿ, ನಾನು ಹೇಳಿದ ಸಂಗತಿ ಎಂದರೆ, "ಯಾವುದನ್ನು ಕಾನೂನಿನಂತೆ ಪರಿಪಾಲಿಸಲಾಗಿದೆಯೋ" ಇದೊಂದು ಸರಳವಾದ ವಿಷಯ. ಏಕೆಂದರೆ ಯಾವುದನ್ನು ಅಂಗೀಕರಿಸಲಾಗಿದೆಯೋ ಅದೊಂದು ಗುರುತಿಸಲಾದ ಸಂಪ್ರದಾಯವಾಗುತ್ತದೆ.

ಮೂರನೆಯದಾಗಿ; ನಾನು ಪರಿಗಣಿಸಿರುವುದೆಂದರೆ "ಸಾರ್ವಜನಿಕ ನೀತಿ" ಅಥವಾ "ಸಾರ್ವಜನಿಕ ನೈತಿಕತೆ" ನನಗೆ ತಿಳಿಯದೆಹೋಗಿರುವ ವಿಷಯವೆಂದರೆ ಈಗ ನಾವು ಕೈಗೆತ್ತಿಕೊಂಡಿರುವ ಧೋರಣೆಯಲ್ಲಿ "ಸಾರ್ವಜನಿಕ" ಪದ ಬೇಕೆ? ನೀವು ಹೇಳುವಂತೆ ಕೇವಲ ಮನ್ನಣೆ ಪಡೆದ ಸಂಪ್ರದಾಯಗಳನ್ನೆ ಪರಿಗಣಿಸಲಾಗುವುದು ಎಂದಾಗ "ಸಾರ್ವಜನಿಕ ನೀತಿ"ಗೆ ವಿರುದ್ಧವಾದ ಸಂಪ್ರದಾಯದ ಪ್ರಶ್ನೆ ಎಲ್ಲಿದೆ? ಹಾಗೂ ಅದರ ಅರ್ಥವೇನು? ಯಾರೋ ಓರ್ವ ನ್ಯಾಯಾಧೀಶ ಅಥವಾ ನ್ಯಾಯವಾದಿ ಕೈಬಿಟ್ಟ ಪದಕ್ಕೆ ನಾವು ಹೋರಾಟ ನಡೆಸುತ್ತಿರುವುದು ಶೋಚನೀಯ ಅಥವಾ ಸೋಜಿಗದ ಸಂಗತಿ ಎಂದೇ ನನ್ನ ಭಾವನೆಯಾಗಿದ್ದು ಆ ಪದಗಳ ಪ್ರಯೋಗವನ್ನೇ ಕೈಬಿಡಬೇಕು.

ಈಗ ನಾನು ಜಾತಿ ಮತ್ತು ಉಪಜಾತಿಗಳ ಬಗೆಗೆ ಪ್ರಸ್ತಾಪಿಸುವೆ. ಇವು ನನ್ನ ಪದಗಳಲ್ಲ. ಈ ಪದಗಳನ್ನು ಸಂವಿಧಾನದ ೧೫ ಹಾಗೂ ೧೬ನೇ ಅನುಚ್ಛೇದಗಳಲ್ಲಿ ಬಳಸಲಾಗಿದೆ. ನಾವು ನಿನ್ನೆಯ ದಿನ ಕಲಮು ೨ರಲ್ಲಿ "ಸಮುದಾಯ" ಪದ ಬಳಸಿರುವೆವು. ನಾವು ಸಂವಿಧಾನದಲ್ಲಿ ಸಮುದಾಯಕ್ಕೆ ಬದಲಾಗಿ ಜಾತಿ ಪದವನ್ನು ಬಳಸಿದ್ದೇವೆ. ಆದುದರಿಂದ ಜಾತಿ–ಉಪಜಾತಿ ಪದ ಪ್ರಯೋಗವೇ 'ಸಮುದಾಯ'ಕ್ಕಿಂತ ಸೂಕ್ತ. ಹೀಗೆಂದಾಗ ನಿನ್ನೆ ತಾನೇ ಜಾರಿಗೊಳಿಸಿದ ಸಮುದಾಯ ಪದವನ್ನು ಕೈಬಿಡಬೇಕೆಂಬುದು ನನ್ನ ವಾದವಾಗಿರದೇ, ಅದರೊಂದಿಗೆ ಜಾತಿ–ಉಪಜಾತಿಯನ್ನು ಸೇರ್ಪಡಿಸುವುದು ಸೂಕ್ತ ಎಂದು ಹೇಳಬಯಸುವೆ.

ಈ ಪದಗಳ ಸೇರ್ಪಡೆಯಿಂದ ನನ್ನ ತಿದ್ದುಪಡಿಯನ್ನು ಮಂಡಿಸುವೆ. ಆದರೆ ಇದನ್ನು ಒಪ್ಪಲಾಗುವುದೇ ಎಂಬುದರ ಬಗೆಗೆ ನನಗೆ ಸಂದೇಹ. ಏನೇ ಆಗಲಿ ಕಾನೂನು ಸಚಿವರು ಇದರ ಬಗೆಗೆ ಯೋಚಿಸಲಿ.

**ಬಾಬು ರಾಮನಾರಾಯಣ ಸಿಂಗ್** (ಹಿಂದಿ ಭಾಷಣದ ಆಂಗ್ಲ ಭಾಷಾಂತರ): ಸರ್, ತಾವು ಈ ವಿಷಯದ ಬಗೆಗೆ ತೆಗೆದುಕೊಂಡಿರುವ ನಿರ್ಧಾರವು ಸೂಕ್ತ ಹಾಗೂ ಎಲ್ಲರೂ ಒಪ್ಪುವಂತಹದ್ದೇ ಆಗಿದೆ ಎಂದೇ ನಾನು ಹೇಳಬಯಸುವೆ. ಆದರೆ ಕೆಲವೊಮ್ಮೆ ತಮ್ಮ ಶೀಘ್ರ ಹಾಗೂ ಆತುರದ ನಿರ್ಣಯಗಳು ನಮಗೆ ಚಿವುಟಿದಂತಾಗುತ್ತದೆ. ಆದುದರಿಂದ ತಾವು ಆತುರ ನಿರ್ಣಯ ತೆಗೆದುಕೊಳ್ಳಬಾರದೆಂದೆ ನಾನು ತಮ್ಮನ್ನು ಕೋರುವೆ. ಅಲ್ಲದೆ ಈ ಬಗೆಗೆ ಅಧಿಕ ಚರ್ಚೆಯಾಗಿದೆ ಎಂಬುದನ್ನು ನಾನು ಒಪ್ಪುವುದಿಲ್ಲ ಅದಕ್ಕೆಂದೆ ನಾನು ಎದ್ದು ನಿಂತರೂ ತಾವು ನನ್ನೆಡೆ ಗಮನ ಹರಿಸಲಿಲ್ಲ.

**ಶ್ರೀ. ವಿ. ಜಿ. ಗುಪ್ತ :** ನನಗೆ ಒಂದು ಸಂಶಯ. ಅದನ್ನು ದಯಮಾಡಿ ನಿವಾರಿಸಬೇಕು. ಅದೇನೆಂದರೆ ವ್ಯಾಖ್ಯೆಯಲ್ಲಿ "ಸಂಪ್ರದಾಯ" ಮತ್ತು "ಪದ್ಧತಿ" ಪದಗಳು ಸೂಚಿಸುವಂತೆ ಅವು ಸತತವಾಗಿ ಮತ್ತು ಏಕರೂಪದಿಂದ, ಬಹುದಿನಗಳಿಂದಲೂ ಹಿಂದೂ ಕುಟುಂಬ ಹಾಗೂ ಪಂಗಡಗಳಲ್ಲಿ ಆಚರಣೆಯಲ್ಲಿವೆ ಮತ್ತು ಕಾನೂನಿನ ಬೆಂಬಲ ಪಡೆದಿವೆ ಎನ್ನಲಾಗಿದೆ. ಆದರೆ ತಮಗೆ ತಿಳಿದಿರುವಂತೆ ನಮ್ಮ ಭಾಗದಲ್ಲಿ ಸೋದರಮಾವನ ಮಗಳೊಂದಿಗೆ ವಿವಾಹವಾಗುವ ಆಚರಣೆ ಅನೇಕ ಸಮುದಾಯಗಳಲ್ಲಿದೆ. ಇದೊಂದು ಸಾಮಾನ್ಯ ಪದ್ಧತಿ. ಆದರೆ ಅದು ಸದಾ ಹಾಗೂ ಸತತವಾಗಿ ಆಚರಿಸಲಾಗುವುದು ಎಂದು ಹೇಳಲಾಗದು.

**ಮಾನ್ಯ ಉಪಸಭಾಧ್ಯಕ್ಷರು :** ತಾವು ಅಧ್ಯಾಯವನ್ನು ಸಂಪೂರ್ಣವಾಗಿ ಓದಬೇಕು. ಅದರಲ್ಲಿ ವಿಶೇಷ ಅಪವಾದವನ್ನು ಕಲ್ಪಿಸಿದೆ.

**ಶ್ರೀ. ವಿ. ಜಿ. ಗುಪ್ತ :** ಮುಂದುವರಿದು ವ್ಯಾಖ್ಯೆಯಲ್ಲಿ "ಸಾರ್ವಜನಿಕ ನೀತಿ ವಿರೋಧ"ವಾದ ಎಂಬ ಪದವನ್ನು ಬಳಸಲಾಗಿದೆ. ಯಾವುದೇ ಒಂದು ಪ್ರದೇಶದ ಜನತೆ ಆಚರಿಸುವ ವಿಚಾರಗಳನ್ನೇ ಸಂಪ್ರದಾಯ ಎನ್ನಲಾಗುವುದು. ಹೀಗೆ ಯಾವ ವಿರೋಧವೇ ಇರದಂತೆ ಸಾರ್ವತ್ರಿಕವಾಗಿ ಜನತೆ ಆಚರಿಸುವಾಗ ವಿರೋಧವೆಲ್ಲಿದೆ?

**ಡಾ. ದೇಶಮುಖ :** ನಾನು ಅದನ್ನು ವಿರೋಧಿಸುವೆ.

**ಮಾನ್ಯ ಉಪಸಭಾಧ್ಯಕ್ಷರು :** ತಾವು ಅದರ ವಿರುದ್ಧ ಮತ ಚಲಾಯಿಸಿ.

**ಬಾಬು ರಾಮನಾರಾಯಣ ಸಿಂಗ್ :** ನಾನೂ ಅದರ ಬಗೆಗೆ ಮಾತನಾಡಬೇಕೆಂದಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ತಿಳಿದಂತೆ ಮಾನ್ಯ ಸದಸ್ಯರು ಮಾತನಾಡಲು ಬಯಸಿರುವರು. ಆದರೆ ನಾನು ಸದನವನ್ನು ಗಮನಿಸಿದ ನಂತರ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಎಂದೇ ನನಗೆ ಮನವರಿಕೆಯಾಗಿದೆ. ಆದುದರಿಂದ ಶಿಷ್ಟಾಚಾರದಂತೆ ಯಾರಾದರೂ ಈ ವಿಷಯದ ಚರ್ಚೆಯ ಬಗೆಗೆ ಮಂಡನೆ ಮಾಡಿದಲ್ಲಿ ನಾನು ಅದನ್ನು ಸದನದಲ್ಲಿ ಸ್ವೀಕರಿಸಲಾಗಿದೆ ಎಂದೇ ಹೇಳಬಯಸುವೆ.

**ಶ್ರೀ ಸಂತಾನಂ :** ಸರ್, ಪ್ರಶ್ನೆ ಎಂದರೆ:

**ಮಾನ್ಯ ಉಪಸಭಾಧ್ಯಕ್ಷರು :** ಈಗ ಪ್ರಶ್ನೆ ಎಂದರೆ:

ನಿಲುವಳಿಯನ್ನು ಅಂಗೀಕರಿಸಿದೆ.

**ಬಾಬು ರಾಮನಾರಾಯಣ ಸಿಂಗ್ :** ಅವರ ಧ್ವನಿಗಿಂತ ನನ್ನ ಧ್ವನಿ ಅಧಿಕವಾಗಿದೆ.

**ಡಾ. ಅಂಬೇಡ್ಕರ್ :** ನಾನು ಹಿಂದೆಯೇ, ಈ ವಿಷಯದ ಬಗೆಗೆ ಸಾಕಷ್ಟು ಚರ್ಚಿಸಿರುವೆ. ಆದುದರಿಂದ "ಸಂಪ್ರದಾಯ" ಪದದ ಬಗೆಗೆ ಯಾವ ತಿದ್ದುಪಡಿಯನ್ನು ನಾನು ಒಪ್ಪಲಾರೆ. ಏಕೆಂದರೆ ನಾನು ಪ್ರಯೋಗಿಸಿರುವ

ಪದ ನ್ಯಾಯಾಂಗ ನಿರ್ಣಯಗಳಿಂದ ಪಡೆದ ಪದವಾಗಿದೆ. ಇದು ಕೇವಲ ನಮ್ಮ ದೇಶಕ್ಕೆ ಸಂಬಂಧಿಸಿರದೇ ಪ್ರಪಂಚದ ಅನೇಕ ನ್ಯಾಯಾಂಗಗಳು ಈ ಪದವನ್ನು ಬಳಸಿವೆ. ಆದುದರಿಂದ ಅದನ್ನು ಬದಲಾಯಿಸುವ ಪ್ರಮೇಯವೇ ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ:

ಕಲಮು ೩ರಲ್ಲಿ ಪದಗಳ ಯಾವುದೇ ವಿಷಯದ "ಅಸಹನೀಯ ಹಾಗೂ ಅಸಂಗತವಾಗಿ" ಪದಗಳನ್ನು ಬದಲಾಯಿಸಿ "ಸಂದರ್ಭಕ್ಕೆ ಸೂಕ್ತ" ಸೇರ್ಪಡಿಸಬೇಕು.

ನಿಲುವಳಿ ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ:

ಕಲಮು ೩ರಲ್ಲಿ ಸೂಚಿಸಿದ ವಿಷಯಗಳ (I), (II), (III) ಮತ್ತು (IV) ಗಳನ್ನು (II), (III), (IV), (V) ಎಂದು ಬದಲಾಯಿಸುವುದು ಮತ್ತು ಈ ಕೆಳಗೆ ಕಾಣಿಸಲಾದ (I) ವಿಷಯ ಅಂದರೆ: "(I)" ಅಳಿಯ ಸಂತಾನ ಕಾಯ್ದೆ" ಎಂದರೆ, ಈ ಶಾಸನ ಅಂಗೀಕರಿಸದೆ ಇದ್ದಾಗ ಅವರು ಮದ್ರಾಸಿನ "ಅಳಿಯ ಸಂತಾನ" ಕಾಯ್ದೆಗೆ ೧೯೪೯ ಒಳಪಟ್ಟಿದ್ದರು (ಮದ್ರಾಸ್ ಕಾನೂನು (IX ೧೯೪೯)

ನಿಲುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ವಿಷಯಗಳಿಗೆ ಪುನರಂಕಿಗಳನ್ನು ನೀಡಿರುವುದರಿಂದ ಹಿಂದಿನ ಎಲ್ಲಾ ತಿದ್ದುಪಡಿಗಳು (I) ಈಗಿನ (II)ಕ್ಕೆ ಅನ್ವಯಿಸುವುದು. ನಾನು ಈಗ ಅವನ್ನು ಕ್ರಮವಾಗಿ ಸದನದ ಮುಂದೆ ಇಡುವೆ.

**ಪ್ರಶ್ನೆ ಎಂದರೆ :** ಭಾಗ (I)ನ್ನು ಈಗ (II) ಎಂದು ಪರಿಗಣಿಸಲಾಗಿದೆ. ಹೀಗಾಗಿ "ಹಿಂದೂಗಳಲ್ಲಿ" ಎಂಬ ಪದವನ್ನು ಬದಲಾಯಿಸಿ ಈ ಶಾಸನ ಅನ್ವಯಿಸುವವರಿಗೆಲ್ಲಾ ಸೇರಿಸಬೇಕು.

ನಿಲುವಳಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ:

ಭಾಗ (I) ಈಗ ೩ನೆಯ ವಿಧಿಯ ಭಾಗ (II) ಎಂದು ಸಂಖ್ಯೆಯನ್ನು ನೀಡಿರುವುದರಿಂದ (ಎ) "ಗುಂಪು ಅಥವಾ ಕುಟುಂಬ" ಪದಗಳ ನಂತರ ನಾಲ್ಕನೆಯ ಪಂಕ್ತಿಯಲ್ಲಿ ಕೆಳಗಿನದನ್ನು ಸೇರ್ಪಡಿಸಬೇಕು.

ಯಾವುದೇ ನಿಯಮಾವಳಿ ಸೂಕ್ತವಾಗಿದ್ದಲ್ಲಿ ಹಾಗೂ ನ್ಯಾಯಾಂಗದಿಂದ ಮನ್ನಣೆ ಪಡೆದಿದ್ದು ಪ್ರಾದೇಶಿಕ ಪಂಗಡ, ಸಮುದಾಯ, ಗುಂಪು ಅಥವಾ ಕುಟುಂಬಕ್ಕೆ ಬಂಧನಕಾರಿ. ಮತ್ತು (ಬಿ) ಮೊದಲನೆಯ ವಿಷಯ ಕೈಬಿಡಬೇಕು.

ನಿಲುವಳಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ:

ಭಾಗ (I) ಈಗ ಭಾಗ (II) ಎಂಬ ಅಂಕಿಯನ್ನು ಹೊಂದಿದ್ದು "ಪಂಗಡ" ಪದದ ಬದಲಾಗಿ "ವರ್ಣ" ಪದ ಸೇರಿಸಬೇಕು.

ನಿಲುವಳಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ೪೧೩ನೆಯ ತಿದ್ದುಪಡಿಯನ್ನು ನಿರಾಕರಿಸಿರುವುದರಿಂದ ೪೧೪ನೇ ತಿದ್ದುಪಡಿ ಉದ್ಭವಿಸಲಾರದು.

ಪ್ರಶ್ನೆ ಎಂದರೆ:

ಭಾಗ (I) ಈಗ ಭಾಗ (II) ಎಂದಿರುವಲ್ಲಿ ಅಡಕವಾಗಿರುವ ವಿಷಯ ಕೈಬಿಡಬೇಕು.

ನಿಲುವಳಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು** : ಪ್ರಶ್ನೆ ಎಂದರೆ:

ಭಾಗ(I)ನ್ನು ಭಾಗ (II) ಎಂದು ಪರಿಗಣಿಸಿರುವುದರಿಂದ ವಿಧಿಯಲ್ಲಿ ಕೆಳಗಿನದನ್ನು ಸೇರ್ಪಡಿಸಬೇಕು.

**"ಸಂಪ್ರದಾಯ"** ಮತ್ತು **"ಪದ್ಧತಿ"** ಪದಗಳು ಯಾವುದೇ ಒಂದು ನಿಯಮ ಬಹುಕಾಲದಿಂದ ಹಿಂದೂ ಜನಾಂಗದಲ್ಲಿ, ಯಾವುದೇ ಪ್ರದೇಶದ ಜಾತಿ, ಉಪಜಾತಿ, ಪಂಗಡ, ಸಮುದಾಯಗಳಲ್ಲಿ ಜಾರಿಯಲ್ಲಿದ್ದು, ಕಾನೂನಿನ ಮಹತ್ವವನ್ನು ಪಡೆದುಕೊಂಡು ಪ್ರಮುಖವಾಗಿರುವ; ಆದರೂ, ಈ ನಿಯಮ ನಿಖರ ಮತ್ತು ಸೂಕ್ತವಾಗಿದ್ದಲ್ಲಿ ಮತ್ತು ಈ ನಿಯಮ ಕೇವಲ ಒಂದು ಕುಟುಂಬದಲ್ಲಿ ಜಾರಿಯಲ್ಲಿದ್ದರೆ**"**

ನಿಲುವಳಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು** : ಪ್ರಶ್ನೆ ಎಂದರೆ:

ಭಾಗ (I) ವಿಧಿ ೩(II) ಎಂದೇ ಅಂಕಿಯನ್ನು ನೀಡಿರುವುದರಿಂದ ಬಿಲ್ಲಿನ ಆ ಭಾಗ ನಿಲುವಳಿಯನ್ನು ಅನುಮೋದಿಸಲಾಗಿದೆ.

**ಶ್ರೀ ನಜೀರುದ್ದೀನ್ ಅಹಮದ್** : ನಂ ೩೭೭ ಭಾಗ (II)ಕ್ಕೆ ಸಂಬಂಧಿಸಿದಂತೆ ನನ್ನದೊಂದು ತಿದ್ದುಪಡಿಯಿದೆ.

**ಡಾ. ಅಂಬೇಡ್ಕರ್** : ನಾನು ಈ ಸಮಯದಲ್ಲಿ ಒಂದು ಸಲಹೆಯನ್ನು ಹೇಳಬಯಸುವೆ. ಏಕೆಂದರೆ ಅದರಿಂದ ಶ್ರಮ ಕಡಿಮೆಯಾಗುವುದು. ತಮಗೆ ತೋರುವಂತೆ ಭಾಗ(II)ರಲ್ಲಿ ಹೇಳಲಾದ ವ್ಯಾಖ್ಯೆಗಳು ವಿವಾಹ ಹಾಗೂ ವಿಚ್ಛೇದನಗಳಿಗೆ ಮಾತ್ರ ಅನ್ವಯಿಸದೇ ಶಾಸನದ ಇತರ ಭಾಗಗಳಿಗೂ ಅನ್ವಯಿಸುತ್ತದೆ. ಏನು ಜರುಗಿದೆ ಎಂಬುದನ್ನು ವಿವರಿಸಲು, ಮುಂದಿನ ಹಂತದಲ್ಲಿ ನನಗೆ ತಿದ್ದುಪಡಿಯನ್ನು ತರಬೇಕಾದ ಅನಿವಾರ್ಯ ಪ್ರಸಂಗವಿರುವುದರಿಂದ, ಇವುಗಳ ವ್ಯಾಪ್ತಿಯನ್ನು ಕೇವಲ ವಿವಾಹ ಹಾಗೂ ವಿಚ್ಛೇದನಕ್ಕೆ ಮಾತ್ರ ಸೀಮಿತಗೊಳಿಸುವುದು ಸೂಕ್ತ. ಆದುದರಿಂದ ಸದನಕ್ಕೆ ನನ್ನ ಸಲಹೆ ಏನೆಂದರೆ, ಇದಕ್ಕೆ ಅಧಿಕ ಮಹತ್ವ ನೀಡದೇ ಸಾಮಾನ್ಯ ರೀತಿಯ ಒಪ್ಪಿಗೆಯನ್ನು ನೀಡಲಿ, ಏಕೆಂದರೆ ಮುಂದೆ ಹೇಗಾದರೂ ಮತ್ತೊಮ್ಮೆ ಇದನ್ನು ಕೈಗೆತ್ತಿಕೊಳ್ಳಲೇಬೇಕಾಗಿರುವುದರಿಂದ ಈ ತಿದ್ದುಪಡಿಯನ್ನು ನಾನು ಗಂಭೀರವಾಗಿ ಗಮನಿಸುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು** : ಇದಕ್ಕೆ ಯಾರಿಂದಲಾದರೂ ವಿರೋಧವಿದೆಯೆ?

**ಶ್ರೀ ಸಂತಾನಂ** : ಸಂಪೂರ್ಣ ವಿಧಿಗೆ ಅನ್ವಯವಾಗುವುದೆ ಅಂದರೆ ಭಾಗ (VIII) ಮತ್ತು (IX) ಪಾಸಾದ ನಂತರ ಸಂಪೂರ್ಣ ವಿಧಿಯನ್ನು ಕೈಗೆತ್ತಿಕೊಳ್ಳುವುದೆ?

**ಮಾನ್ಯ ಉಪಸಭಾಧ್ಯಕ್ಷರು** : ಅದು ಪೀಠಕ್ಕೆ ಸೇರಿದ ಸಂಗತಿ. ಅಂಶತಃ ಅಥವಾ ಸಂಪೂರ್ಣವಾಗಿ ಕೈಗೆತ್ತಿಕೊಳ್ಳಬಹುದು. ವಾಸ್ತವಿಕವಾಗಿ ನಾನು ಭಾಗ, ಭಾಗವಾಗಿ ಮಂಡಿಸಿದ್ದು ಎರಡು ಭಾಗಗಳಿಗೆ ಅಂಗೀಕಾರ ಕೂಡ ದೊರೆತಿದೆ.

**ಶ್ರೀ ಭಾರತಿ** : ವ್ಯಾಖ್ಯೆಯನ್ನು ಯಾವ ಸಂದರ್ಭದಲ್ಲಿಯಾದರೂ ಸೇರಿಸಬಹುದು.

**ಮಾನ್ಯ ಉಪಸಭಾಧ್ಯಕ್ಷರು** : ವಿಧಿಯನ್ನು ಸಂಕುಚಿತಗೊಳಿಸುವುದರಿಂದ ಹಾನಿಯೇನೂ ಇಲ್ಲ.

**ಶ್ರೀ ನಜೀರುದ್ದೀನ್ ಅಹಮದ್** : ಸರ್, ನನ್ನ ತಿದ್ದುಪಡಿಯೂ ಈ ಉದ್ದೇಶವನ್ನೇ ಹೊಂದಿದೆ.

**ಮಾನ್ಯ ಉಪ ಸಭಾಧ್ಯಕ್ಷರು** : ಸನ್ಮಾನ್ಯ ಸದಸ್ಯರು ದೂರಾಲೋಚನೆ ಹೊಂದಿದವರಾಗಿದ್ದಾರೆ ಮತ್ತು ಕಾನೂನು ಸಚಿವರು ತಾವು ಹೇಳಿದ್ದನ್ನೇ ಒಪ್ಪಿಕೊಂಡು ಹೇಳಿದ್ದಾರೆ. ಹೀಗಾಗಿ ಈ ವಿಷಯ ಉಳಿದುಕೊಳ್ಳುತ್ತದೆ.

**ಶ್ರೀ ನಜೀರುದ್ದೀನ್ ಅಹಮದ್** : ನನಗೆ ಯಾವ ವಿರೋಧವೂ ಇಲ್ಲ.

**ಶ್ರಿ ಭಾರತಿ :** ಈ ಶಾಸನದಲ್ಲಿ ಸಂಪೂರ್ಣ ಹಾಗೂ ಅರೆರಕ್ತ ಸಂಬಂಧಿ ಪದಗಳನ್ನು ಬಳಸಬೇಕೆಂದಿದ್ದೆವು. ಆದರೆ ಅವು ಕಾಣುತ್ತಿಲ್ಲ. ಆದರೆ ಈಗ ಅವುಗಳ ಆವಶ್ಯಕತೆ ಇಲ್ಲವೆಂದೇ ತೋರುತ್ತದೆ.

ಹೀಗಾಗಿ ಆ ಪದಗಳನ್ನು ಕೈ ಬಿಡಬಹುದು.

**ಡಾ. ಅಂಬೇಡ್ಕರ್ :** ಈ ಪದಗಳನ್ನು ನಿಷೇಧ ಪ್ರಮಾಣದಲ್ಲಿ ಸಪಿಂಡಕ್ಕೆ ಸಂಬಂಧಿಸಿದಂತೆ ಬಳಸಲೂಬಹುದು. ಆದುದರಿಂದ ಈ ಹಂತದಲ್ಲಿ ಭಾಗವನ್ನು ಅಂಗೀಕರಿಸಿ ಮುಂದೆ ಆವಶ್ಯಕವೆಂದರೆ ನಾನು ತಿದ್ದುಪಡಿಯನ್ನು ಮಂಡಿಸುವೆ.

**ಶ್ರೀ ಭಾರತಿ :** ಈ ಪದಗಳು ಕೇವಲ ವ್ಯಾಖ್ಯೆಯ ಪದಗಳಾಗಿರುವುದರಿಂದ ಸಂಬಂಧಿಸಿದ ಅಧ್ಯಾಯಗಳಲ್ಲಿ ಅವನ್ನು ಪ್ರಸ್ತಾಪಿಸಬಹುದೆ ಹೊರತು ಬೇರೆಯ ಸಮಯದಲ್ಲಿ ಅಲ್ಲ. ಅದನ್ನು ವಿವಾಹ ಮತ್ತು ವಿಚ್ಛೇದನ ಪ್ರಕರಣದಲ್ಲಿ ಪ್ರಯೋಗಿಸಬೇಕೆ ಹೊರತು ವ್ಯಾಖ್ಯೆಯಲ್ಲಿ ಅಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಈ ಭಾಗವನ್ನು ನಂ. ೩೭೦ರ ತಿದ್ದುಪಡಿಯಂತೆ ಬದಲಾಯಿಸಿದೆ. ಹೀಗಾಗಿ ಈ ತಿದ್ದುಪಡಿಯು ನೂತನವಾಗಿದ್ದರೂ, ಅದರಲ್ಲಿಯೂ "ರಕ್ತಸಂಬಂಧಿ ಸಹೋದರ" ವಿಷಯವನ್ನು ಒಳಗೊಂಡಿದೆ.

**ಡಾ. ಅಂಬೇಡ್ಕರ್ :** ನನ್ನ ಅಭಿಪ್ರಾಯದಲ್ಲಿ ಈ ಎಲ್ಲ ವಿಷಯಗಳನ್ನು ವ್ಯಾಖ್ಯೆಯಲ್ಲಿ ಪ್ರಸ್ತಾಪಿಸಲು ಸಾಮಾನ್ಯ ಆಸ್ಪದ ನೀಡಬಹುದು. ನಾನು ಈಗಾಗಲೇ ವಿವರಿಸಿದಂತೆ, ಮುಂದೆ ಬೇಕಾದ ತಿದ್ದುಪಡಿಯ ಮೂಲಕ ಸರಿಪಡಿಸಿಕೊಳ್ಳಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಏನೇ ಆದರೂ, ಯಾವ ಸಂದೇಹಕ್ಕೆ ಅವಕಾಶ ನೀಡದೆ ಈ ವಿಷಯವನ್ನು ವಿವಾಹ ಹಾಗೂ ವಿಚ್ಛೇದನ ಅಧ್ಯಾಯಗಳಲ್ಲಿ ಪ್ರಸ್ತಾಪಿಸಬೇಕು. ಈ ಪದಗಳನ್ನು ಮೂಲ ಮತ್ತು ತಿದ್ದುಪಡಿಯಾದ ಎರಡೂ ಮಸೂದೆಗಳಲ್ಲಿ ಪ್ರಸ್ತಾಪಿಸಲಾಗಿದೆ.

ಈಗ ನಾನು ಭಾಗ (III) ನ್ನು (IV) ಎಂದು ಅಂಕಿ ನೀಡಿರುವ ೩ನೇ ವಿಧಿಯನ್ನು ಮಂಡಿಸುವೆ.

ನಿಲುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ:

(IV)ನೇ ವಿಷಯದ ವಿವರಣೆಗೆ (V) ಎಂಬ ಸಂಖ್ಯೆಯನ್ನು ನೀಡಲಾಗಿದೆ. "ಈ ವಿಧಿ"ಗೆ (IV)&(V)ಗಳನ್ನು ಸೇರ್ಪಡಿಸಬೇಕು.

ನಿಲುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ: ಕಲಮು ೩ ಭಾಗ (IV)ಕ್ಕೆ (V) ಸಂಖ್ಯೆಯನ್ನು ನೀಡಲಾಗಿದೆ. ಅದಕ್ಕೆ ಕೆಳಗಿನ ನೂತನ ಭಾಗವನ್ನು ಸೇರ್ಪಡಿಸಬೇಕು.

"(VI)" ಮರುಮಕ್ಕತ್ತಾಯಂ ಕಾಯ್ದೆ ಎಂಬುದನ್ನು ಇವರಿಗೆ ಅನ್ವಯಿಸಲಾಗುವುದು. ಅ) ಈ ಶಾಸನ ಜಾರಿಗೆ ಬಾರದೇ ಹೋದ ಸಮಯದಲ್ಲಿ ೧೯೩೨ರ ಮದ್ರಾಸಿನ ಮರುಮಕ್ಕತ್ತಾಯಂ ಕಾಯ್ದೆಗೆ ಒಳಪಟ್ಟಿದ್ದವರು. (ಮದ್ರಾಸ್ ಶಾಸನ XXII ೧೯೩೩), ತಿರುವಾಂಕೂರು ನಾಯರ್ ಕಾಯ್ದೆ II ೧೧೦೦ರ, ತಿರುವಾಂಕೂರು ಇಳವಾಕಾಯ್ದೆ ೧೧೦೦, ನಂಜಿಡವೆಲ್ಲಾಲ ಶಾಸನ ೧೧೦೧, ತಿರುವಾಂಕೂರು ಕ್ಷತ್ರಿಯಾ ಕಾಯ್ದೆ ೧೧೦೮, ತಿರುವಾಂಕೂರು ಕೃಷ್ಣವಾಕ ಮರುಮಕ್ಕತ್ತಾಯಂ ಕಾಯ್ದೆ ೧೧೧೫, ಕೊಚ್ಚಿನ್ ತೀಯಾಕಾಯ್ದೆ VIII ೧೧೦೭, ಕೊಚ್ಚಿನ್ ನಾಯರ್ ಕಾಯ್ದೆ ೧೧೧೩ ಅಥವಾ ಕೊಚ್ಚಿನ್ ಮರುಮಕ್ಕತ್ತಾಯಂ ಶಾಸನ XXXIII ೧೧೧೩ ಅಥವಾ

ಆ) ಮದ್ರಾಸ್ ಹಾಗೂ ತಿರುವಾಂಕೂರು ರಾಜ್ಯಗಳಲ್ಲಿ ಈ ಶಾಸನ ಜಾರಿಗೆ ಬರುವ ಮುನ್ನ ವಾರಸುದಾರಿಕೆಯನ್ನು ಸ್ತ್ರೀಯರ ಮೂಲಕ ಪಡೆಯಲಾಗುತ್ತಿತ್ತೋ ಅವರೆಲ್ಲರಿಗೂ ಆದರೆ ಅಳಿಯಸಂತಾನ ಕಾಯ್ದೆ ಹೊರತುಪಡಿಸಿ ಅನ್ವಯಿಸಲಾಗುವುದು.

ನಿಲುವಳಿಯನ್ನು ಅಂಗೀಕರಿಸಲಾಗಿದೆ.

**ಶ್ರೀ ನಜೀರುದ್ದೀನ್ ಅಹಮದ್ :** ಇದು ಪುನರ್ ಪರಿಶೀಲನೆಯ ಸಂಗತಿಯಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಇಲ್ಲ. ಅಳಿಯ ಸಂತಾನ ಶಾಸನ ಈಗಾಗಲೇ ರಚಿತವಾಗಿದೆ.

**ಡಾ. ಅಂಬೇಡ್ಕರ್ :** ಸಾರಾಂಶವನ್ನು ಪುನರ್ ಪರಿಶೀಲಿಸಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಭಾಷೆಗೆ ಸೀಮಿತಗೊಂಡ ವಿಷಯವನ್ನು ಪ್ರಸ್ತಾಪಿಸಬಹುದು ಹಾಗೂ ಸಲಹೆ ನೀಡಬಹುದು.

ಪ್ರಶ್ನೆ ಎಂದರೆ:

ಮೂರನೇ ವಿಧಿಯಲ್ಲಿ **"ಮರುಮಕ್ಕತ್ತಾಯಂ"** ಶಾಸನದ ವ್ಯಾಖ್ಯೆಯ ನಂತರ ಈ ಹೊಸ ಭಾಗವನ್ನು ಸೇರ್ಪಡಿಸಬೇಕು.

"(VII) ನಂಬೂದರಿ ಕಾಯ್ದೆ ಎಂದರೆ, ಈ ಶಾಸನ ಜಾರಿಯಲ್ಲಿರದ ಸಮಯದಲ್ಲಿ ಮದ್ರಾಸ್ ನಂಬೂದರಿ ಕಾಯ್ದೆ ೧೯೩೨(ಮದ್ರಾಸ್ ಆಕ್ಟ್ XXI ೧೯೩೩) ಹಾಗೂ ಕೊಚ್ಚಿನ್ ನಂಬೂದ್ರಿ ಕಾಯ್ದೆ (XVII 1114); ಅಥವಾ ತಿರುವಾಂಕೂರು ಮಲಯಾಳಿ ಬ್ರಾಹ್ಮಣ ಕಾಯ್ದೆ, ೧೧೦೬ (ರೆಗ್ಯುಲೇಷನ್ III ೧೧೧೬)", ಅನ್ವಯಿಸುತ್ತಿತ್ತೋ ಅವರೆಲ್ಲರೂ ಎಂದು ಭಾವಿಸಬೇಕು.

ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಈಗ ಭಾಗ (VIII) ಅಂದರೆ ಮೂಲದಲ್ಲಿ ಭಾಗ(V) ಅದು ಹೇಳುವಂತೆ "ಭಾಗ" ಎಂದರೆ ಶಾಸನದ ಯಾವುದೇ ಭಾಗ–ಪುನಃ ಅದನ್ನೇ ಪರಿಶೀಲಿಸಬೇಕೆಂದಿರುವರೆ?

**ಡಾ. ಅಂಬೇಡ್ಕರ್ :** ಈ ಒಂದು ಸಂದರ್ಭದಲ್ಲಿ ನಾನು ಏನು ತಿದ್ದುಪಡಿಯನ್ನು ಮಾಡಬೇಕೆಂದಿರುವೆನೊ ಅದನ್ನು ಹೇಳಲು ಕಷ್ಟವಾಗಿದೆ. ನನಗೆ ಆಲೋಚನೆ ಮಾಡಲು ಅವಕಾಶ ನೀಡಿ. ನಂತರ ನಾನು 'ಮಸೂದೆ' ಅಥವಾ "ಅಧ್ಯಾಯವನ್ನೇ" ಬದಲಾಯಿಸಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾದರೆ ನಾನು ಮೂಲ (V) (ಸದ್ಯದ VIII) ಹಾಗೇ ಇಡುವೆ. ಈಗ ನಾನು "ನಿರ್ಧರಿಸಿದ" ವ್ಯಾಖ್ಯೆಯನ್ನು ಕೈಗೆತ್ತಿಕೊಳ್ಳುವೆ.

**ಕ್ಯಾಪ್ಟನ್ ಎ. ಪಿ. ಸಿಂಗ್** (ವಿಂಧ್ಯ ಪ್ರದೇಶ) : ನಾನು **'ಕುಲ'** ಎಂಬ ಪದವನ್ನು ಸೇರ್ಪಡಿಸಲು ಇಚ್ಛಿಸಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ಮೊದಲು ಇವನ್ನು ಪರಿಹರಿಸೋಣ,

ಪ್ರಶ್ನೆ ಎಂದರೆ:

"ಆ ಭಾಗ (VI) ಪುನರ್ ಸಂಖ್ಯೆ (IX) ಮೂರನೇ ಕಲಮು ಈ ಶಾಸನದ ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

**ಶ್ರೀ ಭಾರತಿ :** ನನಗೆ ತಿಳಿದುಬಂದಂತೆ **"ಸಂಹಿತೆ"** ಪದವನ್ನು ಬದಲಾಯಿಸಲಾಗುವುದೆ?

**ಡಾ. ಅಂಬೇಡ್ಕರ್ :** ಸೂಕ್ತವಾಗಿ ಬದಲಾಯಿಸಲಾಗುವುದು.

**ಮಾನ್ಯ ಉಪಸಭಾಧ್ಯಕ್ಷರು :** ಭಾಗ (VI) ವ್ಯಾಖ್ಯೆಗೆ ಸಂಬಂಧಿಸಿದಂತೆ "ನಿರ್ಣಯಿಸಿದ" ಪುನರ್

ಸಂಖ್ಯೆ ನೀಡಿದ್ದನ್ನು ಅಂಗೀಕರಿಸಿದೆ. ಈಗ ನಾವು (VII) ಭಾಗ ಎತ್ತಿಕೊಳ್ಳೋಣ, ಭಾಗ (X) ಮಸೂದೆಯ ಕಲಮು ೩

ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು** : ನಾವು ಈ ಭಾಗ (VI)ರ ತಿದ್ದುಪಡಿ ನಂ. ೫, ಡಾ. ಅಂಬೇಡ್ಕರ್‌ರ ವಿಷಯ ಪರಿಶೀಲಿಸುವ, ಅದು ಹೇಳುವಂತೆ ಐಟಮ್ (VIII) ಪುನರ್‌ಸಂಖ್ಯೆ ನೀಡಿದ ನಂತರ 'ಯಾವ' ಪದದ ಬದಲು 'ಒಂದು' ಸೇರ್ಪಡೆಯಾಗಬೇಕು.

**ಡಾ. ಅಂಬೇಡ್ಕರ್** : ಅದು ಮೂಲದಲ್ಲಿ "ಯಾವುದೇ ಭಾಗ" ಆದರೆ ಈಗ ಅದು "ಒಂದೇ ಭಾಗ" ಆದರೆ ತಮಗೆ ಜ್ಞಾಪಕವಿದ್ದಂತೆ ತಾವು (VIII) ಪುನರ್‌ಸಂಖ್ಯೆಯ ವಿಷಯ ಎತ್ತಿ ಹಿಡಿದಿದ್ದೀರಿ. ಅದರಂತೆಯೇ ಇದೂ ಉಳಿದುಹೋಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು** : ನಾವು ಈಗ "ಪುತ್ರ" ವ್ಯಾಖ್ಯೆಯನ್ನು ಕೈಗೆತ್ತಿಕೊಳ್ಳುವ. ಭಾಗ (VIII) ಮೂಲ ಕಲಮಿನದ್ದು.

**ಪಂಡಿತ ಠಾಕೂರ್ ದಾಸ್ ಭಾರ್ಗವ** : ನನ್ನದೊಂದು ತಿದ್ದುಪಡಿ ಇದೆ. ಅದರ ನಂ. ೧೨೭.

**ಡಾ. ಅಂಬೇಡ್ಕರ್** : ಅದೊಂದು ವಿಧವಾದ, ವಹಿಸಿರಬಹುದಾದ ಅಧಿಕಾರ.

**ರಾಜಗೋಪಾಲಾಚಾರಿ** : ಆದರೆ ಅದು ಪಂಜಾಬಿನಲ್ಲಿ ದತ್ತು ಸ್ವೀಕಾರ.

**ಸರ್ದಾರ್ ಹುಕುಂ ಸಿಂಗ್** : ಅದೊಂದು ವಹಿಸಿದ ಅಧಿಕಾರವಲ್ಲ. ಅದನ್ನು ಸರಳೀಕರಿಸಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ** : ನಾನು ಮಂಡಿಸಲು ಕೋರುವೆ.

ಮೂರನೇ ವಿಧಿ ಭಾಗ (VIII) ಪುನರ್‌ಸಂಖ್ಯೆ (IX) ಕೆಳಗಿನಂತೆ ಬದಲಾಯಿಸಬೇಕು. "(XI) ಪುತ್ರ ಪದವು, ನಿಗದಿಪಡಿಸಿದ ವಾರಸುದಾರ, ದತ್ತುಪುತ್ರ ನೇಮಿಸಿದ ಅಥವಾ ದತ್ತು ತೆಗೆದುಕೊಳ್ಳಲಾದ, ಈ ಶಾಸನದ ಮುಂಚೆ ಹಾಗೂ ನಂತರ ಆದರೆ ಅನೈತಿಕ ಸಂಬಂಧದ ಮಗನನ್ನು ಹೊರತುಪಡಿಸಿ, ಎಲ್ಲರನ್ನೂ ಒಳಗೊಂಡಿದೆ." ಬಹುಶಃ ಸದನಕ್ಕೆ ತಿಳಿದಂತೆ ಪಂಜಾಬಿನಲ್ಲಿ ವಾರಸುದಾರನನ್ನು ನೇಮಿಸುವ ಪದ್ಧತಿ ಜಾರಿಯಲ್ಲಿದೆ.

**ಮಾನ್ಯ ಉಪಸಭಾಧ್ಯಕ್ಷರು** : ನಾವು "ಪುತ್ರ" ಪದದ ವ್ಯಾಖ್ಯೆ ಚರ್ಚಿಸುತ್ತಿದ್ದೇವೆ. ಉತ್ತರಾಧಿಕಾರಿ ಅಥವಾ ವ್ಯಕ್ತಿಯ ನೇಮಕಾತಿಯು ಆಸ್ತಿ ಪಡೆಯಬಲ್ಲ ವಿಷಯಕ್ಕೆ ಸೇರಿದೆ. ಹೀಗಾಗಿ ಉತ್ತರಾಧಿಕಾರಿಯನ್ನು ನೇಮಿಸುವ ವ್ಯಕ್ತಿಯ ಪುತ್ರಿಯನ್ನು ವಿವಾಹವಾಗಬಲ್ಲ ಅರ್ಹತೆಯನ್ನೇ ಆಧರಿಸಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ** : ಪದ್ಧತಿಯಂತೆ ಅವನು ಪುತ್ರ ಸಮಾನನು. ಆದುದರಿಂದ ಅವನು ಆ ವ್ಯಕ್ತಿಯ ಮಗಳನ್ನು ವಿವಾಹ ಆಗಲಾರ, ಏಕೆಂದರೆ ಅವಳು ಸೋದರಿ ಸಮಾನಳು. ಉತ್ತರಾಧಿಕಾರಿಯಾಗಿ ನೇಮಕಹೊಂದಿದವನಿಗೆ ವಿಶೇಷ ಜವಾಬ್ದಾರಿಗಳಿವೆ ಹಾಗೂ ಸಂಬಂಧಗಳಿವೆ. ಏಕೆಂದರೆ ಎಲ್ಲಾ ಕಾರಣಗಳಿಂದಲೂ ಅವನು ಪುತ್ರ ಸಮಾನ.

**ಮಾನ್ಯ ಉಪಸಭಾಧ್ಯಕ್ಷರು** : ಹಾಗಾದಲ್ಲಿ ಅದು ನಿಷೇಧನೀಯವೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ** : ಹೌದು. ಅವನು ಕುಟುಂಬದ ಸದಸ್ಯನಾಗುತ್ತಾನೆ. ಅಂಬಾಲ ಪ್ರದೇಶದ ಆಯುಕ್ತರ ಅಡಿಯಲ್ಲಿ ಅನೇಕ ಪದ್ಧತಿಗಳು, ಈ ಉತ್ತರಾಧಿಕಾರಿಯ ಬಗೆಗೆ ಇಂದೂ ಜಾರಿಯಲ್ಲಿವೆ. ಅದು ದತ್ತು ತೆಗೆದುಕೊಂಡಂತೆಯೇ; ಹೀಗಾಗಿ ಉತ್ತರಾಧಿಕಾರಿಯ ನೇಮಕ ಮತ್ತು ದತ್ತು ವಿಧಾನಗಳಲ್ಲಿ ಹೆಚ್ಚು ವ್ಯತ್ಯಾಸಗಳೇ ಇಲ್ಲ; ವಿಧಿವಿಧಾನಗಳೂ ಹಲವಾರು ಬಾರಿ ಒಂದೇ ತೆರನಾಗಿವೆ. ಆದುದರಿಂದ ಯಾರನ್ನು ವಾರಸುದಾರನೆಂದು ನೇಮಿಸಲಾಗುವುದೊ ಅವನು ಪುತ್ರ ಸಮಾನನು. ಹೀಗಾಗಿ ಅವನು, ತನ್ನನ್ನು ನೇಮಿಸಿದವರ

ಮಗಳನ್ನು ವಿವಾಹವಾಗಲಾರ; ಏಕೆಂದರೆ ಅವಳು ಸಹೋದರಿ ಸಮಾನಳಾಗುತ್ತಾಳೆ. ಇದನ್ನು ಪಂಜಾಬಿನಲ್ಲಿ ಯಾರೂ ಒಪ್ಪಲಾರರು. ಅಲ್ಲದೆ ಅವನು ಚಿಕ್ಕಪ್ಪ, ದೊಡ್ಡಪ್ಪ ಅವರ ಮಗಳನ್ನು ವಿವಾಹವಾಗಲಾರ ಏಕೆಂದರೆ ಅವನು ಪುತ್ರ ಸಮಾನ. ಒಂದೇ ಒಂದು ವ್ಯತ್ಯಾಸವೆಂದರೆ ಉತ್ತರಾಧಿಕಾರಿಯು ವಿವಾಹವಾದವನೂ ಆಗಿರಬಹುದು.

**ಡಾ. ಅಂಬೇಡ್ಕರ್ :** ಅವನು ದಾಡಿ ಇರುವ ಪುರುಷನಾಗಿರಲೂಬಹುದು.

**ಶ್ರೀ ರಾಜಗೋಪಾಲಾಚಾರಿ :** ಸನ್ಮಾನ್ಯ ಸದಸ್ಯರು ಈ ಬಗೆಗೆ ಹೆಚ್ಚು ವಿಷಯ ನಮಗೆ ಹೇಳಬೇಕು. ಅವನು ತನ್ನ ಅಳಿಯನನ್ನೇ ವಾರಸುದಾರನಾಗಿ ನೇಮಿಸಬಹುದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದನ್ನು **"**ಮನೆ ಅಳಿಯ**"**ನೆಂದೇ ಕರೆಯಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಇದಕ್ಕೆ ಸಮಾನಾಂತರವಾಗಿ ದಕ್ಷಿಣದಲ್ಲಿ **"**ಇಲ್ಲೋತ್ತಮ್ ದತ್ತು**"** ಪದ್ಧತಿ ಜಾರಿಯಲ್ಲಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ಪದ್ಧತಿಯು ನ್ಯಾಯಾಲಯದ ಮನ್ನಣೆ ಪಡೆದು ಬಹುತೇಕ ಕಾನೂನಿನಂತೆ ಜಾರಿಯಲ್ಲಿದೆ. ಅದೊಂದು ಸಂಪೂರ್ಣ ಜಾರಿಯಲ್ಲಿರುವ ಸಂಪ್ರದಾಯವಾಗಿದೆ. ಸಾಮಾನ್ಯ ಕಾನೂನಿಗಿಂತ ಅಧಿಕ ಬೆಂಬಲ ಪಡೆದಿದೆ. ಹಿಂದೂ ಜನಾಂಗದಲ್ಲಿ, ಸಿಖ್ ಮತ್ತು ಮುಸ್ಲಿಮರಲ್ಲಿ ಸಾರ್ವತ್ರಿಕವಾಗಿ ಜಾರಿಯಲ್ಲಿದೆ. ಇದು ಕೇವಲ ಉತ್ತರಾಧಿಕಾರಿ ನೇಮಕವಾಗಿರದೆ, ಕೌಟುಂಬಿಕ ಸಂಬಂಧವನ್ನು ಪಡೆದ ವ್ಯವಸ್ಥೆಯಾಗಿದೆ.

**ಡಾ. ಅಂಬೇಡ್ಕರ್ :** ಆಸ್ತಿಯ ಉದ್ದೇಶಕ್ಕಾಗಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಆಸ್ತಿ ಹಾಗೂ ಸಂಬಂಧ ಎರಡೂ ಉದ್ದೇಶಗಳಿಗಾಗಿ. ಆದುದರಿಂದ ಅವನು, ತನ್ನನ್ನು ನೇಮಿಸಿಕೊಂಡವರ ಮಗಳನ್ನು ವಿವಾಹವಾಗಲಾರ. ಹೀಗಾಗಿ ಅದು ಕೇವಲ ಆಸ್ತಿಗಾಗಿ ಇರದೇ ವ್ಯಕ್ತಿ ಬಾಂಧವ್ಯವನ್ನು ಹೊಂದಿವೆ.

**ಮಾನು ಉಪಸಭಾಧ್ಯಕ್ಷರು :** ಹೀಗೆ ನೇಮಿಸಿಕೊಂಡ ಪುತ್ರ, ವಯಸ್ಸಿನಲ್ಲಿ ಹಿರಿಯನಾಗಿರಬಹುದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಓಹೋ, ಅವನು ಹಿರಿಯನಾಗಿರಬಹುದು. ಏಕೆಂದರೆ ಓರ್ವ ಸಹೋದರನು, ತನ್ನ ಅಣ್ಣನ ಮಕ್ಕಳನ್ನೇ ದತ್ತು ಅಥವಾ ನೇಮಕ ಮಾಡಿಕೊಂಡಾಗ ಅವನು ತನ್ನ ಕಕ್ಕನಿಗಿಂತಲೂ ವಯಸ್ಸಿನಲ್ಲಿ ಹಿರಿಯನಾಗಿರಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಈ ಬಗೆಗೆ ವಿಧಿವಿಧಾನಗಳನ್ನೇನಾದರೂ ಆಚರಿಸಬೇಕೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದನ್ನು ಅನೇಕ ವಿಧಾನಗಳಿಂದ ಆಚರಿಸಲಾಗುವುದು. ಆದರೆ ಅದನ್ನು ಸಾರ್ವಜನಿಕವಾಗಿ ತಿಳಿಯುವಂತೆ ಆಚರಿಸಬೇಕು. ಕೆಲವು ಕಡೆ ನೋಂದಾಯಿಸುವ ವಿಧಾನವೂ ಇದೆ. ಈ ಸಂದರ್ಭದಲ್ಲಿ ಕುಟುಂಬದ ಎಲ್ಲಾ ಸದಸ್ಯರೂ ಸೇರಿ ವಾರಸುದಾರ ಬಾಲಕನನ್ನು ಅಂಗೀಕರಿಸುತ್ತಾರೆ. ಕೆಲವು ಬಾರಿ ಹೋಮಹವನಗಳನ್ನು ಮಾಡಲಾಗುತ್ತದೆ. ಪ್ರಾಯೋಗಿಕವಾಗಿ ಅದು ದತ್ತಕ ಎಂದೇ ಆಗುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ಬಗೆಯ ಪದ್ಧತಿಯೊಂದಿಗೆ ದತ್ತುಪದ್ಧತಿಯೂ ಜಾರಿಯಲ್ಲಿದೆಯೆ? ಅಥವಾ ಇದೊಂದೇ ವಿಧಾನವನ್ನು ಅನುಸರಿಸುವರೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಎರಡೂ ವಿಧಾನಗಳಿವೆ.

**ಮಾನ್ಯ ಉಪಸಭಾಧ್ಯಕ್ಷರು :** ಓರ್ವ ಮನುಷ್ಯ, ಇಬ್ಬರನ್ನೂ ಅಂದರೆ ದತ್ತುಪುತ್ರ ಹಾಗೂ ವಾರಸುಪುತ್ರರನ್ನು ಹೊಂದಿರಬಹುದೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಒಂದೇ ಕುಟುಂಬದಲ್ಲಿ ಒಬ್ಬ ಸಹೋದರ ವಾರಸುದಾರನನ್ನು

ಮತ್ತೋರ್ವ ಸಹೋದರ ದತ್ತುಪುತ್ರನನ್ನು ಹೊಂದಿರಬಹುದು. ಈ ಪದ್ಧತಿ ಮುಸಲ್ಮಾನರಲ್ಲಿಯೂ ಜಾರಿಯಲ್ಲಿದೆ.

**ಕ್ವಾಜಾ ಇನಾಯತ್ ಉಲ್ಲಾ** (ಬಿಹಾರ) : ಮುಸಲ್ಮಾನರಲ್ಲಿ ದತ್ತು ಪದ್ಧತಿ ಇಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಮುಸ್ಲಿಂ ಜನಾಂಗದ ಬಗೆಗೆ ಮಾತನಾಡುತ್ತಿಲ್ಲ. ಆದರೆ ಮುಸಲ್ಮಾನ ಪದ್ಧತಿಗಳಲ್ಲಿ ಮಾತ್ರ ಹೇಳುತ್ತಿರುವೆ. ಏಕೆಂದರೆ ಪಂಜಾಬಿನಲ್ಲಿಯ ಪ್ರತಿಯೋರ್ವ ಮುಸಲ್ಮಾನರೂ ಈ ಪದ್ಧತಿಯನ್ನು ಅನುಸರಿಸುತ್ತಾರೆ.

**ಮಾನ್ಯ ಉಪಸಭಾಧ್ಯಕ್ಷರು :** ಇದು ತಾವು ವಿವರಿಸಿದ ರೀತಿಯಲ್ಲಿ ಜಾರಿಯಲ್ಲಿದ್ದರೆ ಅದನ್ನು ವ್ಯಾಖ್ಯೆ ಅಡಿಯಲ್ಲಿ ತರಬಹುದು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಯಾರೂ ಈ ಪದ್ಧತಿಯ ಬಗೆಗೆ ಸಂದೇಹಪಡಲೇಬೇಕಾಗಿಲ್ಲ. ತಾವು ಸಂಪ್ರದಾಯ ಶಾಸನಗಳ ಯಾವುದೇ ಕೃತಿಯನ್ನು ಪರಿಶೀಲಿಸಬಹುದು. ಅದರಲ್ಲಿ ವಾರಸುದಾರರ ನೇಮಕಾತಿಯ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

**ಶ್ರೀ ರಾಧೇಲಾಲ್ ವ್ಯಾಸ :** ಸ್ತ್ರೀಯರನ್ನು ಎಲ್ಲಿಯಾದರೂ ವಾರಸುದಾರರಾಗಿ ನೇಮಿಸಲಾಗಿದೆಯೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅವಳನ್ನು ಪುತ್ರನೆಂದು ಪರಿಗಣಿಸಲಾಗದು.

**ಡಾ. ಅಂಬೇಡ್ಕರ್ :** ಈಗ ನಾವು ಚರ್ಚಿಸುತ್ತಿರುವುದು ಕೇವಲ ವಿವಾಹ ಹಾಗೂ ವಿಚ್ಛೇದನೆಯ ವಿಷಯವಾಗಿರುವುದರಿಂದ ನಮ್ಮ ಸನ್ಮಾನ್ಯ ಮಿತ್ರರು ಪ್ರಸ್ತಾಪಿಸಿದ ವಿಷಯವನ್ನು ದತ್ತು ಸ್ವೀಕಾರದ ವಿಷಯ ಬಂದಾಗ ಪರಿಶೀಲಿಸಬಹುದು. ಆ ಅವರು ಸದನಕ್ಕೆ ತಮ್ಮ ಅಭಿಪ್ರಾಯವನ್ನು ಮನವರಿಕೆ ಮಾಡಿಕೊಡಬಹುದು. ಸದ್ಯ ಆ ವಿಷಯದ ಬಗೆಗೆ ಚರ್ಚೆ ಬೇಡ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ತಾವು "ಪುತ್ರ" ಪದ ಬಳಸಿದ್ದರಿಂದಲೇ ಇಷ್ಟೆಲ್ಲಾ ಚರ್ಚಿಸಬೇಕಾಯಿತು.

**ಡಾ. ಅಂಬೇಡ್ಕರ್ :** ತಮಗೆ ತಿಳಿದಿರುವಂತೆ ದತ್ತು ಪ್ರಕರಣದಲ್ಲಿ ನಾವು ಏಕರೂಪ ವ್ಯವಸ್ಥೆಗೆ ಆಸ್ಪದ ನೀಡಿದ್ದು, ವಿವಿಧ ಪದ್ಧತಿಗಳನ್ನು ಪರಿಗಣಿಸಿಲ್ಲ. ನಾವು ದತ್ತು ವಿಧಾನವು ಎಲ್ಲೆಡೆಯಲ್ಲಿ ಒಂದೇ ಆಗಿರಬೇಕೆಂದೇ ನಿರ್ಧರಿಸಿದ್ದೇವೆ. ಆದರೆ ವಿಧಿವಿಧಾನಗಳು ಏನೇ ಇದ್ದರೂ, ಎಲ್ಲೆಡೆಯಲ್ಲಿಯೂ ದತ್ತು ಸ್ವೀಕರಿಸುವ ವಿಧಾನ ಒಂದೇ. ಬಾಲಕನ ಬಾಯಿಯಲ್ಲಿ ಸಕ್ಕರೆ ಹಾಕುವುದರಿಂದ ಅಥವಾ ಯಾವ ವಿಧಿಗಳ ಆಚರಣೆಯಿಂದ ವಾರಸುದಾರ ಅಂದರೆ ನೇಮಕಗೊಂಡ ಪುತ್ರ, ದತ್ತುಪುತ್ರನಿಗೆ ಸಮಾನನಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಶೋಚನೀಯ ಸಂಗತಿ ಎಂದರೆ ನಾನು ಅಂಬೇಡ್ಕರರ ನಂಬಿಕೆಯನ್ನು ಕುರಿತು ಏನೂ ಹೇಳಲಾರೆ.

**ಮಾನ್ಯ ಉಪಸಭಾಧ್ಯಕ್ಷರು :** ಪಂಡಿತ ಭಾರ್ಗವರು ಎತ್ತಿದ ವಿಷಯ ವಿವಾಹಕ್ಕೂ ಸಂಬಂಧಿಸಿದೆ.

**ಡಾ. ಅಂಬೇಡ್ಕರ್ :** ನನಗೆ ಈ ಪದ್ಧತಿಯ ಬಗೆಗೆ ಮನವರಿಕೆಯಾಗುವ ಸಂದೇಹಗಳಿರುವುದರಿಂದ– ನಾನು ಈಗಲೇ ಯಾವ ನಿರ್ಣಯಕ್ಕೂ ಬರಲಾರೆ. ಸಂದರ್ಭಗಳು, ಪದ್ಧತಿಗಳು, ಸಕಾರಣವೊ ಅಥವಾ ಇಲ್ಲದೇ ಇರುವುವೊ ಎಂಬುದನ್ನು ನಮ್ಮ ಮಿತ್ರರು ನಮಗೆ ಇನ್ನೂ ಮನವರಿಕೆಯಾಗುವಂತೆ ಚಿತ್ರಿಸಿಲ್ಲ. ಹೀಗಾಗಿ ನಾನು ಈ ದಿಶೆಯಲ್ಲಿ ನನ್ನ ಮನಸ್ಸನ್ನು ಹರಿಸದೇ ಹೋದುದರಿಂದ ಸದ್ಯ ಏನನ್ನೂ ಹೇಳಲಾರೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ವಿಷಯವನ್ನು ಹಿಡಿದಿರಿಸಿರಿ.

**ಡಾ. ಅಂಬೇಡ್ಕರ್ :** ಅದನ್ನು ನಂತರ ಸೇರ್ಪಡಿಸಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಒಂದು ಮಾರ್ಗವನ್ನು ಸೂಚಿಸಬಹುದೆ? ಸದ್ಯದಲ್ಲಿಯೇ ಇದನ್ನು

ಸೇರ್ಪಡಿಸಬಹುದು ಹಾಗೂ ಅಂಗೀಕರಿಸಲೂಬಹುದು. ಆದರೆ ಅದನ್ನು ಬೇರೆ ರೀತಿಯಲ್ಲಿ ನಡೆಸಬಹುದು. ಆದುದರಿಂದ ಅದಕ್ಕೆ ಅಂಗೀಕಾರ ನೀಡಬಹುದು. ಏಕೆಂದರೆ ನಾವು ಕಲಮು ೩ನ್ನು ಸಂಪೂರ್ಣವಾಗಿ ಅಂಗೀಕರಿಸುತ್ತಿಲ್ಲ. ಆದುದರಿಂದ ನಾನು ಸದನದ ಮುಂದೆ ಮತದಾನಕ್ಕೆ ಮಂಡಿಸುವೆ. ಪ್ರಶ್ನೆ ಎಂದರೆ

"ಆ ಭಾಗ (VIII)(XI) ಎಂದು ಪುನರ್‌ಸಂಖ್ಯೆಯಿಂದ ಕೂಡಿದ ೩ನೇ ಕಲಮಿನ ಭಾಗದಲ್ಲಿಯ" ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಈಗ ನಾವು ಕಲಮು ೪ನ್ನು ಕೈಗೆತ್ತಿಕೊಳ್ಳುವಾ.

**ಕ್ಯಾಪ್ಟನ್ ವಿ. ಪಿ. ಸಿಂಗ್:** ನಾನು ಈಗಾಗಲೇ ಭಾಗ (VIII)ಕ್ಕೆ ನಂ ೩೭೮ನೇ ತಿದ್ದುಪಡಿಯನ್ನು ಸೇರ್ಪಡಿಸುವಂತೆ ಕೋರಿದ್ದೇನೆ. ಅದು "ಕುಲ"ದ ವ್ಯಾಖ್ಯೆಯಾಗಿದೆ. ನಾನು ಏಕೆ "ಕುಲ" ಪದವನ್ನು ಸೇರಿಸಬೇಕೆಂದಿರುವುದು ಹಲವರಿಗೆ ಆಶ್ಚರ್ಯ ಉಂಟುಮಾಡಲೂಬಹುದು. ಆದರೆ ತಾವು ನಂ. ೩೮೭ ತಿದ್ದುಪಡಿ ಗಮನಿಸಿದ್ದಲ್ಲಿ ನಾನು ಅದರಲ್ಲಿ "ಒಂದೇ ಕುಲಕ್ಕೆ ಸೇರಿದವರಲ್ಲಿ ವಿವಾಹವಾಗಕೂಡದು" ಎಂದಿದ್ದೇನೆ. ಆದುದರಿಂದ ನಾನು ಈ ಪದವನ್ನು ಸೇರಿಸುವುದರಿಂದ ಒಂದೇ "ಕುಲ"ಕ್ಕೆ ಸೇರಿದವರಲ್ಲಿ ವಿವಾಹ ನಿಷೇಧವಿದೆ.

**ಡಾ. ಅಂಬೇಡ್ಕರ್ :** ನಾನು ಒಂದು ವಿಷಯವನ್ನು ವಿವರಿಸಲು ಬಯಸುವೆ. ನನಗೆ ಒಂದು ಭಯ ಹಾಗೂ ಸಂದೇಹವೆಂದರೆ ಈ ತಿದ್ದುಪಡಿಯು ಕಲಮು ೭ಕ್ಕೆ ಸಂಬಂಧಿಸಿದ ಧಾರ್ಮಿಕ ವಿವಾಹಕ್ಕೆ ಪ್ರಮುಖವಾಗಿದೆ– ಏಕೆಂದರೆ ಅಲ್ಲಿ ಹಲವು ಪರಿಸ್ಥಿತಿಗಳನ್ನು ವಿಧಿಸಲಾಗಿದೆ. ನನ್ನ ಮಿತ್ರರು ಈಗ ಮತ್ತೊಂದು ಸಮರ್ಥನೀಯ ಪರಿಸ್ಥಿತಿಯನ್ನೇ ನಿರ್ಮಿಸಲು ಮುಂದಾಗಿದ್ದಾರೆ. ಅದೇನೆಂದರೆ ಒಂದೇ ಕುಲದಲ್ಲಿ ವಿವಾಹ ನಿಷೇಧ. ಇದನ್ನು ಅಂಗೀಕರಿಸಿದಲ್ಲಿ ಆಗ ಕುಲದ ವ್ಯಾಖ್ಯೆ ಅನಿವಾರ್ಯವಾಗಬಹುದು. ಆದರೆ "ಕುಲ" ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಅದರ ಬಗೆಗೆ ವ್ಯಾಖ್ಯೆ ಬೇಕೆ? ಆದರೆ ಕಲಮು ೭ನ್ನು ಚರ್ಚಿಸುವಾಗ ಸದನ ಒಪ್ಪಿದಲ್ಲಿ ಈ ತಿದ್ದುಪಡಿಯನ್ನು ಪರಿಶೀಲಿಸಬಹುದು. ಆದರೆ ಈಗ "ಕುಲ"ದ ವ್ಯಾಖ್ಯೆಯನ್ನು ನಿರ್ಧರಿಸುವುದು ಬೇಡ.

**ಕ್ಯಾಪ್ಟನ್ ವಿ. ಪಿ. ಸಿಂಗ್ :** ನನ್ನ ಸಂದಿಗ್ಧತೆ ಏನೆಂದರೆ ಯಾವುದೇ ಪದವನ್ನು ಪ್ರಯೋಗಿಸಿದಾಗ ಅದರ ವ್ಯಾಖ್ಯೆ ಏನು ಎಂದೇ ಕೇಳಿ, ವ್ಯಾಖ್ಯೆ ಇಲ್ಲದೇಹೋದಲ್ಲಿ ಅದನ್ನು ಸಾಮಾನ್ಯವಾಗಿ ತಿರಸ್ಕರಿಸಲಾಗುವುದು. ಆದುದರಿಂದ ಅದನ್ನು ಈಗ ನಿರ್ಧರಿಸುವುದೇ ಉತ್ತಮ. ಆದರೆ ಅದನ್ನು ನಂತರ ಚರ್ಚೆಗೆ ತೆಗೆದುಕೊಂಡಲ್ಲಿ ನನ್ನ ವಿರೋಧವೇನೂ ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಕಲಮು ೭ರ ಅಡಿಯಲ್ಲಿ ವ್ಯಾಖ್ಯೆಯನ್ನು ಅಂಗೀಕರಿಸದೆ ಹೋದಲ್ಲಿ ಈ ತಿದ್ದುಪಡಿ ಅನವಶ್ಯಕವಾದುದು. ಆದರೆ ಬೇರೆ ಸಂದರ್ಭದಲ್ಲಿ ಕೈಗೆತ್ತಿಕೊಳ್ಳುವಲ್ಲಿ ಯಾವ ಅಭ್ಯಂತರವೂ ಇರಲಾರದು.

**ಡಾ. ಅಂಬೇಡ್ಕರ್ :** ವಿವರಣೆಯ ರೂಪದಲ್ಲಿ "ಕುಲ" ಎಂದರೇನು ಎಂಬುದನ್ನು ವಿವರಿಸಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಕಲಮು ೩ರ ಚರ್ಚೆ ಸಂಪೂರ್ಣವಾಗಿಲ್ಲ. ಅಥವಾ ಕಾನೂನು ಸಚಿವರು ಬಯಸಿದಂತೆ "ಕುಲ"ದ ವಿವರಣೆಯನ್ನು ಒದಗಿಸಬಹುದೆ?

**ಕ್ಯಾಪ್ಟನ್ ವಿ. ಪಿ. ಸಿಂಗ್ :** ಹಾಗಾದರೆ, ಅದನ್ನು ತಾವು ತಡೆಹಿಡಿಯಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಈಗ ಕಲಮು ೪ ಕೈಗೆತ್ತಿಕೊಳ್ಳುವ.

ಕಲಮು ೪ – (ಶಾಸನದ ಅಧಿಕಾರ ಪರಿಣಾಮ ಕುರಿತಂತೆ)

**ಡಾ. ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ ಕಲಮು ೪ಕ್ಕೆ ಬದಲಾಗಿ "೪–ಶಾಸನದ ವಿಶೇಷ ಅಧಿಕಾರದ ಪರಿಣಾಮ" – ಈ ಶಾಸನದಲ್ಲಿ ಸ್ಪಷ್ಟಪಡಿಸಿದಂತೆ ಮಾತ್ರ–

ಎ) ಯಾವುದೇ ಗ್ರಂಥ, ನಿಯಮಾವಳಿ ಅಥವಾ ಹಿಂದೂ ಶಾಸನವನ್ನು ವಿವರಿಸುವ ಅಥವಾ ಸಂಪ್ರದಾಯ ಪದ್ಧತಿಗಳು, ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದು ನಂತರ ನಿಂತುಹೋಗಿದ್ದರೆ ಅವುಗಳನ್ನು ಪರಿಗಣಿಸದೆ, ಮತ್ತು

ಬಿ) ಯಾವುದೇ ಶಾಸನ, ಇದಕ್ಕೂ ಮುಂಚೆ ಜಾರಿಯಲ್ಲಿದ್ದರೆ, ಅವೆಲ್ಲವೂ ಈ ಶಾಸನದಿಂದ ಅನೂರ್ಜಿತ.

ಈ ತಿದ್ದುಪಡಿಯ ಉದ್ದೇಶ ಎಂದರೆ, ಸದನ ಕಾಣುವಂತೆ, ಮೂಲದಲ್ಲಿ ಒಂದೇ ಕಲಮು ಇದ್ದು ಅದರಲ್ಲಿ ಯಾವ ಉಪ–ಕಲಮುಗಳೂ ಇರಲಿಲ್ಲ. ಅಲ್ಲದೆ ಇದರಲ್ಲಿ ಜಾರಿಯಲ್ಲಿದ್ದ ಸಂಪ್ರದಾಯ ಶಾಸನ ಮುಂತಾದುವುಗಳೆಲ್ಲವೂ ಅಡಕವಾಗಿದ್ದವು. ಶಾಸನದ ಉದ್ದೇಶ ಜಾರಿಯಲ್ಲಿದ್ದವನ್ನು ತೆಗೆದುಹಾಕಬೇಕೆಂದಿರದೆ, ಯಾವುದು ಈ ಮಸೂದೆಗೆ ಅಪ್ರಸ್ತುತವೆಂದು ಕಂಡುಬಂದಲ್ಲಿ ಅವನ್ನು ಮಾತ್ರ ಕೈಬಿಡಲಾಗಿದೆ. ಆದುದರಿಂದ ನಾನು ಯೋಚಿಸಿ, ಉತ್ತಮಮಾರ್ಗವೆಂದರೆ ೪ನೆಯ ಕಲಮನ್ನು ವಿಭಜನೆಗೆ ಗುರಿಮಾಡುವುದು. (ಎ) ಮತ್ತು (ಬಿ), (ಎ) ಭಾಗದಲ್ಲಿ ನಿಯಮಗಳು, ವಿವರಣೆಗಳು, ಮತ್ತು ಪದ್ಧತಿಗಳು ಮತ್ತು (ಬಿ) ಭಾಗದಲ್ಲಿ ಜಾರಿಯಲ್ಲಿರುವ ಶಾಸನಗಳು ಹೀಗೆ ನಿರ್ಧರಿಸಿದೆ. ಆದುದರಿಂದ ನಮ್ಮ ಉದ್ದೇಶ ಎಲ್ಲ ಶಾಸನಗಳನ್ನು ಭಂಗಗೊಳಿಸದೆ ಯಾವು ಈ ವಿಧೇಯಕಕ್ಕೆ ಅಪ್ರಸ್ತುತ ಎನಿಸಿದವನ್ನು ಮಾತ್ರ ಕೈಬಿಡುವುದಾಗಿದೆ. ಇದೇ ಈ ತಿದ್ದುಪಡಿಯ ಉದ್ದೇಶ.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿ ಮಂಡಿಸಲಾಗಿದೆ.

ನಾಲ್ಕನೆ ಕಲಮಿಗೆ ಬದಲಾಗಿ.

"೪ – ಈ ಶಾಸನದ ಮೇಲೆ ಪ್ರಭಾವ ಬೀರಬಲ್ಲ – ಇದರಲ್ಲಿ ನಿಖರವಾಗಿ ಹೇಳಿದಂತೆ:–

ಎ) ಯಾವುದೇ ಗ್ರಂಥ, ನಿಯಮಗಳು ಅಥವಾ ಹಿಂದೂ ಶಾಸನವನ್ನು ವಿವರಿಸುವ ಅಥವಾ ಸಂಪ್ರದಾಯ ಪದ್ಧತಿಗಳು ಈ ಶಾಸನದ ಮುಂಚೆ ಆಚರಣೆಯಲ್ಲಿದ್ದು ನಿಂತುಹೋಗಿದ್ದಲ್ಲಿ ಅವನ್ನು ಪರಿಗಣಿಸಲಾಗದು ಮತ್ತು

ಬಿ) ಈ ಶಾಸನ ಜಾರಿಗೆ ಬರುವ ಮುನ್ನ ಜಾರಿಯಲ್ಲಿದ್ದಿರಬಹುದಾದ ಶಾಸನಗಳು ಈ ಶಾಸನ ಜಾರಿಗೆ ಬಂದ ಮೇಲೆ ಅನೂರ್ಜಿತವಾಗುವುದು.

**ಡಾ. ದೇಶಮುಖ :** ನಾನು ಮಂಡನೆಗೆ ಕೋರುವೆ.

ಡಾ. ಅಂಬೇಡ್ಕರರು ತಂದಿರುವ ತಿದ್ದುಪಡಿಯಲ್ಲಿ ೪ನೇ ಕಲಮಿನಲ್ಲಿನ "ಅಥವಾ ಸಂಪ್ರದಾಯಗಳು ಅಥವಾ ನಡವಳಿಕೆ" ಪದಗಳನ್ನು ಕೈಬಿಡಬೇಕು. ನಾನು ಈಗಲೇ ಮಾತನಾಡಬಹುದೆ? ಅಥವಾ ನಂತರವೆ?

**ಮಾನ್ಯ ಉಪಸಭಾಧ್ಯಕ್ಷರು :** ನಾನು ಮೊದಲು ಎಲ್ಲಾ ತಿದ್ದುಪಡಿಗಳನ್ನು ಪಡೆದು ನಂತರ ಮಾನ್ಯ ಸದಸ್ಯರು ಅವನ್ನು ಮಂಡಿಸಲೇಬೇಕೆಂದರೆ ಚರ್ಚೆಗೆ ಅವಕಾಶ ಒದಗಿಸುವೆ, ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಡಾ. ಅಂಬೇಡ್ಕರ್ :** ನನಗೇನೂ ಅರ್ಥವಾಗದಂತಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಯಾವುದಾದರೂ ಸಂಪ್ರದಾಯ ಜಾರಿಯಲ್ಲಿದ್ದರೆ ಅದು ಮುಂದುವರಿಯುವುದು. ಆದರೆ ನಾನು ಈ ತಿದ್ದುಪಡಿಯ ಉದ್ದೇಶ, ಈ ವಿಧೇಯಕಕ್ಕೆ ವಿರೋಧವಾಗಿ, ಹಿಂದಿನ ಸಂಪ್ರದಾಯಗಳೆ ಪ್ರಭಾವಶಾಲಿ ಎಂದಲ್ಲ ಎಂದೇ ಭಾವಿಸಿರುವೆ. ಅದು ಸರಿಯೆ?

**ಡಾ. ದೇಶಮುಖ :** ಹೌದು.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಎರಡು ಸಂಗತಿಗಳನ್ನು ಕಲ್ಪಿಸೋಣ. ಎಲ್ಲಿ ಯಾವ ಅಂಶವನ್ನೂ ಪ್ರಸ್ತಾಪಿಸದೆ ಹೋಗಿದ್ದರೆ, ಅಲ್ಲಿ ಸಂಪ್ರದಾಯಗಳೆ ಮುಂದುವರಿಯುವುವು. ಆದರೆ ಎಲ್ಲಿ ವಿಷಯ ಪ್ರಸ್ತಾಪಿಸಿದ್ದು, ಸಂಪ್ರದಾಯಗಳು ಅಪ್ರಸ್ತುತ ಎಂದಲ್ಲಿ ಅವು ಮುಂದುವರಿಯಲಾರವು. ಆದುದರಿಂದ ಮಾನ್ಯ ಸದಸ್ಯರು

ಸಂಪ್ರದಾಯಗಳೆ ಮುಂದುವರಿಯಲೇಬೇಕೆಂದಿರುವರೆ ಎಂಬುದರ ಬಗೆಗೆ ತಮ್ಮ ನಿಲುವನ್ನು ನಾನು ಮುಂದೆ ಕೇಳಿದಾಗ ಸ್ಪಷ್ಟಪಡಿಸಬೇಕು.

**ಸರ್ದಾರ್ ಹುಕುಂ ಸಿಂಗ್ :** ನಾನು ಮಂಡಿಸಲು ಕೋರುವೆ.

೪ನೇ ಕಲಮಿನಲ್ಲಿನ **"**ಸಂಪ್ರದಾಯ ಅಥವಾ ನಡವಳಿಕೆ**"** ಪದಗಳನ್ನು ಕೈಬಿಡಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ನಮ್ಮ ತಿದ್ದುಪಡಿಯೂ ಅದೇ ಆಗಿದೆಯಲ್ಲ.

**ಸರ್ದಾರ್ ಹುಕುಂ ಸಿಂಗ್ :** ನನ್ನ ಸೂಚನೆ ಎಂದರೆ ಈ ಶಾಸನ ಜಾರಿಗೆ ಬಂದ ಮೇಲೂ ಸಂಪ್ರದಾಯಗಳು ಮುಂದುವರೆಯುತ್ತವೆ.

**ಮಾನ್ಯ ಉಪಸಭಾಧ್ಯಕ್ಷರು :** ತಮ್ಮ ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಮಂಡಿಸುವೆ.

೪ನೆಯ ಕಲಮಿನ ಬದಲಿಗೆ ಇದನ್ನು ಸೇರ್ಪಡಿಸಬೇಕು.

**"**೪ – ಯಾವುದೇ ಗ್ರಂಥ, ನಿಯಮ ಅಥವಾ ಹಿಂದೂ ಶಾಸನವನ್ನು ಅರ್ಥೈಸುವ ಅಥವಾ ಜಾರಿಯಲ್ಲಿರುವ ಸಂಪ್ರದಾಯಗಳು ಈ ಶಾಸನ ಜಾರಿಗೊಳ್ಳುವ ಮುಂಚೆ ಆಚರಣೆಯಲ್ಲಿದ್ದವೊ, ಅವು ಈ ಶಾಸನವು ವಿವರಣೆ ನೀಡದೆಹೋದಲ್ಲಿ ಜಾರಿಯಲ್ಲಿರುವವು.

ಇದು ವಿಷಯದ ಪ್ರಮುಖಾಂಶ.

**ಮಾನ್ಯ ಉಪಸಭಾಧ್ಯಕ್ಷರು :** ಎಲ್ಲಿ ಈ ಶಾಸನ ಅವಕಾಶ ಕಲ್ಪಿಸಿಲ್ಲವೊ ಅಲ್ಲಿ ಜಾರಿಯಲ್ಲಿರುತ್ತವೆ.

**ಡಾ. ಅಂಬೇಡ್ಕರ್ :** ನಾವು ೫೫ನೇ ಕಲಮಿನೊಂದಿಗೆ ಮುಕ್ತಾಯ ಮಾಡಿದಾಗ ಮಾತ್ರ ಅದು ಸಾಧ್ಯ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಹೇಳುವಂತೆ ಎರಡರಲ್ಲಿ ಅಧಿಕ ವ್ಯತ್ಯಾಸವಿರದು.

**ಮಾನ್ಯ ಉಪ ಸಭಾಧ್ಯಕ್ಷರು :** ತಮ್ಮ ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಹೆಸರಿನಲ್ಲಿ ಮತ್ತೊಂದು ತಿದ್ದುಪಡಿ ಇದೆ. ಅದರ ನಂ. ೪೪೯. ಅದನ್ನು ಮಂಡಿಸಲು ಕೋರುವೆ.

೪ನೇ ವಿಧಿಯನ್ನು ಹೀಗೆ ಬದಲಾಯಿಸಬೇಕು,

**"**೪ – ಯಾವುದೇ ಸಂಪ್ರದಾಯ ಅಥವಾ ನಡವಳಿಕೆ**,** ಈ ಶಾಸನ ಜಾರಿಗೆ ಮುನ್ನ ಆಚರಣೆಯಲ್ಲಿದ್ದು, ಅದು ಬಂಧನಕಾರಿಯಾಗಿದ್ದಲ್ಲಿ ಮತ್ತು ಯಾವುದೇ ಗ್ರಂಥ, ನಿಯಮಗಳು ಹಾಗೂ ಹಿಂದೂ ಸಂಪ್ರದಾಯವನ್ನು ಅರ್ಥೈಸುವ, ಅಥವಾ ಬೇರೆ ಯಾವ ಶಾಸನವೆ ಇರಲಿ ಅವು ವಿವಾಹ ಮತ್ತು ವಿಚ್ಛೇದನ, ವಿಷಯಗಳಲ್ಲಿ ಆದ್ಯತೆಯನ್ನು ಪಡೆದಿರುತ್ತವೆ.**"**

ಇದು ಸೆಕ್ಷನ್ ೪ಕ್ಕೆ ವ್ಯತಿರಿಕ್ತವಾಗಿದೆ. ಆದರೂ ನನ್ನ ಮಿತ್ರರಾದ ಡಾ. ಅಂಬೆಡ್ಕರ್‌ರು **"**ಸಂಪ್ರದಾಯ**"** ನೀಡಿರುವ ವ್ಯಂಗ್ಯ ಅರ್ಥವನ್ನು ನಾನು ಅಂಗೀಕರಿಸಲಾರೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಎಲ್ಲಾ ವರ್ಗೀಕರಣವನ್ನೂ ಒಂದು ತಿದ್ದುಪಡಿಯ ಅಡಿಯಲ್ಲಿ ತರಲುಬಯಸಿರುವೆ. ತಿದ್ದುಪಡಿ ೧೨೮ ಕೂಡಾ ಸಂಪ್ರದಾಯಕ್ಕೆ ಸಂಬಂಧಿಸಿದೆ. ಎಲ್ಲಿ ಶಾಸನ ಮೌನವಾಗಿದೆಯೊ ಅಲ್ಲಿ ನಂ. ೪೪೯ ತಿದ್ದುಪಡಿಯಲ್ಲಿ ಸೂಚಿಸಿದಂತೆ ಸಂಪ್ರದಾಯಗಳೆ ಊರ್ಜಿತವಾಗಿರುತ್ತವೆ.

**ಶ್ರೀ ಸಂತಾನಂ :** ಇದು ಕಲಮು ೪ಕ್ಕೆ ಸಂಪೂರ್ಣ ವಿರೋಧವಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಕಲಮು ೪– ಈ ಕೆಳಕಂಡಂತೆ ಬದಲಾಯಿಸಬೇಕು.

"೪ – ಯಾವುದೇ ಸಂಪ್ರದಾಯ ಅಥವಾ ನಡವಳಿಕೆ ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದು ಅವು ಈ ಶಾಸನಕ್ಕೆ ಅಸಂಗತವಾಗಿದ್ದಲ್ಲಿ ಅವು ಅನೂರ್ಜಿತಗೊಳ್ಳುವುವು"

ನನ್ನದು ಇನ್ನೊಂದು ತಿದ್ದುಪಡಿ ಇದೆ.

**ಮಾನ್ಯ ಉಪಸಭಾಧ್ಯಕ್ಷರು** : ಅದು ಅವಶ್ಯಕವೆ?

**ಶ್ರೀ ನಜೀರುದ್ದೀನ್ ಅಹಮದ್** : ಅದು ಹೆಚ್ಚು ವಿಶದವಾಗಿದೆ. ನಾನು ಮಂಡಿಸಲು ಕೋರುವೆ.

ನಾಲ್ಕನೆ ಕಲಮಿನ ಬದಲಿಗೆ ಇದನ್ನು ಸೇರ್ಪಡಿಸಬೇಕು.

"೪ – ಯಾವುದೇ ಗ್ರಂಥಗಳು, ಹಿಂದೂ ಶಾಸನಗಳಿಗೆ ಹಾಗೂ ಅದರ ಅರ್ಥವನ್ನು ವಿವರಿಸುವುದಕ್ಕೆ ಸಂಬಂಧಿಸಿದಂತೆ ಅಥವಾ ಪವಿತ್ರಗ್ರಂಥಗಳಿದ್ದರೆ, ನ್ಯಾಯಾಂಗ ನಿರ್ಣಯಗಳು ಅಥವಾ ಸಮಿತಿ ಅಥವಾ ಪ್ರಿವೀ ಕೌನ್ಸಿಲ್‌ನ ನಿರ್ಣಯಗಳು ವಿದ್ವಾಂಸರ ಟೀಕೆಗಳು ಅಥವಾ ಸಂಪ್ರದಾಯಗಳು, ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದು, ಈ ಶಾಸನಕ್ಕೆ ಅಪ್ರಸ್ತುತವಾಗಿದ್ದರೆ ಅವು ಅನೂರ್ಜಿತ."

**ಮಾನ್ಯ ಉಪಸಭಾಧ್ಯಕ್ಷರು** : ಇದೊಂದು ಬೇರೆ ರೂಪದಲ್ಲಿದೆ.

**ಶ್ರೀ ನಜೀರುದ್ದೀನ್ ಅಹಮದ್** : ವಿವರಗಳಲ್ಲಿ ಮಾತ್ರ.

**ಮಾನ್ಯ ಉಪಸಭಾಧ್ಯಕ್ಷರು** : ತಿದ್ದುಪಡಿ (ಮೇಲೆ ಸೂಚಿಸಿದ) ಮಂಡಿಸಲಾಗಿದೆ.

ನಾಲ್ಕನೆಯ ವಿಧಿಯನ್ನು ಹೀಗೆ ಬದಲಾಯಿಸಬೇಕು.

೪ – ಗ್ರಂಥಗಳು, ನಿಯಮಗಳು, ಹಿಂದೂ ಶಾಸನದ ಅರ್ಥಗಳು, ಸಂಪ್ರದಾಯ ಮತ್ತು ನಡವಳಿಕೆ ಈ ಶಾಸನ ಜಾರಿಗೆ ಬರುವ ಮುನ್ನ ಆಚರಣೆಯಲ್ಲಿದ್ದು ಈಗ ಈ ಶಾಸನಕ್ಕೆ ವ್ಯತಿರಿಕ್ತವಾಗಿದ್ದಲ್ಲಿ ಅವು ಅನೂರ್ಜಿತಗೊಳ್ಳುವುವು" ಮತ್ತು

"೪ನೇ ಕಲಮು ಹೀಗೆ ಬದಲಾಯಿಸಬೇಕು.

"೪ – ಗ್ರಂಥಗಳು, ನಿಯಮಗಳು, ಹಿಂದೂ ಶಾಸನದ ಅರ್ಥಗಳು, ಪವಿತ್ರ ಗ್ರಂಥಗಳು, ನ್ಯಾಯಾಂಗ ನಿರ್ಣಯಗಳು ಉಚ್ಚ ನ್ಯಾಯಾಲಯ, ನ್ಯಾಯಾಂಗ ಸಮಿತಿ, ಪ್ರಿವೀ ಕೌನ್ಸಿಲ್ ಪುಸ್ತಕಗಳು, ವಿದ್ವಾಂಸರ ಅಭಿಪ್ರಾಯಗಳು, ಈ ಶಾಸನಕ್ಕೆ ವ್ಯತಿರಿಕ್ತವಾಗಿದ್ದರೆ ಅವು ಅನೂರ್ಜಿತಗೊಳ್ಳುವುವು."

**ಶ್ರೀ ಝುಂಝುನ್‌ವಾಲಾ** : ನಾನು ಮಂಡಿಸಲು ಕೋರುವೆ.

ನಾಲ್ಕನೆಯ ಕಲಮಿನಲ್ಲಿ ಈ ಅಂಶವನ್ನು ಸೇರ್ಪಡಿಸಬೇಕು.

"ಏನೇ ಇದ್ದರೂ ಈ ಶಾಸನ, ಯಾವುದೇ ಗ್ರಂಥ, ಅರ್ಥ, ಹಿಂದೂ ಶಾಸನಕ್ಕೆ ಸಂಬಂಧಿಸಿದಂತೆ ಅಥವಾ ಸಂಪ್ರದಾಯ ನಡವಳಿಕೆ ಅಥವಾ ಜಾರಿಯಲ್ಲಿದ್ದ ಯಾವ ಶಾಸನವನ್ನು ಈ ಮುಂಚೆ ಆಚರಿಸುತ್ತಿದ್ದರೆ, ಅವನ್ನು ಈ ಶಾಸನ ಅನೂರ್ಜಿತ ಎಂದು ಹೇಳಬಾರದು. ಹಿಂದೆ ಜಾರಿಯಲ್ಲಿದ್ದ ಗ್ರಂಥಗಳು, ಅರ್ಥಗಳನ್ನು ಸಂಪ್ರದಾಯ ಹಾಗೂ ನಡವಳಿಕೆಯನ್ನು ಅನೂರ್ಜಿತಗೊಳಿಸುವ ಅಧಿಕಾರವಿಲ್ಲ. ಸರ್ ನನ್ನದು ಮತ್ತೊಂದು ತಿದ್ದುಪಡಿ ಇದೆ. ಅದರ ಸಂಖ್ಯೆ ೪೧೮.

**ಮಾನ್ಯ ಉಪಸಭಾಧ್ಯಕ್ಷರು** : ಅದು ನಂ. ೧೩೦ರ ಪುನರಾವೃತ್ತಿಯಲ್ಲವೆ?

**ಶ್ರೀ ಝುಂಝುನ್‌ವಾಲಾ** : ಅಲ್ಲ ಸ್ವಲ್ಪ ಬೇರೆಯಾಗಿದೆ. ನಾನು ಮಂಡಿಸುವೆ.

೪ಕ್ಕೆ ಕೆಳಗಿನ ಅಂಶಗಳನ್ನು ಸೇರ್ಪಡಿಸಬೇಕು.

ಈ ಶಾಸನ ಜಾರಿಯಲ್ಲಿರುವ ಸಂಪ್ರದಾಯ ಹಾಗೂ ಪದ್ಧತಿಗಳನ್ನು ನಿರಾಕರಿಸುವಂತಿಲ್ಲ, ಏಕೆಂದರೆ ಅವು ನಮ್ಮ ಸಂಸ್ಕೃತಿಯ ಉತ್ತಮಾಂಶಗಳಿಂದ ಕೂಡಿದ್ದು ಜನತೆಯ ಬೆಂಬಲ ಪಡೆದಿವೆ.

**ಮಾನ್ಯ ಉಪಸಭಾಧ್ಯಕ್ಷರು :** ಉತ್ತಮ ಸಂಸ್ಕೃತಿ ಎಂದು ಯಾರು ನಿರ್ಣಯಿಸಬೇಕು? ತಿದ್ದುಪಡಿಗಳೇನೇ ಇರಲಿ ಅವನ್ನು ಸದನದ ಮುಂದೆ ಮಂಡಿಸುವಾಗ, ಅವು ನ್ಯಾಯಾಂಗದಲ್ಲಿ ಊರ್ಜಿತವಾಗುವಂತೆ ಇರಬೇಕು.

**ಶ್ರೀ ಝುಂಝುನ್‌ವಾಲ :** ಅದನ್ನು ೨೯ನೇ ಅನುಚ್ಛೇದದಲ್ಲಿ ತಿಳಿಸಲಾಗಿದ್ದು ಸಮಾಜದಲ್ಲಿಯ ವಿವಿಧ ಸಂಸ್ಕೃತಿಗಳಿಗೆ ರಕ್ಷಣೆ ನೀಡಬೇಕೆಂದೇ ತಿಳಿಸಿದೆ.

**ಮಾನ್ಯ ಉಪಸಭಾಧ್ಯಕ್ಷರು :** ಸದಸ್ಯರ ಅಭಿಪ್ರಾಯವೆಂದರೆ, ವಿವಿಧ ಸಂಸ್ಕೃತಿಗಳನ್ನು ನ್ಯಾಯಾಲಯಗಳು ಸ್ಥಾಪಿಸಬೇಕೆಂದೇ.

**ಶ್ರೀ ಝುಂಝುನ್‌ವಾಲಾ :** ಸಂವಿಧಾನದಲ್ಲಿಯೇ ಹೇಳಲಾಗಿದೆ.

**ಸಂತಾನಂ :** ಬಹುಶಃ ರಾಜ್ಯ ನಿರ್ದೇಶಕ ತತ್ವಗಳಲ್ಲಿರಬಹುದು.

**ಡಾ. ಅಂಬೇಡ್ಕರ್ :** ಅದು ಬಹುಮಟ್ಟಿಗೆ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಥವಾ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿರಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಗಳನ್ನು ಮಂಡಿಸಲಾಗಿದೆ.

೪ನೇ ಕಲಮಿಗೆ ಕೆಳಗಿನ ಅಂಶಗಳನ್ನು ಸೇರ್ಪಡಿಸಬೇಕು.

ಏನೇ ಆಗಲೀ, ಈ ಶಾಸನವು; ಈ ಹಿಂದೆ ಜಾರಿಯಲ್ಲಿದ್ದ ಗ್ರಂಥಗಳ ನಿಯಮಗಳ, ಹಿಂದೂ ಶಾಸನಗಳ, ಅರ್ಥದ, ಪದ್ಧತಿ ಹಾಗೂ ಸಂಪ್ರದಾಯಗಳ ಮೇಲೆ ಯಾವ ನಿರ್ಬಂಧವನ್ನು ವಿಧಿಸುವಂತಿಲ್ಲ. ಯಾವುದೇ ಧರ್ಮದ ಕಟ್ಟುಗಳನ್ನೂ ನಿರ್ಬಂಧಿಸುವಂತಿಲ್ಲ.

ಮುಂದುವರಿದು ಜಾರಿಯಲ್ಲಿರುವ ಸಂಪ್ರದಾಯಗಳ, ಗ್ರಂಥಗಳ, ಹಿಂದೂ ಶಾಸನದ ಅರ್ಥ ಅಥವಾ ಅವುಗಳ ನೈತಿಕತೆಯನ್ನು ನಿರ್ಬಂಧಿಸಲಾರದು.

ಅಂಬೇಡ್ಕರರು ಸೂಚಿಸಿದ ೪ನೇ ಕಲಮಿನಲ್ಲಿ ಕೆಳಗಿನ ಅಂಶಗಳನ್ನು ಸೇರ್ಪಡಿಸಬೇಕು. ಜಾರಿಯಲ್ಲಿರುವ ಸಂಪ್ರದಾಯಗಳನ್ನು ನಿರ್ಬಂಧಿಸಲಾಗದು ಅಥವಾ ನಮ್ಮ ಸಂಸ್ಕೃತಿಯ ಉತ್ತಮಾಂಶ ಹೊಂದಿರುವ ಕಾಯ್ದೆಗಳು ಅಥವಾ ಈ ಶಾಸನ ಅನ್ವಯಿಸುವವರಿಗೆಲ್ಲಾ ಸೇರಿದಂತೆ ಏನನ್ನೂ ರದ್ದುಗೊಳಿಸುವ ಅಧಿಕಾರ ಈ ಶಾಸನಕ್ಕೆ ಇಲ್ಲ.

**ಶ್ರೀ ಸರ್ವಟೆ** (ಮ.ಪ್ರ) : ನಾನು ಮಂಡಿಸಬಯಸುವೆ.

"೪ನೆಯ ಕಲಮಿಗೆ ಈ ಕೆಳಕಂಡ ಅಂಶ ಸೇರ್ಪಡಿಸುವುದು. ಯಾವುದೇ ರಾಜ್ಯದ ಶಾಸಕಾಂಗವು ಬಹುಮತದಿಂದ ಈ ಶಾಸನದ ಅಂಶಗಳು ತಮಗೆ ಸೂಕ್ತವಲ್ಲ ಎಂದು ನಿರ್ಣಯಿಸಿದಲ್ಲಿ ಹಾಗೂ ಬದಲಾವಣೆಗಳನ್ನು ಸೂಚಿಸಿದಲ್ಲಿ ಅದನ್ನು ಶಾಸನದಲ್ಲಿ ಅಳವಡಿಸಬೇಕು."

**ಮಾನ್ಯ ಉಪಸಭಾಧ್ಯಕ್ಷರು :** ಅದು ಹೇಗೆ ಈ ವಿಧಿಯಲ್ಲಿ ತರಲಾಗುವುದು? ಯಾವುದೇ ತಿದ್ದುಪಡಿಯು ವಿಧಿಗೆ ಪೂರಕವಾಗಿರಬೇಕು.

**ಶ್ರೀ ಸರ್ವಟೆ :** ಆದುದರಿಂದಲೇ ಪೂರಕವಾಗಿರದ ಎಲ್ಲಾ ಶಾಸನಗಳನ್ನು ತಿರಸ್ಕರಿಸಲೆಂದೇ ಸದ್ಯದ ಶಾಸನದಲ್ಲಿ ಹೇಳಲಾಗಿದೆ. ಆದರೆ ನನ್ನ ಈ ತಿದ್ದುಪಡಿಯಿಂದ ಭವಿಷ್ಯತ್ತಿನಲ್ಲಿ ಏನಾದರೂ ಸೇರ್ಪಡಿಸಬೇಕೆಂದರೆ, ಆ ಅಧಿಕಾರ ಈ ತಿದ್ದುಪಡಿ ನೀಡುತ್ತದೆ.

ಏಕೆಂದರೆ, ನನ್ನ ಅಭಿಪ್ರಾಯದಲ್ಲಿ, ಶಾಸನದ ಹಲವು ಅಂಶಗಳು ರಾಜ್ಯಕ್ಕೆ ಬೇಡವೆಂದಾದರೆ, ಅವರು ಈ ದಿಶೆಯಲ್ಲಿ ಶಾಸನ ರಚಿಸಿಕೊಳ್ಳುವ ಅಧಿಕಾರ ಹೊಂದಿರಬೇಕು. ಈ ಒಂದು ಶಾಸನದಿಂದ ರಾಜ್ಯ ಅಧಿಕಾರವನ್ನು ಮೊಟಕುಗೊಳಿಸಲಾಗದು.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ಈ ತಿದ್ದುಪಡಿಯ ಉದ್ದೇಶ ಅರ್ಥವಾಗುತ್ತಿಲ್ಲ. ಈ ತಿದ್ದುಪಡಿಯು ಕಲಮು ೧ಕ್ಕೆ ಸಂಬಂಧಿಸಿರಬೇಕು. ಏಕೆಂದರೆ ಇದೇ ಮಾದರಿಯ, ಎರಡನೇ ಕಲಮಿಗೆ ಸಂಬಂಧಿಸಿ ಒಂದು ತಿದ್ದುಪಡಿಯನ್ನು ಈಗಾಗಲೇ ತೀರ್ಮಾನಿಸಲಾಗಿದೆ.

**ಡಾ. ಅಂಬೇಡ್ಕರ್ :** ಪಂಡಿತ ಮಾಲವೀಯ ಅವರ ತಿದ್ದುಪಡಿ ಹೀಗೆಯೇ ಇದೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ಒಂದು ಅಂಶವು ಸೂಕ್ತವಾಗಿಲ್ಲ. ಏಕೆಂದರೆ ಯಾವುದೇ ಸಂದರ್ಭದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಶಾಸನಗಳಲ್ಲಿ ಘರ್ಷಣೆಗೆ ಅವಕಾಶವಿರಬಾರದು. ವಿಶೇಷ ಸಂದರ್ಭಗಳಲ್ಲಿ ಪ್ರಾಂತೀಯ ಶಾಸಕಾಂಗವು ಕಾಯ್ದೆಯನ್ನು ರಚಿಸಲೇಬೇಕೆಂದಿದ್ದರೆ ಅದಕ್ಕೆ ಅಧ್ಯಕ್ಷರ (ರಾಷ್ಟ್ರಪತಿ) ಅವರ ಸಮ್ಮತಿ ಬೇಕೇಬೇಕು. ಪ್ರಾಂತೀಯ ಅಧಿಕಾರದ ನೆಪದಲ್ಲಿ ನಾವು ಅಧ್ಯಕ್ಷರ ಅಧಿಕಾರಕ್ಕೆ ಸಂಚಕಾರ ತರಬಾರದು. ಅಲ್ಲದೇ ಈ ಬಗ್ಗೆ ಕಲಮು ೨ನ್ನು ಚರ್ಚಿಸಿದಾಗ ಪರಿಶೀಲಿಸಿದೆ. ಹೀಗಾಗಿ ಈಗ ತಿದ್ದುಪಡಿ ಅನಿವಾರ್ಯವೆ ಅಥವಾ ಬೇರೆ ರೂಪದಲ್ಲಿ ತಿದ್ದುಪಡಿ ತರಬಹುದೆ?

**ಡಾ. ಸಿ. ಡಿ. ಪಾಂಡೆ** (ಉ.ಪ್ರ) : ನನ್ನದೊಂದು ತಿದ್ದುಪಡಿ ಇದೆ.

**ಮಾನ್ಯ ಉಪಸಭಾಧ್ಯಕ್ಷರು :** ಈಗಾಗಲೇ ಮಂಡಿಸಿರುವಿರೆ?

**ಡಾ. ಸಿ. ಡಿ. ಪಾಂಡೆ :** ಹೌದು ಮಂಡಿಸಿರುವೆ. ಆದರೆ ಪಟ್ಟಿಯಲ್ಲಿ ಬಂದಿಲ್ಲ. ನನ್ನಲ್ಲಿ ಒಂದು ಪ್ರತಿ ಇದೆ.

**ಡಾ. ಅಂಬೇಡ್ಕರ್ :** ನನಗೆ ಪ್ರತಿ ಬಂದಿಲ್ಲ.

**ಡಾ. ಸಿ. ಡಿ. ಪಾಂಡೆ :** ನನಗಂತೂ ಒಂದು ಪ್ರತಿಯನ್ನು ತಲುಪಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ನೀವು ಯಾವಾಗ ನೋಟೀಸ್ ನೀಡಿದ್ದಿರಿ?

**ಡಾ. ಸಿ. ಡಿ. ಪಾಂಡೆ :** ನಾನು ಈ ದಿನ ಬೆಳಗ್ಗೆ ನೋಟೀಸ್ ಆಫೀಸ್‌ನಲ್ಲಿ ನೋಟೀಸ್ ನೀಡಿದೆ. ಅವರು ನನಗೆ ಒಂದು ಪ್ರತಿ ನೀಡಿದರು. ಅದು ನಿಮಗೂ ತಲುಪಬೇಕಾಗಿತ್ತು. ಏನೇ ಇರಲಿ ನನಗಂತೂ ಒಂದು ಪ್ರತಿ ನೀಡಿದ್ದಾರೆ. ಅದರಂತೆಯೇ ನಿಮಗೂ ಮತ್ತು ಮಾನ್ಯ ಮಂತ್ರಿಗಳಿಗೂ ಕಳಿಸಿಕೊಡಬೇಕಾಗಿತ್ತು.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಗಳು ಬೆಳಗಿನಿಂದಲೂ ಪ್ರವಾಹದಂತೆ ಹರಿದುಬರುತ್ತಲಿವೆ. ಇದೊಂದು ಮೊದಲನೆಯ ಬಗೆಯದಾಗಿದೆ. ಆದರೆ ಈ ಮಾದರಿಯ ತಿದ್ದುಪಡಿಗಳಿವೆ. ನಾನು ಕಾನೂನು ಮಂತ್ರಿ ಒಪ್ಪಿದಲ್ಲಿ ಮಾತ್ರ ತಮಗೆ ಅವಕಾಶ ನೀಡುವೆ. ಏಕೆಂದರೆ ನೋಟೀಸ್ ತಲುಪಿಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ತಮ್ಮ ಅನುಮತಿಯನ್ನು ಕೋರಿ ನಾನು ನನ್ನ ಹೆಸರಿನಲ್ಲಿರುವ ನಂ. ೪೨೦ ತಿದ್ದುಪಡಿಯನ್ನು ಮಂಡಿಸುವೆ.

**ಮಾನ್ಯ ಉಪಸಭಾಧ್ಯಕ್ಷರು :** ಅದೇ ತಿದ್ದುಪಡಿ ಬೇರೆ ರೂಪದಲ್ಲಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಇದು ಬದಲಿಯದು. ಇಲ್ಲಿ ಒಂದು ತಪ್ಪಾಗಿದೆ. ಅದು ಬೆರಳಚ್ಚಿನ ತಪ್ಪು. ಅದು "ಎಲ್ಲಿಯವರೆಗೆ ಅಪ್ರಸ್ತುತವೋ" ಎಂದಿರಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅದನ್ನು ಸರಿಪಡಿಸಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದನ್ನು ಸರಿಪಡಿಸಲಾಗಿಲ್ಲ. ಮೂಲದಲ್ಲಿ ಕಲಮು ೪ ಹೇಳುವುದೇನೆಂದರೆ:

"ಈ ಶಾಸನದಲ್ಲಿ ಹೇಳಿದಂತೆಯೇ ಹೊರತು ಬೇರೆಯಾಗಿಲ್ಲ" ಎಂದಿದೆ. ಆದರೆ ಈ ಪದಗಳು ಇಲ್ಲ.

**ಡಾ. ಅಂಬೇಡ್ಕರ್ :** ಆ ಪದಗಳಿವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನನ್ನ ಹೇಳಿಕೆಯಂತೆ ಈ ಸಂಹಿತೆಯ ಮಟ್ಟಿಗೆ ಯಾವುದೇ ಸಂಪ್ರದಾಯದ ಪ್ರಭಾವಕ್ಕೆ ಕೊನೆ ಬೀಳುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ವಿಷಯಗಳನ್ನು ಮಸೂದೆಯಲ್ಲಿ ವ್ಯವಹರಿಸಿರಬೇಕು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅದೇನೂ ಆವಶ್ಯಕವಲ್ಲ. ನಾವು ಸಂಪ್ರದಾಯವನ್ನು ರಕ್ಷಿಸಲಾಗುವುದು ಎಂಬ ಅಂಶವನ್ನು ಸೇರಿಸಿದಾಗ, ಅದರ ಬಲದಿಂದ ಸಂಪ್ರದಾಯ ಬದುಕುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು :** ಮೂಲದಲ್ಲಿ ಏನು ವಿರೋಧಿಸಲಾಗಿದೆ ಎಂಬುದನ್ನು ನೋಡೋಣ. ಈ ವಿಧಿಯಂತೆ ಮಾಡಬೇಕಾದುದೆಂದರೆ, ಸಂಪ್ರದಾಯ ಏನೇ ಇರಲಿ, ಈ ಮಸೂದೆಯಲ್ಲಿ ಸೂಚಿಸಲಾದಂತೆ ಜಾರಿಯಲ್ಲಿರಬಹುದು. ಈಗ ನಿಮ್ಮ ತಕರಾರು ಏನು?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಇದು ನಾಲ್ಕನೆಯ ಹಳೇ ವಿಧಿಗೆ ತಂದ ತಿದ್ದುಪಡಿ. ಅಲ್ಲಿ ಅದರ ಅಪ್ರಸ್ತುತ ಪ್ರಶ್ನೆಯೇ ಉದ್ಭವಿಸಲಾರದು.

**ಮಾನ್ಯ ಉಪಸಭಾಧ್ಯಕ್ಷರು :** ಅಂದರೆ ಎಲ್ಲಿ ಅಪ್ರಸ್ತುತವೊ ಅಲ್ಲಿ ಮಾತ್ರ ಕಾಯ್ದೆ ಜಾರಿಗೊಳಿಸಬೇಕು. ಇಲ್ಲದೇ ಹೋದಲ್ಲಿ ಅವು ಮುಂದುವರಿಯಬೇಕು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ತಿದ್ದುಪಡಿ ಮೂಲ ೪ನೆಯ ಕಲಮಿಗೆ ತಂದದ್ದು. ಆದರೆ ನೂತನ ೪ನೇ ಕಲಮಿಗೆ ಬೇರೆ ತಿದ್ದುಪಡಿಯನ್ನು ತಂದಿದೆ. ಹೀಗಾಗಿ ತಾವು ಡಾ. ಅಂಬೇಡ್ಕರ್ ಅವರು ತಂದಿರುವ ತಿದ್ದುಪಡಿಯನ್ನು ಅಂಗೀಕರಿಸಿದರೆ, ಇದು ಅನವಶ್ಯಕ.

**ಡಾ. ಅಂಬೇಡ್ಕರ್ :** ಅದೇ ನನ್ನ ತಿದ್ದುಪಡಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ನಿಮ್ಮ ತಿದ್ದುಪಡಿಯೊಂದಿಗೆ ಸಹಮತನಿದ್ದೇನೆ. ಆದರೆ ನಾನು ಬೇರೆ ವಿಧವಾದ ತಿದ್ದುಪಡಿಯನ್ನು ನೀಡಿರುವೆ.

**ಡಾ. ಅಂಬೇಡ್ಕರ್ :** ಸದನದ ಮುಂದೆ ಇರುವುದೇ ನನ್ನ ತಿದ್ದುಪಡಿ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಮೂಲದ ನಾಲ್ಕನೆಯ ಕಲಮಿನ ಅಸಂಗತ ಬಗೆಗೆ ಏನನ್ನೂ ಹೇಳಿಯೇ ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ಈ ತಿದ್ದುಪಡಿಯ ಆವಶ್ಯಕತೆ ಇಲ್ಲವೆಂದೇ ತೋರುತ್ತದೆ.

**ಶ್ರೀ ಸಂತಾನಂ :** ಅವರು ಸಂಪ್ರದಾಯ ಅಸಂಗತವಿದ್ದಲ್ಲಿ ಜಾರಿಯಲ್ಲಿರದು ಎಂಬುದನ್ನು ಮೂಲದಲ್ಲಿದ್ದಂತೆ ಪ್ರಸ್ತಾಪಿಸಬೇಕು ಎಂದಿದ್ದಾರೆ.

**ಡಾ. ಅಂಬೇಡ್ಕರ್ :** ನಾವು "ಅಸಂಗತ" ಪದವನ್ನೇ, ಮೂಲವಿಧಿಯಲ್ಲಿಯೂ ಪ್ರಯೋಗ ಮಾಡಿಲ್ಲ. ಮೂಲವಿಧಿ ಹೀಗಿದೆ.

"ಈ ಶಾಸನದಲ್ಲಿ ಹೇಳಲಾದಂತೆ, ಯಾವುದೇ ಗ್ರಂಥ, ನಿಯಮ ಅಥವಾ ಹಿಂದೂ ಶಾಸನಗಳ ಅರ್ಥ, ಅಥವಾ ಸಂಪ್ರದಾಯ, ಪದ್ಧತಿ ಅಥವಾ ಜಾರಿಯಲ್ಲಿದ್ದಿರಬಹುದಾದ ಯಾವುದೇ ಕಾನೂನು, ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದರೆ, ಅವು ಈ ಶಾಸನ ಜಾರಿಗೊಳಿಸಿದ ನಂತರ ಅನೂರ್ಜಿತವಾಗುತ್ತವೆ."

ಆದುದರಿಂದ ಕಾನೂನು ಮತ್ತು ಸಂಪ್ರದಾಯಗಳ ಬಗೆಗೆ ಸ್ಪಷ್ಟವಾಗಿದೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾಲ್ಕನೇ ಕಲಮಿನ ಮೂಲಪಾಠದಲ್ಲಿ "ಅಸಂಗತ"ದ ಬಗೆಗೆ ಪ್ರಸ್ತಾಪಿಸಿಲ್ಲ. ಅದು ಸತ್ಯ. ಆದರೆ ನಾನು ಮಂಡಿಸುವ ತಿದ್ದುಪಡಿ ಆ ವಿಧಿಯನ್ನು ಎರಡು ವಿಧವಾಗಿ ತಿದ್ದಲು ಬಯಸಿದೆ. ಮೊದಲನೆಯದಾಗಿ ಈ ಪದಗಳು ಇಲ್ಲ. ಅದೆಂದರೆ, "ಈ ಶಾಸನದಲ್ಲಿ ವಿಶದಪಡಿಸಿದಂತೆ"

ಎರಡನೆಯದಾಗಿ ಮೂಲವಿಧಿಯಲ್ಲಿ "ಅಸಂಗತ" ಪದವಿಲ್ಲದೇ ಇರುವುದು. ಆಗ ಎಲ್ಲಾ ಸಂಪ್ರದಾಯಗಳು, ಹಾಗೂ ಹಿಂದೂ ಶಾಸನದ ಗ್ರಂಥಗಳು, ಎಲ್ಲಿಯವರೆಗೂ ಅಸಂಗತೆಯಿಂದ ಕೂಡಿರುವುದಿಲ್ಲವೂ ಅಲ್ಲಿಯವರೆಗೆ ಜಾರಿಯಲ್ಲಿರುತ್ತವೆ. ಹಾಗಿರದೇ ಹೋದ ಸಂದರ್ಭದಲ್ಲಿ ಈ ಶಾಸನವೆ ಪರಿಣಾಮಕಾರಿಯಾಗಿರುತ್ತದೆ. ಆದುದರಿಂದ ನಿಮ್ಮ ಅನುಮತಿ ಕೋರಿ ನಾನು ನಂ. ೪೨೦ ನೇ ತಿದ್ದುಪಡಿಯನ್ನು ತಿದ್ದಿದ ರೀತಿಯಲ್ಲಿ ಮಂಡಿಸುವೆ.

ಕಲಮು ೪ಕ್ಕೆ ಕೆಳಗಿನದನ್ನು ಸೇರ್ಪಡಿಸಬೇಕು.

"೪ – ಯಾವುದೇ ಗ್ರಂಥ, ನಿಯಮ, ಹಿಂದೂ ಶಾಸನಗಳ ಅರ್ಥ, ಕಾಯ್ದೆ, ಸಂಪ್ರದಾಯಗಳು ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದರೂ, ಈ ಶಾಸನ ಜಾರಿಗೆ ಬಂದ ಮೇಲೆ ಅವು ಅಸಂಗತ. ಈ ಶಾಸನದಿಂದಾಗಿ ಅವೆಲ್ಲಾ ಅನೂರ್ಜಿತ."

**ಮಾನ್ಯ ಉಪಸಭಾಧ್ಯಕ್ಷರು :** ಈ ಮೇಲೆ ತಿಳಿಸಲಾದ ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಶ್ರೀ ಶ್ಯಾಮನಂದನ್ ಸಹಾಯ್ :** ನಾನು ಮಂಡಿಸಲು ಕೋರುವೆ.

"ಡಾ. ಅಂಬೇಡ್ಕರರು ಸೂಚಿಸಿದ ತಿದ್ದುಪಡಿಯಲ್ಲಿ ಭಾಗ (ಎ) ಕಲಮು ೪ರಲ್ಲಿಯ "ಈ ಶಾಸನ" ಪದಗಳು ಎರಡು ಬಾರಿ ಪ್ರಯೋಗಿಸಲಾಗಿದೆ. ಆದುದರಿಂದ ಅದನ್ನು ತೆಗೆದು: "ಈ ಶಾಸನದ ಯಾವುದೇ ಅಂಶಕ್ಕೆ ಅಥವಾ ವಿಷಯಗಳಿಗೆ ಎಷ್ಟರಮಟ್ಟಿಗೆ ಅಸಂಗತವೊ" ಎಂದು ಸೇರ್ಪಡಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಭಾಗ (ಎ) ನಲ್ಲಿಯೆ?

**ಶ್ರೀ ಶ್ಯಾಮನಂದನ್ ಸಹಾಯ್ :** ಹೌದು.

**ಮಾನ್ಯ ಉಪಸಭಾಧ್ಯಕ್ಷರು :** ಕಾನೂನು ಮಂತ್ರಿಗಳ ಅಭಿಪ್ರಾಯದಂತೆ ಇಲ್ಲಿ ಪ್ರಸ್ತಾಪಿಸಲಾದ ವಿಷಯಗಳನ್ನು ಒಂದು ಬಾರಿ ನಿರ್ಧರಿಸಿದ ಮೇಲೆ ಬೇರೆ ಪ್ರಸ್ತಾಪನೆಗಳು ಇಲ್ಲ. ಆದರೆ ತಮ್ಮ ಸೂಚಿತ ತಿದ್ದುಪಡಿಯಂತೆ, ಯಾವ ಸಂಪ್ರದಾಯಗಳು ಈ ಶಾಸನದಂತೆ ಅಸಂಗತವಾಗಿರದೆ ಹೋದಲ್ಲಿ ಮುಂದುವರಿಯಬಹುದು ಎಂದಂತಾಯಿತು.

**ಶ್ರೀ ಶ್ಯಾಮನಂದನ್ ಸಹಾಯ್ :** ನಿಜಕ್ಕೂ ಅದೇ ನನ್ನ ಉದ್ದೇಶವಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಡಾ. ಅಂಬೇಡ್ಕರ್‌ರಿಂದ ಸೂಚಿಸಲಾದ ತಿದ್ದುಪಡಿ ಭಾಗ (ಎ)ಕಲಮು ೪ರಲ್ಲಿ "ಈ ಶಾಸನದ" ಪದದ ನಂತರ ಎರಡನೆಯ ಬಾರಿ ಅದೇ ಪದದ ಬದಲಾಗಿ "ಈ ಶಾಸನದ ಅಂಶಗಳಿಗೆ ಎಲ್ಲಿಯವರೆಗೂ ಅಸಂಗತವೆನಿಸಬಹುದೊ" ಎಂಬುದನ್ನು ಸೇರ್ಪಡಿಸಬೇಕು.

ಅದಕ್ಕಾಗಿ ಈ ಕೆಳಗಿನ ತಿದ್ದುಪಡಿಗಳನ್ನು ಮಂಡಿಸಲಾಗಿದೆ:

ನಂ. ೬, ಡಾ. ಅಂಬೇಡ್ಕರ್‌ರ, ನಂ ೪೫೦ ಡಾ. ದೇಶಮುಖರ, ನಂ ೧೨೯ ಸರ್ದಾರ್ ಹುಕುಂಸಿಂಗ್‌ರ, ನಂ ೧೨೮, ೪೨೦ ಮತ್ತು ೪೪೪ಪಂಡಿತ ಠಾಕೂರ್ ದಾಸ್ ಭಾರ್ಗವರ, ನಂ ೩೮೦ ಮತ್ತು ನಂ ೪೧೭ **ಶ್ರೀ ಶ್ಯಾಮನಂದನ್ ಸಹಾಯ್.**

ಈ ಎಲ್ಲಾ ತಿದ್ದುಪಡಿಗಳೂ ಮತ್ತು ವಿಧಿಗಳೂ ಚರ್ಚೆಗಳು ಮುಕ್ತವಾಗಿವೆ.

**ಡಾ. ದೇಶಮುಖ :** ಇದೊಂದು ಪ್ರಮುಖ ವಿಧಿಯಾಗಿದ್ದು ಅಧಿಕ ಮಹತ್ವವನ್ನು ಪಡೆದಿದೆ. ಏಕೆಂದರೆ ಸದ್ಯದ ಕಾನೂನಿನ ಅಂಶಗಳು ಕೇವಲ ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿವೆ. ಈ ಕಾರಣಕ್ಕೆಂದೇ ನಾನು ಕಲಮು ೩ಕ್ಕೆ ಸಂಬಂಧಿಸಿದಂತೆ "ಸಂಪ್ರದಾಯ ಮತ್ತು ನಡವಳಿಕೆ" ಪದಗಳ ವ್ಯಾಖ್ಯೆ ಅನವಶ್ಯಕವೆಂದೇ

ಹೇಳಿದೆ. ಅಲ್ಲದೆ ನನ್ನ ಭಾವನೆಯಂತೆ ವಿವಾಹ ಹಾಗೂ ವಿಚ್ಛೇದನಗಳಿಗೆ ಸಂಬಂಧಿಸಿದಂತೆ ಸಂಪ್ರದಾಯಗಳನ್ನು ಬಹಿಷ್ಕರಿಸಬಾರದೆಂದೆ ಅಭಿಪ್ರಾಯವಿದ್ದು ಅವನ್ನು ಕಾರ್ಯಾಚರಣೆಯಲ್ಲಿ, ವಾರಸುದಾರಿಕೆ ಹಾಗೂ ಪಿತ್ರಾರ್ಜಿತ ಆಸ್ತಿ ಪಡೆಯಲು ಈ ಶಾಸನದಲ್ಲಿರುವಂತೆ; ಅದನ್ನು ಮುಂದುವರಿಸಬೇಕು. ಆದುದರಿಂದ, ನಾವು ಈಗ ಈ ಕಲಮುಗಳನ್ನು ಕೇವಲ ವಿವಾಹ ಮತ್ತು ವಿಚ್ಛೇದನಕ್ಕೆ ಮಾತ್ರ ಸೀಮಿತಗೊಳಿಸುವುದರಿಂದ, ನಾಲ್ಕನೆಯ ಕಲಮಿನಲ್ಲಿ ಸಂಪ್ರದಾಯ ಮತ್ತು ನಡವಳಿಕೆಗಳ ವ್ಯಾಖ್ಯೆಗಳಿಗೆ ಒತ್ತಾಯಿಸುವ ಮಹತ್ವವಿಲ್ಲ. ಆದುದರಿಂದ ೩ನೆಯ ಕಲಮಿನಲ್ಲಿಯೂ ವ್ಯಾಖ್ಯೆಯನ್ನು ಕೈಬಿಡಬೇಕೆಂದು ಹೇಳಿದೆ. ವ್ಯಾಖ್ಯೆಯ ಬಗೆಗೆ ನಾನು ಡಾಕ್ಟರರೊಂದಿಗೆ ಸಹಮತ ಹೊಂದಿರುವೆ. ಏಕೆಂದರೆ ಅದರಲ್ಲಿಯ ಪದಪ್ರಯೋಗ ಸಂಪೂರ್ಣವಾಗಿ ನಿಯಮಗಳಿಗೆ ಮತ್ತು ಕಾನೂನಿಗೆ ಸೂಕ್ತವಾಗಿದೆ. ಅದೇನಾದರೂ ಉದಾರತೆಯನ್ನು ತೋರಿದ್ದಲ್ಲಿ (ಶ್ರೀಮತಿ ದುರ್ಗಾಬಾಯಿ ಪೀಠದಲ್ಲಿ) ಮತ್ತು ವ್ಯಾಪ್ತಿಯನ್ನು ಕುಟುಂಬದ ಸಂಪ್ರದಾಯಗಳಿಗೆ ಎಂದೇ ಹೇಳಬಹುದು. ಹೀಗಾಗಿ ಆ ವ್ಯಾಖ್ಯೆಗೆ ಏನೂ ವಿರೋಧವಿಲ್ಲ. ಆದರೆ, ಸಭೆಯ ಮುಂದೆ ಇರುವ ಶಾಸನದ ಅಂಶಗಳನ್ನು ಕುರಿತಂತೆ, ನಾನು ಮಾನ್ಯಮಂತ್ರಿವರ್ಯರನ್ನು ಶೀಘ್ರವಾಗಿ ಪುನರ್ ಪರಿಶೀಲಿಸುವಂತೆ ಕೋರುವೆ. ಏಕೆಂದರೆ ಶಾಸನದ ಈ ಅಂಶಗಳು ಕೇವಲ ವಿವಾಹ ಮತ್ತು ವಿಚ್ಛೇದನಗಳಿಗೆ ಮಾತ್ರ ಸೀಮಿತವಾಗಿವೆ. ಅವರೇ ಹೇಳಿದಂತೆ ಈ ಶಾಸನದ ಅನೇಕ ಅಂಶಗಳನ್ನು ಪರಿಶೀಲಿಸಿ ಒಂದು ಸೂಕ್ತಮಾರ್ಗಕ್ಕೆ ಆಸ್ಪದ ನೀಡಬೇಕಾಗಿದೆ ಎಂದಾಗ ಈ ಶಾಸನದಲ್ಲಿ ಸೂಕ್ತ ಬದಲಾವಣೆಗಳಿಗೆ ಆಸ್ಪದವಿದೆ ಎಂದಂತಾಗಿದೆ, ಈ ಹಿನ್ನೆಲೆಯಲ್ಲಿ ಈ ಶಾಸನದಂತೆ ಸಂಪ್ರದಾಯದ ಮೇಲೆ ಆಗಬಹುದಾದ ಪ್ರಭಾವ ಮತ್ತು ಹಿಂದೂ ಶಾಸನಗಳ ಅರ್ಥ ಮತ್ತು ನಡವಳಿಕೆಗಳ ಪರಿಣಾಮಗಳನ್ನು ಆಲೋಚಿಸಬೇಕೆಂದೆ ಹೇಳುವೆ.

ಒಂದು ವೇಳೆ ನಾವು ಡಾ. ಅಂಬೇಡ್ಕರ್‌ರ ತಿದ್ದುಪಡಿಯನ್ನೇ ಅಂಗೀಕರಿಸಿದರೆ, ನನ್ನ ನಂಬಿಕೆಯಂತೆ ನಾಲ್ಕನೆಯ ಕಲಮಿನ ಉಪಕಲಮು(ಎ) ಹೀಗಿದೆ:–

"ಯಾವುದೇ ಗ್ರಂಥ, ನಿಯಮ ಮತ್ತು ಹಿಂದೂ ಶಾಸನಗಳ ಅರ್ಥ, ಸಂಪ್ರದಾಯಗಳು ಈ ಶಾಸನದ ಮುಂಚೆ ಜಾರಿಯಲ್ಲಿದ್ದರೆ, ಅವು ಈ ಶಾಸನ ಜಾರಿಗೆ ಬಂದ ಮೇಲೆ ಅನೂರ್ಜಿತವಾಗುತ್ತವೆ." ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ವಿವಾಹ ಮತ್ತು ವಿಚ್ಛೇದನೆಗೆ ಸಂಬಂಧಿಸಿದ ಸಂಪ್ರದಾಯಗಳೆಲ್ಲಾ ನಿಷೇಧಕ್ಕೆ ಗುರಿಯಾಗುತ್ತವೆ.

**ಶ್ರೀ ಜೆ. ಆರ್. ಕಪೂರ್ :** ವಿಶೇಷ ರಕ್ಷಣೆ ನೀಡಿದಲ್ಲಿ ಮಾತ್ರ ಉಳಿಯಬಹುದು.

**ಡಾ. ದೇಶಮುಖ :** ನಾನು ನನ್ನ ಮಿತ್ರ ಸಹಾಯ್ ಅವರ ತಿದ್ದುಪಡಿಯ ನೋಟೀಸಿಗೆ ಸಂಪೂರ್ಣ ಬೆಂಬಲ ನೀಡುವೆ. ಅವರು ಪ್ರಯೋಗಿಸಿದ ಪದಗಳಿಂದ ವಿವಾಹ ಹಾಗೂ ವಿಚ್ಛೇದನೆಯ ಬಗೆಗೆ ಶಾಸನ ರಚನೆಗೊಂಡಲ್ಲಿ ಯಾವ ಸಂಪ್ರದಾಯಗಳಿಗೂ ಆಸ್ಪದ ಇರುವುದಿಲ್ಲ.

**ಡಾ. ಅಂಬೇಡ್ಕರ್ :** ನಾವು ಹಲವನ್ನು ರಕ್ಷಿಸುತ್ತೇವೆ.

**ಡಾ. ದೇಶಮುಖ :** ಅದನ್ನು ಲಿಖಿತದಲ್ಲಿರಿಸಿದರೆ ಮಾತ್ರ.

**ಡಾ. ಅಂಬೇಡ್ಕರ್ :** ಕಲಮು ಆ ಪದಗಳಿಂದಲೇ ಆರಂಭವಾಗುತ್ತದೆ. "ಈ ಶಾಸನದಲ್ಲಿ ಹೇಳಿದಂತೆ ಮಾತ್ರ".

**ಡಾ. ದೇಶಮುಖ :** ನನ್ನ ಅಭಿಪ್ರಾಯದಂತೆ ವಿವಾಹ ಮತ್ತು ವಿಚ್ಛೇದನಗಳಿಗೆ ಸಂಬಂಧಿಸಿದಂತೆ, ಸಂಪ್ರದಾಯಗಳಿರುವುದು ಸೂಕ್ತ ಏಕೆಂದರೆ ನಮಗೆ ಪಂಜಾಬ ಜೀವಂತ ಸಾಕ್ಷಿರೂಪದಲ್ಲಿದ್ದು, ಅಲ್ಲಿ ಕಾನೂನಿಗಿಂತ, ಸಂಪ್ರದಾಯಗಳಿಗೇ ಅಧಿಕ ಗೌರವ ನೀಡಲಾಗುತ್ತಿದೆ.

**ಡಾ. ಅಂಬೇಡ್ಕರ್ :** ನಾವು ಪಂಜಾಬಿಗಳನ್ನು ನಮ್ಮ ಮಟ್ಟಕ್ಕೆ ಎತ್ತುತ್ತೇವೆ.

**ಡಾ. ದೇಶಮುಖ :** ಆ ದೃಷ್ಟಿಕೋನದಿಂದಲೇ ನಾನೊಂದು ತಿದ್ದುಪಡಿಯನ್ನು ಮಂಡಿಸಿದ್ದು. ಅದರಲ್ಲಿ "ಸಂಪ್ರದಾಯ ಮತ್ತು ನಡವಳಿಕೆ" ಪದಗಳನ್ನು ಕೈಬಿಡಬೇಕೆಂದೂ ಸೂಚಿಸಿರುವೆ. ಏಕೆಂದರೆ ಯಾವ ಸಂಪ್ರದಾಯಗಳು ಅಸಂಗತವಲ್ಲವೋ ಮತ್ತು ಕಲಮು ೩ರ ಅವಶ್ಯಕತೆಗಳನ್ನು ಪೂರೈಸಬಲ್ಲವೋ ಅವು ಮುಂದುವರಿಯಬಹುದು. ಇದನ್ನು ಮಾಡದೇಹೋದಲ್ಲಿ ಯಾವುದೇ ಶಾಸನದ ಅಂಶಗಳು ಫಲಕಾರಿಯಾಗದೇ ಹೋಗಬಹುದು. ನನಗೆ ತಿಳಿದಂತೆ ೪ನೇ ಕಲಮಿನ ಭಾಗ (ಎ)ಯನ್ನು ಸದ್ಯ ಇದ್ದಂತೆಯೇ ಅಂಗೀಕರಿಸಿ ಅದರೊಂದಿಗೆ ಸಂಪ್ರದಾಯಗಳನ್ನು ಮುಂದುವರೆಸಿದಲ್ಲಿ ಶಾಸನಕ್ಕೆ ಬೆಂಬಲ ದೊರಕುತ್ತದೆ. ಆದುದರಿಂದ "ಸಂಪ್ರದಾಯ ಮತ್ತು ನಡವಳಿಕೆ" ಪದಗಳನ್ನು ಕೈಬಿಡುವುದೇ ಉತ್ತಮ. ನನ್ನ ಹಲವು ಮಿತ್ರರು ಸೂಚಿಸಿದಂತೆ ಸಂಪ್ರದಾಯಗಳು ಕಾನೂನನ್ನು ಮೀರಿ ಮುಂದುವರಿಯುವ ಪ್ರಭಾವ ಹೊಂದಿವೆ ಎಂದೇ ಹೇಳಿದ್ದಾರೆ. ಆದರೆ ಕಲಮು ನಾಲ್ಕಕ್ಕೆ ವಿರೋಧ. ಹೀಗಾಗಿ ಆ ಕಲಮು ಕೈಬಿಡುವ ಅಥವಾ ಅದಕ್ಕೆ ವಿರೋಧವಾಗಬಹುದು.

**ಶ್ರೀ ಜೆ. ಆರ್. ಕಪೂರ್ :** ಅದು ಶಾಸನವನ್ನೇ ವಿರೋಧಿಸಿದಂತಾಗುತ್ತದೆ,

**ಡಾ. ದೇಶಮುಖ :** ಅದು ಶಾಸನಕ್ಕೆ ವಿರೋಧವೆಂಬುದನ್ನು ಒಪ್ಪುವೆ. ಆದರೆ ನಾನು ಹೇಳಬಯಸುವುದೇನೆಂದರೆ, ಸಾಮಾನ್ಯವಾಗಿ ಸರ್ವರಿಗೂ ಸಮ್ಮತವಾಗಿರುವ ಸಂಪ್ರದಾಯಗಳನ್ನು ಮುಂದುವರಿಸಿದ್ದಲ್ಲಿ ತಪ್ಪೇನಿಲ್ಲ. ಏಕೆಂದರೆ ಅವುಗಳ ಆಚರಣೆಯಿಂದ ಶಾಸನಕ್ಕೆ ಯಾವ ಅಡಚಣೆಯೂ ಉಂಟಾಗಲಾರದು. ಆದುದರಿಂದ ಕಲಮು (ಎ)ಯನ್ನು ಮುಂದುವರಿಸದೇ ಕೈಬಿಡಬೇಕು. ಏಕೆಂದರೆ ಮೂಲದಲ್ಲಿ ಹೇಳಿದಂತೆ ಯಾವುದೇ ಗ್ರಂಥ, ನಿಯಮ, ಸಂಪ್ರದಾಯಗಳು ಈ ಶಾಸನ ಜಾರಿಗೆ ಬಂದ ಮೇಲೆ ರದ್ದಾಗುವುವು ಎಂಬುದನ್ನು ಅಲ್ಪ ಸುಧಾರಿಸಿದ್ದೇವೆ. ಏಕೆಂದರೆ ಅದನ್ನು ವಿವಾಹ ಮತ್ತು ವಿಚ್ಛೇದನೆಗೆ ಸೀಮಿತಗೊಳಿಸಲಾಗಿದೆ. ಹೀಗಾಗಿ ಸಂಪ್ರದಾಯಗಳನ್ನು ಮುಂದುವರಿಯಲು ಬಿಟ್ಟಲ್ಲಿ ಅದರಿಂದ ಜನತೆಯ ಬೆಂಬಲ ದೊರಕುವುದು ಹಾಗೂ ಶಾಸನಕ್ಕೆ ವಿರೋಧವೂ ತಗ್ಗುವುದು. ನಾನು ತಿದ್ದುಪಡಿಯನ್ನು ಕುರಿತು ಹೇಳಬೇಕಾದುದನ್ನೆಲ್ಲಾ ಹೇಳಿರುವೆ.

**ಸರ್ದಾರ್ ಹುಕುಂ ಸಿಂಗ್ :** ನಾನು ನನ್ನ ತಿದ್ದುಪಡಿಯನ್ನು ಮಂಡಿಸಿರುವೆ. ಅದರ ಉದ್ದೇಶವೂ ಡಾ. ದೇಶಮುಖರ ತಿದ್ದುಪಡಿಯಂತೆ ಇದೆ. ನಾನು ಡಾ. ದೇಶಮುಖರ ಅಭಿಪ್ರಾಯವನ್ನು ಸಮರ್ಥಿಸುವೆ. ಅದರೊಂದಿಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸುವೆ. ೩ನೇ ಕಲಮಿನಲ್ಲಿ ನಾವು ಸಂಪ್ರದಾಯ ಮತ್ತು ನಡವಳಿಕೆಗಳ ವ್ಯಾಖ್ಯೆಯನ್ನು ನೀಡಿರುವೆವು. ಅದನ್ನು ಹೇಗೆ ಗೌರವಿಸಿದ್ದೇವೆ ಎಂಬುದನ್ನು ಇಲ್ಲಿ ಪ್ರಯೋಗಿಸಲಾದ ಪದಗಳಿಂದ ಕಾಣಬಹುದಾಗಿದೆ.

ಸಂಪ್ರದಾಯ ಮತ್ತು ನಡವಳಿಕೆಗಳು, ಕಾನೂನಿನಷ್ಟೇ, ಕೆಲವು ಪ್ರದೇಶ, ಸಮುದಾಯ ಹಾಗೂ ಕುಟುಂಬಗಳಲ್ಲಿ ಪ್ರಭಾವಶಾಲಿಯಾಗಿವೆ. ಆದರೆ ಅವು ಸಾರ್ವಜನಿಕ ನೀತಿಗೆ ವಿರೋಧವಾಗಿರಬಾರದು ಎಂದೆಲ್ಲಾ ಹೇಳಿದ ಮೇಲೆ, ನಾಲ್ಕನೆಯ ಕಲಮಿನಲ್ಲಿ ಸಂಪ್ರದಾಯಗಳಿಗೆ ಸಂಹಾರಸ್ವರೂಪ ಹೇಳಿಕೆ ನೀಡದಿರುವುದು ಶೋಚನೀಯ.

**ಓರ್ವ ಮಾನ್ಯ ಸದಸ್ಯರು :** ರಕ್ಷಣೆ ನೀಡಲಾಗಿದೆ.

**ಸರ್ದಾರ್ ಹುಕುಂ ಸಿಂಗ್ :** ರಕ್ಷಣೆ ಇದೆ– ಸೂಕ್ತವೆನಿಸಿದ್ದಕ್ಕೆ ಕಾನೂನಿನಲ್ಲಿ ರಕ್ಷಣೆಗಳನ್ನು ನೀಡಲೇಬೇಕು. ಆದರೆ ನಾನು ಅದನ್ನು ಬೇರೆ ದೃಷ್ಟಿಯಿಂದ ನೋಡಬಯಸುವೆ. ಆದರೆ ಶಾಸನದ ಪ್ರತಿಯೊಂದು ಕಲಮಿನಲ್ಲಿ ಅಪವಾದಗಳಿಗೆ ಅಥವಾ ರಿಯಾಯಿತಿಗಳಿಗೆ ಅವಕಾಶ ನೀಡಿದರೆ, ಶಾಸನದ ಗಾಂಭೀರ್ಯವೇ ಕಳಚಿ ಹೋಗಬಹುದು. ಹೀಗೆ ಮಾಡುವುದರ ಬದಲಾಗಿ, ಶಾಸನಸಮಾನವಾದ ಸಂಪ್ರದಾಯಗಳನ್ನೇ ಮುಂದುವರಿಯಲು

ಬಿಟ್ಟಲ್ಲಿ ಏನೂ ಹಾನಿಯಾಗಲಾರದು. ಏಕೆಂದರೆ ಅವು ಜನತೆಯ ಹೃದಯವನ್ನು ಗೆದ್ದಿವೆ. ಹಲವರು ಈ ಸಂಪ್ರದಾಯಗಳನ್ನು ಮುಂದುವರಿಸಿದ್ದಲ್ಲಿ ವಿವಾದಕ್ಕೆ ಆಸ್ಪದ ಉಂಟಾಗಬಹುದು ಎಂದಿದ್ದಾರೆ, ಕಾನೂನಿಗೂ ಇದು ಅನ್ವಯವಾಗುತ್ತದೆ ಎಂಬುದನ್ನು ಮರೆಯಲಾಗದು. ಈ ಅಂಶವನ್ನು ಮೇಯ್ನ್ ಅವರ ಗ್ರಂಥದಿಂದ ಉದಾಹರಿಸುವೆ. "ರಿವಾಜ್ ಎ ಆಮ್" ಒಂದು ಸಾರ್ವಜನಿಕ ದಾಖಲೆ, ಇದನ್ನು ಸಾರ್ವಜನಿಕ ಅಧಿಕಾರಿಯೋರ್ವ ತನ್ನ ಸರ್ಕಾರಿ ಕಾರ್ಯಗಳ ನಿಯಮಗಳಂತೆ ಪಾಲಿಸುವಾಗ ದಾಖಲಿಸಿದ್ದಾನೆ. ಅದರಲ್ಲಿ ಹೇಳಿರಬಹುದಾದ ಹೇಳಿಕೆಗಳನ್ನು, ಸಾಂಪ್ರದಾಯಿಕ ಶಾಸನಗಳೆಂದೇ ಪರಿಗಣಿಸಿ, "ರಿವಾಜ್ ಎ ಆಮ್"ನಂತೆ ಪ್ರತಿಯೊಂದು ಜಿಲ್ಲೆಯಲ್ಲಿ ಪ್ರಯೋಗ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

ಆದುದರಿಂದ ಈ ಸಂಪ್ರದಾಯಗಳು ಮೌಖಿಕವಾಗಿರದೆ ಶಾಸನಗಳಂತೆ ಲಿಖಿತರೂಪದಲ್ಲಿವೆ. ಅಲ್ಲದೇ ಕಾಲಕಾಲಕ್ಕೆ ಜಾರಿಯಲ್ಲಿರುವ ಸಂಪ್ರದಾಯಗಳಂತೆ ಅವನ್ನು ತಿದ್ದಲಾಗುವುದು. ಹೀಗಾಗಿ ಅವುಗಳಿಂದ ಯಾವ ಭಯವಾಗಲಿ ಅಪಾಯವಾಗಲಿ ಇರಲಾರದು. ನನ್ನ ಭಯವೆಂದರೆ ಸರಳವಾಗಿ ಜರುಗಿಕೊಂಡು ಹೋಗುವ ವಿಷಯವನ್ನು ಸಂಕೀರ್ಣಕ್ಕೆ ಗುರಿಮಾಡುತ್ತಿರುವೆವು. ಅಂದರೆ ಪಂಜಾಬಿಗಳು ಹಿಂದೂ ಶಾಸನಗಳಿಗೆ ಒಳಪಡುವುದಿಲ್ಲವೆಂದು ದಂಗೆ ಏಳಬೇಕೆ? ಅದು ತುಂಬಾ ತಡವಾಗಿದೆ. ಏಕೆಂದರೆ ಈ ದಿಶೆಯಲ್ಲಿ ಈಗಾಗಲೇ ಪಂಜಾಬಿ ಶಾಸನದ ಕಲಮು ೫ ಸಂಪ್ರದಾಯಗಳನ್ನು ಎತ್ತಿಹಿಡಿದಿದ್ದು ಅವು ಹಿಂದೂ ಶಾಸನಕ್ಕೆ ಪೂರಕವಾಗಿಲ್ಲ. ಪ್ರತಿಯೋರ್ವನಿಗೂ "ಸಾಂಪ್ರದಾಯಿಕ ಶಾಸನ" ಎಂದರೇನು ಎಂಬುದು ತಿಳಿದಿದೆ.

**ಡಾ. ಅಂಬೇಡ್ಕರ್ :** ಸಾಂಪ್ರದಾಯಿಕ ಶಾಸನಕ್ಕಿಂತ ಇದು ಸರಳವಾಗಿದೆ.

**ಸರ್ದಾರ್ ಹುಕುಂ ಸಿಂಗ್ :** ನಮಗೆ ಒಂದೇ ಉಸಿರಿನಲ್ಲಿ, ಇಂದಿನವರೆಗೂ ಹಿಂದೂ ಶಾಸನಗಳಡಿಯಲ್ಲಿದ್ದೇವೆ ಎಂದೇ ಹೇಳಲಾಗುತ್ತಿತ್ತು. ಆದರೆ ಮತ್ತೊಂದು ಉಸಿರಿನಲ್ಲಿ ಬೆನ್ನ ಹಿಂದೆಯೇ ಅದು ಸೂಕ್ತವಾದುದಲ್ಲ ಎಂದೂ ಹೇಳಲಾಗುತ್ತಿತ್ತು. ಆದರೆ ಈಗ ಹಿಂದೂ ಶಾಸನಗಳನ್ನು ಕ್ರೋಡೀಕರಿಸಿ ಅದನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಕಾನೂನು ನಿರ್ಮಾಪಕರು ಇದು ಹಿಂದೂ ಶಾಸನ ಎಂದೇ ಹೇಳಬಯಸುವವರು. ಆದರೆ ಈ ವಿಷಯವನ್ನು ಹೇಗೆ ನಂಬಬೇಕು? ಏಕೆಂದರೆ ಹಲವು ವರ್ಷಗಳ ನಂತರ ಮತ್ತೊಂದು ಪ್ರಕಟಣೆಯು ಬೇರೆ ವಿಷಯವನ್ನು ಬಹಿರಂಗಗೊಳಿಸಿ, ಇದನ್ನು ಸೂಕ್ತವಲ್ಲವೆಂದು ಹೇಳಬಹುದಲ್ಲವೆ? ಆದುದರಿಂದ ಪ್ರಗತಿಯೇ ಮಾನದಂಡವಾದಲ್ಲಿ, ನಮ್ಮ ಸಂಪ್ರದಾಯಗಳೂ ಪ್ರಗತಿಪರವಾಗಿವೆ. ಹೀಗಾಗಿ ನಮ್ಮನ್ನು ನಮ್ಮ ಪಾಡಿಗೆ ಬಿಡಿ. ನೀವು ಮುಂದುವರಿಯಬೇಕೆಂದು ಭಾವಿಸಿದ್ದರೆ, ನಾವು ಈಗಾಗಲೇ ಮುಂದುವರಿದಿದ್ದೇವೆ. ನಮ್ಮನ್ನು ಹಿಂದೆ ತಳ್ಳುವ ಸಾಹಸ ಮಾಡದಿರಿ. ಕಾನೂನು ಸಮಾಜದ ಪ್ರಗತಿಯ ದಿಕ್ಸೂಚಿ. ಆದುದರಿಂದ ಕಾಯ್ದೆ ನಿರ್ಮಾಪಕರು ನಾವು ಆ ಹಂತವನ್ನು ತಲುಪಿದ್ದೇವೆ ಎಂದರೆ ಅದು ಕೇವಲ ಭ್ರಮೆ. ಈ ಪ್ರಯತ್ನ ಕೇವಲ ಏಕರೂಪತೆಯನ್ನು ಜಾರಿಗೊಳಿಸಬೇಕೆಂದೆ ಇದ್ದರೆ ಅದೂ ಕೇವಲ ಭ್ರಮೆ ಎಂದೇ ಹೇಳುವೆ. ಏಕೆಂದರೆ ಆಚಾರ, ವಿಚಾರ, ಸಂಪ್ರದಾಯ ಹಾಗೂ ನಡವಳಿಕೆಗಳನ್ನು ಕೇವಲ ಅಲ್ಪಸಮಯದಲ್ಲಿ ಸಮನ್ವಯಗೊಳಿಸಲು ಆಗದು.

ನಿನ್ನೆ ತಾನೇ ಸಿಖ್ ಜನಾಂಗಕ್ಕೆ ಮನವಿ ಮಾಡಿ, ಹಳೆಯ ಸಂಪ್ರದಾಯಗಳನ್ನು ತೊರೆದು, ರಾಷ್ಟ್ರದೊಂದಿಗೆ ಬೆರೆಯಬೇಕೆಂದು ತಿಳಿಸಲಾಗಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಡಾ. ಅಂಬೇಡ್ಕರರು ನಮ್ಮ ಬಗೆಗೆ ನನ್ನನ್ನು ವಿಚಾರಿಸಬೇಕು.......

**ಸರ್ದಾರ್ ಬಿ.ಎಸ್. ಮಾನ್** (ಪಂಜಾಬ) : ಅವರು ನಮ್ಮನ್ನು ವಿಚಾರಿಸದೆ, ನಮ್ಮ ಬಗೆಗೆ ಬೇರೆಯವರನ್ನು ಕೇಳುತ್ತಾರೆ. ಅವರಿಗೆ ನಮ್ಮ ಬಗ್ಗೆ ಕಾಳಜಿ ಇಲ್ಲ; ಹಾಗೂ ನಮ್ಮ ಅಭಿಪ್ರಾಯಗಳಿಗೆ ಬೆಲೆ ನೀಡುವುದಿಲ್ಲ.

**ಸರ್ದಾರ್ ಹುಕುಂ ಸಿಂಗ್ :** ಅವರು ಈಗ ನನ್ನನ್ನು ಗಮನಿಸುತ್ತಾರೆ. ಅವರು ನಿನ್ನೆ ಮಾಡಿದ ಮನವಿಯನ್ನು

ನಾವು ಗಮನಿಸುತ್ತೇವೆ. ನಾವು ರಾಷ್ಟ್ರದಿಂದ ಬೇರೆ ಇರಬೇಕೆಂದು ಎಂದೂ ಭಾವಿಸಿಲ್ಲ. ಅವರ ಕೋರಿಕೆ ಸಮಂಜಸವಿದೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುವೆ. ಆದರೆ ನಾನು ಅವರಿಗೆ ಜ್ಞಾಪಿಸುವುದೇನೆಂದರೆ ಅವರು ಸರ್ಕಾರದ ಸಂಪುಟದ ಮಟ್ಟದಲ್ಲಿ ಈ ಕಾರ್ಯ ಕೈಗೆತ್ತಿಕೊಂಡು ರಾಷ್ಟ್ರಪತಿಯವರಿಗೆ ಸಲಹೆ ಮಾಡಬೇಕು. ಅವರು ಯಾವ ಭೇದಭಾವನೆಗಳಿಗೆ ಆಸ್ಪದ ನೀಡದೇ, ೧೯೫೦ರ ಪರಿಶಿಷ್ಟಜಾತಿ ಕಾಯ್ದೆಯನ್ನು ತಿದ್ದಬೇಕು.

**ಡಾ. ಅಂಬೇಡ್ಕರ್ :** ನನ್ನ ಮಿತ್ರರು ಸರ್ಕಾರವನ್ನು ಟೀಕಿಸುವ ಕಾನೂನುಬದ್ಧ ಅಧಿಕಾರ ಪಡೆದಿದ್ದಾರೆ. ಆದರೆ ಈ ದಿಶೆಯಲ್ಲಿ ರಾಷ್ಟ್ರಾಧ್ಯಕ್ಷರ ಬಗೆಗೆ ಪ್ರಸ್ತಾಪಿಸುವುದು ಸೂಕ್ತವಲ್ಲ. ಏಕೆಂದರೆ ರಾಷ್ಟ್ರಾಧ್ಯಕ್ಷರು ಕೇವಲ ಸಂಪುಟದ ಸಲಹೆಯಂತೆ ಕಾರ್ಯನಿರ್ವಹಿಸುತ್ತಾರೆ. ಹೀಗಾಗಿ ನನ್ನ ಮಿತ್ರರು ಏನೇ ಟೀಕಿಸಿದರೂ ನಾನು ಅದನ್ನು ಸಹಿಸುವೆ.

**ಮಾನ್ಯ ಅಧ್ಯಕ್ಷರು :** ಈ ವಿಷಯವನ್ನು ಈಗಾಗಲೇ ಮಾನ್ಯ ಉಪಸಭಾಧ್ಯಕ್ಷರು ವಿವರಿಸಿದ್ದಾರೆ. ಹೀಗಾಗಿ ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿ ಯಾವ ಅಭಿಪ್ರಾಯಗಳನ್ನು ಪ್ರಚಾರ ಮಾಡಕೂಡದು ಅಥವಾ ಅವರನ್ನು ಟೀಕಿಸಲೂ ಕೂಡದು.

**ಸರ್ದಾರ್ ಹುಕುಂ ಸಿಂಗ್ :** ಬಹುಶಃ ನಾನು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡಿಲ್ಲ. ಏಕೆಂದರೆ ನಾನು ಡಾ. ಅಂಬೇಡ್ಕರರು, ರಾಷ್ಟ್ರಪತಿಗೆ "ಸಲಹೆ" ಮಾಡಬೇಕೆಂದೇ ಹೇಳಿರುವೆ. ಹೀಗಾಗಿ ನಾನು ನನ್ನ ಇತಿಮಿತಿಯಲ್ಲಿದ್ದೇನೆ. ನಾನು ರಾಷ್ಟ್ರಾಧ್ಯಕ್ಷರ ಬಗೆಗೆ ಏನೂ ಪ್ರಶ್ನಿಸಿಲ್ಲ. ಅವರಿಗೆ ಸಲಹೆ ಮಾಡುವಂತೆ ಕೋರಿದ್ದೇನೆ. ನನ್ನ ಮನವಿ ಎಂದರೆ ಅಂಬೇಡ್ಕರರು ಮೊದಲು ತಾವು ಆಚರಿಸಿತೋರಬೇಕು.

**ಸರ್ದಾರ್ ಬಿ. ಎಸ್. ಮಾನ್ :** ಅಪ್ಪಣೆಯ ಮೇರೆಗೆ, ಮ್ಯಾಡಂ, ನನ್ನ ಮನಸ್ಸಿನಲ್ಲಿ ಒಂದು ಸಂದೇಹ ಮೂಡಿದೆ. ಅದೇನೆಂದರೆ ರಾಷ್ಟ್ರಾಧ್ಯಕ್ಷರು ಸಂಪುಟದ ಸಲಹೆಯಂತೆ ಕಾರ್ಯನಿರ್ವಹಿಸುತ್ತಾರೆ. ಒಂದು ವೇಳೆ ಅದೂ ಈ ಸಮಯದಲ್ಲಿ ಪಂಜಾಬಿನಲ್ಲಿ ರಾಷ್ಟ್ರಪತಿಗಳ ಆಳ್ವಿಕೆ ಇರುವುದರಿಂದ ಅವರ ಆಡಳಿತ ಬಗ್ಗೆ ದೂರು ನೀಡಬೇಕಾದ ಸಂದರ್ಭದಲ್ಲಿ, ನಾನು ಅವರ ಬಗೆಗೆ ಪ್ರಸ್ತಾಪಿಸುವುದು ಅಪರಾಧವಾಗುವುದೆ? ಅದು ಸರಿಯಲ್ಲ ಎಂದರೆ ಅವರ ಕಾರ್ಯಾಚರಣೆಯ ಬಗೆಗೆ ನಾನು ಏನೂ ಪ್ರಸ್ತಾಪಿಸಲಾರೆ.

**ಡಾ. ಅಂಬೇಡ್ಕರ್ :** ಅದರ ಬಗ್ಗೆ ನಾನು ಖಚಿತವಾಗಿ ಹೇಳುವೆ. ನನ್ನ ಮಾನ್ಯ ಮಿತ್ರರು ರಾಷ್ಟ್ರಪತಿಯವರ ಆದೇಶಗಳ ಬಗೆಗೆ ಟೀಕೆ ಮಾಡುವಂತಿಲ್ಲ. ಆದರೆ ಸರ್ಕಾರವನ್ನು ದೂಷಿಸಬಹುದು.

**ಸರ್ದಾರ್ ಬಿ. ಎಸ್. ಮಾನ್ :** ಆದೇಶಗಳು ನೇರವಾಗಿ ರಾಷ್ಟ್ರಪತಿಯವರೆ ನೀಡಿದ್ದರೂ ನನಗೆ ತಿಳಿದಂತೆ ಸಂವಿಧಾನದಲ್ಲಿ ರಾಷ್ಟ್ರಪತಿಯವರು, ಸಂಪುಟದ ಸಲಹೆಯಂತೆ ಆದೇಶಗಳನ್ನು ಹೊರಡಿಸುತ್ತಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಪಂಜಾಬಿನಲ್ಲಿ ರಾಷ್ಟ್ರಪತಿಯವರೆ ಆದೇಶ ನೀಡಿದರೂ, ಅದರ ಜವಾಬ್ದಾರಿ ಸಂಪುಟದ್ದು. ಆದರೆ ಆ ಬಗೆಯ ಆದೇಶಗಳ ಬಗೆಗೆ ಚರ್ಚಿಸಬೇಕಾದಲ್ಲಿ ನಾನು ಅವನ್ನು ರಾಷ್ಟ್ರಪತಿಯ ಆದೇಶಗಳೆಂದೇ ಕರೆಯಬೇಕಾಗುತ್ತದೆ ಅಲ್ಲವೆ?

**ಮಾನ್ಯ ಅಧ್ಯಕ್ಷರು :** ಸಂವಿಧಾನವು ಹೇಳಿರುವಂತೆ, ರಾಷ್ಟ್ರಪತಿಯವರು, ಸಂಪುಟದ ಸಲಹೆ, ಸೂಚನೆಯಂತೆ ಕಾರ್ಯ ಮಾಡುವವರು. ಹೀಗಾಗಿ ಅದರ ಹೊಣೆ ಅವರದಾಗಿರದೆ ಅವರ ಸಂಪುಟದ್ದಾಗಿರುತ್ತದೆ.

**ಸರ್ದಾರ್ ಬಿ. ಎಸ್. ಮಾನ್ :** ಒಂದು ವೇಳೆ ನಾನು ಅವರ ಆದೇಶಗಳ ಬಗೆಗೆ ಮಾತನಾಡಬೇಕೆಂದರೆ ಅದು ತಪ್ಪೇ. ಈ ದಿಶೆಯಲ್ಲಿ ನಿಮ್ಮ ಸ್ಪಷ್ಟ ಅಭಿಪ್ರಾಯ ನನಗೆ ಬೇಕು.

**ಮಾನ್ಯ ಅಧ್ಯಕ್ಷರು :** ಈ ಬಗೆಗೆ ಡಾ. ಅಂಬೇಡ್ಕರರು ಸ್ಪಷ್ಟೀಕರಣ ನೀಡಿದ್ದಾರೆ. ಅವರ ಹೇಳಿಕೆ ಸಮಂಜಸವಾಗಿದೆ.

**ಎರಡು ಸಂದರ್ಭಗಳು :** ರಾಷ್ಟ್ರಪತಿಯನ್ನು ಟೀಕಿಸಲಾಗದು. ಮತ್ತೊಂದು ಅವರು ಏನೇ ಕಾರ್ಯ ಮಾಡಿದರೂ ಅದು ಸಂಪುಟ ಸಲಹೆಯನ್ನು ಆಧರಿಸಿರುತ್ತದೆ. ಹೀಗಾಗಿ ಅವರನ್ನು ಟೀಕಿಸಲಾಗದು.

**ಸರ್ದಾರ್ ಬಿ. ಎಸ್. ಮಾನ್ :** ಅವು ಒಂದು ವೇಳೆ ಸಂವಿಧಾನಬಾಹಿರವಾಗಿದ್ದರೂ ಹಾಗೂ ಕೆಟ್ಟದಾಗಿದ್ದರೂ? ಈ ಬಗೆಯ ಕೆಟ್ಟ ಸಲಹೆಯನ್ನು ಅವರಿಗೆ ನೀಡಲಾಗಿದೆ ಎಂದು ಹೇಳಲಾಗದೆ?

**ಮಾನ್ಯ ಅಧ್ಯಕ್ಷರು :** ನಾನು ಸಂವಿಧಾನವನ್ನು ಅಂಗೀಕರಿಸಿದ್ದು, ಅದರಲ್ಲಿ ತಿಳಿಸಿದಂತೆ ಅವರನ್ನು ಟೀಕಿಸಲಾಗದು.

**ಸರ್ದಾರ್ ಬಿ. ಎಸ್. ಮಾನ್ :** ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಬಹುದೆ?

**ಡಾ. ಅಂಬೇಡ್ಕರ್ :** ಸರ್ಕಾರದ ವಿರುದ್ಧ ಮಂಡಿಸಬಹುದು. ಆದರೆ ರಾಷ್ಟ್ರಪತಿಯವರ ವಿರುದ್ಧವಲ್ಲ.

**ಶ್ರೀ ದಾಮೋದರ್ ಮೆನನ್** (ಟ್ರಾವೆಂಕೂರ್ ಕೊಚ್ಚಿನ್) : ಅವರನ್ನು ನಿಂದನಾ ಗೊತ್ತುವಳಿಗೆ ಗುರಿಮಾಡುವ ಅಧಿಕಾರ ಈ ಸದನಕ್ಕಿಲ್ಲವೆ?

**ಡಾ. ಅಂಬೇಡ್ಕರ್ :** ಅದು ಬೇರೆ ವಿಷಯ.

**ಮಾನ್ಯ ಅಧ್ಯಕ್ಷರು :** ನಾನು ಈ ಬಗೆಗೆ ಸದನದ ನಿಯಮಾವಳಿ ವಿಧಿ (VI) ೧೫೯೯ರ ಗಮನ ಸೆಳೆಯುವೆ. ಅದು ಹೀಗೆ ಹೇಳುತ್ತದೆ: "(VI) ಸದನದಲ್ಲಿ ಸದಸ್ಯರು ಮಾತನಾಡುವಾಗ, ರಾಷ್ಟ್ರಪತಿಗಳ ಹೆಸರನ್ನು ಯಾವ ಕಾರಣಕ್ಕೂ ಎತ್ತಲಾಗದು".

**ಸರ್ದಾರ್ ಬಿ. ಎಸ್. ಮಾನ್ :** ವಾಸ್ತವವಾಗಿ ಹೇಳಬಹುದಾದರೆ, ಸರ್ಕಾರವು ರಾಷ್ಟ್ರಪತಿಗಳ ಹೆಸರನ್ನು ದುರುಪಯೋಗಗೊಳಿಸುತ್ತದೆ. ನಾನು ಅಧ್ಯಕ್ಷರನ್ನು ಟೀಕಿಸಿದರೆ ಅದರ ದುರ್ನಾತ ಸರ್ಕಾರದ್ದೆ ಅಥವಾ ರಾಷ್ಟ್ರಪತಿಗೆ ಸಲಹೆ ನೀಡಿದವರಿಗೆ ಸಂಬಂಧಿಸಿದ್ದು. ಇದು ಜನರೇ ನಿರ್ಣಯಿಸಬೇಕಾದ ವಿಷಯ. ಸದ್ಯ ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆ ಇದೆ. ಹೀಗಾಗಿ ನಾನು ನನ್ನ ಟೀಕೆಯ ಹಕ್ಕನ್ನು ಕಳೆದುಕೊಳ್ಳಲಾರೆ. ಹೀಗೆ ನಡೆದಲ್ಲಿ ವಿಷಾದನೀಯ. ಏಕೆಂದರೆ ಅದು ಭವಿಷ್ಯತ್ತಿನ ಬಾಗಿಲನ್ನೇ ಮುಚ್ಚಬಹುದಾಗಿದೆ.

**ಮಾನ್ಯ ಅಧ್ಯಕ್ಷರು :** ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ಸನ್ಮಾನ್ಯ ಸದಸ್ಯರು ಟೀಕೆಯನ್ನು ಮಾಡಬಹುದು, ಆದರೆ ಸದನದಲ್ಲಿ, ಅದನ್ನು ಸರ್ಕಾರದ ವಿರುದ್ಧ ಮಾಡಬೇಕೇ ಹೊರತು ರಾಷ್ಟ್ರಪತಿಗಳ ವಿರುದ್ಧವಲ್ಲ. ಏಕೆಂದರೆ ರಾಷ್ಟ್ರಪತಿಯವರು ಸರ್ಕಾರದ ಸಲಹೆಯಂತೆ ಕಾರ್ಯ ಮಾಡುತ್ತಾರೆ. ಕೆಟ್ಟ ಸಲಹೆಗಳಿಗೆ ಸರ್ಕಾರ ಹೊಣೆಯಾಗಿದೆಯೆ ಹೊರತು ರಾಷ್ಟ್ರಪತಿಗಳಲ್ಲ.

**ಡಾ. ದೇಶಮುಖ :** ನಾವು ರಾಷ್ಟ್ರಪತಿಗಳನ್ನಲ್ಲ. ಸರ್ಕಾರವನ್ನೇ ಟೀಕಿಸುತ್ತಿದ್ದೇವೆ ಎಂದು ಹೇಳಬಹುದೆ?

**ಮಾನ್ಯ ಅಧ್ಯಕ್ಷರು :** ಅದರಲ್ಲಿ ತೊಂದರೆಯೇ ಇಲ್ಲ. ಸದಸ್ಯರಿಗೆ ಸರ್ಕಾರದ ಕಾರ್ಯವನ್ನು ಟೀಕಿಸುವ ಹಕ್ಕು ಇದ್ದೇ ಇದೆ. ಅದನ್ನು ಯಾವ ಭಯವಿಲ್ಲದೆ ಮಾಡಬಹುದು. ಆದರೆ ನೇರವಾಗಿ ಆ ರಾಷ್ಟ್ರಪತಿಗಳ ಹೆಸರನ್ನು ಪ್ರಸ್ತಾಪಿಸಬಾರದು.

**ಸರ್ದಾರ್ ಬಿ. ಎಸ್. ಮಾನ್ :** ನಾವು ರಾಷ್ಟ್ರಪತಿಗಳ ಹೆಸರನ್ನು ಟೀಕಿಸುವುದಿಲ್ಲ. ಆದರೆ ಅವರ ಕಾರ್ಯಗಳನ್ನು ಏಕೆಂದರೆ ಅದು ಸರ್ಕಾರದ ಕಾರ್ಯಗಳಿಗೆ ಸಂಬಂಧಿಸಿದ್ದು. ನಾವು ಏನನ್ನು ಟೀಕಿಸುತ್ತಿದ್ದೇವೆ ಎಂಬುದನ್ನು ತಾವು ಅರಿಯಬೇಕು, ಅದು ತಮಗೆ ಬಿಟ್ಟ ವಿಷಯ.

**ಮಾನ್ಯ ಅಧ್ಯಕ್ಷರು :** ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಿರುವೆ. ಅವರು ಸರ್ಕಾರವನ್ನೇ ಟೀಕಿಸುತ್ತಿದ್ದೇವೆ ಎಂದಾದರೆ ಅದನ್ನು ಯಾರೂ ತಡೆಹಿಡಿಯಲಾರರು.

**ಸರ್ದಾರ್ ಹುಕುಂ ಸಿಂಗ್ :** ನನ್ನ ಮನವಿಯೇ ಚರ್ಚೆಗೆ ಬರಲಿಲ್ಲ. ನನ್ನ ಉದ್ದೇಶ ರಾಷ್ಟ್ರಪತಿಯವರನ್ನು

ಟೀಕಿಸಬೇಕೆಂದಿಲ್ಲ. ಅವರನ್ನು ನಾನು ದೂಷಿಸಿಲ್ಲ. ಆದರೆ ನನ್ನ ದೂಷಣೆ ಡಾ. ಅಂಬೇಡ್ಕರ್‌ರನ್ನು ಕುರಿತು; ಏಕೆಂದರೆ ಅವರು ನನಗೆ ಸಿಖ್ ಜನಾಂಗಕ್ಕೆ ಅರುಹುವಂತೆ ಮನವಿ ಮಾಡಿದರು. ಆದರೆ ಈ ದೋಷ ಅವರಲ್ಲಿದೆಯೆ ಹೊರತು ನಮ್ಮಲ್ಲಿ ಅಲ್ಲ. ಏಕೆಂದರೆ ಈ ನಾಟಕ ಆರಂಭಿಸಿದವರು ಅವರುಗಳೇ. ಏಕೆಂದರೆ ಪರಿಶಿಷ್ಟ ಜಾತಿಗಳ ಕಾಯ್ದೆ ಕುರಿತು ರಾಷ್ಟ್ರಪತಿಗೆ ಸಲಹೆ ನೀಡಿದವರು ಅವರೇ. ಇದು ನನ್ನ ದೂರು. ಅವರು ನನಗೆ ಮನಸ್ಸನ್ನು ಬದಲಾಯಿಸಬೇಕೆಂದು ಮನವಿ ಮಾಡುವ ಮುಂಚೆ ತಮ್ಮ ಮನಸ್ಸನ್ನು ಬದಲಾಯಿಸಿಕೊಂಡು ಅನ್ಯಾಯವನ್ನು ನಿವಾರಿಸಬೇಕು. ಇದು ನನ್ನ ಮೊದಲನೆಯ ವಿಷಯ.

ಎರಡನೆಯದೆಂದರೆ, ಪಂಜಾಬಿನಲ್ಲಿಯ ಸಂಪ್ರದಾಯಗಳು ಸರಳವಾಗಿದ್ದು ಎಲ್ಲರಿಗೂ ತಿಳಿದಂತಿವೆ. ಎಂದಾಗ ನಾವು ಏಕಪತ್ನಿ ವಿವಾಹದ ಪರವೊ ಅಥವಾ ವಿರೋಧವೊ ಎಂಬುದು ನನ್ನ ಪ್ರಶ್ನೆಯಾಗಿಲ್ಲ. ಏಕೆಂದರೆ ನಮಗೆ ಬೇಕಾದುದೆ ಏಕಪತ್ನಿ ವಿವಾಹ ಪದ್ಧತಿ. ಅದನ್ನು ನಾವು ಸ್ವಾಗತಿಸುತ್ತೇವೆ ಹಾಗೂ ಬೆಂಬಲಿಸುತ್ತೇವೆ. ಯಾರೂ ಅದನ್ನು ವಿರೋಧಿಸದೆ ಸ್ವಾಗತಿಸುತ್ತಾರೆ. ಈಗಾಗಲೇ ಸಾರ್ವಜನಿಕ ಅಭಿಪ್ರಾಯ ಇದರ ಪರವಾಗಿದೆ. ಅಲ್ಲದೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಬಹುಪತ್ನಿ ವಿವಾಹಕ್ಕೆ ಅವಕಾಶ ನೀಡಲಾರದು.

ಸಾಮಾನ್ಯವಾಗಿ ಮನುಷ್ಯನಿಗೆ ಎರಡು ಮದುವೆ ಮಾಡಿಕೊಳ್ಳುವ ಸೌಕರ್ಯಗಳಲ್ಲಿ ಅದು ಕೇವಲ ಕೆಲವರಿಗೆ ಸೀಮಿತವಾಗಿದೆ. ಉದಾಹರಣೆಗೆ ಡಾ. ಅಂಬೇಡ್ಕರರು, ಹೀಗಾಗಿ ನಮ್ಮ ಮುಂದೆ ಏಕಪತ್ನಿ ಪ್ರಶ್ನೆ ಅಲ್ಲದೇ ಹಲವಾರು ವಿಷಯಗಳಿವೆ. ಹಲವಾರು ವಿಧಿನಿಯಮಗಳನ್ನು ವಿರೋಧಿಸಬೇಕಾಗಿದೆ. ಉದಾಹರಣೆಗೆ ಆಸ್ತಿ ಪಡೆಯುವ ವಿಷಯದಲ್ಲಿ ಬಾಲಕಿಗೆ ಆಸ್ತಿ ನೀಡಬಹುದೆ ಎಂಬ ವ್ಯವಸ್ಥೆ ಇಂದಿನವರೆಗೂ ವಿರೋಧಿಸಲಾಗಿತ್ತು. ತಾವು ಪ್ರಗತಿಯ ಹೆಸರಲ್ಲಿ ನಮ್ಮನ್ನು ಹಿಂದೆ ತಳ್ಳುತ್ತಿದ್ದೀರಿ ಏಕೆಂದರೆ ಪಂಜಾಬಿಗಳು ಹಲವಾರು ವಿಷಯಗಳಲ್ಲಿ ಮುಂದುವರಿದಿದ್ದು ದೇಶಕ್ಕೆ ಮಾರ್ಗದರ್ಶನ ನೀಡಬಲ್ಲವರಾಗಿದ್ದರೆ.

(ಪೀಠದಲ್ಲಿ ಮಾನ್ಯ ಉಪ ಸಭಾಧ್ಯಕ್ಷರು)

ಮತ್ತೊಂದು ವಿಷಯದ ಬಗೆಗೆ ನನ್ನ ಮಿತ್ರರಾದ ಪಂಡಿತ ಠಾಕೂರ್ ದಾಸ್ ಭಾರ್ಗವರು ಸದನದಲ್ಲಿ ದತ್ತು ತೆಗೆದುಕೊಳ್ಳುವ ವಿಷಯ ಪ್ರಸ್ತಾಪಿಸಿದರು. ಅದರೊಂದಿಗೆ ನೇಮಿಸಲಾದ ಉತ್ತರಾಧಿಕಾರಿ ಎಂಬುದನ್ನೂ ಸೇರ್ಪಡಿಸಬೇಕು. ಏಕೆಂದರೆ ಅವನೂ ದತ್ತುಪುತ್ರನಂತೆ, ಪುತ್ರ ಸಮಾನನು. ಆದರೆ ಈ ಬಗ್ಗೆ ಯಾವ ವಿಧಿನಿಯಮಗಳನ್ನೂ ಆಚರಿಸುವುದಿಲ್ಲ. ಮತ್ತು ಇದರಲ್ಲಿ ವಯಸ್ಸಿನ ಪ್ರಶ್ನೆಯೇ ಇಲ್ಲ. ಕೇವಲ ಸಂಬಂಧದ ಪ್ರಶ್ನೆಯಾಗಿದೆ.

**ಡಾ. ಅಂಬೇಡ್ಕರ್ :** ನಾವು ಈ ಪ್ರಶ್ನೆಯನ್ನು ಮುಂದಿನ ಹಂತದಲ್ಲಿ ವಿಚಾರಿಸಬಹುದು ಎಂದೇ ಹೇಳಲಾಗಿದೆಯಲ್ಲಾ? ಅದಕ್ಕೆ ಸದನವೂ ಸಮ್ಮತಿಸಿದೆ. ನಾವು ಮೂರನೇ ಕಲಮಿನ "ಪುತ್ರ"ನ ವ್ಯಾಖ್ಯೆಯ ಬಗೆಗೆ ಚರ್ಚಿಸಿದಾಗ ಪಂಡಿತ ಠಾಕೂರ ದಾಸ್ ಭಾರ್ಗವ ಅವರು ಈ ಪ್ರಶ್ನೆಯನ್ನು ಎತ್ತಿದರು. ಸೂಕ್ತ ಹಂತದಲ್ಲಿ ಇದನ್ನು........

**ಮಾನ್ಯ ಉಪಸಭಾಧ್ಯಕ್ಷರು :** ನಾವು ವ್ಯಾಖ್ಯೆಯನ್ನು ಚರ್ಚಿಸಿದಾಗ.

**ಡಾ. ಅಂಬೇಡ್ಕರ್ :** ನನ್ನ ಮಿತ್ರರು ದತ್ತುಪುತ್ರನ ಬಗೆಗೆ ಪ್ರಸ್ತಾಪಿಸುತ್ತಿದ್ದಾರೆ. ಆದರೆ ನಾವು ಇನ್ನೂ ಆ ವಿಷಯ ಚರ್ಚೆಗೆ ಎತ್ತಿಕೊಂಡಿಲ್ಲ. ಸಮಯ ಹಾಳಾಗದಂತೆ ೪ನೇ ಕಲಮನ್ನು ಸಂಪೂರ್ಣಗೊಳಿಸೋಣ.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಅದನ್ನು ಭಾಗ VII ರವರೆಗೂ ಮುಂದೂಡಲು ಒಪ್ಪಿದ್ದೇವೆ. ಅದನ್ನು ಆ ಹಂತದಲ್ಲಿ ಚರ್ಚಿಸಬಹುದು.

**ಸರ್ದಾರ್ ಹುಕುಂ ಸಿಂಗ್ :** ಮಾನ್ಯ ಮಂತ್ರಿವರ್ಯರ ಹೇಳಿಕೆಯಿಂದ ನನಗೆ ಭಯವಾಗಿದೆ.

ನಾನು ಹೇಳುತ್ತಿರುವುದನ್ನು ಅವರು ಗ್ರಹಿಸಿಲ್ಲವೊ ಅಥವಾ ನಾನೇ ತಪ್ಪಿರುವೆನೆ? ಎಂಬುದೆ ನನಗೆ ಹೊಳೆಯುತ್ತಿಲ್ಲ.

**ಡಾ. ಅಂಬೇಡ್ಕರ್ :** ನಾನು ಗ್ರಹಿಸಿದ್ದೇನೆ. ಪಂಜಾಬ್ ಮುಂದುವರಿದಿದೆ. ಆವರು ನಮ್ಮನ್ನು ಅನುಸರಿಸಲು ಇಷ್ಟಪಡದೆ ಇರಬಹುದು. ನಾನು ಮುಂದೆ ಹೆಚ್ಚು ವಿವರಿಸುವೆ.

**ಬಾಬು ರಾಮನಾರಾಯಣ ಸಿಂಗ್ :** ತಾವು ಅದನ್ನು ಕಲಿಯಬೇಕು.

**ಸರ್ದಾರ್ ಹುಕುಂ ಸಿಂಗ್ :** ಕಲಿಯಬೇಕಾದವರು ಅಂಬೇಡ್ಕರರೊಬ್ಬರೇ ಅಲ್ಲ. ಹಲವಾರು ಜನರು. ನಾನು ಸದಸ್ಯರಿಗೆ ಮತ ನೀಡುವಂತೆ ಕೋರಬೇಕಾದರೆ, ಅವರಿಗೆ ನನ್ನ ವಿಷಯ ತಿಳಿದಿರಬೇಕಲ್ಲವೆ........

**ಡಾ. ಅಂಬೇಡ್ಕರ್ :** ನಂತರದಲ್ಲಿ .

**ಮಾನ್ಯ ಉಪಸಭಾಧ್ಯಕ್ಷರು :** ನಾನು ಈಗ ಸೂಚಿಸುವುದೇನೆಂದರೆ, ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಆದರೆ ಮತ್ತೊಂದು ಸ್ಥಾನದಲ್ಲಿ ಇದೇ ವಿಷಯವನ್ನು ೩ನೇ ಕಲಮಿನಲ್ಲಿ ಚರ್ಚೆಗೆ ಎತ್ತಿಕೊಳ್ಳಬಹುದು. ಏಕೆಂದರೆ "ದತ್ತುಪುತ್ರ" ಹಾಗೂ ವಾರಸುಪುತ್ರರ ಬಗೆಗೆ ಏಳನೆಯ ಕಲಮಿನಲ್ಲಿ ಹಲವಾರು ನಿರ್ಬಂಧಗಳಿಗೆ ಗುರಿಮಾಡಿದ್ದು ಅಲ್ಲಿಯೂ ಅವಕಾಶವಿದೆ. ಆಗ ಕೈಗೆತ್ತಿಕೊಳ್ಳಬಹುದು.

**ಸರ್ದಾರ್ ಹುಕುಂ ಸಿಂಗ್ :** ನಾನು ಹೇಳಿದ್ದನ್ನು ಯಾರೂ ಅರ್ಥಮಾಡಿಕೊಳ್ಳದೆ ಹೋದುದು ವಿಷಾದನೀಯ. ನಾನು ಹೇಳಬಯಸಿದುದೇನೆಂದರೆ, ಯಾವ ಸಂಪ್ರದಾಯಗಳು, ಕಾನೂನಿಗಿಂತ ಅಧಿಕ ಪರಿಣಾಮಕಾರಿಯಾಗಿವೆಯೊ ಅವು ಮುಂದುವರಿಯಬೇಕು. ಏಕೆಂದರೆ ಆ ಬಗೆಯ ಸಂಪ್ರದಾಯಗಳು ಸಮಾಜಕ್ಕೆ ಸಹಕಾರಿಯಾಗಿವೆ; ಹಾಗೂ ಪ್ರಗತಿಗೆ ಪೂರಕವಾಗಿವೆ. ಅಲ್ಲದೆ ಈ ಬಗೆಯಲ್ಲಿ ಕಾನೂನಿಗೆ ಮತ್ತು ಸಂಪ್ರದಾಯಕ್ಕೆ ಅಧಿಕ ಭೇದಭಾವಗಳಿರುವುದಿಲ್ಲ. ಅದಕ್ಕಾಗಿಯೆ ನಾನು "ಪುತ್ರ"ರ ಬಗೆಗೆ ಪ್ರಸ್ತಾಪಿಸಿರುವೆ ಹೊರತು ನಾನು "ಪುತ್ರ" ಪದದ ವ್ಯಾಖ್ಯೆಯನ್ನು ನೀಡುತ್ತಿಲ್ಲ. ಇದು ನನ್ನ ಉದ್ದೇಶ., ಆದರೆ ಡಾಕ್ಟರ್ ಸಾಹೇಬರೆ, ಚರ್ಚೆ ಬೇಡವೆಂದರೆ ನಾನು ನಿಲ್ಲಿಸಲು ಸಿದ್ಧನಿದ್ದೇನೆ.

**ಡಾ. ಅಂಬೇಡ್ಕರ್ :** ನಾನು ಈ ವಿಷಯವನ್ನು ನಂತರ ಚರ್ಚಿಸಬಹುದೆಂದೇ ಹೇಳಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಇದನ್ನು ನಂತರ ಚರ್ಚಿಸೋಣ.

**ಸರ್ದಾರ್ ಹುಕುಂ ಸಿಂಗ್ :** ಹಾಗಾದರೆ, ನಾನು ಏನು ಹೇಳುತ್ತಿದ್ದೇನೆಂದರೆ, ಸರ್, ಪಂಜಾಬಿನಲ್ಲಿಯೆ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಇದು ಎಲ್ಲರಿಗೂ ತಿಳಿದ ಹಾಗೂ ಅಂಗೀಕರಿಸಿದ ವಿಷಯವಾಗಿದೆ. ಅದು ಹಿಂದೂ ಕಾನೂನಿನ ಮೇಲೆ ಅಗಾಧ ಪರಿಣಾಮ ಬೀರಿ ಅದನ್ನು ಬದಿಗೆ ತಳ್ಳಿದ ವಿಷಯ ಪಂಜಾಬಿನಲ್ಲಿ ನ್ಯಾಯಾಧೀಶರು, ನ್ಯಾಯವಾದಿಗಳು ಹಾಗೂ ಶ್ರೀ ಸಾಮಾನ್ಯರಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಈ ಪದ್ಧತಿ ಬಹುಕಾಲದಿಂದಲೂ ಜಾರಿಯಲ್ಲಿದ್ದು ನ್ಯಾಯಾಂಗ ತೀರ್ಪುಗಳ ಬೆಂಬಲವನ್ನು ಪಡೆದಿದೆ. ಅದು ಸೂಕ್ತ ಹಾಗೂ ಸಕ್ರಮವಾಗಿದೆ. ಸಮಯದ ಸವಾಲನ್ನೂ ಎದುರಿಸಿ ಏಕರೂಪತೆಯನ್ನು ಹೊಂದಿದೆ. ನಾನು ಈಗಾಗಲೇ ಹೇಳಿದಂತೆ ಅದು ಸಾರ್ವಜನಿಕ ದಾಖಲೆಯಲ್ಲಿ ಸ್ಥಾನ ಪಡೆದಿದೆ. ಅದರ ಬಗ್ಗೆ ದ್ವಂದ್ವ ಅಭಿಪ್ರಾಯಕ್ಕೆ ಆಸ್ಪದವೇ ಇಲ್ಲ. ಆದುದರಿಂದ ನಾನು ಈ ಪದಗಳನ್ನು ಕೈಬಿಡಬೇಕೆಂದೇ ಮಂಡಿಸುವೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಹೇಳಬಹುದಾದರೆ, ಸರ್. ಈ ಕಲಮು ಸದನದ ಮುಂದೆ ಮಂಡಿಸಿ, ಅದು ಒಪ್ಪಿದ್ದಲ್ಲಿ.

**ಹಲವಾರು ಸದಸ್ಯರು :** ಇಲ್ಲ. ಇಲ್ಲ. ಇದೊಂದು ವಾದಗ್ರಸ್ಥ ಕಲಮು ಆಗಿದೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ತಿದ್ದುಪಡಿಗಳನ್ನು ಮಂಡಿಸಿರುವ ಸದಸ್ಯರಿಗೆ ಅವಕಾಶ ನೀಡುವೆ.

ಮೊದಲು ಡಾ. ದೇಶಮುಖ, ನಂತರ ಸರ್ದಾರ ಹುಕುಂ ಸಿಂಗ್ ನಂತರ ಪಂಡಿತ ಠಾಕೂರ್ ದಾಸ್ ಭಾರ್ಗವ ಅಲ್ಲಿಂದ ಶ್ರೀ ನಜೀರುದ್ದೀನ್ ಅಹಮದ್ ಮತ್ತು ಜುನ್‌ಜುನ್‌ವಾಲಾ. ಬಹುಶಃ ಯಾವ ದುರುದ್ದೇಶವಿಲ್ಲದೆ ಅವಕಾಶ ನೀಡಿರುವೆ.

**ಹಲವಾರು ಸದಸ್ಯರು :** ಇದೊಂದು ವಿವಾದಾತ್ಮಕವಾದ ಮಸೂದೆ.

**ಮಾನ್ಯ ಉಪಸಭಾಧ್ಯಕ್ಷರು :** ನಾವು ನಾಳೆ ಒಂದು ದಿನ ಸಭೆ ಸೇರಬೇಕಾಗಬಹುದು. ಆದುದರಿಂದ ನಾಳೆ ಸಭೆ ಸೇರೋಣ.

**ಹಲವಾರು ಸದಸ್ಯರು :** ಇಲ್ಲ. ಇಲ್ಲ.

**ಕ್ಯಾಪ್ಟನ್ ವಿ. ಪಿ. ಸಿಂಗ್ :** ನಾಳೆ ರಜೆ ಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅಪಾರ ಕಾರ್ಯವಿದೆ. ನಾವು ನಾಲ್ಕನೆಯ ಕಲಮನ್ನೇ ಪೂರ್ಣಗೊಳಿಸಿಲ್ಲ. ಒಟ್ಟಾರೆ ಈ ಅಧ್ಯಾಯದಲ್ಲಿ ೫೫ ಕಲಮುಗಳಿವೆ. ನಾಳೆ ಸೇರಲೇಬೇಕು.

**ಕ್ಯಾಪ್ಟನ್ ವಿ. ಪಿ. ಸಿಂಗ್ :** ಈ ವಿಧೇಯಕದ ಬಗೆಗೆ ಅರಿಯಬೇಕಾದ ವಿಷಯಗಳಿವೆ. ನಾವು ಅಧ್ಯಯನ ಮಾಡಬೇಕು. ಆದುದರಿಂದ ಸಮಯ ಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ನಾಳೆಯ ದಿನ ಯಾವ ಪ್ರಶ್ನೆಗಳಿಲ್ಲ. ಹೀಗಾಗಿ ಬೆಳಿಗ್ಗೆ ೯.೩೦ ಗಂಟೆಗೆ ಸಭೆಸೇರಲು ನನ್ನ ವಿರೋಧವಿಲ್ಲ. ಆದುದರಿಂದ ನಾಳೆ ಬೆಳಿಗ್ಗೆ ೯.೩೦ ಗಂಟೆಗೆ ಸಭೆಸೇರೋಣ. ನಾಳೆ ಇದೊಂದೆ ಕಾರ್ಯ.

**ಹಲವಾರು ಸದಸ್ಯರು :** ಸರಿ.

**ಒಬ್ಬ ಮಾನ್ಯ ಸದಸ್ಯರು :** ಎಷ್ಟು ಸಮಯದವರೆಗೆ?

**ಮಾನ್ಯ ಉಪಸಭಾಧ್ಯಕ್ಷರು :** ಮಾಮೂಲಿನಂತೆ ೧.೧೫ರವರೆಗೆ.

**ಒಬ್ಬ ಮಾನ್ಯ ಸದಸ್ಯರು :** ೯.೩೦ ರಿಂದ ೨ ಗಂಟೆಯವರೆಗೆ.

**ಪಂಡಿತ ಮೈತ್ರ** (ಬಂಗಾಲ): ನಮಗೆ ಬೇರೆ ಕಾರ್ಯಗಳಿವೆ. ಹೀಗಾಗಿ ೧೨ ಗಂಟೆವರೆಗೆ ಸೇರೋಣ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ವಿಧೇಯಕದಲ್ಲಿ ಇದೊಂದು ವಿವಾದಾತ್ಮಕ ಕಲಮು ಆಗಿದೆ. ಸರ್, ನಾನು ಏನು ಹೇಳುತ್ತಿದ್ದೆ ಎಂದರೆ, ಕಲಮು ೪ ತುಂಬಾ ವಿವಾದಾತ್ಮಕವಾಗಿದೆ. ವಾಸ್ತವಿಕವಾಗಿ ೨ನೇ ಕಲಮಿನ ಚರ್ಚೆಗೆ ಸದನದ ಅಧಿಕ ಸಮಯ ಕಳೆದಿದೆ. ಆದರೆ ನಾಲ್ಕನೆಯ ಕಲಮು ಇನ್ನೂ ವಿವಾದಾತ್ಮಕವಾಗಿಯೇ ಉಳಿದಿದೆ. ನಮಗೆಲ್ಲರಿಗೂ ತಿಳಿದಂತೆ ಮಾನವರು ತಮ್ಮ ಸಂಪ್ರದಾಯಗಳನ್ನು ಪ್ರೀತಿಸುತ್ತಾರೆ. ಯಾವ ಸಮಾಜದಲ್ಲಿ ಕಾನೂನನ್ನು ಸೂಕ್ತವಾಗಿ ಜಾರಿಗೊಳಿಸುವ ವ್ಯವಸ್ಥೆ ಇಲ್ಲವೊ ಅಲ್ಲಿ ಸಂಪ್ರದಾಯಗಳೆ ಮಹತ್ವಸ್ಥಾನ ಹೊಂದಿರುತ್ತವೆ. ಹೀಗಾಗಿ ಅವು ಜನತೆಯ ಹೃದಯದಲ್ಲಿ ಅಚ್ಚಳಿಯದೆ ಉಳಿದುಕೊಳ್ಳುತ್ತದೆ. ಅಲ್ಲಿ ಕಾನೂನು ಹೇರುವುದು ಫಲಕಾರಿಯಾಗಲಾರದು. ಹೀಗಾಗಿ ನಾವು ಆ ಪ್ರದೇಶಗಳಿಗೆ ಭೇಟಿ ನೀಡಿದಾಗ **"**ನಮ್ಮ ಸಂಪ್ರದಾಯಗಳು ಸುರಕ್ಷಿತವಾಗಿರಬಾರದೆ?**"** ಎಂದು ಜನರು ಪ್ರಶ್ನಿಸುತ್ತಿದ್ದಾರೆ. ಈಚೆಗೆ ನಾನು ಕೇಂದ್ರದಲ್ಲಿ ಮಂತ್ರಿಯಾಗಿರುವ ನನ್ನ ಮಿತ್ರರ ಮನೆಗೆ ಹೋಗಿದ್ದೆ. ಅಲ್ಲಿ ಅವರ ಮನೆಯ ಓರ್ವ ನೌಕರನು 'ಸರ್ ಹಿಂದೂ ಕೋಡ್'ನ ಬಗೆಗೆ ಏನು ಕ್ರಮ ಕೈಗೊಳ್ಳುವಿರಿ ಎಂದೇ ಪ್ರಶ್ನೆ ಮಾಡಿದ. ಅದರ ಬಗ್ಗೆ ಚರ್ಚೆ ಮುಂದುವರಿದಿದೆ. ಹಲವು ಅಂಶಗಳನ್ನು ಅಂಗೀಕರಿಸಬಹುದು ಎಂದೆ. ಶೀಘ್ರವಾಗಿ ಅವನು ನನ್ನನ್ನು ಮರುಪ್ರಶ್ನಿಸಿ ಸರ್ ಅದು ನಮ್ಮ ವಿವಾಹ ವಿಚ್ಛೇದನೆಯನ್ನು ಹೋಗಲಾಡಿಸುವುದೆ? ಆಗ ನಾನು ವಿಚ್ಛೇದನೆಯ ಅಂಶಗಳು ಪಾಸಾಗಬಹುದು. ಆದರೆ ಯಾವ ಸಂಪ್ರದಾಯಗಳು ಶಾಸನಕ್ಕೆ ವಿರೋಧವಾಗಿವೆಯೊ ಅವು ಉಳಿಯಲಾರವು ಎಂದೇ ಹೇಳಿದೆ.

ಇದರಿಂದ ಅವನಿಗೆ ಸಂತಸವಾಗಲಿಲ್ಲ. ಅವನಿಗೆ ತನ್ನ ಸಂಪ್ರದಾಯ ಅದು ಸರಿಯೊ ಅಥವಾ ತಪ್ಪೊ ಮುಂದುವರಿದುಕೊಂಡು ಬರಬೇಕೆಂಬ ಮೋಹ. ಆದುದರಿಂದ ಯಾವ ಸಂಪ್ರದಾಯಗಳು ಜನರ ಮೆಚ್ಚುಗೆ ಪಡೆದಿವೆಯೊ ಅವು ಮುಂದುವರಿಯಬೇಕು. ಉತ್ತರ ಭಾರತೀಯ ಸಂಪ್ರದಾಯಗಳಿಗೆ ವಿರೋಧವಾಗಿ ದಕ್ಷಿಣದಲ್ಲಿ ಹಲವಾರು ಸಂಪ್ರದಾಯಗಳನ್ನು ಆಚರಿಸಲಾಗುತ್ತದೆ. ಅದು ಅವರಿಗೆ ಸರಿ ಎಂದೇ ಕಾಣಬಹುದು. ಅದಕ್ಕೆ ಅಡಚಣೆಯಾಗಬಾರದು. ಹೀಗೆ ಭಾರತದಲ್ಲಿರುವ ಸಂಪ್ರದಾಯಗಳಿಗೆ ಯಾವ ಬಗೆಯ ಆತಂಕಗಳಿರಬಾರದು ಈ ದಿಶೆಯಲ್ಲಿ ಪಂಜಾಬಿನ ವ್ಯವಸಾಯ ಕುಟುಂಬಗಳಲ್ಲಿ ಜಾರಿಯಲ್ಲಿರುವ ಒಂದು ಸಂಪ್ರದಾಯವನ್ನು ವಿವರಿಸುವೆ. ಅದರಲ್ಲಿ **"ಕರೇವಾ ವಿವಾಹ"** ಪದ್ಧತಿ ಜಾರಿಯಲ್ಲಿದೆ. ಈ ವ್ಯವಸ್ಥೆಯಲ್ಲಿ ವಿಧವೆಯಾದವಳು ತನ್ನ ಪತಿಯ ಸಹೋದರನನ್ನೆ ವಿವಾಹವಾಗಬಹುದು. ಕೆಲವು ಪ್ರಕರಣಗಳಲ್ಲಿ ಹಿರಿಯ ಅಣ್ಣನನ್ನೇ ವಿವಾಹವಾಗುವ ಕ್ರಮವಿದೆ. ಈ ಬಗೆಯ ವಿವಾಹಗಳಲ್ಲಿ **"ಸಪ್ತಪದಿ"** ಕ್ರಮ ಜಾರಿಯಲ್ಲಿ ಇಲ್ಲ. ಅದೊಂದು ಸಾಂಪ್ರದಾಯಿಕ ವಿವಾಹ. ಈ ವ್ಯವಸ್ಥೆಯ ಅನುಕೂಲವೆಂದರೆ, ಸಂಬಂಧಗಳನ್ನು ಉಳಿಸಿಕೊಳ್ಳುವುದು; ಹಾಗೂ ಮನೆತನದ ಆಸ್ತಿಯು ಬೇರೆಯವರಿಗೆ ಹೋಗದಂತೆ ಕಾಪಾಡುವುದೆ ಆಗಿದೆ. ಅಲ್ಲದೆ ವಿಧವೆಗೆ ಮತ್ತು ಅವಳ ಅನಾಥ ಮಕ್ಕಳಿಗೆ ರಕ್ಷಣೆ ನೀಡುವುದು. ಈ ವ್ಯವಸ್ಥೆ ಬಹುಕಾಲದಿಂದಲೂ ನಡೆದುಬಂದಿದೆ. ಬಹುಶಃ ಈಚಿನ ದಿನಗಳಲ್ಲಿ ಉನ್ನತ ಹಿಂದೂವರ್ಗದವರು ವಿಧವಾ ವಿವಾಹವನ್ನು ಅಂಗೀಕರಿಸಿ ಆಚರಿಸಲು ತೊಡಗಿದ್ದಾರೆ. ಹೀಗಾಗಿ ಪಂಜಾಬಿನ ರೈತ ಕುಟುಂಬಗಳಲ್ಲಿ ಪುರಾತನ ಕಾಲದಿಂದಲೂ ಜಾರಿಯಲ್ಲಿದ್ದ ಪದ್ಧತಿಯನ್ನು ಮೇಲ್ವರ್ಗದ ಹಿಂದೂಗಳು ಅನುಸರಿಸಿದ್ದಾರೆ. ಹೀಗಾಗಿ ಮೃತ ವ್ಯಕ್ತಿಯ ಕಿರಿಯ ಸಹೋದರನಿಗೆ ಹೆಂಡತಿ ಇದ್ದರೂ, ಅಣ್ಣನ ವಿಧವೆಯನ್ನು ಮರು ಮದುವೆ ಮಾಡಿಕೊಳ್ಳಬಹುದು. ಆದರೆ ಇದು ಹಿಂದೂ ಕೋಡಿನಲ್ಲಿ ಬಹುಪತ್ನಿ ವಿವಾಹ ಎಂದೇ ಪರಿಗಣಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು** : ಹೇಗೆ?

**ಪಂಡಿತ ಠಾಕೂರ್ ದಾಸ್ ಭಾರ್ಗವ** : ಏಕೆಂದರೆ ಕಿರಿಯ ಸಹೋದರನು ವಿವಾಹದಿಂದ ಹೆಂಡತಿಯನ್ನು ಪಡೆದಿರುವುದರಿಂದ (ಗಲಾಟೆ)

**ಮಾನ್ಯ ಉಪಸಭಾಧ್ಯಕ್ಷರು** : ಈ ಬಗೆಯ ಸಂಪ್ರದಾಯಗಳು ವಿವಿಧ ಭಾಗಗಳಲ್ಲಿರುವುದು ಸಹಜ. ಆದರೆ ನಾವು ಭೇದಭಾವನೆಗಳ ಬಗೆಗೆ ಹಾಸ್ಯ ಮಾಡಬೇಕಾಗಿಲ್ಲ. ಏಕೆಂದರೆ ಅದು ಅವರ ಮನಸ್ಸಿಗೆ ನೋವು ಉಂಟುಮಾಡಬಹುದು. ನಾನು ವಿಷಯ ತಿಳಿದುಕೊಳ್ಳಬೇಕೆಂದೆ ಪ್ರಶ್ನೆ ಮಾಡಿದೆ. ಈಗ ಸದನಕ್ಕೆ ಪರಿಸ್ಥಿತಿಯ ಅರಿವು ಉಂಟಾಗಿರಬಹುದು.

ಸದನವನ್ನು ಮರುದಿನ ಬೆಳಿಗ್ಗೆ ಅಂದರೆ ೨೨ ಸೆಪ್ಟಂಬರ್ ೧೯೫೧, ೯.೩೦ ಬೆಳಗಿನವರೆಗೂ ಮುಂದೂಡಲಾಗಿದೆ.

## ಹಿಂದೂ ಮಸೂದೆ – ಮುಂದುವರಿಕೆ

**ಪಂಡಿತ ಠಾಕೂರ್ ದಾಸ್ ಭಾರ್ಗವ** (ಹಿಂದಿ ಭಾಷಣದ ಆಂಗ್ಲ ಅನುವಾದ) : ಸರ್, ಓರ್ವ ಸದಸ್ಯರು ನಾನು ಹಿಂದಿಯಲ್ಲಿ ಮಾತನಾಡಬೇಕೆಂದು ತಿಳಿಸಿದ್ದಾರೆ. ಆದುದರಿಂದಲೇ ನಾನು ಅದೇ ಭಾಷೆಯಲ್ಲಿ ಮಾತನಾಡುವೆ.

ನಿನ್ನೆ ಸದನದಲ್ಲಿ ನಾನು ಹೇಳುವಂತೆ ನಮ್ಮ ಸಂಪ್ರದಾಯಗಳು ವಿವಿಧವಾಗಿವೆ. ಅವು ಏಕರೂಪವಾಗಿರದೆ ವಿಭಿನ್ನವಾಗಿವೆ. ಅಲ್ಲದೆ ಪರಸ್ಪರ ವಿರೋಧವಾಗಿಯೂ ಇವೆ. ಆದುದರಿಂದ ನಾವು ಈ ವಿಧೇಯಕದ ಬಗ್ಗೆ ಜಾಗರೂಕರಾಗಿರಬೇಕು. ನಾನು ನಿನ್ನೆಯ ದಿನ **"ಕರೇವ"** ಪದ್ಧತಿಯನ್ನು ವಿವರಿಸಿದಾಗ ಹಲವರು ಹಾಸ್ಯ ಮಾಡಿದರು. ಆದರೆ ಪಂಜಾಬ್ ಮತ್ತು ಅವಧ್ ಭಾಗಗಳಲ್ಲಿ ಇದು ಜಾರಿಯಲ್ಲಿರುವುದರಿಂದ ಯಾರೂ ನಗಬೇಕಾಗಿಲ್ಲ. ಹಿಂದೂ ಸಮಾಜದ ಉನ್ನತ ಆದರ್ಶಗಳ ಹಿನ್ನೆಲೆಯಲ್ಲಿ ಈ ವಿಧವಾದ ವಿವಾಹ ಹಲವರಿಗೆ ಸರಿ ಎನಿಸಿರಲಾರದು, ಏಕೆಂದರೆ ಉನ್ನತ ಹಿಂದೂ ಸಂಪ್ರದಾಯದಂತೆ ಹಿರಿಯ ಸಹೋದರನ ಹೆಂಡತಿ ಮಾತೃಸಮಾನಳು. ಏಕೆಂದರೆ ರಾಮಾಯಣದಲ್ಲಿ ಲಕ್ಷ್ಮಣನು ರಾಮನೊಂದಿಗೆ ವನವಾಸಕ್ಕೆ ಅಪ್ಪಣೆ ಬೇಡಿದಾಗ ಅವನ ತಾಯಿ ಹೀಗೆ ಹೇಳಿದಳು.

*"ರಾಮಂ ದಶರಥಂ ವಿಧಿ, ಮಾಮ್ ವಿಧಿ ಜನಕಾತ್ಮಜಂ;*
*ಅಯೋಧ್ಯಾಮತವಿಂವಿಧಿ, ಗಚ್ಛಾತ್ ಯಥಾ ಸುಖಂ"*

ಲಕ್ಷ್ಮಣನ ತಾಯಿ, ರಾಮನನ್ನು ತಂದೆಯ ಸಮಾನನೆಂದೂ, ಸೀತೆಯನ್ನು ಮಾತೆಯಂತೆಯೂ ಕಾಡನ್ನೇ ಅಯೋಧ್ಯಾನಗರವೆಂದು ಭಾವಿಸಬೇಕೆಂದು ಹೇಳಿದಳು.

ಇದು ನಮ್ಮ ಸಮಾಜದ ಉಚ್ಚ ಧ್ಯೇಯವಾಗಿತ್ತು. ಆದರೆ ಇಂದು ತಮ್ಮ ತಂದೆಯ ವಚನವನ್ನು ಪಾರಿಪಾಲಿಸಲೆಂದೆ ಎಷ್ಟು ಯುವಕರು ಕಾಡಿಗೆ ಹೋಗಲು ಸಿದ್ಧರಿದ್ದಾರೆ?

ಅದು ಒಂದು ಆದರ್ಶ ನಡತೆ. ಇಂದಿಗೂ ನಮ್ಮ ಸಮಾಜದಲ್ಲಿ ಜಾರಿಯಲ್ಲಿರುವ ಸಂಪ್ರದಾಯದಂತೆ, ಪತಿಯ ಚಿಕ್ಕ ಸಹೋದರನನ್ನು **"ದೇವರ್"** ಅಂದರೆ ಭಾವೀಪತಿ ಎಂದೇ ಪರಿಗಣಿಸಿದ್ದು ನಮ್ಮ ಶಾಸ್ತ್ರಗಳು, ಹಿರಿಯ ಸಹೋದರನ ಮಡದಿಯನ್ನು ಮದುವೆಯಾಗಲು ಅವಕಾಶ ನೀಡಿವೆ. ಇದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಈ ಬಗೆಯ ಸಂಪ್ರದಾಯಗಳು ಮದ್ರಾಸ್ ಮತ್ತು ಇತರ ರಾಜ್ಯಗಳಲ್ಲಿಯೂ ಇರುವುದು ನನಗೆ ತಿಳಿದಿದೆ. ಏಕೆಂದರೆ ನಾನು, **"ಕಾಲ ಸಮ್ಮತಿ ಸಮಿತಿ"**ಯ ಸದಸ್ಯನಾಗಿ ಸಮಸ್ತ ಭಾರತದಲ್ಲಿ ಪ್ರವಾಸ ಮಾಡಿದ್ದೇನೆ; ಹಾಗೂ ವಿವಿಧ ಸಂಪ್ರದಾಯ ಮತ್ತು ಪದ್ಧತಿಗಳನ್ನು ವಿಚಾರಿಸಿದ್ದೇನೆ. ಆದುದರಿಂದಲೆ ನಮ್ಮಲ್ಲಿರುವ ವಿವಿಧ ಸಂಪ್ರದಾಯಗಳಲ್ಲಿಯೂ ಸೂಕ್ಷ್ಮ ಭೇದಭಾವಗಳನ್ನು ಅಧಿಕವಾಗಿ ವಿವರಿಸಲು ಹೋಗದೇ, ಜನರ ಮನಸ್ಸಿಗೆ ನೋವು ಉಂಟಾಗದಂತೆ ವರ್ತಿಸಬೇಕು. ಆದುದರಿಂದ **"ಕರೇವಾ"** ವಿವಾಹ ಪದ್ಧತಿಯ ಬಗೆ ನಗುವಂತಹದ್ದೇನೂ ಇಲ್ಲ. ಏಕೆಂದರೆ ಈ ಪದ್ಧತಿಯಿಂದ

ಸಮೂಹಕ್ಕೆ ಶುಭವಾಗಿದೆ. ಅನೇಕ ಕಾಲದಿಂದಲೂ ಹುಡುಗಿಯರು ಮದುವೆಯಾದ ನಂತರ, ಗಂಡನ ಕುಟುಂಬದ ಸದಸ್ಯಳಾಗುತ್ತಾಳೆ. ಅವಳ ಆಸ್ತಿ ಗಂಡನ ಕುಟುಂಬದ ಆಸ್ತಿ. ಹೀಗಾಗಿ ಗಂಡ ತೀರಿದ ನಂತರ ಅವಳನ್ನು ಹಾಗೂ ಅವಳ ಸಂತಾನವನ್ನು ರಕ್ಷಿಸುವುದು ಕುಟುಂಬದ ಜವಾಬ್ದಾರಿಯಾಗಿರುತ್ತದೆ. ಇದೇ "ಕರೇವ ವಿವಾಹ" ಪದ್ಧತಿಯ ಸಾರಾಂಶವಾಗಿದೆ. ಹೀಗಾಗಿ ಅವಳು ತನ್ನ ಪತಿಯ ಮರಣದ ನಂತರ, ಅವನ ಸಹೋದರನ ಮಡದಿಯಾಗಿ ಕುಟುಂಬದ ಸದಸ್ಯಳಾಗಿ ಮುಂದುವರಿಯುತ್ತಾಳೆ. ಇದರಿಂದಾಗಿ ಅವಳಿಗೆ ಮತ್ತು ಮಕ್ಕಳಿಗೆ ಪ್ರೇಮ ವಿಶ್ವಾಸ ಹಾಗೂ ರಕ್ಷಣೆ ದೊರೆಯುತ್ತದೆ. ಸನ್ಮಾನ್ಯ ಸದಸ್ಯರಿಗೆಲ್ಲಾ ತಿಳಿದಂತೆ ಇಂತಹ ಪದ್ಧತಿಗಳು ಜಾರಿಯಲ್ಲಿವೆ. ೧೮೫೬ರ ಪ್ರಕರಣ ೨ ವಿಧವಾ ಪುನರ್ ವಿವಾಹ ಕಾನೂನಿನಂತೆ ವಿಧವೆಯು ಪುನರ್ ವಿವಾಹವಾದಲ್ಲಿ, ಅವಳು ತನ್ನ ಗಂಡನ ಆಸ್ತಿಯ ಮೇಲಿನ ಹಕ್ಕು ಕಳೆದುಕೊಳ್ಳುತ್ತಾಳೆ. ಈ ವಿಷಯಕ್ಕೆ ನಾನು ವಿವಾಹದಡಿಯಲ್ಲಿ ಅವಳಿಗೆ ಈ ಆತಂಕಗಳಿರದೇ ಅವಳು ಕುಟುಂಬದ ಸದಸ್ಯಳಾಗಿ ಮುಂದುವರಿಯುತ್ತಾಳೆ. ಈ ಪದ್ಧತಿಯು ಪಂಜಾಬಿನ ಜಪ್‌ಸಿಖ್ ಸಮುದಾಯದಲ್ಲಿ ಬಹುಮಟ್ಟಿಗೆ ಜಾರಿಯಲ್ಲಿದೆ. ಹೀಗಾಗಿ ವಿಧವೆ ತನ್ನ ಗಂಡನ ಸಹೋದರನನ್ನು ಮದುವೆಯಾಗುವುದರಿಂದ ಅವನ ಆಸ್ತಿಯ ಹಕ್ಕನ್ನೂ ಹೊಂದುತ್ತಾಳೆ. ಹೀಗಾಗಿ ಅವನ ಭಾಗದ ಜಮೀನಿನ ಒಡೆತನ ಅವಳಿಗೆ ಸಲ್ಲುತ್ತದೆ.

**ಕಾನೂನು ಸಚಿವ (ಡಾ. ಅಂಬೇಡ್ಕರ್) :** ಈ ವಿಷಯವನ್ನು ನಾವು ಪುನರ್ ವಿವಾಹದ ಚರ್ಚೆ ಬಂದಾಗ ಪರಿಶೀಲಿಸುವುದು ಸರಿಯಲ್ಲವೆ? ಈಗ ನಾವು ಸಾಮಾನ್ಯ ಚರ್ಚೆ ಕೈಗೆತ್ತಿಕೊಂಡಿದ್ದೇವೆ. ನಾನು ಈಗಾಗಲೇ ಹೇಳಿರುವಂತೆ ಯಾವ ವಿಧಿಯೆ ಇರಲಿ ಅದು ಸಾಕಷ್ಟು ಸಂಪ್ರದಾಯಗಳನ್ನು ಅನುಸರಿಸಿಕೊಂಡಿರುವಂತೆ ನೋಡಿಕೊಳ್ಳಲಾಗುವುದರಿಂದ, ನನ್ನ ಸಲಹೆ ಎಂದರೆ, ನಮ್ಮ ಮಿತ್ರರು ಈ ವಿಷಯವನ್ನು ನಂತರ ಕೈಗೆತ್ತಿಕೊಳ್ಳಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಹಾಗೆಯೇ ಆಲೋಚಿಸಿರುವೆ. ಈಗ ಅವರು ಮಂಡಿಸಿರಬಹುದಾದ ತಿದ್ದುಪಡಿಗಳ ಯಾವ ಭಾಗ ಕಾನೂನಿಗೆ ವಿರೋಧವಾಗಲಾರದೊ ಆ ಸಂಪ್ರದಾಯಗಳನ್ನು ರಕ್ಷಿಸಲಾಗುವುದು. ಬೇರೆ ವಿಷಯಗಳೇನಾದರೂ ಇದ್ದಲ್ಲಿ ಅವನ್ನು ಸೂಕ್ತ ಸಮಯದಲ್ಲಿ ಪರಾಂಬರಿಸಬಹುದು.

**ಡಾ. ಅಂಬೇಡ್ಕರ್ :** ಬಹಳ ವ್ಯತ್ಯಾಸವೇನೂ ಇರದು. ಏಕೆಂದರೆ ಯಾವುದೇ ಪದ್ಧತಿಯ ವಿಧೇಯಕಕ್ಕೆ ಅಪ್ರಸ್ತುತವಾಗದೇ ಇದ್ದಲ್ಲಿ ಎಂಬುದರ ಬದಲಾಗಿ "ನಿರ್ಧರಿಸಿ"ದಂತೆ ಎಂದೂ ಹೇಳಬಹುದಲ್ಲವೆ?

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸದಸ್ಯರು, ಸಂಪ್ರದಾಯಗಳ ವಿವರಣೆಗೆ ಹೋಗದೆ ಸಾಮಾನ್ಯವಾಗಿ ವಿವರಿಸಿದರೆ ಸಾಕು. ವಿವರಣೆಗಳನ್ನು ಸಂಬಂಧಿಸಿದ ವಿಧಿಗಳು ಚರ್ಚೆಗೆ ಬಂದಾಗ ಪರಿಶೀಲಿಸೋಣ.

*********************************************************
*********************************************************
*********************************************************

**ಮಾನ್ಯ ಉಪ ಸಭಾಧ್ಯಕ್ಷರು :** ಅದು ಈ ಸಂಹಿತೆಯ ಭಾವನೆಗೆ ವಿರೋಧವಾಗಲಾರದೆ?

ಇಲ್ಲಿಯವರೆಗೆ ಸಂಪ್ರದಾಯಗಳನ್ನು ಕ್ರೋಡೀಕರಿಸಿಲ್ಲ. ಆದರೆ ವಿವಿಧ ಭಾಗಗಳಲ್ಲಿಯ ವಿವಿಧ ಸಂಪ್ರದಾಯಗಳನ್ನು ಏಕೀಕೃತವಾಗಿ ಕ್ರೋಡೀಕರಿಸುವುದೇ ಈ ವಿಧೇಯಕದ ಗುರಿ. ಏಕೆಂದರೆ ಈ ಮುಂಚೆ ಈ ಕಾರ್ಯವಾಗಿರಲಿಲ್ಲ. ಕೆಲವು ಸಂಪ್ರದಾಯಗಳನ್ನು ನ್ಯಾಯಾಲಯಗಳೂ ಮನ್ನಿಸಿವೆ. ಆದುದರಿಂದ ನಾವು ಪ್ರತಿಯೊಂದು ಕಾಯ್ದೆಯಲ್ಲಿಯೂ ಅಪವಾದಗಳಿಗೆ ಆಸ್ಪದನೀಡುತ್ತಾ ಹೋದರೆ ಕಾನೂನಿನ ಗುರಿಯೇ ತಪ್ಪಿಹೋಗಬಹುದು. ಈ ಸಂಹಿತೆಯಲ್ಲಿ ನ್ಯಾಯಾಲಯಗಳಿಂದ ಮನ್ನಿಸಲಾದ ಸಂಪ್ರದಾಯಗಳಿಗೆ ಆಸ್ಪದವಿದ್ದು, ಮಿಕ್ಕ ಅಸಂಗತ ಸಂಪ್ರದಾಯಗಳಿಗೆ ಅವಕಾಶವೇ ಇಲ್ಲ. ಆದರೆ ಮಾನ್ಯ ಸದಸ್ಯರ ಪ್ರತಿಪಾದನೆ ಸಂಪೂರ್ಣ ತಪ್ಪೆಂದು ನಾನು ಹೇಳಲಾರೆ.

*************************************************************

*************************************************************

*************************************************************

ಎಲ್ಲಿ ಈ ಬಗೆಯ ಸಂಪ್ರದಾಯಗಳ ಮುಂದುವರಿಕೆಗೆ ಅವಕಾಶ ನೀಡಲಾಗಿದೆಯೊ ಅಲ್ಲಿ ಇತರ ಸಂಪ್ರದಾಯಗಳನ್ನು ಕೈಬಿಡಬೇಕು. ಇಲ್ಲವೇ ಕ್ರೋಡೀಕರಣದಿಂದ ಕೆಟ್ಟ ಸಂಪ್ರದಾಯಗಳನ್ನು ಶುದ್ಧಗೊಳಿಸಬೇಕು. ಈ ಸಲಹೆಗೆ ಡಾ. ಅಂಬೇಡ್ಕರರು ಒಪ್ಪಲಾರರು. ಅವರು ಎಲ್ಲಾ ಸಂಪ್ರದಾಯಗಳನ್ನು ಕ್ರೋಡೀಕರಿಸಬೇಕೆನ್ನುತ್ತಾರೆ. ಆದರೆ ನನ್ನ ಮನವಿ ಏನೆಂದರೆ ಕೇವಲ ಉತ್ತಮ ಸಂಪ್ರದಾಯಗಳನ್ನು ಮಾತ್ರ ಕ್ರೋಡೀಕರಿಸಿ, ದುಷ್ಟ ಸಂಪ್ರದಾಯಗಳನ್ನು ಕೈಬಿಡಬೇಕು. ಆದುದರಿಂದ ಆ ಬಗೆಯ ಕ್ರೋಡೀಕರಣಕ್ಕೆ ಅಂದರೆ ದುಷ್ಟ ಸಂಪ್ರದಾಯಗಳಿಗೆ ಆಸ್ಪದ ನೀಡುವ ವಿಧಾನಕ್ಕೆ ನನ್ನ ವಿರೋಧವಿದೆ. ನನ್ನ ತಿದ್ದುಪಡಿಯಂತೆ ಕೇವಲ ಉತ್ತಮ ಸಂಪ್ರದಾಯಗಳನ್ನು ಮಾತ್ರ ಮುಂದುವರಿಸಿಕೊಂಡು ಹೋಗಬೇಕು. ಈ ಬಗೆಗೆ ಸಾರ್ವತ್ರಿಕಗಿವಾ ಜಾರಿಯಲ್ಲಿರುವ ಕಾಯ್ದೆಗೆ ಅಸಂಗತವಾಗದಂತಹ ಸಂಪ್ರದಾಯಗಳನ್ನು ಮುಂದುವರಿಸಬಹುದು.

ನಾವು ಸಂಪ್ರದಾಯಗಳನ್ನು ಕ್ರೋಡೀಕರಿಸುವಲ್ಲಿ ವಿವಾಹ ವಿಚ್ಛೇದನೆಗೆ ಆಸ್ಪದ ನೀಡಲೇಬಾರದು. ಆದರೆ ನಾವು ಆ ಅಧಿಕಾರವನ್ನು ನಮ್ಮ ಮಹಿಳೆಯರಿಗೆ, ಸಂವಿಧಾನಾತ್ಮಕವಾಗಿ, ಅವರ ಸ್ವಾತಂತ್ರ್ಯ ರಕ್ಷಣೆಗೆಂದೇ ನೀಡಿದ್ದೇವೆ. ಮುಂದೆ ಹೋಗಿ ಈ ಅಧಿಕಾರ ನೀಡಿದರೂ, ಬಹುಪತ್ನಿ ವಿವಾಹ ಸಂಪ್ರದಾಯ ಅನಾದಿಕಾಲದಿಂದಲೂ ಜಾರಿಯಲ್ಲಿರುವ ಸಂಪ್ರದಾಯವಾಗಿದೆ. ಆದರೆ ಈ ವಿಧೇಯಕ ಜಾರಿಗೆ ಬಂದ ಮೇಲೆ ಅದು ಅನೂರ್ಜಿತ. ಹೀಗೆಂದಾಗ ಕರೇವಾ ವಿವಾಹ ಪದ್ಧತಿಯಲ್ಲಿ ಯಾವ ವ್ಯಕ್ತಿಗೂ ತನ್ನ ಪತ್ನಿ ಬದುಕಿರುವವರೆಗೂ ವಿವಾಹಕ್ಕೆ ಆಸ್ಪದವಿರಲಾರದು.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಹೇಳುವುದೇನೆಂದರೆ ಕರೇವಾ ವಿವಾಹ ಪದ್ಧತಿಯು ವಿಶೇಷ ಸಂದರ್ಭಗಳಲ್ಲಿ ಉದ್ಭವಿಸುವ ಸಂಗತಿಯಾದುದರಿಂದ ನಾವು ಮುಂದೆ ಅದನ್ನು ಚರ್ಚಿಸಬಹುದು. ಸದ್ಯ ಸಾಮಾನ್ಯ ಚರ್ಚೆ ಜರುಗುತ್ತಿರುವಾಗ ವಿವರಣೆಗಳು ಬೇಡ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ನಿರ್ದಿಷ್ಟ ಸಂಪ್ರದಾಯ ಪ್ರತಿಪಾದಿಸದೆ ಕೇವಲ ಉದಾಹರಣೆಗೆಂದೆ ಒಂದನ್ನು ಮಾತ್ರ ವಿವರಿಸಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ನನಗೆ ತಿಳಿದಂತೆ ಈ ವಿಧೇಯಕವನ್ನು ಮಂಡಿಸಿದ ವ್ಯಕ್ತಿ ಕಾನೂನಿನಿಂದ ಮನ್ನಿಸಲಾದ ಸರ್ವ ಸಂಪ್ರದಾಯಗಳನ್ನು ಅರಿತುಕೊಂಡಿರುವುದಾಗಿ ಹೇಳುತ್ತಾರೆ. ಆದರೆ ಹಲವು ಸದಸ್ಯರು ಕಲ್ಪಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ವಿಷಯಗಳನ್ನು ಸೂಕ್ತ ಸಮಯದಲ್ಲಿ ಚರ್ಚೆಗೆ

ಕೈಗೆತ್ತಿಕೊಳ್ಳೋಣ. ಈಗ ಕೇವಲ ಸಾಮಾನ್ಯ ಚರ್ಚೆ ಮುಂದುವರಿಸೋಣ. ಹೀಗಾಗಿ ಎಲ್ಲಿಯವರೆಗೂ ಈ ಶಾಸನಕ್ಕೆ ಅಸಂಗತವಾಗುವುದಿಲ್ಲವೊ ಅಲ್ಲಿಯವರೆಗೆ ಮುಂದುವರಿಯಬಹುದು ಎಂಬುದನ್ನು ಸೇರ್ಪಡಿಸಬಹುದಲ್ಲವೆ? ಹೀಗಾಗಿ ಈ ವಿಧೇಯಕದ ಜೀವಾಳವಾಗಿರುವ, ಅಸಂಗತ ಸಂಪ್ರದಾಯಗಳ ನಿವಾರಣೆಯ ಬಗೆಗೆ ಆಲೋಚಿಸಿ ಎಂದೇ ಸದಸ್ಯರಿಗೆ ಹೇಳುವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾವು ಸಂಪೂರ್ಣ ಶಾಸನವನ್ನು ಚರ್ಚಿಸುವುದಾದರೆ ಈ ವಿಧಿಯ ಚರ್ಚೆಯೂ ಅನಿವಾರ್ಯ. ಆದರೆ ನಾವು ಕೆಲವು ಅಧ್ಯಾಯಗಳನ್ನೇ ಚರ್ಚಿಸಿ ಅವುಗಳಲ್ಲಿ ಸಂಪ್ರದಾಯಗಳ ಪಾತ್ರದ ಬಗೆಗೆ ನಾನು ಉದಾಹರಿಸಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ವಿವಾಹ ಹಾಗೂ ವಿಚ್ಛೇದನೆಯ ಬಗೆಗೆ ಒಂದು ಅಸಂಗತ ಸಂಪ್ರದಾಯವಿದ್ದಲ್ಲಿಯೂ ಈ ವಿಧಿಯು ಅನಿವಾರ್ಯ. ಏಕೆಂದರೆ ಈ ಮಸೂದೆಯನ್ನು ಮಂಡಿಸಿದವರ ಹೇಳಿಕೆಯಂತೆ ಸೋದರಮಾವನ ಮಗಳನ್ನು ಅಥವಾ ಅಕ್ಕನ ಮಗಳನ್ನು ಅಥವಾ ಅಣ್ಣನ ಮಗಳನ್ನು ಮದುವೆಯಾಗುವ ವಿಷಯಗಳಿಗೆ ಆಸ್ಪದ ನೀಡಬಾರದೆಂದೆ ಇದೆ.

**ಅಂಬೇಡ್ಕರ್ :** ನಾವು ಈ ವಿಷಯವನ್ನು ಸೂಕ್ತ ಹಂತದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

**ಮಾನ್ಯ ಉಪಸಭಾಧ್ಯಕ್ಷರು :** ಕಾನೂನು ಸಚಿವರ ಹೇಳಿಕೆಯಂತೆ ಆ ಬಗೆಯ ವಿವಾಹಗಳಿಗೆ ಕಾಯ್ದೆಯ ಬೆಂಬಲವಿರಲಾರದು. ಆದರೆ ಈ ದಿಶೆಯಲ್ಲಿ ಒಂದು ಸಾಮಾನ್ಯ ವಿಧಿಯು ಇರಬೇಕಾಗುತ್ತದೆ. ಏಕೆಂದರೆ ವಿವಾಹ ಹಾಗೂ ವಿಚ್ಛೇದನೆಯ ಬಗೆಗೆ ಸಾರ್ವಜನಿಕ ನೀತಿಗೆ ಹಾಗೂ ಅಸಂಗತವಾದ ಅನೇಕ ಸಂಪ್ರದಾಯಗಳಿವೆ. ಅವನ್ನು ನಿವಾರಿಸಲು ಇಂತಹ ವಿಧಿಯೊಂದು ಇರಬೇಕು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ತಾವು ಪಟ್ಟಿಯನ್ನು ನೋಡಿದರೆ, ನಾನು ಕಲಮು ೪ರ ಬಗೆಗೆ ಯಾವ ನೋಟೀಸೂ ನೀಡಿಲ್ಲ ಎಂಬುದು ತಮ್ಮ ಗಮನಕ್ಕೆ ಬರುತ್ತದೆ. ನಾನು ಸಾಮಾನ್ಯ ವಿಧಿಯಲ್ಲಿ ಸಂಪ್ರದಾಯಗಳ ಪಾತ್ರ ಏನಿರಬಹುದು ಎಂಬುದಕ್ಕೆ ಮಾತ್ರ ಉದಾಹರಿಸಿರುವೆ. ನಾನು ಮಾನ್ ಅವರು ಹೇಳಿದ 'ಸಂಪ್ರದಾಯ ನಿರ್ಣಯದ ಮೊದಲನೆಯ ನಿಯಮ' ಎಂಬುದನ್ನು ಸಮರ್ಥಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು :** ವಾದಗಳು ನಾಲ್ಕನೆಯ ಕಲಮಿಗೆ ಸಂಬಂಧಿಸಿದ ನಿರ್ಬಂಧಗಳ ಕುರಿತಂತೆ ಅಲ್ಲ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ವಿನಮ್ರತೆಯಿಂದ ಹೇಳಬಯಸುವುದೇನೆಂದರೆ ಕಲಮು ೩ ಹಾಗೂ ೪ರಲ್ಲಿ ಪುನರಾವರ್ತಿಗಳಿವೆ. ನಿನ್ನೆ ನಾನು ಮಾತನಾಡಿದಾಗ ಡಾ. ಅಂಬೇಡ್ಕರರು ನಾಲ್ಕನೆಯ ಕಲಮನ್ನೇ ಹೇಳಿದರು. ಈ ಕಲಮುಗಳಲ್ಲಿ ಪುನರಾವರ್ತನೆಗಳಿರುವುದರಿಂದ ಅಪಾರ್ಥಕ್ಕೆ ಆಸ್ಪದ ನೀಡಿದಂತಾಗುತ್ತದೆ.

ಸೂತ್ರ ಮತ್ತು ಸ್ಮೃತಿಗಳು ಹೇಳುವಂತೆ.

*"ವೇದಃ ವಿಭಿನ್ನಃ ಸ್ಮೃತ್ಯೋ ವಿಭಿನ್ನಃ ನಯ್ಯೋಮನರ್ಯಶ್ಯವಾಚಾ ಪ್ರಮಾಣಂ,*
*ಧರ್ಮಶ್ಚ ತತ್ವಾನ್ ನಿಹಿಂತ ಗುಹ್ಯಂ. ಮಹಾಯೋಜನೋಯೇನಗತಹಸ ಪಂಥ"*

[ಶ್ರುತಿ ಒಂದನ್ನು ಹೇಳಿದರೆ ಸ್ಮೃತಿ ಇನ್ನೊಂದನ್ನು ಹೇಳುತ್ತದೆ. ಆದುದರಿಂದ ಯಾವ ಋಷಿಯ

ಹೇಳಿಕೆಯೂ ಅಂತಿಮವಲ್ಲ. ಧರ್ಮದ ರಹಸ್ಯ(ಕರ್ತವ್ಯ) ತುಂಬಾ ಆಳವಾದುದು. ಆದುದರಿಂದ ಹಿರಿಯರು ಕ್ರಮಿಸಿದ ಮಾರ್ಗದಲ್ಲಿ ನಡೆ] ಆದುದರಿಂದ ೧೮೭೨ ಪಂಜಾಬ್ ಶಾಸನದ ೫ನೇ ಕಲಮಿನಲ್ಲಿ ಹೇಳಲಾದಂತೆ ಸಂಪ್ರದಾಯಗಳಿಗೆ ವಿಶೇಷ ಸ್ಥಾನವಿದೆ. ವ್ಯಕ್ತಿಗತ ಕಾನೂನನ್ನು ಸಂಪ್ರದಾಯದ ಹಿನ್ನೆಲೆಯಲ್ಲಿಯೇ ಪರಾಂಬರಿಸಬೇಕು. ಸರ್, ಕಳೆದ ಒಂದು ಶತಮಾನದಿಂದ, ವ್ಯವಸಾಯದ ತಕರಾರುಗಳನ್ನು ಈ ಪದ್ಧತಿಯಂತೆಯೆ ಬಗೆಹರಿಸಲಾಗಿದೆ. ಪಂಜಾಬ್ ಉಚ್ಚನ್ಯಾಯಾಲಯದ ೧೦೭ ಹಾಗೂ ಇತರ ಅನೇಕ ತೀರ್ಪುಗಳ ಹಿನ್ನೆಲೆಯಲ್ಲಿ ಯಾವುದೇ ಸಂಪ್ರದಾಯ ಕಾನೂನಿನಂತೆ ಪರಿಗಣಿಸಲಾಗಿದೆ. ಈ ಒಂದು ಹಿನ್ನೆಲೆಯಲ್ಲಿ ಯಾವುದೇ ಸಂಪ್ರದಾಯದ ಹಸ್ತಕ್ಷೇಪವಿರಬಾರದು ಎಂದೇ ಹೇಳುವೆ. (ಹಿಂದೂ ಕೋಡ್‌ಗೆ) ಸರ್, ನಾನು ನಿನ್ನೆ ಹೇಳಿದಂತೆ, ಡಾ. ಅಂಬೇಡ್ಕರರು, ಮದ್ರಾಸ್ ಮತ್ತು ಮುಂಬೈ ಶಾಸನಗಳನ್ನು ಸಾಂಪ್ರದಾಯಿಕ ವಿಚ್ಛೇದನೆಯ ತಳಹದಿ ಮಾಡಬೇಕೆಂದೆ ಬಯಸಿದ್ದರೆ, ಅದನ್ನು ನಾನು ವಿರೋಧಿಸುವೆ. ಈ ಶಾಸನದಿಂದಾಗಿ ನಮ್ಮಲ್ಲಿಯ ಸರಳ ವಿಚ್ಛೇದನೆ ಸಂಪ್ರದಾಯಗಳಿಗೆ ಧಕ್ಕೆ ಬರಬಹುದು. ಈ ಒಂದು ಕ್ರಮದಿಂದ ತಾವು ಮೇಲುವರ್ಗದವರ ಸಾಮಾಜಿಕ ಅರ್ಥವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ. ನಾನು ವಿಚ್ಛೇದನೆಯ ಪರವಾಗಿದ್ದೇನೆ. ನನ್ನ ಹೇಳಿಕೆಯಂತೆ ಸಮಸ್ತ ದೇಶಕ್ಕೆ ಒಂದೇ ವಿಚ್ಛೇದನೆಯ ಕಾಯ್ದೆ ಇರಬೇಕು. (ಈ ಬಗ್ಗೆ ದೇಶದ ಏಕೀಕರಣದ ವಿಷಯ ನಾನು ನಿಮ್ಮನ್ನು ಸಮರ್ಥಿಸುವೆ) ನನಗೆ ತಿಳಿದಂತೆ ಪಂಜಾಬಿನಲ್ಲಿ ಮತ್ತು ದೇಶದ ಇತರ ಕಡೆಗಳಲ್ಲಿ ವಿವಿಧ ವಿಚ್ಛೇದನೆಯ ಕಾಯ್ದೆಗಳು ಜಾರಿಯಲ್ಲಿವೆ. ಆದರೆ ವಿಚ್ಛೇದನೆಯು ಸರಳ ಏಕೆಂದರೆ ದಂಪತಿಗಳು ಸಮ್ಮತಿಸಿದಲ್ಲಿ ಯಾವ ಡಿಕ್ರಿಯೂ ಬೇಕಾಗಿಲ್ಲ' ಹೀಗೆಂದ ಮಾತ್ರಕ್ಕೆ ವಿಚ್ಛೇದನೆ ಕೇಳಿದವರಿಗೆಲ್ಲಾ ಸುಲಭವಾಗಿ ದೊರೆಯಬೇಕೆಂದು ಹೇಳಲಾರೆ. ಏಕೆಂದರೆ ಈ ದಿಶೆಯಲ್ಲಿ ಹಲವಾರು ಸಂಪ್ರದಾಯಗಳಿವೆ. ಒಂದು ಸಂಪ್ರದಾಯದಂತೆ, ಮಹಿಳೆಯು ತನ್ನಿಂದಾದ ಖರ್ಚನ್ನು ಪತಿಗೆ ನೀಡಿ ವಿಚ್ಛೇದನ ಪಡೆಯಬಹುದು. ಆದರೆ ನಾನು ಅದನ್ನು ನೀತಿಯ ಆಧಾರದ ಮೇಲೆ ನಿರಾಕರಿಸುವೆ. ನಾನು ತಮ್ಮ ಸಮಯ ಹಾಳುಮಾಡುತ್ತಿರುವೆ. ಆದರೆ ನನ್ನ ಹೇಳಿಕೆಯನ್ನು ಡಾ. ಅಂಬೇಡ್ಕರರು ಕೇಳದೇ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ನಾನು ಹೇಳುವುದೇನೆಂದರೆ, ವಿಚ್ಛೇದನೆಗೆ ಸಂಬಂಧಿಸಿದಂತೆ ಸಾಮಾನ್ಯ ಶಾಸನವೊಂದು ಇರಬೇಕು; ಹಾಗೂ ಯಾವ ಸಂಪ್ರದಾಯಗಳ ಹಸ್ತಕ್ಷೇಪಕ್ಕೆ ಅವಕಾಶ ನೀಡಬಾರದು; ಹಾಗೆ ನೀಡಿದಲ್ಲಿ ಆಘಾತಕ್ಕೆ ಅವಕಾಶ ನೀಡಿದಂತೆ.

ನಾನು ಮದ್ರಾಸ್ ಹಾಗೂ ಮುಂಬೈ ಶಾಸನಗಳನ್ನು ಪ್ರತಿಭಟಿಸುವೆ, ಏಕೆಂದರೆ ಅವು ಬಹುಪತ್ನಿ ವಿವಾಹಕ್ಕೆ ಅವಕಾಶ ಕಲ್ಪಿಸುತ್ತವೆ. ಅವುಗಳನ್ನು ವಿರೋಧಿಸುವೆ. ನಾವು ನೀಡಿರುವ ತಿದ್ದುಪಡಿಯ ನೋಟೀಸಿನಂತೆ ನನ್ನ ಉದ್ದೇಶ ಎಂದರೆ ನಮ್ಮ ಉತ್ತಮ ಸೂತ್ರಗಳಿಗೆ ವಿದಾಯ ಹೇಳಲು ಸಮ್ಮತಿಸುವುದಿಲ್ಲ. ಡಾ. ಅಂಬೇಡ್ಕರರು ಸಾಂಪ್ರದಾಯಿಕ ತಳಹದಿಯನ್ನು ಒಪ್ಪಿಕೊಳ್ಳುತ್ತಾ ಸಂಪ್ರದಾಯಗಳನ್ನು ಕೈಬಿಡಬೇಕೆಂದಿದ್ದಾರೆ. ಹೀಗೆ ಮಾಡಿದಲ್ಲಿ ಸಾರಾಸಗಟಾಗಿ ಹಿಂದೂ ಕೋಡ್ ಮಸೂದೆ ಛಿದ್ರವಾಗಿ ಹೋಗುತ್ತದೆ. ಆದುದರಿಂದ ವಿಚ್ಛೇದನೆಗೆ ಸಂಬಂಧಿಸಿದಂತೆ ಏಕರೂಪ ಶಾಸನವಿರಬೇಕು. ಒಂದು ವೇಳೆ ಪತಿಯ ಮೇಲೆ ಹೊಣೆಗಾರಿಕೆ ಇದ್ದಲ್ಲಿ ಅವನು ತನ್ನ ಪತ್ನಿಗೆ ವಿವಾಹವಾಗುವವರೆಗೂ ಧನಸಹಾಯ ನೀಡಲೇಬೇಕು. ಈ ಬಗೆಗೆ ಸಾಂಪ್ರದಾಯಿಕ ತಳಹದಿಗಳೇ ಅಭಾವವಿದ್ದರೂ, ವಿದೇಶಗಳಲ್ಲಿ ಜಾರಿಯಲ್ಲಿರುವುದನ್ನು ಕಾಣಬಹುದು. ನಾನು ಬೇರೆ ದೇಶಗಳ ಶಾಸನ ವಿರೋಧಿಯಲ್ಲ. ಆದರೆ ಅಸಂಗತ ಮತ್ತು ದುಷ್ಟ ಸಂಪ್ರದಾಯಗಳಿಗೆ ಎಡೆ ನೀಡಬಾರದೆಂಬುದೆ ನನ್ನ ಉದ್ದೇಶವಾಗಿದೆ. ಸಾಂಪ್ರದಾಯಿಕ ತಳಹದಿ ಎಂದರೆ; ನ್ಯಾಯ, ಸಮಾನತೆ ಹಾಗೂ ಉತ್ತಮ ಮನಸಾಕ್ಷಿಗಳೆಂದೇ ನನ್ನ ಭಾವನೆ. ಇವನ್ನು

ಹೊಂದಿರದ ಅನೇಕ ಸಾಂಪ್ರದಾಯಿಕ ಕಾಯ್ದೆಗಳನ್ನು ನ್ಯಾಯಾಂಗ ಅನೂರ್ಜಿತಗೊಳಿಸಿದೆ; ಯಾವುದೇ ವಿಧವಾದ ಒತ್ತಡ ಅಥವಾ ಒತ್ತಾಯಗಳಿಗೆ ಗುರಿಯಾದ ನಿಯಮಗಳನ್ನು ಶ್ರೇಷ್ಠ ನ್ಯಾಯಾಲಯಗಳು ತಿರಸ್ಕರಿಸಿವೆ. ಈ ಅನ್ಯಾಯವು ನಾಲ್ಕನೆಯ ಕಲಮಿನಿಂದಾಗಿ ಹಿಂದಿನ ದ್ವಾರದಿಂದ ಪ್ರವೇಶಗೊಳ್ಳಬಾರದು. ಈ ಪ್ರಯತ್ನ ನಡೆದಲ್ಲಿ ಹಿಂದೂ ಕೋಡ್‌ನ ಮರಣವಾಗುತ್ತದೆ ಎಂದೇ ಹೇಳುವೆ. ಅದನ್ನು ನಾವು ಯಾವ ಸಮಯದಲ್ಲಿ ಜರುಗಲು ಅವಕಾಶ ನೀಡುವುದಿಲ್ಲ. ನಾವು ಈ ದುಷ್ಟ ಸಂಪ್ರದಾಯಗಳನ್ನು ಮುಂದುವರಿಯಲು ಬಿಡಬಾರದು. ಆದರೆ ಈಗ ತಾನೇ ನೀವು ಹೇಳಿದಂತೆ ಉತ್ತಮ ಸಂಪ್ರದಾಯಗಳಾದ ದಕ್ಷಿಣ ಭಾರತದಲ್ಲಿ ಜಾರಿಯಲ್ಲಿರುವ ಅಳಿಯ ಸಂತಾನಕ್ಕೆ ನನ್ನ ವಿರೋಧವಿಲ್ಲ. ಏಕೆಂದರೆ ಅದು ತಲೆ ತಲಾಂತರದಿಂದ ಜಾರಿಯಲ್ಲಿರುವ ಉತ್ತಮ ಸಂಪ್ರದಾಯವಾಗಿದೆ. ಅದನ್ನು ಕಾನೂನು ೨೪ (ಎ)ನಲ್ಲಿ ನಮೂದಿಸಲಾಗಿದೆ. ಹಿಂದೂ ಶಾಸನ ಹೇಳುವಂತೆ ಸಂಪ್ರದಾಯಗಳನ್ನು ಪಾಲಿಸಬೇಕು. ಆದರೆ ಅನಿಷ್ಟ ಸಂಪ್ರದಾಯಗಳನ್ನಲ್ಲ. ಪುರಾತನ ಸಮಾಜಗಳಿಗೆ ಹೊರತು ಪ್ರಗತಿಪರ ಸಮಾಜಕ್ಕೆ ಸಂಪ್ರದಾಯದ ನೆರವು ಬೇಕಾಗಿಲ್ಲ.

ಆದರೆ ಹಲವು ಸಂಪ್ರದಾಯಗಳನ್ನು ಶಾಸಕಾಂಗವೇ ತಮ್ಮ ತಳಹದಿಯನ್ನಾಗಿಸಿಕೊಂಡಿವೆ. ಅಂತಹವನ್ನು ಅಲ್ಲಗಳೆಯಲಾಗದು. ಇದೇ ನನ್ನ ೪೪೬ನೇ ತಿದ್ದುಪಡಿಯ ಗುರಿಯಾಗಿದೆ. ಮಿಕ್ಕ ತಿದ್ದುಪಡಿಗಳನ್ನು ನಾನು ಈಗಾಗಲೇ ಮಂಡಿಸಿರುವೆ.

ಈ ಸಂದರ್ಭದಲ್ಲಿ ನಾನು ಅಂಬೇಡ್ಕರರನ್ನು ಆಗ್ರಹಿಸುವುದೇನೆಂದರೆ ಸದನವು ನ್ಯಾಯನೀಡಬೇಕು ಹಾಗೂ ಯಾರಿಗೂ ತೊಂದರೆ ಉಂಟಾಗಬಾರದು. ಆದುದರಿಂದ ಮಾನ್ಯ ಸಚಿವರು ಏನೇ ನಿರ್ಧರಿಸಲಿ ಅದು ನ್ಯಾಯ ಸಮಾನತೆ ಹಾಗೂ ಮನಸಾಕ್ಷಿಗೆ ವಿರೋಧವಾಗಿರಬಾರದು. ನೂತನವಾಗಿ ರಚಿಸಬಹುದಾದ ಶಾಸನವು ನ್ಯಾಯಸಮ್ಮತವಾಗಿರಬೇಕು. ಸಂಪ್ರದಾಯಗಳಿಗೆ ತಮ್ಮ ಸ್ಥಾನ ದೊರಕಬೇಕು. ಆದರೆ ಅನಿಷ್ಟ ವಾದವನ್ನು ಖಂಡಿತವಾಗಿ ಕೈಬಿಡಬೇಕು. ಏಕೆಂದರೆ ಅದು ಹಿಂದೂಶಾಸ್ತ್ರಕ್ಕೆ ಹಾಗೂ ಸೂತ್ರಗಳಿಗೆ ವ್ಯತಿರಿಕ್ತವಾಗಿವೆ. ಆದರೆ ನಾನು ಸ್ತ್ರೀಯರಿಗೆ ನ್ಯಾಯ ದೊರಕಬೇಕು ಎಂದೇ ಹೇಳುವೆ. ಸ್ತ್ರೀಯರಿಗೆ ಆದ ಅನ್ಯಾಯವನ್ನು ಕವಿ ತುಳಸೀದಾಸರು ಸೀತಾಮತೆಯ ಬಾಯಿಯಿಂದ ಹೇಳಿಸಿದ್ದಾರೆ:

*"ಮಿತಂ ದದಾತಿ ಹಿ ಪಿತ ಮಿತಂ ಭ್ರಾತ ಸುತಃ*
*ಅಮಿತಸ್ಯ ತು ದಾತಾರಂ ಭಾರತ್ರಂ ಕಾನೂಪೂಜಯತ್"*

ಆರ್ಥಿಕ ಸಹಾಯಕತೆಯಿಂದ ಕೂಡಿದ ಸ್ತ್ರೀಯು ತನ್ನ ಪತಿಯನ್ನು ಪೂಜಿಸುತ್ತಾಳೆ. ಇದು ಸಮಾಜದಿಂದಲ್ಲ ಅಥವಾ ನ್ಯಾಯಸೂತ್ರಗಳಿಂದಲ್ಲ, ತುಳಸಿದಾಸರು ಇದನ್ನು ಹೇಳಬೇಕಾಗಿರಲಿಲ್ಲ. ಇದರಿಂದ ರಾಮನ ಬಗೆಗೆ ನಮಗಿರುವ ಗೌರವ ಕುಂದಲಾರದು, ಆದರೆ ಸ್ತ್ರೀಯರನ್ನು ಮಾತ್ರ ದಾಸ್ಯಕ್ಕೆ ಗುರಿಮಾಡಲಾಗದು. ಹೀಗಾಗಿ ವಿಚ್ಛೇದನೆಯು ಯಾರೊಬ್ಬರ ಆಶೆಯಲ್ಲ. ಆದರೆ ಅದು ಸಮಾನತೆ ಮತ್ತು ನ್ಯಾಯವನ್ನು ಆಧರಿಸಿರಬೇಕು. ಹೀಗಾಗಿ ಮಹಿಳೆಯರಿಗಾಗುವ ಅನ್ಯಾಯವನ್ನು ನೋಡಿ ನಾನು ಸುಮ್ಮನಿರಲಾರೆ. ಇದೊಂದು ಪ್ರತಿದಿನ ನಡೆಯಬಹುದಾದ ಘಟನೆಯಾಗಿದೆ, ಯುವಕರು ಪತ್ನಿಯನ್ನು ಹೊಂದಿದ್ದಾರೆ. ಹಾಗೂ ಅವರನ್ನು ಬಿಡಲೂ ಸಿದ್ಧರಿದ್ದಾರೆ. ಹೀಗಾಗಿ ವಿಚ್ಛೇದನೆಯು ಒಂದು ರೀತಿ ಅನಿವಾರ್ಯತೆಯನ್ನು ಪಡೆದಿದೆ ಎಂದರೆ ತಪ್ಪಾಗಲಾರದು. ಜನರು 'ಸತಿ' ಬಗ್ಗೆ ಮಾತನಾಡುತ್ತಾರೆ. ಆದರೆ 'ಸತ್' ಬಗ್ಗೆ ಏಕೆ ಮಾತನಾಡುವುದಿಲ್ಲ? ಹೀಗೆ ಹಿಂದಿನ ಕಾಲದಲ್ಲಿ ಮಹಿಳೆಯರ ಹಕ್ಕುಗಳನ್ನು

ದೋಚಲಾಗಿತ್ತು. ಆದರೆ ವಿವಾಹಿತ ಮಹಿಳೆಯ ಆಸ್ತಿಯ ಶಾಸನ ಇಂಗ್ಲೆಂಡಿನಲ್ಲಿ ೧೮೮೫ರಲ್ಲಿಯೇ ಜಾರಿಗೆ ಬಂದಿತ್ತು.

**ಶ್ರೀ. ಟಿ. ಎನ್. ಸಿಂಗ್ :** (ಉ.ಪ್ರ) : ಸತ್ ಎಂದರೇನು?

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಿಮಗೆ 'ಸತ್' ಎಂದರೆ ತಿಳಿಯದೆ? ಆದರೆ ಪ್ರತಿಯೋರ್ವ ಮಹಿಳೆ 'ಸತಿ' ಎಂದರೇನು ಎಂಬುದನ್ನು ತಿಳಿದಿದ್ದಾಳೆ, ಆದರೆ ಪುರುಷನು ಮಾತ್ರ ಸತಿ ಎಂದರೇನು ಎಂಬುದನ್ನು ಅರಿಯನು.

ನನ್ನ ಹೇಳಿಕೆ ಎಂದರೆ ಅನಿಷ್ಟ ಸಂಪ್ರದಾಯಗಳ ತಳಹದಿಯ ಮೇಲೆ ಏನನ್ನೂ ನಿರ್ಮಿಸಲಾಗದು. ಅವು ಇಂದು ಅಸಂಗತ ಹಾಗೂ ಓಬೀರಾಯನ ಕಾಲದ್ದಾಗಿವೆ. ಸರ್ಕಾರ ನ್ಯಾಯ ಹಾಗೂ ಸನಾತನಗಳ ಆಧಾರದ ಮೇಲೆ ಶಾಸನಗಳನ್ನು ರಚಿಸಬೇಕು.

**ಶ್ರೀ ಭಟ್ :** ನನ್ನ ತಪ್ಪಿನಿಂದಾಗಿ ನನ್ನದೊಂದು ತಿದ್ದುಪಡಿ ಮಂಡಿಸದೆ ಹೋದೆ, ನೀವು ಅಪ್ಪಣೆ ನೀಡಿದಲ್ಲಿ ನಾನು ಮಂಡಿಸಬಯಸುವೆ.

**ಮಾನ್ಯ ಉಪಸಭಾಧ್ಯಕ್ಷರು :** ಅದು ಪಟ್ಟಿಯಲ್ಲಿದೆಯೆ, ಆದರ ಕ್ರಮ ಸಂಖ್ಯೆ ಏನು?

**ಶ್ರೀ ಭಟ್ :** ನಂ. ೨೮೮ ಪುಟ ಸಂಖ್ಯೆ ೫.

**ಮಾನ್ಯ ಉಪಸಭಾಧ್ಯಕ್ಷರು :** ನಿನ್ನೆ ಏಕೆ ಮಂಡಿಸಲಿಲ್ಲ?

**ಶ್ರೀ ಭಟ್ :** ನಾನು ಸರಿಯಾದ ಸಮಯದಲ್ಲಿ ಹಾಜರಿರದೆ ಹೋದೆ. ನಾನು ಸದನ ಪ್ರವೇಶಿಸಿದಾಗ ಭಾಷಣ ಆರಂಭವಾಗಿತ್ತು.

**ಮಾನ್ಯ ಉಪಸಭಾಧ್ಯಕ್ಷರು :** ನೀವು ಮಂಡಿಸಬಹುದು.

**ಶ್ರೀ ಭಟ್ :** ಮಂಡನೆಗೆ ಕೋರುವೆ.

ಡಾ. ಅಂಬೇಡ್ಕರರು ಮಂಡಿಸಿರುವ ನೂತನ ಕಲಮು ನಾಲ್ಕರಲ್ಲಿ ಸೂಚಿಸಿದಂತೆ.

(೧) ಭಾಗ (ಎ) ನಂತರ "ಈ ಸಂಹಿತೆಯಲ್ಲಿ ಪ್ರಸ್ತಾಪಿಸಿದಂತೆ" ಬದಲು "ಈ ಶಾಸನ ಜಾರಿಗೆ ಬಂದ ಹತ್ತು ವರ್ಷಗಳ ವಿವರಣೆ : (ಎ) ಉಪವಿಧಿಗೆ ವಿರೋಧವಾಗದಂತೆ, ಈ ಶಾಸನ ಜಾರಿಗೆ ಬಂದ ಹತ್ತು ವರ್ಷಗಳವರೆಗೂ, ಯಾವುದೇ ಗ್ರಂಥ, ನಿಯಮ ಅಥವಾ ಜಾರಿಯಲ್ಲಿರುವ ಸಂಪ್ರದಾಯ, ಪದ್ಧತಿಗಳು ಪರಿಣಾಮಕಾರಿಯಾಗಿರುತ್ತವೆ."

***ಬಾಬುರಾಮನಾರಾಯಣ ಸಿಂಗ್** (ಬಿಹಾರ): (ಹಿಂದಿ ಭಾಷಣದ ಆಂಗ್ಲ ಭಾಷಾಂತರ) ಸರ್, ಈ ದಿನ ನೀವು ನನಗೆ ಶೀಘ್ರವಾಗಿ ಅವಕಾಶ ದೊರಕಿಸಿಕೊಟ್ಟಿದ್ದೀರಿ, ಅದೂ ಈ ಅಪಾಯಕಾರಿ ವಿಷಯದ ಮೇಲೆ, ನಿಮಗೆ ವಂದನೆಗಳು. ನಿನ್ನೆ ಮತ್ತು ಮೊನ್ನೆಯ ದಿನ ನಾನು ತಮ್ಮ ಗಮನಸೆಳೆಯಲು ತುಂಬಾ ಪ್ರಯತ್ನ ಮಾಡಿದೆ. ಆದರೆ ನನಗೆ ಮಹತ್ವಪೂರ್ಣವಾದ ವಿಷಯದ ಬಗೆಗೆ ಮಾತನಾಡಲು ಅವಕಾಶವೇ ದೊರೆಯಲಿಲ್ಲ. ತಾವು ಈ ವಿಷಯದಲ್ಲಿ ನ್ಯಾಯಯುತವಾಗಿ ನಡೆದುಕೊಂಡು ಯಾರಿಗೂ ಸಂದೇಹ ಉಂಟಾಗದಂತೆ ವರ್ತಿಸಿದ್ದೀರಿ.......

**ಶ್ರೀ ಶ್ಯಾಮನಂದನ ಸಹಾಯ್ :** ಯಾರಿಗೂ ಸಂದೇಹವಿಲ್ಲ.

**ಬಾಬು ರಾಮನಾರಾಯಣ್ ಸಿಂಗ್ :** ನಿಸ್ಸಂಶಯವಾಗಿ, ಆದರೆ ತಾವು ತೀರ್ಪುಗಳನ್ನು ಸಮನಾದ

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪುಟ ೩೦೯೫–೩೧೧೨

ರೀತಿಯಲ್ಲಿ ನೀಡಬೇಕು. ನಿನ್ನೆ ನೀವು ತಮ್ಮ ವಿರೋಧವಾಗಿ ಕೆಲವು ಅಸಮಾಧಾನಗಳಿವೆ ಎಂದೇ ಹೇಳಿದಿರಿ. ಆದರೆ ಆ ಬಗೆಯ ಅಸಮಾಧಾನಗಳಿಲ್ಲ. ಎಲ್ಲರೂ ಸಾಮಾನ್ಯ ಸಂತಸದಿಂದ ಇದ್ದಾರೆ. ಇದೊಂದು ಸಭೆ ಕಾರ್ಯಗಳನ್ನು ಚಾಣಾಕ್ಷತೆಯಿಂದ ನಿಭಾಯಿಸಬೇಕಾಗುತ್ತದೆ. ಯಾರಾದರೂ ತೊಂದರೆಯುಂಟುಮಾಡಿದರೆ ಅದು ಸಹಜ. ಏಕೆಂದರೆ ಯಾರೂ ಎಲ್ಲಾ ಸಮಯದಲ್ಲಿ ತಪ್ಪು ಮಾಡದೇ ಇರದವರೆಂದು ಭಾವಿಸಕೂಡದು. ಆದುದರಿಂದ ತಾವು ತಮ್ಮ ಕಾರ್ಯವನ್ನು ನ್ಯಾಯಯುತವಾಗಿ ಮಾಡಬೇಕು ಹಾಗೂ ಮಾಡುತ್ತಿದ್ದೀರಿ ಎಂದೇ ಹೇಳಿ ತಮಗೆ ತಪ್ಪು ಮಾಡಿರುವೆ ಎಂಬ ಭಯವಿರಕೂಡದು ಎಂದೇ ಹೇಳುವೆ.

**ಶ್ರೀ ಜುಂಗಡೆ** (ಮ.ಪ್ರ) : ದಯಮಾಡಿ ವಿಷಯಕ್ಕೆ ಬನ್ನಿ.

**ಬಾಬು ರಾಮನಾರಾಯಣ ಸಿಂಗ್ :** ನಾನು ಇನ್ನೊಂದು ವಿಷಯ ಹೇಳಬಯಸುವೆ, ಅದೇನೆಂದರೆ ಈ ವಿಷಯದ ಬಗೆಗೆ ಸಾಕಷ್ಟು ಚರ್ಚೆಯಾಗಿದೆ, ಅದನ್ನು ಯಾರೂ ಹೇಳಲಿಲ್ಲ. ಆದರೆ ಮಹತ್ವದ ವಿಷಯವಾದುದರಿಂದ ಹೇಳಬಯಸುವೆ.

**ಶ್ರೀ ಜುಂಗಡೆ :** ಮಾನ್ಯ ಸದಸ್ಯರು ಪ್ರಸ್ತಾಪಿಸಲಿ.

**ಮಾನ್ಯ ಉಪಸಭಾಧ್ಯಕ್ಷರು :** ಚರ್ಚೆ ಸಾಕಷ್ಟು ನಡೆದಿದೆಯೊ ಇಲ್ಲವೊ ಅದನ್ನು ಬೇರೆಯವರಿಗೆ ಬಿಟ್ಟಿದ್ದೇನೆ. ಆದರೆ ಪೀಠವು ತನ್ನ ಜವಾಬ್ದಾರಿಯಂತೆ ವರ್ತಿಸುತ್ತದೆ. ಆದುದರಿಂದ ಕಾನೂನು ಮಂತ್ರಿಗೆ ಉತ್ತರಿಸುವಂತೆ ಹೇಳುವೆ. ಈಗ ಅವನ್ನೆಲ್ಲಾ ಪ್ರಸ್ತಾಪಿಸುವುದು ಬೇಡ. ನಿರ್ಣಯ ಅಧ್ಯಕ್ಷರಿಗೆ ಸಂಬಂಧಿಸಿದ್ದು.

ಈಗ ನಾನು ಮಾನ್ಯ ಸದಸ್ಯರಿಗೆ ವಿಧಿಯ ವ್ಯಾಖ್ಯೆ ಕುರಿತಂತೆ ಮಾತನಾಡಲು ಅವಕಾಶ ನೀಡಿರುವೆ. ಇದು ನಂಬರ್ ೪ ಈಗ ಇದರ ಬಗ್ಗೆ ಅವರು ಮಾತನಾಡಬೇಕು. ಅದು ಬಿಟ್ಟು ನನಗೆ ಅವಕಾಶ ನೀಡಲಿಲ್ಲ ಎಂದು ಗೊಣಗಿದರೆ ಯಾವ ಪ್ರಯೋಜನವಿಲ್ಲ. ಅದೆಲ್ಲಾ ಅಪ್ರಸ್ತುತ.

**ಬಾಬು ರಾಮನಾರಾಯಣ ಸಿಂಗ್ :** ನೀವು ಹೇಳಿದ್ದು ಸಮಂಜಸ. ಅದನ್ನು ಒಪ್ಪುವೆ. ನಾನು ಯಾವುದೇ ಅಪ್ರಸ್ತುತ ವಿಷಯ ಪ್ರಸ್ತಾಪಿಸಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸಮಯ ಹಾಳುಮಾಡದೆ ವಿಷಯಕ್ಕೆ ಬನ್ನಿ.

**ಬಾಬು ರಾಮನಾರಾಯಣ ಸಿಂಗ್ :** ವಿಷಯ ಅದಲ್ಲ. ಎಲ್ಲಾ ಸದಸ್ಯರಿಗೂ ಮಾತನಾಡುವ ಹಕ್ಕಿದೆ. ಈ ಸದನದ ಮುಂದೆ ಇರುವ ವಿಷಯ ತರಲೇಬಾರದಾಗಿತ್ತು. ಈ ವಿಷಯ ತಂದಿರುವ ಸರ್ಕಾರಕ್ಕೆ ಏನು ಶಿಕ್ಷೆ ನೀಡಬೇಕೊ ನನಗೆ ತಿಳಿಯದು. ಆದರೆ ಅದರ ಬೆಂಬಲಿಗರಿಗೆ ಅದು ಸೂಕ್ತ ಎಂದೇ ತೋರಿದರೂ, ಸದನದ ಹೊರಗಡೆ ಇದನ್ನು ವಿರೋಧಿಸಿ ಪ್ರತಿಭಟನೆ ಮಾಡಿದವರನ್ನು ಬಂಧಿಸಿ ನಗರದ ಹೊರವಲಯದಲ್ಲಿ ಅಂದರೆ ೨೦ ಮೈಲಿಯಾಚೆ ಬಿಟ್ಟು ಬರುತ್ತಿದ್ದಾರೆ. ಈ ವಿಷಯಕ್ಕೆ ತಾವು ಗಮನ ಹರಿಸಬೇಕು, ತಾವು ಸಭಾಪತಿಗಳು ಹಾಗೂ ವೇದಪಾರಂಗತರು. ಅದಕ್ಕೆ ಮನ್ನಣೆ ನೀಡಬೇಕು. ಜಾತ್ಯತೀತ ರಾಜ್ಯದ ಹೆಸರಿನಲ್ಲಿ ಅನ್ಯಾಯ ಮಾಡುತ್ತಿರುವುದು ಖಂಡನೀಯ.

ಈ ವಿಧೇಯಕ ಅನಾದಿಕಾಲದಿಂದಲೂ ಜಾರಿಯಲ್ಲಿರುವ ವೇದ ಸಂಪ್ರದಾಯಗಳನ್ನು ನಾಶಮಾಡಲು ಹೊರಟಿದೆ. ನಾನು ಸಂಪ್ರದಾಯಗಳ ಬಗೆಗೆ ಹೇಳುತ್ತಿಲ್ಲ. ಸರ್, ತಾವು ವಿದ್ವಾಂಸರು, ತಮಗೆ ತಿಳಿದಂತೆ ಪ್ರಪಂಚದಲ್ಲಿಯೆ ವೇದಗಳಿಗೆ ಅಗ್ರಸ್ಥಾನವಿದೆ. ನಮ್ಮ ದೇಶದ ಜನರ ಕರ್ತವ್ಯಗಳನ್ನು ಅವು ತಿಳಿಸುತ್ತವೆ. ಆದರೆ ಇಂದು ಪಂಡಿತ ನೆಹರೂ ಅವರ ಆಡಳಿತದಲ್ಲಿ ಅವರ ಪ್ರತಿನಿಧಿಯಾದ ಡಾ. ಅಂಬೇಡ್ಕರ್ ತಮ್ಮ ಲೆಕ್ಕಣಿಕೆಯಿಂದ ಅವನ್ನು ಅನೂರ್ಜಿತವೆಂದು ಸಾರಿದ್ದನ್ನು ಸದನದ ಸದಸ್ಯರು ವಿರೋಧಿಸಬೇಕು.

ಮೊದಲನೆಯದಾಗಿ ಹಿಂದೂ ಸಂಹಿತೆ ಮಸೂದೆಯನ್ನೇ ತಿರಸ್ಕರಿಸಬೇಕು. ಅದರಲ್ಲಿಯೂ ಈ ನಾಲ್ಕನೆಯ ಕಲಮನ್ನು ಅಂಗೀಕರಿಸಲೇಬಾರದು. ಸರ್ ಡಾ. ಅಂಬೇಡ್ಕರರಿಗೆ ತಿಳಿದಂತೆ ಬುದ್ಧನು ವೇದ ವಿರೋಧಿಯಾಗಿದ್ದ. ಆದರೆ ವೇದಗಳು ಅನಾದಿಕಾಲದಿಂದ ಜಾರಿಯಲ್ಲಿವೆ. ಅವು ನಾಶಹೊಂದಲಾರವು. ಆದರೆ ಕೇವಲ ಕೆಲವೇ ದಿನಗಳ ಹಿಂದೆ ಅಧಿಕಾರಕ್ಕೆ ಬಂದ ನೆಹರೂ ಹಾಗೂ ಅಂಬೇಡ್ಕರರು ಅವನ್ನು ನಿರಾಕರಿಸುತ್ತಿದ್ದಾರೆ. ಅವರಿಗೆ ಈ ಬಗೆಯ ಕಾಯ್ದೆ ಮಾಡಬಾರದು ಎಂಬ ಜ್ಞಾನವೇ ಇಲ್ಲ. ಇದನ್ನು ದೇಶ ಒಪ್ಪಬಾರದು.

**ಶ್ರೀ ಶ್ಯಾಮನಂದನ ಸಹಾಯ್ :** ಬಾಬು ರಾಮನಾರಾಯಣರ ಹೇಳಿಕೆ ಸೂಕ್ತವಾಗಿದೆ.

**ಬಾಬು ರಾಮನಾರಾಯಣ ಸಿಂಗ್ :** ಆಚಂದ್ರಾರ್ಕವಾಗಿ ವಿಶ್ವದಲ್ಲಿ ಮೊಳಗಿರುವ ಸಂಪ್ರದಾಯಗಳನ್ನು ಈಗ ಜಾರಿಯಲ್ಲಿರಕೂಡದು ಎಂದು ಹೇಳುವ ಭಂಡಸಾಹಸಕ್ಕೆ ಕೈ ಹಾಕಿರುವರು. ಎಷ್ಟು ಧೈರ್ಯ ಇವರಿಗೆ. ಅವರಿಗೆ ಈ ಅಧಿಕಾರವನ್ನು ಯಾರು ನೀಡಿದ್ದಾರೆ? ಬೌದ್ಧ ಧರ್ಮವು ಹಿಂದೂಧರ್ಮದ ನಾಶಕ್ಕೆಂದೇ ಜಾರಿಯಲ್ಲಿ ಬಂದಿತು. ಅದರಂತೆಯೇ ಇಸ್ಲಾಂ ಧರ್ಮವೂ ಹಿಂದುಧರ್ಮವನ್ನು ಖಂಡಿಸಿತು. ಆದರೆ ಅವೆಲ್ಲವೂ ಮಣ್ಣು ಮುಕ್ಕಿವೆ. ವೇದದ ಧರ್ಮ ಮುಂದುವರಿದಿದೆ ಹಾಗೂ ಮುಂದುವರಿಯುವುದು. ಯಾರೂ ಅದನ್ನು ನಾಶಗೊಳಿಸಲಾರರು. ಅದನ್ನು ಯಾರಾದರೂ ಪ್ರಯತ್ನಿಸಿದಲ್ಲಿ ಅದು ಖಂಡನೀಯ. ಈ ಬಗೆಯ ವಿಷಯಗಳನ್ನು ಸಂಸತ್ತಿನ ಮುಂದೆ ತಂದಿರುವುದು ನನಗೆ ಅತೀವ ದುಃಖ ಉಂಟುಮಾಡಿದೆ.

ಈಗ ತಾನೇ ನನ್ನ ಮಿತ್ರರಾದ ಭಾರ್ಗವ ಅವರು ಹೇಳಿದಂತೆ ಧರ್ಮ ಮತ್ತು ಉತ್ತಮ ನಡವಳಿಕೆಯ ಸೂತ್ರಗಳನ್ನು ವೇದ ಹಾಗೂ ಸ್ಮೃತಿಗಳು ನಿರ್ಮಿಸಿವೆ.

*ವೇದ, ಸ್ಮೃತಿ, ಸದಾಚಾರಃ ಆತ್ಮಾನ್ ಸ್ತುಷ್ಠಿತ್ರೇವ ಚ*
*ಏತಚ ಚರ್ತುವಿಧಃ ಪ್ರಾಹುಸ್ – ಸಾಕ್ಷಾದ್ ಧರ್ಮಸ್ಯ ಲಕ್ಷಣಂ*
*ಅಂದರೆ*

ಧರ್ಮದ ವ್ಯಾಖ್ಯೆ ನಾಲ್ಕು ಭಾಗಗಳಿಂದ ಕೂಡಿದೆ. ವೇದ, ಸ್ಮೃತಿ, ಸದಾಚಾರ, (ಉತ್ತಮ ನಡತೆ) ಮತ್ತು ಆತ್ಮತೃಪ್ತಿ (ಸಂತೃಪ್ತಿ).

ಹೀಗಾಗಿ ನಡವಳಿಕೆಗಳನ್ನು ವೇದಸೂತ್ರಗಳಿಂದ ನಿರ್ಣಯಿಸಲಾಗಿದೆ. ಅದೊಂದೇ ಸಾಲದು. ವೇದಗಳಲ್ಲಿ ವಿವರಿಸಿದ್ದನ್ನೇ ಶಾಸ್ತ್ರಗಳೂ ಅನುಸರಿಸಿವೆ. ಅವು ವೇದಕ್ಕೆ ಪೂರಕವಾಗಿ ಅನೇಕ ವಿವರಗಳನ್ನೂ ಸೇರ್ಪಡಿಸಿವೆ. ಆದುದರಿಂದ ವೇದ ಮತ್ತು ಶಾಸ್ತ್ರಗಳಲ್ಲಿ ಹೇಳಲಾದ ವಿಷಯಗಳನ್ನೇ ಆಚರಣೆಯಲ್ಲಿ ತರಬೇಕು. ಅದು ಧರ್ಮ. ಹೀಗಾಗಿ ವೇದ, ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದ ಮಾತ್ರಕ್ಕೆ ಅವನ್ನು ಆತ್ಮಸಾಕ್ಷಿಗೆ ವಿರುದ್ಧವಾಗಿದ್ದಲ್ಲಿ ಒಪ್ಪಲೇಬೇಕೆಂಬ ಕಡ್ಡಾಯವಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸದೇ ಮಾನ್ಯ ಮಂತ್ರಿವರ್ಯರು ಹಾಗೂ ಅವರ ಸರ್ಕಾರ ಈ ಮಸೂದೆಯನ್ನು ಅಂಗೀಕರಿಸಬೇಕು ಎಂಬ ಸಂಗತಿ ಆತ್ಮಘಾತುಕ ಕಾರ್ಯವಾಗಿದೆ. ಒಂದು ವೇಳೆ ಹೀಗಾದಲ್ಲಿ ಅದು ಪರಮ ಅನ್ಯಾಯದ ವಿಷಯ ಎಂದೇ ಹೇಳುವೆ. ಕಾನೂನು ಎಂದರೇನು ಎಂಬುದನ್ನು ಹಾಗೂ ಅದರ ಅರ್ಥವನ್ನು ಯಾವುದೇ ನಿಘಂಟಿನಲ್ಲಿ ನೋಡಿರಿ.
ಡಾ. ಅಂಬೇಡ್ಕರರು ಓರ್ವ ವಿದ್ವಾಂಸರಾಗಿ, ನಿಘಂಟಿನಲ್ಲಿಯ ಅರ್ಥವನ್ನು ಅರಿತವರು.

**ಡಾ. ಅಂಬೇಡ್ಕರ್ :** ನಾನು ಅದನ್ನು ನೋಡುವುದಿಲ್ಲ.

**ಬಾಬು ರಾಮನಾರಾಯಣ ಸಿಂಗ್ :** ಅವರು ತಮ್ಮ ವಿದ್ವತ್ತನ್ನು ಬದಿಗಿರಿಸಿ, ಅಚ್ಚರಿಯಾಗುವಂತೆ ಮಾತನಾಡುತ್ತಿದ್ದಾರೆ. ಕಾನೂನು ಎಂದರೇನು? ಕಾನೂನು ಈಚಿನ ದಿನಗಳಲ್ಲಿ ಅತಿಮಹತ್ವವಾದುದು. ಅದು ಮಿಲಿಟರಿ ಇಲ್ಲವೇ ಪೋಲಿಸರ ಬೆಂಬಲದಿಂದ ಸಮಾಜದ ಮೇಲೆ ಹೇರಲಾಗಿದೆ. ಸರ್, ಕಾನೂನು ಅಂದರೆ ಅದಲ್ಲ. ಕಾನೂನು ಜನತೆಯ ಮನಸ್ಸಿನ ಪ್ರತಿಬಿಂಬವಾಗಿರುವ ನಿಯಮಗಳೇ ಹೊರತು ಬಲಾತ್ಕಾರವಾಗಿ ಹೇರಲಾದ ವಿಷಯವಲ್ಲ. ಆದರೆ ಈಗ ಇವರು ಪೊಲೀಸ್, ಹಾಗೂ ಮಿಲಿಟರಿ ಬೆಂಬಲ ಪಡೆದು ಪ್ರಾಮುಖ್ಯತೆ ಪಡೆದಿದ್ದಾರೆ. ಜನತೆಯ ಮಾನಸಿಕ ಬೆಂಬಲದಿಂದಲ್ಲ, ಹೀಗಾಗಿ ಅವರು ಪಕ್ಷದ ಶಿಸ್ತು ಎಂಬ ನೆಪದಲ್ಲಿ ಸಂಸತ್ತಿನಲ್ಲಿ ಕಾನೂನನ್ನು ಅಂಗೀಕರಿಸುತ್ತಾರೆ.

**ಶ್ರೀಮತಿ ದೀಕ್ಷಿತ್** (ಮ.ಪ್ರ) : ಪಕ್ಷದ ಶಿಸ್ತಿನ ಪ್ರಶ್ನೆಯೇ ಇಲ್ಲ.

**ಬಾಬು ರಾಮನಾರಾಯಣ ಸಿಂಗ್ :** ಪಕ್ಷದ ಶಿಸ್ತು- ಅದರಿಂದಲೇ ಮಸೂದೆ ಅಂಗೀಕರಿಸಲಾಗುವುದು.

**ಶ್ರೀಮತಿ ದೀಕ್ಷಿತ್ :** ಅಲ್ಲ. ಅದು ಹಾಗಿಲ್ಲ.

**ಬಾಬು ರಾಮನಾರಾಯಣ ಸಿಂಗ್ :** ನನಗೆ ತಿಳಿದಿದೆ **"ಹೌದು"** ಹಾಗೂ **"ಇಲ್ಲ"** ಲೆಕ್ಕಾಚಾರವೇ ಅದನ್ನು ಸೂಚಿಸುತ್ತದೆ. ಸರ್, ನಾನು ಏನು ಹೇಳಬಯಸುವೆ ಎಂದರೆ ಈ ಬಗೆಯ ಶಾಸನಗಳಿಂದ ಅಧಿಕ ಅನ್ಯಾಯಕ್ಕೆ ಗುರಿಯಾಗುತ್ತೇವೆ. ಏಕೆಂದರೆ ಅದು ದೇಶದ ಹಿತವನ್ನು ಅಲಕ್ಷಿಸುತ್ತದೆ. ಆದುದರಿಂದ ಈ ಶಾಸನವನ್ನು ಅಂಗೀಕರಿಸಬಾರದು. ನಾನು ಅನೇಕ ಬಾರಿ ಹೇಳಿದಂತೆ, ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಗಳಾಗಿವೆ. ಆದರೆ ವೇದ ಮೂಲ ಬದಲಾಗಿಲ್ಲ. ಆದರೆ ಡಾ. ಅಂಬೇಡ್ಕರರು ತಮ್ಮ ಲೆಕ್ಕಣಿಕೆಯ ಬಲದಿಂದ ಅವನ್ನು ಬದಲಾಯಿಸಬೇಕೆಂದಿದ್ದಾರೆ. ಅದನ್ನು ಆಗಲುಬಿಡಲಾಗದು. ಶ್ರೀ ಠಾಕೂರ ದಾಸರು ಹೇಳಿದಂತೆ ನಮ್ಮ ದೇಶದಲ್ಲಿ ಅನೇಕ ಮುನಿಗಳು ಮತ್ತು ಋಷಿಗಳು ಜನಿಸಿದ್ದಾರೆ.

ಠಾಕೂರ ದಾಸ್ ಭಾರ್ಗವರು ಹೇಳಿದಂತೆ

*ವೇದಾಃ ವಿಭಿನ್ನಃ ಸ್ಮೃತಿಯೇ ವಿಭಿನ್ನಃ ನಯೇಕೋ ಮುನಿರ್ಯಸ್ಯ ವಾಚಃಪ್ರಮಾಣಂ ಧರ್ಮಸ್ಯ ತತ್ವಂ ನಿಹಿತಂ ಗುಹ್ಯಂ ಮಹಾಜನೋ ಏನ ಗಥಃ ಸ ಪಂಥಃ*

ವೇದಗಳಲ್ಲಿ ಭೇದವಿರಬಹುದು, ಸ್ಮೃತಿಗಳು ಬೇರೆ ಬೇರೆಯಾಗಿರಬಹುದು. ಯಾವುದೇ ಓರ್ವ ಮುನಿಯ ವಾಕ್ಯವೇ ಕೊನೆಯೆಂದು ಭಾವಿಸಲಾಗದು. ಧರ್ಮದ ಸೂಕ್ಷ್ಮ ಆಳವಾಗಿದೆ, ಆದುದರಿಂದ ಹಿರಿಯರು ಹೇಳಿದ ಮಾರ್ಗದಲ್ಲಿ ಚಲಿಸು. ಅಂದರೆ ಒಂದು ವೇದ ಒಂದು ಅದೇಶ ನೀಡಬಹುದು. ಆದರೆ ಬೇರೆ ವೇದಗಳು ಅದನ್ನು ಒಪ್ಪದೇ ಇರಬಹುದು. ಏಕೆಂದರೆ ವೇದಗಳಲ್ಲಿ ತಿಳಿಸಿದ ವಿಷಯಗಳ ಬಗೆಗೆ ಅನೇಕ ಸಂದೇಹಗಳಿರಬಹುದು. ಅದರಂತೆಯೇ ಸ್ಮೃತಿ ಹಾಗೂ ಧರ್ಮಶಾಸ್ತ್ರಗಳು. ಅದರಲ್ಲಿಯೂ ಏಕಾಭಿಪ್ರಾಯವಿರಲಾರದು. ಹಾಗೆಯೇ ಯಾವುದೇ ಓರ್ವ ಮುನಿಯ ಹೇಳಿಕೆಯೆ ಅಂತಿಮವೆಂದೂ ಹೇಳಲಾಗದು. ಏಕೆಂದರೆ ಚಿರಸತ್ಯವನ್ನು ಹೇಳಿದ ಯಾವ ಮುನಿಯು ಇಂದಿಗೂ ಜನಿಸಿಲ್ಲ. ಆದರೂ ನಾವು ಮನು ಮಹಾರಾಜನನ್ನು ಉದಾಹರಿಸುತ್ತೇವೆ. ಡಾ. ಅಂಬೇಡ್ಕರರನ್ನು ಆಧುನಿಕ ಮನು ಎಂದೇ ಹೇಳಲಾಗುತ್ತಿದೆ......

**ಡಾ. ಅಂಬೇಡ್ಕರ್ :** ನಾನು ಆ ಬಿರುದನ್ನು ಒಪ್ಪಿಕೊಂಡಿಲ್ಲ.

**ಬಾಬು ರಾಮನಾರಾಯಣ ಸಿಂಗ್ :** ದಯಮಾಡಿ ಒಪ್ಪಿಕೊಳ್ಳಬೇಡಿ. ಏಕೆಂದರೆ ಅದು ತಪ್ಪು ಹೇಳಿಕೆಯಾಗಿದೆ. ಅದು ತಮಗೆ ಸೂಕ್ತವಲ್ಲ ಹಾಗೂ ಆ ಅರ್ಹತೆ ತಮಗಿಲ್ಲ. ಈ ಬಿರುದು ಕೇವಲ

ಹೊಗಳುಭಟ್ಟರದು. ನಿಮ್ಮನ್ನು "ಮನು" ಎಂದರೆ ನಾವೇನೂ ಕನಿಷ್ಠರಲ್ಲ, ನಾವು ನಿಮ್ಮಂತೆಯೇ ಮನುಗಳು.

ಮನುವಿನ ಆದೇಶಗಳನ್ನು ಚಾಚೂ ತಪ್ಪದೇ ಪಾಲಿಸಲಾಗಿದೆ. ಅದನ್ನು ಖಡ್ಗಬಲದಿಂದ ಪ್ರಚಾರ ಮಾಡಲಿಲ್ಲ. ಅವನು ಕಾನೂನುಗಳನ್ನು ಪೋಲೀಸರ ಅಥವಾ ಮಿಲಿಟರಿ ಬೆಂಬಲದಿಂದ ಬರೆಯಲಿಲ್ಲ. ನನಗೆ ಅಂತಹ ಮಹಾಪುರುಷನ ಬಗೆಗೆ ಈ ಸದನದಲ್ಲಿ ಪ್ರಸ್ತಾಪಿಸುವುದು ನಾಚಿಕೆಗೇಡು ಎಂದೇ ಭಾವಿಸುವೆ. ಏಕೆಂದರೆ ನಮ್ಮ ಸಂಸತ್ತಿನ ಸುತ್ತಮುತ್ತಲೂ ಪೋಲೀಸರ ಹಾಗೂ ಮಿಲಿಟರಿಯ ಕಾವಲು ಏರ್ಪಡಿಸಿದೆ. ಅಲ್ಲದೆ "ಧರ್ಮಸ್ಯತತಂ ನಿಹಿತಂ ಗುಹ್ಯಂ" ಎಂದೇ ಹೇಳಲಾಗಿದೆ. ಧರ್ಮ ರಹಸ್ಯವಾದುದು. ಇವರು ಭಾವಿಸಿದಂತೆ ಅದು ಆಚರಣೆಗೆ ದುರ್ಲಭವಾಗಿಲ್ಲ. ಹಿರಿಯರು ಕ್ರಮಿಸಿದ ಮಾರ್ಗವನ್ನೇ ಅನುಸರಿಸು ಎಂದೇ ಹೇಳಿರುವುದರಿಂದ ಆಚರಣೆಗೆ ಅದಕ್ಕಿಂತ ಸುಲಭಮಾರ್ಗ ಬೇರೊಂದಿಲ್ಲ. ಆದರೆ ಶೋಚನೀಯ ಸಂಗತಿ ಎಂದರೆ ಇಂದು ನಮ್ಮಲ್ಲಿ ಹಿರಿಯರೆನಿಸಿಕೊಂಡವರು ಅದರಂತೆ ನಡೆಯದೇ ಹೋಗಿದ್ದಾರೆ. ಇವರ ಹೇಳಿಕೆಯನ್ನು ಯಾರು ಅನುಸರಿಸುವರೋ ಅದನ್ನು ಕಾಲವೇ ನಿರ್ಣಯಿಸುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಯೋಚಿಸಬೇಕು. ಆದುದರಿಂದ ಇದರ ಬಗ್ಗೆ ಮಾತನಾಡಲು ಎಲ್ಲರಿಗೂ ಆಸ್ಪದ ನೀಡಲೇಬೇಕು.

ಸರ್, ಸಂಪ್ರದಾಯಗಳು ಮತ್ತು ಪದ್ಧತಿಗಳು ಇರಬಾರದು ಎಂದೇ ಹೇಳುತ್ತಿದ್ದಾರೆ. ಸಂಪ್ರದಾಯಗಳನ್ನೇ ಕೈಬಿಡಬೇಕು ಎಂದ ಇವರು ತಮ್ಮನ್ನೇ ಕೈಬಿಡಲೂ ಹೇಸರು. ಅವರು ವೇದ, ಶಾಸ್ತ್ರಗಳು ಖಡ್ಗದಿಂದ ಜಾರಿಗೊಳಿಸಲಾಗಿಲ್ಲ ಎಂಬುದನ್ನು ಅರಿಯಬೇಕು. ಅವನ್ನು ಪ್ರತಿಯೊಂದು ಕುಟುಂಬದಲ್ಲಿ ಸಂಪ್ರದಾಯ ಅಥವಾ ಪದ್ಧತಿಗಳ ರೀತಿಯಲ್ಲಿ ಆಚರಿಸಿಕೊಂಡು ಬಂದಿದ್ದುದರಿಂದಲೇ ಇಂದು ಅವನ್ನು ಪರಂಪರೆ ಎಂದೇ ಹೆಸರಿಸಲಾಗಿದೆ.

ರಾಮಾಯಣದಲ್ಲಿ ಒಂದೆಡೆ ಹೀಗೆ ಹೇಳಲಾಗಿದೆ:

*ರಘುಕುಲರೀತಿ ಸದಾಚಲೀಆಯೀ*
*ಪ್ರಾಣಜಾಯೆ ಪರ್ ವಚನ ನಜಾಯೆ.*

ಅಂದರೆ ರಘುವಂಶದ ಸಂಪ್ರದಾಯ ಸದಾ ಜಾರಿಯಲ್ಲಿದೆ. ವಚನಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧ. ಇದು ರಘುವಂಶದ ಹೆಗ್ಗಳಿಕೆ. ಅದು ಪರಂಪರೆ ಮತ್ತು ಸಂಪ್ರದಾಯ. ಅವರು ಕೊಟ್ಟ ವಚನಕ್ಕೆ ಬದ್ಧರಾಗಿ ಪ್ರಾಣತ್ಯಾಗ ಮಾಡಲೂ ಸಿದ್ಧರಿದ್ದರು. ನಾನು ಈ ದಿನ ಏಕೆ ಹೇಳುತ್ತಿರುವೆ ಎಂದರೆ ಅಂಬೇಡ್ಕರರು ಹಾಗೂ ಅವರ ಸರ್ಕಾರ ನಮಗೆ ಸಂಪ್ರದಾಯಗಳನ್ನೇ ತಿರಸ್ಕರಿಸಿರಿ ಎಂದೇ ಬೋಧಿಸುತ್ತಿದೆ. ಶಹಬ್ಬಾಸ್! ಆದರೆ ಅದು ಎಷ್ಟು ಮಹತ್ವದ್ದು ಎಂಬುದನ್ನು ನಾವು ರಘುವಂಶದಿಂದ ಕಂಡುಕೊಂಡಿದ್ದೇವೆ. ಶೋಚನೀಯ, ಆಧುನಿಕ ಮನು ಎನಿಸಿಕೊಂಡವರೇ ಹೀಗೆ ಪ್ರತಿಪಾದಿಸಿದ್ದಾರೆ.

**ಶ್ರೀಮತಿ ದೀಕ್ಷಿತ್** : ಆದರೆ ಇಂದು ಏನು ಜರುಗುತ್ತಲಿದೆ?

**ಬಾಬು ರಾಮನಾರಾಯಣ ಸಿಂಗ್** : ನಿಮ್ಮ ಹೇಳಿಕೆಯೇ ಸರಿಯಾದಲ್ಲಿ ವಿಚ್ಛೇದನೆಯ ವಿಷಯ ಕೊಡಿ. ಕೇವಲ ಎರಡು ಮೂರು ಕೋಟಿ ಜನಕ್ಕೆಂದೇ ಇವರು ವಿಚ್ಛೇದನೆಯ ಮಸೂದೆ ಅಂಗೀಕರಿಸಲಿದ್ದಾರೆ. ಮಿಕ್ಕ ೯೦% ಜನರಿಗೆ ವಿಚ್ಛೇದನೆಯ ರಕ್ಷಣೆಯೇ ಇಲ್ಲವಲ್ಲಾ. ವಿಚ್ಛೇದನೆ ದಿನನಿತ್ಯದ ವಿಷಯ. ಹೇಗೆ ಪಡೆಯಬಹುದು? ಮೂರು ಅಥವಾ ನಾಲ್ಕು ಮಂದಿ ಕುಳಿತುಕೊಂಡು, ವಾದಗ್ರಸ್ತ

ಪಕ್ಷಗಳ ಸಮ್ಮುಖದಲ್ಲಿ ಒಂದು ಕಡ್ಡಿಯನ್ನು ಮುರಿದುಹಾಕಿದರೆ ವಿಚ್ಛೇದನೆಯಾದಂತೆ. ಇಷ್ಟು ಸರಳ, ಒಂದು ನಯಾಪೈಸೆಯ ವೆಚ್ಚವಿಲ್ಲ. ನಮ್ಮ ಅಂಬೇಡ್ಕರರು ಅಸ್ಪೃಶ್ಯರ ಹಿತೈಷಿಗಳು, ಮಾಡಿರುವುದೇನು? ಈ ಸರಳ ಕಾರ್ಯವನ್ನು ಜಿಲ್ಲಾ ನ್ಯಾಯಾಧೀಶರಿಗೆ ವಹಿಸಿ ಕಿರಿಕಿರಿಗೆ ಅವಕಾಶ ಮಾಡಿರುವುದನ್ನು ನೋಡಿ ನಗಬೇಕೊ ಅಳಬೇಕೊ ತಿಳಿಯದು.

**ಶ್ರೀ ನಜೀರುದ್ದೀನ್ ಅಹಮದ್ :** ನ್ಯಾಯವಾದಿಗಳಿಗೊಂದು ಒಳ್ಳೆಯ ಕೆಲಸ ಸಿಕ್ಕಿದ ಹಾಗಲ್ಲವೆ?!

**ಬಾಬು ರಾಮನಾರಾಯಣ ಸಿಂಗ್ :** ನ್ಯಾಯವಾದಿಗಳು, ನ್ಯಾಯವಾದಿಗಳಿಗೆ ಅವಕಾಶ ಮಾಡಿಕೊಡುವುದು.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಪಂಚಾಯತ್‌ಗೆ ವಿಚ್ಛೇದನೆಯನ್ನು ನೋಂದಾಯಿಸುವ ಕಾರ್ಯ ನೀಡಲಾಗಿದೆ.

**ಬಾಬು ರಾಮನಾರಾಯಣ ಸಿಂಗ್ :** ಅದನ್ನು ಪಂಚಾಯಿತಿಗೆ ನೀಡಿರುವುದು ಸರಿ. ಆದರೆ ಪಂಚಾಯಿತಿ ಕೂಡಾ ಸರ್ಕಾರದ್ದೇ ಅಲ್ಲವೆ? ನಾನು ಹೇಳುವುದೇನೆಂದರೆ ಈ ವಿಧೇಯಕವನ್ನೇ ರದ್ದುಪಡಿಸಿ. ಆಗ ವ್ಯವಹಾರ ಎಷ್ಟು ಸರಳ ಹಾಗೂ ಸುಗಮವಾಗಬಲ್ಲದು ಎಂಬುದನ್ನು ನೀವೇ ಅರಿಯುವಿರಿ. ನಮ್ಮ ದೇಶದಲ್ಲಿ ಪಂಚಾಯಿತಿ ಹಾಗೂ ಪಂಚರಿದ್ದಾರೆ. ಅದರಂತೆಯೇ ಸಂಪ್ರದಾಯಗಳಿದ್ದು, ಸಂಪ್ರದಾಯಗಳನ್ನು ಜನತೆ ಸರಳವಾಗಿ ಸ್ವೀಕರಿಸುತ್ತದೆ. ಈ ದಿಶೆಯಲ್ಲಿ ಯಾವುದೇ ಶಾಸನ ಜಾರಿಗೆ ತಂದಲ್ಲಿ ಅದು ಸರ್ವರ ಸಮ್ಮತಿಯನ್ನೂ ಹೊಂದಿರಬೇಕು; ಹಾಗೂ ಯಾರೋ ಅದರ ವಿರುದ್ಧ ಹೋಗದಂತೆ ಇರಬೇಕು. ಆದರೆ ನಾವು ಜಾರಿಗೊಳಿಸುವ ಶಾಸನಗಳನ್ನು ಮುರಿದುಹಾಕುವಲ್ಲಿಯೇ ನಮ್ಮ ಜನ ಹೆಮ್ಮೆಪಡುತ್ತಾರೆ. ಇದರಿಂದೇನು ಪ್ರಯೋಜನ. ಇದು ಇಂದು ಅಧಿಕಾರದಲ್ಲಿರುವವರಿಗೆ ಮಾತ್ರ ಸಂತೋಷ ನೀಡಬಲ್ಲದು. ಅವರು ಏನಕೇನ ಪ್ರಕಾರೇಣ ಎಂದು ಇದನ್ನು ಅಂಗೀಕರಿಸಲೇಬೇಕು ಎಂದು ಪಣತೊಟ್ಟಿದ್ದಾರೆ.

ಹೀಗಾಗಿ ದೇಶಕ್ಕೆ ಬೇಕಾದುದೇನು ಎಂಬುದನ್ನು ಯಾರೂ ಪರಿಗಣಿಸುತ್ತಿಲ್ಲ. ಸರ್ಕಾರ ಹಣ ವ್ಯಯಮಾಡುತ್ತಲೇ ಇದೆ. ಅದನ್ನು ಯಾರೂ ಏತಕ್ಕೆ ಎಂದು ಪ್ರಶ್ನಿಸಿಯೇ ಇಲ್ಲ. ದೇಶದ ಸರ್ವನಾಶಕ್ಕೆ ಹಣದ ದುಂದುವೆಚ್ಚವಾಗುತ್ತಿದ್ದರೂ ಅದರ ಅರಿವಿಲ್ಲ. ಆದುದರಿಂದ ನಾನು ರಾಜಾಜಿ ಹಾಗೂ ಅಂಬೇಡ್ಕರರನ್ನು ಈ ಮಸೂದೆಯನ್ನು ವಾಪಾಸು ಪಡೆಯುವಂತೆ ಆಗ್ರಹಿಸುತ್ತೇನೆ. ರಾಜಾಜಿಯವರ ಸಮ್ಮುಖದಲ್ಲಿಯೇ ಈ ಅನ್ಯಾಯ ನಡೆದಿರುವುದನ್ನು ನೋಡಿ ನನಗೆ ಅಚ್ಚರಿಯಾಗಿದೆ. ಇದಕ್ಕಿಂತ ನಾಚಿಕೆಗೇಡಿನ ಕಾರ್ಯ ಬೇರೊಂದಿದೆಯೆ?

ಸರ್, ನಾನು ಅಧಿಕ ಸಮಯ ತೆಗೆದುಕೊಳ್ಳದೇ, ಇದೊಂದು ಗಂಭೀರವಾದ ವಿಷಯ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕು. ಎಲ್ಲರಿಗೂ ಅವಕಾಶ ಕಲ್ಪಿಸಬೇಕು. ಏಕೆಂದರೆ ಈ ವಿಧೇಯಕವು ದೇಶದಲ್ಲಿ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ. ಅನೇಕ ನಗರಗಳಲ್ಲಿ ಇದರ ವಿರುದ್ಧ ಪ್ರತಿಭಟನಾ ಮೆರವಣಿಗೆಗಳೂ ನಡೆದಿವೆ. ಆದುದರಿಂದ ಸರ್ಕಾರ ಇದನ್ನು ಹಿಂದಕ್ಕೆ ಪಡೆಯಬೇಕು. ಇಲ್ಲದೇಹೋದಲ್ಲಿ ಸಾಕಷ್ಟು ಅವಕಾಶ ನೀಡಿ ಇದರ ಬಗ್ಗೆ ಗಂಭೀರ ಚರ್ಚೆ ಜರುಗಬೇಕು. ನಾನು ಮತ್ತೊಮ್ಮೆ ಈ ವಿಧಿಯನ್ನು ಕೈಬಿಡಬೇಕೆಂದೇ ಆಗ್ರಹಪೂರ್ವಕವಾಗಿ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವೆ.

**ಶ್ರೀ ಸರ್ವಟೆ** (ಮ.ಪ್ರ) : ನಾನು ಅಂಬೇಡ್ಕರರ ಭಾಗ (ಬಿ) ತಿದ್ದುಪಡಿಯನ್ನು ವಿರೋಧಿಸಬಯಸುವೆ. ಅದು ಅನವಶ್ಯಕ. ಏಕೆಂದರೆ ಭಾಗ (ಎ) ಯಲ್ಲಿ ಎಲ್ಲವನ್ನೂ ಹೇಳಲಾಗಿದೆ.

**ಡಾ. ಅಂಬೇಡ್ಕರ್ :** ನನ್ನನ್ನು ನಿಂದೆ ಮಾಡಿರಿ, ನನಗೆ ಚಿಂತೆ ಇಲ್ಲ. ಆದರೆ ಸಮಯ ವ್ಯರ್ಥ ಮಾಡಬೇಡಿರಿ. ನಿಂದನೆಗಿಂತ ಸಮಯದ ಬಗೆಗೆ ನನಗೆ ಕಾಳಜಿಯಾಗಿದೆ.

***ಶ್ರೀ ಸರ್ವಟೆ :** ನಾನು ನಿಂದಿಸುತ್ತಿಲ್ಲ. ವಿರೋಧಿಸುತ್ತಿದ್ದೇನೆ.

ಸಂವಿಧಾನದ ೨೫೪ನೆಯ ಅನುಚ್ಛೇದದಂತೆ ಯಾವ ಕಾನೂನುಗಳೇ ಇರಲಿ, ಅವು ಸಂಸತ್ತಿನಿಂದ ರಚಿಸಲಾಗಿದ್ದ ಕಾನೂನುಗಳಿಗೆ ವಿರುದ್ಧವಾಗಿದ್ದರೆ, ಅವು ಅನೂರ್ಜಿತವಾಗುವುವು. ಈ ದಿಶೆಯಲ್ಲಿ ಹೇಳಬಹುದಾದ ಇತರ ಶಾಸನಗಳೆಂದರೆ, ಈ ಶಾಸನ ಜಾರಿಗೆ ಬರುವ ಮುನ್ನ ಕೇಂದ್ರದಿಂದ ರಚಿಸಿದ್ದ ಕಾನೂನುಗಳು. ಆದುದರಿಂದ ಈ ಶಾಸನ ಜಾರಿಗೆ ಬಂದ ಮೇಲೆ ಹಿಂದಿನ ಶಾಸನಗಳು ಅಸಂಗತವಾಗಿದ್ದಲ್ಲಿ ತಾವೇ ತಾವಾಗಿ ಅನೂರ್ಜಿತವಾಗುವುವು. ಆದುದರಿಂದ ನಾನು ಹೇಳುವ ಭಾಗ (ಬಿ) ಅನವಶ್ಯಕ. ಭಾಗ (ಎ)ಗೆ ಸಂಬಂಧಿಸಿದಂತೆ ಈ ತಿದ್ದುಪಡಿಯ ಪರಿಣಾಮ ಎಂದರೆ ಹಿಂದಿನ ಸಂಪ್ರದಾಯಗಳು, ಹಿಂದೂ ಶಾಸನದ ಅರ್ಥ, ಈ ಶಾಸನದಲ್ಲಿ ತಿಳಿಸಿದಂತೆ ರದ್ದಾಗುವುವು. ಆದರೆ ಈ ಶಾಸನಕ್ಕೇ ಅಸಂಗತವಾಗದೆ ಇರುವ ಸಂಪ್ರದಾಯಗಳಿಗೆ ರಕ್ಷಣೆ ಇರುತ್ತದೆ. ಆದುದರಿಂದ ನನ್ನ ಹೇಳಿಕೆಯಂತೆ ಇದೆಲ್ಲವೂ ಅನವಶ್ಯಕ. ಏಕೆಂದರೆ ಹಿಂದೂ ಧರ್ಮ ಜೀವಂತ ಹಾಗೂ ಪ್ರಗತಿ ಹೊಂದುತ್ತಲೇ ಇದೆ. ಆದರೆ ಹಲವರು ಅದೊಂದು ಹೇಡಿ ಹಾಗೂ ಪಲಾಯನವಾದಿ, ಮೃತ ಹೊಂದಿದ ಧರ್ಮ ಎಂದಿದ್ದಾರೆ. ಅದು ಸರಿಯಲ್ಲ, ಏಕೆಂದರೆ ಹಿಂದೂಗಳು ಅಲ್ಪಕಾಲ ತಮ್ಮ ಮೇಲೆ ಹೇರಲಾಗಿದ್ದ ಎಲ್ಲಾ ಧರ್ಮಗಳನ್ನು ಸಮರ್ಥನೀಯವಾಗಿ ಎದುರಿಸಿ ತಮ್ಮ ಧರ್ಮವನ್ನೇ ಆಚರಿಸುತ್ತಲೇ ಇದ್ದಾರೆ. ಇದಕ್ಕೆ ಉದಾಹರಣೆ ಎಂದರೆ ಅಂಬೇಡ್ಕರರ ಜನ್ಮಭೂಮಿಯಾದ ಮಹಾರಾಷ್ಟ್ರ ಮತ್ತು ಪಂಜಾಬಿನಲ್ಲಿ ತಮ್ಮದೇ ಆದ ಸ್ವತಂತ್ರ ರಾಜ್ಯಗಳಿದ್ದವು ಎಂಬುದನ್ನು ಮರೆಯಬಾರದು. ನಾನು ಇಲ್ಲಿ ಚರಿತ್ರೆಯನ್ನು ಹೇಳದೇ ನಮ್ಮ ದಿನಗಳಲ್ಲಿಯೇ ಜೀವಂತಸಾಕ್ಷಿಯಾಗಿ ಅಂಬೇಡ್ಕರರು ನಮ್ಮ ಈ ಸದನದಲ್ಲಿದ್ದಾರೆ.

**ಡಾ. ಅಂಬೇಡ್ಕರ್ :** ನನಗೆ ಇಲ್ಲಿರುವ ಅಧಿಕಾರವೇ ಇಲ್ಲ. ಆದರೆ ತೂರಿಬಂದಿದ್ದೇನೆ.

**ಶ್ರೀ ಸರ್ವಟೆ :** ಅವರು ಆ ವಿಧವಾದ ತಪ್ಪೊಪ್ಪಿಗೆಯನ್ನು ಮಾಡಬಾರದು. ಏಕೆಂದರೆ ಇಂದು ಈ ಸಂಸತ್ತೇ, ಬ್ರಿಟಿಷರ ತಾತ್ಕಾಲಿಕ ಅಧಿಕಾರವನ್ನು ಕಿತ್ತೊಗೆದಿರುವುದಕ್ಕೆ ಜೀವಂತ ಸಾಕ್ಷಿಯಾಗಿದೆ. ಇದು ಹಿಂದೂಧರ್ಮದ ಅಂತಸ್ಸತ್ವಕ್ಕೆ ಉದಾಹರಣೆಯಾಗಿದೆ. ಇದೊಂದು ಸಂಪ್ರದಾಯ. ಅಂದರೆ ಈ ಶಾಸನದ ಮೂರನೇ ವಿಧಿಯಲ್ಲಿ ಹೇಳಿದಂತೆ ಸಂಪ್ರದಾಯ, ಅದೊಂದು ನಿಯಮ. ಸಾರ್ವಜನಿಕ ಧೋರಣೆಯ ಸಂಕೇತವಾಗಿರುವ ಸಂಪ್ರದಾಯ. ಏಕೆಂದರೆ ಹಲವು ಅನಿಷ್ಟ ಸಂಪ್ರದಾಯಗಳೂ ಇರುವುದರಿಂದ ಹೀಗೆ ಹೇಳುತ್ತಿರುವೆ. ಅದೊಂದು ವಿಧವಾದ ವಿರೋಧಾಭಾಸ. ಆದರೆ ಅವು ಒಂದು ಕಾಲದಲ್ಲಿ ವಂದ್ಯಾಸ್ತುತ್ಯವಾಗಿದ್ದವು. ಏಕೆಂದರೆ ಇಲ್ಲಿ ನಾವು ಸಂಪ್ರದಾಯದ ವ್ಯಾಖ್ಯೆಯನ್ನು ನೀಡಿ, ಯಾವ ಸಾರ್ವಜನಿಕ ಧೋರಣೆಗೆ ವಿರೋಧವಾಗಿಲ್ಲವೊ ಅವು ವಂದನೀಯ ಎಂದೇ ಹೇಳಿದ್ದೇವೆ. ಆದುದರಿಂದ ಉತ್ತಮ ಸಂಪ್ರದಾಯಗಳು ರಕ್ಷಿಸಲ್ಪಡುತ್ತವೆ.

ಸದನವು ಹಿಂದೂ ಮೂಲದ ಬಗೆ ವಿವರಿಸಿದನ್ನು ಅರಿಯಬಹುದು: ಅದೇನೆಂದರೆ, ಶ್ರುತಿ, ಸ್ಮೃತಿ, ಸದಾಚಾರ.

ಸಾಮಾನ್ಯ ಹಿನ್ನೆಲೆಯಲ್ಲಿ ಶ್ರುತಿ ಮತ್ತು ಸ್ಮೃತಿಗಳು ನೀಡುತ್ತವೆ. ನಂತರ ಸದಾಚಾರ ವಿವಿಧ ವಿಷಯಗಳಿಗೆ

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೦೩-೦೭)

ಆಯಾ ಪ್ರದೇಶಕ್ಕೆ ಸಂಬಂಧಿಸಿದಂತೆ ನೀಡುತ್ತದೆ. ಆದುದರಿಂದ ನಮ್ಮ ಭಾರತ ಒಂದು ವಿಶಾಲದೇಶವಾಗಿದೆ. ಹೀಗಾಗಿ ಶಾಸನದಲ್ಲಿ ವೈವಿಧ್ಯತೆ ಅನಿವಾರ್ಯ. ಇಲ್ಲದೇ ಹೋದಲ್ಲಿ ಅದು ದೌರ್ಜನ್ಯಕ್ಕೆ ಎಡೆಮಾಡಿಕೊಡುತ್ತದೆ.

ನಾನು ಈಗ ಇನ್ನೊಂದು ಹಿಂದೂ ಗ್ರಂಥದ ಶಾಸನವು ಇಂದೂ ಪ್ರಚಲಿತದಲ್ಲಿದ್ದುದನ್ನು ಹೇಳುವೆ. ಅದು ಯಾಜ್ಞ್ಯವಲ್ಕನ ಹೇಳಿಕೆಯಾಗಿದೆ.

*ಯಸ್ಮಿನ್ ದೇಶೋ ಯ ಆಚಾರೋ ವ್ಯವಹಾರಃ*
*ಕುಲಸ್ಥಿತಿಃ ತಥೈವ ಪರಿಪಾಯಂತೇಸೌ॥*

ಅಂದರೆ ಈ ದೇಶದಲ್ಲಿ ಜಾರಿಯಲ್ಲಿರುವ ಯಾವ ಸಂಪ್ರದಾಯಗಳು, ಆಚರಣೆಗಳು ಕುಟುಂಬ ನಡವಳಿಕೆಗಳನ್ನು ಸೂಕ್ತವಾಗಿ ಕಾಪಾಡಬೇಕು ಮತ್ತು ವ್ಯವಸ್ಥೆ ಅಥವಾ ನಿಯಮಗಳ ಬಗೆಗೆ ಹೀಗೆ ಹೇಳಿದೆ.

*ಯೇಷಾಂ ಪರಸ್ಪರಾ ಪ್ರಾಪ್ತ ಪೂರ್ವಜೈನುಷ್ಠಿತಾ।*
*ತ ಏವ ತ್ಯೆರ್ನಪುಷ್ಟೇದುಃ ಆಚಾರೈತಿರಪುನಃ॥*

ಅವನ್ನು ಬಹಿಷ್ಕರಿಸಬಾರದು. ಏಕೆಂದರೆ ನಮ್ಮ ಪೂರ್ವಿಕರು ಆಚರಿಸುತ್ತಿದ್ದರು. ಆಧುನಿಕ ಪರಿಭಾಷೆಯಲ್ಲಿ ಹೇಳಬಹುದಾದರೆ ಸಂಪ್ರದಾಯಗಳು ಸನಾತನಕಾಲದಿಂದಲೂ ಜಾರಿಯಲ್ಲಿವೆ. ಬೇರೆಯವು ಹಾಗಲ್ಲ. ಆದುದರಿಂದ ಅವನ್ನು ಆಚರಿಸದೆ ಸಂಪ್ರದಾಯಗಳನ್ನೇ ಅನುಸರಿಸಬೇಕು.

ಹೀಗೆ ಹಿಂದೂಧರ್ಮವು ತನ್ನ ವ್ಯವಸ್ಥೆಯನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಂಡೆ ತನ್ನ ಶಕ್ತಿಯನ್ನು ವೃದ್ಧಿಸಿಕೊಂಡೆ ಬಂದಿದೆ. ಹೀಗಾಗಿ ಅದೊಂದು ವೀರ್ಯವತ್ತಾದ ಸಜೀವ ಸಮಾಜವಾಗಿ ಉಳಿದುಕೊಂಡು ಬಂದಿದೆ.

ಈಗ ನಾನು ಚಿಕ್ಕ ಉದಾಹರಣೆಗಳಿಂದ, ಈ ತಿದ್ದುಪಡಿಯಿಂದ, ಸಂಪ್ರದಾಯಗಳ ಮೇಲೆ ಆಗಬಹುದಾದ ಪರಿಣಾಮಗಳನ್ನು ವಿವರಿಸುವೆ. ಹಲವಾರು ಕಾರಣಗಳಿಂದಾಗಿ ಈ ತಿದ್ದುಪಡಿಯನ್ನು ಈಗಿರುವ ಸ್ವರೂಪದಲ್ಲಿ ಅಂಗೀಕರಿಸಬಾರದು. ಮೊದಲನೆಯದಾಗಿ, ವಿದ್ವಾಂಸರಾದ ಕಾನೂನು ಮಂತ್ರಿಗಳೂ ಎಲ್ಲಾ ಸಂಪ್ರದಾಯಗಳನ್ನು ಅರಿತಿದ್ದಾರೆ ಎಂದು ಹೇಳಲಾಗದು. ಏಕೆಂದರೆ ಆಸೇತು ಹಿಮಾಚಲದವರೆಗೂ ಈ ದೇಶದಲ್ಲಿ ಹಲವಾರು ಸಂಪ್ರದಾಯಗಳಿವೆ ಅಥವಾ ಸದನದ ಸದಸ್ಯರಿಗೂ ಈ ಬಗೆಗೆ ತಿಳಿವಳಿಕೆ ಇಲ್ಲ. ಒಂದು ವೇಳೆ ಯಾರಾದರೂ ಅರಿತಿದ್ದರೂ ಡಾಕ್ಟರಿಗೆ ಮನವರಿಕೆ ಮಾಡಲಾರರು. ಆದುದರಿಂದ ನಾನು ನನ್ನ ತಿದ್ದುಪಡಿಯಲ್ಲಿ ಒಂದು ಉಪಾಯ ಸೂಚಿಸಿದ್ದರೂ, ತಾಂತ್ರಿಕವಾಗಿ ಅದನ್ನು ಒಪ್ಪಿಲ್ಲ. ನಾನು ಹೇಳಿರುವುದೇನೆಂದರೆ ಈ ಶಾಸನಕ್ಕೆ ಸ್ಥಳೀಯ ಶಾಸಕಾಂಗಗಳು ತಮಗೆ ಸರಿತೋರಿದ ವಿಷಯಗಳನ್ನು ಸೇರ್ಪಡಿಸಬೇಕು. ಅದನ್ನು ನಿರಾಕರಿಸಲಾಗಿದೆ. ಆದುದರಿಂದ ನಾನು ಹೇಳಬಯಸುವುದೇನೆಂದರೆ: ದೇಶದಲ್ಲಿಯ ಉತ್ತಮ ನಡತೆಗಳ ಅರಿವು ನಮಗೆ ಇರದೇ ಹೋದುದರಿಂದ, "ಈ ಶಾಸನದಲ್ಲಿ ಸೂಚಿಸಲಾದ ಅಂಶಗಳಂತೆ..." ಎಂದಾಗ ಅವರ ಪರಿಣಾಮ ಬೇರೆಯೇ ಆಗುತ್ತದೆ. ಆಗ ಭಾಗ (ಎ) ಯಂತೆ ಉತ್ತಮ ಸಂಪ್ರದಾಯಗಳು ಅಂದರೆ ಕಾನೂನಿಗೆ ವಿರೋಧವಾದವು ತಾವೇ ಕಳಚಿಹೋಗುತ್ತದೆ.

ಭಾಗ(ಬಿ)ಯಂತೆ ಈ ಕಾನೂನಿಗೆ ಅಸಂಗತವಾದ ಸಂಪ್ರದಾಯಗಳು ರದ್ದಾಗುತ್ತವೆ. ಹೀಗಾಗಿ

ಸಂಪ್ರದಾಯಗಳೆಲ್ಲವೂ ರದ್ದಾಗಿ ಹೋಗುತ್ತವೆ. ಇದೊಂದು ವಿಶಾಲವಾದ ಅಂಶ. ಹೀಗಾಗಿ ಇದನ್ನು ಕೈಬಿಟ್ಟಿಲ್ಲ. ಅಪಾರ ನಷ್ಟ ಉಂಟಾಗುತ್ತದೆ. ಸಂಪ್ರದಾಯಗಳು ಇನೇ ವಿಧಿಯಲ್ಲಿ ಹೇಳಿದಂತೆ, ಸದನ ಒಪ್ಪಿಗೆ ನೀಡಿದೆ. ಶಾಸನಗಳು ಸಂವಿಧಾನದ ೨೫೪ರಂತೆ ಮುಂದುವರಿಯುತ್ತವೆ.

ನಾನು ಮತ್ತೊಂದು ಉದಾಹರಣೆ ಕೈಗೆತ್ತಿಕೊಳ್ಳುವೆ. ವಿವಾಹ ಒಂದು ಸಾಮಾಜಿಕ ಸಂಘಟನೆ. ಅದು ಸಾಮಾಜಿಕ ಆವಶ್ಯಕತೆಗಳನ್ನು ಪೂರೈಸುತ್ತದೆ. ದೇಶದ ಯಾವುದೇ ಪ್ರದೇಶದಲ್ಲಿಯ ಶಾಸನದಲ್ಲಿಯೂ ಅನೇಕ ಬದಲಾವಣೆಗಳನ್ನು ತರಲೇಬೇಕಾಗುತ್ತದೆ. ಆದರೆ ಇಂದಿನ ಹಿಂದೂ ಶಾಸನದಡಿಯಲ್ಲಿ ಇದನ್ನು ಎರಡು ವಿಧವಾಗಿ ಸಾಧಿಸಲಾಗಿದೆ. ಮೊದಲನೆಯದಾಗಿ ವಿವಿಧ ಹಿಂದೂ ಶಾಸನಗಳು ಜಾರಿಯಲ್ಲಿವೆ. ದಯಾಭಾಗ, ಮಿತಾಕ್ಷರಿ ಮುಂತಾದವು. ಸಾಮಾನ್ಯ ಹಿನ್ನೆಲೆಯಲ್ಲಿ ಯಾಜ್ಞವಲ್ಕ್ಯ ಹಾಗೂ ಮನುಸ್ಮೃತಿಗಳಿವೆ.

ದಯಾಭಾಗ ಮತ್ತು ಮಿತಾಕ್ಷರಿಗಳು ವೈವಿಧ್ಯತೆಗೆ ಸಹಕಾರಿಯಾಗಿವೆ. ಇದಲ್ಲದೇ ಮಿತಾಕ್ಷರಿಯಲ್ಲಿಯೇ ವಿವಿಧ ಪಂಥಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಏಕೆಂದರೆ ಮಿಥಿಲೆ, ಬನಾರಸ್ ಹಾಗೂ ಮಹಾರಾಷ್ಟ್ರ, ಮದ್ರಾಸ್ ಸಂಪ್ರದಾಯಗಳಿವೆ. ಇದು ಹಿಂದೂ ಸಮಾಜದ ವೈವಿಧ್ಯತೆಗೆ ಪರಿಪೋಷಕವಾಗಿದೆ. ಹೀಗಾಗಿ ಹಿಂದೂ ಸಮಾಜ ಜೀವಂತ ಸಮಾಜದಲ್ಲಿ ಉಳಿದು ಬಂದಿದೆ. ಎರಡನೆಯದಾಗಿ ಹಿಂದೂ ಶಾಸನ ಮತ್ತು ಧರ್ಮದಲ್ಲಿ ಆಚಾರಕ್ಕೆ ಮಹತ್ವವಾದ ಸ್ಥಾನ ನೀಡಲಾಗಿದೆ. ಇದು ಎಲ್ಲರ ಆಶೋತ್ತರಗಳಿಗೂ ಸ್ಪಂದಿಸುತ್ತದೆ. ಹೀಗಾಗಿ ಹಿಂದೂ ಸಮಾಜ ಇಂದಿಗೂ ಮುಂದುವರಿಯುತ್ತಿದೆ.

ಈಗ ನಾನು ಏಕಪತ್ನಿ ವಿವಾಹ ಪ್ರಶ್ನೆ ಎತ್ತಿಕೊಳ್ಳುವೆ. ಕಾನೂನು ನಿರ್ಮಾಪಕರು ಏನೇ ಹೇಳಲಿ, ಸಮಾಜವು ತನ್ನ ಆವಶ್ಯಕತೆಯನ್ನು ಪೂರೈಸಿಕೊಳ್ಳಲು, ಏಕಪತ್ನಿ ಅಥವಾ ಯಾವುದೇ ಒಂದು ಬಗೆಯ ವಿವಾಹ ಪದ್ಧತಿಯನ್ನು ಆಯ್ದುಕೊಳ್ಳಲೇಬೇಕು. ಹೀಗಾಗಿ ಉತ್ತಮ ಶಾಸನಕಾರರು ವಿವಿಧ ಬಗೆಯ ಆವಶ್ಯಕತೆಗಳಿಗೆ ಅನುಗುಣವಾಗಿ ಒಂದು ವ್ಯವಸ್ಥೆಯನ್ನು ನೀಡುತ್ತಲೇ ಇರಬೇಕಾಗುತ್ತದೆ. ಆದರೆ ವಿವಾಹವನ್ನು ನಿರ್ಣಯಿಸುವ ಪ್ರಮುಖ ಅಂಶವೆಂದರೆ ಪುರುಷ ಮತ್ತು ಸ್ತ್ರೀಯರ ಪ್ರಮಾಣ ಸಂಖ್ಯೆ. ಸ್ತ್ರೀ ಹಾಗೂ ಪುರುಷರ ಸಂಖ್ಯೆ ಸರಿಸಮನಾಗಿದ್ದರೆ, ಏಕಪತ್ನಿ ವ್ಯವಸ್ಥೆ ಜಾರಿಯಲ್ಲಿದ್ದು ಸಮಾಜದ ಸುಖಸಂತೋಷಕ್ಕೆ ನಾಂದಿಯಾಗಬಲ್ಲದು. ಪುರುಷ ಹಾಗೂ ಸ್ತ್ರೀ ಸಂಖ್ಯಾ ಪ್ರಮಾಣದಲ್ಲಿ ಏರುಪೇರಿದ್ದರೆ ವಿವಾಹ ಪದ್ಧತಿಯೂ ಬದಲಾಗುತ್ತದೆ. ಸ್ತ್ರೀ ಸಂಖ್ಯೆ ಅಧಿಕವಿದ್ದಲ್ಲಿ ಬಹುಪತ್ನಿ ವ್ಯವಸ್ಥೆ, ಪುರುಷರು ಅಧಿಕವಿದ್ದಲ್ಲಿ ಬಹುಪತಿ ವಿವಾಹ ಪದ್ಧತಿಗಳು ಅಸ್ತಿತ್ವದಲ್ಲಿರಬಹುದು ಇಲ್ಲವೇ ಅನೈತಿಕ ಲೈಂಗಿಕ ವ್ಯವಹಾರಕ್ಕೆ ಆಸ್ಪದ ದೊರೆತು ಶನಿಸಂತಾನಕ್ಕೆ ಆಸ್ಪದವಾಗುತ್ತದೆ.

**ಶ್ರೀ ನಜೀರುದ್ದೀನ್ ಅಹಮದ್ :** ಈ ವಿಧೇಯಕವು ಅನೈತಿಕ ವಿವಾಹಕ್ಕೆ ಆಸ್ಪದ ನೀಡಿದೆ.

**ಶ್ರೀ ಸರ್ವಟೆ :** ನಾನು ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಯುದ್ಧದ ಸಮಯದಲ್ಲಿ ಅದೊಂದು ಸಾಮಾನ್ಯ ಸ್ವರೂಪದ್ದಾಗಿತ್ತು. ಇಂಗ್ಲೆಂಡಿನಲ್ಲಿ ಯುವಕರೆಲ್ಲರೂ ರಣರಂಗಕ್ಕೆ ಹೋರಾಡಲು ಹೋದಾಗ, ಸ್ತ್ರೀಯರು ಅನೈತಿಕ ಸಂಬಂಧದಿಂದ ಸಂತಾನ ಪಡೆದುದು ಸರ್ವವಿದಿತವಾದ ಸಂಗತಿ. ಈಗ ಅದೊಂದು ಕಾನೂನಿನ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಈ ಮಾದರಿ ಪ್ರಕರಣ ಬೇರೆ ದೇಶಗಳಲ್ಲಿಯೂ ನಡೆದಿದೆ. ಪುರುಷರು ಅಧಿಕವಾಗಿದ್ದ ಸಮಾಜಗಳಲ್ಲಿಯೂ ಬಹುಪತಿ ವ್ಯವಸ್ಥೆ ಜಾರಿಯಲ್ಲಿರುವುದನ್ನು ಕಾಣಬಹುದು. ಅಲ್ಲಿಯೂ ಅನೈತಿಕ ಸಂಬಂಧಗಳಿಗೆ ಆಸ್ಪದವಿರುತ್ತದೆ. ಆದರೆ ನಾನು ಏಕಪತ್ನಿ ಪದ್ಧತಿಯ ಪರ; ಏಕೆಂದರೆ ಅದು ಸಹಜ ವ್ಯವಸ್ಥೆ ಹಾಗೂ ಸಮಾಜಕ್ಕೆ ಶಾಂತಿ ನೀಡುತ್ತದೆ. ಅಲ್ಲದೆ ಅದು ಆಧುನಿಕ ವ್ಯವಸ್ಥೆಗೆ ಪರಿಪೂರಕವಾಗಿದೆ. ನನ್ನಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಅಂಕಿಸಂಖ್ಯೆಗಳಿವೆ. ಮದ್ರಾಸ್

ಹಾಗೂ ಬೊಂಬಾಯಿಯಲ್ಲಿ ಸ್ತ್ರೀಪುರುಷರ ಪ್ರಮಾಣ ಸರಿ ಸಮಾನವಾಗಿದೆ.

**ಡಾ. ಅಂಬೇಡ್ಕರ್ :** ನೀವು ಬಹುಪತ್ನಿ ವಿವಾಹಕ್ಕೆ ವಾದಿಸುತ್ತಿದ್ದೀರಿ?

**ಶ್ರೀ ಸರ್ವಟೆ :** ನನಗೆ ವಿವರಿಸಲು ಬಿಡಿ, ಬಂಗಾಲ ಮುಂತಾದ ಪ್ರಾಂತಗಳಲ್ಲಿ ಪುರುಷರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ನೀವು ಒಂದೇ ವಿವಾಹ ಪದ್ಧತಿಯನ್ನು ಜಾರಿಗೊಳಿಸಿದರೆ ಹೇಗೆ?

**ಶ್ರೀ ಬೃಜೇಶ್ವರ ಪ್ರಸಾದ** (ಬಿಹಾರ) : ನನ್ನ ಮಿತ್ರರು, ಒಂದೇ ವಯಸ್ಸಿನ ಗುಂಪುಗಳಲ್ಲಿಯ ಪ್ರಮಾಣ ಅಧ್ಯಯನ ಮಾಡಿದ್ದಾರೆಯೆ? ೧೬ ರಿಂದ ೩೫ರ ಪುರುಷ-ಸ್ತ್ರೀ ಪ್ರಮಾಣ ನೋಡಿದಲ್ಲಿ ಏಕಪತ್ನಿ ಅಥವಾ ಬಹುಪತ್ನಿ ವಿಧಾನಗಳಲ್ಲಿ ಯಾವುದು ಉತ್ತಮ ಎಂದು ತಿಳಿಯಬಹುದು.

**ಡಾ. ಅಂಬೇಡ್ಕರ್ :** ಆ ಅಧ್ಯಯನವನ್ನು ತಮಗೆ ಬಿಟ್ಟಿದ್ದಾರೆ. ಅಧ್ಯಯನದ ವಿಷಯ ಯುವಕರಿಗೆ ಬಿಡಿ. ತಮಗೆ ವಯಸ್ಸಾಗಿದೆ.

**ಶ್ರೀ ಸರ್ವಟೆ :** ಪ್ರತಿಯೊಬ್ಬರೂ ತಮ್ಮ ಕಾರ್ಯಗಳನ್ನು ಮಾಡುತ್ತಲೇ ಇರಬೇಕು. ಹೀಗಾಗಿ ಅಂಬೇಡ್ಕರರು ತಮ್ಮ ಕಾರ್ಯಮಾಡಲಿ, ನಾನು ನನ್ನ ಕಾರ್ಯಮಾಡುವೆನು. ನನ್ನ ವಾದ ಮುಂದುವರಿಸುವೆ. ಸ್ತ್ರೀ ಪುರುಷ ವಯೋಮಾನದಲ್ಲಿಯ ಪ್ರಮಾಣದ ಬಗೆಗೆ ಪ್ರಸಾಪಿಸದೆ ದೇಶದ ವಿವಿಧ ಭಾಗಗಳಲ್ಲಿರುವ ಪರಿಸ್ಥಿತಿಗೆ, ಈಗ ಜಾರಿಯಲ್ಲಿರುವ ಹಿಂದೂ ಶಾಸನ ತನ್ನ **'ಆಚಾರ'** ಪದ್ಧತಿಯಲ್ಲಿ ಅವಕಾಶ ಮಾಡಿದೆ. ಆದುದರಿಂದ ಏಕವಿವಾಹ ಪದ್ಧತಿಗೆ ಅವಕಾಶ ನೀಡದೆ ಸಂಪ್ರದಾಯಕ್ಕೆ ಅನುಗುಣವಾದ ವಿವಾಹ ಪದ್ಧತಿಗಳಿಗೆ ಆಸ್ಪದ ನೀಡಿದರೆ ಉತ್ತಮ. ಹೀಗಾಗಿ ನನ್ನ ದೃಷ್ಟಿಯಲ್ಲಿ ತಿದ್ದುಪಡಿ ಅನವಶ್ಯಕ. ಉಪಕಲಮು (ಎ) ಹಾಗೂ (ಬಿ) ಗಳು ಇರಬೇಕಾಗಿಲ್ಲ. ಒಟ್ಟಾರೆ ಕಲಮನ್ನೇ ಕೈಬಿಡಬೇಕು.

***ಡಾ. ಸಿ.ಡಿ. ಪಾಂಡೆ** (ಉ.ಪ್ರ) : ನಾನು ಸಾಂಪ್ರದಾಯಿಕ ಕಾನೂನುಗಳನ್ನು ರದ್ದುಗೊಳಿಸುವ ಈ ವಿಧೇಯಕದ ಪರ ವಿರುದ್ಧ ಮಾತನಾಡಲು ನಿಂತಿರುವೆ. ಈ ವಿಧಿಯು ಹಿಂದೂ ಕೋಡಿನ ವ್ಯಾಪ್ತಿಯನ್ನು ವಿಶಾಲಗೊಳಿಸಿದೆ. ಆದುದರಿಂದ ಹಿಂದೂ ಕೋಡಿನ ಉತ್ಪತ್ತಿಯನ್ನು ವಿವರಿಸುವೆ. ಈ ವಿಧೇಯಕದ ಆವಶ್ಯಕತೆ ಏನು? ನೀವು ಹಿನ್ನೆಲೆಯನ್ನು ಅರಿತರೆ ಈ ವಿಧೇಯಕದಲ್ಲಿ ಈ ವಿಧಿಯನ್ನು ಸೇರ್ಪಡಿಸಿರುವುದು ಅಪಹಾಸ್ಯವೆಂದು ನಿಮಗೇ ಗೋಚರಿಸುವುದು. ಹಿಂದೂ ಕೋಡಿನ ಮೂಲವೆಂದರೆ, ಹಿಂದೂ ಸಮಾಜದ ಹಲವಾರು ನಾಯಕರ ಮನಸ್ಸಿನಲ್ಲಿ, ಆಧುನಿಕ ನಾಗರಿಕತೆಯು ಮಾನವ ಸಮಾಜಕ್ಕೆ ಸರಿಹೋಗುವಂತೆ ಒಂದು ಶಾಸನವಿರಬೇಕೆಂಬ ಹಿರಿಯಾಸೆ ಹೊಂದಿದ್ದರು. ಎರಡು ವಿಷಯಗಳ ಬಗೆಗೆ ಅಂತಿಮವಾಗಿ ನಿರ್ಣಯಿಸಲಾಯಿತು. ಒಂದು ಎಂದರೆ, ಏಕಪತ್ನಿ ವಿವಾಹ ವ್ಯವಸ್ಥೆ ಎರಡನೆಯದೆಂದರೆ ವಿಶೇಷ ಸಂದರ್ಭಗಳಲ್ಲಿ ವಿಚ್ಛೇದನೆಗೆ ಆಸ್ಪದ ನೀಡುವುದು. ಈ ವಿಚ್ಛೇದನೆ ಸರಳ ಮತ್ತು ಸುಲಭವಾಗಿರಬೇಕು. ಈ ಎರಡನ್ನು ಬಿಟ್ಟು ಬೇರೆ ಯಾವ ಸಾಂಪ್ರದಾಯಿಕ ಕಾಯ್ದೆಗಳ ಬಗೆಗೆ ಅಥವಾ ಅದನ್ನು ರದ್ದುಗೊಳಿಸುವ ಬಗೆಗೆ ಪ್ರಸ್ತಾವನೆ ಇಲ್ಲ. ಸೋಜಿಗದ ಸಂಗತಿ ಎಂದರೆ ಯಾವ ಒಂದೇ ವ್ಯಕ್ತಿಯಾಗಲಿ ಅಥವಾ ಸಂಸ್ಥೆಯಾಗಲಿ ಈ ಶಾಸನ ಸಾಂಪ್ರದಾಯಿಕ ಕಾನೂನುಗಳನ್ನು ವಿರೋಧಿಸಿದೆ ಎಂಬುದರ ಬಗೆಗೆ ಚಕಾರವೆತ್ತಿಲ್ಲ. ಅಥವಾ ಅದನ್ನು ಮನುವಿನ ಶಾಸನದಂತೆ ಇರಬೇಕೆಂದಾಗಲಿ ಅಥವಾ ಅದರಿಂದ ಅಸಂತುಷ್ಟರಾಗಿದ್ದೇವೆ ಎಂದಾಗಲಿ ಪ್ರತಿಪಾದಿಸಿಲ್ಲ. ಇಲ್ಲಿ, ನಾನು ಈ ಬಗ್ಗೆ ಒಂದು ಮನವಿಯನ್ನು ಕಂಡಿಲ್ಲ ಅಥವಾ ಯಾವ ಸಭೆಯನ್ನೂ ಅಥವಾ ಸುದ್ದಿ ಮಾಧ್ಯಮಗಳಲ್ಲಿಯೂ ಕಂಡಿಲ್ಲ, ಕೇಳಿಲ್ಲ. ಆದರೆ

---

*ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೦೭-೧೨

ಏಕಪತ್ನಿ, ವಿವಾಹದ ವಿಕಾಸಕ್ಕೆ ಅನೇಕ ಪ್ರಯತ್ನಗಳು ನಡದೇ ಇವೆ. ಅದರಂತೆಯೇ ವಿಚ್ಛೇದನೆಯ ಸುಧಾರಣೆಗೂ ಪ್ರಯತ್ನ ಮುಂದುವರಿದಿದೆ. ಆದರೆ ಸುಧಾರಣೆಗಳ ನೆಪದಲ್ಲಿ ಸುಮಾರು ಶೇಕಡಾ ೮೦ ಜನರಿಗೆ ಅಪಾಯಕಾರಿಯಾಗಬಹುದಾದ ವಿಷಯವನ್ನು ಸೇರ್ಪಡಿಸಿರುವುದು ಸರಿಯಲ್ಲ. ಈ ದೇಶದ ಜನಸಂಖ್ಯೆಯನ್ನು ಪರಿಶೀಲಿಸಿದಾಗ, ಮನುವಿನ ಶಾಸನದಂತೆ ನಡೆಯುವವರ ಸಂಖ್ಯೆ ಎಷ್ಟು? ಕೇವಲ ಕೈಬೆರಳಲ್ಲಿ ಎಣಿಸಬಹುದಾದ ಬ್ರಾಹ್ಮಣ ಸಮಾಜ ಹಾಗೂ ಕ್ಷತ್ರಿಯರು ಮತ್ತು ವೈಶ್ಯರು. ಆದರೆ ಅವರಲ್ಲಿಯೂ ಅನೇಕರು ಸ್ಥಳೀಯ ಶಾಸನಗಳಂತೆ ನಡೆದುಕೊಳ್ಳುವವರಿದ್ದಾರೆ. ಏಕೆಂದರೆ ಹಿಂದೂ ಶಾಸನದಲ್ಲಿ ಅವಕ್ಕೆ ಅಧಿಕ ಮನ್ನಣೆ ನೀಡಲಾಗಿದೆ. ಹಿಂದೂ ಲಾ ಅಂದರೆ ಹಿಂದೂ ಶಾಸನವು ಕೇವಲ ಸಾಂಪ್ರದಾಯಿಕ ಶಾಸನದ ರೂಪದಲಿತ್ತು, ಅದು ಲಿಖಿತವಾಗಿರಲಿಲ್ಲ. ಮನು ಮತ್ತು ಯಾಜ್ಞ್ಯವಲ್ಕ್ಯರು ಅದನ್ನು ಕ್ರೋಡೀಕರಿಸಿದವರಲ್ಲಿ ಮೊದಲಿಗರು.

ಕಳೆದ ಒಂದು ನೂರು ವರ್ಷಗಳಲ್ಲಿ ಭಾರತದಲ್ಲಿಯ ಶಾಸಕಾಂಗವು ಹಲವಾರು ತೊಂದರೆಗಳನ್ನು ಎದುರಿಸಿತು. ಆಗ ಅವರು ಕೆಲವು ಶಾಸನಗಳನ್ನು ಕೈಗೆತ್ತಿಕೊಂಡು ತೊಂದರೆಗಳನ್ನು ನಿವಾರಿಸಿದರು. ಆದರೆ ಈಗ ಏಕಪತ್ನಿ ವಿವಾಹ ಹಾಗೂ ವಿಚ್ಛೇದನೆಯ ಬಗೆಗೆ ಬೇಡಿಕೆ ಅಧಿಕವಾಗಿದೆ. ಅದನ್ನು ನಾವು ಒಪ್ಪಲೇಬೇಕು. ಆದರೆ ಸಾಂಪ್ರದಾಯಿಕ ಶಾಸನಗಳ ಬದಲಾವಣೆಯ ಚಿಂತನೆಗೆಂದು ಹೇಗೆ ಹೇಳಬಹುದು? ಸಾಂಪ್ರದಾಯಿಕ ಶಾಸನ ಎಂದರೇನು? ಅದೊಂದು ಸಹಜ ಶಾಸನ; ಅದೊಂದು ವಿಕಾಸ ಶೀಲ ಕಾಯ್ದೆ ಮತ್ತು ಪ್ರಗತಿಪರ ಶಾಸನ. ಅದಕ್ಕೆ ಸಮಯದ ಆವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯ ಇದೆ. ನೀವು ಅದರ ಬೆಳವಣಿಗೆಗೆ ಅಡಚಣೆ ಒಡ್ಡಿದಲ್ಲಿ, ಸಮಾಜ ವಿನಾಶದ ದಾರಿ ಹಿಡಿಯುತ್ತದೆ. ಆಗ ನೀವೂ ಮನುವಿನಂತೆ ಹಿಂದೂ ಸಮಾಜಕ್ಕೆ ಹಾನಿ ಉಂಟುಮಾಡುವಿರಿ. ಈ ಕ್ರಿಯೆ ಕಳೆದ ೩೦೦೦ ವರ್ಷಗಳಿಂದ ಮುಂದುವರಿದೆ ಬಂದಿದೆ. ಅದನ್ನೇ ಮರುಕಳಿಸಬೇಕೆ? ಸಮಾಜದಲ್ಲಿ ವಿವಿಧ ಮಾರ್ಗ ಅಥವಾ ವರ್ಣ ವ್ಯವಸ್ಥೆಯೇ ಮುಂದುವರಿಯಬೇಕೆ? ಈ ಸದನ ಏಕಪತ್ನಿ ವಿವಾಹ ಮತ್ತು ವಿಚ್ಛೇದನೆಯನ್ನು ಅಂಗೀಕರಿಸಿದೆ. ಈ ಪ್ರಗತಿಪರ ಯುಗದಲ್ಲಿ ನೀವು ಅಡ್ಡಿಯನ್ನುಂಟುಮಾಡಬೇಕೊ ಅಥವಾ ಸೌಕರ್ಯಗಳನ್ನು ನೀಡಬೇಕೊ? ನೀವು ಪ್ರಗತಿಗೆ ಅಡಚಣೆ ಉಂಟುಮಾಡಿದರೆ ನಾವು ಹಿನ್ನೆಡೆಗೆ ಪ್ರೋತ್ಸಾಹಿಸಿದಂತೆ ಎಂದೇ ನನ್ನ ಭಾವನೆ.

ಸಾಂಪ್ರದಾಯಿಕ ಶಾಸನಗಳನ್ನು ಮುಂದುವರಿಸಿಕೊಂಡು ಹೋಗಲು ಮತ್ತೊಂದು ಕಾರಣವಿದೆ. ಅದೇನೆಂದರೆ, ರಾಜ್ಯವು ವಿವಾಹ ವಿಚ್ಛೇದನೆಯ ಬಗೆಗೆ ವಿಚಾರಿಸಲು ಬೇಕಾದ ನ್ಯಾಯಾಧೀಶರನ್ನು ಒದಗಿಸುವ ಸಾಮರ್ಥ್ಯ ಹೊದಿಲ್ಲ. (ಸರ್ಕಾರಕ್ಕೆ ಹಣವಿದೆ) ಸರ್ಕಾರಕ್ಕೆ ಸಾಮಾನ್ಯ ಪ್ರಕರಣಗಳ ವಿಚಾರಣೆಗೆ ನ್ಯಾಯಾಧೀಶರನ್ನು ನೇಮಿಸಲು ಹಣವಿಲ್ಲ. ಹೀಗಾಗಿ ಅನೇಕ ಪ್ರಕರಣಗಳು ಕೊಳೆಯುತ್ತಲಿದೆ. ಈ ವಿಲೇವಾರಿಗೆ ಎಷ್ಟು ನ್ಯಾಯಾಧೀಶರು ಬೇಕಾಗಬಹುದು ಎಂಬುದರ ಬಗೆಗೆ ಯಾರಿಗೂ ಕಲ್ಪನೆಯೇ ಇಲ್ಲ. ಅಲ್ಲದೆ ಈ ದಿಶೆಯಲ್ಲಿ ಉದ್ಭವಿಸಬಹುದಾದ ಕಷ್ಟಕಾರ್ಪಣ್ಯಗಳ ಕಲ್ಪನೆ ಇದೆಯೆ? ವೆಚ್ಚವನ್ನು ಕಡೆಗಣಿಸಬಹುದು. ಆದರೆ ಕಷ್ಟಗಳನ್ನು ನಿವಾರಿಸಲಾಗದು. ಸರ್ಕಾರದೊಂದಿಗೆ ತನ್ನ ಕಾರ್ಯಕ್ಕೆಂದೇ ಬಂದ ನಾಗರಿಕನು ಹಿಂಸೆಗೆ ಗುರಿಯಾಗುತ್ತಾನೆ ಹೊರತು ಅವನಿಗೆ ಪರಿಹಾರ ದೊರೆಯದು. ನಾನು ಸರ್ಕಾರಿ ನೌಕರನಿದ್ದು ನನಗೆ ಸ್ಪಷ್ಟ ಕಲ್ಪನೆ ಇದೆ. ಹೀಗಾಗಿ ಸಾಮಾನ್ಯ ನಾಗರಿಕರಿಗೆ ತುಂಬಾ ತೊಂದರೆ. ವಿಚ್ಛೇದನೆ ಪ್ರಮಾಣ ಪತ್ರವನ್ನು ಕೋರ್ಟಿನಿಂದ ಪಡೆಯಬೇಕೆಂದರೆ ಅದು ಸುಲಭವಲ್ಲ. ಅದರಲ್ಲಿಯೂ ಅಮಾಯಕ ನಾಗರಿಕರು ಹಿಂಸೆಗೀಡಾಗುತ್ತಾರೆ.

**ಪಂಡಿತ ಎಂ.ಬಿ. ಭಾರ್ಗವ** (ಅಜಮೀರ್) : ಇನ್ನು ಮುಂದೆ ನ್ಯಾಯಾಲಯಗಳು ಸಮರ್ಥನೀಯವಾಗಿ ಕಾರ್ಯಮಾಡುತ್ತವೆ.

**ಡಾ. ಸಿ.ಡಿ. ಪಾಂಡೆ :** ವಿಷಯಗಳನ್ನು ಅವು ಇದ್ದ ರೀತಿಯಲ್ಲಿ ಒಪ್ಪಬೇಕು. ಸುಧಾರಿಸಬಹುದು ಎಂಬುದು ಕೇವಲ ಮಾತಿನಲ್ಲಿ ಮಾತ್ರ, ಅದು ಅಷ್ಟು ಸುಲಭವಲ್ಲ, ಇದರಿಂದ ಹಿಂಸೆ ನಿವಾರಿಸಿದಂತಾಗುವುದಿಲ್ಲ. ನೀವು ಸಂಪ್ರದಾಯ ಶಾಸನಗಳನ್ನು ಏಕೆ ತೆಗೆದುಹಾಕಬೇಕೆಂದಿದ್ದೀರಿ? ಅದಕ್ಕೆ ಪಟ್ಟು ಏಕೆ? ಹಿಂಸೆ ನೀಡಲೇ ನಿರ್ಧರಿಸಿರುವಿರಾ?

**ಶ್ರೀ ಎ.ಸಿ. ಶುಕ್ಲಾ** (ಮ.ಪ್ರ) : ಅದು ಸಾರ್ವಜನಿಕ ನೀತಿಗೆ ವಿರುದ್ಧವಾಗಿದೆ.

**ಡಾ. ಸಿ.ಡಿ. ಪಾಂಡೆ :** ನೀತಿ, ಕಾನೂನಿನಿಂದ ನಡೆಯಬೇಕಾಗಿಲ್ಲ. ನೀವು ಶಾಸನದ ಬೆಂಬಲದಿಂದ ನೈತಿಕತೆಯನ್ನು ಜಾರಿಗೊಳಿಸಬಹುದು ಎಂದರೆ ಅದು ನಿಮ್ಮ ಭ್ರಮೆ.

**ಶ್ರೀ ಲಕ್ಷ್ಮಣನ್ :** ಸದಸ್ಯರು ಪೀಠವನ್ನು ಉದ್ದೇಶಿಸಿ ಮಾತನಾಡದೇ "ನೀವು" ಎಂದು ವ್ಯಕ್ತಿಗತವಾಗಿ ಮಾತನಾಡುತ್ತಿದ್ದಾರೆ.

**ಡಾ. ಸಿ.ಡಿ. ಪಾಂಡೆ :** ಕ್ಷಮಿಸಿರಿ "ನೀನು" ಎಂದು ಹೇಳುವುದು ಒಂದು ವಿಧಾನ. ನಾನು ವ್ಯಕ್ತಿಯನ್ನು ಉದ್ದೇಶಿಸಿಲ್ಲ. ಶಾಸಕನೆಂದೇ ಭಾವಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಮಧ್ಯ ಪ್ರವೇಶಿಸಕೂಡದು.

**ಡಾ. ಸಿ.ಡಿ. ಪಾಂಡೆ :** ನನಗೆ ಯಾರೇ ಮಧ್ಯಪ್ರವೇಶಿಸಿದರೂ ತಕರಾರಿಲ್ಲ. ಏಕೆಂದರೆ ನಾನು ಹೇಳುವ ವಿಷಯಕ್ಕೆ ಸದನದ ಹೊರಗೆ ಜನರ ಬೆಂಬಲವಿದೆ. ನನಗೆ ಜನತೆಯ ಅರಿವಿದೆ ಹಾಗೂ ಅವರ ಸಮಸ್ಯೆಗಳನ್ನೂ ಬಲ್ಲೆ. ಅಲ್ಲದೆ ಜಾರಿಯಲ್ಲಿರುವ ಸಂಪ್ರದಾಯಗಳನ್ನೂ ಬಲ್ಲೆ, ಈ ವಿಧೇಯಕದಿಂದ ಜನರಿಗೆ ಆಗಬಹುದಾದ ಸಾಧನಗಳಿರಬಹುದು. ಆದರೆ ದೇಶದ ಯಾವುದೇ ಮೂಲೆಯಲ್ಲಿ ಪ್ರಕರಣಗಳು ಸಂಭವಿಸಿದಾಗ ಸರ್ಕಾರದ ಬಳಿ ಅಲ್ಲಿ ತಲುಪುವ ಯಾವ ಸಾಧನಗಳೂ ಇಲ್ಲ. ಅಲ್ಲಿಯ ಜನರು ತಮ್ಮ ಸಾಮಾಜಿಕ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುತ್ತಾರೆ. ಈ ವಿಧೇಯಕದಿಂದ ಅದಕ್ಕೆ ಧಕ್ಕೆ ತಗಲುತ್ತದೆ. ನಿಮಗೆ ನಿಭಾಯಿಸಲಾಗದ ಕಾರ್ಯಕ್ಕೆ ಕೈ ಹಾಕಿ ಅದರ ಹೊಣೆಗಾರಿಕೆಯನ್ನು ಏಕೆ ಅಂಗೀಕರಿಸುವಿರಿ? ಅದು ಅನವಶ್ಯಕ. ಇಲ್ಲಿ ಸಂಪ್ರದಾಯ ಶಾಸನಗಳನ್ನು ರದ್ದುಪಡಿಸಬೇಕೆಂಬ ಪ್ರಸ್ತಾವನೆಯೇ ಇಲ್ಲ; ಏಕೆಂದರೆ ನಮ್ಮ ಮುಂದೆ ಇರುವ ವಿಷಯ ಎಂದರೆ ವಿವಾಹ ಮತ್ತು ವಿಚ್ಛೇದನೆ. ಅಲ್ಲದೆ ನೀವು ಕೈಗೆತ್ತಿಕೊಂಡಿರುವ ವಿಧೇಯಕ ಜನರಿಗೆ ಬೇಕಾಗಿಲ್ಲ. ಅದು ಈ ವಿಧೇಯಕಕ್ಕೆ ವಿರೋಧವಾಗಿದೆ. ಈ ವಿಧೇಯಕ ವಿಚ್ಛೇದನ ನೀಡಬಯಸಿದೆ. ಆದರೆ ನೀವು ಅದನ್ನು ನಿರ್ಬಂಧಿಸುತ್ತಿದ್ದೀರಿ. ಆದುದರಿಂದ ಕಾನೂನು ಮಂತ್ರಿಗಳು ಈ ವಿಷಯವನ್ನು ಜಾಗರೂಕತೆಯಿಂದ ಹಾಗೂ ಸಹಾನುಭೂತಿಯಿಂದ ಪರಾಂಬರಿಸಲಿ ಎಂದು ಕೋರುವೆ.

***ಶ್ರೀ ಓರಾನ್** (ಹಿಂದಿ ಭಾಷಣದ ಆಂಗ್ಲ ಅನುವಾದ) : ನಾನು ಈ ಹಿಂದೂ ಕೋಡ್ ಬಗೆಗೆ ಹೆಚ್ಚೇನೂ ಹೇಳಬೇಕಾಗಿಲ್ಲ. ಆದರೆ ನಾನು ಈಗ ಎದುರಿಸುತ್ತಿರುವ ಸಂದಿಗ್ಧತೆಯಿಂದಾಗಿ ಮಾತನಾಡಬೇಕಾಗಿ ಬಂದಿದೆ. ನನ್ನ ದೃಷ್ಟಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಮೂಲ ನಿವಾಸಿಗಳು ಹಿಂದೂಗಳಲ್ಲ, ಮುಸಲ್ಮಾನರಲ್ಲ

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೧೨-೧೩
* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೧೭-೨೦

ಮತ್ತು ಕ್ರಿಶ್ಚಿಯನ್ನರೂ ಅಲ್ಲ. ಅವರಿಗೆ ಯಾವ ಮತವೇ ಇಲ್ಲ. ಮೊದಲಿಗೆ ಅವರನ್ನು ಈ ವಿಧೇಯಕದಲ್ಲಿ ಸೇರ್ಪಡಿಸಿಲ್ಲ ಹಾಗೆ ಅವರು ಅದನ್ನು ಬಯಸಿಲ್ಲ. ಬಹುಶಃ ನಮ್ಮ ಸಮುದಾಯದಲ್ಲಿಯಂತೆ ವಿವಾಹ ವಿಚ್ಛೇದನೆ, ವಿಶ್ವದ ಬೇರೆ ಯಾವ ಪ್ರದೇಶದಲ್ಲಿಯೂ ಕಾಣಲಾರೆವು. ನಮಗೆ ತಿಳಿದಂತೆ, ವಿವಾಹವಾಗಿ ಮೊದಲನೆಯ ಶಿಶು ಜನ್ಮತಳೆಯುವ ಮುನ್ನವೇ ಸುಮಾರು ಶೇಕಡಾ ೮೦–೮೫ ವಿವಾಹ ವಿಚ್ಛೇದನಗಳಾಗುತ್ತವೆ. ಈ ಬಗೆಗೆ ಏನು ಕಾರ್ಯ ಕೈಕೊಳ್ಳಬೇಕು ಅಥವಾ ವಿಚ್ಛೇದನೆಯೊಂದೇ ಮಾರ್ಗವೇ ಎಂಬುದೇ ಸಮಸ್ಯೆ. ಏಕೆಂದರೆ ಈ ಬಗೆಗೆ ಪಂಚ್‌ನಲ್ಲಿ ಯಾವ ದಾಖಲೆಗಳೂ ಇರುವುದಿಲ್ಲ. ಆದರೆ ಪಂಚಾಯತ್‌ಗಳಿಗೆ ದೂರು ಸಲ್ಲಿಸಬೇಕೆಂದು ಹೇಳಲಾಗಿದೆ. ಆದರೆ ಹಳ್ಳಿಯ ಮುಖಿಯಾ ಅಂದರೆ ಮುಖ್ಯಸ್ಥ ವಿಚ್ಛೇದನದ ಪಕ್ಷಗಳು, ಅವನ ನಿರ್ಣಯವನ್ನು ಅಂಗೀಕರಿಸದೆ ಹೋದಾಗ ಅದನ್ನು ನ್ಯಾಯಾಲಯಕ್ಕೆ ಒಯ್ಯುತ್ತಾನೆ. ಎಷ್ಟು ವಿಚ್ಛೇದನೆಗಳು ವಿಚಾರಣೆಗೆ ಬರಬಲ್ಲವು ಎಂಬುದನ್ನು ನಾವು ಬಲ್ಲೆವು. ಏಕೆಂದರೆ ಒಂದು ಪ್ರಕರಣದ ದಾಖಲೆಗೇ ೧೮ ತಿಂಗಳ ಸಮಯ ಹಿಡಿಯುತ್ತದೆ. ಆದುದರಿಂದ ಈ ಪ್ರಕರಣಗಳನ್ನು ನ್ಯಾಯಾಲಯಕ್ಕೆ ಬಿಡುವುದರಿಂದ ಅದು ನಮ್ಮ ಜೀವಮಾನವನ್ನೇ ಹಾಳುಮಾಡುವುದರಿಂದ, ಡಾಕ್ಟರರು ಈ ಬಗೆಗೆ ಗಂಭೀರವಾಗಿ ಯೋಚಿಸಿ ಅದನ್ನು ಕೈ ಬಿಡಬೇಕೆಂದು ಕೋರಿಕೆ.

****ಶ್ರೀ ಜಂಗಡೆ** (ಹಿಂದಿ ಭಾಷಣದ ಆಂಗ್ಲ ಅನುವಾದ) : ಸರ್, ಕಳೆದ ನಾಲ್ಕೈದು ದಿನಗಳಿಂದ ನಾನು ಮಾನ್ಯ ಸದಸ್ಯರ ಮಾತುಗಳನ್ನು ಕೇಳುತ್ತಲೇ ಬಂದಿರುವೆ. ಅದರಿಂದ ನಿಮಗೆ ತಿಳಿದಂತೆ ವಿಧಿಯ ಬಗೆಗೆ ಚರ್ಚೆಯಾಗದೆ, ಕೇವಲ ಸಾಮಾನ್ಯ ಚರ್ಚೆ ಮುಂದುವರಿದಿದೆ. ಹೀಗಾಗಿ ನಾನು ಸದಸ್ಯರು ಎತ್ತಿರಬಹುದಾದ ವಿರೋಧ ಅಭಿಪ್ರಾಯಗಳಿಗೆ ಉತ್ತರ ನೀಡಬಯಸುವೆ. ಅದೂ ವಿವಾಹ ಹಾಗೂ ವಿಚ್ಛೇದನೆ ಬಗೆಗೆ ಹೇಳಲೇಬೇಕಾದುದು ನನ್ನ ಕರ್ತವ್ಯ ಎಂದೇ ಭಾವಿಸುವೆ. ಏಕೆಂದರೆ ಈಗ ತಾನೇ ಸಿ.ಡಿ. ಪಾಂಡೆಯವರು ಸುಮಾರು ಶೇಕಡಾ ೯೦ ಜನರಲ್ಲಿ ಜಾರಿಯಿರುವ ವಿಚ್ಛೇದನೆಗೆ ನಮ್ಮ ಗಮನ ಸೆಳೆದಿದ್ದಾರೆ. ಅವರು ಮುಂದುವರಿದು ದ್ವಿಜ ಸಮುದಾಯದಲ್ಲಿ ಈ ಬಗೆಯ ವಿಚ್ಛೇದನೆಗೆ ಅವಕಾಶವೇ ಇರದಾಗ, ಅದನ್ನು ಅಂಗೀಕರಿಸಬೇಕೆಂಬ ಒತ್ತಾಯ ಏಕೆ?

**ಪಂಡಿತ ಎಂ.ಬಿ. ಭಾರ್ಗವ** (ಅಜಮೀರ್) : ಅವರು ಹಾಗೆ ಹೇಳಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್** : ಅದರಂತೆ ಅವರು ಹೇಳಿಲ್ಲ. ಏಕೆ ಅವರಿಗೆ ಅನ್ಯಾಯ ಮಾಡುತ್ತೀರಿ?

**ಶ್ರೀ ಜಂಗಡೆ** : ಈಗ ಅನುಮೋದಿಸಲ್ಪಡುತ್ತಿರುವ ಈ ವೈವಾಹಿಕ ಸಂಹಿತೆ ವಿವಾಹ ಇತ್ಯಾದಿಗಳ ಪ್ರಕ್ರಿಯೆಯನ್ನು ಬಹಳವಾಗಿ ಲಂಬಿಸಿ, ಹಳ್ಳಿಯ ಜನಗಳಿಗೆ ಅನೇಕ ಕಷ್ಟಗಳನ್ನುಂಟುಮಾಡುತ್ತದೆ ಎಂದು ಅವರು ಹೇಳಿದರು.

**ಬಾಬು ರಾಮನಾರಾಯಣ ಸಿಂಗ್** : ಅವರು ಮಸೂದೆಯ ಬಗೆಗೆ ಮಾತನಾಡದೇ ಕೇವಲ ಉಪದೇಶ ಮಾಡಿದ್ದಾರೆ. ಅದು ತಮಗೆ ಸಲ್ಲಬೇಕಾದುದು.

**ಶ್ರೀ ಜಂಗಡೆ** : ನಾನು ಸಮಾಜದಲ್ಲಿ ಸೇವೆ ಮಾಡುತ್ತಿರುವುದರಿಂದ ಅಧಿಕ ಜನರ ಸಮಸ್ಯೆ ಮತ್ತು ತೊಂದರೆಗಳನ್ನು ಬಲ್ಲೆ. ಅವರ ವಿವಾಹ ಹಾಗೂ ವಿಚ್ಛೇದನೆಗಳ ಸಂಪ್ರದಾಯಗಳನ್ನೂ ಬಲ್ಲೆ. ಆದರೆ ಅವರ ಬಗೆಗೆ ಮಾತನಾಡುವವರಿಗೆ ಅವರ ವಿಷಯ ಗೊತ್ತಿಲ್ಲ. ಅವರು ಕೇವಲ ಮಸೂದೆಗೆ ಅಡಚಣೆ ಮಾಡುವ ಉದ್ದೇಶದಿಂದ ಮಾತನಾಡುತ್ತಾರೆ. ಸರಳ ವಿಚ್ಛೇದನ ಉತ್ತಮವಾದುದು ಎಂದೇ ಹೇಳಲಾಗುತ್ತಿದ್ದರೂ ಅದು ಸರಳವೂ ಇಲ್ಲ ಸುಲಭವೂ ಅಲ್ಲ. ಶೂದ್ರ ಸಮೂಹದಲ್ಲಿ ವಿಚ್ಛೇದನೆ ತುಂಬಾ

ಪುರಾತನವಾಗಿದ್ದು ಅದನ್ನು ದುರುಪಯೋಗಗೊಳಿಸಿಕೊಳ್ಳಲಾಗಿದೆ. ಹೀಗಾಗಿ ಇಂದು ನಮ್ಮ ಸಹೋದರಿಯರ, ಮಾತೆಯರ ಮಾನಭಂಗವಾಗುತ್ತಿದೆ. ಅವರನ್ನು ಬೊಂಬಾಯಿ ಹಾಗೂ ಕಲಕತ್ತಾ ಬೀದಿಗಳಲ್ಲಿ ಹರಾಜಿಗೆ ಗುರಿಪಡಿಸಲಾಗಿದೆ. ಇದರಿಂದ ಅವರು ಮತಾಂತರಕ್ಕೆ ಬಲಿಯಾಗಿದ್ದಾರೆ. ಹಣ ಖರ್ಚಾಗಬಹುದು. ಅಂಬೇಡ್ಕರರನ್ನು ಹೊಗಳದೇ ಇರಲಾರೆ. ಕೋರ್ಟಿನಿಂದ ಸಮ್ಮತಿ ದೊರೆಯುವವರೆಗೂ ವಿಚ್ಛೇದನೆ ಕೇವಲ ಪಂಚರಿಂದ ಪರಿಹರಿಸಬಾರದು. ನಾವು ಇಂದು 'ಸಪ್ತಪದಿ' ಹೆಸರಿನಲ್ಲಿ ವಿವಾಹವಾದ ಎರಡು ಮೂರು ದಿನಗಳ ನಂತರ ವಿಚ್ಛೇದನೆಯ ನೆಪದಲ್ಲಿ ಇವಳನ್ನು ಬಹಿರಂಗವಾಗಿ ಮಾರಾಟ ಮಾಡುವ ಮಟ್ಟ ತಲುಪಿದ್ದೇವೆ. ಪರಿಸ್ಥಿತಿ ಹೀರುವಾಗ ಧಾರ್ಮಿಕ ವಿವಾಹದ ಅರ್ಥವೇನು? ಪುರಾತನ ಸಂಪ್ರದಾಯಗಳು ಕೊಳೆತು ನಾರುತ್ತಲಿವೆ. ಅದನ್ನು ಮುಂದುವರಿಸುವುದು ಮೂರ್ಖತನ. ಅದನ್ನು ಧರ್ಮದ ಹೆಸರಿನಲ್ಲಿ ಮುಂದುವರಿಸುವುದನ್ನು ಶೇಕಡಾ ೯೦ ಮಂದಿ ನಿರಾಕರಿಸುತ್ತಾರೆ. ನಾವು ಸ್ತ್ರೀಯರನ್ನು ದೇವಿ ಹಾಗೂ ಸೌಭಾಗ್ಯ ಲಕ್ಷ್ಮೀ ಎಂದೇ ಕರೆಯುತ್ತಿದ್ದರೂ, ಅವರು ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಇದೊಂದು ತಪ್ಪು. ಈಗ ತಾನೇ ಸದನದ ಸನ್ಮಾನ್ಯ ಸದಸ್ಯರು, ದ್ವಿಜ ಸಮುದಾಯದಲ್ಲಿ ವಿಚ್ಛೇದನೆ ಇಲ್ಲದಿರುವಾಗ, ಅದನ್ನು ಒಪ್ಪುವಂತೆ ಅದನ್ನೇಕೆ ಅವರ ಮೇಲೆ ಹೇರಬೇಕೆಂದೇ ಕೇಳಿದರು. ಇದು ಅನೇಕ ಸದಸ್ಯರ ಅಭಿಪ್ರಾಯವಾಗಿದೆ. ನೀವು ಸಿಂಹ ಮತ್ತು ಹಸುವನ್ನು ಒಂದೇ ವರ್ಗಕ್ಕೆ ಸೇರಿಸಬಹುದೇ. ಬೇಟೆ ಹಾಗೂ ಬೇಟೆಗಾರ ಇಬ್ಬರನ್ನೂ ಒಂದೇ ಎಂದು ಪರಿಗಣಿಸಬಹುದೆ? ಪೂರ್ವ ಹಾಗೂ ಪಶ್ಚಿಮಗಳನ್ನು ಒಂದುಗೂಡಿಸಲಾಗುವುದೆ? ಅವು ಒಂದನ್ನೊಂದು ಸಂಧಿಸಲಾರವು. ಒಂದೆಡೆ ದ್ವಿಜರಿಗೆ ವಿಚ್ಛೇದನೆ ಇರಕೂಡದು ಎಂದೂ ಮತ್ತು ಶೂದ್ರರಲ್ಲಿ ಸಡಿಲಾದ ವಿಚ್ಛೇದನೆ ಇರಬೇಕೆಂದೂ ವಿರುದ್ಧ ಹೇಳಿಕೆಗಳನ್ನು ನೀಡುವುದು ಸೂಕ್ತವಲ್ಲ. ಈ ಬಗೆಯ ವಿರೋಧಾಭಾಸವು ನಮ್ಮ ನೀತಿಯ ಪತನಕ್ಕೆ ನಾಂದಿಯಾಗುತ್ತದೆ. ಹಿಂದೂ ಕೋಡ್ ಶಾಸನವನ್ನು ಹಿಂದೂ ಸಮಾಜದಲ್ಲಿಯ ಭೇದಭಾವಗಳನ್ನು ತೊಲಗಿಸಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ದ್ವಿಜ ಹಾಗೂ ಶೂದ್ರ ಭಾವನೆಗಳನ್ನು ನಿವಾರಿಸಬೇಕೆಂದೇ ಜಾರಿಗೊಳಿಸಿದೆ. ಈ ದಿಶೆಯಲ್ಲಿ ಈ ವಿಧೇಯಕವು ಅತಿ ಮಹತ್ವವಾಗಿದೆ. ಅಂಬೇಡ್ಕರರು ಎತ್ತಿ ಹಿಡಿದ ನೀತಿಯನ್ನು ನೀವೂ ತೋರಿ, ದ್ವಿಜ ಮತ್ತು ಶೂದ್ರರನ್ನು ಒಂದೇ ಮಾಡಿ ಒಬ್ಬರಿಗೊಂದು ಇನ್ನೊಬ್ಬರಿಗೊಂದು ಎಂದು ಪ್ರಚಾರ ಮಾಡದಿರಿ. ಸರ್ಕಾರಕ್ಕೆ ಹಣದ ಅಭಾವ. ಅದು ಪ್ರಚಾರ ಮಾಡಲಾಗದು. ಆದರೆ ವಿರೋಧಿಗಳು ಅಬ್ಬರದ ಪ್ರಚಾರ ಮಾಡುತ್ತಿದ್ದಾರೆ. ಒಂದು ಬಾರಿ ಕರಪತ್ರಜೀ ಅವರು ತಂದೆ-ಮಗಳ ಮಧ್ಯ ಕೂಡಾ ವಿವಾಹ ಸಾಧ್ಯ ಎಂದೇ ಹೇಳಿದಂತೆ ಪ್ರಚಾರ ಮಾಡಲಾಯಿತು. ಇದರಂತೆ ಅನೇಕ ಅಪಪ್ರಚಾರಗಳನ್ನು ಮಾಡಲಾಗಿದೆ. ಅಣ್ಣ-ತಂಗಿಯರ ಮಧ್ಯೆ ಕೂಡಾ ವಿವಾಹ ಸಾಧು ಎಂದರೆ ಹಿಂದೂಧರ್ಮ ತುಂಡುತುಂಡಾಗಿ ಹೋಗುತ್ತದೆ. ಆದರೆ ಈ ಬಗೆಯ ನಾನಾ ವ್ಯಾಧಿಗಳನ್ನು ಬೇಡ ಎಂದು ಹೇಳಿ ಅದನ್ನು ನಮ್ಮ ಮೇಲೆ ಏಕೆ ಹೇರಬಯಸುವಿರಿ. ದ್ವಿಜರಲ್ಲಿ ವಿಧವೆಯು ಮರುಮದುವೆಯಾಗುವಂತಿಲ್ಲ. ಆದರೆ ವಿದುರ ನೂರು ಬಾರಿ ವಿವಾಹವಾಗಬಹುದು. ಇದೆಂತಹ ನ್ಯಾಯ? ಆದರೆ ಶ್ರೀರಾಮ ಒಂದೇ ಬಾರಿ ವಿವಾಹ.......

**ಮಾನ್ಯ ಉಪಸಭಾಧ್ಯಕ್ಷರು :** ದಯಮಾಡಿ ರಾಮನ ಹೆಸರನ್ನು ಪ್ರಸ್ತಾಪಿಸಬೇಡಿ.

**ಶ್ರೀ ಭಟ್ :** ಹೇಳಲು ಅವಕಾಶ ನೀಡಿ.

**ಶ್ರೀ ಜಂಗಡೆ :** ನಾನು ಶೂದ್ರರಲ್ಲಿ ಜಾರಿಯಲ್ಲಿರುವ ಅನಿಷ್ಟ ಸಂಪ್ರದಾಯವನ್ನು ಹೇಳುತ್ತಿರುವೆ. ಅದನ್ನು ನಾನು ಬದಲಾಯಿಸಲೇಬೇಕು. ಓರ್ವ ವ್ಯಕ್ತಿ ಐದು ಆರು ಸ್ತ್ರೀಯರನ್ನು ವಿವಾಹವಾಗಬಹುದು,

ನಾವು ಸಪ್ತಪದಿಯ ವಿವಾಹವನ್ನೇ ಕಾಣಲಾರೆವು. ಇದು ದೌರ್ಜನ್ಯ. ಇದರಿಂದಾಗಿ ಸ್ತ್ರೀಯರನ್ನು ಬಾರಿ ಬಾರಿಗೂ ಬದಲಾಯಿಸಲಾಗುವುದು ಅಧಿಕ ವೆಚ್ಚದ ಕಾರ್ಯವಾಗಿದೆ. ಸುಮಾರು ಅರ್ಧಕ್ಕಿಂತ ಅಧಿಕ ಆಸ್ತಿ ಈ ಕಾರ್ಯಕ್ಕೆ ವೆಚ್ಚವಾಗುತ್ತದೆ. ಒಮ್ಮೆ ವಿವಾಹವಾದ ಸ್ತ್ರೀಯು ಮತ್ತೊಬ್ಬನ ಮಡದಿಯಾಗುವುದು ನ್ಯಾಯವೆ? ಈ ವಿಧೇಯಕದಲ್ಲಿ ಅದನ್ನು ನಿವಾರಿಸುವ ಪ್ರಯತ್ನ ಮಾಡಲಾಗಿದೆ. ಆದುದರಿಂದ ಹಿಂದೂಧರ್ಮದಲ್ಲಿ ನವಯುಗದ ನಾಂದಿಯಾಗಬೇಕೆಂದರೆ ಈ ವಿಧೇಯಕದಂತೆ ದ್ವಿಜ ಹಾಗೂ ಶೂದ್ರರನ್ನು ಕನಿಷ್ಠ ವಿವಾಹ ಹಾಗೂ ವಿಚ್ಛೇದನೆಯ ವಿಷಯದಲ್ಲಿ ಒಂದುಗೂಡಿಸಿ. ಆದ್ದರಿಂದ ಹಿಂದೂ ಕೋಡ್ ಕಾನೂನನ್ನು ಬೆಂಬಲಿಸಿ.

***ಶ್ರೀ ಟಿ.ಎನ್. ಸಿಂಗ್** (ಹಿಂದಿ ಭಾಷಣದ ಆಂಗ್ಲ ಅನುವಾದ) : ಸರ್, ನಾನು ಮುದ್ದಾಂ ಹಿಂದಿಯಲ್ಲಿಯೇ ಮಾತನಾಡುತ್ತಿರುವೆ. ಏಕೆಂದರೆ ಹಲವು ಸದಸ್ಯರು ಹಿಂದಿಯಲ್ಲಿಯೆ ಹಿಂದೂ ಕೋಡಿನ ಬಗ್ಗೆ ಮಾತನಾಡಬೇಕೆಂದು ಆಗ್ರಹಿಸಿದ್ದಾರೆ. ವಿಶೇಷವಾಗಿ, ನಾಲ್ಕನೆಯ ಕಲಮನ್ನು ಕುರಿತು ಚರ್ಚಿಸುವಾಗ, ನಮ್ಮ ಮನಸ್ಸಿನಲ್ಲಿ ಒಂದು ಯೋಚನೆ ಬರುತ್ತದೆ. ಅದೇನೆಂದರೆ ಡಾ. ಅಂಬೇಡ್ಕರರು ಮನು, ಪರಾಶರ, ಯುಜ್ಞವಲ್ಕ್ಯರ ಪಂಕ್ತಿಗೆ ಸೇರಬಯಸಿ ಅವರಂತೆ ನಡೆದುಕೊಳ್ಳಬೇಕೆಂದೇ ಬಯಸಿದ್ದಾರೆ. ಆದರೆ ನಮ್ಮ ಪರಂಪರೆಗಳು ಕಾಲಕ್ಕೆ ತಕ್ಕಂತೆ ಉದ್ಭವಿಸಿವೆಯೇ ಹೊರತು ಏಕಕಾಲದಲ್ಲಿ ಅಲ್ಲ. ಹಾಗೂ ಅವು ಸಾಮೂಹಿಕ ಜ್ಞಾನದ ಪ್ರತೀಕವಾಗಿ ಹೊರಹೊಮ್ಮಿವೆ ಹೊರತು ಏಕವ್ಯಕ್ತಿಯಿಂದಲ್ಲ. ಹೀಗಾಗಿ ಓರ್ವ ವ್ಯಕ್ತಿಯ ಜ್ಞಾನದಿಂದ ಅವುಗಳಿಗೆ ಯಾವ ಧಕ್ಕೆಯೂ ಉಂಟಾಗದು. ನಾನು ಹೇಳುವುದೇನೆಂದರೆ ನಾವು ಅಷ್ಟು ಸುಲಭವಾಗಿ ನಮ್ಮ ಪರಂಪರೆಗಳನ್ನು ಕೈಬಿಡಲೂ ಆಗದು. ಏಕೆಂದರೆ ಸಂಪ್ರದಾಯಗಳ ಬಗೆಗೆ ನಮಗೆ ಸಂಪೂರ್ಣ ಅರಿವೇ ಇಲ್ಲ. ಹೀಗಾಗಿ ನಮ್ಮ ಕಾನೂನು ಸಚಿವರು ಎಷ್ಟು ಸಂಪ್ರದಾಯಗಳನ್ನು ಬಲ್ಲರೊ ಅದೇ ತಿಳಿಯದ ಪ್ರಶ್ನೆಯಾಗಿದೆ. ಆದರೆ ಅವರು ಈ ಹಿಂದೂ ಕೋಡಿನಿಂದ ಎಲ್ಲಾ ಸಂಪ್ರದಾಯಗಳನ್ನು ತೊಡೆದು ಹಾಕಬೇಕೆಂದೇ ನಿರ್ಧರಿಸಿದ್ದಾರೆ. ಈ ಭರತ ವರ್ಷವೆನಿಸಿದ ಭಾರತದ ಮೂಲೆಮೂಲೆಯಲ್ಲಿ ವಿವಿಧ ಸಂಪ್ರದಾಯಗಳನ್ನು ಸಂಪೂರ್ಣವಾಗಿ ತೊಲಗಿಸಬೇಕೆಂದೇ ನಿರ್ಣಯಿಸಿರುವುದು ಸೋಜಿಗದ ಸಂಗತಿಯೇ ಆಗಿದೆ. ಏಕೆಂದರೆ ಅವರು ಮನು, ಯಾಜ್ಞವಲ್ಕ್ಯರ ಅಥವಾ ಯಾವ ಸ್ಮೃತಿಕಾರರನ್ನೇ ಹೋಲಲಿ, ಆದರೆ ದೇವರ ದಯೆಯಿಂದ ಸಂಪ್ರದಾಯಗಳ ಮೇಲೆ ದಾಳಿ ನಡೆಸದಿರಲಿ.

ಸರ್, ನಮ್ಮ ದೇಶದಲ್ಲಿ ಅನೇಕರು, ಅನೇಕ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ. ಬಹುಶಃ ಇದರಿಂದ, ಆ ಜನತೆಯು, ನಮ್ಮ ವಿಧೇಯಕದಲ್ಲಿ ಹೇಳಲಾದ ನೀತಿಗಿಂತ, ಉತ್ತಮ ಮಟ್ಟದ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಅದು ಮನು, ಪರಾಶರರಿಗೆ ಮಾತ್ರ ಸೀಮಿತವಾಗಿಲ್ಲ ಎಂಬುದನ್ನೂ ನಾವು ಸ್ಮರಿಸಬೇಕು. ಉದಾಹರಣೆ ಶ್ರೀ ತಿಬಲೆ ಓರಾನ್ ಅವರ ಪಂಗಡವು ಯಾವ ಕಾನೂನು ಅಥವಾ ಪರಂಪರೆಗಿಂತಲೂ ಕನಿಷ್ಠವಾಗಿಲ್ಲ ಎಂದು ಧಾರಾಳವಾಗಿ ಹೇಳಬಹುದು. ನನ್ನ ಅಭಿಪ್ರಾಯದಲ್ಲಿ ಹಿಂದಿ ಭಾಷೆಯಲ್ಲಿ ಏಕರೂಪದ ಪದವಿಲ್ಲ ಎಂದೇ ಹೇಳಿದರೆ ತಪ್ಪಾಗದು. (ಓರ್ವರು ವಿವಾಹ ವಿಚ್ಛೇದನೆ) ನೀವು ಹೇಳುವ ಒಂದು ಪದವಾಗಿಯೇ ಇಲ್ಲ. ಆದುದರಿಂದ ಜಾರಿಯಲ್ಲಿರುವ ಸಂಪ್ರದಾಯಗಳಿಗಿಂತ ಈ ಕೋಡ್ ಉತ್ತಮ ಎಂದು ಹೊಗಳುವುದು ಸರಿಯಲ್ಲ. ಆದುದರಿಂದ ಸಂಪ್ರದಾಯಗಳನ್ನು ಅಲಕ್ಷಿಸಬಾರದೆಂದೇ ಕಾನೂನು

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೨೬–೨೮

ಸಚಿವ ಮತ್ತು ಸರ್ಕಾರವನ್ನು ಕೋರುತ್ತದೆ. ಎರಡನೆಯದಾಗಿ ಎಲ್ಲಾ ಸಂಪ್ರದಾಯಗಳನ್ನು ರದ್ದುಮಾಡುವುದು ಜಾಣತನದ ಕಾರ್ಯವಾಗಲಾರದು. ಏಕೆಂದರೆ ಹಲವು ಪ್ರದೇಶಗಳಲ್ಲಿ ಕಾನೂನಿನಂತೆಯೆ ಸಂಪ್ರದಾಯಗಳನ್ನೂ ಗೌರವಿಸುತ್ತಲಿದ್ದಾರೆ. ಅವುಗಳ ಬಗೆಗೆ ಯಾರೂ ತಿದ್ದುಪಡಿಯನ್ನೇ ಮಂಡಿಸಿಲ್ಲ.

**ಓರ್ವ ಸದಸ್ಯರು :** ವಿವಾಹದ ಬಗೆಗೆ ತಿದ್ದುಪಡಿಗಳನ್ನು ಸೂಚಿಸಿದ್ದಾರೆ.

**ಶ್ರೀ ಟಿ.ಎನ್. ಸಿಂಗ್ :** ಆದರೆ ಬೇರೆ ವಿಷಯಗಳ ಬಗೆಗೆ ತಿದ್ದುಪಡಿಗಳಿಲ್ಲ. ಬಹುಶಃ ಅವು ಮುಂದೆ ಬರಲೂ ಬಹುದು. ನಾನು ಸ್ವಾಗತಿಸುವೆ. ಆದರೆ ಅವನ್ನು ಒಂದೇ ಶಾಸನದಿಂದ ಏಕಾಏಕಿಯಾಗಿ ರದ್ದುಪಡಿಸುವುದು ಸರಿ ಅಲ್ಲ. ಇದು ಕಾಲಕ್ರಮೇಣದಲ್ಲಿ ಆಗಬೇಕಾದ ಕಾರ್ಯ. ಅದನ್ನು ಬಿಟ್ಟು ಈ ಶಾಸನ ಜಾರಿಗೆ ಬಂದ ಮೇಲೆ ಯಾವ ಸಂಪ್ರದಾಯಗಳೂ ಇರಲಾರವು ಎಂದು ಹೇಳುವುದು ಸೂಕ್ತವಲ್ಲ. ಹೀಗೆಂದ ಮಾತ್ರಕ್ಕೆ ಸಂಪ್ರದಾಯಗಳನ್ನು ಬದಲಿಸಬಾರದು ಎಂದಲ್ಲ. ಅನಿಷ್ಟ ಸಂಪ್ರದಾಯಗಳನ್ನು ಬದಲಿಸಬಹುದು. ಈಗ ಜಾರಿಯಲ್ಲಿರುವ ಪದ್ಧತಿಯಂತೆ ೬೦-೭೦ ವಯಸ್ಸಿನ ವೃದ್ಧರೂ ವಿವಾಹವಾಗಬಹುದು ಅದನ್ನು ಹಿಂದೂ ಶಾಸನವು ಪ್ರತಿಬಂಧಿಸಿಲ್ಲ. ನಾನು ಹೇಳುವುದೇನೆಂದರೆ ಅನಿಷ್ಟ ಸಂಪ್ರದಾಯಗಳಿಗೆ ತಿಲಾಂಜಲಿ ನೀಡಿರಿ ಎಂದೇ.

**ಶ್ರೀ ಎ.ಸಿ. ಶುಕ್ಲಾ :** ವರದಕ್ಷಿಣೆಗೆ ಸಂಬಂಧಿಸಿದವು.

**ಶ್ರೀ ಟಿ.ಎನ್. ಸಿಂಗ್ :** ಹೌದು, ಅದರಂತೆ ಇನ್ನೂ ಅನೇಕ ವಿಷಯಗಳಿವೆ. ವಿಧವಾ ಪುನರ್‌ವಿವಾಹ ಮುಂತಾದವು. ನೀವು ಕೋಟಿ ಕೋಟಿ ಕಾನೂನುಗಳನ್ನು ಮಾಡಿದ್ದರೂ ಅವನ್ನು ಜಾರಿಗೊಳಿಸಲು ಆಗಿಲ್ಲ, ಏಕೆಂದರೆ ಸಮಾಜದ ಮೇಲೆ ಸಂಪ್ರದಾಯಗಳ ಹಿಡಿತ ಅಧಿಕವಾಗಿವೆ. ಆದುದರಿಂದಲೇ ಸಂಪ್ರದಾಯಗಳ ಅಧ್ಯಯನ ಅಗತ್ಯವೆಂದೆ ಹೇಳುವೆ. ಹೀಗಾಗಿ ಅವನ್ನು ರದ್ದುಪಡಿಸುವುದು ಸರಿಯಲ್ಲ. ಹೀಗೆಂದ ಮಾತ್ರಕ್ಕೆ ನಮ್ಮ ಎಲ್ಲಾ ಸಂಪ್ರದಾಯಗಳೂ ಉತ್ತಮ ಎಂದು ಭಾವಿಸಲಾಗದು.

**ಶ್ರೀ ಎ.ಸಿ. ಶುಕ್ಲಾ :** ನಾನೊಂದು ಪ್ರಶ್ನೆ ಕೇಳಬಹುದೆ? ಸಂಪ್ರದಾಯಗಳ ಉತ್ತಮತೆಯನ್ನು ಹೇಗೆ ನಿರ್ಧರಿಸುವಿರಿ? ಒಂದು ಸಮೂಹದ ಶೇಕಡಾ ೭೫ ಮಂದಿ ಒಂದು ಸಂಪ್ರದಾಯಗಳನ್ನು ಅಂಗೀಕರಿಸಿದ್ದಲ್ಲಿ ಅದನ್ನು ಉಳಿಸಿಕೊಳ್ಳಬೇಕೆ? ಅದಕ್ಕೆ ಅನುಗುಣವಾಗಿ ಸಾಂಪ್ರದಾಯಿಕ ಕಾನೂನುಗಳನ್ನು ಸುಧಾರಿಸಬೇಕೆ? ಎಲ್ಲರೂ ಅನಿಷ್ಟ ಸಂಪ್ರದಾಯಗಳನ್ನು ಕೈಬಿಡಬೇಕು ಎಂದೇ ಹೇಳುತ್ತಿದ್ದಾರೆ. ಆದರೆ ಅದನ್ನು ಯಾವ ಆಧಾರದ ಮೇಲೆ ನಿರ್ಣಯಿಸಬಹುದು?

**ಶ್ರೀ ಟಿ.ಎನ್. ಸಿಂಗ್ :** ಶ್ರೀ ಶುಕ್ಲರು ಕೇಳಿದ ಪ್ರಶ್ನೆ ಸರಳವಾಗಿದೆ. ಏಕೆಂದರೆ ನಾನಾಗಲಿ ಅಥವಾ ನೀವಾಗಲಿ ಸಂಪ್ರದಾಯಗಳ ಸುಧಾರಣೆ ಮಾಡಲಾರೆವು. ಅದು ಸಮಾಜದಿಂದಲೇ ಆಗಬೇಕಾದ ಕಾರ್ಯ. ಸಮಯಕ್ಕೆ ತಕ್ಕಂತೆ ಸಮಾಜ ಅದನ್ನು ಮಾಡುತ್ತದೆ. ಆದರೆ ಸಾಮೂಹಿಕ ನಿರ್ಣಯಗಳ ಬಗೆಗೆ ವೈಯಕ್ತಿಕ ಅಭಿಪ್ರಾಯಗಳ ತೀರ್ಪು ಇದೆಯೆಂಬುದನ್ನು ಕಡೆಗಣಿಸಲಾಗದು. ಪ್ರತಿಯೊಬ್ಬನೂ ಈ ಚಿಂತನೆ ಮಾಡಬೇಕು. ಹೀಗೆ ಚಿಂತನ-ಮಂಥನದಿಂದ ಶಾಸನಗಳು ರಚನೆಯಾಗಬೇಕು.

**ಶ್ರೀ ಎ.ಸಿ. ಶುಕ್ಲಾ :** ಅನೇಕ ಅನಿಷ್ಟ ಸಂಪ್ರದಾಯಗಳ ಸಾರ್ವಜನಿಕ ಅಭಿಪ್ರಾಯದಂತೆ ಕಾಲಕಾಲಕ್ಕೆ ಪರಿವರ್ತನೆಗೆ ಗುರಿಯಾಗಿವೆ. ಹಾಗೂ ಕಾಲದ ಪ್ರಭಾವಕ್ಕೆ ಗುರಿಯಾಗಿ ಇನ್ನೂ ಅನೇಕ ಸಂಪ್ರದಾಯಗಳು ಬದಲಾಗಲೂಬಹುದು. ಏಕೆಂದರೆ ಒಂದು ಕಾಲದಲ್ಲಿ ಗ್ರೀಸ್ ದೇಶದಲ್ಲಿಯ ಸ್ಪಾರ್ಟಾ ನಗರದಲ್ಲಿ ಜನಿಸಿದ ಕೂಡಲೇ ಮಗುವನ್ನು ಬಯಲಲ್ಲಿ ಬಿಸಾಡಿಬಿಡುತ್ತಿದ್ದರು. ಆ ಮಗು ಬದುಕಿ ಉಳಿದರೆ ಅದನ್ನು ಪೋಷಿಸುವ ಸಂಪ್ರದಾಯವಿತ್ತು. ಆದರೆ ಅದು ಈಗ ಇಲ್ಲ.

**ಡಾ. ಅಂಬೇಡ್ಕರ್ :** ತಾವು ಕೆಟ್ಟ ಉದಾಹರಣೆ ಹೇಳಿದ್ದೀರಿ.

**ಶ್ರೀ ಟಿ.ಎನ್. ಸಿಂಗ್ :** ನನಗೆ ನೀವು ಏನು ಹೇಳಬಯಸಿರುವಿರಿ ಎಂಬುದೇ ಅರ್ಥವಾಗುತ್ತಿಲ್ಲ. ನೀವು ತಪ್ಪು ಅಭಿಪ್ರಾಯಗಳಿಗೆ ಬೆಂಬಲಿಸಿದ್ದೀರಿ ಎಂದು ಹೇಳಿದಾಗ ಅದು ತಮಗೆ ಕೆಟ್ಟ ಉದಾಹರಣೆಯಾಗಿ ಕಾಣುವುದು ಸ್ವಾಭಾವಿಕವಾದದ್ದು. ನಿಜವಾದ ವಿಷಯವೆಂದರೆ ಸಂಪ್ರದಾಯಗಳ ಬಗೆಗೆ ತಮಗೆ ಸಂಪೂರ್ಣ ಜ್ಞಾನವಿಲ್ಲ. ಆದುದರಿಂದ ಅವನ್ನು ಸಮಗ್ರವಾಗಿ ಅಧ್ಯಯನ ಕೈಕೊಂಡ ನಂತರ ತಾವು ಈ ಕ್ರಮವನ್ನು ಅನುಸರಿಸಬಹುದು.

**ಶ್ರೀ ಎ.ಪಿ. ಶುಕ್ಲಾ :** ಅವನ್ನು ದಾಖಲಿಸಿದೆಯೆ?

**ಶ್ರೀ ಟಿ.ಎನ್. ಸಿಂಗ್ :** ನಾವು ಈ ದೇಶದಲ್ಲಿಯೇ ವಾಸಿಸಿರುವುದರಿಂದ ಸಂಪ್ರದಾಯಗಳನ್ನು ಬಲ್ಲೆವು. ಆದುದರಿಂದ ಉತ್ತಮ ಸಂಪ್ರದಾಯಗಳನ್ನು ರದ್ದುಪಡಿಸುವುದು ತಪ್ಪು. ಹೀಗಾಗಿ ಈ ವಿಧಿಯನ್ನೇ ಕೈಬಿಡಬೇಕು. ಇಲ್ಲವೇ ಮುಂದಿನ ವಿಧಿಯನ್ನು ಮಾರ್ಪಡಿಸಬೇಕು. ಇದ್ದ ರೀತಿಯಲ್ಲಿ ವಿಧೇಯಕವನ್ನು ಅಂಗೀಕರಿಸುವುದು ಸೂಕ್ತವಲ್ಲ.

***ಛ. ರಣಬೀರ್‌ಸಿಂಗ್** (ಪಂಜಾಬ್) : (ಹಿಂದಿ ಭಾಷಣದ ಆಂಗ್ಲ ಅನುವಾದ) : ನಾನು, ನಂ. ೪೨೦ ಪಂಡಿತ ಠಾಕೂರ್ ದಾಸ್ ಭಾರ್ಗವರ ತಿದ್ದುಪಡಿ ಮತ್ತು ಶ್ರೀ ಭಟ್ಟರ ನಂ. ೨೮೮ ತಿದ್ದುಪಡಿಗಳನ್ನು ಅನುಮೋದಿಸಲು ಎದ್ದು ನಿಂತಿರುವೆ. ಶ್ರೀ ಭಟ್ಟರ ತಿದ್ದುಪಡಿಯಂತೆ, ಯಾವುದೇ ಸಂಪ್ರದಾಯ ಈ ಶಾಸನಕ್ಕೆ ಅಸಂಗತವೆಂದು ಕಂಡರೆ ಅವನ್ನು ಕೂಡಲೇ ರದ್ದುಗೊಳಿಸದೆ, ಹತ್ತು ವರ್ಷ ಕಾಲಾವಕಾಶ ನೀಡಿ ನಂತರ ಕ್ರಮತೆಗೆದುಕೊಳ್ಳಬೇಕೆಂದಿದೆ. ನಂ. ೪೨೦ ಪಂಡಿತ ಠಾಕೂರ ದಾಸ ಭಾರ್ಗವರ ತಿದ್ದುಪಡಿಯಂತೆ, ಯಾವ ಸಂಪ್ರದಾಯಗಳು ಈ ಶಾಸನಕ್ಕೆ ವಿರೋಧವಾಗಿಲ್ಲವೊ ಅವನ್ನು ಮುಂದುವರಿಸಿಕೊಂಡೇ ಹೋಗಬೇಕೆಂದು ಹೇಳಿದ್ದಾರೆ. ನನ್ನ ಮಿತ್ರ ಪಾಂಡೆಯವರ ಹೇಳಿಕೆ ಏನೇ ಇರಲಿ, ಹಿಂದೂ ಕೋಡಿನ ನಿಜವಾದ ಉದ್ದೇಶ ನಿವಾರಿಸುವುದಾಗಿದೆ. ಆದರೆ ಇದು ಎಷ್ಟು ಮಂದಿಗೆ ಉಪಯೋಗವಾಗಬಲ್ಲದು ಎಂಬುದನ್ನು ಪರಿಶೀಲಿಸಿ ಇದನ್ನು, ಇಂದಿನವರೆಗೂ ಯಾವ ನಿರ್ಬಂಧಗಳಿಗೂ ಗುರಿಯಾಗದವರ ಮೇಲೆ ಹಿಂದಿನ ಬಾಗಿಲಿನಿಂದ ಬಂದು ಹೇರಿದರೆ, ಅದು ಅಧಿಕಾರದ ದುರುಪಯೋಗ ಎಂದೇ ಭಾವಿಸುವೆ.

**ಶ್ರೀ ಎ.ಪಿ. ಶುಕ್ಲಾ :** ಅವರಿಗೆ ಬೇಡವಾಗಿದ್ದರೂ ಅದನ್ನು ಅವರು ಅಂಗೀಕರಿಸಬೇಕು.

**ಛ. ರಣಬೀರ್‌ಸಿಂಗ್** (ಪಂಜಾಬ್) : ಶ್ರೀ ಶುಕ್ಲಾ ಅವರು ನನ್ನ ಹೇಳಿಕೆಯನ್ನು ಸರಿಯಾಗಿ ಗ್ರಹಿಸಿಲ್ಲವೆಂದೇ ತೋರುತ್ತದೆ. ನಾನು ಹೇಳಿದ **'ಹೇರಿಕೆ'** ಪದ ಸೂಕ್ತವಲ್ಲ ಎಂದರೆ ಅವರೇ ಸರಿಯಾದ ಪದವನ್ನೂ ಸಲಹೆ ಮಾಡಲಿ. ಅದೂ ಪಂಜಾಬ್ ಜನತೆಗೆ ಅವರು ಹಿಂದೂ, ಸಿಖ್ ಮತ್ತು ಮುಸಲ್ಮಾನರೇ ಇರಲಿ, ತಮ್ಮ ಸಾಂಪ್ರದಾಯಿಕ ಶಾಸನಗಳನ್ನು ತೊರೆದು, ಮನುವಿನ ಅಥವಾ ಯಾಜ್ಞವಲ್ಕ್ಯರ ಶಾಸನಗಳನ್ನು ಅಂಗೀಕರಿಸುವುದೇ?

**ಶ್ರೀ ಎ.ಪಿ. ಶುಕ್ಲಾ :** ಅವರು ವಿದ್ಯಾವಂತರಾದ ಮೇಲೆ ಅದನ್ನೂ ಬೇಡಬಹುದು.

**ಛ. ರಣಬೀರ್‌ಸಿಂಗ್ :** ಬಹುಶಃ ಎಷ್ಟು ಪ್ರತಿಭಾವಂತ ವ್ಯಕ್ತಿಗಳು ಪಂಜಾಬಿನವರು ಎಂಬುದರ ಅರಿವೇ ಶುಕ್ಲಾರಿಗೆ ಇರುವಂತೆ ಕಾಣುವುದಿಲ್ಲ. ಪಂಜಾಬಿಗಳ ಸಾಮರ್ಥ್ಯ ಎಷ್ಟು ಎಂಬುದನ್ನು, ಹಿಂದೂ

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೪೨–೫೦

ಅಧಿಕ ಸಂಖ್ಯೆಯಲ್ಲಿದ್ದ ಮತದಾರ ಕ್ಷೇತ್ರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಭ್ಯರ್ಥಿಯನ್ನು ಪರಾಭವಕ್ಕೆ ಈಡುಮಾಡಿದವರು ಪಂಜಾಬಿಗಳು ಎಂಬುದನ್ನು ಅವರ ಗಮನಕ್ಕೆ ತರಬಯಸುವೆ. ಛ. ಛೋಟೂರಾಮ ಅವರು ಈ ಕಾರ್ಯಮಾಡಿದ್ದಾರೆ.

**ಡಾ. ಅಂಬೇಡ್ಕರ್ :** ಛ. ಛೋಟೂರಾಮ ಹಿಂದೂಗಳ ಪರಮ ಮಿತ್ರನು.

**ಛ. ರಣಬೀರ್‌ಸಿಂಗ್ :** ಹಾಗೆಂದು ಅಂಬೇಡ್ಕರರ ಬಳಿ ಏನಾದರೂ ದಾಖಲೆ ಇದೆಯೆ? ಹಾಗಿದ್ದಲ್ಲಿ ನಾನು ಅದನ್ನು ವಿರೋಧಿಸುವುದಿಲ್ಲ. ನಾನು ಏಕಪತ್ನಿ ವಿವಾಹ ಪದ್ಧತಿಯನ್ನು ಬೆಂಬಲಿಸುವೆ. ಆದರೆ ವಿಶೇಷ ತೊಂದರೆಯ ಸಂದರ್ಭಗಳಲ್ಲಿ ವಿಚ್ಛೇದನೆಗೆ ಅವಕಾಶವಿರಬೇಕು. ಅದು ಸ್ತ್ರೀ ಹಾಗೂ ಪುರುಷರಿಗೆ ಸಮನಾಗಿರಬೇಕು. ಆದರೂ ಈ ವಿಧೇಯಕವು ಅಧಿಕಾರದ ದುರುಪಯೋಗವೆಂದು ಹೇಳದೇ ಇರಲಾರೆ. ಏಕೆಂದರೆ ನಾವು ಈ ಹಿಂದೂ ಕೋಡ್ ಬಿಲ್ಲನ್ನು, ಕಡ್ಡಾಯವಾಗಿ ಸರ್ವರ ಮೇಲೂ ಹೇರುತ್ತಿದ್ದೇವೆ.

ಹಿಂದೂ ಕೋಡ್ ವಿಧೇಯಕವು ಸದನದ ಮುಂದೆ ಚರ್ಚೆಗೆ ಬಂದಿರುವುದರಿಂದ ಅದು ಹಲವಾರು ತಿಂಗಳಿನಿಂದಲೂ ಚರ್ಚೆಗೆ ಗ್ರಾಸವಾಗಿದೆ ಹಾಗೂ ಇನ್ನೂ ಅನೇಕ ದಿನ ಬೇಕೆಂದಿವೆ, ಆದರೆ ನನಗೆ ಅವಕಾಶ ದೊರೆಯದೇ ಹೋದುದು ಶೋಚನೀಯ. ದುರದೃಷ್ಟಕರ ವಿಷಯ ಎಂದರೆ ಸರದಾರ್ ಮಾನ್ ಅವರು ವಿಧೇಯಕದ ಬಗೆಗೆ ಚರ್ಚಿಸದೆ ಸಿಖ್ ಮತದ ಮೂಲದ ಬಗ್ಗೆ ವಿವರಿಸಿದರು. ಬಹುಶಃ ಅವರ ಅನಿಸಿಕೆಯಂತೆ, ಈ ಪ್ರಶ್ನೆ ಕೇವಲ ಸಿಖ್ ಜನಾಂಗಕ್ಕೆ ಮಾತ್ರ ಮೀಸಲಾಗಿರದೆ ಅದು ಪಂಜಾಬಿನ ಸಮಸ್ತ ಜನತೆಗೆ ಸಂಬಂಧಿಸಿದ ಸಾಂಪ್ರದಾಯಿಕ ಶಾಸನವಾಗಿದೆ. ನಾನು ಡಾ. ಅಂಬೇಡ್ಕರರ ಗಮನಕ್ಕೆ ತರಬೇಕೆಂದಿರುವ ವಿಷಯ ಎಂದರೆ ಇಂದಿಗೂ ಬ್ರಾಹ್ಮಣ ಸಂಪ್ರದಾಯಗಳನ್ನು ಸಮಾಜದಲ್ಲಿ ಅನುಸರಿಸಲಾಗುತ್ತಿದೆ. ಉದಾ : ಯುದ್ಧ ಜನಾಂಗದ ಜಾತಿಯವರಾದ ಜಾಟ್ ಜನಾಂಗದಲ್ಲಿ ಸೋಮವಾರ, ಮಂಗಳವಾರ ಮತ್ತು ಶನಿವಾರಗಳಂದು ಒಂದು ದಿಕ್ಕಿನಲ್ಲಿ ಪ್ರಯಾಣ ಮಾಡಕೂಡದು ಎಂಬ ಬ್ರಾಹ್ಮಣ ಪದ್ಧತಿ ಜಾರಿಯಲ್ಲಿದೆ. ಈ ಪಂಥಕ್ಕೆ ನಾನು ಹಾಗೂ ಸರದಾರ ಬಲದೇವಸಿಂಗ್‌ರು ಸೇರಿದ್ದೇವೆ. ಅದನ್ನು ವಿರೋಧಿಸಿದ್ದೇವೆ. ನಾನು ಹೇಳಬಯಸುವುದೇನೆಂದರೆ, ನಮ್ಮ ಸಮಾಜದಲ್ಲಿ ಸಂಪ್ರದಾಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ನಾನು ಏಕಪತ್ನಿ ಹಾಗೂ ವಿವಾಹ ವಿಚ್ಛೇದನೆಗೆ ವಿರೋಧವಿಲ್ಲ. ಆದರೆ ಈ ಬಗ್ಗೆ ಏಕಾಭಿಪ್ರಾಯ ಇಲ್ಲವೆಂದೆ ಹೇಳಬಯಸುವೆ. ಅಲ್ಲದೆ ಈ ಶಾಸನವನ್ನು ಹಿಂಬಾಗಿಲಿನಿಂದ ಜಾರಿಗೊಳಿಸುತ್ತಿರುವುದು ಸರಿಯಲ್ಲ. ಇದನ್ನು ಹಿಂದೂ ಅಲ್ಲವೆಂಬ ಭಾವನೆಯಿಂದ ಹೇಳುತ್ತಿಲ್ಲ. ಈ ಪ್ರಶ್ನೆಯನ್ನು ಜನತೆಯ ಮುಂದಿಟ್ಟು ಅಂಗೀಕರಿಸದೆ ದೊಡ್ಡಬಾಗಿಲಿನಿಂದ ಸದನದ ಮುಂದೆ ತಂದಿರುವುದು ಸರಿಯಲ್ಲ. ನಮ್ಮ ಸಮಾಜದಲ್ಲಿ ಅಂದರೆ ಪಂಜಾಬಿನಲ್ಲಿ ಬಾಲವಿಧವೆಯರ ಪ್ರಶ್ನೆಯೇ ಇಲ್ಲದಿರುವಾಗ ಈ ಮಾದರಿಯ ವಿಧೇಯಕವನ್ನು ಹೇರುವುದೇಕೆ? ಹಿಂದೂ ಸಮಾಜದಲ್ಲಿ ಬಾಲವಿಧವೆಯು ತನ್ನ ಸಂಕಷ್ಟಗಳನ್ನು ಏಕಾಂಗಿಯಾಗಿಯೆ ಎದುರಿಸಬೇಕು, ಆದರೆ ನಮ್ಮ ಸಮಾಜದಲ್ಲಿ ಅದರ ಪ್ರಶ್ನೆಯೇ ಇಲ್ಲ, ಏಕೆಂದರೆ ಗಂಡ ತೀರಿದ ಒಂದು ವರ್ಷದ ನಂತರ ಅವಳಿಗೆ ಕುಟುಂಬದಲ್ಲಿ ಮಡದಿಯ ಸ್ಥಾನವನ್ನು ನೀಡಲಾಗುತ್ತದೆ. ಆದರ್ಶದ ದೃಷ್ಟಿಯಿಂದ ಬಾಲವಿಧವೆಯ ಸಂಪ್ರದಾಯ ಸೊಗಸಾಗಿ ಕಂಡರೂ, ಆ ಉನ್ನತ ಆದರ್ಶವನ್ನು ಎಷ್ಟು ಮಂದಿ ಸಾಧಿಸಬಲ್ಲರು. ಆದುದರಿಂದ ಶ್ರೀ ಭಟ್ಟರು ಹೇಳಿದಂತೆ ನಾವು ಸಂಪ್ರದಾಯಗಳನ್ನು ಸ್ವಲ್ಪ ಸಮಯವಾದರೂ ಕಾದುನೋಡಬೇಕು.

ಒಂದೆಡೆ ಸ್ತ್ರೀಯರ ಸಂಕಷ್ಟಗಳನ್ನು ನಿವಾರಿಸಬೇಕೆಂದು ಹೇಳುತ್ತಿದ್ದೀರಿ. ಆದರೆ ಮತ್ತೊಂದೆಡೆ ಅವರನ್ನು ಕಷ್ಟಗಳಿಗೆ ಅಥವಾ ತೊಂದರೆಗಳಿಗೆ ಗುರಿಮಾಡುತ್ತೀರಿ. ಏಕೆಂದರೆ ಕೇವಲ ತೊಂದರೆಯ

ಸಮಯದಲ್ಲಿ ಮಾತ್ರ ಬಹುಪತ್ನಿ ವ್ಯವಸ್ಥೆ ಜಾರಿಯಲ್ಲಿ ಬರಬಹುದು, ಏಕೆಂದರೆ ಸಹಜವಾಗಿ ಯಾರೂ ಬಹುಪತ್ನಿಯರನ್ನು ಹೊಂದುವ ಆಸೆ ಇರಿಸಿಕೊಂಡಿಲ್ಲ. ಇದು ಕುಟುಂಬದಲ್ಲಿ ಮರಣವಾದಾಗ ಮಾತ್ರ ಕಾಣಬಹುದು.

**ಶ್ರೀಮತಿ ದೀಕ್ಷಿತ್ :** ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳುವೆ. ಓರ್ವ ಸ್ತ್ರೀಗೆ ನಾಲ್ಕಾರು ಮಕ್ಕಳಿರುತ್ತಾರೆ. ಆಗ ಅವಳ ಗಂಡ ಮರಣ ಹೊಂದುತ್ತಾನೆ. ಅವಳ ಮೈದುನನಿಗೆ ಮಕ್ಕಳಿದ್ದಾಗ ಮತ್ತೊಬ್ಬಳು ಹೆಂಡತಿಯನ್ನು ಸ್ವೀಕರಿಸುವುದು ನ್ಯಾಯವೆ? ಅದು ಸಂಸಾರದಲ್ಲಿ ವಿರಸಕ್ಕೆ ಆಸ್ಪದ ನೀಡುವುದಿಲ್ಲವೆ?

**ಸರ್ದಾರ್ ಹುಕುಂ ಸಿಂಗ್** (ಪಂಜಾಬ್) : ದೇವರ ಇಚ್ಛೆ.

**ಛ. ರಣಬೀರ್‌ಸಿಂಗ್ :** ನೀವು ಪುನರ್ ವಿವಾಹ ಎಂದರೆ, ಅಲ್ಲ ಎಂದೇ ನಾನು ಹೇಳಬಯಸುವೆ. ಸಮಾಜ ಒಪ್ಪಿಗೆ ನೀಡಿದರೆ ಮಾತ್ರ ಪುನರ್ ವಿವಾಹ ಸಾಧ್ಯ; ಆದರೆ ಅದರ ಬಗೆಗೆ ತಮ್ಮ ಅಭಿಪ್ರಾಯವನ್ನು ಹೇಳದೇ ಇರುವ ಅನೇಕ ಸ್ತ್ರೀಯರಿದ್ದಾರೆ. ತನ್ನ ಹೆಂಡತಿ ತೀರಿಹೋದ ಹದಿನೈದನೇ ದಿನದಂದೇ ಪುರುಷ ಪುನರ್‌ವಿವಾಹಕ್ಕೆ ಸಿದ್ಧನಾಗಿದ್ದರೆ, ಸ್ತ್ರೀಯರ ಬಗ್ಗೆ ವಿಚಿತ್ರವಾದ ಧೋರಣೆಯನ್ನು ನಮ್ಮ ಸಮಾಜ ಹೊಂದಿವೆ. ಆದರೆ ಸಹೋದರನಿಗೆ ಮಕ್ಕಳು ಹೆಂಡತಿ ಇದ್ದಾಳೆ ಎಂಬ ಸಂಗತಿ ತಿಳಿದೂ, ಅವಳು ವಿವಾಹಕ್ಕೆ ಸಿದ್ಧಳಿರುತ್ತಾಳೆ. ಏಕೆಂದರೆ, ಅವಳು ಮಕ್ಕಳು ಅನಾಥರಾಗದಂತೆ ನೋಡಿಕೊಳ್ಳಲು ಇರುವ ಮಾರ್ಗ ಅದೊಂದೇ. ಅದು ಮರಣ ಹೊಂದಿದ ಪತಿಯ ಸಂಸಾರದೊಂದಿಗೆ ಹೊಂದಿಕೊಂಡು ಹೋಗುವುದು. ಕುಟುಂಬದ ಸದಸ್ಯರೂ ಇದಕ್ಕೆ ಸಮ್ಮತಿಸುತ್ತಾರೆ. ಇದು ನಮ್ಮ ಸಮಾಜದಲ್ಲಿ ಅನಾದಿ ಕಾಲದಿಂದಲೂ ನಡೆದು ಬಂದ ಪದ್ಧತಿ. ನೀವು ಏನು ಕಾನೂನು ಮಾಡಿದರೂ ಅದು ಬದಲಾಗದು. ಅವರೇ ಮನಸ್ಸು ಮಾಡಿದರೆ ಮಾತ್ರ ಸಮಾಜದಲ್ಲಿ ಬದಲಾವಣೆಯಾಗಬಹುದೆ ಹೊರತು ಕಾನೂನಿನಿಂದಲ್ಲ.

ನಮ್ಮ ಸಮಾಜದಲ್ಲಿ ಮತ್ತೊಂದು ಪದ್ಧತಿ ಇದೆ. ಅದೇನೆಂದರೆ ಎಂಥ ಮೂರ್ಖನೇ ಇದ್ದರೂ, ತನ್ನ ಕುಟುಂಬದ ಸಂತಾನಗಳನ್ನು ಬೇರೆ ಕುಟುಂಬದೊಂದಿಗೆ ಕಳಿಸಿಕೊಡಲಾರ, ಒಂದು ವೇಳೆ ಅವನು ಹಾಗೇನಾದರೂ ಮಾಡಿದಲ್ಲಿ ಅವನಿಗೆ ನಮ್ಮ ಸಮಾಜ ಕಠಿಣ ಶಿಕ್ಷೆಯನ್ನು ವಿಧಿಸುವುದು. ನೀವು ನಮ್ಮ ಸಮಾಜ ಹಿಂದುಳಿದಿದೆ ಎಂದು ಹೇಳಿದರೂ, ಅದನ್ನು ಬದಲಾಯಿಸಲಾಗದು. ಹಾಗೇನಾದರೂ ನಡೆದಲ್ಲಿ ಅದು ಕೊಲೆ ಎಂದೇ ಭಾವಿಸಬಹುದು. ಒಂದು ವೇಳೆ ಕೊಲೆಯೇ ನಮ್ಮ ಸಮಾಜದಲ್ಲಿ ಹೆಚ್ಚಬೇಕೆಂದೇ ನಿಮ್ಮ ಭಾವನೆಯಾಗಿದ್ದರೆ, ಪಂಜಾಬ್ ಈಗಾಗಲೇ ಕೊಲೆಗಳಿಗೆ ಹೆಸರುವಾಸಿಯಾಗಿದೆ. ಅದನ್ನು ಅಧಿಕಗೊಳಿಸಬೇಕೆಂದಿದ್ದರೆ ಅದು ನಿಮಗೆ ಬಿಟ್ಟ ವಿಷಯ. ಒಂದು ವೇಳೆ ಅದನ್ನು ತಪ್ಪಿಸಬೇಕೆಂದಿದ್ದರೆ ಶ್ರೀ ಭಟ್ ಅವರ ಸಲಹೆಯನ್ನು ಅಂಗೀಕರಿಸಿ ಅಥವಾ ಭಾರ್ಗವರ ಸಲಹೆಯನ್ನು ಅನುಮೋದಿಸಿ.

ನಾನು ಸ್ತ್ರೀಯ ಬಗೆಗೆ ಹೇಳುವುದೇನೆಂದರೆ ಸ್ತ್ರೀಯು ನಿಜವಾದ ತನ್ನ ಮಕ್ಕಳನ್ನು ಪ್ರೀತಿಸಿದ್ದೇ ಆದರೆ ಅವಳು ತನ್ನ ಮಿಕ್ಕ ಜೀವನವನ್ನು ವಿಧವೆಯಂತೆ ಕಳೆಯಲೇಬೇಕಾಗಿಲ್ಲ. ಏಕೆಂದರೆ ಆ ಸಂಪ್ರದಾಯ ನಮ್ಮಲ್ಲಿಲ್ಲ. ಒಂದು ವೇಳೆ ಅವಳಿಗೆ ತನ್ನ ಸಂತಾನದ ಬಗೆಗೆ ಪ್ರೀತಿ ಇಲ್ಲದೇ ಹೋದಲ್ಲಿ ಅವರನ್ನು ರಾತ್ರಿ ಸಮಯದಲ್ಲಿ ಕಳ್ಳತನದಿಂದ ಕರೆದುಕೊಂಡು ಹೋಗಿ, ಧೈರ್ಯವಾನ್‌ನನ್ನು ಮದುವೆಯಾದರೂ, ಅವಳ ಗಂಡನ ಕೊಲೆ ತಪ್ಪಿದ್ದಲ್ಲ. ಏಕೆಂದರೆ ಅದೇ ನಮ್ಮ ಸಮಾಜದ ಪದ್ಧತಿ. ಹೀಗಾಗಿ ಅವಳ ಸ್ಥಿತಿ ಉತ್ತಮವಾಗಿರದು. ಇದು ಭಯಾನಕವೆಂದರೂ, ಸತ್ಯ ಸಂಗತಿ.

ಇನ್ನು ಸಗೋತ್ರ ವಿವಾಹದ ಪ್ರಶ್ನೆ. ಎಷ್ಟು ಸ್ತ್ರೀ ಹಾಗೂ ಪುರುಷರು ನಗರವಾಸಿಗಳಾಗಿದ್ದಾರೆ? ಈ ದಿಶೆಯಲ್ಲಿ ಹಿಂದೂ ಕೋಡ್ ಬಿಲ್‌ಗೆ ನನ್ನ ಪ್ರತಿಕ್ರಿಯೆಯನ್ನೇ ಹೇಳುವೆ. ಈ ಸದನದಲ್ಲಿ ನಗರದಿಂದ

ಬಂದವರೇ ಅಧಿಕವಾಗಿದ್ದಾರೆ. ನಗರದಲ್ಲಿ ಹುಟ್ಟಿ ಬೆಳೆದವರು ನಗರದ ಆಚಾರ-ವಿಚಾರ ಹಾಗೂ ಆಲೋಚನೆ ಹೊಂದಿದವರಾಗಿರುತ್ತಾರೆ. ಅವರ ಗ್ರಹಿಕೆಯಲ್ಲಿ ನಗರ ಮತ್ತು ಹಳ್ಳಿಗಳಿಗೆ ಅಗಾಧ ವ್ಯತ್ಯಾಸಗಳಿವೆ ಎಂದೇ ಭಾವಿಸುತ್ತಾರೆ, ಏಕೆಂದರೆ ಅವರಿಗೆ ಹಳ್ಳಿಯ ಜೀವನ ತಿಳಿಯದು. ಒಂದು ಉದಾಹರಣೆ ಹೇಳುವೆ. ಪಟ್ಟಣದಲ್ಲಿ ಸ್ತ್ರೀ ವಿವಾಹವಾಗದೇ ಹೋದಲ್ಲಿ ಯಾರು ಅದನ್ನು ಲಕ್ಷಿಸುವುದಿಲ್ಲ. ಆದರೆ ಹಳ್ಳಿಯಲ್ಲಿಯ ಹುಡುಗಿ ಹಾಗೆ ಮಾಡಿದಲ್ಲಿ ಅವಳ ತಂದೆತಾಯಿಗಳು ತೊಂದರೆಗೆ ಈಡಾಗುತ್ತಾರೆ. ಎಲ್ಲರೂ ಈ ಬಗ್ಗೆ ಪ್ರಶ್ನೆ ಕೇಳುವವರೆ? ಹುಡುಗಿಗೆ ಮದುವೆ ಇಷ್ಟವಿಲ್ಲದೆ ಇದ್ದರೂ ಅವಳು ಅದನ್ನು ಬಹಿರಂಗಗೊಳಿಸದೆ, ಒತ್ತಡಕ್ಕೆ ಗುರಿಯಾಗುತ್ತಾಳೆ. ಇದು ಹಳ್ಳಿಯ ಅಂತರವನ್ನು ಅರಿಯಬಹುದು. ಹೀಗಿದ್ದಾಗಲೂ ಕಾನೂನನ್ನು ಅಂಗೀಕರಿಸಬೇಕೆಂದರೆ ಅದು ತಮಗೆ ಬಿಟ್ಟದ್ದು. ಶ್ರೀ ಜಿಂಗಾಡೆಯವರು ಬಲವಾಗಿ ಪ್ರತಿಪಾದಿಸಿದ್ದಾರೆ. ಅವರು ಈಗ ಪಟ್ಟಣವಾಸಿಗಳಾಗಿದ್ದಾರೆಯೆ ತಿಳಿಯದು. ಆದರೆ ಅವರು ಪಟ್ಟಣಿಗರ ಪರವಾಗಿದ್ದಾರೆ. ಅವರು ತಮ್ಮದೇ ಆದ ವಿಷಯವನ್ನು ಹೇಳುತ್ತಿದ್ದಾರೆ. ಬೇರೆಯವರ ಚಿಂತೆ ಅವರಿಗಿಲ್ಲ. ಏನೇ ಇರಲಿ ಎರಡು ವಿಧವಾದ ಜೀವನ ಶೈಲಿಗಳಿವೆ. ಅಲ್ಲದೆ ಅವುಗಳಲ್ಲಿ ಅಪಾರ ಭೇದವೂ ಅಡಕವಾಗಿದೆ. ಒಂದು ವೇಳೆ ಇದೆಲ್ಲವನ್ನೂ ಗಮನಿಸಿಯೂ ವಿಧೇಯಕವನ್ನು ಅಂಗೀಕರಿಸಿದರೆ ಅದಕ್ಕಿಂತ ಅಧಿಕ ಅನ್ಯಾಯ ಬೇರೊಂದು ಇಲ್ಲ.

ಈ ಸಂಬಂಧದಲ್ಲಿ ನಾನು ಇನ್ನೊಂದು ವಿಷಯ ಹೇಳಬಯಸುವೆ. ಅದು ಸಗೋತ್ರ ವಿವಾಹ. ನಮ್ಮ ಪಂಜಾಬಿನಲ್ಲಿಯ ಪದ್ಧತಿಯಂತೆ, ಇಲ್ಲಿ ಕೂಡಾ ಸ್ಥಳೀಯವಾಗಿಯೆ ಬಾಲಕಿಯರ ವಿವಾಹಗಳು ನಡೆಯುತ್ತವೆ. ದೆಹಲಿ ನಗರದಲ್ಲಿ ಒಂದು ಪ್ರದೇಶದ ಹುಡುಗಿಯು ದೆಹಲಿಯ ಇನ್ನೊಂದು ಪ್ರದೇಶದ ಯುವಕನನ್ನೇ ಮದುವೆಯಾಗುತ್ತಾಳೆ. ಇದು ಸಾಮಾನ್ಯವಾಗಿ ಹತ್ತು ಸಾವಿರ ಜನಸಂಖ್ಯೆ ಹೊಂದಿರುವ ಎಲ್ಲಾ ಪಟ್ಟಣಗಳಲ್ಲಿಯೂ ಜಾರಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಅವರು ನಮ್ಮಲ್ಲಿ ಜಾರಿಯಲ್ಲಿರುವ ಸಂಪ್ರದಾಯಗಳನ್ನೇ ಅರಿಯರು. ಆದರೆ ನಮ್ಮ ಸಮಾಜದಲ್ಲಿ ಜಾರಿ ಇರುವ ಪದ್ಧತಿಯಂತೆ ನಾನು ನನ್ನ ಮಗನ ವಿವಾಹವನ್ನು ೨೪ ಹಳ್ಳಿಗಳಾಚೆ ಅಂದರೆ ಸುಮಾರು ೧೦ ಮೈಲು ದೂರದ ಹಳ್ಳಿಯ ಹುಡುಗಿಯೊಂದಿಗೆ ಮಾಡಲು ಬರುವುದಿಲ್ಲ. ಏಕೆಂದರೆ ಅವರ ತಾಯಿಯ ಉಪಜಾತಿಗೆ ಸೇರಿದ ಹಳ್ಳಿಯಲ್ಲಿ ನನ್ನ ಮಗನ ವಿವಾಹ ಆಗಲಾರದು. ಇದೊಂದು ವಿಚಿತ್ರ ಪದ್ಧತಿ.

**ಶ್ರೀ ಎ.ಸಿ. ಶುಕ್ಲಾ :** ಅದೊಂದು ಉತ್ತಮ ಪದ್ಧತಿ ಎನ್ನುವಿರೊ?

**ಛ. ರಣಬೀರ್‌ಸಿಂಗ್ :** ನಾನು ಹಾಗೆಂದು ಹೇಳಿರುವೆನೆ? ಇದರಲ್ಲಿ ಯಾರಿಗೂ ಡಾಕ್ಟರಂತೆ ನೋವು ಉಂಟು ಮಾಡಬೇಕೆಂದಿಲ್ಲ. ಏಕೆಂದರೆ ಅವರಂತೆ ಅಸಂತೋಷ ವಿಷಯಗಳನ್ನು ಹೇಳಲಾರೆ. ಅವರು ಓರ್ವ ಮಹಾಪುರುಷರು. ಆದರೆ ನಾನು ಅಲ್ಪಮಾನವ ಮತ್ತು ಸದಸ್ಯ.

**ಶ್ರೀ ರಾಧೇಲಾಲ್ ವ್ಯಾಸ್** (ಮ.ಭಾ.) : ಆದರೆ ನೀವೂ ಓರ್ವ ಜಾಟ್.

**ಛ. ರಣಬೀರ್‌ಸಿಂಗ್ :** ಅದು ಸರಿಯೇ. ಆದರೆ ನಾನು ಸರದಾರ ಭೂಪೇಂದ್ರಸಿಂಗ್ ಮಾನ್ ಅವರಂತೆ ಸಿಖ್ ಜಾಟ್‌ನಲ್ಲ. ನಾನು ಯಾವ ವಿವಾದಕ್ಕೂ ಒಳಗಾಗಲಾರೆ. ಏಕೆಂದರೆ ನಾನು ಯಾರಿಗೂ ನೋವನ್ನುಂಟುಮಾಡಲಾರೆ. ನಮ್ಮ ಸಂಪ್ರದಾಯಗಳು ಬೇರೆಯವರಿಗಿಂತ ಉತ್ತಮವೊ ಅಥವಾ ಕನಿಷ್ಠವೊ ಅದು ಹೆಚ್ಚು ಪ್ರಯೋಜನಕಾರಿಯಾದ ಸಂಗತಿಯಲ್ಲ. ನಾನು ಸದನಕ್ಕೆ ನಮ್ಮ ಸಂಪ್ರದಾಯಗಳು ಏನು ಎಂಬುದನ್ನು ಅರುಹುತ್ತಿರುವೆ. ಉದಾಹರಣೆಗೆ, ನನ್ನ ಮಗನಿಗೆ ಸುಮಾರು ನೂರುಹಳ್ಳಿಗಳಲ್ಲಿ ನಾನು ವಿವಾಹ ಸಂಬಂಧ ಬೆಳೆಸಲೂಬಾರದು. ಪರಿಸ್ಥಿತಿಯು ಹೀಗಿರುವಾಗ ಪಟ್ಟಣದಲ್ಲಿಯ ಅಥವಾ ಹಳ್ಳಿಗಳಲ್ಲಿಯ

ಸ್ತ್ರೀಯರು ಈ ತೊಂದರೆಗಳನ್ನು ಹೇಗೆ ಎದುರಿಸಬಲ್ಲರು? ಅವರಿಗೆ ವಿವಾಹ ಒಂದು ನಿತ್ಯದ ಕಾರ್ಯವೆಂದೇ ಭಾವಿಸಿ, ಮೊಹಲ್ಲಾಗಳಲ್ಲಿಯೇ ವಿವಾಹಗಳು ನಡೆಯುತ್ತವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಈ ವಿಷಯದಲ್ಲಿ ನಿಮ್ಮ ಹಾಗೂ ಹಿಂದೂ ಲಾ ದಲ್ಲಿ ಅಧಿಕ ವ್ಯತ್ಯಾಸವಿಲ್ಲ.

**ಛ. ರಣಬೀರ್‌ಸಿಂಗ್ :** ಶಾಸನದಲ್ಲಿ ವ್ಯತ್ಯಾಸವಿರದೆ ಹೋದರೂ ನಡವಳಿಕೆಗಳು ಬೇರೆಯಾಗಿವೆ. ಏಕೆಂದರೆ ನಮ್ಮ ಸಂಪ್ರದಾಯದಂತೆ ನಾವು ಹಲವು ಗೋತ್ರಗಳಲ್ಲಿ ವಿವಾಹವಾಗಕೂಡದು. ಅದರ ವಿರುದ್ಧ ಹೋಗುವ ಸಾಹಸ ಯಾರೂ ಮಾಡಲಾರರು. ಇಂದು ಜಾರಿಯಲ್ಲಿರುವ ಪರಿಸ್ಥಿತಿಯಂತೆ, ಯಾರೇ ಆಗಲೀ ಎಷ್ಟೇ ಮುಂದುವರಿದವರು ಎನಿಸಿಕೊಂಡವರೂ ಅದನ್ನು ವಿರೋಧಿಸುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಇಂದು ನೀವು ಮಾಡುತ್ತಿರುವುದೇನೆಂದರೆ, ಶಾಸನ ರಚಿಸಿ ಅವನಿಗೆ ಪ್ರಚೋದನೆ ನೀಡಿ ಆ ಕಾರ್ಯವನ್ನು ಮಾಡುವಂತೆ ಪ್ರೇರೇಪಿಸುವಿರಿ.

**ಶ್ರೀ ಎ.ಸಿ. ಶುಕ್ಲಾ :** ಮಾನ್ಯ ಸದಸ್ಯರ ಬಯಕೆ ಏನು?

**ಛ. ರಣಬೀರ್‌ಸಿಂಗ್ :** ನಾನು ನನಗೆ ಏನು ಬೇಕೆಂದು ಹೇಳಲು ಹೊರಟಿಲ್ಲ. ಆದರೆ ಸದನಕ್ಕೆ ನಮ್ಮ ಸಂಪ್ರದಾಯಗಳೇನು ಎಂಬುದನ್ನು ಮಾತ್ರ ತಿಳಿಸುತ್ತಿರುವೆ. ಅದಕ್ಕಾಗಿಯೇ ನಾನು ಶ್ರೀ ಭಟ್ಟರ ಸೂಚನೆಯನ್ನು ಒಪ್ಪಬೇಕೆಂದು ಹೇಳುವೆ. ಬೆಳವಣಿಗೆಯನ್ನು ಗಮನಿಸಿ ಮುಂದಿನ ಹತ್ತು ವರ್ಷಗಳಾದ ನಂತರ ಸೂಕ್ತ ಕ್ರಮ ಕೈಗೆತ್ತಿಕೊಳ್ಳಬಹುದು. ಈ ಒಂದು ಸಮಯದಲ್ಲಿ ನಮ್ಮ ಸಂಪ್ರದಾಯಗಳೇ ಉತ್ತಮ ಎಂದು ಕಂಡುಬಂದಲ್ಲಿ ಅದನ್ನೇ ಮುಂದುವರಿಸಿಕೊಂಡು ಹೋಗಲೂಬಹುದು. ಹೀಗಾಗಿ ಈ ದಿನಗಳಲ್ಲಿಯೂ ಸಗೋತ್ರ ವಿವಾಹಗಳು ಆಗಲಾರವು. ಅದರ ಹಿಂದೆ ಕಾನೂನಿನ ಬೆಂಬಲವೂ ಇದೇ ಎಂಬುದನ್ನು ಅಲ್ಲಗಳೆಯಲಾಗದು. ಈ ಕಾನೂನಿನ ಬೆಂಬಲದಿಂದ ಸಗೋತ್ರದಲ್ಲಿಯಾಗಲಿ ಅಥವಾ ಒಂದೇ ಹಳ್ಳಿಯಲ್ಲಾಗಲಿ ವಿವಾಹವಾಗಲು ಯತ್ನಿಸಿದಲ್ಲಿ ಅದರ ಪರಿಣಾಮಗಳನ್ನು ಊಹಿಸಲಾಗದು. ಅವನು ನಾನು ಈಗಾಗಲೇ ವಿವರಿಸಿದ ಗತಿ ಹೊಂದುವನು ಅಂದರೆ ಕೊಲೆಗೆ ಈಡಾಗುವನು. ನಾನು ಉತ್ಪ್ರೇಕ್ಷೆಗೆ ಆಸ್ಪದ ನೀಡದೆ, ಇಂದಿನ ಪರಿಸ್ಥಿತಿಯ ಬಗೆಗೆ ಗಂಭೀರವಾಗಿ ಯೋಚಿಸಿ, ಕ್ರಮ ತೆಗೆದುಕೊಳ್ಳಿ ಎಂದೇ ಸೂಚಿಸುತ್ತಿರುವೆ. ನಮ್ಮ ಸಹೋದರರನೇ ಈ ಕಾರ್ಯ ಮಾಡಿದಲ್ಲಿ, ನಾನು ಅವನಿಗೆ ಏನೂ ಹೇಳಲಾರೆ, ಆದರೆ ಅವನ ಸಹೋದರನಾಗಿರುವುದರಿಂದ ನಾನು ಕೊಲೆಗೆ ಈಡಾಗಬಹುದು. ಇದು ನಮ್ಮ ಸಮಾಜದ ಇಂದಿನ ದುಃಖಸ್ಥಿತಿ. ಇದನ್ನು ರಾಜಕೀಯ ದೃಷ್ಟಿಯಿಂದ ನೋಡಲಾಗದು. ಏಕೆಂದರೆ ರಾಜಕಾರಣದಲ್ಲಿ ಒಂದೇ ಕುಟುಂಬದ ಸದಸ್ಯರು ಬೇರೆ ಬೇರೆ ರಾಜಕೀಯ ಪಕ್ಷಗಳ ಸದಸ್ಯರಾಗಿರಬಹುದು. ಆದರೆ ಸಾಮಾಜಿಕ ವ್ಯವಹಾರದಲ್ಲಿಯ ರೀತಿನೀತಿಗಳೇ ಬೇರೆ. ಏಕೆಂದರೆ ನಮ್ಮ ಸಮಾಜದಲ್ಲಿ ಈ ಬಗೆಗೆ ಅಧಿಕ ಸ್ವಾತಂತ್ರ್ಯಕ್ಕೆ ಆಸ್ಪದವೇ ಇಲ್ಲ. ರಾಜಕೀಯದಲ್ಲಿಯೂ ಕುಟುಂಬ ಏಕರೀತಿಯಲ್ಲಿಯೇ ವರ್ತಿಸಬೇಕು. ನೀವು ಅದನ್ನು ಹಿಂದುಳಿದ ವ್ಯವಸ್ಥೆ ಎಂದರೂ ಅಡ್ಡಿ ಇಲ್ಲ. ಆದರೆ ಪರಿಸ್ಥಿತಿ ಮಾತ್ರ ಬದಲಾಗದು. ಆದರೆ ನಾನು ಏಕಪತ್ನಿ ವ್ಯವಸ್ಥೆಯ ಪರವಾಗಿದ್ದೇನೆ. ಅದರಲ್ಲಿಯೂ ನಮ್ಮ ಜಾಟ್ ಸಮೂಹದಲ್ಲಿ ಇದು ಅನಿವಾರ್ಯ ಎಂದೇ ಹೇಳಬಯಸುವೆ. ಏಕೆಂದರೆ ನಮ್ಮಲ್ಲಿ ಹುಡುಗರ ಸಂಖ್ಯೆ ಹುಡುಗಿಯರ ಸಂಖ್ಯೆಗಿಂತ ಅಧಿಕವಾಗಿದೆ. ಯಾರಾದರೂ ಇಬ್ಬರು ಹೆಂಡಂದಿರನ್ನು ಹೊಂದಿದ್ದರೆ ಅದು ಇನ್ನೊಬ್ಬನ ಮೇಲೆ ಆಕ್ರಮಣ ಮಾಡಿದಂತೆ. ಬೇರೆ ಪ್ರದೇಶಗಳಲ್ಲಿ ಅಂದರೆ ಎಲ್ಲಿ ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿರುವರೊ ಅಲ್ಲಿ ಬಹುಪತ್ನಿ ವಿವಾಹ ಪದ್ಧತಿ ಜಾರಿಯಲ್ಲಿರಬಹುದು.

(ಆಂಗ್ಲ ಅನುವಾದ ಮುಗಿಯಿತು)

**ಸರ್ದಾರ್ ಬಿ.ಎಸ್. ಮಾನ್ :** ಮದ್ರಾಸಿನಲ್ಲಿದೆ.

**ಛ. ರಣಬೀರ್‌ಸಿಂಗ್ :** ತೊಂದರೆ ಎಂದರೆ ನಮ್ಮ ಭಾಗದಲ್ಲಿಯ ಹಿಂದೂ ಜಾಟ್ ಜನಾಂಗದವರು ಮದ್ರಾಸಿನವರಂತೆ ಉದಾರ ಮನೋಭಾವನೆಗಳನ್ನು ಹೊಂದಿಲ್ಲ. ಆದರೆ ಸಿಖ್ ಜಾಟ್ ಹಾಗಿಲ್ಲ. ನಾನು ಮಾತ್ರ ಏಕಪತ್ನಿ ವ್ಯವಸ್ಥೆ ಒಂದು ಉತ್ತಮ ಹೆಜ್ಜೆ ಎಂದೇ ಭಾವಿಸುವೆ; ತೊಂದರೆ ಎಂದರೆ ನಮ್ಮ ಸಮಾಜ ಮುಂದುವರಿದಿಲ್ಲ. ಮತ್ತು ಸಗೋತ್ರ ವಿವಾಹವನ್ನೂ ಮಾಡಿಕೊಳ್ಳುವ ಕೀಳುಮಟ್ಟಕ್ಕೆ ಇಳಿದಿದೆ. ಆದುದರಿಂದ ಈ ವಿಷಯವನ್ನು ಹತ್ತು ವರ್ಷಗಳವರೆಗೆ ಮುಂದೂಡಿ ನಂತರ ಪರಿಶೀಲಿಸುವುದು ಸೂಕ್ತ. ಏಕೆಂದರೆ ಅಷ್ಟು ಹೊತ್ತಿಗೆ ಸಮಾಜ ಮುಂದುವರಿದಿರಬಹುದು. ನಾವು ಬಹುಪತ್ನಿ ವಿವಾಹದ ವ್ಯವಸ್ಥೆಯನ್ನು ಬಲಾತ್ಕಾರವಾಗಿ ಹೇರದೇ ಹೋದರೂ ಅದು ನಮ್ಮ ಇಂದಿನ ಸಮಾಜದಲ್ಲಿ ಜಾರಿಯಲ್ಲಿದೆ. ಅದು ಅತಿ ಹೆಚ್ಚಿನ ಸಂಖ್ಯೆಯಲ್ಲಿರದೇ ಹೋದರೂ ಅಡಚಣೆಯಲ್ಲಿರುವುದರಿಂದ ನಮಗೆ ಹತ್ತು ವರ್ಷ ಕಾಲಾವಧಿ ದೊರೆತಲ್ಲಿ ಸುಧಾರಣೆಯಾಗಿ ಆ ಅನಿಷ್ಟ ಪದ್ಧತಿಯನ್ನು ತೊಲಗಿಸಬಹುದು.

ಕೊನೆಯಲ್ಲಿ, ನಾನು ಅಂಬೇಡ್ಕರರ ಸಲಹೆಯನ್ನು ಸಂಪೂರ್ಣವಾಗಿ ಸಮ್ಮತಿಸಿದರೂ ಅವರು ಶ್ರೀ ಭಟ್ ಹಾಗೂ ಭಾರ್ಗವರು ಮಂಡಿಸಿದ ನಂ. ೪೨೦ನ್ನು ಒಪ್ಪಿಕೊಳ್ಳಬೇಕೆಂದು ಕೋರುವೆ.

**ಶ್ರೀ ಶಿವನ್ ಪಿಳ್ಳೆ** (ಟ್ರಾವೆಂಕೂರ್–ಕೊಚ್ಚಿನ್) : ಸರ್, ಪ್ರಶ್ನಿಸಬಹುದೆ?

**ಕ್ಯಾಪ್ಟನ್ ಎ.ಪಿ. ಸಿಂಗ್** (ವಿಂಧ್ಯ ಪ್ರದೇಶ) : ಬೇಡ ಸರ್, ಏಕೆಂದರೆ ತಿದ್ದುಪಡಿಗಳನ್ನು ಮಂಡಿಸಿದವರಿಗೆ ಮಾತನಾಡಲು ಅವಕಾಶ ಕೊಡಿ.

**ಸರ್ದಾರ್ ಬಿ.ಎಸ್. ಮಾನ್ :** ಹೌದು, ಸರ್, ಅದೊಂದು ಪ್ರಮುಖ ವಿಷಯ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಝುಂಝುನ್‌ವಾಲಾರನ್ನು ಕರೆಯುವೆ, ಅವರ ನಂತರ ಶ್ರೀ ಭಟ್, ಈರ್ವರೂ ತಿದ್ದುಪಡಿಗಳನ್ನು ಮಂಡಿಸಿದ್ದಾರೆ.

**ಶ್ರೀ ಶ್ಯಾಮನಂದನ ಸಹಾಯ್ :** ಸರ್, ನಾನೂ ತಿದ್ದುಪಡಿಗಳನ್ನು ಮಂಡಿಸಿರುವೆ.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಹೇಳಿದಂತೆ ಕರೆಯುವೆ. ಮಿಕ್ಕವರನ್ನು ಕರೆಯುವ ಬಗ್ಗೆ ಆಲೋಚಿಸುವೆ.

***ಶ್ರೀ ಝುಂಝುನ್‌ವಾಲಾ** (ಬಿಹಾರ) : (ಹಿಂದಿ ಭಾಷಣದ ಆಂಗ್ಲ ಅನುವಾದ) ನನ್ನ ಮೂರು ತಿದ್ದುಪಡಿಗಳೂ ಸಂವಿಧಾನಕ್ಕೆ ಸೂಕ್ತವಾಗಿವೆ. ನನ್ನ ಮೊದಲನೆಯ ತಿದ್ದುಪಡಿಯಂತೆ, ಈ ಶಾಸನದಲ್ಲಿ ಏನಾದರೂ, ಧರ್ಮ ವಿರೋಧವಿದ್ದರೆ, ಈ ಶಾಸನದ ಯಾವುದೇ ವಿಧಿಗೆ ಜಾರಿಯಲ್ಲಿರುವ ಕಾಯ್ದೆಗಳನ್ನು ಮೀರುವ ಅಧಿಕಾರವಿಲ್ಲ. ಎರಡನೆಯ ತಿದ್ದುಪಡಿಯಂತೆ ಈ ಶಾಸನದಲ್ಲಿ ನೀತಿಗೆ ವಿರೋಧವಾಗಿದ್ದರೆ ಅದನ್ನು ಜಾರಿಗೊಳಿಸುವ ಅಧಿಕಾರವಿಲ್ಲ. ಮೂರನೆಯದಾಗಿ ಈ ಶಾಸನದಲ್ಲಿ ಯಾವ ಭಾಗದ ಜನರ ಸಂಸ್ಕೃತಿಗೆ ವಿರೋಧವಾದ ಅಂಶಗಳಿದ್ದಲ್ಲಿ, ಇದಕ್ಕೆ ಅಂತಹ ಕಾನೂನುಗಳನ್ನು ಮೀರಿ ನಿರ್ಣಯ ಮಾಡುವ ಅಧಿಕಾರವಿಲ್ಲ.

ಸರ್, ನಾನು ಮೂರನೇ ತಿದ್ದುಪಡಿ ಮಂಡಿಸಿದಾಗ "ಸಂಸ್ಕೃತಿ"ಯ ವ್ಯಾಖ್ಯೆ ಏನು ಎಂದು ತಾವು ಪ್ರಶ್ನೆ ಕೇಳಿದಾಗ ನಾನು ತಪ್ಪಾಗಿ ೧೨೯ನೇ ಅನುಚ್ಛೇದ ಎಂದು ಹೇಳಿದ್ದೆ. ಆದರೆ ಅದು ೧೨೯

---

* ಸಂ. ಚ. ಸಂಪುಟ XV ಭಾಗ II ೨೨ನೆಯ ಸೆಪ್ಟಂಬರ್ ೧೯೫೧ ಪು ೩೧೬೮–೮೮

ಆಗಿರದೇ ೨೯ ಎಂದು ತಿಳಿಸುವೆ. ಅನುಚ್ಛೇದ ೨೯ ಸಂಸ್ಕೃತಿಯ ಬಗೆಗೆ ಹೀಗೆ ಹೇಳುತ್ತದೆ. "೨೯ (೧) ಯಾವ ಪ್ರದೇಶದ, ಯಾವುದೇ ವರ್ಗಕ್ಕೆ ಸೇರಿದ ನಾಗರಿಕರು, ತಮ್ಮದೇ ಆದ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದಲ್ಲಿ, ಅವರಿಗೆ ಅದನ್ನು ರಕ್ಷಿಸಿಕೊಳ್ಳುವ ಹಕ್ಕಿದೆ". ಆದುದರಿಂದ ನಾನು ನನ್ನ ತಿದ್ದುಪಡಿಯಲ್ಲಿ "ಸಂಸ್ಕೃತಿ" ಪದವನ್ನು ಸೇರ್ಪಡಿಸಿರುವೆ. ಹೀಗಾಗಿ ಹಿಂದೂಕೋಡ್, ಸಂವಿಧಾನದಿಂದ ನೀಡಿರುವ ಹಕ್ಕುಗಳಿಗೆ ವಿರೋಧವಾದ ಯಾವ ಅಂಶವನ್ನೂ ಕೈಗೆತ್ತಿಕೊಳ್ಳಕೂಡದು, ಏಕೆಂದರೆ ಅದು ಜನರಿಗೆ ನೀಡಿರುವ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ. ನಾನು ನನ್ನ ತಿದ್ದುಪಡಿಯ ಬಗೆಗೆ ಮುಂದೆ ಪ್ರಸ್ತಾಪಿಸುವೆ. ಆದರೆ ಈಗ ಸದ್ಯದಲ್ಲಿ ತಮ್ಮ ನಿರ್ಣಯದಂತೆ ಯಾವುದೇ ತಿದ್ದುಪಡಿಗಳ ಬಗೆಗೆ ಮಾತನಾಡುವ ಅವಕಾಶವನ್ನು ಉಪಯೋಗಿಸಿಕೊಂಡು ಮಾತನಾಡುವೆ. ಈ ಹಿನ್ನೆಲೆಯಲ್ಲಿ ನಾನು ಈ ವಿಧಿಯ ಬಗ್ಗೆ ಮಾತನಾಡಿದ ನಂತರ ನನ್ನ ತಿದ್ದುಪಡಿಗಳ ಬಗ್ಗೆ ಮಾತನಾಡುವೆ. ಅದೇ ನನಗೆ ಅನುಕೂಲಕರ.

ಸರ್, ಹಿಂದೂ ಕೋಡ್ ಬಿಲ್ಲನ್ನು ಈಗ "ವಿವಾಹ ಮತ್ತು ವಿಚ್ಛೇದನೆ" ಮಸೂದೆ ಎಂದು ಮರುನಾಮಕರಣ ಮಾಡಿ, ಸದನದ ಅಂಗೀಕಾರಕ್ಕೆಂದೇ ಮಂಡಿಸಲಾಗಿದೆ. ಅಲ್ಲದೇ ಅದು ಪ್ರಮುಖವಾಗಿ ಎರಡು ವಿಷಯಗಳಿಂದ ಕೂಡಿದೆ ಎಂದೂ ಹೇಳಲಾಗಿದೆ. ಹೀಗಾಗಿ ಈ ಬಗೆಗೆ ಚರ್ಚೆ ನಡೆದಿದ್ದು ಅದನ್ನು ಸದನ ಅಂಗೀಕರಿಸಬೇಕಾಗಿದೆ. ಮೊದಲನೆಯದಾಗಿ ಈ ವಿಧೇಯಕವು ಪ್ರಗತಿಪರವೆಂದೂ, ಎರಡನೆಯದಾಗಿ ಈ ಶಾಸನದಿಂದ, ಸ್ತ್ರೀಯರಿಗೆ ಇಂದಿನವರೆಗೂ ಪುರುಷರಿಂದ ನಿರಾಕರಿಸಲಾದ ಹಕ್ಕುಗಳನ್ನು ನೀಡಲಾಗುವುದು ಎಂದೇ ಹೇಳಲಾಗಿದೆ. ಪುರುಷರು ಸ್ತ್ರೀಯರ ಬಗೆಗೆ ಅನ್ಯಾಯದಿಂದ ವರ್ತಿಸಿದ್ದು, ಅದನ್ನು ಈಗ ಸರಿಪಡಿಸಲಾಗುವುದು. ಅದಕ್ಕೆಂದೇ ಈ ವಿಧೇಯಕವನ್ನು ತರಲಾಗಿದೆ ಎಂದೇ ಹೇಳಲಾಗಿದೆ. ಈಗ ನಾವೂ ಈ ವಿಧೇಯಕವು ಪ್ರಗತಿಪರವೇ ಅಥವಾ ಇಲ್ಲವೇ ಎಂಬುದನ್ನು ಪರಾಂಬರಿಸೋಣ. ಸನ್ಮಾನ್ಯ ಕಾನೂನು ಸಚಿವರು "ಪ್ರಗತಿಪರ"ದ ವ್ಯಾಖ್ಯೆಯನ್ನು ನೀಡದೇ ಇರುವಾಗ "ಪ್ರಗತಿ" ಹಾಗೂ ಅಪ್ರಗತಿಗಳನ್ನು ಯಾವ ವಿಧವಾಗಿ ಗುರುತಿಸಬಹುದು. ಒಂದೆಡೆ ಹಿಂದೂಧರ್ಮವು ವೈಜ್ಞಾನಿಕ ತಳಪಾಯವನ್ನು ಹೊಂದಿರುವುದರಿಂದಲೇ ಅದು ಇಂದಿಗೂ, ಅನಾದಿಕಾಲದಿಂದಲೂ ಉಳಿದುಕೊಂಡೇ ಬಂದಿದೆ ಎಂದು ಹೇಳುವರು.

ಏಕೆಂದರೆ ಅದು ತನ್ನ ಮೇಲೆ ಎರಗಿದ ಎಲ್ಲಾ ದಾಳಿಗಳನ್ನು ಸಮರ್ಥನೀಯವಾಗಿ ಎದುರಿಸಿ ಇಂದಿಗೂ ಬದುಕಿ ಉಳಿದಿದೆ. ಈ ವಿಷಯಕ್ಕೆ ಉತ್ತರವಾಗಿ ಸನ್ಮಾನ್ಯ ಕಾನೂನು ಸಚಿವರು, ಭಗವಾನ್ ಬುದ್ಧನು ಧರ್ಮದ ನಿಜಮಾರ್ಗವನ್ನು ತಿಳಿಸಿದ್ದಾರೆ ಎಂದು ಹೇಳಿದ್ದಾರೆ.

ಅಂಬೇಡ್ಕರರು ಹೇಳುವಂತೆ ಬುದ್ಧನು, ಪುರುಷರಿಂದ ಸ್ತ್ರೀಯರಿಗೆ ಆದ ಅನ್ಯಾಯವನ್ನು ಕಂಡ ಬುದ್ಧನ ಹೃದಯ ರಕ್ತವನ್ನೇ ಕಾರಿಕೊಂಡಿತಂತೆ. ಈ ಒಂದು ಆಧಾರದ ಮೇಲೆ ನಮ್ಮ ಕಾನೂನು ಸಚಿವರು ಹೇಳುವಂತೆ, ಭಗವಾನ್ ಬುದ್ಧನು ಸ್ತ್ರೀ ಪುರುಷರ ಸಮಾನತೆಯನ್ನು ಬೋಧಿಸಿದನಂತೆ, ಹೀಗೆಂದಾಗ ನಮ್ಮ ಕಾನೂನು ಸಚಿವರು ಈ ವಿಧೇಯಕವನ್ನು ಬುದ್ಧನ ಬೋಧನೆಯಂತೆ ಮಂಡಿಸಿದ್ದಾರೆ ಎಂದಾಯಿತು. ಭಗವಾನ್ ಬುದ್ಧ ಓರ್ವ ಮಹಾಪುರುಷ ಮತ್ತು ಧಾರ್ಮಿಕ ಮನೋಭಾವನೆ ಹೊಂದಿದ್ದ ವ್ಯಕ್ತಿಯಾಗಿದ್ದ. ಆದುದರಿಂದ ಈ ವಿಧೇಯಕದ ನಿಜವಾದ ಉದ್ದೇಶ ಏನಾಗಿರಬಹುದು ಎಂಬುದನ್ನು ವಿಚಾರಿಸುವಾ. ಸರ್, ನನಗೆ ಪ್ರಖ್ಯಾತ ಮರಾಠ ಪುರುಷನಾದ ಸಂತ ಜ್ಞಾನೇಶ್ವರರ ಒಂದು ದ್ವಿಪದಿ ಜ್ಞಾಪಕಕ್ಕೆ ಬರುತ್ತದೆ. ಅದರ ಅರ್ಥ ಹೀಗಿದೆ. ಒಂದು ಸರೋರವರದಲ್ಲಿಯ ಕಪ್ಪೆ, ಜೇನುನೊಣದೊಂದಿಗೆ ಕಮಲಪುಷ್ಪದೆಡೆಗೆ ಹೋಯಿತು. ಜೇನುನೋಣ ಕಮಲದಲ್ಲಿಯ ಮಧು ಹೀರಿಕೊಂಡು ಕಪ್ಪೆಯೊಂದಿಗೆ

ಮರಳಿ ಬಂದರೆ, ಕಪ್ಪೆ ಕೆರೆಯ ಹೊಂಡನ್ನು ಮೈಗೆ ಮೆತ್ತಿಕೊಂಡು ಮರಳಿತ್ತು.

(ಪೀಠದಲ್ಲಿ ಸರ್ದಾರ್ ಹುಕುಂ ಸಿಂಗ್)

ಸರ್, ಬುದ್ಧನು ಹೇಳಿದ್ದೇನೆಂದರೆ, ನಾವು ನಮ್ಮ ದುರಾಶೆಗಳನ್ನು ನಿಯಂತ್ರಿಸಿದಷ್ಟೇ ಅದು ನಮಗೆ ಸಮಾಜ ಹಾಗೂ ಮಾನವರಿಗೆ ಉತ್ತಮ ಸೇವೆ ಸಲ್ಲಿಸುವ ಅರ್ಹತೆಯನ್ನು ಒದಗಿಸುತ್ತದೆ. ಇದು ಬುದ್ಧನ ಬೋಧನೆಯ ಸಾರ. ಆದರೆ ನಮ್ಮ ಕಾನೂನು ಸಚಿವರು ಆ ಮಾದರಿಯ ಬೋಧನೆಯನ್ನೇ ಉದಾಹರಿಸದೆ ಇರುವುದು ತುಂಬಾ ನೋವನ್ನುಂಟುಮಾಡಿದೆ. ಆದರೆ ಅದನ್ನು ಬಿಟ್ಟು ಪುರುಷನು ಬಹುಪತ್ನಿ ವಿವಾಹ ಮಾಡಿಕೊಳ್ಳಬಹುದಾದ ಹಕ್ಕನ್ನು ಹೊಂದಿದ್ದಾನೆ, ಹೀಗಾಗಿ ಸ್ತ್ರೀಯರಿಗೆ ವಿಚ್ಛೇದನೆ ಅಧಿಕಾರವಿರಬೇಕು ಎಂದೇ ನಮ್ಮ ಮಂತ್ರಿಗಳು ಹೇಳುತ್ತಾ ಈ ಬಗೆಯ ಕ್ರಮ ಸ್ತ್ರೀ–ಪುರುಷರಿಗೆ ಸಮಾನತೆ ನೀಡುತ್ತದೆ ಎಂದಿದ್ದಾರೆ. ಯಾವ ಬಗೆಯ ಸಮಾನತೆ ಅದು ನೀಡುತ್ತದೆ ಎಂದು ನೋಡಬಹುದಲ್ಲವೆ?

**ಡಾ. ಅಂಬೇಡ್ಕರ್ :** ಈ ವಾದ ಕಲಮು ೪ಕ್ಕೆ ಸೂಕ್ತವೆ? ಸೂಕ್ತತೆಯ ಬಗೆಗೆ ಕಿಂಚಿತ್ ಗೌರವವೂ ಬೇಡವೆ? ನಾವು ಸುಸಂಬದ್ಧ ನಿಯಮವನ್ನು ಕೈಬಿಡಲಾಗದು.

**ಪಂಡಿತ್ ಎಂ.ಬಿ. ಭಾರ್ಗವ :** ಸುಸಂಬದ್ಧತೆಯು ಕೇವಲ ಕಾನೂನು ಮಂತ್ರಿಗಳ ಸೊತ್ತಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಈ ವಿಷಯವನ್ನು ಮಾನ್ಯ ಸದಸ್ಯರು ನನಗೆ ಬಿಡಬೇಕು. ಕಾನೂನು ಸಚಿವರು ಅದನ್ನು ನನಗೆ ಕೇಳಿದ್ದಾರೆ.

**ಪಂಡಿತ್ ಎಂ.ಬಿ. ಭಾರ್ಗವ :** ಅವರು ತಮಗೆ ಕೇಳಿಲ್ಲ. ತಾವೇ ನಿರ್ಣಯವನ್ನು ಸಾರಿದ್ದಾರೆ.

**ಡಾ. ಅಂಬೇಡ್ಕರ್ :** ಸುಸಂಬದ್ಧತೆ ನಿಮ್ಮ ಸೊತ್ತೂ ಆಗಿದೆ. ನನ್ನದೊಂದೇ ಅಲ್ಲ.

**ಪಂಡಿತ್ ಎಂ.ಬಿ. ಭಾರ್ಗವ :** ಇಲ್ಲ ಅದು ತಮ್ಮದೇ......

**ಮಾನ್ಯ ಸಭಾಧ್ಯಕ್ಷರು :** ಸದಸ್ಯರು ತಮ್ಮ ತಮ್ಮಲ್ಲಿಯೇ ಪ್ರಶ್ನೋತ್ತರ ಮಾಡದೆ ಶಾಂತಿಯಾಗಿರಬೇಕು. ಮಾತನಾಡಿದ ಸದಸ್ಯರು ತಮ್ಮ ಮಾತಿನ ಸುಸಂಬದ್ಧತೆ ಅರಿತಿರಬೇಕು.

**ಶ್ರೀ ಝುಂಝುನ್‌ವಾಲಾ** : ಸರ್, ನಾನು ಸುಸಂಬದ್ಧತೆಯಂತೆಯೇ ಸ್ತ್ರೀ ಮತ್ತು ಪುರುಷರಿಗೆ ಹೇಗೆ ಸಮಾನತೆ ನೀಡಲಾಗಿದೆ ಎಂದೇ ಕೇಳಿರುವೆ ಹಾಗೂ ಎಲ್ಲಿ ಅದನ್ನು ನೀಡಬೇಕು. ನನ್ನ ಮಿತ್ರ ಠಾಕೂರದಾಸರು ಭಾವಿಸಿದಂತೆ.

**ಅಧ್ಯಕ್ಷರು :** ಈಗ ಸ್ತ್ರೀ ಪುರುಷರ ಸಮಾನತೆ ಬಗ್ಗೆ ಮಾತನಾಡುವ ಪ್ರಮೇಯವಿರದೇ, ಕೇವಲ ಸಂಪ್ರದಾಯ ಮತ್ತು ಇತರ ವಿಷಯಗಳಿಗೆ ಕುರಿತಂತೆ ಇದೆ. ಹೀಗಾಗಿ ಸಂಪ್ರದಾಯಗಳ ಬಗೆಗೆ ಮಾತು ಮುಂದುವರಿಯಲಿ. ಮಿಕ್ಕ ವಿಷಯವನ್ನು ಆಮೇಲೆ ಚರ್ಚಿಸಬಹುದು.

**ಶ್ರೀ ಝುಂಝುನ್‌ವಾಲಾ** : ಸರ್, ಈ ಎಲ್ಲಾ ಸಂಗತಿಗಳು, ನಿಜಜೀವನಕ್ಕೆ ಹೇಗೆ ಸಂಬಂಧಿಸಿವೆ ಎಂಬುದನ್ನು ಹೇಳುವೆ. ಮೊಟ್ಟಮೊದಲಿಗೆ ನಾನು ಹೇಳಿದಂತೆ, ಕಾನೂನು ಮಂತ್ರಿಗಳು ಹೇಳಿದಂತೆ ಈ ವಿಧೇಯಕ ಎರಡು ಪ್ರಮುಖ ವಿಷಯಗಳಿಂದ ಒಡಗೂಡಿದೆ. ಮೊದಲನೆಯದೆಂದರೆ ಪ್ರಗತಿ ಹಾಗೂ ಎರಡನೆಯದಾಗಿ ಸ್ತ್ರೀಯರಿಗೆ ಪುರುಷರೊಂದಿಗೆ ಸಮಾನತೆ; ಆದರೆ ಈಗ ಈ ೪ನೇ ಕಲಮು ಜಾರಿಯಲ್ಲಿರುವ ಸಂಪ್ರದಾಯಗಳನ್ನೆಲ್ಲಾ ರದ್ದುಪಡಿಸುವ ಅಧಿಕಾರವನ್ನೂ ಹೊಂದಿದೆ. ನಾನು ಈಗಾಗಲೇ ಹೇಳಿದಂತೆ ಮೊದಲು, ನಾನು ಕಲಮು ೪ರ ಬಗೆಗೆ ಮಾತನಾಡುವೆ. ನನ್ನ ಅಭಿಪ್ರಾಯದಲ್ಲಿ ಈ ವಿಧೇಯಕವೇ ಉಪಯೋಗಕ್ಕೆ ಬಾರದು. ಏಕೆಂದರೆ ಯಾವ ಎರಡು ಪ್ರಮುಖ ವಿಷಯಗಳೆಂದು ತಿಳಿಯಲಾಗಿತ್ತೊ ಅವನ್ನೇ ನೆರವೇರಿಸದು. ಆದುದರಿಂದ ನಾನು, ಕಾನೂನು ಮಂತ್ರಿಗಳಿಗೆ ಮನವರಿಕೆ

ಮಾಡಿಕೊಡುವುದೇನೆಂದರೆ ಸದನದ ಮುಂದಿರುವ ವಿಧೇಯಕ ಅಬದ್ಧವಾಗಿದೆ. ಏಕೆಂದರೆ ಅದು ತನ್ನ ಪ್ರಮುಖ ಎರಡು ಗುರಿಗಳನ್ನು ಸಾಧಿಸುವಲ್ಲಿ ವಿಫಲವಾಗಿದೆ. ನಿಜವಾಗಿ ಈ ವಿಧೇಯಕದ ಚರ್ಚೆಯನ್ನು ಕೈಗೆತ್ತಿಕೊಳ್ಳಬಾರದಾಗಿತ್ತು. ಇದನ್ನೇ ಸದನ ಗಮನಿಸಬೇಕೆಂದೇ ಕೋರುತ್ತದೆ. ನಿಮ್ಮೆಲ್ಲರ ಅನುಮತಿ ಪಡೆದು ಹಲವಾರು ವಿಷಯಗಳನ್ನು ಪ್ರಸ್ತಾಪಿಸಬಯಸುವೆ.

ಏಕೆಂದರೆ ಈ ವಿಷಯಗಳನ್ನು ವಿವರಿಸದೆ ಹೋದರೆ ಅದು ಅರ್ಥಹೀನವಾಗುತ್ತದೆ. ಆದುದರಿಂದಲೇ ನಾನು ತಿಳಿಸುವುದೇನೆಂದರೆ, ಈ ವಿಧೇಯಕ ಪ್ರಗತಿ ಪರವೂ ಅಲ್ಲ ಹಾಗೂ ಸ್ತ್ರೀಯರಿಗೆ ಸಮಾನತೆಯನ್ನು ಒದಗಿಸುವುದಿಲ್ಲ. ಏಕೆಂದರೆ ಅದು ಆಸ್ತಿಯ ಹಕ್ಕಿನ ವಿಷಯವನ್ನೇ ಪ್ರಸ್ತಾಪಿಸುತ್ತಿಲ್ಲ. ನನಗೆ ತಿಳಿದಂತೆ ನಮ್ಮ ಸ್ತ್ರೀಯರಿಗೆ ಆಸ್ತಿಯಲ್ಲಿ ಸಮಪಾಲನ್ನು ನೀಡಲಾಗಿಲ್ಲ. ಇದರಿಂದಾಗಿ ಅವರು ಅನೇಕ ಕಷ್ಟ–ನಷ್ಟಗಳಿಗೆ ಈಡಾಗಿದ್ದಾರೆ; ಹಾಗೂ ದೌರ್ಜನ್ಯಗಳಿಗೂ ಬಲಿಯಾಗಿದ್ದಾರೆ. ಈ ಸಮಯದಲ್ಲಿ ಶ್ರೀಮತಿ ದುರ್ಗಾಬಾಯಿ ಸದನದಲ್ಲಿರದಿರುವುದಕ್ಕೆ ನಾನು ವಿಷಾದಿಸುತ್ತೇನೆ. ಅವರು ಮದ್ರಾಸಿನಲ್ಲಿ ಸ್ತ್ರೀಯರಿಗಾದ ಅನ್ಯಾಯಗಳನ್ನು ಮನಮುಟ್ಟುವಂತೆ ವಿವರಿಸುತ್ತಿದ್ದರು. ಈ ವಿಷಯವನ್ನು ಆಸ್ತಿಯ ಹಕ್ಕಿನ ವಿಷಯ ಚರ್ಚೆಗೆ ಬಂದಾಗ ಅಧಿಕವಾಗಿ ವಿವರಿಸುವೆ. ನಮ್ಮ ಕಾನೂನು ಮಂತ್ರಿಗಳು ನಿಜವಾಗಿಯೂ ಸ್ತ್ರೀಯರ ಹಕ್ಕುಗಳ ಬಗೆಗೆ ಗಂಭೀರವಾದ ನಿಲುವು ಹೊಂದಿದ್ದರೆ, ಆಸ್ತಿಯ ಹಕ್ಕನ್ನು ಮೊದಲು ಚರ್ಚಿಸಬಹುದಾಗಿತ್ತು. ಏಕೆಂದರೆ ಆರ್ಥಿಕ ಸ್ವಾವಲಂಬನೆ ಸ್ತ್ರೀಯರಿಗೆ ಹಾಗೂ ಅವರ ವಿಕಾಸಕ್ಕೆ ಅನಿವಾರ್ಯವಾದ ವಿಷಯವಾಗಿದೆ. ಅದನ್ನು ಏಕೆ ಮೊದಲಿಗೆ ಚರ್ಚೆ ಮಾಡಲಿಲ್ಲವೊ ನನಗೆ ತಿಳಿಯದಾಗಿದೆ. ಅವರ ಉದ್ದೇಶಗಳನ್ನು ಟೀಕಿಸುವುದೇ ನನ್ನ ಗುರಿಯಲ್ಲ. ಆದರೆ ಅವರ ಹೇಳಿಕೆಗಳು ಅವರು ಮಾಡುವ ಕೃತಿಗಳಿಂದ ಭಿನ್ನವಾಗಿದೆ ಎಂದು ಹೇಳದೇ ಇರಲಾರೆ. ಈ ವಿಧೇಯಕವನ್ನು ಜಾರಿಗೊಳಿಸುವ ಮೂಲಕ, ಅವರು ಹಿಂದೂ ಸಮಾಜ, ಹಿಂದೂಧರ್ಮ ಹಾಗೂ ಹಿಂದೂ ರೀತಿನೀತಿಗಳನ್ನು ಸಂಪೂರ್ಣ ನಾಶಕ್ಕೆ ಗುರಿಮಾಡಬೇಕೆಂದಿದ್ದಾರೆ. ಏಕೆಂದರೆ ಈ ವಿಧೇಯಕವು ಹಿಂದೂ ಸಮಾಜದ ನೀತಿಗಳನ್ನೇ ನಾಶಮಾಡುತ್ತವೆ. ಇದೇ ಅವರು ಕೈಗೆತ್ತಿಕೊಂಡು, ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆ ನೀಡಿದ್ದರೆ ಅದೆಷ್ಟು ಉತ್ತಮವಾಗುತ್ತಿತ್ತು. ಈ ವಿಷಯವನ್ನು ತೆಗೆದುಕೊಳ್ಳದೇ ಹೋಗಿದ್ದಾರೆ. ಬಹುಶಃ ಅವರು ಕೀರ್ತಿಯಲ್ಲಿ ನಮಗೆ ಯಾವ ಪಾಲೂ ಸಿಗಬಾರದೆಂದೆ ಹೀಗೆ ಮಾಡಿರಬಹುದು.

ನಾನು ನನ್ನ ಮಿತ್ರರಾದ ಭಾರ್ಗವರು ವಿಚ್ಛೇದನದ ಬಗೆಗೆ ಹೇಳಿದ ವಿಷಯ ಪ್ರಸ್ತಾಪಿಸಿದ್ದನ್ನು ಅಧಿಕ ಸದಸ್ಯರು ಬೆಂಬಲಿಸದೆ ಹೋದರು. ಆದರೆ ವಿಚ್ಛೇದನವನ್ನು ಬಲಾತ್ಕಾರವಾಗಿ ಹೇರಿದಲ್ಲಿ ಏನು ಆಗಬಹುದು ಎಂಬುದನ್ನು ವಿವರಿಸುವೆ. ನಮ್ಮ ದೇಶದ ಯುವಕರು ಪ್ರತಿದಿನ ಪತ್ರಿಕೆಗಳಲ್ಲಿ ವಿಚ್ಛೇದನೆಯ ಬಗೆಗೆ ಓದುವರು. ಬಿಹಾರಿನ ನನ್ನ ಮಿತ್ರರಾದ ಬ್ರಿಜ್ ಕಿಶೋರ ತಮ್ಮ ಹಳ್ಳಿಯಿಂದ ಈ ಶ್ಯಾಮನಂದನ ಸಹಾಯ್ ಅವರಿಂದ ಹೊರತರಲಾದ ಪತ್ರಿಕೆಯು ಈ ವಿಚ್ಛೇದನೆಯ ವಿಷಯವನ್ನು ಪ್ರಕಟಿಸಿದಾಗ ಅದನ್ನು ಹಳ್ಳಿಯ ಜನರು ಓದುಬಲ್ಲವರಿಂದ ತಿಳಿದುಕೊಂಡಾಗ ಆಗುವ ಪರಿಣಾಮ ಏನು? ಬಹುಶಃ ಬ್ರಿಜ್ ಕಿಶೋರರಿಗೆ ಅನುಕೂಲವೇ ಆಗಬಹುದು. ಅವರು ಸದನದಲ್ಲಿ ಇಲ್ಲ, ಕ್ಷಮಿಸಿರಿ.

ಸರ್, ಪಂಡಿತ ಠಾಕೂರದಾಸ್ ಭಾರ್ಗವರ ಹೇಳಿಕೆಯಂತೆ ವಿಚ್ಛೇದನೆ ಉತ್ತಮವಾದುದಲ್ಲ. ಆದರೂ ಅದನ್ನೇಕೆ ಒಪ್ಪಿದೆ ಎಂಬುದನ್ನೂ ಅವರು ಸಕಾರಣವಾಗಿ ಹೇಳಿದ್ದಾರೆ. ಅದೇನೆಂದರೆ ವಿಚ್ಛೇದನೆಯನ್ನು ಐಚ್ಛಿಕವಾಗಿಸುವುದು. ಅವರಂತೆ ಅದೊಂದು ಮಹತ್ವದ ಅಂಶ; ಹಾಗೂ ಬೆಂಬಲ ನೀಡುವ ಉಪವಿಧಿ. ಆದರೆ ಆ ಬಗೆಯ ಅನೇಕ ಬೆಂಬಲ ವಿಧಗಳನ್ನು ಉದಾಹರಿಸಬಲ್ಲೆ ಏಕೆಂದರೆ ಉದ್ದಿಮೆ ಮತ್ತು

ವಾಣಿಜ್ಯ ಮಂತ್ರಿಗಳು ಇದರಿಂದಲೇ ಬದುಕಿ ಉಳಿದಿದ್ದಾರೆ. ಅವರು ಕೋಕೋಕೋಲಾದ ಬಗೆಗೆ ಇದನ್ನೇ ಹೇಳಿದ್ದಾರೆ. ಅವರು ಉತ್ಪಾದನೆಯ ಬಗೆಗೆ ಇದನ್ನೇ ಹೇಳಿದ್ದಾರೆ. ನಾನು ಪಂಡಿತ ಠಾಕೂರದಾಸರನ್ನು ಒಂದು ವಿಷಯದ ಬಗೆಗೆ ಕೇಳುವೆ. ಅದೇನೆಂದರೆ, ಓರ್ವ ವ್ಯಕ್ತಿಗೆ ಇಬ್ಬರು ಪುತ್ರರಿದ್ದು, ಅವರಲ್ಲಿ ಒಬ್ಬನು ಮೂವರು ಪತ್ನಿಯರನ್ನು ಹೊಂದಿದಾಗ, ಅವನ ಎರಡನೆಯ ಮಗ ತಂದೆ ಬಳಿಗೆ ಹೋಗಿ ಅಣ್ಣ ಮೂರು ಸ್ತ್ರೀಯರನ್ನು ವಿವಾಹವಾಗಿ ಹಣ ದುಂದುವೆಚ್ಚ ಮಾಡಿದರೆ ತನ್ನ ಗತಿ ಏನು? ಎಂದು ಕೇಳಬಹುದಲ್ಲವೆ?

**ಡಾ. ಅಂಬೇಡ್ಕರ್ :** ಅವನು ನಾಲ್ಕು ಮದುವೆ ಮಾಡಿಕೊಳ್ಳಬಹುದು.

**ಶ್ರೀ ಝುಂಝುನ್‌ವಾಲಾ :** ತಂದೆ ಐದು ಮದುವೆಯಾದರೆ ಮತ್ತೋರ್ವ ಐದು ಆಗಬಹುದು. ಅವನೇಕೆ ಹಿಂದೆ ಬೀಳಬೇಕು? ಈ ಬಗೆಯ ಹಕ್ಕನ್ನು ಅವರು ನೀಡಬಯಸಿದ್ದಾರೆ. ಆದರೆ ನನ್ನ ಮಿತ್ರ ಶ್ಯಾಮನಂದನ ಸಹಾಯ್ ಪಕ್ಕಾ ಬನಿಯಾ. ಅವರೇನು ಹೇಳುತ್ತಾರೆ? ಅವರು ಮೂರು ವಿವಾಹವಾಗಿದ್ದೇನೆ ಎಂದರೆ ಅವರನ್ನು ಕೂಡಲೇ ಸದನದಿಂದ ತಳ್ಳಬೇಕು.

**ಮಾನ್ಯ ಸಭಾಧ್ಯಕ್ಷರು :** ಸದಸ್ಯರು, ವಿವಾಹದ ವಿಷಯವನ್ನು ಏಕಪತ್ನಿಯ ವಿಷಯ ಚರ್ಚೆಗೆ ಬಂದಾಗ ಮಾತನಾಡಬೇಕು. ಈಗ ಸದನವು ಸಂಪ್ರದಾಯಗಳ ಬಗೆಗೆ ಚರ್ಚಿಸುತ್ತಿದೆ. ಆದುದರಿಂದ ಅದರ ಬಗೆಗೆ ಮಾತನಾಡಬೇಕೆಂದೇ ಸೂಚಿಸುವೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ಅವರು ಓರ್ವ ಮಗನು ಮೂರು ಪತ್ನಿಯರಿಗೆ ವಿಚ್ಛೇದನೆ ನೀಡಿದರೆ, ಮತ್ತೋರ್ವನು ಐದಕ್ಕೆ ವಿಚ್ಛೇದನೆ ನೀಡಬೇಕೆಂದು ಸೂಚಿಸುವರೆ.

**ಶ್ರೀ ಝುಂಝುನ್‌ವಾಲಾ :** ಸರ್, ನಾನು ನಿಮ್ಮ ಆದೇಶದಂತೆ ನಡೆದುಕೊಳ್ಳುವೆ. ಆದರೆ ನಾನು ಆರಂಭದಲ್ಲಿ ಹೇಳಿದ್ದೇನೆಂದರೆ......

**ಮಾನ್ಯ ಸಭಾಧ್ಯಕ್ಷರು :** ಅವರು ಈ ವಿಧಿಯನ್ನು ಕುರಿತು ಮಾತನಾಡಬಹುದು.

**ಶ್ರೀ ಝುಂಝುನ್‌ವಾಲಾ :** ನಾನು ವಿವಾಹದ ವಿಧಿಗೆ ಸಂಬಂಧಿಸಿದಂತೆ ಮಾತನಾಡುತ್ತಿದ್ದೆ.

**ಮಾನ್ಯ ಸಭಾಧ್ಯಕ್ಷರು :** ವಿವಾಹದ ಬಗ್ಗೆ ಅಲ್ಲ. ನಾಲ್ಕನೆಯ ಕಲಮು ಚರ್ಚೆಯಾಗುತ್ತಿದೆ.

**ಸರ್ದಾರ್ ಬಿ.ಎಸ್. ಮಾನ್ :** ವಿಷಯ ಅರಿಯಲಿಕ್ಕೆಂದೇ ಕೇಳುತ್ತಿರುವೆ. ಈಗ ಚರ್ಚೆಗೆ ಕೈಗೆತ್ತಿಕೊಂಡಿರುವ ವಿಧಿಯ ಬಗೆಗೆ ಮತ್ತು ಅದಕ್ಕೆ ಸೂಚಿಸಬಹುದಾದ ತಿದ್ದುಪಡಿಗಳಿಂದ ಅದರ ಮೇಲೆ ಉಂಟಾಗುವ ಪರಿಣಾಮದಿಂದಾಗಿ ಕೆಲವು ತಿದ್ದುಪಡಿಗಳನ್ನು ಕೈಬಿಡಬಹುದು, ಈ ಬಗ್ಗೆ ನಾವು ಸೂಚಿಸಬಹುದಾದ ಸಂಪ್ರದಾಯಗಳು ಭಿನ್ನವಾಗಿದ್ದು ಅವುಗಳು ಬಹುಕಾಲದಿಂದ ಜಾರಿಯಲ್ಲಿದ್ದು, ಕಾನೂನಿನಂತೆ ಸ್ಥಾನಮಾನವನ್ನು ಪಡೆದಿದ್ದು, ಸಾರ್ವಜನಿಕ ಧೋರಣೆಗೆ ವಿರೋಧವಾಗಿರದೇ ಹೋದಲ್ಲಿ ಅವನ್ನು ಚರ್ಚಿಸಲು ಸದಸ್ಯರಿಗೆ ಅಧಿಕಾರವಿದೆ.

**ಮಾನ್ಯ ಸಭಾಧ್ಯಕ್ಷರು :** ಈಗಾಗಲೇ, ಹಲವು ಸಂಪ್ರದಾಯಗಳನ್ನು ಸಂಬಂಧಿಸಿದ ವಿಧಿಯು ಚರ್ಚೆಗೆ ಬಂದಾಗ ಪ್ರಸ್ತಾಪಿಸಬಹುದೆಂದು ಹೇಳಲಾಗಿದೆ. ಆದರೆ, ಈ ಸಾಮಾನ್ಯ ಚರ್ಚೆಯಲ್ಲಿ ಸಂಪ್ರದಾಯಗಳ ಸಾಮಾನ್ಯ ಚರ್ಚೆಯಾಗಬೇಕು. ಆದುದರಿಂದ ಸಂಪ್ರದಾಯಗಳ ಕೂಲಂಕಷ ಚರ್ಚೆ ಮಾಡಬಹುದು. ಅದು ಸೂಕ್ತ. ಹೀಗಾಗಿ ಸದಸ್ಯರು ಕೇವಲ ಸಾಮಾನ್ಯ ಚರ್ಚೆಯನ್ನು ಮುಂದುವರಿಸಬೇಕೆಂದೇ ಹೇಳುವೆ.

**ಶ್ರೀ ಝುಂಝುನ್‌ವಾಲಾ :** ಸರ್, ನಾನು ತಾವು ಹೇಳಿದಂತೆಯೇ ಮಾತನಾಡುವೆ. ಆದರೆ ನನಗೆ ಎರಡನೆಯ ಕಲಮಿನ ಬಗೆಗೆ ಮಾತನಾಡಲು ಅವಕಾಶ ದೊರೆಯಲಿಲ್ಲ ಎಂದು ಹೇಳಬಯಸುವೆ.

ಆಗ ಸನ್ಮಾನ್ಯ ಅಧ್ಯಕ್ಷರು ನಾಲ್ಕನೆಯ ಕಲಮಿನ ಚರ್ಚೆ ನಡೆದಾಗ ಎಲ್ಲಾ ವಿಷಯದ ಬಗೆಗೂ ಆಸ್ಪದವಿದೆ ಎಂದೇ ಹೇಳಿದರು. ಆದರೆ ಆಸ್ತಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಬಾರದು. ಹೀಗಾಗಿ ನಾನು ಸದನಕ್ಕೆ ವಿವಾಹ ಮತ್ತು ವಿಚ್ಛೇದನಗಳಿಂದ ಆಗಬಹುದಾದ ಲಾಭ ಮತ್ತು ನಷ್ಟಗಳನ್ನು ಸದನದ ಗಮನಕ್ಕೆ ತರಬಯಸುವೆ. ಆದುದರಿಂದ ನಾನು ಅಸಂಬದ್ಧವಾದುದನ್ನೇನೂ ಪ್ರಸ್ತಾಪಿಸುತ್ತಿಲ್ಲ ಎಂದೇ ಭಾವಿಸುವೆ. ನಾನೂ ಸೂಕ್ಷ್ಮವಾಗಿ ಹಾಗೂ ಶೀಘ್ರವಾಗಿ ನನ್ನ ವಾದ ಮಂಡಿಸುವೆ.

**ಬಾಬು ರಾಮನಾರಾಯಣ ಸಿಂಗ್ :** ಬಹಳ ಒಳ್ಳೆಯದು.

**ಡಾ. ಅಂಬೇಡ್ಕರ್ :** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಝುಂಝುನ್‌ವಾಲಾ :** ನೀವು ನಿಮ್ಮ ಹಿಂದೂ ಕೋಡ್‌ಬಿಲ್ ವಾಪಸು ಪಡೆದುಕೊಂಡು ಹಿಂದೂ ಜನಾಂಗವನ್ನು ಮುಕ್ತಗೊಳಿಸಿರಿ. ಆಗ ನಾನೂ ಕುಳಿತುಕೊಳ್ಳುವೆ.

**ಡಾ. ಅಂಬೇಡ್ಕರ್ :** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಝುಂಝುನ್‌ವಾಲಾ :** ತಾವು ನಿರ್ಗಮಿಸಿದರೆ ಮಾತ್ರ ನಾನು ಕುಳಿತುಕೊಳ್ಳುವೆ.

**ಡಾ. ಅಂಬೇಡ್ಕರ್ :** ನಾನು ಹೊರಡುವೆ. ತಾವು ತಮ್ಮ ಆಸನ ಸ್ವೀಕರಿಸಿ.

**ಶ್ರೀ ಝುಂಝುನ್‌ವಾಲಾ :** ತಾವು ಹೊರಡಿ, ನಾನು ಆಸನ ಸ್ವೀಕರಿಸುವೆ.

**ಮಾನ್ಯ ಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರಿಸಲಿ.

**ಶ್ರೀ ಝುಂಝುನ್‌ವಾಲಾ :** ನಾನು ಮಾತನಾಡಲೆಂದೇ ಬಂದಿರುವಾಗ, ಕಾನೂನು ಮಂತ್ರಿಗಳು ಸಲ್ಲದ ಅಡಚಣೆ ಉಂಟುಮಾಡುತ್ತಿದ್ದಾರೆ. ಅವರು ಸರ್ಕಾರದ ಹಣವನ್ನು ಈ ಬಗೆಯ ಮಾತನಾಡಿ ಖರ್ಚು ಮಾಡಬೇಕೆಂದಿದ್ದಾರೆ. ಅವರು ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ಬಗೆಗೆ ಒಲವು ತೋರದೆ, ಈ ಬಗೆಯ ಮಾತುಗಳಿಂದ ಸಮಯ ಹಾಗೂ ಸರ್ಕಾರದ ಹಣದ ಅಪವ್ಯಯಕ್ಕೆ ಅವಕಾಶ ಮಾಡುತ್ತಾರೆ. ಅವರು ಸದನದ ಹೊರಗಿನವರಿಗೆ ತಾವು ಸದಾ ಕಾರ್ಯನಿರತರಾಗಿರುವಂತೆ ತೋರ್ಪಡಿಸುತ್ತಾರೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು ಮಾತನ್ನು ಮುಂದುವರಿಸಿ, ಅನಗತ್ಯ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿಲ್ಲ.

**ಶ್ರೀ ಝುಂಝುನ್‌ವಾಲಾ :** ಸರ್, ನಾನು ತಮ್ಮ ಆದೇಶಗಳನ್ನು ಪಾಲಿಸಲು ಬದ್ಧನಾಗಿದ್ದೇನೆ. ಆದರೆ ಮಾನ್ಯ ಸದಸ್ಯರ ಮಧ್ಯೆ ಪ್ರವೇಶದಿಂದಾಗಿ ನಾನು ಮಾತನ್ನು ಮುಂದುವರಿಸಲಾರೆ ಹಾಗೂ ನನ್ನ ಭಾಷಣಕ್ಕೆ ಅಧಿಕ ಸಮಯವೂ ಬೇಕಾಗುತ್ತದೆ.

**ಡಾ. ಅಂಬೇಡ್ಕರ್ :** ಅವರೆಲ್ಲರೂ ನಿಮ್ಮ ಮಿತ್ರರೇ, ಆದುದರಿಂದ ಭೀತಿಗೆ ಗುರಿಯಾಗಬೇಕಿಲ್ಲ.

**ಶ್ರೀ ಝುಂಝುನ್‌ವಾಲಾ :** ಮಿತ್ರರೂ ಹಲವು ಬಾರಿ ಕೈಕೊಡುತ್ತಾರೆ. ನಿಮ್ಮಂತಹ ಅನೇಕ ಮಿತ್ರರು ನನಗಿದ್ದಾರೆ. ನೀವು ಸ್ತ್ರೀ ವಿಮೋಚನಾವಾದಿ ಎಂದೇ ಬಡಾಯಿ ಕೊಚ್ಚಿಕೊಂಡು ನಂತರ ಅವರನ್ನು ನಡುನೀರಿನಲ್ಲಿ ಕೈಬಿಟ್ಟಿರುವಿರಿ.

ಸರ್, ನಾನು ಮಾತು ಮುಂದುವರಿಸುವೆ. ಆದರೆ ಮಂತ್ರಿವರ್ಯರು ಅಡ್ಡಿ ಉಂಟುಮಾಡುತ್ತಿದ್ದಾರೆ.

**ಸರ್ದಾರ್ ಬಿ.ಎಸ್. ಮಾನ್ :** ಕಾನೂನು ಮಂತ್ರಿಗಳು ಅಡ್ಡಿಪಡಿಸುವುದು ಹಾಗೂ ಉತ್ತರಿಸದೇ ಇರುವುದು ಅವರಿಗೆ ಗೌರವ ತರಬಲ್ಲ ವಿಷಯವಲ್ಲ.

**ಶ್ರೀ ಝುಂಝುನ್‌ವಾಲಾ :** ನಾನು ಇನ್ನೊಂದು ವಿಷಯ ಹೇಳುವೆ. ಪಂಡಿತ್ ಠಾಕೂರ್ ದಾಸ್

ಭಾರ್ಗವರು ಸೂಚಿಸಿದಂತೆ, ಯಾರಿಂದಾದರೂ, ಅಪಾಯ ಉಂಟಾಗುತ್ತಿದ್ದರೆ, ಬೇರೆಯವರೂ ಅದನ್ನೇ ಮುಂದುವರಿಸಿದರೆ ಅದು ಸೂಕ್ತವೆ? ಸ್ತ್ರೀಯರಿಂದ ಪುರುಷರಿಗೆ ತಪ್ಪಾದಲ್ಲಿ ಅದು ಎಷ್ಟರಮಟ್ಟಿಗೆ ಸೂಕ್ತ ಎಂದೇ ತಿಳಿಯಬಯಸುವೆ.

ಆಗ ಈ ವಿಷಯವು ಪ್ರಗತಿಪರವೊ ಇಲ್ಲವೊ ಎಂಬುದನ್ನು ನೋಡಬಹುದು. ನಮ್ಮ ಗೃಹಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಈಗ ಸದನದಲ್ಲಿಲ್ಲ. ಅವರು ಸುದ್ದಿ ಮಾಧ್ಯಮ ಸಲಹಾ ಸಮಿತಿಯ ಮುಂದೆ ಒಂದು ವಿಷಯ ಹೇಳಿದ್ದರು. ಅದೇನೆಂದರೆ ಅವರು ತಮ್ಮ ಬಗ್ಗೆ ಒಂದು ದಿನಪತ್ರಿಕೆಯಲ್ಲಿ ವ್ಯಂಗ್ಯ ಚಿತ್ರದಲ್ಲಿ ಅವರನ್ನು ಕೀಳಾಗಿ ಚಿತ್ರಿಸಲಾಗಿತ್ತಂತೆ. ಆದರೆ ಇಂದಿನ ವೃತ್ತಪತ್ರಿಕೆಗಳನ್ನು ನೋಡಿದಾಗ, ಅದರಲ್ಲಿ ಅಂದರೆ ತಾವು ನೋಡಿದ ಚಿತ್ರದಲ್ಲಿ ಏನೂ ವಿಶೇಷವೆ ಇಲ್ಲವೆಂದೆ ತಿಳಿದರಂತೆ (ಅಡಚಣೆ) ಸರ್, ಸದಸ್ಯರು ಅಡ್ಡಿಮಾಡುತ್ತಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ತಾವು ಪೀಠವನ್ನು ಗಮನದಲ್ಲಿರಿಸಿಕೊಂಡು ಮಾತನಾಡಿದರೆ ಯಾವ ತೊಂದರೆಯೂ ಉಂಟಾಗಲಾರದು.

**ಶ್ರೀ ಝುಂಝುನ್‌ವಾಲಾ :** ಆದರೆ ನನಗೆ, ಮಾತನಾಡುವಾಗ, ಅಕ್ಕಪಕ್ಕ ಮಾಡುವ ಹವ್ಯಾಸ, ರಾಜಾಜಿಯವರ ಹೇಳಿಕೆ ಅತಿ ಪ್ರಮುಖವಾದದ್ದು; ಏಕೆಂದರೆ ಇಂದಿನ ವೃತ್ತಪತ್ರಿಕೆಗಳ ಮಟ್ಟ ಕೀಳುದರ್ಜೆಗೆ ಇಳಿದಿದೆ. ಏಕೆಂದರೆ ಅವರಿಗೆ ಅಸಹ್ಯ ಎಂಬುದೇ ತಿಳಿದಿಲ್ಲ. ಆದರೆ ವೃತ್ತಪತ್ರಿಕೆಗಳು ನಮಗೆ ಬೇಡವಾದುವನ್ನು ಪ್ರಕಟಿಸಿ ನೋಡುವಂತೆ ಮಾಡುತ್ತವೆ. ಇದು ವಿಚ್ಛೇದನೆಯ ಬಗೆಗೆ ಸತ್ಯ, ಏಕೆಂದರೆ ಯುವಕರು ಅದನ್ನು ಓದುತ್ತಾರೆ. ಅದು ಆ ಯುವಕರ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದನ್ನು ಭಗವಂತನೇ ಬಲ್ಲ. ಹೀಗಾಗಿ ಈ ಬಗೆಯ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದು ಪ್ರಗತಿಯೆ? ಅಸಹ್ಯ ಚಿತ್ರಗಳನ್ನು ಪ್ರಕಟಿಸುವುದೇ ಪ್ರಗತಿ ಎಂದಾಗ ಅದು ಹೇಗೆ ನಮಗೆ ಉಪಯೋಗವಾಗಬಲ್ಲದು? ಆದುದರಿಂದ, ಕಲಿಯುಗದ ಮನುವಾದ ನಮ್ಮ ಕಾನೂನು ಮಂತ್ರಿಯವರಿಗೆ ಹೇಳಬಯಸುವುದೇನೆಂದರೆ.......

**ಶ್ರೀ ಶ್ಯಾಮನಂದನ ಸಹಾಯ್ :** ಕಲಿಯುಗದ ಮನು ಅಲ್ಲ. ಕಪ್ಪುಯುಗದ ಮನು.

**ಶ್ರೀ ಝುಂಝುನ್‌ವಾಲಾ :** ನಾವು ಕಲಿಯುಗದಲ್ಲಿರುವುದರಿಂದ, ನಾನು ಕಲಿಯುಗದ ಮನು ಎಂದೇ ಹೇಳಿದೆ. ನಮ್ಮ ಮಾನ್ಯ ಮಂತ್ರಿಗಳಾದ ಗಾಡ್ಗೀಳ್ ಅವರು ತಾವು ಬಹಿಷ್ಕಾರಕ್ಕೆ ಈಡಾದ ಬ್ರಾಹ್ಮಣ, ಆದರೂ ತನಗೆ ಪಂಡಿತ್ ಎಂದೇ ಬಿರುದು ನೀಡಿದೆ ಎಂದೇ ಹೇಳಿದ್ದಾರೆ. ಇಲ್ಲಿ ನಾನು ಹೇಳುವುದೇನೆಂದರೆ ಅಂಬೇಡ್ಕರರು ಈ ಯುಗದ ಮನು. ಆದುದರಿಂದ ಅವರಿಂದ ಮಂಡಿಸಿದ ಈ ವಿಧೇಯಕವು ನಮ್ಮ ಉದ್ಧಾರಕ್ಕಾಗಿಯೆ? ಅಥವಾ ಅವನತಿಗಾಗಿಯೆ? ಏಕೆಂದರೆ ಅದು ನಮ್ಮನ್ನು ನೀತಿಭ್ರಷ್ಟತೆಗೆ ಈಡು ಮಾಡುತ್ತದೆ. ನಾನು ನನ್ನ ತಿದ್ದುಪಡಿ ಮಂಡಿಸುವ ಮುನ್ನವೇ ನನಗೆ ತಿಳಿಸಿ ಹೇಳಿದ್ದಾರೆ. ನಾನು ಒಪ್ಪಬಹುದಿತ್ತೇನೊ? ಆದರೆ ಅವರು ಕೇವಲ ಪ್ರಗತಿಪರ ಮಸೂದೆ ಎಂದೇ ಹೇಳುತ್ತಲೇ ಬಂದು, ಸ್ತ್ರೀಯರಿಗೆ ದೊರೆಯಬೇಕಾಗಿದ್ದ ಹಕ್ಕಿಗೇ ಕತ್ತರಿ ಪ್ರಯೋಗ ಮಾಡಿದ್ದಾರೆ. ಅವರು ನೀಡುವ ಒಂದೇ ಒಂದು ಹಕ್ಕು ಎಂದರೆ ವಿಚ್ಛೇದನೆಯದು. ಅದು ನಿಜವಾಗಿಯೂ ಪ್ರಗತಿಪರ ಅಲ್ಲ ಎಂದೇ ಹೇಳಬಯಸುವೆ. ಹೀಗೆ ಓರ್ವ ವ್ಯಕ್ತಿ ಮಾಡುತ್ತಿರುವ ತಪ್ಪನ್ನೇ ಜಾಣ್ಮೆ ಎಂದು ಹೊಗಳಬಾರದು. ಈ ಮಾದರಿಯ ಶಾಸನವನ್ನು ಜಾರಿಗೊಳಿಸುವುದು ಅಪರಾಧ. ಅದನ್ನು ಮುಂದುವರಿಸುವುದು ಮಹಾ ಅಪರಾಧ ಇಷ್ಟು ಹೇಳಿ ನನ್ನ ತಿದ್ದುಪಡಿಗಳನ್ನು ಮಂಡಿಸುವೆ. ಅವನ್ನು ಈಗಾಗಲೇ ನಾನು ಮಂಡಿಸಿರುವುದರಿಂದ, ಅವನ್ನು ಓದುವುದಿಲ್ಲ. ಏಕೆಂದರೆ ಸದನದ ಸಮಯ ಹಾಳುಮಾಡಲಾರೆ.

**ಶ್ರೀ ಶ್ಯಾಮನಂದನ ಸಹಾಯ್** : ಹಾಗಾದರೆ ಅವು ನಮಗೆ ಹೇಗೆ ಅರ್ಥವಾಗಬೇಕು? ಅಲ್ಲದೆ ಹೇಗೆ ಮತ ಚಲಾಯಿಸಬೇಕು?

**ಅಧ್ಯಕ್ಷರು** : ಈಗಾಗಲೇ ಓದಿರುವಿರಲ್ಲವೆ?

**ಶ್ರೀ ಝುಂಝುನ್‌ವಾಲಾ** : ಹೌದು, ಓದಿರುವೆ.

**ಅಧ್ಯಕ್ಷರು** : ಹಾಗಾದರೆ ಮತ್ತೊಂದು ಬಾರಿ ಓದಬೇಕಾಗಿಲ್ಲ.

**ಶ್ರೀ ಶ್ಯಾಮನಂದನ ಸಹಾಯ್** : ಅದರ ಮೇಲೆ ನಾವು ಮತದಾನ ಮಾಡುವುದರಿಂದ, ಅದನ್ನು ಅವರು ಓದಲೇಬೇಕು.

**ಶ್ರೀ ಝುಂಝುನ್‌ವಾಲಾ** : ನನ್ನ ಮೊದಲನೆಯ ತಿದ್ದುಪಡಿ ಎಂದರೆ, ಈ ಶಾಸನದಲ್ಲಿ ಹಿಂದೂ, ಸಿಖ್, ಜೈನ, ಬುದ್ಧ ಧರ್ಮಗಳಿಗೆ ಅಥವಾ ಮರುಮಕ್ಕತ್ತಾಯಂಗೆ, ಮತ್ತು ಅಳಿಯ ಸಂತಾನ ಕಾನೂನುಗಳಿಗೆ ವಿರುದ್ಧವಾದುದೇನಾದರೂ ಇದ್ದಲ್ಲಿ ಅವು ಅವರಿಗೆ ಅನ್ವಯಿಸಲಾರವು.

**ಡಾ. ಅಂಬೇಡ್ಕರ್** : ಅದು ಕೇವಲ ಮಾರವಾಡಿಗಳಿಗೆ ಮಾತ್ರ ಅನ್ವಯಿಸಲಾಗುವುದು.

**ಶ್ರೀ ಝುಂಝುನ್‌ವಾಲಾ** : ಅದು ಮಾರವಾಡಿಗಳಿಗೆ ಅನ್ವಯಿಸದೇ ಇದ್ದರೂ, ನಾನು ಸುಮ್ಮನೆ ಕುಳಿತಿರುತ್ತಿರಲಿಲ್ಲ. ಏಕೆಂದರೆ ಈ ವಿಧೇಯಕವು ಸಮಾಜಕ್ಕೆ ಮತ್ತು ದೇಶಕ್ಕೆ ಮಾರಕವಾಗಿದೆ.

**ಮಾನ್ಯ ಅಧ್ಯಕ್ಷರು** : ಮಾನ್ಯ ಸದಸ್ಯರು ಮುಂದುವರಿಸಬೇಕು.

**ಶ್ರೀ ಝುಂಝುನ್‌ವಾಲಾ** : ಮಾನ್ಯ ಮಂತ್ರಿಗಳು ಅಡ್ಡಬರುವುದಲ್ಲದೆ ಅವಹೇಳನಾತ್ಮಕ ಹೇಳಿಕೆಗಳನ್ನೂ ಮಂಡಿಸುತ್ತಿದ್ದಾರೆ. ನಮ್ಮ ಸಂವಿಧಾನ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ಆದುದರಿಂದ ಅವರ ಹೇಳಿಕೆಗೆ ಉತ್ತರಿಸುವಲ್ಲಿ ನನ್ನನ್ನೇಕೆ ಪ್ರತಿಬಂಧಿಸುವಿರಿ?

**ಮಾನ್ಯ ಅಧ್ಯಕ್ಷರು** : ನಾನು ಅವರಿಗೂ ಮಧ್ಯೆ ಮಾತನಾಡಬಾರದೆಂದೇ ಹೇಳಿರುವುದರಿಂದ ನೀವು ನಿಮ್ಮ ಮಾತನ್ನು ಮುಂದುವರಿಸಿರಿ.

**ಶ್ರೀ ಝುಂಝುನ್‌ವಾಲಾ** : ದಯಮಾಡಿ ಅವರೆಡೆಗೆ ನೋಡಿ ಅವರಿಗೆ ಕೇಳಿಸುವಂತೆ ಹೇಳಿರಿ.

**ಮಾನ್ಯ ಅಧ್ಯಕ್ಷರು** : ನಾನು ಈ ಪಾಠವನ್ನು ಸದಸ್ಯರಿಂದ ಕಲಿಯಬೇಕಾಗಿದೆ. ನಾನು ಮಾನ್ಯ ಮಂತ್ರಿವರ್ಯರು ಮಧ್ಯೆ ಮಾತನಾಡಬಾರದು ಎಂದೇ ಹೇಳುವೆ.

**ಶ್ರೀ ಝುಂಝುನ್‌ವಾಲಾ** : ಈ ಬಗ್ಗೆ ನಾನು ಸಂವಿಧಾನದ ವಿಧಿ–೨೫ನ್ನು ಸದನದ ಗಮನಕ್ಕೆ ತರಬಯಸುವೆ. ದಯಮಾಡಿ ಸದಸ್ಯರು ಸಮಾಧಾನದಿಂದ ಕೇಳಿರಿ.

"೨೫ (೧) ಸಾರ್ವಜನಿಕ ನಿಯಮದನ್ವಯ, ನೀತಿ ಹಾಗೂ ಆರೋಗ್ಯಕರ ವಿಷಯಗಳ ದೃಷ್ಟಿಯಿಂದ ಈ ಭಾಗದಲ್ಲಿಯ ಅಂಶಗಳು ತಿಳಿಸುವಂತೆ, ಎಲ್ಲರೂ ಮನಸಾಕ್ಷಿಯ ಸ್ವಾತಂತ್ರ್ಯ ಪಡೆದಿದ್ದು ಅದನ್ನು ಹೇಳುವ ಹಾಗೂ ಆಚರಿಸುವ ಮತ್ತು ಪ್ರಚಾರ ಮಾಡಬಲ್ಲ ಹಕ್ಕನ್ನು ಹೊಂದಿದ್ದಾರೆ.

(೨) ಆದುದರಿಂದ ಈ ಶಾಸನದಲ್ಲಿ ಅದಕ್ಕೆ ವಿರೋಧವಾದ ಅಥವಾ ಅದನ್ನು ಪ್ರತಿಬಂಧಿಸುವ ಕಾನೂನುಗಳನ್ನು ರಾಜ್ಯ ಮಾಡಬಾರದು–

(ಎ) ಆರ್ಥಿಕ, ಹಣಕಾಸಿನ, ರಾಜಕೀಯ ಅಥವಾ ಇನ್ನಿತರ ಜಾತ್ಯತೀತ ವಿಷಯಗಳ ಮೇಲೆ ಪ್ರತಿಬಂಧ ಹೇರಲಾಗದು.

**ಬಾಬು ರಾಮನಾರಾಯಣ ಸಿಂಗ್** : ದಯಮಾಡಿ ಹಿಂದಿಯಲ್ಲಿಯೇ ಹೇಳಿ.

**ಶ್ರೀ ಝುಂಝುನ್‌ವಾಲಾ** : ಅದಕ್ಕೆಂದೇ ಓರ್ವ ಉಪಾಧ್ಯಾಯನನ್ನು ನೇಮಿಸಿಕೊಳ್ಳಿ. ನಂತರ

(ಬಿ) ಸಾಮಾಜಿಕ ವಿಕಾಸಕ್ಕೆ ಆಸ್ಪದ ನೀಡುವ, ಮತ್ತು ಸುಧಾರಣೆಗೆ ಎಡೆಮಾಡಿಕೊಡುವ ಹಿಂದೂ ಧಾರ್ಮಿಕ ಸಂಸ್ಥೆಗಳು ಸಕಲರಿಗೂ ಮುಕ್ತವಾಗಿದ್ದು ಅದರಲ್ಲಿ ಎಲ್ಲ ವರ್ಗಗಳಿಗೂ, ಹಿಂದೂಗಳಿಗೂ ಅವಕಾಶವಿದೆ."

ಮುಂದಿನ ವಿವರಣೆಯನ್ನು ನಾನು ಓದಲೇಬೇಕಾಗಿಲ್ಲ. ಹೀಗೆ ನಾನು ಪೀಠಕ್ಕೆ ಹಾಗೂ ಸದನದ ಸದಸ್ಯರ ಗಮನಕ್ಕೆ ತರಬೇಕೆಂದಿರುವ ಸಂಗತಿ ಎಂದರೆ ಸುಧಾರಣೆ ಮಾಡಿ, ಧರ್ಮಶಾಸ್ತ್ರಗಳನ್ನು ತಡೆಯುವ ಹಕ್ಕು ನಮಗಿಲ್ಲ. ಆದರೆ ಅವಕ್ಕೆ ವಿರೋಧವಾಗಬಹುದಾದ ಕಾರ್ಯಗಳನ್ನು ನಮ್ಮ ಶಾಸ್ತ್ರಗಳು ಸಹಿಸುವುದಿಲ್ಲ; ನನ್ನ ತಿದ್ದುಪಡಿಗಳು ಹೀಗಿವೆ :

"ಯಾವುದೇ ಗ್ರಂಥ, ನಿಯಮಗಳು ಅಥವಾ ಹಿಂದೂ ಶಾಸ್ತ್ರದ ಅರ್ಥ, ಸಂಪ್ರದಾಯ ಹಾಗೂ ನಡವಳಿಕೆಗಳು ಈ ಶಾಸನ ಬರುವ ಮುಂಚೆ ಜಾರಿಯಲ್ಲಿದ್ದು, ಈ ಶಾಸನಕ್ಕೆ ವಿರೋಧವಾಗಿದ್ದಲ್ಲಿ ಅನೂರ್ಜಿತಗೊಳ್ಳುವುವು"

"ಯಾವುದೇ ಇತರ ಕಾನೂನುಗಳು ಈ ಶಾಸನ ಜಾರಿಗೆ ಬರುವ ಮುಂಚೆ ಜಾರಿಯಲ್ಲಿದ್ದು, ಈ ಶಾಸನಕ್ಕೆ ಅಸಂಗತವಾಗಿದ್ದಲ್ಲಿ ಅವು ತಾವೇತಾವಾಗಿ ರದ್ದಾಗುವುವು."

ನನಗೆ ಈ ಶಾಸನದ ಬಗ್ಗೆ ಯಾವ ವಿರೋಧವೂ ಇಲ್ಲ. ಆದರೆ ಈ ಶಾಸನದಲ್ಲಿಯ ಯಾವ ಅಂಶಗಳು ಹಿಂದೂ, ಸಿಖ್, ಜೈನಧರ್ಮಗಳಿಗೆ ವಿರೋಧವಾಗಿದ್ದಲ್ಲಿ ಅವು ಆ ಧರ್ಮದವರಿಗೆ ಅನ್ವಯಿಸಲಾಗದು.

**ಶ್ರೀ ನಜೀರುದ್ದೀನ್ ಅಹಮದ್ :** ಮುಸಲ್ಮಾನರು?

**ಶ್ರೀ ಝುಂಝುನ್‌ವಾಲಾ :** ಈ ವಿಧೇಯಕವು ಮುಸಲ್ಮಾನರಿಗೆ ಅನ್ವಯಿಸುವುದಿಲ್ಲ. ನಂತರ ಮುಂದಿನ ತಿದ್ದುಪಡಿಯಲ್ಲಿ ಧರ್ಮದ ಬದಲು ನೀತಿ ಇದೆ. ಏಕೆಂದರೆ ಯಾವುದೇ ಸದನವು ಜನರ ನೈತಿಕ ಮಟ್ಟವನ್ನು ಕುಗ್ಗಿಸುವಂತೆ ಇರಕೂಡದು. ಹೀಗಾಗಿ ಈ ತಿದ್ದುಪಡಿಯನ್ನು ಸೇರ್ಪಡಿಸಬೇಕು. ಈ ಹಕ್ಕು ನಮಗೆ ಸಂವಿಧಾನದಲ್ಲಿ ನೀಡಲಾಗಿದೆ. ಈ ತಿದ್ದುಪಡಿಯನ್ನು ನಿರಾಕರಿಸಿದಲ್ಲಿ ನಮ್ಮ ಸರ್ಕಾರವು ನಮ್ಮ ಧರ್ಮವನ್ನೇ ದೂಷಿಸಿದಂತೆ ಆಗುತ್ತದೆ. ಅದನ್ನು ಅವರು ಮಾಡಕೂಡದು. ನನ್ನ ಮೂರನೇ ತಿದ್ದುಪಡಿ ಸಂವಿಧಾನದ ೨೯ನೆಯ ಅನುಚ್ಛೇದವನ್ನೇ ಅವಲಂಬಿಸಿದೆ. ಏಕೆಂದರೆ ಅದರಲ್ಲಿ ಸಂಸ್ಕೃತಿಯ ಬಗ್ಗೆ ಹೇಳಲಾಗಿದೆ.

"೨೯ (೧) ಭಾರತದ ಯಾವುದೇ ಭಾಗದಲ್ಲಿ ವಾಸಕ್ಕೆ ಇರುವ, ಎಲ್ಲಾ ವರ್ಗದ ನಾಗರಿಕರಿಗೂ, ತಮ್ಮದೇ ಆದ ಭಾಷೆ, ಲಿಪಿ, ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಹಕ್ಕಿದೆ." ನನ್ನ ಹೇಳಿಕೆ ಏನೆಂದರೆ, ಈ ಶಾಸನವು ಹಿಂದೂ, ಸಿಖ್, ಜೈನ ಧರ್ಮಗಳ ಸಂಸ್ಕೃತಿಗೆ ವಿರೋಧವಾಗಿದ್ದಲ್ಲಿ, ಅದು ಅವರಿಗೆ ಅನ್ವಯಿಸಲಾಗದು.

(ಮಾನ್ಯ ಉಪಸಭಾಧ್ಯಕ್ಷರು ಪೀಠದಲ್ಲಿ)

ಆದುದರಿಂದ ಸದಸ್ಯರಿಗೆ ನನ್ನ ತಿದ್ದುಪಡಿಗಳನ್ನು ಅಂಗೀಕರಿಸಬೇಕೆಂದು ಕೋರುವೆ. ಈ ಅಂಶಗಳನ್ನು ಗಮನಿಸದೆ ವಿಧೇಯಕಕ್ಕೆ ಒಪ್ಪಿಗೆ ನೀಡಬಾರದು. ಒಂದು ಪಕ್ಷ ಒಪ್ಪಿಗೆ ನೀಡಿದಲ್ಲಿ ನನ್ನ ತಿದ್ದುಪಡಿಗಳನ್ನು ಸೇರ್ಪಡಿಸಬೇಕು. ಹೆಚ್ಚಿಗೆ ಸಮಯ ತೆಗೆದುಕೊಳ್ಳಲಾರೆ.

**ಓರ್ವ ಸದಸ್ಯ :** ಮುಗಿದಿದೆಯೆ, ಸರ್

**ಶ್ರೀ ಭಾರತಿ :** ಈ ಪ್ರಶ್ನೆಯನ್ನು ನಾವು....

**ಅನೇಕ ಸದಸ್ಯರು :** ಇಲ್ಲ, ಇಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸದಸ್ಯರು ಶಾಂತಿರೀತಿಯಿಂದ ತಮ್ಮ ಆಸನದಲ್ಲಿ ಕೂಡಬೇಕು. ನಾನು ಈ ಪ್ರಶ್ನೆಯನ್ನು ಸದನದ ಮುಂದಿಡುವೆ.

**ಶ್ರೀ ನಜೀರುದ್ದೀನ್ ಅಹಮದ್ :** ಅದಕ್ಕೂ ಮುಂಚೆ ಸರ್, ನಾವೂ ತಿದ್ದುಪಡಿಗಳನ್ನು ಮಂಡಿಸಿರುವೆವು. ನಮಗೂ ಮಾತನಾಡಲು ಅವಕಾಶ ಮಾಡಿದಲ್ಲಿ ನಾವೂ ನಮ್ಮ ಅಭಿಪ್ರಾಯಗಳನ್ನು ತಿಳಿಸುವೆವು. ನಮ್ಮ ತಿದ್ದುಪಡಿಗಳ ಬಗ್ಗೆ ಚರ್ಚೆ ಆಗಲಿ.

**ಮಾನ್ಯ ಉಪಸಭಾಧ್ಯಕ್ಷರು :** ನನ್ನ ಒಪ್ಪಿಗೆ ಇದೆ.

**ಶ್ರೀ ಶ್ಯಾಮಾನಂದನ ಸಹಾಯ್ :** ನನ್ನದೊಂದು ಹೇಳಿಕೆ ಸರ್, ಈಗ ತಾನೇ ತಾವೇ ಹೇಳಿದ್ದಂತೆ ಝುಂಝುನ್‌ವಾಲಾರ ನಂತರ ಶ್ರೀ ಭಟ್ ಅವರು ಮಾತನಾಡುವರು, ನಂತರ ಬೇರೆಯವರ ವಿಷಯ ಪರಿಗಣಿಸಲಾಗುವುದು ಎಂದು.

**ಮಾನ್ಯ ಉಪಸಭಾಧ್ಯಕ್ಷರು :** ಝುಂಝುನ್‌ವಾಲಾರು ಇಷ್ಟು ದೀರ್ಘ ಅವಧಿ ತೆಗೆದುಕೊಳ್ಳುತ್ತಾರೆ ಎಂಬ ಕಲ್ಪನೆಯೇ ನನಗಿರಲಿಲ್ಲ. ಅವರ ತಿದ್ದುಪಡಿ ತುಂಬಾ ಚಿಕ್ಕದಾಗಿದ್ದರೂ ಅವರು ಅಧಿಕ ಅವಧಿ ತೆಗೆದುಕೊಂಡಿದ್ದಾರೆ. ಈ ಅವಧಿಯಲ್ಲಿ ಬೇರೆ ಇಬ್ಬರ ಭಾಷಣ ಮುಗಿಸಬಹುದಾಗಿತ್ತು. ಈ ಕಲಮಿನ ಬಗ್ಗೆ ನಿನ್ನೆಯಿಂದಲೂ ಚರ್ಚೆ ನಡದೇ ಇದೆ. ನಾವು ಈ ವಿಧಿಯ ಬಗೆಗೆ ಸಾಕಷ್ಟು ಚರ್ಚೆ ನಡೆಸಿದ್ದೇವೆ. ಅದನ್ನು ಗಮನಿಸಿ ನಾನು ಈ ನಿಲುವಳಿಯನ್ನು ಸದನಕ್ಕೆ ಅರ್ಪಿಸುವೆ. ಅದು ಬೇಕಾದಲ್ಲಿ ಒಪ್ಪಿಗೆ ನೀಡಬಹುದು ಅಥವಾ ನಿರಾಕರಿಸಬಹುದು.

**ಶ್ರೀ ಭಟ್ :** ನನ್ನ ಹೆಸರಿನಲ್ಲಿಯೂ ಒಂದು ತಿದ್ದುಪಡಿ ಇದೆ.

**ಶ್ರೀ ಶ್ಯಾಮಾನಂದನ ಸಹಾಯ್ :** ನಜೀರುದ್ದೀನ್ ಅವರು ಹೇಳಿದಂತೆ, ನಾವೆಲ್ಲರೂ ತಿದ್ದುಪಡಿಗಳನ್ನು ಮಂಡಿಸಿರುವೆವು. ಅಲ್ಲದೆ ನಾವು ಎರಡನೆಯ ಕಲಮಿನ ಬಗೆಗೂ ಮಾತನಾಡಬೇಕಾಗಿದೆ. ಏಕೆಂದರೆ ಈ ವಿಧಿಯನ್ನು ಅಂಗೀಕರಿಸಿದರೂ ಇದರ ಮೇಲಿನ ಚರ್ಚೆ ಇಂದಿಗೇ ಮುಗಿಯಲಾರದು. ಏಕೆಂದರೆ ಕನಿಷ್ಠ ೫೦ ಅಥವಾ ೫೫ ಕಲಮುಗಳನ್ನು ಪರಿಶೀಲಿಸಬೇಕಾಗಿದೆ. ಆದುದರಿಂದ ನಾನು ಹೀಗೆ ಹೇಳಬಯಸುವೆ. ಈ ವಿಧಿಯು ತುಂಬಾ ಪ್ರಮುಖವಾಗಿರುವುದರಿಂದ ಇಲ್ಲಿ ನಾವು ಗ್ರಂಥಗಳನ್ನು ಪರಿಗಣಿಸಲಾಗುವುದಿಲ್ಲ ಎಂದೇ ಹೇಳಿರುವುದರಿಂದ ಅದು ಮೂಲವಾಗಿ ಪ್ರಮುಖವಾದ ವಿಷಯವಾಗಿದೆ. ನಾವು ವಿವಾಹ ಹಾಗೂ ವಿಚ್ಛೇದನೆಯ ರೀತಿ ನೀತಿಗಳನ್ನು ಚರ್ಚಿಸುವುದಾದರೆ ಅದು ಬೇರೆ ವಿಷಯ. ಅದನ್ನು ಶೀಘ್ರದಲ್ಲಿ ಒಪ್ಪಿಯೆ ಅಥವಾ ಒಪ್ಪದೆಯೆ ಮುಗಿಸಬಹುದು. ಆದರೆ ಗ್ರಂಥಗಳನ್ನು ಮತ್ತು ಸಂಪ್ರದಾಯಗಳನ್ನು ರದ್ದುಪಡಿಸುವ ಕ್ರಮ ಅತಿ ಮಹತ್ವವಾಗಿದೆ. ಆದುದರಿಂದ ಮತ್ತೊಮ್ಮೆ ವಿನಯದಿಂದ ಕೋರುವುದೇನೆಂದರೆ ನೀವು ಈ ದಿನವೇ ಈ ವಿಧೇಯಕವನ್ನು ಅಂಗೀಕರಿಸಬೇಕು ಎಂದರೆ ಅದು ಆಗಬಹುದು. ಆದರೆ ವಿಷಯ ಬೇರೆಯಾಗಿದೆ. ಹೀಗಾಗಿ ತಿದ್ದುಪಡಿ ಮಂಡಿಸಿದವರಿಗೆ ಅವಕಾಶ ನೀಡಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಅದು ಹೇಗೆ ಸಾಧ್ಯ?

**ಶ್ರೀ ಶ್ಯಾಮಾನಂದನ ಸಹಾಯ್ :** ನಾವು ೫೫ ಕಲಮುಗಳನ್ನು ಚರ್ಚಿಸಬೇಕಾಗಿದೆ. ಹೀಗಾಗಿ ಈ ಕಲಮಿಗೆ ಹೆಚ್ಚು ಅವಕಾಶ ನೀಡಬಹುದು. ನನ್ನಂತೆ, ಅಭಿಪ್ರಾಯ ಹೊಂದಿದವರು ಅನೇಕರಿದ್ದಾರೆ.

**ಪಂಡಿತ ಠಾಕೂರದಾಸ್ ಭಾರ್ಗವ :** ನಮ್ರತೆಯಿಂದ ನಾನೊಂದು ವಿಷಯ ಪ್ರಸ್ತಾಪಿಸಬಹುದೇ ಸರ್, ಅನೇಕ ಬಾರಿ, ಈ ಸದನದಲ್ಲಿ ತಿದ್ದುಪಡಿಗಳನ್ನು ಮಂಡಿಸಿದಾಗ, ಸದಸ್ಯರ ಉದ್ದೇಶ, ಮಾತನಾಡಲು ಅವಕಾಶ ಪಡೆಯುವುದೇ ಅವರ ಉದ್ದೇಶವಾಗಿರುತ್ತದೆ. ಆದರೆ ಈಗ ಸದನದ ಮುಂದಿರುವ ವಿಧೇಯಕ

ಅತಿ ಗಂಭೀರ ಸ್ವರೂಪದ್ದಾಗಿವೆ. ಹೀಗಾಗಿ ನಾನು ನಿಮ್ಮನ್ನು ಕೋರುವುದೇನೆಂದರೆ, ತಾವು ತಿದ್ದುಪಡಿಗಳನ್ನು ಪರಾಂಬರಿಸಿ ತಿದ್ದುಪಡಿಯಲ್ಲಿ ವಿಧೇಯಕಕ್ಕೆ ಸಂಬಂಧಿಸಿದ ಸಂಗತಿ ಇದ್ದು ಅದು ತಮಗೆ ಮನವರಿಕೆಯಾದಲ್ಲಿ ಅಂಥವರಿಗೆ ಅವಕಾಶ ನೀಡಬಹುದು.

**ಶ್ರೀ ಭಾರತಿ :** ಪೀಠಕ್ಕೆ ಆ ವಿವೇಚನೆ ಇದೆ.

**ಪಂಡಿತ ಮಾಲವೀಯ (ಉ.ಪ್ರ.) :** ಈ ವಿಷಯದ ಬಗೆಗೆ ಮಾತನಾಡುವವರು ಇನ್ನೂ ಅನೇಕರಿದ್ದಾರೆ. ಸದನವು ಇದನ್ನು ಇಂದು ಅಂಗೀಕರಿಸಿದರೂ, ನಾವು ಸದಸ್ಯರು ಏನು ಮಾತನಾಡುವರು ಎಂಬುದನ್ನು ಶಾಂತರೀತಿಯಿಂದ ಕೇಳಿಯೇ ನಿರ್ಣಯಕ್ಕೆ ಬರಬೇಕು. ಆದುದರಿಂದ ಮಾತನಾಡುವವರಿಗೆ ಅವಕಾಶ ಕಲ್ಪಿಸಿಕೊಡಬೇಕು. ಅವಕಾಶ ದೊರೆತಲ್ಲಿ ನಾನೂ ಈ ವಿಧಿಯ ಬಗೆಗೆ ಕೆಲವು ಮಾತುಗಳನ್ನು ಹೇಳಬಯಸುವೆ. ಆದುದರಿಂದ ಸರ್, ಎಲ್ಲರಿಗೂ ಅವಕಾಶ ಕಲ್ಪಿಸಿಕೊಡಬೇಕು ಇಲ್ಲದೇ ಹೋದರೆ ಅದು ದಬ್ಬಾಳಿಕೆಯಾಗುತ್ತದೆ. ಚರ್ಚೆಯಲ್ಲಿ ಅನೇಕ ಸತ್ಯಾಂಶಗಳು ಹೊರಹೊಮ್ಮಲು ಅವಕಾಶವಿದೆ. ಆದುದರಿಂದ ಎಲ್ಲರಿಗೂ ಅವಕಾಶ ಒದಗಿಸಕೊಡಬೇಕೆಂದೇ ಕೋರುವೆ.

**ಶ್ರೀ ಭಾರತಿ :** ಸರ್, ಈ ವಿಷಯ ಸಂಪೂರ್ಣವಾಗಿ ತಮ್ಮ ವಿವೇಚನೆಗೆ ಸೇರಿದ್ದು, ತಾವು ಒಟ್ಟಿನಲ್ಲಿ ವಿಚಾರಮಾಡಿ ನಿರ್ಣಯಿಸಬೇಕೇ ಹೊರತು ನಾವುಗಳಲ್ಲ..........

**ಶ್ರೀ ಶ್ಯಾಮಾನಂದನ ಸಹಾಯ್ :** ನಾನು, ಅನೇಕರು ಮಾತನಾಡಲು ಬಯಸಿರುವುದರಿಂದ ಮನವಿ ಮಾಡುವೆ.........

**ಡಾ. ಅಂಬೇಡ್ಕರ್ :** ಈ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. (ಅಡ್ಡಿ) ಸರ್, ನಾನು ಮನವಿ ಮಾಡುವುದೇನೆಂದರೆ, ವಿಧೇಯಕದ ಚರ್ಚೆ ಮುಗಿಸುವುದೇ ಹೊರತು, ಎಲ್ಲರೂ ಮಾತನಾಡಿದ್ದರೊ ಇಲ್ಲವೊ ಎಂಬುದು ಮುಖ್ಯವಲ್ಲ. ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆಯೆ ಇಲ್ಲವೊ ಎಂಬುದನ್ನು ಗಮನಿಸಬೇಕು.

**ಶ್ರೀ ಶ್ಯಾಮಾನಂದನ ಸಹಾಯ್ :** ಯಾರು ಮಾತನಾಡಬೇಕೆಂದಿರುವವರೊ ಅವರಿಗೆ ಅವಕಾಶ ನೀಡಲೇಬೇಕು. ಸರ್, ನೀವೇ ನನಗೆ ವಿಧೇಯಕಕ್ಕೆ ಸಂಬಂಧಿಸಿದಂತೆ ತಿದ್ದುಪಡಿಯನ್ನು ಮಂಡಿಸಬಹುದು ಎಂದು ಹೇಳಿದ್ದೀರಿ.

**ಪಂಡಿತ ಮಾಲವೀಯ :** ಯಾವುದೇ ಸದಸ್ಯ ಸದನದಲ್ಲಿ ಮಾತನಾಡುತ್ತಿದ್ದ ಸಮಯದ ನಡುವೆ, ಚರ್ಚೆಯನ್ನು ಸಂಪೂರ್ಣಗೊಳಿಸಬೇಕೆಂಬುದು ಸರಿಯಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಆದರೆ ಯಾರೂ ಸದಸ್ಯರು ಮಾತನಾಡುತ್ತಿಲ್ಲ.

**ಪಂಡಿತ ಮಾಲವೀಯ :** ಇದೊಂದು ಪ್ರಮುಖವಾದ ವಿಷಯ. ಆದುದರಿಂದ ಅನೇಕರು ಮಾತನಾಡಬೇಕೆಂದರೂ ಆಸ್ಪದ ದೊರೆತಿಲ್ಲ. ತಮಗೇ ತಿಳಿದಂತೆ ನಾನೂ ಈ ವಿಷಯದ ಬಗೆಗೆ ಇನ್ನೂ ಮಾತನಾಡಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರು ಅರಿಯಬೇಕಾದುದೇನೆಂದರೆ, ಮಾನ್ಯ ಸಚಿವರ ಹೇಳಿಕೆಯಂತೆ ತಿದ್ದುಪಡಿಗಳನ್ನು ಮಂಡಿಸಿದವರೆಲ್ಲರೂ ಮಾತನಾಡಬೇಕೆಂದಿಲ್ಲ, ಹಾಗೂ ಅವಕಾಶ ನೀಡಬೇಕೆಂದೂ ಇಲ್ಲ.

**ಶ್ರೀ ನಜೀರುದ್ದೀನ್ ಅಹಮದ್ :** ಆದರೆ ತಿದ್ದುಪಡಿ ನಿಲುವಳಿಗಳನ್ನು ನೀಡಿದವರ ಬಗ್ಗೆ?

**ಮಾನ್ಯ ಉಪಸಭಾಧ್ಯಕ್ಷರು :** ಹಾಗಾದರೆ ಪ್ರತಿಯೊಬ್ಬ, ತಿದ್ದುಪಡಿಗಳನ್ನು ಮಂಡಿಸಿದ ಸದಸ್ಯನಿಗೆ

ಮಾತನಾಡಲು ಅವಕಾಶ ನೀಡಲೇಬೇಕೆಂಬುದು ಕಡ್ಡಾಯವಲ್ಲ. ಪೀಠವು ಈ ಬಗೆಗೆ ಸಾರಾಸಾರ ವಿಚಾರ ಮಾಡಿ ವಿಷಯದ ಬಗ್ಗೆ ಚರ್ಚೆಯಾಗಿದೆಯೆ ಇಲ್ಲವೊ ಎಂದು ನಿರ್ಣಯಿಸುತ್ತದೆ. ತಿದ್ದುಪಡಿ ಮಂಡಿಸಿದವರು ಅವಕಾಶಕ್ಕೆ ಒತ್ತಾಯ ಮಾಡದೆ ಇರಬಹುದು ಹಾಗೂ ಹಲವರು ಅಧಿಕವಾಗಿ ಒತ್ತಾಯಿಸಲೂಬಹುದು.

**ಶ್ರೀ ನಜೀರುದ್ದೀನ್ ಅಹಮದ್ :** ಸರ್, ಹಾಗಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಇದು ತಾವು ನಿರ್ಣಯಿಸುವ ವಿಷಯವಲ್ಲ. ನನಗೆ ತಿಳಿದಂತೆ ವಿಷಯದ ಬಗೆಗೆ ಸಾಕಷ್ಟು ಚರ್ಚೆಯಾಗಿದೆ.

**ಶ್ರೀ ಶ್ಯಾಮಾನಂದನ ಸಹಾಯ್ :** ಈ ತಿದ್ದುಪಡಿಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಎತ್ತಲಾಗಿದೆ. ನೀವು ಹೇಳಿದಂತೆ ಒಂದೇ ವಿಷಯವನ್ನು ವಿವಿಧ ತಿದ್ದುಪಡಿಗಳಲ್ಲಿ ಎತ್ತಿರದೆ, ಈ ತಿದ್ದುಪಡಿಗಳು ಹಲವಾರು ಚರ್ಚಿಸದೇ ಹೋದ ಅಂಶಗಳ ಬಗೆಗೆ ಇವೆ. ಇದೊಂದು ಮನವಿ. ಈಗ ನಾವು ಗ್ರಂಥಗಳಿಗೆ ಸಂಪ್ರದಾಯಗಳಿಗೆ ಹಾಗೂ ಪದ್ಧತಿಗಳಿಗೆ ತಿಲಾಂಜಲಿ ನೀಡಬೇಕು ಎಂಬುದನ್ನು ಆಖೈರಾಗಿ ನಿರ್ಧರಿಸಬೇಕಾಗಿದೆ. ಆದುದರಿಂದ ಈ ವಿಧಿಯ ಪ್ರಾಮುಖ್ಯತೆ ಇನ್ನೂ ಅಧಿಕವಾಗಿರುವುದರಿಂದ ಈ ವಿಧೇಯಕದ ಬಗೆಗೆ ಚರ್ಚೆಯಾಗಬೇಕೆಂದೇ ಕೋರಿಕೆ.

**ಮಾನ್ಯ ಉಪಸಭಾಧ್ಯಕ್ಷರು :** ಈ ವಿಷಯವನ್ನು ಈಗ ಪ್ರಸ್ತಾಪಿಸಿರುವುದರಿಂದ ಎರಡೂ ಭಾಗಗಳಲ್ಲಿ "ಅಪ್ರಸ್ತುತ" ಪದವನ್ನು ಸೇರ್ಪಡಿಸಬಹುದೆ ಎಂದೂ ಕಾನೂನು ಸಚಿವರನ್ನು ಕೇಳುವೆ.

**ಡಾ. ಅಂಬೇಡ್ಕರ್ :** ಅದು ಬೇರೆ ವಿಷಯ. ನಾನು ಬದಲಾಯಿಸಲು ಒಪ್ಪಲಾರೆ. ತಾವು ಅವಕಾಶ ನೀಡಿದ್ದಲ್ಲಿ ಅದನ್ನು ವಿವರಿಸುವೆ.

**ಪಂಡಿತ ಮಾಲವೀಯ :** ಸರ್, ಸದನದ ನಾಯಕರೇ ಇದ್ದಾರೆ. ಅವರಿಗೆ ನಾವು ಮನವಿ ಮಾಡಬಹುದೆ?

**ಮಾನ್ಯ ಉಪಸಭಾಧ್ಯಕ್ಷರು :** ಬೇಡ, ನನ್ನ ದೃಷ್ಟಿಯಲ್ಲಿ ಸಾಕಷ್ಟು ಚರ್ಚೆಯಗಿದೆ ಎಂದು ಹೇಳುವೆ. ಈಗ ಪ್ರಶ್ನೆ ಎಂದರೆ; ವಿಧೇಯಕವನ್ನು ಮತಕ್ಕೆ ಗುರಿಪಡಿಸುವುದು ಸದನದ ಒಪ್ಪಿಗೆಗೆ ಪರ ೬೩: ವಿರೋಧ ೩೪

| **ವಿಭಜನೆ ೩** | **ಪರ** | **೧೨.೪೫ ಮಧ್ಯಾಹ್ನ** |
|---|---|---|
| ಶ್ರೀ ಅಲಗೇಶನ್ | ಶ್ರೀ ಬಿ.ಕೆ. ದಾಸ | ಶ್ರೀ ಜಿ.ಎಸ್. ಗುಹಾ |
| ಶ್ರೀ ಅಂಬೇಡ್ಕರ್ | ಶ್ರೀ ರಾಜಧಾನಿ ದಾಸ | ಶ್ರೀ ಎಂ.ಎ. ಹಸನ್ |
| ಶ್ರೀ ಅನ್ಸಾರಿ | ದೇವಿ ಸಿಂಗ್ | ಡಾ. ಜೆ.ಎನ್. ಹಜಾರಿಕಾ |
| ಬಲದೇವ ಸಿಂಗ್ ಸರ್ದಾರ್ | ಶ್ರೀಮತಿ ದುರ್ಗಾ ಬಾಯಿ | ಶ್ರೀ ಎಂ. ಹಜಾರಿಕಾ |
| ಶ್ರೀ ಬರಮಾನ್ | ಶ್ರೀ ಗಾಡ್‌ಗೀಳ್ | ಹಿಮತ್ ಸಿಂಗ್ ಜೀ |
| ಶ್ರೀ ಭಾರತಿ | ಶ್ರೀ ಗಾಲಿಬ್ | ಮೇಜರ್ ಜನರಲ್ |
| ಶ್ರೀ ಭರೂಹ | ಶ್ರೀ ಫಿರೋಜ್ ಗಾಂಧೀ | ಶ್ರೀ ಐಯ್ಯುನಿ |
| ಶ್ರೀ ಬ್ರಜೇಶ್ವರ ಪ್ರಸಾದ್ | ಶ್ರೀ ಎಸ್.ಎಂ. ಘೋಷ್ | ಶ್ರೀ ಜಗಜೀವನ್ ರಾಮ್ |
| ಚೌಧರಿ ಶ್ರೀಮತಿ | ಶ್ರೀ ಗುಲೆ | ಶ್ರೀ ಎ.ವಿ. ಜೈನ್ |

| | | |
|---|---|---|
| ಕೈಮಾಲಾ | ಶ್ರೀ ಗೋಪಾಲಸ್ವಾಮಿ | ಶ್ರೀ ಜಾಜೂ |
| ಶ್ರೀ ಜಂಗಡೇ | ಮೋಯ್ದು ಮೌಲ್ವಿ | ಶ್ರೀ ಸತೀಶ ಚಂದ್ರ |
| ಶ್ರೀಮತಿ ಜಯಶ್ರೀ | ಶ್ರೀ ಜವಾಹರಲಾಲ ನೆಹರು | ಶರ್ಮ ಪಂಡಿತ್ ಚಂದ್ರ |
| ಶ್ರೀ ಕನಕ ಸಬಾಯ್ | ಶ್ರೀ ಒಬೇದುಲ್ಲಾ | ಶ್ರೀ ಚರಣ್ ಲಾಲ್ |
| ಡಾ. ಕೇಸ್ಕರ | ಶ್ರೀ ಡಿ.ಡಿ. ಪಂತ | ಶ್ರೀ ಎಸ್.ಎನ್. ಶುಕ್ಲಾ |
| ಶ್ರೀ ಟಿ.ಟಿ. ಕೃಷ್ಣಮಾಚಾರಿ | ಶ್ರೀ ಶಿವನ್ ಪಿಳ್ಳೈ | ಶ್ರೀ ಸಿದ್ದಾ |
| ಕುಂರ್ಝು ಪಂಡಿತ್ | ಶ್ರೀ ಪೂಣಚ್ಚ | ಶ್ರೀ ಸುಬ್ಬಯ್ಯ |
| ಶ್ರೀ ಲಕ್ಷ್ಮಣನ್ | ಶ್ರೀ ಪುಸ್ತಕೆ | ಡಾ. ವಿ. ಸುಬ್ರಮಣ್ಯಂ |
| ಶ್ರೀ ಮಿರ್ಜಾ | ಶ್ರೀ ರಾಜಾಬಹದ್ದೂರ್ | ಶ್ರೀ ವೆಂಕಟರಾಮನ್ |

**ವಿರೋಧ**

| | | |
|---|---|---|
| ಅಚಿಂತರಂಲಾಲ | ಸರ್ದಾರ್‌ಹುಕುಮ್ ಸಿಂಗ್ | ಶ್ರೀ ರಾವ್ರತ್ |
| ಎಮ್.ಬಿ.ಭಾರ್ಗವ ಪಂಡಿತ್ | ಶ್ರೀ ಇಂದ್ರ ವಿದ್ಯಾವಾಚಸ್ಪತಿ | ಶ್ರೀ ಶ್ಯಾಮಾನಂದನ ಸಹಾಯ್ |
| ಭಾರ್ಗವ ಪಂಡಿತ್ | ಶ್ರೀ ಝುಂಝುನ್ ವಾಲಾ | ಪ್ರೋ. ಕೆ.ಟಿ. ಷಹಾ |
| ಠಾಕೂರ್ ದಾಸ್ | ಮೈತ್ರ ಪಂಡಿತ್ | ಪಂಡಿತ್ ಬಾಲಕೃಷ್ಣ ಶರ್ಮಾ |
| ಶ್ರೀ ಭಟ್ | ಮಾಲವೀಯ ಪಂಡಿತ್ | ಶ್ರೀ ಎ.ಸಿ. ಶುಕ್ಲಾ |
| ಶ್ರೀ ಚಂದ್ರಿಕಾ ರಾಮ್ | ಸರ್ದಾರ್ ಬಿ.ಎಸ್. ಮಾನ್ | ಎ.ಪಿ. ಸಿಂಗ್ ಕ್ಯಾಪ್ಟನ್ |
| ಶ್ರೀ ನಂದ ಕಿಶೋರ್ ದಾಸ್ | ಶ್ರೀ ನಜಿರುದ್ದೀನ್ ಅಹಮದ್ | ಶ್ರೀ ಎನ್. ಸ್ನಾತಕ್ |
| ಶ್ರೀ ಸಾರಂಗಧರ್ ದಾಸ್ | ಶ್ರೀ ಓರಾನ್ | ಶ್ರೀ ಸೋಂದಿ |
| ಶ್ರೀ ಎಸ್.ಎನ್. ದಾಸ್ | ಶ್ರೀ ಪನ್ನಾಲಾಲ್ ಬನ್ಸಿಲಾಲ್ | ಡಾ. ಠೇಕ್ ಚಂದ್ರ ಶಿ |
| ಧೋಲಕಿಯಾ | ಬಾಬು ರಾಮನಾರಾಯಣ ಸಿಂಗ್ | ಶ್ರೀ ವಿ.ಬಿ. ವೈದ್ಯ |
| ಶ್ರೀ ವಿ.ಜೆ. ಗುಪ್ತಾ | ಛ. ರಣಬೀರ್ ಸಿಂಗ್ | ಪ್ರೊ. ಯಶವಂತ ರಾಯ್ |

*__ಡಾ. ಅಂಬೇಡ್ಕರ್ :__ ಈ ಮುನ್ನ ನಾನು ಮಧ್ಯೆ ಪ್ರವೇಶ ಮಾಡಿದಾಗಲೇ ನಾನು ಸಂಪ್ರದಾಯಗಳ ಪಾತ್ರ ನಾಲ್ಕನೆಯ ಕಲಮಿಗೆ ಸಂಬಂಧಿಸಿದ್ದನ್ನು ವಿವರಿಸಿದ್ದೆ. ಆಗ ನಾನು ಹೇಳಿದ್ದೇನೆಂದರೆ ನಾಲ್ಕನೆಯ ವಿಧಿಗೆ ಸಂಬಂಧಿಸಿದಂತೆ ಅದು ಯಾವ ಸಂಪ್ರದಾಯಗಳನ್ನು ಪರಿಗಣಿಸುವುದಿಲ್ಲ ಎಂದು ಹೇಳಿಲ್ಲ. ನಾಲ್ಕನೆ ಕಲಮಿಗೆ ನನ್ನ ತಿದ್ದುಪಡಿ ಎಂದರೆ "ಈ ಕೋಡಿನಲ್ಲಿ ನಿಖರವಾಗಿ ಸೂಚಿಸಿದಂತೆ ಅಂದರೆ ಸಂಪತ್ತು ಯಾವುದೇ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಬರಲು ನಿರ್ಧರಿಸಿದಲ್ಲಿ ಅದು ಸಂಸತ್ತಿಗೆ ಸೇರಿದ ವಿಷಯ. ಅದು ವಿಧಿಯ ಬಗೆಗೆ ನಿರ್ಣಯಿಸಬಹುದು. ಆದುದರಿಂದ ಈ ಕಲಮಿನಲ್ಲಿ ಯಾವುದೇ ಸಂಪ್ರದಾಯಗಳು ಮುಂದುವರಿಯಲು ಅವಕಾಶವೇ ಇಲ್ಲ ಎಂದು ಸಂಸದರು ಹೇಳಲಾಗದು. ಈ ಶಾಸನದಲ್ಲಿ ನಾನು ಸಂಪ್ರದಾಯದ ಬಗೆಗೆ ಹೇಳಿರುವುದರ ಬಗ್ಗೆ ತಪ್ಪು ಕಲ್ಪನೆ ಉಂಟಾಗಿದೆ. ನಾನು ಈಗಾಗಲೇ ಸ್ಪಷ್ಟ ಪಡಿಸಿದಂತೆ ಅದು ಸಂಸತ್ತಿಗೆ ಸೇರಿದ ವಿಷಯ. ಆದುದರಿಂದ ಯಾವುದಾದರೂ

* ಸಂ. ಚ. ಸಂಪುಟ XV ಭಾಗ II ೨೧ನೆಯ ಸೆಪ್ಟಂಬರ್ ೧೯೫೧ ಪು ೩೧೮೩–೮೮

ಸಂಪ್ರದಾಯ ಮುಂದುವರಿಯಬೇಕೆಂದಿದ್ದಲ್ಲಿ ಸಂಸದರು, ಸಂಬಂಧಿಸಿದ ವಿಧಿಯು ಚರ್ಚೆಗೆ ಬಂದಾಗ ಪ್ರಸ್ತಾಪಿಸಬಹುದು. ಆಗ ನಾನು ನನ್ನ ಅಭಿಪ್ರಾಯವನ್ನು ಹೇಳಬಹುದು. ಆದುದರಿಂದ ನಾಲ್ಕನೆಯ ಕಲಮನ್ನು ನಾನು ಸೂಚಿಸಿದಂತೆಯೆ ಅಂಗೀಕರಿಸಬಹುದೆಂದೆ ಭರವಸೆ ನೀಡುವೆ.

ಮತ್ತೊಂದು ವಿಷಯದ ಬಗ್ಗೆ ಪ್ರಸ್ತಾಪಿಸಬಯಸುವೆ. ಅದೇನೆಂದರೆ ನನ್ನ ಮಿತ್ರ ಶ್ರೀ ಥೆಬಲೇ ಓರಗಾವಂ ಅವರು ಒಂದು ಪರಿಶಿಷ್ಟ ಪಂಗಡದಿಂದ ಬಂದಿದ್ದಾರೆ. ಅವರು ಉಪಕಲಮು (೨) ಕಲಮು ೨ನ್ನು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ. ಈ ಕಲಮನ್ನು ಈಗಾಗಲೇ ಅಂಗೀಕರಿಸಲಾಗಿದೆ. ಇದರಲ್ಲಿ ಈ ಕಲಮು ಯಾರಿಗೆ ಅನ್ವಯಿಸಲಾಗದು ಎಂಬುದನ್ನು ಹೇಳಲಾಗಿದೆ. ಈ ಬಗ್ಗೆ ನನ್ನ ಹೇಳಿಕೆ ಎಂದರೆ ವ್ಯಕ್ತಿಗಳು ಯಾವುದೇ ಒಂದು ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಸಂಪೂರ್ಣವಾಗಿ ಹಿಂದೂಗಳಾಗಿರದೆ ಇದ್ದಲ್ಲಿ ಅಂತಹವರಿಗೆ ಹಿಂದೂ ಶಾಸನವೇ ಅನ್ವಯಿಸಲಾರದು. ಹಿಂದೂಗಳಿಗೆ ಈ ಕೋಡನ್ನು ಸಂಪೂರ್ಣವಾಗಿ ಹಿಂದೂ ಶಾಸನ ಅನ್ವಯಿಸಲಾಗುವುದೊ ಅಷ್ಟರ ಮಟ್ಟಿಗೆ ಈ ಶಾಸನವನ್ನು ಅನ್ವಯಿಸಲಾಗುವುದು. ಆದುದರಿಂದ ಈ ಶಾಸನದಿಂದ ಯಾರೂ ಭಯಪಡಬೇಕಾಗಿಲ್ಲ. ಅದರಲ್ಲಿಯೂ ಪರಿಶಿಷ್ಟ ಪಂಗಡದವರು ಯಾವ ಭೀತಿಯನ್ನೂ ಹೊಂದುವ ಅವಕಾಶ ಇಲ್ಲ. ಅವರು ತಮ್ಮ ಪಂಗಡಗಳ ವಿವಾಹ ಹಾಗೂ ವಿಚ್ಛೇದನೆಗಳ ಸಂಪ್ರದಾಯಗಳನ್ನೇ ಮುಂದುವರಿಸಲು ಆಸ್ಪದವಿದೆ. ಅವರ ಹಿತಾಸಕ್ತಿಯನ್ನು ಕಾಪಾಡಲಾಗುವುದು. ಆದರೆ ಎಲ್ಲಿ ಅವರು ಹಿಂದೂ ಶಾಸನಗಳನ್ನು ಅನ್ವಯಿಸುವರೊ ಅಲ್ಲಿ ಮಾತ್ರ ಈ ಶಾಸನವನ್ನು ಅನ್ವಯಿಸಲಾಗುವುದು. ನಾವು ಸಾಕಷ್ಟು ಜಾಗರೂಕತೆಯಿಂದ ಉಪಕಲಮು (೨)ರಲ್ಲಿ ಹಿಂದೂ ಶಾಸನ ಭಾಗ ೨ನ್ನು ಸಂಪೂರ್ಣವಾಗಿ ಅನ್ವಯಿಸದಂತೆ ಎಚ್ಚರಿಕೆವಹಿಸಿದ್ದೇವೆ. ಅವರಿಗೆ ತಮ್ಮ ಆಚಾರ ವಿಚಾರಗಳನ್ನೇ ಮುಂದುವರಿಸಿಕೊಂಡು ಹೋಗುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಮತ್ತೊಂದು ವಿಷಯದ ಬಗೆಗೆ ಪ್ರಸ್ತಾಪಿಸಬೇಕೆಂದಿದ್ದೇನೆ. ಅದೇನೆಂದರೆ ನನ್ನ ಕಿರಿಯ ಮಿತ್ರರಾದ ಡಾ. ಪಾಂಡೆ ಹಾಗೂ ಮಿತ್ರ ಟಿ.ಎನ್. ಸಿಂಗ್‌ರು ಪ್ರಸ್ತಾಪಿಸಿದ ವಿಷಯಗಳು. ಅವರು ಖಚಿತವಾದ ರೀತಿಯಲ್ಲಿ, ಇಂದು ಜಾರಿಯಲ್ಲಿರುವ ಸಂಪ್ರದಾಯಗಳನ್ನು ರಕ್ಷಿಸಬೇಕು. ಅವುಗಳನ್ನು ರದ್ದುಮಾಡಬಾರದೆಂದೇ ಆಗ್ರಹಿಸಿದ್ದಾರೆ. ನನ್ನ ಮಿತ್ರರಾದ ಪಾಂಡೆಯವರು, ಯುವಕರು ಹಾಗೂ ನೂತನ ಪದವೀಧರರು. ಇನ್ನೂ ಅನೇಕ ವಿಷಯಗಳನ್ನು ಅರಿಯಬೇಕಾಗಿದೆ. ಅದರಲ್ಲಿಯೂ ಸಂಸತ್ತಿನ ಕಾರ್ಯಕಲಾಪಗಳ ಬಗೆಗೆ......

**ಓರ್ವ ಸದಸ್ಯರು :** ಅವರು ಪ್ರಾಧ್ಯಾಪಕರಿದ್ದಾರೆ ಹಾಗೂ ಕಾರ್ಯದರ್ಶಿ.

**ಡಾ. ಅಂಬೇಡ್ಕರ್ :** ಕ್ಷಮಿಸಿ, ಅವರಿಗೆ ಹಲವು ವಿಷಯಗಳು ಇನ್ನೂ ಗೊತ್ತಿಲ್ಲ. ಜನ ಈ ದೇಶದಲ್ಲಿಯ ಸಂಪ್ರದಾಯಗಳ ಬಗೆಗೆ ಮಾತನಾಡುತ್ತಾರೆ. ಆದರೆ ಸಂಪ್ರದಾಯಗಳು ಹೇಗೆ ಬೆಳೆದವು? ಸ್ಮೃತಿಕಾರರು ಸಂಪ್ರದಾಯಗಳನ್ನು ಬೆಳೆಯಲು ಏಕೆ ಬಿಟ್ಟರು? ಈ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆಯಬೇಕಾಗಿದೆ. ಈ ದೇಶಕ್ಕೆ ಸಂಬಂಧಿಸಿದಂತೆ ಸಂಸತ್ತು ಇರಲೇ ಇಲ್ಲ. ಜನರು ಒಂದೆಡೆ ಸೇರಿ ತಮ್ಮ ಸಾಮಾಜಿಕ ಕಟ್ಟಳೆಗಳಿಗೆ ಶಾಸನ ರೂಪವನ್ನು ನೀಡಿದ ಪ್ರಸಂಗಗಳೇ ಇಲ್ಲ. (ಅಡ್ಡಿ) ನಾವು ಉತ್ತಮರಾದವರೊ ಇಲ್ಲವೊ ಅದನ್ನು ನಾನು ಅರಿಯೆ. ಹೀಗಾಗಿ ನಮ್ಮ ದೇಶದಲ್ಲಿ, ವಿಶ್ವದ ಯಾವುದೇ ದೇಶಗಳಲ್ಲಿ ಕಾಣಲಾಗದ ಕಠಿಣ ಸಂಪ್ರದಾಯಗಳು ಉದಯಗೊಂಡವು ಎಂದೇ ಹೇಳಬಹುದು.

**ಶ್ರೀ ಶ್ಯಾಮನಂದನ ಸಹಾಯ್ :** ಇಂಗ್ಲೆಂಡಿನಲ್ಲಿ ಸಂಸತ್ತಿದ್ದರೂ ಅಲ್ಲಿರುವ ಸಾಮಾನ್ಯ ಶಾಸನ ಅಂದರೆ ಕಾಮನ್ ಲಾ ಇಂದಿಗೂ ಜಾರಿಯಲ್ಲಿದೆ.

**ಡಾ. ಅಂಬೇಡ್ಕರ್ :** ಅವರು ನಮಗಿಂತ ಕೆಲವೊಂದು ವಿಷಯಗಳನ್ನು ಅಧಿಕವಾಗಿ ಬಲ್ಲವರು ಎಂದು ನನಗೆ ತಿಳಿದಿದೆ.

**ಶ್ರೀ ಶ್ಯಾಮಾನಂದನ ಸಹಾಯ್ :** ಡಾ. ಅಂಬೇಡ್ಕರರೇ ನಾನು ನಿಮ್ಮನ್ನು ಸರ್ವಾಂತರ್ಯಾಮಿ ಎಂದು ಪರಿಗಣಿಸಿಲ್ಲ ಹಾಗೂ ಎಲ್ಲವನ್ನೂ ಬಲ್ಲ ಸರ್ವಜ್ಞನೆಂದೂ ಭಾವಿಸಿಲ್ಲ. ಆದರೆ ನೀವು ಹೇಳಿದಂತೆ ನನಗೆ ಕೆಲವು ವಿಷಯಗಳ ಬಗ್ಗೆ ಮಾಹಿತಿ ಇರಬಹುದು.....

**ಡಾ. ಅಂಬೇಡ್ಕರ್ :** ನಾನು ತಮ್ಮ ಹೇಳಿಕೆಯನ್ನು ಒಪ್ಪುವೆ. ಆದರೆ ವಿಷಯಗಳ ಬಗೆಗೆ ನನ್ನ ದೃಷ್ಟಿಕೋನವೆಂದರೆ...

**ಶ್ರೀ ಭಟ್ :** ನಾನು ಡಾಕ್ಟರರಿಗೆ, ಪರಿಷತ್ ಎಂಬ ಪದ ಹೇಗೆ ಜಾರಿಗೆ ಬಂದಿದೆ ಎಂಬುದನ್ನು ಸ್ಮರಿಸಬಯಸುವೆ. ಏಕೆಂದರೆ ಈ ಪದದಿಂದಲೇ ರಾಜ್ಯ ಪರಿಷತ್ ಪದ ಜಾರಿಯಲ್ಲಿ ಬಂದಿದೆ.

**ಡಾ. ಅಂಬೇಡ್ಕರ್ :** ಆ ಪರಿಷತ್‌ನ ವಿಷಯ ಬೇರೆ.

**ಶ್ರೀ ಭಟ್ :** ಪರಿಷದ್ ಬೇರೆ ಏನೂ ಆಗಿರದೇ ಪರಿಷತ್ ಪದದಿಂದಲೇ ಉದ್ಭವಿಸಿದೆ

**ಡಾ. ಅಂಬೇಡ್ಕರ್ :** ಪರಿಷತ್ ಒಂದು ಮಂಡಳಿಯೆ ಹೊರತು ಸಂಸತ್ ಅಲ್ಲ, ಅದೆಂದೂ ಸಂಸತ್ತಾಗಿರಲಿಲ್ಲ ಹೀಗಾಗಿ ತಮ್ಮ ಜೀವನವನ್ನು ಕ್ರಮಬದ್ಧಗೊಳಿಸಲು ಉಳಿದ ಮಾರ್ಗವೆಂದರೆ ಸಂಪ್ರದಾಯಗಳು, ಹೀಗಾಗಿ ಸಂಸತ್ತಿಲ್ಲದೆ ಜನತೆಯು ಅದಕ್ಕೆ ಮೊರೆಹೊಕ್ಕರು. ಅಲ್ಲದೆ ಶಾಸಕಾಂಗವೇ ಇರಲಿಲ್ಲ. ಆದರೆ ಈಗ ನಮಗೆ ಸಂಸತ್ತು ಇದೆ. ಅದರ ಕಾರ್ಯವೇ ಕಾನೂನುಗಳನ್ನು ರಚಿಸುವುದು. ಕಾನೂನಿನೊಂದಿಗೆ ಸಾಂಪ್ರದಾಯಿಕ ಶಾಸನಗಳ ಬಗ್ಗೆ ಸಂಸತ್ತು ಹಸ್ತಕ್ಷೇಪ ಮಾಡಬಹುದೆ ಎಂಬುದನ್ನು ನಾವು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಎಲ್ಲಿ ಸಂಪ್ರದಾಯಗಳು, ಎರಡನೆಯ ಕಲಮಿನಲ್ಲಿ ಸೂಚಿಸಿದಂತೆ ಬೆಳೆದು ಬಂದಿದೆಯೊ ಅವು ಮುಂದುವರಿಯುವುದು ಬೇರೆ ವಿಷಯ. ಆದರೆ ಸಂಪ್ರದಾಯಗಳನ್ನೆ ಬದಲಾಯಿಸಬಾರದು ಎಂದರೆ ಅದು ಸಂಸತ್ತಿನ ಅಧಿಕಾರವನ್ನು ತೊಡೆದುಹಾಕಿದಂತೆಯೆ, ಅದನ್ನು ಸಂಸತ್ತು ಅಂಗೀಕರಿಸುತ್ತದೆ ಎಂದು ನಾನು ಭಾವಿಸಲಾರೆ.

ಈ ಬಗೆಗೆ ನನಗೆ ಅನುಮಾನವಿದೆ. ಏಕೆಂದರೆ ಸಂಸತ್ತು ಮುಂದುವರಿದು ಸಾಮಾಜಿಕ ಜೀವನವನ್ನು ಬದಲಾಯಿಸುವ ಒಂದು ಉಪಯುಕ್ತ ಉಪಕರಣವಾಗಿದೆ. ಆದರೆ ಸರ್ವಶ್ರೀ ಪಾಂಡೆ ಹಾಗೂ ಟಿ.ಎನ್.ಸಿಂಗ್ ಅವರ ಸೂಚನೆಯಂತೆ, ಸಂಸತ್ತಿಗೆ ಸಾಂಪ್ರದಾಯಿಕ ಕಾನೂನುಗಳ ಮೇಲೆ ಅಧಿಕಾರ ವ್ಯಾಪ್ತಿಯೇ ಇಲ್ಲವೆಂದರೆ....

**ಮಾನ್ಯ ಉಪಸಭಾಧ್ಯಕ್ಷರು :** ಕಾನೂನು ಸಚಿವರು ಅಧಿಕ ಸಮಯ ತೆಗೆದುಕೊಳ್ಳುವರೆ?

**ಡಾ. ಅಂಬೇಡ್ಕರ್ :** ನಾನು ಸದ್ಯದಲ್ಲಿಯೆ ಮುಕ್ತಾಯ ಮಾಡುವೆ.

**ಶ್ರೀ ನಜೀರುದ್ದೀನ್ ಅಹಮದ್ :** ನಮ್ಮ ಅಂಶಗಳನ್ನು ಮಾನ್ಯ ಸಚಿವರಿಂದ ಪರಿಗಣಿಸಲಾಗಿಲ್ಲ. ಹೀಗಾದರೆ ನಾವು ಮಂಡಿಸಿದ ತಿದ್ದುಪಡಿಗಳ ಗತಿ ಏನು? ಅವನ್ನು ನಿರಾಕರಿಸಿದಂತೆಯೆ.....

**ಶ್ರೀ ಟಿ.ಎನ್. ಸಿಂಗ್ :** ವೈಯಕ್ತಿಕ ಮಾಹಿತಿಗೆಂದೇ ಹೇಳುತ್ತಿರುವೆ. ಕಾನೂನು ಸಚಿವರು ನಾನು ಪ್ರತಿಯೊಂದು ಸಂಪ್ರದಾಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕೆಂದೇ ಹೇಳಿದ್ದೇನೆ ಎಂದಿದ್ದಾರೆ. ಬಹುಶಃ ಅವರು ನನ್ನ ಹಿಂದಿ ಭಾಷಣವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ.....

**ಡಾ. ಅಂಬೇಡ್ಕರ್ :** ಅದು ಇರಲೂ ಬಹುದು.

**ಶ್ರೀ ಟಿ.ಎನ್. ಸಿಂಗ್ :** ನಾನು ಹೇಳಿದ್ದೇನೆಂದರೆ ಎಲ್ಲಾ ಸಂಪ್ರದಾಯಗಳನ್ನು ಲಘುವಾಗಿ ಪರಿಗಣಿಸಿ,

ಕಾನೂನಿನಿಂದ ಕಿತ್ತೊಗೆಯಬಾರದು ನಾನು...

**ಡಾ. ಅಂಬೇಡ್ಕರ್ :** ಅದರ ಬಗೆಗೆ ನಾನು ಸಹಮತನಿರುವೆ.

**ಶ್ರೀ ಟಿ.ಎನ್. ಸಿಂಗ್ :** ಕಾನೂನು ಸಚಿವರಲ್ಲಿ ಸಂಪ್ರದಾಯಗಳ ಸಂಪೂರ್ಣ ಪಟ್ಟಿ ಏನಾದರೂ ಇದೆಯೆ ಎಂದು ತಿಳಿಯಬಯಸುವೆ. ಏಕೆಂದರೆ ಎಲ್ಲಾ ಸಂಪ್ರದಾಯಗಳನ್ನೂ ಅರಿಯದೇ, ದೇಶದಲ್ಲಿನ ಸಂಪ್ರದಾಯಗಳನ್ನು ತೊಡೆದುಹಾಕುವುದು ಸರಿ ಎಂದು ತೋರದು. ಇದು ನಾನು ಹೇಳಿದ ವಿಷಯ.

**ಡಾ. ಸಿ.ಡಿ. ಪಾಂಡೆ :** ಸರ್. ಒಂದು ವಿಷಯವನ್ನು ಹೇಳಲಾಗಿದೆ.

**ಡಾ. ಅಂಬೇಡ್ಕರ್ :** ತಾವು ನನ್ನ ಕೊಠಡಿಗೆ ಬಂದು ಹೇಳಬಹುದು.

**ಡಾ. ಸಿ.ಡಿ. ಪಾಂಡೆ :** ಡಾ. ಅಂಬೇಡ್ಕರರು ಇದನ್ನು ಸಂಸತ್ತಿನಲ್ಲಿಯೇ ಹೇಳಿರುವುದರಿಂದ ಅದನ್ನು ಸಂಸತ್ತಿನಲ್ಲಿಯೇ ವಿವರಿಸಬೇಕು. ನಾನು ಸಾಂಪ್ರದಾಯಿಕ ಶಾಸನಗಳ ಬಗೆಗೆ ಶಾಸನ ರಚಿಸುವ ಅಧಿಕಾರ ಸಂಸತ್ತಿಗಿಲ್ಲ ಎಂದು ಹೇಳಿಲ್ಲ. ನಾನು ಅವುಗಳ ಬಗೆಗೆ ಹಸ್ತಕ್ಷೇಪ ಮಾಡಬಾರದೆಂದೆ ಸಂಸತ್ತಿಗೆ ಮನವಿ ಮಾಡಿಕೊಂಡಿರುವೆ. ಆದುದರಿಂದ ಕಾನೂನು ಸಚಿವರು ಅದನ್ನು ಪರಿಹರಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಕಲಮನ್ನು ಹಾಗೂ ತಿದ್ದುಪಡಿಗಳನ್ನು ಕ್ರಮಬದ್ಧವಾಗಿ ಇರಿಸುವೆ.

**ಶ್ರೀ ಶ್ಯಾಮನಂದನ ಸಹಾಯ್ :** ತಾವು ಅವನ್ನು ಕ್ರಮವಾಗಿ ಇಡುವ ಮುಂಚೆ ನಾನು ೧–೧೫ನ್ನು ಈಗಾಗಲೇ ಮಂಡಿಸಿರುವೆ. ನಾನು ಈಗಾಗಲೇ ಹೇಳಿದಂತೆ ಈ ಕಲಮು ಅತ್ಯಂತ ಪ್ರಮುಖವಾದದ್ದು. ಏಕೆಂದರೆ ಗ್ರಂಥಗಳು ಹಿಂದೂ ಶಾಸನದ ಅರ್ಥಗಳು, ಸಂಪ್ರದಾಯಗಳನ್ನು ಕೈಬಿಡಲಾಗುವುದು. ಆದುದರಿಂದ ನಾವು ಮಂಡಿಸಿದ ತಿದ್ದುಪಡಿಗಳ ಬಗೆಗೆ ವಿಭಜನೆ ಕೋರುವೆ. ಅದು ಅಧಿಕ ಸಮಯ ತೆಗೆದುಕೊಳ್ಳುವುದರಿಂದ ಈ ನಿಲುವಳಿಯನ್ನು ಮತ್ತೊಂದು ದಿನ ಕೈಗೆತ್ತಿಕೊಳ್ಳಬಹುದು.

**ಹಲವಾರು ಸದಸ್ಯರು :** ಹೌದು, ಹೌದು.

**ಹಲವರು :** ಬೇಡ, ಬೇಡ.

**ಡಾ. ಅಂಬೇಡ್ಕರ್ :** ಅದು ಐದು ನಿಮಿಷದ ಕಾರ್ಯ.

**ಹಲವರು :** ಅಲ್ಲ, ಅಲ್ಲ.

**ಕ್ಯಾಪ್ಟನ್ ಎ.ಪಿ. ಸಿಂಗ್ :** ಹಲವಾರು ತಿದ್ದುಪಡಿಗಳಿರುವುದರಿಂದ ಕನಿಷ್ಠ ನಾಲ್ಕು ತಾಸು ಬೇಕು (ಗಲಾಟೆ).

**ಮಾನ್ಯ ಉಪಸಭಾಧ್ಯಕ್ಷರು :** ಆರ್ಡರ್, ಆರ್ಡರ್, ಹೀಗೆ ಮಾಡಿದರೆ ಏನೂ ಲಾಭವಿಲ್ಲ.

**ಶ್ರೀ ಸೋಂಧಿ** (ಪಂಜಾಬ್) : ಸರ್, ವಿಭಜನೆಗೆ ಅವಕಾಶ ನೀಡಿ.

**ಶ್ರೀ ನಜೀರುದ್ದೀನ್ ಅಹಮದ್ :** ನಾವು ಪ್ರತಿಯೊಂದು ಹಂತಕ್ಕೂ ವಿಭಜನೆ ಬೇಡುವೆವು. ನಾವು ನ್ಯಾಯಯುಕ್ತವಾಗಿ ನಡೆಯಬೇಕು. ದಬ್ಬಾಳಿಕೆಯಿಂದಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರಿಗೆ ಖಂಡಿತವಾಗಿ ನ್ಯಾಯ ದೊರೆಯುವುದು. ಆದರೆ.... ಪ್ರಶ್ನೆ ಏನೆಂದರೆ ಸದನ ವಿಷಯವನ್ನು ಸಂಪೂರ್ಣಗೊಳಿಸಬೇಕೆಂದಿದೆ. ಆದುದರಿಂದ ಚರ್ಚೆ ಮುಕ್ತಾಯಗೊಂಡಿದೆ. ಕಾನೂನು ಸಚಿವರು ಉತ್ತರಿಸಿದ್ದಾರೆ.

**ಪಂಡಿತ ಮಾಲವೀಯ :** ಚರ್ಚೆ ಆರಂಭವಾದ ಐದು ನಿಮಿಷದಲ್ಲಿಯೇ ತಾವು ನಿಲುವಳಿಯನ್ನು ಮಂಡಿಸಿದ್ದರೂ ಸಭೆ ತನ್ನ ಒಪ್ಪಿಗೆ ನೀಡುತ್ತಿತ್ತು. ಅದು ಬಹುಮತದ ದಬ್ಬಾಳಿಕೆ ನಮ್ಮ ಮೇಲೆ ಹೇರಿದಂತೆ (ಗಲಾಟೆ).

**ಶ್ರೀಮತಿ ದುರ್ಗಾಬಾಯಿ** (ಮದ್ರಾಸು) : ಇದು ಅಲ್ಪಮತದ ದಬ್ಬಾಳಿಕೆಯೇ ಹೊರತು ಬಹು ಮತದವಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಮಹಿಳೆಯರ ದಬ್ಬಾಳಿಕೆ.

**ರೈಲ್ವೆ ಮತ್ತು ಸಾರಿಗೆ ರಾಜ್ಯ ಸಚಿವರು (ಶ್ರೀ ಸಂತಾನಂ) :** ಸನ್ಮಾನ್ಯ ಸದಸ್ಯರು ಪದವನ್ನು ವಾಪಸು ಪಡೆಯಬೇಕು. ಅದು ಸಂಸತ್ತಿಗೆ ಅಪಮಾನಕರವಾಗಿದೆ.

**ಹಲವಾರು ಸದಸ್ಯರು :** ಇಲ್ಲ, ಇಲ್ಲ ಅಪಮಾನವಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು :** ಅದರ ಬಗೆಗೆ ಭಾವೋದ್ವೇಗರಾಗಬೇಕಿಲ್ಲ. ಇವೆಲ್ಲಾ ಸಾಮಾನ್ಯವಾಗಿ ಸಂಸತ್ತಿನಲ್ಲಿ ಜರುಗುವಂಥ ವಿಷಯಗಳೇ, ಆದರೂ ನಾವು ಸಮಾಧಾನದಿಂದ ಇರಬೇಕು. ಒಟ್ಟಾರೆ ಹನ್ನೊಂದು ತಿದ್ದುಪಡಿಗಳಿವೆ.

**ಶ್ರೀ ಶ್ಯಾಮಾನಂದನ ಸಹಾಯ್ :** ಕನಿಷ್ಠ ಒಂದು ತಾಸುಬೇಕಾಗಬಹುದು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಜರುಗಿರುವುದನ್ನು ನೋಡಿದ ಮೇಲೆ ನಾವು ಆದಷ್ಟು ಶೀಘ್ರವಾಗಿ ಮುಗಿಸಲು ಪ್ರಯತ್ನಿಸೋಣ.

**ಹಲವು ಸದಸ್ಯರು :** ಇಲ್ಲ, ಇಲ್ಲ.

೨೪ ಸೆಪ್ಟೆಂಬರ್ ೧೯೫೧ ಸೋಮವಾರ ಬೆಳಗಿನ ೮.೩೦ ಗಂಟೆಗೆ ಸದನವನ್ನು ಮುಂದೂಡಲಾಯಿತು.

## **ಹಿಂದೂ ಮಸೂದೆ –** ಮುಂದುವರಿಕೆ

ಕಲಮು ೪ – (ಸಂಹಿತೆಯ ಸರ್ವಾಂಗೀಣ ಪರಿಣಾಮ)

**ಕಾನೂನು ಸಚಿವ ಡಾ. ಅಂಬೇಡ್ಕರ್ :** ಕಲಮು ೪ರ ಬಗೆಗೆ ನಾನು ಹೇಳುವುದೇನೆಂದರೆ ಅದನ್ನು ಸದನದ ಅಂಗೀಕಾರಕ್ಕೆ ಮಂಡಿಸಿ, ಮುಂದಿನ ಕಲಾಪಗಳಿಗೆ ಎಡೆಮಾಡಿಕೊಡಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಮಾನ್ಯ ಸಚಿವರು, ವಿಧೇಯಕದ ಒಂದು ಭಾಗಕ್ಕೆ ಹೆಚ್ಚು ಒಲವನ್ನು ತೋರಿದ್ದಾರೆ. ಈಗಾಗಲೇ ಇದರ ಬಗೆಗೆ ಚರ್ಚೆಯಾಗಿದ್ದು, ಅದಕ್ಕೆ ಉತ್ತರವನ್ನೂ ನೀಡಲಾಗಿದೆ. ಅಂದೇ ನಾನು ಸದನದ ಒಪ್ಪಿಗೆಗೆ ಮಂಡಿಸಬೇಕೆಂದಿದ್ದೆ. ಆಗ ಹಲವರ ಹೇಳಿಕೆಯಂತೆ ಅದು ಅಧಿಕ ಸಮಯ ತೆಗೆದುಕೊಳ್ಳಬಹುದು ಎಂದರಲ್ಲದೆ, ಆಗ ಸಮಯ ೧.೧೫ ಗಂಟೆಯಾಗಿದ್ದುದರಿಂದ ಸದನವನ್ನು ಮುಂದೂಡಬೇಕಾಯಿತು. ಈಗ ಆ ಕಾರ್ಯವನ್ನು ಪೂರ್ಣಗೊಳಿಸೋಣ.

ಈಗ ನಾನು ಪಂಡಿತ ಠಾಕೂರದಾಸ ಭಾರ್ಗವರ ತಿದ್ದುಪಡಿಯನ್ನು ಮತಕ್ಕೆ ಹಾಕುವೆ ಪ್ರಶ್ನೆ ಎಂದರೆ :

ನಾಲ್ಕನೆಯ ಕಲಮಿಗೆ ಈ ಕೆಳಕಂಡದ್ದನ್ನು ಸೇರ್ಪಡಿಸಬೇಕು.

"೪ ಯಾವುದೇ ಗ್ರಂಥ, ಹಿಂದೂ ಶಾಸನದ ಅರ್ಥ ಅಥವಾ ಯಾವುದೇ ಸಂಪ್ರದಾಯ ಹಾಗೂ ನಡವಳಿಕೆಗಳು, ಈ ಶಾಸನ ಜಾರಿಗೆ ಬರುವ ಮುಂಚೆ ಜಾರಿಯಲ್ಲಿದ್ದವೊ ಅವು ಈ ಕೋಡಿನಲ್ಲಿ ಹೇಳಲಾಗದ ವಿಷಯಗಳ ಬಗ್ಗೆ ಪರಿಣಾಮಕಾರಿಯಾಗಿರುತ್ತವೆ."

ನಿಲುವನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ತಿದ್ದುಪಡಿ ೪೪೯ ಕೈಗೆತ್ತಿಕೊಳ್ಳೋಣ.

**ಪಂಡಿತ ಠಾಕೂರ ದಾಸ ಭಾರ್ಗವ :** ನಾನು ಆ ತಿದ್ದುಪಡಿಯನ್ನು ವಾಪಸು ಪಡೆಯುವೆ.
ಅನುಮತಿಯಂತೆ ತಿದ್ದುಪಡಿಯನ್ನು ವಾಪಸು ಪಡೆಯಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ ಡಾ. ಅಂಬೇಡ್ಕರರು ಸಲ್ಲಿಸಿದ ಕಲಮು ೪ ಭಾಗ (ಎ) ತಿದ್ದುಪಡಿಯಲ್ಲಿಯ ಪದಗಳಾದ "ಯಾವುದೇ ಸಂಪ್ರದಾಯ ಮತ್ತು ನಡವಳಿಕೆ" ಗಳನ್ನು ಕೈಬಿಡಬೇಕು.

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಎಂದರೆ, ಡಾ. ಅಂಬೇಡ್ಕರರಿಂದ ಮಂಡಿಸಲಾದ ನೂತನ ನಾಲ್ಕನೆ ಕಲಮಿನ (೧) ಭಾಗ (ಎ) ಯಲ್ಲಿ "ಈ ಕೋಡಿನಲ್ಲಿ ಪ್ರಸ್ತಾಪಿಸಲಾದ" ಪದಗಳ ನಂತರ 'ಈ ಕೋಡ್ ಜಾರಿಗೆ ಬಂದ ಹತ್ತು ವರ್ಷಗಳವರೆಗೆ' ಸೇರ್ಪಡಿಸಬೇಕು ಮತ್ತು (ಎ) ಭಾಗ (ಬಿ) ಈ ಕೆಳಗಿನ ವಿವರಣೆ ಸೇರಿಸಬೇಕು.

**ವಿವರಣೆ :** ಉಪಕಲಮು (ಎ)ಯಲ್ಲಿ ಹೇಳಲಾದ ವಿಷಯಕ್ಕೆ ವ್ಯತಿರಿಕ್ತವಾಗದಂತೆ ಈ ಕೋಡ್ ಜಾರಿಗೆ ಬಂದ ಹತ್ತು ವರ್ಷಗಳವರೆಗೆ ಯಾವುದೇ ಗ್ರಂಥ, ನಿಯಮ, ಸಂಪ್ರದಾಯ, ನಡವಳಿಕೆಗಳು

---

* ಸಂ. ಚ. ಸಂಪುಟ XV ಭಾಗ II ೨೫ನೆಯ ಸೆಪ್ಟಂಬರ್ ೧೯೫೧ ಪುಟ ೩೨೭೮–೩೩೦೧

ಪರಿಣಾಮಕಾರಿಯಾಗಿರುತ್ತವೆ.

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಏನೆಂದರೆ, ಅಂಬೇಡ್ಕರರು ಮಂಡಿಸಿದ ಭಾಗ (ಎ) ನಾಲ್ಕನೆ ವಿಧಿಯಲ್ಲಿ "ಈ ಕೋಡ್" ಪದ ಎರಡನೇ ಬಾರಿ ಹೇಳಲಾಗಿದೆಯೋ ಅಲ್ಲಿ "ಎಲ್ಲಿಯವರೆಗೂ ಈ ಕೋಡಿಗೆ ಅಪ್ರಸ್ತುತವಾಗಿದೆ." ಎಂಬ ಪದಗಳನ್ನು ಸೇರಿಸಬೇಕು.

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ನಾವು ಈಗ ಮುಂದಿನ ತಿದ್ದುಪಡಿಗೆ ಹೋಗೋಣ

ಪ್ರಶ್ನೆ ಏನೆಂದರೆ:

ಡಾ. ಅಂಬೇಡ್ಕರರು ಸೂಚಿಸಿದ ನಾಲ್ಕನೆಯ ವಿಧಿಯ ಡಿ ಇದನ್ನು ಸೇರ್ಪಡಿಸಬೇಕು. "ಈ ಶಾಸನವು ಅನ್ವಯಿಸುವ ಜನರಲ್ಲಿ ಜಾರಿಯಲ್ಲಿರುವ ಸಂಪ್ರದಾಯ ಶಾಸನ ಮತ್ತು ಸಂಸ್ಕೃತಿಯ ಬಗೆಗೆ ಹಸ್ತಕ್ಷೇಪ ಮಾಡುವುದಿಲ್ಲ."

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಏನೆಂದರೆ:

ನಾಲ್ಕನೆಯ ವಿಧಿಗೆ ಈ ಕೆಳಕಂಡ ವಿಷಯ ಸೇರ್ಪಡಿಸಬೇಕು.

"೪ ಎಲ್ಲಾ ಗ್ರಂಥಗಳು, ನಿಯಮಗಳು, ಹಿಂದೂ ಶಾಸನದ ಅರ್ಥಗಳು, ಸಂಪ್ರದಾಯ ನಡವಳಿಕೆಗಳು, ಈ ಶಾಸನ ಜಾರಿಗೆ ಬರುವ ಮುಂಚೆ ಜಾರಿಯಲ್ಲಿದ್ದವು ಈ ಶಾಸನದ ಅಂಶಗಳಿಗೆ ಎಷ್ಟರ ಮಟ್ಟಿಗೆ ಅಸಂಗತವಾಗಿರುತ್ತವೆಯೊ ಅಷ್ಟರ ಮಟ್ಟಿಗೆ ಅವು ಅನೂರ್ಜಿತವಾಗುವುದು."

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಮುಂದಿನವು ತಿದ್ದುಪಡಿ ೩೮೦, ಪ್ರಶ್ನೆ ಏನೆಂದರೆ:

"೪ ಎಲ್ಲಾ ಗ್ರಂಥಗಳು, ಹಿಂದೂ ಶಾಸನದ ಅರ್ಥಗಳು, ಶಾಸ್ತ್ರದಲ್ಲಿ ಹೇಳಿದಂತೆ, ಅಥವಾ ನ್ಯಾಯಾಲಯಗಳ ನಿರ್ಣಯದಂತೆ, ಸರ್ವಶ್ರೇಷ್ಠ ನ್ಯಾಯಾಲಯ, ಪ್ರಿವೀಕೌನ್ಸಿಲ್‌ನ ನ್ಯಾಯ ಸಮಿತಿಯ ನಿರ್ಣಯ, ಹಾಗೂ ವಿದ್ವಾಂಸರ ಅಭಿಪ್ರಾಯದಲ್ಲಿ ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದ ಎಲ್ಲವೂ ಈ ಶಾಸನಕ್ಕೆ ಎಷ್ಟರಮಟ್ಟಿಗೆ ಅಸಂಗತವಾಗುವುವೊ ಅಷ್ಟು ಅನೂರ್ಜಿತವಾಗುವುದು."

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಮುಂದಿನದು ೪೨೦.

**ಪಂಡಿತ ಠಾಕೂರ್ ದಾಸ್ ಭಾರ್ಗವ :** ನಾನು ಅದನ್ನು ವಾಪಸು ಪಡೆಯುವೆ.

ಅನುಮತಿಯಿಂದ ಪಡೆಯಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಸರದಾರ ಹುಕುಮ್ ಸಿಂಗ್ ಅವರ ನಂ. ೧೨೯ ಈಗ ೧೩೦ ಎಂದಿದೆ. ಪ್ರಶ್ನೆ ಏನೆಂದರೆ, ನಾಲ್ಕನೆಯ ವಿಧಿಗೆ ಈ ಅಂಶಗಳನ್ನು ಸೇರ್ಪಡಿಸಬೇಕು. "ಏನೇ ಆದರೂ ಯಾವ ಪ್ರಸಂಗದಲ್ಲಿಯೂ, ಗ್ರಂಥಗಳನ್ನು, ಹಿಂದೂ ಶಾಸನದ ಅರ್ಥಗಳನ್ನು, ಸಂಪ್ರದಾಯಗಳ ಹಾಗೂ ನಡವಳಿಕೆಗಳ ಈ ಶಾಸನ ಜಾರಿಗೆ ಬರುವ ಮುನ್ನ ಆಚರಣೆಯಲ್ಲಿದ್ದವುಗಳ ಮೇಲೆ ಇದು ಪರಿಣಾಮ ಬೀರಲಾರದು." ಹಾಗೂ "ಈ ಶಾಸನ ಜಾರಿಗೆ ಬರುವ ಮುಂಚೆ ಇದ್ದ ಯಾವುದೇ ಧಾರ್ಮಿಕ ಭಾವನೆಗಳ ಹಾಗೂ ನೀತಿಯ ಮೇಲೆ ಇದು ಪರಿಣಾಮಕಾರಿಯಾಗಲಾರದು."

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಈಗ ಅಂಬೇಡ್ಕರರ ನಂ. ೬ ತಿದ್ದುಪಡಿ

ಪ್ರಶ್ನೆ ಏನೆಂದರೆ:

"೪ ಈ ಕೋಡ್‌ನ ಸರ್ವಾಂಗೀಣ ಪರಿಣಾಮಕಾರಿ ಪ್ರಭಾವ – ಈ ಶಾಸನದಲ್ಲಿ ಹೇಳಲಾದಂತೆ ಮಾತ್ರ :–

(ಎ) ಯಾವುದೇ ಗ್ರಂಥ, ಹಿಂದೂ ಶಾಸನಗಳ ಅರ್ಥ, ಸಂಪ್ರದಾಯಗಳು ಈ ಶಾಸನ ಜಾರಿಗೆ ಬರುವ ಮುಂಚೆ ಆಚರಣೆಯಲ್ಲಿದ್ದವು, ಈ ಶಾಸನ ಜಾರಿಗೆ ಬಂದ ಮೇಲೆ ಅನೂರ್ಜಿತಗೊಳ್ಳುವುವು.

(ಬಿ) ಈ ಶಾಸನ ಜಾರಿಗೆ ಬರುವ ಮುಂಚೆ ಇದ್ದ ಶಾಸನಗಳು ಎಲ್ಲಿಯವರೆಗೂ ಅಸಂಗತವಾಗಿರುವುವೊ ಅವು ರದ್ದಾಗುವುವು.

ನಿಲುವಳಿಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಪ್ರಶ್ನೆ ಏನೆಂದರೆ : "ಆ ನಾಲ್ಕನೆಯ ಕಲಮು ತಿದ್ದುಪಡಿಯಾದಂತೆ ಎಂಬುದನ್ನು ವಿಧೇಯಕದಲ್ಲಿ ಸೇರ್ಪಡಿಸಿದೆ."

ನಿಲುವಳಿಯನ್ನು ಅಂಗೀಕರಿಸಿದ ನಂತರ ತಿದ್ದುಪಡಿ ಸೇರ್ಪಡಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಸದನ, ಈಗ ಮುಂದಿನ ಶಾಸನದ ವಿಧಿಗಳನ್ನು ಕೈಗೆತ್ತಿಕೊಳ್ಳುವುದು.

**ಪಂಡಿತ ಮೈತ್ರ** (ಪ.ಬಂ.) ಮಿಕ್ಕ ಕಲಮುಗಳ ಬಗ್ಗೆ ಏನು?

**ಮಾನ್ಯ ಉಪಸಭಾಧ್ಯಕ್ಷರು :** ಮಿಕ್ಕ ಕಾರ್ಯಕ್ರಮಗಳು ನಿಯಮಾವಳಿಯ ಪಟ್ಟಿಯಂತೆ ಜರುಗಿದ ನಂತರ ಕೈಗೆತ್ತಿಕೊಳ್ಳಲಾಗುವುದು.

# ಅನುಬಂಧಗಳು
# ಮತ್ತು
# ಅನುಸೂಚಿ

# ಅನುಬಂಧ – 1

## ಮಂತ್ರಿಮಂಡಳದಿಂದ ತಮ್ಮ ರಾಜೀನಾಮೆ ಕುರಿತು ಸಂಸತ್ತಿನಲ್ಲಿ ಡಾ. ಬಿ.ಆರ್. ಅಂಬೇಡ್ಕರರು ನೀಡಿದ ಹೇಳಿಕೆ

ಹೊಸ ದೆಹಲಿ
ಅಕ್ಟೋಬರ್ 10, 1951

ಡಾ. ಅಂಬೇಡ್ಕರರು ಪತ್ರಿಕೆಗಳಿಗೆ ನೀಡಿದ ಹೇಳಿಕೆಯ ಪ್ರತಿಯಿಂದ ಪುನರ್ಮುದ್ರಿಸಲಾಗಿದೆ. ಇದು ಮಹಾರಾಷ್ಟ್ರ ಸರ್ಕಾರವು ಮುಂಬಯಿ ಉಚ್ಚ ನ್ಯಾಯಾಲಯದಿಂದ ಪಡೆದುಕೊಂಡಿದ್ದ ಅಂಬೇಡ್ಕರ್ ದಾಖಲೆಯಿಂದ ದೊರೆತಿದೆ. ಡಾ. ಅಂಬೇಡ್ಕರ್‌ರಿಗೆ ತಮ್ಮ ಹೇಳಿಕೆಯನ್ನು ಸದನದಲ್ಲಿ ನೀಡಲು ಸಭಾಧ್ಯಕ್ಷರು ಪರವಾನಿಗೆ ಕೊಡಲಿಲ್ಲ. ಆದ್ದರಿಂದ ಅವರು ಸಭಾತ್ಯಾಗಮಾಡಿ ತಮ್ಮ ಹೇಳಿಕೆಯ ಪ್ರತಿಗಳನ್ನು ಸದನದ ಹೊರಗಡೆ ಮತ್ತು ಪತ್ರಿಕೆಯವರಿಗೆ ಹಂಚಿದರು.

**–ಸಂಪಾದಕ.**

# ಅನುಬಂಧ – 1

ಹೇಳಿಕೆ

## ಡಾ. ಬಿ. ಆರ್. ಅಂಬೇಡ್ಕರರಿಂದ

**ಸಂಪುಟಕ್ಕೆ ರಾಜೀನಾಮೆ ನೀಡಿದ್ದರ ಕುರಿತು ಸಂಸತ್ತಿಗೆ ವಿವರಣೆ**

ಹೊಸ ದೆಹಲಿ
ಅಕ್ಟೋಬರ್ 10, 1951

[ಮಹಾರಾಷ್ಟ್ರ ಸರ್ಕಾರಕ್ಕೆ ಬೊಂಬಾಯಿ ಹೈಕೋರ್ಟಿನಿಂದ ಪಡೆದ ಕಾಗದಪತ್ರಗಳಲ್ಲಿ ಡಾ. ಅಂಬೇಡ್ಕರರು, ಪತ್ರಿಕೆಗೆ ಪ್ರಕಟಣೆಗೆಂದೇ ನೀಡಲಾದ ಪ್ರತಿ ದೊರಕಿತು. ತಮ್ಮ ರಾಜೀನಾಮೆಯನ್ನು ಸಂಸತ್ತಿನಲ್ಲಿ ನೀಡಬಾರದೆಂದೇ ಅಧ್ಯಕ್ಷರು ಆದೇಶಿಸಿದ್ದರು. ಆದುದರಿಂದ ಅಂಬೇಡ್ಕರರು ಸದನದಿಂದ ಹೊರಬಿದ್ದು ರಾಜೀನಾಮೆ ಪ್ರತಿಗಳನ್ನು ಸಂಸತ್ತಿನ ಸದಸ್ಯರಿಗೆ ಹಂಚಿದರು.]

**–ಸಂಪಾದಕ.**

# ಡಾ. ಬಿ.ಆರ್. ಅಂಬೇಡ್ಕರರಿಂದ ತಮ್ಮ

# ರಾಜೀನಾಮೆ ಕುರಿತಂತೆ

### ಹೇಳಿಕೆ

ನಾನು ನೀಡಿದ ರಾಜೀನಾಮೆಯ ವಿಷಯ ಸದನಕ್ಕೆ ಅಧಿಕೃತವಾಗಿ ತಿಳಿದಿರಬಹುದು. ನಾನು ಈಗ ಸಂಪುಟದ ಸದಸ್ಯನಾಗಿಲ್ಲ. ಏಕೆಂದರೆ ನಾನು ನನ್ನ ರಾಜೀನಾಮೆಯನ್ನು ಪ್ರಧಾನ ಮಂತ್ರಿಗಳಿಗೆ ಗುರುವಾರ ಸೆಪ್ಟೆಂಬರ್ ೨೭ರಂದೇ ನೀಡಿ, ಕೂಡಲೇ ನನ್ನ ರಾಜೀನಾಮೆ ಅಂಗೀಕರಿಸಬೇಕೆಂದು ಕೇಳಿದ್ದೆ. ಪ್ರಧಾನಿಗಳು ನನ್ನ ರಾಜೀನಾಮೆಯನ್ನು ಅಂದೇ ಸ್ವೀಕರಿಸಿದರು. ನಾನು ಶುಕ್ರವಾರ ೨೮ರಿಂದ ಮಂತ್ರಿಯಾಗಿ ಮುಂದುವರಿದಿದ್ದರೆ ಅದು ಪ್ರಧಾನಿಗಳ ಕೋರಿಕೆ ಮತ್ತು ಸಂಪ್ರಾದಾಯದಂತೆ ಈ ಅಧಿವೇಶನ ಮುಗಿಯುವ ಅವಧಿಗೆ ಮಾತ್ರ ಎಂದೇ ಹೇಳಬಯಸುವೆ. ಒಂದು ಸಂವಿಧಾನಾತ್ಮಕ ಉತ್ತಮ ಸಂಪ್ರದಾಯಗಳನ್ನು ಎತ್ತಿಹಿಡಿಯಲೆಂದೇ ಅದನ್ನು ಅಂಗೀಕರಿಸಿರುವೆ.

ನಮ್ಮ ಸದನದ ನಿಯಮಾವಳಿಗಳಂತೆ, ಯಾವುದೇ ಸಚಿವ ತನ್ನ ಪದವಿಗೆ ರಾಜೀನಾಮೆ ನೀಡಿದ್ದಲ್ಲಿ, ಅದರ ಬಗ್ಗೆ ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು. ನನ್ನ ಅಧಿಕಾರ ಅವಧಿಯಲ್ಲಿ ಅನೇಕರು ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ ಅವರಲ್ಲಿ ಎಲ್ಲರೂ ಹೇಳಿಕೆ ನೀಡಿಲ್ಲ. ಕೆಲವರು ಯಾವ ಹೇಳಿಕೆ ನೀಡದೇ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ನಾನು ಯಾವ ಮಾರ್ಗವನ್ನು ಅನುಸರಿಸಬೇಕೆಂದು ನಿರ್ಣಯಿಸಲಾರದೆ ಕೆಲವು ದಿನ ತೊಳಲಾಡಿ, ಹೇಳಿಕೆ ನೀಡುವುದೇ ಸೂಕ್ತ ಎಂದು ನಿರ್ಧರಿಸಿದೆ. ಇದು ಕೇವಲ ಅಗತ್ಯ ಮಾತ್ರ ಆಗಿರದೆ ಕರ್ತವ್ಯವಾಗಿದೆಯೆಂದೇ ನಾನು ಭಾವಿಸುವೆ.

ಸಂಪುಟದ ಕಾರ್ಯಾಚರಣೆಯ ಬಗೆಗೆ ಸದನಕ್ಕೆ ಅರಿಯುವ ಅವಕಾಶಗಳು ಇಲ್ಲ. ಸಂಪುಟದ ನಿಯಮಾವಳಿಯಂತೆ ಅದರ ಕಾರ್ಯಕಲಾಪಗಳು ರಹಸ್ಯ. ಆದುದರಿಂದ ಅದರ ಕಲಾಪದಲ್ಲಿ ಒಮ್ಮತವಿದೆಯೊ ಅಥವಾ ವಿರೋಧಗಳಿವೆಯೊ ಎಂಬುದನ್ನು ತಿಳಿಯಲಾಗದು. ಏಕೆಂದರೆ ಸಂಪುಟ ಸಾಮೂಹಿಕ ಹೊಣೆಗಾರಿಕೆಯ ತತ್ವ ಅನುಸರಿಸುತ್ತದೆ. ಹಾಗಾಗಿ ಅಲ್ಪಮತದವರು ತಮ್ಮ ಭಿನ್ನಾಭಿಪ್ರಾಯಗಳಿದ್ದರೂ, ಅದನ್ನು ನುಂಗಿಕೊಳ್ಳಬೇಕಾಗುತ್ತದೆ. ಹಾಗೂ ಅದನ್ನು ಬಹಿರಂಗಪಡಿಸುವಂತಿಲ್ಲ. ಈ ಕಾರಣಗಳಿಂದ ಸದನವು ಸಂಪುಟದಲ್ಲಿ ಕಲಹವಿಲ್ಲವೆಂದೇ ಭಾವಿಸಬಹುದು. ಆದರೆ ಅಲ್ಲಿ ಕಲಹಗಳಿವೆ. ಹೀಗಾಗಿ ರಾಜೀನಾಮೆ ನೀಡುವ ಸಚಿವರು ತಾವು ಏಕೆ ರಾಜೀನಾಮೆ ನೀಡುತ್ತೇವೆ ಎಂಬುದನ್ನು ಸದನದ ಅವಗಾಹನೆಗೆ ತರುವುದು ಸೂಕ್ತ.

ಎರಡನೆಯದಾಗಿ ಸಚಿವರು ಹೇಳಿಕೆ ನೀಡದೇ ಹೋದರೆ ಇಲ್ಲಸಲ್ಲದ ಸಂದೇಹಗಳಿಗೆ ಆಮಂತ್ರಣ ನೀಡಿದಂತಾಗುತ್ತದೆ. ಅದು ಸಚಿವರ ಸಾಮರ್ಥ್ಯವನ್ನು ಸಂಶಯಕ್ಕೆ ಗುರಿ ಮಾಡುತ್ತದೆ. ಈ ಊಹಾಪೋಹಗಳಿಗೆ ಆಸ್ಪದ ನೀಡಬಾರದೆಂದರೆ, ಹೇಳಿಕೆ ನೀಡುವುದೇ ಉತ್ತಮ ಮಾರ್ಗ.

ಮೂರನೆಯದಾಗಿ ನಮ್ಮ ಪತ್ರಿಕೆಗಳು, ಅವರಿಗೆ ತಮ್ಮದೇ ಆದ ರಾಗದ್ವೇಷಗಳಿವೆ. ಅವರ ತೀರ್ಪುಗಳು ಎಂದೂ ಸುಸಂಬದ್ಧವಾಗಿರದೇ ತಮಗೆ ತಿಳಿದಂತೆ ಪ್ರಕಟಿಸುತ್ತಾರೆ. ನಿಜಾಂಶವನ್ನು ಅರಿಯುವ ಹವ್ಯಾಸ ಕಡಿಮೆ ಎಂದರೂ ಸರಿಯೇ. ತಮಗೆ ಬೇಕಾದವರನ್ನು ಎತ್ತಿಕಟ್ಟುವುದು ಪತ್ರಿಕೆಗಳ ರೀತಿ. ಅದನ್ನು ಬದಲಾಯಿಸಲಾಗದು. ಇದಕ್ಕೆ ನನ್ನದೇ ಉದಾಹರಣೆ.

ಈ ಎಲ್ಲಾ ಕಾರಣಗಳಿಂದಾಗಿ, ನಾನು ಹೇಳಿಕೆ ನೀಡಲೇಬೇಕೆಂದು ನಿರ್ಧರಿಸಿದೆ.

ಈಗ ನಾನು ಅಧಿಕಾರದಲ್ಲಿದ್ದು ೪ ವರ್ಷ ೧ ತಿಂಗಳು ೨೬ ದಿನಗಳಾದವು. ನನಗೆ ಪ್ರಧಾನಿಗಳು ತಮ್ಮ ಸಂಪುಟದಲ್ಲಿ ಕಾನೂನು ಸಚಿವರಾಗಿ ಅಧಿಕಾರ ಸ್ವೀಕರಿಸಬೇಕೆಂದು ಕೇಳಿದಾಗ ಆಶ್ಚರ್ಯವಾಯಿತು. ಏಕೆಂದರೆ ನಾನು ವಿರೋಧ ಪಕ್ಷದಲ್ಲಿದ್ದು ೧೯೪೬ರಲ್ಲಿಯ ನಡುಗಾಲ ಸರ್ಕಾರದಲ್ಲಿ ಯಾವ ಹುದ್ದೆಯನ್ನೂ ಪಡೆಯುವಲ್ಲಿ ಸಫಲನಾಗಿರದೆ ಎಲ್ಲರ ಖಂಡನೆಗೆ ಗುರಿಯಾಗಿದ್ದೆ. ಆದರೆ ಪ್ರಧಾನಿಗಳ ಮನಸ್ಸಿನ ಪರಿವರ್ತನೆ ಹೇಗೆ ಮತ್ತು ಏಕೆ ಆಯಿತು ಎಂದು ಊಹಿಸಲೂ ಆಗದು. ನನ್ನ ಸ್ನೇಹಿತರಲ್ಲದವರೊಂದಿಗೆ ಹೇಗೆ ಮುಂದುವರಿಯಬಲ್ಲೆನೊ ಅದೇ ನನಗೆ ತಿಳಿಯದಂತಾಯಿತು. ನನಗೆ ನನ್ನದೇ ಆದ ಸಂದೇಹಗಳಿದ್ದು, ನಾನು ಹಿಂದಿನ ಕಾನೂನು ಮಂತ್ರಿಗಳಂತೆ ಸಮರ್ಥನೀಯವಾಗಿ ಕಾರ್ಯನಡೆಸಬಲ್ಲವನೇ ಎಂದೇ ಬಾಧೆಪಡುತ್ತಿದ್ದೆ. ಆದರೆ ನನ್ನ ಸಂದೇಹಗಳನ್ನು ಬದಿಗೊತ್ತಿ, ಪ್ರಧಾನಿಗಳು ನೀಡಿದ ಅವಕಾಶವನ್ನು ನನ್ನ ರಾಷ್ಟ್ರ ನಿರ್ಮಾಣಕ್ಕೆ ಸದುಪಯೋಗಪಡಿಸಿಕೊಳ್ಳಬೇಕೆಂದು ಒಪ್ಪಿಕೊಂಡೆ, ಆದರೆ ನಾನು ಸಂಪುಟದ ಸದಸ್ಯ ಹಾಗೂ ಕಾನೂನು ಸಚಿವನಾಗಿ ಹೇಗೆ ಸೇವೆ ಸಲ್ಲಿಸಿದೆ ಎಂಬುದನ್ನು ಬೇರೆಯವರು ನಿರ್ಧರಿಸಬೇಕು.

ನಾನು ನನ್ನ ಸಹೋದ್ಯೋಗಿಗಳಿಂದ ಏಕೆ ಬಿಡುಗಡೆ ಹೊಂದಿದೆ ಎಂಬುದನ್ನು ವಿವರಿಸುವೆ. ರಾಜೀನಾಮೆ ಸಲ್ಲಿಸಬೇಕೆಂಬ ಬಯಕೆ ಹಲವಾರು ಕಾರಣಗಳಿಂದ, ಕಳೆದ ಕೆಲವು ದಿನಗಳಿಂದ ನನ್ನನ್ನು ಕಾಡುತ್ತಲೇ ಇತ್ತು.

ನಾನು ಮೊಟ್ಟ ಮೊದಲು ವೈಯಕ್ತಿಕ ಕಾರಣಗಳನ್ನು ವಿವರಿಸುವೆ. ಆದರೆ ನಾನು ಈ ಕಾರಣಗಳಿಂದಲೇ ರಾಜೀನಾಮೆ ನೀಡಲಿಲ್ಲ. ನಾನು ವೈಸರಾಯರ ಆಡಳಿತ ಮಂಡಳಿಯ ಸದಸ್ಯನಾಗಿದ್ದೆ. ನನ್ನ ಗ್ರಹಿಕೆಯಂತೆ ಕಾನೂನು ಸಚಿವಾಲಯಕ್ಕೆ ಯಾವ ಆಡಳಿತ ಮಹತ್ವವೂ ಇರಲಿಲ್ಲ. ಅದರಲ್ಲಿ ಭಾರತದ ಧೋರಣೆಗಳನ್ನು ನಿರೂಪಿಸಲು ಯಾವ ಅವಕಾಶಗಳೂ ಇರಲಿಲ್ಲ. ಅದನ್ನು ನಾವು ಖಾಲಿ ಸಾಬೂನಿನ ಪೆಟ್ಟಿಗೆ ಎಂದು ಕರೆಯುತ್ತಿದ್ದೆವು. ಅದು ಕೇವಲ ಕೆಲವು ವೃದ್ಧ ನ್ಯಾಯವಾದಿಗಳಿಗೆ ಸರಿಯಾದ ಸ್ಥಾನವಾಗಿತ್ತು. ಆದರೆ ನನ್ನನ್ನು ಪ್ರಧಾನಿಗಳು ಆಮಂತ್ರಿಸಿದಾಗ, ನಾನು ಓರ್ವ ನ್ಯಾಯವಾದಿಯಾಗಿರದೇ ಸಮರ್ಥ ಆಡಳಿತಗಾರನಾಗಿ, ವೈಸ್‌ರಾಯರ ಸಮಿತಿಯಲ್ಲಿ ಕಾರ್ಮಿಕ ಹಾಗೂ ಕೇಂದ್ರ ಸಾರ್ವಜನಿಕ ಆಡಳಿತ ಇಲಾಖೆಗಳನ್ನು ಹೊಂದಿದ್ದು ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದನ್ನು ತಿಳಿಸಿದೆ. ಪ್ರಧಾನಿಗಳು ನನ್ನ ಹೇಳಿಕೆಯನ್ನು ಒಪ್ಪಿಕೊಂಡು, ನನಗೆ ಕೇವಲ ಕಾನೂನು ಶಾಖೆಯಲ್ಲದೆ, ಯೋಜನಾ ಶಾಖೆಯು ನಿರ್ಮಾಣಗೊಂಡ ಮೇಲೆ ನೀಡುವುದಾಗಿ ಭರವಸೆ ನೀಡಿದರು. ಆದರೆ ಆ ಶಾಖೆ ಜಾರಿಗೆ ಬರುವುದು ಬಹಳ ತಡವಾಯಿತು. ಆದರೆ ಅದು ಬಂದಾಗ ನನ್ನನ್ನು ಹೊರಗಿಡಲಾಯಿತು. ಆದರೆ ನಾನು ಅಧಿಕಾರಾವಧಿಯಲ್ಲಿದ್ದಾಗ ಅನೇಕ ಶಾಖೆಗಳ ಬದಲಾವಣೆಗಳು ನಡೆದರೂ, ನನಗೆ ಅವರು ಬೇರೆ ಶಾಖೆಯನ್ನೇ ನೀಡಲಿಲ್ಲ. ಆದರೆ ನನಗೆ ಅವರು ಬೇರೆ ಯಾವುದಾದರೊಂದು ಶಾಖೆಯನ್ನು ನೀಡಬಹುದೆಂದೇ ಗ್ರಹಿಸಿದ್ದೆ. ಹಲವು ಮಂತ್ರಿಗಳಿಗೆ ಎರಡು ಮೂರು ಶಾಖೆಗಳನ್ನು ನೀಡಿದ್ದರು. ಅವರು ಅಧಿಕ ಹೊಣೆಗಾರಿಕೆ ಹೊರಲಾರದೇ ಒದ್ದಾಡುತ್ತಿದ್ದರೂ, ಕಾರ್ಯ ಮಾಡಬೇಕೆಂದಿದ್ದ ನನಗೆ ಅವರು

ಯಾವ ಹೆಚ್ಚಿನ ಕಾರ್ಯ ನೀಡದೇ ಹೋದರು. ಮಂತ್ರಿಗಳ ಗೈರುಹಾಜರಿಯಲ್ಲಿಯೂ ತಾತ್ಕಾಲಿಕವಾಗಿಯೂ ನನಗೆ ಅವರ ಅಧಿಕಾರ ನೀಡಲಿಲ್ಲ. ಅವರು ಮನಸ್ಸಿನಲ್ಲೇನಿತ್ತೊ ಎಂಬುದನ್ನು ನಾನು ಅರಿಯಲಾರೆ, ಅದು ನನ್ನ ಅಸಾಮರ್ಥ್ಯವೆ? ಅಥವಾ ನನ್ನಲ್ಲಿ ವಿಶ್ವಾಸವಿಲ್ಲವೆ? ಅಥವಾ ನಾನು ಸ್ನೇಹಪರವಾಗಿರಲಿಲ್ಲವೆ? ಅಥವಾ ಅವಿಧೇಯತೆಯೆ?

ನಾನು ಯಾವ ಪ್ರಮುಖ ಸಮಿತಿಗಳ ಸದಸ್ಯನೂ ಆಗಿರಲಿಲ್ಲ. ಆರ್ಥಿಕ ಆಡಳಿತ ಸಮಿತಿಯನ್ನು ನಿರ್ಮಿಸಿದಾಗ ಕೂಡ ನನ್ನನ್ನು ಕೈಬಿಡಲಾಯಿತು. ನಾನು ಅರ್ಥಶಾಸ್ತ್ರ ಮತ್ತು ಹಣಕಾಸಿನ ವಿದ್ಯಾರ್ಥಿಯಾಗಿದ್ದೆ; ಆದರೆ ಪ್ರಧಾನಿಗಳು ಇಂಗ್ಲೆಂಡಿಗೆ ಹೋದಾಗ ಸಂಪುಟವು ನನ್ನನ್ನು ಆ ಸಮಿತಿಯ ಸದಸ್ಯನನ್ನಾಗಿ ಮಾಡಿತು. ಆದರೆ ಅವರು ಮರಳಿ ಬಂದ ಮೇಲೆ ಪುನರ್‌ರಚನೆಯ ನೆಪದಲ್ಲಿ ನನ್ನನ್ನು ಕೈಬಿಡಲಾಯಿತು. ಆದರೆ ನಾನು ಪ್ರತಿಭಟಿಸಿದುದರಿಂದ ನನ್ನನ್ನು ಮರುನೇಮಕ ಮಾಡಲಾಯಿತು.

ಆದರೆ ನಾನು ಈ ಬಗ್ಗೆ ಎಂದೂ ಪ್ರಧಾನಿಗಳಿಗೆ ದೂರು ನೀಡಲಿಲ್ಲ. ಏಕೆಂದರೆ ನಾನು ಎಂದೂ ಅಧಿಕಾರಕ್ಕಾಗಿ ಆಸೆ ಮಾಡಿದವನಲ್ಲ. ನನ್ನ ಗುರಿ ಕೇವಲ ಸೇವೆ. ಅದೂ ಪ್ರಧಾನಿಗಳು ನೀಡಿದ ಶಾಖೆಯಲ್ಲಿ ಸೇವೆ. ನನಗೆ ಅನ್ಯಾಯವಾಗುತ್ತಿದೆ ಎಂದು ನನಗೆ ಅನಿಸಿಲ್ಲದೇ ಇದ್ದರೆ ನಾನು ಮಾನವತ್ವದಿಂದ ಹೊರಗುಳಿಯುತ್ತಿದ್ದೆ.

ನಾನು, ಇನ್ನೊಂದು ಕಾರಣ ಹೇಳುವೆ; ಇದು ನನಗೆ ಸರ್ಕಾರದ ಬಗ್ಗೆ ಬೇಜಾರು ನೀಡಿದ ವಿಷಯ. ಅದೇನೆಂದರೆ ಹಿಂದುಳಿದ ವರ್ಗಗಳಿಗೆ ಮತ್ತು ಪರಿಶಿಷ್ಟ ಜಾತಿಗಳ ಬಗೆಗೆ ನಡೆದುಕೊಂಡ ರೀತಿ, ಸಂವಿಧಾನದಲ್ಲಿ ಈ ವರ್ಗಗಳಿಗೆ ಯಾವ ರಕ್ಷಣೆಯನ್ನು ನೀಡದೆ ಒಂದು ಆಡಳಿತ ಸಮಿತಿಯ ನೇಮಕದಿಂದ ಈ ಕಾರ್ಯ ಮಾಡಿಸಲಾಯಿತು. ಅದೂ ಸಂವಿಧಾನ ಜಾರಿಗೆ ಬಂದು ಒಂದು ವರ್ಷದ ನಂತರ. ಸೋಜಿಗದ ಸಂಗತಿ ಎಂದರೆ ಈ ದಿಶೆಯಲ್ಲಿ ಸರ್ಕಾರ ಒಂದು ಆಯೋಗವನ್ನು ರಚಿಸಬೇಕೆಂದೂ ಊಹಿಸಿರಲಿಲ್ಲ. ೧೯೪೬ರಲ್ಲಿ ನಾನು ಅಧಿಕಾರದಲ್ಲಿದ್ದಾಗ ನನಗೂ ಹಾಗೂ ಇತರ ಪರಿಶಿಷ್ಟ ವರ್ಗದ ಪ್ರತಿನಿಧಿಗಳಿಗೂ ಇದರ ಬಗ್ಗೆ ವಿಶೇಷ ಕಾಳಜಿಯಾಗಿತ್ತು. ಏಕೆಂದರೆ ಈ ದಿಶೆಯಲ್ಲಿ ದಲಿತರಿಗೆ ಸಂವಿಧಾನಾತ್ಮಕ ರಕ್ಷಣೆ ನೀಡುವಲ್ಲಿ ಬ್ರಿಟಿಷರೂ ಹಿಂದೇಟು ಹಾಕಿದ್ದರು. ಅವರು ಸಂವಿಧಾನ ಸಭೆಯು ಇದರ ಬಗೆಗೆ ನಿರ್ಣಯ ತೆಗೆದುಕೊಳ್ಳುತ್ತದೆ ಎಂದೇ ಹೇಳಿ ಜಾರಿಕೊಂಡರು. ಈ ಒಂದು ಬಗೆಯ ಆತಂಕ ಸಮಯದಲ್ಲಿ ನಾನು ಒಂದು ವರದಿಯನ್ನು ತಯಾರಿಸಿದ್ದೆ. ಅದನ್ನು ನಾನು ಸಂಯುಕ್ತ ರಾಷ್ಟ್ರಗಳ ಸಭೆಗೆ ಕಳಿಸಿಬೇಕೆಂದಿದ್ದೆ. (ಸಂಪಾದಕರು ಈ ವರದಿಗೆ ಹುಡುಕಾಡಿದರು. ಆದರೆ ಅದು ದೊರೆತಿಲ್ಲ. ಈ ಬಗ್ಗೆ ಯಾರಾದರೂ ಸಹಕರಿಸಿದಲ್ಲಿ ಸ್ವಾಗತ). ಆದರೆ ಆ ಕಾರ್ಯ ನನ್ನಿಂದಾಗಲಿಲ್ಲ. ಏಕೆಂದರೆ ಸಂವಿಧಾನ ರಚನೆಯ ಸಭೆ ಏನು ಮಾಡಬಲ್ಲದೊ ಎಂದು ಕಾದು ನೋಡಬೇಕಾಗಿತ್ತು. ಅಲ್ಲದೆ ಸಂಸತ್ತು ಈ ದಿಶೆಯಲ್ಲಿ ಏನಾದರೂ ನಿರ್ಣಯ ತೆಗೆದುಕೊಳ್ಳಬಹುದೆಂದೇ ಆಶಿಸಿದ್ದೆ. ಆದರೆ ಸಂವಿಧಾನದಲ್ಲಿ ಪರಿಶಿಷ್ಟ ವರ್ಗ ಹಾಗೂ ಜಾತಿಗಳಿಗೆ ನೀಡಿರುವ ಅಂಶಗಳು ನನಗೆ ತೃಪ್ತಿ ನೀಡಿಲ್ಲ. ಆದರೆ ಅವನ್ನು ಇದ್ದ ರೀತಿಯಲ್ಲಿಯೇ ನಾನು ಅಂಗೀಕರಿಸಿದೆ. ಆದರೆ ಈಗ ಪರಿಶಿಷ್ಟ ಜಾತಿಯವರ ಸ್ಥಿತಿಗತಿ ಏನಾಗಿದೆ? ಸರಕಾರ ಮುಸಲ್ಮಾನರ ಬಗೆಗೆ ತೋರುವ ಕಾಳಜಿ ನೋಡಿದಾಗ ಮನಸ್ಸಿಗೆ ನೋವಾಗದೆ ಇರದು. ಏಕೆಂದರೆ ಪರಿಶಿಷ್ಟ ಜಾತಿಯವರನ್ನು ಕಡೆಗಣಿಸಲಾಗಿದೆ. ಏಕೆಂದರೆ ಈ ವರ್ಗಗಳ ಪರಿಸ್ಥಿತಿ ಹಿಂದಿನಂತೆ ದಬ್ಬಾಳಿಕೆಗೆ ಗುರಿಯಾಗಿದೆ. ಸವರ್ಣೀಯ ಹಿಂದೂಗಳಿಂದ ತೊಂದರೆಗೆ ಈಡಾಗಿರುವ ಅನೇಕ ದಲಿತರು ನನಗೆ ಈ ಬಗ್ಗೆ ದೂರುಗಳನ್ನು ಸಲ್ಲಿಸಿದ್ದಾರೆ. ಪೊಲೀಸರು ಈ ದೂರುಗಳನ್ನು ಅಂಗೀಕರಿಸಲು

ನಿರಾಕರಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿದ್ದರೂ ಪ್ರಧಾನಿಗಳು ಸಂಪೂರ್ಣ ಸಮಯವನ್ನು ಮುಸ್ಲಿಂ ರಕ್ಷಣೆಗೆ ಕಳೆಯುತ್ತಿದ್ದಾರೆ. ಇದು ನನಗೆ ನೋವು ತಂದಿದೆ. ಹೀಗೆಂದ ಮಾತ್ರಕ್ಕೆ ಮುಸ್ಲಿಂ ಜನಾಂಗಕ್ಕೆ ರಕ್ಷಣೆ ಒದಗಿಸಬಾರದು ಎಂದಲ್ಲ. ಆದರೆ ಅವರಿಗೆ ಮಾತ್ರ ರಕ್ಷಣೆ ನೀಡಿ ಬೇರೆಯವರನ್ನು ಕಡೆಗಣಿಸಬಹುದೆ ಎಂಬುದೇ ನನ್ನ ಪ್ರಶ್ನೆ. ಪ್ರಧಾನಿಗಳು ಇತರ ಅಲ್ಪಸಂಖ್ಯಾತ ವರ್ಗಗಳ ಅಂದರೆ ಪರಿಶಿಷ್ಟ ಜಾತಿ, ಪಂಗಡ ಮತ್ತು ಭಾರತೀಯ ಕ್ರಿಶ್ಚಿಯನ್‌ರ ಬಗೆಗೆ ಏನು ಆಸಕ್ತಿ ತೋರಿದ್ದಾರೆ? ಈ ವರ್ಗಗಳು ಮುಸ್ಲಿಂ ವರ್ಗಕ್ಕಿಂತ ಅಧಿಕ ರಕ್ಷಣೆಗೆ ಪಾತ್ರವಾಗಿವೆ. ಆದರೂ ಸರಕಾರ ಅವುಗಳ ಬಗ್ಗೆ ದಿವ್ಯ ನಿರ್ಲಕ್ಷ ಹೊಂದಿರುವುದು ಸಂತಸದ ಸಂಗತಿಯಲ್ಲ.

ಈ ಬಗೆಯ ಅಪಮಾನವನ್ನು ನಾನು ಸಹಿಸಲಾರದೆ ಅನೇಕ ಬಾರಿ ಪ್ರತಿಭಟಿಸಿರುವೆ. ಆದರೆ ಅನೇಕ ಬಾರಿ ಗೃಹಮಂತ್ರಿಯವರು ನನ್ನ ಆರೋಪಗಳನ್ನು ಹುರುಳಿಲ್ಲ ಹಾಗೂ ಪರಿಶಿಷ್ಟ ಜಾತಿಯವರಿಗೆ ಶೇಕಡಾ ೧೨ ಮೀಸಲಾತಿ ನೀಡಿರುವುದೇ ಇದಕ್ಕೆ ಸಾಕ್ಷಿ ಎಂದಿದ್ದಾರೆ. ಮುಂದುವರಿದು ಸರಕಾರ ಎಲ್ಲಾ ಇಲಾಖೆಗಳಿಗೆ ಕಳಿಸಿಕೊಟ್ಟ ಒಂದು ಸುತ್ತೋಲೆ ನನಗೆ ಕಳಿಸಿದ್ದಾರೆ. ಅದೇನೆಂದರೆ ಈಚಿನ ದಿನಗಳಲ್ಲಿ ಸರಕಾರಿ ಹುದ್ದೆಗಳಿಗೆ ಎಷ್ಟು ಮಂದಿ ಪರಿಶಿಷ್ಟ ಜಾತಿಯವರನ್ನು ಆಯ್ಕೆಮಾಡಿಕೊಳ್ಳಲಾಗಿದೆ ಎಂದಿದೆ. ಆದರೆ ನನಗೆ ತಿಳಿಸಲಾದ ವರದಿಯಂತೆ ಯಾರನ್ನೂ ಆಯ್ಕೆ ಮಾಡಲಾಗಿಲ್ಲ. ಇದು ಮಾನ್ಯ ಗೃಹಮಂತ್ರಿಗಳಿಂದಲೇ ಬಂದಿರುವ ಮಾಹಿತಿ. ನಾನು ಅಧಿಕ ವಿವರಣೆ ನೀಡಬೇಕಾಗಿಲ್ಲ.

ನಾನು ನನ್ನ ಬಾಲ್ಯದ ದಿನಗಳಿಂದಲೂ, ಪರಿಶಿಷ್ಟ ಜಾತಿಯ ವಿಕಾಸಕ್ಕೆ ಹೋರಾಡಿದ್ದೇನೆ. ಏಕೆಂದರೆ ನಾನು ಓರ್ವ ಪರಿಶಿಷ್ಟ ಕುಟುಂಬದಲ್ಲಿಯೇ ಜನಿಸಿದವನಾಗಿದ್ದೇನೆ. ನಾನು ನನಗಾಗಿ ಯಾವ ಹೋರಾಟ ಮಾಡಿಲ್ಲ. ನಾನು ಮನಸ್ಸು ಮಾಡಿದ್ದರೆ ಇಂದು ಈ ಪರಿಸ್ಥಿತಿಯಲ್ಲಿರದೆ ಯಾವುದೋ ಒಂದು ಉನ್ನತ ಸ್ಥಾನದಲ್ಲಿರುತ್ತಿದ್ದೆ. ಆದರೆ ನಾನು ಆ ಬಗೆಯ ಆಮಿಷಗಳಿಗೆ ಬಲಿಯಾಗಲಿಲ್ಲ. ನಾನು ಒಂದು ವೇಳೆ ಕಾಂಗ್ರೆಸ್ ಪಕ್ಷ ಸೇರಿದ್ದರೆ, ಇಂದು ರಾಷ್ಟ್ರದ ಉನ್ನತ ಹುದ್ದೆಯಲ್ಲಿರುತ್ತಿದ್ದೆ. ಆದರೆ ನಾನು, ಪರಿಶಿಷ್ಟ ವರ್ಗದ ಹಿತಕ್ಕೆಂದೇ ಹೋರಾಡುತ್ತಿದ್ದೇನೆ. ಒಟ್ಟಾರೆ ಪರಿಶಿಷ್ಟ ವರ್ಗವನ್ನು ಕಡೆಗಣಿಸಲಾಗಿದೆ ಎಂದೇ ಹೇಳುವೆ.

ಮೂರನೆಯ ಕಾರಣ ಎಂದರೆ, ನಮ್ಮ ದೇಶದ ವಿದೇಶಾಂಗ ನೀತಿ. ಏಕೆಂದರೆ ನಾವು ೧೫ ಆಗಸ್ಟ್ ೧೯೪೭ರಂದು ಸ್ವತಂತ್ರರಾದ ಮೇಲೆ, ವಿಶ್ವದ ಎಲ್ಲಾ ದೇಶಗಳೂ ನಮಗೆ ಶುಭ ಹಾರೈಸಿದವು ಹಾಗೂ ಅವರ ವಿದೇಶಾಂಗ ನೀತಿಯಲ್ಲಿ ಬದಲಾವಣೆ ಕಂಡುಬಂದಿತು. ಆದರೆ ಸ್ವಾತಂತ್ರ್ಯ ಬಂದು ನಾಲ್ಕು ವರ್ಷಗಳಾದ ಮೇಲೆ ಎಲ್ಲ ಮಿತ್ರರೂ ನಮ್ಮನ್ನು ಕೈಬಿಟ್ಟಿದ್ದಾರೆ, ಏಕೆಂದರೆ ನಮ್ಮ ವಿದೇಶಾಂಗ ನೀತಿಯಿಂದಾಗಿ. ಹೀಗಾಗಿ ಯು.ಎನ್.ಓ ದಲ್ಲಿ ನಮ್ಮ ನಿಲುವಳಿಗೆ ಬೆಂಬಲ ಸೂಚಿಸುವವರೇ ಇಲ್ಲದಂತಾಗಿದೆ. ನನಗೆ ಬಿಸ್ಮಾರ್ಕ್ ಹಾಗೂ ಜಾರ್ಜ್ ಬರ್ನಾಡ್ ಷಾ ಅವರ ಹೇಳಿಕೆಗಳು ಜ್ಞಾಪಕಕ್ಕೆ ಬರುತ್ತಲಿದೆ. ಬಿಸ್ಮಾರ್ಕ್ ಅವರು ಹೇಳುವಂತೆ "ರಾಜಕಾರಣ ಆದರ್ಶಗಳನ್ನು ಜಾರಿಗೆ ತರುವ ಆಟವಲ್ಲ" ರಾಜಕಾರಣ ಎಂದರೆ ಸಾಧ್ಯವಾದುದನ್ನು ಸಾಧಿಸುವುದೇ ಹೊರತು ಆದರ್ಶಗಳ ಬೆನ್ನೇರಿಹೋಗುವುದಲ್ಲ. ಬರ್ನಾಡ್ ಷಾ ಅವರ ಹೇಳಿಕೆಯಂತೆ ಆದರ್ಶಗಳು ಉತ್ತಮ. ಆದರೆ ಉತ್ತಮ ಆದರ್ಶವಾದಿಯಾದರೆ ಅಪಾಯ ತಪ್ಪದು. ಈ ಹಿರಿಯರ ಹೇಳಿಕೆಗೆ ನಮ್ಮ ವಿದೇಶಾಂಗ ನೀತಿ ವಿರುದ್ಧವಾಗಿವೆ ಎಂದೇನೂ ಹೇಳಲೇಬೇಕಾಗಿಲ್ಲ. ಈ ಮಾದರಿಯ ಆದರ್ಶದ ಬೆನ್ನೇರಿದ ನಾವು, ಔದ್ಯೋಗೀಕರಣಕ್ಕೆ ಹಣವನ್ನು ವೆಚ್ಚಮಾಡದೇ ಹಣವನ್ನು ರಕ್ಷಣಾ ಇಲಾಖೆ ಮತ್ತು ಮಿಲಿಟರಿಗೆ ಖರ್ಚು

ಮಾಡುತ್ತಿದ್ದೇವೆ. ಇದು ಸರಿಯೆ?

ನಾವು ಸಂಗ್ರಹಿಸುವ ೩೫೦ ಕೋಟಿ ರೂಪಾಯಿ ಆದಾಯದಲ್ಲಿ ೧೮೦ ಕೋಟಿ ಹಣವನ್ನು ಕೇವಲ ಸೈನಿಕ ವೆಚ್ಚಕ್ಕೆ ವ್ಯಯವಾಗುತ್ತಿದೆ. ಇದು ಪ್ರಗತಿಗೆ ಅಡಚಣೆಯಾಗಲಾರದೆ? ಇಷ್ಟು ಹಣ ಮಿಲಿಟರಿಯ ಮೇಲೆ ಖರ್ಚು ಮಾಡಿ ನಾವು ಏನನ್ನು ಸಾಧಿಸಿರುವೆವು. ಹಣ ಹೋಯಿತು. ಹಣದೊಂದಿಗೆ ಮಿತ್ರರನ್ನು ಕಳೆದುಕೊಂಡಿದ್ದೇವೆ. ಇದು ಉತ್ತಮ ವಿದೇಶಾಂಗ ನೀತಿಯೆ?

ಪಾಕಿಸ್ಥಾನದೊಂದಿಗೆ ನಮ್ಮ ಹೋರಾಟ ನಮ್ಮ ವಿದೇಶಾಂಗದ ಪ್ರಮುಖ ಅಂಶವಾಗಿರುವುದನ್ನು ನಾನು ಸಹಿಸಲಾರೆ. ಎರಡು ಕಾರಣಗಳಿಂದಾಗಿ ನಮ್ಮ ಬಾಂಧವ್ಯ ಪಾಕಿಸ್ಥಾನದೊಂದಿಗೆ ವಿರಸವನ್ನುಂಟುಮಾಡಿದೆ. ೧) ಕಾಶ್ಮೀರ ಸಮಸ್ಯೆ ೨) ಪೂರ್ವಬಂಗಾಳದಲ್ಲಿ ನಮ್ಮ ಜನರ ಪರಿಸ್ಥಿತಿ. ಪತ್ರಿಕಾ ವರದಿಗಳಂತೆ ನಮ್ಮ ಜನರ ಪರಿಸ್ಥಿತಿ ಪೂರ್ವಬಂಗಾಳದಲ್ಲಿ ಗಂಭೀರವಾಗಿದೆ. ಪರಿಸ್ಥಿತಿ ಹೀಗಿದ್ದಾಗಲೂ ನಾವು ಕಾಶ್ಮೀರ ಪ್ರಶ್ನೆಯನ್ನೇ ಮುಂದುವರಿಸಿಕೊಂಡು ಬರುತ್ತಿರುವುದು ಸರಿಯೆ? ನಾನು ಹೇಳಬಹುದಾದರೆ ನಾನು ಕಾಶ್ಮೀರದ ವಿಷಯದಲ್ಲಿ ನಿಜವಾಗಿರಬಹುದಾದ ಸಮಸ್ಯೆಗಾಗಿ ಹೋರಾಡದೆ, ಯಾರು ಆಕ್ರಮಣಕಾರರು ಹಾಗೂ ಯಾರು ಸರಿ, ಯಾರು ತಪ್ಪು ಎಂಬ ನಿರರ್ಥಕ ವಾದಕ್ಕಾಗಿಯೇ ಹೋರಾಟವನ್ನು ಮುಂದುವರಿಸಿಕೊಂಡೇ ಬಂದಿದ್ದೇವೆ. ನನಗೆ ತೋರಿದಂತೆ ಯಾರು ತಪ್ಪು, ಯಾರು ಸರಿ ಎಂಬುದಲ್ಲ. ಅದು ಕಾಶ್ಮೀರದ ವಿಭಜನೆ. ನನಗೆ ತೋಚಿದಂತೆ ಹಿಂದೂ ಮತ್ತು ಬುದ್ಧ ಭಾಗದ ಕಾಶ್ಮೀರವನ್ನು ಭಾರತಕ್ಕೆ ಹಾಗೂ ಮುಸ್ಲಿಂ ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ವರ್ಗಾಯಿಸುವುದು ಸೂಕ್ತ. ನಾವು ಭಾರತವನ್ನೇ ಈ ಸೂತ್ರದಂತೆ ವಿಭಜಿಸಿರುವೆವು. ಅದನ್ನೇ ಕಾಶ್ಮೀರಕ್ಕೆ ಏಕೆ ಅನುಸರಿಸಬಾರದು? ಕಾಶ್ಮೀರ ಮುಸ್ಲಿಮರು ಮತ್ತು ಪಾಕಿಸ್ಥಾನ ಏನಾದರೂ ನಿರ್ಣಯಿಸಿಕೊಳ್ಳಲಿ, ಅದರ ಬಗೆಗೆ ನಾವು ತಲೆ ಕೆಡಿಸಿಕೊಳ್ಳಬಾರದು ಅಥವಾ ಕಾಶ್ಮೀರವನ್ನು ಮೂರುಭಾಗವಾಗಿ ವಿಂಗಡಿಸಲೂಬಹುದು. ಯುದ್ಧವಿರಾಮದ ಭಾಗ, ಕಾಶ್ಮೀರ್ ಕಣಿವೆ, ಜಮ್ಮು ಲಡಾಕದ ವಿಭಾಗ ಮಾಡಿ ಕಣಿವೆಯಲ್ಲಿ ಮಾತ್ರ ಜನಮತದ ಅಭಿಪ್ರಾಯವನ್ನು ಸಂಗ್ರಹಿಸುವುದು. ನನಗೆ ಭಯವಾಗುವ ವಿಷಯ ಎಂದರೆ, ಸಮಗ್ರ ಜನಮತ ಸಂಗ್ರಹ, ಹೀಗೆ ಮಾಡಿದಲ್ಲಿ ಕಾಶ್ಮೀರಿ ಹಿಂದೂ ಮತ್ತು ಬುದ್ಧರಿಗೆ ಅನ್ಯಾಯವಾಗುತ್ತದೆ. ಆಗ ಬುದ್ಧರು ಮತ್ತು ಹಿಂದೂಗಳು, ಪಾಕಿಸ್ಥಾನದಲ್ಲೇ ಒಂದು ಪೂರ್ವ ಬಂಗಾಲದಲ್ಲಿ ನಮ್ಮ ಜನ ಅನುಭವಿಸುತ್ತಿರುವ ಸಂಕಷ್ಟಗಳನ್ನೇ ಎದುರಿಸಬೇಕಾಗುತ್ತದೆ.

ನಾನು ನನ್ನ ರಾಜೀನಾಮೆಗೆ ಸಂಬಂಧಿಸಿದಂತೆ ನಾಲ್ಕನೆಯ ಕಾರಣವನ್ನು ವಿವರಿಸುವೆ. ಸಂಪುಟವು, ಸಮಿತಿಗಳ ನಿರ್ಣಯಗಳನ್ನು ನೋಂದಾಯಿಸುವ ಮತ್ತು ದಾಖಲಿಸುವ ಕಾರ್ಯವನ್ನು ಮಾಡುತ್ತದೆ ಎಂದರೆ ತಪ್ಪು ಭಾವಿಸಬಾರದು. ಏಕೆಂದರೆ, ಸಮಿತಿಗಳೇ ಸಂಪುಟದ ಕಾರ್ಯಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತವೆ. ಅದರ ಆಧಾರದ ಮೇಲೆ ಸಂಪುಟ ತನ್ನ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಹೀಗೆ ವಿದೇಶಾಂಗ ಮತ್ತು ಸಂರಕ್ಷಣಾ ಸಮಿತಿಗಳಿವೆ. ಈ ಬಗೆ ಎಲ್ಲಾ ಪ್ರಮುಖ ನಿರ್ಣಯಗಳನ್ನೂ ಸಮಿತಿಯ ಹಂತದಲ್ಲಿಯೇ ನಿರ್ಧರಿಸಲಾಗುತ್ತಿದೆ. ಇದಕ್ಕೆ ಕಾರಣ ಎಂದರೆ ಸಮಿತಿಯಲ್ಲಿ ಸಂಪುಟದ ಸದಸ್ಯರಿರುತ್ತಾರೆ. ಕಾಟಾಚಾರಕ್ಕೆ ಬೇರೆಯವರನ್ನು ನೇಮಿಸಿಕೊಳ್ಳಲಾದರೂ, ನಿರ್ಣಯದ ಹಂತದಲ್ಲಿ ಅವರ ಪಾತ್ರ ಶೂನ್ಯ. ಏಕೆಂದರೆ ಅವರಿಗೆ ಸಂಪುಟದ ಮಟ್ಟದಲ್ಲಿಯ ವಿಷಯಗಳ ಅರಿವೇ ಇರದು. ಆದರೆ ನಾನು ಈ ಎರಡೂ ಸಮಿತಿಗಳ ಸದಸ್ಯನಲ್ಲ. ಅವು ತಮ್ಮ ನಿರ್ಣಯಗಳನ್ನು ಕಬ್ಬಿಣದ ಪರದೆಯ ಹಿಂದೆ ತೆಗೆದುಕೊಳ್ಳುತ್ತವೆ. ಆದರೆ ಜಂಟಿ ಜವಾಬ್ದಾರಿಯಂತೆ ನಾನು ಅದರ ಹೊಣೆ ಹೊರಬೇಕು. ಅದು

ನನಗೆ ಇಷ್ಟವಿಲ್ಲ. ಏಕೆಂದರೆ ಧೋರಣೆಯನ್ನು ನಿರ್ಣಯಿಸುವಲ್ಲಿ ನನ್ನ ಪಾತ್ರ ಶೂನ್ಯ.

ನಾನು ರಾಜೀನಾಮೆಯನ್ನು ನೀಡಲೇಬೇಕೆಂಬ ನಿರ್ಧಾರಕ್ಕೆ ಏಕೆ ಬಂದೆ ಎಂಬುದನ್ನು ವಿವರಿಸುವೆ. ನನ್ನ ರಾಜೀನಾಮೆಗೆ ಪ್ರಮುಖ ಕಾರಣವೆಂದರೆ ಹಿಂದೂ ಕೋಡ್ ಹಾಗೂ ಸರಕಾರ ಅದಕ್ಕೆ ತೋರಿದ ಅಸಡ್ಡೆ. ಸದನದಲ್ಲಿ ಈ ವಿಧೇಯಕವನ್ನು ಏಪ್ರಿಲ್ ೧೧, ೧೯೪೭ರಂದು ಮಂಡಿಸಲಾಯಿತು. ನಾಲ್ಕು ವರ್ಷಗಳ ನಂತರ ಇದನ್ನು ಕೊಲ್ಲಲಾಯಿತು, ಆದರೆ ಯಾರೂ ಇದರ ಬಗ್ಗೆ ಕಣ್ಣೀರು ಸುರಿಸಿಲ್ಲ. ಆದರೆ ಈ ವಿಧೇಯಕದ ಕೇವಲ ನಾಲ್ಕು ವಿಧಿಗಳನ್ನು ಮಾತ್ರ ಅಂಗೀಕರಿಸಲಾಯಿತು. ಅದು ಸದನದ ಮುಂದೆ ವಾಯುರೋಗ ಪೀಡಿತ ಹಸುಳೆಯಂತೆ ವಿಲಿವಿಲಿ ಒದ್ದಾಡುತ್ತಲೇ ಇತ್ತು; ಏಕೆಂದರೆ ಒಂದು ವರ್ಷ ಮೀರಿದ್ದರೂ, ಈ ವಿಧೇಯಕವನ್ನು ಸೆಲೆಕ್ಟ್ ಸಮಿತಿ ಮುಂದೆ ಸರಕಾರವು ತರಲೇ ಇಲ್ಲ. ನಂತರ ೯ ಏಪ್ರಿಲ್ ೧೯೪೮ರಂದು ಸದನಕ್ಕೆ ಸಲ್ಲಿಸಲಾಯಿತು. ಈ ವರದಿಯ ಬಗ್ಗೆ ನಿಲುವಳಿಯನ್ನು ನಾನು ೩೧ ಆಗಸ್ಟ್ ೧೯೪೮ರಂದು ಮಂಡಿಸಿದೆ. ಅದು ಕೇವಲ ನಿಲುವಳಿಯನ್ನು ಸೂಚಿಸುವ ವಿಧೇಯಕವಾಗಿತ್ತು. ಅದನ್ನು ಕಾರ್ಯಕ್ರಮದಲ್ಲಿ ಸೇರ್ಪಡಿಸಲಾಯಿತು. ಆದರೆ ಈ ನಿಲುವಳಿಯನ್ನು ಕುರಿತು ಚರ್ಚೆಗೆ, ಫೆಬ್ರವರಿ ೧೯೪೯ರ ಅವಧಿಯವರೆಗೂ ಅವಕಾಶ ನೀಡಲಿಲ್ಲ. ಆಗ ಕೂಡಾ ಅದರ ಬಗ್ಗೆ ಸಂಪೂರ್ಣ ಚರ್ಚೆಗೆ ಆಸ್ಪದ ನೀಡದೆ ಅದನ್ನು ಹತ್ತು ತಿಂಗಳ ಅವಧಿಯಲ್ಲಿ ಹಂತ ಹಂತವಾಗಿ ಚರ್ಚಿಸಲಾಯಿತು. ನಾಲ್ಕು ದಿನ ಫೆಬ್ರವರಿಯಲ್ಲಿ, ಒಂದು ದಿನ ಮಾರ್ಚ್‌ನಲ್ಲಿ, ಎರಡು ದಿನ ಏಪ್ರಿಲ್ ೧೯೪೯ ಇದಾದ ನಂತರ ಡಿಸೆಂಬರ್ ೧೯೪೯ ಅಂದರೆ ಡಿಸೆಂಬರ್ ೧೯ರಂದು ನನ್ನ ನಿಲುವಳಿಯನ್ನು ಚರ್ಚೆಗೆಂದು ಸದನ ಅಂಗೀಕರಿಸಿತು. ಆದರೆ ೧೯೫೦ರ ವರೆಗೆ ಈ ವಿಧೇಯಕದ ಚರ್ಚೆಗೆ ಅವಕಾಶವೇ ದೊರೆಯಲಿಲ್ಲ. ಫೆಬ್ರವರಿ ೧೯೫೧ರಲ್ಲಿ ಈ ವಿಧೇಯಕವನ್ನು ವಿಧಿವತ್ತಾಗಿ ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು. ಅದೂ ಕೇವಲ ಮೂರೇ ದಿನಗಳು ಅಂದರೆ ೫, ೬ ಮತ್ತು ೭ ರಂದು ಚರ್ಚಿಸಿ ಮತ್ತು ಅದನ್ನು ಕೊಳೆಯಲೆಂದೇ ಬಿಡಲಾಯಿತು.

ಈ ಸಂಸತ್ತಿನ ಕೊನೆಯ ಅಧಿವೇಶನವಾಗಿರುವುದರಿಂದ, ಈಗ ಸಂಪುಟವು ಈ ವಿಧೇಯಕವನ್ನು ಸದ್ಯದ ಸಂಸತ್ತಿನಲ್ಲಿಯೇ ಅಂಗೀಕರಿಸಬೇಕೊ ಅಥವಾ ಮುಂಬರುವ ಸಂಸತ್ತಿನಲ್ಲಿ ಕೈಗೆತ್ತಿಕೊಳ್ಳಬೇಕೆಂಬುದನ್ನು ನಿರ್ಣಯಿಸಬೇಕಾಗಿರುವುದರಿಂದ, ಸಂಪುಟವು ಈ ಅಧಿವೇಶನದಲ್ಲಿಯೆ ಅದನ್ನು ಸಂಪೂರ್ಣ ಗೊಳಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಿತು. ಆದುದರಿಂದ ಮಸೂದೆಯನ್ನು ಕಾರ್ಯಕ್ರಮಪಟ್ಟಿಯಲ್ಲಿ ಸೇರಿಸಿ ಅದನ್ನು ೧೭ ಸೆಪ್ಟೆಂಬರ್ ೧೯೫೧ರಂದು ವಿಧಿವತ್ತಾಗಿ ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು. ಚರ್ಚೆಯು ಮುಂದುವರಿದಿದ್ದಾಗ, ಪ್ರಧಾನಿಗಳು ಒಂದು ಹೊಸ ಸೂಚನೆಯನ್ನು ಸದನದಲ್ಲಿ ಮಂಡಿಸಿದರು. ಅದೇನೆಂದರೆ, ಈ ವಿಧೇಯಕದ ಚರ್ಚೆಗೆ ಸಾಕಷ್ಟು ಸಮಯ ಹಿಡಿಯುವುದರಿಂದ, ಅದನ್ನು ಈ ಅಧಿವೇಶನದಲ್ಲಿ ಸಂಪೂರ್ಣಗೊಳಿಸಲಾಗವುದಿಲ್ಲ. ಅದಕ್ಕಾಗಿ ಅದರ ಒಂದು ಭಾಗವನ್ನು ಕಾನೂನು ಮಾಡಿ ಮುಗಿಸುವುದು ಉತ್ತಮ ಎಂದರು. ಇದೊಂದು ಕಪಿಮುಷ್ಟಿಯ ತಿರುಚನ್ನು ನಾನು ಸಹಿಸದೇ ಅನ್ಯಮಾರ್ಗವೇ ಇರಲಿಲ್ಲ. ಏಕೆಂದರೆ ನಾನು ಇದನ್ನು ಪ್ರತಿಭಟಿಸಿದರೆ ವಿಧೇಯಕವೇ ಮೂಲೆಗುಂಪಾಗಬಹುದು. ಹೀಗಾಗಿ ಅಂಶತಃ ವಿಧೇಯಕಕ್ಕೆ ಒಪ್ಪಿದೆ. ಪ್ರಧಾನಿಗಳ ಸಲಹೆಯಂತೆ ಕೇವಲ ವಿವಾಹ ಹಾಗೂ ವಿಚ್ಛೇದನೆಯ ಅಂಶವನ್ನು ಮಾತ್ರ ಚರ್ಚೆಗೆ ಎತ್ತಿಕೊಳ್ಳಲಾಯಿತು. ಹೀಗೆ ಅರ್ಧಂಬರ್ಧವಾದ ವಿಧೇಯಕ ಮುಂದುವರಿಯಿತು. ಮೂರು ನಾಲ್ಕು ದಿನಗಳ ಚರ್ಚೆಯ ನಂತರ ಪ್ರಧಾನಿಗಳು ಮತ್ತೊಂದು ನೂತನ ಸಲಹೆಯನ್ನು ಸದನದ ಮುಂದೆ ಇರಿಸಿದರು. ಈ ಬಾರಿ ಅವರ

ಸಲಹೆಯಂತೆ ಸಂಪೂರ್ಣ ವಿಧೇಯಕವನ್ನು ವಿವಾಹ-ವಿಚ್ಛೇದನೆಯನ್ನೂ ಸೇರಿದಂತೆ ಕೈಬಿಡಬೇಕು ಎಂದರು. ಇದು ನನಗೆ ಸಿಡಿಲು ಬಡಿದಂತಾಯಿತು. ನಾನು ದಿಗ್ಭ್ರಮೆಹೊಂದಿ ಏನು ಹೇಳಬೇಕೋ ತಿಳಿಯದಂತಾಯಿತು. ಈ ಅರೆ ವಿಧೇಯಕವನ್ನು ಸಮಯದ ಅಭಾವದ ಬಲಿಗೆ ನೀಡಲು ನನಗೆ ಸಾಧ್ಯವಿರಲಿಲ್ಲ. ನನಗೆ ತಿಳಿದಂತೆ ಸಂಪುಟದಲ್ಲಿಯ ಹಲವು ಸಚಿವರು ತಮ್ಮ ವಿಧೇಯಕಗಳನ್ನು ಮಂಜೂರು ಮಾಡಿಸಿಕೊಳ್ಳಲು ಈ ಪಿತೂರಿ ನಡೆಸಿದ್ದರು. ನನಗೆ, ತಿಳಿಯಲಾರದ ಸಂಗತಿ ಎಂದರೆ ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಅಲಿಘರ್ ವಿಶ್ವವಿದ್ಯಾಲಯ ಸಮಾಚಾರ ಪತ್ರಿಕೆ ಮಸೂದೆಗಳಿಗೆ ಅವಕಾಶ ಹೇಗೆ ದೊರೆಯಿತು? ಈ ವಿಶ್ವವಿದ್ಯಾಲಯಗಳ ಬಗೆಗೆ ಶಾಸನಗಳಿಗೆ ಅವುಗಳ ಮುಂದುವರಿಕೆಗೆ ಯಾವ ಗಂಡಾಂತರವೂ ಇರದೇ ಹೋದಾಗ್ಯೂ ಈ ಮಸೂದೆಗಳನ್ನೇ ಕೈಗೆತ್ತಿಕೊಳ್ಳಲಾಯಿತು. ನನ್ನ ಅನಿಸಿಕೆಯಂತೆ ಪ್ರಧಾನಿಗೆ ಹಿಂದೂ ಕೋಡ್ ಬಗ್ಗೆ ಕಾಳಜಿ ಇರಲಿಲ್ಲ.

ಈ ವಿಧೇಯಕದಿಂದಾಗಿ ನನಗೆ ಮಾನಸಿಕ ಹಿಂಸೆಯಾಗಿದೆ. ಈ ದಿಶೆಯಲ್ಲಿ ನನಗೆ ರಾಜಕೀಯ ಪಕ್ಷದ ಬೆಂಬಲ ದೊರಕಲಿಲ್ಲ. ಆದರೆ ಪ್ರಧಾನಿಗಳು ಈ ವಿಧೇಯಕಕ್ಕೆಂದೇ ಮನಸಾಕ್ಷಿ ಆಧಾರದಂತೆ ಮತನೀಡಲು ಹೇಳಿದ್ದು ನಿಜವಾಗಿಯೂ ಪಕ್ಷದಲ್ಲಿ ಒಂದು ಚಾರಿತ್ರಿಕ ದಾಖಲೆಯೇ ಆಗಿದೆ. ಇದಾವುದೂ ನನಗೆ ಪ್ರಮುಖವಾಗಿರಲಿಲ್ಲ. ನಾನು ಎರಡು ವಿಷಯಗಳನ್ನು ಬಯಸಿದ್ದೆ. ಅವೆಂದರೆ ಪಕ್ಷವು ಸಮಯದ ಬಗೆಗೆ ಆದೇಶವನ್ನು ನೀಡಬೇಕಾಗಿತ್ತು. ಎರಡನೆಯದಾಗಿ ಸಾಕಷ್ಟು ಚರ್ಚೆಯಾದ ಮೇಲೆ ಒಂದು ಹಂತದಲ್ಲಿ ಅದನ್ನು ಸಂಪೂರ್ಣಗೊಳಿಸದೆ ಅನವಶ್ಯಕವಾದ ಚರ್ಚೆಗೆ ಆಸ್ಪದ ನೀಡದಂತೆ ಸಂಪೂರ್ಣ ಗೊಳಿಸಬೇಕಾಗಿತ್ತು. ಆದರೆ ಈ ವಿಧವಾದ ಆದೇಶ ಪಕ್ಷ ಸಚೇತಕನಿಂದ ಹೊರಡಲೇ ಇಲ್ಲ. ಸಂಸದೀಯ ವ್ಯವಹಾರ ಖಾತೆಯ ಸಚಿವ ಹಾಗೂ ಪಕ್ಷದ ಸಚೇತಕನ ಪಾತ್ರ ನಿಂದನೀಯವಾಗಿತ್ತೆಂದೆ ಹೇಳಬಯಸುವೆ. ಏಕೆಂದರೆ ಅವರು ಹಿಂದೂ ಕೋಡ್ ವಿಧೇಯಕದ ಕಡುವಿರೋಧಿಯಾಗಿದ್ದರು. ಅವರು ಈ ವಿಧೇಯಕದ ಬಗ್ಗೆ ನನಗೆ ಯಾವ ವಿಧದಲ್ಲಿಯೂ ಸಹಕರಿಸಲಿಲ್ಲ. ಸರಕಾರದ ಸಮಯವನ್ನು ಹಾಳುಮಾಡದೆ ವಿಧೇಯಕವನ್ನು ಮುನ್ನುಗ್ಗಿಸುವುದು ಸಚೇತಕನ ಕರ್ತವ್ಯ, ಆದರೆ ಹಿಂದೂ ಕೋಡ್ ವಿಧೇಯಕದಲ್ಲಿ ಇದು ಸಂಪೂರ್ಣ ಕಣ್ಮರೆಯಾಗಿತ್ತು. ನನಗೆ ಕಂಡಂತೆ ಸಚೇತಕನು ಪ್ರಧಾನಿಗೆ ವಿಧೇಯನಾಗಿರಲಿಲ್ಲ. ಅದರಂತೆಯೇ ಪ್ರಧಾನಿಯು, ಅವಿಧೇಯನಾದ ಸಚೇತಕನಿಗೆ ವಿಧೇಯಕನಾಗಿದ್ದನ್ನು ನಾನು ಎಂದೂ ಕಂಡಿರಲಿಲ್ಲ. ಸಚೇತಕನು ಕೇವಲ ಸಂವಿಧಾನ ವಿರೋಧಿ ನಡವಳಿಕೆ ಹೊಂದಿದ್ದರೂ, ಪ್ರಧಾನಿಗಳಿಗೆ ಬೇಕಾದವನಾಗಿದ್ದ. ಈ ಎಲ್ಲಕ್ಕಿಂತಲೂ ಅಧಿಕವಾಗಿ ನನಗೆ ನೋವು ನೀಡಿದ ಸಂಗತಿ ಎಂದರೆ ಸಚೇತಕನಿಗೆ ಪಕ್ಷದ ಕಾರ್ಯದಲ್ಲಿ ಬಡ್ತಿಯನ್ನು ನೀಡಿದ್ದು. ಈ ಎಲ್ಲ ಹಿನ್ನೆಲೆಯಿಂದ ನಾನು ಮಾನಸಿಕ ಆಘಾತಕ್ಕೆ ಗುರಿಯಾಗಿ, ಮುಂದುವರಿಯುವ ಪ್ರಶ್ನೆಯೇ ಇರಲಿಲ್ಲ.

ವಿರೋಧ ಪಕ್ಷದ ವಿರೋಧವು ಬಲಶಾಲಿಯಾಗಿರುವುದರಿಂದ ವಿಧೇಯಕವನ್ನು ಕೈಬಿಡಲೇಬೇಕೆಂದು ಹೇಳಲಾಯಿತು. ವಿರೋಧ ಪಕ್ಷದ ಬಲವೆಷ್ಟಿತ್ತು? ಯಾವ ಸಂದರ್ಭದಲ್ಲಿಯೇ ಆಗಲಿ ಈ ವಿಧೇಯಕದ ಬಹುಮತವೇ ಅಧಿಕವಾಗಿತ್ತು. ೧೨೦ ಪರ ಮತಗಳಿದ್ದರೆ, ಕೇವಲ ೨೦ ವಿರೋಧವಾಗಿದ್ದವು. ಪಕ್ಷಮಟ್ಟದಲ್ಲಿ ೪೪ ವಿಧಿಗಳನ್ನು ಕೇವಲ ಮೂರುವರೆ ಗಂಟೆಯಲ್ಲಿಯೆ ಅಂಗೀಕರಿಸಲಾಯಿತು. ಇದು ವಿರೋಧಪಕ್ಷದ ಬಲ ತೋರಿಸುತ್ತದೆ. ಈ ವಿಧೇಯಕ ಎರಡು ಮೂರು ಬಾರಿ ವಿಭಜನೆಗೆ ಗುರಿಯಾದರೂ ಅಧಿಕ ಬಹುಮತದಿಂದಲೇ ಅಂಗೀಕರಿಸಲಾಗಿದೆ.

ಆದುದರಿಂದ ನಾನು ಪ್ರಧಾನಿಗಳ ನಿರ್ಣಯವನ್ನು ಅಂಗೀಕರಿಸಲಾರೆ. ಆದರೂ ನನ್ನ

ರಾಜೀನಾಮೆಯನ್ನು ಕುರಿತು ದೀರ್ಘ ವಿವರಣೆ ನೀಡಲೇಬೇಕಾಗಿ ಬಂತು, ಏಕೆಂದರೆ ಹಲವರು ನಾನು ಅನಾರೋಗ್ಯದಿಂದಾಗ ಹೊರಬಿದ್ದಿರುವೆ ಎಂದೇ ಪ್ರಚಾರ ಮಾಡಿದರು. ಆದರೆ ನಾನು ನನ್ನ ಕರ್ತವ್ಯದಿಂದ ಹಿಮ್ಮೆಟ್ಟಿದವನಲ್ಲ.

ಕೆಲವರ ಹೇಳಿಕೆಯಂತೆ ನನ್ನ ರಾಜೀನಾಮೆ ಅಕಾಲಿಕವಂತೆ. ಒಂದು ವೇಳೆ ವಿದೇಶಾಂಗ ನೀತಿ ಮನಸ್ಸಿಗೆಬಾರದೇ ಹೋಗಿದ್ದ ಸಮಯದಲ್ಲಿಯೇ ರಾಜೀನಾಮೆ ನೀಡಬಹುದಾಗಿತ್ತು ಎಂದೇ ಅವರ ಅನಿಸಿಕೆ. ಆದರೆ ನಾನು ಸಂವಿಧಾನ ರಚನೆಯ ಕಾರ್ಯದಲ್ಲಿ ಮಗ್ನನಾಗಿದ್ದೆ. ಅದು ೨೬, ಜನವರಿ ೧೯೫೦ರ ಅವಧಿಯವರೆಗೂ ನನ್ನ ಸಮಯವನ್ನು ಪಡೆದುಕೊಂಡಿತ್ತು. ಅಲ್ಲದೆ ಜನತಾ ಪ್ರತಿನಿಧಿಗಳ ಕಾನೂನನ್ನು ರಚಿಸುತ್ತಿದ್ದೆ. ಹೀಗಾಗಿ ನನಗೆ ವಿದೇಶಾಂಗ ನೀತಿಯ ಬಗೆಗೆ ಚಿಂತನೆ ಮಾಡಲು ಅವಕಾಶವೇ ಇರಲಿಲ್ಲ. ಅಲ್ಲದೆ ಈ ಎಲ್ಲ ಕಾರ್ಯಗಳನ್ನು ನಡುನೀರಿನಲ್ಲಿ ಬಿಡುವುದು ಸೂಕ್ತವಲ್ಲವೆಂದೆ ನಾನು ಭಾವಿಸಿದ್ದೆ.

ಎರಡನೆಯದಾಗಿ, ನಾನು ಹಿಂದೂ ಕೋಡ್ ವಿಧೇಯಕಕ್ಕೆಂದೇ ಮುಂದುವರಿದೆ. ಅದು ತಪ್ಪು ಎಂದೇ ಹಲವರ ಅಭಿಪ್ರಾಯವಾಗಿದೆ. ಆದರೆ ನಾನು ಬೇರೆ ದೃಷ್ಟಿಕೋನ ತಳೆದಿದ್ದೆ, ಏಕೆಂದರೆ ಹಿಂದೂ ಕೋಡ್ ವಿಧೇಯಕದಿಂದ ದೇಶದಲ್ಲಿಯ ಸಾಮಾಜಿಕ ಪರಿಸ್ಥಿತಿಯಲ್ಲಿ ಅಗಾಧ ಪರಿವರ್ತನೆ ಉಂಟಾಗುತ್ತದೆ ಎಂದೇ ಭಾವಿಸಿದ್ದೆ. ಈಗಲ್ಲದೇ ಹೋದರೂ ಮುಂದೆ ಈ ವಿಧೇಯಕವನ್ನು ಅಂಗೀಕರಿಸುವ ಧೈರ್ಯ ನನಗಿದೆ. ಏಕೆಂದರೆ ಈ ಹಿಂದೂ ಕೋಡ್ ವಿಧೇಯಕದಿಂದ ವರ್ಣ ಹಾಗೂ ವರ್ಗಬೇಧಗಳೂ ಲಿಂಗಗಳಲ್ಲಿಯ ಭೇದಭಾವನೆಗಳು, ಅಸ್ಪೃಶ್ಯತೆ, ಆರ್ಥಿಕ, ಅಸಮಾನತೆಗಳು ತೊಲಗಿ ಹಿಂದೂ ಸಮಾಜದ ಸಮಗ್ರ ವಿಕಾಸಕ್ಕೆ ನಾಂದಿಯಾಗಬಲ್ಲದು. ಇದು ನಾನು ಹಿಂದೂ ಕೋಡ್ ವಿಧೇಯಕದ ಬಗ್ಗೆ ಹೊಂದಿರುವ ಭಾವನೆ. ಅದಕ್ಕಾಗಿ ನಾನು ಮುಂದುವರಿದೆ. ಎಲ್ಲಾ ಭಿನ್ನಾಭಿಪ್ರಾಯಗಳನ್ನು ಲೆಕ್ಕಿಸದೇ ಮುಂದುವರಿದೆ. ಆದರೆ ಪ್ರಧಾನಿಗಳು ಸಂಸತ್ತಿನಲ್ಲಿ ನೀಡಿದ ಮೂರು ಹೇಳಿಕೆಗಳು ನನ್ನ ಲೆಕ್ಕಚಾರವನ್ನೇ ತಲೆಕೆಳಗೆ ಮಾಡಿದವು. ಅವೆಂದರೆ : ೨೮ ನವೆಂಬರ್ ೧೯೪೯ "ಸರಕಾರ ಹಿಂದೂ ಕೋಡ್‌ಗೆ ಬದ್ಧವಾಗಿದ್ದು ಅದನ್ನು ಈ ಅಧಿವೇಶನದಲ್ಲಿಯೇ ಅಂಗೀಕರಿಸಲಾಗುವುದು."

* * * *

"ಸರಕಾರ ಈ ದಿಶೆಯಲ್ಲಿ ಮುಂದುವರಿಯುವುದು. ಆದರೆ ಇದನ್ನು ಒಪ್ಪುವುದು ಅಥವಾ ಬಿಡುವುದು ಸದನಕ್ಕೆ ಸಂಬಂಧಿಸಿದ್ದು. ಒಂದು ವೇಳೆ ಸದನ ಇದನ್ನು ತಿರಸ್ಕರಿಸಿದರೆ ಸರಕಾರ ಬಿದ್ದುಹೋಗಿ ಬೇರೆ ಸರಕಾರ ಜಾರಿಯಲ್ಲಿ ಬರುವುದು. ಆದರೆ ಅದಾವುದನ್ನೂ ಲೆಕ್ಕಿಸದೆ ಸರಕಾರ ಈ ವಿಧೇಯಕಕ್ಕೆ ಅಧಿಕ ಮಹತ್ವವನ್ನು ನೀಡಿದೆ." ಮತ್ತೆ ಡಿಸೆಂಬರ್ ೧೯, ೧೯೪೯ರಂದು ಪ್ರಧಾನಿಗಳು ಈ ಹೇಳಿಕೆ ನೀಡಿದರು: "ಸದನವು, ಈ ಮಸೂದೆಯನ್ನು ಮಹತ್ವವೆಂದು ಸರಕಾರ ಪರಿಗಣಿಸವುದರ ಬಗೆಗೆ ಯಾವ ಸಂಶಯಕ್ಕೂ ಆಸ್ಪದ ನೀಡಬಾರದು. ನಾವು ಹಿಂದೂ ಕೋಡ್ ವಿಧೇಯಕಕ್ಕೆ ಅಧಿಕ ಮಹತ್ವ ನೀಡಿದ್ದೇವೆ. ಏಕೆಂದರೆ ಅದು ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಕಾರಿಯಾಗಿದೆ. ಇದರಿಂದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ದೊರೆಯಬಲ್ಲದು. ನಾವು ರಾಜಕೀಯ ಸ್ವಾತಂತ್ರ್ಯ ಹೊಂದಿದ್ದು ಇತರ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಪಡೆಯುವಲ್ಲಿ ಮುಂದೆ ಸಾಗೋಣ. ಈ ಕಾರ್ಯಗಳಿಗೆ ಹಿಂದೂ ಕೋಡ್ ವಿಧೇಯಕ ಸಹಕಾರಿಯಾಗಿದೆ."

೨೬ ಸೆಪ್ಟೆಂಬರ್ ೧೯೫೧ ಪ್ರಧಾನಿಗಳ ಹೇಳಿಕೆ ಹೀಗಿದೆ :

**"**ನಾನು ಸದನಕ್ಕೆ ಈ ವಿಧೇಯಕದ ಬಗೆಗೆ ಏನೂ ಭರವಸೆ ನೀಡಬೇಕೆಂದಿಲ್ಲ, ಏಕೆಂದರೆ ಸರಕಾರ ಈ ಕಾರ್ಯವನ್ನು ಮುಂದುವರಿಸಿಕೊಂಡೇ ಹೋಗುವುದು. ಈಗ ಆಗದೇ ಹೋದಲ್ಲಿ ಮುಂದೂಡಿದ ಕಾರ್ಯವನ್ನು ಮತ್ತೆ ಮುಂದುವರಿಸುತ್ತೇವೆ. ಆದರೆ ಆದಷ್ಟು ಈ ಸಂಸತ್ತಿನಲ್ಲಿಯೆ ಅವಕಾಶ ದೊರೆಯಬಹುದೆಂದೇ ಆಶಿಸುವೆ**"**.

ಇದನ್ನು ವಿಧೇಯಕ ಕೈಬಿಟ್ಟ ಮೇಲೆ ಪ್ರಧಾನಿಗಳು ಹೇಳಿದರು. ಈ ಹೇಳಿಕೆಯನ್ನು ಪ್ರಧಾನಿಗಳಿಂದ ನಾನು ಬಯಸಿರಲಿಲ್ಲ. ಆದರೆ ನನ್ನ ರಾಜೀನಾಮೆಯನ್ನು ಈ ದೇಶದಲ್ಲಿ ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ ನಾನು ಸರಕಾರಕ್ಕೂ ನನ್ನ ಸಹೋದ್ಯೋಗಿಗಳಿಗೂ ಸಹಕರಿಸಿದ್ದಕ್ಕೆ ಋಣಿ. ಆದರೆ ನಾನು ಸಂಸತ್ತಿಗೆ ರಾಜೀನಾಮೆ ನೀಡಿಲ್ಲ. ಹೀಗಾಗಿ ನಾನು ಸಂಸತ್ತಿನ ಎಲ್ಲ ಸದಸ್ಯರನ್ನೂ ಅಭಿನಂದಿಸುವೆ.

ಹೊಸದಿಲ್ಲಿ ೧೦ ಅಕ್ಟೋಬರ್ ೧೯೫೧ **ಬಿ.ಆರ್. ಅಂಬೇಡ್ಕರ್**

# ಅನುಬಂಧ – 2

ಭಾರತ ಸರ್ಕಾರ, ತನ್ನ ಪ್ರಕಾಶನ ವಿಭಾಗದ ವತಿಯಿಂದ, 50ರ ದಶಕದಲ್ಲಿ Hindu Code Bill and Its Purpose ಎಂಬ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಪುಸ್ತಕವನ್ನು ಹೊರತಂದಿತ್ತು. ಆ ಪುಸ್ತಕ ಸಂವಿಧಾನ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿದ್ದ ಎರಡು ಭಾಷಣಗಳನ್ನೂ, ಜ್ಯೋತಿರ್ಮಠದ ಶಂಕರಾಚಾರ್ಯರು ಮತ್ತು ಸ್ವಾಮಿ ಕರಪತ್ರಿಜೀ ಅವರು ಈ ಮಸೂದೆಗೆ ವಿರುದ್ಧವಾಗಿ ಮಾಡಿದ್ದ ಭಾಷಣಗಳ ಪತ್ರಿಕಾ ವರದಿಗಳನ್ನೂ ಪ್ರಖ್ಯಾತ ವೈದಿಕ ವಿದ್ವಾಂಸರಾಗಿದ್ದ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಅವರು ಮಸೂದೆಯನ್ನು ಬೆಂಬಲಿಸಿ ಬರೆದಿದ್ದ ಲೇಖನಗಳನ್ನೂ ಒಳಗೊಂಡಿತ್ತು. ಆ ಪುಸ್ತಕ ಹಿಂದೂ ಸಂಹಿತೆಯ ಪಠ್ಯವನ್ನೂ, ಅದನ್ನು ಬೆಂಬಲಿಸಿ ಬರೆಯಲಾಗಿದ್ದ ಪತ್ರಿಕಾ ವರದಿಗಳನ್ನೂ ಒಳಗೊಂಡಿತ್ತು.

ಡಾ. ಅಂಬೇಡ್ಕರ್ ಅವರು ಮಂಡಿಸಿದ ಸುಧಾರಣಾ ಮಸೂದೆ ಹೇಗೆ ಹಿಂದೂ ಶಾಸ್ತ್ರಗ್ರಂಥಗಳ ಸಮರ್ಥನೆಯನ್ನೂ ಹೊಂದಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಲು ಓದುಗರಿಗೆ ತುಂಬ ನೆರವಾಗಲಿರುವುದರಿಂದ, ಹಿಂದಿ ಪುಸ್ತಕದಲ್ಲಿನ ಧರ್ಮದೇವ ವಿದ್ಯಾವಾಚಸ್ಪತಿ ಅವರ ಲೇಖನಗಳನ್ನು ಸದರಿ ಸಂಪುಟದಲ್ಲಿ ಸೇರಿಸಬೇಕೆಂದು ಸಮಿತಿಯ ಸದಸ್ಯರು ಭಾವಿಸಿದರು. ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಈ ಲೇಖನಗಳಿಂದ ಪ್ರಯೋಜನ ಪಡೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

**–ಸಂಪಾದಕ.**

# ಅನುಬಂಧ – ೨

('ಹಿಂದೂ ಕೋಡ್ ಬಿಲ್' ಕುರಿತ ಆಲೋಚನೆಗಳು – ೧)

# ಹಿಂದುತ್ವವನ್ನು ರಕ್ಷಿಸುವ 'ಹಿಂದೂ ಕೋಡ್ ಬಿಲ್'

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

(ವೇದಗಳ ಹಾಗೂ ಆರ್ಯರ ಪ್ರಾಚೀನ ಧರ್ಮಗ್ರಂಥಗಳ ಅಧ್ಯಯನ ಮತ್ತು ಸಂಶೋಧನೆಗಳಲ್ಲಿಯೇ ತಮ್ಮ ಬಾಳಿನ ಬಹುಭಾಗವನ್ನು ಕಳೆದಿರುವಂಥ ಬೆರಳೆಣಿಕೆಯ ವ್ಯಕ್ತಿಗಳಲ್ಲಿ ಸುಪ್ರಸಿದ್ಧ ವೇದ–ವಿದ್ವಾಂಸರಾದ ಧರ್ಮದೇವ ವಿದ್ಯಾವಾಚಸ್ಪತಿ ಅವರೂ ಒಬ್ಬರಾಗಿದ್ದಾರೆ. ದೆಹಲಿಯ ಸುಪ್ರಸಿದ್ಧ ಹಿಂದೀ ದಿನಪತ್ರಿಕೆಯಾದ 'ವೀರ ಅರ್ಜುನ' ಎಂಬ ಪತ್ರಿಕೆಯಲ್ಲಿ ಅವರ ಲೇಖನಮಾಲೆ ಈಗ್ಗೆ ಸ್ವಲ್ಪ ಕಾಲದ ಹಿಂದೆಯಷ್ಟೇ ಪ್ರಕಟವಾಗಿತ್ತು. ಪ್ರಾಚೀನ ಸ್ಮೃತಿಗಳು, ವೇದಗಳು ಮತ್ತು ಶಾಸ್ತ್ರಗಳ ಆಧಾರವನ್ನು ಒದಗಿಸಿ ಹಾಗೂ ಉದ್ಧರಣಗಳನ್ನು ಕೊಟ್ಟು, ಅವರು ಆ ಲೇಖನಗಳಲ್ಲಿ ಹಿಂದೂ ಮಸೂದೆಯ ವಿವಿಧ ಉಪಬಂಧಗಳನ್ನು ಕುರಿತ ಸಾರಗರ್ಭಿತ ವಿವೇಚನೆಯನ್ನು ಮುಂದಿರಿಸಿದ್ದಾರೆ. ವಿವೇಚನಾಶೀಲ ಓದುಗರಿಗಾಗಿ, 'ವೀರ ಅರ್ಜುನ' ಪತ್ರಿಕೆಯ ಕೃಪೆಯಿಂದ, ಆ ಲೇಖನಮಾಲೆಯನ್ನು ಇಲ್ಲಿ ಮತ್ತೆ ಪ್ರಕಟಿಸಲಾಗುತ್ತಿದೆ.)

ಭಾರತ ಸರ್ಕಾರದ ಕಾನೂನು ಸಚಿವರಾದ ಮಾನ್ಯ ಡಾ. ಭೀಮರಾವ್ ಅಂಬೇಡ್ಕರ್ ಅವರು ಭಾರತ ರಾಷ್ಟ್ರದ ಸಂಸತ್ತಿನಲ್ಲಿ ಮಂಡಿಸಿದ 'ಹಿಂದೂ ಕೋಡ್ ಬಿಲ್' ವಿರುದ್ಧ ಭಾರಿ ಆಂದೋಳನವನ್ನು ನಡೆಸಲಾಗುತ್ತಿದೆ. ದೆಹಲಿಯಲ್ಲಿಯೂ 'ಹಿಂದೂ–ಕೋಡ್' ವಿರೋಧಿ ಸಮ್ಮೇಳನ ನಡೆದಿದೆ. ಅದರಲ್ಲಿ ಮಾಡಲಾದ ಮುಖ್ಯವಾದ ಉದ್ಘೋಷಣೆಯೆಂದರೆ ಇದರಿಂದ ಧರ್ಮ ಹಾಗೂ ಸಂಸ್ಕೃತಿಗಳ ಸರ್ವನಾಶ ಆಗಿಹೋಗುತ್ತದೆ ಎಂಬುದು. 'ಹಿಂದೂ ಕೋಡ್ ಬಿಲ್' ಅನ್ನು ಎಲ್ಲ ಮುಖಗಳಿಂದಲೂ ಸಮರ್ಥಿಸಲು ನಾನು ಹೊರಟಿಲ್ಲ ಎಂಬುದನ್ನು ಮೊದಲಿಗೇ ನಾನು ಸ್ಪಷ್ಟಪಡಿಸಬಯಸುತ್ತೇನೆ. ನನ್ನ ದೃಷ್ಟಿಯಲ್ಲಿ ಅದಕ್ಕೆ ಅನೇಕ ತಿದ್ದುಪಡಿಗಳು ಆಗಬೇಕಾದ ಅಗತ್ಯವಿದೆ. ಆದರೆ, ಈ ಮಸೂದೆಯ ವಿಷಯದಲ್ಲಿ ಸುಳ್ಳು ಪ್ರಚಾರವೇ ತುಂಬ ಹೆಚ್ಚಾಗಿ ಆಗಿದೆ ಎಂಬುದನ್ನು ಕಂಡಾಗ, ನನಗೆ ತುಂಬ ವಿಷಾದವೇ ಆಗಿದೆ. ಯಾರೂ ಗಮನವಿಟ್ಟು ಈ ಮಸೂದೆಯ ಪ್ರಕರಣಗಳನ್ನು ಓದಲು ಎಂದೂ ಶ್ರಮವನ್ನೇ ವಹಿಸಿಲ್ಲವೊ ಅಂಥವರೆ ಬಹುಶಃ ಇದನ್ನು ವಿರೋಧಿಸುತ್ತಿದ್ದಾರೆ ಹಾಗೂ ಹಿಂದೂಧರ್ಮ ಮತ್ತು ಸಂಸ್ಕೃತಿ ಸಂಕಟದಲ್ಲಿ ಸಿಲುಕಿವೆ' ಎಂಬ ಘೋಷಣೆಗಳನ್ನು ಕೂಗುತ್ತ ಸಾಮಾನ್ಯ ಜನತೆಯನ್ನು ರೊಚ್ಚಿಗೆಬ್ಬಿಸುವಂಥ ಅನುಚಿತ ಪ್ರಯತ್ನಮಾಡುತ್ತಿದ್ದಾರೆ. ನಾನು ಸ್ವತಃ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ವಿಷಯದಲ್ಲಿ ದೃಢವಾದ ನಂಬಿಕೆ ಈ ಮಸೂದೆಯಲ್ಲಿ ಮಂಡಿಸಲಾಗಿರುವಂಥ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದೇನೆ. ಅದರ ಫಲಿತಾಂಶವನ್ನು ನಾನು ಜನತೆಯ ಮುಂದೆ ಇರಿಸುವ ಪ್ರಯತ್ನ ಮಾಡಬಯಸುತ್ತೇನೆ. ಈ 'ಹಿಂದೂ ಕೋಡ್ ಬಿಲ್'

ಅನ್ನು ರೂಪಿಸಿರುವಂಥವರು ಅಥವಾ ಅದನ್ನು ಸಮರ್ಥಿಸುತ್ತಿರುವಂಥವರು 'ಹಿಂದೂಧರ್ಮ' ಮತ್ತು 'ಸಂಸ್ಕೃತಿ'ಯನ್ನು ನಾಶ ಮಾಡಬಯಸುತ್ತಾರೆ ಹಾಗೂ ಅವರಿಗೆ 'ಹಿಂದೂಧರ್ಮ'ದ ವಿಷಯದಲ್ಲಿ ಪ್ರೀತಿ–ಅಭಿಮಾನ ಎಂಬುದೇನು ಇಲ್ಲ ಎಂಬುದಾಗಿ ಏನೆಲ್ಲ ಅಪ ಪ್ರಚಾರವನ್ನು ನಡೆಸಿಕೊಂಡು ಬರಲಾಗುತ್ತಿದೆಯೊ ಅದು ಎಷ್ಟು ಸುಳ್ಳು ಎಂಬುದನ್ನು ಈ ಮೊದಲನೆಯ ಲೇಖನದಲ್ಲಿ ತೋರಿಸಕೊಡಬಯಸುತ್ತೇನೆ.

ಈ ಮಸೂದೆಯ ೭೮ನೆಯ ಪ್ರಕರಣದಲ್ಲಿ ಹೀಗೆಂದು ಹೇಳಲಾಗಿದೆ. ಯಾವನೇ ವ್ಯಕ್ತಿ (ಅ) ಹಿಂದೂ ಧರ್ಮವನ್ನು ತ್ಯಜಿಸಿದ್ದರೆ, ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ, ಯಾವನೇ ಅವಯಸ್ಕನಿಗೆ ಸಂರಕ್ಷಕನಾಗಿರುವ ಅಧಿಕಾರವನ್ನು ಹೊಂದಿರುವುದಿಲ್ಲ.

೮೧ನೆಯ ಪ್ರಕರಣದಲ್ಲಿ 'ಸ್ವಾಭಾವಿಕ ಸಂರಕ್ಷಕನ ಅಧಿಕಾರಸತ್ತೆಯ ಖಂಡನೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಹೀಗೆಂದು ಹೇಳಲಾಗಿದೆ; ಯಾವನೇ ಅವಯಸ್ಕ ಹಿಂದೂವಿನ ಸ್ವಾಭಾವಿಕ ಸಂರಕ್ಷಕನಾಗಿರುವಂಥ ವ್ಯಕ್ತಿ, ಅಂಥ ಅವಯಸ್ಕನ ಸಂರಕ್ಷಣೆಯ ಹೊಣೆಯನ್ನು ಬೇರೆ ಯಾವನೇ ವ್ಯಕ್ತಿಗೆ ವಹಿಸಿಕೊಟ್ಟಿದ್ದಲ್ಲಿ, ಈ ಕೆಳಗೆ ಕಾಣಿಸಲಾಗಿರುವಂಥ ಸಂದರ್ಭಗಳನ್ನು ಹೊರತುಪಡಿಸಿ, ಉಳಿದಂತೆ ಅದು ಅನೂರ್ಜಿತ ವಾಗುತ್ತದೆ:

(ಕ) ಅಂಥ ವ್ಯಕ್ತಿಯನ್ನು ಅನೂರ್ಜಿತಗೊಳಿಸುವುದಕ್ಕೆ ಒಪ್ಪಿಗೆಯನ್ನು ನೀಡುವುದು ಅವಯಸ್ಕನ ಹಿತದೃಷ್ಟಿಯಿಂದ ಉಚಿತವಾಗದೆ ಇದ್ದಲ್ಲಿ; ಅಥವಾ

(ಖ) ಸ್ವಾಭಾವಿಕ ಸಂರಕ್ಷಕನು ಹಿಂದೂಧರ್ಮವನ್ನು ತ್ಯಜಿಸಿದ್ದಲ್ಲಿ.

೮೩ನೆಯ ಪ್ರಕರಣದಲ್ಲಿ ಹೀಗೆಂದು ಹೇಳಲಾಗಿದೆ : "ಯಾವನೇ ಅವಯಸ್ಕ ಹಿಂದೂವಿನ ಸಂರಕ್ಷಕನು, ಅಂಥ ಅವಯಸ್ಕನನ್ನು ಹಿಂದೂವಿನ ರೂಪದಲ್ಲಿಯೇ ಪಾಲನೆ ಪೋಷಣೆ ಮಾಡತಕ್ಕದ್ದು".

ದತ್ತು ಸ್ವೀಕಾರದ ವಿಷಯದಲ್ಲಿ ವಿಧವೆಯ ಅಧಿಕಾರವನ್ನು ಕೊನೆಗೊಳಿಸುವುದಕ್ಕೆ ಸಂಬಂಧಿಸಿದ ೬೧ನೆಯ ಪ್ರಕರಣದಲ್ಲಿ :

(ಕ) ಆಕೆ ಮರು–ಮದುವೆ ಮಾಡಿಕೊಂಡಲ್ಲಿ;

(ಖ) ಆಕೆ ಹಿಂದೂಧರ್ಮವನ್ನು ತ್ಯಜಿಸಿದಲ್ಲಿ;

– ಅಂಥ ವಿಧವೆಯ ದತ್ತುಸ್ವೀಕಾರದ ಅಧಿಕಾರ ಕೊನೆಗೊಂಡುಬಿಡುತ್ತದೆ ಎಂದು ಹೇಳಲಾಗಿದೆ.

ಈ ಶೀರ್ಷಿಕೆಯಲ್ಲಿನ ೬೨ನೆಯ ಪ್ರಕರಣದ (೩)ನೆಯ ಉಪ–ಪ್ರಕರಣದಲ್ಲಿ ದತ್ತುನೀಡುವ ಅರ್ಹತೆಯನ್ನುಳ್ಳಂಥ ವ್ಯಕ್ತಿಯ ವಿಚಾರದಲ್ಲಿ ಹೀಗೆಂದು ಹೇಳಲಾಗಿದೆ:

(ಕ) ಮಗುವಿನ ತಂದೆ ತೀರಿಕೊಂಡಿದ್ದಲ್ಲಿ;

(ಖ) ಅಂಥ ತಂದೆ ಹಿಂದೂಧರ್ಮವನ್ನು ತ್ಯಜಿಸಿದ್ದಲ್ಲಿ;

ತಾಯಿಯಾದವಳು ಮಗವನ್ನು ದತ್ತು ನೀಡಬಹುದಾಗಿದೆ.

**ಪರಿಶೀಲನಾ ಸಮಿತಿ**

ಪರಿಶೀಲನಾ ಸಮಿತಿ (ಸೆಲೆಕ್ಟ್ ಕಮಿಟಿ)ಯ ವರದಿಯಲ್ಲಿ ಮೇಲೆ ಉದ್ಧರಿಸಲಾಗಿರುವ ೭೮ನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದಸ್ಯರು ಹೀಗೆಂದು ಬರೆದಿದ್ದಾರೆ :

"ಹಿಂದೂಧರ್ಮವನ್ನು ಅಥವಾ ಇಹಲೋಕವನ್ನು ತ್ಯಜಿಸಿರುವಂಥ ವ್ಯಕ್ತಿಗೆ ಯಾವನೇ ಅವಯಸ್ಕ ಹಿಂದೂವಿಗೆ ಸ್ವಾಭಾವಿಕ ಸಂರಕ್ಷಕನಾಗುವ ಅಧಿಕಾರ ಇರತಕ್ಕದ್ದಲ್ಲ."

ಈ ಶೀರ್ಷಿಕೆಯ ೧೨೬ನೆಯ ಪ್ರಕರಣದಲ್ಲಿ, ಪತ್ನಿಯ ಪಾಲನೆ–ಪೋಷಣೆಗೆ ಸಂಬಂಧಿಸಿದಂತೆ, ಹೀಗೆಂದು ಹೇಳಲಾಗಿದೆ: ಈ ಕೆಳಗೆ ಕಾಣಿಸಲಾಗಿರುವಂಥ ಸಂದರ್ಭದಲ್ಲಿ ಜೀವನಾಂಶವನ್ನು ಪಡೆದುಕೊಳ್ಳುವ ತನ್ನ ಹಕ್ಕಿನಿಂದ ವಂಚಿತಳಾಗದೆಯೇ ಹಿಂದೂ ಪತಿಯಿಂದ ಬೇರೆಯಾಗಿ ಇರುವ ಹಕ್ಕನ್ನು ಉಳಿಸಿಕೊಂಡಿರುತ್ತಾಳೆ.

(ಅ) ಅವನು ಧರ್ಮಾಂತರದ ಮೂಲಕ ಬೇರೊಂದು ಧರ್ಮವನ್ನು ಸ್ವೀಕರಿಸಿ 'ಅಹಿಂದೂ' ಆಗಿ ಬಿಟ್ಟಿದ್ದರೆ; ಇತ್ಯಾದಿ.

೩ನೆಯ ಉಪ ಪ್ರಕರಣದಲ್ಲಿ ಹೀಗೆಂದು ಹೇಳಲಾಗಿದೆ. ಯಾವಳಾದರೂ ಹಿಂದೂ ಪತ್ನಿ ಅಪತಿವ್ರತೆಯಾಗಿದ್ದಲ್ಲಿ ಅಥವಾ ಧರ್ಮಾಂತರದ ಮೂಲಕ ಬೇರೊಂದು ಧರ್ಮವನ್ನು ಸ್ವೀಕರಿಸಿ 'ಅಹಿಂದೂ' ಆಗಿದ್ದಲ್ಲಿ, ಆಕೆಗೆ ತನ್ನ ಪತಿಯಿಂದ ಬೇರೆಯಾಗಿ ಇರುವ ಹಾಗೂ ಪಾಲನೆ–ಪೋಷಣೆಯನ್ನು ಪಡೆದುಕೊಳ್ಳುವ ಹಕ್ಕು ಇರುವುದಿಲ್ಲ.

ಧರ್ಮಾಂತರಗೊಳ್ಳುವಂಥ ವ್ಯಕ್ತಿಗೆ 'ದಯಾ–ಗ್ರಹಣ'ದ ಅರ್ಹತೆ ಇರುವುದಿಲ್ಲವೆಂಬುದನ್ನು ಹೇಳುವ ೧೨೦ನೆಯ ಪ್ರಕರಣದಲ್ಲಿ ಈ ಶೀರ್ಷಿಕೆಯ ಅಡಿಯಲ್ಲಿ ಹೀಗೆಂದು ಹೇಳಲಾಗಿದೆ : ಈ ಮಸೂದೆ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರದಲ್ಲಿ ಯಾವನೇ ಹಿಂದೂ ಧರ್ಮಾಂತರಗೊಂಡ ಅನ್ಯಧರ್ಮೀಯನಾಗಿಬಿಟ್ಟುದರಿಂದಾಗಿ, 'ಹಿಂದೂ' ಆಗಿ ಉಳಿಯದೆ ಇದ್ದಲ್ಲಿ ಅಥವಾ ಅಹಿಂದೂ ಆಗಿಬಿಟ್ಟಿದ್ದಲ್ಲಿ ಈ ಬಗೆಯ ಧರ್ಮಾಂತರದ ಬಳಿಕ, ಆ ಗಂಡಸಿಗೆ ಅಥವಾ ಹೆಂಗಸಿಗೆ ಹುಟ್ಟುವಂಥ ಮಕ್ಕಳು, ಉತ್ತರಾಧಿಕಾರ, ಆರಂಭವಾಗುವ ಹೊತ್ತಿನಲ್ಲಿ ಹಿಂದೂಗಳಾಗಿರದೆ ಇದ್ದಲ್ಲಿ, ತಮ್ಮ ಯಾವನೇ ಹಿಂದೂ ನೆಂಟನ ಸಂಪತ್ತನ್ನು ಪಡೆದುಕೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ. 'ಹಿಂದೂ ಕೋಡ್ ಬಿಲ್' ಅನ್ನು ರೂಪಿಸಿರುವಂಥ ವ್ಯಕ್ತಿಗಳು ಹಿಂದುತ್ವವನ್ನು ಕಾಪಾಡಿಕೊಂಡು ಬರುವ ವಿಷಯದತ್ತ ವಿಶೇಷವಾಗಿ ಗಮನಹರಿಸಿದ್ದಾರೆ ಹಾಗೂ ಹಿಂದೂಧರ್ಮದ ವಿಷಯದಲ್ಲಿ ಅವರಿಗೆ ಪ್ರೀತಿ ಅಭಿಮಾನಗಳಿವೆ ಎಂಬುದನ್ನು ಸ್ಪಷ್ಟಪಡಿಸುವಂಥ ಇನ್ನೂ ಅನೇಕ ಉದ್ಧರಣಗಳನ್ನು ಕೊಡಬಹುದಾಗಿದೆ. ಇಷ್ಟಾಗಿಯೂ ಅದರಲ್ಲಿ ಸುಧಾರಣೆಗಳು ಆಗಬೇಕಾದ ಅಗತ್ಯವಿದೆ ಎಂಬುದು ಅವರಿಗೆ ಖಂಡಿತವಾಗಿಯೂ ಮನವರಿಕೆಯಾಗಿದೆ. ವಾಸ್ತವವಾಗಿ ಹಿಂದೂಧರ್ಮ ಮತ್ತು ಸಮುದಾಯದ ಉದ್ಧಾರವನ್ನು ಸಾಧಿಸುವುದೇ ಅದರ ಉದ್ದೇಶವಾಗಿದೆ.

ಈ ವಿಷಯದ ಬಗ್ಗೆ ಮಾನ್ಯರಾದ ಡಾ. ಅಂಬೇಡ್ಕರ್ ಅವರೊಡನೆ ಹಾಗೂ ಇತರರೊಡನೆ ನಡೆಸಿದ ಮಾತುಕತೆಗಳ ಆಧಾರದ ಮೇಲೆ ನಾನು ಖಂಡಿತವಾಗಿಯೂ ಹೀಗೆಂದು ಹೇಳಬಲ್ಲೆ; ಹಿಂದೂ ಸಮುದಾಯವನ್ನು ಒಂದು ಸೂತ್ರಕ್ಕೆ ಒಳಪಡಿಸಲು ಹಾಗೂ ಅದರ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಸಲುವಾಗಿಯೇ ಅವರು ಈ 'ಹಿಂದೂ ಕೋಡ್ ಬಿಲ್' ಅನ್ನು ಮಂಡಿಸುತ್ತಿದ್ದಾರೆ; ೨ನೆಯ ಪ್ರಕರಣದಲ್ಲಿ ಕೊಡಲಾಗಿರುವ ಪರಿಭಾಷೆಯ ಪ್ರಕಾರ, ಹಿಂದೂಧರ್ಮದ ಯಾವುದೇ ಸ್ವರೂಪ ಅಥವಾ ಸಮುದಾಯವನ್ನು ನೆಚ್ಚಿ ನಡೆಯುತ್ತಿರುವವರು ಮಾತ್ರವಲ್ಲದೆ, ಬೌದ್ಧ, ಜೈನ ಅಥವಾ ಸಿಖ್ ಧರ್ಮದ ಅನುಯಾಯಿಗಳು ಅಥವಾ ಹಿಂದೂಧರ್ಮವನ್ನು ಅಂಗೀಕರಿಸದಂಥ ವ್ಯಕ್ತಿಗಳು ಕೂಡ ಹಿಂದೂ ಎಂಬ ಶಬ್ದದ ವ್ಯಾಪ್ತಿಗೆ ಒಳಪಡುತ್ತಾರೆ. ಈ ಪರಿಭಾಷೆಯ ಮೇರೆಗೆ, ಆದಿವಾಸಿಗಳು ಮತ್ತು ಇತರರು ಕೂಡ ಹಿಂದೂ ಶಬ್ದದ ವ್ಯಾಪ್ತಿಯಲ್ಲಿ ಬರುತ್ತಾರೆಂದು ಭಾವಿಸಲಾಗಿದೆ.

ವಿಶಾಲ ದೃಷ್ಟಿಯಿಂದ ನೋಡಿದರೆ, ನಿಷ್ಪಕ್ಷಪಾತವಾಗಿ ಆಲೋಚಿಸಬಲ್ಲಂಥ ವ್ಯಕ್ತಿಗಳಿಗೆ ಇಂಥದೊಂದು ಸರ್ವಸಾಮಾನ್ಯ ಸಂಹಿತೆಯ ಮಹತ್ವವೇನೆಂಬುದು ವಿಧಿತವಾಗುತ್ತದೆ. ಬೇರೆ ಬೇರೆ ಎಡೆಗಳಲ್ಲಿನ ಹಾಗೂ

ಸಮುದಾಯಗಳಲ್ಲಿನ ನಡೆನುಡಿಗಳು ವಿಶಾಲವಾದ ಹಿಂದೂ ಧರ್ಮವನ್ನು ಹೇಗೆ ಭಿನ್ನ ಭಿನ್ನವಾಗಿಸಿವೆ ಎಂಬುದನ್ನು ವಿವರಿಸಿ ಹೇಳುವ ಅಗತ್ಯವೇನೂ ಇಲ್ಲ. ಆದ್ದರಿಂದ ಸುಳ್ಳು ಘೋಷಣೆಗಳನ್ನು ಕೂಗುವುದನ್ನು ಬಿಟ್ಟು ಹಾಗೂ ಈ ಮಸೂದೆಯನ್ನು ಆಮೂಲಾಗ್ರವಾಗಿ ವಿರೋಧಿಸಬೇಕೆಂಬ ಭಾವನೆಯನ್ನು ಬದಿಗಿರಿಸಿ, ಈ ಮಸೂದೆಯ ಪ್ರಕರಣಗಳನ್ನು ಜನರು ನಿಷ್ಪನ್ನಮತಿಗಳಾಗಿ ಅಧ್ಯಯನಮಾಡಬೇಕೆಂದೂ, ಇದು ಹೆಚ್ಚು, ಹೆಚ್ಚು ಉಪಯುಕ್ತವೂ ಲಾಭದಾಯಕವೂ ಆಗುವಂತೆ ಮಾಡುವಂಥ ಸಲಹೆ ಸೂಚನೆಗಳನ್ನು ಅಥವಾ ತಿದ್ದುಪಡಿಗಳನ್ನು ನಮ್ಮ ಜನ ಮುಂದಿರಿಸಬೇಕೆಂದೂ ನಾನು ಸೂಚಿಸುತ್ತೇನೆ. ಡಾ. ಅಂಬೇಡ್ಕರ್ ಅವರು ಹಾಗೂ ಸದಸ್ಯರು ಅಂಥ ರಚನಾತ್ಮಕ ಸಲಹೆ ಸೂಚನೆಗಳನ್ನು ಸ್ವಾಗತಿಸಲು ಸಿದ್ಧರಾಗಿದ್ದಾರೆ.

# ವಿವಾಹಸಂಬಂಧಿ ಪ್ರಕರಣಗಳು

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

'ಹಿಂದೂ ಕೋಡ್ ಬಿಲ್'ನ ಉದ್ದೇಶ ಹಿಂದೂಧರ್ಮ, ಸಮಾಜ ಮತ್ತು ಸಂಸ್ಕೃತಿಗಳನ್ನು ನಾಶಪಡಿಸುವುದೇ ಆಗಿದೆ; ಇವೇ ಮೊದಲಾದ ಕಲ್ಪಿತವಾದ, ಸುಳ್ಳಿನ ಘೋಷಣೆಗಳನ್ನು ನಂಬದೆ, ನಿಷ್ಪಕ್ಷಪಾತ ದೃಷ್ಟಿಯಿಂದ ಗಂಭೀರವಾದ ಆಲೋಚನೆಯೊಡನೆ 'ಹಿಂದೂ ಕೋಡ್ ಬಿಲ್'ನ ವಿವಿಧ ಪ್ರಕರಣಗಳನ್ನು ಕುರಿತು ಚಿಂತನ–ಮಂಥನ ಮಾಡಲೇಬೇಕೆಂದು ನನ್ನ ಮೊದಲನೆಯ ಲೇಖನದಲ್ಲಿ ಓದುಗರಿಗೆ ವಿನಂತಿ ಮಾಡಿದ್ದೆ. ಈ ಲೇಖನದಲ್ಲಿ ವಿವಾಹಕ್ಕೆ ಸಂಬಂಧಿಸಿದ ಪ್ರಕರಣಗಳ ಮೇಲೆ ಸ್ವಲ್ಪಮಟ್ಟಿಗೆ ಬೆಳಕುಚೆಲ್ಲುವ ಪ್ರಯತ್ನ ಮಾಡಬಯಸುತ್ತೇನೆ.

ವಿವಾಹವನ್ನು ಶಾಸ್ತ್ರೀಯ ಮತ್ತು ಸಿವಿಲ್ ಎಂಬುದಾಗಿ ಎರಡು ಭಾಗಗಳಾಗಿ ವಿಂಗಡಿಸಿ, ೭ನೆಯ ಪ್ರಕರಣದಲ್ಲಿ ಈ ಕೆಳಕಂಡವನ್ನು ಶಾಸ್ತ್ರೀಯ ವಿವಾಹದ ನಿಬಂಧನೆಗಳೆಂದು ಪರಿಗಣಿಸಲಾಗಿದೆ.:

ಪ್ರಕರಣ ೭ : ಈ ಕೆಳಗೆ ಕಾಣಿಸಲಾಗಿರುವ ನಿಬಂಧನೆಗಳನ್ನು ಪಾಲಿಸಿದ ಪಕ್ಷದಲ್ಲಿ. ಯಾರೇ ಇಬ್ಬರು ಹಿಂದೂಗಳ ನಡುವೆ ಶಾಸ್ತ್ರೀಯವಾಗಿ ಮದುವೆ ನಡೆಯಬಹುದಾಗಿದೆ.

(೧) ಎರಡೂ ಕಡೆಗಳಲ್ಲಿ ವಿವಾಹದ ಸಮಯದಲ್ಲಿ ಯಾವುದೇ ಒಂದು ಕಡೆಯವರಾಗಲಿ, ಪತಿ ಅಥವಾ ಪತ್ನಿಯನ್ನು ಹೊಂದಿರದೆ ಇದ್ದಲ್ಲಿ;

(೨) ಎರಡೂ ಕಡೆಗಳಲ್ಲಿ ವಿವಾಹದ ಸಮಯದಲ್ಲಿ ಯಾರೇ ಆಗಲಿ ಮಂದಬುದ್ಧಿಯವರಾಗಲಿ ಹುಚ್ಚರಾಗಲಿ ಆಗಿರದೆ ಇದ್ದಲ್ಲಿ;

(೩) ವಿವಾಹದ ಸಮಯದಲ್ಲಿ ವರನಿಗೆ ಹದಿನೆಂಟು ವರ್ಷ ತುಂಬಿದ್ದಲ್ಲಿ ಹಾಗೂ ವಧುವಿಗೆ ಹದಿನಾಲ್ಕು ವರ್ಷ ತುಂಬಿದ್ದಲ್ಲಿ;

(೪) ಎರಡೂ ಕಡೆಯವರು ಪರಸ್ಪರ ನಿಷೇಧಾತ್ಮಕ ಸಂಬಂಧದ ವರ್ಗಕ್ಕೆ ಸೇರಿದವರಾಗದೆ ಇದ್ದಲ್ಲಿ;

(೫) ಎರಡೂ ಕಡೆಯವರು ಪರಸ್ಪರ ಸಪಿಂಡ ಸಂಬಂಧಿಗಳಾಗಿರದೆ ಇದ್ದಲ್ಲಿ ಹಾಗೂ ಪರಸ್ಪರ ಆಚಾರ ಮತ್ತು ಪರಂಪರೆಗಳ ಅಡಿಯಲ್ಲಿ ಎರಡೂ ಕಡೆಯವರಲ್ಲಿ ಅಂಥ (ವಿವಾಹ) ಸಂಸ್ಕಾರವನ್ನು ಶಿಷ್ಟವಾದುವೆಂದು ಭಾವಿಸುವ ಪದ್ಧತಿ ಇಲ್ಲದೆ ಇದ್ದಲ್ಲಿ;

(೬) ವರ ಅಥವಾ ವಧುವಿಗೆ ಹದಿನಾರು ವರ್ಷ ತುಂಬಿರದೆ ಇದ್ದಲ್ಲಿ, ಅವನ ಅಥವಾ ಅವಳ ಪಾಲಕರ ಒಪ್ಪಿಗೆಯನ್ನು ಪಡೆದುಕೊಂಡಿದ್ದಲ್ಲಿ.

'ಸಪಿಂಡ ಸಂಬಂಧ' ಎಂದರೆ ಏನು ಎಂಬ ಪರಿಭಾಷೆಯನ್ನು ಮತ್ತು ಅದರ ಬಗೆಗಿನ ವ್ಯಾಖ್ಯಾನವನ್ನು ಮುಂದಿರಿಸುತ್ತ, ೫ನೆಯ ಪ್ರಕರಣದಲ್ಲಿ ಹೀಗೆಂದು ಹೇಳಿದೆ:

(೧) (ಕ) 'ಸಪಿಂಡ ಸಂಬಂಧ' ಎಂದರೆ ತಾಯಿಯ ಕಡೆ ಮೂರು ತಲೆಮಾರುಗಳವರೆಗೆ ಹಾಗೂ ತಂದೆಯ ಕಡೆ ಐದು ತಲೆಮಾರುಗಳವರೆಗೆ ಇರುವಂಥದು.

(ಖ) ಇಬ್ಬರು ವ್ಯಕ್ತಿಗಳು ಪರಸ್ಪರ ವಂಶ–ಪರಂಪರೆಯ ದೃಷ್ಟಿಯಿಂದ ಸಪಿಂಡ ಸಂಬಂಧದ ಮೇರೆಯಲ್ಲಿ

ಸಮವಂಶಜರಾಗಿದ್ದರೆ ಅಥವಾ ಆ ಇಬ್ಬರು ವ್ಯಕ್ತಿಗಳು ಸಪಿಂಡ ಸಂಬಂಧದ ಮೇರೆಯಲ್ಲಿ ಸಮ್ಮಿಳಿತವಾಗಿರುವ ಅಂಶಗಳಲ್ಲಿ ಪರಂಪರಾಗತವಾಗಿ ಪರಸ್ಪರ ಸಮಾನ ವಂಶಜರ ರೂಪದಲ್ಲಿದ್ದರೆ, ಪರಸ್ಪರ ಸಪಿಂಡಸಂಬಂಧಿಗಳೆಂದು ಭಾವಿಸಲಾಗುತ್ತದೆ.

(ಗ) ನಿಷಿದ್ಧ ಸಂಬಂಧ : ಇಬ್ಬರಲ್ಲಿ ಯಾರಾದರೊಬ್ಬರು ವಂಶಾನುಕ್ರಮದಲ್ಲಿ ಇನ್ನೊಬ್ಬರಿಗೆ ಪೂರ್ವಜರಾಗಿದ್ದರೆ ಅಥವಾ ವಂಶಾನುಕ್ರಮದಲ್ಲಿ ಪೂರ್ವಜರಾಗಿರುವಂಥ ವ್ಯಕ್ತಿಯ ಅಥವಾ ಆ ಸಂತತಿಗೆ ಸೇರಿದ ವ್ಯಕ್ತಿಯ ಪತ್ನಿ ಅಥವಾ ಪತಿ ಆಗಿದ್ದಲ್ಲಿ ಪುತ್ರ ಆಗಿದ್ದಲ್ಲಿ ಹಾಗೂ ಚಿಕ್ಕಮ್ಮ ಸೋದರಿಯರು, ಚಿಕ್ಕಪ್ಪ–ಸಹೋದರ ಪುತ್ರ ಆಗಿದ್ದಲ್ಲಿ ಹಾಗೂ ಚಿಕ್ಕಮ್ಮ ಸಹೋದರ ಪುತ್ರಿ ಆಗಿದ್ದಲ್ಲಿ ಅಥವಾ ಸೋದರರ ಹಾಗೂ ಸೋದರಿಯರ ಮಕ್ಕಳಾಗಿದ್ದಲ್ಲಿ.

ಸ್ಪಷ್ಟೀಕರಣ : ವಾಕ್ಯ ಖಂಡ ೧ ಮತ್ತು ೨ರಲ್ಲಿ ಈ ಸಂಬಂಧಗಳೂ ಸೇರಿವೆ :

(೧) ಅರ್ಥ : ರಕ್ತಯುಕ್ತ ಸಹೋದರನ ರಕ್ತವನ್ನೊಳಗೊಂಡಿರುವ ಸಂಬಂಧ;

(೨) ಧರ್ಮಜ ಹಾಗೂ ಅಧರ್ಮಜ ಸಂತತಿಯ ಸಂಬಂಧ ;

(೩) ದತ್ತಕ ಅಥವಾ ರಕ್ತಸಂಬಂಧ

ಮೇಲಿನ ವಾಕ್ಯಾಂಶಗಳಲ್ಲಿ ಹೇಳಲಾಗಿರುವ ಎಲ್ಲ ಸಂಬಂಧಸೂಚಕ ಶಬ್ದಗಳನ್ನು ಇದೇ ರೀತಿಯಲ್ಲಿ ಅರ್ಥೈಸಿಕೊಳ್ಳಲಾಗುತ್ತದೆ. ಶಾಸ್ತ್ರೀಯ ವಿವಾಹಕ್ಕೆ ಯಾವ ನಿಬಂಧನೆಗಳನ್ನು ಮೇಲೆ ಹೇಳಲಾಗಿದೆಯೊ, ಅವೆಲ್ಲ ಬಹುಮಟ್ಟಿಗೆ ಇಂದಿಗೂ ಧಾರ್ಮಿಕ ದೃಷ್ಟಿಯಿಂದ ಬಹುಶಃ ಮಾನ್ಯ ಮಾಡಲಾಗಿರುವಂಥವೆ ಎಂಬುದನ್ನು ಓದುಗರು ಗಮನಿಸಬಹುದಾಗಿದೆ. ವ್ಯತ್ಯಾಸ ಇರುವುದು ಸ್ವಲ್ಪ ಮಾತ್ರವೇ "ಪಂಚಾಯತ್ ಸಪ್ತಮಾದೂರ್ಧ್ವ ಮಾತೃತಃ ಪಿತೃತಸ್ತಥಾ" – ಇವೇ ಮೊದಲಾದ ಸ್ಮೃತಿ ವಾಕ್ಯಗಳಲ್ಲಿ ತಾಯಿಯ ಕಡೆಯಿಂದ ಮತ್ತು ತಂದೆಯ ಕಡೆಯಿಂದ ಕ್ರಮವಾಗಿ ಐದು ಮತ್ತು ಏಳು ತಲೆಮಾರುಗಳನ್ನು ಸಪಿಂಡ ಸಂಬಂಧವೆಂದು ಭಾವಿಸಿ ಅವುಗಳನ್ನು ಕೈಬಿಡಬೇಕೆಂದು ಕಟ್ಟುಪಾಡುಗಳನ್ನು ಹೇಳಲಾಗಿದೆ. ಆದರೆ 'ಸ್ಮೃತಿ ಚಂದ್ರಿಕಾ', 'ಚತುರ್ವಿಂಶತಿ ಮತಸಂಗ್ರಹ' ಮೊದಲಾದವುಗಳಲ್ಲಿ ಮೂರು ಮತ್ತು ಐದು ತಲೆಮಾರುಗಳನ್ನು ಸಪಿಂಡ ಸಂಬಂಧವೆಂದು ಭಾವಿಸಲಾಗಿದೆ. ಅನೇಕ ಪೌರಾಣಿಕ ಗ್ರಂಥಗಳಲ್ಲಿ ಸಪಿಂಡತ್ವವನ್ನು ಮತ್ತಷ್ಟು ಕಡಿಮೆಯಾಗಿಸುತ್ತ ಬಂದು ಮಾವನ ಮಗಳೊಡನೆ, ಸೋದರತ್ತೆಯ ಮಗಳೊಡನೆ ನಡೆಯಬಹುದಾದ ಮದುವೆಗಳನ್ನು ಮಾನ್ಯ ಮಾಡಲಾಗಿದೆ; ದಾಕ್ಷಿಣಾತ್ಯರಲ್ಲಿ ಅನೇಕ ಕಡೆಗಳಲ್ಲಿ ಇಂಥ ವಾಡಿಕೆಯೇ ಇದೆ. ಹೀಗಾಗಿ, 'ಹಿಂದೂ ಕೋಡ್ ಬಿಲ್'ನಲ್ಲಿ ಮಧ್ಯಮ ಮಾರ್ಗವನ್ನು ಸ್ವೀಕರಿಸಲಾಗಿದೆ. ಮೂರು ಮತ್ತು ಐದು ತಲೆಮಾರುಗಳಿಗೆ ಬದಲಾಗಿ, ತಾಯಿಯ ಕಡೆಯಿಂದ ಮತ್ತು ತಂದೆಯ ಕಡೆಯಿಂದ ಕ್ರಮವಾಗಿ ಐದು ಮತ್ತು ಏಳು ತಲೆಮಾರುಗಳನ್ನು ವರ್ಜಿಸುವುದೇ ಆದಲ್ಲಿ, ಅದು ಹೆಚ್ಚು ಶಾಸ್ತ್ರೀಯವಾಗುತ್ತದೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈ ಮಸೂದೆಯನ್ನು ವಿರೋಧಿಸುತ್ತಿರುವಂಥ ವ್ಯಕ್ತಿಗಳು ಹೊರತಂದಿರುವಂಥ ಕರಪತ್ರಗಳಲ್ಲಿ ಹಾಗೂ ಭಿತ್ತಿಪತ್ರಗಳಲ್ಲಿ ಹೇಳಿರುವಂತೆ ಈ ಮಸೂದೆಯ ಮೇರೆಗೆ ಸೋದರ ಸೋದರಿಯರ ನಡುವಣ ವಿವಾಹವೂ ಸಿಂಧುವಾಗುತ್ತದೆ ಎಂಬುದು ಸರ್ವಥಾ ಸುಳ್ಳು ಪ್ರಚಾರವೇ ಆಗಿದೆ ಎಂಬುದು ಸ್ಪಷ್ಟವಾಗಿಯೆ ಇದೆ. ಮುಂದೆ ೭ನೆಯ ಪ್ರಕರಣದ ೫ನೆಯ ಉಪ–ಪ್ರಕರಣದಲ್ಲಿ ಕೊಡಲಾಗಿರುವ ಅಪವಾದವನ್ನು ಅಂದರೆ, "ಪರಸ್ಪರ ಆಚರಣೆ ಮತ್ತು ಸಂಪ್ರದಾಯಗಳ ಅಡಿಯಲ್ಲಿ ಎರಡೂ ಕಡೆಗಳಲ್ಲಿ ಇಂಥ ವಿವಾಹ ಸಂಸ್ಕಾರಗಳನ್ನು ವಿಧಿಬದ್ಧ ಅಥವಾ ಸಿಂಧುವೆಂದು ಭಾವಿಸುವ ಪದ್ಧತಿ ಇಲ್ಲದೆ ಇದ್ದಲ್ಲಿ" ಎಂಬ ಮಾತುಗಳನ್ನು ಕಿತ್ತುಹಾಕಬೇಕು. ಹಾಗೆ ಮಾಡುವುದರಿಂದ

ಏಕರೂಪತೆಯನ್ನು ಕಾಪಾಡಿಕೊಂಡು ಬರುವುದು ಸಾಧ್ಯವಾಗುವುದು ಮಾತ್ರವಲ್ಲದೆ, ಸಪಿಂಡಗಳ ಅಥವಾ ನಿಕಟ ಸಂಬಂಧಿಗಳ ನಡುವಣ ವಿವಾಹವನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದ ಶಾಸ್ತ್ರೋಕ್ತ ವೈಜ್ಞಾನಿಕ ನಿಬಂಧನೆಯನ್ನು ಪಾಲಿಸಿದಂತೆಯೂ ಆಗುತ್ತದೆ.

'ಹಿಂದೂ ಕೋಡ್ ಬಿಲ್ಲನ್ನು' ವಿರೋಧಿಸುತ್ತಿರುವ ಅನೇಕ ವ್ಯಕ್ತಿಗಳು ಎಂಥ ಸುಳ್ಳಿನ ಹಾಗೂ ಕಾಪಟ್ಯದ ಆಸರೆಯನ್ನೆ ಪಡೆದುಕೊಳ್ಳುತ್ತಿದ್ದಾರೆ ಎಂಬುದಕ್ಕೆ ಅತ್ಯಂತ ಸ್ಪಷ್ಟವಾಗಿರುವ ಇನ್ನೊಂದು ಉದಾಹರಣೆಯನ್ನು ನಾನು ಕೊಟ್ಟೇತೀರಬೇಕಾಗಿದೆ. ಮೇಲೆ ಶಾಸ್ತ್ರೀಯ ವಿವಾಹದ ನಿಬಂಧನೆಗಳ ವಿಷಯದಲ್ಲಿ ನಾನು ಉದ್ಧರಿಸಿರುವ ೭ನೆಯ ಪ್ರಕರಣದ ನಾಲ್ಕನೆಯ ನಿಬಂಧನೆಯ ಬಗ್ಗೆ ಮೂಲ ಇಂಗ್ಲಿಷ್ ಹೇಳಿಕೆಯಲ್ಲಿ ಈ ಶಬ್ದಗಳಿವೆ; "(೪) The parties are not within the degrees of prohibited relationship" ಕಲ್ಕತ್ತೆಯ ಹಿಂದೂ ಕೋಡ್ ಬಿಲ್ ವಿರೋಧ ಸಮಿತಿ ಅಚ್ಚಿಸಿರುವ ಹಿಂದೀ ಅನುವಾದದಲ್ಲಿ ೫ನೆಯ ಪುಟದಲ್ಲಿ ಇದನ್ನು ಹೀಗೆ ಅನುವಾದಿಸಲಾಗಿದೆ; "ಎರಡೂ ಕಡೆಯವರು (ಗಂಡು ಮತ್ತು ಹೆಣ್ಣು) ನಿಷಿದ್ಧ ಸಂಬಂಧದ ವ್ಯಾಪ್ತಿಯಲ್ಲಿ ಬರುವುದಾದರೆ" ಆದರೆ ಮೂಲ ಹೇಳಿಕೆಯ ಅರ್ಥ "ನಿಷಿದ್ಧ ಸಂಬಂಧದ ವ್ಯಾಪ್ತಿಯಲ್ಲಿ ಬರದೆ ಇದ್ದರೆ" ಎಂದಾಗಬೇಕಿತ್ತು. ಆದರೆ, ಆ ಅನುವಾದಕ ಮಹಾಶಯ ಜನತೆಯಲ್ಲಿ ಈ ಮಸೂದೆಗೆ ವಿರುದ್ಧವಾದ ಭಾವನೆಯನ್ನು ತುಂಬುವ ಸಲುವಾಗಿ ನಿಷೇಧಾರ್ಥಕ ಶಬ್ದ(not)ವನ್ನು ನುಂಗಿ ಕುಳಿತು ಎರಡೂ ಕಡೆಯವರು ನಿಷಿದ್ಧ ಸಂಬಂಧದ ವ್ಯಾಪ್ತಿಯಲ್ಲಿ ಬರುವುದಾದರೆ ಅದು ಶಾಸ್ತ್ರೀಯ ವಿವಾಹ ಎನ್ನಿಸಿಕೊಳ್ಳುತ್ತದೆ ಎಂದು ಹೇಳಿಬಿಟ್ಟಿದ್ದಾನೆ. ಇದನ್ನು ಅಚ್ಚಿನ ತಪ್ಪು ಎಂದು ಭಾವಿಸುವುದು ತುಂಬ ಕಷ್ಟವೇ ಆಗುತ್ತದೆ. ಇದರಲ್ಲಿ ಕಿಡಿಗೇಡಿತನವೆ ನನಗೆ ಎದ್ದು ಕಾಣುತ್ತದೆ. ಈ ಅನುವಾದದ ಕೊನೆಯ ಪುಟದಲ್ಲಿ ಹೀಗೆಂದು ಹೇಳಲಾಗಿದೆ: "ಪ್ರತಿಯೊಬ್ಬ ಹಿಂದುವೂ ಎಚ್ಚೆತ್ತುಕೊಳ್ಳಬೇಕು. ಈ ಹಿಂದೂ ಕೋಡ್ ಬಿಲ್, ಹಿಂದೂ ಸಮಾಜ ಮತ್ತು ಸಂಸ್ಕೃತಿಯನ್ನು ಬುಡಮೇಲು ಮಾಡಬಯಸುವ ಭಯಂಕರ ಕುತಂತ್ರವೇ ಆಗಿದೆ." ಇಂಥ ಸುಳ್ಳು ಹೇಳಿಕೆಗಳಿಂದ ಹಿಂದೂ ಸಮಾಜ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಸಾಧ್ಯವಾಗುತ್ತದೆಯೆ ಎಂಬುದನ್ನು ತೀರ್ಮಾನಿಸುವ ಹೊಣೆಗಾರಿಕೆಯನ್ನು ನಾನು ಓದುಗರಿಗೆ ಬಿಡಬಯಸುತ್ತೇನೆ.

ಗಂಡ–ಹೆಂಡತಿಯರಿಬ್ಬರಿಗೂ ಬಹು–ವಿವಾಹವನ್ನು ನಿಷೇಧಿಸುತ್ತ, ಪ್ರಸ್ತುತ "ಛಾಯಾ ಪತ್ಯೇ ಮಧುಮತೀಂ ವಾಚಂ ವದುತು ಶಾಂತಿವಾಮ್" ಹಾಗೂ "ಇಹೇಮಾವಿಂದ್ರ ಸುನಂದ ಚಕ್ರವಾಕೇವ ದಂಪತೀ" ಇವೇ ಮೊದಲಾದ ವೇದಮಂತ್ರಗಳಲ್ಲಿ ಸ್ಪಷ್ಟವಾಗಿ ಏಕ ವಿವಾಹದ ಆದರ್ಶವನ್ನು ಸಮರ್ಥಿಸಲಾಗಿದೆ. "ಸಂಮತ–ಪತ್ಯಭಿತಃ ಸಪತ್ನೀರಿವ ಪರ್ಶವಃ" ಇವೇ ಮೊದಲಾದ ವೇದಮಂತ್ರಗಳಲ್ಲಿ ಸಪತ್ನಿತ್ವವನ್ನು ಅತ್ಯಂತ ದುಃಖದಾಯಕವಾದ ಸಂಗತಿ ಎಂದೇ ಹೇಳಲಾಗಿದೆ. ದುರದೃಷ್ಟವಶಾತ್ ಕೆಲವು ಮಂದಿ ವಿದ್ಯಾವಂತ ಯುವಕ–ಯುವತಿಯರಲ್ಲಿಯೂ ಈ ಬಹುವಿವಾಹದ ಪ್ರವೃತ್ತಿ ಹೆಚ್ಚುತ್ತ ನಡೆದಿತ್ತು ಹಾಗೂ ಅದರ ಭಯಂಕರ ಪರಿಣಾಮಗಳು ಎದ್ದುಕಾಣಿಸತೊಡಗಿದ್ದವು. ಹೀಗಾಗಿ, ಇಂಥ ನಿರ್ಬಂಧವನ್ನು ವಿಧಿಸುವುದು ಅಗತ್ಯವೇ ಆಗಿತ್ತು. ಸದ್ಯದ ಹಿಂದೂ ಕಾನೂನಿಗೆ ಅನುಗುಣವಾಗಿ, ಗಂಡಸು ಎಷ್ಟು ವಿವಾಹಗಳನ್ನು ಬೇಕಾದರೂ ಮಾಡಿಕೊಳ್ಳಬಹುದಾಗಿತ್ತು. ದೆಹಲಿಯಲ್ಲಿನ ಶ್ರೀಮಂತ ಹಾಗೂ ಪ್ರತಿಷ್ಠಿತ ಕುಟುಂಬಗಳಿಗೆ ಸೇರಿದವರೆಂದು ಭಾವಿಸಲಾಗಿದ್ದ ವ್ಯಕ್ತಿಗಳಲ್ಲಿಯೂ ಇದಕ್ಕೆ ಅನೇಕ ಉದಾಹರಣೆಗಳು ಕಾಣದೊರೆಯುತ್ತಿದ್ದುವು. ಒಬ್ಬ ಹೆಂಡತಿ ಇರುವಾಗಲೇ ಇನ್ನೊಂದು ಮದುವೆಯಾಗುವುದು ಎಂದರೆ ಮೊದಲನೆಯ ಹೆಂಡತಿಗೆ ವಿಷವನ್ನು ನೀಡಿದಂತೆಯೆ ಆಗುತ್ತದೆ ಎಂಬುದನ್ನು ಲಿಖಿತವಾಗಿ ಹೇಳಬೇಕಾದ

ಅಗತ್ಯವೇನೂ ಇಲ್ಲ.

ಕನಿಷ್ಠ ವಯಸ್ಸಿನ ವಿಷಯದಲ್ಲಿಯೂ ಇದರಲ್ಲಿ ಗಂಡು ಹೆಣ್ಣು ಮಕ್ಕಳಿಗೆ ಕ್ರಮವಾಗಿ ೧೮ ಮತ್ತು ೧೪ ವರ್ಷಗಳನ್ನು ಗೊತ್ತುಪಡಿಸಲಾಗಿದೆ. ಇದು ತೀರ ಕಡಿಮೆಯಾಯಿತು ಎಂದು ನಾನು ಭಾವಿಸಿದ್ದೇನೆ. ನನ್ನ ದೃಷ್ಟಿಯಲ್ಲಿ ಮದುವೆಯಾಗುವ ಗಂಡು–ಹೆಣ್ಣುಗಳ ವಯಸ್ಸು ಕ್ರಮವಾಗಿ ೨೪ ಮತ್ತು ೧೬ಕ್ಕಿಂತಲೂ ಕಡಿಮೆಯಾಗಿರಬಾರದು. "ಅಷ್ಟವರ್ಷಾ ಭವೇದ್ ಗೌರೀ" ಯಂಥ ವೇದ–ವಿರುದ್ಧವಾದ ಶ್ಲೋಕಗಳನ್ನು ಮಾನ್ಯ ಮಾಡುವಂಥ ವ್ಯಕ್ತಿಗಳು ಈ ವಿಚಾರವನ್ನು ವಿರೋಧಿಸಿದರೆ, ಅದರಲ್ಲಿ ಆಶ್ಚರ್ಯಪಡುವಂಥದೇನೂ ಇಲ್ಲ.

ಮದುವೆಗೆ ಸಂಬಂಧಿಸಿದ ಈ ಪ್ರಕರಣಗಳಲ್ಲಿ, ಜಾತಿಮೂಲವಾದ ಭೇದಭಾವಗಳನ್ನು ಮಾನ್ಯಮಾಡಲಾಗಿಲ್ಲ. ಇದು ತೀವ್ರ ಸಂಪ್ರದಾಯವಾದಿಗಳಿಗೆ ಅಸಂತೋಷವನ್ನುಂಟುಮಾಡಬಹುದಾಗಿದೆ. ಆದರೆ, ಈ ಕೃತ್ರಿಮ, ಜನ್ಮಾಧಾರಿತ ಜಾತಿಭೇದ ಹಿಂದೂ ಸಮಾಜವನ್ನು ಹೇಗೆ ಸುಮಾರು ೮ ಸಾವಿರ ಜಾತಿ ಮತ್ತು ಉಪಜಾತಿಗಳಾಗಿ ಹರಿದು ಹಂಚಿಬಿಟ್ಟಿದ್ದು, ಅದರ ಏಕತೆಯನ್ನು, ಸಂಘಟನೆಯನ್ನು ಹಾಗೂ ಪರಸ್ಪರ ಪ್ರೀತಿ ವಿಶ್ವಾಸದ ಭಾವನೆಯನ್ನು ಹಾಳುಮಾಡಿಬಿಟ್ಟಿದೆ ಹಾಗೂ ಈ ಜಾತಿ–ಭೇದ ಯಾವ ರೀತಿಯಲ್ಲಿ "ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಂಭ್ರಾತರೋವಾವೃಧುಃ ಸೌಭಗಾಯ । (ಋಗ್ವೇದ ೫/೫೬/೫) "ಶೂದ್ರೋ ಬ್ರಾಹ್ಮಣತಾ ಮೇತಿ, ಬ್ರಾಹ್ಮಣಶ್ಚೈತಿ ಶೂದ್ರತಾಮ್ (ಮನು. ೧೦/೪೬), "ನ ಜಾತ್ಯಾ ಬ್ರಾಹ್ಮಣಶ್ಚಾತ್ರ, ಕ್ಷತ್ರಿಯೋ ವೈಶ್ಯ ಏವಂ । ನ ಶೂದ್ರೋ ನ ಚ ವೈ ಮ್ಲೇಂಚ್ಛೋ ಭೇದಿತಾಗುಕರ್ಮಭಿಃ ॥" (ಶುಕ್ರನೀತಿ) "ನ ಕುಲೇನ ನ ಜಾತ್ಯಾ ವಾ, ಕ್ರಿಯಾಭಿ ಬ್ರಾಹ್ಮಣೋ ಭವೇತ್।" (ಮಹಾಭಾರತ, ವನಪರ್ವ) ಇವೇ ಮೊದಲಾದ ಶಾಸ್ತ್ರ – ವಚನಗಳಿಗೆ ವಿರುದ್ಧವಾಗಿದೆ ಎಂಬುದನ್ನು ಹಾಗೂ ಇಲ್ಲೆಲ್ಲ ವರ್ಣವ್ಯವಸ್ಥೆ ಕೇವಲ ಗುಣಕರ್ಮಾನುಸಾರಿಯಾದುದೆಂದು ಹೇಳಲಾಗಿದೆ ಎಂಬುದನ್ನು ಮತ್ತು ಹೆಚ್ಚಿನ ದೃಷ್ಟಿಯಿಂದ ಎಲ್ಲ ಮನುಷ್ಯರೂ ಸಮಾನರು ಎಂಬ ವಿಚಾರವನ್ನು ಮತ್ತು ಹುಟ್ಟಿನ ದೃಷ್ಟಿಯಿಂದ ಎಲ್ಲ ಮನುಷ್ಯರು ಸಮಾನರು ಎಂಬ ವಿಚಾರವನ್ನು ಇಲ್ಲೆಲ್ಲ ಪ್ರತಿಪಾದಿಸಲಾಗಿದೆ ಎಂಬುದನ್ನು ಬಲ್ಲ ವಿಚಾರವಾದಿಗಳಿಗೆ ಇದರಿಂದ ಒಂದಿಷ್ಟು ಅಸಂತೋಷ ಉಂಟಾಗಲಾರದು. ವರ್ಣವ್ಯವಸ್ಥೆ ಗುಣ, ಕರ್ಮಾನುಸಾರಿಯಾದುದು ಎಂಬ ವಿಚಾರವನ್ನು ಒಪ್ಪಿದ್ದೆ ಆದರೆ (ಸಮಾನತೆಯ ವಿಚಾರವನ್ನು ಉದ್ಘೋಷಿಸುವ ಈ ಸಿದ್ಧಾಂತವನ್ನು. ಕಳೆದ ವರ್ಷ ವಾರಣಾಸಿ ಮತ್ತು ಇತರ ಕಡೆಗಳಲ್ಲಿ ಸಭೆ ಸೇರಿದ್ದ ವಿದ್ವನ್ಮಂಡಲಿಗಳೂ ಮಾನ್ಯ ಮಾಡಿವೆ) ಮದುವೆಯ ವಿಚಾರದಲ್ಲಿ ಜಾತಿಯ ಪ್ರಶ್ನೆ ಏಳುವಂತೆಯೆ ಇಲ್ಲ. ವಾಸ್ತವವಾಗಿ ಅಂತರ್ಜಾತೀಯ ವಿವಾಹಗಳನ್ನು ಸಮರ್ಥಿಸುವಂಥ ಅನೇಕ ಶಾಸ್ತ್ರವಚನಗಳನ್ನು ಹಾಗೂ ಐತಿಹಾಸಿಕ ಉದಾಹರಣೆಗಳನ್ನೂ ನೀಡುವ ಅಗತ್ಯವೇನೂ ಇಲ್ಲವೆಂದು ನಾನು ಭಾವಿಸಿದ್ದೇನೆ. ಜನ್ಮಾಧಾರಿತ ಜಾತಿಭೇದವನ್ನು ಮಾನ್ಯ ಮಾಡುವಂಥ ನನ್ನ ಸೋದರರಿಗೆ ಈ ಸಂಹಿತೆಯಲ್ಲಿ ಅಂಥ ನಿಷೇಧವನ್ನೇನೂ ಹೇರಲಾಗಿಲ್ಲ ಎಂಬುದನ್ನು ತಿಳಿಯಬಯಸುತ್ತೇನೆ. ತಮ್ಮ ತಮ್ಮ ನಂಬಿಕೆಗಳಿಗೆ ಅನುಗುಣವಾಗಿ, ವಿವಾಹಾದಿಗಳನ್ನು ನಡೆಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ಅವರಿಗೆ ಇದೆ.

ಈ ಸಂಹಿತೆಯಲ್ಲಿ ಸಗೋತ್ರ–ವಿವಾಹದ ವಿಚಾರವನ್ನು ಒತ್ತಿ ಹೇಳಲಾಗಿದೆ ಎಂಬುದಾಗಿ ಹೇಳುತ್ತ, ಹಿಂದೂ ಜನತೆಯನ್ನು ಇದರ ವಿರುದ್ಧವಾಗಿ ರೊಚ್ಚಿಗೆಬ್ಬಿಸಬಹುದಾಗಿದೆ. ಆದರೆ, ಸಗೋತ್ರ, ವಿವಾಹವನ್ನು ಪ್ರತಿಪಾದಿಸುವ ಅಥವಾ ಸಮರ್ಥಿಸುವ ಯಾವೊಂದು ಪ್ರಕರಣವೂ ಇದರಲ್ಲಿ ಇಲ್ಲ. ೨೭ನೆಯ ಪ್ರಕರಣವೊಂದು ಮಾತ್ರ ಇದಕ್ಕೆ ಸಂಬಂಧಿಸಿದ್ದು, ಅದರ ಶೀರ್ಷಿಕೆ ಹೀಗಿದೆ : "ಮೊದಲಿನ ವಿವಾಹಗಳ

ವಿಷಯದಲ್ಲಿ ವಿನಾಯಿತಿ". ಅದರಲ್ಲಿ ಹೀಗೆಂದು ಹೇಳಲಾಗಿದೆ. : "ಈ ಸಂಹಿತೆ ಜಾರಿಗೆ ಬರುವುದಕ್ಕೆ ಮೊದಲು ಇಬ್ಬರು ಹಿಂದೂಗಳ ನಡುವೆ ನಡೆಸಲಾಗಿರುವ ಹಾಗೂ ಬೇರೆ ಕಟ್ಟುಪಾಡುಗಳ ಮೇರೆಗೆ ಸಿಂಧುವಾಗಿರುವ ಅಥವಾ ವಿಧಿಸಮ್ಮತವಾಗಿರುವ ವಿವಾಹ ಅಸಿಂಧುವಾಗತಕ್ಕದ್ದಲ್ಲ; ಹಾಗೂ ಎರಡೂ ಪಕ್ಷಗಳು ಸಮಾನ ಗೋತ್ರ ಅಥವಾ ಸಮಾನ ಪ್ರವರವನ್ನು ಹೊಂದಿವೆ ಅಥವಾ ಭಿನ್ನ ಜಾತಿಗಳಿಗೆ ಸೇರಿದವಾಗಿವೆ ಅಥವಾ ಒಂದೇ ಜಾತಿಯಲ್ಲಿನ ವಿಭಿನ್ನ ಉಪಜಾತಿಗಳಿಗೆ ಸೇರಿದವಾಗಿವೆ ಎಂಬ ಕಾರಣದಿಂದಾಗಿ ಹಾಗೂ ವಸ್ತುಸ್ಥಿತಿಯ ಆಧಾರದ ಮೇಲೆ ಅಂಥ ವಿವಾಹಗಳನ್ನು ಅಸಿಂಧು ಅಥವಾ ವಿಧಿಸಮ್ಮತವಾದುದಲ್ಲ ಎಂದು ಪರಿಗಣಿಸತಕ್ಕದ್ದಲ್ಲ"

ಈ ಪ್ರಕರಣ ಈ ಸಂಹಿತೆ ಜಾರಿಗೆ ಬರುವುದಕ್ಕೆ ಹಿಂದೆ ನಡೆಸಲಾಗಿರುವಂಥ ವಿವಾಹಗಳಿಗೆ ಸಂಬಂಧಿಸಿರುವಂಥದು. 'ಹಿಂದೂ ಕೋಡ್ ಬಿಲ್ಲ'ನ್ನು ವಿರೋಧಿಸುವಂಥ ವ್ಯಕ್ತಿಗಳು ಒಂದೆಡೆ ಸನಾತನ ಧರ್ಮದ ಹೆಸರಿನಲ್ಲಿ ವಿವಾಹ ಸಂಬಂಧದ ಅವಿಚ್ಛೇದನೀಯತೆಯ ವಿಚಾರವನ್ನು ಹಾಡಿ ಹೊಗಳುತ್ತಾರೆ; ಇನ್ನೊಂದು ಕಡೆ ಕೇವಲ ಸಗೋತ್ರದ ವಿಚಾರವನ್ನು ಅಥವಾ ಜಾತಿ ಬೇರೆಯಾಗಿರುವ ವಿಚಾರವನ್ನು ಆಧಾರವಾಗಿಸಿಕೊಂಡು, ಈ ಮೊದಲು ನಡೆದಿರಬಹುದಾದಂಥ ವಿವಾಹಗಳನ್ನು ಅಸಿಂಧುವೆಂದು ಅಥವಾ ವಿಧಿಸಮ್ಮತವಲ್ಲವೆಂದು ಭಾವಿಸತಕ್ಕದಲ್ಲವೆಂದು ಹೇಳುವ ಈ ಪ್ರಕರಣವನ್ನು ವಿರೋಧಿಸುತ್ತಾರೆ ಅಥವಾ ಖಂಡಿಸುತ್ತಾರೆ. ತದ್ವಿರುದ್ಧವಾಗಿರುವ ಅವರ ಈ ನಿಲುವುಗಳು ಆಶ್ಚರ್ಯವನ್ನುಂಟುಮಾಡುತ್ತವೆ.

ಎಲ್ಲರೂ ಶಾಸ್ತ್ರೋಕ್ತವಾಗಿಯೆ ಮದುವೆ ಮಾಡಿಕೊಳ್ಳಬೇಕೆಂದು ನಾನು ಸಹಜವಾಗಿಯೆ ಇಚ್ಛಿಸುತ್ತೇನೆ; ಹಾಗೂ ಇದರ ಮಹತ್ವವನ್ನು ಬುದ್ಧಿಪೂರ್ವಕವಾಗಿ ತಿಳಿಯ ಹೇಳಿ, ಹಾಗೆ ಮಾಡುವಂತೆ ಎಲ್ಲರನ್ನು ಪ್ರೇರೇಪಿಸಬೇಕೆಂದೂ ನಾನು ಇಚ್ಛಿಸುತ್ತೇನೆ. ಆದರೆ, ಯಾವುದೋ ಕಾರಣದಿಂದಾಗಿ, ಹಾಗೆ ಮಾಡಬಯಸದಿರುವಂಥ ವ್ಯಕ್ತಿಗಳಿಗಾಗಿ 'ಸಿವಿಲ್ ವಿವಾಹ'ದ, ಈ ಮೊದಲು ಉದ್ಧರಿಸಲಾಗಿರುವ ಷರತ್ತುಗಳಿಗೆ ಅನುಗುಣವಾಗಿ ಮದುವೆ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಅದಕ್ಕೆ ಇನ್ನೊಂದು ಷರತ್ತಿನಲ್ಲಿ ಮಾತ್ರವೇ ಸೇರಿಸಲಾಗಿದೆ. : "ಮದುವೆಗೆ ಸಂಬಂಧಿಸಿದ ಎರಡು ಪಕ್ಷಗಳಲ್ಲಿ, ಗಂಡು ಅಥವಾ ಹೆಣ್ಣುಗಳಲ್ಲಿ, ಯಾರಿಗಾದರೂ ೨೧ ವರ್ಷ ತುಂಬಿರದೆ ಇದ್ದಲ್ಲಿ, ಅಂಥ ಸಂದರ್ಭದಲ್ಲಿ ಆ ವಿವಾಹಕ್ಕೆ ಒಪ್ಪಿಗೆಯನ್ನು ಪಡೆದುಕೊಂಡಿರತಕ್ಕದ್ದು." ಸಂಸ್ಕಾರಗಳು ಇರಬಾರದೆಂಬುದು ಈ ಸಂಹಿತೆಯಲ್ಲಿ ಎಲ್ಲಿಯೂ ಹೇಳಲಾಗಿಲ್ಲ. ೧೮ನೆಯ ಪ್ರಕರಣದ ೨ನೆಯ ಖಂಡದಲ್ಲಿ, ಮದುವೆ ಯಾವ ರೀತಿಯಲ್ಲಾದರೂ ನಡೆದಿರಬಹುದು; ಆದರೆ, ಎಲ್ಲಿಯವರೆಗೆ ಎರಡೂ ಪಕ್ಷಗಳವರು (ಅಂದರೆ, ಗಂಡು ಮತ್ತು ಹೆಣ್ಣು) ನಾನು ನನ್ನನ್ನು ಕಾನೂನುಸಮ್ಮತ ಪತ್ನಿ (ಅಥವಾ ಪತಿ) ಎಂದು ಸಮ್ಮುಖದಲ್ಲಿ ಹೇಳವುದಿಲ್ಲವೊ ಅಲ್ಲಿಯವರೆಗೆ ಅಂಥ ವಿವಾಹ ಪೂರ್ಣಗೊಂಡಿತು ಎಂದಾಗಲಿ ಕಾನೂನು ಸಮ್ಮತವಾಗಿ ಅವರನ್ನು ಬಂಧಿಸುವಂಥದಾಗಲಿ ಆಗಿರುವುದಲ್ಲ" ಎಂಬುದಾಗಿ ಸ್ಪಷ್ಟವಾಗಿ ಹೇಳಲಾಗಿದೆ.

ವಾಸ್ತವವಾಗಿ, ವಿವಾಹಸಂಬಂಧಿ ಮಂತ್ರಗಳಲ್ಲಿ ಈ ಭಾವನೆ ಸ್ಪಷ್ಟವಾಗಿಯೇ ಸೇರಿಕೊಂಡಿದೆ. ಮುಖ್ಯವಾಗಿರುವ ಸಂಗತಿ ಏನೆಂದರೆ 'ಸಿವಿಲ್ ವಿವಾಹ'ದ ಸಂದರ್ಭದಲ್ಲಿ, ಹಿಂದಿನಂತೆ ನಾನು ಹಿಂದೂಧರ್ಮವನ್ನು ಅಥವಾ ಬೇರಾವುದೇ ಅಂಗೀಕೃತ ಧರ್ಮವನ್ನು ಒಪ್ಪಿ ನಡೆಯುವಂಥವನಲ್ಲ ಎಂದು ಹೇಳಬೇಕಾದ ಅಗತ್ಯವೇನೂ ಇಲ್ಲ.

# ಅನುಬಂಧ ೩

## ವಿವಾಹ ವಿಚ್ಛೇದನಕ್ಕೆ ಎಡೆಮಾಡಿಕೊಡುವ ಪರಿಸ್ಥಿತಿಗಳು

## ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ

ಮೂರನೆಯ ಈ ಲೇಖನದಲ್ಲಿ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಪ್ರಕರಣಗಳ ಬಗೆಗಿನ ನನ್ನ ಕೆಲವೊಂದು ಆಲೋಚನೆಗಳನ್ನು ಮುಂದಿರಿಸಬಯಸುತ್ತೇನೆ. ಮುಖ್ಯವಾಗಿ ಅವು ಹೀಗಿವೆ:

ಪ್ರಕರಣ ೩೦ : ಈ ಸಂಹಿತೆ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರದಲ್ಲಿ ನಡೆದ ಅಥವಾ ಪೂರ್ಣಗೊಳಿಸಲಾದ ಇಂಥ ಯಾವುದೇ ವಿವಾಹ ಈ ಕೆಳಗೆ ಕಾಣಿಸಲಾಗಿರುವ ಸಂಗತಿಗಳಲ್ಲಿ ಯಾವುದೇ ಒಂದು ಕಾರಣದ ಆಧಾರದ ಮೇಲೆ ಕೊನೆಗೊಳ್ಳಬಹುದಾಗಿರುತ್ತದೆ:

೧. ಇಂಥ ವಿವಾಹ ನಡೆದ ಕಾಲದಲ್ಲಿ ಹಾಗೂ ಆಗಿನಿಂದ ಹಿಡಿದು ಈ ಸಂಬಂಧವಾದ ನ್ಯಾಯಾಲಯದ ನಡವಳಿಗಳು ಮೊದಲಾಗುವವರೆಗೆ, ವಿವಾಹಕ್ಕೆ ಸಂಬಂಧಿಸಿದ ಎರಡು ಪಕ್ಷಗಳಲ್ಲಿ ಯಾರಾದರೂ ಒಬ್ಬರು ನಪುಂಸಕರಾಗಿದ್ದಲ್ಲಿ;

೨. ಗಂಡನಾದವನು ಬೇರೆ ಯಾವಳೇ ಹೆಂಗಸನ್ನು ಇಟ್ಟುಕೊಂಡವಳಾಗಿ ಇರಿಸಿಕೊಂಡಿದ್ದಲ್ಲಿ ಅಥವಾ ಹೆಂಡತಿಯಾದವಳು ಬೇರೊಬ್ಬ ಗಂಡಸಿಗೆ ಇಟ್ಟುಕೊಂಡವಳಾಗಿ ಬಾಳುತ್ತಿದ್ದಲ್ಲಿ ಅಥವಾ ವೇಶ್ಯಾ ಜೀವನವನ್ನು ನಡೆಸುತ್ತಿದ್ದಲ್ಲಿ;

೩. ವಿವಾಹಕ್ಕೆ ಸಂಬಂಧಿಸಿದ ಎರಡು ಪಕ್ಷಗಳಲ್ಲಿ, ಯಾರಾದರೂ ಒಬ್ಬರು ಬೇರೊಂದು ಧರ್ಮವನ್ನು ಸ್ವೀಕರಿಸಿದ್ದಲ್ಲಿ ಹಾಗೂ ಹಿಂದೂಧರ್ಮವನ್ನು ತ್ಯಜಿಸಿದ್ದಲ್ಲಿ;

೪. ವಿವಾಹಕ್ಕೆ ಸಂಬಂಧಿಸಿದ ಎರಡು ಪಕ್ಷಗಳಲ್ಲಿ, ಯಾರಾದರೂ ಒಬ್ಬರು ಗುಣಪಡಿಸಲಾಗದ ರೂಪದಲ್ಲಿ ಉನ್ಮತ್ತರು ಅಥವಾ ಹುಚ್ಚರಾಗಿದ್ದಲ್ಲಿ ಹಾಗೂ ಇಂಥ ಕೋರಿಕೆಯನ್ನು ಸಲ್ಲಿಸುವುದಕ್ಕೆ ಮೊದಲು ಐದು ವರ್ಷಗಳವರೆಗೆ ಅವರಿಗೆ ಚಿಕಿತ್ಸೆಯನ್ನು ನಡೆಸಿ (ಅದು ಫಲಪ್ರದವಾಗದೆ ಹೋಗಿ)ದ್ದಲ್ಲಿ;

೫. ಎರಡು ವರ್ಷಗಳಲ್ಲಿ ಯಾರಾದರೂ ಒಬ್ಬರು ಗುಣಪಡಿಸಲಾಗದಂಥ ಹಾಗೂ ತುಂಬ ಭಯಂಕರವಾದಂಥ ಕುಷ್ಠರೋಗದಿಂದ ನರಳುತ್ತ ಇದ್ದಲ್ಲಿ/

ತುಂಬ ವಿವಾದಾಸ್ಪದವಾಗಿರುವ ಹಾಗೂ ಗಂಭೀರವಾಗಿರುವ ಈ ವಿಷಯದ ಬಗ್ಗೆ ನನ್ನ ವೈಯಕ್ತಿಕವಾದ ಆಲೋಚನೆಗಳನ್ನು ಮುಂದಿರಿಸುವುದಕ್ಕೆ ಮೊದಲು, ಒಂದು ವಿಚಾರವನ್ನು ಸ್ಪಷ್ಟಪಡಿಸುವ ಅಗತ್ಯವಿದೆಯೆಂದು ಭಾವಿಸಿದ್ದೇನೆ. ಅದೇನೆಂದರೆ ವೈದಿಕ ಆದರ್ಶಗಳಿಗನುಗುಣವಾಗಿ ಗಂಡ–ಹೆಂಡಿರ ಸಂಬಂಧ ಅವಿಚ್ಛೇದ್ಯವಾದುದು.

"*ಗೃಹ್ಣಾಮಿತೇ ಸೌಭಗತ್ವಾಯ ಹಸ್ತಂ ಮಯಾ ಪತ್ಯಾ ಜರದಷ್ಟಿರ್ಯಥಾಸಃ।*
*ಭಗೋ ಅರ್ಯಮಾ ಸವಿತಾ ಪುರಂಧಿ ಮಹ್ಯ ತ್ವಾದುರ್ಗಾರ್ಹಪತ್ಯಾಯ ದೇವಾಃ॥*"

(ಋಗ್ವೇದ, ೧೦,೮೫.೩೬);

*"ಮಭೇಯಮಸ್ತು ಪೋಷ್ಯಾಮದ್ಯತ್ವಾದಾದ್ ವಹ ಸತಿಃ ।*
*ಮಯಾ ಪತ್ಯಾ ಪ್ರಜಾವತೀ ಸಂಜೀವ ಶರದಃ ಶತಮ್।"*

(ಅಥರ್ವ ವೇದ, ೧೪.೧.೫೨)

ಪಾಣಿಗ್ರಹಣದ ಸಂದರ್ಭದಲ್ಲಿ ಹೇಳಲಾಗುವ ಇವೇ ಮೊದಲಾದ ಮಂತ್ರಗಳಲ್ಲಿ ವರನು ವಧುವನ್ನು ಉದ್ದೇಶಿಸಿ ಈ ಮಾತುಗಳನ್ನು ಸ್ಪಷ್ಟವಾಗಿ ಹೇಳುತ್ತಾನೆ. "ಸೌಭಾಗ್ಯವೃದ್ಧಿಗಾಗಿ ನಾನು ನಿನ್ನ ಕೈಹಿಡಿಯುತ್ತಿದ್ದೇನೆ. ವೃದ್ಧಾವಸ್ಥೆಯವರೆಗೂ ನೀನು ನನ್ನೊಡನೆ ಸುಖವಾಗಿ ಬಾಳು. ನೀನು ನನ್ನಿಂದ ಪೋಷ್ಯಳಾಗಿ ಅಂದರೆ ಪತ್ನಿಯಾಗಿ ಇರುತ್ತೀಯೆ. ಆ ಭಗವಂತ ನಿನ್ನನ್ನು ನನಗೆ ದಯಪಾಲಿಸಿದ್ದಾನೆ. ಪತಿಯಾದ ನನ್ನೊಡನೆ ನೀನು ನೂರು ವರ್ಷಗಳವರೆಗೆ ಸುಖ-ಶಾಂತಿಗಳಿಂದ ಬಾಳು."

*೧) ಆ ನಃ ಪ್ರಜಾಂ ಜನಯತು ಪ್ರಜಾಪತಿರಾಜಸೂಯ ಸಮನಕ್ತ್ವರ್ಯಮಾ।*
*ಅದುರ್ಮಗಲೀಃ ಪತಿಲೋಕಮಾವಿಶ ಶಂ ನೋಭವ ದ್ವಿಪದೇಶಂ ಚತುಷ್ಪದೇ॥*

(ಋಗ್ವೇದ, ೧೦/೮೫/೪೨)

*೨) "ಇಹೈವಸ್ತಂ ಮಾವಿಯೌಷ್ಟಂ ವಿಶ್ವಮಾಯುರ್ವ್ಯಶ್ನುತಮ್।*
*ಕ್ರೀಡಾನೌ ಪುತ್ರೈರ್ನಪ್ತೃಭಿರ್ಮೋದಮಾನೌ ಸ್ವೇ ಗೃಹೇ॥"*

(ಋಗ್ವೇದ, ೧೦/೮೫/೪೨)

ವಿವಾಹ-ಸೂಕ್ತದ ಇತರ ಮಂತ್ರಗಳಲ್ಲಿಯೂ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಲಾಗಿದೆ: "ವೃದ್ಧಾವಸ್ಥೆಯವರೆಗೂ ಭಗವಂತನು ನಮ್ಮನ್ನು ಒಂದಾಗಿ ಇಟ್ಟಿರಲಿ ಹೇ, ಪತಿ-ಪತ್ನಿಯರೆ! ನೀವಿಬ್ಬರೂ ಇಲ್ಲಿಯೇ ಇರಿ ('ಮಾವಿಯೌಷ್ಟಮ್'); ನೀವಿಬ್ಬರೂ ಎಂದೂ ಬೇರೆಯಾಗದಿರಿ; ನಿಮ್ಮಿಬ್ಬರಲ್ಲಿ ಎಂದೂ ವಿರೋಧ ಏರ್ಪಡದೆ ಇರಲಿ ಅಥವಾ ನಿಮ್ಮಿಬ್ಬರಲ್ಲಿ ಯಾರೂ ಇನ್ನೊಬ್ಬರನ್ನು ತ್ಯಜಿಸದಿರಿ. ಪ್ರಸನ್ನಚಿತ್ತರಾಗಿ ಇಡೀ ಆಯುಷ್ಯಪರ್ಯಂತ ನೀವು ಆನಂದವಾಗಿ ಕಾಲಕಳೆಯಿರಿ."

ವೈದಿಕ ಆದರ್ಶಗಳಿಗನುಗುಣವಾಗಿ, ಈ ಕೆಳಗೆ ಕಾಣಿಸಿರುವ ನಿಯಮಗಳು ಅಗತ್ಯವಾಗುತ್ತವೆ:

೧. ಕನಿಷ್ಠ ಪಕ್ಷ ೨೪ ವರ್ಷಗಳವರೆಗೆ ಗಂಡು ಹಾಗೂ ೧೬ ವರ್ಷಗಳವರೆಗೆ ಹೆಣ್ಣು ಪೂರ್ಣ ಬ್ರಹ್ಮಚರ್ಯೆಯನ್ನು ಪಾಲಿಸಬೇಕು. ಆಗ ಮಾತ್ರವೇ ಒಬ್ಬರು ಇನ್ನೊಬ್ಬರಿಗೆ ಪ್ರಸನ್ನತೆಯನ್ನುಂಟು ಮಾಡುವ ರೀತಿಯಲ್ಲಿ ಗೃಹಸ್ಥಾಶ್ರಮವನ್ನು ಪ್ರವೇಶಿಸತಕ್ಕದ್ದು.

೨. ತಾರುಣ್ಯದಲ್ಲಿ ಸ್ವಯಂವರದ ರೂಪದಲ್ಲಿ ವಿವಾಹ ಮಾಡಿಕೊಳ್ಳಬೇಕು; ಪರಸ್ಪರ ಕಾಮನೆ ದೃಢವಾಗಿದ್ದಾಗ ಮಾತ್ರವೇ ವಿವಾಹವಾಗಬೇಕು, ಇಲ್ಲವಾದಲ್ಲಿ ಕೂಡದು
*"ಏಯಮಗನ್ ಪತಿ ಕಾಮಾ ಜನಿಕಾಮೋಹಮಾಗಮಮ್।" (ಅಥರ್ವ ವೇದ),*
*"ವಧೂರಿಯಂ ಪತಿಮಿಚ್ಛನ್ತ್ಯೈತಿ।"*

(ಋಗ್ವೇದ, ೫/೩೭/೩);

*"ಭದ್ರಾ ವಧೂರ್ಭವತಿ ಯತ್ಸುಪೇಶಾ।*
*ಸ್ವಯಂ ಸಾ ಮಿತ್ರ ವನುತೆ ಜನೇಚಿತ್)।"*

(ಋಗ್ವೇದ, ೧೦/೨೭/೧೨)

–ಇವೇ ಮೊದಲಾದ ವೇದ–ಮಂತ್ರಗಳಲ್ಲಿ ಇದೇ ಭಾವನೆ ಪ್ರತಿಪಾದಿತವಾಗಿದೆ. ಇಬ್ಬರೂ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತುಕೊಂಡು, ಪರಸ್ಪರ ಪ್ರಸನ್ನಚಿತ್ತರಾಗಿ ವಿವಾಹಬಂಧನಕ್ಕೆ ಒಳಗಾಗಬೇಕು.

೩) ಗಂಡು ಪತ್ನೀವ್ರತದ ಧರ್ಮವನ್ನು, ಹೆಣ್ಣು ಪಾತಿವ್ರತ್ಯದ ಧರ್ಮವನ್ನು ಸದಾ ಕಾಲವೂ ಪಾಲಿಸಿಕೊಂಡು ಬರಬೇಕು. ಪರಸ್ಪರ ಪೂರ್ಣ ವಿಶ್ವಾಸವನ್ನಿರಿಸಿಕೊಂಡು, ಅವರು ಧರ್ಮ, ಅರ್ಥ ಮತ್ತು ಕಾಮಗಳಲ್ಲಿ ಸಂಪೂರ್ಣವಾಗಿ ಸಹಕರಿಸಬೇಕು.

ಈ ವೈದಿಕ ಆದರ್ಶಗಳನ್ನು ಪಾಲಿಸಿಕೊಂಡು ಬರುವ ವೈವಾಹಿಕ ಸಂಬಂಧದಲ್ಲಿ ವಿಚ್ಛೇದ ಮೊದಲಾದ ಪ್ರಶ್ನೆಗಳು ಉದ್ಭವಿಸುವುದೇ ಇಲ್ಲವೆಂಬುದನ್ನು ಹೇಳಬೇಕಾದ ಅಗತ್ಯವೇ ಇರುವುದಿಲ್ಲ. ಆದರೆ, ದೌರ್ಭಾಗ್ಯದ ಸಂಗತಿ ಎಂದರೆ ಜನತೆ ಈ ಆದರ್ಶಗಳಿಂದ ಮತ್ತು ನಿಯಮಗಳಿಂದ ಬಹುದೂರವಾಗಿಬಿಟ್ಟಿದೆ. ಬ್ರಹ್ಮಚರ್ಯದ ಪಾಲನೆಯೂ ಇಲ್ಲ; ವೇದಾಧ್ಯಯನ ಮುಂತಾದವುಗಳ ಅಭ್ಯಾಸವೂ ಇಲ್ಲ; ಶಾರೀರಿಕ, ಮಾನಸಿಕ ಮತ್ತು ಆತ್ಮಿಕ ಶಕ್ತಿಗಳ ವಿಕಾಸಕ್ಕೆ ನೆರವಾಗುವಂಥ ಇತರ ವೈದಿಕ ನಿಯಮಗಳ ಪಾಲನೆಯೂ ಆಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ, ೩೦ನೆಯ ಪ್ರಕರಣದಲ್ಲಿ ವರ್ಣಿಸಲಾಗಿರುವ ಸ್ಥಿತಿಗಳಲ್ಲಿ ಏನು ಮಾಡಬೇಕು ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ.

ಮಧ್ಯಕಾಲೀನ ಅವಧಿಯಲ್ಲಿ ರಚಿಸಲಾದ ಎಲ್ಲ ಸ್ಮೃತಿಗಳಲ್ಲಿ ಹಾಗೂ ಇತರ ಗ್ರಂಥಗಳಲ್ಲಿ ವೈದಿಕ ಆದರ್ಶಗಳಿಗೆ ವಿರುದ್ಧವಾಗಿರುವಂಥ ಅನೇಕ ಮಾತುಗಳು ಕಾಣದೊರೆಯುತ್ತವೆ. ಅವುಗಳನ್ನೇ ಆಧಾರವೆಂದು ಭಾವಿಸಿ ಬಾಲ್ಯವಿವಾಹದ ಪದ್ಧತಿ ರೂಢಿಗೆ ಬಂದಿತು; ವೇದಗಳನ್ನು ಅಧ್ಯಯನ ಮಾಡುವ ಹಾಗೂ ಯಜ್ಞಗಳನ್ನು ಆಚರಿಸುವ ಸ್ತ್ರೀಯರ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು; ತಂದೆ–ತಾಯಿಗಳ ಇಚ್ಛೆಗೆ ಅನುಗುಣವಾಗಿಯೆ ಅಥವಾ ಬಹುಮಟ್ಟಿಗೆ ಅವಿದ್ಯಾವಂತರಾಗಿರುತ್ತಿದ್ದ ಪುರೋಹಿತರ ಅಥವಾ ತಾಯಿಂದರ ಇಚ್ಛೆಯ ಮೇರೆಗೆ ವಿವಾಹಗಳು ನಡೆಯತೊಡಗಿದವು; ಇಂಥ ವಿವಾಹಗಳಲ್ಲಿ ಗುಣ, ಕರ್ಮ ಮತ್ತು ಸ್ವಭಾವಗಳಲ್ಲಿ ಸಾಮ್ಯವಿರಬೇಕೆಂಬ ಅಂಶಗಳನ್ನು ಗಮನಿಸದೆ, ಜಾತಿ ಮತ್ತು ಉಪಜಾತಿಗಳ ಸಾಮ್ಯವನ್ನೇ ಗಮನದಲ್ಲಿರಿಸಿಕೊಳ್ಳಲಾಯಿತು. ಇಂಥ ಸನ್ನಿವೇಶದಲ್ಲಿ ಉದ್ಭವಿಸಿದಂಥ ಶೋಚನೀಯ ಪರಿಸ್ಥಿತಿಯನ್ನು ಸುಧಾರಿಸಬೇಕಾದ ಅಗತ್ಯ ಏರ್ಪಟ್ಟಿತ್ತು ಎಂಬುದನ್ನು ಯಾವನೇ ವಿಚಾರವಾದಿಯೂ ನಿರಾಕರಿಸಲಾರ. ಬಾಲ್ಯವಿವಾಹದ ದುಷ್ಪರಿಣಾಮಗಳೇ ಚಿಕ್ಕಂದಿನಲ್ಲಿಯೇ ಉಂಟಾಗುವ ಸಾವಿನ, ನಿರ್ವೀರ್ಯತೆಯ ಹಾಗೂ ನಪುಸಂಕತೆಯ ಹಾಗೂ ಇನ್ನಿತರ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಗಂಡ–ಹೆಂಡಿರ ನಡುವಣ ಜಗಳಗಳ ಹಾಗೂ ಗಂಡಂದಿರು ತಮ್ಮ ವಿವಾಹಪತ್ನಿಯರನ್ನು ತ್ಯಜಿಸಿರುವ, ಅವರೊಡನೆ ಕ್ರೌರ್ಯದಿಂದ ವರ್ತಿಸಿರುವ ಅಥವಾ ಮರುಮದುವೆ ನಡೆದಿರುವ ಹಾಗೂ ಇನ್ನಿತರ ಪ್ರಸಂಗಗಳ ನೂರಾರು ಮಾತ್ರವಲ್ಲ, ಸಾವಿರಾರು ಉದಾಹರಣೆಗಳು ಯಾವುದೇ ನಗರದಲ್ಲಿ ನಮಗೆ ಸುಲಭವಾಗಿಯೇ ದೊರೆಯಬಹುದಾಗಿದೆ. ಇಂಥ ಸನ್ನಿವೇಶದಲ್ಲಿ, ವೈದಿಕ ಆದರ್ಶಗಳನ್ನು ಅಥವಾ ಸನಾತನ ಧರ್ಮವನ್ನು ಹಾಡಿ ಹೊಗಳುವ ಮೂಲಕ ಸುಧಾರಣೆಯನ್ನು ತರಲು ಸಾಧ್ಯವಾಗುವುದಿಲ್ಲವೇನು? ಈ ಪ್ರಶ್ನೆಯ ಬಗ್ಗೆ ಸಮಾಜದ ಹಿತೈಷಿಗಳು ಗಂಭೀರವಾಗಿ ಚಿಂತಿಸಬೇಕಾಗಿದೆ. ಇದಕ್ಕೆ ಪ್ರತಿಯಾಗಿ ನಾವು ಯಾವ ಸುಧಾರಣೆಯ ಕಾರ್ಯವನ್ನು ನೆಮ್ಮಿ ನಿಲ್ಲಬಯಸುತ್ತೇವೆಯೊ ಅದು ಇಂದಿನ ಸನ್ನಿವೇಶವನ್ನು ಇನ್ನಷ್ಟು ಹಾಳುಗೆಡಿಸುವಂಥದ್ದಾಗಿರಬಾರದು ಎಂಬ ಸಂಗತಿಯನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕಾಗಿದೆ.

# ವಿವಾಹ ವಿಚ್ಛೇದನೆ ಮತ್ತು ಸ್ಮೃತಿ ಮೊದಲಾದ ಗ್ರಂಥಗಳು

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ವಿವಾಹ–ವಿಚ್ಛೇದನೆ ಹಿಂದೂಧರ್ಮದ ಹಾಗೂ ಹಿಂದೂ ಸಮಾಜದ ಭಾವನೆಗೆ ಸಂಪೂರ್ಣವಾಗಿ ವಿರುದ್ಧವಾಗಿರುವಂಥ ಹಾಗೂ ಅದರ ಮಟ್ಟಿಗೆ ಸಂಪೂರ್ಣವಾಗಿ ಹೊಸತಾಗಿರುವಂಥ ಪದ್ಧತಿಯಾಗಿದ್ದು, ಅದನ್ನು ಈ ಮಸೂದೆಯ ಮೂಲಕ ಹಿಂದೂ ಸಮಾಜದ ಮೇಲೆ ಹೊರಿಸಲಾಗುತ್ತಿದೆ ಎಂಬುದಾಗಿ ಸಾಮಾನ್ಯವಾಗಿ ಹೇಳಲಾಗುತ್ತಿದೆ. ನಮ್ಮ ನಾಡಿನ ಸಂಸತ್ತಿನಲ್ಲಿ ಪಂಡಿತ ಲಕ್ಷ್ಮೀಕಾಂತ ಮೈತ್ರ ಮೊದಲಾದ ಅನೇಕ ವ್ಯಕ್ತಿಗಳು ಇದೇ ಮಾತನ್ನು ಮತ್ತೆ ಮತ್ತೆ ಹೇಳಿದ್ದರು. ಅದರೆ ಸ್ಮೃತಿ ಗ್ರಂಥಗಳನ್ನು ಹಾಗೂ ಇತರ ಮಧ್ಯಕಾಲೀನ ಕೃತಿಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದ್ದೇ ಆದರೆ, ಈ ಮಾತಿನ ಅಸತ್ಯತೆ ಸ್ಪಷ್ಟವಾಗಿಯೇ ನಮ್ಮ ಅರಿವಿಗೆ ಬರುತ್ತದೆ. ಈ ಲೇಖನದ ಮೊದಲ ಭಾಗದಲ್ಲಿ ನಾನು ತೋರಿಸಿಕೊಟ್ಟಿರುವಂತೆ, ವೈದಿಕ ಆದರ್ಶಗಳನ್ನು ಅನುಸರಿಸಿದ್ದೇ ಆದರೆ ಹಾಗೂ ವಿವಾಹಕ್ಕೆ ಸಂಬಂಧಿಸಿದ ವೈದಿಕ ನಿಯಮಗಳನ್ನು ಪಾಲಿಸಿದ್ದೇ ಆದರೆ, ವೈವಾಹಿಕ ಸಂಬಂಧವನ್ನು ತೊಡೆದುಹಾಕುವ ಪ್ರಶ್ನೆಯೇ ಏಳುವುದಿಲ್ಲ. ಆದರೆ, ಆ ಪದ್ಧತಿಗಳನ್ನು ಅನುಸರಿಸಿಕೊಂಡು ಬಂದಿರುವುದರಿಂದಾಗಿ ಉದ್ಭವಿಸಿರುವ ಶೋಚನೀಯ ಸ್ಥಿತಿಯನ್ನು ಕುರಿತು ನಾವಿಂದು ಚಿಂತಿಸಬೇಕಾಗಿದೆ. ಸ್ಮೃತಿಗಳ ಹಾಗೂ ಇನ್ನಿತರ ಗ್ರಂಥಗಳ, ಈ ಕೆಳಗೆ ಕಾಣಿಸಲಾಗಿರುವ ಹೇಳಿಕೆಗಳನ್ನು ಈ ಸಂದರ್ಭದಲ್ಲಿ ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಮೊಟ್ಟಮೊದಲಿಗೆ ಸುಪ್ರಸಿದ್ಧವಾಗಿರುವ ಆ ಸ್ಮೃತಿ–ವಚನವನ್ನು ನಾನು ಉದ್ಧರಿಸಬಯಸುತ್ತೇನೆ:

*೧) ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ।*
*ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ॥*

ಇದು 'ಪರಾಶರ ಸ್ಮೃತಿ'ಯ ನಾಲ್ಕನೆಯ ಅಧ್ಯಾಯದ ೩೦ನೆಯ ಶ್ಲೋಕ. *"ಕಲೌ ಪರಾಶರಃ ಸ್ಮೃತಃ"* ಅಥವಾ *"ಕಲೌ ಪರಾಶರೀ ಸ್ಮೃತಿಃ"* – 'ಹಿಂದೂ ಕೋಡ್ ಬಿಲ್ಲ'ನ್ನು ವಿರೋಧಿಸುತ್ತಿರುವ ನಮ್ಮ ಪುರಾಣಪ್ರಿಯ ಸೋದರರು, ಈ ಹೇಳಿಕೆಗಳಿಗನುಗುಣವಾಗಿ, ಇದನ್ನೇ ಅತ್ಯಂತ ಆಧಾರಪ್ರಾಯವಾದ ಕೃತಿಯೆಂದು ಭಾವಿಸುತ್ತಾರೆ. ಈ ಶ್ಲೋಕದ ಅರ್ಥ ಸ್ಪಷ್ಟವಾಗಿಯೇ ಇದೆ. ಅದೇನೆಂದರೆ–

ಗಂಡನಾದವನು ಕಳೆದುಹೋಗಿರುವ ಸಂದರ್ಭದಲ್ಲಿ (ಅಂದರೆ, ಅವನು ಕಾಣೆಯಾಗಿದ್ದಲ್ಲಿ ಅಥವಾ ಅವನ ಬಗ್ಗೆ ಯಾವುದೇ ಸುದ್ದಿ ತಿಳಿಯದೆ ಇರುವ ಸಂದರ್ಭದಲ್ಲಿ), ಮೃತನಾಗಿದ್ದಲ್ಲಿ, ಸಂನ್ಯಾಸಿಯಾಗಿಬಿಟ್ಟಿದ್ದಲ್ಲಿ, ನಪುಂಸಕನಾಗಿದ್ದಲ್ಲಿ ಅಥವಾ ಪತಿತನಾಗಿದ್ದಲ್ಲಿ – ಈ ಐದು ಆಪತ್ತುಗಳ ಸಂದರ್ಭದಲ್ಲಿ ಹೆಂಗಸರು ಇನ್ನೊಬ್ಬನನ್ನು ಪತಿಯಾಗಿ ಸ್ವೀಕರಿಸಬಹುದಾಗಿದೆ.

ಹಿಂದೂಧರ್ಮವನ್ನು ತ್ಯಜಿಸಿ ಇಸ್ಲಾಂ ಧರ್ಮಕ್ಕೆ ಅಥವಾ ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುವುದು ಸಂಪ್ರದಾಯನಿಷ್ಠ ಹಿಂದೂಗಳ ದೃಷ್ಟಿಯಲ್ಲಿ ಪತಿತನಾಗುವುದೆ ಆಗಿರುತ್ತದೆ. ಹೀಗಾಗಿ, ೩೦ನೆಯ

ಪ್ರಕರಣದಲ್ಲಿ ವರ್ಣಿಸಲಾಗಿರುವ ಅನೇಕ ವಿಚಾರಗಳಿಗೆ ಇದನ್ನೇ ಆಧಾರವಾಗಿ ಭಾವಿಸಲಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ.

ಪುರಾಣಗಳಿಗೆ ವ್ಯಾಖ್ಯಾನಗಳನ್ನು ಒದಗಿಸುವಂಥ ವ್ಯಕ್ತಿಗಳು ಹಾಗೂ ಪುರಾಣಪ್ರಿಯರಾದ ನಮ್ಮ ಸೋದರರು 'ಪತೌ' ಎಂಬ ಮಾತಿಗೆ 'ಉತ್ಪಸ್ಯಮಾನ ಪತಿ' ಅಥವಾ 'ಭಾವೀಪತಿ' ಎಂಬ ಅರ್ಥನೀಡುತ್ತಾರೆಯೆ ಹೊರತು 'ವಿವಾಹಿತ ಪತಿ' ಎಂದಲ್ಲ ಎಂಬುದು ನನಗೆ ತಿಳಿದಿದೆ. ಹೀಗೆ ಮಾಡುವುದರ ಮೂಲಕ, ವಿವಾಹ ಸಂಸ್ಕಾರಕ್ಕೆ ಮೊದಲಿನ ಕೇವಲ ವಾಗ್ದಾನದ ಸನ್ನಿವೇಶಕ್ಕೆ ಈ ಶ್ಲೋಕ ಸಂಬಂಧಿಸಿದ್ದೆಂದು ವಾದಿಸುತ್ತಾರೆ ಹಾಗೂ ವ್ಯಾಕರಣದ ದೃಷ್ಟಿಯಿಂದ ಈ ಶಬ್ದವನ್ನು ತಿರುಚಿ, ಇಂಥ ಅರ್ಥವನ್ನು ಹೊರಡಿಸುವ ದುಃಸಾಹಸವನ್ನೆಸಗುತ್ತಾರೆ ಎಂಬುದೂ ನನಗೆ ಗೊತ್ತಿದೆ. ಆದರೆ *"ಪತಿಃ ಅನ್ಯೋ ವಿಧೀಯತೇ"* ಎಂಬ ಮಾತುಗಳಿಗೆ ಇನ್ನೊಬ್ಬ ಪತಿಯನ್ನು ಹೊಂದುವ ಅವಕಾಶವನ್ನು ಕಲ್ಪಿಸಲಾಗುತ್ತದೆ – ಅಂದರೆ, ಇನ್ನೊಬ್ಬನನ್ನು ಪತಿಯಾಗಿ ಸ್ವೀಕರಿಸಬಹುದಾಗಿದೆ–ಎಂಬುದನ್ನು ಬಿಟ್ಟು ಬೇರಾವುದೇ ಅರ್ಥವನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ ಎಂಬುದು ಈ ಪ್ರಯತ್ನದ ನಿಸ್ಸಾರತೆಯನ್ನು ತೋರಿಸಿಕೊಡುತ್ತದೆ. ಇಲ್ಲಿ ಬಳಸಲಾಗಿರುವ 'ಪತೌ' ಶಬ್ದವನ್ನು 'ಆರ್ಷಪ್ರಯೋಗ'ವೆಂದು ಭಾವಿಸುವುದೇ ಸೂಕ್ತ. ಇಷ್ಟಾಗಿಯೂ ಯಾರಿಗಾದರೂ ಈ ವಿಚಾರದಲ್ಲಿ ಅನುಮಾನವಿದ್ದರೆ, ಅವರು 'ನಾರದೀಯ ಮನುಸಂಹಿತೆ'ಯ ೧೨ನೆಯ ಅಧ್ಯಾಯದ ೯೭ನೆಯ ಶ್ಲೋಕವನ್ನು ನೋಡಬಹುದಾಗಿದೆ. ಅದು ಹೀಗಿದೆ:

*"ಪತ್ಯೌ ಪ್ರವ್ರಜಿತೇ ನಷ್ಟೇ ಕ್ಲೀಬೇಥ ಪತಿತೇ ಮೃತೇ।*
*ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ॥"*

(ನೋಡಿ, ಭವಸ್ವಾಮಿ ಭಾಷ್ಯ ಸಂಹಿತೆಯನ್ನೊಳಗೊಂಡಿರುವ ಹಾಗೂ ಸಾಂಬಶಿವ ಶಾಸ್ತ್ರಿಗಳಿಂದ ಸಂಪಾದಿತವಾಗಿರುವ 'ನಾರದೀಯ ಮನುಸಂಹಿತಾ', ತಿರುವನಂತಪುರ ೧೯೨೯, ಪು ೧೪೪). ನಾನು ಈ ಮೊದಲು ಉದ್ಧರಿಸಿರುವ ಶ್ಲೋಕವನ್ನೇ ಇಲ್ಲಿ ಒಂದೆರಡು ಶಾಬ್ದಿಕ ವ್ಯತ್ಯಾಸಗಳೊಂದಿಗೆ ಕೊಡಲಾಗಿದೆ. ಮುಖ್ಯವಾದ ವಿಚಾರವೆಂದರೆ ಇಲ್ಲಿಯೂ 'ಪತ್ಯೌ' ಎಂಬ ಶಬ್ದವನ್ನೇ ಬಳಸಲಾಗಿದೆ ಎಂಬುದು. ಅದು ಲೌಕಿಕ ವ್ಯಾಕರಣದ ದೃಷ್ಟಿಯಿಂದಲೂ ಸರ್ವಥಾ ಸರಿಯಾಗಿದೆ. ಇದರ ಅರ್ಥವೂ ಅದೇ; ಅದನ್ನು ಈಗಾಗಲೇ ಕೊಡಲಾಗಿದೆ. 'ಅಗ್ನಿಪುರಾಣ'ದ ೧೫೪ನೆಯ ಅಧ್ಯಾಯದಲ್ಲಿಯೂ ಇದೇ ಶ್ಲೋಕ 'ಪರಾಶರ ಸ್ಮೃತಿ'ಯ ಪಾಠಕ್ಕೆ ಅನುಗುಣವಾಗಿಯೇ ಕಾಣಿಸಿಕೊಂಡಿದೆ.

'ಗೌತಮ ಧರ್ಮಸೂತ್ರ'ದ ಮಸ್ಕರಿಭಾಷ್ಯದಲ್ಲಿ *"ಅಪತಿರಪತ್ಯಲಿಪ್ಸು–ದೇವರಾತ್"* ಎಂಬ ಮಾತಿಗೆ (೧೮/೪) ಈ ವ್ಯಾಖ್ಯಾನವನ್ನು ನೀಡಲಾಗಿದೆ.

*"ಅಪತಿಃ–ಅವಿದ್ಯಮಾನ ಭರ್ತೃಕಾ ಅಯೋಗ್ಯ ಪತಿರ್ವಾ ತಥಾ ಚ ಬೃಹಸ್ಪತಿಃ 'ನಷ್ಟೇ ಮೃತೋ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ। ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ಇತಿ।"*

(ನೋಡಿ : ಪುಣೆಯ ತರ್ಕತೀರ್ಥ ಪಂಡಿತ ಲಕ್ಷ್ಮಣಶಾಸ್ತ್ರೀ ಜೋಶಿ ಅವರಿಂದ ಸಂಪಾದಿತವಾಗಿರುವ 'ಧರ್ಮಕೋಶ' ಗ್ರಂಥದ 'ವ್ಯವಹಾರ ಕಾಂಡ' ಭಾಗ ; ಪು ೧೦೧೨). ಇದರಿಂದ 'ಬೃಹಸ್ಪತಿ ಸ್ಮೃತಿ'ಯಲ್ಲೂ ಈ ಶ್ಲೋಕ ಕಾಣದೊರೆಯುತ್ತದೆ ಎಂಬ ವಿಚಾರ ತಿಳಿದುಬರುತ್ತದೆ. ಈ ಸ್ಮೃತಿಗ್ರಂಥ ಇಂದು ಪೂರ್ಣರೂಪದಲ್ಲಿ ಲಭ್ಯವಾಗಿಲ್ಲ.

ಇವುಗಳೆ ಅಲ್ಲದೆ, ವಾರಾಣಸಿಯ 'ಚೌಖಂಬಾ ಸಂಸ್ಕೃತ ಗ್ರಂಥಮಾಲಾ' ಕಾರ್ಯಾಲಯದ ವತಿಯಿಂದ, ಕುಲ್ಲೂಕ ಭಾಷ್ಯ ಸಹಿತವಾಗಿರುವ 'ಮನುಸ್ಮೃತಿ ಸಂವತ್ ೧೯೯೨ (ಸನ್ ೧೯೩೫) ಪ್ರಕಟವಾಗಿದ್ದು, ಅದರ ಕೊನೆಯಲ್ಲಿ ಇಂದು ಲಭ್ಯವಾಗಿರುವ 'ಮನುಸ್ಮೃತಿ'ಯಲ್ಲಿ ಕಾಣದೆ ಇರುವಂಥ, ಆದರೆ ಇತರ ಗ್ರಂಥಗಳಲ್ಲಿ ಮನುವಿನ ಹೆಸರಿನಲ್ಲಿ ಉದ್ಧರಿಸಲಾಗಿರುವಂಥ ಶ್ಲೋಕಗಳನ್ನು ಕೊಡಲಾಗಿದೆ. ಈ ಗ್ರಂಥದ ೧೨ನೆಯ ಪುಟದಲ್ಲಿ *"ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ"* ಮೊದಲಾದ ಶ್ಲೋಕಗಳನ್ನು 'ಸ್ಮೃತಿ ಚಂದ್ರಿಕಾ' ಎಂಬ ಹೆಸರಿನ ಸುಪ್ರಸಿದ್ಧ ಸಂಕಲನ ಗ್ರಂಥದ ಆಧಾರದ ಮೇಲೆ ಉದ್ಧರಿಸಲಾಗಿದೆ. ಇದರಿಂದ ಮೊದಲು 'ಮನುಸ್ಮೃತಿ'ಯಲ್ಲಿಯೂ ಈ ಶ್ಲೋಕ ಕಾಣದೊರೆಯುತ್ತ ಇದ್ದಿತು ಎಂದು ತೋರುತ್ತದೆ. ಇಷ್ಟೊಂದು ಸ್ಮೃತಿ–ಪುರಾಣಾದಿಗಳಲ್ಲಿ ಕಾಣದೊರೆಯುವ ಈ ಶ್ಲೋಕವನ್ನು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ.

೨) ಈ ಸಂದರ್ಭದಲ್ಲಿ 'ಮನುಸ್ಮೃತಿ'ಯ ೯ನೆಯ ಅಧ್ಯಾಯದ ೭೨ನೆಯ ಶ್ಲೋಕವೂ ಗಮನಾರ್ಹವಾಗಿದ್ದು, ಅದು ಈ ಕೆಳಗಿನಂತೆ ಇದೆ :

*"ವಿಧಿವತ್ ಪ್ರತಿಗೃಹ್ಯಾಪಿ ತ್ಯಜೇತ್ ಕನ್ಯಾಂ ವಿಗರ್ಹಿಸಾಮ್।*
*ವ್ಯಾಧಿತಾಮ್ ವಿಪ್ರದುಷ್ಟಾಂ ವಾ ಛದ್ಮ ನಾ ಚೋಪಪಾದಿತಾಮ್॥*

ಮುಂಬಯಿಯ ವೆಂಕಟೇಶ್ವರ ಪ್ರೆಸ್‌ನಲ್ಲಿ ಅಚ್ಚಿಸಲಾಗಿರುವ 'ಧರ್ಮಶಾಸ್ತ್ರ ಸಂಗ್ರಹ'ದ ೧೯೩ನೆಯ ಪುಟದಲ್ಲಿ ಸಾಧುಚರಣ ಪ್ರಸಾದ್ ಅವರು ಕೊಟ್ಟಿರುವ ಅನುವಾದ ಹೀಗಿದೆ:

"ಗಮನಕ್ಕೆ ಬಾರದೆ ಹೋದಂಥ ದೋಷವನ್ನುಳ್ಳ ರೋಗಿಷ್ಠೆಯನ್ನು, ಮೈಥುನದ ಅಭ್ಯಾಸವನ್ನುಳ್ಳಂಥ ಅಥವಾ ಮೋಸಮಾಡಿ ಮದುವೆ ಮಾಡಿಕೊಡಲಾಗಿರುವಂಥ ಕನ್ಯೆಯನ್ನು ಶಾಸ್ತ್ರೋಕ್ತವಾಗಿ ಪರಿಗ್ರಹಿಸಿದ್ದರೂ, ತ್ಯಜಿಸಿಬಿಡುವುದು ವರನ ಮಟ್ಟಿಗೆ ಯುಕ್ತವಾದ ಕಾರ್ಯವೇ ಆಗಿರುತ್ತದೆ."

೩) 'ನಾರದೀಯ ಮನುಸಂಹಿತೆ'ಯ ೧೨ನೆಯ ಅಧ್ಯಾಯದ ೩೨ನೆಯ ಶ್ಲೋಕದಲ್ಲಿ ಹೀಗೆಂದು ಹೇಳಲಾಗಿದೆ.

*"ಯಸ್ತು ದೋಷವತೀ ಕನ್ಯಾಮ್ ಅನಾಖ್ಯಾಯ ಪ್ರಯಚ್ಛತಿ।*
*ದೋಷೇ ತ್ರಸತಿ ನಾಗಃ ಅನ್ಯೋನ್ಯಂ ತ್ಯಜತೋಸ್ತಯೋಃ॥"*

ಸಾಧುಚರಣ ಪ್ರಸಾದರು 'ಧರ್ಮಶಾಸ್ತ್ರ ಸಂಗ್ರಹ'ದ ೧೯೪ನೆಯ ಪುಟದಲ್ಲಿ ಇದರ ಅನುವಾದವನ್ನು ಈ ರೀತಿಯಾಗಿ ಕೊಟ್ಟಿದ್ದಾರೆ :

"ಕನ್ಯೆಯ ದೋಷವನ್ನು ಬಚ್ಚಿಟ್ಟು ವರನಿಗೆ ಕನ್ಯೆಯನ್ನು ಕೊಡಲಾಗಿದ್ದರೆ, ವರನು ಕನ್ಯೆಯನ್ನು ತ್ಯಜಿಸಲಿ; ಅಂತೆಯೇ ವರನ ದೋಷವನ್ನು ಬಚ್ಚಿಟ್ಟು ಕನ್ಯೆಯನ್ನು ಮದುವೆ ಮಾಡಿಕೊಡಲಾಗಿದ್ದರೆ, ಕನ್ಯೆಯು ಅಂಥ ವರರನ್ನು ತ್ಯಜಿಸಲಿ. ಇಂಥ ಸಂದರ್ಭದಲ್ಲಿ ಯಾರೂ ಅಪರಾಧಿಗಳಾಗುವುದಿಲ್ಲ."

ಸದ್ಯದ 'ಹಿಂದೂ ಕೋಡ್ ಬಿಲ್ಲಿ'ನಲ್ಲಿಯೂ ಹೀಗೆ ಮೋಸದಿಂದ ಮಾಡಿಕೊಡಲಾದ ವಿವಾಹವನ್ನು ವಿಧಿಸಮ್ಮತವಾದುದಲ್ಲವೆಂದು ಭಾವಿಸಲಾಗಿದೆ. ಮೇಲೆ ಉದ್ಧರಿಸಲಾಗಿರುವ ಹೇಳಿಕೆಗಳೇ ಇದಕ್ಕೆ ಆಧಾರವಾಗಿರುವಂತೆ ತೋರುತ್ತದೆ.

೪) 'ಮನುಸಂಹಿತಾ ಅಧ್ಯಾಯ'ದಲ್ಲಿ ಕಾಣದೊರೆಯುವ ಈ ಕೆಳಗೆ ಕಾಣಿಸಲಾಗಿರುವ ಶ್ಲೋಕವೂ

ಈ ಸಂದರ್ಭದಲ್ಲಿ ವಿಶೇಷ ಪರಿಗಣನೆಗೆ ಅರ್ಹವಾಗಿದೆ.

*"ಪ್ರೋಷಿತೋ ಧರ್ಮಕಾರ್ಯಾರ್ಥಂ ಪ್ರತಿಕ್ಷ್ಯೋಷ್ಟೌ ನರಃ ಸಮಾಃ ।*
*ವಿದ್ಯಾರ್ಥಂ ಷಡ್ಯಶೋರ್ಥಂ ವಾ ಕಾಮಾರ್ಥಂ ತ್ರೀಂಸ್ತು ವತ್ಸರಾನ್ ॥*

* * *

*ವಂಧ್ಯಾಷ್ಟಮೇ ದಿವೇದ್ಯಾಬ್ದೇದಶಮೇ ತು ನೃತಪ್ರಜಾ ।*
*ಏಕಾದಶೇ ಸ್ತ್ರೀಜನನೀಂ ಸದ್ಯಸ್ತ್ವ ಪ್ರಿಯವಾದಿನೀ ॥"*

ಮನುಸಂಹಿತಾ ಅಧ್ಯಾಯ, ೯/೭೬/೮೧)

'ಸತ್ಯಾರ್ಥ ಪ್ರಕಾಶ'ದ ನಾಲ್ಕನೆಯ 'ಸಮುಲ್ಲಾಸ'ದಲ್ಲಿ ಮಹರ್ಷಿ ದಯಾನಂದರು ಇದಕ್ಕೆ ಈ ರೀತಿ ಅರ್ಥವಿವರಣೆ ನೀಡಿದ್ದಾರೆ:

"ಹೆಂಡತಿ ಬಂಜೆಯಾದರೆ ಎಂಟು ವರ್ಷಗಳ ಬಳಿಕ (ಅಂದರೆ ಮದುವೆಯಾಗಿ ಎಂಟು ವರ್ಷಗಳಾದರೂ ಹೆಂಡತಿ ಗರ್ಭಿಣಿಯಾಗದೆ ಇದ್ದಲ್ಲಿ), ಮಕ್ಕಳು ಹುಟ್ಟಿಯೂ ಸಾಯುತ್ತ ಇದ್ದರೆ ಹತ್ತು ವರ್ಷಗಳ ಬಳಿಕ, ಹೆತ್ತ ಮಕ್ಕಳೆಲ್ಲ ಹೆಣ್ಣುಮಕ್ಕಳೇ ಆದಲ್ಲಿ ಹನ್ನೊಂದು ವರ್ಷಗಳ ಬಳಿಕ ಹಾಗೂ ಕಟುಮಾತಿನವಳಾದರೆ ಆ ಕ್ಷಣದಲ್ಲಿಯೇ ಅವಳನ್ನು ತ್ಯಜಿಸಿ, ಇನ್ನೊಬ್ಬಳೊಂದಿಗೆ ನಿಯೋಗ ಮಾಡುವುದರ ಮೂಲಕ ಮಕ್ಕಳನ್ನು ಪಡೆಯಬಹುದೆಂದು ಗಂಡಸಿಗೆ ಕಟ್ಟುಪಾಡನ್ನು ವಿಧಿಸಲಾಗಿದೆ. ಅಂತೆಯೇ ಗಂಡನಾದವನು ತುಂಬ ಗೋಳು ಹೊಯ್ದುಕೊಳ್ಳುವಂಥವನಾಗಿದ್ದಲ್ಲಿ, ಹೆಂಡತಿಯಾದವಳು ಅವನನ್ನು ಬಿಟ್ಟು, ಇನ್ನೊಬ್ಬ ಗಂಡಸಿನೊಂದಿಗೆ ನಿಯೋಗಮಾಡುವ ಮೂಲಕ ಮಕ್ಕಳನ್ನು ಪಡೆದು, ಅದೇ ಗಂಡನ ದಾಯಬಾಗೀ ಮಕ್ಕಳನ್ನಾಗಿಸಿಕೊಳ್ಳಬಹುದೆಂದು ಹೆಂಗಸಿಗೆ ಕಟ್ಟುಪಾಡನ್ನು ವಿಧಿಸಲಾಗಿದೆ." ("ಸತ್ಯಾರ್ಥಪ್ರಕಾಶ', ೨೭ನೆ ಆವೃತ್ತಿ, ಪು.೭೩)

೫) 'ಮನುಸ್ಮೃತಿ'ಯ ೯ನೆಯ ಅಧ್ಯಾಯನ ೭೯ನೆಯ ಶ್ಲೋಕದಲ್ಲಿ ಹೀಗೆಂದು ಹೇಳಲಾಗಿದೆ:

*"ಉನ್ಮತ್ತಂ ಪತಿತಂ ಕ್ಲೀಬಂ ಅಬೀಜಂ ಪಾಪರೋಗಿಣಮ್।*
*ನತ್ಯಾಗೋಸ್ತಿ ದ್ವಿಷಂತ್ಯಾ ಶ್ಚ ನ ಚ ದಾಯಾಪವರ್ತನಮ್ ॥*

ಇದರ ಭಾವಾರ್ಥ ಇಷ್ಟು : ಉನ್ಮತ್ತವಾಗಿರುವ (ಅಂದರೆ ಹುಚ್ಚನಾಗಿರುವ) ಧರ್ಮವನ್ನು ತ್ಯಜಿಸಿ ಪತಿತನಾಗಿರುವ, ನಪುಸಂಕನಾಗಿರುವ, ಕುಷ್ಠರೋಗವೇ ಮೊದಲಾದ ಭಯಂಕರರೋಗಕ್ಕೆ ತುತ್ತಾಗಿರುವ ಗಂಡನನ್ನು ಹೆಂಡತಿಯಾದವಳು ದ್ವೇಷಿಸತೊಡಗಿದರೆ, ಆಕೆಯ ಮೇಲೆ ವಿಶೇಷ ದೋಷಾರೋಪಣೆ ಮಾಡುವಂತಿಲ್ಲ ಅಥವಾ ದಂಡನೆಯನ್ನು ವಿಧಿಸುವಂತಿಲ್ಲ.

ಸದ್ಯದ 'ಹಿಂದೂ ಕೋಡ್ ಬಿಲ್ಲಿ'ನ ೩೦ನೆಯ ಪ್ರಕರಣದಲ್ಲಿ ಇದೇ ಬಗೆಯ ಷರತ್ತುಗಳನ್ನು ವಿಧಿಸಲಾಗಿದೆ. ಓದುಗರು ಇವನ್ನು ಈ ಲೇಖನದ ಆರಂಭದಲ್ಲಿ ಉದ್ಧರಿಸಲಾಗಿರುವ ವಾಕ್ಯಗಳಲ್ಲಿ ಗಮನಿಸಬಹುದಾಗಿದೆ.

೬) 'ಕೌಟಿಲ್ಯ ಅರ್ಥಶಾಸ್ತ್ರ'ದ ಧರ್ಮಸ್ಥೀಯ ಅಧಿಕರಣದ ೩ನೆಯ ಅಧ್ಯಾಯದ ೨ನೆಯ ಶ್ಲೋಕದಲ್ಲಿ

ಚಾಣಕ್ಯ ಹೀಗೆಂದು ಹೇಳಿದ್ದಾನೆ:

*"ನೀಚತ್ವಂ ಪರದೇಶಂ ವಾ ಪ್ರಸ್ಥಿತೋ ರಾಜ ಕಿಲ್ಬಿಷೀ ।*
*ಪ್ರಾಣಾಭಿಹಂತಾ ಪತಿತಃ ತ್ಯಾಜ್ಯಃ ಕ್ಲಿಬೋಥವಾಪತಿಃ ॥"*

* * *

*"ಪರಸ್ಪರಂ ದ್ವೇಷಾನ್ಮೋಕ್ಷಃ"* (ಧರ್ಮಸ್ಥೀಯ ಅಧಿಕರಣ ೩/೪/೧೯)

ಇದರ ಅರ್ಥ ಇಷ್ಟು : ಗಂಡನಾದವನು ನೀಚನೂ ಪತಿತನೂ ಆಗಿಬಿಟ್ಟಿದ್ದಲ್ಲಿ, ಪರದೇಶಕ್ಕೆ ಹೋಗಿಬಿಟ್ಟಿದ್ದರೆ (ಹಾಗೂ ಅವನ ವಿಷಯದಲ್ಲಿ ಏನು ತಿಳಿಯದೆ ಹೋಗಿದ್ದಲ್ಲಿ, ನಿಯತ ಅವಧಿಯವರೆಗೆ – ಮಗುವಿನ ಪ್ರಕಾರ ಈ ಅವಧಿ ತೀರ ಹೆಚ್ಚೆಂದರೆ ಎಂಟು ವರ್ಷಗಳು – ಅವನಿಗಾಗಿ ಕಾಯಬೇಕು), ಧರ್ಮನಿಷ್ಠನಾದ ರಾಜನ ವಿಷಯದಲ್ಲಿ ದ್ರೋಹವೇ ಮೊದಲಾದ ಭಯಂಕರ ಅಪರಾಧಗಳನ್ನು ಎಸಗಿದವನಾಗಿದ್ದರೆ, ಕೊಲೆಗಡುಕನಾಗಿದ್ದರೆ ಅಥವಾ ನಪುಂಸಕನಾಗಿದ್ದರೆ, ಅಂಥವನು ತ್ಯಾಜ್ಯನಾಗುತ್ತನೆ.

ಪರಸ್ಪರ ದ್ವೇಷ ಭಾವ ಇದ್ದಲ್ಲಿ ಗಂಡಹೆಂಡಿರು ಪರಸ್ಪರರನ್ನು ತ್ಯಜಿಸಬಹುದು ಅಥವಾ ಸಂಬಂಧವನ್ನು ಕಡಿದುಕೊಳ್ಳಬಹುದು.

'ಯಮಸ್ಮೃತಿ', 'ಕಾತ್ಯಾಯನ ಸ್ಮೃತಿ' ಇವೇ ಮೊದಲಾದ ಗ್ರಂಥಗಳಿಂದ ಈ ಬಗೆಯ ಇತರ ಹೇಳಿಕೆಗಳನ್ನು ಉದ್ಧರಿಸಬಹುದಾಗಿದೆ. ಆದರೆ, ಈ ವಿಷಯವನ್ನು ಕುರಿತ ಚರ್ಚೆ ಈಗಾಗಲೇ ತುಂಬ ದೀರ್ಘವಾಗಿಬಿಟ್ಟಿದೆ. ಹೀಗಾಗಿ ಅವುಗಳನ್ನು ಉಲ್ಲೇಖಿಸುವಷ್ಟರಿಂದಲೇ ತೃಪ್ತನಾಗಿ, ವಿವಾಹ ವಿಚ್ಛೇದನವೇ ಮೊದಲಾದ ಯಾವ ಆಲೋಚನೆಗಳೂ ಗಂಡ–ಹೆಂಡಿರ ಮನಸ್ಸಿನಲ್ಲಿ ಮೂಡದಿರುವಂಥ ರೀತಿಯಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಬೇಕಾಗಿದೆ ಎಂಬ ವಿಚಾರವನ್ನು ಅರಿಕೆ ಮಾಡಿಕೊಳ್ಳಬಯಸುತ್ತೇನೆ. ನಮ್ಮ ಪ್ರಾಚೀನ ಸಂಸ್ಕೃತಿಯ ಮುಖ್ಯ ತತ್ತ್ವಗಳಾಗಿರುವ ಪತ್ನೀವ್ರತ ಹಾಗೂ ಪಾತಿವ್ರತ್ಯ ಧರ್ಮಗಳನ್ನು ಗಂಡ–ಹೆಂಡಿರು ಪಾಲಿಸಿಕೊಂಡು ಬಂದದ್ದೇ ಆದಲ್ಲಿ, ಈ ಬಗೆಯ ವ್ಯವಸ್ಥೆ ಸರ್ವಥಾ ಅನಗತ್ಯವೇ ಆಗಿಬಿಡುತ್ತದೆ. ಸಮಾಜದ ಹಿತೈಷಿಗಳೆಲ್ಲರೂ ಒಂದುಗೂಡಿ, ಇಂಥದೇ ಪ್ರಯತ್ನ ಮಾಡಬೇಕು. ತುಂಬ ವಿಶೇಷವಾದ ವಿಪತ್ತಿನ, ಆಕಸ್ಮಿಕ ಮರಣದ, ಅಸಾಮರ್ಥ್ಯದ ಸಂದರ್ಭಗಳಲ್ಲಿ ಹಿಂದಿನ ಕಾಲದ ನಿಯೋಗದ ಪದ್ಧತಿಯನ್ನು ಆಶ್ರಯಿಸಕೊಳ್ಳಬಹುದಾಗಿದೆ. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಇದು ವ್ಯಾವಹಾರಿಕವಾಗಿಲ್ಲವೆಂದು ಭಾವಿಸಿದ್ದೇ ಆದರೆ, ಅತ್ಯಂತ ವಿಕಟವೂ ಜಟಿಲವೂ ಆದ ಸಂದರ್ಭಗಳಲ್ಲಿ, ಬೇರಾವುದೇ ದಾರಿ ಇಲ್ಲದೆ ಇದ್ದಲ್ಲಿ, ಅಂತಿಮ ಸಾಧನೋಪಾಯವಾಗಿ ಸಂಬಂಧ–ವಿಚ್ಛೇದನೆಗೆ ಅನುಮತಿಯನ್ನು ನೀಡಬಹುದಾಗಿದೆ. ಆದರೆ, ಅದನ್ನು ದುರುಪಯೋಗಪಡಿಸಿಕೊಳ್ಳಲು ಸಾಧ್ಯವಾಗದಂತೆ, ಅದರ ಷರತ್ತುಗಳನ್ನು ತುಂಬ ಸುಲಭವಾಗಿಸಿಬಿಟ್ಟಿರುವುದರಿಂದ, ನೈತಿಕತೆ ಮತ್ತು ಸದಾಚಾರಗಳು ತುಂಬ ಹೀನಾಯಸ್ಥಿತಿಗೆ ಬಂದುಬಿಟ್ಟಿವೆ. ಈ ಪರಿಸ್ಥಿತಿ ತುಂಬ ನಿಂದ್ಯಾರ್ಹವಾಗಿಬಿಟ್ಟಿದೆ. ಆದ್ದರಿಂದ, ನಾವು ಅದನ್ನು ಅನುಕರಿಸಲು ಹೋಗಬಾರದು. ಹೀಗಾಗಿ, ಈ ಲೇಖನದ ಮೊದಲಲ್ಲಿ ನಾನು ಉದ್ಧರಿಸಿರುವ ೩೦ನೆಯ ಪ್ರಕರಣಕ್ಕೆ ಈ ಕೆಳಗೆ ಕಾಣಿಸಿರುವ ತಿದ್ದುಪಡಿಗಳನ್ನು ತರುವುದು ತುಂಬ ಅಗತ್ಯವೆಂದು ತೋರುತ್ತದೆ :

೧) ಮದುವೆಯಾಗಿ ಎಂಟು ವರ್ಷಗಳು ಕಳೆಯುವವರೆಗೆ ಸಂಬಂಧ–ವಿಚ್ಛೇದನಕ್ಕಾಗಿ ಯಾರೂ

ಅರ್ಜಿಯನ್ನು ಸಲ್ಲಿಸುವಂತಿಲ್ಲ ಹಾಗೂ ಈ ಅವಧಿ ಕಳೆಯುವವರೆಗೆ ಯಾರಿಗೂ ಇಂಥ ಅನುಮತಿಯನ್ನು ಕೊಡುವಂತಿಲ್ಲ ಎಂಬ ನಿಯಮವನ್ನು ರೂಪಿಸಬೇಕು. ಈ ಮಸೂದೆಯನ್ನು ಮಂಡಿಸಿರುವ ವ್ಯಕ್ತಿಗಳು, ತಿದ್ದುಪಡಿಯ ರೂಪದಲ್ಲಿ ೫ ವರ್ಷಗಳ ಅವಧಿಯನ್ನು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆಂದು ವಿಶ್ವಾಸನೀಯ ಮೂಲಗಳಿಂದ ನನಗೆ ತಿಳಿದುಬಂದಿದೆ. ಇದನ್ನು ೮ ವರ್ಷಗಳಿಗೆ ವಿಸ್ತರಿಸುವುದು ಒಳ್ಳೆಯದು. ಈ ಮಧ್ಯೆ ಗಂಡ-ಹೆಂಡಿರು ಪರಸ್ಪರರ ಸ್ವಭಾವಾದಿಗಳನ್ನು ಅರಿತುಕೊಂಡು ಸಂಬಂಧ-ವಿಚ್ಛೇದನೆಯೆ ಮೊದಲಾದ ವಿಚಾರಗಳನ್ನು ಮರೆತುಬಿಡುವ ಸಾಧ್ಯತೆಯೆ ಹೆಚ್ಚಾಗಿರುತ್ತದೆ.

೨) ನಪುಂಸಕತೆ, ಹುಚ್ಚು, ಕುಷ್ಠರೋಗ ಮುಂತಾದವುಗಳ ಚಿಕಿತ್ಸೆಗೂ ೮ ವರ್ಷಗಳ ಅವಧಿಯನ್ನು ಕೊಡುವುದು ಸೂಕ್ತವಾಗುತ್ತದೆ. ಒಳ್ಳೆಯ ಚಿಕಿತ್ಸೆ ಮತ್ತು ಸೇವೆ-ಶುಶ್ರೂಷೆಗಳ ಬಳಿಕವೂ ಪ್ರಯೋಜನವಾಗದಿದ್ದರೆ ಹಾಗೂ ಗಂಡ-ಹೆಂಡಿರು ಸಂಬಂಧ-ವಿಚ್ಛೇದನೆ ಮಾಡಿಕೊಳ್ಳಲೇಬೇಕೆಂದು ಪಟ್ಟುಹಿಡಿದಿದ್ದರೆ, ೮ ವರ್ಷಗಳ ಈ ಅವಧಿ ಕಳೆದ ಬಳಿಕ, ಅನುಮತಿಯನ್ನು ಕೊಡಬಹುದಾಗಿದೆ.

ವಿವಾಹ-ವಿಚ್ಛೇದನೆಗೆ ಸಂಬಂಧಿಸಿದ ೩೦ನೆಯ ಪ್ರಕರಣದ ಜೊತೆಗೆ 'ನ್ಯಾಯಾಂಗಿಕ ಬೇರ್ಪಡೆ'ಗೆ ಸಂಬಂಧಿಸಿದ ೩೩ನೆಯ ಪ್ರಕರಣದಲ್ಲಿ ಹೀಗೆಂದು ಹೇಳಲಾಗಿದೆ:

"ವಿವಾಹಕ್ಕೆ ಸಂಬಂಧಿಸಿದ ಎರಡು ಪಕ್ಷಗಳಲ್ಲಿ ಯಾರು ಬೇಕಾದರೂ, ಈ ಸಂಹಿತೆ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರ ತಮ್ಮ ವಿವಾಹ ನಡೆದಿದ್ದರೂ, ಈ ಕೆಳಗೆ ಕಾಣಿಸಲಾಗಿರುವ ಆಧಾರದ ಮೇಲೆ, ನ್ಯಾಯಿಕ ಬೇರ್ಪಡೆಯ 'ಡಿಕ್ರಿ'ಯನ್ನು ಪಡೆದುಕೊಳ್ಳುವ ಸಲುವಾಗಿ ಜಿಲ್ಲಾ ನ್ಯಾಯಾಲಯಕ್ಕೆ ಕೋರಿಕೆಯನ್ನು ಸಲ್ಲಿಸಬಹುದಾಗಿದೆ :

(ಅ) ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿಯಿಂದಲೂ ಪ್ರತಿಪಕ್ಷಕ್ಕೆ ಸೇರಿದ ವ್ಯಕ್ತಿ ತನ್ನನ್ನು ತ್ಯಜಿಸಿದ್ದಾನೆ/ಳೆ ಎಂದಾದಲ್ಲಿ;

(ಇ) ತನ್ನ ಮೇಲೆ ಕ್ರೌರ್ಯ ಅಥವಾ ಅತ್ಯಾಚಾರವನ್ನೆಸಗಿದ್ದ, ಅದರ ಪರಿಣಾಮವಾಗಿ, ಅರ್ಜಿದಾರನು/ಳು ಆತನೊಡನೆ ಅಥವಾ ಆಕೆಯೊಡನೆ ವಾಸಿಸುವ ವಿಚಾರದಲ್ಲಿ ಭಯಭೀತನಾಗಿದ್ದಲ್ಲಿ; ಅಥವಾ

(ಉ) ಗುಣಪಡಿಸಲು ಅಸಾಧ್ಯವಾದ, ದುಃಖದಾಯಕವಾಗಿರುವ, ಮಾರಣಾಂತಿಕವಾಗಿರುವ ವ್ಯಾಧಿಯಿಂದ ಪೀಡಿತನಾಗಿದ್ದು, ಅದು ಎದ್ದುಕಾಣುವಂಥ ಸ್ಥಿತಿಯಲ್ಲಿದ್ದು ಹಾಗೂ ಅದು ಅರ್ಜಿದಾರನಿಂ(ಳಿಂ)ದ ತನಗೆ ತಗುಲಿದ ವ್ಯಾಧಿ ಆಗಿರದೆ ಇದ್ದು ಅರ್ಜಿಸಲ್ಲಿಸುವುದಕ್ಕೆ ಸನ್ನಿಹಿತವಾದ ಕಾಲದಿಂದ ಮೊದಲುಗೊಂಡು ಒಂದು ವರ್ಷಕ್ಕೆ ಕಡಿಮೆ ಇಲ್ಲದಷ್ಟು ಅವಧಿಯಿಂದಲೂ ಆ ವ್ಯಾಧಿಯಿಂದ ಅವನು(ಳು) ಪೀಡಿತನಾ(ಳಾ)ಗಿದ್ದಲ್ಲಿ;

(ಋ) ಭಯಂಕರ ಸ್ವರೂಪದ ಕುಷ್ಠರೋಗದಿಂದ ನರಳುತ್ತಿದ್ದಲ್ಲಿ; ಅಥವಾ

(ಎ) ವಿವಾಹದ ದಿನಾಂಕದಿಂದ ಹಿಡಿದು ಅವನು(ಳು) ಸತತವಾಗಿ ಸಹಜವಾದ ಹುಚ್ಚಿಗೆ ಒಳಗಾಗಿದ್ದಲ್ಲಿ; ಅಥವಾ

(ಓ) ದಾಂಪತ್ಯಕಾಲದ ಅವಧಿಯಲ್ಲಿ ವ್ಯಭಿಚಾರವನ್ನೆಸಗಿದ್ದಲ್ಲಿ.

ಈ ನಿಯಮಗಳಲ್ಲಿಯೂ ೧ ಮತ್ತು ೨ ವರ್ಷಗಳ ಅವಧಿಯ ಬದಲಿಗೆ ಕನಿಷ್ಠ ಪಕ್ಷ ೫ ವರ್ಷಗಳ ಅವಧಿಯನ್ನು ನಿಗದಿಪಡಿಸಬೇಕು. ಈ 'ನ್ಯಾಯಿಕ ಬೇರ್ಪಡೆ' ಸಂಪೂರ್ಣವಾಗಿ ಬೇರೆಯಾಗಿದೆ ಹಾಗೂ ವಿವಾಹ-ವಿಚ್ಛೇದನದ ಪ್ರಕ್ರಿಯೆಗಿಂತಲೂ ಭಿನ್ನವಾಗಿದೆ. ಹೀಗಾಗಿ, ನ್ಯಾಯಾಧೀಶರುಗಳು ಮತ್ತು

ಇತರರು, ದಂಪತಿಗಳು ಮತ್ತೆ ಅನ್ಯೋನ್ಯವಾಗಿ ಬಾಳಲು ಸಾಧ್ಯವಾಗುವಂತೆ ಮಾಡುವ ಪ್ರಯತ್ನಗಳನ್ನು ಕೈಗೊಳ್ಳಬೇಕು.

ಪಾತಿವ್ರತ್ಯದ ಧರ್ಮದ ವಿಷಯದಲ್ಲಿ ಹೇಳಲಾಗಿರುವ ಮಾತುಗಳು ಸರಿಯಾಗಿಯೆ ಇವೆ. ಅದು ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಗೌರವಪ್ರಾಯವಾದ ಸಂಗತಿಯೆ ಆಗಿದೆ. ಅದನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಪತ್ನೀವ್ರತ ಧರ್ಮದ ಮಹತ್ವದ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೂ ಸಮಾಜದಲ್ಲಿ ಅಷ್ಟೇನೂ ಒತ್ತುಕೊಟ್ಟಿಲ್ಲದಿರುವುದು ನಿಜಕ್ಕೂ ದುಃಖದ ಸಂಗತಿ. ಇಲ್ಲವಾಗಿದ್ದಲ್ಲಿ, ಇಂಥ ಶೋಚನೀಯ ಪರಿಸ್ಥಿತಿಯೂ ಇರುತ್ತಿರಲಿಲ್ಲ ಹಾಗೂ ಈ ಬಗೆಯ ನಿಯಮಗಳ ಅಗತ್ಯವೂ ಉಂಟಾಗುತ್ತಿರಲಿಲ್ಲ.

ಬಡೌದಾ (ಬರೋಡಾ)ದಲ್ಲಿ ೧೯೩೧ನೆಯ ಇಸವಿಯಿಂದಲೂ 'ಹಿಂದೂ ಡೈವೋರ್ಸ್ ಲಾ' ಅಥವಾ ಹಿಂದೂ ವಿವಾಹ ವಿಚ್ಛೇದನದ ಕಾನೂನು ಜಾರಿಯಲ್ಲಿದೆ. ಆದರೆ, ಅಂದಿನಿಂದ ಇಂದಿನವರೆಗೆ, ವಿವಾಹ ವಿಚ್ಛೇದನದ ಪದ್ಧತಿ ಜಾರಿಯಲ್ಲಿರದಿದ್ದ ಆ ಜಾತಿಗಳ ವತಿಯಿಂದ ಕೇವಲ ೪೩ ಮೊಕದ್ದಮೆಗಳಷ್ಟೇ ದಾಖಲಾಗಿವೆ. ಇವುಗಳಿಗೆ ಮುಖ್ಯ ಆಧಾರವಾಗಿದ್ದ ಸಂಗತಿಗಳೆಂದರೆ ಗಂಡನ ಕ್ರೌರ್ಯ ಹಾಗೂ ಪರಿತ್ಯಾಗಗಳು.

ಹೀಗಾಗಿ ಮೇಲೆ ಕಾಣಿಸಲಾಗಿರುವ ಪ್ರಕರಣಗಳ ಅರಿವಿಲ್ಲದಿದ್ದರೂ ಈ ಮಸೂದೆಯ ಮೇರೆಗೆ ಯಾವಾಗ ಬೇಕಾದರೂ ಗಂಡ-ಹೆಂಡಿರು ಪರಸ್ಪರರನ್ನು ಪರಿತ್ಯಜಿಸಬಹುದಾಗಿದೆ ಹಾಗೂ ಈ ರೀತಿಯಲ್ಲಿ ಹಿಂದೂ ಸಮುದಾಯ ಮತ್ತು ಅದರ ಸಂಸ್ಕೃತಿ ನಾಶವಾಗಿಬಿಡುತ್ತದೆ ಎಂಬುದಾಗಿ ಹೇಳುತ್ತಿರುವುದು ಶುದ್ಧಾಂಗವಾಗಿ ಸುಳ್ಳು, ಆವೇಶವನ್ನುಂಟುಮಾಡುವ ಪ್ರಯತ್ನ ಮಾಡಲಾಗುತ್ತಿದೆ.

"ವಿವಾಹ ವಿಚ್ಛೇದನಕ್ಕಾಗಿ ಸಲ್ಲಿಸಲಾದ ಅರ್ಜಿಯ ಆಧಾರದ ಮೇಲೆ ವಿವಾಹವನ್ನು ಕೊನೆಗೊಳಿಸಲಾಗಿದೆ ಅಥವಾ ವಿವಾಹದ ಸಿಂಧುತ್ವ ವಿಚಾರಣೀಯ ವಿಷಯವಾಗಿದ್ದು, ಬೇರೊಂದು ಕಾನೂನಿನ ಪ್ರಕ್ರಿಯೆಯ ಅಂಗವಾಗಿ ಅದನ್ನು ಕೊನೆಗೊಳಿಸಲಾಗಿದೆ ಎಂಬುದಾಗಿ ಯಾವುದಾದರೂ ಸೂಕ್ತ ನ್ಯಾಯಾಲಯದ ಮೂಲಕ ಘೋಷಿತವಾಗಿ, 'ಡಿಕ್ರಿ'ಯನ್ನು ನೀಡಿದ್ದ ಹೊರತು, ಯಾವುದೇ ವಿವಾಹವನ್ನು ಕಾನೂನಿಕವಾಗಿ ವಿಸರ್ಜಿತವಾದುದೆಂದು ಪರಿಗಣಿಸಲಾಗುವುದಿಲ್ಲ" ಎಂಬುದಾಗಿ ३೪ನೆಯ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಪ್ರಕರಣ ೪೪೧: ಜಿಲ್ಲಾ ನ್ಯಾಯಾಧೀಶರಿಂದ ನೀಡಲಾದ ವಿವಾಹ ವಿಚ್ಛೇದನದ ಪ್ರತಿಯೊಂದು 'ಡಿಕ್ರಿ'ಯೂ, ಉಚ್ಚನ್ಯಾಯಾಲಯದ ಮೂಲಕ ಸ್ಥಿರೀಕೃತವಾಗಬೇಕಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಈ ನಿಯಮಗಳ ದುರುಪಯೋಗವಾಗುವುದಕ್ಕೆ ಅವಕಾಶವಿರಬಾರದು ಹಾಗೂ ಇವುಗಳನ್ನು (ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವಂತೆ) ಮೃದುವಾಗಿಸಲೂಬಾರದು ಎಂಬ ಎಚ್ಚರಿಕೆಯನ್ನು ಕೊಡುವುದು ಅಗತ್ಯವಾಗಿದೆ. "ಭಾರತದಲ್ಲಿನ ಸುಮಾರು ಶೇ. ೯೦ರಷ್ಟು ಮಂದಿ ಜಾತಿಭೇದದ ದೃಷ್ಟಿಯಿಂದ ಶೂದ್ರ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಹಾಗೂ ಅವರಲ್ಲಿ ವೈವಾಹಿಕ ಸಂಬಂಧ ವಿಚ್ಛೇದನೆಯ ಪದ್ಧತಿಯು ಒಂದಲ್ಲ ಒಂದು ರೂಪದಲ್ಲಿ ಪ್ರಚಾರವಾಗಿದೆ ಎಂಬ ಮಾನ್ಯ ಡಾ. ಅಂಬೇಡ್ಕರ್ ಅವರ ಹೇಳಿಕೆ ಎಷ್ಟರಮಟ್ಟಿಗೆ ಸರಿಯಾಗಿದೆ ಎಂಬುದು ನನಗೆ ತಿಳಿಯದು. ಬಹುಶಃ ಇದರಲ್ಲಿ ಸ್ವಲ್ಪಮಟ್ಟಿನ ಅತಿಶಯೋಕ್ತಿಯೂ ಇರಬಹುದು. ಜಾತಿ ಭೇದದ ಅನಿಶ್ಚಿತತೆಯಿಂದಾಗಿಯೂ ಹೀಗಾಗಿರುವ ಸಾಧ್ಯತೆ ಇದೆ. ಇಷ್ಟಾಗಿಯೂ, ಇದರಿಂದಾಗಿ ವಿವಾಹ-ವಿಚ್ಛೇದನೆಯ ಪದ್ಧತಿಯನ್ನು ಶ್ರೇಷ್ಠವಾದುದೆಂದು ಭಾವಿಸಲು ಅಥವಾ ಅದನ್ನು

ಅಂಗೀಕರಿಸುವ ಒಂದು ತಂತ್ರದ ರೂಪದಲ್ಲಿ ಪರಿಗಣಿಸಲು ನಾನು ಸಿದ್ಧನಿಲ್ಲ. ಇತರ ಮಾರ್ಗೋಪಾಯಗಳು ಇಲ್ಲದಿರುವಾಗ ಮಾತ್ರವೇ ಹಾಗೂ ಕಟ್ಟಕಡೆಯ ಸಾಧನವಾಗಿ ಮಾತ್ರವೇ, ವಿಶೇಷ ಸಂದರ್ಭಗಳಲ್ಲಿ ಇದಕ್ಕೆ ಅನುಮತಿ ನೀಡಬಹುದಾಗಿದೆ. ಎಲ್ಲ ಹಿತೈಷಿಗಳ ಪರಿಗಣನೆಗಾಗಿ ನಾನು ಈ ಮಾತುಗಳನ್ನು ಬರೆದಿದ್ದೇನೆ. ಸಮಾಜದ ಹಿತವನ್ನು ಹಾಗೂ ಶಾಸ್ತ್ರ ವಚನಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಇದರ ಬಗ್ಗೆ ವಿದ್ವಾಂಸರು ನಿಷ್ಪಕ್ಷಪಾತವಾಗಿ ಚಿಂತನೆಮಾಡುತ್ತಾರೆಂದು ನಾನು ನಂಬಿದ್ದೇನೆ. ಇಂದಿನ ಶೋಚನೀಯ ಪರಿಸ್ಥಿತಿಗೆ ಬೇರೆ ಯಾವುದಾದರೂ ಪರಿಹಾರೋಪಾಯವೇನಾದರೂ ಇರುವುದು ಸಾಧ್ಯವಿದ್ದರೆ, ಅದನ್ನೂ ಸೂಚಿಸುತ್ತಾರೆಂದೂ ನಾನು ನಂಬಿದ್ದೇನೆ.

# ದತ್ತು ಸ್ವೀಕಾರದ ವಿಧಾನ ಮತ್ತು ಸಂರಕ್ಷಕತ್ವ

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

'ಹಿಂದೂ ಕೋಡ್ ಬಿಲ್ಲಿನ' ಮೂರನೆಯ ಭಾಗದಲ್ಲಿ ದತ್ತಕ ವಿಧಾನಕ್ಕೆ ಅಥವಾ ದತ್ತು ಸ್ವೀಕಾರದ ಬಗೆಗಿನ ನಿಯಮಗಳಿವೆ. ನಾಲ್ಕನೆಯ ಭಾಗದಲ್ಲಿ 'ಅಲ್ಪ ವಯಸ್ಕತೆ ಮತ್ತು ಸಂರಕ್ಷಕತ್ವ'ಕ್ಕೆ ಸಂಬಂಧಿಸಿದ ನಿಯಮಗಳಿವೆ. ಈ ಎರಡೂ ಭಾಗಗಳಲ್ಲಿ ವಿವರಿಸಲಾಗಿರುವ ಮುಖ್ಯವಾದ ಪ್ರಕರಣಗಳನ್ನು ಕುರಿತಂತೆ ಈ ಲೇಖನದಲ್ಲಿ ಸಂಕ್ಷೇಪವಾಗಿ ಚರ್ಚಿಸಬಯಸುತ್ತೇನೆ.

ಇಲ್ಲಿಯವರೆಗೂ ಹಿಂದೂಗಳಲ್ಲಿ ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಧಾನಗಳು ರೂಢಿಯಲ್ಲಿವೆ. ಮೂರನೆಯ ಭಾಗದಲ್ಲಿ ಅವುಗಳಿಗೆ ಒಂದು ರೂಪವನ್ನು ನೀಡುವ ಪ್ರಯತ್ನ ಮಾಡಲಾಗಿದೆ ಹಾಗೂ ಈ ಪ್ರಯತ್ನ ಪ್ರಶಂಸನೀಯವಾಗಿದೆ.

'ದತ್ತು ಸ್ವೀಕಾರದ ಅರ್ಹತೆ' ಎಂಬ ಶೀರ್ಷಿಕೆಯನ್ನುಳ್ಳ ೫೪ನೆಯ ಪ್ರಕರಣದಲ್ಲಿ ಹೀಗೆಂದು ಹೇಳಲಾಗಿದೆ : ಬುದ್ಧಿ ಮತ್ತು ಮನಸ್ಸುಗಳು ಸ್ವಸ್ಥವಾಗಿರುವಂಥ (ಆರೋಗ್ಯ ಪೂರ್ಣ ಮಾನಸಿಕ ಸ್ಥಿತಿಯಲ್ಲಿರುವಂಥ) ಹಾಗೂ ೧೮ ವರ್ಷ ವಯಸ್ಸು ಪೂರ್ಣವಾಗಿರುವಂಥ ಯಾವನೇ ಹಿಂದೂ, ಮಗುವನ್ನು ದತ್ತು ತೆಗೆದುಕೊಳ್ಳಲು ಅರ್ಹನಾಗಿರುತ್ತಾನೆ.

ಆದರೆ, ಇದಕ್ಕಿರುವ ಷರತ್ತು ಏನೆಂದರೆ, ತನ್ನ ಪತ್ನಿಯ ಅನುಮತಿಯನ್ನು ಪಡೆದುಕೊಳ್ಳದೆ, ಯಾವನೇ ವ್ಯಕ್ತಿ ದತ್ತು ಸ್ವೀಕಾರ ಮಾಡುವಂತಿಲ್ಲ. ದತ್ತುಪುತ್ರನನ್ನು ಸ್ವೀಕರಿಸುವುದಕ್ಕೆ ಗೊತ್ತುಪಡಿಸಲಾಗಿರುವ ೧೮ ವರ್ಷಗಳ ವಯಸ್ಸು ತೀರ ಕಡಿಮೆ ಎಂಬುದು ನನ್ನ ಅಭಿಪ್ರಾಯ. ಕನಿಷ್ಠ ಪಕ್ಷ ೨೫ ವರ್ಷಗಳಾಗಿರಬೇಕೆಂಬ ನಿಯಮವನ್ನು ಗೊತ್ತುಪಡಿಸಬೇಕು. ಈ ಲೇಖನಮಾಲೆಯ ಮೊದಲನೆಯ ಲೇಖನದಲ್ಲಿ ನಾನು ಈಗಾಗಲೇ ತಿಳಿಸಿರುವಂತೆ, ಈ ಸಂಹಿತೆಯನ್ನು ರೂಪಿಸಿದವರು ಹಿಂದೂತ್ವದ ರಕ್ಷಣೆಯ ವಿಚಾರವನ್ನು ಗಮನದಲ್ಲಿರಿಸಿಕೊಂಡು, ೬೨ನೆಯ ಪ್ರಕರಣದ ೩ನೆಯ ಭಾಗವನ್ನು ಮಗುವಿನ ತಂದೆ ಹಿಂದೂಧರ್ಮವನ್ನು ತ್ಯಜಿಸಿರುವ ಸಂದರ್ಭದಲ್ಲಿ ತಾಯಿಗೆ ದತ್ತು ಸ್ವೀಕಾರದ ಅಧಿಕಾರವನ್ನು ನೀಡಿದ್ದಾರೆ.

ವಿಧವೆಯಾದವಳು ಹಿಂದುಧರ್ಮವನ್ನು ತ್ಯಜಿಸಿದ ಪಕ್ಷದಲ್ಲಿ, ದತ್ತು ಸ್ವೀಕಾರದ ಅವಳ ಅಧಿಕಾರ ಇಲ್ಲವಾಗುತ್ತದೆಂದು ಪರಿಗಣಿಸಲಾಗುತ್ತದೆ ಎಂಬುದಾಗಿ ೬೧ನೆಯ ಪ್ರಕರಣದ ೩ನೆಯ ಭಾಗದಲ್ಲಿ ಹೇಳಲಾಗಿದೆ. ಹಿಂದೂಧರ್ಮವನ್ನು ಪ್ರೀತಿಸುವ ಯಾವನೇ ವ್ಯಕ್ತಿ ಈ ಭಾವನೆಯನ್ನು ಅಭಿನಂದಿಸದೆ ಇರಲಾರೆ.

ಈ ಕೆಳಗೆ ಕಾಣಿಸಲಾಗಿರುವ ಷರತ್ತುಗಳನ್ನು ಪೂರೈಸದಿರುವವರೆಗೆ ಯಾವನೇ ವ್ಯಕ್ತಿ ಸ್ವೀಕಾರದ ಅರ್ಹತೆಯನ್ನು ಪಡೆದುಕೊಂಡಿರುವುದಿಲ್ಲ ಎಂಬುದಾಗಿ "ದತ್ತು ಸ್ವೀಕಾರದ ಅರ್ಹತೆ"ಯ ಬಗೆಗಿನ ೬೩ನೆಯ ಪ್ರಕರಣದಲ್ಲಿ ಹೇಳಲಾಗಿದೆ.

(೧) ತಾನು ಹಿಂದೂವಾಗಿದ್ದೇನೆ.

(೨) ತಾನು ವಿವಾಹಿತನಾಗಿಲ್ಲ.

(೩) ತನ್ನನ್ನು ಈ ಮೊದಲು ಯಾರೂ ದತ್ತು ತೆಗೆದುಕೊಂಡಿಲ್ಲ

(೪) ತಾನಿನ್ನೂ ೧೫ ವರ್ಷಗಳನ್ನು ಪೂರೈಸಿಲ್ಲ.

ಇವುಗಳಲ್ಲಿ ಆಕ್ಷೇಪಾರ್ಹವಾಗಿರುವಂಥ ಸಂಗತಿ ಯಾವುದೂ ಇಲ್ಲ. ಮಹತ್ವ ಪೂರ್ಣವಾಗಿರುವ ಸಂಗತಿ ಎಂದರೆ ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಪ್ರಚಲಿತ ಹಿಂದೂ ಕಾನೂನಿನಲ್ಲಿ ಕಾಣದೊರೆಯುವ ಜಾತಿ–ಸಂಬಂಧವಾದ ನಿರ್ಬಂಧವನ್ನು ತೊಡೆದುಹಾಕಿರುವುದು. ಪ್ರಚಲಿತವಾಗಿರುವ ಕಾನೂನಿನ ಮೇರೆಗೆ, ದತ್ತು ಸ್ವೀಕಾರ ಮಾಡುವಂಥ ವ್ಯಕ್ತಿ ತನ್ನ ಜಾತಿಗೆ ಸೇರಿದಂಥ ಮಗುವನ್ನು ಮಾತ್ರವೇ ದತ್ತು ತೆಗೆದುಕೊಳ್ಳಬಹುದಾಗಿದೆ. ಈಗ ಜಾತಿ ಉಪಜಾತಿಗಳಿಗೆ ಸಂಬಂಧಿಸಿದ ನಿರ್ಬಂಧವನ್ನು ತೊಡೆದುಹಾಕಲಾಗಿದೆ. ಆದರೆ ಅಂಥ ವ್ಯಕ್ತಿ ಹಿಂದೂವಾಗಿರಬೇಕೆಂಬ ನಿರ್ಬಂಧವನ್ನು ತೊಡೆದುಹಾಕಲಾಗಿದೆ. ಈ ಸಂಹಿತೆಯ ಮೇರೆಗೆ ಯಾವ ಧರ್ಮಕ್ಕೆ ಸೇರಿದ ವ್ಯಕ್ತಿಯನ್ನಾದರೂ, ಅವನು ಮುಸಲ್ಮಾನನಾಗಿದ್ದರೂ ಸರಿ, ಕ್ರಿಶ್ಚಿಯನ್ ಆಗಿದ್ದರೂ ಸರಿ ದತ್ತು ತೆಗೆದುಕೊಳ್ಳಬಹುದಾಗಿದೆ ಎಂಬುದಾಗಿ 'ಹಿಂದೂ ಕೋಡ್ ಬಿಲ್ಲಿ'ನ ವಿರೋಧಿಗಳ ವತಿಯಿಂದ ಪತ್ರಿಕೆಗಳಲ್ಲಿ ಏನು ಪ್ರಚಾರ–ಸಮರ ಅಥವಾ ಆಂದೋಳನವನ್ನು ನಡೆಸಲಾಗಿದೆಯೊ ಅದು ಸಂಪೂರ್ಣವಾಗಿ ಸುಳ್ಳಿನ ಸಮರವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಇದರಲ್ಲಿರುವ ಷರತ್ತುಗಳನ್ನು ತಿಳಿದುಕೊಳ್ಳದೆಯೆ ಅಥವಾ ತಿಳಿದೂ ತಿಳಿದೂ ಅವರು ಹೀಗೆ ಮಾಡುತ್ತಿರಬಹುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಜಾತಿ ವಿಷಯಕ ನಿರ್ಬಂಧದ ಅಗತ್ಯವೇನೂ ಇಲ್ಲ; ಅದರಿಂದ ಯಾವ ಪ್ರಯೋಜನವೂ ಇಲ್ಲ. ಹೀಗಾಗಿ, ಮನೋವೃತ್ತಿಯನ್ನುಳ್ಳ ಎಲ್ಲ ಸಮಾಜ–ಹಿತೈಷಿಗಳೂ ಈಗಿರುವಂತೆಯೆ ಈ ಪ್ರಕರಣವನ್ನು ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಸಂಕುಚಿತ ಮನೋವೃತ್ತಿಯ ಕೂಪ–ಮಂಡೂಕಗಳು ಇದರಿಂದ ಅಸಂತುಷ್ಟವಾದರೆ ಅದರಲ್ಲಿ ಅಸಹಜವಾದುದೇನೂ ಇಲ್ಲ. ಆದರೆ, ಈ ಸಂಕುಚಿತ ಮನೋವೃತ್ತಿಯಿಂದ ಸಮಾಜದ ಹಾಗೂ ರಾಷ್ಟ್ರದ ಉನ್ನತಿ ಸಾಧಿತವಾಗುವುದಿಲ್ಲ. ತಾವೇ ಕಲ್ಪಿಸಿಕೊಂಡಿರುವ ಜಾತಿ ಮತ್ತು ಉಪ ಜಾತಿಗಳವರಿಗೆ ದತ್ತು ಸ್ವೀಕಾರದ ಅಧಿಕಾರವನ್ನು ಸೀಮಿತಗೊಳಿಸಬಯಸುವವರು ಹಾಗೆ ಮಾಡಬಯಸಿದರೆ, ಈ ನಿಯಮಗಳು ಹಾಗೆ ಮಾಡದಂತೆ ಅವರನ್ನು ತಡೆಯಲಾರವು; ಅವರಿಗೆ ಪೂರ್ಣ ಸ್ವಾತಂತ್ರ್ಯವಿದೆ.

ಉನ್ನತಾಧಿಕಾರ ಸಮಿತಿ ದತ್ತು ಸ್ವೀಕಾರದ ವಿಧಾನದಲ್ಲಿ ಮಾಡಿರುವ ಒಂದು ಮುಖ್ಯವಾದ ಬದಲಾವಣೆ ಈ ಪ್ರಕರಣದಲ್ಲಿ ಉಲ್ಲೇಖನೀಯವಾಗಿದೆ. ಈಗಿನ ವಿಧಾನದ ಪ್ರಕಾರ ತನ್ನನ್ನು ದತ್ತು ತೆಗೆದುಕೊಂಡಿರುವಂಥ ದತ್ತುಪುತ್ರ ವಿಧವೆಯು ಸಮಸ್ತ ಆಸ್ತಿಪಾಸ್ತಿಗಳ ಮೇಲೆ ಅಧಿಕಾರವನ್ನಿರಿಕೊಳ್ಳಬಹುದಾಗಿತ್ತು; ಈ ಕಾರಣದಿಂದಾಗಿಯೇ ಸಾಕಷ್ಟು ನ್ಯಾಯಿಕ ಘರ್ಷಣೆಗಳು– ಮೊಕದ್ದಮೆಗಳ ಸೆಣಸಾಟ–ನಡೆಯುತ್ತಿದ್ದುವು; ದತ್ತು ತೆಗೆದುಕೊಂಡ ವಿಧವೆಯ ಸ್ಥಿತಿ ತುಂಬ ಚಿಂತಾಜನಕವಾಗಿರುತ್ತಿತ್ತು. ಈಗ ೬೮ನೆಯ ಪ್ರಕರಣದಲ್ಲಿ ಈ ಸಂಬಂಧವಾಗಿ ಹೀಗೆಂದು ಹೇಳಲಾಗಿದೆ : (೧) ಈ ಸಂಹಿತೆ ಜಾರಿಗೆ ಬಂದ ಮೇಲೆ, ಯಾರಾದರೂ ವಿಧವೆ ದತ್ತು ತೆಗೆದುಕೊಂಡ ಸಂದರ್ಭದಲ್ಲಿ, ಅವಳಿಂದ ದತ್ತು ತೆಗೆದುಕೊಳ್ಳಲಾದ ಪುತ್ರ–

(ಅ) ಆ ವಿಧವೆಯ ಅಥವಾ ಆಕೆಯ ಸವತಿ – ವಿಧವೆಯರ (ಅಂಥವರೇನಾದರೂ ಇದ್ದಲ್ಲಿ) ಮೂಲಕ, ದತ್ತು ತೆಗೆದುಕೊಂಡಂಥ ತಂದೆಯ ವಾರಸುದಾರನಾಗಿ, ದತ್ತು ಸ್ವೀಕಾರ ಕಾರ್ಯಕ್ಕೆ ಮುನ್ನ ಸನ್ನಿಹಿತವಾಗಿದ್ದ ಕಾಲದಲ್ಲಿ ಇದ್ದಂಥ ಹಾಗೂ ಉತ್ತರಾಧಿಕಾರದ ರೂಪದಲ್ಲಿ ಲಭಿಸಿದ್ದಂಥ ಆಸ್ತಿ–ಪಾಸ್ತಿಗಳಲ್ಲಿ ಅರ್ಧಕ್ಕೆ ಮಾತ್ರವೇ ಹಕ್ಕುದಾರನಾಗಿರುತ್ತಾನೆ.

ಅನುಭವದಿಂದ ಲಾಭ ಪಡೆದು ಹಾಗೂ ವಿಧವೆಯರ ಬಗೆಗಿನ ಸಹಾನುಭೂತಿಯಿಂದ ರಚಿಸಲಾಗಿರುವ ಈ ಹೊಸ ನಿಯಮವನ್ನು ವಿಚಾರಶೀಲ ಜನತೆ ಸ್ವಾಗತಿಸುತ್ತದೆ ಹಾಗೂ ಸಂಬಂಧಪಟ್ಟವರನ್ನು ಅಭಿನಂದಿಸುತ್ತದೆ ಎಂಬುದಾಗಿ ನಂಬಿದ್ದೇನೆ.

ಅಲ್ಪವಯಸ್ಕರ ಹಾಗೂ ಅವರ ಸಂರಕ್ಷಕರ ಬಗ್ಗೆ ೪ನೆಯ ಭಾಗದಲ್ಲಿ ಕೊಡಲಾಗಿರುವ ಪ್ರಕರಣಗಳ ಬಗ್ಗೆ ಹೆಚ್ಚಿಗೆ ಬರೆಯಬೇಕಾದ ಅಗತ್ಯವೇನೂ ಇಲ್ಲ. ೭೮ನೆಯ ಪ್ರಕರಣದಲ್ಲಿ ಹಿಂದೂ ಅಲ್ಪವಯಸ್ಕರ ಸ್ವಾಭಾವಿಕ ಸಂರಕ್ಷಕರ ಅಥವಾ ಪಾಲಕರ ವಿಷಯದಲ್ಲಿ ಹೀಗೆಂದು ಹೇಳಲಾಗಿದೆ:

ಯಾವನೇ ಅಲ್ಪವಯಸ್ಕ ಹಿಂದೂವಿನ ವೈಯಕ್ತಿಕ ಹಿತದ ಹಾಗೂ ಅದರೊಡನೆ ಅವನ ಆಸ್ತಿ–ಪಾಸ್ತಿಗಳ ವಿಷಯದಲ್ಲಿ ಅವನ ಸ್ವಾಭಾವಿಕ ಸಂರಕ್ಷಕರೆಂದರೆ–

(ಅ) ಯಾವನೇ ಬಾಲಕನ ಅಥವಾ ಅವಿವಾಹಿತ ಕನ್ಯೆಯ ವಿಷಯದಲ್ಲಿ ತಂದೆ; ಆ ಬಳಿಕ ತಾಯಿ ಆದರೆ, ಇದಕ್ಕೆ ಒಂದು ಷರತ್ತನ್ನೂ ಹಾಕಲಾಗಿದೆ. ಅದೇನೆಂದರೆ, ಸಾಮಾನ್ಯವಾಗಿ ಅವನ ತಾಯಿಯೇ ಅವನ ಸಂರಕ್ಷಕಳಾಗಿರತಕ್ಕದ್ದು.

(ಇ) ಅಕ್ರಮ ಸಂತಾನದ ಬಾಲಕನ ಅಥವಾ ಅವಿವಾಹಿತ ಕನ್ಯೆಯ ವಿಷಯದಲ್ಲಿ ತಾಯಿ; ಆ ಬಳಿಕ ತಂದೆ.

(ಉ) ಮದುವೆಯಾಗಿರುವ ಯಾವುದೇ ಹುಡುಗಿಯ ವಿಷಯದಲ್ಲಿ ಅವಳ ಗಂಡ; ಇದಕ್ಕಿರುವ ಷರತ್ತೆಂದರೆ ಇಂಥ ಯಾವನೇ ವ್ಯಕ್ತಿ ಈ ಕೆಳಗೆ ಕಾಣಿಸಲಾಗಿರುವ ಸಂದರ್ಭದಲ್ಲಿ ಈ ಪ್ರಕರಣದ ಅವಕಾಶಗಳ ಅಡಿಯಲ್ಲಿ ಯಾವನೇ ಅಲ್ಪವಯಸ್ಕನ ಸಂರಕ್ಷಕನಾಗಿರುವ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(೧) ಅವನು ಹಿಂದೂಧರ್ಮವನ್ನು ತ್ಯಜಿಸಿದ್ದರೆ.

(೨) ೧೧೦ನೆಯ ಪ್ರಕರಣದ (೧)ನೆ ಉಪ–ಪ್ರಕರಣದಲ್ಲಿ ವಿವರಿಸಲಾಗಿರುವ ರೀತಿಗಳಲ್ಲಿ ಯಾವುದಾದರೂ ರೀತಿಯಲ್ಲಿ ಲೌಕಿಕ ವ್ಯವಹಾರಗಳನ್ನು ಪೂರ್ಣವಾಗಿ ಹಾಗೂ ಅಂತಿಮವಾಗಿ ತ್ಯಜಿಸಿದ್ದರೆ.

ಸ್ವಾಭಾವಿಕ ಸಂರಕ್ಷಕನು ಹಿಂದೂಧರ್ಮವನ್ನು ತ್ಯಜಿಸಿದ್ದರೆ, ಅಂಥ ಸಂದರ್ಭದಲ್ಲಿ ಅವನ ಅಧಿಕಾರ–ಸತ್ತೆ ಸಮಾಪ್ತವಾಗಿಬಿಡುತ್ತದೆಂದು ೮೧ನೆಯ ಪ್ರಕರಣದಲ್ಲಿ ಹೇಳಲಾಗಿದೆ. ಅಲ್ಪವಯಸ್ಕನಾಗಿರುವ ಹಿಂದೂ ಬಾಲಕನನ್ನು ಹಿಂದೂವಿನ ರೂಪದಲ್ಲಿಯೇ ಪಾಲಿಸುವುದು ಮತ್ತು ಪೋಷಿಸುವುದು ಯಾವನೇ ಅಲ್ಪವಯಸ್ಕ ಹಿಂದೂವಿನ ಸಂರಕ್ಷಕನ ಕರ್ತವ್ಯವಾಗಿರುತ್ತದೆ. ಹಿಂದೂ ಧರ್ಮದ ವಿಷಯದಲ್ಲಿ ಪ್ರೀತಿಯನ್ನಿರಿಸಿ ಕೊಂಡಿರುವಂಥ ವ್ಯಕ್ತಿ ಹಿಂದುತ್ವಕ್ಕೆ ಪೋಷಕವಾಗಿರುವಂಥ ಈ ಪ್ರಕರಣಗಳನ್ನು ಸ್ವಾಗತಿಸದೆ, ಅಭಿನಂದಿಸದೆ ಇರಲಾರೆ. ಈ ಪ್ರಸಂಗದಲ್ಲಿ ಉಲ್ಲೇಖನೀಯವಾಗಿರುವ ಹಾಗೂ ಸಮರ್ಥನೀಯವಾಗಿರುವ ಸಂಗತಿಯೆಂದು ನನಗೆ ತೋರುತ್ತಿರುವ ಅಂಶವೆಂದರೆ ಅಲ್ಪವಯಸ್ಕ ಮಕ್ಕಳ ಮೇಲೆ ತಾಯಿಗಿರುವ ಅಧಿಕಾರಕ್ಕೆ ಒಪ್ಪಿಗೆಯನ್ನು ನೀಡಿರುವ ವಿಷಯಕ್ಕೆ ಸಂಬಂಧಿಸಿರುವಂಥದು. ಶಾಸ್ತ್ರಗಳಿಗನುಗುಣವಾಗಿ ತಾಯಿ ಸ್ಥಾನವೇ ಅತ್ಯಂತ ಹಿರಿಯದಾಗಿದ್ದರೂ, ಇದುವರೆಗೆ ಪ್ರಚಲಿತವಾಗಿರುವ ವ್ಯವಸ್ಥೆಯಲ್ಲಿ ತಾಯಿಯ ಸ್ಥಾನವನ್ನು ಉಪೇಕ್ಷಿಸಲಾಗಿತ್ತು ಎಂಬುದು ತಿಳಿದು ಬರುತ್ತದೆ. ಈ ವಿಷಯದಲ್ಲಿ ಶಾಸ್ತ್ರಗಳು ಎಲ್ಲಿಯವರೆಗೆ ಹೋಗಿದ್ದುವೆಂದರೆ 'ಮನುಸ್ಮೃತಿ'ಯ ೨ನೆಯ ಅಧ್ಯಾಯದ ೧೪೫ನೆಯ ಶ್ಲೋಕದಲ್ಲಿ ಹೀಗೆಂದು ಹೇಳಲಾಗಿದೆ:

*"ಉಪಾಧ್ಯಾಯನ್ ದಶಾಚಾರ್ಯ ಆಚಾರ್ಯಣಾಂ ಶತಂ ಪಿತಾ ಸಹಸ್ರತು ಪಿತೃನ್‌ಮಾತಾ ಗೌರವೇಣಾರಿಚ್ಯತೇ"* – ಅಂದರೆ, "ಆಚಾರ್ಯನ ಸ್ಥಾನ ೧೦ ಮಂದಿ ಉಪಾಧ್ಯಾಯರಿಗಿಂತಲೂ

ಮಿಗಿಲಾದುದು; ತಂದೆಯ ಸ್ಥಾನ ೧೦೦ ಮಂದಿ ಆಚಾರ್ಯರುಗಳಿಗಿಂತಲೂ, ತಾಯಿಯ ಸ್ಥಾನ ೧೦೦ ಮಂದಿ ತಂದೆಯವರಿಗಿಂತಲೂ ಮಿಗಿಲಾದುದು."

ಈ ದೃಷ್ಟಿಯಿಂದ, ಮೇಲೆ ಉದ್ಧರಿಸಲಾಗಿರುವ ಪ್ರಕರಣಗಳ ಹಾಗೂ ೮೨ನೆಯ ಪ್ರಕರಣದ ಈ ಭಾಗವನ್ನು – ಅಂದರೆ, "ಆದರೆ ಇದಕ್ಕಿರುವ ಷರತ್ತು ಏನೆಂದರೆ ಯಾವನೇ ವ್ಯಕ್ತಿಯ ಸಂರಕ್ಷಕನ ಕಾರ್ಯವನ್ನು ಪೂರ್ಣಗೊಳಿಸುವ ಸಲುವಾಗಿ ಅವನನ್ನು ಸಾಧಿಕಾರಯುಕ್ತನನ್ನಾಗಿಸಬಲ್ಲಂಥ ಯಾವುದೇ ಸಂಗತಿಯನ್ನು ಪೂರೈಸಲು ನೆರವಾಗುವಂಥ ಯಾವುದೇ ಸಂಗತಿಯ ಇರುವಿಕೆಯ ಬಗ್ಗೆ ಇಲ್ಲಿ ಚಿಂತಿಸಲಾಗುವುದಿಲ್ಲ–ಅಲ್ಪವಯಸ್ಕನ ತಾಯಿಯೇನಾದರೂ ಬದುಕಿದ್ದಲ್ಲಿ ಹಾಗೂ ಇಂಥ ತನ್ನ ಅಲ್ಪವಯಸ್ಕರ ಸ್ವಾಭಾವಿಕ ಸಂರಕ್ಷಕಿಯಾಗಿರಬಲ್ಲ ಸಾಮರ್ಥ್ಯವನ್ನು ಮತ್ತು ಅರ್ಹತೆಯನ್ನು ಅವಳು ಹೊಂದಿದ್ದಲ್ಲಿ" ಎಂಬ ಮಾತುಗಳನ್ನು ಹಾಕಿರುವುದಕ್ಕಾಗಿ ಸಂಬಂಧಪಟ್ಟವರನ್ನು ನಾವು ಅಭಿನಂದಿಸುತ್ತೇವೆ.

# ಆಸ್ತಿಯಲ್ಲಿ ಸ್ತ್ರೀಯರ ಹಕ್ಕು

(ಪೂರ್ವಾರ್ಧ)

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

'ಆಸ್ತಿಯಲ್ಲಿ ಸ್ತ್ರೀಯರ ಹಕ್ಕು'ಗಳಿಗೆ ಸಂಬಂಧಿಸಿರುವಂಥ ಪ್ರಕರಣಗಳ ಬಗ್ಗೆ ಈ ಲೇಖನದಲ್ಲಿ ಒಂದಿಷ್ಟು ಚಿಂತನೆ ಮಾಡಬಯಸುತ್ತೇನೆ. ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಇರುವ ಹಕ್ಕಿನ ಬಗ್ಗೆ ಮುಂದಿನ ಲೇಖನದಲ್ಲಿ ಚಿಂತನೆ ಮಾಡಲಿದ್ದೇನೆ. ಈ ಎರಡು ವಿಷಯಗಳೂ ತುಂಬ ವಿವಾದಾಸ್ಪದವಾಗಿರುವಂಥವು ಹಾಗೂ ಕ್ಲಿಷ್ಟವಾಗಿರುವಂಥವು. ಅನೇಕ ದಿನಗಳವರೆಗೆ ಈ ವಿಷಯಗಳನ್ನು ಕುರಿತ ಶಾಸ್ತ್ರದೃಷ್ಟಿಯಿಂದ ಹಾಗೂ ವ್ಯಾವಹಾರಿಕ ದೃಷ್ಟಿಯಿಂದ ನಾನೇ ಚಿಂತನೆ ಮಾಡಿದ್ದೇನೆ. ಇದುವರೆಗೂ ಖಚಿತವಾದ ತೀರ್ಮಾನಕ್ಕೆ ಬರಲು ನನಗೆ ಸಂಪೂರ್ಣವಾಗಿ ಸಾಧ್ಯವಾಗಿಲ್ಲ ಎಂಬುದನ್ನು ದಾಖಲಿಸುವುದು ಹಾಗೂ ವಿದ್ವನ್ಮಂಡಲಿಗಳು ಅವುಗಳ ಬಗ್ಗೆ ಗಂಭೀರವಾಗಿ ಚಿಂತಿಸುವಂತಾಗಲಿ ಎಂಬ ದೃಷ್ಟಿಯಿಂದ ಅನೇಕ ವಿಚಾರಗಳನ್ನು ಲೇಖನ ಬದ್ಧವಾಗಿಸುವುದು ಸೂಕ್ತವೆಂದು ನನಗೆ ತೋರುತ್ತಿದೆ.

ಸ್ತ್ರೀಯರಿಗೆ ವಿಧವೆಯರಿಗೆ ಆಸ್ತಿಯಲ್ಲಿ ಹಕ್ಕು ಇರಬೇಕೆ ಅಥವಾ ಬೇಡವೆ? ಇರಬೇಕು ಎಂದಾದಲ್ಲಿ ಅದು ಸೀಮಿತವಾಗಿರಬೇಕೆ ಅಥವಾ ಈ ಮಸೂದೆಯ ೯೧ರಿಂದ ೯೩ನೆಯ ಪ್ರಕರಣಗಳಲ್ಲಿ ಹೇಳಿರುವಂತೆ ಪೂರ್ಣವಾಗಿರಬೇಕೆ? ಈ ಪ್ರಕರಣಗಳಲ್ಲಿ ಹೀಗೆಂದು ಹೇಳಲಾಗಿದೆ:

ಹೆಣ್ಣಿನ ಆಸ್ತಿಯ ಬಗೆಗಳು : (೧) ಈ ಸಂಹಿತೆ ಸಂಪೂರ್ಣವಾಗಿ ಜಾರಿಗೆ ಬಂದ ಮೇಲೆ, ಹೆಣ್ಣು ಗಳಿಸಬಹುದಾಗಿರುವ ಯಾವುದೇ ಬಗೆಯ ಆಸ್ತಿ ನಿಶ್ಚಯವಾಗಿ ಅಥವಾ ನಿರುಪಾಧಿಕವಾಗಿ ಅವಳ ಆಸ್ತಿಯಾಗಿರುತ್ತದೆ.

ಅಪವಾದ–೨, ಹೆಣ್ಣಿಗೆ ದಾನದ ರೂಪದಲ್ಲಿ ಅಥವಾ ಯಾವುದೇ ಉಯಿಲಿನ ಅಂಗವಾಗಿ ದೊರೆತಿರುವಂಥ ಯಾವುದೇ ಆಸ್ತಿಯ ಮೇಲೆ, ಉಪಪ್ರಕರಣ (೧)ರಲ್ಲಿ ಉಲ್ಲೇಖಿಸಲಾಗಿರುವ ಯಾವ ಮಾತೂ ಅನ್ವಯವಾಗುವುದಿಲ್ಲ. ದಾನಪತ್ರದಲ್ಲಿನ ಹಾಗೂ ಉಯಿಲಿನಲ್ಲಿನ ಷರತ್ತುಗಳು ಸ್ಪಷ್ಟವಾಗಿ ಅಥವಾ ಅನುಷಂಗಿಕವಾಗಿ ಇಂಥ ಆಸ್ತಿಯ ವಿಷಯದಲ್ಲಿ ಸೀಮಿತ ಹಕ್ಕನ್ನು ನೀಡಿರುತ್ತವೆ. ಮೇಲೆ ಹೇಳಿದ ಅನುಷಂಗಿಕ ಆದೇಶ ಆಕೆ ಹೆಣ್ಣಿನ ವರ್ಗಕ್ಕೆ ಸೇರಿದವಳು ಎಂಬ ಕಾರಣದಿಂದಾಗಿಯೆ ಉದ್ಭವಿಸಿರುವಂಥದಲ್ಲ ಎಂಬ ಕಟ್ಟುಪಾಡಿಗೆ ಒಳಪಟ್ಟ ಈ ಹಕ್ಕೂ ಲಭ್ಯವಾಗಿರುತ್ತದೆ.

ವ್ಯಾಖ್ಯಾನ : ಈ ಪ್ರಕರಣದಲ್ಲಿ 'ಆಸ್ತಿ' ಎಂದರೆ ಹೆಣ್ಣು ಗಳಿಸಿಕೊಂಡಿರುವ ಚರ ಮತ್ತು ಸ್ಥಿರ ಆಸ್ತಿಗಳೆಲ್ಲ ಸೇರುತ್ತವೆ – ಅದು ಅವಳ ಮದುವೆಗೆ ಮೊದಲು ಲಭಿಸಿದ್ದಾಗಿರಬಹುದು ಅಥವಾ ಅನಂತರದಲ್ಲಿ ಲಭಿಸಿದ್ದಾಗಿರಬಹುದು; ಅಥವಾ ಅದು ವೈಧವ್ಯ ಕಾಲದ ಮಧ್ಯದಲ್ಲಿ ಲಭಿಸಿದ್ದಾಗಿರಬಹುದು ಹಾಗೂ ಅದು ಉತ್ತರಾಧಿಕಾರದ ರೂಪದಲ್ಲಿ ಲಭಿಸಿದ್ದಾಗಿರಬಹುದು ಅಥವಾ ಅದು ಆಸ್ತಿ ವಿಭಜನೆಯ ಮೂಲಕ ಅಥವಾ ಯಾವನೋ ಒಬ್ಬ ನೆಂಟ ಅಥವಾ ಇತರ ಯಾವುದೇ ವ್ಯಕ್ತಿ ಮಾಡಿದ ದಾನದ

ಮೂಲಕ ಬಂದುದಾಗಿರಬಹುದು ಅಥವಾ ತನ್ನ ಚಾತುರ್ಯದಿಂದ ಅಥವಾ ಪ್ರಯತ್ನದಿಂದ ಪಡೆದುಕೊಂಡುದಾಗಿರಬಹುದು ಅಥವಾ ಕೊಂಡುಕೊಂಡುದಾಗಿರಬಹುದು ಅಥವಾ ಬಹುಕಾಲ ಬೋಧಕ ಅಧಿಕಾರದಿಂದಾಗಿ ಯಾವುದೋ ರೀತಿಯಲ್ಲಿ ಲಭಿಸಿದುದಾಗಿರಬೇಕು.

ಪ್ರಕರಣ ೯೩ : ಸ್ತ್ರೀಧನ-ಅಂದರೆ ಪತ್ನಿಯ ಅಮಾನತ್ತು – ಈ ಮಸೂದೆ ಜಾರಿಗೆ ಬಂದ ಬಳಿಕ ನಡೆಸಲಾದ ಮದುವೆಯಲ್ಲಿ, ವಿವಾಹದ ಸಂಸ್ಕಾರಗಳು ಸಂಪೂರ್ಣಗೊಳ್ಳುವ ಸನ್ನಿವೇಶದಲ್ಲಿ ನೀಡಲಾಗುವ ಯಾವುದೇ ಸ್ತ್ರೀಧನ. ಇದು ವಿವಾಹದ ಸಂದರ್ಭದಲ್ಲಿ ಅಥವಾ ಅದರ ಯಾವುದೋ ಷರತ್ತಿನ ರೂಪದಲ್ಲಿ ಅಥವಾ ಆ ಸಂಬಂಧವಾಗಿ ನೀಡಲಾದ ಕಾಣಿಕೆಯ ರೂಪದಲ್ಲಿ ಲಭಿಸಿದ್ದಾಗಿರಬಹುದು. ಇದು ಈ ರೀತಿ ವಿವಾಹ-ಸಂಸ್ಕಾರಕ್ಕೊಳಗಾದ ಆ ಹೆಣ್ಣಿನ ಆಸ್ತಿ ಎಂದು ಪರಿಗಣಿಸಲ್ಪಡುತ್ತದೆ.

(೨) ಹೀಗೆ ವಿವಾಹ-ಸಂಸ್ಕಾರಕ್ಕೊಳಗಾದ ಇಂಥ ಹೆಣ್ಣನ್ನು ಹೊರತುಪಡಿಸಿ, ಬೇರೆ ಯಾವನೇ ವ್ಯಕ್ತಿ ಸ್ತ್ರೀಧನವನ್ನೇನಾದರೂ ಪಡೆದುಕೊಂಡಿದ್ದರೆ, ಆ ಸಂದರ್ಭದಲ್ಲಿ ಅಂಥ ವ್ಯಕ್ತಿ ಅದನ್ನು ಆ ಹೆಣ್ಣಿನ ಲಾಭಕ್ಕಾಗಿ ಹಾಗೂ ವ್ಯಕ್ತಿಗತ ಪ್ರಯೋಜನಕ್ಕಾಗಿ ಅಮಾನತ್ತಿನ ರೂಪದಲ್ಲಿ ಇಟ್ಟಿರಬೇಕು ಹಾಗೂ ಆ ಹೆಣ್ಣಿಗೆ ೧೮ನೇ ವರ್ಷ ತುಂಬಿದಾಗ, ಅದನ್ನು ಅವಳಿಗೆ ಕೊಡಮಾಡಬೇಕು. ಒಂದು ವೇಳೆ ತನ್ನ ಆಯುಸ್ಸಿನ ಉಕ್ತ ಅವಧಿ ಪೂರ್ಣಗೊಳ್ಳುವುದಕ್ಕೆ ಮೊದಲೇ ಅವಳು ತೀರಿಕೊಂಡರೆ, ೭ನೆಯ ಭಾಗದಲ್ಲಿ ನಿಗದಿಪಡಿಸಲಾಗಿರುವ ಅವಳ ಉತ್ತರಾಧಿಕಾರಗಳ ಹೆಸರಿಗೆ ಅದನ್ನು ಬದಲಾಯಿಸಿಕೊಡಬೇಕು. ಈ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಚಾರಗಳು ಗಂಭೀರವಾದ ಚಿಂತನೆಗೆ ಅರ್ಹವಾಗಿರುವಂಥವಾಗಿವೆ.

*ಸಮ್ರಾಜ್ಞೀ ಶ್ವಶುರೇ ಭವ ಸಾಮ್ರಜ್ಞೀಶ್ವಸ್ರವಾಂ ಭವ ।*
*ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿ ದೇವೃಷು ॥*

ಋಗ್ವೇದ, ೧೦/೮೫/೪೫

*ಯಥಾ ಸಿಂಧುನದೀನಾಂ ಸಾಮ್ರಾಜ್ಯಂ ಸುಷುವೇ ವೃಷಾ ।*
*ಏವಂ ತ್ವಂ ಸಮ್ರಾಜ್ಞ್ಯೇಧಿ ಪತ್ಯುರಸ್ತಂ ಪರೇತ್ಯಾ ॥*

ಅಥರ್ವವೇದ, ೧೪/೧/೪೩

ವೇದಗಳಲ್ಲಿ ಪತ್ನಿಗೆ ತುಂಬ ಎತ್ತರದ ಸ್ಥಾನವನ್ನು ನೀಡಲಾಗಿದೆ ಹಾಗೂ ಆಕೆಯನ್ನು ಸಂಬೋಧಿಸುವ ಸಲುವಾಗಿ ಅನೇಕ ವೇದ-ಮಂತ್ರಗಳಲ್ಲಿ 'ಸಮ್ರಾಜ್ಞೀ' ಎಂಬ ಶಬ್ದವನ್ನು ಬಳಸಲಾಗಿದೆ. ಸಮ್+ರಾಜ್ಞೀ ಎಂಬ ಬಿಡಿಸಲಾಗುವ ಈ ಶಬ್ದಕ್ಕೆ ತನ್ನ ಗುಣಗಳಿಂದ ಚೆನ್ನಾಗಿ ಬೆಳಗುತ್ತಿರುವವಳು ಮತ್ತು ರಾಣಿ ಎಂದು ಅರ್ಥಗಳು ದೊರೆಯುತ್ತವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಈ ಮಂತ್ರ ವಿಶೇಷವಾಗಿ ಗಮನಾರ್ಹವಾಗಿದೆ. 'ಸಮ್+ರಾಜ್ಞೀ' ಎಂಬಲ್ಲಿ 'ಸಮ್' ಎಂದರೆ ಒಂದುಗೂಡಿ (ಪತಿಯೊಡನೆ ಒಂದುಗೂಡಿ) ಅಥವಾ ಅವನೊಂದಿಗೆ ರಾಜ್ಯವನ್ನಾಳುವಳು ಎಂದೂ ಅರ್ಥವಾಗುತ್ತದೆ. ನವವಧುವನ್ನು ಸಂಬೋಧಿಸುತ್ತಿರುವ ಈ ಮಂತ್ರಗಳಲ್ಲಿ, ಮನೆಯ ಸಮ್ರಾಜ್ಞೀಯಾಗುವಂತೆ ಅವಳಿಗೆ ಆದೇಶವನ್ನೂ, ಆಶೀರ್ವಾದವನ್ನೂ ನೀಡಲಾಗಿದೆ. ತನ್ನ ಮಾವ, ಮೈದುನ, ನಾದಿನಿ, ಅತ್ತೆ ಮೊದಲಾದ ಎಲ್ಲ ಬಾಂಧವರನ್ನು ಸದ್ವ್ಯವಹಾರದಿಂದ ಪ್ರಸನ್ನಗೊಳಿಸಬೇಕೆಂಬ ಅಥವಾ ತನ್ನ ಗುಣಗಳಿಂದ ಬೆಳಗಿ ನಿಲ್ಲಬೇಕೆಂಬ ಉಪದೇಶವನ್ನೂ ನೀಡಲಾಗಿದೆ.

*"ಗೃಹಾನ್ ಗಚ್ಛ ಗೃಹಪತ್ನೀ ಯಥಾಸಃ"* (ಋಗ್ವೇದ, ೧೦/೮೫/೧೬) ಹಾಗೂ *"ಅಸ್ಮೀನ್ ಗೃಹೇ ಗಾರ್ದಪತ್ಯಾಯ ಜಾಗೃಹಿ"* (ಋಗ್ವೇದ, ೧೦/೮೫/೨೭) ಇವೇ ಮೊದಲಾದ ಮಂತ್ರಗಳಲ್ಲಿ ಹೆಣ್ಣಿಗೆ ಗೃಹಪತ್ನಿ ಅಥವಾ ಮನೆಯ ಒಡತಿ ಆಗಬೇಕೆಂಬ ಉಪದೇಶ ಹಾಗೂ ಆದೇಶಗಳನ್ನು ನೀಡಲಾಗಿದೆ. *"ಆಶಸಾನಾ ಸೌಮನಸಂ ಪ್ರಜಾಂ ಸೌಭಾಗ್ಯಂ ರಯಿಮ್। ಪತ್ಯರನವ್ರತಾ ಭೂತ್ವಾ ಸಂನಹ್ಯ-ಸ್ವಾಮೃತಾಯ ಕಮ್ ॥"* (ಅಥರ್ವವೇದ', ೧೪/೧/೪೨) *"ರಮ್ಯ ಸಹಸ್ಯ ವರ್ಚಸಾ ಇಮೌ ಸ್ತಾಮನು ಪಕ್ಷಿರ್ತ"* ("ಅಥರ್ವವೇದ,' ೩/೭೮/೧)– ಇವೇ ಮೊದಲಾದ ಮಂತ್ರಗಳಲ್ಲಿ, ಪತಿಯಿಂದ ಪ್ರೀತಿ, ಪ್ರಸನ್ನತೆ, ಸಂತಾನ, ಸೌಭಾಗ್ಯ, ಐಶ್ವರ್ಯಗಳನ್ನು ಬಯಸುತ್ತ, ಅವನಿಗೆ ಅನುವ್ರತೆಯಾಗಿದ್ದುಕೊಂಡು, ಸುಖವನ್ನು ಗಳಿಸಿಕೊ ಎಂಬುದಾಗಿ ವಧುವಿಗೆ ಹಿತನುಡಿಯನ್ನು ಹೇಳಲಾಗಿದೆ. ಇವರಿಬ್ಬರೂ (ಗಂಡ ಮತ್ತು ಹೆಂಡತಿ) ಎಲ್ಲ ರೀತಿಯಿಂದಲೂ ಧನಸಮೃದ್ಧಿಯಿಂದ ಕೂಡಿರಲಿ ಎಂದು ಆಶಿಸಲಾಗಿದೆ. ಹೀಗೆ ವೇದಗಳು ಸ್ತ್ರೀಯರ ವಿಷಯದಲ್ಲಿ ತುಂಬ ಗೌರವದ ಭಾವನೆಯನ್ನು ತೋರುತ್ತ, ಅವರಿಗೆ ಗಂಡನ ಆಸ್ತಿಯಲ್ಲಿ ಹಾಗೂ ಸಮಸ್ತ ಸುಖಸಾಧನಗಳಲ್ಲಿ ಸಮಾನವಾದ ಹಕ್ಕು ಇರಬೇಕೆಂಬುದನ್ನು ಎತ್ತಿ ಹೇಳುತ್ತವೆ.

ಸ್ತ್ರೀಯರ ಸ್ಥಿತಿಗತಿಗಳು ಅನೇಕ ಅಂಶಗಳಲ್ಲಿ ಅಧೋಮುಖಿಯಾಗಿರುವುದನ್ನು ನಾವು ಮಧ್ಯಕಾಲೀನ ಸಾಹಿತ್ಯದಲ್ಲಿ ಕಾಣುತ್ತೇವೆ. *"ಅನೃತಂ ಸ್ತ್ರೀ", "ನಿರಿಂದ್ರಿಯಾ ಹ್ಯಮಂತ್ರಾಶ್ಚ ಸ್ತ್ರೀಯೋನೃತಮಿತಿ ಸ್ಥಿತಿಃ॥"* ಹಾಗೂ *"ವಿಶ್ವಾಸ ಪಾತ್ರಂ ನ ಕಿಮಸ್ತಿ ನಾರೀ"* (ಶ್ರೀ ಶಂಕರಾಚಾರ್ಯ ಕೃತ 'ಪ್ರಶ್ನೋತ್ತರೀ') – ಇವೇ ಮೊದಲಾದ ವಾಕ್ಯಗಳು ಆ ಕಾಲದ ಅನೇಕ ಸ್ಮೃತಿಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಕಾಣದೊರೆಯುತ್ತವೆ.

ಇವುಗಳಲ್ಲಿ ಸ್ತ್ರೀಯರನ್ನು ಅವಿಶ್ವಾಸನೀಯರೆಂದೂ, ಅಸತ್ಯಸ್ವರೂಪಿಣಿಯರೆಂದೂ, ಅಶುಭೆಯರೆಂದೂ ಪರಿಗಣಿಸಿ, ಅವರನ್ನು ಸರ್ವಥಾ ಸ್ವತಂತ್ರರಾಗಿರಬಾರದವರೆಂದೂ ಶೂದ್ರರಿಗೆ ಹಾಗೂ ದಾಸಿಯರಿಗೆ ಸಮಾನರಾಗಿರಬೇಕಾದವರೆಂದೂ ಭಾವಿಸಲಾಗಿದೆ. ಆದರೆ, ವೇದಕಾಲದ ಮನೋಧರ್ಮಕ್ಕೆ ವಿರುದ್ಧವಾಗಿರುವ ಇಂಥ ಹೇಳಿಕೆಗಳ ಕರ್ತೃತ್ವವನ್ನು ಯಾವ ಮುನಿಗೆ ಬೇಕಾದರೂ ಆರೋಪಿಸಿರಲಿ, ಯಾವ ಗ್ರಂಥಗಳಲ್ಲಿ ಬೇಕಾದರೂ ಇವು ದೊರೆತಿರಲಿ, ಇವುಗಳನ್ನು ಒಪ್ಪಲು ನಾವು ಸರ್ವಥಾ ನಿರಾಕರಿಸಬೇಕು. ಏಕೆಂದರೆ, ಇವು ವೇದಕಾಲದ ಮನೋಧರ್ಮಕ್ಕೆ ವಿರುದ್ಧವಾಗಿರುವ ಮಾತ್ರವಲ್ಲ, ನ್ಯಾಯ-ಪ್ರಜ್ಞೆಗೂ ವಿರುದ್ಧವಾಗಿದೆ. ವಿಷಾದದ ಸಂಗತಿ ಎಂದರೆ ಸ್ತ್ರೀಯರ ವಿಷಯದಲ್ಲಿ ಕೀಳುತನವನ್ನು ಹಾಗೂ ಅಪನಂಬಿಕೆಯ ಭಾವನೆಯನ್ನು ಸೂಚಿಸುವ ಇಂಥ ಮಾತುಗಳು ಜನರ ಮನಸ್ಸಿನಲ್ಲಿ ಬೀಡುಬಿಟ್ಟಿವೆ, ಈ ವಿಷಯಗಳನ್ನು ಕುರಿತು ಯಾವಾಗಲೂ ಚಿಂತನೆ-ಮಂಥನಕ್ಕೆ ತೊಡಗಿದರೆ, ಬಹುಶಃ ಪುರುಷರ ಬಾಯಿಂದ ಇಂಥ ಅಪನಂಬಿಕೆಯ ಪ್ರತೀಕವಾಗಿರುವಂಥ ಮಾತುಗಳೇ ಹೊರಬೀಳುತ್ತವೆ. ಅನೇಕ ಸುಶಿಕ್ಷಿತ ಮಹಾನುಭಾವರೊಂದಿಗೆ ಮಾತುಕತೆ ನಡೆಸಿದಾಗ ಈ ದಿನಗಳಲ್ಲಿಯೂ ನನಗೆ ಇಂಥ ಅನುಭವ ಆಗಿದೆ.

ಆಸ್ತಿಯಲ್ಲಿ ಸ್ತ್ರೀಯರಿಗೆ ಇರುವ ಹಕ್ಕಿಗೆ ಸಂಬಂಧಿಸಿದಂತೆ, ಶಾಸ್ತ್ರದೃಷ್ಟಿಯಿಂದ ಆಲೋಚನೆ ಮಾಡುವ ಸಂದರ್ಭದಲ್ಲಿ ಸ್ತ್ರೀಧನದ ಸ್ವರೂಪವನ್ನು ಅರಿತುಕೊಳ್ಳುವುದೂ ಅಗತ್ಯವಾಗುತ್ತದೆ. ಇದರ ಮೇಲೆ ಸ್ತ್ರೀಯರಿಗೆ ಸಂಪೂರ್ಣ ಅಧಿಕಾರ ಅಥವಾ ಹಕ್ಕು ಇರಬೇಕೆಂಬುದನ್ನು ಬಹುಶಃ ಎಲ್ಲಾ ಸ್ಮೃತಿಕಾರರೂ ಒಪ್ಪಿದ್ದಾರೆ. 'ಮನುಸ್ಮೃತಿ'ಯ ೯ನೆಯ ಅಧ್ಯಾಯದ ೧೯೪ನೆಯ ಶ್ಲೋಕದಲ್ಲಿ ಸ್ತ್ರೀಧನದ ಸ್ವರೂಪವನ್ನು ಹೀಗೆ ನಿರೂಪಿಸಲಾಗಿದೆ.

*"ಅಧ್ಯಗ್ನ್ಯ ಧ್ಯಾವಾಹನಿಕಂ ದತ್ತಂ ಚ ಪ್ರೀತಿಕರ್ಮಣಿ*
*ಭ್ರಾತೃಮಾತೃ ಪಿತೃ ಪ್ರಾಪ್ತಂ ಸ್ತ್ರೀಧನಂ ಸ್ಮೃತಮ್ ॥"*

ಅಂದರೆ, ಮದುವೆಯ ಸಂದರ್ಭದಲ್ಲಿ ಅಗ್ನಿಸಾಕ್ಷಿಯಾಗಿ ಸ್ತ್ರೀಗೆ ನೀಡಲಾಗುವ ಹಣ, ಗಂಡನ ಮನೆಯಿಂದ ತಂದೆಯ ಮನೆಗೆ ಹೋಗುವ ಸಂದರ್ಭ ಮಾವನವರೇ ಮೊದಲಾದವರಿಂದ ದೊರೆಯುವ ಹಣ, ಗಂಡನಿಂದ ಪ್ರೀತಿಯ ಕಾಣಿಕೆಯ ರೂಪದಲ್ಲಿ ದೊರೆಯುವ ಹಣ, ಆಗಿಂದಾಗ್ಗೆ, ತಂದೆ, ತಾಯಿ ಮತ್ತು ಸೋದರರಿಂದ ದೊರೆಯುವ ಹಣ–ಈ ಆರು ಬಗೆಗಳಲ್ಲಿ ದೊರೆಯುವ ಹಣ, ಗಂಡನಿಂದ ಪ್ರೀತಿಯ ಕಾಣಿಕೆಯ ರೂಪದಲ್ಲಿ ದೊರೆಯುವ ಹಣ, ಆಗಿಂದಾಗ್ಗೆ, ತಂದೆ, ತಾಯಿ ಮತ್ತು ಸೋದರರಿಂದ ದೊರೆಯುವ ಹಣ – ಈ ಆರು ಬಗೆಗಳಲ್ಲಿ ದೊರೆಯುವ ಹಣವನ್ನು 'ಸ್ತ್ರೀಧನ' ವೆಂದು ಪರಿಗಣಿಸಲಾಗುತ್ತದೆ. 'ಯಾಜ್ಞವಲ್ಕ್ಯ ಸ್ಮೃತಿ'ಯ ೨ನೆಯ ಅಧ್ಯಾಯದ ೧೪೩ನೆಯ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ: *"ಪಿತ್ರ ಮಾತೃ ಪತಿಭ್ರಾತೃ ದತ್ತ ಮಧ್ಯಗ್ನ್ಯು ವಾಗತಮ್ ಅಧಿವೇದನಿಕಾದ್ಯ ಚ ಸ್ತ್ರೀಧನಂ ಪರಿಕೀರ್ತಿತಮ್॥"* ಈ ಶ್ಲೋಕದಲ್ಲಿ ಸ್ತ್ರೀಧನದ ಸ್ವರೂಪವನ್ನು ಬಹುಮಟ್ಟಿಗೆ 'ಮನುಸ್ಮೃತಿ'ಯಲ್ಲಿ ಇರುವಂತೆಯೇ ನಿರೂಪಿಸಲಾಗಿದ್ದರೂ, ಹೆಚ್ಚಿನದಾಗಿ 'ಆದಿ; (ಇವೆ ಮೊದಲಾದುವು) ಎಂಬ ಶಬ್ದವನ್ನು ಬಳಸಲಾಗಿದೆ. ಇದಕ್ಕೆ ವ್ಯಾಖ್ಯಾನವನ್ನು ನೀಡುತ್ತ ವಿಜ್ಞಾನೇಶ್ವರನು 'ಮಿತಾಕ್ಷರಾ ಟೀಕಾ'ದಲ್ಲಿ ಹೀಗೆಂದು ಹೇಳಿದ್ದಾನೆ. : *"ಆದ್ಯ ಶಬ್ದೇನ ರಿಕ್ಥಕ್ರಯ ಸಂವಿಭಾಗ–ಪರಿಗ್ರಹಾಧಿಗಮಪ್ರಾಪ್ತ ಮೇತನ್ ಸ್ತ್ರೀಧನಂ ಮನ್ವಾದಿಭಿರುಕ್ತಮ್"* (ಯಾಜ್ಞವಲ್ಕ್ಯ ಸ್ಮೃತಿ ಮಿತಾಕ್ಷರಾ, ಸುಬೋಧಿನೀ ಬಾಲ ಭಟ್ಟ್ಯಾಧೀ ಟೀಕಾಸಹಿತಮ್, ಮದ್ರಾಸ್, ಪು. ೮೪೨) – ಅಂದರೆ, 'ಆದಿ' ಶಬ್ದದಿಂದ ದಾಯಭಾಗ, ಖರೀದಿ, ಆಸ್ತಿ ಹಂಚಿಕೆ, ಲಾಭ ಮತ್ತು ಇತರ ಪ್ರಕಾರಗಳಿಂದ ಲಭಿಸಿದ ಹಣ ಎಂಬ ಅರ್ಥವನ್ನು ಗ್ರಹಿಸಿಕೊಳ್ಳಬೇಕು.

ನಾರದ ಸ್ಮೃತಿಗಳಲ್ಲಿಯೂ ಹೀಗೆ ಹೇಳಿದೆ:

*"ಅಧ್ಯಗ್ನ್ಯಧ್ಯಾವಾಹನಿಕಂ ಭರ್ತೃದಾಯಸ್ತಧ್ಯವಚ।*
*ಭ್ರಾತೃದತ್ತಂ ಪಿತೃಭ್ಯಾಂಚ ಷಡ್ವಿಧಂ ಸ್ತ್ರೀಧನಂ ಸ್ಮೃತಮ್॥"*

('ನಾರದ ಸ್ಮೃತಿ', ೧೩/೮)

ಈ ಮಾತುಗಳಲ್ಲಿ, ಮನುಸ್ಮೃತಿಯಲ್ಲಿ ಹೇಳಿರುವಂತೆಯೇ ಸ್ತ್ರೀಧನದ ಸ್ವರೂಪವನ್ನು ನಿರೂಪಿಸಲಾಗಿದೆ. ಇಲ್ಲಿ 'ಭರ್ತೃದಾಯ' ಶಬ್ದವನ್ನು ಸ್ಪಷ್ಟರೂಪದಲ್ಲಿ ಬಳಸಲಾಗಿದೆ. ಈ ಶಬ್ದಕ್ಕೆ 'ಪತಿ ಕೊಟ್ಟಿದ್ದು' ಎಂದು ಅರ್ಥ.

ಈ ಸ್ತ್ರೀಧನದ ಮೇಲೆ ಸ್ತ್ರೀಯರಿಗೆ ಸಂಪೂರ್ಣ ಅಧಿಕಾರ ಅಥವಾ ಹಕ್ಕೂ ಇರತಕ್ಕದ್ದೆಂಬುದನ್ನು ಬಹುಶಃ ಎಲ್ಲ ಸ್ಮೃತಿಕಾರರು ಮತ್ತು ಮಹಾಭಾರತಕಾರರೂ ಒಪ್ಪಿದ್ದಾರೆ. 'ಮಹಾಭಾರತ'ದಲ್ಲಿ (೧೮.೧) ಹೀಗೆಂದು ಹೇಳಲಾಗಿದೆ.

*"ಸ್ತ್ರೀಧನಸ್ಯೇಶಿನಿ ಸ್ತ್ರೀ ಸ್ಯಾದ್ ಭರ್ತಾ ಚ ತದನುಜ್ಞಯಾ ।*
*ಭೋಕ್ತು ರಕ್ಷಯಿತು ಯೋಮ್ಯೋ ಭರ್ತು ನಾಶಯಿತು ನ ಚ ॥"*

ಅಂದರೆ, ಸ್ತ್ರೀಧನಕ್ಕೆ ಹೆಂಡತಿಯೇ ಒಡತಿ. ಅವಳ ಅನುಮತಿಯೊಂದಿಗೆ ಮಾತ್ರವೇ ವಿಶೇಷ ಸಂದರ್ಭಗಳಲ್ಲಿ ಪತಿ ಅದನ್ನು ಬಳಸಬಹುದಾಗಿದೆ. ಇಲ್ಲವಾದಲ್ಲಿ ಹಾಗೆ ಮಾಡುವಂತಿಲ್ಲ. ಈ ವಿಷಯದ ಬಗ್ಗೆ ಎಲ್ಲಿಯವರೆಗೆ ಹೋಗಿದ್ದಾರೆಂದರೆ ಹೀಗೆಲ್ಲ ಹೇಳಲಾಗಿದೆ:

*"ನ ಭರ್ತಾ ನೈವ ಚ ಸುತೋ ನ ಪಿತಾ ಭ್ರಾತರೋ ನ ಚ।*
*ಆದಾನೇ ವಾ ವಿಸರ್ಗೇ ವಾ ಸ್ತ್ರೀಧನೇ ಪ್ರಭವಿಷ್ಣವಃ ॥"*

('ದಾಯಭಾಗ' ೭೮; 'ಸ್ಮೃತಿ ಚಂದ್ರಿಕಾ' ೨೮೨' 'ಪರಾಶರ ಮಾಧವೀಯ '೫೫೬) ಅಂದರೆ, ಸ್ತ್ರೀಧನವನ್ನು ತೆಗೆದುಕೊಳ್ಳುವ ಹಾಗೂ ಅದನ್ನು ಮಾರಾಟಮಾಡುವುದೇ ಮೊದಲಾದ ಯಾವ ಅಧಿಕಾರವೂ ಗಂಡನಿಗಾಗಲಿ, ಮಗನಿಗಾಗಲಿ, ತಂದೆಗಾಗಲಿ, ಸೋದರನಿಗಾಗಲಿ, ಬೇರೆ ಯಾರಿಗೆ ಆಗಲಿ ಇರುವುದಿಲ್ಲ.

'ಶುಕ್ರ ನೀತಿ'ಯಲ್ಲಿ (೪.೭೯೩)' ಸೌದಾಯಿಕ ಧನ'ದ ಲಕ್ಷಣವನ್ನು ಹೀಗೆ ವಿವರಿಸಲಾಗಿದೆ.

*"ಊಢಯಾ ಕನ್ಯಯಾ ವಾಪಿ ಪತ್ಯುಃ ಪಿತೃಗೃಹೇಪಿ ವಾ।*
*ಭ್ರಾತುಃ ಸಕಾಶಾತ್ಪಿತ್ರೋರ್ವಾ ಲಬ್ಧಂ ಸೌದಾಯಿಕಂ ಸ್ಮೃತಮ್ ॥"*

('ಸ್ಮೃತಿಸಾರ' ೬೦; 'ಸ್ಮೃತಿ ಚಂದ್ರಿಕಾ' ೨೮೨, 'ಪರಾಶರ ಮಾಧವೀಯ' ೫೪೯)

–ಅಂದರೆ, ವಿವಾಹಿತೆಯಾದ ಅಥವಾ ಅವಿವಾಹಿತೆಯಾದ ಕನ್ಯೆ ಪತಿಯ ಅಥವಾ ತಂದೆಯ ಮನೆಯಿಂದ ಅಥವಾ ಸೋದರನಿಂದ ಹಾಗೂ ತಂದೆ ತಾಯಿಗಳಿಂದ ಏನೆಲ್ಲವನ್ನೂ ಪಡೆದುಕೊಳ್ಳುತ್ತಾಳೊ ಅದನ್ನು 'ಸೌದಾಯಿಕ ಧನ' ಎನ್ನುತ್ತಾರೆ. ಈ 'ಸೌದಾಯಿಕ ಧನ'ದ ಬಗ್ಗೆ ಶಾಸ್ತ್ರಕಾರರು ಹೀಗೆ ಹೇಳಿದ್ದಾರೆ:

*"ಸೌದಾಯಿಕಂ ಧನಂ ಪ್ರಾಪ್ಯ ಸ್ತ್ರೀಣಾಂ ಸ್ವಾತಂತ್ರ್ಯ ಮಿಷ್ಯತೇ ।*
*ಯಸ್ಮಾತ್ತ ದಾತೃಶಂ ಸ್ವಾರ್ಥ ತೈರ್ದತ್ತಮಪಜೀವನಮ್ ॥*
*ಸೌದಾಯಿಕೇ ಸದಾ ಸ್ತ್ರೀಣಾಂ ಸ್ವಾತಂತ್ರ್ಯಂ ಪರಿಕೀರ್ತಿತಮ್ ।*
*ವಿಕ್ರಯೇ ಚೈವ ದಾನೇ ಚ ಯಥೇಷ್ಟ ಸ್ಥಾವರೇಷ್ವ ಪಿ॥"*

('ಶುಕ್ರ ನೀತಿ' ೪/೭೯೨–೯೩; 'ಕಾತ್ಯಾಯನ ಸ್ಮೃತಿ', ದಾಯ ಭಾಗ ೭೬; 'ಸ್ಮೃತಿ–ಚಂದ್ರಿಕಾ' ೨೮೨, 'ಪರಾಶರ ಮಾಧವೀಯ' ೫೪೯)

–ಅಂದರೆ, ಸೌದಾಯಿಕ ಧನದ ವಿಷಯದಲ್ಲಿ ಸ್ತ್ರೀಯರಿಗೆ ಯಾವಾಗಲೂ, ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಇದನ್ನು ಮಾರುವ ಹಾಗೂ ದಾನ ಮಾಡುವ ವಿಷಯದಲ್ಲಿಯೂ ಹಾಗೂ ಸ್ಥಿರ ಆಸ್ತಿಯಾದ ಭೂಮಿಕಾಣಿ ಮುಂತಾದವುಗಳ ವಿಷಯದಲ್ಲಿಯೂ ಯಥೇಷ್ಟವಾಗಿ ಅಥವಾ ತಮ್ಮ ಇಚ್ಛೆಗೆ ಅನುಗುಣವಾಗಿ ಕೆಲಸ ಮಾಡುವ ಸಂಪೂರ್ಣ ಅಧಿಕಾರ ಅವರಿಗೆ ಇರುತ್ತದೆ.

# ಆಸ್ತಿಯಲ್ಲಿ ಸ್ತ್ರೀಯರ ಹಕ್ಕು

(ಉತ್ತರಾರ್ಧ)

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ಆಸ್ತಿಯಲ್ಲಿ ಸ್ತ್ರೀಯರ ಹಕ್ಕಿಗೆ ಸಂಬಂಧಿಸಿದಂತೆ 'ಹಿಂದೂ ಕೋಡ್ ಬಿಲ್ಲಿ'ನಲ್ಲಿ ಏನು ಹೇಳಲಾಗಿದೆ ಎಂಬುದನ್ನು ಈ ಲೇಖನದ ಪೂರ್ವಾರ್ಧದಲ್ಲಿ ಉದ್ಧರಿಸಿದ್ದೇನೆ. ಅಲ್ಲಿ ಉದ್ಧರಿಸಲಾಗಿರುವ ಪ್ರಕರಣಗಳಲ್ಲಿ ಏನೆಲ್ಲ ಹೇಳಲಾಗಿದೆಯೋ ಅದು ಈ ಶ್ಲೋಕಗಳಲ್ಲಿ ಹೇಳಲಾಗಿರುವ ಭಾವಕ್ಕೆ ಸರ್ವಥಾ ಅನುಗುಣವಾಗಿಯೇ ಇದೆ. ಹೀಗಾಗಿ ಈ ಪ್ರಸ್ತಾವಗಳು ಶಾಸ್ತ್ರವಿರುದ್ಧವಾಗಿವೆ ಎಂದು ಹೇಳುವುದು ಸುಳ್ಳು ಎಂಬುದು ಪ್ರಮಾಣೀಕೃತವಾಗಿ ಬಿಡುತ್ತದೆ. ಈ ವಿಷಯದಲ್ಲಿ ಸ್ಮೃತಿಕಾರರಲ್ಲಿಯೂ ಪರಸ್ಪರ ಭಿನ್ನಾಭಿಪ್ರಾಯಗಳಿವೆ ಎಂಬುದು ನಿಜ. ಅದರಲ್ಲಿಯೂ ಗಂಡನ ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ವಿಧವೆಯರಿಗೆ ಸೀಮಿತ ಹಕ್ಕುಗಳಿರಬೇಕೆ ಅಥವಾ ಸಂಪೂರ್ಣ ಹಕ್ಕು ಇರಬೇಕೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ, 'ನಾರದ ಸ್ಮೃತಿ'ಯಲ್ಲಿ ಹೀಗೆಂದು ಹೇಳಲಾಗಿದೆ.

*"ಭರ್ತ್ರಾ ಪ್ರೀತೇನ ಯದ್ದತ್ತಂ ಸ್ತ್ರೀಯೈ ತಸ್ಮಿನ್ ಮೃತೇಪಿತತ್ ।*
*ಸಾಯಥಾ ಕಾಮಮಶ್ನೀಯಾದ್ ದದ್ಯಾದ್ವಾ ಸ್ಥಾವರಾದೃತೇ ॥*

('ನಾರದ ಸ್ಮೃತಿ' – 'ವ್ಯವಹಾರ ಮಯೂಖ', ಪು. ೯೭ರಲ್ಲಿ ಉದ್ಧೃತವಾಗಿರುವಂತೆ) – ಅಂದರೆ, ಗಂಡನಾದವನು ಹೆಂಡತಿಗೆ ಪ್ರೇಮಪೂರ್ವಕವಾಗಿ ಏನೆಲ್ಲವನ್ನು ಕೊಟ್ಟಿರಬಹುದೊ ಅದನ್ನು, ಅವನು ತೀರಿಕೊಂಡ ಬಳಿಕ, ಅವಳು ತನ್ನ ಇಚ್ಛಾನುಸಾರವಾಗಿ ಉಪಯೋಗಿಸಬಹುದು ಅಥವಾ ದಾನ ಮಾಡಿಬಿಡಬಹುದು. ಆದರೆ ಅವನ ಸ್ಥಾವರ ಅಥವಾ ಸ್ಥಿರ ಆಸ್ತಿಯ ವಿಷಯದಲ್ಲಿ ಅವಳಿಗೆ ಈ ಹಕ್ಕು ಇರುವುದಿಲ್ಲ.

ಇನ್ನೊಂದು ಕಡೆಯಲ್ಲಿಯೂ (೨/೧೪೪) ನಾರದನು ಇದೇ ಮಾತನ್ನು ಹೇಳಿದ್ದಾನೆ:

*"ಅಪುತ್ರಾ ಶಯನಂ ಭರ್ತುಃ ಪಾಲಯಂತೀ ಗುಕಾ ಸ್ಥಿತಾ ।*
*ಭುಂಜೀತಾ ಮರಣಾತ್ ಕ್ಷಾಂತಾದಾಯದಾ ಊರ್ಧ್ವಮಾಪ್ನಯುಃ ॥"*

– ಅಂದರೆ, ಮಕ್ಕಳಿಲ್ಲದ, ಶುದ್ಧವಾದ ಚಾರಿತ್ರ್ಯವನ್ನುಳ್ಳ ವಿಧವೆ ಕ್ಷಮಾಶೀಲೆಯಾಗಿದ್ದುಕೊಂಡು, ತಾನು ತೀರಿಕೊಳ್ಳುವವರೆಗೆ ಗಂಡನ ಆಸ್ತಿಯನ್ನು ಉಪಭೋಗಿಸತಕ್ಕದ್ದು. ಆ ಬಳಿಕ ಆ ಆಸ್ತಿ ಅವನ ಉತ್ತರಾಧಿಕಾರಿಗಳಿಗೆ ಸೇರತಕ್ಕದ್ದು.

'ಮಹಾಭಾರತ'ದ ಅನುಶಾಸನಪರ್ವದಲ್ಲಿ (೪೭/೨೩–೨೪) ಹೀಗೆ ಹೇಳಿದೆ :

*"ತ್ರಿಸಹಸ್ರಪರೋದಾಯಃ ಸ್ತ್ರೀಯೈ ದೇಯೋಧನಸ್ಯ ವೈ*
*ಭರ್ತ್ರಾ ತಚ್ಚ ಧನಂ ದತ್ತಂ ಯಥಾರ್ಹ ಭೋಕ್ತುಮರ್ಹತಿ ।*
*ಸ್ತ್ರೀಣಾಂ ಚ ಪತಿದಾಯಾದ್ಯಂ ಉಪಭೋಗಪಲಂ ಸ್ಮೃತಮ್ ॥"*

– ಅಂದರೆ, ಪತಿಯಾದವನು ತನ್ನ ಪತ್ನಿಗೆ ೩,೦೦೦ಕ್ಕಿಂತಲೂ ಹೆಚ್ಚು ಕಾರ್ಷಾಪಣಗಳನ್ನು (ಇದು ಒಂದು ನಾಣ್ಯದ ಹೆಸರು; ಇದರ ಸರಿಯಾದ ಪರಿಮಾಣ ಅಥವಾ ಮೌಲ್ಯ ಎಷ್ಟು ಎಂಬುದು ಇದುವರೆಗೂ ನಮಗೆ ತಿಳಿದುಬಂದಿಲ್ಲ.) ದಾಯರೂಪದಲ್ಲಿ ಕೊಟ್ಟಿರಬೇಕು. ಪತಿ ಕೊಟ್ಟಿರುವ ಆ ಧನವನ್ನು ಆಕೆ ಯಥೋಚಿತವಾಗಿ ಉಪಭೋಗಿಸಬಹುದು. ಪತಿ ಕೊಟ್ಟಿರುವ ಹಣ ಅಥವಾ ಆಸ್ತಿಯ ಉಪಭೋಗಫಲ ಸ್ವರೂಪದ್ದು–ಅಂದರೆ, ಬದುಕಿರುವವರೆಗೆ ಮಾತ್ರವೇ ಅದನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಕೌಟಿಲೀಯ 'ಅರ್ಥಶಾಸ್ತ್ರ'ಕಾರನೂ ಇದೇ ಮಾತನ್ನು ಹೇಳಿದ್ದಾನೆ.

*"ಅಪುತ್ರಾ ಪತಿಶಯನಂ ಪಾಲಯಂತೀ ಗುರುಸಮೀಪೇ ಸ್ತ್ರೀಧನಂ ಆ ಆಯುಃ ಕ್ಷಯಾದ್ ಭುಂಜೀತ । ಅಪದರ್ಥ ಹಿ ಸ್ತ್ರೀಧನಮ್ । ಊರ್ಧ್ವಂ ದಾಯಾದಂ ಗಚ್ಛೇತ್ ॥" (೩.೨)*

ಇದರಲ್ಲಿಯೂ, ಬದುಕಿರುವವರೆಗೆ ಗಂಡನ ಆಸ್ತಿಯನ್ನು ಉಪಭೋಗಿಸುವ ಹಕ್ಕನ್ನು ಹೆಂಡತಿಗೆ ಕೊಡಲಾಗಿದೆ. ಆ ಬಳಿಕ ಅದು ಅವನ ಉತ್ತರಾಧಿಕಾರಿಗಳಿಗೆ ಸೇರತಕ್ಕದ್ದೆಂದು ಹೇಳಲಾಗಿದೆ. 'ಯಾಜ್ಞವಲ್ಕ್ಯ ಸ್ಮೃತಿ'ಯ 'ಮಿತಾಕ್ಷರಾ' ವ್ಯಾಖ್ಯಾನದಲ್ಲಿ ವಿಜ್ಞಾನೇಶ್ವರನು ಮಕ್ಕಳಿಲ್ಲದ ಗಂಡನ ಆಸ್ತಿಯ ಮೇಲೆ ಸಂಪೂರ್ಣ ಹಕ್ಕು ಯಾರದ್ದಾಗಿರಬೇಕೆಂಬುದನ್ನು ಈ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾನೆ.

*"ತಸ್ಮಾದ ಪುತ್ರಸ್ಯೈ ಸ್ವರ್ಯಾತಸ್ಯಾಸಂ ಸೃಷ್ಟೀನೀ ಧನಂ ಪರಣಿತಾ ಸ್ತ್ರೀ*
*ಸಂಯತಾ ಸಕಲಮೇವ ಗೃಹಾತಿ ।"*

– ಅಂದರೆ, ಮಕ್ಕಳಿಲ್ಲದೆ, ಅವಿಭಕ್ತಕುಟುಂಬದಿಂದ ಬೇರೆಯಾಗಿರುವ ಪತಿಯ ಸಂಯಮ ಶೀಲೆಯಾದ ಸಾಧ್ವಿ, ಪತ್ನಿ ಹಣವನ್ನೆಲ್ಲವನ್ನೂ ಸಂಗ್ರಹಿಸುತ್ತಾಳೆ.

ಹೀಗೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಮೃತಿಕಾರರಲ್ಲಿ ಹಾಗೂ ನಿಬಂಧಕಾರರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳಿರುವುದು ಸ್ಪಷ್ಟವಾಗಿದೆ. ವ್ಯಾವಹಾರಿಕ ದೃಷ್ಟಿಯಿಂದಲೂ ಇದರ ಬಗ್ಗೆ ಆಲೋಚಿಸುವುದು ಅಗತ್ಯವಾಗಿದೆ.

'ಹಿಂದೂ ಕೋಡ್ ಬಿಲ್'ನಲ್ಲಿ ವಿವರಿಸಲಾಗಿರುವ ಪ್ರಕರಣಗಳನ್ನು ವಿರೋಧಿಸುವಂಥ ವ್ಯಕ್ತಿಗಳಲ್ಲಿ ಹೆಚ್ಚು ಜನರ ಅಭಿಪ್ರಾಯ ಇದು: ಹೆಂಗಸರು ಆಸ್ತಿಪಾಸ್ತಿಯ ಮೇಲ್ವಿಚಾರಣೆ ಮಾಡಲು ಸಮರ್ಥರಾಗಿರುವುದಿಲ್ಲ; ಆದ್ದರಿಂದ ಅವರಿಗೆ ಆಸ್ತಿಯ ಮೇಲಿನ ಸಂಪೂರ್ಣ ಹಕ್ಕುಗಳನ್ನು ಕೊಡುವುದು ಸರಿಯಲ್ಲ; ಇದರಿಂದ ಅವರಿಗೆ ಮಾತ್ರವಲ್ಲ, ಅವರ ಇಡೀ ಕುಲಕ್ಕೇ ಹಾನಿಯುಂಟಾಗುತ್ತದೆ. ವಾಸ್ತವಿಕವಾಗಿ, ಈ ಮಾತು ಅನುಭವದ ಆಧಾರದ ಮೇಲೆ ಸತ್ಯವೆಂದು ಪ್ರಮಾಣಿತವಾಗುವುದಿಲ್ಲ. ತಂದೆಯ ಆಸ್ತಿಯ ಮೇಲೆ ಸಂಪೂರ್ಣ ಹಕ್ಕುಗಳನ್ನು ಹೆಣ್ಣುಮಕ್ಕಳಿಗೆ ನೀಡಲಾಗಿರುವ ಮುಂಬಯಿಯಲ್ಲಿ ಆಸ್ತಿಪಾಸ್ತಿಗಳ

ನಿರ್ವಹಣೆಯಲ್ಲಿ ಅವರು ಗಂಡಸರಿಗಿಂತಲೂ ಹೆಚ್ಚಿನ ಸಾಮರ್ಥ್ಯವನ್ನು ತೋರಿದ್ದಾರೆಂದು ಹೇಳಲಾಗಿದೆ. ಈ ಪ್ರಸ್ತಾವಕ್ಕೆ ವಿರುದ್ಧವಾಗಿ ಹೇಳುವ ಇನ್ನೊಂದು ಮಾತೆಂದರೆ ಹೆಂಗಸರಲ್ಲಿ ಶೇಕಡಾ ೩ರಷ್ಟು ಮಂದಿ ಮಾತ್ರವೇ ವಿದ್ಯಾವತಿಯರಾಗಿದ್ದಾರೆ; ಉಳಿದ ಶೇಕಡಾ ೯೭ರಷ್ಟು ಮಂದಿ ಅವಿದ್ಯಾವತಿಯರು; ಹೀಗಾಗಿ, ಅವರಿಗೆ ಈ ಬಗೆಯ ಹಕ್ಕುಗಳನ್ನು ನೀಡಿದಲ್ಲಿ, ಅದರಿಂದ ಖಂಡಿತವಾಗಿಯೂ ಹಾನಿಯುಂಟಾಗುತ್ತದೆ. ಈ ತರ್ಕ ಸ್ವಲ್ಪಮಟ್ಟಿಗೆ ಸರಿಯಾಗಿರುವಂತೆ ತೋರುತ್ತದೆ. ಆದರೆ, ಗಂಡಸರಲ್ಲಿಯೂ ಶೇಕಡಾ ೧೦ರಷ್ಟು ಮಂದಿ ಮಾತ್ರವೇ ವಿದ್ಯಾವಂತರಾಗಿದ್ದು, ಉಳಿದವರೆಲ್ಲ ಅವಿದ್ಯಾವಂತರೇ ಆಗಿದ್ದಾರೆ. ಹೀಗಾಗಿ, ಈ ತರ್ಕದ ಮೇರೆಗೆ ಆ ಶೇಕಡಾ ೯೦ರಷ್ಟು ಮಂದಿಗೂ ಈ ಹಕ್ಕನ್ನು ಕೊಡುವಂತಿಲ್ಲ. ಹೆಂಗಸರಿಗೆ ಆಸ್ತಿಯ ಮೇಲಿನ ಸಂಪೂರ್ಣ ಹಕ್ಕುಗಳನ್ನು ನೀಡುವುದಕ್ಕೆ ವಿದ್ಯಾರ್ಜನೆಯ ಅಳತೆಗೋಲನ್ನು ನಿಗದಿಪಡಿಸಬೇಕು; ಹಾಗೆ ಮಾಡಿದ್ದಲ್ಲಿ ಶೈಕ್ಷಣಿಕ ಅರ್ಹತೆಯನ್ನುಳ್ಳ ವಿದ್ಯಾವಂತ ಮಹಿಳೆಯರಿಗೆ ಮಾತ್ರವೇ ಈ ಹಕ್ಕನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ, ಇತರರಿಗಲ್ಲ ಎಂಬ ಸಲಹೆಯನ್ನು ನೀಡಿದ್ದಾರೆ ವಾರಣಾಸಿಯ ಹಿಂದೂ ವಿಶ್ವವಿದ್ಯಾಲಯದ ಶ್ರೇಷ್ಠ ಅಧ್ಯಾಪಕರಾದ ಡಾ. ಅನಂತ ಸದಾಶಿವ ಅಲ್ತೇಕರ್ ಅವರು. The Position of Women in Hindu Civilisation ಎಂಬ ತಮ್ಮ ಪುಸ್ತಕದಲ್ಲಿ ಅವರು ಈ ಸಲಹೆಯನ್ನು ಮುಂದಿರಿಸಿದ್ದಾರೆ. ಈ ಸಲಹೆ ಉಪಾದೇಯವಾಗಿರುವಂತೆ ನನಗೂ ತೋರುತ್ತದೆ. ಅವಿದ್ಯಾವಂತೆ ಎಂಬ ಕಾರಣವನ್ನೇ ಮುಂದಿಟ್ಟುಕೊಂಡು, ಹೆಂಗಸರಿಗೆ ಮೋಸವಾಡಲು ಯಾವ ತರ್ಕವನ್ನು ಆಶ್ರಯಿಸಲಾಗುತ್ತಿದೆಯೊ ಆ ತರ್ಕ ಇದರಿಂದ ಖಂಡಿತವಾಗಿಯೂ ದುರ್ಬಲವಾಗಿಬಿಡುತ್ತದೆ. ಆದರೆ, ಈ ಅಳತೆಗೋಲನ್ನು ಅನ್ವಯಿಸುವ ಸಂದರ್ಭದಲ್ಲಿ, ಗಂಡಸರಿಗೆ ಇರುವ ಹಕ್ಕಿನ ಮೇಲೂ ಇಂಥದೇ ನಿರ್ಬಂಧವನ್ನು ವಿಧಿಸುವುದು ನ್ಯಾಯಸಮ್ಮತವಾಗುವುದಿಲ್ಲವೇನು?

ವಿಧವೆಯರಿಗೆ ಗಂಡನ ಚರ ಮತ್ತು ಸ್ಥಿರ ಆಸ್ತಿಗಳೆರಡರ ಮೇಲೂ ಸಂಪೂರ್ಣ ಹಕ್ಕುಗಳನ್ನು ನೀಡಿದ್ದೇ ಆದರೆ, ಆ ಹಕ್ಕಿನ ದುರುಪಯೋಗ ಆಗುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ ಎಂಬ ಭಯವನ್ನು ವ್ಯಕ್ತಪಡಿಸಲಾಗಿದೆ. ಹೀಗಾಗಿ, ಇನ್ನೊಂದು ಸಲಹೆಯನ್ನು ಮುಂದಿರಿಸಲಾಗಿದೆ. ಇದು ಚಾಂದ್‌ಕಿರಣ್ ಶಾರದಾ ಅವರು 'ಹಿಂದೂ ಕಾನೂನು ಸಮಿತಿ'ಯ ಮುಂದೆ ಸಾಕ್ಷ್ಯ ನೀಡುವ ಸಂದರ್ಭದಲ್ಲಿ ಮುಂದಿರಿಸಿದ ಸಲಹೆ. ಚರ ಆಸ್ತಿಯಲ್ಲಿ ಹೆಂಗಸರಿಗೆ ಸಂಪೂರ್ಣ ಹಕ್ಕುಗಳನ್ನು ಕೊಡಬಹುದು. ಆದರೆ, ಸ್ಥಿರ ಆಸ್ತಿಯ ವಿಷಯದಲ್ಲಿ ಅವರಿಗೆ ಸೀಮಿತ ಹಕ್ಕುಗಳನ್ನು ಮಾತ್ರವೇ ನೀಡಬೇಕು. ಹೀಗೆ ಮಾಡುವುದರಿಂದ ಆ ಆಸ್ತಿ ಆ ಕುಟುಂಬದಲ್ಲಿಯೇ ಉಳಿದುಕೊಳ್ಳುವಂತಾಗುತ್ತದೆ ಎಂಬುದೇ ಆ ಸಲಹೆ. ಮೇಲೆ ಹೇಳಿದ (ಹಕ್ಕಿನ ದುರುಪಯೋಗದ) ಸಾಧ್ಯತೆ ಇದರಿಂದ ಸಂಪೂರ್ಣವಾಗಿ ಇಲ್ಲದಂತಾಗಿಬಿಡುತ್ತದೆ ಎಂದು ಹೇಳಲು ಸಾಧ್ಯವಾಗದೆ ಇದ್ದರೂ ಈ ಸಲಹೆ ಉತ್ತಮವಾಗಿರುವಂತೆ ಹಾಗೂ ಸ್ವೀಕಾರಾರ್ಹವಾಗಿರುವಂತೆ ನನಗೆ ತೋರುತ್ತದೆ. ಮಕ್ಕಳು ಮತ್ತು ಉತ್ತರಾಧಿಕಾರಿಗಳು ಇಲ್ಲದಿರುವಂಥ ಸಂದರ್ಭಗಳಲ್ಲಿ ಮಾತ್ರವೇ ವಿಧವೆಯರಿಗೆ ಗಂಡನ ಆಸ್ತಿಯ ಮೇಲೆ ಸಂಪೂರ್ಣ ಹಕ್ಕುಗಳನ್ನು ನೀಡಬೇಕು, ಉಳಿದಂತೆ ಅಲ್ಲ ಎಂಬ ಇನ್ನೊಂದು ಸಲಹೆಯನ್ನು ಮುಂದಿರಿಸಲಾಗಿದೆ. ನನಗಂತೂ ಇದಕ್ಕಿಂತಲೂ ಈ ಮೊದಲು ಉಲ್ಲೇಖಿಸಿರುವ ಸಲಹೆಯೇ – ಅಂದರೆ, ವಿದ್ಯಾವಂತ ವಿಧವೆಯರಿಗೆ ಮಾತ್ರವೇ ಗಂಡನ ಚರ ಆಸ್ತಿಯ ಮೇಲಿನ ಸಂಪೂರ್ಣ ಹಕ್ಕುಗಳನ್ನು ನೀಡಬೇಕು ಎಂಬ ಸಲಹೆಯೇ – ಇಂದಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೆಚ್ಚು ಉಪಯುಕ್ತವಾಗಿರುವಂತೆ ತೋರುತ್ತದೆ. ನೈತಿಕ ಕಟ್ಟುಪಾಡುಗಳು ಶಿಥಿಲಗೊಳ್ಳುತ್ತಿರುವ ಹಾಗೂ ಧೂರ್ತವಂಚಕರ ಜಾಲಗಳು ಎಲ್ಲ ಕಡೆಯೂ ಹರಡಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಹೆಚ್ಚಿನ

ಎಚ್ಚರಿಕೆಯಿಂದ ಮುನ್ನಡೆಯುವುದು ಒಳ್ಳೆಯದಲ್ಲವೆ? ಕೆಲವು ಹಂತಗಳ ಮಟ್ಟಿಗೆ, ಮೇಲೆ ಹೇಳಿದ ಸಲಹೆಯ ಮೇರೆಗೆ ರೂಪಿಸಿದ ಕಾನೂನಿನ ಪರಿಣಾಮ ಏನಾಗುತ್ತದೆಂಬುದನ್ನು. ಈ ವಿಷಯದಲ್ಲಿ ಅತಿಯಾದ ಅವಸರವನ್ನು ತೋರುವ ಅಗತ್ಯವೇನೂ ಇಲ್ಲ. ವಿಚಾರಶೀಲರಾಗಿರುವ ಸಮಾಜದ ಹಿತೈಷಿಗಳು ಈ ವಿಷಯದ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಾರೆಂದು ನಂಬಿದ್ದೇನೆ.

# ಸ್ತ್ರೀಯರ ದಾಯಭಾಗದ ಹಕ್ಕುಗಳು

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ಸ್ತ್ರೀಯರಿಗೆ ಆಸ್ತಿಯಲ್ಲಿ ದೊರಯಬೇಕಾದ ಹಕ್ಕಿಗೆ ಸಂಬಂಧಿಸಿದ 'ಹಿಂದೂ ಕೋಡ್ ಬಿಲ್ಲಿ'ನ ಪ್ರಕರಣಗಳ ಬಗ್ಗೆ ಶಾಸ್ತ್ರಗಳ ದೃಷ್ಟಿಯಿಂದ ಹಾಗೂ ವ್ಯಾವಹಾರಿಕ ದೃಷ್ಟಿಯಿಂದ ಸ್ವಲ್ಪಮಟ್ಟಿನ ಚಿಂತನೆ ನಡೆಸಿದ ಬಳಿಕ, ನಾನು ಈ ಮಸೂದೆಯ ೧೦೦ನೆಯ ಪ್ರಕರಣದ ಒಂದು ಅಂಶದ ಬಗ್ಗೆ ಒಂದಿಷ್ಟು ಚಿಂತನೆ ಮಾಡಬಯಸುತ್ತೇನೆ. ಅದರಲ್ಲಿ ಉಯಿಲು ಮಾಡದೆ ಸತ್ತ ವ್ಯಕ್ತಿಯ ಆಸ್ತಿಪಾಸ್ತಿಗಳ ಹಂಚಿಕೆಗೆ ಸಂಬಂಧಿಸಿದ ನಿಯಮವನ್ನು ತಿಳಿಸುತ್ತ "ಪ್ರತಿಯೊಬ್ಬ ಮಗಳಿಗೆ ದೊರೆಯುವ ಆಸ್ತಿಯ ಭಾಗ ಪ್ರತಿಯೊಬ್ಬ ಮಗನಿಗೆ ದೊರೆಯುವ ಆಸ್ತಿಯ ಭಾಗಕ್ಕೆ ಸರಿಸಮನಾಗಿರತಕ್ಕದ್ದು" ಎಂದು ಹೇಳಲಾಗಿದೆ.

ಇದು ಅತ್ಯಂತ ವಿವಾದಾಸ್ಪದವಾದ ಪ್ರಕರಣವಾಗಿದೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಇದಕ್ಕೆ ವಿರುದ್ಧವಾಗಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯ ಆಂದೋಳನಗಳು ನಡೆಯುತ್ತ ಇವೆ. ಇದು ಮುಸಲ್ಮಾನರಲ್ಲಿ ಇರುವ ಪದ್ಧತಿ, ಇದನ್ನು ಹಿಂದೂಗಳ ಮೇಲೆ ಹೊರಿಸುವ ಪ್ರಯತ್ನ ಮಾಡಲಾಗುತ್ತಿದೆ ಎನ್ನುವವರೆಗೆ ಆಕ್ಷೇಪಗಳನ್ನು ಹೊರಿಸಲಾಗುತ್ತಿದೆ. ಮೊದಲಿಗೆ ಈ ವಿಷಯದ ಬಗ್ಗೆ ಶಾಸ್ತ್ರದೃಷ್ಟಿಯಿಂದ ಚಿಂತನೆ ಮಾಡಿ, ಕೆಲವೊಂದು ವಿಚಾರಗಳನ್ನು ವಿದ್ವಾಂಸರ ಮುಂದೆ ಇಡಬಯಸುತ್ತೇನೆ. ಆ ಬಳಿಕ ವ್ಯಾವಹಾರಿಕ ದೃಷ್ಟಿಯಿಂದಲೂ ಇದರ ಬಗ್ಗೆ ಚಿಂತನೆ ಮಾಡಲಾಗುತ್ತದೆ. ಈ ಸಂಹಿತೆಗೆ ಸಂಬಂಧಿಸಿದ ಮಸೂದೆಯಲ್ಲಿ ಈ ಪ್ರಕರಣವನ್ನು ಯಾವ ರೂಪದಲ್ಲಿ ಮಂಡಿಸಲಾಗಿದೆಯೊ ಆ ರೂಪದಲ್ಲಿ ಅದನ್ನು ಅಂದರೆ "ಪ್ರತಿಯೊಬ್ಬ ಮಗಳಿಗೆ ದೊರೆಯುವ ಆಸ್ತಿಯ ಭಾಗ ಪ್ರತಿಯೊಬ್ಬ ಮಗನಿಗೆ ದೊರೆಯುವ ಆಸ್ತಿಯ ಭಾಗಕ್ಕೆ ಸರಿಸಮನಾಗಿರತಕ್ಕದ್ದು" ಎಂಬ ನಿಲುವನ್ನು ಒಪ್ಪಿಕೊಳ್ಳುವುದರ ಪರವಾಗಿ ನಾನಿಲ್ಲ. ಇಷ್ಟಾಗಿಯೂ, ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕುನೀಡುವ ಪದ್ಧತಿಯನ್ನು ಮುಸಲ್ಮಾನರಲ್ಲಿರುವ ಪದ್ಧತಿ, ಅದು ಸರ್ವಥಾ ಶಾಸ್ತ್ರಸಮ್ಮತವಾಗಿಲ್ಲ ಹಾಗೂ ಅದು ನಮ್ಮ ಧರ್ಮಕ್ಕೆ ವಿರುದ್ಧವಾಗಿರುವಂಥದು ಎಂದೆಲ್ಲ ಹೀಗೆಳೆಯುವುದಕ್ಕೆ ಮೊದಲು, ನಿಷ್ಪಕ್ಷಪಾತ ದೃಷ್ಟಿಯಿಂದ ಅದರ ಬಗ್ಗೆ ಆಲೋಚನೆ ಮಾಡುವುದು ಹಾಗೂ ಅದನ್ನು ಮಾರ್ಪಡಿಸುವ ಸಲುವಾಗಿ ಸೂಕ್ತವಾದ ತಿದ್ದುಪಡಿಗಳನ್ನು ಸೂಚಿಸುವುದು ಅಗತ್ಯವೆನ್ನಿಸುತ್ತದೆ.

ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಪಡೆಯುವ ಹಕ್ಕು ಇರಬೇಕೆ ಅಥವಾ ಇರಬೇಡವೇ? ಇರಬೇಕು ಎಂದಾದರೆ ಯಾರಿಗೆ ಎಷ್ಟು ಭಾಗ ಸೇರಬೇಕು.

–ಇವುಗಳ ಬಗ್ಗೆ ನಾವು ಶಾಸ್ತ್ರದೃಷ್ಟಿಯಿಂದ ಬೇರೆಬೇರೆಯಾಗಿಯೆ ಆಲೋಚಿಸುವುದು ಸೂಕ್ತವಾಗುತ್ತದೆ. ಎಲ್ಲಕ್ಕಿಂತಲೂ ಮೊದಲು ಮದುವೆಯಾಗದಿರುವ ಹಾಗೂ ಮದುವೆಮಾಡಿಕೊಳ್ಳಲು ಒಪ್ಪದಿರುವ ಹೆಣ್ಣುಮಕ್ಕಳ ಬಗೆಗಿನ ನನ್ನ ಆಲೋಚನೆಗಳನ್ನು ಹಾಗೂ ಕೊನೆಯದಾಗಿ ಮದುವೆಯಾಗಿರುವ ಹೆಣ್ಣುಮಕ್ಕಳ ಬಗೆಗಿನ ನನ್ನ ಆಲೋಚನೆಗಳನ್ನು ಮುಂದಿರಿಸುತ್ತೇನೆ.

'ಋಗ್ವೇದ'ದಲ್ಲಿ (೨/೧೭/೭) ಈ ಕೆಳಗೆ ಕಾಣಿಸಲಾಗಿರುವ ಮಂತ್ರ ಬಂದಿದೆ:

"ಅಮಾಜೂರಿವ ಪಿತ್ರೋಃ ಸಛಾ ಸತೀ ಸಮಾನಾದಾ ಸದಸಸ್ತ್ವಾಮಿಯೇ
*ಭಗಮ್। ಕೃಧಿ ಪ್ರಕೇತ ಮುಪಮಾಸ್ಯಾಭರ ತದ್ ಮೇ ಭಾಗಂ*
*ತನ್ವೋಯೇನ ಮಾಮಹಃ॥"*

ಈ ಮಂತ್ರಕ್ಕೆ ಸಾಯಾಣಾಚಾರ್ಯರೇ ಮೊದಲಾದ ಎಲ್ಲ ಭಾಷ್ಯಕಾರರೂ ಈ ಭಾಷ್ಯವನ್ನು ನೀಡಿದ್ದಾರೆ.

*"ಹೇ ಇಂದ್ರ ಅಮುಜೂಃ ಯಾವಜ್ಜೀವಂಗೃಹ ಏವಜೀರ್ಯಂತೀ*
*ಪಿತ್ರೋಃ ಸಚಾ–ಮಾತಾ–ಪಿತೃಭ್ಯಾಂ ಸಹ ಭವಂತೀ ತಯೋಃ*
*ಶುಶ್ರೂಷಣಾಪರಾ ಪತಿಮಲಭ–ಮಾನಃ ಸತೀ ದುಹಿತಾ (ಸಮಾನಾತ್)*
*ಆತ್ಮನಃ ಪಿತ್ರೋಶ್ಚ ಸಾಧಾರಣಾತ್ (ಸದಸಃ) ಗೃಹಾತ್।*
*"ಗೃಹ ಉಪಸ್ಯಾಮವ ಯಥಾ ಭಾಗಂ ಯಾಜತಿ ತಥಾ ಸ್ತೋತಾಹಂ ಭಗಂ।*
*ಭಜನೀಯಂ ಧನಂ ಸ್ವಾಮಿಯೇ ತ್ವಂಯಾಚೇ॥"*

ಇದರ ತಾತ್ಪರ್ಯ ಇಷ್ಟು: ಜೀವನಪರ್ಯಂತ ತಾಯಿ–ತಂದೆಯರ ಮನೆಯಲ್ಲಿಯೇ ವಾಸಮಾಡುತ್ತಿದ್ದರೂ, ತಂದೆ–ತಾಯಿಯವರಿಂದ ಆಸ್ತಿಯ ತನ್ನ ಪಾಲನ್ನು ಕೇಳುವ ಮಗಳಂತೆಯೇ ಸ್ತೋತನಾದ ನಾನು ಇಂದ್ರನಾದ (ಪರಮೇಶ್ವರನಾದ) ನಿನ್ನಿಂದ, ಸೇವನೀಯವಾಗಿರುವ ಐಶ್ವರ್ಯವನ್ನು ಅನುಗ್ರಹಿಸುವಂತೆ ಕೋರುತ್ತೇನೆ. ಧರ್ಮಕೋಶದ ಸಂಪಾದಕರಾಗಿರುವ ತರ್ಕತೀರ್ಥ ಪಂಡಿತ ಲಕ್ಷ್ಮಣಜೋಷಿಯವರು ಈ ವೇದಮಂತ್ರವನ್ನು ವ್ಯವಹಾರ ಕಾಂಡದ ಉತ್ತರಾರ್ಧದಲ್ಲಿ (ಪು. ೧೪೧೫) ಉದ್ಧರಿಸುತ್ತ, ಅದಕ್ಕೆ ಈ ರೀತಿ ಶೀರ್ಷಿಕೆಯನ್ನು ಕೊಟ್ಟಿದ್ದಾರೆ: *'ಅನೂಢ ದುಹಿತಾ ಪೈತ್ರ ಭಾಗಹಾರಿಣೀ– ಪುತ್ರಿಯಾದವಳು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳುವ ಹಕ್ಕನ್ನು ಹೊಂದಿರುತ್ತಾಳೆ.'*

ಯಾವುದಾದರೂ ವಿಶೇಷ ಉದ್ದೇಶದಿಂದ ಸುಲಭಾ, ಗಾರ್ಗೀ ಮೊದಲಾದವರಂತೆ ನೈತಿಕ ಬ್ರಹ್ಮಚರ್ಯದ ವ್ರತವನ್ನು ಸ್ವೀಕರಿಸಿದ ಅಥವಾ ಬೇರೆ ಯಾವುದೋ ಕಾರಣದಿಂದಾಗಿ ಮದುವೆಯಾಗದೆ ಇರುವ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ದೊರೆಯಬೇಕು ಎಂಬ ವಿಚಾರದಲ್ಲಿ ಬಹುಶಃ ಯಾವನೇ ವಿಚಾರಶೀಲ ವ್ಯಕ್ತಿ ಭಿನ್ನಾಭಿಪ್ರಾಯವನ್ನು ಹೊಂದಿರಲಾರ.

ಪುತ್ರಿಯರಿಗೆ ದಾಯಭಾಗ ದೊರೆಯಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ, 'ನಿರುಕ್ತ'ದ ಕರ್ತೃವಾದ, ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ಯಾಸ್ಕಾಚಾರ್ಯರು ಈ ಕೆಳಗೆ ಕಾಣಿಸಿರುವ ವೇದ–ಮಂತ್ರವನ್ನು ಉದ್ಧರಿಸಿದ್ದಾರೆ:

*"ಶಾಸದ್ವಹ್ನಿರ್ದುಹಿತುರ್ನಪ್ತ್ಯಂಗಾದ್ ವಿದ್ವಾಂ ಋತಸ್ಯ ದೀಧಿತಂ ಸಪರ್ಯಾನ್।*
*ಪಿತಾ ಯಂತ್ರ ದುಹಿತುಃ ಸೇಕಮೃಂಜನ್ ಸಂಶಗ್ಮ್ಯೇನ ಮನಸ್ರದ ಧನ್ವೇ॥'"*

('ಋಗ್ವೇದ', ೩/೩೧/೧)

ಈ ಮಂತ್ರವನ್ನು ಉದ್ಧರಿಸುವುದಕ್ಕೂ ಮೊದಲೇ ಶ್ರೀ ಯಾಸ್ಕಾಚಾರ್ಯರು
"ಅಥೈತಾಂ ದುಹಿತೃ ದಾಯಾದ ಉದಾಹರಂತಿ ಪುತ್ರದಾಯಾದ ಇತ್ಯೇಕೇ।"
ಇದಕ್ಕೆ ಭಾಷ್ಯವನ್ನು ಬರೆಯುತ್ತ, ದುರ್ಗಾಚಾರ್ಯರು ಹೀಗೆ ಬರೆದಿದ್ದಾರೆ:
*"ಏನಾಂ ಋಚಂ ಶಾಸದ್ ವಹ್ನೀಃ ಇತ್ಯಾದೀ ಯಾ ವಕ್ಷ್ಯಮಾಣಾ ತಾ
ದುಹಿತು–ರ್ದಾಯಾದೇ ಅರ್ಥ ಉದಾಹರಂತಿ ಧರ್ಮವಿದಃ। ಅಸ್ಯಾಂ ಋಚಿ
ವಕ್ಷಯ ಮಾಣಾಯಾಂ ದುಹಿತುರುಪಿ ದಾಯಾದ್ಯತ್ವಮಸ್ತೀತಿ ದೃಶ್ಯತೇ॥"*

–ಅಂದರೆ, 'ಶಾಸದ್‌ವಹ್ನೀ:' ಈ ಋಚೆಯನ್ನು ಬಲ್ಲ ಪುತ್ರಿಗೆ ದಾಯಾಭಾಗದ ಹಕ್ಕಿದೆ; ಈ ಅರ್ಥದಲ್ಲಿ ಇದನ್ನು ಉದ್ಧರಿಸುತ್ತಿದ್ದೇವೆ. ಪುತ್ರಿಗೂ ದಾಯಾಭಾಗದ ಹಕ್ಕಿದೆ ಎಂಬುದು ಈ ಋಚೆಯಿಂದ ತಿಳಿದುಬರುತ್ತದೆ.

ಈ ಮಂತ್ರಕ್ಕೆ ಭಾಷ್ಯವನ್ನು ಬರೆಯುತ್ತ, ಶ್ರೀ ಯಾಸ್ಕಾಚಾರ್ಯರು ಹೀಗೆ ಬರೆದಿದ್ದಾರೆ.

*"ವಿದ್ವಾನ್ ಋತಸ್ಯೆ ದಿಮಿತಿಂ ಸಪರ್ಯಾನ್ ವಿಧಾನಂ ಪೂಜಯಾನ್।"*

– ಅಂದರೆ, "ವೇದದ ವಿಧಾನವನ್ನು ಗೌರವದಿಂದ ಕಾಣುತ್ತ" ಎಂದು ಅರ್ಥ.

ಆ ವೇದ – ವಿಧಾನವನ್ನು ಯಾವುದು ಎಂಬುದನ್ನು ಯಾಸ್ಕಾಚಾರ್ಯರು ಮುಂದೆ ಈ ರೀತಿ ಪ್ರತಿಪಾದಿಸಿದ್ದಾರೆ. ಅದು ನಮ್ಮ ವಿಷಯದ ದೃಷ್ಟಿಯಿಂದ ಅತ್ಯಂತ ಮಹತ್ವ ಪೂರ್ಣವಾಗಿದೆ.

*"ಅವಿಶೇಷೇಣ ಮಿಥುನಾಃ ಪುತ್ರಾ ದಾಯಾದಾ ಇತಿ। ತಂದೇತದೃಕ್
ಶ್ಲೋಕಾಭ್ಯಾಮ ಭಿಹಿತಂ ಅಂಗವಂಗಾತ್ ಸಂಭವಿಸಿ ಹೃದಯಾದಧಿ ಜಾಯಸೇ।
ಆತ್ಮಾ ವೈ ಪುತ್ರ–
ನಾಮಾಸಿ ಸ ಜೀವ ಶರದಃ ಶತಮ್॥ ಇತಿ॥ ಅವಿಶೇಷೇಣ ಪುತ್ರಾಣಾಂ
ದಾಯೋ
ಭವತಿ ಧರ್ಮತಃ। ಮಿಥುನಾನಾಂ ವಿಸರ್ಗಾದೌ ಮನುಃ
ಸ್ವಾಯಂಭುವೋಽಬ್ರವೀತ್॥"*

–ಅಂದರೆ, ಈ ಕೆಳಗೆ ಕಾಣಿಸಿರುವ ಋಚೆಯಲ್ಲಿ ಮತ್ತು ಶ್ಲೋಕದಲ್ಲಿ ಹೇಳಿರುವಂತೆ, ಮಗ ಮತ್ತು ಮಗಳು ಇಬ್ಬರಿಗೂ ದಾಯಾಭಾಗದ ಹಕ್ಕು ಇರುತ್ತದೆ. ಇವುಗಳ ಅರ್ಥ ಇಷ್ಟು: ಪುತ್ರನನ್ನು ಸಂಬೋಧಿಸುತ್ತ, "ನೀನು ನನ್ನ ಅಂಗ–ಅಂಗಗಳಿಂದ ಹಾಗೂ ಹೃದಯದಿಂದ ಮೂಡಿಬಂದಿರುವಂಥವನು; ಆದ್ದರಿಂದ ನೀನು ನನ್ನ ಆತ್ಮಕ್ಕೆ ಸಮಾನನಾದವನು; ನೀನು ನೂರು ವರ್ಷಗಳವರೆಗೆ ಬಾಳು" ಎಂಬುದಾಗಿ ಹೇಳುವ ಈ ಮಾತುಗಳೆಲ್ಲವೂ ಪುತ್ರ ಮತ್ತು ಪುತ್ರಿಯರಿಬ್ಬರಿಗೂ ಸಮಾನ ರೂಪದಲ್ಲಿ ಅನ್ವಯವಾಗುತ್ತವೆ. ಈ ಉದ್ಧರಣ 'ಶತಪಥ ಬ್ರಾಹ್ಮಣ' (೧೪/೯/೪/೬), 'ಸಾಮ ಬ್ರಾಹ್ಮಣ' (೧/೧೫/೧೭), 'ಬೃಹದಾರಣ್ಯಕೋಪನಿಷತ್ತು' (೬/೪/೨೬), 'ಕೌಷೀತಕೀ ಬ್ರಾಹ್ಮಣೋಪನಿಷತ್ತು' (೨/೧೧), 'ಪಾರಸ್ಕರ

ಗೃಹ್ಯಸೂತ್ರ' (೧/೧೬/೧೮). ಹಿರಣ್ಯಕೇಶೀ ಗೃಹ್ಯಸೂತ್ರ '(೨/೩/೨) ಮೊದಲಾದುವುಗಳಲ್ಲಿಯೂ ಕಾಣದೊರೆಯುತ್ತದೆ. ಇದನ್ನೇ ಹೋಲುವ 'ಮನುಸ್ಮೃತಿ'ಯ (೯/೧೩೦) ಹೇಳಿಕೆ, ಕೆಳಗೆ ಕಾಣಿಸಿರುವಂತೆ ಇದೆ:

*"ಯಥೈವಾತ್ಮಾ ತಥಾ ಪುತಃ ಪುತ್ರೇಣ ದುಹಿತಾ ಸಮಾ।*
*ತಸ್ಯಾಮಾತ್ಮ ನಿ ತಿಷ್ಠಂತ್ಯಾಂ ಕಥಮನ್ಯೋ ಧನಂ ಹರಿರೇತ್॥*

–ಅಂದರೆ, ಪುತ್ರನು ಆತ್ಮಕ್ಕೆ ಸಮಾನನಾಗಿರುವಂಥವನು, ಪುತ್ರಿಯಾದರೋ ಪುತ್ರನಿಗೆ ಸಮಾನಳಾಗಿರುವಂಥವಳು. ಆತ್ಮಕ್ಕೆ ಸಮಾನಳಾಗಿರುವಂಥ ಪುತ್ರಿ ಇರುವಾಗ, ಬೇರೆಯವರು ಹಣವನ್ನು ತೆಗೆದುಕೊಂಡು ಹೋಗುವುದಾದರೂ ಹೇಗೆ ಸಾಧ್ಯ?

'ಮಹಾಭಾರತ'ದ ಅನುಶಾಸನಪರ್ವದಲ್ಲಿ (೪೫/೧೧), ಮೇಲೆ ಉದ್ಧರಿಸಲಾಗಿರುವ 'ಮನುಸ್ಮೃತಿ'ಯ ಶ್ಲೋಕವನ್ನೇ ಯಥಾವತ್ತಾಗಿ ಉದ್ಧರಿಸಿಕೊಳ್ಳಲಾಗಿದೆ. ಇನ್ನೊಂದು ಶ್ಲೋಕವನ್ನು ನಿರುಕ್ತಕಾರರಾದ ಯಾಸ್ಕಮುನಿಗಳು ಸ್ವಾಯಂಭುವ ಮನುವಿನ ವಿಷಯದಲ್ಲಿ ಉದ್ಧರಿಸಿಕೊಂಡಿದ್ದಾರೆ. ಅದರ ಅರ್ಥ ಇಷ್ಟು: ಅವಿಶೇಷ ಅಥವಾ ಸಾಮಾನ್ಯರೂಪದಲ್ಲಿ ಪುತ್ರ ಮತ್ತು ಪುತ್ರಿಯರಿಬ್ಬರಿಗೂ ಧರ್ಮಾನುಸಾರವಾಗಿ ದಾಯಾಭಾಗದಲ್ಲಿ ಹಕ್ಕಿರುತ್ತದೆ ಎಂಬುದಾಗಿ ಸ್ವಾಯಂಭುವ ಮನುಸ್ಮೃತಿಯ ಪ್ರಾರಂಭದಲ್ಲಿಯೇ ಹೇಳಿದ್ದ. ಸ್ವಾಯಂಭುವ ಮನುವಿನ ಈ ಅಭಿಪ್ರಾಯಕ್ಕೆ ವೇದವೇ ಆಧಾರವಾಗಿದ್ದಿರಬೇಕು. ಆದ್ದರಿಂದಲೇ ನಿರುಕ್ತಕಾರನು "ಶಾಸದ್ ವಹ್ನಿರ್ದುಹಿತುಃ" ಎಂಬ ಮಂತ್ರವನ್ನು ಉದ್ಧರಿಸಿದ್ದಾನೆ.

ಹೆಣ್ಣುಮಕ್ಕಳಿಗೆ ದಾಯಾಭಾಗದ ಹಕ್ಕು ಇರಬೇಕೆಂಬುದೇ ನಿರುಕ್ತಕಾರನ ಸ್ಪಷ್ಟವಾದ ಅಭಿಪ್ರಾಯವಾಗಿರುವಂತೆ ತೋರುತ್ತದೆ. ಇಷ್ಟಾಗಿಯೂ "ನ ದುಹಿತರ ಇತ್ಯೇಕೇ" ಎಂಬ ಮಾತನ್ನು ಸೇರಿಸಿ, ಹೆಣ್ಣುಮಕ್ಕಳಿಗೆ ದಾಯಾಭಾಗದ ಹಕ್ಕು ಇರಬಾರದೆಂದು ಹೇಳುವ ಇನ್ನೊಂದು ಪಕ್ಷದ ಅಭಿಪ್ರಾಯವನ್ನೂ ದಾಖಲಿಸಿದ್ದಾನೆ.

*"ಸ್ತ್ರೀಯಾಃ ದಾನವಿಕ್ರಯಾಸರ್ಗಾ ವಿದ್ಯಂತೇ ನಪುಂಸಃ"* (ಅಂದರೆ, ಸ್ತ್ರೀಯರನ್ನು ದಾನಮಾಡಲಾಗುತ್ತದೆ, ಮಾರಾಟ ಮಾಡಲಾಗುತ್ತದೆ, ಇಚ್ಛಾನುಸಾರವಾಗಿ ಅವರನ್ನು ತ್ಯಜಿಸಲಾಗುತ್ತದೆ) ಅಥವಾ *"ತಸ್ಮಾತ್ ಸ್ತ್ರೀಯಂ ಜಾತಾಂ ಪರಸ್ಯ್ರತಿನ ಪುಮಾಂಸಮ್"* (ಅಂದರೆ, ಹೆಣ್ಣು(ಮಗು) ಹುಟ್ಟಿದಾಗ, ಅದನ್ನು ಬೀದಿಗೆ ಎಸೆಯಲಾಗುತ್ತದೆ. ಆದರೆ ಗಂಡು (ಮಗುವನ್ನು ಅಲ್ಲ) ಎಂಬಂಥ ದುರ್ಬಲ ತರ್ಕವನ್ನು ಮುಂದಿರಿಸಿ, *"ತಸ್ಮಾತ್ ಪುಮಾನ್ ದಾಯಾದಃ ಅದಾಯಾದಾ ಸ್ತ್ರೀತಿ ವಿಜ್ಞಾಯತೇ"* (ಅಂದರೆ, ಗಂಡು (ಮಗುವಿಗೆ) ಮಾತ್ರವೇ ದಾಯಾಭಾಗದ ಹಕ್ಕು ಇರುತ್ತದೆ, ಹೆಣ್ಣುಮಗುವಿಗೆ ಅಲ್ಲ) ಎಂದು ಹೇಳುವವರಿಗಿಂತ, ನಮಗೆ ನಿರುಕ್ತಕಾರರಾದ ಯಾಸ್ಕಾಚಾರ್ಯರ ಸ್ವಂತ ಅಭಿಪ್ರಾಯವೇ ಹೆಚ್ಚು ಉಪಾದೇಯವಾಗಿ ತೋರುತ್ತದೆ ಎಂದು ಹೇಳಬೇಕಾದ ಅಗತ್ಯವೇನೂ ಇಲ್ಲ. "ಶಾಸದ್ ವಹ್ನಿರ್ದುಹಿತುಃ" ಎಂಬ 'ಋಗ್ವೇದ'ದ (೩/೩೧) ಮೊದಲನೆಯ ಮಂತ್ರ ಹೆಣ್ಣುಮಗುವಿನ ದಾಯಾಭಾಗದ ಹಕ್ಕನ್ನು ಸಮರ್ಥಿಸುವಾಗ, ಅದೇ ಸೂಕ್ತದ ಇನ್ನೊಂದು ಮಂತ್ರಕ್ಕೆ – "ನ *ತಾನ್ವೋಚಾಮಯೇ*" ಎಂಬುದಕ್ಕೆ ತದ್ವಿರುದ್ಧವಾದ ಅರ್ಥವನ್ನು ಕಲ್ಪಿಸುವುದು ಎಳೆದೆಳೆದು ತಿರುಚಿ ಹೊರಡಿಸಿದ ಅರ್ಥದಂತೆ ತೋರುವುದರಿಂದ ಅದು ನಮಗೆ ಸಂಗತವಾಗಿ ತೋರುತ್ತದೆ. ದಾಯಾಭಾಗದ ವಿರೋಧಿಗಳು ಬಹಳಷ್ಟು ತಿರುಚುವ

ಪ್ರಯತ್ನಗಳನ್ನು ಮಾಡಬೇಕಾಗಿಬರುತ್ತದೆ. 'ಮಾತರಃ' ಎಂಬ ಮಾತಿಗೆ 'ತಾಯಿ–ತಂದೆ' ಎಂದೂ 'ವಹ್ನಿ' ಎಂಬ ಮಾತಿಗೆ 'ಗಂಡು' ಎಂದೂ ಅರ್ಥೈಸಿ, ಅದರೊಡನೆ 'ಅವಹ್ನಿ' ಎಂಬ ಶಬ್ದವನ್ನು ಬಲವಂತವಾಗಿ ಬೆಸೆದು ಅದಕ್ಕೆ 'ಹೆಣ್ಣು' ಎಂದೂ ಇವುಗಳಲ್ಲಿ ಒಬ್ಬನು ಶುಭಕರ್ಮದ ಕರ್ತೃ ಅಂದರೆ ಪಿಂಡಪ್ರಧಾನ ಮಾಡುವ 'ಪುರುಷ'ನೆಂದೂ, ಇನ್ನೊಬ್ಬಳು ಅಲಂಕೃತಳಾಗಲಿರುವ 'ಹೆಣ್ಣು' ಎಂದೆಲ್ಲ ಅರ್ಥಗಳನ್ನು ಕಲ್ಪಿಸಬೇಕಾಗಿದೆ. ನಿರುಕ್ತಕಾರನು ಮೊದಲು ತನ್ನ ಅಭಿಪ್ರಾಯವನ್ನು ನಿರೂಪಿಸಿ, ಆ ಬಳಿಕ ಇನ್ನೊಂದು ಪಕ್ಷವನ್ನು ಹೆಸರಿಸುವ ಕೆಲಸವನ್ನು ಮಾತ್ರವೇ ಮಾಡಿದ್ದಾನೆ. ಮಹರ್ಷಿ ದಯಾನಂದರು ಇದನ್ನು ವ್ಯಾಖ್ಯಾನಿಸುವಾಗ ಅಗ್ನಿ, ವಿದ್ಯೆ ಮತ್ತು ಸಂತಾನ ರಕ್ಷಣೆಯೊಂದಿಗೆ ಸಂಬಂಧವನ್ನು ಕಲ್ಪಿಸಿದ್ದಾರೆ. ಆದರೆ, ಅದಕ್ಕೂ ಭಗಿನಿಗೆ ಭಾಗದೇಯದ ಹಕ್ಕನ್ನು ಕೊಡುವುದಕ್ಕೂ ಯಾವುದೇ ಸಂಬಂಧವೂ ಇಲ್ಲ. ವೇದದಲ್ಲಿ ಈ ರೀತಿ ಒಂದೇ ಸೂಕ್ತದಲ್ಲಿ ತದ್ವಿರುದ್ಧವಾದ ಕಟ್ಟುಪಾಡುಗಳಿರುವುದನ್ನು ಯಾವ ವೇದಪ್ರೇಮಿ ತಾನೇ ಒಪ್ಪಿಯಾನು? ಸಾಯಾಣಾಚಾರ್ಯರೇ ಮೊದಲಾದ ಭಾಷ್ಯಕಾರರು ಪೌರಾಣಿಕ ಮನೋಧರ್ಮದವರಾಗಿದ್ದುದರಿಂದ, *"ಪಿಂಡದಾನಾದಿ ಕರ್ತೃತ್ವಾತ್ ಪುತ್ರೋ ದಾಯಾರ್ಹಃ ದುಹಿತಾ ತಥಾ ನೇತಿನ ದಾಯಾರ್ಹ"* –(ಅಂದರೆ, ಪುತ್ರನಾದವನು ತೀರಿಕೊಂಡಿರುವ ಪಿತೃಗಳಿಗೆ ಪಿಂದದಾನ ಮಾಡುವುದರಿಂದ ದಾಯಾಭಾಗಕ್ಕೆ ಹಕ್ಕುದಾರನಾಗಿರುತ್ತಾನೆ; ಆದರೆ, ಪುತ್ರಿಯಾದವಳು ಪಿಂಡದಾನ ಮಾಡದಿರುವುದರಿಂದ, ಅವಳಿಗೆ ದಾಯಾಭಾಗದ ಹಕ್ಕು ಇರುವುದಿಲ್ಲ) ಎಂಬುದಾಗಿ ಸ್ಪಷ್ಟವಾಗಿ ಬರೆದುಬಿಟ್ಟಿದ್ದಾರೆ. (ಸಾಯಣಭಾಷ್ಯ ೩/೩೧/೨). ಬಹುಮಟ್ಟಿಗೆ ಪೌರಾಣಿಕ ಭಾಷ್ಯಕಾರರೂ ಇಂಥವೇ ಮಾತುಗಳನ್ನು ಬರೆದಿದ್ದಾರೆ. ಕೆಲವರಂತೂ ಸ್ತ್ರೀಯರ ವಿಷಯದಲ್ಲಿ ತುಚ್ಛಭಾವನೆಯನ್ನು ವ್ಯಕ್ತಪಡಿಸುತ್ತಾ, ಅವರನ್ನು ದಾಯಾಭಾಗಕ್ಕೆ ಅನರ್ಹರೆಂದೂ ಘೋಷಿಸಿಬಿಟ್ಟಿದ್ದಾರೆ. ಉದಾಹರಣೆಗೆ 'ಸರಸ್ವತೀ ನಿರಿಂದ್ರಿಯತ್ವಾತ್।" (ಪು. ೩೬೩) ಅಂದರೆ, ಸ್ತ್ರೀಯರು ಇಂದ್ರಿಯಶೂನ್ಯವಾಗಿರುವುದರಿಂದ, ಅವರಿಗೆ ದಾಯಾಭಾಗದ ಹಕ್ಕು ಇರುವುದಿಲ್ಲ.

ಸಂಯುಕ್ತ ಪ್ರಾಂತ್ಯದ ಧರ್ಮಸಂಘದ ಮುಖ್ಯಸ್ಥರಾಗಿರುವ ಪಂಡಿತ ಸದಾಯತನ ಪಾಂಡೇಯ ಅವರು ರಾವ್ ಸಮಿತಿಯ ಮುಂದೆ ಸಾಕ್ಷ್ಯವನ್ನು ನೀಡುತ್ತ, ಹೆಣ್ಣುಮಕ್ಕಳಿಗೆ ದಾಯಾಭಾಗ ನೀಡುವುದಕ್ಕೆ ವಿರುದ್ಧವಾಗಿ ವಾದಿಸಿದಾಗ, ಇದೇ ತರ್ಕವನ್ನು ಮುಂದಿಟ್ಟರು. ತಂದೆಯ ಶ್ರಾದ್ಧ ಮತ್ತು ಪಿಂಡ–ದಾನ ಇತ್ಯಾದಿ ಕಾರ್ಯಗಳಲ್ಲಿ ಯಾವ ರೀತಿಯಲ್ಲಿಯೂ ಭಾಗವಹಿಸದಿರುವ ಹೆಣ್ಣುಮಕ್ಕಳಿಗೆ, ಈ ಬಗೆಯ ಕರ್ತವ್ಯಗಳನ್ನು ಪಾಲಿಸಬೇಕಾಗಿರುವ ಗಂಡು ಮಗನೊಂದಿಗೆ ದಾಯಾಭಾಗದ ಹಕ್ಕನ್ನು ನೀಡುವುದು ಸರ್ವಥಾ ಅನುಚಿತವಾಗುತ್ತದೆಂದು ಅವರು ವಾದಿಸಿದರು. (ನೋಡಿ: 'ಹಿಂದೂ ಲಾ ಕಮಿಟಿ ರಿಪೋರ್ಟ್' ಪು. ೧೩೦) ತಂದೆಯ ಶ್ರಾದ್ಧವನ್ನು ಮಾಡದಿರುವ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಯಾವುದೇ ಪಾಲು ದೊರೆಯಕೂಡದೆಂದು ಅಖಿಲ ಭಾರತೀಯ ಸನಾತನ ಧರ್ಮ ಮಹಾಸಭೆಯ ಪರವಾಗಿ ಅಲಹಾಬಾದಿನಲ್ಲಿ ಸಾಕ್ಷ್ಯ ನೀಡಿದ ಮಹಾಮಹೋಪಾಧ್ಯಾಯ ಚಿನ್ನಸ್ವಾಮಿ ಶಾಸ್ತ್ರಿಗಳು ಮತ್ತಿತರರು ವಾದಿಸಿದರು. (ನೋಡಿ. 'ರಾವ್ ಕಮಿಟಿ ರಿಪೋರ್ಟ್' ಪು. ೧೨೯) ಪೌರಾಣಿಕ ಆಲೋಚನೆಗಳನ್ನು ಅವಲಂಬಿಸಿರುವ ಈ ಬಗೆಯ ಸತ್ವಹೀನ ತರ್ಕಗಳು ಎಷ್ಟರಮಟ್ಟಿಗೆ ಸೂಕ್ತವಾಗಿವೆ ಎಂಬುದರ ಬಗ್ಗೆ ವಿಚಾರಶೀಲ ಸಜ್ಜನರೇ ಸ್ವತಃ ತೀರ್ಮಾನಿಸಲಿ.

ಸೋದರನೊಂದಿಗೆ ಸೋದರಿಯೂ ದಾಯಾಭಾಗವನ್ನು ಸ್ವೀಕರಿಸುವ ವಿಷಯಕ್ಕೆ ಸಂಬಂಧಿಸಿದ ವೇದಮಂತ್ರವನ್ನು ತರ್ಕತೀರ್ಥ ಪಂಡಿತ ಲಕ್ಷ್ಮಣಶಾಸ್ತ್ರೀ ಜೋಶಿಯವರು ಉದ್ಧರಿಸಿದ್ದು, ಅದು ಈ

ರೀತಿ ಇದೆ:

*"ಏಷ್ಯತೇ ರುದ್ರಭಾಗಃ ಸಹ ಸಸ್ತ್ರಾಂಬಿಕಯಾ ತಂ ಜುಷಸ್ವ।"*

("ಶುಕ್ಲ ಯಜುರ್ವೇದ' ೩/೫೭; 'ಕಣ್ವ ಸಂಹಿತಾ' ೭/೬; 'ಮೈತ್ರಾಯಣೀ ಸಂಹಿತಾ' ೧/೧೦/೪; 'ತೈತೇರೀಯ ಸಂಹಿತಾ '೧೮/೬೧; 'ಶತಪಥ ಬ್ರಾಹ್ಮಣ' ೨/೬/೨/೯)

ಇಲ್ಲಿಯೂ ಸೋದರನೊಡನೆ ಸೋದರಿಯೂ ದಾಯಾದಿ–ಭಾಗವನ್ನು ಪಡೆದಿರುವ ಸ್ಪಷ್ಟ ಸೂಚನೆ ಇದೆ.

*"ಅಭ್ರಾತೇವ ಪುಂಸ ಇತಿ ಪ್ರತೀಚೀ ಗರ್ತಾರುಗಿವ ಸನಯೇ ಧನಾನಾಮ್।"*

'ನಿರುಕ್ತ'ದಲ್ಲಿ (೩/೪) ವ್ಯಾಖ್ಯಾನಿಸಲಾಗಿರುವ ಈ ಮಂತ್ರದಲ್ಲಿ, ಅಭ್ರಾತೃಕಾ ಕನ್ಯೆ ಪಿತ್ರಾರ್ಜಿತ ಆಸ್ತಿಯನ್ನು ಪಡೆದುಕೊಂಡಿರುವ ಸ್ಪಷ್ಟವಾದ ಸೂಚನೆ ಇದೆ. ಇದನ್ನು ಬಹುಮಟ್ಟಿಗೆ ಎಲ್ಲ ಸ್ಮೃತಿಗಳೂ ಸಮರ್ಥಿಸಿವೆ. ಮುಂದಿನ ಲೇಖನದಲ್ಲಿ ಉದ್ಧರಿಸಲಾಗಿರುವ ಸ್ಮೃತ್ಯಾದಿ ವಚನಗಳಿಂದ ಈ ಸಂಗತಿ ಓದುಗರಿಗೆ ಅರಿವಾಗಲಿದೆ.

## ಸ್ತ್ರೀಯರ ದಾಯಾಭಾಗ ಮತ್ತು ಸ್ಮೃತಿಗಳು

### ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ

ಈ ಸಂಬಂಧವಾಗಿ ದೊರೆಯುವ ಸ್ಮೃತ್ಯಾದಿ ಗ್ರಂಥಗಳ ವಚನಗಳನ್ನು ಈಗ ವಿದ್ವಾಂಸರ ಮುಂದಿರಿಸಬಯಸುತ್ತೇನೆ.

'ಮನುಸ್ಮೃತಿ'ಯಲ್ಲಿ (೯/೧೧೮) ಈ ಕೆಳಗಿನ ಶ್ಲೋಕ ಕಾಣ ದೊರೆಯುತ್ತದೆ:

"*ಸ್ವೇಭ್ಯೋಂಶೇಭ್ಯಸ್ತು ಕನ್ಯಾಭ್ಯಃ ಪ್ರದ್ಯುಭ್ರಾತರಃ ಪೃಥಕ್।*
*ಸ್ವಾತ್ಸ್ವಾಂದಂಶಾಚ್ಚತುರ್ಭಾಗಂ ಪತಿತಃ ಸ್ಯುರದಿತ್ಸವಃ॥"*

–ಅಂದರೆ, ಸೋದರರು ತಮ್ಮ ಪಾಲಿನ ನಾಲ್ಕನೆಯ ಒಂದು ಭಾಗವನ್ನು ಬೇರೆ ಬೇರೆಯಾಗಿ ಇಬ್ಬರು ಕನ್ಯೆಯರಿಗೆ – ಅಂದರೆ ತಮ್ಮ ಅವಿವಾಹಿತ ಭಗಿನಿಯರಿಗೆ ಕೊಡತಕ್ಕದ್ದು. ಹೀಗೆ ಕೊಡ ಬಯಸದಂಥವರನ್ನು ಪತಿತರೆಂದು ಭಾವಿಸತಕ್ಕದ್ದು.

"*ಅಸಂಸ್ಕೃತಾಸ್ತು ಸಂಸ್ಕಾರ್ಯ ಭ್ರಾತೃಭಿಃ ಪೂರ್ಣ ಸಂಸ್ಕೃತೈಃ।*
*ಭಗೀನ್ಯಶ್ಚ ನಿಜಾವಂಶಾದದ್ಯತ್ವಾಂಶಂ ತು ತುರೀಯಕಮ್॥"*

_ ಈ ಶ್ಲೋಕದ ಮೂಲಕ, ಯಾಜ್ಞವಲ್ಕ್ಯ ಸ್ಮೃತಿಯಲ್ಲಿಯೂ (೨/೨೧) ಇದೇ ಮಾತನ್ನು ಹೇಳಲಾಗಿದೆ. ಈ ಶ್ಲೋಕದ ಬಗೆಗಿನ 'ಮಿತಾಕ್ಷರಾ' ಟೀಕೆಯಲ್ಲಿ ವಿಜ್ಞಾನೇಶ್ವರನು ಹೀಗೆಂದು ಹೇಳಿದ್ದಾನೆ.

"*ಅನೇನ ದುಹಿನರೂಪಿ ಪಿತುರುರ್ಧ್ವಮಂಶಭಾಗಿನ್ಯೆ ಇತಿ ಗಮ್ಯತೇ।"*

–ಅಂದರೆ, ತಂದೆಯ ಸಾವಿನ ಬಳಿಕ, ಹೆಣ್ಣುಮಕ್ಕಳಿಗೂ ದಾಯಾಭಾಗದ ಹಕ್ಕು ಇರುತ್ತದೆ ಎಂಬುದು ಇದರಿಂದ ತಿಳಿದುಬರುತ್ತದೆ. ಈ ಟೀಕೆಯಲ್ಲಿ ಮುಂದೆ ಹೀಗೆಂದು ಹೇಳಲಾಗಿದೆ:

*"ನ ಚ ನಿಜಾದಂಶಾದ್ ದತ್ವಾಂಶಂ ತುರೀಯಕಂ ಇತಿ ತುರೀಯಾಂಶ–*
*ವಿವಕ್ಷಯಾ ಸಂಸ್ಕಾರ ಮಾತ್ರೋಪಯೋಗಿ ದ್ರವ್ಯಂ ದತ್ವೇತಿ*
*ವ್ಯಾಖ್ಯಾನಯುಕ್ತಮ್। ಮನುವಚನ ವಿರೋಧಾತ್ । ತಸ್ಮಾತ್*

*ಪಿತುರುರ್ಧ್ವಂ ಕನ್ಯಾಪ್ಯೆಂಶಾಭಾಗಿನೀ ಪೂರ್ವ ಚೇದ್ಯತ್ ಕಿಂಚಿಂತ್ ಪಿತೌ*
*ದದಾತಿ ತದೇವ ಲಭತೇ ವಿಶೇಷ ವಚನಾ ಭಾವಾದಿತಿ*
*ಸರ್ವಮನವದ್ಯಮ್।" (ಮಿತಾಕ್ಷರಾ ಟೀಕಾ')*

–ಅಂದರೆ, ಇಲ್ಲಿ ಭಗಿನಿಗೆ ನಾಲ್ಕನೆಯ ಒಂದು ಭಾಗದಷ್ಟು ಪಾಲು ಕೊಡುವ ಪದ್ಧತಿಯನ್ನು ಅರ್ಥೈಸುವಾಗ, ಅದಕ್ಕೆ (ವಿವಾಹ, ಸಂಸ್ಕಾರಕ್ಕೆ) ಉಪಯುಕ್ತವಾಗುವ ದ್ರವ್ಯಗಳನ್ನು ಮಾತ್ರವೇ ಉದ್ದೇಶಿಸಲಾಗಿದೆಯೇ ಹೊರತು, ನಾಲ್ಕನೆಯ ಒಂದು ಭಾಗದಷ್ಟು ಆಸ್ತಿಯನ್ನು ಹಂಚಿಕೊಡುವುದಲ್ಲ ಎಂದು ಭಾವಿಸಿತಕ್ಕದ್ದಲ್ಲ. ಏಕೆಂದರೆ ಹಾಗೆ ಭಾವಿಸಿದಲ್ಲಿ, ಅದು 'ಮನುಸ್ಮೃತಿ'ಯ ಹೇಳಿಕೆಗೆ ವಿರುದ್ಧವಾಗುತ್ತದೆ. ಹೀಗಾಗಿ, ತಂದೆಯ ಸಾವಿನ ಬಳಿಕ, ತಂದೆಯ ಆಸ್ತಿಯಲ್ಲಿ ಪಾಲನ್ನು ಪಡೆದುಕೊಳ್ಳುವ ಹಕ್ಕು ಹೆಣ್ಣು ಮಕ್ಕಳಿಗೂ ಇದೆ ಎಂಬುದು ಸ್ಪಷ್ಟವಾಗುತ್ತದೆ. ವಿಶ್ವೇಶ್ವರಭಟ್ಟ ಪ್ರಣೀತವಾಗಿರುವ 'ಮದನ ಪಾರಿಜಾತ'ವೆಂಬ ಸುಪ್ರಸಿದ್ಧ ನಿಬಂಧ ಗ್ರಂಥದಲ್ಲಿ ಯಾಜ್ಞವಲ್ಕ್ಯ ಸ್ಮೃತಿ'ಯ ಈ ಶ್ಲೋಕದ ಬಗ್ಗೆ ವ್ಯಾಖ್ಯಾನ ಮಾಡುವಾಗ

*"ಭಗಿನ್ಯಶ್ಚ ಇತ್ಯಾದೇಸ್ಯಂ ತಾತ್ಪರ್ಯಾರ್ಥಂ। ಭಗಿನೀ ನಾಮಸಂಸ್ಕೃತಾನಾಂ*
*ವಿವಾಹಂ ಕೃತ್ವಾ ತಾಭ್ಯಶ್ಚ ತುರ್ಥಮಂಶಂ ದದ್ಯಾತ್॥"*

('ಮದನ ಪಾರಿಜಾತ' ೬೪೮)

–ಅಂದರೆ, 'ಭಗಿನ್ಯಶ್ಚ' ಎಂದು ಮೊದಲಾಗುವ ಯಾಜ್ಞವಲ್ಕ್ಯರ ವಚನದ ತಾತ್ಪರ್ಯ ಇದು. ಅವಿವಾಹಿತ ಸೋದರಿಯರ ವಿವಾಹ ಸಂಸ್ಕಾರವೆನ್ನೆಸಗಿ, ಆ ಬಳಿಕ ಅವರಿಗೆ ಅವರ ಭಾಗದ ನಾಲ್ಕನೆಯ ಒಂದು ಪಾಲನ್ನು ಕೊಡತಕ್ಕದ್ದು.

ಭಗಿನಿಗೆ ವಿವಾಹ ಸಂಸ್ಕಾರಕ್ಕಾಗಿ ಮಾತ್ರವೇ ಆಸ್ತಿಯ ನಾಲ್ಕನೆಯ ಒಂದು ಭಾಗವನ್ನು ಕೊಡಲಾಗುತ್ತದೆ ಎಂದು ಕೆಲವರು ಭಾವಿಸಿದ್ದಾರೆ. ಈ ಅಭಿಪ್ರಾಯವನ್ನು ಅಲ್ಲಗಳೆಯುತ್ತ 'ಮದನಪಾರಿಜಾತ'ದಲ್ಲಿ ಮುಂದೆ ಹೀಗೆ ಹೇಳಲಾಗಿದೆ:

*"ಕೇಚ್‌ನ ಏವಂ ಮನ್ಯಂತೇ ಪೂರ್ವೋಕ್ತ ರೀತ್ಯಾ ಚತುರ್ಥಮಂಶಂ*
*ಕನ್ಯಕಾಯೈ ದತ್ವಾ ತೇನೈವ ವಿವಾಹಃ ಕರ್ತವ್ಯೋನತು ಸಮುದಿತ ದ್ರವ್ಯೇಣ*
*ವಿವಾಹಂ ಕೃತ್ವಾ ಪುನರಪಿ ಚತುರ್ಥಾಂಶದಾನಮಿತಿ ತನ್ಮೇಧಾತಿಥಿ*
*ಮಿತಾಕ್ಷರಾಕಾರಾದೀ ನಾಮನಭಿಮತತ್ವಾದು ಪೇಕ್ಷಣೀಯಮ್।"*

('ಮದನಪಾರಿಜಾತ' ೬೫೦).

– ಅಂದರೆ, ಹಿಂದೆ ಹೇಳಿರುವಂತೆ ಕನ್ಯೆಯರಿಗೆ ಅವರ ಪಾಲಿನ ನಾಲ್ಕನೆಯ ಒಂದು ಭಾಗದಷ್ಟು ಆಸ್ತಿಯನ್ನು ಕೊಟ್ಟು, ಅದರಿಂದಲೇ ಅವರ ಮದುವೆಯನ್ನು ನಡೆಸಬೇಕೇ ಹೊರತು, ಒಗ್ಗೂಡಿಸಲಾಗಿರುವ ಹಾಗೂ ಸಂಯುಕ್ತ ರೂಪದಲ್ಲಿರುವ ದ್ರವ್ಯದಿಂದ ಮದುವೆಯನ್ನು ನೆರವೇರಿಸಿ, ಆ ಬಳಿಕ ಆಸ್ತಿಯ ನಾಲ್ಕನೆಯ ಒಂದು ಭಾಗವನ್ನು ಅವರಿಗೆ ಕೊಡಬೇಕು ಎಂದಲ್ಲ ಎಂಬುದಾಗಿ ಹೇಳುವವರ ಅಭಿಪ್ರಾಯವನ್ನು 'ನಚ' ಇತ್ಯಾದಿ ಮಾತುಗಳ ಮೂಲಕ ಮಿತಾಕ್ಷರಾಕಾರನು ಅಲ್ಲಗಳೆದಿದ್ದಾನೆ. *"ಅಥವಾ ದೇಶಾಚಾರತೋ ವ್ಯವಸ್ಥಾ"* ಅಂದರೆ "ಅಥವಾ ದೇಶಾಚಾರಕ್ಕೆ ಅನುಗುಣವಾಗಿ ಇದಕ್ಕೆ ಏರ್ಪಾಟು ಮಾಡಬಹುದಾಗಿರುತ್ತದೆ"

ಎಂಬುದಾಗಿ 'ಮದನ ಪಾರಿಜಾತ'ದ ಕೊನೆಯಲ್ಲಿ ಹೇಳಿರುವ ಮಾತುಗಳನ್ನೂ ಇದರಿಂದ ಅಲ್ಲಗಳೆದಂತಾಗುತ್ತದೆ.

'ಮನುಸ್ಮೃತಿ' ಮತ್ತು 'ಯಾಜ್ಞವಲ್ಕ್ಯ ಸ್ಮೃತಿ'ಗಳಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲಾಗಿರುವ ನಾಲ್ಕನೆಯ ಒಂದು ಭಾಗದಷ್ಟು ಆಸ್ತಿಯನ್ನು ನೀಡುವ ವಿಚಾರದ ಆಶಯ ವಿವಾಹ ಸಂಸ್ಕಾರಕ್ಕಾಗಿ ಮಾಡಲಿರುವ ವೆಚ್ಚಕ್ಕೆ ಸಂಬಂಧಿಸಿರುವಂಥದು ಎಂದು ಹೇಳಿ ಪೌರಾಣಿಕ ದೃಷ್ಟಿಯ ಪಂಡಿತರು ನೆಪವನ್ನು ಸೃಷ್ಟಿಸುವ ಪ್ರಯತ್ನವನ್ನೇನು ಮಾಡಿದ್ದಾರೋ ಅದರ ದೌರ್ಬಲ್ಯ ಮತ್ತು ಯಥಾರ್ಥತೆಗಳು ವಿದ್ವಾಂಸರ ಅರಿವಿಗೆ ಬರಲಿ ಎಂಬ ಉದ್ದೇಶದಿಂದ ಈ ವಿಷಯದ ಬಗ್ಗೆ ಇಷ್ಟು ದೀರ್ಘವಾಗಿ ಬರೆಯಬೇಕಾದ ಅಗತ್ಯ ಉಂಟಾಯಿತು. ಈಗ ಇದಕ್ಕೆ ಸಂಬಂಧಿಸಿದಂತೆ ಇತರ ಸ್ಮೃತ್ಯಾದಿ ಗ್ರಂಥಗಳಲ್ಲಿ ಹೇಳಲಾಗಿರುವ ಮಾತುಗಳನ್ನು ಗಮನಿಸಬಹುದಾಗಿದೆ.

(೭) 'ನಾರದ ಸಂಹಿತೆ'ಯಲ್ಲಿ (೧೪/೧೩) ಹೀಗೆಂದು ಹೇಳಲಾಗಿದೆ.

*"ಜೇಷ್ಠಾಯಾಂಶೋಽಧಿಕೋ ಜ್ಞೇಯಃ ಕನಿಷ್ಠಾಯಾವರಃ ಸ್ಮೃತಃ।*
*ಸಮಾಂಶಭಾಗಃ ಶೇಷಾಃ ಸ್ಮೃತಃ ಅಪ್ರಾತ್ತಾ ಭಗಿನೀತಥಾ॥"*

– ಅಂದರೆ, ಹಿರಿಯ ಸೋದರನಿಗೆ ಒಂದಿಷ್ಟು ಅಂಶ ಹೆಚ್ಚಾಗಿ ಕೊಡಬೇಕು ಹಾಗೂ ಅತ್ಯಂತ ಕಿರಿಯ ಸೋದರನಿಗೆ ಒಂದಿಷ್ಟು ಕಡಿಮೆ ಕೊಡಬೇಕು. ಉಳಿದ ಸೋದರರಿಗೆ ಹಾಗೂ ಅವಿವಾಹಿತ ಸೋದರಿಗೆ ಸರಿಸಮಾನವಾಗಿ ಹಂಚಿಕೊಡಬೇಕು.

ಇಲ್ಲಿ ನಡುವಣ ಸೋದರರಿಗೆ ನೀಡಲಾಗುವ ಭಾಗವನ್ನೇ ಅವಿವಾಹಿತ ಸೋದರಿಗೂ ಸರಿಸಮವಾಗಿ ಹಂಚಿಕೊಡಬೇಕು ಎಂಬ ಕಟ್ಟುಪಾಡನ್ನು ವಿಧಿಸಲಾಗಿದೆ.

(೮) 'ಕಾತ್ಯಾಯನ ಸ್ಮೃತಿ'ಯಲ್ಲಿ ಈ ಕೆಳಗೆ ಕಾಣಿಸಿರುವ ಶ್ಲೋಕ ಇದೆ:

*"ಕನ್ಯಕಾನಾಂ ಸ್ವದತ್ತಾನಾಂ ಚತುರ್ಥೋಽಭಾಗ ಇಷ್ಯತೇ।*
*ಪುತ್ರಾಣಾಂ ಚ ತ್ರಯೋಽಭಾಗಃ ಸಾಮ್ಯಂ ಸ್ವಲ್ಪಧನೇ ಸ್ಮೃತಮ್॥"*

*('ದಾಯಭಾಗ' ೬೯,' ಸ್ಮೃತಿ ಚಂದ್ರಿಕಾ' ೨೬೮)*

– ಅಂದರೆ, ವಿವಾಹಿತ ಕನ್ಯೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಪಡೆಯುವ ಹಕ್ಕು ಇರುತ್ತದೆ; ಉಳಿದ ಪುತ್ರರಿಗೆ ೩/೪ ಭಾಗ. ಇಂಥ ಹಣ ಸ್ವಲ್ಪವಷ್ಟೇ ಇದ್ದಾಗ, ಆ ಹಣದ ಮೇಲೆ ಕನ್ಯೆಯರಿಗೂ ಪುತ್ರರಿಗೆ ಇರುವಷ್ಟೇ ಅಂದರೆ ಸಮಾನ ಸ್ವರೂಪದ ಹಕ್ಕು ಇರುತ್ತದೆ.

(೯) ಈ ವಿಷಯದ ಬಗ್ಗೆ 'ಬೃಹಸ್ಪತಿ ಸ್ಮೃತಿ'ಯಲ್ಲಿ ಹೀಗೆನ್ನಲಾಗಿದೆ:

*"ತದೇಭಾವೇತು ಜನನೀ ತನಯಾಂಶ ಸಮಾಂಶಿನೀ।*
*ಸಮಾಂಶಾ ಮಾತರಸ್ತೇಷಾಂ ತುರಿಯಾಂಶಾ ಚ ಕನ್ಯಕಾ॥"*

(ದಾಯಭಾಗ '೬೯'; ಸ್ಮೃತಿಸಾರ ೫೭; 'ವೀರಮಿತ್ರೋದಯ ೨/೧೧೧೭; ಧರ್ಮಕೋಶ; ಮಿ. ೧೪೪೩)

– ಅಂದರೆ, ತಂದೆ ತೀರಿಕೊಂಡ ತರುವಾಯ ಅವನ ಪತ್ನಿಗೆ ದೊರೆಯುವ ಪಾಲು ತನ್ನ ಮಕ್ಕಳಿಗೆ ದೊರೆಯುವ ಪಾಲಿಗೆ ಸಮನಾಗಿರುತ್ತದೆ ಹಾಗೂ ಹೆಣ್ಣುಮಗಳಿಗೆ ದೊರೆಯುವ ಪಾಲು ನಾಲ್ಕನೆಯ ಒಂದು ಭಾಗವಾಗಿರುತ್ತದೆ.

(೧೦) 'ವಿಷ್ಣುಸ್ಮೃತಿ'ಯಲ್ಲಿ (೧೮/೩೪–೩೫) ಹೀಗೆಂದು ಹೇಳಲಾಗಿದೆ:

*"ಮಾತಃ ಪುತ್ರ ಭಾಗನುಸಾರೇಣ ಭಾಗಹಾರಿಷ್ಯಃ ಅನೂಢಾಸ್ಚ ದುಹಿತರ॥"*

('ದಾಯಭಾಗ' ೬೮ 'ಸರಸ್ವತೀ ವಿಲಾಸ' ೩೫೭)

– ಅಂದರೆ, ತಾಯಿಗೆ ದೊರೆಯುವ ಪಾಲು ಗಂಡುಮಕ್ಕಳಿಗೆ ದೊರೆಯುವಷ್ಟೇ ಆಗಿರುತ್ತದೆ. ಅವಿವಾಹಿತ ಪುತ್ರಿಯರ ಬಗ್ಗೆ ಇನ್ನೊಂದು ಕಡೆ ಹೇಳಲಾಗಿದೆ. ಅದನ್ನು 'ಸರಸ್ವತೀ ವಿಲಾಸ' (ಪು/ ೩೬೧) ಮತ್ತು 'ಧರ್ಮಕೋಶ' (ವ್ಯವಹಾರಕಾಂಡ, ಉತ್ತರಾರ್ಧ, ಪು. ೧೪೧೬)ಗಳಲ್ಲಿ ಉದ್ಧರಿಸಲಾಗಿದೆ. ವಿಷ್ಣು ಹೀಗೆಂದು ಹೇಳಿದ್ದಾನೆ:

*"ಅನೂಢನಾಮ ಪ್ರತಿಷ್ಠಿತಾ ನಾಮೇ ವಾಂಶೋದಾತವ್ಯಃ।"*

– ಅಂದರೆ, ಅವಿವಾಹಿತೆಯಾಗಿರುವ ಅಥವಾ ಬಡವರಾಗಿರುವ ಅಥವಾ ವಿಧವೆಯಾಗಿರುವ (ಪುತ್ರಿಯರಿಗೆ) ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡಬೇಕು.

(೧೧) 'ವೃದ್ಧಹಾರೀತ ಸ್ಮೃತಿ'ಯಲ್ಲಿ (೭/೨೫೬) ಹೀಗೆ ಹೇಳಿದೆ:

*"ಭಗಿನ್ಯಶ್ಚ ತುರೀಯಾಂಶಂ ಪೈತೃಕಾದಾಹರೇದ್ ಧನಮ್।*
*ನ ಸ್ತ್ರೀಧನಂ ತು ದಾಯಾದ್ಧಾವಿಭಜೇರಯುನಾಪದಿ॥"*

– ಅಂದರೆ, ಪಿತ್ರಾರ್ಜಿತ ಆಸ್ತಿಯಲ್ಲಿ ಸೋದರಿಯರಿಗೆ ಅವರ ಪಾಲಿನದಾದ ನಾಲ್ಕನೆಯ ಒಂದು ಭಾಗವನ್ನು ಕೊಡತಕ್ಕದ್ದು. ಸಂಬಂಧಿಗಳು, ವಿಶೇಷ ಆಪತ್ತಿನ ಸಂದರ್ಭವನ್ನು ಹೊರತುಪಡಿಸಿ, ಸ್ತ್ರೀಧನವನ್ನು ಹಂಚಿಕೊಳ್ಳಕೂಡದು.

(೧೨) 'ದೇವಲಸ್ಮೃತಿ'ಯಲ್ಲಿ ಈ ಕೆಳಗೆ ಕಾಣಿಸಲಾಗಿರುವ ವಚನ ಅಥವಾ ಹೇಳಿಕೆ ಇತ್ತು. ಇದನ್ನು 'ದಾಯಭಾಗ'(೧೭೫), 'ಸ್ಮೃತಿ ಚಂದ್ರಿಕಾ' (೨೬೮), 'ಸ್ಮೃತಿಸಾರ'(೫೯) ಇವೇ ಮೊದಲಾದ ಗ್ರಂಥಗಳಲ್ಲಿ ಉದ್ಧರಿಸಲಾಗಿದೆ:

*ಕನ್ಯಾಭ್ಯಶ್ಚ ಪಿತೃದ್ರವ್ಯಶ್ಚ ದೇಯಂ ವೈವಾಹಿಕಂ ವಸ್ತು॥"*

ಇದಕ್ಕೆ ಸ್ಮೃತಿಚಂದ್ರಿಕಾಕಾರನು ಈ ರೀತಿ ಅರ್ಥ ಹೇಳಿದ್ದಾನೆ:

*"ವಿವಾಹ ಪ್ರಯೋಜಕಂ ಧನಂ ಕನ್ಯಾಭ್ಯಃ ಪಿತೃದ್ರವ್ಯಾದ್ ದೇಯಮ್॥"*

– ಅಂದರೆ, "ಕನ್ಯೆಯರಿಗೆ ವಿವಾಹಕ್ಕಾಗಿ ಪಿತ್ರಾರ್ಜಿತ ಆಸ್ತಿಯಿಂದ ಹಣವನ್ನು ಕೊಡತಕ್ಕದ್ದು" ಎಂಬುದಾಗಿ ಸ್ಮೃತಿಚಂದ್ರಿಕಾಕಾರನು ಇದಕ್ಕೆ ಅರ್ಥಹಚ್ಚಿದ್ದಾನೆ.

ಅದರೆ, ಈ ಅರ್ಥವನ್ನು ಅಲ್ಲಗಳೆಯುತ್ತ 'ವ್ಯವಹಾರ ಪ್ರಕಾಶಕಾರನು' ಹೀಗೆಂದು ಹೇಳಿದ್ದಾನೆ:

*"ಸ್ಮೃತಿ ಚಂದ್ರಿಕಾಕಾರಸ್ತು ಕನ್ಯಾಭ್ಯಶ್ಚೇತಿ ದೇವ ವಚನಾನು–ಸಾರೇಣ ಸಂಸ್ಕಾರ*
*ಮಾತ್ರೋಪಯೋಗಿ ದ್ರವ್ಯದಾನಮೇವ ಮನ್ಯತೇ ಅತ್ರವದಾಮಃ ಕನ್ಯಭ್ಯಃ*
*ಪಿತೃ ದ್ರವೇದೇಯಮಿತಿ ಪೃಥಗ್ ವಿಧಿಃ। ತಚ್ಚ ಮನ್ವಾದ್ಯನುರೋಧಾತ್*
*ಚತುರ್ಥಾಂಶರುಪಮೇವ। ವೈವಾಹಿಕನುಃ ಚ ದೇಯಂ ಇತ್ಯಪಿ*
*ಪೃಥಗ್ ವಿಧಿಃ ವಿಭಜ್ಯೈಮಾನ್ ದಾಯಾದ್ವೇ ಕನ್ಯಾಲಂಕಾರಂ ವೈವಾಹಿಕಂ*
*ಚ ಸ್ತ್ರೀಧನಂ ಲಭೇತ್ ಇತಿ ಶಂಖ ವಚನಸಮಾನಾರ್ಥತಯಾ । ವ್ಯಾಖ್ಯಾನಂ*
*ಚೇದಂ ಶಂಖವಚನಂ ವಿದ್ಯಾರಣ್ಯಶ್ರೀ ಚರಣೈಃ ಪರಾಶರಸ್ಮೃತಿ ಟೀಕಾಯಾಮ್*
*ಪೈತೃಕದ್ರವ್ಯವಿಭಾಗ ಕಾಲೇ ಸ್ವಧೃತಿಮಲಂಕಾರಾದಿಕಮಪಿ*
*ಕನ್ಯಾಪ್ರಾಪ್ನೋತಿತ್ಯಾಹ ಶಂಖ ಇತಿ– ಯದಿ ತು ವೈವಾಹಿಕಂ*
*ವಿವಾಹೋಪಯೋಗಿ ಪಿತೃದ್ರವ್ಯಂ ಕನ್ಯಾಭ್ಯೋ*
*ದೇಯಮಿತ್ಯರ್ಥಃ ಸ್ವಾದ್ ವಸುಪದಂ ಪುನರುಕ್ತಂ ಸ್ವಾದಿತಿ ಪೃಥಗ್ ವಿಧಿ*
*ದ್ವಯಮೇವಾತ್ರ ಯುಕ್ತಮ್। ತಸ್ಮಾದಸ್ಮದುಕ್ತಮೇವ*
*ವ್ಯಾಖ್ಯಾನಮಾದುರ್ತುಮಹಂ*
*ನ ತು ವಿವಾಹೋಪಯುಕ್ತ ದ್ರವ್ಯಂ ಪರತೇತ್ಯವಸೇಯಮ್॥"*
*('ವ್ಯವಹಾರ ಪ್ರಕಾಶ' ೪೫೬/೪೫೭; 'ಧರ್ಮಕೋಶ; ಪು. ೧೪೨೨)*

– ಅಂದರೆ, ಕನ್ಯೆಯರಿಗೆ ವಿವಾಹೋಪಯೋಗಿ ದ್ರವ್ಯವನ್ನಷ್ಟೇ ಪಿತ್ರಾರ್ಜಿತ ಆಸ್ತಿಯಿಂದ ನೀಡತಕ್ಕದ್ದು ಎಂಬುದಾಗಿ ಸ್ಮೃತಿ ಚಂದ್ರಿಕಾಕಾರನು ಈ ವಚನಕ್ಕೆ ಅರ್ಥ ಮಾಡಿರುವುದು ಸರಿಯಲ್ಲ. ಇಲ್ಲಿ ಎರಡು ಮಾರ್ಗಗಳಿವೆ. ಒಂದು, ಕನ್ಯೆಯರಿಗೆ ಪಿತ್ರಾರ್ಜಿತ ಆಸ್ತಿಯನ್ನು ನೀಡಬೇಕು ಎಂಬುದು. 'ಮನಸ್ಮೃತಿ'ಯೇ ಮೊದಲಾದ ಗ್ರಂಥಗಳ ಪ್ರಕಾರ ಇದು ನಾಲ್ಕನೆಯ ಒಂದು ಭಾಗವಾಗಿರುತ್ತದೆ. ಎರಡನೆಯ ಮಾರ್ಗ ಎಂದರೆ ಶಂಖ ಸ್ಮೃತಿಯಲ್ಲಿಯೂ ಹೇಳಿರುವಂತೆ ಕನ್ಯೆಯರಿಗೆ ವಿವಾಹೋಪಯೋಗಿ ದ್ರವ್ಯವನ್ನು ಕೊಡುವುದು. ಇಲ್ಲವಾದಲ್ಲಿ, 'ವಸು' ಎಂಬ ಶಬ್ದ ವ್ಯರ್ಥವೂ, ಪುನರುಕ್ತಿಯೂ ಆಗುತ್ತಿತ್ತು. ಆದ್ದರಿಂದ, ಕನ್ಯೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ (ನಾಲ್ಕನೆಯ ಒಂದು ಭಾಗ) ನೀಡಬೇಕು ಹಾಗೂ ವಿವಾಹೋಪಯೋಗಿ ದ್ರವ್ಯವನ್ನು ಕೊಡಬೇಕು ಎಂಬ ನಮ್ಮ ಅರ್ಥವೇ ಮಾನ್ಯ ಮಾಡಲು ಅರ್ಹವಾಗುತ್ತದೆ.

(೧೩) 'ಪೈಠಾನಸಿ ಸ್ಮೃತಿ'ಯಲ್ಲಿ *"ಕನ್ಯಾ ವೈವಾಹಿಕಂ ಸ್ತ್ರೀಧನಂ ಚ ಲಭತೇ।"*

– ಅಂದರೆ, "ಕನ್ಯೆ ವಿವಾಹೋಪಯೋಗಿ ದ್ರವ್ಯ ಮತ್ತು ಧನಗಳನ್ನು ಮಾತ್ರವಲ್ಲದೆ, ತಾಯಿಯ ಸ್ತ್ರೀಧನವನ್ನೂ ಪಡೆದುಕೊಳ್ಳತಕ್ಕದ್ದು" ಎಂದು ಹೇಳಲಾಗಿದೆ. ('ವ್ಯವಹಾರ ನಿರ್ಣಯ' ಹಾಗೂ ವ್ಯವಹಾರಾರ್ಥ ಸಮುಚ್ಚಯ'ಗಳಿಂದ 'ಧರ್ಮಕೋಶ'ದ ಪು. ೧೪೪೨ರಲ್ಲಿ ಉದ್ಧೃತ)

(೧೪) ಇತರ ಸ್ಮೃತಿಗಳ ಆಧಾರದ ಮೇಲೆ, ಸ್ಮೃತಿ ಚಂದ್ರಿಕಾ '(೨೬೮) ಮತ್ತು ವ್ಯವಹಾರ ಸಮುಚ್ಚಯ' (೧೨೯)ಗಳಲ್ಲಿ ಈ ಹೇಳಿಕೆಯನ್ನು ಉದ್ಧರಿಸಲಾಗಿದೆ.

*"ಭ್ರಾತೃಭ್ಯೋಽಶಂಚತುರ್ಥಾಂಶಂ ತತ್ರಾಕನ್ಯಾ ಹರೇದ್ಧನಮ್।"*

–ಅಂದರೆ, ಕನ್ಯೆಯಾದವಳು ಪಿತ್ರಾರ್ಜಿತ ಆಸ್ತಿಯಲ್ಲಿ ಪ್ರತಿಯೊಬ್ಬ ಸೋದರನ ಪಾಲಿನ ನಾಲ್ಕನೆಯ ಒಂದು ಭಾಗವನ್ನು ಪಡೆದುಕೊಳ್ಳತಕ್ಕದ್ದು.

(೧೫) ಕೌಟಲೀಯ 'ಅರ್ಥಶಾಸ್ತ್ರ'ದಲ್ಲಿ (೩/೫) ಹೀಗೆ ಹೇಳಿದೆ:

*"ರಿಕ್ತಂ ಪುತ್ರವತಃ ಪುತ್ರಾ ದುಹಿತರೋ ವಾಧರ್ಮಿಷ್ಟೇಷು ವಿವಾಹೇತು ಜಾತಿ॥"*

–ಅಂದರೆ, ಮಕ್ಕಳನ್ನು ಪಡೆದಿರುವ ತಂದೆಯ ಸಂಪತ್ತನ್ನು ಉತ್ತಮ ವಿವಾಹ ವಿಧಿಯಿಂದ ಜನಿಸಿರುವ ಗಂಡು ಮತ್ತು ಹೆಣ್ಣುಮಕ್ಕಳು ಪಡೆದುಕೊಳ್ಳತಕ್ಕದ್ದು.

(೧೬) 'ಶುಕ್ರನೀತಿ' ಎಂದು ಕರೆಯಲಾಗಿರುವ ತಮ್ಮ ಸ್ಮೃತಿಯಲ್ಲಿ ಶುಕ್ರಾಚಾರ್ಯರು ಹೀಗೆಂದು ಹೇಳಿದ್ದಾರೆ:

*"ಸಮಾನಭಾಗಾ ವೈ ಕಾರ್ಯಃ ಪುತ್ರಾಃ ಸ್ವಸ್ಯಂಚ ಸ್ತ್ರೀಯಃ।*
*ಸ್ವಭಾಗಾರ್ಧಹರಾ ಕನ್ಯಾ ದೌಹಿತ್ರಸ್ತು ತದರ್ಧ ಭಾಕ್"*

–ಅಂದರೆ, ತಂದೆಯ ಆಸ್ತಿಯನ್ನು/ಪುತ್ರರು ಮತ್ತು ಸ್ತ್ರೀಯರು ಸರಿಸಮಾನವಾಗಿ ಹಂಚಿಕೊಳ್ಳತಕ್ಕದ್ದು. ಕನ್ಯೆಯರಿಗೆ ಪುತ್ರರ ಪಾಲಿನ ಅರ್ಧಭಾಗವೂ ದೌಹಿತ್ರರಿಗೆ (ಮಗಳ ಮಗ) ಅದರ ಅರ್ಧಭಾಗವೂ ದೊರೆಯಬೇಕು. ದಾಯಾಭಾಗದಲ್ಲಿ ಕನ್ಯೆಯರ ಹಕ್ಕಿಗೆ ಸಂಬಂಧಿಸಿದಂತೆ ಈ ಬಗೆಯ ಇನ್ನೂ ಅನೇಕ ಹೇಳಿಕೆಗಳು ಸ್ಮೃತಿಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಕಾಣದೊರೆಯುತ್ತವೆ. ಆದರೆ, ಅವುಗಳಲ್ಲೆಲ್ಲ ಕನ್ಯೆಯ ಭಾಗ ಬಹುಮಟ್ಟಿಗೆ, ಪುತ್ರನ ಭಾಗ ನಾಲ್ಕನೆಯ ಒಂದರಷ್ಟಾಗಿರಬೇಕೆಂದು ಒಪ್ಪಲಾಗಿದೆ. ಕನ್ಯೆಯರಿಗೆ, ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡುವ ಪದ್ಧತಿ ಧರ್ಮವಿರುದ್ಧವಾದುದಾಗಲಿ, ಮುಸಲ್ಮಾನ ಸಂಪ್ರದಾಯದ್ದಾಗಲಿ ಅಲ್ಲವೆಂಬುದು ಈ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಮುಂದಿನ ಲೇಖನದಲ್ಲಿ ಈ ವಿಷಯದ ಬಗ್ಗೆ ಇತರ ದೃಷ್ಟಿಕೋನಗಳಿಂದ ಚರ್ಚಿಸಲಿದ್ದೇನೆ.

# ಪುತ್ರಿಯರ ದಾಯಾಭಾಗದ ಹಕ್ಕನ್ನು ಕುರಿತ ವಿವೇಚನೆ

(ಪೂರ್ವಾರ್ಧ)

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ಈ ಹಿಂದಿನ ಲೇಖನಗಳಲ್ಲಿ, ೧೬ ಆಧಾರಗಳನ್ನಿರಿಸಿಕೊಂಡು, ಪುತ್ರಿಯರಿಗೆ ಪಿತ್ರಾರ್ಜಿತ ಸಂಪತ್ತಿನಲ್ಲಿರುವ ದಾಯಾಭಾಗದ ಹಕ್ಕಿನ ಬಗ್ಗೆ ಚರ್ಚಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇತರ ಅನೇಕ ಆಧಾರಗಳೂ ದೊರೆಯುತ್ತವೆ. ಆದರೆ, ವಿಸ್ತಾರ ಭಯದಿಂದಾಗಿ ಅವುಗಳೆಲ್ಲವನ್ನೂ ಉಲ್ಲೇಖಿಸಲು ಸಾಧ್ಯವಿಲ್ಲವಾಗಿದೆ. ಈ ಕೆಳಗೆ ಕಾಣಿಸಿರುವ ಶಂಖಲಿಖಿತ ಸ್ಮೃತಿಯ ಹೇಳಿಕೆ ಖಂಡಿತ ವಾಗಿಯೂ ಉಲ್ಲೇಖನೀಯವಾಗಿದೆ. ಇದರ ಬಗ್ಗೆ ಒಂದು ಉಲ್ಲೇಖನದ ಮೂಲಕ ಕೆಲವು ಸೂಚನೆಗಳನ್ನು ಕೊಡಲಾಗಿದೆ.

(೧೭) "*ವಿಭಜ್ಯಮಾನ್ ದಾಯದ್ಯೇ ಕನ್ಯಾಲಂಕಾರ ವೈವಾಹಿತಂ ಸ್ತ್ರೀಧನಂ ಚ ಕನ್ಯಾ ಲಭೇತ್।*"

– ಅಂದರೆ, ದಾಯಾಭಾಗಾದಿಗಳ ಹಂಚಿಕೆಯನ್ನು ಮಾಡುವ ಸಂದರ್ಭದಲ್ಲಿ ಒಡವೆಗಳು, ವಿವಾಹೋಪಯೋಗಿ ದ್ರವ್ಯಗಳು ಮತ್ತು ಸ್ತ್ರೀಧನವನ್ನು ಹೆಣ್ಣುಮಗಳು ಪಡೆದುಕೊಳ್ಳತಕ್ಕದ್ದು. ಈ ವಾಕ್ಯದ ಬಗೆಗಿನ ವ್ಯಾಖ್ಯಾನದಲ್ಲಿ 'ಸ್ಮೃತಿ ಚಂದ್ರಿಕಾ'ದಲ್ಲಿ ಹೀಗೆಂದು ಹೇಳಲಾಗಿದೆ:

*"ಮಾತೃ ನಿರ್ವಿಭಜ್ಯಮಾನೇ ಕನ್ಯಾ ಸ್ವಧೃತಮಲಂಕಾರಂ ವೈವಾಹಿಕಂ*
*ತುರೀಯಾಂಶಾದಿಧನಂ ಸ್ತ್ರೀಧನಂ ಚ ಪಿತ್ರಾದಿರ್ದತ್ತಂ ಲಭತೇತಿ।"*

ಪುತ್ರನು ನಾಲ್ಕನೆಯ ಒಂದು ಭಾಗದಷ್ಟು ಆಸ್ತಿಯನ್ನು ಪಡೆದುಕೊಳ್ಳುವ ವಿಚಾರವನ್ನು ಸ್ಮೃತಿ ಚಂದ್ರಿಕಾಕಾರನು ಉಲ್ಲೇಖಿಸಿದ್ದಾನೆ.

ತಂದೆಯ ಆಸ್ತಿಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಪಡೆದುಕೊಳ್ಳುವುದೇ ಅಲ್ಲದೆ, ಮಾತೃಧನದ ಮೇಲೂ ಹೆಣ್ಣುಮಕ್ಕಳಿಗೆ ಹಕ್ಕು ಇರುತ್ತದೆಂಬ ವಿಚಾರವನ್ನೂ ಅನೇಕ 'ಸ್ಮೃತಿ'ಗಳಲ್ಲಿ ಹಾಗೂ 'ಮಹಾಭಾರತ'ವೇ ಮೊದಲಾದ ಗ್ರಂಥಗಳಲ್ಲಿ ಪ್ರತಿಪಾದಿಸಲಾಗಿದೆ. ಉದಾಹರಣೆಗೆ, ಶ್ರೀ ಪ್ರತಾಪರುದ್ರದೇವ ರಚಿತ 'ಸರಸ್ವತೀ ವಿಲಾಸ'ದಲ್ಲಿ 'ವಿಷ್ಣು ಸ್ಮೃತಿ'ಯ ಈ ಹೇಳಿಕೆಯನ್ನು ಉದ್ಧರಿಸಲಾಗಿದೆ.

*"ಯೌತುಕಂ ಮಾತುಃ ಕುಮಾರೀ ದಾರ್ಯ ಏವ।"* ("ಸರಸ್ವತೀ ವಿಲಾಸ, ಪು. ೩೮೨). ಅಂದರೆ, ಮಾತೃಧನದ ಮೇಲೆ (*ಯೌತುಕಂ ಅನ್ಯೋನಾನ್ವಿತ ವೋವಧೂರ್ವರಂಯೋರ್ದೇಯಂ ಯತ್ ತದ್ಧನಮ್"*) ಹೆಣ್ಣುಮಕ್ಕಳಿಗೆ ಹಕ್ಕು ಇರುತ್ತದೆ.

(೧೮) ಮಾತೃಧನದ ಹಂಚಿಕೆಯ ವಿಷಯದಲ್ಲಿ 'ಮನುಸ್ಮೃತಿ'ಯಲ್ಲಿ (೯.೧೯೨) ಹೀಗೆಂದು ಹೇಳಲಾಗಿದೆ:

*"ಜನನ್ಯಾಂ ಸಂಸ್ಥಿತಾಯಂ ತು ಸಮಂ ಸರ್ವೇ ಸಹೋದರಾಃ।*
*ಭಜೇರನ್ ಮಾತೃಕಂ ರಿಕ್ಥಂ ಭಗಿನ್ಯಶ್ಚ ಸನಾಮಯಃ ॥"*

– ಅಂದರೆ, ತಾಯಿ ತೀರಿಕೊಂಡ ಬಳಿಕ, ಸೋದರ–ಸೋದರಿಯರೆಲ್ಲರೂ ಮಾತೃಧನವನ್ನು ಹಂಚಿಕೊಳ್ಳತಕ್ಕದ್ದು.

(೧೯) ಈ ವಿಷಯದ ಬಗ್ಗೆ 'ಬೃಹಸ್ಪತಿ ಸ್ಮೃತಿ'ಯಲ್ಲಿ ಹೀಗೆಂದು ಹೇಳಲಾಗಿದೆ,

*"ಸ್ತ್ರೀಧನಂ ತದಪತ್ಯಾನಾಂ ದುಹಿತಾ ಚ ತದಂಶಿನೀ।*
*ಅಪ್ರತ್ತಾ ಚೇತ್ಸಮೂಢಾ ತು ಲಭತೇ ಮಾನಮಾತ್ರಕಮ್ ॥" ೨೬/೧೦೭*

*"ಯಾ ತಸ್ಯ ಭಗಿನೀ ಸಾತು ತತೋಽಶ ಲಬ್ಧುಮರ್ಹತಿ।*
*ಅನಪತ್ಯಸ್ಯ ಧರ್ಮೋಽಯಮ್ ಅಭಾರ್ಯಪಿತೃಕಸ್ಯ ಚ ॥ ೨೬/೧೦೮*

*"ಯಾ ತಸ್ಯ ಭಗಿನೀ ಸಾತು ತತೋಽಶಂ ಲಬ್ಧುಮರ್ಹತಿ।*
*ಅನಪತ್ಯಸ್ಯ ಧರ್ಮೋಽಯಮ್ ಅಭಾರ್ಯಪಿತೃಕಸ್ಯ ಚ॥ ೨೬/೧೦೮*

*" ಸಾ ಚ ದತ್ತ ಸ್ವದತ್ತಾ ವಾ ಸೋದರೇ ತು ಮೃತೇ ಸತಿ।*
*ತಸ್ಯಾಂಶಂ ತು ಹರೇತ್ಸೈವ ದ್ವಯೋರ್ವಕ್ತಂ ಹಿ ಕಾರಣಮ್॥"೨೬/೧೧೯*

*" ಸೋದರ್ಯಾ ವಿಭಜೇರಸ್ತೇ ಸಮೇತ್ಯೆ ಸಹಿತಾಃ ಸಮಮ್।*
*ಭ್ರಾತಿರೋ ಯೇ ಚ ಸಂಸೃಷ್ಟಾಃ ಭಗಿನ್ಯೆಶ್ಚ ಸನಾಮಯಃ॥" ೨೬/೧೧೪*

_ ಈ ಶ್ಲೋಕಗಳಲ್ಲಿ ಹೀಗೆಂದು ಹೇಳಲಾಗಿದೆ: ಸ್ತ್ರೀಧನ, ತೀರಿಕೊಂಡ ಆ ಸ್ತ್ರೀಯ ಗಂಡು ಮಕ್ಕಳದ್ದಾಗಿರುತ್ತದೆ; ಪುತ್ರಿ ಅವಿವಾಹಿತೆಯಾಗಿದ್ದರೆ, ಆಕೆಗೂ ಅದರಲ್ಲಿ ಪಾಲು ದೊರೆಯುತ್ತದೆ; ವಿವಾಹಿತೆಯಾಗಿದ್ದರೆ, ಆಕೆ ಅದರಿಂದ ಗೌರವ ದ್ರವ್ಯ ಅಥವಾ ಪ್ರತಿಷ್ಠಾರ್ಥ ದ್ರವ್ಯವನ್ನು ಪಡೆದುಕೊಳ್ಳಬಹುದಾಗಿದೆ. ಒಂದು ವೇಳೆ ಸೋದರನೇನಾದರೂ ತೀರಿಕೊಂಡರೆ, ಅವನ ಸೋದರಿಗೂ ಅವನ ಭಾಗದ ಹಣದಲ್ಲಿ ಪಾಲು ದೊರೆಯಬೇಕಾಗುತ್ತದೆ. ಪುತ್ರಿಕೆಯ ರೂಪದಲ್ಲಿ ಅದು ಕೊಡಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಸೋದರನು ತೀರಿಕೊಂಡಾಗ, ಅವನ ಭಾಗದ ಹಣ ಆ ಸೋದರಿಗೇ ದೊರೆಯಬೇಕು; ಏಕೆಂದರೆ, ಇಬ್ಬರ ಹುಟ್ಟಿನ ಮೂಲವೂ ಒಂದೇ ಆಗಿರುತ್ತದೆ. ಸಂಸೃಷ್ಟವಾಗಿರುವ ಅಥವಾ ಸಂಯುಕ್ತವಾಗಿರುವ ಪಿತ್ರಾರ್ಜಿತ ಸಂಪತ್ತನ್ನು ಸೋದರ ಸೋದರಿಯರು ಒಟ್ಟುಗೂಡಿ ಹಂಚಿಕೊಳ್ಳಬೇಕು.

'ಯಾಜ್ಞವಲ್ಕ್ಯ ಸ್ಮೃತಿಯ ವ್ಯವಹಾರಾಧ್ಯಾಯದಲ್ಲಿ (೨/೧೧೭) ಹೀಗೆಂದು ಹೇಳಲಾಗಿದೆ:

*"ಮಾತೃರ್ದುಹಿತರಃ ಶೇಷಮ್ ಋಣ ತಾಭ್ಯ ಋತೇಽನ್ವಯಃ।"*

ಇದನ್ನು ಕುರಿತ ಮಿತಾಕ್ಷರ–ವ್ಯಾಖ್ಯಾನದಲ್ಲಿ ವಿಜ್ಞಾನೇಶ್ವರನು ಹೀಗೆಂದು ಹೇಳಿದ್ದಾನೆ:

*"ಮಾತೃ ಕೃತಿಮ್ ಋಣಂ ಪುತ್ರೈರೇವ ಪಾಕರರಣೀಯಂ ಬ ದುಹಿತೃಭಿಃ*
*ಋಣಾವರಿಷ್ಟಂ ತು ದುಹಿತರೋ ಗೃಹಣೀಯುರಿತಿ। ಯುಕ್ತಂ*
*ಚೈತತ್‌ಪುಮಾನ್*

*ಪುಸೋಧಿಕೇ ವೀರ್ಯೇ ಸ್ತ್ರೀಭವತ್ಯಧಿಕೇ ಸ್ತ್ರೀಯಾಃ ಇತಿ ಸ್ತ್ರಯ ವಯವಾನಾಂ ದುಹಿತೃಷುಬಾಹುಲ್ಯಾತ್ ಸ್ತ್ರೀಧನಂ ದುಹಿತೃಗಾಮಿ ಪಿತೃಧನಂ ಪುತ್ರಗಾಮಿ ಪಿತ್ರವಯವಾನಾಂ ಪುತ್ರೇಷು ಬಾಹುಲ್ಯಾದಿತಿ । ತತ್ರ ಚ ಗೌತಮೇನ ವಿಶೇಷೋ ದರ್ಶಿತಃ।*

*ಸ್ತ್ರೀಧನ ದುಹಿತೃರ್ಣಾಮ್ ಅಪ್ರತಿಷ್ಠಾತಾನಾಂ ಅಪ್ರಿತಷ್ಠಿತಾನಾಂ ಚ।"*

('ಗೌತಮ ಧರ್ಮಸೂತ್ರ', ೨೮/೨೫)

– ಅಂದರೆ, ತಾಯಿ ಏನಾದರೂ ಸಾಲವನ್ನು ಉಳಿಸಿಕೊಂಡಿದ್ದರೆ, ಅದನ್ನು ತೀರಿಸುವುದು ಗಂಡು ಮಕ್ಕಳ ಕರ್ತವ್ಯವೇ ಹೊರತು ಹೆಣ್ಣುಮಕ್ಕಳದ್ದಲ್ಲ. ಸಾಲವನ್ನು ತೀರಿಸಿದ ಬಳಿಕ ಉಳಿಯುವ ಹಣವನ್ನು ಹೆಣ್ಣುಮಕ್ಕಳು ತೆಗೆದುಕೊಳ್ಳತಕ್ಕದ್ದು. ಮನುವಿನ ಹೇಳಿಕೆಯ ಮೇರೆಗೆ ಹೆಣ್ಣುಮಕ್ಕಳಲ್ಲಿ ತಾಯಿಯ ಅವಯವ ಹೆಚ್ಚಿನ ಭಾಗ ಇರುವುದರಿಂದ ಸ್ತ್ರೀಧನದ ಮೇಲೆ ಹೆಣ್ಣುಮಕ್ಕಳಿಗೂ, ತಂದೆಯ ಸಂಪತ್ತಿನ ಮೇಲೆ ಗಂಡುಮಕ್ಕಳಿಗೂ ಹೆಚ್ಚಿನ ಹಕ್ಕು ಇರುತ್ತದೆ. ಈ ವಿಷಯದ ಬಗ್ಗೆ ಗೌತಮನು ಈ ರೀತಿಯಾಗಿ ವಿಶೇಷ ವಿಚಾರವನ್ನು ತೋರಿಸಿಕೊಟ್ಟಿದ್ದಾನೆ: ಸ್ತ್ರೀಧನ ಅವಿವಾಹಿತೆಯಾಗಿರುವ ಹಾಗೂ ಅಪ್ರತಿಷ್ಠಿತೆಯಾಗಿರುವ ಅಥವಾ ಬಡವರಾಗಿರುವ ಹೆಣ್ಣುಮಕ್ಕಳಿಗೆ ಸೇರಬೇಕಾಗಿರುವಂಥದು,"

(೨೧) ಅಭ್ರಾತೃಕೆಗೆ ಸಂಬಂಧಿಸಿದಂತೆ, 'ಮಹಾಭಾರತದ' 'ಅನುಶಾಸನ ಪರ್ವ'ದಲ್ಲಿ (೮೮–೨೨) *"ಅಭ್ರಾತೃಕಾ ಸಮಗ್ರಾರ್ಹಾ ಚಾಧರ್ಹಿತ್ವ ಪರೇ ವಿದುಃ"* ಎಂದು ಹೇಳಲಾಗಿದೆ.

–ಅಂದರೆ, ಸೋದರನಿಲ್ಲದಿರುವಂಥ ಮಗಳು, ತಂದೆಯ ಇಡೀ ಆಸ್ತಿಯ ಮೇಲೆ ಹಕ್ಕನ್ನುಳ್ಳವಳಾಗಿರುತ್ತಾಳೆ. ಇದು ಅನೇಕ ಆಚಾರ್ಯರುಗಳ ಅಭಿಪ್ರಾಯ. ಆಕೆಗೆ ಅರ್ಧ ಆಸ್ತಿಯ ಮೇಲೆ ಮಾತ್ರವೇ ಹಕ್ಕು ಇರುತ್ತದೆ ಎಂಬುದಾಗಿ ಇನ್ನು ಕೆಲವರ ಅಭಿಪ್ರಾಯವಾಗಿದೆ.

(೨೨) ಇಂಥ ಅಭ್ರಾತೃಕೆಯ ಬಗ್ಗೆ 'ನಾರದ ಸ್ಮೃತಿ'ಯಲ್ಲಿ ಹೀಗೆ ಹೇಳಲಾಗಿದೆ.

*"ಪುತ್ರಾಭಾವೇ ತು ದುಹಿತಾ ತುಲ್ಯ ಸಂತಾಪ ಕಾರಣಾತ್*
*ಪುತ್ರಾಶ್ಚ ದುಹಿತಾ ಚೋಭೌ ಮಿತುಃ ಸೂತನಾ ಕಾರಕೌ॥"*

('ನಾರದೀಯ ಮನುಸಂಹಿತಾ, ೧೪/೪೭)

– ಅಂದರೆ, ಗಂಡುಮಗನಿಲ್ಲದೆ ಇರುವಲ್ಲಿ, ಹೆಣ್ಣುಮಗಳೇ ಪಿತ್ರಾರ್ಜಿತ ಆಸ್ತಿಯ ಮೇಲೆ ಸಂಪೂರ್ಣ ಹಕ್ಕುಳ್ಳವಳಾಗಿರುತ್ತಾಳೆ. ಏಕೆಂದರೆ, ಅವಳೂ ಮಗನಂತೆ ಆ ತಂದೆಯ ಸಂತಾನವೇ ಆಗಿರುತ್ತಾಳೆ.

(೨೩) ಮಹಾಭಾರತದ 'ಅನುಶಾಸನಪರ್ವ'ದಲ್ಲಿ (೪೫/೧೨) ಹೀಗೆಂದು ಹೇಳಿದೆ:

*"ಮಾತುಶ್ಚ ಯೌತುಕೇ ಯತ್ಸ್ಯಾತ್ ಕುಮಾರೀಭಾಗ ಏವಸಃ॥*

– ಅಂದರೆ, ತಾಯಿಯ ಹಣದ ಮೇಲೆ ಮಗಳಿಗೆ ಮಾತ್ರವೇ ಹಕ್ಕಿರುತ್ತದೆ.

(೨೪) 'ಬೃಹಸ್ಪತಿ ಸ್ಮೃತಿ'ಯಲ್ಲಿ (೨೬/೧೩೨) ಹೀಗೆಂದು ಹೇಳಲಾಗಿದೆ:

*"ಸದೃತೀ ಸದೃಶೇನೋಂಢಾ ಶುಶ್ರೋಷಣೇ ರತಾ।*
*ಕೃತಾಽಕೃತಾ ವಾ ಪುತ್ರಸ್ಯ ಪಿತುರ್ಧನಹರೀತು ಸಾ॥"*

– ಅಂದರೆ, ಮಗಳನ್ನೇ ಮಗನೆಂದು ಪರಿಗಣಿಸಿರಲಿ ಅಥವಾ ಇಲ್ಲದಿರಲಿ, ತಂದೆಯಂತೆಯೇ, ಗುಣಕರ್ಮ ಸ್ವಭಾವವನ್ನುಳ್ಳವಳಾಗಿದ್ದು, ತನ್ನ ಗುಣಕರ್ಮದ ಸ್ವಭಾವಗಳಿಗೆ ಅನುರೂಪನಾಗಿರುವಂಥ ಗಂಡನನ್ನು ಆಕೆ ಮದುವೆಯಾಗಿದ್ದಲ್ಲಿ ಹಾಗೂ ಆಕೆ ಸಾಧ್ವಿಯೂ ಪತಿವ್ರತೆಯೂ ಆಗಿದ್ದಲ್ಲಿ, ತಂದೆಯ ದಾಯಾಭಾಗದ ಮೇಲೆ ಹಕ್ಕನ್ನುಳ್ಳವಳಾಗಿರುತ್ತಾಳೆ.

ಈ ಹೇಳಿಕೆಗಳ ಬಗ್ಗೆ ನಿಷ್ಪಕ್ಷಪಾತ ದೃಷ್ಟಿಯಿಂದ ಆಲೋಚನೆ ಮಾಡಿದ್ದೇ ಆದರೆ, ಈ ಪರಿಣಾಮಗಳಿಗೆ ಬಂದು ತಲುಪುತ್ತೇವೆ:

(೧) ಗಾರ್ಗಿ, ಸುಲಭಾ ಮೊದಲಾದವರಂತೆ ಜೀವನಪರ್ಯಂತ ಬ್ರಹ್ಮಚರ್ಯವನ್ನು ಅನುಷ್ಠಾನಮಾಡುತ್ತ, ಸಮಾಜದ ಮತ್ತು ರಾಷ್ಟ್ರದ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡಿರುವಂಥ ಹೆಣ್ಣುಮಕ್ಕಳಿಗೆ ತಂದೆಯ ಸಂಪತ್ತಿನ ಮೇಲೆ ಗಂಡುಮಕ್ಕಳಿಗಿರುವಂಥದೇ ಹಕ್ಕು ಇರುತ್ತದೆ; ಹಾಗೂ ಅವರಿಗೆ ತಮ್ಮ ಜೀವನ ನಿರ್ವಹಣೆಗಾಗಿ, ಮಗನಿಗೆ ದೊರೆಯುವಷ್ಟೇ ಭಾಗದ ಆಸ್ತಿ ದೊರೆಯಬೇಕಾಗಿರುತ್ತದೆ. ಶಾರೀರಿಕ ದೋಷಗಳಿಂದಾಗಿ, ಅವಳು ಅವಿವಾಹಿತೆಯಾಗಿಯೇ ಇರಬೇಕಾಗಿ ಬಂದಿದ್ದರೂ, ತಂದೆಯ ಆಸ್ತಿಯಲ್ಲಿ ಅಂಥ ಮಕ್ಕಳಿಗೆ ಪಾಲು ದೊರೆಯಲೇಬೇಕಾಗಿರುತ್ತದೆ.

(೨) ತಂದೆಯ ಏಕೈಕ ಸಂತಾನವಾಗಿರುವ ಹೆಣ್ಣುಮಗಳಿಗೆ, ಆಕೆಯ ತಾಯಿ ಬದುಕಿದ್ದಲ್ಲಿ, ತಂದೆಯ ಆಸ್ತಿಯ ಮೇಲೆ ಸಮಾನವಾದ ಹಕ್ಕು ಇರುತ್ತದೆ; ಹಾಗಿಲ್ಲವಾದಲ್ಲಿ – ಅಂದರೆ, ತಾಯಿ ತೀರಿಕೊಂಡಿದ್ದಲ್ಲಿ, ಪೂರ್ಣಹಕ್ಕು ಆಕೆಯದೇ ಆಗಿರುತ್ತದೆ.

(೩) ಅವಿವಾಹಿತೆಯರಾಗಿರುವ ಕನ್ಯೆಯರಿಗೆ ತಂದೆಯ ಆಸ್ತಿಯಲ್ಲಿ ಸೋದರರ ಪಾಲಿನ ನಾಲ್ಕನೆಯ ಒಂದು ಭಾಗದಷ್ಟು ಆಸ್ತಿ ದೊರೆಯಬೇಕೆಂಬುದನ್ನು ಮನು, ಯಾಜ್ಞವಲ್ಕ್ಯ, ನಾರದ, ದೇವಲ, ಬೃಹಸ್ಪತಿ, ಕಾತ್ಯಾಯನ, ವಿಷ್ಣುವೃದ್ಧ, ಹಾರೀತ ಮೊದಲಾದ ಬಹುಮಟ್ಟಿನ ಸ್ಮೃತಿಕಾರರೂ ಒಪ್ಪಿದ್ದಾರೆ. ಶುಕ್ರಾಚಾರ್ಯರು ಕನ್ಯೆಯರಿಗೆ, ಗಂಡುಮಕ್ಕಳಿಗೆ ದೊರೆಯುವ ಅರ್ಧಭಾಗದಷ್ಟು ಪಿತ್ರಾರ್ಜಿತ ಆಸ್ತಿ ದೊರೆಯಬೇಕೆಂಬ ನಿಲುವಿನ ಪರವಾಗಿದ್ದಾರೆ.

(೪) ವಿವಾಹಿತೆಯರಾಗಿರುವಂಥ ಹೆಣ್ಣುಮಕ್ಕಳಿಗೂ ತಂದೆಯ ಆಸ್ತಿಯ ಮೇಲೆ ಹಕ್ಕು ಇರತಕ್ಕದ್ದು ಎಂಬುದನ್ನು ಸಮರ್ಥಿಸುವಂಥ ಮೂರು ಹೇಳಿಕೆಗಳಷ್ಟೇ ನನ್ನ ಕಣ್ಣಿಗೆ ಬಿದ್ದಿವೆ. ಇವರುಗಳಲ್ಲಿಯೂ, ವಿವಾಹಿತೆಯರಾಗಿರುವ ಎಲ್ಲ ಹೆಣ್ಣಮಕ್ಕಳಿಗೂ ಈ ಹಕ್ಕನ್ನು ಕೊಡದೆ, ಅಪ್ರತಿಷ್ಠೆಯರಾಗಿರುವಂಥ – ಅಂದರೆ ಬಡತನದಲ್ಲಿರುವಂಥ ವಿವಾಹಿತ ಪುತ್ರಿಯರಿಗೆ ಮಾತ್ರವೇ, ತಂದೆಯ ಆಸ್ತಿಯಲ್ಲಿನ ಪುತ್ರರ ಪಾಲಿನ ನಾಲ್ಕನೆಯ ಒಂದು ಭಾಗ ಆಸ್ತಿಯನ್ನು ಕೊಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಹೇಳಿಕೆಗಳು 'ವಿಷ್ಣು ಸ್ಮೃತಿ', 'ಗೌತಮ ಧರ್ಮಸೂತ್ರ' ಹಾಗೂ 'ಬೃಹಸ್ಪತಿ' ಸ್ಮೃತಿಗಳಲ್ಲಿ ಕಾಣದೊರೆತಿದ್ದು, ಅವುಗಳನ್ನು ಈ ಹಿಂದಿನ ಲೇಖನದಲ್ಲಿ ಅಚ್ಚಿಸಲಾಗಿರುವ ವಿಷ್ಣುವಿನ ಹೇಳಿಕೆ ಹೀಗಿದೆ: "*ಅನಾಥಾನಾಂ ಅಪ್ರತಿಷ್ಠಿತಾಂ ಏವಾಂಶೋ ದಾತವ್ಯ* – ಅಂದರೆ, ಅವಿವಾಹಿತೆಯಾಗಿರುವ ಹಾಗೂ ಬಡತನದಲ್ಲಿರುವ ಹೆಣ್ಣುಮಕ್ಕಳಿಗೆ ಮಾತ್ರವೇ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ದೊರೆಯಬೇಕು. ಸುಪ್ರಸಿದ್ಧ ಸನಾತನ ಧರ್ಮಾಭಿಮಾನಿಗಳಾಗಿರುವ ದಾಕ್ಷಿಣಾತ್ಯ ವಿದ್ವಾಂಸ ಮಹಾಮಹೋಪಧ್ಯಾಯ

ಪಂಡಿತ ಅನಂತಕೃಷ್ಣಶಾಸ್ತ್ರಿಗಳು, ಹಿಂದೂ ಕಾನೂನು ಸಮಿತಿಯ ಮುಂದೆ ಸಾಕ್ಷ್ಯವನ್ನು ಮಂಡಿಸುತ್ತ, 'ಯಾಜ್ಞವಲ್ಕ್ಯ ಸ್ಮೃತಿ'ಯ ನನ್ನ ವ್ಯಾಖ್ಯೆಗೆ ಅನುಗುಣವಾಗಿ ಮಗಳಿಗೆ– ಅವಳು ವಿವಾಹಿತೆಯಾಗಿರಲಿ ಅಥವಾ ಇಲ್ಲದಿರಲಿ – ಮದುವೆಗೆ ಸಂಬಂಧಿಸಿದ ವೆಚ್ಚಗಳನ್ನು ಹೊರತುಪಡಿಸಿ, ಪಿತ್ರಾರ್ಜಿತ ಆಸ್ತಿಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಪಡೆಯುವ ಹಕ್ಕಿರುತ್ತದೆ ಎಂದು ಹೇಳಿದ್ದಾರೆ (ನೋಡಿ: 'ಹಿಂದೂ ಲಾ ಕಮಿಟಿ ರಿಪೋರ್ಟ್' ೧೯೪೭, ಪು. ೩೨).

ಈ ಎಲ್ಲ ವಿಚಾರಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಅವಿವಾಹಿತ ಕನ್ಯೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿನ ಮಗನ ಪಾಲಿನ ನಾಲ್ಕನೆಯ ಒಂದರಷ್ಟು ಭಾಗ ಆಸ್ತಿಯನ್ನು ನೀಡುವುದು ಸರ್ವಥಾ ಶಾಸ್ತ್ರಸಮ್ಮತವೂ, ಉಚಿತವೂ ಆಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಇವರುಗಳಿಗಲ್ಲದೆ, ಬಡತನದಲ್ಲಿರುವ ವಿವಾಹಿತ ಪುತ್ರಿಯರಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನು ಪಡೆದುಕೊಳ್ಳಲು ಶಾಸ್ತ್ರಸಮ್ಮತವಾದ ಹಕ್ಕಿದೆ. ಆದರೆ, ಇದರ ಬಗ್ಗೆ ತೀರ್ಮಾನಕ್ಕೆ ಬರುವಲ್ಲಿ ವ್ಯಾವಹಾರಿಕವಾದ ತೊಂದರೆಗಳು ಖಂಡಿತವಾಗಿಯೂ ಎದುರಾಗುತ್ತವೆ.

# ಪುತ್ರಿಯರ ದಾಯಾಭಾಗದ ಹಕ್ಕನ್ನು ಕುರಿತ ವಿವೇಚನೆ

(ಉತ್ತರಾರ್ಧ)

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ಉಯಿಲು ಮಾಡದೆ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೂ ಗಂಡುಮಕ್ಕಳಿಗೆ ಸರಿಸಮಾನವಾಗಿ ಪಾಲು ನೀಡಬೇಕೆಂಬ 'ಹಿಂದೂ ಕೋಡ್ ಬಿಲ್ಲಿ'ನ ಪ್ರಸ್ತಾವ ನನಗೆ ಒಪ್ಪಿಗೆಯಾಗಿಲ್ಲ. ಏಕೆಂದರೆ, ಹೆಣ್ಣುಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಸರಿಸಮನಾದ ಪಾಲು ದೊರೆಯುವುದಾದಲ್ಲಿ, ಗಂಡನ ಆಸ್ತಿಯಲ್ಲಿಯೂ ವಿವಾಹಿತ ಪತ್ನಿಗೆ ಹಕ್ಕಿದೆ ಎಂದಾದಲ್ಲಿ, ತಾಯಿಯ ಸ್ತ್ರೀಧನದಲ್ಲಿನ ಹೆಚ್ಚಿನ ಪಾಲು ಅವಳಿಗೇ ದೊರೆಯಬೇಕು ಎಂದಾದಲ್ಲಿ, ಅದು ನ್ಯಾಯಸಮ್ಮತವಾಗುತ್ತದೆಂದು ನನಗೆ ತೋರುವುದಿಲ್ಲ. ಉಯಿಲು ಮಾಡದೆ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ದೊರೆಯುವ ಪಾಲಿನ ಅರ್ಧದಷ್ಟು ಆಸ್ತಿಯನ್ನು ಕೊಡಬೇಕೆಂಬ ಪ್ರಸ್ತಾಪವನ್ನು ಉಪ – ಸಮಿತಿ ಮುಂದಿರಿಸಿತ್ತು. ಆದರೆ, ಇದಕ್ಕೆ ಎದುರಾದ ವಿರೋಧಕ್ಕೆ ಪ್ರತಿಕ್ರಿಯೆಯಾಗಿ, ಹೆಣ್ಣುಮಕ್ಕಳಿಗೂ, ಗಂಡುಮಕ್ಕಳಿಗೆ ಸರಿಸಮನಾಗಿ ಪಾಲು ನೀಡಬೇಕೆಂಬ ಆಲೋಚನೆ ವ್ಯಕ್ತವಾಗಿರುವುದಾಗಿ ಆಯ್ಕೆ ಸಮಿತಿಯ ಅನೇಕ ಸದಸ್ಯರಿಂದ ನನಗೆ ತಿಳಿದುಬಂದಿದೆ. ಇದು ಬುದ್ಧಿವಂತಿಕೆಯಿಂದ ಕೂಡಿದ್ದು ಹಾಗೂ ನ್ಯಾಯ ಸಮ್ಮತವಾಗಿರುವಂಥದು ಎಂದು ನಾನು ಹೇಳಲಾರೆ. ವಾಸ್ತವವಾಗಿ, ಹೀಗೆ ಮಾಡುವುದರ ಮೂಲಕ, ಅವರು 'ಹಿಂದೂ ಕೋಡ್ ಬಿಲ್'ಗೆ ವಿರುದ್ಧವಾಗಿ ನಡೆಯುತ್ತಿರುವ ಆಂದೋಳನ ಪ್ರಬಲವಾಗುವುದಕ್ಕೆ, ತಮಗೆ ಅರಿವಿಲ್ಲದೆಯೇ ನೆರವು ನೀಡಿದ್ದಾರೆ. ಈ ಲೇಖನಮಾಲೆಯಲ್ಲಿ ಉದ್ಧರಿಸಲಾಗಿರುವ ಶಾಸ್ತ್ರ–ವಚನಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹಾಗೂ ಮದರಾಸಿನ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ಸರ್ ವೇ. ಪಾ. ರಮೇಶನ್ ಅವರಂಥ ಸುಧಾರಣಾಪ್ರೇಮಿ ಮಹಾನುಭಾವರ ಹೇಳಿಕೆಯ ಮೇರೆಗೆ, ಹೆಣ್ಣುಮಕ್ಕಳಿಗೆ, ತಂದೆಯ ಆಸ್ತಿಯಲ್ಲಿ ಗಂಡುಮಕ್ಕಳಿಗೆ ದೊರೆಯುವ ಪಾಲಿನ ನಾಲ್ಕನೆಯ ಒಂದರಷ್ಟು ಭಾಗ ಆಸ್ತಿಯನ್ನು ನೀಡುವ ಪ್ರಸ್ತಾವವನ್ನು ಮುಂದಿರಿಸಿದ್ದರೆ ಈ ಮಸೂದೆಗೆ ಇಷ್ಟೊಂದು ವಿರೋಧ ವ್ಯಕ್ತವಾಗುತ್ತಿರಲಿಲ್ಲ ಎಂಬುದು ನನ್ನ ದೃಢವಾದ ಅಭಿಪ್ರಾಯವಾಗಿದೆ. ಹೀಗಾಗಿ, ಈಗಲೂ, ಉಯಿಲು ಮಾಡದೆ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಗಂಡುಮಕ್ಕಳಿಗೆ ದೊರೆಯುವ ಪಾಲಿನ ಕಾಲುಭಾಗದಷ್ಟು ಆಸ್ತಿಯನ್ನು ಹೆಣ್ಣುಮಕ್ಕಳಿಗೆ ಕೊಡತಕ್ಕದ್ದು ಎಂಬ ತಿದ್ದುಪಡಿಯನ್ನು, ಈ ಬಿಲ್ ಅನ್ನು ಮುಂದಿರಿಸಿರುವಂಥ ವ್ಯಕ್ತಿಗಳು ಅಂಗೀಕರಿಸಬೇಕೆಂದು ಬಯಸುತ್ತೇನೆ. ನಿಷ್ಪಕ್ಷಪಾತ ದೃಷ್ಟಿಯನ್ನುಳ್ಳ ಯಾವೊಬ್ಬ ವ್ಯಕ್ತಿಯೂ, ಶಾಸ್ತ್ರದೃಷ್ಟಿಯಿಂದ ಇದನ್ನು ವಿರೋಧಿಸುವ ಸಾಹಸವನ್ನು ಮಾಡಲಾರ. ಅಷ್ಟೇ ಅಲ್ಲ. ವ್ಯಾವಹಾರಿಕ ದೃಷ್ಟಿಯಿಂದ ಆಲೋಚಿಸುವಂಥ ವ್ಯಕ್ತಿಗಳಿಗೂ ಇದು ಹೆಚ್ಚು ನ್ಯಾಯಸಮ್ಮತವಾಗಿ ತೋರುತ್ತದೆ.

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಪಾಲನ್ನು ನೀಡುವುದರಿಂದ ಸೋದರ – ಸೋದರಿಯರ

ನಡುವಣ ಕಲಹಗಳು ಹೆಚ್ಚುತ್ತಾ ಹೋಗುತ್ತವೆಂದೂ, ಇದರಿಂದಾಗಿ ಅವರಲ್ಲಿ ಪರಸ್ಪರ ಪ್ರೀತಿ ಉಳಿದುಬರುವುದಿಲ್ಲವೆಂದೂ, ಈ ಪ್ರಸ್ತಾಪವನ್ನು ವಿರೋಧಿಸುವಂಥ ವ್ಯಕ್ತಿಗಳು ಹೇಳುತ್ತಿದ್ದಾರೆ. ಈ ತರ್ಕ ಅಷ್ಟೇನೂ ಪ್ರಬಲವಾಗಿಲ್ಲ. ಈ ತರ್ಕವನ್ನೇ ನೆಚ್ಚುವುದಾದರೆ, ಸೋದರರ ನಡುವೆಯೂ ಆಸ್ತಿ ವಿಭಜನೆಯಾಗುವಂತಿಲ್ಲ. ಜಗತ್ತಿನಲ್ಲಿರುವ ಬಹುಮಟ್ಟಿನ ಎಲ್ಲ ಸಮುದಾಯಗಳಲ್ಲಿಯೂ, ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಆದರೆ, ಅದರಿಂದ ಅವರ ಅಂದರೆ ಗಂಡು ಮತ್ತು ಹೆಣ್ಣುಮಕ್ಕಳ ನಡುವೆ ಪ್ರೀತಿ–ವಿಶ್ವಾಸಗಳೇ ಇರುವುದಿಲ್ಲ ಅಥವಾ ಕಲಹಗಳು ಹೆಚ್ಚುತ್ತ ನಡೆದಿವೆ ಎಂದು ಹೇಳಲು ಬರುವುದಿಲ್ಲ. ಗೋವಾದಲ್ಲಿ ಒಂದೇ ಪೌರಸಂಹಿತೆ ಹಿಂದೂಗಳಿಗೆ, ಕ್ರಿಶ್ಚಿಯನ್ನರಿಗೆ ಹಾಗೂ ಮುಸಲ್ಮಾನರಿಗೇ ಅನ್ವಯವಾಗುತ್ತದೆ. ಅದರ ಮೇರೆಗೆ ಹುಡುಗಿಯರಿಗೂ ಹುಡುಗರಂತೆಯೇ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಇದರಿಂದಾಗಿ ಸೋದರ–ಸೋದರಿಯರ ನಡುವೆ ಕಲಹಗಳು ನಡೆದಿರುವ ಉದಾಹರಣೆಗಳು ಅಷ್ಟಾಗಿ ಇಲ್ಲವೇ ಇಲ್ಲ ಎಂಬ ಸಂಗತಿ, ಈ ಸಂಬಂಧವಾಗಿ ನಡೆಸಲಾದ ತನಿಖೆಯಿಂದ ತಿಳಿದುಬಂದಿದೆ. ತೀರಿಕೊಂಡ ತಂದೆಯ ಆಸ್ತಿಯಲ್ಲಿನ ಪ್ರಸ್ತಾವದ ಮೇರೆಗೆ, (ಸೋದರನ ಪಾಲಿನ ಕಾಲು ಭಾಗದಷ್ಟಾಗಿರುತ್ತದೆ) ಸೋದರಿಗೆ ಲಭಿಸುತ್ತದೆಂಬ ಕಾರಣಕ್ಕಾಗಿ ಸೋದರ–ಸೋದರಿಯರ ನಡುವೆ ಪರಸ್ಪರ ಪ್ರೀತಿ – ವಿಶ್ವಾಸ ಇಲ್ಲದಂತಾಗಿಬಿಡುತ್ತದೆ ಎನ್ನುವುದಾದಲ್ಲಿ, ಅಂಥ ಪ್ರೀತಿಯನ್ನು ಸ್ವಾರ್ಥಮೂಲವಾದುದೆಂದೇ ಹೇಳಬೇಕಾಗುತ್ತದೆ. ಕಲ್ಕತ್ತ ಉಚ್ಚನ್ಯಾಯಾಲಯದ ವಕೀಲರಾಗಿರುವ ಶ್ರೀ ಎ. ಸಿ. ಗುಪ್ತ ಮತ್ತು ಮದರಾಸಿನ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರ್ ಅವರುಗಳು 'ಹಿಂದೂ ಲಾ ಕಮಿಟಿ'ಯ ಮುಂದೆ ಸಾಕ್ಷ್ಯ ನೀಡುತ್ತ, "ತನ್ನ ಸ್ವಾರ್ಥಕ್ಕೆ ಅಥವಾ ಪಾಲಿಗೆ ಉಂಟಾಗಬಹುದಾದ ಕಿಂಚಿತ್ ನಷ್ಟದಿಂದ ನಾಶವಾಗಿಬಿಡುವಂಥ ಸೋದರ–ಪ್ರೇಮವಾದರೂ ಎಂಥದು?" ಎಂದು ಹೇಳುವ ಮೂಲಕ, ಈ ತರ್ಕವನ್ನು ಸರಿಯಾಗಿಯೇ ಅಲ್ಲಗಳೆದಿದ್ದಾರೆ. ಸೋದರಿಗೆ ಯಾವುದೇ ಪಾಲನ್ನು ಕೊಡದಿರುವ ಸಂದರ್ಭದಲ್ಲಿ ಪ್ರೀತಿ ಹೆಚ್ಚುತ್ತದೆ, ಇಲ್ಲವಾದಲ್ಲಿ ಇಲ್ಲ ಎಂಬ ವಾದವನ್ನು ನಾನು ಒಪ್ಪಲಾರೆ.

ಇಷ್ಟಾಗಿಯೂ, ಯಾರಾದರೂ ಮಹಾನುಭಾವರಿಗೆ ಭಯವೇನಾದರೂ ಇದ್ದರೆ, ಅಂಥವರು "ನನ್ನ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಯಾವ ಪಾಲನ್ನು ಕೊಡತಕ್ಕದ್ದಲ್ಲ" ಎಂಬುದಾಗಿ ತಮ್ಮ ಉಯಿಲಿನಲ್ಲಿ ಬರೆಯುವ ಹಕ್ಕನ್ನುಳ್ಳವರಾಗಿರುತ್ತಾರೆ. ಆ ಪ್ರಸ್ತಾವ ಉಯಿಲು ಬರೆಯದೆ ಸತ್ತಿರುವಂಥ ವ್ಯಕ್ತಿಯ ಸಂಪತ್ತಿಗೆ ಸಂಬಂಧಿಸಿರುವಂತದ್ದಲ್ಲ; ಹಾಗೂ ಆತನ ಮಗಳಿಗೂ ಬಹುಶಃ ಗೊತ್ತಿಲ್ಲ ಅಥವಾ ಅವರು ಅದನ್ನು ಮರೆತುಬಿಡುತ್ತಾರೆ. ತನ್ನ ಉಯಿಲಿನಲ್ಲಿ ಏನು ಬೇಕಾದರೂ ನಿರ್ದೇಶನವನ್ನು ಕೊಡುವ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಇರುತ್ತದೆ. ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ನೀಡುವುದನ್ನು ವಿರೋಧಿಸುವಂಥ ವ್ಯಕ್ತಿಗಳು ಈ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ – ಅದರಲ್ಲಿಯೂ ಚರ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ನೀಡಿದ್ದೇ ಆದರೆ, ಅದರಿಂದ ಸಾಕಷ್ಟು ಗೊಂದಲ ಉಂಟಾಗುತ್ತದೆ ಎಂಬ ಆಕ್ಷೇಪವನ್ನು ಎತ್ತಲಾಗಿದೆ ಹಾಗೂ ಈ ಆಕ್ಷೇಪದಲ್ಲಿ ಸ್ವಲ್ಪ ಹುರುಳೂ ಇದೆ. ಮದುವೆಯಾದ ಬಳಿಕ, ಹೆಣ್ಣುಮಕ್ಕಳು ತಮ್ಮ ಆಸ್ತಿಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ ಹಾಗೂ ಹೇಗೆ ತೆಗೆದುಕೊಂಡು ಹೋಗುತ್ತಾರೆ. ಸೋದರಿಯ ಸೊತ್ತನ್ನು ಸೋದರರು ಕೊಂಡುಕೊಂಡುಬಿಡಲಿ ಎಂಬುದಾಗಿ ಇದಕ್ಕೆ ಉತ್ತರವನ್ನು ನೀಡಬಹುದಾಗಿದೆ. ಕೊಳ್ಳುವ ಮೊದಲ ಹಕ್ಕನ್ನು ಸೋದರರಿಗೆ ಕೊಡಲಿ ಎಂದೂ ಹೇಳಲಾಗಿದೆ. ಶ್ರೀ ಕನ್ಹೈಯಾಲಾಲ್ ಮುನ್ಷೀ ಮೊದಲಾದ ಅನೇಕ ಸುಪ್ರಸಿದ್ಧ ವ್ಯಕ್ತಿಗಳು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯಕ್ಕೆ

ಸಂಬಂಧಿಸಿದಂತೆ, ಇನ್ನೊಂದು ತಿದ್ದುಪಡಿಯನ್ನು ಸೂಚಿಸಲಾಗಿದೆ. ಹಾಗೂ ಅದು ನನಗೂ ಸೂಕ್ತವೆಂದು ತೋರುತ್ತಿದೆ. ಸಂಯುಕ್ತ ಅಥವಾ ಅವಿಭಕ್ತ ಕುಟುಂಬದ ಆಸ್ತಿಯ ಆಶ್ರಯದಲ್ಲೇ ಇರಲು ಹಾಗೂ ಅದನ್ನು ಉಪಯೋಗಿಸಲು ಹೆಣ್ಣುಮಕ್ಕಳಿಗೆ ಹಕ್ಕಿರಬೇಕು; ಆದರೆ ಅದನ್ನು ಇತರರಿಗೆ ಮಾರುವ ಅಥವಾ ಅದರ ಯಾವುದಾದರೂ ಒಂದು ಭಾಗವನ್ನು ಬಾಡಿಗೆಗೆ ಕೊಡುವ ಹಕ್ಕು ಅವರಿಗೆ ಇರಬಾರದು.

ಈ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದೇ ಆದಲ್ಲಿ, ಮೇಲೆ ಹೇಳಿದ ಎಲ್ಲ ಆಕ್ಷೇಪಗಳಿಗೂ ಹೆಚ್ಚು ಕಡಿಮೆ ಸಮಾಧಾನ ದೊರೆತಂತೆ ಆಗುತ್ತದೆ.

"ತೀರಿಕೊಂಡ ಪಿತೃಗಳಿಗೆ ಹೆಣ್ಣುಮಗಳು ಪಿಂಡವನ್ನು ಕೊಡದೆ ಇರುವುದರಿಂದ ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಯಾವ ಪಾಲೂ ಇರತಕ್ಕದ್ದಲ್ಲ" ಎಂಬ ಈ ತರ್ಕವನ್ನು ಮುಂದಿಟ್ಟವರೆಂದರೆ ಮಧುರೆಯ ರಾವಸಾಹೇಬ್ ನರೇಶ್ ಅಯ್ಯರ್, ಮಹಾಮಹೋಪಾಧ್ಯಾಯ ಚಿನ್ನಸ್ವಾಮಿ ಶಾಸ್ತ್ರಿಗಳು ಹಾಗೂ ಇತರ ಅನೇಕ ಮಂದಿ ಪೌರಾಣಿಕ ಮನೋಧರ್ಮದ ಪಂಡಿತರು. ಈ ತರ್ಕ ಎಷ್ಟು ದುರ್ಬಲವಾಗಿದೆ ಎಂದರೆ ಅದರ ಬಗ್ಗೆ ಏನನ್ನೂ ಹೇಳುವ ಅಗತ್ಯವೇ ಇಲ್ಲದಂತಾಗಿಬಿಟ್ಟಿದೆ. ಈ ದಿನಗಳಲ್ಲಿ, ವಿವಾಹದ ಸಂದರ್ಭದಲ್ಲಿ ಆಡಂಬರದಿಂದ ಮಾಡಲಾಗುವ ವ್ಯರ್ಥವೆಚ್ಚದಿಂದ, ತಮ್ಮ ಪ್ರತಿಷ್ಠೆಯನ್ನು ಮೆರೆಸುವುದನ್ನು ಬಿಟ್ಟರೆ, ಬೇರಾವುದೇ ಪ್ರಯೋಜನವೂ ಇಲ್ಲ; ಬದಲಾಗಿ, ಸಾವಿರಾರು ಕುಟುಂಬಗಳು ಸದಾ ಕಾಲವೂ ಸಾಲದ ಹೊರೆಯ ಅಡಿಯಲ್ಲಿ ಸಿಕ್ಕಿಕೊಂಡು ನರಳುತ್ತಿರುತ್ತವೆ. ಅಂಥ ಕುಟುಂಬಗಳ ಸಂಖ್ಯೆಯನ್ನು ಕಡಿಮೆಯಾಗಿಸಬೇಕು; ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹಾಗೂ ವಿಪತ್ತಿನ ಸಂದರ್ಭಗಳಲ್ಲಿ ಸಹಾಯಾರ್ಥವಾಗಿ ಪಿತ್ರಾರ್ಜಿತ ಸಂಪತ್ತಿನಲ್ಲಿ ಭಾಗವನ್ನು ಕೊಡಬಹುದು. ಹಾಗೆ ಮಾಡುವುದು ಸರ್ವಥಾ ಸೂಕ್ತವೂ ಆಗುತ್ತದೆ. ವರದಕ್ಷಿಣೆಯೇ ಮೊದಲಾದ ಹಾನಿಕಾರಕ ಪದ್ಧತಿಗಳು ಹಾಗೂ ಆಡಂಬರಪೂರ್ಣವಾದ ಏರ್ಪಾಡುಗಳು ಇದರಿಂದಾಗಿ ತುಂಬ ಕಡಿಮೆಯಾಗಿಬಿಡುತ್ತವೆ; ಹಾಗೂ ಹೆಣ್ಣುಮಕ್ಕಳಿಗೆ ಆಲೋಚನಾಶೀಲರಾದ ವಾಸ್ತವಿಕ ಪ್ರಯೋಜನವೂ ಲಭಿಸಬಹುದು. ಆಲೋಚನಾಶೀಲರಾದ ವ್ಯಕ್ತಿಗಳು ಈ ವಿಚಾರಗಳ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತಾರೆಂದು ನಂಬಿದ್ದೇನೆ.

# ಅವಿಭಕ್ತ ಕುಟುಂಬ ಪದ್ಧತಿ

## ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ

ಸದ್ಯದ 'ಹಿಂದೂ ಕೋಡ್ ಬಿಲ್'ನ ಯಾವ ಪ್ರಕರಣಗಳ ವಿರುದ್ಧವಾಗಿ ತೀವ್ರವಾದ ಅಸಂತೋಷವನ್ನು ವ್ಯಕ್ತಪಡಿಸಲಾಗುತ್ತಿದೆಯೊ ಅವುಗಳಲ್ಲಿ ಈ ಕೆಳಗಿನ ಪ್ರಕರಣಗಳು ವಿಶೇಷವಾಗಿ ಉಲ್ಲೇಖನೀಯವಾಗಿವೆ:

ಪ್ರಕರಣ ೮೬ : ಕುಟುಂಬದಲ್ಲಿ ಹುಟ್ಟಿದ ಮಾತ್ರಕ್ಕೇ ಆಸ್ತಿಯ ಮೇಲೆ ಹಕ್ಕು ಸ್ಥಾಪಿತವಾಗುವುದಿಲ್ಲ. ಈ ಸಂಹಿತೆ ಆರಂಭಗೊಂಡ ದಿನದಿಂದ ಹಾಗೂ ಅದರ ಬಳಿಕ, ಪೂರ್ವವರ್ತಿಯ ಜೀವಕಾಲದಲ್ಲಿ ಅವನ ಸಂಪತ್ತಿನಲ್ಲಿ ಹಿತಾಸಕ್ತಿ ಇದೆಯೆಂದು ಕ್ಲೇಮು ಮಾಡುವ ಹಕ್ಕು, ಕ್ಲೇಮುದಾರನ ಹುಟ್ಟು ಆ ಪೂರ್ವವರ್ತಿಯ ಕುಟುಂಬದಲ್ಲಿ ಆಗಿದೆ ಎಂಬ ಸಂಗತಿಯನ್ನು ಮಾತ್ರವೇ ಆಧರಿಸಿರುತ್ತಿತ್ತೋ, ಅದು ಇನ್ನು ಮುಂದೆ ಯಾವುದೇ ನ್ಯಾಯಾಲಯದಲ್ಲಿ ಅಂಗೀಕೃತವಾಗುವುದಿಲ್ಲ.

೮೭) ಅವಿಭಕ್ತ ಹಕ್ಕುದಾರನ ಸ್ಥಾನಮಾನ ಕೂಡೊಕ್ಕಲಿನ ಹಕ್ಕುದಾರನ ಸ್ಥಾನಮಾನವಾಗಿ ಬದಲಾಗುವುದು.

ಈ ಸಂಹಿತೆಯಲ್ಲಿ ಆರಂಭಗೊಂಡ ದಿನದಿಂದ ಹಾಗೂ ಆ ಬಳಿಕ ಯಾವುದೇ ನ್ಯಾಯಾಲಯ, ಅವಿಭಕ್ತ ಕುಟುಂಬದ ಸಂಪತ್ತಿನಲ್ಲಿ ಹಿತಾಸಕ್ತಿಯನ್ನಿರಿಸಿಕೊಂಡಿರುವುದಾಗಿ ಮಾಡುವ ಯಾವುದೇ ಕ್ಲೇಮನ್ನು ಅಂದರೆ, ಉತ್ತರಾಧಿಕಾರದ ನಿಯಮಗಳನ್ನು ಅವಲಂಬಿಸಿರುವಂಥ ಇಂಥ ಯಾವುದೇ ಕ್ಲೇಮನ್ನು – ಮಾನ್ಯ ಮಾಡುವುದಿಲ್ಲ. ಹಾಗೂ ಈ ಸಂಹಿತೆ ಜಾರಿಗೆ ಬರುವ ದಿನದಿಂದ ಅವಿಭಕ್ತ ಕುಟುಂಬದ ಸಂಪತ್ತನ್ನು ತಮ್ಮ ಸ್ವಾಧೀನದಲ್ಲಿರಿಸಿಕೊಂಡಿರುವ ಸಮಸ್ತ ವ್ಯಕ್ತಿಗಳನ್ನು ಕೂಡೊಕ್ಕಲು ಹಕ್ಕುದಾರರಾಗಿ (tenants in common) ಆ ಸಂಪತ್ತನ್ನು ತಮ್ಮ ಬಳಿ ಇರಿಸಿಕೊಂಡಿರುವಂಥವರೆಂದು ಪರಿಗಣಿಸಲಾಗುವುದು ಅಂದರೆ, ಈ ಸಂಹಿತೆ ಆರಂಭಗೊಂಡ ದಿನದಂದು ಇಂಥ ಸಂಪತ್ತಿನ ವಿಷಯದಲ್ಲಿ ಅವಿಭಕ್ತ ಕುಟುಂಬದ ಸಮಸ್ತ ಸದಸ್ಯರ ನಡುವೆ ಆಸ್ತಿ – ಹಂಚಿಕೆ ಆಗಿಬಿಟ್ಟಿದೆಯೊ ಎಂಬಂತೆ ಹಾಗೂ ಅವರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪರಿಪೂರ್ಣ ಒಡೆಯನ ರೂಪದಲ್ಲಿ ತನ್ನ ಪಾಲಿನ ಆಸ್ತಿಯನ್ನು ತನ್ನ ಬಳಿ ಪ್ರತ್ಯೇಕವಾಗಿ ಇರಿಸಿಕೊಂಡಿದ್ದಾನೊ ಎಂಬಂತೆ ಪರಿಗಣಿಸಲಾಗುವುದು.

೮೮) ಹಿಂದೂ ಉತ್ತರಾಧಿಕಾರ ಅಧಿನಿಯಮದಲ್ಲಿನ ಧಾರ್ಮಿಕ ಕರ್ತವ್ಯದ (Pious obligation) ಬಗೆಗಿನ ನಿಯಮವನ್ನು ನಿರಸ್ತಗೊಳಿಸಲಾಗುತ್ತದೆ.

೧) ಈ ಸಂಹಿತೆ ಆರಂಭಗೊಂಡ ಬಳಿಕ ಉಪ–ಪ್ರಕರಣ ೨ರಲ್ಲಿ ನಿಗದಿಗೊಳಿಸಲಾಗಿರುವಂಥ ನ್ಯಾಯಾಲಯವನ್ನು ಹೊರತುಪಡಿಸಿ, ಯಾವುದೇ ನ್ಯಾಯಾಲಯ ಯಾವನೇ ಪುತ್ರ, ಪೌತ್ರ ಮತ್ತು ಪ್ರಪೌತ್ರನ ವಿರುದ್ಧ, ಅವನ ತಂದೆ, ತಾತ ಹಾಗೂ ಮುತ್ತಾತ ಪಡೆದುಕೊಂಡಿದ್ದ ಸಾಲದ ವಸೂಲಿಗಾಗಿ ಹಾಗೂ ಇಂಥ ಯಾವುದೇ ಸಾಲದ ಸಂದಾಯಕ್ಕೆ ಸಂಬಂಧಿಸಿದಂತೆ ಯಾವುದೇ ಸಂಪತ್ತನ್ನು ವಶಕ್ಕೆ ತೆಗೆದುಕೊಳ್ಳುವ ಸಲುವಾಗಿ, ಇಂಥ ಯಾವುದೇ ಸಾಲವನ್ನು ತೀರಿಸುವುದು ಮೇಲೆ ತಿಳಿಸಿದ ಪುತ್ರ,

ಪೌತ್ರ ಅಥವಾ ಪ್ರಪೌತ್ರನ ಧಾರ್ಮಿಕ ಕರ್ತವ್ಯವಾಗಿರುತ್ತದೆಂಬ ಆಧಾರದ ಮೇಲೆ, ಕಾನೂನು ಕ್ರಮವನ್ನು ಜರುಗಿಸುವ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

೨) ಈ ಸಂಹಿತೆ ಜಾರಿಗೆ ಬರುವುದಕ್ಕೆ ಮೊದಲು, ಸಾಲವನ್ನೇನಾದರೂ ತೆಗೆದುಕೊಂಡಿದ್ದ ಸಂದರ್ಭದಲ್ಲಿ, ಉಪ – ಪ್ರಕರಣ (೧)ರಲ್ಲಿ ಉಲ್ಲೇಖಿಸಿರುವ ಯಾವುದೇ ಸಂಗತಿಯೂ ಕೆಳಗೆ ಸೂಚಿಸಲಾಗಿರುವಂಥ ವ್ಯಕ್ತಿಗಳ ಮೇಲೆ ಪರಿಣಾಮ ಬೀರುವುದಿಲ್ಲ.

(ಅ) ಪ್ರಸಂಗಾನುಗುಣವಾಗಿ, ಯಾವನೇ ಸಾಲಗಾರನ ಪುತ್ರ, ಪೌತ್ರ ಮತ್ತು ಪ್ರಪೌತ್ರನ ವಿರುದ್ಧ ಕಾನೂನು ಕ್ರಮವನ್ನು ಕೈಗೊಳ್ಳುವ ಹಕ್ಕು ಅಥವಾ ಇಂಥ ಯಾವುದೇ ಸಾಲ–ನೀಡಿಕೆಯ ವಸೂಲಿಗೆ ಸಂಬಂಧಿಸಿದಂತೆ ಮಾಡಲಾಗಿರುವ ಯಾವುದೇ ಆಸ್ತಿಯ ಸ್ವಂತ್ವಾರ್ಪಣೆ ಅಥವಾ ಪರಭಾರೆ (alien-ation) ಹಾಗೂ ಇಂಥ ಯಾವುದೇ ಹಕ್ಕು ಅಥವಾ ಸ್ವಾಂತ್ವಾರ್ಪಣೆ ಧಾರ್ಮಿಕ ಕರ್ತವ್ಯದ ನಿಯಮಗಳ ಅಡಿಯಲ್ಲಿ, ಈ ಸಂಹಿತೆ ಅಂಗೀಕೃತವಾಗದೆ ಇದ್ದ ಸಂದರ್ಭದಲ್ಲಿ ಮಾಡಲಾಗುತ್ತಿದ್ದಂತೆ, ಅದೆ ರೀತಿಯಲ್ಲಿ ಹಾಗೂ ಅದೇ ಪರಿಮಿತಿಯವರೆಗೆ ಮಾತ್ರವೇ ಕಾರ್ಯರೂಪಕ್ಕೆ ಬರಬಹುದಾಗಿರುತ್ತದೆ.

೮೯) ಈ ಸಂಹಿತೆ ಜಾರಿಗೆ ಬರುವುದಕ್ಕೆ ಹಿಂದಿನ ಸಾಲಕ್ಕೆ ಸಂಬಂಧಿಸಿದಂತೆ, ಅವಿಭಕ್ತ ಕುಟುಂಬದ ಸದಸ್ಯರ ಹೊಣೆಗಾರಿಕೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಸಂಹಿತೆ ಆರಂಭಗೊಳ್ಳುವುದಕ್ಕೆ ಮೊದಲು, ಅವಿಭಕ್ತ ಕುಟಂಬದ ಕರ್ತ ಅಥವಾ ಯಜಮಾನ ಕುಟುಂಬದ ಉಪಯೋಗಕ್ಕಾಗಿ ಯಾವುದಾದರೂ ಸಾಲವನ್ನು ತೆಗೆದುಕೊಂಡಿದ್ದಲ್ಲಿ, ಈ ಸಂಹಿತೆಯಲ್ಲಿ ಉಲ್ಲೇಖಿಸಲಾಗಿರುವ ಯಾವ ಸಂಗತಿಯೂ, ಅವಿಭಕ್ತ ಕುಟುಂಬದ ಯಾವನೇ ಸದಸ್ಯನ ಸದರಿ ಸಾಲ ತೀರಿಕೆಯ ಹೊಣೆಗಾರಿಕೆಗೆ ಅನ್ವಯವಾಗುವುದಿಲ್ಲ; ಹಾಗೂ ಇಂಥ ಯಾವುದೇ ಹೊಣೆಗಾರಿಕೆ ಅದಕ್ಕೆ ಹೊಣೆಗಾರರಾಗಿರುವಂಥ ಸಮಸ್ತ ವ್ಯಕ್ತಿಗಳ ಮೇಲೆ ಅಥವಾ ಯಾವುದೇ ವ್ಯಕ್ತಿಗಳ ಮೇಲೆ, ಈ ಸಂಹಿತೆ ಅಂಗೀಕೃತವಾಗದಿದ್ದ ಸಂದರ್ಭದಲ್ಲಿ ಮಾಡಲಾಗುತ್ತಿದ್ದಂತೆ, ಅದೇ ರೀತಿಯಲ್ಲಿ ಹಾಗೂ ಅದೇ ಪರಿಮಿತಿಯವರೆಗೆ ನಿರ್ವಹಣೀಯವಾಗಿರುತ್ತದೆ.

ಈ ಪ್ರಕರಣಗಳ ವಿಷಯದಲ್ಲಿ ಎತ್ತಲಾಗಿರುವ ಬಹಳ ತೀವ್ರವಾದ ಆಕ್ಷೇಪವೇನೆಂದರೆ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿರುವ ಧಾರ್ಮಿಕ ಪದ್ಧತಿಯಾಗಿರುವ ಅವಿಭಕ್ತ ಕುಟುಂಬ ಪದ್ಧತಿಗೆ ಈ ಪ್ರಕರಣಗಳು ಮಂಗಳ ಹಾಡಿಬಿಡುತ್ತವೆ ಎಂಬುದು. ಭಾರತದ ಸಂಸತ್ತಿನಲ್ಲಿ ಕಳೆದ ಕೆಲವು ದಿನಗಳಲ್ಲಿ 'ಹಿಂದೂ ಕೋಡ್ ಬಿಲ್ಲ'ನ್ನು ಕುರಿತಂತೆ ನಡೆದ ವಾದ–ವಿವಾದಗಳನ್ನು ನಾಲ್ಕು ದಿನಗಳವರೆಗೆ ಕೇಳುವ ಅವಕಾಶ ನನಗೂ ದೊರೆತಿತ್ತು. ಇದನ್ನು ತುಂಬ ಕಟುವಾಗಿ ವಿರೋಧಿಸಿದವರು ಹಾಗೂ ಇನ್ನೊಂದು ರೀತಿಯಲ್ಲಿ, ಸಂಹಿತೆಯನ್ನು ವಿರೋಧಿಸುವ ಗುಂಪಿನ ಪ್ರಮುಖ ನೇತಾರರಾಗಿದ್ದವರು ಮೌಲಾನಾ ನಜೀರುದ್ದೀನ್ ಅಹಮದ್ ಅವರು ಎಂಬುದನ್ನು ನೋಡಿ ನಿಜಕ್ಕೂ ನನಗೆ ಆಶ್ಚರ್ಯವಾಯಿತು. ಇದರ ಮುನ್ನಡೆಯನ್ನು ತಡೆಯಲು ಅವರು ಹೆಜ್ಜೆ ಹೆಜ್ಜೆಗೂ ಅಡೆ – ತಡೆಗಳನ್ನೊಡ್ಡಲು ಅವರು ಮಹಾ–ಸಾಹಸಗಳನ್ನೇ ಮಾಡಿದರು. ಹಾಗೂ ಶ್ರೋತೃಗಳು ಸತತವಾಗಿ ಬೇಸರವನ್ನು ವ್ಯಕ್ತಪಡಿಸಿದರೂ, ಸಂಹಿತೆಯ ವಿರುದ್ಧವಾಗಿ ಏಳು ಘಂಟೆಗಳ ಕಾಲ ಭಾಷಣವನ್ನು ಮಾಡಿದರು. ಮುಸ್ಲಿಮ್ ಲೀಗಿನ ಈ ಛಲವಾದಿ ಸಜ್ಜನರ ಹಾಗೂ ಪಂಡಿತ ಲಕ್ಷ್ಮೀಕಾಂತ ಮೈತ್ರೇಯರಂಥ ಛಲವಾದಿ ಸನಾತನ ಧರ್ಮಾಭಿಮಾನಿಗಳ ಈ ಅನಿರೀಕ್ಷಿತ 'ಗಂಟು–ನಂಟು' ಸಂಸತ್ ಸದಸ್ಯರನ್ನು ಮತ್ತು ವೀಕ್ಷಕರನ್ನು ಆಶ್ಚರ್ಯಗೊಳಿಸುತ್ತಿತ್ತು. ಮೌಲಾನಾ ನಜೀರುದ್ದೀನ್ ಅಹಮದ್ ಅವರಿಗೆ ಹಿಂದೂಧರ್ಮ, ಹಿಂದೂ

ಸಂಸ್ಕೃತಿ ಮತ್ತು ಆಚಾರ – ವಿಚಾರಗಳ ಬಗ್ಗೆ ಇಷ್ಟೊಂದು ಆದರ – ಅಭಿಮಾನಗಳಿದ್ದು, ಅದರ ಗುಣ – ವೈಶಿಷ್ಟ್ಯಗಳನ್ನು ಹಾಡಿ – ಹೊಗಳಿ ದಣಿಯದ ಅವರು ಹಿಂದೂಧರ್ಮ ಸ್ವೀಕರಿಸಲಾಯಿತು? ಎನ್ನಿಸುತ್ತಿತ್ತು. ಏಪ್ರಿಲ್ ೨ರ ತಮ್ಮ ಭಾಷಣದಲ್ಲಿ ಮೌಲಾನಾ ನಜೀರುದ್ದೀನ್ ಅಹಮದ್ ಅವರು ವಿವಾಹ – ವಿಚ್ಛೇದನಕ್ಕೆ ("ತಲಾಕ್") ವಿರುದ್ಧವಾಗಿ, ಹಾಗೂ ಅವಿಭಕ್ತ ಕುಟುಂಬದ ಪದ್ಧತಿಯ ಪರವಾಗಿ ಬಹಳಷ್ಟು ಮಾತನಾಡಿದರು. ಪಂಡಿತ ಲಕ್ಷ್ಮೀಕಾಂತ ಮೈತ್ರೇಯರು ಮತ್ತು ಅಜಮೀರಿನ ಪಂಡಿತ ಮುಕುಟ ಬಿಹಾರೀಲಾಲ ಭಾರ್ಗವ ಅವರೂ ಇದೇ ಧಾಟಿಯಲ್ಲಿ ಮಾತನಾಡಿದರು. ಅವಿಭಕ್ತಕುಟುಂಬ ಪದ್ಧತಿ ಬಹುಮಟ್ಟಿಗೆ ಕಣ್ಮರೆಯಾಗುತ್ತಲೇ ಇದೆ. ಇಂದಿನ ನಿಯಮಗಳ ಮೇರೆಗೆ, ಕುಟುಂಬದ ಯಾವನೇ ಸದಸ್ಯ ಸಾಮಾನ್ಯ ಪತ್ರದ ಮೂಲಕ ಕೋರಿಕೆಯನ್ನು ಸಲ್ಲಿಸಿಯೂ, ಆ ಕುಟುಂಬದಿಂದ ಬೇರೆಯಾಗಬಹುದಾಗಿದೆ. ಭಾರತೀಯ ನ್ಯಾಯಾಲಯಗಳು ನೀಡಿರುವ ತೀರ್ಪುಗಳು ಮತ್ತು 'ಪ್ರಿವಿ–ಕೌನ್ಸಿಲ್'ನ ಪರವಾಗಿಯೇ ಇವೆ. ಹಳೆಯ ಮತ್ತು ಹೊಸ ಆಲೋಚನೆಗಳನ್ನುಳ್ಳ ಜನರ ನಡೆನುಡಿಗಳು ಮತ್ತು ಆಚಾರ–ವಿಚಾರಗಳಲ್ಲಿ ಉಂಟಾಗಿರುವ ಅಗಾಧ ವ್ಯತ್ಯಾಸಗಳಿಂದಾಗಿ ಹಾಗೂ ಉಂಟಾಗಿರುವ ಅನೇಕ ಪರಿಸ್ಥಿತಿಗಳಿಂದಾಗಿ ಅವಿಭಕ್ತ ಕುಟುಂಬ ಪದ್ಧತಿ ತಾನಾಗಿಯೇ ಇಲ್ಲವಾಗತೊಡಗಿದೆ ಹಾಗೂ ಪ್ರತಿದಿನ ನಶಿಸತೊಡಗಿದೆ. ಅದನ್ನು ಸಮರ್ಥಿಸಿ ಬರೆಯಬೇಕಾದ ಅಗತ್ಯವೇನೂ ನನಗೆ ತೋರುತ್ತಿಲ್ಲ. ನಮ್ಮ ಪುರಾಣಪ್ರಿಯ ಸೋದರರು ಯಾವುದನ್ನು ಹಾಡಿಹೊಗಳುತ್ತಿದ್ದಾರೊ ಹಾಗೂ ಮೌಲಾನಾ ನಜೀರುದ್ದೀನ್ ಅಹಮದ್ ಅವರು ಯಾವುದರ ಪರವಾಗಿ ವಕೀಲಿ ನಡೆಸುತ್ತಿದ್ದಾರೊ ಆ ವ್ಯವಸ್ಥೆಯ ಬಗ್ಗೆ ಶಾಸ್ತ್ರಗಳ ದೃಷ್ಟಿಕೋನದಿಂದ ಒಂದಿಷ್ಟು ಬೆಳಕು ಚೆಲ್ಲುವುದಷ್ಟೇ ನನ್ನ ಇಚ್ಛೆ. ಮಾನ್ಯ ಓದುಗರು ಸ್ಮೃತಿಗಳ ಈ ಹೇಳಿಕೆಗಳನ್ನು ಗಂಭೀರವಾಗಿ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಭಾವಿಸಲಿ :

೧) 'ಮನುಸ್ಮೃತಿ' (೯/೧೧) ಹೀಗೆನ್ನುತ್ತದೆ :

*"ಏವಂ ಸಹ ವಸೇಯುರ್ವಾ ಪೃಥಗ್ ವಾ ಧರ್ಮ–ಕಾಮ್ಯಯಾ।*
*ಪೃಥಗ್ ವಿವರ್ಧತೇ ಧರ್ಮಃ ತಸ್ಮದ್ ಧರ್ಮ್ಯಾ ಪೃಥಕ್ ಕ್ರಿಯಾ॥"*

– ಅಂದರೆ, ಹೀಗೆ ಸೋದರರು ಒಂದಾಗಿ ಇರಬೇಕೆ ಅಥವಾ ಬೇರೆ ಬೇರೆಯಾಗಿ ಇರಬೇಕೆ ಎಂಬುದು ಅವರ ಇಚ್ಛೆಯನ್ನು ಅವಲಂಬಿಸಿರುತ್ತದೆ. ಆದರೆ, ಬೇರೆ ಬೇರೆಯಾಗಿ ಇದ್ದರೆ, ಅದರಿಂದ ಧರ್ಮಕ್ಕೆ ವೃದ್ಧಿಯುಂಟಾಗುತ್ತದೆ. ಆದ್ದರಿಂದ ಬೇರೆ ಬೇರೆಯಾಗಿದ್ದು, ಕರ್ಮಾನುಷ್ಠಾನ ಮಾಡುವುದು ಧರ್ಮಸಮ್ಮತವಾಗಿದೆ.

ಇದರ ಬಗ್ಗೆ ವ್ಯಾಖ್ಯಾನಮಾಡುತ್ತ, ಕುಲ್ಲೂಕ ಭಟ್ಟ ಹೀಗೆಂದು ಹೇಳಿದ್ದಾನೆ:

*"ಏವಂ ಅವಿಭಕ್ತಾ ಭ್ರಾತರಃ ಸಹ ವಸೇಯುಃ ಯದಿ ವಾ ಧರ್ಮಕಾಮನಯಾ*
*ಕೃತ ವಿಭಾಗಃ ಪೃಥಕ್ ವಸೇಯುಃ ಯಸ್ಮತಾ ಪೃಥಗವಸ್ಥಾನೇ ಸತಿ ಪೃಥಗ್*
*ಪೃಥಗ್ ಮಹಾಯಜ್ಞಾದ್ಯನುಷ್ಠಾನ ಧರ್ಮಸ್ತೇಷಾಂ ವಿವರ್ಧತೇ ತಸ್ಮಾತ್*
*ವಿಭಾಗ ಕ್ರಿಯಾ ಧರ್ಮಾರ್ಥಾ ॥"*

– ಅಂದರೆ, ಹೀಗೆ ಸೋದರರು ಅವಿಭಕ್ತರಾಗಿ ಒಂದಾಗಿ ಇರಲಿ ಅಥವಾ ಧರ್ಮ –

ಕಾಮನೆಯಿಂದ ಆಸ್ತಿವಿಭಾಗ ಮಾಡಿಕೊಂಡು ಬೇರೆಬೇರೆಯಾಗಿ ಬೇಕಾದರೂ ಇರಲಿ. ಏಕೆಂದರೆ, ಬೇರೆಬೇರೆಯಾಗಿ ಇದ್ದರೆ, ಪಂಚ ಮಹಾಯಜ್ಞಗಳ ಅನುಷ್ಠಾನವೂ ಬೇರೆಬೇರೆಯಾಗಿ ಆಗುವುದರಿಂದ ಧರ್ಮವೃದ್ಧಿ ಆಗುತ್ತದೆ. ಹೀಗಾಗಿ ವಿಭಾಗಕ್ರಿಯೆಯನ್ನು ಮಾಡಿಕೊಂಡು – ಅಂದರೆ, ಆಸ್ತಿವಿಭಾಗ ಮಾಡಿಕೊಂಡು – ಬೇರೆಬೇರೆಯಾಗಿ ಕ್ರಿಯೆಗಳನ್ನು ನೆರವೇರಿಸುವುದು ಧರ್ಮಕ್ಕೆ ಅನುಗುಣವಾದುದೇ ಆಗಿರುತ್ತದೆ.

ಮೇಧಾತಿಥಿಯೂ ಈ ಶ್ಲೋಕಕ್ಕೆ ಇದೇ ಬಗೆಯಾಗಿ ವ್ಯಾಖ್ಯಾನ ಮಾಡುತ್ತ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಹೀಗೆಂದಿದ್ದಾನೆ:

*"ಯಸ್ತು ಜೀವತ್ಯೇದ ಪಿತರಿ ಕೃತ ವಿವಾಹಸ್ತದೈವ ಪರಿಗೃಹೀತಾಗ್ನಿಸ್ತಸ್ಯಾಂಧಿಕೃತ–*
*ತತ್ತ್ವಾನ್ನೈವಾ–ವಿಭಾಗಃ ನಹಿ ವಿಭಾಗಾಧಿಭಾಗಯೋರ್ಧಮಾಧರ್ಮತ್ವಂ*
*ಸ್ವರೂಪೇಣಾಸ್ತೀತ್ಯುಕ್ತಮ್ ।"*

('ಮನುಸ್ಮೃತಿ', ಮೇಧಾತಿಥಿಭಾಷ್ಯ, ೨ನೆಯ ಭಾಗ, ಕಲ್ಕತ್ತಾ ಆವೃತ್ತಿ, ಪು. ೨೭೩).

– ಅಂದರೆ, ತಂದೆ ಜೀವಂತವಾಗಿರುವಾಗಲೇ ಮದುವೆಮಾಡಿಕೊಂಡು, ಆ ಸಂದರ್ಭದಲ್ಲಿ ಗೃಹ್ಯಾಗ್ನಿಯನ್ನು ಸ್ವೀಕರಿಸುವಂಥವನು, ಅವಿಭಕ್ತ ಕುಟುಂಬದಿಂದ ಬೇರೆಯಾಗುವುದು ಅನಿವಾರ್ಯ ಅಥವಾ ಅತ್ಯವಶ್ಯಕವಾಗುತ್ತದೆ. ಕುಟುಂಬದ ಸದಸ್ಯರು ಬೇರೆಯಾಗುವುದರಿಂದ ಅಥವಾ ಬೇರೆಯಾಗದಿರುವುದರಿಂದ ಧರ್ಮ ಅಥವಾ ಅಧರ್ಮವೇನೂ ಆಗುವುದಿಲ್ಲ ಎಂಬುದನ್ನು ನಾವು ಈಗಾಗಲೇ ತಿಳಿಸಿದ್ದೇವೆ.

೨) 'ಬೃಹಸ್ಪತಿ ಸ್ಮೃತಿ'ಯಲ್ಲಿ ಈ ವಿಷಯದ ಬಗ್ಗೆ ಹೀಗೆಂದು ಹೇಳಲಾಗಿದೆ:

*"ಏಕಪಾಕೇನ ವಸತಾಂ ಪಿತೃದೇವಾರ್ಚನಾದಿಯಮ್ ।*
*ಏಕಂ ಭವೇದ್ವಿಭಕ್ತಾನಾಂ ತದೇವಸ್ಯಾದ್ ಗೃಹೇಗೃಹೇ ॥"*

('ಬೃಹಸ್ಪತಿ ಸ್ಮೃತಿ', ೨೬/೫; ಪು. ೯೬; ಬಡೌದಾ ಆವೃತ್ತಿ)

– ಅಂದರೆ, ಸೋದರರು ಮುಂತಾದವರೆಲ್ಲ ಒಟ್ಟಿಗೇ ಇದ್ದರೆ ಹಾಗೂ ಒಂದೇ ಕಡೆಯಲ್ಲಿ ಭೋಜನ ಮಾಡಿದರೆ ಪಿತೃಯಜ್ಞ, ದೇವಯಜ್ಞ ಮೊದಲಾದುವೆಲ್ಲ ಒಂದು ಮಾತ್ರವೇ ಆಗಿರುತ್ತದೆ. ಆದರೆ, ಆಸ್ತಿವಿಭಾಗ ಮಾಡಿಕೊಂಡು ಬೇರೆಬೇರೆಯಾಗಿದ್ದರೆ, ಪ್ರತಿಯೊಂದು ಮನೆಯಲ್ಲಿಯೂ ಈ ಯಜ್ಞಗಳಾಗುತ್ತವೆ. ಆದ್ದರಿಂದ ಪ್ರತ್ಯೇಕವಾಗಿ ಇರುವುದೇ ಒಳ್ಳೆಯದು.

೩) 'ಗೌತಮ ಧರ್ಮಸೂತ್ರ'ದಲ್ಲಿಯೂ (೨೮೪) ಇದೇ ಮಾತನ್ನು ಚಿಕ್ಕಸೂತ್ರದ ರೂಪದಲ್ಲಿ ಹೇಳಲಾಗಿದ್ದು, ಅದು ಹೀಗಿದೆ :

*"ವಿಭಾಗೇ ತು ಧರ್ಮವೃದ್ಧಿಃ"*

– ಅಂದರೆ, ಅವಿಭಕ್ತ ಕುಟುಂಬಕ್ಕೆ ಬದಲಾಗಿ, ಬೇರೆಬೇರೆಯಾಗಿರುವುದರಿಂದ ಧರ್ಮವೃದ್ಧಿ ಯಾಗುತ್ತದೆ.

ಇದೇ ಬಗೆಯ ಹೇಳಿಕೆಗಳು ಇತರ ಗ್ರಂಥಗಳಲ್ಲಿಯೂ ದೊರೆಯುತ್ತವೆ. ಆದರೆ, ಅವರ ಅಂದರೆ, 'ಹಿಂದೂ ಕೋಡ್ ಬಿಲ್ಲಿ'ನ ವಿರೋಧಗಳ ಹೇಳಿಕೆಗಳು ಅವಾಸ್ತವವಾಗಿವೆ ಎಂಬುದನ್ನು ತೋರಿಸಿಕೊಡಲು ಇಷ್ಟೇ ಸಾಕಾಗುತ್ತದೆ. ಅವಿಭಕ್ತಕುಟುಂಬ ಪದ್ಧತಿಯನ್ನು ಪ್ರಾಚೀನ ಆರ್ಯ ಹಿಂದೂಧರ್ಮ ಮತ್ತು ಸಂಸ್ಕೃತಿಯ ಅನಿವಾರ್ಯ ಅಥವಾ ಅತ್ಯವಶ್ಯಕ ಅಂಗವೆಂದು ಭಾವಿಸಿ, ಅದು ಶಿಥಿಲಗೊಳ್ಳುತ್ತಿರುವುದನ್ನು ಅವರು ಅಧರ್ಮವೆಂದು ಭಾವಿಸುತ್ತಾರೆ. ವಾಸ್ತವವಾಗಿ ಧರ್ಮದ ದೃಷ್ಟಿಯಿಂದ ನೋಡಿದರೆ, ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಎಲ್ಲರೂ ಪರಸ್ಪರ ಪ್ರೀತಿಯಿಂದ ಇರಲಿ, ಸಂಪೂರ್ಣ ಸಹಾನುಭೂತಿ ಅವರಲ್ಲಿರಲಿ, ಯಾವುದೇ ಬಗೆಯ ವಿರೋಧಭಾವ ಇಲ್ಲದಿರಲಿ ಎಂಬುದು ನಮಗೆ ಅಗತ್ಯವಾಗಿರುವ ಧರ್ಮವೇ ಹೌದು. 'ಅಥರ್ವವೇದ'ದಲ್ಲಿ (೩/೩೦) ಇಂಥದೇ ಆದೇಶವಿದೆ:

*"ಸಹೃದಯಂ ಸಾಂಮನಸ್ಯಮ ವಿದ್ವೇಷಂ ಕೃಣೋಮಿವಃ ।*
*ಅನ್ಯೋ ಅನ್ಯಮಭಿಹರ್ಯತ ವತ್ಸಜಾತಾಮಿವಾಘ್ನ್ಯಾ ॥"*

– ಅಂದರೆ, ನಾನು ನಿನ್ನೊಳಗೆ ಹೃದಯ ಮತ್ತು ಮನಸ್ಸುಗಳ ಏಕತೆಯನ್ನು ಅದ್ವೇಷ ಭಾವನೆಯನ್ನೂ ನೆಲೆಗೊಳಿಸುತ್ತೇನೆ. ಹೊಸದಾಗಿ ಜನಿಸಿದ ಕರುವಿನ ವಿಷಯದಲ್ಲಿ ಹಸು ಪ್ರೀತಿಯನ್ನು ತೋರುವ ರೀತಿಯಲ್ಲಿ ನೀವು ಪರಸ್ಪರ ಪ್ರೇಮದಿಂದಿರಿ.

ಅವಿಭಕ್ತ ಕುಟುಂಬ ಪದ್ಧತಿಯ ಪರವಾಗಿ ಹಾಗೂ ವಿರೋಧವಾಗಿ ವ್ಯಾವಹಾರಿಕ ದೃಷ್ಟಿಯಿಂದ ಸಾಕಷ್ಟು ವಿಚಾರಗಳನ್ನು ಬರೆಯಬಹುದಾಗಿದೆ. ಆದರೆ, ಆ ವಿಷಯದ ಬಗ್ಗೆ ಅಷ್ಟೆಲ್ಲವನ್ನು ಇಲ್ಲಿ ಬರೆಯಬೇಕಾದ ಅಗತ್ಯವೇನೂ ಇಲ್ಲವೆಂದು ಭಾವಿಸಿದ್ದೇನೆ. ವೈಯಕ್ತಿಕ ಶಕ್ತಿಗಳ ವಿಕಾಸ, ಸ್ವಾವಲಂಬನೆಯೇ ಮೊದಲಾದ ಗುಣಗಳ ವೃದ್ಧಿ ಬೇರೆಬೇರೆಯಾಗಿರುವುದರಿಂದ ಈ ಗುಣಗಳು ಹೆಚ್ಚಾಗುತ್ತವೆ ಎಂಬುದು ಬಹುಶಃ ಜನರ ಅನುಭವಕ್ಕೆ ಬಂದಿರುವ ಸಂಗತಿಯೇ ಆಗಿದೆ. ಸಂಬಂಧಿಗಳ ಹಾಗೂ ಇತರರ ವಿಷಯದಲ್ಲಿ ದಯೆ ಮತ್ತು ಸಹಾನುಭೂತಿಗಳನ್ನು ತೋರುವುದು ಪ್ರತಿಯೊಬ್ಬ ಗೃಹಸ್ಥನ ಕರ್ತವ್ಯವೇ ಆಗಿದೆ. ಧಾರ್ಮಿಕ ದೃಷ್ಟಿಯಿಂದ ಇಷ್ಟು ಮಾತನ್ನು ಕೇಳುವುದೇ ಸಾಕಾಗುತ್ತದೆ.

# ‘ಹಿಂದೂ ಕೋಡ್ ಬಿಲ್’ನ ಅಗತ್ಯ

**ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ**

ಹಿಂದಿನ ಲೇಖನದಲ್ಲಿ ಅವಿಭಕ್ತಕುಟುಂಬ ಪದ್ಧತಿಯ ಬಗ್ಗೆ ಧಾರ್ಮಿಕ ದೃಷ್ಟಿಯಿಂದ ಒಂದಿಷ್ಟು ಬೆಳಕು ಚೆಲ್ಲಿದ್ದೆ. ಸಂಪತ್ತಿನ ವಿಷಯದಲ್ಲಿ ಹುಟ್ಟಿನಿಂದ ಬರುವ ಹಕ್ಕಿನ ಬಗ್ಗೆ ವಿಶೇಷವಾಗಿ ಬರೆಯುವ ಅಗತ್ಯವಿದೆ ಎಂದು ನಾನು ಭಾವಿಸಿರಲಿಲ್ಲ. ವೈದಿಕ ಧರ್ಮಾವಲಂಬಿಗಳಾದ ನಾವು ಯಾವುದೇ ವಿಷಯದಲ್ಲಿಯೂ ಹುಟ್ಟಿನಿಂದ ಬರುವ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

*“ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಭ್ರಾತರೋ ವಾವೃಧುಃ ಸೌಭಗಾಯ ।*
*ಯುವಾ ಪಿತಾ ಸ್ವಪಾ ರುದ್ರ ಏಷಾಂ ಸುದುಘಾ ವೃಶ್ನಿಃ ಸುದಿನಾ ಮರುದ್ಭ್ಯ ॥”*
(‘ಋಗ್ವೇದ’, ೫/೬೦೫)

– ಇವೇ ಮೊದಲಾದ ಮಂತ್ರಗಳಲ್ಲಿ ಮನುಷ್ಯ ಮಾತ್ರನ ಭ್ರಾತೃತ್ವ ಹಾಗೂ ಸಮಾನತೆಗಳನ್ನು. ತಾತ್ತ್ವಿಕ ದೃಷ್ಟಿಯಿಂದ ಪ್ರತಿಪಾದಿಸುತ್ತ, ಹುಟ್ಟಿನಿಂದ ಬರುವ ಹಕ್ಕನ್ನು ನಿರಾಕರಿಸಲಾಗಿದೆ. ಬೌದ್ಧ, ಜೈನ, ಸಿಖ್ ಮೊದಲಾದ ಧರ್ಮಗಳ ಅನುಯಾಯಿಗಳು ಕೂಡ ಸಮಾನತೆಯ ಸಿದ್ಧಾಂತವನ್ನು ಒಪ್ಪುತ್ತಾರೆ. ಹೀಗಾಗಿ, ಹುಟ್ಟಿನಿಂದ ಬರುವ ಹಕ್ಕಿಗೆ ಸಮರ್ಥನೆ ದೊರೆಯುವುದಿಲ್ಲ. ಮಹರ್ಷಿ ದಯಾನಂದರು ಇನ್ನೂ ಒಂದು ಹೆಜ್ಜೆ ಮುಂದೆಹೋಗಿದ್ದಾರೆ. ಗುಣ–ಕರ್ಮ–ಸ್ವಭಾವಗಳನ್ನು ಆಧರಿಸಿರುವ ವರ್ಣವ್ಯವಸ್ಥೆಯ ಸಿದ್ಧಾಂತವನ್ನು ಪ್ರತಿಪಾದಿಸುತ್ತ ಅವರು ‘ಸತ್ಯಾರ್ಥಪ್ರಕಾಶ’ದಲ್ಲಿ ಹೀಗೆಂದು ಬರೆದಿದ್ದಾರೆ :

“ಯಾರದೇ ಸೇವೆಗೂ ಭಂಗ ಉಂಟಾಗುವುದಿಲ್ಲ, ವಂಶಚ್ಛೇದನವೂ ಆಗುವುದಿಲ್ಲ. ಏಕೆಂದರೆ, ಅವರಿಗೆ ತಮ್ಮ ಹುಡುಗರು ಮತ್ತು ಹುಡುಗಿಯರಿಗೆ ಬದಲಾಗಿ, ವಿದ್ಯಾಸಭೆ ಮತ್ತು ರಾಜಸಭೆಗಳ ವ್ಯವಸ್ಥೆಯಿಂದಾಗಿ, ತಮ್ಮದೇ ವರ್ಣಕ್ಕೆ ಸೇರಿದ ಇತರ ವ್ಯಕ್ತಿಗಳ ಅರ್ಹರಾದ ಮಕ್ಕಳು ದೊರೆಯುತ್ತಾರೆ. ಹೀಗಾಗಿ ಯಾವುದೇ ಅವ್ಯವಸ್ಥೆಯೂ ಉಂಟಾಗುವುದಿಲ್ಲ.” ‘ಮಿತಾಕ್ಷರಾ’ ಮತ್ತು ‘ದಾಯಾಭಾಗ’ಗಳು ಮಾಡುವ ವ್ಯತ್ಯಾಸದ ಬಗ್ಗೆ ವಿಸ್ತಾರವಾಗಿ ಚರ್ಚಿಸುವುದು ಈ ಲೇಖನದಲ್ಲಿ ಸಾಧ್ಯವಿಲ್ಲ. ಆದರೆ, ‘ಹಿಂದೂ ಲಾ ಕಮಿಟಿ’ಯ ಮುಂದೆ ಸಾಕ್ಷ್ಯ ನೀಡುತ್ತ, ಈ ವಿಷಯದ ಬಗ್ಗೆ ಪಟ್ನಾದ ಒಬ್ಬ ವಿದ್ವಾಂಸರೂ, ನಿವೃತ್ತ ಉಪನ್ಯಾಯಾಧೀಶರೂ ಆದ ವ್ಯಕ್ತಿ ತಮ್ಮ ಅನುಭವದ ಆಧಾರದ ಮೇಲೆ ಹೇಳಿರುವ ಒಂದು ಅತ್ಯಂತ ಮಹತ್ವಪೂರ್ಣವಾದ ಹಾಗೂ ತರ್ಕಸಮ್ಮತವಾದ ವಿಚಾರವನ್ನು ಉಲ್ಲೇಖಿಸುವುದು ಉಚಿತ ಎಂದು ನನಗೆ ತೋರುತ್ತದೆ. ಅವರು ಹೀಗೆಂದು ಹೇಳಿದ್ದಾರೆ,’ ‘ಮಿತಾಕ್ಷರಾ’ಗಿಂತ ‘ದಾಯಾಭಾಗ’ ಹೆಚ್ಚು ಉಪಯುಕ್ತವಾದುದು. ಅವಿಭಕ್ತಕುಟುಂಬ ಪದ್ಧತಿಯನ್ನು ಮಗನಿಗೆ ಹುಟ್ಟಿನಿಂದ ಬರುವ ಹಕ್ಕು ಮೊದಲಾದುವನ್ನು ಕೊನೆಗಾಣಿಸಿಬಿಡಬೇಕೆಂಬ ನಿಲುವಿನ ಪರವಾಗಿ ನಾನಿದ್ದೇನೆ. ಬಿಹಾರದಲ್ಲಿ ಶ್ರೀಮಂತ ಕುಟುಂಬಗಳಿಗೆ ಸೇರಿದ ಹುಡುಗರು ಸೋಮಾರಿಗಳಾಗಿರುವುದನ್ನು ನಾನು ಕಂಡಿದ್ದೇನೆ. ಇದಕ್ಕೆ

ಕಾರಣವೇನೆಂದರೆ ಅವರಿಗೆ ಹುಟ್ಟಿನಿಂದ ಬರುವ ಹಕ್ಕು ಲಭಿಸಿದೆ. ಇತ್ತ 'ದಾಯಾಭಾಗ'ಕ್ಕೆ ಅನುಗುಣವಾದ ನಿಯಮಗಳು ಜಾರಿಯಲ್ಲಿರುವ ಬಂಗಾಳದಲ್ಲಿ ಹುಡುಗರು ಕಾರ್ಯನಿಷ್ಠರೂ ಸಾಹಸಿಗಳೂ ಆಗಿದ್ದಾರೆ. ಇದಕ್ಕೆ ಕಾರಣವೇನೆಂದರೆ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದಾರೆ ಎಂಬ ಕಾರಣಕ್ಕಾಗಿಯೇ ಅವರಿಗೆ ಯಾವುದೇ ಹಕ್ಕು ದೊರೆಯುವುದಿಲ್ಲ." (ನೋಡಿ : 'ಹಿಂದೂ ಲಾ ಕಮಿಟಿ ರಿಪೋರ್ಟ್', ಪು. ೧೫೪).

ಪಿತಾ–ಪಿತಾಮಹರ ಸಾಲದ ನೈತಿಕ ಹೊಣೆಗಾರಿಕೆಯಿಂದ ಪುತ್ರ–ಪೌತ್ರಾದಿಗಳನ್ನು ಮುಕ್ತಗೊಳಿಸುವ ಮಾತನ್ನು, ಈ ಹಿಂದೆ ಉದ್ಧರಿಸಲಾಗಿರುವ ೮೮ನೆಯ ಪ್ರಕರಣದಲ್ಲಿ ಹೇಳಲಾಗಿದೆ, ಅದು ತರ್ಕಬದ್ಧವೂ, ನ್ಯಾಯಸಮ್ಮತವೂ ಆಗಿದೆ.

ಎಲ್ಲರಿಗೂ ಸಮಾನವಾಗಿರುವಂಥ 'ಹಿಂದೂ ಕೋಡ್ ಬಿಲ್ಲಿ'ನ ಅಗತ್ಯ ಮತ್ತು ಉಪಯುಕ್ತತೆಗೆ ಸಂಬಂಧಿಸಿದಂತೆ ಯಾವನೇ ಸಮಾಜದ ಹಿತೈಷಿ, ಒಗ್ಗಟ್ಟಿನ ಸಮರ್ಥಕ ಭಿನ್ನಾಭಿಪ್ರಾಯವನ್ನು ಹೊಂದಿರುವುದು ಬಹುಮಟ್ಟಿಗೆ ಸಾಧ್ಯವೇ ಇಲ್ಲ ಎಂದು ನಾನು ನಂಬಿದ್ದೇನೆ. ಈಗ ಬಹುಮಟ್ಟಿಗೆ ಸ್ಥಳೀಯ ಅಥವಾ ಪ್ರಾಂತೀಯ ರೂಢಿಗಳು ಹಾಗೂ ರೀತಿ–ನೀತಿಗಳು ಕಾನೂನಿನ ಸ್ಥಾನವನ್ನು ಪಡೆದುಕೊಂಡುಬಿಟ್ಟಿವೆ.

*"ರೂಢಿಃ ಶಾಸ್ತ್ರದ್ ಬಲಿಯಸೀ"* – ಅಂದರೆ, "ರೂಢಿ ಶಾಸ್ತ್ರಕ್ಕಿಂತಲೂ ಹೆಚ್ಚು ಪ್ರಬಲವಾಗಿರುತ್ತದೆ" – ಎಂಬ ಈ ಹಾನಿಕಾರಕವಾದ ಹಾಗೂ ಒಕ್ಕೂಟಕ್ಕೆ ಮತ್ತು ಏಕತೆಗೆ ಬಾಧಕವಾಗಿರುವಂಥ ಉಕ್ತಿ ಹಿಂದೂ ಸಮಾಜವನ್ನು ಚಿಂದಿಚಿಂದಿಯಾಗಿಸಿಬಿಟ್ಟಿದೆ. ಕಾನೂನಿನ ಪ್ರಕಾರ ತೀರ್ಮಾನವನ್ನು ಕೊಡುವಲ್ಲಿಯೂ ಇದರಿಂದಾಗಿ ತುಂಬ ತೊಂದರೆಗಳು ಉಂಟಾಗುತ್ತವೆ. ನ್ಯಾಯಾಲಯಗಳ ಪರಸ್ಪರ ವಿರುದ್ಧವಾದ ತೀರ್ಮಾನಗಳಿಂದಾಗಿ ಹಣ ಹಾಗೂ ಶಕ್ತಿ–ಸಾಮರ್ಥ್ಯಗಳ ಅಪಾರ ಅಪವ್ಯಯವಾಗುತ್ತಿದೆ. ಹೀಗಾಗಿ, ಎಲ್ಲರಿಗೂ ಸಮಾನವಾಗಿರುವಂಥ 'ಹಿಂದೂ ಕೋಡ್' ಇರುವುದು ಎಲ್ಲ ದೃಷ್ಟಿಗಳಿಂದಲೂ ಅಪೇಕ್ಷಣೀಯವಾಗಿದೆ. "ಯಾರು ಏನು ಬೇಕಾದರೂ ಹೇಳಲಿ, ಏನು ಬೇಕಾದರೂ ಮಾಡಲಿ, ಸ್ವದೇಶಿಯರ ಆಳ್ವಿಕೆಯೇ ಎಲ್ಲಕ್ಕಿಂತಲೂ ಉತ್ತಮವಾದುದಾಗಿರುತ್ತದೆ. ಮತಾಂತರದ ಒತ್ತಾಯವಿಲ್ಲದಿರುವಂಥ, ನಮ್ಮವನು, ಬೇರೆಯವನು ಎಂಬ ಪಕ್ಷಪಾತ ಇಲ್ಲದಿರುವಂಥ, ತಂದೆ–ತಾಯಿಗಳಂತೆ ಪ್ರಜೆಗಳ ಮೇಲೆ ಕೃಪೆ ತೋರುವಂಥ, ನ್ಯಾಯ ಮತ್ತು ಅನ್ಯಾಯಗಳ ಬಗ್ಗೆ ವಿವೇಚನೆಯನ್ನು ತೋರುವಂಥ ವಿದೇಶೀಯರ ಆಳ್ವಿಕೆಯೂ ಸಂಪೂರ್ಣವಾಗಿ ಸುಖದಾಯಕವಾಗಿರುವುದಿಲ್ಲ." ಈ ಮಾತುಗಳ ಮೂಲಕ ಸ್ವರಾಜ್ಯದ ಮಹತ್ವವನ್ನು ಸಾರಿ ಹೇಳಿದ ಮಹರ್ಷಿ ದಯಾನಂದರು, ಹೀಗೆಂದು ಹೇಳಿದರು : "ಆದರೆ, ಬೇರೆ ಬೇರೆ ಭಾಷೆಗಳು, ಶಿಕ್ಷಣ ವ್ಯವಸ್ಥೆಗಳು, ಬೇರೆ ಬೇರೆ ವ್ಯವಹಾರಗಳು–ಇವುಗಳ ನಡುವಣ ವಿರೋಧ ಇಲ್ಲವಾಗುವುದು ತುಂಬ ದುಸ್ತರವಾಗಿದೆ. ಇದು ಇಲ್ಲವಾಗದ ಹೊರತು, ಪರಸ್ಪರರಿಗೆ ಪೂರ್ಣ ಉಪಕಾರವಾಗುವುದಾಗಲಿ, ಪರಸ್ಪರರಿಗೆ ಸಮ್ಮತವಾಗುವಂಥ ಅಭಿಪ್ರಾಯ ಏರ್ಪಡುವುದಾಗಲಿ ಕಷ್ಟವಾಗುತ್ತದೆ." ('ಸತ್ಯಾರ್ಥ ಪ್ರಕಾಶ' ೮ರಲ್ಲಿನ ಸೂತ್ರ).

ಬೇರೆ ಬೇರೆ ವ್ಯವಹಾರಾದಿಗಳಿಂದ ಕೂಡಿರುವ, ಹುಟ್ಟಿಗೆ ಸಂಬಂಧಿಸಿದ ವೈಷಮ್ಯಗಳನ್ನು ದೂರಮಾಡುವಲ್ಲಿ 'ಹಿಂದೂ ಕೋಡ್ ಬಿಲ್' ನೆರವಾಗುತ್ತದೆ ಎಂಬುದರಲ್ಲಿ ನನಗೆ ಸಂದೇಹವೇನೂ ಕಾಣುತ್ತಿಲ್ಲ. ಹೀಗಾಗಿ, ಅದು ಉಪಯುಕ್ತವಾಗುತ್ತದೆ. ಹಿಂದೂಗಳಿಗೆ ಮಾತ್ರವಲ್ಲ. ಎಲ್ಲ ಭಾರತೀಯರಿಗೆ ಏಕರೂಪದಲ್ಲಿ ಅನ್ವಯವಾಗುವಂಥ ಸರ್ವಸಾಮಾನ್ಯ ವ್ಯವಹಾರ ಸಂಹಿತೆಯನ್ನು ರೂಪಿಸಬೇಕು ಎಂಬ ಬೇಡಿಕೆಯಲ್ಲಿ ಅನಿಷ್ಟಕಾರಕವಾಗಿರುವಂಥದೇನು ನನಗೆ ಕಾಣುತ್ತಿಲ್ಲ. ಆದರೆ, ಅದಕ್ಕೆ ಹೆಚ್ಚು ಸಮಯ

ಹಿಡಿಯುತ್ತದೆ. ಅದಕ್ಕೆ ಮೊದಲು, ಹಿಂದೂಗಳ ಒಕ್ಕೂಟವನ್ನು ದೃಢಗೊಳಿಸುವ ಸಲುವಾಗಿ ಹಾಗೂ ಸಾಮಾಜಿಕ ಕೆಡಕುಗಳನ್ನು ನಿವಾರಿಸುವ ಸಲುವಾಗಿ 'ಹಿಂದೂ ಕೋಡ್ ಬಿಲ್' ಉಪಯುಕ್ತವಾಗುತ್ತದೆ ಎಂಬುದನ್ನು ನಿರಾಕರಿಸಲು ಸಾಧ್ಯವಾಗುವುದಿಲ್ಲ. ಛಲವಾದಿ ಮುಸ್ಲಿಂ ಲೀಗ್‌ನ ಸದಸ್ಯರಾಗಿರುವ ಮೌಲಾನಾ ನಜೀರುದ್ದೀನ್ ಅಹಮದ್ ಅವರ ಮನೋವೃತ್ತಿಯಲ್ಲಿ ಈಗ ವಿಶೇಷ ಬದಲಾವಣೆಯಾಗಿದೆ ಎಂದು ನಂಬಲು ನಮಗೆ ಯಾವುದೇ ಆಧಾರಗಳು ದೊರೆಯುವುದಿಲ್ಲ. ಈ ದೃಷ್ಟಿಯಿಂದಲೂ ಅವರು 'ಹಿಂದೂ ಕೋಡ್ ಬಿಲ್ಲ'ನ್ನು ವಿರೋಧಿಸುತ್ತಿದ್ದಾರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಾಗಿಲ್ಲದೆ ಇದ್ದಲ್ಲಿ, ಏಳು ಘಂಟೆಗಳ ಭಾಷಣದ ಅಗತ್ಯ ಅವರಿಗೆ ಕಂಡುಬರುವಂಥ ಯಾವ ಸಂಬಂಧವೂ ಅವರಿಗೂ ಇದಕ್ಕೂ ಇದ್ದಂತೆ ನನಗೆ ತೋರುವುದಿಲ್ಲ.

ಇಂದಿನ ಸಂವಿಧಾನ ಸಭೆಯ ಸದಸ್ಯರಿಗೆ ಇಂಥ ಮಸೂದೆಯನ್ನು ರೂಪಿಸುವ ಹಾಗೂ ಅದು ಅಂಗೀಕರಿಸುವ ಹಕ್ಕೇ ಇಲ್ಲ ಎಂದು ಹೇಳುವುದು ನನಗೆ ತರ್ಕಸಮ್ಮತವಾಗಿ ತೋರುವುದಿಲ್ಲ. ಸಂವಿಧಾನ ಸಭೆಗೆ ಕಾನೂನನ್ನು ರೂಪಿಸುವಂಥ ಮಹತ್ವಪೂರ್ಣ ಕಾರ್ಯವನ್ನು ನಿರ್ವಹಿಸುವ ಹಕ್ಕು ಇರುವುದಾದಲ್ಲಿ, 'ಹಿಂದೂ ಕೋಡ್ ಬಿಲ್ಲಿ'ನಂಥ ಉಪಯುಕ್ತ ಮಸೂದೆಯನ್ನು ರೂಪಿಸುವ ಹಾಗೂ ಅಂಗೀಕರಿಸುವ ಹಕ್ಕಿನಿಂದ ಅದನ್ನು ಹೇಗೆ ತಾನೇ ವಂಚಿಸಲು ಸಾಧ್ಯವಾಗುತ್ತದೆ? ಅದರಲ್ಲಿಯೂ ಸಂವಿಧಾನ ಸಭೆಯನ್ನು ಸರ್ವಾಧಿಕಾರ ಸಂಪನ್ನವಾಗಿರುವ ಸ್ವತಂತ್ರ ಸಂಸ್ಥೆ ಎಂದು ಮಾನ್ಯ ಮಾಡಿರುವಾಗ 'ಹಿಂದೂ ಕೋಡ್ ಬಿಲ್'ನಂಥ ಮಸೂದೆಗೆ ಒಪ್ಪಿಗೆಯನ್ನು ನೀಡುವ ಹಕ್ಕು ಕೇವಲ ಹಿಂದೂ ಸದಸ್ಯರಿಗೆ ಇರಬೇಕೇ ಹೊರತು, ಇತರರಿಗಲ್ಲ; ಏಕೆಂದರೆ ಅದಕ್ಕೂ ಆ ಹಿಂದೂಗಳಿಗೂ ಯಾವುದೇ ಸಂಬಂಧವಿಲ್ಲ ಎಂಬ ವಾದ ನ್ಯಾಯಸಮ್ಮತವೂ ತರ್ಕಬದ್ಧವೂ ಆಗಿದೆ ಎಂಬುದು ನಿಜ. ಈ ಲೇಖನಮಾಲೆಯಲ್ಲಿ ಶಾಸ್ತ್ರದೃಷ್ಟಿಯಿಂದ ಹಾಗೂ ವ್ಯಾವಹಾರಿಕ ದೃಷ್ಟಿಯಿಂದ 'ಹಿಂದೂ ಕೋಡ್ ಬಿಲ್'ನ ವಿಭಿನ್ನ ಮುಖ್ಯ ಪ್ರಕರಣಗಳ ಮೇಲೆ ಬೆಳಕು ಚೆಲ್ಲುತ್ತ ನಾನು ಹೇಳಿರುವಂತೆ ಏಕ–ವಿವಾಹ ಮತ್ತು ಅಂತರ್ಜಾತೀಯ ವಿವಾಹಗಳ ಬಗೆಗಿನ ಸಮರ್ಥನೆ, ಸ್ತ್ರೀಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದು – ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿರುವಂಥ ಅದರ ಉಪಬಂಧಗಳು ಪ್ರಶಂಸನೀಯವಾಗಿವೆ. ವಿವಾಹದ ವಯಸ್ಸು, ದಾಯಾಭಾಗದಲ್ಲಿನ ಹೆಣ್ಣುಮಕ್ಕಳ ಹಕ್ಕು – ಇವೇ ಮೊದಲಾದ ವಿಷಯಗಳಲ್ಲಿ ತಿದ್ದುಪಡಿಗಳನ್ನು ಮಾಡಬೇಕಾದ ಅಗತ್ಯ ಇದೆ. ಗಂಡು–ಹೆಣ್ಣುಗಳಿಗೆ ಮದುವೆಯ ಕನಿಷ್ಠ ವಯಸ್ಸನ್ನು ೨೪ ಮತ್ತು ೧೬ ಎಂದು ನಿಗದಿಪಡಿಸುವುದಕ್ಕೆ ವಿಶೇಷವಾದ ಅಡಚಣೆಗಳೇನಾದರೂ ಇದ್ದರೆ, ಇದನ್ನು ೨೨ ಮತ್ತು ೧೫ ಎಂದು ಈ ಕೂಡಲೇ ನಿಗದಿಪಡಿಸಬೇಕು. ಅತಿ ವಿಶೇಷ ಸಂದರ್ಭಗಳಲ್ಲಿ ವಿವಾಹ–ವಿಚ್ಛೇದನಕ್ಕೆ ಅನುಮತಿಕೊಡುವುದು ಅಗತ್ಯ ಎಂದಾದಲ್ಲಿ ಅದರ ಷರತ್ತುಗಳನ್ನು ಇನ್ನಷ್ಟು ಬಿಗಿಯಾಗಿಸಬೇಕು ಹಾಗೂ ಇದಕ್ಕೆ ೮ರಿಂದ ೧೦ ವರ್ಷಗಳ ಅವಧಿಯನ್ನು ಗೊತ್ತುಪಡಿಸಬೇಕು. ಈ ಅವಧಿಯ ಒಳಗಾಗಿ ನಪುಂಸಕತೆ, ಹುಚ್ಚು, ಕುಷ್ಠರೋಗ ಇವೇ ಮೊದಲಾದ ಕಾರಣಗಳಿಗಾಗಿಯೂ ವಿವಾಹ–ವಿಚ್ಛೇದನಕ್ಕೆ ಅನುಮತಿಯನ್ನು ಕೊಡಬಾರದು. ವಿಷಮ–ವಿವಾಹಗಳನ್ನು ನಿವಾರಿಸುವ ಸಲುವಾಗಿಯೂ ನಿಯಮಗಳನ್ನು ರೂಪಿಸಬೇಕಾದ ಅಗತ್ಯವಿದೆ. ದತ್ತು ಸ್ವೀಕಾರ ಮಾಡಲು ಗಂಡಸಿಗೆ ೨೫ ವರ್ಷಗಳ ಹಾಗೂ ಹೆಂಗಸಿಗೆ ೨೧ ವರ್ಷಗಳ ವಯಸ್ಸನ್ನು ಕಡ್ಡಾಯವಾಗಿ ನಿಗದಿಪಡಿಸಬೇಕಾಗಿದೆ. ಉಯಿಲು ಮಾಡದೆ ತೀರಿಕೊಂಡ ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ದಾಯ ಭಾಗವಾಗಿ ಗಂಡುಮಕ್ಕಳಿಗೆ ಸರಿಸಮಾನದ ಹಕ್ಕಿಗೆ ಬದಲಾಗಿ, ನಾಲ್ಕನೆಯ ಒಂದು (ಕಾಲು) ಭಾಗದಷ್ಟು ಪಾಲು ದೊರೆಯುವಂತಾಗಬೇಕು, ಆದರೆ ಗಂಡನ ಆಸ್ತಿಯಲ್ಲಿ ಮತ್ತು

ತಾಯಿಯ ಸ್ತ್ರೀಧನದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಹಕ್ಕುದೊರೆಯುವಂತಾಗಬೇಕು. ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯನ್ನು ಉಪಭೋಗಿಸುವ ಹಕ್ಕು ಇರಬೇಕು; ಸೋದರರನ್ನು ಬಿಟ್ಟು ಇತರರಿಗೆ ಅದನ್ನು ಮಾರುವ ಅಥವಾ ಬಾಡಿಗೆಗೆ ನೀಡುವ ಹಕ್ಕು ಇರಬಾರದು. ಇವೇ ಮೊದಲಾದ ಕೆಲವು ತಿದ್ದುಪಡಿಗಳನ್ನು ಅಳವಡಿಸುವ ಪ್ರಯತ್ನ ಮಾಡುತ್ತ 'ಹಿಂದೂ ಕೋಡ್ ಬಿಲ್'ಗೆ ಸಾಮಾನ್ಯ ರೂಪದ ಸಮರ್ಥನೆಯನ್ನು ನೀಡುವುದು ಸಮಾಜದ ಮತ್ತು ದೇಶದ ಹಿತದೃಷ್ಟಿಯಿಂದ ಸರ್ವಥಾ ಸೂಕ್ತವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಹಿಂದೂ ಸಮಾಜದ ಇಂದಿನ ಸ್ಥಿತಿ ಶೋಚನೀಯವಾಗಿದೆ. ಅಗತ್ಯವಾಗಿರುವ ಅನೇಕ ಸುಧಾರಣೆಗಳನ್ನು – ಇದರಲ್ಲಿ ಜಾತಿಭೇದವನ್ನು ದೂರವಾಗಿಸುವುದಕ್ಕೆ ಪ್ರಮುಖ ಸ್ಥಾನ ದೊರೆಯುಬೇಕಾಗಿದೆ – ತರದೆ ಇದ್ದಲ್ಲಿ, ಅದನ್ನು ಉದ್ಧಾರಮಾಡಲು ಸಾಧ್ಯವಿಲ್ಲವೆಂದು ತೋರುತ್ತದೆ. ವಿಚಾರವಾದಿಗಳಾಗಿರುವ ಮಹಾನುಭಾವರುಗಳು ನಿಷ್ಪಕ್ಷಪಾತವಾಗಿ ಇವುಗಳ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಾರೆಂದು ನಂಬಿದ್ದೇನೆ.

# ವಿಷಯಸೂಚಿ


**ಅ**

ಅಂಥೋನಿ ೧೧೨

ಅಂಬಾಲ ೩೯೫

ಅಂಬೇಡ್ಕರ್ ೩, ೬, ೮, ೧೦, ೧೭, ೨೦, ೨೧, ೨೨, ೨೩, ೨೭, ೩೨, ೩೪, ೩೫, ೩೬, ೩೭, ೪೨, ೪೩, ೪೪, ೪೫, ೪೭, ೪೮, ೫೧, ೫೬, ೫೭, ೬೦, ೬೧, ೬೨, ೬೩, ೬೭, ೭೧, ೭೨, ೭೪, ೭೬, ೭೮, ೮೦, ೮೬, ೮೭, ೮೮, ೮೯, ೯೧, ೯೨, ೯೪, ೯೫, ೯೬, ೯೭, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೬, ೧೦೭, ೧೦೮, ೧೦೯, ೧೧೦, ೧೧೩, ೧೧೪, ೧೧೫, ೧೧೭, ೧೧೮, ೧೨೧, ೧೨೨, ೧೨೩, ೧೨೫, ೧೨೭, ೧೩೦, ೧೩೧, ೧೩೩, ೧೩೪, ೧೩೫, ೧೩೯, ೧೪೧, ೧೪೨, ೧೪೪, ೧೬೦, ೧೬೧, ೧೬೫, ೧೬೬, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೩, ೧೭೪, ೧೭೭, ೧೭೮, ೧೭೯, ೧೮೨, ೧೮೩, ೧೮೪, ೧೮೭, ೧೮೯, ೧೯೦, ೧೯೩, ೧೯೪, ೧೯೫, ೧೯೭, ೨೦೭, ೨೦೮, ೨೦೯, ೨೧೦, ೨೧೨, ೨೨೩, ೨೨೬, ೨೨೮, ೨೩೩, ೨೩೬, ೨೩೭, ೨೩೮, ೨೩೯, ೨೪೦, ೨೪೧, ೨೪೩, ೨೪೪, ೨೪೫, ೨೪೬, ೨೪೯, ೨೫೧, ೨೫೪, ೨೫೫, ೨೫೬, ೨೫೮, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೭೨, ೨೭೩, ೨೭೪, ೨೭೭, ೨೮೦, ೨೮೧, ೨೮೩, ೨೮೪, ೨೮೫, ೨೮೯, ೨೯೦, ೨೯೧, ೨೯೩, ೩೦೧, ೩೦೫, ೩೦೬, ೩೦೭, ೩೦೯, ೩೧೩, ೩೧೫, ೩೨೦, ೩೨೨, ೩೨೬, ೩೩೧, ೩೩೨, ೩೩೩, ೩೩೪, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೦, ೩೫೨, ೩೫೪, ೩೫೫, ೩೫೬, ೩೫೭, ೩೬೦, ೩೬೧, ೩೬೪, ೩೬೬, ೩೬೯, ೩೭೧, ೩೭೨, ೩೭೩, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೩, ೩೮೭, ೩೯೦, ೩೯೧, ೩೯೨, ೩೯೩, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೧೫, ೪೧೬, ೪೧೭, ೪೧೮, ೪೧೯, ೪೨೦, ೪೨೨, ೪೨೩, ೪೨೪, ೪೨೫, ೪೨೬, ೪೨೯, ೪೩೩, ೪೩೪, ೪೩೬, ೪೩೭, ೪೪೧, ೪೪೩, ೪೪೫, ೪೪೬, ೪೪೭, ೪೪೮, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೮, ೪೫೯, ೪೬೭, ೪೭೫, ೪೭೯, ೪೮೧, ೪೮೨, ೪೯೭

ಅಗರಕರ್ ೨೨೬

ಅಗ್ನಿಪುರಾಣ ೪೯೨

ಅಚಿಂತರಂಲಾಲ ೪೫೩

ಅಜಮೀರ್ ೧೯೮, ೨೬೪, ೪೩೧, ೪೩೨, ೫೩೦

ಅಥರ್ವವೇದ ೫೦೩, ೫೦೪, ೫೩೨

ಅನಂತ ಸದಾಶಿವ ಅಲ್ತೇಕರ್ ಡಾ. ೫೧೦

ಅನಂತಶಯನಂ ಅಯ್ಯಂಗಾರ್ಯರು ೩೩೯, ೩೪೦, ೩೭೭

ಅನಿಬೆಸೆಂಟ್ ೧೦೯

ಅನ್ಸಾರಿ ೪೫೩

ಅಬ್ದುಲ್ ಕಲಾಂ ಆಜಾದ್ ೧೬೭
ಅಮಲಾಕ್ಷ ೩೧೬
ಅಮಲೋಕ್ ಚಂದ್ ೨೮೦, ೩೦೮, ೩೪೦, ೩೭೭
ಅಮೆರಿಕ ೧೭, ೧೪೪, ೧೮೯, ೧೯೦, ೨೧೨, ೩೨೭, ೩೩೦
ಅಯ್ಯಂಗಾರ್ ಎಂ. ಎ. ೧೧೧, ೧೩೯, ೧೪೦, ೧೪೬, ೧೪೮
ಅರಬ್ ೧೨೮
ಅಲಹಾಬಾದ್ ೫೧೫
ಅಲಿಫರ್ ೪೭೩
ಅಲೆಗ್ಸಾಂಡರ್ ೧೨೨
ಅವದ್ ೪೧೪
ಅಸ್ಸಾಂ ೩, ೬೪, ೬೫, ೧೦೮, ೧೬೩, ೨೨೦, ೩೩೭, ೩೬೯
ಅಹಮದಾಬಾದ್ ೧೪೬
ಅಹಿಂದೂ ೪೮೧

ಆ

ಆಂಗ್ಲಭಾಷೆ ೧೫೫, ೨೩೫, ೨೩೭, ೩೮೮
ಆಕಾಲಿ ೩೪೭
ಆಗಾಖಾನ್ ೧೨೬
ಆಚಾರ್ಯ ಕೃಪಲಾನಿ ೧೦೩
ಆಜ್ಮೀರ್ ೭, ೮೯, ೧೧೫
ಆಫ್ರಿಕಾ ೧೭
ಆರ್ಯ ೧೧೦, ೧೯೯, ೨೪೪, ೨೬೨, ೩೩೬, ೪೭೯
ಆರ್ಯಸಮಾಜ ೧೪೯, ೧೭೩, ೨೪೮, ೩೨೧

ಇ

ಇಂಗ್ಲಿಷ್ ೨೨, ೧೧೦, ೧೫೯, ೨೩೫, ೨೪೭, ೩೨೩, ೪೮೫
ಇಂಗ್ಲೆಂಡ್ ೧೧೯, ೧೩೦, ೨೩೫, ೨೩೬, ೪೨೦, ೪೨೯, ೪೫೫, ೪೬೯
ಇಂಡೋನೇಷಿಯಾ ೧೪೯
ಇಂದಿರಾ ವಿದ್ಯಾವಾಚಸ್ಪತಿ ೨೫, ೨೬, ೫೧೨
ಇಕ್ಬಾಲ್ ಸಿಂಗ್ ೩೪೭
ಇರಾನ್ ೨೪೪
ಇಸ್ಲಾಂ ೧೪೦, ೧೪೨, ೧೪೯, ೨೪೫, ೩೨೪, ೪೨೨, ೪೯೧

ಈ

ಈಜಿಪ್ಷಿಯನ್ ೩೩೪
ಈಟ್ಸ್ ೨೪೪
ಈಶ್ವರ ಚಂದ್ರ ವಿದ್ಯಾಸಾಗರ ೧೫೬, ೨೪೨

ಋ

ಋಗ್ವೇದ ೪೮೬, ೪೮೮, ೪೮೯, ೫೦೩, ೫೧೧, ೫೧೨, ೫೧೪, ೫೩೩

ಏ

ಏಷ್ಯಾ ೨೮೩, ೩೩೨

ಒ

ಒರಿಸ್ಸಾ ೪, ೬೦, ೧೧೨, ೧೨೯, ೧೩೦, ೧೬೬, ೧೮೧, ೨೪೬, ೩೦೬, ೩೩೧
ಒಹಾದ್ ೨೪೦

ಓ

ಓರಾನ್ ೪೩೨, ೪೩೫, ೪೫೩

ಕ

ಕಚ್ಚಿಮುಸ್ಲಿಂ ೧೪೧
ಕಚ್ಚಿಮೆಮನ್ ೬೪, ೧೪೦, ೧೪೧, ೨೪೫

ಕಣ್ವ ೫೧೬
ಕನಕ ಸಬಾಯ್ ೪೫೩
ಕನ್ಯಾಕುಮಾರಿ ೨೮೩, ೪೩೩
ಕನ್ಹೈಯಾಲಾಲ್ ಮುನ್ಷೀ ೫೨೭
ಕಪೂರ್ (ಜಸ್ಪತ್ ರಾಯ್) ಜೆ.ಆರ್. ೧೩, ೨೮, ೩೧, ೩೨, ೩೩, ೪೧, ೪೨, ೪೩, ೬೨, ೬೪, ೬೯, ೯೪, ೧೦೧, ೧೦೩, ೧೦೪, ೧೦೮, ೧೧೫, ೧೩೪, ೧೬೦, ೧೬೧, ೧೬೮, ೧೬೯, ೧೭೦, ೧೭೧, ೧೭೨, ೧೭೫, ೧೭೬, ೧೭೮, ೧೮೨, ೧೯೩, ೨೩೦, ೨೪೭, ೨೬೪, ೨೭೧, ೨೯೯, ೩೦೭, ೩೨೩, ೩೩೯, ೩೪೦, ೩೪೧, ೩೪೨, ೩೪೪, ೩೫೧, ೩೫೨, ೩೫೪, ೩೫೬, ೩೫೭, ೩೫೮, ೩೭೬, ೩೮೪, ೩೮೫, ೪೦೬
ಕರಪತ್ರಜೀ ೧೯೫, ೪೩೩
ಕರೇವಾ ೮೬, ೨೮೦, ೨೮೨, ೪೧೩, ೪೧೪, ೪೧೫, ೪೧೬
ಕಲಕತ್ತಾ ೧೩೬, ೨೦೧, ೨೦೨, ೨೨೮, ೩೮೬, ೪೩೩
ಕಲೀಮಾ ೨೪೫
ಕಲಕತ್ತಾ ೫೪, ೯೨, ೧೩೬, ೩೩೬, ೪೮೫, ೫೨೭, ೫೩೧
ಕಾಂಗ್ರೆಸ್ ೧೨೩, ೧೨೩, ೧೫೪, ೧೫೭, ೧೫೮, ೨೪೩, ೨೫೮, ೨೫೯, ೨೮೬, ೪೩೭, ೪೭೦
ಕಾಕಾಸಾಹೇಬ್ ೨೨೭, ೨೩೬, ೨೩೭
ಕಾತ್ಯಾಯನ ೪೯೫, ೫೦೭, ೫೧೮, ೫೨೫
ಕಾಬೂಲ್ ೩೪೯
ಕಾಮತ್ ೧೬೩, ೧೬೮, ೧೭೩, ೧೮೮, ೧೯೦, ೧೯೭, ೨೦೦, ೨೦೧, ೨೦೨, ೨೦೬, ೨೦೮
ಕಾಮಮಶ್ನೀಯಾದ್ ೫೦೮
ಕಾಶ್ಮೀರ ೨೪೦, ೪೩೩, ೪೭೧
ಕುಂಝ್ರು ೧೯೪, ೨೨೮, ೨೨೯, ೨೩೧, ೨೩೨, ೨೩೪, ೨೩೫, ೨೩೬, ೨೪೦, ೨೪೩, ೨೪೪, ೨೪೭, ೩೩೧, ೪೫೩
ಕುಚ್ ೧೨೬
ಕುಮಾರಿಲ ೨೯೨
ಕೃಷ್ಣ ಚಂದ್ರಶರ್ಮ ೫೧, ೭೩, ೮೧, ೨೩೧
ಕೃಷ್ಣಮಾಚಾರಿ ಟಿ.ಟಿ. ೪೫೩
ಕೃಷ್ಣವಾಕ ಮರುಮಕ್ಕತಾಯಂ ೨೬೨, ೩೬೧, ೩೯೩
ಕೃಷ್ಣಾನಂದ ರಾಯ್ ೩೩೮
ಕೇಶವ ಚಂದ್ರಸೇನ್ ೨೨೦
ಕೇಶವರಾವ್ ೧೪೮
ಕೊಚ್ಚಿನ್ ೧೧೯, ೨೦೫, ೨೩೩, ೨೬೨, ೨೯೯, ೩೬೧, ೩೯೩, ೪೦೯, ೪೪೧
ಕೋಕೋಕೋಲಾ ೪೪೫
ಕ್ಯಾಥೋಲಿಕರು ೨೧, ೧೯೦
ಕ್ರಿಶ್ಚಿಯನ್ ೯, ೧೦, ೧೨, ೧೪, ೧೫, ೧೯, ೨೦, ೨೧, ೨೫, ೩೦, ೩೧, ೩೯, ೪೧, ೪೩, ೪೫, ೪೭, ೪೮, ೪೯, ೫೦, ೫೧, ೫೩, ೫೬, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೪, ೭೫, ೮೧, ೮೩, ೯೩, ೯೮, ೧೦೯, ೧೧೦, ೧೪೧, ೧೫೧, ೧೫೨, ೧೫೩, ೧೬೯, ೧೭೫, ೧೭೬, ೧೭೮, ೨೧೫, ೨೦೭, ೨೪೫, ೨೫೯, ೩೦೭, ೩೪೪, ೩೫೦, ೩೫೩, ೪೩೨, ೪೭೦, ೫೦೦, ೫೨೭
ಕ್ರೈಸ್ತ ೧೨೬, ೨೪೮, ೨೪೯, ೨೫೭, ೨೫೯, ೨೭೮, ೩೨೩, ೩೩೦, ೪೯೧
ಖ್ವಾಜಾ ಇನಾಯತ್ ಉಲ್ಲಾ ೪೧, ೧೮೧, ೧೮೫, ೩೦೬, ೩೦೭, ೩೦೮, ೩೨೩, ೩೨೪, ೩೨೫, ೩೯೬

## ಖ

ಖತ್ರಿ ೨೫೩
ಖುರ್ಷಿದ್ ಲಾಲ್ ೪೪, ೫೦, ೫೨, ೫೩, ೫೪
ಖೋಜಾ ಮೋಮಿನ್ ೩೩೯

## ಗ


ಗಂಗಾನದಿ ೧೯೯
ಗಂಗಾನಾಥ ಜಾ ೧೫೨
ಗಾಂಧಿ ೨೪೧, ೨೪೨, ೨೪೩, ೩೩೧, ೪೫೩,
ಗಾಡಗೀಳ್ ೧೫೫, ೧೬೨, ೧೬೭, ೧೮೬, ೧೮೭, ೧೮೯, ೧೯೨, ೧೯೩, ೨೧೮, ೨೨೦, ೨೨೨, ೨೨೩, ೨೨೪, ೨೨೫, ೨೨೬, ೨೨೭, ೨೩೧, ೨೩೬, ೨೩೭, ೨೩೮, ೨೪೭, ೩೧೯, ೩೨೪, ೩೩೧, ೩೫೦, ೩೮೧, ೪೪೭, ೪೫೩,
ಗಾರ್ಗೀ ೫೧೨, ೫೨೪
ಗಾರ್ಗೆ ೨೨೬
ಗಾಲಿಬ್ ೪೫೩
ಗೀತಾಂಜಲಿ ೨೪೪
ಗುಪ್ತಾ ವಿ.ಜೆ. ೪೫೪
ಗುರುದ್ವಾರ ೨೫೮
ಗುಲೆ ೪೫೩
ಗುಹಾ ಜಿ.ಎಸ್. ೪೫೩
ಗೆಲೋಟಿನ್ ೨೩
ಗೋಕುಲ್ ಭಾಯ್ ಭಟ್ ೩೫೮
ಗೋಕುಲಭಾಯಿ ೨೪೨
ಗೋಪಾಲಸ್ವಾಮಿ ೪೫೩
ಗೋವಾ ೫೨೭
ಗೌತಮ್ ೧೧೧, ೩೪೧
ಗ್ರೀಕ್ ೧೧೦, ೧೫೧, ೨೪೪, ೩೩೪
ಗ್ರೀಸ್ ೪೩೬
ಗ್ಲಾಡ್‌ಸ್ಟೋನ್ ೧೧೯


## ಘ


ಘೋಷ್ ಎಸ್.ಎಂ. ೪೫೩


## ಚ


ಚಂದ್ರನಗರ ೨೨೮
ಚಂದ್ರಿಕಾ ರಾಮ್ ೪೫೩
ಚಾಂದ್‌ಕಿರಣ್ ಶಾರದಾ ೫೧೦
ಚಾರಲ್ಸ್ ರೋ ೨೭೬
ಚಾರ್ವಾಕ ೨೯೨
ಚಿನ್ನಸ್ವಾಮಿ ಶಾಸ್ತ್ರಿ ೫೧೫, ೫೨೮
ಚೀನಾ ೧೨೮, ೧೪೪, ೩೩೭
ಚೀನಾ ೧೪೯, ೧೮೯, ೨೧೨
ಚೌಖಂಬಾ ೪೯೩
ಚೌಧರಿ ಆರ್.ಕೆ. ೩, ೫, ೬೪, ೬೬, ೬೭, ೬೯, ೭೦, ೯೫, ೧೦೨, ೧೦೩, ೧೦೫, ೧೦೭, ೧೦೮, ೧೦೯, ೧೧೦, ೧೧೧, ೧೬೩, ೧೬೬, ೧೬೭, ೧೭೨, ೧೮೧, ೧೮೪, ೨೦೩, ೨೦೫, ೨೦೭, ೨೨೦, ೨೨೪, ೨೨೬, ೨೨೯, ೨೩೧, ೨೩೫, ೨೩೭, ೨೬೩, ೨೭೧, ೨೭೫, ೨೮೮, ೩೦೧, ೩೦೭, ೩೦೮, ೩೩೭, ೩೪೫, ೩೫೬, ೩೬೯, ೩೭೧,


## ಛ


ಛಾದರ ೨೮೦, ೨೮೧, ೨೮೨
ಛೋಟೂರಾಮ ಛ.೪೩೭


## ಜ


ಜಗಜೀವನ್ ರಾಮ್ ೪೫೩
ಜಪಾನ್ ೫೦, ೧೭೬
ಜಪ್‌ಸಿಖ್ ೪೧೫
ಜಮ್ಮು ೪೭೧
ಜಯಕರ್ ಎಮ್. ಆರ್. ೨೦೩, ೩೩೨
ಜಯಶ್ರೀ ೨೧೫, ೨೧೬, ೪೫೩
ಜಯಸ್‌ವಾಲಾ ೧೪೮
ಜರ್ಮನಿ ೧೫೧, ೨೪೦
ಜವಹರಲಾಲ್ ನೆಹರೂ ೧೬೭, ೧೬೮, ೨೧೦, ೨೩೮, ೨೪೩, ೨೬೬, ೨೬೭, ೨೯೨, ೩೩೮, ೪೨೨, ೪೫೩

ಜಸ್ವಟ್‌ರಾಯ್ ಕಪೂರ್ ೪೨, ೬೪, ೧೦೩, ೧೦೮, ೧೧೫, ೧೪೨, ೧೫೮, ೧೬೦, ೧೬೧, ೧೬೨, ೧೭೫, ೩೫೭
ಜಸ್‌ವಂತ್ ರಾಯ್ ಕಪೂರ್ ೬೨
ಜಾಜೋ ೩೨೨
ಜಾಟ್ ೮೫, ೨೭೯, ೨೮೦, ೨೮೩, ೩೪೯, ೪೩೭, ೪೪೦, ೪೪೧
ಜಾರ್ಜ್ ಬರ್ನಾಡ್ ಷಾ ೪೭೦
ಜಾರ್ಜ ಕ್ಯಾಂಪ್‌ಬೆಲ್ ೨೮೪
ಜಿಂಗಾಡೆ ೪೩೯
ಜಿನ್ನಾ ೨೨೪, ೨೩೮, ೨೪೭, ೩೩೯
ಜುಂಗಡೆ ೪೨೧
ಜೆನುವಾ ೨೨೬
ಜೈನ ೧೦, ೧೧, ೧೨, ೧೪, ೧೫, ೧೮, ೪೯, ೫೬, ೬೮, ೯೯, ೧೦೦, ೧೪೮, ೧೭೪, ೩೨೦, ೩೫೩, ೪೪೯
ಜೈಮಿನಿ ೨೯೨
ಜೊರಾಷ್ಟ್ರಿಯನ್ ೨೪೯

## ಜ್ಞ

ಜ್ಞಾನಿ ಗುರಮುಖ್ ಸಿಂಗ್ ಮುಸಾಫಿರ್ ೨೫೪
ಜ್ಞಾನಿ ಗುರಮುಖ್ ಸಿಂಗ್ ಮುಸಾಫಿರ್ ೧೫೭, ೨೫೪, ೨೫೫, ೨೫೬, ೨೫೯, ೩೨೨
ಜ್ಞಾನೇಶ್ವರ ೪೪೩

## ಝ

ಝುಂಝುನವಾಲ ೧೦, ೧೨, ೧೩, ೧೬, ೨೮, ೩೭, ೪೧, ೫೧, ೧೦೬, ೧೭೨, ೧೭೭, ೩೫೧, ೩೬೯, ೩೮೧, ೩೮೨, ೩೮೪, ೩೮೫, ೪೦೦, ೪೦೧, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೩

## ಟ

ಟಕೂರ್ ದಾಸ್ ಭಾರ್ಗವ ೬೪
ಟರ್ಕಿ ೮೮
ಟಾಟ್ ೧೦೪
ಟೀಕ್‌ಸಿಂಗ್ ೩೪೯
ಟೇಕ್ ಚಂದ್ ಡಾ. ೧೧೦, ೧೯೦, ೨೮೦, ೨೮೧, ೩೧೬, ೩೪೯, ೩೫೦
ಟ್ರಾವೆಂಕೂರ್ ೪೦೯, ೪೪೧
ಠಾಕೂರ್ ದಾಸ್ ಭಾರ್ಗವ ೭, ೮, ೧೦, ೧೭, ೩೧, ೩೨, ೪೨, ೬೧, ೬೫, ೬೬, ೬೭, ೬೯, ೭೦, ೭೧, ೭೨, ೭೩, ೭೪, ೭೬, ೭೭, ೭೮, ೮೦, ೮೧, ೮೨, ೮೩, ೮೪, ೮೭, ೯೧, ೯೨, ೯೩, ೯೫, ೯೭, ೯೯, ೧೦೧, ೧೦೪, ೧೧೯, ೧೨೭, ೧೨೮, ೧೪೩, ೧೫೪, ೧೬೧, ೧೭೨, ೧೮೫, ೧೮೭, ೧೯೬, ೨೦೯, ೨೩೭, ೨೪೦, ೨೬೦, ೨೬೨, ೨೭೨, ೨೭೮, ೨೯೫, ೩೪೨, ೩೪೯, ೩೫೪, ೩೫೭, ೩೬೭, ೩೬೮, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೮, ೩೭೯, ೩೮೦, ೩೮೧, ೩೮೩, ೩೮೪, ೩೮೫, ೩೯೪, ೩೯೫, ೩೯೬, ೩೯೭, ೩೯೯, ೪೦೩, ೪೦೪, ೪೦೫, ೪೧೦, ೪೧೧, ೪೧೨, ೪೧೩, ೪೧೪, ೪೧೭, ೪೨೦, ೪೨೩, ೪೨೫, ೪೩೬, ೪೪೦, ೪೪೩, ೪೪೫, ೪೪೭, ೪೫೧, ೪೫೩, ೪೫೮, ೪೫೯

## ಠ

ಠೇಕ್ ಚಂದ್ರ ಶ್ರೀ ಧೋಲಕಿಯಾ ಬಾಬು ಡಾ. ೪೫೩

## ಡ

ಡಿಲ್ಲಿ ೧೯೭
ಡಿಸೋಜಾ ರೆವರೆಂಡ್ ೨೮೨

### ತ

ತಮಿಳುನಾಡು ೧೯೩
ತಲಾಕ್ ೫೩೦
ತಿಬಲೆ ಓರಾನ್ ೪೩೫
ತಿರುಮಲರಾವ್ ಜಿ.೧೪೬, ೧೪೮, ೨೧೦
ತಿರುವನಂತಪುರ ೨೦೨, ೪೯೨
ತಿರುವಾಂಕೂರು ೨೯೯, ೩೬೧
ತಿಲಕ್ ೨೨೬
ತುಳಸೀದಾಸ ೪೧೯
ತೇಜ್‌ಚಂದ್ ಡಾ. ೨೭೯
ತೇಜ್‌ಸಿಂಗ್ ೩೪೭
ತೊಘಲಕ್ ೧೧೭
ತ್ಯಾಗಿ ೮, ೯, ೨೨, ೨೫೯

### ಥ

ಥಾಕೂರ್ ದಾಸ್ ಭಾರ್ಗವ ೧೮
ಥಾನಾ ೨೨೭
ಥೆಬಲೇ ಓರಗಾವಂ ೪೫೪

### ದ

ದಸ್ಲು ೨೪೪
ದಾಸ್ ೩೩೧, ೩೩೨
ದಾಸ್ ಎಂ.ಎಂ. ಡಾ. ೧೭೫, ೨೭೯, ೨೮೮, ೨೯೨, ೩೦೨
ದಾಸ್ ಬಿ. ೪, ೭, ೧೧೨, ೧೬೬, ೨೪೬, ೨೪೯, ೩೦೬, ೩೩೨
ದಾಸ್ ಬಿ.ಎಸ್. ೩೩೧
ದಿಲ್ಲಿ ೨೪೩
ದೀಕ್ಷಿತ್ ೪೨೩, ೪೨೫, ೪೩೮
ದುರ್ಗಾಬಾಯಿ ೫, ೮, ೨೪, ೨೫, ೩೫, ೫೩, ೫೪, ೬೩, ೯೦, ೧೬೨, ೧೬೩, ೧೬೪, ೨೧೦, ೨೧೧, ೨೩೯, ೨೬೩, ೨೬೬, ೨೬೯, ೩೦೧, ೩೦೨, ೩೦೫, ೩೦೯, ೩೧೦, ೩೧೯, ೪೦೫, ೪೪೪, ೪೫೩, ೪೫೭
ದುಷ್ಯಂತ ೨೨೨
ದೆಹಲಿ ೧೦೭, ೧೫೫, ೪೩೯, ೪೭೯, ೪೮೫
ದೇವಲ ೫೨೫
ದೇವಲಸ್ಮೃತಿ ೫೧೯
ದೇವಿ ಸಿಂಗ್ ೪೫೩
ದೇಶಬಂಧು ಗುಪ್ತ ೧೦೭, ೨೪೫, ೨೭೫, ೩೭೯
ದೇಶ್‌ಮುಖ್ ಡಾ. ೨೬, ೩೧, ೩೨, ೩೪, ೩೫, ೩೭, ೪೦, ೬೧, ೧೪೫, ೨೦೩, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೩, ೨೧೬, ೨೧೮, ೨೩೦, ೨೪೨, ೨೬೪, ೨೯೩, ೩೫೬, ೩೭೮, ೩೭೯, ೩೮೪, ೩೮೯, ೩೯೮, ೩೯೯, ೪೦೫, ೪೦೬, ೪೧೦, ೪೧೨
ದ್ರಾವಿಡ ೯೯

### ಧ

ಧರ್ಮದೇವ ವಿದ್ಯಾವಾಚಸ್ಪತಿ ೧೦, ೨೨, ೬೨, ೬೪, ೪೫೩, ೪೭೯, ೪೮೩, ೪೮೮, ೪೯೧, ೪೯೯, ೫೦೩, ೫೦೮, ೫೧೧, ೫೧೬, ೫೨೧, ೫೨೬, ೫೨೮, ೫೩೩

### ನ

ನಂಜಿಡವೆಲ್ಲಾಲ ೩೯೩
ನಂಜಿನಡಾಡ್ ೩೬೦
ನಂಜಿನದಾದ್ ೨೬೨
ನಂದ ಕಿಶೋರ್ ದಾಸ್ ೪೫೩
ನಂಬೂದರಿ ೨೬೨, ೩೬೧, ೩೭೩, ೩೯೩
ನಜೀರುದ್ದೀನ್ ಅಹ್ಮದ್ ೪, ೫, ೬, ೧೧, ೧೨, ೧೬, ೧೭, ೨೯, ೩೦, ೩೮, ೪೨, ೪೩, ೪೪, ೪೫, ೪೬, ೪೭, ೪೮, ೫೦, ೫೧, ೫೨, ೫೩,

೫೪, ೫೫, ೫೬, ೫೭, ೫೮, ೬೦, ೬೧, ೭೦, ೭೧, ೭೩, ೭೪, ೭೫, ೯೭, ೯೮, ೧೦೫, ೧೦೬, ೧೦೭, ೧೨೭, ೧೬೨, ೧೬೩, ೧೬೪, ೧೬೫, ೧೭೧, ೧೭೩, ೧೭೪, ೧೭೫, ೧೭೬, ೧೭೭, ೧೮೬, ೧೮೭, ೧೮೮, ೨೨೯, ೨೩೬, ೨೪೧, ೨೬೧, ೨೬೫, ೩೨೩, ೩೪೦, ೩೫೦, ೩೫೩, ೩೫೮, ೩೬೧, ೩೬೪, ೩೬೫, ೩೬೬, ೩೬೭, ೩೭೩, ೩೭೬, ೩೭೯, ೩೮೧, ೩೮೩, ೩೯೧, ೩೯೨, ೩೯೩, ೪೦೦, ೪೧೨, ೪೨೫, ೪೨೯, ೪೪೯, ೪೫೦, ೪೫೨, ೪೫೩, ೪೫೬, ೪೫೭, ೫೩೦, ೫೩೧, ೫೩೫

ನರೇಶ್ ಅಯ್ಯರ್ ೫೨೮

ನಾಸಿರುದ್ದೀನ್ ಅಹಮದ್ ೩೪೫

**ಪ**

ಪಂಚ್ ೪೩೨

ಪಂಜಾಬ್ ೭, ೧೧, ೬೧, ೬೫, ೬೬, ೬೭, ೬೮, ೭೫, ೭೬, ೮೧, ೮೨, ೮೯, ೯೧, ೯೫, ೧೦೧, ೧೦೪, ೧೧೦, ೧೧೯, ೧೬೩, ೧೭೨, ೨೦೯, ೨೨೯, ೨೩೭, ೨೫೩, ೨೫೫, ೨೬೦, ೨೬೧, ೨೬೨, ೨೬೩, ೨೭೬, ೨೭೭, ೩೦೫, ೩೨೨, ೩೪೨, ೩೪೬, ೩೪೮, ೩೬೭, ೪೧೧, ೪೧೪, ೪೧೮, ೪೩೬, ೪೩೭, ೪೩೮, ೪೫೭

ಪಂಜಾಬಿ ೬೫, ೬೬, ೬೭, ೬೮, ೭೩, ೭೭, ೭೮, ೭೯, ೮೦, ೮೧, ೮೩, ೮೪, ೮೯, ೧೦೨, ೧೦೪, ೧೦೫, ೧೨೭, ೧೫೦, ೨೫೨, ೨೫೩, ೨೫೪, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೭೬, ೨೭೭, ೨೭೮, ೨೭೯, ೨೮೦, ೨೮೧, ೨೮೨, ೨೮೩, ೨೮೪, ೩೨೪, ೩೪೭, ೩೪೮, ೩೭೪, ೩೯೪, ೩೯೫, ೩೯೬, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೧೨, ೪೧೩, ೪೧೫, ೪೧೮, ೪೨೬, ೪೩೭, ೪೩೮, ೪೩೯

ಪಟ್ಟಾಭಿಸೀತಾರಾಮಯ್ಯ ೬೧

ಪಟ್ನಾ ೫೩೪

ಪದ್ಮಜಾ ನಾಯ್ಡು ೩೨೬, ೩೩೧

ಪನ್ನಾಲಾಲ್ ಬನ್ಸಿಲಾಲ್ ೪೫೩

ಪರಾಶರಸ್ಮೃತಿ ೫೨೦

ಪಶ್ಚಿಮಬಂಗಾಲ ೫೩

ಪಾಂಡೆ ಸಿ.ಡಿ. ೪೩೨, ೪೩೬, ೪೫೪

ಪಾಕಿಸ್ಥಾನ ೧೨೬, ೧೪೭, ೪೭೧

ಪಾಣಿನಿ ೩೧೬, ೩೧೭

ಪಾದ್ರಿ ೯೮

ಪಾರ್ಸಿ ೧೦, ೧೪, ೧೬, ೧೯, ೨೦, ೨೧, ೩೦, ೩೧, ೩೨, ೩೯, ೪೧, ೪೯, ೫೦, ೫೧, ೫೬, ೬೪, ೬೫, ೬೮, ೬೯, ೭೦, ೭೪, ೭೫, ೮೩, ೯೩, ೯೮, ೧೦೯, ೧೬೯, ೧೭೬, ೧೭೮, ೨೧೫, ೨೧೭, ೨೪೯, ೨೫೭, ೩೫೩, ೩೫೫

ಪೂಂಜ ೨೪೨

ಪೂರ್ವಬಂಗಾಳ ೪೭೧

ಪೃಥ್ವೀರಾಜ ೨೨೨

ಪೈಗಂಬರ ೨೪೫

ಪೋರ್ಚುಗೀಸ್ ೧೩೪

ಪೌರಸಂಹಿತೆ ೫೨೭

ಪ್ರಿವೀಕೌನ್ಸಿಲ್ ೪೫೯

ಪ್ಲೇಟೋ ೩೩೦

**ಫ**

ಫಾರ್ಸಿ ೧೨

ಫಿರೋಜ್ ಗಾಂಧೀ ೪೫೩

ಫೈಜಾಪುರ ೨೪೩

ಫ್ರಾಂಕ್ ಅಂಥೋನಿ ೧೧೨

ಫ್ರಾನ್ಸ್ ೨೪೦

## ಬ

ಬಂಗಾಲಿ ೨೨೦
ಬಂಗಾಳ ೪, ೫೩, ೫೪, ೫೫, ೫೭, ೫೮, ೬೫, ೭೨, ೧೧೩, ೧೨೩, ೧೪೭, ೨೦೧, ೨೬೧, ೨೭೯, ೩೨೩, ೩೩೦, ೩೩೧, ೩೪೮, ೩೬೧, ೪೧೨, ೪೨೯, ೪೭೧, ೫೩೪
ಬಡೋದೆ ೨೦೭, ೪೯೭, ೫೩೨
ಬನವಾಸಿ ೧೬
ಬನಾರಸ್ ೪೨೮, ೪೭೩
ಬನಾರಸಿ ಪ್ರಸಾದ್ ಝುಂಝುನವಾಲಾ ೧೩, ೧೬, ೨೮, ೩೫೧, ೩೮೧, ೪೧೨
ಬರೋಡ ೨೧೬, ೨೩೨, ೨೩೪, ೨೪೬, ೨೪೭, ೨೬೯, ೪೯೭
ಬಲದೇವ ಸಿಂಗ್ ೪೩೭, ೪೫೩
ಬಾಂಬೆ ೫, ೬, ೨೫, ೨೬, ೧೧೩, ೨೧೫, ೨೫೧, ೨೬೯, ೨೭೧, ೨೮೭, ೨೯೯, ೩೪೦, ೩೪೧
ಬಾಗ್ಡೆ ಕೆ.ಜಿ. ೧೫೨
ಬಾಬು ಗೋಪಿನಾಥ ಸಿಂಗ್ ೧೨, ೨೨
ಬಾಬು ರಾಮನಾರಾಯಣ ಸಿಂಗ್ ೬೦, ೯೬, ೧೦೩, ೧೨೪, ೩೨೨, ೩೩೩, ೩೮೬, ೩೮೭, ೩೮೯, ೩೯೦, ೪೧೧, ೪೨೧, ೪೨೨, ೪೨೩, ೪೨೪, ೪೨೫, ೪೩೩, ೪೪೬, ೪೪೯, ೪೫೩
ಬಾರ್ಮನ್ ೧೭೩, ೧೭೪
ಬಾಲಕೃಷ್ಣ ಶರ್ಮಾ ೪೫೩
ಬಿಸ್ಮಾರ್ಕ್ ೪೭೦
ಬಿಸ್ಲಾ ೧೧೦
ಬಿಸ್ವನಾಥ್ ದಾಸ್ ೧೨೯, ೧೩೦, ೧೩೧, ೧೩೨, ೧೩೩, ೧೩೪, ೧೩೫, ೧೩೭, ೧೩೮, ೧೩೯
ಬಿಹಾರ ೧೦, ೧೨, ೩೬, ೪೧, ೬೦, ೮೭, ೧೧೩, ೧೨೪, ೧೩೧, ೧೩೬, ೧೫೫, ೧೬೫, ೧೬೯, ೧೭೭, ೧೮೧, ೨೦೨, ೨೦೩, ೨೨೬, ೨೭೦, ೩೦೬, ೩೧೭, ೩೧೮, ೩೨೨, ೩೨೩, ೩೨೯, ೩೬೯, ೩೮೨, ೩೮೬, ೩೯೬, ೪೨೦, ೪೨೯, ೪೪೨, ೪೪೫, ೫೩೪
ಬಿಹಾರಿ ೮೯, ೨೦೩
ಬುದ್ಧ ೯೯, ೧೦೦, ೧೯೧, ೩೩೫, ೪೭೧
ಬೈಬಲ್ ೨೭೭
ಬೊಂಬಾಯಿ ೨೦೩, ೨೧೮, ೨೩೪, ೨೪೨, ೪೨೯
ಬೋಹ್ರಾ ೬೪
ಬೌದ್ಧ ೧೦, ೧೧, ೧೨, ೧೪, ೧೫, ೧೮, ೩೩, ೩೯, ೪೧, ೪೯, ೫೦, ೫೬, ೬೫, ೬೮, ೭೫, ೮೩, ೯೨, ೧೦೦, ೧೪೧, ೧೪೮, ೧೪೯, ೧೭೪, ೧೮೭, ೧೯೧, ೧೯೨, ೨೪೮, ೨೭೦, ೩೨೦, ೩೪೫, ೩೫೦, ೩೫೬, ೩೫೯
ಬ್ರಜೇಶ್ವರ ಪ್ರಸಾದ್ ೧೨, ೨೮, ೧೬೧, ೩೨೯, ೩೩೦, ೪೨೯, ೪೫೩,
ಬ್ರಹ್ಮಸಮಾಜ ೨೪೮, ೩೨೦
ಬ್ರಿಜ್ ಕಿಶೋರ ೪೪೫
ಬ್ರಿಟಿಷ ೨೪, ೬೫, ೧೪೦, ೧೪೩, ೧೪೬, ೪೨೬, ೪೬೯

## ಭ

ಭಗವದ್ಗೀತೆ ೧೩೪
ಭಗವಾನದಾಸ್ ೨೪೦, ೨೪೧, ೨೪೫, ೩೨೧,
ಭಗೀರಥ ೨೩೫, ೨೩೬
ಭಟ್ ೧೭೩, ೧೭೭, ೨೩೧, ೨೩೫, ೨೪೫, ೨೪೬, ೨೪೭, ೨೪೯, ೨೫೦, ೨೫೧, ೨೫೨, ೨೭೧, ೨೭೨, ೩೨೨, ೩೪೦, ೩೪೪, ೩೪೫, ೩೫೮, ೩೭೦, ೩೭೧, ೩೭೮, ೩೮೬, ೩೮೭, ೪೨೦, ೪೩೪, ೪೩೯, ೪೪೧, ೪೫೦, ೪೫೩, ೪೫೫
ಭಟ್ಟ ೨೨೩, ೨೩೦, ೨೩೧, ೨೩೬, ೨೩೭, ೨೩೮, ೨೪೧, ೨೪೪, ೨೪೫, ೪೩೬, ೪೩೮, ೪೪೦
ಭಟ್ಟಾಚಾರ್ಯ ಕೆ.ಕೆ. ಪ್ರೊ. ೧೨
ಭರೂಹ ೪೫೩

ಭವಸ್ವಾಮಿ ೪೯೨
ಭಾರತಿ ೧೧೭, ೧೨೧, ೧೨೭, ೧೮೫, ೧೮೭, ೧೮೯, ೧೯೩, ೧೯೪, ೧೯೫, ೨೦೭, ೨೧೩, ೨೬೪, ೨೭೬, ೨೭೮, ೨೮೬, ೨೮೭, ೨೮೮, ೨೯೦, ೨೯೬, ೨೯೯
ಭಾರತೀ ಎಲ್. ಕೃಷ್ಣಸ್ವಾಮಿ ೧೦೭, ೧೯೩, ೨೧೩, ೨೮೬, ೨೮೮, ೨೯೬
ಭೂಪೇಂದ್ರಸಿಂಗ್ ಮಾನ್ ೩೪೫, ೪೪೦

## ಮ

ಮಜಹಬಿ ೩೪೯
ಮದನ ಮೋಹನ ಮಾಳವೀಯ ೫೪, ೧೮೧, ೧೮೨, ೧೮೩, ೧೮೪, ೧೯೯, ೨೦೦, ೨೦೧, ೨೨೧, ೨೨೬, ೨೩೭, ೨೬೮, ೨೬೯, ೨೭೦, ೨೮೫, ೨೮೬, ೨೮೭, ೨೮೮, ೨೯೦, ೨೯೧, ೨೯೨, ೨೯೩, ೨೯೫, ೨೯೬, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೩, ೩೧೫, ೩೧೬, ೩೧೭, ೩೧೮, ೩೨೦, ೩೨೨, ೩೨೩, ೩೩೧, ೩೩೨, ೩೩೬, ೩೪೯, ೪೦೨, ೪೫೧, ೪೫೨, ೪೫೩, ೪೫೭
ಮದ್ರಾಸ್ ೧೧೦, ೧೨೩, ೧೨೪, ೧೪೬, ೧೪೮, ೧೬೨, ೧೮೫, ೧೯೧, ೧೯೮, ೨೦೧, ೨೧೦, ೨೧೧, ೨೧೩, ೨೧೭, ೨೩೨, ೨೩೪, ೨೬೨, ೨೬೪, ೨೬೮, ೨೬೯, ೨೮೨, ೨೯೯, ೩೪೦, ೩೪೧, ೩೪೨, ೩೬೦, ೩೬೧, ೩೬೫, ೩೭೯, ೩೮೬, ೩೯೦, ೩೯೩, ೪೧೫, ೪೧೮, ೪೨೮, ೪೨೯, ೪೪೧, ೪೪೪, ೪೫೭, ೫೦೫
ಮಧುರೆ ೫೨೮
ಮನುಸಂಹಿತೆ ೪೯೨, ೪೯೩, ೪೯೪, ೫೨೪
ಮನುಸ್ಮೃತಿ ೪೨೮
ಮರಾಠ ೪೪೩
ಮರಾಠಿ ೨೪೪
ಮರುಮಕ್ಕತ್ತಾಯಂ ೭೮, ೧೨೦, ೧೫೦, ೨೬೨, ೩೬೦, ೩೬೧, ೩೬೪, ೩೬೫, ೩೬೬, ೩೭೩, ೩೯೩, ೪೪೮
ಮಲಬಾರ ೧೨೬, ೧೩೯, ೧೪೨, ೧೫೦, ೧೫೭, ೨೩೩
ಮಲೆಯಾಳ ೨೬೨, ೩೬೧
ಮಲಯಾಳಿ ೩೯೩
ಮಲೇಶಿಯಾ ೧೪೯
ಮಸ್ಕರಿಭಾಷ್ಯ ೪೯೨
ಮಸ್ರುವಾಲಾ ೨೧೬
ಮಹಮ್ಮದ್ ಆಲಿ ೬೭
ಮಹರ್ಷಿ ದಯಾನಂದರು ೪೯೪, ೫೧೫, ೫೩೩, ೫೩೫
ಮಹಾಭಾರತ ೧೫೭, ೨೧೬, ೫೦೫, ೫೨೪
ಮಾನ್ ಬಿ.ಎಸ್. ೩೪೬
ಮಾನಿಕೇಜಿ ದಾದಾಬಾಯಿ ೧೫೮
ಮಾಪ್ಲಾ ೧೪೨
ಮಾವೂ ಕಪೂರ್ ೫೧
ಮಾಸ್ಕೋ ೧೬೧
ಮಿಥಿಲೆ ೪೨೮
ಮಿರ್ಜಾ ೪೫೩
ಮಿಶ್ರಾ ಎಸ್.ಪಿ (ಪಂಡಿತ್) ೧೧, ೨೭೩
ಮೀರತ್ ೮೧
ಮುಂಬೈ ೧೩೦, ೧೪೬, ೪೧೮, ೪೯೩, ೫೦೯
ಮುಕುಟ ಬಿಹಾರಿಲಾಲ್ ಭಾರ್ಗವ ೨೦೬, ೫.೦
ಮುಖರ್ಜಿ ಎಸ್.ಪಿ. ಡಾ. ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೨, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೧, ೨೧೧, ೨೧೫, ೨೧೮, ೨೨೦, ೩೩೧, ೩೩೩
ಮುನವಳ್ಳಿ ೨೮೭, ೨೯೦, ೨೯೬, ೨೯೮, ೨೯೯, ೩೦೦

ಮುಲ್ಲ ೨೨೪, ೩೪೭
ಮುಲ್ಲಾ ೩೬, ೧೦೯
ಮುಸಲ್ಮಾನ ೬೫, ೧೪೦, ೧೪೧, ೧೪೨, ೧೫೩, ೨೧೫, ೨೨೪, ೨೨೫, ೨೩೨, ೨೪೫, ೨೬೧, ೩೯೬, ೪೩೨, ೪೩೭, ೪೪೯, ೪೬೯, ೫೦೦, ೫೧೧, ೫೨೧, ೫೨೭
ಮುಸ್ಲಿಂ ೧೦, ೧೨, ೧೪, ೧೫, ೨೦, ೨೧, ೨೪, ೨೫, ೨೬, ೨೭, ೩೦, ೩೧, ೩೨, ೩೯, ೪೧, ೪೨, ೪೩, ೪೭, ೪೮, ೪೯, ೫೦, ೫೩, ೫೬, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೩, ೭೪, ೭೫, ೮೧, ೮೩, ೮೫, ೯೩, ೯೮, ೧೦೧, ೧೦೯, ೧೧೦, ೧೨೩, ೧೨೭, ೧೨೮, ೧೪೧, ೧೪೨, ೧೫೨, ೧೫೩, ೧೬೯, ೧೭೧, ೧೭೬, ೧೭೮, ೧೮೭, ೧೮೮, ೨೧೫, ೨೧೭, ೨೨೪, ೨೩೨, ೨೪೦, ೨೪೫, ೨೪೭, ೨೪೮, ೨೫೧, ೨೫೭, ೨೬೦, ೨೮೪, ೩೨೩, ೩೨೪, ೩೨೫, ೩೪೩, ೩೪೪, ೩೫೩, ೩೭೪, ೩೮೩, ೩೯೬, ೪೭೦, ೪೭೧, ೫೩೫
ಮುಸ್ಲಿಂ ಲೀಗ್ ೫೩೫
ಮುಸ್ಸೋಲಿ ೧೪೮
ಮೆನನ್ (ದಾಮೋದರ್) ೧೫೦, ೨೧೧, ೪೦೯
ಮೇಯ್ನ್ ೨೬೨, ೪೦೭
ಮೈತ್ರ ೨೨೧, ೨೩೪
ಮೈತ್ರಾಯಣೀ ೫೧೬
ಮೈತ್ರೇಯ ೫೩೦
ಮೈಸೂರು ೨೪೬, ೩೪೫
ಮೊಗಲ್ ೧೧೭, ೨೩೬, ೩೮೩
ಮೋಯ್ದು ಮೌಲ್ಫ್ ೪೫೩
ಮೋಸ್ಲಾ ೧೨೬
ಮ್ಯಾಕ್ಸಮುಲ್ಲರ್ ೧೪೪, ೨೪೩

## ಯ

ಯಜುರ್ವೇದ ೨೦೦, ೫೧೬
ಯಮಸ್ಮೃತಿ ೪೯೫
ಯಮುನೆ ೧೪೭, ೨೩೬
ಯಶವಂತ ರಾಯ್ ಪ್ರೊ. ೨೮೩, ೪೫೪
ಯಹೂದಿ ೧೦, ೧೪, ೧೯, ೩೯, ೪೧, ೪೫, ೪೭, ೪೮, ೪೯, ೫೦, ೫೧, ೫೬, ೬೪, ೬೫, ೬೮, ೭೦, ೭೪, ೭೫, ೮೩, ೯೩, ೯೮, ೧೦೯, ೧೬೯, ೧೭೬, ೧೭೮, ೩೫೩
ಯಾಜ್ಞವಲ್ಕ್ಯ ೨೨೬, ೨೩೫, ೨೩೬, ೨೪೩, ೨೪೪, ೪೨೮, ೪೩೦, ೪೩೪, ೪೩೭, ೫೦೫, ೫೦೯, ೫೧೬, ೫೧೭, ೫೧೮, ೫೨೩, ೫೨೫
ಯಾಮಿನ್ ಖಾನ್ ೨೪೫
ಯಾಸ್ಕಾಚಾರ್ಯ ೫೧೨, ೫೧೩, ೫೧೪
ಯುರೋಪು ೩೩೦, ೩೪೩

## ರ

ರಂಗಾ ಪ್ರೊ. ೯೭, ೯೯, ೧೨೭, ೧೨೮, ೧೫೯
ರಣಬೀರ್ ಸಿಂಗ್ ೪೩೬, ೪೩೭, ೪೩೮, ೪೩೯, ೪೪೦, ೪೪೧, ೪೫೪
ರತ್ತಿಗನ್ ಡೈಜೆಸ್ಟ್ ೨೬೦, ೨೬೧
ರತ್ನಾ ಸಿ ಮೊರಾರ್ಜಿ ೧೧೦
ರಮೇಶನ್ ವೇ. ಪಾ. ೫೨೬
ರವೀಂದ್ರನಾಥ್ ಟಾಗೂರ್ ೧೪೯, ೨೨೦, ೨೪೪
ರಾಜ್ ಬಹದ್ದೂರ್ ೫, ೪೦, ೧೦೨, ೧೧೩, ೧೪೧
ರಾಜಗೋಪಾಲಾಚಾರಿ ೧೮೪, ೧೮೫, ೧೮೭, ೧೮೮, ೩೬೫, ೩೯೪, ೩೯೫, ೪೪೭
ರಾಜರಾಮ್ ಮೋಹನ್ ರಾಯ್ ೧೫೫, ೨೨೦, ೨೨೬, ೨೪೨, ೩೩೧
ರಾಜಸ್ಥಾನ ೫, ೭೩, ೧೧೩, ೨೪೦
ರಾಜಾಜಿ ೪೨೫, ೪೪೭

ರಾಜಾಬಹದ್ದೂರ್ ೪೫೩
ರಾಜಾಸ್ಥಾನ ೧೫೩, ೨೨೩, ೨೫೦, ೨೬೧
ರಾಜಾಸ್ಥಾನಿ ೨೪೬
ರಾಜೇಂದ್ರ ಪ್ರಸಾದ ಡಾ. ೧೫೭
ರಾಧೇಲಾಲ್ ವ್ಯಾಸ್ ೨೭೨, ೨೯೯, ೩೭೮, ೩೯೬, ೪೪೦
ರಾಮಕೃಷ್ಣ ಪರಮಹಂಸ ೩೩೧
ರಾಮರಾಜ ಜಜವಾರೆ ೧೩೧
ರಾಮಲಿಂಗಂ ಚೆಟ್ಟಿಯಾರ್ ೨೬೮, ೨೭೨, ೨೭೩, ೨೭೪
ರಾಯ್ ಎಂ.ಎನ್. ೨೪೩
ರಾಯಾಭಾಗ ೫೩೪
ರಾವ್ ೧೪೪, ೧೪೮,
ರಾವ್ ಸಮಿತಿ ೧೧೬, ೧೪೪, ೩೪೫, ೩೪೭, ೩೪೮, ೫೧೫
ರಾವ್ರತ್ ೪೫೩
ರಿವಾಜ್–ಇ–ಆಮ್ಸ್ ೨೮೧
ರುಸ್ತುಂಜಿ ೨೭೭
ರೂಢಿ ೨೪೩
ರೇಣುಕಾರಾಯ್ ೫೩, ೭೨, ೭೩, ೧೧೩, ೭೩, ೧೬೭, ೧೭೨, ೧೭೩, ೧೮೨, ೧೮೩, ೧೮೪, ೧೮೬, ೧೯೦, ೨೩೯, ೨೬೬, ೨೯೦, ೩೦೦, ೩೦೧, ೩೦೨, ೩೦೬
ರೋಮ್ ೭೭
ರೋಮನ್ ೨೧, ೧೯೦, ೩೩೪
ರೋಹಿನಿ ಕುಮಾರ ಚೌಧರಿ ೯೫
ರ್ಯಾಟಿಗನ್ ೬೫, ೬೬
ರ್ಯಾನಡೆ ೨೨೬

## ಲ

ಲಂಡನ್ ೧೮೮
ಲಕ್ಷ್ಮಣಜೋಷಿ ೫೧೨
ಲಕ್ಷ್ಮಣನ್ ೨೦೫, ೨೯೯, ೪೩೧, ೪೫೩
ಲಕ್ಷ್ಮಣಶಾಸ್ತ್ರೀ ೪೯೨, ೫೧೫
ಲಕ್ಷ್ಮೀಕಾಂತ ಮೈತ್ರ ೪೯೧, ೫೩೦
ಲಡಾಕ ೪೭೧
ಲಾಹೋರ್ ೩೪೭, ೩೪೮, ೩೪೯

## ವ

ವರದರಾಮನ್ ೧೨೩
ವರ್ಯಾಮ್‌ಸಿಂಗ್ ೩೪೭
ವಲ್ಲಭ ಭಾಯಿ ಪಟೇಲ್ ೯೧
ವಾರಣಾಸಿ ೪೮೬, ೫೧೦
ವಿಜ್ಞಾನೇಶ್ವರ ೫೦೫, ೫೦೯, ೫೧೬, ೫೨೩
ವಿಠಲಭಾಯಿ ಪಟೇಲ್ ೩೭೮
ವಿಶ್ವೇಶ್ವರಭಟ್ಟ ೫೧೭
ವಿಷ್ಣುವೃದ್ಧ ೫೨೫
ವಿಷ್ಣುಸ್ಮೃತಿ ೫೦೯
ವೆಂಕಟ ರಾಮನ್ ೧೧೦, ೪೫೩
ವೇಲಾಯುಧನ್ ಆರ್. ೧೧೯, ೧೨೦
ವೋಲ್ಟೇರ್ ೨೮೩

## ಶ

ಶಂಕರಾಚಾರ್ಯ ೨೪೨, ೫೦೪
ಶಂಟೋ ೫೦
ಶಾರದಾ ಕಾನೂನು ೬೭, ೭೧, ೧೪೫, ೧೫೬, ೨೪೭, ೨೪೮, ೨೪೯, ೨೫೧, ೨೫೨, ೨೭೨
ಶಾಸ್ತ್ರಿ ೨೨೭
ಶಿವ ಚರಣಲಾಲ್ ೧೨, ೨೭, ೨೮, ೩೦೬, ೩೮೫
ಶಿವನ್ ಪಿಳ್ಳೈ ೪೪೧, ೪೫೩
ಶಿವಸ್ವಾಮಿ ಅಯ್ಯರ್ ಪಿ. ಎಸ್. ೫೨೭
ಶುಕ್ರನೀತಿ ೪೮೬, ೫೨೧

ಶುಕ್ಲಾ ೨೨೫, ೪೩೧, ೪೩೫, ೪೩೬, ೪೩೭, ೪೩೯, ೪೪೦, ೪೫೩
ಶೃತಿ ೧೯, ೪೧೮, ೪೨೭
ಶ್ಯಾಮನಂದನ್ ಸಹಾಯ್ ೩೬, ೩೭, ೪೧, ೫೨, ೮೯, ೧೦೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೭, ೧೩೩, ೧೩೫, ೧೩೭, ೧೩೮, ೧೫೭, ೧೬೫, ೧೬೬, ೧೬೭, ೧೬೮, ೧೭೨, ೧೯೯, ೨೦೩, ೨೩೬, ೨೪೭, ೨೭೦, ೨೭೫, ೩೦೬, ೩೩೩, ೩೩೭, ೩೩೯, ೩೪೪, ೩೪೫, ೩೬೯, ೩೭೦, ೩೭೧, ೩೮೨, ೩೮೩, ೩೮೫, ೩೮೬, ೪೦೪, ೪೦೫, ೪೨೧, ೪೨೨, ೪೩೨, ೪೪೧, ೪೪೫, ೪೪೭, ೪೪೮, ೪೫೦, ೪೫೧, ೪೫೨, ೪೫೩, ೪೫೫, ೪೫೬, ೪೫೭
ಶ್ಯಾಮಪ್ರಸಾದ ಮುಖರ್ಜಿ ೨೦೭, ೨೧೮, ೨೧೯, ೨೨೦, ೨೨೨, ೨೨೩, ೨೨೪, ೩೨೩, ೩೨೭, ೩೩೧, ೩೩೩, ೩೩೪, ೩೩೫

## ಷ

ಷರೀಯತ್ ೧೪೧, ೧೪೨, ೧೬೧, ೨೪೫, ೨೬೧, ೩೨೪, ೩೩೯, ೩೪೦, ೩೪೩
ಷರೀಯರ್ ೧೪೦
ಷಹಾ ಕೆ.ಟಿ. ೩೧೭, ೪೫೩
ಷಿಂಟೋಯಿಸ್‌ಮಾ ೧೭೬

## ಸ

ಸಂತಾನಂ ೯, ೧೧೦, ೩೬೬, ೩೬೭, ೩೬೮, ೩೬೯, ೩೭೯, ೩೮೦, ೩೯೦, ೩೯೧, ೪೦೦, ೪೦೧, ೪೦೪, ೪೫೭
ಸತೀಪದ್ಧತಿ ೧೫೫, ೧೮೬
ಸತೀಶ ಚಂದ್ರ ೪೫, ೪೫೩
ಸದಾಯತನ ಪಾಂಡೇಯ ೫೧೫
ಸನ್ ಯಾತ್ ಸೇನ್ ಡಾ. ೧೨೮,
ಸಯ್ಯದ್ ೧೧೭
ಸಯ್ಯಾಜಿರಾವ್ ಗಾಯಕವಾಡ್ ೨೪೬
ಸರ್ದಾರ್ ಹುಕುಂ ಸಿಂಗ್ ೧೧, ೩೦, ೩೭, ೫೦, ೫೪, ೮೨, ೮೩, ೮೫, ೮೬, ೮೭, ೮೮, ೮೯, ೯೦, ೯೧, ೯೯, ೧೦೦, ೧೦೧, ೧೧೪, ೨೫೫, ೨೫೯, ೨೬೩, , ೩೪೬, ೩೪೭, ೩೪೮, ೩೪೯, ೩೯೯, ೪೦೫, ೪೦೬, ೪೦೭, ೪೦೮, ೪೧೦, ೪೧೧, ೪೧೨, ೪೩೮, ೪೪೩, ೪೫೩, ೪೫೯
ಸರ್ವಟೆ ೮, ೯, ೧೭, ೧೮, ೨೧, ೨೨, ೨೯, ೩೦, ೩೨, ೩೪, ೩೬, ೬೨, ೬೪, ೧೬೪, ೨೭೦, ೪೦೧, ೪೦೨, ೪೨೬, ೪೨೯
ಸಾಂಬಶಿವ ಶಾಸ್ತ್ರಿ ೪೯೨
ಸಾಧುಚರಣ ಪ್ರಸಾದ್ ೪೯೩
ಸಾಯಾಣಭಾಷ್ಯ ೫೧೫
ಸಾಯಾಣಾಚಾರ್ಯ ೫೧೨, ೫೧೫
ಸಾರಂಗಧರ್ ದಾಸ್ ೪೫೩
ಸಾವರಕರ್ ೧೭
ಸಾವಿತ್ರಿ ೧೫೧
ಸಿಂಗ್ ಎ.ಪಿ. ಕ್ಯಾಪ್ಟನ್ ೩೭೦, ೩೯೪, ೩೯೭, ೪೪೧, ೪೫೩, ೪೫೭
ಸಿಂಗ್ ಟಿ.ಎನ್. ೧೫೧, ೪೨೦, ೪೩೪, ೪೩೫, ೪೩೬, ೪೫೪, ೪೫೬,
ಸಿಂಗ್ ವಿ. ಪಿ. ೩೯೭, ೩೯೮, ೪೧೨
ಸಿಂಧೂ ೧೭, ೨೨೮, ೨೪೪
ಸಿಖ್ಖ ೧೦, ೧೧, ೧೨, ೧೪, ೧೫, ೧೬, ೧೮, ೨೦, ೩೦, ೩೩, ೩೯, ೪೯, ೫೦, ೫೬, ೬೫, ೬೮, ೭೫, ೮೨, ೮೩, ೮೪, ೮೫, ೯೦, ೯೧, ೯೨, ೯೯, ೧೦೦, ೧೧೪, ೧೭೪, ೧೮೭, ೨೫೨, ೨೫೩, ೨೫೪, ೨೫೫, ೨೫೬, ೨೫೮, ೨೫೯, ೨೬೦, ೨೬೪, ೨೬೬, ೨೭೦, ೨೭೬, ೨೭೭, ೨೭೮, ೨೭೯, ೨೮೦, ೨೮೩, ೨೮೫,

೩೨೦, ೩೩೧, ೩೪೫, ೩೪೬, ೩೪೭, ೩೪೮, ೩೪೯, ೩೫೬, ೩೫೯, ೩೭೩
ಸಿದ್ವಾ ೨೧೧, ೨೪೧, ೨೯೫, ೩೦೯
ಸಿನ್ಹಾ ಬಿ.ಕೆ.ಪಿ ೧೧೩, ೧೬೯, ೧೯೮, ೧೯೯, ೨೦೦, ೨೦೧, ೨೦೨, ೨೦೩, ೩೧೮, ೩೮೨, ೩೮೫
ಸುನ್ನತ್ ೩೮೩
ಸುಬ್ಬಯ್ಯ ೪೫೩
ಸುಬ್ರಮಣ್ಯ ಸಿ. ೧೨೪
ಸುಬ್ರಮಣ್ಯಂ ವಿ. ಡಾ. ೪೫೩
ಸೂಫಿ ೨೪೫
ಸೇಠ್ ಗೋವಿಂದದಾಸ್ ೧೫೫, ೧೫೭, ೧೫೯
ಸೋಂಧೀ ೫೩, ೯೫, ೧೬೩, ೨೦೯, ೩೦೫, ೩೪೬, ೩೪೮, ೪೫೩, ೪೫೭
ಸೋಚೇತ್ ಸಿಂಗ್ ೨೫೯
ಸೋನಾವಣೆ ೧೧೩, ೧೧೪
ಸ್ವಿಟ್ಜರ್‌ಲ್ಯಾಂಡ್ ೧೫೧
ಸ್ಟೀಫನ್ ೩೭೬
ಸ್ಪಾನಿಷ್ ೨೭೭
ಸ್ಪಾರ್ಟಾ ೪೩೬
ಸ್ಯಾಡ್ಲರ್ ಕಮಿಷನ್ ೧೩೬

## ಹ

ಹಜರತ್ ಮಹಮದ್ ೨೪೦
ಹರಿಸಿಂಗ್ ಗೌರ್ ೧೫೮, ೨೩೫, ೨೪೫, ೩೩೨
ಹರ್‌ನಾಮ್‌ಸಿಂಗ್ ೩೪೮
ಹಸನ್ ಎಂ.ಎ. ೪೫೩
ಹಾಲೆಂಡ್ ೩೮೩
ಹಿಂದಾಸ್ ೨೪೪
ಹಿಂದಿ ೨೩೫, ೨೩೬, ೪೩೪, ೪೪೯
ಹಿಂದೂ ೪, ೯, ೧೧, ೧೨, ೧೪, ೧೫, ೧೬, ೧೭, ೧೮, ೧೯, ೨೦, ೨೩, ೨೪, ೨೬, ೨೭, ೩೦, ೩೧, ೩೨, ೩೩, ೩೫, ೩೬, ೩೯, ೪೦, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೩, ೫೫, ೫೬, ೫೭, ೫೯, ೬೨, ೬೩, ೬೪, ೬೫, ೬೬, ೭೦, ೭೪, ೭೫, ೮೩, ೯೨, ೯೩, ೯೪, ೯೮, ೯೯, ೧೦೦, ೧೦೪, ೧೦೭, ೧೦೮, ೧೦೯, ೧೧೦, ೧೧೧, ೧೧೪, ೧೧೬, ೧೨೦, ೧೨೨, ೧೨೩, ೧೨೭, ೧೪೦, ೧೪೧, ೧೪೪, ೧೪೫, ೧೪೮, ೧೪೯, ೧೭೦, ೧೭೪, ೧೭೬, ೧೭೭, ೧೭೯, ೧೮೦, ೧೮೬, ೧೮೭, ೧೯೦, ೧೯೧, ೧೯೨, ೧೯೬, ೧೯೭, ೧೯೮, ೨೦೧, ೨೦೨, ೨೦೭, ೨೦೯, ೨೧೨, ೨೧೪, ೨೧೯, ೨೨೩, ೨೨೭, ೨೩೨, ೨೩೩, ೨೩೪, ೨೩೫, ೨೩೯, ೨೪೫, ೨೪೬, ೨೪೭, ೨೪೮, ೨೪೯, ೨೫೨, ೨೫೩, ೨೫೫, ೨೫೬, ೨೬೦, ೨೬೧, ೨೭೦, ೨೭೬, ೨೮೪, ೨೮೮, ೨೯೨, ೨೯೩, ೨೯೪, ೨೯೮, ೩೧೨, ೩೧೯, ೩೨೦, ೩೨೧, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೩೧, ೩೩೨, ೩೩೬, ೩೩೮, ೩೩೯, ೩೪೧, ೩೪೨, ೩೪೩, ೩೪೪, ೩೪೭, ೩೫೦, ೩೫೩, ೩೫೬, ೩೫೮, ೩೬೪, ೩೬೭, ೩೭೧, ೩೭೩, ೩೭೪, ೩೯೦, ೪೧೩, ೪೨೨, ೪೨೬, ೪೨೭, ೪೩೨, ೪೩೪, ೪೩೭, ೪೪೨, ೪೪೯, ೪೫೪, ೪೫೮, ೪೬೯, ೪೮೦, ೪೮೧, ೪೮೩, ೪೮೭, ೪೮೮, ೪೯೧, ೪೯೯, ೫೦೦, ೫೦೧, ೫೧೧, ೫೨೭, ೫೩೫
ಹಿಂದೂಕೋಡ್ ೧೫೯, ೧೬೦, ೧೬೫, ೧೬೭, ೧೭೬, ೨೦೦, ೨೧೮, ೨೨೧, ೪೪೨
ಹಿಂದೂಶಾಸ್ತ್ರ ೧೦೭, ೩೩೬, ೪೧೯
ಹಿಂದೂಸಂಹಿತೆ ೭೧
ಹಿಂದೂಸ್ಥಾನಿ ೨೩೫, ೨೪೭
ಹಿಟ್ಲರ್ ೧೪೮
ಹಿಮತ್ ಸಿಂಗ್ ಕಾ ೧೨೩, ೧೯೬, ೨೦೦, ೪೫೩

ಹಿಮಾಚಲ ೪೨೭
ಹಿಸ್ಸಾರ್ ೮೧, ೨೪೦
ಹೀರಣ್ಯಕೇಶೀ ೫೧೩
ಹುಕಂ ಸಿಂಗ್ ೧೨, ೫೪, ೮೬, ೯೦, ೯೧, ೯೯, ೧೧೪, ೧೭೨, ೩೪೬, ೩೪೭, ೩೪೮, ೩೪೯, ೪೦೫, ೪೩೮, ೪೫೩, ೪೫೯
ಹುಸೇನ್ ೮೭
ಹುಸೇನ್ ಇಮಾಮ್ ೧೫೫, ೧೫೯, ೧೬೧
ಹುಸೇನ್ ಟಿ. ೩೩೦
ಹೆನ್ರಿ ಕೇಕ್ ೨೪೬